1938

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.

# SWADESHABHIMANI MANGALORE

ಬಿಡಿ ಸಂಚಿಕೆಗೆ ಒಂದಾಣೆ. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೇವತೆಗಳುನುಪಮರತ್ನಗಳನು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುಕ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ—೩೨] ತಾರೀಕು ೭ನೇ ಜನವರಿ ೧೯೩೮ (7 1 – 1938) [ಸಂಚಿಕೆ ೧


## ಇನ್ನು ಸಂಬಳದಲ್ಲಿ ಕಡಿತ

### ಮದ್ರಾಸು ಆಧಿಪತ್ಯದ ಪ್ರಾಂತಿಕ ಮತ್ತು ಕೆಳತರಗತಿಯ ಹುದ್ದೆಗಳ ವಿಷಯ ಮಾತ್ರ

**ಜನವರಿ ತಾ. ೧ರಿಂದ ಹೊಸ ತಿದ್ದಿದ ಸಂಬಳ ಸ್ಕೇಲುಗಳು**

ಮಂತ್ರಿಮಂಡಲವು ಚುನಾವಣೆಗೆ ಹೋ ಗಲಿ ಮತದಾರರಿಗೆ ಅರುಹಿದಂತೆ, ಯಾವ ಯಾವ ಕಾರ್ಯಕ್ರಮ [illegible] ಕೈಕೊಳ್ಳಬೇಕಾ ಗಿರುವುದೋ ಅದರಲ್ಲಿ ಇದೂ ಒಂದು.

ಇದುವರೆಗೆ ಮುಖ್ಯವಾಗಿ ಪ್ರಜಾಹಿತ ಕ್ಕಾಗಿ (ಗ್ರಾಮಾಂತರಗಳೇ ಹೆಚ್ಚಿನದಾಗಿ) ಕೈಕೊಂಡಿರದ ವ ಮತ್ತು [illegible] ಕೈಕೊಳಬೇಕಾ ಗಿರುವ ಕಾರ್ಯಕ್ರಮಕ್ಕೆ ತಗಲುವ ವಿಶೇಷ ಖರ್ಚು, ಮದ್ಯಪಾನ ನಿವಾರಣೆಯ [illegible] ದಿಂದ ನಷ್ಟವಾಗುವ ಸುಂಕ,— ಇವನ್ನು [illegible] ನಲ್ಲಿಟ್ಟುಕೊಂಡು, ಹೊಸ ತೆರಿಗೆಗಳನ್ನು [illegible] ಸಲು ಅಶಕ್ಯವಾಗಿರುವ ಕಾರಣ, [illegible] ಗಳೆಲ್ಲವನ್ನೂ ಇಳಿಸು [illegible], ೧೯೩೪ ರಲ್ಲಿ ತಿದ್ದಿದ ಸ್ಕೇಲುಗಳನ್ನು ಈಗ ಇನ್ನೂ ಇಳಿ ಸುವುದಕ್ಕೆ ಕೈಹಚ್ಚಿರುವಾಗಿದೆ ಪ್ರೊವಿನ್ಷಿಯಲ್ ಮತ್ತು ಸಬೋರ್ಡಿನೇಟು ಸರ್ವಿಸುಗಳ ಸಂಬಳ ಮಾತ್ರ ಹೀಗೆ ಕಡಿಮೆ ಮಾಡಬೇಕಾಗಿದೆ

೧೦೦ ರೂಪಾಯಿ ಅಥವಾ ಕಡಿಮೆ ಸಂಬಳ ವಿರುವವರ ಸಂಬಳದಲ್ಲಿ ಕಡಿತವಿಲ್ಲ.

| | | |
|---|---|---|
| ೧೦೦ರಿಂದ ೨೦೦ರ ವರೆಗೆ ಕಡಿತ ಶೇ [illegible] | | [illegible] |
| ೨೦೦ಕ್ಕೆ ಮಿಕ್ಕಿದ್ದಕ್ಕೆ | ,, | [illegible] |
| ಪ್ರೊವಿನ್ಷಿಯಲ್ ಸರ್ವಿಸ್ | | |
| [illegible]೦ ರೂ. ಮತ್ತು ಕಡಮೆ | ,, | [illegible] |
| [illegible]ರಿಂದ ೩೦೦ರ ವರೆಗೆ | ,, | [illegible] |
| ೩೦೦ ,, ೫೦೦ ,, | ,, | [illegible] |
| ೫೦೦ ,, ೧೦೦೦ ,, | ,, | [illegible] |
| ೧೦೦೦ಕ್ಕೆ ಮಿಕ್ಕಿರುವವರಿಗೆ | ,, | [illegible] |

ಜನವರಿ ೧ನೇ ತಾರೀಕಿನಿಂದ ಹೊಸ ಪ್ರೊವಿನ್ಷಿಯಲ್ ಸ್ಕೇಲುಗಳನ್ನು ಇದೇ ಧೋರ [illegible] ಯಂತೆ ಜನ್ಮರಿಗೆ ತರಲಾಗುವುದು ತಾರೀಕು ೧—೪—೧೯೩೭ರಿಂದ ಈ ಸರ್ವಿಸಿಗೆ ನೇಮಕ ಹೊಂದಿರುವ ಮತ್ತು ೧—೧೦—೧೯೩೭ರಲ್ಲಿ ಪ್ರಮೋಶನ್ ಹೊಂದಿದವರಿಗೆ ಈ ಸ್ಕೇಲುಗಳು ಇದೇ ಜನವರಿ ತಾ. ೧ರಿಂದ ಲಗಾವಾಗುವುವು.

ಈ ಸ್ಕೇಲುಗಳು ಹೇಗಿರುವುದೆಂದು ಕೆಲ ಉದಾಹರಣೆಗಳಿಂದ [illegible] ಡೆಪ್ಯೂಟಿ ಕಲೆಕ್ಟರರಿಗೆ ಹಿಂದೆ ೩೦೦ರಿಂದ [illegible] ವರೆಗೂ ಸಿಲೆಕ್ಷನ್ ಗ್ರೇಡಿನಲ್ಲಿ ೧೦೦೦ [illegible] ೦೦ರ ವರೆಗೂ ಸಂಬಳ ಏರುವ [illegible]

# ಜಿನ್ನಾ-ಹುಕ್-ನೆಹರು

## ಮುಸ್ಲಿಮರೇ ಮೊದಲಾದ ಅಲ್ಪಸಂಖ್ಯಾಕರ ಹಿತಕರಣ

**ಇದಕ್ಕೆ ಗುರಿಕಾರರು ಯಾರು?**

ವಿಧಾನಗಳಾವುವು? ಯಾರ ಹಿತವನ್ನು ಹೇಗೆ ಸಾಧಿಸಬಹುದು? ಭಾರತ ವರ್ಷದವ ರೆಲ್ಲ ಒಂದೇ? ನೂರೊಂದೇ?

ಒಬ್ಬರ ಯುದ್ಧ ನಗಾರಿ! ಮತ್ತೊಬ್ಬರ ಕಹಳೆ! ಇನ್ನೊಬ್ಬರ ಕರೆ

(ಪಂಡಿತ ಜವಾಹರಲಾಲರ ಹೇಳಿಕೆ)

'ಕಲ್ಕತ್ತದಲ್ಲಿ ಎರಡು ಮುಖ್ಯ ಭಾಷಣ ಗಳಾದವು ಅವು ಎಲ್ಲೆಲ್ಲಿಯೂ ಟೀಕೆಗೆ ಒಳ ಪಟ್ಟಿವೆ ಅವುಗಳ ನ್ಯಾಯಾನ್ಯಾಯಗಳ ಮಾ ತನ್ನ ವಾಚಕರೇ ತೀರ್ಮಾನಿಸಲಿ ಆದರೆ ಅವುಗಳಲ್ಲಿಂದ ಹೊರಸೂಸುವ ಅಭಿಪ್ರಾಯಗ ಳನ್ನು ಕ್ಷೇ [illegible] ತಿಳಿದುಕೊಳ್ಳಬೇಕು, ಇವುಗಳಿಗೆ ಸಮಾಧಾನವೇನು?

ಮಿ। ಜಿನ್ನಾರವರು — ಹಿಂದೂಗಳನ್ನು ಗುರಿತಪ್ಪಿಸಿ ಹಾಳುದಾರಿಗೆ ಒಯ್ಯುವ ಕಾಂಗ್ರೆ ಸಿನ ಅಧಿನಾಯಕತ್ವವನ್ನು ನಾನು ಕಾದಾಡು ತ್ತೇನೆ

ಮಿ ಫಜಲುಲ್ ಹುಕ್‌ರವರು – ಹಿಂ ದೂಗಳ ಮೇಲೆ ಸೀದಾ ಕೈ ಮಾಡಲು ಸಿದ್ಧರಾ ಗಿರಿ ನನಗೆ ಸರಿಬೀಳದವರಿಗಂತೂ ನನ್ನ ಕೋಲು ಇದೆ ಇನ್ನು ಸಮಾಜಗಳೊಳಗೆ ಜಗಳಗಳಾಗದೆ ಇರಲಾರವು ನಾನು ಅಗ ಪ್ರಮುಖತ್ವವನ್ನು ವಹಿಸಿಕೊಂಡು ಎಂತಹ ಶೋಚನೀಯ ಪರಿಣಾಮಗಳನ್ನು ಉಂಟುಮಾ ಡುವೆನೋ ನೋಡ ಬಿರಿ

~~ಶ್ರೀ. ನೆಹರುರವರು. — ಇದೆಲ್ಲವೂ ಜಾತಿ~~ ದ್ವೇಷವನ್ನು ಹುಟ್ಟಿಸುವಂತೆ ರಾಜಕೀಯ ಮು ಖಂಡರಾರೂ ಉಪಯೋಗಿಸದ ಭಾಷೆಯಲ್ಲಿ, ಅಧಿಕಾರವಾಣಿಯಿಂದ ಇದು ವರೆಗೆ ಯಾರೂ ಮಾತಾಡದ ರೀತಿಯಲ್ಲಿ ಹೊರಟಿರುವುದು ವಿಚಿ ತ್ರವಾಗಿದೆ. ಇಂತಹ ಸೆಣಸಾಟದಲ್ಲಿ ನಾನು ಸೇರುವ ಅಭಿರುಚಿಯುಳ್ಳವನೂ ಅಲ್ಲ ಅದು ನನ್ನ ಸ್ವಭಾವವೂ ಅಲ್ಲ

'ಜಾತಿಪಕ್ಷವಾಗಿ [illegible] ಡುವವನ [illegible] ಗಿರುವುದು [illegible] ಕೊಂಗ್ರೆಸ [illegible] ತರ ತ್ತಿಲ್ಲ ಸಾಮ್ರಾಜ್ಯಶಾಹಿಯನ್ನು [illegible] ಸುವುದಕ್ಕೆ ಕೊಂಗ್ರೆಸು [illegible] ರ್ಥವಾಗಿಲ್ಲ ಈ [illegible] ಗಳಲ್ಲಿ ನಾವು ಸರ್ವರೊಡನೆ (ವ್ಯಕ್ತಿ ಅಥವಾ ಸಮ [illegible]) ಸೇರು ವವರು ನಮ್ಮ [illegible] ಟ್ಟಿಲ್ಲದೆ ಇದ [illegible] ಯಾವ [illegible] ನಮ್ಮ ದೇಶ ಬಾಂಧವರಿಲ್ಲ [illegible] ನಮ್ಮಿಂದಾಗುವ [illegible] ನಾವು ನಾಡ ಬೇವು

ಮಿ ಜಿನ್ನಾ [illegible] ವ್ಯಕ್ತಿಯ [illegible] ದ ಒ ದಿಲ್ಲ [illegible] ಹಕ್ಕು [illegible] ಗ ಪ್ರತಿದ್ವಂದ್ವಿಯಾಗಿಯೇ [illegible]

ಸಾಂಪತ್ತಿಕ ಸಮಸ್ಯೆಗಳನ್ನು [illegible] ಯುವಾಗ ಲಕ್ಷಿಸಿ [illegible] ಕೊಂಗ್ರೆಸು ಇವೆಲ್ಲವು ಯಾವ ಜಾತಿ ಧರ್ಮ ಮೊದಲಾದವುಕ್ಕೆ ಸೇರದೆ, ಎಲ್ಲರಿಗೂ ಅನ್ವ ಯಿಸುವಂತಹವು ಏಕೆಂದರೆ, ಕೊಂಗ್ರೆಸಿನ ಸದಸ್ಯರು ಸಮಸ್ತ ಜಾತಿ [illegible] ಸಮಾಜಗಳ ವರು ಕೊಂಗ್ರೆಸು ಈಗ [illegible] ಸಾಂಗವಷ್ಟೆ ಅಲ್ಲದೆ ಜಗತ್ತಿನವರ ಗೋಚರಕ್ಕೂ ಬರುವಂತಾಗಿದೆ ಇದರಲ್ಲಿ, ಮತ ಮತ್ತು ಜಾತಿಯ ಪ್ರಶ್ನೆಗಳೆಲ್ಲಿವೆ?

'ಈ ದಿನ ಕೊಂಗ್ರೆಸು, ಜಿನ್ನಾರವರು ಸೇ ~~ರಿದ್ದ ಕಾಲದ ಕೊಂಗ್ರೆಸಲ್ಲ. ಈಗ ಕೊಂಗ್ರೆಸಿ~~ ನಲ್ಲಿ 31 ಲಕ್ಷ ಸದಸ್ಯರಿರುವರು, ಇವರೊಳಗೆ ಒಂದು ಲಕ್ಷ ಮುಸ್ಲಿಮರು ಇರುವರು

'ಫೆಡರೇಶನ್ ನಿವಾರಣೆಗೆ, ಸ್ವಾತಂತ್ರ್ಯ ಸಾಧ್ಯತೆಗೆ, ನಿರುದ್ಯೋಗ ದಾರಿದ್ರ್ಯಗಳ ನಿರ್ಮೂಲನಕ್ಕೆ, ಆರೋಗ್ಯ ಶಿಕ್ಷಣ ಕೈಗಾರಿಕೆ ಗಳ ಅಭಿವೃದ್ಧಿಗೆ ಹೋರಾಡುವುದೇ ಕೊಂಗ್ರೆ ಸಿನ ಹೋರಾಟ ಭಾರತ ವರ್ಷವನ್ನು ಪೀಡಿ ಸುವ ಯಾವ ಬಾಧೆಯ ನಿವಾರಣೆಗಾದರೂ ಉಪಾಯಗಳನ್ನು ಹುಡುಕುವುದಕ್ಕೆ ನಾವು ಯಾವಾಗಲೂ ಸಿದ್ಧರು. ಕೊಂಗ್ರೆಸು ಯಾವ ಅಲ್ಪ ಸಂಖ್ಯಾಕರನ್ನು ಕಡೆಗಣ್ಣಿಂದ ನೋಡದೆ ಸರ್ವರನ್ನು ಸಮಾನ ಭಾವನಾಗಿ ನೋಡು

[illegible] ದಿನ [illegible] ಪತ್ರಿಕೆಗಳಿಗೆ [illegible] ಭವಗಳ [illegible] ಜನರು [illegible] ಹಿತರಲ [illegible]

ವೃದ [illegible] ಗೆದ್ದ [illegible] ವ್ಯಕ್ತಿ [illegible] ಕೊಂಗ್ರೆಸ [illegible] ಎವಾದ [illegible] ವ [illegible] ಸಲ [illegible] ಮಿ ಜಿನ್ನಾರವರ [illegible] ಗೆಸು ಅಂಗೀಕರಿಸಿಯೇ ಇದೆ ಅವಕ್ಕೆಂದೂ ತಪ್ಪಿಗಳೆದಿಲ್ಲ

ಇನ್ನು [illegible] ಬೇಕಾ ದರೆ [illegible] ಅದಕ್ಕೆ [illegible] ಸಮರ್ಥಿಸಬಹುದ ಆದರೆ ಈ [illegible] ವೆಲ್ಲ ಯಾ [illegible] ವಿಷಯವಾಗಿ [illegible] ನನಗೆ [illegible] ಯದಾಗಿದೆ

'ಈಗ ಮುಸ್ಲಿಮ್ ಲೀಗಿನ [illegible] ಗಳು ಅದನ್ನು ಕೊಂಗ್ರೆಸಿನ ಹತ್ತಿರಕ್ಕೆ ತಂದಿದೆ ಸ್ವಾತಂತ್ರ್ಯ ಸಾಧನೆಯು ಲೀಗಿನ ಆದರ್ಶಗಳ ~~ಲ್ಲಿ [illegible]~~ ಸಂಸ್ಥೆಯೂ ಕೊಂಗ್ರೆಸಿನೊಡನೆ ಸೇರಿ ಸಾಮ್ರಾ ಜ್ಯ ಶಾಹಿಯನ್ನು ಕೆಡೆವುದರಲ್ಲಿ ವಿಜಯ ಹೊಂ ದೀತೆಂದು ನಂಬಿದ್ದೇನೆ

ಇದೇ ವಿಷಯವನ್ನು ಈಗ ಕೊಂಗ್ರೆಸ್ ಕಾರ್ಯಕಾರೀ ಸಮಿತಿಯೂ ಚರ್ಚಿಸಿಯದೆ ಮ ಹಾತ್ಮಾಜಿಯವರೂ ನೆಹರುರವರೊಡನೆ ಈ ವಿ ಷಯ ಪರಾಮರ್ಶಿಸಿದ್ದಾರೆ [illegible] ಕೊಂಗ್ರೆಸು ಮುಸ್ಲಿಮ್ ಲೀಗ್‌ಗಳು ಒಂದೇ ಸೋದರ ಭಾವದಿಂದ ಇರುವ ಅನುಕೂಲತೆ ಗಳು ಕಲ್ಪಿತವಾಗುವವೆಂದು ನಂಬಬಹುದು ಹಾಗೆಯೇ ದೇಶವು ಉದ್ಧಾರ ಹೊಂದು ವುದಕ್ಕೆ ಹತ್ತಿರದ ಅವಧಿ ಬೇಕಾಗಿದೆ' ದೇವ ರಿಚ್ಛೆ ಹೀಗಿರಲಿ ಎಂದು ಸರ್ವರೂ ಅಭಿಪ್ರಾಯ ಪ್ರಕಟಿಸಿರುವರು.

೧೯೩೪ರಲ್ಲಿ, ಇವರಿಗೆ ೨೫೦ರಿಂದ ೭೦೦ರ ವರೆಗೆ ಎಂದು ನಿರ್ಧಾರವಾಯಿತು ಇನ್ನು ಮುಂದೆ ಈ ಸ್ಕೇಲು ೨೫೦ರಿಂದ ೫೦೦ರ ವರೆಗೆ ಮಾತ್ರ. ಎಂದರೆ, ಪ್ರಾರಂಭದಲ್ಲಿ ೫೦ ರೂ. ಕಡಮೆ, ಅವಸಾನದಲ್ಲಿ ೬೦೦ ಕಡಮೆ.

# ಆರೋಗ್ಯ ವಿಚಾರಗಳು.

## ಮಾದಕದ್ರವ್ಯದ ಆಸೆ ನಿಮ್ಮನ್ನು ತೊಲಗಬೇಕೆ?

### ಕೃತಕ ಆಹಾರಗಳನ್ನು ತಿನ್ನಬೇಡಿರಿ.

ಕೃತಕ, ಅಸ್ವಾಭಾವಿಕ ಆಹಾರಗಳನ್ನು ತಿನ್ನುವುದನ್ನು ನಿಲ್ಲಿಸಿದರೆ ಕುಡಿಕತನದ ಹವ್ಯಾಸವು ಅಳಿಯಬಹುದು ಮಾತ್ರವಲ್ಲದೆ ಅವುಗಳ ನಿಸೆಯಿಂದುಂಟಾದ ಬಾಯಾರಿಕೆಯು ನೀರು ಅಥವಾ ಅನ್ಯಾನ ಇತರ ವಸ್ತುಗಳನ್ನು ಕುಡಿದರೂ ನಿಲ್ಲುವುದಿಲ್ಲ! ಅಂತೂ ಒಟ್ಟಿನಲ್ಲಿ ಹೆಚ್ಚಿನ ಅಂಶ ಈ ಕುಡಿಕತನದ ಹವ್ಯಾಸಕ್ಕೆ ಕಾರಣ ನಾವು ತಿನ್ನುವ ತಿನಿಸು. ಕೆಲವು ಹೋಟೇಲು ಮಾಲಿಕರು ಅಂದರೆ ಮಾದಕದ್ರವ್ಯ ವ್ಯಾಪಾರಿಗಳು, ತಮ್ಮ ವ್ಯಾಪಾರದ ಕಡೆಗೆ ಮಾತ್ರ ದೃಷ್ಟಿಯನ್ನಿಟ್ಟು ಇಂತಹ ತಿಂಡಿಗಳನ್ನು ತಮ್ಮಲ್ಲಿಗೆ ಬಂದ ಉದಾರಿ ವ್ಯಾಪಾರಿಗಳಿಗೆ ಧರ್ಮಾರ್ಥವಾಗಿ ಒದಗಿಸುತ್ತಿದ್ದರು. ಇಂತಹ ಧರ್ಮಾರ್ಥ ತಿಂಡಿಗಳೆಂದರೆ ಚಿತ್ತಳಿ, ಎಪ್ರಲ್, ಮಾಪ್ರ ಮುಂತಾದ ರಸಯುಕ್ತ ಹಣ್ಣುಗಳಿಂದ ಕೂಡಿರಲಿಲ್ಲ ಬದಲು ಹುರಿದ ವಸ್ತುಗಳು, ಮಾಂಸದ ತಿಂಡಿಗಳು, ಕರಿಮೆಣಸು, ಲವಂಗ ಮುಂತಾದ ವಸ್ತುಗಳನ್ನು ಅಧಿಕವಾಗಿ ಉಪಯೋಗಿಸಲ್ಪಟ್ಟ ತಿಂಡಿಗಳು ಆಗಿದ್ದುವು. ಇಂತಹ ತಿಂಡಿಗಳು, ತಿಂದೊಡನೆಯೇ ಗಂಟಲಲ್ಲಿ ಒಂದು ತರದ ವಿಚಿತ್ರ ಪರಿಣಾಮವನ್ನುಂಟು ಮಾಡಿ ಅದನ್ನು ತಿಂದವರೆಲ್ಲ ಒಂದು ಬಟ್ಟಲು ಮಾದಕದ್ರವ್ಯಕ್ಕಾಗಿ ಆ ಹೋಟೇಲನ್ನು ಅಥವಾ ಅಂಗಡಿಯನ್ನು ಪ್ರವೇಶಿಸುವಂತೆ ಮಾಡುತ್ತಿದ್ದುವು.

ಸರಕಾರದ ವಿಚಿತ್ರ ಕಾನೂನು—ಕಟ್ಟಳೆಗಳಿಗಿಂತ, ಪುರುಷ ಪರಿಯಂತ ನಿಷೇಧದ ಕುರಿತಾಗಿ ಬೋಧಿಸುವದಕ್ಕಿಂತ ಸಾಧಾರಣವಾದ ತಿಂಡಿಗಳ, ಪದಾರ್ಥಗಳ ಉಪಯೋಗದಿಂದ, ಮಾಂಸ ಭಕ್ಷಣ, ಅಧಿಕ ಉಪ್ಪು ಬೆರೆಸಲ್ಪಟ್ಟ ಪದಾರ್ಥ, ಅಧಿಕವಾದ ಖಾರ ಪದಾರ್ಥಗಳು ಇವುಗಳ ಉಪಯೋಗದಿಂದ ದೂರವಾಗುವುದರಿಂದಲೂ, ಕಾಯಿಪಲ್ಯ, ಹಸುರು, ಹಣ್ಣು ಗೆಡ್ಡೆಗೆಣಸುಗಳ ಹಾಗೂ ಧಾನ್ಯಗಳ ಉಪಯೋಗದಿಂದಲೂ ಮಾದಕದ್ರವ್ಯ ನಿಷೇಧ ಕಾರ್ಯವನ್ನು ನೆರವೇರಿಸಿಕೊಳ್ಳಬಹುದು ಪ್ರಾಣಿಗಳನ್ನು ಸಾಕಿ ಸಲಹಿ, ಮಾಂಸ ತಿನ್ನುವದರಿಂದಾಗುವ ಉಪಯೋಗಕ್ಕಿಂತ ಹದಿನೈದು ಪಾಲು ಹೆಚ್ಚು ಉಪಯೋಗ ಕಾಯಿಪಲ್ಯದಿಂದಿದೆ.

## ಬಣ್ಣದ ಕಿರಣಗಳಿಂದ ರೋಗಪರಿಹಾರ! ಇನ್ನು ಔಷಧ ಕುಡಿಯಬೇಕಾಗಿಲ್ಲ!

ರೋಗ ಬಂದೊಡನೆಯೇ-ಇನ್ನು ಔಷಧಿ ಕುಡಿಯಬೇಕಲ್ಲ—ಎಂದು ನೀವು ಬೇಸರಿಸಬೇಕಾದುದಿಲ್ಲ. ನಿಮ್ಮ ಕೈಬೆರಳುಗಳ ಮೇಲೆ ಬಣ್ಣ ಬಣ್ಣದ ಕಿರಣಗಳನ್ನು ಪ್ರಯೋಗಿಸಿ ಅಂತಹ ರೋಗಗಳನ್ನು ವಾಸಿಪಡಿಸಬಹುದಂತೆ ಇಂಜಕ್ಷನಿನ ಕಾಟವೂ ಕೊಂಚ ಕಡಿಮೆಯಾಗಬಹುದು. ನಮ್ಮ ಕೈಬೆರಳುಗಳಿಗೂ ದೇಹದ ಇತರ ಅಂಗಗಳಿಗೂ, ಅಂತರ್ ಅಂಗಗಳಿಗೂ ಸಂಬಂಧವಿದೆಯೆಂದೂ, ದೇಹದೊಳಗಿನ ಅಂಗಗಳು ಆಯಾಯ ಬೆರಳುಗಳಿಗೆ ಒಂದು ಅಲೆಯನ್ನು ಕಳುಹಿಸುವುದೆಂದೂ ಅದರ ಅಳತೆ ಆರೋಗ್ಯದಿಂದಿರುವವನಲ್ಲಿ ೧೦ ಸಾವಿರ ಎ. ಯು. ಎಂದೂ ಇದರ ಶೋಧ ನಡೆಸಿದ ಡಾಕ್ಟರ್ ಬ್ರನ್‌ಲರ್ ಎಂಬವರು ಅಭಿಪ್ರಾಯ ಪಡುತ್ತಾರೆ.

ಹೀಗೆ ಕೈಯ ಐದು ಬೆರಳುಗಳಲ್ಲಿ ಹೆಬ್ಬೆರಳು ಶ್ವಾಸಕೋಶಗಳಿಗೂ, ಮಧ್ಯಬೆರಳು ಹೊಟ್ಟೆ ಕರುಳು ಪಿತ್ತಕೋಶಗಳಿಗೂ, ಉಂಗುರಬೆರಳು ಮೂತ್ರಕೋಶಕ್ಕೂ, ಕಿರಿಬೆರಳು ಅಂಗಗಳಿಗೂ ಸಂಬಂಧಿಸಿದೆ ಎಂದು ವ್ಯಕ್ತಪಡಿಸಿದ್ದಾರೆ. ಉದಾಹರಣಾರ್ಥವಾಗಿ, ನಿಮ್ಮ ತೋರ್ಬೆರಳು ಹತ್ತು ಸಾವಿರ ಎ. ಯು. ಅಲೆಗಳನ್ನು ತೋರುವ ಬದಲು ೮೫೦೦ - ಎ. ಯು. ಅಲೆಗಳನ್ನು ತೋರಿಸುತ್ತದೆ ಎನ್ನೋಣ. ಆಗ ನಿಮ್ಮ ಶ್ವಾಸಕೋಶಗಳು ರೋಗಕ್ಕೆ ತುತ್ತಾಗಿವೆ ಎಂದು ಲೆಕ್ಕ. ಇಂತಹ ರೋಗಗಳಿಗೆ ಪ್ರಯೋಗಿಸುವ ಕಿರಣಗಳ ಬಣ್ಣಗಳು-ನೀಲ, ಹಸುರು, ಕೆಂಪು ಮತ್ತು ಹಳದಿ.

ಶೋಧಕರೆನ್ನುವಂತೆ, ನೀಲ ಕಿರಣವು ಹಿಸ್ಟೀರಿಯಾ ಮುಂತಾದ ರೋಗಗಳನ್ನು ಗುಣಪಡಿಸುವುದಲ್ಲದೆ ರಕ್ತದ ಒತ್ತಾಟವನ್ನು ಕಡಿಮೆ ಮಾಡಿ ನಿದ್ರೆಯನ್ನು ಒದಗಿಸುವುದು. ಕೆಂಪು ಕಿರಣವು ಮೆಲಂಕೋಲಿಯಾ ರೋಗಗಳನ್ನೂ ಮೂತ್ರಸಂಬಂಧ ರೋಗಗಳನ್ನೂ ವಾಸಿಮಾಡುವುದು. ಹಸುರು ಆನಂದವನ್ನು ಉಂಟುಮಾಡುವುದು ಕಾರಣ ದೇಹದ ಎಲ್ಲ ಭಾಗಗಳಲ್ಲೂ ಶಕ್ತಿಯನ್ನು ತುಂಬಿ ಉಲ್ಲಾಸವನ್ನು ಹೆಚ್ಚಿಸಿ ಚೇತನವನ್ನುಂಟುಮಾಡುವುದು

## ಒಂದೂಟಕ್ಕೆ ಒಂದು ರೊಟ್ಟಿ ಸಾಕು

### ಇದರ ಬೆಲೆ ಒಂದೇ ಆಣೆ!

ಹಸಿವನ್ನು ನೀಗುವ ಹಾಗೂ ಆರೋಗ್ಯವನ್ನು ಕೊಡುವ ಚಪಾತಿ (ರೊಟ್ಟಿ)ಗಳನ್ನು ಇದೀಗ ಒಂದಾಣೆ ವೆಚ್ಚದಲ್ಲಿ ತಯಾರಿಸಬಹುದೆಂದು ಕಂಡುಹಿಡಿದ್ದಾರೆ. ಆನಂದಕ್ಕಾಗಿ ತಿರುಗಾಡುವವರಿಗೆ, ಕೆಲಸಗಾರರಿಗೆ, ಪರವೂರುಗಳಿಗೆ ಪ್ರಯಾಣಬೆಳೆಸುವವರಿಗೆ ಅನುಕೂಲವಾಗಿ ಇದನ್ನು ತಯಾರಿಸಿಕೊಳ್ಳಬಹುದು ಇದನ್ನು ತಿಂದು ನೀರು ಕುಡಿದು ಹಸಿವು ತೃಷೆಗಳನ್ನು ನೀಗಿಕೊಳ್ಳಬಹುದು ಮನೆ-ಸಂಸಾರ ಇದ್ದವರು ಹೆಂಡಿರ ಸಿಟ್ಟಿಗೆ ತಲೆಬಾಗಿ ಅವರ ಗರ್ಜನೆಗೆ ನಡುಗಿ—ಮನೆಯಲ್ಲಿ ಬಂದ ಸಿಟ್ಟನ್ನು ಆಫೀಸಿನ ತನಕ ತಂದು ಅಲ್ಲಿನ ಬಡ ಕೆಲಸಗಾರರನ್ನು ಬೆದರಿಸಿ ಅನ್ಯಾಯವನ್ನು ಮಾಡುವುದನ್ನು ನಿಲ್ಲಿಸಿಕೊಳ್ಳಬಹುದು

ಹತ್ತು ಔನ್ಸ್ ಗೋದಿ ಹುಡಿ, ಬೆಂಗಾಲಿ ಕಾಳು ೨॥ ಔನ್ಸು (ಒಂದು ಔನ್ಸಿಗೆ ಎರಡೂವರೆ ತೊಲೆ) ನೀರುಳ್ಳಿ, ಮುಕ್ಕಾಲು ಔನ್ಸ್, ಪರಿಮಳಯುಕ್ತವಾದ ಅಥವಾ ನಾವು ಸಾಧಾರಣವಾಗಿ ತಿನ್ನಲು ಉಪಯೋಗಿಸುವ ಹಸುರು ಎಲೆ, (ಹರಿವೆ, ಕೆಸು, ಕೇಬೀಜ, ಬಸಳೆ, ನುಗ್ಗೆ, ಚಗಟೆ ಇತ್ಯಾದಿ ಸೊಪ್ಪುಗಳು.) ಅರ್ಧ ಔನ್ಸು, ತುಪ್ಪ ಅಥವಾ ಬೆಣ್ಣೆ ಕಾಲು ಔನ್ಸ್, ಇವುಗಳನ್ನು ತಂದು ಮೊದಲು ತುಪ್ಪ ಹೊರತು ಉಳಿದವುಗಳನ್ನು ಬೇಕಂತೆ ಕತ್ತರಿಸಿ ತಯಾರುಮಾಡಿ ನೀರಿನಲ್ಲಿ ಕಲಸಿ ರೊಟ್ಟಿ ತಟ್ಟಬೇಕು ಅದನ್ನು ಕಾಯಿಸುತ್ತಿರುವಾಗ ತುಪ್ಪ ಅಥವಾ ಬೆಣ್ಣೆಯನ್ನು ರೊಟ್ಟಿಯ ಮೇಲೆ ಸವರಬೇಕು ಹೀಗೆ ತಯಾರಿಸಿದ ರೊಟ್ಟಿಯ ಭಾರ ಸುಮಾರು ೧ ರಾತ್ತಲು ಇರುತ್ತದೆ ಹೀಗೆ ತಯಾರಿಸಿದ ರೊಟ್ಟಿಯಲ್ಲಿ ದೇಹದ ಬೆಳವಣಿಗೆಗೆ ಬೇಕಾದ ವಸ್ತುಗಳೆಲ್ಲ ಇರುತ್ತವೆ.

ಇನ್ನು ಕುಡಿಯುವುದಕ್ಕೆ ಹಾಲನ್ನಾಗಲೀ ಅಥವಾ ರೊಟ್ಟಿಯೊಡನೆ ಬೆರಸಿ ತಿನ್ನುವುದಕ್ಕೆ ಕೋಳಿಮೊಟ್ಟೆ, ಕುದಿಸಿ ಹುಡಿಮಾಡಿದ ದಪ್ಪ ಹಾಲು ಇವುಗಳನ್ನು ಉಪಯೋಗಿಸಬಹುದು

## ಕರ್ನಾಟಕ ಯುವಕ ಪರಿಷತ್ತು

ಕರ್ನಾಟಕ ಯುವಕ ಪರಿಷತ್ತಿನ ೧ನೆಯ ಅಧಿವೇಶನವು ರಾಣೀಬೆನ್ನೂರಲ್ಲಿ ಇದೇ ತಾ. ೧೩ ರಲ್ಲು ಕಾಮ್ರೇಡಾ ಯುಸುಫ್ ಮೆಹರಾಲಿ ಮುಂಬಾ ಇವರ ಅಧ್ಯಕ್ಷತನದಲಿ ಜರಗುವುದು. ಕರ್ನಾಟಕದ ಎಲ್ಲ ಯುವಕ ಸಂಘಗಳೂ ಮತ್ತು ವಿದ್ಯಾರ್ಥಿ ಸಂಘಗಳೂ ತಮ್ಮ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಈ ಪರಿಷತ್ತು ಯಶಸ್ವಿಯನ್ನಾಗಿ ಮಾಡಬೇಕಾಗಿ ಕೋರಿಕೆ ಬಾಬು ಸುಭಾಷ್ಚಂದ್ರರ ವೀರ ನುಡಿಯನ್ನು ಜ್ಞಾಪಿಸಿಕೊಳ್ಳಿರಿ ಯುವಕರು ರಾಷ್ಟ್ರದ ಜೀವಾಳ. ನಮ್ಮ ರಾಷ್ಟ್ರದ ಪ್ರಗತಿಯು ಭರದಿಂದ ಸಾಗಬೇಕಾದರೆ ಯುವಕರಲ್ಲಿ ಜಾಗ್ರತೆಯುಂಟಾಗಬೇಕು. ಜಾತಿ, ಪಂಥ, ಪಂಗಡಗಳ ಭಾವನೆಯನ್ನು ಬದಿಗಿರಿಸಿ, ರಾಷ್ಟ್ರೀಯ ಭಾವನೆಯನ್ನು ಬೇರೂರಿಸಬೇಕು ಯುವಕರೆಲ್ಲರೂ ಒಂದಾಗಬೇಕು. ನಮ್ಮ ದೇಶವು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿ ಜಗತ್ತಿನಲ್ಲಿಯ ರಾಷ್ಟ್ರಗಳಲ್ಲಿ ಮೇಲ್ಪಂಕ್ತಿಯನ್ನು ಪಡೆದು ವಿರಾಜಿಸಬೇಕೆಂಬ ಅಚಲವಾದ ಧ್ಯೇಯವನ್ನಿಟ್ಟುಕೊಂಡು ಯುವಕರು ಮುಂದರಿಯಬೇಕು ಈ ಸದುದ್ದೇಶದಿಂದಲೇ ಕರ್ನಾಟಕ ಯುವಕ ಪರಿಷತ್ತು ಕರೆಯಲಾಗಿದೆ

ನಿಮ್ಮ ಕುಟುಂಬದವರಿಗೆಲ್ಲ ಒಳ್ಳೇ ಆರೋಗ್ಯ

ನಿಮ್ಮ ಕುಟುಂಬದ ಆರೋಗ್ಯವು ಬಹಳ ಪ್ರಾಮುಖ್ಯವಾದ ವಿಷಯವಾಗಿರುತ್ತದೆ ಇದರಿಂದಲೇ ದೇಶದಲ್ಲಿನ ಎಲ್ಲಾ ಮನೆಗಳಲ್ಲಿಯೂ ಶಕ್ತಿವರ್ಧಕ ಆಹಾರ ಪಾನೀಯವಾದ 'ಓವಲ್ಟಿನ್'ನ್ನು ಬಹಳವಾಗಿ ಉಪಯೋಗಿಸುತ್ತಿದ್ದಾರೆ.

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಪೌಷ್ಟಿಕ ಆಹಾರಗಳಾದ ಹಸನ್ನಾದ ಬಾರ್ಲಿ ಸತ್ವದಿಂದಲೂ, ಉತ್ತಮ ಗೋವಿನ ಹಾಲಿನಿಂದಲೂ ತಯಾರಿಸಲ್ಪಟ್ಟದ್ದಾಗಿದ್ದು ಸಂಪೂರ್ಣವೂ ಪರಿಪೂರ್ಣವಾಗಿಯೂ ಆದದ್ದಾಗಿರುತ್ತದೆ ಇಷ್ಟಲ್ಲದೆ ಇದರಲ್ಲಿ ಪ್ರಕೃತಿಸಿದ್ಧವಾದ ವಿಟಮಿನ್‌ಗಳೂ ಇತರ ಉತ್ತಮ ಆಹಾರಗಳೂ ಸೇರಿವೆ

'ಓವಲ್ಟಿನ್' ನಲ್ಲಿ ದೇಹಶಕ್ತಿಯನ್ನು, ಮಾನಸಿಕ ಚಟುವಟಿಕೆಯನ್ನು ಅಭಿವೃದ್ಧಿಗೊಳಿಸಿ ಆದರ್ಶತರ ಎಲ್ಲಾ ಪೌಷ್ಟಿಕ ಆಹಾರಗಳೂ ಸೇರಿರುವುದರಿಂದ, ಒಂದು ಕಪ 'ಓವಲ್ಟಿನ್' ದಿನಾ ಪ್ರತಿ ಸೇವಿಸುವುದೆಂದರೆ, ನಿಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ಒಳ್ಳೇ ಶಕ್ತಿ ಆರೋಗ್ಯ ಮತ್ತು ಚೈತನ್ಯವನ್ನು ಸೂಚಿಸುತ್ತದೆ ಇಮಿಟೇಶನುಗಳಿಗೆ ಮೋಸಹೋಗಬೇಡಿರಿ

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ
ಮಿದುಳು, ನರ ಮತ್ತು ದೇಹಶಕ್ತಿಯನ್ನು ವೃದ್ಧಿಸುತ್ತದೆ.
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ
ಇದು ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಏಜಂಟರು - ಜೇಮ್ಸ್ ರೈಟ್ ಲಿಮಿಟೆಡ್
ಕಲ್ಕತ್ತ, ಮುಂಬಾಯಿ, ಕರಾಚಿ, ಮದ್ರಾಸುಗಳಲ್ಲಿ

OV/447

# ತಿರುವಾಂಕೂರು ಸಾರಸ್ವತರು

## ದೇವಾಲಯಗಳಲ್ಲಿ ಹರಿಜನ ಪ್ರವೇಶಾಭಿಮತ

ಶೆರ್ತಾಲಿಯ ತಿರುಮಲ ದೇವಸ್ಥಾನ ದಲ್ಲಿ ತಿರುಮಲ ದೇವಸ್ಥಾನ ದಕ್ಷೈಸ್ಕೂಲಿನ ಮುಖ್ಯೋಪಾಧ್ಯಾಯರು ಶ್ರೀ ವಿ. ನಾರಾಯಣ ಕಾಮತ್ ಇವರ ಅಧ್ಯಕ್ಷತೆಯಲ್ಲಿ, ಸಾರಸ್ವತರ ಮಹಾ ಸಭೆಯೊಂದು ಸೇರಿತು. (ತಾ ೨) ಶ್ರೀ ಎಮ್. ಅನಂತ ಕಾಮತರು ಸ್ವಾಗತ ಭಾಷಣ ಮಾಡಿ, ಹರಿಜನರನ್ನು ತ್ರಿವಾಂಕೂರು ಮಹಾರಾಜರು ಎಲ್ಲ ಹಿಂದೂ ದೇವಾಲಯಗಳಲ್ಲಿ ಪ್ರವೇಶಮಾಡಲು ಅಪ್ಪಣೆ (ಶಾಸನ) ಮಾಡಿರುವಂತೆಯೇ ಸಾರಸ್ವತರೂ ಇನ್ನು ವಿಳಂಬಿಸದೆ ಹರಿಜನರನ್ನು ತಮ್ಮ ಸಾರಸ್ವತ ದೇವಸ್ಥಾನಗಳಲ್ಲೂ ನಿರಾತಂಕವಾಗಿ ಪ್ರವೇಶಕ್ಕೆ ಬಿಡಬೇಕೆಂದು ಚರ್ಚಿಸಿ ನಿರ್ಣಯಿಸಬೇಕೆಂದು ಸೂಚಿಸಲು, ಹಲವು ಸ್ವಜಾತಿ ಮುಖಂಡರು ಅದನ್ನು ಅನುಮೋದಿಸಿದರು. ಕೊನೆಗೆ, ಶ್ರೀ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರಿಗೆ ಈ ವಿಷಯವನ್ನು ಅರಿಕೆಮಾಡಿಕೊಂಡು, ಹರಿಜನರಿಗೆ ತಮ್ಮ ದೇವಸ್ಥಾನಗಳಿಗೆ ಪ್ರವೇಶ ಕೊಡುವರೆ ಅಪ್ಪಣೆ ಪಡೆಯಬೇಕೆಂದಾಯಿತು. ಮಾತ್ರವಲ್ಲದೆ, ಎಲ್ಲ ಜಾತಿಗಳ ಹಿಂದುಗಳಿಗೆ ಸ್ವಜಾತಿ ದೇವಸ್ಥಾನಗಳಲ್ಲಿ ಪ್ರವೇಶ ಕೊಡುವಂತಾಗಬೇಕೆಂದು ಅವರು ಅರಿಕೆಮಾಡಿಕೊಳ್ಳಲು ಕೆಲ ಪ್ರತಿನಿಧಿಗಳ ಕೂಟವನ್ನು ನೇಮಿಸಲಾಯಿತು. ಸಾರಸ್ವತರಿರುವ ಕೇಂದ್ರಗಳೆಲ್ಲ ತ್ರಿವಾಂಕೂರು ರಾಜ್ಯದಲ್ಲಿ ಇದೇ ವಿಷಯವಾಗಿ ಸಭೆಗಳು ಸೇರಿವೆ. ಯಥಾ ರಾಜಾ, ತಥಾ ಪ್ರಜಾ, ಸ್ಪೇನು?

—

### ಮಿಶನರಿಗಳಿಗೆ ಹಿತಸೂಚನೆ

### ಯುಕರಿಸ್ಟಿಕ್ ಕೊಂಗ್ರೆಸಿನಲ್ಲಿ ವಿಶಾಖಪಟ್ಟಣದ ಬಿಷಪರ ಭಾಷಣದಿಂದ ಸಂಗ್ರಹಿಸಿದುದು

ಮಿಶನರಿಗಳ ಕರ್ತವ್ಯವೇನೆಂದು ಕೇಳುವರಿದ್ದಾರೆ. ಕ್ರೈಸ್ತ ಮತವನ್ನು ಬೋಧಿಸುವುದು, ಅದನ್ನು ಪ್ರಚಾರಗೊಳಿಸುವುದು. ಇಷ್ಟು ಎಲ್ಲರಿಗೂ ತಿಳಿದುದೇ. ಆದರೆ, ಹಲವರು ತಿಳಿದಿರುವಂತೆ ಕೆಲವರು ಸಂದೇಹಪಡುವಂತೆ ಅಷ್ಟೇ ಮಾತ್ರ ನಮ್ಮ ಕರ್ತವ್ಯವಲ್ಲ.

ನಾವು ಅಂತರ್ಜನಾಂಗಿಕ ಗೊಂದಲಗಾರರಲ್ಲ. ನಾವು ರಾಜಕೀಯ ಸಮಸ್ಯೆಗಳಲ್ಲಿ ಪ್ರಮುಖ್ಯನವರಲ್ಲ. ಯಾವುದೊಂದು ಜನಾಂಗವು ಉಚ್ಛವರ್ಣದ್ದೆಂದು ನಾವು ಗಣನೆಗೆ ತರುವವರಲ್ಲ. ವ್ಯಾಪಾರ ಕೈಗಾರಿಕೆಗಳು ಹರಡುವಂತೆ ನಾವೇನೂ ಪ್ರಕಟಿಸುವವರಲ್ಲ. ನಾವ್ಯಾರೂ ಹಿಂದೀಯರನ್ನು ಪಾಶ್ಚಾತ್ಯರನ್ನಾಗಿ ಪರಿವರ್ತಿಸಲು ಪ್ರಯತ್ನಪಡುವವರೇ ಅಲ್ಲವೆಂದು ಇಡೀ ಕೆಥೋಲಿಕ ಧರ್ಮಾಧಿಕಾರಿಗಳೂ ಆಶ್ವಾಸನೆ ಕೊಡಬಲ್ಲರು. ಹಿಂದೀಯರ ಪ್ರೇಮ್ಯ ಜನಾಂಗಿಕತೆಯನ್ನು ಮುರಿಯದೆ ... ಶ್ರೀ ನಾವೂ ಹಿಂದೀಯರಾಗಿ ಅವರೊಡನೆ ಹಿಂದೀಯರಾಗಿಯೇ ಇರುವಂತೆ ಸಾಧಿಸುವೆವು. ನಮಗೆ ಇಂಡಿಯವೇ ತಾಯ್ನಾಡಾಗಿರುವುದು; ನಾವಿಲ್ಲೇ ಬೆಳೆದು ಬಾಳಿ ದೇಹವನ್ನಿಲ್ಲಿ ಇಳಿಸುವೆವು. ಈ ನಾಡೇ ನಮಗೂ ತಾಯಿ, ಆಕೆಯ ಸಂತಾನವೇ ನಮ್ಮ ಸೋದರರ್ಗ. ಈ ನಾಡು ಸ್ವತಂತ್ರವಾಗಿ ಸಂಪನ್ನವಾಗಿ ಜಗತ್ತಿನಲ್ಲೆಲ್ಲ ಗೌರವ ತಳೆಯಲೆಂದು ನಮ್ಮ ಪ್ರಾರ್ಥನೆಯಾಗಿದೆ. ಕ್ರಿಸ್ತ ಸ್ವಾಮಿಯನ್ನೂ ಆತನ ಬೋಧನೆಯನ್ನೂ ಈ ದೇಶಕ್ಕೆ ಕೊಡಿರುವೆವು. ಅಷ್ಟ ನಮ್ಮ ಕರ್ತವ್ಯ.

ನಮ್ಮ ಜಾತಿಗೆ ಇತರರನ್ನು ಸೇರಿಸಿಕೊಳ್ಳುವುದಷ್ಟೆ ನಮ್ಮ ಕರ್ತವ್ಯವಲ್ಲ; ಶಾಶ್ವತವಾಗಿ ಈ ಧರ್ಮವು ಉಳಿಯುವಂತೆ ಮಾಡುವುದು ನಮ್ಮ ಕರ್ತವ್ಯ. ಇನ್ನೊಂದೆರಡು ತಲಾಂತರಗಳಲ್ಲಿ ಕ್ರೈಸ್ತಧರ್ಮವು ಇಲ್ಲಿ ನೆಲೆಗೊಳ್ಳುವಂತೆ ಮಾಡಬಹುದೆಂದು ಭಾವಿಸುತ್ತೇವೆ.

ಮಿಶನರಿಗಳು ತಾವೇ ಮೊದಲು ಹಿಂದೀಯರಾಗಿ ಬಾಳಲು ಕಲಿತುಕೊಳ್ಳುವುದು ಅಗತ್ಯ. ಇತರ ಧರ್ಮಗಳ ಜ್ಞಾನವನ್ನು ಪಡೆದು ಅವುಗಳಲ್ಲಿನ ಉತ್ತಮಸೂತ್ರಗಳನ್ನು ಅರಿಸಿಕೊಂಡು, ಹಿಂದೀಯರನ್ನು ಸಹಾನುಭೂತಿಯಿಂದ ಕಾಣಲು ಕಲಿತುಕೊಳ್ಳಬೇಕಾಗಿದೆ. ಇಲ್ಲಿನ ಸಂಸ್ಕೃತಿಯನ್ನು ಧ್ವಂಸಗೊಳಿಸುವ ಸಲುವಾಗಿ ಬಂದವರಂತೆ ವರ್ತಿಸದೆ, ಇಲ್ಲಿನವರೊಡನೆ ಸೇರಿ ಒಂದಾಗಿರುವುದೇ ಸಹಜ ಧರ್ಮವಾಗಿದೆ.

———

### ಡಂಡೀ—ಲಂಕೇಶಯರುಗಳು

### ಭಾರತವರ್ಷದ ಬೇಸಾಯಿಗಳಿಗೆ ರಾಹುಕೇತುಗಳು

ನಮ್ಮ ಬಂಗಾಳವೇ (ಜ್ಯೂಟ್) ಸಣಬಿಗೆ ಮಾತೃಸ್ಥಾನ. ಇದು ಪ್ರಪಂಚದಲ್ಲಿ ಮತ್ತೆಲ್ಲಿಯೂ ಬೆಳೆವುದಿಲ್ಲ. ಆದರೆ, ಇದೇ ಎಲ್ಲ ಕೈಗಾರಿಕೆ ಮಾಡುವ ರಾಜ್ಯಗಳಿಗೆ ಅತ್ಯಾವಶ್ಯಕವಾಗಿ ಬೇಕಾದುದು. ಗೋಣೀನಾರು ಇಲ್ಲದಿದ್ದರೆ ಸರಕು ಚಲಾವಣೆಗೆ ಎಷ್ಟು ಕಷ್ಟ ಬಟ್ಟೆ ಮೊದಲಾದುವೂ ಇರವು.

ನಮ್ಮಲ್ಲಿ ಬೆಳೆವ ನಾರನ್ನು ಇಲ್ಲೇ ನೂತು ಬಟ್ಟೆಯನ್ನು ನೇಯುತ್ತ ಅದನ್ನು ರಫ್ತುಮಾಡುವುದು ಸ್ವಾಭಾವಿಕವಾಗಿಯೂ ನಮಗೆ ಪ್ರಯೋಜನಕರವಾಗಿದೆ. ಇದು ರಫ್ತಾಗುವಾಗ ಸುಂಕವೆಂತೂ ಇದೆ. ಇರಲಿ. ಇದನ್ನು ನಾರಿನ ರೂಪವಾಗಿಯೇ ಪಡೆದು ಅಲ್ಲಿ ಬಟ್ಟೆಯನ್ನಾಗಿ ಮಾಡಿ ನಮಗೆ ಮಾರುವವರೂ ಇದ್ದಾರಷ್ಟೆ. ಇವರ ಡಂಡೀ ನಗರದವರು. ಹತ್ತೀ ಬಟ್ಟೆಗೆ ಲಂಕೇಶಯರು, ನಾರಿಗೆ ಡಂಡೀ. ಇವರಿಗೆ ನಾರನ್ನು ನಾವು ಒದಗಿಸಬೇಕಲ್ಲದೆ, ನಾವು ಬಟ್ಟೆ ನೇಯಬಾರದೆಂದೂ, ಹಾಗೆ ಮಾಡಿದಲ್ಲಿ ಅವರಿಗ ನಷ್ಟವಾಗುವ ಕಾರಣ ಆ ವಿದೇಶೀಯ ಬಟ್ಟೆಯಷ್ಟೆ ಬೆಲೆ ಇದಕ್ಕೂ ಬೀಳ ವಂತೆ, ಇಲ್ಲೇ ತಯಾರಾಗುವ ನಾರು ಮತ್ತು ಬಟ್ಟೆಗಳ ಮೇಲೆ ಸುಂಕ ವಿಧಿಸಬೇಕೆಂದೂ ಡಂಡೀಯವರು ತಂಟೆ ಹಿಡಿದು ದೂರು ಕೊಟ್ಟಿರುವರು.

ಹತ್ತಿಯ ವಿಷಯವಾಗಿ ಸಹ ನಮಗೆ ಈ ರಗಳೆಯಿದೆ. ನಾವು ನೇಯುವ ಬಟ್ಟೆಯ ಮೇಲೂ ಸುಂಕವಿದೆ. ಲಂಕೇಶಯರು ಪ್ರತ್ಯೇಕವಾಗಿ ಮತ್ತೊಂದು ಸುಂಕವನ್ನು ಹೊರಿಸುವ ಏರ್ಪಾಡಾದರೆ ಈ ಸುಂಕಗಳ ಸಂಕಷ್ಟದಿಂದ ಎರಡು ಕೈಗಾರಿಕೆಗಳಿಗೂ ಹಾನಿಯಿದೆ.

ಒಡ ಹಿಂದೀಯರು ಸಾಲದ ಬೆಲೆಯದನ್ನೆ ಕೊಂಡುಕೊಳ್ಳುವ ಹಾಗಾಗಲಿ ಎಂದೂ, ಸುಂಕದ ಫಲವು ಬೇಸಾಯಿಗಳಿಗೆ, ಬಡವರಿಗೆ ಎಂದೂ ಗ್ರಿಗ್ ಸಾಹೆಬರು ಸುಂಕ ಏರಿಸುವಾಗಲೆಲ್ಲ ಸಾರುವುದುಂಟು. ಈಗ? ಬಡ ಬ್ರಿಟನ ಕಾರ್ಖಾನಾ ಮಾಲೀಕರಿಗಾಗಿ ಸೌಕರ್ಯವೊದಗಿಸಲು ಸುಂಕವನ್ನು ಏರಿಸುವರೇನು? ನಮ್ಮ ನಾರಿನ ಮೇಲೆ ಸುಂಕವೇರಿದರೆ, ಬ್ರಿಟಿಷರೇ ಹೆಚ್ಚಿನ ನಷ್ಟ ಪಡುವರಲ್ಲ? ಎಷ್ಟೋ ಕಾರ್ಖಾನೆಗಳು ಇಲ್ಲಿಯೂ ಬ್ರಿಟಿಷರದೇ ಆಗಿವೆ. ಇದಕ್ಕೇನು ಮಾಡುವರಂತೆ, ಇಲ್ಲಿನ ಬ್ರಿಟಿಷರು?

——

### ಕೊಚ್ಚಿಯಲ್ಲಿ ಪ್ರಜಾಧಿಕಾರದ ಪ್ರಗತಿ

ದಿವಾನರವರ ಹಸ್ತಕರಾಗಿ ಪ್ರಜಾಭ್ಯುದಯ ಕೆಲಸಗಳನ್ನು ನಿರ್ವಹಿಸಲಿಕ್ಕೆಂದು ಚುನಾಯಿತ ಸದಸ್ಯರಲ್ಲೊಬ್ಬರನ್ನು ಮಹಾರಾಜರು ಮಂತ್ರಿಯನ್ನಾಗಿ ನೇಮಿಸುವರೆಂದು ಈಗ, ಅವರ ಜನ್ಮದಿನಾಚರಣೆಯ ಸಂಭ್ರಮದಲ್ಲಿ ವರದಾನ ಶಾಸನ ಮಾಡಿರುವರು. ಹಲವರು ಮಹಾಜನರು ಇದು ಪ್ರಜಾಸತ್ತೆಯ ಏರ್ಪಾಡಿಗೆ ಅತ್ಯನುಕೂಲವಾದದ್ದೊಂದು ಮೊದಲ ಹರಿಯೆಂದೂ, ಮುಂದೆ ಇನ್ನೂ ಸುಧಾರಣೆಗಳಾಗಲು ಮೊದಲನೆ ಮೆಟ್ಟಿಲೆಂದೂ ಕೊಂಡಾಡಿರುವರು. ಈ ಮಂತ್ರಿಗೆ ಅಧಿಕಾರದಲ್ಲಿರುವ ಅವಧಿಯನ್ನು ಮಹಾರಾಜರೇ ನಿರ್ಣಯಿಸುವ ಕಾರಣ, ಪ್ರಜಾಪ್ರತಿನಿಧಿಗಳು ಈ ಮಂತ್ರಿಯಲ್ಲಿ ಅವಿಶ್ವಾಸ ತೋರಿಸಿದರೂ, ಅವನನ್ನು ತೆಕ್ಕೆ ಬಿಡುವಷ್ಟು ಅಧಿಕಾರವು ಸಭೆಗಿಲ್ಲ, ಮಹಾರಾಜರಿಗೆ ಮಾತ್ರ. ಹೀಗಿರುವ ಕಾರಣ, ಅಧಿಕಾರ ಪ್ರೀತಿಯಿಂದ ಆತನು ಮಹಾರಾಜರ ಇಚ್ಛೆಗೆ ಸರಿಯಾಗಿ ಕಾರ್ಯ ನಡೆಯಿಸುವ ಪ್ರಜಾ ಪ್ರತಿನಿಧಿಯಾಗಿ ನಡೆಯುವುದರಲ್ಲಿ ಸಂದೇಹವಿಲ್ಲ. ವೈಸರಾಯ್ ಸಾಹೇಬರು ಹಿಂದೆ ಒಬ್ಬ ಹಿಂದೀಯನನ್ನು ವೈಸ್ರಾಯರ ಕೌನ್ಸಿಲಿಗೆ ಚುನಾಯಿತ ಸದಸ್ಯರೊಳಗಿಂದಲೇ ಆರಿಸಿ ಉಂಟಾದ ಫಲವನ್ನೂ, ಅದರ ಕಾರಣವನ್ನೂ ಬಲ್ಲವರು,—ಈ ಮಹಾ ವರದಾನಕ್ಕಾಗಿ ಹೇಗೆ ಕೊಂಡಾಡಬಲ್ಲರೋ ಹೇಳಬರುವುದಿಲ್ಲ. ಆದರೆ, ಮಹಾರಾಜರು ಈ ಮಂತ್ರಿಯ ನೇಮಕದ ವಿಷಯ ಒಳಗುಟ್ಟನ್ನು ಸರಿಯಾಗಿ ಈಗಲೆ ವಿವರಿಸಿರುವುದಕ್ಕೆ ಅವರನ್ನು ಖಂಡಿತವಾಗಿಯೂ ಕೊಂಡಾಡಬೇಕಾಗಿದೆ.


# ದಾದಿಯು ಉದರಶೂಲ ಯಿಂದ ನರಳಾಡುತ್ತಿದ್ದಳು.

ಇತರರ ಸಂಕಟ ನಿವಾರಣೆ ಮಾಡುವುದೇ ದಾದಿಯ ಜೀವನಮಾನದ ಉದ್ದೇಶವು. ಅಂಥವಳಿಗೇನೆ ಸಂಕಟ ಪ್ರಾಪ್ತಿಯಾದರೆ, ಆಗ ಆಕೆಯ ಗತಿ ಏನಾಗಬೇಕು? ಇದು ದಾದಿ 'ಡಿ. ಡಬ್ಲ್ಯು' ಎಂಬವಳ ವೇದನಮಯ ಅನುಭವವು. ಅವಳ ಪತ್ರವು ಇಲ್ಲಿ ಕೊಡಲಾಗಿದೆ.

'ಕೂಡಲೆ ಗುಣ ದೊರೆಕಿತು'

"ಅನೇಕ ವರ್ಷಗಳ ಸಮಯ ನಾನೊಂದು ಕಠಿಣ ತರದ ಅಜೀರ್ಣವನ್ನನುಭವಿಸುತ್ತಿದ್ದೆ. ಅನೇಕ ಬಾರಿ ನೋವಿನಿಂದ ನಾನು ನರಳಾಡುತ್ತಿದ್ದೆನು.

"ಅನೇಕ ಔಷಧಿಗಳನ್ನುಪಯೋಗಿಸಿದರೂ ನನಗೆ ಫಲ ದೊರೆಕಲಿಲ್ಲ. ಕಳೆದ ವರ್ಷ ನನ್ನ ಸಂಕಟವು ಭಯಂಕರ ರೂಪವನ್ನು ಹೊಂದಲು ನನ್ನ ಮೇಲೆ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಆದರೂ ನಾನು ನೋವಿನ ಬವಣೆಯಿಂದ ಪಾರಾಗಲಿಲ್ಲ.

ನನ್ನ ತಂಗಿಯು, ತನ್ನ ಉಪಯೋಗಕ್ಕಾಗಿ ಯಾವಾಗಲೂ ತನ್ನಲ್ಲಿ ಒಂದು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪುಡಿಯನ್ನು ಇಟ್ಟುಕೊಳ್ಳುತ್ತಿದ್ದಳು. ಅವಳ ಒತ್ತಾಯದಿಂದ ನಾನೂ ಒಂದು ಡೋಸನ್ನು ಸೇವಿಸಿದ್ದೆನು. ಸಂಬಳಿಸಿದ್ದ ಮನಸಿನ ರೀತಿಯಲ್ಲಿ ನನಗೆ ಒಂದೇ ಒಂದು ಡೋಸಿನಿಂದ ಒಡನೆ ಗುಣಲಾಭ ದೊರೆಕಿತು. ಅದನ್ನು ಸೇವಿಸುತ್ತಿರುವಾಗ ನನ್ನಲ್ಲಿ ಒಂದು ತರದ ನವೀನಭಾವವುಂಟಾಯಿತು. ಕ್ರಮೇಣ ಎಲ್ಲ ನೋವು ಮಾಯವಾಯಿತು.

ಈ ಸಹಿಯಿರುವಂತೆ ಜಾಗರೂಕರಾಗಿರಿ

ಸದಾಕಾಲ ರೋಗಿಗಳ ಸೇವೆಯಲ್ಲಿ ಗೇಯುವ ದಾದಿಯ ಆರೋಗ್ಯ ಮತ್ತು ಬಲವು ಅವಳಿಗೆ ಮಾತ್ರವಲ್ಲದೆ ರೋಗಿಗಳಿಗೂ ಮಹತ್ವವುಳ್ಳದ್ದು. ಆಕೆಯು ಉದರಶೂಲೆಯಿಂದ ಪೀಡಿತಳಾದರೆ, ಆಕೆಯು ಅದಕ್ಕೆ ಒಗ್ಗಬಾರದು.

Alex. C. Maclean

ಮಾತ್ರ ಮೆಕ್ಲೀನನನ್ನು ಪಡಕೊಳ್ಳಬೇಕು.

## MACLEAN Brand Stomach Powder

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡ ರಿನಂತಹ ಅನೇಕ ನಕಲಿ ಔಷಧಿಗಳು ಹೊರಟಿವೆ. ಆದುದರಿಂದ ಪಟ್ಟಿಗೆಯ ಮೇಲೂ ಬಾಟ್ಲಿಯ ಮೇಲೂ 'Alex C Maclean' ಎಂಬ ಸಹಿಯಿಂದ ಕೂಡಿದ ಕಂಪನ ವಿಶೇಷಣವಂತೆ ಸೋಡಿ ಅದು ಚಿಲ್ಲರೆಯಾಗಿ ಮಾರುವುದಿಲ್ಲ. ಪಟ್ಟಿಗೆಯಲ್ಲಿರುವ ಬಾಟ್ಲಿಗಳಲ್ಲಿ (ಪುಡಿಯ ಮಾತ್ರ ರೂಪದಲ್ಲಿ) ಎಲ್ಲಾ ದವಾಖಾನೆಗಳಲ್ಲಿ ದೊರೆಯುತ್ತದೆ.

J L Morison, Son & Jones (India) Ltd Standard Building, Hornby Road, BOMBAY



## ಹಿಂದುಸ್ಥಾನ ಕೋ-ಓಪರೇಟಿವ್ ಇನ್ಸೂರೆನ್ಸ್ ಸೊಸ್ಯಾಟಿ, ಲಿಮಿಟೆಡ್

| ಹೆಡ್ ಆಫೀಸು | | ಸ್ಥಾಪನೆ |
|---|---|---|
| ಕಲ್ಕತ್ತಾ | ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ | 1907 |

| | | |
|---|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ | 12,00,00,000 |
| ಆಸ್ತಿಪಾಸ್ತಿಗಳು | ರೂ | 2,21,00,000 |
| ನೂತನ ವ್ಯವಹಾರ | ರೂ | 2,82,81,000 |

ಅತ್ಯಧಿಕ ಬೋನಸ್ ಹಂಚಲಾಗಿದೆ.

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ವಿಮೆಯ ಮೇಲೆ ಪ್ರತಿ ವರ್ಷ ಒಂದರ ರೂ 23.

ಮಕ್ಕಳ ವಿಮಾ, ಅವಧಿಯ, ಮತ್ತು ಮರಣ ವಿಮೆ—ನಮ್ಮ ವಿಶಿಷ್ಟತೆ

*For particulars please apply to*

T. ANANTACHARI, BRANCH MANAGER, H C I S LTD., POST BOX 223 - MADRAS.

K. K MENON, Organiser H C I S LTD, Court Road CALICUT

## ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ' ಸೇವನೆ ವಿಟ್ಟರೆ ಬೇರೆದಾರಿಯಿಲ್ಲ ಗರ್ಭಾಶಯ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಜೀವಿಸಿ' ಮಾಡುವುದೆಂದರೆ

'ಲೋಧ್ರ'

ಕೇಸರಿಕುಟೀರಂ ರಾಯಪೇಟೆ ಮದ್ರಾಸು

ಮಂಗಳೂರು ಪ್ರವರ್ತಕರು—ಪಾಪ್ಯುಲರ್ ಸ್ಟೋರ್ಸ್, ರಥಬೀದಿ


# ಒಲಿದರೆ ನಾರಿ! ಮುನಿದರೆ ಮಾರಿ!!

ಪುರುಷರು ಸಬಲರೆಂದೂ "ಸ್ತ್ರೀಯರು ಅಬಲೆಯರೆಂದೂ ಜನರು" ಎಣಿಸುತ್ತಾರೆ. ಆದರೆ ಅಬಲೆಯರಾದ ಸ್ತ್ರೀಯರೂ ಸಬಲೆಯರಾಗಿ, ಪುರುಷರಂತೆ, ಅಥವಾ ಅವರಿಗೂ ಮಿಗಿಲೆಯರಾಗಿ 'ಒಲಿದರೆ ನಾರಿ, ಮುನಿದರೆ ಮಾರಿ' ಯರೆನ್ನಿಸಿಕೊಂಡ ಅನೇಕ ಕತೆಗಳನ್ನು ನಾವು ಓದಿದ್ದೇವೆ. ಪುರಾಣಗಳ ಮಾತನ್ನು ನಂಬಲೂ ಬಹುದು, ನಂಬದಿರಲೂ ಬಹುದು ಸ್ತ್ರೀಯರು ಪುರುಷರಂತಾಗಬಲ್ಲರೆಂಬುದಕ್ಕೆ ಇನ್ನು ನಮಗೆ ಪುರಾಣಗಳೇ ಪ್ರಮಾಣಗಳಾಗಬೇಕಿಲ್ಲ. ಪ್ರತ್ಯಕ್ಷ ಅಂಥ ಎಷ್ಟೋ ಸ್ತ್ರೀಯರನ್ನು ಈಗಲೂ ನಾವು ಕಾಣಬಹುದು

ಮಲ್ಲಯುದ್ಧ ವಿಶಾರದೆಯರು, ಡ್ರಿಲು ಕಸರತ್ತುಗಳಲ್ಲಿ ಪ್ರವೀಣೆಯರು, ಲೇಡಿ ಸೆಂಡೊಗಳ ಅದ್ಭುತ ಸಾಹಸದ ಸಮಾಚಾರಗಳು ಈಗ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಬರುತ್ತಿವೆ ಆ ವಾರ್ತೆಗಳು ಪುರುಷರನ್ನು ರೋಮಾಂಚನಗೊಳಿಸುತ್ತವೆ ಹಿಂದಿನ ಕಾಲದ ಆ ನಾರಿಯರೋ—ರಾಕ್ಷಸಿಯರಂತೆ ಭೀಮಕಾಯರಾಗಿದ್ದಿರಬಹುದು ನೋಡಿದರೆ ಭಯ ಹುಟ್ಟಿಸುವ ರೂಪು ಆಕಾರಗಳನ್ನು ತಾಳಿದ್ದಿರಬಹುದು ಆದರೆ, ಈಗಿನವರು ಹಾಗಲ್ಲ ನೋಡಿದರೆ ಅವರು ಕೋಮಲಾಂಗಿಯರೇ ಆಗಿದ್ದರೆ, ಸುರದ್ರೂಪಿಣಿಯರಾಗಿದ್ದಾರೆ ಅವರು ಅತ್ಯಂತ ಆಕರ್ಷಕರಾಗಿರುತ್ತಾರೆ' ಮೈಮಾತ್ರ ಕಲ್ಲಿಗಿಂತಲೂ ಗಟ್ಟಿ; ಮನಸ್ಸು ಪಾಷಾಣದಂತೆ ಕಠಿಣ.

ಈಗ ಈ ನಾರಿಯರು ಪುರುಷರಿಗಿಂತ ಮಿಗಿಲಾಗುತ್ತಿದ್ದಾರೆ ಪುರುಷರನ್ನು ಕೆಣಕಿಸಿ ಸಂಗ್ರಾಮಕ್ಕೆ ಕರೆಯುತ್ತಿದ್ದಾರೆ ಪುರುಷರು ದಿಗಿಲುಪಟ್ಟು ಹಿಂದೆಹಿಂದೆ ಸರಿದಂತೆ ಅವರು ಮುಂದುಮುಂದಾಗುತ್ತಿದ್ದಾರೆ

ಲಂಡನಿನ ಜನನಿಬಿಡವಾದ ಒಂದು ಸ್ಥಾನದಲ್ಲಿ ಮೊನ್ನೆ ತಾನೇ ಒಂದು ದೊಡ್ಡ ತಮಾಷೆ ನಡೆಯಿತು ಎಾಹುಬಲದ ಪ್ರದರ್ಶನವನ್ನು ಅಲ್ಲಿ ಮಾಡಲಿಕ್ಕಿತ್ತು ಪ್ರದರ್ಶನಕ್ಕೆ ಬಂದವರು ಯಾರು ಬಲ್ಲಿರಾ? ಲೋಕವು ದಂಗುಬೆಸ್ಸಿಸಿದ ಯುವತಿಯರು ಅವರು ತಮ್ಮ ಶರೀರ ಬಲವನ್ನು ನಾನಾ ಆಟಗಳಿಂದ ತೋರಿಸಿದರು ಪುರುಷರು ಅದನ್ನು ನೋಡಿ ತುಟಿಕಚ್ಚಿದರು

ಪುರುಷರು ಈ ವರೆಗೆ ತಮ್ಮ ಅಧಿಕಾರದ್ದೆಂದು ತಿಳಿದು ನಿಶ್ಚಿಂತರಾಗಿದ್ದ ಕ್ಷೇತ್ರಗಳನ್ನೆಲ್ಲ ಸ್ತ್ರೀಯರು ಬಂದು ಆಕ್ರಮಿಸುತ್ತಿದ್ದಾರೆ. ವ್ಯಾಯಾಮ ಕಸರತ್ತುಗಳಲ್ಲಿ, ವಿಮಾನ ನಡೆಸುವುದರಲ್ಲಿ, ಭಾರವನ್ನೆತ್ತುವುದರಲ್ಲಿ ಸ್ತ್ರೀಯರು ಮುಂದಾಗಿರುವುದು ಮಾತ್ರವಲ್ಲ, ಕಾಲ್ಚೆಂಡಾಟ ಉರುಡಾಟ, ಗುದ್ದಾಟಗಳಲ್ಲಿಯೂ ಅವರು ಪುರುಷರನ್ನು ಮೀರಿಸುತ್ತಿದ್ದಾರೆ ಪೋಲೀಸು ಫೌಜು, ಸೈನಿಕದಳಗಳಲ್ಲಿ ಕೂಡ ಸ್ತ್ರೀಯರ ಪ್ರವೇಶವಾಗಹತ್ತಿದೆ ಕೈಗಾರಿಕೆ ಕೇಂದ್ರಗಳಲ್ಲಿ ಕೂಲಿಕಾರರ ದೊಡ್ಡ ದೊಡ್ಡ ಮುಷ್ಕರಗಳಾಗುತ್ತಿವೆ ಅವುಗಳಲ್ಲಿ ಸ್ತ್ರೀಯರೂ ಸೇರಿಕೊಳ್ಳುತ್ತಾರೆ ಸಾರ್ವಜನಿಕ ಶಾಂತಿಗೆ ಭಂಗ ತರುವ ಕಾರ್ಯಗಳನ್ನು ಅವರು ಮಾಡುತ್ತಾರೆ. ಆಗ ಸ್ತ್ರೀಯರನ್ನು ದೂರಕ್ಕೊಯ್ಯುವ ಸಾಹಸದ ಕಾರ್ಯವನ್ನು ಸಮರ್ಥ ಸ್ತ್ರೀಯರು ಮಾತ್ರ ಬಲ್ಲರು ಅಂಥ ದಿಂಡೆಯರು ಕೂಡ ಅಮೇರಿಕದಲ್ಲಿ, ಜರ್ಮನಿಯಲ್ಲಿ, ಫ್ರಾನ್ಸಿನಲ್ಲಿ ತುಂಬಾ ಇದ್ದಾರೆ

ಆಧುನಿಕ ಸ್ತ್ರೀಯರು ಅಬಲೆಯರಲ್ಲ, ಅವರು ಪುರುಷರಂತೆ ಸಬಲೆಯರು ಯೊಂದು ರೀತಿಯಿಂದ ಆಧುನಿಕ ಸ್ತ್ರೀಯರು ಆಧುನಿಕ ಪುರುಷರಿಗೆ ಸಮಾನರು ಅಥವಾ ಅವರನ್ನು ಮೀರಿಸುವವರು ಆಗುತ್ತಿದ್ದಾರೆ. 'ಸ್ತ್ರೀಯರು ಪುರುಷರಿಗೆ ಅಧೀನರಾಗಿರತಕ್ಕವರು' ಎಂಬ ಮಾತನ್ನು ಮರೆಯುವ ಕಾಲವು ಸಮೀಪವಾಗುತ್ತಲಿದೆ ಅಂಥ ಕಾಲವು ಬಂದಾಗ ಸ್ತ್ರೀಯರು ಒಲಿದರೆ ನಾರಿಯರು ಮಾತ್ರವಲ್ಲ, ಮುನಿದರೆ ಮಾರಿಯರೂ ಆಗುವರು


## 'DILROZ' Regd

'Dil Roz' is a sure cure for Oriental sores local sores, all kinds of deep rooted sores, skin eruptions Pimples, Eczema, Ringworm Sinus Fistula auxillary Abscess

There is no need of dressing the wounds nor are baths prohibited

Price Rs. 2 Postage extra.

TAHIR DIN
Anarkali, LAHORE





ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣ ಬೇಧಿಗಳು, ಕೈಕಾಲುಗಳು ಸಣ್ಣವಾಗಿ ರೋಗ, ಇವುಗಳಿಂದ ನರಳಿ, ಬಳಲಿ ಎಷ್ಟೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ನೊಯೋ ಎಂದಿರುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ

ಎಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

## ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೧ ಗೋವಿಂದಪ್ಪನಾಯ್ಕರ್ ಬೀದಿ,
ಜಿ ಟಿ ಮದ್ರಾಸು

ದ ಕ ಜಿಲ್ಲೆಯ ಏಜಂಟರು —
ಪಾಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.



***Ready for sale!***

# SHARADA DIARY 1938

ARE ISSUED IN THREE SIZES

**Small size 0—4 0.**

ಶಾರದಾ ಪೋಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

**Interleaved big size DIARIES useful for Banks & Lawyers**

ARE AVAILABLE AT 1—2—0 PER COPY

**Sharada Press, Mangalore, S. Canara.**



## HOUNSA

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು



*Use the soaps*
KNOWN ALL OVER
***WISICO'S.***

**MINAR**
&
**TAJAMAHAL** Red
Bar Soaps.

POPULAR IN THE MARKET

*Sole Distributer -*

**P. G. KAMATH,**
Kashmir House
Marnamikatta, MANGALORE



## ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ ಸಮಾಜ, ಪೆರಿಡೇಪಿ
P O, Peridepi (ನೆಲ್ಲೂರು ಜಿ)

## ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು

### ಮೂರನೆಯ ಅಧಿವೇಶನ ಮದ್ರಾಸು ಏನಾಯಿತು?

ಈ ಪರಿಷತ್ತು ಮದ್ರಾಸು ಮೆಡಿಕಲ್ ಕಾಲೇಜಿನ ಪರಾರದಲ್ಲಿ ಸೇರಿತು. ಶ್ರೀ ಎಮ್. ಆರ್. ಮಸಾನಿಯವರೇ ಅಧ್ಯಕ್ಷರು ವಿದ್ಯಾರ್ಥಿಗಳು ತುಂಬಾ ಹಾಜರಿದ್ದರು. ರಾಷ್ಟ್ರಧ್ವಜವನ್ನು ಶ್ರೀ ಕೆ. ಎಸ್. ಆಳ್ವರು ಏರಿಸಿದ ಬಳಿಕ, ಸ್ವಾಗತಾಧ್ಯಕ್ಷ ಶ್ರೀ ಕೆ ಸರ್ವೋತ್ತಮ ಶೆಟ್ರು ಶ್ರೀಮತಿ ಕಮಲಾ ದೇವಿಯರೇ ಮೊದಲಾದವರನ್ನು ಸ್ವಾಗತೀಕರಿಸಿ ಭಾಷಣ ಮಾಡಿದರು. ಶ್ರೀ ಸುಭಾಷ್ಚಂದ್ರ ಬೋಸರೂ ಶ್ರೀಮತಿ ಸರೋಜಿನಿಯವರೂ ಆಶೀರ್ವಚನ ಸಂದೇಶ ಕಳುಹಿದ್ದರು ಇವಲ್ಲದೆ, ಪ್ಯಾರಿಸು, ಇಂಗ್ಲೆಂಡುಗಳಲ್ಲಿನ ವಿದ್ಯಾರ್ಥಿಗಳ ಫೆಡರೇಶನುಗಳೂ, ಮಧ್ಯಪ್ರಾಂತ್ಯದ ಮಂತ್ರಿಗಳೂ ಸಂದೇಶ (ಸೌಹಾರ್ದತೆಗಳನ್ನು ಸೂಚಿಸಿ) ಕಳುಹಿದ್ದರು ಶ್ರೀಮತಿ ಕಮಲಾ ದೇವಿಯವರ ಭಾಷಣವಾಗಿ ಅಧ್ಯಕ್ಷರು ಭಾಷಣ ಮಾಡಿದರು. ಯಾವುದೊಂದು ರಾಜಕೀಯ ಪಕ್ಷದ ಹಿಂಬಾಲಿಕರಾಗಿ ವಿದ್ಯಾರ್ಥಿಗಳು ಇರಬಾರದೆಂದೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ವಿದ್ಯಾರ್ಥಿಗಳು ಹೋರಾಡುವ ವೀರರಾಗಲು ಮುಂದೆ ಸಿದ್ಧರಾಗುವಂತಿರಬೇಕೆಂದೂ ಪ್ರತಿಯೊಂದು ವಿಷಯವನ್ನೂ ಸ್ವಂತದ ವಿಚಾರದಿಂದಲ್ಲದೆ ಅಂಗೀಕರಿಸಬಾರದೆಂದೂ, ವಾರ್ಧಾ ಸ್ಕೀಮು ಅಪ್ರಾಸಾಂಗಿಕವಾದುದೆಂದೂ ವಿದ್ಯಾರ್ಥಿಗಳೆಂಒವರನ್ನು ಸಹಕರಿಸುವುದೇ ಈ ಪರಿಷತ್ತಿನ ಧ್ಯೇಯವೆಂದೂ, ಜಾತಿವಾರು ಮೊದಲಾದ ಪರಿಷತ್ತುಗಳು ಇರುವುದು ನ್ಯಾಯವಲ್ಲವೆಂದೂ ಜಗದ್ಬಾಂಧವ್ಯ ಸಾಧಿಸುವುದೂ ಒಂದು ಆದರ್ಶವೆಂದೂ ಬೋಧಿಸುತ್ತಿದ್ದರು

ಫೆಡರೇಶನು ಉಂಟಾಗದೆ ಹಾಗೆ ಪ್ರಯತ್ನಿಸಬೇಕಾಗ ಮಾತ್ರವಲ್ಲದೆ ಸಾಮ್ರಾಜ್ಯದ ಸವಾರಿ ಇತ್ತ ಬಂದಾಗ ಅದನ್ನು ಬಹಿಷ್ಕರಿಸಬೇಕಾಗಿ ಕಾಂಗ್ರೆಸ ಪ ಯ ತ್ನಿಸಬೇಕೆಂದೂ ಸಹಾ ಸೂಚನೆಗಳು ಮಂಜೂರಾದವು ರಷ್ಯದ ಮೇಲೆ ಅದು ಶಾಂತಿ ಮತ್ತು ಅಭ್ಯುದಯ ಸಾಧಕ ರಾಜ್ಯವಾದ ಕಾರಣ, ಅದನ್ನು ಅಣಗಿಸ ವಸರಾದ ಫೆಸಿಸ್ಟ, ಅಥವಾ ಶ್ರೀಮಂತ ರಾಜ್ಯಗಳ ಪ್ರಯತ್ನಗಳನ್ನು ನಿಷೇಧಿಸಿ, ಇಪ್ಪತ್ತು ವರ್ಷಗಳ ತನಕ ದೇಶಾಭ್ಯುದಯ ಸಾಧಿಸಿದ ಸೋವಿಯಟ್ಟನ್ನು ಶ್ಲಾಘಿಸಿ, ಅದರಷ್ಟು ಉತ್ತಮ ಪ್ರಜಾಸತ್ತೆಯಿಲ್ಲೆಂದು ಅದನ್ನು ಅಭಿನಂದಿಸತಕ್ಕ ತರಾವು ಮುಂದೆ ಬಂತು ಆಗಲೆ ಚರ್ಚೆಗ ಪ್ರಾರಂಭವಾಯಿತು ಅದನ್ನು ಹಿಂತೆಗೆವುದಕ್ಕೆ ಅಪ್ಪಣೆ ಸಿಗಲಿಲ್ಲ ವೋಟು ಎತ್ತಲಾಗಿ, ಬಹುಮತವು ಅದನ್ನು ತಿದ್ದಬಾರದೆಂದೇ ಸೂಚಿಸಿತು ಪ್ರಾಂತಿಕವಾಗಿ ಹೇಗೆ ಅಭಿಪ್ರಾಯವೆಂದು ನೋಡುವಾಗ, ಅಲ್ಲಿ ಹಾಜರಿದ್ದ ಪ್ರತಿನಿಧಿಗಳು ಎರಡೇ ಪ್ರಾಂತ್ಯಗಳಿಂದ ಮಾತ್ರ ಇದ್ದರೆಂದೂ, ಉಳಿದ ಒಂಭತ್ತು ಪ್ರಾಂತ್ಯಗಳಿಂದ ಯಾವ ಪ್ರತಿನಿಧಿಗಳ ಫೀಸು ಬಂದಿರಲಿಲ್ಲವೆಂದೂ ಗೊತ್ತಾಯಿತು ಅಧ್ಯಕ್ಷರು ಇಂತಹ ಪರಿಷತ್ತಿನಿಂದ ಯಾವುದೊಂದು ನಿರ್ಣಯವನ್ನು ಅಂಗೀಕರಿಸಿಕೊಳ್ಳುವ ಬದಲಾಗಿ, ಅದನ್ನು ಹಿಂತೆಗೆವುದುತ್ತಮವೆಂದರು. ಮರುದಿನ ಬೆಳಗ್ಗೆ, ಅಧ್ಯಕ್ಷರು ಇನ್ನು ಈ ವಿಷಯ ತುಂಬಾ ಆಲೋಚಿಸಿದರೂ, ಸಭೆಯ ನಿರ್ಣಯಗಳು ಸರ್ವಮಾನ್ಯವಾಗದ ಕಾರಣ, ಸಭೆಯನ್ನು ವಿಸರ್ಜಿಸುವುದುತ್ತಮವೆಂದು-ಹಾಗೇ ಮಾಡಿದರು ವ್ಯವಸ್ಥೆಗೆ ಸರಿಯಾದ ಮತ್ತೊಂದು ಪರಿಷತ್ತನ್ನು ಕರೆವಂತೆಯೂ ಸೂಚಿಸಿದರು ಅವರೂ ಕೆಲ ಡೆಲಿಗೇಟರೂ ಅವರನ್ನು ಸೇರಿ ಎದ್ದು ಹೋದರು ಉಳಿದವರು ಸಭೆಸೇರಿ, ಸ್ವಾಗತಾಧ್ಯಕ್ಷ ಅಧ್ಯಕ್ಷರನ್ನಾಗಿಟ್ಟುಕೊಂಡು, ಹಳೆಯ ಕಾರ್ಯಕಾರೀ ಸಭೆ, ಅಧ್ಯಕ್ಷರು ಮತ್ತು ಸೆಕ್ರೆಟರಿಯವರಲ್ಲಿ ಅವಿಶ್ವಾಸದ ಠರಾವನ್ನು ಮಂಜೂರ್ಮಾಡಿಕೊಂಡರು. ಅನಂತರ ಮರುದಿನ ಸೇರುವುದಾಗಿ ನಿರ್ಧರಿಸಿದರು.

ಕಾರ್ಯಕಾರೀ ಮಂಡಲವು ಸೇರಿ, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಡಿಲ್ಲಿ, ಬಂಗಾಳ, ಪಂಜಾಬುಗಳ ಪ್ರತಿನಿಧಿ ಸದಸ್ಯರು ಪ್ರೆಸಿಡೆಂಟರು ವರ್ತಿಸಿದ್ದು ಈ ಸಂದರ್ಭದಲ್ಲಿ ಸರಿಯಾದುದೆಂದೂ, ಈ ಅಧಿವೇಶನದಲ್ಲಿ ನಡೆದ ಕಾರ್ಯವೆಲ್ಲ ಸಿಂಧುವಲ್ಲವೆಂದೂ, ಮೂಲ ವ್ಯವಸ್ಥೆಯಂತೆ ಈ ಮಂಡಲವು ಪರಿಷತ್ತನ್ನು ಕರೆವಂತಾಗಬೇಕೆಂದೂ, ಅಧ್ಯಕ್ಷರು ಸಭಾ ವಿಸರ್ಜನೆ ಮಾಡಿದ ಬಳಿಕ ಕೆಲ ಡೆಲಿಗೇಟರು ಗೊಂದಲವೆಬ್ಬಿಸಿದ್ದು ಸರಿಯಾದುದಲ್ಲವೆಂದೂ ನಿರ್ಣಯ ಮಾಡಿದರು

### ವಿದ್ಯಾರ್ಥಿಗಳ ಪರಿಷತ್ತು

#### ಮದರಾಸು

ವ್ಯರ್ಥವಾಯಿತೇಕೆ? ವಿದ್ಯಾರ್ಥಿದಶೆಗೆ, ಸಂಬಂಧಪಡುವ ಸಮಸ್ಯೆಗಳನ್ನು ಮಾತ್ರ ಆಲೋಚನೆಗೆ ತೆಗೆದುಕೊಳ್ಳದೆ, ಸಮಾಜವಾದಿಗಳ ಮತ್ತು ಸಮತಾವಾದಿಗಳ ಜಗಳದಲ್ಲಿ ಇವರು ಸಿಕ್ಕಿಕೊಂಡುದೇ ಹೀಗಾಗಲು ಕಾರಣವೆನ್ನುತ್ತಾರೆ ಹಿಂದೆಯೂ ಮುಂದೆಯೂ ವಿದ್ಯಾರ್ಥಿಗಳೇ ನಮ್ಮ ಜನಾಂಗದ ಸಮಸ್ತ ರಾಜಕೀಯ ಸಾಮಾಜಿಕವೇ ಮೊದಲಾದ ಚಳವಳಿಗಳಲ್ಲಿ ಅತ್ಯಧಿಕ ಭಾಗವಹಿಸ ಬಲ್ಲವರು. ಅವರನ್ನು ಪಕ್ಷಗಳ ತಂತ್ರಗಳಲ್ಲಿ ಸಿಲ್ಕಿಸಿ ಯಾರಿಗೂ ಯಾವ ಪ್ರಯೋಜನವೂ ಇರಲಾರದು ... ಮತದಿಂದ ಬಹುಸಂಖ್ಯಾತರು ಅಭಿವೃದ್ಧಿ ಸಾಧಕವಾದುದೆಂದು ಯಾವ ಚಟುವಟಿಕೆಗಳನ್ನು ಪ್ರೇರೇಪಿಸುವರೋ, ಅದನ್ನು ವಿಮರ್ಶಿಸಿ ಪಾರ ನಡೆದು, ಜನಾಂಗದ ಉನ್ನತಿಗೆ ದುಡಿಯುವುದಷ್ಟೇ ವಿದ್ಯಾರ್ಥಿಗಳ ಸದ್ಯದ ಕರ್ತವ್ಯವೆಂದು ಅಭಿಪ್ರಾಯಗಳು ಒಲ್ಲದವರಿಂದ ದೊರೆಯದೆ ಇರಲಾರವು. ಇವನ್ನಾದರೂ ಸರಿಯಾಗಿ ವಿಮರ್ಶಿಸಿ, ಯಾರೊಬ್ಬನ ತಂತ್ರ ಮತ ಸ್ವೇಚ್ಛಾಸಾಧನೆಗಳಿಗೆ ಉಪಕರಣಗಳಾಗದೆ ವಿದ್ಯಾರ್ಥಿಗಳು ನಡೆವುದರಿಂದ ಸಮಸ್ತರಿಗೂ ಹಿತವೇ.


## ಕುಂದಕವನ್ನುಂಟುಮಾಡುವ ಮನೋವ್ಯಾಕುಲಗಳನ್ನು

## ಭಾರತೀಯ ಚಾ ಪಾನಮಾಡಿ ತೊರೆಯಿರಿ

"ಚಾ ಪಾನವು ಮನಃಖಿನ್ನತೆಯನ್ನುಂಟುಮಾಡುವ ಸಂಚ ಕಾರಣಗಳನ್ನು ಹೋಗಲಾಡಿಸುವುದು" ಎಂಬ ಒಂದು ಹೇಳಿಕೆ ಇದೆ ಇದು ಒಂದು ಜಂಭದ ಹೇಳಿಕೆಯಲ್ಲ ಬಹಳ ಸಹಜವಾದುದು" ಎಲ್ಲಾ ಚಾ ಪಾನಕರುಗಳ ಅನುಭವ

ಸೌಂದರ್ಯವಾದ ಮತ್ತು ಉತ್ಕೃಷ್ಟವಾದ ವಸ್ತುವನ್ನು ನೋಡಿದೊಡನೆ ಉಂಟಾಗುವ ಬ್ರಹ್ಮಾನಂದವನ್ನು ಮೊಟ್ಟಮೊದಲು ಚಾ ರುಚಿನೋಡಿದವರಿಗೆ ಭಾರತೀಯ ಚಾ ಉಂಟುಮಾಡುವುದು ಸಹಸ್ರ ಗುಣ ಗೊಳಗೂಡಿರುವ" ಈ ಪಾನವಿಲ್ಲದೆ ಜೀವಿಸುವುದು ಬಹು ಬೇಜಾರು



### ಚಾ ತಯಾರಿಸುವ ವಿಧಾನ

ನಿರ್ಮಲವಾದ ನೀರನ್ನು ಕಾಸಿ ಕುದಿಯಾದ ಒಂದು ಪಾತ್ರೆಯನ್ನು ಬೆಚ್ಚಗೆ ಮಾಡಿ ಅದರಲ್ಲಿ ತಲಾ ಒಂದು ಚಮಚ ಕೊಸರಿಗೊಂದು ಚಮಚಾ ಉತ್ತಮವಾದ ಭಾರತೀಯ ಚಾ ಸೊಪ್ಪನ್ನು ಹಾಕಿ ನೀರು ಚೆನ್ನಾಗಿ ಕುದಿದ ಮೇಲೆ ಅದರ ಮೇಲೆ ಸುರಿಯಿರಿ ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರಸಿ ಸೇವಿಸಿರಿ

## ಹಿಂದೂದೇಶದ ಆನಂದ, ಹೆಮ್ಮೆ-ಭಾರತೀಯ ಚಾ

I K. 43

# ಮನುಷ್ಯನಿಗಿಂತ ಪ್ರಾಣಿಗಳೇ ಶ್ರೇಷ್ಠ!

## ಬುದ್ಧಿಯಲ್ಲಿ ಮಿಗಿಲು, ಆದರ್ಶಮಯ ಪ್ರೇಮ,

### ದೂರಾಲೋಚನೆ ಅಧಿಕತಮ!

ಮಾನವನಂತೆ ಇತರ ಪ್ರಾಣಿಗಳಿಗೂ ಶಕ್ತಿಯಿದೆ, ಬುದ್ಧಿ ಇದೆ, ಮಿದುಳಿದೆ, ಅಂತೆಯೇ, ಪ್ರೇಮ, ಕಾಮ, ಹೊಟ್ಟೆಕಿಚ್ಚು, ನ್ಯಾಯ ಇವು ಗಳಿವೆ. ಆದರೆ ಮಾನವನಲ್ಲಿ ಅದು ವಿಪರೀತವಾದ ಉಪಯೋಗಗಳಿಗಾಗಿ ಉಪಯೋಗಿಸಲ್ಪಡುತ್ತದೆ. ಮಾನವನು ತನ್ನ ತಲೆಯನ್ನು ವಿವಿಧ ವಿಚಾರಗಳಿಗಾಗಿ ಉಪಯೋಗಿಸುವುದರಿಂದ ಇತರೆ ಪ್ರಾಣಿಗಳು ತಮ್ಮ ದೇಹದ ಅಂಗವಾಗಿ ಸ್ವಹಿತರಕ್ಷಣೆಗಾಗಿ ಉಪಯೋಗಿಸಿಕೊಳ್ಳುತಿದೆ.

ಪ್ರಾಣಿಗಳಲ್ಲಿ ಕೂಡ ನಾವು ಬೇರೆ ಬೇರೆ ವಿಚಾರಗಳನ್ನು ಕಾಣಬಹುದಾಗಿದೆ. ಉಪಾಯ – ಸಮಾಧಾನ, ಪ್ರತ್ಯುಪಕಾರವಅಪಕಾರ, ಬೇಸರ – ಆನಂದ, ಪ್ರೇಮ—ದ್ರೋಹ, ಹುರುಪು – ಸೋಮಾರಿತನ, ಕಾಮ, ಹಿತ—ಅಹಿತ ಮುಂತಾದುವುಗಳು ಅವುಗಳಲ್ಲೂ ಇವೆ.

ಈ ಕುರಿತಾಗಿ ಡಾ। ಪ್ರೊರೊನೊಪ್ ಎಂಬವರು ತನ್ನ 'ಪ್ರೇಮ, ಪ್ರಾಣಿಗಳಲ್ಲಿ ಮತ್ತು ಮಾನವರಲ್ಲಿ ಪ್ರೇಮ ಮತ್ತು ವಿಚಾರಗಳು' ಎಂಬ ಗ್ರಂಥದಲ್ಲಿ ತನ್ನ ಅನೇಕ ಅನುಭವಗಳ ಸಹಾಯದಿಂದ ವಿಶಾಲವಾಗಿ ವಿವರಿಸಿದ್ದಾರೆ. ಅವುಗಳಲ್ಲಿ ಪ್ರಾಣಿಗಳಲ್ಲಿನ ಬುದ್ಧಿಯು ಮಾನವನ ವಿಚಾರಗಳಿಂದ ಎಲ್ಲಿ ಹೆಚ್ಚು ಶ್ರೇಷ್ಠವೆಂದು ಕಾಣಬಹುದೋ? ಆ ಉದಾಹರಣೆಗಳನ್ನಿಲ್ಲಿ ಕೊಡಲಾಗಿದೆ.

**ಪ್ರೇಮ—**

ಸೆರೆಯಲ್ಲಿರಿಸಲ್ಪಟ್ಟ ಅನೇಕ ಕಪಿಗಳಲ್ಲಿ ಅವುಗಳ ನಾಯಕನೆನ್ನಬಹುದಾದ ಒಂದು ದೊಡ್ಡ ಕಪಿಯನ್ನೊಮ್ಮೆ ರಕ್ತ ಪರೀಕ್ಷೆಗಾಗಿ ಒಯ್ದರು. ಅದಕ್ಕೆ ನಾಲ್ಕು ಹೆಂಡರಿದ್ದರು. ಈ ಕಪಿಯನ್ನೊಯ್ದುದನ್ನು ಕಂಡು ಅದರ ಹೆಂಡಿರ ಪೈಕಿ ಎರಡು ಇತರ ಕಪಿಗಳ ಸಂಗದಿಂದ ತಮ್ಮ ಕಾಮತೃಷೆಯನ್ನು ಪರಿಹಸಿಕೊಂಡುವು. ಕಪಿಯು ಹಿಂತಿರುಗಿ ಬಂದೊಡನೆಯೇ ಈ ವಿಚಾರವನ್ನು ಉಳಿದ ಎರಡು ಹೆಣ್ಣು ಕಪಿಗಳು ಅದಕ್ಕೆ ತಿಳಿಸಿದುವು. ಕೂಡಲೇ ಆ ಕಪಿ ಸಿಟ್ಟುಗೊಂಡು ಮಾನವನ್ನು ಮಾರಿದ ಮಡದಿಯರಿಬ್ಬರನ್ನು ಚೆನ್ನಾಗಿ ಗಾಯಗೊಳಿಸಿ ಅಂದಿನಿಂದ ಅವುಗಳ ಸಂಘವನ್ನು ಬಿಟ್ಟಿತು.

**ಪ್ರಣಯ—**

ಕಾಡಿನಲ್ಲಿನ ಕೋಗಿಲೆಗಳ ಇಂಪಾದ ಹಾಡು, ಹಾಗೆಯೇ ಇತರ ಪ್ರಾಣಿಗಳ ಪ್ರೇಮವನ್ನುಕ್ಕಿಸುವ ಗೀತೆಗಳನ್ನು ಕೇಳಿ ಹೃದಯವು ಪ್ರೇಮಮಯವಾದಲ್ಲಿ ಮಾತ್ರ ಚಿರತೆಗಳು ತಮ್ಮ ಕಾಮವಾಸನೆಯನ್ನು ಪೂರೈಸುವುವು. ಇಲ್ಲವಾದರೆ ಬಲಾತ್ಕಾರವಾಗಿ ಮಾನವನಂತೆ ಅವುಗಳೆಂದೂ ಕಾಮದ ಬಲೆಯಲ್ಲಿ ಬಿದ್ದು ಬೇಯವು. ಅಲ್ಲದೆ ಗಂಡು ತನ್ನ ಪ್ರಣಯಿಯೊಡನೆ ಶಾಂತಚಿತ್ತತೆಯಿಂದಲೂ, ಪ್ರೇಮದಿಂದಲೂ ಹಲಕಾಲ ಆಟವಾಡುತ್ತಿದ್ದು ಅವಳಲ್ಲಿನ ಪ್ರೇಮವನ್ನು ಹೆಚ್ಚಿಸಿ ಆಕೆಯಲ್ಲಿ ಸಣಯಚೇಷ್ಟೆಯನ್ನು ಹುಟ್ಟಿಸಿ ಆ ಮೇಲೆ ಕೂಡುವುವೇ ಹೊರತು ಮಾನವರಂತೆ ಕ್ಷಣಮಾತ್ರದಲ್ಲಿ ಕೂಡಿ, ವೀರ್ಯನಾಶವನ್ನು ಮಾಡಿ ಅಮಾನುಷೀ ರೀತಿಯಿಂದ ಕಾಮ ಅಭಿಲಾಷೆಯನ್ನು ಪೂರ್ತಿಗೊಳಿಸುತ್ತಿಲ್ಲ!

**ವಿಚಾರಶೀಲತೆ—**

ಅದೊಮ್ಮೆ ಹಲವು ಇರುವೆಗಳು ಒಂದು ಎಲೆಯ ಮೇಲೇರುವುದು ಕಷ್ಟವಾಗಿ ಕಂಡುದರಿಂದ ಆಗ ಒಂದು ಇರುವೆಯು ತಾನು ಮುಂದೆ ಸರಿದು ಹಿಂದಿನ ಕಾಲುಗಳನ್ನು ನೆಲದ ಮೇಲೂ ಮುಂದಿನ ಕಾಲುಗಳನ್ನು ಎಲೆಯ ಬದಿಗೂ ಇರಿಸಿ ಒಂದು ಸೇತುವೆಯನ್ನು ಕಲ್ಪಿಸಿತು. ಕ್ಷಣಮಾತ್ರದಲ್ಲಿ ನೂರಾರು ಇರುವೆಗಳು ಅದರ ಬೆನ್ನ ಮೇಲೇರಿ ಎಲೆಯನ್ನು ಸೇರಿದುವು. ಹಾಗೆಯೇ ಇರುವೆಗಳು ಸಾಲುಸಾಲಾಗಿ ಮುಂದೆ ಸಾಗುತ್ತಿರಲು ತಮ್ಮ ಪೈಕಿ ಒಂದನ್ನು ಮುಂದೆ ಅಪಾಯವಿದೆಯೇ ಎಂದು ತಿಳಿಯಲು ಕಳುಹಿಸಿಕೊಡುವುದು. ಹೀಗೆ ಅನೇಕ ವಿಚಾರಗಳಲ್ಲಿ ಅವುಗಳ ಬುದ್ಧಿಯು ಮಾನವನನ್ನು ಮೀರಿಸುತ್ತಿದೆ.

---


# ಪರಮಾ

ಮೊದಲಾದ ಭಯಂಕರ ಮೂತ್ರರೋಗಗಳ ಭಯಂಕರ ಪರಿಣಾಮವನ್ನು ತಡೆಯುವದಕ್ಕಾಗಿ (ಪಿಚಕಾರಿಯ ಹೊರತಾಗಿ)

**ಗೊನೋಲೆಕ್ಸ (ರಿಜಿಸ್ಟರ್ಡ)**

ತೆಗೆದುಕೊಳ್ಳಿರಿ ಮತ್ತು ಶಾಶ್ವತವಾಗಿ ರೋಗದಿಂದ ಮುಕ್ತರಾಗಿರಿ. ಈ ಔಷಧವು ಎಲ್ಲ ತರಹದ ಸರವಾ ಮೊದಲಾದ ಎಲ್ಲ ಮೂತ್ರರೋಗಗಳ ನಿವಾರಣೆಯಾಗಿ ಮೂತ್ರಗಳು ಸಾಫ ಆಗುತ್ತವೆ. ಮೊದಲಿನ ಒಂದೇ ಒಂದು ಬಾಟ್ಲಿಯಿಂದ ಗುಣವಾಗುತ್ತದೆ. ಬಾ ೩ ರೂ, ೧-೦-೦ ಅಂಚೆವೆಚ್ಚ ಪ್ರತ್ಯೇಕ. ಹಳೇ ಮತ್ತು ಅಸಾಧ್ಯ ರೋಗಗಳಿಗೆ ಗೊನೋಲೆಕ್ಸನ್ನು ಉಪಯೋಗಿಸಿರಿ. ಬಾ ೩ ರೂ ೩-೦-೦ ಅಂಚೆವೆಚ್ಚ ಪ್ರತ್ಯೇಕ. ಎಲ್ಲಿಡೆಯಲ್ಲಿಯೂ ದೊರೆಯುತ್ತದೆ. ಪ್ರತಿಯೊಂದು ಊರಲ್ಲಿಯೂ ಸ್ಟೋಕಿಸ್ಟರು ಬೇಕು.

ಸೋಲ್ ಏಜಂಟರು — ಸ್ಟಾರ್ ಏಜೆನ್ಸಿ,

೧೭೪ ಹಾರ್ನಬಿ ರೋಡ್,

ಫೋರ್ಟ ಮುಂಬಾಯಿ

ಸ್ಟಾಕಿಸ್ಟ ಎಂ. ಡಿ. ಪ್ರೊರಾ ಮತ್ತು ಕಂಪೆನಿ

ಪ್ರಿನ್ಸೆಸ್ ಸ್ಟ್ರೀಟ್ ಮುಂಬಾಯಿ



# The Bombay Life Assurance Company, Ltd.

ESTD: 1908.

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,855 | 1,16,58,706 |
| 1930 | 59,97,500 | 9,83,367 | 28,00,970 | 2,06,68,328 |
| 1933 | 94,16,500 | 1?,12,692 | 50,04,871 | 3,07,98,434 |
| 1936 | 1,83,00,180 | 26,76,274 | 82,69,451 | 5,14,38,205 |

The Company offers all the up-to-date schemes of Assurances. Family Safe Guard Policy a special feature.

Application for agencies will be received from honest and respectable gentlemen.

Organisers appointed with pay and allowance.

Gentlemen with organising ability and who can guarantee Business need apply.

**Kochikar Brothers, Ltd.,**

(Incorporating Messrs. Kochikar Brothers),

***Madras Branch Secretaries,***

Post Box 337, Mount Road, MADRAS

Phone No 8245

***Apply to any of the following Offices:-***

| Ottapalam | Central Station Road, Trivandrum | Visveshwarapuram Circle, Bangalore City | Soumyalayam Puthiyara, Calicut | Car Street Mangalore | Udipi, S India, | Charni Road, Bombay No 4 |
|---|---|---|---|---|---|---|

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.




ಮಂಗಳೂರಲ್ಲಿ ಶಾ ಕಂಪೆನಿಯಲಿ ದೊರೆಯುವುದು

# ಮುಂಬಾಯಿಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಮಂಡಳದ ಸಭೆ.

ಹಿಂದೂ-ಮುಸ್ಲಿಂ ಐಕ್ಯ—ಕಾಂಗ್ರೆಸ್ ಮಂತ್ರಿಮಂಡಳಗಳ ಶ್ಲಾಘನ.

## ಬಿಹಾರಿನ ಸಾಮ್ಯವಾದಿಗಳ ಮೇಲೆ ಶಿಸ್ತಿನ ಕಾಯಿದೆ.

ಕಾಂಗ್ರೆಸಿನಲ್ಲಿ ಶಿಸ್ತು ರಕ್ಷಣೆಯಾಗಬೇಕು—ಅಹಿಂಸಾ ನೀತಿಯೇ ಅದರ ಮೂಲತತ್ವ.

ಕಾಂಗ್ರೆಸ್ ಕಾರ್ಯಕಾರೀ ಮಂಡಳದ ಸಭೆಗಾಗಿ ಮುಂಬಾಯಿಯಲ್ಲಿ ಶ್ರೀ ಭುಲಾಭಾಯಿ ದೇಸಾಯಿಗಳವರ ಸದನದಲ್ಲಿ ಈ ವಾರ ನಡೆ ನಡೆಯಿತು ಕಾರ್ಯಕಾರೀ ಮಂಡಲದ ಸಾಧಾರಣ ಎಲ್ಲಾ ಸದಸ್ಯರು ಹಾಜರಿದ್ದರು ಶ್ರೀ ಸುಭಾಷ್ಚಂದ್ರರ ಬದಲಾಗಿ ಶ್ರೀ ಶರಚ್ಚಂದ್ರ ಭೋಸರು ಹಾಜರಾಗಿದ್ದರು

ಕಾಂಗ್ರೆಸ್ ಕಾರ್ಯಕಾರಿ ಮಂಡಲಕ್ಕಾಗಿ ಮುಂಬಾಯಿಗೆ ಬಂದ ರಾಷ್ಟ್ರಪತಿ ನೆಹರು, ಅಜಾದ, ಪಟೇಲ್, ರಾಜೇಂದ್ರಪ್ರಸಾದ ಈ ಐದು ಮಹಾವ್ಯಕ್ತಿಗಳು ಜುಹುನಲ್ಲಿರುವ ಮಹಾತ್ಮಾಜಿಯವರನ್ನು ಕಂಡು, ಹಿಂದೂ ಮುಸ್ಲಿಂ ಐಕ್ಯದ ಕುರಿತು [illegible] ತನಕ ಮಾತುಕತೆ ನಡೆಸಿದರು ಈ ಮಾತುಕತೆಗಳ ಪರಿಣಾಮವಾಗಿ, ಜಿನ್ನಾರೊಡನೆ ಅವರ ಈಗಿನ ಕೋರಿಕೆಗಳಾವುವೆಂದು ವಿಚಾರಿಸಲು ರಾಷ್ಟ್ರಪತಿಯವರಿಗೆ ಅಧಿಕಾರ ಕೊಡಲಾಯಿತು

ಶ್ರೀ ರಾಜಗೋಪಾಲಾಚಾರಿಯವರು ಕಾಂಗ್ರೆಸ್ ಕಾರ್ಯಕಾರೀ ಮಂಡಳದ ಸಭೆಯಲ್ಲಿ ಬಾಟ್ಲಿವಾಲರ ಮೊಕದ್ದಮೆಯ [illegible] ಸರಿಯಾದ ಉದಾಹರಣೆಯನ್ನು ಕೊಟ್ಟರು ನರು ಇಲ್ಲಿಗೆ ಈ ಪ್ರಕರಣವು ಮುಗಿದಿರುತ್ತದೆ

ಪ್ರಾಂತಿಕೀಯ ಕಾಂಗ್ರೆಸ್ ಸರಕಾರಗಳ ಚುನಾವಣಾ ಸಮಯದಲ್ಲಿ ಮಾಡಿದ ವಾಗ್ದಾನಗಳನ್ನು ಎಷ್ಟರಮಟ್ಟಿಗೆ ನಡೆಸುತ್ತಿರುವುದೆಂದು ಈ ಸಭೆಯಲ್ಲಿ ಪರೀಕ್ಷಿಸಲಾಯಿತು ಮುಂದಕ್ಕೆ ಯಾವತ್ತೂ ಕಾಂಗ್ರೆಸ್‌ವಾಲರು ತಮ್ಮ ಇಚ್ಛಾನುಸಾರ ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಟೀಕಿಸಬಾರದಾಗಿಯೂ, ತಮಗೆ ಕಾಂಗ್ರೆಸ್ ಮಂತ್ರಿಯರ ಯಾವತ್ತೂ ಕಾರ್ಯಗಳಲ್ಲಿ ಅಸಮಾಧಾನ ಕಂಡುಬಂದಲ್ಲಿ ಅದನ್ನು ರಾಷ್ಟ್ರಪತಿಯವರೊಡನೆ ಅರುಹಬೇಕೆಂದೂ, ರಾಷ್ಟ್ರಪತಿಯವರು ನಂತರ ವಿಚಾರಣೆ ನಡೆಸಬೇಕೆಂದೂ ತೀರ್ಮಾನಿಸಲಾಯಿತು ಶ್ರೀ ರಾಜಾಜಿಯವರು ವಿವರಿಸಿದಂತೆ, ಕಾಂಗ್ರೆಸ್ ಮಂತ್ರಿ ಮಂಡಲಗಳಿಗೆ ಕೆಲವು ವಿಚಾರಗಳಲ್ಲಿ ಹೆಚ್ಚಿನ ಅಧಿಕಾರ ಕೊಡಬೇಕೆಂದಾಯಿತು ಸಂಯುಕ್ತ ಪ್ರಾಂತ್ಯ, ಬಿಹಾರ ಇತ್ಯಾದಿ ಕಡೆಗಳಲ್ಲಿ ಸಾಮ್ಯವಾದಿಗಳಿಂದುಂಟಾಗುವ ತಡೆಗಳ ಕುರಿತು ಆಲೋಚಿಸಲಾಯಿತು. ಈ ಕುರಿತು ರಾಷ್ಟ್ರಪತಿಯವರು ತೀವ್ರವಾಗಿ ಖಂಡಿಸಿದರು ಮೈಸೂರಿನ ದಬ್ಬಾಳಿಕೆಯ ಕುರಿತು ಅದ ಅ ಭಾ ಕಾಂ ಕಮಿಟಿಯ ಠರಾವು ಅಸಿಂಧುವಾಗತಕ್ಕದೆಂದು, (ಗಾಂಧೀಜಿಯವರ ಅಭಿಪ್ರಾಯ ಪ್ರಕಾರ) ಕಾರ್ಯಕಾರೀ ಮಂಡಲದ ಹೆಚ್ಚಿನ ಸದಸ್ಯರು ಅಭಿಪ್ರಾಯಪಟ್ಟರು. ಹಿಂದೂ-ಮುಸ್ಲಿಂ ಐಕ್ಯ ಸಾಧನೆಯ ಕುರಿತು ಈ ಸಭೆಯಲ್ಲಿ ಆಲೋಚನೆಯು ನಡೆಯಿತು

ಕಾಂಗ್ರೆಸ್ ಕಾ ಕಾ ಮಂಡಳದ ಸಭೆಯಲ್ಲಿ ಮುಖ್ಯವಾಗಿ ನಡೆದ ಇತ್ಯರ್ಥವೆಂದರೆ, ಕಾಂಗ್ರೆಸ್ ಮಂತ್ರಿ ಮಂಡಳಗಳ ಮೇಲೆ ಅವರು ಗಲಿಬಿಲಿ ಕ್ರಮ ಇತ್ಯಾದಿಗಳನ್ನು ಉಪಯೋಗಿಸಿದುದಕ್ಕೆ ಅವಿಶ್ವಾಸ ಸೂಚಿಸಿ ಬಂದ ಶ್ರೀ ಮಸಾನಿಯವರಿಂದ ಕಲ್ಕತ್ತೆಯ ಅ. ಭಾ. ಕಾಂಗ್ರೆಸ್ ಕಮಿಟಿಯಲ್ಲಿ ತರಲಾದ ಠರಾವಿನ ಕುರಿತು ಮದ್ರಾಸಿನ ಪ್ರಧಾನರನ್ನು ವಿಚಾರಿಸಿ, ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳದ ವರ್ತನೆಯು ಸರಿಯಾದುದೆಂದು, ಕಾರ್ಯಕಾರಿ ಮಂಡಳದಿಂದ ತೀರ್ಮಾನಿಸಲಾಯಿತು ಅಲ್ಲದೆ ಕಾಂಗ್ರೆಸ್ ಮಂಡಳಗಳು, ಕಾಂಗ್ರೆಸ್ ಕಾರ್ಯಕ್ರಮವನ್ನು ನಡೆಯಿಸುವರೆ ಪಡುವ ಯತ್ನಗಳು ಶ್ಲಾಘಿಸಲ್ಪಟ್ಟವು ಕಾಂಗ್ರೆಸ್ಸಿನಲ್ಲಿ ಶಿಸ್ತು ರಕ್ಷಣೆಯಾಗಬೇಕೆಂದೂ, ಅಹಿಂಸಾ ನೀತಿಯು ಕಾಂಗ್ರೆಸ್ ನೀತಿಯಾಗಬೇಕೆಂದೂ, ಕಾರ್ಯಕಾರಿ ಮಂಡಳವು ಅಭಿಪ್ರಾಯಪಟ್ಟಿತು

ರಾಜಕೀಯ ಕೈದಿಗಳ ವಿಚಾರದಲ್ಲಿ ಬಿಡುಗಡೆ ಹೊಂದಿದವರು ಕಾಂಗ್ರೆಸ್ ಶಿಸ್ತಿಗೆ ಅನುಗುಣವಾಗಿ ನಡೆಯಬೇಕೆಂದೂ ಈ ಮಂಡಳವು ಅಭಿಪ್ರಾಯಪಟ್ಟಿತು ಕಾಂಗ್ರೆಸ್ಸಿನೊಳಗಿದ್ದವರು ಕಾಂಗ್ರೆಸ್ಸಿನ ಶಿಸ್ತಿಗೆ ಸರಿಯಾಗಿ ವರ್ತಿಸಬೇಕೆಂದೂ ಅದಕ್ಕೆ ವಿರೋಧವಾಗಿ ನಡೆಯುವವರ ಮೇಲೆ ಶಿಸ್ತಿನ ಕಾಯಿದೆ ಜಾರಿಯಾಗಬೇಕೆಂದೂ ಈ ಮಂಡಳವು ಅಭಿಪ್ರಾಯಪಟ್ಟಿತು ಕಾಂಗ್ರೆಸ್ಸಿನಲ್ಲಿ ಶಿಸ್ತು ರಕ್ಷಣೆಯಾಗುವಂತೆ ಕಾಂಗ್ರೆಸ್ ಮಹಾಸಂಸ್ಥೆಯನ್ನು [illegible] ಶುದ್ಧಗೊಳಿಸುವ [illegible] ಈ ಸಭೆಯಲ್ಲಿ ತೋರಿಬಂತು

ಬಿಹಾರಿನಲ್ಲಿ ಕಾಂಗ್ರೆಸ್ [illegible] ಗಳ ಕಾಂಗ್ರೆಸ್ [illegible] ಕೊಂಡವಾಗಿ ಪ್ರಚಾರ ನಡೆಯಿಸುವರೆ [illegible] ರೈತರ ಮತದಿಂದ ಎಸೆಂಬ್ಲಿಗೆ ಸೇರಿದ ಕಾಂಗ್ರೆಸ್ ಸದಸ್ಯರ ಈಗ ರೈತರನ್ನು ಒಬ್ಬೊಬ್ಬನುದಾನವಾಗಿ ಮಾಡಿ ಬಿಟ್ಟರೆಂಬ ತಪ್ಪು ಅಭಿಪ್ರಾಯದ ಪ್ರಚಾರವು ಸಾಮ್ಯವಾದಿಗಳಿಂದ ನಡೆಯುತಿದ್ದುದ ಈ ಕಾರ್ಯಕಾರಿ ಮಂಡಳದ ವಿಚಾರಣೆಗೆ ಬಂದು ಆ ತರದ ಚಟುವಟಿಕೆಗಳಲ್ಲಿ ಭಾಗವಹಿಸುವವರ ಮೇಲೆ ಶಿಸ್ತಿನ ಕಾಯಿದೆ ಜಾರಿ ಮಾಡಬೇಕಾಗಿ ನಿರ್ಣಯಿಸಲಾಯಿತು

ಹರಿಪುರದ ಕಾಂಗ್ರೆಸ್ಸಿನ ಪ್ರತಿನಿಧಿಗಳ ಚುನಾವಣೆಯ ಸಮಯ ಕೆಲವು ಕಡೆಗಳಲ್ಲಿ, ನಡೆದ ಹಿಂಸಾ ಮಯ ಕಾರ್ಯಗಳನ್ನು ನೋಡಿ ಕಾರ್ಯಕಾರಿ ಮಂಡಳವು ವಿಷಾದಿಸಿತು

ಕಾರ್ಯಕಾರಿ ಮಂಡಳವು ಮುಂದಕ್ಕೆ ಫೆಬ್ರವರಿ ತಾ ೧ರಲ್ಲಿ ವಾರ್ಧಾದಲ್ಲಿ ಸಭೆ ಸೇರುವುದು

---

ಕಂತಿನಲ್ಲಿ ಸಾಮಾನುಗಳ ಮಾರಾಟವಾಗಿ ವ್ಯಾಪಾರಿಗಳು ಅತಿರೇಕ ಲಾಭವನ್ನು ಗಳಿಸುವ ಅಭ್ಯಾಸವನ್ನು ತಡೆಯುವರೆ, ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಒಂದು ಬಿಲ್ಲು ಬರುವದಂತೆ

ಜರ್ಮನಿಯನ್ನು ವಾಯು ಸಂಚಾರದ ಮಹಾ ಕೇಂದ್ರವನ್ನಾಗಿ ಮಾಡಲು ಹಿಟ್ಲರನ ಸರಕಾರದ ಏರ್ಪಾಡುಗಳಾಗಿವೆ ಈ ಬಗ್ಗೆ ಒಂದು ಮಹಾ ವಿಮಾನನಿಲ್ದಾಣದ ರಚನೆಯು ಈಗ ಕೊನೆಗೊಂಡಿದ್ದು, ಅದರ ಪ್ರಾರಂಭೋತ್ಸವವು ಮೊನ್ನೆ ನಡೆಯಿತು

ಐಗುಪ್ತ ಪಾರ್ಲಿಮೆಂಟಿನಲ್ಲಿ ಮಾಜಿ ಪ್ರಧಾನರಾದ ನಾಹಾಸ್ ಪಾಶಾರವರು ಮಾತನಾಡಲುಪಕ್ರಮಿಸಿದಾಗ ವಿಶೇಷ ಗದ್ದಲವು ನಡೆಯಿತು

# ವಾರ್ತಾವರದಿ

ಹಾಂಗ್ಕಾಂಗನ್ನು ಜಪಾನಿಯರು ಹಿಡಿದುದನ್ನು ಚೀನೀಯರು ಪುನಃ ವಶೀಕರಿಸಿಕೊಂಡಿರುವರು ಚೀನೀಯರು ಜಪಾನಿಯರಿಗೆ ಒಳ್ಳೇ ವಿರೋಧವನ್ನು ತೋರಿಸುತ್ತಿದ್ದಾರೆ

ಬಿಹಾರಿನಲ್ಲಿ ಕಿಶನ್ ಸಭೆಯ ಚಟುವಟಿಕೆಗಳ ಕುರಿತಾಗಿ ಬಿಹಾರ್ ಕಾಂಗ್ರೆಸ್ ಕಮಿಟಿಯ ಠರಾವಿನಿಂದಾಗಿ ಸಾಮ್ಯವಾದಿ ಸ್ವಾಮಿ ಸಹಜಾನಂದರು, ಕಾಂಗ್ರೆಸ್ ಸದಸ್ಯತನಕ್ಕೆ ರಾಜಿಯಿತ್ತಿರುವರು ಕಿಶನ್ ಸಭೆಯ ಚಟುವಟಿಕೆಗಳಲ್ಲಿ ಸಾಮ್ಯವಾದಿಗಳ ಹಿಂಸಾಮಯ ಕಾರ್ಯಗಳನ್ನು ನೋಡಿ, ಬಿಹಾರ್ ಕಾಂಗ್ರೆಸ್ ಕಮಿಟಿಯು ಅದನ್ನು ಖಂಡಿಸಿ ಠರಾವು ಮಾಡಿತ್ತು

ಕಾಂಗ್ರೆಸ್ಸಿನ ಒಳಗಿರಬೇಕಾದರೆ, ಕಾಂಗ್ರೆಸ್ಸಿನ ತತ್ವಗಳಿಗೆ ಸಂಪೂರ್ಣ ಮನ್ನಣೆ ದೊರಕಬೇಕು ಅಲ್ಲದಿದ್ದರೆ, ಹೊರ ನಡೆದು, ಬೇರೆ ಒಂದು ಪಕ್ಷವಾಗಿ ಕಾರ್ಯ ನಡೆಸಬೇಕು ಎಂದು ಸಾಮ್ಯವಾದಿಗಳಿಗೆ ಒಬ್ಬರ ಹಿತಬೋಧನೆ

ಶ್ರೀ ಸಿ ವೈ ಚಿಂತಾಮಣಿ

ಲಿಬರಲ ಪಕ್ಷದ ಶ್ರೀ ಸಿ ವೈ ಚಿಂತಾಮಣಿಯವರ ಪಿ ಜಿನ್ನಾರವರ ಕೇಸರಿವಾದು ಧೋರಣೆಯನ್ನು ತೀವ್ರವಾಗಿ ಖಂಡಿಸಿರುವರು ಕೋಮುವಾರು ಸಮಸ್ಯೆಗೆ ಪೆಟ್ಟು ಕೊಡತ್ತವನ್ನು ಕೊಡದಿರುವುದರಲ್ಲೇ ಆ ಸಮಸ್ಯೆಯ ಸುಧಾರಣೆಯಿರುವುದೆಂದು ಅವರ ಅಭಿಪ್ರಾಯ

ರಾಷ್ಟ್ರದ ಬಲ ಹೆಚ್ಚಿದರೆ ಮಾತ್ರ ಶಾಂತಿ ಸ್ಥಾಪನೆಯಾಗುವುದೆಂಬ ಅಭಿಪ್ರಾಯವನ್ನು ಸೂಚಿಸಿ ರಾಷ್ಟ್ರ ಬಲವನ್ನು ಇನ್ನೂ ಹೆಚ್ಚಿಸುವ ಒಂದು ಮಹಾ ಯೋಜನೆಯು ಕುರಿತು ಜರ್ಮನಿಯಲ್ಲಿ ಸರ್ವಾಧಿಕಾರಿ ಹಿಟ್ಲರನ ಪ್ರಕಟಣೆಯಾಗಿರುವುದು

ಸ್ಪೇಯಿನಿನಲ್ಲಿ ಘೋರ ಕದನವು ನಡೆಯುತ್ತಿದೆ ಸ್ಪೇಯಿನ ಅಸಂಖ್ಯಾತ ಮಕ್ಕಳ ರಕ್ಷಣೆಗಾಗಿ, ಈ ಭೀಕರ ಯುದ್ಧವು ನಿಲ್ಲುವನಂತೆ ಪ್ರೇರೇಪಿಸುವರೆ ಕೋರಿ ಸ್ಪೇಯಿನಿನ ಸ್ತ್ರೀಯರು ಮುಸಲೀನಿಯು ಪತ್ನಿಯೊಡನೆ ಮೊರೆಯಿಟ್ಟಿರುವರು

ಮಧ್ಯಪ್ರಾಂತ್ಯದಲ್ಲಿ ಮದ್ಯನಿಷೇಧ ಠರಾವು ಮಂಜೂರಾಗದಿದ್ದರೂ ಅದು ನಿಷೇಧಕಾರ್ಯವನ್ನು ಕೈಕೊಳ್ಳುವುದಂತೆ ಅಲ್ಲಿನ ಕಾಂಗ್ರೆಸ್ ಸರಕಾರವು ಕೆಲವು ಜಿಲ್ಲೆಗಳಲ್ಲಿ ಶೇಂದಿ ಅಂಗಡಿಗಳ ಏಲಮನ್ನು ನಿಲ್ಲಿಸುವುದಂತೆ

ರೈತರ ಋಣ ವಿಮೋಚನಾ ಮಸೂದೆಯು ಜೊಯಿಂಟ್ ಸಿಲೆಕ್ಟ ಕಮಿಟಿಯವರಿಂದ ಪರ್ಯಾಲೋಚಿಸಲಾಗಿ, ಕೆಲವು ಪ್ರಾಮುಖ್ಯ ಬದಲಾವಣೆಗಳನ್ನು ಹೊಂದಿಕೊಂಡು ಪ್ರಕಟವಾಗಿರುತ್ತದೆ.

ಕೊಚ್ಚಿ ಸಂಸ್ಥಾನದಲ್ಲಿ ನ್ಯಾಯವಿಧಾಯಕ ಸಭೆಗೆ ಚುನಾಯಿತರಾದ ಒಬ್ಬ ಸದಸ್ಯರನ್ನು ಗ್ರಾಮಾಭ್ಯುದಯ ಮುಖ್ಯಗಳಾಗಿ ದಿವಾನರಿಗೆ ಸಹಾಯವೀಯಲು ನೇಮಿಸುವುದಾಗಿ ಅಲ್ಲಿನ ರಾಜರು ತಮ್ಮ ಜನ್ಮದಿನೋತ್ಸವ ಸಮಾರಂಭದಲ್ಲಿ ಪ್ರಕಟಿಸುವರು.

ವ್ಯಾಸಸ್ವಾಯರು ಕಲ್ಕತ್ತ ಯುರೋಪಿಯನರ ಒಂದು ಔತಣಕೂಟದಲ್ಲಿ ಭಾಷಣವೀಯುತ್ತಾ, ನೂತನವಾಗಿ ರಚನೆಯಾದ ಪ್ರಾಂತ್ಯಕೀಯ ಸರಕಾರಗಳ ಉತ್ತಮ ಕೆಲಸಗಳನ್ನು ಶ್ಲಾಘಿಸಿದರು

ಸಂಯುಕ್ತ ಅಮೇರಿಕಾದ ಕಾಂಗ್ರೆಸ್ ಅಧಿವೇಶನವು ಅಧ್ಯಕ್ಷ ರೂಸ್ವೆಲ್ಟರಿಂದ ಪ್ರಾರಂಭವಾಗಿರುತ್ತದೆ ನಿರುದ್ಯೋಗ ನಿವಾರಣೆ, ದೇಶದ ರಕ್ಷಣೆ, ಶಾಂತಿ ಇವೆಲ್ಲಕ್ಕೆ ಪ್ರಜಾಸತ್ತೆಯಲ್ಲಿ ತಮಗೆ ಸಂಪೂರ್ಣ ಭರವಸೆಯಿರುವುದೆಂದು ಅಧ್ಯಕ್ಷ ರೂಸ್‌ವೆಲ್ಟರು ತಮ್ಮ ಭಾಷಣದಲ್ಲಿ ತಿಳಿಸಿದರು

ಹರಿಪುರ ಕಾಂಗ್ರೆಸ್ಸಿನ ಕಾರ್ಯಕ್ರಮದ ಕುರಿತು ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಮುಂದಿನ ಸಭೆಯಲ್ಲಿ ಆಲೋಚಿಸಲಾಗುವುದು

ಬ್ರಾಹ್ಮಣರಲ್ಲಿ ಮಿಶ್ರವಿವಾಹವಾಗುವ ಕುರಿತು ಆಲೋಚಿಸ [illegible] ಬ್ರಾಹ್ಮಣರ ಪರಿಷತ್ತೊಂದು ಪಂಡಿತ [illegible] ಮಾಲವೀಯರ ಅಧ್ಯಕ್ಷತನದಲ್ಲಿ ಕಾಶಿಯಲ್ಲಿ ಜರಗಿತು ಬ್ರಾಹ್ಮಣವರ್ಗದ ವಿವಿಧ ಪಕ್ಷಗಳಲ್ಲಿ ಮಿಶ್ರವಿವಾಹವಾಗುವರೆ ಈಗ ಇರುವ ಅಡ್ಡಿಗಳನ್ನು ತೆಗೆದು ಹಾಕುವುದೇ ಈ ಪರಿಷತ್ತಿನ ಉದ್ದೇಶ

[illegible] ನಲ್ಲಿ ಚೀನಾ—ಜಪಾನ್ ಸಂಗ್ರಾಮದ ಕುರಿತಾಗಿ ಆಲೋಚಿಸಲು ನವಜನಾಂಗಗಳ ಪರಿಷತ್ತೊಂದು ಸಭೆ ಸೇರಿತು ಅದರಿಂದ [illegible] ಚೀನಾಕ್ಕೆ [illegible] ಈ ಪರಿಷತ್ತಿನ [illegible]

ಸ್ಪೇಯಿನ ತಟಸ್ಥ [illegible] ಸರಕಾರಕ್ಕೆ ಶಸ್ತ್ರ [illegible] ಇತ್ಯಾದಿಗಳು ಒದಗದ [illegible] ಮಾತ್ರ ಇತರ ರಾಷ್ಟ್ರಗಳ [illegible] ಯುದ್ಧ ಸಾಮಾನುಗಳು [illegible] ಬ್ರಸೆಲ್ಲಿನ ಪರಿಷತ್ತಿ [illegible] ಜಪಾನಿಗೆ, ಫ್ರೆಂಚ್ ಇತ್ಯಾದಿ ಜನಾಂಗಗಳಿಂದ ಯುದ್ಧದ ಸಾಮಾನುಗಳು ಒದಗುವಂತಾಗಿದೆ

ಪೌರ್ವಾತ್ಯದಲ್ಲಿ ಸಾಮ್ರಾಜ್ಯ ಪ್ರಭುತ್ವದ ದಿನದ ಅಸ್ತಮಾನವು ಸಮೀಪದಲ್ಲಿದೆ. ಜಪಾನನ್ನು ತಡೆಬಡೆಯುವ ಅಸ್ಸದ ವ್ಯಾಪಾರದಲ್ಲಿ ಅದಕ್ಕಿನ್ನು ಮುಂದಕ್ಕೆ ಹಿತಕರ ತರದ ಅವಕಾಶ ದೊರಕದು'' ಎಂದು ಪ್ರಖ್ಯಾತರೊಬ್ಬರ ಅಭಿಪ್ರಾಯ

ಮಹಾತ್ಮಾಜಿಯವರು ಸಂಪೂರ್ಣ ಗುಣಮುಖರಾಗಲು ಇನ್ನು ಒಂದು ತಿಂಗಳು ಬೇಕಾಗುವುದಂತೆ

ಇಂಗ್ಲಂಡಿನಲ್ಲಿ ಈಗ ಅಧಿಕಾರದಲ್ಲಿರುವ ಟೋರಿಗಳ ಹಿಡಿತವು ಸಡಿಲಾಗುತ್ತಿರುವುದು ಕಾಣಬರುತ್ತದೆ ಲೇಬರ್ ಪಕ್ಷವು ದಿನೇ ದಿನೇ ಬಲಗೊಳ್ಳುತ್ತಿದೆ

ಜನರಲ್ ಫ [illegible] ವಿನ ಸ್ಥಾನವು ಕುಂದಿರುವುದೆಂದು ಈಗ ಎಲ್ಲರಿಗೂ ತಿಳಿದಿರುವುದು ಈಗ ಎಲ್ಲ [illegible] ಫ್ರಾಂಕೋವಿನಿಂದ ದೂರ ಸರಿಯುತ್ತಿದ್ದಾರಲ್ಲದೆ, ಸರಕಾರದ [illegible] ತಟ್ಟಲು ಸಿದ್ಧರಾಗಿರುವರು. ಆದರೂ, [illegible] ದಾಗಿ ಫ್ರಾಂಕೋನು ಇನ್ನೊಂದು ಮಹಾಯುದ್ಧವನ್ನು ಹೂಡಲು ಸಿದ್ಧತೆಗಳನ್ನು ಮಾಡುತ್ತಿರುವನಂತೆ ಇವರ ಫಲಿತಾಂಶವು ಇನ್ನು ನಾಲ್ಕೈದು ತಿಂಗಳುಗಳಲ್ಲಿ ತಿಳಿದುಬರಬಹುದು

ಪೆಲಿಸ್ತೀನದಲ್ಲಿ ತಮ್ಮದೊಂದು ರಾಜ್ಯ ಸ್ಥಾಪನೆಯಾಗಬೇಕೆಂದು ಬ್ರಿಟಿಷ ಯೆಹೂದಿ ಸಂಘದಲ್ಲಿ ಒಂದು ಠರಾವು ಮಂಜೂರಾಯಿತು.

ಬೆಳಗಾವಿಯಲ್ಲಿ

# ಕರ್ನಾಟಕ ಒಕ್ಕಲತನದ ಪ್ರದರ್ಶನ

## ಬೇರೆ ಬೇರೆ ವಿಭಾಗಗಳ ಪೂರ್ವಸಿದ್ಧತೆ.

### ಆಟನೋಟಗಳ ಹಾಗೂ ಮನೋರಂಜನೆಯ ವಿವಿಧ ಕಾರ್ಯಕ್ರಮಗಳು

ಕರ್ನಾಟಕ ಒಕ್ಕಲತನದ ಪ್ರದರ್ಶನದ ಅನಾವರಣ ಸಮಾರಂಭಕ್ಕೆ ಈಗ ಕೇವಲ ಮೂರು ವಾರಗಳು ಉಳಿದಿರುವದರಿಂದ ಪ್ರದರ್ಶನದ ಸ್ಥಳದ ಮೇಲೆ ಬೇರೆ ಬೇರೆ ವಿಭಾಗಗಳ ಪೂರ್ವ ತಯಾರಿಯು ಒಳ್ಳೇ ಜೋರಿನಿಂದ ಸಾಗಿದೆ ಮೇಲಾಗಿ ಅಲ್ಲಿ ಪ್ರದರ್ಶನದ ಚಾಲಕರೂ ಬೇರೆ ಬೇರೆ ವಿಭಾಗಗಳ ಕಾರ್ಯದರ್ಶಿಗಳೂ ಸ್ಟಾಲುಗಳನ್ನು ಹಿಡಿದವರೂ ಕೂಲಿಕಾರರೂ ಕಂತ್ರಾಟದಾರರೂ ಈ ಪ್ರದರ್ಶನವನ್ನು ಒಳ್ಳೇ ಯಶಸ್ವಿತೆಯಿಂದ ಕೊನೆಗಾಣಿಸಲು ಹಗಲಿರುಳು ದುಡಿಯುತ್ತಿದ್ದಾರೆ ಅವರ ಕೆಲಸಕ್ಕೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಪ್ರದರ್ಶನದ ಸ್ಥಳವು ಸಾರ್ವಜನಿಕರಿಗೆ ಬಂದು ಮಾಡಲ್ಪಟ್ಟಿದೆ ಮತ್ತು ಜನವರಿ ೭೭ನೇ ತಾರೀಕು ದಿವಸ ಮುಂಬಯಿಯ ಗವರ್ನರರಿಂದ ಪ್ರದರ್ಶನವು ತೆರೆಯಲ್ಪಟ್ಟ ಬಳಿಕ ಹತ್ತು ದಿವಸಗಳ ವರೆಗೆ ಸಾರ್ವಜನಿಕರಿಗೆ ತೆರೆದಿಡಲಾಗುವದು

ಈ ಪ್ರದರ್ಶನವು ಅತ್ಯಂತ ವಿಶಾಲ ಹಾಗೂ ವಿಸ್ತೃತ ಪ್ರಮಾಣದ ಮೇಲೆ ಜರಗಲಿರುವದರಿಂದ ಏನಿಲ್ಲೆಂದರೂ ಎರಡು ಲಕ್ಷ ಜನರು ಈ ಪ್ರದರ್ಶನಕ್ಕೆ ಬರುವರೆಂಬ ಅಂದಾಜಿದೆ ಅದೇ ಕಾಲಕ್ಕೆ ಜಿ ಆಯ್ ಪಿ ಮತ್ತು ಎಮ್ ಎಂಡ್ ಎಸ್ ಎಂ ರೈಲ್ವೇ ಕಂಪನಿಯವರು ಅಗ್ಗದರದ ತಿರುಗಿ ಬರುವ ಟಿಕೇಟುಗಳನ್ನು ಇಟ್ಟಿರುವದರಿಂದ ಸಾವಿರಾರು ಪ್ರೇಕ್ಷಕರು ಬರುವದರಲ್ಲಿ ಸಂದೇಹವಿಲ್ಲ

ಈ ಪ್ರದರ್ಶನಕ್ಕಾಗಿ 'ರಾಣೀಬಗೀಚಾ' ಎಂಬ ೪೨ ಎಕರೆಯುಳ್ಳ ವಿಸ್ತೃತ ಭೂಮಿಯನ್ನು ಲಷ್ಕರೀ ಅಧಿಕಾರಸ್ಥರಿಂದ ದೊರಕಿಸುವದರಲ್ಲಿ ಬಂದಿದ್ದು ಅಲ್ಲಿ ಅನೇಕ ಬೆಳೆಗಳನ್ನು ಬೆಳೆದಿರುವರು ಬೇರೆ ಬೇರೆ ಜಾತಿಯ ಆರೇಳು ತರದ ಕಬ್ಬು, ಅಲ್ಲ, ಅರಸಿನ ಅನಾನಸ ದಾಳಿಂಬ ಸೂರಣ ಗೋದಿನ ಜೋಳ ಮುಂತಾದವುಗಳು ಬೆಳೆಸಲ್ಪಟ್ಟಿದ್ದು ಬೆಳೆಗಳು ಚೆನ್ನಾಗಿವೆ ಈ ಹಂಗಾಮಿನಲ್ಲಿ ಬಿತ್ತಬೇಕಾದ ಇನ್ನಿತರ ಬೆಳೆಗಳ ಬೀಜಗಳನ್ನೂ ಅವಕ್ಕೆ ಬೇಕಾಗುವ ಭೂಮಿಯ ಹದವನ್ನೂ ಕಾಯ್ದಿಡಲಾಗಿದೆ ಉತ್ತಮೋತ್ತಮ ಬೆಳೆ ಧಾನ್ಯ ಮತ್ತು ಇನ್ನಿತರ ಭೂಮಿಯ ಮಹಸೂಲಿನ ಮಾದರಿಗಳನ್ನು ಈ ಪ್ರದರ್ಶನದಲ್ಲಿ ಇಡಲಾಗುವದಲ್ಲದೆ ಬೀಜದ ಹೋರಿಗೆ ಆ ಮಾದರಿಯ ದನಕರುಗಳೂ ಕ[illegible]ಳೂ ಪ್ರದರ್ಶಿಸಲ್ಪಡುವವು

ಪ್ರದರ್ಶನದ ಜಾಗೆಯ ಮೇಲೆ ಬೇರೆ ಬೇರೆ ವಿಭಾಗಗಳಿಗಾಗಿ ೭೦ ಸಾವಿರ ಚದರ ಫೂಟಿನಷ್ಟು ಸ್ಥಳವು ಸ್ಟಾಲುಗಳಿಗಾಗಿ ಕಾಯ್ದಿಡಲಾಗಿದೆ ಅಲ್ಲಿ ಈ ವರೆಗೆ ಅನೇಕ ಸ್ಟಾಲುಗಳನ್ನು ಕಟ್ಟಿಸಿದ್ದಾರೆ ಎಷ್ಟೋ ಜನ ಪ್ರಸಿದ್ಧ ಕಾರಖಾನೆದಾರರೂ ಅಂಗಡಿಕಾರರೂ ತಮ್ಮ ವಸ್ತುಗಳನ್ನು ಪ್ರದರ್ಶನಕ್ಕಾಗಿಯಾಗಲೀ ವಿಕ್ರಿಗಾಗಿಯಾಗಲೀ ಇಡುವದಕ್ಕಾಗಿ ಅನೇಕ ಸ್ಟಾಲುಗಳನ್ನು ಕಟ್ಟಿಸಿಕೊಂಡಿದ್ದಾರೆ

ಈ ಪ್ರದರ್ಶನವು ಅತ್ಯಂತ ಬೋಧಪ್ರದವೂ ಚಿತ್ತಾಕರ್ಷಕವೂ ಮನೋರಂಜಕವೂ ಆಗಬೇಕೆಂದು ಪ್ರದರ್ಶನ ಸಮಿತಿಯ ಸಭಾಸದರು ಉತ್ಸಾಹದಿಂದ ಕೆಲಸ ನಡಿಸಿದ್ದಾರೆ ತಮ್ಮ ಒಕ್ಕಲಿಗ ಬಂಧುಗಳಿಗೆ ಒಕ್ಕಲತನದ ಸುಧಾರಣೆಯ ಬಗ್ಗೆ ಕಬ್ಬು, ಹತ್ತಿ, ಗೋದಿ, ಜೋಳ ಮುಂತಾದ ಬೆಳೆಗಳ ಬಿತ್ತಿಗೆಯಿಂದ ಬೆಳೆಗಳ ವಿಕ್ರಿಯ ವರೆಗೆ ಯಾವತ್ತೂ ಕ್ರಮಗಳ ಆಧುನಿಕ ಶಾಸ್ತ್ರೀಯ ಜ್ಞಾನವಾಗಬೇಕು ಮತ್ತು ಅವುಗಳ ಪ್ರಯೋಗಗಳು ನೋಡಲು ಸಿಗಬೇಕೆಂಬುದೇ ಈ ಪ್ರದರ್ಶನದ ಮುಖ್ಯ ಉದ್ದೇಶವಿದೆ ಇದಲ್ಲದೆ ಕೋಳಿ ಬಾತುಗಳ ಸಾಕುವಿಕೆ, ಉತ್ತಮ ಜಾತಿಯ ದನಕರುಗಳ ಹುಟ್ಟುವಿಕೆ, ಗ್ರಾಮೋದ್ಯೋಗಗಳ ಬೆಳವಣಿಗೆ ಮೊದಲಾದ ಒಕ್ಕಲತನಕ್ಕೆ ಸಂಬಂಧಿಸಿದ ಉಪಧಂದೆಗಳ ಜ್ಞಾನವಾಗಬೇಕು ಮತ್ತು ಅವುಗಳ ಪ್ರಯೋಗಗಳು ನೋಡಲು ಸಿಗಬೇಕೆಂಬ ಉದ್ದೇಶವು ಸಹ ಇರುವದು ಆದುದರಿಂದ ಬೇರೆ ಬೇರೆ ಬೀಜಗಳ ಹಾಗೂ ಬೆಳೆಗಳ ನಟನೆಗಳೂ ಗ್ರಾಮೋದ್ಯೋಗಗಳ ಪ್ರಾತ್ಯಕ್ಷಿಕೆಗಳೂ ಒಕ್ಕಲತನದ ಬೇಸಾಯದ ಬಗ್ಗೆ ಬೇರೆ ಬೇರೆ ಪ್ರಯೋಗಗಳೂ ಒಕ್ಕಲಿಗರಿಗೆ ಸುಲಭ ಭಾಷೆಯಿಂದ ತಿಳಿಸಲ್ಪಡುವದು ಮತ್ತು ಮ್ಯಾಜಿಕ್ ಲ್ಯಾಂಟರ್ನದ ಸಹಾಯದಿಂದ ಒಕ್ಕಲತನದ ಸುಧಾರಣೆಯ ಬಗ್ಗೆ ಬೇರೆ ವಿಷಯಗಳ ಮೇಲೆ ಬೇರೆ ಬೇರೆ ತಜ್ಞರಿಂದ ವ್ಯಾಖ್ಯಾನಗಳನ್ನು ಕೊಡಿಸುವ ವ್ಯವಸ್ಥೆಯಾಗಿದೆ

ಈ ಪ್ರದರ್ಶನದ ಕೆಲಸದಲ್ಲಿ ಕಾಂಗ್ರೆಸ್ ಸೆಕ್ರೆಟರಿಯ ಸಹಾಯ್ಯವು ದೊರೆತಿದ್ದು ಅದನ್ನು ಯಶಸ್ವಿಯಾಗಿ ಮಾಡಲು ಕಾಂಗ್ರೆಸ್ ಕೆಲಸಗಾರರ ಪ್ರಯತ್ನಗಳು ನಡೆದಿವೆ ಈ ಪ್ರದರ್ಶನಕ್ಕೆ ಕಾಂಗ್ರೆಸ್ ಮಂತ್ರಿಮಂಡಲದ ಒಕ್ಕಲತನದ ಖಾತೆಯ ಮಂತ್ರಿಗಳಾದ ಶ್ರೀ ಮುಂ[illegible] ರಜೀ ದೇಸಾಯಿ ಇವರು ಉಪಾಧ್ಯಕ್ಷರಾಗಿರುವರಲ್ಲದೆ ಕಾರ್ಯಕಾರೀ ಮಂಡಲದಲ್ಲಿ ಶ್ರೀ ಗಂಗಾಧರರಾವ್ ದೇಶಪಾಂಡೆ ಭೀಮರಾವ್ ಕೆ ಎಸ್ ಪಾಟೀಲ ಎನ್ ಎಸ್ [illegible] ಯನ್ ಮೊದಲಾದ ಕಾಂಗ್ರೆಸ್ [illegible]ಗಳು ಇರುವರು ಕರ್ನಾಟಕ ಚರಖಾಸಂಘದ [illegible]ದರ್ಶಿಗಳಾದ ಶ್ರೀ ಹಣಮಂತರಾವ ಕೌಜಲಗಿಯವರು ಈ ಪ್ರದರ್ಶನದಲ್ಲಿ ಖಾದಿ [illegible] ಗ್ರಾಮೋದ್ಯೋಗಗಳ ವಿಭಾಗಗಳ ವ್ಯವಸ್ಥೆಯನ್ನು ನೋಡುತ್ತಿದ್ದಾರೆ ಅದರಂತೆ ಈ ಪ್ರದರ್ಶನದ ಕಾಲಕ್ಕೆ ಪ್ರೇಕ್ಷಕರ ಮನೋರಂಜನೆಗಾಗಿ ಗಾನವಾದನದ ವಿವಿಧ ಕಾರ್ಯಕ್ರಮಗಳು ನಿಶ್ಚಿತವಾಗಿರುವವಲ್ಲದೆ ಬೇರೆ ಬೇರೆ ಆಟನೋಟಗಳ ಕಾರ್ಯಕ್ರಮಗಳೂ ಜರಗಲಿರುವವು ಇಲ್ಲಿಯ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಬ [illegible] ರಾಕಸಿಯರು ಆಟಪಾಟಗಳ ವ್ಯವಸ್ಥೆಯನ್ನು ನೋಡುತ್ತಿದ್ದು ಕೊಲ್ಹಾಪುರದಿಂದ ಹಾಗೂ ಬೇರೆ ಬೇರೆ ಸ್ಥಳಗಳಿಂದ ಪ್ರಸಿದ್ಧ ಮಲ್ಲಯುದ್ಧ ಪ್ರವೀಣರನ್ನು ಕರೆಸಿಕೊಂಡು ಪ್ರೇಕ್ಷಣೀಯವಾದ ಕುಸ್ತಿಗಳನ್ನು ಮಾಡಿಸುವವರಿದ್ದಾರೆ

---

### ಬ್ರಾಹ್ಮಣ ಜಾತಿಗಳೊಳಗೆ ಅಂತರ್ಜಾತಿ ವಿವಾಹ

ಪಂಚಗೌಡ ಬ್ರಾಹ್ಮಣರ ಪರಿಷತ್ತೊಂದು ಕಾಶೀಕ್ಷೇತ್ರದಲ್ಲಿ ಭಾರತಭೂಷಣ ಮದನ ಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಸೇರಿ, (ಅಖಿಲಭಾರತ ಗೌಡ ಮಹಾಸಭಾಶಯದಲ್ಲಿ) ಆಯಾ ಕಡೆಯಲ್ಲಿ ಅನಾದಿಯಿಂದಲೂ ಬ್ರಾಹ್ಮಣರಾಗಿ ಪರಿಗಣಿಸಲ್ಪಟ್ಟ ಬ್ರಾಹ್ಮಣರ ಒಳಜಾತಿಗಳನ್ನು ಗಣನೆಗೆ ತಾರದೆ ಒಂದೇ ಬಗೆಯ ಸಾಮಾಜಿಕ ಕಟ್ಟಳೆಗಳುಳ್ಳವರಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚಾರವುಳ್ಳವರೆಲ್ಲರೊಳಗೆ, ಅವರ ಗೋತ್ರಗಳು ಇಂಥವೇ ಎಂದು ತಿಳಿದುಕೊಂಡು, ಅಂತರ್ಜಾತಿಗಳೊಳಗೆ ವಿವಾಹವನ್ನು ಜರಗಿಸುವುದು ಶಾಸ್ತ್ರಸಮ್ಮತವೆಂದು ನಿರ್ಧಾರವಾಗಿದೆ

---

# ರಷ್ಯದ ಪ್ರಗತಿ.

### ಆಧುನಿಕ ಅಂಗಡಿಗಳು

ರಷ್ಯದಲ್ಲಿ ಇಂದು ತುಂಬಾ ಸಾಮಾನುಗಳು ತಯಾರಾಗುತ್ತಿವೆ ಅವುಗಳನ್ನು ತೆಗೆದುಕೊಳ್ಳುವ ಜನರೂ ಇದ್ದಾರೆ ಕೆಲವು ಅಂಗಡಿಗಳನ್ನು ಸಿಂಗರಿಸಿದ ರೀತಿಯನ್ನೂ, ಅವುಗಳಲ್ಲಿ ಸಾಮಾನುಗಳನ್ನು ಇಟ್ಟ ಕ್ರಮವನ್ನೂ ನೋಡಿದರೆ ಮನಸ್ಸಿಗೆ ತುಂಬಾ ಆನಂದವಾಗುವುದು ಸಾಮಾನುಗಳಲ್ಲಿ ವೈವಿಧ್ಯವಿರುವುದಲ್ಲದೆ, ಯಥೇಷ್ಟವಾಗಿಯೂ ಇರುವುವು ಆದರೆ ಅವುಗಳ ಕೆಲಸವು ಮಾತ್ರ ಅಷ್ಟು ನಾಜೂಕಾಗಿಲ್ಲ

ವೆಚ್ಚವಾಗುವ ಪದಾರ್ಥಗಳ (consumable goods) ಸಮಸ್ಯೆಯನ್ನು ಇಂದು ರಷ್ಯವು ಹತೋಟಿಗೆ ತಂದಿರುವುದು ಸರ್ವಸಾಮಾನ್ಯವಾಗಿ ಕೈಗಾರಿಕೆಗಳ ಸಮಸ್ಯೆಯನ್ನು ಅದು ಈ ಮೊದಲೆ ಪರಿಹರಿಸಿರುವುದೆನ್ನಬಹುದು ಈ ದಿನ ರಷ್ಯದ ಉತ್ಪನ್ನ ತಯಾರಿಯು ಅಪಾರವಾಗಿರುವುದು

ಜಗತ್ತಿನ ಅತಿ ವೇಗವಾಗಿ ಹಾರಾಡಬಲ್ಲ ವಿಮಾನಗಳನ್ನು ಇಂದು ಅದು ತಯಾರಿಸಬಲ್ಲದು ಬೇಸಾಯಕ್ರಮದಲ್ಲಿ ಅದೊಂದು ಹೊಸ ಮಾರ್ಗವನ್ನು ಕಂಡುಹಿಡಿದಿರುವುದು ಅದಕ್ಕೆ ಬೇಕಾದ ಸಾಹಿತ್ಯಗಳ ತಯಾರಿಯು ಜಗತ್ತಿನಲ್ಲಾಗುವ ಎಲ್ಲಾ ಕಡೆಗಳಿಗಿಂತಲೂ ಅಲ್ಲಿ ಹೆಚ್ಚಾಗುತ್ತಿದೆ

### ವಿಚಿತ್ರ ಜಲಮಾರ್ಗ

ರಷ್ಯದಲ್ಲಿರುವಷ್ಟು ಉತ್ತಮವಾದ ರೋಡು ರೈಲು ಮತ್ತಾವ ದೇಶದಲ್ಲೂ ಇಲ್ಲ ಒಂದೇ ನಾಲ್ಕು ವರ್ಷದಲ್ಲಿ ನ್ಯೂಯೋರ್ಕಿನಿಂದ ಮೊಸ್ಕೋನಗರವನ್ನೂ ಮುಟ್ಟುವಂತೆ ವಿಚಿತ್ರವಾದ ಜಲಮಾರ್ಗವನ್ನು ಅದು [illegible]ದ

[illegible]ಜ್ಞಾನದತ್ತವು ರಷ್ಯವು [illegible] ನನ್ನು ಕೊಡುತ್ತಿದೆ

[illegible] ವಿದ್ಯೆಯ [illegible] ಪ್ರೊಫೆಸರ್ ಹಾನೆ[illegible] ಉತ್ತರ [illegible] ಜಾತಿಯ [illegible]ಗಳನ್ನು ಹುಟ್ಟಿಸಲು ಪ್ರಯತ್ನಿ[illegible] ಈ [illegible] ಪ್ರಯತ್ನದ ಫಲವಾಗಿ ರಷ್ಯದ ದಕ್ಷಿಣದ ಫಲಪುಷ್ಪಗಳು ಉತ್ತರ ಪ್ರದೇಶದ [illegible] ಬಗೆಬಗೆಯ [illegible] ಗಡಮರಗಳನ್ನೂ ದವಸಧಾನ್ಯಗಳನ್ನೂ ಅವರು ಸೃಷ್ಟಿಸಿರುವರು [illegible] ಚಿಂತಾರ್ಹ ಕಾರ್ಯವೆ ದರೆ ಬಹು ವರ್ಷಗಳ ಕನಕ [illegible] ಗೋವಿಯ [illegible]

ಇಂತಹ ಕಾರ್ಯಗಳಿಗಾಗಿ ವೆಚ್ಚವಾದ [illegible] ಹಣವು ಅಷ್ಟಿಷ್ಟಲ್ಲ [illegible] ಬಲ್ಲಿರುವ ಔಷಧಾಲಯ [illegible] ಮುಂದಿ ವಿಜ್ಞಾನ ಶಾಸ್ತ್ರಜ್ಞರ ಕೆಲಸ ಮಾಡುತ್ತಿರುವರು [illegible] ಯಥೇಷ್ಟ ಸಾಮಗ್ರಿಗಳು ಇವೆ ಆದರೆ ಇಂತಹ ಕೆಲಸಗಳಿಗಾಗಿ ವೆಚ್ಚಮಾಡಲ್ಪಟ್ಟ ಹಣವು ನಿರರ್ಥಕವಾಗುವುದಿಲ್ಲವೆಂಬುದಕ್ಕೆ ಅವುಗಳಿಂದಾಗುವ ಪ್ರಯೋಜನವೇ ಸಾಕ್ಷಿ

ಈ ವರ್ಷ ರಷ್ಯದಲ್ಲಿ ಬೇಸಾಯದ ಉತ್ಪತ್ತಿಯು ದಿಗಣಿತವಾಗಿರುವುದೊಂದು ಆಶ್ಚರ್ಯವಲ್ಲ ಸಂಯುಕ್ತ ಕೃಷಿ ಮತ್ತು ವೈಜ್ಞಾನಿಕ ಬೇಸಾಯದಿಂದಾಗಿ ಇಷ್ಟು ಹೆಚ್ಚಾಗಬಹುದಾಗಿದೆ

### ಗುಣಾವಗುಣಗಳು

ರಷ್ಯದ ಚರಿತೆಯನ್ನು ಅನುಸರಿಸುತ್ತಿರುವವರಿಗೆ, ಅದರ ಕುಂತು ಟೀಕೆ ಟಿಪ್ಪಣಿಗಳಿಗೆ ಆಸ್ಪದವಿದೆಯೆಂಬುದು ನಿಜ ಅಲ್ಲಿ ಗ[illegible] ಮೇಲೆ ಇಂಥ ಅನೇಕ [illegible] ದಂಡನೆಗಳು ವಿಧಿಸಲಾಗುತ್ತಿವೆ ಪರಿವರ್ತನೆಯ ಸ[illegible] ಲ್ಲಿ ಸಿಕ್ಕಿಕೊಂಡ ೧೭ ನೆಯ ಶತಮಾನದ ಇಂಗ್ಲಾಂಡಿನಲ್ಲೂ ಇದೇ ರೀತಿ ನಡೆದಿಲ್ಲವೆ? ಅದರಂತೆ ರಷ್ಯದಲ್ಲೂ ಅಂತಹ ಪರಿಸ್ಥಿತಿಯು ಈ ದಿನ ಅನಿವಾರ್ಯವಾಗಿದೆ ಕಾರ್ಯಕ್ರಮದಲ್ಲಿ ಸ್ಥಿತಿ ಬದಲಾವಣೆಯಾಗದೆ ಇರಲಾರದು

ಸ್ವಮತಾಭಿಮಾನವೂ ಪರಮತ ಅಸಹನೆಯೂ ಇದ್ದರೂ, ಅದು ಇಂದು ಅದೃಶ್ಯವಾಗುತ್ತಿದೆ

ರಷ್ಯನರು ಸ್ವಭಾವ ಮತ್ತು ನಡತೆಯಲ್ಲಿ ಸ್ವಲ್ಪ ಸಾಧುವಾಗಿರುವರು ಸ್ಟೈಕ್ಸೊವ್ಯಾಟ್ ಚಳವಳಿಕ್ಕೆ ಇದೊಂದು ಕಾರಣವಾಗಿದ್ದರೂ ಇರಬಹುದು ಅಲ್ಲದೆ ರೈತಾಪಿ ಜನರ ಅವಿದ್ಯೆಯೂ ಇದಕ್ಕೆ ಒಂದು ಕಾರಣವಾಗಿದೆ

ಈ ಬಗೆಯ ಕುಂದುಕೊರತೆಗಳಿದ್ದರೂ ಇದಕ್ಕಿಂತ ಇಮ್ಮಡಿಯಾಗಿ ಒಳಿತೂ ಆಗಿದೆ ಇಂದು ರಷ್ಯದಲ್ಲಿ ಕೂಲಿ ಹೆಚ್ಚಾಗುತ್ತಿದೆ, ಸಾಮಗ್ರಿಗಳ ಕ್ರಯವು ಕಮ್ಮಿಯಾಗುತ್ತಿದೆ, ಜನರಿಗೆ ಪ್ರತಿಯೊಂದು ವಿಷಯದಲ್ಲೂ ಸೌಲಭ್ಯವು ಹೆಚ್ಚುತ್ತಿದೆ, ಮತ್ತು ನಿರೋದ್ಯವು ಪೂರ್ಣ ನಿರ್ಮೂಲ ಮಾಡಲ್ಪಟ್ಟಿದೆ

ಇಂತ ಪರಿಸ್ಥಿತಿಯು ಪ್ರಪಂಚದ ಬೇರೆ ಯಾವ ದೇಶದಲ್ಲೂ ಇಲ್ಲ ಇನ್ನು ಐದು ವರ್ಷಗಳೊಳಗಾಗಿ ರಷ್ಯದ ಜನರ ಜೀವನಸ್ಥಿತಿಯು ಎಲ್ಲಾ ದೇಶಗಳಿಗಿಂತ ಉನ್ನತವಾಗುವುದೆಂದು ಸ್ಟೇಲಿನನು ಅನ್ನುತ್ತಿರುವನು ಕೆಲವು ವರ್ಷಗಳಿಂದ ಅಲ್ಲಿ ಆದ ಪ್ರಗತಿಯನ್ನು ನೋಡಿದರೆ ಅ[illegible] ಆಗುವುದರಲ್ಲೂ ಸಂಶಯವಿಲ್ಲ

ರಷ್ಯದಲ್ಲಿ ಜೀವನಸ್ಥಿತಿಯು ಸುಧಾರಿಸುವುದು ಮಾತ್ರವಲ್ಲ, ಜನರ ನೀತಿಚರ್ಯೆಗಳೂ [illegible] ಹೊಂದುತ್ತಿವೆ ಜನರ ಸಭ್ಯತನ, ಸಚ್ಛೀಲಗಳ ವಿಚಾರಗಳಲ್ಲಿ ಪರಿವರ್ತನವು ಆಗಿರುವುದು

ಗರ್ಭವನ್ನು ತೆಗೆದ ಕೊಳ್ಳುವವರಿಗೆ ಸರಕಾರದಿಂದ ಶಿಕ್ಷೆಯು ವಿಧಿಸಲಾಗುತ್ತದೆ ವ್ಯಭಿಚಾರವು ನಿರ್ಮೂಲವಾಡಲ್ಪಟ್ಟಿದೆ [illegible] ಜನ್ಮ [illegible] ಕದ [illegible] ವಿಕ[illegible] ತ್ವದಿಂದ ಇರು[illegible] ತೆ ಪ್ರೋತ್ಸಾಹಿಸಲಾಗುತ್ತಿದೆ ಅ[illegible] ಕೆಗ ದರೂ ರಷ್ಯವು ಇಂದು [illegible] ರಾಷ್ಟ್ರಗಳ [illegible]ವಾಗಿದೆ

ರಷ್ಯನರ ಚರಿತೆ ಮೊದಲಾದ ನೀತಿಪರ ಶಾಸ್ತ್ರಗಳನ್ನು ಓದಲು ಉಪಕ್ರಮಿಸಿರುವುದರಿಂದ ಅವರ ನೈತಿಕ ವಿಚಾರಗಳಲ್ಲಿ ಕ್ರಾಂತಿಯುಂಟಾಗಿದೆಯೆಂದು ಹೇಳಬಹುದು ಕ್ರೈಸ್ತ ಧರ್ಮದಿಂದ ತಮಗುಂಟಾದ ಒಳ್ಳಿತನ್ನು ಅವರು ಸ್ಮರಿಸುತ್ತಿರುವರು ಇನ್ನೂ ಅನೇಕ ಸುಧಾರಣೆಗಳು ಆಗಲಿರುವವು

### ಸಾರ್ವಜನಿಕ ಸ್ವಾತಂತ್ರ್ಯ

[illegible] ಬರ [illegible] ಚ ನಾವಣೆಗಳಿಂದಾಗಿ, ಅವರ ಹೊಸ ರಾಜ್ಯಾಂಗ ಶಾಸನವು ಎಲ್ಲರ ಚಿತ್ತಾಕರ್ಷಣೆ [illegible]ವಿರುವುದು

ಮನುಷ್ಯನ ಹಕ್ಕು ಬಾಧ್ಯತೆಗಳ ಆದರಲ್ಲಿ [illegible]ಪಿಸಲ್ಪಟ್ಟಿವೆ ಓಟುಕೊಡುವ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೂ ಕೊಡಲಾಗಿದೆ ಇಚ್ಛೆ[illegible] ಜನರನ್ನು ಕೈದುಮಾಡದಂತೆ ಅದು ನೋಡಿಕೊಳ್ಳುತ್ತದೆ ಮನುಷ್ಯನಿಗೆ ಕೆಲಸ ಮಾಡಿದಕ್ಕೆ ಯೋಗ್ಯವಾದ ಕೂಲಿಯು ದೊರಕುವಂತೆಯೂ ಪ್ರತಿ ವಾರದಲ್ಲಿ ಇಂತಿಷ್ಟೇ ಗಂಟೆ ಕೆಲಸ ಮಾಡಬೇಕೆಂದೂ, ಇಂತಿಷ್ಟೇ ರಜಾ ದಿನಗಳೆಂದೂ, ಆ ರಜಾ ದಿನಗಳಲ್ಲಿ ಸಂಬಳವು ನಡೆಯುವಂತೆಯೂ ಇದರಲ್ಲಿ ಆಸ್ಪದವನ್ನು ಕೊಡಲಾಗಿದೆ

ಪ್ರಜೆಗಳ ಸೌಕರ್ಯದ ವಿಷಯದಲ್ಲಿ ರಷ್ಯ ಸರಕಾರದವರು ತೋರುತ್ತಿರುವ ಸಹಾನುಭೂತಿ ಸಹಕಾರಗಳ ಅನುಕರಣೀಯವಾಗಿವೆ ರಷ್ಯವು ಯುದ್ಧವನ್ನು ಬಯಸುವುದಿಲ್ಲ ಶಾಂತಿಪಾಲನೆಗಾಗಿ ಅದು ಹೆಣಗಾಡುತ್ತದೆ

ತನ್ನ ರಾಜ್ಯವನ್ನು ಆದರ್ಶ ರಾಜ್ಯವನ್ನಾಗಿ ಮಾಡಿಕೊಂಡು ಪರರಾಷ್ಟ್ರಗಳ ದೃಷ್ಟಿಯನ್ನು ತನ್ನ ಕಡೆಗೆ ಸೆಳೆದು, ಅವುಗಳೂ ತನ್ನನ್ನೇ ಹಿಂಬಾಲಿಸುವಂತೆ ಮಾಡಬೇಕೆಂದು ಅದಿಂದು ಸಾಧಿಸುತ್ತದೆ ಇದು ಉತ್ತಮವಾದ ಮಾರ್ಗವೂ ಅಹುದು

# ನಾಗರಿಕ ಜರ್ಮನಿಯು ಅನಾಗರಿಕ ಬರ್ಬರ ದೇಶಕ್ಕಿಂತಲೂ ಬಹಳ ಕೀಳು!!

## ಜರ್ಮನಿಯ ಜೈಲುಗಳು ಭೂಲೋಕದ ನರಕಕುಂಡಗಳು!

## ಜೈಲುಗಳಲ್ಲಿ ಕೈದಿಗಳ ಯಾತನೆಯು ನರಕಯಾತನೆಗಿಂತಲೂ ಕಷ್ಟ!!

### [illegible]ಂಧಿಗಳನ್ನು ತುಳಿಯುತ್ತಾರೆ, ಹೊಡೆಯುತ್ತಾರೆ; ಬಡೆಯುತ್ತಾರೆ!— ಕೊಲ್ಲುತ್ತಾರೆ!

### ಅಯ್ಯಪ್ಪಾ! ಹಿಟ್ಲರನ ಜರ್ಮನಿಯೆ!! ಎಂದೆಲ್ಲರೂ ಕೂಗುತ್ತಾರೆ.

ಜರ್ಮನಿಯಲ್ಲಿ ಡಾಚು ಜೈಲು ಎಲ್ಲ[illegible]ಕ ಪ್ರಸಿದ್ಧವಾದ್ದು. ಅದರ ಹೆಸರು ಕೇಳಿ[illegible]ಡನೆ ಐದು ವರ್ಷದ ಮಗುವು ಕೂಡ ಥರ ಥರನೆ ನಡುಗುತ್ತಿದೆ. ಅರ್ವತ್ತು ವರ್ಷದ ಮುದು[illegible]ನು ಕೂಡ ಕನಸಿನಲ್ಲಿ ವೈದೆಗೆಯುತ್ತಾನೆ.

ಏಳು ದಿನಗಳಿಗೊಮ್ಮೆ ಪ್ರತಿ ಸೋಮವಾರ ಮತ್ತು ಬುಧವಾರ ಅಲ್ಲಿಗೊಂದು ಮೋ[illegible]ರ ಲೋರಿಯು ಹೊರಡುತ್ತದೆ. ಅದರಲ್ಲಿ [illegible]ಳಿ ಬೆಳಕು ಏನೂ ಇಲ್ಲದ ಮೂರು ಕೊರಡಿ[illegible]ವೆ. ಆ ಕೊರಡಿಗಳೊಳಗೆ ತಪ್ಪನ್ನು ಒಪ್ಪಿ[illegible]ಳ್ಳದ ಕೈದಿಗಳನ್ನು ಬಂಧಿಸಿ ಅಸ್ತ್ರಶಸ್ತ್ರಗಳಿಂದ ಸುಸಜ್ಜಿತರಾದ ೪ ಮಂದಿ ನಾಜಿ ಕಾವಲುಗಾರರು ಡಾಚೂ ಜೈಲಿಗೆ ತರುತ್ತಾರೆ. ಆ [illegible]ಟರ ಗಾಡಿಯಲ್ಲಿ ಈ ಕೈದಿಗಳಲ್ಲದೆ ಇನ್ನೂ [illegible]ನೇಕ ಮಂದಿ ಸಾಮಾನ್ಯ ಕೈದಿಗಳೂ ತುಂಬಲ್ಪಟ್ಟಿರುತ್ತಾರೆ.

ಜೈಲಿನಲ್ಲಿ ಸಣ್ಣ ಅಪರಾಧಿಗಳು, ದೊಡ್ಡ ಅಪರಾಧಿಗಳು, ಎಂದೆಲ್ಲಾ ಅವರನ್ನು ವಿಂಗಡಿಸಿ ಅವರಿಗಾಗಿರುವ ಬೇರೆ ಬೇರೆ ಕೋಣೆಗಳಲ್ಲಿ [illegible]ಂಧಿಸುವರು. ಬಂಧಿಸಲ್ಪಡುವ ಮೊದಲು [illegible]ದಿಗಳು ತಮ್ಮ ಉಡಿಗೆತೊಡಿಗೆ ಎಲ್ಲಾ [illegible] ಟ್ಟು ಜೈಲು ಉಡಿಗೆಯನ್ನು ತೊಟ್ಟುಕೊಳ್ಳ[illegible]ಕು. ಜೈಲಿನಲ್ಲಿ ಅವರಿಗೆ ಸಿಕ್ಕುವುದು ಇಷ್ಟೆ[illegible]ದ್ವಿ ಶರ್ಟು, ಒಂದು ಜೊತೆ ಬೂಟ್ಸು, ಕಪ್ಪು [illegible]ಬ ಟೊಪ್ಪಿ ಮತ್ತು ಚಾಪೆಯ ಮೇಲೆ ಹಾಸ[illegible]ಕ್ಕೆ ಒಂದು ತುಂಡು ಬಟ್ಟೆ, ಟಿನ್ನಿನ ಒಂದು [illegible]ಟ್ಟಲು ಮತ್ತು ದಿನಕ್ಕೊಂದರಂತೆ ಒಂದೊಂದು [illegible]ರ್ರಿಗೆಸುಟ್ಟ ಬ್ರೆಡ್ಡು! ಜೈಲು ಕೋಣೆಗಳಿಗೆ [illegible]ದಿಗಳನ್ನು ದೂಡಬೇಕಾದರೆ ಮೊದಲು ಅವರ [illegible]ಲೆಯನ್ನು ಸರಿಯಾಗಿ [illegible]ಳಿಸಿಬಿಡುವರು. [illegible]ಂದಿನಿಂದ ಕೈದಿಗಳ ಜೈಲುಜೀವನ ಆರಂಭವಾಗುವದು.

ಆಶಿಬಿಟ್ಟ ಕೈದಿಗಳಿಗಾಗಿಯೂ, ಅಪ್ರಾಕೃತ ಸಂಬಂಧವನ್ನಿಟ್ಟು ಜರ್ಮನ ಜಾತಿಯನ್ನು ಕೆಡಿಸಿದ ಯಹೂದಿಯರಿಗಾಗಿಯೂ ಜೈಲಿನಲ್ಲಿ ಪ್ರತ್ಯೇಕ ಕೋಣೆಗಳಿರುತ್ತವೆ. ಇವರು ಇತರೊಡನೆ ಯಾವ ತರದ ಸಂಪರ್ಕವನ್ನೂ ಇಟ್ಟುಕೊಳ್ಳದ ಹಾಗೆ ಬಹಳ ಜಾಗ್ರತೆತೆಗೆದುಕೊಳ್ಳುವರು. ಒಂದಕ್ಕಿಂತ ಹೆಚ್ಚು ಬಾರಿ ದಂಡನೆಗೆ ಗುರಿಯಾದವರಿಗಾಗಿಯೂ ಪ್ರತ್ಯೇಕ ಕೋಣೆಗಳಿರುತ್ತವೆ. ಡಾಚೂ ಜೈಲಿನ ಕೈದಿಗಳನ್ನು ರೆಪಣೆಗಳಿಂದ ಬಂಧಿಸಡಲಿಕ್ಕೆ ಅಲ್ಲಿ ಬೇರೆ ಪ್ರತ್ಯೇಕ ಕೋಣೆಯಿರುತ್ತಿತ್ತು. ಆದರೆ ಹಾಗೆ ಅವರನ್ನು ಕಟ್ಟಿಹಾಕಿದಾಗ ಕೆಲವು ಮಂದಿ ಸತ್ತುಹೋದುದರಿಂದ, ಈಗ ಆ ಕೋಣೆಯನ್ನು ಆ ಕಾರ್ಯಕ್ಕಾಗಿ ಉಪಯೋಗಿಸುವುದಿಲ್ಲ. ಈಗ ಡಾಚೂ ಜೈಲಿನಲ್ಲಿ ೨೬೦೦ ಮಂದಿ ಕೈದಿಗಳು ಕೊಳೆಯುತ್ತಿದ್ದಾರೆ. ಬೇಸಗೆಯಲ್ಲಿ ಬೆಳಗ್ಗೆ ೪ ಗಂಟೆಗೂ, ಚಳಿಗಾಲದಲ್ಲಿ [illegible] ಗಂಟೆಗೂ ಎದ್ದು ಕೈದಿಗಳು ೧೫ ಮಿನಿಟುಗಳೊಳಗಾಗಿ ಶೌಚಾದಿಗಳನ್ನು ತೀರಿಸಿ ಕೆಲಸಕ್ಕೆ ಸಿದ್ಧರಾಗಬೇಕು. ೬-೩೦ರೊಳಗೆ ಅವರೆಲ್ಲರೂ [illegible]ಳಿಗ್ಗಿನಜಾವಸ್ವಲ್ಪಕಾಫಿಕುಡಿದು ಜೈಲುಗೇಟಿನ ಹತ್ತಿರ ಒಟ್ಟುಸೇರುವರು. ಅವರವರ ಅಪರಾಧ ಮತ್ತು ಅವರಿಗೆ ಕೊಟ್ಟ ಶಿಕ್ಷೆಗನುಗುಣವಾಗಿ ಕೈದಿಗಳಿಗೆ ಕಲ್ಲುಕಡಿಯುವುದು, ಮರಕಡಿಯುವುದು, ಕಲ್ಲಿದ್ದಲು ಸಾಗಿಸುವದು ಮೊದಲಾದ ಕಷ್ಟದ ಕೆಲಸಗಳನ್ನು ಕೊಡುತ್ತಾರೆ. ಅಪರಾಧವನ್ನನುಸರಿಸಿ ಶಿಕ್ಷೆಕೊಡುವದರ ಬದಲಿಗೆ ವ್ಯಕ್ತಿ ನೋಡಿ ಶಿಕ್ಷೆ ಕೊಡುತ್ತಾರೆ. ಆದ್ದರಿಂದ ಮಾಡುವ ಕೆಲಸದಲ್ಲಿ ಹೆಚ್ಚುಕಡಿಮೆ ಆದರೆ ಜನ ನೋಡಿ ಏಟುಕೊಡುವರು. ಕೆಲವರು ಯಾವ ಅಪರಾಧ ಮಾಡದಿದ್ದರೂ ಅನ್ಯಾಯವಾಗಿ ಏಟು ತಿನ್ನುವರು. ನಾಜಿಸರಕಾರದ ವಕ್ರದೃಷ್ಟಿ ಅವರ ಮೇಲೆ ಬಿದ್ದಿರುವುದಕ್ಕಾಗಿಯೇ ಅವರು ಅನ್ಯಾಯದ ಶಿಕ್ಷೆಯನ್ನು ಅನುಭವಿಸಬೇಕು ಹೊತ್ತುಕೊಂಡು ಹೋಗುವಾಗ ತುಂಬಿದ ಬುಟ್ಟಿಯಿಂದ ಕಡಲೆಕಾಳಿನಷ್ಟು ಸಣ್ಣ ಕಲ್ಲಿದ್ದಲು ತುಂಡು ಕೆಳಗೆ ಬಿದ್ದರೂ ಕೆಲಕೆಲವರಿಗೆ [illegible]ರ್ವಾಂತ್ಯ ತನಕ ಚಡಿಏಟುಗಳನ್ನು ಕೊಡುವರು ಅಥವಾ ಒಂದು ಬೆಂಚಿಗೆ ಕೈಕಾಲು ಕಟ್ಟಿಹಾಕಿ ರಪರಪನೆ ಮನಸ್ಸುಬಂದಷ್ಟು ಹೊಡೆಯುವರು, ಲಾಳಕಟ್ಟಿದ ಬೂಟ್ಸುಗಳಿಂದ ಅವರನ್ನು ನಿರ್ದಯವಾಗಿ ತುಳಿಯುವರು

ಪ್ರತಿಯೊಬ್ಬ ಕೈದಿಯು ಬೆಳಗ್ಗೆ ೬ ಘಂಟೆಯಿಂದ ಆರಂಭಿಸಿ ಮಧ್ಯಾಹ್ನವಾಗುವ ತನಕ ಒಪ್ಪಿಸಿಕೊಟ್ಟ ಕೆಲಸಮಾಡಬೇಕು. ನಡುವೆ [illegible] ಊಟಕ್ಕೆ [illegible] ಅರ್ಧ ಗಂಟೆಯ ವಿರಾಮವಿರುತ್ತದೆ. ಅನಂತರ ಪುನಃ [illegible] ಗಂಟೆಗೆ [illegible] ಆರಂಭಿಸಿ ಸಂಜೆ [illegible] ಗಂಟೆ ತನಕ ಎಡೆ[illegible] [illegible] ಕೆಲಸಮಾಡಿದ ಮೇಲೆ [illegible] ಪುನಃ [illegible] ಕೆಲಸಮಾಡಬೇಕು. ಅವರ ಕೆಲಸವನ್ನು ನೋಡಲಿಕ್ಕೆ ಅಲ್ಲಿ [illegible] ನೇಮಿಸಿದ ಅನೇಕ [illegible] ಬಡೆಯಲಿಕ್ಕೆ ಕಾವಲುಗಾರರು [illegible] ಇದ್ದೇ ಇದ್ದಾರೆ [illegible] ಎಂದೂ [illegible] — ಹೀಗಿರುತ್ತದೆ ಡಾಚೂ ಜೈಲಿನ [illegible]ತ್ಯದ ಜೀವನಕ್ರಮ. ಯಾರ್ಯಾರಿಗೆ ಎಷ್ಟೆಷ್ಟು ಯಾತನೆ ಕೊಡಬೇಕೆಂದು ಮೊದಲೇ ನಿರ್ಣಯವಾಗುತ್ತದೆ. ಕೈದಿಗಳು ಜೈಲಿನಲ್ಲಿ ತಪ್ಪುಮಾಡಿದರೂ ಮಾಡದೆ ಇದ್ದರೂ ಆ ನಿರ್ಣಯದಂತೆ ಅವರು ಯಾತನೆಯನ್ನು ಅನುಭವಿಸಲೇಬೇಕು ಕಾವಲುಗಾರರು ಕೈದಿಗಳನ್ನು ಸ್ವೇಚ್ಛೆಯಾಗಿ ಒಡೆಯುವರು, ಗುದ್ದುವರು, ಕೇಳುವವರೇ ಇಲ್ಲ. ಯಾತನೆಯು ಅಸಹನೀಯವಾಗಿ ಯಾರಾದರೂ ಕೆಲಸದಲ್ಲಿ ಬಹುಸ್ವಲ್ಪ ಉದಾಸೀನತೆ ತೋರಿಸಿದರೂ ಅವರನ್ನು ಕಬ್ಬಿಣದ ಮುಳ್ಳುಗಳಿಂದ, ಈಟಿಬರ್ಚಿಗಳಿಂದ ತಿವಿಯುವರು. ಶರೀರಭಂಗ, ಮಾನಭಂಗ ಮಾಡುವರು. ಜೈಲುಗೇಟುಗಳಿಂದ ಕೆಲಸಕ್ಕೆ ಹೊರಗೆ ಹೊರಡಬೇಕಾದರೆಯೇ ಈ ತರದ ಯಾತನೆಗೆ ಆರಂಭವಾಗುತ್ತದೆ. ಕೆಲವು ಕೈದಿಗಳು, ಮುಖ್ಯವಾಗಿ ಜರ್ಮನರ ಜಾತಿ ಕೆಡಿಸದವರೆಂದು ದಂಡನೆಗೆ ಗುರಿಯಾದ ಯಹೂದಿಯರು ಕೆಸರಿನಲ್ಲಿ ಹೊಟ್ಟೆಯ ಮೇಲೆ ಮಲಗಬೇಕು ಆಗ ಅವರನ್ನು ಕಾಲಿನಿಂದ ಎತ್ತಿ ಮೇಲಕ್ಕೆ ಹಾರಿಸುವರು. ಕೆಳಗೆ ಬಿದ್ದ ಅನಂತರ ಗುಪ್ತೇಂದ್ರಿಯಗಳನ್ನು ತುಳಿದು ನೋಯಿಸುವರು. ಹೀಗೆ ಧೂಳು ಕೆಸರುಗಳಿಂದ ಲೇಪಿಸಲ್ಪಟ್ಟು ರಕ್ತ— ನೀರು ಸುರಿಸುತ್ತ, ದಣಿದು ಕಂಗಾಲಾದ ಕೈದಿಗಳು ರಾತ್ರಿ ಸಮಯಕ್ಕೆ ತಮ್ಮ ಕೋಣೆಗಳಿಗೆ ಹಿಂತೆರಳುವರು. ಮತ್ತೆ ಅವರ ಮೇಲೆ ಆಲಸ್ಯ ತೋರಿಸಿದ್ದಕ್ಕಾಗಿ ತಪ್ಪುಹೊರಿಸಲ್ಪಟ್ಟು ಬಾರು ಕೋಲಿನಿಂದ ಹೊಡೆಯುವರು. ಯಹೂದಿಯರಾದರೆ ರಾತ್ರಿಯಲ್ಲಿ ಮಲಗಲಿಕ್ಕೆ ಒಂದುಚಾಪೆಯನ್ನು ಕೂಡ ಕೊಡುವುದಿಲ್ಲ. ಒಣಗಿದ ಒಂದು ರೊಟ್ಟಿಚೂರು ತಿಂದು, ಒಂದು ಗಿಂದಲು ನೀರು ಕುಡಿದು, ಅಪ್ಪರಿಂದ ಅವನು ಕಲ್ಲುಮುಳ್ಳಿನ ಬರೀ ನೆಲದ ಮೇಲೆ ಮಲಗಿ ರಾತ್ರಿ ಕಳೆಯಬೇಕು

ಎರಡನೆ, ಮೂರನೇ ಬಾರಿ ಜೈಲಿಗೆ ಬರುವುದಾದರೆ, ಜೈಲನ್ನು ಸೇರುವ ಮೊದಲೇ ಚಾಟಿ ಹೊಡೆಯಲಾರಂಭವಾಗುತ್ತದೆ. ಈಗಂತೂ ಎಲ್ಲರ ಮುಂದೆ ಬೆತ್ತಲೆ ನಿಲ್ಲಿಸಿ ಕೈದಿಗಳಿಗೆ ಚಾಟಿಯೇಟು ಕೊಡುವರು. ಇದರಷ್ಟು ನಿರ್ಲಜ್ಜ, ನಿರ್ದಯ, ಅಮಾನುಷಿಕ ವ್ಯವಹಾರವು ಬೇರೊಂದುಂಟೆ? ಇಲ್ಲ. ಈ ಪೈಶಾಚಿಕ ಲೀಲೆಯನ್ನು ತೋರಿಸಿದಷ್ಟೂ ಜೈಲಿನಧಿಕಾರಿಗಳಿಗೆ ತೃಪ್ತಿಯಿರುವುದಿಲ್ಲ. ಇಂಥ ಶಿಕ್ಷೆಯನ್ನು ಕೊಟ್ಟಾದ ಅನಂತರ ಕೈದಿಗಳು ನೋವನ್ನು ತಾಳಲಿಕ್ಕಾಗದೆ ಮೃಗಗಳಂತೆ ಅರಚುತ್ತಾ ಬೋರ್ಧತಪ್ಪಿ ಬೀಳುವರು. ಕೈದಿಗಳು ಪಕ್ಷಕ್ಕೊಮ್ಮೆ ಒಂದು ಪತ್ರ ಬರೆದು ತಮ್ಮ ಮನೆಯವರಿಗೆ ಕಳುಹಿಸಲು ಬಹುದೆಂದಿದ್ದರೂ, ಅವರು ಬರೆದ ಪತ್ರಗಳು ವಿಳಾಸದಾರರನ್ನು ತಲಪುವುದೇ ಅಪರೂಪವಾಗಿದೆ. ಜೈಲು ಅಧಿಕಾರಿಗಳು ಅವನ್ನು ಏನಾದರೊಂದು ನೆವನದಿಂದ [illegible]ತಡಗಿಸಿಬಿಡುತ್ತಾರೆ. ಜೈಲಿನಲ್ಲಿಯೇ ಕಾವಲುಗಾರರಿಂದ ಕೈದಿಗಳ ಕೊಲೆಗಳಾಗುತ್ತವೆ. ಅಥವಾ ಕೈದಿಗಳೇ ಆತ್ಮಘಾತಮಾಡಿಕೊಳ್ಳುತ್ತಾರೆ. ಕಾವಲುಗಾರರು ಮೇಲಧಿಕಾರಿಗಳ ಅಪ್ಪಣೆ ಪಡೆದೂ, ಸ್ವೇಚ್ಛೆಯಿಂದಲೂ ಕೊಡುವ ಯಾತನೆಯು ಅಷ್ಟು ಕ್ರೂರವೂ ಭಯಂಕರವೂ ಆಗಿರುತ್ತದೆ. ಸೇದುವ ಸಿಗರೇಟನ್ನು ಕೈದಿಗಳ ಮುಖಕ್ಕೆಟ್ಟಿ ಅವನ್ನು ಸುಡುತ್ತ ಕಾವಲುಗಾರರು ಅವರನ್ನು ಕೊಲ್ಲುವದು ಅವರಿಗೊಂದು ತಮಾಷೆಯೇ ಆಗಿದೆ.

ಆತ್ಮಘಾತ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿ ಸಫಲನಾಗದಿದ್ದರೆ ಕೈದಿಯು ೩೦ ಚಾಟಿ ಏಟುಗಳನ್ನು ತಿನ್ನಬೇಕು. ಆ ಮೇಲೆ ೩ ದಿನಗಳ ತನಕ ಅಂಧಕಾರಮಯ ಗವಿಯಲ್ಲಿ ಏಕಾಂತವಾಸಮಾಡಬೇಕು. ಒಮ್ಮೆಗೆ ಡಾಚೂ ಜೈಲಿಗೆ ಬಂದವನು ಎಷ್ಟು ದಿನಗಳ ತನಕ ಅಲ್ಲಿರುವನೆಂದು ಯಾರಿಂದಲೂ ಹೇಳಲಿಕ್ಕಾಗುವುದಿಲ್ಲ. ನಾಜಿಸರಕಾರದ ಕೃಪಾದೃಷ್ಟಿಗೆ ಪಾತ್ರನಾದ ಕೈದಿಯ ಸಂಬಂಧಿಗಳು ಹೊರಗೆ ಯಾರೂ ಇಲ್ಲವಾದರೆ, ಅವನು ಜೀವಾಂತ್ಯದ ವರೆಗೆ ಆ ಜೈಲಿನಲ್ಲಿ ಕೊಳೆಯಬೇಕಾಗ ಬಹುದು. ಆದರೆ, ಯಾರಿಗೂ ೩ ತಿಂಗಳಿಗಿಂತ ಕಡಿಮೆ ಜೈಲುವಾಸವಿರುವುದಿಲ್ಲ. ಅಷ್ಟರೊಳಗಾಗಿ ಕೈದಿಯು ಮುಂದಿನ ಜೀವನದಲ್ಲಿ ಯಾವ ಪ್ರಯೋಜನಕ್ಕೂ ಬಾರದಷ್ಟು ದುರ್ಬಲನೂ ದೀನನೂ ಆಗುತ್ತಾನೆ. ಜೈಲಿನಲ್ಲಿ ಡಾಕ್ಟರನು ಇದ್ದಾನೆ. ಆದರೆ ನಾಜಿ ಪಾರ್ಟಿಗೆ ಸೇರಿದವನು ಅವನು. ಪಾರ್ಟಿತತ್ವವನ್ನು ಅನುಸರಿಸಿ ನಡಯುವುದು ಅವನು ಧರ್ಮವೆಂದು ಅವನು ಎಣಿಸುತ್ತಾನೆ. ಆದ್ದರಿಂದ ಕೈದಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದಕ್ಕಿಂತಲೂ, ಒಬ್ಬೊಬ್ಬ ಕೈದಿಯು ಎಷ್ಟೆಷ್ಟು ಶಿಕ್ಷೆಯನ್ನು ಅನುಭವಿಸಬಲ್ಲನೆಂದು ತಿಳಿಯುವದು ತನ್ನ ಕರ್ತವ್ಯವೆಂದು ಅವನು ಹೇಳುವನು.

ಈ ಎಲಾ ಸಂಗತಿಗಳನು ಕೈದಿಗಳು ಹೇಳಿದುದಲ್ಲ. ಅವರು ಜೈಲಿನಲ್ಲಿ ಮೂಕರಾಗಿ ಬಿಡುತ್ತಾರೆ. ಹೊರಗೆ ಬಂದ ಮೇಲೆ ಜೈಲಿನ ಸಂಗತಿಗಳನ್ನೆಲ್ಲ ಹೇಳುವ ಸಾಹಸ, ಧೈರ್ಯ ಅವರಲ್ಲಿ ಎಷ್ಟು ಮಾತ್ರಕ್ಕೂ ಉಳಿಯುವುದಿಲ್ಲ. ಆದರೆ ಜೈಲಿನಲ್ಲಿ [illegible]ದಿಗಳಿಗೆ ಆ ತರಹದ ಶಿಕ್ಷೆಯನ್ನು ಕೊಟ್ಟು ಕೊಟ್ಟು ಬೇಸರಪಟ್ಟವರೇ ನಾಜಿ(ಹಿಟ್ಲರ) ಸರಕಾರದ ಪೈಶಾಚಿಕ ವರ್ತನೆಯಿಂದ ಅದಕ್ಕೆ ವಿದ್ರೋಹಿಗಳಾದವರೇ ಇಷ್ಟು ಸಂಗತಿಯನ್ನು ನ್ಯೂ ಸ್ಟೇಟ್ಸ್‌ಮೆನ್ ಮತ್ತು ನೇಶನ್ ಎಂಬ ಪತ್ರಿಕೆಯ ಪ್ರತಿನಿಧಿಗೆ ಹೇಳಿದರು. ಶಿಕ್ಷೆ ಕೊಟ್ಟವರೇ ಶಿಕ್ಷೆ ಇಷ್ಟು ಭಯಂಕರವಾಗಿತ್ತೆಂದು ಹೇಳುವಾಗ ಶಿಕ್ಷೆ ಅನುಭವಿಸಿದ ಆ ಕೈದಿಗಳಿಗೆ ಶಿಕ್ಷೆಯು ಎಷ್ಟು ಭಯಂಕರವಾಗಿದ್ದಿರಬಹುದೆಂಬುದನ್ನು ಬರೆದು ಹೇಳಲಿಕ್ಕಾಗದು. ಅದಕ್ಕೆ ಬೇಕಾದ ಶಬ್ದಗಳ ಸಂಗ್ರಹ ನಮ್ಮಲ್ಲಿಲ್ಲ. ಶಿಕ್ಷೆಯ ಭಯಂಕರತೆಯನ್ನು ವಾಚಕರೇ ಊಹಿಸಿಕೊಳ್ಳಬೇಕು. ಇದೀಗ ನಾಗರಿಕತೆಯ ಅತ್ಯುಚ್ಚ ಶಿಖರವನ್ನೇರಿದ ನಾಜಿ ಜರ್ಮನಿಯ ನಾಗರೀಕತೆಯ ಲಕ್ಷಣ?

---

## ಅಯರ್ಲೆಂಡಿನಲ್ಲಿ ಅಸಹಕಾರದ ವಿಜಯ.

ಡಿವೆಲರಾನಿಂದ ರಚನೆಯಾದ ಅಯರ್ಲೆಂಡಿನ ನೂತನರಾಜಶಾಸನವು ಪ್ರಕಟವಾಗಿರುತ್ತದೆ. ಈಗ ಅಯರ್ಲೇಂಡು ಸಂಪೂರ್ಣ ಸ್ವತಂತ್ರವಾಗಿರುತ್ತದೆ. ಅಲ್‌ಸ್ಟರ್ ಎಂಬ ಪ್ರದೇಶವು ಸ್ವತಂತ್ರ ಅಯರ್ಲೆಂಡಿನಿಂದ ವಿಂಗಡಿಸಲ್ಪಟ್ಟಿದ್ದರೂ, ಈ ನೂತನ ರಾಜಶಾಸನವು ಅದಕ್ಕೂ ಅನ್ವಯಿಸುವಂತಾಗಿದೆ. ಈ ನೂತನ ರಾಜಶಾಸನದಲ್ಲಿ, ಬ್ರಿಟಿಷ ಚಕ್ರವರ್ತಿಯರ ಹೆಸರು ಇಲ್ಲ. ಬ್ರಿಟಿಷ ಸರಕಾರದೊಡನೆ ಯಾವಕ್ಕೂ ಸಂಬಂಧವಿರುವುದು ಇದರಲ್ಲಿ ಕಾಣುವುದಿಲ್ಲ. ಅದರಲ್ಲಿ, ಬ್ರಿಟನಿಗೆ ಯಾವತಪ್ಪ ಕಪ್ಪಕಾಣಿಕೆಗಳನ್ನು ಕೊಡಲು ಸಿದ್ಧವಿರುವುದೂ ಕಾಣಿಸುವುದಿಲ್ಲ.

ಡಿವೆಲರಾನನ್ನು ಒಲಿಸಿಕೊಳ್ಳಬಹುದೆಂಬದಾಗಿ ಇದ್ದ ಬ್ರಿಟನಿನ ಆಶೆಯು ರಾಶೆಯಾಯಿತು. ಅಯರ್ಲೆಂಡಿಗೆ ದಂಡೆತ್ತಿಹೋಗಿ ಡಿವೆಲರಾನಿಗೆ ಬುದ್ಧಿಕಲಿಸುವ ಯೋಜನೆ ಮಾತ್ರ ಬ್ರಿಟನು ಉಪಯೋಗಿಸಬೇಕಾಗಿತ್ತು. ಆದರೆ, ಅಂಥ ಪ್ರಸಂಗಕ್ಕೆ ಬ್ರಿಟನಿನ ಟೋರಿಸರಕಾರವು ಈಗ ಸಿದ್ಧವಿಲ್ಲದಿರುವುದರಿಂದಲೇ ಬ್ರಿಟನು ಡಿವೆಲರಾನಿಗೆ ಬಗ್ಗಿದುದು

ಡಿವೆಲರಾನ ಅಸಹಕಾರವೇ ಈ ವಿಚಾರದಲ್ಲಿ ಅತ್ಯಂತ ಪರಿಣಾಮಕಾರೀ ಅಸ್ತ್ರವಾಯಿತು. ಇದರ ಸೆಸೆಯಿಂದ ಡಿವೆಲರಾನಿಗೆ ಬ್ರಿಟನು ಮನ್ನಣೆ ಕೊಟ್ಟದಲ್ಲದೆ, ಅಲ್‌ಸ್ಟರ್ ಪ್ರದೇಶವು ಅಯರ್ಲೇಂಡಿನೊಡನೆ ಕೂಡುವಂತೆ ಅದರ ಟೋರಿಸರಕಾರವು ಪ್ರೇರೇಪಿಸುತ್ತದೆ. ಕಾರಣ — ಡಿವೆಲರಾನ ಅಸಹಕಾರ ಚಳವಳದ ರುಚಿಯು [illegible] ಹಿಂದೆ ತಿಳಿದಿದೆ. ಈಗಿನ ಅಂತರಾಷ್ಟ್ರೀಯ ರಾಜಕೀಯ ವಾತಾವರಣದಲ್ಲಿ ಕಗ್ಗತ್ತಲೆಯ ಮೋಡಗಳು ಕವಿದುಕೊಂಡಿರುವ ಈ ಸಮಯದಲ್ಲಿ ಮತ್ತೊಮ್ಮೆ ಡಿವೆಲರಾನ ಅಸಹಕಾರ ಪ್ರಭಾವವು ನಡೆಯದಂತೆ ಅದು ಅಲ್‌ಸ್ಟರಿಗೆ ಮೇಲಿನ ಬೋಧನೆಯನ್ನು ಕೊಡುತ್ತಿರ ಪ್ರದ[illegible]

---

ಜೇನೀವಾ. ಜಪಾನಿಯರಿಂದ ಕೊಡಲ್ಪಾದ ಶರ್ತಗಳನ್ನು ತಿರಸ್ಕರಿಸಿರುವರು. ಚಾಂಗ್ಸೇ ಎಂಬಲ್ಲಿ ಬೀಕರ ಕದನವು ನಡೆಯುತ್ತಿವೆ. ಚಿಯಾಂಗ್ ಕೈ ಶೇಕ್‌ರಿಗೆ ಸಂಗ್ರಾಮ ವ್ಯವಸ್ಥೆ ಕಾರ್ಯಗಳಿರುವುದರಿಂದ ಮಿ। ಕಾಪಾವೆಂಬವರು ಪ್ರಧಾನಮಂತ್ರಿಯರಾಗಿ ನೇಮಕಹೊಂದಿರುವರು

— —

ಹಿಟ್ಲರನು ಮುಸಲೋನಿಯನ್ನು ಕಾಣಲು ಸದ್ಯದಲ್ಲೇ ಇಟಲಿಯ ರಾಜಧಾನಿ ರೋಮಿಗೆ ಪ್ರಯಾಣ ಬೆಳೆಸುವನಂತೆ.

## ಅನುಕ್ರಮಣಿಕೆ


ವಾರದ ವಾರ್ತೆಗಳು ೩
ಅಖಿಲಭಾರತ ವಿದ್ಯಾರ್ಥಿ ಪರಿಷತ್ತು ೭
ಗ್ರಾಮಾಭ್ಯುದಯ ೯
ನೋಟಗಳು [illegible]
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು,
ಗ್ರಹೀಕು
ವಕ್ರಗ್ರಹ ಶಾಂತಿಗೆ ಜಪಾನಿನ ಪ್ರಯತ್ನ ೧೦
ಸ್ಫುಟವಿಚಾರಗಳು
ಜವಾಹರಲಾಲರ ಸಂದೇಶ ೧೧
ತಾಲೂಕುಗಳಿಂದ ೧೪
ಶಿಲುಬಂತಲೆಯ ಬಲಿದಾನ ೧೮



ಸ್ವದೇಶಾಭಿಮಾನಿ

ತಾ. ೭ನೇ ಶುಕ್ರವಾರ ಜನವರಿ ೧೯೩೮


# ವಕ್ರಗ್ರಹ ಶಾಂತಿಗೆ ಜಪಾನಿನ ಸೂಚನೆ

ಸೋತವರು ಸಂಧಾನಕ್ಕೆ ಒರುವುದು ರೀತಿ, ಎದ್ದುದೆಂಟ ಜಪಾನು ಸಂಧಾನದ ಶರ್ತಗಳನ್ನು ಮೊದಲೇ ಹೇಳುವುದರಲ್ಲಿ ಇಂಗಿತವಿದೆ ಎಂದು ಬೇರೆ ಹೇಳಬೇಕೇ?

ಸಾಮ್ರಾಜ್ಯಲೋಲುಪರ ಅವಸ್ಥೆಗನು ಸಾರಿಗೆ, ಶರ್ತಗಳೂ ಇತ್ಯಾತ್ತನನ್ನೇ ಜಪಾನು, ಏನು ಅನುಕಲ್ಪ ಸಂಪೊಡುವ ಸಾಮ್ರಾಜ್ಯ ಸರ ಕಾರಿವ್ವ ಗೆಲ್ಲಿಗ ನರ್ತಿಸುತ್ತದೋ ಅದನ್ನೆ ನೋಡಿ ತನ್ನ ಶರ್ತಗಳನ್ನು ಹೇಳಿಯದೆ

೧. ಕಡ್ಡಾಯವಾದ ಸಾಂಪತ್ತಿಕ ಕರಾರು

೨. ಕೊಮ್ಯುನಿಸ್ಟರಿಗೆ ವಿರುದ್ಧವಾಗಿರುವ ತಂಡದಲ್ಲಿ ಸೇರುವಿಕೆ

೩. ಚೀನದಲ್ಲಿ ಜಪಾನಿನ ಸೈನ್ಯಗಳನ್ನು ಶಾಶ್ವತವಾಗಿರಿಸುವ ಏರ್ಪಾಡು.

೪. ಒಳಮಂಗೋಲಿಯದಲ್ಲಿ ಸ್ವತಂತ್ರ ರಾಜ್ಯ ನಿರ್ಮಾಣ

೫. ಯುದ್ಧ ಖರ್ಚನ್ನು ತೆರುವಿಕೆ

ಈ ಶರ್ತಗಳನ್ನು ಚೀನವು ಓದದೆಯೆ ನಿರಾಕರಣ ಮಾಡಿದೆ ಚೀನವು ಒಂದು ಪರಾಹತ ಮಾತ್ರವಲ್ಲ, ಬರಿಯ ಒಳರಾಜ್ಯವಾಗುವಷ್ಟು ದೈನ್ಯತೆಗೆ ಈ ಶರ್ತಗಳನ್ನು ಅಂಗೀಕರಿಸಿ ಒಳಗಾಗಲು ಒಪ್ಪುವುದುಂಟೆ? ಇತರ ಸಾಮ್ರಾಜ್ಯ ಸರಕಾರಗಳು ಮಾತ್ರ ಈ ಶರ್ತಗಳನ್ನು ನೋಡಿ ಸಂತೋಷಪಟ್ಟು, ಜಪಾನನ್ನು ಕೊಂಡಾಡದಿದ್ದರೂ ಹಿಗ್ಗಿನಲ್ಲಿವೆಯಂತೆ!

ಚೀನವು ಜಪಾನಿಗೆ ಒಳಗಾಗದೆ ಇದ್ದಲ್ಲಿ ಜಪಾನು ತನ್ನ ಸ್ಥಾನಮಾನಗಳನ್ನು ಇನ್ನು ಬಹು ಕಾಲ ಇಟ್ಟುಕೊಳ್ಳಲಾರದು. ಆಶ್ರಿತರ ದುಡಿತದಿಂದ ಜೀವನಮಾಡುವ ಸುಧಾರಿಕ ರಾಜ್ಯಗಳುಂಟು, ಈ ರಾಜ್ಯಗಳು ಗೌರವಯುಕ್ತವಾಗಿ ಜೀವಿಸಿ, ಒಳಪಟ್ಟವರನ್ನು ಮರ್ದಿಸಿ, ಸೊಕ್ಕುತ್ತಲೇ ಬದುಕಿವೆ.

ಚಿಯಾಂಗ್ ಕೈಶೇಕನು ಈ ಶರ್ತಗಳನ್ನು ಎಂದೋ ತಿರಸ್ಕರಿಸಿರುವನು. ಇನ್ನೂ ಕೆಲಕಾಲ ಹೀಗೆಯೆ ಕಳೆದರೆ, ಜಪಾನಿಗೆ ದೇಹವೇ ಜಡವಾಗಿ ಬಡವಾಗಬಹುದು. ಜಪಾನು ಪಡೆದಿರುವ ಜಯವೆಂಬುದು ಸೋಲಿಗೂ ಹೀನವಾಗುವುದು. ನಾವು ಗೆಲ್ಲಲಾರೆವು ಎಂಬ ಭಾವನೆಯು ಚೀನೀಯರಲ್ಲಿ ಮೂಡಿಲ್ಲ; ಅದು ಮೂಡದಿರುವಲ್ಲಿ ಜಪಾನು ಗೆದ್ದರೂ ಗೆಲವಿಲ್ಲ. ಸಾಮ್ರಾಜ್ಯಲಾಲಸೆಯೆಂಬ ಭೂತವನ್ನು ಉಚ್ಚಾಟನೆ ಮಾಡಬೇಕೆಂಬುದು ಚೀನದ ಸ್ಥಿರ ಪ್ರಯತ್ನ.

# ರೈತರ ಋಣವಿಮೋಚನೆಯ ಕಾನೂನು

### ಮಸೂದೆಯಲ್ಲಿ ಸಿಲೆಕ್ಟ್ ಕಮಿಟಿಯು ಮಾಡಿರುವ ತಿದ್ದುಪಡಿಗಳು

ಸಿಲೆಕ್ಟ್ ಕಮಿಟಿಗೆ ಎಲ್ಲ ಅಭಿಪ್ರಾಯಗಳನ್ನುಳ್ಳ ಸದಸ್ಯರನ್ನೆ ಆರಿಸಲಾಗಿದ್ದಿತು. ಆದರೂ ಅವರ ಒಮ್ಮತದಿಂದಲೇ ತಿದ್ದುಪಡಿಗಳನ್ನು ಮಾಡಿ, ಮಸೂದೆಯನ್ನು ಈಗ ಅಂಗೀಕಾರಕ್ಕೆ ಒಪ್ಪಿಸಿರುವರು. ಪ್ರಾಮುಖ್ಯವಾದ ಕೆಲ ವಿಷಯಗಳಲ್ಲಿ ಉತ್ತಮವಾಗಿರುವ ತಿದ್ದುಪಡಿಗಳಾಗಿವೆ ನಿಜ, ಆದರೆ ಹೀಗೆ ಎಮ್ಮತ ಅಭಿಪ್ರಾಯವು ಬರುವಂತೆ ಕೆಲ ವಿಷಯಗಳಲ್ಲಿನ ರಿಯಾಯಿತಿಗಳು ವಾಯುವಾದುವೋ ಎಂದು ನೋಡಬೇಕು.

1987ನೆ ಇಸ್ವಿ ಅಕ್ಟೋಬರದ 1ನೇ ತಾರೀಕಿಗೆ ಬಾಕಿಯಿದ್ದ ಬಡ್ಡಿಯನ್ನು ವಜಾ ಮಾಡುವ ವಿಷಯದಲ್ಲಿ ಮುಖ್ಯ ತಿದ್ದುಪಡಿಯಾಗಿದೆ. ಈ ಬಗೆಯ ಸಾಲಗಳನ್ನು ಎರಡು ವರ್ಗಗಳಲ್ಲಿ ವಿಭಜಿಸಿದ್ದಾರೆ. 1982ನೆ ಇಸ್ವಿಯ ಮೊದಲಿನ ಸಾಲಗಳಿಗೆ ಹಿಂದೆ ಕೊಟ್ಟ ರಿಯಾಯಿತಿಗಳೇ ಇವೆ, ಅವನ್ನು ಪ್ರತ್ಯೇಕ ಚರ್ಚಿಸುವುದು ಆವಶ್ಯಕವಾಗಿಲ್ಲ.

1932ನೆ ಇಸವಿ ಅಕ್ಟೋಬರ ತಾ 1ರ ತರುವಾಯದಲ್ಲಾದ ಸಾಲಗಳಿಗೆಲ್ಲ ನೇಕಡಾ 5ರ ಸಲೆ ಬಡ್ಡಿಯನ್ನು ಗಣಿಸಲಾಗಿದೆ ಇದರಿಂದ ಬಡ್ಡಿಯನ್ನೇನೂ ಹಿಂತೆರದಿದ್ದವರಿಗೆ ಹೊಸ ಮಸೂದೆಯಲ್ಲಿನ ರಿಯಾಯಿತಿಗಳು ತಕ್ಕಷ್ಟು ಸಿಗಲಾರದಾಗಿದೆ ಬಡ್ಡಿಯನ್ನು ಸಂಪೂರ್ಣವಾಗಿ ತೆತ್ತು ಬಿಟ್ಟವರಿಗೆ ಹೀಗೆ ಅವಶ್ಯವಾಗಿಯೂ ಹೊಸ ರಿಯಾಯಿತಿ ಇದೆ

1932ನೆ ಇಸ್ವಿ ಅಕ್ಟೋಬರ 1ನೆ ತಾರೀಕಿಗೆ 10ರ ಸಲೆ ಬಡ್ಡಿಯಲ್ಲಿ ಪಡೆದ 100 ರೂಪಾಯಿ ಸಾಲಕ್ಕೆ, ಬಡ್ಡಿಯನ್ನೇನೂ ಕೊಡದಾತನು 25 ರೂಪಾಯಿ ಬಡ್ಡಿ ತೆತ್ತರೆ ಸಾಕು ಅರೆವಾಸಿ ಬಡ್ಡಿಯನ್ನು ತೆತ್ತವನು ಇನ್ನು ಕೊಡಬೇಕಾದ್ದಿಲ್ಲವೆಂದರ್ಥ ಪೂರ್ಣ ಬಡ್ಡಿಯನ್ನು ತೆತ್ತವನಿಗೆ ಅರ್ಧ ಬಡ್ಡಿ ವಾಪಸು ಸಿಗುವುದು, ಎಂದರೆ ಅಸಲಿನಿಂದ ವಜಾ ಆಗುವುದು ಇದರಿಂದ ನ್ಯಾಯವಾದ ಬಡ್ಡಿಯನ್ನು ಸರಿಯಾಗಿ ಮುಚಿ ತೆತ್ತಂತಾಗುವುದು ಕೆಲವರಿಗೆ ಇದರಿಂದ ಪೂರ್ಣ ಆಶಿಸಿದಷ್ಟು ರಿಯಾಯಿತಿ ಸಿಗದಿದ್ದರೂ, ಎಲ್ಲರ ವಿಚಾರ ಮಾಡಿದರೆ, ಇಡೀ ಪ್ರಾಂತ್ಯಕ್ಕೆ ಇದು ನ್ಯಾಯ ಸಲ್ಲಿಸಿದಂತಾಗಿದೆ ಈ ತಿದ್ದುಪಡಿಯಿಂದ ಯಾರೂ ಅತೃಪ್ತರಾಗುವಂತಿಲ್ಲ.

ಅನಾಥ ವಿಧವೆಯರಿಗೆ ಮೋಸವಾಗುವುದೆಂದು ದೂರಿಟ್ಟವರ ಮಾತನ್ನು ಸರಿಯಾಗಿ ಈ ಕಮಿಟಿಯು ಆಲೋಚಿಸಿ, ಅವರಿಗೆ ಇದೊಂದೇ ಆಧಾರವೆಂದು ಮಾತ್ರ ತೋರಿದಲ್ಲಿ, ಮತ್ತು ಅಂತಹ ಸಾಲ ತೆತ್ತ ಹಣವು 3000ಕ್ಕೆ ಮೀರದ ಮೊಬಲಗಾದಲ್ಲಿ ಈ ಕಾನೂನಿನ ಸೂತ್ರಗಳು ಅನ್ವಯಿಸಬಾರದೆಂದಾಗಿದೆ.

ಜಮೀನ್ದಾರರು ದೂರಿಟ್ಟಷ್ಟನ್ನು ಚೆನ್ನಾಗಿ ತಿಳಿದು, ಕೆಲವು ಮಾತ್ರ ರಿಯಾಯಿತಿಗಳನ್ನು ಶಿಫಾರಸು ಮಾಡಲಾಗಿದೆ. 1938ನೆ ಇಸ್ವಿ ಸೆಪ್ಟೆಂಬರಿನೊಳಗಾಗಿಯೆ 1347ನೆ ಫಸಲಿಯ ಗೇಣಿ ತೆರಬೇಕಾಗಿದೆ, ಆಗ ಮಾತ್ರ ಒಕ್ಕಲಿಗೆ ರಿಯಾಯಿತಿ ಸಿಗುವುದು. ಎಂದರೆ, ಈಗ ಈ ವರ್ಷ ಸಲ್ಲಬೇಕಾದುದನ್ನು ಒಕ್ಕಲು ಕೂಡಲೆ ಧನಿಗೆ ತೆರಬೇಕಾಗಿದೆ ಒಕ್ಕಲು ತೆರದಂತೆ ಈ ಕಾನೂನು ಪ್ರೋತ್ಸಾಹಿಸುವದೆಂಬ ಆಕ್ಷೇಪವು ಇನ್ನು ಉಳಿಯದು. ಜಮೀನ್ದಾರನು ರೈತನ ಬಗ್ಗೆ ತೆತ್ತ ಸೆಸ್ಸುಗಳು, ಗೇಣಿ ವಸೂಲಿ ಬಗ್ಗೆ ದಾವೆಯ ಖರ್ಚು—ಇವನ್ನು ರೈತನಿಂದ ವಸೂಲ್ಮಾಡಿಕೊಳ್ಳಬೇಕೆಂದೂ ಶಿಫಾರಸಾಗಿದೆ. ರೈತನು, ಈ ಆಕ್ಟು ಜ್ಯಾರಿಗೆ ಬಂದ ತರುವಾಯ ತೆರುವ ಎಲ್ಲ ಗೇಣಿಯನ್ನು 1847ನೆ ಫಸಲಿಯ ಬಗ್ಗೆ ಬರೆದುಕೊಳ್ಳಲಾದೀತು ಈ ಗೇಣಿಯನ್ನು ರೈತನು ಕೋರ್ಟಿನಲ್ಲಿ ಠೇವಣಾತಿಯಾಗಿಟ್ಟು, ಹಿಂದಣ ಗೇಣಿಯನ್ನು ವಜಪೆಪಡಿಸುವಂತೆ ಸಹ ಅರಿಕೆ ಮಾಡಬಹುದು.

### 1936—37ರಲ್ಲಿ

# ತಂತೀ—ಟಪ್ಪಾಲು ವ್ಯವಹಾರ

ಈ ವರ್ಷದಲ್ಲಿ 120000 ಜನರಿಗೆ ಈ ಇಲಾಖೆಯಲ್ಲಿ ಉದ್ಯೋಗ ದೊರೆತಿದೆ. ಇವರು ಸುಮಾರು 360 ಕೋಟಿ ರೂಪಾಯಿ ಮೊಬಲಗಿನ ವ್ಯವಹಾರವನ್ನು ಜನತೆಗಾಗಿ ಕೈಕೊಂಡಿದ್ದರು. 1250 ಮಿಲ್ಲಿಯ ಸನಗುಗಳು ಟಪ್ಪಾಲುದ್ವಾರಾ ರವಾನೆಯಾಗಿದ್ದವು. 18 ಮಿಲ್ಲಿಯ ತಂತೀ ವಾರ್ತೆಗಳನ್ನು ನೈಯಲಾಗಿತ್ತು

ಇಂಡಿಯಾ—ಇಂಗ್ಲೆಂಡುಗಳನ್ನು ಈ ಇಲಾಖಾ ಆಡಳಿತ ಮತ್ತು ಖರ್ಚುಗಳ ವಿಷಯವಾಗಿ ಹೋಲಿಸುವುದುಂಟು. ಇಂಡಿಯವು ಇಡೀ ಬ್ರಿಟಿಷ ದ್ವೀಪಗಳಿಗಿಂತ ಹತ್ತುಪಾಲು ದೊಡ್ಡದಾಗಿದೆ ಎಂಬುದನ್ನು ಮರೆಯುವರು. ಅದೂ ಅಲ್ಲದೆ, ಇಲ್ಲೆಲ್ಲ ಕೃಷಿ ಜೀವಿಗಳು ಹೆಚ್ಚಾಗಿ, ಒಂದು ಗ್ರಾಮದಿಂದ ಮತ್ತೊಂದಕ್ಕೆ ಹೋಗುವುದೆಂದರೆ ನಾಲ್ಕಾರು ಮೈಲು, ಕಾಡುಗಳು, ಜನವಿರಳವಾದ ಪ್ರದೇಶಗಳು. ಇಷ್ಟು ದೂರದೂರಕ್ಕೆ ಸಂಚಾರ ಮಾಡುವಾಗ, ಕೊಂಡೊಯ್ಯುವ ಸನಗುಗಳ ಸಂಖ್ಯೆ ಅಷ್ಟಿಲ್ಲ ಇಂಗ್ಲೆಂಡಿನಲ್ಲಿ ದೂರ ಕಡಿಮೆ, ಸನಗು ಸಂಖ್ಯೆ ಹೆಚ್ಚು ನಾನಾ ಭಾಷೆಗಳೂ ಇಲ್ಲಿವೆ, ಅಶಿಕ್ಷಿತರ ಸಂಖ್ಯೆ ಬಹಳವಾಗಿದೆ ಇಲ್ಲಿ ಸಂಬಳವು ಕಡಮೆ ನಿಜ, ಪಹಿವಾಟಿನ ಹೆದ್ದಾರಿಗಳ ಇತ್ಯಾದಿಗಳ ಮತ್ತು ಯಂತ್ರಗಳ ಸಂಖ್ಯೆ ಹೆಚ್ಚು ಇಲ್ಲಿನ ಅಲ್ಪ ಮಿತಿಯ ಟಪ್ಪಾಲು ಖರ್ಚು ಇಂಗ್ಲೆಂಡಿನಲ್ಲಿಗಿಂತಲೂ ಕಡಮೆ, ಆದರೆ ಪತ್ರಗಳು ಅಲ್ಲಿನ ಐದರಷ್ಟು ದೂರಕ್ಕೆ ಒಯ್ಯಲ್ಪಡುವುವು. ತಂತೀ ದಸ್ತೂರಿಯು ಹೆಚ್ಚು, ಆದರೆ, ವಾರ್ತೆಗಳನ್ನೂ ಐದರಷ್ಟು ದೂರಕೊಯ್ಯಬೇಕು ಸರ್ವಿಸಿನ ಖರ್ಚು ಅಷ್ಟೇ ಉಳಿದು, ಪಹಿವಾಟುಗಳು ಹೆಚ್ಚಾಗದೆ ಇರುವಂಥ ಸಂದರ್ಭದಲ್ಲಿ ಬೇರೊಂದೇ ಹಾಸಲಿನ್ನು ಕಡಮೆ ಮಾಡವುದು ತಪ್ಪು ಇಂಗ್ಲೆಂಡಿನಲ್ಲೂ ಹೀಗೆಯೇ ಎಂದು ಪಾಠ ಕಲಿತಾಗಿದೆ

ಇವು ಶ್ರೀ। ಬೆವೂರವರು ಮದ್ರಾಸಿನಲ್ಲಿ ವಿವರಿಸಿದ ಈ ಇಲಾಖಾ ಸಂಕಷ್ಟಗಳು.

# ವಿಶೇಷ ನ್ಯಾಯವಿಚಾರಣೆ ತೀರ್ಮಾನ

### 'ಹರಿಜನ' ಪತ್ರಿಕೆಯಿಂದ

ಕಿರೂ ಎಂಬಾತನು ರಾವಲ್‌ಪಿಂಡಿಯ ಸೈನಿಕ ಬಜಾರಿನಲ್ಲಿ ಕಾಫೀ ಅಂಗಡಿಯ ಚಾಕರಿದಾರನು. ಆ ಅಂಗಡಿಯಲ್ಲಿ ದರೋಡೆ ನಡೆದಿತ್ತು ಇವನೇ ಕಾರಣನೆಂದು ಊಹಿಸಿ, ಪೋಲೀಸರು ಅವನನ್ನು ಬಲು ಚೆನ್ನಾಗಿ ಬಡೆದರು (ಕೆಲವು ತಾಸುಗಳ ವರೆಗೆ) ಅವನು ತಾನೇ ಕದ್ದುದೆಂದು ಒಪ್ಪಿಕೊಂಡನು ಕಳವಾದ ಸಾಮಾನನ್ನು ತೋರಿಸಿಕೊಡಲೂ ಸಮ್ಮತಿಸಿದನು ಹಲವರು ಅವನ ಜತೆಗೆ ಹೋದರು ಅವನಿಗೆ ಹತ್ತಿರವೇ ಒಂದು ಚೂರಿ ಸಿಕ್ಕಿತು ಅದರಿಂದ ಪೋಲೀಸ್ ಜವಾನನನ್ನೂ ಅಂಗಡಿಗಾರನನ್ನೂ, ತನ್ನನ್ನೂ ತಿವಿದೇ ಬಿಟ್ಟನು ಪೋಲೀಸ್ ಜವಾನನು ಸತ್ತನು, ಕಿರೂ ಮತ್ತು ಅಂಗಡಿಗಾರ ಇಬ್ಬರೂ ಗುಣಹೊಂದಿದರು ಜವಾನನ ಕೊಲೆಗಾಗಿ, ಮತ್ತು ಅಂಗಡಿಗಾರನಿಗೆ ವಿಪರೀತ ಗಾಯ ಮಾಡಿದುದಕ್ಕಾಗಿ ರಾವಲ್‌ಪಿಂಡಿಯ ಸೆಶನ್ಸ್ ಜಡ್ಜರು ಕಿರೂವಿಗೆ ಜೀವಾಂತ್ಯದ ವರೆಗೆ ಟಾಪು ಶಿಕ್ಷೆಯನ್ನೂ ೧೮ ತಿಂಗಳ ಕಠಿನ ಸಜೆಯನ್ನೂ ವಿಧಿಸಿದರು ಕಿರೂವು ಸೈನಿಕ ಅಫೀಸರರಾದ ಮೇಜರ್ ಸ್ಟುವರ್ಟ ರನ್ನು ಸಾಕ್ಷಿ ಕರೆದು, ಅವರಿಂದ ತನಗೆ ಜವಾನರಿಂದಾದ ಹಿಂಸೆಯನ್ನು ವಿವರಿಸಿಕೊಂಡನು ಆದರೆ ಸೆಶನ್ಸ್ ಜಡ್ಜರು,—ಆತ್ಮರಕ್ಷಣೆಗಾಗಿ ಅಥವಾ ಥಕ್ಕನೆ ಉದ್ರೇಕಗೊಂಡು ಈತನು ಇತರರನ್ನು ಚೂರಿಯಿಂದ ತಿವಿದಂತಿಲ್ಲವೆಂದರು ಪಂಜಾಬು ಹೈಕೋರ್ಟಿನಲ್ಲಿ,—ಈ ವಿಷಯ ನ್ಯಾಯವಿಚಾರಣೆ ನಡೆದಿದೆ. "ಆತ್ಮರಕ್ಷಣೆಗಾಗಿ ಶುದ್ಧವಾದ ಕಾರಣವಾವುದೂ ಇದ್ದರೆ ಅದು ಕಿರೂವಿಗೆ ಇತ್ತೆಂದು ಹೇಳಬೇಕಾಗಿದೆ. ಅವನನ್ನು ಕರುಣೆಯಿಲ್ಲದೆ ಹಿಂಸೆಮಾಡುತ್ತ ಬಡೆಯುತಿದ್ದರು. ಅದೂ ಬಹಳ ಹೊತ್ತು ನಡೆದು, ಅದನ್ನು ಎಣಿಸಿದರೆ ಭಯಂಕರವೆನಿಸುವಂತಾಗಿದೆ. ಇದು ನ್ಯಾಯಸಮ್ಮತವಲ್ಲದ ದಂಡನೆ. ಗುಮಾನಿಗಳನ್ನು ಈ ರೀತಿ ದಂಡಿಸಿ, ಮತ್ತೆ 'ಒಪ್ಪಿಕೊಂಡ'ನೆಂಬ ಒಂದು ಹೇಳಿಕೆಯನ್ನು ಅವರಿಂದ ಪಡೆದು, ಕದ್ದುದೆಂಬ ಸಾಮಾನನ್ನು ಕಂಡುಕೊಳ್ಳುವ ರೀತಿಯುಂಟು. ಎಷ್ಟೋ ವೇಳೆ ಈ ರೀತಿ ಶೋಧನೆಯಿಂದ ಸತ್ತ ಗುಮಾನಿಗಳ ವಿಷಯ ನಾವು ಬಲ್ಲೆವು. ಅಪರಾಧಿತನನ್ನು ನಾನಾ ರೀತಿಯಾಗಿ ಬಾಧಕಕರವಾದ ರೀತಿಯಲ್ಲಿ ದಂಡಿಸುವಾಗ, ಅದನ್ನು ತಡೆವುದು, —ಕೊಲೆಮಾಡಿಯೇ ಆದರೂ,—ನ್ಯಾಯಕ್ಕೆ ವಿರೋಧವಲ್ಲವೆಂದು ನಮ್ಮ ಅಭಿಪ್ರಾಯ. ಪೋಲೀಸ್ ಫೌಜಿಗೇ ಈ ರೀತಿಯ ಶೋಧನೆ (ಪತ್ತೆ ಮಾಡುವ) ಕ್ರಮವು ಒಂದು ನಾಚುಗೆಗೇಡು ನ್ಯಾಯ ತೀರ್ಮಾನವಾಗದಂತೆ ಇದು ಒಂದು ತಡೆ, ಇದನ್ನು ನಿಲ್ಲಿಸಬೇಕು'' ಎಂದು ಇಬ್ಬರು (ಚೀಫ್ ಜಡ್ಜರೂ ಕೂಡಿ) ಜಡ್ಜರು ತೀರ್ಮಾನಿಸಿ, ಕಿರೂವನ್ನು ಬಿಡುಗಡೆ ಮಾಡಿರುವರು

# ಲಿಬರಲರಿಗೆ ಫೆಡರೇಶನಿನಲ್ಲಿ ಪ್ರೀತಿಯಿದೆ!

### ಆದರೆ ಮೆಚ್ಚುಗೆಯಿಲ್ಲ

### ಇದೆಂತಹ ವಿಚಿತ್ರ ರೀತಿಯೊ!

೧೯೩೫ರಲ್ಲಿ ಮಂಜೂರಾದ ಫೆಡರೇಶನು ಆಕ್ಟು ಸಮಸ್ತ ಪಕ್ಷದವರಿಗೂ ಅತೃಪ್ತಿಕರವೇ ಆಗಿದೆ, ಅದನ್ನು ಭಾರತವಾಸಿಗಳಾರೂ ಅಂಗೀಕರಿಸುವುದಿಲ್ಲ ಅದು ನಮಗೆ ಸಾಲದು, ಎಷ್ಟೋ ವಿಧಾನಗಳಲ್ಲಿ ಅದ ಇನ್ನೂ ನಮ್ಮ ಭವಿಷ್ಯವನ್ನೆ ಭಂಗಿಸಿಯದೆ ಭಾರತವಾಸಿಯರಿಗೆ ಒಲ್ಲದ ಅಭಿಪ್ರಾಯಗಳೆಷ್ಟೋ ಅದರಲ್ಲಿವೆ ಆದರೂ, ಇಡೀ ದೇಶದ ಸಾಮಾಜಿಕ, ಆರ್ಥಿಕ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಅದು ಸದ್ಯಕ್ಕೆ ಸಾಕೆಂದೂ ಅದರಿಂದ್ಲಾಗಿ ಡೊಮಿನಿಯನ್ ಸ್ಟೇಟಸ್ ನಮಗೆ ದೊರೆಯುವಂತಾದೀತೆಂದೂ ಭಾವಿಸಿ, ಮುಖ್ಯವಾಗಿ ಕಾಂಗ್ರೆಸ್ ಪಕ್ಷವು ಹಲವು ಪ್ರಾಂತ್ಯಗಳಲ್ಲೂ ಮುಂದುವರಿದುದನ್ನು ತಿಳಿದು, ಅಲ್ಲಿನ ಮಂತ್ರಿ ಮಂಡಲಗಳು ಸಮಸ್ತ ಪ್ರಜೆಗಳನ್ನು ಒಂದೇ ಪ್ರಕಾರವಾಗಿ ನಡೆಸಿ ಬರುವ ಕಾರಣ ಗವರ್ನರರು ರಕ್ಷಿಕವಚದ ಉಪಯೋಗ ಮಾಡದಂತೆ ತಡೆವರೆಂದು ನಂಬಿ, ಸಮಸ್ತ ಅಧಿಕಾರವೂ ಈ ಮಂತ್ರಿಮಂಡಲಗಳಿಗೇ ದೊರೆವಂತಾದೀತೆಂಬ ಭರವಸೆಯಿಂದ, ಈಗ ಲಿಬರಲ್ ಪಕ್ಷವು—ಸ್ಥಳೀಯ ರಾಜರುಗಳಿಗೆ ಯಾವ ತೆರದ ಹೆಚ್ಚಿನ ರಿಯಾಯಿತಿಗಳನ್ನು ಕೊಡದೆ ಅವರ ಅಧಿಕಾರವು ಫೆಡರೇಶನಿಂದಾಗಿ ಇನ್ನಷ್ಟು ಹೆಚ್ಚುವಂತೆ ಮಾಡದಿರಬೇಕಾಗಿ ಇಂಡಿಯಾ ಸರಕಾರಕ್ಕೆ ಸೂಚಿಸಿದೆ ಫೆಡರೇಶನನ್ನು ಅಗತ್ಯವಾಗಿ ಅಂಗೀಕರಿಸಿ ನೋಡಬೇಕೆಂದು ಇವರ ಒತ್ತಾಯವಿದೆ ಎಷ್ಟು ತಡೆ, ಎಷ್ಟು ಬಾಧೆಗಳಿದ್ದರೂ ಫೆಡರೇಶನನ್ನು ಅಂಗೀಕರಿಸಿ, ಆಕ್ಟನ್ನು ಜ್ಯಾರಿಗೆ ತರುವುದರಿಂದ, ನಿಧಾನವಾಗಿ ಡೊಮಿನಿಯನ್ ಸ್ಟೇಟಸ್ ಕಡೆಗೆ ನಾವು ಮುಂದರಿಯಲು ಅನುಕೂಲವಿರುವುದಾಗಿ ಶ್ರೀ। ಶಾಸ್ತ್ರಿಯವರು ಬೋಧಿಸಿರುವರು.

ಹಿಂದೂ ಮಹಾಸಭೆಯೂ, ಫೆಡರೇಶನನ್ನು ಅಂಗೀಕರಿಸಿದರೆ, ಹಿಂದೂ ಮುಸ್ಲಿಮರೊಳಗಣ ಹೊಟ್ಟೆಕಿಚ್ಚಿನ ವಿವಾದಗಳು ಮುಗಿಯಬಹುದಾಗಿ ನಂಬಿ, ಫೆಡರೇಶನನ್ನು ಆಗುವಷ್ಟು ಬೇಗನೆ ಜ್ಯಾರಿಗೆ ತರುವಂತೆ ಸರಕಾರವನ್ನು ಕೇಳಿಕೊಂಡಿದೆ.

ಈ ವರ್ಷ ಅದು ಜ್ಯಾರಿಗೆ ಬರುವ ಹಾಗಿಲ್ಲೆಂದು ವೈಸ್ರಾಯರ ಭಾಷಣದಿಂದ ವ್ಯಕ್ತವಾಗಿದೆ.

# ನವವರ್ಷದ ಅಭಿವಂದನೆಗಳು

## ಪಂಡಿತ ಜವಾಹರಲಾಲರ ಸಂದೇಶ:-

ಸುಖದುಃಖಗಳ, ಸೋಲು ಗೆಲವುಗಳ, ಆಶೆ ನಿರಾಶೆಗಳ ಭಾರದಿಂದ ಬಾಗಿದ್ದ ಹಳೆಯ ವರ್ಷವು ಮುಂದೆ ಸರಿಯಿತು. ನಾನೀಗಲೆ ಭಾಷಣವಿತ್ತು ಬಂದಿರುವ ಸಂಯುಕ್ತ ಪ್ರಾಂತದ ರಾಜಕೀಯ ಪರಿಷದದಲ್ಲಿ ಸೇರಿದ್ದ ಹತ್ತು ಸಾವಿರ ಉಜ್ವಲ ಮುಖಗಳ ಮೇಲೆ ಮೂಡಿದ್ದ ಭರವಸೆಯ ಪ್ರಕಾಶವನ್ನು ಕಂಡು, ಭವಿಷ್ಯವನ್ನು ಅವರ ಮುಖಗಳು ಪ್ರತಿಬಿಂಬಿಸುವಂತೆ ಭಾವಿಸುವೆನು.

ತನ್ನ ಉತ್ತರಾಧಿಕಾರಿಗೆ ಕಚ್ಚಾಟಗಳನ್ನೂ ಸಮಸ್ಯೆಗಳನ್ನೂ ಬಿಟ್ಟು, ಹಳೆಯ ವರ್ಷವು ತೊಲಗಿತು. ಅಷ್ಟು ದೀರ್ಘ ರಾತ್ರಿಯೆಲ್ಲ ದುಡಿದವರ ಹೃದಯದಲ್ಲಿ ನೂತನ ಉದಯದ ಆಸೆಯನ್ನೂ ಅದು ಬಿಟ್ಟುಹೋಗಿದೆ.

ನಾವು ಹೊರಬೇಕಾಗಿರುವ ಭಾರವು ಕಡಿಮೆಯಾಗಿಲ್ಲ. ಭಾರತವರ್ಷಕ್ಕೂ ಜಗತ್ತಿಗೂ ಕಷ್ಟಕಾಲವು ಸನ್ನಿಹಿತವಾಗುತ್ತಿದೆ. ಆದರೆ ನಮ್ಮಲ್ಲಿ ಬಲವೂ ವಿಶ್ವಾಸವೂ ಇರುವುದರಿಂದ ಈ ಕಷ್ಟಪರಂಪರೆಯಿಂದೆಲ್ಲ ಪಾರಾಗುವೆವೆಂದೂ ಗೊತ್ತಿದೆ.

ಆದುದರಿಂದ ಭಕ್ತಿ ವಿಶ್ವಾಸಗಳಿಂದ, ಭಾರತವಾಸಿ ಸ್ತ್ರೀಪುರುಷರೆಲ್ಲರಿಗೆ ನನ್ನ ನವವರ್ಷದ ಅಭಿವಂದನೆಗಳಿವೆ, ನಮ್ಮ ಸೋದರರಿಗೆ, ಮುಖ್ಯವಾಗಿ ಇನ್ನೂ ಜೈಲಿನಲ್ಲಿ ಆವರಣದೊಳಗೂ ತಡೆಬೇಡಿಗಳೊಳಗೂ ನರಳುತ್ತಿರುವವರಿಗೆ ವಂದನೆಗಳು.

ಈ ನವವರ್ಷವು ನಮ್ಮ ಪ್ರಯತ್ನಗಳಿಗೆ ಸಾಕಷ್ಟು ಸಫಲತೆ ಕೊಡಲಿ, ನರಳುವ ನಮ್ಮ ಜನಕೋಟಿಯ ಭಾರವನ್ನಿಳಿಸಲಿ.

ಐಕ್ಯವಾದ ನಮ್ಮ ಜನಾಂಗವನ್ನು ಅದು ನಮಗೆ ಅಗತ್ಯವಿರುವ ಪೂರ್ಣ ಸ್ವರಾಜ್ಯದ ಕಡೆಗೆ ನಡೆಯಿಸಲಿ.

### ಹಿಂದೂ ಮಹಾಸಭೆ ಹತ್ತೊಂಬತ್ತನೆಯ ಅಧಿವೇಶನ ಅಹ್ಮದಾಬಾದಿನಲ್ಲಿ

ಶ್ರೀ ವಿನಾಯಕ ದಾಮೋದರ ಸಾವರಕಾರರೇ ಅಧ್ಯಕ್ಷರು. ಇವರ ಮೆರವಣಿಗೆಯಲ್ಲಿ ಕಿರಿಚಲ್ಲಣವನ್ನೂ ಶರ್ಟುಗಳನ್ನೂ ಧರಿಸಿದ ನೂರಾರು ಬಾಲಿಕೆಯರು ಇದ್ದರು. ಸವಾರಿಯ ಗಾಡಿಗೆ ನಾಲ್ಕು ಕುದುರೆಗಳನ್ನು ಹೂಡಿದ್ದರು.

'ಹಿಂದೂ ಮುಸ್ಲಿಮರೆಲ್ಲ ಒಂದೆ. ಭಾರತವರ್ಷವೇ ನಮ್ಮ ಜನ್ಮಭೂಮಿ. ಪೂರ್ಣ ಸ್ವರಾಜ್ಯ ಸಿಗುವಂತೆ ನಾವೆಲ್ಲರೂ ಪ್ರಯತ್ನಿಸಬೇಕು.' ಹಿಂದೂ ಮಹಾಸಭೆಯೂ ರಾಷ್ಟ್ರಸಭೆಯ ಆದರ್ಶಗಳನ್ನೇ ಉಳ್ಳದ್ದು' ಎಂದು ಇವರು ಮೆರವಣಿಗೆಯ ಕೊನೆಯಲ್ಲಿ ಭಾಷಣ ಮಾಡಿದರು.

ನಮ್ಮಲ್ಲಿಂದ ರಫ್ತಾಗುವ ಹತ್ತು ಲಕ್ಷ ಹತ್ತೀ ಕಟ್ಟುಗಳಲ್ಲಿ ೬ ಲಕ್ಷದಷ್ಟನ್ನು ಇಂಗ್ಲೆಂಡು ಕೊಂಡುಕೊಳ್ಳುತ್ತದೆ.

### ದೇವರು ಸರ್ವ ವ್ಯಾಪಿಯು
### ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಅಭಿಭಾಷಣ

ಇದು ಇಪ್ಪತ್ತನೆಯ ವಾರ್ಷಿಕಾಧಿವೇಶನ. ಸ್ನಾತಕರಿಗೆ ಅಭಿಭಾಷಣವಾಗುವಾಗ, ಪರದೇಶಗಳಿಂದ ಬಂದಿರುವ ವಿಜ್ಞಾನಿಗಳೆಲ್ಲರನ್ನು ಆಮಂತ್ರಿಸಲಾಗಿತ್ತು. ಪಂಡಿತ ಮದನಮೋಹನ ಮಾಲವೀಯರೇ ಭಾಷಣ ಮಾಡಿದರು. 'ಸತ್ಯಂವದ, ಧರ್ಮಂಚರ' ಎಂಬುದು ಋಷಿವರರು ಕಲಿಸಿಕೊಟ್ಟ ಮೂಲಮಂತ್ರ. 'ಇದೀಗ ಜಗತ್ತಿಗೆ ಈಗ ಅಗತ್ಯ ತಿಳಿಯಬೇಕಾಗಿದೆ. ಮರೆಯದಿರಿ. ವಿದ್ಯಾಭ್ಯಾಸ ಮಾಡುತ್ತೀರಿ



ಪಿತೃಗಳಿಗೂ ದೇವತೆಗಳಿಗೂ ಸಲಬೇಕಾದ ಯಜ್ಞಗಳನ್ನು ಮಾಡುತ್ತೀರಿ. ಪಹತ್ತದ ಕಡೆಗೆ ಕಣ್ಣಿಡಿರಿ. ಮನುಧರ್ಮಶಾಸ್ತ್ರವನ್ನೂ ಗೀತೆಯನ್ನೂ ನೆನಪಿನಲ್ಲಿಟ್ಟುಕೊಂಡು ಅವುಗಳಲ್ಲಿ ನಿರ್ದಿಷ್ಟವಾದಂತೆ ನಡೆಯಿರಿ. ಇದರಿಂದಲೆ ಸಂಪತ್ತು' ಎಂದಿಷ್ಟು ವಿವರಣೆಯನ್ನು ಮಾಡಿದರು.

### ಅಖಿಲಭಾರತ ಮುಸ್ಲಿಮ ವಿದ್ಯಾರ್ಥಿಗಳ ಪರಿಷತ್ತು
### ಮಂಜೂರು ಮಾಡಿದ ನಿರ್ಣಯ: ಜಾತಿವಾರು ಪರಿಷತ್ತುಗಳು ಹಾನಿಕರ
### ಹಾಜರಾದ ಪ್ರತಿನಿಧಿಗಳೆಲ್ಲರೂ ಮುಸ್ಲಿಮರು, ಆದರೆ ಇನ್ಕಿಲಾಬ್ ಝಿಂದಬಾದ್ ಮತ್ತು ವಂದೇ ಮಾತರಮ್ ಎಂದೇ ಅವರು ಘೋಷಿಸಿದರು

ಅಧ್ಯಕ್ಷಭಾಷಣದ ಕೊನೆಯ ಅಂಶ ಹೀಗಿತು.—ಇಂದಿನ ಮುಸ್ಲಿಮ ತರುಣರು ಇತರ ಸಮಾಜಗಳ ತರುಣರೊಡನೆ ಸಮಾನಸ್ಕಂಧರಾಗಿ ನಿಂತು, ಜಗತ್ತಿನ ಸಮಸ್ಯೆಗಳನ್ನು ಇತ್ಯರ್ಥಿಸುವವರಾಗಬೇಕು. ನಮ್ಮ ಇತಿಹಾಸದಲ್ಲಿ ನಮಗೆ ನಮ್ಮ ಜನರ ಗುಣನಡತೆಗಳನ್ನು ಕುರಿತು ಕಂಡುಬರುವ ಕುಂದುಗಳನ್ನು ನಿವಾರಿಸಲೆತ್ನಿಸಿ ಉತ್ತಮ ಶಿಸ್ತಿನಿಂದ ಧೀರರಾಗಿ ವರ್ತಿಸಿ, ನಮ್ಮ ಭಾರತವರ್ಷದ ಅಭ್ಯುದಯವನ್ನು ಸಾಧಿಸಬೇಕು. ನಮ್ಮ ದೇಶದ ಸಂಸ್ಕೃತಿಯು ಇಂದಿಗೂ ಹಿಂದೂಸಂಸ್ಕೃತಿಯೇ ಅಲ್ಲ, ಮುಸ್ಲಿಮ ಸಂಸ್ಕೃತಿಯೇ ಅಲ್ಲ,—ಇವೆರಡು ವಿಂಗಡಿಸಬಾರದಷ್ಟು ಬಲವಾಗಿ ಮಿಶ್ರವಾಗಿವೆ. ಹಿಂದುಗಳು ನಮ್ಮ ಸಂಸ್ಕೃತಿಯೇ ಮೇಲೆನ್ನುವುದು ಮೂಢತನ, ಮುಸ್ಲಿಮರು ಈ ಸಂಸ್ಕೃತಿಯು ಪರಕೀಯವೆಂದು ಭಾವಿಸುವುದೂ ಹೆಡ್ಡತನವಾಗಿದೆ.

ಆದುದರಿಂದ ಹಿಂದೂ ಮುಸ್ಲಿಮ ಮತ್ತಿತರ ವಿದ್ಯಾರ್ಥಿಗಳು ಮಾಡತಕ್ಕದ್ದೇನೆಂದರೆ,

# ಹಿಂದೂ ಮಹಾಸಭೆಯ ನಿರ್ಣಯ

## ಅಹಮ್ಮದಾಬಾದ್ ಅಧಿವೇಶನದಲ್ಲಿ ನೂತನ ಚಟುವಟಿಕೆ.
### ಶ್ರೀ ವಿನಾಯಕ ದಾಮೋದರ ಸಾವರಕಾರರು ಅಧ್ಯಕ್ಷರು.

**"ನಾಗರಿಕ ಹಕ್ಕುಗಳನ್ನು ಕೊಡಿರಿ!"**

ದೇಶೀಯ ಸಂಸ್ಥಾನಗಳು ತಮ್ಮ ಪ್ರಜೆಗಳಿಗೆ ಜವಾಬ್ದಾರ ಸರಕಾರವನ್ನು ಪಡೆವಂತೆ ಹೋರಾಡಲು ಅಗತ್ಯವಾದ ಸಲಕರಣೆಗಳನ್ನು ಒದಗಿಸಬೇಕು. ಹಿಂದೂಸಭೆಯ ಸದಸ್ಯರ ಒಂದು ಕಮಿಟಿಯು ಹಿಂದೂ ಮತಶಾಸನಗಳ ಉಂಬಳಿ ಲೆಕ್ಕವನ್ನು ವಿಮರ್ಶಿಸುವ ಹಾಗೆ ಸರಕಾರವು ಅಧಿಕಾರ ಕೊಡಬೇಕು. ಹಿಂದುಗಳ ಧಾರ್ಮಿಕ ಸಾಮಾಜಿಕ ಮತ್ತು ಸಾಂಪತ್ತಿಕ ಉನ್ನತಿಗಾಗಿ ಸಾಕಷ್ಟು ಹಣವನ್ನು ಈ ಉಂಬಳಿಗಳಿಂದ ಕೊಡುವಂತಾಗಬೇಕು. ಮಧುರಾದಿಂದ ಕಸಾಯಿಕೋಣೆಯನ್ನು ಸರಕಾರವು ವರ್ಗಾಯಿಸದಿದ್ದರೆ, ಸತ್ಯಾಗ್ರಹವನ್ನು ಆರಂಭಿಸಬೇಕಾದೀತು. ಹಿಂದೂ ಯುವಕ ಸಂಘಗಳನ್ನು ಸ್ಥಾಪಿಸಬೇಕು. ಮಹಾವೀರ ಜಯಂತಿಯು ರಜಾದಿನವಾಗುವಂತೆ ಜೈನರು ಕೇಳಿಕೊಳ್ಳುವುದನ್ನು ಸಮರ್ಥಿಸಬೇಕು. ಡಿಟೆನ್ಯೂಗಳನ್ನು ಬಿಡುಗಡೆ ಮಾಡಬೇಕೆಂದು ಪ್ರಾಂತಿಕ ಸರಕಾರಗಳು ಇಂಡಿಯಾ ಸರಕಾರವನ್ನು ಕೇಳಿಕೊಳ್ಳಬೇಕು. ಬಂಗಾಳದಲ್ಲಿ ಜಾತಿ ಪಕ್ಷಪಾತದಿಂದ ಉಂಟಾಗಿರುವ ಹಾವಳಿ ಕಠಿನವಾಗಿರುವ ಕಾರಣ, ಹಿಂದೂಗಳು ತಮ್ಮ ಸಾಂಸ್ಕೃತಿಕ ಮತ್ತು ರಾಜಕೀಯ ಹಕ್ಕುಗಳನ್ನು ಕಾಪಾಡಿಕೊಳ್ಳಲು ಒಳ್ಳೆಯ ವ್ಯವಸ್ಥಿತ ಪ್ರಯತ್ನಗಳನ್ನು ಮಾಡಬೇಕು. ಅಲ್ಲಿನವರಿಗೆ ಬೇಕಾದಷ್ಟು ಜನರು ಹೋಗುವಂತೆ ಬಿಡುವುದರಿಂದ ಅದು ಮುಸ್ಲಿಮ ಪ್ರಾಂತ್ಯವಾಗುವಂತೆ ಸರಕಾರವು ಸಾಧಿಸುವಂತಾದ ಕಾರಣ, ಅಸ್ಸಾಮಿನ ಹಿಂದುಗಳು ಅದನ್ನು ತೀವ್ರವಾಗಿ ವಿರೋಧಿಸುವಂತೆ ಪ್ರಯತ್ನಿಸಬೇಕು. ಹಿಂದೂ ಕುಟುಂಬಗಳಿಗೆ ಗಡಿನಾಡಿನಲ್ಲಿ ಒಂದೊಂದು ಪಿಸ್ತೂಲನ್ನಾದರೂ ಇಟ್ಟುಕೊಳ್ಳುವ ಹಕ್ಕನ್ನು ಸರಕಾರವು ಕೊಡಬೇಕು. ಹಿಂದೀಯು ಸಂಸ್ಕೃತದಿಂದ ಹುಟ್ಟಿದ ಭಾಷೆಯಾದ ಕಾರಣ, ದೇವನಾಗರಿ ಲಿಪಿಯನ್ನೆ ಮಂಜೂರು ಮಾಡಬೇಕಲ್ಲದೆ ಉರ್ದುವನ್ನಲ್ಲ.

ನಮ್ಮ ನಾಗರೀಕತೆಯ ಇನ್ನೂ ಹುಟ್ಟಿಲ್ಲವಾದುದರಿಂದ, ಅದನ್ನು ಸರಿಯಾಗಿ ವೃದ್ಧಿ ಬೆಳಸುವ ಗರ್ವವೂ ಗೌರವವೂ ಅವರಿಗೇ ಸಲ್ಲಬೇಕಾಗಿದೆ ಎಂದು ತಿಳಿದುಕೊಂಡು,—ಮೊದಲನೆಯದಾಗಿ ಜಾತಿ ಮತ ಸಮಾಜ ಮೊದಲಾದುವನ್ನು ಬದಿಗಿಟ್ಟು ಪ್ರಾಂತ್ಯಗಳನ್ನು ಸಹ ಪರಿಗಣಿಸದೆ, ಒಂದೇ ಸೋದರರಂತೆ ಒಂದೇ ಅವಿಭಕ್ತ ಕವಿನತೆಯನ್ನು ತಾಳಿ ಕೆಲಸಮಾಡಲು ಉದ್ಯುಕ್ತರಾಗಬೇಕಾಗಿದೆ.

ಅನಂತರ—"ಇಂಡಿಯದ ಮುಸ್ಲಿಮ ವಿದ್ಯಾರ್ಥಿಗಳ ಈ ಪರಿಷತ್ತು, ಜಾತಿವಾರಾದ ಪರಿಷತ್ತುಗಳಿಂದ ದೇಶಕ್ಕೂ ಸಮಾಜಕ್ಕೂ ಹಾನಿಯಿದೆ ಎಂದು ಅತಿದೃಢ ಭಾವದಿಂದ ನಿರ್ಧರಿಸಿ, ಹಿಂದೂ ಮುಸ್ಲಿಮ ಮತ್ತು ಇತರ ಸಮಾಜಗಳ ವಿದ್ಯಾರ್ಥಿಗಳೊಡಗೂಡಿದ ಒಂದೇ ಪರಿಷತ್ತನ್ನು ನಿರ್ಮಾಣಮಾಡಿಕೊಂಡು, ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಸರಿಯಾಗಿ ಮುಂದರಿಸಬೇಕಾಗಿದೆ" ಎಂಬ ಸೂಚನೆಯನ್ನು ಬಂಗಾಳ ಪ್ರಾಂತಿಕ ವಿದ್ಯಾರ್ಥಿಗಳ ಫೆಡರೇಶನಿನ ಪ್ರೆಸಿಡೆಂಟರಾಗಿರುವ ಶ್ರೀ ಕೆ ಅಮುದ್ ರವರು ಮುಂತೊಡರು. ಅದನ್ನು ಅಲಿಪುರದ ಶ್ರೀ ಸಿದ್ದಿಕ್ ರವರೂ, ಢಿಲ್ಲಿಯ ಶ್ರೀ ಅಬ್ಬಾಸಿಯವರೂ, ಹೈದಾಬಾದಿನ ಶ್ರೀ ಕೆ ಎ ಹುಸ್ಸೇನರೂ, ಲಾಹೋರಿನ ಶ್ರೀ ಎಸ್ ಹುಸ್ಸೇನರೂ, ಆಲಿಪುರದ ಶ್ರೀ ಅನ್ಸಾರ ಅಬ್ಬಾಸಿಯವರೂ, ಯುಕ್ತ ಪ್ರಾಂತ್ಯದ ಶ್ರೀ ಮೊಸ್ಲೆಮುದ್ದೀನರೂ ಅನುಮೋದಿಸಿದರು—ಮಂಜೂರಾಯಿತು.

ವಾದುದರಿಂದ ವಾರ್ಧಾ ಶಿಕ್ಷಣ ಯೋಜನೆಯಲ್ಲಿ ಇದು ತಪ್ಪು ಎಂದು ಸೂಚಿಸಬೇಕು. ಗೋರಕ್ಷಣೆಗೆ ಮಾತ್ರವಲ್ಲದೆ ಗೋವಧೆಯಾಗದಂತೆ ಕಾನೂನಾಗಬೇಕು.

ಹಿಂದೂ ಮತ್ತು ಸಿಕ್ಖ ರಾಜರುಗಳು ಫೆಡರೇಶನನ್ನು ಕೂಡಲೆ ಸೇರಬೇಕು. ಎಂಬುದು ಹೊಸ ಕಾರ್ಯಕಾರೀ ಕಮಿಟಿಯ ಪ್ರಥಮ ನಿರ್ಣಯ.

## ಗಾಂಧಿಜೀಯವರ ಶಿಕ್ಷಣ ವಿಧಾನ
### ರವೀಂದ್ರರ ವಿಮರ್ಶೆ
### ಅಖಿಲಭಾರತದ ಶಿಕ್ಷಣ ಸಮ್ಮೇಲನದಲ್ಲಿ ಈ ವಿಧಾನದ ನಿರ್ಣಯ

"ಈ ವಿಧಾನವು ಸರಿ ಅಥವಾ ಸರಿಯಲ್ಲವೆಂದು ನಿರ್ಣಯಿಸುವ ಮೊದಲು, ಗಾಂಧಿಜೀಯವರು ಹುಟ್ಟು ವ್ಯವಹಾರ ಕುಶಲ ಬುದ್ಧಿಯುಳ್ಳವರೆಂದೂ, ಅವರು ನಿರ್ದೇಶಿಸುವ ಸೂತ್ರಗಳಿಗಿಂತ ಅವರ ವ್ಯವಹಾರ ಚಾತುರ್ಯವು ಹೆಚ್ಚಿನದೆಂದೂ ಪರಿಗಣಿಸಿ ವಿಧಾನವನ್ನು ಓದಿದರೆ, ವೈಯಕ್ತಿಕ ಅಭ್ಯುದಯಕ್ಕಿಂತ ಹಣಕಾಸುಗಳನ್ನು ದೊರಕಿಸಿಕೊಳ್ಳುವುದೊಂದೇ ಶಿಕ್ಷಣದ ಮುಖ್ಯೋದ್ದೇಶವಾಗಿದೆ ಎಂದು ಅವರಿಗನಿಸಿದಂತೆ ತೋರುತ್ತಿರಬಹುದು, ನಿಜವಾದ ಶಿಕ್ಷಣವು ಬೇಕಾದವರಿಗೆ ಮಾತ್ರ ಧಾರಾಳ ವ್ಯಯದಿಂದ ಸಾಧ್ಯವಾಗಲಿ ಎನ್ನುವ ಅಭಿಪ್ರಾಯವು ಗಾಂಧಿಜೀಯವರದು ಎಂದು ತೋರಬಹುದು. ಜನಸಮುದಾಯಕ್ಕೆ ಜೀವನನಿರ್ವಾಹಕ್ಕೆ ಅಗತ್ಯವಾಗಿರುವ ಶಿಕ್ಷಣ, ವ್ಯಕ್ತಿಶಿಕ್ಷಣವೇ ಮುಖ್ಯ ಎಂದು ಮಹಾತ್ಮಾಜೀಯವರೆನ್ನುವಂತೆ ಕಾಣಬಹುದು. ವಾಸ್ತವಿಕವಾಗಿ ಆಲೋಚಿಸಿದರೆ, ಈಗ ಸರ್ವಸಾಧಾರಣವಾಗಿ ಇದ್ದಾದರೂ ಜನಸಮುದಾಯಕ್ಕೆ ದೊರೆಯುತ್ತಿಲ್ಲವಷ್ಟೆ, ಬಡವರಿಗೆ ಹಿಡಿತುಂಬ ಧರ್ಮಕೊಡುವಂತೆ ನಾವು ಶಿಕ್ಷಣ ಕೊಡುವುದು ಶ್ರೀಮಂತರಿಗೆ ಶಿಕ್ಷಣವು ಸಮಾರಾಧನೆಯಂತೆ ಸಿಗುವುದೂ ಶೋಚನೀಯವಲ್ಲವೆ?"

ಶಿಕ್ಷಣವಿಧಾನದಲ್ಲಿ ಆಟಕ್ಕೂ ವಿನೋದಕ್ಕೂ ಅವಕಾಶವೇ ಇಲ್ಲದೆ, ದುಡಿತವೇ ಮುಖ್ಯವಾಗಿ ಕೂಲೀ ಜೀವನದಂತೆ ವಿದ್ಯಾರ್ಥಿಗಳು ದಿನ ಕಳೆಯಬೇಕೆನ್ನುವುದೂ ಶೋಚನೀಯವಾಗಿದೆ. ಮಕ್ಕಳು ದುಡಿವುದರಲ್ಲಿ ಉಪಾಧ್ಯಾಯರಿಗೆ ಆಶ್ರಯ ದೊರೆವಂತೆ—ಉಪಾಧ್ಯಾಯರು ನಿಜವಾಗಿಯೂ ಮೇಸ್ತ್ರಿಗಳಾಗಿ ಮಕ್ಕಳಿಂದ ಕೂಲಿ ಕೆಲಸ ಮಾಡಿಸುವಂತೆ ಯಾವುದೊಂದು ಶಿಕ್ಷಣವಿಧಾನವಿರುವುದು ಉತ್ತಮವಾಗಿಲ್ಲ.. ಆದರೆ, ಕಾಗದದಲ್ಲಿ ಬರೆದಿರುವ ಒಕ್ಕಣೆಯಿಂದ ಹೀಗೇನೋ ತೋರಲು ಅವಕಾಶವಿದೆಯಾದರೂ, ಮಹಾತ್ಮರಿಗಿಂತ ಮಕ್ಕಳಲ್ಲಿ ಪ್ರೇಮವುಳ್ಳವರು ವಿರಳರಾಗಿರುವ ಕಾರಣ, ಈ ವಿಧಾನವನ್ನು ಅನುಸರಿಸುವಾಗ, ನುಡಿಗಿಂತ ನಡೆಯೇ ಮೇಲಾಗಿರುವ ಮಹಾತ್ಮರು ಎಂತಹ ರೀತಿಯಿಂದ ಮಕ್ಕಳ ಅಭ್ಯುದಯಕ್ಕಾಗಿ ಈ ವಿಧಾನವನ್ನು ಹೂಡಿರುವರೋ, ಆಗ ತಿಳಿಯಬಹುದೆಂದೂ ಆಗ ನಾವೇ ಈ ಕ್ರಮವನ್ನು ಕೊಂಡಾಡಲಿದೆಯೆಂದೂ ಸಹ ಭರವಸೆಯಿಂದ ನಿರೀಕ್ಷಿಸಬಹುದಾಗಿದೆ.

ಹಿಂದೂದೇಶವು, ಹೊರದೇಶಗಳಿಗೆ ಸಕ್ಕರೆ ರಫ್ತು ಮಾಡದಂತೆ, ಇಂಡಿಯಾ ಸರಕಾರದಿಂದ ಕಾನೂನು ಜ್ಯಾರಿಯಾಗಿರುತ್ತದೆ.

# ಗ್ರಾಮೋನ್ನತಿಯಿಂದ

## ದೇಶಾಭ್ಯುದಯ,—ಹಳ್ಳಿಗಳ ಸುಧಾರಣೆಗೆ ಕೆಲವು ಸೂಚನೆಗಳು.

ಪತನೋನ್ಮುಖವಾದ ದೇಶವನ್ನು ಉನ್ನತಿ ಗಾಮಿಯನ್ನಾಗಿ ಮಾಡಲಿಕ್ಕೆ ಹಳ್ಳಿಗಳ ಸುಧಾರಣೆ ಮಾಡುವದು ಅಗತ್ಯವೆಂದು ಈಗ ವೈಸರಾಯ ಮೊದಲುಗೊಂಡು ಗಾಂಧಿಯವರ ತನಕ ಪ್ರತಿಯೊಬ್ಬರು ಹೇಳುತಿದ್ದಾರೆ. ದೇಶದ ಎಲ್ಲ ಬಗೆಯ ಕಷ್ಟನಷ್ಟಗಳ ನಿವಾರಣೆಗೆ ಗ್ರಾಮಾಭ್ಯುದಯ ಒಂದೇ ಒಂದು ಉಪಾಯವಾಗಿರುವದೆಂದು ಇವರು ಸಾರುತಿದ್ದಾರೆ. ಆದ್ದರಿಂದ ಎಲ್ಲರ ದೃಷ್ಟಿ ಊರು ಕೇರಿ ನಗರ ಪಟ್ಟಣಗಳಿಂದ ಹಳ್ಳಿಪಳ್ಳಿಗಳ ಕಡೆಗೆ ಓಡಿದೆ

ಇತ್ತೀಚೆಗೆ ಕೆಲವು ವರ್ಷಗಳಿಂದ ಜನೋಪಕಾರಿ ಸಂಘ, ಸಂಸ್ಥೆಗಳೂ ಸರಕಾರವೂ ಕೂಡಿಕೊಂಡು ಹಲವು ರೀತಿಗಳಿಂದ ಗ್ರಾಮೋನ್ನತಿಯನ್ನು ಸಾಧಿಸುತಿದ್ದಾವೆ, ಹಳ್ಳಿಗರ ಜೀವನವು ಸುಖಮಯವಾಗಲಿಕ್ಕೆ ಹಲವು ಯೋಜನೆಗಳನ್ನು ಕೈಕೊಂಡಿರುತ್ತವೆ ಜೀವನ್ಮೃತವಾಗಿರುವ ಹಳ್ಳಿಗಳಲ್ಲಿ ನವೀನ ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸಿದ ಹೊರತು ಪಟ್ಟಣಗಳು ಸಂಪನ್ನವಾಗಲಾರವೆಂಬುದು ಎಲ್ಲರಿಗೆ ತಿಳಿದಿದೆ

### ಮುಖ್ಯ ಸಾಧನಗಳು

ಶಿಕ್ಷಣ ಮತ್ತು ಪ್ರಚಾರ—ಇವೆರಡು ಗ್ರಾಮೋನ್ನತಿಯ ಮುಖ್ಯ ಸಾಧನಗಳಾಗಿವೆ. ಗ್ರಾಮೋನ್ನತಿ ಎಂದಾಗ—ಗ್ರಾಮಗಳ ಸ್ವರೂಪವನ್ನೇ ಕೆಡಿಸಿ ಬಿಡುವದೆಂದರ್ಥವಲ್ಲ ಗ್ರಾಮಗಳಲ್ಲಿ [illegible] ಬರುವ ಕುಂದುಕೊರತೆಗಳನ್ನು ದೂರಮಾಡುವದೇ [illegible]ಜವಾದ ಗ್ರಾಮೋನ್ನತಿಯಾಗಿದೆ ಆದಕಾರಣ ಹಳ್ಳಿಯ ಸಂಸ್ಥೆಗಳು,—ಹಳ್ಳಿಯ ಪಂಚಾಯತು ಸಹಕಾರ ಸಂಘ ಮೊದಲಾದವುಗಳನ್ನು ಈಗಿನ ಅವಶ್ಯಕತೆಗಳ ಪೂರ್ತಿಗೆ ಅನುಕೂಲವಾಗುವಂತೆ ಪರಿಷ್ಕರಿಸಿ ಅವುಗಳಿಗೆ ನವಜೀವನವನ್ನು ತುಂಬಿಕೊಡಬೇಕು. ಗ್ರಾಮೀಣ ಜನರ ದಾರಿದ್ರ್ಯಕ್ಕೆ ಕಾರಣಗಳಾಗಿರುವ ಅವರ ದುಂದುವೆಚ್ಚ, ಮದುವೆ, ಮುಂಜಿ ಶುಭಶೋಭನಾದಿಗಳಲ್ಲಿ ಅವರ ಮಾಡುವ ಅನಾವ್ಯಯವನ್ನು ನಿಲ್ಲಿಸುವದೂ ಅಗತ್ಯವಾಗಿದೆ ಗ್ರಾಮೀಣ ಜನರ ಒಪತನದ, ಇತರ ಕಾರಣಗಳು—ಅಂದರೆ ಮದ್ಯಪಾನ, ಜೂಜು ಮೊದಲಂಥ ದುರ್ವ್ಯಸನಗಳಿಗೆ ಅವರು ಬಲಿಯಾಗದಂತೆಯೂ ಎಚ್ಚರ ತೆಗೆದುಕೊಳ್ಳಬೇಕು ಅದಕ್ಕೋಸ್ಕರ ಪ್ರತಿಯೊಂದು ಗ್ರಾಮದ ಪ್ರತಿಯೊಂದು ಮನೆಯಲ್ಲಿ, ಪ್ರತಿಯೊಂದು ಗುಡಿಸಲಿನಲ್ಲಿ ಶಿಕ್ಷಣ ಮತ್ತು ಪ್ರಚಾರ ಆಗುವದು ಅಗತ್ಯ

### ಏನು ಮಾಡಬೇಕು?

ಹಳ್ಳಿಗಳಲ್ಲಿ ಜನರ ಮುಖ್ಯವಾದ ಜೀವನವೃತ್ತಿ ಎಂದರೆ ಬೇಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಉದ್ಯೋಗಗಳಾಗಿವೆ. ಆದರೆ ಈ ವೃತ್ತಿ ಉದ್ಯೋಗಗಳಲ್ಲಿ ಜನರಿಗೆ ಈಗ ಯಾವ ಆಕರ್ಷಣವೂ ಉಳಿದಿರುವದಿಲ್ಲ ಅವುಗಳು ಅವರ ನಷ್ಟಕ್ಕೂ ಕಷ್ಟಕ್ಕೂ ಕಾರಣಗಳಾಗಿವೆ ಸುಧಾರಿತ ಕೃಷಿಕ್ರಮಗಳನ್ನು ಅನುಸರಿಸದೆ ಹಳ್ಳಿಗರ ಜೀವನವು ಸುಖಮಯವಾಗುವದು ಸಾಧ್ಯವಲ್ಲ ಕೃಷಿಕಾರ್ಯಕ್ಕೆ ಸಂಬಂಧಪಟ್ಟ ಸುಧಾರಿತ ಸಾಹಿತ್ಯಉಪಕರಣಗಳು, ಉತ್ತಮವಾದ ಬೀಜಗಳು, ಫಲವತ್ತಾದ ಗೊಬ್ಬರಗಳು, ಮತ್ತು ಉತ್ಪತ್ತಿಯ ಮಾರಾಟದ ಅನುಕೂಲತೆಗಳು, ಇವುಗಳ ತುಂಬ ಪ್ರಚಾರ ಮತ್ತು ಪ್ರಸಾರವಾದ ಹೊರತು ಹಳ್ಳಿಗರ ಕೊಳ್ಳುವ ಶಕ್ತಿಯು ಹೆಚ್ಚುವದಿಲ್ಲ. ಉತ್ಪತ್ತಿಯು ಹೆಚ್ಚಾದುದರಿಂದ ಜೀನಸು [illegible]ಯು ತಗ್ಗಿರುವದಲ್ಲ. ಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿರುವದರಿಂದಲೇ ಜೀನಸುಗಳ ಧಾರಣೆ ಕಡಿಮೆಯಾಗಿದೆ. ಆದ್ದರಿಂದ ನವೀನ ಕೃಷಿಕ್ರಮ ತಿಳಿಸಿ ಮಾರಾಟದ ಅನುಕೂಲತೆಗಳನ್ನು ಹಳ್ಳಿಗರಿಗೆ ಒದಗಿಸಿ ಕೊಡುವದು ಅಗತ್ಯವಾಗಿದೆ. ಅದಕ್ಕೆ ಪರಸ್ಪರ ಸಹಕಾರದಿಂದ ಬಹಳ ಸಹಾಯದೊರೆಯಲು ಸಾಧ್ಯವಿದೆ. ಗ್ರಾಮಾಂತರಗಳಲ್ಲಿ ಲೇವಾದೇವಿಯ ಮತ್ತು ಜಮೀನು ಅಡಮಾನದ ಸಹಕಾರ ಸಂಘಗಳನ್ನು ಮಾತ್ರವಲ್ಲದೆ ಇತರ ಜಾತಿಯ, ಅಂದರೆ ಬೀಜಗಳನ್ನು ಸಾಹಿತ್ಯೋಪಕರಣಗಳನ್ನು ಗೊಬ್ಬರಗಳನ್ನು ಒದಗಿಸಿ ಕೊಡುವ, ಉತ್ಪತ್ತಿಯನ್ನು ಕೊಂಡು ಮಾರುವ ಮೊದಲಾದ ಸಂಘಗಳನ್ನು ವ್ಯವಸ್ಥೆಗೊಳಿಸಬೇಕು.

### ಸುಧಾರಣೆಯ ಕಾರ್ಯಗಳು

ಗ್ರಾಮೋನ್ನತಿಯನ್ನು ಸಾಧಿಸುವ ಬಗ್ಗೆ ಇತರ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳಬಹುದು ಇದಕ್ಕೆ ಅನುಭವಿಕರೂ, ಈ ವಿಷಯದ ಜ್ಞಾನಿಗಳೂ ಆದವರು ಸೇರಿ ಆಲೋಚಿಸಿ ಪಂಚವಾರ್ಷಿಕ ಅಥವಾ ದಶವಾರ್ಷಿಕ ಯೋಜನೆಯನ್ನು ಸಿದ್ಧಮಾಡಿ, ಪ್ರಾಂತಿಕ ಸರಕಾರದ ಮೂಲಕ ಜಾರಿಗೆ ತರುವಂತೆ ಪ್ರಯತ್ನಿಸುವದು ಪ್ರಯೋಜನಕರವಾಗಿದೆ ಸರಕಾರಿ—ಬಿನಸರಕಾರಿ ಸಹಾಯ ಸಹಾನುಭೂತಿಗಳಿಲ್ಲದೆ ಯಾವ ಕಾರ್ಯವೂ ಸಾಧ್ಯವಲ್ಲ ಪ್ರಚಾರ ಕಾರ್ಯಕ್ಕಾಗಿ ಪ್ರತಿಯೊಂದು ಜಿಲ್ಲೆ ಅಥವಾ ತಾಲೂಕಿಗಾಗಿ ಒಂದೊಂದು ಪ್ರಚಾರಕ ದಳವನ್ನೇರ್ಪಡಿಸುವುದೂ ಹಿತವಾಗಿದೆ. ಮತ್ತೆ ಹಳ್ಳಿಗರಿಗೆ ಅಗತ್ಯವುಳ್ಳ ಜ್ಞಾನ-ಅನುಭವ-ಆನಂದವನ್ನು ಕೊಡುವಂಥ ಪತ್ರಿಕೆಗಳ ಪ್ರಚಾರವೂ ಬಹುಪಟ್ಟಿಗೆ ಉಪಯೋಗಕರವಾಗಿ ಪರಿಣಮಿಸೀತು.

### ಗ್ರಾಮ ಚಟುವಟಿಕೆಯ ಕೇಂದ್ರಗಳು

ಗ್ರಾಮ ಶಾಲೆಗಳ, ಗ್ರಾಮ ಚಟುವಟಿಕೆಗಳ ಕೇಂದ್ರಗಳಾಗಬಲ್ಲವು ಗ್ರಾಮಶಾಲೆಗಳ ಶಿಕ್ಷಣವು ಗ್ರಾಮಸರ ಅವಶ್ಯಕತೆಗಳಿಗೆ ತಕ್ಕಂತೆ ಅವರ ಶಾರೀರ ಮಾನಸಿಕನೈತಿಕ—ಉನ್ನತಿಯನ್ನು ಸಾಧಿಸುವಂಥದ್ದಾಗಿರಬೇಕು ಆದ್ದರಿಂದ ಗ್ರಾಮಶಾಲೆಗಳಲ್ಲಿ ಸಾಹಿತಿಕ ಶಿಕ್ಷಣದೊಂದಿಗೆ ಕೃಷಿ, ಶಿಲ್ಪ, ಕೈಗಾರಿಕೆ ಶಿಕ್ಷಣವನ್ನು ಕೊಡುವದು ಸಮಂಜಸವಾಗಿದೆ ಶಿವಗಾಸ್ ಪದ್ಧತಿ (ಗಾಂಧಿಯವರ ಸ್ವಾವಲಂಬಿ ಶಿಕ್ಷಣ ಕ್ರಮ)ಯಿಂದ ಗ್ರಾಮಶಾಲೆಗಳಲ್ಲಿ ಶಿಕ್ಷಣವನ್ನು ಕೊಡುವದು ಉಪಯುಕ್ತವಾಗಬಹುದು ಗ್ರಾಮಸೇವಕರೂ, ಕೆಲಸಗಾರರೂ ಈ ಸೂಚನೆಗಳನ್ನು ಪರ್ಯಾಲೋಚಿಸಿ ಕಾರ್ಯಪ್ರವೃತ್ತರಾಗುವರೆಂದು ನಂಬುತ್ತೇವೆ

—

### ಲಕ್ನೋವಿನಲ್ಲಿ ಹಿಂದೂ—ಮುಸ್ಲಿಂ ಗಲಾಟೆ

ಗಾಳಿಪಟ ಹಾರ್‍ಯಾಡಿಸುವಿಕೆಯಿಂದ ಸಂಯುಕ್ತ ಪ್ರಾಂತ್ಯದ ಲಕ್ನೋವಿನ ಹತ್ತಿರ ಹಿಂದೂ ಮುಸಲ್ಮಾನರೊಳಗೆ ಗಲಾಟೆಯುಂಟಾದುದು, ಪೋಲೀಸರಿಂದ ಮತ್ತು ಓರ್ವ ಪಾರ್ಲಿಮೆಂಟರಿ ಸೆಕ್ರೆಟರಿಯವರಿಂದ ತಣಿಸಲಾಯಿತು.

ದಿವಂಗತ ಲಾಲಾ ಲಜಪತರಾಯವರ ಒಬ್ಬರೇ ಪುತ್ರಿಯಾದ ಪಂಜಾಬಿನ ಅಸೆಂಬ್ಲಿಯ ನಾಲ್ವರು ಸ್ತ್ರೀಸದಸ್ಯರಲ್ಲಿ ಒಬ್ಬ ಕಾಂಗ್ರೆಸ್ ಸದಸ್ಯರಾದ ಶ್ರೀ। ಪಾರ್ವತಿದೇವಿಯವರು ಬಹಳ ಸಮಯದಿಂದ ರೋಗಪೀಡಿತರಾಗಿದ್ದು ಮೊನ್ನೆ ತಾ ೧೧ರಲ್ಲಿ ದಿವಂಗತರಾದರು.

# ನೋಟಗಳು.—Note......s

ಹಿಂದಿಯನ್ನು ಕಡ್ಡಾಯವಾಗಿ ನಮ್ಮ ಸಂಸ್ಥಾನದ ಒಂದು ನೂರು ಶಾಲೆಗಳಲ್ಲಿ ಈ ವರ್ಷ ಸರಕಾರವು ಕಲಿಸುವಂತೆ ವಿಧಿಸುವುದೆಂದೂ, ಹಿಂದೀ ಪ್ರಚಾರಕರು ಇನ್ನು ತಮ್ಮ ಉದ್ಯೋಗ ಮುಗಿಯಿತೆಂದು ಎಣಿಸುವ ಅಗತ್ಯವೇನೂ ಇಲ್ಲದೆ ಇನ್ನಷ್ಟು ಚೆನ್ನಾಗಿ ಸರಕಾರದೊಡನೆ ಸಹಕರಿಸಿ, ಹಿಂದೀ ಪ್ರಚಾರವು ನಿರಾತಂಕವಾಗಿ ಸಾಗುವಂತೆ ಮಾಡಬೇಕೆಂದೂ ಶ್ರೀ। ಗೋಪಾಲ ರೆಡ್ಡಿ(ಮಂತ್ರಿಯವರು)ಯವರು ಹಿಂದೀ ಪ್ರಚಾರಕರ ಪರಿಷತ್ತಿನಲ್ಲಿ ತಿಳಿಸಿರುವರು.

ಂ ಂ ಂ ಂ

ಸಹಕರಿಸದಿದ್ದರೂ ಅಪಕಾರ ಮಾಡದಂತೆ ಪ್ರಚಾರಕರು ಉದಾತ್ತಭಾವದಿಂದ ಇದ್ದರೆ ಉತ್ತಮ ಸಹಾಯವೆಂದು ಹಿಂದೀ ಕಲಿಸುವ ಶಾಲಾ ಉಪಾಧ್ಯಾಯರ ಪ್ರಾರ್ಥನೆಯಾಗಿದೆ

ಂ ಂ ಂ ಂ

ಗ್ರಾಮೋಫೋನ್ ಕಂಪೆನಿಯ ಕಟ್ಟಡವು ಸುಟ್ಟು ಒಂದು ಲಕ್ಷ ರಿಕಾರ್ಡು(ದೋಸೆ)ಗಳು ಬೂದಿಯಾದುವು 30 ಬೆಂಕಿ ಆರಿಸುವ ಮಂಮಗಳೊಡನೆ 250 ಮಂದಿಗೆ ಈ ಕಟ್ಟಡದ ಸುಟ್ಟ ಅಂಶವನ್ನು ತಣಿಸಲಿಕ್ಕೆ ಮೂರು ತಾಸು ಹಿಡಿಯಿತು,—ಎಂದು ಲಂಡನಿನ ವಾರ್ತೆ

ಂ ಂ ಂ ಂ

ಅನಾವಶ್ಯಕವಾಗಿ ದಿನಾಲೂ ಈ ರಿಕಾರ್ಡುಗಳನ್ನು ಜೀವಕ್ಕೆ ಬೇಸರ ಹಿಡಿವಂತೆ ಉಪಯೋಗಿಸುತ್ತಿರುವ ಅಲ್ಲಲ್ಲಿ, ಒಂದೊಂದು ಮನೆ, ಒಬ್ಬೊಬ್ಬ ಜವಾನನ್ನು ಇನ್ನು ಇರಿಸುವುದುಂಟೆ... ಕೆಲವು ರಿಕಾರ್ಡುಗಳು ನಿರಂತರ ಕೂಗುತ್ತ, ಜೀವವನ್ನೇ ಸುಟ್ಟು ಹಾಕುವ ಪ್ರಯತ್ನ ಮಾಡುತ್ತವಲ್ಲ, ಅವೇ ಎಲ್ಲವೂ ಸೇರಿ ಮೂಲ ಆಫೀಸಿನ ಕಟ್ಟಡವನ್ನು ಸುಟ್ಟಿರಬಹುದು ಇಲ್ಲದಿದ್ದರೆ, ಬೆಂಕಿ ತಗಲಿತು ಹೇಗೆಂದು ಪ್ರಕಟವೇಕಾಗಲಿಲ್ಲ?

ಂ ಂ ಂ ಂ

ಡಾಕ್ಟರರನ್ನು ಕರೆದ ಬದಲಾಗಿ,—ಜನರು ಬೇಕಾದ್ದನ್ನು ತಿಂದು ಜಾಡ್ಯ ಹಿಡಿಯಲಿ, ಆದರೆ ಏನನ್ನು ಎಷ್ಟು ತಿಂದರೆ ಯಾವ ಜಾಡ್ಯ ಹಿಡಿಯುವುದೆಂಬುದನ್ನು ಜನರು ನೆನಪಿನಲ್ಲಿಟ್ಟುಕೊಳ್ಳಲಿ ಬಾಯಿಗೆ (ನಾಲಗೆಗೆ) ರುಚಿಯಾದ ಯಾವುದು ಜಾಡ್ಯಕ್ಕೆ ಸಹಾಯಮಾಡಿತೆಂಬುದನ್ನೂ, ಯಾವುದನ್ನು ತಿನ್ನುವಾಗ ನಾಲಗೆಗೆ ರುಚಿಯೂ, ಆಹಾರಾನಂತರ ಸುಖನಿದ್ರೆಯೂ ಉಂಟಾಯಿತೆಂಬುದನ್ನೂ ಜನರು ಮರೆಯಬಾರದು ಎಂದು ಫ್ರೆಂಚ್ ಆಹಾರ ಸಂಸ್ಥೆಯ ಅಧ್ಯಕ್ಷರ ಅಭಿಪ್ರಾಯ

ಂ ಂ ಂ ಂ

ರುಚಿಕರವಾದ ಆಹಾರದ ನೆನಪು, ಕಹಿಯಾದ ಮದ್ದಿನ ನೆನಪೂ ನಮ್ಮಲ್ಲಿ ಬಹುಕಾಲವಿರುವುದಲ್ಲದೆ, ಇವೆರಡರಿಂದ ಉಂಟಾದ (ಕ್ರಮವಾಗಿ) ಜಾಡ್ಯ ಮತ್ತು ಆರೋಗ್ಯಗಳ ಸ್ಮರಣೆಯೇ ಉಳಿಯುವುದಿಲ್ಲ ಏಕೆಂದರೆ, ಇವೆರಡಕ್ಕೂ ತೆರಬೇಕಾದ ಕಾಸು ಕೆಲವಲ್ಲಿ ಧಾರಾಳ ತೆರದಿರವಲ್ಲಿ ಸಾಲವಾಗಿಯೇ ಮನಸ್ವಾಸ್ಥ್ಯವನ್ನು ಕೆಡಿಸುವುವಲ್ಲವೆ?

ಂ ಂ ಂ ಂ

ಜಗತ್ತಿನ ನಾಣ್ಯಗಳಲ್ಲಿ ಅತಿದೊಡ್ಡದಾದುದು ಸಿಯಾಮ್ ರಾಜ್ಯದ '40 ಟಿಕಾಲ್' ಎಂಬ ಬೆಳ್ಳಿಯ ನಾಣ್ಯ, ಇದು 36 ಔನ್ಸು ಭಾರವಾಗಿದೆ ಇಂತಹದೊಂದು ನಾಣ್ಯವು, ಸುಮಾರು 60 ವರ್ಷ ಹಳೆಯದು, ಕ್ರಿಕೆಟ್ ಚೆಂಡಿನಷ್ಟು ಭಾರವಾಗಿದ್ದು, ಹತ್ತು ಪವನು ಮೌಲ್ಯವಟ್ಟುದುಂಟು

ಂ ಂ ಂ ಂ

ಭಾರತ ವರ್ಷದ ಎಲ್ಲ ರಜಪೂತರು ಅಖಿಲ ಭಾರತದ ಕ್ಷತ್ರಿಯ ಮಹಾಸಭೆಗೆ ಸೇರುವಂತಾದರೆ, ಅದೇ ನನ್ನ ಜೀವನದಲ್ಲಿ ಅತ್ಯಾನಂದಕರವಾದ ಗಳಿಗೆ, ಎಂದು ಪಾಟಿಯಾಲದ ಮಹಾರಾಜರು ಉದ್ಗಾರವೆತ್ತಿರುವರು' ಆದರೆ, ಅದೇ ಭಾಷಣದಲ್ಲಿ, ಜಾತಿಗಳು ನಿರ್ದೋಷವಾಗಿ ಊರ್ಜಿತವಿರಬೇಕು, ವಿದ್ಯಾಭ್ಯಾಸವು ಕ್ಷತ್ರಿಯರಲ್ಲಿ ಹೆಚ್ಚಬೇಕು, ಮಾತ್ರವಲ್ಲದೆ ರಾಜಭಕ್ತರೆಂದು ಹೆಸಗೊಂಡ ರಜಪೂತರಿಗೆ ಸರಕಾರವು ಹೆಚ್ಚು ಹೆಚ್ಚಾಗಿ ಹುದ್ದೆಗಳನ್ನು ಕೊಡುತ್ತಿರಬೇಕು ಎಂದು ಅವರೇ ಭಾಷಣ ಮುಗಿಸಿದರು

ಂ ಂ ಂ ಂ

'ಕತ್ತಿಗಿಂತಲೂ ಲೇಖನಿಯೇ ಶ್ರೇಷ್ಠ' ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆಯಿದು!

ಂ ಂ ಂ ಂ

ನಮ್ಮ ಸಂಖ್ಯೆ ಕಡಿಮೆಯಾಗುತ್ತ ಬರುತ್ತಿದ್ದಾದರೂ, ನಮ್ಮ ಅಭಿಪ್ರಾಯಗಳನ್ನೆ ಅಂಗೀಕರಿಸುವ ಕೋಟ್ಯಂತರ ಜನರು ಇದ್ದಾರೆಂಬುದು (ಇವರು 'ಲಿಬರಲ್' ಎಂಬ ಲೇಬಲ್ ಹಚ್ಚಿಕೊಳ್ಳದಿದ್ದರೂ) ನಮಗೆ ಪ್ರೋತ್ಸಾಹಕರವಾಗಿದೆ ಎಂದು ಲಿಬರಲ್ ಪರಿಷತ್ತಿನಲ್ಲಿ ಸರ್ ಚಿಮಣಲಾಲ ಸೆಟ್ಲವಾಡರ ಅಧ್ಯಕ್ಷ ಭಾಷಣದಲ್ಲಿದೆ

ಂ ಂ ಂ ಂ

ಈ ಉದ್ಗಾರಗಳನ್ನು ಯಾವನೂ ಪ್ರಕಟಿಸಬಹುದು ಸ್ವಲ್ಪ ಆಲೋಚಿಸಿದರೆ, ಇದೆಷ್ಟು ಅಪಹಾಸ್ಯಕರವಾಗಿದೆ ಎಂದು ತೋರುವುದಿಲ್ಲವೆ? ಲಿಬರಲರು ಹೀಗೇಕಾದರು?

ಂ ಂ ಂ ಂ

'ಜಂಟಿ ಪ್ರಾತಿನಿಧ್ಯವೇ ಅತ್ಯಾವಶ್ಯಕ ಎಂದು ಎಂದಿನಿಂದಲೂ ಹೇಳುತ್ತಿದ್ದ ಮಿ। ಜಿನ್ನಾರವರು, ಈಗ ಅವನ್ನೆ ನಿರಾಕರಿಸುತ್ತ ಸಮಸ್ತ ಹಿಂದುಗಳನ್ನು ದೂರುವುದೇಕೆಂದು ನನಗೆ ತಿಳಿಯದು ಕಾಂಗ್ರೆಸು ಮುಸ್ಲಿಮರಿಗೆ ಯಾವ ವಿರೋಧವನ್ನೂ ಮಾಡಲಾರದು ಒಂದು ವೇಳೆ ಹಾಗೆ ಮಾಡಿದರೂ, ಇದೀ ಹಿಂದೂ ಸಮಾಜವನ್ನೇ ಅವರು ದೂರುವುದೆಂದರೇನು? ಮುಸಿಮ ಲೀಗಿನ ಮುಖಂಡರನ್ನು ಹಾಗೇ ಬಿಟ್ಟು ಮುಸ್ಲಿಮರನ್ನು ಕಾಂಗ್ರೆಸಿಗೆ ಸೇರಿಸಿಕೊಳ್ಳಲು ಕಾಂಗ್ರೆಸು ಪ್ರಯತ್ನಿಸಿರುವುದೇ ಅನ್ಯಾಯವಾಯಿತೆ?' ಅಂತೂ ಮಿ। ಜಿನ್ನಾರನ್ನು ದೂರಿಯೂ ಹೊಗಳಬೇಕು, ಕಾಂಗ್ರೆಸಿನ ಮೇಲೆ ಸ್ವಲ್ಪ ಅನುಕೂಲ ವಿಷವನ್ನು ಚೆಲ್ಲಬೇಕ—ಎಂದಿಪ್ಪೆವ ತಾತ್ಪರ್ಯಾಗಿರವ ಲಿಬರಲ್ ಅಧ್ಯಕ್ಷರ ಅಭಿಮತ

ಂ ಂ ಂ ಂ

ಪೂರ್ವ ಬಂಗಾಳದಲ್ಲೆಲ್ಲ ಸಂಚರಿಸುವಾಗ, ಒಬ್ಬನೇ ಒಬ್ಬ ಪತ್ರಿಕಾ ಪ್ರತಿನಿಧಿಯೂ ನನ್ನ ಸರಹದ್ದಿಗೆ ಬಂದಿಲ್ಲವೆಂದರೆ ಅರ್ಥವೇನಯ್ಯ? ನಾನು ಮುಸ್ಲಿಮನೆಂದೇ ಹೀಗೆ ಮಾಡುತ್ತಾರೆ ನನ್ನ ಕೈಯಲ್ಲಿ ದೊಣ್ಣೆ ಇದೆ, ದೊಣ್ಣಪ್ಪನಾಯಕನ ಅಪ್ಪಣೆಯಂತೆ ಇವರನ್ನೆಲ್ಲ ವಿಧೇಯರನ್ನಾಗಿ ಮಾಡಲೂ ನನಗೆ ಗೊತ್ತಿದೆ'' ಎಂದು ಸರ್ ಫಜಲುಲ್ ಹಕ್ (ಬಂಗಾಳದ ಮುಖ್ಯ ಮಂತ್ರಿಯವರು) ದೂರುತ್ತಾರೆ

ಂ ಂ ಂ ಂ

ಪೂರ್ವ ಬಂಗಾಳವು ಪ್ರತ್ಯೇಕವಾದಾಗ, ಸರ್ ಬಂಫಿಲ್ಡ್ ಫುಲ್ಲರರಿಗೆ ಯಾವ ಸನ್ಮಾನವಿತ್ತೆಂದು ಶ್ರೀ ಹಕ್ಕರಿಗೆ ಗೊತ್ತಿದೆ ಅದಕ್ಕೇನು ಕಾರಣವಾಗಿತ್ತೆಂದೂ ಅವರು ಬಲ್ಲರು ಅದನ್ನು ನೆನೆದರೆ ಈ ಭಯಪ್ರದರ್ಶನಕ್ಕೇನೂ ಅಗತ್ಯವಿರಲಿಲ್ಲ

ಂ ಂ ಂ ಂ

ಫೆಡರೇಶನಿನಲ್ಲಿ ಪುರುಷಾರ್ಥವೇನೇನೂ ಇಲ್ಲ ಎಂದು ಸರ್ ಚಿಮಣಲಾಲರು ಸಾರಿ, ರುಜುವಾಡಿಸಿರುವರು, ಆದರೆ,—ಲಿಬರಲರ ಈ ಆದರೆಗಳನ್ನು ನೋಡಬೇಕು—ಫೆಡರೇಶನನ್ನು ಬಹಿಷ್ಕರಿಸದೆ, ಎಲ್ಲವರೂ ಸೇರಿ, ಅದರಿಂದ ಸಿಗುವಷ್ಟು ಹೆಚ್ಚಿನ ಪ್ರಯೋಜನವನ್ನು ಗಳಿಸಬೇಕೆಂದೂ ಅವರ ಸೂಚನೆಯಿದೆ 'ಕೋಲು ಮುರಿಯದೆ । ಹಾವು ಸಾಯದೆ । ಲೀಲೆಯಿಂದಲಿ । ಬಾಳಬೇಕಲೇ !'—ಲಿಬರಲರ ನೀತಿ

# ಮಂಗಳೂರು.

## ಮದರಾಸು ಕೌನ್ಸಿಲು ಓಟರರಲ್ಲಿ ವಿನಂತಿ.

ರೈತರ ಸಾಲ ನಿವೃತ್ತಿ ಮಸೂದೆಯು ಜನರ ಮುಂದೆ ಬಂದು ಕೆಲವು ವಾರಗಳಾದುವು. ವಿವಿಧ ರೀತಿಯ ಟೀಕೆಗಳೂ ಬಂದಿವೆ. ಅಲ್ಲಲ್ಲಿ ಸಭೆ ಸೇರಿ ಆಯಾಯ ತರಗತಿಯ ಜನರ ಅಭಿಪ್ರಾಯಗಳನ್ನು ಕೂಡ ತಿಳಿಸುತ್ತಾ ಇದ್ದಾರೆ. ಪ್ರಕೃತ ಸದ್ರಿ ಮಸೂದೆಯು "ಸಿಲೆಕ್ಟ ಕಮಿಟಿ"ಯವರ ಕೈಯಲ್ಲಿದೆ. ಹಿಂದಿನ ಬಡ್ಡಿ ಬಾಕಿ ವಿಚಾರದಲ್ಲಿ ಸಾಲ ಕೊಟ್ಟವರ ಅನುಗುಣವಾಗಿ ಸ್ವಲ್ಪ ರಿಯಾಯತಿ ಬದಲಾವಣೆಯೂ ಸಾಲಗಾರರ ಪರವಾಗಿ "ದಾಮ್‌ದುಪ್ಪಟ್ಟು" ತತ್ವವನ್ನು ಸ್ವೀಕರಿಸುವುದಾಗಿಯೂ ಇನ್ನು ಕೆಲವು ಇತರ ಬದಲಾವಣೆಗಳನ್ನು ಸದ್ರಿ "ಸಿಲೆಕ್ಟ್ ಕಮಿಟಿ"ಯವರು ಮಾಡುತ್ತಾರೆ. ನಾನು ಕೂಡಾ ಈ ಮೊದಲು "ಸಾಲ ನಿವೃತ್ತಿಯ" ತತ್ವವನ್ನು ಇಟ್ಟುಕೊಂಡಂಥ ಮಸೂದೆಯು ಸಿಲೆಕ್ಟ್ ಕಮಿಟಿಯವರಿಗೆ ಒಪ್ಪಿಸುವ ಸಮಯದಲ್ಲಿ ಕೆಲವು ಬದಲಾವಣೆಗಳು ಮಾಡುವ ಶರ್ತದಿಂದ ಅನುಮೋದಿಸಿರುವೆನು. ಇನ್ನು ನನ್ನನ್ನು ಆರಿಸಿದ ಮತದಾರರ ಅಭಿಪ್ರಾಯವೇನೆಂಬುದನ್ನು ತಿಳಿಯುವುದು ನನ್ನ ಕರ್ತವ್ಯ. ಈ ಸಂಬಂಧ ಮಂಗಳೂರಿನ ಜೈನ್ ಬೋರ್ಡಿಂಗ್‌ನಲ್ಲಿ ಇದೇ ಜನವರಿ ತಿಂಗಳು ೧೫ಕ್ಕೆ ಮಧ್ಯಾಹ್ನ ೩ ಗಂಟೆಗೆ 'ಮದ್ರಾಸು ಕೌನ್ಸಿಲು' ಮತದಾರರ ಸಭೆಯನ್ನು ಸೇರಿಸಲು ಆತುರಪಡುತ್ತೇನೆ. ಸಭೆಗೆ ಆಗತ್ಯವಾಗಿ ಸಂಬಂಧಪಟ್ಟವರು ಬಂದು, ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿ ವಿನಂತಿ. ಸಭೆಗೆ ಬರಲು ಅನಾನುಕೂಲವಾದವರು ಟಪ್ಪಾಲು ಮೂಲಕ ತಮ್ಮ ಅಭಿಪ್ರಾಯಗಳನ್ನು ತಿಳಿಸಲೂ ಬಹುದು. ಅಂತು ಬಹುಮತದವರ ಅಭಿಪ್ರಾಯದಂತೆ ವರ್ತಿಸಲು ಪ್ರಯತ್ನಪಡುವೆನು ಎಂಬುದನ್ನು ಈ ಮೂಲಕ ಜಾಹೀರು ಮಾಡುವೆನು. ಇತಿ ತಮ್ಮ (ಮಂಜಯ್ಯ ಹೆಗ್ಗಡೆ, ಎಂ. ಎಲ್. ಸಿ.)

**ಶ್ರೀ ವಿವೇಕಾನಂದ ಸಭಾ:—** ಇದೇ ತಾ೯—೧ ೩ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೮ಕ್ಕೆ ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಶ್ರೀಮತಿ ಮಲ್ಲಾಪುರ ರುಕ್ಮಿಣಿಬಾಯಿಯವರು 'ಭಕ್ತ ಏಕನಾಥ' ಇವರ ಚರಿತ್ರವನ್ನು ಹರಿಕಥಾ ರೂಪದಲ್ಲಿ ನಿರೂಪಿಸುವರು. ಬೆಳಗಾವಿನಲ್ಲಿ ಕಟ್ಟಿಸಲಿರುವ ಭಜನಾ ಮಂದಿರದ ಸಹಾಯಾರ್ಥವಾಗಿ ಶ್ರೀಮತಿಯವರು ಈ ಕಾರ್ಯವನ್ನು ಕೈಕೊಂಡಿರುವುದರಿಂದ ಮಹಾ ಜನರು ಉದಾರಾಶ್ರಯವನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

**ವಸ್ತ್ರದಂಗಡಿ ಲ್ಯಾಸನ್ಸು:—** ಮದ್ರಾಸು ಸರಕಾರದಿಂದ ಹೊಸತಾಗಿ ಹೊರಡಿಸಲ್ಪಟ್ಟ ಶಾಸನದ ಪ್ರಕಾರ ವಸ್ತ್ರದಂಗಡಿಗಳು ಲೈಸನ್ಸು ಪಡೆಕೊಳ್ಳಬೇಕೆಂದಾಗಿದೆ. ಜಿಲ್ಲಾ ಕಲೆಕ್ಟರರು ಈ ಲೈಸನ್ಸು ಕೊಡತಕ್ಕ ಅಧಿಕಾರಿಗಳಾಗಿರುವರು. ಕೋರ್ಟು ಫೀ ಆಕ್ಟಿನ ಪ್ರಕಾರ ಈ ಲೈಸನ್ಸಿಗಾಗಿ ಅರ್ಜಿಯೊಡನೆ ಹದಿನೆರಡಾಣೆ ಸ್ಟಾಂಪು ಕೊಡಬೇಕಾಗಿದೆ. ಇದರಿಂದ ವಸ್ತ್ರದ ಸಾಹುಕಾರರಿಗೆ ಅನೇಕ ತೊಂದರೆಗಳುಂಟಾಗಿವೆ. ಆದುದರಿಂದ ಈ ಮೇಲಿನ ಹೊಸ ಕಾನೂನು ಜಾರಿಗೆ ಬಂದಂದಿನಿಂದ ಈ ಸ್ಟಾಂಪು ಆಪ್ಪು ಅರ್ಜಿಗಳ ಬಗ್ಗೆ ಸಿಂಧುವಾಗತಕ್ಕದಲ್ಲವೆಂದು ಸರಕಾರದ ಅಪ್ಪಣೆಯಾಗಿರುತ್ತದೆ. ಇಷ್ಟರವರೆಗೆ ಯಾರಾದರೂ ಫೀಸು ತೆತ್ತಿರುವುದಾದರೆ ಅದನ್ನು ಜಿಲ್ಲಾ ಅಧಿಕಾರಿಗಳಿಂದ ಮರಳಿ ತಕ್ಕೊಳ್ಳಬಹುದು.

**ದ. ಕ. ಜಿಲ್ಲಾ ಬೋರ್ಡಿನ ಸಭೆ:—** ಮೊನ್ನೆ ಶ್ರೀ ಮಹಾಬಲ ಹೆಗ್ಗಡೆಯವರ ಅಧ್ಯಕ್ಷತನದಲ್ಲಿ ಜರಗಿದ ಜಿಲ್ಲಾ ಬೋರ್ಡಿನ ಆಡಳಿತದಲ್ಲಿರುವ ಹಾಯರ್ ಎಲಿಮೆಂಟರಿ ಶಾಲೆಯನ್ನು ರದ್ದು ಮಾಡಬೇಕೆಂದು ಮೂಡಬಿದ್ರೆ ಬೈಂದೂರು ಈ ಕಡೆಗಳಲ್ಲಿರುವ ಮಿಡ್ಲ್ ಸ್ಕೂಲುಗಳನ್ನೂ ರದ್ದು ಮಾಡಬೇಕಾಗಿ ಬಂದ ಹುಕುಮನ್ನು ಪ್ರತಿಕೂಲಿಸಿ ಠರಾವುಗಳಾದವು. ಈ ಸರಗೋಡಿನ ಟಿ. ಬೋರ್ಡಿನ ಮುಖದ್ವಾರದ ಪಟ್ಟೆಯು ಮಳೆಯೊಳೆಯಲ್ಲಿ ಆಗಬೇಕಾಗಿ ಬಂದ ಠರಾವು ಬಿದ್ದು ಹೋಯಿತು. ನಂದಳ್ಕೆಯಲ್ಲಿ ಬೋರ್ಡು ಶಾಲೆಯನ್ನು ರದ್ದು ಮಾಡಬಾರದಾಗಿ ಬೋರ್ಡು ಅಭಿಪ್ರಾಯಪಟ್ಟಿತು. ಗೋಪಾಡಿಯಲ್ಲಿ ಒಂದು ಮಾರ್ಕೆಟು ತೆರೆಯಬೇಕಾಗಿ ಸರ್ವಾನುಮತದಿಂದ ಮಂಜೂರಾಯಿತು. ಚರ್ಕತ್ತೂರಿನಲ್ಲಿ ಲೋ. ಫೈ. ಆಸ್ಪತ್ರೆಯನ್ನು ತೆರೆಯಬೇಕಾಗಿ ಬಂದ ಠರಾವು ಬಿದ್ದು ಹೋಯಿತು. ಶ್ರೀಗಳಾದ ಕೃಷ್ಣರಾಯ ಹೆಗ್ಗಡೆ, ಸದಾಶಿವ ಅಡಿಗ, ಈಶ್ವರ ಈ ಮೂವರು ವಿದ್ಯಾ ಕೌನ್ಸಿಲಿನ ಸದಸ್ಯರಾಗಿ ಆರಿಸಲಾಯಿತು.

## ಕೆನರಾ ಹೈಸ್ಕೂಲ್, ಮಂಗಳೂರು.

### ೧೯೩೭ನೆ ಇಸ್ವಿಯ ಕಾರ್ಯವೃತ್ತಾಂತ.

(ಕಳೆದ ದಶಂಬ್ರ ೨೩ರಲ್ಲಿ ಮದ್ರಾಸು ಸರಕಾರದ ಮಂತ್ರಿಯವರು ಶ್ರೀ| ರಾಮನ್ ಮಾನೋನ್‌ರವರ ಅಧ್ಯಕ್ಷತೆಯಲ್ಲಿ ಜರಗಿದ ವರ್ಧಂತ್ಯುತ್ಸವದ ಕಾಲದಲ್ಲಿ ಹೆಡ್ ಮಾಸ್ತರರು ಓದಿದ ವರದಿಯ ಸಾರಾಂಶ)

ಮಹಾತ್ಮಾಜಿಯವರಂತಹ ಅಪ್ರತಿಮ ನಾಯಕರ ಅನುಮತಿಯಿಂದ ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡಿದುದರಿಂದ ಉಂಟಾದ ಮದ್ರಾಸು ಸರಕಾರದ ಮಂತ್ರಿಮಂಡಲಕ್ಕೆ ಸೇರಿರುವ ಇಂದಿನ ಸಭಾಧ್ಯಕ್ಷರಿಗೆ ಸ್ವಾಗತ.

ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಯರ ಸಂಖ್ಯೆ ೯೭೭ (ಕಳೆದ ವರ್ಷ ೯೮೦) ಪ್ರೈಮರಿ ತರಗತಿಗಳಲ್ಲಿ ಸಂಖ್ಯೆಯು ಇಳಿಯುವುದು, ಧರ್ಮಾರ್ಥ ಶಿಕ್ಷಣ ಕೊಡುವ ಎಲಿಮೆಂಟರಿ ಶಾಲೆಗಳು ಸುತ್ತಲಿರುವ ಕಾರಣ. ಆದರೆ ಹೈಸ್ಕೂಲ್ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿರುವುದು. IV Formನಲ್ಲಿ ಹೆಮ್ಮಕ್ಕಳಿಗಾಗಿಯೆ ಒಂದು ಪ್ರತ್ಯೇಕ ಡಿವಿಜನ್ ಏರ್ಪಡಿಸಲಾಗಿದ್ದು, ಅದರಲ್ಲಿ ೨೫ ಮಂದಿ ವಿದ್ಯಾರ್ಥಿನಿಯರಿರುವರು. ಸಹಶಿಕ್ಷಣವು ಈ ತರಗತಿಗಳಲ್ಲಿ ಐದು ವರ್ಷಗಳಿಂದಲೂ ನಡೆಯುತ್ತಿದೆ; ವಿದ್ಯಾರ್ಥಿಗಳ ನಡತೆಯೂ ಪಾಠಗಳಲ್ಲಿ ಸ್ಪರ್ಧೆಯೂ ಉತ್ತಮವಾಗಿದೆ.

ಮಹಾತ್ಮಾಜಿಯವರು ೧೯೩೪ರಲ್ಲಿ ಶಂಕುಸ್ಥಾಪನೆ ಮಾಡಿರುವ ಕೃಷ್ಣಮಂದಿರದ ಇಬ್ಬದಿಗಳ ಕೈಸಾಲೆಗಳಲ್ಲಿ ಪ್ರಾಥಮಿಕ ತರಗತಿಗಳ ಮಕ್ಕಳು ಓದುತ್ತಿದ್ದಾರೆ. ದಿವಂಗತ ಹುಂಡಿ ಸರ್ವೋತ್ತಮ ಕಾಮತರ ವಿಧವೆ ನೇತ್ರಾವತಿ ಯಾನೆ ಸತ್ಯಭಾಮಮ್ಮನವರು ಕೃಷ್ಣಮಂದಿರದ ಎಲ್ಲಾ ಖರ್ಚನ್ನು, ಮಧ್ಯಾಹ್ನದ ಭೋಜನಕ್ಕೆ ಹೋಗಲಾರದ ಬಡವಿದ್ಯಾರ್ಥಿಗಳ ಊಟದ ಖರ್ಚಿಗೆ ಎಲ್ಲ ಲಾಗುವಾದನ್ನು ತೆರಲು ಒಪ್ಪಿರುವುದು ಸಂತೋಷಕರವಾಗಿದೆ. ಬಡವಿದ್ಯಾರ್ಥಿಗಳ ಶಾಲಾ ಸಂಬಳವು ಮಾಫಿಯಾಗುವಂತೆ ಪ್ರಯತ್ನಿಸಲು, ಸ್ವಾಮಿ ವಿವೇಕಾನಂದ ವೇತನನಿಧಿಯು ಸ್ಥಾಪನೆ ಹೊಂದಿದೆ. ಈ ಫಂಡಿಗೆ ಈಗಲೇ ರೂ ೨೬೦೦ ವಸೂಲಾಗಿದೆ.

ಮಾಡಿರುವ ಒಂದು ವ್ಯಾಯಾಮ ಶಾಲೆಯನ್ನೂ ವೃತ್ತಿಶಿಕ್ಷಣಕ್ಕೊಂದು ಪ್ರತ್ಯೇಕ ಕಟ್ಟಡವನ್ನೂ ಕಟ್ಟಿಸಬೇಕೆಂದೂ ಅಲ್ಲದೆ ಪ್ರಕೃತಿವಿಜ್ಞಾನ ಬೋಧನೆಗೋಸ್ಕರ, (ತಿಮಿಂಗಿಲದ ಅಸ್ಥಿಪಂಜರವನ್ನು ಇರಿಸಲೂ ಸಹ) ಮತ್ತೊಂದು ಪ್ರತ್ಯೇಕ ಕಟ್ಟಡ ಕಟ್ಟಿಸುವ ಆಲೋಚನೆಯಿದೆ.

೪೩ ಮಂದಿ ಉಪಾಧ್ಯಾಯರಿರುವರು. ಸ್ಕೂಲ್ ಫೈನಲ್ ಪರೀಕ್ಷೆಗೆ ಯಾವತ್ತು C ಗ್ರೂಪ್ ವಿಷಯಗಳನ್ನು ಕಲಿಸಲಾಗುತ್ತದೆ. ಒಳ್ಳೆಯ ಯೋಗ್ಯತೆಯುಳ್ಳ ಉಪಾಧ್ಯಾಯರಿದ್ದು ಅವರು ತಮ್ಮ ಕೆಲಸವನ್ನು ಮನಃಪೂರ್ವಕ ಮಾಡುತ್ತಾರೆಂದು. ವಿದ್ಯಾ ಇಲಾಖೆ ಇನ್ಸ್‌ಪೆಕ್ಟರು ವಿಮರ್ಶಿಸಿರುವರು. ಸರಕಾರದ ಗ್ರೇಂಟು ರೂ ೮೪೭೨ (ಕಳೆದ ವರ್ಷ ೮೪೯೩) ಮೆನೇಜ್‌ಮೆಂಟಿಗೆ ರೂ. ೩೬೬೩ ಕೈಯಿಂದ ಬಿದ್ದಿದೆ. ಶಾಲೆಯಲ್ಲಿ ೨೯ ಡಿವಿಜನುಗಳಿವೆ. ಪಾಠಶಾಲೆಯಲ್ಲಿ ಒಂದು ಕಡವೆ ಸ್ಕೌಟ್ ಟ್ರೂಪಿನಲ್ಲಿ ಬಹು ಹೆಚ್ಚು ವಿವಿಧ ತರಗತಿಗಳಲ್ಲಿನ ಶಿಕ್ಷಣವು ಸುಸೂತ್ರವಾಗಿ ಏಕಪ್ರಕಾರವಾಗಿ ಸಾಗುವ ಹಾಗೆ ಹಿರಿಯ ಉಪಾಧ್ಯಾಯರಿಗೆ ಮೇಲ್ವಿಚಾರಣೆ ನಡೆಸುವಂತೆ ನೇಮಿಸಲಾಗಿದೆ. ವಿಜ್ಞಾನ ಬೋಧನೆಗೆ ಇಲ್ಲಿ ಎಂದಿನಿಂದಲೂ ವಿಶೇಷ ಪ್ರೋತ್ಸಾಹ ಪ್ರಯತ್ನಗಳು ನಡೆಯುತ್ತಲಿವೆ. ಮಹಾಯುದ್ಧ ಕಾಲದಲ್ಲಿ ಮೆಡಿಕಲ್ ಸರ್ವಿಸಿಗೆ ಸೇರಿದ ಡಾಕ್ಟರರುಗಳಲ್ಲಿ, ಮತ್ತಾವ ಹೈಸ್ಕೂಲಿನವರಿಗಿಂತಲೂ ಹೆಚ್ಚಾಗಿ ಈ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಸಂಖ್ಯೆಯೇ ಇತ್ತು. ದೇಶದ ಪುನರುದ್ಧಾರಕ್ಕೆ ಚರಿತ್ರವನ್ನು ಓದಿ ಫಲವಿಲ್ಲ, ಕೈಗಾರಿಕೆಗಳಿಗೆ ಪ್ರೋತ್ಸಾಹವು ಹೆಚ್ಚಬೇಕು, ಅದಕ್ಕಾಗಿ ವಿಜ್ಞಾನವೇ ಸಹಾಯಕವಾಗಿದೆ. ಹಿಂದಿಯನ್ನು IV ಫೋರ್ಮಿನಲ್ಲಿ ಈ ವರ್ಷ ಪ್ರಾರಂಭಿಸಲಾಗಿದೆ. ಒಂದು ಡಿವಿಜನ್ ಬಾಲಕರು ಹಿಂದಿಯನ್ನೇ ಕಲಿಯುವರು. I, II, III ಫೋರ್ಮುಗಳಲ್ಲಿ ಸಹ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದುತ್ತಮವೆಂದೂ, ಆದಕ್ಕಾಗಿ ಇಲ್ಲೀಗಲೇ ಉಪಾಧ್ಯಾಯರು ಯೋಗ್ಯತೆಯುಳ್ಳವರೇ ಆಗಿದ್ದಾರೆಂದೂ ತಿಳಿಸಲಾಗಿದೆ. IV ಫೋರ್ಮಿನ ವರೆಗೆ ಮಾತೃಭಾಷೆಯನ್ನಷ್ಟೇ ಅಲ್ಲದೆ, ಇತರ ಸಂಗೀತ ಮತ್ತು ಗೃಹಕೃತ್ಯ ವಿಜ್ಞಾನವನ್ನು C ಗ್ರೂಪಿಗೂ ಕಲಿಸಲಾಗುತ್ತದೆ. ಎರಡು ವರ್ಷಗಳಿಂದ ನೇಯ್ಗೆಯನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗಿದೆ. ಬಟ್ಟೆಗಳು ಮಾರಿಹೋಗುತ್ತವೆ, ಬಹುಮಾನ ಕೊಡಲೂ ಸಿಗುತ್ತವೆ. ವಿದ್ಯಾಭ್ಯಾಸದ ಫಿಚರ್ ತನ್ನಷ್ಟಕ್ಕೆ ಹುಟ್ಟುವಂತಾಗಬೇಕೆಂಬ ವಿಷಯ ಇಷ್ಟರಲ್ಲೇ ಅಭಿಪ್ರಾಯಕೂಡ ಬರುವುದಿಲ್ಲ. ಆದರೂ ಪಠಾರದಲ್ಲಿ ನಿರುಪಯುಕ್ತವಾದ ಸ್ಥಳದಲ್ಲಿ ಮಾರಿ ಬೆಲೆಬರುವ ಬೆಳೆಗಳನ್ನು ಬೆಳೆಸಲು ಎಣಿಸಲಾಗಿದೆ. ಮತ್ತೊಬ್ಬ ಹರಿಜನ ಪೇದೆಯನ್ನು ನೇಮಕ ಮಾಡಲಾಗಿದೆ. ಹರಿಜನ ವಿದ್ಯಾರ್ಥಿಗಳನ್ನು ಇತರ ಜಾತಿಗಳ ವಿದ್ಯಾರ್ಥಿಗಳು ಆದರದಿಂದ ಕಾಣುತ್ತಾರೆ. ಮಹಾತ್ಮಾಜಿಯವರು ಈ ಭಾಗದಲ್ಲಿ ಆನುಜ್ಞೆ ಕೊಟ್ಟಂತೆ ಇಲ್ಲಿ ನಡೆಯಲಾಗಿದೆ. ಸರಕಾರದ S. S L. C ಪರೀಕ್ಷೆಯಲ್ಲಿ ೧೦೭ರಲ್ಲಿ ೭೦ ಮಂದಿ ಪಾಸು; ನೇಕಡಾ ೬೯. ಶಾಲಾ ವಿದ್ಯಾರ್ಥಿಗಳಿಗೆ ದೊರೆತ ಮಾರ್ಕುಗಳು ಜಿಲ್ಲಾ ಮಟ್ಟಿಗೆ ಸಂಸ್ಥಾನದ ಸರಾಸರಿಗೂ ಮಿಕ್ಕಿವೆ. ಶ್ರೀ| ಮಾರ್ಗಯವರು ಇಲ್ಲಿ ನೆರೆಯಿಸಿದ ಉಪಾಧ್ಯಾಯರ ಸಭೆಯಲ್ಲಿ IV ಫೋರ್ಮಿನ ಅಂತ್ಯದಲ್ಲಿ ಪರೀಕ್ಷೆ ಬೇಡವೆಂದು ಈ ಶಾಲಾಧಿಕಾರಿಗಳ ಅಭಿಪ್ರಾಯ ತಿಳಿಸಲಾಗಿದೆ. ಶಾಲಾ ಇನ್ಸ್‌ಪೆಕ್ಟರು—"ದೊಡ್ಡ ಶಾಲೆ, ವಿದ್ಯಾರ್ಥಿಗಳ ತರಬೇತಿಗೆ ಬೇಕಾದ ಪ್ರಯತ್ನ ನಡೆಯುತ್ತದೆ. ಶಿಕ್ಷಣವು ಉತ್ತಮ ತರಗತಿಯದಾಗಿದೆ. ಕೈಬರಹದ ಮಾಸಪತ್ರಿಕೆಗಳೂ ಸಂಚಾರವಿಹಾರಾದಿಗಳೂ ಸಾಗುತ್ತವೆ. ಶಿಸ್ತು ಚೆನ್ನಾಗಿದೆ. ಶಾಲೆ ಅಷ್ಟು ದೊಡ್ಡದಾಗಿದೆಯಾದರೂ, ಪುಸ್ತಕ ಭಂಡಾರ ಬಲುದೊಡ್ಡದು; ಪುಸ್ತಕಗಳನ್ನು ಚುನಾಯಿಸಿದುದೂ, ವರ್ಗೀಕರಿಸಿದ್ದೂ ಚೆನ್ನಾಗಿದೆ. ಹಲೋ ತೋಟ, ಆದರ್ಶ ವಸ್ತುಭಂಡಾರಗಳು ಇಲ್ಲಿವೆ." ಸುಮಾರು ೧೩೦೦ ರೂಪಾಯಿಗಳನ್ನು ವಿದ್ಯಾರ್ಥಿವೇತನಗಳಿಗಾಗಿ ಈ ಶಾಲೆಗೆ ಈ ವರ್ಷ ಹೊಸತಾಗಿ ಮೂಲಧನ ಸಮರ್ಪಿಸಿರುವ ಸ್ತ್ರೀಪುರುಷರುಗಳು ವಂದನಾರ್ಹರು. ವಾರ್ಷಿಕವಾದ ೫೦೦ ರೂಪಾಯಿಗಳಷ್ಟು ಗೇಣಿ ತೆತ್ತು ಬರುವ ನಾಲ್ಕು ಎಕ್ರೆ ಸ್ಥಳವನ್ನು ವ್ಯಾಯಾಮ ವ ಆಟಗಳಿಗಾಗಿ ಈ ಶಾಲೆಯು ಪಡೆದಿದೆಯಷ್ಟೆ. ಅದನ್ನೀಗ ೨೦೦೦ ರೂಪಾಯಿ ವ್ಯಯಿಸಿ (ಸರಕಾರದ ಗ್ರೇಂಟು ಅರೆ ವಾಸಿ) ಏರುಜಾರುಗಳಿರದಂತೆ ಹದಗೊಳಿಸಲಾಗಿದೆ. ಅದರದೊಂದು ಭಾಗದಲ್ಲಿ ಹಳೆಯ ವಿದ್ಯಾರ್ಥಿ ವರ್ಗವು ರೂ ೩೫೦೦ ಮೌಲ್ಯದ ಒಂದು ಕಟ್ಟಡ ಕಟ್ಟಿಸಿಕೊಡುವರು. ಈಗ ಶಾರೀರಿಕ ಶಿಕ್ಷಣದ ಕಡೆಗೆ ತುಂಬ ಲಕ್ಷ್ಯ ಕೊಡಲಾಗುತ್ತದೆ ಮಾತ್ರವಲ್ಲದೆ, ವಿದ್ಯಾರ್ಥಿಗಳೂ ಆಟಗಳಲ್ಲಿ ಲೀಲೆಯಿಂದ ಭಾಗವಹಿಸುತ್ತಾರೆ ಎಂದು ಎಡ್ಯುಕೇಶನಲ್ ಆಫೀಸರರ ಷರಾ ಇದೆ. ಶಾಲಾ ಮ್ಯೂಜಿಯಮ್ಮಿನ ವಿಷಯ ಎಷ್ಟು ಬಗೆಯಾಗಿ ಒರೆದರೂ ಕಡಮೆಯೇ ಎನಿಸುವುದು. ಇಂತಹ ವಸ್ತುಸಂಗ್ರಹಾಲಯ ಇದ್ದ ಹೈಸ್ಕೂಲುಗಳಾಗಲೀ ವಿದ್ಯಾಸಂಸ್ಥೆಗಳಾಗಲಿ ತೀರ ವಿರಳ. ಪ್ರೇಕ್ಷಕರು ಸಂದರ್ಶಕರು ಮೊದಲಾದವರು ಬಹುಸಂಖ್ಯಾತರಾಗಿ ಇಲ್ಲಿಗೆ ಬರುವರು. ಈ ಆಲಯವನ್ನು ಆರೈಕೆ ನೋಡುವ ಆಸಕ್ತರಾಗಿರುವ ವಿಶ್ವವಿಜ್ಞಾನದ ಬೋಧಕರನ್ನು ಅವರು ಶ್ಲಾಘಿಸುವರು. ಶಾಲಾ ಉದ್ಯಾನವು ಬಲು ಸೊಗಸಾಗಿದೆ. ಮಂಗಳೂರಲ್ಲಿ ಜರುಗಿದ ಪುಷ್ಪ ಪ್ರದರ್ಶನದಲ್ಲಿ ಬಹುಮಾನಗಳೂ ಪದಕಗಳೂ ದೊರೆತಿವೆ. ಇದರ ಜತನವನ್ನು ಕಿಂಚಿತ್ತೂ ಕಡಮೆಯಾಗದಂತೆ ಮತ್ತೊಬ್ಬ ಉಪಾಧ್ಯಾಯರು ನೋಡುತ್ತಿರುವರು. ಜಿಲ್ಲಾ ಶಿಕ್ಷಣ ಪ್ರದರ್ಶನದಲ್ಲಿ ಇಲ್ಲಿಂದ ಕಳುಹಿಸಿದ ನಾನಾ ಬಗೆಗಳೆಲ್ಲಕ್ಕೂ ಸರ್ಟಿಫಿಕೇಟು ದೊರೆತಿವೆ. ಶಾಲಾ ಹೊಸ್ಟೆಲಿನಲ್ಲಿ ೬೫ ಮಂದಿ ವಿದ್ಯಾರ್ಥಿಗಳು ವಸತಿಮಾಡಿರುವರು. ಇವರಿಗೂ ವ್ಯಾಯಾಮ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶವಿದೆ. ಕಾಮಧೇನು ಸೇವಾದಳವು, ಸ್ಕೌಟು ಮತ್ತು ಸೇವಾ ಸಮಿತಿಗಳ ಧ್ಯೇಯಗಳಂತೆ—೧೧೭ ಮಂದಿ (೧೩ ಮಂದಿ ವಿದ್ಯಾರ್ಥಿನಿಯರು) ಯಿಂದ ಕೂಡಿದೆ. ಇವರಲ್ಲಿ ಹೈಸ್ಕೂಲಿಗೆ ಸೇರಿದವರ … ಶಾಲಾ ಸ್ಥಾಪಕರ ದಿನ ಇವರು ಪ್ರದರ್ಶಿಸಿದ ವ್ಯಾಯಾಮ ಮತ್ತು ಕಸರತ್ತುಗಳನ್ನು ಕಂಡವರಿಗೆ ದಳದ ವಿಶೇಷ … ವಾಗುವುದು. ಇವರಲ್ಲಿ ಮುಖ್ಯಾಲಯದ ಉಪಾಧ್ಯಾಯರೊಡನೆ ಬಜಪೆಗೆ ವಿಹಾರ … ಬಂದಿರುವರು. ಸ್ವಾವಲಂಬನೆ, ಪ್ರೇಮ, ಸೇವೆ, ಸಂಯಮ ಇವನ್ನು ಕಲಿತುಕೊಳ್ಳುವುದೇ ಇವರ ಆದರ್ಶ ಪ್ರಯತ್ನಗಳಾಗಿವೆ. ಮಾರ್ಚ್ ಕಬ್ ಪೇಕ್‌ನಲ್ಲಿ ೩೩ ಬಾಲಕರಿರುವರು. ಮೊನ್ನೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಇದರ ವರ್ಧಂತಿ ನಡೆಯಿತು. ಶಾಲಾ ಸ್ಥಾಪಕರ ದಿನ—ಜಿಲ್ಲಾ ಜಡ್ಜರಾಗಿರುವ ಶ್ರೀ| ಮಿರ್ ಅಮೀರುದ್ದೀನರ ಅಧ್ಯಕ್ಷತೆಯಲ್ಲಿ ಜರುಗಿತು. ಮಕ್ಕಳ ಕೈಗೆಲಸದ ಪ್ರದರ್ಶನವೂ ಲಾಠಿ, ಲೆಜಿಮ್, ಡ್ರಿಲ್‌ಗಳ ಪ್ರದರ್ಶನವೂ ಜರುಗಿತು. ಶಾಲೆಯ ಸ್ವರ್ಣ ಮಹೋತ್ಸವ ಇನ್ನು ಸಮೀಪವಾಗಿದೆ. ಉಪಾಧ್ಯಾಯರುಗಳೇ ಮೊದಲಾಗಿ ತಮ್ಮೊಳಗಿಂದ ಆ ಕಾಲಕ್ಕೆ ರೂ. ೧೫೦೦ರಷ್ಟನ್ನು ಕೂಡಿಸಬೇಕೆಂದು ಈಗ ತಿಂಗಳು ತಿಂಗಳೂ ವಂತಿಗೆ ಎತ್ತುತ್ತ ಬರುತ್ತಾರೆ. ಇಲ್ಲಿದೆ,—ಶಾಲೆಯ ಹಿತಚಿಂತಕರಾದ ಸಮಸ್ತರು ಒಂದು ಸ್ಮಾರಕ ಫಂಡಿಗೆ ಧನಸಹಾಯವನ್ನು ಮಾಡುವುದಕ್ಕೆ ಅತ್ಯುತ್ತಮ ಸಂದರ್ಭ.

**ಮೂಲ್ಕಿ:—**

ಮೂಲ್ಕಿ ಕಾಂಗ್ರೆಸು ಕಮಿಟಿಯು ಹೊಸ ಕಾರ್ಯಕಾರಿ ಮಂಡಳಿಯನ್ನು ನೇಮಿಸುವ ಬಗ್ಗೆ, ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಗೆ ೯ ಜನ ಮೆಂಬರರನ್ನು ಆರಿಸುವ ಬಗ್ಗೆ ಮತ್ತು ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಗೆ ಎರಡು ಜನ ಮೆಂಬರರನ್ನು ಆರಿಸಿ ಕಳುಹಿಸುವ ಬಗ್ಗೆ ಕಾಂಗ್ರೆಸಿನ ಪ್ರಾಥಮಿಕ ಸದಸ್ಯರ ಮಹಾಸಭೆಯೊಂದನ್ನು ಇದೇ ಬರುವ ತಾ ೮ನೇ ಶನಿವಾರ ಸಾಯಂಕಾಲ ೪ ಗಂಟೆ ಸಮಯಕ್ಕೆ ಸ್ಥಳೀಯ ಕಾಂಗ್ರೆಸು ಕಮಿಟಿ ಕಚೇರಿಯಲ್ಲಿ ಜರಗಿಸುತ್ತದೆಂದೂ, ಆ ಬಗ್ಗೆ ಎಲ್ಲಾ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರು ಹಾಜರಾಗಬೇಕೆಂದೂ ಸದ್ರಿ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿಯವರು ವಿನಂತಿಸಿಕೊಳ್ಳುತ್ತಾರೆ.

ಮರುದಿವಸ ಬೆಳಿಗ್ಗೆ ಪ್ರಭಾತಫೇರಿ, ಧ್ವಜಾರೋಹಣ ನಡೆದು ನಂತರ 'ಚೀನಾ ದಿನಾಚರಣೆ'ಯನ್ನು ಆಚರಿಸಬೇಕೆಂದು ಸ್ಥಳೀಯ ಕಾಂಗ್ರೆಸು ಕಮಿಟಿಯವರು ನಿಶ್ಚಯಿಸಿರುವುದರಿಂದ ಎಲ್ಲಾ ಮಹನೀಯರು ಸದ್ರಿ ದಿನಾಚರಣೆಯಲ್ಲಿ ಸಹಕರಿಸಬೇಕಾಗಿ ಕಮಿಟಿಯವರು ಕೋರುತ್ತಾರೆ.

ಕಳೆದ ಜಿಲ್ಲಾ ರಾಜಕೀಯ ಪರಿಷತ್ತಿನ ಸಂಬಂಧ ಎಲ್ಲಾ ಖರ್ಚು ಕಳೆದು ಸುಮಾರು ರೂಪಾಯಿ ೫೦ರಷ್ಟು ಉಳಿದಿರುತ್ತದೆಯಾಗಿ ತಿಳಿದುಬರುತ್ತದೆ.

**ಉಡುಪಿ:—**

ಶಿವಳ್ಳಿ, ಮೂಡನಿಡಂಬೂರು, ಬಡಗಬೆಟ್ಟು, ಪುತ್ತೂರು, ಹಿರಿಯಡ್ಕ, ಅಂಬಲಪಾಡಿ ಕಡೇಕಾರು ಮತ್ತು ಕುತ್ಪಾಡಿ ಗ್ರಾಮಗಳನ್ನೊಳಗೊಂಡ ಉಡುಪಿ ಕೇಂದ್ರ ಕಾಂಗ್ರೆಸ್ ಕಮಿಟಿಯನ್ನು ಮತ್ತು ತಾ. ಕಾ. ಕಮಿಟಿಗಳಿಗೆ ಪ್ರತಿನಿಧಿಗಳನ್ನು ಆರಿಸುವರೆ ಇದೇ ತಾ ೯ನೇ ಆದಿತ್ಯವಾರ ೩ಕ್ಕೆ ಸಂಬಂಧಪಟ್ಟ ಗ್ರಾಮಗಳ ಪ್ರಾಥಮಿಕ ಕಾಂಗ್ರೆಸು ಸದಸ್ಯರ ಮಹಾಸಭೆಯು ಮೊದಲ್ ಫಾರ್ಮ್ ಎಲಿಮೆಂಟರಿ ಶಾಲೆಯಲ್ಲಿ ಸೇರಲಿದೆಯಾಗಿ ಸಂಬಂಧಪಟ್ಟ ಸದಸ್ಯರೆಲ್ಲ ಸದ್ರಿ ಸಭೆಗೆ ಹಾಜರಾಗಿ ಭಾಗವಹಿಸಬೇಕೆಂದೂ ಅಪೇಕ್ಷಿಸಲಾಗುತ್ತದೆ. ಅಲ್ಲದೆ ಅಂದೇ ೫-೩೦ಕ್ಕೆ ಅಖಿಲ ಭಾರತ ಚೀನಾ ದಿನಾಚರಣೆಯೂ ಅದೇ ಶಾಲೆಯಲ್ಲಿ ನಡೆಸಲ್ಪಡಲಿರುವುದಾಗಿ ಮಹಾಜನರೆಲ್ಲ ಈ ಸಭೆಗೆ ಬಂದು ಪ್ರೋತ್ಸಾಹಿಸಬೇಕಾಗಿ ತಾ. ಕಾಂ. ಕಮಿಟಿಯ ಅಧ್ಯಕ್ಷರ ವಿನಂತಿಯಿದೆ.




ಇಂದ್ರಜಾಲದಂತೆ ವಾಸಿಮಾಡುವುದರಿಂದ ಇದು ಪ್ರತಿಯೊಬ್ಬರಿಗೂ ಅಗತ್ಯವಿರುತ್ತದೆ.

ಚರ್ಮವ್ಯಾಧಿ ಮತ್ತು ಘಾಯಗಳಿಗೆ ಸಾಂಬಕ್ಕನ್ನೆ ಉಪಯೋಗಿಸಿರಿ

ನಿಮಗೆ ಕಠಿಣವಾದ ತುರಿಕೆ ಯಾ ಹುಣ್ಣುಗಳಿದ್ದರೆ ಅಥವಾ ತುರಿಕಜ್ಜಿ, ಹುಣ್ಣು ಅಥವಾ ವ್ರಣಗಳನ್ನು ಸಾಂಬಕ್ ಮುಲಾಮು ತೀವ್ರವಾಗಿ ಗುಣಪಡಿಸುತ್ತದೆ. ಅಮೂಲ್ಯವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ಸಾಂಬಕ್ಕು ಚರ್ಮದೊಳಗಿರುವ ಗ್ರಂಥಿಗಳನ್ನು ಹೊಕ್ಕು, ನೋವನ್ನು ಹೋಗಲಾಡಿಸಿ, ಕೆಂಪಾಗಿ ಬಾತುಕೊಂಡುದನ್ನು ಕ್ಷಿಪ್ರದಲ್ಲಿಯೇ ಕಡಿಮೆಮಾಡಿ, ಒಸರುತ್ತಿರುವ ನೀರು ಯಾ ರಕ್ತವನ್ನು ನಿಲ್ಲಿಸಿ ಅದನ್ನು ಒಣಗಿಸುತ್ತದೆ. ಏನೊಂದೂ ಕಲೆ ಅಥವಾ ಘಾಯ ಇಲ್ಲದಂತೆ ಗುಣಪಡಿಸುತ್ತದೆ. ಎಲ್ಲಾ ತರದ ಚರ್ಮರೋಗಗಳಿಗೂ, ಹುಣ್ಣುಗಳಿಗೂ ಮತ್ತು ಪೆಟ್ಟು ಜೊಡೆತದಿಂದುಂಟಾದ ದೊಡ್ಡ ಘಾಯಗಳಿಗೂ ವಿಶೇಷ ಗುಣಕಾರಿಯಾಗಿದೆ. ಎಲ್ಲಾ ಔಷಧಿವ್ಯಾಪಾರಸ್ಥರಲ್ಲಿ ಸಾಂಬಕ್ಕು ರೂ. 2-4 0 ಮತ್ತು ರೂ 1ರಂತೆ ಮಾರಲ್ಪಡುತ್ತದೆ.

ಏಜಂಟರು —ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್ ಟೌನ್, ಮದ್ರಾಸು.

ಸಾಂಬಕ್ ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

ಸಾಂಬಕ್

Zam-Buk

# ೯ನೇ ಕ. ಪ್ರಾ. ರಾಜಕೀಯ ಪರಿಷತ್ತು

ರಾಣೇಬೆನ್ನೂರೆ
೧೬—೧೭ನೇ ಜನವರಿ ೧೯೩೮

೧೯೩೫ರಲ್ಲಿ ಮಂಗಳೂರಿನಲ್ಲಾದ ಮೇಲೆ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತು ಸೇರುವದು ಇದೇ ಮೊದಲನೆಯ ಸಾರಿ. ಸ್ಥಳೀಯ ಹಾಗು ಪ್ರಾಂತಿಕ ಅಸೆಂಬ್ಲಿ ಚುನಾವಣೆಗಳೇ ಮುಂತಾದ ಒಂದಲ್ಲೊಂದು ಕಾರಣದಿಂದ ಪರಿಷತ್ತು ಇದರ ನಡುವೆ ಸೇರಲಾಗಲಿಲ್ಲ. ಈಗ ರಾಣೆಬೆನ್ನೂರಿನಲ್ಲಿ ಜನವರಿ ೧೬—೧೭ನೇ ತಾರೀಖುಗಳಲ್ಲಿ ರಾಜಕೀಯ ಪರಿಷತ್ತಿನ ೯ನೇ ಅಧಿವೇಶನವು ನಡೆಯುವುದು ಈ ಪರಿಷತ್ತು ಎಲ್ಲ ದೃಷ್ಟಿಯಿಂದಲೂ ಮಹತ್ವದ್ದಾಗುವುದು.

ಕಳೆದ ೨-೩ ವರ್ಷಗಳ ಅವಧಿಯೊಳಗೆ ದೇಶದಲ್ಲಿ ಅನೇಕ ಬದಲಾವಣೆಗಳಾಗಿವೆ ಸ್ವಾತಂತ್ರ್ಯಪ್ರಾಪ್ತಿಗಾಗಿ ಹೋರಾಡುತ್ತಾ ಸೆರೆಮನೆಗಳಿಗೆ ತುತ್ತಾಗಿ ಬೇಕಾಯಿದೇಶೀರ ಸಂಸ್ಥೆಯೆನಿಸಿಕೊಂಡಿದ್ದ ಕಾಂಗ್ರೆಸ್ಸು ಇಂದು ದೇಶದ ಏಳು ಪ್ರಾಂತ್ಯಗಳಲ್ಲಿ ಅಧಿಕಾರ ವಹಿಸಿ ರಾಜ್ಯದ ಕಾರಭಾರವನ್ನು ಸ್ವಲ್ಪಮಟ್ಟಿಗಾದರೂ ಹೊತ್ತಿರುವದು

ಪ್ರಾಂತ್ಯಗಳಲ್ಲಿ ಅಧಿಕಾರಾರೂಢರಾಗಿರುವ ಕಾಂಗ್ರೆಸ್ ಮಂತ್ರಿಮಂಡಲಗಳ ಹಾಗೂ ಕಾಂಗ್ರೆಸ್ಸಿನ ಎದುರಿಗೆ ಕೆಲವು ಪ್ರಶ್ನೆಗಳಿವೆ ಮೊದಲನೆಯದು ಇಡೀ ಹಿಂದುಸ್ಥಾನವೇ ತಿರಸ್ಕರಿಸಿದ್ದರೂ ಒತ್ತಾಯದಿಂದ ಹೇರಿರುವ ಹೊಸ ಸುಧಾರಣೆಯನ್ನು, ಒಳಗಿನಿಂದ ಹೇಗೆ ಬಗ್ಗು ಬಡಿಯಬೇಕು? ಇನ್ನೊಂದು ಪ್ರಶ್ನೆಯೆಂದರೆ ದೇಶದ ಬಡತನವನ್ನು ಯಾವ ರೀತಿಯಿಂದ ನೀಗ ಹೇಗೆ ಅವರ ಏಳಿಗೆಗೆ ಪ್ರಯತ್ನಿಸಬೇಕೆಂಬದು ಕೊನೆಯದಾಗಿ ಈಗ ಬರಲಿರುವ ಸಂಯುಕ್ತ ರಾಜ್ಯಘಟನೆಯ ಸಂಬಂಧದ ಧೋರಣ ಇದನ್ನು ಕಾಂಗ್ರೆಸ್ಸು ಮೊದಲಿನಿಂದಲೂ ದೇಶಘಾತುಕವೆಂದು ಅಲ್ಲಗಳೆಯುತ್ತಾ ಬಿದ್ದು ಮೊನ್ನೆ ಕಲ್ಕತ್ತಾದಲ್ಲಿ ವರ್ಕಿಂಗ ಕಮಿಟಿ ಕೂಡಿದಾಗಲೂ, ಬರಲಿರುವ ಈ ರಾಜ್ಯಘಟನೆಯನ್ನು ನಿಷೇಧಿಸಿ ಇದು ಬಾರದಂತೆ ಮಾಡಲು ಪ್ರಯತ್ನ ನಡೆಸಬೇಕೆಂದು ನಿರ್ಣಯ ಮಾಡಿತು.

ಈ ಮೂರು ಪ್ರಶ್ನೆಗಳೂ ಬಹಳ ಮಹತ್ವದ್ದು ಇವು ಫೆಬ್ರವರಿ ೩ರಲ್ಲಿ ಕೂಡಲಿರ ಕಾಂಗ್ರೆಸ ಅಧಿವೇಶನದ ಹೆಚ್ಚು ಲಕ್ಷ್ಯವನ್ನು ಸೆಳೆದುಕೊಳ್ಳುವದೆಂಬುದರಲ್ಲಿ ಸಂದೇಹವಿಲ್ಲ ಈ ಸಮಯದಲ್ಲಿ ನಮ್ಮ ಪ್ರಾಂತದವರೂ ತಮ್ಮ ಸಲಹೆ ಅಭಿಪ್ರಾಯಗಳನ್ನು ಕೊಡಬೇಕಾಗುವದು ಇಡೀ ಪ್ರಾಂತದಲ್ಲಿನ ಕೆಲಸಗಾರರು ಒಟ್ಟುಗೂಡಿ ಈ ಪ್ರಶ್ನೆಗಳ ಸಂಬಂಧ ಪೂರ್ಣ ಚರ್ಚೆ ಮಾಡಿ ಪ್ರಾಂತಾಭಿಪ್ರಾಯವನ್ನು ಕೇಂದ್ರೀಕರಿಸಿ ಹಿರಿಯ ಕಾಂಗ್ರೆಸ್ಸಿನಲ್ಲಿಡಲು ಈಗ ನೆರೆಯಲಿರುವ ಪ್ರಾಂತಿಕ ರಾಜಕೀಯ ಪರಿಷತ್ತು ಬಹಳ ಸಹಕಾರಿಯಾಗುವದ

ಇಷ್ಟು ಒಟ್ಟು ಭಾರತದ ಪ್ರಶ್ನೆಯಾಯಿತು ಪ್ರಾಂತದಲ್ಲಿಯಾದರೂ ಇಂತಹ ಅನೇಕ ಪ್ರಶ್ನೆಗಳಿವೆ ಪ್ರಾಂತದಲ್ಲಿನ ಕಾಂಗ್ರೆಸ ಮಂತ್ರಿಮಂಡಲಗಳು ರೈತರ ಕಷ್ಟ ನಿವಾರಣೆಗೋಸುಗ ಅನೇಕ ವಿಧಗಳಿಂದ ಪ್ರಯತ್ನಪಡುತ್ತಿರುವುದು ಎಲ್ಲರಿಗೂ ಗೊತ್ತಾದ ಸಂಗತಿ ಪ್ರಾಂತದವರು ಕಾರ್ಯಕ್ರಮಗಳಲ್ಲಿ ಸಹಕರಿಸಿ ಬೆಂಬಲ ಕೊಡುವುದು ಅಗತ್ಯ ಋಣ ವಿಮೋಚಕ ಕಾನೂನು, ಸಾಲಗಾರರ ಮಸೂದೆ, ಮದ್ಯಪಾನ ನಿರೋಧ ಮೊದಲಾದ ಯೋಜನೆ ಕಾನೂನುಗಳಿಗೆ ಪ್ರಾಂತದವರು ತಮ್ಮ ಸೂಚನೆ ಸಲಹೆಗಳನ್ನು ಕೊಟ್ಟು ಅವರು ಒಳಗಿಂದ ಮಾಡುತ್ತಿರುವ ಪ್ರಜಾ ಹಿತಕಾರ್ಯಗಳಲ್ಲಿ ಹೊರಗಿನಿಂದ ಭಾಗವಹಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ಕಾಂಗ್ರೆಸ ಮಂತ್ರಿಮಂಡಲದವರು ಅವರ ಮರ್ಯಾದಿತ ಅಧಿಕಾರದಿಂದ ಇಲ್ಲಿಯವರೆಗೆ ಮಾಡಿರುವ ಕಾರ್ಯಗಳು ಚುನಾವಣೆ ಪತ್ರಿಕೆಯ ಪ್ರಕಾರ ಮಾಡಬೇಕಾಗಿರುವ ಮತ್ತು ಮಾಡಬಹುದಾದ ಯೋಜನೆಗಳು ಇವುಗಳೆಲ್ಲದರ ವಿವೇಚನೆಯು ರಾಣೆಬೆನ್ನೂರಿನಲ್ಲಿ ಕೂಡುವ ಪರಿಷತ್ತಿನಲ್ಲಾಗಿ ನಮ್ಮ ಮಂತ್ರಿಮಂಡಲಗಳಿಗೆ ರಚನಾತ್ಮಕ ಯುಕ್ತ ಸಲಹೆಗಳನ್ನು ಕೊಡಲು ಅವಕಾಶವಾಗುವದು. ಒಟ್ಟಿನಲ್ಲಿ ಹೇಳಬೇಕೆಂದರೆ ಈ ಪರಿಷತ್ತಿನಲ್ಲಿ ಪ್ರಾಂತದ ಇಡೀ ವರುಷದ ರಾಜಕೀಯ ಒಳನೋಟ ರೂಪುಗೊಳ್ಳುವದು

ಪರಿಷತ್ತಿನ ಸ್ವಾಗತ ಸಮಿತಿಯವರು ಪ್ರತಿನಿಧಿಗಳ, ಪ್ರೇಕ್ಷಕರ ಊಟ ವಸತಿಗಳಿಗೆ ಯೋಗ್ಯ ವ್ಯವಸ್ಥೆ ಮಾಡುತ್ತಿರುವರು ಬರುವವರಿಗೆ ಯಾವ ವಿಧದ ತೊಂದರೆಯೂ ಆಗದಂತೆ ಎಲ್ಲ ಸಿದ್ಧತೆಗಳೂ ಜರಗುತ್ತಲಿರುವವು ಊಟ ವಸತಿ ಮುಂತಾದವುಗಳ ಬಗ್ಗೆ ಆಯಾ ಸಮಿತಿಗಳಿಂದ ಪ್ರಕಟನೆಗಳೂ ಹೊರಡುವವಿವೆ ರಾಣೆಬೆನ್ನೂರಿನ ಹವೆಯಾದರೂ ಈ ಕಾಲದಲ್ಲಿ ಬಹಳ ಉತ್ತಮವಾಗಿರುವದು

ಪರಿಷತ್ತಿನ ವೇಳೆಯಲ್ಲಿ ಶ್ರೀ ಮಹರಾಲಿಯವರ ಅಧ್ಯಕ್ಷತೆಯಲ್ಲಿ ಮೊದಲನೆ ಕರ್ನಾಟಕ ಪ್ರಾಂತಿಕ ಯುವಕ ಪರಿಷತ್ತು ನೆರೆಯುವದು ಅದೇ ಕಾಲದಲ್ಲಿ ಖಾದೀ ಪ್ರದರ್ಶನವಾದರೂ ಜರಗುತ್ತದೆ. ಇವಲ್ಲದೆ ಪತ್ರಿಕೋದ್ಯಮಿಗಳ ಪರಿಷತ್ತು ಮೊದಲಾದ ಇನ್ನು ಹಲವು ಪರಿಷತ್ತುಗಳು ಸೇರುವ ಸಂಭವವಿದೆ ವಿಸ್ತೃತ ಕಾರ್ಯಕ್ರಮವು ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವದ ದೇಶದ ಅನೇಕ ಮುಖಂಡರುಗಳು ಪರಿಷತ್ತಿನ ಆಮಂತ್ರಣವನ್ನು ಸ್ವೀಕರಿಸಿ ಬರುವ ಸಂಭವವಿದೆ ಇಂತಹ ಸುಪ್ರಸಂಗವನ್ನು ಕಳೆದುಕೊಳ್ಳದೆ ಧಾರವಾಡ ಜಿಲ್ಲಾ ಜನರು ಸ್ವಾಗತ ಸಮಿತಿ ಸದಸ್ಯರಾಗಿಯೂ ಉಳಿದ ಜಿಲ್ಲೆಗಳವರು ಪ್ರತಿನಿಧಿಗಳಾಗಿಯೂ ಹೆಚ್ಚಾಗಿ ಬಂದು ಪರಿಷತ್ತಿನಲ್ಲಿ ಭಾಗವಹಿಸಬೇಕು ದೇಶದ ಉದಾರಿಗಳೇ ಪ್ರಾಂತದ ಎಲ್ಲಾ ಭಾಗಗಳ ಕಾರ್ಯಕರ್ತರೂ ಬರುವ ಈ ವೇಳೆಯನ್ನು ಬಿಡದೆ ಉಳಿದವರಾದರೂ ಪ್ರೇಕ್ಷಕರಾಗಿ ಪರಿಷತ್ತಿಗೆ ಬಂದು ತಮ್ಮ ಸಹಾನುಭೂತಿ ಬೆಂಬಲಗಳನ್ನು ತೋರಿಸಬೇಕೆಂದು ಬಿನ್ನಹ

ಎಸ್ ಬಿ ಹಿರೇಮಠ (ಅಧ್ಯಕ್ಷರು)
ಕೆ ಎಫ್ ಪಾಟೀಲ ಆರ್ ವಿ ಕರಗುದರಿ
ಕಾರ್ಯದರ್ಶಿಗಳು
ಸ್ವಾಗತ ಸಮಿತಿ ೯ನೇ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತು

## ರೈತರ ಋಣವಿಮೋಚನೆಯ ಕಾನೂನು

(೧೦ನೇ ಪುಟದಿಂದ ಮುಂದುವರಿದುದು)

ಪರದೇಶೀಯ ಬ್ಯಾಂಕುಗಳೂ ದೇಶೀಯ ಬೇಂಕುಗಳ ಸ್ಥಾನಕ್ಕೇ ಬರುವಂತಾಗಿದೆ ವ್ಯಕ್ತಿಗಳಿಗೆ ತೆತ್ತವರಿಗೆ ರಿಯಾಯಿತಿಯು ನಗರಗಳಲ್ಲಿರುವವರಿಗೆ ಮಾತ್ರವಾಗಿದೆ ಬೇಸಾಯಗಾರರಿಗೆ ತೆರಿಗೆ ಕೂಲಿಯನ್ನು ಸಹ ವಿನಾಯಿತಿ ಪಡಿಸಲಾಗಿದೆ ದಿವಾಳಿ ಅರ್ಜಿಯ ಸಾಲಗಾರರಿಗೆ ಈ ಆಕ್ಟಿನ ರಿಯಾಯಿತಿಗಳು ಆತನ ಮೂಲದಿಂದ ಒಂದು ಕಂತು ಪಾವತಿಪಡುವ ತನಕ ಸಲ್ಲತಕ್ಕುವಾಗಿವೆ

ಹೀಗೆ, ಒಂದೆರಡು ಮಹತ್ವ ತಿದ್ದುಪಡಿಗಳಿಂದಾಗಿ ಆಕ್ಷೇಪಗಳಿಗೆ ಸಮಾಧಾನ ಕೊಟ್ಟಂತಾಗಿದೆ ಇದರಿಂದ ರಿಯಾಯಿತಿಯೇನೂ ಕಡಮೆ ಮಾಡಿದಂತಾಗಿಲ್ಲ ಕಮಿಟಿಯು ಹೀಗೆ ಮಾಡಿಯೂ ತಿದ್ದುಪಡಿಗಳನು ಸೂಚಿಸಿದುದರಿಂದ ರಾಜಕೀಯವಾದ ಹಾಗೂ ಸಾಂಪತ್ತಿಕ ಫಲಪ್ರಯೋಜನಗಳು ಕಡಮೆಯಾಗದೆ ಹೆಚ್ಚಿವೆ ಇನ್ನು ಈ ಮಸೂದೆಯು ಕೂಡಲೆ ಅಂಗೀಕಾರವಾಗಲು ಆತಂಕವಿರಲಾರದು

ಸರಕಾರವೂ ಸಾಲಗಾರರಿಗೆ ಸಹಾಯ ಮಾಡುವಂತೆ ಸೂಚನೆಗಳನ್ನು ಬಜೇಟು ಮುಂದೆ ಬರುವಂತಾದರೆ, ಇನ್ನಷ್ಟು ಉತ್ತಮವೆಂದು ಸೂಚಿಸಬೇಕಾಗಿದೆ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳಿಗೆ ಗುರುಳಾಗಿ ಮೋಸಹೋಗದೇಯಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗಿಗಳಾಗಿದ್ದರೂ, ಗೋನೋಕಿಲ್ಲರ್ ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯದಾ ಯಾವದೇ ಸ್ಥಿತಿಯಲ್ಲಿರಲಿ) ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇನ್ನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ,

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

*Sole Manufacturer* Dr D. N JASANI, Vithalbhai Patal Road, BOMBAY 4.

DIAMONDS! DIAMONDS!

BEST BRILLIANCY

**K. R. K. SHET,**

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

# ವಜ್ರಗಳು!

ಎಮ್‌ಸ್ಟ್ಯಾಡಮ್ಮಿನಿಂದ ಬರುವ ವಜ್ರಗಳು ಚಾರ ಧಾರಣೆಗಿಂತ ಐದು ಪರ್ಸೇಂಟಿಗೆ ಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರು

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ.

## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ. | ರೂ. ಆ. |
| ಬತ್ತ ಹೊಸ ಗುಡ್ಡ ಮು. | 1 —11 | 1 —11 |
| ರಾಶಿ ಅಕ್ಕಿ ... | 3— 8 | 4— 0 |
| ಸುಗ್ಗಿ ... | 3—14 | 4— 0 |
| ಗುಡ್ಡ ... | 4— 2 | 4— 2 |
| ಊರ ಅವಲ್ ಬೆಳ್ತಿಗೆ . | 4— 7 | 4— 7 |
| ರಂಗೂನು ಬೆ ಗೋ ಗೋಣಿ .. | 6 — 8 | 7— 4 |
| ಎಲ್ಲೂರು ಬೆ. ಮು. ಗೋಣಿ .. | 3—14 | 4— 0 |
| ಗೋಧಿ ಗೋಣಿ ಗೋಣಿ .. | 12 — 8 | 15— 8 |
| ತೊಗರಿ ಗೋಣಿ ಗೋಣಿ ... | 11— 8 | 18— 8 |
| ಹುರುಳಿ ಗೋಣಿ ಗೋಣಿ .. | 5—10 | 5 —10 |
| ಕಡಲೆ ಗೋಣಿ ಗೋಣಿ ... | 9 — 8 | 10 — 8 |
| ತೊಗರಿಬೇಳೆ ಗೋಣಿಗೋಣಿ.. | 11— 8 | 18— 0 |
| ಉದ್ದು ಗೋಣಿ ಗೋಣಿ . | 9— 0 | 9 — 8 |
| ಹೆಸರು ಗೋಣಿ ಗೋಣಿ .. | 9—12 | 10— 8 |
| ಊರುಬೆಲ್ಲ ಖಂಡಿ ಗೋಣಿ ... | 25— 0 | 30— 0 |
| ಉಪ್ಪು ಗೋಣಿ ಗೋಣಿ .. | 4— 8 | 5— 4 |
| ಕೊಬ್ರಿ ಖಂಡಿ ಗೋಣಿ .. | 54 — 0 | 55— 0 |
| ಎಳ್ಳಿಂಡಿ ಖಂಡಿ ಗೋಣಿ . | 25 — | 26 — 0 |
| ತೆಂಗಿನ ಎಣ್ಣೆ ಮಣ ಗೋಣಿ.. | 3 —13 | 3—13 |
| ಎಳ್ಳೆಣ್ಣೆ ಮಣ ಗೋಣಿ . | 6— 0 | 7— 0 |
| ಚಿಮಣಿಎಣ್ಣೆ ಪೆಟ್ಟಿಗೆ ಗೋಣಿ .. | 6— 5 | 7— 5 |
| ಮೋರಿಸ ಸಕ್ಕರೆ ಮ ಗೋಣಿ . | 2— 13 | 2 —14 |
| ಮೆಣಸು . | 4— 8 | 6— 0 |
| ಸಾಸಿವೆ ಮುಡಿ ಗೋಣಿ | 5 — 8 | 6— 8 |
| ಕಾಳುಮೆಣಸು ಜ ಪೇಗೆ | 17 — 0 | 17— 8 |
| ಮೆಂತ್ಯೆಬೀಜ ಮಣಗೋಣಿ | 80— 0 | 85— 0 |
| ಗೇರುಬೀಜ ಮು ಗೋಣಿ | 1—12 | ?— 8 |
| ಕಬ್ಬಿಣ ಖಂಡಿ ಗೋಣಿ | 50— 0 | 55— 0 |
| ತಾಂಮ್ರತಗಡು ಮ ಗೋಣಿ | 14— 12 | 15— 0 |
| ತಾಂಮ್ರಪಾತ್ರಗಳು ಮ ಗೋಣಿ | 17— 0 | 15— 0 |
| ಚೀನಿಬೆಳ್ಳಿ ಸೇರು ಗೋಣಿ | 13— 8 | 14— 0 |
| ಹಿತ್ತಾಳೆ ತಗಡು ಮ ಗೋಣಿ | 12— 0 | 12— 0 |
| ಬಿದಿರು ಗೋಣಿ | 22— 4 | 22— 6 |
| ಹುಣಿಸೆ ಹುಳಿ ಖಂಡಿ ಗೋಣಿ | 40— 0 | 45— 0 |
| ನೇಟಿವ್ ಕಾಫಿ ಖಂಡಿ ಗೋಣಿ | 140— 0 | 146— 0 |
| ಪ್ಲಾಂಟೇಶನ್ ಕಾಫಿ ಖಂಡಿ ಗೋಣಿ | 185— 0 | 198 - 0 |
| ಮುಡಿಕ್ಕೇರಿ ಏಲಕ್ಕಿ | 45— 0 | 47 - 8 |

## ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ.

### ಮೆಂಬರರ ಅವಗಾಹನೆ ಬಗ್ಗೆ

ಈ ಮೇಲ್ಕೋರುವ ಮಂಡಳಿಯ ಕ್ರಮ ನಿಬಂಧನೆಯ ೧೧ನೇ ಕಲಮಿಗನುಸಾರವಾಗಿ ಸನ್ ೧೯೩೮ನೇ ಇಸವಿಯ ಕಾರ್ಯನಿರ್ವಾಹಕ ಸಭೆಗೆ ೧೫ ಮಂದಿ ಮೆಂಬರರನ್ನು ಬರುವ ಮಹಾಸಭೆ ಜರಗುವುದರೊಳಗೆ ಆರಿಸಲ್ಪಡಲಿಕ್ಕಿರುವುದರಿಂದ ಸದ್ರಿ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಲಿಚ್ಛಿಸುವ-ಸನ್ ೧೯೩೭ನೇ ಇಸವಿಯ ವಾರ್ಷಿಕ ವಂತಿಗೆಯನ್ನು ಸಂಪೂರ್ಣ ಕೆತ್ತ-ಮಂಡಳಿಯ ಮೆಂಬರರು ತಾ ೩೧-೧-೧೯೩೮ರೊಳಗೆ ಅವರ ಉಮೇದ್ವಾರಿಕೆ ಪತ್ರಗಳನ್ನು ನಮಗೆ ಕಳುಹಿಸಿಕೊಡತಕ್ಕದ್ದು ಉಮೇದ್ವಾರಿಕೆ ಪತ್ರ ಸಿಗಬಿದ್ದವರು ಮಂಡಳಿಯ ಆಫೀಸಿನಿಂದ ಪಡೆಯಬಹುದು

೧೯೩೭ನೇ ಇಸವಿಯ ಕಾರ್ಯನಿರ್ವಾಹಕ ಸಭೆಯ ಅನುಮತಿಯಿಂದ,

ಯಾಸ್ ಕೆ ಮೈಂದನ್,
ಆರ್ ಕೆ ಕುಂದರ್,
ಆರ್ ಎ ಅಮೀನ್,
ಮಾನಾರ್ಥ ಜತೆಕಾರ್ಯದರ್ಶಿಯರು

## ರೇಣು ಸ್ಪರ್ಶವಾಗದೆ ಬೀಜೋತ್ಪತ್ತಿ

ಗಿಡಮರಗಳಲ್ಲಿ ಬೀಜೋತ್ಪತ್ತಿಯಾಗಬೇಕಾದರೆ ಸ್ವಕೀಯ ಅಥವಾ ಪರಕೀಯ ರೇಣು ಸ್ಪರ್ಶವಾಗಬೇಕು. ಅಂದರೆ ಪರಾಗ ಕೋಶದಲ್ಲಿರುವ ಪರಾಗವು ಯಾವದಾದರೊಂದು ಉಪಾಯದಿಂದ ಶಲಾಗೆಯ ಮಾರ್ಗವಾಗಿ ಹೂವಿನ ಅಂಡಾಶಯವನ್ನು ಸೇರಬೇಕು ಆಗ ಮಾತ್ರ ಅಂಡಾಶಯದೊಳಗಿನ ಬೀಜಗಳು ಬೆಳೆದು ಮರ ಗಿಡಗಳು ಫಲ ಕೊಡುತ್ತವೆ ಇದು ಪ್ರಾಕೃತಿಕ ನಿಯಮ ಆದರೆ ವೈಜ್ಞಾನಿಕರು ಬೆಳವಣಿಗೆಗೆ ಸಹಾಯಕವಾದ ಕೆಲವು ಬಗೆಯ ದ್ರಾವಕಗಳಿಂದ ತೆಳ್ಳಗೆ ಮಾಡಿದ ಅಂಶವನ್ನು ಹೂಗಳ ಮೇಲೆ ಚಿಮುಕಿಸಿ, ರೇಣು ಸ್ಪರ್ಶವಾಗದೇನೇ ಹಣ್ಣು ಕಾಯಿಗಳನ್ನು ಪಡೆಯುವ ಪ್ರಯತ್ನದಲ್ಲಿರುವರು ಕೆಲಕೆಲವರಿಗೆ ತಮ್ಮ ಪ್ರಯತ್ನಗಳಲ್ಲಿ ಸಫಲತೆಯುಂಟಾಗಿದೆ ಈ ಪ್ರಯೋಗವು ಪೂರ್ಣ ಸಫಲವಾದಾಗ ಮರಗಿಡಗಳ ಬೀಜಗಳು ರೇಣು ಸ್ಪರ್ಶವಾಗದೆ ಕೊಳೆತು ಬಿದ್ದು ಹೋಗಬೇಕಾಗಿಲ್ಲ ವೈಜ್ಞಾನಿಕ ಉಪಾಯದಿಂದ ಅವು ಬೆಳೆಯುವಂತೆ ಮಾಡಬಹುದು ಆಗ ಸಸ್ಯೋತ್ಪತ್ತಿಯು ಈಗಿನಕ್ಕಿಂತ ನೂರಾರು ಪಾಲು ಹೆಚ್ಚುವುದು ಆದರೆ ಆದರಿಂದ ಪ್ರಪಂಚದಲ್ಲಿ ಸುಭಿಕ್ಷವಾದೀತೆ ಎಂಬ ಪ್ರಶ್ನೆ ಇದೆ ಅದನ್ನು ಉತ್ತರಿಸುವದು ಈಗ ಸಾಧ್ಯವಲ್ಲ

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಪುಷ್ಯ ಶು ೭ ಶನಿವಾರದಿಂದ,
ಪುಷ್ಯ ಶು ೧೩ ಶುಕ್ರವಾರದ ವರೇಗಿನ ಪಂಚಾಂಗ (೧೯೩೮ನೇಯ ಜನವರಿ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ವಿಶೇಷ |
|---|---|---|---|---|---|---|---|
| 8 | ಶನಿ | ೭ | ೪೩ | ಉ. ಭಾ. | ೬೨ | ೨೪ | ಅ 13 ಮಕರ ಸಂಕ್ರಮಣ |
| 9 | ರವಿ | ೮ | ೫೧ | ರೇವತಿ | ೬೦ | ೨೫ | |
| 10 | ಸೋಮ | ೯ | ೪೬ | ಅಶ್ವಿನಿ | ೩೯ | ೨೬ | |
| 11 | ಕುಜ | ೧೦ | ೪೧ | ಭರಣಿ | ೩೬ | ೨೭ | |
| 12 | ಬುಧ | ೧೧ | ೩೬ | ಕೃತ್ತಿಕ | ೩೨ | ೨೮ | |
| 13 | ಗುರು | ೧೨ | ೩೦ | ರೋಹಿಣಿ | ೨೮ | ೨೯ | |
| 14 | ಶುಕ್ರ | ೧೩ | ೨೪ | ಮೃಗಶಿರಾ | ೨೪ | ೧ | |

## ಗರ್ಭಿನೋಲ್ ಅಥವಾ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ, ಶ್ವೇತಪ್ರದರ, ರಕ್ತಪ್ರದರ, ಗರ್ಭಸ್ರಾವ, ಗರ್ಭಾಶಯ ವ್ರಣ, ಮೂತ್ರದ್ವಾರ ಉರಿ, ನರಗಳ ಶೈಥಿಲ್ಯ, ಪ್ರಸವ ನಂತರ ಉಂಟಾಗುವ ಕ್ಷಯ ಚಿಹ್ನೆ, ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು, ತಲೆನೋವು, ತಲೆ ತಿರುಗುವಿಕೆ, ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ಮಿದುಳಿನ ವಿಕಾರಗಳು ಅಶಕ್ತತೆ, ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು.

**ಹೆಚ್ಚೇನು?** ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

## "ವಿಜಯ ಗರ್ಭಿನೋಲ"

ನ್ನ ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು.

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರೆಯಾಗಿ ಗುಣಹೊಂದಿದ್ದಾರೆ ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ'

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2—8—0.
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು:—

**ವಿಜಯ ಫಾರ್ಮೆಸಿ, ಕೊಚ್ಚಿನ್.**

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

## THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

**FIXED DEPOSITS**

For 2 Years 6% 1 Year 5% For 6 months 4% 3 months 3½%

Auction chit Funds ranging from Rs 100/ to Rs 5000/ run regularly on systematic lines Unique Banking facilities to Businessmen and interested Public

*Apply for particulars*— **K R. GURU**, *Managing Director*

## ಪೈಂಟರ್ಸ್

Whenever you require the service of

*Please call on or write to:—*

**Simon & Co.,**
*Painters.*

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
**ಸ್ಟ್ಯಾನ್ ಬೋರ್ಡ್** ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಚಿಟ್ಟಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

PAINTERS

# ಬಾಬುರಾಜೇಂದ್ರ ಪ್ರಸಾದರು ಕಾರಣೀಕ ಪುರುಷರಾದರು!!

## ಬಿಹಾರದಲ್ಲಿ ನಡೆದ ಅದ್ಭುತ ಪವಾಡ!

### ಹತ್ತಾರರ ಖರ್ಚಿನಿಂದ—ಲಕ್ಷಗಟ್ಟಲೆ ಉಳಿಯಿತು.

ಶ್ರೀ ಬಾಬುರಾಜೇಂದ್ರ ಪ್ರಸಾದರು.

ಬಿಹಾರವು ಅನೇಕ ವರ್ಷಗಳಿಂದ ನೆರೆಯ ಹಾವಳಿಗೆ ಗುರಿಯಾಗಿ ಜನರು ಬಹಳ ಕಷ್ಟ ಪಡುತ್ತಿದ್ದರು. ಜನ ಜಾನುವಾರುಗಳ ಬಲಿಯಾಗುವದಕ್ಕೆ ಲೆಕ್ಕವಿರಲಿಲ್ಲ. ಸರಕಾರವು ಜನರ ಈ ಸಂಕಷ್ಟವನ್ನು ನೋಡಿಯೂ ನೋಡದಂತೆ ಉದಾಸೀನವಾಗಿರುತಿತ್ತು.

ಒಂದು ಪ್ರದೇಶದ ಜನರ ಕಷ್ಟವನ್ನಾದರೂ ಕಡಿಮೆ ಮಾಡೋಣ ಎಂದುಕೊಂಡು ಅಲ್ಲಿಯ ಜಿಲ್ಲಾ ಬೋರ್ಡು ಒಂದು ಕಟ್ಟವನ್ನು ಕಟ್ಟಲಿಕ್ಕೂ ಚಿಕ್ಕದೊಂದು ಕಾಲುವೆಯನ್ನು ತೋಡಲಿಕ್ಕೂ ಸ್ವಲ್ಪ ಹಣ ಮಂಜೂರು ಮಾಡಿತು. ಆದರೆ ಬೋರ್ಡಿನ ಕಾರ್ಯವು ಸರಕಾರದ ಮನಸ್ಸಿಗೆ ಪಥ್ಯವಾಗಲಿಲ್ಲ. ಸರಕಾರವು ಜಿಲ್ಲಾ ಬೋರ್ಡಿಗೆ ಆ ಕಾರ್ಯವನ್ನು ಮಾಡಲಿಕ್ಕೆ ಅನುಮತಿ ಕೊಡಲಿಲ್ಲ. ಆಲೋಚನೆಯಾಗಿಯೇ ಉಳಿಯಿತು.

ಮುಂದಿನ ವರ್ಷ ನೆರೆ ಬಂದಿತು. ಅದು ಹಿಂದಿನ ವರ್ಷಕ್ಕಿಂತಲೂ ದೊಡ್ಡದಾಗಿತ್ತು. ಜನರು ಪ್ರಳಯವಾಯಿತೋ ಎಂದು ಭಯಪಟ್ಟರು. ಎಂದಿಗಿಂತ ಹೆಚ್ಚಿನ ನಷ್ಟವಾಯಿತು. ನೆರೆನೀರು ಲಕ್ಷಾಂತರ ರೂಪಾಯಿಗಳ ಬದುಕು ಬಾಳನ್ನು ತೊಳೆದುಕೊಂಡು ಹೋಯಿತು. ಆದರೂ ಸರಕಾರದ ಕಣ್ಣು ತೆರೆಯಲಿಲ್ಲ; ಜನರ ಗೋಳು ಅವರ ಕಿವಿಮುಟ್ಟಲಿಲ್ಲ!

ಸರಕಾರದ ಹೃದಯವು ಪಾಷಾಣವಂತಾಗಿರುವದನ್ನು ನೋಡಿ ಜನರು ರಾಜೇಂದ್ರ ಪ್ರಸಾದರ ಕಡೆಗೆ ಮೊರೆ ಮಾಡಿದರು. ಜನರ ದೀನಾವಸ್ಥೆಯನ್ನು ನೋಡಿ ರಾಜೇಂದ್ರ ಬಾಬುಗಳ ಕಣ್ಣುಗಳಿಂದ ದುಃಖಾಶ್ರುಗಳು ಧಾರೆಕಟ್ಟಿ ಸುರಿದುವು. ಅವರು ಬಿಹಾರ ಕೇಂದ್ರದ ಸಹಾಯಸಮಿತಿಯಿಂದ ಸ್ವಲ್ಪ ಹಣ ಖರ್ಚು ಮಾಡಿ ಕೆಲವು ಕಟ್ಟಗಳನ್ನು ಕಟ್ಟಿ, ಕಾಲುವೆಗಳನ್ನು ತೋಡಿ ನೆರೆಯ ಬಾಧೆ ಕಡಿಮೆ ಮಾಡಬೇಕೆಂದು ಆಲೋಚಿಸಿದರು.

ಅಷ್ಟರಲ್ಲಿ ಹೊಸ ರಾಜಕೀಯ ಸುಧಾರಣೆಗಳು ದೊರೆತು ಬಿಹಾರದಲ್ಲಿ ತಾತ್ಕಾಲಿಕ ಮಂತ್ರಿಮಂಡಲದ ರಚನೆಯಾಗಿತ್ತು. ತಾತ್ಕಾಲಿಕ ಮುಖ್ಯಮಂತ್ರಿ ಯೂನಸರು ಕರುಣಾಳುಗಳು. ಅವರು ರಾಜೇಂದ್ರ ಬಾಬುಗಳು ಕೈಕೊಂಡ ಕಾರ್ಯದಲ್ಲಿ ಸಹಾನುಭೂತಿ ತೋರಿಸಿದರು. ಒಂದು ಕಡೆ ಅವರು ಸ್ವತಹ ಹೋಗಿ ಅಲ್ಲಿ ನಡೆಯುವ ಕೆಲಸಕ್ಕೆ ಕೈಕೊಟ್ಟರು.

ಆ ಮೇಲೆ ಕಾಂಗ್ರೆಸು ಮಂತ್ರಿಮಂಡಲವು ಅಧಿಕಾರಕ್ಕೆ ಬಂದಿತು. ಕಟ್ಟೆ ಕಟ್ಟಿ, ಕಾಲುವೆ ತೋಡುವ ಕಾರ್ಯಕ್ಕೆ ಸರಕಾರದ ಪೂರ್ಣ ಪ್ರೋತ್ಸಾಹ ಇದ್ದಿತು. ಬಿಟ್ಟಿ ಕೆಲಸಮಾಡಿ ಅಥವಾ ಸ್ವಲ್ಪ ಮೌಲ್ಯದ ಹಣಸಹಾಯಕೊಟ್ಟು ಜನರು ಪೂರೈಸುವದಾದರೆ ಆ ಕಾರ್ಯವನ್ನು ಕೇಂದ್ರ ಸಹಾಯ ಸಮಿತಿಯು ಕೊನೆಗಾಣಿಸಿಕೊಡುವದಾಗಿ ರಾಜೇಂದ್ರ ಬಾಬುಗಳು ಮಾತು ಕೊಟ್ಟರು.

ಜನರ ಬೆಂಬಲವು ನಿರೀಕ್ಷಿಸಿದುದಕ್ಕಿಂತ ಹೆಚ್ಚಿಗೆ ದೊರೆಯಿತು. ಕಳೆದ ಮೇ ತಿಂಗಳಲ್ಲಿ ಕೆಲಸ ಪ್ರಾರಂಭವಾಯಿತು. ಜುಲೈ ಮಧ್ಯದೊಳಗಾಗಿ ಕಟ್ಟಗಳ ಕೆಲಸಗಳೆಲ್ಲವೂ ಸಾಮಾನ್ಯವಾಗಿ ಮುಗಿದುದರಿಂದ ನೆರೆಯ ಹಾವಳಿ ಬಹಳ ಮಟ್ಟಿಗೆ ಕಡಿಮೆಯಾಯಿತು. ಆಗೋಸ್ತು ಸೆಪ್ಟೆಂಬರ ತಿಂಗಳುಗಳಲ್ಲಿ ಎಲ್ಲೆಲ್ಲಿ ಅಗತ್ಯವೋ ಅಲ್ಲಲ್ಲಿ ಹಳೆಕಟ್ಟಗಳ ದುರಸ್ತಿಮಾಡಿ ಅವುಗಳನ್ನು ಭದ್ರಮಾಡಿದರು. ಸರಕಾರವು ತಾನಾಗಿ ಕೆಲಸ ಕೈಕೊಂಡಲ್ಲಿ ಒಟ್ಟು ಉಳಿದ ಎಲ್ಲ ಕಡೆಗಳಲ್ಲಿ ನೆರೆಯು ತಾನಾಗಿ ಇಳಿದು ಹೋಗಿ ಈ ಬಾರಿ ಜನರಿಗೆ ಯಾವ ಕಷ್ಟನಷ್ಟಗಳೂ ಆಗಲಿಲ್ಲ.

ಕೇಂದ್ರ ಸಹಾಯ ಸಮಿತಿಯು ಕಟ್ಟಿದ ಮತ್ತು ದುರಸ್ತಿ ಮಾಡಿದ ಕಟ್ಟಗಳ ಉದ್ದವು ಸುಮಾರು 45 ಮೈಲು. ಇವುಗಳ ದ್ವಾರಗಳನ್ನು ಕಟ್ಟಲಿಕ್ಕೆ ಖರ್ಚಾದ ರೂಪಾಯಿ 8972 ಇತರ ಖರ್ಚು 2000 ರೂಪಾಯಿ ಮಾತ್ರ—ಆದರೆ 1,18,800 ಸ್ವಯಂ ಸೇವಕರು ಪ್ರತಿಫಲಾಪೇಕ್ಷೆಯಿಲ್ಲದೆ ಕೆಲಸ ಮಾಡಿದುದರಿಂದ ಮಾತ್ರ ಲಕ್ಷಗಟ್ಟಲೆ ಖರ್ಚಿನ ಈ ಕೆಲಸವನ್ನು ಬರೇ 5000ದಲ್ಲಿ ಮುಗಿಸುವದು ಸಾಧ್ಯವಾಯಿತು

ಜನರ ಸಹಾಯ ಸಹಕಾರಗಳು ದೊರೆತುದರಿಂದ ಬರೇ ಐದು ಸಾವಿರ ರೂಪಾಯಿಗಳ ಖರ್ಚಿನಿಂದ ವರ್ಷವರ್ಷವೂ ನೆರೆಯಿಂದ ಆಗುತ್ತಿದ್ದ ಒಂದೆರಡು ಮಿಲಿಯ ರೂಪಾಯಿಗಳಿಗೆ ಕಡಿಮೆಯಾಗದ ನಷ್ಟವು ನಿಂತಿತು. ಲಕ್ಷಗಟ್ಟಲೆ ಖರ್ಚು ಮಾಡಿ ಸರಕಾರವೇ ಈ ಕಾರ್ಯವನ್ನು ಮಾಡುವದಾಗಿದ್ದರೆ ಹತ್ತಿಪ್ಪತ್ತು ವರ್ಷಗಳಾದರೂ ಬೇಕಾಗುತ್ತಿದ್ದವು. ಆದರೆ ರಾಜೇಂದ್ರ ಬಾಬುಗಳು ಈ ಕೆಲಸವನ್ನು ಬರೇ ಮೂರು ತಿಂಗಳುಗಳಲ್ಲಿ ಮಾಡಿ ಮುಗಿಸಿ ಅಪ್ರತಿಮ ಕಾರುಣಿಕ ಪುರುಷರೆನ್ನಿಸಿಕೊಂಡರು.

ಹಣದಿಂದಾಗದ ಕಾರ್ಯವು ಕೇವಲ ಸಾಹಸ ಮತ್ತು ಇಚ್ಛಾಶಕ್ತಿಯಿಂದ ಸಾಧ್ಯವೆಂದು ತೋರಿಸಲಿಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇರೊಂದು ಬೇಕೆ? ಮನಸ್ಸು ಮಾಡಿದರೆ ಮನುಷ್ಯನಿಗೆ ಎಲ್ಲವೂ ಸಾಧ್ಯವೆಂಬುದನ್ನು ಭಾರತೀಯರು ಇದೊಂದು ಘಟನೆಯಿಂದಾದರೂ ಕಲಿತುಕೊಳ್ಳಲಿ! ನಮಗೆ ಬೇಕಾದ ಪ್ರತಿಯೊಂದನ್ನು ಸಾಧಿಸಿಕೊಳ್ಳಲಿಕ್ಕೆ ನಾವು ಸರಕಾರಕ್ಕೆ ಮೊರೆಯಿಡಬೇಕಾಗಿಲ್ಲ. ನಾವೆಲ್ಲರೂ ಒಂದು ಮನಸ್ಸಿನವರಾಗಿದ್ದರೆ ಎಷ್ಟೋ ಕೆಲಸಗಳನ್ನು ಬಹು ಸುಲಭದಿಂದ ನಾವು ನಾವೇ ಸಾಧಿಸಿಕೊಳ್ಳಬಹುದು.

---

ರೊಮೈನ್ ರೊಲೆಂಡರಿಂದ ಫ್ರೆಂಚ್ ಭಾಷೆಯಲ್ಲಿ ಬರೆಯಲಾದ ಶ್ರೀ ರಾಮಕೃಷ್ಣ, ವಿವೇಕಾನಂದರ ಆತ್ಮಕಥೆಯಿಂದ ಫ್ರಾನ್ಸಿನ ಜನರಲ್ಲಿ ಒಳ್ಳೇ ಪ್ರಭಾವವುಂಟಾಗಿರುತ್ತದೆಂದು ವಾರ್ತೆ ಬಂದಿದೆ.

# ಜಪಾನಿಗೆ ಎಲ್ಲರೂ ಹೆದರುತ್ತಾರೆ!

ಜಪಾನೀಯರು ಯಾವ ತರದ ಸಂಗ್ರಾಮಿಕರು? ಈ ಪ್ರಶ್ನೆಯು ಈಗ ಸರ್ವಜಗತ್ತಿನ ವಿಚಾರಕ್ಕೆ ಒಳಗಾಗಿದೆ. ಕಾರಣ ಅಷ್ಟು ಚಿಕ್ಕದಾದ ಜಪಾನು, ಮಹತ್ವಾಕಾಂಕ್ಷೆಗಳಿಂದ ಕೂಡಿದಾಗ, ಜಗತ್ತಿನ ಪ್ರಬಲ ಜನಾಂಗಗಳ ಪ್ರತಿಕೂಲಿಗಳಿದ್ದರೂ, ಯಾರಿಗೂ ಹೆದರದೆ, ಒಂದಿಷ್ಟು ದುಡುಕದೆ, ಚೀನಾದಲ್ಲಿ ಮುಂದೆ ಸಾಗುತ್ತಿದೆ.

ಚೀನಾದಲ್ಲಿದ್ದ ಉಚ್ಚವರ್ಗದ ಬ್ರಿಟಿಷ್ ರಾಯಭಾರಿಗಳೊಬ್ಬರನ್ನು, ಜಪಾನೀಯರು ವಿಮಾನದಿಂದ ಗುಂಡಿಕ್ಕಿ ಮೃತ್ಯುಕರ ರೀತಿಯಲ್ಲಿ ಗಾಯಗೊಳಿಸಿದರು. ಆದರೆ ಬ್ರಿಟಿಷರು ಬರೇ ಕ್ಷಮಾಪಣೆಯನ್ನು ಮಾತ್ರ ಕೇಳಿದಲ್ಲದೆ ಬೇರೇನು ಮಾಡಲಿಲ್ಲ. ಇದರ ರಹಸ್ಯವೇನು?

ಫ್ರಾನ್ಸು ತನ್ನ ವಸಾಹತಾದ ಇಂಡೋ-ಚೀನಾದ ಮೂಲಕ ಚೀನಾಕ್ಕೆ ಯುದ್ಧ ಶಸ್ತ್ರ ಸಿಡಿಮದ್ದುಗಳನ್ನು ಒದಗಿಸಬಾರದಾಗಿ, ಜಪಾನು ಎಚ್ಚರಿಸಿತು—ತನ್ನ ಇಚ್ಛೆಯು ಪೂರೈಕೆಯಾಗದಿದ್ದರೆ ಇಂಡೋ-ಚೀನಾದ ಮೇಲೆ ವಿಮಾನಗಳ ಮೂಲಕ ದಾಳಿ ನಡೆಯಿಸುವುದೆಂದು ಹೇಳಿಬಿಟ್ಟಿತು. ಕೂಡಲೇ ಫ್ರಾನ್ಸು ಚೀನಕ್ಕೆ ಯುದ್ಧ ಶಸ್ತ್ರ, ಸಿಡಿಮದ್ದನ್ನು ಒದಗಿಸುವುದನ್ನು ನಿಲ್ಲಿಸಿಬಿಟ್ಟಿತು. ಯಾಕೆ?

ಮೊನ್ನೆ ಅಮೇರಿಕದ 'ಪನೆ' ಎಂಬ ಯುದ್ಧ ಜಹಜಿನ ಮೇಲೆ ಜಪಾನಿನಿಂದ ಭಯಂಕರ ತರದ ಅತಿಕ್ರಮ ನಡೆಯಿತು. ಆ ಜಹಜು ಮುಳುಗಿಯೂ ಹೋಯಿತು. ಒಳಗಿದ್ದ ಅನೇಕರು ಜಲಸಮಾಧಿಯನ್ನು ಹೊಂದಿದರು. ಜಪಾನೀಯರಿಂದ ಅಮೇರಿಕವು ಕ್ಷಮಾಪಣೆಯನ್ನು ಕೇಳಿತು. ಜಪಾನಿನಿಂದ ಬಂದ ಕ್ಷಮಾಪಣೆಯು ತಮಗೆ ಅಸಮಾಧಾನಕರವೆಂದು ಕಂಡುಬಂದರೂ ಅಮೇರಿಕವು ಸುಮ್ಮನಿದೆ. ಇದರ ರಹಸ್ಯವೇನು?

**ಜಪಾನಿಗೆ ಎಲ್ಲರೂ ಹೆದರುತ್ತಿರುವರು, ಕಾರಣ?**

**ಮೂರ್ತಿ ಸಣ್ಣದಾದರೂ ಅದರ ಕೀರ್ತಿ ದೊಡ್ಡದಿದೆ.**

ಅಂದು 1905ರಲ್ಲಿ ರಷ್ಯಾದೊಡನೆ ನಡೆದ ಯುದ್ಧದಲ್ಲಿ ಜಪಾನಿನಿಂದ ತೋರಿಸಲಾದ ನೌಕಾಬಲ ಯೋಗ್ಯತೆಯು ಎಲ್ಲರಲ್ಲೂ ಅದರ ಕುರಿತು ಮನ್ನಣೆಯನ್ನೂ, ಹೆದರಿಕೆಯನ್ನೂ ಉಂಟುಮಾಡಿರುವುದು. ಅಂದು ರಷ್ಯಾದ ಜ್ಹಾರನ ಅತ್ಯಂತ ಪ್ರಬಲವಾದ ನೌಕಾಪಡೆಯಲ್ಲಿ ಒಂದೇ ಒಂದು ಜಹಜು, ಸ್ವದೇಶಕ್ಕೆ ಮರಳಿ ತೆರಳಲಿಲ್ಲ. ನಂತರದ ಅನೇಕ ವರ್ಷಗಳಲ್ಲಿ ಜಪಾನಿನ ನೌಕಾಬಲವು ಬಹಳವಾಗಿ ವೃದ್ಧಿಯಾಗಿರುತ್ತದೆ. ಈ ಜಗತ್ತಿನ ಯಾವತ್ತೂ ಮಹಾಪ್ರಭುತ್ವದ ಜನಾಂಗವನ್ನು ಎದುರಾಯಿಸುವ ಮಹಾಶಕ್ತಿಯು ಅದಕ್ಕಿದೆ. ಅದರಲ್ಲೂ ಜಪಾನಿಯ ಸೈನಿಕರು ಮಹಾಸಮರಶೂರರು. ಸ್ವರಾಷ್ಟ್ರದ ಕೀರ್ತಿಗಾಗಿ ಏನನ್ನು ಮಾಡಬಲ್ಲರು, ಎಂತದನ್ನೂ ಸಹಿಸಬಲ್ಲರು. ಜಪಾನೀಯರ ಈ ಸಂಗ್ರಾಮ ಶೂರತೆಯು 2 ಸಾವಿರ ವರ್ಷಗಳಿಂದ ಅನ್ಯ ಜನಾಂಗಗಳ ಕಲೆಯಿಲ್ಲದೆ ರಾಷ್ಟ್ರೀಯ ಭಾವದಲ್ಲೇ ಬೆಳೆಯುತ್ತಾ ಬಂದಿದೆ. ದೇಶಕ್ಕೆ ತಮ್ಮ ಅಸಾಮರ್ಥ್ಯದಿಂದ ಸೋಲು ಒದಗುವ ಸಂಭವ ಒದಗಿದಲ್ಲಿ ಪ್ರಾಣತ್ಯಾಗ ಮಾಡಿಕೊಳ್ಳುವುದೆ ಜಪಾನೀಯರ ನೀತಿ.

ಬ್ರಿಟನ್, ಅಮೇರಿಕಾ, ಇತ್ಯಾದಿ ಮಹಾಪ್ರಭುತ್ವದ ಜನಾಂಗಗಳಂತೆ ಜಪಾನು, ಮುಂದೊತ್ತಿದೆ. ಸುತ್ತಲೂ ಸಮುದ್ರವಿದ್ದು ಅವರು ದ್ವೀಪವಾಸಿಗಳಾಗಿದ್ದುದರಿಂದ, ಇಂಗ್ಲಾಂಡಿನಂತೆ ಅವರ ನೌಕಾ ಯೋಗ್ಯತೆ ಬಹಳವಾಗಿ ಪ್ರಗತಿ ಹೊಂದಿದೆ. ಆಧುನಿಕ ಸಂಗ್ರಾಮದ ಎಲ್ಲಾ ವಿಚಾರಗಳಲ್ಲಿ ಅವರು, ಮಹಾಪ್ರಭುತ್ವ ಜನಾಂಗಗಳೊಡನೆ ಸರಿಸಮಾನವಾದ ಸ್ಥಾನವನ್ನು ಪಡೆದಿರುವರು. ಆದುದರಿಂದಲೇ ಜಗತ್ತಿನ ಮಹಾಪ್ರಭುತ್ವಗಳು, ಜಪಾನಿನಿಂದ ತಮಗೆ ಯಾವತ್ತೂ ಅವಮಾನ, ಕಷ್ಟಗಳು ಒದಗಿದರೂ, ಅವುಗಳನ್ನು ನುಂಗಿಕೊಂಡು, ಬರೆ ಕ್ಷಮಾಪಣೆಯಿಂದ ಸಮಾಧಾನ ಹೊಂದುತ್ತಿರುವರು. ಜಪಾನೀಯರ ಎದುರು ನಿಲ್ಲುವುದು ಒಂದು ಸಾಮಾನ್ಯ ಕೆಲಸವಲ್ಲವೆಂದು ಅವರಿಗೆ ತಿಳಿದಿರುವುದು.

---

ಮ್ಯುನಿಸಿಪಾಲಿಟಿಗಳ ನೌಕರರ ಜೀವವಿಮೆ ಮಾಡುವುದಕ್ಕಾಗಿ ಸರಕಾರವೇ ವಿಮಾಕ್ರಮವನ್ನು ಕೈಕೊಂಡರೆ, ಮುಂದೆ ಎಲ್ಲ ವಿಮೆಯೂ ಸರಕಾರದ್ದೇ ಆಗುವಂತಾಗಲು ಒಂದು ಅನುಭವ ಸಿಗಬಹುದು—ಎಂದು ಶ್ರೀ ಸ್ವಾಮಿ ವೆಂಕಟಾಚಲಂ ಚೆಟ್ಟಿಯಾರರು ಸೇಲಂನಲ್ಲಿ ಸೇರಿದ ಮ್ಯುನಿಸಿಪಲ್ ನೌಕರರ ಪರಿಷತ್ತಿನಲ್ಲಿ ಸೂಚಿಸಿರುವರು.

ಮ್ಯುನಿಸಿಪಾಲಿಟಿಗಳ ನೌಕರರ ಜೀವವನ್ನು ವಿಮೆ ಮಾಡುವ ಮೊದಲು, ಆ ಜೀವವು ಈಗಿನ ಅಲ್ಪ ಸಂಬಳ, ಧಾರಾಳ ಉದ್ಯಮ, ಬೇಕಾದಷ್ಟು ಕಿರಿಕಿರಿಗಳಿಂದ ಎಷ್ಟು ಉಳಿದಿದೆ ಎಂದು ಪರೀಕ್ಷೆಯಾಗಬೇಕಷ್ಟೆ. ಈ ಪರೀಕ್ಷೆ ನಡೆದರೆ, ಜೀವವಿಮೆ ಸಾಧ್ಯವಿಲ್ಲ. ಪರೀಕ್ಷೆಯಿಲ್ಲದೆ ಜೀವವಿಮೆ ಮಾಡಿದರೆ, ಸರಕಾರದ ಖಜಾನೆಯು ಜೀವವಿಮೆ ಮಾಡಿಕೊಳ್ಳುವಷ್ಟು ಗಂಡಾಂತರ ಭಯವಿದ್ದೀತು.


**GREETINGS**

The Directors of the CANARA BANK join in sending you this message of appreciation for the valued patronage and friendship we have enjoyed during the past year. We sincerely wish you a HAPPY and PROSPEROUS NEW YEAR.

RESOURCES OF A CRORE.

ESTD: 1906.
CANARA BANK, LIMITED.

THE
## BANK OF MANGALORE LTD.,
MANGALORE.
ESTD 1931

*Branches*-
Panemangalore, Mudabidri & Padubidri.

*Chairman*—**Philip J. Chandran, Esq.,**
*Retd. Dt Registrar of Joint Stock Companies*

On & from 1st of January 1937,
Fixed Deposits will be received at following rates of interest

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly

Saving Bank deposit 3½% on daily balances

**All kinds of banking business transacted**
U. R. PAI, N. U. PAI, *Managing Directors*

## ದಮ್ಮು ಪೂರ್ಣ ಗುಣವಾಗುವ ಉಪಾಯವನ್ನೇ ಕೈಕೊಳ್ಳಬೇಕು.

ಕೆಮ್ಮು ಮತ್ತು ಕಫ ವಿಕಾರವಿದ್ದವರು "ಎಫಿಡಿನ್" ಮುಂತಾದ ತಾತ್ಕಾಲಿಕ ಆರಾಮುಪಡಿಸುವ ಔಷಧಗಳನ್ನು ಎಂದೂ ಉಪಯೋಗಿಸಬಾರದು ಈ ಔಷಧಗಳು ರೋಗವನ್ನು ಪೂರ್ಣ ಗುಣಪಡಿಸಲು ನಿರುಪಯೋಗಿ ಎಂಬುದು ನಿಶ್ಚಿತವು ಮತ್ತು ಇಂಥ ಔಷಧಗಳು ಶ್ವಾಸನಲಿಕೆಯಲ್ಲಿ ಹೆಚ್ಚಿಗೆ ನೋವುಂಟುಮಾಡಿ ರೋಗವನ್ನು ಶಾಶ್ವತಮಾಡುತ್ತವೆ

ರೋಗಲಕ್ಷಣವನ್ನು ಪೂರ್ಣ ವಿಚಾರಮಾಡಿ, ರೋಗಿಗೆ ಬೇಗನೆ ಮತ್ತು ಸಾವಧಾನವಾಗಿ ಪೂರ್ಣ ಗುಣಮಾಡುವ ಔಷಧವೇ ನಿಜವಾದ ಉಪಾಯವು ಮತ್ತು ಇದೇ ದೃಷ್ಟಿಯಿಂದ ಡಾ। ಪುರೋಹಿತ ಇವರ "ಶ್ವಾಸಹಾರಿ ಪ್ಲೇನ" ಮತ್ತು "ಶ್ವಾಸಹಾರಿ ಕಾಂಪಾವುಂಡ" ಈ ಎರಡೂ ಔಷಧಗಳು ದಮ್ಮು ವಿಕಾರವನ್ನು ಪೂರ್ಣ ಗುಣಪಡಿಸುವ ದಿವ್ಯೌಷಧಿಯಲ್ಲಿ ಅಗ್ರೇಸರವೆನಿಸಿವೆ ದಮ್ಮು, ಶ್ವಾಸ, ಮಂಜಾನೆಯ ದಸಕಿ, ಗಂಟಲು ಕೆಂಯುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗ ಗುಣಪಡಿಸಲು 'ಶ್ವಾಸಹಾರಿ ಪ್ಲೇನ' ಉಪಯೋಗಿಸಬೇಕು. ಅಮ್ಲಪಿತ್ತವಿದ್ದವರು 'ಶ್ವಾಸಹಾರಿ ಕಂಪಾವುಂಡ' (ಕೆಂಪು ಪ್ಯಾಕಿಂಗ) ಉಪಯೋಗಿಸುವುದು ಹೆಚ್ಚು ಲಾಭಕರ

ಬಹುತರವಾಗಿ ಎಲ್ಲಾ ಶಹರುಗಳಲ್ಲಿ ಕೆಮಿಸ್ಟ್ ಸ್ಟೋರ್ಸ ಮತ್ತು ಅಂಗಡಿಗಳಲ್ಲಿ ಈ ಔಷಧಗಳು ರೂ. 2, 3-8-0 ಮತ್ತು 6 ಹೀಗೆ ಬೇರೆ ಬೇರೆ ಬೆಲೆಯ 3 ಪ್ಯಾಕಿಂಗ್ ಮಾದರಿಕ್ಕೆ ಸಿಗುತ್ತವೆ

ಮಂಗಳೂರು —ದಿ ಪೋಪ್ಯುಲರ್ ಸ್ಟೋರ್ಸ್, ರಥಬೀದಿ.
ಬೀಜಾಪುರ — ಪಾಂಡುರಂಗ ಫಾರ್ಮಸಿ, ಯು ಬಿ ಬಾಗಾ
ಹುಬ್ಬಳ್ಳಿ, ಗದಗ, ಧಾರವಾಡ — ಹುಬ್ಬಳ್ಳಿ ಫಾರ್ಮಸಿ

**ಪುರೋಹಿತ ಶ್ವಾಸಹಾರಿ**
ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ

# LIMDA SOAP




*Free from Animal Fat*

THE VEGETABLE SOAP WORKS. Props: SAIT N.P. & Co. CALICUT.

Distributors for South Kanara —
**Raghavendra Ranga Pai, Car Street Mangalore.**
ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

## S. U. N. & Co.,
— *Silk Merchants,*
Chaukhamba BENARES CITY

ಈಗಿನ ದರಹ (ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ ಈಗ ಕ್ರೆಪ್ ಬಂದಿದೆ ಸುಲಭ ಪ್ರಾಕ್ರಿ ಮಾ... 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1 ಕ್ಕೆ ರೂ 45 ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣಬುಟ್ಟ ಶೀರೆಗಳು ರೂ 35 ರಿಂದ ರೂ 55 ವರೆಗೆ ಸಾದಾ ಶೀರೆ 18 ಮೊಳ ರೂ 32 ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35 ರ ವರೆಗೆ ಬೇರೆ ಮಾಲುಗಳ ಕ್ಯಟಲಾಗು ಉಚಿತವಾಗಿ ಕಳುಹಿಸಲಾಗುವುದು

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನಾರಿಸ್ ಸಿಟಿ

# ನೋಟೀಸು.

## ಶ್ರೀಮದ್ಭುವನೇಂದ್ರ ಮಹೌಷಧಾಲಯ,
## ಕಟಪಾಡಿ, ದ. ಕ.

ಮೇಲಿನ ಹೆಸರಿನಿಂದ ಕಟಪಾಡಿಯಲ್ಲಿ ಸ್ಥಾಪಿಸಲ್ಪಟ್ಟ ಔಷಧಾಲಯವು ದಿನೇ ದಿನೇ ಜನ ಕೃಪೆಗೆ ಪಾತ್ರವಾಗಿ ನಿರೀಕ್ಷಣೆಗಿಂತಲೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿರುವುದರಿಂದ ಸದ್ರಿ ಸಂಸ್ಥೆಯಿಂದ ಜನಸಮುದಾಯವು ಇನ್ನೂ ಹೆಚ್ಚಿನ ಪ್ರಯೋಜನ ಪಡಿಯುವಂತೆ ಅದನ್ನು 'ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್' ಎಂಬ ಹೆಸರಿನಿಂದ ಲಿಮಿಟೆಡ್ ಕಂಪೆನಿಯಾಗಿ ಪರಿವರ್ತಿಸುತ್ತೇವೆ ನಮ್ಮ ಯಾವತ್ತೂ ಏಜಂಟರು, ಸ್ಟೋಕಿಸ್ಟರು, ಪ್ರತಿನಿಧಿಗಳು ಮತ್ತು ಗಿರಾಕಿಗಳು ಮುಂದೆ "ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್" ಕಟಪಾಡಿ ದಕ್ಷಿಣ ಕನ್ನಡ, ಎಂಬ ಹೆಸರಿಗೇನೇ ಪತ್ರವ್ಯವಹಾರ ನಡಿಸಬೇಕು

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ.

# ಶಕುಂತಳೆಯ ಬಲಿದಾನ

(ಅನುವಾದಕ: ಶ್ರೀ ಕಟಪ್ಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

ಆವನಿಗೆ ಕ್ಷಯರೋಗ ಹಾಸಿಗೆಯ ಮೇಲೆ ಬಿದ್ದು ನರಳುತಿದ್ದನು. ಇಡೀ ದಿನ ಕೆಮ್ಮುತಿದ್ದನು, ಇಡೀ ದಿನ ಉಗುಳುತಿದ್ದನು. ಕೊನೆಗೊಂದು ದಿನ ಸತ್ತುಹೋದನು. ಶಕುಂತಳೆ ಹದಿಮೂರು ವರ್ಷ ಆಗಬೇಕಾದರೆ ವಿಧವೆಯಾದಳು ಗಂಡನ ಮನೆಯವರು ಅವಳನ್ನು ಅನಿಷ್ಟ ಗ್ರಹವೆಂದು ಭಯದಿಂದ ಕಾಣುತಿದ್ದರು ಗಂಡನ ಮರಣಕ್ಕೆ ಅವಳೇ ಕಾರಣ ಎಂದು ಊಹಿಸುತಿದ್ದರು ಅವರು ಅವಳ ಕೈ ಬಳೆಗಳನ್ನು ಕಿತ್ತು ಬಿಸಾಡಿದರು, ಮತ್ತೆ ಅವಳಿಗೆ ಉಡಲಿಕ್ಕೊಂದು ದರಗುದರಗಾದ ಬಟ್ಟೆ ತುಂಡನ್ನು ಕೊಟ್ಟರು. ಬೆಳಗ್ಗೆ ಎದ್ದೊಡನೆ ಶಕುಂತಳೆಯ ಮುಖ ನೋಡುವದು ಅವಲಕ್ಷಣ. ಅವಳು ಬೆಳಗ್ಗಿನಿಂದ ರಾತ್ರಿಯಾಗುವ ತನಕ ಗುಲಾಮ ಹುಡುಗಿಯರಂತೆ ಕೆಲಸ ಮಾಡುತಿದ್ದಳು ಮನೆಯವರು ತಿಂದು ಉಂಡಾದ ಮೇಲೆ ಉಳಿದುದರಿಂದ ಹೊಟ್ಟೆ ತುಂಬಿಸಿಕೊಂಡು ಹೇಗೂ ದಿನ ಕಳೆಯುತಿದ್ದಳು

ಅವಳ ತಂದೆ ತಾಯಿಗಳು ಮೊದಲೇ ಸತ್ತು ಹೋಗಿದ್ದರು. ಚಿಕ್ಕಪ್ಪನೊಬ್ಬನಿದ್ದ ಆವನಿಗೆ ಅವಳ ಮೇಲೆ ದಯೆ ಬಂದಿತು ಹೋಗಿ ತನ್ನ ಮನೆಗೆ ಕರಕೊಂಡು ಬಂದ ಅಲ್ಲಿಯೂ ಕೂಡ ಅವಳ ವೈಧವ್ಯವು ಅವಳಿಗೆ ಪಾಶವಾಯಿತು ಚಿಕ್ಕಪ್ಪನ ಮನೆಯಲ್ಲಿ ಕೂಡ ಜನರು ಅವಳನ್ನು ಅವಲಕ್ಷಣವೆಂದು ತಿಳಿಯುತ್ತಿದ್ದರು

ಈಗ ಶಕುಂತಳೆ ಯುವತಿಯಾದಳು ಅಷ್ಟರ ತನಕ ವೈಧವ್ಯವೆಂದರೆ ಹಾಳು ಅನ್ನ ತಿನ್ನುವದು, ಕೊಳಕು ವಸ್ತ್ರ ಉಡುವದು, ಮತ್ತೆ ತನಗೆ ಬೇಕಾದುದನ್ನು ತೆಗೆದುಕೊಳ್ಳದೆ ಇರುವದ ಎಂದು ಅವಳು ಕಲ್ಪಿಸಿಕೊಂಡಿದ್ದಳು ಪರಂತು ವೈಧವ್ಯವಂದರೆ ಅಷ್ಟು ಮಾತ್ರವಲ್ಲ ಜೀವನವನ್ನೇ ಮರೆಯಬೇಕಾದ್ದು, ಜೀವನ್ಮೃತಳಾಗಿ [illegible]ಬೇಕಾದ್ದು ವೈಧವ್ಯ ಎಂದು ಈಗ ಅವಳಿಗೆ [illegible] ತಾನೊಬ್ಬಳು ತನ್ನನ್ನು ತಾನು ಮಾರಿಕೊಂಡ ಗುಲಾಮಗಿತ್ತಿ, ಮನೆಮಲ್ಲಿ, ತನ್ನ ಆಶೆ ಪ್ರತ್ಯಾಶೆಗಳ ಇಂದ್ರಿಯಕಾಮನೆಗಳು ಅವಕ್ಕೆ ಏನೂ ಬೆಲೆಯಿರುವದಿಲ್ಲ ಎಂದು ಅವಳಿಗೆ ತಿಳಿಯ[illegible]

ವಿಧವೆ ಎಂದರೆ ನಿರ್ಜೀವವಾದ ಒಂದು ಯಂತ್ರ, ಯಂತ್ರ ದಂತೆಯೇ ವಿಧವೆ[illegible] ಭಾವಿಸುವುದಿಲ್ಲ, ಆಲೋಚಿಸುವುದಿಲ್ಲ ಎಂದು ಜನರು ಎಣಿಸುತ್ತಾರೆ ಹೇಳಿದಷ್ಟು ಕೆಲಸವನ್ನು ಮಾಡಿ ಹಾಕಿದಷ್ಟು ತಿಂದುಕೊಂಡಿರುವ ತನಕ, ಅನ್ಯರೇನು ಮಾಡಿದರೂ, ವಿನೀತ ಭಾವದಿಂದ ತಲೆಕೊಟ್ಟು ಅದನ್ನು ಸಹಿಸುತ್ತಿರುವ ತನಕ, ಮತ್ತೆ ಅವಳ ಶರೀರವನ್ನು ಮಾಂಲಿಕ್ಕಿಟ್ಟ ವಸ್ತುವೆಂದು ತಿಳಿದು ಅನ್ಯರಿಗೆ ಅದರ ಬೇಕಾದಂತೆ ಉಪಯೋಗಿಸಲಿಡುವ ತನಕ, ಜನರು ವಿಧವೆಯನ್ನು ಕುರಿತು ಒಂದು ಮಾತ ಕೂಡ ಆಡುವುದಿಲ್ಲ ಇಂದ್ರಿಯ ಕಾಮನೆ ವ ಕ್ತ ಒದುಕಿರುವ ಭಾವವನ್ನು ತೋರಿಸದೆ ಇರುವ ತನಕ ಜನರು ವಿಧವೆಗೆ ಬತ್ತಿಹೋದ ಮುದಿ ದನದ ಹಕ್ಕು ಅಧಿಕಾರಗಳನ್ನು ಕೊಡುತ್ತಾರೆ ಆದರೆ ವಿಧವೆಗೂ ಜೀವವೊಂದಿರುವದಷ್ಟೆ' ಅದನ್ಯಾರೂ ಕೊಲ್ಲಲಾರರಷ್ಟೆ?

ಶಕುಂತಳೆಯಲ್ಲಿಯೂ ಇಂದ್ರಿಯ ಕಾಮನೆಗಳೆಂಬ ಮೊಗ್ಗುಗಳು ಹುಟ್ಟಿ ಬೆಳೆದು ಅರಳತೊಡಗಿದುವು ಅವಳ ಶರೀರದೊಳಗೆ ಜೀವನದ ಬಿರುಗಾಳಿ ಬೀಸತಾರಂಭಿಸಿತು ಬೇಸಿಗೆಯ ಬೆಳದಿಂಗಳಲ್ಲಿ ಅವಳು ಮಲಗಿಕೊಂಡು ಪ್ರೇಮದ ಕನಸುಗಳನ್ನು ಕಾಣತೊಡಗಿದಳು.

ನವಜೀವನ, ನವ ಸ್ಫೂರ್ತಿಯನ್ನು ಕೊಡುವ, ಹೃದಯ ಮನಸ್ಸುಗಳನ್ನು ಚುಚ್ಚಿ ನೋಯಿಸುತಿದ್ದ ಕಲ್ಲು ಮುಳ್ಳುಗಳನ್ನು ಮುರಿದು ಹಾಕುವ ಪ್ರೇಮದ ಸ್ವಪ್ನಗಳನ್ನು ಅವಳು ನೋಡಹತ್ತಿದಳು. ಆದರೆ ವಿಧವೆಯು ಪ್ರೇಮದ ಅಧಿಕಾರಿಣಿಯಲ್ಲ ಸಮಾಜವು ಅವಳ ಆ ಎಲ್ಲ ಅಧಿಕಾರಗಳನ್ನು ಕಿತ್ತುಕೊಂಡಿದೆ. ಜೀವನದ ಯಾವತ್ತು ಸುಖಸಂತೋಷಗಳನ್ನು ತಗಳಿಂದ ಅದು ಅವಳನ್ನು ವಂಚಿತಳನ್ನಾಗಿ ಮಾಡಿದೆ ಆದರೆ ವಿಧವೆಯಲ್ಲಿಯೂ ಜೀವವೊಂದು ಇದ್ದೇ ಇರುವದು. ಅದನ್ನು ಯಾರೂ ಕೊಲ್ಲಲಾರರು ಸಮಾಜದ ದುಷ್ಟ ವರ್ತನೆಯಿಂದ ವಿಧವೆಯರ ನೋವು ನರಳಿಕೆಗಳಷ್ಟೇ ಹೆಚ್ಚುವವು. ನಿಗ್ರಹಿಸಿದ ವಿಧವೆಯ ಪ್ರೇಮಾಗ್ನಿಯು ಶಾಂತವಾಗಿ ಉರಿದು ಆನಂದವನ್ನು ಕೊಡುವ ಬದಲಿಗೆ ಏಳೂ ನಾಲಿಗೆಗಳನ್ನು ಚಾಚಿ, ಧಗಧಗಿಸಿ ಉರಿದು ಪ್ರಪಂಚವನ್ನೇ ಸುಟ್ಟುಬಿಡುವದು. ಬೀಜವನ್ನು ನೀವು ಎಷ್ಟು ಆಳದಲ್ಲಿ ಬೇಕಾದರೆ ಬಿತ್ತಿರಿ, ಅದು ಮೊಳೆಯದೆ ಇರುವುದಿಲ್ಲ ಹಾಗಿರುತ್ತ ಶಕುಂತಳೆಯ ಪ್ರೇಮವು ಮಾತ್ರ ಹೇಗೆ ಅಂಕುರಿಸದೆ ಅಲ್ಲೇ ಕರಟಿ ಸುರುಟಿ ಹೋದೀತು? ಅದೂ ಅವಳ ಹೃದಯದಲ್ಲಿ ಅಂಕುರಿಸಿ ಗಿಡವಾಗಿ ಮರವಾಗಿ ಹೂ ಬಿಡಹತ್ತಿತು

ಶಕುಂತಳೆಯ ಚಿಕ್ಕಪ್ಪ ಪಂಡಿತ ಜಯನಾರಾಯಣ ಮಿಶ್ರರು ಆಗರೆಯಲ್ಲಿ ದೊಡ್ಡ ಶ್ರೀಮಂತ ವಕೀಲರಾಗಿದ್ದರು ಜಿಲ್ಲೆಯ ಅಧಿಕಾರಿಗಳನ್ನು ಆಗಾಗ ಆಮಂತ್ರಣ ಕೊಟ್ಟು ಬರಮಾಡಿಸಿ ಅವರಿಗೆ ಸನ್ಮಾನ ಔತಣ ಕೊಡುತಿದ್ದರು ಬ್ರಿಟಿಷ ಸರಕಾರವು ಅವರ ಸೇವೆಯನ್ನು ಮನ್ನಿಸಿ ಅವರಿಗೆ ರಾಯ ಬಹದ್ದೂರ ಬಿರುದನ್ನು ದಯಪಾಲಿಸಿದ್ದಿತು ಅಧಿಕಾರಿಗಳ ದಯೆಯದೃಷ್ಟಿಯು ಅವರ ಮೇಲೆ ಬಿದ್ದು ಇದ್ದದರಿಂದ ಅವರು ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಆಗಿದ್ದರು ಮಾತ್ರವಲ್ಲ, ಮಿಶ್ರರು ದೇವರನ್ನು ಹೆದರಿ ನಡೆಯುತ ಜನವಾಗಿದ್ದರ ಬಹಳ ದಯಾವಂತರು, ಕರುಣಾಳುಗಳು ಆಗಿದ್ದರು ಜನರು ಅವರನ್ನು ಮರ್ಯಾದೆಯಿಂದ, ಭಕ್ತಿಯಿಂದ ಕಾಣುತಿದ್ದರು, ತಮಗೆ ಕಷ್ಟನಷ್ಟಗಳುಂಟಾದಾಗಲೆಲ್ಲ ಅವರಿಂದಲೇ ಅವನ್ನು ದೂರ ಮಾಡಿಕೊಳ್ಳುತಿದ್ದರು ಪ್ರತಿ ದಿನ ಸಾಯಂಕಾಲ ಅವರ ಮನೆಯಲ್ಲಿ ಒಂದೊಂದು ಚಿಕ್ಕ ಸಭೆಯೇ ಕೂಡುತ್ತಿತ್ತ , ಮಿಶ್ರರು ತಮ್ಮ ಉಪದೇಶದಿಂದ ಕೂಡಿದ ಜನರನ್ನು ಸಮಾಧಾನಪಡಿಸಿ ಅವರವರ ಮನೆಗೆ ಕಳುಹಿಸಿ ಕೊಡುತಿದ್ದರ

ಅವರ ಹತ್ತಿರ ಕೇಳಿದಷ್ಟೆನ್ನು ಕೊಟ್ಟ ಬೇಕಾದಷ್ಟು ಉಳಿಸಿಕೊಳ್ಳಲಿಕ್ಕೆ ಸಾಕಾದಷ್ಟ ಹಣವಿತ್ತು ಆದ್ದರಿಂದ ಅವರಿಗೆ ಶಕುಂತಳೆಯು ಒಂದು ಭಾರವಾಗಿರಲಿಲ್ಲ [illegible] ಅವಳಿಂದಾಗಿ ಅವರಿಗೆ ಖರ್ಚು ಕೂಡ ಮಾಡಬೇಕಾಗಿರಲಿಲ್ಲ ಮನೆ ಕೆಲಸ ಎಲ್ಲವನ್ನು ಅವಳೊಬ್ಬಳು ಮಾಡಿ ಮುಗಿಸುತಿದ್ದಳು ಆದರಿಂದ ಅವರಿಗೆ ಕೊಂಚ ಲಾಭವೇ ಆಗುತಿತ್ತು. ಇಬ್ಬರು ಮೂವರು ನೌಕರ – ನೌಕರಾಣಿಯರ ತಿಂಗಳ ಸಂಬಳ ಉಳಿದು ಬರುತಿತ್ತು – ಆದ್ದರಿಂದಲೇ ಚಿಕ್ಕಪ್ಪನ ಮನೆಯಲ್ಲಿ ಶಕುಂತಳೆ ಸುಖದಿಂದ ಇರುತಿದ್ದಳು

ಅವಳು ದೀನಳಾಗಿ ವಿನೀತಳಾಗಿ ಇರುವಷ್ಟು ಕಾಲ ಶಕುಂತಳೆಗೆ ಅಲ್ಲಿ ಯಾವ ಕಷ್ಟ, ಯಾವ ಭಯ ಏನೂ ಇದ್ದಿರಲಿಲ್ಲ ಆದರೆ ಇಂದ್ರಿಯ ಕಾಮನೆಯ ಸುಂಟರ ಗಾಳಿಯನ್ನು ತಡೆಯುವದು ಯಾರಿಂದಲೂ ಸಾಧ್ಯವಿಲ್ಲ. ಶಕುಂತಳೆಯ ಮನಸ್ಸು ನೆರೆಮನೆಯ ಯುವಕನ ಗುಣ ಮಾತುಗಳ ಮೇಲೆ ನಟ್ಟಿತು ಅವನೂ ಅವಳ ಕಡೆಗೆ ಆಕರ್ಷಿತನಾಗಿದ್ದನು ಜೀವನದ ದುಃಖದ ದಿನಗಳು ಆಗ ಬಂದುವು ಪರಿವರ್ತಿತ ಪರಿಸ್ಥಿತಿಯಿಂದಾಗಿ ಅವಳಿಗೆ ಅಷ್ಟರ ತನಕ ಇದ್ದ ಜೀವನದ ತೃಪ್ತಿಯು ಅಂದಿನಿಂದ ಹೆಸರಿಲ್ಲದೆ ಅಡಗಿಹೋಯಿತು ಅಂದಿನಿಂದ ಅವಳ ಜೀವನದಲ್ಲಿ ಅತೃಪ್ತಿ, ಅಸಮಾಧಾನ ಮತ್ತು ಭೋಗೇಚ್ಛೆಯು ಸಂಚಾರವಾಗ ತೊಡಗಿತು.

ಕಡೆಕಡೆಗೆ ಅವಳು ಗುಟ್ಟಾಗಿ ಆ ಯುವಕನನ್ನು ಕೂಡ ತೊಡಗಿದಳು. ಅವಳು ಅವನೊಂದಿಗಿದ್ದ ಕೊಂಚ ಸಮಯದ ಜೀವನದ ನೋವು ನರಳಿಕೆಗಳನ್ನು ಮರೆತು ಅವಳು ಸ್ವರ್ಗೀಯ ಆನಂದವನ್ನೂ ಅನುಭವಿಸುತಿದ್ದಳು. ಅವನೊಂದಿಗೆ ಪ್ರೇಮಾಲಾಪ ಮಾಡುವಾಗ ಅವಳಿಗೆ ಅಷ್ಟರ ತನಕ ಅನುಭವಿಸದ ಸುಖದ ಅನುಭವವಾಗುತಿತ್ತು ಆ ಸಮಯಕ್ಕೆ ಅವಳಿಗೆ ತನ್ನ ತಾಯಿಯ ನೆನಪಾಗುತಿತ್ತು ತಂದೆ ಅವಳನ್ನು ಬೈದು ಭಂಗಿಸಿದಾಗಲೆಲ್ಲ ತಾಯಿ ಬಂದು ಅವಳನ್ನು ಸಮಾಧಾನ ಮಾಡುತಿದ್ದಳು. ಸಂಸಾರದಲ್ಲಿ ಮತ್ತೆಲ್ಲಿಯೂ ಯಾವಾಗಲೂ ಅವಳು ಅನುಭವಿಸಿರದಂಥ ಶಾಂತಿ ಸಮಾಧಾನಗಳು ಅವಳಿಗೆ ಆಗ ಪ್ರಾಪ್ತವಾಗುತಿತ್ತು

ಒಂದು ದಿನ ಏಕಾಂತದಲ್ಲಿ ಯುವಕನು ಅವಳನ್ನು ಮುದ್ದಿಟ್ಟನು ಎಷ್ಟೋ ಸಮಯದ ತನಕ ಅವಳು ಅವನನ್ನು ಆಲಿಂಗಿಸಿಕೊಂಡಳು ಆಗ ಅವಳಿಗೆ ಒಂದು ದಿನ ಅವಳ ಕಾಯಿಲೆ ಬಿದ್ದ ಗಂಡನು ಮುದ್ದಿಟ್ಟುದರ ನೆನಪಾಯಿತು ಆಗ ಅವಳಿಗೆ ಭಯವೂ ಅಸಹ್ಯವೂ ಆಗಿತ್ತು ಗಂಡ ಹಾಸಿಗೆಯ ಮೇಲೆ ಮಲಗಿಕೊಂಡಿದ್ದ ಶಕುಂತಳೆ ಆಗ ತಾನೆ ಒಂದು ಗುಟುಕು ಮದ್ದು ಕೊಟ್ಟಿದ್ದಳು ಅವನು ಬಹು ಪ್ರಯಾಸದಿಂದ ಹಾಸಿಗೆಯಲ್ಲೇ ಎದ್ದು ಕೂತನು ಶಕುಂತಳೆಯನ್ನು ಬಳಿಯಲ್ಲಿ ಕುಳ್ಳಿರಿಸಿದನು ಎಷ್ಟೋ ದಿನಗಳಿಂದ ಕ್ಷೌರವಾಗಿರಲಿಲ್ಲ ಗಡ್ಡ ಮೀಸೆ ಉದ್ದುದ್ದ ಬೆಳೆದಿತ್ತು ಕಣ್ಣುಗಳು ಗುಳಿ ಸೇರಿದ್ದುವು ಮುಖವು ನಿಸ್ತೇಜವಾಗಿತ್ತು ಕಣ್ಣುಗಳಿಂದ ಮಾತ್ರ ಕಾಂತಿಯು ಹೊರಸೂಸುತ್ತಿತ್ತು ಅವನು ಅವಳನ್ನು ದಿಟ್ಟಿಸಿ ನೋಡಿದ ಆ ಮೇಲೆ ತನ್ನ ಎರಡು ದುರ್ಬಲ ಬಾಹುಗಳಿಂದ ಅವಳನ್ನು ಅಪ್ಪಿಕೊಂಡು ಮುಖವನ್ನು ಚುಂಬಿಸುವ ಆಗ ಅವಳು ಗಂಡನನ್ನು ನೋಡಿದ್ದಳ ಅವನು ಅವಳಿಗೆ ಕರಡಿಯಂತೆ ಕಂಡಿದ್ದನು. ಹೆದರಿ ಅಂಜಿಕೊಂಡು ಅವಳು ದೂರಕ್ಕೆ ಓಡಿಹೋಗಿದ್ದಳು.

ಆದರೆ ಈಗ? ಹುಡುಗನ ಚುಂಬನದಲ್ಲಿ ಆ ತೆರನದ ಜುಗುಪ್ಸೆ ಆ ತೆರನದ ಅಸಹ್ಯವಿದ್ದಿಲ್ಲ ಅವಳಿಗೆ ಹುಡುಗನ ಚುಂಬನ ಅತ್ಯಂತ ಮಧುರವಾಗಿ ತೋರಿತು ಬಹಳ ಸಮಯದ ತನಕ ಅವಳು ಅವನ ಅಧರಾಮೃತದ ಪಾನ ಮಾಡುತ್ತ ಇದ್ದಳು. ಅವಳಿಗೆ ಆ ಚುಂಬನ ಪ್ರಾಥರ್ಯವು ಆಶ್ಚರ್ಯ ಮತ್ತು ಅದ್ಭುತವಾಗಿ ತೋರಿತು ಅವಳು ಇನ್ನೊಮ್ಮೆ ಅವನನ್ನು ಬಲವಾಗಿ ಅಪ್ಪಿಕೊಂಡು ಮುಖವನ್ನು ಒತ್ತಿಟ್ಟು ಮುದ್ದಿಟ್ಟಳು

ಆದರೆ ವಸಂತಕಾಲ ಬಹಳ ಸಮಯ ಇರುವದಿಲ್ಲ ಒಂದ ದಿನ ಶಕುಂತಳೆಯ ಚಿಕ್ಕಪ್ಪನಿಗೆ ಎಲ್ಲವು ತಿಳಿದು ಹೋಯಿತು ಅವಳು ಭಯದಿಂದ ಮೃತ್ಯುವನ್ನು ಎದುರು ನೋಡಿದಳು ಆದರೆ ಮೃತ್ಯುವಿನ ಭಯ ಈಗ ಅವಳಿಗೆ ಮೊದಲಿನಂತೆ ದುಃಖದಾಯಿ ಆಗಲಿಲ್ಲ ಅದಕ್ಕಿಂತ ಕಷ್ಟತರ ಮತ್ತೇನಿರಬಹುದೆಂದು ಅವಳ ಹೆದರಿದಳು ಮೃತ್ಯುವಿನ ಮಡಿಲು ಅವಳಿಗೆ ಸುಖ ಕಂಡಿತು ಅವಳಿಗೆ ಆ ದಿನ ಇಡೀ ರಾತ್ರಿ ನಿದ್ರೆ ಬೀಳಲಿಲ್ಲ ಬೆಳಗಾಗ ಬೇಕಾದರೆ ಅವಳು ಎದ್ದು ಕೆಲಸ ಕಾರ್ಯದಲ್ಲಿ ತೊಡಗಿ ಭವಿಷ್ಯ ಜೀವನದ ದುಃಖವನ್ನು ಮರೆಯ ಪ್ರಯತ್ನಿಸಿದಳು

ಮಧ್ಯಾಹ್ನ ಪಂಡಿತರು ಮನೆಗೆ ಬಂದು ಎಂದಿನಂತೆ ಅವರ ಮುಂದೆ ಹೋಗಲು ಶಕುಂತಳೆ ನಡುಗಿದಳು ಅವರು ಶಕುಂತಳೆಯನ್ನು ಕರೆದು ಹತ್ತಿರ ಕುಳ್ಳಿರಿಸಿಕೊಳ್ಳ ಹೇಳಿದರು ಮುಂದೇನಾಗುವದೆಂದು ಅವಳು ನಡುಗಿದಳು ಪಂಡಿತರು ಪ್ರೇಮದಿಂದ ಹೇಳಿದರು–'ಮಗಳೇ, ಇಲ್ಲೇನೂ ಕಷ್ಟವಿಲ್ಲವಷ್ಟೆ?' ಇದನ್ನು ಕೇಳಿ ಅವಳಿಗೆ ಆಶ್ಚರ್ಯವಾಯಿತು ಅವರ ಬಾಯಿಯಿಂದ ಇಂಥ ಮಾತುಗಳನ್ನು ಅವಳೆಂದೂ ಕೇಳಿರಲಿಲ್ಲ ಬಹುಶ ಆ ಗುಟ್ಟು ಅವರಿಗೆ ತಿಳಿದಿಲ್ಲವೆಂದೆಣಿಸಿ ಅವಳು ಸ್ವಲ್ಪ ಸುಖಪಟ್ಟಳು

'ಇಲ್ಲಿ ಅಪ್ಪಯ್ಯ, ಇಲ್ಲಿ ನನಗೆ ಎಲ್ಲ ಸುಖವುಂಟು!' ಎಂದು ಅವಳು ಹೇಳಿದಳು.

'ಏನಾದರೂ ಬೇಕಾದರೆ ಹೇಳು, ನಾನು ತಂದು ಕೊಡುತ್ತೇನೆ.' ಎಂದು ಅವರು ಹೇಳಿದರು. ಚಿಕ್ಕಪ್ಪನ ಈ ಆಕಸ್ಮಿಕ ಪ್ರೇಮ ನೋಡಿ ಅವಳಿಗೆ ಅತ್ಯಾಶ್ಚರ್ಯವಾಯಿತು ಏನೋ ಒಂದು ವಿಶೇಷ ನಡೆದಿರಬೇಕೆಂದು ಈಗ ಅವಳು ಎಣಿಸಿದಳು

'ಅಪ್ಪಯ್ಯ, ಏನು ಬೇಡ, ನನಗೆ ಬೇಕಾದುದೆಲ್ಲ ಇಲ್ಲಿ ಇದೆ!' ಎಂದು ಅವಳು ಪುನಃ ಹೇಳಿದಳು

'ಒಳ್ಳೇದು, ನಿನ್ನ ಮರ್ಜಿ!'

ಆದರೆ ಸ್ವಲ್ಪ ಸಮಯ ಆಲೋಚನಾಪರರಾಗಿ ಅವರು ಪುನಃ ಹೇಳಿದರು.–'ಈ ದಿನ ಸಾಯಂಕಾಲ ನಾವು ಪ್ರಯಾಗಕ್ಕೆ ಹೋಗುತ್ತೇವೆ ನೀನೂ ಬಾ' ಗಂಗೆಯಲ್ಲಿ ಸ್ನಾನ ಮಾಡಿ ಪುಣ್ಯ ಸಂಪಾದಿಸುವೆ!'

'ಆಗಬಹುದು ಅಪ್ಪಯ್ಯ'

ಅವಳು ಸಂತೋಷಪಟ್ಟು, ಒಳಗೆ ಹೋಗಿ ತನ್ನ ಕೆಲಸ ಕಾರ್ಯದಲ್ಲಿ ತೊಡಗಿದಳು

ನದಿಯ ದಂಡೆ ಸಾಯಂಕಾಲದ ಸಮಯಕ್ಕೆ ಬೇಗಾಡಿನಂತೆ ತೋರುತಿತ್ತು ರಾತ್ರಿ ದೇವಿಯು ಮೆಲ್ಲ ಮೆಲ್ಲಗ ಅಲ್ಲಿ ಸಂಚರಿಸುತಿದ್ದಳು ನಾಲ್ಕೂ ಸುತ್ತು ಶಾಂತಿಯು ವಿರಾಜಮಾನವಾಗಿತ್ತು ನಾಲ್ವರು ಮನುಷ್ಯರು ಅಲ್ಲಿಗೆ ಬಂದರು ಅವರಲ್ಲಿ ಒಬ್ಬಳು ಒಬ್ಬ ತರುಣಿಯಾಗಿದ್ದಳು ಇನ್ನೊಬ್ಬನು ನಡು ಪ್ರಾಯದ ಪುರುಷನಾಗಿದ್ದನು ಮತ್ತಿಬ್ಬರು ಕೈಯಲ್ಲಿ ದೊಣ್ಣೆ ಹಿಡಿದುಕೊಂಡ ಯುವಕರಾಗಿದ್ದರ ಅವರು ನದಿಯ ಸಟ್ಟದಿಂದ ದೂರದ ಡೆಗೆ ಒತ್ತಿಕೊಂಡು ನಡೆಯುತಿದ್ದರು ಯುವತಿ ಯಾರೂ ಅಲ್ಲ ಶಕುಂತಳೆ ಆಗಿದ್ದಳು ಉಳಿದವರ ಅವಳ ಚಿಕ್ಕಪ್ಪ [illegible] ಅವರ ಮಕ್ಕಳು ಆಗಿದ್ದರು

ಒಂದು ಪಕ್ಷಿ ಅರಚುತ್ತ ಅವರ ತಲೆ ಮೇಲಿಂದ ಹಾರಿ ಹೋಯಿತು. ಒಂದು ನಿಮಿಷ ಅದೇ ಸಮಯಕ್ಕೆ [illegible] ಬಿದ್ದಿತು. [illegible] ಸ್ವಲ್ಪ ದೂರ ಹೋದ ಮೇಲೆ ಪಂಡಿತರು ನಾಲ್ಕೂ ಸುತ್ತ ನೋಡಿ ಒಂದು ನಿಟ್ಟುಸಿರುಬಿಟ್ಟರು ಆ ಮೇಲೆ ಹೇಳಿದರು–'ಇದೇ ಅತ್ಯಂತ ಸುಂದರ, ಸರ್ವ ದೃಷ್ಟಿಯಿಂದ ಅನುಕೂಲವಾದ ಸ್ಥಳ ಇಲ್ಲಿ ಸ್ವಲ್ಪ ಹೊತ್ತು ವಿರಮಿಸಿಕೊಂಡು, ಆ ಮೇಲೆ ಸ್ನಾನ ಮಾಡೋಣ '

ಎದುರುಗಡೆ, ನದಿಯಾಚೆ ಸೂರ್ಯನು ಮುಳುಗಿದನು ನೀಲ ಸುಳಿ ಅವನಂತೆ ಆಕಾಶದಲ್ಲಿ ಮೋಡಗಳು ವರ್ತುಲಾಕಾರವಾಗಿ ಸುಳಿಯುತಿದ್ದವು ದೂರದಲ್ಲಿ ಮರದ ಸಾಲುಗಳು ಅಸ್ಪಷ್ಟ ಕಪ್ಪು ಕಲೆಯಾಗಿ ತೋರುತಿದ್ದುವು, ಎಲ್ಲೆಲ್ಲಿಯೂ ನಿರಾಶಾಮಯ ವಾತಾವರಣವು ತೋರುತಿತ್ತು

ಮರುಕ್ಷಣದಲ್ಲಿ ಗಾಢಾಂಧಕಾರವು ತುಂಬಿಕೊಂಡಿತು ಎಲ್ಲವೂ ಅಂಧಕಾರದಲ್ಲಿ ಅದೃಶ್ಯವಾದವು ಪಂಡಿತರು ತಮ್ಮ ಮಕ್ಕಳೊಂದಿಗೆ ಹೇಳಿದರು–'ಸಮಯವಾಯಿತು ಬೇಗ ಕೆಲಸ ಮಾಡಿ ಮುಗಿಸೋಣ '

ಶಕುಂತಳೆ ಎಚ್ಚ ನಿಂತಳು ಆದರೆ ಮಕ್ಕಳು ಅವಳನ್ನು ಹಿಡಿದು ನೆಲಕ್ಕೆ ಅಪ್ಪಳಿಸಿದರು ಒಬ್ಬನು ಕೈಯಲ್ಲಿದ್ದ ದೊಣ್ಣೆಯನ್ನು ಅವಳ ಕುತ್ತಿಗೆಯ ಅಡಿಯಲ್ಲಿ ಹಿಡಿದನು ಮತ್ತೊಬ್ಬನು ತನ್ನ ದೊಣ್ಣೆಯಿಂದ ಅವಳ ಗಂಟಲನ್ನು ಅಮುಕಿದನು ಶಕುಂತಳೆ ಅರಚಿದಳು

'ಅಯ್ಯಯ್ಯ ಯ್ಯ ಯಯ್ಯೋ ಏನು ಮಾಡುತ್ತೀರಿ' ಅಪ್ಪಯ್ಯ?'

ಪಂಡಿತರು ಸಿಟ್ಟು ಮತ್ತು ದ್ವೇಷದಿಂದ ಹೇಳಿದರು–'ನಿನಗೆ ತಕ್ಕ ಶಿಕ್ಷೆ ಇದು. ಧರ್ಮವನ್ನು ಭ್ರಷ್ಟ ಮಾಡಿದಕ್ಕೂ ಕುಲ ಮರ್ಯಾ–

(೧೯ನೇ ಪುಟಕ್ಕೆ ಮುಂದರಿಯುವದು.)

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. 2—18—0. Regd. No. M. 3406. ಬಿಡಿ ಸಂಚಿಕೆ ಒಂದಾಣೆ.

ಸಂಪುಟ ೩೨] ತಾರೀಕು ೧೪ನೇ ಜನವರಿ ೧೯೩೮ (14—1—1938) [ಸಂಚಿಕೆ ೧

ಪ್ರತಿ ಶುಕ್ರವಾರವೂ ಮಂಗಳೂರಿನ ...

*

## ಅನುಕ್ರಮಣಿಕೆ

ಂಟ್ವಾಳದ ಹತ್ತಿರ
ಭಯಂಕರ ಅಪಘಾತ.

ಶ್ರೀರವಮಾತೆ ಸ್ವರೂಪರಾಣಿ
ನೆಹರುಗಳ ನಿಧನ.

ಾಂಗ್ರೆಸ್-ಮುಸ್ಲಿಂ
ಲೀಗಿನ ಸಂಧಾನ.

ಪಾನಿನ ಬ್ಲೇಕ್ ಡ್ರಗನ್
ಸೊಸೈಟಿ.

ಹಕ್ಕರ ಬಂಗಾಳದಲ್ಲಿ
ಸೇನೆಯ ದರ್ಪ.

ಬ್ರಿಟನ್ನಿನಲ್ಲಿ
ಜಪಾನು ವಸ್ತು ಬಹಿಷ್ಕಾರ.

*

ಬಂಟ್ವಾಳದ ಹತ್ತಿರ ಮಾಣಿಹಳ್ಳ ಸಂಕಪ್ಪ ಕುಸಿದು ಬಿದ್ದ ದೃಶ್ಯ.

ಮಾಣಿಹಳ್ಳದ ಸಂಕಪ್ಪ ಕುಸಿದುಬಿದ್ದು ಕಲ್ಲಿನಡಿ ಬಿದ್ದ ಕೂಲಿಗಳ ಮೃತ ದೇಹಗಳು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿಯ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ರಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತೆ.

# ವಿಜ್ಞಾನ ವಿಚಾರಗಳು

## ಬಾ ಎಂದಾಗ ಮಳೆ ಬರುವದು.

ಹಂಗೇರಿಯ ಇಬ್ಬರು ವಿಜ್ಞಾನಿಗಳು 'ಬಾ' ಎಂದಾಗ ಮಳೆ ಬರಿಸುವ ಒಂದು ಸಾಧನವನ್ನು ಕಂಡುಹಿಡಿದಿದ್ದಾರೆ. ಜ್ವಾಲಾಮುಖಿಗಳಿದ್ದಾಗ, ಕಾಡ್ಗಿಚ್ಚುಗಳಿಗೆ, ಉಗ್ರಾಣಗಳಿಗೆ, ಎಣ್ಣೆಬಾವಿಗಳಿಗೆ ದೊಡ್ಡ ಬೆಂಕಿಬಿದ್ದಾಗ, ಸಾಮಾನ್ಯವಾಗಿ ಮಳೆ ಬರುತ್ತದೆ. ಆದ್ದರಿಂದ ಒಂದು ಪ್ರದೇಶದಲ್ಲಿ ಮಳೆ ಬರಬೇಕೆಂದಾದರೆ, ಅದಕ್ಕೆ ಸಮೀಪದಲ್ಲಿರುವ ನೀರಿನ ಸ್ಥಳದಲ್ಲಿ ದೊಡ್ಡ ಬೆಂಕಿ ಮಾಡಿದರಾಯಿತು ಆಗ ಅಲ್ಲಿ ಮಳೆ ಸುರಿಯಲೇ ಬೇಕೆಂದು ಅವರ ವಾದವಿರುತ್ತದೆ.

ಅವರು ತಮ್ಮ ಶೋಧವನ್ನು ಸರಕಾರಕ್ಕೆ ಹೇಳಿಕೊಟ್ಟಿದ್ದಾರೆ. ಎರಡಾಣೆ ಖರ್ಚಿನಿಂದ ಒಂದು ಎಕ್ರೆ ಭೂಮಿಗೆ ಮಳೆ ಬರಿಸಬಹುದೆಂದೂ ಕೃಷಿಕರು ವರ್ಷದಲ್ಲಿ ಯಾವಾಗ ಎಷ್ಟು ಬೇಕಾದರೂ, ಆಗ ಅಷ್ಟು ಮಳೆ ಪಡೆಯಬಹುದೆಂದೂ ಅವರು ಹೇಳುತ್ತಾರೆ ವಿಜ್ಞಾನಿಗಳ ಈ ಗುಟ್ಟು ಎಲ್ಲರಿಗೆ ತಿಳಿದರೆ ಮತ್ತೆ ಬರಗಾಲದ ಪ್ರಶ್ನೆಯಿಲ್ಲ

---

## ರಕ್ತಶುದ್ಧಿಗೂ ಯಂತ್ರ!

ಯಂತ್ರಗಳು ಯಾವುದಕ್ಕೆ ಬರುವವು, ಯಾವುದಕ್ಕೆ ಬರಲಾರವು ಎಂದು ಇನ್ನು ಹೇಳುವದು ಕಷ್ಟ ಒಬ್ಬ ವೈದ್ಯನು ರಕ್ತಶುದ್ಧಿಗೂ ಒಂದು ಯಂತ್ರವನ್ನು ಕಂಡುಹಿಡಿದಿದ್ದಾನೆ ಆ ಯಂತ್ರವು ಬಲಗೈಯ್ಯ ರಕ್ತನಾಳದಿಂದ ರಕ್ತವನ್ನು ಹೀರಿ ಒಂದು ನಳಿಗೆಗೆ ಕಳುಹಿಸುವದು ಆ ನಳಿಗೆಯ ಮೇಲೆ ಒಂದು ಬಗೆಯ ಶುದ್ಧೀಕರಣ ಪ್ರಕಾಶವನ್ನು ಹಾಕಿ ರಕ್ತವನ್ನು ಶುದ್ಧ ಮಾಡುವದು ಆ ಮೇಲೆ ಎಡಗೈಯ್ಯ ರಕ್ತನಾಳಕ್ಕೆ ಶುದ್ಧಮಾಡಿದ ರಕ್ತವನ್ನು ಕಳುಹಿಸಿ ಕೊಡುವದು ಯಂತ್ರ ಪ್ರಚಾರವು ಸಾರ್ವತ್ರಿಕವಾದರೆ, ರಕ್ತಶುದ್ಧಿಗಾಗಿ ಮದ್ದು, ಔಷಧಿ, ಇಂಜಕ್ಷನು ಮೊದಲಾದವುಗಳನ್ನು ತೆಗೆದುಕೊಂಡು ತಿಂಗಳುಗಟ್ಟಲೆ ಕಾಯಬೇಕಾಗಿಲ್ಲ ಐದಾರು ಮಿನುಟುಗಳಲ್ಲಿ ಶರೀರದ ಎಲ್ಲಾ ರಕ್ತವು ಶುದ್ಧವಾಗಿ ರೋಗಿಯು ನಿರೋಗಿಯಾಗುವನು

## ಮೊಟ್ಟೆಗಳನ್ನು ಅಳೆದು ವಿಂಗಡಿಸುವ ಯಂತ್ರ

ಇಂಗ್ಲೆಂಡಿನಲ್ಲಿ ಕೆಲವು ದಿನಗಳ ಹಿಂದೆ ಆದ ಕೃಷಿ ಕೈಗಾರಿಕೆಗಳ ಒಂದು ಪ್ರದರ್ಶನದಲ್ಲಿ ಒಂದು ವಿಚಿತ್ರಯಂತ್ರವನ್ನು ಪ್ರದರ್ಶನಕ್ಕೆ ಇಟ್ಟಿದ್ದರು ಆ ಯಂತ್ರವು ಒಂದು ತಾಸಿನಲ್ಲಿ 3600 ಮೊಟ್ಟೆಗಳನ್ನು ಬೇರೆಬೇರೆಯಾಗಿ ಅಳೆದು ಅಳತೆಗನುಸರಿಸಿ ಅವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಹಾಕಬಲ್ಲದಾಗಿತ್ತು ಮೊಟ್ಟೆ ವ್ಯಾಪಾರಿಗಳಿಗೆ ಈ ಯಂತ್ರದಿಂದ ಬಹಳ ಪ್ರಯೋಜನವಿರುವದರಿಂದ ಅದನ್ನು ಕಂಡು ಹಿಡಿದವನನ್ನು ಜನರು ಮೆಚ್ಚಿ ಬಹಳವಾಗಿ ಕೊಂಡಾಡಿದರು

## ತೆಂಗಿನ ಸಿಪ್ಪೆಯಿಂದ ಕಾಗದ.

ಈಗ ನಾವು ಒಲೆಯಲ್ಲಿ ಸುಡುತ್ತಿರುವ ತೆಂಗಿನ ಸಿಪ್ಪೆಗೆ ಸದ್ಯದಲ್ಲೇ ಒಳ್ಳೇ ಧಾರಣೆ ಬರಲಿದೆ ತೆಂಗಿನ ತೋಟಗಾರರಿಗೆ ಹೆಚ್ಚಿನ ಲಾಭ ಸಂಪಾದಿಸುವ ದಿನವು ಬೇಗನೆ ಮೂಡಲಿದೆ ಶ್ರೀಗಳಾದ ಎಸ್ ಆರ್ ಕೆ ಮೆನೊನ್ ಎಂಬ ಮದ್ರಾಸಿನ ಪದವೀಧರರೊಬ್ಬರು ನ್ಯೂಯಾರ್ಕಿನ ಒಂದು ವಿಜ್ಞಾನ ಪರಿಶೋಧನಾಲಯದಲ್ಲಿ ಕಾರ್ಯಮಾಡುವವರು. ಇವರು ಮೊನ್ನೆ 'ತೆಂಗಿನ ಬೋರ್ಡಿ'ನ ಸ್ಟಾಂಡಿಂಗ್ ಕಮಿಟಿಯವರಿಗೆ ತೆಂಗಿನ ಸಿಪ್ಪೆಯಿಂದ ಕಾಗದವನ್ನು ತಯಾರಿಸುವ ಯೋಜನೆಯನ್ನು ಪ್ರದರ್ಶಿಸಿರುವರು ಇವರಿಂದ ಕಂಡು ಹಿಡಿಯಲಾದ ಒಂದು ವಿಶಿಷ್ಟ ವಿಧಾನದಲ್ಲಿ ತೆಂಗಿನ ಸಿಪ್ಪೆಯಿಂದ ಅತಿ ಸುಲಭದಲ್ಲಿ ಉತ್ತಮ ತರದ ಕಾಗದವನ್ನು ತಯಾರಿಸಬಹುದಂತೆ

ಶ್ರೀ ಮೆನೊನರ ವಿಧಾನದಿಂದ ತೆಂಗಿನ ಸಿಪ್ಪೆಯಿಂದ ಕಾಗದ ತಯ್ಯಾರಿಗೆ ಬೇಕಾದ ಕಂದು ಬಣ್ಣದ ಪಲ್ಪನ್ನು ತಯಾರಿಸಬಹುದು ಈ ಬಣ್ಣವನ್ನು ಮತ್ತೆ ತೆಗೆಯಲು ಸಾಧ್ಯವಿದೆ. ಹಿಂದೂದೇಶದಲ್ಲಿ ಮತ್ತು ಸಿಂಹಳದಲ್ಲಿರುವ ಹತ್ತು ಮಿಲಿಯ ಎಕ್ರೆ ತೆಂಗಿನ ಪ್ರದೇಶದಿಂದ ಮುಂದಕ್ಕೆ ಸರ್ವಜಗತ್ತಿಗೆ ಅತಿಸುಲಭ ದರದಲ್ಲಿ ಕಾಗದವನ್ನು ಒದಗಿಸಿಕೊಡಬಹುದೆಂದು, ಮೆನೊನ್ನರ ಅಭಿಪ್ರಾಯ ಈ ಒಂದು ಕೈಗಾರಿಕೆಯಿಂದ ಗಾಜಿನ ಕೈಗಾರಿಕೆ, ಸಾಬೂನು ಕೈಗಾರಿಕೆಗಳು ಬೆಳೆಯಬಹುದೆಂದು, ಅವರ ಸೂಚನೆ

ಶ್ರೀ ಮೆನೊನರ ಯೋಜನೆಯ ಪ್ರಕಾರ ಎರಡು ರೂಪಾಯಿ ಕ್ರಯ ಬಾಳುವ ತೆಂಗಿನ ಸಿಪ್ಪೆಯಿಂದ ೨೪ ರೂಪಾಯಿ ಮೌಲ್ಯದ ಕಾಗದವನ್ನು ತಯಾರಿಸಬಹುದಂತೆ ಈ ಕುರಿತ ತನ್ನ ಪರಿಶೋಧನಾ ಕಾರ್ಯವನ್ನು ಸಂಪೂರ್ಣಗೊಳಿಸುವರೆ, ಅವರು ತೆಂಗಿನ ಬೋರ್ಡಿನೊಡನೆ ಸಹಾಯವನ್ನು ಕೋರಿರುವರು ಶ್ರೀ ಮೆನೊನರ ಈ ಯೋಜನೆಗೆ ತೆಂಗಿನ ಬೋರ್ಡಿನಿಂದ ತಕ್ಕ ಮನ್ನಣೆಯು ದೊರಕಬಹುದೆಂದು ಬಲವಾದ ವಾರ್ತೆಯಿದೆ

## ಕಬ್ಬಿನಿಂದ ಕಾಗದ ತಯ್ಯಾರಿ

ಧಾರಾಳ ವೆಚ್ಚಮಾಡಿ ಅನೇಕ ವರ್ಷಗಳ ಪರಿಶೋಧನೆ ನಡೆಸಿದುದರ ಫಲಿತಾಂಶವಾಗಿ, ಗಾಣದಲ್ಲಿ ಹಿಂಡಿದ ಬಳಿಕ ಉಳಿಯುವ ಕಬ್ಬಿನ ಚಂದಿಯಿಂದ ಕಾಗದವನ್ನು ತಯಾರಿಸುವ ಉಪಾಯ ಒಂದು ಅಮೇರಿಕಾದಲ್ಲಿ ಕಂಡುಹಿಡಿಯಲಾಗಿದೆ ಈ ಉಪಾಯದ ವಿವರಗಳು ಬಹಳ ರಹಸ್ಯದಲ್ಲಿ ಇಡಲಾಗಿದೆ

ಈಗ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ತೆಗೆದಾಗಿ ಉಳಿದ ಕಬ್ಬಿನ ಚಂದಿಯನ್ನು ಉರಿಯನ್ನು ತಯಾರಿಸುವುದಕ್ಕಾಗಿ ಬೆಂಕಿಯ ಒಲೆಗಳಲ್ಲಿ ಸುಡುತ್ತಿದ್ದಾರೆ

ಈ ಉಪಾಯದಿಂದ ಕಾಗದವನ್ನು ತಯಾರಿಸಲು ಒಂದು ಅಮೇರಿಕನ್ ಸಂಸ್ಥೆಯ ಸ್ಥಾಪನೆಯಾಗಿದೆ. ಈ ಸಂಸ್ಥೆಯು ಜಗತ್ತಿನ ಎಲ್ಲ ಕಡೆಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ, ಕಬ್ಬಿನ ಚಂದಿಯಿಂದ ಕಾಗದವನ್ನು ತಯಾರಿಸಿ ಮಾರಾಟ ಮಾಡುವ ವ್ಯವಸ್ಥೆ ಮಾಡುವುದಂತೆ ಈ ಉಪಾಯದಿಂದ ಯಾವತರದ ಕಾಗದವನ್ನು ಅತಿ ಸುಲಭದಲ್ಲಿ ತಯಾರಿಸಬಹುದಂತೆ

ಈ ಉಪಾಯವು ಜರ್ಮನ್ ವಿಜ್ಞಾನಿಗಳೊಬ್ಬರಿಂದ ಕಲ್ಪಿಸಲ್ಪಟ್ಟದ್ದಾಗಿರುತ್ತದೆ ಈ ವಿಜ್ಞಾನಿಗಳು ಆಗ ಜರ್ಮನಿಗೆ ತೆರಳಿ, ಈ ಉಪಾಯದಿಂದ ಕಾಗದ ತಯಾರಿಸಲು ಬೇಕಾದ ಯಂತ್ರ ಸಾಮಗ್ರಿಗಳನ್ನು ಸಿದ್ಧಪಡಿಸುತ್ತಿದ್ದಾರೆ

## ಸಾಗರದ ಮೇಲೆ ಛಾಪಖಾನೆ.

ಪಾಶ್ಚಾತ್ಯದೇಶಗಳಿಂದ ಜಗತ್ತಿನ ವಿವಿಧ ಕಡೆಗಳಿಗೆ ಪ್ರಯಾಣ ಬೆಳೆಸುವ ಮಹಾ ಜಹಜುಗಳಲ್ಲಿ ಪಯಾಣಿಕರಿಗೆ ಬೇಕಾದ ಎಲ್ಲಾ ಅತ್ಯಾಧುನಿಕ ಸೌಕರ್ಯಗಳು ಕೂಡಿವೆ ಪ್ರಯಾಣಿಕರಿಗೆ ಹಾದಿಯಲ್ಲಿ ಬೇಕಾದ ವರ್ತಮಾನಪತ್ರಿಕೆಗಳನ್ನು ತಯಾರಿಸಲು, ಕೆಲವು ಜಹಜುಗಳಲ್ಲಿ ಮುದ್ರಣಾಲಯದ ವ್ಯವಸ್ಥೆಯಿದೆ ಪಾಶ್ಚಾತ್ಯದ ಕೆಲ ಮಹಾ ಜಹಜುಗಳಲ್ಲಿ ಈ ತರದ ಛಾಪಖಾನಾ ವ್ಯವಸ್ಥೆಯಿರುವುದೆಂದು ತಿಳಿದುಬರುತ್ತದೆ ಈ ಛಾಪಖಾನೆಗಳು ಅತ್ಯಾಧುನಿಕ ಯಂತ್ರೋಪಾಯಗಳಿಂದ ಕೂಡಿದಾಗಿರುತ್ತವೆ ಪ್ರಯಾಣದ ಸಮಯ ಹಡಗುಗಳು ಈ ಮುದ್ರಣಾಲಯಗಳಲ್ಲಿ ಕೆಲಸವು ನಡೆಯುತ್ತದೆ ರೇಡಿಯೊ ಮೂಲಕ ವಾರ್ತೆಗಳನ್ನು ಸಂಗ್ರಹಿಸಿ, ಅವುಗಳನ್ನು ಮುದ್ರಿಸಿ ಪ್ರಯಾಣಿಕರಿಗೆ ಒಂದು ಪತ್ರಿಕೆ ರೂಪದಲ್ಲಿ ಒದಗಿಸುವುದೆ, ಈ ಛಾಪಖಾನೆಗಳ ಕೆಲಸ

ಪಂಥ, ಸ್ಪರ್ಧೆ ಎಲ್ಲಿಯ ತನಕ ಅಂದರೆ, ಮಾತನಾಡಿ ಮಾತನಾಡಿ ಸಾಯಲಿಕ್ಕೂ ಪಂಥ ಸ್ಪರ್ಧೆ. ಅಮೇರಿಕದಲ್ಲಿ ಪ್ಲಾಂಟ್ ಎಂಬ ಊರು ಇದೆ ಅಲ್ಲಿ ಹೊವಾರ್ಡ್ ಸ್ಟೀಲ್ ಮೋನ್ ಎಂಬವನು ಮೇಯರನಾಗಲು ಪಂಥಕಟ್ಟಿ ತಾಸುಗಳ ತನಕ ಎಡೆಬಿಡದೆ, ಕೊನೆಗೆ ಕನಸಿನಲ್ಲಿ ದಿನಗಳಲ್ಲಿ ಕೂಡ ಮಾತನಾಡುತ್ತಾ ದೆ ಒರ್ಲಿನ್ ಒರ್ಲಿನ್ ಆಗಿ ಜ್ವರಬಂದ ಸತ್ತುಹೋದನು ಜ್ವರಬಂದಾಗಲೂ ಆತನ ಮಾತನಾಡುವುದನ್ನು ನಿಲ್ಲಿಸಲಿಕ್ಕೆ ಡಾಕ್ಟರರಿಂದ ಸಹ ಅಸಾಧ್ಯವಾಯಿತು ಹೀಗೆ ಮಾತ್ರವಲ್ಲ ಸತ್ತವರಲ್ಲಿ ಹೊವಾರ್ಡ್ ಸ್ಟೀಲ್‌ಮೋನನೆ ಮೊದಲಿಗನಂತೆ!

ರಕ್ಷ್ಯೈರ್ಮಹಾರ್ಹೈಸ್ತುತುರ್ಮನ
ದೇವಾ । ನ ಭೇಜಿರೇ ಭೀಮ
ವಿಶೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರಂ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥

# ಸ್ವದೇಶಾಭಿಮಾನಿ
SWADESHABHIMANI

ಗರಲಕವರಂಜಿದರೆ! ಸುಧೆಯನು।
ಮರೆತು ಕಷ್ಟದ್ಮುರ
ತೆರದಿ ಕುಳಿತರೆ। ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾ. ೧೪ನೇ ಶುಕ್ರವಾರ ಜನವರಿ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.) | ತಾರೀಖು 14—1—1938


## ಅಂತರಾಷ್ಟ್ರೀಯ ವಿಚಾರಗಳು.

### ಇಟೆಲಿಯೂ ಜನಾಂಗಮಂಡಳವೂ

ಇಟಲಿಯು ಜನಾಂಗ ಮಂಡಳದಿಂದ ಹೊರನಡೆದ ವಾರ್ತೆಯು ಈ ಮೊದಲು ಬಂದಿರುವುದಷ್ಟೆ. ಈಗ ಅದು, ಜನಾಂಗ ಮಂಡಳದ ನೇತೃತ್ವದಲ್ಲಿ ನಡೆಯುವ, ಅಂತರಾಷ್ಟ್ರೀಯ ಮಜೂರ್ ಸಂಘ ಇತ್ಯಾದಿ ಸಂಸ್ಥೆಗಳೊಡನಿರುವ

ಇಟಲಿಯ ಸರ್ವಾಧಿಕಾರಿ ಮುಸಲೋನಿ

ತನ್ನ ಸಂಬಂಧವನ್ನು ಕಳಚಿಬಿಡುವುದು. ಅಷ್ಟೆ ಅಲ್ಲ ಜನಾಂಗ ಮಂಡಳದ ಜಾಗವನ್ನೂ ಇಲಾಖೆಯ ಉದ್ಯೋಗದಲ್ಲಿದ್ದ ಇಟಲಿಯಾನ ಜನಾಂಗಿಕ ನೌಕರರು ತಮ್ಮ ಜಾಗೆಯನ್ನು ಬಿಟ್ಟು ಸ್ವದೇಶಕ್ಕೆ ಬರಬೇಕಾಗಿ ಮುಸಲೋನಿಯ ಅಪ್ಪಣೆಯಾಗಿರುತ್ತದೆ. ಜನಾಂಗ ಮಂಡಳದ ಇಟಲಿಯಾನ ಜನಾಂಗಿಕನೋಕರರೆ ಸಭಜರಿಗೆ ಮುಸಲೋನಿಯ ಅಪ್ಪಣೆಯನ್ನು ಮನ್ನಿಸಬೇಕಾಗಿ ತೀರ್ಮಾನವೂ ಕೂಡ ಆಯಿತು. ಈ ನೌಕರರಿಗೆ ಇಟಲಿಯಲ್ಲಿ ಉದ್ಯೋಗ ದೊರಕಿಸುವ ವಿರ್ಪಾಡು ಮಾಡಲಾಗಿರುವುದಂತೆ.

### ಜೆಕೊಸ್ಲೆವೆಕಿಯಾ—ಹಿಂದೂಸ್ಥಾನ

ಜೆಕೊಸ್ಲೆವೆಕಿಯಾ—ಹಿಂದೂಸ್ಥಾನಗಳೊಳಗೆ ಒಳ್ಳೆ ವ್ಯಾಪಾರ ಸಂಬಂಧವುಂಟಾಗುವಂತೆ ಜೆಕೊಸ್ಲೆವೆಕಿಯಾದ ರಾಜಧಾನಿ—ಪ್ರೇಗ್ ಪಟ್ಟಣದಲ್ಲಿ ಒಂದು ಸಂಘಸ್ಥಾಪನೆಯಾಗಿರುತ್ತದೆ. ಜೆಕೊಸ್ಲೆವೆಕಿಯಾವು, ಹಿಂದೂದೇಶದಲ್ಲಿ ಸಿಗುತ್ತಿರುವ ಕೆಲಸಾಮಾನುಗಳ ಕುರಿತು, ಹೆಚ್ಚಿನ ಕುತೂಹಲ ತೋರಿಸುತ್ತದೆಯೆಂದೂ, ಅಂತೆಯೆ ಹಿಂದೂದೇಶದಲ್ಲೂ ಜೆಕೊಸ್ಲೆವೆಕಿಯಾದ ಒಡವೆಗಳ ಮೇಲೆ ಕುತೂಹಲವುಂಟಾಗಿರುವುದೆಂದೂ, ಈ ಎರಡು ದೇಶಗಳೊಳಗೆ ವ್ಯಾಪಾರ ಸಂಬಂಧವು ಬೆಳೆಯುತ್ತ ಬರುವರೆ, ಒಳ್ಳೆ ಅವಕಾಶವಿರುವುದೆಂದು ಪ್ರೇಗಿನಲ್ಲಿ ಇಂಡಿಯಾ ಕಮಿಶನರೊಬ್ಬರನ್ನು ಇಡುವ ವ್ಯವಸ್ಥೆಯಾಗಬೇಕೆಂದೂ ಸೂಚಿಸಿ, ಅಲ್ಲಿನ ಪ್ರಸಿದ್ಧ ವ್ಯಕ್ತಿಗಳೊಬ್ಬರು ಮೇಲಿನ ಸಂಘದ ಪ್ರಾರಂಭೋತ್ಸವದಲ್ಲಿ ಭಾಷಣವಿತ್ತರು.

### ಜರ್ಮನಿಯಲ್ಲೇನು?

ಬಹೀರ್ ದೇಶದ ಅನೇಕ ಮಹಾವ್ಯಕ್ತಿಗಳು, ಜರ್ಮನಿಯ ಬರ್ಲಿನ್ ನಗರಕ್ಕೆ ಚಿತ್ತೈಸಿ, ಹಿಂತೆರಳಿರುವರು. ಮುಸಲೋನಿಯು ಹಿಟ್ಲರನನ್ನು ಬರ್ಲಿನ್ ನಗರದಲ್ಲಿ ಬೇಟಿ ಮಾಡಿದನು. ರಷ್ಯಾ ದೇಶದ ಬೊಲ್ಶೆವಿಸಮಿಗೆ ವಿರೋಧವಾಗಿ, ಹಿಟ್ಲರ್ ಮುಸಲೋನಿಯವರು ಒಂದಾಗಿರುವರು. ಜನಾಂಗಮಂಡಳದಲ್ಲಿ ಇವರಿಗೆ ವಿಶ್ವಾಸವಿರುವುದಿಲ್ಲ. ಶಾಂತಿ ಸಾಧನೆಗೆ ಬೇರೆ ಉಪಾಯಗಳಿರುವುವೆಂದು, ಇವರೀರ್ವರ ನಂಬಿಕೆಯಾಗಿರುವುದರಿಂದಲೆ, ಅವರಿಬ್ಬರೂ ಜನಾಂಗ ಮಂಡಳವನ್ನು ಧಿಕ್ಕರಿಸುವುದು. ಇವರೀರ್ವರಲ್ಲಿ ಬೊಲ್ಶೆವಿಸಮ್ ವಿರೋಧವು ಬಹಳವಾಗಿರುವುದರಿಂದಲೆ ಅವರು ಜಪಾನೊಡನೆ ಅದಕ್ಕೆ ವಿರೋಧವಾಗಿ ಎಂಟಿ—ಕೊಮಿನ್‌ಟರ್ನ್ ಒಪ್ಪಂದವನ್ನು ಮಾಡಿರುವುದು. ಈ ಕಾರಣದಿಂದಲೇ ಸ್ಪೈನಿನ ಪ್ರಕರಣದಲ್ಲಿ ಇಬ್ಬರೂ ಸೈನಿಕ ಜನರಲ್ ಫ್ರಾಂಕೋವಿಗೆ ಸಹಾಯ ಕೊಡುವರಾಗಿದ್ದಾರೆ. ಪೌರ್ವಾತ್ಯದ ಪ್ರಕರಣದಲ್ಲಿ ಜರ್ಮನಿಯು ಇಷ್ಟರ ತನಕ ಸುಮ್ಮನಿದ್ದರೂ ಅದು ಜಪಾನ್ ಸಂಘಶಕ್ತಿಗೆ ಸರಿಸಮವಿದೆ.

ಸ್ಪೈನಿನ ದಂಗೆನಾಯಕ ಜನರಲ್ ಫ್ರಾಂಕೋ

ಅಂತರಾಷ್ಟ್ರೀಯ ರಾಜಕೀಯದಲ್ಲಿ ಜರ್ಮನಿಗೆ ಪಕ್ಕದ ಸ್ಥಾನವು ದೊರಕಿರುವುದೆಂದು ಬರ್ಲಿನಿಗೆ ಮುಸಲೋನಿಯು ಬಂದ ಮೇಲೆ ಲಾರ್ಡ್ ಹೆಲಿಫೆಕ್ಸರ, — ಹಿಟ್ಲರನ ಭೇಟಿ, ಇತ್ಯಾದಿ ಬಹೀರ್ ದೇಶಗಳ ಮಹಾವ್ಯಕ್ತಿಗಳು ಬರ್ಲಿನಿಗೆ ಚಿತ್ತೈಸುವುದು, ಜರ್ಮನಿಯ ಪ್ರತಿನಿಧಿಗಳಾಗಿ ನಾಜಿ ಮಹಾವ್ಯಕ್ತಿಗಳು ಹೊರರಾಷ್ಟ್ರಗಳಿಗೆ ನಡೆದುದು — ಇವುಗಳು ಸೂಚಿಸುತ್ತವೆ. ವಸಾಹತುಗಳನ್ನು ಹಿಂದಕ್ಕೆ ಕೇಳಿದ ಹಿಟ್ಲರನ ಕೋರಿಕೆಗಳನ್ನು ಸಂಯೋಗ ಪರೀಕ್ಷಿಸುವರೆ, ಇಂಗ್ಲಂಡಿನ ಪ್ರಧಾನ ಚೆಂಬರ್‌ಲೀನರು, ಹಾಲಿಫೆಕ್ಸರನ್ನು ಬರ್ಲಿನಿಗೆ ಕಳುಹಿಸಿರುವರಂತೆ. ಬ್ರಿಟನಿಗೂ ಜರ್ಮನಿಯನ್ನು ಒಲಿಸಿಕೊಳ್ಳುವ ಆಲೋಚನೆಯು ಇದೆ.

### ಜರ್ಮನಿಯ ೪ ವರ್ಷಗಳ ಯೋಜನೆ

ಬೆಲ್ಜಿಯಮಿನ ತಾಟಸ್ಥ್ಯವನ್ನು ತಾನು ಹಾಳುಮಾಡುವುದಿಲ್ಲವೆಂದು ಜರ್ಮನಿಯ ಗ್ಯಾರಂಟಿ, ಜರ್ಮನ್-ಪೋಲೆಂಡ್ ಒಪ್ಪಂದ, ಇವುಗಳೆಲ್ಲಾ ಜರ್ಮನಿಯ ಸದ್ಯದ ಧೋರಣೆಯ ಫಲಗಳು. ೧೯೩೬ರಲ್ಲಿ ಜರಗಿದ ನಾಜಿ ಪಕ್ಷದ ಪರಿಷತ್ತಿನಲ್ಲಿ, ದೇಶದ ಆಂತರ್ಯಸ್ಥಿತಿಯನ್ನು ಉದ್ಧರಿಸಬೇಕಾಗಿ ನಿರ್ಧಾರಗಳಾಗಿವೆ. ಇದಕ್ಕಾಗಿ ಜರ್ಮನಿಯು ನಾಲ್ಕು ವರ್ಷಗಳ ಒಂದು ಯೋಜನೆಯನ್ನು ಕೈಕೊಂಡಿರುತ್ತದೆ. ಜರ್ಮನಿಯು ಸ್ವಾವಲಂಬಿಯಾಗುವಂತೆ, ಅಲ್ಲಿ ದೊರಕುವ ಕೀಳುವ ತರದ ಲೋಹದ ಕಲ್ಲುಗಳನ್ನೆ ಉಪಯೋಗಿಸಬೇಕಾಗಿಯೂ, ಕೃಗಾ

ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರ್

ರಿಕೆಗೆ [illegible] ಇತರ [illegible]ಗಳನ್ನು [illegible] ರೀತಿಗಳಲ್ಲ ದೇಶಗಳ [illegible] ತಯಾರಿಸುವ [illegible] ಮಾಡಲಾಗುತ್ತದೆ [illegible] ವ್ಯಾಪಾರ [illegible] ಸಂಗ್ರಾಮ [illegible] ವಸ್ತು ಒಂದು ಪ್ರದರ್ಶನವು ಹಿಟ್ಲರ್ ಮುಸಲೋನಿಗಳ ಸಮಕ್ಷಮದಲ್ಲಿ ಕೆಲದಿನಗಳಹಿಂದೆ ನಡೆಯಿತು.

### ಅಮೇರಿಕಾದೊಡನೆ ಒಪ್ಪಂದವೆ?

ಸಂಯುಕ್ತ ಅಮೇರಿಕಾಕ್ಕೂ, ಬ್ರಿಟನಿನ ಸಂಯುಕ್ತ ರಾಜ್ಯಗಳಿಗೂ, ವ್ಯಾಪಾರದ ಕುರಿತು ಪರಸ್ಪರ ರಿಯಾಯಿತಿಗಳನ್ನು ಒದಗಿಸುವ ಹಿಂದೆ ಒಪ್ಪಂದವಾಗುವ ಕುರಿತ, ಬ್ರಿಟನಿನಲ್ಲಿ ಅಮೇರಿಕಾದಲ್ಲೂ ಪ್ರಕಟಣೆಗಳಾಗಿವೆ. ಅದಕ್ಕಾಗಿ ಈಗ ಸಿದ್ಧತೆಗಳು ನಡೆಯುತ್ತಿವೆ. ವ್ಯಾಪಾರ ಕ್ಷೇತ್ರದಲ್ಲಿ ಈಗಿರುವ ನಿರ್ಬಂಧ ಇತ್ಯಾದಿಗಳನ್ನು ತೆಗೆದು ಬಿಟ್ಟರೆ ಯುದ್ಧ ಕಾರಣಗಳು ಮಾಯವಾಗಬಹುದೆಂದು, ಹಿಂದೆ ಅದಿದ, ಅಮೇರಿಕದ ವ್ಯಾಪಾರ ಮಂತ್ರಿಗಳು, ತನ್ನ ಈ ಮಾತುಗಳನ್ನು ಮರೆತುಬಿಟ್ಟು ತನ್ನ ದೇಶದಲ್ಲಿ ಬ್ರಿಟನಿಗೆ ಹೆಚ್ಚು ಅವಕಾಶವನ್ನು ಕೊಡುವ ಯೋಜನೆಯಲ್ಲಿ ತೊಡಗಿರುವರು. ಅಮೇರಿಕಾ—ಬ್ರಿಟನಿನೊಳಗೆ ಒಳ್ಳೆ ವ್ಯಾಪಾರವು ಇರುವುದೆ ಈ ತರದ ವ್ಯಾಪಾರ ಒಪ್ಪಂದಕ್ಕೆ ಕಾರಣವಂತೆ. ಇದೊಂದು ಮಹಾ ಯೋಜನೆ ಎಂದು ಎಲ್ಲೆಲ್ಲೂ ಭಾವಿಸಲಾಗಿದೆ.

ಈ ಒಪ್ಪಂದದಿಂದ, ಬ್ರಿಟನರ ಕೆಲವು ಸಾಮಾನುಗಳ ಮೇಲಿರುವ ನಿರ್ಬಂಧವು ತೆಗೆಯಲಾಗುವುದು. ಅದೇ ರೀತಿಯಲ್ಲಿ ಈ ಮೊದಲು ಅಮೇರಿಕನ್ ಸಾಮಾನಿನ ಮೇಲಿದ್ದ ನಿರ್ಬಂಧಗಳನ್ನು ಬ್ರಿಟನು ತೆಗೆದುಬಿಡುವುದಂತೆ.

ಆದರೆ, ಈ ಒಪ್ಪಂದದಿಂದ, ಬ್ರಿಟನಿನೊಡನೆ ಸಂಗ್ರಾಮ ಒಪ್ಪಂದವಾದಂತಾಗಬಾರದೆಂದು ಅಮೇರಿಕಾದ ಪ್ರಜಾ ಪತ್ರಿಕೆಗಳಲ್ಲಿ ಇರುವುದೆಂದು ತಿಳಿದುಬರುತ್ತದೆ.

### ಟೆಕ್ಸಾಸ್ ಎಣ್ಣೆ ಸಂಸ್ಥೆ

ಅಮೇರಿಕಾದ ಸುಪ್ರಸಿದ್ಧವಾದ ಈ ಸೀಮೆಎಣ್ಣೆ ಸಂಸ್ಥೆಯವರು ಹಿಂದೂದೇಶದಲ್ಲಿ 'ಕಾಲ್‌ಟೆಕ್ಸ್' ಎಂಬ ನಾಮಾಂಕಿತದಲ್ಲಿ ಸೀಮೆ ಎಣ್ಣೆ ಮಾರಲು ಒಂದು ಮಹಾಸಂಸ್ಥೆಯನ್ನು ಸ್ಥಾಪಿಸಿರುವುದಷ್ಟೆ. ಈ ಸಂಸ್ಥೆಯು ಸೀಮೆ ಎಣ್ಣೆಯನ್ನು ತಗಿಯುವರೆ ಪರ್ಶಿಯನ್ ಕೊಲ್ಲಿಯ, ಬರ್ಮ ಆಮೀರರೊಡನೆ, ಆತನ ಪ್ರದೇಶದ ಸರ್ವಹಕ್ಕನ್ನು ಕೊಂಡುಕೊಂಡಿರುವರಂತೆ.

### ಎಬಿಸೀನಿಯಾದ ಧರ್ಮಗುರುಗಳು

[illegible] ಸ್ಥದ [illegible]ದಲ್ಲಿ [illegible] ಯ ವಿದ್ವತ್ [illegible] ಎಬಿಸೀನಿಯಾದಲ್ಲಿ ಕ್ರೈಸ್ತಧರ್ಮಪ್ರಚಾರ [illegible] ಮುಸಲೋನಿಯು ಈಗ [illegible] ಎಬಿಸೀನಿ[illegible] ಹೊರದೂಡಿದನು. [illegible] ಧರ್ಮಗುರುಗಳ ಬದಲಾಗಿ ಎಬಿಸೀನಿ [illegible] ಇಟಲಿಯನ್ನು [illegible] ಆತನ [illegible] ಬಹಳ [illegible] ಉಂಟಾಗಿರುವುದೆಂದು ವರ್ತಿ ಇದೆ.

### ಎಬಿಸೀನಿಯಾದ ಪ್ರಥಮ ಸುಲ್ತಾನನು

[illegible] ತನ್ನ [illegible] ರಾಜರನ್ನಾಗಿ [illegible] ತನ್ನ [illegible] ವಾಗಲು [illegible], ಇಂದು [illegible] ದೊರೆ [illegible] ಪ್ರಥಮ ಸುಲ್ತಾನನನ್ನಾಗಿ ಪಟ್ಟಕಟ್ಟಿದನೆಂದು ವಾರ್ತೆ ಬಂದಿದೆ.

### ನಾಜಿ ಅಧ್ಯಕ್ಷರು ಸೆರೆಹಿಡಿಯಲ್ಪಟ್ಟರು.

ಕ್ಯೂಬಾ ದೇಶದ ನಾಜಿ ಅಧ್ಯಕ್ಷನಾದ ಗೆರೆಂಡೊ ಮಚಾದೊರವರನ್ನು ನ್ಯೂಯೋರ್ಕ್‌ನಲ್ಲಿ ಸೆರೆಹಿಡಿದಿರುವರು. ಈ ಮನುಷ್ಯನು ಅಲ್ಲಿನ ಒಂದು ಆಸ್ಪತ್ರೆಯಲ್ಲಿ ಹಿಡಿಯಲ್ಪಟ್ಟನು. ಈತನು ದೇಶದ ಅಧ್ಯಕ್ಷನಾಗಿದ್ದು ಕ್ರೂರವಾದ ಕಾರ್ಯಗಳನ್ನು ನಡೆಸಿದ್ದನು. ಅಸಂಖ್ಯಾತ ಕೊಲೆಗಳೂ, ಹೇಯ ಕೆಲಸಗಳೂ ಆತನಿಂದ ನಡೆದವೆ. ತನ್ನ ದೇಶಸ್ಥರು ತನ್ನ ಮೇಲೆ ರೇಗಲು, ಅವರಿಂದ ತಲೆತಪ್ಪಿಸಿ, ಇಂದಿಗೆ ೪ ವರ್ಷಗಳಿಂದ ಎಲ್ಲೆಲ್ಲೂ ಗುಪ್ತನಾಗಿ ಅಲೆದಾಡುತಿದವನನ್ನು ಮೊನ್ನೆ ಅಮೇರಿಕಾದ ನ್ಯೂಯೋರ್ಕಿನ ಒಂದು ಆಸ್ಪತ್ರೆಯಲ್ಲಿ ಆಕಸ್ಮಾತ್ತಾಗಿ, ಸೆರೆಹಿಡಿಯಲ್ಪಟ್ಟನು. ನ್ಯೂಯೋರ್ಕಿನಿಂದ ಆತನನ್ನು ಕ್ಯೂಬಾಕ್ಕೆ ಒಯ್ದು, ಅಲ್ಲಿ ಆತನು ಹಿಂದೆ ನಡೆಯಿಸಿದ ತಪ್ಪಿತಗಳಿಗಾಗಿ, ವಿಚಾರಣೆಯು ನಡೆಯುವುದಂತೆ. ಕ್ಯೂಬಾ ದೇಶದಲ್ಲಿ ಒಂದಾನೊಂದು ಸಮಯ ತಾನೆ ದೊಡ್ಡವನೆಂದು, ಮಹಾಜನರ ಗೋಳಿನ ಮೇಲೆ ದರ್ಬಾರ ನಡೆಯಿಸಿದವನಾತನು.

# ಏನು ತಿನ್ನುತ್ತೀರೋ-ಹಾಗೆ ಆಗುತ್ತೀರಿ!

ಆಹಾರ ಗುಣದೋಷಗಳನ್ನು ಎತ್ತಿ ತೋರಿಸುತ್ತ ದೊಡ್ಡ ಪದವಿ ಪಡೆದ ವೈದ್ಯರೊಬ್ಬರು ತಮ್ಮ ಭಾಷಣದಲ್ಲಿ ಹೀಗೆಂದು ಹೇಳಿದರು! “ನೀವು ಏನು ತಿನ್ನುತ್ತೀರೋ ಹಾಗೆಯೇ ಆಗುತ್ತೀರಿ!’ ಇದು ನಿಜವಾದರೆ, ಲೇಖಕ ಕವಿಗಳ ಕಲ್ಪನೆಗೆ ಬಹಳ ಸಾಮಗ್ರಿ ದೊರೆತಂತಾಗುವುದು ‘ಏನು ತಿನ್ನುತ್ತೀರೋ ಹಾಗೆ ಆಗುತ್ತೀರಿ’ ಹಾಗಾದರೆ ನಾವು ಏನಾಗಬೇಕೆಂದು ಭಾವಿಸುತ್ತೇವೊ ಅದನ್ನು ತಿಂದರಾಯಿತು! ಹಾಗೆಯೇ ಆಗಿಬಿಡುತ್ತೇವೆ! ಇದೊಂದು ದೊಡ್ಡ ಅನುಕೂಲವಲ್ಲವೆ?

ನೀವು ಪ್ರಸಿದ್ಧ ವಕೀಲರಾಗಬೇಕೆಂದು ಇಟ್ಟುಕೊಳ್ಳಿ ಆಗ ನೀವು ಏನುಮಾಡಬೇಕು? ಬಲ್ಲಿರಾ? ಕಾನೂನು ಪುಸ್ತಕಗಳನ್ನು ಹರಿದು ಹರಿದು ತಿಂದುಬಿಡಿ ದೊಡ್ಡ ವಕೀಲರಾಗುವಿರಿ ಅಥವಾ ಬಂದಂಥ ಬರಲಿರುವ ಕಕ್ಷಿಗಾರರನ್ನೇ ತಿಂದುಬಿಡಿ. ದೊಡ್ಡ ವಕೀಲರಾಗುವಿರಿ.

ಬೇಡ, ನೀವು ವೈದ್ಯರಾಗಲು ಇಚ್ಛಿಸುತ್ತೀರಾ? ಹಾಗಾದರೆ ಏನುಮಾಡಬೇಕು? ಇದ್ದ ಔಷಧಿಗಳನ್ನು ನೀವೇ ಕುಡಿದುಬಿಡಿ ಇಂಜೆಕ್ಷನುಗಳನ್ನೆಲ್ಲ ನೀವೇ ತೆಗೆದುಕೊಂಡುಬಿಡಿ, ಅಥವಾ ರೋಗಿಗಳನ್ನೇ ತಿಂದುಹಾಕಿಬಿಡಿ, ದೊಡ್ಡ ವೈದ್ಯರಾಗುವಿರಿ ನೀವು ಏನು ತಿನ್ನುತ್ತೀರೋ ಹಾಗೆ ಆಗುತ್ತೀರಿ! ಆದರೆ ನಾವು ಏನು ತಿನ್ನುತ್ತೇವೊ, ಆ ಪದಾರ್ಥದ ಸ್ವಭಾವ ಗುಣಗಳು ನಮಗೂ ಬರುವವೆಂಬುದರಲ್ಲಿ ಸಂಶಯವಿಲ್ಲ. ಎಮ್ಮೆ ಹಾಲು ಕುಡಿದವನ ಬುದ್ಧಿ ಎಮ್ಮೆ—ಕೋಣಗಳ ಬುದ್ಧಿಯಂತೆ ಮಂದ ಮಂದ ಎಂದು ನಮಗೆ ತಿಳಿದೇ ಇದೆ. ಉದಾಹರಣ—

ಇಟಲಿಯ ಮುಸಲೋನಿ ಇನ್ನು ಮುಂದೆ ಹಾಲು ಅನ್ನ ಅಲ್ಲದೆ ಇನ್ನೇನೂ ತಿನ್ನದಿದ್ದರೆ ಲೋಕಕ್ಕೆ ಕ್ಷೇಮವುಂಟು ಯಾಕೆಂದರೆ ಜನಾಂಗ ಜನಾಂಗಗಳೊಳಗೆ ಶಾಂತಿ ಸಮಾಧಾನವಿರಬೇಕಾದರೆ ಅವನು ಅಂಥ ಆಹಾರ ತೆಗೆದುಕೊಳ್ಳುವದು ಅಗತ್ಯ ಜರ್ಮನಿಯ ಹಿಟ್ಲರನು ಬರೀ ನೀರು ಗಾಳಿ ತೆಗೆದುಕೊಂಡಿದ್ದರೆ ಸಾಕು ಪ್ರಪಂಚದಲ್ಲಿ ನೀರು ಗಾಳಿ ತೆಗೆದುಕೊಳ್ಳುವ ಜನರು ಜರ್ಮನರಲ್ಲದೆ ಇನ್ನೂ ಅನೇಕ ದೇಶವಾಸಿಗಳಿದ್ದಾರೆ ಎಂಬುದು ತಿಳಿಯಲಿಕ್ಕೆ ಅವನಿಗೆ ನೀರು ಗಾಳಿಗಳನ್ನೇ ಕೊಡಬೇಕು ರಷ್ಯಾದ ಸ್ಟಾಲಿನನಿಗೆ ನೀರು ಗಾಳಿ ಸಹ ಕೊಡದೆ ಉಪವಾಸಹಾಕಬೇಕು ಕೊಲ್ಲಿಸದರಿಂದ ಶಾಂತಿಸ್ಥಾಪನೆಯಾಗುವುದಿಲ್ಲ ಎಂಬದು ತಿಳಿಯಲಿಕ್ಕೆ ಅವನು ಉಪವಾಸವಿರುವದು ಒಳ್ಳೆಯ ಪಾಠವಾಗುತ್ತದೆ ಮುಸಲೋನಿ—ಹಿಟ್ಲರ—ಸ್ಟಾಲಿನ್ ಈ ಮೂವರು ಅವರಿಗೆ ಅಗತ್ಯದ ಆಹಾರ ತಿಂದು ತಮಗೆ ಅತ್ಯಂತ ಪ್ರಿಯವಾದ ಲೋಕಶಾಂತಿಯನ್ನು ಸ್ಥಾಪಿಸುವುದಾದರೆ ಮತ್ತೆ ‘ಯಾರು ಏನು ತಿನ್ನುತ್ತಾರೋ ಹಾಗೆ ಆಗುತ್ತಾರೆ’ ಎಂಬ ಮಾತನ್ನು ಸತ್ಯವೆಂದು ಎಲ್ಲರೂ ನಂಬುವಂತಾಗುವದ

## ಅದೆಂತಹ ಬಲವೊ!

“ಎಳ್ಳನ್ನು ಮುಷ್ಟಿಯಲ್ಲಿ ಹಿಡಿದು ಎಣ್ಣೆಯನ್ನು ಹಿಂಡಿ ಅನ್ನಕ್ಕೆ ಹಾಕಿಕೊಳ್ಳುವ ವಾಡಿಕೆ ನಮ್ಮ ಅಜ್ಜನದು” ಎಂತ ಪೂರ್ವ ಕಾಲದವರು ಹೇಳುವುದುಂಟು ಅದು ಸತ್ಯವೋ ಅಸತ್ಯವೋ ಎಂಬುದನ್ನು ನಾವು ನೋಡದಿದ್ದರೂ ಕಾಯಕಷ್ಟವನ್ನು ಮಾಡುತ್ತಿದ್ದ ಪೂರ್ವಿಕರು ಮಾತ್ರ ಶಕ್ತಿವಂತರಾಗಿದ್ದರೆಂಬುದನ್ನು ಒಪ್ಪಿಕೊಳ್ಳುತ್ತೇವೆ

ಆದರೆ ನಮ್ಮಲ್ಲಿ ಅನೇಕರಿಗೆ ಆಶಕ್ತಿಯೂ ಆ ಬಲವೂ ಪಟುತ್ವವೂ ಇರುವುದಿಲ್ಲ ನಮಗೆ ಕಾಯಕಷ್ಟ ಮಾಡಲಿಕ್ಕೆ ಅವಕಾಶವಿಲ್ಲನೆಂತ ತಿಳಿದು ಸುಮ್ಮನೆ ಈ ನೀರಸವಾದ ಜೀವನವನ್ನು ಕಳೆಯಬಾರದು ನಾವು ಉತ್ತಮ ಆರೋಗ್ಯವಂತರಾಗಿಯೂ, ತೇಜಸ್ಸುಳ್ಳವರಾಗಿಯೂ ಕಳೆಕಾಂತಿಯುಳ್ಳವರಾಗಿಯೂ ಇರಬೇಕ ಅದಕ್ಕಾಗಿ ಅಮೃತವನ್ನು ಸೇವಿಸಬೇಕು ಅಮೃತವನ್ನು ಸೇವಿಸಿದರೆ ಜೀವಿತ ಸೌಖ್ಯವನ್ನು ಅನುಭವಿಸಲಿಕ್ಕೆ ಬೇಕಾದ ಉಷ್ಣರಕ್ತವನ್ನೂ ಬಲವನ್ನೂ ಉಂಟುಮಾಡುತ್ತದೆ

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ—ರಾಯಪೇಟೆ— ಮದ್ರಾಸು.

ಮಂಗಳೂರ ಪ್ರವರ್ತಕರ ದಿ ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

## ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ—

## ಜೀವಾಮೃತ

ಆಯುರ್ವೇದಾಶ್ರಮಂ,
೧೫೧, ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ ಮದ್ರಾಸು

ದ. ಕ ಜಿಲ್ಲಾ ಏಜಂಟರು —
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು



***Ready for sale !***

# SHARADA DIARY 1938

**Small size 0—4-0.**

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

**Interleaved big size DIARIES usetul for Banks & Lawyers**

ARE AVAILABLE AT 1-2-0 PER COPY

**Sharada Press, Mangalore, S. Canara.**



# HOUNSA



## ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಕಟ್ಟಾ ಬಜಾರ್, ಮಂಗಳೂರು



*Use the soaps*
KNOWN ALL OVER
***WISICO'S.***

**MINAR**
&
**TAJAMAHAL** Red
Bar Soaps.

POPULAR IN THE MARKET

*Sole Distributer-*

**P. G. KAMATH,**
Kashmir House,
Marnamikatta, MANGALORE



## ಮದನಕಾಮೇಶ್ವರಿ ಲೇಹ್ಯ

**ಅತ್ಯಂತ ಬಲಕಾರಿ.**

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0(ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ.
P O Peridepi (ನೆಲ್ಲೂರು ಜಿ.)

# ವಾರ್ತಾಪತ್ರಿಕಾ ರಹಸ್ಯಗಳು.

**ಅಮೃತಬಜಾರ್ ಪತ್ರಿಕೆಯ ಸಂಪಾದಕ— ತುಷಾರ ಕಾಂತಿಘೋಷರಿಂದ**

**ಈ ಕೆಳಗಿನ ಲೇಖವು, ಮೇಲಿನ ಮಹನೀಯರು ಕಲ್ಕತ್ತೆಯಲ್ಲಿ ವೈ. ಎಂ. ಸಿ. ಎ. ಮಂದಿರದಲ್ಲಿ ಮಾಡಿದ ಭಾಷಣದ ಸಾರಾಂಶವಾಗಿರುತ್ತದೆ.**

ಜಗತ್ತಿನ ದಿನದಿನದ ವಾರ್ತೆಗಳಿಂದ ಕೂಡಿ ಭಾರತೀಯ ವಾರ್ತಾಪತ್ರಿಕೆಗಳು ಹೇಗೆ ಸಿದ್ಧವಾಗುತ್ತಿವೆಯೆಂಬುದನ್ನು ತಿಳಿಯಲು ಅನೇಕರಿಗೆ ಕುತೂಹಲವಿರಬಹುದು. ಅತಿ ದೂರದಲ್ಲಿರುವ ಲಂಡನಿನ, ಸ್ಪೈಯಿನಿನ, ಬರ್ಲಿನಿನ, ರಷ್ಯಾದ, ಮೊಸ್ಕೋವಿನ ವಾರ್ತೆಗಳು ಅತಿ ಬೇಗನೆ ಸಂಗ್ರಹಿಸಲ್ಪಟ್ಟು, ಬೆಳಗಾಗಬೇಕಾದರೆ ಅಥವಾ ಸಾಯಂಕಾಲದೊಳಗೆ ಓದುಗರಿಗೆ ಒದಗಿಸುತ್ತಿರುವರಾದರೂ ಹೇಗೆ? ಒಂದು ಶತಮಾನದ ಹಿಂದೆ, ಹಿಂದೂದೇಶದಲ್ಲಿ ವಾರ್ತಾಪತ್ರಿಕೆಗಳು ಈ ತರದಲ್ಲಿ ಸಿದ್ಧವಾಗುತಿದ್ದಿಲ್ಲ. 'ಅಮೃತ ಬಜಾರ' ಪತ್ರಿಕೆಯು ೧೮೬೮ರಲ್ಲಿ ಶ್ರೀ ಘೋಷರ ಪ್ರಾಜ್ಞರಿಂದ ಸ್ಥಾಪನೆಯಾದದು ಬಂಗಾಳದ ಜೆಸ್ಸೂರ ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ. ಅಂದು ಹೆಚ್ಚು ವಾರ್ತಾ ಪತ್ರಿಕೆಗಳು ಇರಲಿಲ್ಲ, ಇಂದಿನ ಸೌಕರ್ಯಗಳೂ ಇದ್ದಿರಲಿಲ್ಲ. ಯಂತ್ರೋಪಕರಣಗಳು ಆಗ್ಗೆ ಬಂದಿಲ್ಲ,— ಬಂದಿದ್ದರೂ ಅವುಗಳನ್ನು ಪಡೆಯಲು ಈ ಹಳ್ಳಿಯ ಪತ್ರಿಕೆಗೆ ಅನುಕೂಲವಿರಲಿಲ್ಲ. ಆದ್ದರಿಂದ ಅಂದಿನವರು ಈ ಪತ್ರಿಕೆಯನ್ನು ಹೊರಡಿಸಲು ಬಹಳ ಪರಿಶ್ರಮವನ್ನು ಹೊಂದಬೇಕಾಗಿತ್ತು. ಶಿರೋನಾಮೆಗಳಿಗೆ ಬೇಕಾದ ಅಕ್ಷರಗಳನ್ನು ಅವರು ಆಗಿಂದಾಗ್ಗೆ ಮರದ ಮೇಲೆ ಕೆತ್ತುತಿದ್ದರೆಂದು ಹೇಳಿದರೆ ಯಾರಾದರೂ ನಂಬುವರೆ? ಛಾಪಾ ಯಂತ್ರವು ಒಂದು ಕೈಯಂತ್ರವಾಗಿದ್ದು ಅದರಿಂದ ತಾಸು ಒಂದರ ಬರೇ ೧೦೦ ಪ್ರತಿಗಳನ್ನು ಮಾತ್ರ ತೆಗೆಯಲು ಸಾಧ್ಯವಾಗುತಿತ್ತು. ಟೆಲಿಗ್ರಾಫ್ ಯಾ ಟೆಲಿಫೋನ್ ಸೌಕರ್ಯಗಳು ಆಗ ಬಂದಿರಲಿಲ್ಲ. ಅನೇಕ ತರದ ಕಷ್ಟಗಳನ್ನು ಅನುಭವಿಸಿಯಾದರೂ, ಅಂದಿನವರು ಸಾರ್ವಜನಿಕರಿಗೆ ಸಂಬಂಧಪಟ್ಟ ವಾರ್ತೆಗಳನ್ನು ಪ್ರಚಾರಪಡಿಸುವುದೇ ಧ್ಯೇಯವಾಗಿಟ್ಟು ತಮ್ಮ ಪತ್ರಿಕೆಯನ್ನು ಅವರು ನಡೆಯಿಸಿದರು. ಅಂದಿನ ದಿನಗಳಲ್ಲಿ ಸಾರ್ವಜನಿಕ ಸಭೆಗಳು ಸೇರುವುದು ತೀರ ವಿರಳವಾಗಿತ್ತು, ಆದುದರಿಂದ ಸಾರ್ವಜನಿಕ ಪ್ರಶ್ನೆಗಳಿಗೆ ಪ್ರಾಮುಖ್ಯವನ್ನು ತರುವ ಮಹಾ ಕರ್ತವ್ಯವು ವಾರ್ತಾಪತ್ರಿಕೆಗಳ ಮೇಲೆಯೇ ಹೊಂದಿಕೊಂಡಿತ್ತು. ಇಂದು ಎಲ್ಲವೂ ಮಾರ್ಪಾಟಾಗಿ ಬಿಟ್ಟಿವೆ. ಈ ಆಧುನಿಕ ಸಮಯದಲ್ಲಿ ಭಾರತೀಯ ಪತ್ರಿಕೆಗಳಿಗೂ ಇತರ ಪಾಶ್ಚಾತ್ಯ ಪತ್ರಿಕೆಗಳಿಗೂ ಹೆಚ್ಚು ವ್ಯತ್ಯಾಸವಿರುವುದಿಲ್ಲ. ಈ ವ್ಯವಸಾಯಕ್ಕೆ ಧಾರಾಳ ಧನವು ಬೇಕು ನಿಜ, ಹೆಚ್ಚಿನ ಸಂಭವಗಳಲ್ಲಿ ಇದರಿಂದ ಸ್ಥಾಪಕರಿಗೆ ಮಹಾ ನಷ್ಟಗಳು ಒದಗುತ್ತಿರುವುದಾದರೂ,— ಇದರಲ್ಲಿ ಒಂದು ಗುಣ ವಿಶೇಷವಿದೆ— ಅದು ಅತ್ಯಂತ ರೋಮಾಂಚನಮಯ ಕೆಲಸವನ್ನು ಒದಗಿಸುತ್ತದೆ. ಈ ವ್ಯವಸಾಯದೊಡನೆ ಒಬ್ಬನ ಸ್ಪರ್ಶವು ಹೆಚ್ಚಾಗುತ್ತ ಬರುತಿದ್ದ ಹಾಗೆ, ಅದರಲ್ಲಿ ಆತನ ಆಸಕ್ತಿ ಅಭಿರುಚಿಗಳೂ ಹೆಚ್ಚಾಗುತ್ತ ಬರುತ್ತವೆ. ಆತನಿಗೆ ಅದರಿಂದ ಅನೇಕ ಕೊರತೆಗಳುಂಟಾಗಬಹುದು. ಆತನು ಅದರ ಸಂಪರ್ಕಗಳನ್ನು ಕಳಚಿಬಿಡಬಹುದು, ಆದರೂ ಮತ್ತೂ ಮತ್ತೂ ಆತನು ಅದರ ಕಡೆಗೆ ಆಕರ್ಷಿಸಲ್ಪಡುತ್ತಾನೆ.

ತಂತಿ ಮೂಲಕ, ವಾಯರ್‌ಲೆಸ್ ಮೂಲಕ, ಜಗತ್ತಿನ ವಿವಿಧ ಕಡೆಗಳಲ್ಲಿರುವ ಪ್ರತಿನಿಧಿಗಳಿಂದ, ವರದಿಗಾರರಿಂದ, ಬರುವ ವಾರ್ತಾ ಭೇದಗಳು, ಸಂಪಾದಕೀಯ ಶಿಬಂದಿಯಿಂದ ಸರಿಯಾದ ರೀತಿಯಲ್ಲಿ ಬರೆಯಲ್ಪಟ್ಟು, ಶಿರೋನಾಮೆಗಳನ್ನು ಹೊಂದಿದವುಗಳಿಗೆ 'ಕೋಪಿ' ಅನ್ನುತ್ತಾರೆ. ಈ ರೀತಿಯಲ್ಲಿ ವಾರ್ತೆಯು ಮೊಳೆ ಜೋಡಿಸುವವರಿಗಾಗಿ ಸಿದ್ಧಪಡಿಸುವ ಕಾರ್ಯವು ಅತ್ಯಂತ ಕುತೂಹಲಮಯವು. ಪ್ರಿಂಟರನು ಈ ಕೋಪಿಯ ತುಂಡುತುಂಡುಗಳನ್ನು ಕಂಪೋಜಿಟರರಲ್ಲಿ ಹಂಚುವನು— ಶ್ರೇಷ್ಠ ತರಗತಿಯ ಪತ್ರಿಕಾಲಯಗಳಲ್ಲಿ ಇವರಿಗೆ ಲೈನೊ ಓಪರೇಟರರೆಂದು ಕರೆಯುತ್ತಾರೆ. ಇವರು 'ಕೋಪಿ'ಯನ್ನು ಮೊಳೆಯಲ್ಲಿ ಜೋಡಿಸುತ್ತಾರೆ. ಮೊಳೆ ಜೋಡಣೆ ಆದನಂತರ, ಅವುಗಳನ್ನು ಕಾಲಮು ರೂಪದಲ್ಲಿ ಒಂದು 'ಗೇಲಿ'ಯ ಮೇಲೆ ಇಡುತ್ತಾರೆ. ಗೇಲಿ ಅಂದರೆ ಉದ್ದವಾದ ಲೋಹದ ಹರಿವಾಣದಂತಿರುವುದು. ಅದರಲಿ ತಪ್ಪುಗಳು ಇರುವವೋ ಎಂಬುದನ್ನು ನೋಡಲು ಈ ಕಾಲಮುಗಳ ಪ್ರೂಫ್ ತೆಗೆಯಲಾಗುವುದು. ಇವುಗಳನ್ನು ಮೂಲ ಪ್ರತಿಯೊಂದಿಗೆ ಹೋಲಿಸಿ ತಿದ್ದುಪಡಿಯಾಗುವುದು, ತಿದ್ದುಪಡಿ ಕೆಲಸ ಮುಗಿದ ನಂತರ ಈ ಕಾಲಮುಗಳನ್ನು ಜೋಡಿಸಿ ಪುಟವನ್ನಾಗಿ ಮಾಡುವರು. ಇದೆ ಪುಟವು ನಂತರ ವಾರ್ತಾಪತ್ರಿಕೆಗಳಲ್ಲಿ ಕಾಣಸುತ್ತಿರುವುದು. ನಂತರ ಈ ಪುಟದ ಸುತ್ತಲು ಕಬ್ಬಿಣದ ಒಂದು ಚೌಕವನ್ನು 'ಚೆಸ್' ಹಾಕಿ ಅದರಲ್ಲಿ ಪುಟದ ರೂಪದಲ್ಲಿ ಜೋಡಿಸಿದ ಅಚ್ಚನ್ನು ಭದ್ರಪಡಿಸಿ, ಅಲ್ಲಿಂದ ಅದನ್ನು ಸ್ಟೀರಿಯೊ ಟೈಪಿಂಗ್ ಶಾಖೆಗೆ ಕೊಂಡೊಯ್ಯುವರು. ಅಲ್ಲಿ ಅದರ ಮೇಲೆ ಮ್ಯಾಟ್ ತರದ ಒಂದು ಕಾಗದವನ್ನು ಇಟ್ಟು, ಅದರ ಅಚ್ಚನ್ನು ತೆಗೆದು ನಂತರ ಒಂದು ಯಂತ್ರದಲ್ಲಿ ಆ ಅಚ್ಚನ್ನು ಇಟ್ಟು ಕರಗಿದ ಸೀಸವನ್ನು ಅದರ ಮೇಲೆ ಹೊಯಿದು, ಆ ಪುಟದ ಒಂದು ಪ್ಲೇಟು ತಯಾರಿಸುವರು. ಈ ಪ್ಲೇಟಿಗೆ ಒಂದು ಯಂತ್ರದ ಮೇಲೆ ಉರುಟಾಕೃತಿ ಕೊಟ್ಟಾದ ಮೇಲೆ, ಮುದ್ರಣ ಯಂತ್ರವಾಗಿರುವ ರೋಟರಿಯ ಮೇಲೆ ಇದನ್ನು ಜೋಡಿಸುವರು. ಈ ರೀತಿ ರೋಟರಿಯ ಮೇಲೆ ವಾರ್ತಾಪತ್ರಿಕೆಯ ಎಲ್ಲ ಪುಟಗಳು ಜೋಡಿಸಲ್ಪಟ್ಟ ನಂತರ, ಒಂದೊಂದು ತಾಸಿನೊಳಗೆ ೩೦ ಯಾ ೪೦ ಪುಟಗಳಿಂದ ಕೂಡಿದ ಸಹಸ್ರಗಟ್ಟಲೆ ವಾರ್ತಾ ಪತ್ರಿಕೆಗಳು ಅಚ್ಚಾಗಿ, ಮಡಚಿ, ಮಾರಾಟಕ್ಕೆ ಸಿದ್ಧವಾಗುವುವು.

ಶ್ರೀ ತುಷಾರ ಕಾಂತಿಘೋಸ್

ಪತ್ರಿಕಾ ಉದ್ಯಮವೆಂದರೆ, ಅವಸರದ ಸಾಹಿತ್ಯವೆಂದು ಲಾರ್ಡ್ ಮೋರ್ಲಿಯವರ ಅಭಿಪ್ರಾಯ. ಮಹತ್ತರದ ಘಟನೆಗಳ ಕುರಿತು ಎಲ್ಲರಿಗಿಂತ ಮೊದಲು ವಾರ್ತೆಗಳನ್ನು ಕೊಡುವುದೆ ಮಹಾ ಪತ್ರಿಕೆಗಳ ಮುಖ್ಯ ಧ್ಯೇಯವು. ದೊಡ್ಡ ದೊಡ್ಡ ಸಂದರ್ಭಗಳಲ್ಲಿ ವಿಶೇಷ ತರದಲ್ಲಿ ವಾರ್ತೆಗಳನ್ನು ಕೊಡುವ ಯೋಗ್ಯತೆಯ ಮೇಲೆ ಒಂದು ಪತ್ರಿಕೆಯು ಯಶಸ್ಸು ಹೊಂದಿಕೊಂಡಿದೆ. ಈ ವಿಚಾರವನ್ನು ಓದುಗರು ಪತ್ರಿಕೆಗಳಲ್ಲಿ ಓದಿ ತಿಳಿಯಬೇಕಾಗಿದೆ. ಕೆಲವು ತಿಂಗಳ ಹಿಂದೆ, ಅಷ್ಟಮ ಎಡ್ವರ್ಡ ಚಕ್ರವರ್ತಿಯರ ಪದಚ್ಯುತನದ ವಾರ್ತೆಯನ್ನು ಎಲ್ಲರಿಗಿಂತ ಮೊದಲು ಪ್ರಕಟಿಸಿ 'ಅಮೃತ ಬಜಾರ್' ಪತ್ರಿಕೆಯು ಮಹಾ ಪ್ರಶಸ್ತಿಯನ್ನು ಪಡೆಯಿತು.

ಈಗ ಪತ್ರಿಕೆಗಳಿಗೆ ವಾರ್ತೆಗಳನ್ನು ಸಂಗ್ರಹಿಸುವ ಉದ್ಯೋಗಸ್ಥರ ಕುರಿತು ಆಲೋಚಿಸೋಣ. ಒಂದು ಪತ್ರಿಕೆಯ ಯಶಸ್ಸು ಇವರ ಮೇಲೆ ಬಹಳ ಮಟ್ಟಿಗೆ ಹೊಂದಿಕೊಂಡಿದೆ. ಇವರಲ್ಲಿ, ಬಹೀರ್ ದೇಶಗಳಲ್ಲಿರುವ ವರದಿಗಾರನ ಕೆಲಸವು ಅತಿ ವಿಶಿಷ್ಟವೆನಿಸುತ್ತದೆ. ನಂತರ, ವಾರ್ತಾವರದಿಗಾರನ ಕೆಲಸವು ಅತ್ಯಂತ ಸಾಹಸವನ್ನು ವಹಿಸುತ್ತದೆ. ಆತನಲ್ಲಿ ಮುಖ್ಯವಾಗಿ ಧೈರ್ಯವೂ ಯೋಗ್ಯತೆಯೂ ಇದ್ದರೆ, ಆತನು ಮಹಾ ಕೀರ್ತಿಯನ್ನು ಗಳಿಸಬಹುದು. ಆತನಿಗೆ ಅನೇಕ ಸುಸಂದರ್ಭಗಳು ಒದಗುವವು. ಕಾರಣ, ಆತನಿಗೆ ಮಹಾಪುರುಷರು ಭೇಟಿ ಕೊಡುತ್ತಿರುವರು. ಈ ಭೇಟಿಯಿಂದ ತನ್ನ ಪತ್ರಿಕೆಗಾಗಿ ಯಾವ ತರದ ಉಪಯೋಗವನ್ನು ಪಡೆಯಬಹುದೆಂದು ಆತನು ಅರ್ಥೈಸಬೇಕಾಗಿದೆ. ಆತನು, ತನ್ನಲ್ಲಿ ಇತರರು ಇಟ್ಟಿರುವ ವಿಶ್ವಾಸವು ಕಳೆದುಹೋಗದಂತೆ ವರ್ತಿಸಬೇಕು. ಆತನಲ್ಲಿ ವಿಶೇಷತರದ ಗೌರವಭಾವವು ಇರಬೇಕು. ಕಾರಣ, ಕೆಲ ವಾರ್ತೆಗಳನ್ನು ಬಚ್ಚಿಡುವಂತೆ ಅನೇಕರು ಆತನಲ್ಲಿಗೆ ಬರುವುದುಂಟು.

ವಾರ್ತಾವರದಿಗಾರರು ಜಗತ್ತಿನ ಜ್ಞಾನ ಹೊಂದುವ ಮೊದಲು, ಆತನು ಅನೇಕ ವಿಧಗಳಲ್ಲಿ ತರಬೇತಿ ಹೊಂದಬೇಕಾಗಿದೆ. ಅವನು ಅತಿ ಜಾಗರೂಕತೆಯಿಂದ ವಾರ್ತೆಗಳನ್ನು ವರದಿ ಮಾಡಬೇಕು. ವಾರ್ತೆಗಳು ಸತ್ಯವಾದವುಗಳೆಂದು ಖಚಿತವಾಗುವ ಮೊದಲು ಅವುಗಳು ಪ್ರಕಟವಾಗಬಾರದು. ವ್ಯಾಖ್ಯಾನವಾಗಿ— ಟೀಕೆ, ತಕ್ಕರಾರು ಇತ್ಯಾದಿಗಳನ್ನು ವರದಿ ಮಾಡುವಾಗ ಅವುಗಳಿಂದ ತಪ್ಪಭಿಪ್ರಾಯಗಳು ಉಂಟಾಗದಂತೆ ಜಾಗರೂಕರಾಗಿರಬೇಕು. ವಾರ್ತಾ ವರದಿಗಾರರು ಬುದ್ಧಿಚಾತುರ್ಯದಿಂದ ಕೂಡಿದವರಾಗಿರಬೇಕು. ಜನರಿಗೆ ಬೇಕಾದ ರೀತಿಯಲ್ಲಿ ವಾರ್ತೆಗಳನ್ನು ಕೊಡುವವರಾಗಿರಬೇಕು.

ಪತ್ರಿಕಾಲಯದಲ್ಲಿ ಉಪಸಂಪಾದಕರು ಪ್ರಾಮುಖ್ಯ ವ್ಯಕ್ತಿಗಳು. ಒಂದು ಪತ್ರಿಕೆಯ ರೂಪವು ಅವರ ಮೇಲೆ ಹೊಂದಿಕೊಂಡಿದೆ. ಯಾವ ವಾರ್ತೆಗಳನ್ನು ಹೇಗೆ ಕೊಡಬೇಕು, ಯಾವ ವಾರ್ತೆಗಳನ್ನು ಕೊಡಬಾರದು, ಯಾವ ಪಂಕ್ತಿಯು ಪ್ರಾಮುಖ್ಯವಾದದ್ದು, ಜನರನ್ನು ಆಕರ್ಷಿಸುವರೆ ವಾರ್ತೆಗಳನ್ನು ಹೇಗೆ ಕೊಡಬೇಕು, ಇತ್ಯಾದಿ ವಿಷಯಗಳನ್ನು ಇತ್ಯರ್ಥಿಸುವವರು ಇವರು. ವಾರ್ತೆಗಳನ್ನು ಆರಿಸುವುದರಲ್ಲಿ ಇವರು ಅತ್ಯಂತ ಜಾಣರಾಗಬೇಕು. ಸ್ಥಳೀಯ ವಾರ್ತಾ ವರದಿ, ತಂತಿ ಮೂಲಕ ಬಂದ ವಾರ್ತೆ, ಕೇಬಲ್ ಮೂಲಕ ಬಹೀರ್ ದೇಶಗಳಿಂದ ಬಂದ ವಾರ್ತೆ, ವಿವಿಧ ವಾರ್ತಾ ಸಂಸ್ಥೆಗಳಿಂದ ಬಂದ ವಾರ್ತೆ, ಇವುಗಳ ರಾಶಿಯಿಂದ ಬೇಕಾದ ಸಾರ್ವಜನಿಕ ಅಭಿರುಚಿಯ ವಾರ್ತೆಗಳನ್ನು ಆರಿಸುವವರು— ಈ ಉಪಸಂಪಾದಕರು. ಈ ಎಲ್ಲಾ ಕೆಲಸವನ್ನು ಅವರು ಅತಿ ಅವಸರದಲ್ಲಿ ಮಾಡಬೇಕಾಗಿದೆ. ಕೆಲವೆ ತಾಸಿನೊಳಗೆ ಒಂದಿಷ್ಟು ತಪ್ಪಿಲ್ಲದೆ ಈ ಕೆಲಸವು ಆದರಿಂದಾಗಬೇಕು. ತಂತಿಗಳು ಪರಿಪೂರ್ಣವಾಗಿ ಬರುವುದಿಲ್ಲ. ಕಲವು ಬಾರಿ ಕೆಲವೆ ಶಬ್ದಗಳಿಂದ ಮಾತ್ರ ಕೂಡಿದ ತಂತಿಗಳು ಬರುವುದುಂಟು. ಅವುಗಳನ್ನು ಅರ್ಥ ಸರಿಯಾಗುವಂತೆ ಬರೆಯುವ ಕೆಲಸವು ಉಪಸಂಪಾದಕರದು. ಕೆಲವು ಬಾರಿ ಈ ಉಪಸಂಪಾದಕರ ಅಜ್ಞಾನದಿಂದ ವಾರ್ತೆಗಳು ತಪ್ಪಾದ ರೀತಿಯಲ್ಲಿ, ಹಾಸ್ಯಾಸ್ಪದ ರೀತಿಯಲ್ಲಿ ಪ್ರಕಟವಾಗುವುದುಂಟು. ಕೆಲವು ಬಾರಿ ಮುದ್ರಣದ ತಪ್ಪಿನಿಂದ ಕೆಲವು ಹಾಸ್ಯಮಯ ತಪ್ಪುಗಳಾಗುವುದುಂಟು. ಇದಕ್ಕೆ 'ಪ್ರಿಂಟರ್ಸ್ ಡೆವಿಲ್' ಎಂದು ಕರೆಯುತ್ತಾರೆ. ಆತನು ಸಮಯ ಈತನು ಯಾರಿಗೂ ತಿಳಿಯದಂತೆ ತನ್ನ ಕೆಲಸವನ್ನು ನಡೆಯಿಸಿಬಿಡುತ್ತಾನೆ.

ಇತರ ದೇಶಗಳಲ್ಲಿರುವಂತೆ, ಭಾರತೀಯ ಪತ್ರಿಕೆಯು ವಿವಿಧ ತರದ ಅಭಿರುಚಿಯುಳ್ಳ ಭಾವಗಳಿರುವ ಜನರನ್ನು ಸಮಾಧಾನಪಡಿಸಬೇಕಾಗಿದೆ. ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ನಡೆಯುವ ವಾರ್ತಾಪತ್ರಿಕೆಗಳಿಲ್ಲ. ಆದರೆ, ಹಿಂದೂದೇಶದ ಪತ್ರಿಕೆಗಳು ಈ ವಿಚಾರದಲ್ಲಿ ಅತ್ಯಂತ ಶ್ರೇಯಸ್ಕರ ರೀತಿಯಲ್ಲಿ ಕಾರ್ಯಗೈಯುತಿದ್ದಾವೆಂದು ಹೇಳಬಹುದು. ಇತರ ದೇಶದ ಪತ್ರಿಕೆಗಳೊಡನೆ ನಮ್ಮವುಗಳನ್ನು ಹೋಲಿಸಿದರೆ, ನಮ್ಮ ಮುಂದೆ ಅನೇಕ ಅಡ್ಡಂತರಗಳಿರುವುದು ಕಾಣಸುತ್ತದೆ. ಆದರೂ ಭಯಭೀತಿಯಿಲ್ಲದೆ ನಾವು ಕಾರ್ಯನಿರ್ವಹಿಸುತಿದ್ದೇವೆ. ಆದರ್ಶ ರೀತಿಯಲ್ಲಿ ಪತ್ರಿಕೆಯನ್ನು ನಡೆಸುವುದನ್ನು ಧ್ಯೇಯವಾಗಿಟ್ಟು, ನಾವು ಮುಕ್ಕಡೆ ಮುಂದೆ ಸಾಗುತಿದ್ದೇವೆ.

ಈಗ ಸಂಪಾದಕರ ವಿಚಾರ,— ಇವರು ಪುರಸೊತ್ತು ಇಲ್ಲದ ಜನರು. ಬೆಳಗಿನ ಜಾವದಿಂದ ಮಧ್ಯರಾತ್ರಿಯ ವರೆಗೆ ದುಡಿಯಬೇಕು. ಮಧ್ಯರಾತ್ರಿ ನಂತರ ಶಯನ ಹಿಡಿದರೂ ಕೂಡ ಆಗಲೂ ಇವರನ್ನು ಎಚ್ಚರಗೊಳಿಸುವವರಿದ್ದಾರೆ. ಮಲಗಿದ ಮೇಲೂ, ಇವರೊಡನೆ ಟೆಲಿಫೋನ್ ಮೂಲಕ ಕೆಲವರು ಹಲಕೆಲವು ವಿಷಯಗಳ ಕುರಿತು ವಿಚಾರಿಸುವುದುಂಟು. ತನ್ನದು ಲೇಖವೊಂದು ಪ್ರಕಟವಾಗಿರುತ್ತದೋ?, ನಾಳೆ ಸ್ಟೀಮರು ಎಷ್ಟು ಗಂಟೆಗೆ ತಲುಪುವುದು, ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೊಡಲು, ಸಂಪಾದಕರು ನಿದ್ರೆಯಿಂದ ಎಚ್ಚರ ಹೊಂದಬೇಕಾಗುತ್ತದೆ.

ಸಂಪಾದಕರೆಂದರೆ, ಅವರು ಎಲ್ಲಾ ವಿಷಯಗಳ ಕುರಿತು ಒಂದು ಜ್ಞಾನಕೋಶವೆ ಆಗಿರಬೇಕು. ಆತನು ಎಲ್ಲದರಲ್ಲಿಯೂ ಜ್ಞಾನಿಯಾಗಿರುವುದರಿಂದ, ಆತನ ಭೇಟಿ ಮಾಡಿದರೆ ಯಾವತರದ ಸಮಸ್ಯೆಗಳ ಸಾಧಾರಣೆಯಾಗುವುದೆಂದು ಜನರ ನಂಬುಗೆ. ಇದರಿಂದ ಸಂಪಾದಕರು ಕೆಲವು ವಿಚಿತ್ರ ತರದ ಕೆಲಸದಲ್ಲಿ ತೊಡಗಬೇಕಾಗುತ್ತದೆ. ಆದರೂ ಭಾರತೀಯ ಪತ್ರಿಕಾ ಸಂಪಾದಕರು ಜನತೆಯ ಸೇವೆಯನ್ನು ತಮ್ಮಿಂದಾ ಕೈಲಾದಮಟ್ಟಿಗೆ ಆಗುತ್ತಿರುವ ತರದಲ್ಲಿ ಶ್ರಮಿಸುತ್ತಿದ್ದಾರೆ. ಜನತೆಗೆ ಎಲ್ಲಾ ಪ್ರಸಂಗಗಳಲ್ಲಿ ಸಹಾಯ ದೊರಕಿಸುವರೆ ಅವರು ಸದಾಸಿದ್ಧರೆ ಆಗಿರುತ್ತಾರೆ.

---

## ಬ್ರಿಟನ್— ಅಮೇರಿಕನ್ ಸಂಬಂಧ

ವ್ಯಾಪಾರ ವಿಚಾರದಲ್ಲಿ ಬ್ರಿಟನಿಗೆ ಅಮೇರಿಕದೊಡನೆ ಪ್ರತಿಸ್ಪರ್ಧಿಸಲು ಸಾಧ್ಯವಿಲ್ಲದಾಗಿ ಅಮೇರಿಕಾಕ್ಕೆ ಆಸ್ಪದ ದೊರೆತರೆ ಬ್ರಿಟನಿನ ವ್ಯಾಪಾರ ಸ್ಥಿತಿಯು ನಷ್ಟವಾಗದ ಅದಕ್ಕಾಗಿ ಬ್ರಿಟನು, ಅಮೇರಿಕಾಕ್ಕೆ ವ್ಯಾಪಾರ ಪ್ರಪಂಚದಲ್ಲಿ ಹೆಚ್ಚಿನ ಅವಕಾಶ ದೊರಕದಂತೆ, ಬ್ರಿಟಿಷ ಸರಕಾರವು ಸಾಧಿಸಬೇಕೆಂದು, ಬ್ರಿಟನಿನ ವ್ಯಾಪಾರಿಕ ಬೋರ್ಡಿನವರು ತಮ್ಮ ಸರಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿರುವರು— ಅವರ ಈ ಸೂಚನೆಯು ಮನ್ನಿಸಲ್ಪಡುವುದು ಅಮೇರಿಕಾಕ್ಕೆ ಅವಕಾಶ ದೊರಕುವ ಮೊದಲೇ ತಮ್ಮ ಸ್ಥಿತಿಯನ್ನು ಭದ್ರಗೊಳಿಸಬೇಕು, ಬ್ರಿಟನಿಗೆ ಹಿತಕರವೆನಿಸುವ ರೀತಿಯಲ್ಲಿ ಕ್ರಿಂವುಗಳನ್ನು ಹೆಚ್ಚಿಸಿ, ಹೀಗೆ ಒಮ್ಮೆ ತಮ್ಮ ಸ್ಥಿತಿಯನ್ನು ಭದ್ರಪಡಿಸಿದ ನಂತರ, ಅಮೇರಿಕಾದೊಡನೆ ವ್ಯಾಪಾರ ಒಪ್ಪಂದ ಮಾಡುವ ಕುರಿತು ವಿಚಾರವೆತ್ತಬಹುದೆಂದು ಬೋರ್ಡಿನವರ ಸೂಚನೆ. ಅಮೇರಿಕಾಕ್ಕೆ ಆಸ್ಪದವು ದೊರಕಿದರೆ,— ಅದು ವ್ಯಾಪಾರ ಕ್ಷೇತ್ರದಲ್ಲಿ ಬ್ರಿಟನಿಗೆ ಮೃತ್ಯುಪ್ರಾಯವಾಗುವುದು. ಬ್ರಿಟನಿನ ಮಹಾ ಪ್ರತಿಸ್ಪರ್ಧಿಯಾಗುವುದು ಅಮೇರಿಕಾದೊಡನೆ ಸಾವಧಾನಿನ ಮಹಾ ಸಂಗ್ರಹವಿದ ಅವುಗಳನ್ನು ಅವರು ಬ್ರಿಟನಿನ ವಸಾಹತುಗಳಲ್ಲಿ ಹಾಕಬಹುದು, ಬ್ರಿಟನಿನೊಡನೆ ಪ್ರತಿಸ್ಪರ್ಧಿಸಿ, ಬ್ರಿಟನಿನ ಡೊಮಿನಿಯನ್ಸ್ ಮಾರ್ಕೆಟುಗಳನ್ನು ಅವರಿಂದ ಕಿತ್ತುಕೊಳ್ಳಬಹುದು. ಅಮೇರಿಕಾಕ್ಕೆ ಈ ತರದ ಆಸ್ಪದವೆ ದೊರಕದಂತೆ ಸಾಧಿಸಬೇಕೆಂದು ಬ್ರಿಟಿಷ ಸರಕಾರವು ಯತ್ನಿಸಬೇಕೆಂದು ವ್ಯಾಪಾರಿ ಮಂಡಳ ಸರಕಾರವನ್ನು ಒತ್ತಾಯಪಡಿಸುತ್ತದೆ.

## ನೋಟೀಸು

### ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಬಡ್ಡಿ ವಗೈರೆಗಳನ್ನು ರಜಿಸ್ತ್ರಿಕೊಟ್ಟರೂ ಈ ವರೆಗೆ ಕೊಡದೆ ಇದ್ದುದರಿಂದ ಸದರಿ ಸಾಲಗಳಲ್ಲಿ ಜವಾಬ್ದಾರಿ ಇರುವ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 22ನೇ ಶನಿವಾರ ಮಧ್ಯಾಹ್ನಘಂಟೆ 1 30ಕ್ಕೆ ಅಥವಾ ಬೇಂಕಿಗೆ ಯುಕ್ತತೋರುವ ಬೇರೆ ದಿವಸಗಳಲ್ಲಿ ಪುನಃ ನೋಟಿಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು

ಸಾಲದ ನಂಬ್ರ 530/35 ಪಡೆದವರ ಹೆಸ್ರು ವಿಳಾಸ—ಪಿ ಕೆ. ಎಸ್. ಅಬ್ದುಲ್ಲಾ ಮುಸಲಿಯಾರ್ ಇಬ್ರಾಹಿಮ್ ಹಕೀಮರ ಮಗ, ಮಂಜೇಶ್ವರ, ಅಸ್ಲು ರೂ. 30

ಸಾಲದ ನಂ. 281/36 ಶೀಶಪ್ಪ, ಫಕೀರ ಪೂಜಾರಿ ಅಳಿಯ, ಕಂಕನಾಡಿ ಗೇಟಿನ ಬಳಿ, ಕಂಕನಾಡಿ ಪೋಸ್ಟು ಅಸ್ಲು ರೂ 25

ಸಾಲದ ನಂ 1127/36-2072/36 ಪಡೆದವರ ಹೆಸರು ವಿಳಾಸ—ಎಮ್ ಮೈದಿನ್ ಬಿನ್ ಅಹಮದ್, C/o ಮೊಳದಮ್ ಮೈದಿನ್ ಹಾಜಿ, ಲಕ್ಷ್ಮಿ ಬಜಾರ್, ಬಂದರ್ ಮಂಗಳೂರು, ಅಸ್ಲು ರೂ. 147

ಸಾ ನಂಬ್ರ 1464/36 ಜೆ ಹಸಿನಬ್ಬ ಬ್ಯಾರಿ, ಅಬ್ಬು ಬ್ಯಾರಿಗಳ ಮಗ, ಕಂಕನಾಡಿ ಪೋಸ್ಟು ಅಸ್ಲು ರೂ 26.

ಸಾ ನಂಬ್ರ 1967/36 ಕೆ ಮಹಾಬಲ ಶೆಟ್ಟಿ, ಅಚ್ಚಪ್ಪ ಶೆಟ್ರ ಮಗ, C/o Ishwara Photo Studio, ಗಡ್ಡಕೇರಿ ಮಂಗಳೂರು. ಅಸ್ಲು ರೂ. 110.

ಸಾ. ನಂ. 1121/35 ಪಡಕೊಂಡವರ ಹೆಸರು ವಿಳಾಸ—ಅಹಮ್ಮದ ಬ್ಯಾರಿ, ಹಸನೆ ಬ್ಯಾರಿಗಳ ಮಗ, ಪಡುಗ್ರಾಮ, ಫರಂಗಿಪೇಟೆ ಪೋಸ್ಟು ಅಸ್ಲು ರೂ. 75

Office of the Bank, Mangalore, 11—1—38 — P Narasimha Nayak, Agent,

---

## The Prabhakara Bank,
### MOODABIDRI.
### ದಿ ಪ್ರಭಾಕರ ಬೇಂಕ್, ಮೂಡಬಿದ್ರಿ.

ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ—ಈ ಕೆಳಗೆ ಕಾಣಿಸಿದ ಹೆಸರಿನವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಬಡ್ಡಿ ಮರುಬಡ್ಡಿ ಸಮೇತ ತಾ 28—1—1938ರೊಳಗೆ ಬೇಂಕಿಗೆ ಪಾವತಿಮಾಡದೆ ಇದ್ದಲ್ಲಿ ಅವರು ಈ ಬೇಂಕಿನಲ್ಲಿ ಅಡವಿಡಲಾದ ನಗ ವಗೈರೆಗಳನ್ನು ತಾರೀಕು 12—2—1938ನೇ ಶನಿವಾರ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಸದ್ರಿ ಹಣ ಪಡಕೊಂಡವರಿಗೆ ಕ್ರಮವಾಗಿ ಕೊಟ್ಟ ರಿಜಿಸ್ತ್ರಿ ನೋಟೀಸುಗಳು ಕೆಲವು ಜ್ಯಾರಿಯಾಗಿಯೂ ಕೆಲವು ಜ್ಯಾರಿಯಾಗದೆ ವ್ಯಾಪಾಸು ಬಂದಿರುತ್ತವೆ ವಿಸ್ತಾರ ವಿವರಗಳನ್ನು ಬೇಂಕಿನಿಂದ ತಿಳಕೊಳ್ಳಬಹುದು

ಸಾಲದ ನಂ 1831/19 2 35 ಕಾರ್ಕಳ ತಾಲೂಕು ಪುಚ್ಚಮೊಗ್ರು ಗ್ರಾಮದ ಆಲಂಗಾರು ಗುತ್ತು ಅಂತಕ್ಕೆ ಸೆಟ್ಟೀರ ಮಗ ರಾಮಣ್ಣ ಸೆಟ್ಟಿ, ಅಸ್ಲು ರೂ 105—0—0

ಸಾ ನಂ 2084/2 5 35 ಕಾರ್ಕಳ ತಾಲೂಕು ಪ್ರಾಂತ್ಯ ಗ್ರಾಮದ ಕೇರಿ ಕಡೆಮನೆ ದೇವಪ್ಪಾಚಾರಿಗಳ ಮಗ ಜನಾರ್ಧನ ಆಚಾರಿ ಅಸ್ಲು ರೂ 18—0—0

ಸಾ ನಂ 30/36—8 1 36 ಕಾರ್ಕಳ ತಾಲೂಕು ಪ್ರಾಂತ್ಯ ಗ್ರಾಮದ ಕಾಂತು ದೇವಡಿಗರ ಅಳಿಯ ಐತಪ್ಪ ದೇವಡಿಗ, ಅಸ್ಲು ರೂ 20—0—0

ಸಾ ನ 140/36-7-2 36 ಕಾರ್ಕಳ ತಾಲೂಕು ಪಾಲ್ಡಡಿ ಬಸ್ತಿ ಭೀಮಣ್ಣ ಇಂದ್ರರ ಮಗ ಶಾಂತಿರಾಜ ಇಂದ್ರ ಅಸ್ಲು ರೂ 8

ಸಾ ನ 168/36-15 2-36 ಮಂಗ್ಳೂರು ತಾಲೂಕು ಮೂಲ್ಕಿ ಮುತ್ತಯ್ಯ ಪೂಜಾರಿಗಳ ಮಗ ಕೃಷ್ಣಪ್ಪ, ಅಸ್ಲು ರೂ 15

ಸಾ ನ 384/36-20 3 36 ಕಾರ್ಕಳ ತಾಲೂಕು ಬೆಳುವಾಯಿ ಅರಂತಬೆಟ್ಟು ನರಸಿಂಹ ಪ್ರಭುಗಳ ಮಗ ಶ್ರೀಧರ ಪ್ರಭು ಅಸ್ಲು ರೂಪಾಯಿ 42

ಸಾ ನಂ 560/36-19 5 36 ಕಾರ್ಕಳ ತಾಲೂಕು ಮೂಡಬಿದ್ರಿ ಆಲಂಗಾರು ದುಮಿಂಗ ಸೋಜರ ಮಗ ಪೇದ್ರು ಸೋಜ ರೂ 8

ಸಾ ನ 570/36 21 5 36 ಕಾರ್ಕಳ ತಾಲೂಕು ಮೂಡಬಿದ್ರಿ ಕೋಟೆಬಾಗ್ಲು ಇದಿನೆ ಬ್ಯಾರಿಗಳ ಮಗ ಶೇಕ ಬ್ಯಾರಿ, ರೂ 6

ಸಾ ನಂ 622 36/29 5-36 ಕಾರ್ಕಳ ತಾಲೂಕು ಇರ್ವತ್ತೂರು ಮೂಡಿಕೋಡಿ ಮುಂಡಾಜಾರಿಗಳ ಮಗ ಅನಂತಾಚಾರಿ, ರೂ 5,

ಸಾ ನಂ 627 36/1-6 36 ಕಾರ್ಕಳ ತಾಲೂಕು ಮೂಡಬಿದ್ರೆ ಕೋಟೆಬಾಗ್ಲು ಅಮ್ಮು ಪೂಜಾರಿಗಳ ಅಳಿಯ ಸೋಮಯ್ಯ ಪೂಜಾರಿ ಅಸ್ಲು ರೂ 5

ಸಾ ನಂ 982 36/28 8-36 ಕಾರ್ಕಳ ತಾಲೂಕು ಬೆಳ್ವಾಯಿ ಗ್ರಾಮದ ಹಣಜೆ ದೇಜು ಸೆಟ್ಟಿ ಅಳಿಯ ಮಂಜಯ್ಯ ಸೆಟ್ಟಿ, ರೂ 9

ಸಾ ನಂಬ 21 37/8 1 37 ಕಾರ್ಕಳ ತಾಲೂಕು ತಿರ್ತಾಡಿ ಹೊಸಮನೆ ಜಾರು ಸೆಟ್ಟಿ ಅಳಿಯ ಬಾಬ ಸೆಟ್ಟಿ ರೂ 5

**M. Anantharaya V. Prabhu,**
Proprietor

---


# 7 O'CLOCK
## SLOTTED BLADE

ಸೆವೆನೋಕ್ಲಾಕ್ ಮಾರ್ಕಿನ ಬ್ಲೇಡುಗಳು ಅತಿ ಅಗ್ಗವಾದ ಅತ್ಯುತ್ತಮ ಬ್ಲೇಡ ಗಳು ಅವುಗಳ ಬಾಯಿ ಒಳ್ಳೆ ಹರಿತವಾಗಿದ್ದು, ಚೊಕ್ಕಟವಾದ ಉರಿಯಿಲ್ಲದ ಕ್ಷೌರಗಳನ್ನು ಕೊಡಬಲ್ಲುವು ಅವುಗಳ ಬಾಳ್ವಿಕೆ ಬಹಳ, ಹಳೆ ತರದ ಬ್ಲೇಡುಗಳಿಗಿಂತ ಇವು ಉತ್ತಮವಾದುವುಗಳು

**8 ಆಣೆಗಳಿಗೆ ಬ್ಲೇಡುಗಳು 10**

707


---


# Combined Booking Agency Mangalore.
# Joint Booking Office, Kodialbail.

### ಪ್ರಯಾಣಿಕರಲ್ಲಿ ನಮ್ಮ ವಿನಂತಿ

1st Class ಸೀಟಿನಲ್ಲಿ ಕುಳಿತುಕೊಳ್ಳಲು ಇಚ್ಛಿಸುವ ಮಹಾಶಯರಿಗೆ ಸರ್ವಸಾಧಾರಣ 1st Class ಸೀಟ ಗಳು ನಮ್ಮ ಬಸ್ಸುಗಳಲ್ಲಿ ಸಿಗ ವುದಿಲ್ಲವಾಗಿಯೂ ಅಂಥಾ ಸೀಟುಗಳಲ್ಲಿ ಇತರ ಪ್ರಯಾಣಿಕರು ಕುಳಿತುಕೊಂಡು ತಮಗೆ 1st Classನ ಉಪಯೋಗವನ್ನು ಪಡೆಯಲಾಗುವುದಿಲ್ಲವೆಂದೂ ಆದಕಾರಣ 1st Class ಸೀಟುಗಳಿಗೆ ಈ ಮುಂಚಿನಂತೆ ದರವನ್ನು ಹೆಚ್ಚಿಸಿ, 1st Class ಸೀಟುಗಳೆಂದು ಪ್ರತ್ಯೇಕಿಸಬೇಕೆಂದು ಅನೇಕ ಯೋಗ್ಯ ಮಹಾಶಯರು ಒತ್ತಾಯ ಪಡಿಸಿರುವ ಕಾರಣ, ನಮ್ಮ ಸ್ವಂತ ಪ್ರಯೋಜನಕ್ಕಲ್ಲದಿದ್ದರೂ ಯೋಗ್ಯ ಪ್ರಯಾಣಿಕರ ಮನಸ್ಸನ್ನು ನೋಯಿಸದಂತೆ ಈ ರೀತಿ ಇದೇ ತಾ 1—1—1938ರ ಲಾಗಾಯತು 1st Class ಸೀಟುಗಳೆಂದು ಪ್ರತ್ಯೇಕಿಸಿ 2ನೇ ತರಗತಿಯ ಟಿಕೇಟು ಮೌಲ್ಯದ ¼ ಪಾಲು ದರವನ್ನು ಮಾತ್ರ ಹೆಚ್ಚಿಸಿರುವೆವು

ಆದಕಾರಣ ದಯಮಾಡಿ ಪ್ರಯಾಣಿಕರೆಲ್ಲರೂ 2ನೇ ತರಗತಿಯ ಟಿಕೇಟುಗಳನ್ನು ಪಡಕೊಂಡು 1st Class ಸೀಟಿನಲ್ಲಿ ಕುಳಿತುಕೊಳ್ಳಬಾರದೆಂದ ನಮ್ಮ ಸವಿನಯ ವಿನಂತಿ

***Joint Managers,***

THE Joint Booking Office, KODIALBAIL. — THE Combined Booking Agency, MANGALORE.

# ರಷ್ಯಾ ದೇಶದ ಇಂದಿನ ವಿಚಾರ

## ಅಲ್ಲಿ ಹಸಿದವನಿಲ್ಲ—ಬದಲು ಬೊಜ್ಜು ಬೆಳೆಯಹತ್ತಿದೆ!

### ಮೋಟರ ಕಾರುಗಳು ಮರ್ಯಾದೆಯ ಕುರುಹು.

ರಷ್ಯಾದೇಶದಲ್ಲಿ ಧನಿಕರು ಬಡವರೆಂದಿಲ್ಲದೆ ಎಲ್ಲರೂ ಸಮಾನರು, ಎಲ್ಲರಿಗೂ ಸಮಾನ ಹಕ್ಕು ಎಂದು ನೀವು ತಿಳಿದಾಗಲೇ ನಿಮಗೆ ಆ ದೇಶದ ಕುರಿತಾಗಿ ಅದೆಷ್ಟು ಆಶ್ಚರ್ಯವಾಗುವದೆಯೋ ಅಷ್ಟೇ-ಅಭಿಮಾನವೂ ಕುತೂಹಲವೂ ಉಂಟಾಗದೆ ಇರದು. ಅಂತಿರಲು ಇಂದಿನ ದಿನದ ರಶ್ಯಾದ ಕುರಿತಾದ ಕೆಲ ವಿಚಾರಗಳನ್ನು ತಿಳಿಯುವ ಆಶೆಯಾಗದಿರದು

**ಧನಿಯ ಸಂಬಳ:—**

ಪ್ರತಿಯೊಂದು ಕಾರ್ಖಾನೆಯಲ್ಲಿ ಹೆಚ್ಚು ಕಡಿಮೆ ೫೦೦ ಮಂದಿ ಕೆಲಸಗಾರರಿರುವರು. ಇಷ್ಟು ಮಂದಿಯ ಮೇಲ್ವಿಚಾರವನ್ನು ನೋಡುವ ಧನಿಯ ಸಂಬಳವು ಸಾಮಾನ್ಯ ಕೆಲಸಗಾರನೊಬ್ಬನ ಕನಿಷ್ಠ ಸಂಬಳದ ಹದಿಮೂರು ಪಾಲಷ್ಟು ಹೆಚ್ಚಿಗೆ ಇರುತ್ತದೆ ಒಬ್ಬ ಕೆಲಸಗಾರನ ಒಂದು ವಾರದ ಸಂಬಳ ೨ ಪವನುಗಳಾದರೆ ಕಾರ್ಖಾನೆಯ ಮೆನೇಜರನ ಸಂಬಳ ೨೬ ಪವನುಗಳು ಅಲ್ಲದೆ, ಕಾರ್ಖಾನೆಯನ್ನು ನಡೆಸುವ ಸರಕಾರವು ಆತನಿಗೊಂದು ಮೋಟರ್ ಕಾರನ್ನೂ ಒದಗಿಸಿಕೊಡುತ್ತದೆ ಅದರಲ್ಲಾತನು ಆನಂದದಿಂದ ತಿರುಗಾಡಬಹುದು

**ಇದು ಕೆಲಸಗಾರರಿಗೆ ಗೊತ್ತು—**

ಕೆಲಸಗಾರರಿಗೆ ಅವರ ಮೆನೇಜರನ ಸಂಬಳದ ಕುರಿತಾಗಿ ತಿಳಿದೇ ಇರುತ್ತದೆ ಕಾರಣ, ಈ ವಿಚಾರವನ್ನು ಕಾರ್ಖಾನೆಯ ನೋಟೀಸು ಬೋರ್ಡಿನಲ್ಲಿ ಪ್ರಚಾರಪಡಿಸುವರಲ್ಲದೆ, ಅವನಿಗೆ ಸಂಬಳ ಹೆಚ್ಚಿಸಲ್ಪಟ್ಟರೆ ಅದನ್ನೂ ಅದರ ಕಾರಣವನ್ನೂ ಪ್ರಕಟಿಸುವರು ಕೆಲಸಗಾರರು ಕೆಲವೊಮ್ಮೆ ಮೆನೇಜರನ ಸಂಬಳದ ಕುರಿತಾಗಿ ಆಡಿಕೊಳ್ಳುವುದಿದೆ ಆದರೆ ಆ ರೀತಿ ಗಟ್ಟಿಯಾಗಿ ನುಡಿವ ಧೈರ್ಯವಿಲ್ಲ ಕಾರಣ ಮೆನೇಜರನ ಕೆಲಸದ ವಿಚಾರ ಅವರಿಗೆ ತಿಳಿಯದ ಅಲ್ಲದೆ ಅವರಿಗೆ ತೃಪ್ತಿ ಇದ್ದರೂ ಉಣ್ಣಲು ಕೊಡಕಿಲ್ಲ ಮಾನವನಿಗೆ ಅದೆಷ್ಟು ಅನುಕೂಲ ದೊರೆತರೂ, ಅತೃಪ್ತಿ ಮಾಯವಾಗುವುದಿಲ್ಲ!

**ಉತ್ತಮ ವಸ್ತುಗಳು—**

ಇದೀಗ ಅತೀ ಉತ್ತಮವಾದ ವಸ್ತುಒಡವೆಗಳು ರಷ್ಯಾದೇಶದಲ್ಲಿ ತಯಾರಾಗುತ್ತಿವೆ. ಅದನ್ನು ತಯಾರಿಸುವ ಕಾರ್ಖಾನೆಯ ಹೆಸರೇ ಅದರ 'ಟ್ರೇಡ್ ಮಾರ್ಕ್' ಆಧರಿಸಿದ ಜನರಿಗೆ ಯಾವ ಕಾರ್ಖಾನೆಯು ಉತ್ತಮ ವಸ್ತುಗಳನ್ನು ತಯಾರಿಸುತ್ತಿದೆಯೆಂದು ತಿಳಿಯಲು ಬಹಳ ಅನುಕೂಲ ಉದಾಹರಣೆಗಾಗಿ ಲೆನಿನ್‌ಗ್ರಾಡ್ ಕಾರ್ಖಾನೆಯಲ್ಲಿ ತಯಾರಾಗುವ ಗ್ರಾಮಫೋನುಗಳೇ ಅತೀ ಉತ್ತಮವಾದವುಗಳು ಅಂತಹ ಇತರ ಕೆಲವು ಕಾರ್ಖಾನೆಗಳೂ ಇವೆ. ಹೆಚ್ಚಾಗಿ ಉತ್ತಮ ಪದಾರ್ಥಗಳೆಲ್ಲಾ ಅಲ್ಲೇ ತಯಾರಿಸಲ್ಪಡುತ್ತವೆ ಅಂತೂ ಆಯಾಯ ಸಾಮಾನುಗಳ ಮೇಲಿರುವ 'ಟ್ರೇಡ್ ಮಾರ್ಕು' ಗಳಿಗಿಂತಲೂ ಅಧಿಕ ಬೆಲೆಯುಳ್ಳವುಗಳು

**ಹಸಿದವನೇ ಇಲ್ಲ!**

ಕೆಲವು ವರುಷಗಳ ಹಿಂದೆ, ಮಂದಿಗೆ ಬೇಕಷ್ಟು ಉಣ್ಣಲು ಇದ್ದಿಲ್ಲ. ಆದರೆ ಈಗ ಹಾಗಿಲ್ಲ. ಪ್ರತಿಯೊಬ್ಬನಿಗೂ ಬೇಕಷ್ಟು ತಿನ್ನಲಿದೆ. ಹಸಿವಿನ ಮಾತೇ ರಷ್ಯಾದೇಶದಿಂದ ಓಡಿದೆ ಜನರು — ಬದಲು — ದಪ್ಪ ಪುಷ್ಟರಾಗಿದ್ದಾರೆ. ಬೊಜ್ಜುಬೆಳೆಯ ಹತ್ತಿದೆ. ಎಲ್ಲರೂ ಬಲಿತ ದೇಹಧಾರಿಗಳು.

**ಕಾರುಗಳು ಮರ್ಯಾದೆಯ ಕುರುಹು!**

ರಷ್ಯದಲ್ಲಿ ಬೇಕಷ್ಟು 'ಕಾರು'ಗಳಿವೆ ಆದರೆ,ಅವುಗಳನ್ನು ಕೊಳ್ಳಲ್ಕುಮಾತ್ರ ನಿರ್ಬಂಧಗಳಿವೆ. ಅವುಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಅಗ್ರಗಣ್ಯ ಸ್ಥಾನದಲ್ಲಿರುವವರಿಗೆ ಅಥವಾ ಉತ್ತಮ ಕೆಲಸಗಳನ್ನು ಮಾಡಿದವರಿಗೆ ಇವು ಸರಕಾರದಿಂದ ಬಹುಮಾನವಾಗಿ ಕೊಡಲ್ಪಡುತ್ತವೆ.

**ಮೊದಲ ಭಾರಿಯ ಅನುಭವ**

ರಷ್ಯಾದೇಶವನ್ನು ಪ್ರವೇಶಿಸಿದೊಡನೆಯೇ ಅಲ್ಲಿಯ ಕುರಿತು ತಿಳಿಯುವ ಕುತೂಹಲ ಎಲ್ಲರಿಗೂ ಹೆಚ್ಚುತ್ತದೆ ಜನರಿಂದ ಕಿಕ್ಕಿರಿದ ಪಟ್ಟಣಗಳನ್ನು, ಶಾಂತತೆಯಿಂದ ಸರಿಯುವ ಮಂದಿಗಳನ್ನು, ಕೆಲಸಗಾರರನ್ನು, ಮಂದಿಯಿಂದ ತುಂಬಿದ ಮಂದಿರಗಳನ್ನೂ ಕಂಡರೆ ಪ್ರತಿಯೊಬ್ಬನಿಗೂ ಆಶ್ಚರ್ಯವಾಗದೆ ಇರದು ಮೊಸ್ಕೋ ನಗರದಷ್ಟು ಅತಿಯಾಗಿ ಕಿಕ್ಕಿರಿದ ಪ್ರದೇಶವು ಪಟ್ಟಣವು ಜಗತ್ತಿನಲ್ಲಿ ಬೇರೊಂದಿಲ್ಲ ಒಂದು ಸಂಸಾರಿಗೆ ಒಂದು ಕೋಣೆ ಸಿಗುವಂತಿಲ್ಲ ಒಂದೊಂದು ಕೋಣೆಯಲ್ಲಿ ಹರಿಂದ ೯ ಮಂದಿ ಯಾರಿಗೆ ವಾಸಿಸಬೇಕಾಗುತ್ತದೆ

ಇದು ರಷ್ಯದ ಇಂದಿನ ವಿಚಾರ

**ದೇಶೀ ಸಕ್ಕರೆ ಕೊಂಡರೆ—**

**ಕರ್ತವ್ಯ ಮುಗಿಯಿತೆ?**

ಎಂದು ಗ್ರಾಮೋದ್ಯೋಗ ಪತ್ರಿಕೆಯು ಭಕ್ತರನ್ನು ಪ್ರಶ್ನಿಸಿದೆ ವಿದೇಶಿ ಸಕ್ಕರೆಯ ಉಪಯೋಗದಿಂದ ಸೇಕಡ ೩೦ರಷ್ಟು ಜಂಪಾದ ಬೆಳಸಾಯಗಾರರಿಗೆ ದೊರೆಯುತ್ತದ ಉಳಿದ್ದುದು ಸರಕಾರದ ಬೊಕ್ಕಸಕ್ಕೆ ದೇಶೀ ಸಕ್ಕರೆಯನ್ನು ಕೊಂಡುಕೊಂಡಾಗ ಸೇಕಡ ೬೦ ಪಾಲನಷ್ಟು ಹಣ ನಮ್ಮ ದೇಶದ ಕೃಷಿಕರಿಗೆ ಕಬ್ಬಿನ ಬೆಲೆಯ ರೂಪದಲ್ಲಿ ಸಿಕ್ಕುವದು. ಉಳಿದುದು ಕೂಲಿ, ಸಾಗಿಸುವ ಖರ್ಚು, ಯಂತ್ರ ಸಾಮುಗ್ರಿಗಳ ಖರ್ಚಿಗೆ ಹೋಗುತ್ತದೆ ಆದರೆ ಬೆಲ್ಲವನ್ನು ಕೊಂಡುಕೊಂಡಾಗ ನೀವು ಬೆಲ್ಲಕ್ಕಾಗಿ ಕೊಟ್ಟ ಒಂದೊಂದು ಪೈಸವೂ ಹಳ್ಳಿಗರ ಕೈಸೇರುವದು ಯಾಕೆಂದರೆ ಬೆಲ್ಲಮಾಡಲಿಕ್ಕೆ ಉಪಯೋಗಿಸುವ ಪ್ರತಿಯೊಂದು ಸಾಮಾನು ಇದೇ ದೇಶದಲ್ಲಿ ತಯ್ಯಾರಾದುದಾಗಿದೆ. ಮಾಡಿದ ಬೆಲ್ಲವೆಲ್ಲ ಹಳ್ಳಿಗಳಲ್ಲಿಯೇ ಖರ್ಚಾಗುತ್ತದೆ ಪೇಟೆ ಪಟ್ಟಣಗಳಿಗೆ ಹೋಗುವವಾದರೂ, ಎತ್ತಿನ ಗಾಡಿಗಳ ಮೂಲಕ ಸಾಗಿಸುತ್ತಾರೆ ಅದ್ದರಿಂದ ಸಾಗಿಸುವ ಖರ್ಚು ಕೂಡ ಹಳ್ಳಿಗರ ಕೈಸೇರುತ್ತದೆ

ಆದಕಾರಣ ದೇಶೀ ಸಕ್ಕರೆಯ ಉಪಯೋಗ ಮಾಡಿದ ಮಾತ್ರದಿಂದ ತಮ್ಮ ಕರ್ತವ್ಯ ಮುಗಿಯಿತೆನ್ನುವದು ತಪ್ಪು ಹಳ್ಳಿಗಳ ಉದ್ಧಾರದ ಮೂಲಕ ದೇಶೋದ್ಧಾರ, ದೇಶದ ಸಾಂಪತ್ತಿಕ ಉನ್ನತಿಯಾಗಬೇಕೆನ್ನುವರು ಯಾವ ಸಕ್ಕರೆಯನ್ನು ಉಪಯೋಗಿಸಬಾರದು, ಕೇವಲ ಬೆಲ್ಲವನ್ನೇ ಉಪಯೋಗಿಸಬೇಕು ಎಂದು ಗ್ರಾಮೋದ್ಯೋಗ ಪತ್ರಿಕೆಯು ಹೇಳುತ್ತದೆ

**ಏಳಡಿ ಅಗಲದ ಹೂವು.**

ಅಮೇರಿಕದ ಒಬ್ಬ ಸಂಶೋಧಕನು ದಕ್ಷಿಣ ಅಮೇರಿಕದ ಅಂತರ್ಪ್ರದೇಶಗಳಲ್ಲಿ ಸುತ್ತಾಡುತ್ತ ಈಗ ತನ್ನ ಪ್ರವಾಸವನ್ನು ಮುಗಿಸಿ ಸ್ವಸ್ಥಾನಕ್ಕೆ ಬಂದಿದ್ದಾನೆ, ದಕ್ಷಿಣ ಅಮೇರಿಕದ ಉಷ್ಣವಲಯದ ಒಂದಾನೊಂದು ಪ್ರದೇಶದಲ್ಲಿ ತಾನೊಂದು ಏಳು ಅಡಿ ಅಗಲದ ಬಹು ದೊಡ್ಡ ಹೂವನ್ನು ನೋಡಿಬಂದಿರುವನಾಗಿ ಅವನು ಪ್ರಕಟಣೆ ಹೊರಡಿಸಿದ್ದಾನೆ. ಏಳು ಅಡಿ ಅಗಲದ ಹೂವು—ಎಷ್ಟು ದೊಡ್ಡದಾಯಿತೆಂದು ನೀವು ಅಳೆದು ನೋಡಿ.

---

ಗಂಡನನ್ನು ಹೆಂಡತಿ ಹೇಗೆ ವಶದಲ್ಲಿಡಬೇಕು?

# ಪ್ರೇಮ ವ್ಯವಹಾರಗಳನ್ನು ಕಲಿಸುವ—ಸರ್ವಾಧಿಕಾರಿ ಹಿಟ್ಲರನ ಶಾಲೆಗಳು!

ದಾಂಪತ್ಯ ವಿಜ್ಞಾನ, ಪ್ರೇಮ ವ್ಯವಹಾರ, ವಶೀಕರಣ, ಕಾಮಕಳಾಶಾಸ್ತ್ರ ಮೊದಲಾದ ಗುಪ್ತವಿದ್ಯೆಗಳನ್ನು ಜರ್ಮನಿಯ ಹೆಮ್ಮಕ್ಕಳಿಗೆ ಕಲಿಸಲಿಕ್ಕೆ ಹಿಟ್ಲರನು ಈ ತಿಂಗಳೊಳಗಾಗಿ ಬರ್ಲಿನಿನಲ್ಲಿ ಹೊಸ ಬಗೆಯ ನೂತನ ಶಾಲೆಗಳನ್ನು ತೆರೆಯುವನಾಗಿ ಸುದ್ದಿ ಬಂದಿದೆ

ಗಂಡನನ್ನು ಹೆಂಡತಿ ವಶದಲ್ಲಿಟ್ಟುಕೊಳ್ಳುವುದು ಹೇಗೆ? ಅವನೊಡನೆ ಪ್ರೇಮವ್ಯವಹಾರವನ್ನು ಬೆಳೆಸುವದು ಹೇಗೆ? ಇವೇ ಮೊದಲಾದ ವಿಷಯಗಳನ್ನು ಜರ್ಮನಿಯ ಹೆಮ್ಮಕ್ಕಳಿಗೆ ಈ ಶಾಲೆಗಳಲ್ಲಿ ಕಲಿಸುವ ವ್ಯವಸ್ಥೆಯಾಗುವದ ಆ ಮೇಲೆ ಅವರಿಗೆ ಗೃಹಕಾರ್ಯಗಳನ್ನು ಹೇಗೆ ಮಾಡಬೇಕು, ಗಂಡನ ಸಂಪಾದನೆಗೆ ಹೆಂಡತಿ ಹೇಗೆ ಯೋಗಕೊಡಬಹುದು, ಮನೆಯಲ್ಲಿ ಗಂಡಹೆಂಡರು ಮಕ್ಕಳುಮರಿಗಳೊಡನೆ ಸುಖ ಜೀವನವನ್ನು ನಡೆಸಬೇಕಾದರೆ, ಹೆಂಡತಿ ಹೇಗೆ ನಡಕೊಳ್ಳಬೇಕು? ಅವಳ ಆಚಾರ ವಿಚಾರ, ನಡೆ ನುಡಿ ಗುಣ ಸ್ವಭಾವಗಳು ಎಂಥವಿರಬೇಕು? ಇಂಥೀ ವಿಷಯಗಳನ್ನು ಕಲಿಸಿಕೊಡುವರ

ಹಿಟ್ಲರನ ಈ ಹೊಸ ಶಾಲೆಗಳಲ್ಲಿ ಕಲಿತ ಹುಡುಗಿಯರಿಗೆ ಅನುರೂಪ ಗಂಡಂದಿರನ್ನು ದೊರಕಿಸಿಕೊಡಲಿಕ್ಕೆ ಶಾಲೆಗೆ ಸಂಬಂಧಿಸಿ ಒಂದು ಪ್ರತ್ಯೇಕ ಸಂಸ್ಥೆಯೂ ಇದೆ ಹಿಟ್ಲರನ ನಾಜಿ ಸಂಗದದ ಧ್ಯೇಯಾದರ್ಶಗಳನ್ನು ಒಪ್ಪಿಕೊಂಡು ಅದರ ಸದಸ್ಯರಾದ ಅವಿವಾಹಿತ ಯುವಕರೆಲ್ಲರೂ ಈ ಶಾಲೆಗಳಲ್ಲಿ ಕಲಿತು ಪಾಸಾದವರನ್ನೇ ವಿವಾಹವಾಗಬೇಕೆಂದು ಇನ್ನೊಂದ ನಿಯಮವು ಕೂಡ ಇದೆ ಆದಕಾರಣ ಈ ಶಾಲೆಗಳಲ್ಲಿ ಕಲಿತ ಹುಡುಗಿಯರಿಗೆ ಗಂಡಂದಿರ ಬರಗಾಲ ಬೀಳುವುದಿಲ್ಲ ಅವರು ಮನಗನ ರೂಪರಾದ ಗಂಡಂದಿರು ಎಲ್ಲಿದ್ದಾರೆಂದು ಊರು ಕೇರಿ ಹಳ್ಳಿಪಳ್ಳಿಗಳನ್ನು ಹುಡುಕಿ ಹೋಗಬೇಕಾದ್ದು ಇಲ್ಲ ಅಷ್ಟು ಕೆಲಸ ಕೂತಲ್ಲೇ ಆಗಿಬಿಡುವದು

ಹೆತ್ತವರು ತಮ್ಮ ೧೮ ೨೧ ವರ್ಷ ಪ್ರಾಯದ ಹೆಣ್ಣು ಮಕ್ಕಳನ್ನೆಲ್ಲಾ ಹಿಟ್ಲರನ ಈ ಶಾಲೆಗಳಿಗೆ ಕಳುಹಿಸಿಕೊಡಲೇ ಬೇಕು ಈ ಶಾಲೆಗಳಲ್ಲಿ ಕಲಿತು, ಶಾಲೆಗಳ ಪ್ರಯತ್ನದಿಂದ ತಮಗ ಬೇಕಾದ ಯುವಕರೊಡನೆ ವಿವಾಹವಾದ ದಂಪತಿಗಳು ದಾಂಪತ್ಯವಿಚ್ಛೇದವಮಾಡಿಕೊಳ್ಳಬೇಕಾದರೆ, ಮೊದಲು ಶಾಲಾಧಿಕಾರಿಗಳಿಗೆ ತಮ್ಮ ಜಗಳದ ಕಾರಣವನ್ನು ತಿಳಿಸಬೇಕು ದಂಪತಿಗಳು ಜಗಳವನ್ನು ರಾಜಿಮಾಡಿಕೊಂಡು ಮೊದಲಿನಂತೆ ಗಂಡಹೆಂಡರಾಗಿರಲಿಕ್ಕೆ ಶಾಲಾಧಿಕಾರಿಗಳು ಶತಃ ಪ್ರಯತ್ನಮಾಡುವರು ಹೇಗಿದ್ದರೂ ಶಾಲಾಧಿಕಾರಿಗಳ ಅಪ್ಪಣೆಯಿಲ್ಲದೆ ಗಂಡಹೆಂಡಿರು ದಾಂಪತ್ಯವಿಚ್ಛೇದ ಮಾಡಿಕೊಂಡರೆ ಇನ್ನು ಮುಂದೆ ಅದು ಅಪರಾಧವಾಗುವದು

ಶಾಲೆಯಲ್ಲಿ ಕಲಿತುಕೊಳ್ಳುವ ಹೆಣ್ಣುಮಕ್ಕಳು ನಾಜೀ ಸಂಗಡಕ್ಕೆ ಸೇರಿದವರು ಆಗಿರಲೇಬೇಕೆಂದು ನಿರ್ಬಂಧವುಂಟು ಜರ್ಮನಿಯಲ್ಲಿ ನಾಜಿಗಳಲ್ಲದವರು ದಾಂಪತ್ಯವಿಜ್ಞಾನ ಕಲಿತುಕೊಳ್ಳಬಾರದೆಂದು ಹಿಟ್ಲರನ ಅಭಿಮತವಾಗಿರಬಹುದೇನೊ? ಬಹುಶಃ ಹಾಗೆಯೆ ಸರಿ! ಯಹೂದಿ ಹೆಣ್ಣುಮಕ್ಕಳು ಈ ಶಾಲೆಗಳಿಗೆ ಸೇರಲೇಬಾರದು ಈ ಶಾಲೆಗಳಲ್ಲಿ ಕಲಿತ ಹುಡುಗಿಯರು ಯೆಹೂದಿ ಯುವಕರನ್ನು ಮದುವೆಯಾಗಲೇಬಾರದೆಂದು ಹಿಟ್ಲರನ ಕಟ್ಟಾಜ್ಞೆಯಾಗಿರುತ್ತದೆ.

**ವಧೂವರರನ್ನು ಆರಿಸಲಿಕ್ಕೆ ಹೊಸ ಕ್ರಮದ ಜಾತಕ.**

ಅವಿವಾಹಿತ ಯುವತಿಯರು ವಿವಾಹವಾಗಲಿಕ್ಕೆ ಯಾರು ಯಾರನ್ನು ಆರಿಸಬೇಕೆಂದು ಹಿಂದೂಗಳು ಜನ್ಮಪತ್ರಿಕೆ ನೋಡುವರು ಕ್ರೈಸ್ತ ಮುಸಲ್ಮಾನರು ಮನೋಕೂಟ ಪರೀಕ್ಷಿಸುವರು ಆದರೆ ಈ ಎಲ್ಲ ಉಪಾಯಗಳನ್ನು ಅನುಸರಿಸಿ ವಧುವರರು ವಿವಾಹವಾದರೂ— ಎಷ್ಟೋ ಸಂದರ್ಭಗಳಲ್ಲಿ ವಿವಾಹಿತ ಜೀವನವು ಕರಾಳವಾದಂತೆ ಅವರಿಗೆ ಕಾಣಿಸಿಕೊಳ್ಳುವದು, ದಾಂಪತ್ಯ ಜೀವನದಲ್ಲಿ ಅಶಾಂತಿ ಅತೃಪ್ತಿ, ಜಿಗುಪ್ಸೆ ನಿರಾಶೆಗಳು ಹುಟ್ಟಿ ವಧೂವರರು ಒಂದೇ ಆತ್ಮಘಾತಮಾಡಿಕೊಳ್ಳುವರು, ಅಥವಾ ಜೀವನ್ಮೃತಾವಸ್ಥೆಯಲ್ಲಿ ಕಾಲಯಾಪನೆಮಾಡುವರು ಜಾತಕ ನೋಡಿ, ಮನೋಕೂಟ ಪರೀಕ್ಷಿಸಿ ಆದ ವಿವಾಹಗಳಲ್ಲಿ ಎಲ್ಲೋ ನೂರಕ್ಕೊಂದು ಸಾವಿರಕ್ಕೊಂದು ಆದಿಯಿಂದ ಅಂತ್ಯದ ತನಕ ಸುಖಮಯವಾಗಿ ಪರಿಣಮಿಸುತ್ತವೆ

ಅದಕ್ಕೋಸ್ಕರ ಗಂಡ ಅಥವಾ ಹೆಂಡತಿಯನ್ನು ಆರಿಸಿಕೊಳ್ಳಲಿಕ್ಕೆ ಡಾಕ್ಟರ ಡಿ ವಿ ವಾಗ್ನರ ಎಂಬ ಬೋಸ್ಟನ್ ವಿಶ್ವವಿದ್ಯಾಲಯದ ಆಚಾರ್ಯನೊಬ್ಬನ ಜಾತಕದಂಥ ಒಂದು ಪಟ್ಟಿಯನ್ನು ಸಿದ್ಧಮಾಡಿದ್ದಾನೆ ಸ್ತ್ರೀಪುರುಷರಿಗೆ ಬೇರೆ ಬೇರೆ ಪಟ್ಟಿ ಇರುವದು ಆರೋಗ್ಯ, ಜಾತ ಕುಲ, ಕರ್ತವ್ಯ, ಗುಣ ಸ್ವಭಾವ, ಪ್ರಾಯ ಶಿಕ್ಷಣ ಧರ್ಮ, ಸ್ವಭಾವ ಶೀಲ ರೂಪ ಮೊದಲಾದ ಬೇರೆ ಬೇರೆ ವಿಷಯಗಳಿಗೆ ಮಾರ್ಕುಗಳನ್ನಿಟ್ಟು ಆ ವಿಷಯಗಳಲ್ಲಿ ಇವರಿಬ್ಬರ ಪರೀಕ್ಷೆಮಾಡುವದ ಈ ಪರೀಕ್ಷೆಯಲ್ಲಿ ಅತ್ಯಧಿಕ ಮಾರ್ಕುಗಳನ್ನು ಪಡೆದವರನ್ನೇ ಆರಿಸಿದ ಪಕ್ಷದಲ್ಲಿ, ದಾಂಪತ್ಯ ಸುಖದಲ್ಲಿ ಯಾವದೇ ರೀತಿಯ ಕಲಹ ಕಿರುಕುಳಗಳ ಕಾಣಿಸಿಕೊಳ್ಳುವ ಸಂಭವವಿರುವುದಿಲ್ಲವೆಂದು ಆ ಆಚಾರ್ಯನು ಹೇಳುತ್ತಾನೆ

**ಜರ್ಮನಿಯಲ್ಲಿ ಯೆಹೂದ್ಯರಿಗೆ ಮಾನ ಮರ್ಯಾದೆ ಕೊಡಬಾರದು**

**ಕೊಟ್ಟರೆ ಅಪರಾಧವೆ?**

ಜರ್ಮನಿಯ ಒಬ್ಬ ವಕೀಲನು ಒಬ್ಬ ಯೆಹೂದಿಗೆ ಪತ್ರ ಬರೆಯುತ್ತ 'ಪ್ರಿಯ ಸ್ವಾಮಿ' ಎಂದು ಆರಂಭಿಸಿ 'ನಿಮ್ಮ ವಿಶ್ವಾಸ ಪಾತ್ರ' ಎಂದು ಪತ್ರವನ್ನು ಕೊನೆಗೊಳಿಸಿದ್ದನು. ಯಹೂದಿಗೆ ಈ ರೀತಿ ಮರ್ಯಾದೆಯಿಂದ ಸಂಬೋಧಿಸಿದ್ದು, ಜರ್ಮನಿಯ ಸ್ಟ್ರೂಮರ್ ಎಂಬ ಪತ್ರಿಕೆಯ ಮನಸ್ಸಿಗೆ ಒಗ್ಗಲಿಲ್ಲ. ಅದು ಯಹೂದಿಯರನ್ನು ಹೃದಯ ಮನಸ್ಸುಗಳಿಂದ ದ್ವೇಷಿಸುವ ಪತಿಕೆ ಯಹೂದಿಗೆ ಆ ಪತ್ರ ಬರೆದ ವಕೀಲನನ್ನು ಖಂಡಾಬಟ್ಟೆ ಬೈದುಬಿಟ್ಟಿತು ವಕೀಲನು ಬರ್ಲಿನಿನ ನ್ಯಾಯಾಸ್ಥಾನದಲ್ಲಿ ಸ್ಟ್ರೂರ್ಮರ ಪತ್ರಿಕೆಯ ಮೇಲೆ ಮಾನನಷ್ಟಕ್ಕೆ ದಾವೆ ಮಾಡಿದನು ಯಹೂದಿಯರಿಗೆ ಮರ್ಯಾದೆತೋರಿಸುವ ಜರ್ಮನ ವ್ಯಕ್ತಿಗಳನ್ನು ನಿಂದಿಸಿ ಬರೆದುದು ಪತ್ರಿಕೆಯ ತಪ್ಪಲ್ಲವೆಂದು ನ್ಯಾಯಾಧೀಶರು ದಾವೆಯನ್ನು ತಳ್ಳಿಬಿಟ್ಟರು

ಯಹೂದ್ಯರಿಗೆ ಮರ್ಯಾದೆಕೊಟ್ಟರೆ ಜರ್ಮನಿಯಲ್ಲಿ ಅದು ಅಪರಾಧವಾಗುವದೇ ಎಂಬ ಸಂಗತಿ ಮಾತ್ರ ಈ ದಾವೆಯಿಂದ ಗೊತ್ತಾಗಲಿಲ್ಲ, ಆದರೆ, ಮರ್ಯಾದೆ ಕೊಟ್ಟವರನ್ನು ಬೈದುಭಂಗಿಸಿದರೆ ಅದು ನ್ಯಾಯಕ್ಕೂ ನೀತಿಗೂ ಸರಿಯಾದ್ದು ಎಂಬುದು ಈ ದಾವೆಯಿಂದ ಸ್ಪಷ್ಟವಾಯಿತು.

# ರೈತರಿಗೆ ರಾಷ್ಟ್ರಪತಿಗಳ ಕರೆ!

## ಕಾಂಗ್ರೆಸ್ಸನ್ನು ಕೂಡಿರೆಂದು ಸಂದೇಶ.

### ಜಮೀನ್ದಾರೀ ಸುಲಿಗೆಯಿಂದ ರಕ್ಷಿಸುವ ಆಶ್ವಾಸನೆ.

ರೈತಜನರಿಗೂ ಒಕ್ಕಲುಗಳಿಗೂ ವಿಶೇಷ ಉಪಯುಕ್ತವಾದ ಒಂದು ಕಾನೂನನ್ನು ಸಂಯುಕ್ತ ಪ್ರಾಂತದ ಕಾಂಗ್ರೆಸ ಸರಕಾರವು ಇನ್ನು ಆರು ತಿಂಗಳೊಳಗಾಗಿ ಮಾಡುವದೆಂದೂ ಅದರಿಂದ ಅವರ ಕಷ್ಟನಷ್ಟಗಳು ಬಹುತೇಕ ಪರಿಹಾರಗೊಳ್ಳುವವೆಂದೂ ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರೂರವರು ಭಾರವಾರಿ ಜಿಲ್ಲೆಯ ಕಡಿದಾಗ ೫೦೦೦೦ ರೈತಜನರ ಪ್ರಚಂಡ ಸಭೆಯಲ್ಲಿ ಭಾಷಣ ಮಾಡಿದರು.

ಪಂಡಿತರು ರೈತರ ಸಮಸ್ಯೆಗಳ ಕಡೆಗೆ ವಿಶೇಷ ಲಕ್ಷ್ಯ ಕೊಡುತ್ತಿದ್ದಾರೆ. ಹೋದ ಹೋದಲ್ಲೆಲ್ಲ ಈ ಸಮಸ್ಯೆಗಳನ್ನು ಬಿಡಿಸುವ ಕುರಿತು ಆಲೋಚಿಸುತ್ತಾರೆ.

'ಅಖಿಲ ಭಾರತ ರೈತಜನರ ಒಂದು ಸಭೆಯಿದೆ. ಅದರ ಉದ್ದೇಶವು ರೈತಜನರ ಕಷ್ಟ ಪರಂಪರೆಯನ್ನು ದೂರಮಾಡುವದಾಗಿದ್ದರೂ ಅದರ ಕೆಲಕೆಲವು ಕೆಲಸಗಾರರು ರಾಷ್ಟ್ರಸಭೆಯ ಧ್ಯೇಯಾದರ್ಶಗಳಿಗೆ ವಿರೋಧವಾಗಿ ನಡೆದು, ರೈತರ ನಿಜವಾದ ಉನ್ನತಿಗೆ ಬಾಧಕ ಸ್ವರೂಪರಾಗುತ್ತಾರೆ. ಆದ್ದರಿಂದ ಪಂಡಿತರು ಅಂಥ ಕೆಲಸಗಾರರಿಗೆಲ್ಲ ಎಚ್ಚರಿಕೆಯನ್ನು ಕೊಟ್ಟಿದ್ದಾರೆ, ಕಾಂಗ್ರೆಸ ಮಂತ್ರಿಮಂಡಲಗಳ ಜನೋಪಕಾರಿ ಕೆಲಸ ಕಾರ್ಯಗಳಲ್ಲಿ ತಡೆಹಾಕಬಾರದೆಂದು ಆಗ್ರಹದಿಂದ ಕೇಳಿಕೊಂಡಿದ್ದಾರೆ ಮಂತ್ರಿಮಂಡಲಗಳಿಗೆ ರೈತಜನರ ಸಂಪೂರ್ಣ ಬೆಂಬಲವು ದೊರೆಯುವಂತೆ ತಾವೇ ಅಗ್ರಗಾಮಿಗಳಾಗಿ ಕೆಲಸ ಮಾಡುತ್ತಿದ್ದಾರೆ

'ನಿಮ್ಮ ಸಂಪೂರ್ಣ ಬಡತನವನ್ನು ದೂರ ಮಾಡುವದು ಈಗಿನ ರಾಜಕೀಯ ಘಟನೆಯ ಕೊರತೆಗಳ ಮೂಲಕ ಕಾಂಗ್ರೆಸ ಮಂತ್ರಿಮಂಡಲಗಳಿಗೆ ಅಸಾಧ್ಯವಾಗಬಹುದಾದರೂ, ಅವರು ನಿಮಗಾಗಿ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡುವರು' ಎಂದು ಪಂಡಿತರು ರೈತರಿಗೆ ಆಶ್ವಾಸನೆ ಕೊಟ್ಟಿದ್ದಾರೆ

'ರೈತಜನರ ಕಷ್ಟ ನಿವಾರಣಾ ಕಾನೂನನ್ನು ಮಂಜೂರು ಮಾಡಿದ ಬಳಿಕ ಜಮೀನದಾರಿ ಪದ್ಧತಿಯನ್ನು ನಾಶಮಾಡುವ ಕ್ರಮವನ್ನು ಆಲೋಚಿಸುವೆವು' ಎಂದು ಅವರು ಹೇಳಿದ್ದಾರೆ ಮಂತ್ರಿಮಂಡಲದ ಸತ್ಕಾರ ಮಾಡುವದಕ್ಕಾಗಿ ಕೂಡಿದ ಜಮೀನದಾರ ಮತ್ತು ಕೆಲವು ಮುಸಲ್ಮಾನರ ಸಭೆಯಲ್ಲಿ ಕೂಡ ಅವರು ಇದೇ ಮಾತನ್ನು ಎರಡೆರಡು ನೂರ ಮೂರು ಬಾರಿ ಹೇಳಿದ್ದಾರೆ

ಪಂಡಿತರು ಹಳ್ಳಿಜನರನ್ನು ಕೂಡಿಸಿ ಭಾಷಣ ಕೊಡುವ ಕ್ರಮವನ್ನು ತಿಳಿಯಬೇಕೆಂಬ ಆತುರವಿರುವದಾಗಿ ಈಗ ಭಾರತ ಸಂಚಾರ ಮಾಡುತ್ತಿರುವ ಲೋರ್ಡ್ ಲೋಥಿಯಾನರು ಪಂಡಿತರಿಗೆ ಸೂಚಿಸಿದರು. ಅಂಥದ್ದೊಂದು ಸಭೆಯಲ್ಲಿ ಭಾಷಣ ಮಾಡುತ್ತಾ ರಾಷ್ಟ್ರಪತಿಗಳು ಹೇಳಿದ್ದೇನಂದರೆ— ರಾಷ್ಟ್ರಸಭೆಯು ಕೂಲಿ ಜನರು ಮತ್ತು ರೈತರ ಹಿತಕ್ಕಾಗಿ ದುಡಿಯುತ್ತದೆ ಆದ್ದರಿಂದ ಹಿಂದು ಮತ್ತು ಮುಸಲ್ಮಾನ ಎಲ್ಲ ಜಾತಿಮತ ಪಂಗಡಗಳ ಸೇವೆ ಮಾಡುವ ವೀಳ್ಯವನ್ನು ಅದು ತೆಗೆದುಕೊಂಡಿದೆ.

ಸಂಯುಕ್ತ ಪ್ರಾಂತದಲ್ಲಿ ಬೇಸಾಯಕ್ಕೊಳಪಡದ ಜಮೀನು ಪ್ರದೇಶಗಳಲ್ಲಿ ಸಾಮುದಾಯಿಕ ವ್ಯವಸಾಯ ಕ್ರಮವನ್ನು ಆರಂಭಿಸುವದಕ್ಕೆ ಪಂಡಿತರು ಆ ಪ್ರಾಂತ್ಯದ ಕಾಂಗ್ರೆಸ ಸರಕಾರಕ್ಕೆ ಕೆಲವು ಸೂಚನೆಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಬಂಜರು ಪ್ರದೇಶಗಳೆಲ್ಲಾ ಬೇಸಾಯ ಭೂಮಿಗಳಾಗುವದರಿಂದ ಪ್ರಾಂತ್ಯದ ಬೇಸಾಯ ಉತ್ಪತ್ತಿಯು ಹೇಳಕೂಡದಷ್ಟು ಬೆಳೆಯುವದು. ಜನರ ಸಂಪತ್ತು ಹೆಚ್ಚುವದು. ಸರಕಾರವೇ ಈ ವ್ಯವಸಾಯ ಕ್ರಮವನ್ನನುಸರಿಸುವದರಿಂದ ರೈತರ ಜೀವನವು ಹೆಚ್ಚು ಸುಖಮಯವಾಗಬಹುದು. ಮತ್ತು ಸಾರ್ವತ್ರಿಕ ಸಾಮುದಾಯಿಕ ವ್ಯವಸಾಯ ಕ್ರಮವನ್ನು ಬಳಕೆಗೆ ತಂದರೆ ಹೇಗಾಗಬಹುದೆಂಬ ಅನುಭವವೂ ಸಿಕ್ಕುವದು


### ರಕ್ತ ಒತ್ತಾಟವು ಮುಂಚಿಗಿಂತ ಕಡಿಮೆಯಾಯಿತು

#### ಕ್ರುಶನ್ ಲವಣಗಳ ಸೇವನೆಯಿಂದ ಆತನ ಹಳೆ ಪೀಡೆಯು ಮಾಯವಾಯಿತು

ರಕ್ತ ಒತ್ತಾಟದ ಹೆಚ್ಚಳದಿಂದ ಅಪಾಯವಿರುವುದೆಂದೂ, ಸಮಯ ವಿಳಂಬವಾಗದೆ, ಅದರ ಚಿಕಿತ್ಸೆಯಾಗಬೇಕೆಂದೂ ವೈದ್ಯಕೀಯ ಜನರ ಅಭಿಪ್ರಾಯವಾಗಿರುತ್ತದೆ ತಲೆ ತಿರುಗುವಿಕೆ ಪಿತ್ತ, ಇತ್ಯಾದಿಗಳು, ಈ ಪೀಡೆಯ ಕುರಿತು ಎಚ್ಚರಿಕೆಯ ಕುರುಹುಗಳು ರಕ್ತ ಒತ್ತಾಟದ ಹೆಚ್ಚಳವನ್ನು ಅನುಭವಿಸಿದ ಓರ್ವರ ಪತ್ರವನ್ನು ಓದಿರಿ —

"ಅನೇಕ ವರ್ಷಗಳ ಸಮಯ ನಾನು ರಕ್ತ ಒತ್ತಾಟದ ಹೆಚ್ಚಳದಿಂದ ಪೀಡಿತನಾಗಿದ್ದು, ಅದರಿಂದ ಉಂಟಾದ ಅನಿಷ್ಟಗಳನ್ನು ಅನುಭವಿಸಿದೆನು. ಎಲ್ಲಾ ಬಗೆಯ ಔಷಧಿಗಳನ್ನು ಉಪಯೋಗಿಸಿದರೂ ನಿರರ್ಥಕವಾಯಿತು ಕಡೆಗೆ ನಾನು ಕ್ರುಶನ್ ಲವಣಗಳನ್ನು ಸೇವಿಸಿದೆ ಎರಡೇ ಡೋಸುಗಳೊಳಗೆ ನನಗೆ ಶಮನವು ದೊರಕಿತು ಜಡಭರಿತವಾಗಿದ್ದ ನನ್ನ ತಲೆಯು ಶುಭ್ರವಾಯಿತು ಅದರೊಳಗೆ ಹೊಸ ಹುರುಪು ಕಾಣಿಸಿಕೊಂಡಿತು

ಈಗ ನನ್ನಲ್ಲಿರುವ ವ್ಯಥೆಯು ಮಾಯವಾಗಿ ಸುಖಭಾವವು ಉಂಟಾಗಿರುತ್ತದೆ ಬೆಳಗಾತ ಒಂದಿಷ್ಟು ಕ್ರುಶನ್ ಸೇವಿಸಿದರೆ ಸರಿ, ನನಗೆ ಹಿಂದಿನ ಪೀಡೆಯು ಬಾಧಿಸುವುದೇ ಇಲ್ಲ" ಎಫ್ ಟಿ

ಮಾನವನ ಅಂತಸ್ಥದ ಅಂಗಗಳು ಸರಿಯಾಗಿ ಕಾರ್ಯಗೈದ ವಿಷ ಹೊರಡಿಸುವ ಕಶ್ಮಲಗಳು ಉದರದೊಳಗೆ ಶೇಖರವಾಗಿರುವುದೆ, ಆತನ ಸಂಕಟಗಳ ಮುಖ್ಯ ಕಾರಣವಾಗಿರುತ್ತದೆ

ಈ ವಿಷಕಶ್ಮಲಗಳೆ ಆತನ ರಕ್ತ ಒತ್ತಾಟದ ಹೆಚ್ಚಳಕ್ಕೆ ಕಾರಣವು ಅಂಗದೊಳಗೆ ವಿಷವಿರುವುದರಿಂದ ಹೃದಯಕಮಲಕ್ಕೆ ಹೆಚ್ಚಿನ ಶ್ರಮ ವಹಿಸಿ ಕಾರ್ಯಗೈಸಬೇಕಾಗುತ್ತದೆ ಆದರಿಂದಲೆ ರಕ್ತ ಒತ್ತಾಟವು ಹೆಚ್ಚುತ್ತದೆ

ಕ್ರುಶನ್ ಲವಣಗಳಲ್ಲಿ ನೈಸರ್ಗಿಕವಾದ ೬ ಲವಣಗಳಿವೆ, ಇವುಗಳು ಉದರವನ್ನು ನಿರ್ಮಲಗೊಳಿಸುವುದು, ಮಾತ್ರವಲ್ಲದೆ ನಿಮ್ಮ ಅಂಗಾಂಗಗಳು ಸರಿಯಾಗಿ ಕಾರ್ಯಗೈಸುವಂತೆ ಮಾಡುವುದು ನಿಮ್ಮ ರಕ್ತವು ಪರಿಶುದ್ಧ ಹೊಂದುವುದು

ಕ್ರುಶನ್ ಲವಣಗಳು ಎಲ್ಲಾ ಸ್ಟೋರುಗಳಲ್ಲೂ, ಬಜಾರುಗಳಲ್ಲೂ ಮಾರಲ್ಪಡುತ್ತದೆ


### ಹಿಂದೀಯರು ದೃಢಕಾಯರಾಗಬೇಕಾದರೆ—

#### — ಹಿಂದೂ ಮುಸಲ್ಮಾನರ ಕರ್ತವ್ಯ.

ಹಿಂದೀಯರು ದೃಢಕಾಯರಾಗಿ ಒಂದು ಜನಾಂಗವೆನ್ನಿಸಿಕೊಳ್ಳುವ ಮೊದಲು ಹಿಂದುಗಳು ಮುಸಲ್ಮಾನರಿಂದಲೂ, ಮುಸಲ್ಮಾನರು ಹಿಂದುಗಳಿಂದಲೂ ಕಲಿತುಕೊಳ್ಳಬೇಕಾದ ಬಹಳ ಅಂಶಗಳಿವೆ ಎಂದು ಶ್ರೀ ಗೋಚನವಾಲಾ ದಾಸರು ಇಂಡಿಯನ್ ರಿವ್ಯೂದಲ್ಲಿ ಒಂದು ಲೇಖ ಬರೆದಿದ್ದಾರೆ ಹಿಂದುಗಳು ಅಂತರ್ದೃಷ್ಟಿಯುಳ್ಳವರು, ಅವರ ವಿಚಾರವೆಲ್ಲ ಪರಲೋಕಕ್ಕೆ ಸಂಬಂಧಪಟ್ಟ ಇರುತ್ತದೆ ಮುಸಲ್ಮಾನರು ಸಾಮಾನ್ಯವಾಗಿ ಬಹಿರ್ದೃಷ್ಟಿಯುಳ್ಳವರು, ಅವರ ವಿಚಾರಗಳು ಇಹಲೋಕಕ್ಕೆ ಸಂಬಂಧಿಸಿ ಇರುತ್ತದೆ ಆದರೆ ದೇಶೀಯರ ಸರ್ವತೋಮುಖವಾದ ಉನ್ನತಿಯಾಗಿ ಅವರು ಒಂದು ಜನಾಂಗದವರಾಗಬೇಕಾದರೆ ದೇಶೀಯರಲ್ಲಿ ಅಂತರ್ದೃಷ್ಟಿ, ಬಹಿರ್ದೃಷ್ಟಿ ಎರಡೂ ಇರಬೇಕಾಗುತ್ತದೆ

ಹಿಂದೂ ಮುಸಲ್ಮಾನ ಧರ್ಮಗಳ ಪ್ರಭಾವವು ಬೇರೆ ಬೇರೆಯಾಗಿ ಹಿಂದೂ ಮುಸಲ್ಮಾನರ ಮೇಲೆ ಬೀಳುತ್ತದೆ ಆದರೆ ಜಾತಿಮತ ಭೇದವನ್ನಿಟ್ಟುಕೊಳ್ಳದೆ ಎಲ್ಲರ ಮನಸ್ಸಿನ ಮೇಲೆ ಪ್ರಭಾವವನ್ನು ಹಾಕುವ ಒಂದು ಸತ್ಯ ಸನಾತನ ವಿಶ್ವಧರ್ಮವು ಬೇರೆಯಿದೆ ಹಿಂದೂ ಮುಸಲ್ಮಾನರು ಸೇರಿ ಈ ನವೀನ ಧರ್ಮದ ಅನುಯಾಯಿಗಳಾಗಬೇಕು ಅಂತರ್ದೃಷ್ಟಿ ಬಹಿರ್ದೃಷ್ಟಿ ಉಳ್ಳ ಹಿಂದೂ ಮುಸಲ್ಮಾನರು ಕೋಮಲ ಕಠಿನ ಮನಸ್ಸುಗಳ ಹಿಂದೂ ಮುಸಲ್ಮಾನರು ವಿಚಾರ ಪ್ರಧಾನ ಆಚಾರ ಪ್ರಧಾನರಾದ ಹಿಂದೂ ಮುಸಲ್ಮಾನರು, ಪರಲೋಕ ಇಹಲೋಕಗಳ ಕಡೆಗೆ ದೃಷ್ಟಿಯಿಟ್ಟಿರುವ ಹಿಂದೂ ಮುಸಲ್ಮಾನರು, ಪರಸ್ಪರ ಕೊಟ್ಟು ತಕ್ಕೊಳ್ಳುವವರಾಗಿ, ಸ್ನೇಹದಿಂದ, ಭ್ರಾತೃಭಾವದಿಂದ ಸೇರಿ ಪರಸ್ಪರ ಉನ್ನತಿ ಅಭಿವೃದ್ಧಿಯನ್ನು ಸಾಧಿಸುವರಾದರೆ, ಆಗ ಹಿಂದೀ ಜನಾಂಗವು ದೃಢಕಾಯವಾದ ಗಟ್ಟಿಮುಟ್ಟಾದ ಒಂದು ಪ್ರಬಲ ಶಕ್ತಿಯಾಗಿ ಪ್ರಪಂಚದಲ್ಲಿ ಶೋಭಿಸುವದು

# ಅರಬದೇಶಗಳಲ್ಲಿ ನಾಜಿಗಳ ಪ್ರಚಾರ

## ಕೆನಡಕ್ಕೆ ಫೆಸಿಸ್ಟರಿಂದ ಭಯ!

### ಕ್ವಿಬೆಕ್ ಪ್ರಾಂತ್ಯದಲ್ಲಿ ಫೆಸಿಸ್ಟರ ಆಕ್ರಮಣ?

ಜರ್ಮನಿಯ ನಾಜಿ ತಂಡದ ಯುವಕ ಚಳವಳಿಯ ಮುಖಂಡ ಬಾಲ್ಡರ್ ವಾನ್ ಶಿರಾಚ್ ಎಂಬವನು ಡಮಾಸ್ಕಸ್ಸಿಗೆ ಬಂದು ಅಲ್ಲಿಯ ಮುಖ್ಯ ಮುಖ್ಯ ಜನರನ್ನೆಲ್ಲಾ ಕಂಡು ಮಾತ್ನಾಡಿಸಿದ ಪರಿಣಾಮವಾಗಿ ಅರಬದೇಶಗಳಲ್ಲಿ ನಾಜಿಗಳ ಪ್ರಬಲ ಪ್ರಚಾರಕ್ಕೆ ಆರಂಭವಾಗಿದೆ ಪುಸ್ತಕ, ಕರಪತ್ರಾದಿಗಳ ವಿತರಣ ಮಾಡುವ ಮೂಲಕವಾಗಿಯೂ ರೇಡಿಯೋಗಳಲ್ಲಿ ಭಾಷಣಾದಿಗಳನ್ನು ಕೊಟ್ಟು, ನಾಜೀ ತತ್ವಗಳ ಪ್ರಚಾರವನ್ನು ಅರಬದೇಶಗಳ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಬಹು ರೀತಿಯಾಗಿ ಮಾಡತೊಡಗಿದ್ದಾರೆ ಅರಬದೇಶದ ಯುವಕರು ಜರ್ಮನಿಗೆ ಬಂದು ಅಲ್ಲಿಯ ಸ್ಥಿತಿಗತಿಗಳನ್ನು ತಿಳಕೊಳ್ಳಲಿಕ್ಕೆ ಜರ್ಮನಿಯಲ್ಲಿ ಕೆಲವು ವಿಶೇಷ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಹೀಗೆ ಈ ನಾಜೀ ಸುಂಟರಗಾಳಿಯು ಜರ್ಮನಿಯಿಂದ ಹೊರಟು ಇಂಗ್ಲಂಡ್, ಸ್ಪೈನ್, ಪೋರ್ಚುಗಲ್, ಇಟಲಿ, ರುಮೇನಿಯ, ಆಸ್ಟ್ರಿಯ ಮೊದಲಾದ ದೇಶಗಳನ್ನು ಸುತ್ತುಹಾಕಿ ಈಗ ವಿಶ್ವದ ಮೇಲಿಂದ ಬೀಸಲಾರಂಭವಾಗಿದೆ. ಇದರ ಪರಿಣಾಮ ಬಹಳ ಭಯಂಕರವಾಗಿ ತೋರಲಿಕ್ಕಿದೆ.

#### ಕೆನಡಕ್ಕೆ ಫೆಸಿಸ್ಟರಿಂದ ಭಯ

ಕೆನಡದ ಕ್ವಿಬೆಕ್ ಪ್ರಾಂತ್ಯದಲ್ಲಿ ಫೆಸಿಸ್ಟರ ಆಕ್ರಮಣ ಭಯವುಂಟಾಗಿದೆ ಅಲ್ಲಿಯ ಸರಕಾರಕ್ಕೆ ಫೆಸಿಸ್ಟರೊಡನೆ ಸಹಾನುಭೂತಿ ತೋರಿಸುವ ಡುಪ್ಲೆಸ್ಸಿಸ ಪ್ರಧಾನ ಮಂತ್ರಿಯಾಗಿರುವದು ಅವರ ಚಳವಳಿಗೆ ಒಳ್ಳೇ ಪ್ರೋತ್ಸಾಹ ಕೊಟ್ಟಂತಾಗಿದೆ ಈಗ ಆ ಪ್ರಾಂತ್ಯದಲ್ಲಿ ಎಲ್ಲಿ ನೋಡಿದರಲ್ಲಿ ಸ್ವಸ್ತಿಕಾ ಪ್ರಚಾರ ಆಯುಧಪಾಣಿಗಳಾದ ಸ್ವಯಂಸೇವಕರ ಕವಾಯತು, ಯೆಹೂದಿಯರ ವಿರುದ್ಧ ಚಳವಳಿ—ಇವೆಲ್ಲ ಕಂಡುಬರುತ್ತಿವೆ ೨೦೦೦೦ ಮಿಕ್ಕಿದ ಸಶಸ್ತ್ರ ಸ್ವಯಂಸೇವಕರು ಈ ಫೆಸಿಸ್ಟ ಪಾರ್ಟಿಯ ಸದಸ್ಯರಾಗಿದ್ದಾರೆ ಪಾರ್ಟಿಯ ವ್ಯವಸ್ಥೆಯು ಪ್ರಾಂತ್ಯದಿಂದ ಜಿಲ್ಲೆ, ಜಿಲ್ಲೆಯಿಂದ ತಾಲೂಕು, ತಾಲೂಕಿನಿಂದ ಹಳ್ಳಿ ಹಳ್ಳಿಗಳಲ್ಲಿ ಬಹಳ ಚೆನ್ನಾಗಿ ಆಗುತ್ತಿದೆ ಇವರಲ್ಲಿ ಜರ್ಮನರ ಅನುಕರಣವೇ ವಿಶೇಷವಾಗಿ ಕಂಡುಬರುತ್ತದೆ ಸಾರ್ವಜನಿಕ ಶಾಂತಿಸ್ಥಾಪನೆಯೇ ಪಾರ್ಟಿಯ ಉದ್ದೇಶವೆಂದು ಹೇಳಲಾಗುತ್ತದೆ ಆದರೆ, ಕೆನಡ ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿದ ಅಲ್ಲಿ ಜರ್ಮನರ ಪ್ರಭಾವ ಬೆಳೆದರೆ ಪರಿಣಾಮವು ಏನಾದೀತೆಂದು ನೀವೇ ಊಹಿಸಿಕೊಳ್ಳಿ


**'DILROZ'** Regd

'Dil Roz' is a sure cure for Oriental sores local sores, all kinds of deep rooted sores, skin eruptions, Pimples, Eczema, Ringworm, Sinus Fistula auxillary-Abscess

There is no need of dressing the wounds, nor are baths prohibited

Price Rs. 2 Postage extra

TAHIR DIN,
Anarkali, LAHORE.



## GREETINGS

The Directors of the CANARA BANK join in sending you this message of appreciation for the valued patronage and friendship we have enjoyed during the past year. We sincerely wish you a HAPPY and PROSPEROUS NEW YEAR

ESTD 1906

RESOURCES OF A CRORE

CANARA BANK, LIMITED.

# ಹರಿಪುರ ಕಾಂಗ್ರೆಸ್ಸು

## ವಿಶೇಷ ತರದ ಅಡುಗೆ ಏರ್ಪಾಡು!

### ನೂಲುವ ಹಬ್ಬ! ರೇಡಿಯೋ ಸೌಕರ್ಯ

ಹರಿಪುರದ ಕಾಂಗ್ರೆಸ್ಸಿನ ನೇತೃತ್ವದಲ್ಲಿ ನೂಲುವ ಹಬ್ಬವೊಂದನ್ನು ಜರಗಿಸಬೇಕಾಗಿ ವ್ಯವಸ್ಥೆಮಾಡಲಾಗಿದೆ. ಚರಕದ ಮೂಲಕ ಸ್ವತಂತ್ರ ಸಂದೇಶವು ಮಹಾತ್ಮಾಜಿಯವರಿಂದ ೨೦ ವರ್ಷಗಳ ಹಿಂದೆ ಕೊಡಲಾಯಿತು ಅವರಿಗೆ ಈ ಸಂದೇಶದಲ್ಲಿ ತುಂಬಾ ವಿಶ್ವಾಸವೂ ಭಕ್ತಿಯೂ ಇರುತ್ತದೆ ಈ ಸಮಯದಲ್ಲಿ ಅವರ ಸಂದೇಶವು ಇನ್ನಷ್ಟು ಶ್ರೇಷ್ಠತೆಯನ್ನು ಹೊಂದಿರುವುದೆಂದು ಅವರ ಅನುಭವದ ಮತ್ತು ಸಂಶೋಧನೆಗಳ ಫಲಿತಾಂಶವು ಚರಕದ ಈ ಸಂದೇಶಕ್ಕೆ ಇನ್ನಷ್ಟು ಜೀವಕಳೆಯನ್ನು ಕೊಡಲು, ಹರಿಪುರ ಕಾಂಗ್ರೆಸ್ಸಿನ ಖಾದಿ ಮತ್ತು ಗ್ರಾಮ ಕೈಗಾರಿಕೆಯ ಪ್ರದರ್ಶನದವರು ಈ ತ್ಯಾಗದ ಚಿಹ್ನೆಯಾದ ನೂಲುವುದರ ಸಲುವಾಗಿ ಒಂದು ಹಬ್ಬವನ್ನು ಜರಗಿಸಬೇಕಾಗಿ ಗೊತ್ತಾಗಿರುವುದು ಕಾಂಗ್ರೆಸಿನ ಡೆಲಿಗೇಟರಾಗ್ಲಿ, ಪ್ರೇಕ್ಷಕರಾಗಲಿ ಆಗಿ ಬರುವ ಪ್ರತಿಯೊರ್ವನು ೮೪೦ ಗಜ ಕೈಯಿಂದ ನೂತ ನೂಲಿರುವ ನೂಲುಂಡೆ ತರಬೇಕಾಗಿ ಈ ಪ್ರದರ್ಶನ ಸಮಿತಿಯ ಸದಸ್ಯರ ವಿನಂತಿ ಹೊರಟಿರುತ್ತದೆ ಈ ನೂಲುಂಡೆಗಳನ್ನು ಬೇರೆ ಬೇರೆಯಾಗಿ ತಿಂಗಡಿಸಿ, ರಾಶಿ ಹಾಕಿ ಮಹಾತ್ಮಾಜಿಯವರಿಗೆ ಅರ್ಪಿಸಲಾಗುವುದಂತೆ ಹಿಂದೂದೇಶದ ಎಲ್ಲಾ ಖಾದಿ ಪ್ರೇಮಿಗಳಿಂದ ಈ ತರದ ಒಂದು ಲಕ್ಷ ನೂಲುಂಡೆ ಬರಬಹುದೆಂದು ನಿರೀಕ್ಷೆ ಇದೆ ಈ ಸುಸಂಧಿಯಿಂದ ಖಾದಿಯ ಮೂಲಕ ಪ್ರತಿಯೊಬ್ಬರು ತಮಗಿರುವ ರಾಷ್ಟ್ರಪ್ರೇಮವನ್ನು ಪ್ರಕಟಿಸಬಹುದು ಶಿಕ್ಷಿತರಾಗಲೀ, ಅಶಿಕ್ಷಿತರಾಗಲೀ, ನಗರವಾಸಿಗಳಾಗಲಿ, ಹಳ್ಳಿಗರಾಗಲಿ, ಸ್ತ್ರೀಯರಾಗಲೀ, ಪುರುಷರಾಗಲೀ ಎಲ್ಲರೂ ಈ ಮೂಲಕ ಕಾಂಗ್ರೆಸ್ಸಿನಲ್ಲಿ ತಮಗಿರುವ ಪ್ರೀತಿ ವಿಶ್ವಾಸವನ್ನು ಪ್ರಕಟಿಸಬಹುದು

ಕಾಂಗ್ರೆಸ್ ಅಧಿವೇಶನಕ್ಕೆ ಮಹಾಜನಸ್ತೋಮವು ಕೂಡಿಬರುವುದೆಂದು ನಿರೀಕ್ಷೆಯಿದೆ ಇದಕ್ಕಾಗಿ ಹರಿಪುರದಲ್ಲಿ ಎಲ್ಲಾ ಸಿದ್ಧತಾ ಕಾರ್ಯಗಳು ನಡೆಯುತ್ತಿವೆ ರಾಷ್ಟ್ರಪತಿಗಳ ಮತ್ತು ರಾಷ್ಟ್ರನಾಯಕರ ಕಾಂಗ್ರೆಸ್ ಸಂದೇಶಗಳಿಂದ ಕೂಡಿದ ಭಾಷಣಗಳು ನೆರೆದ ಎಲ್ಲರಿಗೂ ಸರಿಯಾಗಿ ಕೇಳುವಂತೆ ಅವುಗಳು ರೇಡಿಯೊ ಮೂಲಕ ಪ್ರಚಾರಮಾಡುವ ವಿಶೇಷ ಏರ್ಪಾಡು ಹರಿಪುರದಲ್ಲಾಗಿದೆ ಕಾಂಗ್ರೆಸ್ಸಿಗೆ ಆಕರ್ಷಿಸಿದವರು ಈ ಭಾಷಣಗಳನ್ನು ತಮ್ಮ ಬಿಡಾರದಲ್ಲೂ ಕೂಡ ಕೂತು ಕೇಳಬಹುದಂತೆ ಇದಲ್ಲದೆ ಕಾಂಗ್ರೆಸ್ ಸಮಯದಲ್ಲಾಗುವ ಭಾಷಣಗಳೂ, ಸಮಸ್ತ ಭರತಖಂಡದ ಹಳ್ಳಿಕೇರಿಗಳಿಗೂ, ನಗರಗಳಿಗೂ, ಎಲ್ಲರಿಗೂ ಕೇಳಿಬರುವಂತೆ ಅವುಗಳನ್ನು ಹರಿಪುರದಿಂದ ಬ್ರಾಡ್ ಕಾಸ್ಟ್ ಮಾಡಿಸಿ, ದಿಲ್ಲಿಯ ಮೂಲಕ ಸಮಸ್ತ ಹಿಂದೂದೇಶದಲ್ಲಿ ಪ್ರಚಾರಗೊಳಿಸುವ ಕುರಿತು ಹರಿಪುರ ಕಾಂಗ್ರೆಸ್ ಅಧಿಕಾರಿಗಳು, ದಿಲ್ಲಿ ರೇಡಿಯೊ ಸ್ಟೇಶನ್ ಅಧಿಕಾರಿಗಳೊಡನೆ ವ್ಯವಹಾರ ನಡೆಸುತ್ತಿದ್ದಾರೆ

ಮಹಾಜನಗಳನ್ನು ಪೀಡಿಸುತ್ತಿರುವ ಹಸಿವನ್ನು ನಿವಾರಿಸುವುದೆ ಗುರಿಯನ್ನಾಗಿಟ್ಟು ಹರಿಪುರ ಕಾಂಗ್ರೆಸ್ಸಿನ ಸ್ವಾಗತಮಂಡಳಿಯವರು ಕಾಂಗ್ರೆಸ್ ಅಧಿವೇಶನಕ್ಕೆ ಬೇಕಾದ ಎಲ್ಲಾ ಗೋಧಿ, ಅಕ್ಕಿ, ಎಣ್ಣೆ ಇತ್ಯಾದಿ ಅಡುಗೆಮನೆಯ ಜೀನಸುಗಳನ್ನು, ಹಳ್ಳಿಗರ ಕೈಯಿಂದ ತಯಾರಾದವುಗಳನ್ನೇ ಕೊಂಡುಕೊಳ್ಳಬೇಕಾಗಿ ನಿರ್ಣಯಿಸಿರುವರು ದಿನ ಒಂದರ ಹದಿನೆರಡಾಣೆ ಖರ್ಚಿನಲ್ಲಿ ಮೂರು ಊಟಗಳನ್ನು ಒದಗಿಸುವ ಒಂದು ಸರ್ವಸಾಮಾನ್ಯ ಅಡುಗೆಮನೆಯಲ್ಲದೆ, ದಿನಕ್ಕೆ ಮೂರಾಣೆ ಖರ್ಚಿನಲ್ಲಿ ಮೂರು ಊಟಗಳನ್ನು ಒದಗಿಸುವ, ಹಳ್ಳಿಯ ಮಹಾಜನಗಳಿಗಾಗಿ ಒಂದು ವಿಶೇಷ ಅಡುಗೆಮನೆಯ ಏರ್ಪಾಡು ಮಾಡಲಾಗಿದೆ ಕಾಂಗ್ರೆಸ್ ಅಧಿವೇಶನ ಸಮಯದಲ್ಲಿ ಈ ಅಡುಗೆಮನೆಯಲ್ಲಿ ಲಕ್ಷೋಪಲಕ್ಷ ಜನರು ಉಣುವರೆಂದು ನಿರೀಕ್ಷೆಯಿದೆ, ಈ ಅಡಿಗೆಮನೆಯ ಪರವಾಗಿ ಬಾರ್ಡೋಲಿ ಸತ್ಯಾಗ್ರಹ ವೀರರಾದ ಶ್ರೀ। ಮುರಾರ್ ಭಾಯಿಪಟೇಲ್ ಶ್ರೀ। ರವಿಶಂಕರ ವ್ಯಾಸ್ ಇವರೇ ಮೊದಲಾದವರು ಜಿನಸು, ಸಾಮಾನುಗಳನ್ನು ಕೂಡಿಸುವರೆ ಗುಜರಾತಿನ ಹಳ್ಳಿಹಳ್ಳಿಗಳಲ್ಲಿ ಸಂಚರಿಸುತ್ತಿದ್ದು, ಈಗಾಗಲೆ ೨೫೦೦ ಮಣ ಅಕ್ಕಿಯನ್ನು ಕೂಡಿಸಿರುವರು. ಇವರಿಗೆ ೫೦೦೦ ಮಣ ಅಕ್ಕಿಯನ್ನು ಕೂಡಿಸುವ ಧೈರ್ಯವಿದೆ

ಹರಿಪುರದಲ್ಲಿ ಏರ್ಪಡಿಸಲ್ಪಟ್ಟ ಸರ್ವಸಾಮಾನ್ಯ ಅಡುಗೆ ಮನೆಯಲ್ಲಿ ಒಂದೇ ಒಂದು ಬಾರಿ ೯೦೦೦ ಮಂದಿಗಳು ಊಟಕ್ಕೆ ಕುಳಿತುಕೊಳ್ಳಬಹುದು

---

### ಋಣವಿಮೋಚನೆಯಾಗುವುದು ನಿಜ— ಮುಂದಕ್ಕೆ?

೧೯೩೬–೩೭ರ ಗೇಣಿಯನ್ನು ಕಾಲಕ್ಕೆ ಸರಿಯಾಗಿ ಪೂರ್ಣ ತೆತ್ತರೆ ಸರಿ, ಒಕ್ಕಲ ಗಳು ೧೯೩೫ರ ತನಕ ಬಾಕಿಯುಳ್ಳ ಗೇಣಿಯನ್ನು ತೆರಬೇಕಾಗಿಲ್ಲ ರೈತರ ಋಣವಿಮೋಚನ ಬಿಲಿನ ಪ್ರಕಾರ ಮುಂದಕ್ಕೆ ಪಾವತಿ[illegible] ತಿಂಗಳು ೧೦ರಷ್ಟು ಪ್ರಕಾರ ಬಡ್ಡಿಯನ್ನು ತೆರುವ ತಾಗುವುದು [illegible] ಮೊದಲಾದ ಸಾಲಗಳ ಬಡ್ಡಿಯು [illegible] ಇವೇ ಮೊದಲಾದ ರೈತರಿಗೆ ಉಪಶಮನ ದೊರಕಿಸುವ [illegible] ಸರಕಾರದ ರೈತ ಋಣವಿಮೋಚನಾ ಬಿಲ್ಲು [illegible] ರೈತರ ಹಿಂದಿನ ಸಾಲಗಳ [illegible] ಗಳ [illegible] ರೈತರ [illegible] ಮಾಡಬೇಕೆಂದು [illegible] ಮಹಾದೇವ ದೇಸಾಯಿಯವರ ಹರಿಜನ ಪತ್ರಿಕೆಯಲ್ಲಿ ಬರೆದಿದ್ದಾರೆ

### ಮಹಾತ್ಮಾಜಿಯವರ ಆರೋಗ್ಯ

ಮಹಾತ್ಮಾಜಿಯವರ ಆರೋಗ್ಯವು ಸಹಜ ಸ್ಥಿತಿಗೆ ಬರುವ ಚಿಹ್ನೆಗಳು ಕಾಣಿಸಿಕೊಂಡಿವೆ ಅವರ ರಕ್ತ ಒತ್ತಡದಲ್ಲಿ ಹೆಚ್ಚಿನ ಹೆಚ್ಚು ಕಡಿಮೆಯು ಕಾಣಿಸುವುದಿಲ್ಲ ಹೀಗಾಗಲು ಅನೇಕ ಕಾರಣಗಳಿವೆಯಾದರೂ, ಇವುಗಳಲ್ಲಿ ಮುಖ್ಯ ಕಾರಣವು ಒಂದು ದೇಶೀಯ ಔಷಧಿಯು ಈ ಔಷಧಿಯಿಂದ ರಕ್ತ ಒತ್ತಾಟದ ಹೆಚ್ಚಳವನ್ನು ಗುಣಪಡಿಸುವ ಕುರಿತು ಹರಿಜನ ಪತ್ರಿಕೆಯಲ್ಲಿ ಮುಂದಕ್ಕೆ ಪ್ರಕಟವಾಗುವುದು ಮಹಾತ್ಮಾಜಿಯವರ ಈ ರೋಗದಿಂದ, ಧಾದಿಯರು ಡಾಕ್ಟರರು ರೋಗದ ಕುರಿತು ಅನೇಕ ನವಸತ್ಯಗಳನು ಕಂಡು ಹಿಡಿಯುವವರಾದರು. ಇದರಿಂದ ರೋಗಪೀಡಿತರಾದ ಇತರರಿಗೆ ಬಹಳ ಉಪಕಾರವಾಗಬಹುದು

ಮಹಾತ್ಮಾಜಿಯವರು ಬೇಗನೆ ಆರೋಗ್ಯವಂತರಾಗುವಂತೆ ಅನೇಕ ಕಡೆಗಳಿಂದ ಅನೇಕ ತರದ ಪ್ರಾರ್ಥನೆಗಳಿಂದ ಕೂಡಿದ ಪತ್ರಗಳು ಬಂದವೆಂದು ಮಹಾದೇವ ದೇಸಾಯಿಗಳು ಹರಿಜನ ಪತ್ರಿಕೆಯಲ್ಲಿ ಬರೆಯುತ್ತಿದ್ದಾರೆ ಅವುಗಳಲ್ಲಿ ಮಹಾತ್ಮಾಜಿಯವರು ರಕ್ತ ಒತ್ತಾಟದ ಹೆಚ್ಚಳದಿಂದ ಪಾರಾದುದರಿಂದ, ಆದಷ್ಟು ಬೇಗನೆ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಬೇಕಾಗಿ ವಿನಂತಿಸಿ, ಒಂದು ಪತ್ರವು ಬಂದಿತ್ತಂತೆ.

---

# ಸೇಲಮಿನಲ್ಲಿ ಮದ್ಯನಿಷೇಧ!

## ಜನರಿಗೆ ಉಣ್ಣಲಿಕ್ಕೆ ದರಿದ್ರವಿಲ್ಲ!!

### ಬಟ್ಟೆಬರೆಗಳು ಧಾರಾಳ! ಹಣದ ಉಳಿತಾಯ! ಬೆಲ್ಲದ ವ್ಯಾಪಾರಾಭಿವೃದ್ಧಿ!

### ಮದ್ಯ ನಿಷೇಧದ ಕುರಿತು ಜಿಲ್ಲಾ ಕಲೆಕ್ಟರರ ವರದಿ

ಸೇಲಮಿನಲ್ಲಿ ಜ್ಯಾರಿಯಾದ ಮದ್ಯನಿಷೇಧವು ಈಗಾಗಲೆ ಬಹಳ ಯಶಸ್ವಿಯಾಗಿ ನಡೆಯುತ್ತದೆಂದೂ, ಆದರೆ ಇನ್ನೂ ಕೆಲ ಸಮಯದ ವರೆಗೆ ಈ ಸ್ಥಿತಿಯು ಜಾಗರೂಕತೆಯಿಂದ ನಿರೀಕ್ಷಿಸಲ್ಪಡಬೇಕೆಂದೂ, ಸೇಲಮಿನ ಜಿಲ್ಲಾ ಕಲೆಕ್ಟರವರ ಅಭಿಪ್ರಾಯವಾಗಿರುತ್ತದೆ ಕಳೆದ ಒಕ್ಟೋಬರ 1ರಿಂದ ಈ ನಿಷೇಧ ಕ್ರಮ ಜ್ಯಾರಿಯಾದಂದಿನಿಂದ ಇಷ್ಟರ ತನಕ ಮದ್ಯಸೇವಕರಲ್ಲಿ ಸಾಧಾರಣ ಶೇ ೯೦ರ ಸಲ ಈಗ ಮದ್ಯವನ್ನು ತ್ಯಜಿಸಿರುವರು ಕಳ್ಳಬಟ್ಟಿಯಲ್ಲಿ ಮದ್ಯ ಸೇವನೆಯಾಗುವುದನ್ನು ಕಂಡುಹಿಡಿಯಲು ಪೋಲೀಸರೂ ಜಂಗಲ್ ಇಲಾಖೆಯವರೂ ಭಾರಿ ಪರಿಶ್ರಮವನ್ನು ನಡೆಸುತ್ತಿದ್ದಾರೆ

ಸೇಲಂ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮದ್ಯನಿಷೇಧ ಕಮಿಟಿಗಳ ರಚನೆಯಾಗಿವೆ ಇವುಗಳಲ್ಲಿ ಹೆಚ್ಚಾಗಿ ಕಾಂಗ್ರೆಸ್‌ವಾದಿಗಳೆ ಇದ್ದಾರೆ ಈ ತರದಲ್ಲಿ ಸಾಧಾರಣ ೨೦೦ ಮಂದಿಗಳು ಸೇಲಂ ಜಿಲ್ಲೆಯ ವಿವಿಧ ಕಡೆಗಳಲ್ಲಿ ಮದ್ಯನಿಷೇಧಕ್ಕಾಗಿ [illegible] ಈ ಕಮಿಟಿಗಳ [illegible] ಈ ಕಮಿಟಿಗಳಿಂದ ಪ್ರತಿಯೊಂದ ಹಳ್ಳಿಯಲ್ಲಿ ಮದ್ಯನಿಷೇಧ ಕಮಿಟಿಗಳು [illegible] ಮದ್ಯಸೇವನೆ ನಡೆಯುವುದನ್ನು ಕಂಡುಹಿಡಿಯ[illegible], ಪೋಲೀಸ್ ಅಧಿಕಾರಿಗಳಿಗೆ ಧಾರಾಳ ಸಹಾಯವು ದೊರಕುತ್ತಿದೆ ಈ ಕಮಿಟಿಯವರು [illegible] ಕಲೆಕ್ಟರರಿಗೆ [illegible] ವರದಿ [illegible]ಕೊಡುತ್ತಿದ್ದಾರೆ

### ಬೆಲ್ಲ ತಯಾರು

ಕಾಳಿಮರಗಳಿಂದ ಬೆಲ್ಲ ತಯಾರಿಗಾಗಿ ಸಿಹಿರಸವನ್ನು [illegible], ಅನೇಕರ [illegible] ಕಾಳಿ ಬೆಲ್ಲವನ್ನು [illegible] ಸರಕಾರದ [illegible] ದ ಸೇಲಮಿನಲ್ಲಿ ಸನ್ನದರ [illegible] ಕಾಳಿಮರದ ಸಿಹಿರಸದಿಂದ ಬೆಲ್ಲವನ್ನು ತಯಾರಿಸಲು, ಜನರನ್ನು [illegible] ಮೂರಾಟ ಮಾಡುವರೆ ೬ ಬೆಲ ಮಾರಾಟದ ಸಹಕಾರ ಸಂಘಗಳಿವೆ ಈ ಸಂಘಗಳು ಮುಕ್ತಿದಾರರಿಗೆ ಆವಶ್ಯವಿದ್ದ ಹಣವನ್ನು ಒದಗಿಸಿ, ಅವರಿಂದ ಬೆಲ್ಲವನ್ನು ತಯಾರಿಸಿ, ಅದನ್ನು ಮಾರಿ ಬಂದುದರಲ್ಲಿ ತಮ್ಮ ಸಾಲವನ್ನು ಕಳೆಯುತ್ತಿದ್ದಾರೆ

ಜನರು ಹಣವನ್ನು ಉಳಿಸಿಕೊಳ್ಳುವಂತೆ, ಸೇಲಮಿನ ಅರ್ಬನ್ ಬೇಂಕಿನಿಂದ ಓರ್ವ ಇನ್ಸ್‌ಪೆಕ್ಟರರ ನೇಮಕವಾಗಿರುತ್ತದೆ ಇವರು ಅಲ್ಲಲ್ಲಿ ಸಂಚರಿಸಿ, ಹಳ್ಳಿಗರು ಮದ್ಯ ಕುಡಿಯುವಿಕೆಯಿಂದ ಉಳಿಯುವ ಹಣವನ್ನು ಬೇಂಕಿನಲ್ಲಿ ಕೂಡಿಸಿಡು ವಂತೆ ಅವರನ್ನು ಒತ್ತಾಯಪಡಿಸುತ್ತಿದ್ದಾರೆ ಅವರ ಪರಿಶ್ರಮದ ಫಲವಾಗಿ, ಆ ಬೇಂಕಿನಲ್ಲಿ ಅನೇಕ ಹಳ್ಳಿಗರ ಸೇವಿಂಗ್ಸ್ ಡೇಪಾಸಿಟುಗಳಾಗಿವೆ ಆವಶ್ಯವಿದ್ದಾಗ ಮಾತ್ರ ಹಳ್ಳಿಗರು ಈ ಹಣವನ್ನು ತೆಗೆದುಕೊಳ್ಳಬಹುದು ಈ ರೀತಿ ಹಣವನ್ನು ಉಳಿಸುವ ಅಭ್ಯಾಸವು ಹೆಚ್ಚಾಗಿ ರೂಢಿಗೆ ಬಂದಿಲ್ಲ ಕಾರಣ, ಹಳ್ಳಿಗರು ಈಗ ಸರಿಯಾಗಿ ಹೊಟ್ಟೆಗೆ ತಿನ್ನುತಿದ್ದಾರೆ, ಅಲ್ಲದೆ ಅವರ ಹಿಂದಿನ ಸಾಲಗಳನ್ನು ಸ್ವಲ್ಪ ಸ್ವಲ್ಪವಾಗಿ ಮರುಪಾವತಿ ಮಾಡುತಿದ್ದಾರೆ

---

ಮಹಾತ್ಮಾಜಿಯವರ ಅಹಿಂಸಾ ನೀತಿಯು ಹಿಂದೂದೇಶದಲ್ಲಿ ಹೇಗೆ ನಡೆಯುತ್ತಿದೆ ಎಂಬುದರ ಕುರಿತು ಬಹಿರ್‌ಜನಾಂಗಿಕ ಜನರಿಗೆ ಜ್ಞಾನ ಮಾಡಿ ಕೊಡಲು ಮೆಡಮ್ ಹೆಲ್ಯಾಸ್ ಎಡಿಫ್ ಹಾಸುಮ್ ಎಂಬವರ 'ಇನ್ಸೈಡ್ ಇಂಡಿಯಾ' 'ಹಿಂದೂದೇಶದೊಳಗೆ' ಎಂಬ ಪುಸ್ತಕವನ್ನು ಬರೆದಿರುವರು ಇದರಲಿ ಹಿಂದೂದೇಶದಲ್ಲಿ ನಡೆಯುವ ಗಾಂಧಿಜಿಯರ ಅಹಿಂಸಾ ಚಳವಳವು ಚಿತ್ರಿಸಲಾಗಿವೆ ಮೆಡಮ್ ಹೆಲ್ಯಾಸ್ ಎಡಿಬಳು ಇದೇ ತರದ ಲೇಖನಗಳನ್ನು ಹರಿಜನ ಪತ್ರಿಕೆಗೆ ಕಳುಹಿಸಿರುವರೆಂದು ಮಹಾದೇವ ದೇಸಾಯಿಗಳು ತಿಳಿಸುತ್ತಾರೆ

### ಮಹಾಜನಮನಗಳನ್ನು ಸೆಳೆಯಬೇಕು

ಮಹಾಜನಗಳ ಮನಸ್ಸನ್ನು ಸೆಳೆಯುವ [illegible] ಕಾರ್ಯವನ್ನು ಮಾಡಿ, ನಮ್ಮ ಸರಕಾರದ ಆಡಳಿತ ಪ್ರಾರಂಭಿಸಬೇಕೆಂದು ಕಾಂಗ್ರೆಸ್ ಅಧಿಕಾರ ವಹಿಸುವ ಮೊದಲೆ ಮಹಾತ್ಮಾಜಿಯವರು ರಾಜಾಜಿಯವರೊಡನೆ ಅಂದಿದರು ಇದಕ್ಕೆ ಸರಿಯಾಗಿ ಪ್ರಧಾನ ರಾಜಾಜಿಯವರು ವರ್ತಿಸಿರುವರು ಮದ್ಯನಿಷೇಧ ಕ್ರಮ ನೆಲೆ [illegible] ಪ್ರತಿಮೆ ತೆಗೆಯೋಣ, ರೈತರ [illegible] ಇಪ್ಪುಗಳೆಲ್ಲ ರಾಜಾಜಿಯರ ಈ ವರ್ತನೆಯ ಕುರುಹುಗಳು [illegible] ಮದ್ಯನಿಷೇಧ ಕ್ರಮ ಜ್ಯಾರಿಗೆ ತರಲು ಸಹಾಯವಾಗುವಂತೆಯೂ, ಗ್ರಾಮ [illegible] ಕೈಗೊಳ್ಳುವಂತೆಯೂ ಪ್ರಜೆಗಳನ್ನು ಇತರ ವಿಧಗಳಲ್ಲಿ ಸುಧಾರಿಸುವಂತೆಯೂ ಅವರಿಗೆ ನಿರ್ಮಲವಾದ ಕುಡಿಯುವ ನೀರನ್ನು ಒದಗಿಸುವಂತೆಯೂ, ಅವರಿಗೆ ಬೇಕಾದ ವೈದ್ಯಕೀಯ ಸಹಾಯವನ್ನು ಒದಗಿಸುವ ತೆಯೂ ಅನುಕೂಲವಾಗ ವರೆ ಆಡಳಿತದ ವೆಚ್ಚವನ್ನು ಕಡಿಮೆಮಾಡುವರೆ ಸರಕಾರಿ ನೌಕರರ ಸಂಬಳವು ಇಳಿಸಲಾಗಿದ್ದೆ ಎಂದು ಮದ್ರಾಸು ಪ್ರಕಟಣೆಯಲ್ಲಿ ಸಾರಲಾಗಿದೆ.


## ಹಿಂದುಸ್ಥಾನ ಕೋಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು — ಕಲ್ಕತ್ತಾ — ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ — ಸ್ಥಾಪನೆ 1907

| | | |
|---|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ | 12,00 00,000 |
| ಆಸ್ತಿಪಾಸ್ತಿಗಳು | ರೂ | 2,21 00,000 |
| ನೂತನ ವ್ಯವಹಾರ | ರೂ | 2 82,81,000 |

ಅತ್ಯಧಿಕ ಬೋನಸ್ ಹಂಚಲಾಗಿದೆ.

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ವಿಮೆಯ ಮೇಲೆ ಪ್ರತಿ ವರ್ಷ ಒಂದರ ರೂ. 23.

ಮಕ್ಕಳ ವಿಮಾ, ಅಪಘಾತ, ಮತ್ತು ಮರಣ ವಿಮೆ–ನಮ್ಮ ವಿಶಿಷ್ಟತೆ.

*For particulars, please apply to*

T. ANANTACHARI,
BRANCH MANAGER, H C I S LTD"
POST BOX 223 MADRAS.

K. K. MENON,
ORGANISOR H. C. I. S LTD,
Court Road, CALICUT.

## ವಿಷಯಸೂಚಿಕೆ


ಅಂತರರಾಷ್ಟ್ರೀಯ ವಿಚಾರಗಳು
ವಾರ್ತಾಪತ್ರಿಕಾ ರಹಸ್ಯಗಳು
ಹರಿಪುರ ಕಾಂಗ್ರೆಸ್
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು.
ಅಗ್ರಲೇಖ
ಪ್ರಾಂತಿಕ ಗ್ರಾಮಪಂಚಾಯತುಗಳ ಪರಿಷತ್ತು ೧೦
ಸ್ಫುಟವಿಚಾರಗಳು ,,
ಬಂಟ್ವಾಳದ ಮಣೆಹಳ್ಳದಲ್ಲಿ ಭಯಂಕರ ಅಪಘಾತ ೧೩
ತಾಲೂಕುಗಳಿಂದ ೧೧
ಬ್ಲೇಕ್ ಡ್ರಗನ್ ಸೊಸ್ಸಾಟಿ ೧೬
ನೋಟಿಗಳು ೧೮


ಸ್ವದೇಶಾಭಿಮಾನಿ.

ತಾ. ೧೪ನೇ ಶುಕ್ರವಾರ ಜನವರಿ ೧೯೩೮

## ಪ್ರಾಂತಿಕ ಗ್ರಾಮಪಂಚಾಯತುಗಳ ಪರಿಷತ್ತು.

ಗ್ರಾಮಪಂಚಾಯತುಗಳು ನಿರ್ಮಾಣ ಹೊಂದುದು 1920ರಲ್ಲಿ, ಅವುಗಳ ಮೊದಲನೆ ಪರಿಷತ್ತು ಸೇರಿದುದು ಈ ವರ್ಷವೇ ಮಾತ್ರ. ಮಂತ್ರಿಮಂಡಲವು ಕಾಂಗ್ರೆಸಿನದಾಗಿ ಗ್ರಾಮೋದ್ಧಾರದ ಕಡೆಗೆ ಪ್ರಜಾಪ್ರತಿನಿಧಿಗಳೇ ಇರುವರೆಂದು ಪಂಚಾಯತುಗಳಿಗೆ ತೋರಿದರೂ ಈ ಹರ್ಷ ಮಾತ್ರವೆ? ಸಹಾನುಭೂತಿಯನ್ನು ಬಲು ಚೆನ್ನಾಗಿ ಹಿಂದಣ ಮಂತ್ರಿಕೂಟಗಳು ಸಾರಿದ್ದರೂ ಈ ಪಂಚಾಯತುಗಳು ಮಾತ್ರ ಇವರಿಂದ ಹೆಚ್ಚಿನ ಯೋಗ್ಯತೆ ಪಡೆಯದಾದುವು. ಪಂಚಾಯತುಗಳಿಗೆ ಸಲ್ಲತಕ್ಕ ಸೌಲಭ್ಯಗಳು ಹಕ್ಕುಗಳ ಜವಾಬ್ದಾರಿಗಳು ಸಹ ಇದುವರೆಗೆ ಪೂರ್ಣವಾಗಿ ಸಂದಿಲ್ಲ. ಇನ್ನು ಸಲ್ಲಬಹುದಾಗಿ ನಂಬಿಕೆಯಿದೆ.

ಆರು ಸಾವಿರ ಗ್ರಾಮಗಳಲ್ಲಿ ಉಂಟಾದ ಪಂಚಾಯತುಗಳು ಸಹ ತಾಲೂಕುಬೋರ್ಡುಗಳ ಹಂಗಿನಿಂದ ಪಾರಾಗುವುದೇ ಕಷ್ಟವಾಯಿತೆಂಬಂತೆ ಅಧ್ಯಕ್ಷರು ಸೂಚಿಸಿರುವರು. ಜಿಲ್ಲಾ ಬೋರ್ಡುಗಳು ಪಂಚಾಯತುಗಳ ಕಡೆಗೆ ದುರ್ಲಕ್ಷ್ಯವನ್ನಿಟ್ಟುದೇ ಅಲ್ಲದೆ, ವಕ್ರದೃಷ್ಟಿಯನ್ನು ಬೀರಿ, ಅದನ್ನು ನಿರಾಶಗೊಳಿಸಿವೆಯೆಂದೂ ಸೂಚಿತವಾಗಿದೆ.

ಸ್ವಾಗತಾಧ್ಯಕ್ಷರೂ, ಪರಿಷದಾಧ್ಯಕ್ಷರೂ ಈಗಿರುವ ನಮೂನೆಯ ಜಿಲ್ಲಾ ಬೋರ್ಡುಗಳನ್ನು ವಜಾಪಡಿಸಿ, ಪ್ರತಿಯೊಂದು ಗ್ರಾಮದಲ್ಲೂ ಪಂಚಾಯತನ್ನೇ ಸ್ಥಾಪಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯವಾಗಿ ಹಿಂದೆ ಜನತೆಯ ಮುಂದೆ ಇವೇ ಅಭಿಪ್ರಾಯಗಳನ್ನು ವಿವರವಾಗಿ ಇಟ್ಟುದರಿಂದ, ಪುನಃ ಇವನ್ನು ವಿವರಿಸಬೇಕಾಗಿಲ್ಲ.

ಗ್ರಾಮದಿಂದ ಬರುವ ಸೆಸ್ಸಿನ ಮುಕ್ಕಾಲಂಶವನ್ನು ಈ ಪಂಚಾಯತುಗಳಿಗೆ ಕೊಡಬೇಕಲ್ಲದೆ ಸರಕಾರವು ಇವು ಕೂಡಿಸುವ ಹಣದಷ್ಟನ್ನೇ ಗ್ರಾಂಟಾಗಿ ಇವುಗಳಿಗೆ ಕೊಡಬೇಕೆಂದೂ ಅಧ್ಯಕ್ಷರು ಸೂಚಿಸಿರುವರು. ಸಂತೆ, ದೊಡ್ಡಿ, ಕಾಡು, ಕಡವು ಇವುಗಳ ಉತ್ಪನ್ನವೂ ಪಂಚಾಯತಕ್ಕೆ ಸೇರತಕ್ಕದಾಗಿದೆ. ಇತರ ಕಂದಾಯವು ಉತ್ಪನ್ನಗಳ ಅಥವಾ ಶ್ರಮದ, ಅಥವಾ ಹಣದ ಮೂಲಕ ವಸೂಲಾಗುವ ಅಧಿಕಾರವನ್ನು ಪಂಚಾಯತುಗಳಿಗೆ ಇರಬೇಕೆನ್ನುವರು. ಕಂದಾಯದ ಒಂದಂಶವಾದರೂ ಈ ಪಂಚಾಯತುಗಳಿಗೆ ಸಿಗಲೇಬೇಕೆಂಬ ಸೂತ್ರವಿದ್ದರೆ ಚೆನ್ನಾಗುವುದು. ರಸ್ತೆ, ಕಾಲುವೆ ಮೊದಲಾದವನ್ನು ದುರುಸ್ತಿಮಾಡುವುದಕ್ಕೆ ಬೇಕಾಗುವ ಶ್ರಮವನ್ನೂ ತೆರಿಗೆಯಂತೆ ಪಾವತಿಮಾಡಿಕೊಳ್ಳಬೇಕಾಗುವುದು. ಇಲ್ಲದಿದ್ದಲ್ಲಿ ಸರಕಾರದ ಇಲಾಖೆಯೇ ಎಲ್ಲ ಕೆಲಸ ಮಾಡಿಕೊಟ್ಟು, ಅದರ ಖರ್ಚನ್ನು ಗ್ರಾಮದಿಂದ ವಸೂಲ್ಮಾಡಿಕೊಳ್ಳಬೇಕಾಗುವುದು.

ಕಂದಾಯವನ್ನು ವಸೂಲ್ಮಾಡುವುದಕ್ಕೆ ಗ್ರಾಮಪಂಚಾಯತುಗಳನ್ನು ನಿಯೋಜಿಸಬಾರದಾಗಿ ಸ್ವಾಗತಾಧ್ಯಕ್ಷರ ಭಾಷಣವಾಗಿದೆ. ಮಂತ್ರಿಗಳ ಅಭಿಪ್ರಾಯಕ್ಕೆ ಇದು ವಿರುದ್ಧವಾಗಿದೆ. ಕಂದಾಯವನ್ನು ನಿರ್ಧರಿಸುವ ಅಧಿಕಾರವನ್ನೇನೂ ಪಂಚಾಯತುಗಳಿಗೆ ಕೊಡುವುದಿಲ್ಲ, ವಸೂಲು ಮಾಡಿಕೊಳ್ಳುವಷ್ಟೆ ಅಧಿಕಾರವನ್ನು ಕೊಡುವುದರಲ್ಲಿ ಆತಂಕವು ಏತಕ್ಕೆ ಇರಬೇಕು. ಆ ಕಂದಾಯದ ಅಂಶವು ಇವಕ್ಕೆ ದೊರೆವಾಗ, ಅವನ್ನು ಅವರೇ ವಸೂಲ್ಮಾಡಿಕೊಂಡರೆ ತಪ್ಪಾಗುವುದೆ? ಇದರಿಂದ ಗ್ರಾಮ ಉದ್ಯೋಗಸ್ಥರಲ್ಲಿ ಒಬ್ಬರನ್ನೇ ಮಾತ್ರ ನಿಯೋಜಿಸಬೇಕಾಗುವುದರಿಂದ, ಮತ್ತೊಬ್ಬರ ಸಂಬಳವೂ ಸರಕಾರಕ್ಕೆ ಉಳಿಯುವುದೆಂದೂ ಸೂಚಿಸಲಾಗಿದೆ. ಕೊನೆಯ ಪಕ್ಷ 5000ವಾದರೂ ಜನಸಂಖ್ಯೆಯುಳ್ಳಷ್ಟು ಗ್ರಾಮಗಳಿಗೊಂದು ಪಂಚಾಯತವಿರಬೇಕೆನ್ನುವರು.

### ಸಹಕಾರ ಸಂಘಗಳು

ಸರಕಾರದ ಆಡಳಿತದಲ್ಲಿರುವ ಸಹಕಾರ ಸಂಘಗಳು ವ್ಯರ್ಥವೆಂದು ಸಹಕಾರ ಚಳವಳದಲ್ಲಿ ಮುಂದಾಳಾಗಿರುವ ಶ್ರೀ ರಾವ ದಾಸ ಪಂತುಲುರವರೇ ಸಾರುತ್ತಾರೆ. ಆದರೆ ಗ್ರಾಮಪಂಚಾಯತುಗಳಿಗೆ ಸಹಕಾರ ಸಂಘಗಳನ್ನು ಒಪ್ಪಿಸುವುದ ಕ್ರಮವಲ್ಲ. ಹಾಗೆಂದು ಸಹಕಾರ ಸಂಘವು ಗ್ರಾಮಾಂತರದಲ್ಲಿರುವ ಸಮಸ್ತರ ಸಾಂಪತ್ತಿಕ ಸಹಾಯಕ್ಕೆ ಒದಗುವುದೆನ್ನುವಾಗ, ಹಾಗೇ ಬಿಟ್ಟರೆ ಅದು ಕೆಲವರೇ ದೊಡ್ಡವರುಗಳ ಸಂಘಗಳಾಗಿ ಬಡ ರೈತರಿಗೆ ಅಪಕಾರವನ್ನೇ ಮಾಡಬಹುದು.

ಒಂದೇ ಸಂಘವೇ ನಾನಾ ಬಗೆಯ ವಹಿವಾಟುಗಳನ್ನುಳ್ಳದ್ದಾಗಿರುವುದ ಕ್ರಮ ಹೊರತು ಒಂದು ಗ್ರಾಮದಲ್ಲಿ ನಾಲ್ಕಾರು ಸಂಘಗಳು ಬೇಡವೆಂದೂ ಒಂದು ಅಭಿಪ್ರಾಯವು ಬಲಗೊಳ್ಳುತ್ತ ಬರುತ್ತದೆ. ಸಾಮಾನು ದಾಸ್ತಾನು ಇಡುವ, ಮಾರುವ, ಹತ್ಯಾರು ಇತ್ಯಾದಿಗಳನ್ನು ಒದಗಿಸುವ ಗುಡಿಕೈಗಾರಿಕೆಗಳಿಗೆ ಸಹಾಯ ಮಾಡುವ, ಅಲ್ಪಾವಧಿಯ ಸಾಲಗಳನ್ನು ಕೊಡುವ ಮೊದಲಾದ ನಾನಾ ಚಟುವಟಿಕೆಗಳು ಈ ಸಂಘದಿಂದಲೇ ನಡೆಯಬೇಕಾಗಿವೆ. ರಾಜಕೀಯ ವಿಷಯಗಳಲ್ಲಿ ಪಂಚಾಯತ ಇರುವಂತೆ ಸಾಂಪತ್ತಿಕ ವಿಷಯಗಳಲ್ಲಿ ಸಹಕಾರ ಸಂಘವಿರಬೇಕಾಗಿದೆ. ಪ್ರಾಯಸ್ಥನಾಗಿರುವ ಪ್ರತಿಯೊಬ್ಬನೂ ಈ ಸಂಘದಲ್ಲಿ ಸದಸ್ಯನಾಗಬೇಕು. ಪಂಚಾಯತು ಮತ್ತು ಸಹಕಾರ ಸಂಘ ಇವೆರಡೂ ಸೇರಿದರೆ ಗ್ರಾಮೋದ್ಧಾರವು ಸುಲಭಸಾಧ್ಯವಾಗುವುದು. ಬಡವರಿಗೂ ಅಶಿಕ್ಷಿತರಿಗೂ ಸಹಾಯವಾಗುವಂತೆ ಇವೆರಡು ಸಂಘಗಳು ಕಾರ್ಯನಿರ್ವಹಿಸಬೇಕಾಗಿದೆ ಹೊರತು ಶ್ರೀಮಂತರ ಸ್ವಾರ್ಥಕ್ಕಾಗಲ್ಲ.

ಜಿಲ್ಲಾಬೋರ್ಡುಗಳ ಈಗಣ ಸ್ಥಿತಿಯನ್ನೆ ಅಳಿಸಿಬಿಟ್ಟು, ಅವು ಮುಂದೆ ಇಡೀ ಜಿಲ್ಲೆಯ ಪಾರ್ಲಿಮೆಂಟಿನಂತಾಗಿ ಕಾರ್ಯನಿರ್ವಾಹ ಮಾಡುವಂತೆ, ಇಲಾಖಾಧೀಶರರನ್ನು ಒಳಕೊಂಡಿರಬೇಕಾದ ಸಂಸ್ಥೆಗಳಾಗಬೇಕೆಂದೂ, ಆ ಇಲಾಖೆಗಳ ಸಿಬ್ಬಂದಿಯು ಬೋರ್ಡುಗಳ ಹೆಚ್ಚಿನ ಕಾರ್ಯಭಾಗವನ್ನು ವಹಿಸುವಂತಾಗಬೇಕೆಂದೂ ಶ್ರೀ ಪರಿಷದಾಧ್ಯಕ್ಷರು ಹೇಳಿರುವರು. ಗ್ರಾಮಗಳಲ್ಲೆಲ್ಲ ಪಂಚಾಯತಗಳಾದಲ್ಲಿ, ಸ್ವಾಭಾವಿಕವಾಗಿ ಬೋರ್ಡುಗಳ ಕಾರ್ಯಕ್ರಮವು ಇಷ್ಟಕ್ಕೆ ನಿಲ್ಲುವುದು. ಈ ವಿಷಯವನ್ನು ಮುಂದೆ ವಿವರಿಸಬೇಕಾಗಿದೆ.

### ಮದ್ರಾಸಿನಲ್ಲಿ ಶ್ರೀಮಾನ್ ವೈಸರಾಯರು

ಕಾಂಗ್ರೆಸ್ ಮಂತ್ರಿಮಂಡಳಗಳಿರುವ ಪ್ರಾಂತ್ಯಗಳಲ್ಲಿ, ಮದ್ರಾಸಿನಲ್ಲೇ ಮೊದಲನೆಯದಾಗಿ, ವೈಸ್ರಾಯರು ದಯೆಮಾಡಿಸಿರುವರು. ಹಿಂದೆ ಕೆಲ ಸಲ ವೈಸ್ರಾಯರು ಮದ್ರಾಸಿಗೆ ಬರುವಾಗ ಕರೀ ಬಾವುಟಗಳು ಅವರನ್ನು ಎದುರ್ಗೊಂಡದ್ದುವು. ಅಂತಹ ಸಂಭವಗಳೇನೂ ಈ ಸಲ ಇದ್ದಿಲ್ಲದುದರಿಂದ, ಕಾಂಗ್ರೆಸು ಅಧಿಕಾರ ಸ್ವೀಕರಿಸಿದ ಬಳಿಕ ಉಂಟಾದ ಈ ವಿದ್ಯಮಾನಗಳಲ್ಲಿನ ಮಾರ್ಪಾಟುಗಳನ್ನು ಅವರು ಸುಲಭವಾಗಿ ತಿಳಿದುಕೊಳ್ಳಲು ಅನುಕೂಲವೇ ಸರಿ. ವೈಸ್ರಾಯರು ಭಾಷಣಾದಿಗಳನ್ನು ಮಾಡುವಾಗಲ್ಲದೆ, ಫಲಾಹಾರಾದಿ ಕೂಟಗಳಲ್ಲಿ ಮಾತ್ರ ಇನ್ನೂ ಕಾಂಗ್ರೆಸು ಸ್ವಾಭಾವಿಕವಾಗಿ ದೂರವೇ ನಿಂತಿದೆ. ಫೆಡರೇಶನ ಇತ್ಯರ್ಥವೆಂದು ವೈಸ್ರಾಯರಿಗೆ ಅವಶ್ಯವಾಗಿಯೂ ಮುಖ್ಯವೆನಿಸಿಯದೆ. ಆ ವಿಷಯದಲ್ಲಿ ಅವರಿಗೆ ಸಂಪೂರ್ಣ ವಿಶ್ವಾಸವಿದೆ. ಕಾಂಗ್ರೆಸು ಅದನ್ನು ಅವಿಶ್ವಾಸದಿಂದಲೇ ಕಂಡು ಅದನ್ನು ಖಂಡಿತವೂ ವಿರೋಧಿಸಬೇಕೆಂದಿದೆ. ಇದೊಂದು ರಗಳೆ ಎಂದಿಗೆ ಹೇಗೆ ಇತ್ಯರ್ಥವಾದೀತೆಂದು ಯಾರಿಗೂ ಹೇಳಬರುತ್ತಿಲ್ಲ. ಹಿಂದೀಯರಿಗೆ ಅದು ಅತ್ಯುತ್ತಮವೆಂದು ವೈಸ್ರಾಯರು ನಂಬಿರುವರಾದರೂ, ಜನತೆಗೆ ಅದು ಬೇಡವಾಗಿದ್ದು, ನಮ್ಮ ರಾಜಕೀಯ ಸ್ಥಿತಿಯನ್ನೇ ಪ್ರತ್ಯೇಕ ರೀತಿಯಲ್ಲಿ ಮಾರ್ಪಡಿಸಿಕೊಳ್ಳಲು ಬೇರೆ ನೂತನ ತಕ್ಕನ್ನು ಮಾಡಿಕೊಳ್ಳಬೇಕೆಂಬ ಲವಲವಿಕೆಯಿದೆ.

### ಫೆಡರೇಶನಿನ ವಿಷಯ ತಪ್ಪುವಿಚಾರ

ಕೆಲವರು,—ಹಿಂದೆ ಪ್ರಾಂತಿಕ ಸ್ವರಾಜ್ಯದಲ್ಲಿ ಕಾಂಗ್ರೆಸು ನಂಬಿರಲಿಲ್ಲ. ಅದನ್ನು ಜ್ಯಾರಿಗೆ ತಂದುದೇ ಕಾಂಗ್ರೆಸ್ ಮಂತ್ರಿಗಳು ಅತ್ಯಧಿಕ ಮತಪಿರುವಲ್ಲಿ ಅದನ್ನೊಪ್ಪಿಯೂ ಈಗ ಕಾರ್ಯನಿರ್ವಹಿಸುತ್ತಿಲ್ಲವೇ,— ಅದರಂತೆ, ಫೆಡರೇಶನು ಕಾಂಗ್ರೆಸು ಈಗ ಒಪ್ಪದಿದೆಯಾದರೂ ಅದನ್ನು ಜ್ಯಾರಿಗೆ ತರುತ್ತಲೇ ಕಾಂಗ್ರೆಸೂ ಅದನ್ನು ಸ್ವೀಕರಿಸಬಹುದೆಂದು ಸೂಚಿಸುತಲೇ ಇದ್ದಾರೆ. ಈ ಮಾತುಗಳು ಈ ಧೋರಣೆಯ ಅಭಿಪ್ರಾಯವನೇನೂ ಸೂಚಿಸುವುದಲ್ಲ. ವೈಸ್ರಾಯರು ನಿಪುಣರು. ಈ ಹೇಳಿಕೆಯನ್ನು ಅವರು ನಂಬುವ ಹಾಗಿಲ್ಲ. ನಂಬಿದರೆ ಹಿಂದೀಯರಿಗೂ ಬ್ರಿಟಿಷ ಸರಕಾರಕ್ಕೂ ನಾನಾ ತೊಂದರೆಗಳುಂಟಾಗಲು ಕಾರಣವುಂಟು. ಫೆಡರೇಶನನ್ನು ಜ್ಯಾರಿಗೆ ತರದಂತೆ ಮಾಡಲು ಸಾಕಷ್ಟು ಕಾರಣಗಳನ್ನು ಅಧಿಕಾರಪೂರ್ವಕವಾಗಿ ಕೊಡಲು ಪ್ರಾಂತಿಕ ಸರಕಾರಗಳು ಸಿದ್ಧವಾಗುವ ಹಾಗೆ ಮಾತ್ರ ಕಾಂಗ್ರೆಸು ಅಧಿಕವೆಂಬುವಿರುವಲ್ಲಿ ಅಧಿಕಾರ ಸ್ವೀಕರಿಸಿ ಪ್ರಾಂತಿಕ ಸರಕಾರಗಳನ್ನು ಕೈಗೊಂಡಿವೆ. ಗೊಂಬೆ ಮಂತ್ರಿಗಳ ಬದಲಾಗಿ ಈ ಅಧಿಕಾರಯುಕ್ತ ಮಂತ್ರಿಗಳೇ ಪ್ರಾಂತಿಕ ರಾಜ್ಯಭಾರ ನಿರ್ವಹಿಸಲಿ ಎಂದು ಕಾಂಗ್ರೆಸು ನಿರ್ಧರಿಸುವಾಗ, ಫೆಡರೇಶನನ್ನು ಅಗತ್ಯವಾಗಿಯೂ ವಿರೋಧಿಸಬೇಕೆಂದೂ ಸೂಚಿಸಿಯೇ ಇದೆ.

### ರಾಜ್ಯಗಳು—ಪ್ರಾಂತ್ಯಗಳು.

~~ನಿರಂಕುಶ ಪ್ರಭುತ್ವವುಳ್ಳ ರಾಜ್ಯಗಳನ್ನೂ~~ ಪ್ರಜಾಪ್ರಭುತ್ವವುಳ್ಳ ಪ್ರಾಂತ್ಯಗಳನ್ನೂ ಒಂದುಗೂಡಿಸಿ, ಫೆಡರೇಶನ್ ಮಾಡುವುದು ಜನತೆಗೆ ಸಮ್ಮತವಾಗಿಲ್ಲ. ಆದರೂ, ಫೆಡರೇಶನಿನಲ್ಲಿ ಪ್ರಾತಿನಿಧ್ಯದ ಕ್ರಮವಾದರೂ ಸರಿಯಾಗಿದ್ದು ಪ್ರಜಾಪ್ರಭುತ್ವವು ಬೆಳೆಯಲು ಸಹಾಯಕವಾಗಿದ್ದರೆ, ಅದನ್ನೊಂದು ವೇಳೆ ಅಂಗೀಕರಿಸಲು ಅವಕಾಶವಿರುತ್ತಿತ್ತು. ಫೆಡರಲ್ ಸರಕಾರವು, ದೇಶರಕ್ಷಣೆ, ಪರದೇಶಗಳೊಡನೆ ಸಂಪರ್ಕ, ರೈಲ್ವೆಗಳು, ಹಣ ಚಲಾವಣೆಯ ನಿರ್ಣಯ ಮೊದಲಾದುವನ್ನು ಕುರಿತು ಯಾವ ತೀರ್ಮಾನವನ್ನೂ ಮಾಡದಂತೆ ಅದನ್ನು ಸ್ಟೇಟ್ ಸೆಕ್ರೆಟರಿಯವರಿಗೇ ಕೊಟ್ಟು ಪಾರ್ಲಿಮೆಂಟಿನ ಅಂಕೆಯಲ್ಲಿಟ್ಟು,— ಇವೆಲ್ಲ ವಿಷಯಗಳು ಫೆಡರಲ್ ಸರಕಾರಕ್ಕೂ ಸಿಗದ ಹಾಗೆ ನಿರಂಕುಶ ಪ್ರಭುತ್ವದ ಪ್ರಾತಿನಿಧ್ಯವನ್ನು ಫೆಡರೇಶನಿನಲ್ಲಿ ಬಲಪಡಿಸಿರುವುದು ಹಾನಿಕರವಾಗಿದೆ. ಇಂತಹ ಫೆಡರಲ್ ಸರಕಾರ ಕ್ರಮವು ಜನಾನುರಾಗಕ್ಕೆ ಪಾತ್ರವಾಗಿಲ್ಲವೆಂದು ವೈಸ್ರಾಯರು ತಮ್ಮ ಪ್ರಾಂತಿಕ ಸಂಚಾರಕಾಲದಲ್ಲಿ ತಿಳಿದುಕೊಳ್ಳುವಂತಾಗಬಹುದಾಗಿ ನಂಬಬಹುದಾದರೆ, ಮುಂದೆ ಹಿಂದಿನ ಅನುಕೂಲವಾಗಿಲ್ಲದ ಫೆಡರಲ್ ಸರಕಾರ ಕ್ರಮವು ಜ್ಯಾರಿಗೆ ಬಾರದಂತೆ ಅವರೂ ಪ್ರೇರೇಪಿಸಬಹುದಾಗಿಯೂ ನಂಬಬಹುದು. ಹಾಗಾದೀತೆ?

### ಎಸೆಂಬ್ಲಿ ಅಧ್ಯಕ್ಷರ ಕೂಟ

ನಿಶ್ಚಯಿಸಿರುವ ಎರಡು ವಿಚಾರಗಳು ಮಾತ್ರ ವಿಶೇಷತ್ವದವು. ನ್ಯಾಯವಿಧಾಯಕ ಸಮಾರಂಭದಲ್ಲಿ ಪ್ರಾರ್ಥನೆಗಳು ಅಗತ್ಯವಲ್ಲವೆಂಬುದು ಒಂದು ನಿರ್ಣಯ. ಪ್ರಾರ್ಥನೆಯ ಮಹತ್ವ ಅಥವಾ ಉಪಯೋಗವನ್ನು ಕುರಿತು ಏನೂ ವಿವರಿಸಿ ಹೇಳಬೇಕಾಗಿಲ್ಲ. ಆದರೆ, ಅದನ್ನು ಚರ್ಚಿಸಿ ಗಲಭೆಯೆಬ್ಬಿಸುವುದರಿಂದ ಯಾವ ಮಹತ್ವವೂ ಉಪಯೋಗವೂ ಉಂಟಾಗಲಾರದಷ್ಟೆ. ಮತಸಂಬಂಧವಾದ ಸಂಸ್ಕಾರವೊಂದು ಪ್ರತಿ ಸಾಂಪ್ರದಾಯದವರಿಗೂ ಅಗತ್ಯವೆಂದು ತೋರುವುದುಂಟು, ಆದರೆ ಒಬ್ಬರ ಕ್ರಮ ಮಾತ್ರ ಮತ್ತೊಬ್ಬರಿಗೆ ಒಪ್ಪದು. ನಾನಾ ಭಾಷೆಗಳ ಗಾನ ಪ್ರಾರ್ಥನೆಗಳನ್ನು ಹಾಡಿಯೇ ಒಂದು ಕ್ರಮವನ್ನಿಟ್ಟುಕೊಂಡು, ಅದು ಪ್ರತಿದಿನ ನಡೆವ ಕಾರಣ, ಅದಕ್ಕೆ ಯಾವ ವಿಶೇಷತೆಯನ್ನೂ ಎಣಿಸದೆ, ವೃಥಾ ಕಾಲಕ್ಷೇಪ ಮಾಡುವ ಬೇಸರವೊಂದು ಇನ್ನೂ ಸನ್ನಿಹಿತವಾಗಬಹುದು. ಮಂತ್ರಿಗಳ ಬದಲಾಗಿ ಅವರ ಸೆಕ್ರೆಟರಿಗಳು ಪ್ರಶ್ನೆಗಳಿಗೆ ಉತ್ತರ ಕೊಡಬಹುದೆಂದೂ ಒಂದು ನಿರ್ಧಾರವಾಗಿದೆ. ಇದರಿಂದ ಮಂತ್ರಿಗಳು ವಿಶೇಷ ಮಹತ್ವದ ಸಮಸ್ಯೆಗಳಿಗೆ ಮಾತ್ರ ಸಮಾಧಾನಕೊಡಲು ಸಿದ್ಧರಾಗುವಂತಾಯಿತು. ಸೆಕ್ರೆಟರಿಗಳೂ ಸ್ವಲ್ಪ ಇಲಾಖಾ ವಿಷಯಗಳಲ್ಲಿ ಹೆಚ್ಚಿನ ಅನುಭವ ಪಡೆದುಕೊಳ್ಳಲೂ ಅನುಕೂಲವಾಯಿತು — ಎನ್ನಬಹುದು. ಸ್ಪೀಕರ (ಅಧ್ಯಕ್ಷ)ರು ಯಾವ ರಾಜಕೀಯ ಪಕ್ಷಕ್ಕೂ ಸೇರದಂತೆ ವರ್ತಿಸಬೇಕೆಂಬುದು ಉತ್ತಮ ತತ್ವ.

### ಶ್ರಮಜೀವಿಗಳನ್ನು ಕುರಿತು ಹೆರೊಲ್ಡ್ ಬಟ್ಲರರು

ಒಂದು ತಿಂಗಳ ತನಕ ಇಲ್ಲಿ ಸಂಚಾರ ಮಾಡಿ, ಕೆಲವು ಸೂಚನೆ ಬರೆದಿರುವರು. ಕೈಗಾರಿಕೆಗಳನ್ನು ತಡೆಯಲಾಗುವಂತಿಲ್ಲ. ಇದಕ್ಕಾಗಿ ಯೋಗ್ಯ ಶಿಕ್ಷಣವಿಲ್ಲದೆ ಇವು ವಿಸ್ತಾರ ಹೊಂದಿದರೆ ಮೋಸವೇ. ವಿದ್ಯಾಭ್ಯಾಸವು ಎಲ್ಲಕ್ಕೂ ಮೂಲದಲ್ಲಿದೆ. ಈ ದೇಶವೆಂದರೆ ಎಲ್ಲ ಹಳ್ಳಿಗಳೇ ಸರಿ. ಹೊಲಗಳಿಂದ ಹುಟ್ಟುವ ಉತ್ಪನ್ನಗಳನ್ನು ಹೆಚ್ಚಿಸುವ ಪ್ರಯತ್ನಗಳಾಗಬೇಕು, ಕಾರ್ಖಾನೆಗಳಿಗಿಂತ ಇವೇ ಮುಖ್ಯ. ಜನಸಂಖ್ಯೆ ಈಗ ಹೆಚ್ಚುತ್ತಿರುವಂತೆ ಹೆಚ್ಚುತ್ತ ಬಂದರೆ, ಜೀವನಕ್ರಮವು ಇನ್ನಷ್ಟು ಕುಂದುವುದು. ಜನರು ಹೆಚ್ಚಾಗಿ ನಗರಗಳನ್ನೆ ಸೇರುವರು. ಕೃಷಿಕ್ರಮವು ಶಾಸ್ತ್ರೀಯವಾಗುವ ಹಾಗೆ ಸರಕಾರವು ಮಾಡುವ ಪ್ರಯತ್ನಗಳನ್ನು ಈ ಹಳ್ಳೀಜನರು ಸರಿಯಾಗಿ ತಿಳಿದುಕೊಳ್ಳುವಂತಾಗಬೇಕು. ಆಗ ಅವರ ಉತ್ಪನ್ನಗಳು ಹೆಚ್ಚಿ ಜೀವನವು ಸುಖಮಯವಾದೀತು. ನೇಕಾರರಷ್ಟಾದರೂ ಅವರ ಆಯವು ಹೆಚ್ಚಿದರೆ, ಅವರ ಜೀವನವು ಎಷ್ಟೋ ಹೆಚ್ಚಾಗಿ ಸುಖಮಯವಾದೀತು! ಇದನ್ನೆಲ್ಲ ಕೂಡಿಸಿ ತರಲು ಜಗತ್ತಿನ ಇತರ ಎಲ್ಲಿಯೂ ಇಲ್ಲದಷ್ಟು ಹೆಚ್ಚಾದ ಕಷ್ಟಗಳಿವೆ. ಮುಂದಾಳುಗಳು ಬೇಕು. ಅವರು ಜನಹಿತಕ್ಕಾಗಿ ಹೋರಾಡುವರಾದರೆ, ರಾಷ್ಟ್ರೀಯ ಉಜ್ಜೀವನವು ತಾನಾಗಿ ಸಿದ್ಧವಾಗುವುದು. ಮೇಲ್ದನಿಯವರ ಸಹಾನುಭೂತಿ, ಉದ್ಯೋಗದ ಅವಧಿಯ ಭದ್ರತೆ ಮೊದಲಾದುವಿಲ್ಲದೆ ಎಂತಹ ಕೆಲಸಗಾರನೂ ಸುಖಪಡಲಾರನು.

# ವೀರಮಾತೆ ನೆಹರೂರವರ ನಿಧನ! ಕಾಂಗ್ರೆಸ್–ಮುಸ್ಲಿಂ ಲೀಗ್ ಸಂಧಾನ

## ಹರಿಜನರಿಗೆ ದೇವಾಲಯ ಪ್ರವೇಶ! — ಜಗತ್ತಿನ ಸರ್ವನಾಶವಾಗುವುದಿತ್ತು!

## ಗ್ರಾಮಪಂಚಾಯತುಗಳಿಗೆ ಹೆಚ್ಚಿನ ಅಧಿಕಾರ ದೊರಕಬೇಕು! ಜಿಲ್ಲಾ ಬೋರ್ಡುಗಳು ಜಿಲ್ಲೆಯ ಆಡಳಿತವನ್ನು ನಡೆಯಿಸುವಂತವುಗಳಾಗಬೇಕು!

### ವೀರಮಾತೆ ಶ್ರೀಮತಿ ಸ್ವರೂಪರಾಣಿ ನೆಹರೂರವರ ನಿಧನ.

ಶ್ರೀಮತಿಯವರು ಕೀರ್ತಿಶೇಷ ಮೋತಿಲಾಲ ನೆಹರೂರವರ ಧರ್ಮಪತ್ನಿ, ರಾಷ್ಟ್ರಪತಿ ಜವಾಹರಲಾಲ ನೆಹರುರವರ ಮಾತೆ — ಇವರು ಮೊನ್ನೆ ತಾ ೧೦ರ ಬೆಳಿಗ್ಗೆ ಗಂಟೆ ೫ಕ್ಕೆ ತಮ್ಮ 71ನೇ ವಯಸ್ಸಿನಲ್ಲಿ ತನ್ನ ಮಕ್ಕಳೆಲ್ಲಾ ತನ್ನ ಸುತ್ತಲೂ ನೆರೆದಿದ್ದ ಸಮಯದಲ್ಲಿ, ಶಾಂತರೀತಿಯಲ್ಲಿ ಈ ಲೋಕವನ್ನು ತ್ಯಜಿಸಿ ಪರಲೋಕವಾಸಿಗಳಾದರು. ತನ್ನ ಸರ್ವಸ್ವವನ್ನೂ ತ್ಯಜಿಸಿ ದೇಶಸೇವೆಯಲ್ಲಿ ತೊಡಗಿದ, ರಾಷ್ಟ್ರಾಭ್ಯುದಯದಲ್ಲಿ ಮಹಾಕಾರ್ಯಸಾಧನೆಯನ್ನು ಮಾಡಿದ ಮಹಾ ವೀರ ಪುರುಷರನ್ನೂ ವೀರ ರಮಣಿಯರನ್ನೂ ಭರತಮಾತೆಗೆ ಒಪ್ಪಿಸಿದ ಈ ನೆಹರೂ ಮಾತೆಯವರ ಎಷ್ಟು ಶ್ಲಾಘನೆಮಾಡಿದರೂ ಸಾಲದು. ತನ್ನ ಕುಮಾರ ಕುಮಾರಿಯರೂ ಪತಿದೇವರೂ ಕಾರಾಗೃಹವಾಸವನ್ನನುಭವಿಸುತ್ತ ಇರುವಾಗ, ತಾಯಿಯ ಪತ್ನಿಯ ವ್ಯಥೆಯನ್ನು ತೋರಿಸುವ ಬದಲಾಗಿ,— ಅದು ತನಗೊಂದು ಮಹಾ ಗೌರವವೆಂದೆಣಿಸಿದವರು ಇವರು. ಕಳೆದ ಅಸಹಕಾರ ಚಳವಳದಲ್ಲಿ ದಿವಂಗತರು ತನ್ನ ಕುಟುಂಬದ ಇತರರೊಡನೆ ತಾನೂ ಸೇರಿ, ದೇಶಸೇವಾಕಾರ್ಯಗಳನ್ನು ಮಾಡಿ, [illegible] ಪ್ರಹಾರಕ್ಕೆ ಒಳಗಾಗಿದ್ದರು. ಅಂದು ಮೆರವಣಿಗೆಯಲ್ಲಿ ಅವರಿಗೆ ಕಠಿಣ ತರದ ಏಟು ಬಿದ್ದ ಆ ಏಟಿನಿಂದ ಗಾಯಹೊಂದಿದವರಾಗಿ ರಕ್ತ ಸುರಿದು, ಪ್ರಜ್ಞೆತಪ್ಪಿದ ಅವರನ್ನು ಪೋಲೀಸರು ಮನೆಗೆ ಕೊಂಡೊಯಿದ್ದರು. ಇದನ್ನೆಲ್ಲಾ ಸಂತೋಷದಿಂದ ಅನುಭವಿಸಿದರು. ಇವೆಲ್ಲಾ ರಾಷ್ಟ್ರಪತಿಯವರ ಆತ್ಮಕಥೆಯಲ್ಲಿ ತಿಳಿಸಲಾಗಿದೆ. ಈ ಏಟುಗಳಿಂದ ಅವರು ಪ್ರಜ್ಞೆ ಗುಣಹೊಂದಿದರೂ ಇವುಗಳೇ ಅವರ ನಂತರದ ಪೀಡೆಗಳಿಗೆ ಕಾರಣವಾದುವು. [illegible] ರಾಷ್ಟ್ರಪತಿಯವರು, ರೋಗಪೀಡಿತರಾದ ತಮ್ಮ ಮಾತೆಯ ಬಳಿಯಲ್ಲಿರಲು ಅವರನ್ನು ಬಂಧಮುಕ್ತಮಾಡಲಾಗಿತ್ತು. ವೀರಮಾತೆಯ ನಿಧನದಿಂದ ಸಮಸ್ತ ಭಾರತವು ದುಃಖಿಸುವ [illegible] ದಲ್ಲಿ ಮುಳುಗಿರುತ್ತದೆ. ವೀರಮಾತೆಯವರು ತಾ ೯ನೇ ರಾತ್ರಿ ಸೌಖ್ಯದಲ್ಲಿದ್ದು, ಅಂದು ಅಲ್ಲಿ ನೆರೆದಿದ್ದ ತನ್ನ ಈರ್ವರು ಕುಮಾರಿಯೊಡನೆಯೂ, ಪುತ್ರನೊಡನೆಯೂ ಮಾತನಾಡುತ್ತಿರುವಾಗ ಆಕಸ್ಮಾತ್ತಾಗಿ ಅವರಿಗೆ ಪ್ರಾಣಸಂಕಟವುಂಟಾಗಿ ಬೆಳಗ್ಗಿನ ಜಾವ ಗಂಟೆ ೫ಕ್ಕೆ ಈ ಲೋಕವನ್ನು ತ್ಯಜಿಸಿದರು. ದಿವಂಗತರ ಸ್ಮಶಾನಯಾತ್ರೆಗೆ ಅಲ್ಲಹಾಬಾದಿನ ಸಮಸ್ತ ಜನರೂ ಕೂಡಿಬಂದಿದರು. ಹಾದಿಯಲ್ಲಿ ಸ್ತ್ರೀಪುರುಷರು ವೀರಮಾತೆಯವರಿಗೆ ಪುಷ್ಪಹಾರಗಳನ್ನು ಒಪ್ಪಿಸಿದರು. ಅಂದು ಅಲ್ಲಹಾಬಾದಿನ ಸಮಸ್ತ ವ್ಯಾಪಾರವೂ ನಿಲ್ಲಿಸಲಾಗಿತ್ತು. ಮಹಾವ್ಯಕ್ತಿಗಳಾದ ಸರ್ ತೇಜ್‌ಬಹದ್ದೂರ್ ಸಪ್ರೂ, ಸಂಯುಕ್ತ ಪ್ರಾಂತ್ಯದ ಮಂತ್ರಿಗಳನೇಕರು, ವಿಶ್ವವಿದ್ಯಾಲಯದ ವೈಸ್‌ಚೆನ್ಸಲರರು ಮೊದಲಾದವರೆಲ್ಲರೂ ಶವವನ್ನು ಅನುಸರಿಸಿಬಂದಿದ್ದರು. ಭಾರತದ ಅನೇಕ ಕಡೆಗಳಿಂದಲೂ ಹೊರದೇಶಗಳಿಂದಲೂ ರಾಷ್ಟ್ರಪತಿಯವರಿಗೆ, ಅವರ ಮಾತೆಯ ನಿಧನದ ಕುರಿತು ಸಂತಾಪ ಸೂಚಿಸಿ ಅನೇಕ ತಂತಿಗಳೂ ಪತ್ರಗಳೂ ಬಂದಿವೆ.

### 1939ರಲ್ಲಿ ಫೆಡರೇಶನನ್ನು ಎದುರಿಸಲು ಸಿದ್ಧರಾಗಬೇಕು.

ಕಾಂಗ್ರೆಸ್ ಸೌಮ್ಯವಾದಿ ನಾಯಕರಾದ ಜೈಪ್ರಕಾಶ ನಾರಾಯಣರವರು ಪೂನೆಯಲ್ಲಿ ಭಾಷಣಮಾಡುತ್ತಾ, ಕಾಂಗ್ರೆಸ್ ಮಂತ್ರಿಗಳ ಕಾರ್ಯಗಳನ್ನು ಅಲ್ಲಗಳೆಯುವ ಉದ್ದೇಶವು ನಮ್ಮದಲ್ಲ. ದೇಶದ ಮೇಲೆ ಅಧಿಕಾರ ಪಡೆಯಲು ನಡೆಯುತ್ತಿರುವ ಕಾಂಗ್ರೆಸ್ಸಿನ ಚಳವಳಿವನ್ನು ಬಲಪಡಿಸುವುದರಲ್ಲಿ ನಾವು ಸಹಕಾರಿಗಳಾಗುತ್ತಿರುವಾಗ, ಮಂತ್ರಿಮಂಡಲಗಳನ್ನು ನ್ಯಾಯವಾದ ರೀತಿಯಲ್ಲಿ ಟೀಕಿಸುವ ಅವಕಾಶವು ನಮಗಿರಬೇಕು. ಸದ್ಯದಲ್ಲೇ ಅಂದರೆ ೧೯೩೯ರೊಳಗೆ ಫೆಡರೇಶನನ್ನು ವಿರೋಧಿಸುವ ಮಹಾಕಾರ್ಯಕ್ಕಾಗಿ ದೇಶದ ಯುವಕರನ್ನೂ ರೈತರನ್ನೂ ಮಜೂರರನ್ನೂ ವ್ಯವಸ್ಥೆಗೊಳಿಸಬೇಕು. ಈ ಉದ್ದೇಶದಿಂದಲೇ ಕಾಂಗ್ರೆಸ್ ಸೌಮ್ಯವಾದಿ ಪಕ್ಷವು ಈಗ ಪರಿಶ್ರಮಿಸುತ್ತಿದೆ ಎಂದರು.

### ದೇವಸ್ಥಾನ ಪ್ರವೇಶ—

ಹರಿಜನರಿಗೆ ದೇವಸ್ಥಾನ ಪ್ರವೇಶವನ್ನು ಕೊಡುವರೆ ಅವಕಾಶ ಮಾಡಿಕೊಡುವ ಒಂದು ಬಿಲ್ಲು, ಮುಂಬಾಯಿ ಕಾಂಗ್ರೆಸ್ ಸರಕಾರದಿಂದ ಪ್ರಕಟವಾಗಿರುತ್ತದೆ. ಈ ಬಿಲ್ಲು ಮುಂದಿನ ಎಸೆಂಬ್ಲಿ ಅಧಿವೇಶನದಲ್ಲಿ ಬರುವುದು. ಯಾವತ್ತೂ ಕಾರಣಗಳಿಂದಾಗಿ ಹರಿಜನರು ಹಿಂದೂ ಸಾರ್ವಜನಿಕ ದೇವಾಲಯಗಳನ್ನು ಪ್ರವೇಶಿಸದಂತೆ ಈಗಿರುವ ತಡೆಗಳನ್ನು ನಿವಾರಿಸುವರೆ ಅನುಕೂಲವಾಗುವಂತೆ ಮಾಡುವುದೇ ಈ ಬಿಲ್ಲಿನ ಉದ್ದೇಶ. ಹರಿಜನರಿಗೆ ದೇವಸ್ಥಾನದೊಳಗೆ ಪ್ರವೇಶ ದೊರಕಿಸದೆ ತಾನು ಸಾಯಲಾರೆನೆಂದು ಮದ್ರಾಸಿನ ಕಾಂಗ್ರೆಸ್ ಪ್ರಧಾನ ಮಾನ್ಯ ರಾಜಾಜಿಯವರು ಮ[illegible]ಯಲ್ಲಿ ಎಂದೆಡೆಯಲ್ಲಿ ಭಾಷಣ ಮಾಡುತ್ತಿರುವಾಗ ಆಡಿರುವರು.

### ಪಂಚಾಯತುಗಳ ಪರಿಷತ್ತು

ಮದ್ರಾಸು ಸಂಸ್ಥಾನದ ಗ್ರಾಮ ಪಂಚಾಯತು ಬೋರ್ಡುಗಳ ಪ್ರಥಮ ಪರಿಷತ್ತು ಮೊನ್ನೆ ಮದ್ರಾಸಿನಲ್ಲಿ ನಡೆದು, ಈ ಕೆಳಗಿನ ಠರಾವುಗಳನ್ನು ಮಾಡಿತು. ಸ್ಥಳೀಯ ಸಂಸ್ಥೆಗಳ [illegible] ಈಗಿರುವ [illegible] ಸರಕಾರದ ಆಕ್ಟನ್ನು ಸಂಪೂರ್ಣವಾಗಿ ರದ್ದುಪಡಿಸಿ ಸ್ಥಳೀಯ ಸಂಸ್ಥೆಗಳನ್ನು ಸರಿಯಾದ [illegible] ರೀತಿಯಲ್ಲಿ ವ್ಯವಸ್ಥೆಗೊಳಿಸುವರೆ ಈ ಆಕ್ಟನ್ನು ನೂತನವಾಗಿ ರಚಿಸಬೇಕೆಂದು ಯೂ, ಪ್ರತಿಯೊಂದು ಹಳ್ಳಿಯಲ್ಲಿಯೂ ಹಳ್ಳಿಗಳ ಸಮೂಹದಲ್ಲಿ ಪಂಚಾಯತುಗಳ ರಚನೆಯಾಗಬೇಕೆಂದೂ, ಇವುಗಳ ಚುನಾವಣೆಯು ಪ್ರಾಯಸ್ಥರ ಮತಗಳಿಂದ ನಡೆಸಬೇಕೆಂದು ಕೋರಿಯೂ, ಪಂಚಾಯತು ಬೋರ್ಡುಗಳಿಗೆ ಹಣವೊದಗಿಸುವ ಕ್ರಮ ಸುವ್ಯವಸ್ಥೆ ಹೊಂದಬೇಕೆಂದೂ, ಹಳ್ಳಿಗಳಲ್ಲಿರುವ ಧಾರ್ಮಿಕ ಎಂಡೋಮೆಂಟ್ ಇತ್ಯಾದಿಗಳನ್ನು ಪಂಚಾಯತಿನ ಅಧಿಕಾರಕ್ಕೆ ಕೊಡಬೇಕೆಂದು ಕೋರಿಯೂ, ಗ್ರಾಮ ಉದ್ಯೋಗಸ್ಥರೆಲ್ಲಾ ಗ್ರಾಮ ಪಂಚಾಯತುಗಳ ಕೈಕೆಳಗಿರಬೇಕೆಂದೂ, ಈಗ ರೂಢಿಯಲ್ಲಿರುವ ಜಿಲ್ಲಾ ಬೋರ್ಡುಗಳಿಂದ ಯಾವತ್ತೂ ಉಪಯುಕ್ತತೆಯು ಇಲ್ಲದಿರುವುದರಿಂದ ಅವುಗಳು ಜಿಲ್ಲಾ ಆಡಳಿತಕ್ಕೆ ನೆರವಾಗುವಂತೆಯೂ, ಜಿಲ್ಲಾ ಪ್ರಜಾಭಿಪ್ರಾಯವನ್ನು ಕೂಡಿಸುವ ತರದಲ್ಲಿ ಕಾರ್ಯಸುವಂತೆ ಸುಧಾರಣೆಹೊಂದಲು ಜಿಲ್ಲಾ ಬೋರ್ಡಿನ ಆಕ್ಟಿನ ತಿದ್ದುಪಡಿಯನ್ನು ಕೋರಿಯೂ, ಗ್ರಾಮ ಪಂಚಾಯತುಗಳ ಆಡಳಿತಕ್ಕೆ ಸರಕಾರದ ಬೇರೆ ಒಂದು ಇಲಾಖೆಯು ಏರ್ಪಾಡಾಗಬೇಕೆಂದೂ, ಅದಕ್ಕಾಗಿ ಪಂಚಾಯತ ರಿಜಿಸ್ಟ್ರಾರ್ ಜನರಲರೊಬ್ಬರ ನೇಮಕವಾಗಬೇಕೆಂದು ಕೋರಿಯೂ, ಹಳ್ಳಿಶಾಲೆಗಳ ಆಡಳಿತವು ಪಂಚಾಯತಿನ ಅಧಿಕಾರಕ್ಕೊಳಪಡಬೇಕೆಂದೂ ಹಳ್ಳಿಯ ನೀರಾವರಿ, ಕಾಡು ಇತ್ಯಾದಿಗಳ ಕುರಿತು ಆಡಳಿತಕ್ಕೆ ಬೇರೆ ಪಂಚಾಯತುಗಳ ರಚನೆಯಾಗುವ ಬದಲಿಗೆ ಅವುಗಳು ಗ್ರಾಮಪಂಚಾಯತುಗಳಿಗೆ ಒಪ್ಪಿಸಲ್ಪಡಬೇಕೆಂದೂ, ಹಳ್ಳಿಗಳಲ್ಲಿನ ಸರಕಾರಿ ಆಸ್ತಿಗಳನ್ನೆಲ್ಲಾ ಪಂಚಾಯತುಗಳಿಗೆ ಕೊಡಲಾಗಬೇಕೆಂದೂ, ಪಂಚಾಯತುಗಳಿಂದಲೇ ದವಾಖಾನೆ ಇತ್ಯಾದಿ ಸಾರ್ವಜನಿಕ ಉಪಯೋಗದ ಹಳ್ಳಿಸಂಸ್ಥೆಗಳ ಸ್ಥಾಪನೆಯಾಗುವಂತೆ ಪ್ರೋತ್ಸಾಹಿಸಬೇಕೆಂದೂ, ಹಳ್ಳಿಗಳ ಮಾರ್ಕೆಟು ಇತ್ಯಾದಿಗಳ ಏಲಂ ಪಂಚಾಯತುಗಳಿಂದಲೇ ನಡೆಯುವಂತಾಗಬೇಕೆಂದೂ, ಪಂಚಾಯತುಗಳಿಂದಲೇ ನಡೆಯುವಂತಾಗಬೇಕೆಂದೂ, ಹೀಗೆ 'ಪ್ರಜಾಸತ್ತೆಯ ಸರಕಾರದ ಕ್ರಮಕ್ಕೆ ಸರಿಯಾಗಿ ಗ್ರಾಮಪಂಚಾಯತು ಪ್ರಜಾಸತ್ತೆ ಸೂತ್ರದ ಸಣ್ಣ ಸಣ್ಣ ಸರಕಾರಗಳಾಗುವ ರೀತಿ ಅವುಗಳು ಮಾರ್ಪಡುವಂತೆ ಅನೇಕ ಠರಾವುಗಳು ಮಾಡಲಾದುವು.

### ಕೋಮುಗಳ ಐಕ್ಯತೆ.

ಹಿಂದೂ ಮುಸ್ಲಿಂ ಪ್ರಶ್ನೆಯನ್ನು ಸುಧಾರಿಸುವರೆ ಉಂಟಾದ ಕಾಂಗ್ರೆಸಿನ ಸಂಕಲ್ಪ ಪ್ರಕಾರ ಆ ಕುರಿತು ಗಾಂಧಿಜಿಯವರನ್ನು ಕಂಡು ದೀರ್ಘಕಾಲದ ಸಂಭಾಷಣೆನಡೆಸಿದ ಅಬ್ದುಲ್ ಕಲಂ ಅಜಾದರು ಮೊನ್ನೆ ದಿನ ಮುಂಬಾಯಿಯಲ್ಲಿ ಜಿನ್ನಾರನ್ನು ಕಂಡು, ಆ ಪ್ರಶ್ನೆಯ ಕುರಿತ [illegible] ಈ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸ್ಪಷ್ಟವಾದ ಸೂಚನೆಗಳನ್ನು ಕಾಂಗ್ರೆಸು ಎದುರಿಡಬೇಕೆಂದೂ, ಭೇದಭಾವವಿಲ್ಲದ ಅವುಗಳನ್ನು ವಿಚಾರಿಸಬೇಕೆಂದೂ ಮಹಾತ್ಮಾಜಿಯವರೇ ಈ ಸೂಚನೆಗಳನ್ನು ಕಳ್ಪಿಸಿದರೆ ಕೆಲಸವು ಇನ್ನಷ್ಟು ಸುಲಭವಾಗುವುದೆಂದೂ ಜಿನ್ನಾರು ಅಜಾದರೊಡನೆ ತಿಳಿಸಿದರು. ಅಜಾದರು ಜಿನ್ನಾರವರ ಈ ಸೂಚನೆಗಳನ್ನು ಮಹಾತ್ಮಾಜಿಯವರಿಗೆ ತಿಳಿಸ [illegible] ಕಾಂಗ್ರೆಸ್ಸಿನಿಂದ ಬರುವ ಯಾವತ್ತೂ ಸೂಚನೆಗಳ ಕುರಿತ ಆಲೋಚಿಸಲು ಮುಸ್ಲಿಂ ಲೀಗ ಸಿದ್ಧವಿರುವುದೆಂದು ಜಿನ್ನಾರವರು ಒಂದು ಪ್ರಕಟಣೆಯನ್ನು ಮಾಡಿರುವರು. ರಾಷ್ಟ್ರಪತಿ ನಹರೂರವರ ಕೋಮುವಾರು ಐಕ್ಯದ ಕುರಿತು ಕಳೆದವಾರ ಮಾಡಿದ ಪ್ರಕಟಣೆಯಿಂದ ಜಿನ್ನಾರಲ್ಲಿ ಒಳ್ಳೇ ಆಶಯಗಳು ಟಾಗಿರುವುದರಿಂದ ಅವರು ಕಾಂಗ್ರೆಸ್ಸಿನೊಂದಿಗೆ ಸಂಧಾನಕ್ಕೆ ಸಿದ್ಧರಾದಂತೆ [illegible] ಜಿನ್ನಾರು ತಮ್ಮ ಕೋಮುವಾರ ಭಾವವನ್ನು ಸಂಪೂರ್ಣವಾಗಿ ತ್ಯಜಿಸಿದ್ದುದು ಕಂಡುಬರುವುದಿಲ್ಲ. ಹಿಂದೂಗಳ ಕುರಿತು ಅವರು ವ್ಯರ್ಥ ದೂರುಗಳನ್ನು ಹೊರಡಿಸುತ್ತಿರುವುದನ್ನು ಇನ್ನೂ ಬಿಡಲಿಲ್ಲ. [illegible] ದೊಂದು ಕೋಮುಗಳಿಗಾಗಿ ಯಾ ವರ್ಗಕ್ಕಾಗಿ ಸದಸ್ಯತನಗಳನ್ನು ಪ್ರತ್ಯೇಕಿಸಿಡುವುದು ಆದರ್ಶ ಪ್ರಜಾಸತ್ತೆ ಸರಕಾರದ ಕ್ರಮವಲ್ಲ. ಅದರಿಂದ ರಾಷ್ಟ್ರಕ್ಕೆ ಮಹಾ ಹಾನಿಯಿದೆ. ಪ್ರಜಾಸತ್ತೆಯ ಸರಕಾರದ ಪ್ರಗತಿಯಾಗಬೇಕಾದರೆ ಜೋಯಿಂಟ್ ಮತದಾರ ಪಟ್ಟಿಯು ಉಪಯೋಗಿಸಲ್ಪಡಬೇಕೆಂದೂ ಕಲ್ಕತ್ತೆಯ ಶ್ರೀ ರಾಧಕುಮುದ ಮುಖರ್ಜಿಯವರ ಅಭಿಪ್ರಾಯ. ಬ್ರಿಟಿಷರಿಂದ ಅನೇಕ ರಿಯಾಯಿತಿಗಳನ್ನು ಪಡೆದಿದ್ದರೂ ಸಂತುಷ್ಟರಾಗದೆ, ಈಗ ಕಾಂಗ್ರೆಸ್ಸಿನಿಂದಲೂ ರಿಯಾಯಿತಿ ಪಡೆಯುವರೆ ಮುಸ್ಲಿಮರು ಹೊರಟಿರುವರು. ಕೋಮುಗಳ ಐಕ್ಯವಾಗಬೇಕು ನಿಜ. ಆದರೆ, ಹಿಂದೂಗಳ ಹಿತಗಳಿಗೆ ಭಂಗಬರಬಾರದೆಂದು ಬಂಗಾಳ ಹಿಂದೂ ಮಹಾಸಭಾ ನಾಯಕರೊಬ್ಬರ ಹಿಂದೂ ಮಹಾಸಭಾಸ್ಥರಿಗಳಿಗೆ ಹಿತೋಕ್ತಿ. ಆದರೆ, ಮಹಾತ್ಮಾಜಿಯವರೇ ಈ ಸಮಸ್ಯೆಯನ್ನು ಹಿಡಿದರೆ, ಆಗ ಎಲ್ಲವೂ ನ್ಯಾಯವಾದ ರೀತಿಯಲ್ಲಿ ಇತ್ಯರ್ಥವಾಗಬಹುದು.

### ಮಹಾತ್ಮಾಜಿಯವರು —

ಮುಂಬಾಯಿಯ ಜುಹು ಎಂಬಲ್ಲಿಂದ ಶಿವಗಾಂವು ಹಳ್ಳಿಗೆ ಹಿಂತೆರಳಿರುವರು. ಇಲ್ಲಿ ಉಳಕೊಂಡು ಅವರ ಮುಂದಿನ ಚಿಕಿತ್ಸೆಹೊಂದುವರಂತೆ. ರಕ್ತಒತ್ತಾಟದ ಹೆಚ್ಚಳವು ಈಗ ಸ್ವಲ್ಪ ಇದ್ದರೂ, ಮಹಾತ್ಮಾಜಿಯವರು ಒಳವುಟ್ಟಿಗೆ ಗುಣಹೊಂದಿರುವರು.

### ಮುದುಕಿಯ ಮೇಲೆ ಜಪಾನೀಯರ ಬ್ರಹ್ಮಾಸ್ತ್ರ!

ಶಾಂಗಾಯಿಯಲ್ಲಿ ಜಪಾನಿಯರಿಗೂ ಚೀನಿಯರಿಗೂ ಘೋರ ಕದನವಾಗುವ ಸಂಭವಗಳುಂಟಾಗಿದ್ದರೂ, ದೈವವಶಾತ್ ತಪ್ಪಿಸಲಾದುವು. ಶಾಂಗಾಯಿಯ ಚೀನಾ ಪ್ರದೇಶದ ಓರ್ವ ಚೀನೀ ಮುದುಕಿಯು ನೀರಿಗಾಗಿ ಜಪಾನೀಯ ಶಾಂಗಾಯಿ ಪ್ರದೇಶಕ್ಕೆ ಹೋದುದೇ ಇದರ ಕಾರಣ. ಮುದುಕಿಯ ಮೇಲೆ ಜಪಾನೀಯ ಸೈನಿಕನೊಬ್ಬನು ಬಲಾತ್ಕಾರ ನಡೆಯಿಸಿದನು. ಇದನ್ನು ನೋಡಿ ರಷ್ಯಾ ಸ್ವಯಂಸೇವಕನೊಬ್ಬನು ಆತನನ್ನು ಜರೆದನು. ಕೂಡಲೆ ರಷ್ಯಾನನ ಮೇಲೆ ಅನೇಕ ಜಪಾನೀಯ ಸೈನಿಕರು ಬೀಳುವವರಾದರು. ಜಗಳವು ಶೀಘ್ರದಲ್ಲಿ ಬೆಳೆದ, ಚೀನಾ ಜಪಾನು ಸೈನ್ಯಮಂಡಳಗಳು ಒಬ್ಬರನ್ನೊಬ್ಬರು ಎದುರಾಯಿಸುವ ಪ್ರಸಂಗವು ಉಂಟಾಯಿತು. ಈ ತರದಲ್ಲಿ ಜಪಾನೀಯರು ಚೀನಾದಲ್ಲಿ [illegible] ರಕ್ಷಣೆ ಮಾಡುತ್ತಿದ್ದಾರೆ.

### ಚೀನಾ ಜಪಾನ್ ಯುದ್ಧವು ಇನ್ನೂ ೪ ವರ್ಷಗಳ ತನಕ ನಡೆಯುವುದು.

ಶಿಗ್ಟಾವೊ ಎಂಬಲ್ಲಿ ಕೆಲದಿವಸಗಳ ಹಿಂದೆ ಚೀನೀಯರು ಜಪಾನೀಯರ ಗಿರಣಿಗಳನ್ನು ಸುಟ್ಟು ಹಾಕಿದ ವಾರ್ತೆ ಬಂದಿತ್ತಷ್ಟೆ. ಅಲ್ಲದೆ ಜಪಾನೀಯರು ಅದಕ್ಕಾಗಿ ಸೇಡು ತೀರಿಸುವರೆಂಬ ವಾರ್ತೆ ಕೂಡ ಬಂದಿತ್ತು. ಈ ಸೇಡನ್ನು ಭಯಂಕರ ರೀತಿಯಲ್ಲಿ ತೀರಿಸುವರೆ ಜಪಾನೀಯರ ಸಂಕಲ್ಪ ಮಾಡಿರುವರು. ಇನ್ನೂ ನಾಲ್ಕು ವರ್ಷಗಳ ವರೆಗೆ ಯುದ್ಧವನ್ನು ನಡೆಯಿಸಲು ಸಿದ್ಧತೆಗಳಾಗಬೇಕೆಂದು ಜಪಾನಿನ ಪ್ರಧಾನ ಜಪಾನಿನ ಮಂತ್ರಿಮಂಡಲಕ್ಕೆ ತಿಳಿಸಿರುವರು. ಅಂದರೆ ಸ್ವಭಾವ ಮಾತುಕತೆಗಳ ನಿಷ್ಫಲತೆ ಇಲ್ಲಿ ವ್ಯಕ್ತವಾಗುತ್ತದೆ. ಸಂಪೂರ್ಣ ಚೀನಾದ ಮೇಲೆ ತನಗೆ ಪೂರ್ಣ ಅಧಿಕಾರ ದೊರೆಯುವ ತನಕ ಜಪಾನು ತನ್ನ ಶಕ್ತಿಯನ್ನು ಚೀನಾದ ಸರ್ವನಾಶಕ್ಕಾಗಿ ಉಪಯೋಗಿಸುವುದರಲ್ಲಿ ನಿಸ್ಸಂದೇಹ.

### ಸರ್ವ ಜಗತ್ತೆ ನುಚ್ಚುನೂರಾಗುತ್ತಿತ್ತು

ಕಳೆದ ಒಕ್ಟೋಬರ ಮಾಸದಲ್ಲಿ ಗ್ರಹ [illegible] ಭೂಮಿಗೆ ಸಮೀಪವಾಗಿ ಹಾದು ಹೋಗಿದ್ದುದರಿಂದ ಭೂಮಂಡಲವು ನಷ್ಟವಾಗುವ ಸಂಭವಗಳಿದ್ದವೆಂದು [illegible] ಖಗೋಳ ಶಾಸ್ತ್ರಜ್ಞರೊಬ್ಬರು ಶೋಧನೆಮಾಡಿ ಕಂಡುಹಿಡಿದಿರುವರು. [illegible] ಜನಾಂಗದ ಜಗತ್ತಿನ ಸರ್ವನಾಶವಾಗುವ ಪ್ರಸಂಗವು ಹಿಂದೆ ಒದಗಿದುದು ಹೇಗೋ ತಪ್ಪಿಸಲಾಯಿತು. ಸ್ಪೈನಿನಲ್ಲಿ ಮಸಿಯುಷ್ಟರು ನೋಡಿ ಸಲ್ಪಟ್ಟಿದ್ದರೆ ಸ್ಪೈನಿನ ನಾಗರಿಕರಿಗೆ ಸುಖವಿಲ್ಲ. ಯುದ್ಧದಲ್ಲಿ ತೊಡಗದದಿಂದ ವಾಸಿಕರ ಮನೆಮಠಗಳು ಲಯವಾಗುತ್ತಿವೆ. ದಿನೇ ದಿನೇ ಜಗತ್ತೇ ಸರ್ವನಾಶದ ಕಡೆ ಸಾಗುತ್ತಿದೆ.

### ನಮ್ಮ ದೇಶದಲ್ಲೇನು?

ಎಲ್ಲಾ ಕೋಮುಗಳು ಕಾಂಗ್ರೆಸ್ ಧ್ವಜದಡಿಯಲ್ಲಿ ಐಕ್ಯಹೊಂದುವಂತೆ ಮಾಡುವ ಕಾಂಗ್ರೆಸ್ಸಿನ ಯತ್ನಗಳಿಗೆ ಕೋಮುವಾರು ವರ್ಗಗಳಿಂದ ತಡೆಗಳು ತೋರುತ್ತಿವೆ. ಮಿ। ಜಿನ್ನಾರವರೇ ಸಂಧಾನಮಾಡಲು ಸಿದ್ಧರಿರುವಾಗ, ಕೆಲವರು ~~ಅದಕ್ಕೆ ಸಿದ್ಧರಿಲ್ಲದಿರುವುದು ಕಾಣಿಸುತ್ತದೆ~~. ಅಂತರಾಷ್ಟ್ರೀಯ ಮಜೂರ ಮಂಡಳದ ಮಿ। ಬಟ್ಲರ್‌ರವರು, ತನ್ನ ಹಿಂದೂದೇಶದ ಪ್ರವಾಸದಲಿ ಪ್ರಗತಿಪರ ಚಿಹ್ನೆಯನ್ನು ಕಾಣುತ್ತಿದ್ದರೂ, ಸದ್ಯದಲ್ಲೇ ಹಿಂದೂದೇಶವು ಮಹಾಸುಧಾರಣೆಗಳನ್ನು ಹೊಂದುವುದೆಂದು ಅವರ ಭವಿಷ್ಯವಾಣಿಯಾಗಿದ್ದರೂ, ನಮ್ಮ ದೇಶದ ಕೈಗಾರಿಕೆಯು ಅಶಿಕ್ಷಿತ ಕೆಲಸಗಾರರಿಂದ ಬೆಳೆಯಬೇಕಾಗಿದೆ. ಕೈಗಾರಿಕೆಯು ಉದ್ಧಾರವಾಗಬೇಕು ನಿಜ. ಆದರೆ, ಅದರ ಉದ್ಧಾರವಾಗುತ್ತಿರುವಾಗ ಕೆಲಸಗಾರರು ಮಾಡಬೇಕಾದಂತೆ ಆತನನ್ನು ಶಿಕ್ಷಿತನನ್ನಾಗಿ ಮಾಡ ಸುಧಾರಣೆಗಳು ನಡೆಯಬೇಕು.

# ಬಂಟ್ವಾಳದ ಮಣಿಹಳ್ಳದಲ್ಲಿ ಭಯಂಕರ ಅಪಘಾತ!!

## ಸಂಕದ ಕೆಲಸ ನಡೆಯುತ್ತಿರಲು ಇಡೀ ಸಂಕವೇ ಕುಸಿದುಬಿತ್ತು!!.

## ೯ ಮಂದಿ ಜಖಂಗೊಂಡಿರುವರು! ೭ ಮಂದಿ ಸತ್ತಿರುವರು!!

(ನಮ್ಮ ಸ್ವಂತ ಬಾತ್ಮಿದಾರರಿಂದ)

ಬಂಟವಾಳ ೧೧-೧-೩೮,

ಬಂಟವಾಳದ ಸಮೀಪ, ಮಣಿಹಳ್ಳದಲ್ಲಿರುವ ಸಂಕವನ್ನು ಹೊಸತು ಕಟ್ಟಿಸುವುದಕ್ಕಾಗಿ, ಹಳೆಸಂಕವನ್ನು ತೆಗೆಯುವ ಕೆಲಸವು ನಡೆಯುತ್ತಿತ್ತು. ಸಂಕವು ಬಹಳ ಹಳತು, ಮೂರು ಕಮಾನಿನ ದೊಡ್ಡ ಸಂಕ. ಇಂದಿಗೆ ಸಾಧಾರಣ ಒಂದು ತಿಂಗಳಿಂದ ಅದರ ಕೆಲಸವು ನಡೆಯುತಿತ್ತು. ಸಾಧಾರಣ ಎರಡು ಕಮಾನುಗಳಷ್ಟಕ್ಕೆ ಸಂಕದ ಮೇಲಿನ ಮಣ್ಣು ತೆಗೆದಾಗಿತ್ತು. ಒಂದು ಕೊನೆಯಲ್ಲಿ ಅವನ್ನು ಕೆಡಹುವುದಕ್ಕಾಗಿ ಮಣ್ಣನ್ನೆಲ್ಲ ತೆಗೆದು ಸಿದ್ಧಮಾಡಲ್ಪಟ್ಟಿತ್ತು.

ನಿನ್ನೆ ಪೂರ್ವಾಹ್ನದ ಕೆಲಸವನ್ನು ಮುಗಿಸಿ ಕೂಲಿಯಾಳುಗಳೆಲ್ಲರೂ ಊಟಕ್ಕಾಗಿ ಹೋಗಿದ್ದರು. ಊಟ ಮುಗಿಸಿ ಬಂದು, ೨೦ ಮಂದಿ ಸಂಕದ ಮೇಲ್ಗಡೆ ನಿಂತು ಮಣ್ಣನ್ನು ಅಗೆದು ಸಾಗಿಸುವ ಕೆಲಸವನ್ನು ಪ್ರಾರಂಭಿಸಿದ್ದರಷ್ಟೆ! ಸಾಧಾರಣ ೩ ಗಂಟೆಯ ಸಮಯಕ್ಕೆ ಇಡೀ ಸಂಕವೇ ಕುಸಿದು ಬಿತ್ತು.

ಒಬ್ಬ ಸಣ್ಣ ಹುಡುಗನು ಓಡುತ್ತೋಡುತ್ತ ಬಂದು ಈ ವರ್ತಮಾನವನ್ನು ಪೇಟೆಯಲ್ಲಿ ತಿಳಿಸಿದನು. ಪೇಟೆಯ ಜನರನೇಕರು ಅಲ್ಲಿಗೆ ಓಡಿಹೋದರು. ಸಾಧಾರಣ ನಾಲ್ವತ್ತು ಮಂದಿ ಅಡಿಗೆ ಬಿದ್ದಿರುವರೆಂಬ ಗಲಭೆಯಿದ್ದಿತು. ಊರವರು ಹೋಗಿ ಮಣ್ಣು ಕಲ್ಲುಗಳ ಅಡಿಗೆ ಬಿದ್ದವರನ್ನು ಬೇಗಬೇಗನೆ ಹೊರಗೆ ತೆಗೆಯುವಂತೆ ಅಲ್ಲಿದ್ದ ಬಾಕಿ ಕೂಲಿಯಾಳುಗಳಿಗೆ ಹೇಳಿದರು. ಮೊದಲು ಯಾರೂ ಒಪ್ಪಲಿಲ್ಲ. ಎಲ್ಲರೂ ಹೆದರಿ ಕಂಗಾಲಾಗಿದ್ದರು. ಹೆಂಗಸರನೇಕ ಮಂದಿ ಕೂಗುತ್ತಿದ್ದರು. ಕುಸಿದು ಬಿದ್ದ ಪಾರ್ಶ್ವದಲ್ಲಿ ಒಂದು ಕುಂದವು ಸಾಧಾರಣ ಎರಡು ಅಡಿಗಳಷ್ಟು ಸ್ಥಳಬಿಟ್ಟು ಪಾಲಿ ನಿಂತಿರುವುದು. ಅದು 'ಬೀಳ್ವುದೋ ಬಿದ್ದರೆ?' ಎಂಬುದೇ ಎಲ್ಲರ ಪ್ರಶ್ನೆ. ಅದರೂ ಅನಂತರ ಹೇಗೂ ಸಮಾಧಾನ ಪಡಿಸಿ ಕೆಲಸವು ಪ್ರಾರಂಭಿಸಲ್ಪಟ್ಟಿತು. ಮೇಲೆ ಮೇಲೆ ಇದ್ದ ೫ ಮಂದಿಯನ್ನು ಮಣ್ಣಿನಡಿಯಿಂದ ತೋರಿದೆಳೆದು ಆಸ್ಪತ್ರೆಗೆ ಸಾಗಿಸಲಾಗಿ ಅವರಲ್ಲಿ ಮೂರು ಮಂದಿ ಸ್ವಲ್ಪ ಜೋರು ಪೆಟ್ಟಾಗಿ ಆಸ್ಪತ್ರೆಯಲ್ಲಿಯೇ ಇರುವರು. ಉಳಿದ ಎರಡು ಮಂದಿಗೆ ಪೆಟ್ಟಾದಲ್ಲಿ ಮದ್ದು ಹಾಕಿಸಿ ಮನೆಗೆ ಕಳುಹಿಸಲಾಯಿತು. ಅಲ್ಲಿ ಒಬ್ಬನು ಒದುಕ್ಕಿದ್ದ ರೀತಿಯು ವಿಚಿತ್ರವಾಗಿರುವುದು. ಸಂಕವು ಕುಸಿದು ಬೀಳುವಾಗ ಆತನು ಅಡಿಗೆ ಬಿದ್ದನು. ಆದರೆ ಆತನಿಗೆ ಒಂದಿಷ್ಟು ಹಾನಿಯಾಗಿದುದಿಲ್ಲ. ಅರ್ಧ ಕುಸಿದು ನಿಂತ ಕುಂದದ ಬುಡದಲ್ಲಿಯೇ ಆತನು ಬಿದ್ದಿದ್ದನು. ಇನ್ನೊಂದು ಕುಂದದ ಕಮಾನು ಕುಸಿದು ಅದರ ಮೇಲೆ ಬಿತ್ತು. ಅಡಿಯಲ್ಲಿ ಸಾಧಾರಣ ಒಬ್ಬ ಮನುಷ್ಯನು ನುಸುಳಿಕೊಂಡು ಹೋಗುವಷ್ಟು ಜಾಗವು ಉಳಿಯಿತು. ಅಲ್ಲಿ ಬಿದ್ದಿದ್ದ ಆತನನ್ನು ನಂತರ ನೆಲ್ಲನೆ ಹೊರಗೆಳೆದು ತೆಗೆಯಲಾಯಿತು. ಅರ್ಧ ಕುಸಿದು ನಿಂತ ಕುಂದದ ಮೇಲೂ ನಾಲ್ಕು ಮಂದಿ ಇದ್ದರು. ಅವರನ್ನು ಏಣಿ ಇಟ್ಟು ಕೆಳಗೆ ಇಳಿಸಲಾಯಿತು. ಒಬ್ಬ ಹೆಂಗಸು ಮಣ್ಣಿನ ಮೇಲೆ ಬಿದ್ದುದರಿಂದ ಅವಳಿಗೂ ಹಾನಿಯಾಗಲಿಲ್ಲ. ಇಷ್ಟರಲ್ಲಿ ಕೂಲಿಯಾಳುಗಳ ಹಾಜರಿಯನ್ನು ಕರೆಯಲಾಗಿ ಎಂಟು ಮಂದಿ ಅಡಿಗೆ ಬಿದ್ದಿರುವರೆಂದು ಅಂದಾಜು ಮಾಡಲಾಯಿತು. ಅಗೆಯುವ ಕೆಲಸವು ರಭಸದಿಂದ ಸಾಗುತಿತ್ತು. ಸಾಧಾರಣ ೫॥ ಘಂಟೆಯ ಸಮಯಕ್ಕೆ ಮೂವರ ಹೆಣಗಳು ಸಿಕ್ಕಿದುವು. ಒಬ್ಬನ ತಲೆಯು ಒಡೆದು ಹೋಳಾಗಿ, ತಲೆಯೊಳಗಿನ ಮೆದುಳು ಹೊರಗೆ ಬಿದ್ದಿತು. ಇನ್ನೊಬ್ಬನ ಎದೆಯು ಚೂರಾಗಿತ್ತು. ಮತ್ತೊಬ್ಬನ ಕಾಲು ಮುರಿದಿತ್ತು. ರಕ್ತ ಮಣ್ಣುಗಳಿಂದ ಕುಂಟಿ ಹೋದ ಆ ಹೆಣಗಳನ್ನು ನೋಡಲಾಗುತ್ತಿರಲಿಲ್ಲ. ಇಷ್ಟೆಲ್ಲ ಕೆಲಸವಾಗುತ್ತಿರಲು ಬಂಟವಾಳದ ಮೆಜಿಸ್ಟ್ರೇಟರಾದ ಶ್ರೀ ಸುಂದರರಾಯರು ಮತ್ತು ಲೋಕಲ್ ಫಂಡ್ ಆಸ್ಪತ್ರೆಯ ಡಾಕ್ಟರರಾದ ಶ್ರೀ ಉಮೇಶರಾಯರೂ ಹತ್ತಿರವೇ ನಿಂತು ಮೇಲ್ವಿಚಾರಣೆಯನ್ನು ನೋಡುತ್ತಿದ್ದರು. ಪೋಲೀಸ ಖಾತೆಯವರ ಸುಳಿವೇ ಇದ್ದಿಲ್ಲ. ಸಾಯಂಕಾಲವಾದೊಡನೆ ಪೆಟ್ರೊಮೆಕ್ಸ್ ದೀಪಗಳನ್ನು ಉರಿಸಿ ಕೆಲಸವು ಮುಂದರಿಸಲಾಯಿತು. ರಾತ್ರಿ ನಾಲ್ಕು ಹೆಣಗಳು ಮತ್ತೆ ಸಿಕ್ಕಿದುವು. ಅವರಲ್ಲಿ ಇಬ್ಬರು ಅಪ್ಪಿಕೊಂಡು ಸತ್ತಿದ್ದರು. ಅಂತು ಒಟ್ಟಿಗೆ ಏಳುಮಂದಿಯ ಶವಗಳನ್ನು ಅಗೆದು ತೆಗೆಯಲಾಯಿತು. ಹಾಜರಿಯ ಪ್ರಕಾರ ಇನ್ನೊಬ್ಬನು ಆಗಬೇಕು. ಆತನು ಓಡಿಹೋಗಿರುವನೆಂದು ಹೇಳುವರು.

ದಕ್ಷಿಣ ಕನ್ನಡದಲ್ಲಿ ಇಂತಹ ಭಯಂಕರವಾದ ಅಪಘಾತವು ಇಷ್ಟರ ತನಕ ಸಂಭವಿಸಿಲ್ಲವೆಂದು ಹೇಳಬಹುದು. ಆದದ್ದು ಆಗಿಹೋಯಿತು. ಆದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇದರಲ್ಲಿ ಏನೂ ಜವಾಬ್ದಾರಿಯೇ ಇಲ್ಲವೆ? ಇಷ್ಟು ದೊಡ್ಡ ಮತ್ತು ಅಪಾಯಕರವಾದ ಸಂಕದ ಕೆಲಸವು ನಡೆಯುತ್ತಿರುವಾಗ ಒಬ್ಬ ಇಂಜಿನಿಯರರಾಗಲಿ, ಒಬ್ಬ ಓವರ್ಸಿಯರರಾಗಲಿ ಇರಬೇಡವೆ? ಇಡೀ ಕೆಲಸದ ಭಾರವನ್ನು ಬಡಕೂಲಿಯಾಳುಗಳ ಮೇಲೆ ಬಿಟ್ಟು ಬಿಡುವುದೆಂದರೆ ಏನು ಬೇಜವಾಬ್ದಾರಿಕೆ? ಇವರ ಉಪೇಕ್ಷೆಯಿಂದಾಗಿ ಪಾಪ! ಏಳುಮಂದಿಯ ಪ್ರಾಣಗಳು ಆಹುತಿಯಾದುವು. ಏಳು ಕುಟುಂಬಗಳು ನಿರ್ಗತಿಕವಾದುವು.

ಇನ್ನು ನಮ್ಮ ಪೋಲೀಸು ಖಾತೆಯವರು! ಇವರೇನು ನಿದ್ದೆ ತೆಗೆಯುತ್ತಿದ್ದರೆ? ಬಂಟವಾಳಕ್ಕೆ ಇಷ್ಟು ಸಮೀಪದಲ್ಲಿ ಇಷ್ಟೊಂದು ದೊಡ್ಡ ಅಪಘಾತವು ಸಂಭವಿಸಲು ರಾತ್ರಿ ಹತ್ತು ಗಂಟೆಯ ತನಕ ಇವರಿಗದು ತಿಳಿಯಲೇ ಇಲ್ಲವೆ? ಹತ್ತು ಗಂಟೆಯಷ್ಟಕ್ಕೆ ಹೇಗೂ ಎಚ್ಚತ್ತು ಬಂದರು. ಇದರ ಈ ಕುರಿತು ಯೋಗ್ಯ ತನಿಖೆಯು ನಡೆಯುವುದೆಂದು ನಂಬುತ್ತೇನೆ.

ಮರುದಿವಸ ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಶ್ರೀ ಜಗನ್ನಾಯಕುಲು ನಾಯಡುರವರು ಅಪಘಾತದ ಸ್ಥಳಕ್ಕೆ ಬಂದು ಅಪಘಾತದ ಕುರಿತು ವಿಚಾರಣೆಯನ್ನು ನಡೆಯಿಸಿ, ಆ ಕುರಿತು ಅನೇಕ ಸಾಕ್ಷಿಗಳನ್ನು ಪಡೆಕೊಂಡಿರುವರು.

ಈ ತರದ ಕೆಲಸವು ಪ್ರವೀಣರಿಂದಲ್ಲದೆ ನಡೆಯಬೇಕೆಂದೂ ಕಂಟ್ರಾಕ್ಟಿನ ಶರ್ತವಾಗಿದ್ದರೂ ಅಪಘಾತದ ದಿನ ಏನೂ ಗೊತ್ತಿಲ್ಲದ ಓವರ್ ಸೀಯರು ಹೊರತು ಯಾರೂ ಇದ್ದಿಲ್ಲವೆಂದು ತಿಳಿದು ಬರುತ್ತದೆ. ಕಂಟ್ರಾಕ್ಟುದಾರನು ಕೂಡಾ ಇದ್ದಿಲ್ಲವಂತೆ.

ಸಂಕವು ಮುರಿದು ಬೀಳಲು ಕಾರಣ ಚಿಕ್ಕ ಚಿಕ್ಕ ಸುಣ್ಣದ ಕಲ್ಲುಗಳಿಂದ ಕಟ್ಟಿದ್ದುದೇ. ಬೀಳಲು ಕಾರಣವೆಂದೂ ದ. ಕ. ಜಿಲ್ಲೆಯಲ್ಲಿ ಈ ತರದ ಕಲ್ಲಿನ ಅನೇಕ ಸಂಕ ಕಲ್ವರ್ಟುಗಳು ಇರುವವೆಂದೂ ಅವುಗಳ ಮೇಲಿಂದ ಬಸ್ಸು ಲೋರಿಗಳು ಸುರಕ್ಷಿತವಾಗಿ ಓಡಾಡುತ್ತಿರುವುದು ದೈವಕೃಪೆಯಿಂದ ಎಂದೂ ಈ ತರದ ಕಲ್ಲಿನ ಅನೇಕ ಸಂಕಗಳನ್ನು ತೆಗೆದು ಭದ್ರವಾದವುಗಳನ್ನು ಮಾಡಲು ಜಿಲ್ಲಾ ಬೋರ್ಡಿನ ಹಣದ ಅಭಾವವು ಅಡ್ಡಿಯಾಗಿರುವುದೆಂದೂ, ಜಿಲ್ಲಾ ಬೋರ್ಡಿನ ಇಂಜಿನಿಯರರ ಅಭಿಪ್ರಾಯ.

### ಕಾರ್ಕಳ.

ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣ ಸಭೆಯ ಕಾರ್ಯದರ್ಶಿ ಮತ್ತು ಸುಪ್ರಸಿದ್ಧ ಕ್ಷಯ ರೋಗ ಚಿಕಿತ್ಸಕರಾದ ರಾವ್‌ಬಹದ್ದೂರ ಡಾಕ್ಟರ್ ಯಂ ಕೇಶವ ಪೈ ಒ ಬಿ ಇ ಯಂ ಡಿ ಯವರು ಇಲ್ಲಿ ಕಳೆದವಾರ ಉಳಕೊಂಡು ಸಭೆಯ ಸ್ಕಾಲರಶಿಪ್ ನಿಧಿಗೆ ಸುಮಾರು ೮೦೦ ರೂಪಾಯಿಗಳ ತನಕ ಹಣ ಸಂಗ್ರಹ ಮಾಡಿದರು. ಶ್ರೀ ವೆಂಕಟ್ರಮಣ ದೇವಾಲಯ ಶ್ರೀಗಳಾದ ಕೆ ಪಿ ಜನಾರ್ಧನ ಪ್ರಭು ಮತ್ತು ಕೆ ಪಿ ಮುಕುಂದ ಪ್ರಭು ಯವರು ನಿಧಿಯ ಆಜೀವನ ಸದಸ್ಯರಾಗಿದ್ದಾರೆ.

ಸ್ಥಳೀಯ ಆರ್ಯ ಸಮಾಜದ ಗೌರವ ಪ್ರಚಾರಕ ಶ್ರೀ ರಂಜಾಳ ಮಂಜುನಾಥ ಶೆಣೈಯವರು ಧೂಮದ ಕಟ್ಟೆಯಲ್ಲಿ ಸಭೆಮಾಡಿ ಆರ್ಯ ಧರ್ಮ ಮತ್ತು ಸಂಸ್ಕೃತಿಯ ಪ್ರಶಸ್ತ್ಯವನ್ನು ಕುರಿತು ಬೋಧಪ್ರದವಾದ ಭಾಷಣಮಾಡಿ ಆರ್ಯ ಸಮಾಜದ ಗಡೆಗೆ ಜನರ ಸಹಾನುಭೂತಿ ಬೆಂಬಲಗಳನ್ನು ಪಡೆದರು.

ಗ್ರಾಮ ಸೇವಾಸಂಘದ ಒಂದು ಸಾಧಾರಣ ಸಭೆಯು ತಾ ೩ ೧-೩೮ರ ದಿನ ಶ್ರೀ ಸಿ ಮಾಧವ ಕಾಮತರ ಅಧ್ಯಕ್ಷತೆಯಲ್ಲಿ ಬೋರ್ಡ್ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಜರುಗಿ ಬಾಲಿಕಾ ವರ್ಷಕ್ಕೆ ಶ್ರೀಗಳಾದ ಕೆ ವೆಂಕಟರಮಣಯ್ಯನವರು ಸಂಘದ ಅಧ್ಯಕ್ಷರು ಮತ್ತು ಪಾಂಡುರಂಗ ಪೈ ಹಾಗೂ ಸರ್ವೋತ್ತಮ ಶೆಣೈಯವರು ಕಾರ್ಯದರ್ಶಿಗಳೆಂದ ೯ ಜನರ ಕಾರ್ಯನಿರ್ವಾಹಕ ಸಮಿತಿಯು ರಚನೆಯಾಯಿತು.

ಇಲ್ಲಿ ಸಬ್ ಮೆಜಿಸ್ಟ್ರೇಟರಾಗಿದ್ದ ರಾ ಪಳ್ಳಿಬ್ಬಾರಿಗಳು ಡಿಸ್ಟ್ರಿಕ್ಟ್ ಲೇಬರ ಆಫೀಸರರಾಗಿ ನೇಮಕ ಹೊಂದಿ ಹೋದುದರಿಂದ ಅವರ ಸ್ಥಾನಕ್ಕೆ ಶ್ರೀ ಬೇಕಲ ನರಸಿಂಗರಾಯರು ಬಂದು ಚಾರ್ಜು ತೆಗೆದುಕೊಂಡಿದ್ದಾರೆ.

### ಜಿಲ್ಲಾ ಮತ್ತು ಟೌನು ಕಾಂಗ್ರೆಸ್ ಕಮಿಟಿಗಳ ಚುನಾವಣೆಗಳು

ಮಂಗಳೂರು ಟೌನು ಕಮಿಟಿಯ ಪರವಾಗಿ ಜಿಲ್ಲಾ ಕಮಿಟಿಯ ಪ್ರತಿನಿಧಿಗಳ ಚುನಾವಣೆ ಮತ್ತು ಟೌನು ಕಮಿಟಿಯ ಕಾರ್ಯ ಪ್ರತಿನಿಧಿಗಳ ಚುನಾವಣೆಗಳು ಕ್ರಮವಾಗಿ ತಾ ೨೬-೧-೩೮ ಮತ್ತು ತಾ. ೩೦-೧-೩೮ನೇ ದಿನಗಳಲ್ಲಿ ಬೆಳಗ್ಗೆ ೮-೧೨ ಮತ್ತು ಮಧ್ಯಾಹ್ನ ೨-೬ ತನಕ ನಡೆಯುವವು. ತಾ. ೧೫ನೇ ದಿನ ಚುನಾವಣೆಯ ವಿಭಾಗಗಳು ತಯಾರಿಸಲ್ಪಡುವವು, ಮತ್ತು ವೋಟರರ ಪಟ್ಟಿಯನ್ನು ಬೇಕಾದವರು ಪರೀಕ್ಷಿಸಿ ಪತ್ರ ತೆಗೆಯುವರೆ ಆಫೀಸಿನಲ್ಲಿ ದೊರೆಯುವವು. ನಾಮಪತ್ರಗಳನ್ನು ಕ್ರಮವಾಗಿ ತಾ ೨೨ ಮತ್ತು ೨೫ರ ಸಾಯಂಕಾಲ ಗಂಟೆ ೬ರ ತನಕ ಸ್ವೀಕರಿಸಲಾಗುವವು. ಅದೇ ದಿನ ನಾಮಪತ್ರಗಳನ್ನು ಪರೀಕ್ಷಿಸಿ ಮಾರನೇ ದಿನ ಉಮೇದ್ವಾರರ ಪಟ್ಟಿಯು ಪ್ರಕಟಿಸಲ್ಪಡುವುದು. ತಾ ೨೪ ಮತ್ತು ೨೮ರ ಸಂಜೆ ಗಂಟೆ ೬ರ ಒಳಗೆ ಕ್ರಮವಾಗಿ ನಾಮಪತ್ರಗಳನ್ನು ಹಿಂತೆಗೆಯಬಹುದು. ಮೊದಲನೆಯ ನಾಮಪತ್ರದೊಡನೆ ಸದಸ್ಯತನದ ಫೀಸು ರೂಪಾಯಿ ಒಂದು ಮತ್ತು ಎರಡನೆಯ ನಾಮಪತ್ರದೊಡನೆ ಟೌನು ಕಮಿಟಿಯ ಸದಸ್ಯತನದ ಫೀಸು ಆಣೆ ಆರನ್ನು ಕೊಡಬೇಕಾಗುವುದು. ನಾಮಪತ್ರದ ಪ್ರತಿಗಳು ಆಫೀಸಿನಲ್ಲಿದ್ದು ಅವುಗಳ ಪ್ರತಿಗಳನ್ನು ಬೇಕಾದವರು ಪಡೆದುಕೊಳ್ಳಬಹುದು ಎಂದು ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ತಿಳಿಸುತಾರೆ.

### ಉಡುಪಿ:—

ಕಾಂಗ್ರೆಸ್ ಪ್ರಥಮ ಸದಸ್ಯರ ಮಹಾಸಭೆಯು ತಾ ೯ರಲ್ಲಿ ನಡೆದು ಇಲ್ಲೊಂದು ಟೌನ್ ಕಾಂಗ್ರೆಸ್ ಕಮಿಟಿ ಸ್ಥಾಪಿಸಬೇಕಾಗಿ ನಿರ್ಣಯಿಸಲಾಗಿ ಕಾಂಗ್ರೆಸ್ ಕಮಿಟಿಯ ಪ್ರತಿನಿಧಿಗಳಾಗಿ ೧ ಶ್ರೀಮತಿ ಪಿ ಮನೋರಮಾ ಬಾ, ೨ ಶ್ರೀಮತಿ ಅಮ್ಮಣಿ ಬಾ ವಿನಾಯಕ್ ೩ ಶ್ರೀಮತಿ ಜಯಂತಿ ಬಾ ಎಚ್ ನಾಯಕ್, ೪ ಶ್ರೀ ಪಿ ವೆಂಕಟೇಶ ನಾಯಕ್, ೫ ಕೆ ಕೆ ಸೆಟ್ಟಿ ೬ ಯು ಸಂದ ಕಮ್ತಿ ೭ ಎನ್ ವಾಮನ ಭಟ್ಟ ೮ ಪಿ ಮಂಜುನಾಥ ನಾಯ್ಕ ೯ ಎಲ್ ಎಲ್ ನಾಯಕ ೧೦ ಕೆ ಎಚ್ ಪದ್ಮನಾಭ, ೧೧ ಕೆ ಶ್ರೀನಿವಾಸ ಪೈ ೧೨ ಆರ್ ಎಚ್ ಅಂದಾ ದೆ ೧೩ ನಾಗೇಶ ರಾಮರಾವ್, ೧೪ ಕೆ ಶ್ರೀನಿವಾಸ ಕಮ್ತಿ ೧೫ ರಾಮಲಿಂಗ ಕಮ್ತಿ ೧೬ ಆರ್ ಶರ್ಮ ಮತ್ತು ೧೭ ಕೊಚ್ಚಿಕಾರ ಮಂಜುನಾಥ ಪೈ ಇವರುಗಳು ಆರಿಸಲ್ಪಟ್ಟರು.

ಅದೇ ದಿವಸ ಶ್ರೀ ನಾಗಪ್ಪ ರಾಮರಾಯರ ಅಧ್ಯಕ್ಷತೆಯಲ್ಲಿ ಚೀನಾ ದಿನಾಚರಣೆಯು ನಡೆಯಿತು. ಚೀನಾ ವೈದ್ಯಕೀಯ ಸಹಾಯವನ್ನು ಒದಗಿಸುವರೆ ನಾತಿಗೆ ಎತ ಬೇಕಾಗಿ ನಿರ್ಣಯವಾಯಿತು. ಅಂತಯೆ ಕೀರ್ತಿಶೇಷ ಕಾರ್ನಾಡು ಸದಾಶಿವರಾಯರ ದಿನಾಚರಣೆಯು ನಡೆಯಿತು.

ತಾ. ೧೦ಕ್ಕೆ ಸ್ಥಳೀಯ ನಗರ ಸಭೆಯ ಸಾಮಾನ್ಯ ಸಭೆಯೊಂದು ಜರಗಿತು. ಕಾರ್ಯಕ್ರಮವು ಹೆಚ್ಚಾದುದರಿಂದ ಸಭೆಯು ಬೇಗನೆ ಕೊನೆಗೊಂಡಿತು. ಹೊಲಿವುಡ್ ಸಿಟಿ ಕೋಣೆಗೆ ಲೈಸನ್ಸು ಕೊಡಬಾರದಾಗಿ ಶ್ರೀ ಎಲ್ ಎಸ್ ನಾಯಕರು ತಂದ ಠರಾವು ಬಹುಮತದಿಂದ ಸ್ವೀಕರಿಸಲಾಯಿತು. ಮುನ್ಸಿಪಾಲಿಟಿಯೊಳಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ ಆಲೋಚನೆ ಮಾಡಿದರು ~~ದುರಾವಿಸ ಕುರಿತು ಆಲೋಚನೆಯು ಮುಂದೂಡಲಾಯಿತು~~

### ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಶ್ಯಾನುಭಾಗರ ಸಂಘದಲ್ಲಿ ತಾ ೧೫-೮-೩೭ರಲ್ಲೂ ತಾ ೧೩-೧೨-೩೭ರಲ್ಲೂ ನಿರ್ಧಾರವಾದ ಮೇರೆಗೆ ಈ ಸಂಘ ರಿಜಿಸ್ಟ್ರಿ ಆಗ್ಬೇಕು ಪ್ರತಿ ತಾಲೂಕಿನಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸುವುದಲ್ಲದೆ ಸ್ಪೆಶಲ್ ಮೆಂಬರನ್ನಾಗಿ ರೂ ೧ನ್ನು ಆಲ್ಲಿ ವರ್ಷದ ಚಂದಾ ಆಗಿ ಅರ ಸಮೇತ ಪ್ರತಿಯೊಬ್ಬ ಶ್ಯಾನುಭಾಗರಿಂದ ಪಡೆದು ಎಲ್ಲಾ ವಿವರಗಳನ್ನೂ ಈ ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣರಾವ್ ಎ, ಶ್ಯಾನುಭಾಗ ಸಂಘ, ಮುಂಡ್ಕೂರು ಪೋಸ್ಟು, ದ ಕನ್ನಡ ಇವರಿಗೆ ಇದೇ ಬರುವ ತಾರೀಕು ೧೫-೩-೩೮ರ ಒಳಗೆ ತಲ್ಪುವಂತೆ ರವಾನಿಸಬೇಕಾಗಿ ಅಪೇಕ್ಷಿಸಲಾಗುತ್ತದೆ.

## ಮಂಗಳೂರು.

### ಕೀರ್ತಿಶೇಷ ಕಾರ್ನಾಡು ಸದಾಶಿವರಾಯರ ಸ್ಮಾರಕ ದಿನ:—

ಕಳೆದ ಆದಿತ್ಯವಾರ ದಿವಂಗತ ಕಾರ್ನಾಡು ಸದಾಶಿವರಾಯರ ಪುಣ್ಯದಿನವಾಗಿ ಆಚರಿಸಲಾಯಿತು. ಅಂದು ಸ್ಥಳೀಯ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ, ದಿವಂಗತರ ಗುಣಕಥನ ಮಾಡಿ ಅನೇಕ ಮಹನೀಯರುಗಳಿಂದ ಭಾಷಣಗಳು ಆದವು. ದಿವಂಗತರು ದೇಶಸೇವೆಗಾಗಿ ಮಾಡಿದ ಪರಿತ್ಯಾಗವು ಶ್ಲಾಘಿಸಲಾಯಿತು. ಮಾತ್ರವಲ್ಲದೆ ಅವರ ಈ ತ್ಯಾಗ ಬುದ್ಧಿಯು ಇತರರಿಗೂ ಮಾರ್ಗದರ್ಶಕವಾಗಬೇಕೆಂದು ಕೆಲವರು ಸೂಚಿಸಿದರು. ದಿವಂಗತರ ದೇಶಸೇವೆಯ ಸ್ಮಾರಕವಾಗಿ ಕಾರ್ನಾಡು ಸದಾಶಿವರಾವ್ ಸ್ಮಾರಕವೊಂದನ್ನು ನಿರ್ಮಿಸುವರೆ ನಿಧಿಗೆ ಎಲ್ಲರಿಂದಲೂ ಉದಾರ ಸಹಾಯವು ಕೋರಲಾಯಿತು.

### ಚೀನಾ ದಿನಾಚರಣೆ.

ರಾಷ್ಟ್ರಪತಿಗಳ ದುಸನಿಯ ಪ್ರಕಾರ ಕಳೆದ ಆದಿತ್ಯವಾರ ದಿವಸ, ಸ್ಥಳೀಯ ಮೈದಾನದಲ್ಲಿ ಚೀನಾ ದಿನಾಚರಣೆಯು ನಡೆಯಿತು. ನಗರದ ಅನೇಕ ಮಹನೀಯರು, ಜಪಾನಿನ ಕ್ರೂರ ತರದ ಸಾಮ್ರಾಜ್ಯ ಶಾಹಿ ಮಹತ್ವಾಕಾಂಕ್ಷೆಯನ್ನು ಖಂಡಿಸಿ, ಹುರಿದುಂಬಿಸುವ ಗಂಭೀರವಾದ ಭಾಷಣವನ್ನು ಮಾಡಿದರು. ಜಪಾನೀಯ ಸಾಮಾನುಗಳ ಬಹಿಷ್ಕಾರ ಮಾಡಬೇಕೆಂದು ವಿನಂತಿಸಲಾಯಿತು.

### ಸಾಮಾಜಿಕ ವಿವಾಹಗಳು.

ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಕಳೆದ ಆದಿತ್ಯವಾರ, ನಿವೃತ್ತ ಡೆಪ್ಯೂಟಿ ಕಲೆಕ್ಟರರಾದ ಮಿ। ಮಂಜಪ್ಪನವರ ಸಮಕ್ಷಮದಲ್ಲಿ ರಿಜಿಸ್ಟ್ರಿ ನಿಬಂಧನೆ ಪ್ರಕಾರ ಎರಡು ವಿವಾಹಗಳು ನಡೆದವು. ಅದರಲ್ಲಿ ಒಂದನೇ ವಿವಾಹವು ಅಖಿಲ ಭಾರತ ಸೇವಾ ಸಂಘದ ಸ್ಥಳೀಯ ಶಾಖೆಯ ಶ್ರೀ ಬಿ ನಾರಾಯಣ ರೈಯವರಿಗೆ ಶ್ರೀ ಬಿ ಕಾಂತಪ್ಪ ಭಂಡಾರಿಯವರ ಕುಮಾರಿಯಾದ ಮುತ್ತಮ್ಮರೊಡನೆ ನಡೆಯಿತು. ಇವರೆರಡು ಪಕ್ಷಗಳೂ ಬಂಟ ಜಾತಿಯವರು.

ಎರಡನೆಯದು ಒಕ್ಕಲಿಗ ಜಾತಿಯ ವರಗೂ, ಮಹಾರಾಷ್ಟ್ರ ಬ್ರಾಹ್ಮಣ ವಧುವಿಗೂ ನಡೆದುದಾಗಿರುತ್ತದೆ. ಅಸ್ಪೃಶ್ಯತಾ ನಿವಾರಣ ಕಾಂಗ್ರೆಸ್ ಪ್ರಚಾರದಲ್ಲಿ ನಡೆಯುತ್ತಿರುವ, ಶ್ರೀ ಬಿ ಕೆ ಭಂಡಾರಿಯವರು ಮತ್ತು ಕುಮಾರಿ ಸುಮತಿ ಬಾಯಿಯವರು ಈ ವಿವಾಹದ ವಧೂವರರು. ಶ್ರೀ ಭಂಡಾರಿಗಳು ಒಕ್ಕಲಿಗರು. ಕೆ ಸುಮತಿಯು ಬ್ರಾಹ್ಮಣ ಕುಲದವರು. ಈ ವಿವಾಹಕ್ಕೆ ಅನೇಕ ಮಾನ್ಯರು ಕೂಡಿ ಬಂದಿದ್ದರು.

### ಎಲ್ಲಾ ಮಹಾಜನರಲ್ಲಿ ವಿನಂತಿ —

ಮೊದಲು ಕಾಂಗ್ರೆಸ್ ಸ್ವಯಂ ಸೇವಕರೆಂದು ಹೇಳಿಕೊಂಡು ಕಳೆದ ವರ್ಷ ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯ ಹೆಸರು ಹಾಕುವ ಮತ್ತು ರಶೀದಿ ಮೂಲಕ ಹಣ ಸಂಗ್ರಹ ಎತ್ತುತ್ತಿದ್ದ ಚಂದಾಕೊಟ್ಟಾರಿಯವರು ಕಳೆದ ಡಿಸೆಂಬರ ತಿಂಗಳ ೧ನೇ ೫ ರಶೀದಿ ಪುಸ್ತಕವನ್ನು ಸಮಿತಿ ಅಧಿಕಾರಿಗಳ ಕೂಡ ಹೇಳದೆ ಕೇಳದೆ ಸಮಿತಿಯ ರಶೀದಿಯನ್ನು ಮತ್ತು ಎರಡು ದೊಡ್ಡ ರಾಷ್ಟ್ರಪತಾಕೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಮತ್ತು ಈಗಲೂ ಈ ಸಮಿತಿಯ ಹೆಸರಲ್ಲಿ ಹಣ ಎತ್ತುತ್ತಿದ್ದಾರೆ ಎಂಬ ವರ್ತಮಾನವನ್ನು ಕೇಳುತ್ತೇನೆ. ಹೀಗೆ ಸಾರ್ವಜನಿಕರಿಂದ ಹಣ ಕೂಡಿಸಲು ಅವರಿಗೆ ಯಾವ ಅಧಿಕಾರವೂ ಇರುವದಿಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಗೆ ಧನಸಹಾಯ ಮಾಡಲಿಚ್ಛಿಸುವವರು ಇವರೊಡನೆ ಕೊಡದೆ ಇನ್ನು ಮುಂದೆ ಈ ಸಮಿತಿಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕೊಟ್ಟಿರುವ ಶಿಫಾರಸು ಪತ್ರವನ್ನು ತೋರಿಸುವವರ ಹಸ್ತ ಮಾತ್ರ ಧನ ಸಹಾಯವನ್ನು ಮಾಡಬೇಕಾಗಿ ಪ್ರಾರ್ಥಿಸುತ್ತೇನೆಂದು ಬಿ. ಟಿ ಲೈ ಜನರಲ್ ಸೆಕ್ರೆಟರಿ, ಇವರು ತಿಳಿಸುತ್ತಾರೆ.

### ಡಾ। ಕೇಶವ ಪೈಯವರು:—

ಮುಂಬಯಿಯಲ್ಲಿರುವ ದಿ ಸಂಯುಕ್ತ ಗೌಡಸಾರಸ್ವತ ಸಭೆಯ ಸೆಕ್ರೆಟರಿ ಮತ್ತು ಟ್ರೆಜರರ್ ಆದ ನಮ್ಮ ಜಿಲ್ಲೆಯ ಪ್ರಸಿದ್ಧರಾದ ಮೆ. ರಾ ಡಾಕ್ಟರ್ ಕೇಶವ ಪೈಯವರು ಮಂಗಳೂರಿಗೆ ಬಂದು ಹಲವು ದಿವಸ ಇದ್ದು ಸ್ವಜಾತಿ ಪ್ರಸಾರದ ಮಹತ್ಕಾರ್ಯದಿಂದ ಈ ಸಭೆಯ ೨೫ನೆ ವರ್ಷಾವಧಿಯ ಬೆಳ್ಳಿ ಉತ್ಸವ ಸಲುವಾಗಿ ನಮ್ಮ ಜಿಲ್ಲೆಯಿಂದ ಅಂದಾಜು ರೂಪಾಯಿ ೫೦೦೦ವನ್ನು ಸಂಗ್ರಹಿಸಿರುವರಾಗಿ ತಿಳಿದುಬರುತ್ತದೆ. ಮಂಜೇಶ್ವರ, ಮೂಲ್ಕಿ, ಕಾರ್ಕಳ ದೇವಸ್ಥಾನದವರು ಸಹಾಯ ಮಾಡಿರುವರಲ್ಲದೆ, ವಿದ್ಯೆಯ ಸಲುವಾಗಿ ಈ ಕಾರ್ಯದಲ್ಲಿ ಎಲ್ಲರೂ ಉತ್ಸಾಹದಿಂದ ಸಂಪೂರ್ಣವಾಗಿ ಸಹಾಯ ಮಾಡಿರುವರಾಗಿ ರಾ। ಕಸ್ತೂರಿ ಸರ್ವೋತ್ತಮ ಪೈಯವರಿಂದ ತಿಳಿದುಬರುತ್ತದೆ.

## ನಕಲಿ ವ್ಯಾಪಾರದ ಗುರುತಿನ ಮೋಸ.

### ಮೊಕದ್ದಮೆಯೊಂದರ ವಿಶೇಷ ಪರಿಣಾಮ

ಜಿಲ್ಲೆಟ್ ಕ್ಷೌರದ ಬ್ಲೇಡುಗಳನ್ನು ತಯಾರಿಸುವ ಕಂಪೆನಿಯವರು ತಮ್ಮದೊಂದು ವ್ಯಾಪಾರದ ಗುರುತನ್ನು ಇಟ್ಟುಕೊಂಡಿರುವರಷ್ಟೆ ಅವುಗಳಂತೆ ನ್ಯೂಜಿಲ್ಲೆಟ್ ಬ್ಲೂ ಜಿಲ್ಲೆಟ್, ಪ್ರೊಬಾಕ್, 7 ಒಕ್ಲಾಕ್, ಎಂಬಿತ್ಯಾದಿ ಅತ್ಯುತ್ತಮ ಬ್ಲೇಡುಗಳನ್ನು ಇಂಡಿಯಾದಲ್ಲಿ ಎಲ್ಲೆಲ್ಲಿಯೂ ವ್ಯಾಪಾರಿಗಳು ಮಾರುತ್ತಾ ಇದ್ದಾರೆ ಅವು ಅಷ್ಟು ಹೆಸರುಗೊಂಡಿವೆ.

ಈ ಬ್ಲೇಡುಗಳನ್ನು ಯುನೈಟೆಡ್ ಸ್ಟೇಟ್ಸಿನ ಫೊವ್ವನನೆಂಬಾತನು ಮೊದಲು ರಚಿಸಿದನು. ಈತನಿಗೆ 1931ನೇ ಜೂನ್‌ನಲ್ಲಿ ಈ ವ್ಯಾಪಾರದ ಬಗ್ಗೆ ಅವನಿಟ್ಟ ಗುರುತನ್ನು ಹಿಂದಿನ ಮಾರ್ಚಿಯಿಂದ 16 ವರ್ಷಗಳ ತನಕ ರಿಜಿಸ್ಟರು ಮಾಡಲಾಗಿತ್ತು 1931ನೇ ಒಕ್ಟೋಬರದಲ್ಲಿ ಆತನು ಈ ಹಕ್ಕನ್ನು ಜಿಲ್ಲೆಟ್ ಇಂಡಸ್ಟ್ರೀಸ್ ಕಂಪೆನಿಗೆ ಒಪ್ಪಿಸಿಕೊಟ್ಟನು ರಿಜಿಸ್ಟರಿನಲ್ಲಿ ಹಾಗೆಯೆ ತಿದ್ದಲಾಯಿತು

ಈ ಬ್ಲೇಡುಗಳಿಗೆ ನಡುವೆ ಸೀಳಿದಂತೆ ತೂತುಗಳಿವೆ ಅಂತಹ ತೂತುಗಳುಳ್ಳ ಇವುಗಳಂತೇ ಇರುವ ಬ್ಲೇಡುಗಳನ್ನು ಯಶವಂತ ಬ್ರದರ್ಸ್ ಕಂಪೆನಿಯವರೂ ಇತ್ತ ತರಿಸಿ ಮಾರುತ್ತಿದ್ದ ಕಾರಣ, ಮೂಲ ಹಕ್ಕುಳ್ಳ ಕಂಪೆನಿಗೆ 0000 ರೂಪಾಯಿಯ ನಷ್ಟವಾಗಿದೆಂದು ಒಂದು ಮೊಕದ್ದಮೆ ಹೂಡಲಾಯಿತು ಪ್ರತಿವಾದಿಗಳು ತಮ್ಮ ಬ್ಲೇಡುಗಳು ನೇವಿ ಅಥವಾ ನೇವಿ ಬ್ಲೂ ಎಂಬ ಹೆಸರಿನವು, ಅವನ್ನು ತಯಾರಿಸುವ ಕಂಪೆನಿಯವರು 20 ದೇಶಗಳಲ್ಲೂ ಅವನ್ನು ಮಾರುತ್ತಿರುವರು, ನಾವೂ ಮಾರುತ್ತಿದ್ದೇವೆ ಎಂದು ಕೋರ್ಟಿಗೆ ತಿಳಿಸಿದರು ಫೊವ್ವನನು ಇದರ ಮೂಲ ಪುರುಷನಲ್ಲ, ಎಷ್ಟೋ ಕಂಪೆನಿಗಳು ಯುನೈಟೆಡ್ ಸ್ಟೇಟ್ಸಿನಲ್ಲಿ ಇಂತಹ ಬ್ಲೇಡುಗಳನ್ನು ಮಾಡುತ್ತಿವೆ, ಇದೇ ರೀತಿ ಅವುಗಳಿಗೂ ತೂತುಗಳಿವೆ, ಹೀಗಾಗಿ ಫೊವ್ವನನೇ ... ಹಕ್ಕು ಸಿಂಧುವಲ್ಲ ಎಂದರು ... ಒಂದೇ ಬಗೆಯ ವಸ್ತು ತಯಾರಿಸಿದರೆ ... ಈ ಹಕ್ಕನ್ನು ... 'ನಷ್ಟವಾದುದಿಲ್ಲ' ಕಾರಣವಿಲ್ಲದ ವ್ಯಾಜ್ಯವಾಡಿ ತಮಗೆ 000 ರೂಪಾಯಿ ನಷ್ಟವಾಗಿದೆ ಎಂದು ವಾದಿಸಿ ಪ್ರತಿವಾದಿಗಳು ವಾದಿಸಿದರು

ಗವರ್ನಮೆಂಟಿನ ಎಕ್ಸ್‌ಪಾರ್ಟರೊಬ್ಬನನ್ನು ಹಲವು ದಿನ ಪುನರ್ವಿಚಾರಣೆ ಮಾಡಲಾಯಿತು ವಾದಿಗಳ ಕಂಪೆನಿಯ ಲೋಹವಿಜ್ಞಾನಿಯನ್ನು ವಿಚಾರಿಸಿ ಅನುಭವ ಪಡೆಯಲಾಯಿತು

ಬೊಂಬಾಯಿ ಹೈಕೋರ್ಟಿನ ಜಡ್ಜರಾಗಿರುವ ಬ್ಲೇಕ್‌ವೆಲ್ ದೊರೆಗಳು ಈ ವ್ಯಾಜ್ಯವನ್ನು ತೀರ್ಮಾನಿಸಿದರು ಫೊವ್ವನನೇ ಈ ಬ್ಲೇಡುಗಳಿಗೆ ಮೂಲಪುರುಷನು ಅವನ ಹಕ್ಕು ನ್ಯಾಯಾಧಾರವಾಗಿದೆ ಮೊದಲು ಇವುಗಳಲ್ಲಿದ್ದ ಮೂರು ತೂತುಗಳನ್ನು ನಿವಾರಿಸಿ ಬ್ಲೇಡುಗಳು ನಡುವೆ ಸೀಳಿದಂತೆ ಈತನು ಈ ಹೊಸ ಬಗೆಯ ತೂತುಗಳನ್ನು ಮಾಡಿಕೊಟ್ಟವನು ಈ ರೀತಿ ಅವನ್ನು ಉತ್ತಮ ಸ್ಥಿತಿಗೆ ಬ್ಲೇಡುಗಳನ್ನು ತಂದುದರಿಂದ ಅವನ ಬ್ಲೇಡುಗಳು ಉತ್ತಮವೆಂದು ನಿಸ್ಸಂಶಯವು

ಈತನು ಈ ಹೊಸ ರೀತಿ ತೂತುಗಳನ್ನು ಕಲ್ಪಿಸುವ ಮೊದಲು ಇಂತಹ ಬ್ಲೇಡುಗಳನ್ನು ಯಾರೂ ಕಲ್ಪಿಸಿದ್ದಿಲ್ಲವೆಂದೂ ರುಜುವಾತಾಯಿತು ಹೀಗಿರುವುದರಿಂದ ಇವುಗಳಲ್ಲಿನ ಹಕ್ಕನ್ನು ವಾದಿಕಂಪೆನಿಗೆ ವಹಿಸಿದುದು ಸರಿಯಾದುದಾಯಿತು

ಪ್ರತಿವಾದಿಗಳು ಈ ಜಾತಿಯ ಬ್ಲೇಡುಗಳನ್ನು ಮಾರದಂತೆಯೂ ವ್ಯಾಜ್ಯದ ಖರ್ಚನ್ನು ಅವರೇ ತೆರುವಂತೆಯೂ ಕೋರ್ಟಿನ ತೀರ್ಮಾನವಾಯಿತು, ಆದರೆ ವಾದಿಗಳೇ ಹೇಳಿದಂತೆ, ನಷ್ಟಕ್ಕಾಗಿ ಬರೀ ಒಂದು ರೂಪಾಯಿ ಮಾತ್ರ ಪ್ರತಿವಾದಿಗಳು ತೆತ್ತರೆ ಸಾಕೆಂದಾಯಿತು, ಪ್ರತಿವಾದಿಗಳು ಪ್ರತಿ ವ್ಯಾಜ್ಯ ಹೂಡಿದುದನ್ನು ಜಡ್ಜರು ತೆಗೆದುಹಾಕಿದರು.

ವಾದಿಗಳಿಗೆ ಜಿಲ್ಲೆಟ್ ಮೊದಲಾದ ಆ ಬಗೆಯ ಬ್ಲೇಡುಗಳಲ್ಲಿರುವ ಹಕ್ಕನ್ನು ಈ ಕೋರ್ಟು ಸರ್ಟಿಫಿಕೇಟು ಮೂಲಕ ದೃಢಪಡಿಸಿದ್ದಾಗಿದೆ.

---

### ಹಿಂದೀ ಸ್ತ್ರೀಯರಿಗೆ ಪರಿಶ್ರಮಕ್ಕೆ ತಕ್ಕ ಪುರಸ್ಕಾರವಿಲ್ಲ!

ಹಿಂದೀ ಸ್ತ್ರೀಯರು ಬಹಳ ಮಟ್ಟಿಗೆ ನಾಚಿಕೊಳ್ಳುವ ಸ್ವಭಾವದವರು, ಸಂಕೋಚಪಡುವವರು ಎಲ್ಲರೊಡನೆ ಕೂಡಿ ಕೆಲಸ ಮಾಡುವದೆಂದರೆ ಅವರಿಗೆ ಸಲ್ಲದು ಹೆಚ್ಚಾಗಿ ಪುರುಷರ ರಕ್ಷೆ-ಆಶ್ರಯಗಳಲ್ಲಿ ಇರಲಿಕ್ಕೆ ಮೆಚ್ಚುವರು ಎಂದು ಜನರು ಸಾಮಾನ್ಯವಾಗಿ ಆಡಿಕೊಳ್ಳುತ್ತಾರೆ ಹೀಗಿದ್ದರೂ ಕೂಡ ನಮ್ಮ ದೇಶದ ಬೇರೆ ಬೇರೆ ವ್ಯವಸಾಯ ಕ್ಷೇತ್ರಗಳು, ಉದ್ಯೋಗ ಮಂದಿರಗಳು ಮತ್ತು ಕರ್ಮಾಲಯಗಳಲ್ಲಿ ಕೆಲಸ ಮಾಡುವ ಕೆಲಸಗಾರರಲ್ಲಿ ಅರ್ಧಾಂಶಕ್ಕಿಂತಲೂ ಮಿಗಿಲು ಹೆಂಗಸರಿರುತ್ತಾರೆ ಹಾಗಿರುವಾಗ ಅವರ ಪರಿಶ್ರಮವು ಗಣನೀಯವಲ್ಲವೆಂದು ಹೇಗೆ ಹೇಳಬಹುದು?

ಬಯಲು ಗದ್ದೆಗಳಲ್ಲಿ ಬಿತ್ತಿ ಬೆಳೆ ಮಾಡುವವರು ಸ್ತ್ರೀಯರು ... ಗಳಲ್ಲೂ ಮನೆಗಳಲ್ಲೂ ಕಾಳು ಬೀಸಿ ಹಿಟ್ಟು ಮಾಡುವವರು ಅವರು ರಸ್ತೆ ಮಾರ್ಗಗಳನ್ನು ಕಡಿಯಲಿಕ್ಕೂ ದುರಸ್ತಿ ಮಾಡಲಿಕ್ಕೂ ಜಲ್ಲಿ ಕಲ್ಲು ಕಡಿದು ರಾಶಿಹಾಕುವವರು ಅವರು ಹತ್ತಿಯನ್ನು ನೂತು ಬಟ್ಟೆ ನೇಯುವವರೂ ಅದರ ಮೇಲೆ ಜರತಾರಿ ಕೆಲಸ ಮಾಡುವವರೂ ಅವರು, ತಲೆಹೊರೆಗಳನ್ನು ಹೊತ್ತು ಬೇಕಾದಲ್ಲಿ ಸಾಗಿಸುವವರು ಮನೆಕಟ್ಟುವವರು ಮತ್ತು ಬೇಸಾಯಗಾರರಿಗೆ ಸಹಾಯಕರು ಕೂಡ ಅವರೇ ಆಗಿದ್ದಾರೆ ಗಿರಣಿ ಮಿಲ್ಲುಗಳಲ್ಲಿ ಅವರ ಅನಾರೋಗ್ಯಕರ, ಒಸಿಬಿದ ಸ್ಥಾನಗಳಲ್ಲಿ ಇದ್ದು ... ವರು

ದೇಶದ ಸಂಪದಭಿವೃದ್ಧಿಯ ಸಾಧನೆಯಲ್ಲಿ ಹಿಂದೀ ಸ್ತ್ರೀಯರ ಕೈಯಿಲ್ಲ ಎನ್ನುವದೆ ತಪ್ಪು ... ಅದರಲ್ಲಿ ಅವರದೊಂದು ದೊಡ್ಡ ಪಾಲು ಇದೆ ಆದರೂ ಅವರ ಪರಿಶ್ರಮಕ್ಕೆ ಸಿಕ್ಕುವ ಪುರಸ್ಕಾರವು ಮಾತ್ರ ಅತ್ಯಲ್ಪವಾಗಿರುವದು ಅವರೆಲ್ಲರೂ ಬಡವರಾಗಿದ್ದಾರೆ ಊಟಕ್ಕಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಊಟಕ್ಕಿಲ್ಲ ಹರಕುಮುರುಕು ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ಅವರ ಬಾಳುವೆಯು ವ್ಯರ್ಥವಾಗದಂತೆ ನೋಡಿಕೊಳ್ಳುವದು ನಮ್ಮ ಧರ್ಮವಾಗಿದೆ ಎಂದು ಶ್ರೀಮತಿ ಸತಿಯಾನಾಥನರವರು 'ಚಿತ್ರಮಯ ಸಾಪ್ತಾಹಿಕ'ದಲ್ಲಿ ಬರೆಯುತ್ತಾರೆ

## ನೋಟೀಸು

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. No. 324/1937

ಕೃಷ್ಣ ಭಟ್ಟ, ಚನ್ನ ಭಟ್ಟ — ಸುಬ್ರಾಯ ಭಟ್ಟರ ಮಗ, ಮಂಗಳೂರು ತಾಲೂಕು ಬಾಳ ಪುಹ ಮಾಗಣೆ ನರಿಂಗಾನ ಗ್ರಾಮದಲ್ಲಿರುವವ ವಾದಿ. ಮತ್ತ

1 ನಾರಾಯಣ ಹೆಬ್ಬಾರ, 2 ಶಂಭು ಹೆಬ್ಬಾರ, 3. ವೆಂಕಟೇಶ್ವರ ಹೆಬ್ಬಾರ ಬಡಗು ಮನೆ ಶಂಭು ಹೆಬ್ಬಾರರ ಮಕ್ಕಳು— ಕಣ್ಣೂರು ಗ್ರಾಮದ ಪೆರ್ನೆಯಲ್ಲಿರುವವರು—ಪ್ರತಿವಾದಿರು

ಇವರೊಳಗೆ

ಪ್ರತಿವಾದರು ವಾದಿಗೆ ತಾ 18-11-1934 ರಲ್ಲು ಬರಕೊಟ್ಟ ಪ್ರೊಮಿಸರಿ ನೋಟು ಮೇರೆಗೆ ವಾದಿಗೆ ಬಹಾ ರೂ 358—14—4ನ್ನು ವಸೂಲು ಪಡೆಯುವರೆ ವಾದಿಯು ದಾಖಲು ಮಾಡಿದ ಸದಿ ವ್ಯಾಜ್ಯವು ಸದರಿ ಕೋರ್ಟಿನಲ್ಲಿ ತಾ 27 1—1938ರಲ್ಲು ಅಖೈರ ತೀರ್ಮಾನದ ... ಪ್ರತಿವಾದಿರಿಗೆ ಆಕ್ಷೇಪವಿದೆ ಸದರಿ ತಾರೀಕಿನಲ್ಲಿ ಹಾಜರಾಗಿ ಬಚ್ಚಿಹೇಳು ಮಾಡಿಕೊಳ್ಳಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ

ಕಾಸರಗೋಡು, 11-1-38 G Rama Rau, ವಾದಿಯ ಕಡೆ ವಕೀಲ

---

## ಪ್ರಕಟಣೆ.

ಮಂಗಳೂರು ತಾಲೂಕು ಉಪ್ಪನಾಡು ಕಸಬ ಮುಳ್ಕಿ ಪೇಟೆಯಲ್ಲಿರುವ ವರೇಂಟೆಟ್ಟು ಸಾಂತಪ್ಪ ಶೆಟ್ಟಿಯವರ ಮಗಳು ವ ಸೂರ ಕೃಷ್ಣ ಜೋಯಿಸರ ವಿಧವೆ ಭವಾನಿ ಯಾನೆ ರುಕ್ಮಿಣಿ ಅಮ್ಮನಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನನ್ನ ತಾಯಿ ತುಳಸಿಯಾನೆ ಸರಸ್ವತಿ ಅಮ್ಮನು ಮುಳ್ಕಿ ಸ ರ ಆಫೀಸಿನಲ್ಲಿ ನಂಬ್ರ 6/1915ಕ್ಕೆ ರಿಜಿಸ್ಟ್ರಿ ಬರೆದಿಟ್ಟ ವೀಲ್ ನಾನು ಪ್ರಕಾರ ಸದ್ರಿ ತುಳಸಿ ಯಾನೆ ಸರಸ್ವತಿ ಅಮ್ಮನ ಸ್ವಕೃತ ಹಿರೇವ ಗಳಾದ ನಾನೂ ಸದ್ರಿ ನನ್ನ ತಾಯಿಯ ಹಕ್ಕಿನ ಆಸ್ತಿಯನ್ನು 192೦ನೇ ... ಈಗ ಸುಮಾರು ಏಳು ವರ್ಷಗಳ ಹಿಂದೆ 20 25 ವರ್ಷಗಳಲ್ಲಿ ಮೃತಪಟ್ಟ ನನ್ನ ಗಂಡ ಕೃಷ್ಣ ಜೋಯಿಸರ ಆಸ್ತಿಯ ವ್ಯವಹಾರಕೆ ಸಂಬಂಧ ನನ್ನ ಗಂಡನ ಕಡೆಯ ಸಂಬಂಧಿಕರಿಂದ ಮಂಗಳೂರು ತೇರ ಬೀದಿಯಲ್ಲಿರುವ ವಾಸುದೇವ ಭಟ್ರು ಮಗ ಕೃಷ್ಣ ಭಟ್ಟರು ನಮ್ಮ ಮನೆಗೆ ಆಗಿಂದಾಗ್ಗೆ ಬರುತ್ತಾ ಇದ್ದರು ಆಗ ಸದ್ರಿಯವರು ನಾವು ಬರೆಯಲ್ಲದವರಾದ್ದರಿಂದ ನಮ್ಮ ಖಾಸಗಿ ಲೇವಾದೇವಿಯ ಬಾಬ್ತಿಗೆ, ವ್ಯವಹಾರಗಳನ್ನು ಸಹಾ ಸದ್ರಿ ಕೃಷ್ಣ ಭಟ್ಟರೇ ನಡೆಸುತ್ತಾ ಇದ್ದರು ಈ ಕನ್ನಡ ಸದ್ರಿ ಕೃಷ್ಣ ಭಟ್ಟರು ರೂಪಾಯಿ 800ಕ್ಕೆ ನನಗೆ ಬರಕೊಟ್ಟ ಪ್ರೊ ನೋಟನ್ನು ನಾನು ಅವರ ... ಧಾಗಿಗೆ ಟ್ರಾನ್ಸ್‌ಫರ್ ಕೊಟ್ಟಾಗ ಸದ್ರಿ ವಾದುನ ... ಭಾಗದ ನೋಟಿನ ಐವೇಜು ವಸೂಲು ಮಾಡುವರೆ ನನ್ನನ್ನು ಕಥಿತಾ ಪ್ರತಿವಾದಿಯಾಗಿ ಮಾಡಿದ ದಾವೆಯಲ್ಲಿ ಸದ್ರಿ ಕೃಷ್ಣ ಭಟ್ರು ಈ ದಾವೆಗೆ ಏನೊಂದೂ ಸಂಬಂಧವಿಲ್ಲದೆ ನನ್ನ ತಾಯ ರಿಜಿಸ್ಟ್ರಿ ಬರೆದಿಟ್ಟ ವೀಲು ನಾಮೆಯನ್ನು ಹಾಜರುಪಡಿಸಿ ತನ್ನ ಕಡೆಯಿಂದ ಸಾಕ್ಷಿಯ ... ಸದ್ರಿ ವೀಲನ್ನು ಕೋರ್ಟಿಗೆ ಹಾಜರುಪಡಿಸುವರೆ ನನ್ನ ... ಸದ್ರಿ ರಿಜಿಸ್ಟ್ರಿ ಆದ ವೀಲು ಮತ್ತು ಸದ್ರಿ ಆಸ್ತಿಗೆ ಸಂಬಂಧಪಟ್ಟ ರಿಕಾರ್ಡುಗಳು ... ನೋಡಿ ನಾನು ಆಗಲೇ ತಾ 21 11 31 ... ಪೋಲೀಸು ಸುಪರಿಂಟೆಂಡೆಂಟ್ ದೊರೆಗಳವರಿಗೆ C ನಂಬ್ರ 1623/1931ನೇ ಅರ್ಜಿಯ ಮೂಲಕ ಒಂದು ಕೊಟ್ಟಿದ್ದೆ ಸದ್ರಿ ಅರ್ಜಿಯಲ್ಲಿ ನನ್ನ ... ನಾನು ಸದ್ರಿ ಕೃಷ್ಣ ಭಟ್ಟರ ಮೇಲೆ ನನಗೆ ಅನುಮಾನ ಉಂಟೆಂದು ಹೇಳಿ ಕೊಟ್ಟಿದ್ದರಿಂದ, ಸದ್ರಿ ಅರ್ಜಿಯಲ್ಲಿ ಸದ್ರಿ ಕೃಷ್ಣ ಭಟ್ಟರು 2 3 ತಿಂಗಳು ... ಕೊಂಡರೂ ನನಗೆ ಅವರ ಮ ... ಆಗಿ ... ನಂತರ ತಾ 29 11 37ರಲ್ಲಿ ಮುಲ್ಕಿ ... ಭಟ್ರು ಮಗ ಸುಬ್ರಾಯ ಭಟ್ರು ಮತ್ತು ಮುಲ್ಕಿ ... ಭಟ್ರು ಮಗ ರಾಮಕೃಷ್ಣ ಭಟ್ರು ಕೂಡಾ ಎರಡು ಜನರು ನನಗೆ ಬಿಟ್ಟ ಮುಲ್ಕಿ ಪೋಸ್ಟಾಫೀಸು ನಂಬ್ರ 106ನೇ ರಿಜಿಸ್ಟ್ರಿ ಕಾರ್ಡು ನೋಡಲಾಗ ... ಕೃಷ್ಣ ಭಟ್ಟರು ತನ್ನ ಸಮಿಪದ ಸಂಬಂಧಿಕರಾದ ಈ ... ಜನರನ್ನು ತನ್ನ ಕೂಡುವಿಕೆಗೆ ತೆಗೆದುಕೊಂಡು, ... ಸ್ವಹಸ್ತ ರಿಕಾರ್ಡು ತಯಾರಿಸುವ ಒಳಸಂಚು ನಡೆಸುತ್ತಾರಾಗಿ ನನಗೆ ಅನುಮಾನ ಉಂಟಾಗಿ, ನಾನು ಸದ್ರಿ ಸಂಗ್ತಿ ... ತಾ 9—12—37ರಲ್ಲು ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳವರಿಗೆ C ನಂಬ್ರ 2255/1937ನೇ ಅರ್ಜಿಯನ್ನು ಬರಕೊಂಡಿದ್ದೇನೆ ಅದ್ದರಿಂದ ಸದ್ರಿ ... ರಿಜಿಸ್ಟ್ರಿ ಆದ ... ಹಿನ ಆಧಾರದಿಂದ ಮೇಲೆ ಹೆಸರು ಕಾಣಿಸಿದವರಾಗಲೀ ಇತರರು ಯಾರೇ ಆಗಲಿ ಸ್ವಹಸ್ತ ರಿಕಾರ್ಡು ತಯಾರಿಸಿದ್ದಲ್ಲಿ ಅದು ನನಗೆ ಆಗಲೀ, ನನ್ನ ಅನುಭೋಗದಲ್ಲಿರುವ ಸದ್ರಿ ಆಸ್ತಿಗಾಗಲೀ ಬಾಧಕವಲ್ಲವೆಲ್ಲ ಸದ್ರಿ ಆಸ್ತಿಗೆ ಸಂಬಂಧಪಟ್ಟ ರಿಜಿಸ್ಟ್ರಿ ಆದ ವೀಲು ಮಾತ್ರ ಸಿಂಧುವಾಗತಕ್ಕದ್ದು ಎಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುತ್ತೇನೆ

ಈ ಎಡಕ್ಕೆ ಹೆಬ್ಬೆಟ್ಟಿನ ಗುರುತು ಮತ್ತು ಈ ಎರಡು ಗೆರೆ ಸಹಾ ಸದ್ರಿ ಭವಾನಿ ಯಾನೆ ರುಕ್ಮಿಣಿ ಅಮ್ಮನ ರುಜುವಾಗಿರುತ್ತದೆ.

ಈ ಬಗ್ಗೆ ಸಾಕ್ಷಿ—ಈ ... ಮಂಜೇಶ್ವರ ಗೋವಿಂದ ಭಟ್ರು ಮಗ ಮುಕುಂದ ಭಟ್ರು ಸಾಕ್ಷಿ ಆಗಿರುತ್ತದೆ.


## ಇನೋಸ್ ಫ್ರುಟ್ ಸಾಲ್ಟ

# ನೀವು ತಿನ್ನುವಿಯೊ: ನಿನ್ನಪ್ರೀತಿಯ ವಸ್ತುವನ್ನು? ನಿನಗೆ ಸಿಕ್ಕಲಿಲ್ಲ? ನಿನಗೆ ಬೇಕೆಂದಾಗ?

ಎಷ್ಟೋ ಜನರು ತಾವು ತಿನ್ನುವ ಆಹಾರದ ವಿಷಯದಲ್ಲಿ ಜಾಗರೂಕರಾಗಿರಬೇಕು

ಅವರು ಕೆಲವು ಆಹಾರಗಳನ್ನು ತಿಂದ ಮೇಲೆ, ಹೊಟ್ಟೆಯ ನೋವು ಶುರುವಾಗಿ ಹೊಟ್ಟೆಯ ಅಸ್ವಸ್ಥತೆಯನ್ನುಂಟುಮಾಡುವುದು.

ಇದು ಅವರ ಹೊಟ್ಟೆಯು ಸರಿಯಾದ ಸ್ಥಿತಿಯಲ್ಲಿಲವೆಂಬುದರ ಸೂಚನೆಯು

### ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ

'ನಾವು ಶ್ರೀಮಂತರಲ್ಲ. ಆದ್ದರಿಂದ ನಾವು ನಮ್ಮ ಸಂಪತ್ತಿಯನ್ನು ಉಳಿಸಿಕೊಂಡು ಬರಬೇಕು ಕ್ರೈಸ್ತ ಸಮಾಜತತ್ವವನ್ನನುಸರಿಸಿ ನಾವು ನಮ್ಮ ಸಂಪತ್ತಿಯನ್ನು ಉಳಿಸಿಕೊಳ್ಳುತ್ತೇವೆ ನಮ್ಮ ಜನರು ವಾರದಲ್ಲಿ ಒಂದು ಬಾರಿ ಮಾತ್ರ ಬತ್ತಿ ಸೇದುವರು ಎರಡು ಬಾರಿ ಮಾತ್ರ ಹೆಂಗಸರಿಗೆ ಒಂದು ಕಪ್ಪು ಟೀ ಸಿಕ್ಕುತ್ತದೆ' ಎಂದು ವಿಲ್ಡೆ ಹೇಳಿದ

ಈಗ ಅವನು ತಾನು ಬಂದ ಕಾರ್ಯವನ್ನು ಸಾಧಿಸಿಕೊಂಡು ಪುನಃ ತನ್ನ ರಾಜ್ಯಕ್ಕೆ ಹೊರಟಿದ್ದಾನೆ.

### ಹುದ್ದೆದಾರಿ ರಕ್ಕರಿಗೆ ಅನುಭವಸ್ಥರ ಸಹಾಯ!

ಕಿಸೆ ಕಳ್ಳರು, ರಕ್ಕರು, ಮೋಸಗಾರರು, ಧೂರ್ತರು ಮೊದಲಾದವರಿಗೆ ಅವರವರ ವೃತ್ತಿ ಉದ್ಯೋಗಗಳಲ್ಲಿ ಸಹಾಯ ಮಾಡಲಿಕ್ಕೆ ಅನುಭವಸ್ಥರ ಕೂಟವೊಂದ, ಸಂಭಾವಿತ ಜನರ ನಡುವೆ-ಇಂಗ್ಲಂಡಿನಲ್ಲೇ ಇರುವದಾಗಿ ತಿಳಿದು ಬರುತ್ತವೆ ಈ ಕೂಟಕ್ಕೆ ಸ್ವಂತದ ಛಾಪಖಾನೆ ಇದೆ ಅದು ಪ್ರತಿವರ್ಷವೂ ಅನುಭವ ಕೊಡುವ ಪುಸ್ತಕ ಕರಪತ್ರಾದಿಗಳನ್ನು ಛಾಪಿಸಿ ಸಂಘದ ಸದಸ್ಯರಿಗೆ ಹಂಚುತ್ತದೆ. ಫ್ರಾನ್ಸು ಒಂದು ದೇಶದಲ್ಲಿಯೇ ಈ ಸಂಘಕ್ಕೆ ಸೇರಿದ ಸಾವಿರಾರು ಮಂದಿ ಸದಸ್ಯರಿದ್ದಾರೆ. ಅವರ ಪರಿಚಯ ಕೊಡುವ ಕೈಪಿಡಿಯು ೨೦೦೦ ಪುಟಗಳುಳ್ಳದ್ದಾಗಿದೆ ಅದರಲ್ಲಿ ರಾಜರಾಣಿಯರಿಂದಾರಂಭಿಸಿ ಮಧ್ಯಮ ವರ್ಗದ ವ್ಯಾಪಾರ ಉದ್ಯಮಿಗಳ ತನಕ ಪ್ರಪಂಚದ ಎಲ್ಲ ಪ್ರದೇಶಗಳಿಗೆ ಸೇರಿದ ೪೦೦೯ ಜನರ ಪರಿಚಯವನ್ನು ಕೊಟ್ಟಿರುತ್ತದೆ ಈ ಪರಿಚಯವನ್ನು ಕೊಟ್ಟಿರುವಲ್ಲಿ, ಅವರವರ ಹಿಂದಿನ ಜೀವನದಲ್ಲಿ ನಡೆದ ಸದಸ್ಯರಿಗೆ ಪಯುಕ್ತವಾದ ಘಟನಾ ವಿಶೇಷಗಳನ್ನು ಉಲ್ಲೇಖಿಸುತ್ತಾರೆ ಈ ಕೈಪಿಡಿಯ ಬೇರೆ ಬೇರೆ ಪುರವಣಿಗಳನ್ನು ಬೇರೆ ಬೇರೆ ಕಾಲದಲ್ಲಿ ಛಾಪಿಸಿ ಪ್ರಕಟಿಸಿ, ಸದಸ್ಯರ ಜ್ಞಾನವು ಪರಿಪೂರ್ಣವಾಗುವಂತೆ ಮಾಡುತ್ತಾರೆ. ಇಂಥ ಕೈಪಿಡಿ ಮತ್ತು ಪುರವಣಿಗಳು ಇಂಗ್ಲಿಷ್, ಫ್ರೆಂಚ್, ಜರ್ಮನ್ ಮೂರು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿವೆ, ಚಂದಾದಾರರಿಗೆ ಮಾತ್ರ ಅವುಗಳನ್ನು ಕಳುಹಿಸಿ ಕೊಡುತ್ತಾರೆ.

ಇಷ್ಟು ವ್ಯವಸ್ಥೆ ಮಾಡುವ ಅನುಭವಸ್ಥರ ಕೂಟದ ಪ್ರಧಾನ ಕಾರ್ಯಾಲಯವು ಇಂಗ್ಲಂಡಿನಲ್ಲಿ ಇರುವದಾಗಿಯೂ, ಅದರ ಶಾಖೆಗಳು ಪ್ರಪಂಚದ ಎಲ್ಲ ದೇಶಗಳಲ್ಲಿ ಕೆಲಸಮಾಡುತ್ತಿರುವವಾಗಿಯೂ ಫ್ರಾನ್ಸ ದೇಶದ ಸರಕಾರಿ ಗೂಢಚಾರರು ಕಂಡು ಹಿಡಿದಿದ್ದಾರೆ ಬೇರೆ ಬೇರೆ ದೇಶಗಳ ಸರಕಾರಗಳ ಸಹಕಾರ ಪಡೆದು, ಅವುಗಳ ಪತ್ತೆ ಹಚ್ಚುವ ಕಾರ್ಯದಲ್ಲಿ ಈಗ ಆ ಗೂಢಾಚಾರರು ತೊಡಗಿದ್ದಾರೆ, ಟಪ್ಪಾಲು ಮೂಲಕ ಕಳ್ಳತನ, ರಕ್ಕತನ, ಮೋಸಗಾರಿಕೆ ಧೂರ್ತತನ ಇತ್ಯಾದಿಯನ್ನು ಕೂಡ ಇಂಗ್ಲಂಡಿನ ಈ ಸಂಸ್ಥೆಯು ಆ ವಿದ್ಯೆಯನ್ನು ಕಲಿಯಲಪೇಕ್ಷಿಸುವವರಿಗೆ ಕಲಿಸಿಕೊಡುವದೆಂದು ಆ ಗೂಢಚಾರರು ಹೇಳುತ್ತಾರೆ

## ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ,
ಅದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ—

**ಜೀವಾಮೃತ**

ಆಯುರ್ವೇದಾಶ್ರಮಂ,
೧೫೧, ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.

ದ. ಜಿಲ್ಲಾ ಏಜಂಟರು —
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು



***Ready for sale !***

# SHARADA DIARY 1938

**Small size 0–4–0.**

ಶಾರದಾ ಪೋಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

Interleaved big size DIARIES useful for Banks & Lawyers
ARE AVAILABLE AT 1-2-0 PER COPY

**Sharada Press, Mangalore, S. Canara.**



**HOUNSA**

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋವಿಂದಪ್ಪ ಬಜಾರ್, ಮಂಗಳೂರು.



*Use the soaps*
KNOWN ALL OVER
*WISICO'S.*
MINAR
&
TAJAMAHAL 'Red'
Bar Soaps.
POPULAR IN THE MARKET.
*Sole Distributer -*
**P. G. KAMATH,**
Kashmir House,
Marnamikatta, MANGALORE.



## ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿ ಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ ಸದನ, ಪೆರಡೆಪಿ.
P. O Peridepi (ಸೆಲ್ಲೂರು ಕೆ.)

ವಾರದ ಕಥೆ

# ನರಪುಂಗವ!

(ಲೇಖಕ:— ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

ಕೃಷ್ಣಪಕ್ಷದ ಚತುರ್ದಶಿ ದಿನ. ರಾತ್ರಿ ಎಂಟು ಗಂಟೆಯ ಸಮಯ ಆಗಿರಬಹುದು ಪೇಟೆಯ ಕೆಲಸ ಮುಗಿಸಿ ನಾನು ಮನೆಗೆ ಹೊರಡಬೇಕಾದರೆ ಅಷ್ಟು ರಾತ್ರಿ ಕಳೆದು ಹೋಗಿತ್ತು. ಮೂರು ಮೂರುವರೆ ಮೈಲು ದೂರವನ್ನು ಕಾಲುದಾರಿಯಿಂದ ನಡೆದುಹೋಗಬೇಕು ದಾರಿಯಲ್ಲಿ ಕಳ್ಳಕಾಕರು ಬಂದು ಮುತ್ತುವರು, ಇದ್ದುದನ್ನು ಸುಲಿದುಕೊಂಡು ಓಡಿಹೋಗುವರು, ಎಂಬ ಭಯ ನನಗೆ ಇದ್ದಿರಲಿಲ್ಲ. ಕೈಯಲ್ಲಿ ಇದ್ದುದು, ಉದಲಿಕ್ಕೆ ತೆಗೆದುಕೊಂಡ ಒಂದು ಜೋಡಿ ಧೋತರ ಮತ್ತು ಅಮೃತಾಂಜನದ ಒಂದು ಕರಡಿಗೆ ಮಾತ್ರ ಆದರೂ ಕತ್ತಲೆಯಲ್ಲಿ ದಾರಿನಡೆದುಕೊಂಡು ಹೋಗುವದೆಂದರೆ, ಅದು ಬಹು ಪ್ರಯಾಸಸಾಧ್ಯವಾದ ಕೆಲಸ ಹಳ್ಳಕೊಳ್ಳಗಳು ಇವೆ ತೋಡುಪ್ರವಾಹಗಳಿವೆ, ಕಾಡುಗದ್ದೆಗಳಿವೆ, ಇವುಗಳನ್ನೆಲ್ಲ ದಾಟಿ ಹೋಗಬೇಕು ನಾವು ಆ ದಾರಿಯಿಂದ ಆಗಾಗ ಬಂದುಹೋಗುವವರಾದ್ದರಿಂದ, ಸ್ವಲ್ಪ ರಾತ್ರಿಯಾದರೂ ಒಬ್ಬೊಂಟಿಗರಾಗಿ ನಡೆದುಹೋಗುವ ಧೈರ್ಯವಿದೆ ಹೊಸಬರಾದರೆ ಸುಮಾರು ೬–೭ ಗಂಟೆಗಳ ಬಳಿಕ ಯಾರೂ ಆ ಮಾರ್ಗವಾಗಿ ಸಂಚರಿಸುವುದಿಲ್ಲ.

ಸುಮಾರು ಒಂದ ಒಂದೂವರೆ ಮೈಲು ದೂರ ನಡೆದು ಆಗಿದೆ ಅಷ್ಟರಲಿ ನನಗೆ ಏನೋ ಸ್ವಲ್ಪ ದೂರದಲಿ ಒಂದು ಅಳುಸ್ವರ ಕೇಳಿಬಂದಿತು ಕೂಗು ಮನೋವೇದಕವಾಗಿತ್ತು ನಾನು ಸ್ತಂಭೀಭೂತನಾಗಿ ನಿಂತುಕೊಂಡೆ 'ಅಯ್ಯೋ, ಅಮ್ಮಯ್ಯೋ ಸತ್ತೆನಪ್ಪಾ, ಸತ್ತೆ ನೀರು [illegible] ' ನಾನು ಇನ್ನೂ ಹತ್ತು ಹೆಜ್ಜೆ ಮುಂದೆ ಇಟ್ಟೆ

ಅಲ್ಲಿಂದ ಅಷ್ಟು ದೂರದಲಿ ಒಂದು ಗದ್ದೆಯ ಏರಿ ಇದೆ ಗದ್ದೆ [illegible] ಆದ [illegible] ಅಳೋಳು ಅದಿ [illegible]ಳಗಿರುವುದ ಅದ [illegible] ಇಬ್ಬರು ಕೈಕೈಕೊಟ್ಟ [illegible] ನಡೆದ ಹೋಗಲಿಕ್ಕಾಗದಷ್ಟು ಅದರ ಇಕ್ಕಟ್ಟಾಗಿದೆ ಅಲ್ಲೇ ಅದಕ್ಕೆ ಒತ್ತಿಕೊಂಡು ಒಂದು [illegible]ಂಗಿನ ಮರ ನಿಂತಿದೆ ಅದರ ಬ[illegible] ಒಬ್ಬನು ಕೂತುಕೊಂಡು [illegible] ನಾನೂ ಸ್ವಲ್ಪ ಸ್ಟೂ[illegible]ಟಬೀಸಿ, ಬೆಳಕಿಗೆ [illegible] ನೋಡಿದೆ ಮರಕ್ಕೆ ಬೆನ್ನುಕೊಟ್ಟ [illegible] ಎರಡು ಕಾಲುಗಳನ್ನೂ ತಿಕ್ಕಿಕೊಳ್ಳುತ್ತಿದ್ದನು [illegible] ನಾನು ಕೆಳಗೆ ಹೋದೆ [illegible] ಗದ್ದೆಯ ಕೆಸರಿನಲ್ಲಿ ಬಿದ್ದೇನೆಂಬ ಭಯ ನನಗೆ

ಹೋಗಿ ನೋಡುವಾಗ [illegible] ವುದು ಬಿದ್ದವರ ಗುತ್ತಿನ ನಾಗರಾಜಸೆಟ್ಟರು ೫೦–೬೦ ವರ್ಷದ [illegible] ಈ ರಾತ್ರಿ ಸಮಯ ಒಬ್ಬರಾಗಿ ಈ ದಾರಿಯಿಂದ [illegible] ನಡೆದ ಬಂದು ಕಸರಿನಲ್ಲಿ ಬಿದ್ದರೆಂದ ನನಗೆ ಆಶ್ಚರ್ಯವಾಯಿತು [illegible] ಅವರದೇ ಶಾಸನ ಅವರದೇ [illegible]! ಪ್ರಾಚೀನ ಕಾಲದ [illegible] ಪ್ರಭುಗಳಲಿರುತ್ತಿದ್ದ ಕೆಲಕೆಲವು ಲಕ್ಷಣಗಳು ಅವರಲ್ಲಿಯೂ ಉಳಿದು ಬಂದಿದ್ದವು [illegible], ಗದ್ದೆಯ ಕೆಸರಿನಲಿ ಬಿದ್ದುಕೊಂಡಿರುವುದು

'ಗುತ್ತಿನವರೆ, ಇದೇನ, ಇಷ್ಟು ರಾತ್ರಿಗೆ ಎಲ್ಲಿಗೆ ಹೊರಟಿದ್ದೀರಿ? ಕೆಸರಿನಲೇ [illegible] ಕೊಂಡಿರುವಿರಲ್ಲ!''

'ನನ್ನ ಪ್ರಾರಬ್ಧ ಯಾರು [illegible] ಭಟ್ಟರೆ? ಸ್ವಾಮಿಯೂ, ಆ [illegible] ಗಳ [illegible] ಬೆಳಗ್ಗೆ ಅವಳ [illegible] ನೋಡಿದ್ದೆ ಅದರಿಂದ ಈ ಗಂಡಾಂತ! ಅಯ್ಯೋ ಕಾಲು ನೋಯುತ್ತದೆ' ಎಂದು ಹೇಳಿ ಅವರ ಕಾಲು ತೀಡತೊಡಗಿದರು

ನಾನು ಅವರ ಕಾಲು ಮುಟ್ಟಿ ಎಲಿ ಸ್ವಾಮಿ ನೋವು?' ಎಂದು ಕೇಳಿದೆ

'ಛೀ, ಛೀ ಭಟ್ಟರೆ ನೀವು ಕಾಲು ಮುಟ್ಟಬಾರದು' ಎಂದು ಹೇಳಿ [illegible]— 'ಸ್ವಾಮಿ, ಭಟ್ಟರೆ! ಇಲಿ ನೋವು ಇಲ್ಲಿ ನೋವು!' ಎಂದು ಮೊಣಕಾಲಿನ ಗಂಟನ್ನು ತೋರಿಸಿದರು

ನಾನು ಅವರ ಕಾಲಿನ ಗಂಟಿಗೆ ಸ್ವಲ್ಪ ಅಮೃತಾಂಜನ ತಿಕ್ಕಿ—'ಸೆಟ್ಟರೆ! ಬರುವಾಗ ಇಷ್ಟು ರಾತ್ರಿ ಯಾಕಾಯಿತು, ಸ್ವಾಮಿ? ಸಂಗಡ ಯಾರೂ ಇರಲಿಲ್ಲವೆ?'

'ಬೆಳಗಾಗಬೇಕಾದರೆ ಬಿತ್ತೋಳು ಕರಕೊಂಡು ಬರಬೇಕಾಗಿ ಕೊರಗನಿಗೆ ಹೇಳಿ ಕಳುಹಿಸಿದ್ದೆ ಆ ಗಂಟೆಯ ಸಮಯವಾದರೂ ಅವ ಬಂದಿರಲಿಲ್ಲ, ನಾಳೆಬರು ಗದ್ದೆಯಲ್ಲಿ ನೀರುನಿಂತಿತ್ತು ನಮ್ಮ ಬಾಗಿಲಗದ್ದೆ ಉತ್ತು ಆಗಿಲಿಲ್ಲ ಆದ್ದರಿಂದ ಈ ದಿನವೇ ಬಂದು ಉತ್ತುಹೋಗಬೇಕೆಂದು ಹೇಳಿದ್ದೆ '

'ಆಗ!'

'ಎಂಟು ಗಂಟೆ ಹೊತಾಯಿತಾದರೂ ಬರಲಿಲ್ಲವೆಂದ ಕೊಡು [illegible] ಸಬ್ಬನೊಂದಿಗೆ ಇವನ ಗುಡಿಸಲಿಗೆ ಹೋದೆ ಅಲ್ಲಿ ಕೊರಗನ [illegible] ತ್ಯಾಂಪ ತೋಟದಲ್ಲಿ ಕೆಲಸಮಾಡುತ್ತಿದ್ದ. ನಾನು 'ಕೊರಗ! ಎಂದೆ'

ಅವನ —'ಸ್ವಾಮಿ!' ಎಂದ

'ಕೊರಗ ಎಲ್ಲಿ?' ಎಂದ ಪ್ರಶ್ನೆ ಕೇಳಿದೆ

'ಸ್ವಾಮಿ' ಜ್ವರ ಬಂದಿದೆ ಮಲಗಿದ್ದಾನೆ ' ಎಂದ

ಏನ, ಜ್ವರವೆ? ನಾನು ಹೇಳಿ ಕಳುಹಿಸಿದ್ದು ಸಿಕ್ಕಾಗಲಿಲ್ಲ, ಅಲ್ಲವೆ?' ಎಂದು ಕೇಳಿದೆ

ತ್ಯಾಂಪ [illegible] ಗಿದು [illegible], ಅವನು ಮಾತನಾಡಲಿಲ್ಲ

ನನಗೆ ಸಿಟ್ಟು ಬಂದಿತು ಇವರು [illegible] ಈಗೀಗ ಇವರಿಗೆ [illegible] ಸಾಲದೆ [illegible] ಸಾಲದು ಆ ಗಾಂಧಿಜನರು ಇವರನ್ನು [illegible] ಇಟ್ಟಿದ್ದಾರೆ ಅವರಿಗೆ ನನ್ನ ಧರ್ಮವನ್ನು [illegible] ಒಳಗೆ [illegible] ಜನರಿಗೆ [illegible] ನ್ಯಾಯ [illegible] ಇವರಿಗೆ [illegible] ತ್ಯಾಂಪನಿಗೆ [illegible]

[illegible] ಏನಾಯಿತು?' ಎಂದು [illegible] ಸೆಟ್ಟರ [illegible] ಕೇಳಿದೆ

[illegible] ಕೆಲಸಮಾಡಿ [illegible] ಕೇಳ [illegible]

ಸೆಟ್ಟರಿಗೆ ವಿಶೇಷ ಗಾಯವಾಗಿರಲಿಲ್ಲ ಬಿಟ್ಟ [illegible] ಮೊಣಕಾಲಿನ ಸಂದು ಸ್ವಲ್ಪ ಉಳುಕಿಹೋಗಿತ್ತು ಆದರೆ ಮಾದ [illegible] ಬಹಳ [illegible] ನಾನು

ಬಂದುದರಿಂದ ಅವರಿಗೆ ಸ್ವಲ್ಪ ಧೈರ್ಯ ಬಂದಿತ್ತು ಅವರು ಹೇಳಿದರು—

'ತ್ಯಾಂಪನಿಗೆ ಹೊಡೆದ ಪೆಟ್ಟು ಸ್ವಲ್ಪ ವಿಶೇಷವಾಯಿತು ಅವನು 'ದಢಾಲ್' ಎಂದು ನೆಲದ ಮೇಲೆ ಬಿದ್ದುಬಿಟ್ಟ ಎಷ್ಟೋ ಸಲ ಹೊಡೆದಿದ್ದೇನೆ, ಹೊಡೆಸಿದ್ದೇನೆ, ಎಷ್ಟೋ ಮಂದಿ ಹೆದರಿಸಲಿಕ್ಕಾಗಿ ಸುಮ್ಮನೆ ನಟನೆಮಾಡುತ್ತಾರೆ ಎಂದುಕೊಂಡು, ತ್ಯಾಂಪ ಕಣ್ಣುಹೊರಳಿಸಿ ಬಾಯಿಯಿಂದ ನೊರೆಕಾರುತ್ತಿದ್ದರೂ, ನಾನು ಕಲ್ಲೆದೆಯವನಾಗಿ ಅವನನ್ನು ನೋಡುತ್ತ ನಿಂತೆ'

'ಮುಂದೆ?'

'ದೊಡ್ಡ ಗಲಾಟೆಯೆದ್ದಿತು ಭಟ್ಟರೆ! ಎಲ್ಲಿ ಆ ಬೊಬ್ಬೆ ಕೇಳುತಲೆ ಮುಂಡೆಯನ್ನು, ಬೆಳಗಾಗಬೇಕಾದರೆ ನೋಡಿದ ದರ ಫಲ! ಕೊರಗ, ಅವನ ಹೆಂಡತಿ ಎಲ್ಲ ಬಂದು ತ್ಯಾಂಪನ ಸುತ್ತ ಹಾಕಿ ಗಲಾಟೆಮಾಡಿದರು ಅಷ್ಟರಲ್ಲಿ ಒಂದು ಗಾಂಧಿ ಜನ ಅವನು ಈಗ ಪೋಲೀಸು ಪೇಟೆಯಿಂದ ಬಂದು ಎಲ್ಲಾ ಸಂಗತಿ ಬರಕೊಂಡು ಹೋದ ತ್ಯಾಂಪನನ್ನು ಅವನು ಪೇಟೆಯ ಆಸ್ಪತ್ರೆಗೆ ಸಾಗಿಸಿದ''

ನಾನೊಂದು ನಿಟ್ಟುಸಿರು ಬಿಟ್ಟು—'ಮುಂದೇನಾಯಿತು, ಗುತ್ತಿನವರೆ? ಎಂದು ಕೇಳಿದ

'ನನಗೆ ಆಗ ದ ಸ್ವಪ್ನವಿಲ್ಲ ಮನೆಗೆ ಬಂದು ಊಟದ [illegible] ಗಿನ ವಷ್ಟರಲ್ಲಿ ಸುಬ್ಬ ಬಂದು ಹೇಳಿದ—'ತ್ಯಾಂಪ ಸತ್ತ' ಎಂದು ನನ್ನ ಎದೆ ಧಸಕ್ಕ ದಿತು ಕಣ್ಣು ಮುಂದೆ ಕತ್ತಲು ಕಾಣಿಸಿತು, ಪೇಟೆಗೆ ಹೋದೆ ಅಲ್ಲಿ ಪೋಲೀಸರ ಮೆಜಿಸ್ಟ್ರೇಟರು ಡಾಕ್ಟರು ಎಲ್ಲರನ್ನೂ ಕಾಣಿಸಿದೆ ಹೇಗಾದರೂ ಮಾಡಿ ಒದುಕಿಸಬೇಕು, ಎಲ್ಲಿ ನನ್ನ ಅಪವಾದ [illegible] ಹೇಗಾದರೂ [illegible] ಎಂದು ಅವರ ಕಾಲಿಗೆ ಬಿದ್ದು ಬೇಡಿಕೊಂಡೆ ಪ್ರಾಯೊಬ್ಬರೂ ಕೇಳುತ್ತಿದ್ದರೇ ಹೊರತು ಒಬ್ಬರಾದರೂ ನನಗಾಗಿ ಮರುಗುತ್ತಿರಲಿಲ್ಲ '

[illegible]?''

[illegible] ಗಂಟೆಯಾಗಿತ್ತು [illegible] ಮಾಡುವುದೆಂದು ತಿಳಿಯಲಿಲ್ಲ ಮೊದಲಾದರೆ ಇಂಥ ಹತ್ತುಹತ್ತು ಸಂಗತಿಗಳು ನಡೆದರೂ ನಾನು [illegible] ತಿದ್ದೆ ಈಗ ಈ ಕಾಲ ಬದಲಾಯಿಸಿದೆ ಭಟ್ಟರೆ! ನಾನ ಮನೆಗೆ ಬರುತಿದ್ದೆ '

'ಬರುವಾಗ ಕಾಲು ಜಾರಿ ಬಿದ್ದಿರಾ'

'ಹೌದು, ನನ್ನ ಮನಸ್ಸಿಗೆ ನೆಮ್ಮದಿ ಇರಲಿಲ್ಲ ಎದೆ ಡಸಡಸ ಎನ್ನುತಿತ್ತು ಕಾಲುಗಳು ನನ್ನ ಸ್ವಾಧೀನವಿರಲಿಲ್ಲ. ನಾನು ಜಾರಿ ಬಿದ್ದೆ.'

'ಪಾಪ '

'ಸ್ವಾಮಿ! ಇನ್ನಷ್ಟು ಕೇಳಿಬಿಡಿ, ಕೊರಗ ನಿಜಕ್ಕೂ ಹಾಸಿಗೆ ಹಿಡಿದಿದ್ದ; ಕೊರಗ ನಾಗನ ಸುದ್ದಿ ಕೇಳಬೇಕೆಂದು ಪೇಟೆಗೆ ಹೊರಟಿದ್ದ ಅವನೇ ನನ್ನನ್ನು ಎತ್ತಿ ಕೂತುಕೊಳ್ಳಿಸಿದ. ನನ್ನನ್ನು ಬದುಕಿಸಿದ '

'ಈಗ ಎಲ್ಲಿಗೆ ಹೋದ?'

'ನನ್ನನ್ನು ಮನೆತನಕ ಕರಕೊಂಡು ಹೋಗಲಿಕ್ಕೆ ಆಳು ತರಲು ಹೋಗಿದ್ದಾನೆ ಸ್ವಾಮಿ! ಈಗ ನನಗೆ ಗೊತ್ತಾಯಿತು, ಹೊಲೆಯ ಅವನಲ್ಲ, ನಾನು '

ನಾನು ಮಾತನಾಡಲಿಲ್ಲ

ಸ್ವಾಮಿ, ಹೊಲೆಯ ಅವನಲ್ಲ, ನಾನು, ಅವನು ಜಾತಿಯಿಂದ ಹೊಲೆಯನಾದರೆ ನಾನು ಗುಣಕರ್ಮದಿಂದ ಹೊಲೆಯ ಸ್ವಾಮಿ, ಈಗ ನನಗೆ ಗೊತ್ತಾಯಿತು '

ಅಷ್ಟರಲ್ಲಿ ಕೊರಗ ನಾಲ್ಕಾರು ಆಳುಗಳೊಂದಿಗೆ ಬಂದ ಗುತ್ತಿನವರ ಮನೆಯವರೂ ಇದ್ದರು ಎಲ್ಲರೂ ಕೂಡಿ ಸೆಟ್ಟರನ್ನು ಮನೆಗೆ ಸಾಗಿಸಿದರು

ಆಗಲೇ ಪೋಲೀಸು ಬಂದು ತ್ಯಾಂಪ ಸತ್ತ ಸುದ್ದಿಯನ್ನು ಕೊರಗನಿಗೆ ಹೇಳಿದ ಕೊರಗನ ಕಣ್ಣುಗಳಿಂದ ಎರಡು ಹನಿ ಬಿಸಿ ನೀರು ಇಳಿದು ಬಂದುದನ್ನು ಅವನು ತನ್ನ ಹರಿದ ಚಿಂದಿ ಬಟ್ಟೆಯಿಂದ ಒರಸಿಕೊಂಡ

ನಿನ್ನದು ಫಿರ್ಯಾದಿ ಇದೆಯೊ?' ಎಂದು ಪೋಲೀಸನು ಕೊರಗನನ್ನು ಕೇಳಿದ

ಕೊರಗ ಸ್ವಲ್ಪ ಹೊತ್ತು ಆಲೋಚಿಸಿ— 'ಯಾವುದಕ್ಕಾಗಿ ಫಿರ್ಯಾದಿ?' ಎಂದು ಕೇಳಿದ

'ಗುತ್ತಿನ ಸೆಟ್ಟರು ನಿನ್ನ ಮಗನನ್ನು ಹೊಡೆದ ಕೊಂದರು'

'ಇಲ್ಲ, ಅವರು ಹೊಡೆಯಲಿಲ್ಲ, ಕೊಲ್ಲಲಿಲ್ಲ ನನ್ನ ಪ್ರಾರಬ್ಧ ಅವನು ಬಿದ್ದು ಸತ್ತ!' ಎಂದ ಕೊರಗ ಹೇಳಿದ

ನನಗಿಲ್ಲಿಗೆ ಆಶ್ಚರ್ಯವಾಯಿತು

ನಾಗರಾಜಸೆಟ್ಟರು ಹೇಳಿದರು 'ಸ್ವಾಮಿ, ಆಶ್ಚರ್ಯ ಯಾಕೆ? ಕೊರಗ ಅಂದರೆ ಅವನು ಹೊಲೆಯನಲ್ಲ, ಅವನು ನರಪುಂಗವ!

ಎಂದು ಸೆಟ್ಟರು ಸರಸರನೆ ಇಳಿದು ಬಂದ ಇಳಿದು ತಮ್ಮ ಗಳಲ್ಲಿ ಎಂಥ ಕೊರಗನನ್ನು ಅಪ್ಪಿಕೊಂಡರು ಕೊರಗನು ಧಾರೆಕಟ್ಟಿ ಕಣ್ಣೀರು ಸುರಿಸುತ್ತ ಸೆಟ್ಟರ ಆಲಿಂಗನದಿಂದ ಬಿಡಿಸಿಕೊಳ್ಳುವಾಗ—ಹಾಯ್ ಸೆಟ್ಟರ ಜೀವದ ಮೇಲೆ ಮಲಗಿದರು ಅವರ ಪ್ರಾಣಪಕ್ಷಿ ಹೃದಯಗೂಡಿನಿಂದ ಹಾರಿಹೋಗಿತ್ತು

---


ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಉತ್ತರಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳಿಗೆ ಎರವಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನು ಗಮನಿಸಿ

ಇಂದಿನ ಅಪ್ರತಿಮ ಔಷಧ ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನು ಉಪಯೋಗಿಸಿ ನೋಡಿರಿ ಎಷ್ಟೋ ದೀರ್ಘಕಾಲದಿಂದ ಅನುಭವಿಸಿ ಬಂದ [illegible] ಗೊನೊಕಿಲರ್, ಸ್ತ್ರೀಪುರುಷರ ಎಲ್ಲ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ [illegible] ಪ್ರಮೇಹ (ಎಷ್ಟೇ ಹಳೆಯ [illegible]), ನೋವು ಮೂತ್ರದಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ತಡೆಯುವಿಕೆ, [illegible] ದಿಂದ ಬರುವ ಇತರ ರೋಗಗಳ [illegible] ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 8-0-0 (ಮೂರು) ವಿ ಪಿ ಖರ್ಚು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer Dr D N JASANI, Vithalbhai Patel Road, BOMBAY 4

# ದುರಾಗ್ರಹ

(ಒಂದು ದೃಶ್ಯ)

ಬರೆದವಳು: ಶೀಲಾವತಿ

(ಮೊದಲು ಮಾತು—ಕಂಡುದನ್ನು, ಕೇಳಿದ್ದನ್ನು, ಕೆಲವೆಡೆಗಳಲ್ಲಿ ಹಾಗೆಯೇ, ಕೆಲವೆಡೆಗಳಲ್ಲಿ ಉಪ್ಪು ಕಾರ ಹಚ್ಚಿ, ಈ ರೂಪವನ್ನು ಕೊಟ್ಟಿದ್ದೇನೆ. ಸಮಾಜದಲ್ಲಿ ಕಾಣಬರುವ ಹುಳುಕು—ಕೊಳಕುಗಳನ್ನು ಎತ್ತಿ ಹಿಡಿದು ಅದನ್ನು ವಿಡಂಬನೆಗೆ ಅವಹೇಳನೆಗೆ ಗುರಿಪಡಿಸಿ ಜನರು ಉತ್ತಮ ಪಥವನ್ನು ಹಿಡಿಯುವಂತೆ ಮಾಡುವುದು ನನ್ನೀ ಲೇಖನದ ಉದ್ದೇಶ. ಇದನ್ನು ಯಾರ ಕುರಿತಾಗಿಯೂ ಬರೆದಿಲ್ಲ. ಆದರೆ ಹಲವರಿಗೆ ಇದು ತನ್ನ ವಿಷಯವೋ ಎಂದು ಸಂಶಯ ಹುಟ್ಟಲೂಬಹುದು. ಅವರ ಮನಸ್ಸನ್ನು ನಾನು ಆಗ ನೋಯಿಸಬೇಕಾದೀತು. ತಪ್ಪು ನನ್ನದಲ್ಲ. ಅವರದು.)

ರಾಮಣ್ಣ—ಕಾಂಗ್ರೆಸು ನಮ್ಮದು. ಕಾಂಗ್ರೆಸು ಉಮೇದ್ವಾರರಿಗೆ ಮತಕೊಡಬೇಕು ಎಂದು ಯಾರಾದರು ತಲೆಹೋಕರು, ಜೀವನದ ಹೋರಾಟದಲ್ಲಿ ಧಡಕಾಣದೆ ಅಂಡಲೆಯುವ ಹುಚ್ಚರು ಊರೂರು, ಮನೆ ಮನೆ ಬಂದು ಗಂಟಲೊಡೆಯುವಂತೆ, ದೊಂಡೆಯೊಣಗುವಂತೆ ಬೊಬ್ಬೆ ಹೊಡೆದರೆ, ಕಾಂಗ್ರೆಸು ಸರಕಾರ ಬಂತೆಂದ್ರೇ ಬಂದೀತು ಭೂರೀ ಭಾಗ್ಯ ಎಂದು ಭಾವಿಸಿಕೊಂಡು ಈ ಮರುಳರು ಮತದಾನ ಮಾಡಲಿಕ್ಕೆ, ಅನಂತರ ಅವರು ಅಧಿಕಾರ ಸ್ವೀಕಾರ ಮಾಡಲಿಕ್ಕೆ ಈ ತಲೆಹೋಕರ ಕಾರುಭಾರ ಎಲ್ಲವನ್ನೂ ಈಗ ಚೆನ್ನಾಗಿ ಅನುಭವಕ್ಕೆ ತಂದುಕೊಡುತ್ತದೆ.

ಭೀಮಣ್ಣ—ಕಾಂಗ್ರೆಸು ಸರಕಾರ ಬರುವುದಕ್ಕೆ ಮುಂಚೆ ಬದುಕಿರುವುದಕ್ಕೆ, ಸುಖದಿಂದಿರುವುದಕ್ಕೆ ಮೋಸವಿರಲಿಲ್ಲ. ಈಗ ಅದಕ್ಕೂ ಧಕ್ಕೆ ಬಂತು. ನಮಗಿನ್ನು ಉಳಿಸಿಕೊಳ್ಳುವುದಕ್ಕೆ ಜಾಗವಿಲ್ಲವಾಗಿ ಬಿಡುತ್ತೆ.

ರಾಮಚಂದ್ರ—ಎಲ್ಲ ಆ ಕಲಿ ಪುರುಷನ ಪ್ರಭಾವ. ಅವನ ಮಾತಿಗೆ ಊರಿಗೆ ಊರೇ, ದೇಶಕ್ಕೆ ದೇಶವೇ ಎದ್ದುಬಿಡುತ್ತದೆ. ಅವನೊಬ್ಬ ಕ್ರಾಂತಿಕಾರ ಹುಟ್ಟಿ ಜಗತ್ತನ್ನೇ ಕ್ರಾಂತಿಮಯವನ್ನಾಗಿ ಮಾಡಿಬಿಟ್ಟ, ಅವನಿಗೋ ಯಾವುದೂ ಬೇಡ. ಎಲ್ಲರೂ ತನ್ನಂತೆ ಆಗಿಬಿಡಲಿ ಎಂದು ಅವನ ಮತ. ಮಹಾತ್ಮ ಎಂದು ತಿಳಿದು ಅವನ ತಾಳಕ್ಕೆ ಸರಿಯಾಗಿ ಕುಣಿಯುತಕ್ಕ ಕುರಿಗಳಿವು. ಮರ್ಯಾದೆಯನ್ನು ಮಾರದಿದ್ದರೆ ಜೀವನಕ್ಕೆ ಬೇರೆ ದಾರಿಯಿಲ್ಲ.

ತಿಮ್ಮಪ್ಪ—ದೇಶಕ್ಕೆ ದೇಶವೇ ದೇಶೋದ್ಧಾರಕ ಎಂದು ಹೇಳುತ್ತದೆ ನಿಮಗೆ ಮಾತ್ರ ಅವರು ನೀಚರಾಗುವುದೆಂದರೆ ಅರ್ಥವೇನು ರಾಯರೇ? ಮರುಳರು ಜನರೋ ಅಥವಾ ನೀವೋ?

ಭೀಮಣ್ಣ—ನಾಲಿಗೆ ಹಿಡಿದು ಮಾತನಾಡು.

ರಾಮಣ್ಣ—ಸಂಭಾವಿತನ ಹಾಗೆ ಮಾತನಾಡಬೇಡ. ಹರಿಜನೋದ್ಧಾರ ಎಂದು ಹೇಳೀರಲ್ಲ ಅದಕ್ಕೇನು ತುದಿ ಬುಡ ಇದೆಯೇ? ಹೊಲೆಯರನ್ನು ಮುಟ್ಟಿಸಿಕೊಳ್ಳುವುದರಿಂದ ಸಿಗುವ ಲಾಭವೇನು, ಮುಟ್ಟಿದ ಮಾತ್ರದಿಂದ, ಅವನೊಡನೆ ಉಂಡ ಮಾತ್ರದಿಂದ ಉದ್ಧಾರವಾಯಿತೇನು? ಹೊಲೆಯರನ್ನು ಮುಟ್ಟು ಎಂದು ಯಾವ ಶಾಸ್ತ್ರದಲ್ಲಿ ಹೇಳಿದೆ? ಪುರಾತನ ಕಾಲದಿಂದ ನಡೆದುಕೊಂಡು ಬಂದ ಆಚರಣೆಯನ್ನು ಮೀರುವುದು ಎಂದರೆ, ಅದಕ್ಕೇನು ಅರ್ಥವಿದೆಯೇ?

ತಿಮ್ಮಪ್ಪ—ಮೊನ್ನೆ ಯಾರೋ ಒಬ್ಬರು, ಅವರ ಹೆಸರು ಮರೆತು ಹೋಯಿತು ಪರಂಪರಾನುಗತವಾಗಿ ಗುರುಗಳು ಎಂದು ಪೂಜಿಸುತ್ತ ಬಂದ ಸ್ವಾಮಿಗಳ ಮೇಲೆ ಮಾನನಷ್ಟದ ದಾವೆ ಹೂಡಿದರು ಎಂದು ನೀವು ಹೇಳಿದಿರಲ್ಲ. ಅವರು ಮಾಡಿದ ಕಾರ್ಯ ಸರಿ ಎಂದು ನೀವು ಹೇಗೆ ಸಮರ್ಥಿಸಿದಿರಿ. ಗುರುಗಳ ಮೇಲೆ ಮಠಾಧಿಪತಿಗಳ ಮೇಲೆ ಮಾನನಷ್ಟದ ದಾವೆ ಹೂಡುವುದು ಅದಕ್ಕೇನು ಅರ್ಥವಿದೆಯೇ? ಅದಾವ ಶಾಸ್ತ್ರದಲ್ಲಿ ಬರೆದಿದೆ ರಾಮಣ್ಣಯ್ಯ?

ಭೀಮಣ್ಣ—ತಪ್ಪು ಎಂದು ಕಂಡುಬಂದರೆ ಯಾರಾದರೇನು? ಶಿಕ್ಷಿಸಲೇ ಬೇಕು. ಯಾವ ಕಾನೂನನ್ನೂ ಉಲ್ಲಂಘಿಸಬೇಕು.

ವೆಂಕಪ್ಪಯ್ಯ—ಅದು ಇದಕ್ಕೆ ಅನ್ವಯಿಸುವುದಿಲ್ಲವೇನು?

ರಾಮಚಂದ್ರ—ಇದಕ್ಕೆ ಅಂದರೆ....?

ವೆಂಕಪ್ಪಯ್ಯ—ಮಹಾತ್ಮರ ಹರಿಜನೋದ್ಧಾರದ ಕೆಲಸಕ್ಕೆ ಹರಿಜನರನ್ನು ದೂರಿಡುವುದು ತಪ್ಪು ಎಂದು ಅವರಿಗೆ ಕಂಡಿತು ಆದ್ದರಿಂದ ಉದ್ಧಾರದ ಕೆಲಸಕ್ಕೆ ಹೊರಟಿದ್ದಾರೆ.

ಭೀಮಣ್ಣ—ಲೋಕಸಮ್ಮತವಾಗಬೇಡವೇ?

ವೆಂಕಪ್ಪಯ್ಯ—ಮಠದವರ ಮೇಲೆ ಹೂಡಿದ ಮಾನನಷ್ಟದ ದಾವೆ, ಅದೂ ಲೋಕಸಮ್ಮತವೋ? ದಾವೆ ಹೂಡಿದ ಐತಾಳರಿಗೆ, ಸಮರ್ಥಿಸುವ ನಿಮಗೆ ಅವರದು ಸರಿ ಎಂದು ಕಂಡು ಬಂದರೂ ನಾವು ಹಾಗೆ ತಿಳಿಯುವುದಿಲ್ಲ.

ಭೀಮಣ್ಣನ ಹೆಂಡತಿ—(ಬಂದು) ಊಟಕ್ಕಾಯಿತು.

ಭೀಮಣ್ಣ—ನಿಮಗೆ ಹೆಂಗಸರಿಗೆ ಸಮಯ ಸಾರಿ ಯಾವುದೂ ಇಲ್ಲ. ಮಾತಿನ ಮಧ್ಯೆ ಬಂದು ಏನಾದರೂ ಹೇಳುವುದು. ಹಸಿವೆಯಾಗಿದ್ದರೆ ನಾವೇ ಬರುತ್ತೇವಲ್ಲ. ನೀವೇ ಬರಬೇಕೇನು? ಹೇಳಬೇಕೇನು? ಅಣ್ಣ, ಕೆಳಗಿನ ಮನೆ ಚತ್ತಣ್ಣ ಬಂದು ಬಡ್ಡಿ ತೆತ್ತು ರಶೀದಿ ತಕ್ಕೊಂಡು ಹೋದರೋ?

ರಾಮಣ್ಣ—ಬರಲೇ ಇಲ್ಲ. ಬಂದಾದರೂ ಹೋಗಲಿ ಎಂದು ದೂಮಣ್ಣನನ್ನು ಕಳಿಸಿದ್ದೆ. ನಮಗೆ ಉಳಿಗಾಲವಿಲ್ಲ. ನಮ್ಮ ಹಣದ ಮೇಲೆ ಎಲ್ಲರದೂ ಕಣ್ಣು. ಇನ್ನು ಆ ಹಾಳು ಸಾಲ ರಿಯಾತಿ ಮಸೂದೆ ಬಂತೆಂದರೆ...?

ರಾಮಚಂದ್ರ—ಗುಡ್ಡೆಯವರದು?

ಭೀಮಣ್ಣ—ಕೊಡುತ್ತೇನೆ ಎಂದಿದ್ದಾರೆ.

ತಿಮ್ಮಪ್ಪ—ಅವರು ಬಿಲ್ ಪಾಸಾದರೂ ಕೊಡುತ್ತೇನೆ ಎಂದಿದ್ದರೆ ಯಾರಿಂದಲೂ ನಿಮಗೆ ಬಡ್ಡಿ ವಸೂಲು ಮಾಡಬಹುದು.

ರಾಮಚಂದ್ರ—ಪಾಸಾಗುತ್ತದೆ ಎಂದು ಹೇಗೆ ಹೇಳುವುದು? ಸಿಲೆಕ್ಟ ಕಮಿಟಿಗೆ ಬಿಟ್ಟು ಕೊಟ್ಟಿದ್ದಾರಲ್ಲಾ!

ಭೀಮಣ್ಣ—ಪಾಸಾಗದೆ ಎಲ್ಲಿ ಹೋಗುತ್ತದೆ. ಅಲ್ಲಿರುವುದಾರು? ಸಾಲದಲ್ಲಿ ಕೊಳೆಯುತ್ತಿರುವ ಹುಳುಗಳು. ಒಬ್ಬರಿಗೆ ಮೂವತ್ತೈದೋ ಮೂವತ್ತಾರೋ ಇದೆಯಂತೆ. ಮತ್ತೊಬ್ಬರಿಗೆ ಎಳೆಂಟು ಸಾವಿರವಂತೆ. ಇನ್ನುಳಿದವರಿಗೆ ಎಷ್ಟೆಷ್ಟು ಉಂಟೋ? ಅಂತೂ ಯೋಗ್ಯರೆಂಬವರು ಅಲ್ಲಿಲ್ಲ.

ರಾಮಣ್ಣ—ಇಂದು ಬಡ್ಡಿಯಲ್ಲಿ ರಿಯಾತಿ ನಾಳೆ ಅಸಲಿನಲ್ಲೇ? ಹೋದರೆ ನಮ್ಮ ನಿವೃತ್ತ ಹರಿಗೆ ಚಕ್ಕರ್ ಬಂತು ಭಾವ! ಅವರ ಕೈಯಿಂದೇನು ಖರ್ಚಾಗುತ್ತಿದೆ? ನಮ್ಮ ಬೆವರಿಳಿಸಿ ಸಂಪಾದಿಸಿದ ಹಣದ ಮೇಲೆ ಅವರ ಕಣ್ಣು. ಬುದ್ಧಿಯಿಲ್ಲದವರು ಅಧಿಕಾರಕ್ಕೆ ಬಂದರೆ ಆಗುವ ಅನರ್ಥವಿದು. ಅವರಿಗೋ ಚಕ್ಕಾಸು ಕೈಯಲ್ಲಿಲ್ಲ. ಇದ್ದುದನ್ನು ಕಳಕೊಂಡಿದ್ದಾರೆ.

ರಾಮಚಂದ್ರ—ಆ ಸಲ ನ್ನೂ ಕೊಡುವುದು ಬೇಡವೆಂದು ನೀವು ಒಂದು ಬಿಲ್ ಪಾಸು ಮಾಡಲಿಕ್ಕಿಲ್ಲವೆಂದು ಹೇಗೆ ಹೇಳುವುದು ಎಂದು ಯಾರೋ ಮಂತ್ರಿಗಳನ್ನು ಪ್ರಶ್ನಿಸಿದರಂತೆ. ಮಾತಿಲ್ಲವಂತೆ! ಹಾಗೊಂದು ಬಿಲ್ ಬರಬೇಕು. ಅನಂತರ ಭಾವ ನಮಗೆ ಗೇಟ್, ಕೋಲೇಗತಿ. ಏನು ಮಾಡುವುದು? ಕಲಿಪುರುಷನ ಮಹಾತ್ಮೆ.

ವೆಂಕಪ್ಪಯ್ಯ—ನಿಮಗೆ ಬುದ್ಧಿ ಇಲ್ಲವೆಂದು ಹೇಳಿದ್ದು ಅದಕ್ಕೇ. ಮಹಾತ್ಮರು ಬದುಕಿದ್ದರೆಂದೇ ನೀವೆಲ್ಲ ಹೀಗಿದ್ದೀರಿ. ಅವರಿಲ್ಲವಾಗಿದ್ದರೆ ಸಮತಾವಾದಿಗಳ ಸಂಖ್ಯೆ ಬೆಳೆದು, ಬೆಳಕಿಗೆ ಬಂದು, ಆ ತಕ್ಕದೆ ಪ್ರಚಾರವಾಗಿ ನಿಮ್ಮಂತಹ ಧನಿಕರ ಭಂಡವಾಳಕ್ಕೇ ಕೊಡಲಿ ಯೇಟು ಹಾಕುತಿದ್ದರು. ಓಡುವ ಕುದುರೆಗಳನ್ನು ತಡೆದು ನಿಲ್ಲಿಸಿದವರು ಅವರು. ಅವರಿದ್ದ ಕಾರಣ ನೀವು ಇದ್ದೀರಿ. ಇಲ್ಲವಾಗಿದ್ದರೆ ನಮ್ಮ ಸ್ಥಿತಿಯೇ ನಿಮಗೂ.

ರಾಮಣ್ಣ—ದೇಶಬಂಧು, ಹೇ ದೇಶದ್ರೋಹಿ! ತಪ್ಪು, ಆ ಚಿತ್ರತಾ.

/(ಭೀಮಣ್ಣ—ಒಳಗೆ ಹೋಗಿ ಮಹಾತ್ಮರ ಚಿತ್ರವನ್ನು ಹೊರಕ್ಕೆ ತರುವನು. ಚಿತ್ರಕ್ಕೆ ಮಸಿ ಬಳಿದಿದೆ. ಹಿಂಬದಿಯಲ್ಲಿ ದೊಡ್ಡ ಅಕ್ಷರಗಳಲ್ಲಿ ದೇಶದ್ರೋಹಿ ಎಂದು ಕನ್ನಡದಲ್ಲಿ, Traitor ಎಂದು ಇಂಗ್ಲಿಷಿನಲ್ಲಿ ಬರೆದಿದೆ.)

ಈ ಚಿತ್ರ ನೋಡಿದರೆ ಗಂಜಿ ಸಿಗದು. ಆದ ಕಾರಣ ಮುಖ ಕಾಣಬಾರದು ಎಂದು ಮಸಿ ಬಳಿಸಿದ್ದೇನೆ. ಎಲ್ಲರೂ—(ನಗುವರು)

ರಾಮಣ್ಣ—ನಾವು ಧನಿಕರು ಒಟ್ಟಾದರೆ ಯಾರೇನು ಮಾಡಿಯಾರು? ಯಾವ ಬಿಲ್ಲಿನಿಂದೇನಾದೀತು, ಬಡವರು ಕಾಲಬುಡಕ್ಕೆ ಬಾರದೇನು ಮಾಡಿಯಾರು? ಹಸಿವು ತೃಷೆ ಇದ್ದರೆ—ಅದನ್ನು ತಣಿಸಬೇಕಾದರೆ—ನಮ್ಮ ಕಾಲಿಬುಡಕ್ಕೆ ಬರಬೇಕು ಅದು ನಿಮಗೇನು ಗೊತ್ತು?

ವೆಂಕಪ್ಪಯ್ಯ—ಅದು ನಿಮ್ಮ ತಪ್ಪು ಭಾವನೆ. ಬದುಕುವುದಕ್ಕೆ ಬೇಕಾದ್ದು ಹಣವಲ್ಲ. ಬಡವರಿಲ್ಲದಿರುತಿದ್ದರೆ ನಿಮಗೆ ಹಣವೆಲ್ಲಿಂದ ಬರುತ್ತಿತ್ತು. ಬಡವರೆಲ್ಲ ಒಂದಾಗಿ ನಿಮ್ಮ ಹಣ ಬೇಡವೆಂದು ಸುಮ್ಮನೆ ಕುಳಿತರೆ ನಿಮ್ಮನ್ನಾರು ಕೇಳಬೇಕು? ನಿಮ್ಮ ಹಣವನ್ನಾರು ಮೂಸಬೇಕು?

ಭೀಮಣ್ಣ ನಮ್ಮ ಹಣ? ಅದಕ್ಕಿನ್ನು ಬೆಲೆಯಿಲ್ಲವೇನು?

ವೆಂಕಪ್ಪಯ್ಯ—ಹಣದಿಂದೇನು ಮಾಡುವುದಕ್ಕೆ ಬರುತ್ತೆ ಜನರ ಬೆಂಬಲವಿಲ್ಲದಿದ್ದರೆ ಜನರ ಸುಳಿವಿಲ್ಲದ ದ್ವೀಪ ಒಂದರಲ್ಲಿ ಬೇಕಾದಷ್ಟು ಹಣ ಸುರುವಿ ನಿಮ್ಮನ್ನು ಮಾತ್ರ ಬಿಟ್ಟರು ನೀವೇನು ಮಾಡುವಿರಿ? ಏನು ಮಾಡಲಾದೀತು? ಅದರ ಕಲ್ಪನೆ ಮಾಡಿಕೊಳ್ಳಿ. ಬದುಕುವುದು ಸಾಧ್ಯವೇ? ಬದುಕಬೇಕೆಂಬ, ಸುಖಪಡಬೇಕೆಂಬ ಆಸೆ ದೊಡ್ಡದು. ಆದರೊಡನೆ ಇತರರೂ ಬದುಕಲಿ, ಸುಖಪಡಲಿ. ಏಕೆ? ಮಾಡಲೇಬೇಕು? ರಾಮಣ್ಣ, ಹಣದ ಕಾಲ ಹೋಯಿತು. ಹಣಕ್ಕೆ ಮಣಿಯುವ ಕಾಲ ದೂರವಾಯಿತು. ಬರುವುದು ಬಡವರ ಕಾಲ. ದುಡಿತ ಕಾಲ.

# ಸುಭಾಷಚಂದ್ರರ ಸಂದೇಶ

## ಕೊಂಗ್ರೆಸು ಎಷ್ಟು ಕಾಲ ತಾನೆ ಅಧಿಕಾರ ನಿರ್ವಹಿಸುವುದು?

ಭಾರತ ವರ್ಷದ ನಂಟು ಜಗತ್ತಿಗಿದೆ. ಸ್ವಾತಂತ್ರ್ಯಕ್ಕಾಗಿ ಸಮಾಜಶಾಹಿಗಾಗಿ ಪ್ರಜಾಸತ್ತೆಗಾಗಿ ಕೊಂಗ್ರೆಸು, ಜಗತ್ತಿನ ಆವಶ್ಯಕತೆಯನ್ನರಿತೇ, ತಾನೂ ಇವುಗಳಿಗ್ಗಾಗಿ ಚಳವಳಿಸಲು ಸಿದ್ಧವಾಗಿದೆ. ಚೀನಾ, ಸ್ಪೈಯಿನು, ಅಬಿಸೀನಿಯ, ಇಂಡಿಯಾ ಇವುಗಳಲ್ಲಿನ ಸದ್ಯಸ್ಥಿತಿಯನ್ನರಿತರೆ ಇದು ಅತ್ಯಾವಶ್ಯಕವಾಗಿ ಕೊಂಗ್ರೆಸಿಗೆ ತೋರುತ್ತಿದೆ. ಭಾರತ ವರ್ಷವು ಜಗತ್ತಿನಿಂದ ದೂರವಾಗಿ ಪ್ರತ್ಯೇಕವಾಗಿ ಇರಲಾರದು.

ಇಂಗ್ಲೆಂಡಿನಲ್ಲಿ ನನಗೆ ತೋರಿದ ಮಟ್ಟಿಗೆ, ಭಾರತ ವರ್ಷದಲ್ಲಿ ಕಾಂಗ್ರೆಸು ಅಧಿಕಾರ ವಹಿಸಿ ಏನು ಮಾಡಬಹುದು ಎಂಬ ಪ್ರಶ್ನೆಗೆ ನಾನಾ ಉತ್ತರಗಳು ಸಿದ್ಧವಾಗುತ್ತಿವೆ. ಜನಾಂಗದ ಹಿತವು ಎಷ್ಟು ದಿನ ಅಭಿವೃದ್ಧಿಗೆ ಬರಬಹುದೋ ಅಷ್ಟು ಕಾಲಕ್ಕೆ ಕೊಂಗ್ರೆಸು ಅಧಿಕಾರ ನಿರ್ವಹಿಸುವುದು. ಮಂತ್ರಿಗಳು ಕರ್ತವ್ಯ ಪರಾಯಣರಾಗಿಯೆ ಇರುವಂತೆ ಕೊಂಗ್ರೆಸು ಕಾರ್ಯಕಾರೀ ಮಂಡಲವು ಎಚ್ಚರ ನೋಡುವುದು. ಇದಕ್ಕೆ ಯಾವಾಗ ಸರಿತೋರದಾಗುವುದೋ ಆಗ ಮಂತ್ರಿಗಳು ರಾಜೀನಾಮೆ ಕೊಡುವದು.

ಪ್ರಾಂತಿಕ ಸ್ವರಾಜ್ಯ ಮತ್ತು ಫೆಡರೇಶನು ಇವುಗಳಿಗೆ ಹೋಲಿಕೆಯೆ ಇಲ್ಲ. ಕೊಂಗ್ರೆಸು ಪ್ರಾಂತಿಕ ಸ್ವರಾಜ್ಯ ನಿರ್ವಹಿಸಿಯದೆ ನಿಜ; ಫೆಡರೇಶನಿಗೆ ಒಪ್ಪದು. ಅದರಲ್ಲಿ ಯಾವ ವಿಶ್ವಾಸವನ್ನೂ ಕಾಣುವ ಕೊಂಗ್ರೆಸ್ ಮೆಂಬರನೊಬ್ಬನೂ ಇಲ್ಲ.

ಸರಕಾರವು ಫೆಡರೇಶನಿನ ವಿಷಯ ಹೇಗೆ ಭಾವಿಸುವುದೋ ಅದನ್ನು ಹೊಂದಿಕೊಂಡು ಕೊಂಗ್ರೆಸು ಮುಂದೆ ತನ್ನ ಕಾರ್ಯಕ್ರಮ ತಿದ್ದುವುದು. ಈ ಹೋರಾಟವು ಪ್ರಯತ್ನಗಳೂ ಮುಂದೆ ಸಾಗತಕ್ಕವಾಗಿವೆ. ಕೊಂಗ್ರೆಸಿನ ಇಂದಿನ ಮುಂದಾಳುಗಳು ತಪ್ಪಿದಲ್ಲಿ, ಇತರರನ್ನು ಭಾರತವರ್ಷವು ಮುಂದೆ ತರುವುದು ನಿಶ್ಚಯ.

ತಾವು ಕೊಟ್ಟ ಸುಧಾರಣೆಗಳು ಜಯ ಹೊಂದಿದುವೆಂದು ಸುಮ್ಮನೆ ಸಾಮ್ರಾಜ್ಯವಾದಿಗಳು ಈಗ ಹೇಳುತ್ತಿರುವುದರಲ್ಲಿ ಅರ್ಥವೇ ಇಲ್ಲ.

## ಕೊಂಗ್ರೆಸಿಗೆ ಬೇಕಾದುದೇನು?

ಪೂರ್ಣ ಸ್ವಾತಂತ್ರ್ಯ—ಮತ್ತು ನಾವೇ ತಯಾರಿಸುವ ರಾಜಕೀಯ ಅಂಗರಚನೆಯ ಏರ್ಪಾಡು. ಯಾರೂ ಈಗಣ ಸರಕಾರದೊಡನೆ ಹೋರಾಡಲಿಚ್ಛಿಸುವುದೇ ಇಲ್ಲ—ಬರೀ ಹೋರಾಟಕ್ಕಾಗಿ ವ್ಯಾತ್ರ. ಆದರೆ, ನಮಗೆ ಬೇಕಾಗಿರುವುದು ಕ್ರಮವಾಗಿ ದೊರೆತರೆ ಯಾವ ಹೋರಾಟವೂ ಇಲ್ಲವಾಗುವುದು, ಅಷ್ಟೆ.

ಮಂತ್ರಿಗಳು ಕಾರ್ಯಾರಂಭಮಾಡಿದುವರು; ತೃಪ್ತಿಕರನಾಗಿಯೆ ಇದುವರೆಗೆ ಕಾರ್ಯ ನಿರ್ವಹಿಸಿರುವರು. ಆದರೆ, ಇದರಿಂದ ಕೊಂಗ್ರೆಸಿನ ಸೇರಿರುವ ಸಮಸ್ತ ಪಂಗಡಗಳಿಗೆ ಬೇಕಾದುದೆಲ್ಲ, ಅವರು ನಿರೀಕ್ಷಿಸಿದುದೆಲ್ಲ ದೊರೆತಿಲ್ಲ. ಆದುದರಿಂದ ಅಧಿಕಾರ ಸ್ವೀಕರಿಸಿದುದು ಸಹ ಶಾಶ್ವತವಲ್ಲ. ಮುಂದೆ ಸುಧಾರಿಸಲಾರದಾದರೆ, ಕೂಡಲೆ ಅವರು ತಮ್ಮ ಕಾರ್ಯಕ್ರಮದಂತೆ ರಾಜೀನಾಮೆ ಕೊಡುವರು. ಇದೊಂದು ವರುಷದ ತರುವಾಯ ಎಲ್ಲ ವಿಮರ್ಶೆ ನಡೆವುದು. ಅದರ ಪರಿಣಾಮದಂತೆ ಮುಂದೆ ಏರ್ಪಾಡು.

1930ರಲ್ಲಾದ ಚಳವಳವು ಮತ್ತೊಮ್ಮೆ ತಲೆದೋರದಂತಾದೀತೆನ್ನಬಹುದಾದರೂ, ಪ್ರಬಲ ದೋರೀತೋ ಎಂದೂ ಭಯವಿದೆ. ಬ್ರಿಟಿಷ ಸರಕಾರವು ಹೇಗೆ ವರ್ತಿಸುವುದೋ ನೋಡಿ ಮುಂದೆ ಕಾರ್ಯಕ್ರಮ. ನಮ್ಮ ರಾಜ್ಯಾಂಗವನ್ನು ನಾವೇ ರಚಿಸುವೆವೆನ್ನುತ್ತೇವೆ. ಬ್ರಿಟಿಷ ಸರಕಾರವು ಒಪ್ಪಿದರೆ ಎಲ್ಲವೂ ಸುಗಮ. ಹಾಗಾದಲ್ಲಿ, ನಮಗೆ ಬ್ರಿಟಿಷರಂತಹ ಮಿತ್ರರೇ ಇರರು.

ಚೀನಾದೊಡನೆ ನಮ್ಮ ಸಹಾನುಭೂತಿ ಇದೆ. ಸ್ವತಂತ್ರಭಾರತವು ಬ್ರಿಟಿಷರ ಸ್ನೇಹ ಬಂಧನದಿಂದ ಬಲಗೊಳ್ಳುವುದರಲ್ಲಿ ಆತಂಕವಿಲ್ಲ. ಆದರೆ, ವ್ಯಾಪಾರ ವಿಷಯಗಳಲ್ಲಿ ಬ್ರಿಟಿಷರೇ ಮೇಲ್ಮೈಯಾಗಿರುವ ಪ್ರಯತ್ನಗಳನ್ನು ನಾವು ಮೆಚ್ಚುತ್ತಿಲ್ಲ.

ಒಟ್ಟಾವಾ ಕರಾರೂ ಹಾಗೆಯೆ. ನಾವೂ ಆ ವಿಷಯ ಎರಡು ಮಾತು ಹೇಳಲಿಕ್ಕಿದೆ. ಅದನ್ನೊಪ್ಪದೆ ಹೋದರೆ, ಕರಾರರನ್ನು ಕೊಂಗ್ರೆಸು ನಿರಾಕರಿಸಬೇಕಾದೀತು.

ಜಂಜಬಾರಿನ ಲವಂಗದ ಬಹಿಷ್ಕಾರಕ್ಕೂ ಕಾರಣವಿಷ್ಟೆ. ನಾವು ಸ್ವತಂತ್ರರಾಗಿದ್ದಲ್ಲಿ ಜಂಜಬಾರು ಎಂದೇ ನಮ್ಮ ಮಾತಿಗೆ ಕಿವಿಗೊಡುವಂತೆ ಒತ್ತಾಯನಾಡಬಹುದಾಗಿತ್ತು.

ಲೇಬರ್ ಪಕ್ಷದಲ್ಲೂ ನಮಗೆ ವಿಶ್ವಾಸವಿಲ್ಲ. ಆದರೆ ಲೇಬರ್ ಪಕ್ಷದವರು ಭಾರತವರ್ಷದ ವಿಷಯ ಸಾಕಷ್ಟು ತಿಳಿವಳಿಕೆ ಹರಡಿಸುತ್ತಿರುವುದು ಸಂತೋಷ. ಯಾವ ಬ್ರಿಟಿಷ ಪಕ್ಷದಲ್ಲೂ ನಮಗೆ ಭರವಸೆಯಿಲ್ಲವಾಗಿದೆ. ನಮ್ಮೊಳಗಣ ಮೈತ್ರಿ ಶಾಶ್ವತವಾಗುವಂತೆ ಪ್ರಯತ್ನಿಸಿರಿ 20–30 ವರ್ಷಗಳಿಂದ ನಮ್ಮನ್ನು ಪ್ರತ್ಯೇಕವಿರಿಸಿರುವುದು ಹಾನಿಕರವಾಗಿದೆ. ಜಗತ್ತಿಗೂ ನಮಗೂ ಸಂಪರ್ಕವೇ ಇಲ್ಲವೆ? ಭಾರತ ವರ್ಷದ ಸಮಸ್ಯೆ ಮುಗಿಯಲು ಇನ್ನೂ ಎಷ್ಟೋ ಕಾಲ ಬೇಕಾಗಿದೆ.

ಕೊಂಗ್ರೆಸ್ ಮಂತ್ರಿಗಳು ಕಾರ್ಯಭಾರ ನಡಿಸುವಾಗ, ಹೆಚ್ಚಿನ ಪ್ರಯೋಜನಗಳು ಉಂಟಾಗುವ ಹಾಗೆ, ಕೇಂದ್ರ ಸರಕಾರವು ಹಣ ಕೊಡಬೇಕಾಗಿದೆ. ಹಣದ ಅಭಾವದಿಂದ ಮುಂದರಿಸುವುದು ಕಷ್ಟವಾಗಿದೆ.

### ಮದ್ರಾಸಿನ
## ಸಂಯುಕ್ತ ಗೌಡಸಾರಸ್ವತ ಸಭಾ ರಜತೋತ್ಸವ ಸಮಾರಂಭ

(ನಮ್ಮ ಮದ್ರಾಸಿನ ಬಾತ್ಮಿದಾರರಿಂದ).

ಮದ್ರಾಸಿನ ಗೌಡಸಾರಸ್ವತ ಸಭೆಯ ರಜತೋತ್ಸವವು ಮೊನ್ನೆ ತಾ. ೧೯ರಲ್ಲಿ ಸಾಯಂಕಾಲ ಮದ್ರಾಸಿನ ಹೈಕೋರ್ಟಿನ ಜಸ್ಟಿಸರಾದ ಶ್ರೀಮಾನ್ ಕೆ. ಪಿ. ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಾರಂಭಕ್ಕೆ ಸಂಘದ ಸದಸ್ಯರು ಮಾತ್ರವಲ್ಲದೆ, ಪರವೂರುಗಳಿಂದಲೂ ಅನೇಕ ಗೃಹಸ್ಥರು ನೆರೆದಿದ್ದರು.

ಫಲಾಹಾರದ ನಂತರ ಶ್ರೀ. ಕೆ. ಪಿ ಲಕ್ಷ್ಮಣರಾಯರು ನೆರೆದವರಿಗೆ ಸ್ವಾಗತ ಕರಿಸಿ ಆದ ನಂತರ, ಸಂಘದ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಈ ಸಂಘವು ೧೯೧೨ರಲ್ಲಿ ದಿವಂಗತ ಡಾ. ಕೆ. ನಾರಾಯಣರಿಂದ ಸ್ಥಾಪಿತವಾಗಿ, ಡಾ. ವಿ. ಪಿ. ಕಾಮತ್, ಶ್ರೀ. ರಮಾನಾಥ ಶೆಣೈಯವರ ಆಧಾರದಿಂದ ಕೆಲಕಾಲ ಬೆಳೆದು,

ಶ್ರೀಮತಿ ರುಕ್ಮಿಣಿ ಅರುಂಡೇಲರವರು.
ಇವರು ಮದ್ರಾಸಿನ ಅಡ್ಯಾರದ ತಿಯೊಸೊಫಿಕಲ್ ಸಂಘದ ನೇತೃತ್ವದಲಿ ನಡೆದ 'ಭೀಷ್ಮ' ಎಂಬ ನಾಟಕದಲ್ಲಿ ಪಾತ್ರಧಾರಿಗಳಾಗಿದರು ಪ್ರಖ್ಯಾತ ನಟನೆಗಾರರೂ, ಗಾಯಕರೂ, ನೃತ್ಯಗಾರರೂ ಆಗಿರುವರು. ಈ ವಿಷಯದ ಅವರು ತಮ್ಮ ಯೋಗ್ಯತೆಯನ್ನು ಪಾಶ್ಚಾತ್ಯ ದೇಶಗಳಲ್ಲಿ ಪ್ರಕಟಿಸಿರುವರು.

೧೯೧೬ರಲ್ಲಿ ಡಾ। ನಾರಾಯಣರಾಯರ ನಿಧನವಾಗಲು, ಸಂಘವು ಕೊನೆಗೊಂಡಿತು. ನಂತರ ೧೯೨೦ರಲಿ ಜೀವಕ್ಕೆ ಬಂದು, ಡಾ। ಎಮ್ಮ ಕೇಶವಪೈ, ಈ ಮಹಾಶಯರ ಅವಿಶ್ರಾಂತ ಶ್ರಮಗಳ ಪರಿಣಾಮವಾಗಿ, ಒಳ್ಳೆಹೊಂದುತ್ತಾ ಪ್ರಗತಿ ಹೊಂದಿಕೊಂಡು, ಇಂದಿಗೆ ಶ್ರೇಯಸ್ಕರ ತೆರದ ಸ್ಥಿತಿಗೆ ಬಂದಿರುವುದೆಂದೂ, ಈ ಸಂಘದ ಮೂಲಧನವು ಈಗ ರೂ ೫೦,೨೦೦ ಆಗಿದ್ದು, ಇಷ್ಟರೊಳಗೆ ೨೦೦ಕ್ಕೆ ಮೇಲ್ಪಟ್ಟು ವಿದ್ಯಾವೇತನಗಳು ಕೊಡಲ್ಪಟ್ಟಿವೆ ಅವರಲ್ಲಿ ೫೦ ಮಂದಿಗಳು ಉದ್ಯೋಗ ಪಡೆದಿರುವರೆಂದೂ, ಕಳೆದ ೨೫ ವರ್ಷಗಳಲ್ಲಿ ಸ್ವಜಾತಿ ಗೃಹಸ್ಥರಿಂದಲೂ ಸಹಾಯವನ್ನು ಪಡೆದು, ಈ ಸಂಘವು ಯಶಸ್ವಿಯಾಗಿ ಕಾರ್ಯಸಿರುವುದೆಂದೂ, ಮುಂದಕ್ಕೂ ಈ ಸಂಘವು ಸ್ವಜಾತಿ ಬಂಧುಗಳ ಉದಾರಾಶ್ರಯವನ್ನು ಹೊಂದಿಕೊಂಡಿದೆಯೆಂದೂ - ಜಸ್ಟಿಸ್ ಕೆ. ಪಿ. ಲಕ್ಷ್ಮಣರಾಯರ ಭಾಷಣವಾದ ನಂತರ ಸಂಘದ ಗೌರವ ಕಾರ್ಯದರ್ಶಿಗಳಾದ ಡಾ। ಎಂ. ಕೇಶವ ಪೈಗಳವರು, ಸಂಘಕ್ಕೆ ಒಂದ ಕೆಲಸಂದೇಶಗಳನ್ನು ಓದಿ ತಿಳಿಸಿದರು. ನಂತರ ಅವರು ಶ್ರೇಷ್ಠ ಇತ್ತೀಚೆಗಿನ ದ. ಕ. ಜಿಲ್ಲೆಯ ಪ್ರವಾಸದ ಅನುಭವವನ್ನು ವಿವರಿಸಿ, ಸಂಘವು ಜಿಲ್ಲೆಯಲ್ಲಿ ಒಳ್ಳೇ ಜನಜನಿತವಾಗಿರುವುದೆಂದು ತಿಳಿಸಿದರು. ಜಿಲ್ಲೆಯ ಸ್ವಜಾತೀಯ ದೇವಾಲಯಗಳಿಂದ ಸಂಘಕ್ಕೆ ಸಹಾಯಧನವು ದೊರಕಿರುವುದೆಂದು ತಿಳಿಸಿದರು.

ನಂತರ ಜಸ್ಟೀಸರಾದ ಶ್ರೀಮಾನ್ ವಿ ಪಿ. ರಾಯರು ರಜತೋತ್ಸವಬಿನ್ನವವನ್ನು ಕೊಟ್ಟರು.

ಡಾ। ಕೇಶವ ಪೈಯವರ ಪರಿಶ್ರಮವೆ ಸಂಘದ ಅಭಿವೃದ್ಧಿಗೆ ಕಾರಣವೆಂದೂ, ಅವರ ಪರಿಶ್ರಮದ ಫಲವಾಗಿ ಮುಂದಕ್ಕೂ ಈ ಸಂಘವು ಅಭಿವೃದ್ಧಿಹೊಂದುವುದೆಂದೂ ಸಂಘದ ಇತರ ಸದಸ್ಯರು ಡಾ। ಕೇಶವ ಪೈಯವರೊಡನೆ ಸಹಕರಿಸಿ, ಸಮಯ ಬಂದಾಗ ಅವರಿಂದ ಈ ಸಂಘದ ಕಾರ್ಯಗಳನ್ನು ಸಂಪೂರ್ಣವಾಗಿ ವಹಿಸಿಕೊಳ್ಳಲು ಮುಂದೆ ಬರಬೇಕೆಂದೂ, ವಿದ್ಯಾವೇತನಗಳ ಮೂಲಕ ಈ ಸಂಘವು ಜಾತಿಯ ಬೌದ್ಧಿಕ, ಕಾಯಿಕ, ಸಾಮಾಜಿಕ, ಬೆಳೆವಣಿಗೆಗೆ ಕಾರಣವಾಗಿರುವುದೆಂದೂ, ಈ ಉತ್ತಮ ಕಾರ್ಯವು ಮುಂದಕ್ಕೂ ನಡೆಯಬೇಕೆಂದೂ, ಸಾರಸ್ವತರೂ, ಗೌಡಸಾರಸ್ವತರೂ ಐಕ್ಯಹೊಂದಬೇಕೆಂದೂ, ಹರಿಕಥೆ ಮೊದಲಾದವುಗಳ ಮೂಲಕ ಸಂಘದ ಸದಸ್ಯರಲ್ಲಿ ದೇವರ ಕುರಿತು ಭಕ್ತಿವುಂಟಾಗುವಂತೆ ಸಾಧಿಸಬೇಕೆಂದೂ, ಸಂಘವು ಯಶಸ್ಸಿನಿಂದ ಕಾರ್ಯ ನಡೆಯಿಸಲು ಸಹಕರಿಸಿ, ಸಂಘದ ಸ್ತ್ರೀಪುರುಷರನ್ನು ಶ್ಲಾಘಿಸಿ, ಅನೇಕ ಒಳ್ಳೇ ಸೂಚನೆಗಳನ್ನೂ ಅಭಿಪ್ರಾಯಗಳನ್ನೂ ಕೊಟ್ಟು ಶ್ರೀ ವಿ ಪಿ. ರಾಯರು ತಮ್ಮ ಭಾಷಣವನ್ನು ಮುಗಿಸಿದರು.

ನಂತರ ಶ್ರೀಮತಿ ವಿಲಾಸಿನಿ ಶೆಣೈಯವರು, ಜಾತಿಯ ವಿದ್ಯಾಪ್ರಗತಿ ಕುರಿತು, ಈ ಬಗ್ಗೆ ಸಂಘದ ಸಹಾಯವನ್ನು ಶ್ಲಾಘಿಸಿ ಭಾಷಣ ವಿತ್ತರು.

ನಂತರ ಮಂಗಳೂರಿನ ಡಾ। ಗಿರಿಧರರಾಯರು, ಅಲ್ಲಿನ ವೆಂಕಟ್ರಮಣ ದೇವಳದ ಟ್ರಸ್ಟಿಗಳಾಗಿ, ಅದರ ಪರವಾಗಿ ತಾವು ಸಹಾಯಧನ ಕೊಡುವುದಾಗಿ, ವಾಗ್ದಾನವಿತ್ತು ಭಾಷಣ ಮಾಡಿದರು.

ಹೀಗೆ ಭಾಷಣಾದಿಗಳು ನಡೆದು, ಹರಿಕಥೆ, ಭೋಜನ ಇತ್ಯಾದಿಗಳೊಡನೆ ಸಮಾರಂಭವು ಮುಕ್ತಾಯವಾಯಿತು.




ದಿನೇ ದಿನೇ ಹಗಲೂ ರಾತ್ರಿ ಉಷ್ಣವು ಹೆಚ್ಚುತ್ತಿರುವುದು. ನೀವೂ ಆಯಾಸವನ್ನು ಹೊಂದುತ್ತಿರುವಿರಿ. ಇಂತಹ ವೇಳೆಯಲ್ಲಿ ಆಗಾಗ ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿಯುವುದೇ ಉತ್ತಮ ಮಾರ್ಗ. ಕೆಲಸ ಮಾಡುವ ಕಾಲದಲಿ ಟೀ ಕುಡಿದಲ್ಲಿ ಆಯಾಸವನ್ನು ಪರಿಹರಿಸುವುದು. ಮಲಗುವ ಮುಂಚೆ ಕುಡಿದಲ್ಲಿ ಸುಖನಿದ್ರೆಯನ್ನು ಕೊಡುವುದು.

# ಭಾರತೀಯ ಚಹಾ

ತಂಪನ್ನೂ ಆನಂದವನ್ನೂ ಕೊಡುವುದು.

**ಟೀ ತಯಾರಿಸುವ ವಿಧಾನ**

ಶುದ್ಧವಾದ ನೀರನ್ನು ಬಿಸಿ ಮಾಡಿರಿ. ಶುಭ್ರವಾದ ಒಂದು ಪಿಂಗಾಣೀ ಮಣ್ಣಿನ ಪಾತ್ರೆಯನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ಅನುಸರಿಸಿ ತಲಾ ಒಂದು ಚಮಚದಂತೆಯೂ ಪಾತ್ರೆಗಾಗಿ ಒಂದು ಚಮಚವೂ ಉತ್ತಮ ಇಂಡಿಯಾ ಟೀ ಸೊಪ್ಪನ್ನು ಹಾಕಿರಿ. ನೀರು ಕುದಿದ ನಂತರ ಅದರ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಸೋಸಿ ಹಾಲು ಸಕ್ಕರೆ ಬೆರಸಿ ಕುಡಿಯಿರಿ.

I K 49.

# ಹೊಸ ಮಾಲು ಇಂದೆ ಬಂದದ್ದು!




## ಕಣನ್ ದೇವನ್ ಚಹಾ ಪೊಟ್ಣಗಳು!

### ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents —*

**The Kerala Tea Syndicate.**

PONANI—(S. Malabar)

---

## ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

### ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂಧವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟುಗುಟ್ಟಿಕೆಯು ನೇಮದಂತೆ ಸುಗಮವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು — ಡಾ॥ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲಾಪೂರ ಇವರು ಬರೆಯುತ್ತಾರೆ. ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ತಪ್ಪಿಯ ಕ್ರಯ: ರೂ. ೪-೦-೦ ವಿ. ಪಿ. ಅಂಚೆ.

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ. ಮಿರಜೆ, (S. M. C.

---

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0 ಮೂರು ಬಾಟ್ಲಿಗಳಿಗೆ ರೂ. 7—0—0

## ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ 1—8—0

### ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ.-ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಾಯಿ 4 ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

---

## ಅತ್ಯಪೂರ್ವ ಸಂದರ್ಭ! ಅತ್ಯಲ್ಪ ಖರ್ಚು!

# ಮಹೋದಯ ಯೋಗ

ಇದೇ ಬರುವ ತಾ **31-1-1938**ರಲ್ಲು ಮಹೋದಯ ಯೋಗ

ಮಹೋದಯ ಯೋಗವೆಂಬುದು ಆಗಿಂದಾಗ್ಯೆ ಬರಲಾರದ ಪರ್ವಕಾಲವು. ಈ ಪರ್ವ ಕಾಲದಲ್ಲಿ ಕಾಶೀ ಪ್ರಯಾಗವೇ ಮೊದಲಾದ ಅನೇಕ ಪುಣ್ಯಸ್ಥಳಗಳಿಗೆ ಹೋಗಿ ತೀರ್ಥಯಾತ್ರೆಯನ್ನು ಮಾಡಿ ಇಹಜನ್ಮವನ್ನು ಸಾರ್ಥಕಪಡಿಸಲಿಚ್ಛಿಸುವವರು, ಮಹಾ ಪವಿತ್ರವಾದ ನೇತ್ರಾವತಿ ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ದಕ್ಷಿಣ ಕಾಶಿ ಎಂದು ಕರೆಯಲ್ಪಡುವ ಉಪ್ಪಿನಂಗಡಿ ಕ್ಷೇತ್ರಕ್ಕೆ ಹೋಗಿ, ಪರ್ವಕಾಲದಲ್ಲಿ ಸಂಗಮಸ್ನಾನ ಮಾಡಿ ಪುಣ್ಯಾರ್ಜನೆಯನ್ನು ಮಾಡಲತ್ಯನುಕೂಲ. ಇಲ್ಲಿಂದ ಬರೀ ೩೦ ಮೈಲು ದೂರವಿರುವ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವನ್ನು ಸಹಾ ಸಂದರ್ಶಿಸಿ, ಶ್ರೀ ಸುಬ್ರಹ್ಮಣ್ಯನ ಕೃಪಾಕಟಾಕ್ಷವನ್ನು ಸಂಪಾದಿಸಲು ಅತ್ಯನುಕೂಲ.

## ಇಂತಹ ಸುಸಂದರ್ಭವನ್ನು ಕಳಕೊಳ್ಳದಿರಿ!

ಯಾತ್ರಾರ್ಥಿಗಳ ಪ್ರಯಾಣದ ಬಗ್ಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದು

***Joint Managers,***

| | |
|---|---|
| THE | THE |
| **Joint Booking Office,** | **Combined Booking Agency,** |
| **KODIALBAIL.** | **MANGALORE.** |

ಜನನ ಮರಣಗಳಂತೆ ಯವನಾವಸ್ಥೆಯಲ್ಲಿ ಪಾದಾರ್ಪಣವಾಡುವದು ಕೂಡ ಜೀವನದ ಒಂದು ಸಂಧಿಕಾಲವಾಗಿರುವದು. ಜನನ ಮರಣಗಳಂತೆ ಅದರ ವಿಷಯವಾಗಿಯೂ ತಿಳುವಳಿಕೆಯನ್ನು ಪಡೆಯುವದು ಉನ್ನತಿಸಾಧನೆಗೆ ಅತ್ಯಗತ್ಯವಾಗಿದೆ ತಿಳುವಳಿಕೆಯು ಮನುಷ್ಯನ ಬಲವಾಗಿದೆ. ಅದು ಕಾರ್ಯಸಾಧನೆಯ ಮುಖ್ಯೋಪಾಯವೂ ಆನಂದಪ್ರಯಸಾಧನವೂ ಆಗಿರುವದು ಅದರಲ್ಲೂ ಜೀವನಕ್ಕೆ ಸಂಬಂಧಪಟ್ಟ ಯುವಾವಸ್ಥೆಯ ತಿಳುವಳಿಕೆ-ಎನ್ನುವಾಗ ಅದರ ಮಹತ್ವ ಎಷ್ಟಿರಬೇಡ? ಆದರೂ, ಮನುಷ್ಯವರ್ಗವು ಹೇಗೆ ಹೇಗೆ ನಾಗರಿಕವಾಗುತ್ತ ಹೋಗುತ್ತದೆಯೋ ಹಾಗೆ ಹಾಗೆ ಅದು ಜನನಮರಣಗಳ ವಿಷಯಗಳ ತಿಳುವಳಿಕೆಗೆ ಕೊಡುವಷ್ಟು ಮಹತ್ವವನ್ನು ಈ ವಿಷಯದ ತಿಳುವಳಿಕೆಗೆ ಕೊಡುವದಿಲ್ಲ ಕಾಮವಿಜ್ಞಾನ, ಲೈಂಗಿಕ ವಿಜ್ಞಾನ, ಸಂತಾನೋತ್ಪತ್ತಿ ವಿಷಯ, ಋತುಮತಿಯಾಗುವದೆಂದರೇನು ಎಂಬೀ ಮೊದಲಾದ ವಿಷಯಗಳನ್ನು ತಿಳಕೊಳ್ಳಲಿಕ್ಕೆ ಮನುಷ್ಯನು ಹೆಚ್ಚೆಚ್ಚು ನಾಗರಿಕನೂ ಹೆಚ್ಚು ಸಭ್ಯನೂ ಆಗುತ್ತ ಹೋದ ಹಾಗೆ ಹೆಚ್ಚೆಚ್ಚು ಲಜ್ಜಿತನೂ ಹೆಚ್ಚೆಚ್ಚು ಹಿಂಜರಿಯುವವನೂ ಆಗುತ್ತಾನೆ ಆದರೆ ಇದೇ ಜ್ಞಾನದೊಳಗೆ ಮನುಷ್ಯನ ಅಸ್ತಿತ್ವವು ಅಡಕವಾಗಿದೆ, ಆ ವಿಷಯ ಅವನು ಅಜ್ಞಾನಿಯಾಗುತಿದ್ದಂತೆ ಅವನ ನಾಶವು ಸಮೀಪವಾಗುತ್ತದೆ, ಆ ವಿಷಯ ಅವನು ಸುಜ್ಞಾನಿಯಾಗುತ್ತಿದ್ದಂತೆ ಅವನಿಗೆ ಅಮರತ್ವವು ಪ್ರಾಪ್ತವಾಗುತ್ತದೆ ಎಂದು ತಿಳಕೊಂಡಾಗ ಅವನು ತನ್ನ ಲಜ್ಜೆ ಮತ್ತು ಅಂಜಿಕೆಗೆ ತಿಲಾಂಜಲಿಯಿತ್ತು ಆ ಜ್ಞಾನವನ್ನು ಸಂಪಾದಿಸಲಿಕ್ಕೆ ಮುಂದಾಗದೆ ಇರನು

ಸಭ್ಯ ಜನಾಂಗಗಳು ಕಾಮವಿಜ್ಞಾನ ಸಂಬಂಧ ಇನ್ನೂ ಅಜ್ಞಾನಾಂಧಕಾರದಲ್ಲಿ ಮುಳುಗಿ ತೇಲುತ್ತಿರುವಾಗ, ಆಫ್ರಿಕದ ಅಸಭ್ಯ ಬರ್ಬರ ಜಾತಿಗಳು ಅನಾದಿಯಿಂದ ಈ ವಿಷಯವನ್ನು ತಿಳಕೊಳ್ಳುವ ಆತುರದಲ್ಲಿರುತ್ತವೆಂಬುದು ಅವುಗಳ ಕೆಲಕೆಲವು ವಿಚಿತ್ರ, ಅದ್ಭುತ ಆಚರಣೆಗಳಿಂದ ಸಿದ್ಧವಾಗುತ್ತದೆ ಈ ಜಾತಿಗಳು ಈರೋಸ್ ಎಂಬ ಪರ್ವಕಾಲವನ್ನು ವಿಶೇಷ ವಿಜೃಂಭಣೆಯಿಂದ ಆಚರಿಸುತ್ತವೆ ಈರೋಸ್ ಅಂದರೆ ಹೆಣ್ಣು ಋತುಮತಿಯಾಗುವದು! ಗಂಡು ಪ್ರಾಯಕ್ಕೆ ಬರುವದು! ಹೆಣ್ಣು ಋತುಮತಿಯಾದಾಗ, ಗಂಡು ಪ್ರಾಯಕ್ಕೆ ಬಂದಾಗ ಆಫ್ರಿಕದ ಮೂಲನಿವಾಸಿಗಳು ಲಜ್ಜಿತರಾಗುವುದಿಲ್ಲ. ಆದರೆ ತಮ್ಮ ಜೀವನದಲ್ಲಿ ಅದೊಂದು ಸಂಧಿಕಾಲ, ಪರ್ವಕಾಲ, ಪುಣ್ಯಕಾಲ ಎಂದು ತಿಳಿದು ಆ ಸಂದರ್ಭವನ್ನು ವಿಶೇಷ ಆನಂದ ಉತ್ಸವಗಳಿಂದ ಕಳೆಯುತ್ತಾರೆ ನಮ್ಮ ಸಭ್ಯ ದೃಷ್ಟಿಗೆ ಅವರ ಈ ಸಂದರ್ಭ ವಿಚಿತ್ರ ಆಚರಣೆಯು ಅಸಭ್ಯವೆಂದೂ, ಬರ್ಬರವೆಂದೂ ತೋರಬಹುದು. ಆದರೂ ಆ ಕಾಲವು ಜೀವನದಲ್ಲಿ ಅತ್ಯಂತ ಮಹತ್ವವುಳ್ಳದೆಂಬುದನ್ನು ನಮಗೆ ನೆನಪು ಮಾಡಿಸದೆ ಇರಲಾರದು

ಆಫ್ರಿಕದ ಹೆಣ್ಣು ಋತುಮತಿಯಾದಾಗ —ಅವಳ ಎಡಕೈಯ ಉಂಗುರದೆರಳಿನ ಒಂದಂಶವನ್ನು ಕಡಿದುಬಿಡುವರು! ಹೆಣ್ಣು ಪ್ರಾಯಕ್ಕೆ ಬಂದಿದ್ದಾಳೆಂಬುದಕ್ಕೆ ಇದೇ ಕುರುಹು! ಬೆರಳಿನ ಕಡಿದ ತುಂಡಿಗೆ ದನದ ಸೆಗಣಿ ಮೆತ್ತಿ ಅವರು ತಮ್ಮ ಗುಡಿಸಲು ಮಾಡಿನ ಮೇಲ್ಗಡೆ ಇಟ್ಟುಬಿಡುವರು. ಕೆಲವು ಪ್ರದೇಶಗಳಲ್ಲಿ ಹೆಣ್ಣು ಮಗು ಪ್ರಾಯಕ್ಕೆ ಬಂದಾಗ ತಂದೆಯು ಒಂದು ಗಟ್ಟಿಮುಟ್ಟಾದ ದನದ ಬಾಲದ ಕೆಲವು ರೋಮಗಳನ್ನು ಕಿತ್ತು ತರುವನು ತಾಯಿ ಅವುಗಳನ್ನು ಹೆಣೆದು ದಾರಮಾಡುವಳು. ಮತ್ತು ಆ ದಾರವನ್ನು ಪ್ರಾಯಕ್ಕೆ ಬಂದ ಹೆಣ್ಣಿನ ಕುತ್ತಿಗೆಗೆ ಕಟ್ಟುವಳು ಆಗ ಆ ದನ ಮತ್ತು ಈ ಹೆಣ್ಣು ಅಕ್ಕತಂಗಿಯರಂತೆ ಭಾವಿಸಲ್ಪಡುವದು. ಅಂದಿನಿಂದ ಅದು ದನವಾಗಿ ಇರುವದಿಲ್ಲ.

# ಅನಾಗರಿಕ ಆಫ್ರಿಕನರ ಬರ್ಬರ ಆಚರಣೆ! — ಈರೋಸ್.

## ಇದರಿಂದ ನಾವು ಕಲಿಯಬೇಕಾದ ಪಾಠ.

(ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರ 'ಈರೋಸ್' ಎಂಬ ಲೇಖದ ಆಧಾರದ ಮೇಲೆ ಬರೆದ ಲೇಖನವಿದು)

ಅದನ್ನು ವಿಶೇಷ ಪ್ರೇಮವಾತ್ಸಲ್ಯಗಳಿಂದ ಸಾಕುವರು ಅಂದಿನಿಂದ ಅದನ್ನು ಮಾರಲೂ ಅನ್ಯರಿಗೆ ಕೊಡಲೂ ಕೂಡದು. ಹಾಗಿದ್ದಾಗಲೇ ಹೆಣ್ಣು ಆರೋಗ್ಯವಂತೆ, ದೃಢಕಾಯೆ ಮತ್ತು ಪುತ್ರವತಿ ಆಗುವಳೆಂದು ಅವರ ಕಲ್ಪನೆ

ಆಫ್ರಿಕದಲ್ಲಿ ಕಾಫಿರ ಎಂದು ಕರೆಯಲ್ಪಡುವ ಒಂದು ನೀಗ್ರೊ ಜಾತಿಯ ಹೆಣ್ಣು ಪ್ರಾಯಕ್ಕೆ ಬಂದಾಗ ಆ ಜಾತಿಯ ವ್ಯವಹಾರವು ಇನ್ನೂ ವಿಚಿತ್ರವಾಗಿದೆ ಒಬ್ಬ ಹೆಂಗಸು ಋತುಮತಿಯಾದ ಹೆಣ್ಣುಮಕ್ಕಳನ್ನು ಒಟ್ಟುಗೂಡಿಸಿ ಸಮೀಪದ ಹೊಳೆಯ ದಂಡೆಗೆ ಕರೆಕೊಂಡು ಹೋಗುತ್ತಾಳೆ. ಅಲ್ಲಿ ಅವಳು ಅವರಿಗೆ ಸ್ತ್ರೀತ್ವ ಮಾತೃತ್ವ ಗೃಹಕೃತ್ಯ ಮೊದಲಾದ ವಿಷಯಗಳಲ್ಲಿ ಶಿಕ್ಷಣವನ್ನು ಕೊಡುತ್ತಾಳೆ ಕಲಿಯುವಿಕೆಯಲ್ಲಿ ಚೆನ್ನಾಗಿ ಅಭಿವೃದ್ಧಿ ತೋರಿಸದವಳನ್ನು ಅವಳ ಹೊಡೆದು ಬಡೆಯುವದೂ ಇದೆ ಹೆಣ್ಣುಮಕ್ಕಳು ಹೊಳೆಯ ದಂಡೆಯ ಮೇಲೆ ದಿನಕಳೆಯುತ್ತಿರುವಾಗ ಅವರು ಹಾಲು ಕುಡಿಯುವಾದದ ಕೆಲವು ಪುರುಷ ಮಕ್ಕಳು ಯುವಕರಂತೆ ವೇಷಹಾಕಿಕೊಂಡು ಶಸ್ತ್ರಾಸ್ತ್ರಗಳ ಅಭ್ಯಾಸ ಮಾಡುತ್ತಿರುವಾಗ ಒಬ್ಬರ ಕೊಲ್ಲಲ್ಪಟ್ಟರೂ ಅದು ಅಪರಾಧವಾಗುವುದಿಲ್ಲ ಶಿಕ್ಷಣವು ಮುಗಿದ ಮೇಲೆ ಆ ಹೆಣ್ಣುಮಕ್ಕಳ ಕಲಿಯನ್ನು ಪರೀಕ್ಷಿಸುತ್ತಾರೆ ಒಂದು ದೊಡ್ಡ ಬೆಂಕಿಮಾಡಿ ಅದರ ಸುತ್ತಲೂ ತಾಳಹಾಕಿ ಕುಣಿಯುತ್ತಾರೆ, ಹಾಡುತ್ತಾರೆ ಮರುದಿನ ಒಬ್ಬ ಮುದುಕಿ [illegible] ದೊಡ್ಡ [illegible] ಒಬ್ಬ ಯುವಕ [illegible] ಅವಳೇ ಆ ಹಳ್ಳಿಯ ರಾಣಿ, ಅವನೇ ಆ ಹಳ್ಳಿಯ ರಾಜ ಆ ಮೇಲೆ ಉಳಿದ ಹೆಣ್ಣುಮಕ್ಕಳು ತಮಗೆ ಬೇಕಾದ ಒಬ್ಬೊಬ್ಬ ಯುವಕನನ್ನು ಆರಿಸಿಕೊಂಡು ಅವರಿಗೆ ಕೈಕೊಡುವರು.

ಮುಂದೆ ಎಷ್ಟೋ ತಿಂಗಳುಗಳ ತನಕ ಅವರು ಸುಖಮಯ ದಾಂಪತ್ಯ ಜೀವನವನ್ನು ನಡೆಸುವರು ಹೆಣ್ಣು ಗರ್ಭವತಿಯಾದಾಗ ಅವಳನ್ನು, ಅವಳ ಕೈಕೊಟ್ಟ ಯುವಕನು ಕೈಕೊಟ್ಟು ನಡುವಯಾಗುತ್ತಾನೆ ಹುಟ್ಟಿದ ಆ ಮಗು ಅವಳ ತಂದೆಗೆ ಅಧಿಕಾರಿಯಾಗುವದು ಅದು ಅವನ ಸೊತ್ತಾಗುವದು ಆದರೆ ಅವನು ಬೇಡವೆಂದರೆ-ಅದನ್ನು ಹೆತ್ತ ತಂದೆತಾಯಿಗಳು ಅವನಿಂದ ದನಗಳನ್ನು ಪ್ರತಿಯಾಗಿ ಕೊಟ್ಟು ಕ್ರಯಕ್ಕೆ ತಗೆದುಕೊಳ್ಳುವರು ಲೊಅಂಗೋ ಜಾತಿಯ ನಿಗ್ರೊ ಹೆಣ್ಣುಮಕ್ಕಳು ಪ್ರಾಯಕ್ಕೆ ಬಂದಾಗ ಅವರನ್ನು ಬೇರೆಯೇ ಗುಡಿಸಲುಗಳಲ್ಲಿ ಇರಿಸಿ, ಪ್ರವೀಣೆಯಾದ ಹೆಂಗಸಿನಿಂದ ದಾಂಪತ್ಯ ಪ್ರೇಮದ ಮರ್ಮಗಳನ್ನು ಕಲಿಸಿಕೊಡುತ್ತಾರೆ.

### ಹುಡುಗರು ಪ್ರಾಯಸ್ಥರಾದಾಗ!

ಇಷ್ಟರ ತನಕ ಹುಡುಗಿಯರು ಪ್ರಾಯಕ್ಕೆ ಬಂದಾಗ ಏನು ಮಾಡುತ್ತಾರೆಂದು ತಿಳಿಯಿತು. ಈಗ ಹುಡುಗರನ್ನು ಏನುಮಾಡುತ್ತಾರೆಂದು ತಿಳಿಸುತ್ತೇವೆ! ವಿಕ್ಟೋರಿಯದಲ್ಲಿ ಈ ತರದ ಪದ್ಧತಿಯಿದೆ-ಹುಡುಗನು ಪ್ರಾಯಕ್ಕೆ ಬಂದಾಗ ಹಣೆಯಿಂದ ಕುತ್ತಿಗೆಯ ಹಿಂಭಾಗದವರೆಗಿನ ಅಗಲಕಿಂದ್ದಾದ ಪ್ರದೇಶವನ್ನು ಬಿಟ್ಟು ಉಳಿದ ತಲೆಯನ್ನು ಹರಿತವಾದ ಕತ್ತಿಯಿಂದ ಬೋಳಿಸಿಬಿಡುವರು. ಬೋಳಿಸಿದ ಭಾಗಕ್ಕೆ ಮುಣ್ಣು ಮೆತ್ತುವರು ಸೊಂಟದ ಸುತ್ತಲೂ ಹುಲಿಯ ಚರ್ಮವನ್ನು ಕಟ್ಟುವರು. ಉಳಿದ ಶರೀರವನ್ನು ಜೇಡಿಮಣ್ಣು ಮತ್ತು ಕಲ್ಲಿದ್ದಲು ಧೂಳಿಯಿಂದ ಲೇಪಿಸುವರು. ಅನಂತರ ಹುಡುಗನು ಪ್ರಾಯಕ್ಕೆ ಬಂದಿರುವದನ್ನು ಹಿರಿಯರಿಗೆ ತಿಳಿಸುವರು. ಆ ಹಿರಿಯರು ಅವನನ್ನು ಹೆಂಗಸರಿಗೆ ಒಪ್ಪಿಸಿಕೊಡುವರು. ಹೆಂಗಸರು ಅವನ ಮೈಕಾಲುಗಳನ್ನು ತೊಳೆದು ಮುಖದ ಮೇಲೆ ಕರಿಯ ಬಣ್ಣದ ಬರೆಗಳನ್ನು ಎಳೆಯಿಸಿ ಸುತ್ತಲೂ ಕುಣಿದಾಡುವರು. ಇಷ್ಟರಲ್ಲೇ ಆ ಸಮಾರಂಭವು ಮುಗಿಯುವದಿಲ್ಲ ಅಜ್ಞಾತಗಳ ವೀರಾಧಿವೀರನಂತೆ ಅವನೂ ಮೌಢ್ಯದ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾಗಬೇಕು. ಹುಡುಗನನ್ನು ಗೊಂಡಾರಣ್ಯದಲ್ಲಿ ಬಿಟ್ಟುಬರುವರು. ಅಲ್ಲಿ ಅವನು ಎರಡು ಹಗಲು ಎರಡು ರಾತ್ರಿ ಒಬ್ಬನೇ ಕಳೆಯಬೇಕು. ಆ ವೇಳೆ ಒಂದು ವಿಚಿತ್ರ ಒಗಟಿನ ಆಧಾರದಿಂದ ಅವನ ಮುಂದಿನ ಎರಡು ದವಡೆಹಲ್ಲುಗಳನ್ನು ಮುರಿದು ತೆಗೆಯುವರು. ಆ ಹಲ್ಲುಗಳನ್ನು ತೆಗೆದುಕೊಂಡು ಅವನು ಹಳ್ಳಿಗೆ ಬಂದು ಅವುಗಳನ್ನು ತಾಯಿಗೆ ಕೊಡುವನು ಆ ಮೇಲೆ ಪುನಃ ಕಾಡಿಗೆ ಹೋಗಿ ಎರಡು ದಿನ ಉಳಕೊಳ್ಳುವನು. ತಾಯಿಯು ಆ ಹಲ್ಲುಗಳನ್ನು ಯಾವುದಾದರೊಂದು ಮರದಲ್ಲಿ ಅಡಗಿಸಿಡುತ್ತಾಳೆ ಹುಡುಗನು ಬಂದು ಆ ಹಲ್ಲುಗಳನ್ನು ಹುಡುಕಿ ತರಬೇಕು, ಇಲ್ಲವಾದರೆ ಹುಡುಕುತ್ತ ಹುಡುಕುತ್ತ ಸಾಯಬೇಕು [illegible] ಪ್ರಸಂಗಗಳ ಅನೇಕ ಬರುವವು [illegible] ಒದುಕ ಹಲ್ಲುಸಿಂದಿಗೆ ಹಿಂತಿರುಗಿದರೆ ಆ ಮರವು ಬಹು ಪವಿತ್ರವಾಗುವದು ಸತ್ತರೆ, ಅದನ್ನು ಕಡಿದು ಸುಟ್ಟುಹಾಕುವರು. ಅನಂತರ ಮಾತ್ರ ಹುಡುಗನು ತನ್ನ ಸಂಪೂರ್ಣ ಪ್ರಾಯಕ್ಕೆ ಬಂದ ಹುಡುಗಿಯನ್ನು ಮದುವೆಯಾಗುವನು.

ಇನ್ನೊಂದು ವಿಚಿತ್ರ ಆಚರಣೆ ಹೀಗಿದೆ— ಪ್ರಾಯಕ್ಕೆ ಬಂದಾತನ ದಂಡಿನ ಮುರೋಹಿತರೂ ಬಣ್ಣಗಾರರೂ ಬಂದು ಹುಡುಗನ ಸುತ್ತ ಕೂಡುವರು. ಅವನಿಗೆ ಬಣ್ಣಹಾಕಿ ವಿಧಿಯಂತೆ ಹಲ್ಲು ಮುರಿಯುವರು. ಆ ಮೇಲೆ ಅವನನ್ನು ಒಂದು ದಟ್ಟವಾಗಿ ಹೊದಿಸಿದ ಗುಡಿಸಲಿನಲ್ಲಿ ಅಡಗಿಸಿಡುವರು ಹೆಣ್ಣುಮಕ್ಕಳು ಸೂಟಿ ಹಿಡಿದು ಗುಡಿಸಲ ಸುತ್ತಲೂ ಕುಣಿಯುವರು. ಇದಾದ ಮೇಲೆ ಆ ಹುಡುಗನಿಗೆ ಎಮು ಪಕ್ಷಿ ಬಳಿದ ಹಸಿ ಮಾಂಸವನ್ನು ತಿನ್ನಲು ಕೊಡುವರು. ಅವನು ಆ ಮಾಂಸವನ್ನು ಪೂರ್ಣ ತಿಂದು ಮುಗಿಸುವುದರೊಳಗಾಗಿ ಯಾರಾದರೂ ಹೆಂಗಸು ಅವನನ್ನು ಸ್ವಲ್ಪಮಾತ್ರ ಕಂಡರೆ ಸಾಕು; ಅವನ ಅಂತಿಮಕಾಲ ಸಮೀಪವಾಯಿತೆಂಬೇ ಅರ್ಥ ಅವನ ಮುಖ ನೋಡುವದು-ನಮ್ಮ ದೇಶದಲ್ಲಿ ಬೆಳಗಾಗಬೇಕಾದರೆ ವಿಧವೆಯ ಮುಖ ನೋಡಿದ ಹಾಗೆ-ದೊಡ್ಡ ಅಪಲಕ್ಷಣ!

ಇಂಥ ಎಷ್ಟೋ ವಿಚಿತ್ರ ಸಂಪ್ರದಾಯಗಳು ಆಫ್ರಿಕದಲ್ಲಿರುವವು ಈ ಸಂಪ್ರದಾಯಗಳಿಗೆ ಏನೂ ಅರ್ಥವಿರುವುದಿಲ್ಲವೆ? ಅವು ಸಂಪೂರ್ಣ ಅನರ್ಥಕಾರಿಗಳಾಗಿರುವವೆ?— ಹಾಗೇನೂ ಇಲ್ಲ ಅವು ವಿಶೇಷವಾದ ಅರ್ಥಗಳಿಂದ ಕೂಡಿವೆ ಹೆಣ್ಣುಗಂಡುಗಳು ಪ್ರಾಯಕ್ಕೆ ಬಂದ ಮಹತ್ವವನ್ನು ತೋರಿಸುತ್ತವೆ ಅದರ ಭವಿಷ್ಯ ಜೀವನದ ಉತ್ತರದಾಯಿತ್ವವು ಎಂತಹದೆಂಬುದನ್ನು ಹೇಳಿಕೊಡುತ್ತವೆ ಸಭ್ಯಜಾತಿಗಳಲ್ಲಿ, ನಾಗರಿಕ ಜನಾಂಗಗಳಲ್ಲಿ ಹೆಣ್ಣುಗಂಡುಗಳು ಪ್ರಾಯಕ್ಕೆ ಬಂದುದನ್ನು ತೋರಿಸಿಕೊಡುವ ಇವುಗಳಂಥ ಸಾರ್ಥಕ ಸಮಾರಂಭಗಳ ಆವಶ್ಯಕತೆಯಿರುವದಿಲ್ಲವೆ? ಇದೆ, ಆದರೆ, ವಿಚಾರಿಗಳ ಲಕ್ಷ್ಯವು ಆ ಕಡೆಗೆ ಇನ್ನೂ ಹೋಗಿರುವದಿಲ್ಲ

### ಸಾಮಾನ್ಯ ಜನರಿಗೆ ಕಾರು

ಜರ್ಮನಿಯ ಹಿಟ್ಲರನು ಅಧಿಕಾರಕ್ಕೆ ಬರುವಾಗ ಪ್ರತಿಯೊಬ್ಬ ಸಾಮಾನ್ಯ ಪುರುಷನಿಗೆ ಸಹ ಬಸದರದಲ್ಲಿ ಒಂದು ಕಾರನ್ನು ಒದಗಿಸುವೆನಾಗಿ ವಾಗ್ದಾನ ಮಾಡಿದ್ದನು ಅದಕ್ಕೆ ಸರಿಯಾಗಿ ಕಾರು ಒಂದನ್ನು ರೂ 2000 ಪ್ರಕಾರ ಮಾರಾಟ ಮಾಡಲು, ಜರ್ಮನಿಯ ಬರ್ಲಿನ್ ನಗರದಲ್ಲಿ ಹೊಸತೊಂದು ಮೋಟಾರು ಕಾರ್ಖಾನೆಯು ಸ್ಥಾಪನೆಯಾಗಿರುವುದು ಈ ಕಾರ್ಖಾನೆಯಲ್ಲಿ ಈ ತರದ ಮಿಲಿಯಗಟ್ಟಲೆ ಕಾರುಗಳು ಸಿದ್ಧವಾಗುವವಂತೆ ಈ ಕಾರಿನ ತಾಸು ಒಂದರ ವೇಗ ೬೦ ಮೈಲುಗಳ ವೇಗವಿರುವುದು

ಈ ಇಂದ್ರಜಾಲ ಔಷಧಿಯು ನವ ಚರ್ಮವನ್ನು ಬೆಳೆಸುತ್ತದೆ.

[illegible]

[illegible]

...ಭಾಯಿಗಳ ಪಿಕಾರಿಯಾಗಿ ಪರಿಣಮಿಸಲಾರವು. ಸಾಂಬಕ್ ವೇದನೆಯನ್ನು ಇಂದ್ರಜಾಲದಂತೆ ಗುಣಪಡಿಸಿ, ಕಲೆಯಿಲ್ಲದಂತೆ ಮಾಡುತ್ತದೆ. ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲಿ ಸಾಂಬಕ್ ಪೆಟ್ಟಿಗೆಯೊಂದಕ್ಕೆ ರೂಪಾಯಿ 2-4-0ಗಳಂತೆ ಸಿಗುತ್ತದೆ

ಏಜಂಟರು —ಮೆಸರ್ಸ್ ದಾಧಾ ಎಂಡ್ ಕೋ.,

ಪಿ. ಬಿ. ಮದ್ರಾಸು

ಸಾಂಬಕ್‌ನಲ್ಲಿ ಕೊಬ್ಬಿನ ಅಂಶವಿಲ್ಲ.

ಸಾಂಬಕ್

Zam Buk

**ಬಾಮ್‌ರೋಲಿಯಲ್ಲಿ ಭಯಂಕರ ರೈಲ್ವೆ ಅಪಘಾತ**

ದಿಲ್ಲಿಯಿಂದ ಅಲ್ಲಹಾಬಾದು ಮಾರ್ಗವಾಗಿ, ಕಲ್ಕತ್ತೆಗೆ ತೆರಳುವ ಇ. ಐ. ಆರ್. ರೈಲ್ವೆ ಕಂಪೆನಿಯ ಎಕ್ಸ್‌ಪ್ರೆಸ್ ಟ್ರೈನು ಬಾಮ್‌ರೋಲಿಯಲ್ಲಿ, ಸ್ಟೇಶನಿನಲ್ಲಿ ನಿಂತಿದ್ದ ಸರಕು ಟ್ರೈನಿಗೆ ತಿಕ್ಕಿ ಬಡೆದು ಇಂಜಿನಿನ ಹತ್ತಿರವಿರುವ ಗಾಡಿಯು ನುಚ್ಚುನೂರಾಗಿ ಏಳು ಮಂದಿಗಳು ಮೃತರಾಗಿರುವರು, ಅನೇಕ ಮಂದಿಗಳಿಗೆ ಭಯಂಕರ ತರದ ಹಾನಿಯಾಗಿರುವುದು.

**ಗಾಂಧಿಜಿ-ಲಾರ್ಡ್ ಲೊಥಿಯನ ಬೇಟಿ**

—ಮಹಾತ್ಮಾಜಿಯವರ ಬೇಟಿಗಾಗಿ ಲೋರ್ಡ್ ಲೊಥಿಯನರು ವಾರ್ಧಾಕ್ಕೆ ತೆರಳಿರುವರು. ಸದೃಢ ಆರೋಗ್ಯಸ್ಥಿತಿಯಲ್ಲಿ ಮಹಾತ್ಮಾಜಿಯವರಿಗೆ ದೀರ್ಘ ಸಮಯ ಮಾತನಾಡಲಾಗದುದರಿಂದ ಈ ಭೇಟಿ ಮೂರು ದಿವಸಗಳಲ್ಲಿ ದಿನ ಒಂದರ ಅರ್ಧ ತಾಸಿನ ಪ್ರಕಾರ ನಡೆಯುವುದು. ಈ ಮೂರು ದಿವಸಗಳಲ್ಲಿ ಲೋರ್ಡ ಲೊಥಿಯನರು ಶ್ರೀ ಜಮ್ನಾಲಾಲರ ಅತಿಥಿಗಳಾಗಿ ಒಂದು ಮಣ್ಣಿನ ಗುಡಿಸಲಲ್ಲಿ ಉಳಕೊಳ್ಳುವರು. ಲಾರ್ಡ ಲೊಥಿಯಾನರು ಮಹಾತ್ಮಾಜಿಯವರೊಡನೆ ಫೆಡರೇಶನ್ ವಿಚಾರವನ್ನು ಎತ್ತಲಿರುವರು.

---

# ಸ್ವದೇಶಾಭಿಮಾನಿ

ತಾ. ೨೧ನೇ ಶುಕ್ರವಾರ ಜನವರಿ ೧೯೩೮

## ಇಂಗ್ಲೆಂಡು ಅಮೇರಿಕಾ – ಜಪಾನು

### ಮುಂದೇನು?

ಜಪಾನಿನ ಕಿರುಕುಳಗಳಿಂದ ಅಮೇರಿಕವು (ಸಂಯುಕ್ತರಾಷ್ಟ್ರ) ನೊಂದಿದೆ; ಆದರೂ, ಈ ನೋವಿಗಾಗಿಯೆ, ಜಪಾನಿನೊಡನೆ ಯುದ್ಧ ಮಾಡಲು ಅಷ್ಟು ಕಾರಣವಿಲ್ಲೆಂದು ಹೇಳುವ ಪ್ರಬಲ ಪಕ್ಷವಿರುವ ಕಾರಣ, ಪ್ರೆಸಿಡೆಂಟ್ ರೂಸ್‌ವೆಲ್ಟರು ಈಗ ಅಲ್ಲಿ ನೌಕಾಬಲವನ್ನು ಹೆಚ್ಚಿಸಿ, ಯುದ್ಧಸನ್ನಾಹವನ್ನು ತುಂಬ ಬೆಳಸುವ ಪ್ರಯತ್ನದಲ್ಲಿದ್ದಾರೆ.

ಇಂಗ್ಲೆಂಡು ಅಮೇರಿಕಗಳು ಒಂದಾಗಿ ಜಪಾನನ್ನು ಬುದ್ಧಿಹೇಳಬಹುದೇ ಎಂಬ ಪ್ರಶ್ನೆಯನ್ನು ಎಲ್ಲಾ ಪ್ರಮುಖ ಪತ್ರಿಕೆಗಳು ಚರ್ಚಿಸಿವೆ. ಇಂಗ್ಲೆಂಡನ್ನೂ ಜಪಾನು ಸಾಕಷ್ಟು ಜೋರಾಗಿ ಸೆಣಸಿಯೇ ಇದೆ. ಥಪರಾಕು ಹೊಡೆಯುತ್ತಲೂ, ಶೇಕ್‌ಹ್ಯಾಂಡ್ ಮಾಡುತ್ತಲೂ ಗೌರವ ಕಾಪಾಡಿಕೊಳ್ಳುವ ಜಪಾನನ್ನು ಗದರಿಸುತ್ತಲೂ, ಮನ್ನಿಸುತ್ತಲೂ ಬ್ರಿಟನು ನಡೆಸಿಕೊಂಡು ಬಂದಿದೆ. ಇನ್ನೂ ಜಪಾನು ನಮ್ಮನ್ನು ಮೀರಿ ನಡೆಯದು ಎಂದೇ ಬ್ರಿಟಿಷ ಮಂತ್ರಿಗಳು ನಂಬುವಂತಾಗಿದೆ.

ಜಪಾನು, ಬಿಳೀ ಜನಾಂಗಗಳು ಎಂದೂ ಚೀನವನ್ನು ವಶಮಾಡಿಕೊಳ್ಳದ ರೀತಿಯಲ್ಲಿ ಯುದ್ಧಮಾಡಬೇಕೆಂದೇ ನಿರ್ಧಾರಮಾಡಿರುವ ಒಂದು ಕಠಿಣಪಕ್ಷವು ಜಪಾನಿನಲ್ಲಿದೆ ಎಂದು ಜಪಾನಿನ ಮಂತ್ರಿಗಳು ಸಾರಿಯೇ ಇದ್ದಾರೆ. ಶಾಂಘಾಯಿಯಲ್ಲಿ ಜಪಾನು ಎಷ್ಟು ಸುಲಭವಾಗಿ, ಪರರಾಷ್ಟ್ರೀಯರ ಮೇಲೂ ಅಧಿಕಾರ ಸ್ಥಾಪನೆಮಾಡಿರುವುದು!

ಹಣವಿರುವಷ್ಟು ತನಕ ಜಪಾನಿಗೆ ಭಯಪಡುವುದೇಕೆ? ಜಪಾನಿಗೆ ಹಣ ಬೇಕಾಗುವುದು; ಮುಂದೆ ಅದು ಲಂಡನಿಗೇ ಕೈಚಾಚಿ ಬರಬಹುದು, — ಆಗ? ಜಪಾನಿಗೆ ನಮ್ಮ ಸಹಾಯ, ನಮಗೆ ಜಪಾನಿನ ಸಹಾಯ ಎನ್ನುವ ಶ್ರೀಮಂತ ಕೂಟಗಳು ಇಂಗ್ಲೆಂಡಿನಲ್ಲಿವೆ ಎಂದು ಅಲ್ಲಿನ ಪತ್ರಿಕೆಗಳೇ ಹೇಳುತ್ತವೆ. (ಆದರೆ ಜರ್ಮನಿಯು ಚಿನ್ನದ ಬದಲಾಗಿ, ಸರಕನ್ನು ಸಾಲಕೊಡಬಲ್ಲುದೆಂಬುದನ್ನು ಬ್ರಿಟಿಷರು ಮರೆತಿದೆ.) ಅಮೇರಿಕದೊಡನೆ ಅಷ್ಟು ಪ್ರಬಲವಾಗಿ ಸೇರದೆಯೂ ರಷ್ಯವನ್ನು ಅಷ್ಟು ಚೆನ್ನಾಗಿ ಹತ್ತಿರಕ್ಕೆ ಕರೆಯದೆಯೂ ಬ್ರಿಟನ್ನು ಇರುವುದಕ್ಕೆ ಇದೇ ಕಾರಣವೆನ್ನಬಹುದು.

ನಿಜವಾಗಿಯೂ, ನೌಕಾಬಲದ ಪ್ರದರ್ಶನವಾದರೆ ಜಪಾನು ಸ್ವಲ್ಪ ಜಗ್ಗೀತೆನ್ನುವ ಪಕ್ಷವೂ ಬ್ರಿಟನ್ನಿನಲ್ಲಿದೆ. ಚೀನದಲ್ಲಿ ಬಿತ್ತಿರುವ ಹಣ, ಅಲ್ಲಿನ ವ್ಯಾಪಾರದ ಮೇಲೆ ಹೊಂದಿಕೊಂಡಿರುವ ಅಸಂಖ್ಯಾತ ಇಂಗ್ಲಿಷರ ಜೀವನ ಇವನ್ನೂ ಸ್ಮರಿಸಿಕೊಂಡು, ಚೀನವನ್ನು ಆಧರಿಸಬೇಕೆಂದು ಈ ಪಕ್ಷದ ತರ್ಕವಿದೆ.

ಯುರೋಪಿನ ಸ್ಥಿತಿಯು ಹಾಳಾಗಿದೆ. ಜರ್ಮನಿ ಇಟಲಿಗಳು ಪ್ರಬಲವಾಗಿರುವ ಕಾರಣ, ಜರ್ಮನಿಯು ಪೂರ್ವಕ್ಕೆ ಕೈನೀಡಲು ಇಂಗ್ಲೆಂಡು ಸಹಾಯಕವಲ್ಲದಿದ್ದರೂ, ಕೈಯಿಕ್ಕದಂತೆ ಇದ್ದರೆ ಸಾಕು; ಏಕೆಂದರೆ ಬ್ರಿಟಿಷ ನೌಕಾಬಲವು ಇತ್ತ ಜಪಾನನ್ನು ಎದುರಿಸಿ ಅತ್ತ ಸ್ವಕ್ಷೇತ್ರವನ್ನು ಒಮ್ಮೆಲೇ ಕಾಪಾಡಲು ಸಾಮರ್ಥ್ಯವುಳ್ಳದೇ? ಎಂದು ಸಂದೇಹ ಯುಕ್ತವಾಗಿ ಇಂಗ್ಲೆಂಡಿನಲ್ಲೇ ಪ್ರಶ್ನಿಸುವರು. ಯುರೋಪಿನ ಸಮುದ್ರವನ್ನು ಕಾಪಾಡುವ ಶಕ್ತಿಯು ಯಾವುದೊಂದೇ ರಾಷ್ಟ್ರಕ್ಕಿಲ್ಲವಾಗುವಂತೆ, ಇಟಲಿಯು ಮಾಡಿಟ್ಟಿರುವುದಂತೆ. ಮಧ್ಯ ಯುರೋಪಿನಲ್ಲಂತೂ ಜರ್ಮನಿಯೇ ಪ್ರಬಲವೆನ್ನುತ್ತಾರೆ.

ಜಪಾನಿಗೆ ಯಾವ ಸಹಾಯವನ್ನೂ (ಹಣ, ಹತ್ಯಾರು, ಎಣ್ಣೆ ಮೊದಲಾದುವು) ಮಾಡುವುದಿಲ್ಲೆಂದು ಬಾಯಿಂದ ಹೇಳಬಹುದೇ ವಿನಾ, ಕರಾರುಗಳನ್ನು ಅಳಿಸಲಾಗುವುದಿಲ್ಲ. ಇಂಗ್ಲೆಂಡು ನಿರುಪಾಯವಾಗಿದೆ. ಆದರೆ, ಜಪಾನಿನ ಸರಕನ್ನು ಬಹಿಷ್ಕರಿಸಲು ಯಾವ ಆತಂಕವೂ ಇಂಗ್ಲೆಂಡಿಗೆ ಇಲ್ಲ.

ಯುದ್ಧಕ್ಕೆ ಖಂಡಿತವಾಗಿಯೂ ಸಿದ್ಧವಾಗದೆ, ಸುಮ್ಮನೆ ಬಲಪ್ರದರ್ಶನವು ಪ್ರಯೋಜನವಲ್ಲ. ಬ್ರಿಟನ್ನು ಶಾಂತಿಗಾಗಿಯೇ ಪ್ರಯುಕ್ತಿಸಿಧ ರಾಷ್ಟ್ರ; ಮುಂದೆಯೂ ಹಾಗಿರುವುದುತ್ತಮ.

ಇಂದಿಗೆ ಇದು ಇಷ್ಟಕ್ಕಿದೆ. ಬ್ರಿಟಿಷ ಮತ್ತು ಅಮೇರಿಕದ ನೌಕಾಸೈನ್ಯಗಳು ಪೂರ್ವ ಸಾಗರಗಳಲ್ಲಿ ಸದ್ಯದಲ್ಲೇ ತಮ್ಮ ವಾರ್ಷಿಕ ‘ಅಭ್ಯಾಸ’ಗಳಲ್ಲೇ ನಿರತವಾಗುವುವು. ಇದರಿಂದ ಜಪಾನು ವಿವೇಕ ಹೊಂದಬಹುದು. ಚೀನಕ್ಕೆ ಸಹಾಯವು ದೊರೆವಷ್ಟು ಸಿಗಬಹುದೇ ವಿನಾ, ಖಂಡಿತವಾಗಿಯೂ ಬೆಂಬಲ ಸಿಗಲಾರದಂತಿದೆ. ಯುರೋಪಿನ ಸ್ಥಿತಿ ಉತ್ತಮವಾಗದ ತನಕ, ಚೀನಕ್ಕೆ ಚೀನವೇ ಬೆಂಬಲ.

---

### ರಾಜಕೀಯ ಕೈದಿಗಳ ಉಪವಾಸ.

ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಹಲವು ರಾಜಕೀಯ ಕೈದಿಗಳು ಉಪವಾಸವಾಗಿದ್ದಾರೆ. ಈ ವಾರ್ತೆಯನ್ನು ಕೊಂಗ್ರೆಸ್ ಮಂತ್ರಿಮಂಡಲಗಳು ಓದುವವೇನೆನ್ನುತ್ತವೆ? ಬಾಬು ರಾಜೇಂದ್ರ ಪ್ರಸಾದರು ಅತ್ತ ತೆರಳಿ ಈ ಕೈದಿಗಳನ್ನು ವಿಚಾರಿಸಿ, ಉಪವಾಸ ಬಿಡುವಂತೆ ಪ್ರೇರೇಪಿಸಲು ಬಿಹಾರ ಮಂತ್ರಿಮಂಡಲವು ನಿಯೋಜಿಸಿದೆ. ಪ್ರಸಾದರ ಮಾತೇ ಮಹಾಪ್ರಸಾದವೆಂದು ಅಂಗೀಕರಿಸುವ ರಾಜಕೀಯ ಕೈದಿಗಳು ಇರಬಹುದು. ಆದರೆ, ಅವರ ಉಪವಾಸದ ಕಾರಣ ವಿಚಾರಿಸಿ, ಅವುಗಳಿಗೆ ಸಮಾಧಾನ ಕೊಡುವುದು ಪ್ರಸಾದರಿಗೂ ಸುಲಭವಾಗದು. ಮರಣೋನ್ಮುಖರಾಗಿದ್ದ ಎಷ್ಟೋ ಇಂತಹ ಕೈದಿಗಳು ಮಹಾತ್ಮಾಜಿಯವರ ಮಾತನ್ನು ಮನ್ನಿಸಿ, ತಾವು ಕೈಕೊಂಡಿದ್ದ ಉಪವಾಸ ವ್ರತವನ್ನು ತ್ಯಜಿಸಿದರು. ಅವರು ಉಪವಾಸಮಾಡುತ್ತಿದ್ದರೆ, ಅದು ಸರಕಾರದ ಮೇಲೆ ಆಕ್ಷೇಪದ ದೆಸೆಯಿಂದಾಗಿದೆಂದು ಭಾವಿಸಿ, ಅವರ ಬಿಡುಗಡೆ ಸಾಧ್ಯವಾಗದೆಂದು ಅಧಿಕಾರಿಗಳು ತಿಳಿಸಿದರು. ಅದಾಗಿ ಮೂರು ತಿಂಗಳು ಮೀರಿದೆ. ಪರಿಣಾಮವೇನಾಗಿದೆ? ಕೊಂಗ್ರೆಸು ಮಂತ್ರಿಗಳಿರುವ ಪ್ರಾಂತ್ಯಗಳಲ್ಲಿರುವ ಇಂತಹ ಕೈದಿಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಇದೇ ಈಗಣ ಇವರ ಉಪವಾಸಕ್ಕೆ ಕಾರಣವಾಗಿದೆ. ಕಾದು ಕಾದು ಸಾಕಾಗಿ ಕೊನೆಗೆ ಹೀಗೆ ಅವರು, ವರ್ತಿಸಬೇಕಾಯಿತು. ಸ್ವಾತಂತ್ರ್ಯ ಅಥವಾ ಮರಣ ಎಂಬುದೇ ಮೂಲಮಂತ್ರವಾಗಿದ್ದ ಈ ಕೈದಿಗಳು ಈಗ ಸ್ವಾತಂತ್ರ್ಯ ಸಿಗದ ಕಾರಣ ಮರಣಕ್ಕೆ ಸಿದ್ಧರಾಗಿ, ಜನಾಂಗದ ದೃಷ್ಟಿ ಅವರ ಕಡೆಗೆ ತಿರುಗುವಂತೆ ಮಾಡಿರುವರು. ರಾಜಕೀಯ ಚಳವಳದ ಗಢಿಬಿಡಿ ಮುಗಿದೊಡನೆಯೆ, ರಾಜಕೀಯ ಕೈದಿಗಳನ್ನು ಮುಕ್ತಗೊಳಿಸುವುದು ತಪ್ಪಾಗದಷ್ಟೆ. ಕ್ರಾಂತಿಯನ್ನು ಇವರು ಸಂಪೂರ್ಣವಾಗಿ ತ್ಯಜಿಸಿರುವರೆಂದು ತಿಳಿಸಿರುವ ಬಳಿಕವೂ ಇವರನ್ನೇಕೆ ಬಿಡುಗಡೆಮಾಡಿದ್ದಿಲ್ಲ ಎಂಬುದನ್ನು ಇವರಿಗೆ ಪ್ರಸಾದರು ಹೀಗೆ ವಿವರಿಸಿ ಸಮಾಧಾನಗೊಳಿಸುವರೋ ತಿಳಿದಿಲ್ಲ.

### ಮುಂಬಯಿ ಸರಕಾರದ ಋಣವಿಮೋಚನೆಯ ಕಾನೂನು.

ಇನ್ನೂ ಪ್ರಕಟವಾಗಿಲ್ಲ. ಆದರ ಕೆಲವು ತತ್ವಗಳು ಮಾತ್ರ ಪ್ರಕಟವಾಗುತ್ತಾ ಇವೆ. ಚಿಕ್ಕ ಭೂಮಿಗಳ ರೈತರ ಸಾಲಗಳನ್ನು ಒಂತೆರ ಬೇಕಾದ ಅವಧಿಯನ್ನು ಒಂದು ವರ್ಷದ ತನಕ ಮನ್ನಿಮಾಡುವುದು; ಎಂದರೆ ಒಂದು ವರ್ಷ ಸಾಲದ ಗೊಡವೆಯನ್ನು ರೈತನು ಮರೆವಂತೆ ಮಾಡುವುದು, ಈ ಸೂತ್ರಗಳಲ್ಲಿ ಒಂದು. ಸಾಲಗಳನ್ನು ಇಳಿಸುವುದು; ಬಡ್ಡಿ ಅಸಲು ಕೂಡಿಸಿ, ಅದರ ಮೊಬಲಗನ್ನು ಕಿರಿದಾಗಿಸಿ, ರೈತನ ಹಿಡಿತದೊಳಗೆ ತರುವುದು; ಸಾಲಕೊಡುವವರ ಹೆಸರುಗಳನ್ನು ರಿಜಿಸ್ಟರು ಮಾಡಿಸುವುದು, ಅವರಿಂದ ತೆರಿಗೆ ವಿಧಿಸುತ್ತ ಲೈಸನ್ಸ ಕೊಡುವುದು — ಇವಿಷ್ಟು ಪ್ರಕಟ ವಿಷಯಗಳು. ಸಾಲಗಳನ್ನು ಪಂಚಾಯತಿಗೆ ಒಪ್ಪಿಸಿ ರಾಜೀಮೂಲಕ ಇತ್ಯರ್ಥಿಸಲು ಮದ್ರಾಸಿನಲ್ಲಿರುವ ಕಾನೂನು ನಿಷ್ಪ್ರಯೋಜಕವೆಂದು ಇಲ್ಲಿ ತಿಳಿದು ಬಂದಿದೆ. ಅಸಲು ಮಿತಿಗಿಂತ ಹೆಚ್ಚಾಗುತ್ತ ಕೂಡಿಬರುವ ಬಡ್ಡಿಯನ್ನು ಅಗಾಧವಷ್ಟು ನಜಾಪಡಿಸುವ ಪ್ರಯತ್ನಗಳು ಮದ್ರಾಸು ಮಸೂದೆಯಲ್ಲಿವೆ. ಬೊಂಬಾಯಿ ಪ್ರಾಂತ್ಯವು ಪಠಾಣ ಸಾಲಗಾರರ ಕೈಯಿಂದ ಬಡ ರೈತರನ್ನು ಹೇಗೆ ಕಾಪಾಡಬಲ್ಲುದೋ ನೋಡಬೇಕು. ಏಕೆಂದರೆ, ಈ ಮಹಶಿಯರು ಸಾಲಕೊಟ್ಟ ದಿನದಿಂದ ಕೋಲನ್ನು ಪ್ರಯೋಗಿಸಿ ವಸೂಲಿಗೆ ತೊಡಗಿ ನಾನಾ ಅತ್ಯಾಚಾರಗಳನ್ನು ಮಾಡುತ್ತ, ಕೊನೆಗೆ ದಂಗೆಗಳುಂಟಾಗಲೂ ಕಾರಣರಾಗುವುದುಂಟಷ್ಟೆ. ಆದರೆ, ಮದ್ರಾಸು ಮಸೂದೆಯಲ್ಲಿ ಕುರಾನಿನ ಪವಿತ್ರಧರ್ಮವನ್ನು ದೂರುತ್ತಿರುವವರು ಬೊಂಬಾಯಿಯ ಮಸೂದೆಯಲ್ಲಿ ಯಾವ ಅಧರ್ಮವನ್ನು ಕಾಣುವರೋ ನೋಡಬೇಕು.

---

## 1938

### ಪ್ರಖ್ಯಾತರಾಗಿರುವ ಒಬ್ಬ ಜೋಯಿಸರ ಭವಿಷ್ಯವಾದ.

**“ಇಂತಹ ಹಾಳು ಸಂವತ್ಸರ ಮತ್ತೊಂದಿಲ್ಲ”**

ಕರಾಚಿಯ ಪ್ರಖ್ಯಾತ ಜೋಯಿಸ ಪಂಡಿತ ಎಮ್. ಎಸ್. ಶರ್ಮರು ಹೀಗೆ ಪ್ರಕಟಿಸಿರುವರು:—

ಈ ವರ್ಷ ಗ್ರಹಚಲನೆ ಮತ್ತು ಕೂಟಗಳ ಫಲವಾಗಿ ಯುದ್ಧ, ಭೂಕಂಪ, ರೈಲು ಅನಾಹುತ, ವಿಮಾನ ಪತನ ಮೊದಲಾದುವುಗಳಿಂದ ಅಸಂಖ್ಯಾತ ಮರಣಗಳಾಗುವುವು.

ಸ್ಪೆಯಿನಿನಲ್ಲಿ ಪ್ರಜಾಪ್ರಭುತ್ವವೇ ನೆಲೆಗೊಳ್ಳುವುದು.

ಜರ್ಮನಿಯು ಪುನಃ ತನ್ನ ವಸಾಹತುಗಳನ್ನು ಲಭಿಸಿಕೊಳ್ಳುವುದು. ರಷ್ಯದೊಡನೆ ಯುದ್ಧವಾಗಬೇಕಾದೀತು.

ಇಂಗ್ಲೆಂಡು ಶಾಂತವಾದಿಯಾಗಿ, ಮಹಾರಾಷ್ಟ್ರಗಳ ಪರಿಷತ್ತನ್ನು ಕೂಡಿಸಿ (ಮೇ ತಿಂಗಳಲ್ಲಿ) ಅಮೇರಿಕದೊಡನೆ ಪರಾಮರ್ಶಿಸಿ, ಸದ್ಯಕ್ಕೆ ಜಯಶೀಲವಾಗಬಹುದಾದರೂ, ಮಹಾಯುದ್ಧವು ಪ್ರಾರಂಭವಾಗಿ, ಯುರೋಪಿನ ಹೆಚ್ಚಿನ ರಾಷ್ಟ್ರಗಳು ಅದರಲ್ಲಿ ಸೇರುವಂತಾದೀತು. ಬ್ರಿಟನ್ನಿನಲ್ಲಿ ಲೇಬರ್ ಪಕ್ಷವು ಅಧಿಕಾರ ಹೊಂದುವುದು. ಇತರ ರಾಜ್ಯಗಳು ಬ್ರಿಟಿಷರೊಡನೆ ವ್ಯಾಪಾರದಲ್ಲಿ ತುಂಬ ಸ್ಪರ್ಧೆಗೆ ನಿಲ್ಲುವುವು.

ಅಬಿಸೀನಿಯದಲ್ಲಿ ಉಂಟಾಗುವ ಸಮಸ್ಯೆಗಳಿಂದ ಇಟಲಿಯು ಪೀಡಿತವಾಗಿ, ಕೊನೆಗೆ ಅಬಿಸೀನಿಯವನ್ನು ಕಳೆದುಕೊಳ್ಳಲೂಬಹುದು. ಮುಸ್ಸೊಲಿನಿಗೆ ವಿರುದ್ಧವಾದ ಒಂದು ಪಕ್ಷವು ಉಂಟಾಗಿ ರಗಳೆಗಳಾಗುವುವು; ಈತನೆ ಕೊನೆಗೆ ಜಯಶೀಲನಾಗಿ ಶಾಂತಿಯನ್ನುಂಟುಮಾಡುವನು.

ರಷ್ಯದಲ್ಲಿ ಒಳಜಗಳವುಂಟಾಗುವುದು; ಸ್ಟೆಲಿನ್ (ಡಿಕ್ಟೇಟರ)ವನ್ನೆ ವಿರೋಧಿಸುವರು; ರಷ್ಯವೆಲ್ಲ ಕತ್ತಲಾಗಿ, ಅನಾಯಕವಾಗುವುದು;

ಟರ್ಕಿಯಲ್ಲಿ ರಾಜಕೀಯ ಕೋಲಾಹಲವು ಪ್ರಬಲವಾಗಿ, ಮೇಲೇಳುವ ಚಳವಳವು ಜಯಶೀಲವಾಗುವುದು; ಈಗಣ ಸರಕಾರವು ಅದಕ್ಕೆ ತಲೆಬಾಗುವುದು.

ಮಹಮ್ಮದೀಯ ರಾಜ್ಯಗಳು ತಂತಮ್ಮ ರಾಜ್ಯಗಳ ಪರ್ಯಾಲೋಚನೆಯಲ್ಲೇ ಮಗ್ನರಾಗುವರು ಹೊರತು, ಇದರಲ್ಲಿ ಕೈಯಿಕ್ಕರು. ಇಂತಹ ರಾಜ್ಯಗಳಲ್ಲಿ ಮುಖ್ಯಾಧಿಕಾರಿಯಾದ ಮಂತ್ರಿಯೊಬ್ಬನ ಕೊಲೆಯಾಗುವುದು; ನಂತರ ಅಲ್ಲೆಲ್ಲ ಕ್ರಾಂತಿಗೆ ಪ್ರಾರಂಭವಾದೀತು; ಕೊನೆಗೆ ಅದು ಶಾಂತವಾಗುವುದು.

ಜಪಾನು ಸದ್ಯದಲ್ಲೇ ಯುದ್ಧದಲ್ಲಿ ಜಯ ಹೊಂದದೆ ಹಿಮ್ಮೆಟ್ಟುವುದು. ದೊರೆತುದನ್ನೆ ಬಲಪಡಿಸುವುದು. ಅದೇ ಕಾಲಕ್ಕೆ ಚೀನವು ತನ್ನ ಬೆಂಬಲವನ್ನೆಲ್ಲ ವ್ಯವಸ್ಥೆಗೊಳಿಸುವುದು.

#### ಭಾರತ ವರ್ಷ

ಇದೊಂದು ಬಹಳ ದುಷ್ಕಾಲದ ಸಂವತ್ಸರವಾಗಿದೆ. ಕೊಂಗ್ರೆಸು ಸರಕಾರಗಳು ಶಾಂತಿ ಸ್ಥಾಪನೆ ಮಾಡಲು ತುಂಬ ಕೆಲಸ ಮಾಡಬೇಕಾಗುವುದು. ರೈತರ ಸಂಘಗಳೇ ಹೆಚ್ಚಾಗಿ ರಾಜಕೀಯ ಹಕ್ಕುಗಳಿಗಾಗಿ ಬಹಳ ಮುಂದೊತ್ತುವುವು. ಕೊಂಗ್ರೆಸ್ ಪಕ್ಷಗಳೊಳಗೆ ಪ್ರಾಂತ್ಯಗಳಲ್ಲೆಲ್ಲ ಒಮ್ಮನಸ್ಸಿಲ್ಲದೆ, ಎಷ್ಟೋ ಕಡೆ ಕೊಂಗ್ರೆಸು ಮಂತ್ರಿಗಳು ರಾಜೀನಾಮೆ ಕೊಡಬೇಕಾದೀತು. ಇಬ್ಬರು ಯಾ ಮೂವರು ಕೊಂಗ್ರೆಸು ಮುಖಂಡರು ಮರಣಪಡುವರು. ಸಂಯುಕ್ತ ಪ್ರಾಂತ್ಯ ಮತ್ತು ಅಸ್ಸಾಮುಗಳಲ್ಲಿ ನೆರೆಯಿಂದ ವಿಶೇಷ ನಷ್ಟವಾಗುವುದು. ಸಿಂಧ, ಬೊಂಬಾಯಿ, ಪಂಜಾಬುಗಳಲ್ಲಿ ದಂಗೆಗಳಾಗುವುವು.

ಮಹಾಧಿಕಾರಿಗಳು ಇಂಗ್ಲೆಂಡಿನ ರಾಜಕೀಯ ವಿಚಾರ ವಿಮರ್ಶೆಗಾಗಿ ತೆರಳಬಹುದು; ಈ ವಿಮರ್ಶೆಯನ್ನು ಭಾಗವಹಿಸಲು ಕೊಂಗ್ರೆಸು ಮುಖಂಡರನ್ನು ಲೇಬರ್ ಸರಕಾರವು ಇಂಗ್ಲೆಂಡಿಗೆ ಆಮಂತ್ರಿಸಬಹುದು.

ಎಪ್ರಿಲ್ ತಾ. 18ರ ತನಕ ಸಾಂಕ್ರಾಮಿಕ ರೋಗ ಹಾವಳಿ ಇರುವುದು. ಎಳೇ ಮಕ್ಕಳ ಮರಣಗಳು ಹೆಚ್ಚುವುವು. ಜನಾಂಗದ ಸಂಪತ್ತೂ, ವ್ಯಾಪಾರಾದಿಗಳೂ ಕುಂದುವುವು. ನಿರುದ್ಯೋಗವೇ ಎಲ್ಲೆಲ್ಲೂ ಹೆಚ್ಚುವುದು. ನಾಟಕಶಾಲೆ ಸಿನೆಮಗಳಲ್ಲಿ ಬೆಂಕಿಯ ಕಪಟ ಹೆಚ್ಚುವುದು. ಬೆಂಕಿ ಹೊತ್ತಿಸುವುದು, ದಂಗೆ ಎಬ್ಬಿಸುವುದು, ದುಷ್ಕರಗಳು ಮೊದಲಾದುವು ಎಲ್ಲೆಲ್ಲೂ ಹೆಚ್ಚಬಹುದು.

ಇಷ್ಟು ದುಃಖದಲ್ಲಿ ಸುಖವೆಂದರೆ, ಜೀನಸುಗಳ ಧಾರಣೆ ವಾಸಿಗಳು ಹೆಚ್ಚಾಗಿ, ವ್ಯಾಪಾರಿಗಳಿಗೂ ದಲ್ಲಾಲರಿಗೂ ತುಂಬಾ ಲಾಭವಿದ್ದೀತು.

---

### ಜವಾಹರಲಾಲ ಲಾರ್ಡ್ ಸೆಮ್ಯುವೇಲರ ಬೇಟಿ

ಹಿಂದೂದೇಶದ ಪ್ರವಾಸಗೈಯ್ಯುತ್ತಿದ್ದ ಲೋರ್ಡ್ ಸಾಮುವೇಲರು (ಬ್ರಿಟಿಷ ಸರಕಾರದಲ್ಲಿ ಮಹತ್ವವಿರುವವರು) ಜವಾಹರಲಾಲರನ್ನು ಅಲ್ಲಹಾಬಾದಿನ ಆನಂದ ಭವನದಲ್ಲಿ ಕಂಡರು.

# ಮಂಗಳೂರು.

## ದಕ್ಷಿಣ ಕನ್ನಡ ಜಿಲ್ಲಾ ಮೋಟಾರು ಕೆಲಸಗಾರರ ಸಂಘ.

ಈ ಸಂಘದ ಮಹಾಸಭೆಯು ಇದೇ ೧೯೪೮ನೇ ಇಸವಿ ಜನವರಿ ತಿಂಗಳ ತಾ. ೨೫ನೇ ಆದಿತ್ಯವಾರ ಸಾಯಂಕಾಲ ಘಂಟೆ ೬-೩೦ಕ್ಕೆ ಸರಿಯಾಗಿ ಸಂಘದ ಆಫೀಸಿನಲ್ಲಿ ಜರಗಲಿರುವುದು. ಎಲ್ಲಾ ಸದಸ್ಯರೂ ದಯಮಾಡಿ ಬಂದು ಸಭೆಯ ಉದ್ದೇಶವನ್ನು ಯಶಸ್ವಿಯಾಗಿ ಮಾಡಬೇಕಾಗಿ ವಿನಂತಿ. ಸಂಘದ ಸದಸ್ಯರಲ್ಲಿ ಯಾರಿಗಾದರೂ ಸಭೆಯ ಮುಂದೆ ಇಡಬೇಕಾದ ವಿಷಯಗಳಿದ್ದಲ್ಲಿ, ಅವುಗಳನ್ನು ಕ್ರಮವಾಗಿ ಬರೆದು ತಾ. ೨೦—೧—೧೯೪೮ರ ಒಳಗಾಗಿ ಕೊಡಿಯಾಲಬೈಲು 'ಕೋ-ಒಪರೇಟಿವ್ ಬಿಲ್ಡಿಂಗ್ಸಿ'ನ ಮಾಳಿಗೆಯಲ್ಲಿ ಇರುವ ಸಂಘದ ಆಫೀಸಿಗೆ ತಲ್ಪುವ ಹಾಗೆ ರವಾನಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ. ತದನಂತರ ಬಂದ ಸೂಚನೆಗಳನ್ನು ಮಹಾಸಭೆಯು ಮುಂದಿಡಲಾಗಲಿಕ್ಕಿಲ್ಲ ಎಂದು ಜತೆಕಾರ್ಯದರ್ಶಿಗಳು ತಿಳಿಸುತ್ತಾರೆ.

### ವಿದ್ಯಾಪರಿಷತ್ತು

ಮದ್ರಾಸು ಪ್ರಾಂತಿಕ ೧೯ನೆಯ ವಿದ್ಯಾಪರಿಷತ್ತು ಮಂಗಳೂರಿನಲ್ಲಿ ಜರಗಿಸಬೇಕಾಗಿ ನಿರ್ಣಯವಾಗಿರುತ್ತದೆ. ಈ ಪರಿಷತ್ತಿನ ಬಗ್ಗೆ ಸಿದ್ಧತೆಗಳ ಕುರಿತಾಗಿ ಆಲೋಚಿಸಿ ಸಭೆಯೊಂದು ಶ್ರೀ ಎಂ. ಎಸ್. ಶಿವರಾಂ... ರಾಯರ ಅಧ್ಯಕ್ಷತೆಯಲ್ಲಿ ಕೂಡಿ ಬಂದು, ಪರಿಷತ್ತಿಗಾಗಿ ನಿಧಿ ಕೂಡಿಸುವರೆ ಪರಿಷತ್ತಿನ ನೇತೃತ್ವದಲ್ಲಿ ಒಂದು ಪ್ರದರ್ಶನ ಜರಗಿಸುವುದು, ಅಧ್ಯಕ್ಷರು ಯಾರು ಎಂಬಿವೇ ಮೊದಲಾದ ವಿಚಾರಗಳ ಕುರಿತು ಆಲೋಚಿಸಲಾಯಿತು.

### ಮಂಗಳೂರಿನಲ್ಲಿ ಮೈಸೂರಿನ ಮಹಾರಾಜ ಕೊಲೇಜಿನ ಟೀಮು

ಮೈಸೂರಿನ ಮಹಾರಾಜ ಕೊಲ್ಲೇಜಿನ ಟೀಮು ಒಂದು ಕಳೆದ ವಾರ ಮಂಗಳೂರಿಗೆ ಆಗಮಿಸಿ, ಸ್ಥಳೀಯ ಸ್ಯಾಂಟ್ ಅಲೋಶಿಯಸ್ ಕಾಲೇಜು ಗವರ್ನಮೆಂಟ್ ಕಾಲೇಜು, ಗಣಪತಿ ಹೈಸ್ಕೂಲು ಇವೇ ಮೊದಲಾದ ಟೀಮುಗಳೊಡನೆ ವ್ಹಾಲಿಬೋಲು ಪಂದ್ಯಾಟವನ್ನು ಆಡಿ ಎಲ್ಲದರಲ್ಲಿಯೂ ಜಯಪ್ರದರಾಗಿರುವರು. ಅಲ್ಲದೆ ಕೆನರಾ ಹೈಸ್ಕೂಲಿನೊಡನೆ ನಡೆದ ಬಾಸ್ಕೆಟ್‌ಬೋಲ್ ಪಂದ್ಯಾಟದಲ್ಲೂ ಇವರು ವಿಜಯಿಗಳಾಗಿರುವರು. ಬಾಸ್ಕೆಟ್‌ಬೋಲ್ ಆಟದಲ್ಲಿ ಈ ಟೀಮಿನವರು ಅತ್ಯಂತ ಪ್ರವೀಣರಂತೆ.

### ಮುನ್ಸಿಪಲ್ ಕೌನ್ಸಿಲಿನ ಸಭೆ

ಮಂಗಳೂರು ಮ್ಯುನ್ಸಿಪಾಲಿಟಿಯ ಸಭೆಯೊಂದು ಶ್ರೀಯುತ ಡಾ। ವಿಠ್ಠಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ದಿನ ಜರಗಿ, ನೆಹರು ಮಾತೆಯವರ ನಿಧನದ ಕುರಿತು ಸಂತಾಪಸೂಚಕ ಠರಾವನ್ನು, ಸ್ಯಾಂಟ್ ಜೋಸೆಫ್ ಕೆಥೆಡ್ರಲ್‌ಗೆ ಎಸ್ಟಾಬ್ಲಿಷ್‌ಮೆಂಟಿಗೆ ರೂ. ೨೦೦ ಸಹಾಯಧನವೀಯಬೇಕಾಗಿಯೂ ಠರಾವು ಮಾಡಲಾಯಿತು.

ನಂತರ ಉರ್ವ ಸ್ಟೋರನ್ನು ಪಡೆಕೊಂಡು ಅ೧೫ ಎಕ್ರೆ ೫೦ ಸೆಂಟ್ಸ್ ಸ್ಥಳವನ್ನು ಪ್ಲೋಟುಗಳನ್ನಾಗಿ ಮಾರುವ ಕುರಿತು, ಬಂದ ಜಿಲ್ಲಾ ಕಲೆಕ್ಟರರ ಪತ್ರದ ವಿಚಾರ ಬರಲು, ಹಾಗೆ ಮಾಡಲು ಮ್ಯುನ್ಸಿಪಾಲಿಟಿಗೆ ಬಹಳ ನಷ್ಟ ತಗಲುವುದರಿಂದಲೂ ಹಿಂದೆ ಮ್ಯುನ್ಸಿಪಾಲಿಟಿಯವರು ಆ ಸ್ಥಳವನ್ನು ಹರಿಜನರಿಗೆ ಕೊಡುವ ಕುರಿತು ಸರಕಾರದೊಡನೆ ವಿನಂತಿಸಿರುವುದರಿಂದ, ಸರಕಾರವು ಹಾಗೆ ಮಾಡುವಂತೆ ಕಲೆಕ್ಟರರನ್ನು ವಿನಂತಿಸಬೇಕಾಗಿ ಠರಾವು ಮಾಡಲಾಯಿತು.

ನಂತರ ಹೋಟೇಲುಗಳ ಲೈಸನ್ಸ್ ಮತ್ತು ಪಿ. ಎ. ಸರ್ಕಸಿನವರಿಗೆ ವಿಧಿಸಲಾದ ನೆಲ ಬಾಡಿಗೆಯ ವಿಷಯವು ಚರ್ಚೆಗೆ ಬರಲು, ಅಂಥ ಸಂಸ್ಥೆಗಳಿಗೆ ಲೈಸನ್ಸನ್ನು ಕೊಡಬೇಕಾಗಿ ಕಮಿಷನರು ಕೌನ್ಸಿಲನ್ನು ಕೇಳಿಕೊಳ್ಳಬೇಕಾಗಿ ಸೂಚನೆಯು ಮುಂದೆ ಬಂತು. ಈ ಕುರಿತು ದೊಡ್ಡ ಪ್ರಶ್ನೋತ್ತರವು ನಡೆಯಿತು. ಈ ವಿಷಯದಲ್ಲಿ ಒಂದು ಠರಾವು ಬರಲಿದ್ದುದರಿಂದ ವಿಚಾರವು ಮುಂದಿಡಲಾಯಿತು.

### ಅರ್ಜಿ ಡಿಸ್‌ಮಿಸ್ ಮಾಡಲಾಯಿತು

ಆರ್ಯ ಶಂಕರಶಾಂತಿಯವರು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಸಹಸ್ರಾಭಿಷೇಕ ವ್ರತ ಜರಗಿಸದಂತೆ ನಿರ್ಬಂಧ ಹಾಕಬೇಕಾಗಿ ಬಂದ ಶ್ರೀ ಕೆ. ಆರ್. ಗುರುವರ ಅರ್ಜಿಯು ದಿವಿಜನಲ್ ಮೆಜಿಸ್ಟ್ರೇಟರಿಂದ ಡಿಸ್‌ಮಿಸ್ ಮಾಡಲಾಯಿತು. ಈ ಅರ್ಜಿಯಲ್ಲಿ ಹಿಂದೆ ಈ ದೇವಾಲಯದ ಕುರಿತು ತ್ಯಾರಿಯಾದ ೧೯೪೧ನೆ ಕ್ರಮವನ್ನು ಮನ್ನಿಸದವರಿಗೆ ತಕ್ಕ ಶಿಕ್ಷೆಯಾಗಬೇಕಾಗಿ ಕೋರಲಾಗಿತ್ತಂತೆ.

### ತಪ್ಪಿತನಲ್ಲವೆಂದು ಬಿಡಲಾಯಿತು

ಕೆಲಸಮಯದ ಹಿಂದೆ ಹಿಂಸೆ ನಡೆಯಿಸಿದನೆಂಬ ಅಪಾದನೆಗೆ ಒಳಗಾಗಿ, ಡಿಪ್ಯೂಟಿ ಕಲೆಕ್ಟರರ ವಿಚಾರಣೆಗೆ ಒಳಗಾಗಿ ಶಿಕ್ಷೆ ವಿಧಿಸಲ್ಪಟ್ಟ ಬಾಬು ಎಂಬವನ ಅಪೀಲು ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ ತೀರ್ಮಾನವಾಗಿ ಬಾಬುವು ತಪ್ಪಿತನಲ್ಲವೆಂದಾಗಿದೆ.

### ಹುಚ್ಚಿಯೊಬ್ಬಳು ವೈದ್ಯನ ತಲೆ ಕಡಿದಳು

ಮೊನ್ನೆ ೨೩ ೧೯೪೮ ರಾತ್ರಿ ಕಡಬದಲ್ಲಿ ಹುಚ್ಚಿಯೊಬ್ಬಳು ತನ್ನ ಚಿಕಿತ್ಸೆಗಾಗಿ ಮಲಬಾರಿನಿಂದ ಸ್ಪೆಶಲ್ ಆಗಿ ತರಲ್ಪಟ್ಟ ಒರ್ವ ವೈದ್ಯನ ತಲೆಯನ್ನು ಕಡಿದ ವಾರ್ತೆಯು ಬಂದಿರುತ್ತದೆ.

ಕಡಬದ ಈ ಯುವತಿಗೆ ಉನ್ಮಾದ ಉಂಟಾಗಿ ಮಲಬಾರಿನ ಪ್ರಖ್ಯಾತ ವೈದ್ಯರನ್ನು ಚಿಕಿತ್ಸೆಗೆ ಕರೆಯಲಾಗಿತ್ತಂತೆ. ಈ ಸ್ತ್ರೀಯನ್ನು ಒಂದು ಕೋಣೆಯಲ್ಲಿ ಹಾಕಿ, ಬಾಗಿಲನ್ನು ಸಂಕೋಲೆಯಿಂದ ಭದ್ರಪಡಿಸಿ, ವೈದ್ಯರು ಮಧ್ಯದ ಕೋಣೆಯಲ್ಲಿ ಮಲಗಿದ್ದರಂತೆ. ಮಧ್ಯರಾತ್ರಿಯಲ್ಲಿ ಹುಚ್ಚಿಯು ಹೇಗೋ ಹೊರಗೆ ಬಂದು ಅಲ್ಲೇ ಬಿದ್ದಿರುವ ಪಿಂಡುಕತ್ತಿಯಿಂದ ಹೊರಗಿನಲ್ಲಿ ಮಲಗಿದ್ದ ಮಲೆಯಾಳ ವೈದ್ಯನ ತಲೆಯನ್ನು ಕಡಿದು ಬಿಟ್ಟು ಅವಕ್ಕಾಗಿ ಅಲ್ಲೇ ಸಂತು ಬಿಟ್ಟಳಂತೆ. ಈ ವಿಷಯ ಇತರರಿಗೆ ತಿಳಿದುಬರಲು ಪೋಲೀಸರು ಆಕೆಯನ್ನು ಬಂಧಿಸಿರುವರು.

### ರೈತರ ಋಣಸಂದಾಯ ಮಸೂದೆ

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಮತದಾರರ ಸಭೆಯೊಂದು ಧರ್ಮಸ್ಥಳದ ಶ್ರೀ ಮಾನ್ ಮಂಜಯ್ಯ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಜೈನ್ ಬೋರ್ಡಿಂಗ್ ಹೌಸಿನಲ್ಲಿ ಕೂಡಿ ಬಂದು, ಮೇಲಿನ ಆಕ್ಟಿನ ಪ್ರತಿಯೊಂದು ಆಕ್ಟಿನ ೫ ನೆಯ ಪರಿಶೀಲನೆಯು ನಡೆದು, ಆಕ್ಟಿನಲ್ಲಿ ಕೆಲವೊಂದು ಬದಲಾವಣೆಗಳಾಗಬೇಕೆಂಬ ನಿರ್ಣಯ ಪಾಸಾಗಿ, ಅಗತ್ಯವಾದ ತಿದ್ದುಪಡಿಯನ್ನು ಶ್ರೀ ಹೆಗಡೆಯವರ ಮೂಲಕ ಕೌನ್ಸಿಲ್ ಸೆಕ್ರೆಟರಿಯವರಿಗೆ ಬರಹ ಮೂಲಕ ತಿಳಿಸಲಾಗಿದೆ.

### ದ. ಕ. ಜಿಲ್ಲೆಯ ಭೂಮ್ಯಾಲಿಕರ ಯಾನೆ ವರ್ಗದಾರರ ಮಹಾಸಭೆ

ಪ್ರಕೃತ ನ್ಯಾಯಪೀಠಾಯುಕ್ತ ಸಭೆಗಳಲ್ಲಿ ನಡೆಯಲಿಕ್ಕಿರುವ ಬೇಸಾಯಗಾರರ ಸಾಲ ನಿವೃತ್ತಿ ನಿಯಾಮಕ ಮಸೂದೆ ಕುರಿತು ರೈತರ ವ ವರ್ಗದಾರರ ಅಭಿಪ್ರಾಯವನ್ನು ಪಡಕೊಳ್ಳುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ರೈತರ ಯಾ ಭೂಮ್ಯಾಲಿಕರ ಸಂಘದ ಕಡೆಯಿಂದ ಎಲ್ಲಾ ವರ್ಗದಾರರ ವ ಬೇಸಾಯಗಾರರ ಮಹಾಸಭೆಯೊಂದನ್ನು ಇದೇ ಜನವರಿ ತಿಂಗಳು ೨೫ನೇ ಮಂಗಳವಾರ ಮಧ್ಯಾಹ್ನ ಘಂಟೆ ೨ಕ್ಕೆ ಬೆಳ್ತಂಗಡಿ ಪಂಚಾಯತಿ ಆಫೀಸಿನಲ್ಲಿ ಕೂಡಿಸುವುದಾಗಿ ನಿಶ್ಚೈಸಿಯದೆ. ಆದುದರಿಂದ ಜಿಲ್ಲೆಯ ಎಲ್ಲಾ ರೈತರೂ ವರ್ಗದಾರರೂ ವ ಬೇಸಾಯಗಾರರೂ ಆಗತಕ್ಕ ಬರಬೇಕಾಗಿ ಅಪೇಕ್ಷಿಸೋಣಾಗಿಯದೆ.

### ಭಾಗವತ ವಾಚನ

ಬರುವ ಆದಿತ್ಯವಾರ ತಾ. ೨೫ರಲ್ಲು ಬೆಳಗ್ಗೆ ಘಂಟೆ ೮ಕ್ಕೆ ಕೆನರಾ ಹೈಸ್ಕೂಲಿನ ಬಳಿ ಶ್ರೀ ಕೃಷ್ಣಮಂದಿರದಲ್ಲಿ ಶ್ರೀಯುತರಾದ ಹಣಂಬೂರು ರಂಗಭಂಡಾರಿ ಮುತ್ತ ಸೇವಗಾರ ಮಾಧವ ಶೆಟ್ಟಿ ಇವರಿಬ್ಬರೂ ಕೂಡಿ 'ಭಕ್ತಿ ಸುಧಾಮನ ಚರಿತ್ರೆ' ಎಂಬ ವಿಷಯವನ್ನು ಭಾಗವತ ಗ್ರಂಥದಿಂದ ಅರ್ಥ ಸಹಿತ ಓದಿ ಹೇಳುವರು. ಶ್ರೀ ಕೃಷ್ಣ ... ವೃಂದದ ಕೆಲಸದಲ್ಲಿ ಸರ್ವರೂ ಭಾಗಿಗಳಾಗುವಂತೆ ಪ್ರೋತ್ಸಾಹಿಸಬೇಕಾಗಿ ಶ್ರೀ ವಿವೇಕಾನಂದ ಸಭೆಯ ಕಾರ್ಯದರ್ಶಿಯವರ ವಿನಂತಿಯಾಗಿರುತ್ತದೆ.

### ಪ್ರಕಟಣೆ

ತಾ. ೧೫-೧-೧೯೪೮ನೇ ರವಿವಾರ ಬಂಟ್ವಾಳ ಕೊಂಗ್ರೆಸ್ ಆಫೀಸಿನಲ್ಲಿ ಜಿಲ್ಲಾ ಕೊಂಗ್ರೆಸ್ ಕಮಿಟಿಯಲ್ಲಿ ಮಂಗಳೂರು ತಾಲೂಕಿಗೆ ಇರುವ ೧೧ ಸೀಟುಗಳಿಗಾಗಿ ನಡೆದ ಚುನಾವಣೆಯ ಫಲಿತಾಂಶ.

೧. ಪೆಜಮಾಡಿ ಸರ್ಕಲ್—ಪಿ. ರಾಮದಾಸ ನಾಯ್ಕ ೨. ಬಪ್ಪನಾಡು ಸರ್ಕಲ್ ಕೆ ಅಪ್ಪಾಜಿ ರಾವ್ ಮತ್ತು ಕೆ. ಮಾಧವ ಶೈ ೩. ಮುಂಡ್ಕೂರು ಸರ್ಕಲ್—ಜಿ ಕೃಷ್ಣರಾಯ ಪ್ರಭು, ೪. ಬಜಪೆ ಸರ್ಕಲ್—ಬಿ. ಉಗ್ಗಪ್ಪ ಆಳ್ವ. ೫. ಸುರತ್ಕಲ್ ಸರ್ಕಲ್—ವಿಟ್ಠಲ ಶೆಟ್ಟಿ. ೬. ಪಣಂಬೂರು ಸರ್ಕಲ್—ಬಿ. ಕೆ. ವೆಂಕಪ್ಪ, ೭. ದೇರೆಬೈಲು ಸರ್ಕಲ್—ಬಿ. ನಾಗೇಂದ್ರನಾಥ ಬಾಳಿಗ ೮. ಉಳ್ಳಾಲ ಸರ್ಕಲ್—ಬಿ. ಆರ್. ಕಾಮತ್. ೯. ಬಂಟವಾಳ ಸರ್ಕಲ್—ಬಿ. ಕೇಶವ ಬಾಳಿಗ, ೧೦. ಪಾಣೆಮಂಗಳೂರು ಸರ್ಕಲ್—ಉಪೇಂದ್ರ ಪೈ ಮತ್ತು ಪಿ. ಕೇಶವ ದೇವಣ್ಣ ಪೈ ೧೧. ಪುಂಜಾಲಕಟ್ಟೆ ಸರ್ಕಲ್—ಬಿ. ನಾರಾಯಣ ಪೈ.

ಮೇಲೆ ಕಾಣಿಸಿದ ಸರ್ಕಲುಗಳ ಪೈಕಿ ೯ ಸರ್ಕಲುಗಳಿಗೆ ಪ್ರತಿಸ್ಪರ್ಧಿಗಳಿಲ್ಲದ ಕಾರಣ, ನೊಮಿನೇಶನ್ ಹಾಕಿದ ಸದ್ರಿ ಒಂಭತ್ತು ಮಂದಿಯನ್ನು ಆಯಾ ಸರ್ಕಲುಗಳಿಗೆ ಡಿ. ಸಿ. ಸಿ. ಸದಸ್ಯರಾಗಿ ಚುನಾಯಿಸಲಾಯಿತು.

ಬಾಕಿ ಉಳಿದ ಎರಡು ಸರ್ಕಲುಗಳಿಗೆ ಪ್ರತಿಸ್ಪರ್ಧಿಗಳಿರುವ ಕಾರಣ, ತಾ. ೧೬. ೧-೧೯೪೮ನೇ ಸೋಮವಾರ ಸಾಯಂಕಾಲ ಗಂಟೆ ೫—೩೦ರ ಒಳಗೆ ನೊಮಿನೇಶನ್ ಪತ್ರಗಳನ್ನು ಯಾರಾದರೂ ಹಿಂದೆಗೆಯದಿದ್ದಲ್ಲಿ ಚುನಾವಣೆಯು ತಾ. ೨೪-೧-೧೯೪೮ರಲ್ಲು ಜರಗಿಸಲ್ಪಡುವುದು ಎಂದು ಬಿ. ನಾಗೇಂದ್ರನಾಥ ಬಾಳಿಗ, ರಿಟರ್ನಿಂಗ್ ಆಫೀಸರ, ಮಂಗಳೂರು ತಾಲೂಕು ಇವರು ತಿಳಿಸುತ್ತಾರೆ.

# ತಾಲೂಕುಗಳಿಂದ

### ಕಾಸರಗೋಡು

ಈ ತಾಲೂಕಿನಿಂದ ಜಿಲ್ಲಾ ಕಮಿಟಿಗೆ ೧೦ ಪ್ರತಿನಿಧಿಗಳು ಆರಿಸಲಿದ್ದಾರೆ. ಈ ಚುನಾವಣೆಯಲ್ಲಿ ಉಮೇದುವಾರರಾಗಲು ಅಪೇಕ್ಷಿಸುವವರು ಈ ತಿಂಗಳ ತಾ. ೨೩ರೊಳಗೆ ತಮ್ಮ ನಾಮಪತ್ರಗಳನ್ನು ಸದಸ್ಯತನದ ವರ್ಗಣೆ ರೂಪಾಯಿ ೧ರ ಸಮೇತ ಕಾಸರಗೋಡು ತಾಲೂಕು ಕಾಂಗ್ರೆಸ್ ಆಫೀಸಿಗೆ ಕಳುಹಿಸತಕ್ಕದ್ದು. ಉಮೇದುವಾರರು ಕಾಂಗ್ರೆಸ್ ಮೆಂಬರರಾಗಿದ್ದು ಸತತ ಖಾದಿ ಧರಿಸುವವರೇ ಆಗಿರತಕ್ಕದ್ದು.

ಮತದಾರರ ಸಂಘಗಳು—೧. ಮಂಜೇಶ್ವರ ಮತ್ತು ವರ್ಕಾಡಿ ಸರ್ಕಲ್. ೨. ಕೊಡ್ಲಮೊಗರು ಮತ್ತು ಬಂಬ್ರಾಣ ಸರ್ಕಲ್. ೩. ಬೆಪ್ಪಾರು ಮಂಗಲ್ಪಾಡಿ ಸರ್ಕಲ್. ೪. ಪೆರ್ಲ ಮತ್ತು ಅಂಗಡಿಮೊಗರು ಸರ್ಕಲ್. ೫. ಅದೂರು ಸರ್ಕಲ್ ಮತ್ತು ಪೆರಂಬಳ, ಮುಳಿಯಾರು. ೬. ಕಾಸರಗೋಡು ಪಟ್ಟಣ. ೭. ಸಲ್ಯಕೆರೆ ಸರ್ಕಲ್. ೮. ಅಜಾನೂರು ಸರ್ಕಲ್. ೯. ಪೆರ್ಡಾಲ್ ಸರ್ಕಲ್ ೧೦. ಹೊಸದುರ್ಗ ಸರ್ಕಲ್.

ನಾಮಪತ್ರಗಳನ್ನು ಹಿಂದೆಗೆಯುವ ಕೊನೆಯ ತಾರೀಕು ೨೫—೧—೧೯೪೮. ಕಾಸರಗೋಡು ಪಟ್ಟಣದ ಕಾಂಗ್ರೆಸ್ ಕಮಿಟಿಯ ಚುನಾವಣೆ ಮತ್ತು ತಾಲೂಕು ಕಮಿಟಿಗೆ ೬ ಪ್ರತಿನಿಧಿಗಳನ್ನು ಆರಿಸುವುದು. ಇವೆರಡರ ಬಗ್ಗೆ ಕಾಸರಗೋಡಿನ ಸದಸ್ಯರ ಸಭೆಯು ಇದೇ ತಾ ೩೦ರಲ್ಲಿ ಕಾಂಗ್ರೆಸ್ ಆಫೀಸಿನಲ್ಲಿ ಕೂಡುವುದು ಎಂದು ತಾಲೂಕು ಕೊಂಗ್ರೆಸ್ ಕಮಿಟಿಯ ಸೆಕ್ರೆಟರಿ ಎಂ. ಉಮೇಶರಾಯರು ತಿಳಿಸುತ್ತಾರೆ.

### ಪಕ್ಷಮತ್ಸರಗಳೂ, ಮಾರವಾಡಿಗಳು ಹಳ್ಳಿಬೇಂಕುಗಳ ಮಹಾಪೀಡೆಗಳು. ಕಾಸರಗೋಡಿನಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರರಾದ ರಾವ್ ಬಹದ್ದೂರ್ ಗಿಂಡಯ್ಯನವರ ಭಾಷಣ.

ಕಾಸರಗೋಡಿನ ಟೌನ್ ಕೋ-ಒಪರೇಟಿವ್ ಬೇಂಕಿನ ರಜತೋತ್ಸವವು ಕಳೆದ ೧೬ನೇ ತಾರೀಕಿನಲ್ಲಿ ಬೇಂಕಿನ ಸದನದಲ್ಲಿ ಮದ್ರಾಸಿನ ಸಹಕಾರ ಸಂಘಗಳ ರಿಜಿಸ್ಟ್ರಾರಾದ ಶ್ರೀಮಾನ್ ಗಿಂಡಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಈ ಸಮಯದಲ್ಲಿ ಊರ ಪರವೂರ ಮಹಾಶಯರು ನೆರೆದು ಬಂದಿದ್ದರು.

ಸಮಾರಂಭವು ವಂದೇ ಮಾತರಂ ಹಾಡಿನೊಂದಿಗೆ ಸಾಯಂಕಾಲಕ್ಕೆ ಪ್ರಾರಂಭವಾಯಿತು. ಸದರಿ ಬೇಂಕಿನ ಕಾರ್ಯದರ್ಶಿಗಳು ಕಳೆದ ೨೫ ವರ್ಷಗಳಲ್ಲಿ ನಡೆದ ಬೇಂಕಿನ ಬೆಳವಣಿಗೆಯ ಕುರಿತು ವರದಿಯನ್ನು ಓದಿ ಹೇಳಿದರು. ೨೫ ವರುಷಗಳ ಹಿಂದೆ ಸ್ವಲ್ಪ ಮೂಲಧನದಿಂದ ಪ್ರಾರಂಭವಾದ ಈ ಸಂಸ್ಥೆಯು ಕ್ರಮೇಣ ಬೆಳೆದು ಬಂದು ಇಂದಿನ ಸ್ಥಿತಿಗೆ ಏರಿರುವುದರಿಂದ ನೋಡಲಾದ ಸಂಗತಿಗಳೂ ಈ ವರದಿಯಲ್ಲಿತ್ತು.

ನಂತರ ಅಧ್ಯಕ್ಷರಾದ ಶ್ರೀಮಾನ್ ಗಿಂಡಯ್ಯನವರು ಭಾಷಣಮಾಡುತ್ತಾ ಸಹಕಾರ ಸಂಘಗಳು ಒಳ್ಳೆ ಸಾಲಗಳನ್ನು ಮಾತ್ರ ಕೊಡುವ ಸಂಸ್ಥೆಗಳಲ್ಲದೆ ಜನರಲ್ಲಿ ಹಣವನ್ನು ಕೂಡಿಸುವ ಕೆಲಸ ಮಾಡುವ ಸಂಸ್ಥೆಗಳಾಗಬೇಕೆಂದೂ, ಸಹಕಾರ ಸಂಘಗಳು ತೆತ್ತ ಸಾಲಗಳು ಒಳ್ಳೆ ಫಲದಾಯಕ ಕೆಲಸಗಳಿಗೆ ಉಪಯೋಗಿಸಲ್ಪಡಬೇಕೆಂದೂ, ಹಳ್ಳಿಗಳಲ್ಲಿ ಇರುವ ಅಧಿಕ ದರಗಳನ್ನು ಬಡ್ಡಿಯಲ್ಲಿ ಸಾಲಗಳನ್ನು ಕೊಟ್ಟು ಲಾಭಗಳಿಸುವುದನ್ನು ನಿಲ್ಲಿಸುವುದರಲ್ಲಿ ಸಹಕಾರ ಸಂಘಗಳ ಯಶಸ್ಸು ಹೊಂದಿಕೊಂಡಿರುವುದೆಂದೂ, ಸೇವೆಯೇ ಸಹಕಾರ ಸಂಘಗಳ ಧ್ಯೇಯವಾಗಿರಬೇಕೆಂದೂ, ಸಹಕಾರ ಬೇಂಕುಗಳು ಬಡವರಿಗೂ ಮಧ್ಯತರಗತಿಯವರಿಗೂ ಸಹಾಯಕಾರಿಗಳಾಗುವುದಾಗಬೇಕೆಂದೂ, ಅವಶ್ಯವಿದ್ದ ಒಡನೆಯೇ ಸಾಲ ಕೊಡುವುದೇ ಸಹಕಾರ ಸಂಘಗಳ ಉದ್ದೇಶವಾಗಿರಬೇಕು, ಜನರಿಗೆ ಜೀವನ ನಡೆಯಿಸುವಂತೆ ಸಹಾಯವಾಗುವ ರೀತಿ ಈ ಬೇಂಕುಗಳಿಂದ ಸಾಲಗಳು ಕೊಡಲಾಗಬೇಕು. ಪಕ್ಷಭೇದಗಳು, ಸ್ಥಳೀಯ ರಾಜಕೀಯ ವಿವಾದಗಳಿಂದ ಸಹಕಾರ ಸಂಘಗಳಿಗೆ ಮಹಾ ಹಾನಿಯಾಗುತ್ತದೆ, ಪಕ್ಷಗಳು ತಮ್ಮ ಸ್ವಾರ್ಥಕ್ಕಾಗಿ ಸಹಕಾರ ಸಂಘಗಳನ್ನು ಉಪಯೋಗಿಸುವುದುಂಟು. ಇದರಿಂದ ಸಹಕಾರ ಚಳವಳಿಗೆ ಬಹಳ ಹಾನಿಯಿದೆ. ಪಕ್ಷಭೇದಗಳನ್ನು ದೂರವಿಟ್ಟು ಸಹಕಾರ ಸಂಘಗಳನ್ನು ನಡೆಸುವುದರಲ್ಲಿ ಉತ್ತಮವಿದೆ. ಒಂದು ಸಹಕಾರ ಸಂಘದ ಯಶಸ್ಸು ಅದರ ಸದಸ್ಯರ ಮೇಲೆ ಹೊಂದಿಕೊಂಡಿದೆ ಎಂಬುದಾಗಿ ಅಭಿಪ್ರಾಯ ಸೂಚಿಸಿ ಬೇಂಕಿನ ೨೫ ವರ್ಷಗಳ ಪ್ರಗತಿಯನ್ನು ಶ್ಲಾಘಿಸಿದರು.

ಕಾಸರಗೋಡು ಸಹಕಾರ ಟೌನ್ ಬೇಂಕಿನವರು ವ್ಯಾಪಾರಿಗಳಿಗೆ ಮಾತ್ರ ಸಾಲ ಕೊಡುವುದಲ್ಲದೆ ಧನಸಹಾಯವನ್ನು ಬೆಳ್ಳಿ ಬಂಗಾರದ ಆಭರಣಗಳ ಮೇಲೆ ಸುಲಭ ದರದ ಸಾಲಗಳನ್ನು ಅವಶ್ಯಕಂತೆ ಬರುವರಿಗೂ ರೈತರಿಗೂ, ಇನ್ನಿತರ ಮಧ್ಯಮ ವರ್ಗದವರಿಗೂ ಕೊಡುತ್ತಿರುವರೆಂದು ಕಾರ್ಯದರ್ಶಿಯವರ ವರದಿಯಿಂದ ತಿಳಿದುಬರುತ್ತದೆ. ಈ ಸಂಘದ ಈಗ ದುಡಿಯುತ್ತಿರುವ ಮೂಲಧನವು ಒಂದು ಲಕ್ಷಕ್ಕೆ ಮಿಕ್ಕಿರುತ್ತದೆ. ಈ ೨೫ ವರ್ಷಗಳಲ್ಲಿ ಸಂಘದ ಅಧ್ಯಕ್ಷರಾಗಿದ್ದ ಶ್ರೀ ನರಸಿಂಗ ನಾಯ್ಕರ ಸಂಘದ ಬೆಳವಣಿಗೆಗೆ ಕಾರಣರೆಂದು ಶ್ರೀ ಗಿಂಡಯ್ಯನವರು ಶ್ಲಾಘಿಸಿದರು.

ಈ ಸಮಾರಂಭದಲ್ಲಿ ಶ್ರೀಯುತರಾದ ಎಂ. ಶಿವರಾಯರು, ಸಿ. ಎಸ್. ಭಂಡಾರಕಾರ್, ಕಣ್ಣನ್ ನಾಯರ್, ದತ್ತಾತ್ರೇ ರಾವ್ ಮೊದಲಾದವರು ಸಂಘದ ಬೆಳವಣಿಗೆಯನ್ನು ಶ್ಲಾಘಿಸಿ ಭಾಷಣಮಾಡಿದರು.

ಈ ರಜತೋತ್ಸವ ಸಮಾರಂಭದ ಸಮಯದಲ್ಲಿ ಸಂಘದ ಶ್ರೇಯಸ್ಸಿಗೆ ಕಾರಣರಾದ, ಇತ್ತೀಚೆಗೆ ೨೫ ವರ್ಷಗಳಿಂದ ಅದಕ್ಕಾಗಿ ದುಡಿದ ಶ್ರೀಮಾನ್ ನರಸಿಂಗ ನಾಯ್ಕರ ಸ್ಮಾರಕಾರ್ಥವಾಗಿ ಅವರದೊಂದು ತೈಲಚಿತ್ರವು ಶ್ರೀ ಶಿವರಾಯರಿಂದ ಅನಾವರಣಗೊಳಿಸಲ್ಪಟ್ಟಿತು.

### ಬಂಟವಾಳ

ಇಲ್ಲಿ ಪುರಸಭೆ ಸ್ಥಾನಭಾಗರಾಗಿದ್ದ ಶ್ರೀ ಆನಂದರಾಯರನ್ನು ಎರಡು ವರ್ಷಗಳ ತನಕ ಡಿಪ್ಯೂಟಿ ಕಲೆಕ್ಟರರು ಕೆಲಸದಿಂದ ನಿವೃತ್ತಿಪಡಿಸಿರುವರು. ಅವರು ತಪ್ಪು ಮಾಡಿಯೂ ಒಪ್ಪಿಕೊಳ್ಳಲಿಲ್ಲವಾದುದರಿಂದ ಈ ಬಗೆಯ ಶಿಕ್ಷೆಯು ಕೊಡಲ್ಪಟ್ಟಿತೆಂದು ಹೇಳುತ್ತಾರೆ.

ಪಾಣೆಮಂಗಳೂರಿನಲ್ಲಿ ಸಂಠವು ... ಇದ್ದವರ ಕುರಿತು ಡಿಪ್ಯೂಟಿ ಕಲೆಕ್ಟರರಾದ ರಾ। ಜಗನ್ನಾಥರಾವ್ ನಾಯುಡುಗಳು ಯೋಗ್ಯ ಕಳಕಳಿಯನ್ನು ವಹಿಸಿ ಮಂಗಳೂರಿಗೆ ಹಿಂತಿರುಗಿರುವರು. ಇಲ್ಲಿದೆ ... ತಾರೀಕಿನ ತನಕ ಕೆಲಸವನ್ನು ಮುಂದುವರಿಸಬಾರದೆಂದು ಕಂಟ್ರಾಕ್ಟರರಿಗೆ ಆಜ್ಞೆ ವಿಧಿಸಿರುವರು.

ಇಲ್ಲಿ ಕಳೆದ ತಾ. ೧೮ನೇ ಆದಿತ್ಯವಾರ ಬಂಟ್ವಾಳ ಕಾಂಗ್ರೆಸ ಕಮಿಟಿಯ ಚಾಲ್ತಿವರ್ಷದ ಕಾರ್ಯಕಾರಿ ಮಂಡಲಿಯ ಚುನಾವಣೆಯು ನಡೆದು. ಶ್ರೀ ಬಿ. ಕೇಶವ ಬಾಳಿಗರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಿ. ಆರ್. ಕಾಮತರನ್ನು ಕಾರ್ಯದರ್ಶಿ ಮತ್ತು ಕೋಶಾಧಿಕಾರರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು. ಅಲ್ಲದೆ ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿಗೆ ಈ ಕೆಳಗೆ ಹೆಸರು ಕಾಣಿಸಿದ ೫ ಮಂದಿ ಮೆಂಬರರು ಸರ್ವಾನುಮತದಿಂದ ಚುನಾಯಿಸಲ್ಪಟ್ಟಿರುವರು.

೧. ಬಿ. ನಾಗೇಂದ್ರನಾಥ ಬಾಳಿಗ, ೨. ಬಿ. ಕೇಶವ ಬಾಳಿಗ, ೩. ಬಿ. ಆರ್. ಕಾಮತ್, ೪. ಜಿ. ಕೃಷ್ಣರಾಯ ಪ್ರಭು ೫. ಮೋನಪ್ಪ ಭಂಡಾರಿ.

### ಉಡುಪಿ

ತಾ. ೧೮ನೇ ರವಿವಾರ ಸಾಯಂಕಾಲ ತಾಸಿಗೆ ಶ್ರೀ ... ಶ್ರೀ ... ಶ್ರೀ ಕೃಷ್ಣಮಠದ ... ವರ್ಷಗಳ ... [illegible]

ತಾ. ೧೮ನೇ ಮಧ್ಯಾಹ್ನ ೪ ಘಂಟೆಗೆ ... ಸಹಕಾರ ಸಂಘ ... ರಿಜಿಸ್ಟ್ರಾರಾದ ರಾವ್ ಬಹದ್ದೂರ್ ಶ್ರೀ ... ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ... [illegible]

### ಕಾರ್ಕಳ

ತಾ. ... ನೇ ರವಿವಾರ ದಿನ ಸಾಯಂಕಾಲ ಶ್ರೀ ... ಸಭೆಯೊಂದು ... ದೇಶಭಕ್ತ ಶ್ರೀ ... ರಾಯರ ... ಶ್ರೀ ... ರಾಯರು ಸಭೆಯ ಅಧ್ಯಕ್ಷರಾಗಿದ್ದರು. ಅದೇ ಸಭೆಯಲ್ಲಿ ಕಾರ್ಕಳ ಮತದಾರರ ಸಂಘದ ಕಡೆಯಿಂದ ತಾಲೂಕು ಕಾಂಗ್ರೆಸ್ ಕಮಿಟಿ ಮತ್ತು ಟೌನ್ ಕಾಂಗ್ರೆಸ ಕಮಿಟಿಯ ಚುನಾವಣೆಗಳು ಕೂಡ ಆದುವು.

ಶ್ರೀಮದ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯದಲ್ಲಿ ತಾ. ೧೩-೧-೧೯೪೮ರ ದಿನ ಕಾರ್ಕಳ ಶ್ರೀ ... ಅಧ್ಯಕ್ಷತೆಯಲ್ಲಿ ... ನಡೆಯಿತು.

# ಅಸ್ಸಾಮಿನಲ್ಲಿ ಕಾಂಗ್ರೆಸ್ ಪ್ರಚಾರ. ಇನ್ನು ರೈತರಿಗೆ ಸಿವಿಲ್ ಜೈಲು ಇಲ್ಲ

## ಒಂದಾಣೆಯ ಕಾಂಗ್ರೆಸ್ ಸದಸ್ಯತನ

## ಪೋಲಿಸ್ ಸಬ್ ಇನ್ಸಪೆಕ್ಟರರಿಗೆ ಕಠಿಣ ಸಜೆ!

ರಾಷ್ಟ್ರಪತಿ ನೆಹರೂರವರ ಸೂಚನೆ ಮೇರೆಗೆ ಸಮಸ್ತ ಅಸ್ಸಾಮದಲ್ಲೆಲ್ಲಾ ಕಾಂಗ್ರೆಸ್ ಪ್ರಚಾರವನ್ನು ನಡೆಯಿಸುವರೆ, ಸ್ವಯಂ ಸೇವಕ ದಳವೊಂದರ ವ್ಯವಸ್ಥೆಯಾಗಿರುತ್ತದೆ ಪ್ರತಿಯೊಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಡಿಯಲ್ಲಿ ಈ ತರದ ಸ್ವಯಂ ಸೇವಕರ ದಳವೊಂದಿರುವಂತೆ ಏರ್ಪಾಡು ಮಾಡಲಾಗಿದೆ.

ಈ ಸ್ವಯಂ ಸೇವಕರನ್ನು ತರಬೇತು ಗೊಳಿಸಲು, ಒಳ್ಳೆ ವ್ಯವಸ್ಥೆ ಮಾಡಲಾಗಿದೆ ಈ ಸ್ವಯಂ ಸೇವಕರಿಗೆ ರಾಜಕೀಯದ ಕುರಿತು ಜ್ಞಾನ, ಹಿಂದೂದೇಶದ ಸ್ವಾತಂತ್ರ್ಯಹೋರಾಟದ ಚರಿತ್ರೆಯ ಪರಿಚಯ, ಗ್ರಾಮಾಭ್ಯುದಯ ಇವೇ ಮೊದಲಾದ ವಿಷಯಗಳಲ್ಲಿ ತರಬೇತು ಕ್ಷೇತ್ರಗಳಲ್ಲಿ ಶಿಕ್ಷಣಕೊಡಲಾಗುವುದು

### ವಿಠಲ ನಗರದ ಗೋಶಾಲೆ

ಈಗಾಗಲೇ ವಿಠಲ ನಗರಕ್ಕೆ ೨೫೦ ದನಗಳು ಬಂದಿವೆ ಕಾಂಗ್ರೆಸ್ ಅಧಿವೇಶನದ ಸಮಯದೊಳಗೆ ಇನ್ನೂ ೨೫೦ ದನಗಳನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ

ಈಗ ದನಗಳ ಹಾಲನ್ನು ಸೇವಿಸಲು ಸಾಕಷ್ಟು ಜನರು ವಿಠಲ ನಗರದಲ್ಲಿರದ್ದರಿಂದ, ಉಳಿಯುವ ಹಾಲಿನಿಂದ ಬೆಣ್ಣೆಯನ್ನು ತೆಗೆದು ತುಪ್ಪವನ್ನು ತಯಾರಿಸುತ್ತಿದ್ದಾರೆ ಬೆಣ್ಣೆ ತೆಗೆದ ಹಾಲನ್ನು ಕಾಸಿ ಹುಡಿಮಾಡಿ, ಮುಂದಿನ ಉಪಯೋಗಕ್ಕೆ ಶೇಖರಿಸುತ್ತಿದ್ದಾರೆ ಕಾಂಗ್ರೆಸ್ ಅಧಿವೇಶನದ ಸಮಯ ಬಂದ ಜನರಿಗೆ ಒಳ್ಳೆ ಬೆಣ್ಣೆ ಒದಗಿಸುವ ಏರ್ಪಾಡು ಮಾಡಲಾಗುವುದು

ಇದಲ್ಲದೆ ಕಾಂಗ್ರೆಸ್ ಅಧಿವೇಶನಕ್ಕೆ ಇನ್ನಷ್ಟು ದನದ ತುಪ್ಪವನ್ನು ಸ್ವಾಗತ ಸಮಿತಿಯವರು, ಸಂಗ್ರಹಿಸುತ್ತಿದ್ದಾರೆ. ಕಾಂಗ್ರೆಸ್ ಅಧಿವೇಶನಕ್ಕೆ ಸಾಧಾರಣ ಒಂದುವರೆ ಸಾವಿರ ಡಬ್ಬಿ ತುಪ್ಪಬೇಕೆಂದು ಅಂದಾಜು ಮಾಡಲಾಗಿದೆ

ಒಂದೊಂದು ದನವನ್ನು ಪಡಕೊಂಡು, ಅದನ್ನು ಕಾಂಗ್ರೆಸ್ ಅಧಿವೇಶನದ ವರೆಗೆ ಆರೈಕೆ ಮಾಡಲು ರೂ ೧೧೦ ವೆಚ್ಚ ತಗಲುವುದು ಆದ್ದರಿಂದ ಹರಿಪುರ ಕಾಂಗ್ರೆಸ್ಸಿನ ಹಾಲ ಮತ್ತು ತುಪ್ಪದ ಏರ್ಪಾಡಿಗಾಗಿ ರೂಪಾಯಿ ೫೦,೦೦೦ ಬೇಕಾಗಿರುವುದರಿಂದ ಆ ಬಗ್ಗೆ ಉದಾರಿಗಳು, ಧಾರಾಳ ಸಹಾಯ ಧನವೀಯಬೇಕಾಗಿ ಸ್ವಾಗತ ಸಮಿತಿಯ ಮನವಿ ಹೊರಟಿರುತ್ತದೆ

### ಕಮಲಾ ನೆಹರು ಸ್ಮಾರಕ ಆಸ್ಪತ್ರೆ.

ಕಮಲಾ ನೆಹರು ಸ್ಮಾರಕ ಆಸ್ಪತ್ರೆಗೆ, ಸಂಯುಕ್ತ ಪ್ರಾಂತ್ಯದ ಸರಕಾರದವರು, ಅಲ್ಲಹಾಬಾದಿನ ಆನಂದ ಭವನದ ಹತ್ತಿರವಿರುವ ಸ್ಥಳವನ್ನು ಸುಲಭದ ಕಂದಾಯದಲ್ಲಿ ಕೊಟ್ಟಿರುವರು

ಈ ಸ್ಮಾರಕದ ಶಂಕುಸ್ಥಾಪನೆಯು ಮಹಾತ್ಮಾಜಿಯವರಿಂದ ಮಾಡಿಸಬೇಕಾಗಿ ಸಂಕಲ್ಪವಿದೆ ಆದರೆ ಮಹಾತ್ಮಾಜಿಯವರ ಅನಾರೋಗ್ಯದ ದೆಸೆಯಿಂದ ಅವರಿಗೆ ಈ ಕಾರ್ಯವನ್ನು ವಹಿಸುವರೆ ಅಸಾಧ್ಯವಾದರೆ ಬೇರೆ ಏರ್ಪಾಡು ಮಾಡಲಾಗುವುದು

### ಪ್ರಧಾನ ಮಂತ್ರಿ ಶಿಕ್ಷಣ ಯೋಜನೆ.

ಮಹಾತ್ಮಾಜಿಯವರ ವಾರ್ಧಾ ಶಿಕ್ಷಣ ಯೋಜನೆಯಲ್ಲಿ ಸಾರವಿದೆ, ಅದು ನಮಗೆ ಬೇಕಾದ ಆದರ್ಶ ಯೋಜನೆ, ಎಂಬದಾಗ್ಯೂ, ಸಾಧಾರಣ ಮೂರು ತಿಂಗಳ ಸಮಯ ವಾರ್ಧಾ ಯೋಜನೆಯನ್ನು ಪರಿಶೀಲಿಸಿ ಪ್ರಾಂತ್ಯದ ಶಿಕ್ಷಣ ಪ್ರವೀಣರು ಅಭಿಪ್ರಾಯಪಟ್ಟ ಮೇರೆಗೆ ಅದನ್ನು ಈಗ ಕಾರ್ಯರೂಪಕ್ಕೆ ತರುವರೆ, ಸಂಯುಕ್ತ ಪ್ರಾಂತ್ಯದ ಪ್ರಧಾನ ಪಂತರು, ವಿಶೇಷ ಏರ್ಪಾಡನ್ನು ಮಾಡಿರುವರು ಆ ಬಗ್ಗೆ ಅವರೊಂದು ಯೋಜನೆಯನ್ನು ರಚಿಸಿರುವರು ಈ ಯೋಜನೆ ಪ್ರಕಾರ ಮುಂದಕ್ಕೆ ವರ್ಷಂಪ್ರತಿ ೫೦,೦೦,೦೦೦ ಮಕ್ಕಳ ಶಿಕ್ಷಣದ ಏರ್ಪಾಡುಮಾಡಲಾಗುವುದು



ಪ್ರಧಾನಮಂತ್ರಿಗಳಾದ ಗೋವಿಂದ ವಲ್ಲಭ ಪಂತರು

ಸರಕಾರವು ಎಲಿಮೆಂಟರಿ ಶಾಲೆಗಳ ಮೇಲಿರುವ ಜಿಲ್ಲಾ ಬೋರ್ಡುಗಳ ಅಧಿಕಾರವನ್ನು ರದ್ದುಪಡಿಸಿ, ಅವುಗಳನ್ನು ಸರಕಾರದ ನೇತೃತ್ವದಲ್ಲಿ ನಡೆಯುವ ಒಂದು ಕೇಂದ್ರ ಬೋರ್ಡಿಗೆ ಒಪ್ಪಿಸುವುದಂತೆ

ಈ ಯೋಜನೆಯ ಪ್ರಕಾರ ೨೦೦೦೦ ಅಧ್ಯಾಪಕರು ಬೇಕಾಗುವರು ಈಗ, ೩೦,೦೦೦ ಮಂದಿಗಳು ಮಾತ್ರ ಇರುವುದರಿಂದ ಹೆಚ್ಚಿನವರನ್ನು ತರಬೇತುಗೊಳಿಸುವ ಏರ್ಪಾಡನ್ನು ಬೇಗನೆ ಕೈಗೊಳ್ಳಲಾಗುವುದು

ಈ ವರೆಗೆ, ಮಕ್ಕಳ ಶಿಕ್ಷಣಕ್ಕೆ ವರ್ಷ ಒಂದರ ತಲಾ ೭ ದರ ರೂ ೮ ವೆಚ್ಚ ತಗಲುತಿತ್ತು ಈಗ ಮಹಾತ್ಮಾಜಿಯವರ ವೃತ್ತಿಶಿಕ್ಷಣ ಯೋಜನೆಯಿಂದ, ವಿದ್ಯಾರ್ಥಿಯರಿಂದಲೆ, ದುಡಿಸಿ, ಮೇಲಿನ ವೆಚ್ಚದಿಂದ, ಮೂರು ಮಕ್ಕಳ ಶಿಕ್ಷಣ ನಡೆಯಿಸುವಂತೆ

### ಒಂದಾಣೆಯ ಸದಸ್ಯತನ.

ಕಾಂಗ್ರೆಸ್ ಸದಸ್ಯತನದ ಈಗಿನ ನಾಲ್ಕಾಣೆ ಹಾಸಲನ್ನು ಒಂದಾಣೆಗೆ ಇಳಿಸುವ ಕುರಿತು ಒಂದು ಠರಾವು ಹರಿಪುರ ಕಾಂಗ್ರೆಸ್ಸಿನಲ್ಲಿ ಬರಲಿದೆ ಎಂದು ಬಲವಾದ ವಾರ್ತೆಯಿದೆ

ಅಲ್ಲದೆ ಎಲ್ಲಾ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಸಂಗ್ರಾಮ ಶಿಕ್ಷಣವು ಕಡ್ಡಾಯವಾಗಿ ನಡೆಯಬೇಕೆಂಬುದಾಗಿ ಕೋರುವ ಒಂದು ಠರಾವು ಹರಿಪುರ ಕಾಂಗ್ರೆಸ್ಸಿನಲ್ಲಿ ಬರಲಿದೆ

### ಬಂಗಾಳದಲ್ಲಿ ಮದ್ಯಪಾನ ನಿಷೇಧ

ಬಂಗಾಳ ಸರಕಾರದವರು—ತಮ್ಮ ಪ್ರಾಂತ್ಯದಲ್ಲಿ ಮೊದಲಿನ ಬಾರಿ ಮದ್ಯಪಾನ ನಿಷೇಧ ಕಾನೂನನ್ನು ಎಪ್ರಿಲ್ ೩೦ ರಲ್ಲು ನೋವಾಖಾಲಿ ಜಿಲ್ಲೆಯಲ್ಲಿ ಜ್ಯಾರಿಗೆ ತರಲಿರುವರು

ಮಾದಕ ದ್ರವ್ಯಗಳನ್ನು ವಿಕ್ರಯಿಸುವ ಅಂಗಡಿಗಳೆಲ್ಲವೂ ಮುಚ್ಚಲ್ಪಡುವುವು ಆದರೆ ಮದ್ದಿಗೆ ಬೇಕಾದವುಗಳ ಮೇಲೆ ನಿಷೇಧವು ಹಾಕಲ್ಪಡುವುದಿಲ್ಲ ಅಲ್ಲದೆ ಯಾವದಾದರೂ ಸಂಘಗಳು ಮದ್ಯಪಾನ ನಿಷೇಧ ಪ್ರಚಾರ ಕಾರ್ಯವನ್ನು ಕೈಕೊಳ್ಳುವುದಾದರೆ ಸರಕಾರದವರು ಅವರಿಗೆ ಸಹಾಯಮಾಡುವುದಾಗಿ ನಿಶ್ಚೈಸಲಾಗಿದೆ

### ಸೇಲಮಿನ ಮದ್ಯನಿಷೇಧದ ಕುರಿತು ಆಂಗ್ಲೇಯರ ಶ್ಲಾಘನೆ.

ರಾಜಾಜಿಯವರ ಸೇಲಮಿನ ಮದ್ಯ ನಿಷೇಧ ಕೀರ್ತಿಯು ಹಿಂದೂದೇಶದಲ್ಲಿ ಮಾತ್ರವಲ್ಲ ಪಾಶ್ಚಾತ್ಯದಲ್ಲೂ ಹರಡಿರುತ್ತದೆ

ಸೇಲಮಿನಲ್ಲಿ ಜ್ಯಾರಿಯಾದ ಮದ್ಯ ನಿಷೇದದ ಕ್ರಮದಿಂದ ಒಳ್ಳೆ ಉತ್ಸಾಹದಾಯಕ ಫಲಿತಾಂಶವು ಉಂಟಾಗಿರುವುದು ಹಿಂದೆ ಸಾಲಗಾರರ ಹಿಡಿತದಲ್ಲಿ ಸಿಲುಕುವವರು, ಇಂದು ಹಣವನ್ನು ಉಳಿಸುವವರಾಗಿದ್ದಾರೆ. ಎಂಬುದಾಗಿ, ಸೇಲಮಿನ ಮದ್ಯ ನಿಷೇದದ ಪ್ರಗತಿಯ ಕುರಿತು, ಇಂಗ್ಲಾಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯೊಂದರಲ್ಲಿ ಒಂದು ಪತ್ರ ಪ್ರಕಟವಾದುದಲ್ಲದೆ, ಅದೆ ಪತ್ರದ ಪ್ರಕಾರ, ಶೇಕಡಾ ೯೬ರ ಸಲೆ ಜನರು ಮದ್ಯ ಹಾವಳಿಯಿಂದ ಪಾರಾಗಿರುವರು, ಹಳ್ಳಿಗರಿಗೆ ಸಾಲಕೊಟ್ಟು ಧನಸಂಗ್ರಹಿಸುವರಿಗೆ ಈಗ ವ್ಯಾಪಾರವೇ ಇಲ್ಲದಾಗಿದೆ, ಹಿಂದಿನ ಮದ್ಯ ದಂಗಡಿಗಳೆಲ್ಲಾ ವಾಚನಾಲಯಗಳಾಗಿ ಮಾರ್ಪಟ್ಟಿವೆ, ಪ್ರೌಢ ವಯಸ್ಕರ ಶಿಕ್ಷಣ ಬಗ್ಗೆ ಅಲ್ಲಿನ ೭೫೦೦ ಉಪಾಧ್ಯಾಯರ ಒಂದು ವ್ಯವಸ್ಥೆ ಮಾಡುವರೆ ಜಿಲ್ಲಾಧಿಕಾರಿಗಳು ಪರಿಶ್ರಮಿಸುತಿದ್ದಾರೆ.

### ಪೋಲಿಸ್ ಸಬ್ ಇನ್ಸ್‌ಪೆಕ್ಟರರಿಗೆ ಏಳು ವರ್ಷದ ಕಠಿನ ಸಜೆ.

ಹರಿಜನ ಸ್ತ್ರೀಯೊಬ್ಬಳನ್ನ ಬಂಧಿಸಿ, ಅವಳಿಂದ ಒಂದು ಬಂಗಾರದ ಸರಪಣಿಯನ್ನು ಕದ್ದಿರುವಳೆಂಬ ಸತ್ಯವನ್ನು ಕಂಡುಹಿಡಿಯುವರೆ, ಆಕೆಯ ಮೇಲೆ ಹಿಂಸೆ ನಡೆಯಿಸಿ, ಈ ಹಿಂಸೆಯ ಪರಿಣಾಮ ಆಕೆಯು ಮೃತವಾದ ಪರಿಣಾಮವಾಗಿ, ಡಬಲಾಪುರದಲ್ಲಿ ಪೊಲೀಸು ಸಬ್ ಇನ್ಸ್‌ಪೆಕ್ಟರರಿಗೆ ಏಳು ವರ್ಷದ ಕಠಿನ ಸಜೆಯೂ ೨೦೦೦ ರೂ ಜುಲ್ಮಾನೆಯೂ, ತಪ್ಪಿದರೆ ಇನ್ನೂ ಆರು ತಿಂಗಳ ಕಠಿನ ಸಜೆಯೂ, ಅವರೊಡನೆ ಆ ಕಾರ್ಯದಲ್ಲಿ ಸಹಕರಿಸಿದ ಪೊಲೀಸ್ ಜವಾನರಿಗೆ ಮೂವರಿಗೆ ತಲಾ ಒಂದರ ಐದು ವರ್ಷಗಳ ಕಠಿನ ಸಜೆಯೂ ಅಲ್ಲಿನ ಸೆಶನ್ಸ ಜಡ್ಜರಿಂದ ವಿಧಿಸಲಾಯಿತು

ಹರಿಜನ ಸ್ತ್ರೀಯು ಬಂಗಾರದ ಆಭರಣವೊಂದನ್ನು ಕದ್ದಿರುವಳೆಂಬ ಸಂಶಯಕ್ಕಾಗಿ ಅವಳನ್ನು ಲೋಕಅಪ್‌ನಲ್ಲಿ ಹಾಕಲಾಗಿ, ಅವಳಿಂದ ಸತ್ಯವನ್ನು ಹೊಂದಿಸುವರೆ, ಈ ಸಬ್ ಇನ್ಸ್‌ಪೆಕ್ಟರರು ಅವಳ ಮೇಲೆ, ಹಿಂಸ ನಡೆಯಿಸಿದಾಗ, ಅವಳು ಚೀರಿದಕ್ಕೆ, ಸಬ್ ಇನ್ಸ್‌ಪೆಕ್ಟರರು ಅವಳ ಹೊಟ್ಟೆಯ ಮೇಲೆ ಒದೆದು, ಅವಳು ಬೊಬ್ಬೆ ಹಾಕಿದಕ್ಕೆ ಇಬ್ಬರು ಪೊಲೀಸ್ ಜವಾನರಿಂದ ಅವಳನ್ನು ರಸ್ತೆಯ ಬದಿಯ ಒಂದು ಹೊಂಡದಲ್ಲಿ ಹಾಕಿದವಳನ್ನು, ರೋದನದಿಂದ ಆಕರ್ಷಿಸಲ್ಪಟ್ಟ ಕೆಲವರು, ಆಕೆಯನ್ನ ಆಸ್ಪತ್ರೆಗೆ ಒಯ್ಯಲಾಗಿ ಅಲ್ಲಿ ಅವಳು ಮೃತಳಾದಳು

ಪೊಲೀಸ್ ನೌಕರರು ಸತ್ಯವನ್ನು ಹೊಂದಿಸುವರೆ ಈ ತರದ ಹಿಂಸೆಗಳನ್ನು ಎಂದಿಗೂ ನಡೆಯಿಸಬಾರದಾಗಿ, ಅಭಿಪ್ರಾಯಪಟ್ಟು ಜಡ್ಜರು ಈ ತೀರ್ಪನ್ನು ಬರೆದಿರುವರು

### ರೈತರಿಗೆ ಸಿವಿಲ್ ಜೈಲಿಲ್ಲ

ಸಾಲಗಳನ್ನು ಮರುಪಾವತಿ ಮಾಡಲಾಗದೆ ಕಾರಾಗ್ರಹವಾಸವನ್ನು ಸೇರಿದ ಪಾಮರರನ್ನೂ ವಿಮೋಚನೆಗೊಳಿಸುವ ಮತ್ತು ಮುಂದಕ್ಕೆ ಪಾಮರರನ್ನು ಸಿವಿಲ್ ಕೈದಿಗಳಾಗಿ ಹಿಡಿಯದಂತೆ ಅನುಕೂಲವಾಗುವ ಸಂಯುಕ್ತಪ್ರಾಂತ್ಯದ ಒಂದು ತಾತ್ಕಾಲಿಕ ಕ್ರಮಕ್ಕೆ ವೈಸ್ರಾಯರ ಅನುಮತಿಯು ದೊರಕಿರುತ್ತದೆ.

### ಗಣಿತಶಾಸ್ತ್ರ ಕಲಿಯುವುದರಿಂದ ಏನು ಪ್ರಯೋಜನವಿದೆ?

ಗಣಿತಶಾಸ್ತ್ರ ಕಲಿಯುವುದರಿಂದ ಮುಂದಿನ ಜೀವಮಾನಕ್ಕೆ ಯಾವತರೂ ತರದ ಪ್ರಯೋಜನವಿರುವುದಿಲ್ಲವೆಂದೂ, ಅದರಿಂದ ವಿದ್ಯಾರ್ಥಿಗಳ ಬುದ್ಧಿಶಕ್ತಿಯ ಬೆಳವಣಿಗೆ ಮಾತ್ರ ಆಗುತ್ತದೆಂದೂ ಓರ್ವ ವಿದ್ಯಾರ್ಥಿಯು ಗಣಿತ ಪರೀಕ್ಷೆಯ ಪೇಪರಿನಲ್ಲಿ ಬರೆದು, ಲೆಖ್ಖಗಳನ್ನು ಮಾಡದೆ, ಅದನ್ನು ಒಪ್ಪಿಸಿದ್ದನಂತೆ. ಆತನಿಗೆ ಫುಲ್ ಮಾರ್ಕುಗಳು ದೊರಕಿದೆಯಂತೆ

### ಹಿಂದೂಸ್ಥಾನ ಸೇವಾದಳ.

ಹಿಂದುಸ್ಥಾನ ಸೇವಾದಳವು ಪುನರ್ವ್ಯವಸ್ಥೆ ಹೊಂದಿರುವುದೆಂದು ಡಾ। ಎನ್ ಎಸ್ ಹರ್ಡೀಕರರಿಂದ ಪ್ರಕಟವಾಗಿರುವುದು

'ಸ್ವಾತಂತ್ರ್ಯ ಅಲ್ಲವೆ ಮರಣ'' ಎಂಬುದನ್ನು ಧ್ಯೇಯವಾಗಿಟ್ಟು, ಈ ಸಂಸ್ಥೆಯು ಅಸಹಕಾರ ಚಳವಳದ ದಿನಗಳಲ್ಲಿ ಪ್ರಬಲ ಪಾತ್ರವನ್ನು ವಹಿಸಿದೆ ಕರ್ನಾಟಕ ಪ್ರಾಂತ್ಯದಲ್ಲಿ ಕಾಂಗ್ರೆಸ್ ಚಳವಳವನ್ನು ಬಲಪಡಿಸುವುದೇ ಈ ಸೇವಾದಳದ ಉದ್ದೇಶ

ಶ್ರೀ ಎನ್ ಎಸ್ ಹರಡೀಕರರು

'ಕರ್ನಾಟಕದ ರಾಜಕೀಯದಲ್ಲಿ ಭೇದಾಭಿಪ್ರಾಯ ತಡೆ ಇತ್ಯಾದಿ ಯಾವದೆ ಇರಲಿ ಎಲ್ಲವನ್ನು ಎದುರಾಯಿಸಿ, ಅಗತ್ಯ ಬಿದ್ದರೆ ಸಂಕಷ್ಟಗಳನ್ನಾದರು ಪಟ್ಟು ಮುಂದೊತ್ತುವುದೇ ನಮ್ಮ ಧ್ಯೇಯ'ವೆಂದು ಡಾ। ಹರ್ಡೀಕರರ ಹೇಳಿಕೆ

### ಕರ್ನಾಟಕದ ಏಕೀಕರಣ

ಭಾಷೆಗಳನ್ನು ಅನ್ವಯಿಸಿ ಪ್ರಾಂತ್ಯಗಳನ್ನು ರಚಿಸುವ ಕುರಿತು, ಮುಂಬಾಯಿ ಅಸೆಂಬ್ಲಿಯ ಈ ಬಾರಿಯ ಅಧಿವೇಶನದಲ್ಲಿ ಠರಾವು ಬರಲಿದೆ ಅಲ್ಲದೆ ಅದಕ್ಕೆ ಅಧಿಕಮತವು ದೊರಕುವ ಸಂಭವಗಳೂ ಕೂಡ ಇವೆ ಇದೇ ತರದ ಠರಾವೊಂದು ಮದ್ರಾಸು ಎಸೆಂಬ್ಲಿಯಲ್ಲೂ ಬರಲಿರುವುದು ಹೀಗಾಗಿ ಕರ್ನಾಟಕ ಏಕೀಕರಣಕ್ಕೆ ಹೆಚ್ಚಿನ ಸಹಾಯದೊರೆಯುವ ಅವಕಾಶಗಳೂ ಸದ್ಯದಲ್ಲಿ ಉಂಟಾಗಬಹುದೆಂದು ಹೇಳಬಹುದು

ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯವರು ಸಮತಾವಾದಿಗಳ ಕುರಿತು ಮಂಜೂರು ಮಾಡಿದ ಠರಾವಿನಿಂದಾಗಿ ಸಿಡಿದೆದ್ದ ಕೆಲವು ಮಂದಿ ಸಮತಾವಾದಿಗಳು, ತಮ್ಮ ಪಕ್ಷೀಯರಾದ ಆಚಾರ್ಯ ನರೇಂದ್ರ ದೇವೋ ಮತ್ತು ಅಚ್ಯುತ ಪಟವರ್ಧನರಿಗೆ, ಕಾರ್ಯಕಾರಿಮಂಡಲಿಯ ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ಕೊಡುವಂತೆ ಕೇಳಿಕೊಂಡಿರುವರಂತೆ

ಒರಿಸ್ಸಾ ನೆರೆ ಹಾವಳಿಯ ನಿಧಿಗೆ ಇಷ್ಟರ ತನಕ ರೂ. ೨೬,೯೭೯-೧೨-೦ ಬಟ್ಟಾಗಿರುವುದಂತೆ

# ಜಿನ್ನಾರ ಸಲಹೆ ಸೂಚನೆಗಳು ಏಕೆ ಮುಂದೆ ಬರುವದಿಲ್ಲ

ಈ ಕುರಿತು ಅಮೃತ ಬಜಾರ ಪತ್ರಿಕೆಯ ನೀತಿಯು ಹೀಗಿದೆ,—

“ಮಿ॥ ಜಿನ್ನಾರಿಗೂ, ಮತ್ತವರ ಅನುಯಾಯಿಗಳಿಗೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದ ಸಾಕಷ್ಟು ರಿಯಾಯತಿ ಉಡುಗೊರೆಗಳು ದೊರಕಿವೆ. ಕೋಮುವಾರು ಎವಾರ್ಡಿನಿಂದ ದೊರಕುವ ರಿಯಾಯತಿಗಳು ತಮಗೆ ಸಾಕಾಗಿಲ್ಲವೆಂಬದಾಗಿ ಅವರ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಕೌಟಿಲ್ಯ ನೀತಿಯನ್ನಾಚರಿಸಿ ಕಾಂಗ್ರೆಸ್ಸಿನಿಂದ ಇನ್ನಷ್ಟು ರಿಯಾಯತಿಗಳನ್ನು ಪಡೆಕೊಳ್ಳುವುದು ಅವರ ಉದ್ದೇಶವಾಗಿರುತ್ತದೆ. ಕಾಂಗ್ರೆಸ್ಸು ಎಷ್ಟು ಬಾರಿ ಕೇಳಿದರೂ, ಮಿ॥ ಜಿನ್ನಾರವರು ಕೋಮುವಾರು ಕಿಕ್ಕಾಟದ ನಿವಾರಣೆ ಬಗ್ಗೆ ತಮ್ಮ ಸೂಚನೆ, ಸಲಹೆಗಳನ್ನು ಕೊಡಲು ಸಿದ್ಧರಿರುವುದು ಕಾಣಿಸುವುದಿಲ್ಲ. ತಮ್ಮ ಮೈತ್ರಿಯಾಗಿ ಕಾಂಗ್ರೆಸ್ಸು ಕ್ರಯಕೊಡಬೇಕಾಗಿ ಈ ಮುಸ್ಲಿಂ ನಾಯಕರ ಅಭಿಪ್ರಾಯವಾಗಿರುವುದೆಂದು ಅವರ ಸದ್ಯದ ವರ್ತನೆಯಿಂದ ಖಚಿತವಾಗುತ್ತದೆ. ಯಾರು ತನಗೆ ಹೆಚ್ಚಿನ ಕ್ರಯವನ್ನು ಕೊಡುತ್ತಾರೋ ಅವರಿಗೇನೇ ತನ್ನ ಮೈತ್ರಿಯನ್ನು ಕೊಡುವುದು ಜಿನ್ನಾರವರ ಧ್ಯೇಯವಾಗಿರುತ್ತದೆ.

“ರಾಷ್ಟ್ರಪತಿಯಿಂದ ವಿಶ್ವಾಸದಾಯಕ ಭರವಸೆಗಳು ಬಂದಿದ್ದರೂ ಕೂಡ ಜಿನ್ನಾರವರ ಸಲಹೆ ಸೂಚನೆಗಳು ಮುಂದೆ ಬಂದದ್ದು ಕಾಣಿಸುವುದಿಲ್ಲ. ಮುಸ್ಲಿಂ ಅಲ್ಪ ಸಂಖ್ಯಾಕರಿಗೆ ಬೇಕಾದ ರಕ್ಷಣೆ ಕೊಡಲು ಸಿದ್ಧವಿದೆ ಎಂದು ಕಾಂಗ್ರೆಸ್ಸು ಸಾರಿಹೇಳಿದೆ. ಆದರೂ ಮಿ॥ ಜಿನ್ನಾರವರಿಗೆ ಆ ಕುರಿತು ವಿಶ್ವಾಸ ಉಂಟಾಗಲಿಲ್ಲ. ಕೋಮುವಾರು ವಿಷಯ ಇವತ್ತಿಗೆ ಹತ್ತು ವರ್ಷಗಳಲ್ಲೂ ಜಿನ್ನಾರವರ ಮತ್ತವರ ಅನುಯಾಯಿಗಳ ಮನೋಭಾವ ಯಾವ ತರದೆಂದು ತಿಳಿಯಲು ಯಾರಿಗಾ ಸಾಧ್ಯವಾಗಲಿಲ್ಲ.

ಮುಸ್ಲಿಂ ಧರ್ಮ, ಸಂಸ್ಕೃತಿ, ಭಾಷೆ, ಇತ್ಯಾದಿಗಳ ರಕ್ಷಣೆ ಬಗ್ಗೆ ಕಾಂಗ್ರೆಸ್ಸಿನಿಂದ ಯೋಗ್ಯ ಭರವಸೆಗಳು ಕೊಡಲಾಗಿವೆ. ಇವುಗಳು ಕಾಂಗ್ರೆಸ್ಸಿನ ನಾಯಕರ ಒಣ ಬಾಯಿ ಮಾತುಗಳಲ್ಲ. ಆ ಬಗ್ಗೆ ಶಾಸನ ಕ್ರಮವನ್ನು ರಚಿಸಲು ಕೂಡ ಕಾಂಗ್ರೆಸ್ಸಿನವರು ಸಿದ್ಧರಿರುವರು, ಮುಸ್ಲಿಮರ ನ್ಯಾಯವಾದ ಹಕ್ಕುಗಳ ರಕ್ಷಣೆ ಮಾಡುವೆವೆಂದು ಈ ತರದ ಭರವಸೆಯಿಂದಲೇ, ಬುದ್ಧಿವಂತರು ಹಿಂದೂ—ಮುಸ್ಲಿಂ ಭೇದವನ್ನು ನಿವಾರಿಸುವರೆ ಸಾಕೆಂದು ತಿಳಿಯುತ್ತಿದ್ದರು.

“ತಮ್ಮ ರಾಜಕೀಯ ಹಕ್ಕುಗಳು ಕೂಡ ರಕ್ಷಿಸಲ್ಪಡಬೇಕೆಂಬ ಜಿನ್ನಾರವರ ಕೋರಿಕೆ. ಅಲ್ಪ ಸಂಖ್ಯಾಕರ ರಾಜಕೀಯ ಹಕ್ಕುಗಳೆಂದರೇನು? ತಮ್ಮ ಪ್ರತಿನಿಧಿಗಳನ್ನು ಆರಿಸುವರೆ ಒಂದು ಓಟು, ಅಧಿಕ ಸಂಖ್ಯಾಕರನ್ನು ತಮ್ಮ ಮನೋಭಾವಕ್ಕೆ ಮತಾಂತರಗೊಳಿಸುವ ಹಕ್ಕು, ಸಮಯ ಬಂದಾಗ ಅಧಿಕ ಸಂಖ್ಯಾಕರ ಸ್ಥಾನವನ್ನು ಹೊಂದುವುದು, ಇವುಗಳೆಲ್ಲಾ ಅವರ ರಾಜಕೀಯ ಹಕ್ಕುಗಳು. ಇದಕ್ಕಿಂತ ಹೆಚ್ಚಿನ ರಾಜಕೀಯ ಹಕ್ಕುಗಳಾವುವು?

‘ಏನೇ ಆಗಲಿ, ದೇಶದ ಮೇಲೆ ಒಂದು ಮಹಾಕಳಂಕದಂತಿರುವ ಜಾತಿಭೇದವನ್ನು ನಿವಾರಿಸುವರೆ, ಸಾರ್ವಜನಿಕರು ಅವುಗಳ ಕುರಿತು ಇತ್ಯರ್ಥ ಕೊಡುವಂತೆ, ಮುಸ್ಲಿಂ ಲೀಗಿನವರು ಧೈರ್ಯದಿಂದ ತಮ್ಮ ಸಲಹೆ ಸೂಚನೆಗಳನ್ನು ಸಾರ್ವಜನಿಕರ ಮುಂದೆ ಹಾಕಲ್ಪಡುವುದರಲ್ಲಿ ಉತ್ತಮವಿದೆ’.

“ಆದರೆ ಕೋಮುವಾರು ಪ್ರಶ್ನೆಯು ರಹಸ್ಯದಲ್ಲಿ ವಿಚಾರಿಸಲ್ಪಡಬೇಕೆಂದೂ ಜಿನ್ನಾರವರ ಪ್ರಕಟನೆ.”

## ಈಗ ಅಲ್ಲ

ಜಿನ್ನಾ-ರಾಜೇಂದ್ರ ಪ್ರಸಾದ ಒಪ್ಪಂದದಿಂದ ಕೋಮುವಾರು ಕಲಹವು ನಿವಾರಣೆ ಮಾಡುವ ಕುರಿತು ರಾಷ್ಟ್ರಪತಿಯವರು ವರ್ಕಿಂಗ್ ಕಮಿಟಿಯ ಬಗ್ಗೆ ಭರವಸೆಗಳನ್ನು ವ್ಯಕ್ತಪಡಿಸಿದ್ದರೂ, ಅದರಿಂದ ಕಲಹದ ನಿವಾರಣೆಯು ಬೇಗನೆ ಆಗದೆಂದೂ ಕಲ್ಕತ್ತೆಯ ಅಮೃತ ಬಜಾರ ಪತ್ರಿಕೆಯು ಅಭಿಪ್ರಾಯ ಸೂಚಿಸಿ, ಆ ಕುರಿತು ಹೀಗೆಂದು ಬರೆದಿರುವುದು.

ಮಿ॥ ಜಿನ್ನಾರವರು ಸಂಧಾನಕ್ಕೆ ಸಿದ್ಧರಾಗಿದ್ದರೂ ಅವರ ಕೋಮಿನವರು ಬೇರೆಯಾಗಿ ವ್ಯವಸ್ಥೆ ಹೊಂದಲೇಬೇಕಾಗಿ ಅವರ ಕರೆ ಹೊರದಿರುತ್ತದೆ. ಸಂಧಾನವಾದರೂ ಕೂಡ, ಹೀಗಾಗಬೇಕೆಂದು ಅವರು ಹೇಳುತ್ತಿರುವರು. ಆ ತರದ

ಮಿ॥ ಜಿನ್ನಾರವರು

ವ್ಯವಸ್ಥೆಯಲ್ಲಿ ಅವರಿಗೆ ಹೆಚ್ಚಿನ ವಿಶ್ವಾಸವಿರುವುದೆಂದು ಇದರಿಂದ ಖಚಿತವಾಗುತ್ತದೆ. ಅದ್ದರಿಂದ ಕಾಂಗ್ರೆಸ್ಸು ತನಗೆ ಒಗ್ಗುವಂತೆ ಮಾಡುವುದು ಮಿ॥ ಜಿನ್ನಾರವರ ಉದ್ದೇಶವೆಂಬ ಕೆಲವರ ಸಂಶಯಕ್ಕೆ ಒಳ್ಳೆ ಆಧಾರ ದೊರಕಿದಂತಾಗಿದೆ.

‘ಮಿ॥ ಜಿನ್ನಾರವರ ಈ ತರದ ವರ್ತನೆಯಿಂದ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ॥ ವಿನಾಯಕ್ ಸಾವಾರಕಾರರಿಂದಲೂ ಬಾಯಿ ಪರಮಾನಂದರಿಂದಲೂ ಪ್ರತಿಭಟನೆ ಹೊರಟಿರುತ್ತವೆ. ಇವರು ಆ ಬಗ್ಗೆ ತಮ್ಮ ಎಚ್ಚರಿಕೆಗಳನ್ನು ಕೊಟ್ಟಿರುವರು. ಈ ಮಹಾಶಯರ ಅಭಿಪ್ರಾಯಗಳಿಗೆ ಅಧಿಕ ಮಹತ್ವ ಬೇಕಾಗಿರುವುದೆಂದು ನಾವು ಹೇಳುವುದಿಲ್ಲವಾದರೂ, ಕೋಮುವಾರು ಕಲಹ ನಿವಾರಣೆಗೆ ಕಾಂಗ್ರೆಸ್ಸಿನವರು ಮುಸ್ಲಿಂ ಲೀಗಿಗೆ ಕೊಡುವಷ್ಟು ಮಹತ್ವವನ್ನು ಹಿಂದೂ ಮಹಾಸಭೆಗೆ ಕೊಡಬೇಕೆಂದು ನಮ್ಮ ಕೋರಿಕೆ. ಮೇಲಿನ ಮಹನೀಯರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾ ಪರಿತ್ಯಾಗವನ್ನೂ ಅನುಸರಿಸಿಟ್ಟವರೂ ಹೊಂದಿದವರಾದುದರಿಂದಲೇ ಅವರ ಮಾತುಗಳಿಗೆ ಕಾಂಗ್ರೆಸ್ಸಿನಿಂದ ಮನ್ನಣೆ ದೊರಕಲೇಬೇಕು. ಸಂಬಂಧಪಟ್ಟ ಎಲ್ಲಾ ಕೋಮುಗಳ ಸಮ್ಮತವಿರದೆ ಕೋಮುವಾರು ಒಪ್ಪಂದವಾಗುವುದರಲ್ಲಿ ಪ್ರಯೋಜನವಿಲ್ಲ. ಶ್ರೀ॥ ಸಾವಾರಕಾರರು ಎಂದಂತೆ, ಹಿಂದೂ ಮಹಾಸಭೆಯ ಸಮ್ಮತವಿಲ್ಲದ ಕೋಮುವಾರ ಒಪ್ಪಂದವು ಸಿಂಧುವಾಗತಕ್ಕದ್ದಲ್ಲ ಎಂಬುದು ನಮ್ಮದೂ ಮತವಾಗಿರುತ್ತದೆ. ಕೋಮುಗಳ ಮೇಲೆ ಒತ್ತಾಯದಿಂದ ಹಿಂದು ಒಪ್ಪಂದವನ್ನು ಹೊರಿಸುವುದರಿಂದ ಅನರ್ಥಗಳೇ ಉಂಟಾಗುವವೆಂದು ನಮ್ಮ ಮತವಾಗಿರುತ್ತದೆ.

‘ಕೋಮುವಾರು ಐಕ್ಯದ ಬಗ್ಗೆ ಸರಿಯಾದ ವಾತಾವರಣವು ಉಂಟಾಗಲಿಲ್ಲವೆಂಬುದು ನಮಗೆ ತಿಳುವಳಿಕೆಯಾಗಿರುತ್ತದೆ. ಕಾಂಗ್ರೆಸ್ಸು ಸಂಧಾನವಾಗಬೇಕಾದರೆ, ಕಾಂಗ್ರೆಸ್ಸಿನವರು ಮಹಾಜನ ಸಂಪರ್ಕ ಚಳವಳಿಯನ್ನು ನಿಲ್ಲಿಸಬೇಕು, ಪ್ರಾಂತಿಕ ಮಂತ್ರಿಮಂಡಳಗಳಲ್ಲಿ ಸೇರಿಸಿಕೊಂಡ ಮುಸ್ಲಿಮರನ್ನು ಇಸ್ಲಾಮಿನ ದ್ರೋಹಿಗಳಾಗಿ ಹೊರಗೆ ಹಾಕಬೇಕೆಂದೂ ಬಂಗಾಳದ ಮುಸ್ಲಿಂ ಲೀಗಿನವರು ತಮ್ಮ ಶರ್ತಗಳನ್ನು ಮಿ॥ ಜಿನ್ನಾರವರಿಗೆ ತಂತಿ ಮೂಲಕ ತಿಳಿಸಿರುವರು.

‘ಕಾಂಗ್ರೆಸ್ಸು ಈ ಶರ್ತಗಳಿಗೆ ಮನ್ನಣೆಯನ್ನು ಕಂಡಿತವಾಗಿಯೂ ಕೊಡಲಾರದೆಂದು ನಮ್ಮ ಮತವು. ಆದರೆ ಈ ತರದ ಸೂಚನೆಗಳು ಮುಂದೆ ಬರುತ್ತಿರುವಾಗ, ಸಂಧಾನಕ್ಕೆ ತಕ್ಕ ವಾತಾವರಣವು ಉಂಟಾಗಿದೆಯೆಂದು ನಂಬಲು ನಮಗೆ ಸಾಧ್ಯವಾಗುವುದಿಲ್ಲ.

‘ಸರ್ವಸಾಮಾನ್ಯ ಗುರಿಗಳಿದ್ದವರು ಮಾತ್ರ ಕೋಮುಗಳ ಐಕ್ಯವನ್ನು ಕೋರುತ್ತಿರಬೇಕು. ಮುಸ್ಲಿಂ ಲೀಗಿನವರು, ತಮ್ಮ ಬ್ರಿಟಿಷ್ ಹಿತೈಷಿಗಳ ಮೇಲೆ ಹೊಂದಿಕೊಂಡಿರುವಾಗ, ಆ ಲೀಗಿನೊಡನೆ ಯಾವತ್ತೂ ತರದ ಸಂಧಾನ ಮಾತುಕತೆಗಳನ್ನು ನಡೆಯಿಸುವುದರಿಂದ ಪ್ರಯೋಜನವಿಲ್ಲ. ದೇಶದ ರಾಜಕೀಯ ಗುಲಾಮಗಿರಿಯಲ್ಲಿ ಸಂತುಷ್ಟರಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಗೌರವೀಯ ಪಾತ್ರವನ್ನು ವಹಿಸುವಂತೆ ಮಾಡುವುದು ಅಸಾಧ್ಯ.

## ಸ್ವತಂತ್ರ ಐಯರ್ಲೆಂಡ್.

ಐಯರ್ಲೆಂಡು ಸ್ವತಂತ್ರಗೊಳಿಸುವ ನೂತನ ರಾಜಶಾಸನವೊಂದು ಡಿವೆಲೆರನ ಸರಕಾರದಿಂದ ಜ್ಯಾರಿಮಾಡಲ್ಪಟ್ಟು, ಅವಕೀಗ ಬ್ರಿಟಿಸ ಮನ್ನಣೆಯು ದೊರಕಿದ್ದು ವ್ಯಾಪಾರ, ರಕ್ಷಣ, ಇತ್ಯಾದಿ ವಿಷಯಕುರಿತು ವಿಚಾರವು ನೆತ್ತಿಲು ನೂತನ ಐಯರ್ಲೆಂಡಿನ ಸರ್ವಾಧಿಕಾರಿ ಡಿವೆಲೆರನು ಲಂಡನಿಗೆ ತೆರಳಿರುವನು. ಡಿವೆಲೆರನ ಐರ್ಲೆಂಡಿನಿಂದ ಹೊರಗಿರುವ ಅಲ್ಸಟರ್ ಪ್ರದೇಶವನ್ನು ಡಿವೆಲೆರನಿಗೆ ಒಪ್ಪಿಸುವ ವಿಚಾರ ಅಲ್ಲಿ ಮುಂದೆ ಒದಗಿದೆ ಎಂದು ವಾರ್ತೆಯಿದೆ. ಡಿವೆಲೆರನು ನಿಜವಾಗಿಯೂ ಗೆದ್ದಿರುವನೆಂದು ಇದರಿಂದ ಖಚಿತವಾಗುತ್ತದೆ.

## ಫ್ರೆಂಚ್ ಸರಕಾರದ ಪರಿಸ್ಥಿತಿ

ಫ್ರಾನ್ಸಿನಲ್ಲಿ ಸರಕಾರಗಳ ಆಗಿಂದಾಗ್ಗೆ ಬದಲಾಗುತ್ತಿವೆ. ಫ್ರಾನ್ಸಿನ ಅಂತರ್ಯ ರಾಜಕೀಯದಲ್ಲಿ ಬಹಳ ಗೊಂದಲವಿರುವುದು ಇದರಿಂದ ಖಚಿತವಾಗುತ್ತದೆ. ಈಗ ಕ್ಯಾಂಟಿನ ಬ್ಲಮ್ಮರು ಕೊಮ್ಯುನಿಷ್ಟ ಮತ್ತು ಸೋಶ್ಯಾಲಿಸ್ಟ ಗಳನ್ನು ಕೂಡಿಸಿ, ಸರಕಾರ ಮಂಡಳದ ರಚನೆ ಮಾಡುವರಂತೆ. ಕೆಲ ದಿವಸ ಹಿಂದೆ ಇದ್ದ ಸರಕಾರಕ್ಕೆ ಮಜೂರರ ವಿಷಯ ಕೆಲವು ವಿಚಾರಗಳನ್ನು ಸರಿಯಾಗಿ ಇತ್ಯರ್ಥ ಮಾಡಲಸಾಧ್ಯವಾದುದರಿಂದಲೂ ಸರಕಾರದ ಆರ್ಥಿಕ ಸ್ಥಿತಿಯನ್ನು ಹತೋಟಿಗೆ ತರಲು ಅಸಾಧ್ಯವಾದುದರಿಂದಲೂ ಅಧಿಕಾರದಿಂದ ಹೊರಗಿಳಿಯಬೇಕಾಯಿತು. ಬ್ಲಮ್ಮರ ಸರಕಾರಕ್ಕೆ ಎಷ್ಟು ಆಯುಷ್ಯವಿರುವುದೆಂದು ನೋಡಬೇಕಾಗಿದೆ.

## ಅಸೆಂಬ್ಲಿಯ ಸದಸ್ಯರಿಗೆ ಅಧಿಕಾರಗಳು ಕೊಡಲಾಗುವವು.

ಅಸೆಂಬ್ಲಿಯ ಸದಸ್ಯರಿಗೆ ಪೋಲೀಸ್ ಸ್ಟೇಶನ್, ಅಬಕಾರಿ ಅಂಗಡಿಗಳನ್ನು, ಸರಕಾರಿ ಆಸ್ಪತ್ರೆಗಳನ್ನು ಸರಕಾರ ಸಹಾಯಕ ಶಾಲೆಗಳನ್ನು, ಜೈಲು ಇತ್ಯಾದ ತಮ್ಮ ಪ್ರದೇಶದಲ್ಲಿನ ಸರಕಾರಿ ಸಂಸ್ಥೆಗಳನ್ನು ಸಂದರ್ಶಿಸಿ, ಅಲ್ಲಿನ ರೆಕಾರ್ಡ ದಸ್ತೈರೆಗಳನ್ನು ಪರಿಶೋಧಿಸಲು ಅವಕಾಶ ಮಾಡಿಕೊಡುವ, ಜಿಲ್ಲಾ ಬೋರ್ಡು, ನಗರ ಸಭೆ ಆಫೀಸುಗಳನ್ನು ಸಂದರ್ಶಿಸಿ, ಅವುಗಳ ಎಲ್ಲಾ ರೆಕಾರ್ಡು ಇತ್ಯಾದಿ ಗಳನ್ನು ನೋಡುವ ... ಮುಂತಾದ ಎಲ್ಲಾ ಸರಕಾರಿ ಉದ್ಯೋಗಸ್ಥರು ಸಾರ್ವಜನಿಕ ವಿಷಯಗಳಲ್ಲಿ ವಿಚಾರಿಸ ಅವಕಾಶ ಮಾಡಿಕೊಡುವ ಒಂದು ಬಿಲ್ ಸಂಯುಕ್ತ ಪ್ರಾಂತ್ಯದ ಅಸೆಂಬ್ಲಿಯ ಒದಗಿದೆ.

—

ಸಂಯುಕ್ತ ಪ್ರಾಂತ್ಯದ ಮಂತ್ರಿಗಳ ನಾವು ಬಾಗ ಶ್ರೀ॥ ರಾಫಿ ಅಹಮದ ಕಿದ್ವಾ ಗಳ ಹೃದಯಕ್ರಿಯಾಬಾಗ ಕೆಲವು ದಿನ ತನಕ ಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವರು.


## ಊಟದ ಹೊತ್ತು ತಿವಿದ ರೀತಿಯ ಹೊಟ್ಟೆನೋವು

ಊಟದ ಮೊದಲು, ತಿವಿದ ರೀತಿಯ ಹೊಟ್ಟೆ ನೋವುಂಟಾಗುವುದು ಅತ್ಯಂತ ಭಯಂಕರ ಉದರಪೀಡೆಯು.

ಮಿ॥ ಎ ಬಿ ಎಂಬವರು ಈ ತರದ ಸಂಕಟಕ್ಕೊಳಗಾಗಿದ್ದರು. ಸಂಕಟವನ್ನು ಅನುಭವಿಸಿ ಕೊನೆಗೆ ಬಹು ನಿರಾಶರಾಗಿದ್ದರು. ಆದರೆ, ಅವರ ಪತ್ರವನ್ನು ಓದಿರಿ.

“ಕಳೆದ ಹತ್ತು ವರ್ಷಗಳಿಂದ ನಾನು ಅತ್ಯಂತ ಭಯಂಕರ ತರದ ಹೊಟ್ಟೆನೋವನ್ನು ಅನುಭವಿಸುತ್ತಿದ್ದೆನು. ಈ ನೋವು ಭೋಜನಗಳ ಊಟದ ಮೊದಲು ಪ್ರಾರಂಭವಾಗುತ್ತಿತ್ತು. ಅಸಂಖ್ಯಾಕ ಔಷಧಿಗಳನ್ನು ಉಪಯೋಗಿಸಿದರೂ ನನಗೆ ಫಲ ದೊರಕಲಿಲ್ಲ. ಕೊನೆಗೆ ಮೆಕ್ಲೀನ್ ಬ್ರಾಂಡನ್ನು ಉಪಯೋಗಿಸಿದೆನು. ಪ್ರಥಮ ಡೋಸಿನ ಲಾಗಾಯ್ತ, ನಾನೊಬ್ಬ ಹೊಸ ಮನುಷ್ಯನಾಗಿರುವೆನು. ಈ ನೋವು ಪ್ರಾರಂಭವಾದೊಡನೆ ನಾನು ಮೆಕ್ಲೀನ್ ಬ್ರೇಂಡ್ ಹುಡಿಯನ್ನು ಸೇವಿಸುತ್ತೇನೆ. ಒಡನೆ ನೋವು ಮಾಯವಾಗುವುದು. ನನ್ನ ಮನೆಯಲ್ಲಿ ಈಗ ಮೆಕ್ಲೀನ್ ಹುಡಿಯ ಬಾಟ್ಲಿಯನ್ನು ತಪ್ಪಿಸುವುದೇ ಇಲ್ಲ. ನೀವು ನೀಡಿದ ಸಹಾಯಕ್ಕೆ ನಾನು ಕೃತಜ್ಞನಾಗಿರುತ್ತೇನೆ.”

ಮೆಕ್ಲೀನ್ ಬ್ರೇಂಡಿನಿಂದ ನಿಮ್ಮ ಉದರವು ಸರಿಹೊಂದುವುದಲ್ಲದೆ ನಿಮ್ಮ ಮನೋವ್ಯಥೆಯೂ ಮಾಯವಾಗುವುದು. ನೀವು ಹೊಟ್ಟೆ ಸಂಬಂಧವಾದ ಸಂಕಟಪೀಡಿತರಾಗಿದ್ದರೆ ನೆಟ್ಟಗೆ ದವಾಖಾನೆಗೆ ಹೋಗಿ ಮೆಕ್ಲೀನ್ ಬ್ರೇಂಡ್ ಹುಡಿಯನ್ನು ಪಡೆಯಿರಿ—ಪಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

Alex. C. Maclean

ಎಂಬ ಸಹಿಯಿರ ವಂತೆಯೂ, ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿ. ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ.

ಇಂತಹ ನಮೂನೆಯ ಕಡಿಮೆ ದರದ ಔಷಧಿಯ ಮಾರಾಟವನ್ನು ತಡೆದು ನೋಡಿಕೊಳ್ಳಬೇಕು, ಇದು ಬಿಡಿಯಾಗಿ ದೊರೆಯುವುದಿಲ್ಲ. ಸೀಲ್‌ಗಳುಳ್ಳ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಅಸಾಧ್ಯವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜೆ ಎಲ್ ಮೊರಿಸನ್, ಸನ್ ಎಂಡ್ ಜೋನ್ಸ (ಇಂಡಿಯಾ) ಲಿಮಿಟೆಡ್
ಸ್ಟೆಂಡಾರ್ಡ ಬಿಲ್ಡಿಂಗ್ ಹೊರ್ನ್ಬಿ ರೋಡ್ ಮುಂಬೈ

S No 75.

# ೧ನೆಯ ಕರ್ನಾಟಕ ರಾಜಕೀಯ ಪರಿಷತ್ತು

## ರಾಣೆಬೆನ್ನೂರು

ಹಿಂದೆಯೆ ಪ್ರಕಟವಾದಂತೆ ಮೇಲಣ ಪರಿಷತ್ತು ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಶ್ರೀ ಹನುಮಂತರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ತಾ. ೧೬ನೇ ಆದಿತ್ಯವಾರ ಜರಗಿತು. ಮುಂಚಿನ ದಿನ ಅಧ್ಯಕ್ಷರನ್ನು ರೈಲ್ವೆ ಸ್ಟೇಶನಿನಿಂದ ಅವರಿಗೆ ಸಿದ್ಧಮಾಡಿದ್ದ ಬಂಗಲೆಗೆ ವಾದ್ಯಘೋಷ, ಸ್ವಯಂ ಸೇವಕರು, ರಾಷ್ಟ್ರಧ್ವಜ ನಿಶಾನೆ ಸಮೇತ ಮೆರವಣಿಗೆಯಿಂದ ಸ್ವಾಗತ ಮಾಡಿದರು. ತಾ. ೧೬ನೇ ಪ್ರಾತಃಕಾಲ ೮ ತಾಸಿಗೆ ಶ್ರೀ ಲೀಲಾವತಿ ಮುನ್ಶಿಯವರ ಹಸ್ತದಿಂದ ರಾಷ್ಟ್ರಧ್ವಜಾರೋಹಣ ಮಾಡಲ್ಪಟ್ಟಿತು, ೧೦ರಿಂದ ೧೨ರ ತನಕ ಪರಿಷತ್ತಿನ ವಿಷಯ ನಿಯಾಮಕ ಸಮಿತಿಯು ಕೂಡಿತು, ಅಪರಾಹ್ನ ೨-೩ಕ್ಕೆ ಕ. ಪ್ರಾಂ. ಕಾ. ಸಮಿತಿಯ ಮಹಾಧಿವೇಶನವು ಸೇರಿ ೫-೩೦ರ ತನಕ ಚರ್ಚೆ ನಡೆದು, ಬಿಜಾಪುರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಕಾಂಗ್ರೆಸು ಪ್ರತಿನಿಧಿಗಳ ಚುನಾವಣೆ ತಕರಾರಿನ ಇತ್ಯರ್ಥವಾಗದೆ, ರಾತ್ರೆ ೧೦ಕ್ಕೆ ಮುಂದರಿಸಿಡಲಾಯಿತು ಐದು ತಾಸಿನ ಸುಮಾರಿಗೆ ಪರಿಷತ್ತಿನ ಮಹಾಸಭೆಯು ಶ್ರೀಮತಿ ಲೀಲಾವತಿ ಮುನ್ಶಿಯವರಿಂದ ಆರಂಭಿಸಲ್ಪಟ್ಟಿತು, ಶ್ರೀಮತಿಯರ ಹಿಂದೀ ಭಾಷಣವನ್ನು ಶ್ರೀ ಹ ಕೌಜಲಗಿಯವರು ಕನ್ನಡಿಸಿದರು ಆನಂತರ ಸ್ವಾಗತ ಅಧ್ಯಕ್ಷರಾದ ಶ್ರೀ ಶಿವಮೂರ್ತಿ ಸ್ವಾಮಿ ಹಿರೇಮಠ ಇವರು ಸ್ವಾಗತ ಭಾಷಣ ಮಾಡಿದರು. ಕಾಂಗ್ರೆಸು ರಾಜಕೀಯ ಸಂಸ್ಥೆಯಾಗಿ ಕಾಂಗ್ರೆಸಿನ ಧೋರಣೆ, ಪ್ರಸ್ತುತ ಪ್ರವೃತ್ತಿಯನ್ನು ನಮೂದಿಸಿ, ಕಾಂಗ್ರೆಸಿಗೆ ದೊರಕಿರುವ ಹೊಸಪ್ರಕ್ತಿಯನ್ನು ಸಮರ್ಥನ ಮಾಡಿ ನಮ್ಮ ನಡೆನುಡಿಗಳನ್ನು ಶಿಸ್ತಿಗೊಳಗು ಮಾಡಿ ದೇಶದ ಸ್ವಾತಂತ್ರ್ಯದ ವಿಚಾರವನ್ನೇ ಮುಂದಿಟ್ಟುಕೊಳ್ಳಬೇಕಾಗಿಯೂ, ಕರ್ನಾಟಕ ಏಕೀಕರಣ, ಕಾಂಗ್ರೆಸು ಪ್ರಗತಿಯ ಕುರಿತು ಆಲೋಚನೆಯು ಪರಿಷತ್ತಿನಲ್ಲಿ ಸಮಾಲೋಚಿಸತಕ್ಕದ್ದಿದೆಯೆಂದರು

ಆನಂತರ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹ ಕೌಜಲಗಿಯವರು ತಮ್ಮ ಭಾಷಣ ಮಾಡಿದರು ಕಾಂಗ್ರೆಸು ಅಧಿಕಾರವನ್ನು ಸ್ವೀಕರಿಸಿ ಸದಿಚ್ಛೆ ಜನಹಿತ ದೃಷ್ಟಿಯಿಂದ ಚುನಾವಣೆಯ ಘೋಷಣೆಯ ದೃಷ್ಟಿಯಿಂದ ಕಾರ್ಯ ಸುತ್ತಿದ್ದರೂ, ಅದರ ಮಾರ್ಗವು ಸುಗಮವಾಗಿರುವುದಿಲ್ಲ. ಸಂಯುಕ್ತ ರಾಜ್ಯಘಟನೆಯ ಬಗ್ಗೆ ಕಾಂಗ್ರೆಸು ತನ್ನ ಧೋರಣವನ್ನು ನಿಶ್ಚಯಿಸಲಿದೆ ದೇಶೀಯ ಸಂಸ್ಥಾನಗಳೂ ಅಲ್ಲಿನ ಪ್ರಜೆಗಳ ಮಟ್ಟಿನ ಪ್ರಶ್ನೆಯು ಮಹತ್ವದಿದ್ದಾಗಲೇ, ಸದ್ಯ ಮೈಸೂರು ಸಂಸ್ಥಾನದಲ್ಲಿ ದಬ್ಬಾಳಿಕೆಯ ವಿಚಾರವೂ ಆಗತಕ್ಕದ್ದಿದೆ. ಆದರೆ ನಮ್ಮ ಧ್ಯೇಯವನ್ನು ಸಾಧಿಸಲು ಶಾಂತಹಾಗೂ ಅಹಿಂಸಾ ಮಾರ್ಗವೇ ತಕ್ಕದ್ದೆಂದು ಹದಿನೇಳು ವರ್ಷಗಳ ಅನುಭವದ ಮಾತು. ಹಿಂದೂ ಮುಸಲ್ಮಾನ ಹಾಗೂ ಜಾತೀಯ ಪಕ್ಷಿಯನ್ನು ಜಾತೀಯತೆಯಷ್ಟೇ ಮರೆತು ಉಜ್ವಲ ರಾಷ್ಟ್ರೀಯ ಭಾವನೆಯನ್ನು ಪ್ರಕಾಶಿಸಬೇಕ, ಆಗ ಮಾತ್ರ ರಾಷ್ಟ್ರೀಯ ಪ್ರಗತಿಯುಂಟಾಗುವುದು. ಹಿಂದುಸ್ತಾನಿ ಸೇವಾದಳದ ಮಹತ್ವ, ಇದನ್ನು ಪುನರ್ಘಟಿಸಿ, ಹಳ್ಳಿ ಕೆಲಸಗಾರರನ್ನು ತರಬೇತು ಮಾಡಿ ನಿಸ್ವಾರ್ಥ ಸೇವಾ ವೃತ್ತಿಯಿಂದ ರಾಷ್ಟ್ರಜಾಗೃತಿ ಯಶಸ್ಸು ಸಾಧಿಸಬೇಕು. ಸ್ವಪರಾಕ್ರಮದಿಂದಲೇ ಅನ್ಯರ ಸಹಾಯವನ್ನವಲಂಬಿಸದೆ ಮುಂದುವರಿಯುತ್ತಿರಬೇಕು. ನಮ್ಮ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳಿಗೆಲ್ಲ ಸ್ಫೂರ್ತಿಯುಂತಿರುವ ಮಹಾತ್ಮಜಿಯವರಿಂದ ಜನ್ಮಕ್ಕೆ ತರಲ್ಪಟ್ಟಿರುವ ಅಖಿಲ ಭಾರತ ಚರಕಾ ಸಂಘ, ಗ್ರಾಮೋದ್ಯೋಗ ಸಂಘ, ಹರಿಜನ ಸೇವಾಸಂಘದ ಪ್ರಸ್ತಾಪವೆತ್ತಿ, ಅವುಗಳನ್ನು ಯಶಸ್ವಿಗೊಳಿಸಬೇಕು.

## ತುಂಡು ವಾರ್ತೆಗಳು.

ಹರಿಪುರದಲ್ಲಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ವಸ್ತು ಪ್ರದರ್ಶನವನ್ನು ಫೆಬ್ರವರಿ ೧೦ನೇ ತಾರೀಕಿನ ದಿನ ಮಹಾತ್ಮಾಜಿಯವರು ತೆರೆಯಲಿರುವರು.

ನಮ್ಮ ಸಾರ್ವಭೌಮರ ನಾಣ್ಯಗಳು ಈ ವರ್ಷ ಅಚ್ಚು ಹಾಕಲ್ಪಡುವುವು. ನಿಕ್ಕೆಲ್ ಮತ್ತು ತಾಮ್ರದ ನಾಣ್ಯಗಳನ್ನು ತಯಾರಿಸಲು ಮಾತ್ರ ಅಪ್ಪಣೆಯು ದೊರಕಿರುವುದು. ಸಾಧಾರಣ ಜೂನಿನಷ್ಟಕ್ಕೆ ನಾಣ್ಯಗಳು ಸಿದ್ಧವಾಗಬಹುದು.

ಟಿನೆಂನ್ಸಿ ಬಿಲ್ಲಿನ ಕುರಿತು ಒರಿಸ್ಸದಲ್ಲಿ ಸರಕಾರದವರೊಳಗೂ ಜಮೀನುದಾರರೊಳಗೂ ರಾಜಿಯ ಮಾತುಕತೆಗಳು ನಡೆಯುತ್ತಿವೆ. ಗವರ್ನರರೊಡನೆ ಮಾತನಾಡಲು ಮುಖ್ಯ ಮಂತ್ರಿಗಳಾದ ನಾಮದಾರ ವಿಶ್ವನಾಥ ದಾಸರು ಪುರಿಗೆ ತೆರಳಿರುವರು

ಕರ್ನೂಲಿನಲ್ಲಿ ಕ್ಷಾಮದ ಬಹ್ನೆಗಳು ಕಲೆದೋರಿರುವುದರಿಂದ ಜನರಿಂದ ಜನವರಿ ಕಿಸ್ತಿನ ತೆರಿಗೆಯನ್ನು ವಸೂಲು ಮಾಡಬಾರದೆಂದು ಕಲೆಕ್ಟರರ ಹುಕುಂ ಹೊರಟಿರುವುದು.

ಭೂಕಂದಾಯವು ಅಧಿಕವಾಗಿರುವುದೆಂದು ಅದನ್ನು ಇಳಿಸುವ ಬಗ್ಗೆ ಪಾಲಿಟಾನಾ ಸಂಸ್ಥಾನದ ರೈತರುಗಳು ಚಳವಳವನ್ನು ಪ್ರಾರಂಭಿಸಿರುವರು. ಮೊನ್ನೆ ಅವರು ಅರಮನೆಯ ಎದುರು ಸತ್ಯಾಗ್ರಹವನ್ನು ನಡೆಯಿಸಿದರು.

ಮದ್ರಾಸು ಸರಕಾರದ ಮಾಜಿ ಪೋಲೀಸ್ ಕಮಿಶನರಾದ ಕರ್ನಲ್ ಹೇಮಿಲ್ ಮೊನ್ನೆ ನಿವೃತ್ತರಾಗಿ ಸ್ವದೇಶಕ್ಕೆ ತೆರಳಿದವು. ಎ. ಎಸ್ ಪಿ. ರೈಷ್ಟಿನ್ ಸ್ಪೆಷಲ್ ಡಿಟೆಕ್ಟರರಾಗಿ ಟನಾಯಕರಾಗಿರುವರು

ಮಲಬಾರು ಪ್ರಾಂತ್ಯದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯ ಚುನಾವಣೆಯಲ್ಲಿ ಸಾಮ್ಯವಾದಿಗಳಿಗೆ ಅಧಿಕ ಸ್ಥಾನಗಳು ದೊರಕಿವೆ

ಕಾಂಗ್ರೆಸ್ಸಿನ ರಾಜಕೀಯದಲ್ಲಿರುವ ಅಶುದ್ಧತೆಯನ್ನು ನಾಶಗೊಳಿಸಬೇಕಾಗಿ ರಾಷ್ಟ್ರಪತಿ ನೆಹರೂರವರ ಕೋರಿಕೆಯಾಗಿರುತ್ತದೆ

ಮದ್ರಾಸು ಸರಕಾರದ ಮಂತ್ರಿಮಂಡಳದ ಸದಸ್ಯರೊಬ್ಬರು ಆಫ್ರಿಕಾಕ್ಕೆ ತೆರಳಬೇಕಾಗಿ ಬಂದುದರಿಂದ, ಮಂತ್ರಿಮಂಡಳದಲ್ಲಿ ಬದಲಾವಣೆ ಆಗಬಹುದೆಂದು ವಾರ್ತೆಯಿದೆ

ಹಳ್ಳಿಗರ ಸುಧಾರಣೆ ಮಾಡಲು ಮುಂಬಯಿ ಪ್ರಾಂತ್ಯದ ಕಾಂಗ್ರೆಸ್ ಸರಕಾರವು ಒಂದು ಮಹಾಯೋಜನೆಯನ್ನು ಕೈಕೊಳ್ಳುವುದಂತೆ. ರೈತರ ಸಾಲನಿವಾರಣೆ ಮಾಡುವ ಕ್ರಮವು ಅದರಲ್ಲೊಂದು

ಹಳ್ಳಿಗರಿಗೆ ಸುಲಭ ದರದ ಸಾಲಗಳನ್ನು ಒದಗಿಸುವರೆ ರಿಸರ್ವ್ ಬೇಂಕಿನವರು ವ್ಯವಸ್ಥೆ ಮಾಡಿರುವರು. ಪಾಮರ ಗಾಗಿ ಸುಲಭ ದರದಲ್ಲಿ ಭೂಮಿಯ ಮೇಲೆ ಸಾಲಕೊಡುವ ಬೇಂಕುಗಳಿಗೆ ರಿಸರ್ವ್ ಬೇಂಕು ಸುಲಭ ದರದಲ್ಲಿ ಸಾಲಕೊಡಲು ಸಿದ್ಧವಿದೆ

---

ಕರ್ನಾಟಕ ಏಕೀಕರಣ, ಉತ್ತರ ಕನ್ನಡದಲ್ಲಿ ಕರನಿರಾಕರಣ ಚಳವಳಿಯ ಪ್ರಸ್ತಾಪವೆತ್ತಿದರು. ಕರನಿರಾಕರಣೆ ಸರ್ವಸ್ವವನ್ನು ಕಳೆದುಕೊಂಡವರಿಗೆ ಚಿರಋಣಿಯಾಗಿದ್ದೇವೆ, ಅವರ ಭೂಮಿಗಳನ್ನು ಮರಳಿ ಕೊಡುವ ಬಗ್ಗೆ ಕಾಂಗ್ರೆಸು ಮಂತ್ರಿ ಮಂಡಳವು ನಿರ್ಧರಿಸಿದೆಯಾದರೂ ಕರ್ನಾಟಕಸ್ಥರೆಲ್ಲ ಅವರ ಉದ್ಧಾರ ಮಾಡುವ ಕರ್ತವ್ಯವಿದೆಯೆಂದರು.

ತಾ. ೧೬ನೆ ಪೂರ್ವಾಹ್ನ ೯ರಿಂದ ೧೦-೩೦ರ ವರೆಗೆ ಕರ್ನಾಟಕ ಯುವಕ ಪರಿಷದವು ಶ್ರೀ ಯುಸೂಫ್ ಮೆಹರಾಲಿಯವರ ಅಧ್ಯಕ್ಷತೆಯಲ್ಲಿ ಜರಗಿತು

ತಾ. ೧೬ನೇ ರಾತ್ರೆ ೧೦—೩೦ಕ್ಕೆ ಕರ್ನಾಟಕ ಪ್ರಾ. ಕಾ. ಕಮಿಟಿ ಸಭೆ ಸೇರಿ ಒಮ್ಮತದ ತೀರ್ಮಾನದಿಂದ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಅಧ್ಯಕ್ಷರಾಗಿ ಹೊಸ ಕಾರ್ಯನಿರ್ವಾಹಕರೂ ಕಾರ್ಯಕಾರಿ ಮಂಡಳಿಯೂ ಗೊತ್ತುಮಾಡಲ್ಪಟ್ಟಿತು. ಅನಂತರ ಅ. ಭಾ. ಕಾಂ. ಕಮಿಟಿಗೆ ಸದಸ್ಯರ ಚುನಾವಣೆಯು ಬೆಲ್ಲಟ್ ಪತ್ರಗಳ ಮೂಲಕ ಜರಗಿತು, ಫಲಿತಾಂಶವು ಮರುದಿನಕ್ಕೆ ತಿಳಿಸುವುದಾಗಿ ಮುಂದಿಸಲಾಯಿತು

---

## ಚೀನಾಕ್ಕೆ ಹಿಂದೂದೇಶದ ಸಹಾಯ.

ಚೈನಾ ದಿನಾಚರಣೆಯಂದು ಬರೇ ಬೊಂಬಾಯಿಯಲಿಯೇ ೪೦,೦೦೦ ರೂಪಾಯಿಗಳು ಸಂಗ್ರಹಿಸಲ್ಪಟ್ಟಿರುವುವು. ಬೆಂಗಳೂರಿನಲಿ ೧೫,೨೦೦ ರೂಪಾಯಿಗಳೂ ಒಟ್ಟಾಗಿರುವುವು. ಈ ಹಣವು ಚೀನಾದೇಶಕ್ಕೆ ಅವರ ಸಹಾಯಾರ್ಥವಾಗಿ ಕಳುಹಿಸಲ್ಪಡುವುದು. ಹಿಂದೂದೇಶದಲ್ಲಿದ್ದ ಚೀನಿಯರಿಂದ ಈ ತನಕ ಕಳುಹಿಸಲ್ಪಟ್ಟ ಹಣವು ೫೦,೦೦೦ಕ್ಕೆ ಮಿಕ್ಕಿರುವುದು


## ಇನೋಸ್ ಫ್ರುಟ್ ಸಾಲ್ಟ್

ಅವಳು ಯಾವಾಗಲೂ ಅಸ್ವಸ್ಥಳಾಗಿದ್ದು ಉಲ್ಲಾಸವಿಲ್ಲದೆ ಮುಂಗೋಪಿಯಾಗಿದ್ದಳು. ಅವಳು ಕಾಹಿಲೆಯಾಗಿದ್ದು ಈಗ ಅವಳಿಗೆ ಆರೋಗ್ಯಾವಸ್ಥೆಗೆ ಬರಲು ಶಕ್ತಿಯೇ ಇರಲಿಲ್ಲ

"ಇನೋ" ಅವಳಿಗೆ ಹೊಟ್ಟೆಯೊಳಗಿನ ವಿಷಗಳನ್ನು ತೆಗೆದು ಪುನಃ ಆರೋಗ್ಯಾವಸ್ಥೆಗೆ ತಂದಿತು

### ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ



ನೀವು ಆರೋಗ್ಯದಲ್ಲಿರುವಿರಿ ಇನೋಸ್‌ಫ್ರುಟ್ ಸಾಲ್ಟ್ 'Eno's Fruit Salt' ಇದು ಹೊಟ್ಟೆಯ ಅವ್ಯವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ಮಲಬದ್ಧತೆ ತಲೆನೋವು ನಿದ್ರಾಭಂಗ ಮುಂತಾದ ರೋಗಗಳನ್ನು ಬೇಗ ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ. ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಸ್ಥವಾಗುವುದು. ಇದೇ ಆರೋಗ್ಯವು. ಇನೋ 'ENO' ಇದಕ್ಕೆ ನಿಮ್ಮ ಸ್ವಾಭಾವಿಕ ಸ ರಕ್ಷಿತ ದ ಭೇದಿಯಾಗುವ ಗುಣವಿದೆ

ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸಾಲ್ಟಿನ 'Eno's Fruit Salt' ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ.

ಇನೋಸ್‌ಫ್ರುಟ್ ಸಾಲ್ಟಿನಲ್ಲಿ 'Eno's Fruit Salt' ಒಳ್ಳೇ ತಾಜಾವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರುತ್ತವೆ

EX 13

Eno's 'Fruit Salt'



## ಹಿಂದುಸ್ಥಾನ ಕೋ-ಓಪರೇಟಿವ್ ಇನ್ಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಹೆಡ್ ಆಫೀಸು ಕಲ್ಕತ್ತಾ — **ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ** — ಸ್ಥಾಪನೆ 1907

| | | |
|---|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ | 12 00 00,000 |
| ಆಸ್ತಿಪಾಸ್ತಿಗಳು . . . | ರೂ | 2 21 00 000 |
| ನೂತನ ವ್ಯವಹಾರ | ರೂ | 2 82,81,000 |

**ಅತ್ಯಧಿಕ ಬೋನಸ್ ಹಂಚಲಾಗಿದೆ.**

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ವಿಮೆಯ ಮೇಲೆ ಪ್ರತಿ ವರ್ಷ ಒಂದರ ರೂ 23

ಮಕ್ಕಳ ವಿಮಾ, ಅವಘಡ, ಮತ್ತು ಮರಣ ವಿಮೆ—ನಮ್ಮ ವಿಶಿಷ್ಟತೆ

*For particulars please apply to*

T ANA NACHARI,
BRANCH MANAGER H C I S LTD
POST BOX 223 MADRAS

K K MENON
ORGANISOR H C I S LTD
Court Road CALICUT

DIAMONDS! DIAMONDS!
BEST BRILLIANCY

**K. R. K. SHET,**

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

**ವಜ್ರಗಳು!**

ಎವರ್ಸ್ವಾಡಮ್ನಿನಿಂದ ಬರುವ ವಜ್ರಗಳು ಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುವೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಯನ್ ಹೈಸ್ಕೂಲ್ ಬಳಿ, ಮಂಗಳೂರು.

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

**ಸ್ವದೇಶಾಭಿಮಾನಿಗೆ**

ಚಂದಾದಾರರಾಗಿರಿ.

## ಮಂಗಳೂರಿನ ಪೇಟೆಧಾರಣೆ

| ಸಾಮುಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ಬತ್ತ ಹೊಸ ಗುಡ್ಡೆ ಮು. | 1 —10 | 1 —10 |
| ರಾಶಿ ಅಕ್ಕಿ ... | 3— 8 | 4— 0 |
| ಸುಗ್ಗಿ ... | 4— 0 | 4— 0 |
| ಗುಡ್ಡು ... | 4— 3 | 4— 3 |
| ಊರ ಅವ್ವಲ್ ಬೆಳ್ತಿಗೆ ... | 4— 7 | 4— 7 |
| ರಂಗೂನು ಬೆ. ಗೋ. ಗೆಕ್ಕೆ ... | 7 — 2 | 7— 4 |
| ಎಲ್ಲೂರು ಬೆ. ಮು. ಗೆಕ್ಕೆ ... | 3—14 | 4— 0 |
| ಗೋಧಿ ಗೋಣಿ ಗೆಕ್ಕೆ ... | 13 — 0 | 14— 8 |
| ಕೊಗರಿ ಗೋಣಿ ಗೆಕ್ಕೆ ... | 11— 8 | 18— 8 |
| ಹುರುಳಿ ಗೋಣಿ ಗೆಕ್ಕೆ ... | 6— 0 | 6— 2 |
| ಕಡಲೆ ಗೋಣಿ ಗೆಕ್ಕೆ ... | 9 — 8 | 10 — 8 |
| ಕೊಗರಿಬೇಳೆ ಗೋಣಿಗೆಕ್ಕೆ ... | 17— 8 | 18— 0 |
| ಉದ್ದು ಗೋಣಿ ಗೆಕ್ಕೆ ... | 9— 0 | 9 — 8 |
| ಹೆಸರು ಗೋಣಿ ಗೆಕ್ಕೆ ... | 9—12 | 10— 8 |
| ಊರುಬೆಲ್ಲ ಖಂಡಿ ಗೆಕ್ಕೆ ... | 27— 0 | 33— 0 |
| ಉಪ್ಪು ಗೋಣಿ ಗೆಕ್ಕೆ ... | 4— 8 | 5— 4 |
| ಕೊಬ್ರಿ ಖಂಡಿ ಗೆಕ್ಕೆ ... | 50 —0 | 52— 8 |
| ಎಳ್ಳಿಂಡಿ ಖಂಡಿ ಗೆಕ್ಕೆ ... | 25 — | 26 — 0 |
| ತೆಂಗಿನ ಎಣ್ಣೆ ಮುಡಿ ಗೆಕ್ಕೆ ... | 3 —13 | 3—13 |
| ಎಳ್ಳೆಣ್ಣೆ ಮುಡಿ ಗೆಕ್ಕೆ ... | 6— c | 7— 0 |
| ಚಿಮಿಣಿಎಣ್ಣೆ ಪೆಟ್ಟಿಗೆ ಗೆಕ್ಕೆ ... | 6— 5 | 7— 5 |
| ಮೋರಿಸ ಸಕ್ಕರೆ ಮು. ಗೆಕ್ಕೆ ... | 2— 13 | 2 —14 |
| ಮೆಣಸು ... | 4— 8 | 6— 0 |
| ಸಾಸಿವೆ ಮುಡಿ ಗೆಕ್ಕೆ ... | 5 — 8 | 6— 8 |
| ಕಾಳುಮೆಣಸು (ಹ ಮೇ. ಗ ... | 15 — 4 | 17— 0 |
| ಯೇಲಕ್ಕಿ ಬೀಜ ಮಣಗೆಕ್ಕೆ ... | 80— 0 | 85— o |
| ಗೇರುಬೀಜ ಮು. ಗೆಕ್ಕೆ ... | 2— 0 | 2 —12 |
| ಕಬ್ಬಿಣ ಖಂಡಿ ಗೆಕ್ಕೆ ... | 50— o | 55— 0 |
| ಕಾಂಪ್ಯುಕಗಳು ಮು. ಗೆಕ್ಕೆ ... | 14— 12 | 15— 0 |
| ಕಾಂಪ್ಯುಹಾಳ್ಯಗಳು ಮು. ಗೆಕ್ಕೆ | 14— 8 | 15— o |
| ಚೀನಿಬೆಳ್ಳಿ ಸೇರು ಗೆಕ್ಕೆ ... | 13— 8 | 14— 0 |
| ಹಿಕ್ಕಾಳೆ ಹಗಡು ಮು. ಗೆಕ್ಕೆ ... | 12— 0 | 12— o |
| ಹವನು ಗೆಕ್ಕೆ ... | 22— 8 | 22— 6 |
| ಹುಣಸೆ ಹುಳಿ ಖಂಡಿ ಗೆಕ್ಕೆ | 40— o | 45— 8 |
| ನೇಟಿವ್ ಕಾಫಿ ಖಂಡಿ ಗೆಕ್ಕೆ | 140— o | 148— 0 |
| ಪ್ಲಾಂಟೇಶನ್ ಕಾಫಿ ಖಂಡಿ ಗೆಕ್ಕೆ ... | 185— o | 198— 0 |
| ಮಡಿಕೇರಿ ಏಲಕ್ಕಿ ಮಣ ... | 35— o | 39 — 0 |

# ಮುಸ್ಲಿಮರೂ ಹಿಂದಿಯರೇ? ಅಲ್ಲವೆ!

### ಶ್ರೀ ವಿನಾಯಕರಾವ್ ಸಾವರ್‌ಕರರ ಭಾಷಣ

### ಹಿಂದೂ ಮಹಾ ಸಭಾಧ್ಯಕ್ಷರ ಜಿನ್ನಾ—ನೆಹರು ಪ್ರಸಂಗ ವಿಮರ್ಶೆ

'ಯಾವನೊಬ್ಬನೆ ಮತ, ಧರ್ಮ, ಜಾತಿಗಳನ್ನು ಗಣನೆಗೆ ತಾರದೆ, ಸರ್ವರ ಕಡೆಗೂ ಸಮಾನವಾಗಿ ನಡೆದು ಬರುವುದು ಕಾಂಗ್ರೆಸಿನ ಧ್ಯೇಯವೆಂಬುದು ನಿಜವಾದರೆ, ಹಿಂದೀಯರಾಗಿಯೆ ನಮ್ಮೆಲ್ಲರೊಡನೆ ಸೇರಿ ದೇಶವನ್ನು ಮುಕ್ತಗೊಳಿಸುವುದಕ್ಕೆ ಮುಸ್ಲಿಮರು ಮುಂದೆ ಬರಬೇಕೇ ಹೊರತು, ಯಾರೂ ಪರಕೀಯರಂತಾಗಿ ಹಿಂದುಗಳಿಗೆ ಸಹಾಯಾರ್ಥವಾಗಿ ಪೋಷಕರೆಂಬಂತೆ ಅವರು ಬರುವುದು ಸರಿಯಾದುದಲ್ಲೆಂದು ಮುಸ್ಲಿಮರಿಗೆ ಮೊದಲಾಗಿ ತಿಳಿಸುವುದುತ್ತಮ!' ಮುಸ್ಲಿಮರು ರಾಜೀ ಪಂಚಾಯತಿಗೆ ಬರಲು ಏನೆಲ್ಲ ಏರ್ಪಾಡಾಗಬೇಕೆಂದು, ಮುಸ್ಲಿಮರನ್ನು ಮುಂದೆ ಕರೆದ ನೆಹರುರವರ ಸಂದೇಶವನ್ನು ಕುರಿತು—ಜಿನ್ನಾರವರು ಬರೆದ ಹೇಳಿಕೆಯನ್ನೋದಿ ಶ್ರೀ। ಸಾವರಕಾರರು ಹೀಗೆಂದರು.

'ಜಿನ್ನಾರವರ ಮಾತುಗಳಲ್ಲಿ ಬಹಳ ದರ್ಪವಿದೆ. ತಾವೇನೋ ಮಹಾರಾಜ ಪದವಿಗೇರಿ ಸಿಂಹಾಸನದಲ್ಲಿ ಕೂತು, ಜವಾಹರಲಾಲರು ಜೀವದಾನಕ್ಕಾಗಿ ಬೇಡುತ್ತಿದ್ದವರಂತೆ ಭಾವಿಸಿ ಅವರು ಮಾತನಾಡುತ್ತಿದ್ದಾರೆ. ಗಾಂಧಿಜಿಯವರೇ ಹಿಂದುಗಳನ್ನು ಸಾಕಷ್ಟು ಬಲಿಕೊಟ್ಟಾದರೂ ಮುಸ್ಲಿಮರನ್ನು ತೃಪ್ತಿಪಡಿಸೋಣವೆಂದು ಹಾಕಿಕೊಟ್ಟ ಸೂತ್ರದ ಶರ್ತಗಳನ್ನ ನೆಹರುರವರೇ ಹಿಂದೂ ಮುಸ್ಲಿಮರ ಐಕ್ಯಕ್ಕಾಗಿ ಹೇಳಿದರು. ಹಾಗೆಂದು ಜಿನ್ನಾರವರು ಹಿಂದೂ ಮಹಾಸಭೆಯ ಕಡೆಗೆ ಕಣ್ಣೆತ್ತಿಯೂ ನೋಡಿಲ್ಲ ಏಕೆ? ಈ ಸಭೆಯು ಅವರಿಗೆ ಹಾಗೆ ಸುಲಭವಾಗಿ ಮನಬಂದಂತೆ ಆಡಲು ಬಿಡಲೊಪ್ಪುವುದಿಲ್ಲ.'

'ಶೌಕತ್ ಅಲಿಯವರ ಮಾತಿಗೆ ಏನರ್ಥ? ಮುಸ್ಲಿಮರು ಹಿಂದೂದೇಶವನ್ನು ಕಳೆದುಕೊಂಡರೆ, ಇತರ ಮುಸ್ಲಿಮ ದೇಶಗಳಲ್ಲಿ ಆಶ್ರಯ ಪಡೆವರಂತೆ! ಹಿಂದುಗಳಿಗೆ ಹಾಗೆ ಅಂತಹ ಆಶ್ರಯವಿಲ್ಲವಂತೆ—ಈಗ, ಈ ಕಾರಣದಿಂದಲೇ ಹಿಂದುಗಳು ಇನ್ನೊಂದು ಅಂಗುಲದಷ್ಟಾದರೂ ಕದಲಲಾರರು. ಬಂದರೆ ನಮ್ಮೊಡನೆ ಬನ್ನಿ, ಬಾರದಿದ್ದರೆ ಹಾಗೇ ಇರಿ ಎಂಬುದು ಮಹಾಸಭೆಯ ಮಾತು. ಹಿಂದೆ ಎಷ್ಟೋ ಸಲ ಮರಣದ ಮುಖ ನೋಡಿ ಹಿಂದುಗಳು ಗೆದ್ದಿದ್ದಾರೆ, ಮುಂದೆಯೂ ಗೆಲ್ಲುವರು. ಮುಕ್ತಿ ಅವರಿಗೆ ದೊರೆಯದಿರಲಾರದು.'

ಜಿನ್ನಾ-ನೆಹರುಗಳೊಳಗಣ ಮಾತಿನ ಪ್ರಕಾರಗಳೇ ಬೇರೆಯಾಗಿವೆ ನಿಜ. ಹಿಂದೂಮಹಾಸಭೆ ಪುನಃ ಅದನ್ನು ಪ್ರಕಟಿಸ ತೊಡಗಿ ಆಕಾಂಡತಾಂಡವಕ್ಕೆ ಇನ್ನು ಪ್ರಾರಂಭವಾಗದಿರದು, ಮುಂದಣ ಕಾಂಗ್ರೆಸ್ ಅಧಿವೇಶನದಲ್ಲಿ ಈ ಶರ್ತವೆಲ್ಲ ಒಮ್ಮೆ ತೀರ್ಮಾನವಾಗಲೇ ಬೇಕಾಗಿದೆ. ಇಲ್ಲದಿದ್ದರೆ ಯಾರಿಗೂ ಶಾಂತಿ ಬಾರದು.

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಪುಷ್ಯ ಬ॥ ೨ ಶನಿವಾರದಿಂದ, ಪುಷ್ಯ ಬ॥ ೧೨ ಶುಕ್ರವಾರದ ವರೆಗಿನ ಪಂಚಾಂಗ. (ಗ್ರೆಗೋರಿಯನ್ ಮಕರ ಪುದುಂಜೆಲ್)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ಹಬ್ಬ |
|---|---|---|---|---|---|---|---|
| 22 | ಶನಿ | ೨ | ೫೬ | ಹಸ್ತ | ೯ | ೯ | |
| 23 | ರವಿ | ೩ | ೫೮ | ಚಿತ್ತ | ೧೧ | ೧೦ | |
| 24 | ಸೋ. | ೪ | ೬೦ | ಸ್ವಾತಿ | ೧೫ | ೧೧ | |
| 25 | ಕುಜ | ೪ | ೨ | ವಿಶಾಖ | ೨೦ | ೧೨ | |
| 26 | ಬುಧ | ೧೦ | ೨ | ಅನುರಾಧ | ೨೬ | ೧೩ | |
| 27 | ಗುರು | ೧೧ | ೫೫ | ಜ್ಯೇಷ್ಠ | ೩೩ | ೧೪ | |
| 28 | ಶುಕ್ರ | ೧೨ | ೫೫ | ಮೂಲ | ೩೯ | ೧೫ | |

**THE PIE-MONEY BANK LTD.,**

Maidan Road, MANGALORE.

Undertakes all kinds of Banking Business. Current account at 2½ per annum. Savings Bank Deposits at 4½% per annum.

**FIXED DEPOSITS**

For 2 Years 6% 1 Year 5% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars*— **K. R. GURU**, *Managing Director*

**ಗರ್ಭಿನೋಲ್ ಅಥವಾ ಸತ್ಸಂತಾನದಾಯಿನಿ**

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ, ಶ್ವೇತಪದರ, ರಕ್ತಪದರ, ಗರ್ಭಸ್ರಾವ, ಗರ್ಭಾಶಯ ವ್ರಣ, ಮೂತ್ರದ್ವಾರ ಉರಿ, ನರಗಳ ಶಿಥಿಲ, ಪ್ರಸವ ನಂತರ ಉಂಟಾಗುವ ಕ್ಷಯ ಚಿಹ್ನೆ, ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು, ತಲೆನೋವು, ತಲೆ ತಿರುಗುವಿಕೆ, ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ಮೆದುಳಿನ ವಿಕಾರಗಳು, ಅಶಕ್ತತೆ, ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು.

**ಹೆಚ್ಚೇನು?** ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು. ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ್ದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

**"ವಿಜಯ ಗರ್ಭಿನೋಲ"**

ನ್ನೆ ಧಾರಾಳವಾಗಿ ಉಪಯೋಗಿಸುತ್ತಾರೆ. ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು.

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ: "ಬೇರೆ ಅನೇಕ ಔಷಧಗಳಿಂದ ಗುಣ ಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರಿತವಾಗಿ ಗುಣಹೊಂದಿದ್ದಾರೆ. ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ."

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2—8—0.
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು:—

**ವಿಜಯ ಫಾರ್ಮಸಿ, ಕೊಚ್ಚಿನ್.**

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

☞ **ಪೇಂಟರ್ಸ್**

**Whenever you require the service of,**




*Please call on, or write to:-*

**Simon & Co,**
*Painters*

Churchgate, Hampankatta No. 13, MANGALORE.

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ
**ಸೈನ್ ಬೋರ್ಡ್** ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಚಿತ್ರದ ದರದ ಬಗ್ಗೆ ಬೇಕಾದ ವಿವರಕ್ಕೆ ಕೂಡಲೆ ಬರೆದು ತಿಳಿಯಬಹುದು.

**PAINTERS**

# ನೋಟಗಳು.—Note......s

ಶಕ್ತಿಯನ್ನು ಬಹುಮಾನ್ಯವಾಗಿ ಒಪ್ಪಿಸುವ ಸಂದರ್ಭಗಳು ಕಡಮೆ. ಶಾಂತಿಕ್ಕಯಾಗಿ ಒಪ್ಪಿಸಿದವರಿದ್ದಾರೆ; ಅಥವಾ, ಹಗೆತನದ ನಿರ್ಧಾರಕ್ಕಾಗಿ ಕಳುಹುವವರಿದ್ದಾರೆ. ಆತ್ಮಘಾತ ಮಾಡಿಕೊಳ್ಳಲು ಉಪಯೋಗಿಸುವ ಶಕ್ತಿಯನ್ನು ಯಾರೊಬ್ಬನಿಗೆ ಕೊಟ್ಟು, ಇದೇ 'ನನ್ನ ಸಂದೇಶ' ಎಂದರೆ ಏನರ್ಥ?—— ——

o o o o

ಬ್ರಿಟಿಷ ಮುಖ್ಯ ಮಂತ್ರಿಗಳಿಗೆ ಅದೇ ಸಂದೇಶವೆಂದು ಜಪಾನಿಯನೊಬ್ಬ ಪತ್ರಕರ್ತನು ಒಪ್ಪಿಸಿದನಂತೆ. ಅವನನ್ನು ಸೆರೆಹಿಡಿಯಲಾಗಿ, ವಿಚಾರಿಸಲಾಯಿತು. ಬಿಡುಗಡೆಯೂ ಆಯಿತು. ವಿಚಾರಣೆಯಾದುದೇನೆಂದು ಪ್ರಕಟವಾಗಿಲ್ಲ. ಅವನ ಪಕ್ಷದ ಅಭಿಪ್ರಾಯವಿದು:-ಹಿರಿಯರು ತನಗೆ ಕೊಟ್ಟ ಶಕ್ತಿಯನ್ನು ಬಹುಮಾನವಾಗಿ ನನ್ನ ಸಂದೇಶವೆಂದು ಕಳುಹಿದ್ದೇ ಹೊರತು ಬೇರೆಯೇನೂ ಇಲ್ಲ!

o o o o

ಜಪಾನಿನ ಪತ್ರಿಕೆಗಳು ಇದೇ ಸಮಯಕ್ಕೆ ಇದು ವರೆಗೆ ನಡೆದ ಯುದ್ಧವು ಇನ್ನು ನಿಜವಾದ ಯುದ್ಧವೆಂದು ಸಾರಲು ಸಿದ್ಧವಾಗಿ,—ಬ್ರಿಟಿಷರೂ ಅಮೇರಿಕವೂ ಯುದ್ಧ ಸನ್ನಾಹ ಮಾಡುತ್ತಿರುವುದನ್ನು ಅರಿತುಕೊಂಡು—ಬ್ರಿಟಿಷರಿಗೆ ತಮ್ಮ ನೌಕಾಬಂದರುಗಳನ್ನು ಭದ್ರಪಡಿಸುವರೆ ಅಗತ್ಯವಾದ ಕಾರಣವನ್ನು ನಾವು ಉಂಟುಮಾಡುವ ಸದಿಚ್ಛೆಯುಳ್ಳವರಾಗಿದ್ದೇವೆ' ಎಂದು ಪ್ರಕಟಿಸಿವೆ.

o o o o

ಸಿಂಗಾಪುರದಲ್ಲಿ ವಾರ್ಷಿಕ ಯುದ್ಧದ ಸ್ಪರ್ಧೆಯಾಟಗಳಿಗೆ ಪ್ರಾರಂಭವಾಗುವುದಾಗಿ ಇಂಗ್ಲೆಂಡು ತಿಳಿಸ್ತಿರುವುದೆ. ಎಲ್ಲ ವಿಷಯಗಳನ್ನು ಓದಿದರೆ,—ಆಟವೇ ಪಾಟವಾಗಿಯೂ ಪರಿಣಮಿಸಲು ಅನತಿಕಾಲವೋ ಎಂಬಂತೆ ತೋರುತ್ತಿದೆ. ಗಾಬರಿಗೆ ಅಗತ್ಯವಿಲ್ಲ, ಕಾರಣವಿಲ್ಲ. ಆದರೆ, ಕುತೂಹಲಗಳಿಗೆ ತುಂಬ ಸಂಭವ ಸಾರಲು ಅನುಕೂಲ ವ ಹೂರ್ತ

o o o o

ಐರ್ಲೆಂಡು ಸ್ವತಂತ್ರವಾಗಿದೆ ಬ್ರಿಟಿಷ ಚಕ್ರಾಧಿಪತ್ಯ ಬಿಡುವಂತಿಲ್ಲ; ಬ್ರಿಟಿಷ ಐರ್ಲೆಂಡನ್ನು ಬಿಡುವ ಹಾಗಿಲ್ಲ. ಬ್ರಿಟಿಷ ಮುಖ್ಯ ಮಂತ್ರಿಗಳೇ ಡಿವೇಲರನೊಡನೆ (ಪ್ರಸಿಡೆಂಟ್) ಸಂಭಾಷಣೆಗೆ ತೆರಳುವರು. ಸಂಭಾಷಣೆ ರಾಜಕೀಯ ಕಪ್ಪಕೊಡದಿರುವುದ, ವ್ಯಾಪಾರದ ಕರಾರು, ಬ್ರಿಟಿಷ ಅಂಶದ ವಿಭಜನೆ ಇವೇ ಮೂರು ವಿಷಯಗಳಲ್ಲಿ ಸಂಭಾಷಣೆಯಂತೆ. ನಾಲ್ಕಾರು ವರ್ಷದ ಹಿಂದೆ ಐರ್ಲೆಂಡನ್ನು ಗದರಿಸುತ್ತಿದ್ದವರು ಈಗ ಸಂಭಾಷಣೆಗೆ ಸಿದ್ಧರು. ಇದೆಲ್ಲ ಹೇಗಾಯಿತು?

o o o o

ವಾರ್ಧಾ ಸ್ಕೀಮನ್ನು ಇಂಗ್ಲೆಂಡಿನಿಂದ ಇತ್ತ ಬಂದಿರುವ ವಿದ್ವಾಂಸರೂ ಪರೀಕ್ಷಿಸಿದ್ದಾರೆ. ಗ್ರಾಮಬಾಲಕರಿಗೆಲ್ಲ ಇದು ಹಿತಕರ, ದುಡಿತವನ್ನು ಜ್ಞಾನಾರ್ಜನೆಗೆ ಎರಡನೆಯದಾಗಿ ಭಾವಿಸಬೇಕು ಹೊರತು ಮುಖ್ಯವಾಗಿಯಲ್ಲ, ತರಬೇತಾಗಿರುವ ಉಪಾಧ್ಯಾಯರು ಈ ಸ್ಕೀಮನ್ನು ಬ್ಯಾರಿಗೆ ತರಲು ಸಿಗಲಾರರು, ಆದರೆ, ಜ್ಞಾನಾರ್ಜನೆಯೊಡನೆ ವೃತ್ತಿಪಾಠಗಳು ಅಗತ್ಯವಿರಬೇಕು—ಎಂದು ಮೊದಲಾಗಿ ಅವರು ಅಭಿಪ್ರಾಯಕೊಟ್ಟಿರುವರು

o o o o

ಪೆಲೆಸ್ತೀನದಲ್ಲಿ ಬ್ರಿಟಿಷರು ವಿಭಜನೆಮಾಡುವ ವಿಷಯ ಸರಿಯಲ್ಲವೆಂದೂ ಹಿಂದೀಯ ಶೆಪ್ಸ್ಟೋ ಸೂಚಿಸಿರುವರು. ಅತ್ತ ಅರಬರಿಗೆ ಅನ್ಯಾಯವಾಗುತ್ತದೆಂದು ಮುಸ್ಲಿಮರೂ ಅರಬರ ಬೆಂಬಲಕ್ಕೆ ಕೂಡಿಸಿರುವರು. ಹೀಗಾಗಿ ಈಗ ಪೆಲೆಸ್ತೀನದಿಂದ ಯಹೂದಿ ಮುಖಂಡರು ಹಲವರು ಇತ್ತ ಬಂದು ಅವರ ಹೇಳಿಕೆಯನ್ನೂ ಇಲ್ಲಿನ ಜನತೆಯ ಮುಂದಿಡುವರಂತೆ.

o o o o

ಶಾಹಿದ್ಗಂಜಿನ ಸತ್ಯಾಗ್ರಹ ನಡೆಯುತ್ತಲೆ ಇದೆ. 'ಅಲ್ಲಿ 'ಪ್ರಾರ್ಥನೆಮಾಡುವ ಹಕ್ಕುಂಟು ಎಂದು ಮುಸ್ಲಿಮರು ಐವ್ವರು ಜನ ಸೇರಿ ಹೋಗುವುದೂ ಅವರನ್ನು ಕೈದುಮಾಡುವುದೂ ಅವರಿಗೆ ಆರು ತಿಂಗಳ ಜಾಮೀನು ಪಿಕ್ಕೆಕೊಡುವುದೂ (ತಪ್ಪಿದಲ್ಲಿ ಜೈಲು) ಒಂದು ನಿತ್ಯದ ಕೆಲಸವಾಗಿದೆ. ಇದು ವರೆಗೆ ೧೩೦ ಮಂದಿಗೆ ಈ ದಂಡನೆಯಾಗಿದೆ. ಅತ್ತ ದೊಡ್ಡಮೆ,—ಶಾಹಿದಗಂಜಿನ ಹಕ್ಕನ್ನು ಕುರಿತು—ವಿಚಾರ ಮುಗಿದಿದೆ. ತೀರ್ಮಾನ ಹೊರಟಿಲ್ಲ.

o o o o

ರಾಜಕೀಯ ಕೈದಿಗ್ಗಳನ್ನು ಇನ್ನು ಬಿಡುಗಡೆ ಮಾಡುವುದಕ್ಕೆ ಮಂತ್ರಿಗಳಿಗೆ ಕಣ್ಣಿಗೆ ಬೀಳುವಂತೆ ಚಳವಳಿಸಲು ಪಂಜಾಬಿನ ಹಲವು ಸಂಘಗಳು ಒಟ್ಟಾಗಿವೆ. ಬಿಡುಗಡೆ ಹೊಂದದಿರುವವರೊಡನೆ ಇನ್ನೂ ಕೈದು ಆಗುವವರು ಹೆಚ್ಚಬಹುದೋ ಎಂಬ ಸಂದೇಹವಿದೆ.

o o o o

ಬೆಲ್ಲದ ರವೆಯಿಂದ ಉಂಟಾಗುವ ಅಲ್ಕಹೋಲನ್ನು ಇಂತಿಷ್ಟೇ ಪರಿಮಾಣದಲ್ಲಿ ಬೆರಸದ ಪೆಟ್ರೋಲನ್ನು ಯಂತ್ರಗಳಿಗೆ ಉಪಯೋಗಿಸುವಂತೆ ನಿರ್ದೇಶಿಸುವ ಆಲೋಚನೆಯನ್ನು ಸರಕಾರವು ಮಾಡುತ್ತಿದೆ. ಇದರಿಂದ ಮದವು ಮತ್ತೊಂದು ಒಗೆಯ ಉಪಯೋಗಕ್ಕೆ ಬರುವಂತಾಗುವುದು, ಕಬ್ಬಿಗೂ ಧಾರಣೆ ಕುಂದದು ಎಂದು ಅಭಿಪ್ರಾಯವಾಗಿದೆ

o o o o

ರಷ್ಯದ ಪಾರ್ಲಿಮೆಂಟು ಮೊದಲನೇ ಸಲ ಸೇರಿತು. ಯೂನಿಯ ನಿನ ಕೌನ್ಸಿಲು ಸಭೆಗೆ [illegible] ಪ್ರತಿನಿಧಿಗಳು! ಜನಾಂಗಿಕ ಕೌನ್ಸಿಲಿಗೆ [illegible] ಸೇರಿದರೆ ಪಾರ್ಲಿಮೆಂಟ್ ... [illegible] ಪಾರ್ಲಿಮೆಂಟಿನ ... [illegible] ರಷ್ಯದ ... ವುದೇ ಮೊದಲನೆ ಸೂಚನೆಯಾಗಿದೆ

o o o o

ಇತರರ ನಮ್ಮನ್ನು ಕಾಣ ಬಹ ಗೌರವದಿಂದ ನಾವು ಅವರನ್ನು ಕಾಣಬೇಕು ಎಂಬ ತತ್ವದಂತೆ ನಮ್ಮ [illegible] ನಾನಾ ಪರರಾಜ್ಯಗಳಲ್ಲಿ ವಾಗ ಅವರನ್ನು ಅಲ್ಲಿನವರು ಕಾಣುವಂತೆಯೇ ನಾವೂ ಇಲ್ಲಿ ಅಲ್ಲಿನವರನ್ನು ಕಾಣ ವ ತಾಗಬೇಕೆಂಬ ಕಾನೂನು ಸದ್ಯದಲ್ಲಿ [illegible] ಬರಲಿದೆ. ಇದ ವ ಜಾರಿಯಾದರೆ, ಸಮ್ಮ ಸರಕಾರವು ವಕ್ರದೃಷ್ಟಿಯನ್ನು ಈಗ ಅಭ್ಯಾಸ ಮಾಡುವ ಅಗತ್ಯತೋರದಿ ಲಾರದ

o o o o

ಚೀನದ [illegible] ಜಪಾನಿನವರು ಮಾಡುತ್ತಿರುವ ಯುದ್ಧಹಾವಳಿಯನ್ನು ತಡೆಯಲು, [illegible] ಸಂಘಗಳು [illegible] ಸಭೆಸೇರಿ ನಿರ್ಧರಿಸಿ, ಜಪಾನಿಗೆ ಬಹಿಷ್ಕಾರ ಸಾರುತ್ತಿವೆ. ಕೆಲವು ಕಡೆಗಳು ಬಹಿರಂಗವಾಗಿ ಬ್ರಿಟಿಷ ವಿರೋಧ [illegible] ಜಪಾನಿನಲ್ಲಿ

o o o o

ಎಲ್ಲ ಬೇಂಕುಗಳಿಗೆ ಈ ರೈತರ [illegible] [illegible] ಜೈಂಟ್ ಸ್ಟೋಕ್ ಬೇಂಕುಗಳ ಪ್ರತಿನಿಧಿಗಳು [illegible] ಸಭೆಸೇರಿ ನಿರ್ಧರಿಸಿ ಮಂತ್ರಿಯರಿಗೆ ಸೂಚಿಸಿರ [illegible]

o o o o

ಸಂಬಳಗಳ ಮಿತವು ಸವರ್ಣರವಾಗಿಲ್ಲ. ೫೦ ರೂಪಾಯಿ ಕಲಬಿನಿಂದ ಸೇವೆಯನ್ನೂ ಕಮಿಯಬೇಕು, ೧೦೦ಕ್ಕೆ ಮೇಲ್ಪಟ್ಟ ಸಂಬಳವಿರಬಾರದು. ಅಧಿಕ ಸಂಬಳದವರು ತಾವಾಗಿ ಒಂದಂಶ ಬಿಟ್ಟುಬಿಡಬೇಕು. ೨೫ ವರ್ಷ ಸರ್ವಿಸು ಅಥವಾ ೫೦ ವರ್ಷ ವಯಸ್ಸಾದವರು ಪೆನ್ಶನು ಪಡೆಯಬೇಕು—ಎಂದು ಸಿ.ಪಿ. ಉನಾಡ ಪ್ರಾಂತೀಯ ಪರಿಷತ್ತಿನ ಅಧ್ಯಕ್ಷರ ಸೂಚನೆ.

# ಬಿಳಿ ಮುಖದವರನ್ನು ಏಷ್ಯಾದಿಂದ ಹೊರಗಟ್ಟಬೇಕು.

**ಜಪಾನೀಯ ನೌಕಾನಾಯಕರ ಪ್ರಕಟನೆ!** **ಬ್ರಿಟನಿನೊಡನೆ ಯುದ್ಧವೆ?**

ಜಪಾನಿನ ನೌಕಾ ನಾಯಕರಾದ ಎಡ್ಮಿರಲ್ ಸುಯೆಟ್ಸುಗೂರರು, ಬಿಳಿ ಮುಖದವರನ್ನು ಏಷ್ಯಾ ಖಂಡದಿಂದ ಹೊರಗಟ್ಟುವುದೇ ಜಪಾನಿಯರ ಉದ್ದೇಶವೆಂಬ ಪ್ರಕಟಣೆಯನ್ನು ಮಾಡಿರುವವರಾಗಿಯೂ ಸದ್ಯದಲ್ಲೇ, ಬ್ರಿಟನ್-ಜಪಾನ್ ತಿಕ್ಕಾಟವು ಉಂಟಾಗಬಹುದೆಂದೂ ಟೋಕಿಯೊದಲ್ಲಿರುವ ಲಂಡನಿನ 'ಟ್ರೈಮ್ಸ್' ಪ್ರತಿನಿಧಿಗಳ ಪತ್ರದಲ್ಲಿದೆ

ಚೀನಾದೇಶವು ಜಪಾನಿಯರಿಗೆ ದೀರ್ಘಕಾಲದ ವಿರೋಧಕೊಡುವುದಾದರೆ, ಅದು ಬ್ರಿಟಿಷ ಸಹಕಾರದಿಂದೆಂದೂ ಅದರಿಂದ ಚೀನೀಯರನ್ನು ಸದೆಬಡೆಯಲು ಬ್ರಿಟನ್ನಿನ ಮೇಲೆ ಬೀಳಲೇ ಬೇಕಾಗುವುದೆಂದೂ ಜಪಾನಿಯ ಸಂಗ್ರಾಮಾಧಿಕಾರಿಗಳ ಅಭಿಪ್ರಾಯ. ಅಗತ್ಯ ಬಿದ್ದರೆ ಬ್ರಿಟನಿನೊಡನೆ ಯುದ್ಧ ಹೂಡಲು ಕೂಡ ಜಪಾನು ಸಿದ್ಧವಿದೆ ಎಂದು ಜಪಾನೀಯ ಸಂಗ್ರಾಮಾಧಿಕಾರಿಗಳು ಪ್ರಕಟಣೆಮಾಡಿರುವರಂತೆ

ಹೊಂಗ್-ಕೊಂಗ್ ಮೂಲಕ ಚೀನಿಯರಿಗೆ ಶಸ್ತ್ರ, ಸಿಡಿಮದ್ದು ದೊರೆಯದಂತೆ ಬ್ರಿಟಿಷರು ತಡೆಹಾಕಬೇಕೆಂದಾಗಿಯೂ ಜಪಾನಿನ ರಾಜಧಾನಿಯಾದ ಟೋಕಿಯೊ ಪಟ್ಟಣದಲ್ಲಿ ಚಳವಳಿಯ ಪ್ರಾರಂಭವಾಗಿರುತ್ತದೆ. ಬ್ರಿಟನಿನಲ್ಲಿ ಮೊದಲಿನ ಸಂಗ್ರಾಮ ಯೋಗ್ಯತೆಯು ಇರವುದಿಲ್ಲವೆಂದೂ ಅವರ ಯುದ್ಧಜಹಜುಗಳಿಗೆ ಇಂದು ನಾವು ಹೆದರಬೇಕಾಗಿಲ್ಲವೆಂದೂ ಕೇವಂದಿ ಜಪಾನಿಯ ಮಹಾಮಹಿನಿಯರ ಅಭಿಪ್ರಾಯ. ಜಪಾನಿನ ವಾಯುಬಲದ ಎದುರಿನಲ್ಲಿ ಬ್ರಿಟನಿನ ಯುದ್ಧಜಹಜುಗಳು ಏನನ್ನೂ ಮಾಡಲಾರದವುಗಳಾಗುವುವಂತೆ. ಜಪಾನಿನ ವಾಯುಬಲವು ಅತ್ಯಂತ ಮಹತ್ವದ್ದೆಂದೂ ಸಮಸ್ತ ಜಗತ್ತಿನಿಂದ ಪರಿಗಣಿಸಲ್ಪಟ್ಟಿದೆ. ಆದರೆ, ಚೀನಾಕ್ಕೆ ಹೊಂಗ್ ಕೊಂಗ್ ಮೂಲಕ ಬ್ರಿಟನಿನಿಂದ ಹೋದ ಶಸ್ತ್ರ ಸಿಡಿಮದ್ದು ಅತಿ ಕಡಿಮೆಯೆಂದೂ, ಈ ಬಂದರಿನ ಮೂಲಕ ಜರ್ಮನಿ, ಫ್ರಾನ್ಸು, ರಷ್ಯಾದೇಶದ ಶಸ್ತ್ರ, ಸಿಡಿಮದ್ದು ಚೀನಾದೇಶಕ್ಕೆ ಧಾರಾಳವಾಗಿ ಹೋಗುತ್ತಿವೆ ಎಂದೂ ಈ ಟ್ರೈಮ್ಸ್ ಪತ್ರಿಕೆಯ ಪ್ರತಿನಿಧಿಗಳ ಅಭಿಪ್ರಾಯ. ಪೌರ್ವಾತ್ಯದ ರಾಜಕೀಯ ವ್ಯವಹಾರದಲ್ಲಿ ಬ್ರಿಟನು ಕೈಹಾಕದೆ ಸುಮ್ಮನಿರುವುದೇ ಲೇಸೆಂದು ಈ ವರದಿಗಾರರ ಬ್ರಿಟನಿಗೊಂದು ಹಿತಬೋಧನೆ

## ಜಪಾನಿಯರ ಮೇಲೆ ಬಹಿಷ್ಕಾರ

೩,೦೦,೦೦೦ ಸದಸ್ಯರಿರುವ ಲಂಡನಿನ ಸಹಕಾರ ಸಂಘವು ಜಪಾನೀಯ ಒಡವೆಗಳನ್ನು ಬಹಿಷ್ಕರಿಸಬೇಕಾಗಿ ನಿರ್ಧರಿಸಿ, ಅದರ ಯಾವ ಶಾಖೆ ಅಂಗಡಿಗಳು ಜಪಾನೀಯ ಒಡವೆಗಳನು ಕೊಂಡುಕೊಳ್ಳಬಾರದಾಗಿ ಅಪ್ಪಣೆ ಕೊಟ್ಟಿರುತ್ತದೆ. ಅದಲ್ಲದೆ ೮ ಲಕ್ಷ ಸದಸ್ಯರಿರುವ ಕೋಓಪರೇಟಿವ್ ಹೋಲ್ ಸೇಲ್ ಸಂಘದವರೂ ಇದೇ ರೀತಿ ಜಪಾನೀಯ ಒಡವೆಗಳ ಮೇಲೆ ಬಹಿಷ್ಕಾರ ಹಾಕಬೇಕಾಗಿ ಅದು ಪ್ರೇರಿಪಿಸುತ್ತದೆ


**Best Cheap Durable**

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied Buy now and you wi l also be convinced**

*Manufactured by—*

The West Coast Soap Factory

**ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,**

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

*Sole Agents.*

**Panchmal Krishnaya Shenoy & Son,**
Bunder, MANGALORE

THE

**BANK OF MANGALORE LTD.,**

**MANGALORE.**

*ESTD. 1931.*

*Branches:-*

Panemangalore; Mudabidri & Padubidri.

*Chairman:*—**Philip J. Chandran, Esq.,**

*Retd. Dt. Registrar of Joint Stock Companies.*

On & from 1st of January 1937,

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly.

Saving Bank deposit 3½% on daily balances

**All kinds of banking business transacted.**

U. R. PAI, N. U. PAI, *Managing Directors.*

# ದಮ್ಮು ಪೂರ್ಣ ಗುಣವಾಗುವ ಉಪಾಯವನ್ನೇ ಕೈಕೊಳ್ಳಬೇಕು.

ಕೆಮ್ಮು ಮತ್ತು ಕಫ ವಿಕಾರವಿದ್ದವರು "ಎಫೆಡ್ರಿನ್" ಮುಂತಾದ ತಾತ್ಕಾಲಿಕ ಆರಾಮಗೊಳಿಸುವ ಔಷಧಗಳನ್ನು ಎಂದೂ ಉಪಯೋಗಿಸಬಾರದು. ಈ ಔಷಧಗಳು ರೋಗವನ್ನು ಪೂರ್ಣ ಗುಣಪಡಿಸಲು ನಿರುಪಯೋಗಿ ಎಂಬುದು ನಿಶ್ಚಿತವು ಮತ್ತು ಇಂಥ ಔಷಧಗಳು ಶ್ವಾಸನಲಿಕೆಯಲ್ಲಿ ಹೆಚ್ಚಿಗೆ ನೋವುಂಟು ಮಾಡಿ ರೋಗವನ್ನು ಶಾಶ್ವತಮಾಡುತ್ತವೆ.

ರೋಗಲಕ್ಷಣವನ್ನು ಪೂರ್ಣ ನಿವಾರಿಸಿ, ರೋಗಿಗೆ ಬೇಗನೆ ಮತ್ತು ಸಾವಧಾನವಾಗಿ ಪೂರ್ಣ ಗುಣಮಾಡುವ ಔಷಧವೇ ಸರಿಯಾದ ಉಪಾಯವು ಮತ್ತು ಇದೇ ದೃಷ್ಟಿಯಿಂದ ಡಾ| ಪುರೋಹಿತ ಅವರ "ಶ್ವಾಸಹಾರಿ ಪ್ರೇನ" ಮತ್ತು "ಶ್ವಾಸಹಾರಿ ಕಾಂಪಾಪುಂಡ" ಈ ಎರಡೂ ಔಷಧಗಳು ದಮ್ಮು ವಿಕಾರವನ್ನು ಪೂರ್ಣ ಗುಣಪಡಿಸುವ ದಿವ್ಯೌಷಧಿಯಲ್ಲಿ ಅಗ್ರೇಸರವೆನಿಸಿವೆ. ದಮ್ಮು, ಶ್ವಾಸ, ಮಲಂಜಾನೆಯ ಕಸಕ, ಗಂಟಲು ಕೆರೆಯುವ ಹಳೇ ಕೆಮ್ಮು ಮತ್ತು ಕ್ಷಯ ಸದವಿಲ್ಲಾ ರೋಗ ಗುಣಪಡಿಸಲು "ಶ್ವಾಸಹಾರಿ ಪ್ರೇನ" ಉಪಯೋಗಿಸಬೇಕು. ಅನ್ನು ಪಿತ್ತವಿದ್ದವರು "ಶ್ವಾಸಹಾರಿ ಕಂಪಾಪುಂಡ" (ಕೆಂಪು ಪ್ಯಾಕಿಂಗ) ಉಪಯೋಗಿಸುವುದು ಹೆಚ್ಚು ಲಾಭಕರ.

ಬಹುತರವಾಗಿ ಎಲ್ಲಾ ಶಹರುಗಳಲ್ಲಿ ಕೆಮಿಸ್ಟ ಸ್ಟೋರ್ಸ ಮತ್ತು ಅಂಗಡಿಗಳಲ್ಲಿ ಈ ಔಷಧಗಳು ರೂ. ೧, 3-8-0 ಮತ್ತು 6 ಹೀಗೆ ಬೇರೆ ಬೇರೆ ಬೆಲೆಯ 3 ಪ್ಯಾಕಿಂಗ್ ಮೂರಲ್ಲಿ ಸಿಗುತ್ತವೆ.

ಮಂಗಳೂರು:—ದಿ ಪೋಪ್ಯುಲರ್ ಸ್ಟೋರ್ಸ್, ರಥಬೀದಿ.

ಬಿಜಾಪುರ:— { ಹಾಯೋನಿಯರ ಫಾರ್ಮಸಿ, ಯು. ಬಿ. ಬಾಳಿಗಾ.

ಹುಬ್ಬಳ್ಳಿ ಗದಗ ಧಾರವಾಡ } ಹುಬ್ಬಳ್ಳಿ ಫಾರ್ಮಸಿ.





ಡಾ| ಪುರೋಹಿತ ಫಾರ್ಮಸಿ, ಕೊಲ್ಹಾಪುರ.



**S. U. N. & Co.,**

*Silk Merchants,*

Chaukhamba, BENARES CITY.

ಈಗಿನ ತರಹ(ಕಾಶಿ) ಬೆನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ್ದು 18ಮೊಳ ಸಣ್ಣ ಬುಟ್ಟ ಶೀರೆಗಳು ರೂ. 35ರಿಂದ ರೂ. 55. ವಡಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 16, ಅಗಲ 2½ ರೂ. 20 ರಿಂದ 35ರ ವರೆಗೆ. ಬೇರೆ ಮಾಲುಗಳ ಪಟ ಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನಾರಿಸ್ ಸಿಟಿ.



# ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ,

ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ.

**ಲಿಮ್ಡಾ ಸೋಪು ಉಪಯೋಗಿಸಿರಿ**

ವೆಜಿಟೆಬಲ್ ಸೋಪುವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ-ಮದ್ರಾಸು

ಒದಗಿಸಿಕೊಡುವವರು:— ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ, ಕಲ್ಲಿಕೋಟೆ (ಮಲಬಾರು)

Distributors for South Kanara:—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.


# ನೋಟೀಸು.

## ಶ್ರೀಮದ್ಭುವನೇಂದ್ರ ಮಹೌಷಧಾಲಯ

## ಕಟಪಾಡಿ, ದ. ಕ.

ಮೇಲಿನ ಹೆಸರಿನಿಂದ ಕಟಪಾಡಿಯಲ್ಲಿ ಸ್ಥಾಪಿಸಲ್ಪಟ್ಟ ಔಷಧಾಲಯವು ದಿನೇ ದಿನೇ ಜನ ಕೃಪೆಗೆ ಪಾತ್ರವಾಗಿ ನಿರೀಕ್ಷಣೆಗಿಂತಲೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿರುವುದರಿಂದ ಸದ್ರಿ ಸಂಸ್ಥೆಯಿಂದ ಜನಸಮುದಾಯವು ಇನ್ನೂ ಹೆಚ್ಚಿನ ಪ್ರಯೋಜನ ಪಡೆಯುವಂತೆ ಅದನ್ನು 'ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್' ಎಂಬ ಹೆಸರಿನಿಂದ ಲಿಮಿಟೆಡ್ ಕಂಪೆನಿಯಾಗಿ ಪರಿವರ್ತಿಸಿರುತ್ತೇವೆ. ನಮ್ಮ ಯಾವತ್ತೂ ಏಜಂಟರು, ಸ್ನೇಹಿತರು, ಪ್ರತಿನಿಧಿಗಳು ಮತ್ತು ಗಿರಾಕಿಗಳು ಇನ್ನು ಮುಂದೆ "ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್" ಕಟಪಾಡಿ ದಕ್ಷಿಣ ಕನ್ನಡ, ಎಂಬ ಹೆಸರಿಗೆನೇ ಪತ್ರವ್ಯವಹಾರ ನಡಿಸಬೇಕು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ.

# ಇಂಡಿಯಾದಲ್ಲಿ ಪ್ರಾಯಸ್ಥರ ಶಿಕ್ಷಣ

ನಮ್ಮ ದೇಶದ ಬೇರೆ ಬೇರೆ ಪ್ರಾಂತ್ಯಗಳ ಆಡಳಿತ ಸೂತ್ರವು ಜನ ಪ್ರತಿನಿಧಿಗಳ ಕೈಗೆ ಬಂದಿರುವಾಗ, ಅವರು ಮಾಡಬೇಕಾದ ಮೊದಲಿನ ಕೆಲಸವೆಂದರೆ— ಪ್ರಜಾವರ್ಗವು ಸ್ವಾವಲಂಬಿಯಾಗುವಂತೆ ಮತ್ತು ಅದು ಸುಖಮಯ ಜೀವನವನ್ನು ಸಾಗಿಸುವಂತೆ, ಅದನ್ನು ಸುಶಿಕ್ಷಿತ ಮಾಡುವಂಥದ್ದಾಗಿದೆ.

ಪ್ರಾರಂಭ ದೆಸೆಯಲ್ಲಾದರೂ ಶಾಲೆಗೆ ಹೋಗುವ ಪ್ರಾಯದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವು ಧರ್ಮಾರ್ಥವಾಗಿ ದೊರೆಯಲೇಬೇಕು; ಮತ್ತು ಅದು ಕಡ್ಡಾಯವಾಗಿಯೂ ಇರಬೇಕು—ಎಂಬ ವಿಷಯದಲ್ಲಿ ಈಗ ಯಾರಿಗೂ ಮತಭೇದವಿರುವದಿಲ್ಲ. ಪ್ರಾಂತೀಯ ಸರಕಾರಗಳು ಈ ಪ್ರಯತ್ನದಲ್ಲಿ ತೊಡಗಿವೆ; ಮತ್ತು ಅವು ಇನ್ನೂ ಸ್ವಲ್ಪ ಕಾಲದೊಳಗಾಗಿ ಆ ದಿಸೆಯಲ್ಲಿ ಕೃತಾರ್ಥವಾಗುವವು ಎಂದಿಟ್ಟುಕೊಳ್ಳೋಣ. ಆದರೆ ಪ್ರಾಂತೀಯ ಸರಕಾರಗಳು ಇಷ್ಟು ಮಾತ್ರ ಮಾಡಿದರೆ ಸಾಲದು. ಪ್ರಾಯಸ್ಥರ ಶಿಕ್ಷಣವು ಮಕ್ಕಳ ಶಿಕ್ಷಣದಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ ಎಂದು ಶ್ರೀ ಜಿ. ಡಿ. ಕುಲಕರ್ಣಿಯವರು 'ಬೊಂಬೇಕ್ರಾನಿಕಲ್' ನಲ್ಲಿ ಬರೆಯುತ್ತಾರೆ.

ಬರೇ ಓದುಬರಹ ಬಂದ ಮಾತ್ರದಿಂದ ಬೇರೆ ಬೇರೆ ವಿಷಯಕ ಜ್ಞಾನವನ್ನು ಸಂಪಾದಿಸುವದಕ್ಕೆ ಮನುಷ್ಯನು ಸಮರ್ಥನಾಗುವದಿಲ್ಲ. ಅಥವಾ ಎಲ್ಲರಿಗೆ ಓದುಬರಹವು ಬರುವ ತನಕ ದೇಶಾಭಿವೃದ್ಧಿಯ ಸಾಧನೆಗಳನ್ನು ಮಾಡದೆ ಇರಲಿಕ್ಕೆ ಆಗುವದಿಲ್ಲ. ನಮ್ಮ ಹಳ್ಳಿಗರು ಅಕ್ಷರಸ್ಥರಲ್ಲವಾದರೂ ಅವರ ಭಾಷೆಯಲ್ಲಿ ಸುಲಭ ಶೈಲಿಯಲ್ಲಿ ಆಡಿದ ಮಾತುಗಳನ್ನು ತಿಳಕೊಳ್ಳುವಷ್ಟು ಜಾಣ್ಮೆಯು ಅವರಲ್ಲಿರುವದು ದೇಶದ ಸೌಭಾಗ್ಯವೆನ್ನಬೇಕು. ಹೇಳಿದ ಮಾತು ತಮ್ಮ ಉಪಯೋಗದ್ದೆಂದು ಗೊತ್ತಾದರೆ ಅದನ್ನು ಚಾಚೂ ತಪ್ಪದೆ ಅನುಸರಿಸುವಷ್ಟು ಬುದ್ಧಿವಂತರೂ ಅವರಾಗಿದ್ದಾರೆ. ಆದ್ದರಿಂದ ನಮ್ಮ ದೇಶದ ಪ್ರಾಯಸ್ಥರಿಗೆ ಶಿಕ್ಷಣವನ್ನು ಕೊಡುವದು ಅಸಾಧ್ಯ ವಿಷಯವಲ್ಲ. ಶಿಕ್ಷಣವೆಂದರೆ ಬರೇ ಓದುಬರಹ ಜ್ಞಾನವೆನ್ನಿಸಿಕೊಳ್ಳಲಾರದು. ಓದುಬರಹ ಜ್ಞಾನವನ್ನು ಅವರಿಗೆ ಅತ್ಯಲ್ಪ ಕಾಲದಲ್ಲಿ ಬರೇ ನಾಲ್ಕಾರು ವಾರಗಳೊಳಗಾಗಿ ಕೊಡುವದು ಸಾಧ್ಯವೆಂದು ಕೆಲ ಕೆಲವು ಕೇಂದ್ರಗಳಲ್ಲಿ ನಡೆದ ಪ್ರಯತ್ನಗಳಿಂದ ಗೊತ್ತಾಗಿದೆ.

ಪರಂತು ಪ್ರಾಯಸ್ಥರಲ್ಲಿ ಪ್ರಾಯ ಸಂದವರಿಗೆ ಶಿಕ್ಷಣವನ್ನು ಕೊಡುವದು ನಿಜಕ್ಕೂ ಒಂದು ಸಮಸ್ಯೆಯಾಗಿದೆ. ಅವರಲ್ಲಿ ಅಕ್ಷರ ಜ್ಞಾನವನ್ನು ಪಡೆಯುವ ಇಚ್ಛೆ ಆತುರ ಕುತೂಹಲಗಳು ಸ್ವಲ್ಪವಾದರೂ ಇರುವದಿಲ್ಲ. ಈ ಸಮಸ್ಯೆಯನ್ನು ನಾವು ಹೇಗಾದರೂ ಮಾಡಿ ಬಗೆಹರಿಸಬೇಕು.

ಶಿಕ್ಷಣವೆಂದರೆ ತಿಳುವಳಿಕೆಯನ್ನು ಕೊಡುವದು. ಅದಕ್ಕೆ ಓದುಬರಹ ಜ್ಞಾನವು ಸಹಾಯಕವಾಗುತ್ತದೆ. ಆದರೆ ಅದುವೇ ಶಿಕ್ಷಣವಲ್ಲವೆಂದು ಹಿಂದೆ ಹೇಳಿದೆವು. ತಿಳುವಳಿಕೆಯನ್ನು ನಾವು ಓದುಬರಹದ ಮೂಲಕ ಮಾತ್ರವಲ್ಲದೆ ಇತರ ಸುಲಭಸಾಧ್ಯ ಉಪಾಯಗಳಿಂದಲೂ ಕೊಡಲಿಕ್ಕೆ ಬರುತ್ತದೆ. ಬರೇ ಭಾಷಣಗಳು, ಎಂಥ ಉತ್ತಮ ವಿಷಯವನ್ನು ಎಷ್ಟು ಲಲಿತ ಭಾಷೆಯಿಂದ ಕೊಟ್ಟರೂ ಅವು ನೀರಸವಾಗುತ್ತವೆ. ಆದ್ದರಿಂದ ಸುಪ್ರಖ್ಯಾತ ಭಾಷಣಕರ್ತರು ಬಾರದೆ, ಇತರರ ಭಾಷಣಗಳನ್ನು ಕೇಳಲಿಕ್ಕೆ ಜನರು ಬರುವದೇ ಅಪರೂಪ. ಅದರ ಬದಲಿಗೆ ಮಾಜಿಕಲಾಂಟರ್ನ, ಬೇಬಿಸಿನೀಮಾಗಳ ದೀಪಾವಳಿ ಇತ್ಯಾದಿ, ಭಾಷಣಗಳೊಂದಿಗೆ ಕೂಡಿದ್ದರೆ ಸಾಕಷ್ಟು ಜನರು ಕೂಡುತ್ತಾರೆ. ಅವು ಅಕ್ಷರಸ್ಥರಿಗೆ ಕೂಡ ಆಕರ್ಷಕವಾಗಿರುತ್ತದೆ. ಪುಸ್ತಕಗಳ ಪಠನ ಪಾಠನಕ್ಕಿಂತ ಈ ಸಾಧನಗಳ ಮೂಲಕ ವಿಷಯವನ್ನು ತಿಳಿಯುವುದು ಸುಲಭವಾಗಿದೆ.

ಪ್ರಾಂತೀಯ ಸರಕಾರಗಳು ಈ ಸಾಧನಗಳಿಗೆ ಬೇಕಾದ ಹಣವನ್ನು ವಿನಿಯೋಗಿಸಿ ಅವನ್ನು ಕೆಲಸಗಾರರಿಗೆ ಒದಗಿಸಿಕೊಡಬೇಕು. ಇದರಿಂದ ಶ್ರೀಮಂತರ ಮೇಲೆ ಹೆಚ್ಚಿಗೆ ಕರವನ್ನು ಹಾಕಲೂಬಹುದು. ಯಾಕೆಂದರೆ ಅಶಿಕ್ಷಿತರು ಸುಶಿಕ್ಷಿತರಾದುದರ ಪ್ರಯೋಜನವು ಪರ್ಯಾಯದಿಂದ ಶ್ರೀಮಂತರಿಗೂ ದೊರೆಯುವುದು. ಈ ಕಾರ್ಯಕ್ಕೆ ಕೆಲಸಗಾರರ ಅಭಾವವಿರುವುದಿಲ್ಲ. ಯಾಕೆಂದರೆ ಇದು ಎಲ್ಲರ ಮೆಚ್ಚುಗೆಯ ಕಾರ್ಯವಾಗಿರುವುದು. ಪ್ರಾಯಸ್ಥರನ್ನು ಶಿಕ್ಷಿತರನ್ನಾಗಿ ಮಾಡುವ ಇದೇ ಸುಲಭಸಾಧ್ಯ, ಅತ್ಯಲ್ಪ ವ್ಯಯದ, ಅತ್ಯಂತ ಪ್ರಯೋಜನಕಾರಿ ಉಪಾಯವಾಗಿದೆ.

ಅಶಿಕ್ಷಿತರಿಗೆ ತಿಳುವಳಿಕೆಯನ್ನು ಕೊಡುವ ವಿಷಯಗಳು ಯಾವುವಾಗಿರಬೇಕೆಂಬುದನ್ನು ಈಗ ನಾವು ಸ್ವಲ್ಪ ಮಟ್ಟಿಗೆ ಆಲೋಚಿಸೋಣ. ಭೂಗೋಲದ ಪ್ರಾರಂಭಿಕ ಜ್ಞಾನವು ಅತ್ಯಂತಾವಶ್ಯಕವಾಗಿದೆ. ನಮ್ಮ ಮತ್ತು ಪ್ರಪಂಚದ ಬೇರೆ ಬೇರೆ ಜನಾಂಗಗಳ ನಡೆನುಡಿ, ಆಚಾರ ವಿಚಾರ, ಜೀವನಕ್ರಮ ಇತ್ಯಾದಿ ವಿಷಯವು ಪ್ರತಿಯೊಬ್ಬನಿಗೂ ತಿಳಿದಿರಬೇಕು. ಅದರಂತೆ ನಿತ್ಯಜೀವನದಲ್ಲಿ ಅತ್ಯಂತ ಉಪಕಾರಿಗಳೂ ಉಪಯುಕ್ತವೂ ಆದ ಮೋಟರು, ರೈಲು, ವಿಮಾನ, ಚಿಕಿತ್ಸಾಕ್ರಮ, ಕೃಷಿಕ್ರಮ ಮೊದಲಾದುವುಗಳಲ್ಲಿ ಆಗಿರುವ ವೈಜ್ಞಾನಿಕ ಶೋಧಗಳ ಸಾಮಾನ್ಯ ಜ್ಞಾನವೂ ಜನರಿಗಿರಬೇಕು. ಇತಿಹಾಸದಲ್ಲಿ ಪ್ರಾಮುಖ್ಯ ಘಟನೆಗಳು ಮತ್ತು ಮುಖ್ಯ ಮುಖ್ಯ ಐತಿಹಾಸಿಕ ಪುರುಷರ ಜ್ಞಾನವನ್ನು ಪಡೆಯುವುದು ಅಗತ್ಯವಾಗಿದೆ.

ಜನರಿಗೆ ರಾಜಕೀಯ ಶಿಕ್ಷಣವು ಬೇಕೇ ಬೇಕು. ನಮಗೆ ಸ್ವಾತಂತ್ರ್ಯವನ್ನು ಕೊಡದಿರುವುದಕ್ಕೆ ಆಳರಸರು ಮುಂದೊಡ್ಡುವ ಮುಖ್ಯ ಕಾರಣ— ಜನರಿಗೆ ಆಡಳಿತವಿಷಯವಾದ ಜ್ಞಾನವಿಲ್ಲದಿರುವುದು ಆಗಿದೆ. ಆದ್ದರಿಂದ ಪ್ರಜಾಸತ್ತೆ, ಅದರ ಸಂಘ ಸಂಸ್ಥೆಗಳು, ಕಾರ್ಯನಿರ್ವಾಹ ಕ್ರಮ ಇವನ್ನೆಲ್ಲ ಬೋಧಿಸಬೇಕು. ಪ್ರಾಯಸ್ಥರಿಗೆ ಮತದಾನದ ಅಧಿಕಾರವು ಪ್ರಾಪ್ತವಾಗುವ ಸಂದರ್ಭದಲ್ಲಿ ಈ ಬಗೆಯ ಜ್ಞಾನವು ಅತ್ಯುಪಯುಕ್ತವಾಗಿರುವುದು. ಯಾಕೆಂದರೆ ಜನರು ಹಂಗು ದಾಕ್ಷಿಣ್ಯಗಳಿಗೆ ಬಲಿಯಾಗದೆ ಆತ್ಮಸಾಕ್ಷಿಗೆ ಅನುಕೂಲವಾಗಿ ಮತದಾನ ಮಾಡುವ ಧೈರ್ಯಸಾಹಸಗಳು, ರಾಜಕೀಯ ಶಿಕ್ಷಣದಿಂದ ಪ್ರಾಪ್ತವಾಗುವವು.

ಶಿಕ್ಷಣವಿಷಯವನ್ನು ಆಲೋಚಿಸುವಾಗ ಸಾಮಾಜಿಕ ಸುಧಾರಣೆಯ ವಿಷಯವೂ ಮುಂದೆ ಬರುತ್ತದೆ. ಅಸ್ಪೃಶ್ಯಭಾವನೆ, ಪರ್ದಾ, ಬಾಲ್ಯವಿವಾಹ ಮೊದಲಾದ ಪದ್ಧತಿಗಳಿಂದ ಆಗುವ ಹಾನಿಗಳನ್ನು ಜನರಿಗೆ ತಿಳಿಸಿಕೊಡಬೇಕು. ಜನರಿಗೆ ತಿಳುವಳಿಕೆಯನ್ನು ಕೊಡದೆ ಮಾಡುವ ಸುಧಾರಣೆಯ ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥ. ಕೆಟ್ಟ ಚಾಳಿಗಳು ಕೂಡ ಬಹಳ ಅನರ್ಥಕ್ಕೆ ಕಾರಣವಾಗಿವೆ. ಹೊಗೆಸೊಪ್ಪು ಮೆಲ್ಲುವುದರಿಂದ ಹಲ್ಲುನೋವು ಬರುವುದಿಲ್ಲವೆಂಬ ಭಾವನೆಯು ಜನರಲ್ಲಿದೆ. ಆದ್ದರಿಂದ ಬಹಳ ಮಂದಿ ಈ ಕೆಟ್ಟ ಚಾಳಿಗೆ ಬಲಿಯಾಗುತ್ತಾರೆ. ಇಂಥ ಚಾಳಿಗಳು ಆರೋಗ್ಯಕ್ಕೆ ಹಾನಿಕರವೆಂಬುದನ್ನೂ ಅವರಿಗೆ ಮನದಟ್ಟುಮಾಡಬೇಕು.

ದಾರಿದ್ರ್ಯವು ಆರೋಗ್ಯ ನಿಯಮಗಳನ್ನು ಪಾಲಿಸಲಿಕ್ಕೆ ದೊಡ್ಡ ತಡೆಯಾಗುತ್ತದೆ. ಶುಚಿತ್ವ, ನೈರ್ಮಲ್ಯ, ಬಯಲು ಹವೆ, ಪುಷ್ಟಿಕರವಾದ ಆಹಾರ, ವ್ಯಾಯಾಮ ಕಸರತ್ತುಗಳು ಶರೀರಾರೋಗ್ಯಕ್ಕೆ ಅಗತ್ಯವಾದುವುಗಳೆಂದು ಬಹಳ ಮಂದಿ ಬಲ್ಲರು. ಆದರೆ ಬಡತನವು ಅವರಿಗೆ ಆ ಪ್ರಕಾರ ಜೀವನವನ್ನು ನಡೆಸಲಿಕ್ಕೆ ಬಿಡುವುದಿಲ್ಲ. ಆದರೆ ಬಡತನವಿದ್ದು ಈಗಿನಕ್ಕಿಂತ ಹೆಚ್ಚು ಆರೋಗ್ಯವಾಗಿರಲಿಕ್ಕೆ ಸಾಧ್ಯವಿದೆ. ಆರೋಗ್ಯವಾಗಿರುವ ಆ ಸುಲಭಸಾಧನಗಳನ್ನೂ ಅವರಿಗೆ ಕಲಿಸಿಕೊಡಬೇಕು.

ದೇಶದ ಅವನತಿಗೆ ದಾರಿದ್ರ್ಯವೇ ಮೂಲ ಕಾರಣ. ದಾರಿದ್ರ್ಯವು ಹೋದರೆ ದೇಶವು ಉನ್ನತಿಗಾಮಿಯಾಯಿತೆಂದು ಅರ್ಥ. ಅದರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವುದೇ ಸರಕಾರದ ಪ್ರಧಾನ ಲಕ್ಷ್ಯವಾಗಿರಬೇಕು. ಆದ್ದರಿಂದ ನವೀನ ಕೃಷಿಕ್ರಮ, ಹಳ್ಳಿ ಕೈಗಾರಿಕೆಗಳ ಪುನರುದ್ಧಾರ ಮೊದಲಾದ ವಿಷಯಗಳಲ್ಲಿ ಜನರಿಗೆ ಶಿಕ್ಷಣವಾಗುವುದಗತ್ಯ.

ಇಷ್ಟೆಲ್ಲ ಮಾಡಿದರೂ ಜನರು ಸಂತತಿ ನಿಗ್ರಹ ಮತ್ತು ನಿಯಮನವನ್ನು ಮಾಡಲಾರರಾದರೆ ಎಲ್ಲ ವ್ಯರ್ಥ. ಈಗಿನ ಕಾಲದಲ್ಲಿ ಸಂತತಿ ನಿಗ್ರಹ ಮತ್ತು ನಿಯಮನವು ಅತ್ಯಂತ ಆವಶ್ಯಕವಾಗಿದೆ. ಮಿತ ಪರಿವಾರವನ್ನಿಟ್ಟುಕೊಳ್ಳುವ ಕ್ರಮವನ್ನು ಜನರಿಗೆ ಹೇಳಿಕೊಡಬೇಕು. ಜನಸಂಖ್ಯೆಯು ಈಗಿನ ಮಾನದಿಂದ ಬೆಳೆಯುತ್ತ ಹೋದರೆ ಹುಟ್ಟುವ ಮಕ್ಕಳ ಲಾಲನೆಪಾಲನೆ ಶಿಕ್ಷಣ ರಕ್ಷಣೆಗಳು ಅಸಾಧ್ಯವಾಗಿ ಕೆಲವೇ ವರ್ಷಗಳಲ್ಲಿ ದೇಶವು ದೊಡ್ಡದೊಂದು ಗಂಡಾಂತರಕ್ಕೆ ಗುರಿಯಾಗುವುದು ಖಂಡಿತ. ಆ ಅವಾಂತರದಿಂದ ತಪ್ಪಿಸಿಕೊಳ್ಳಬೇಕಾದರೆ ಈಗಿನಿಂದಲೇ ಜಾಗರೂಕರಾಗಿರಬೇಕು. ಬರೇ ಜನಸಂಖ್ಯೆಯನ್ನು ಹೆಚ್ಚಿಸಿದುದರಿಂದ ಏನೂ ಪ್ರಯೋಜನವಿರುವುದಿಲ್ಲ. ಸಂಖ್ಯೆಗಿಂತಲೂ ಗುಣದ ಕಡೆಗೆ ನಾವು ಅಧಿಕ ಧ್ಯಾನವನ್ನಿಡಬೇಕು. ಆಕಾಶದಲ್ಲಿ ಎಷ್ಟೋ ನಕ್ಷತ್ರಪುಂಜಗಳಿವೆ; ಆದರೆ ಅವುಗಳಿಂದ ಅಂಧಕಾರವು ದೂರವಾಗುವುದಿಲ್ಲ. ಆಕಾಶದಲ್ಲಿರುವ ಒಬ್ಬನೇ ಒಬ್ಬ ಚಂದ್ರನು ಕತ್ತಲು ದೂರ ಮಾಡಲಿಕ್ಕೆ ಸಮರ್ಥನಾಗಿದ್ದಾನೆ ಆದಕಾರಣ ಮಿತಸಂತತಿ ಇರಬೇಕು. ಹುಟ್ಟಿದ ಸಂತಾನವು ಹೆತ್ತವರ ಹೆಸರನ್ನು ಬೆಳಕಿಗೆ ತರುವಂಥದ್ದಾಗಿರಬೇಕು. ಈ ಬಗೆಯ ಜ್ಞಾನವು ಸುಶಿಕ್ಷಿತರು ಮತ್ತು ಶ್ರೀಮಂತರಿಗಿಂತ ಅಶಿಕ್ಷಿತರು ಮತ್ತು ಬಡವರಿಗೆ ಹೆಚ್ಚು ಆವಶ್ಯಕವಾಗಿದೆ. ಇತರ ವಿಷಯಗಳೊಂದಿಗೆ ಇದನ್ನು ತಿಳಿಸಿಕೊಟ್ಟು ಮಿತಸಂತತಿಯ ಬೇರೆ ಬೇರೆ ಉಪಾಯಗಳನ್ನು ಪ್ರವೀಣರಿಂದ ಕಲಿಸಿಕೊಟ್ಟಾಗಲೇ ಪ್ರಾಯಸ್ಥರ ಶಿಕ್ಷಣ ಸಮಸ್ಯೆಯನ್ನು ಬಗೆಹರಿಸಿದಂತಾಗುವದೆಂದು ನನ್ನ ಅಭಿಪ್ರಾಯವಾಗಿದೆ. ಮಾತ್ರವಲ್ಲ, ಶ್ರೀ ರಾಧಾ ಕಮಲಮುಖರ್ಜಿ, ಅಪ್ಟನ ಸಿಂಕ್ಲೇರ್ ಮೊದಲಾದ ದೇಶವಿದೇಶೀಯ ಹಿತಚಿಂತಕರು ಕೂಡ ಹಾಗೆಯೇ ಅಭಿಪ್ರಾಯಪಡುತ್ತಾರೆ.

ಪರಮಾ

ಮೊದಲಾದ ಭಯಂಕರ ಮೂತ್ರರೋಗಗಳ ಭಯಂಕರ ಪರಿಣಾಮವನ್ನು ತಡೆಯುವದಕ್ಕಾಗಿ (ಪಿಚಕಾರಿಯ ಹೊರತಾಗಿ)

ಗೊನೋಲೆಕ್ಸ (ರಿಜಿಸ್ಟರ್ಡ)

ತೆಗೆದುಕೊಳ್ಳಿರಿ ಮತ್ತು ಶಾಶ್ವತವಾಗಿ ರೋಗದಿಂದ ಮುಕ್ತರಾಗಿರಿ. ಈ ಔಷಧವು ಎಲ್ಲ ತರಹದ ಪರಮಾ ಮೊದಲಾದ ಎಲ್ಲ ಮೂತ್ರರೋಗಗಳ ನಿವಾರಣೆಯಾಗಿ ಮೂತ್ರಪಿಂಡಗಳು ಸಾಫ ಆಗುತ್ತವೆ. ಮೊದಲಿನ ಒಂದೇ ಒಂದು ಬಾಟ್ಲಿಯಿಂದ ಗುಣವಾಗುತ್ತದೆ. ಬಾ. ಕಿ. ರೂ. ೧-೦-೦ ಅಂಚೆವೆಚ್ಚ ಪ್ರತ್ಯೇಕ. ಹಳೇ ಮತ್ತು ಅಸಾಧ್ಯ ರೋಗಗಳಿಗೆ ಗೊನೋಲೆಕ್ಸ ನಂ. ೧ನ್ನು ಉಪಯೋಗಿಸಿರಿ. ಬಾ. ಕಿ. ರೂ. ೩-೦-೦ ಅಂಚೆವೆಚ್ಚ ಪ್ರತ್ಯೇಕ. ಎಲ್ಲೆಡೆಯಲ್ಲಿಯೂ ದೊರೆಯುತ್ತದೆ. ಪ್ರತಿಯೊಂದು ಊರಲ್ಲಿಯೂ ಸ್ಟಾಕಿಸ್ಟರು ಬೇಕು.

ಸೋಲ್ ಏಜಂಟರು:—ಸ್ಟಾರ್ ಏಜೆನ್ಸಿ,
೧೬೪ ಹಾರ್ನಬಿ ರೋಡ್,
ಫೋರ್ಟ ಮುಂಬಾಯಿ
ಸ್ಟಾಕಿಸ್ಟ:—ಎಂ. ಡಿ. ಪ್ರೊರಾ ಮತ್ತು ಕಂಪೆನಿ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ



ಡೋಂಗರೇ ಇವರ ಬಾಲಾಮೃತ
ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.
(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.
(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.
(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.
(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಜ್ವರ ಇವುಗಳನ್ನು ಗುಣಪಡಿಸುತ್ತದೆ.
(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ.

ಸಿಗುವ ಸ್ಥಳ:—
ಪ್ರಾ ಮತ್ತು ಕಂಪೆನಿ.
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

'ನಾವಿಂದು ನಮ್ಮ ಅನಾದಿ ಕಾಲದ ಶಾಸ್ತ್ರಗಳನ್ನು ಬಿಟ್ಟು ಪೈಶಾಚಿಕ ನಾಗರಿಕತೆಯ ದಾಸರಾಗಿ, ಮಾನವ ಜನ್ಮದಿಂದ ಇದಾಗ ಪ್ರಾಣಿಜನ್ಮಕ್ಕೆ ತಿರುಗಿದ ಬಿಳಿ ಜನಾಂಗದವರನ್ನು ಅನುಸರಿಸಿ ಕುರುಡು ಕುನ್ನಿಗಳಾಗಿ ತೊಡಗಿದ್ದೇವೆ. ನಮ್ಮ ದೇಶವನ್ನು ಜಗತ್ತಿನ ಶಿಖರವಾಗಿ ಇರಿಸಿ, ಜಗತ್ತನ್ನೇ ವೈದಿಕ ನಾಗರಿಕತೆಗೆ ತಂದ ಇಂದ್ರಜಾಲ, ಮಹೇಂದ್ರಜಾಲ, ಸಾಮುದ್ರಿಕಾ ಶಾಸ್ತ್ರ, ಮುಂತಾದ 64 ಮಹಾ ವಿದ್ಯೆಗಳನ್ನು ಮರೆತು ಅದನ್ನಿಂದು ಅನ್ಯ ರಾಷ್ಟ್ರೀಯರು ಎತ್ತಿ ಹಿಡಿದು ಹೋಗುವಾಗ ಬಾಯ್ಬಿಟ್ಟು ರೊಟ್ಟಿಗಾಗಿ ಕಾಯುವ ನಾಯಿಯಂತೆ ನೋಡುತ್ತಿದ್ದೇವೆ. ಆ ಮೂರ್ಖತೆಯೊಂದಿಗೆ ನಮ್ಮ ಉದ್ಧಾರ

ಭರತಖಂಡವು ವಿಚಿತ್ರ ದೇಶವೆಂದು ತಿಳಿದು, ಡಿ ವೋಲ್ ಎಂಬವರು ಭಾರತಕ್ಕೆ ಬಂದಾಗ ಒಬ್ಬ ಯೋಗಿಯನ್ನು ಸಂದರ್ಶಿಸಿ ತಾನು ತಿಳಿದ ಅಮೂಲ್ಯ ಅನುಭವವನ್ನು ಎಪ್ರೋಚೀ ದೈಸ್ಟಾರ್ಸ್—(ನಾನು ನನ್ನ ನಕ್ಷತ್ರಗಳನ್ನು ಹೊಂದಿಕೊಂಡಿರುವೆನು) ಗ್ರಂಥದಲ್ಲಿ ವಿವರಿಸಿರುವರು.

## ಜ್ಯೋತಿಷ್ಯ ಶಾಸ್ತ್ರದಲ್ಲಿ

### ಭಾರತವೆಂದೂ ಹಿಂದುಳಿಯದು'

### ಆದರೆ ಇತರ ಶಾಸ್ತ್ರಗಳಂತೆ ಇದನ್ನೂ ಮರೆಯಬಾರದು!!

ಯೋಗಿಯೊಬ್ಬನನ್ನು ಕಾಣಲು ಹೋಗಿದ್ದಾಗ, ಇವರಿಗೆ ಆತನು 'ಅದಾವುದೇ ಪ್ರಶ್ನೆಯನ್ನು ಕೇಳಿದರೂ ಉತ್ತರ ಹೇಳುವೆನು' ಎಂದಾಗ ಆತನ ಸತ್ವ ಪರೀಕ್ಷೆಯನ್ನೆಳಸಿ ವೋಲರು ತನ್ನ ಜನನ ತಾರೀಕನ್ನು ಕೇಳಿದರು. ಯೋಗಿಯು ಕೆಲಹೊತ್ತು ಕಣ್ಮುಚ್ಚಿ ಧ್ಯಾನಾಸಕ್ತನಾಗಿ ಇವರ ಜನ್ಮಸ್ಥಳದ ಚಿತ್ರವನ್ನು ಮನಸ್ಸಿನಲ್ಲಿ ತಂದ ನಂತರ— 1908ನೇ ಇಸವಿಯ ಜನವರಿ 24ನೇ ತಾರೀಕಿನಂದು ನೀವು ಜನಿಸಿದಿರಿ. ಆಗ ನಡುಗತ್ತಲೆಯಾಗಿತ್ತು. ಹೊರಗೆ ಹಿಮವು ಕೆಂಚಕೆಂಚವಾಗಿ ಹೂವಿನ ಮಳೆಯಂತೆ ಸುರಿಯುತ್ತಿದ್ದಿತು ಎಂದನು.

ಈ ಸತ್ಯಾಂಶದ ವೋಲರ ಆನಂದಕ್ಕಾಗಿ 'ಹೌದು ಅದು ಹಾಗೆ' ಎಂದರು. ಯೋಗಿಯು ಈ ತರನ ಶಕ್ತಿಯಿಂದ ಆವರ ಎದೆ ನಡುಗಿತು. ಬಳಿಕ ಇನ್ನೇನು ನಿಮ್ಮ ಮರಣದ ದಿನವನ್ನು ತಿಳಿಯಬೇಕೆಂದು ನೀವೇಳಬಹುದಿರೇ ಎಂದು ಯೋಗಿಯು ಕೇಳಲು ಹೌದೆಂದರು ವೋಲರು.

ಪುನಹ ಯೋಗಿಯು ಧ್ಯಾನಾಸಕ್ತನಾದ ಸರಿ ಕಣ್ತೆರೆದು— '1964ನೇ ಇಸವಿಯ ಫೆಬ್ರವರಿ ತಿಂಗಳ 16ನೇ ತಾರೀಕಿನ ದಿನ ನೀವು ಜಗತ್ತನ್ನುಳಿದು ಹೊರಡುವಿರಿ' ಎಂದನು ಯೋಗಿ. ಇದರಿಂದ ವೋಲರ ಸಂತೋಷಗೊಂಡರು. ಕಾರಣ— ತನಗೆ ಇನ್ನೂ ಕೆಲವರುಷಗಳ ಜೀವನವಿದೆಯೆಂದು.

ವೋಲರು ಜ್ಯೋತಿಷ್ಯ ಶಾಸ್ತ್ರದಲ್ಲಿ ಅಧಿಕವಾದ ನಂಬಿಗೆ ಇದ್ದವರು. ತನ್ನ ನಕ್ಷತ್ರದ ಅನುಕೂಲವು ಕಂಡು ಬಾರದೆ ಅದಾವ ಕೆಲಸಕ್ಕೂ ಆವರು ಕೈಹಚ್ಚುತ್ತಿದ್ದಿಲ್ಲ. ಅದೇ 1932ರಲ್ಲಿ ನಡೆದ ಒಂದು ಘಟನೆಯು ಅವರಿಗೆ ಜ್ಯೋತಿಷ್ಯ ಶಾಸ್ತ್ರದ ಬೆಲೆಯನ್ನು ಸಂಪೂರ್ಣವಾಗಿ ತಿಳಿಸಿತು. 1932ರಲ್ಲಿ ಅದೊಂದು ಚಲನ ಚಿತ್ರ ಸಂಸ್ಥೆಯವರು ವೋಲರ ಪುಸ್ತಕದಹಕ್ಕನ್ನು ಚಲನ ಚಿತ್ರವಾಗಿ ಮಾರ್ಪಡಿಸಲು ಕೇಳಿದರು. ವೋಲರು ತನ್ನ ತಾರಾಬಲವನ್ನು ನೋಡಿದರು. ಆದರೆ ಅದು ವ್ಯವಹಾರಕ್ಕೆ ತಕ್ಕುದಾಗಿರಲಿಲ್ಲ. ಆದರೂ ಕೂಡಾ ಇಂತಹ ಲಾಭದಾಯಕ ಸಂದರ್ಭವನ್ನು ಬಿಡಬಾರದೆಂದು ಒಪ್ಪಿಕೊಂಡರು. ಆದರೆ ನಕ್ಷತ್ರದ ಫಲದಂತೆ ಅದು ಆಗಿಯೇ ತೀರಿತು. 'ಕಂಟ್ರಾಕ್ಟು' ನಡೆದ ಕೆಲ ದಿನಗಳಲ್ಲಿ ಆ ಸಂಸ್ಥೆಯು ದಿವಾಳಿಯಾಯಿತೆಂಬ ಸುದ್ದಿ ಬಂದೇ ಬಂದಿತು.

ಇದೇ ಇಂತಹ ತನ್ನ ಅನೇಕಾನೇಕ ಅನುಭವಗಳ ಪರಿಣಾಮವಾಗಿ ವೋಲರು ಒಂದು ಗ್ರಂಥವನ್ನು ಬರೆದಿರುವರು. ಅದನ್ನೋದಿದವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಅಧಿಕ ಅಭಿಮಾನ ಉಂಟಾಗದೆ ಇರದು.

---


# The Canara Banking Corporation, Udipi, Ltd

Sends Its

NEW YEAR'S GREETINGS

To All

Shareholders, Constituents, Well-wishers

and the Public

Sincerely Wishes Them

*A HAPPY AND PROSPEROUS NEW YEAR.*

# The Bombay Life Assurance Company, Ltd.

ESTD: 1908

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,855 | 1,16,58,706 |
| 1930 | 59,97,500 | 9,83,367 | 28,00,970 | ,08,68,328 |
| 1933 | 94,16,500 | 15,12,692 | 50,04,871 | 3,07,98,434 |
| 1936 | 1,36,00,180 | 26,76,274 | 82,69,451 | 5,14,38,205 |

The Company offers all the up-to-date schemes of Assurances Family Safe Guard Policy a special feature

Application for agencies will be received from honest and respectable gentlemen.

Organisers appointed with pay and allowance

Gentlemen with organising ability and who can guarantee Business need apply

**Kochikar Brothers, Ltd.,**

(Incorporating Messrs Kochikar Brothers),

***Madras Branch Secretaries.***

Post Box 337, Mount Road, MADRAS.

Phone No. 8245.

***Apply to any of the following Offices:-***

| | | | | | | |
|---|---|---|---|---|---|---|
| Ottapalam | Central Station Road Trivandrum | Visveshwarapuram Circle, Bangalore City | Soumyalayam Puthiyara, Calicut. | Car Street, Mangalore | Udipi, S. India. | Charni Road, Bombay No. 4 |

ವಾರ್ಷಿಕ ಚಂದಾ: ರೂಪಾಯಿ 2—0—0. Regd. No. M. 3406. ಟಪ್ಪಾಲು ಹಾಸಲು ಸೇರಿ ರೂಪಾಯಿ 2—12—0

# ಸ್ವದೇಶಾಭಿಮಾನಿ.

# SWADESHABHIMANI, MANGALORE

ಬಿಡಿಸಂಚಿಕೆಗೆ ಆಣೆ 1 | ತಾರೀಕು 21ನೇ ಶುಕ್ರವಾರ ಜನವರಿ 1938. | Established 190[illegible]



## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾ...
ಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊಡಿವೆ ಮೊದಲಿಂದ
ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ ಎತ್ತ
ಉಪದ್ರವ, ತಲೆಹುಣ್ಣು, ವಣ ಮೊದಲಾದ
ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ.

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

Edited Printed & Published By A. S. Kamath at the Sharada Press, Car Street, Mangalore.

Regd. No. M. 3406.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩—18—0.

ಬಿಡಿ ಸಂಚಿಕೆ ಒಂದಾ[illegible]

ಸಂಪುಟ ೩೨] ತಾರೀಕು ೨೮ನೇ ಜನವರಿ ೧೯೩೮ (28 – 1 – 1938) [ಸಂಚಿ[illegible]

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

## ಅನುಕ್ರಮಣಿಕೆ


ಗುಣಪುರದಲ್ಲಿ ಮನುಷ್ಯರನ್ನು ತಿನ್ನುವ ರಕ್ಕಸರು

ಮೇಯರನ ತಲೆಹಾರಿಸಿದ ಹಿಟ್ಲರ

ಸೇಲಮಿನಲ್ಲಿ ಮದ್ಯನಿಷೇಧದ ಪ್ರಬಲ ಪ್ರಚಾರ

ಇಂಗ್ಲೆಂಡಿನಲ್ಲಿ ಸುಭಾಷ್ಚಂದ್ರ ಡಿವೆಲರಾ ಭೇಟಿ

ಸಾಹಿತ್ಯ ರವಿ—ಶರತ್‌ಚಂದ್ರ ಚಟರ್ಜಿಯವರ ನಿಧನ

ಜಿನ್ನಾರವರ ನಿಜವಾದ ರೂಪ

ಕೆಲಸಗಾರರಿಗೆ ಎಂ. ಎನ್. ರೋ[illegible]ರ ಸಂದೇಶ.




— [illegible]ದ ಚಿತ್ರ

ದಿವಂಗತ ಶರತ್‌ಚಂದ್ರ ಚಟರ್ಜಿಯವರು


# GREETINGS

The Directors of the CANARA BANK join in sending you this message of appreciation for the valued patronage and friendship we have enjoyed during the past year. We sincerely wish you a HAPPY and PROSPEROUS NEW YEAR.

**Resources of a Crore.**

ESTD 1906
**CANARA BANK, LIMITED.**

# ವಿಚಿತ್ರಕರ! ಆದರೂ ಸತ್ಯ!!

### ತತ್ತಿ ತಿನ್ನುವ ಸ್ಪರ್ಧೆ.

ಒಂದು ವಿಚಿತ್ರ ತರದ ತಿನ್ನುವ ಸ್ಪರ್ಧೆಯು ಆಸ್ಟ್ರೇಲಿಯಾದಲ್ಲಿ ನಡೆಯಿತು. ಇದರಲ್ಲಿ ಭಾಗವಹಿಸಿದ ನಾಲ್ವರು ೨೩೩ ತತ್ತಿಗಳನ್ನು ತಿಂದರು. ಒಬ್ಬನು ೬೩, ಇನ್ನೊಬ್ಬನು ೬೦, ಮೂರನೆಯವನು ೫೯, ನಾಲ್ಕನೆಯವನು ೫೧ ತತ್ತಿಗಳನ್ನು ಒಂದೆ ಬಾರಿಗೆ ತಿಂದುಬಿಟ್ಟರು.

ಹಿಂದೆ ಆಸ್ಟ್ರೇಲಿಯದ ಸಿಡ್ನಿಯಲ್ಲಿ ಒಬ್ಬನು ೨೫ ತತ್ತಿಗಳನ್ನು ೨೦ ನಿಮಿಷಗಳಲ್ಲಿ ನುಂಗಿ ಬಿಟ್ಟಿದ್ದನಂತೆ ಆದರೆ ಬರಿ ಅರ್ಧ ಡಾಲರಿನ ಶರ್ತಕ್ಕಾಗಿ ೬೦ ತತ್ತಿಗಳನ್ನು ನುಂಗಿ ಬಿಟ್ಟ ಒಬ್ಬ ಇಟಲಿಯಾನನೊಬ್ಬನಿರುವನಂತೆ ೬೦ ತತ್ತಿಗಳನ್ನು ತಿಂದಾದ ಮೇಲೆ, ತಿನ್ನಲು ಮತ್ತೇನು ಇರುವುದೆಂದು ಆತನು ಕೇಳಿದ್ದನಂತೆ.

### ಹತ್ತಿಯಿಂದ ನಿರ್ಮಿಸಲ್ಪಟ್ಟ ಮಾರ್ಗಗಳು

ಹತ್ತಿಯಿಂದ ಮಾರ್ಗಗಳನ್ನು ರಚಿಸುವ ಕುರಿತು ಸಂಶೋಧನೆಯು ಅಮೇರಿಕಾದಲ್ಲಿ ನಡೆಯುತ್ತಿದೆ ಇದಕ್ಕಾಗಿ ೫೦೦ ಮೈಲುದ್ದದ ಹತ್ತಿ ಮಾರ್ಗವು ಈಗಾಗಲೆ ರಚನೆಯಾಗಿರುತ್ತದೆ. ಮೊದಲು ಕಾಂಕ್ರಿಟು ಹಾಸಲ್ಪಟ್ಟು ಅದರ ಮೇಲೆ ಹತ್ತಿಯು ಹಾಸಲ್ಪಟ್ಟು, ಹತ್ತಿಯ ಮೇಲೆ ಮತ್ತೆ ಡಾಮರನ್ನು ಹಾಕಿಕೊಳ್ಳುವುದೆ ಈ ರಸ್ತೆಯ ರಚನೆಯ ಕ್ರಮ ಈ ರೀತಿಯಲ್ಲಿ ಮಾರ್ಗದಲ್ಲಿ ಹತ್ತಿ ಹಾಸಲಿಕ್ಕೆ ಮೈಲು ಒಂದರ ೧೨೦ ಪವನುಗಳ ವೆಚ್ಚತಗಲುವುದಂತೆ.

ಈ ತರದಲ್ಲಿ ರಚನೆಯಾದ ಹತ್ತಿಯ ರಸ್ತೆಗಳು ಅತಿ ಉತ್ತಮವಾಗಿವೆಂದೂ ಇಷ್ಟರ ತನಕ ತಿಳಿದು ಬಂದಿರುತ್ತದಂತೆ ಅಲ್ಲದೆ ಈ ತರದ ರಸ್ತೆ ನಿರ್ಮಾಣಕ್ಕೆ ವ್ಯಯವು ಕಡಿಮೆಯೂ ಅವು ಹೆಚ್ಚಿನ ಸಮಯ ಬಾಳ್ತರ ಬರುವುದೆಂದು ಲೆಖ್ಖವಿದೆ

ಈ ತರದ ಮಾರ್ಗಗಳಿಂದ ಈಗ ಅತಿರೇಕವಾಗಿ ಸಿದ್ಧವಾಗುತ್ತಿರುವ ಹತ್ತಿಗೆ ಒಂದು ಗಿರಾಕಿಯನ್ನು ಒದಗಿಸಿದಂತಾಗಬಹುದಂತೆ

### ಕೆಂಪು ಕಿವಿಯವರು.

ಕಿಸೆಗಳಿಂದ ದೋಚುವವರಿಗೆ ವಿಚಿತ್ರ ತರದ ಒಂದು ಶಿಕ್ಷೆ ವಿಧಿಸುವ ಕ್ರಮವು ರುಮೇನಿಯದಲ್ಲಿ ಆಚರಿಸಲಾಗುವುದಂತೆ ಕಿಸೆಗಳಿಂದ ಕಳ್ಳತನ ಮಾಡಿದವನಿಗೆ ಒಳ್ಳೆ ಬೋಧನೆಯಾದ ನಂತರ, ಪ್ರಥಮತವಾಗಿ ಮಾಫಿ ಕೊಡಲಾಗುವುದಂತೆ ನಂತರವೂ ಆತನು ಈ ತಪ್ಪಿತವನ್ನು ಮಾಡಿದರೆ, ಆತನನ್ನು ಜನರು ಸುಲಭವಾಗಿ ಕಂಡು ಹಿಡಿಯುವಂತೆ ಅವನ ಕಿವಿಯ ಮೇಲೆ ಕೆಂಪು ಬಣ್ಣ ಹಾಕಲಾಗುವುದಂತೆ ಮಾಸಲು ಅಸಾಧ್ಯವಾದ ಬಣ್ಣ ಅದಂತೆ

### ವಿಚಿತ್ರ ತರದ ಶಿಕ್ಷೆ.

ಪೊಲೀಸ್ ಜವಾನನೊಬ್ಬನ ಅಂಗಿಯನ್ನು ಹರಿದಾತನೊಬ್ಬನು, ಆ ಪೊಲೀಸ್ ಜವಾನನನ್ನು ಇನ್ನು ಮೂರು ತಿಂಗಳ ಸಮಯ ಬೆಳಗಿನಜಾವ ಒಂದಾವರ್ತಿ ಟೊಪ್ಪಿತೆಗೆದು ನಮಸ್ಕರಿಸಬೇಕಾಗಿ ಅಮೇರಿಕಾದ ಒಂದೆಡೆಯ ನ್ಯಾಯಾಧೀಶರಿಂದ ಶಿಕ್ಷೆವಿಧಿಸಲಾಗಿದೆ

### ಮನುಷ್ಯನು ನಾಯಿಯನ್ನು ಕಚ್ಚುವುದು.

ನಾಯಿ ಒಂದು ಮನುಷ್ಯನನ್ನು ಕಚ್ಚುವುದು ಸಹಜವಾದುದು. ಆದರೆ ಮನುಷ್ಯನೊಬ್ಬನು ನಾಯಿಯನ್ನು ಕಚ್ಚುತ್ತಿರುವುದು ಒಂದು ವಿಶಿಷ್ಟ ವಾರ್ತೆಯಾಗಿರುತ್ತದೆ ಆಫ್ರಿಕದ ಕೆನ್ಯಾದಿಂದ ಈ ತರದ ವಾರ್ತೆಗಳು ಆಗಿಂದಾಗ್ಗೆ ಹೊರಡುವುದುಂಟು ಯಾವುದಾದರೊಂದು ಸಂದರ್ಭದಲ್ಲಿ ಮೂಲ ನಿವಾಸಿಯೊಬ್ಬನು ಸಾಕ್ಷಿ ಹೇಳಬೇಕಾಗಿ ಬಂದರೆ, ಅವನು ನ್ಯಾಯಸ್ಥಾನಕ್ಕೆ ಹೋಗುತ್ತಿರುವಾಗ ಒಂದು ನಾಯಿಯನ್ನು ಕೊಂಡೊಯ್ಯುವುದುಂಟು ತನ್ನ ಸಾಕ್ಷಿಯನ್ನು ಹೇಳುವ ಮೊದಲು ಅವನು ನಾಯಿಯನ್ನು ಕಚ್ಚಿ, 'ನಾನು ಸುಳ್ಳು ಹೇಳುವವನಾದರೆ, ನಾನು ಈ ನಾಯಿಯನ್ನು ಕಚ್ಚುವಂತೆ ಆ ನಾಯಿಯು ನನ್ನನ್ನು ಕಚ್ಚಲಿ' ಎಂದು ಆತನು ಪ್ರಮಾಣ ಮಾಡುವನ. ಇದು ಮೂಲನಿವಾಸಿಗಳ ಪ್ರಮಾಣ ಕ್ರಮವಂತೆ

ಹೀಗೆ ವಿಚಿತ್ರ ತರದ ಪ್ರಮಾಣ ಕ್ರಮಗಳಿರುವ ಅನೇಕ ದೇಶಗಳಿವೆ ಮಲಿಯಾ ಪ್ರಾಂತ್ಯದ ಮೂಲನಿವಾಸಿಗಳು ಪ್ರಮಾಣ ಮಾಡುತ್ತಿರುವಾಗ, ಒಂದು ಹಲ್ಲಿ ಯಾ ಕಪ್ಪೆಯ ಕಾಲನ್ನು ಹರಿದ. ತೆಗೆಯುವುದುಂಟು. ತಾವು ಸುಳ್ಳು ಹೇಳುವುದಾದರೆ, ಅವರೂ ಅದರಂತೆ ಹರಿಯಲ್ಪಡಲೇಡು ಅವರ ಅರ್ಥವಂತೆ

ಇದೇ ರೀತಿಯಲ್ಲಿ ಪ್ರಮಾಣ ಮಾಡುತ್ತಿರುವಾಗ ಒಂದು ಸೊಸರನ್ನು ಪುಡಿಪುಡಿ ಮಾಡುವ ಚೀನಿಯರ ಕ್ರಮವಿದೆ ತಮ್ಮಿಂದ ಸುಳ್ಳು ಹೊರಟರೆ ತಮಗೂ ಅದೇ ಗತಿ ಉಂಟಾಗಲೆಂದು ಅವರ ಅರ್ಥವಂತೆ

### ಸ್ವಪ್ನವು ನಿಜವಾಗಿ ಪರಿಣಮಿಸಿತು.

ಬಿಹಾರಿನ ಪಾಟ್ನಾದಲ್ಲಿ ವಿದ್ಯಾರ್ಥಿಯೊಬ್ಬನಿಗೆ, ಒಂದು ಸ್ವಪ್ನ ಬಿದ್ದಿತು ಆತನು ಭೂತಪಿಶಾಚಿಗಳನ್ನು ಈ ಸ್ವಪ್ನದಲ್ಲಿ ಕಂಡ, ತಾನು ಮೂಕ ಮತ್ತು ಕಿವುಡಾದುದನ್ನು ಕಂಡನು ಬೆಳಿಗ್ಗೆ ಎದ್ದ ಈ ವಿದ್ಯಾರ್ಥಿಗೆ ಮಾತನಾಡಲು ಕೇಳಲು ಅಸಾಧ್ಯವೆನಿಸಿತು ಈ ವಿಷಯವನ್ನು ಆತನು ತನ್ನ ಮಿತ್ರರೊಡನೆ ಸನ್ನೆಯ ಮೂಲಕವೂ ಕಾಗದದ ಮೇಲೆ ಬರೆದು ತಿಳಿಸಿದನು

### ಬೆಕ್ಕು ಮೊದಲು

ಪಾಶ್ಚಾತ್ಯದಲ್ಲಿನ ಪಾದ್ರಿಯೊಬ್ಬನು ತನ್ನ ನಿಲುನಾಮೆಯಲ್ಲಿ ಮೊದಲಾಗಿ ತನ್ನ ಬೆಕ್ಕಿಗೆ ೯೦೦ ಪೌಂಡುಗಳನ್ನು ಸಲ್ಲಬೇಕಾಗಿ ಬರೆದಿರುವನ

### ಸಿನೆಮಾಕ್ಕಾಗಿ ಪ್ರಾಣಹತ್ಯ.

ತನ್ನ ಪತಿಯು ತಾನು ಸಿನೆಮಾಕ್ಕೆ ಹೋಗುವುದಕ್ಕೆ ಅಡ್ಡಿಮಾಡಿದುದಕ್ಕಾಗಿ ವೆರಾಕ್ರಜ್ ಎಂಬಲ್ಲಿ ೩೩ ವರ್ಷ ಪ್ರಾಯದ ತರುಣಿಯೋರ್ವಳು ಪಿಸ್ತೂಲಿನಿಂದ ಹೃದಯದೊಳಗೆ ಗುಂಡನ್ನು ಹೊಡೆದುಕೊಂಡು ಪ್ರಾಣತ್ಯಾಗ ಮಾಡಿರುವಳು.

## ಅಸೌಖ್ಯದ ನಂತರ ತ್ವರೆಯಾಗಿ ಆರೋಗ್ಯವನ್ನುಂಟುಮಾಡುವುದು

'ಓವಲ್ಟೀನು' ಬಹಳ ಶ್ರೇಷ್ಠವಾದ ಪುಷ್ಟಿಯುಕ್ತ ಆಹಾರ ಪಾನೀಯವಾಗಿರುತ್ತದೆ ಪ್ರಕೃತಿಯ ಉತ್ತಮ ಪೌಷ್ಟಿಕ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ ದನದ ನವ ಕೆನೆಹಾಲಿನಿಂದಲೂ ತಯಾರಿಸಲ್ಪಟ್ಟದ್ದಾಗಿದ್ದು ಅದರಲ್ಲಿ ದೇಹಕ್ಕೆ ಅಗತ್ಯವಿರುವ ವಿಟಮಿನ್ ಸತ್ವಗಳ ಕೂಡಿಕೊಂಡಿದೆ ಇದರಲ್ಲಿನ ಅಮೂಲ್ಯ ಪೌಷ್ಟಿಕಗಳ ಶ್ರೇಷ್ಠತೆಯು ಅದ್ವಿತೀಯವಾಗಿದ್ದು, ಅಸೌಖ್ಯದಲ್ಲಿ ಬಿದ್ದ ಕೃಶರಾದವರ ದೇಹಗಳನ್ನು ಪುಷ್ಟಿಮಾಡಿ ಆರೋಗ್ಯವನ್ನುಂಟುಮಾಡುತ್ತದೆ

ರುಚಿಕರವಾದ ಓವಲ್ಟಿನನ್ನು ದಿನನಿತ್ಯದ ಸೇವನೆಯು, ಆರೋಗ್ಯ, ಶಕ್ತಿ, ಚೈತನ್ಯಗಳನ್ನುಂಟ ಮಾಡುವುದು,

'ಓವಲ್‌ಟೀನ್'

ಟಾನಿಕ್ ಆಹಾರ ಪಾನೀಯ.

# OVALTINE

ಮೆದುಳು, ನರ ಮತ್ತು ಮೆದುಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತ್ತದೆ
ಏಜಂಟರು — ಜೇಮ್ಸ್ ರೈಟ್, 86 ಎ ಬಿಪನ್ ಸ್ಟ್ರೀಟ್, ಕಲ್ಕತ್ತ, ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ

OV. 475


### ಭೂಮಿಯ ಅಡಿಯಲ್ಲಿ ನಿಧಿ ದೊರಕಿತು

ಕಾಶ್ಮೀರದ ಜಾಮು ನಗರದಲ್ಲಿ ನವೀನ ಒಂದು ಕಟ್ಟಡದ ರಚನೆಗಾಗಿ ಭೂಮಿಯನ್ನು ಅಗೆಯುತ್ತಿರುವಾಗ ಒಂದು ನಿಧಿಯು ದೊರಕಿರುತ್ತದೆ. ಅದರಲ್ಲಿ ಅವರಂಗಜೇಬ, ಜಹಾಂಗೀರ ಇತ್ಯಾದಿ ಮೊಗಲರ ಕಾಲದ ೬೦೩ ನಾಣ್ಯಗಳು ದೊರಕಿವೆ ಈ ನಿಧಿಯಿಂದ ಕಾಶ್ಮೀರದ ಚರಿತ್ರೆಯ ಕುರಿತು ನವಸತ್ಯಗಳು ತಿಳಿದುಬರಬಹುದೆಂದು ಊಹೆಗಳಾಗಿವೆ. ಸ್ಥಳವು ಈಗ ಪೋಲಿಸರಿಂದ ರಕ್ಷಿಸಲ್ಪಟ್ಟು ಅಗೆಯುವ ಕೆಲಸವು ಮುಂದಕ್ಕೆ ಸಾಗುತ್ತಿದೆ.

### ಕಪಿಗಳು ಮಾನವರಿಗಿಂತ ಜಾಣರು

ಉಚ್ಚ ತರದಲ್ಲಿ ಬೆಳೆದ ಕಪಿಯ ಜಾಣ್ಮೆಯ ಕುರಿತು ಮಾನವರಿಗಿಂತ ಹೆಚ್ಚಿನ ಯೋಗ್ಯತೆಯಿರುವುದೆಂದು, ಅಮೇರಿಕಾದ ಮಾನಸಿಕ ಶಾಸ್ತ್ರಜ್ಞನೊಬ್ಬನು ಕಂಡು ಹಿಡಿದಿರುವನು.

### ನವಾಬರ ಚುನಾವಣೆ ಅಸಿಂಧುವಾಯಿತು

ಬಂಗಾಳ ಅಸೆಂಬ್ಲಿ ಸದಸ್ಯತನಕ್ಕೆ ಚುನಾಯಿತರಾದ ಮಾಜಿ ಮಂತ್ರಿಗಳಾದ ಸರ್ ಮೊಹೀದ್ದಿನ್ ಫರೋಕಿಯವರ ಮೇಲೆ, ಅವರ ಚುನಾವಣೆ ಅಸಿಂಧುವಾಗತಕ್ಕದೆಂದು ಅವರ ವಿರೋಧಿ ಹುರಿಯಾಳುಗಳ ಅರ್ಜಿಯ ಪ್ರಕಾರ ವಿಶಿಷ್ಟ ವಿಚಾರಣೆಯೊಂದು ನಡೆದು, ಸರ್ ಮೊಹೀದ್ದಿನ್ನರು ಮಂತ್ರಿಗಳಾಗಿ ಸರಕಾರಿ ಉದ್ಯೋಗಸ್ಥರ ಮೂಲಕ ಮತದಾರರ ಮೇಲೆ ಪ್ರೇರಣೆ ನಡೆಯಿಸಿದುದು ತಪ್ಪೆಂದೂ, ಅವರು ಅನ್ಯಾಯ ರೀತಿಯಲ್ಲಿ ಈ ಚುನಾವಣೆಯನ್ನು ಗೆದ್ದಿರುವರೆಂಬ ಅಭಿಪ್ರಾಯವಾಗಿ ಅವರಿನ್ನು ೬ ವರ್ಷದವರೆಗೆ ಅಸೆಂಬ್ಲಿಯ ಸದಸ್ಯತನಕ್ಕೆ ನಿಲ್ಲಬಾರದಾಗಿ ತೀರ್ಮಾಕೊಡಲಾಗಿದೆ

ಅವರೊಡನೆ ಸಹಕರಿಸಿದ ಸರಕಾರಿ ನೋಕರರ ಮೇಲೆ ಕಟ್ಟಿಯ ಕ್ರಮಗಳು ಜ್ಯಾರಿಯಾಗುವವಂತೆ

### ಫ್ರೆಂಕೊವಿನ ಕೊನೆಯ ಪ್ರಯತ್ನ

ಅರ್ಧ ಸ್ಪೈಯಿನನ್ನಾದರೂ ಪಡೆಯಬೇಕೆಂದಾದ ಉದ್ದೇಶದಿಂದ ಜನರಲ್ ಫ್ರೆಂಕೊ ಟಿರುವೇಲಿನಲ್ಲಿ ಮತ್ತೊಮ್ಮೆ ಯುದ್ಧ ಚಟುವಟಿಕೆಗಳನ್ನು ಪ್ರಾರಂಭಿಸಿರುವನು ಬೆರ್ಸಿಲೋನ ಇತ್ಯಾದಿ ನಗರಗಳ ಮೇಲೆ ವಿಮಾನಗಳ ಲಕ ಧಾಳಿನಡೆಸುತ್ತಿರುವನು, ಆತನ ಈ ಧಾಳಿಗಳು ಅತಿ ಕ್ರೂರ ರೀತಿಯಲ್ಲಿ ನಡೆಯುತ್ತಿವೆ ಅದರಿಂದ ಅವನಿಗೆ ಫಲವೇನೂ ದೊರಕಲಿಕ್ಕಿಲ್ಲ ತಟಸ್ಥಭಾವ ಸಮಿತಿಯವರು ಪತ್ರವ್ಯವಹಾರ ನಡೆಸುತ್ತಾ ಇದ್ದಾರೆ ಇದರ ಸಭೆಯೊಂದು ಬೇಗನೇ ಕೂಡಲಿದೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುರಿವ ಬರುತಿರುವ ॥

# ಸ್ವದೇಶಾಭಿಮಾನಿ
SWADESHABHIMANI

ಗರಳಕವರಂಜಿದರೆ! ಸುಧೆಯನು । ಮರೆತು ಕ್ಷಣದ್ಧರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾ. ೨೮ನೇ ಶುಕ್ರವಾರ ಜನವರಿ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.) | ತಾರೀಕು 28—1—1938


# ದೇಶೀಯ ವಿಚಾರಗಳು

### ಕಾಂಗ್ರೆಸ್-ಮುಸ್ಲಿಮ್ ಲೀಗ್ ವ್ಯವಹಾರ

ಹಿಂದೂದೇಶದಲ್ಲಿ ಜಂಟಿ ಮತದಾರರ ಪದ್ಧತಿಯನ್ನು ರೂಢಿಗೆ ತರುವರೆ ನಡೆಯುತ್ತಿರುವ ಕಾಂಗ್ರೆಸ್-ಮುಸ್ಲಿಮ್ ಲೀಗ್ ವ್ಯವಹಾರವನ್ನು ಇಂಡಿಯಾ ಸರಕಾರವು ಬಹಳ ಕುತೂಹಲದಿಂದ ನಿರೀಕ್ಷಿಸುತ್ತದೆ. ಈ ವಿಚಾರವು ಅಷ್ಟೊಂದು ಪ್ರಗತಿ ಹೊಂದದಿದ್ದರೂ, ಎರಡು ಪಕ್ಷಗಳ ನಾಯಕರು ಪತ್ರಿಕೆಗಳಲ್ಲಿ ಮಾತ್ರ ಚರ್ಚಿಸಲ್ಪಡುತ್ತಿದ್ದರೂ, ಈ ಪ್ರಶ್ನೆಯು ಸಾಧಾರಣಸಲ್ಪಟ್ಟು ಸಂಬಂಧಪಟ್ಟವರೊಳಗೆ ಒಪ್ಪಂದವಾಗಬಹುದೆಂದು ಇಂಡಿಯಾ ಸರಕಾರದ ಆಶಯವಾಗಿದೆ. ತಕ್ಕ ಕಾರಣವಿಷ್ಟೆ: ಈಗ ಮುಸ್ಲಿಮ್ ಲೀಗಿನವರ ಫೆಡರೇಶನಿನ ಕುರಿತು ಎತ್ತಿದ ಆಕ್ಷೇಪವು ನಿವಾರಣೆಯಾಗುವುದೆಂದು. ಮುಸ್ಲಿಮರಿಗೆ ಫೆಡರೇಶನಿನಲ್ಲಿ ಹೆಚ್ಚು ಸದಸ್ಯತನ ಸಿಕ್ಕಬೇಕೆಂದಲ್ಲ, ಇಸ್ಲಾಂ ಸಂಸ್ಕೃತಿ, ಭಾಷೆ, ಸಾಂಪತ್ತಿಕ ಸ್ಥಿತಿ ಇತ್ಯಾದಿಗಳಿಗೆ ತಕ್ಕ ರಕ್ಷಣೆಯು ದೊರೆಯಬೇಕೆಂದು. ಜಿನ್ನಾ-ಕಾಂಗ್ರೆಸ್ ವ್ಯವಹಾರದಿಂದ ಫೆಡರೇಶನನ್ನು ಜೀವಕ್ಕೆ ತರಲು, ಒಂದು ಅಡ್ಡಿ ತರವು ಕಡಿಮೆಯಾಗಬಹುದೆಂಬ ಭಾವನೆಯಿಂದಲೇ ಇಂಡಿಯಾ ಸರಕಾರವು ಅದನ್ನು ಇಷ್ಟು ಕುತೂಹಲದಿಂದ ನಿರೀಕ್ಷಿಸುವುದು.

### ಹೊರದೇಶಗಳಲ್ಲಿರುವ ಹಿಂದೀಯರ

ರಕ್ಷಣೆಗಾಗಿ, ಬರುವ ಕೇಂದ್ರ ಅಸೆಂಬ್ಲಿ ಅಧಿವೇಶನದಲ್ಲಿ ಒಂದು ಬಿಲ್ಲನ್ನು ತರಲು ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರಿಗೆ ವೈಸರಾಯರ ಅನುಮತಿಯು ದೊರಕಿರುವುದು. ಸ್ವೀಕೃತದ ವಿಸಂಬ್ಲಿಯು ಆಯುಷ್ಯವು ಸದ್ಯದಲ್ಲಿ ಕೊನೆಗೊಳ್ಳುವುದರಿಂದ, ಅಷ್ಟರೊಳಗೆ ಈ ಬಿಲ್ಲನ್ನು ಒಂದು ಕಾನೂನನ್ನಾಗಿ ಮಾಡಿ ಇಂಡಿಯಾ ಸರಕಾರದ ಕಾನೂನು ಪುಸ್ತಕದಲ್ಲಿ ಸೇರಿಸಬೇಕೆಂದು ಈ ಬಿಲಿನ ಉತ್ಪಾದಕರ ಉದ್ದೇಶವಾಗಿರುತ್ತದೆ. ಹೊರದೇಶಗಳಲ್ಲಿ ಹಿಂದೀಯರಿಗೆ ಸಮಸಮಾನವಾದ ನಡೆಸುವಿಕೆಯು ದೊರಕಬೇಕು, ಈಗ ಭಾರತೀಯರ ಕಡೆಯುದಾಗ ಪಕ್ಷಪಾತನೆಯನ್ನು ತೊಡೆಯಲ್ಪಡುವಂತೆ ಮಾಡುವುದೇ ಈ ಬಿಲಿನ ಉದ್ದೇಶವಾಗಿರುತ್ತದೆ. ಅನ್ಯ ಜನಾಂಗಿಕರು ಭಾರತೀಯರಿಗೆ ಸಮಸಮಾನವಾದ ವರ್ತನೆಯನ್ನು ಕೊಡದಿದ್ದಲ್ಲಿ, ಆ ಜನಾಂಗಿಕರಿಗೆ ಹಿಂದೂದೇಶದಲ್ಲೂ ಅದೇ ತರದ ವರ್ತನೆಯನ್ನು ಕೊಡಿಸಲ್ಪಡಬೇಕೆಂದು ಈ ಬಿಲ್ಲಿನ [illegible]. ಇದರಿಂದ ಆಫ್ರಿಕಾ ಇತ್ಯಾದಿ ಕಡೆಗಳಲ್ಲಿ ಈಗ ಭಾರತೀಯರಿಗೆ ದೊರಕುವ ಕುತ್ಸಿತ ವರ್ತನೆಯನ್ನು ದೂರಮಾಡಲು ಆಗುವುದು. ಜಂಜಿಬಾರಿನಲ್ಲಿ ಭಾರತೀಯರಿಗೆ ಉಂಟಾದ ಸಮಸ್ಯೆಯು ಈ ಬಿಲ್ಲಿನಿಂದ ಸುಧಾರಿಸಲ್ಪಡಬಹುದು. ಇಂಡಿಯಾ ಸರಕಾರವು ಈ ಕುರಿತು ತನ್ನ ಸಹಾನುಭೂತಿಯನ್ನು ತೋರಿಸಿದರೆ ಉತ್ತಮವಿದೆ.

### ಫೆಡರೇಶನಿನ ಭವಿಷ್ಯ

ಕಳೆದ ವಾರ ವಾರ್ಧಾದಲ್ಲಿ ಅತಿ ಪ್ರಾಮುಖ್ಯವೆನಿಸುವ ಮಾತುಕತೆಗಳು ನಡೆದುವು. ಮಹಾತ್ಮಾಜೀಯವರಿಗೂ ಲೋರ್ಡ ಲೋಥಿಯನರಿಗೂ ಈ ಮಾತುಕತೆಗಳು ಬಹಳ ರಹಸ್ಯವಾಗಿ ನಡೆದವು. ಈ ಮಾತುಕತೆಗಳು ನಡೆದುದು ಫೆಡರೇಶನಿನ ಕುರಿತೆಂದು ಊಹೆಗಳಿವೆ. ಈ ವಿಷಯವನ್ನು ಮಹಾತ್ಮಾಜಿಯವರು ಸದ್ಯದಲ್ಲಿ ಸನರಾಷ್ಟ್ರಪತಿಯಾಗಿರುವ ಶ್ರೀ ಸುಭಾಷಚಂದ್ರ ಬೋಸರೊಡನೆ ಎತ್ತಬಹುದು. ಊಹೆಗಳಿಗೆ ಸಹಾಯಕವಾಗಿ ಲೋರ್ಡ ಲೋಥಿಯನರು, ಕಾಂಗ್ರೆಸ ನಾಯಕರಾದ ಶ್ರೀ ಭೂಲಾಭಾಯಿ ದೇಸಾಯಿ, ಸರದಾರ ಪಟೇಲ್, ರಾಜೇಂದ್ರಪ್ರಸಾದ, ಜವಾಹರಲಾಲ ನೆಹರು, ಗೋವಿಂದವಲ್ಲಭ ಪಂತರೊಡನೆ ವಿಚಾರ ವಿನಿಮಯ ಮಾಡಿದರು. ಈ ಮಾತುಕತೆಗಳ ವಿಷಯವು ಯಾರಿಗೂ ತಿಳಿಯಲಿಲ್ಲವಾದರೂ ಅನೇಕರು ಅನೇಕತರದ ಕಲ್ಪನೆಗಳನ್ನು ಹೊಂದಿದ್ದಾರೆ. ಅದರ ಮೊದಲಾಗಿ ಬ್ರಿಟಿಷ ಪ್ರಾಂತಗಳ ಫೆಡರೇಶನನ್ನು ರಚಿಸಿ ಆ ಬಳಿಕ ಸಂಸ್ಥಾನಿಕ ರಾಜರನ್ನು ಅದರಲ್ಲಿ ಸೇರಿಸುವ ವಿಚಾರ ನಡೆದ ಸುದ್ದಿಯಾಗಿ ಜನ [illegible] ಲೋರ್ಡ ಲೋಥಿಯನರ ಸಮ್ಮತವಿರುವ ಪ್ರಕಾರ ಒಳನಾಡ ಸಾರ್ವಭೌಮ ಸ್ವಾತಂತ್ರ್ಯವು ದೊರೆತು ನಂತರ ಫೆಡರೇಶನ ಕುರಿತಾಗಿ ಯೋಚಿಸುವರೆಂದು ವಿಚಾರವೆಂದು ಬಂದ ಊಹೆಗಳು. ಕಾಂಗ್ರೆಸ್ಸಿನ ವೇಳಿನ ಸಲಹೆಗೆ ಬ್ರಿಟಿಷ ಸರಕಾರದ ಸಮ್ಮತವು ದೊರೆತವಾದರೆ, ಫೆಡರೇಶನ ಸರಕಾರದ ಕಾರ್ಯರೂಪಕ್ಕೆ ಬರಬಹುದೆಂದು ಹೇಳಬೇಕು. ಲೋರ್ಡ ಲೋಥಿಯನರಿಗೆ ಸಮ್ಮತವಿದ್ದಾಗ, ಅವರ ಮಾತಿಗೆ ಬ್ರಿಟಿಷ ಸರಕಾರದಲ್ಲಿ ಮನ್ನಣೆಯಿರುವುದರಿಂದ ಫೆಡರೇಶನ ಶಾಸನವು ಬೇಗನೆ ಕಾಂಗ್ರೆಸ್ಸಿನ ವೇಳಿನ ಸಲಹೆಗೆ ಸರಿಯಾಗಿ ಬದಲಾಯಿಸಲ್ಪಡಬಹುದೆಂದು ಊಹೆಗಳಿವೆ. ವಾರ್ಧಾದಲ್ಲಿ ನಡೆದ ಗಾಂಧೀಜಿ-ಲೋಥಿಯನ್ ಮಾತುಕತೆಯು ಫಲಿತಾಂಶವಾಗಿ ಮೇಲಿನ ತರದ ಒಂದು ಒಪ್ಪಂದವಾಗಬಹುದೆಂದು ಊಹಿಸಿ ಲೋರ್ಡ ಲೋಥಿಯನರು ತಮ್ಮ ಮಾತುಕತೆಯ ಫಲಿತಾಂಶಗಳನ್ನು ವೈಸರಾಯರಿಗೆ ತಿಳಿಸಿದ ಮೇಲೆ ಈ ಕುರಿತು ಹೆಚ್ಚಿನ ಮಾತುಕತೆಗಳನ್ನು ನಡೆಸುವರೆ, ವೈಸರಾಯರು ಮಹಾತ್ಮಾಜಿಯವರನ್ನು ಕಾಣಬಹುದೆಂದೂ ಒಂದಾನೊಂದು ವಾರ್ತೆಗಳಿವೆ.

### ಹಾಗಾದರೆ ಮುಂದೇನು?

ಬ್ರಿಟಿಷ ಸರಕಾರವು ಫೆಡರೇಶನಿನ ಕುರಿತು ಕಾಂಗ್ರೆಸ್ಸಿನ ಸಲಹೆಗೆ ಒಪ್ಪುವವರಾದರೆ, ಬ್ರಿಟಿಷ ಇಂಡಿಯಾ ಪ್ರಾಂತ್ಯಗಳ ಫೆಡರೇಶನು, ಬ್ರಿಟಿಷ ಚಕ್ರವರ್ತಿಯಿಂದ ಪ್ರಾರಂಭಿಸಲ್ಪಡುವುದಕ್ಕೆ ಕಾಂಗ್ರೆಸ್ಸಿನ ಸಹಕಾರವು ದೊರೆಯಬಹುದು. ಬ್ರಿಟಿಷ ಇಂಡಿಯಾ ಪ್ರಾಂತ್ಯಗಳು ಒಟ್ಟಾಗಿ ಫೆಡರೇಶನಿನ ರಚನೆಯಾದರೆ, ಮತ್ತು ಆಶ್ರಿತ ರಾಜರುಗಳೊಡನೆ ವ್ಯವಹಾರ ನಡೆಸಲು ಸುಲಭವೆನಿಸುವುದು.

ಆಶ್ರಿತ ರಾಜರನ್ನು ಫೆಡರೇಶನನ್ನು ಸೇರುವ ವಿಚಾರ,—ಪ್ರಜಾಸತ್ತೆಯೂ, ಸರ್ವಾಧಿಕಾರವೂ ಐಕ್ಯವಾಗುವುದೆಂದರೆ ಸರಿ ಕಾಣಿಸದು. ಹೀಗೆಂದು ಪ್ರಜಾಸತ್ತಾ ಕ್ರಮಗಳನ್ನು ಆಚರಿಸುವಂತೆ ಆಶ್ರಿತ ರಾಜರುಗಳ ಮೇಲೆ ಒತ್ತಾಯ ನಡೆಯಿಸಲಾಗದು. ಈ ಕುರಿತು ನಿಪುಣರಾದ ರಾಜಕೀಯ ಪುರುಷರು ಹಿಂದೆ ಉಪಾಯವನ್ನು ಕಲ್ಪಿಸಿರುವರು. ಆಶ್ರಿತ ರಾಜ್ಯಗಳಲ್ಲಿ ಬ್ರಿಟಿಷ ಪ್ರಾಂತ್ಯಗಳಲ್ಲಿದ್ದಂತೆ ಪ್ರಜಾರಾಜ್ಯ ಪದ್ಧತಿ ರೂಢಿಗೆ ಬಂದು, ಈ ಪ್ರಜೆಗಳು ಮತದಾನದ ಸ್ವಾತಂತ್ರ್ಯ ಹಕ್ಕುಗಳನ್ನು ಪಡೆದಲ್ಲಿ ಅವರನ್ನು ಗಂಭೀರ ಆಶ್ರಿತ ರಾಜರು ನೋಡುತ್ತಿರುವರು ಮಾಡಿಕೊಳ್ಳಲಿ. ಆದರೆ ಈ ತರದ ಸೂಚನೆಗೆ ಸ್ವಸ್ಥಾನಿಕ ಸಮ್ಮತ ವಿದೆಯೇ? ಇದರ ಮೇಲೆ ಬೇರೆ ಉಪಾಯವು ಕಾಣಿಸ ಹುದಿಲ್ಲ.

### ಆಶ್ರಿತ ರಾಜ್ಯಗಳ ಕುರಿತು ಕೆಲಸತ್ಯಗಳು

ಎಲ್ಲಾ ಮಹಾರಾಜರು, ರಾಜರ ಸಮಾಜದಲ್ಲಿ ಮೈಸೂರು ಮಹಾರಾಜರಲ್ಲಿರು, ಅದರ ಗಳಲ್ಲಿರುವ ಸ್ವ-ಆಡಳಿತ ಪದ್ಧತಿಯನ್ನು ಹೊರಿಸಲ್ಪಟ್ಟ ಕಾಂಗ್ರೆಸ್ಸಿಗೆ ಮೈಸೂರು, ತಿರುವಾಂಕೂರ, ಕೊಚ್ಚಿನ್ ಮತ್ತು ಬರೋಡಾ ಆಶ್ರಿತ ರಾಜ್ಯಗಳನ್ನು ಸಹ ಸೇರಿಸಿಕೊಳ್ಳಲು ಸುಲಭವಾಗಬಹುದು. ಆದರೆ ಇತರ ಕೆಲವು ಆಶ್ರಿತ ರಾಜ್ಯಗಳೊಡನೆ ಬೆರೆತುಕೊಳ್ಳಲು ಕಾಂಗ್ರೆಸ್ಸಿಗೆ ಅಸಹ್ಯಕರವೆನಿಸುವದು. ತನ್ನ ಬಿನ್ನ ಹೆಸರಿಗೆ ಕೊರತೆ ಬಾರದ ರೀತಿ ಅದು ಅನ್ನರಿಂದ ದೂರವಿರುವುದು. ಈ ತರದ ಆಶ್ರಿತ ರಾಜ್ಯ ಒಂದರ ಕುರಿತು ವಿಷಯಗಳು ಈಗ ತಿಳಿವಳಿಕೆಗೆ ಬಂದಿರ ಸ್ಥಿತಿಯು, ಇದು ವೈಸರಾಯರ ಕಿವಿಗಳಿಗೆ ಬಿಟ್ಟಿದೆಯೆಂದೂ ಬಲವಾದ ವಾರ್ತೆಯ ಅಗ ವೈಸರಾಯರು ಕಾಂಗ್ರೆಸ್ಸು ಅದರಿಂದ ದೂರ ಇರಲು ಕಾರಣವಾಗಿದೆಂದು, ಸರಿಯಾಗಿ ತಿಳಿದು ಬರುವುದು. ಅವರಲ್ಲಿರುವ ಶ್ರೇಷ್ಠ ಪ್ರಭೋಧನವು ಬೇಗ ಬಹುದು. ಈ ಕೊರತೆಗಳ ನಿವಾರಣೆಯಾಗುವುದು ಅವಶ್ಯವೆಂದು ಅವರ ಕಿವಿಯ ಮಾತು. ಸಮಾನವಾದ ಈ ತರದ ತೊಂದರೆ ದೂರ ಅಂಗಗಳನ್ನು ಕಡಿದುಹಾಕಿದ ಮೇಲೆ, ಲೋರ್ಡ ಲಿನ್‌ಲಿತ್‌ಗೋರವರ ಫೆಡರೇಶನ ಜನ್ಮಕ್ಕೆ ಬರಬೇಕು.

### ಕಾಂಗ್ರೆಸಿನಲ್ಲಿ ಒಡಕುಗಳೇಕೆ?

ಬಿಹಾರಿನ ಕಿಸಾನ್‌ಸಭೆಯ ಕುರಿತು ಕಳೆದ ವಾರದಲ್ಲಿ ವಾರ್ಧಾದಲ್ಲಿ ಜರಗಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯದಿಂದ ಸುಧಾರಿಸಲ್ಪಟ್ಟಂತೆ ಕಾಣ ವುದಿಲ್ಲ. ಸ್ವಾಮಿ ಸಹಜಾನಂದ ನಾಯಕರಾದ ಕಿಸಾನ ನಾಯಕರು ಕೆಲ ದಿವಸಗಳ ಹಿಂದೆ ಮಾಡಿದ ಭಾಷಣ ಪ್ರಕಟಣೆಯಿಂದ ಸದ್ಯದಲ್ಲೇ ಸಂದಿಗ್ಧ ಸ್ಥಿತಿಯು ಉಂಟಾಗಿ ಕಾಂಗ್ರೆಸ್ಸಿನ ವಿಚ್ಛೇದವಾಗುವ ಸಂಭವಗಳು ತಾಗಬಹುದೆಂದು ಊಹನೆಗಳು ಉಂಟಾಗುತ್ತವೆ. ಪ್ರಕೃತಕ್ಕೆ ಈ ಸ್ಥಿತಿಯು ಬಿಹಾರಿನಲ್ಲಿ ಮಾತ್ರವಿರುವುದಾದರೆ, ಕ್ರಮೇಣ ಅದು ಸಮಸ್ತ ಭರತಖಂಡದಲ್ಲೂ ಹರಡದೆ ಇರದು.

ಕಿಸಾನ್ ನಾಯಕರು ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಟೀಕಿಸಿ, ಅದು ಕಾಂಗ್ರೆಸ್ಸಿನ ಆದರ್ಶಗಳಿಗೆ ವಿರುದ್ಧವಾದ ತರದ ಕಾರ್ಯಕ್ರಮವನ್ನನುಸರಿಸುವಂತೆ ಪ್ರೇರೇಪಣೆ ನಡೆಯಿಸಿತು ಎಂಬುದಾಗಿ ಕಾಂಗ್ರೆಸ್ಸಿನ ಒಂದು ಪಕ್ಷದವರು ಅವರ ಮೇಲೆ ದೂರು ಹೊರಿಸಿದ್ದಾರೆ. ಇದರಿಂದ ಕಾಂಗ್ರೆಸ್ಸಿನ ಬಲಗ ಕುಂದಬಹುದು, ಹಿಂದಿ ಮಾನ ಹಾನಿಪದಗಳು ಉಂಟಾಗುವುದು ಎಂದು ಅವರು ಹೇಳುತ್ತಿರುವರು. ಕಾಂಗ್ರೆಸ್ಸಿನ ಈ ತರದ ಪಕ್ಷದಿಂದ ಒಂದು ತರದ ಸಹಿಷ್ಣುತೆ ಮನೋಭಾವವು ಉಂಟಾಗಿ, ಕಾಂಗ್ರೆಸ್ಸಿನ ಸ್ವಾತಂತ್ರ್ಯ ರೂಪಕ ಮಾಡುವಾಗ ಬಹುದೆಂದು, ಸೌಮ್ಯವಾದಿಗಳ ವಾದ ವ್ಯತ್ಯಾಸ ಯಾವುದೇ ಇರಲಿ, ಕಾಂಗ್ರೆಸ್ಸಿನೊಳಗಿರುವ ಎರಡು ಆದರ್ಶಗಳೊಳಗೆ ಪರಸ್ಪರ ತಿಕ್ಕಾಟವು ಹುಟ್ಟಾಗಿರುವುದು. ಆದರೆ ಈ ತಿಕ್ಕಾಟದ ಒಳ್ಳೆಯತನ್ನ ಹೇಳಿದರೆ ಕಾಂಗ್ರೆಸ್ ಬಲ ಕೆಡಬಹುದು.

ಗಾಂಧಿಜೀಯವರಲ್ಲಿ ಜರಗಿದ ಕಾಂಗ್ರೆಸ ವರ್ಕಿಂಗ್ ಕಮಿಟಿಯಿಂದ ಈ ಸ್ಥಿತಿಯು ನಿವಾರಣೆಯಾಗದೆ ಬದಲಿಗೆ ಇನ್ನು ಕಲಹ ಬೆಳೆಯಲು ಆಸ್ಪದ ದೊರಕಿದಂತಾಗಿದೆ. ಇಲ್ಲಿಗೆ ಆ ಕಲಹವು ತೀರಬೇಕಾಗಿದ್ದರೆ ಕಾಂಗ್ರೆಸಿನವರ ಎರಡು ಆದರ್ಶಗಳು, ಉಂಟಾಗಿ, ಅವುಗಳೊಳಗೆ ವಿಶೇಷ ತಿಕ್ಕಾಟವು ಉಂಟಾಗಿರುವುದರಿಂದ ಮುಂದಕ್ಕೆ ಪ್ರಯೋಜನ ವಿಲ್ಲದ ಕುರಿತು ತಿಕ್ಕಾಟವುಂಟಾಗಬಹುದು. ಕಾಂಗ್ರೆಸ್ಸಿನೊಳಗೆ ಸಂಘರ್ಷ ಸ್ಥಿತಿಯು ಉಂಟಾಗಬಹುದು ಎಂಬುದರಿಂದ ದೇಶಾಭಿಮಾನಿಗಳು ಮತ್ತು ಕಿಸಾನ್ ಸಭೆಯವರೂ ಬುದ್ಧಿ ಕಾರ್ಯ ಸಾಮ್ಯವಾದವೂ ತಮ್ಮೊಳಗೆ ಪರಸ್ಪರ ಭೇದಗಳನ್ನು ಮರೆತು ಐಕ್ಯಹೊಂದಬೇಕು. ಒಂದು ದಿನದ ಮೇಲೆ ಅವರ ಕಾರ್ಯಕ್ರಮಗಳು ನಡೆಯುವ ಕಾಂಗ್ರೆಸ್ಸು ಜರತಮುಂದಿದ ಆತ್ಮೀಕ ಪ್ರೇರಣೆಯಾದ ರಾಜಕೀಯ ಸ್ಥಿತಿ. ಸಾಮ್ರಾಜ್ಯವಾದಿ ಪ್ರಜಾ ವಿರೋಧ ಕೊಡುವ ಶಕ್ತಿ ಇದರಿಂದ ಸಾಮಾಜ್ಯವಾದಿ ವಿರೋಧವಾಗಿ ಅದರ ಒಳವು ಎಲ್ಲದರ ಹೆಚ್ಚಿಸಲ್ಪಡಬೇಕು ಸ್ವತಂತ್ರ, ಬಂಧ ಇತ್ಯಾದಿಗಳನ್ನು ಮರೆತುಬಿಟ್ಟು ಎಲ್ಲರೂ ಕಾಂಗ್ರೆಸ್ ಧ್ವಜದ ಕೆಳಗೆ ಸೇರಬೇಕು.

ಹೀಗಿರುವದರಿಂದ ಕಾಂಗ್ರೆಸ್ಸಿಗೆ ಹೊರತು ಕಿಸಾನ್ ಸಭೆಗಳು ನಡೆಸುವ ರಮ ಆದರಿಂದ ತೀವ್ರ ಹೋರಾಟಗಳು ಬೇರೆಯಾಗಬಹುದು. ಈ ಕಲಹವು ವಿಚಾರಕ್ಕೆ ಅರ್ಥವಾಗಿರುತ್ತದೆ. ಇತರ ಪ್ರಾಂತ್ಯಗಳಲ್ಲೂ ಉಂಟಾಗಬಹುದು. ಈ ತರದ ಸ್ಥಿತಿಯು ಬೆಳೆಯುತ್ತಾ ಹೋದರೆ, ಆಗ ಕಾಂಗ್ರೆಸ್ಸು ನಮ್ಮ ನಾಯಕರ ವ್ಯವಹಾರವಿದ್ದ ಕೆಲವರ ಮೇಲೆ ಶಿಸ್ತಿನ ಕ್ರಮವಾಗಿ ಕ್ರಮವನ್ನು ಕೈಗೊಳ್ಳಬಹುದು. ಅದರಿಂದ ಕಿಸಾನ್ ನಾಯಕರು ಕಾಂಗ್ರೆಸ್ಸಿಗೆ ಸಹಾನುಭೂತಿ [illegible] ಮಂತ್ರಿಮಂಡಲದ ಮತ್ತು ಕಾಂಗ್ರೆಸ್ಸಿನ ವಿಚ್ಛೇದದಿಂದ ಕಿಸಾನರಿಗೆ ಹಾನಿ ತಪ್ಪದು, ಲಾಭವು ದೊರೆಯದ ತಾತ್ಕಾಲಿಕ ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಟೀಕಿಸಬೇಕು. ನಿಜ, ಅದರ ಆ ಟೀಕೆಯು ಕಾಂಗ್ರೆಸ್ಸಿನ ಬಲವನ್ನು ಕುಂದಿಸುವ ತರದ್ದಾಗದೆ, ಬ್ರಿಟಿಷ ಸಾಮ್ರಾಜ್ಯಶಾಹಿಯ ಎದುರು ಹೋರಾಡುವರೆ ಕಾಂಗ್ರೆಸ್ಸಿಗೆ ಇನ್ನಷ್ಟು ಬಲವನ್ನು ಕೊಡುವಂತಾಗಬೇಕು.

ಮುಂದಕ್ಕೆ ನವದೆಲ್ಲಿಯಲ್ಲಿಂದ ಸಿಮ್ಲಾಕ್ಕೆ ಇಂಡಿಯಾ ಸರಕಾರವು ಬೇಸಿಗೆಕಾಲದಲ್ಲಿ ಹೋಗುತ್ತಿರುವ ಅಭ್ಯಾಸವನ್ನು ನಿಲ್ಲಿಸಲಾಗುವುದೆಂದು ವಾರ್ತೆಯಿದೆ.

## ಅದೆಂತಹ ಬಲಪ್ರದ!

"ಎಳ್ಳನ್ನು ಮುಷ್ಟಿಯಲ್ಲಿ ಹಿಡಿದು ಎಣ್ಣೆಯನ್ನು ಹಿಂಡಿ ಅನ್ನಕ್ಕೆ ಹಾಕಿಕೊಳ್ಳುವ ಗಾಣಿಗ ನಮ್ಮ ಸ್ವದೇಶದ ಪೂರ್ವ ಕಾಲದವರು ಹೇಳುವುದುಂಟು. ಆ ಮಾತು ಸತ್ಯವೋ ಅಸತ್ಯವೋ ಎಂಬುದನ್ನು ನಾವು ತಿಳಿಯದಿದ್ದರೂ, ಆಯುಶ್ಶಾಸ್ತ್ರವನ್ನು ಬಲ್ಲವರಾದ ಪೂರ್ವಿಕರು ಬಹಳ ಶಕ್ತಿವಂತರಾಗಿದ್ದರೆಂಬುದನ್ನು ಒಪ್ಪಿಕೊಳ್ಳುತ್ತೇವೆ.

ಆದರೆ, ನಮ್ಮಲ್ಲಿ ಅನೇಕರಿಗೆ ಆಶಕ್ತಿಯೂ ಆ ಬಲವೂ ಏತಕ್ಕೆ ಇರುವುದಿಲ್ಲ. ಅದಕ್ಕೆ ಕಾರಣವನ್ನು ನೋಡಲಿಕ್ಕೆ ಅವಕಾಶವಿಲ್ಲವೆಂದು ತಿಳಿದು ಸುಮ್ಮನೆ ಈ ನೀರಸವಾದ ಜೀವನವನ್ನು ಕಳೆಯುವುದರಿಂದ ನಾವು ಉತ್ತಮ ಆರೋಗ್ಯವಂತರಾಗಿಯೂ, ತೇಜಸ್ಸುಳ್ಳವರಾಗಿಯೂ, ಶಕ್ತಿಶಾಲಿಗಳಾಗಿಯೂ ಇರಬೇಕಾದಕ್ಕಾಗಿ 'ಅಮೃತ'ವನ್ನು ಸೇವಿಸಬೇಕು. ಅಮೃತವನ್ನು ಸೇವಿಸಿದರೆ ಜೀವಿತ ಸೌಖ್ಯವನ್ನು ಅನುಭವಿಸಲಿಕ್ಕೆ ಬೇಕಾದ ಉತ್ಸಾಹವನ್ನೂ, ಬಲವನ್ನೂ ಉಂಟುಮಾಡುತ್ತದೆ.

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ—ರಾಯಪೇಟೆ—ಮದ್ರಾಸು.

ಮಂಗಳೂರು ಪ್ರವರ್ತಕರು: ದಿ ಪಾಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು


## ಕಡಬದ ನಾಗರೀಕರೂ ಡಾ. ಆಳೇಕಲ ವಾರ್ಡೂ.

ಕಡಬದಂಥ ಒಳನಾಡಿನಲ್ಲಿ ಒಂದು ಸರಕಾರಿ ಆಸ್ಪತ್ರೆಯಾದುದು ಆ ಪ್ರಾಂತ್ಯದವರ ಭಾಗ್ಯ. ಮಳೆಗಾಲ ಬಂತೆಂದರೆ ಕಡಬದಿಂದ ಸುಬ್ರಹ್ಮಣ್ಯದ ತನಕ ವಾಹನಗಳ ಅನುಕೂಲತೆಯೇ ಇಲ್ಲ. ಹೀಗಿರಲು, ಅವರಿಗೆ ಕಡಬದಲ್ಲಾದರೂ ಒಂದು ಆಸ್ಪತ್ರೆಯು ದೊರೆಯುವಂತಾದುದು ಹಿಂದಿನ ತಾಲೂಕು ಬೋರ್ಡಿನ ಸಾಹಸವೆನ್ನಬೇಕು. ಇಲ್ಲಿ ಒಂದೆರಡು ವರ್ಷಗಳ ಹಿಂದಿನ ತನಕ ಡಾ| ಆಳೇಕಲರು ಶ್ರದ್ಧೆಯಿಂದ ಕೆಲಸಮಾಡಿದರು. ಅವರ ಉದ್ಯಮದಿಂದ ಅವರ ಜನಪ್ರೀತರಾದುದಲ್ಲದೆ, ಸಾಹಸದಿಂದ ದಾಕ್ತರರ ವಸತಿಗೃಹಕ್ಕೂ ಕಾರಣರಾದರು. ಹೀಗಿರಲು, ಅವರು ವರ್ಗಹೊಂದುವಾಗ ಊರ ನಾಗರಿಕರು ಅವರ ಹೆಸರನ್ನು ಶಾಶ್ವತವಿತ, ಇತ್ತ ಜನರಿಗೆ ಉಪಯೋಗವಾಗುವಂತೆ ಒಂದು ವಾರ್ಡ್ ಕಟ್ಟಿಸುವುದಾಗಿ ನಿಶ್ಚಯಿಸಿದರು. ಸದರಿ ವಾರ್ಡಿಗೆ ಶ್ರೀ ಆಳೇಕಲರ ಹೆಸರನ್ನು ಸೇರಿಸಲು ಅವರು ಸಂಕಲ್ಪ ಮಾಡಿ ಕೆಲಸವನ್ನು ಬಡಕನದಲ್ಲಿ ಮುಂದುವರಿಸಿದರು. ಡಾ| ಆಳೇಕಲರು, ತಾವು ವರ್ಗಗೊಂಡರೂ ಊರಿನ ಪ್ರೀತಿಯಿಂದ ವಾರ್ಡಿಗೆ ನೂರು ರೂಪಾಯಿ ದಾನವನ್ನು ಮಾಡಿದರು.

ಈಗ ವಾರ್ಡು ರೂಪಕ್ಕೆ ಬಂದಿದೆ. ನೆಲದ ಕೆಲಸ ಒಂದು ಆಗಿದರೆ ಸುಂದರವಾದ ಒಂದು ವಾರ್ಡು ಆಸ್ಪತ್ರೆಯ ಪಕ್ಕದಲ್ಲಿ ತಲೆ ಎತ್ತಿ ನಿಲ್ಲುವುದು. ಈ ಕೆಲಸವನ್ನು ಆದಷ್ಟು ಶೀಘ್ರವೇ ಮುಗಿಸಬೇಕೆಂದೂ, ಈಗಿನ ನಮ್ಮ ಡಾ| ಸೀತಾರಾಮರಾಯರು, ಸದರಿ ಆಳೇಕಲ ವಾರ್ಡಿನ ಉಪಯೋಗವನ್ನು ಜನರು ಪಡೆಯುವಂತೆ ಪ್ರೋತ್ಸಾಹಗೊಳಿಸುವರೆಂದೂ ನಮ್ಮೆಲ್ಲರ ವಿಶ್ವಾಸ.

ಕಡಬದಂತೆ ನಾಗರಿಕರ ಸಂಸರ್ಗಕ್ಕೆ ದೂರವಾದಂಥ ಗುತ್ತಿಗಾರಿನಂಥ ಒಳನಾಡಿಗೆ ಸರಕಾರವು ವೈದ್ಯಕೀಯ ಸಹಾಯದ ಯೋಜನೆಯನ್ನು ಒಂದು ರೂರಲ್ ಡಿಸ್ಪೆನ್ಸರಿಯ ರೂಪದಿಂದಲಾದರೂ ಮಾಡಬೇಕು. ಕಾರಣ, ಈ ಪ್ರಾಂತ್ಯವು ಮಳೆಗಾಲಕ್ಕೆ ಬಹಳ ನಾಗರಿಕ ಸಂಪರ್ಕಕ್ಕೆ ಬಾರದ ನಾಡು.

ಸರಕಾರವಾಗಲಿ ಬೋರ್ಡಾಗಲಿ ಈ ಉದ್ಯಮಕ್ಕೆ ಪ್ರೋತ್ಸಾಹ ಕೊಟ್ಟರೆ ಆ ಪ್ರಾಂತದ ಜನರು ತಮ್ಮ ಆಸ್ಪತ್ರೆಗೆ ಬೇಕಾಗುವ ಸ್ಥಳ, ಕಟ್ಟಡಗಳನ್ನು ತಮ್ಮ ಒಡತನದ ಮಟ್ಟಿಗಾದರೂ ಸಹಾಯಮಾಡಲು ಹಿಂದಾಗರು.

ಶಿವರಾಮ ಕಾರಂತ


# 'DILROZ'

Dil Roz' is a sure cure for Oriental sores, ... sores, ... and deep rooted sores, skin eruptions, Pimples, Eczema, Ringworm, Sinus, Fistula, axillary Abscess.

There is no need of dressing the wounds nor ... prohibited.

Price Rs. 2 Postage extra

TAHIR DIN

... LAHORE.

## ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಅದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ—

## ಜೀವಾಮೃತ

ಆಯುರ್ವೇದಾಶ್ರಮಂ,
೧೫೫, ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.
ದ. ಕ. ಜಿಲ್ಲಾ ಏಜಂಟರು:—
ಪಾಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.



***Ready for sale!***

# SHARADA DIARY 1938

**Small size 0—4—0.**

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

**Interleaved big size DIARIES useful for Banks & Lawyers**

**ARE AVAILABLE AT 1—2—0 PER COPY**

**Sharada Press, Mangalore. S. Canara.**



# HOUNSA

**ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,**

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲಿಕಟ್ಟೆ ಬಜಾರ್, ಮಂಗಳೂರು.



***Use the soaps***
KNOWN ALL OVER
***WISICO'S.***

**MINAR**
&
**TAJAMAHAL** 'Red'
Bar Soaps.

POPULAR IN THE MARKET

*Sole Distributer—*

**P. G. KAMATH,**
Kashmir House,
Marnamikatta, MANGALORE.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1—4—0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಆಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ.
P. O. Peradepi (ನೆಲ್ಲೂರು ಜಿ)

ಸರ್ವಾಧಿಕಾರಿಗಳ ಬಾಲ್ಯ: ೧

# ಸ್ಟೇಲಿನ್

**ಸ್ಟೇಲಿನನ ತಂದೆಯು ಆತನನ್ನು ತನ್ನ ಕುಲಕಸಬಿಗೆ ಹಚ್ಚಬೇಕೆಂದು ಬಗೆದಿದ್ದನು; ತಾಯಿಯು ಆತನನ್ನು ಧರ್ಮಗುರುವನ್ನಾಗಿ ಮಾಡುವೆನೆಂದು ಹರಕೆ ಹೇಳಿ ಕೊಂಡಿದ್ದಳು. ಆದರೆ ಸ್ಟೇಲಿನನ ನ್ಯಾಯಬುದ್ಧಿಯೂ ವಾಚನಾಭಿರುಚಿಯೂ ಆತನನ್ನು ಬೇರೆ ದಾರಿಗೆ ಎಳೆದುವು. ಸಮಗಾರನ ಮಗನಾತನು— ಇಂದು ರಷ್ಯದ ಸರ್ವಾಧಿಕಾರಿಯು.**

"ಸೋಸೊವು ಒಳ್ಳೆ ಹುಡುಗನು. ಒಮ್ಮೆಯಾದರೂ ಆತನನ್ನು ನಾನು ಶಿಕ್ಷಿಸಿದುದಿಲ್ಲ. ಆತನು ಯಾವಾಗಲೂ ತನ್ನ ಪಾಠಗಳನ್ನು ಚೆನ್ನಾಗಿ ಕಲಿಯುತ್ತಿದ್ದನು. ಪ್ರತಿಯೊಂದು ವಿಷಯವನ್ನು ಕಲಿಯಬೇಕೆಂಬ ಆಸಕ್ತಿಯೂ ಆತನಲ್ಲಿತ್ತು" ಇವು ತನ್ನ ಒಬ್ಬನೇ ಒಬ್ಬ ಮಗನ ಕುರಿತು, ೭೮ ವರ್ಷದ ಹಣ್ಣುಮುದುಕಿಯಾದ ಸ್ಟೇಲಿನನ ತಾಯಿಯ ಮಾತುಗಳು. ಸ್ಟೇಲಿನನು ರಷ್ಯದ ಸರ್ವಾಧಿಕಾರಿಯಾದರೂ ಆಕೆಗಾತನು ಮಗನಲ್ಲವೆ? ಈಗಲೂ ಆಕೆಯು ಆತನನ್ನು ಸೋಸೊವೆಂದೇ ಕರೆಯುತ್ತಿರುವಳು. ಆತನ ಬಾಲ್ಯದ ಹೆಸರ ಜೋಸೆಫ್ ಜುಗಶಿವೇಲಿ ಎಂದು.

ಎಕೆಟರೀನಾ ಜುಗಶಿವೇಲಿ ಎಂದ ಸೋಸೊವಿನ ತಾಯಿಯ ಹೆಸರು. ಹಳೆಯ ಸಂಪ್ರದಾಯದ ಹೆಂಗಸಾಕೆ ... ಮುಖದಲ್ಲಿ ಸೆರೆ ಬಿದ್ದಿದ್ದರೂ, ಆಕೆಯು ಯುವವಯದಲ್ಲಿ ಸೌಂದರ್ಯವತಿಯಾಗಿದ್ದಳೆಂದು ತಿಳಿಯಬಹುದಾಗಿದೆ. ಟಿಫ್ಲಿಸ್ ... ಬಳಿಯಲ್ಲಿದ್ದ ಸಣ್ಣದಾದ ಅದೊಂದು ... ಆಕೆಯ ಇಂದಿನ ವಾಸಸ್ಥಾನ. ತನ್ನ ... ಚಿತ್ರಪಟಗಳಿಂದಲೇ ಆಕೆಯು ತನ್ನ ಕೋಣೆಯನ್ನು ಸಿಂಗರಿಸಿರುವಳು. ಮತ್ತು ಆತನ ಕುರಿತು ... ಕೆಗಳಲ್ಲಿ ಬಂದ ವಿಷಯಗಳನ್ನೆಲ್ಲಾ ಸಂಗ್ರಹಿಸಿರುವಳು. ತನ್ನ ಮಗನ ಬಾಲ್ಯದ ದಿನಗಳ ... ಪ್ರಸ್ತಾಪಿಸುವುದೆಂದರೆ ಆಕೆಗೆ ... ಮಿತಭಾಷಿಯಾದವಳ ಸ್ವಭಾವವೇ ಇದಲ್ಲವೆ?

ಸ್ಟೇಲಿನನು ಜುಗಶಿವೇಲಿಯ ... ಪುತ್ರನು. ಆಕೆಗೆ ... ವರ್ಷಗಳಾಗ ... ಮೂವರ ... ಹುಟ್ಟಿ ಮಡಿದ್ದರು. ಆಕೆಯು ತನ್ನ ... ಸ್ಟೆಪಿನಿಷ್ಟ್ ... ಜನ್ಮವಿತ್ತಳು. ಮೂವರ ... ಕಳೆದು ಸ್ಟೇಲಿನೊಬ್ಬನೇ ಉಳಿದುದರಿಂದ ಆತನನ್ನು ಜುಗಶಿವೇಲಿಯು ಬಹಳ ಅಕ್ಕರೆಯಿಂದ ಸಾಕಿ ಸಲಹಿದಳು.

ಸ್ಟೇಲಿನನ ತಂದೆ, ವಿಸ್ಸಾರಿಯನ್ ಜುಗಶಿವೇಲಿಯು— ಒಬ್ಬ ಸಮಗಾರನು. ಆತನ ... ಕುಟುಂಬದವರ ನ್ಯಾಯ ... ಜಿಲ್ಲೆಯಲ್ಲಿ ... ಸ್ವಲ್ಪ ಬೇಸಾಯವನ್ನು ... ಸ್ಟೇಲಿನನೂ ಅದೇ ವೃತ್ತಿಯನ್ನು ... ಬೇಕೆಂದು ಆತನ ತಂದೆಯ ... ಮನಸ್ಸಿನಲ್ಲಿತ್ತು.

**ಧರ್ಮಗುರುವಾಗಬೇಕೆಂಬ ಆಶೆ**

ಆದರೆ ಸ್ಟೇಲಿನನಿಗೆ ಹನ್ನೊಂದು ವರ್ಷವಾಗುವಷ್ಟರಲ್ಲಿ ಆತನ ತಂದೆಯು ತೀರಿಕೊಂಡನು. ತಾಯಿಯು, ತನ್ನ ಮಗನು ಒಂದು ಉತ್ತಮ ಕೆಲಸ ವೃತ್ತಿಯನ್ನು ... ನಡೆಯಬೇಕೆಂದು ಇಚ್ಛಿಸಿ, ಆತನು ಧರ್ಮಗುರುವಾಗಿ ಬಾಳ್ವೆಗೊಳ್ಳಬೇಕೆನೆಂದು ... ಗಳನ್ನು ಹೆಣೆಯತೊಡಗಿದಳು. ಆಕೆಯ ಈ ಇಚ್ಛೆಯು ಬಂದ ಆತನಿಗೆ ಮಾತ್ರಾಗಿರದೆ ಆದಕ್ಕೊಂದು ಕಾರಣವೂ ಇದ್ದಿತು. ತನ್ನ ಪುತ್ರನು ಧರ್ಮಗುರುವಾದುದರಿಂದ ತುಂಬ ಹಣವನ್ನು ಗಳಿಸಿ, ಸುಖದಿಂದ ಇರಬಲ್ಲನೆಂಬುದೊಂದೇ ಇದರ ಕಾರಣವಲ್ಲ, ... ಹೇಳಿಕೊಂಡ ಅದೊಂದು ಹರಕೆಯನ್ನು ಪೂರೈಸುವುದಕ್ಕಾಗಿಯೇ ತನ್ನ ಮಗನನ್ನು ಧರ್ಮಗುರುವನ್ನಾಗಿ ಮಾಡಲು ಆಕೆಯು ಆಲೋಚಿಸಿದುದಾಗಿದೆ.

ಹುಟ್ಟಿದ ಅಕ್ಕಳ ಅವಧಿಯಲ್ಲಿಯೇ ಆಕೆಯ ಮಕ್ಕಳು ... ಕೊಂಡಿದ್ದರು. ಅದುದರಿಂದ ನಾಲ್ಕನೇ ಬಾರಿ ಗರ್ಭಿಣಿಯೆನ್ನುವಾಗಲೇ ದೇವರು ಈ ಬಾರಿ ಹುಟ್ಟುವ ಶಿಶುವನ್ನು ಉಳಿಸಿಕೊಟ್ಟರೆ, ಆ ಮಗುವನ್ನು ದೇವತಾಸೇವೆಗಾಗಿಯೇ ಮೀಸಲಾಗಿಡುವೆನೆಂದು ಆಕೆಯು ಹರಕೆಯನ್ನು ಹೇಳಿಕೊಂಡಿದ್ದಳು. ಮಗನಿಗೆ ಹದಿನೈದು ವಯಸ್ಸು ತುಂಬಿದೊಡನೆ ಆತನನ್ನಾಕೆಯು ಹುಟ್ಟಿದ್ದಂದ ಟಿಫ್ಲಿಸಿಗೆ ತಂದು ಶಾಸ್ತ್ರಶಿಕ್ಷಣವನ್ನು ಕೊಡುವ ಒಂದು ವಿಶ್ವವಿದ್ಯಾಲಯಕ್ಕೆ ಸೇರಿಸಿದಳು.

ಸ್ಟೇಲಿನನ ಬಾಲ್ಯದ ಕೆಲವು ಕತೆಗಳು ಆತನ ಸ್ವಭಾವವನ್ನು ಪ್ರಕಟಿಸುತ್ತವೆ. ಆತನ

ರಷ್ಯದ ಸರ್ವಾಧಿಕಾರಿ ಸ್ಟೇಲಿನ್.

ಸಾ... ಪತ್ರ ... ಬೇರೆ ... ಆತನ ಸತ್ಯಪ್ರಿಯ ...

ಸ್ಟೇಲಿನ ... ಸ್ಟೆಪನ ... ರಾತ್ರಿ ಮತ್ತನಾಗಿ ... ತನ್ನ ನಾಯಿಯನ್ನು ಒದೆದು ... ಅದು ಸೋಸೊವನ್ನು ಸಹಿಸಲಾರದೆ ... ಕಚ್ಚಿತು ... ಅದನ್ನು ಸಹಿಸಲಾರ ... ಅಮಲು ... ಕುಡಿಕನ ಪ್ರತಿ... ಆ ... ತನ್ನ ... ನೋಡಿ ಆತನು ... ಕೆಲವು ... ಸಹಪಾಠಿಗಳನ್ನು ... ಅದೊಂದು ದಿನ ... ಹೋಗಿದ್ದನು.

'ನೀವು ಇಲ್ಲಿಗೇಕೆ ಬಂದಿರುವಿರಿ?' ... ಇವರನ್ನು ... ಕೇಳಿದನು.

ಆಗ ಸೋಸೊವು ... 'ನ್ಯಾಯಕ್ಕಾಗಿ' ...

ಅಪ್ಪಂದೂ ... ಕುಡಿಕನು ... ಶಿಕ್ಷಿಸಿದನು ... ಸೀನು ... ಎಂದು ಹೇಡಿವಾದ ... ಸ್ಟೇಲಿನನ ... ನೋಡನೆ ಕೇಳಿದನು.

**ಮೊದಲಿಂದಲೂ ನಾಯಕನು**

ಅಂದಿನ ... ಹಳ್ಳಿಯ ಹುಡುಗರೆಲ್ಲರೂ ಸ್ಟೇಲಿನನನ್ನು ತಮ್ಮ ನಾಯಕನನ್ನಾಗಿ ಆರಿಸಿದರು. ಆತನು ಹೇಳಿದ ಹಾಗೆ ನಡೆಯುತ್ತಿದ್ದರು. ಆತನು ಹೋಗಬೇಕೆಂದಲ್ಲಿ ಆತನನ್ನು ಹಿಂಬಾಲಿಸಿದರು.

ಸೋಸೊವಿಗೆ ಪುಸ್ತಕಗಳನ್ನು ಓದುವ ಅಭಿರುಚಿ ಬಹಳ. ಯಾರಾದರೂ ಕಥೆಗಳನ್ನು ಓದಿ ಹೇಳುವವರಾದರೆ ಹುಟ್ಟಿನಂಟಿಕ್ಕೆ ... ಕಿವಿಗೊಟ್ಟು, ನಿಶ್ಚಲ ಚಿತ್ತದಿಂದ ಅವುಗಳನ್ನಾತನು ಕೇಳುತ್ತಿದ್ದನು. ಅನಂತರ ... ಓದಲಿಕ್ಕೆ ಬೇಕಾದ ಪುಸ್ತಕಗಳನ್ನು ಆತನು ತಂದುಕೊಡುತ್ತಿದ್ದನು. ಪ್ರಾಯದಲ್ಲಿ ಎಂದ್ರಜೀವನಕ್ಕಿಂತ ಸೋಸೊವು ಎಷ್ಟೋ ಚಿಕ್ಕವನು ... ತಾನು ಅರಿಯುವ ವಿಷಯಗಳ ಕುರಿತು ಆತನು ಆಗಾಗ್ಗೆ ಎಂದ್ರಜೀವನನ್ನು ವಿಚಾರಿಸಿ ತಿಳಿದುಕೊಳ್ಳುತ್ತಿದ್ದನು.

ಒಮ್ಮೊಮ್ಮೆ ತನ್ನ ಪ್ರಶ್ನೆಗಳಿಗೆ ತಕ್ಕುದಾದ ಉತ್ತರವು ಆತನಿಗೆ ದೊರೆಯುತ್ತಿರಲಿಲ್ಲ.

'ಮರಗಳಲ್ಲಿರುವ ಎಲೆಗಳನ್ನು ಮಾಡಿದವನಾರು?' ಎಂದೊಮ್ಮೆ ಸೋಸೊವು ತನ್ನ ಮಿತ್ರನೊಡನೆ ಕೇಳಿದನು.

'ದೇವರು ಮಾಡುವನು' ಎಂದು ಜೀವನು ...

'ಪ್ರತಿಯೊಂದನ್ನು ದೇವರೇ ಮಾಡುವನೆ?' ಸೋಸೊವು ಪುನಃ ವಿಚಾರಿಸಿದನು.

'ಹೌದು'

'ಟಿಫ್ಲಿಸಿನಲ್ಲಿರುವ ಎಲ್ಲಾ ಮರಗಳ ಎಲೆಗಳನ್ನು ಮಾಡಿದವನು ದೇವರೇ ಏನು?'

'ಹೌದು' ... ಟಿಫ್ಲಿಸಿನಲ್ಲಿರುವ ಮರಗಳ ... ಎಲೆಗಳ ... ಸಂಖ್ಯೆ ... ಮಾಡಿದೆ ... ಪರ ...

ಇದರಿಂದ ಸೋಸೊವಿನಿಂದ ತಡೆಯಲಾಗಲಿಲ್ಲ ... ಆತನು ಕೂಗಿಕೊಂಡದ್ದು ... ಜೀವನನ್ನು ... ನೀನು ... ಕಿರಿಗಳ ... ಒಂದೇ ದಿನ ಕಲಿಸಿ ... ನನ್ನ ಕೆಂಡ ... ಕೊಟ್ಟಿ ... ಹಾಗಾದರೆ ಪರಮಾತ್ಮನು ಇಷ್ಟೊಂದು ವಸ್ತುಗಳನ್ನು ಸೃಷ್ಟಿಸುವುದ ಹೇಗೆ? ಆತನಿಗೆ ಸಮಯವೇ ಸಾಕಾಗಲಿಕ್ಕಿಲ್ಲ ಎಂದನು.

ಜ್ಯಾರ್ ಇವಾನನ ಕ್ರೌರ್ಯದ ಕಥೆಗಳನ್ನು ಕೇಳಿದೊಡನೆ ಸೋಸೊವು ಎಷ್ಟು ... ಕೋಪಗೊಳ್ಳುತ್ತಿದ್ದನೆಂದು ಇದೊಂದು ವಿಷಯದಿಂದ ಸ್ಪಷ್ಟವಾಗುತ್ತದೆ.

'ತನ್ನ ಪ್ರಜೆಗಳನ್ನು ಈ ರೀತಿಯಲ್ಲಿ ಹಿಂಸಿಸಲು ಆತನಿಗೆ ಅಧಿಕಾರವಿಲ್ಲ. ಆತನು ಅರಸನಾದರೂ ಆತನು ... ತನ್ನ ಇಚ್ಛೆಯನುಸಾರವಾಗಿ ನಡೆಸಲು ... ಸೋಡಬಾರದು. ... ಆತನ ಮಾತು ... ದರೆ, ಆತನನ್ನು ಕೊಲ್ಲುವುದೇ ... '

**ಸರಯಜ್ಞದ ನಂತರದ ಪರಿಣಾಮ**

... ಹೋಗುತ್ತಿದ್ದ ಸೋಸೊವು ಜನಪ್ರಿಯನಾಗತೊಡಗಿದನು. ಅದರಲ್ಲೂ ಆತನ ಸಹಪಾಠಿಗಳಿಗೆ ಆತನನ್ನು ಕಂಡರೆ ಬಹಳ ಪ್ರೀತಿ. ಕಾರಣ, ಯಾವಾಗಲೂ ಆತನು ಅವರಿಗೆ ಸಹಾಯವನ್ನು ಮಾಡುತ್ತಿದ್ದನಲ್ಲದೆ ... ಎಂದೂ ದ್ರೋಹವನ್ನು ಎಣಿಸುತ್ತಿದ್ದಿಲ್ಲ. ಎಲ್ಲಿಯಾದರೂ ತನ್ನ ಕೂಟದವರಿಗೆ ಹಾನಿಯಾಗ ಬಂದಿದ್ದರೆ ತಾನೇ ತಪ್ಪನ್ನು ಒಪ್ಪಿಕೊಂಡು ಅವರಿಗೆ ಹಾನಿಯಾಗದಂತೆ ಆತನು ನೋಡಿಕೊಳ್ಳುತ್ತಿದ್ದನು.

ಒಮ್ಮೆ ಒಬ್ಬ ಹುಡುಗನು ಒಂದು ಬೆಕ್ಕಿನ ... ಬಿಲ್ಲೆಯನ್ನು ಒಬ್ಬ ವ್ಯಾಪಾರಿಯ ಅಂಗಡಿಯಿಂದ ಕದ್ದುಕೊಂಡನು. ಆಗ ಸೋಸೊವು ಅಪರಾಧಿಯು ತಾನೆಂದು ಮುಂದೆ ಬಂದನು ... ಒಂದೆರಡು ... ಗಳನ್ನು ಹಚ್ಚಿಗೆ ತಿನ್ನುವ ಶಕ್ತಿಯು ತನ್ನಲ್ಲಿದೆ ಎಂದೇ ಆತನು ತನ್ನ ಈ ವಿಚಿತ್ರ ನಡತೆಯ ಕುರಿತು ಕೊಟ್ಟ ವಿವರಣೆ.

ಶಾಲಾ ಉಪಾಧ್ಯಾಯರು ಕೂಡ ಆತನನ್ನು ಪ್ರೀತಿಸುತ್ತಿದ್ದರು. ಆತನು ಪಾಠಗಳನ್ನು ಚೆನ್ನಾಗಿ ಕಲಿಯುತ್ತಿದ್ದನಲ್ಲದೆ, ಬೇರೆ ಪುಸ್ತಕಗಳನ್ನು ಓದುವುದರಲ್ಲಿ ತುಂಬಾ ಸಮಯವನ್ನು ವ್ಯಯಿಸುತ್ತಿದ್ದನು.

ಸರ್ವ ಜಗತ್ತನ್ನೇ ಸಂಕ್ಷೋಭಗೊಳಿಸಿದ ಆರ್ಮೀನಿಯನ್ ಸರಹತ್ಯಾಕಾಂಡವು ಸ್ಟೇಲಿನನ ಮನೋವೃತ್ತಿಯ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತಿತು. ಆತನ ಮನೋವೃತ್ತಿಯ ಪರಿವರ್ತಿಸಿತು. ನಿಷ್ಕಾರಣವಾಗಿ ಒಂದು ಲಕ್ಷಕ್ಕೂ ಮಿಕ್ಕಿ ಜನರನ್ನು ವಧೆ ಮಾಡಲಾಯಿತು. ಇದರಿಂದಾಗಿ ತರುಣನಾದ ಸ್ಟೇಲಿನನು ತಲ್ಲಣಗೊಂಡನು. ಈ ಭಯಂಕರ ಅತ್ಯಾಚಾರವಲ್ಲದೆ, ಬೇರೆ ವಿಚಾರಗಳೇ ಆತನ ಅಂತರ್ಯದಲ್ಲಿ ಸುಳಿಯದಾದುವು.

ಊರನ್ನು ಬಿಟ್ಟು ಓಡಿಬಂದ ಅನೇಕ ನಿರಾಶ್ರಿತರನ್ನಾತನು ಕಂಡನು. ಅವರ ಕಷ್ಟಗಳನ್ನು ಕಣ್ಣಾರೆ ನೋಡಿದನು. ಅವರ ಕಥೆಗಳನ್ನು ಕಿವಿಯಾರೆ ಕೇಳಿದನು. ಅಂದಿನಿಂದಾತನು ಪೀಡಿತರ ಮಿತ್ರನೂ, ಪೀಡಕರ ಶತ್ರುವೂ ಆದನು.

ಸಮತಾವಾದಿಗಳ ಸಾಹಿತ್ಯವನ್ನಾತನು ಓದಲು ತೊಡಗಿದನು. ಆತನ ಕೋಣೆಯ ಟ್ರಂಕೊಂದು ದಿನ ಕಾರ್ಲ್ ಮಾರ್ಕ್ಸನ ಬರೆದ ಒಂದು ಪುಸ್ತಕವು ದೊರಕಿತು. ಧರ್ಮಬೋಧ...

(೩ನೇ ಪುಟವನ್ನು ನೋಡುವುದು.)

## ಹೊಟ್ಟೆನೋವು ಕೂಡಲೇ ಉಪಶಮನವಾಯಿತು

ಹೊಟ್ಟೆಗೆ ಸಂಬಂಧಪಟ್ಟ ... ಹೊಟ್ಟೆನೋವು ... ಅನುಭವಿಸಿದ ... ಈ ಸಂಕಟವನ್ನು ಅನುಭವಿಸ...

"ಹೊಟ್ಟೆನೋವಿನಿಂದ ... ವರ್ಷ ... ಹೊಟ್ಟೆ ... ಪ್ರಯತ್ನಿಸಿದೆನು ... ಉಪಯೋಗಿಸಿದರೂ ... ಹೊಟ್ಟೆಯ ... ನನ್ನ ಹೊಟ್ಟೆಯ ... ನನ್ನಲ್ಲಿ ನೋವೇ ಉಳಿಯಲಿಲ್ಲ."

... ಮೆಕ್‌ಲೀನ್ ಬ್ರೇಂಡ ಸ್ಟೊಮಕ್ ಪೌಡರನ್ನು ಉಪಯೋಗಿಸಿ ... ದೊರಕುತ್ತದೆ ... ನನ್ನ ಹೊಟ್ಟೆಯ ... ಈಗ ...

"ಎರಡನೇ ಬಾಟ್ಲಿ ಪ್ರಯೋಗವಾದ ... ನನ್ನ ಸಂಪೂರ್ಣ ... ನನ್ನ ಆರೋಗ್ಯವು ... "

ಹೊಟ್ಟೆನೋವಿನಿಂದ ಬಂದ ... ಮೆಕ್‌ಲೀನ್ ಬ್ರೇಂಡ ಸ್ಟೊಮಕ್ ಪೌಡರ್ ... ಈ ದಿನವೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ ...

Alex. C. Maclean

... ಸಹಿಯಿರುವುದರಿಂದ ... ಮೆಕ್‌ಲೀನ್ ... ಸಂಕೇತವಾಗಿದೆ.

... ಕೇವಲ ಪುಡಿಯ ರೂಪದಲ್ಲಿ ... ಟಾಬ್ಲೆಟ್ಸ್ ... ದೊರಕುತ್ತದೆ.

... ಕೆಮಿಸ್ಟರಲ್ಲಿ ... ದೊರಕುತ್ತದೆ.

ಬ್ಲೇಕ್ ... ಸರ್ವ ... (ಇಂಡಿಯಾ) ಲಿಮಿಟೆಡ್.

ಸ್ಟೇಂಡರ್ಡ ಬಿಲ್ಡಿಂಗ್ಸ್ ಹಾರ್ನ್ಬಿ ರೋಡ್ ...

S. No. 83.

# ಸ್ಟೇಲಿನ್

(೫ನೇ ಪುಟದಿಂದ ಮುಂದುವರಿಸಿದುದು.)

ಯನ್ನು ಕೊಡುತ್ತಿರುವ ವಿಶ್ವವಿದ್ಯಾಲಯದವರು ಒಡನೆ ಆತನನ್ನು ತಮ್ಮ ಶಾಲೆಯಿಂದ ಹೊರ ದೊಬ್ಬಿದರು. ಇದಕ್ಕಾಗಿ ಸ್ಟೇಲಿನನು ಮರುಗಲಿಲ್ಲ. ಧರ್ಮಗುರುವಾಗಬೇಕೆಂಬ ಇಚ್ಛೆಯೇ ಅವನಿಗಿದ್ದಿಲ್ಲ. ತಾನು ಇನ್ನು ಮುಂದೆ ಮಾಡಬೇಕಾದ ಕರ್ತವ್ಯವೇನೆಂದು ಆತನು ನಿಶ್ಚಯಿಸಿದನು. ಅದಕ್ಕಾಗಿ ತನ್ನ ಪ್ರಾಣವನ್ನಾದರೂ ಸಮರ್ಪಿಸಲು ಸಿದ್ಧನಾದನು.

ವಿಶ್ವವಿದ್ಯಾಲಯದಿಂದ ಹೊರಗೆ ಬಿದ್ದ ಆತನು, ಸಾಮಾಜಿಕ ಪ್ರಜಾಧಿಪತ್ಯ ಕೂಟವನ್ನು ಸೇರಿದನು. ಟಿಫ್ಲಿಸಿನಲ್ಲಿ, ನ್ಯಾಯಸಮ್ಮತವಲ್ಲವೆಂದು ಸಾರಲ್ಪಟ್ಟ, ಮಾರ್ಕಿಸ್ಟ್ ಪಕ್ಷವನ್ನಾತನು ೧೯೦೧ರಲ್ಲಿ ಸ್ಥಾಪಿಸಿದನು. ಅಂದಿನಿಂದ ೧೯೧೭ನೆಯ ಕೆರೆನ್ಸ್ಕಿ ವಿಪ್ಲವದ ತನಕ ಆತನು ಒಬ್ಬ ದಂಗೆಖೋರನಾಗಿ ಜೀವನವನ್ನು ನಡೆಸಿದನು. ಆರು ಬಾರಿ ಆತನು ಕೈದು ಮಾಡಲ್ಪಟ್ಟನು; ಸೆರೆಹಿಡಿಯಲ್ಪಟ್ಟನು ಮತ್ತು ಗಡಿಪಾರು ಮಾಡಲ್ಪಟ್ಟನು.

ಇವುಗಳಲ್ಲಿ ಐದು ಬಾರಿ ಆತನು ಬಂಧನದಿಂದ ತಲೆತಪ್ಪಿಸಿಕೊಂಡು ಹೊರಬಿದ್ದನು. ೧೯೧೩ರಲ್ಲಿ ಆರ್ಕ್‌ಟಿಕ್ ಪ್ರಾಂತದಲ್ಲಿ ಟುರುಕಾನ್ಸ್ಕಿ ಕ್ರೈ ಎಂಬಲ್ಲಿ ಸೆರೆಯಾಳಾಗಿದ್ದಾಗ ಮಾತ್ರ ಅಲ್ಲಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ೧೯೧೭ರ ತನಕ ಅಲ್ಲಿಯೇ ಇದ್ದನು.

ಜೋಸೆಫ್ ಜುಗಾಶಿವಿಲಿಯು ಎಂಟು ವರ್ಷಗಳನ್ನು ಸೆರೆಮನೆಯಲ್ಲಿ ಕಳೆದನು. ಆದರೆ ಆ ಸಮಯದಲ್ಲಿ ಆತನು ಅನುಭವಿಸಿದ ಕಷ್ಟಸಂಕಷ್ಟಗಳೂ, ಹಿಂಸೆಯೂ, ಸ್ಯಾಬೇರಿಯದಲ್ಲಿ ದೇಶಭ್ರಷ್ಟನಾಗಿದ್ದಾಗ ಸಹಿಸಿದ ನಿಷ್ಠುರ ಜೀವನವೂ, ಆತನ ಹುರುಪನ್ನು ಮಾತ್ರ ಕುಗಿಸಲಿಲ್ಲ. ಬದಲಾಗಿ ಅದು ಇನ್ನೂ ಹುರಿಗೊಂಡಿತು. ಉಕ್ಕಿನಂತಹ ದೇಹಪ್ರಕೃತಿಯು ಆತನದು. ಅದುದರಿಂದಲೇ ಲೆನಿನ್ನನು ಆತನನ್ನು ಸ್ಟೇಲೀನ್—ಉಕ್ಕಿನ ಮನುಷ್ಯನೆಂದು ಕರೆದನು. ಅದೇ ಹೆಸರು ಆತನಿಗೆ ಶಾಶ್ವತವಾಯಿತು.

---

## ನೋಟೀಸು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ.—

ಕಾಸರಗೋಡು ಕಸಬೆಯಲ್ಲಿರುವ ಕಂಪೋದಿ ಮೈದಿಂ ಕುಂಞಾ ಬ್ಯಾರಿಗಳ ಮಗ ಕಂಪೋಡಿ ಅಬ್ದುಲ್ಲ ಕುಂಞಾ ಎಂಬವರು ತಾರೀಕು 28-11 1937ರಲ್ಲು ಈ ಬ್ಯಾಂಕಿನಲ್ಲಿ ಈಡು ಇಟ್ಟ ಸುಮಾರು 6 ಆರು ಖಂಡಿ ಒಳ್ಳೇ ಒಣಗಿದ ಕಾಳು ಮೆಣಸು ಗೋಣಿ 25 ಇಪ್ಪತ್ತೈದನ್ನು ಅಸಲು ಬಡ್ಡಿ ಐವಜು ಕೊಟ್ಟು ಬಿಡಿಸಿಕೊಂಡು ಹೋಗಬೇಕಾಗಿ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದ್ದಲ್ಲಿ ಸದ್ರಿಯವನು ಮೃತಪಟ್ಟು ಹೋಗಿರುವದಾಗಿ ರಿಜಿಸ್ಟ್ರಿ ನೋಟೀಸು ವಾಪಾಸು ಬಂದಿರುವದರಿಂದ ಸದ್ರಿ ಮೆಣಸನ್ನು ಬರುವ ತಿಂಗಳ ತಾ 5ನೇ ಶನಿವಾರ ಬೆಳಿಗ್ಗೆ ಗಂಟೆ 10ಕ್ಕೆ ಸದ್ರಿ ಮೆಣಸಿನ ದಾಸ್ತಾನು ಕೋಣೆಯಾದ ಕಾಸರಗೋಡು ಪೋಸ್ಟ ಆಫೀಸ ಬಳಿಯಲ್ಲಿರುವ ಅಂಗಡಿಯಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವದು. ಹುಟ್ಟಿಬಂದ ಐವಜನಲ್ಲಿ ಬ್ಯಾಂಕಿಗೆ ಬರತಕ್ಕ ಅಸಲ ಬಡ್ಡಿ ಐವಜು ವಗೈರೆ ಕಳೆದು ಬಾಕಿ ಐವಜು ಸಲತಕ್ಕದಿದ್ದಲ್ಲಿ ಮೃತನ ನ್ಯಾಯವಾದ ವಾರಿಸ್ದಾರರಿಗೆ ಕೊಡಲ್ಪಡುವದಲ್ಲದೆ ಐವಜು ಬ್ಯಾಂಕಿಗೆ ಸಲ್ಲಬೇಕಾಗಿ ಬಂದಲ್ಲಿ ಸದ್ರಿ ಮೃತನ ಸ್ಥಿರಚರ ಸೊತ್ತುಗಳು ಜವಾಬುದಾರಿಯಾಗತಕ್ಕದ್ದು.

ಏಲಂ ಕರಿಯತಕ್ಕ [illegible] ಡಿಪೊಜಿಟ್ಟು ಇಡತಕ್ಕದ್ದು, ಮತ್ತು ಏಲಂ ಕಾಯಂ ಆದ ಕೂಡಲೇ ಬಾಕಿ ಐವಜು ಪಾವ್ತಿ ಮಾಡತಕ್ಕದ್ದು. ಆ ರೀತಿ ಐವಜು ಪಾವ್ತಿ ಮಾಡದೆ ಇದ್ದಲ್ಲಿ ಸದ್ರಿ ಕಾಳು ಮೆಣಸು ಆತನ ಜವಾಬುದಾರಿಯಿಂದ ಪುನಹಾ ಏಲಂ ಮಾಡಿ ಎರಡನೆ ಏಲಂನಲ್ಲಿ ಹುಟ್ಟಿ ಬಂದ ಐವಜು ಕಡಿಮೆ ಆದಲ್ಲಿ ಆತನು ನಷ್ಟಕ್ಕೆ ಜವಾಬ್ದಾರನಾಗತಕ್ಕದ್ದಲ್ಲದೆ ನಫೆಯ ಅಂಶಕ್ಕೆ ಜವಾಬ್ದಾನಾಗಲಿಕ್ಕಿಲ್ಲ.

ಬಾಕಿಯವರ ಡಿಪೊಜಿಟ್ಟು ಐವಜು ಏಲಂ ಆದ ಕೂಡಲೇ ವಾಪಾಸು ಮಾಡಲ್ಪಡುವದು ತಿಳಿದಿರುವದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ ಸಿಂಡಿಕೇಟ ಲಿಮಿಟೆಡ್.

Kasaragode, 1[illegible]-1-1938 (Sd) G. S Nayak, *Agent*

## ನೋಟೀಸು

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. No. 288/37

1 ದೇವಮ್ಮ, ಮೃತ ಚಾತಂಗಡಿ ರಾಮಯ್ಯನ ಹೆಂಡ್ತಿ, 2 ರಾಮದಾಸ, 1ನೇ ಅರ್ಜಿದಾರಳ ಮ್ಯಾನರ ಮಗ 3 ಸಿ ಪುಟ್ಟಪ್ಪಯ್ಯ ಸಿ ವೆಂಕಟ್ರಮಣನ ಮಗ ಮತ್ತು 1ನೇ ಅರ್ಜಿದಾರಳ ಅಳಿಯ

ಮ್ಯಾನರ 2ನೇ ಅರ್ಜಿದಾರನ ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು ಕಾಸರಗೋಡು ತಾಲೂಕ ಕಳನಾಡು ಗ್ರಾಮದ ಚಂದಗಿರಿ ಅರ್ಜಿದಾರರು

ಸದ್ರಿ ಅರ್ಜಿದಾರರ ಕಡೆ ಈ ಮೂಲಕ ತಿಳಿಸುವದೇನಂದರೆ.—

ಸದ್ರಿ 1ನೇ ಅರ್ಜಿದಾರಳ ಗಂಡ, 2ನೇ ಅರ್ಜಿದಾರನ ತಂದೆ 3ನೇ ಅರ್ಜಿದಾರ[illegible] ಮಾವ ಮೃತಪಟ್ಟ ಚಾತಂಗಡಿ Ch ರಾವ[illegible] ಯ್ಯಗೆ ಚಾತಂಗಡಿ ಯೈಡೆಡ್ ಶಾಲೆಯಿಂ[illegible] ತಾರೀಕು 31-8-1937ನೇ ವ್ಯಾದಿಗೆ ಸಿ[illegible] ತಕ್ಕ ಗ್ರೇಂಟಿನ ಐವಜು ರೂ 128/—ನ[illegible] ಬರಮಾಡಿಕೊಳ್ಳುವ ಬಗ್ಗೆ ಮೃತನ ವಾರಿಸ[illegible] ರರ ನೆಲೆಯಲಿ ತಮಗೆ ಸಕ್ಸೆಶನ್ ಸರ್ಟಿ[illegible] ಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖ[illegible] ಮಾಡಿದ ಮೇಲ್ಕಂಡ ಅರ್ಜಿಯು ತಾ 7 2 3[illegible] ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವ[illegible] ರಿಂಬ ಆ ಕುರಿತು ಆಕ್ಷೇಪವುಳ್ಳವರು ಸದ[illegible] ತಾರೀಕಿಗೆ ಕೋರ್ಟಿನ ಮುಂದೆ ಹಾಜರಾ[illegible] ಆಕ್ಷೇಪ ಹೇಳಬಹುದೆಂಬ ಸಂಗ್ತಿ ಈ ನೋ[illegible] ಕ ತಿಳಿಸೋಣಾಗಿಯದೆ

Kasaragod, 21 1 1938 (Sd) K. Kamalaksh[illegible] Rao, *Advocate for Petr[illegible]*

---


## WANTED

Wanted influential and energetic agents to book shares of a long standing and progressive Compan[y] recently registered. For particulars apply to Box No C/o THE SWADESHABHIMANI Mangalore.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

# ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಎಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ:—

ಷಾ ಮತ್ತು ಕಂಪೆನಿ,

ಗೆವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.



## ಇನೋಸ್ ಫ್ರುಟ್ ಸಾಲ್ಟ್

### ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ.

ನೀವು ಆರೋಗ್ಯದಲ್ಲಿರುವಿರಿ ಇನೋಸ್ ಫ್ರುಟ್ ಸೊಲ್ಟ್ 'Eno's Fruit Salt' ಇದು ಹೊಟ್ಟೆಯ ಅಸ್ವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ಮಲಬದ್ಧತೆ ತಲೆನೋವು ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ. ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು. ಇದೇ ಆರೋಗ್ಯವು. ಇನೋ 'ENO' ಇದಕ್ಕೆ ಸೌಮ್ಯ, ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿದೆ

ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ Eno's Fruit Salt' ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ

ಇನೋಸ್‌ಫ್ರುಟ್ ಸೋಲ್ಟಿನಲ್ಲಿ 'Eno's Fruit Salt ಒಳ್ಳೇ ಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರಿರುತ್ತವೆ

EX 14

**Eno's 'Fruit Salt'**

# ಅವಳಿಗಾಗಿ

ಬರೆದವಳು ಲೀಲಾವತಿ

ಲಲಿತ—ರಮೇಶ, ಪ್ರಪಂಚದಲ್ಲಿ ಯಾರನ್ನೂ ನಂಬಬಾರದು. ಇವರು ನಮ್ಮವರು ಎಂದು ಯಾರನ್ನೂ ತಿಳಿದುಕೊಳ್ಳಬಾರದು. ಪ್ರಸಂಗ ಬಂದರೆ ಎಲ್ಲರೂ ಕತ್ತಿಗೆ ಕತ್ತರಿ ಇಡತಕ್ಕವರೇ.

ರಮೇಶ—ಅನೇನೋ ಸರಿ. ಮನುಷ್ಯರಲ್ಲಿ ಸಾವಿರಕ್ಕೆ ನಂಬಿಗೆಗೆ ಯೋಗ್ಯನಾದ ಒಬ್ಬನನ್ನು ಕಾಣಿಸುವುದು ಕಷ್ಟ. ಅದರ ಅನುಭವದ ಸವಿ ನಿನಗೆ ಇಂದೇ ಆಗಿರಬಹುದು. ಆದರೆ ಈ ವಿಚಾರವನ್ನು ಶತಮಾನಗಳ ಮೊದಲೇ ಮಹಾ ವ್ಯಕ್ತಿಗಳು ಜನರಿಗೆ ಸಾರಿದ್ದಾರೆ. ಕತ್ತಲಲ್ಲಿ ಕಂಡ ಭಾವಿಗೆ ಹಗಲು ಬೀಳುವ ಹೆದ್ದರು ನಾವು. ಅನುಭವಕ್ಕೆ ಬಾರದೆ ಹೋದವುಗಳನ್ನು ಸತ್ಯವೆಂದು ಜಗತ್ತು ತಿಳಿಯುವುದಿಲ್ಲ.

ಲಲಿತ— ರಮೇಶ ನನ್ನ ಭವಿಷ್ಯವುಮಣ್ಣುಪಾಲಾಯಿತು. ಸತ್ಯವೆಂದು ತಿಳಿದುಬಿಟ್ಟೆ. ಈಗ ಹೊಳೆಯಿತು ಎಲ್ಲ ಢೋಂಗಿ ಎಂದು. ನನಗೆ ಗಂಟುಬಿದ್ದುದು ನಿಂದೆ, ಅಪಮಾನ

ರಮೇಶ—ಏನದು ಹೇಳಬಾರದೇ?

ಲಲಿತ—ಹೇಳಿ ನಾನು ಕಟ್ಟಿಕೊಳ್ಳತಕ್ಕ ಭಾಗ್ಯವಾದರೂ ಏನು?

ರಮೇಶ—ದುಃಖವನ್ನು ತಡೆದಿಡಬಾರದು. ಕಾಟವೆ ಕಡಿದು ತುಂಬಿದ ದುಃಖವನ್ನು ಹರಿಯಬಿಡಬೇಕು. ತಡೆದಿಡುವುದರಿಂದ ಅಪಾಯವೇ ಸಂಭವಿಸಿತು.

ಲಲಿತ—ಹೇಳುವುದರಿಂದ ಅದು ಕಡಮೆಯಾಗಲಾರದು

ರಮೇಶ—ನನಗೂ ತಿಳಿಸಲಾಗದ ಇದುವ ಚಿಂತೆ? ಅದಾವುದು ಲಲಿತ? ಸಾಧ್ಯವಿದ್ದರೆ ದೂರಮಾಡಬಾರದೇನು?

ಲಲಿತ—ಸಾಧ್ಯವಿರುತ್ತಿದ್ದರೆ ಹೇಳುತ್ತಿದ್ದೆ. ಇಲ್ಲವೆಂದೇ ಮೌನ ವ್ರತವನ್ನು ಹಿಡಿದಿದ್ದೇನೆ.

ರಮೇಶ—ಹೇಳು! ಮಾಡುವೆಯೋ ಇಲ್ಲವೋ ಆ ಮೇಲೆ ನೋಡುವೆಯಂತೆ

ಲಲಿತ—ಶೋಚನೀಯವಾಗಿದೆ

ರಮೇಶ—ಅದೇನು ಶೋಕದ ಮಾತ?

ಲಲಿತ—ಡೊಂಕಾದ ವರ್ತನೆಗೆ

ರಮೇಶ—ಯಾರ ವರ್ತನೆ ಡೊಂಕು?

ಲಲಿತ—ಗೊತ್ತಿಲ್ಲದವರಂತೇಕೆ ನಟಿಸುವುದು?

ರಮೇಶ—ನಿನ್ನ ಪ್ರತಿಯೊಂದು ಮಾತೂ ಬಿಡಿಸಲಾರದ ಒಗಟಾಗಿದೆ. ಹೇಳಬಾರದೇ ಬಿಡಿಸಿ ಬಿಡಿಸಿ

ಲಲಿತ—ವಂಚನೆ

ರಮೇಶ—ವಂಚನೆ? ಯಾರು ಮಾಡಿದರು ಲಲಿತ?

ಲಲಿತ—ಯಾರೆಂದರೆ? ನೀವು

ರಮೇಶ—ಯಾವುದರಲ್ಲಿ ನಾನು ವಂಚನೆ ಮಾಡಿದೆ?

ಲಲಿತ—ಬಹು ಚೆನ್ನಾಗಿದೆ. ನಟನೆ ರಂಗಭೂಮಿಕೆಯಲ್ಲಿ ಪ್ರತಿನಾಯಕನ ಭೂಮಿಕೆಗೆ ಹೇಳಿದವರು ನೀವು. ಬಂಡನ್ನು ತಿಂದು ಹೂವಿಂದ ಹೂವಿಗೆ ಹಾರುವ ತುಂಬಿಗೂ ನಿಮಗೂ ಭೇದವೇನು? ಮನಸ್ಸಿನಲ್ಲಿ ಕಾಲಿನ ಕಸಕ್ಕಿಂತಲೂ ಕಡೆಯಾಗಿ ಕಂಡುಕೊಂಡು ಹೊರಗಿನಿಂದ ಬಹುವಾಗಿ ಪ್ರೀತಿಸಿ, ಮುದ್ದಾಡಿ, ನನ್ನ ಭವಿಷ್ಯವನ್ನು—ನನಗೆ ಭವಿಷ್ಯವೇ ಇಲ್ಲದಂತೆ ಮಾಡಿದರೆ ನಂಬಿದರೆ ನಂಬಬೇಕು ನಿಮ್ಮಂತಹರನ್ನು

ರಮೇಶ—ಏನು ಕಟು ನುಡಿ ಲಲಿತ? ನನ್ನದು ವಂಚನೆ, ನಟನೆ, ಅಲ್ಲವೇ? ನಾನು ನಿನ್ನಲ್ಲಿಟ್ಟಿದ್ದ ಪ್ರೇಮದ ಭಾರವನ್ನು ತೂಗುವ ತಕ್ಕಡಿ ಇರುತ್ತಿದ್ದರೆ, ಆಳವನ್ನು ಅಳೆಯುವ ಕೋಲಿದ್ದರೆ, ಅಗಾಧತೆಯನ್ನು ಕಾಣುವ ಚೀಲವಿರುತ್ತಿದ್ದರೆ ತೋರಿಸುತಲಿದ್ದೆ. ಏನಾಗಬೇಕು ಹೇಳು? ಎದೆಯನ್ನೊಡೆದು ಈ 'ನಿಷ್ಕಲ್ಮಷ ಹೃದಯದ ಪರಿಚಯ ಮಾಡಿಕೊಡಬೇಕೆ? ಹೇಳು ಈ ವಿಷಗಾಳಿಯನ್ನಾರು ನಿನ್ನ ಕಿವಿಗೆ ಊದಿದರು?

ಲಲಿತ—ಎಲ್ಲವೂ ತಿಳಿದಿದೆ

ರಮೇಶ—ಏನೆಂದು?

ಲಲಿತ—ಮೋಸದ ಜಾಸೆಂದು.

ರಮೇಶ—ಸಿದ್ಧಾಂತವಿದಲ್ಲೋ?

ಲಲಿತ—ಏನೆಂದು?

ರಮೇಶ ವಂಚಕ ನಾನಲ್ಲ — ಇದ್ದರೆ ನೀನು ಎಂದು

ಲಲಿತ—ಹೇಗೆ ಹೇಳುವಿರಿ?

ರಮೇಶ—ನನ್ನನ್ನು ವಂಚಕನೆಂದು ಹೇಗೆ ಕರೆದೆ?

ಲಲಿತ—ಹಣಕ್ಕಾಗಿ, ಅಧಿಕಾರಕ್ಕಾಗಿ, ನೀವು ಹಾಗೆ ಮಾಡುವಿರಿ ಎಂದು ಕೇಳಿದೆ. ನೀವು ನನ್ನನ್ನು ಮದುವೆಯಾದರೆ, ಹೀನದೀನಳಾದ ನನ್ನ ಕೈ ಹಿಡಿದರೆ, ಉತ್ತಮ ಕುಲಸಂಭೂತೆಯಲ್ಲದ ನನ್ನ ಸಹವಾಸ ಬೆಳೆಸಿದರೆ, ಸಿಂಹಾಸನದಿಂದ ತಳ್ಳುವರೆಂದು ಮಂತ್ರಿಗಳು ತಿಳಿಸಿದ ರೀತಿ ಅರಸುತ್ವದ ಒಂದು ಪೊಳ್ಳು ಹೆಸರಿಗಾಗಿ, ನನ್ನೊಡನಿರಿಸಿದ್ದ ಸಂಬಂಧವನ್ನು ಕಡಿಯಲು ನೀವು ಮಾತುಕೊಟ್ಟಿರಂತೆ. ಅದು ಸತ್ಯವಾದರೆ ನನ್ನ ಮಾತಿನಲ್ಲಿ ಸತ್ಯಾಂಶವಿಲ್ಲವೇನು? ಮಹಾರಾಣಿಯನ್ನಾಗಿ ಮಾಡುವೆ ಎಂದು ಹೇಳಿದ ಮಾತು ಎಲ್ಲಿ ಉಳಿಯಿತು? ಎಲ್ಲ ವಂಚನೆಯಲ್ಲದೆ ಬೇರೆ ಏನು?

ರಮೇಶ—ಏನು ಮಾಡುವೆನೆಂದು ನೋಡು. ಈ ಸಿಂಹಾಸನ, ಈ ಪದವಿ, ಅರ್ಥವಿಲ್ಲದ ಅಧಿಕಾರದ ಲವಲೇಶವಿಲ್ಲದ ಅರಸುತ್ವ ಎಲ್ಲವನ್ನು ತೃಣಕ್ಕೆ ಸಮಗಣಿಸಿ, ನಿನ್ನನ್ನು ಕೈಹಿಡಿದು, ಮೈದಡವಿ, ಮುಂದೆ ನಡೆದರೆ ಮಾತನಾಡಿಸದಿದ್ದರೆ—ಈಗ ಬೇಡ— ನೋಡೋಣವಂತೆ

ಲಲಿತ—ಪೌರುಷದ ಮಾತು ಈಗಬೇಡ. ಆಗ ನೋಡೋಣ

ರಮೇಶ—ಪಟ್ಟವೇರುವುದಿದ್ದರೆ ನಿನ್ನೊಡನೆ ಇಲ್ಲವಾದರೆ ಬೇಡ

ಲಲಿತ—ಸಮಯ ಬಂದಾಗ ತಿಳಿಯುತ್ತೆ ಮನುಷ್ಯನ ಯೋಗ್ಯತೆ

ರಮೇಶ—ಈಗ ಹೋಗು — (ಲಲಿತ ಹೋಗುವಳು)

ಸಚಿವ—(ಪ್ರವೇಶಿಸಿ) ಹೀಗೋಸ್ಕರವೇ ಇದ್ದ ಲಲಿತಳ ಹುಚ್ಚು ಬಿಡದೆ ಜನರ ಆಶಯವನ್ನು ಮಣ್ಣುಗೂಡಿಸುವಿರಿ

ರಮೇಶ—ಮಾತು ನಡೆಸುವೆ. ಮನುಜನ ನುಡಿಯ ಮಾತಿನಲ್ಲಿ

ಸಚಿವ ಅವಳಿಗಾಗಿ ಎಲ್ಲವನ್ನೂ ತೊರೆಯಲು ನೀವು ಸಿದ್ಧರೋ?

ರಮೇಶ—ಮಾತು ನಡೆಸಲೇ ಬೇಕು.

ಸಚಿವ—ಜನಪ್ರಿಯರಾದ ನೀವು ಸಿಂಹಾಸನವೇರಿ ಜನರ ಆಶಯಗಳನ್ನೂ ಕಷ್ಟಗಳನ್ನೂ ದೂರಮಾಡುವಿರಿ ಎಂದು ತಿಳಿದ ನಮ್ಮ ಭಾವನೆಗಳೆಲ್ಲ ಗಾಳಿ ಗೋಪುರಗಳಾಗಿ ಬಿಟ್ಟವು

ರಮೇಶ—ನಾನು ಸಿಂಹಾಸನವೇರಬೇಕೋ, ಅವಳನ್ನು ರಾಣಿ ಎಂದು ಒಪ್ಪಿಕೊಳ್ಳಬೇಕು

ಸಚಿವ—ಅದು ಸಾಧ್ಯವಿಲ್ಲ. ವ್ಯಾಭಿಚಾರಿಣಿಯನ್ನು ರಾಣಿಯೆಂದು ನಾವು ತಿಳಿಯುವುದಿಲ್ಲ. ಹಾಗೆ ತಿಳಿಯಲು ನಮ್ಮಿಂದಾಗದು. ಅವಳು ನಿಮ್ಮ ಭೋಗದ ಹೆಣ್ಣಲ್ಲದೆ ಮತ್ತೇನು? ಅವಳನ್ನು ಪಟ್ಟವೇರಬಿಟ್ಟು, ದೊಡ್ಡ ಮನುಷ್ಯರ ಸ್ಪರ್ಶ ಮಾತ್ರದಿಂದ ಪಾವನವಾದ ಗದ್ದುಗೆಯನ್ನು ಕಲುಷಿತವನ್ನಾಗಿ ಮಾಡೆವು. ನಮ್ಮಿಂದ—

ರಮೇಶ—ಮಾತು ನಿಲ್ಲಿಸು, ನಾಲಿಗೆ ಹಾಗೆಲ್ಲ ಹುಚ್ಚು ಹೊಳೆಯಂತೆ ಹರಿಯದೆ.

ಸಚಿವ—ಸತ್ಯ, ನ್ಯಾಯ, ಧರ್ಮದ ಕೈ ಬಿಡುವೆನೇ ಹೊರತು, ತಲೆ ಬಾಗುವೆನೇ ಹೊರತು, ಮತ್ತಾವುದಕ್ಕೂ, ಮತ್ತಾರಿಗೂ ಮಣಿಯಲಾರೆ, ಬೆದರಲಾರೆ.

ರಮೇಶ—ನೆನಪಿರಲಿ, ನಾನು ರಾಜ. ನೀನು ಸೇವಕ..

ಸಚಿವ—ರಾಜ ರಾಜನಂತಿದ್ದರೆ, ಸೇವಕ ಸೇವಕನ ಹಾಗೆ, ಇಲ್ಲವಾದರೆ—

ರಮೇಶ—ಜಾಗ್ರತೆ ಬೇಕುಬೇಕೆಂದು ಕೆರಳಲು ಬರಬೇಡ

ಸಚಿವ—ಅವಳ ಮೋಹಪಾಶವನ್ನು ಹರಿದೊಗೆದು, ಸಿಂಹಾಸನವೇರಿ, ಜನರ ಗೋಳನ್ನು ದೂರಮಾಡಬೇಕು, ಅಥವಾ ರಾಜನಾಮವನ್ನು ಅಳಿಯಬೇಕು.

ರಮೇಶ—ಅಷ್ಟೇ ಅಲ್ಲವೇ ಬೇಕಾದ್ದು, ಅದಕ್ಕೆ ನನ್ನ ರಾಜನಾಮ ಅರ್ಥವಿಲ್ಲದ. ಸಚಿವರ ಕೈಯಲ್ಲಿ ಆಟದ ಬೊಂಬೆಯಂತಿರುವ ಕೆಲಸ ಅದು ನನಗೆ ಕಾಲತ್ರಯದಲ್ಲಿಯೂ ಬೇಡ. ದೇಶದ ಹಿತ, ಜನರ ಹಿತ, ಅದನ್ನು ಅರಸಾಗಿ ಮಾಡಬೇಕೆಂದಿಲ್ಲ. ಆಳಾಗಿದ್ದುಕೊಂಡು ಮಾಡಬಹುದು. ನಾನು ರಾಜನಲ್ಲ ದೀನರ ದರಿದ್ರರ ಅಡಿಯಾಳು ಬಡವರ ಸೇವೆ. ಬಡವನಿದ್ದುಕೊಂಡೇ ಬಡವರ ಸೇವೆ ಮಾಡಬೇಕು. (ಹೋಗುವನು)

ಸಚಿವ—ಎಲ್ಲ ತ್ಯಾಗ ಅವಳಿಗಾಗಿ. ಆ ಕುಲಗೆಟ್ಟ ಕುಲಟೆಗಾಗಿ.

---

# ದಿವಂಗತ ಶರತ್‌ಚಂದ್ರ ಚಟರ್ಜಿಯವರು

(ಇವರ ಚಿತ್ರವು ಮುಖಪತ್ರದಲ್ಲಿದೆ)

ಬಂಗಾಳದ ಸ್ರಖ್ಯಾತ ಸಾಹಿತಿಯೂ ಕಾದಂಬರಿಕಾರರೂ ಆದ ಡಾ। ಶರತ್‌ಚಂದ್ರ ಚಾಟರ್ಜಿಯವರು ಕಳೆದವಾರ ಕಲ್ಕತ್ತಾದಲ್ಲಿ ಮೃತರಾದರು. ನಮ್ಮ ಕನ್ನಡ ವಾಚಕರಲ್ಲಿ ಬಹು ಜನರು ಇವರ ಹೆಸರನ್ನು ಕೇಳಿರಲಾರರು, ಸಾಹಿತ್ಯದಲ್ಲಿ ಆಲೋಚನೆಯಿರುವ ಎಲ್ಲರಿಗೂ ಇವರ ಹೆಸರು ಪರಿಚಿತವಾದುದು. ಈಗ ಒಂದೆರಡು ವರ್ಷಗಳ ಹಿಂದೆ ನ್ಯೂ ಥಿಯೇಟರ್ಸ್ ಕಂಪನಿಯವರು ತಯಾರಿಸಿದ 'ದೇವದಾಸ್' ಎಂಬ ವಾಕ್‌ಚಲನ ಚಿತ್ರವು ಬೆಂಗಳೂರಿನಲ್ಲಿ ಅನೇಕ ವಾರಗಳ ಕಾಲ ಪ್ರದರ್ಶಿತವಾಯಿತು. ಆ ಚಿತ್ರವನ್ನು ನೋಡಿ ಆನಂದಿಸದವರೇ ಇಲ್ಲ. ಆ ಕತೆಯನ್ನು ರಚಿಸಿದವರು ಡಾ। ಶರತ್‌ಚಂದ್ರ ಚಾಟರ್ಜಿಯವರು. ಇದರಿಂದಲೇ ಅವರು ಮನುಷ್ಯ ಹೃದಯದ ಅಂತರಾಳದ ಆಳವನ್ನು ಎಷ್ಟು ದೂರ ಪ್ರವೇಶಿಸಿ, ಅದನ್ನು ಹೊರಗಡೆ ಲಲಿತವಾಗಿ ತೋರಗೆಡಹುತ್ತಿದ್ದರೆಂಬುದನ್ನು ತಿಳಿಯಬಹುದು.

ಶರತ್‌ಚಂದ್ರರು ವಿಶ್ವವಿದ್ಯಾಲಯದ ಪದವೀಧರರಲ್ಲ. ಆದರೆ ಜೀವನವನ್ನು ಆಳವಾಗಿ ಹೊಕ್ಕವರು. ಬಾಲ್ಯದಲ್ಲಿಯೇ ಇವರ ವಿದ್ಯಾಭ್ಯಾಸವು ಕೊನೆಗಂಡಿತು. ಅನೇಕ ವರುಷಗಳ ಕಾಲ ಇವರು ನಮ್ಮ ಸಮಾಜದ ಎಲ್ಲಾ ಅಂತಸ್ತಿನವರಲ್ಲಿಯೂ ಸೇರಿ ಅವರ ಸುಖದುಃಖಾನುಭವಗಳನ್ನು ಮನಗಂಡರು. ಐಶ್ವರ್ಯವಂತರು ಮತ್ತು ಮಧ್ಯವರ್ತಿ ಜನತೆಗಿಂತಲೂ, ನಮ್ಮ ಸಮಾಜದ ಕನಿಷ್ಟ ತರಗತಿಯಲ್ಲಿರುವ ಜನರೊಡನೆಯೇ ಇವರು ವಿಶೇಷವಾಗಿ ಬೆರೆಯುತ್ತಿದ್ದರು. ಇವರು ಬರೆದಿರುವ ಕಾದಂಬರಿಗಳಲ್ಲಿ ಆ ಜನರ ಹೃದಯವೇ ಕಂಡುಬರುತ್ತದೆ. ಇವರು ಬರೆದಿರತಕ್ಕ ಅನೇಕ ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಚಾರ ಪದ್ಧತಿಯನ್ನು ಬಿಟ್ಟು ಮನುಷ್ಯ ಹೃದಯವು ಬಂಧಿತವಾದರೆ ಯಾವ ರೀತಿಯಲ್ಲಿ ಪ್ರವಹಿಸುತ್ತದೆ ಎಂಬುದನ್ನು ತೋರಿಸಿದ್ದಾರೆ. ಇವರು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಆ ಪೈಕಿ ಚಾರಿತ್ರ್ಯಹೀನ, 'ಶ್ರೀಕಾಂತ' ಎಂಬಿವು ಅತ್ಯಂತ ಪ್ರಖ್ಯಾತವಾದವು. ಪುರುಷರ ಮತ್ತು ಸ್ತ್ರೀಯರ ಹೃದಯದಲ್ಲಿರುವ ಪ್ರೇಮವು ಯಾವ ಯಾವ ವಿಕಾರ ಹೊಂದುತ್ತದೆ, ಯಾವ ಸ್ಥಿತಿಯಲ್ಲಿ ಏನು ರೂಪ ಹೊಂದುತ್ತದೆ ಎಂಬುದನ್ನು ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ನಮ್ಮ ಕನ್ನಡದಲ್ಲಿ ಇವರ ಕಾದಂಬರಿಗಳ ಅನುವಾದವಾದರೂ ಪ್ರಕಟವಾಗಿದೆಯೋ ಇಲ್ಲವೋ ಎಂಬುದನ್ನು ನಾವು ಹೇಳಲಾರೆವು. ಹಿಂದಿ ಭಾಷೆಗೆ ಇವರ ಕಾದಂಬರಿಗಳು ಅನುವಾದ ಹೊಂದಿವೆ. ಶರತ್ ಸಾಹಿತ್ಯ ಎಂದು ಒಂದು ಗ್ರಂಥಮಾಲೆಯೇ ಹೊರಬಿದ್ದಿದೆ. ಲಂಡನ್ ಟೈಂಸ್ ಪತ್ರಿಕೆಯಲ್ಲಿ ಇವರ ಕಾದಂಬರಿಗಳನ್ನು ವಿಮರ್ಶಿಸುತ್ತಾ ಇವರನ್ನು ಬಂಗಾಳದ 'ಮೋಪಾಸಾಂ' ಎಂಬುದಾಗಿ ವರ್ಣಿಸಿದ್ದಾರೆ.

ಬಂಗಾಳದ ಆಧುನಿಕ ಸಾಹಿತ್ಯಕ್ಕೆ ಹೆಸರುವಾಸಿಯಾದವರು ಮೂರು ಜನ. ಮೊದಲನೆಯವರು ಬಂಕಿಂಚಂದ್ರ ಚಾಟರ್ಜಿ. ಇವರ ಗ್ರಂಥಗಳನ್ನು ದಿವಂಗತ ಬಿ. ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇವರು ಒಂದು ರೀತಿಯಾಗಿ ಸಂಪ್ರದಾಯ ಶರಣರು. ಧೈರ್ಯವಾಗಿ ಮನುಷ್ಯ ಹೃದಯವನ್ನು ಒಳಹೊಕ್ಕು ಅದರಲ್ಲಿ ಕಂಡುಬಂದ ಸತ್ಯವನ್ನು ಹೊರಗೆಡಹಲಾರದೆ ಹೋದರು. ಎರಡನೆಯವರು ಡಾ। ರವೀಂದ್ರನಾಥ ಟಾಗೂರರು. ಇವರ ಗ್ರಂಥಗಳಲ್ಲಿಯೂ ಕೆಲವು ಕನ್ನಡಕ್ಕೆ ಅನುವಾದವಾಗಿವೆ. ಡಾ। ರವೀಂದ್ರನಾಥ ಟಾಗೂರರ ನಂತರ ಶರತ್‌ಚಂದ್ರ ಚಾಟರ್ಜಿಯವರು ಬಂಗಾಳದ ಸಾಹಿತ್ಯ ಗಗನದಲ್ಲಿ ಉನ್ನತರಾಗಿ ವಿರಾಜಮಾನರಾಗಿದ್ದರು. ಇವರ ಗ್ರಂಥಗಳು ಬಂಗಾಳದಲ್ಲಿ ಮಾತ್ರವೇ ಅಲ್ಲದೆ ಉತ್ತರ ಭಾರತದಲ್ಲಿ ಬಹು ಸಂಖ್ಯಾತವಾಗಿ ಖರ್ಚಾಗುತ್ತಿವೆ. ಗ್ರಂಥಗಳನ್ನು ಬರೆದು ಮುದ್ರಿಸಿದವರಲ್ಲಿ ಶರತ್‌ಚಂದ್ರ ಚಾಟರ್ಜಿಯವರೊಬ್ಬರು. ಕಲ್ಕತ್ತಾ ವಿಶ್ವವಿದ್ಯಾನಿಲಯವು ಇವರ ಸಾಹಿತ್ಯ ಸೇವೆಗಾಗಿ ಡಾಕ್ಟರೇಟ್ ಬಿರುದನ್ನು ಕೂಡ ಕೊಟ್ಟಿತು.

ಡಾ। ಶರತ್‌ಚಂದ್ರ ಚಾಟರ್ಜಿಯವರ ವೈಯಕ್ತಿಕ ಜೀವನವು ಬಹಳ ಸ್ವಾರಸ್ಯವಾದುದು. ಇವರು ಆಜೀವ ಬ್ರಹ್ಮಚಾರಿಗಳು. ಇವರ ಕರುಣೆಯು ಅವರ್ಣನೀಯವಾದುದು. ಮೂಕಜಂತುಗಳೆಂದರೆ ಇವರಿಗೆ ಅಪಾರವಾದ ದಯೆ. ಇವರು ಒಂದು ನಾಯಿಯನ್ನು ಸಾಕಿಟ್ಟುಕೊಂಡಿದ್ದರು. ಒಂದು ದಿವಸ ಇವರನ್ನು ನೋಡಲು ಯಾರೋ ಒಬ್ಬರು ಬಂದರು. ನಾಯಿ ಬೊಗಳಿತು. ಅದನ್ನು ನೋಡಿ ಹೊಸಬರು ಹಿಂದಕ್ಕೆ ಸರಿದರು. ಚಾಟರ್ಜಿಯವರು ಈ ಹೊಸಬರನ್ನು ನೋಡಿ 'ಏನು? ನನ್ನ ನಾಯಿ ಕಚ್ಚಿತೇ? ಕಚ್ಚುವುದಕ್ಕಿಂತಲೂ ಹೆಚ್ಚಾಗಿ ಸರಿಯುತ್ತಿದ್ದೀರಿ. ನನ್ನ ನಾಯಿ ಅಂತಹುದಲ್ಲ. ನಿಮ್ಮೊಡನೆ ಅದು ಸ್ನೇಹ ಮಾಡಲು ನೀವು ಅರ್ಹರೋ ಅಲ್ಲವೋ ಎಂಬುದನ್ನು ಪರೀಕ್ಷಿಸಿತು' ಎಂಬುದಾಗಿ ಹೇಳಿದರು. ಬಡವರು ನಿರ್ಗತಿಕರು ಸಮಾಜದಿಂದ ತೊರೆಯಲ್ಪಟ್ಟವರು. ಇಂತಹವರನ್ನು ಕಂಡರೆ ಶರತ್‌ಚಂದ್ರ ಚಾಟರ್ಜಿಯವರು ಪಂಚಪ್ರಾಣ. ತಾವು ಸಂಪಾದಿಸಿದ ಹಣವನ್ನೆಲ್ಲ ಈ ಬಡವರ ಸೇವೆಗಾಗಿ ಇವರು ಖರ್ಚು ಮಾಡುತ್ತಿದ್ದರು. ಎಲ್ಲಕ್ಕಿಂತಲೂ ಹೆಚ್ಚು! ಡಾ। ಚಾಟರ್ಜಿಯವರು ಉನ್ನತ ದೇಶಾಭಿಮಾನಿಗಳು. ಇವರು ಕೇವಲ ಸಾಹಿತಿಯೇ ಅಲ್ಲ, ದೇಶ ಸ್ವಾತಂತ್ರ್ಯಕ್ಕೋಸ್ಕರವಾಗಿ ಕಾರಾಗೃಹವನ್ನು ಕೂಡ ಇವರು ಸೇರಿದರು. ಹೌರಾ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿ ಇವರು ಉನ್ನತ ಸೇವೆ ಮಾಡಿದ್ದಾರೆ. ಶರತ್‌ಚಂದ್ರರ ಸಾಹಿತ್ಯ ಜೀವನವೆಂದರೆ ದಯೆ, ಕರುಣೆ, ಮಾನವ ಪ್ರೇಮ, ದೀನಜನ ಸಹಾನುಭೂತಿ ಮತ್ತು ದೇಶಪ್ರೇಮ ಈ ವಿಶೇಷ ಗುಣಗಳು. ಇವರ ಸಾಹಿತ್ಯದಲ್ಲಿ ಅಡಕವಾಗಿವೆ. ಆದ್ದರಿಂದಲೇ ಡಾ। ರವೀಂದ್ರನಾಥ ಟಾಗೂರರು, ಇವರ ಮರಣಕ್ಕಾಗಿ ಬಹಳ ಪರಿತಪಿಸಿ, ಬಂಗಾಳದ ತೇಜೋಮಯ ಸೂರ್ಯನೊಬ್ಬನು ಅಸ್ತಂಗತನಾದನು ಎಂದಿದ್ದಾರೆ.

ಶರತ್‌ಚಂದ್ರ ಚಟರ್ಜಿಯವರ ಗ್ರಂಥಗಳನ್ನು ಕನ್ನಡಿಗರಿಗೆ ಅನುವಾದಗೊಳಿಸಲು ಕನ್ನಡ ಪ್ರೇಮಿಗಳಾರಾದರೂ ಮುಂದೆ ಬರುವರೆಂದು ನಾವು ಹಾರೈಸುತ್ತೇವೆ. ಬಂಕಿಂಚಂದ್ರರವರ ಕಾದಂಬರಿಗಳನ್ನು ಅನುವಾದ ಮಾಡಿ ಬಿ. ವೆಂಕಟಾಚಾರ್ಯರು ಹೇಗೆ ಕೀರ್ತಿಶಾಲಿಗಳಾದರೋ ಹಾಗೆಯೇ ಶರತ್‌ಚಂದ್ರ ಚಾಟರ್ಜಿಯವರ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡ ತರುಣರಾರಾದರೂ ಕೀರ್ತಿಶಾಲಿಗಳಾಗಬೇಕೆಂದು ನಾವು ಹಾರೈಸುತ್ತೇವೆ. ದಿವಂಗತ ಶರತ್‌ಚಂದ್ರ ಚಾಟರ್ಜಿಯವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

([illegible])

# ಹೊಸ ಮಾಲು ಇಂದೆ ಬಂದದ್ದು!




## ಕಣನ್ ದೇವನ್ ಚಹಾ ಪೊಟ್ಣಗಳು!

## ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents.—*

**The Kerala Tea Syndicate,**

**PONANI—(S. Malabar)**

---

**ಗುಣಬಾರದಿದ್ದರೆ — ಹಣ ವಾಪಾಸು!**

ಸುಪ್ರಸಿದ್ಧ ವೈದ್ಯರಾದ ಏಮ್. ಕೆ. ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದವಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದಯವಿಟ್ಟು ಸರ್ಟಿಫಿಕೇಟು — ಡಾ। ಡಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪೂರ ಇವರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪—೦—೦. ವಿ. ಪಿ. ಆಣೆ ೪.

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

---

ಗಿ೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ
ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ
ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ,
ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ
ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ
ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು
ಶರೀರಕ್ಕೆ ಆರೋಗ್ಯವನ್ನು ಕಾಂತಿಯನ್ನೂ ಉಂಟುಮಾಡುವುದು
ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ. 7—0—0.

## ಕಸ್ತೂರಿ ಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ 1—8—0.

**ಎಂ. ಗಣಪಯ್ಯ ಎಂಡ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್**
ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ. ಡಾಕ್ಟರ್ ಬಿ. ಹೆಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2 ... ಪೇಟೆ, ಕಾಸರಗೋಡು. 3 ಮೆಸರ್ಸ್ ಕಾಮತ್ ಎಂಡ್ ಕೋ. ಗಿರಿಗಾಂ ಮುಂಬಯಿ. 4 ಕೆ. ಶ್ರೀನಿವಾಸ ಪೈ ... ಕೀರ್ದಗ್ರಿ

---

**ಅತ್ಯಪೂರ್ವ ಸಂದರ್ಭ! ಅತ್ಯಲ್ಪ ಖರ್ಚು!**

# ಮಹೋದಯ ಯೋಗ

ಇದೇ ಬರುವ ತಾ **31-1-1938**ರಲ್ಲು ಮಹೋದಯ ಯೋಗ

ಮಹೋದಯ ಯೋಗವೆಂಬುದು ಅಗಿಂದಾಗ್ಗೆ ಬರಲಾರದ ಪರ್ವಕಾಲವು. ಈ ಪರ್ವಕಾಲದಲ್ಲಿ ಕಾಶೀ ಪ್ರಯಾಗವೇ ಮೊದಲಾದ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ತೀರ್ಥಯಾತ್ರೆ ಮಾಡಿ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವವರು, ಮಹಾ ಪವಿತ್ರವಾದ ನೇತ್ರಾವತಿ, ಕುಮಾರಧಾರಾ ನದಿಗಳ ಸಂಗಮಸ್ನಾನವಾದ ದಕ್ಷಿಣ ಕಾಶಿ ... ಉಪ್ಪಿನಂಗಡಿ ಕ್ಷೇತ್ರಕ್ಕೆ ಹೋಗಿ, ಪರ್ವಕಾಲದಲ್ಲಿ ಸಂಗಮಸ್ನಾನ ಮಾಡಿ ಪುಣ್ಯಾರ್ಜನೆಯನ್ನು ... ಶ್ರೀ ಸುಬ್ರಹ್ಮಣ್ಯ ಕ್ಷೇತ್ರವನ್ನು ... ಶ್ರೀ ಸುಬ್ರಹ್ಮಣ್ಯನ ... ಅತಿ ...

## ಇಂತಹ ಸುಸಂದರ್ಭವನ್ನು ಕಳಕೊಳ್ಳದಿರಿ!

ಯಾತ್ರಾರ್ಥಿಗಳ ಪ್ರಯಾಣದ ಬಗ್ಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದು.

***Joint Managers,***

| | |
|---|---|
| THE | THE |
| **Joint Booking Office,** | **Combined Booking Agency,** |
| **KODIALBAIL.** | **MANGALORE.** |

# ಮಂಗಳೂರು.

### ಶಾಲಾ ವರ್ಧಂತಿ

ಗವರ್ನಮೆಂಟ್ ಟ್ರಾಯಿಡ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿಯು ಕಳೆದ ಶನಿವಾರ ಶ್ರೀ ಶ್ರೀನಿವಾಸ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

### ನೋಟೀಸು

ಆಸ್ತಿಯ ಆಡವಿನ ಸಹಕಾರಿ ಬೇಂಕುಗಳು ದಕ್ಷಿಣ ಜಿಲ್ಲೆಯಲ್ಲಿ ಕೂಡ ಸ್ಥಾಪಿಸಬೇಕೆಂದು ಈ ಮುಂಚೆ ಚಳವಳ ಹೂಡಿತ್ತಷ್ಟೇ. ಇದರ ಫಲಿತಾಂಶವಾಗಿ ತಾತ್ಕಾಲಿಕ ಮಂಗಳೂರು ಮತ್ತು ಪುತ್ತೂರು ತಾಲೂಕುಗಳಿಗೆ ಸೇರಿಕೊಂಡು ಒಂದು ಬೇಂಕು ಸ್ಥಾಪಿಸಬೇಕಾಗಿ ಸರಕಾರದವರಿಂದ ಈಗಾಗಲೇ ಹುಕುಂ ಬಂದಿದೆ.

ಆದುದರಿಂದ ಅಂಥಾ ಬೇಂಕು ಸ್ಥಾಪಿಸುವ ಬಗ್ಗೆ ಕ್ರಮಪ್ರಕಾರ ಒಂದು ಅರ್ಜಿಯನ್ನು ಬೇಂಕಿನ ನಿಯಮಗಳ ಮುಖೂದೆ ಸಮೇತ ಕಳುಹಿಸಬೇಕಾದುದರಿಂದ ಆ ಬಗ್ಗೆ ಒಂದು ಸಭೆಯನ್ನು ಇದೇ ತಿಂಗಳ ತಾ ೩೧ನೇ ಶನಿವಾರ ಅಪರಾಹ್ನ ೫ ಘಂಟೆಗೆ ಪುತ್ತೂರು ಸಹಕಾರ ಕಟ್ಟಡದಲ್ಲಿ ಕೂಡಿಸುವುದೆಂತ ನಿಶ್ಚಯಿಸಿಯದೆ. ಈ ಬೇಂಕಿನ ಸ್ಥಾಪನೆಯಲ್ಲಿ ಹಿತಚಿಂತಕರೆಲ್ಲರೂ ಪುತ್ತೂರು ತಾಲೂಕಿನವರು ಸಭೆಗೆ ದಯಮಾಡಿ ಬರಬೇಕಾಗಿ ಪ್ರಾರ್ಥನೆ ಎಂಬುದಾಗಿ ಶ್ರೀ ಎಂ ಶಿವರಾಯರು ತಿಳಿಸುತ್ತಾರೆ.

### ಜಿಲ್ಲಾ ಹರಿಜನ ಮುಖಂಡರಲ್ಲಿ ವಿನಂತಿ

ಮದ್ರಾಸ್ ಸರಕಾರದ ಮಂತ್ರಿಮಂಡಲದಲ್ಲಿ ಹರಿಜನ ಪ್ರತಿನಿಧಿಯಾಗಿ ವ್ಯವಸಾಯ ಖಾತೆಯ ಮಾನ್ಯ ಮಂತ್ರಿ ಐ. ಮುನಿಸ್ವಾಮಿ ಪಿಳ್ಳೆಯವರು ಇದೇ ಬರುವ ತಿಂಗಳಲ್ಲಿ ಬರಲಿಕ್ಕಿರುವುದರಿಂದ ಈ ಜಿಲ್ಲೆಯ ಹರಿಜನ ಸಂಘಟನೊಂದನ್ನು ಕರೆಯುವವರೆ ನಿರ್ವಾಹ ಸಮಿತಿಯನ್ನು ನೇಮಕಮಾಡುವರೆ ಹಂಪನ್‌ಕಟ್ಟೆ ಪೆಲಿಕನ್ಸ್ ಬಿಲ್ಡಿಂಗಿನಲ್ಲಿ ಶ್ರೀಯುತ ಎಸ್. ಸಾಲಿನ್ಸರವರ 'ವೆಸ್ಟ್‌ಕೋಸ್ಟ್ ಅಡ್ವರ್ಟೈಸಿಂಗ್' ಕಂಪೆನಿಯ ಆಫೀಸಿನಲ್ಲಿ ಇದೇ ಬರುವ ತಿಂಗಳ ತಾ ೧—೨—೧೯೪೮ನೇ ಆದಿತ್ಯವಾರ ಸಾಯಂಕಾಲ ೩ ಘಂಟೆ ಒಕ್ಕೆ ಸರಿಯಾಗಿ ಜರಗಲಿರುವುದರಿಂದ ಹರಿಜನ ಮುಖಂಡರೆಲ್ಲರೂ ಹಾಜರಾಗಬೇಕಾಗಿ ವಿನಂತಿ.

### ಪಶ್ಚಿಮಕರಾವಳಿ ವಿದ್ಯಾರ್ಥಿ ಪರಿಷತ್ತು
### ಜಿಲ್ಲಾ ವಿದ್ಯಾರ್ಥಿ ಸಂಘಗಳಲ್ಲಿ ವಿನಂತಿ

ಪಶ್ಚಿಮಕರಾವಳಿ ವಿದ್ಯಾರ್ಥಿ ಪರಿಷತ್ತು ಬರುವ ಫೆಬ್ರುವರಿ ತಾರೀಕು ೫ ಮತ್ತು ೬ರಲ್ಲಿ ಮಂಗಳೂರಲ್ಲಿ ಡಾ ಲೋಹಿಯಾ ಶ್ರೀ ಅಶೋಕ ಮೆಹ್ತಾ ಇವರ ಅಧ್ಯಕ್ಷತೆಯಲ್ಲಿ ಜರಗಲಿದೆ. ಈ ಪರಿಷತ್ತಿನಲ್ಲಿ ಮಲಬಾರು ಕೊಡಗು ಮತ್ತು ದಕ್ಷಿಣ ಕನ್ನಡ ಈ ಜಿಲ್ಲೆಗಳ ವಿದ್ಯಾರ್ಥಿ ಬಂಧುಗಳು ಭಾಗವಹಿಸಲಿದ್ದಾರೆ. ನಾ ಕ್ರಾಂತಿ ಮತ್ತು ಪ್ರಾಥಮಿಕ ಸದಸ್ಯರುಗಳ ಸಂಘಗಳು ತಮ್ಮ ಪ್ರತಿನಿಧಿಗಳನ್ನೂ ಮತ್ತು ಸಾಧಾರಣ ಮೇಲ್ಪಟ್ಟ ಪ್ರಾಥಮಿಕ ಸದಸ್ಯರಿದ್ದಲ್ಲಿ ಪ್ರತಿ ೨೦ ಪ್ರಾಥಮಿಕ ಸದಸ್ಯರಿಗೆ ಒಬ್ಬರಂತೆ ಹೆಚ್ಚು ಪ್ರತಿನಿಧಿಗಳನ್ನು ಕಳುಹಿಸಬಹುದು. ಯಾವುದೇ ವಿದ್ಯಾರ್ಥಿ ಸಂಘಕ್ಕೆ ಸೇರದ ಕಾಲೇಜಿನಿಂದ ೫ ಮಂದಿ ಪ್ರತಿನಿಧಿಗಳನ್ನೂ ಕಾಲೇಜು ಅಲ್ಲದ ೧೦ ಮಂದಿ ಪ್ರತಿನಿಧಿಗಳನ್ನೂ ಪರಿಷತ್ತಿಗೆ ಕಳುಹಿಸುವ ಒಂದು ಸಂಘಕ್ಕೆ ಒಬ್ಬನನ್ನು ವಿಷಯ ನಿಯಾಮಕ ಮಂಡಳಿಯ ಸದಸ್ಯನನ್ನಾಗಿ ಕಳುಹಿಸುವ ಹಕ್ಕಿದೆ. ಮತ್ತು ಇಬ್ಬರಿಗೆ ಮೇಲ್ಪಡದ ಆಯಾಯ ಸಂಘದ ಕಾರ್ಯದರ್ಶಿಗಳು ವಿಷಯ ನಿಯಾಮಕ ಮಂಡಳಿಯಲ್ಲಿ ಭಾಗವಹಿಸಬಹುದು. ಜಾಹೀರು ಅಧಿವೇಶನದಲ್ಲಿ ಠರಾವುಗಳನ್ನು ತರಲಿಚ್ಚಿಸುವವರು ವಿಷಯ ನಿಯಾಮಕ ಮಂಡಳಿಯ ಸದಸ್ಯರಾಗಿರಲೇ ಬೇಕು. ಇಲ್ಲದಿದ್ದಲ್ಲಿ ವಿಷಯ ನಿಯಾಮಕ ಮಂಡಳಿಯ ಪರವಾಗಿ ಜಾಹೀರಾತು ಅಧಿವೇಶನದಲ್ಲಿ ಬರತಕ್ಕಂಥ ಠರಾವುಗಳು ಮುಗಿದನಂತರ ಸಮಯವಿದ್ದಲ್ಲಿ ಇನ್ನಿತರ ರಾವ್ಯಗಳಿಗೆ ಅವಕಾಶ ಕೊಡಲಾಗುವುದು. ಆದುದರಿಂದ ಠರಾವುಗಳನ್ನು ತರಲಿಚ್ಛಿಸುವವರು ವಿಷಯ ನಿಯಾಮಕ ಮಂಡಳಿಯ ಸದಸ್ಯರಾಗಿದ್ದು ಠರಾವಿನ ಪ್ರತಿಯೊಂದನ್ನು ಫೆಬ್ರುವರಿ ತಾರೀಕು ೩ರ ಒಳಗೆ 'ಸೆಕ್ರೆಟರಿ' ಮಂಗಳೂರು ಸ್ಟುಡೆಂಟ್ಸ್ ಯೂನಿಯನ್ ಆಫೀಸು, ಪೆಲಿಕನ್ಸ್ ಬಜಾರ್ ಇಲ್ಲಿಗೆ ತಲ್ಪುವಂತೆ ಕಳುಹಿಸಬೇಕು. ಅದು ಅಲ್ಲದೆ ಆಯಾಯ ಯೂನಿಯನ್ ಕಾರ್ಯದರ್ಶಿಗಳು ತಮ್ಮಲ್ಲಿಂದ ಪರಿಷತ್ತಿಗೆ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟ ಸದಸ್ಯರ ಪಟ್ಟಿಯೊಂದನ್ನು ಮತ್ತು ಪ್ರತಿನಿಧಿಗಳಿಂದ ಆರಿಸಲ್ಪಟ್ಟ ವಿಷಯ ನಿಯಾಮಕ ಮಂಡಳದ ಸದಸ್ಯರ ಹಾಗೂ ವಿಷಯ ನಿಯಾಮಕ ಮಂಡಳಿಯ ಸದಸ್ಯರಾಗಿ ಬರತಕ್ಕ ಕಾರ್ಯದರ್ಶಿಗಳ ಹೆಸರಿನ ಪಟ್ಟಿಯೊಂದನ್ನು ಫೆಬ್ರುವರಿ ತಾರೀಕು ೧ರ ಒಳಗೆ ನಮ್ಮ ಆಫೀಸಿಗೆ ಮುಟ್ಟುವಂತೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇವೆ.

ಈ ಪರಿಷತ್ತನ್ನು ಯಶಸ್ವಿಯಾಗಿ ಮಾಡುವ ಸಕಲ ಭಾರವು ಪುರಜನರ ಮೇಲೆ ಹೊಂದಿದೆ. ಆದುದರಿಂದ ಉದಾರಮನಸ್ಕರಾದ ಜಿಲ್ಲಾ ಗೃಹಸ್ಥರು ನಮ್ಮ ಮೇಲೆ ಕೃಪೆ ತೋರಿಸಿ, ಧನಸಹಾಯ ಮಾಡಿ ನಮ್ಮನ್ನು ಹರಿಸಬೇಕಾಗಿ ನಮ್ರಭಾವದಿಂದ ಈ ಮೂಲಕ ಕೇಳಿಕೊಳ್ಳುತ್ತೇವೆ ಎಂದು ವಿದ್ಯಾರ್ಥಿ ಸಂಘದ ಪ್ರಚಾರ ಕಾರ್ಯದರ್ಶಿ ಶ್ರೀ ಎ. ಎನ್. ರಾವ್ ಇವರು ತಿಳಿಸುತ್ತಾರೆ.

### ದ. ಕ. ಜಿಲ್ಲಾ ಮೋಟರ್ ವರ್ಕರ್ಸ್ ಯೂನಿಯನ್

ಕೊಡಿಯಾಲಬೈಲಲ್ಲಿರುವ ಯೂನಿಯನ್ ಆಫೀಸಿನಲ್ಲಿ ಜಿಲ್ಲಾ ಮೋಟರ್ ಕೆಲಸಗಾರರ ಮಹಾಸಭೆಯು ತಾ ೨೨-೧-೧೯೪೮ರಲ್ಲಿ ನವಯುಗ ಸಂಪಾದಕರಾದ ಶ್ರೀ ಕೆ. ಕೆ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಹೆಸರನ್ನು "ದಿ ಸೌತ್ ಕೆನರಾ ಮೋಟರ್ ಎಂಪ್ಲೋಯೀಸ್ ಯೂನಿಯನ್" ಎಂದು ಬದಲಿಸಿದಲಾಯಿತು. ಸಂಘದ ಹೊಸ ಘಟನಾವಳಿಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಸಧ್ಯದಲ್ಲೇ ನಡೆಯಲಿರುವ ಜಿಲ್ಲಾ ಮತ್ತು ಟೌನ್ ಕೊಂಗ್ರೆಸ್ ಚುನಾವಣೆಗಳಿಗೆ ಸಂಘದ ವತಿಯಿಂದ ಹುರಿಯಾಳುಗಳನ್ನು ನಿಲ್ಲಿಸುವುದೆಂದು ನಿರ್ಧರಿಸಲಾಯಿತು. ಸಂಘವನ್ನು ರಜಿಸ್ಟರ್ ಮಾಡುವ ಅಧಿಕಾರವನ್ನು ಸಂಘದ ಅಧಿಕಾರಿಗಳಿಗೇ ಕೊಡಲಾಯಿತು.

### ಭೂಮ್ಯಾಲಿಕರ ಸಂಘ

ಈ ಸಂಘದ ಸಭೆಯೊಂದು ಬೆಳ್ತಂಗಡಿಯಲ್ಲಿ ಜರಗಿ, ಮದ್ರಾಸು ಅಸೆಂಬ್ಲಿಯ ಈ ಸಲದ ಅಧಿವೇಶನದಲ್ಲಿ ಬರುವ ರೈತರ ಋಣವಿಮೋಚನಾ ಬಿಲ್ಲಿಗೆ ಕೆಲವು ತಿದ್ದುಪಡಿಗಳ ಕುರಿತು ಆಲೋಚಿಸಲಾಗಿ ಈ ಕೆಳಗಿನ ತಿದ್ದುಪಡಿಗಳಾಗಬೇಕೆಂದು ಕೇಳಿಕೊಳ್ಳಬೇಕೆಂದು ನಿರ್ಧರಿಸಲಾಯಿತು. ಈಗ ಸ್ತ್ರೀಯರಿಗೆ ಸಿಕ್ಕದ ಪಿನಾಯಿತಿಯು ತಂದೆ ತಾಯಿಗಳಿಲ್ಲದ ಮಕ್ಕಳಿಗೂ ಅಂಗಹೀನರಿಗೂ ಅನ್ವಯಿಸತಕ್ಕದ್ದು. ಧರ್ಮಸಂಸ್ಥೆಗಳಿಗೆ ಪಿನಾಯಿತಿ ದೊರೆಯಬೇಕು. ಸಹಕಾರ ಇತ್ಯಾದಿ ಬೇಂಕುಗಳಿಗೆ ವಿನಾಯಿತಿ ಕೊಡಬಾರದು. ೧-೧೦-೧೯೩೮ರ ವರೆಗೆ ಬಡ್ಡಿ ದರವು ಶೇಕಡಾ ೫ರ ಸಲ್ಲೆ ಆಗಬೇಕು ಇತ್ಯಾದಿ ಇತ್ಯಾದಿ.

### ಸ್ವತಂತ್ರ ದಿನಾಚರಣೆ

ಜಿಲ್ಲೆಯ ಮಂಗಳೂರು, ಉಡುಪಿ, ಕಾರ್ಕಳ ಇತ್ಯಾದಿ ಸ್ಥಳಗಳಲ್ಲಿ ಸ್ವತಂತ್ರ ದಿನಾಚರಣೆಯು ಯೋಗ್ಯ ರೀತಿಯಲ್ಲಿ ಆಚರಿಸಲ್ಪಟ್ಟು ಕಾಂಗ್ರೆಸ್ ಸಂದೇಶದ ಕುರಿತು ಭಾಷಣ ಇತ್ಯಾದಿಗಳಾದವು. ಹೊಸತಾಗಿ ರಚಿಸಿದ ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆಗೈಯಲಾಯಿತು.

### ಜಿಲ್ಲಾ ಮುಖೆಯಾಳಿ ಮೊಹಾಜನ ಸಂಘ

ಶ್ರೀಲಿನ ಸಂಘದ ವಾರ್ಷಿಕ ಸಭೆಯು ತಾ ೨೩ನೇ ಆದಿತ್ಯವಾರ ದಿವಸ ಜಿಲ್ಲಾ ಕಲೆಕ್ಟರರಾದ ಶ್ರೀ ಗೆಲ್ಲ ದಿಗಳವರ ಅಧ್ಯಕ್ಷತೆಯಲ್ಲಿ ಜರಗಿ ಮಲಬಾರಿನಿಂದ ಮಂಗಳೂರಿಗೆ ಉದ್ಯೋಗಕ್ಕಾಗಿ ಬರುವ ಮಾಲೆಯಾಳಿಗಳಿಗೆ ಸಹಾಯ ಒದಗಿಸಬೇಕಾಗಿಯೂ ಇನ್ನೂ ಕೆಲವು ವಿಚಾರಗಳ ಕುರಿತು ಆಲೋಚನೆಯು ನಡೆದ ಬಳಿಕ ಭಾಷಣ ಫಲಾಹಾರಗಳೊಡನೆ ಸಭೆಯು ಮುಕ್ತಾಯವಾಯಿತು.

### ಭಾಷಣ

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಲಾಜಿಕ್ ಲೆಕ್ಚರರಾದ ಶ್ರೀ ಅಪ್ಪಲಾಚಾರ್ಯರು ಮದ್ರಾಸು ವಿಶ್ವವಿದ್ಯಾಲಯದ ಎಕ್ಸ್‌ಟೆನ್ಶನ್ ಬೋರ್ಡಿನ ಪರವಾಗಿ, "ಶಿಶುವಿನ ಮನೋ ಬೆಳವಣಿಗೆಯ ಜಾಗ್ರತೆ" ಎಂಬ ವಿಷಯದ ಕುರಿತು ಸುರಸಯುಕ್ತವಾದ ಭಾಷಣವಿತ್ತರು.

### ಆತ್ಮಹತ್ಯೆ

ಪುತ್ತೂರು ತಾಲೂಕಿನ ಕಡಬೆಯ್ಯಾರು ವಿಟಗ್ರಾಮದ ಬಾಲಪ್ಪ ರೈ ಎಂಬವನು ಸ್ಥಳೀಯ ರೈಲ್ವೆ ಸ್ಟೇಶನಿನಲ್ಲಿ ಚೂರಿಯಿಂದ ತಿವಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನು.

ಈತನು ಒಂದು ಭಂಗಾರದ ಸರಪಣಿಯನ್ನು ಕದ್ದ ವಿಚಾರ ವಾರಂಟು ತಪ್ಪಿಸುವರೆ ಹೀಗೆ ಮಾಡಿದ್ದಾಗಿ ತಿಳಿದು ಬರುತ್ತದೆ.

### ಪೋಲೀಸ್ ಇನ್ಸ್‌ಪೆಕ್ಟರರ ಕೈದು

ಪುತ್ತೂರು ತಾಲೂಕು ಸುಳ್ಯ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದ ಶ್ರೀ ಮಹಾಲಿಂಗರವರನ್ನು ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು ಕೈದು ಮಾಡಿರುವರೆಂದು ವಾರ್ತೆಯಿದೆ. ಈ ಇನ್ಸ್‌ಪೆಕ್ಟರರು ಕ್ರಿಮಿನಲ್ ಪ್ರೋಸಿಜರನ್ನು ಉಲ್ಲಂಘಿಸಿದ್ದೇ ಇದಕ್ಕೆ ಕಾರಣವಂತೆ. ಶ್ರೀ ಮಹಾಲಿಂಗರವರು ಇತ್ತೀಚೆಗೆ ಹರಿಜನ ವರ್ಗದಿಂದ ಈ ಹುದ್ದೆಗೆ ನೇಮಿಸಲ್ಪಟ್ಟವರೆಂದು ತಿಳಿದುಬರುತ್ತದೆ.

# ತಾಲೂಕುಗಳಿಂದ ನ್ಯೂಸು ಮುಗಿದಿಲ್ಲ

### ಹೊಸಂಗಡಿ

ಹೊಸಂಗಡಿ ಘಾಟಿಯಲ್ಲಿ ಮೋಟಾರು ಲಾರಿಗಳ ಓಡಾಟವು ಹೆಚ್ಚಾಗಿದೆ. ಭರ್ತಿ ಸಾಮಾನು ತುಂಬಿದ ಲೋರಿಗಳು ಘಂಟೆಗೆ ೨೦ ಮೈಲಿಗೆ ಕಡಿಮೆಯಿಲ್ಲದೆ ಚಾಲು ಆಗುತ್ತಿವೆ. ಇವುಗಳ ವೇಗವನ್ನು ನೋಡಿದರೆ ಸಾಧಾರಣದವನು ರಸ್ತೆಯಲ್ಲಿ ನಿಲ್ಲಲು ಹೆದರಿಕೆಯಾಗುತ್ತದೆ. ಇಷ್ಟರಲ್ಲೇ ನಾನಾ ತರದ ಅಪಘಾತಗಳಾಗಿವೆ.

ಕಳೆದ ತಾ ೧೩ರ ರಾತ್ರಿ ಇಲ್ಲಿ ಕಾಡೆಕ್ಕೋಳಿಯೆಂಬಲ್ಲಿ (ಮೈಸೂರು ಪ್ರಾಂತ್ಯ ನಗರ ತಾಲೂಕು) ಒಂದು ಲೋರಿಯು ಒಂದು ಎತ್ತಿನ ಗಾಡಿಯ ಮೇಲೆ ಹಾದು ಗಾಡಿಯನ್ನು ಚೂರಾಗಿಸಿ ಎತ್ತಿನ ಕಾಲ್ಮುರಿದು ಗಾಡಿಯವನಿಗೂ ಬಹಳ ಪೆಟ್ಟಾಗಿದೆ.

### ಕಾರ್ಕಳ:

ಇಲ್ಲಿ ಕಾಂಗ್ರೆಸ್ ಕಮಿಟಿಗೆ ಕಾರ್ಕಳ ತಾಲೂಕಿನಿಂದ ಶ್ರೀಗಳಾದ ಜಿ ಗೋಪಾಲ ಪೈ, ಕೆ ಯಲ್. ಕುಡ್ವ, ಕೆ ಅಂತಯ್ಯ ಶೆಟ್ಟಿ, ಯಂ ಕೃಷ್ಣಯ್ಯ ಶೆಟ್ಟಿ, ಡಿ ಐ ಭಟ್ಟ, ಕೆ ಯಂ ಹೆಗಡೆ, ಪಿ ಪಿ ಉಪಾಧ್ಯಾಯ ಮತ್ತು ಕೆ ಬಾಬುರಾಯರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುತ್ತಾರೆ. ಒಂದು ಸ್ಥಾನಕ್ಕೆ ಮಾತ್ರ ಶ್ರೀಗಳಾದ ಎನ್ ಡಿ ಅಧಿಕಾರಿ ಮತ್ತು ಯಂ ಯಸ್ ಅಧಿಕಾರಿಯವರೊಳಗೆ ಸ್ಪರ್ಧೆ ನಡೆಯಲಿಕ್ಕಿದೆ.

ಸ್ಥಳೀಯ ಬೋರ್ಡ ಹೈಸ್ಕೂಲಿನಿಂದ ಈ ವರ್ಷ ಯಸ್ ಯಸ್ ಯಲ್ ಸಿ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳುಹಿಸಿ ಕೊಡುವದೆಂದು ನಿರ್ಧಾರವಾಗಿದೆ.

### ಬಂಟವಾಳ:

ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಪಾಣೆಮಂಗಳೂರು ಮತ್ತು ಬಪ್ಪನಾಡು ಸರ್ಕಲುಗಳಿಗೆ ಕ್ರಮವಾಗಿ ನೊಮಿನೇಶನ್ ಹಾಕಿದ ಶ್ರೀಗಳಾದ ಪಿ. ಕೇಶವ ಪೈಗಳು ಮತ್ತು ಮಾಧವ ಪೈಗಳು ತಮ್ಮ ನೊಮಿನೇಶನ್ ಪತ್ರಗಳನ್ನು ಹಿಂತೆಗೆದುದರಿಂದ ಆ ಎರಡು ಸರ್ಕಲುಗಳಿಗೂ ಕ್ರಮವಾಗಿ ಶ್ರೀಗಳಾದ ಇ ಉಪೇಂದ್ರ ಪೈಗಳು ಮತ್ತು ಕೆ ಅಪ್ಪಾಜಿರಾಯರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟರೆಂದು ಮಂಗಳೂರು ತಾಲೂಕಿನ ರಿಟರ್ನಿಂಗ್ ಆಫೀಸರರಾದ ಟಿ ನಾಗೇಂದ್ರನಾಥ ಬಾಳಿಗರು ತಿಳಿಸುತ್ತಾರೆ.

ಬಂಟವಾಳ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ತಾ ೨೦ರಲ್ಲಿ ಜರಗಿತು. ಈ ಸಮಯದಲ್ಲಿ ದಿವಂಗತ ಪಂಜೆ ಮಂಗೇಶರಾಯರ ಭಾವಚಿತ್ರ ಅನಾವರಣ ಕಾರ್ಯವು ವಿಜೃಂಭಣೆಯಿಂದ ಜರಗಿತು.

ಇಲ್ಲಿಯ ಬೋರ್ಡ ಹುಡುಗರ ಶಾಲೆಯ ಮಾಸ್ಟರರ ಕೊರತೆಯಿಂದ ಅತಿ ಕೆಟ್ಟ ಸ್ಥಿತಿಯಲ್ಲಿದೆ. ಈ ಮಾಡಿನ ಕೆಳಗೆ ಸಮಾರು ೧೦೦ ಮಂದಿ ಮಕ್ಕಳು ಕಲಿಯುವ ಕೋಣೆಯಲ್ಲಿ ಅನೇಕ ಹೆಂಚುಗಳು ಒಡೆದು ಹೋಗಿ ಅಪಾಯಕಾರಿ ಸ್ಥಿತಿಯಲ್ಲಿದ್ದು ಈ ಮಾಡಿನಿಂದ ಈ ಮಕ್ಕಳಿಗೆ ಅಪಾಯ ಉಂಟಾಗಬಹುದೆಂಬ ಹೆದರಿಕೆಯು ಮಕ್ಕಳ ಹೆತ್ತವರಲ್ಲಿ ಉಂಟಾಗಿದೆ. ಆದುದರಿಂದ ಜಿಲ್ಲಾ ಕಲೆಕ್ಟರ್ ದೊರೆಗಳವರು ಬೋರ್ಡಿಗೆ ಇದನ್ನು ಕೂಡಲೇ ದುರಸ್ತಿಮಾಡಲಿಕ್ಕೆ ಒತ್ತಾಯಬೇಕಾಗಿ ಮಕ್ಕಳ ಹೆತ್ತವರ ವಿನಂತಿ.

### ಉಡುಪಿ:

ತಾ ೨೬ನೇ ಸಾಯಂಕಾಲ ಸುಮಾರು ೬ ತಾಸಿಗೆ ಶ್ರೀ ಪಿ ಮಂಜುನಾಥ ನಾಯಕರ ಅಧ್ಯಕ್ಷತೆಯಲ್ಲಿ ಪುರಜನರ ಮಹಾಸಭೆಯು ಗಾಂಧಿಮೈದಾನಿನ ಬಂಡೆಯ ಮೇಲೆ ಸೇರಿತ. ಸ್ವಾತಂತ್ರ್ಯ ದಿನಾಚರಣೆಯೇ ಉದ್ದೇಶವಾಗಿತ್ತು. ಶ್ರೀ ಕೆ ಕೆ ಶೆಟ್ಟರು ಚಿಕ್ಕ ಭಾಷಣದಿಂದ ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆಯ ಪೂರ್ವ ಇತಿಹಾಸವನ್ನು ವಿವರಿಸಿ ಪ್ರತಿಜ್ಞೆಯ ಮರ್ಮವನ್ನು ತಿಳಿಯಗೊಳಿಸಿದರು. ಶ್ರೀ ಯು ನಾಗಪ್ಪ ಕಮ್ತಿ ಅವರ ಸಂಬಂಧ ಚಿಕ್ಕ ಭಾಷಣವನ್ನು ಮಾಡಿದ ನಂತರ ಅಧ್ಯಕ್ಷರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಓದಿ ಹೇಳಿ ಒಂದೇ ಮಾತರಂ ಹಾಡಿ ಸಭೆಯು ಮುಕ್ತಾಯವಾಯಿತು.

ಉಡುಪಿ ತಾಲೂಕಿನೊಳಗಣ ದ್ವ ಕ ಜಿ. ಕಾಂ ಕಮಿಟಿಯ ಪ್ರತಿನಿಧಿಗಳ ಚುನಾವಣೆ ಪ್ರತಿಸ್ಪರ್ಧೆಯುಳ್ಳದ್ದು, ಕೆಲ ನಾಮಪತ್ರಗಳು ಪರಿಶೋಧನೆಗೆ ಮುಂಚಿತವಾಗಿ ಹಿಂತೆಗೆಯಲ್ಪಟ್ಟು, ೨೦ ಸ್ಥಾನಗಳಿಗೆ ೩೦ ನಾಮಪತ್ರಗಳಿದ್ದು, ಈ ಕೆಳಗಿನವರು ಆರಿಸಲ್ಪಟ್ಟಿರುತ್ತಾರೆ. ಶ್ರೀಮತಿ ಕೆ. ಮನೋರಮಾ ಬಾಯಿ, ಶ್ರೀಗಳಾದ ಯು ಸುಂದರ ಕಮ್ತಿ, ಎಮ್ ವಾಮನ ಭಟ್ಟ, ಟಿ ವಾಸುದೇವ ಶೆಣೈ, ಕೆ. ಕೆ. ಶೆಟ್ಟಿ, ಎ ಆನಂದ ಹೆಗಡೆ, ಎ ಸಂಜೀವ ಹೆಗ್ಡೆ, ಎ ಕೃಷ್ಣಯ್ಯ ಹೆಗ್ಡೆ, ಕೆ ರಘುನಾಥ ಪ್ರಭು, ಟಿ, ಜಗಜ್ಜೀವನದಾಸ ಶೆಟ್ಟಿ, ಎಸ್. ಮಾರ್ಟಿಸ್, ಆರ್. ಎಮ್. ಅಂದ್ರಾದೆ, ಬಿ. ಎಲ್. ರಾವ್, ಕೆ ಗಣಪಯ್ಯ ಶೆಟ್ಟಿ, ಕೆ ಸಂಜೀವ ಬಲ್ಲಾಳ ಮತ್ತು ಬಿ. ನಾರಾಯಣ ಹೆಗ್ಡೆ.

### ಮದ್ರಾಸು ಅಸೆಂಬ್ಲಿ ಅಧಿವೇಶನ

ನಿನ್ನೆ ತಾ. ೨೬ರಿಂದ ಪ್ರಾರಂಭವಾದ ... ಪಂಡಿತ ... ಶರಚ್ಚಂದ್ರ ಭೋಸ, ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರುರವರ ಮಾತೋಶ್ರೀಯವರಾದ ಶ್ರೀಮತಿ ಸ್ವರೂಪರಾಣಿ ನೆಹರು, ಕರ್ನಾಟಕ ರಾಷ್ಟ್ರೀಯ ಮುಂದಾಳುಗಳಾಗಿದ್ದ ಶ್ರೀ ಕಾರ್ನಾಡು ಸದಾಶಿವರಾಯರು ಮತ್ತು ಪ್ರಸಿದ್ಧ ಸಾಹಿತಿಗಳಾದ ಪಂಜೆ ಮಂಗೇಶರಾಯರು ನಿಧನ ಹೊಂದಿದಕ್ಕಾಗಿ ಈ ಪರಿಷತ್ತು ತನ್ನ ದುಃಖವನ್ನು ವ್ಯಕ್ತಮಾಡುತ್ತದೆ.

**ನೀರಸಾರಿಗೆ:—**

ನೀರಸಾರಿಗೆಯ ಸಂಬಂಧವಾಗಿ ರೈತರಿಂದ ತೆಗೆದುಕೊಂಡ ಹಣವು ಅದೇ ಕಾರ್ಯಕ್ಕಾಗಿ ವೆಚ್ಚಮಾಡಲ್ಪಡಬೇಕೆಂದು ನಿಯಮವಿದ್ದರೂ ಹಾಗೆ ಬಹುತರವಾಗಿ ಆಗಿರುವದೇ ಇಲ್ಲ. ಆದ್ದರಿಂದ ಇದುವರೆಗೆ ಈ ವಿಷಯವಾಗಿ ಕೂಡಿಸಲ್ಪಟ್ಟ ಮತ್ತು ಇನ್ನು ಮುಂದೆ ಕೂಡಿಸಲ್ಪಡುವ ಹಣವು ನೀರಸಾರಿಗೆಯ ವ್ಯವಸ್ಥೆಗಾಗಿಯೇ ವೆಚ್ಚವಾಗುವಂತೆ ಏರ್ಪಾಡು ಮಾಡಬೇಕು ಮತ್ತು ಕೆರೆಕಟ್ಟೆಗಳು ಹಾಗಿದ್ದರೂ ನೀರಸಾರಿಗೆ ಹಣವನ್ನು ತೆಗೆದುಕೊಳ್ಳುತ್ತಿರುವ ಭಾಗದಲ್ಲಿಯು ಕೆರೆ ಕಾಲುವೆಗಳು ದುರಸ್ತಿ ಆಗುವ ವರೆಗೆ ನೀರುಸಾರಿಗೆಯನ್ನು ವಸೂಲು ಮಾಡುವದನ್ನು ಸರಕಾರದವರು ನಿಲ್ಲಿಸಬೇಕೆಂದು ಈ ಪರಿಷತ್ತು ಅಭಿಪ್ರಾಯ ಪಡುತ್ತದೆ.

**ಸರ್ವೆ ಸೆಟ್ಲ್‌ಮೆಂಟ್:**

ಜಮೀನುಗಳ ಸರ್ವೆ ಸೆಟ್ಲುಮೆಂಟು ಆಗಿ ಬಹಳ ವರುಷಗಳಾಗಿದ್ದು ಆ ಸೆಟ್ಲಮೆಂಟಿನ ಪಟ್ಟಿಯಲ್ಲಿಯೇ ಅನೇಕ ದೋಷಗಳಿವೆ. ಆನಂತರದ ಪರಿಸ್ಥಿತಿಯಲ್ಲಿ ಸಹ ಅನೇಕ ಸ್ಥಿತ್ಯಂತರಗಳಾಗಿವೆ. ಆದ್ದರಿಂದ ಪುನಹ ಈ ಸರ್ವೆ ಕಾರ್ಯವನ್ನು ಬೇಗನೆ ಕೈಕೊಳ್ಳಬೇಕಲ್ಲದೆ ಆಯಾ ಭಾಗದ ಸ್ಥಿತಿಗತಿಗಳನ್ನು ಲಕ್ಷ್ಯಕ್ಕೆ ತಂದು ಅಲ್ಲಿಯ ತೆಂಗೆಯ ಪ್ರಮಾಣವನ್ನು ಗೊತ್ತು ಮಾಡಬೇಕೆಂದು ಈ ಪರಿಷತ್ತು ಸರಕಾರಕ್ಕೆ ಸೂಚಿಸುತ್ತದೆ.

**ನೀಲಾವರಿ:**

ಸರಕಾರದವರು ಕರ್ನಾಟಕದ ನೀರಾವರಿ ಯೋಜನೆಯ ಕಡೆಗೆ ಬಹಳ ದುರ್ಲಕ್ಷ್ಯ ಮಾಡಿದ್ದು ಮತ್ತು ಅನ್ಯ ಪ್ರಾಂತಗಳಲ್ಲಿ ಇಂಥ ಯೋಜನೆಗಳನ್ನು ಕೈಕೊಂಡಿರುವುದು ಕಂಡುಬರುತ್ತವೆ. ಆದ್ದರಿಂದ ಸರಕಾರದವರು ಕರ್ನಾಟಕದಲ್ಲೂ ಇಂಥ ಯೋಜನೆಗಳನ್ನು ಪ್ರಾರಂಭಿಸಬೇಕಾಗಿ ಈ ಪರಿಷತ್ತು ಭಿನ್ನವಿಸುತ್ತದೆ.

**೪ ಕರ್ನಾಟಕ ಏಕೀಕರಣ**

ಬ್ರಿಟಿಷ ಪ್ರದೇಶದಲ್ಲಿದ್ದ ಕರ್ನಾಟಕ ಏಕೀಕರಣ ಪ್ರಶ್ನೆಯು ಮಾಂಟೆಗೋ ಚೆಮ್ಸ್‌ಫರ್ಡ ಸುಧಾರಣೆಗೆ ಬರುವುದಿದ್ದ ಕಾಲದಿಂದ ಪ್ರಾರಂಭವಾಗಿ ... ಅಸೆಂಬ್ಲಿಯ ಪಕ್ಷದ ಸಭೆಯವರು ಈ ಗೊತ್ತುವಳಿಗೆ ಬೆಂಬಲಿಸಬೇಕೆಂದು ಈ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ. ಅದರಂತೆಯೇ ಮದ್ರಾಸ್ ಅಸೆಂಬ್ಲಿಯಲ್ಲಿ ಆಂಧ್ರ ಏಕೀಕರಣದ ಪ್ರಶ್ನೆಯು ಎದ್ದಿದ್ದು ಅದರೊಡನೆಯೇ ಕರ್ನಾಟಕ ಪ್ರಾಂತ ರಚನೆಯೂ ಆಗಬೇಕೆನ್ನುವ ಗೊತ್ತುವಳಿಯು ಒಂದು ಮಾಡುವಂತೆ ಮದ್ರಾಸ ಕೊಂಗ್ರೆಸ್ ಸಭಾಸದರೆಲ್ಲರೂ (ಶಾಸನಸಭೆಯಲ್ಲಿದ್ದ) ಪ್ರಯತ್ನಿಸಬೇಕೆಂದು ಅವರನ್ನು ಈ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ.

೪ ಆಂಧ್ರ ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರು ಬಳ್ಳಾರಿ ಪಟ್ಟಣವನ್ನು ಸಹ ಆಂಧ್ರಕ್ಕೆ ಸೇರಿಸಬೇಕೆಂದು ಮಾಡಿದ ಗೊತ್ತುವಳಿಯನ್ನು, ಅದರಂತೆ ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮಂಗಳೂರು ಜಿಲ್ಲೆಯ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಲು ನಡೆಸಿರುವ ಪ್ರಯತ್ನವನ್ನೂ ಈ ಪರಿಷತ್ತು ತೀವ್ರವಾಗಿ ಖಂಡಿಸುತ್ತದೆ. ಈ ಆಕ್ರಮಣ ವೃತ್ತಿಯನ್ನು ತಡೆಯುವುದಕ್ಕೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಒಂದು ಉಪಸಮಿತಿಯನ್ನು ಮಾಡಿ ಪ್ರಮುಖರ ಕೊಡಗನ್ನು ಒಳಗೊಂಡ ಗಡಿನಾಡುಗಳಲ್ಲಿ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂದು ಈ ಪರಿಷತ್ತು ಸೂಚಿಸುತ್ತದೆ. ಮತ್ತು ಈ ಕಾರ್ಯಕ್ಕಾಗಿ ಕರ್ನಾಟಕಸ್ಥರೆಲ್ಲರೂ ಧನಸಹಾಯ ಮಾಡಬೇಕೆಂದು ಈ ಪರಿಷತ್ತು ಬಿನ್ನವಿಸಿಕೊಳ್ಳುತ್ತದೆ.

**೫ ಔದ್ಯೋಗಿಕ ಕಾರ್ಯಗಳು:**

ನಮ್ಮ ಮುಂಬಾಯಿ ಪ್ರಾಂತದ ಕರ್ನಾಟಕ ಭಾಗದಲ್ಲಿ ಔದ್ಯೋಗಿಕ ಶಿಕ್ಷಣದ ಅವಶ್ಯಕತೆಯು ಬಹಳವಿದ್ದು ಅದಕ್ಕಾಗಿ ಔದ್ಯೋಗಿಕ ಶಾಲೆಗಳನ್ನು ಸರಕಾರದವರು ಬೇಗನೇ ಸ್ಥಾಪಿಸಬೇಕೆಂದು ಈ ಪರಿಷತ್ತು ಸರಕಾರಕ್ಕೆ ಒತ್ತಾಯದಿಂದ ಸೂಚಿಸುತ್ತದೆ.

— ಮುಂದುವರಿಯುವುದು —

# ಹೊಸ ವಾ[illegible]

ಚೀನ [illegible] ಸಂಧರಿಂದ [illegible] ಬಂದಿಂದು ವಾರ್ತೆ.

— ಅಸ್ಸಾಮಿನ ಶಿಲ್ಲಾಂಗಿನಲ್ಲಿ ಭಯಂಕರ ಬೆಂಕಿಯು ಉಂಟಾಗಿ, 40 ಅಂಗಡಿಗಳು ಸುಟ್ಟುಹೋಗಿ, ಸಾಧಾರಣ ನಾಲ್ಕು ಲಕ್ಷದ ನಷ್ಟವು ಸಂಭವಿಸಿರುತ್ತದೆ.

— ಬಂಗಾಳ ಆಧಿಪತ್ಯದ ಅಂಡಮಾನದಲ್ಲಿರುವ 109 ಟೆರರಿಷ್ಟ ಕೈದಿಗಳನ್ನು ಹಿಂತರಬೇಕಾಗಿ ಇಂಡಿಯಾ ಸರಕಾರದ ಅಪ್ಪಣೆಯಾಗಿರುತ್ತದೆ.

---

# ಸ್ವದೇಶಾಭಿಮಾನಿ.

ತಾ. ೨೮ ನೇ ಶುಕ್ರವಾರ ಜನವರಿ ೧೯೩೮

## ಲೋಥಿಯನ್ ಯಾತ್ರಾಫಲ

ಅಲ್ಲವೆಂದೇ ಹೇಳಿದ್ದರಾದರೂ ಲೋಥಿಯನರ ಭಾರತ ಸಂಚಾರವೂ ಮುಖಂಡರೊಡನೆ ನಡೆದ ಸಂಭಾಷಣೆಗಳೂ ಬ್ರಿಟಿಷ ಸರಕಾರಕ್ಕೆ ಫೆಡರೇಶನ್ ನಿರ್ಮಾಣಕ್ಕೊಂದು ಮುಹೂರ್ತ ನಿರ್ಣಯ ಮಾಡುವ ಸಲಹೆ ಕೊಡುವುದಕ್ಕಾಗಿಯೇ ಎಂದು ಅವರ ವಿದಾಯಿ ಕಾಲದಲ್ಲಿ ಮಾಡಿರುವ ಭಾಷಣದಿಂದ ಗೊತ್ತಾಗುವುದು 'ಸಹಯೋಗಿರೋಣ, ಜಗಳಗಳು ಬೇಡ' ಎಂಬ ಭಾವನಾಮಯವಾದ ಜೀವನವೇ ಈ ಸದ್ಗೃಹಸ್ಥರ ಅಭ್ಯಾಸವಾದುದರಿಂದ ಶಾಂತವಾಗಿ ಸಮಾಧಾನವಾಗಿ ಇದ್ದುದನ್ನು ಪರ್ಯಾಲೋಚಿಸಿ, ಅದರಲ್ಲಿನ ಕೊರತೆಗಳನ್ನು ಪರಿಭಾವಿಸದೆ ಅಥವಾ ಸುಮ್ಮನೆ ಉಡಾಯಿಸಿ, 'ಚೆನ್ನಾಗಿದೆಯಲ್ಲ, ಅಂಗೀಕರಿಸಿ ನೋಡಿದರೇ ತಿಳಿದು ಬೇಕಾದಂತೆ ಮುಂದೆ ತಿದ್ದಿಕೊಳ್ಳಬಹುದಲ್ಲ' ಎಂದೇ ಅವರು ಎನ್ನುವಂತಾಗಿದೆ

ಆದರೆ, ಇವರನ್ನು ಸತ್ಯವಾಗಿಯೂ ಗೌರವಿಸಬೇಕಾಗಿರುವಂತೆ, ಇವರೆನ್ನುವ ಅಭಿಪ್ರಾಯಗಳನ್ನೂ ಗೌರವಿಸುವೆವಾದಲ್ಲಿ ಭೂತವನ್ನೆ ಪರಮಾತ್ಮನೆಂದು ಆರಾಧಿಸಿದವರ ಹಾಗೆ ಫೆಡರೇಶನ್ ತತ್ವದ ಪ್ರತಿಷ್ಠೆಗೆ ನಾವು ಕಾರಣರಾಗಬಹುದು 'ಫೆಡರಲ್ ರಾಜ್ಯಭಾರವೆಲ್ಲ ನಿಮ್ಮ ಕೈಯಲ್ಲಿ, ದೇಶರಕ್ಷಣೆ ಮತ್ತು ಅರ್ಥಸಂಬಂಧವಿಚಾರಗಳು ಮಾತ್ರ ನಿಮಗಿಲ್ಲ ಅಷ್ಟೆ' ಎಂದು ಇವರು ಸುಲಭದಲ್ಲಿ ಫೆಡರೇಶನನ್ನು ನಮ್ಮ ಅಂಗೀಕಾರಕ್ಕೆ ಶಿಫಾರಸು ಮಾಡುವಾಗ, ಮನೆಯೆಲ್ಲವನ್ನು ನಮಗೆ ಬಿಟ್ಟುಕೊಟ್ಟು, ಚಂಬು ಚರಿಗೆಗಳಿಗೆ ಮಾತ್ರ ಮುಟ್ಟದಂತೆ ಮಾಡುವ ಅದರ ಸತ್ಕಾರವನ್ನು ಪ್ರೋತ್ಸಾಹಿಸುವವರಂತೆ ತೋರುವುದಲ್ಲವೆ?

ಪ್ರಜಾಸತ್ತೆಯ ಲಕ್ಷಣವೆಂದರೆ, ಸಿವಿಲ್ ~~ಅಧಿಕಾರಿಗಳ ಅಪ್ಪಣೆಯಂತೆ ಮಿಲಿಟರಿ ಅಧಿಕಾ~~ರವು ನಡೆವುದು. ಇವೆರಡು ಅಧಿಕಾರಗಳು ಬಿಂಗಡವಾಗಿರುವಲ್ಲಿ, ಮಿಲಿಟರಿಯು ಯಾರ ಅಧಿಕಾರದೊಳಗೋ ಅದೇ ಸಿವಿಲ್ ಅಧಿಕಾರವನ್ನು ಜಗ್ಗು ಬಡೆವ ಸಂಭವವಿರುವ ಕಾರಣ, ಪ್ರಜಾಸತ್ತೆಯ ಮೇಲೆ ಮತ್ತೊಂದು ಪರಸತ್ತೆ ಇದ್ದು, ಅದಕ್ಕೆ ಲೋಪವುಂಟು ಹೀಗಾದಲ್ಲಿ ಇಂತಹ ರಾಜ್ಯಭಾರವು ಹೇಗೆ ತೃಪ್ತಿಕರವಾಗಬಹುದು, ಸ್ವೀಕಾರಯೋಗ್ಯವಾದೀತು? ಜನಾಂಗವೆಲ್ಲ ದೇಶರಕ್ಷಣೆಗೆ ಕಾರಣವೆಂತಾಗಿರುವಲ್ಲಿ, ಜನಾಂಗವು ಒಂದಾಗಲೂ ಅಸ್ತ್ರದವಿರುವುದು ದೇಶರಕ್ಷಣೆಯು ಪರಹಸ್ತದಲ್ಲಿರುವಾಗ ದೇಶವಾಸಿಗಳು ಸ್ವಾಧೀನರು ಎಂಬುದು [illegible]ಗೆ ಇದೊಂದೇ ಸಾಕು, ಫೆಡರೇಶನನ್ನು [illegible]ಕರಿಸುವುದಕ್ಕೆ.

ಹೇಗೂ ಇರಲಿ. ತರ್ಕಿಸಿ ಫಲವಿಲ್ಲ. [illegible]ಶೀಯ ರಾಜ್ಯಗಳಾಗಲಿ, ಬ್ರಿಟಿಷ ಪ್ರಜೆಗಳಾಗಲಿ ನಮ್ಮಲ್ಲಿ ಫೆಡರೇಶನು ಬೇಡವೆನ್ನುವವರೇ ಹೆಚ್ಚಿನವರು. ಎಷ್ಟೋ ಚೆನ್ನಾಗಿ ವಿವರಿಸಿ ಬೋಧಿಸಿದರೂ, ಇದೊಂದು ವ್ಯಾಪ್ತಿವ ಅಭಿಪ್ರಾಯವನ್ನು ಸುಳ್ಳೆಂದು ಬಿಡಬರುವುದಿಲ್ಲ ಇದನ್ನು ಲೋಥಿಯನರು ತಿಳಿದುಕೊಂಡಿರಬೇಕು ಅವರು ಪ್ರಜಾಸತ್ತಾವಾದಿಗಳಾಗಿ ಭಾರತ ಹಿತೇಚ್ಛುಗಳಾಗಿರುವುದು ನಿಜವಾದರೆ, ಇದನ್ನೆಲ್ಲ ಇದ್ದಂತೆ ಬ್ರಿಟಿಷ ಸರಕಾರಕ್ಕೆ ತಿಳಿಸಿ, ಜಕ್ಟನ್ನು ತಿದ್ದುವಂತೆ ಮಾಡುವುದುತ್ತಮ ಮನೆ ಕೆಲಸ ಬಹಳವಿದೆ, ಪ್ರಪಂಚದ ರಗಳೆ ಧಾರಾಳವಿದೆ, ಆಳ್ವ ತಿದ್ದಲು ಅವಕಾಶವಿಲ್ಲ ಎಂತಾದರೆ, ಅದನ್ನು ಜ್ಯಾರಿಗೆ ತರಲು ತಡೆಯಬೇಕು ಹೀಗೆ ಮಾಡದೆ, ಅತ್ಯವಸರದಲ್ಲಿ ಮಹಾಮತವು ಬೇಡವೆನ್ನುವುದನ್ನು ರೂಢಿಗೆ ತರಲೆತ್ನಿಸಿದರೆ, ನಮ್ಮ ದೇಶದಲ್ಲಿನ ಎಲ್ಲ ಪಕ್ಷಗಳೂ ಫೆಡರೇಶನನ್ನು ಆತಂಕಿಸುವಂತೆ ತವಕಗೊಳ್ಳದಿರರೆಂಬ ಅಂಜಿಕೆ ಖಂಡಿತವಾಗಿಯೂ ಮುಂದೊತ್ತಿ ಪ್ರಕಟವಾಗುವುದು

---

## ಶ್ರೀ। ಸುಭಾಷಚಂದ್ರ ಬೋಸರವರು

ಕಲ್ಕತ್ತೆಗೆ ಬಂದು ಸೇರಿದರು ರಾಷ್ಟ್ರಪತಿಗಳೆಂದು ಚುನಾವಣೆ ಹೊಂದಿದವರಲ್ಲಿ ಇವರು ಕಡಮೆ ವಯಸ್ಸಿನವರು ಆದರೆ ಇವರಿಗೆ ದೊರೆತಿರುವ ಜೀವನಾನುಭವ ಹೆಚ್ಚಿನದ ರಾಜಕೀಯ ರಂಗದಲ್ಲಿ ಇವರು ದುಡಿದು ದಣಿದವರು ಇಂಗ್ಲೆಂಡಿನಲ್ಲಿ ತನಗೆ ದೊರೆತ ಅಭಿಪ್ರಾಯಗಳನ್ನು ಪತ್ರಿಕರ್ತರಿಗೆ ವಿವರಿಸುತ್ತಾ ಇಂಗ್ಲೆಂಡಿನಲ್ಲಿ ನಮ್ಮ ದೇಶದ ವಿಷಯವಾಗಿ ಅಜ್ಞಾನವೇನೂ ಕಡಮೆಯಾಗಿಲ್ಲವೆಂದೂ ಕೆಲವರಿಂದಲ್ಲಾ ಭಾರತ ಸ್ವಾತಂತ್ರ್ಯದ ಇಲ್ಲಿನ ಉದ್ಯಮದಲ್ಲಿ ಸಹಾನುಭೂತಿಯುಳ್ಳವರಾಗಿರುವರೆಂದೂ, ಬ್ರಿಟಿಷ ಪತ್ರಗಳ ವಾತಮಿದಾರರೂ ಅಥವಾ ಇಲ್ಲಿನ ಬ್ರಿಟಿಷ ಆಫೀಸರುಗಳೇ ಮುಖ್ಯವಾಗಿ ಭಾರತವರ್ಷದ ವಿಚಾರಗಳನ್ನು ತಮಗೆ ಬೇಕಾದಂತೆ ಇಂಗ್ಲೆಂಡಿನಲ್ಲಿ ಹರಡುತ್ತಾರೆಂದೂ ಮೊದಲಾಗಿ ತಿಳಿಸಿದರು ಮಹಾಯುದ್ಧದ ಸಂಭವವು ಈಗ ಒಂದು ವರ್ಷ ಹಿಂದಿದ್ದುದಕ್ಕಿಂತ ಕಡಮೆಯೆಂದೂ, ಯುದ್ಧದ ಭೀಕರತೆಯನ್ನು ಸ್ಪೈಯಿನನ್ನು ನೋಡಿಯೂ, ಜರ್ಮನಿಯು ಸ್ವಲ್ಪ ಶಾಂತಬುದ್ಧಿಯನ್ನು ತಿಳಿದೂ ಯರೋಪಿನಲ್ಲಿ ಪಕ್ಕನೆ ಯುದ್ಧೋದ್ಭವವಾಗದೆಂದೂ ಸೂಚಿಸಿದರು ಆದರೆ, ಯುದ್ಧವಾಗುವಂತಿದ್ದಲ್ಲಿ ಅದು ಮಧ್ಯ ಯುರೋಪಿನಲ್ಲಾಗುವುದೆಂದೂ ಅಲ್ಲಿಂದ ಮೊದಲು ಪೂರ್ವಕ್ಕೂ ಬಳಿಕ ಪಶ್ಚಿಮಕ್ಕೂ ವಿಸ್ತಾರ ಹೊಂದಬಹುದೆಂದೂ ಅಭಿಪ್ರಾಯಪಟ್ಟರು

## ಡೆಟೆನ್ಯೂಗಳ ವಿಚಾರ

ಇವರನ್ನು ಬಂಗಾಳ ಸರಕಾರವು ಸಾಕಷ್ಟು ಸಂಖ್ಯೆಯಲ್ಲಿ ಬಿಡುಗಡೆ ಮಾಡಿದೆ ನಿಜ, ಆದರೆ ಇನ್ನೂ ಎಷ್ಟೋ ರಿಯಾಯಿತಿ ನ್ಯಾಯ ತೋರಿಸುವಿಕೆಯು ಉಳಿದಿದೆ ಹಾಗೆಂದು ಇವರನ್ನು ಬಂಧವಿಮೋಚನೆಗೊಳಿಸುವ ಪ್ರಯತ್ನಗಳು ಇನ್ನೂ ಹೆಚ್ಚಬಹುದು ಡಟೆನ್ಯೂಗಳೇ ಮಾತ್ರವಲ್ಲದೆ, ರಾಜಕೀಯ ಕಾರಣದಿಂದಾಗಿ ಕೈದು ಹೊಂದಿದವರೆಲ್ಲರನ್ನು ಬಿಡುಗಡೆ ಮಾಡುವಂತಾಗಬೇಕೆಂಬ ಆಸೆಯು ಸುಭಾಷರಲ್ಲಿದೆ ಇದಕ್ಕಾಗಿ ಮಾಡಬೇಕಾಗಿರುವ ಪ್ರಯತ್ನಗಳನ್ನು ಮಹಾತ್ಮಾಜಿಯವರನ್ನು ಸಂದರ್ಶಿಸಿ ಚರ್ಚಿಸಿ ನಿರ್ಧರಿಸಿದ ಬಳಿಕವೇ ಸುಭಾಷರು ಸೂಚಿಸಿರುವರಾಗಿಯೂ ತಿಳಿದುಬರುತ್ತದೆ ಕೊಂಗ್ರೆಸು ಅಹಿಂಸಾ ವ್ರತಹಿಡಿದಿದೆ, ಶಾಸನಭಂಗವನ್ನು ಈಗ ಮನ್ನಿಸುತ್ತಿಲ್ಲ ಹೀಗಿರುವ ಕಾರಣ, ನ್ಯಾಯಸಮ್ಮತವಾದ ರೀತಿಯಲ್ಲಿ ಮುಂದರಿಯುವ ಪ್ರಕಾರಗಳನ್ನು ಕೊಂಗ್ರೆಸಿನ ಕಾರ್ಯಕಾರೀ ಮಂಡಲವೇ ನಿರ್ಣಯಿಸುವುದೆಂದಾಗಿದೆ

## ಫೆಡರೇಶನು

ಈ ವಿಷಯದಲ್ಲಿ ಕೆಲವು ಕಾಂಗ್ರೆಸ್ ಮಂತ್ರಿಕೂಟಗಳು ಬೇಡವೆಂದೇ ನಿರ್ಧರಿಸಿವೆ. ಭಾರತೀಯ ವಾಣಿಜ್ಯಸಂಘವು ಸಹ ಇದು ಬೇಡವೆಂದಿದೆ. ಮೈಸರಾಯರು ನಿಧಾನವಾಗಿ ಇದನ್ನು ಹೂಡಿ ತರುವುದರಲ್ಲಿದ್ದಾರೆ ರಾಜರುಗಳಲ್ಲಿ ಕೆಲವರು ಇದರಲ್ಲಿ ತುಂಬಾ ಆಸಕ್ತರು. ಕೊಂಗ್ರೆಸ್ ಅಧಿವೇಶನದಲ್ಲಿ ಈ ವಿಷಯವು ಹೇಗೆ ನಿರ್ಧಾರವಾದೀತೆಂದು ಈಗಲೇ ಹೇಳಬರುವುದಿಲ್ಲ ಆದರೆ, ನೆಹರುರವರಾಗಲೀ, ಸುಭಾಷರಾಗಲಿ ಈ ಫೆಡರೇಶನನ್ನು ಸಂಪೂರ್ಣ ವಿರೋಧಿಸುವವರಾಗಿದ್ದಾರೆ ಕೊಂಗ್ರೆಸು ನ್ಯಾಯಸಮ್ಮತವಾಗಿರುವ ಸಮಸ್ತ ಪ್ರಯತ್ನಗಳಿಂದಲೂ ಫೆಡರೇಶನು ಊರ್ಜಿತಕ್ಕೆ ಬರದಂತೆ ತಡೆವುದೆಂದೇ ಹೇಳಬಹುದು ಬ್ರಿಟಿಷಮುತ್ಸದ್ದಿಗಳು ಸಹ,ಇಂಡಿಯದಲ್ಲಿ ಶಾಂತಿಸಮಾಧಾನಗಳು ಇನ್ನೂ ಇರುವಂತಾಗಲೆಂದು ಬಯಸುತ್ತಾರಲ್ಲದೆ, ಇನ್ನೀ ರಗಳೆ ಸಾಕೆನ್ನುವವರೂ ಇದ್ದಾರೆ ಫೆಡರೇಶನು ಹೇಗೂ ಜ್ಯಾರಿಗೆ ಬಂತೆಂದಾದಲ್ಲಿ, ಉದ್ಧಾರವಾಯಿತೆಂದವರು ಸುಮ್ಮನಾಗುವ ಸಂಭವವಿದೆ ಆದರೆ, ಅಧಿಕಾರ ಸ್ವೀಕಾರಕ್ಕೊಪ್ಪಿದ ರೀತಿಯಲ್ಲಿ ಕೊಂಗ್ರೆಸು ಫೆಡರೇಶನು ಸ್ವೀಕಾರಕ್ಕೆ ಮಾತ್ರ ಸರ್ವಥಾ ಮುಂದಾಗದೆಂದೇ ಹೇಳಬಹುದು ಇದೀ ಭಾರತವರ್ಷ ಒಂದಾಗಬೇಕೆಂದು ಎಲ್ಲರೂ ಆಸೆಪಡುವರಾದರೂ, ಈಗ ಜ್ಯಾರಿಗೆ ಬಂದಿರುವ ಆಕ್ಟಿನಲ್ಲಿರುವ ಬಗೆಯ ಫೆಡರೇಶನು ನಿರುಪಯುಕ್ತವೆಂದೇ ಮಾತ್ರ ಸಮಸ್ತರ ನಂಬಿಗೆಯಾಗಿದೆ

## ಇಪಿಯ ಫಕೀರನು

ನೆಹರುರವರಿಗೆ ಗಡಿನಾಡಿನ ಬೇಟೆಗೆ ಬರಲು [illegible] ತಣವಿದೆಯೆಂದು [illegible] ಆದರ ಸತ್ಯಸ್ಥಿತಿ ತಿಳಿಯಲು ಪತ್ರಿ[illegible] ಸಂಪಾದಕರು ತೆರಳಿದ್ದರು ಫಕೀರನಿಂದ ಇವರಿಗೆ [illegible] ನೆಹರುರವರಿಗೆ [illegible] ಅಲ್ಲದೆ [illegible] ಹಿಂತಿರುಗಿ ಬಂದ್ದರು [illegible] ಅಲ್ಲಿನ [illegible] ತಿಳಿದ [illegible] ಕೇರಳವೇ [illegible] ಫಕೀರನ [illegible] ನಿತ್ಯ ತನ್ನ ಜನ[illegible] ಸರಕಾರವು [illegible] ಅವರ [illegible] ವನ್ನು ಅಪಹರಿಸುವುದರಿಂದ ಫಕೀರನು [illegible] ಸ್ವಾತಂತ್ರ್ಯವು ವಿಲ್ಲದೆ [illegible] ದ ಸರ್ವಸ್ವವನ್ನು ಕಳೆದ [illegible] ಅವರು ಬಗ್ಗಬಾರದೆಂದ ಫಕೀರನು ಉಪದೇಶ ಮಾಡಿದ್ದನು, ಜನರನ್ನು ಕದ್ದೊಯ್ಯುವುದರಲ್ಲಿ ತನಗೆ ಯಾವ ಸಂಬಂಧವೂ ಇದ್ದಿಲ್ಲವೆಂದೂ ಕೇಡಿಗಳ ಮಾಡಿದ ಈ ಅಕೃತ್ಯಗಳನ್ನು ತಾನು ನಿಷೇಧಿಸ ವೆನೆಂದೂ ಇವರ ಈ ಕೃತಿಗಳಿಂದ ಕಾನೆ[illegible] ಬ್ರಿಟಿಷ ಸರಕಾರವು ತನ್ನನ್ನು ದೂಷಿಸ ತೊಡಗಿತೆಂದೂ ಅವನು ಖಂಡಿತನವಿಯುವನ [illegible] ಕಾದವರಿಗೆ ತಮ್ಮ ವಶವನ್ನು ಒತ್ತಾಯದಿಂದ ಬೋಧಿಸುವ ಧಷ್ಟ್ರತಿಯನ್ನು ಯಾವ ಮುಸ್ಲಿಮನೂ ಮಾಡಲಾರನೆಂದು ಫಕೀರನ ಮಾತು. ಸರಕಾರವು ಈಗ ಅಭಿಯೋಗ ಮಾಡಿದ ತನ್ನ ಪ್ರಾಂತ್ಯದಲ್ಲಿ ಜನರ ಹಿಂಸೆ ಬಹಳವಾಗಿದೆಂದು ಮರುಗಿ ಇಂಡಿಯಕ್ಕೆ ಸ್ವಾತಂತ್ರ್ಯ ದೊರೆವಂತೆ ನಡೆವ ಪ್ರಯತ್ನಗಳನ್ನು ಕೊಂಡಾಡಿದ್ದನ್ನು ನೆಹರುಗಳು ಹೀಗೆ ಆ ಪತ್ರದ ಸಾರಾಂಶವನ್ನು ನೆನಪಿದ್ದಷ್ಟು ತಿಳಿಸಿ, ಆ ಕಡೆಗೆ ಹೋಗಲು ಅವಕಾಶವಿಲ್ಲೆಂದು ಮರುಗಿದರಾಗಿಯೂ ವಾರ್ತಾದಾಯಕರು ಬಂದಿರುವರು

## ಕರ್ನಾಟಕದ ಏಕೀಕರಣ

ಈ ವಿಷಯವಾಗಿ ಬೊಂಬಾಯಿಯ ಗವರ್ನರರು ಹೇಳಿರುವ ಮಾತುಗಳನ್ನು ಬೆಳಗಾಂವ ಜಿಲ್ಲಾ ಬೋರ್ಡಿನವರ ಬಿನ್ನಹವನ್ನು ಸ್ವೀಕರಿಸುವಾಗ ಟೀಕಿಸಿ, ಶ್ರೀ। ಗಂಗಾಧರರಾವ್ ದೇಶಪಾಂಡೆಯವರು ಒಂದು ಉತ್ತರವನ್ನು ಪ್ರಕಟಿಸಿರುವರು ಸರಕಾರಿಂದ ಎಷ್ಟೋ ರಿಪೋರ್ಟುಗಳಲ್ಲಿಯೂ, ಮೊಂಟೆಗ್ಯೂರವರು ಬರೆದ ಶಿಫಾರಸುಗಳಲ್ಲಿಯೂ ಭಾಷಾನ್ವಯವಾದ ಪ್ರಾಂತ್ಯರಚನೆಗಳಿಗೆ ಅವಕಾಶ ಕೊಟ್ಟುದೇ ಇದೆ ಅದರಂತೆ ಬಿಹಾರ, ಸಿಂಧ, ಒರಿಸ್ಸಾ, ಪ್ರಾಂತ್ಯಗಳನ್ನು ಪ್ರತ್ಯೇಕಿಸಲಾಗಿದೆಯಷ್ಟೆ ಬೊಂಬಾಯಿ ಪ್ರಾಂತ್ಯದ ನಾಲ್ಕೇ ಜಿಲ್ಲೆಗಳನ್ನಷ್ಟೆ ಅಲ್ಲದೆ, ಕರ್ನಾಟಕ ಪ್ರಾಂತ್ಯ ಮಾಡುವಲ್ಲಿ ಮದ್ರಾಸಾಧಿಪತ್ಯದ ಹಲವು ವಿಭಾಗಗಳೂ ಕೊಡಗು ಪ್ರಾಂತ್ಯವೂ ಸೇರಿ, 75 ಲಕ್ಷ ಜನಸಂಖ್ಯೆಗೆ ಕಡಮೆಯಿಲ್ಲದೆಯೂ ಮೂರು ಕೋಟಿ ಕಂದಾಯ ತರುವಂತಾಹದೂ ಆಗಿರುವ ಒಂದು ಪ್ರಾಂತ್ಯವಾಗುವುದೆಂಬುದನ್ನು ಬೊಂಬಾಯಿ ಗವರ್ನರರು ಮರೆತಂತಿದೆ. ಕರ್ನಾಟಕಕ್ಕೆ ಸಿಕ್ಕಿದ ಪ್ರಶಸ್ತಿ ಸಾಲದೆಂದಾಗಲಿ, ಸರಕಾರದ ನಿಗಾ ಕಡಮೆಯೆಂದಾಗಲಿ ಪ್ರತ್ಯೇಕ ಪ್ರಾಂತ್ಯವು ಬೇಕೆನ್ನುವುದಲ್ಲ ಭಾರತವರ್ಷಕ್ಕೆ ಸಂಪೂರ್ಣವಾದ ಸೇವೆ ಮಾಡಿ ಸರ್ವರ ಉನ್ನತಿ ಸಾಧಿಸುವುದರಲ್ಲಿ ಕರ್ನಾಟಕವೂ ಒಂದಾಗಬಾರದೆಂದೇ ನೂತನ ಪ್ರಾಂತ್ಯವೊಂದು ಕರ್ನಾಟಕಕ್ಕೆ ಬೇಕಾಗಿದೆ ಎಂದೂ ಗವರ್ನರರು ತಿಳಿದಷ್ಟುತ್ತಮ

---

## ರಾಜಕೀಯ ಕೈದಿಗಳ ಬಿಡುಗಡೆ

### ಕಾಂಗ್ರೆಸ್ ಅಧಿಕಾರ ತ್ಯಜಿಸಬೇಕಾಗುವುದೋ?

ಕಲ್ಕತ್ತೆಯಲ್ಲಿ ಒಂದೆಡೆ ಭಾಷಣ ಮಾಡುತ್ತಾ ಶ್ರೀ। ಎಮ್ ಎನ್ ರೋಯ್‌ರವರು ರಾಜಕೀಯಕೈದಿಗಳ ಬಿಡುಗಡೆಯು ಈಗಲೂ ಬ್ರಿಟಿಷ ಸಾಮ್ರಾಜ್ಯಶಾಹಿಯ ಮೇಲೆ ಹೊಂದಿಕೊಂಡಿದೆ, ಆ ಕುರಿತು ಕಾಂಗೆಸ್ ಮಂತ್ರಿಗಳಿಗೆ ಅಧಿಕಾರವಿರುವುದಿಲ್ಲ, ಈ ಸಂಗತಿಯನ್ನು ಅವರ ತಮ್ಮ ಗೌರವ ರಕ್ಷಣೆಗಾಗಿ ಎಯಲ ಮಾಡುವುದೇ [illegible] ಕಾಂಗೆಸ್ ಸರಕಾರಗಳ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತ ವಾಗ್ದಾನವಿತ್ತುದರಿಂದ ಆ ಕುರಿತು ಅವರೊಂದು ದೃಢ ಧೋರಣೆಯನ್ನು ಕೈಕೊಂಡು ಸಂದಿಗ್ಧಸಮಯ ಉಂಟಾಗುವಂತೆ ಅಧಿಕಾರಕ್ಕೆ ರಾಜೀನಾಮೆ ಕೊಡಬೇಕೆಂದ ಗದರಿಸಬೇಕಾಗಿ ಶ್ರೀ। [illegible] ಎನ್ ರಾಯರ ಸೂಚನೆ

## ರಾಷ್ಟ್ರಪತಿ ಜವಾಹರರಿಗ ಅಪ್ರಿದಿ ಸತ್ಕಾರ

[illegible] ತೆರಳಿದ ಜವಾಹರಲಾಲರಿಗೆ, ಅಲ್ಲಿನ ಅಪ್ರಿದಿ ಮಾಲಿಕರು ಅತ್ಯಂತ ಉತ್ಸಾಹದ ಸತ್ಕಾರವನು ಕೊಟ್ಟರು ಅವರು ಬಹುಸಂಖ್ಯೆಯಲ್ಲಿ ಮಾರ್ಗದ ಇಬ್ಬದಿಗಳಲ್ಲಿ [illegible] ರಾಷ್ಟ್ರಪತಿಯ [illegible] ನಿಲ್ಲಿಸಿ, ಅವರಿಗೆ ಚಾ ಫಲಪುಷ್ಪಾದಿಗಳನ್ನು ಒಪ್ಪಿಸಿದರು

## ಚೀನಿಯರಿಗೆ ಸಹಾಯಾರ್ಥವಾಗಿ

ಸೋವಿಯಟ್ ರಷ್ಯವು ತನ್ನ ಪಾವಾಕ್ಷ್ಯದ ಗಡಿಯಲ್ಲಿ ಯುದ್ಧ ಸಿದ್ಧತೆಗಳನ್ನು ಮಾಡುರುವುದೆಂದು ತಿಳಿದುಬರುತ್ತದೆ ಅಲ್ಲದೆ ಸೋವಿಯಟ್ ರಾಯಭಾರಿಗಳೊಬ್ಬರು ವಿಮಾನ ಮೂಲಕ ಬಂದು, ಚೀನಾದ ಸರಕಾರದೊಡನೆ ಸೋವಿಯಟ್ಟಿನ ಸಹಾನುಭೂತಿ ಸಹಾಯಗಳ ಭರವಸೆಯನ್ನು ಕೊಟ್ಟಿರುವರಂತೆ

## ಮುಂಬ್ಯಾಯಲ್ಲಿ ಮುಸ್ಲಿಮ ಲೀಗು

ಸ್ಥಳೀಯ ಸಂಸ್ಥೆಗಳ ಆಕ್ಟಿನ ಬದಲಾವಣೆಯ ಕುರಿತು ಚರ್ಚೆ ಬಂದಾಗ ಮುಸ್ಲಿಮ ಲೀಗ್ ಇತ್ಯಾದಿ ಮೂರು ಪಕ್ಷಗಳು ಮುಂಬಾಯಿ ಅಸೆಂಬ್ಲಿ ಸಭೆಯಿಂದ ಹೊರಗೆ ನಡೆದು ಅಷ್ಟರಲ್ಲಿ ಸಮಾಧಾನ ಹೊಂದದೆ ಕೊಮುವಾರು ಭಾವವನ್ನು ಇನ್ನೂ ಬೆಳೆಯಿಸಲು ಅವರು ಆ ಕುರಿತು ಪ್ರಚಾರಕಾರ್ಯ ನಡೆಯಿಸುವವರಿದ್ದಾರಂತೆ ಅಲ್ಪಸಂಖ್ಯಾಕರ ರಕ್ಷಣೆವಾಗಬೇಕೆಂದು ಅವರು ಗವರ್ನರರನ್ನು ಕಂಡು ಈ ಬೀಲಿಗೆ ತಡೆಯನ್ನು ಹಾಕಲು ಯತ್ನಿಸುವರಂತೆ ಅವರ ಈ ಮನೋವರ್ತನೆಯು ವಿಶಾದಿಸಲ್ಪಡತಕ್ಕುದು. ಸ್ಥಳೀಯ ಸಂಸ್ಥೆಗಳಲ್ಲಿ ಕೋಮುವಾರು ಭಾವವನ್ನು ತೆಗೆದು ಜಂಟಿಮತದಾರ ಪಟ್ಟಿಯನು ಆಚರಿಸಬೇಕಾಗಿ ಬದಲಾವಣೆಯಾಗುವ ಈ ಬೀಲಿಗೆ, ಇದು ಅವರ ವಿರೋಧವಾಗಿರುತ್ತದೆ

---

# ಹಿಂದೂದೇಶದ ಸ್ವಾತಂತ್ರ್ಯಹೋರಾಟವಿನ್ನೂ ಮುಗಿದಿಲ್ಲ

## ಬ್ರಿಟನ್ನಿಗೆ ನೆಹ್ರುರವರ ಎಚ್ಚರಿಕೆ.

### ರಾಷ್ಟ್ರಪತಿ ನೆಹರೂರವರ ಗಡಿನಾಡು ಪ್ರವಾಸ.

ರಾಷ್ಟ್ರಪತಿ ನೆಹರೂರವರು ಪಂಜಾಬಿನ ಲಾಹೋರಿಗೆ ತೆರಳಿ, ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾನನಷ್ಟ ಮೊಕದ್ದಮೆಯೊಂದರಲ್ಲಿ ತಮ್ಮ ಸಾಕ್ಷಿಯನ್ನಿತ್ತು, ಪಂಜಾಬು ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟ ಕೆಲವು ಕೆಲಸಗಳನ್ನು ಪೂರೈಸಿ, ಮುಸ್ಲಿಂ ಕವಿಶ್ರೇಷ್ಠರಾದ ಮಹಮ್ಮದ ಇಖ್ಬಾಲರ ಬೇಟಿಮಾಡಿ, ಅಲ್ಲಿಂದ ಗಡಿನಾಡಿಗೆ ತೆರಳಿದವರಿಗೆ, ಅಲ್ಲಿ ಬಹಳ ಉತ್ಸಾಹಭರಿತ ಸ್ವಾಗತವು ದೊರಕಿರುತ್ತದೆ ಪಂಜಾಬಿನ ಪ್ರಧಾನರಾದ ಸರ್ ಸಿಕಂದರ್‌ಖಾನರು ನೆಹರೂರವರನ್ನು ಕಂಡಿದ್ದರು

ಗಡಿನಾಡಿನ ಹಜಾರಾ ಎಂಬಲ್ಲಿ ಭಾಷಣವೀಯುತ್ತಾ ನೆಹರುಗಳು, ನೂತನ ಇಂಡಿಯಾ ಆಕ್ಟಿನ ಫೆಡರಲ್ ಶಾಸನವನ್ನು ತೀವ್ರವಾಗಿ ಖಂಡಿಸಿದರು ಫೆಡರೇಶನ್ ಸೂತ್ರಕ್ಕೆ ಯಾರೂ ಆಕ್ಷೇಪಿಸುವುದಿಲ್ಲವಾದರೂ, ರಾಷ್ಟ್ರೀಯ ಬಲಗಳ ಅಭ್ಯಂತರಗಳಾಗಿರುವ [illegible] ಹಿತ, ವಿರೋಧಭಾವ ಇತ್ಯಾದಿಗಳಿಂದ ಕೂಡಿದ ಫೆಡರೇಶನ್ ನಮಗೆ ಬೇಡವೆಂದೂ [illegible] ಮಂಡಲಗಳು ಅಧಿಕಾರ ಸ್ವೀಕಾರದ ಶಬ್ಬಿನಲ್ಲಿ ದಾರಿತಪ್ಪಿ ಬಿದ್ದಿರುವರೆಂಬ ದಾಗಿ ಬ್ರಿಟಿಷ ಸರಕಾರದ ಅಭಿಪ್ರಾಯ ಇರುವುದಾದರೆ ಅದು ತೀರ ತಪ್ಪೆಂದೂ ಹಿಂದೂದೇಶದ ಸ್ವಾತಂತ್ರ್ಯಹೋರಾಟವು ಇನ್ನೂ ಮುಗಿಯಲಿಲ್ಲವೆಂದೂ ಅಭಿಪ್ರಾಯಪಟ್ಟು ಸಮಸ್ತ ಪ್ರಾಂತ್ಯದಲೆಲ್ಲ ಜನವರಿ ತಾ ೨೬ನೇ ದಿನ ಸ್ವಾತಂತ್ರ್ಯ ದಿನಾಚರಣೆಯ ನ್ನಾಚರಿಸಬೇಕಾಗಿ ವಿನಂತಿಮಾಡಿಕೊಂಡರು

ರಾಷ್ಟ್ರಪತಿಗಳು ಗಡಿನಾಡಿನ ಹಳ್ಳಿಹಳ್ಳಿಗಳಲ್ಲಿ ಪ್ರವಾಸಮಾಡಿ ಪರಾಣ [illegible] ಕಾಂಗ್ರೆಸ್ಸಿನ ಸಂದೇಶವನ್ನು ಸಾರುತ್ತಿರುವರು. ಹೋದೆಡೆಗಳಲೆಲ್ಲಾ ಅವರಿಗೆ ರಾಷ್ಟ್ರೀಯ ಕೆಲಸಗಳಿಗಾಗಿ ಹಣದ ಥೈಲಿಗಳು [illegible] ಲಾದವು ಅಬೊಟಾಬಾದಿನಲ್ಲಿ ಭಾಷಣವೀಯುತ್ತಾ, ಹಿಂದೂದೇಶದಲ್ಲಿ [illegible] ಕ್ರಾಂತಿಗಳು ನಡೆಯಬೇಕೆಂದೂ ಅವುಗಳು—ರಾಜಕೀಯ ಕ್ರಾಂತಿ ಮತ್ತು ಸಂಪತ್ತಿಕ ಕ್ರಾಂತಿ, ಕಾಂಗ್ರೆಸ್ ಮಂತ್ರಿಮಂಡಲಗಳ ಕಾರ್ಯಕ್ರಮಗಳಿಗೆ ಅನೇಕ ತರದ ತಡೆಗಳು ಇವುದರಿಂದ ಅವರಿಂದ ಹೆಚ್ಚಿನದನ್ನು ಆಶಿಸಬಾರದಾಗಿಯೂ ಸ್ವಾತಂತ್ರ್ಯ ಸಾಧನೆಗಾಗಿ ಎಲ್ಲರೂ ತ್ರಿವರ್ಣದ ಕಾಂಗ್ರೆಸ್‌ಧ್ವಜದ ಅಡಿಯಲ್ಲಿ ಸೇರಿ ಕಾಂಗ್ರೆಸ್ಸನ್ನು ಪುಷ್ಟೀಕರಿಸಬೇಕಾಗಿ ಕೋರಿ ಭಾಷಣವಿತ್ತರು

ಕೆಂಪಂಗಿಗಳ ನೆಲೆವೀಡಾದ ಸ್ವಾಬಿ ತಹಸಿಲ್ಲಿಗೆ ತೆರಳಿ, ಬಹಳ ದೂರದಿಂದ ತಮ್ಮ ದರ್ಶನಕ್ಕೆ ಬಂದ ಸಾವಿರಾರು ಮಂದಿಗಳು ನೆರೆದಿರುವ ಮಹಾಸಭೆಯಲ್ಲಿ, ಎಲ್ಲರೂ ಕಾಂಗ್ರೆಸ್ಸನ್ನು ಪುಷ್ಟೀಕರಿಸಬೇಕಾಗಿ ಕೋರಿ ಭಾಷಣವಿತ್ತರು

### “ಕೆಲಸಗಾರರೆಲ್ಲರೂ ಕಾಂಗ್ರೆಸ್ಸಿನೊಡನೇ ಸೇರಬೇಕು”

ಎಂದು ಶ್ರೀ ಎಂ. ಎನ್ ರಾಯ್ (ಪ್ರಸಿದ್ಧ ಸಮತಾವಾದಿ ನಾಯಕ) ಇವರು ಕಲ್ಕತ್ತೆಯಲ್ಲಿ ಒಂದೆಡೆ ಭಾಷಣಮಾಡುತ್ತಿರುವಾಗ ವಿನಂತಿ ಮಾಡಿಕೊಂಡಿರುವರು. ರೈತ, ಮಜೂರ, ಮಧ್ಯಮ, ಧನಾಢ್ಯ ಇತ್ಯಾದಿ ಎಲ್ಲಾ ವರ್ಗದವರೂ ಕಾಂಗ್ರೆಸ್ಸನ್ನು ಪುಷ್ಟೀಕರಿಸುವುದರಿಂದಲೇ ಸ್ವರಾಜ್ಯಸಾಧನೆಯು ಸುಲಭವಾಗುವುದೆಂಬುದು ಅವರ ಅಭಿಪ್ರಾಯವು.

### ಧಿಲ್ಲಿಯಲ್ಲಿ ಪ್ರಧಾನ ರಾಜಾಜಿಯವರು—

ಪ್ರಾಂತಿಕ ಆರ್ಥಿಕ ಸಚಿವರ ಪರಿಷತ್ತಿಗಾಗಿ ತೆರಳಿದ ಕಾಂಗ್ರೆಸ್ ಮಂತ್ರಿಗಳನ್ನು ಅಭಿನಂದಿಸಲು ಸಾವಿರಾರು ಮಂದಿಗಳು ಕೂಡಿಬಂದ ಒಂದು ಮಹಾಸಭೆಯು ನವಧಿಲ್ಲಿಯಲ್ಲಿ ಜರಗಿತು ಈ ಸಭೆಯಲ್ಲಿ ಮದ್ರಾಸಿನ ಪ್ರಧಾನರಾದ ಶ್ರೀ ಸಿ ರಾಜಗೋಪಾಲಾಚಾರ್ಯರು, ಯುಕ್ತಪ್ರಾಂತ್ಯದ ಪ್ರಧಾನರಾದ ಶ್ರೀ ಗೋವಿಂದವಲ್ಲಭಪಂತರೂ ಇನ್ನಿತರರೂ ಭಾಷಣವಿತ್ತರು ಈ ಮಹನಿಯರುಗಳು ಭಾಷಣಮಾಡಲು ಏಳುತ್ತಿರುವಷ್ಟರಲ್ಲಿ, ಕೆಲವು ಮಂದಿ ‘ಕ್ರಾಂತಿಗೆ ಜಯವಾಗಲಿ’ ಎಂದು ಹೇಳಿ ಕೆಂಪು ಧ್ವಜಗಳನ್ನಿಡಿದು ರಾಜಕೀಯ ಕೈದಿಗಳ ಬಿಡುಗಡೆಯನ್ನು ಕೋರಿ ಪ್ರದರ್ಶನ ನಡೆಯಿಸಲು,—ರಾಜಾಜಿಯವರು, ‘ನನಗೆ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಅಧಿಕಾರವಿರುವುದೆಂದು ಜನರಲ್ಲಿ ತಿಳುವಳಿಕೆಯಾದ ಕುರಿತು ನಾನು ತುಂಬಾ ಸಂತೋಷಪಡುತೇನೆ ಆ ಅಧಿಕಾರ ಬಂದುದು ಇಲಿ ಹಾರ್ರಾಡುತ್ತಿರುವ ಈ [illegible] ಧ್ವಜದಿಂದ ಇನ್ನೂ ಹೆಚ್ಚಿನ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕೆಂದೂ ಯಾರ್‍ಯಾದರೂ ಇಚ್ಛಿಸವುದಾದರೆ ಈ ಧ್ವಜವನ್ನು ಇನ್ನೂ ಪುಷ್ಟೀಕರಿಸಬೇಕು ಕಾಂಗ್ರೆಸು ಧ್ವಜವು ಸರಕಾರಿ ಧ್ವಜವಾಗವುದು ಇನ್ನೂ ಬಾಕಿ ಉಳಿದಿದೆ ಅದರ ಪಕ್ಕದಲ್ಲಿ ಇನ್ನೊಂದ ಧ್ವಜವು ಹಾರಿಸಲ್ಪಟ್ಟರೆ ಆಗ ಜನರಲಿ ಯಾವ ಧ್ವಜವು ಶ್ರೇಷ್ಠವೆಂದರ [illegible] ಉದ್ಭವವಾಗುವುದು ಆದದರಿಂದ ನಮ್ಮ [illegible] ಸಂಘಟನೆಯ [illegible] ಗವುದು [illegible] ಕೋರಿಕೆಗಳು [illegible] ಇರಲಿ, ಕಾಂಗ್ರೆಸ್ ಧ್ವಜದ ಮಾನವು ಹೇಗೆ ಹೆಚ್ಚುತದೋ ಹಾಗೆ ನಮ್ಮಿಂದ ಹೆಚ್ಚು ಕಾರ್ಯಸಾಧನೆಯು ಸಾಧ್ಯವಾಗುವುದು ಎಂಬುದಾಗಿ ಭಾಷಣವಿತ್ತರು

ತನ್ನ ಪ್ರಾಂತ್ಯದ ಹಳಿಜೇನದಲಿ ಹೊಸ [illegible] ಸಂಕರದ [illegible] ಗುತ್ತಾ ಎರಡು [illegible] ನಿರುದ್ಯೋಗಿಗಳ [illegible] ಭೂಮಿ [illegible] ಇತ್ಯಾದಿಗಳ ಕುರಿತ ಕಾನೂನುಗಳು ಬೇಗನೇ ಜ್ಯಾರಿಯಾಗುವುವೆಂದೂ, ಇಷ್ಟೆಲ್ಲಾ ಕಾರ್ಯಗಳು ನಡೆದರೂ ಸ್ವರಾಜ್ಯವು ಇನ್ನೂ ದೂರದಲ್ಲಿರುವುದರಿಂದ ಸ್ವಾತಂತ್ರ್ಯಹೋರಾಟವು ಮುಂದೆ ಸಾಗಬೇಕೆಂದೂ ಯುಕ್ತಪ್ರಾಂತ್ಯದ ಪ್ರಧಾನಿ ವಲ್ಲಭಪಂತರು ಭಾಷಣವಿತ್ತರು.

ನಂತರ ಗಡಿನಾಡಿನ ಆರ್ಥಿಕಸಚಿವರಾದ ಮಾನ್ಯಗಾಂಧಿಗಳವರು ಗಡಿನಾಡಿನ ಕಾಂಗ್ರೆಸ್ ಮಂತ್ರಿಮಂಡಲದ ಕಾರ್ಯಕಲಾಪಗಳನ್ನು ವಿವರಿಸಿ, ಪಠಾಣರು ಕ್ರೂರ ಜೀವಿಗಳಲ್ಲವೆಂದೂ ಖಾನ್ ಅಬ್ದುಲ್ ಗಫರ್ ಖಾನರ ಪ್ರೇರಣೆಯಿಂದ ಅವರು ಅಹಿಂಸಾಪ್ರೇಮಿಗಳಾಗಿರುವರೆಂದೂ ಭಾಷಣವಿತ್ತರು

### ದಬ್ಬಾಳಿಕೆಯ ಶಾಸನ—

ಗಳೆನ್ನೆಲ್ಲಾ ರದ್ದುಮಾಡಲಾಗುವುದೆಂದು ಮುಂಬಾಯಿ ಕಾಂಗ್ರೆಸ್ ಸರಕಾರದ ಪ್ರಧಾನ ಬಿ ಜಿ ಖೇರ್‌ರವರ ಭರವಸೆಯು ದೊರಕಿರುತ್ತದೆ ಈ ಭರವಸೆಯು ನಾಗರೀಕ ಹಕ್ಕು ರಕ್ಷಣಾ ಸಂಘದವರು, ಕೊಂಡೊಯ್ದ ಒಂದು ಡೆಪ್ಯುಟೇಶನಿಗೆ ಕೊಟ್ಟ ಉತ್ತರವಾಗಿರುತ್ತದೆ

### ಮದ್ಯನಿಷೇಧ ಕ್ರಮವು—

ಸದ್ಯದಲ್ಲೇ ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಬಳಕೆಗೆಬರುವುದೆಂದೂ, ಆ ಬಗ್ಗೆ ಎಲ್ಲಾ ಹಳ್ಳಿಗರೂ ಪಟ್ಟಣಿಗರೂ ಸಿದ್ಧರಾಗಬೇಕೆಂದು ಮದರಾಸಿನ ವ್ಯವಸಾಯ ಶಾಖೆಯ ಮಂತ್ರಿಗಳಾದ ಮಾನ್ಯ ಮುನ್ನಿಸ್ವಾಮಿ ಪಿಳ್ಳೆಯವರು ತಿರುಚಿನಾಪಳ್ಳಿಯಲ್ಲಿ ಒಂದೆಡೆ ಭಾಷಣಮಾಡುತ್ತಿರುವಾಗ ತಿಳಿಸಿರುವರು

### ನವರಾಷ್ಟ್ರಪತಿ ಸುಭಾಷ್ಚಂದ್ರ ಭೋಸರೂ ಐರ್ಲೆಂಡಿನ ಸರ್ವಾಧಿಕಾರಿ ಡಿವೆಲೆರನೂ

ಲಂಡನಿಗೆ ತೆರಳಿದ ಸುಭಾಷ್ಚಂದ್ರ ಭೋಸರು ಆಂಗ್ಲೊ ಐರಿಷ್ ಮಾತುಕತೆಗಳಿಗಾಗಿ ಅಲ್ಲಿಗೆ ಬಂದ ಡಿವೆಲೆರಾನನ್ನು ಕಂಡರು ಡಿವೆಲೆರನು ಶ್ರೀ ಭೋಸರು ರಾಷ್ಟ್ರಪತಿಯಾಗಿ ಚುನಾಯಿತರಾದುದಕ್ಕೆ ಅಭಿವಂದಿಸಿದರು ಮಹಾತ್ಮಾಜಿಯವರ ಆರೋಗ್ಯದ ಕುರಿತು ತನ್ನ ಚಿಂತೆಯನ್ನು ಸೂಚಿಸುತ್ತಾ, ಮಹಾತ್ಮಾಜಿಯವರಿಗೆ ತನ್ನ ವಂದನೆಗಳನ್ನು ಕೊಡಬೇಕಾಗಿ ಹೇಳಿಕೊಂಡಿರುವರು “ಹಿಂದೂದೇಶವನ್ನು ಸ್ವತಂತ್ರಗೊಳಿಸುವರೆ ನಡೆಯುವ ನಿಮ್ಮ ಮಹಾಕಾರ್ಯವು ಯಶಸ್ವಿಯಾಗಲಿ’ ಎಂದು ಡಿವೆಲರರು ಹಾರೈಸಿರುವರು ಮುಂದಕ್ಕೆ ಭಾರತೀಯರು ಸ್ವತಂತ್ರರಾಗಲು ಮಹಾ ಹೋರಾಟ ನಡೆಸಬೇಕಾಗುವುದೆಂದು ಆತನ ಅಭಿಪ್ರಾಯವಾಗಿರುವುದ

### ರಾಜಕೀಯ ಕೈದಿಗಳ ಬಿಡುಗಡೆ.

ದೇಶದ ವಿವಿಧ ಜೈಲುಗಳಲ್ಲಿರುವ ರಾಜಕೀಯ ಕೈದಿಗಳು ಆಚರಿಸುವ ಹಸಿವಿನ ಮುಷ್ಕರಗಳ ದಾಗಿ ಅವರ ಬಿಡುಗಡೆಗಾಗಿ ದೇಶದಲ್ಲೆಲ್ಲಾ ಮಹಾ ಚಳವಳಿಯು ಪ್ರಾರಂಭವಾಗಿರುತ್ತದೆ ಕಲ್ಕತ್ತೆಯಲ್ಲಿ ಜರಗಿದ ಒಂದು ಸಭೆಯಲ್ಲಿ ಬಾಬು ರಾಮಾನಂದಚಟರ್ಜಿಯವರೂ ದೀನಬಂಧು ಸಿ ಎಫ್ ಎ ಡ್ರೂಸರೂ ರಾಜಕೀಯ ಕೈದಿಗಳ ಬಿಡುಗಡೆಯ ಕೂಡಲೇ ಆಗಬೇಕೆಂದು ಕೋರಿ ಭಾಷಣವಿತ್ತರು

### ಜಿನ್ನಾರ ನಿಜವಾದ ರೂಪ

ಈ ಕರಿತ ಕಲ್ಕತ್ತೆಯ ಅಮೃತಬಜಾರ್ ಪತ್ರಿಕೆಯು ಹೀಗೆ ಬರೆದಿದೆ ‘ಅನೇಕ ಪಾತ್ರಗಳ ಮುಖವಾಡದೀಯುವ ಜಿನ್ನಾರವರ ಜವಾದ ರೂಪವನ್ನು [illegible] ಕ್ರಿ. ಶ. [illegible] ಪಕ್ಷದ ಅಧ್ಯಕ್ಷರ ಹೀಗೆನ್ನುತ್ತಿ [illegible] ಅವರ ಹೇಳಿದ [illegible] ಹೇಳುವುದು ಜಿನ್ನಾ [illegible] ಗಳಲ್ಲಿ ಈ ಪಕ್ಷದವರಿಗೆ ಮಹತ್ವವು [illegible] ಚುನಾಯಿತ [illegible] ಪಕ್ಷದವರ [illegible] ಜಿನ್ನಾರವರ [illegible] ಅವರ ಹೊರದೇಶ [illegible] ಈ ಕಾಲ್ಪನಿಕ ತರದ ದೂಷಣೆಗಳೇ ಜಿನ್ನಾರವರ [illegible] ಈ ತರದ [illegible] ಗಳನ್ನು ಹೇಳುವುದರಿಂದಲೇ ಅವರಿಗೆ ಪ್ರಸಿದ್ಧಿಯು ಬರುವುದು ಅವುಗಳೇ ಅವರನ್ನು ಕೀರ್ತಿಪಥದಲ್ಲಿಡತ್ತವೆ ಹಿಂದೂಗಳೊಡನೆ ಒಂದು ಒಪ್ಪಂದವಾದರೆ ಮತ್ತೆ ಅವರ ಉದ್ಯೋಗವು ಕೊನೆಗೊಳ್ಳುವುದು. ಆದುದರಿಂದ ತನ್ನ ಸಲಹೆಸೂಚನೆಗಳನ್ನು ಕೊಡಲು ಜಿನ್ನಾರವರಿಗೆ ಅಸಾಧ್ಯವೆನಿಸಿದೆ ತನ್ನ ಕೈಕಾಲುಗಳಲ್ಲಿ ಕೃತಕವಾಗಿ ರಚಿಸಿದ ಹುಣ್ಣುಗಳನ್ನು ಗುಣಪಡಿಸುವರೆ ಆ ಹುಣ್ಣುಗಳನ್ನು ಪ್ರದರ್ಶಿಸಿ, ಜೀವನಮಾಡುವ ಭಿಕ್ಷುಕನಿಗೆ ಅಸಾಧ್ಯವು ಈ ಹುಣ್ಣುಗಳ ಮೇಲೆಯೇ ಆತನ ಜೀವನನಡೆಯುವುದು.

### ರಾಜೇಂದ್ರ ಪ್ರಸಾದರ ಅನಾರೋಗ್ಯ.

ವಿಶ್ರಾಂತಿಗಾಗಿ ತಮ್ಮ ತಾಯಿನಾಡಾದ ಜರದಿ ಎಂಬಲ್ಲಿಗೆ ತೆರಳಿದ ರಾಜೇಂದ್ರಪ್ರಸಾದರವರಿಗೆ ಅಕಸ್ಮಾತ್ ಒಕರಿಕೆಯುಂಟಾಗಿ ದೇಹಾಲಸ್ಯವುಂಟಾಯಿತು. ಕೂಡಲೇ ಪಾಟ್ನಾದಿಂದ ಪ್ರವೀಣ ವೈದ್ಯರನ್ನು ಬರಮಾಡಿಕೊಂಡು ಅವರಿಂದ ಚಿಕಿತ್ಸೆಯು ನಡೆಯಲಾಯಿತು. ಶ್ರೀಯುತರೀಗ ಸ್ವಲ್ಪ ಗುಣಹೊಂದಿರುವರೆಂದು ತಿಳಿದುಬರುತ್ತದೆ.

### ಮದ್ರಾಸು ಅಸೆಂಬ್ಲಿ ಅಧಿವೇಶವು

ನಿನ್ನೆ ತಾ. ೨೪ರಿಂದ ಪ್ರಾರಂಭವಾಗಿರುತ್ತದೆ ಎವತ್ತಕ್ಕೆ ಮಿಕ್ಕಿದ ಪ್ರಶ್ನೆಗಳಿಗೂ ಉತ್ತರಿಸಿದ ಬಳಿಕ, ಸರಕಾರಿ ಬಿಲುಗಳಲ್ಲಿ ಮೊದಲನೆಯದಾಗಿ ರೈತನ ಋಣವಿಮೋಚನಾ ಬಿಲು ಚರ್ಚೆಗೆ ತೆಗೆಯಲಾಯಿತು ಇದರ ಚರ್ಚೆಯನ್ನು ಮೂರು ದಿವಸಗಳೊಳಗೆ ಮುಗಿಸಿ ಆದಷ್ಟು ಬೇಗನೇ ಒಂದು ಕಾನೂನಾಗಿ ಮಾಡುವರು ನಂತರ ಮದ್ರಾಸು ಸಿಟಿ ಮುನಿಸಿಪಾಲಿಟಿ (ಬದಲಾವಣೆ) ಬಿಲು, ಸ್ಥಳೀಯ ಸಂಸ್ಥೆ, ಮುನಿಸಿಪಾಲಿಟಿ ಆಕ್ಟು ಬದಲಾವಣೆ ಇತ್ಯಾದಿಗಳ ಚರ್ಚೆ ನಡೆಯುವುದಂತೆ ಇವುಗಳ ಚರ್ಚೆಯನ್ನೂ ಕೂಡ ಆದಷ್ಟು ಬೇಗನೇ ತೀರಿಸಿ, ಅವುಗಳನ್ನು ಕಾನೂನಾಗಿ ಮಾಡಬೇಕಾಗಿ ಸರಕಾರದ ಉದ್ದೇಶವಿರುತ್ತದೆ

ನೂತನ ಇಂಡಿಯಾ ಸರಕಾರದ ಫೆಡರೇಶನನ್ನು ಖಂಡಿಸಿ, ಠರಾವೊಂದು ರಾಜಾಜಿಯವರಿಂದ ಸಭೆಯಲ್ಲಿ ತರಲಾಗುವುದು

### ಕಾಂಗ್ರೆಸ್ಸಿಗೆ ವಿಜಯ.

ಬಂಗಾಳದ ಹೌರಾ ನಗರ ಸಭೆಯ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸು ಅಧಿಕಸ್ಥಾನಪಡೆದು ವಿಜಯಿಯಾಗಿರುತ್ತದೆ ಮುಸ್ಲಿಮರಿಗಾಗಿ ಮೀಸಲಿಡಲ್ಪಟ್ಟ ೭ ವಾರ್ಡುಗಳಿಂದಲೂ ೩ ಮುಸ್ಲಿಂ ಕಾಂಗ್ರೆಸ್ ಹುರಿಯಾಳುಗಳೇ ಚುನಾಯಿತರಾಗಿ ಬಂದಿರುವರು

### ಮಿ। ಏಡೆನ್ನರಿಗೆ ಜಪಾನಿಯನೊಬ್ಬನ ಉಡುಗೊರೆ!

ಟೋಕಿಯೋದಲ್ಲಿ ಜಪಾನೀಯ ಬರಹಗಾರನೊಬ್ಬನು ಬ್ರಿಟನಿನ ವಿದೇಶಾಂಗ ಸಚಿವರಾಗಿದ್ದ [illegible] ಅಲ್ಲಿ ಬ್ರಿಟಿಷ ರಾಯಭಾರಿಯೊಡನೆ ಕತ್ತಿಯನ್ನು ಒಪ್ಪಿಸಿದನು ಜಪಾನಿನ ಗೌರವ ರಕ್ಷಣೆಗಾಗಿ ಆತ್ಮಹತ್ಯಮಾಡಿಕೊಳ್ಳುವ ಕತ್ತಿಯು ಅದಾಗಿರುತ್ತದೆ ಈ ಪಾರಿತೋಷಕದಿಂದ ಅನೇಕ ತರದ [illegible] ಗಳುಂಟಾಗಿವೆ. ಇದ ಏಡೆನ್ನರಿಗೆ [illegible] ಇದ [illegible] ಜಪಾನೀಯ [illegible] ಮಾಡಿದ್ದಕ್ಕಾಗಿ ಮಿ। ಏಡೆನ್ನರಿಗೆ ನನ್ನ ಉಡುಗೊರೆ ಎಂಬುದಾಗಿ ಆ ಜಪಾನೀಯು ಕವಿಯು ಬ್ರಿಟಿಷ್ ರಾಯಭಾರಿಯೊಡನೆ ತಿಳಿಸಿರುವನು. ಆಗ ಬ್ರಿಟನಿಗೂ ಜಪಾನಿಗೂ ಒಳ್ಳೇ ತರದ ಸಂಬಂಧವು ಇಲ್ಲದಿರುವುದರಿಂದ [illegible] ವರ್ತನೆಯಿಂದ ಒಂದು ತರದ ಸಂದೇಹವುಂಟಾಗಿ, ಆತನನ್ನು ಪೋಲಿಸ್ ವಶಕ್ಕೆ ಗೊಪ್ಪಿಸಲಾಯಿತು ಅಲಿ ನಡೆದ ವಿಚಾರಣೆಯ ಫಲಿತಾಂಶವು [illegible] ತಿಳಿದ ಬರಲಿಲ್ಲ ಆತ್ಮಹತ್ಯಮಾಡಿಕೊಳ್ಳುವ ಕತ್ತಿಯನ್ನು ಉಡುಗೊರೆ ಮಾಡಿ ಕೊಡುವುದರಲ್ಲಿ ಆತನ ಉದ್ದೇಶವು [illegible] ಬಹುದು? ಮುಂದಕ್ಕೆ ಆಂಗ್ಲೇಯ ಜಪಾನೀಯ ಸಂಬಂಧವು ಕೆಟ್ಟುಹೋಗಿ ಅವರೊಡನೆ ಯುದ್ಧವುಂಟಾಗದಂತೆ ಏಡೆನ್ನರು ಹರಾಕಿರಿ ಪ್ರಾಣತ್ಯಾಗವಮಾಡಿಕೊಳ್ಳಬೇಕಾಗಿ ಹೇಳುವುದು ಆ ಜಪಾನೀಯ ಕವಿಯ ಉದ್ದೇಶವಾಗಿರಬಹುದೆ?

### ದಕ್ಷಿಣ ಆಫ್ರಿಕವು

ಭಾರತೀಯರಿಗೊಂದು ನರಕಕುಂಡದಂತಿರುವುದೆಂದು ಅಲ್ಲಿಗೆ ತೆರಳಿ ಪ್ರವಾಸಗೈದು ಬಂದ ಸೇಟ್ ಗೋವಿಂದದಾಸರು (ಅಸೆಂಬ್ಲಿ ಸದಸ್ಯರು) ಅಭಿಪ್ರಾಯವಾಗಿರುತ್ತದೆ ಇವರು ತಮ್ಮ ಪ್ರವಾಸದ ಅನುಭವವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ವರದಿಮಾಡಿಕೊಳ್ಳುವರೆಂದು ತಿಳಿದುಬರುತ್ತದೆ

ರೈಲ್ವೇ ಗಾಡಿಗಳಿಗೆ ಬಣ್ಣಹಾಕುವುದಕ್ಕೆ ಇಂಗ್ಲೆಂಡಿನಿಂದ ಓರ್ವ ಪ್ರವೀಣರನ್ನು ಭರಮಾಡಿಕೊಳ್ಳುವ ಯೋಚನೆಯಿದೆ. ಹೀಗಾಗಬಹುದೇ? ಹಿಂದೂದೇಶದಲ್ಲಿ ಪೈಂಟಿಂಗ್ ಪ್ರವೀಣರಿಲ್ಲವೆ?—ಹೀಗೆಂದು ಅಮೃತಬಜಾರ ಪತ್ರಿಕೆಯ ಪ್ರಶ್ನೆ.

# ಕ. ಪ್ರಾಂ. ಕಾಂಗ್ರೆಸ್ ಕಮಿಟಿಯ ವಾರ್ಷಿಕ ಸಭೆ.

ಶ್ರೀ ಹೊಸಮನಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಕ. ಪ್ರಾ. ಕಾಂ. ಕಮಿಟಿಯ ವಾರ್ಷಿಕ ಸಭೆಯು ತಾ ೧೬-೧-೩೯ರಲ್ಲಿ ರಾಣೀಬೆನ್ನೂರಲ್ಲಿ ಮುನ್ಸಿಪಲ್ ಹಾಲಿನಲ್ಲಿ ಮಧ್ಯಾಹ್ನ ೨ ಗಂಟೆಗೆ ಪ್ರಾರಂಭವಾಯಿತು. ಪ್ರಾರಂಭದಲ್ಲಿಯೇ ಪ್ರಾ. ಕಾಂ. ಕಮಿಟಿಯು ಕೌನ್ಸಿಲಿನವರು ರದ್ದುಮಾಡಿದ ವಿಜಾಪುರ-ಜಿಲ್ಲೆಯ ಪ್ರತಿನಿಧಿಗಳ ಪ್ರಶ್ನೆಯನ್ನು ತೆಗೆದುಕೊಳ್ಳಲು ಕೆಲವರು ಸೂಚಿಸಿದರು. ಈ ವಿಷಯವಾಗಿ ೩ ಗಂಟೆಯವರೆಗೆ ಚರ್ಚೆಯಾಗಿ ಶ್ರೀ ಕೇ ಎಫ್. ಪಾಟೀಲರು ೫-೧೫ ರಾಜಕೀಯ ಪರಿಷತ್ತಿನ ಸಲುವಾಗಿ ಈ ಸಭೆಯನ್ನು ರಾತ್ರಿ ೮ ಗಂಟೆಯ ವರೆಗೆ ಮುಂದೆ ಹಾಕಬೇಕಾಗಿ ಕೇಳಿಕೊಂಡದ್ದರಿಂದ ಸಭೆಯನ್ನು ಮುಂದೆ ಹಾಕಬೇಕಾಯಿತು ಪುನಃ ರಾತ್ರಿ ೮॥ ಗಂಟೆಗೆ ಶ್ರೀ ಹೊಸಮನಿಯವರ ಅಧ್ಯಕ್ಷತೆಯ ಕೆಳಗೆ ಸಭೆಯ ಕೆಲಸವು ಪ್ರಾರಂಭವಾಯಿತು. ಈ ಕೆಳಗಿನ ಗೊತ್ತುವಳಿಯು ಸ್ವೀಕೃತವಾಯಿತು ಕಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಹೊಸ ವರ್ಷದ ಅಧಿಕಾರೀ ವರ್ಗವನ್ನೂ ಕಾರ್ಯಕಾರಿ ಮಂಡಲವನ್ನೂ ಆರಿಸಲು ಈ ಸಭೆಯು ಶ್ರೀ ರಂಗರಾವ್ ದಿವಾಕರ ಮತ್ತು ಶ್ರೀ ಗಂಗಾಧರರಾವ್ ದೇಶಪಾಂಡೆ ಇವರಿಗೆ ಅಧಿಕಾರ ಕೊಡುತ್ತದೆ ಮತ್ತು ಅವರು ಈ ಕೆಲಸವನ್ನು ಅರ್ಧ ಗಂಟೆಯೊಳಗೆ ಮುಗಿಸಿ ಈ ಕಮಿಟಿಗೆ ತಮ್ಮ ವರದಿಯನ್ನು ಒಪ್ಪಿಸಲು ವಿನಂತಿಮಾಡಿಕೊಳ್ಳುತ್ತದೆ. ರಾತ್ರಿ ಊಟದ ಸಲುವಾಗಿ ಪುನಃ ಕಮಿಟಿಯನ್ನು ೧೦॥ ಗಂಟೆಯ ವರೆಗೆ ಮುಂದಕ್ಕೆ ಹಾಕಲಾಯಿತು ರಾತ್ರಿ ೧೧ ಗಂಟೆಗೆ ಶ್ರೀ ನಾರಾಯಣ ರಾವ್ ಜೋಶಿಯವರ ಅಧ್ಯಕ್ಷತೆಯ ಕೆಳಗೆ ಸಭೆಯು ಮುಂದುವರಿಯಿತು ಅಷ್ಟರಲ್ಲಿ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ತಾವು ಮತ್ತು ಶ್ರೀ ದಿವಾಕರರು ಸೇರಿ ಸಿದ್ಧಮಾಡಿದ ಕೆಳಗಿನ ವರದಿಯನ್ನು ಒಪ್ಪಿಸಿದರು ಪ್ರಾ ಕಾಂ ಕಮಿಟಿಯ ಅಧಿಕಾರಿ ವರ್ಗವನ್ನೂ ಕಾರ್ಯಕಾರೀ ಮಂಡಲವನ್ನು ಈ ಪ್ರಕಾರ ಆರಿಸಿರುತ್ತೇವೆ —

ಅಧ್ಯಕ್ಷರು — ಶ್ರೀ ಗಂಗಾಧರರಾವ್ ದೇಶಪಾಂಡೆ ಉಪಾಧ್ಯಕ್ಷರು — ೧ ಶ್ರೀ ನಾರಾಯಣರಾವ್ ಜೋಶಿ ೨ ಶ್ರೀ ಸಿದ್ದಪ್ಪ ಹೊಸಮನಿ ಕಾರ್ಯದರ್ಶಿಗಳು— ೧ ಶ್ರೀ ಗುದ್ಲೆಪ್ಪ ಹಳ್ಳಿಕೇರಿ, ೨ ಶ್ರೀ ಜೀವಣರಾವ್ ಯಾಳಗಿ ಕೋಶಾಧ್ಯಕ್ಷರು. ಶ್ರೀ ರಾಮರಾವ್ ಹುಕ್ಕೇರಿಕರ ಕಾರ್ಯಕಾರೀ ಮಂಡಲ — ಶ್ರೀ ಹೆಗಡೆ ಮೊಟೆನಸೂರ, ೨ ಶ್ರೀ ಚೆಂಗಲರಾಯ ರೆಡ್ಡಿ, ೩ ಡಾ ಎನ್ ಎಸ್ ಹರ್ಡೀಕರ, ೪, ಶ್ರೀ ಭೋಜರಾವ್ ಭೆಂಡ್ರೀಕಾರ, ೫ ಎಂ ರಾಘವೇಂದ್ರರಾವ್, ೬ ಶ್ರೀ ಚನ್ನಬಸಪ್ಪ ಅಂಬಲಿ, ೭ ಶ್ರೀ ದೋಣಪ್ಪ ನಾಯಕ, ೮ ಶ್ರೀ ವೀರನಗೌಡ ಪಾಟೀಲ, ೯ ಶ್ರೀ ಕೇ ಎಸ್ ಪಾಟೀಲ

ಶ್ರೀ ಗಂಗಾಧರರಾವ್ ದೇಶಪಾಂಡೆ ಇವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರ ಚುನಾವಣೆಯ ಲೆಕ್ಕವನ್ನು ಮಾಡಲು ಶ್ರೀ ಗುರುರಾವ್ ವಳವೇಕರ ಇವರನ್ನು ನೇಮಿಸಿದ ಮೇಲೆ, ಮತ ತೆಗೆದುಕೊಳ್ಳಲಾಯಿತು ಶ್ರೀ ಗುರುರಾವ್ ವಾಳವೇಕರ ಇವರು ಈ ಕೆಳಗಿನ ೨೦ ಜನರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಆರಿಸಿ ಬಂದರೆಂದು ತಮ್ಮ ವರದಿಯನ್ನು ಒಪ್ಪಿಸಿದರು.—೧, ಶ್ರೀ ಕೆ ಚೆಂಗಲರಾಯ ರೆಡ್ಡಿ, ೨ ಶ್ರೀಮತಿ ಕಮಲಾದೇವಿ, ೩ ಶ್ರೀ ಗಂಗಾಧರರಾವ್ ದೇಶಪಾಂಡೆ, ೪ ಶ್ರೀ ಕೆ ಎಂ ಪೂಣಚ್ಚಾ, ೫ ಶ್ರೀ ಸುಬ್ಬರಾವ್ ಹಳದೀಪೂರಕರ, ೬ ಶ್ರೀ ಕೆ. ಎಫ್ ಪಾಟೀಲ, ೭ ಶ್ರೀ ಎಸ್ ಎ ಕಾಗದಿಂತರ, ೮ ಶ್ರೀ ಹೆಗಡೆ ಮೊಟೆನಸೂರ ೯ ಶ್ರೀ ನಾರಾಯಣರಾವ್ ಜೋಶಿ, ೧೦, ಶ್ರೀ ಬಿ. ಚಂದ್ರಶೆಟ್ಟಯ್ಯ, ೧೧, ಶ್ರೀ ಎಸ್. ಬಿ ಹಿರೇಮಠ, ೧೨. ಶ್ರೀ ಶ್ರೀನಿವಾಸ ಮಲ್ಯಾ, ೧೩ ಶ್ರೀ ಕೆ. ಎಸ್. ಪಾಟೀಲ, ೧೪. ಶ್ರೀ ರಾಜಗೋಪಾಲ ಅಯ್ಯಂಗಾರ, ೧೫. ಶ್ರೀ ವೀರನಗೌಡ ಪಾಟೀಲ, ೧೬. ಡಾ ಪಾರ್ಥನಾರಾಯಣ ಪಂಡಿತ, ೧೭. ಶ್ರೀ [illegible]ೀಜರಾವ್ ಬೋಳಾರ, ೧೮ ಶ್ರೀ ಶಿವಶಂಕರಪ ಸಕ್ರಿ, ೨೦ ಶ್ರೀ ಟಿ ಸುಬ್ರಹ್ಮಣ್ಯ (ಬೇಲೂರ)

೩. ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯ ತಕರಾರುಗಳನ್ನು ವಿಚಾರಮಾಡಿ ನಿರ್ಣಯ ಕೊಡಲು ಈ ಕಮಿಟಿಯು ಕೆಳಗಿನ ೧೦ ಜನ ಪಂಚರ ಒಂದು ಉಪಸಮಿತಿಯನ್ನು ನೇಮಿಸುತ್ತದೆ —ಶ್ರೀಯುತರುಗಳಾದ ೧. ಜೀವಣರಾವ್ ಯಾಳಗಿ, ೨ ಶ್ರೀ ಕೆ. ಎಸ್ ಪಾಟೀಲ, ೩. ವೀರನಗೌಡ ಪಾಟೀಲ, ೪ ಜೀ ಬಿ ಹಿರೇಮಠ, ೫ ಡಾ ಎನ್. ಬಿ. ಕಟ್ಟೂರ, ೬ ಶ್ರೀನಿವಾಸ ಮಲ್ಯಾ, ೭ ಎಂ. ಉಮೇಶರಾವ್, ೮. ಎಸ್. ಎಸ್. ಶಾಸ್ತ್ರಿ ೯ ಎಂ. ರಾಘವೇಂದ್ರರಾವ್, ೧೦. ಗುರುವಾ ರೆಡ್ಡಿ

ಕಾಂಗ್ರೆಸ್ (ಹರಿಪುರ) ಅಧ್ಯಕ್ಷ ಸ್ಥಳಕ್ಕೆ ಶ್ರೀ ಸುಭಾಷ್ಚಂದ್ರ ಬೋಸರ ಹೆಸರು ಸೂಚಿಸಲಾಯಿತು ಮುಂದೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವರದಿ ಮತ್ತು ಲೆಕ್ಕಪತ್ರಗಳನ್ನು ಓದಲಾಯಿತು ಕೆಲವು ಚಿಕ್ಕಪುಟ್ಟ ಬದಲಾವಣೆಗಳೊಂದಿಗೆ ವರದಿಯು ಸ್ವೀಕೃತವಾಯಿತು ಲೆಕ್ಕಪತ್ರಗಳೂ ಸ್ವೀಕೃತವಾದವು ನಂತರ ಬಜೆಟ್ಟಿನ ಬಗ್ಗೆ ಚರ್ಚೆಯು ಪ್ರಾರಂಭವಾಗಿ ಈಗ ಸದ್ಯಕ್ಕೆ ಆಫೀಸು ವೆಚ್ಚದ ಬಗ್ಗೆ ೨ ತಿಂಗಳ ಬಜೆಟ್ಟು ಮಾಡಲಾಯಿತು ವಾರ್ಷಿಕ ಬಜೆಟ್ಟು ಮುಂದಿನ ಸಭೆಯಲ್ಲಿ ಮಾಡಬೇಕೆಂದು ಗೊತ್ತಾಯಿತು ಶ್ರೀ ಗುರುರಾವ್ ಧಾರವಾಡಕರ, ಇವರನ್ನು ಮುಂದಿನ ವರುಷದ ಲೆಕ್ಕ ತಪಾಸಿಗರನ್ನಾಗಿ ನೇಮಿಸಲಾಯಿತು ಉಳಿದ ವಿಷಯ ಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಬೇಕೆಂದು ನಿರ್ಣಯವಾಗಿ ಬೆಳಗು ಮುಂಜಾನೆ ೨ ಗಂಟೆಗೆ ಸಭೆಯು ಮುಕ್ತಾಯವಾಯಿತು

ಧಾರವಾಡ, ಗುದ್ಲೆಪ್ಪ ಹಳ್ಳೀಕೇರಿ,
೩೦-೧-೩೯ ಪ್ರಾ ಕಾರ್ಯದರ್ಶಿ

## ಸ್ವಾತಂತ್ರ್ಯ ದಿನಾಚರಣೆ.

ಜನವರಿ ತಾ ೨೬ನೇ ದಿವಸ ಸಮಗ್ರ ಹಿಂದೂದೇಶದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆದಾಗ, ಈ ಕೆಳಗಿನ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾಯಿತು

'ಸ್ವಾತಂತ್ರ್ಯವನ್ನುಪಭೋಗಿಸುವ ತಮ್ಮ ಶ್ರಮದ ಫಲವನ್ನು ದೊರಕಿಸುವ ಮತ್ತು ಮಾನವೀ ಜನಾಂಗಕ್ಕೆ ಅವಶ್ಯವಿರುವ ವಸ್ತುಗಳನ್ನು ಸಂಪಾದಿಸುವ ಹಕ್ಕು ಜಗತ್ತಿನಲ್ಲಿಯ ಇತರ ಜನಾಂಗದವರಂತೆ ಹಿಂದುಸ್ಥಾನದ ಜನತೆಗಾದರೂ ಉಂಟು ಜನತೆಯು ಈ ಹಕ್ಕನ್ನು ಕಳೆದುಕೊಂಡು ದಬ್ಬಾಳಿಕೆಯನ್ನು ನಡೆಸುವಂಥ ಯಾವುದೇ ಸರಕಾರವನ್ನು ಬದಲು ಮಾಡುವ ಅಥವಾ ನಾಶಗೊಳಿಸುವ ಅಧಿಕಾರವು ಜನತೆಗೆ ಉಂಟು ಬ್ರಿಟಿಷ ಸರಕಾರದವರು ಹಿಂದೀಯರ ಸ್ವಾತಂತ್ರ್ಯವನ್ನು ನಷ್ಟಗೊಳಿಸಿದ್ದಲ್ಲದೆ ಸಾಮಾನ್ಯ ಜನತೆಯ ರಕ್ತಶೋಷಣೆಯನ್ನು ಮಾಡಿ ತಮ್ಮ ಅಸ್ತಿತ್ವವನ್ನು ಇಲ್ಲಿ ನೆಲೆಸಿದ್ದಾರೆ ಮತ್ತು ಹಿಂದುಸ್ಥಾನದ ಆರ್ಥಿಕ ರಾಜಕೀಯ, ಸಂಸ್ಕೃತಿಕ ಹಾಗೂ ಆಧ್ಯಾತ್ಮಿಕ ನಾಶವನ್ನೂ ಈ ಸರಕಾರದವರು ಮಾಡಿದ್ದಾರೆ ಆದಕಾರಣ ಬ್ರಿಟಿಷ್ ಸಾಮ್ರಾಜ್ಯದ ಸಂಪೂರ್ಣ ಸಂಬಂಧವನ್ನು ಕಡಿದು ಹಾಕಿ ಹಿಂದುಸ್ಥಾನವು ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂಬುದರಲ್ಲಿ ನಮ್ಮ ವಿಶ್ವಾಸವಿದೆ

'ನಮ್ಮ ಸ್ವಾತಂತ್ರ್ಯ ಸಂಪಾದನೆಗೆ ಅತ್ಯಂತ ಪ್ರಭಾವಶಾಲಿಯಾದ ಮಾರ್ಗವು ಹಿಂಸಾಮಯವಲ್ಲವೆಂದು ನಾವು ತಿಳಿಯುತ್ತೇವೆ ಹಿಂದುಸ್ಥಾನವು ಶಕ್ತಿಯನ್ನೂ, ಸ್ವಾವಲಂಬಿತ್ವವನ್ನೂ, ಶಾಂತ ಮತ್ತು ಯೋಗ್ಯ ಉಪಾಯಗಳಿಂದ ದೊರಕಿಸಿ ಸ್ವಾತಂತ್ರ್ಯ ಪಥದಲ್ಲಿ ಹೆಚ್ಚಾಗಿ ಮುಂದಡಿ ಇಟ್ಟಿದೆ ಮತ್ತು ಈ ಮಾರ್ಗಗಳನ್ನು ಅನುಸರಿಸುವುದರಿಂದಲೇ ನಮ್ಮ ದೇಶವು ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುತ್ತದೆ.

'ಸಂಪೂರ್ಣ ಸ್ವಾತಂತ್ರ್ಯವು ನಮಗೆ ದೊರೆಯುವ ವರೆಗೆ ನಾವು ಈ ಅಹಿಂಸಾಮಯವಾದ ಯುದ್ಧವನ್ನು ಮುಂದರಿಸುವೆವೆಂಬ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಇಂದು ಪುನಃ ನಾವು ಮಾಡುತ್ತೇವೆ.'

# ಟಿಪ್ಪಣಿಗಳು.—Note......s

“ಬಂಗಾಳದ ಮಂತ್ರಿಮಂಡಲವು ಈಗ ನಮ್ಮ ದೇಶದ ಪ್ರಾಂತಿಕ ಮಂತ್ರಿಮಂಡಲಗಳಲ್ಲೆಲ್ಲ ಗೌರವಕ್ಕಾಗಿ ಹೆಸರುಗೊಂಡದೆಂದು ಮಾಜಿ ಗವರ್ನರರಾಗಿರುವ ಸರ್ ಜೋನ್ ಎಂಡರ್ಸನರವರು ಲಂಡನಿನ ಈಸ್ಟ್ ಇಂಡಿಯಾ ಎಸೋಸಿಯೇಶನ್‌ನಲ್ಲಿ ಭಾಷಣ ಮೂಲಕ ಶಿಫಾರಸು ಕೊಟ್ಟರು.

೦ ೦ ೦ ೦

ಸುಭಾಷಚಂದ್ರರು 'ಇದು ನೂತನ ವಾರ್ತೆಯೆಂದೆನ್ನುತ್ತ-ಮಂತ್ರಿಕೂಟಗಳಲ್ಲಿ ಅದೇ ಬಂಗಾಳದ ಮಂಡಲವು ಮಾತ್ರ ಹೆಚ್ಚಿನ ಅಸಮಾಧಾನವನ್ನು ಜನರಲ್ಲುಂಟು ಮಾಡಿರುವುದಾದರೂ, ಕೋಮ್ಯುನಲ್ ಎವಾರ್ಡಿನ ಪರಿಣಾಮದಿಂದಾಗಿ ಮಾತ್ರ ಇನ್ನೂ ಅಧಿಕಾರ ನಿರ್ವಹಿಸುವಂತಾಗಿ ಬಾಳಿದೆ. ಆದರೂ ಕಾಲುಗಳು ಮೋಟಾಗಿರುವ ಕಾರಣ, ಇಂದೊ-ನಾಳೆಯೋ ಮಂಡಲವು ಕುಸಿದು ಬೀಳುವುದು ನಿಜ' ಎಂದರು

೦ ೦ ೦ ೦

ಉತ್ತಮನ್‌ಜಾಯ (ಗಡಿನಾಡು)ಯಲ್ಲಿ ಕೊಂಗ್ರೆಸಿನವರನ್ನು ಕೈದು ಮಾಡಲಾಗಿತ್ತು ಉಳಿದವರನ್ನು ಕೂಡಿಸಿ, ಅವರು ಇನ್ನು ರಾಜಕೀಯ ವಿಷಯಗಳಲ್ಲಿ ಕೈಯಿಕ್ಕುವುದಿಲ್ಲವಾಗಿ ಅವರ ವಾಜ್ಮೂಲವನ್ನು ಬರೆಯಿಸಿ, ಹೆಬ್ಬೆಟ್ಟಿನ ಗುರುತು ಒತ್ತಲಾಗಿದ್ದಿತು ಒಬ್ಬನೇನೂ ಈ ಒತ್ತಾಯದ ಮುದ್ರೆ ಕೊಡದಿದ್ದನು

೦ ೦ ೦ ೦

ಅವನು ಮನೆಗೆ ಮರಳುತ್ತಲೇ ಪತ್ನಿ ಅವನ ವಿಚಾರ ತಿಳಿಯದೆ, ಅವನು ಮಾತಿಗೆ ಮಾತು ಕೊಡಲು ಸಂದೇಹಪಡುತ್ತಿದ್ದುದರಿಂದ, ಕೂಡಲೆ ಒಂದು ಕೋಲಿನಿಂದ ಬೆದರಿಸಿ, ಅವನನ್ನು ರಾಣ್ಯದ ಬಳಿಗೆ ಓಡಿಸಿ ತಂದು, ಅವನ ಬಾಯಿಯಿಂದಲೇ ಆತನ ವಾಜ್ಮೂಲವನ್ನು ಹಿಂತೆಗೆಯಿಸಿ ಇತರರಿಗೆಲ್ಲ ತನ್ನನ್ನು ಕ್ಷಮಿಸಬೇಕಾಗಿ ಬೇಡಿಕೊಳ್ಳುವಂತೆ ಮಾಡಿದಳು— ಎಂಬೀ ಕಥೆಯನ್ನು ಗಡಿನಾಡಿನ ಗಾಂಧಿಯವರು ಹೇಳುತ್ತಾರೆ ಸ್ತ್ರೀಯರು ರಾಜಕೀಯ ರಂಗದಲ್ಲಿ ಪ್ರವೇಶಿಸುವುದರ ಪರಿಣಾಮ ಮತ್ತೇನಾಗಬಹುದು?

೦ ೦ ೦ ೦

ಡುಬ್ರಿ (ಅಸ್ಸಾಮ)ಯಲ್ಲಿ ಬೆಂಕಿಕಡ್ಡಿ ಕಾರ್ಖಾನೆಯಿದೆ ಇಲ್ಲಿನ ಕೆಲಸಗಾರರಿಗೆ ಧನಿಗಳು ಸರಿಯಾಗಿ ನಡಿಸಲಿಲ್ಲವಾಗಿ ಅವರು ಮುಷ್ಕರ ಹಿಡಿದರ ಪರಿಣಾಮವುಂಟಾಗಲಿಲ್ಲ ಈಗ ಅವರು ತಾವೇ ಒಂದು ಕಾರ್ಖಾನೆ ನಿರ್ಮಿಸಲು ಪಾಲುಗಳನ್ನು ಮಾರುತ್ತಿದ್ದು ಅಸ್ಸಾಮಿನಲ್ಲೆಲ್ಲ ಇವರ ಹೊಸ ಕಂಪೆನಿಯ ಪಾಲುಗಳು ಮಾರಾಟವಾಗುತ್ತವೆ ಸರ್ ಪಿ ಸಿ ರಾಯರೇ ಇವರಿಗೆ ನಿರ್ದೇಶಕರು ಮುಷ್ಕರಗಾರರಲ್ಲಿ ವಿವೇಕವಿದ್ದರೆ ಸತ್ಪರಿಣಾಮಗಳಾಗುವುವು.

೦ ೦ ೦ ೦

ಶ್ರೀ ಹ್ಯುರಾಯುನ್ ಕಬೀರರವರು ಬಂಗಾಳ ಕೌನ್ಸಿಲಿನಲ್ಲಿ ಹೊಸತೊಂದು ಸೂಚನೆ ತಂದಿರುವರು:—ಪ್ರಾಂತ್ಯದ ಆರ್ಥಿಕ ಸ್ಥಿತಿಯು ಅಷ್ಟು ಚೆನ್ನಾಗಿಲ್ಲದ ಕಾರಣ, ಇನ್ನು ಸಿವಿಲ್ ಮತ್ತು ಪೊಲೀಸ್ ಸರ್ವಿಸುಗಳಿಗೆ ನೇಮಕಗಳನ್ನು ಇಂಗ್ಲೆಂಡಿನಿಂದ ಮಾಡಬಾರದೆಂದು ಇಂಡಿಯಾ ಸೆಕ್ರೆಟರಿಯವರಿಗೆ ಸೂಚನೆ ಮಾತ್ರವಲ್ಲ, ಪ್ರೊವಿನ್ಸಿಯಲ್ ಸರ್ವಿಸಿನಲ್ಲಿ ನೇಮಕ ಹೊಂದುವ ಯಾರೂ ಇಂಗ್ಲಿಷ್ ನೌಕರರಷ್ಟೆ ಚೆನ್ನಾಗಿ ಕೆಲಸ ಮಾಡಬಲ್ಲರು ಎಂಬುದನ್ನು ಈ ಸೂಚನೆಗೆ ಟೀಕೆಯಾಗಿ ಕೂಡಿಸಿರುವುದು ಎಷ್ಟು ನೋವನ್ನುಂಟು ಮಾಡಬಹುದು' ಇದುವರೆಗೆ ನೇಮಿಸಿದ ಸರ್ವಿಸಿನವರಿಗೆ ಸಂದ ಸಂಬಳದ ನಷ್ಟ ತುಂಬುವವರಾರು?

೦ ೦ ೦ ೦

ಫೆಡರೇಶನು ಸದ್ಯಕ್ಕೆ ಬೇಡನೆಂದು ಬೊಂಬಾಯಿ ಕೌನ್ಸಿಲಿನಲ್ಲಿ ಸೂಚನೆ ಮಂಜೂರಾಗಿದೆ ಕೊನ್ಸಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆದು ಹೊಸ ರಾಜ್ಯಾದಳಿತದ ಆಕೃತಿಯನ್ನು ಮಾಡಿಕೊಳ್ಳಬೇಕಾಗಿ ಕಳೆದ ವರ್ಷ ಮಂಜೂರಾದ ಸೂಚನೆಗೆ ಇದೊಂದು ಬಾಲ ಅತ್ತ ಬಿಕಾನೀರ ಮಹಾರಾಜರ ವರ್ಧಂತಿಯ ಕಾಲಕ್ಕೆ ನೆರೆದ ರಾಜರುಗಳು ಫೆಡರೇಶನ್ ಬೇಕೆಂದು ಒಪ್ಪಿಕೊಂಡಿದ್ದಾರೆ ರಾಜರು—ಕೌನ್ಸಿಲು ಇವೆರಡು ಪಂಗಡಗಳಲ್ಲಿ ಯಾರ ಅಭಿಪ್ರಾಯ ಗೆಲ್ಲಬಹುದೋ! '

೦ ೦ ೦ ೦

ಕೊನ್ಸಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆಯಲು ಬ್ರಿಟಿಷ್ ಸರಕಾರವು ಸಮ್ಮತಿಸದಿರುವಲ್ಲಿ, ಫೆಡರೇಶನು ಬೇಡವೆಂದೇ ಇದರ ಅರ್ಥ. ಬ್ರಿಟನು ಇನ್ನೂ ಖಂಡಿತ ನುಡಿಯದಿರುವ ಪ್ರಯುಕ್ತ, ಬಿಕ್ಕಟ್ಟು ಉಂಟಾಗಬಹುದು. ಪ್ರಜಾಪ್ರತಿನಿಧಿಗಳುಳ್ಳ ಕೌನ್ಸಿಲುಗಳೇ ಈ ರೀತಿ ಸೂಚಿಸುವುದನ್ನು ಬ್ರಿಟನ್ನು ಆಲಿಸಬೇಡವೆ?

೦ ೦ ೦ ೦

ಒಂದೊಂದು ಪ್ರಾಂತ್ಯಕ್ಕೆ ಒಬ್ಬೊಬ್ಬ ರಾಜೇಂದ್ರ ಪ್ರಸಾದರು ಇರುತ್ತಿದ್ದರೆ, ಬಹಳ ಚೆನ್ನಾಗಿತ್ತು ಎಂದು ಒರಿಸ್ಸದ ಮಂತ್ರಿಗಳೆನ್ನುವರು ಪ್ರತಿಯೊಂದು ಪ್ರಾಂತ್ಯವೂ ಒರಿಸ್ಸವಲ್ಲ, ಆಯಾ ಪ್ರಾಂತ್ಯದಲ್ಲಿ ಅಹಿಂಸೆ ಭೋಧಿಸುವ ಶಾಂತ ಪುರುಷರು ಇಲ್ಲವೆಂದಿಲ್ಲ, ಭಾರತ ವರ್ಷಕ್ಕೆ ಮಹಾತ್ಮಾಜಿಯವರೊಬ್ಬರೇ ಸಾಲದೇ?

೦ ೦ ೦ ೦

೧೯೨೩ರಲ್ಲಿ ರೀ ಕಮಿಶನು ನೇಮಕವಾಗಿ, ಎಲ್ಲ ಸರ್ವಿಸುಗಳ ಸಂಬಳಾದಿಗಳನ್ನು ಏರಿಸಲು ಶಿಫಾರಸು ಮಾಡಿತು ೧೯೨೫ರಲ್ಲೇ ಶಿಫಾರಸುಗಳೆಲ್ಲ ಜ್ಯಾರಿಗೆ ಬಂದುವು ಪಶುವೈದ್ಯಕ್ಕಾಗಿ ಅತ್ಯುತ್ತಮ ವಿದ್ಯಾಲಯವನ್ನು ಈ ದೇಶದಲ್ಲಿ ಸ್ಥಾಪಿಸುವುದೆಂದು ಇಸ್ಲಿಂಗ್‌ಟನ್ ಕಮಿಶನು ೨೦ ವರ್ಷಗಳ ಹಿಂದೆ ಶಿಫಾರಸು ಮಾಡಿತು ಈ ಶಿಫಾರಸು ಮಾತ್ರ ಹಾಗೆಯೆ ಇದೆ 'ಪಶು'ಗಳ ವಿಚಾರವೆಲ್ಲ ನಿಧಾನ, ಮೇಲು ಉದ್ಯೋಗಿಗಳ ಕಲಬು ತೀವ್ರ ಇದು ಒಂದು ಕ್ರಮ. ಎಕ್ಸಪರ್ಟರ ರಿಪೋರ್ಟುಗಳ ಮರ್ಜಿಯೂ ಹೀಗೆ, ಗತಿಯೂ ಅದೇ

೦ ೦ ೦ ೦

ಇತರ ಪ್ರಾಂತ್ಯಗಳ ಮಂತ್ರಿಗಳನ್ನು ನಾವು ಹಿಂಬಾಲಿಸುವವರಲ್ಲ ಎಂದು ಹುಕ್ಕರು ಬಂಗಾಳದಲ್ಲಿ ನುಡಿದವರು ಈಗ ನೌಖಾಲಿ ಜಿಲ್ಲೆಯಲ್ಲಿ ಮದ್ಯಪಾನ ನಿವಾರಣೆಗೆ ಶಾಸನ ಮಾಡಿರುತ್ತಾರೆ ಮದ್ರಾಸು ಪ್ರಾಂತ್ಯವು ಈ ವಿಷಯ ಮುಂದರಿದೆಂದು ಅವರಿಗೆ ಇನ್ನೂ ವಾರ್ತೆ ತಲಪಿಲ್ಲವೇನು? ಅಥವಾ ಹಾಗೆ ತಿಳಿದಲ್ಲಿ ಇತರರನ್ನು ಅನುಸರಿಸುವುದಿಲ್ಲವೆಂಬುದನ್ನು ಸತ್ಯಗೊಳಿಸಲು ಅವರು ಮದ್ಯಪಾನ ನಿವಾರಣೆ ಮಾಡುವ ನಿರ್ಧಾರವನ್ನು ರದ್ದುಗೊಳಿಸುವರೇನು?

೦ ೦ ೦ ೦

ಬಿಹಾರದ ಮಂತ್ರಿ ಜಗಲಾಲ ಚೌಧುರಿಯವರಿಗೆ ಒಬ್ಬಾನೊಬ್ಬ ಪೊಲೀಸ್ ಸಬ್ ಇನ್ಸಪೆಕ್ಟರನ ವಿಷಯ ದೂರುಗಳು ಬರುತ್ತಿದ್ದುವು ಚೌಧುರಿಯವರು ಒಕ್ಕಲಿಗರ ಉಡುಪು ಉಟ್ಟುಕೊಂಡು, ಸಬ್ ಇನ್ಸಪೆಕ್ಟರರ ಸ್ಟೇಶನಿಗೆ ತೆರಳಿ, ಕೈಜೋಡಿಸಿ 'ನನ್ನ ದನದ ಕರು ಕಾಣೆಯಾಗಿದೆ' ಎಂದು ಹೇಳಿಕೊಂಡರು. 'ಇದು ಕೊಂಗ್ರೆಸ್ ಆಫೀಸಲ್ಲ, ಪೊಲೀಸ್ ಸ್ಟೇಶನು. ತಿಳಿಯಿತೋ, ಕಾಣಿಕೆಯಿದ್ದರೆ ಕೊಡು' ಎಂದ ಪ್ರಣೆಯಾಯಿತು. ಚೌಧುರಿಯವರು ೫ ರೂಪಾಯಿ ಕೊಟ್ಟರು ಸ ಇ ಅದನ್ನು ಬಿಸುಡಿದರು 'ನಿನ್ನ ಧರ್ಮ ಬೇಡವಯ್ಯ' ಎಂದರು ಚೌಧುರಿಯವರು ಹೇಗೂ ನಾಲ್ಕು ರೂಪಾಯಿ ಕೊಡಲು ಸ ಇ. ಸ್ವೀಯೊಂದರು

೦ ೦ ೦ ೦

ಸ ಇ ರಿಪೋರ್ಟು ಬರೆಯ ತೊಡಗಿದರು

ಹೆಸರು — ಜಗಲಾಲ ಚೌಧುರಿ, ಹುಜಾರ್.
ವೃತ್ತಿ —ಹುಜೂರರಿ, ಮಂತ್ರಿ ಆಫೀಸಿನಲ್ಲಿ,
ಸ. ಇ —ಮಿಸ್ತ್ರಿ?
ಚೌಧುರಿ— ಮಂತ್ರಿ
ಸ ಇ.—ಯಾವ ಮಂತ್ರಿ?
ಚೌಧುರಿ—ಅಬಕಾರಿ ಇಲಾಖಾ ಮಂತ್ರಿ!
ಸ ಇ.— ಸ್ವಾಮಿ-(ಎದ್ದು ನಿಂತು) ಮಾನ್ಯ ಮಂತ್ರಿ ಜಗಲಾಲ ಚೌಧುರಿಯವರು!

ಸ ಇ. ತಲೆಕೆಳಗಾದನು. ಮಂತ್ರಿಯವರು ಅವನನ್ನು ಮನ್ನಿಸಿ, ಇನ್ನೆಂದೂ ಲಂಚ ಪಡೆಯಬಾರದೆಂದು ಬುದ್ಧಿ ಹೇಳಿದರು.

# ಕೈಸರನು ಜರ್ಮನಿಗೆ ಹಿಂತೆರಳುವನು

## ೫೬ ಟನ್ ಭಾರವಿರುವ ಸಂಚಾರ ವಿಮಾನ!

**ಆಸ್ಟ್ರೇಲಿಯಾದ ಪತ್ರಿಕಾ ವ್ಯವಸಾಯ.**

ಆಸ್ಟ್ರೇಲಿಯಾದ ಪತ್ರಿಕೆಗಳು ಹೆಚ್ಚಾಗಿ ಇಂಗ್ಲಿಷ್ ಕ್ರಮಗಳನ್ನೆ ಅನುಸರಿಸುತ್ತವೆ ಆಸ್ಟ್ರೇಲಿಯದಲ್ಲಿ ಇಂಗ್ಲಾಂಡಿನಲ್ಲಿರುವಂತೆ ರಾಷ್ಟ್ರೀಯ ಪತ್ರಿಕೆಗಳಿಲ್ಲ. ಕೆಲವು ನಗರಗಳಲ್ಲಿ ಕೆಲವು ವಾರ್ತಾ ಪತ್ರಿಕೆಗಳಿಗೆ ೨೦,೦೧,೦೦೦ ಪ್ರಚಾರವಿದೆ. ಪ್ರಾಂತ್ಯಗಳಲ್ಲಿ ಮಾಸಿಕ ಮತ್ತು ವಾರ ಪತ್ರಿಕೆಗಳು ಹೆಚ್ಚುತ್ತ ಬರುತ್ತವೆ ನಗರಗಳಲ್ಲಿ ವಾರಾಂತ್ಯದಲ್ಲಿ ಕೆಲವು ಪತ್ರಿಕೆಗಳು ೫೬ ಪುಟಗಳಿಂದ ಕೂಡಿದವಾಗಿ ಪ್ರಕಟವಾಗುತ್ತಿವೆ. ೫೬ ಪುಟಗಳು, ತಾಸು ಒಂದರ ೬೦,೦೦೦ ಪ್ರತಿಗಳನ್ನು ಛಾಪಿಸುವ ಯಂತ್ರಗಳ ಏರ್ಪಾಡು ಅಲ್ಲಿದೆ.

ಅಲ್ಲಿ ಜಾಹೀರಾತು ಉತ್ತಮ ಕ್ರಮಗಳನ್ನಾಚರಿಸಿ, ನಡೆಯುತ್ತದೆ. ಇದಕ್ಕಾಗಿ ಜಾಹೀರಾತು ಸಂಸ್ಥೆಗಳ ಏರ್ಪಾಡಿದೆ. ಪತ್ರಿಕಾಲಯಗಳು ಈ ಕೆಲಸವನ್ನು ನಡೆಯಿಸುವುದಿಲ್ಲ. ಅಲ್ಲಿ ಸಚಿತ್ರವಾಗಿ ಹೊರಡುವ ಪತ್ರಿಕೆಗಳಿಗೆ ಒಳ್ಳೆ ಪ್ರೋತ್ಸಾಹವಿದೆ ಈ ತರದ ಒಂದು ಪತ್ರಿಕೆಗೆ ೨೫ ಲಕ್ಷ ಪ್ರಚಾರವಿದೆ.

ಇಂಗ್ಲೆಂಡು ಪತ್ರಿಕಾ ವ್ಯವಸಾಯಗಳ ಸಂಪ್ರದಾಯವಿದೆ. ಆಸ್ಟ್ರೇಲಿಯದ ಪತ್ರಿಕಾ ವ್ಯವಸಾಯಗಳು ಉತ್ತಮ ಕೆಲಸಗಾರರು ವಿಶ್ವವಿದ್ಯಾಲಯಗಳಲ್ಲಿ ಪತ್ರಿಕಾ ಉದ್ಯಮದಲ್ಲಿ ತರಬೇತು ಗೊಳಿಸುವ ಏರ್ಪಾಡುಗಳಿವೆ. ಅಲ್ಲಿ ಸರಕಾರದೊಡನೆ ಒಂದು ಪ್ರಚಾರ ಆಪೀಸು ಇದೆ. ಮಾತ್ರವಲ್ಲದೆ ಅಲ್ಲಿನ ಪ್ರತಿಯೊಂದು ಪ್ರಾಂತೀಕ ಸರಕಾರ ಯಾ ಸ್ಥಳೀಯ ಸಂಸ್ಥೆಗೆ ಒಂದು ಪ್ರಚಾರ ಆಫೀಸಿದೆ.

**೬೫ ಟನ್ನು ಭಾರದ ಸಂಚಾರ ವಿಮಾನ.**

ಅತ್ಯಂತ ಆಧುನಿಕವೆನಿಸುವ ಜಗತ್ತಿನ ಅತ್ಯಂತ ದೊಡ್ಡದಾದ, ಮತ್ತು ಎಲ್ಲಾ ಆಡಂಬರಗಳಿಂದ ಕೂಡಿದ ವಿಮಾನವೊಂದು ಫ್ರಾನ್ಸಿನ ಟ್ರೊಬಾಸ್ ಎಂಬಲ್ಲಿ ಸಿದ್ಧವಾಗುತ್ತಿದೆ. ಇದರ ಭಾರವು ೬೫ ಟನ್ನುಗಳು. ಇದು ತಾಸು ಒಂದರ ೨೬೦ ಮೈಲುಗಳ ವೇಗದಿಂದ ಹಾರಬಲ್ಲದಂತೆ. ಈ ವಿಮಾನವು [illegible] ತಿಂಗಳೊಳಗೆ ಸಿದ್ಧವಾಗುವುದು. ವಿಮಾನಕ್ಕೆ [illegible] ಇಂಜಿನುಗಳಿವೆ. ಈ ವಿಮಾನದಲ್ಲಿ [illegible] ಪ್ರಯಾಣಿಕರನ್ನು, ೩ ಟನ್ನು ಸರಕನ್ನು ಕೊಂಡೊಯ್ಯಬಹುದಂತೆ. ಈ ವಿಮಾನದಲ್ಲಿ, [illegible] ಇಂಜಿನುಗಳ ಮರಮ್ಮತಿ ಮಾಡುವ ಏರ್ಪಾಡು ಮಾಡಲಾಗುವುದಂತೆ. ಪ್ರಯಾಣಿಕರಿಗೆ [illegible], ಊಟ ಮಾಡಲು ಇತ್ಯಾದಿ ಪ್ರಯಾಣ ಹಡಗಿನಲ್ಲಿರುವ ಸೌಕರ್ಯಗಳೆಲ್ಲಾ ಈ ವಿಮಾನದಲ್ಲಿ ಕಾಣಿಸಲಾಗುವವಂತೆ. ಈ ವಿಮಾನದಲ್ಲಿ ಪ್ರಯಾಣಿಕರು ಸ್ನಾನ ಮಾಡಬಹುದಂತೆ. ಈ ವಿಮಾನದಲ್ಲಿ ಒಟ್ಟು ೫೨೦೦ ಅಶ್ವಶಕ್ತಿಯ ಇಂಜಿನುಗಳು ಉಪಯೋಗಿಸಲಾಗುವವು.

**ಕೈಸರನು ಜರ್ಮನಿಗೆ ಹಿಂತೆರಳುವನು.**

ಕಳೆದ ಮಹಾಯುದ್ಧವು ಕೊನೆಗೊಂಡ ನಂತರದಿಂದ ಹೊಲ್ಲೆಂಡಿನಲ್ಲಿ ಅಜ್ಞಾತವಾಸ ಹೊಂದುತ್ತಿದ್ದ ಸಂಗ್ರಾಮ ಪ್ರಭು ಕೈಸರನು ತನ್ನ ಸ್ವದೇಶದಲ್ಲಿ ನಾಜಿಯ ಇಚ್ಛೆಯಿಂದ ಕೂಡಿದವನಾಗಿ ಜರ್ಮನಿಗೆ ಹಿಂತೆರಳುವನಂತೆ ಅವನ ೧೯ ವರ್ಷಗಳ ಅಜ್ಞಾತವಾಸವು ಈಗಾಗಲೇ ಮುಗಿದಿರುತ್ತದೆ. ಜರ್ಮನಿಗೆ ಹಿಂತೆರಳುವರೆ ಆತನಿಗೆ ಈಗ ಯಾವತ್ತು ನಿರ್ಬಂಧಗಳಿರುವುದಿಲ್ಲವೆಂದು ತಿಳಿದುಬರುತ್ತದೆ. ೧೯ ವರ್ಷಗಳ ಕಾಲ ದೇಶದ ಹೊರಗೆ ಅಜ್ಞಾತವಾಸದಲ್ಲಿದ್ದಾತನಿಗೆ ಈಗ ಬೇಸರ ಬಂದಾಗಿ, ಆತನು, ರಾಜಕೀಯದಲ್ಲಿ ಕೈಹಾಕಲಾರನೆಂದು ಭರವಸೆಯಿತ್ತ ಪ್ರಕಾರ ಆತನು ಜರ್ಮನಿಗೆ ಹಿಂತೆರಬಹುದೆಂದಾಗಿದೆ. ಆತನು ಜರ್ಮನಿಗೆ ಹಿಂತೆರಳುವುದರಲ್ಲಿ ಹಾಲೆಂಡಿಗೂ ಫ್ರಾನ್ಸಿಗೂ ಯಾವತ್ತೂ ತರದ ಆಕ್ಷೇಪವಿರುವುದಿಲ್ಲವಂತೆ. ಬ್ರಿಟನಿನ ಮತವೂ ಇನ್ನೂ ತನಕ ತಿಳಿದು ಬರಲಿಲ್ಲ. ಕೈಸರನಿಗಾಗಿ ಜರ್ಮನಿಯಲ್ಲಿ ಒಂದು ಮನೆಯು ಸಿದ್ಧವಾಗುತ್ತಿದೆ.

**ತೆರಿಗೆ ಹೆಚ್ಚಿಸಿರಿ ಎಂದು ಹೇಳುವ ಜನರೂ ಇದ್ದಾರೆ!**

ಕರಕಂದಾಯಗಳು ಹೆಚ್ಚಾದುವು, ಅವನ್ನು ಕಡಿಮೆಮಾಡಿರೆಂದು ಅಧಿಕಾರಿಗಳನ್ನು ಕೇಳಿಕೊಳ್ಳುವ ಜನರ ಕೂಗಿನ ನಡುವೆಯಿಂದ ಒಂದು ವಿಚಿತ್ರಕೂಗು ನರ್ [illegible] ನಗರದಿಂದ ಹೊರಹೊರಟು ಪ್ರಪಂಚದ ಹತ್ತು ದಿಕ್ಕುಗಳಿಂದ ಪ್ರತಿಧ್ವನಿಸುತ್ತಿದೆ. [illegible] ನಗರದ ಜನರು ತಮ್ಮ ತೆರಿಗೆಯನ್ನು ಹೆಚ್ಚಿಸಿರಿ, ನಿಜಕ್ಕೂ ಹೆಚ್ಚಿಸಿರಿ ಎಂದು ಅಧಿಕಾರಿಗಳನ್ನು ಬೇಡಿಕೊಂಡಿದ್ದಾರೆ.

[illegible] ನಗರವು ಪೋಲಿಷ ಪೊಮೆರೇನಿಯದಲ್ಲಿ ಡಾನ್‌ಜಿಗ ನಗರಕ್ಕೆ ಸಮೀಪದಲ್ಲಿದೆ. [illegible] [illegible]

**ಪಂಡಿತ ಮಾಲವೀಯರು**

[illegible] ವರ್ಷಗಳ [illegible] ಎಂಬ ಚಿಕಿತ್ಸೆಯನ್ನು ನಡೆಸ [illegible] ಈ ಚಿಕಿತ್ಸೆಯ ಸಮಯ ನಾಲವಿಯರು ಒಂದು ಕುಟೀರದೊಳಗಿದ್ದು, ಬಹಿರ್ಜಗತ್ತಿನ ಯಾವತ್ತೂ ವ್ಯವಹಾರವನ್ನು ತೊರೆದುಬಿಡುವರಂತೆ. ಚಿಕಿತ್ಸೆ ಸಮಯ ಅವರು ಹಾಲು ಮತ್ತು [illegible] [illegible] ಚಿಕಿತ್ಸೆಯಿಂದ [illegible] ೧೯೩೩ ವರ್ಷ [illegible] ಚಿಕಿತ್ಸೆಯು [illegible] ಚಿಕಿತ್ಸೆಯ ಪರಿಣಾಮವಾಗಿ ಮಾಲವೀಯರ ಆಯುಷ್ಯವು ೩೦ ವರ್ಷಗಳಿಗೆ ಹೆಚ್ಚಿಗೆಯಾಗುವುದೆಂದೂ ಊಹಿಸಲಾಗಿದೆ. ಈ ಚಿಕಿತ್ಸೆಯ ಪರಿಣಾಮವು ಏನಾಗುವುದೆಂದು ನೋಡಬೇಕು.

**ಐರ್ಲೆಂಡು ಸ್ವತಂತ್ರ ಜನಾಂಗವಾಗಿರುವುದು**

'ಐರ್ಲೆಂಡಿನ ಜನರಿಗೆ, ವಾಯಿಕ್‌ಡಿವೆಲರನು ಕಳೆದ ವರ್ಷಾಂತ್ಯದಲ್ಲಿ ಕೊಟ್ಟ ಸಂದೇಶವು ಇಲ್ಲಿ ಕೊಡಲಾಗಿದೆ. 'ಇಂದಿಗೆ ಕೊನೆಗೊಳ್ಳುತ್ತಿರುವ ಈ ವರ್ಷವು ಅತಿ ಮಹತ್ವದೆನ್ನಬೇಕು. ಈ ವರ್ಷವು ನಮ್ಮ ಚರಿತ್ರೆಯಲ್ಲಿ ಪ್ರಜ್ವಲಿತವಾಗಿ ಕಾಣಿಸಿಕೊಳ್ಳುವುದು. ಕಾರಣ ಈ ವರ್ಷದಲ್ಲಿ, ನಮ್ಮ ಹಲವು ವರ್ಷಗಳ ಪರಿಶ್ರಮ ಮತ್ತು ಪರಿತ್ಯಾಗದ ಫಲದಿಂದಾಗಿ, ನಾವೇ ನಮಗೆ ಬೇಕಾದ ಸರಕಾರ ಶಾಸನ ನಮ್ಮ ನಮಗೆನೆ ಕೊಟ್ಟಿರುವೆವು.

'ಅಮೇರಿಕದಿಂದ ತಮ್ಮ ಚಳವಳಕ್ಕಾಗಿ ಸಹಾಯ್ಯ ಧನವಿತ್ತ ಐರ್ಲೆಂಡಿನ ಮಿತ್ರರಿಗೆ ನನ್ನ ಅಭಿನಂದನೆಗಳು. ನಮ್ಮ ಆ ಕಷ್ಟದ ಸಮಯದಲ್ಲಿ ನಮಗೆ ಬೇಕಾದ ಹಣವನ್ನು ಒದಗಿಸಿ, ನಮ್ಮ ಕಾರ್ಯವು ಯಶಸ್ವಿಯಾಗುವಂತೆ ಮಾಡಿದವರೆನ್ನಬಹುದು.

ಈ ಭಾರಿಯ ಕ್ರಿಸ್‌ಮಸ್ ದಿನ ಗೊಂದು ಮಹಾಹಬ್ಬವೆ ಆಗುವುದು ಕಾರಣ ಈ ಸಮಯದಲ್ಲ ನಮ್ಮಿಂದಲೆ ರಚನೆಯಾದ ಸರಕಾರ ಶಾಸನವು ರೂಢಿಗೆ ಬಂದಿರುತ್ತದೆ ಇದು ನಮ್ಮ ಹಲವು ವರ್ಷ ಅವಿಶ್ರಾಂತ ಪರಿಶ್ರಮ ಪರಿತ್ಯಾಗದ ಫಲವಾಗಿರುತ್ತದೆ.

'ಹಿಂದಿನ ಕಾಲದ [illegible] ನಮ್ಮ ರಾಷ್ಟ್ರೀಯ [illegible] ನಾಗರೀಕ ಹಕ್ಕುಗಳು [illegible] [illegible]

[illegible]

ಪೂರೈಸಲಾಗುವುದಿಲ್ಲ. ಉತ್ತಮ ದೃಢವಾದ ಅಡಿಕಟ್ಟಿನಲ್ಲಿ ನಮ್ಮ ಕಾರ್ಯಾರಂಭವಾಗಿರುವುದೆಂಬ ಭರವಸೆಯು ನಮಗಿರಬೇಕು. ನಮ್ಮ ಮಕ್ಕಳಲ್ಲಿ ಉತ್ತಮ ಗುಣಗಳ ಮೇಲೆ ನಮ್ಮ ಭವಿಷ್ಯ ಹೊಂದಿಕೊಂಡಿರುವುದು. ಆದ್ದರಿಂದ ನಮ್ಮ ಮಕ್ಕಳ ಶಿಕ್ಷಣವು ನಮ್ಮ ಮುಂದಿನ ಆದರ್ಶಗಳಿಗೆ ಸರಿಯಾಗಿ ನಡೆಯಬೇಕು, ಇತ್ಯಾದಿ, ಇತ್ಯಾದಿ.

**ಜಪಾನು ತನ್ನ ವರ್ತನೆಯನ್ನು ಬದಲಾಯಿಸಬಹುದು.**

# ಜಪಾನು ತನ್ನ ವರ್ತನೆಯನ್ನು ಬದಲಾಯಿಸಬಹುದು!

ಚೀನಾ ಜಪಾನ್ ಸಂಘಾನದ ಬಗ್ಗೆ ನಡೆದ ನಡೆದ ಪ್ರಯತ್ನಗಳು ಈಗ ನಿಷ್ಫಲವಾಗಿರಲು, ಜಪಾನು ಮುಂದಕ್ಕೆ ಚೀನಾದ ನಾಂಕಿಂಗ್ ಸರಕಾರವನ್ನು ಮನ್ನಿಸದು ಬದಲಾಗಿ, ತನ್ನ ಅಧೀನದಲ್ಲಿ ಅಲ್ಲೊಂದು ಸ್ವಯಂಪ್ರಭುತ್ವ ಸರಕಾರದ ಸ್ಥಾಪನೆಯನ್ನು ಸದ್ಯದಲ್ಲೇ ಮಾಡಬಹುದು. ಆದರೆ, ಯುದ್ಧವು ಬೇಗನೇ ಕೊನೆಗೊಳ್ಳುವ ಚಿಹ್ನೆಗಳು ಕಾಣಬರುವುದಿಲ್ಲ. ಬಹಳ ದೀರ್ಘ ಸಮಯ ವಿರೋಧವನ್ನು ನಡೆಸಿಕೊಂಡು ಹೋಗುವರೆ ಚೀನಾಕ್ಕೆ ಸಾಧ್ಯವಾದರೆ ಅದರಿಂದ ಪರಿಣಮಿಸಬಹುದಾದ ಅಂತರಾಷ್ಟ್ರೀಯ ತೊಡಕುಗಳಿಂದ ಜಪಾನು ತನ್ನ ವರ್ತನೆಯನ್ನು ಬದಲಾಯಿಸುವ ಸಂಭವಗಳುಂಟಾಗಬಹುದು.

**ನೂತನ ಇಂಡಿಯಾ ಆಕ್ಟಿನಲ್ಲಿ ಬದಲಾವಣೆಗಳಾಗಬಹುದು.**

[illegible] ಅಭಿಪ್ರಾಯಗಳನ್ನು [illegible], ಅವುಗಳನ್ನು [illegible] ಒಂದು [illegible] ಅದನ್ನು [illegible] ಸ್ವದೇಶಕ್ಕೆ ಹಿಂತಿರುಗುವರು [illegible] [illegible] ಕೆಲವು ಬದಲಾವಣೆಗಳ [illegible] [illegible]

ಆ ನೋಯುವ ಗಂಟಲು ಅಪಾಯಕರ.

[illegible]

ಪೆಪ್ಸ್‌ನ್ನು [illegible]

ಎಲ್ಲಾ [illegible]

[illegible] -ಮೆಸ್ಸರ್ಸ್ ದಾಧಾ ಎಂಡ್ ಕೊ, ಪಿ. ಬಿ. [illegible]

[illegible]

ಪೆಪ್ಸ್ PEPS

# ಮಹಾತ್ಮಾಜಿಯವರನ್ನು ರಕ್ಷಿಸಿರಿ!

ಅಂಡಮಾನದಿಂದ ಹಿಂತಿರಲಾದ ರಾಜಕೀಯ ಕೈದಿಗಳು ಹಸಿವಿನ ಮುಷ್ಕರವನ್ನು ಹಿಡಿದಿರುವರಷ್ಟೆ. ಆದರೆ ಅವರ ಈ ಅವಸರದಿಂದ ಅವರು ಮಾತ್ರ ವ್ಯಥೆಪಡಬೇಕಾಗಿ ಬರುವುದು, ಕಾರಣ, ಮಹಾತ್ಮಾಜೀಯವರ ಕೆಟ್ಟ ಆರೋಗ್ಯಸ್ಥಿತಿ, ಅದಿನ್ನೂ ಸಹಜಸ್ಥಿತಿಗೆ ಬಂದಿಲ್ಲವೆಂದೂ, ಗಾಂಧಿಜೀಯವರು ಸಂಪೂರ್ಣ ಗುಣಹೊಂದಬೇಕಾದರೆ ಇನ್ನೂ ಕೆಲಂಚ ಸಮಯ ಬೇಕಾಗುವುದೆಂದೂ ಕಳೆದ ವಾರದ ಹರಿಜನ ಪತ್ರಿಕೆಯಲ್ಲಿ ಶ್ರೀ। ಮಹದೇವ ದೇಸಾಯಿಯವರು ಬರೆದಿರುವರು. ಅಲ್ಲದೆ ಮಹಾತ್ಮಾಜೀಯವರ ತಲೆಯಲ್ಲಿ ಅಂಡಮಾನ ಕೈದಿಗಳು ಮತ್ತು ಡಿಟೆನ್ಯುಗಳ ವಿಚಾರವು ಮೇಲಕ್ಕಿರುವುದೆಂದೂ, ರಾಜಕೀಯ ಕೈದಿಗಳ ಬಂಧವಿಮೋಚನೆಗಾಗಿಯೆ ಅವರು ಶೆಗಾಂವಿಗೆ ಹಿಂತೆರಳಿದ್ದೆಂದೂ, ಅವರ ವಿಮೋಚನೆಗಾಗಿ ತನ್ನ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧನಿರುವೆನೆಂದು ಮಹಾತ್ಮಾಜೀಯವರು ಸಂಕಲ್ಪಮಾಡಿರುವರೆಂದೂ, ಶ್ರೀ। ಮಹದೇವ ದೇಸಾಯಿಗಳು ಬರೆಯುತ್ತಾರೆ.

ಮಹಾತ್ಮಾಜಿಯವರಿಂದ ಅಂಡಮಾನ ಕೈದಿಗಳ ವಿಚಾರವು ನಿರ್ಲಕ್ಷ್ಯವಾಗಲಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಪಂಜಾಬಿನಲ್ಲಿ ಮತ್ತು ಇತರ ಕೆಲವು ಕಡೆಗಳಲ್ಲಿ ಮುಷ್ಕರ ಹಿಡಿದಿರುವ ಕೈದಿಗಳು ತಮ್ಮ ಛಲವನ್ನು ಬಿಡದಿದ್ದರೆ, ಆಗ ಮಹಾತ್ಮಾಜೀಯವರು ತಮ್ಮ ಆರೋಗ್ಯದ ಲಕ್ಷ್ಯವನ್ನು ಮಾಡದೆ ಕಾರ್ಯಸಾಧನೆಯಲ್ಲಿ ಕೈಹಚ್ಚಬೇಕಾಗುವುದು. ಅದರಿಂದ ಏನಾದರೂ ಹಾಳು ಸಂಭವಿಸಿದಲ್ಲಿ—ಈ ಕೈದಿಗಳು, ಮತ್ತೆ ತಮ್ಮ ಅಸಮಾಧಾನದ ಕುರಿತು ಚಿಂತಿಸಬೇಕಾಗುವುದು, ಆದರೆ ಒಂದು ವಿಚಾರವಿದೆ. ಬಂಗಾಳ ಮತ್ತು ಪಂಜಾಬು ಪ್ರಾಂತ್ಯಕೀಯ ಸರಕಾರಗಳು ಈ ಕುರಿತು ಯಾವುದನ್ನೂ ಮಾಡದವರಾಗಿ ಸುಮ್ಮನಿರುವುದರಲಿ ಅರ್ಥವಿಲ್ಲ. ಪ್ರಜಾಸತ್ತೆಯ ಸರಕಾರಗಳಾದ ಇವುಗಳಿಗೆ ಯಾವ ಆತಂಕಗಳಿರ್ರುವುವೊ ನಮಗೆ ಕಾಣಿಸವು. ಅದರಲ್ಲೂ ತಾವು ಹಿಂಸಾಮಯ ನೀತಿಯ ಕುರಿತು ನಂಬಿಕೆಯನ್ನು ಬಿಟ್ಟಿರುವೆವೆಂದೂ, ಅಂಡಮಾನ ಕೈದಿಗಳಿಂದ (ಮಹಾತ್ಮಾಜಿಯವರ ಪ್ರೇರಣೆಯಿಂದ) ಒಳ್ಳೇ ಭರವಸೆಗಳು ದೊರೆತಿದ್ದಾಗಲೂ, ಪ್ರಾಂತ್ಯಕೀಯ ಸರಕಾರಗಳು ಅವರ ಬಿಡುಗಡೆ ಮಾಡದೆ, ಸುಮ್ಮನಿರಲು ಕಾರಣವೇನು? ಅವರಿಗೆ ಈಗ ಯಾವ ಹೆದರಿಕೆಯು ಇರುವುದು, ಸಮಸ್ತ ಹಿಂದೂದೇಶದ ಪ್ರಜಾಮತವು ರಾಜಕೀಯ ಕೈದಿಗಳ ಬಿಡುಗಡೆಯನ್ನು ಕೋರುತ್ತಿರುವಾಗ, ಪ್ರಾಂತ್ಯಕೀಯ ಸರಕಾರಗಳು ಅವುಗಳ ನಿರ್ಲಕ್ಷ್ಯ ಮಾಡುವುದೇಕೆ? ಈ ಸರಕಾರಗಳು ಈ ಕುರಿತು ತಕ್ಕ ವ್ಯವಸ್ಥೆಯನ್ನು ಮೊದಲೆ ಮಾಡುತಿದ್ದರೆ ಈಗಿನ ಸಂದಿಗ್ಧ ಸ್ಥಿತಿಯು ಉಂಟಾಗುತ್ತಿರಲಿಲ್ಲ.

ಸ್ಥಿತಿಯು ಕೆಟ್ಟುಹೋಗುವ ಮೊದಲೆ, ಈ ಸರಕಾರಗಳಬುದ್ಧಿಯು ವಿವೇಕವಾಗುವುದರಲ್ಲಿ ಉತ್ತಮವಿದೆ. ಪ್ರಾಂತ್ಯಗಳಲ್ಲಿ ಹಿಂಸಾನೀತಿ ಆಚರಣೆಯಾಗದಂತೆ ಮಹಾತ್ಮಾಜಿಯವರ ಸೇವೆಯನ್ನು ಪಡೆಯುವ ಅವಕಾಶವು ಅವರಿಗೆ ದೊರೆತಿರುತ್ತದೆ. ಅವರು ಮಹಾತ್ಮಾಜೀಯರ ಕೋರಿಕೆ ಪ್ರಕಾರ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮಾಡಿ, ಮಹಾತ್ಮಾಜಿಯರ ಪವಿತ್ರ ಜೀವವನ್ನು ರಕ್ಷಿಸಬಹುದು. ಆದರೆ ಬಂಗಾಳ ಮತ್ತು ಪಂಜಾಬು ಸರಕಾರಗಳು ತಮ್ಮ ಈಗಿನ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಇರುವ ವರ್ತನೆಯನ್ನು ಬದಲಾಯಿಸದಿದ್ದರೆ, ಆಗ ಮಹಾತ್ಮಾಜೀಯರಿಗೆ, ಆ ಕೈದಿಗಳು ಮೃತ್ಯುವನ್ನು ಹೊಂದಲು ಮಾಡಿದ ದೀಕ್ಷೆಯನ್ನು ತೊರೆಯುವಂತೆ ಮಾಡಲು ಅಸಾಧ್ಯವೆನಿಸಬಹುದು. ಇದರಿಂದ ಮಹಾತ್ಮಾಜಿಯರಲ್ಲಿ ಅಲ್ಲೋಲ ಕಲ್ಲೋಲ ಸ್ಥಿತಿಯು ಉಂಟಾಗಿ ಅವರ ಆರೋಗ್ಯವೆ ಕೆಟ್ಟುಹೋಗಬಹುದು. ಅವರ ಜೀವನದ ಅಂತ್ಯವಾಗಲೂ ಬಹುದು. ಆಗ ಸಮಸ್ತ ಭರತಖಂಡದ ಸರಕಾರವನ್ನೆ ಕಂಪನಗೊಳಿಸುವ ಸ್ಥಿತಿಯೂ ಉಂಟಾಗಬಹುದು.

---


### ಊಟವಾದೊಡನೆ ಆತನಲ್ಲಿ ಸಂಕಟವಾಗುತ್ತಿತ್ತು
### ಕಠಿಣ ತರದ ಅಜೀರ್ಣಾವಸ್ಥೆಯು ಕ್ರುಶನ್‌ನಿಂದ ನಿವಾರಿಸಲ್ಪಟ್ಟಿತು
### ಈಗ ಆತನು ಹೊಸ ಮನುಷ್ಯನಾಗಿರುವನು.

ಈತನನ್ನು ಅಜೀರ್ಣಾವಸ್ಥೆಯಿಂದ ಗುಣಪಡಿಸಿದ ಚಿಕಿತ್ಸೆಯು, ಪ್ರತಿಯೊಬ್ಬರು ಉಪಯೋಗಿಸುವುದರಲ್ಲಿ ಉತ್ತಮವಿದೆ. ಆತನು ಹೀಗೆಂದು ಬರೆದಿರುವನು.

ಎರಡು ವರ್ಷಗಳ ಹಿಂದೆ ಅಜೀರ್ಣ ಪೀಡಿತನಾಗಿ, ಹಸಿವಿಲ್ಲದವನಾಗಿ ನಾನು, ಬೆನ್ನಿನಲ್ಲಿ ಒಂದು ಕಠಿಣ ತರದ ನೋವನ್ನು ಅನುಭವಿಸುತ್ತಿದ್ದೆ. ಊಟದ ನಂತರ ನನ್ನಲ್ಲಿ ಸಂಕಟಭಾವವು ಉಂಟಾಗುತಿತ್ತು. ಊಟ ಮಾಡಲು ನನ್ನಲ್ಲಿ ಆಸ್ಥೆಯೂ ಹಸಿವೂ ಇರಲಿಲ್ಲ. ಒಬ್ಬ ಸ್ನೇಹಿತನು ಕ್ರುಶನ್ ಲವಣವನ್ನು ಪರೀಕ್ಷಾರ್ಥವಾಗಿ ಉಪಯೋಗಿಸಲು ನನ್ನನ್ನು ಬೋಧಿಸಿ ನಾನು ಆತನು ಹೇಳಿದ ಹಾಗೆ ವರ್ತಿಸಿದೆನು. ಅದರ ಫಲವಾಗಿ ನಾನೀಗ ಅತ್ಯಂತ ಸುಖವಂತನಾಗಿರುವೆನು. ಸ್ವಲ್ಪ ಸಮಯದಲ್ಲಿ ನನಗೆ ಬಾರಿ ಉಪಶಮನವು ದೊರೆಕಿತು. ಸಂಪೂರ್ಣ ಗುಣ ಹೊಂದುವ ತನಕ ನಾನು ಕ್ರುಶನ್ ಲವಣಗಳನ್ನು ಸೇವಿಸಿದೆನು. ಈಗ ನಾನೊಬ್ಬ ಹೊಸ ಮನುಷ್ಯ ಎಂಬ ಭಾವವು ನನ್ನಲ್ಲಿ ಉಂಟಾಗಿರುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ನಾನು ಯಾವ ಸ್ಥಿತಿಯಲ್ಲಿದ್ದೆನೋ ಅದೇ ಸ್ಥಿತಿಯನ್ನು ಮತ್ತೊಮ್ಮೆ ಹೊಂದಿರುವೆನು.

ಜೀರ್ಣರಸಗಳು ಸರಿಯಾಗಿ ಸುರಿಯದಿದ್ದರೆ ನೀವು ಸೇವಿಸಿದ ಆಹಾರದಿಂದ ಸತ್ವವು ನಿಮ್ಮ ದೇಹವನ್ನು ಸೇರದೆ, ಆಹಾರವು ನಿಮ್ಮ ಹೊಟ್ಟೆಯೊಳಗೆ ಕೊಳೆತು ಹಾನಿಕರ ವಿಷದ್ರಾವಕಗಳನ್ನು ಹೊರಡಿಸುತ್ತದೆ. ಆಗ ನಿಮಗೆ ಬೇಕಾದುದು – ನಿಸರ್ಗದ ಟಾನಿಕ್ ಆದ ಆರು ಲವಣಗಳು.

ಈ 6 ಲವಣಗಳು ನಿಮಗೆ ಕ್ರುಶ್ಶನ್‌ನಲ್ಲಿ ದೊರಕುತ್ತದೆ. ಅವುಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ತರದ ಉಪಯೋಗವಿದೆ. ಕ್ರುಶ್ಶನ್ ಲವಣಗಳ ಸೇವನೆಯಿಂದ ಎಂಜಲು ಸರಿಯಾಗಿ ಉಂಟಾಗಿ ಅದರಿಂದ ಒಳ್ಳೇ ಹಸಿವೆಯು ಉಂಟಾಗುತ್ತದೆ. ನಂತರ ಹೊಟ್ಟೆಯು, ಜೀರ್ಣರಸಗಳು ಸರಿಯಾಗಿ ಸರಿಯುವಂತೆ ಮಾಡಿ, ತಿಂದ ಆಹಾರವು ಸಂಪೂರ್ಣ ಜೀರ್ಣಿಸುವ ಹಾಗೆ ಮಾಡುವ ಪ್ರಭಾವವು ಕ್ರುಶನ್ನಿಗೆ ಇದೆ. ನಂತರ ಈ ಲವಣಗಳಿಂದ, ಕರುಳುಗಳಲ್ಲೂ ಒಂದು ತರದ ರಸವನ್ನು ಹೊರಡಿಸಿ ಹೊಟ್ಟೆಯಲ್ಲಿ ಜೀರ್ಣವಾಗದ ಆಹಾರವನ್ನು ಜೀರ್ಣಗೊಳಿಸುವ ಪ್ರಭಾವವು ಕ್ರುಶನ್ನಿಗೆ ಇದೆ. ಕ್ರುಶನ್ ಲವಣಗಳು ಎಲ್ಲಾ ಬಜಾರುಗಳಲ್ಲೂ ದವಾಖಾನೆಗಳಲ್ಲೂ ಅಂಗಡಿಗಳಲ್ಲೂ ದೊರಕುತ್ತದೆ.

## WANTED

For The South India Co-operative Insurance Society Ltd., Madras the following:-

(1) A District Organiser on an inclusive pay and T. A. of Rs. 70/- per month and commission.

(2) Agents in different parts of the District. Applicants will have to interview the Secretary of the society who will tour the District on the following dates:-

11-2-1938 Moodabidri and Karkal.
12-2-1938 Coondapur & Brahmawar
13-2-1938 Udipi and Moolky.
14-2-1938 Mangalore.
15-2-1938) Puttur and Kasargod.
16-2-1938)

Apply for conditions of appointment and further particulars to the undersigned, to whom all applications should reach by 5-2-1938.

The Secretary,
**The South Canara Central Co-operative Bank, Ltd., Mangalore.**

---


# "NACET" BLADES

ನೆಸೆಟ್ಟನ್ನು ಪಡೆಕೊಂಡು ಕಡಿಮೆ ಬೆಲೆಯ ಖಾತ್ರಿ ಬ್ಲೇಡುಗಳನ್ನು ಪಡೆಯಿರಿ. ಅವುಗಳ ಕಡಿಮೆ ಬೆಲೆ ಮತ್ತು ವಿಶೇಷ ಗುಣಗಳಿಂದಲೇ ಅವುಗಳು ಜನಪ್ರಿಯವಾಗಿವೆ. ಬ್ಲೇಡುಗಳಿಗೆ ಬಾಳ್ವಿಕೆ ಬಹಳ. ಮೂರು ಗೂಟದ ರೇಜರುಗಳಲ್ಲಿ ಉಪಯೋಗಿಸಬಹುದು.

**8 ಆಣೆಗಳಿಗೆ ಬ್ಲೇಡುಗಳು 10**

ಗೋದ್ರೆಜ್ ಬೇವಿನೆಣ್ಣೆ ಸಾಬೂನು ಬಹಳ ಪುರಾತನ ಕಾಲದಿಂದಲೂ ಚರ್ಮವ್ಯಾಧಿಗಳಿಗೆ ಅತ್ಯುತ್ತಮ ಗುಣಕಾರಿಯೆಂದು ಪರಿಗಣಿಸಲ್ಪಟ್ಟ ನೀಮ್ ಅಥವ ಬೇವಿನ ಎಣ್ಣೆಯಿಂದಲೇ ಗೋದ್ರೇಜರ ಲಿಮ್ಡಾ ಸಾಬೂನುಗಳನ್ನು ತಯಾರಿಸಲಾಗುತ್ತವೆ. ಇವುಗಳು ಇತರ ಎಲ್ಲ ಸಾಬೂನುಗಳಿಗಿಂತಲೂ ಉತ್ತಮವಾದುವುಗಳೆಂದು ಹೇಳುವ ಹಕ್ಕುಳ್ಳವುಗಳಾಗಿವೆ.
ಮುಖ್ಯ ವಿಷಯ: ತಾಜಾ ಗೋದ್ರೇಜ್ ಸಾಬೂನುಗಳಿಗಾಗಿ ಅವುಗಳ ಮೇಲಿರುವ 'ಚಾವಿ' ಮುದ್ರೆಯನ್ನು ಗಮನಿಸಿರಿ.

SOLE AGENTS:—
NADIRSHAW PRINTER & CO.
BOMBAY


---

# ನೋಟೀಸು

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

S. E. No. 264/1937.

1 ಕೆ. ಕಣ್ಣನ್ ವೈದ್ಯರ್ ರಾಮ ವೈದ್ಯರ ಅಳಿಯ ಪ್ರೊಪ್ರೈಟರ್–ಶಿವಾನಂದ ವಿಲಾಸ ವೈದ್ಯಶಾಲಾ ಕಾಸರಗೋಡು ಕಸಬಾ (ವಾತ್ರ.) ವಾರೀಸುದಾರರು–2 ಚೋಯುಕ್ಕಿ 8 ಕಾತ್ಯಾಯನಿ, 4 ಶಾರದ—8-4ನೇಯವರು ಮ್ಯಾನರರು ಕ್ಷೇಮಚಿಂತಕಳು ತಾಯಿ 2ನೇ ವಾದಿ— ವಾದಿರು ಮತ್ತು

ರಾಮಯ್ಯರೈ ಅಜಿಲಾಡಿ ಗುತ್ತು ತಿಮ್ಮಪ್ಪರೈ ಅಳಿಯ—ಪುತ್ತೂರು ತಾಲೂಕು ನೆಲ್ಲಿಕಟ್ಟೆ ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನೆಂದರೆ:—

ಪ್ರತಿವಾದಿಯು ವಾದಿಯ ಔಷಧಿ ಅಂಗಡಿಯಿಂದ ತಾ. 15—3—37ರ ವರೆಗೆ ಪಡೆದ ಔಷಧಿಯ ಕ್ರಯ ಮತ್ತು ಆತನಿಗೆ 1ನೇ ವಾದಿಯು ಚಿಕಿತ್ಸೆ ಮಾಡಿದರ ಬಾಬ್ತು ಪ ಸದ್ರಿ ಔಷಧಿಯ ಕ್ರಯದ ಐವಜಿನ ಮೇಲಣ ಬಡ್ಡಿ ವಗೈರೆಯಿಂದ ಕೂಡಿ ರೂಪಾಯಿ 291-7-2ಕ್ಕೆ 1ನೇ ವಾದಿಯು ಪ್ರತಿವಾದಿಯ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ವ್ಯಾಜ್ಯ ದಾಖಲ್ಲು ಮಾಡಿರುತ್ತಾನೆ. ಈಗ 1ನೇ ವಾದಿಯು ಮೃತಪಟ್ಟು 2ರಿಂದ 4ನೇ ವಾದಿರು ಆತನ ವಾರೀಸುದಾರರಾಗಿರುತ್ತಾರೆ. ಸದ್ರಿ ವ್ಯಾಜ್ಯವು ಪ್ರತಿವಾದಿಯ ಹಾಜರಾತಿ ಬಗ್ಗೆ ತಾ. 10—2—1938ಕ್ಕೆ ಇಟ್ಟಿರುವುದರಿಂದ ಆ ದಿವಸ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ವ್ಯಾಜ್ಯವು ಎಕ್ಸಪಾರ್ಟಿಯಾಗಿ ತೀರ್ಮಾನಿಸಲಾಗುವುದು—ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

Kasaragod, 25-1-1938.

**N. K. Nambiar,**
*Advocate for Pltf.*

DIAMONDS! DIAMONDS!
BEST BRILLIANCY.

# K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

## ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

**ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.**
**ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಪಂಜಿನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ಬೆಳ್ತಿ ಹೊಸ ಗುಡ್ಡು ಮು. | 1 — 10 | 1 — 10 |
| ಬಾಕ ಅಕ್ಕಿ ... | 3 — 8 | 4 — 0 |
| ಸುಗ್ಗಿ ... | 4 — 0 | 4 — 0 |
| ಗುಡ್ಡು . | 4 — 3 | 4 — 3 |
| ಊರ ಅವ್ವಲ್ ಬೆಳ್ತಿಗೆ . | 4 — 7 | 4 — 7 |
| ರಂಗೂನು ಬೆ ಗೋ ೧ಕ್ಕೆ... | 7 — 2 | 7 — 4 |
| ಎಲ್ಲೂರು ಬೆ. ಮು.೧ಕ್ಕೆ... | 3 — 14 | 4 — 0 |
| ಗೋದಿ ಗೋಣಿ ೧ಕ್ಕೆ ... | 13 — 0 | 14 — 8 |
| ಕೊಗರಿ ಗೋಣಿ ೧ಕ್ಕೆ .. | 11 — 8 | 18 — 8 |
| ಹುರುಳಿ ಗೋಣಿ ೧ಕ್ಕೆ ... | 6 — 0 | 6 — 2 |
| ಅಲಸಂದೆ ಗೋಣಿ ೧ಕ್ಕೆ ... | 9 — 8 | 10 — 8 |
| ತೊಗರಿಬೇಳೆ ಗೋಣಿ೧ಕ್ಕೆ.. | 17 — 8 | 18 — 0 |
| ಉದ್ದು ಗೋಣಿ ೧ಕ್ಕೆ . | 9 — 0 | 9 — 8 |
| ಹೆಸರು ಗೋಣಿ ೧ಕ್ಕೆ . | 9 — 12 | 10 — 8 |
| ಊರುಬೆಲ್ಲ ಖಂಡಿ ೧ಕ್ಕೆ ... | 27 — 0 | 33 — 0 |
| ಉಪ್ಪು ಗೋಣಿ ೧ಕ್ಕೆ ... | 4 — 8 | 5 — 4 |
| ಕೊಬ್ರಿ ಖಂಡಿ ೧ಕ್ಕೆ . | 50 — 0 | 52 — |
| ಎಳ್ಳೆಂಡಿ ಖಂಡಿ ೧ಕ್ಕೆ .. | 25 — | 26 — 0 |
| ತೆಂಗಿನ ಎಣ್ಣೆ ಮಣ ೧ಕ್ಕೆ . | 3 — 13 | 3 — 13 |
| ಎಳ್ಳೆಣ್ಣೆ ಮಣ ೧ಕ್ಕೆ | 6 — 0 | 7 — 0 |
| ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ.. | 6 — 5 | 7 — 5 |
| ಮೋರಿಸ ಸಕ್ಕರೆ ಮ ೧ಕ್ಕೆ... | 2 — 13 | 2 — 14 |
| ಮೆಣಸು | 4 — 8 | 6 — 0 |
| ಸಾಸಿವೆ ಮುಡಿ ೧ಕ್ಕೆ . | 5 — 8 | 6 — 8 |
| ಕಾಳುಮೆಣಸು ಪ ಸೇ.ಗೆ. | 15 — 4 | 17 0 |
| ಯೇಲಕ್ಕಿ ಬೀಜ ಮಣ೧ಕ್ಕೆ | 80 — 0 | 85 — 0 |
| ಗೇರುಬೀಜ ಮು ೧ಕ್ಕೆ | 2 — 0 | 2 — 12 |
| ಕಚ್ಚಿಣ ಖಂಡಿ ೧ಕ್ಕೆ | 50 — 0 | 55 — 0 |
| ಕಾಂಪ್ರುಕಗಣು ಮ ೧ಕ್ಕೆ. | 14 — 12 | 15 — 0 |
| ಕಾಂಪ್ರುಅಕ್ಕಿಗಳು ಮ ೧ಕ್ಕೆ | 11 — [illegible] | 15 — 0 |
| ಚಿಣಬೆಳ್ಳಿ ಸೇರು ೧ಕ್ಕೆ | 13 — 8 | 14 — 0 |
| ಹಿತ್ತಾಳೆ ಕಗಡು ಮ ೧ಕ್ಕೆ | 12 — 0 | 12 — 0 |
| ಹವಸು ೧ಕ್ಕೆ | 22 — 8 | 22 — 0 |
| ಹೊಣಸೆ ಹುಳಿ ಖಂಡಿ ೧ಕ್ಕೆ | 40 — 0 | 45 — |
| ನೇಟಿವ್ ಕಾಫಿ ಖಂಡಿ ೧ಕ್ಕೆ | 110 0 | 148 — 0 |
| ಕ್ಯೂರ್ ಕಾಫಿ ಖಂಡಿ ೧ಕ್ಕೆ | 185 — 0 | 198 — 0 |
| ಮಡಿಕೇರಿ ಏಲಕ್ಕಿ ಮಣ | 35 — 0 | 39 0 |

## ಮಂಗಳೂರು ನಗರಸಭೆಯೂ ಹರಿಜನ ಸೇವೆಯೂ.

[ಬರೆದು ಬಂದುದು]

ಮಹಾತ್ಮಾಜಿಯವರ ಪರಿಶ್ರಮದ ಫಲವಾಗಿ ಹಿಂದುಳಿದ ಹರಿಜನರಾದ ನಾವು ಸರಿಯಾದ ಹಿಂದುಗಳೆನ್ನಿಸಿಕೊಂಡೆವು ಅಲ್ಲದೆ, ಹಿಂದೂಧೇಶದ ಹಲವು ಕೆಲವು ಉದ್ಯೋಗಗಳಲ್ಲಿ ಸೇರಿಕೊಂಡೆವು. ಈ ರೀತಿ ನಮ್ಮ ಮಂಗಳೂರು ತಾಲೂಕಿನಲ್ಲಿರುವ ಅನೇಕ ಹರಿಜನರಿಗೆ ಸರಕಾರಿ ಉದ್ಯೋಗಗಳು ದೊರಕಿವೆ. ಜಿಲ್ಲಾ ಬೋರ್ಡಿನಲ್ಲೂ ಕೆಲವು ಉದ್ಯೋಗಗಳು ದೊರಕಿವೆ.

ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಬುದ್ದಿ ಮುನ್ಸಿಪಾಲ್ ಶಾಲೆಗಳಲ್ಲಿ ಒಬ್ಬ ಹರಿಜನ ಅಧ್ಯಾಪಕರಿರುವರು. ಮಾನ್ಯ ಸರಕಾರವು ಆದಿ ದ್ರಾವಿಡರ ಉದ್ಧಾರಕ್ಕೆಂದು ತೆರೆದ ಲೇಬರ್ ಶಾಲೆಗಳಲ್ಲಿ ಹಲವು ಮಂದಿ ಹರಿಜನರು ಅಧ್ಯಾಪಕ ವೃತ್ತಿಯಲ್ಲಿರುವರು ಅದರಲ್ಲಿ ಒಬ್ಬಳು ಮಾತ್ರ ಸ್ತ್ರೀ ಅಧ್ಯಾಪಕಿ; ಒಬ್ಬ ಪೇದೆಯೂ ಇರುವನು. ಈಗೀಗ ಅದರಲ್ಲಿಯೂ ಮೇಲುಜಾತಿಯ ಅಧ್ಯಾಪಕರನ್ನೇ ಹೆಚ್ಚಾಗಿ ನೇಮಿಸುತ್ತಾ ಬರುವರು ಹೀಗೆ ಮಾಡಿದರೆ ಹರಿಜನರು ಉದ್ಧಾರವಾಗುವುದೆಂದರೆ ಹೇಗೆ! ಹರಿಜನೋದ್ಧಾರ ಎಂಬ ನಾಟಕವು ಪ್ರಚಾರವಾದರೂ ವಿದ್ಯೆ ಪಡೆದ ಹರಿಜನರು ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಬೇಕಾಯ್ತು.

ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಶಾಲೆಗಳಲ್ಲಿ ಒಟ್ಟು ೬ ಮಂದಿ ಹರಿಜನ ಅಧ್ಯಾಪಕರಿರುವರು ಇದರಲ್ಲಿಯೂ ಒಬ್ಬಳು ಸ್ತ್ರೀ ಅಧ್ಯಾಪಕಿ ಈ ಮೇಲಿನ ವಿವರಗಳು ಹರಿಜನರಾದ ನಮಗೆ ತಕ್ಕಮಟ್ಟಿಗೆ ತೃಪ್ತಿಕರ. ಆದರೆ ಮಂಗಳೂರು ಮುನ್ಸಿಪಾಲಿಟಿಯ ಎಡ್ಯುಕೇಶನ್ ಶಾಖೆಯಲ್ಲಿಯೂ, ಮೆಡಿಕಲ್ ಶಾಖೆಯಲ್ಲಿಯೂ, ಹೆಲ್ತ್ ಶಾಖೆಯಲ್ಲಿಯೂ ಮತ್ತು ಆಫೀಸಿನಲ್ಲಿಯೂ ಒಬ್ಬನೇ ಒಬ್ಬನಾದರೂ ಹರಿಜನ ಬಂಧು ವಿದ್ಯೆಗ ಸಮ್ಮಂಧಪಟ್ಟ ಯಾವುದೊಂದು ವೃತ್ತಿಯಲ್ಲಾಗಲೀ ಇಲ್ಲವೆಂದರೆ ಬಹಳ ಶೋಚನೀಯಕರವಲ್ಲದೆ ಹರಿಜನರ ಪಾಲಿಗೆ ಬಹಳ ಹಾಹಾಕಾರವೂ ಆಗಿರುತ್ತದೆ. ಈಗಿನ ಕೊಂಗ್ರೆಸ್ಸು ಸರಕಾರದೆದುರಿಗೆ ಈ ಮಂಗಳೂರು ಮುನ್ಸಿಪಾಲಿಟಿಯು ಯಾವ ತರದ ಮಾನ್ಯತೆಯನ್ನು ಹರಿಜನರಿಗೆ ಬೇಕಾಗಿ ಪಡೆಯುತ್ತದೋ ನಮಗೆ ಹೇಳಲಸಾಧ್ಯ. ಮುನ್ಸಿಪಾಲಿಟಿಯಿಂದ ಹರಿಜನರಿಗೆ ಈ ತನಕ ಯಾವ ವಿಷಯದಲ್ಲಿಯೂ ಹೆಚ್ಚಿನ ಪ್ರಯೋಜನವು ದೊರೆಯಲಿಲ್ಲವೆಂಬುದಾಗಿ ಖಂಡಿತವಾಗಿಯೂ ಹೇಳಬಲ್ಲೆವು.

ಹರಿಜನರು ತೆರಿಗೆ, ಟೇಕ್ಸ್ ವಗೈರೆಗಳನ್ನು ತೆರುತ್ತಾ ಬರುವರು. ಬಡ ಜನಾಂಗವೆಂಬುದಾಗಿ ಮೂಸಿಯಾಗಲೀ ರಿಯಾಯತಿಯಾಗಲೀ ತೋರಿಸುವುದಿಲ್ಲ. ಉದ್ಯೋಗ ಮಾತ್ರ ಮೇಲುಜಾತಿಯವರಿಗಲ್ಲದೆ ಹರಿಜನರಿಗಿಲ್ಲ. ಇದು ಯಾವ ನ್ಯಾಯ? ಮೂರು ಮಂದಿ ಹರಿಜನರಿಗೆ ಅಧ್ಯಾಪಕ ತರಬೇತಿಗೆ ಕಳುಹಿಸಿದರೂ, ಅವರನ್ನು ಅಧ್ಯಾಪಕ ವೃತ್ತಿಯಲ್ಲಿ ಸೇರಿಸಿಕೊಳ್ಳಲಿಲ್ಲ. ಇನ್ನು ಮುಂದಕ್ಕಾದರೂ ಬಡ ಹರಿಜನರ ಸ್ಥಿತಿಗತಿಗಳನ್ನು ತಿಳಿದುಕೊಂಡು, ಜಾತಿಭೇದವನ್ನು ಮರೆತು, 'ಹರಿಜನ ಸೇವಾಸಂಘ' ದವರು ಹೆಚ್ಚಿನ ಗಮನಕೊಟ್ಟು ಮುನ್ಸಿಪಾಲಿಟಿಯ ಪ್ರತಿಯೊಂದು ಶಾಖೆಗಳಲ್ಲಿಯೂ ಹರಿಜನ ಬಂಧುಗಳನ್ನು ಉದ್ಯೋಗದಲ್ಲಿ ಸೇರಿಸಿ ಬಡವರಾದ ನಮ್ಮನ್ನು ಕಾಪಾಡಬೇಕಾಗಿ ನಮ್ರಭಾವದಿಂದ ಬೇಡಿಕೊಳ್ಳುತ್ತೇವೆ.

ಮಾನ್ಯ ಸರಕಾರದ ಕಮ್ಯುನಲ್ ರೊಟೇಶನ್ ಹುಕುಮನ್ನು ಈ ಮುನ್ಸಿಪಾಲಿಟಿಯು ಇನ್ನೂ ಪಾಲಿಸಲಿಲ್ಲವೆಂದು ಕಂಡುಬರುವುದು ಆ ಪ್ರಯುಕ್ತ ನಮ್ಮ ಹಲಾವಳಿಗಳನ್ನು ಮುನ್ಸಿಪಾಲಿಟಿಯು ಹರಿಜನರ ಪಾಲಿಗೆ ನ್ಯಾಯವಾಗಿ ವರ್ತಿಸುವುದಿಲ್ಲವೆಂದೂ ಈಗಿನ ಕೊಂಗ್ರೆಸ್ಸು ಸರಕಾರಕ್ಕೆ ಪ್ರಾರ್ಥಿಸಿಕೊಳ್ಳುತ್ತೇವೆ

"ಹರಿಜನರಲ್ಲೊಬ್ಬ"

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಪುಷ್ಯ ಬ॥ ೧೩ ಶನಿವಾರದಿಂದ, ಮಾಘ ಶು. ೪ ಶುಕ್ರವಾರದ ವರೆಗಿನ ಪಂಚಾಂಗ.(೧೯೩೮ನೇಯ ಜನವರಿ ಪ್ರಯುಕ್ತ)

| [illegible] | [illegible] | [illegible] | [illegible] | [illegible] | [illegible] | [illegible] | [illegible] |
|---|---|---|---|---|---|---|---|
| 29 | [illegible] | [illegible] | [illegible] | ಪೂ.ಷಾಢ | [illegible] | [illegible] | |
| 30 | [illegible] | [illegible] | [illegible] | [illegible] | [illegible] | [illegible] | [illegible] |
| 31 | [illegible] | [illegible] | [illegible] | [illegible] | | [illegible] | [illegible] |
| 1 | | | [illegible] | [illegible] | | [illegible] | |
| [illegible] | | | | [illegible] | | | |
| 3 | [illegible] | [illegible] | [illegible] | [illegible] | [illegible] | [illegible] | |
| 4 | ಶುಕ್ರ | [illegible] | [illegible] | ಪೂ.ಭಾ | | [illegible] | |

## ಗರ್ಭಿನೋಲ್ ಅಥವಾ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಮುಟ್ಟು ಶೂಲೆ, ಶ್ವೇತಪ್ರದರ, ರಕ್ತಪ್ರದರ, ಗರ್ಭಸ್ರಾವ, ಗರ್ಭಾಶಯ ಶೂಲೆ, ಮೂತ್ರದ್ವಾರ ಉರಿ, ನರಗಳ ಸೆಳೆತ, ಪ್ರಸವ ನಂತರ ಉಂಟಾಗುವ ಕ್ಷಯ ರೋಗ, ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು, ಕಾಲುನೋವು, ತಲೆ ತಿರುಗುವಿಕೆ, ಮೋಹಿನೀ ಜ್ವರ (Hysteria) ಮೊದಲಾದ ನಾನಾ ತರದ ಮೈದುಳಿನ ವಿಕಾರಗಳು. ಅಶಕ್ತತೆ ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು.

**ಹೆಚ್ಚೇನು?** ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಡಾಕ್ಟರರೂ ವೈದ್ಯರು ಕೂಡಾ

## "ವಿಜಯ ಗರ್ಭಿನೋಲ"

ಸ್ವಾಧೀನವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರೆಯಾಗಿ ಗುಣಹೊಂದಿದ್ದಾರೆ ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ"

**ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2 8 0.**
**ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1-4-0.**

**ತಯಾರಿಸುವವರು:—**

## ವಿಜಯ ಫಾರ್ಮೆಸಿ, ಕೊಚ್ಚಿನ್.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

## THE PIE-MONEY BANK LTD.

Mandio R[illegible] MANGALORE.

Undertakes all kinds of Banking Business [illegible]
2½% per annum Savings Bank Deposits at 4% per annum

**FIXED DEPOSITS**

For 2 Years 6% 1 Year 5% For 6 months [illegible] months [illegible]
Auction Chit Funds ranging from Rs 100 to Rs 5000 [illegible]
regularly on systematic lines Unique Banking facilities Businessmen and interested Public.

*Apply for particulars*—**K. R. GURU,** *Managing Director*

☞ ## ಪೇಂಟರ್ಸ್

PAINTERS

**Whenever you require the service of**
*Please call on or write to:—*

**Simon & Co,**
*Painters.*




Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ
ಸ್ಕ್ರಾನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

# ಸೇಲಮಿನಲ್ಲಿ ಮದ್ಯನಿಷೇಧದ ಪ್ರಬಲ ಪ್ರಚಾರ!

### 'ಸೇಲಂ ಪ್ರಪಂಚಕ್ಕೇ ಮಾರ್ಗದರ್ಶಕನಾಗುವದಂತೆ'

ಮದ್ರಾಸು ಸರಕಾರವು ಮದ್ಯನಿಷೇಧ ಕಾನೂನನ್ನು ಮಾಡಿ, ಸೇಲಮಿನಲ್ಲಿ ಅದನ್ನು ಬಳಕೆಗೆ ತಂದುದರಿಂದ ಜನರು ಹೆಚ್ಚೆಚ್ಚು ಸ್ವಾವಲಂಬಿಗಳೂ ಮಿತವ್ಯಯಿಗಳೂ ಆಗಹತ್ತಿದ್ದಾರೆ. ಮೊದಮೊದಲು ಸಾಲಗಾರರ ಗುಲಾಮರಾಗಿ ಇದ್ದ ಮದ್ಯಪಾಯಿಗಳು ಈಗ ಈ ದುರ್ವ್ಯಸನದಿಂದ ಮುಕ್ತರಾಗಿ ಸ್ವತಂತ್ರ ಜೀವನವನ್ನು ನಡೆಸುತ್ತಿದ್ದಾರೆ

ಸೇಲಮಿನ ಹಳ್ಳಿಪಳ್ಳಿಗಳಲ್ಲಿ ಈಗ ಹೊಡೆದಾಟ ಬೈದಾಟಗಳಿಲ್ಲ, ಕೊಲೆಸುಲಿಗೆಗಳಿಲ್ಲ, ಎಲ್ಲರೂ ಜೀವನಕ್ಕೆ ಬೇಕಾದಷ್ಟು ಖರ್ಚುಮಾಡಿ ಸ್ವಲ್ಪ ಸ್ವಲ್ಪ ಮಿಗಿಸುತ್ತ ಬಂದಿದ್ದಾರೆ. ಎಲ್ಲರ ಮುಖದ ಮೇಲೆ ಆನಂದಲಹರಿಯು ಎದ್ದೇಳುತ್ತಿದೆ ಎಲ್ಲರೂ ಸಂತೋಷಸಾಗರದಲ್ಲಿ ಮುಳುಗಿ ತೇಲುತ್ತಿದ್ದಾರೆ. ಮದ್ಯನಿಷೇಧ ಕಾನೂನನ್ನು ಮಾಡಿದ ಮದ್ರಾಸು ಸರಕಾರದ ಮುಖ್ಯಮಂತ್ರಿ ಶ್ರೀಮಾನ್ ಸಿ ರಾಜಗೋಪಾಲಾಚಾರ್ಯರು ದೇವಾಂಶಸಂಭೂತರೆಂದು ಜನರಿಂದ ಹೊಗಳಿಸಿಕೊಳ್ಳುತ್ತಿದ್ದಾರೆ. ಅವರ ಹೆಸರು ಆಬಾಲ ಗೋಪಾಲರಾದಿ ಎಲ್ಲರ ತುದಿ ನಾಲಗೆಯ ಮೇಲೆ ಇದೆ.

'ಈ ಕಾನೂನು ಜನರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಿದೆ?' ಎಂದೊಬ್ಬರು ಒಬ್ಬ ಸಾಹುಕಾರೀ ಬೇಂಕರರನ್ನು ಕೇಳಿದರು 'ಸೇಲಂ ಜನರಷ್ಟು ಮಂದಿ ಸುಖದಲ್ಲಿ ತಲ್ಲೀನರಾಗಿದ್ದಾರೆ. ಅವರೀಗ ಸಾಲಕೇಳಲಿಕ್ಕೆ ಬರುವದೇ ಇಲ್ಲ ಉಳಿದ ಆ ಮಂದಿ ಮಾತ್ರ ಮೊದಲು ಇದ್ದ ಉದ್ಯೋಗವನ್ನು ಕಳಕೊಂಡು ಕೊಂಚ ಅತೃಪ್ತರಾಗಿದ್ದಾರೆ' ಎಂದರು 'ಸೇಲಮಿನ ಗುತ್ತಿಗೆಗಳೆಲ್ಲ ವಾಚನಾಲಯಗಳಾಗುತ್ತಿವೆ ಹಳ್ಳಿಗಾಲಿಗಳ ಮಾಸ್ತರರೆಲ್ಲಾ ಪ್ರಾಯಸ್ಥರಿಗೆ ಶಿಕ್ಷಣ ಕೊಡುತ್ತಿದ್ದಾರೆ ಅನುರೂಪವಾದ ದೃಶ್ಯವಿದು ಇಡೀ ಜೀವಮಾನದಲ್ಲಿ ಪುಣ್ಯವಂತರಿಗೆ ಮಾತ ನೋಡಲಿಕ್ಕೆ ದೊರೆಯುವಂದದ್ದು' ಎಂದು ವಿದೇಶೀಯ ಸಂಚಾರಿಗಳು ಸರಕಾರದ ಈ ಕಾರ್ಯವನ್ನು ಮುಕ್ತಕಂಠದಿಂದ ಹೊಗಳುತ್ತಿದ್ದಾರೆ

'ಸೇಲಂ ಪ್ರಪಂಚಕ್ಕೆ ಮಾರ್ಗದರ್ಶಕನಾಗಲಿರುವದು' ಎಂದು ಫ್ರೆಡರಿಕ್ ಗ್ರಬ್ ಎಂಬ ಇಂಗ್ಲಿಷ ಮಹಾಶಯರು ನ್ಯೂಸ್ ರಿವ್ಯೂದಲ್ಲಿ ಹೀಗೆ ಲೇಖ ಬರೆದಿದ್ದಾರೆ 'ಇಷ್ಟು ಶೀಘ್ರದಲ್ಲಿ ಕಾಂಗ್ರೆಸು ಜನಾವಣೆಯ ಕಾಲದಲ್ಲಿ ಮತದಾರರಿಗಿತ್ತ ವಚನಗಳನ್ನು ಪಾಲಿಸಿಕೊಟ್ಟೀತೆಂದು ನಾವು ಕನಸ್ಸುಮನಸ್ಸುಗಳಲ್ಲಿ ಕೂಡ ಎಣಿಸಿರಲಿಲ್ಲ ಯೂರೋಪ, ಅಮೇರಿಕಗಳಂಥ ಮುಂದುವರಿದ ರಾಷ್ಟ್ರಗಳು ಮದ್ಯನಿಷೇಧ ಸಂಬಂಧ ಮಾತಿನಲ್ಲೇ ಕಾಲಹರಣ ಮಾಡುತ್ತಿರುವಾಗ, ಕಾಂಗ್ರೆಸ್ ಬಹುಮತವಿರುವ ಸಿಮ್ಲಾ ಪ್ರಾಂತೀಯ ಸರಕಾರಗಳು ಮದ್ಯನಿಷೇಧ ಸಂಬಂಧ ಬಹಳ ಕಾರ್ಯಗಳನ್ನು ಮಾಡಿಬಿಟ್ಟವು. ಮದ್ಯನಿಷೇಧ ಚಳವಳದಲ್ಲಿ ಮುಖ್ಯ ಭಾಗವನ್ನು ತಗೆದುಕೊಂಡ ಅಪ್ರತಿಮ ಮೇಧಾವಿ ಮತ್ತು ಅನುಭವಿಗಳಾದ ಶ್ರೀ ರಾಜಗೋಪಾಲಾಚಾರ್ಯರು ಮದ್ರಾಸಿನಲ್ಲಿ ಮುಖ್ಯ ಮಂತ್ರಿಗಳಾಗಿರುವದು ನಿಮ್ಮ ಭಾಗ್ಯವೇ ಸರಿ. ಇವರಿಗೂ ಮುಂಬಾಯಿಯ ಡಾ| ಗಿಲ್ಡರ್ ಮತ್ತು ಇತರ ಪ್ರಾಂತ್ಯಗಳ ಇತರ ಮಂತ್ರಿವರ್ಯರಿಗೆ ಹಿಂದೂ ದೇಶವು ಮಾತ್ರವಲ್ಲ, ಇಡೀ ಜಗತ್ತೇ ಋಣಿಯಾಗಿರುವದು' ಎಂದು ಅವರು ಹೇಳುತ್ತಾರೆ

ದುರ್ದೈವಿ ದುಃಖ ಸಾಗರದಲ್ಲಿ ಮುಳುಗಿರುವ ಪ್ರಪಂಚವನ್ನು ಎತ್ತಿ ಉದ್ಧರಿಸಲಿಕ್ಕೆ ಈ ಕಾಂಗ್ರೆಸ್ ಕಾರ್ಯಕರ್ತರೇ ಸಮರ್ಥರೆಂದು ಇನ್ನೂ ಅನೇಕ ಮಂದಿ ಪಾಶ್ಚಾತ್ಯರ ಅಭಿಪ್ರಾಯವಿರುತ್ತದೆ. ಕಾಂಗ್ರೆಸ್ಸಿನ ಕುರಿತು ಪ್ರಪಂಚದಲ್ಲಿ ಹೇಗೆ ಹೇಗೆ ಸದ್ಭಾವನೆಯು ಹರಡುತ್ತಿದೆ ಎಂದು ನೋಡಿರಿ.

---

### ಯಾವ ದೇಶದ ನಾಗರಿಕ? ಯಾರಿಗೂ ಗೊತ್ತಿಲ್ಲ?

ಕೆಲವು ವರ್ಷಗಳ ಮೊದಲು ಹಿಂದೂದೇಶದವನೊಬ್ಬನು ತಲೆಮರೆಸಿಕೊಂಡು ಅಮೇರಿಕಕ್ಕೆ ಹೋಗಿದ್ದ ಅಲ್ಲಿ – ಮೆಕ್ಸಿಕೋದಿಂದ ತಲೆಮರೆಸಿಕೊಂಡು ಬಂದ ಒಬ್ಬ ಹುಡುಗಿಯನ್ನು ಮದುವೆಯಾಗಿ ಸಂಸಾರ ಮಾಡಿಕೊಂಡಿದ್ದ ಕೆಲಕಾಲದ ನಂತರ ಹುಟ್ಟಿದ ಮಗುವಿನೊಂದಿಗೆ ತಲೆಮರೆಸಿಕೊಂಡು ಕೆನಡಕ್ಕೆ ಹೋದರು. ಅಧಿಕಾರಿಗಳು ಈ ಮೂವರನ್ನೂ ಹಿಡಿದು ಬಂಧನದಲ್ಲಿಟ್ಟಿದ್ದಾರೆ

ಒಂದು ದೇಶದ ನಾಗರಿಕನು ಪರವಾನಗಿ ಇಲ್ಲದೆ ಇನ್ನೊಂದು ದೇಶಕ್ಕೆ ಹೋಗಬಾರದು ಎಂಬ ನಿರ್ಬಂಧವಿದೆ ಹಾಗೆ ಪರವಾನಗಿಯಿಲ್ಲದೆ ಬಂದವರನ್ನು ಸರಕಾರವು ಅವರವರ ದೇಶಗಳಿಗೆ ಹಿಂತಿರುಗಿಸುತ್ತದೆ ಆದರೆ ಈ ಮೂವರನ್ನು ಮಾತ್ರ ಯಾವ ದೇಶಕ್ಕೆ ಕಳುಹಿಸಿಕೊಡುವದೆಂಬುದು ಕೆನಡದ ಅಧಿಕಾರಿಗಳಿಗೆ ತಿಳಿಯದ ಪ್ರಶ್ನೆಯಾಗಿದೆ ಗಂಡನು ಹಿಂದೂದೇಶದ ಪ್ರಜೆಯಾದುದ್ದರಿಂದ ಹೇಗಾದರೂ ಅಲ್ಲಿಗೇ ಕಳುಹಿಸಿಕೊಡಬಹುದು ಆದರೆ, ಹೆಂಡತಿಯನ್ನಾಗಲೀ ಮಗುವನ್ನಾಗಲಿ ಹಿಂದೀ ಸರಕಾರವು ತಗೊಳ್ಳಲಾರದು ಕೆನಡದ ಸರಕಾರವು ಅಮೇರಿಕವನ್ನು ಕೇಳಿದೆ ತಾನು ತನ್ನ ದೇಶದಲ್ಲಿ ಹುಟ್ಟಿದ ಮಗುವನ್ನು ಬೇಕಾದರೆ ತಗೊಳ್ಳುತ್ತೇನೆ ಉಳಿದಿಬ್ಬರ ಸಂಗತಿ ತನಗೆ ಗೊತ್ತಿಲ್ಲವೆನ್ನುತ್ತದೆ ಕೆನಡದ ಸರಕಾರವು ಮೆಕ್ಸಿಕೋವನ್ನು ಕೇಳಿದೆ ತನ್ನ ದೇಶಕ್ಕೆ ಸೇರಿದ ಆ ಹುಡುಗಿಯನ್ನು ಬೇಕಾದರೆ ಹಿಂದಕ್ಕೆ ಕರೆಸಿಕೊಳ್ಳುತ್ತೇನ ತಂದೆಮಕ್ಕಳ ಜವಾಬ್ದಾರಿ ತನ್ನ ಮೇಲಿಲ್ಲ ಎಂದು ಅದು ಎನ್ನುತ್ತಿದೆ ಹೀಗೆ ಮೂವರನ್ನೂ ಕರಕೊಂಡು ಅವರಿಗೆ ನಾಗರಿಕ ಹಕ್ಕುಗಳನ್ನು ಕೊಡುವ ದೇಶವು ಒಂದೂ ಇಲ್ಲ. ಅವರನ್ನು ಎಲ್ಲಿಗೆ ಕಳ ಹಿಸಿಕೊಡುವದೆಂದು ಕೆನಡ ಈಗ ತಲೆಕೆರೆದುಕೊಳ್ಳುತ್ತಿದೆ

### ಅಬಿಸಿನಿಯದ ಹೊಸ ಸುಲ್ತಾನ!— ರಾಸ್ ಸೇಯೂಮ್'!

ದೇಶದ್ರೋಹಿಯಾಗಿದ್ದುದಕ್ಕೆ ಸುಲ್ತಾನ ಪದವಿಯನ್ನು ಕೊಟ್ಟ ಮುಸಲೋನಿಯ ಕೃತಕೃತ್ಯನಾದ ಸ್ವತಂತ್ರಪ್ರೇಮಿಗಳಾದ ಅಬಿಸೀನಿಯದ ಜನರನ್ನು ವಶಕ್ಕೆ ತರುವದು ಅಸಾಧ್ಯವಾಗಿರಲು, ಮುಸಲೋನಿಯು ಅಬಿಸೀನಿಯವನ್ನು ಗೆದ್ದ ಮೇಲೆ ಅಲ್ಲಿಯ ಜನರನ್ನು ಪಳಗಿಸುವುದರಲ್ಲಿ ಒಬ್ಬ ದೇಶೀಯನನ್ನು ಸುಲ್ತಾನ ಪದವಿಗೇರಿಸಲಿಕ್ಕೆ ಆಗಿಂದಲೂ ಪ್ರಯತ್ನಿಸುತ್ತಲಿದ್ದ ಅವನ ಅಬಿಸೀನಿಯದ ಹಿಂದಿನ ಚಕ್ರವರ್ತಿ ಹೇಲೀ ಸೆಲಾಸೀ ಅವನ ಹಿರೀ ಮಗ ಇತ್ಯಾದಿ ಬಹು ಮಂದಿ ಸಮರ್ಥರನ್ನು ಓಲೈಸಿ ನೋಡಿದ ಆದರೆ, ತಮ್ಮ ಸ್ವಾರ್ಥಕ್ಕಾಗಿ ದೇಶದ ಮಾನವನ್ನು ಮಾರಲು ಅವರು ಸಿದ್ಧರಾಗಲಿಲ್ಲ ಮುಸಲೋನಿಯ ಸುಲ್ತಾನಪದವಿಯು ಅವರು ಯಾರಿಗೂ ಬೇಡವಾಯಿತು

ಕೊನೆಗೀಗ ಅದು ರಾಸ್ ಸೇಯೂಮನಿಗೆ ಬೇಕೆನಿಸಿದೆ ಮುಸಲೋನಿಯು ಅದನ್ನು ಅವನಿಗೆ ಕೊಟ್ಟು ಕೊಡುವನು ಇಟಲಿ-ಅಬಿಸೀನಿಯಾ ಯುದ್ಧಕಾಲದಲ್ಲಿ ಉಳಿದ ಎಲ್ಲ ಅಬಿಸಿನಿಯನರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ರಕ್ತವನ್ನು ಧಾರೆಕಟ್ಟಿ ಸುರಿಸುತ್ತಿದ್ದಾಗ, ದೇಶಕ್ಕೆ ಮೋಸಕೊಟ್ಟು ಮುಸಲೋನಿಯ ಆಶ್ರಯವನ್ನು ಬೇಡಿ ಪಡೆದ ಒಬ್ಬನೇ ಒಬ್ಬ ದೇಶದ್ರೋಹಿ ಎಂದರೆ ಈ ರಾಸ್ ಸೇಯುಮನು ಮಾತ್ರ

---

# ಜರ್ಮನ ಸಾಮ್ರಾಜ್ಯದ ಬೆಳವಣಿಗೆ

## ಅಬಿಸಿನಿಯದ ಹೊಸ ಸುಲ್ತಾನ: ಸೇಯೂಮ್

### ಯಾವ ದೇಶದ ನಾಗರಿಕ? ಯಾರಿಗೂ ಗೊತ್ತಿಲ್ಲ!

ಒಂದಾನೊಂದು ಕಾಲದಲ್ಲಿ, ಅಂದರೆ ಜರ್ಮನ—ಇಂಗ್ಲೆಂಡು ಯುದ್ಧವಾಗುವ ಮೊದಲು ಜರ್ಮನಿಯೂ ಒಂದು ಸಾಮ್ರಾಜ್ಯವಾಗಿತ್ತು ಬ್ರಿಟಿಷ ಸಾಮ್ರಾಜ್ಯದಷ್ಟು ಅದು ವಿಸ್ತಾರವಾಗಿರಲಿಲ್ಲವಾದರೂ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿತ್ತು ಆದರೆ, ಯುದ್ಧವು ಕೊನೆಗೊಂಡಾಗ ಅದು ಚೂರುಚೂರಾಗಿ ಹೋಗಿತ್ತು. ಹಿಟ್ಲರನು ಅಧಿಕಾರಕ್ಕೆ ಬರದ ಮೇಲೆ, ಈಗ ಜರ್ಮನಿಯು ತಾನು ತನ್ನ ಸಾಮ್ರಾಜ್ಯವನ್ನು ಬೆಳೆಸಬೇಕು, ಕಳಕೊಂಡ ಪ್ರದೇಶಗಳನ್ನು ಪುನಃ ಪಡೆಯಬೇಕು, ಎಲ್ಲರಂತೆ ತಾನೂ ಆಗಬೇಕು ಎಂಬ ಮಹತ್ವಾಕಾಂಕ್ಷೆಯುಳ್ಳದ್ದಾಗಿದೆ ಹಿಟ್ಲರನು ಅದಕ್ಕೋಸ್ಕರ ಸಾಮ ದಾನ ಭೇದ ದಂಡ ಚತುರೋಪಾಯಗಳಿಂದಲೂ ಪ್ರಯತ್ನಿಸುತ್ತಿದ್ದಾನೆ ಹಿಟ್ಲರನ ಪ್ರಯತ್ನಕ್ಕೆ ಈಗ ಸ್ವಲ್ಪ ಜಯವೂ ಸಿಕ್ಕತೊಡಗಿದೆ ಅಮೇರಿಕದ ಪಶ್ಚಿಮದಂಡೆಗೆ ಹತ್ತಿಕೊಂಡು, ನ್ಯೂ ಫೌಂಡ್ಲೆಂಡ ಎಂಬ ದ್ವೀಪದ ಸಮೀಪದಲ್ಲಿ ಎಂಟಿಕೊಸ್ಟಿ ಎಂಬ ಚಿಕ್ಕದೊಂದು ದ್ವೀಪವಿದೆ ಮೊದಲು ಅದು ಚೊಕಲೆಟ್ ತಯಾರಿಸಿ ಪ್ರಪಂಚಕ್ಕೆ ಒದಗಿಸಿಕೊಡುತ್ತಿದ್ದ ಮ್ಯೂನೀರ ಎಂಬ ಫ್ರೆಂಚನ ವಿಹಾರಭೂಮಿಯಾಗಿತ್ತು. ಅವನೀದನ್ನು ೧೯೩೬ರಲ್ಲಿ ಒಂದು ಕಾಗದದ ಕಾರ್ಖಾನೆಗೆ ಮಾರಿದನು. ಈಗ ಆ ಕಾರ್ಖಾನೆಯು ಆ ದ್ವೀಪವನ್ನು ಜರ್ಮನಿಗೆ ಮಾರಿದೆ. ತತ್ಕಾಲಿ ಆ ದ್ವೀಪದಲ್ಲಿ ೭೫ ಕುಟುಂಬಗಳು ಮಾತ್ರ ವಾಸಿಸಿ ಇವೆ. ಅದನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಹಿಟ್ಲರನು ಇನ್ನೂ ಕೆಲವು ಕುಟುಂಬಗಳನ್ನು ಅಲ್ಲಿಗೆ ಕಳುಹಿಸುವ ವಿಚಾರದಲ್ಲಿದ್ದಾನೆ. ಒಬ್ಬರಿಬ್ಬರು ಇಂಜಿನಿಯರು ಈಗಾಗಲೇ ಹೊರಟುಹೋಗಿರುವರು. ಎಂಟಿಕೊಸ್ಟಿಯ ಸಂಪಾದನೆಯಿಂದ ಜರ್ಮನಿಯ ಸಾಮ್ರಾಜ್ಯತೃಷ್ಣೆಯು ಕಿಂಚಿತ್ತಾದರೂ ಆರುವಂತಹದು ಅಲ್ಲವೆ!

### ಕೀಗಾನ ಕ್ರಮದಿಂದ ಶಿಕ್ಷಣಕೊಡುವದು ಸುಲಭ ಸಾಧ್ಯ.

ರೆವೆರೆಂಡ್ ಟಿ. ಎಸ್ ಸಿಕ್ವೇರಾ ಅವರು ನ್ಯೂ ರಿವ್ಯೂದಲ್ಲಿ ಹೀಗೆ ಬರೆಯುತ್ತಾರೆ

ಈಗ ಸ್ವಾವಲಂಬಿ ಶಿಕ್ಷಣ ಕ್ರಮದ ಮಾತು ಪ್ರತಿಧ್ವನಿಸುತ್ತದೆ ಅದನ್ನು ಜಾರಿಗೆ ತರುವಾಗ ಹಲಕೆಲವು ತೊಂದರೆಗಳುಂಟಾಗಬಹುದು ಆದರೂ, ಅದರ ಸೂತ್ರಗಳು ಶಿಥಿಲವಾಗಿರುವುದಿಲ್ಲ ಆ ಕ್ರಮಕ್ಕೆ ಒಳ್ಳೆಯ ಆಧಾರವಿದೆ ಅದು ಸಂಪೂರ್ಣ ವ್ಯವಹಾರಿಕವಾಗಿರುವದು ಆದ್ದರಿಂದ ಆ ಕ್ರಮದ ಸಂಪೂರ್ಣ ಸಫಲತೆಗಾಗಿ ಪ್ರಯತ್ನಿಸುವುದು ನಮ್ಮ ಕರ್ತವ್ಯವಾಗಿದೆ.


**Best Cheap Durable**

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by –*

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents.*

**Panchmal Krishnaya Shenoy & Son,**

Bunder, MANGALORE

THE
**BANK OF MANGALORE LTD.,**
MANGALORE
ESTD 1931

*Branches*—Panemangalore, Mudabidri & Padubidri.

*Chairman*—Philip J. Chandran, Esq.,
*Retd. Dt Registrar of Joint Stock Companies*

On & from 1st of January 1937,

Fixed Deposits will be received at following rates of interest.

| | | |
|---|---|---|
| For 3 months | | 3½% |
| " 6 " | | 4% |
| " 12 " | | 5% |
| " 24 | & upwards | 5½% |

Interest Payable Quarterly

Saving Bank deposit 3½% on daily balance

**All kinds of banking business transacted**

U. R. PAI, N. U. PAI, *Managing Directors*

**ಕರ್ನಾಟಕ ಫ್ರೀ ಸ್ಕ್ವಾಟ್ ಸ್ಕೂಲು, ಮುಂಬಾಯಿ.**

ಈ ಕೆಳಗಿನ ಮಹಾಶಯರುಗಳನ್ನು ಈ ಮೇಲಿನ ಶಾಲೆಯ ಗೆಣ್ಣಲನೇ ಇಸವಿಯ ಕಾರ್ಯಕಾರೀ ಸಮಿತಿಯ ಸದಸ್ಯರನ್ನಾಗಿ ನೇಮಿಸಲ್ಪಟ್ಟಿರುತ್ತದೆ. ಶ್ರೀಯುತರುಗಳಾದ ಯಸ್. ಯಸ್ ಸೆಟ್ಟಿ, (...) (London) ಅಧ್ಯಕ್ಷರು ಯಸ್. ಸಂಜೀವ ಸೆಟ್ಟಿ ಉಪಾಧ್ಯಾಯ ... ಸಾಲಿಯನ್-ಸಹಾಯಕ ಮುಖ್ಯೋಪಾಧ್ಯಾಯ. ಬಿ. ಟಿ. ಅಂಚನ್—ಗೌರವ ಕಾರ್ಯದರ್ಶಿ. ... ಗೌರವ ಕೋಶಾಧಿಕಾರಿ.

**ಮುಂಬಾಯಿಯಲ್ಲಿ ಕನ್ನಡಿಗರಿಂದ ಅಂಗಸಾಧನೆ.**

ಇದೇ ಜನವರಿ ... ರಾತ್ರಿ ... ಗಂಟೆಗೆ ಇಲ್ಲಿನ ... ಇನ್ಸ್ಟಿಟ್ಯೂಟಿನವರು ಮಂಗಳೂರಿನ ... ಕಲ್ಚರ್ ಇನ್ಸ್ಟಿಟ್ಯೂಟಿನ ... ದರವಾಗಿ ... ಅಂಗಸಾಧನಾ ... ಯನ್ನು ... ಪ್ರದರ್ಶಿಸಲಿರುವರು ... ಉತ್ಸವ ... ಕಲ್ಚರ್ ಇನ್ಸ್ಟಿಟ್ಯೂಟಿಗೊಂದು ಕಟ್ಟಡವನ್ನು ಮಂಗಳೂರಲ್ಲಿ ಕಟ್ಟಿಸುವ ಪರವಾಗಿ ವಿನಿಯೋಗಿಸಲ್ಪಡುವುದೆಂದು ವ್ಯವಸ್ಥಾಪಕರು ತಿಳಿಸುತ್ತಾರೆ. ಮುಂಬಾಯಿಯ ಕನ್ನಡಿಗರಿಂದ ಯುಕ್ತ ಪ್ರೋತ್ಸಾಹವನ್ನು ನಿರೀಕ್ಷಿಸಲಾಗಿದೆ.

... ಂಜರು

**S. U. N. & Co.,**

*Silk Merchants*

Chaukhamba BENARES CITY

... ಸೀರೆಗಳು ... 150 ... 18 ... 10 ... 75 ... 18 ... 120 ... 65 ... 10, ... 2½ ... 20 ... 85ರ ವರೆಗೆ ...

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಸ ಸಿಟಿ

ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ, ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ.

**ಲಿಮ್ಡಾ ಸೋಪು ಉಪಯೋಗಿಸಿರಿ**

ವೆಜಿಟಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ-ಮದ್ರಾಸು

ಒದಗಿಸಿಕೊಡುವವರು

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ (ಮಲಬಾರು)

## ನೋಟೀಸು.

**ಶ್ರೀಮದ್ಭುವನೇಂದ್ರ ಮಹೌಷಧಾಲಯ,**
**ಕಟಪಾಡಿ, ದ. ಕ.**

ಮೇಲಿನ ಹೆಸರಿನಿಂದ ಕಟಪಾಡಿಯಲ್ಲಿ ಸ್ಥಾಪಿಸಲ್ಪಟ್ಟ ಔಷಧಾಲಯವು ದಿನೇ ದಿನೇ ಜನಕೃಪೆಗೆ ಪಾತ್ರವಾಗಿ ನಿರೀಕ್ಷಣೆಗಿಂತಲೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿರುವುದರಿಂದ ಸದ್ರಿ ಸಂಸ್ಥೆಯಿಂದ ಜನಸಮುದಾಯವು ಇನ್ನೂ ಹೆಚ್ಚಿನ ಪ್ರಯೋಜನ ಪಡೆಯುವಂತೆ ಅದನ್ನು 'ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್' ಎಂಬ ಹೆಸರಿನಿಂದ ಲಿಮಿಟೆಡ್ ಕಂಪೆನಿಯಾಗಿ ಪರಿವರ್ತಿಸಿರುತ್ತೇವೆ. ನಮ್ಮ ಯಾವತ್ತೂ ಏಜಂಟರು, ಸ್ಟೋಕಿಸ್ಟರು, ಪ್ರತಿನಿಧಿಗಳು ಮತ್ತು ಗಿರಾಕಿಗಳು ಇನ್ನು ಮುಂದೆ "ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್" ಕಟಪಾಡಿ ದಕ್ಷಿಣ ಕನ್ನಡ, ಎಂಬ ಹೆಸರಿಗೆನೇ ಪತ್ರವ್ಯವಹಾರ ನಡಿಸಬೇಕು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ.

# ಸುಳ್ಳು ದೇವರಿಗೆ ಕಳ್ಳ ಪೂಜಾರಿ

ಸ್ಪೈನಿನಲ್ಲಿ ಅಂತಃಕಲಹ ನಡೆಯುತ್ತದೆ. ನ್ಯಾಯಯುಕ್ತ ಸ್ಪೈನಿನ ಸರಕಾರವನ್ನು ಬಂಡಾಯಗಾರ ಫ್ರೆಂಕೋ ವಿರೋಧಿಸುತ್ತಾನೆ. ಅವನಿಗೆ ಇಟಲಿ, ಜರ್ಮನಿ, ಪೋರ್ಚುಗಲ್ ಮೊದಲಾದ ಫೆಸಿಷ್ಟ ದೇಶಗಳು ಸಹಾಯ ಮಾಡುತ್ತವೆ. ಯಾರೂ ಯಾವ ಪಕ್ಷಕ್ಕೂ ಸಹಾಯ ಮಾಡಬಾರದೆಂದು ಒಂದು ಅಂತರ್ರಾಷ್ಟ್ರೀಯ ಸಮಿತಿಯು ಪ್ರಯತ್ನಿಸುತ್ತದೆ. ಆದ್ದರಿಂದ ಪ್ರಕಟವಾಗಿ—ಫ್ರೆಂಕೋವಿಗೆ—ಸಹಾಯವನ್ನು ಕಳುಹಿಸಿಕೊಡುವದು ಇಟಲಿಗೆ ಅಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯವಾಗಿದೆ ಎಂಬಿಷ್ಟು ವಿಷಯವನ್ನು ವಾಚಕರು ಬಲ್ಲರು.

ಏನಾದರೊಂದು ಉಪಾಯದಿಂದ ಸ್ಪೈನಿನಲ್ಲಿ ಫ್ರೆಂಕೋವಿನ ಕೈಮೇಲಾಗಬೇಕು, ಅಲ್ಲಿ ತನ್ನ ಬೇಳೆ ಬೇಯಬೇಕು ಎಂದು ಮುಸಲೋನಿಯ ಮಹತ್ವಾಕಾಂಕ್ಷೆ ಇರುತ್ತದೆ. ಆದ್ದರಿಂದ ಅವನು ಚತುರೋಪಾಯಗಳಿಂದ ಫ್ರೆಂಕೋವಿಗೆ ಸಹಾಯ ಮಾಡುತ್ತಿದ್ದಾನೆ.

ಮುಸಲೋನಿ ಹೇಗೆ ದೊಡ್ಡ ರಾಜಕೀಯ ಮುತ್ಸದ್ದಿಯೋ ಹಾಗೆ ದೊಡ್ಡ ಮಂತ್ರಗಾರನೂ ಹೌದು. ಮಾಟ ಮೋಡಿಮಾಡಿ ಲೋಕದ ಕಣ್ಣಿಗೆ ಮಣ್ಣು ಎರಚುವದರಲ್ಲಿ ಅವನು ಬಹಳ ಪ್ರವೀಣನಾಗಿದ್ದಾನೆ! ಮಾಟ ಮೋಡಿ ಮಾಡಿಯೇ ಫ್ರೆಂಕೋವಿಗೆ ಬೇಕಾದಷ್ಟು ಜನಸಹಾಯ ಧನಸಹಾಯ ಕಳುಹಿಸಿಕೊಡುತ್ತಿದ್ದಾನೆ.

ಮೊರೊಕ್ಕೊದಲ್ಲಿ ಅರಬರ ಒಂದು ಪುಣ್ಯಕ್ಷೇತ್ರವಿದೆ. ಅಲ್ಲಿಗೆ ಪ್ರತಿವರ್ಷ ಸಾವಿರಾರು ಅರಬರು ಯಾತ್ರೆಗೆ ಹೋಗುತ್ತಾರೆ. ಮುಸಲೋನಿ ತನ್ನ ಸಾಮ್ರಾಜ್ಯಕ್ಕೆ ಸೇರಿದ ಸಾವಿರಾರು ಅರಬರನ್ನು ಯಾತ್ರಿಕರ ವೇಷಕೊಟ್ಟು ಸ್ಟೀಮರ ಮೂಲಕ ಮೊರೊಕ್ಕೊವಿಗೆ ಕಳುಹಿಸಿಕೊಡುತ್ತಾನೆ. ಅಲ್ಲಿ ಅವರಿಗೆ ಸೈನಿಕ ಪೋಷಾಕಗಳೂ ಅಸ್ತ್ರಶಸ್ತ್ರಗಳೂ ಸಿಕ್ಕುತ್ತವೆ. ಅಲ್ಲಿಂದ ಸ್ಪೈನಿಗೆ ಯಾರಿಗೂ ತಿಳಿಯದ ಹಾಗೆ ಹೋಗಿಬಿಡುವದು ಕೈಚಿಟಿಕೆ ಹೊಡೆದಷ್ಟು ಸುಲಭ ಕಾರ್ಯ. ಯಾತ್ರೆಗೆ ಹೊರಟ ಅರಬರು ಫ್ರೆಂಕೋವಿನ ಸೈನ್ಯದಲ್ಲಿ ಸೈನಿಕರಾಗಿ ಭರ್ತಿಯಾಗುವರು. ಹೀಗೆ ಭರ್ತಿಯಾದವರ ಸಂಖ್ಯೆ ಈಗ 7000 8000ಕ್ಕೂ ಮೀರಿದೆ ಎಂದು ಡೈಲಿ ಹೆರಾಲ್ಡಿನ ಸುದ್ದಿಗಾರನು ಬರೆಯುತ್ತಾನೆ.

ಇಷ್ಟು ಮಾತ್ರವಲ್ಲ ಯಾರಿಗೂ ತಿಳಿಯದ ಹಾಗೆ ಮುಸಲೋನಿ ಒಂದು ವಿಮಾನ ಸರ್ವೀಸನ್ನೂ ಏರ್ಪಡಿಸಿದ್ದಾನಂತೆ. ಅದರ ಮೂಲಕವೂ ಅವನ ಫ್ರೆಂಕೋವಿಗೆ ಬೇಕಾದಷ್ಟು ಸೈನ್ಯ ಸರಂಜಾಮುಗಳನ್ನು ಒದಗಿಸಿ ಕೊಡುತ್ತಿರುವನಂತೆ. ಇದು ಸತ್ಯವಾದರೆ ಇವನು ನಿಜಕ್ಕೂ ಸುಳ್ಳು ದೇವರಿಗೆ ಕಳ್ಳ ಪೂಜಾರಿಯೇ ಸರಿ.

---

## ಸರಕಾರದ ಚೀಫ ಸಕ್ರೆಟರಿ ಒಂದು ಫರ್ಮಿನ ವಲ್ಲಾಳ?

ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಸ್ವತಂತ್ರವಾಗಿ ಕೊಡುವ ಆಜ್ಞಾಪತ್ರಗಳನ್ನು ಅವರು ಮನ್ನಿಸಿದರೆ ಅದರಿಂದಾಗುವ ಪರಿಣಾಮಗಳಿಗೆ ಆ ಜಿಲ್ಲಾಧಿಕಾರಿಗಳಲ್ಲದೆ ಸರಕಾರವು ಜವಾಬದಾರವಾಗಲಾರದು ಎಂದು ಸರ್ಕ್ಯುಲಾರು ಕಳುಹಿಸಿಕೊಟ್ಟು, ಆ ಮೇಲೆ ಮಂತ್ರಿಗಳಿಂದ ಒಲಾಕ್ಷರಿಸಲ್ಪಟ್ಟು, ಉಪಾಯ ಕಾಣದೆ ಆ ಸರ್ಕ್ಯುಲಾರನ್ನು ಹಿಂತೆಗೆದು ಪ್ರಸಿದ್ಧರಾಗಿರುವ ಬಿಹಾರ ಸರಕಾರದ ಚೀಫ ಸೆಕ್ರೆಟರಿ ಬ್ರೆಟ್ ಸಾಹೇಬರು ತಾವು ಸಂಪಾದಿಸಿದ ಕೀರ್ತಿ ಅಷ್ಟು ಸಾಲದು ಎಂಬ ಹಾಗೆ ಈಗ ಪತ್ರಿಕೆಗಳ ದಿಲ್ಲಾಳರಾಗಿಯೂ ಕೀರ್ತಿಪಡೆಯುವ ಇಚ್ಛೆಯಲ್ಲಿದ್ದ ಹಾಗೆ ಕಾಣುತ್ತಿದೆ.

ಸಿಲಿಗುರಿಯ ಬಸಮಾಲಕರಿಗೆ ಬ್ರೆಟ ಸಾಹೇಬರು ಒಂದು ಸರ್ಕ್ಯುಲಾರು ಕೊಟ್ಟಿದ್ದಾರೆ. ಬಿಹಾರಿನಲ್ಲಿ ಓಡಾಡುವ ಬಸ್ಸುಗಳಲ್ಲಿ ಒಂದೊಂದು ಪ್ರಥಮ ಚಿಕಿತ್ಸೆಯ ಸಾಧನೋಪಕರಣಗಳ ಒಂದೊಂದು ಸೆಟ್ಟು ಇಡಬೇಕೆಂದೂ, ಅಂಥ ಸೆಟ್ಟುಗಳನ್ನು ನವದಿಲ್ಲಿಯ ಒಂದು ಇಂಗ್ಲೀಷ ಫರ್ಮಿನಿಂದ ಒಂದೊಂದಕ್ಕೆ 17—8—0 ಪ್ರಕಾರ ಕೊಂಡುಕೊಳ್ಳಬೇಕೆಂದೂ ಅವರು ಆ ಸರ್ಕ್ಯುಲಾರ ಮೂಲಕ ಬಸಮಾಲಕರಿಗೆ ತಿಳಿಸಿದ್ದಾರೆ. ಇಂಥಹದೇ ಸೆಟ್ಟುಗಳನ್ನು ಕಲ್ಕತ್ತೆಯ ಸ್ವದೇಶೀ ಕಂಪನಿಗಳಿಂದ ಎಷ್ಟೋ ಕಡಿಮೆ ಕ್ರಯಕ್ಕೆ ಕೊಂಡುಕೊಳ್ಳಬಹುದಾಗಿದೆ ಎಂದೂ, ಇಂಥಿಂಥ ಕಂಪನಿಯಿಂದಲೇ ಅವನ್ನು ತೆಗೆದುಕೊಳ್ಳಬೇಕೆಂದು ನಿರ್ಬಂಧಿಸುವದು ಸಲ್ಲದೆಂದೂ ಬಸಮಾಲಕರು ಬೊಬ್ಬೆ ಹಾಕುತ್ತಿದ್ದಾರೆ.

ಬ್ರಿಟಿಷ ವಸ್ತುಗಳನ್ನು ಹೆಚ್ಚು ಕ್ರಯಕೊಟ್ಟೂ ಪ್ರೋತ್ಸಾಹಿಸಿದರೆ ದೇಶದ ಹಿತವು ಚೆನ್ನಾಗಿ ಆಗುತ್ತದೆಂಬ ತತ್ವವು ಬ್ರೆಟ್ ಸಾಹೆಬರಿಗೆ ತಿಳಿದಷ್ಟು ಚೆನ್ನಾಗಿ ಬಸಮಾಲಕರಿಗೆ ತಿಳಿದಿರುವದೆ? ಬ್ರೆಟ್ ಸಾಹೆಬರ ವಿಚಾರ ಸರಣಿಯನ್ನು ತಿಳಕೊಳ್ಳದೆ ಬಸಮಾಲಕರು ಅವರನ್ನು ದೂರುವದು ಶುದ್ಧ ಅನ್ಯಾಯವೇ ಸರಿ.

---

## ಗುಣಪುರದಲ್ಲಿ ಮನುಷ್ಯರನ್ನು ತಿನ್ನುವ ರಕ್ಕಸರು

ಗುಣಪುರದಲ್ಲಿ ಕೆಲವು ದಿನಗಳ ಮೊದಲು ಒಂದರ ಹಿಂದೆ ಒಂದರಂತೆ ಕೆಲವು ಮಕ್ಕಳು ಕಾಣೆಯಾದುವು. ಅದರ ಸಮೀಪದ ಕೆಲವು ಗುಡ್ಡ ಕಾಡುಗಳಲ್ಲಿ ಸಂಚರಿಸುತ್ತಿರುವಾಗ ಈಗ ಕೆಲವು ಮನುಷ್ಯರ ಅಸ್ಥಿಪಂಜರಗಳು ಅಲ್ಲಲ್ಲಿ ಬಿದ್ದುಕೊಂಡಿರುವಂಥವು ಸಿಕ್ಕಿವೆ. ಆ ಕಾಡುಗಳಲ್ಲಿ ಮನುಷ್ಯರನ್ನು ತಿನ್ನುವ ರಕ್ಕಸರು ವಾಸವಾಗಿದ್ದರೆಂದು ಜನರ ಹಾಹಾಕಾರವೆದ್ದಿದೆ. ಈ ಸುದ್ದಿ ಕೇಳಿದ ಜನರು ತುಂಬಾ ಭಯಭೀತರಾಗಿದ್ದಾರೆ.

ರಕ್ಕಸರ ಹಗಲ ಹೊತ್ತಿನಲ್ಲಿ ತಮ್ಮ ಗವಿಗಳನ್ನು ಬಿಟ್ಟು ಹೊರಗೆ ಬರುವದೇ ಇಲ್ಲ. ರಾತ್ರಿಯಾದಾಗ ಮೆಲ್ಲಗೆ ಹಳ್ಳಿಹಳ್ಳಿಗಳಿಗೆ ಹೋಗಿ ಥಟ್ಟನೆ ಸಿಕ್ಕುವ ಮನುಷ್ಯರನ್ನು ಎತ್ತಿಕೊಂಡು ತಿಂದುಹಾಕುವರು. ಬಿಳಿಗಳಷ್ಟು ವೇಗವಾಗಿ ಸಂಚರಿಸುವರೆಂದೂ, ಮನುಷ್ಯರನ್ನು ಹಿಡಿದ ಕೊಲ್ಲಲಿಕ್ಕೆ ಬಿಲ್ಲುಬಾಣಗಳನ್ನು ಹಿಡಿದುಕೊಂಡು ಗುಂಪುಗುಂಪಾಗಿ ಸಂಚರಿಸುವರೆಂದೂ ಜನರು ಹೇಳಿಕೊಳ್ಳುತ್ತಾರೆ.

ಈ ರಕ್ಕಸರು ರಾತ್ರಿಯಾದೊಡನೆ ಸ್ಮಶಾನಗಳಿಗೆ ಹೋಗಿ ಅಲ್ಲಿ ಹೂತಿಟ್ಟ ಶವಗಳನ್ನು ಅಗೆದು ತೆಗೆದು ತಿನ್ನುವರಂತೆ. ಅರ್ಧಮರ್ಧ ತಿಂದ ಹಾಕಿದ ಅನೇಕ ಶವಗಳು ಗುಣಪುರದ ಜನರಿಗೆ ದೊರೆತಿವೆ. ಕೆಲವು ದಿನಗಳ ಹಿಂದೆ ನಾಲ್ಕು ಮಕ್ಕಳು ಕಾಣೆಯಾಗಲು ಜನರು ಅವರನ್ನು ಹುಡುಕುತ್ತ ಕಾಡುಗುಡ್ಡಗಳನ್ನು ಸೇರಿದರು. ಅಲ್ಲಿ ಬಿಲ್ಲುಬಾಣಗಳಿಂದ ಸುಸಜ್ಜಿತರಾದ ಕೆಲವು ಕಾಡಜನರ ಒಂದು ಗುಂಪು ನಿಂತಿರುವದನ್ನು ಕಂಡರು. ಊರ ಜನರನ್ನು ನೋಡುತ್ತಲೇ ಕಾಡಜನರು ಅವರ ಮೇಲೆ ಬಾಣಗಳ ಸುರಿಮಳೆಯನ್ನು ಸುರಿಸಿಬಿಟ್ಟರು. ಕೆಲವರು ಗಾಯಗೊಂಡರು. ಎಲ್ಲರೂ ಹೆದರಿ ಊರಿಗೆ ಓಡಿದರು.

ಜನರು ನಿರ್ಭಯರಾಗಿರುವಂತೆ ಸರಕಾರವು ಈಗ ಗುಣಪುರದಲ್ಲಿ ಹೆಚ್ಚಿಗೆ ಪೋಲೀಸ ಯೋಜನೆ ಇಟ್ಟಿರುತ್ತದೆ.

---

# ಮೇಯರನ ತಲೆ ಹಾರಿಸಿದ ಹಿಟ್ಲರ

ಆ ದಿನ ಒಂದು ರಾಜಮಾರ್ಗವನ್ನು ಸಾರ್ವಜನಿಕ ಉಪಯೋಗಕ್ಕೆ ತೆರೆಯಲಿಕ್ಕಿತ್ತು. ಒಂದು ಗಂಟೆಗೆ ಹಿಟ್ಲರನ ಕೈಯಿಂದ ಅನಾವರಣ ಸಮಾರಂಭವು ನಡೆಯಬೇಕೆಂದು ನಿಶ್ಚಯವಾಗಿತ್ತು. ತಮ್ಮ ಭಾಗ್ಯದೇವತೆ ಹಿಟ್ಲರನ ಪರಮ ಪವಿತ್ರ ದರ್ಶನ ತೆಗೆದುಕೊಂಡು ಜನ್ಮ ಸಾರ್ಥಕ ಮಾಡಿಕೊಳ್ಳುವ ಇಚ್ಛೆಯಿಂದ ಪ್ರೇಕ್ಷಕರಾದ ಲಕ್ಷಾಂತರ ಜನರು ಅಲ್ಲಿ ಒಟ್ಟುಗೂಡಿದ್ದರು. ಆದರೆ ಹಿಟ್ಲರ ಇಲ್ಲ!

ಹಿಟ್ಲರನು ಯಾವ ಕಾರ್ಯವನ್ನಾದರೂ ಸಮಯಕ್ಕೆ ಸರಿಯಾಗಿ ಮಾಡುವವ. ಕಾಲದ ಮಹತ್ವವು ಅವನಿಗೆ ತಿಳಿದಷ್ಟು ಚೆನ್ನಾಗಿ ಮತ್ತಾರಿಗೂ ತಿಳಿದಿರಲಿಲ್ಲ. ಆದರೂ ಅಂದಿನ ಸಮಾರಂಭಕ್ಕೆ ಮಾತ್ರ ಅವನು 5 ಗಂಟೆ ತಡವಾಗಿ ಬಂದಿದ್ದನು. ಅವನ ಮುಖ ಬಾಡಿ ನಿಸ್ತೇಜವಾಗಿತ್ತು. ಹಣೆಯ ಮೇಲಿನಿಂದ ಬೆವರ ಹನಿಗಳು ಸುರಿಯುತ್ತಿದ್ದುವು. ಅವನ್ನು ಒರಸಿಕೊಳ್ಳುತ್ತ ಹಿಟ್ಲರ ಅವಸರವಸರದಿಂದ ಬಂದ ಕಾರ್ಯವನ್ನು ಮಾಡಿ ಮುಗಿಸಿದ.

ಜನರಿಗೆ ಅತ್ಯಾಶ್ಚರ್ಯವಾಯಿತು. ಅವರು ಹಿಟ್ಲರನ ಅವಸರದ ಗೂಢ ವಿಳಂಬದ ಸಮಸ್ಯೆ, ಮುಖ ನಿಸ್ತೇಜವಾದ ಕಾರಣಗಳನ್ನೆಲ್ಲ ಹುಡುಕಿ ತಿಳಕೊಳ್ಳುವ ಪ್ರಯತ್ನದಲ್ಲಿ ಬಿದ್ದರು. ಅದೇ ದಿನ ಸಾಯಂಕಾಲ ವಾರ್ತಾಪತ್ರಿಕೆಗಳಲ್ಲಿ ಸುದ್ದಿ ಹರಡಿತ—'ಡ್ರೆಸ್ಡನ್ನಿನ ಮೇಯರನು ಆತ್ಮಘಾತ ಮಾಡಿಕೊಂಡ' ಎಂದು.

ಡ್ರೆಸ್ಡನ್ನಿನ ಮೇಯರ ಅರ್ನೆಸ್ಟ ಜೂರ್ನರ ಎಂಬವನು ಸಾರ್ವಜನಿಕ ಹಣದ ದುರುಪಯೋಗ ಮಾಡುತ್ತಿದ್ದನೆಂದು ಸುದ್ದಿ ಹುಟ್ಟಿತ್ತು. ಈ ಸುದ್ದಿ ಹಿಟ್ಲರನ ಕಿವಿಗೂ ಬಿದ್ದಿತ್ತು. ಅನಾವರಣ ಸಮಾರಂಭಕ್ಕೆ ಹೋಗುವಾಗ ದಾರಿಯಲ್ಲಿ ಈ ವಿಚಾರವನ್ನು ತಿಳಕೊಂಡು ಹೋಗೋಣ ಎಂದು ಹಿಟ್ಲರನು ಮೇಯರನ ಕಾರ್ಯಾಲಯಕ್ಕೆ ಹೋಗಿದ್ದನು. ಮೇಯರನಿಗೂ ಅವನಿಗೂ ಮಾತು ಬೆಳೆಯಿತು. ಇದ್ದ ಪುರಾವೆಗಳನ್ನು ಅಲ್ಲಗಳೆದು ತಾನು ನಿರಪರಾಧಿ ಎಂದು ತೋರಿಸಿಕೊಡುವದು ಮೇಯರನಿಗೆ ಅಸಾಧ್ಯವಾಯಿತು.

ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್

ಹಿಟ್ಲರ ಹೊರಗೆ ಓಡಿಬಂದ. ಅಲ್ಲಿ ಒಬ್ಬ ಕಾವಲುಗಾರನ ಸೊಂಟಕ್ಕೆ ಸಿಕ್ಕಿದ್ದ ರಿವಾಲ್ವರನ್ನು ಕಸಕೊಂಡು ಪುನಃ ಒಳಗೆ ಓಡಿದ. ಸರ್ವಾಧಿಕಾರಿಗೆ ಏನೋ ಅಪತ್ತು ಒದಗಿದೆ ಎಂದು ಕಾವಲುಗಾರರು ಒಳಗೆ ನುಗ್ಗಿದರು. ಆದರೆ ಒಂದು ಕ್ಷಣದೊಳಗಾಗಿ ಹಿಟ್ಲರ ಕಾವಲುಗಾರರ ಸಮೀಪ ಹೊರಗ ನಡೆದ. ಕೈಯಲ್ಲಿ ರಿವಾಲ್ವರ್ ಮಾತ್ರ ಇರಲಿಲ್ಲ. ಅವನ ಮುಖ ಕೆಂಪುಕೆಂಪಾಗಿತ್ತು. ಕೈಕಾಲುಗಳು ಸಿಟ್ಟಿನಿಂದ ನಡುಗುತ್ತಿದ್ದವು. ಮಾತನಾಡಲಿಕ್ಕೆ ಆಗುತ್ತಿರಲಿಲ್ಲ.

ಹಿಟ್ಲರ ಅಲ್ಲಿಂದ ಅನಾವರಣ ಸಮಾರಂಭಕ್ಕೆ ಹೊರಟ. ಹೊರಟ ಒಂದು ಮಿನಿಟಿನೊಳಗಾಗಿ ಪಿಸ್ತೂಲಿನ ಗುಂಡು ಹಾರಿದ ಶಬ್ದ ಕೇಳಿತು. ಕಾವಲುಗಾರರು ಒಳಗೆ ಹೋಗಿ ನೋಡಿದರು. ರಕ್ತದ ಕೆರೆಯಲ್ಲಿ ಡ್ರೆಸ್ಡನ್ನಿನ ಮೇಯರ ಮುಳುಗಿದ್ದ. ಕಾವಲುಗಾರನ ಹಿಟ್ಲರ ತಗೊಂಡಿದ್ದ ರಿವಾಲ್ವರ ಅಲ್ಲಿಯೇ ಅವನ ಸಮೀಪದಲ್ಲಿ ಬಿದ್ದಿತ್ತು.

ಡ್ರೆಸ್ಡನ್ನಿನ ಮೇಯರ ಆತ್ಮಘಾತ ಮಾಡಿಕೊಂಡನೆಂದು ಅದೇ ದಿನ ಸಾಯಂಕಾಲದ ಪತ್ರಿಕೆಗಳಲ್ಲಿ ಸುದ್ದಿ ಹರಡಿತು.

---


## ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಜಂತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಸ್ರಾವ, ಬಿಳುಪು ಹರಿಯುವುದು ಇನ್ನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಕಳಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗದೇದಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-8-0 (ಮಾತ್ರ)—ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer: Dr. D. N. JASANI, Vithalbhai Patal Road, BOMBAY 4.

Canara Bank Ltd., Mangalore

**NOTICE**

Is hereby given that under section 37 of the Indian Companies Act No, VII of 1913, the Register of Members of the Bank will be closed from Monday the 7th February 1938 to Saturday the 26th February 1938, (both days inclusive)

ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು

**ನೋಟೀಸು**

1913ನೇ ಇಸವಿಯ ನಂಬ್ರ 7ನೇ ಇಂಡಿಯನ್ ಕಂಪೆನೀಸ್ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಈ ಬೇಂಕಿನ ಮೆಂಬರರ ರಿಜಿಸ್ಟರು 1938ನೇ ಇಸವಿ ಫೆಬ್ರವರಿ ತಾ 7ನೇ ಸೋಮವಾರದಿಂದ 1938ನೇ ಇಸವಿ ಫೆಬ್ರವರಿ ತಾ 26ನೇ ಶನಿವಾರದ ವರೆಗೆ (ಉಭಯ ದಿವಸಗಳು ಕೂಡಿ) ಮುಚ್ಚಲ್ಪಡುವುದು

By order

Office of the Bank, Bunder, Mangalore
Date 26-1 1938

A Madhava Pai
*Secretary*


## ಹಿಂದುಸ್ಥಾನ ಕೊ-ಓಪರೇಟಿವ್ ಇನ್ಸೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು ಕಲ್ಕತ್ತಾ — **ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ** — ಸ್ಥಾಪನೆ 1907

| | |
|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ 12,00 00,000 |
| ಆಸ್ತಿಪಾಸ್ತಿಗಳು | ರೂ 2 21,00,000 |
| ನೂತನ ವ್ಯವಹಾರ | ರೂ 2 82,81,000 |

**ಅತ್ಯಧಿಕ ಬೋನಸ್ ಹಂಚಲಾಗಿದೆ**

ಎಂಡೋವ್ಮೆಂಟ್ ಪಾಲಿಸಿಗಳಿಗೆ ರೂ 1000 ವಿಮೆಯ ಮೇಲೆ ಪ್ರತಿ ವರ್ಷ ಒಂದರ ರೂ 23

ಮಕ್ಕಳ ವಿಮಾ, ಅಪಘಾತ, ಮತ್ತು ಮರಣ ವಿಮೆ—ನಮ್ಮ ವಿಶಿಷ್ಟತೆ

*For particulars please apply to*

T ANANTACHARI,
BRANCH MANAGER H C I S LTD
POST BOX 223 MADRAS

K K MENON
ORGANISER H C I S LTD
Court Road CALICUT



## ಪರಮೊ

ಮೊದಲಾದ ಭಯಂಕರ ವ್ಯಾಪ್ತಿರೋಗಗಳ ಭಯಂಕರ ಪರಿಣಾಮವನ್ನು ತಡೆಯುವದಕ್ಕಾಗಿ (ಪಿಚಕಾರಿಯ ಜೊತೆಗಾಗಿ)

**ಗೊನೋಲೆಕ್ಸ (ರಿಜಿಸ್ಟರ್ಡ)**

ತೆಗೆದುಕೊಳ್ಳಿರಿ ಮತ್ತು ಶಾಶ್ವತವಾಗಿ ರೋಗದಿಂದ ಮುಕ್ತರಾಗಿರಿ ಈ ಔಷಧವು ಎಲ್ಲ ತರಹದ ಪರಮಾ ಮೊದಲಾದ ಎಲ್ಲ ಮೂತ್ರರೋಗಗಳ ನಿವಾರಣೆಯಾಗಿ ಮೂತ್ರಗ್ರಹ ಸಾಫ ಆಗುತ್ತವೆ ನೋಡಲಿನ ಒಂದೇ ಒಂದು ಬಾಟ್ಲಿಯಿಂದ ಗುಣವಾಗುತ್ತದೆ ಬಾ ಕಿ ರೂ ೧ ೧.೧ ಅಂಚೆವಚ್ಚ ಪ್ರತ್ಯೇಕ ಹಳೇ ಮತ್ತು ಅಸಾಧ್ಯ ರೋಗಗಳಿಗೆ ಗೊನೋಲೆಕ್ಸನಂ ಇನ್ನು ಉಪಯೋಗಿಸಿರಿ ಬಾ ಕಿ ರೂ ೨ ೦ ೦ ಅಂಚೆವಚ್ಚ ಪ್ರತ್ಯೇಕ ಎಲ್ಲೆಡೆಯಲ್ಲಿಯೂ ದೊರೆಯುತ್ತದೆ ಪ್ರತಿಯೊಂದು ಊರಲ್ಲಿಯೂ ಸ್ಟೋಕಿಸ್ಟರು ಬೇಕ

ಸೋಲ್ ಏಜಂಟರು ಸ್ಟಾರ್ ಏಜೆನ್ಸಿ, ...ಳ ಹಾರ್ನ್ಬಿ ರೋಡ್, ಫೋರ್ಟ್ ಮುಂಬಾಯಿ

ಸ್ಟಾಕಿಸ್ಟ ಎಂ ಡಿ ಪ್ರ್ಯಾರಾ ಮತ್ತು ಕಂಪೆನಿ ...ಸ್ಸಿಸ್ ಸ್ಟ್ರೀಟ್, ಮಂಗಳೂರು



# The Canara Banking Corporation, Udipi, Ltd

Sends Its

**NEW YEAR'S GREETINGS**

To All

Shareholders, Constituents, Well-wishers

and the Public

Sincerely Wishes Them

***A HAPPY AND PROSPEROUS NEW YEAR.***



# The Bombay Life Assurance Company, Ltd.

ESTD: 1908

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,855 | 1,16,58,706 |
| 1930 | 59,97,500 | 9,83,367 | 28,00,970 | 2,06,68,328 |
| 1933 | 94 16,500 | 15,12,692 | 50,04,871 | 3,07,98,434 |
| 1936 | 1,36,00,180 | 26,76,274 | 82,69,451 | 5,14,38,205 |

The Company offers all the up to date schemes of Assurances Family Safe Guard Policy a special feature

Application for agencies will be received from honest and respectable gentlemen

Organisers appointed with pay and allowance

Gentlemen with organising ability and who can guarantee Business need apply

***Apply to any of the following Offices:-***

**Kochikar Brothers, Ltd.,**
(Incorporating Messrs Kochikar Brothers),
***Madras Branch Secretaries,***
Post Box 337, Mount Road, MADRAS.
Phone No 8245

| Ottapalam | Central Station Road Trivandrum | Visveshwarapuram Circle Bangalore City | Soumyalayam Puthiyara, Calicut | Car Street, Mangalore | Udipi, S India, | Charni Road, Bombay No 4 |
|---|---|---|---|---|---|---|

# ಸ್ವದೇಶಾಭಿಮಾನಿ.

**SWADESHABHIMANI, MANGALORE**

(Regd)

## ಅಮೃತಾಂಜನ

ಎಲ್ಲಾ ರೋಗಗಳಿಗೂ ಸಿದ್ಧೌಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

Edited, Printed & Published By A. S. Kamath at the Sharada Press, Car Street, Mangalore.

ಬಿಡಿ ಸಂಚಿಕೆ ಒಂದಾಣೆ.

ಸಂಪುಟ ೩೨]  ತಾರೀಕು ೪ನೇ ಫೆಬ್ರವರಿ ೧೯೩೮ (4 – 2 – 1938.)  [ಸಂಚಿಕೆ ೫.

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

*

ಅನುಕ್ರಮಣಿಕೆ

ಕರೀಶನಿಗೆ ಉಳಿಗಾಲವಿ

ಪಿತೃಭೂಮಿಯ ಸೇವೆಗಾ
ಚೈನ ಸ್ವಾತಂತ್ರ್ಯಹೊಂದು
ದಕ್ಕಾಗಿ ಐ. ಸಿ. ಎಸ್.
ದ್ಯೋಗಸ್ಥರ ರಾಜೀನಾಮೆ

ಜ್ಞಾನದ ಸಹಾಯದಿಂದ
ಅಪರಾಧಿಗಳ ಶೋಧ

ಪಾಶ್ಚಾತ್ಯ ಜಟ್ಟಿಗಳಿಗೆ
ಗಾಮಾನ ಕರೆ

ಲಾಮುಖಿಗೂ ಹೆದರದ
ವಿಜ್ಞಾನಿ

ದೂದೇಶದ ದಾರಿದ್ರ್ಯದ
ಕಾರಣ

ತರ ಗ್ರಂಥಾವಿಮೋಚನೆ

*

ಚೀನೀಯರ ದೇಶಪ್ರೇಮ.
ಮಕ್ಕಳು ಮುದುಕರುಗಳು ಕೂಡ ದೇಶರಕ್ಷಣೆಗಾಗಿ ಮುಂದೆ ಬರುತ್ತಿರುವರು.
(ಮೇಲಿನ ಚಿತ್ರದಲ್ಲಿ ಚೀನೀಯ ಬಾಲಕ ಸೈನಿಕನನ್ನು ಕಾಣಬಹುದು.)

**GREETINGS**

The Directors of the CANARA BANK join in sending you this message of appreciation of the valued patronage and friendship we have enjoyed during the past year. wish you a HAPPY and PROSPEROUS NEW YEAR.

**Resources of a Crore.**

ESTD 1906

CANARA
LIMI

SWADESH MAN ES

ಒಂದೇ ಸೀಸೆಯಿಂದ




ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!
ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯಲ್ಲಿದೆ.

ಕೇಸರಿ ಕುಟೀರಂ—ರಾಯಪೇಟೆ— ಮದ್ರಾಸ್
ಮಂಗಳೂರು ಪ್ರವರ್ತಕರು ದಿ ಪಾಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

*Best* *Cheap* *Durable*

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied Buy now and you will also be convinced**

*Manufactured by*

The West Coast Soap Factory

ನಮ್ಮ 515 ಕೆಂಪು 365 ಮತ್ತು 232
ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ...ಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು




...ಳುವಿಕೆಗೆ ಅತೀ ಉತ್ತಮವಾದುದು!
...ಯಲ್ಲಿಯೂ ಅಧಿಕವಲ್ಲ
...ಯೋಗಿಸಿ ಖಾತ್ರಿ ಪಡೆಯಿರಿ

...naya Shenoy & Son,
...NGALORE

# ವಿಚಿತ್ರಕರ! ಆದರೂ ಸತ್ಯ!!

### ಜ್ವಾಲಾಮುಖಿಗೂ ಹೆದರದ ವಿಜ್ಞಾನಿ!

ಹವಾಯನ್ ದ್ವೀಪದ ಹಿಲೋ ಎಂಬ ಪಟ್ಟಣವೂ ೧೦೦,೦೦೦,೦೦೦ ಪವನುಗಳನ್ನು ಖರ್ಚುಮಾಡಿ ಕಟ್ಟಿಸಿದ ಅದರ ಬಂದರೂ ಜ್ವಾಲಾಮುಖಿಯ ಹಾವಳಿಯಿಂದಾಗಿ ಹಾಳಾಗುವ ಭಯವು ಈ ತನಕ ಇದ್ದೇ ಇತ್ತು. ಆದರೆ ಡಾ| ಥೋಮಸ್ ಎ ಜೇಗರ್ ಎಂಬವರು ಇನ್ನು ಮುಂದೆ ಆ ಭಯವು ಇಲ್ಲದಂತೆ ತಾನು ಮಾಡಬಲ್ಲೆನೆಂದು ಹೇಳಿರುವರು

ಆ ಜ್ವಾಲಾಮುಖಿಯ ಹೆಸರು ಮೋನಾ ಲೋವಾ ಎಂದು. ಅದರಿಂದ ಹರಿದ ಬರುತ್ತಿರುವ ಶಿಲಾರಸವನ್ನು ತಡೆದು, ಅದು ಬೇರೆ ದಾರಿಯಾಗಿ ಹರಿದುಹೋಗುವಂತೆ ಮಾಡಲು, ಅಲ್ಲಲ್ಲಿ ಬಲವಾದ ಗೋಡೆಗಳನ್ನು ಕಟ್ಟಿ, ಕಣಿಗಳನ್ನು ಅಗೆದುಕೊಡುವ ಆಲೋಚನೆಯಾಗಿದೆ. ಹೀಗೆ ಮಾಡಿದರೆ ಅಗ್ನಿಪ್ರವಾಹವು ಬೇರೆ ಕಡೆಗೆ ಹರಿದು, ಪಟ್ಟಣಕ್ಕೆ ಯಾವ ತರದ ತೊಂದರೆಯೂ ಆಗಲಿಕ್ಕಿಲ್ಲವೆಂದೂ ಊಹಿಸಲಾಗಿದೆ

೧೯೩೫ರಲ್ಲಿ ಡಾ| ಜೇಗರು ಒಮ್ಮೆ ಆ ಪಟ್ಟಣವನ್ನು ರಕ್ಷಿಸಿದ್ದರು. ಜ್ವಾಲಾಮುಖಿಯು ಸಿಡಿದು ಅಗ್ನಿಪ್ರವಾಹವು ಹಿಲೊ ಪಟ್ಟಣದ ಹದಿನೆರಡು ಮೈಲುಗಳಷ್ಟು ಸಮೀಪಕ್ಕೆ ಇಳಿದು ಬಂದಿತ್ತು. ಆಗ ಅವರು ಅಲ್ಲಿದ್ದ ಸೈನಿಕರಿಗೆ ಜ್ವಾಲಾಮುಖಿಯ ಮೂಲವನ್ನೂ ಅದು ಹರಿದು ಬರುತ್ತಿರುವ ಮಾರ್ಗವನ್ನೂ ಬೊಂಬು ಬಿಸುಟು ಸಿಡಿದುಬಿಡುವಂತೆ ಹೇಳಿದರು

ಈ ಉಪಾಯವು ಅಗ್ನಿಪ್ರವಾಹದ ರಭಸವನ್ನು ಬೇರೆ ಕಡೆಗೆ ತಿರುಗಿಸಿ ಪಟ್ಟಣವನ್ನು ಕಾಪಾಡಿತು. ಇನ್ನು ಮುಂದೆ ಎಂದೆಂದೂ ಅಪಾಯವಾಗದಂತೆ ಅವರೀಗ ಹೊಸ ಉಪಾಯವನ್ನು ಮಾಡಲಿರುವರು.

### ಸ್ತ್ರೀ ಜಾತಿಯ ವೈರಿ

ಎಲಿಗ್ಸಾಂಡರ್ ಬೋರ್ಸ್ಮಾನ ಎಂಬವ ಗ್ಲೇಡಿಸ್ ಬಸೀಂ ಎಂಬವಳಿಗೆ ೧೦೦೦ ಪವನುಗಳನ್ನು ತನ್ನ ಮೀಲಿನಲ್ಲಿ ಬರೆದಿಟ್ಟು ಪ್ರಾಣಬಿಟ್ಟರು. ಈಗ ಆ ಕುರಿತು ಜಗಳವೆದ್ದಿದೆ. ಈ ಬೋರ್ಸ್ಮಾನರು ಸ್ತ್ರೀಜಾತಿಯ ದ್ವೇಷಿಗಳಂತೆ. ಅವರ ದ್ವೇಷವು ಎಷ್ಟು ಪ್ರಬಲವಾಗಿತ್ತೆಂದರೆ ಅವರು ದನಗಳನ್ನು ಕೂಡ ಕಣ್ಣೆತ್ತಿ ನೋಡುತ್ತಿದ್ದಿಲ್ಲ. ಅಂಥವರು ಒಬ್ಬ ಹೆಂಗಸಿಗೆ ಹಣವನ್ನು ಬಿಡುವುದೆಂದರೆ ಹೇಗೆ ಸಾಧ್ಯನೆಂದೇ ಈಗ ವಾದ

### ತನ್ನನೇ ತಿಂದಿತು

ಅಮೇರಿಕದ ಅದೊಂದ ಮೃಗಾಲಯದಲ್ಲಿ ಎರಡ ಹೆಡೆಗಳುಳ್ಳ ಸರ್ಪವೊಂದಿತ್ತು. ಆಹಾರವನ್ನು ತಿನ್ನುವ ಸಮಯದಲ್ಲಿ ಒಂದು ಮುಖವು ಇನ್ನೊಂದು ಮುಖದೊಡನೆ ಯಾವಾಗಲೂ ಜಗಳವಾಡುತ್ತಿತ್ತು. ಒಂದು ದಿನ ಒಂದು ತಲೆಯನ್ನು ನುಂಗತೊಡಗಿತು. ತಾನು ಮಾಡುತ್ತಿರುವುದೇನೆಂದು ತಿಳಿದುಕೊಳ್ಳಬೇಕಾದರೆ ಹಾವು ಸತ್ತುಬಿತ್ತು

### ಜ್ವಾಲಾಮುಖಿಯಲ್ಲಿ ತಪ್ಪಿಸಿ ಆ. ಮೃತ್ಯುವಿನ ಬಾಯಲ್ಲಿ ಬಿದ್ದನು!

ಉರಿಯುತ್ತಿರುವ ಜ್ವಾಲಾಮುಖಿಯ ಕುಂಡದಲ್ಲಿ ದಪಾಸೀಯನೊಬ್ಬನು ಹಾರಿದನು ಆದರೆ, ಕಲ್ಲುಗಳು ಅವನನ್ನು ಕೆಳಗೆ ಬೀಳದಂತೆ ಕಾಪಾಡಿದುವು. ಆರು ತಾಸುಗಳ ನಂತರ ಆ ಮನುಷ್ಯನು ಬದುಕಿ ಮೇಲಕ್ಕೆ ಬಂದನು. ಆದರೆ ಪಾಪ! ಅನರರ ಮೆಜಿಸ್ಟ್ರೇಟರೊಬ್ಬರು ಆತನಿಗೆ ೭ ದಿವಸಗಳ ಸಜೆಯನ್ನು ವಿಧಿಸಿದರು.

### 40 ವರ್ಷಗಳಲ್ಲಿ 30 ಮಕ್ಕಳು.

ಹಂಗೇರಿಯ ಹೆಂಗಸೊಬ್ಬಳು ನಾಲ್ವತ್ತು ವರ್ಷಗಳೊಳಗೆ ೩೦ ಮಂದಿ ಮಕ್ಕಳನ್ನು ಹೆತ್ತಿರುವಳು. ತನ್ನ ೧೧ನೆಯ ವರ್ಷ ಪ್ರಾಯದಲ್ಲಿ ಆಕೆಯು ತನ್ನ ಪ್ರಥಮ ಶಿಶುವಿಗೆ ಜನ್ಮವಿತ್ತಳು. ಆರು ಬಾರಿ ಆಕೆಗೆ ಅವಳಿಜವಳಿ ಮಕ್ಕಳು ಹುಟ್ಟಿರುವವು

### ಮಕ್ಕಳಿಗೆ ವೀರತ್ವವನ್ನು ಕಲಿಸಿದುದಕ್ಕಾಗಿ ಶಿಕ್ಷೆ

ಒಸ್ಟ್ರಿಯಾದೇಶದಲ್ಲಿರುವ ಒಬ್ಬ ಉಪಾಧ್ಯಾಯ ತನ್ನ ಶಿಷ್ಯರೆಲ್ಲರೂ ವೀರರೆನಿಸಿಕೊಳ್ಳಬೇಕೆಂಬ ಹಿರಿಯ ಆಶೆ ಅವನಿಗೆ. ಅದರಂತೇ ಅವರಲ್ಲಿ ವೀರಗುಣವನ್ನು ಹುಟ್ಟಿಸಲು, ಕಬ್ಬಿಣದ ಮೊಳೆಗಳನ್ನು ನುಂಗುವಂತೆ ಅವರಿಗೆ ಆಜ್ಞೆಯನ್ನಿತ್ತ. ಅತೀ ವೀರ ಹುಡುಗನು ಹದಿನೆರಡು ಮೊಳೆಗಳನ್ನು ನುಂಗಿದನು. ಆದರೆ ಉಪಾಧ್ಯಾಯನು ಮಾತ್ರ ಈಗ ಎರಡು ತಿಂಗಳ ಕಾರಾಗ್ರಹವಾಸವನ್ನು ಅನುಭವಿಸುತ್ತಿರುವನು

### ಸ್ವರ್ಗದಲ್ಲಿ ಸ್ಥಳವನ್ನು ಮಾರಿದನು!

ಸತ್ತಮೇಲೆ ಸ್ವರ್ಗಕ್ಕೆ ಹೋಗಬೇಕೆಂದಿದ್ದವನು ಮೊದಲೇ ತನ್ನ ಹಣಕೊಟ್ಟು ರಿಜರ್ವ್ ಮಾಡಬೇಕೆಂದು ಒಬ್ಬ ಪಾದರಿಯು ಹೇಳಿದನು. ಅಂತೆಯೇ ಅವನೊಡನೆ ಅನೇಕ ಮಂದಿ ಸ್ವರ್ಗದಲ್ಲಿ ಸ್ಥಳವನ್ನು ಪಡಕೊಂಡರು. ಸ್ಥಳವೊಂದಕ್ಕೆ ಕ್ರಯ ಒಂದೇ ಎರಡು ಪವನು. ದೇವಸಮೀಪದಲ್ಲಾದರೆ ನಾಲ್ಕು ಪವನು. ಪಾದ್ರಿಗೆ ತುಂಬ ಹಣವಾಯಿತು. ಆದರೆ ಪೋಲೀಸರು ಆತನನ್ನು ಕೈದುಮಾಡಿರುವರು. ಇಂಥ ಪಾದ್ರಿಗೆ ಯಾವ ಸ್ವರ್ಗದಲ್ಲಿ ಸ್ಥಾನವಿದೆಯೊ ಅದನ್ನು ಅವನು ಮೊದಲೇ ರಿಜರ್ವ್ ಮಾಡಿ ಬಿಡಲಿ ವೇ"

### ಭಾರತೀಯ ಸ್ವಾತಂತ್ರ್ಯದ ಪರವಾಗಿ ಲಂಡನಿನಲ್ಲಿ ಪ್ರದರ್ಶನ

ಲಂಡನಿನಲ್ಲಿ ಜನವರಿ ತಾ ೩೦ರಂದು ಭಾರತೀಯ ಸ್ವಾತಂತ್ರ್ಯಪರವಾಗಿ ಒಂದು ಪ್ರದರ್ಶನವು ನಡೆಯಿತು. ಈ ಪ್ರದರ್ಶನ ಕಳುಹಿಸಿಕೊಟ್ಟ ಸ ದೇಶದಲ್ಲಿ ರಾಷ್ಟ್ರಪತಿಯವರ ಹಿಂದೂದೇಶದ ಸ್ವಾತಂತ್ರ್ಯವು ಹಿಂದೂದೇಶ ಮಾತ್ರವಲ್ಲದೆ, ಬ್ರಿಟನು ಮತ್ತು ಸಮಸ್ತ ಜಗತ್ತಿಗೆ ಒಂದು ಪ್ರಮುಖ ಸಮಸ್ಯೆಯಾಗಿರುವುದೆಂದೂ ಸ್ವಾತಂತ್ರ್ಯದ ಹಿಂದೂದೇಶ ಸಮಸ್ಯೆಯು ಸುಧಾರಿಸಲ್ಪಡುವುದಾದರೆ ಬ್ರಿಟನ್ ಹಿಂದೂದೇಶಗಳೊಳಗೆ ಮೈತ್ರಿಯು ಬೆಳೆಯಬಹುದೆಂದೂ, ಈ ಕುರಿತು ಕಾಲವಿಳಂಬವಾದರೆ ಜಗತ್ತಿನ ಶಾಂತಿಗೆ ಹಾನಿಯೆಂದೂ ಹಿಂದೂದೇಶಕ್ಕೆ ಬೇರೆ ಯಾವ ತರದ ಸ್ವಾತಂತ್ರ್ಯವು ಬೇಕಾಗಿಲ್ಲವೆಂದು ಹಿಂದೂದೇಶದ ಸ್ವಾತಂತ್ರ್ಯವೆಂದರೆ ಬ್ರಿಟಿಷರೊಡನೆ ವೈರತ್ವವಲ್ಲ, ಮಾನವನ ಪ್ರಗತಿಗೆ, ಶಾಂತಿ ಮೂಲವೆನಿಸುವ ತರದಲ್ಲಿ ಪರಸ್ಪರ ಸಹಕಾರಿಯಾಗುವುದೇ ಹಿಂದೂದೇಶದ ಸ್ವಾತಂತ್ರ್ಯ ಮೂಲವು ಎಂದು ಅಭಿಪ್ರಾಯಪಟ್ಟಿರುವ

ಬಂಗಾಳದ ಜೈಲಿನಲ್ಲಿ ಹದಿನೈದು ದಿನಗಳಿಂದ ಅನ್ನತ್ಯಾಗ ಮುಷ್ಕರವನ್ನು ಆಚರಿಸುತ್ತಿದ್ದ ರಾಜಕೀಯ ಕೈದಿಗಳೊಬ್ಬರು ಮೃತರಾದರು

ಸಕ್ಕರೆಯ ಮೇಲೆ ಸುಂಕವನ್ನು ಹೆಚ್ಚಿಸುವ ಮತ್ತು ಸಕ್ಕರೆಯ ಧಾರಣೆಯ ಮೇಲೆ ಸರಕಾರಕ್ಕೆ ಅಧಿಕಾರ ಕೊಡುವ ಒಂದು ಬಿಲ್ಲು ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿಯ ಮು...

ರಕ್ಷೈರ್ಮಹಾರ್ಹೈಸ್ತುತುರ್ನಸ ದೇವಾ । ನ ಭೇಜಿರೇ ಭೀಮ ವಿಕೀಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರ್ ಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುವ ಬರುತಿರುವ ।

# ಸ್ವದೇಶಾಭಿಮಾನಿ
SWADESHABHIMANI

ಗರಲಕವರಂಜಿದರೆ! ಸುಧೆಯ ನ್ನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾ. ೪ನೇ ಶುಕ್ರವಾರ ಫೆಬ್ರವರಿ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.) | ತಾರೀಕು 4—2—1938.

# ದೇಶೀಯ ವಿಚಾರಗಳು

### ಫೆಡರೇಶನಿಗೆ ಉಳಿಗಾಲವಿಲ್ಲ

೧೯೩೫ರ ಇಂಡಿಯಾ ಆಕ್ಟಿನ ಫೆಡರೇಶನಿನ ಆಧಾರಾಂಗಳ ಸಂಖ್ಯೆಯು ಕಡಿಮೆಯಾಗುತ್ತ ಬಂದಿದೆ. ಹೈದರಾಬಾದಿಗೆ ತೆರಳಿದ ವೈಸರಾಯರು ಈ ಕುರಿತು ಗುಪ್ತೈಕದರ್ಶಿಕ ತರದ ಅಭಿಪ್ರಾಯವನ್ನು ಹೊರದಿಸುವರಾಗಿ ಒಂದು ಆಶಯವಿದ್ದಿತ. ಆದರೆ ಫೆಡರೇಶನಿನ ಕುರಿತು ಇತ್ಯರ್ಥಕ್ಕಾಗಿ ನೈಜಾಮರು ದೈವಸಂಕಲ್ಪದ ಮೇಲೆ ಹೊಂದಿಕೊಂಡಿರುವರೆಂದು ತಿಳಿದು ಬರುತ್ತದೆ. ಈ ತನುಮಧ್ಯೆ ಕಾಂಗ್ರೆಸ್ ಪ್ರಾಂತ್ಯಗಳ ಎಸೆಂಬ್ಲಿಗಳು ಫೆಡರೇಶನಿಗೆ ವಿರೋಧವಾದ ಠರಾವುಗಳನ್ನು ಪಾಸುಮಾಡುವವು. ಫೆಡರೇಶನಿಗೆ ವಿರೋಧವಾದ ಠರಾವೊಂದು ಮದ್ರಾಸು ಎಸೆಂಬ್ಲಿಯಲ್ಲಿಯೂ ಕೌನ್ಸಿಲಿನಲ್ಲಿಯೂ ಬಂದು, ಮಂಜೂರಾಗಿರುತ್ತದೆ. ಎಲ್ಲೆಲ್ಲೂ ಫೆಡರೇಶನಿಗೆ ವಿರೋಧಾಭಿಪ್ರಾಯವೆ ಕಾಣಿಸುತ್ತದೆ. ಕಂದಾಯ ಹೊರಿಸುವ ವಿಚಾರದಲ್ಲಿ ಈ ಫೆಡರೇಶನ್ ಶಾಸನದಲ್ಲಿ ಕೆಲವು ಬದಲಾವಣೆಗಳಾಗಬೇಕೆಂದೂ ಕಾಂಗ್ರೆಸ್‌ಪ್ರಾಂತ್ಯದ ಆರ್ಥಿಕ ಸಚಿವರು ಮೊನ್ನೆ ಡಿಲ್ಲಿಯಲ್ಲಿ ಜರಗಿದ ಆರ್ಥಿಕ ಸಚಿವರ ಪರಿಷತ್ತಿನಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ, ಆ ಬದಲಾವಣೆಗಳನ್ನು ಕೋರಿ ಅವರು ತ...ದೆ ಬರುವ್ಯತಾಗಿಲ್ಲವೆಂದು, ಸೂಚಿಸಿರುವರ ಕಾರಣ, ಅವರಿಂದ ಫೆಡರೇಶನಿಗೆ ಒಪ್ಪಿದಂತಾಗುವುದರಿಂದ ಫೆಡರೇಶನ್ ರಾಜ್ಯಕ್ರಮ ಸೂತ್ರದ ಕುರಿತು ಖಂಡನೆಯು ಮಾತ್ರ ಇರುವುದಿಲ್ಲವೆಂಬುದಾಗಿ ವೈಸ್ರಾಯರು ಸಂತೃಪ್ತರಾಗಬೇಕಾಗಿದೆ. ಆದರೆ ೧೯೩೫ನೇ ಇಂಡಿಯಾ ಆಕ್ಟಿನ ಫೆಡರೇಶನಿಗೆ ಸಮಸ್ತ ಭರತ ಖಂಡದ ವಿರೋಧವಿದೆ.

### ಫೆಡರೇಶನಿನಲ್ಲಿ ಬದಲಾವಣೆಗಳಾಗುವುವೆ?

ಲಾರ್ಡ ಲೋಧಿಯನರು ಭರತಖಂಡದ ಪ್ರವಾಸಗೈದ ೧೯೩೫ ಇಂಡಿಯಾ ಆಕ್ಟಿನ ಫೆಡರೇಶನಿನ ಕುರಿತು, ಜನಮತವು ಹೇಗಿರುವುದೆಂದು ತಿಳಿಕೊಂಡು, ಅವುಗಳನ್ನು ವೈಸರಾಯರಿಗೆ ತಿಳಿಸಿ, ಸ್ವದೇಶಕ್ಕೆ ಹಿಂತೆರಳಿರುವರು. ಕಾಂಗ್ರೆಸ್ ನಾಯಕರೊಡನೆ ಫೆಡರೇಶನ್ ವಿಚಾರಾಂವೆತ್ತಿದ ಇವರಿಗೆ, ಫೆಡರೇಶನಿನ ಕುರಿತು ಕಾಂಗ್ರೆಸ್ಸಿನ ಧೋರಣೆ, ಅಭಿಪ್ರಾಯಗಳು ಏನಿರಬಹುದೆಂದು ಸರಿಯಾದ ಜ್ಞಾನವಾಗಿರುವುದು. ಅವರು ಹೇಳುವಂತೆ ಈ ಫೆಡರೇಶನಿನಲ್ಲಿ ಅನೇಕ ಬದಲಾವಣೆಗಳಾಗಲಿ ಬೇಕು. ಆದರೆ ಅದಕ್ಕೆ ಬ್ರಿಟಿಷ ಸರಕಾರವು ಒಪ್ಪುವುದೆ? ತಮ್ಮ ಪಾರ್ಲಿಮೆಂಟಿನಿಂದ ಅನೇಕ ದಿವಸಗಳ ಪರಿಶ್ರಮದ ಫಲವಾಗಿ ಸಿದ್ಧವಾದ ಈ ಫೆಡರೇಶನ್ ರಾಜ್ಯಕ್ರಮವನ್ನು ಪರೀಕ್ಷೆಗಾಗಿಯಾದರೂ ಸ್ವೀಕರಿಸಲ್ಪಡಬೇಡವೆ? ಎಂಬುದಾಗಿ ಬ್ರಿಟಿಷಪಾರ್ಲಿಮೆಂಟಿನ ಪ್ರಶ್ನೆ ಹೊರಡಬಹುದು. ಆದರೆ ಈ ಫೆಡರೇಶನನ್ನು ವಿರೋಧಿಸಲೇ ಬೇಕೆಂದು ರಾಷ್ಟ್ರೀಯ ನಾಯಕರ ದೃಢಸಂಕಲ್ಪವಾಗಿರುವುದು. ಅದು ರೂಢಿಗೆ ಬಾರದಂತೆ ಅವರು ಸಾಧಿಸಲಿದ್ದಾರೆ. ಆದುದರಿಂದ ಫೆಡರೇಶನನ್ನು ಕೊಂಬೆರೆಗಳಿಲ್ಲದೆ ... ತ್ತದೆ. ಈ ವಿಷಯವು ಬ್ರಿಟಿಷ ಸರಕಾರದ ಪ್ರತಿನಿಧಿಗಳಾದ ಲೋರ್ಡ ಲೋರ್ಡ ಲೊಧಿಯನರಿಗೂ ಲೋರ್ಡ ಸಾಮ್ಯುವೇಲರಿಗೂ ಅವರ ಪ್ರವಾಸದ ಆಗ ಭವದಲ್ಲಿ ತಿಳಿದುಬಂದಿದ್ದು, ಅವರು ಬ್ರಿಟಿಷ ಸರಕಾರಕ್ಕೆ ಒಳ್ಳೆ ಬೋಧನೆಯಿತ್ತರೆ, ಆಗ ಸಲ ಉತ್ತರವಾಗಬಹುದು.

ನೂತನ ಇಂಡಿಯಾ ಆಕ್ಟಿನ ಈ ಫೆಡರಲ್ ರಾಜಕ್ರಮಸೂತ್ರ ... ಚಿಸ ದ್ಯಾಯಾಕ ... ಇನ್ನೂ ಇರುವುದರಿಂದ, [ಸರಕಾರ ... ಅಧಿಕಾರ ಫೆಲ್ಲವು, ವೈಸ್ರಾಯರ ಮತ್ತು ಜನಮತದ ದ ಅಧೀನಲಾಗದವರಲಿ ಇರುವುದಕ್ಕೆ ತ್ಯಾಯ ಕರ್ ಏನ್ನುತ್ತಾರೆ] ಪ್ರಜಾಸತ್ತಾ ... ಗಳನ್ನು ಆಚರಿಸಿ, ಮತದಾರರಿಂದ ಆರಿಸಿಬಂದ ಮಂತ್ರಿ ಮಂಡಳಿ, ಈ ಅಧಿಕಾರವು ಕೇಂದ್ರಗಬೇಕೆಂದ ಕಾಂಗ್ರೆಸ್ ನಾ ... ಪ ದಳಗಳ ... ಗಿರುತ್ತದೆ. ಅಂದರೆ ಆಡಳಿತದ ... ಮೆಗಳಲ್ಲಿ ..., ... ದೇಶದ ರಕ್ಷಣ ಮತ್ತು ಬಹಿರಂಗ ವ್ಯವಹಾರ ... ಭಾರತೀಯರು ಇರ ... ಅವರ ಕೈಕೆಳಗಿರುತ್ತದೆ. ಕಾಂಗ್ರೆಸ್ ಸಲಹೆಗಳನ್ನು ಬ್ರಿಟಿಷ ಸರಕಾರವು ಒಪ್ಪಿಸುವುದೆಂದಿಗೂ ... ಹಾಗಾದರೆ ಫೆಡರೇಶನಿನ ಕುರಿತು ಉಂಟಾಗುವ ಬಿಕ್ಕಟ್ಟಿನ ಪರಿಸ್ಥಿತಿಯ ಸುಲಭದಲ್ಲಿ ನಿವಾರಣೆಯಾಗಲಾರದೇ ಹೇಳಬೇಕಾಗಿದೆ.

### ಸರ್ ಗ್ರಿಗ್ಗರ ಉಭಯಸಂಕಟ

ಆರ್ಥಿಕ ಸಚಿವರ ಪರಿಷತ್ತಿಗಾಗಿ ಡಿಲ್ಲಿಗೆ ತೆರಳಿದ ರಾಜಾಜಿಗಳ, ಅಲ್ಲಿ ನೆರೆದ ಸಭೆಗಳಲ್ಲಿ ಉತ್ಕೃಷ್ಟರೆಂದವರೆಂಬ ಅಭಿಪ್ರಾಯವು ಉಂಟಾಗಿರುವುದು. ಇಂಡಿಯಾ ಸರಕಾರದ ಆರ್ಥಿಕ ಸಚಿವರಾದ ಸರ್ ಜೇಮ್ಸ್ ಗ್ರಿಗ್ಗರು, ಮಾತನಾಡಲು ಪ್ರಾರಂಭಿಸಿದುದೇ ತಡ, ಅವರ ಅಭಿಪ್ರಾಯಗಳನ್ನೆಲ್ಲಾ ಮುಂದಾಗಿಯೆ ತಿಳಿದವರಾಗಿ, ಆರ್ಥಿಕ ವ್ಯವಸ್ಥೆಯ ಕುರಿತು, ಪ್ರಾಂತ್ಯಗಳ ಅಭಿಪ್ರಾಯಗಳ ಆಧಾರವಾಗಿ, ಇವರು ಆಡಿದ ಮಾತುಗಳಿಂದ ಸರ್ ಗ್ರಿಗ್ಗರು ಉಭಯ ಸಂಕಟಕ್ಕೆ ಒಳಗಾದರಂತೆ. "ಇವರನ್ನು ನಾನು ... ನಾಗಿದ್ದೇನೆ. ಇವರು ಮಹಾ ಬುದ್ಧಿಶಾಲಿಗಳು. ಆದರೆ ಅಂತರ್ಯೋರ್ವ ಮಂತ್ರಿಗಳಾಗಿದ್ದು ಅವರ ಕೈಕೆಳಗೆ ನಾನೆಂದಿಗೂ ಕೆಲಸ ಮಾಡೆನು, ಕಾರಣ, ಅವರು ಪ್ರಭಾವಶಾಲಿಗಳು, ಇತರರಿಗೆ ಅವರು ಅವಕಾಶವೆ ಕೊಡುವದಿಲ್ಲ" ಎಂಬುದಾಗಿ ಗ್ರಿಗ್ಗರು, ರಾಜಾಜಿಯವರ ಕುರಿತು ಅಭಿಪ್ರಾಯ ಹೊಂದುವವರಾದರ. ಈ ಪರಿಷತ್ತಿನಲ್ಲಿ ರಾಜಾಜಿಯವರೆ ಕಾಂಗ್ರೆಸ್ ಮಂತ್ರಿಗಳ ನಾಯಕರಾಗಿ, ಎಲ್ಲಾ ವ್ಯವಹಾರವನ್ನು ನಡೆಯಿಸುವವರಾದರು. ಯುಕ್ತ ಪ್ರಾಂತ್ಯದ ಪಂತ ಪಂತರಿಗೂ ಇವರಿಂದ ಅವಕಾಶ ದೊರಕಲಿಲ್ಲವಂತೆ. ಕಾಂಗ್ರೆಸ್ ಮಂತ್ರಿಗಳೇಕೆ, ಇತರ ಪ್ರಾಂತ್ಯಗಳ ಆರ್ಥಿಕ ಮಂತ್ರಿಗಳು ಕೂಡ ಅವರನ್ನು ತಮ್ಮ ನಾಯಕರಾಗಿ ಎಣಿಸಿದರಂತೆ. ರಾಜಾಜಿಯವರ ಕಾರ್ಯಚತುರತೆಯಿಂದಲೆ, ಡಿಲ್ಲಿಯಲ್ಲಿ ಜರಗಿದ ಆರ್ಥಿಕ ...

ಮಾತೃಭೂಮಿಯ ಸೇವೆಗಾಗಿ ಹೆಚ್ಚಿನ ಸ್ವಾತಂತ್ರ್ಯಹೊಂದಲು

# ಐ. ಸಿ. ಎಸ್. ಉದ್ಯೋಗಸ್ಥರೊಬ್ಬರು ರಾಜಿನಾಮೆಯಿತ್ತರು!

ಕ್ರಮವನ್ನು ಅಷ್ಟು ಬೇಗನೆ ಪೂರೈಸಿಬಿಟ್ಟು ದೆಂದು ಹೇಳಬಹುದೆಂದು, ಕೈಸರೀ ಹಿಂದ್ ಪತ್ರಿಕೆಯ ಡಿಲ್ಲಿ ಪತ್ರಗಾರರ ಅಭಿಪ್ರಾಯವಾಗಿರುತ್ತದೆ.

ಈ ... ದ್ವಿತೀಯ ಮದ್ಯಪಾನ ನಿಷೇಧನಾ ಬಿಲಿನ ಕುರಿತು ಈ ಬಿಲು ಈಗ ಮದ್ರಾಸು ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡುತ್ತದೆ. ನಮ್ಮ ಈ ವಾರದ ಸಂಚಿಕೆಯು ಹೊರಡುವುದರಷ್ಟರೊಳಗೆ, ಅದು ಒ..ದ ... ವಾಗಬಹುದು. ಈ ಬಿಲಿನಲಿ ಅನೇಕ ಬದಲಾವಣೆಗಳಾಗಬೇಕೆಂದು, ಎದುರಿಡ ಪೆಂಟ್ ಠರಾವುಗಳ ನೂರಾರು ಒಂದಿದ್ದವು. ಇವುಗಳಿಗ ಪ್ರತಿಯೊಂದಕ್ಕೆ ಯೋಗ್ಯವಾದ ಉತ್ತರ ಕೊಟ್ಟು, ವಾಯುವೇಗದಲ್ಲಿ ಅವುಗಳ ವಿಚಾರ ಮುಗಿಸಿದವರು ರಾಜಾಜಿಯವರು.

ಯಾವತ್ತೂ ತರದ ಟೀಕೆ, ವಿವರ್ ಇತ್ಯಾದಿಗಳನ್ನು ಎದುರಾಯಿಸುವರೆ, ರಾಜಾಜಿಯವರಷ್ಟು ಚಾಣಾಕ್ಷರು ಇನ್ನೊಬ್ಬರಿಲ್ಲವೆನ್ನಬೇಕು.

### ರಾಜಾಜಿಯವರ ಧೈರ್ಯದ ಹೇಳಿಕೆ

"ಕಾಂಗ್ರೆಸು ಅಧಿಕಾರ ತ್ಯಜಿಸುವುದಿಲ್ಲ, ಅವರು ಅಧಿಕಾರ ತ್ಯಜಿಸಿದರೂ, ಇತರರು ಅವರ ಸ್ಥಾನಕ್ಕೆ ಬರಲಾರರು. ನಾವು ಒಳ್ಳೆ ಪ್ರಗತಿಯನ್ನು ಹೊಂದಿದ್ದೇವೆ. ಈಗ ಹಿಂದೆ ಸರಿಯಲು ಸಾಧ್ಯವಿಲ್ಲ" ಎಂಬುದಾಗಿ ರಾಜಾಜಿಯವರು, ಡಿಲ್ಲಿಯಲ್ಲಿ ಅವರ ಸನ್ಮಾರ್ಥನಾಗಿ ನಡೆದ ಒಂದು ಕೂಟದಲ್ಲಿ ಆಡಿರುವರು. ಅದಲ್ಲದೆ ಈ ಲೋಕವ್ಯವಹಾರವನ್ನು ತ್ಯಜಿಸಿ, ಭಗವದ್ಗೀತೆಯ ಪಠನದಲ್ಲಿ ಕಾಲಕ್ಷೇಪ ಮಾಡಲು ತನಗೆ ಇಚ್ಛೆಯಿರುವುದೆಂದೂ ಯೋಗ್ಯರಾದವರು ತನ್ನ ಈಗಿನ ಕಾರ್ಯಗಳನ್ನು ವಹಿಸಿಕೊಳ್ಳಲು ಸಿದ್ಧರಾದ ಮೇಲೆ ಈ ಇಚ್ಛೆಯನ್ನು ನಡೆಯಿಸುವೆನೆಂದೂ, ನೆಯಿಲ್ ವಿಗ್ರಹವನ್ನು ತೆಗೆದು ವಸ್ತುಸಂಗ್ರಹಾಲಯದಲ್ಲಿಡುವಂತೆ ಅದ ಇತ್ಯರ್ಥವು ತನ್ನ ಮಂತ್ರಿಮಂಡಳದ ಕಾರ್ಯಕ್ಕೆ ಮಾತ್ರ ಮೊದಲಾಗಿ ತಿಳಿದಿತ್ತೆಂದೂ, ಜನಸಂಚಾರಕ್ಕೆ ಅಡ್ಡಿಯಾಗದಂತೆ ಅದು ಶಾಂತಿ ಸಮಯದಲ್ಲಿ ತೆಗೆಯಲಾಯಿತೆಂದೂ, ಮದ್ರಾಸು ಸರಕಾರವು ತನ್ನ ಕಾರ್ಯಸಾಧನೆಯನ್ನು ಹೆಚ್ಚಿನ ಜಾಹೀರಾತಿಲ್ಲದೆ ಮಾಡುವುದೆಂದೂ ಅವರು ತಿಳಿಸಿದರು.

### ನಲಿನಿ-ಗಾಂಧಿಜಿ ಮಾತುಕತೆಗಳು

ಆರ್ಥಿಕ ಸಚಿವರ ಪರಿಷತ್ತಿಗಾಗಿ ಡಿಲ್ಲಿಗೆ ತೆರಳಿದ ಬಂಗಾಳದ ಆರ್ಥಿಕ ಸಚಿವರಾದ ಶ್ರೀ ನಲಿನೀರಂಜನ ಸರಕಾರರು, ಹಾದಿಯಲ್ಲಿ ವಾರ್ಧಾದಲ್ಲಿಳಿದು, ಮಹಾತ್ಮಾಜಿಯವರ ಭೇಟಿ ಮಾಡಿದರು. ಇವರೊಡನೆ ಬಂಗಾಳದ ಪ್ರಸಿದ್ಧ ಕಾಂಗ್ರೆಸ್ ನಾಯಕರಾದ ಡಾ। ಬಿ. ಸಿ. ರೋ...

### ನಮ್ಮ ಜಿಲ್ಲೆಯವರಾದ ಶ್ರೀಮಾನ್ ಹುಂಡಿ ವಿಷ್ಣು ಕಾಮತರು

ಇಂಡಿಯನ್ ಸಿವಿಲ್ ಸರ್ವಿಸ್ ದಳವನ್ನು ೧೯೩೦ರಲ್ಲಿ ಸೇರಿದ, ಮಧ್ಯಪ್ರಾಂತ್ಯದ ಜಬಲ್‌ಪುರದಲ್ಲಿ ಸಬ್ ಡಿವಿಜನಲ್ ಆಫೀಸರರಾಗಿದ್ದ, ಶ್ರೀ। ಎಚ್ ವಿಷ್ಣು ಕಾಮತ್‌ರವರು ಮಾತೃಭೂಮಿಯ ಸೇವೆಯನ್ನು ಮಾಡಲು ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯಲು, ಎಂಬ ಕಾರಣದ ಮೇಲೆ ಎರಡು ತಿಂಗಳ ಅವಧಿಯನ್ನು ಕೊಟ್ಟು ಇಂಡಿಯಾ ಸೆಕ್ರೆಟರಿಗಳವರಿಗೆ ತಮ್ಮ ರಾಜಿ ಪತ್ರವನ್ನು ಕಳುಹಿಸಿ ಕೊಟ್ಟಿರುವರು.

ಈ ವಿಚಾರ ಪತ್ರಿಕಾ ಪ್ರತಿನಿಧಿಗಳು ಶ್ರೀ। ಕಾಮತರ ಭೇಟಿ ಮಾಡಲು, ತನಗೆ ದೇಶಸೇವೆ ಮಾಡಲು ಇಚ್ಛೆಯಿರುವುದರಿಂದ, ತಾನು ರಾಜಿಯಿತ್ತೆನೆಂದು ತಿಳಿಸಿದವರಾಗಿಯೂ, ಸದ್ಯಕ್ಕೆ ರಾಜಿನಾಮೆಯ ನಿಜವಾದ ಕಾರಣಗಳನ್ನು ತಿಳಿಸಲು ಸಿದ್ಧರಿಲ್ಲವೆಂದೂ ತಿಳಿಸಿರುವರು. ಭವಿಷ್ಯದ ತಮ್ಮ ಯೋಜನೆಗಳು ರಚನೆಯಾಗ ಬೇಕಿವೆ ಎಂದು ತಿಳಿಸಿರುವರು.

ಶ್ರೀ। ಕಾಮತರು, ಸಿವಿಲ್ ಸರ್ವಿಸನ್ನು ಸೇರಿದಂದಿನಿಂದಲೆ, ತಮ್ಮ ರಾಷ್ಟ್ರೀಯ ಮನೋಭಾವದಿಂದ ಕೂಡಿದವರಾಗಿದ್ದರು. ಲೋರ್ಡ ಜೆಟ್‌ಲೆಂಡರು ಹಿಂದೂದೇಶದ ಕುರಿತಾದ ಶೋಚನೀಯ ವಿಮರ್ಶೆಗೆ ಪ್ರತಿಕೂಲವಾಗಿ ಅವರ ಬೊಯ್ ಸ್ಕೌಟ್ ಸಂಘದ ಅಧ್ಯಕ್ಷತನಕ್ಕೆ ರಾಜಿಯಿತ್ತಿದ್ದರು. ಅವರೀಗ ಸೇವಾಸಮಿತಿಯನ್ನು ಸೇರುವವರಿದ್ದಾರೆ. ಜಬ್ಬಲ್‌ಪುರದ ಹತ್ತಿರ ಪಾನಗರ ಎಂಬಲ್ಲಿ ಫೆಬ್ರವರಿ ತಾ. ೧೦ರಲ್ಲಿ ಜರಗಿದ ಸೇವಾಸಮಿತಿ ರೇಲಿ ಸಂಬಂಧದ ಅಧ್ಯಕ್ಷತನವನ್ನು ಅವರು ವಹಿಸಿದ್ದರು.

ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆ, ಡೆಟಿನ್ಯೂಗಳ ವಿಚಾರವಲ್ಲದೆ, ಬಂಗಾಳದ ಕಾಂಗ್ರೆಸ್ ಕಲಹದ ಕುರಿತು ಕೆಲವು ಪ್ರಾಮುಖ್ಯ ವಿಷಯಗಳ ವಿಚಾರವೆತ್ತಲಾಗಿ, ಈ ಕಲಹ ನಿವಾರಣೆಯಾಗುವಂತೆ, ಶ್ರೀ। ನಲಿನಿ ಸರಕಾರರಿಗೂ, ಶ್ರೀ। ಸರತ್ ಚಂದ್ರ ಬೋಸರಿಗೂ ಇರುವ ವೈಮನಸ್ಸು ಮಾಯವಾಗಿ, ಎಲ್ಲರೂ ಐಕ್ಯದಿಂದ ಕಾರ್ಯ ಸಾಧಿಸಬೇಕಾಗಿ, ಗಾಂಧಿಜೀಯವರು ಕೋರಿದ ಮೇರೆಗೆ, ಶ್ರೀ। ನಲಿನಿ ಸರಕಾರ್ ಮತ್ತು ಶ್ರೀ। ಬೋಸರು ಅದಕ್ಕೆ ಒಪ್ಪಿದ್ದು, ಬಂಗಾಳ ಕಾಂಗ್ರೆಸ್ ವಾತಾವರಣದಲ್ಲಿ ಕಲಹವು ಮಾಯವಾಗುವುದರಿಂದ, ಸದ್ಯದಲ್ಲಿ ಅಲ್ಲಿ ಮಹಾ ಮಾರ್ಪಾಟುಗಳೇ ನಡೆಯುವುವೆಂದು ಊಹಿಸಬಹುದು. ನವರಾಷ್ಟ್ರಪತಿ ಶ್ರೀ। ಬೋಸರೂ ಈ ಕಲಹ ನಿವಾರಣೆಯ ಕಾರ್ಯದಲ್ಲಿ ಶ್ರಮವನ್ನು ವಹಿಸಿರುವರಾಗಿ ತಿಳಿದುಬರುತ್ತದೆ. ಹಕ್ ಮಂತ್ರಿಮಂಡಲಕ್ಕೆ ಇನ್ನೆಷ್ಟು ಆಯುಷ್ಯವಿದೆಯೆಂದು ನೋಡಬೇಕು.

**Use the soaps**
KNOWN ALL OVER
**WISICO'S.**

**MINAR**
&
**TAJAMAHAL** 'Red'
Bar Soaps,
POPULAR IN THE MARKET

*Sole Distributer*—
**P. G. KAMATH,**
Kashmu House,
Marnamikatta, MANGALORE.

**'DILROZ'** Regd
'Dil Roz' is a sure cure for Oriental sores local sores, all kinds of deep rooted sores, skin eruptions, Pimples, Eczema, Ringworm, Sinus Fistula auxillary-Abscess
There is no need of dressing the wounds, nor are baths prohibited
Price Rs. 2 Postage extra
TAHIR DIN,
Anarkali LAHORE

ಆರೋಗ್ಯಕ್ಕೆ
ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ—

ಜೀವಾಮೃತ

ಆಯುರ್ವೇದಾಶ್ರಮಂ,
೧೫೧, ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸು
ದ ಕ ಜಿಲ್ಲಾ ಏಜಂಟರು —
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

### ಭಾರತೀಯ ಜೈಲುಗಳ ಶಾಸನವ್ಯವಸ್ಥೆ

(ಗತಸಂಚಿಕೆಯಿಂದ ಮುಂದರಿಸಿದ್ದುದು)

ಅಪ್ರಾಸಂಗಿಕವಾಗಲಾರದು ಫಾಶೀಯಾಗುವ ಮೊದಲು ಯಾವ ಯಾವ ಅಧಿಕಾರಿ ಅಥವಾ ನೌಕರ ಹೇಗೆ ನಡಕೊಳ್ಳಬೇಕು ಎಂಬುದರ ಅಭ್ಯಾಸವು ಕೆಲವು ದಿನಗಳಿಂದ ನಡೆಯುತ್ತ ಇರುತ್ತದೆ. ಫಾಶೀ ಕೊಡುವ ಪ್ರಾತಃಕಾಲವು ಅತ್ಯಂತ ಭಯಂಕರವಾಗಿರುತ್ತದೆ ಆ ದಿನ ಉಳಿದ ಕೈದಿಗಳು ಹೊತ್ತೇರಿ ಬಹಳ ಸಮಯವಾಗುವ ತನಕ ತಮ್ಮ ತಮ್ಮ ಸೆಲ್ಲು ಅಥವಾ ವಾರ್ಡುಗಳಲ್ಲಿಯೇ ಇರಬೇಕಾಗುತ್ತದೆ. ಬಹುಶಃ ದಂಗೆಯಾಗಬಹುದೆಂಬ ಸಂದೇಹದಿಂದ ಹೀಗೆ ಮಾಡುತ್ತಿರಲೂ ಬಹುದು ಫಾಶಿಗೆ ಹೋಗುವ ಕೈದಿಯು ಅಂದಿನ ಮನೋಸ್ಥಿತಿಯು ಹೇಗಿರಬಹುದೋ ಅದನ್ನು ಹೇಳುವದು ವ್ಯರ್ಥ

#### ಛಡೀ ಶಿಕ್ಷೆ

ಜೈಲಿನೊಳಗೆ ಅಪರಾಧಿಗಳಾದ ಕೈದಿಗಳಿಗೆ ಈ ಶಿಕ್ಷೆಯು ಇರುವದು ಅಥವಾ ಮೆಜಿಸ್ಟ್ರೇಟರೇ ಅವರಿಗೆ ಇಂಥ ಶಿಕ್ಷೆಯನ್ನು ಕೊಟ್ಟದ್ದಿರಬೇಕು. ಬೆತ್ತದ ಶಿಕ್ಷೆಗಿಂತ ಬೇರೆ ಯಾವ ಅಮಾನುಷಿಕ ಶಿಕ್ಷೆ ಇರುವದೋ ನನಗೆ ಗೊತ್ತಿಲ ಬೆತ್ತದ ಶಿಕ್ಷೆಯ ವಾರ್ತೆಯನ್ನು ಕೇಳಿದ ಕಲ್ಲಾದರೂ ಕರಗಿ ನೀರಾದೀತು

ಯಾರಿಗೆ ಬೆತ್ತದ ಶಿಕ್ಷೆಯಾಗವೇಕೋ ಅವನನ್ನು ಬೆತ್ತಲೆಮಾಡಿ ಸೊಂಟದ ಸುತ್ತಲೂ ನಾಲ್ಕು ಅಂಗುಲದ ಚಂಡಿ ಮಾಡಿದ [illegible] ಸುತ್ತುತ್ತಾರೆ ಆ ಮೇಲೆ ಅವನು ಅತ್ತಿತ್ತ ಅಲ್ಲಾಡದಂತೆ ಒಂದು [illegible] ಕಟ್ಟಿಬಿಡುತ್ತಾರೆ ಅನಂತರ ಏಟು ಕೊಡುವವನು ಬೆತ್ತದಿಂದ ರಪರಪ ಹೊಡೆಯುತ್ತಲೂ ಲೆಕ್ಕಮಾಡುವವನು ಆ ಪೆಟ್ಟುಗಳನ್ನು ಲೆಕ್ಕಿಸುತ್ತಲೂ ಇರುತ್ತಾನೆ ಒಮ್ಮೊಮ್ಮೆ ಬೆತ್ತದೇಟು [illegible] ಆ ಶಿಕ್ಷೆ ತೀರಿಸುವುದರೊಳಗಾಗಿ ಮೂರ್ಛೆ [illegible] ಇದೆ

#### ಕ್ಷೌರ

[illegible] ಯಬೇಕೆ? [illegible] ಕೂಡ ಜೈಲುಗಳಲ್ಲಿ ಇಲ್ಲೊಂದು [illegible] ಪೂರ್ಣ [illegible] ಗಳಲ್ಲಿ ಕ್ಷೌರ ಕತ್ತಿಯಿಂದ ಕ್ಷೌರಮಾಡುವುದಿಲ್ಲ [illegible] ಕೇವಲ ಕತ್ತರಿಉಪಯೋಗಿಸುತ್ತಾರೆ [illegible] ಉಪಯೋಗಿಸುವಾಗ ಕೈದಿಯು ಆತ್ಮಘಾತ ಮಾಡಿಕೊಳ್ಳುವ ಸಂಭವವಿದೆಯೆಂತೆ ಜೈಲಿನೊಳಗೆ ಆತ್ಮಹತ್ಯೆಯು ಭಯಂಕರ ವಿಷಯವೆಂದು ತಿಳಿಯಲ್ಪಡುತ್ತದೆ

#### ಓದುಬರಹ

ವಿದ್ಯಾವಂತರಿಗೆ ಜೈಲುಗಳು ಅಧಿಕತ್ರಾಸದಾಯಕವಾಗಿರುವವು ಓದಲಿಕ್ಕೆ ಪುಸ್ತಕಗಳಾಗಲೀ ಬರೆಯಲಿಕ್ಕೆ ಸಾಮಗ್ರಿಯಾಗಲೀ ಅವರಿಗೆ ದೊರೆಯುವುದಿಲ್ಲ ಹೌದು, ಕೆಲವು ಧಾರ್ಮಿಕ ಪುಸ್ತಕಗಳು ದೊರೆಯುತ್ತವೆ. ರಾಜನೈತಿಕ ಪುಸ್ತಕಗಳ ಸುಳಿವೇ ಅಲ್ಲಿಲ್ಲ. ಅವನ್ನು ಓದಿ ಎಲ್ಲಿಯಾದರೂ ಕೈದಿ ವಿದ್ರೋಹಮಾಡಿಬಿಟ್ಟರೆ? ವರ್ತಮಾನ ಪತ್ರಿಕೆಗಳನ್ನು ಓದಲು ಬಿಡುವ ಕುರಿತು ಏನಾದರೂ ಬರೆಯದಿರುವುದೇ ಒಳ್ಳೆಯದು.

#### ಮಾತುಕತೆ

ಮಾತುಕತೆ ಬೆಳೆಸುವ ದೃಶ್ಯವು ವಿಚಿತ್ರವಾಗಿರುವದು ಜೈಲಧಿಕಾರಿಗಳು ಆಫೀಸು ಮಾಡಿಕೊಂಡಿರುವ ಕೋಣೆಯೊಂದರಲ್ಲಿ ಅವರ ಮುಂದೆಯೇ ಕೈದಿಯು ತನ್ನ ಸಂಬಂಧಿಗಳು ಮೊದಲಾದವರೊಡನೆ ಮಾತುಕತೆ ನಡೆಸಬೇಕು. ಕೆಲವು ಕಡೆಗಳಲ್ಲಿ ಈ ಕೋಣೆಯು ಹೊರಗಿನ ಗೇಟಿಗೆ ತೀರ ಸಮೀಪವಾಗಿರುತ್ತದೆ ಈ ಕೋಣೆಗೆ ಸರಳಿನ ಬಾಗಿಲು ಇದೆ ಕೋಣೆಯಲ್ಲಿ ಅದರ ಮುಂದೆ ನಿಂತು ಕೈದಿಯು ಗೇಟಿನ ಒಳ ಇರುವ ತನ್ನ ಸಂಬಂಧಿಯೊಡನೆ ಮಾತನಾಡಬೇಕು ಅವರಿಬ್ಬರು ಪರಸ್ಪರ ಚೆನ್ನಾಗಿ ನೋಡಿಕೊಳ್ಳುವ ಒಳ್ಳೆ ಅನುಕೂಲತೆ ಕೂಡ ಇರುವುದಿಲ್ಲ ಅವರೊಳಗೆ ಮಾತುಕತೆಗೆ ಆರಂಭವಾಗುವುದರೊಳಗಾಗಿಯೇ ಸಮಯವು ಮುಗಿದು ಕೈದಿಯು ತನ್ನ ಸ್ಥಾನಕ್ಕೆ ಹೋಗಬೇಕಾಗುತ್ತದೆ ಹೀಗೆ ಹೋಗುವ ಆ ದೃಶ್ಯವು ಬಹಳ ಮನೋವೇಧಕವಾಗಿರುವದು

ಜೈಲುಗಳಲ್ಲಿ ಕೈದಿಗಳನ್ನು ಸುಧಾರಿಸುವ [illegible] ಅವರಿಗೆ ಶಿಕ್ಷೆಯಾಗುತ್ತದೆಂದು ಕೇಳಿದ್ದೆ ಆದರೆ ಜೈಲುಗಳ ವ್ಯವಸ್ಥೆಯನ್ನು ನೋಡುವಾಗ ಅಲ್ಲಿ ಕೈದಿಗಳ ಸುಧಾರಣೆಯಾಗುವುದಕ್ಕಿಂತಲೂ ಪತನವಾಗುವದೇ ಹೆಚ್ಚು ಜೈಲು ಸುಧಾರಣೆಗಾಗಿ ಪ್ರಪಂಚದ ಇತರ ಸರಕಾರಗಳು ಬಹಳ ಪ್ರಯತ್ನಮಾಡಿವೆ ಆದರೆ ಭಾರತೀಯ ಜೈಲುಗಳಲ್ಲಿ ಆ ಥರ ಸುಧಾರಣೆಗಳಾಗಿ [illegible]

[illegible] ಜೈಲು ಸುಧಾರಣೆಯ ಕಡೆಗೆ [illegible] ಅತ್ಯಾವಶ್ಯಕವಾಗಿದೆ ಜೈಲುಗಳ ಸುಧಾರಣೆಯು ಕೈದಿಗಳ ಸುಧಾರಣೆ [illegible] ಕೈದಿಗಳ [illegible] ದೇಶ [illegible] ಜದ ವ್ಯಕ್ತಿ ತನ್ನ ಕರ್ತವ್ಯಪಾಲಿಸಿ [illegible] ಜೈಲುಗಳ ಸುಧಾರಣೆ [illegible] ಬೇಕು [illegible] ಈ ಕಾರ್ಯವನ್ನು ಕೂಡಲೇ ಕೈಕೊಂಡು ಸಫಲವಾಗುವದಾದರೆ, ಉಳಿದ ಪ್ರಾಂತ್ಯಗಳ ಮಂತ್ರಿ ಮಂಡಲಗಳು ಅವುಗಳ ಅನುಕರಣಮಾಡದೆ ಇರಲಾರವು

ನಿಷ್ಣಾತ ವೈದ್ಯರು
ನಿಮ್ಮ ದಮ್ಮಿನ ಚಿಕಿತ್ಸೆ
ಯನ್ನು
ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ನಿಮಿಷಗಳಲ್ಲಿ ಚುಟಿಕಿ ಹೊಡೆದಂತೆ ಗುಣಮಾಡುವೆನೆಂದು ಅವನು ಹೇಳಬಹುದೆಂದು ನಿಮಗೆ ಅನಿಸುವದೋ? ದಮ್ಮನ್ನು ತತ್ಕಾಲಕ್ಕೆ ಗುಣಮಾಡುವ ಉಪಾಯವು ಎಫಿಡ್ರಿನ್ ಮುದ್ರಿಕೆಗಳು ಅಥವಾ ಹೊಟ್ಟೆಗೆ ತಕ್ಕೊಳ್ಳುವ ಔಷಧಗಳು ಆದರೆ ಇವು ದಮ್ಮನ್ನು ಪೂರ್ಣ ನಾಶಮಾಡಿಸಲು ತೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ ಪರಿಣಾಮದಲ್ಲಿ ಈ ಔಷಧಗಳ ಗಂಟಲಿನ ಹಾಗೂ ಶ್ವಾಸನಳಿಗೆಗಳ [illegible] ಯನ್ನು ಹೆಚ್ಚಿಸಿ ರೋಗವನ್ನು ಕಾಯಮ್ಮದ [illegible] ನವನನ್ನಾಗಿ ಮಾಡಿಬಿಡುವವು

[illegible]

ದೊಡ್ಡ ಶೀಸೆಗಳಲ್ಲಿ
ಮಾರಲ್ಪಡುತ್ತದೆ

ಡಾ ಪುರೋಹಿತ
ಶ್ವಾಸಹಾರೀ
ಡಾ ಪುರೋಹಿತ ಫಾರ್ಮಸಿ ಕೊಲ್ಹಾಪುರ

***Ready for sale !***

**SHARADA DIARY 1938**

**Small size 0—4—0.**

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

**Interleaved big size DIARIES useful for Banks & Lawyers**
**ARE AVAILABLE AT 1-2-0 PER COPY**
**Sharada Press, Mangalore, S. Canara.**

# ಅನಾಗರೀಕ ನಾಗರೀಕತೆ.

## ಇನ್ನೊಂದು ಮಹಾಯುದ್ಧವು ಸದ್ಯದಲ್ಲೆ ನಡೆಯುವುದು!

### ಅದರ ಪರಿಣಾಮಗಳು ಅತಿ ಭೀಕರವೆನಿಸುವುದು.

### ಪ್ರಭುತ್ವದ ರಾಷ್ಟ್ರಗಳಲ್ಲಿ ಯುದ್ಧಸನ್ನಾಹದ ಪೈಪೋಟಿ.

ಮತ್ಸರ, ಸಂಶಯ, ಅಪನಂಬಿಗೆ ಇವುಗಳು ಬಲವಾಗಿ ಕಾಲೂರಿದ ಐರೋಪ್ಯದಲ್ಲಿ ಶಾಂತಿ ರಕ್ಷಣೆಯಾಗುವುದು ಅಸಾಧ್ಯವು ಕಳೆದ ಮಹಾಯುದ್ಧದ ಕಾಲದಲಿ ಯುದ್ಧ ಶಸ್ತ್ರಗಳ ಮೇಲೆ ಯಾವ ತರದಲ್ಲಿ ಅತ್ಯಧಿಕ ವೆಚ್ಚವಾಗಿರುವುದು, ಯಾವ ತರದ ಮಹಾ ಕಷ್ಟ, ನಷ್ಟಗಳು ಉಂಟಾಗಿದ್ದವೆಂದು ಸಂಬಂಧಪಟ್ಟ ಜನಾಂಗಳಿಗೆ ತಿಳಿದೇ ಇರುವುದು ಆ ಮಹಾಯುದ್ಧದ ದೆಸೆಯಿಂದ ಈ ಜಗತ್ತಿನಲ್ಲಿ ಕ್ರಾಂತಿಮಯ ತರದ ಮಾರ್ಪಾಟುಗಳಾಗಿಬಿಟ್ಟವೆಂದೂ ಜನರಿಗೆ ತಿಳಿದೇಯಿರುವುದು. ಕಳೆದ ಮಹಾ ಯುದ್ಧದ ದೆಸೆಯಿಂದ ಜಗತ್ತಿನ ಸಾಂಪತ್ತಿಕ ಸ್ಥಿತಿಯಲ್ಲಿ ಉಂಟಾದ ಅಲ್ಲೋಲಕಲ್ಲೋಲದ ದುಷ್ಪರಿಣಾಮಗಳಿಂದ ಜಗತ್ತು ಇಂದಿಗೂ ಹೊರಗಾಗಲಿಲ್ಲ. ಕಳೆದ ಮಹಾ ಯುದ್ಧದ ದೆಸೆಯಿಂದ ಉಂಟಾದ ನೂರೊಂದು ದುಷ್ಪರಿಣಾಮಗಳ ಕುರಿತ, ಐರೋಪ್ಯದ ಜನಾಂಗಗಳು ಪ್ರಜ್ಞಾಸಂತರಾಗಿದ್ದ [illegible] ಉಂಟಾಗಬಹುದಾದ ಇನ್ನೊಂದು ಮಹಾಯುದ್ಧವನ್ನು ತಡೆಯುವರೆ ಅವರ ಕುತೂಹಲ ಮಂತರಾಗಿಲ್ಲ.

### ಕಳೆದ ಮಹಾಯುದ್ಧ.

ಕಳೆದ ಮಹಾ ಯುದ್ಧದ ವ್ಯಯವು ಎಂಬತ್ತು ಸಾವಿರ ಮಿಲಿಯ ಪವನುಗಳ ಇದರಲ್ಲಿ ಏಳು ಸಾವಿರ ಮಿಲಿಯ ಬ್ರಿಟನ ಪಾಲಾಗಿರುತ್ತದೆ ಈ ಅಂಕೆಗಳ ಅರ್ಥವೇನು? ಈ ಹಣದಿಂದ, ಐದು ಎಕ್ರೆ ಸ್ಥಳದ ಮೇಲೆ ಇನ್ನೂರು ಪವನಿನ ಒಂದು ಮನೆ, ಈ ಮನೆಯಲ್ಲಿ ಇನ್ನೂರು ಪವನುಗಳ, ಸಾಮಾನು, ಈ ತರದ ಮನೆಯನ್ನು ಬ್ರಿಟನ, ಸಂಯುಕ್ತ ಅಮೇರಿಕದ, ಕೆನಡಾದ, ಫ್ರಾನ್ಸಿನ, ಬೆಲ್ಜಿಯಮ್ಮಿನ, ರಷ್ಯದೇಶದ, ಜರ್ಮನಿಯ ಮತ್ತು ಆಸ್ಟ್ರೇಲಿಯಾದ ಪ್ರತಿಯೊಂದು ಕುಟುಂಬಕ್ಕೆ ಒದಗಿಸಬಹುದು, ಅಲ್ಲದೆ ಪತಿಯೊಂದು 20,000 ಜನ ಸಂಖ್ಯೆಯ ಕಂಡಗಳಿಗೆ, ಒಂದು ಮಿಲಿಯ ಪವನಿನ ಪುಸ್ತಕ ಭಂಡಾರವನ್ನೂ, ಎರಡು ಮಿಲಿಯ ಪವನಿನ ವಿಶ್ವವಿದ್ಯಾಲಯವನ್ನು ಒದಗಿಸಬಹುದೆಂದು ಪ್ರಖ್ಯಾತ ಸಂಪತ್ ಶಾಸ್ತ್ರಜ್ಞರೊಬ್ಬರು ಲೆಕ್ಕ ಹಾಕಿರುವರು. ಇಷ್ಟೇ ಅಲ್ಲ, ಆದಾದ ಮೇಲೂ 125,000 ಮಂದಿ ಅಧ್ಯಾಪಕರಿಗೂ, 125,000 ಮಂದಿ ನರ್ಸುಗಳಿಗೂ ಸಂಬಳವಾಗಿ ಕೊಡಲು ಬಡ್ಡಿ ಹುಟ್ಟಿ ಬರುವಂತೆ ಉಂಬಳಿಯಾಗಿ ಬಿಟ್ಟು ಬಿಡಲು ಹಣವು ದೊರಕುವುದು ಇಷ್ಟಾದ ಮೇಲೂ ಉಳಿಯುವ ಹಣದಿಂದ ಸಂಪೂರ್ಣ ಫ್ರಾನ್ಸನ್ನು ಮತ್ತು ಬೆಲ್ಜಿಯಮ್ ದೇಶಗಳನ್ನು ಕ್ರಯಕ್ಕೆ ಪಡಕೊಳ್ಳಬಹುದಂತ

### ಇಷ್ಟೆಲ್ಲಾ ವ್ಯಯ ಏತಕ್ಕಾಗಿ

ಇಷ್ಟೆಲ್ಲಾ ವ್ಯಯವಾದುದು, 10,000,000 ಮಂದಿ ಸೈನಿಕರ ಕೊಲೆಗಾಗಿ, 13,000 000 ಮಂದಿಗಳ ನಾಗರೀಕರ ಕೊಲೆಗಾಗಿ 3,000000 ಮಂದಿಗಳನ್ನು ಕೈದಿಗಳನ್ನಾಗಿ ಮಾಡಲು, ಅಂದರೆ ಒಬ್ಬ ಸೈನಿಕನ ಕೊಲೆಗಾಗಿ ಸರಾಸರಿ ಐದು ಸಾವಿರ ಪವನುಗಳು ವ್ಯಯಿಸಿದಂತಾಗಿದೆ. ಯುದ್ಧ ದೇವತೆಯು ಇಷ್ಟರಲ್ಲೆ ತೃಪ್ತಿಹೊಂದಿದೆ, ಮಹಾಯುದ್ಧದ ದೆಸೆಯಿಂದ ಆದುಕೊನೆಗೊಂಡನಂತರವೇ ಉಂಟಾದ ಇನ್‌ಫ್ಲೂಯೆಂಜ ಹಾವಳಿಯಿಂದ ಜಗತ್ತಿನ ಎಲ್ಲಾ ದೇಶಗಳಿಂದ ವಿಶೇಷವ್ಯಾಣಹಾನಿಗಳನ್ನು ಪಡೆಯಿತು.

### ಮುಂದಿನ ಮಹಾಯುದ್ಧವು ಯಾವ ತರದ್ದಾಗುವುದು.

ಮೇಲಿನ ಅಂಕೆಸಂಖ್ಯೆ ಇತ್ಯಾದಿಗಳಿಂದ ವಾಚಕರಲ್ಲಿ ಮಹಾಆಶ್ಚರ್ಯ ಮತ್ತು ದಿಗಿಲುಂಟಾಗದಿರದು. ಆದರೆ, ಮುಂದಿನ ಮಹಾಯುದ್ಧಕ್ಕಾಗಿ ನಡೆಯುವ ಮಹಾಸಿದ್ಧತೆಗಳು, ಕಳೆದ ಮಹಾಯುದ್ಧ 1914ರ ಸಿದ್ಧತೆಗಳೊಡನೆ ಸರಿ ಹೋಲಿಸಿದರೆ, 1914ರ ಸಿದ್ಧತೆಗಳು ಬರಿ ಒಂದು ಆಟ ವಿನೋದ ತೋರುವುದು, ಮುಂಬಯಿಯ ರೋಟರಿ ಕ್ಲಬ್ಬಿನಲ್ಲಿ ಸರ್ ಸ್ಟಿನ್ಲಿ ರೀಡರು, ತಮ್ಮದೊಂದು ಭಾಷಣದಲ್ಲಿ ಸೂಚಿಸಿದುವರೆಂದು ಹೇಳಿದರೆ, ಆಗ ವಾಚಕರಲ್ಲಿ ಯಾವ ಭಾವಗಳುಂಟಾಗಬೇಕು ‘ಯುದ್ಧ ಶಸ್ತ್ರಸಿದ್ಧತೆ ಸಿಫೆಂಟು’ ಎಂಬ ಪುಸ್ತಕದಲ್ಲಿ ಪ್ರಕಟವಾದಂತೆ, 1925ರೊಳಗೆ ಯುದ್ಧ ಸಿದ್ಧತೆಗಾಗಿ ಎಲ್ಲಾ ಜನಾಂಗಗಳಿಂದ 500,000,000 ಪವನುಗಳು ವೆಚ್ಚವಾಗಿರುವುದೆಂದು ತಿಳಿದು ಬರುತ್ತದೆ. ಇದು 1914ನೇ ಕಾಲದ ಯುದ್ಧಸಿದ್ಧತೆ ವ್ಯಯದ ಮೂರು ಪಾಲಷ್ಟು ಆಗಿರುತ್ತದೆ. ಇದರಲ್ಲಿ [illegible] ಐರೋಪ್ಯದಲ್ಲೆ ವ್ಯಯವಾಗಿರುತ್ತದೆ ಜಗತ್ತಿನ ಎಲ್ಲಾ ರಾಷ್ಟ್ರಗಳ ಯುದ್ಧಸನ್ನಾಹಕ್ಕಾಗಿ [illegible] ಅತಿವೇಗದಿಂದ ಹೆಚ್ಚುತ್ತದೆ ಈ ಪುಸ್ತಕದಿಂದ [illegible] ಈ ಜಗತ್ತಿನ ಸಂಸ್ಥೆಯಲ್ಲಿ [illegible] ಯುದ್ಧದಿಂದ [illegible] ಇತ್ಯಾದಿಗಳ ಯುದ್ಧಸನ್ನಾಹ [illegible] ಯುದ್ಧಸನ್ನಾಹಗಳ [illegible] ಕಡಿಮೆ ಕಡಿಮೆಯಾಗಲಿಲ್ಲ.

### ಆದರಿಂದ ಶಾಂತಿಗೆ ಅವಕಾಶವಿದೆಯೇ?

ವಿಷಯವು ಹೀಗಿರಲು ಮುಂದಕ್ಕೆ ಶಾಂತಿಗೆ ಅವಕಾಶ ದೊರಕಬಹುದೇ? ಯುದ್ಧಸನ್ನಾಹದ ಅಡಿಗಟ್ಟಿನ ಮೇಲೆ ಸ್ಥಾಪನೆಯಾಗುವ ಶಾಂತಿಯು ಶಾಶ್ವತತರದ್ದಾಗದು ಕೇಗಲಾಗ್ ಇದೇ ತರದ ಯುದ್ಧಸನ್ನಾಹದ ಪೈಪೋಟಿಯು ನಡೆಯುತ್ತಿರುವಾಗ ಲಾರ್ಡ ಗ್ರೆ ಎಂಬವರು, ಆದರಿಂದ ಜಗತ್ತಿನ ಜ್ವಾಲೆ ಪರಿಣಮಿಸುವುದೆಂದು ಭವಿಷ್ಯವಾಗಿ ನುಡಿದುದ, ನಿಜವಾಗಿ ಬಿಟ್ಟಿತು. ಈಗ ಯುದ್ಧಶಸ್ತ್ರ, ಸಿಡಿಮದ್ದು ಇತ್ಯಾದಿಗಳ ಮಹಾ ಶೋಧನೆಗಳಿಗುತ್ತಿರುವ ಈ ಸಮಯದಲ್ಲಿ ಅತ್ಯಂತ ಭಯಂಕರ ಯುದ್ಧವು ಪ್ರಾಣಾಪಿ ನಡೆ ಇರದು. ಐರೋಪ್ಯದ ರಾಷ್ಟ್ರಗಳೆಲ್ಲಾ ಉನ್ಮಾದಗೃಹಗಳಾಗಿವೆ ಯುದ್ಧಸನ್ನಾಹಂಗವುದರಲ್ಲಿ ಅವರೊಳಗೆ ಒಂದ ತರದ ಪೈಪೋಟಿಯು ನಡೆಯುತ್ತ ಇದೆ. ಇನ್ನೊಂದು ಮಹಾಯುದ್ಧದ—ಭೀಕರ ಸ್ವರೂಪವು ಅವರಿಗ ತಿಳಿದೆ ಇರುವುದು ಅವರೂ ಅದನ್ನು ತಡೆಯುವದ ಉಪಾಯ. ಕಾಣದ ಸ್ಥಿತಿಗೆ ಅವರು ಬಂದಿರುವರು. ಮಿಲಿಯಗಟ್ಟಲೆ ಹಣ ವ್ಯಯವಾಗುವುದಿರಲಿ, ಅಸಂಖ್ಯಾತ ಜನರ ಕೊಲೆಯಾಗುವುದಿರಲಿ, ಮಹಾಯುದ್ಧವು ನಾಗರೀಕತೆಯ ಅಡಿಗಟ್ಟನ್ನೆ ಧ್ವಂಸಮಾಡುವುದು,—ಪ್ರಗತಿಯ ಸಮಯವನ್ನು ಬಹಳ ಹಿಂದಕ್ಕೆ ದೂಡಿ ಬಿಡುವುದು. ಯುದ್ಧದ ಉನ್ಮಾದಕ್ಕೊಳಗಾದ ಈ ಜನಾಂಗಗಳು ಯುದ್ಧಸನ್ನಾಹಿತ ಕಾರ್ಯಗಳಿಗಾಗಿ ವ್ಯಯಿಸುತ್ತಿರುವ ಹಣದ ಸಣ್ಣದೊಂದಂಶವನ್ನು ನಮ್ಮ ಈ ಜಗತ್ತು, ಉಳಕೊಳ್ಳಲು ಒಂದು ಸುಖಮಯ ಸ್ಥಳವನ್ನಾಗಿ ಮಾಡಲು ವ್ಯಯಿಸಲಾರದೆ?

### ಮಹಾತ್ಮಾಜಿಯವರ ಮಹತ್ವ

ಕಳೆದ ವಾರ ಮುಂಬಾಯಿ ಇತ್ಯಾದಿ ಸ್ಥಳಗಳಲ್ಲಿ, ಹಿಂದೂದೇಶಕ್ಕೆ ಯಾರಾದರೂ ವಿಮಾನ ಮೂಲಕ ದಂಡೆತ್ತಿ ಬಂದರೆ, ಜನರು ಯಾವ ತರದಲ್ಲಿ ವರ್ತಿಸಬೇಕೆಂಬ ಕುರಿತು ಕಲಿಸಿಕೊಡಲು, ‘ಬ್ಲೆಕ್ ಔಟ್’ ಕೆಲಸಗಳು ನಡೆದುವಷ್ಟೆ. ಈ ವಾರ್ತೆಗಳನ್ನು ಕೇಳಿದ ಮಹಾತ್ಮಾಜೀಯವರಲ್ಲಿ ಒಂದು ತರದ ವ್ಯಥೆಯುಂಟಾಗಿರುತ್ತದೆ. ಹಿಂದೀಯರು ಯಾರಿಗೆ ವಿರೋಧರಾಗಿ ರಕ್ಷಣಸನ್ನದ್ಧರಾಗುವುದು? ಅಹಿಂಸಾನೀತಿಯಿಂದಲೇ ವಿಪ್ಲವನ್ನು ಎದುರಾಯಿಸಬೇಕಾಗಿ ಸಂಕಲ್ಪ ಮಾಡಿದ ಭಾರತೀಯರು, ಅದಕ್ಕಾಗಾರದ ಈ ತರದ ಹಿಂಸಾಮಯ ಚಟುವಟಿಕೆಗಳಲ್ಲಿ ಭಾಗಿಗಳಾಗಬಹುದೆ? ಪರಸ್ಪರ ಪ್ರೇಮ, ನವ ಸರ್ವಸ್ವ ವಹಾರದ ಮೂಲವಾಗಿರುವಾಗ, ನಮ್ಮ ಮೇಲೆ ಯಾರು ತಾನೆ ದಂಡೆತ್ತಿ ಬರುವರು? . . . ಎಂಬುದು ಮಹಾತ್ಮಾಜಿಯವರ ಅಭಿಪ್ರಾಯವಾಗಿರುತ್ತದೆ. ಅಹಿಂಸೆ ಮತ್ತು ಸತ್ಯನೀತಿಯು, ಸರ್ವ ಜಗತ್ತಿನಿಂದ ಅಂಗೀಕರಿಸಲ್ಪಟ್ಟರೆ, ಆಗ ಇಷ್ಟೆಲ್ಲಾ ವ್ಯಯ, ನಷ್ಟ, ಕಷ್ಟಗಳನ್ನು ಅನುಭವಿಸಬೇಕಾಗಲ್ಲ. ಈ ಜಗತ್ತು ಶಾಂತಿನಿಕೇತನವಾಗಿ, ಸುಖಸಂತೋಷ, ಸಂತೃಪ್ತಿಯ ನೆಲೆವೀಡಾಗುವುದು.

ಇನ್ನೊಂದು ಮಹಾಯುದ್ಧದ ದುಷ್ಪರಿಣಾಮಗಳಿಂದಾದರೂ, ಯುದ್ಧಸನ್ನಾಹ ಜನಾಂಗಗಳ ಬುದ್ಧಿ ಬದಲಾಗದೆ ಇರದು. ಆಗವರು ಮಹಾತ್ಮಾಜಿಯವರ ಅಹಿಂಸಾ ಮತ್ತು ಸತ್ಯನೀತಿಯಲ್ಲಿ ಮಹತ್ವವನ್ನು ಕಾಣದೆ ಇರರು.

ಅಹಿಂಸಾ ಮತ್ತು ಸತ್ಯನೀತಿ ಶಾಂತಿಯ ಅಡಿಗಟ್ಟು

### ಹಿಂದೂದೇಶದ ಸಹಾಯ ಬೇಕಾಗಿದೆ

ಬಂಗಾಳದ ನಿವೃತ್ತ ಗವರ್ನರರಾದ ಸರ್ ಜೋನ್ ಎಂಡರ್ಸನ್ನರು ಪಾರ್ಲಿಮೆಂಟಿನ ಸದಸ್ಯತ್ವಕ್ಕೆ, ಸ್ಕಾಟಿಶ್ ಯುನಿವರ್ಸಿಟಿಯ [illegible] ಸ್ಥಳಕ್ಕೆ [illegible] ಅವರನ್ನು ಸೋಲಿಸುವರೆ ಬ್ರಿಟನಿನ ಲೇಬರ್ ಪಕ್ಷದವರು ಸ್ಕಾಟಿಸ್ ರಾಷ್ಟ್ರೀಯ ಪಕ್ಷ ಇವೆ ಮೊದಲಾದವರು, ಹಿಂದೂದೇಶದ ಸಹಾಯವನ್ನು ಕೋರಿರುವರಾಗಿ ತಿಳಿದುಬರುತ್ತದೆ

ಸ್ಕಾಟಿಶ ಹೋಮ್ ರೂಲ್ ಪಾರ್ಟಿಯು ಸರ್ ಎಂಡರ್ಸನ್ನರಿಗೆ ವಿರೋಧವಾಗಿ ಹಿಂದೂದೇಶದಲ್ಲಿ ಮತ್ತು ಐರ್ಲೆಂಡಿನಲ್ಲಿ ಹಾಳುಗೆಡವುವ ಕಲಾಪಗಳನ್ನು ಚಿತ್ರಿಸಿ ಒಂದು ಪುಸ್ತಕವನ್ನು ಹೊರಡಿಸಿರುವರು. ಸರ್ ಜೋನರು ಈ ಚುನಾವಣೆಯಲ್ಲಿ ವಿಜಯಗಳಾದರೆ, ಅವರ್ನು ಬ್ರಿಟಿಷ ಮಂತ್ರಿಮಂಡಳದೊಳಗೆ ಕೂಡಿಸಿಕೊಳ್ಳುವ ಆಲೋಚನೆಗಳಿವೆ ಎಂದು ತಿಳಿದುಬರುತ್ತದೆ

### ಬಿಜ್ನೋರಲ್ಲಿ ಕಾಂಗ್ರೆಸ್ ಕಲಹನಿವಾರಣೆ

ಸಂಯುಕ್ತ ಪ್ರಾಂತ್ಯದ ಬಿಜ್ನೋರ್‌ನಲ್ಲಿ ಈ ವರೆಗೆ, ಕಾಂಗ್ರೆಸ್ ವಾದಿರ ಎರಡು ಪಕ್ಷಗಳೊಳಗಿದ್ದ ಕಲಹವು ನಿವಾರಣೆಯಾಗಿ, ಮುಂದಕ್ಕೆ ಕಾಂಗ್ರೆಸ್ ಮಂತ್ರಿಮಂಡಳದ ಕುರಿತ ವಿರೋಧ ಟೀಕೆಯನ್ನು ಮಾಡಬಾರದಾಗಿ ನಿರ್ಣಯವಾಗಿರುತ್ತದೆ. ಮುಂದಕ್ಕೆ ಕಿಸಾನ್ ಸಂಘಗಳು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಡಿಯಲ್ಲಿ ಕಾರ್ಯ ನಡೆಸಬೇಕಾಗಿ ನಿರ್ಧರಿಸಲ್ಪಟ್ಟಿದೆ

### ಬ್ರಿಟ್ಟರ ನಿವೇದನೆ

ಬಿಹಾರ್ ಸರಕಾರದ ನ್ಯಾಯ ಸೆಕ್ರೆಟರಿಯವರು ಡಿವಿಜನಲ್ ಕಮಿಶನರಿಗೆ, ಜೇಲರುಗಳಿಗೆ [illegible] ಕೊಟ್ಟಿರುವರು. ಇದರಲ್ಲಿ ರಾಜಶಾಸನವನ್ನು ನಿರೂಪಿಸಲು, ಆ ಕರಿ ತಾಗಿ ಕ್ರಮಗಳನ್ನು ರಚಿಸಲು ತನಗೆ ಅಧಿಕಾರವಿಲ್ಲವೆಂದೂ, ಅವನು ತಿಳಿಸಿರುವರು.

ಮಂತ್ರಿಗಳಿಂದ ನೇರವಾಗಿ ಬರುವ ಅಪ್ಪಣೆಗಳನ್ನು ಮನ್ನಿಸಬಾರದಾಗಿ ಈ ಮೊದಲು ಹೊರಡಿಸಿದ ತನ್ನ ಸರ್ಕ್ಯುಲರನ್ನು ಹಿಂತೆಗೆದುಕೊಂಡಿರುವರೆಂದೂ ಅವರು ಬರೆದಿರುವರು.

ಬ್ರಿಟ್ಟರ ಅಂದಿನ ವರ್ತನೆಯ ಕುರಿತು, ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಮತ್ತು ಲಾರ್ಡ್ ಲೋಥಿಯನರು ತಮ್ಮ ಅಸಮ್ಮತವನ್ನು ಸೂಚಿಸಿರುವರೆಂದು ವಾರ್ತೆಯಿದೆ.

---

ತಮ್ಮ ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಾಡಿಸಲು, ಸ್ಥಳೀಯ ಸಂಸ್ಥೆಗಳಿಗೂ, ಮುನಿಸಿಪಾಲಿಟಿಗಳಿಗೂ, ಸ್ವಾತಂತ್ರ್ಯವನ್ನು ಕೊಡುವ, ಸಿಂಧ್ ಸರಕಾರದ ಅಪ್ಪಣೆಯಾಗಿರುತ್ತದೆ.

## ನಾರಾಯಣರಾಯರ ಎರಡನೆ ಮದುವೆ

‘ಅಚ್ಯುತರಾಯನಿಗೆ ಎರಡನೆ ವಿವಾಹ!’ ಈ ಮಾತು ಕೇಳಿದೊಡನೆ ಡಾಕ್ಟರ ನಾರಾಯಣ ರಾಯರು ಕ್ರೋಧದಿಂದ ಸ್ತಂಭಿತರಾಗಿದ್ದರು. ಅವರು ಆಗ ಹೇಳಿದ್ದರು.

‘ಈ ಮುದಿಯರನ್ನು ತೋಪಿನ ಬಾಯಿಗೆ ಕೊಡಬೇಕು, ತೋಪಿನ ಬಾಯಿಗೆ! ಇಂದ್ರಿಯ ದಾಸರು. ದೇಶದ ಮುಖಂಡರಂತೆ. ನರೆ! ಥೀ ಥೀ! ನಿನ್ನೆ ಹೆಂಡತಿ ಸತ್ತಳು, ಅಂದರೆ ಇವತ್ತು ಮದುವೆ ಆಗಿಯೂ ಬಿಟ್ಟಿತು! ಇಂಥ ಅನ್ಯಾಯ! ಇವರನ್ನು ಭೂಮಿ ಹೊತ್ತುಕೊಂಡಿರುವುದಾದರೂ ಹೇಗೆ?’

ಸುಬ್ಬಾ ಭಟ್ಟರು ಅಲ್ಲಿಯೇ ಹತ್ತಿರ ನಿಂತಿದ್ದರು. ಅವರು ಮಾತಿಗೆ ಮಾತು ಸೇರಿಸಿ ಹೇಳಿದರು—‘ಡಾಕ್ಟ್ರೆ! ಬಾಗಿಲ ಮುಂದೆ ಬಿದ್ದ ಹೆಣ ಸುಟ್ಟು ಸತ್ತರೂ ದುಃಖದಿಂದ ಹಾಳಾದ ದಿನ ಅನ್ನ ಸೇರುವದಿಲ್ಲ. ಹೆಂಡತಿ ಸತ್ತ ಮಾತು ಬೇರೆಯೆ ಇತ್ತು. ಅವಳ ಮೇಲಿನ ಪ್ರೇಮ ಹಾಗೆ ಹೀಗೆ ಎಂದು ಗಂಡ ಸಾವಿರ ಬಡಾಯಿ ಕೊಚ್ಚುತ್ತಾನೆ, ಆದರೂ

‘ಅಷ್ಟೆಯೆ. ವಿವಾಹವಾಗುವುದು ಸಂತಾನವಾಗಬೇಕೆಂದು. ಅಚ್ಯುತನಿಗೆ ಒಂದಲ್ಲ ಎರಡು ಮಕ್ಕಳಾಗಿವೆ. ಆದರೂ ಈಗ ಇನ್ನೊಂದು ಮದುವೆ! ನಾಲ್ಕು ದಿನಗಳಾದರೂ ತಾಳಿ ಆಗಬಹುದಿತ್ತು.’

‘ಸ್ವಾಮಿ ಇಂದ್ರಿಯ ಗುಲಾಮರಿಗೆ ಹೃದಯವಿಲ್ಲ’ ಒಬ್ಬ ಹೆಂಡತಿ ಸತ್ತಳು ಅಂದರೆ ಅವರು ಇನ್ನೊಬ್ಬ ಹೆಂಡತಿ ಮಾಡಿಕೊಳ್ಳಲಿಕ್ಕೆ ಆಗಲೇ ತಯಾರು.’

ಆದರೆ ಎರಡು ಮಕ್ಕಳ ತಾಯಿ—ಡಾಕ್ಟ್ರ ಹೆಂಡತಿ ಸತ್ತಾಗಲೂ ಡಾಕ್ಟ್ರು ಅವಳ ಕ್ರಿಯಾಕರ್ಮ ಮುಗಿಯಬೇಕಾದರೆ ಇನ್ನೊಂದು ಮದುವೆ ಮಾಡಿಕೊಂಡರು.

ಸುಬ್ಬಾ ಭಟ್ಟರು ಪೇಚಿನಲ್ಲಿ ಸಿಕ್ಕಿದರು. ಅವರು ಹೇಳಿದರು,—‘ಡಾಕ್ಟ್ರೇ ಒಳ್ಳೇ ಕೆಲಸ ಮಾಡಿ ಬಿಟ್ರಿ’

‘ಏನು ಸ್ವಾಮಿ, ಏನು ಹೇಳುತ್ತೀರಿ!’ ಎಂದು ಡಾಕ್ಟರು ಸ್ವಲ್ಪ ಉಕ್ಷೆಯಿಂದ ಹೇಳಿದರು.

ಭಟ್ಟರು ತುಸು ಹತ್ತಿರ ಬಂದು—‘ಸ್ವಾಮಿ, ಮದುವೆ ಆಗಲೇ ಮಾಡಿಕೊಂಡಿದ್ದರೆ ಕೆಲವು ದಿನ ತಾಳಬಹುದಿತ್ತು’

‘ತಾಳಬಹುದಿತ್ತು. ಆದರೆ ಸ್ವಾಮಿ, ಏನು ಗೊತ್ತು?’ ಎಂದು ಡಾಕ್ಟರು ಹೇಳಿದರು. ‘ಸ್ವಾಮಿ, ಇತ್ತ ಒಬ್ಬ ಹಿಂದೂ ಬಾಲಿಕೆಯ ಜೀವನ ಮರಣದ ಪ್ರಶ್ನೆ ಇತ್ತು. ಅತ್ತ ನಾನು ವಿವಾಹಿತ ಅವಿವಾಹಿತನಾಗಿರುವ ಸವಾಲಿತ್ತು. ನೀವು ಹೇಳುತ್ತೀರಿ—ಸ್ವಲ್ಪ ತಾಳಬಹುದಿತ್ತು, ಎಂದು. ಆದರೆ ಸ್ವಾಮಿ, ನಾನು ಎರಡನೆ ಮದುವೆಯಾಗದಿದ್ದರೆ ಸ್ವಲ್ಪ ತಡವಾಗಿದ್ದರೆ ಆ ಬಾಲಿಕೆಯ ರಕ್ಷಣೆ ಮಾಡಲಾಗುತ್ತಿರಲಿಲ್ಲ. ಅವಳ ಜೀವನವು ಪೂರ್ಣ ನಷ್ಟವಾಗುತ್ತಿತ್ತು.’

‘ಅಂದರೆ?’ ಎಂದ ಭಟ್ಟರು ಕುತೂಹಲದಿಂದ ಕೇಳಿದರು.

‘ಅಂದರೆ ಆ ಬಾಲಿಕೆಯನ್ನು ಅವಳ ತಂದೆ ಒಬ್ಬ ಮುದಿ ಗೂಬೆಯ ಕೊರಳಿಗೆ ಕಟ್ಟುವ ಆಲೋಚನೆ ಮಾಡಿದ್ದರು. ಮುನ್ನೂರು ರೂಪಾಯಿಯೊಂದಿಗೆ ಅವಳನ್ನು ಆ ಮುದುಕನಿಗೆ ಕೊಡಬೇಕೆಂದು ನಿಶ್ಚಯವಾಗಿತ್ತು. ನಾನು ಏನೂ ತಗೊಳ್ಳದೆ ಅವಳನ್ನು ಮದುವೆಯಾದೆ.’

‘ಏನು ಸ್ವಾಮಿ! ನನ್ನದು ಅಸರಾಧವಾಯಿತೆ?’

ಭಟ್ಟರು ಮೌನವಾಗಿ ಒಂದು ಥೂ ಅಂದು ಬಿಟ್ಟರು.

(‘ಪ್ರಭಾತ’ದಿಂದ)

# ಹಿಂದೂದೇಶದ ದಾರಿದ್ರ್ಯ ಕಾರಣ

## ಕಾಂಗ್ರೆಸ್ಸಿನ ಈಗಿನ ಧೋರಣೆ, ಕಾರ್ಯಕ್ರಮಗಳ ಕುರಿತು ದೇಶದ ದಾರಿದ್ರ್ಯ ನಿವಾರಣೆಯಾಗುವಂತೆ ದೇಶದಲ್ಲಿ ಪೂರ್ಣ ಬೇಪಾರ್ಟಾಗುವಂತೆ ಬದಲಾಗಬೇಡವೆ?

### ಈ ಕುರಿತು ಎಂ. ಎನ್. ರೋಯರು ಒಂದು ಉಪಾಯ ಕಲ್ಪಿಸಲಾರರೆ?

ಕಾಂಗ್ರೆಸ್ಸಿನ ಧೋರಣೆ ಮತ್ತು ಕಾರ್ಯಕ್ರಮದ ಕುರಿತು ಕಾಂಗ್ರೆಸಿನೊಳಗೆ ಒಂದು ತರದ ಕಿಕ್ಕಾಟವು ಉಂಟಾಗಿರುವುದಷ್ಟೆ. ಆ ಸಿಯಾ, ಯುರೋಪ್, ಅಮೇರಿಕಾ ಈ ಮೂರು ಭೂಖಂಡಗಳ ಕ್ರಾಂತಿ ಮಯ ಚಟುವಟಿಕೆಗಳಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಿ, ಉಚ್ಚತರದ ಅನುಭವ ಪಡೆದ ಪ್ರಖ್ಯಾತರಾದ ಶ್ರೀ ಎಂ. ಎನ್. ರೋಯ್‌ರ ಅಭಿಪ್ರಾಯದ ಕುರಿತು, ಅಮೃತಬಜಾರ ಪತ್ರಿಕೆ ಈ ಕೆಳಗಿನ ಟೀಕೆಯನ್ನು ಮಾಡಿರುತ್ತದೆ.

ಸಾಮ್ಯವಾದ ಮತ್ತು ಕೊಮ್ಯುನಿಜಂ ನಮಗೆ ಸದ್ಯಕ್ಕೆ ಬೇಕಾಗಿಲ್ಲ

ಎಂ. ಎನ್. ರೋಯರೇನು ಸಾಧಾರಣ ವ್ಯಕ್ತಿಗಳೇ? ರಷ್ಯದಲ್ಲಿ ನಡೆದ ಮಹಾ ಕ್ರಾಂತಿಯಲ್ಲಿ ಅತ್ಯಂತ ಪ್ರಾಮುಖ್ಯಪಾತ್ರವನ್ನು ವಹಿಸಿದವರು. ರಷ್ಯದ ಪ್ರಸಿದ್ಧ ಕೊಮ್ಯುನಿಸ್ಟ ನಾಯಕರಾದ ಲೆನಿನ್ನರ ಕೈಕೆಳಗೆ ಕೆಲಸಮಾಡಿ ಆತನಿಂದ ಪ್ರಶಂಸೆಯನ್ನು ಪಡೆದವರು. ಶುದ್ಧವಾದ ಕೊಮ್ಯುನಿಜಂ ಕಾರ್ಯಕ್ರಮದ ಕುರಿತು ಅವರು ಕೆಲಮಟ್ಟಿಗೆ ವಿರೋಧಪ್ರಾಯ ಹೊಂದಿದುದರ ಪರಿಣಾಮವಾಗಿ, ಅವರು ಆ ವರ್ಗದಿಂದ ಹೊರಗೆ ತಳ್ಳಲ್ಪಟ್ಟಿದ್ದು. ಹಿಂದೂದೇಶಕ್ಕೆ ಸಂಪೂರ್ಣ ಮಾರ್ವಟ್ಟವರಾಗಿ ಹಿಂತಿರುಗಿದವರು. ಇಂಡಿಯಾ ಸರಕಾರವು ಅತ್ಯಂತ ಅಪಾಯಕರವೆಂದೆನಿಸುವ ಕೊಮ್ಯುನಿಜಂ ಸರಿಯಾದುದಲ್ಲ ಎಂಬ ಅಭಿಪ್ರಾಯವನ್ನು ಹೊಂದಿದವರಾಗಿ ಅವರು ಹಿಂದೂದೇಶದಲ್ಲಿ ಕಾಲಿಟ್ಟಿದ್ದರು. ಆದರೆ ಅವರು ತಮ್ಮ ಮುಂಚಿನ ಕಾರ್ಯಕಲಾಪ, ಆದರ್ಶಗಳಿಗಾಗಿಯೇ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ಹೇಗೂ ಆಗಲಿ, ಎಂ. ಎನ್. ರೋಯರು ಈಗ ಸಂಪೂರ್ಣ ಬದಲಾಗಿರುವರು. ಅವರ ರಷ್ಯ ಇತ್ಯಾದಿ ಮೊದಲಿನ ಕಾರ್ಯರಂಗದ ಸಹಪಾಟಿಗಳೂ ಕೂಡ ಅವರು ಬದಲಾದುದನ್ನು ಕಂಡುಹಿಡಿದಿದ್ದರು. ಹಿಂದೂದೇಶದಲ್ಲೂ ಅವರ ಕುರಿತು ಇದೇ ತರದ ಸಂದೇಹಗಳುಂಟಾಗಿದ್ದವು. ಕಾರಾಗೃಹದಿಂದ ಹೊರಬಂದದ್ದೆ ಅವರು ತಮ್ಮ ಈ ಬದಲಾವಣೆಯನ್ನು ವ್ಯಕ್ತಪಡಿಸಿಯೇ ಬಿಟ್ಟರು. . . . ಅವರೆನ್ನುತ್ತಿರುವುದು ಸಾಮ್ಯವಾದ, ಕೊಮ್ಯುನಿಜಂ, ನಮ್ಮ ಸದ್ಯದ ಪ್ರಕರಣಗಳಲ್ಲ. ಹಿಂದೂದೇಶದ ರಾಷ್ಟ್ರೀಯ ಸ್ವಾತಂತ್ರ್ಯವೆ ನಮ್ಮ ಸದ್ಯದ ಪ್ರಕರಣ. ಶುದ್ಧವಾದ ಕಾಂಗ್ರೆಸ್‌ವಾಲರು ಈ ಕರೆಯನ್ನು ಆಗಿಂದಾಗ್ಯೆ ಹೊರಡಿಸುತ್ತಿರುವುದು, ಸಾಮ್ಯವಾದಿ ಪಕ್ಷದವರಿಗೆ ಕೇಳಿ ಕೇಳಿ ಅಭ್ಯಾಸವಾಗಿರುವುದು. ಆದರೆ ಎಂ. ಎನ್. ರೋಯರು, ಬಂದೊಡನೆ ಬೇರೆ ತರದ ಒಂದು ಅಭಿಪ್ರಾಯವನ್ನು ಹೊರಡಿಸುವರೆಂಬ ಆಶೆಯು ಅವರದಾಗಿದ್ದಿತು. ಆದರೆ ಕಾರಾಗೃಹದಿಂದ ಹೊರಗೆ ಬಂದವರೆ, ಅವರು ಶುದ್ಧ ಕಾಂಗ್ರೆಸ್‌ವಾಲರ ಕರೆಯನ್ನು ಹೊರಡಿಸಿದುದನ್ನು ನೋಡಿ ಅವರು ಅವಕ್ಕಾದರು. ರೋಯರು ಕಾಂಗ್ರೆಸ್ಸಿನ ಎಡಪಕ್ಷದೊಡನೆ ಸೇರಿದುದನ್ನು ಅವರು ನೋಡಿದರು. ರೋಯರು ಕಾಂಗ್ರೆಸ್ ಮೇಲಧಿಕಾರದ ಪ್ರಚಾರಕರು ಎಂದು ಸಾಮ್ಯವಾದಿಗಳು ಹೇಳುವವರಾದರು. ಅದುದರಿಂದಲೆ ಅವರೀಗ ರೋಯರಿಗೆ ವಿರೋಧವಾಗಿ ಪ್ರಸಾರಣೆಯನ್ನು ನಡೆಯಿಸುತ್ತಿರುವುದು.

### ಕಾಂಗ್ರೆಸ್ಸಿನಲ್ಲಿರುವ ತೊಡಕುಗಳ ನಿವಾರಣೆ

ಕಾಂಗ್ರೆಸ್ಸಿನೊಳಗೆ ತೊಡಕುಗಳಿರುವುದಿಲ್ಲವೆಂದು ಅವರು ಹೇಳುವುದಿಲ್ಲ. ಕಾಂಗ್ರೆಸಿನೊಳಗೆ ಕೆಲವು ಭಯಾನಕ ಗುರಿಗಳಿರುವುದನ್ನು ಅವರು ಕಾಣಿರುವರು. ಆದರೆ ಬಹು ಸಂಖ್ಯೆಯಲ್ಲಿ ಕಾಂಗ್ರೆಸಿನೊಡನೆ ಸೇರುವುದೆ, ಇವುಗಳ ನಿವಾರಣೆಯ ಒಂದೇ ಒಂದಾದ ಉಪಾಯವೆಂದು, ಅದರ ಪಕ್ಷದಲ್ಲಿ ಇನ್ನೊಂದು ಸಂಸ್ಥೆಯನ್ನು ನಡೆಯಿಸುವುದು, ಆ ತೊಡಕುಗಳ ನಿವಾರಣೆಯ ಉಪಾಯವಲ್ಲವೆಂದೂ ಅವರು ಅಭಿಪ್ರಾಯಪಟ್ಟು, ಭಾಷಣ ಮಾಡಿರುವರು. ಕೆಳಗಿನ ಕಾಂಗ್ರೆಸ್ ಸಂಸ್ಥೆಗಳನ್ನು ಉತ್ಸಾಹಗೊಳಿಸುವುದೆ ಅವರ ಕಾರ್ಯಕ್ರಮವಾಗಿರುತ್ತದೆ. ಕ್ರಾಂತಿಕಾರರು ಕಾಂಗ್ರೆಸನ್ನು ಸೇರುವಾಗ ಕಾಂಗ್ರೆಸ್‌ವಾಲರಾಗಿಯೆ ಸೇರಬೇಕೆಂದು ಅವರೆನ್ನುತ್ತಿರುವುದು. ಕಾಂಗ್ರೆಸ್ಸಿನ ಒಳಗಿದ್ದ ಮೇಲೆ ಕಾಂಗ್ರೆಸ್ಸಿನ ಆದರ್ಶಗಳನ್ನು ಅಲ್ಲಗಳೆಯಬಾರದು. ಅದರ ಸಿಸ್ತಿಗೆ ವಿರೋಧವಾಗಿ ವರ್ತಿಸಬಾರದು ಕಾಂಗ್ರೆಸಿನೊಳಗೆ ಬದಲಾವಣೆ ಮಾಡಲಿಚ್ಛಿಸುವವರು, ಹಾಗಾಗುವಂತೆ ಮೊದಲು ಪ್ರಚಾರ ನಡೆಯಿಸಬೇಕು.

### ಕಾಂಗ್ರೆಸ್ ಸದಸ್ಯರಿಗೆ ಶಿಕ್ಷಣ ಕೊಡಬೇಕು

'ಕಾಂಗ್ರೆಸ್ ಸದಸ್ಯರಿಗೆ ರಾಜಕೀಯ ಶಿಕ್ಷಣವನ್ನು ಕೊಡಿರಿ. ಅವರು ರಾಜಕೀಯ ವಿಚಾರಗಳನ್ನೆತ್ತುವಂತೆ, ರಾಜಕೀಯ ಸಮಸ್ಯೆಗಳ ಕುರಿತು ಅವರಲ್ಲಿ ಸರಿಯಾದ ತಿಳುವಳಿಕೆಯಾಗುವಂತೆ ಅವರ ಶಿಕ್ಷಣ ನಡೆಯಬೇಕು. ಕೆಳಗಿನ ಕಾಂಗ್ರೆಸ್ ವ್ಯವಸ್ಥೆಗಳನ್ನು ಉತ್ಸಾಹಗೊಳಿಸಿರಿ. ಅದು ಕೊನೆಗೆ ಕಾಂಗ್ರೆಸ್ಸಿನ ಧೋರಣೆಯನ್ನು ಸಂಪೂರ್ಣ ಬದಲಾಯಿಸಲು, ಪ್ರೇರಣೆ ತವಾಗುವುದು' ಎಂಬ ರೋಯರ ಅಭಿಪ್ರಾಯದಿಂದ, ಅವರಿಗೆ ಕಾಂಗ್ರೆಸ್ ಧೋರಣೆಯನ್ನು ಬದಲಾಯಿಸುವ ಕುರಿತು ಸಮ್ಮತವಿರುವುದೆಂದು ಖಚಿತವಾಗುತ್ತದೆ. ' ಆದರೆ, ಮೇಲಿನ ತರದಲ್ಲಿ ಕಾಂಗ್ರೆಸ್‌ವಾಲರ ಶಿಕ್ಷಣ ನಡೆಯಿಸುವುದನ್ನು ಕಾಂಗ್ರೆಸ್ ಮೇಲಧಿಕಾರವು ಸಹಿಸುವುದೆ? ಕೆಲವು ಪ್ರಾಂತ್ಯಗಳ ಕಿಸಾನ್ ಸಭೆಗಳು ಈ ತರದ ಚಟುವಟಿಕೆಗಳನ್ನು ನಡೆಯಿಸುವುದರ ಕುರಿತು, ಅದು ಕೈಕೊಂಡ ದಾವೆಯಿಂದ ಈ ತರದ ಚಟುವಟಿಕೆಗಳನ್ನು ಅದು ಸಹಿಸುವುದರಲ್ಲಿ ಸಂದೇಹಗಳುಂಟಾಗುತ್ತಿವೆ.

### ಮೊದಲು ಸ್ವಾತಂತ್ರ್ಯ—ನಂತರ

ಸ್ವಾತಂತ್ರ್ಯ ಹೋರಾಟದಲ್ಲಿ ಮಹಾಜನಗಳು ಉತ್ಸಾಹ ಭರಿತ ಪಾತ್ರಗಳನ್ನು ವಹಿಸದೆ, ಜಯ ಒದಗದು. ಇದನ್ನು ಕಾಂಗ್ರೆಸ್‌ವಾಲರು ಸಾರಿ ಸಾರಿ ಹೇಳುತ್ತಿರುವರು. ಅದೊಂದು ದೊಡ್ಡ ವಾಕ್ಯವಾಗಿರುತ್ತದೆ. ಆದರೆ ತಮ್ಮ ಪರಿಶ್ರಮ ಪರಿತ್ಯಾಗದಿಂದ ಬಹು ಸ್ವಾತಂತ್ರ್ಯವು ಒದಗಿದ ನಂತರ ತಮ್ಮ ಸ್ಥಿತಿಯು ಉತ್ತಮಗೊಳ್ಳುವುದೆಂದು, ಮಹಾಜನಗಳು ತಿಳಿಯಲಾರರೆ?

### ಹಿಂದೂದೇಶದ ದಾರಿದ್ರ್ಯ ಕಾರಣ

ಹಿಂದೂದೇಶಕ್ಕೊಂದು ಸಾಂಪತ್ತಿಕ ಯೋಜನೆ ಎಂಬ ತಮ್ಮದೊಂದು ಗ್ರಂಥದಲ್ಲಿ ಪ್ರಸಿದ್ಧ ವಿಶ್ವೇಶ್ವರಯ್ಯನವರು, ಹಿಂದೂದೇಶದಲ್ಲಿ ಶೇಕಡಾ 88 ಸಲಿ ಸಂಪತ್ತು ಜನಸಂಖ್ಯೆಯ ಶೇಕಡಾ ೯ರ ಸಲಿ ಯವರೊಡನಿರುವುದೆಂದೂ, ಶೆ. 85ರಸಲಿ, ಜನಸಂಖ್ಯೆಯವರೊಡನೆ ಶೇಕಡಾ 88ರ ಸಲಿ ಇರುವುದೆಂದೂ, ಬಾಕಿ ಉಳಿದ ಶೇಕಡ 82ರ ಸಲಿಯು, ಜನಸಂಖ್ಯೆಯ ಶೇಕಡ62 ಸಲಿಯವರಲ್ಲಿ ಹಂಚಿಬಿದ್ದಿರುವುದೆಂದು ತೋರಿಸಿ ಕೊಟ್ಟಿರುವರು. ಸಂಪತ್ತಿನ ಈ ತರದಲ್ಲಿ ಹಂಚುವಿಕೆ ಹಿಂದೂದೇಶದ ದಾರಿದ್ರ್ಯಕ್ಕೆ ಕಾರಣವೆಂದು ಅವರ ಅಭಿಪ್ರಾಯವಾಗಿರುತ್ತದೆ. ಸಂಪತ್ತು ಈ ತರದಲ್ಲಿ ಹಂಚಿಬಿದ್ದದ

(೧೪ನೆ ಪುಟವನ್ನು ನೋಡುವುದು.)


## ಎದೆಯಲ್ಲಿ ದಾಹ

ಈ ಸಂಕಷ್ಟಮಯ ಸ್ಥಿತಿಯನ್ನು, ಅದು ಹೊಟ್ಟೆಯಲ್ಲಿ ಅಜೀರ್ಣವಾಗಿ ಉಳಿದ ಆಹಾರದಿಂದ ಉಂಟಾಗುವುದೆಂದು ತಿಳಿಯದೆ ಅನುಭವಿಸುತ್ತಿದ್ದಾರೆ. ಇದನ್ನು ನೀವು ತಿಳಕೊಂಡು ಚಿಕಿತ್ಸೆಯನ್ನು ಅತಿ ಯಶಸ್ವಿಯಾಗಿ ನಡೆಸುವುದು ಸುಲಭವಾಗುವುದು. ಕೆಲವೊಂದು ಬಾರಿ ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಒಂದಿಷ್ಟು ನೀರಿನೊಡನೆ ಸೇವಿಸಿದರೆ,ನಿಮ್ಮ ಕರುಳುಗಳಲ್ಲಿ ಅಜೀರ್ಣವಾದ ಆಹಾರವು ನಿಲ್ಲದಂತಾಗುವುದು. ಜೀರ್ಣೇಂದ್ರಿಯಗಳಿಗೆ ಅದು ಸಹಾಯವನ್ನು ಒದಗಿಸುವುದಲ್ಲದೆ, ಮೆಕ್ಲೀನ್ ಬ್ರೇಂಡ್/ಸ್ಟೊಮಕ್ ಪೌಡರಿಗೆ, ಸಾಧಾರಣ ತರದ ಜಾಡಣಾ ಗುಣಗಳಿವೆ. ಇದರಿಂದ ಅಜೀರ್ಣವಾದ ಆಹಾರವು ಹೊರತಳ್ಳಲ್ಪಡುವುದು. ಹೀಗಾಗಿ ಅಜೀರ್ಣವಾದ ಆಹಾರವು ಹೊಟ್ಟೆಯಲ್ಲಿ ಕೊಳೆತು, ಕರುಳುಗಳಲ್ಲಿ ಸಿಕ್ಕಿ ಕೂತುಕೊಳ್ಳಲು ಅವಕಾಶ ದೊರಕುವುದಿಲ್ಲ.

ಎದೆಯ ದಾಹದಿಂದ ನರಳುವವರು, ಯಾವತರ್ಹು ತರದ ಅಜೀರ್ಣಾವಸ್ಥೆಯನ್ನು ಅನುಭವಿಸುವವರು ಊಟವಾದ ನಂತರ ಒಂದು ಸಣ್ಣ ಚಮಚದಷ್ಟು ಮೆಕ್ಲೀನ್ ಪೌಡರನ್ನು ನೀರಿನೊಡನೆ ಸೇವಿಸಿ ಮೇಲ್ಕಾಣಿಸಿದ ಸಂಕಷ್ಟಗಳಿಂದ ಪಾರಾಗಬಹುದು. ಗುಣವು ಕೂಡಲೆ ಲಭಿಸುವುದು, ಉಪಶಮನವು ಶೀಘ್ರವೆ ದೊರಕುವುದು. ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರು, ಅನೇಕ ವರ್ಷಗಳ ಅನುಭವಸಿದ್ಧ ಯೋಗ್ಯ ಔಷಧಿಗಳು ಉತ್ತಮ ಪ್ರಮಾಣದಲ್ಲಿ ಬೆರೆತಿರುವ ಪುಡಿಯು. ಹೊಟ್ಟೆಯ ಕುರಿತು ಯಾವತ್ತೂ ಸಂಕಷ್ಟಗಳಿಗೆ ಇದು ದಿವ್ಯ ಔಷಧಿಯು. ಎದೆಯಲ್ಲಿ ದಾಹವೇಕೆ? ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನಿಂದ ಅದಕ್ಕಿಂತ ವಿಶೇಷವೆನಿಸುವ ಅಜೀರ್ಣ ರೋಗದ ಮಹಾ ಸಂಕಷ್ಟಗಳನ್ನು ಗುಣಪಡಿಸಲ್ಪಟ್ಟಿವೆ. ಜನರನ್ನು ಶಸ್ತ್ರ ಚಿಕಿತ್ಸೆಯಿಂದ ರಕ್ಷಿಸಿವೆ. ನಿಮ್ಮ ಹೊಟ್ಟೆಯು ಸರಿಯಿಲ್ಲದಿದ್ದರೆ, ಖಾತ್ರಿ ಗುಣ ಕೊಡುವ ಮೆಕ್ಲೀನ್ ಪೌಡರಿನ ಒಂದು ಬಾಟ್ಲಿಯನ್ನು ಪಡಕೊಳ್ಳಿರಿ. ಆದರೆ

Alex. C. Maclean

ಎಂಬ ಸಹಿಯಿರುವಂತೆಯೂ,ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿರಿ. ಅದನ್ನು ಉಪಯೋಗಿಸ್ಸಿದ ನಂತರ ನೀವು ಸಂಕಟಪಡಲಾರಿರಿ.

ಇಂತಹ ನಮೂನೆಯ ಕಡಿಮೆ ತರದ ಪರಕೀಯ ಪ್ಲಾಟನ್ನು ಪಡೆದು ಮೋಸಹೋಗಬೇಡಿ.

ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಪೂರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಜೆ. ಎಲ್. ಮೋರಿಸನ್, ಸನ್ ಎಂಡ್ ಜೋನ್ (ಇಂಡಿಯಾ) ಲಿಮಿಟೆಡ್.

ಸ್ಟೆಂಡಾರ್ಡ ಬಿಲ್ಡಿಂಗ್, ಹೋರ್ನ್ಬಿ ರೋಡ್, ಮುಂಬೈ.

S. No. 64.



# ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಿ. ಜಸಾನಿಯವರ

## ಗೊನೋಕಿಲರ್. (ರಿಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ,ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಕೆಟ್ಟ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ,ಧಾತುಸ್ರಾವ,ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜ ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vithalbhai Patal Road, BOMBAY 4.

# ಗಾಮಾನು ಏನಂತೆ?

## ಹಿಂದೂದೇಶಕ್ಕೆ ಬಂದ ಪ್ರಸಿದ್ಧ ಅಂತರಾಷ್ಟ್ರೀಯ ಜಟ್ಟಿಗಳಿಗೆ—ಕರೆ

ಶ್ರೀಗಳಾದ ಮುಹಮ್ಮದ್ ದಾರರು
"ಗಾಮಾನ ಕರೆ" ಎಂಬ ಲೇಖನದಲ್ಲಿ
ಈ ಕೆಳಗಿನ ಅಭಿಪ್ರಾಯವನ್ನು ಬರೆದಿರುವರು

ಪ್ರಖ್ಯಾತಜಟ್ಟಿಯಾದ ಗಾಮನು ಹಿಂದೂದೇಶಕ್ಕೆ ಬಂದ ಪಾಶ್ಚಾತ್ಯ ಜಟ್ಟಿಗಳನ್ನು ಕಾಳಗಕ್ಕೆ ಕರೆದಿರುವನು. ಹಿಂದೆ ಒಂದು ಕಾದುವಿಕೆಯಲ್ಲಿ ಅವರೆಲ್ಲರನ್ನು ಎದುರಾಯಿಸುವೆನೆಂದು, ಅತನು ಹೇಳಿಕೊಂಡಿರುವನು. ಇದೊಂದು ವಿಚಿತ್ರ ತರದ ಚಾಲೇಂಜ್ ಎಂದು 'ಸ್ಟೇಟ್ಸ್‌ಮನ್' ಪತ್ರಿಕೆಯ ಅಭಿಪ್ರಾಯವಾಗಿರುವುದು ಗಾಮಾನಿಗೆ ನಿಜವಾಗಿಯೂ, ಈ ಸ್ಪರ್ಧೆಗೆ ನಿಲ್ಲಲು ಮನಸ್ಸಿರುವುದೋ ಅಥವಾ ಆತನು ಬರೆ ಅತಿಶಯೋಕ್ತಿಯನ್ನು ಹೊರಡಿಸಿದನೊ ಎಂಬುದಾಗಿ ಕೆಲವರಲ್ಲಿ ಸಂದೇಹಗಳುಂಟಾಗಿವೆ.

ಆದರೆ ಅಂಥವರಿಗೆ ಪ್ರಖ್ಯಾತ ಭಾರತೀಯ ಕುಸ್ತಿವೀರನ ಪರಿಚಯವಿಲ್ಲವೆನ್ನಬಹುದು. ಆತ ವ್ಯಾಖ್ಯವೇನೋ ಹೆಚ್ಚಾಗಿರುವುದು ನಿಜ ಆದರೆ ಆತನ ಶಕ್ತಿ ಸಾಮರ್ಥ್ಯವು ಒಂದಿಷ್ಟೂ ಕುಂದಿರುವುದಿಲ್ಲ.

ಗಾಮನು ಈ ತರದ ಆಶ್ಚರ್ಯಕರ ಚಾಲೆಂಜ್ ಕೊಟ್ಟಿದ್ದು, ಇದು ಮೊದಲನೆ ಬಾರಿಯಲ್ಲ. ೧೯೧೦ರಲ್ಲಿ ಗಾಮಾನು ಲಂಡನ್ನಲ್ಲಿದ್ದಾಗ ಪ್ರಖ್ಯಾತ ಆಂಗ್ಲೋ-ಅಮೇರಿಕನ್ ಪಂದ್ಯಾಟವು ನಡೆದಿತ್ತು. ಕುಸ್ತಿ ಪಂದ್ಯಾಟವು ಅತಿ ಪ್ರಾಮುಖ್ಯವಾಗಿತ್ತು. ಜಗತ್ತಿನ ಎಲ್ಲಾ ಕಡೆಗಳಿಂದ ಕೀರ್ತಿಯನ್ನು ಗಳಿಸಿದ ಜಟ್ಟಿವೀರರು ಅಲ್ಲಿ ನೆರೆದಿದ್ದರು. ಆದರೆ ಆ ಪಂದ್ಯಾಟದಲ್ಲಿ ಒಳ್ಳೇ ಹೆಸರನ್ನು ಪಡೆದವರು, ಜಪಾನಿನ ಪ್ರಖ್ಯಾತ ಕುಸ್ತಿವೀರನಾದ ಬಾರೊ ಮನಾಕೆ ಎಂಬಾತನ ನಾಯಕತ್ವದಲ್ಲಿ ಬಂದ ಜಪಾನೀಯ ಜಟ್ಟಿಗಳು. ಗಾಮಾನು ಈ ಜಟ್ಟಿಗಳಿಗೆ ಚಾಲೆಂಜನ್ನು ಕೊಟ್ಟನು. ಒಂದೇ ಒಂದು ತಾಸಿನೊಳಗೆ ಅವರೊಡನೆ ಕುಸ್ತಿ ಆಡಿ ಮುಗಿಸುವೆನೆಂದು ಆತನ ಚಾಲೆಂಜಿನ ಶರ್ತು. ಈ ಚಾಲೆಂಜಿನ ಬಗ್ಗೆ, ೧೦೦೦ ಪೌಂಡುಗಳನು ಗಾಮಾನಿಂದ ಠೇವಣಾತಿಯಾಗಿ ಇಡಲಾಗಿತ್ತು. ತನ್ನನ್ನು ಜಪಾನೀಯರಲ್ಲಿ ಯಾರಾದರೂ ಸೋಲಿಸಿದ್ದರೆ ಅತನಿಗೆ ಆ ಹಣವನ್ನು ಬಿಟ್ಟುಕೊಡುವೆನೆಂದು ಹೇಳಿದನು. ಹದಿನೈದು ನಿಮಿಷಗಳಲ್ಲಿ ಹದಿನೈದು ಜಪಾನೀಯ ಜಟ್ಟಿಗಳನ್ನು ಎದುರಾಯಿಸುವೆನೆಂದೂ, ನಂತರ ೧೫ ನಿಮಿಷ ವಿಶ್ರಮಿಸಿ ಇತರರನ್ನು ಎದುರಾಯಿಸುವೆನೆಂದೂ ಗಾಮಾನದರ ಚಾಲೆಂಜ್ ಆಗಿತ್ತು. ಜಪಾನೀಯ ಕುಸ್ತಿವೀರರು ಈ ಚಾಲೆಂಜನ್ನು ಸ್ವೀಕರಿಸಿದರೆ? ಇಲ್ಲ. ಎಲ್ಲಾದರೂ ಈ ಚಾಲೆಂಜಿಗೆ ಒಪ್ಪಿದರಾಗಿ ಬರಬಹುದೆಂದು ಹೆದರಿ, ಜಪಾನೀಯ ಕುಸ್ತಿಗಾರರ ಕೂಟವು ಲಂಡನ್ನಿಂದ ಪ್ಯಾರಿಸ್ ನಗರಕ್ಕೆ ಜಾರಿಬಿಟ್ಟಿತು.

ಆತನ ಎರಡನೆ ವಿಶಿಷ್ಟ ಚಾಲೆಂಜು, ಲಂಡನಿಗೆ ಬಂದ, ಆಗ ಜಗತ್ತಿನ ಅತ್ಯಂತ ಶ್ರೇಷ್ಠನಾದ ಬೊಕ್ಸಿಂಗ್ ವೀರನಾದ ಜಾಕ್ ಜೆನ್ಸನ್ ಎಂಬಾತನಿಗೆ ಕೊಟ್ಟುದಾಗಿರುತ್ತದೆ. ಜೊನ್ಸನನ ಬೊಕ್ಸಿಂಗನ್ನು, ಗಾಮನು ಕುಸ್ತಿಯಿಂದ ಎದುರಾಯಿಸುವನೆಂತ ಗೊತ್ತುಮಾಡಲ್ಪಟ್ಟಿತು. ಈ ಚಾಲೆಂಜು ಅನೇಕರಿಗೆ ವಿಚಿತ್ರವಾಗಿ ಕಂಡಿತು. ಕುಸ್ತಿಗಾರನೊಬ್ಬನು, ಬೊಕ್ಸಿಂಗ್ ಆಟಗಾರನನ್ನು ಹೇಗೆ ಎದುರಾಯಿಸಬಹುದೋ—ಇದೊಂದು ಅಸಾಧ್ಯದ ವಿಚಾರವೆ ಎಂದು ನಾನು ಆಗ ಗಾಮನೊಡನೆ ವಾದಿಸಿದ್ದೆನು. ಆದರೂ ಗಾಮನು ತನ್ನ ಮನವನ್ನು ಬದಲಾಯಿಸಲಾರದಾದನು.

ಪ್ರಸ್ತುತದ ಆತನ ಮೂರನೆ ವಿಶಿಷ್ಟ ಚಾಲೆಂಜು ಒಬ್ಬನೊಡನೆ ಕುಸ್ತಿಯಾಡುವುದರಲ್ಲಿ ಗಾಮನು ಶ್ರೇಷ್ಠನೆಂದು ಎಲ್ಲರೂ ಹೇಳುತ್ತಿದ್ದರು, ಒಂದೇ ಕಾದುವಿಕೆಯಲ್ಲಿ ಹಲವರನ್ನು ಎದುರಾಯಿಸುವುದು ಅವನಿಂದ ಸಾಧ್ಯವಾದ ಕಾರ್ಯವೆ ಎಂದ ಕೇಳುವವರಿರಬಹುದು ಆದರೆ ಈ ತರದ ಅನುಪತ್ಯಗಳಾಗಿಯೆ ಎಂಬಂತೆ, ಭಾರತೀಯ ಗರಡಿಗಳಲ್ಲಿ ಕುಸ್ತಿಗಾರರನ್ನು ತರಬೇತು ಮಾಡುತ್ತಿದ್ದಾರೆ. ಇದಕ್ಕೆ ಬೇಕಾದ ಶಕ್ತಿ, ಯುಕ್ತಿ, ದಂಭ ಇತ್ಯಾದಿಗಳು ಉಂಟಾಗುವಂತೆ ಒಬ್ಬನನ್ನು ತರಬೇತಗೊಳಿಸುತ್ತಾರೆ ಆದ್ದರಿಂದ ಗಾಮನಲ್ಲಿ ಈ ವಿಶಿಷ್ಟ ಯೋಗ್ಯತೆಯು ಇದ್ದೇ ಇರುವದ.

1910ರಲ್ಲಿ ಒಂದಾನೊಂದು ದಿನ ಗಾಮನ ಗರಡಿಗೆ ಬರಲಿದಾಗ ಆತನು ಒಂದೇ ಸಾರಿ 32 ಪ್ರಖ್ಯಾತ ಕುಸ್ತಿವೀರರೊಡನೆ ಕುಸ್ತಿ ಆಡಿದುದು ನಾನು ನೋಡಿರುವೆನು. ಕೆಲವೆ ನಿಮಿಷಗಳಲ್ಲಿ ಆತನು ಅವರನ್ನೆಲ್ಲಾ ಸೋಲಿಸಿಬಿಟ್ಟನು. ಕೆಲವು ವರ್ಷಗಳ ಹಿಂದೆ ಗಾಮನ ಸನಗಾಗಿ ಒಂದು ವಿಶೇಷ ಪ್ರದರ್ಶನವನ್ನು ಕೊಟ್ಟಿದ್ದನು. ಅದರಲ್ಲಿ ಆತನು 15 ಕುಸ್ತಿವೀರರಿರುವ ಒಂದು ಗುಂಪನ್ನು ಎದುರಾಯಿಸಿದ್ದನು. ಈ ಗುಂಪಿನಲ್ಲಿ ಇಮಾಮ್ ಬಕ್ಷ ಹಮೀದರು ಮಾತ್ರ ಇರಲಿಲ್ಲ. ಆಗ ಗಾಮನ ತೂಕವು ಬರೆ 280 ರಾತ್ತಲುಗಳಾಗಿತ್ತು. ಆದರೆ ಆತನನ್ನು ಎದುರಾಯಿಸಿದವರಲ್ಲಿ ಘೋಸನ್ಬು ಮತ್ತು ಶಹಾಬುದ್ದಿನ್‌ರವರು 240 ರಾತ್ತಲು ಭಾರದವರಾಗಿದ್ದರು. ಗಾಮನ ಸ್ಪರ್ಶ ಮಾತ್ರದಿಂದ ಈ ಜಟ್ಟಿರಕ್ಕಸರು ನೆಲದ ಮೇಲೆ ಹೊರಳುವವರಾದರು. ಶಹಾಬುದ್ದೀನನ್ನು, ತನ್ನ ಶಕ್ತಿಗಾಗಿ, ಪ್ರಸಿದ್ಧನಾಗಿದ್ದವನಾದರೂ, ಗಾಮನ ಸ್ಪರ್ಶ ಮಾತ್ರದಿಂದ ಹಕ್ಕು ಅಡಿ ದೂರಕ್ಕೆ ಬಿಸಾಡಲ್ಪಟ್ಟನು. ಪ್ರತಿಯೋರ್ವರನ್ನು ಈ ರೀತಿಯಲ್ಲಿ ಸೀರಿಸಿ ಕೊನೆಗೆ ಆತನು ಇಮಾಮನ ಹದಿನೆರಡು ವರ್ಷದ ಬಾಲಕನೊಡನೆ ಕುಸ್ತಿಯಾಡಿದನು. ಆತನ ಅಂದಿನ ಕೊನೆಯ ಯುದ್ಧವು ನಡೆದುದ, ಇಮಾಮನ ಕಿರಿ ಮಗನೊಡನೆ 8 ವರ್ಷ ಪ್ರಾಯದ ಈತನಿಗೆ ಗಾಮನು ತನ್ನ ಭುಜಗಳನ್ನು ನೆಲಕ್ಕೆ ಮಟ್ಟಿಸಲು ಬಿಟ್ಟನು. ಅಂದು ಗಾಮನು ನನ್ನೊಡನೆ ತಮಾಷೆಗಾಗಿ ಹೇಳಿದ್ದನು. ಇಂದಿನ ಕಾಲಾಂತರಗಳಿಂದಲೆ ನಾನ ಇಮಾಮನ ಮತ್ತು ಹಮೀದರನ್ನು ಎದುರಾಯಿಸುವುದಿಲ್ಲ. ಜಗತ್ಪ್ರಖ್ಯಾತ ಜಟ್ಟಿಯೆಜ್ಜ್ಕೋ ಅವರಿಂದ ಸೋಲಿಸಲ್ಪಟ್ಟನೆಂಬ ವಾರ್ತೆಯು ಹರಡಿತ್ತು.

ಆತ್ತ ಆಟದಲಿ ಗಾಮನ ಉರಿ ಎಲ್ಲರೂ ಕರೆದು ಒಂದಿಷ್ಟು ಯೋಚನೆ ಮಾಡುವಂತಾಗಿಲ್ಲ. ರಕ್ಷಣೆ ತರದ ಉಪಾಯಗಳನ್ನು ಉಪಯೋಗಿಸುವುದು ಆತನ ಪ್ರವರ್ತಿ ಆತನ ಹೊಡೆತಗಳ ವಿರೋಧಿಸಿಲ್ಪಡದಿಗಳ ... ಶಕ್ತಿ ಅಡಗುವುದರಲ್ಲಿ ಗಾಮನು ಅತಿ ಶ್ರೇಷ್ಠನಾದವನೆಂದ, ಆತನನ್ನು ಎದುರಾಯಿಸಾಂತ ಜಬಿಸ್ಕೋನು ಸ್ಲಾಘಿಸಿದನು. ವಾಯುವೇಗದಲ್ಲಿ ಬರುವ ಗಾಮನ ಹೊಡೆತಗಳನ್ನು ಎದುರಾಯಿಸುವರೆ ಅತನಿಂದ ಅಸಾಧ್ಯವೆನಿಸಿತಂತೆ. ಜೆಬಿಸ್ಕೋ ಆತನೊಡನೆ 3 4 ತಾಸುಗಳ ತನಕ ಕುಸ್ತಿಯಾಡಿದರೂ ಸಾರ್ಥಕವಾಗಲಿಲ್ಲವಂತೆ.

ಹಿಂದೂದೇಶದ ಕುಸ್ತಿ ತರಬೇತು ಶ್ರೇಷ್ಠತರದೆಂದೂ, ಇಂದು ಸರ್ವ ಜಗತ್ತೆ ಮನ್ನಿಸುತ್ತದೆ. ಕಾರಣ ಭಾರತೀಯ ತರಬೇತು ಪದ್ಧತಿಯಿಂದ, ಕುಸ್ತಿಗಾರರ ಬಲವು ಅಪಾರವಾದುದಾಗುತ್ತದೆ ಮಾತ್ರವಲ್ಲ. ಅವರು ಅಸಂಖ್ಯಾತ ಹೊಡೆತಗಳನ್ನರಿತವರಾಗುವರು. ಗಾಮನು, ಇಮಾಮ್, ಹಮೀದ, ಇಮಾಮ್ ಬಕ್ಷ, ಈ ನಾಲ್ವರಿಂದ ಒಂದಾನೊಂದು ಕಾಲ ಇಂಗ್ಲಾಂಡಿಗೆ ಸಂದ ಕುಸ್ತಿಕೀರ್ತಿಯು ಹಿಂದೂದೇಶಕ್ಕೆ ಬಂದಿತು.

ಗಾಮನ ಈ ಬಾರಿ ಚಾಲೆಂಜುಗಳೆಲ್ಲ ದಾಯಕವಾಗುವುದೊ ಯಾ ಮೇಲಿನ ಎರಡು ಚಾಲೆಂಜುಗಳಂತೆ ಸ್ವೀಕರಿಸಲಾಗದೆ ಹೋಗುವುದೊ ಎಂದು ನೋಡಬೇಕಿದೆ. ಒಂದು ವೇಳೆ ಈ ಚಾಲೆಂಜು ಸ್ವೀಕರಿಸಲ್ಪಟ್ಟರೆ ಗಾಮನು ತನ್ನ 59ನೆ ವಯಸ್ಸಿನಲ್ಲಿ ವಿರೋಧಿಯನ್ನು ಗೆಲುವವನಾಗುವನೊ, ನೋಡಬೇಕು.

[ಗಾಮಾನ ತಮ್ಮನಾದ ಇಮಾಮ್ ... ಬಾರಿ ಬಂದು ವಾರಿ ಕೀರ್ತಿ ... ಪಡೆದ ಜರ್ಮನ್ ಕುಸ್ತಿಗಾರನಾದ ... ದೇ ... ಹೊಡೆತದೊಳಗೆ ಸೋಲಿಸಿದ್ದ.]



# ಬೇಸಿಗೆಯಲ್ಲಿ ಟೀ ಯು ಅತ್ಯಾವಶ್ಯಕ

ಬಿಸಿಲಿನ ಬೇಗೆಯು ಅತಿಯಾಗಿರುವುದು. ನೀವೂ ಸೊಕ್ಕಿ ಸೊಪ್ಪಾಗಿರುವಿರಿ. ಟೀ ಯಿಂದ ಪಡೆಯಬಹುದಾದ ಶಕ್ತಿಯನ್ನು ಪಡೆಯಲು ಇದೇ ಸಕಾಲ. ಬೇಸಿಗೆಯಲ್ಲಿ ಟೀ ಯೇ ಸರ್ವೋತ್ಕೃಷ್ಟವಾದ ಪಾನ. ಅದು ನಿಮ್ಮ ದೇಹದಲ್ಲಿ ತಂಪನ್ನುಂಟುಮಾಡಿ ನರಗಳಿಗೆ ತ್ರಾಣವನ್ನು ಕೊಡುವುದು

## ಇಂಡಿಯಾದ ಟೀ ಯು ತಂಪನ್ನೂ ತೃಪ್ತಿಯನ್ನೂ ಕೊಡುವುದು

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿ ... ಪಾತ್ರೆಯನ್ನು ಬಿಸಿ ಮಾಡಿ ಟೀ ... ಒಂದು ಚಮಚೆ ಮತ್ತು ಪಾತ್ರೆಗಾಗಿ ಒಂದು ... ಉತ್ತಮ ಮಾದರಿ ಇಂಡಿಯಾದ ಟೀ ... ತಣ್ಣಗಾದ ಟೀ ... ಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ

I K 47

## ನೋಟೀಸು

ಕಾರ್ಕಳ ಡಿ. ಮು ಕೋರ್ಟಿನಲ್ಲಿ.

O P ... 13 1938

... ಯಿವನಾ ... ಕಾರ್ಕಳ ತಾಲೂಕು ಕಾರ್ಕಳ ಕಸಬಾ ... ವಾಸ.

—ಅರ್ಜಿದಾರಳು.

ಕಾಲಿ ... ಅರ್ಜಿದಾರಳ ... ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಷ್ಯೂರೆನ್ಸ್ ಕಂಪನಿಯ ಪಾಲಿಸಿ ನಂಬ್ರ 6171ನೇ ಪೋಲಿಸಿ ಪ್ರಕಾರ ಬರತಕ್ಕ ಹಣವನ್ನು ಪಡೆಯುವ ಹಕ್ಕು ಕುರಿತು ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯ ವಿಷಯದಲ್ಲಿ ಆಕ್ಷೇಪವಿದ್ದರೆ ತಾರೀಕು 28-2-1938ನೇ ಹಗಲು ಘಂಟೆ 10ಕ್ಕೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು ಎಂತ ಸಂಬಂಧ ಪಟ್ಟವರಿಗೆ ಈ ಮೂಲಕ ತಿಳಿಸಲಾಗಿದೆ.

ಕಾರ್ಕಳ, 31-1-38. } (sd) K Venkatesha Pai
ಅರ್ಜಿದಾರಳ ಪರ ವಕೀಲು

**ಗುಣಬಾರದಿದ್ದರೆ ಹಣ ವಾಪಾಸು!**

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದ್ದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುತ್ತಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಪ್ರಖ್ಯಾತ ಸರ್ಟಿಫಿಕೇಟು — ಡಾ। ಬಿ. ಎ ವೈದ್ಯ ಎಲ್. ಸಿ ಪಿ ಎಸ್, ಕೊಲ್ಹಾಪೂರ ಇವರು, ಬರೆಯುವುದೇನಂದರೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೬—೦—೦ ವಿ. ಪಿ. ಅಜೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನು ವೃದ್ಧಿ ಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ 2—8—0. ಮೂರು ಬಾಟ್ಲಿಗಳಿಗೆ ರೂ 7—0—0.

## ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ... ತಿಂಗಳು ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0

**ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್**

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ೞಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್ ಶ್ರೀರಾಮ ಪೇಟೆ ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಯಿ 4 ಕೆ ಶೀನಪ್ಪ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

# ಹೊಸ ಮಾಲು ಇಂದೆ ಬಂದದ್ದು!




# ಕಣನ್ ದೇವನ್ ಚಹಾ ಪೊಟ್ಟಣಗಳು!

## ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents*

**The Kerala Tea Syndicate.**

PONANI—(S Malabar)

॥ ಶ್ರೀ ॥

# ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ ಧರ್ಮಸ್ಥಳಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! ಅಪೂರ್ವ ರಿಯಾಯತಿ!

## ತಾ. 14—2—1938ರಿಂದ 15—3—1938ರ ವರೆಗೆ ಮಾತ್ರ!

ಸೇಕಡಾ 33⅓ ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಇದೇ ಬರುವ ತಾರೀಕು 28—2—1938ರಲ್ಲಿ ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದುಹೋಗತಕ್ಕ ಯಾವತ್ತೂ ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತೂ ಸ್ಟೇಷನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓ ರ ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಟನ್ನು ಮಾಡಿರುವೆವು

ಪ್ರಯಾಣವು ಮೇಲೆ ಸೂಚಿಸಿದ ವಾಯಿದಯೊಳಗೆ ಮುಗಿಯತಕ್ಕದ್ದಾಗಿದೆ

## ಇಂತಹ ಅತ್ಯಪೂರ್ವ ಸುಸಂದರ್ಭವನ್ನು ಕಳಕೊಳ್ಳದಿರಿ!

***JOINT MANAGERS,***

**Combined Booking Agency, Mangalore. Joint Booking Office, Kodialbail.**

ಸರ್ವಾಧಿಕಾರಿಗಳ ಬಾಲ್ಯ: ೨

# ಹಿಟ್ಲರ್.

ಬರುವ ವಾರ: ಮುಸೊಲೇನಿ

**ಬೆಳೆಯ ಗುಣವು ಮೊಳೆಯಲ್ಲಿಯೇ ತಿಳಿಯುವುದು. ಅಂತೆಯೇ, ಹಿಟ್ಲರರ ಬಾಲ್ಯದ ಸ್ಥಿತಿಗತಿಗಳನ್ನು ತಿಳಿದುಕೊಂಡರೆ, ಅವರ ಇಂದಿನ ಗಂಭೀರ ಕಟುಸ್ವಭಾವದ ಅರಿವು ನಮಗಾಗದಿರದು. ವಿಧಿಯ ಕೈಗೂಸಾಗಿ ಬೆಳೆದವರವರು ಇಂದು ವಿಧಿಯ ಕೃಪೆಯಿಂದಾಗಿಯೇ ಜರ್ಮನಿಯ ಸರ್ವಾಧಿಕಾರಿಗಳೆಂದೆನಿಸಿ, ಸರ್ವತಂತ್ರ ಸ್ವತಂತ್ರರಾಗಿರುವರು.**

ಹರ್ ಎಡೋಲ್ಫ್ ಹಿಟ್ಲರರ ತಂದೆಯು ಒಬ್ಬ ಬಡ ರೈತನ ಹೆಂಗಸಿನ ಮಗ. ಎಲೋಯುಸ್ ಸ್ಕಿಕ್ ಗ್ರೂಬರ್ ಎಂದು ಅವರ ಹೆಸರು. ತನ್ನ ನಲ್ವತ್ತನೆಯ ವಯಸ್ಸಿನಲ್ಲಿ ಅವರು ಹಿಟ್ಲರ್ ಎಂಬ ಹೆಸರನ್ನು ಇಟ್ಟುಕೊಂಡರು. ಎಡೋಲ್ಫ್ ಹಿಟ್ಲರರ ಸ್ವಭಾವದ ಮೇಲೆ ಇವರು ತನ್ನ ವಿಚಿತ್ರ ವ್ಯಕ್ತಿತ್ವದ ಮುದ್ರೆಯನ್ನು ಒತ್ತಿರುವರು.

ಎಲೋಯುಸ್ ಸ್ಕಿಕ್ ಗ್ರೂಬರರು ಹದಿಮೂರು ವರ್ಷ ಪ್ರಾಯದಲ್ಲಿ ತನ್ನ ಹುಟ್ಟೂರನ್ನು ಬಿಟ್ಟು, ವಿಯನ್ನಕ್ಕೆ ಹೋಗಿ ಅಲ್ಲೊಬ್ಬ ಸಮಗಾರನ ವೃತ್ತಿಯನ್ನು ಕೈಗೊಂಡರು ಆದರೆ ಅವರಿಗೆ ಅದರಲ್ಲಿ ತೃಪ್ತಿಯಿರಲಿಲ್ಲ. ಏನಾದರೂ ವಿಶೇಷ ಕೆಲಸಗಳನ್ನು ಮಾಡಿ, ಕೀರ್ತಿ ಸಂಪಾದಿಸಬೇಕೆಂದು ಅವರ ಕಾಂಕ್ಷೆಯಾಗಿತ್ತು. ಇದಕ್ಕಾಗಿ ಅವರು ಸಮಗಾರನ ವೃತ್ತಿಯನ್ನು ಬಿಟ್ಟು ಸಿವಿಲ್ ಸರ್ವಿಸಿಗೆ ಸೇರಿದರು

ತನ್ನ ನಲ್ವತ್ತೈದನೆಯ ವಯಸ್ಸಿನಲ್ಲಿ ಅವರು ಮದುವೆ ಮಾಡಿಕೊಂಡರು. ಅವರ ಹೆಂಡತಿ—ಎನ್ನಾ ಗ್ಲೇಸ್ ಹೋಯರರು—ಅವರಿಗಿಂತಲೂ ಪ್ರಾಯದಲ್ಲಿ ಹದಿನಾಲ್ಕು ವರ್ಷಕ್ಕೆ ದೊಡ್ಡವರು. ಆದರೆ ಈ ದಾಂಪತ್ಯವು ದೀರ್ಘಕಾಲ ಬಾಳಲಿಲ್ಲ. ಕೆಲವೇ ಸಮಯದಲ್ಲಿ ಗಂಡಹೆಂಡಿರು ಬೇರೆಯಾದರು. ದಾಂಪತ್ಯ ವಿಚ್ಛೇದವಾದ ಅಲ್ಪಾವಧಿಯಲ್ಲಿಯೇ ಎನ್ನಾ ಗ್ಲೇಸ್ ಹೋಯರರು ತೀರಿಕೊಂಡರು.

## ಯಾವಾಗಲೂ ಮುಂದಾಳು.

ಮೊದಲನೆಯ ದಾಂಪತ್ಯ ವಿಚ್ಛೇದವಾದ ಒಂದೇ ತಿಂಗಳಲ್ಲಿ ಎಲೋಯುಸ್ ಸ್ಕಿಕ್ ಗ್ರೂಬರರು ಎರಡನೆಯ ವಿವಾಹವನ್ನು ಮಾಡಿಕೊಂಡರು. ವಿವಾಹವಾದ ಒಂದು ವರ್ಷದಲ್ಲಿ ಅವರ ಈ ದ್ವಿತೀಯ ಭಾರ್ಯೆಯು ಕಾಲಾಧೀನರಾದರು. ಇದಾದ ಹತ್ತು ತಿಂಗಳ ಒಳಗೆ ಅವರು ಮೂರನೆಯ ಸಂಬಂಧವನ್ನು ಮಾಡಿಕೊಂಡರು. ಕ್ಲಾರಾ ಫೆಝಲ್—ಅವರ ಮೂರನೆಯ ಮಡದಿಯು ಅವರಿಗಿಂತ ಇಪ್ಪತ್ತಮೂರು ವರ್ಷಗಳಿಗೆ ಚಿಕ್ಕವರು. ಇವರೇ ಎಡೊಲ್ಫ್ ರ ತಾಯಿ. ಅವರು ಎಡೋಲ್ಫರಿಗೆ ಜನ್ಮವಿತ್ತರು.

ಬಳಿಕ ಎಡೋಲ್ಫರ ತಂದೆಯು 52 ಸಂವತ್ಸರಗಳ ಸುದೀರ್ಘ ಉದ್ಯೋಗವನ್ನು ಬಿಡುವ ಸಮಯ ಬಂದಾಗ, ಅವರ ಕೆಲಸದ ವಿಮುಕ್ತಿ ಹೊಂದಿ ಒಸ್ತ್ರಿಯದಲ್ಲಿ ಲಿನ್ ಎಂಬಲ್ಲಿ ಒಂದು ಮನೆಯನ್ನು ಕ್ರಯಕ್ಕೆ ಪಡೆದುಕೊಂಡು ಅಲ್ಲಿ ಸುಖದಿಂದ ಸಂಸಾರಿಕ ಜೀವನವನ್ನು ನಡೆಸತೊಡಗಿದರು.

ಎಲೋಯುಸ ಸ್ಕಿಕ್ ಗ್ರೂಬರ್ ಹಿಟ್ಲರರು ಬಹಳ ಹಮ್ಮಿನ, ಹಟವಾದಿ ಸ್ವಭಾವದ ಪುರುಷರು ಊರವರೆಲ್ಲರೂ ತನ್ನನ್ನು 'ಹರ್' ಎಂದೇ ಸಂಬೋಧಿಸಬೇಕೆಂದು ಅವರ ಭಾವನೆಯಾಗಿತ್ತು. ತನ್ನ ನೆರೆಕರೆಯವರೊಡನೆ ಜಗಳ ಮಾಡಿ ಅವರು ಅತ್ಯಲ್ಪ ಸಮಯದಲ್ಲೇ ಊರವರ ಅವಕೃಪೆಗೆ ಪಾತ್ರರಾದರು

ಉದ್ಯೋಗವಿಲ್ಲದ ನರನು ಪಶುವಿಗೆ ಸಮಾನನಂತೆ. ಕಾರಣ ಆತನ ಸಿರುದ್ಯೋಗಿ ಮೆದುಳು ಇಲ್ಲದ ದುಷ್ಟ ಆಲೋಚನೆಗಳನ್ನು ಮಾಡುವುದು, ದುಷ್ಕೃತ್ಯಗಳನ್ನು ಚಿಂತಿಸುವುದು ಅದರಂತೆ ಮೊದಲೆ ಜಗಳಗಂಟ ಸ್ವಭಾವದ ಸ್ಕಿಕ್ ಗ್ರೂಬರರು ಈಗ ಉದ್ಯೋಗವಿಲ್ಲದೆ, ಪ್ರತಿಯೊಬ್ಬ ಮಿತ್ರನೊಡನೆಯೂ ಕಲಹವನ್ನು ಹೂಡಿ, ಅವರ ಮೈತ್ರಿಯನ್ನು ಕಳೆಕೊಂಡರು, ಇದರಿಂದ ಅವರಿಗೆ ಸಾಂಸರ್ಗಿಕ ಜೀವನವೂ ಇಲ್ಲವಾಯಿತು. ಆದುದರಿಂದ ಸ್ವಾಭಾವಿಕವಾಗಿ ಅವರು ತನ್ನ ಕುಟುಂಬವನ್ನು ಆಳುವುದರಲ್ಲಿಯೇ ತನ್ನ ಆಯುಷ್ಯದ ದಿನಗಳನ್ನು ನೂಕತೊಡಗಿದರು. ತನ್ನ ಮನೆಯಲ್ಲಿ ಅವರೊಬ್ಬ ಸರ್ವಾಧಿಕಾರಿಯಂತೆ ವರ್ತಿಸತೊಡಗಿದರು.

ತನ್ನ ಮಗನಾದ ಎಡೋಲ್ಫನನ್ನು ಕರೆಯಬೇಕಾದರೆ ಅವರು ಸಿಳ್ಳುಹಾಕುತ್ತಿದರು ವಿನಹ ಆತನನ್ನು ಹೆಸರಿನಿಂದ ಕೂಗಿ ಕರೆಯುತ್ತಿದ್ದಿಲ್ಲ. ಆ ಸಿಳ್ಳಿನ ಶಬ್ದವನ್ನು ಕೇಳಿದೊಡನೆ ಎಡೋಲ್ಫನು ಎಲ್ಲಿದ್ದರೂ ಬಂದೇ ಬರಬೇಕು. ಒಂದವನೆ ಓರ್ವ ಸಿಪಾಯಿಯಂತೆ ತಟಸ್ಥವಾಗಿ ನಿಂತು, ತಂದೆಯ ಆಜ್ಞಾನುಕೂಲವಾಗಿ ನಡೆಸಬೇಕು.

'ನನ್ನ ತಂದೆಯವರನ್ನು ನಾನು ಮಾನಿಸುತ್ತಿದ್ದೆ, ಆದರೆ ತಾಯಿಯನ್ನು ಪ್ರೀತಿಸುತ್ತಿದ್ದೆ'' ಎಂಬುದಾಗಿ ತನ್ನ ಮಾತಾಪಿತೃಗಳ ಕುರಿತು "ಮೈನ್ ಕಾಂಫ್'' ಎಂಬ ಪುಸ್ತಕದಲ್ಲಿ ಹಿಟ್ಲರರು ಬರೆದಿರುವರು. ನಿಜವಾಗಿಯೂ ತನ್ನ ತಾಯಿಯನ್ನು ಆಧರಿಸಿಕೊಂಡೇ ಅವರು ಬೆಳೆದವರೆನ್ನಬೇಕು.

ಅವರ ತಾಯಿಯು ಅವಿದ್ಯಾವತಿಯಾದ ಸಾಮಾನ್ಯ ಹೆಂಗಸು. ಬಡವರ ಮನೆಯ ಹೆಣ್ಣು. ಕೂಲಿಯಂಥ ಪ್ರಕ್ರಿಯೆಯಿಂದ ಕೆಲಸವನ್ನು ಅವರೇ ಕಷ್ಟಪಟ್ಟು ಮಾಡುತ್ತಿದ್ದರು. ತಂದೆ ಶಿಸ್ತಿನ ಹಟವಾದಿ ಸ್ವಭಾವದವರು ತಾಯಿ ಅವಿದ್ಯಾವತಿ, ಕಷ್ಟಕ ಜೀವಿತ ದಿನಗಳ ಈ ಒಗೆಯ ನಡೆನುಡಿಗಳೇ ಹಿಟ್ಲರರ ಸ್ವಭಾವವನ್ನು ರೂಪಿಸಿದ ಆದಿಶಕ್ತಿಗಳು.

ಈ ಬಗೆಯ ವಾತಾವರಣದಲ್ಲಿ ಹಿಟ್ಲರರು ಬೆಳೆದರು. ಮೊದಲಿನಿಂದಲೂ ಅವರು ಅತಿ ಸ್ವತಂತ್ರ ಪ್ರವೃತ್ತಿಯವರು. ಶಾಲೆಗೆ ಹೋದಾಗ ಅವರು ಅನೇಕ ಸಾರಿ ದೊಡ್ಡ ದೊಡ್ಡ ಹುಡುಗರೊಡನೆ ಕಲೆತು, ಆಟದ ಬಯಲಿನಲ್ಲಿ ಕೆಂಪು ಇಂಡಿಯನರ ಯುದ್ಧವನ್ನು ಮಾಡುತ್ತಿದರಲ್ಲದೆ ಮನಸ್ಸಿನಲ್ಲಿ ಗುಪ್ತವಾಗಿ ಪ್ರತ್ಯೇಕ ಕೀರ್ತಿಯನ್ನು ಹೊಂದುವಂಥ ಒಲವು ಅವರಿಗಿದ್ದಿತು. ಈ ಬಗೆಯ ಬಾಲಲೀಲೆಯು ಮುಂದೆ ಕಲ್ಪನಾಶಕ್ತಿಗೆ ಕಾರಣವಾಗಿತ್ತು.

ಆ ಸಮಯದಲ್ಲಿ ನಾನು ಮುಂದೆ ಯಾವ ವೃತ್ತಿಯನ್ನು ಅವಲಂಬಿಸಬೇಕೆಂದು ಆಲೋಚಿಸುತ್ತಿದ್ದೆ. ನನ್ನ ತಂದೆಯವರ ವೃತ್ತಿಯಲ್ಲಿ ನನಗೆ ಅಪೇಕ್ಷೆಯಿದ್ದಿಲ್ಲ. ಬಾಲ್ಯದಲ್ಲಿಯೇ ನಾನು ನನ್ನ ಅನೇಕ ಮಂದಿ ಮಿತ್ರರೊಡನೆ, ಅನೇಕ ವಿಷಯಗಳ ಕುರಿತು ಮಾತನಾಡಿ, ಚರ್ಚಿಸಿ, ನನ್ನ ವಾಕ್ಚಾತುರ್ಯವನ್ನು ಬೆಳೆಸಿದ್ದೆನು. ನನ್ನ ವಾದಗಳನ್ನು ನಾನು ಚೆನ್ನಾಗಿ ಕಲಿಯುತ್ತಿದ್ದೆ. ಮತ್ತು ನನ್ನ ಸಹಪಾಠಿಗಳಿಗೊಬ್ಬ ನಾಯಕನಾಗಿದ್ದೆ. ನನ್ನ ಗುರುಹಿರಿಯರಿಗೆ ನನ್ನನ್ನು ಅಂಕೆಯಲ್ಲಿಡುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ'

## ಮನೆಯಲ್ಲಿ ಅತೃಪ್ತಿ.

ಮೊದಲಿಂದಲೂ ಎಡೋಲ್ಫನು ಆಟ, ಕೂಟ, ಹೊಡೆದಾಟಗಳಲ್ಲಿ ಗಟ್ಟಿಗನು. ಇಂಥ ಪ್ರಸಂಗಗಳಲ್ಲಿ ತಲೆದೋರಿದ ವೈರವನ್ನು ತೀರಿಸಿಕೊಳ್ಳಲು, ಊರ ಬಳಿಯ ಗುಡ್ಡ, ಕಾಡು, ಬೆಟ್ಟಗಳೇ ರಣಭೂಮಿಯಾಗಿ ಅವನಿಂದ ಉಪಯೋಗಿಸಲ್ಪಟ್ಟುವು. ತಾನೊಬ್ಬ ನಾಯಕನೆಂಬುದರಲ್ಲಿ ಆತನಿಗೆ ಬಹಳ ಹೆಮ್ಮೆಯಿತ್ತು. ಶಾಲೆಗೆ ಹೋಗುವುದೆಂದರೆ ಆತನಿಗೆ 'ಶುಕ್ರವಾರ' ಕಲಹವೆಂದರೆ ಯಾವಾಗಲೂ 'ಮೂರುವಾರ'. ಶಾಲೆಯ ಏಕಪ್ರಕಾರದ ಜೀವನವು ಎಡೋಲ್ಫನಿಗೆ ರುಚಿಸದಾಯಿತು. ಅದಕ್ಕಿಂತ ಆಕರ್ಷಕವಾದ ಬೇರೇನಾದರೂ ವಿಷಯವಿದೆಯೇ ಎಂದು ಅವನು ಹುಡುಕ ತೊಡಗಿದನು.

ಸಮೀಪದಲ್ಲಿರುವ ಒಂದು ಇಂಗ್ರೇಜಿಗೆ ಹೋಗಿ, ಅಲ್ಲಿ ಕೆಲಸಮಯದ ತನಕ ಆತನು ಸಂಗೀತಾಭ್ಯಾಸ ಮಾಡತೊಡಗಿದನು. ಇಂಗ್ರೇಜಿಯಲ್ಲಿ ನಡೆಯುವ ಅಭೂತಪೂರ್ವವಾದ ವೈಭವ, ಸಂಭ್ರಮಾದಿಗಳು ಆತನ ಮನಸ್ಸನ್ನು ಆಕರ್ಷಿಸಿದುವು. ಈ ಜಗತ್ತಿನಲ್ಲಿ ಧರ್ಮಗುರುವಾಗಿ ಬಾಳುವುದೇ ಅತ್ಯುಚ್ಚವಾದ ಧ್ಯೇಯವೆಂದು ಆಗ ಆತನಿಗೆ ತೋರಿತು.

ದೊಡ್ಡವನಾದ ಮೇಲೆ ತಾನೂ ಒಬ್ಬ ಧರ್ಮಗುರುವಾಗಬೇಕೆಂದು ಎಡೋಲ್ಫ್ ಹಿಟ್ಲರರ ಬಗೆದರು. ಆದರೆ ಅವರ ಈ ಇಚ್ಛೆಯು ಅಪೂರ್ಣವಾಗಿಯೇ ಉಳಿಯಿತು. ಯಾಕೆ ಅದೃಶ್ಯವಾಯಿತು. ಕಾರಣ, ಅವರ ಸ್ವಭಾವಕ್ಕನುಗುಣವಾದ ವಿಷಯಗಳತ್ತ ಅವರ ಚಿತ್ತವು ನಂತರ ಸೆಳೆಯಲ್ಪಟ್ಟಿತು.

ಅಕಸ್ಮಾತ್ತಾಗಿ ಅವರ ಇಡೀ ದೃಷ್ಟಿ ಕೋನವೇ ಪರಿವರ್ತನಗೊಂಡಿತು. ತನ್ನ ತಂದೆಯ ಪುಸ್ತಕಾಲಯದಲ್ಲಿದ್ದ, ಜರ್ಮನರಿಗೂ ಫ್ರೆಂಚರಿಗೂ ಪ್ರಷ್ಯನರಿಗೂ ನಡೆದ ಯುದ್ಧದ ಕುರಿತು ಉಲ್ಲೇಖಿಸಿದ, ಅದೊಂದು ಪುಸ್ತಕವೇ ಅವರ ಈ ಬಗೆಯ ಮಾರ್ಪಾಟಿಗೆ ಮುನ್ನುಡಿಯಾಯಿತೆನ್ನಬಹುದು.

'ನಾನು ಆ ಪುಸ್ತಕವನ್ನು ಓದಿ ಚೆನ್ನಾಗಿ ಮನನ ಮಾಡಿಕೊಂಡೆ. ಅಂದಿನಿಂದ ಯುದ್ಧಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ನನ್ನ ಆಸಕ್ತಿಯು ಬೆಳೆಯತೊಡಗಿತು.'

[illegible] ಜೀವನದ ಕುರಿತು ಸಹಿಗನಸುಗಳನ್ನು ಕಾಣತೊಡಗಿದರು, ಮತ್ತು ತನ್ನ ಮಾರಗಳತ್ತ ಗಮನವನ್ನು ಕೊಡತೊಡಗಿದರು.

ಆಗ ಹತ್ತು ವರ್ಷದಲ್ಲಿ ಅವರ ಹಿರಿಯರಿಗೂ ಅವರಿಗೂ ಜಗಳಗಳಾಗ ತೊಡಗಿದವು. ಶಾಲೆಯ ಓದಿನಲ್ಲಿ ಮಗನು ಕಲಿಯಬೇಕೆಂದು ತಂದೆ ಮಗನೂ ತನ್ನಂತೆ ಓರ್ವ ಸಿವಿಲ್ ನೌಕರನಾಗಬೇಕೆಂದು ತಂದೆಯ ಇಷ್ಟ. ಆದರೆ ಸಿವಿಲ್ ನೌಕರನಾಗಿ ಸ್ವಾತಂತ್ರ್ಯವನ್ನು ಕಳೆಕೊಳ್ಳಲು ಎಡೋಲ್ಫ್ ಸಿದ್ಧನಾಗಲಿಲ್ಲ. [illegible] ಗಳನ್ನು ಬಿಡಿಸುವ ಆಸಕ್ತಿಯು [illegible] ತಂದೆಯ ಆಗ್ರಹದಲ್ಲಿ, ಮಗನೇ ಮುಂದುವರಿದು [illegible] ಕಲಾವಿದನಾಗಬೇಕಾಯಿತು.

ಅಷ್ಟರಲ್ಲಿ ತನ್ನ ಭವಿಷ್ಯದ ಕುರಿತು ಹಿಟ್ಲರರು ಚಿಂತಿಸತೊಡಗಿದರು. [illegible] ಕಲಾವಿದನಾಗುವುದೇ ಲೇಸೆಂದು ನಿರ್ಧರಿಸಿದರು. ತನ್ನ ಈ ನಿರ್ಧಾರದ ಕುರಿತು ತಂದೆಯೊಡನೆ ಪ್ರಸ್ತಾಪಿಸಿದೊಡನೆ 'ನನ್ನ ಜೀವ ಇರುವ ತನಕ ನೀನು ಚಿತ್ರಕಾರನಾಗಲು ಬಿಡೆನು'' ಎಂದು ಅವರು ಮಗನನ್ನು ಗದರಿಸಿಬಿಟ್ಟರು.

ಅವರು ಮಗನ ಮೇಲೆ ಕೋಪಗೊಂಡರು. ~~ಆದರೆ ಮಗನು ತಂದೆಯ ಈ ಬಾರಿ ಕೇಳುವಂತಿ~~ರಲಿಲ್ಲ. ತನಗೆ ಚಿತ್ರಕಾರನಾಗಲು ಬಿಡದಿದ್ದರೆ ತಾನು ಕಲಿಯುವುದನ್ನೇ ಬಿಟ್ಟುಬಿಡುವೆನೆಂದು ಹಿಟ್ಲರರು ಹೇಳಿದರು. ಅದರಂತೆ ನಡೆದೇ ಬಿಟ್ಟರು. ಶಾಲೆಯಲ್ಲಿ ಅವರಿಗೆ ತನ್ನ ತರಗತಿಯಲ್ಲಿ ಕಡೆಯ ಸ್ಥಾನವು ದೊರಕಿತು. ಅಲ್ಲದೆ ಇನ್ನೊಂದು ವರ್ಷವನ್ನು ಅದೇ ತರಗತಿಯಲ್ಲಿ ಕಳೆದರು.

ಚರಿತ್ರೆಯ ಅಧ್ಯಯನದಲ್ಲಿ ಹಿಟ್ಲರರಿಗೆ ತುಂಬಾ ಆಸಕ್ತಿ. ಅವರು ಚರಿತ್ರೆಯ ಉಪಾಧ್ಯಾಯರಾಗಿದ್ದ ಡಾ। ಲಿಯೊಪೋಲ್ಡ್ ಪೋಚ್ ಎಂಬವರು ತಮ್ಮ ಸ್ಫೂರ್ತಿದಾಯಕವಾದ ಮಾತುಗಳಿಂದ, ಹಿಟ್ಲರರ ಈ ಆಸಕ್ತಿಯನ್ನು ಇನ್ನಷ್ಟು ಹುರಿಗೊಳಿಸಿದರು. ಲಿಯೊಪೋಲ್ಡ್ ಪೋಚರು ಓರ್ವ ದೇಶಪ್ರೇಮಿಗಳು. ಆಗ್ಗೆ ಸಿಂಹಾಸನಾಧಿಕಾರಿಗಳಾಗಿದ್ದ ಹೆಪ್ಸಬರ್ಗ ಮನೆತನದವರನ್ನು ಅವರು ನಿಂದಿಸುತ್ತಿದ್ದರಲ್ಲದೆ, ಹೋಯನ್ ಝೋಲರ್ನ ಮನೆತನದವರ ಮತ್ತು ಬಿಸ್ ಮಾರ್ಕರ ವೀರಕೃತ್ಯಗಳನ್ನು ಬಹಳವಾಗಿ ಹೊಗಳುತ್ತಿದ್ದರು.

## ಸಾಮ್ರಾಜ್ಯದ ಕನಸುಗಳು.

ದೇಶಪ್ರೇಮಿಯಾದ ಒಸ್ತ್ರಿಯದ ಪ್ರತಿಯೊಬ್ಬ ಪ್ರಜೆಯು ಜರ್ಮನ ಸಾಮ್ರಾಜ್ಯದೊಡನೆ ಐಕ್ಯಹೊಂದಲು ಆತುರ ಪಡುತ್ತಿದ್ದನು. ಜರ್ಮನರ ಸಂತೃಪ್ತ ಜೀವನವನ್ನು ಕಂಡು ಪ್ರತಿಯೊಬ್ಬನು ಅಸೂಯೆ ಪಡತೊಡಗಿದನು. ಒಸ್ಟ್ರೋ ಹಂಗೇರಿಯನ್ ರಾಜ್ಯವನ್ನು ನಾಶಗೊಳಿಸಿ, ಜರ್ಮನರೊಡನೆ ಒಂದಾದುವುದೇ ತಮಗೆ ಹಿತದ ದಾರಿಯೆಂದು ಪ್ರತಿಯೊಬ್ಬನು ಬಗೆದನು. ಇವೇ ಮೊದಲಾದ ಆಲೋಚನೆಗಳನ್ನೇ ಡಾ। ಪೋಚರು ತನ್ನ ವಿದ್ಯಾರ್ಥಿಗಳ ಹೃದಯದಲ್ಲಿ ಮುದ್ರೆಯೊತ್ತ ತೊಡಗಿದ್ದರು. ಇಂದೂ ಎಡೋಲ್ಫ್ ಹಿಟ್ಲರರ ಮನಸ್ಸು ಅವನ್ನೇ ಮಥಿಸುತ್ತಿರುವುದು. ಬಾಲ್ಯದಲ್ಲಿ ತನ್ನ ಗುರುವಿನ ಪಾಠಗಳನ್ನು ಕೇಳಿಕೊಂಡು ಹಿಟ್ಲರರು ಅವರನ್ನುನಾಂತೆ ಒಬ್ಬ 'ದಂಗೆಖೋರ'ರಾದರು.

ಹಿಟ್ಲರರಿಗೆ ಹದಿಮೂರು ವರ್ಷಗಳೆನ್ನುವಾಗ ಅವರ ಪಿತನು ಮೃತಿಯನ್ನೈದಿದನು. ಆದರೆ ವಿದ್ಯಾಭ್ಯಾಸದಲ್ಲಿ ಅಸಂತುಷ್ಟಿಪಟ್ಟ ಅವರಿಗೆ, ಶಾಲೆಯನ್ನು ಬಿಡಲು ಅವರ ಮಾತೆ ಸಮ್ಮತಿಸಲಿಲ್ಲ.

ಈ ಸಮಯದಲ್ಲಿ ಅವರು ಅಸ್ವಸ್ಥರಾದರು. ಅವರನ್ನು ಇನ್ನು ಸ್ವಲ್ಪ ಸಮಯದ ತನಕ ಶಾಲೆಗೆ ಕಳುಹಿಸಬಾರದಾಗಿ ವೈದ್ಯರು ಬೋಧಿಸಿದ್ದರು. ವೈದ್ಯರ ಮಾತು ಹಿಟ್ಲರರ ಹಿತಕ್ಕಾಯಿತು.

ಒಂದು ವರುಷದ ತನಕ ಅವರು ಮನೆಯಲ್ಲೇ ಕಳೆಯಬೇಕಾಯಿತು. ಆದರೆ ನಂತರ ತಾಯಿಯು ಪುನಃ ಅವರನ್ನು ಶಾಲೆಗೆ ಕಳುಹಿದಳು, ಪರಂತು ಶಾಲೆಗೆ ಹೋಗುವುದನ್ನು ಅವರು ಸರಿಯಾಗಿ ಮಾಡದೆ ಇದ್ದುದರಿಂದ ಆ ಶಾಲೆ ಮುಗಿಸಿ ಹೊರಟರು. ತಾಯಿಯ ನಿರ್ಬಂಧದಿಂದಾಗಿ ಅವರು ಬೇರೊಂದು ಶಾಲೆಯನ್ನು ಸೇರಿದರು

ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಅಲ್ಲಿಯೂ ಹಿಟ್ಲರರು ಯಾವುದರ ಕಡೆಗೂ ಗಮನವನ್ನು ಕೊಡದೆ ಸೋಮಾರಿಯಾಗಿ ಕಾಲಯಾಪನೆ ಮಾಡತೊಡಗಿದರು. ತಾಯಿಯು ಬೇರೆ ಉಪಾಯವಿಲ್ಲದೆ ಅವರನ್ನು ಶಾಲೆ ಬಿಡಿಸಿದಳು. ಹಿಟ್ಲರರ ಮನೋವಾಂಛಿತವು ಸಫಲವಾಯಿತು. ಅವರ ಮನೆಯಲ್ಲೇ ಇದ್ದು, ಮನೆಯ ಕೆಲಸಗಳಲ್ಲಿ ತನ್ನ ತಾಯಿಗೆ ಸಹಾಯ ಮಾಡಿಕೊಂಡು ನಾನಾ ಬಗೆಯ ವರುಷಗಳನ್ನು ಕಳೆದರು. ಇನ್ನೆಷ್ಟು ಕಾಲದ ತನಕ ಅವರು ಇದೇ ರೀತಿಯಲ್ಲಿ ಸಮಯವನ್ನು ಕಳೆದರು. ಇನ್ನೆಷ್ಟು ಕಾಲದ ತನಕ ಅವರು ಇದೇ ರೀತಿಯಲ್ಲಿ ಸಮಯವನ್ನು ಕಳೆಯುತ್ತಿದ್ದರೋ ಹೇಳಲಾಗುವಂತಿಲ್ಲ. ಆದರೆ ಈ ಸನ್ನಿಧಿ ಸಮಯದಲ್ಲಿ ಅವರ ತಾಯಿಯು ತೀರಿಕೊಂಡಳು.

ಇನ್ನು ತನ್ನ ಉದರ ಪೋಷಣೆಯ ಭಾರವು ಹಿಟ್ಲರರ ಹೆಗಲ ಮೇಲೆಯೇ ಬಿತ್ತು. ತಾನು ದುಡಿಯಬೇಕು, ಹೊಟ್ಟೆ ತುಂಬಬೇಕು ಎಂಬ ಪರಿಸ್ಥಿತಿಯು ಅವರಿಗೆ ಬಂದೊದಗಿತು. ಆಗ ಅವರು ೨೦ ವರ್ಷದ ಯುವಕ. ಏನಾದರೊಂದು ಉದ್ಯೋಗವನ್ನು ಸಂಪಾದಿಸಬೇಕೆಂಬ ಆಕಾಂಕ್ಷೆಯಿಂದ ಅವರು ವಿಯನ್ನಕ್ಕೆ ತೆರಳಿದರು. ಸುಖಮಯವಾದ ಬಾಲ್ಯದ ದಿನಗಳನ್ನು ಕಳೆದುವು. ಹಿಟ್ಲರರು ಯೌವನದ ಅಂಗಸ್ಸಿನಲ್ಲಿ ಪದಾರ್ಪಣಗೊಂಡರು

ಕಾಂಗ್ರೆಸಿನ ಕಾರ್ಯಕ್ರಮದಿಂದ ಹೊರತುಪಡಿಸಿ ಹಳ್ಳಿಯಲ್ಲಿ ಗ್ರಾಮಸ್ಥರೆಲ್ಲರೂ ಖಾದಿ ಮತ್ತು ಸ್ವಾವಲಂಬನೆಯನ್ನು ಮಾಡಬೇಕೆಂದು ಸಂಕಲ್ಪ ಮಾಡಿರುವರು. ಈ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವವನು 5 ರೂಪಾಯಿಗಳ ಜುಲ್ಮಾನೆ ತೆರಬೇಕಂತೆ. ಈ ಸಂಕಲ್ಪದಿಂದ ಅಲ್ಲಿಯ ಕೇಂದ್ರ ಅಂಗಡಿಗೆ ರೂ. ೩೦೦ರ ವ್ಯಾಪಾರವಾಗುತ್ತಿದ್ದುದು ಈಗ ರೂ. ೩೦೦ಕ್ಕೆ ಇಳಿದಿರುವುದಂತೆ.

ಫೆಡರೇಶನಿನ ಕುರಿತು ಇಂಡಿಯಾ ಸರಕಾರವು ಪ್ರಾಂತ್ಯಗಳೊಡನೆ ವಿಚಾರಿಸಲು ಸಿದ್ಧವಿಲ್ಲವೆಂದು ಕೇಂದ್ರ ಎಸೆಂಬ್ಲಿ ಪ್ರಶ್ನೋತ್ತರದಿಂದ ತಿಳಿದುಬರುತ್ತದೆ.

ಮೆಡಿಟರೇನಿಯನದಲ್ಲಿ ಸ್ಪೆನಿಶ್ ದಂಗೆಕೋರರು ಕಳ್ಳಿದ್ದಲು ಕೊಂಡೊಯ್ಯುವ ಬ್ರಿಟಿಷರ ಹಡಗೊಂದನ್ನು ಮುಳುಗಿಸಿದರು.

ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪುನರ್ವ್ಯವಸ್ಥಾ ಕಾರ್ಯವನ್ನು ಶ್ರೀ ಸುಭಾಷ್ಚಂದ್ರಬೋಸರು ಹಿಡಿದಿರುವರು.

# ಸ್ವದೇಶಾಭಿಮಾನಿ

ತಾ. ೪ನೇ ಶುಕ್ರವಾರ ಫೆಬ್ರುವರಿ ೧೯೩೮

## ರೈತರ ಋಣವಿಮೋಚನೆ

ಇದಕ್ಕಾಗಿ ಮದ್ರಾಸು ಸರಕಾರವು ಹೊರಡಿಸಿದ ಮಸೂದೆಯು ಅಕ್ಷೆಪ್ಪ ತಿದ್ದುಪಡಿಗಳೊಡನೆ ಎಸೆಂಬ್ಲಿಯಲ್ಲಿ ಮಂಜೂರಾಯಿತು. ಇನ್ನಿಪ್ಪತ್ತು ತಿದ್ದುಪಡಿಗಳಲ್ಲಿ ಎಂದು (ಅತಿ ಸಾಮಾನ್ಯ) ಅಂಗೀಕೃತವಾದುವು. ಅಧಿಕ ಮತ ಬೆಂಬಲವುಳ್ಳ ಮಂತ್ರಿಮಂಡಲವಿರವಲ್ಲಿ, ಚರ್ಚೆಗಳ ಪರಿಸ್ಥಿತಿಯು ಹೀಗಾಗುವುದು. ಚರ್ಚೆ ಮಾಡಬೇಕೆಂದು ಮುಂದಿನವರಿಗೆ ತಮ್ಮ ಮಾತಿಗೇನೂ ಬೆಲೆಯಿಲ್ಲದೆ ಹೋಗ ಬಹುದೆಂಬ ಅಂಜಿಕೆಯೂ ಆಥಾರ್ಥವಾಗಿಯೂ ಉಂಟಾಗುವುದು. [illegible] ಅಂಗೀಕೃತವಾಗಬೇಕೆಂದೂ, ಎಲ್ಲಕ್ಕೆ [illegible] ಮಂತ್ರಿಗಳೇ ಜವಾಬ್ದಾರರಾಗಿರಬೇಕೆಂದೂ ಮಂತ್ರಿಮಂಡಲದ ವ್ಯವಸ್ಥೆಯ [illegible] ಚರ್ಚೆ ಪೂರ್ತಿಯಾಗಿ ನಡೆದುದೆನ್ನಲು ಬರುತ್ತಿಲ್ಲ. ಮೂರು ದಿನಗಳಲ್ಲಿ ಸಿಲೆಕ್ಟ್ ಕಮಿಟಿಯ ರಿಪೋರ್ಟು ಬರೆದುದು, ನಾಲ್ಕು ದಿನಗಳಲ್ಲಿ [illegible] ಚರ್ಚೆ ನಡೆದ [illegible] ಅವಸರವನ್ನೇ ಸೂಚಿಸುವುದು.

ಈ ಮಸೂದೆಯ ಕಲಮುಗಳನ್ನು ವಿರೋಧಿಸಿ [illegible] ಪತ್ರಿಕೆಗಳಲ್ಲೆಲ್ಲ ಅತಿರೇಕವಾದ ಟೀಕೆಗಳಾಗಿದ್ದುವು. ಆದರೆ ಈತನಕ [illegible] ಕಾನೂನು ಉಂಟಾಗದಿರುವಲ್ಲಿ ರೈತರ [illegible] ಸಂಕಷ್ಟಗಳು ನಿವಾರಣೆ [illegible] ಮಂತ್ರಿಮಂಡಲದಲ್ಲಿದ್ದುದರಿಂದ ಇನ್ನು ಪರಿಗಣಿಸಲೇ ಇಲ್ಲ. ವಿಮೋಚನೆಗಾಗಿ ಮಾಡಿರುವ ನಿಯಮಗಳ ಕೆಲವು ಕಡೆ ಸಾಕಷ್ಟು ದೂರಹೋಗವು, ಇನ್ನಷ್ಟು [illegible] ದಾಟಿನಲ್ಲೇ ಉಳಿದಿದೆ. ಇಳಿಸಿದ ಸಾಲವನ್ನು ಕೊಡುವ ಶಕ್ತಿ ರೈತನಲ್ಲಿ ಸಾಮರ್ಥ್ಯವೂ ಅನುಕೂಲತೆಗಳೂ ಉಂಟಾಗುವಂತೆ ಮಾಡಿರುವುದೇನೂ ಇಲ್ಲ. ಈ ಬಗೆಯ ಕಾನೂನು ಇರುವುದರಿಂದ ಇನ್ನು ರೈತನಿಗೆ ಸಾಲ ದೊರೆವುದೂ ಸುಲಭವಾಗಲಾರದೆಂಬ ಅಂಜಿಕೆ ಇದೆ.

ಸಾಂಪತ್ತಿಕ ದುರ್ಗತಿಯುದ್ದ ವರ್ಗಗಳು, ಮತ್ತು ಹಾಗಿಲ್ಲದ ವರ್ಗಗಳು ಎಂಬೊಂದು ಭೇದವನ್ನು ಕಲ್ಪಿಸಿ, ದಾಮದುಪ್ಪಟ ಕ್ರಮವನ್ನು ಅಂಗೀಕರಿಸಿರುವುದೂ ಏನೋ ಒಂದು ಮಾಯಾ ಚಿತ್ರದಂತಿದೆ. 1927ನೇ ಇಸ್ವಿಯಲ್ಲಿ ಸಾಲ ಕೊಟ್ಟು ಸೇಕಡಾ 10ರ ಬಡ್ಡಿಯನ್ನು ಕ್ರಮವಾಗಿ ವಸೂಲ್ಮಾಡಿಕೊಂಡವನು ಗೆದ್ದವನಾ ಹಾಗೂ 1917ನೇ ಇಸ್ವಿಯಲ್ಲಿ ಸಾಲಕೊಟ್ಟು ಸೇಕಡಾ 10ರ ಬಡ್ಡಿಯನ್ನು ಪಡೆದವನು ಸೋಲುವನು. 1917-'27ರಲ್ಲಿ ಜೀನಸು ಧಾರಣೆ ಏಂದ್ರಿತಾದರೂ, ಅದು ಲೆಕ್ಕಕ್ಕಿಲ್ಲ.

ಹಾಲಿ ಬಾಕಿಯಿರುವ ಗೇಣಿಯನ್ನು ಕೆತ್ತಲ್ಲದೆ ಹಿಂದಣ ಬಾಕಿಗೆ ರಿಯಾಯಿತಿ ಸಿಗಲಾರದೆಂಬುದರಿಂದ ಸದ್ಯದ ಗೇಣಿ ತೆರುವವರಿದ್ದಾರು, ಇಳಿಸಿದ ಸಾಲವನ್ನು ತೆರಲು ಮತ್ತೆ ಅವರು ಪ್ರಯತ್ನ ಮಾಡುವರೇ, ಅಥವಾ ಕಂದಾಯವನ್ನು ಸರಕಾರವು ಇಳಿಸೀತೇ? ಎಂಬುದು ಸ್ಪಷ್ಟವಾಗಿಲ್ಲ.

ಬೆಂಕುಗಳಿಗೆ ಸಲುವ ಸಾಲಗಳ ವಿಷಯದಲ್ಲಿ ಮಂತ್ರಿಯವರೇ ಮೂರು ದಿನಗಳೊಳಗೆ ನಾಲ್ಕಾರು ಸಲ ತಮ್ಮ ಅಭಿಪ್ರಾಯ ಬದಲಾಯಿಸಿದರು. ಹೊಸ ಹೊಸ ಆತಂಕಗಳು ತೋರಿದಂತೆ, ನವನವೀನ ತಿದ್ದುಪಾಟುಗಳಾದುವು. ಮಂತ್ರಿಗಳ ಸೆಕ್ರೆಟರಿಯವರೇ ಕೆಲ ತಿದ್ದುಪಡಿಗಳನ್ನು ಸೂಚಿಸಿದ್ದುದರಿಂದ, ಕಾಂಗ್ರೆಸ್ ಪ್ರತಿನಿಧಿಗಳಲ್ಲಾದರೂ ಈ ಬಿಲ್ಲಿನ ವಿಷಯವಾಗಿ ಐಕ್ಯಾಭಿಪ್ರಾಯವಿದ್ದಿಲ್ಲ ಎನ್ನಬೇಕು.

ಸಾಲ ಕೊಟ್ಟವನ ಮತ್ತು ಪಡೆದವನ ಮನಸ್ಸುಗಳಿಗೆ ತೃಪ್ತಿಯಾಗುವ ಹಾಗೆ, ಈ ಕಾನೂನಿನಲ್ಲಿ ಇನ್ನೆಷ್ಟೋ ಬದಲಾವಣೆಗಳಾಗಲು ಅವಕಾಶವಿದೆ. ರೈತರಿಗೆ ರಿಯಾಯಿತಿ ತೋರಿಸಬೇಕೆಂದು [illegible] ದಕ್ಷಿಣ ದೃಷ್ಟಾಂತ ಮಂತ್ರಿಗಳ ಅಧಿಕ ಬೆಂಬಲದಿಂದ ಸಂಧಿಸಿದರು. [illegible] ಇನ್ನು ಇಷ್ಟು ಧೈರ್ಯಕ್ಕಾಗಿ ಅವರನ್ನು ವಂದಿಸಬೇಕಾದ, ಆದರೆ ಕಾನೂನಿನಲ್ಲಿ ತೋರಿದ ನ್ಯೂನತೆಗಳ [illegible] ಅವನ್ನು ತ್ವರೆಯಲ್ಲಿಯೆ ತಿದ್ದಬೇಕಾದ್ದು ಪ್ರಾಪ್ತವಾಗಿದೆ.

### ಮಿ॥ ಜಿನ್ನಾರವರು

ಸಭೆಯಲ್ಲಿ ಸುಮಾರು 20000 ಜನ ಮುಂದೆ [illegible] ಹೇಳಿಕೆಯನ್ನು [illegible] ಮಂತ್ರಿಗಳ [illegible] ಹೋಗಿ [illegible] ಈಗಲೇ ತಿಳಿಯಬೇಕಾದ [illegible] ಶಿಕ್ಷಣ [illegible] ಸಾಂಪತ್ತಿಕ [illegible] ಕೆಳತರಗತಿಯಲ್ಲಿ [illegible] ಗೌರವ [illegible] ಆಗ್ರೆಸ್ಸರೂ [illegible] ಹೇಳಿಕೆ [illegible] ಅನುಭವವಿಂದ ಹೇಳಬಹುದು. [illegible] ಇಷ್ಟು [illegible] ಕೇಳಿದರೆ, ಅದೂ ಅಷ್ಟೇ [illegible] ಮುಸ್ಲಿಮ್ ಲೀಗಿನ [illegible] ಸಹಕಾರಮಾಡಲು [illegible] ಉನ್ನತಿಗೆ [illegible] ಈಗ ಪೆಲೆಸ್ಟೀನ ವಿಚಾರವಾಗಿಯೂ ಕಾಂಗ್ರೆಸ್ಸಿನ ವಿಚಾರವಾಗಿ [illegible] ಮಾಡಬಹುದೋ ಅದನ್ನು ಹೇಳುವೆನು.

### ಮಿ॥ ನೂರಿಯವರು (ಬೊಂಬಾಯಿಯ ಮಂತ್ರಿಯವರು)

ಅವರ ಬೊಂಬಾಯಿಯಲ್ಲಿ [illegible] ಬೊಂಬಾಯಿ [illegible] ಸಭೆಯಲ್ಲಿ ಭಾಷಣ ಮಾಡುತ್ತ [illegible] ಮುಸ್ಲಿಮರಿಗೆ [illegible] ಸ್ವಾತಂತ್ರ್ಯಕ್ಕಾಗಿ [illegible] ಕಾಂಗ್ರೆಸ್ ನಡಿಸುವಲ್ಲಿ ತಮ್ಮ ಸಂಸ್ಕೃತಿಯೂ ಮತವೂ ಹೋಯಿತೆಂದು, ಮಿಥ್ಯಾವಾದ ಹೇಳುವವರನ್ನು ನಂಬದಿರಿ. ಮುಸ್ಲಿಮರ ಧರ್ಮವನ್ನು ಕುಂದಿಸುವುದಕ್ಕೆ ಯಾವುದಕ್ಕೂ ಶಕ್ತಿಸಾಲದು. ಪ್ರಜಾಸತ್ತೆ ಸಮಾನವಾದ ಇವನ್ನೆ ಆಧರಿಸಿ ಇಸ್ಲಾಂ ಮತ ಇರುವುದು. ಕೆಲವರು ಸ್ವಾರ್ಥ ಸಾಧನೆಗಾಗಿ, 'ಇಸ್ಲಾಂ ಹೋಗುವುದಲ್ಲಾ' ಎನ್ನುವ ವ್ಯರ್ಥಾಲಾಪ ಮಾಡುತ್ತಿರುವರು. ಇಷ್ಟು ದೊಡ್ಡ ಮತ್ತೊಂದು ಸುಳ್ಳಿಲ್ಲ. ಮುಸ್ಲಿಮರು ಅದುದರಿಂದ ಕಾಂಗ್ರೆಸ್ಸು ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ ಅದನ್ನೆ ಸೇರಬೇಕು ಎಂದರು.

### ಜಪಾನಿನ ಭಯಪ್ರದರ್ಶನ

ಇಂಗ್ಲೆಂಡಿಗೂ ಜಪಾನಿಗೂ ಯುದ್ಧವಾದರೆ ಇಂಡಿಯವು ಏನು ಮಾಡೀತು? ಶ್ರೀ ಎಫ್. ಇ. ಜೇಮ್ಸ್‌ರವರ ಅಭಿಪ್ರಾಯ ಹೇಳಿದಂತೆ, ಪೂರ್ವಭೂಭಾಗದಲ್ಲೆಲ್ಲ ಮುಂದಾಳಾಗಲು ಜಪಾನು ಯುದ್ಧ ಹೂಡಬಹುದು. ಶ್ರೀ ಸುಭಾಷಚಂದ್ರರು ನಾವೆಲ್ಲ ದೇಶರಕ್ಷಣೆ ಮಾಡಲು ತರಬೇತು ಹೊಂದುವುದು ಅಗತ್ಯವೆನ್ನುವರು. ಪರಕೀಯರು ಸ್ವದೇಶವನ್ನು ನುಗ್ಗುವಾಗ, ಅವರನ್ನು ಎದುರಿಸಲು ಸಾಕಷ್ಟು ಬಲವು ನಮ್ಮಲ್ಲಿರಲೇಬೇಕು. ಆ ಬಲವು ಇನ್ನಷ್ಟು ವೃದ್ಧವಾಗಬೇಕಾದರೆ ನಮ್ಮಲ್ಲಿ ಏಕೀಭವವಾದ ದೇಶಭಕ್ತಿಯಿರಬೇಕು. ಜಪಾನು ಈಗ [illegible] ರಾಷ್ಟ್ರಗಳೊಡನೆ ವಿಶೇಷವಾದ ಸ್ನೇಹವನ್ನು ಬೆಳೆಸಲಿಚ್ಛಿಸಿರುವುದೆಂದೂ, ಚೀನಕ್ಕೆ ಯುದ್ಧೋಪಕರಣಗಳನ್ನು ಒದಗಿಸುವುದನ್ನು ಇಂಗ್ಲೆಂಡು ತಡೆಯದಿದ್ದರೆ ಇಂಗ್ಲೆಂಡಿನ ಮೈತ್ರಿಯ [illegible] ಜಪಾನು ಎನ್ನುತಿದೆ. ಚೀನದಲ್ಲಿ ಗೆದ್ದ ಬಳಿಕ ಇಂಡಿಯಾ ಕಡೆಗೆ ಸವಾರಿಯೇ?

ಶ್ರೀ ವಲ್ಲಭಭಾಯಿ ಪಟೇಲ್

## ಕಾಂಗ್ರೆಸ್ಸು ಮತ್ತು ಫೆಡರೇಶನು

### ವಾರ್ಧಾದಲ್ಲಿ ನಾಯಕರ ಸಭೆ

ಶ್ರೀಗಳಾದ ರಾಜಾಜಿ [illegible] ಸರದಾರ್ ವಲ್ಲಭಭಾಯಿ ಪಟೇಲ್ [illegible] ಭೂಲಾಭಾಯಿ ದೇಸಾಯಿ [illegible] ಜವಾಹರಲಾಲ [illegible] ವಾರ್ಧಾದಲ್ಲಿ [illegible] ಕಾಂಗ್ರೆಸ್ [illegible] ಶ್ರೀಗಳಾದ [illegible] ಫೆಡರೇಶನ [illegible] ಕಾಂಗ್ರೆಸ್ [illegible] ಮನೋಭಾವದ ವಿಚಾರವೆತ್ತಿ [illegible] ಬರುತ್ತದೆ. ಫೆಡರೇಶನನ್ನು ವಿರೋಧಿಸುವ ಕುರಿತು ಈ ಸಭೆಯಲ್ಲಿ ಚರ್ಚೆಸಾಗಿತ್ತು ಎಂದು ತಿಳಿದ ಬರುತ್ತದೆ.

ಮಹಾತ್ಮಾಜಿಯವರು

ಈ ವಾರ್ಧಾ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಏಳು ಕಾಂಗ್ರೆಸ್ ಪ್ರಾಂತ್ಯಗಳ ಮಂತ್ರಿಗಳು ಮಾಡಿದ ಕೆಲಸವು ವಿಮರ್ಶಿಸಲಾಗುವುದಲ್ಲದೆ, ಹರಿಪುರ ಕಾಂಗ್ರೆಸ್ಸಿನಲ್ಲಿ ಆಗಬೇಕಾದ ಠರಾವುಗಳ ರಚನಾ ಕೆಲಸವೂ ನಡೆಯುವುದೆಂದು ತಿಳಿದುಬರುತ್ತದೆ.

### ಹಿಂದೀಯರಿಗೆ ಸಂಗ್ರಾಮ ತರಬೇತು

ಈ ಕುರಿತು ಠರಾವೊಂದು ಬಂಗಾಳದ ಎಸೆಂಬ್ಲಿಯಲ್ಲಿ ಚರ್ಚಿಸಲಾಯಿತು. ಹಿಂದೀಯರಲ್ಲಿ ಸಂಗ್ರಾಮ ಯೋಗ್ಯತೆಯಿಲ್ಲದಿರುವುದರಿಂದ, ಅನ್ಯ ಜನಾಂಗಿಕರ ಆಕ್ರಮಣಗಳನ್ನು ತಡೆಯುವರೆ ನಮಗೆ ಅಸಾಧ್ಯವಾದುದರಿಂದ, ನಾವು ಸ್ವಾತಂತ್ರ್ಯಕ್ಕೆ ಅರ್ಹರಲ್ಲವೆಂದು ಬ್ರಿಟಿ

ನವರಾಷ್ಟ್ರಪತಿ—ಸುಭಾಷ್ಚಂದ್ರಬೋಸರು

ಷರು ಹೇಳುತ್ತಿರುತ್ತಾರಲ್ಲದೆ, ಹಿಂದೀಯರನ್ನು ಸಂಗ್ರಾಮ ಶೂರರನ್ನಾಗಿ ಮಾಡಲು [illegible] ಕಾರ್ಯಸಂಧಿನೆ ಮಾಡಲಿಲ್ಲ. [illegible] ಬದಲಾಗಿ ಅವರ ಹಿಂದೀಯರು [illegible] ತರಬೇತು [illegible] ಅಭಿಪ್ರಾಯಗಳ ಈ ಚರ್ಚೆಯಲ್ಲಿ [illegible] ಸ್ವಾತಂತ್ರ್ಯದಲ್ಲಿ [illegible] ಈ ವೇಳೆಯಲ್ಲಿ ಹಿಂದೀಯರು ತಮ್ಮ ರಕ್ಷಣೆಗಾಗಿ ಸಿದ್ಧವಾಗಬೇಡವೆ? ಹಿಂದೀಯರು ಬೇಗನೆ ತಮ್ಮ ರಕ್ಷಣಾಕಾರ್ಯವನ್ನು ತಾವೇ ಹೊರ [illegible] ತರಬೇತಿನ ವ್ಯವಸ್ಥೆಯೂ [illegible]

### ಬೇಲೂರಿನಲ್ಲಿ ರಾಮಕೃಷ್ಣ ದೇವಾಲಯ

ಕಲ್ಕತ್ತದ ಬೇಲೂರಿನಲ್ಲಿ ಶ್ರೀರಾಮಕೃಷ್ಣ ದೇವಾಲಯದ ರಚನೆಗಾಗಿ 7 ಲಕ್ಷ ರೂಗಳ ಧನಸಹಾಯ [illegible] ವಿವೇಕಾನಂದ [illegible] ಮಿಸೆಸ್ ಫ್ರೊಸ್ಟ್ [illegible] ಸ್ವಾಮಿ [illegible] ಆ ದೇವಾಲಯವು [illegible] ಶ್ರೀ ರಾಮಕೃಷ್ಣ ವಿವೇಕಾನಂದರ ಸಂದೇಶದ ಕುರುಹೆಂದೂ, ಅಭಿಪ್ರಾಯಪಟ್ಟ ಸ್ವಾಮಿ [illegible] ಅಭಿಪ್ರಾಯ ಪಟ್ಟು [illegible] ಉತ್ತರವಾಗಿ [illegible]

### ಮಂತ್ರಿಮಂಡಲಗಳಿಗೆ ಸೌಮ್ಯವಾದಿಗಳ ಕರೆ

[illegible] ಸೌಮ್ಯವಾದಿಗಳ ಸಭೆಯಲ್ಲಿ [illegible] ಫೆಡರೇಶನ್ ಯೋಜನೆ [illegible] ಕಾಂಗ್ರೆಸ್ ಮಂತ್ರಿ [illegible] ಜನಾಂಗವೂ ಅದನ್ನು ವಿರೋಧಿಸಿ [illegible] ಯೋಜನೆಗಳಿಗಬೇಕೆಂದೂ, [illegible] ನಡೆಯು [illegible] ರಾಜಕೀಯ ಕೈದಿಗಳನ್ನು ಇನ್ನು ಕಾಲವಿಳಂಬ ಮಾಡದೆ ವಿಮೋಚನೆಗೊಳಿಸಬೇಕೆಂದೂ [illegible]

### ಮಹೋದಯ ಯೋಗ

[illegible] ಮಹೋದಯ ಯೋಗದ ಸಮಯ ಪವಿತ್ರವಾದ ಗಂಗಾ ಯಮುನಾ ಸಂಗಮ ಕ್ಷೇತ್ರದಲ್ಲಿ ಸ್ನಾನವಾಡಲು ಅಲ್ಲಹಾಬಾದಿನಲ್ಲಿ ಸಾಧಾರಣ ೫೦ ಲಕ್ಷ ಯಾತ್ರಿಕರು ಕೂಡಿ ಬಂದಿದ್ದರೆಂದೂ, ಈ ಮಹೋದಯ ಮೇಳದಲ್ಲಿ ಗಡಿನಾಡಿನಿಂದ ಹಿಂತಿರುಗಿದ ರಾಷ್ಟ್ರಪತಿ ನೆಹರೂರವರು ಕೂಡ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ. ಕಠಿಣವಾದ ಚಳಿಯಿದ್ದಾಗ್ಯೂ ಕೂಡ ಜನರು ಭಕ್ತಿಯಿಂದ ಕೂಡಿದವರಾಗಿ ಈ ಮೇಳದಲ್ಲಿ ಕೂಡಿ ಬಂದಿದ್ದರು.

# ಮಂಗಳೂರು.

## ಚೆಟ್ಟೂರವರ ಸ್ಮಾರಕ ನಿಧಿ.

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಭೆಯೊಂದರಲ್ಲಿ 'ಕಾಲೇಜ್ ಡೇ' ಆಚರಣೆ ದಿವಸ, ದಿವಂಗತ ಚೆಟ್ಟೂರರ ಸ್ಮಾರಕನಿಧಿಗೆಂದೊಂದು ನಾಟಕ ಪ್ರದರ್ಶನವನ್ನೇರ್ಪಡಿಸಬೇಕೆಂಬ ಠರಾವು ಮಾಡಲಾಗಿತ್ತು. ಇಂತಹ ಠರಾವುಗಳನ್ನು ಅನೇಕ ಕಡೆಗಳಲ್ಲಿ ಅನೇಕ ರೀತಿಯಲ್ಲಿ ಮಾಡಿಕೊಂಡಿದ್ದರೂ, ಹೆಚ್ಚಿನ ಕಡೆಗಳಲ್ಲಿ ಠರಾವುಗಳು ಗುಂಡಾಟ್ಟದೆ ಇವೆ. ಅದೇ ರೀತಿಯಲ್ಲಿ ಇಲ್ಲಿಯೂ ಆಗಬಾರದೆಂದೇ ನಮ್ಮಲ್ಲಿ ಹೆಚ್ಚಿನವರ ಆಸೆ. ಆದರೆ ಇಷ್ಟರ ವರೆಗೆ ಸ್ಮಾರಕ ನಿಧಿಯ ನಾಟಕವಾಗುವ ಆಶಾದಾಯಕ ಚಿಹ್ನೆಯೊಂದು ಯಾವ ಕಡೆಯಿಂದಲೂ ತೋರಿಬರುವುದಿಲ್ಲ. ಈ ಪುಣ್ಯಕಾರ್ಯಕ್ಕೆ ಶ್ರೀಮಾನ್ ಎಸ್. ಎನ್ ಹೊಳ್ಳರು ಸಂಚಾಲಕ (Convenor)ರಾಗಿ ಚುನಾಯಿಸಲ್ಪಟ್ಟಿರುವರು. ಅವರಿಗೆ ಅಖಿಲ ಭಾರತ ಚಟುವಟಿಕೆಗಳಲ್ಲಿ ಭಾಗವಹಿಸಲು ಹರಿಪುರಕ್ಕೆ ಹೋಗುವ ಸಂದರ್ಭವೊದಗಿದೆಯೆಂದು ಪ್ರಚಾರವಾಗಿದೆ. ಈ ತಿಂಗಳು ಹೋದರೆ ಏಪ್ರಿಲ ತಿಂಗಳಲ್ಲಿ ಪರೀಕ್ಷೆಯ ಗಲಾಟೆ. ನಂತರ ರಜಾಕಾಲ. ಅದ ನಂತರ ಮಳೆಗಾಲ. ಆದುದರಿಂದ ತಕ್ಕುದಾದ ಸಮಯವು ಈ ತಿಂಗಳೇ ಆಗಿರುವಾಗ ಇನ್ನೂ ಸಂಬಂಧಪಟ್ಟವರ ಕಡೆಯಿಂದ ಮೌನವೇ ತೋರಿಬಂದರೆ ವರುಷದ ಗುರಿಯನ್ನು ತಲಪುವುದೆಂತು? ನಾವು ಆರಂಭಶೂರರೆನಿಸಿಕೊಳ್ಳಲಾರೆವೇ? ಆಯ್ಯಾ ಸ್ವದೇಶಾಭಿಮಾನಿಯೇ ಸೀನಾದರೂ ಇವರನ್ನು ಎಚ್ಚರಿಸಬಾರದೇ?

'ಚೆಟ್ಟೂರರ ಶಿಷ್ಯ'

## ಮಹಾ ಶಿವರಾತ್ರೆ

ನಡೆಯುವ ಗೋಕರ್ಣ ಜಾತ್ರೆಗೆ ಹೋಗುವವರ ಅನುಕೂಲಕ್ಕಾಗಿ, ಬೊಂಬಾಯಿ ಸ್ಟೀಮ ನೇವಿಗೇಶನ್ ಕಂಪೆನಿಯವರು, ಫೆಬ್ರುವರಿ ೨೫ ತಾರೀಕು ಶುಕ್ರವಾರ, ಮಾರ್ಚ ೨ ನೆ ಮಂಗಳವಾರ ಮತ್ತು ಮಾರ್ಚ ೪ ಶುಕ್ರವಾರ, ಈ ದಿವಸಗಳಲ್ಲಿ ಮಂಗಳೂರು ಬಂದರದಿಂದ ಸ್ಟೀಮರುಗಳನ್ನು ಬಿಡುವ ವ್ಯವಸ್ಥೆ ಮಾಡಿರುವರಾಗಿಯೂ, ರಿಯಾಯತಿ ದರಗಳ ಏರ್ಪಾಡು ಮಾಡಿರ್ವುದಾಗಿ ಈ ಕಂಪೆನಿಯ ಸ್ಥಳೀಯ ಆಫೀಸಿನವರು ತಿಳಿಸುತ್ತಾರೆ.

## ಕೃತಕ ಅಸೆಂಬ್ಲಿ.

ಸೈಂಟ್ ಅಲೋಶಿಯಸ್ ಕಾಲೇಜಿನ ಯೂನಿಯನಿನ ಕೃತಕ ಅಸೆಂಬ್ಲಿಯ ಸಭೆಯೊಂದು ಕಳೆದ ಶುಕ್ರವಾರ ದಿವಸ ಇಂಗ್ಲಿಷ್ ಲೆಕ್ಚರರಾದ ಶ್ರೀ ಮೆಥ್ಯೂ ಫೋಲೊಕರ ಅಧ್ಯಕ್ಷತನದಲ್ಲಿ ಜರಗಿ, ಪ್ರಶ್ನೋತ್ತರ ಇತ್ಯಾದಿಗಳು ನಡೆದು, ಹಿಂದೂದೇಶದಲ್ಲಿ ಸೌಮ್ಯವಾದದ ಮೊದಲು ಸ್ವರಾಜ್ಯ ಬರಬೇಕು ಎಂಬ ವಿಷಯ ಚರ್ಚೆ ನಡೆಯಿತು. ಸ್ವರಾಜ್ಯ ಸ್ಥಾಪನೆಯ ದೃಷ್ಟಿಯಿಂದ, ಸೌಮ್ಯವಾದ ಇತ್ಯಾದಿ ಎಲ್ಲಾ ವಿಷಯಗಳನ್ನು ಬದಿಗಿಡಬೇಕಾಗಿ, ಇತ್ಯಾದಿ ಠರಾವ ಅಭಿಪ್ರಾಯಪಟ್ಟ ಅನೇಕರು ಭಾಷಣವಿತ್ತರು. ಈ ಠರಾವನ್ನು ವಿರೋಧಿಸಿ ಅನೇಕರು ಭಾಷಣವಿತ್ತರು. ಆವರೆ ಯಾವುದೆಂದು ಇತ್ಯರ್ಥವಾಗದೆ ಸಭೆಯು ಮುಕ್ತಾಯವಾಯಿತು.

## ಕೆನರಾ ಗರ್ಲ್ಸ ಸ್ಕೂಲ್ ಡೇ

ಸ್ಥಳೀಯ ಕೆನರಾ ಗರ್ಲ್ಸ್ ಸ್ಕೂಲಿನ ಹಳೆ ವಿದ್ಯಾರ್ಥಿನಿಯರ ದಿನ ಮತ್ತು ವಾರ್ಷಿಕೋತ್ಸವವು ಕಳೆದ ಶನಿವಾರ ಮತ್ತು ಆದಿತ್ಯವಾರ ದಿವಸಗಳಲ್ಲಿ ನಡೆದುವು. ಶನಿವಾರ ದಿವಸ ಬೆಳಿಗ್ಗೆ ಹಳೆ ವಿದ್ಯಾರ್ಥಿನಿಯರ ಬಗ್ಗೆ ಆಟಗಳು ನಡೆದು ಮಧ್ಯಾಹ್ನ ಔತಣ ಕೂಟ ನಡೆದು, ಸಂಜೆಯಲ್ಲಿ ಆಟಗಳಲ್ಲಿ ಗೆದ್ದವರಿಗೆ ಇನಾಮ ಹಂಚೋಣವು ನಡೆದ, ಅಂದಿನ ಕಾರ್ಯಕಲಾಪಗಳು ಮುಗಿದವು.

ಆದಿತ್ಯವಾರ ದಿವಸದ ಸಮಾರಂಭವು ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಶ್ರೀಮತಿ ಎಚ್. ಪಿ ಪಿ ರೊಡ್ರಿಗೆಸ್ಸರ ಅಧ್ಯಕ್ಷತನದಲ್ಲಿ ನಡೆಯಿತು. ಶಾಲೆಯ ಹಳೆ ವಿದ್ಯಾರ್ಥಿನಿಗಳಾದ ಶ್ರೀಮತಿ ಸುಶೀಲಾಬಾಯಿ ನಾಯಕರು ಶಾಲೆಯ ಟೋಸ್ಟನ್ನು ಸೂಚಿಸಿದರು. ನಂತರ, ವಿವಿಧ ವಿನೋದಗಳಿಂದ ಕೂಡಿದ ಕಾರ್ಯಕ್ರಮವು ನಡೆದು ಸಮಾರಂಭವು ಕೊನೆಗೊಂಡಿತು.

## ಸ್ಥಾಪನಾಚಾರ್ಯರ ದಿನ:

ಸ್ಥಳೀಯ ಡಿಪ್ರೆಸ್ಡ್ ಕ್ಲಾಸ್ ಮಿಶನಿನ ಸ್ಥಾಪನಾಚಾರ್ಯರ ದಿನಾಚರಣೆಯು ಆದಿತ್ಯವಾರ ದಿವಸ, ಇಂಪೀರಿಯಲ್ ಬ್ಯಾಂಕಿನ ನಿವೃತ್ತ ಸುಪರ್ಇಂಟೆಂಡೆಂಟರಾದ ಶ್ರೀ ಎಮ್. ಅಣ್ಣಪ್ಪನವರ ಅಧ್ಯಕ್ಷತನದಲ್ಲಿ ಜರಗಿತು. ಪ್ರಾರ್ಥನೆಯೊಂದಿಗೆ ಸಮಾರಂಭವು ಪ್ರಾರಂಭವಾಗಿ, ದಿವಂಗತ ರಂಗರಾಯರ ಗುಣಕಥನ ಮಾಡಿ, ಶ್ರೀ ಎಮ್. ಎಸ್. ಮಾಧವರಾಯರು ಮೊದಲಾದ ಮಹನೀಯರುಗಳಿಂದ ಭಾಷಣಗಳಾದುವು. ದಿವಂಗತರ ಶ್ಲಾಘನೆ ಮಾಡುತ್ತ ಅಧ್ಯಕ್ಷ ಭಾಷಣದೊಂದಿಗೆ ಸಭೆಯು ಮುಕ್ತಾಯವಾಯಿತು. ಸಾಹುಕಾರ್ ಶ್ರೀ ವೆಂಕಟೇಶ ಪೈ ಮತ್ತು ಶ್ರೀ ದೇವರಾಯರ ಕೃಪೆಯಿಂದಲೂ ಅಂದು ಮಧ್ಯಾಹ್ನ ಮಿಶನಿನ ಶಾಲಾ ಹುಡುಗರ ಔತಣ ಕೂಟವೊಂದು ನಡೆಯಿತು.

## ಹರಿಜನ ಸೇವಕ ಸಂಘ.

ಜಿಲ್ಲಾ ಹರಿಜನ ಸೇವಕ ಸಂಘದ ಕೂಟವೊಂದು ಸ್ಥಳೀಯ ಕಲ್ಚರಲ್ ಕ್ಲಬ್ಬಿನಲ್ಲಿ ಡಾ। ಅಡಪ್ಪರ ಅಧ್ಯಕ್ಷತನದಲ್ಲಿ ನಡೆಯಿತು. ಹರಿಜನ ಸೇವಕ ಸಂಘದ ದಿಲ್ಲಿಯ ಕೇಂದ್ರದವರಿಂದ ಹೊರಟ ಒಂದು ಯೋಜನೆಯ ಪ್ರಕಾರ ಹರಿಜನ ಸೇವೆಗಾಗಿ ಕೆಲಸಗಾರರನ್ನು ಜೀವನಸದಸ್ಯರಾಗಿ ಕೂಡಿಸಿಕೊಳ್ಳುವ ಕುರಿತು ಚರ್ಚಿಸಲಾಗಿ, ಅದು ಈ ಜಿಲ್ಲೆಯಲ್ಲಿ ಸಾಧ್ಯವಿಲ್ಲವೆಂದು ಇತ್ಯರ್ಥವಾಯಿತು.

## ಶೀತಾನದಿಯಲ್ಲಿ ಜಾನುವಾರುಗಳ ಸಂತೆ.

ದಕ್ಷಿಣ ಕನ್ನಡ ಜಿಲ್ಲಾ ಇಕೊನೊಮಿಕ್ ಸಂಘದ ಪರವಾಗಿ ಶೀತಾನದಿಯಲ್ಲಿ ತಾ. ೧೪-೧೫-೧೬ರಲ್ಲಿ ಜಾನುವಾರುಗಳ ಸಂತೆಯೊಂದು ನಡೆಯಿತು. ಸಾವಿರಕ್ಕೆ ಮಿಕ್ಕಿದ ಕೋಣಗಳೂ, ೫೦೦ಕ್ಕೆ ಮಿಕ್ಕಿದ ಕುರಿ ಮತ್ತು ಆಡುಗಳೂ ಸಂತೆಗೆ ಬಂದಿದ್ದವು. ೧೫೦ ಕೋಣಗಳು ಮಾತ್ರ ಮಾರಾಟವಾಗದೆ ಉಳಿದಿದ್ದುವು. ಈ ಸಂತೆಯ ಕುರಿತು ಒಳ್ಳೇ ಜಾಹೀರಾತನ್ನು ನಡೆಸಲು ಹೆಚ್ಚು ಸಮಯ ದೊರಕದ ದೃಷ್ಟಿಯಲ್ಲಿ ಈ ಸಂತೆಯು ಬಹಳ ಯಶಸ್ವಿಯಾಗಿ ನಡೆಯಿತೆನ್ನಬೇಕು. ಒಳ್ಳೇ ಕೋಣಗಳು ಈ ಸಂತೆಗೆ ಬರಲಾಗಿ, ಅವುಗಳಿಗೆ ಒಳ್ಳೇ ಕ್ರಯವು ದೊರಕುತ್ತದೆ. ಜಾನುವಾರು ಮಾರಾಟಗಾರರಲ್ಲಿ ಸಂತೆಯ ಏರ್ಪಾಡಿನಿಂದ ತುಂಬಾ ಸಮಾಧಾನ ಉಂಟಾಗಿತ್ತು. ಈ ಸಂತೆಯ ಜನಜನಿತವಾಗುವಂತೆ, ಉತ್ತಮ ಕೋಣಗಳಿಗೆ ಬಹುಮಾನವಾಗಿ ಕೊಡಲು ರೂ ೨೫-೦-೦ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘದಿಂದ ಸಹಾಯ ಧನವಾಗಿ ದೊರಕಿತ್ತು.

## ಬಂದರದಲ್ಲಿ ಬೆಂಕಿ ಅನಾಹುತ

ನಿನ್ನೆ ಬೆಳಗಿನ ಸಮಯ ಪೋರ್ಟಟ್ರಸ್ಟಿನ ಜೆಟ್ಟಿಯ ಹಿಂಬದಿಯಲ್ಲಿರುವ ಕೋಟೇಶ್ವರ ವಿಠಲ ನಾಯಕರ ಪೋರ್ಟ ಕಿಸ್ಕೊಕೆಂಟ್‌ನಲ್ಲಿ ಉಂಟಾದ ಬೆಂಕಿಯಿಂದ ಹೊಟೇಲಿನ ಕಟ್ಟಡವೂ, ಹತ್ತಿರವಿರುವ ಭಂಡಸಾಲೆಯಿಂದ ಬೆಲ್ಲ ಇಡುವ ಕಟ್ಟಡವೂ ಬೆಂಕಿಗಾಹುತಿಯಾಗಿ ಸುಟ್ಟು ರೂಪಾಯಿ ೫೦೦೦ ಕ್ರಯದ ಸಾಮಾನುಗಳು ಇತ್ಯಾದಿಗಳು ಸುಟ್ಟು ಹೋಗಿವೆ. ಹೊಟೇಲಿನ ಕೆಲಸಗಾರರು ಸರ್ಕಸಿಗೆ ತೆರಳಿದ ವೇಳೆ ಸಾಧಾರಣ ೩ ಗಂಟೆಗೆ ಬೆಂಕಿ ಉಂಟಾದುದೆಂದು ತಿಳಿದುಬರುತ್ತದೆ. ಬೆಂಕಿಯ ಕಾರಣಗಳು ತಿಳಿದುಬರಲಿಲ್ಲ. ವಾರ್ತೆಯು ಪ್ರಥಮವಾಗಿ ಪೋರ್ಟ ಟ್ರಸ್ಟಿನ ಕಾವಲುಗಾರನಿಂದ ಫೋನಿನ ಮೂಲಕ ಪೋರ್ಟ ಆಫೀಸರರಿಗೆ ತಿಳಿದುಬರಲು, ಅವರದನ್ನು ಪೋರ್ಟ ಮೂಲಕ ಪೋಲೀಸ್ ಸುಪರಿಂಟೆಂಡೆಂಟರಿಗೆ ತಿಳಿಸಿ, ಅನಾಹುತದ ಕಡೆಗೆ ಕ್ಷಣಮಾತ್ರದಲ್ಲಿ ಧಾವಿಸಿದರು. ಅಷ್ಟರೊಳಗೆ ಪೋಲೀಸ್ ಸುಪರಿಂಟೆಂಡೆಂಟರು ರಿಜರ್ವ ಪೋಲೀಸ್ ಫೌಜಿನೊಂದಿಗೆ ಅಲ್ಲಿ ಬಂದು ಬೆಂಕಿಯನ್ನು ಕಡೆಯುವ ಕಾರ್ಯದಲ್ಲಿ ತೊಡಗಿದ್ದರು. ಪೋರ್ಟ ಆಫೀಸರ ಮತ್ತು ಪೋಲೀಸ್ ಸುಪರಿಂಟೆಂಡೆಂಟರ ಮತ್ತು ಪೋಲೀಸರ ಸಾಹಸದಿಂದ ಬೆಂಕಿಯು ಇತರ ಕಟ್ಟಡಗಳಿಗೆ ಹರಡದಂತೆ ತಡೆಯಲಾಯಿತು. ಪೋಲೀಸರು ಸಾಧಾರಣ ಬೆಳಿಗ್ಗೆ ೭ ಗಂಟೆ ತನಕ ಪರಿಶ್ರಮಿಸಿರುವರಾಗಿ ತಿಳಿದುಬರುತ್ತದೆ. ನಮ್ಮ ನಗರ ಸಭೆಯವರು ~~ಬೆಂಕಿ ಆರಿಸುವ~~ ಇಂಜಿನನ್ನು ಇಡುವ ವ್ಯವಸ್ಥೆಯನ್ನು ಇನ್ನಾದರೂ ಮಾಡಬಾರದೆ?

## ಅಪಘಾತ

ಉಳ್ಳಾಲದ ಹತ್ತಿರ ಮಾಗುವೊಂದು ಓಡುವ ಟ್ರೈನಿನ ಅಡಿಯಲ್ಲಿ ಬಿದ್ದು ಮೃತವಾಗಿರುವುದೆಂದು ವಾರ್ತೆ ಬಂದಿದೆ.

## ಮಂಗಳೂರು ರಥೋತ್ಸವ.

ಮಂಗಳೂರು ಶ್ರೀ ವೆಂಕಟ್ರಮಣ ದೇವಾಲಯದ ರಥೋತ್ಸವದ ಸಮಾರಂಭವು ಧ್ವಜಾರೋಹಣದೊಂದಿಗೆ ನಿನ್ನೆಯಿಂದ ಪ್ರಾರಂಭವಾಗಿರುತ್ತದೆ. ಇದೇ ತಿಂಗಳ ತಾ ೬ರಲ್ಲಿ ರಥಾರೋಹಣವು ನಡೆಯುವುದು.

## ಹೊಸ ಟ್ರಸ್ಟಿ ಮಂಡಳ.

ಮಂಗಳೂರು ಶ್ರೀ ವೆಂಕಟ್ರಮಣ ದೇವಾಲಯದ ಮೊಂಟಿನ ಟ್ರಸ್ಟಿ ವರ್ಗವು ತಮ್ಮ ಹುದ್ದೆಗೆ ರಾಜಿಯಿತ್ತು, ಅವರ ಬದಲಿಗೆ ಸ್ಥಳೀಯ ಪ್ರಸಿದ್ಧ ವ್ಯಕ್ತಿಗಳಾದ ಶ್ರೀಮಾನ್ ಎಂ. ಪದ್ಮನಾಭ ರಘುನಾಥ ಪೈಗಳವರು ಶ್ರೀಮಾನ್ ಎಂ. ವೆಂಕಟೇಶ ಪೈಗಳವರು, ಶ್ರೀಮಾನ್ ಎ ದಾಮೋದರ ಪೈಗಳವರು, ಇರುವ ಟ್ರಸ್ಟಿ ಮಂಡಳವು ರಚನೆಯಾಗಿರುವುದೆಂದು ತಿಳಿದು ಬರುತ್ತದೆ. ಈ ಟ್ರಸ್ಟಿ

# ತಾಲೂಕುಗಳಿಂದ

## ಮೂಡಬಿದ್ರೆ:

ಮೂಡಬಿದ್ರಿ ಉಪಾಧ್ಯಾಯರ ಸಂಘದ ಅಸೋಸಿಯೇಶನ ಸಾಮಾನ್ಯ ಸಭೆಯು ಇದೇ ಫೆಬ್ರವರಿ ತಾ ೬ರಲ್ಲಿ ತಾಲ್ಲೂಕ ಬೋರ್ಡ ಶಾಲಾ ಹೆಡ್ಮಾಸ್ತರರಾದ ಮ. ರಾ. ಶ್ರೀ ಪಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ದಿಗಂಬರ ಜೈನ ಹೈ ಎ ಶಾಲಾ ಹೋಲ್ ಕಟ್ಟೋಣದಲ್ಲಿ ಜರಗಿತು. ಸಂಘದ ೩೩ ಮೆಂಬರರ ಪೈಕಿ ೧೩ ಮಂದಿ ಹಾಜರಿದ್ದರು. ಗುಲಾಬ್ ಬಾವದ ಟೈಲ್ ಶಾಲಾ ಹೆಡ್ಮಾಸ್ತರರಾದ ಮ. ರಾ. ರಾ. ಜೆ. ಎಸ್. ಪಕೀರರು ಅನೇಕ ಕ್ಲಾಸಿನ ಮಕ್ಕಳಿಗೆ ಭೂಮಿಯು ದುಂಡಗಿರುವ ವಿಷಯ ಪಾಠದ ಪಾಠವನ್ನು ಕೊಟ್ಟರು. ಬರುವ ಸಭೆಯು ಫೆಬ್ರುವರಿ ೧೯ಕ್ಕೆ ಬೋರ್ಡ ಶಾಲೆಯಲ್ಲಿ ಜರುಗಿಸಲ್ಪಡುತ್ತದೆ.

ಅದೇ ದಿನ ರಾತ್ರಿ ಮಿತ್ರ ಹೊಸ ಶಾಲಾ ಕಟ್ಟೋಣದಲ್ಲಿ ಗುರುಪುರ ಶ್ರೀ ವರದರಾಜ ನಾಟಕ ಸಭೆಯವರು 'ಚಕ್ರವ್ಯೂಹ' ಎಂಬ ಪೌರಾಣಿಕ ನಾಟಕವನ್ನು ಗರ್ಲ್ಸ ಹಿಂದೂ ಹಾ. ಎ ಶಾಲಾ ಪ್ರೋತ್ಸಾಹಕ್ಕೆ ಅಭಿನಯಿಸಲ್ಪಟ್ಟಿತು. ಸುಬ್ರಹ್ಮಣ್ಯಗಾನವೂ ನೇತ್ರಾಕರ್ಷಕ ದೃಶ್ಯಗಳೂ ಇದ್ದವು. ಶ್ರೀ ಕೃಷ್ಣನ ಮತ್ತು ಅರ್ಜುನನ ಪಾತ್ರಗಳು ಬಹುಸೊಗಸಾಗಿದ್ದುವು.

## ಬಂಟ್ವಾಳ:

ಕಳೆದ ತಾ ೩೦ ಜನವರಿಯ ಆದಿತ್ಯವಾರ ಇಲ್ಲಿಯ ಪೆಡರಲ್ ಯೂನಿಯನ್ ಕ್ಲಬ್ಬಿನ ವರ್ಧಂತ್ಯುತ್ಸವವು ಮ. ರಾ. ರಾ. ಜಗನ್ನಾಥರಾಯರು ಸಬ್ ಕಲೆಕ್ಟರ್, ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಮೊದಲು ಉಪಾಹಾರ, ಗಾಯನ, ಮೊದಲಾದ ಕಾರ್ಯಕ್ರಮಗಳಾದ ನಂತರ, ಅಧ್ಯಕ್ಷರು ಇಂದಿನ ದಿನಗಳಲ್ಲಿ ಕ್ಲಬ್ಬುಗಳ ಅವಶ್ಯಕತೆಯ ಕುರಿತು ವ್ಯಾಖ್ಯಾನ ಮಾಡಿದುದಲ್ಲದೆ ಇಂತಹ ಕ್ಲಬ್ಬುಗಳಲ್ಲಿ ಆಗಬೇಕಾದ ಸುಧಾರಣೆಗಳ ಕುರಿತೂ ಸಲಹೆ ಸೂಚನೆಗಳನ್ನು ಸಭಿಕರ ಮುಂದಿಟ್ಟರು. ಕ್ಲಬ್ಬಿನ ಅಧಿಕಾರಿಗಳು ತಮ್ಮ ವರದಿಯಲ್ಲಿ ಪ್ರಕಟಿಸಿದ ಸೂಚನೆಗಳನ್ನು ಅಧ್ಯಕ್ಷರು ಸಮರ್ಥಿಸಿದವುಗಳಲ್ಲಿ ಅದನ್ನು ಶೀಘ್ರ ಜಾರಿಗೆ ತಂದು ಈ ಕ್ಲಬ್ಬನ್ನು ಆದರ್ಶ ಕ್ಲಬ್ಬಾಗಿ ಮಾಡಬೇಕಾಗಿ ಸಂಬಂಧಿಸಿದ

## ಕುಂಬಳೆ.

ಇಲ್ಲಿ ತಾ ೨೬-೧-೩೮ಕ್ಕೆ ಕುಂಬಳೆ ಸಂಯುಕ್ತ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಕೆ ಕೃಷ್ಣ ಭಟ್ಟರ ಮುಂದಾಳುತನದಲ್ಲಿ ದೇಶಾಭಿಮಾನ ಆಚರಣೆಯು ಸಾಂಗವಾಗಿ ನಡೆಯಿತೆಂದು ವಾರ್ತೆ ಬಂದಿದೆ.

## ವಿದ್ಯಾರ್ಥಿಗಳ ಪರಿಷತ್ತು

ಪಶ್ಚಿಮ ಕರಾವಳಿಯ ವಿದ್ಯಾರ್ಥಿಗಳ ಪರಿಷತ್ತು ಸ್ಥಳೀಯ ಕೆನರಾ ಹೈಸ್ಕೂಲಿನ ಕೋಣೆಯಲ್ಲಿ ಹೊಸ ಕಟ್ಟಡದ ಸಭಾಭವನದಲ್ಲಿ ಈ ತಿಂಗಳು ಶ್ರೀ ಅಶೋಕ ಮೆಹತಾರವರ ಅಧ್ಯಕ್ಷತನದಲ್ಲಿ ಜರಗುವುದು. ಈ ಪರಿಷತ್ತಿಗಾಗಿ ವಿದ್ಯಾರ್ಥಿ ನಗರವು ನೇತ್ರಾವತಿ ನದಿಯ ತೀರದಲ್ಲಿ ಸಭಾಧ್ಯಕ್ಷರಾದ ಡಾ ವಿಠಲ ಶೆಟ್ಟಿಯವರಿಂದ ತೆರೆಯಲ್ಪಟ್ಟಿತು.

## ಶ್ರೀಗಳಾದ ಬಂಟ್ವಾಳ ವೆಂಕಟ್ರಾಯರ ನಿಧನ

ನಮ್ಮ ಜಿಲ್ಲೆಯ ಗೌಡಸಾರಸ್ವತ ಬ್ರಾಹ್ಮಣ ವೃಂದದ ನಿವೃತ್ತ ಜಡ್ಜರಾದ ಶ್ರೀಗಳಾದ ಬಂಟ್ವಾಳ ವೆಂಕಟ್ರಾಯರು ಮುಂಬಯಿಯಲ್ಲಿ ತೀರಿಕೊಂಡರೆಂಬ ವಾರ್ತೆ ತಿಳಿದು ವಿಷಾದಿಸುತ್ತೇವೆ.

## ಸಿಲೋನಿನ ಕುರಿತು ಭಾಷಣ

ಸಿಲೋನಿನ ಕಿರಿಗಳಲ್ಲಿ ಅತಿ ಕಡಿಮೆ ಸರಕಾರಕ್ಕೆ ಉತ್ಪತ್ತಿಯು ಕಷ್ಟಮ್ಸ ಸುಂಕದಿಂದಲೇ ಬರುತ್ತದೆ. ನಿಸರ್ಗ ಸೌಂದರ್ಯದಿಂದ ಶೋಭಾಯಮಾನವಾದ ಊರದು, ಅಲ್ಲಿ ಹವೆಯುತ್ತಮ, ಎಂಬುದಾಗಿ ಅಭಿಪ್ರಾಯಪಡುತ್ತ ಶ್ರೀಗಳಾದ ಎ ಶ್ರೀನಿವಾಸಪೈಗಳು, ತಮ್ಮ ಸಿಲೋನ ಪ್ರವಾಸದ ಕುರಿತು ಸ್ಥಳೀಯ ತಿಯೋಸೋಫಿಕಲ್ ಲಾಜಿನಲ್ಲಿ ಸುಂದರವಾದ ಭಾಷಣ ಕೊಟ್ಟರು. ಸಿಲೋನು ಅತಿಫಲವತ್ತಾದ ಪ್ರದೇಶವೂ, ಅಲ್ಲಿನ ರಸ್ತೆಗಳು ನೇರವಾಗಿವೆ, ಅಲ್ಲಿನ ನಿಸರ್ಗದ ಸೌಂದರ್ಯದಿಂದ ಮನ ಸೋಲ್ಲಾಸವಾಗುತ್ತದೆ. ಸಿಂಹಳದ ಜನರು ಆಲಸ್ಯಗಳು. ಅಲ್ಲಿನ ಸರಕಾರ ನೌಕರರು ಅತಿರೇಕವಾದ ಸಂಬಳಗಳು ದೊರೆಯುತ್ತವೆ, ಅಲ್ಲಿ ಭೂ ಯಾ ನಾನ ತೆರಿಗೆ ಕ್ರಮವಿರುವುದಿಲ್ಲ, ಸಿಂಹಳ ದ್ವೀಪದವರು ಹೆಚ್ಚಾಗಿ ಪಾಶ್ಚಾತ್ಯರನ್ನು ಅನುಸರಿಸುತ್ತಿದ್ದಾರೆ. ಸಿಂಹಳ ದೇಶದಲ್ಲಿ ಒಂದೇ ಧರ್ಮವಿದೆ, ಅದು ಬೌದ್ಧಮತ ಎಂಬುದು ಶ್ರೀ ಪೈಗಳವರ ಭಾಷಣದ ಸಾರಾಂಶ.

ಅಧ್ಯಕ್ಷತೆಯಲ್ಲಿ ಸ್ವತಂತ್ರ ದಿನಾಚರಣೆಯನ್ನು ಆಚರಿಸಲಾಯ್ತು. ಕೈಬಿಟ್ಟಾದ ಬಂಟ್ವಾಳ ಸೇರಿಗೆ ಡಿ. ಕೊಂಗ್ರೆಸ್ ಕಮಿಟಿಗೆ ಇಲ್ಲಿಯ ಕೆನರಾ ಬ್ಯಾಂಕಿನ ಏಜಂಟರಾದ ಮ. ರಾ. ಮಾಧವ ಅನುರುದ್ಧನ ಭಟ್ಟರೂ, ಮ. ರಾ. ಬೊಂಬಾಯಿ ಪ್ರೊವಿನ್ಸಿಯಲ್ ಕೊಂಗ್ರೆಸಿನ ಮಾಜಿ ಡಿ ಮಾರ್ಗನ ಡಿಕ್ಟೇಟರಾದ ಬಿ. ದೇವಪ್ಪ ಆಳ್ವರು ಉಮೇದ್ವಾರರಾಗಿದ್ದರು. ಶ್ರೀ ಮಾಧವ ಅನುರುದ್ಧನ ಭಟ್ಟರು ತಮ್ಮ ನಾಮ ಪತ್ರಿಕೆಯನ್ನು ಹಿಂದ ತೆಗೆದ್ದರಿಂದ ಬಿ. ದೇವಪ್ಪ ಆಳ್ವರು ಚುನಾಯಿಸಲ್ಪಟ್ಟರು.

## ಉಡುಪಿ:

೨೬ ತಾ. ಕಮಿಟಿಯ ವಾರ್ಷಿಕ ಸಾಧಾರಣ ಸಭೆಯು ೩೧. ೧೦ಕ್ಕೆ ಬೋರ್ಡ್ ಹಾಯರ್ ಎಲಿಮೆಂಟರ ಶಾಲೆಯಲ್ಲಿ ಅಧ್ಯಕ್ಷರಾದ ಶ್ರೀ ಪಿ. ಮಂಜುನಾಥ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಕಮಿಟಿಗಳಿಂದ ಒದಗಿದ್ದ ೮೧ ಪ್ರತಿನಿಧಿಗಳ ಪೈಕಿ ೬೫ರ ಬಗ್ಗೆ ಮಾತ್ರ ಚುನಾವಣೆಯ ವರದಿ ಬಂದಿದ್ದು, ೪೩ ಮಂದಿ ಹಾಜರಿದ್ದರು. ಪ್ರಾರ್ಥನೆಯಾದೊಡನೆ ದಿವಂಗತ ಶ್ರೀಮತಿ ಸ್ವರೂಪರಾಣಿ ನೆಹರೂರವರ ವಿಷಯ ಶ್ರೀ ಕೆ ಕೆ ಶೆಟ್ಟರು ವಿವರಿಸಿ ಹೇಳಿದ ತರುವಾಯ, ದುಃಖಸೂಚಕ ನಿರ್ಣಯವು ಎಲ್ಲರೂ ನಿಂತು ಸರ್ವಾನುಮತಿಯಿಂದ ಮಂಜೂರಾಯಿತು. ಗತವರ್ಷದ ವರದಿಯನ್ನೂ ಲೆಕ್ಕಪತ್ರವನ್ನೂ ಓದಿ ಹೇಳಲಾಗಿ ಸ್ವಲ್ಪ ಚರ್ಚೆಯ ನಂತರ ಸರ್ವಾನುಮತದಿಂದ ಮಂಜೂರಾದುವು. ಹೊಸ ವರ್ಷಕ್ಕೆ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಹಾಂಗಾಳ ಲಕ್ಷ್ಮೀನಾರಾಯಣ ನಾಯಕರು. ಸೂಚಿಸಲಾಗಿ ಅನುಮೋದಿಸಲಾಯಿತು. ಶ್ರೀ ಹಾಂಗಾಳ ಮಂಜುನಾಥ ನಾಯಕರೂ ಸೂಚಿಸಲ್ಪಟ್ಟು ಅನುಮೋದಿತರಾದರೂ, ಅವರು ತಮ್ಮ ಹೆಸರನ್ನು ಹಿಂತೆಗೆದುದರಿಂದ ಮೊದಲಿನವರೇ ಸರ್ವಾನುಮತದಿಂದ ಆರಿಸಲ್ಪಟ್ಟರು. ಶ್ರೀ ಮಂಜುನಾಥ ನಾಯಕರು ಕಳೆದ ವರ್ಷದಲ್ಲಿ ಕೊಂಗ್ರೆಸ್ ಕಾರ್ಯಗಳಿಗೆ ತನ್ನೊಡನೆ ಸಹಕರಿಸಿದ ಸಹವ್ಯವಸಾಯಿಗಳಿಗೂ ಸನ್ಮಿತ್ರರುಗಳಿಗೂ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದ ಬಳಿಕ ಹೊಸ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ನಾಯಕರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಸಭೆಗೆ ವಂದನೆಗಳನ್ನು ಕೊಟ್ಟು ತನ್ನ ಮೇಲೆ ವಿಶೇಷ ಜವಾಬ್ದಾರಿಯನ್ನು ಹೊರಿಸಿದವರಲ್ಲಿ ಅದನ್ನು ಸಮರ್ಪಕವಾದಂತೆ ನಿರ್ವಹಿಸುವಂತೆ ಎಲ್ಲರೂ ಸಹಕರಿಸಬೇಕಾಗಿ ಕೇಳಿಕೊಂಡರು. ಶೀಘ್ರದ ಕೆ ಬಿ ಶೆಟ್ಟಿ ೧, ಕೆ ಕೆ ಶೆಟ್ಟರು ಈರ್ವರು ಅಧ್ಯಕ್ಷರನ್ನು ಅಭಿನಂದಿಸಿ ಭಾಷಣಮಾಡಿದರು. ಹೊಸವರ್ಷದ ಕಾರ್ಯಕಾರಿ ಮಂಡಳಿಗೆ ಒಟ್ಟಿಗೆ ೧೮ ಜನರ ಆರಿಸಲ್ಪಟ್ಟರು. ಶ್ರೀ ಬಿ ಕೆ ಹೆಗ್ಡೆಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ ಕೆ ಶೆಟ್ಟಿ ಮತ್ತು ಬಿ ಶ್ರೀನಿವಾಸ ಪೈ ಜೊತೆ ಕಾರ್ಯದರ್ಶಿಗಳಾಗಿಯೂ ಶ್ರೀ ನಗರ ಸಿ ರಾಮರಾಯರು ಕೋಶಾಧ್ಯಕ್ಷರಾಗಿಯೂ, ಶ್ರೀಮತಿ ಸಿ ಮನೋರಮಾ ಬಾಯಿ ಶ್ರೀಗಳಾದ ಕೆ ಎಲ್ ಬಾಳ, ಎಕೀಲ್, ಆರ್ ಎಸ್ ಇಂದ್ರಪ್ರದ, ಎಲ್ ಎಸ್. ಸಹಾಯಕ, ಬಿ ಎನ ಹೆಗ್ಡೆ, ಬಿ ಕೆ, ಹೆಗ್ಡೆ, ಬಿ ಬಿ ಕಾಮತ್, ಕೆ ಕೆ ಕಾಮತ್, ಕೆ ಎ ಶೆಣೈ, ಕೆ, ಬಿ ಶೆಟ್ಟಿ, ಆರ್ ಪ್ರಭು ಯು ಎ ಕಾಮತ್, ಎಸ್ ಎನ ಹೆಗ್ಡೆ ಸದಸ್ಯರನ್ನು ಕಾರ್ಯಕಾರಿ ಮಂಡಳಿಗೆ ಆರಿಸಿದ ಸದಸ್ಯರನ್ನು ಸರ್ವಾನುಮತದಿಂದ ಆರಿಸಲಾಯಿತು. ಆನಂತರ ತಾಲೂಕು ರಾಜಕೀಯ ಪರಿಷತ್ತನ್ನು ಜರಗಿಸುವ ವಿಚಾರದ ಮುಂದೆ ಬಂದು ಚರ್ಚೆಯಾಗಿ, ಅದನ್ನು ಜರಗಿಸುವುದೊಳ್ಳೆಯದೆಂದೂ ಕರ್ನಾಟಕ ಕೇಂದ್ರ ಕಮಿಟಿಯವರ ಆಹ್ವಾನವನ್ನು ಸ್ವೀಕರಿಸಿ ಸದ್ರಿ ಪರಿಷತ್ತನ್ನು ಮೇ ತಿಂಗಳ ೨೫ ರಿಂದೊಳಗೆ ಜರಗಿಸತಕ್ಕದ್ದೆಂದೂ ನಿರ್ಧಾರವಾಯಿತು. ಸಭಾಂತ್ಯದಲ್ಲಿ ಶ್ರೀ ಕೆ ಕೆ ಶೆಟ್ಟರು ಎಲ್ಲರಿಗೆ ಧನ್ಯವಾದಗಳನ್ನಿತ್ತರು. ಶ್ರೀ ಪಿ ಮಂಜುನಾಥ ನಾಯಕರು ಈ ಮೊದಲಿನಂತೆ ಇನ್ನೂ ಮುಂದಕ್ಕೂ ಕೊಂಗ್ರೆಸು ಕಛೇರಿಗೆ ಬೇಕಾದ ಪ್ರೋತ್ಸಾಹವೀಯಬೇಕಾಗಿ ಕೇಳಿಕೊಂಡರು. ಶ್ರೀ ನಾಯಕರು ತಾನು ಕೊಂಗ್ರೆಸು ಸೇವೆ ಮಾಡಲು ಯಾವಾಗಲೂ ಸಿದ್ಧನಿದ್ದೇನೆಂದೂ ಕೊಂಗ್ರೆಸು ಕೆಲಸದಲ್ಲಿ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲರೂ ಒಂದಾಗಿ ದೇಶಹಿತವನ್ನು ಸಾಧಿಸಬೇಕೆಂದರು. ಶ್ರೀಗಳಾದ ಟಿ ವಿ. ಶೆಣೈ, ಟಿ ಆರ್. ಪೈ ಮತ್ತು ಯು. ಎಸ್. ಕಾಮತ್ತರು ಸಭೆಯ ಅಪ್ಪಣೆ ಪಡೆದು, ಈರ್ವರು ಅಧ್ಯಕ್ಷರುಗಳ ತ್ಯಾಗ ಸೇವಾಭಾವ ಜನಸೇವೆಗಳ ಬಗ್ಗೆ ಭಾಷಣಗಳನ್ನಿತ್ತು ಕೃತಿಯೊಪ್ಪದೂ ಈರ್ವರನ್ನೂ ಪುಷ್ಪಹಾರಗಳಿಂದ ಸನ್ಮಾನಿಸಿದರು. ವಂದೇ ಮಾತರಂ ಹಾಡಿ ಸಭಾಂತ್ಯವಾಯಿತು.

೨೬ ತಾರೀಕಿನ ರಾತ್ರಿ ಶ್ರೀ ಸಿ ಬಿ ಮಲ್ಲಪ್ಪನವರ ಚಂದ್ರಮೌಳೀಶ್ವರ ನಾಟಕ ಸಭೆಯವರು ಕಬೀರದಾಸ ನಾಟಕವನ್ನಾಡಿ ಅವರ ಉತ್ಸವವನ್ನು ಉಡುಪಿಯಲ್ಲಿ ನವೀನವಾಗಿ ಸ್ಥಾಪಿತವಾಗಿರುವ ಹಾವಂಜೆ ಅಖಾಡಾ ವ್ಯಾಯಾಮ ಶಾಲೆಯ ಸಹಾಯಾರ್ಥವಾಗಿ ಕೊಟ್ಟಿರುತ್ತಾರೆ. ಅದೇ ವ್ಯಾಯಾಮ ಶಾಲೆಯ ಪ್ರದೇಶದಲ್ಲಿ ಅವರೂ ಅವರ ನಾಟಕ ಸಭೆಯವರೂ ಗಾಯದ ಕಚೇರಿಯನ್ನು ೩೦ ತಾರೀಕಿನ ಆದಿತ್ಯವಾರ ಸಾಯಂಕಾಲ ಜರಗಿಸಿದರು.

# ಭಾರತೀಯ ಜೈಲುಗಳ ಶಾಸನ ವ್ಯವಸ್ಥೆ!

ಲೇಖಕ —ಶ್ರೀ ಮಹಾಮಾಯಾ ಪ್ರಸಾದ ಸಿಂಹ,

ಎಂದರೆ, ಸಂತೋಷ, ಇನ್ನೊಂದೆಡೆ ಅಸಂತೋಷ — ಇದುವೇ ಸಂಸಾರದ ನಿಯಮವಾಗಿರುವಂತೆ ಕಾಣುತ್ತದೆ. ಭಾರತವರ್ಷವು ನವಯುಗದಲ್ಲಿ ಪದಾರ್ಪಣೆ ಮಾಡಿದೆ. ವಿಚಿತ್ರ ಉತ್ಥಾನ ಪತನಕ್ಕಾರಂಭವಾಗಿದೆ. ಎಷ್ಟೋ ಹೃದಯಗಳು ಪಶಂಕಿತವಾಗಿವೆ, ಮತ್ತೆಷ್ಟೋ ಹೃದಯಗಳು ಉಲ್ಲಾಸದಿಂದ ತುಂಬಿದೆ. ಎಲ್ಲರ ದೃಷ್ಟಿ ಕಾಂಗ್ರೆಸ್ ಮಂತ್ರಿಮಂಡಲಗಳ ಕಡೆಗೆ ಹರಿದಿದೆ. ಜನರು ದೊಡ್ಡ ದೊಡ್ಡ ಆಶೆಗಳನ್ನು ಕಟ್ಟಿಕೊಂಡಿದ್ದಾರೆ; ಗಾಳಿಗೋಪುರಗಳನ್ನು ರಚಿಸಿದ್ದಾರೆ; ಎಲ್ಲರೂ ಆನಂದ ತುಂದಿಲರಾಗಿದ್ದಾರೆ. ಎಲಿಯ ತನಕ ಅವರ ಚಿರಸಂಚಿತ ಅಭಿಲಾಷೆಗಳು ಪೂರ್ಣವಾಗುವವು ಎಂಬುದನ್ನು ಹೇಳುವುದು ಅಸಾಧ್ಯ. ಯಾಕೆ ಈಗಿನ ಪರಿಸ್ಥಿತಿಯಲ್ಲಿ ದೊಡ್ಡ ದೊಡ್ಡ ಆಶೆಗಳನ್ನು ಕಟ್ಟಿಕೊಂಡಿರುವದು ಹೆಡ್ಡತನ. ನವೀನ ಶಾಸನ ವಿಧಾನದ ಮೂಲಕ ಭಾರತದ ಹಿತವು ಎಷ್ಟರ ಮಟ್ಟಿಗೆ ಆದೀತು ಎಂಬ ವಿಷಯವು ಯಾರ ಮನಸ್ಸಿನಿಂದಲೂ ಗುಪ್ತವಾಗಿ ಇರುವುದಿಲ್ಲ. ಮಂತ್ರಿಗಳ ಮಾರ್ಗದಲ್ಲಿ ಯಾವ ಯಾವ ಅಡ್ಡಿಗಳಿವೆ, ಏನೇನು ತಡೆಗಳಿವೆ ಎಂಬುದು ಸಹ ಜನರಿಗೆ ತಿಳಿದಿದೆ. ಆದರೂ ಕೂಡ ಜನರು ಆಶಾವಾದಿಗಳಾಗಿದ್ದಾರೆ! ಯಾಕಾಗಕೂಡದು? ಸಣ್ಣ ಸಣ್ಣ ವಿಷಯಗಳಲ್ಲಿ ಮಂತ್ರಿಮಂಡಲಗಳು ಸ್ವತಂತ್ರವಾಗಿವೆ. ಆ ಸಣ್ಣ ವಿಷಯಗಳಲ್ಲಿ ಪ್ರಯುಕ್ತಿಸಲಿಕ್ಕಾದರೂ ಮಂತ್ರಿಮಂಡಲಗಳು ಯಾಕೆ ವಿಲಂಬ ಮಾಡಬೇಕು?

ಕಾಂಗ್ರೆಸೀ ಪ್ರಾಂತ್ಯಗಳ ಪ್ರಾಯಶಃ ಅಧಿಕಾಂಶ ಮಂತ್ರಿಗಳು ಜೈಲುಯಾತ್ರೆಯನ್ನು ಮಾಡಿದವರಾಗಿದ್ದಾರೆ. ಅವರಿಗೆ ಜೈಲುಗಳ ಅನುಭವವಿದೆ, ಜೈಲುಗಳ ರಹಸ್ಯ ತಿಳಿದಿದೆ. ಜೈಲುಗಳ ಹೃದಯ ವಿಭೇದಕ ಕರುಣಕತೆಗಳು ಅವರಿಗೆ ಗೊತ್ತಿವೆ. ಅಲ್ಲಿಯ ಘಟನೆಗಳನ್ನು ಅವರು ನೋಡಿದ್ದಾರೆ. ಆದಕಾರಣ ಅವರಿಂದ ಜೈಲುಗಳ ಶಾಸನವ್ಯವಸ್ಥೆಯಲ್ಲಿ ಸುಧಾರಣೆಯಾಗಬಹುದೆಂದು ಜನರು ನಂಬಿದ್ದಾರೆ. ಮಹಾತ್ಮಾ ಗಾಂಧಿಜಿಯವರು ಈ ವಿಷಯಕ ವಾದ ತಮ್ಮ ಸಂದೇಶವನ್ನು ಮೊದಲೇ ಕೊಟ್ಟುಬಿಟ್ಟಿದ್ದಾರೆ. ಆದುದರಿಂದ ಈ ವಿಷಯ ಹೆಚ್ಚಿಗೆ ಬರೆಯುವ ಆವಶ್ಯಕತೆಯಿರುವುದಿಲ್ಲ. ಆದರೂ ಅಲ್ಪ ಸ್ವಲ್ಪ ಬರೆಯುವದು ಹೆಚ್ಚೆನಿಸಿಕೊಳ್ಳಲಾರದು. ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟು ಕಾಂಗ್ರೆಸ್ಸೀ ಮಂತ್ರಿಗಳ ಧ್ಯಾನವನ್ನು ಆ ಕಡೆಗೆ ಎಳೆಯುವ ಹಕ್ಕು ಸ್ವಾತಂತ್ರ್ಯ ಪ್ರತಿಯೊಬ್ಬನಿಗೆ ಇರುವುದಷ್ಟೆ?

### 'ಸರಕಾರ್ ಸಲಾಂ'

ಈ ಎರಡು ಶಬ್ದಗಳನ್ನು ಯಾವ ರಾಷ್ಟ್ರೀಯ ಕೆಲಸಗಾರನು ಮರೆತಿರಬಹುದು? ಈ ಎರಡು ಶಬ್ದಗಳಿಂದಾಗಿಯೇ ಭಾರತೀಯ ಜೈಲುಗಳಲ್ಲಿ ಭಯಂಕರ ಹತ್ಯಾಕಾಂಡಗಳು ನಡೆದಿರುವವು. ಅನೇಕ ಮಂದಿ ಕೈದಿಗಳ ತರತರದ ಯಾತನೆಗಳನ್ನು ಅನುಭವಿಸಬೇಕಾಗಿ ಬಂದಿರುವದು. ಜೈಲಿನ ಹೊರಗಿರುವ ಜನರಿಗೆ 'ಸರಕಾರ್ ಸಲಾಂ'ನ ಅರ್ಥ ಆಗದಿರಬಹುದು. ಆದ್ದರಿಂದ ಅದರ ಕುರಿತು ಎರಡು ಮಾತು ಹೇಳುತ್ತೇವೆ.

ಪ್ರತಿ ದಿನ ಜೈಲುಗಳಲ್ಲಿ ಕೈದಿಗಳ ನಿರೀಕ್ಷಣೆಯಾಗುತ್ತದೆ. ಆಗ ಜೈಲು ಸುಪರಿಂಟೆಂಡೆಂಟರು ನಿರೀಕ್ಷಣೆಮಾಡಲಿಕ್ಕೆ ಬರುತ್ತಾರೆ. ಅವರು ಬರುವದೆಂದರೆ—ಅವರದೊಂದು ಮೆರವಣಿಗೆ ಹೊರಟಂತೆ! ಅವರು ಮೆರವಣಿಗೆ ಹೊರಡುವ ಕಾಲಕ್ಕೆ ಎಲ್ಲವೂ ನಿಶ್ಶಬ್ದ, ನೀರವ! ಮೆರವಣಿಗೆಯಲ್ಲಿ ಎಲ್ಲರ ಮುಂದೆ ಜೈಲು ವಾರ್ಡರನಿರುತ್ತಾನೆ. ಅವನ ಹಿಂದಿನಿಂದ ಶಿಸ್ತಿನ ಪೋಷಾಕಿನಲ್ಲಿ ಜೈಲಿನ ಬೇರೆ ಬೇರೆ ಅಧಿಕಾರಿಗಳು! ಎಲ್ಲರ ಹಿಂದೆ ಸುಪರಿಂಟೆಂಡೆಂಟ ಸಾಹೇಬರಿರುವರು. ಇವರ ನಡಿಗೆ—ಮದೋನ್ಮತ್ತ ಅನೆಯಂತಿರುವದು; ನೋಡಿದರೆ ಎದೆ ಧಕ್ಕೆನ್ನುವದು.

ದುರ್ಭಾಗಿಗಳಾದ ಕೈದಿಗಳು ತಮ್ಮ ದೊಸ್ತೆ, ಗಿರದಲು ಮತ್ತು ಹಿಸ್ಟ್ರಿ ಟಿಕೇಟು (History Ticket) ತೆಗೆದುಕೊಂಡು ಆ ಸಮಯಕ್ಕೆ ಸಾಲಾಗಿ ನಿಲ್ಲಬೇಕು. ಮೆರವಣಿಗೆ ಬರುವಾಗ "ಸರಕಾರ್ ಸಲಾಮ್" ಎಂಬ ಕರ್ಣಕಠೋರ ಶಬ್ದವು ಕೈದಿಗಳ ಕಿವಿಗಳನ್ನು ಬಾಣದಂತೆ ಭೇದಿಸಿ ಒಳಹೋಗುವದು. ಆಗ ಪ್ರತಿಯೊಬ್ಬ ಕೈದಿಯು ಹಿಸ್ಟ್ರಿ ಟಿಕೇಟನ್ನು ಒಂದು ಕೈಯಲ್ಲಿ ಹಿಡಿದು, ಮುಂದೇನೂ ಆಜ್ಞೆಯೋ ಎಂದು ಥರಥರನೆ ನಡುಗುತ್ತ ಎಟೆನ್ಶನ್ ಆಗಿ ನಿಲ್ಲಬೇಕು. ಹೀಗೆ ನಿಲ್ಲುವುದರಲ್ಲಿ ಅಲ್ಪ ಸ್ವಲ್ಪ ಹೆಚ್ಚು ಕಡಿಮೆ ಆಯಿತು ಎಂದರೆ, ಸರಿ, ಆ ಕೈದಿಯ ಭವಿಷ್ಯವು ನಿರಾಶಾಮಯವಾಗುವುದು. ಸುಪರಿಂಟೆಂಡೆಂಟ ಸಾಹೇಬರ ಮೆರವಣಿಗೆ ಆಗ ಮುಗಿದ ಬಳಿಕವೇ ಕೈದಿಗಳ ಹಾರಿ ಹೋದ ಪ್ರಾಣಗಳು ಮರಳಿ ಬರುವವು. ಏನೊಂದೂ ತೊಂದರೆಗಳಿಲ್ಲದೆ ಆ ದಿನ ಮೆರವಣಿಗೆ ಆಯಿತೆಂದರೆ, ಕೈದಿಗಳು ಪ್ರಸನ್ನವದನರಾಗುವರು, ಇಲ್ಲವಾದರೆ ಅವರ ಮುಖದಲ್ಲಿ ದುಃಖಛಾಯೆಯು ಹರಡಿಕೊಳ್ಳುವುದು. ಇದೇ ಈಗ ಜೈಲುಗಳ 'ಸರಕಾರ್ ಸಲಾಂ'! ಇಂಥ ಪದ್ಧತಿಯಲ್ಲಿ ಯಾವ ನ್ಯಾಯ, ಯಾವ ಧರ್ಮ ಯಾವ ಕರ್ತವ್ಯದ ಪಾಲನೆಯಾಗುತ್ತದೆಂದು ವಾಚಕರಾದರೂ ಆಲೋಚಿಸಿರಿ. ಅಥವಾ ಅದರ ಪಾಲನೆಯಿಂದಾಗುವ ಲಾಭವೇನೆಂದಾದರೂ ನೋಡಿಕೊಳ್ಳಿರಿ. ಇದು ಕೈದಿಗಳ ಸ್ವಾಭಿಮಾನದ ಮೇಲೆ ಆಘಾತವನ್ನುಂಟುಮಾಡುವ ದುಷ್ಟ ಕ್ರೂರ ಪದ್ಧತಿ ಅಲ್ಲವಾದರೆ ಮತ್ತೇನಾಗಬಹುದು?

### ಭೋಜನ

ಜೈಲುಗಳಲ್ಲಿ ಸರ್ವಸಾಧಾರಣ ಕೈದಿಗಳ ಭೋಜನ ವ್ಯವಸ್ಥೆಯನ್ನು ನೋಡಿ ಹೃದಯವು ದ್ರವೀಭೂತವಾಗದೆ ಇರುವುದಿಲ್ಲ. ಬೆಳಿಗ್ಗೆ ಕಿಚಡಿಅನ್ನ ಕೊಡಲಾಗುತ್ತದೆ. ಈ ಕಿಚಡಿಅನ್ನವನ್ನು ವರ್ಣಿಸಬೇಕಾದದಿಲ್ಲ. ಮಧ್ಯಾಹ್ನ ಬಿಸಿ ಅನ್ನ ಮತ್ತು ಸಾಯಂಕಾಲ ರೊಟ್ಟಿ ಸಿಕ್ಕುತ್ತದೆ. ಇದಕ್ಕಾಗಿ ಎಲ್ಲಕ್ಕೂ ಕೀಳಾದ ಅಕ್ಕಿಯನ್ನು ಉಪಯೋಗಿಸುತ್ತಾರೆ. ಜೈಲುಗಳ ತೋಟಗಳಲ್ಲಿ ತುಂಬಾ ತರಕಾರಿಗಳನ್ನು ಬೆಳೆಸುತ್ತಾರೆ. ಅವನ್ನು ಕೈದಿಗಳಿಗೆ ಕೊಡುತ್ತಿರಬಹುದೆಂದು ಜನರು ಎಣಿಸಿಯಾರು. ಹಾಗೇನೂ ಇಲ್ಲ. ಬೆಳೆಸುವವರು ಕೈದಿಗಳು ನಿಜ, ಆದರೆ ತಿನ್ನುವವರು ಮಾತ್ರ ಅವರಲ್ಲ. ಆ ತರಕಾರಿಗಳು ಏನಾಗುತ್ತವೆ ಎಂಬುದನ್ನು ಹೇಳುವ ಆವಶ್ಯಕತೆ ಇಲ್ಲ. ಅವು ಕೈದಿಗಳಿಗೆ ಸಿಕ್ಕುವದಿಲ್ಲ ಎಂಬುದನ್ನು ನಿಶ್ಚಯವಾಗಿ ಹೇಳಬಹುದು. ಕುಂಬಳಕಾಯಿ ಹೂಗಳು ಏನಾಗುತ್ತವೆ, ಯಾರೂ ಕೇಳಕೂಡದು. ಆದರೆ, ಹೂಕ್ಯೊದ ಮೇಲೆ ಉಳಿದ ದಂಟುಸೊಪ್ಪು ಎಲ್ಲಿಯೊ ಸ್ವಲ್ಪ ಈ ಕೈದಿಗಳಿಗೆ ಸಿಕ್ಕುವುದು.

### ರೊಟ್ಟಿ

ರೊಟ್ಟಿಗೆ ಬೇಕಾದ ಹಿಟ್ಟನ್ನು ಕೈದಿಗಳು ಬೀಸುವರು. ಆದರೆ, ಬೀಸಿದ ಹಿಟ್ಟಿನ ರೊಟ್ಟಿ ಮಾತ್ರ ಕೈದಿಗಳಿಗೆ ಸಿಕ್ಕುವುದಿಲ್ಲ. ಕೈದಿಗಳು ರೊಟ್ಟಿ ಬೀಸುವುದು ಯಾರಿಗಾಗಿ? ಯಾರು ಹೇಳಬಲ್ಲರು? ಕೈದಿಗಳಿಗೆ ಸಿಕ್ಕುವ ರೊಟ್ಟಿ-ಅರ್ಧ ಸುಟ್ಟದ್ದು ಅಥವಾ ಪೂರ್ಣ ಸುಟ್ಟುಹೋದದ್ದು ಆಗಿರುತ್ತದೆ. ಅದು ಕೂಡ ಅವರಿಗೆ ಹೊಟ್ಟೆತುಂಬ ಸಿಕ್ಕುವುದಿಲ್ಲ. ಕಸಕಡ್ಡಿಗಳಿಂದ ಬೆರೆತ ರೊಟ್ಟಿಯನ್ನು ಹೊಟ್ಟೆತುಂಬ ತಿನ್ನಲಿಕ್ಕೂ ಆಗುವುದಿಲ್ಲ.

### ಎಣ್ಣೆ

ಜೈಲಿನ ಎಣ್ಣೆಯೆಂದರೆ ಅದು ಬಹು ಉತ್ಕೃಷ್ಟವಾದ್ದು. ಅದನ್ನೇ ಕೈದಿಗಳ ಉಪಯೋಗಕ್ಕೆ ಕೊಡುತ್ತಾರೆಂಬ ಪ್ರತೀತಿ ಬಹು ಕಾಲದಿಂದ ಇದೆ. ನಿಜ, ಜೈಲಿನ ಎಣ್ಣೆ ಉತ್ಕೃಷ್ಟವಾಗದೆ ಹೇಗೆ ಉಳಿದೀತು? ಪಶುಗಳಂತೆ ಮನುಷ್ಯರನ್ನೇ ಗಾಣಗಳಿಗೆ ಕಟ್ಟಿ ಜೈಲಿನಲ್ಲಿ ಎಣ್ಣೆ ತೆಗೆಯುತ್ತಾರೆ. ದುಃಖದ ವಿಷಯವೆಂದರೆ ಕೈದಿಗಳೇ ಲಜ್ಜೆಮಾನಗಳನ್ನು ಮಾರಿ, ಬೆವರು ರಕ್ತ ಹರಿಸಿ, ಗಾಣದೂಡಿ ತೆಗೆದ ಎಣ್ಣೆ ಅವರಿಗೆ ಸಿಕ್ಕುವುದಿಲ್ಲ! ಹೌದು, ಪಲ್ಯದೊಂದಿಗೆ ಸ್ವಲ್ಪ ಎಣ್ಣೆ ಸೇರುವುದುಂಟು, ಎಲ್ಲಿಯಾದರೂ ಮೈಗೆ ತಿಕ್ಕಲಿಕ್ಕೆ ಸ್ವಲ್ಪ ಕೊಡುವದಿದೆ. ಕೈದಿಗಳಿಗೆ ಪೌಷ್ಟಿಕ ಪದಾರ್ಥಗಳನ್ನು ತಿನ್ನಕೊಡಲಿಕ್ಕೆ ಜೈಲುಗಳು ಮಾವನ ಮನೆಗಳೆ? ಇಂಥ ಪರಿಸ್ಥಿತಿಯಲ್ಲಿ ಹೇಗೆ ಬದುಕಿ ಉಳಿಯುತ್ತಾರೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಅನ್ನದೊಂದಿಗೆ ತುಪ್ಪವಿಲ್ಲ, ಕುಡಿಯಲಿಕ್ಕೆ ಹಾಲಿಲ್ಲ, ಮಾಂಸವಿಲ್ಲ, ಮೀನು ಇಲ್ಲ — ಯಾವಾಗಲೂ ಒಂದೇ ಪ್ರಕಾರ ತಿಂದು ತಿಂದು ಬೇಸರ ಬರುವ ಕಿಚಡಿ ಅನ್ನ.

### ಪಾಯಖಾನೆ

ಜೈಲಿನ ಪಾಯಖಾನೆಗಳು ಬಹಳ ನಿರ್ಮಲವಾಗಿರುತ್ತವೆ ಎಂದು ನಾವು ಹೇಳಬೇಕಾದ್ದೇನಿದೆ? ಒಮ್ಮೆಗೆ ಅಲ್ಲಿಗೆ ಹೋಗಿ ಬಂದರೆ ಎಲ್ಲ ಸಂಗತಿಗಳು ನಿಮಗೇ ತಿಳಿದು ಬರುವವು. ಪಾಯಖಾನೆಗಳಲ್ಲಿ ಮರೆಯೇ ಇಲ್ಲ! ಎಲ್ಲರೂ ಒಂದೇ ಸಲ ಒಬ್ಬರೆದುರು ಒಬ್ಬರು ಕೂತು ಪಾಯಖಾನೆ ಮಾಡಬೇಕು. ಕೊಟ್ಟ ಸಮಯದೊಳಗಾಗಿ ಪಾಯಖಾನೆ ಮಾಡಬೇಕು. ಶೌಚಾದಿಗಳನ್ನು ಪಾಯಖಾನೆಗಳೊಳಗೆ ಮಾಡಬಾರದು, ಹೊರಗೆ ಬಂದು ಎಲ್ಲರೂ ಎಲ್ಲರೆದುರಿಗೆ ಮಾಡಬೇಕು! ಆ ಕಾಲದಲ್ಲಿ ಪಾಯಖಾನೆಯಾದರೆ ದೊಡ್ಡ ಆಪತ್ತೇ ಸರಿ! ಆ ಕಾಲದಲ್ಲಿ ಪಾಯಖಾನೆ ಮಾಡುವದು ದೊಡ್ಡ ಅಪರಾಧ! ಈ ಅಪರಾಧಕ್ಕಾಗಿ ಶಿಕ್ಷೆಯನ್ನು ಅನುಭವಿಸಬೇಕು! ಇಷ್ಟು ಮಾತ್ರವೆ? ಎಲ್ಲಿಯಾದರೂ ರಾತ್ರಿ ಕಾಲಕ್ಕೆ ಪಾಯಖಾನೆಯಾದರೆ, ಮರುದಿನ ಉಪವಾಸ ಅನ್ನಾಹಾರಗಳಿಲ್ಲ!! — ಹೀಗಿದೆ, ಭಾರತೀಯ ಜೈಲುಗಳ ವ್ಯವಸ್ಥೆ!

### ಆರಾಮ, ನಿದ್ರೆ

ಶಿಶಿರವಾಗಿರಲಿ, ಮಳೆ ಬರುತ್ತಿರಲಿ, ಛಳಿಯಿರಲಿ, ಏನೇ ಆಗಲಿ, ಸರಿಯಾಗಿ ಸಾಯಂಕಾಲ ೬ ಗಂಟೆಗೆ ಕೈದಿಗಳು ತಮ್ಮ ತಮ್ಮ ಸೆಲ್ಲುಗಳಲ್ಲಿಯೋ ವಾರ್ಡುಗಳಲ್ಲಿಯೋ ಒಂದಾಗಿ ಇರಲೇಬೇಕು. ಯಾರೊಡನೆಯಾದರೂ ಮಾತನಾಡಕೂಡದು, ಅತ್ತಿತ್ತ ಚಲಿಸಲೂ ಕೂಡದು. ಸುಮ್ಮಗೆ ಬಿದ್ದಲ್ಲೇ ಬಿದ್ದುಕೊಂಡಿರಬೇಕು. ಹೀಗೇನಾದರೂ ಮಾಡದಿದ್ದರೆ ಮರುದಿನ ಬೆಳಗಾಗಬೇಕಾದರೆ ಕೈಗೆ ಕೋಳ ಬೀಳುವುದು. ಸೆಲ್ಲುಗಳಲ್ಲಿ ರಾತ್ರಿಕಾಲದಲ್ಲಿ ಬೆಳಕಿನ ವ್ಯವಸ್ಥೆಯೇ ಇಲ್ಲ. ಹೌದು, ೫೦, ೬೦ ಮಂದಿ ಮಲಗಿಕೊಳ್ಳುವ ವಾರ್ಡುಗಳಲ್ಲಿ ಮಾತ್ರ ಒಂದು ಮಿಣುಕು ದೀಪವು ಉರಿಯುತ್ತ ಇರುತ್ತದೆ. ಅದನ್ನು ಸಣ್ಣದು ಯಾ ದೊಡ್ಡದು ಸಹ ಮಾಡಲಿಕ್ಕೆ ಕೂಡದು. ರಾತ್ರಿಕಾಲದಲ್ಲಿ ಗಂಟೆ ಗಂಟೆಗೆ ಕೈದಿಗಳ ಲೆಕ್ಕವಾಗಬೇಕು, ಆ ಲೆಕ್ಕವನ್ನು ಕೈದಿಗಳೇ ಮಾಡಬೇಕು. ಲೆಕ್ಕವಾಗುವ ಕಾಲಕ್ಕೆ ಎಲ್ಲಿಯಾದರೊಬ್ಬನು ಮಲಗಿಬಿಟ್ಟನು ಅಥವಾ ಲೆಕ್ಕದಲ್ಲಿ ಅಸ್ವಸ್ತಪ್ಪ ಹೆಚ್ಚುಕಡಿಮೆ ಆಯಿತೆಂದರೆ, ಬಂತು ಆಪತ್ತು! ಒದೆತ ಹುಳ ಇವುಗಳಿಂದ ಇಡೀ ರಾತ್ರಿ ನಿದ್ದೆಯಿಲ್ಲ. ಕೈದಿಗಳಿಗೆ ಬೇಕಾದಷ್ಟು ಆಹಾರವನ್ನು ಕೊಡುವದಿಲ್ಲ. ಯಾಕೆಂದರೆ ಅಜೀರ್ಣವಾಗಿಬಿಟ್ಟರೆ ಮೋಸವಷ್ಟೆ! ಆದರೆ, ಚಳಿಗಾಲದಲ್ಲಿ ಕೂಡ ಕೈದಿಗಳಿಗೆ ಹೊದೆದುಕೊಳ್ಳಲಿಕ್ಕೆ ಒಂದು ಕಂಬಳಿಯನ್ನಾದರೂ ಯಾಕೆ ಕೊಡುವುದಿಲ್ಲವೆಂದು ಗೊತ್ತಾಗುವುದಿಲ್ಲ.

### ಉಡಿಗೆತೊಡಿಗೆ

ಒಂದು ಚಡ್ಡಿ, ಒಂದು ಕುರ್ತಾ, ತಲೆ ಮೇಲೆ ವಿಚಿತ್ರ ಪ್ರಕಾರದ ಒಂದು ಟೊಪ್ಪಿಗೆ ಅಲ್ಲದೆ ಕೈದಿಗಳಿಗೆ ಬೇರೆ ಯಾವ ಪೋಷಾಕವನ್ನೂ ಕೈದಿಗಳಿಗೆ ಕೊಡುವುದಿಲ್ಲ. ಎಲ್ಲ ಋತುಕಾಲಗಳಲ್ಲಿ ಇದೊಂದೇ ಪ್ರಕಾರದ ಉಡಿಗೆ ಇರುವದು. ಅದರಲ್ಲಿ ವ್ಯತ್ಯಾಸವಾಗುವುದೇ ಇಲ್ಲ.

### ಔಷಧಿ ಚಿಕಿತ್ಸೆ

ಜೈಲುಗಳಲ್ಲಿ ಔಷಧಿ ಚಿಕಿತ್ಸೆಯ ವ್ಯವಸ್ಥೆ ಹೆಸರು ಪೂರ್ತಿಗೆ ಮಾತ್ರ ಇರುವದು. ಔಷಧಿ ಕಡಿಮೆಯಾದರೆ ನೀರು ಬೆರಸುವರು. ಹಾಲ ಕಡಿಮೆಯಾದರೆ ನೀರು ಬೆರಸುವರು. ಹೀಗೆ ಜೈಲುಗಳಲ್ಲಿ ನೀರಿಗೆ ಮಹತ್ವಪೂರ್ಣ ಸ್ಥಾನವು ಪ್ರಾಪ್ತವಾಗಿದೆ. ಅನೇಕಾನೇಕ ರೋಗಗಳಲ್ಲಿ ನೀರೊಂದೇ ರಾಮಬಾಣ ಔಷಧಿಯಾಗಿರುವದು. ಜೈಲುಗಳಲ್ಲಿ ಸರ್ವಸಾಧಾರಣ ರೋಗಗಳು ರೋಗಗಳೇ ಅಲ್ಲ!

### ಥಾಲಿ ಮತ್ತು ಗಿಂದಲು

ಜೈಲುಗಳ ಥಾಲಿಗಿಂದಲುಗಳು ಅತ್ಯಂತ ಪ್ರಸಿದ್ಧವಾಗಿರುವವು. ಈ ಥಾಲಿಗಿಂದಲುಗಳು ಕಬ್ಬಿಣದವಾಗಿರುತ್ತವೆ. ಮತ್ತೆ ಅವು ಕಡಾಯಿಗಳಂತೆ ಸ್ವಚ್ಛವಿರುವವು! ಇವೆರಡರಿಂದಲೆ ಕೈದಿಗಳ ಎಲ್ಲಾ ಕೆಲಸಗಳಾಗಬೇಕು. ಜೈಲುಗಳಲ್ಲಿ ಕಬ್ಬಿಣದ ಥಾಲಿಗಿಂದಲುಗಳನ್ನು ಯಾಕೆ ಉಪಯೋಗಿಸುತ್ತಾರೊ ಗೊತ್ತಿಲ್ಲ.

### ಪರಿಶ್ರಮ

ಕೈದಿಗಳು ಜೈಲಿಗೆ ಹೋಗಬೇಕಾದ ಮೊದಲು ಡಾಕ್ಟರರು ಅವರ ಪರೀಕ್ಷೆಮಾಡುತ್ತಾರೆ. ಆ ವೇಳೆ ಅವರಿಗೆ ಯಾವ ಶಿಕ್ಷೆಯಾಗಿದೆಯೋ ಅದೇ ತರಹದ ಕೆಲಸವು ಕೊಡಲ್ಪಡುತ್ತದೆ. ಕಠಿಣ ಸಜೆಯಾದವರಿಗೆ ಹಿಟ್ಟು ಬೀಸುವ ಅಥವಾ ಗಾಣವಾಡುವ ಕೆಲಸ, ಲಘು ಸಜೆಯಾದವರಿಗೆ ಹಗ್ಗ ಹೊಸೆಯುವ ಬಟ್ಟೆನೇಯುವ ಕೆಲಸ ಹೀಗೆ ಇರುತ್ತದೆ. ಒಪ್ಪಿಸಿದ ಕೆಲಸ ಮಾಡದಿದ್ದರೆ ಆಪತ್ತೇ ಸರಿ. ಮಾಡಿದರೆ ಕೆಲಸ ಪೂರ್ಣವಾಗದೆ ಇದ್ದರೂ ಸ್ವಲ್ಪ ಕಡಿಮೆ ಇದ್ದರೂ ಕೂಡ ಗಂಡಾಂತರ ಸಿಕ್ಕಿಬಿದ್ದ ಹಾಗಾಗುವದು. ಕೈದಿಯು ಬಲಿಷ್ಠನಾಗಿರಲಿ ನಿರ್ಬಲನಾಗಿರಲಿ, ಯಾರೂ ಅದರ ವಿಚಾರಮಾಡುವುದಿಲ್ಲ. ಕಠಿಣ ಸಜೆಯಾದವರ ಜೈಲು ಜೀವನವು ನರಕವಾಸಕ್ಕೆ ಸಮಾನ. ಎಷ್ಟು ಗೋದಿಯನ್ನು ಬೀಸಲಿಕ್ಕೆ ಕೊಡುತ್ತಾರೋ ಅವನ್ನು ಸಮಯಕ್ಕೆ ಸರಿಯಾಗಿ ಬೀಸಿ ಮುಗಿಸಲೇ ಬೇಕು. ಹೀಗೆ ಮಾಡದಿದ್ದರೆ ಮೊದಲು ಬೈಗಳ ಸುರಿಮಳೆ, ಆಮೇಲೆ ಬೆತ್ತದೇಟು ಹೊಡೆತವಿರುವದು. ವಾರ್ಡರ ಮತ್ತು ಜಮಾದಾರರು ಕೂಡಿ ಇಷ್ಟು ಶಿಕ್ಷೆಕೊಟ್ಟ ಮೇಲೆ ಅವರು ಸುಪರಿಂಟೆಂಡೆಂಟರಿಗೆ ರಿಪೋರ್ಟ ಮಾಡುತ್ತಾರೆ. ಆಗ ಇವರೆಲ್ಲರ ಎಷ್ಟು ನಿರ್ದಯತಾಪೂರ್ಣ ವ್ಯವಹಾರವಿರುವುದೆಂದರೆ ಅವರು ರಾಕ್ಷಸರಿಗಿಂತಲೂ ಕಠಿಣರಾಗಿ ತೋರುವರು. ಸರ್ವಸಾಧಾರಣ ತಪ್ಪಿಗಾಗಿ ದೊಡ್ಡ ದೊಡ್ಡ ಶಿಕ್ಷೆಯನ್ನು ಕೊಟ್ಟ ಆ ಅಧಿಕಾರಿಗೆ ತೃಪ್ತಿಯಿರುವುದಿಲ್ಲ.

### ಫಾಶೀ

ಫಾಶೀ ಕೊಡುವದು ಸರಿಯೋ ತಪ್ಪೋ ಎಂಬುದನ್ನು ಚರ್ಚಿಸುವದು ಈ ಲೇಖದ ವಿಷಯವಾಗಿರುವುದಿಲ್ಲ. ಆದರೂ ಫಾಶಿ ಹೇಗೆ ಕೊಡುತ್ತಾರೆಂಬುದನ್ನು ಸ್ವಲ್ಪ ಹೇಳುವ

೪ನೇ ಪುಟಕ್ಕೆ ಮುಂದರಿಸಿದೆ,

DIAMONDS! DIAMONDS!
BEST BRILLIANCY!

# K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

## ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಫಿನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ,

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.



ಅತ್ಯುತ್ಕೃಷ್ಟ ವಾರಪತ್ರಿಕೆಯಾದ
ಸ್ವದೇಶಾಭಿಮಾನಿಗೆ ವ
ಚಂದಾದಾರರಾಗಿರಿ.


## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ ಆ |
| ಟಕ್ಸ್ ಹೊಸ ಗುಡ್ಡು ಮಂ. | 1 —10 | 1 —10 |
| ರಾಶಿ ಅಕ್ಕಿ .. | 3— 8 | 4— 0 |
| ಸುಗ್ಗಿ .. | 4— 0 | 4— 0 |
| ಗುಡ್ಡು .. | 4— 3 | 4— 3 |
| ಊರ ಅವ್ವಲ್ ಬೆಳ್ತಿಗೆ ... | 4— 7 | 4— 7 |
| ರಂಗೂನು ಬೆ ಗೋ ಗಿಕ್ಕೆ... | 7 — 2 | 7— 4 |
| ಎಲ್ಲೂರು ಬೆ ಮು. ಗಿಕ್ಕೆ.. | 3—14 | 4— 0 |
| ಗೋದಿ ಗೋಣಿ ಗಿಕ್ಕೆ ... | 13 — 0 | 14— 8 |
| ತೊಗರಿ ಗೋಣಿ ಗಿಕ್ಕೆ . | 11— 8 | 18— 8 |
| ಹುರುಳಿ ಗೋಣಿ ಗಿಕ್ಕೆ .. | 6— 0 | 6— 2 |
| ಕಡಲೆ ಗೋಣಿ ಗಿಕ್ಕೆ ... | 9 — 6 | 10 — 8 |
| ತೊಗರಿಬೇಳೆ ಗೋಣಿಗಿಕ್ಕೆ.. | 17— 8 | 18— 0 |
| ಉದ್ದು ಗೋಣಿ ಗಿಕ್ಕೆ . | 9— 0 | 9 — 8 |
| ಹೆಸರು ಗೋಣಿ ಗಿಕ್ಕೆ | 9—12 | 10— 8 |
| ಉರುಬೆಲ್ಲ ಖಂಡಿ ಗಿಕ್ಕೆ . | 27— 0 | 33— 0 |
| ಉಪ್ಪು ಗೋಣಿ ಗಿಕ್ಕೆ .. | 4— 8 | 5— 4 |
| ಮೆಣಸು ಖಂಡಿ ಗಿಕ್ಕೆ .. | 50 —0 | 52 — |
| ಎಳ್ಳಿಂಡಿ ಖಂಡಿ ಗಿಕ್ಕೆ ... | 25 — | 26 — 0 |
| ತೆಂಗಿನ ಎಣ್ಣೆ ಮುಡಿ ಗಿಕ್ಕೆ... | 3 —13 | 3—13 |
| ಎಳ್ಳೆಣ್ಣೆ ಮುಡಿ ಗಿಕ್ಕೆ | 6— 0 | 7— 0 |
| ಬಿಮುಣಿಎಣ್ಣೆ ಪೆಟ್ಟಿಗೆ ಗಿಕ್ಕೆ.. | 6— 5 | 7— 5 |
| ಮೋರಿಸ ಸಕ್ಕರೆ ಮು. ಗಿಕ್ಕೆ.. | 2— 13 | 2 —11 |
| ಮೆಣಸು | 4— 8 | 6— 0 |
| ಸಾಸಿವೆ ಮುಡಿ ಗಿಕ್ಕೆ | 5 — 8 | 6— 8 |
| ಕಾಳುಮೆಣಸು ಹಪೇಗೆ | 15 — 1 | 17 0 |
| ಯೇಲಕ್ಕಿ ಬೀಜ ಮುಡಿಗಿಕ್ಕೆ | 80— 0 | 85— 0 |
| ಗೇರುಬೀಜ ಮು. ಗಿಕ್ಕೆ | 1— 0 | 2 —12 |
| ಕಬ್ಬಿಣ ಖಂಡಿ ಗಿಕ್ಕೆ . | 50— 0 | 55— 0 |
| ತಾಂಬ್ರ ಹಗಣೆ ಮು ಗಿಕ್ಕೆ | 14 — 12 | 15— 0 |
| ತಾಂಬ್ರ ಪಾತ್ರಗಳು ಮು ಗಿಕ್ಕೆ | 11— 8 | 15— 0 |
| ಅಡಕೆ ಸೇರು ಗಿಕ್ಕೆ | 13— 8 | 14— 0 |
| ಹಿತ್ತಾಳೆ ತಗಡು ಮು. ಗಿಕ್ಕೆ | 12— 0 | 12— 0 |
| ತವರು ಗಿಕ್ಕೆ | 22— 8 | 22— 0 |
| ಹುಣಿಸೆ ಹುಳಿ ಖಂಡಿ ಗಿಕ್ಕೆ | 40— 0 | 45— 8 |
| ನೇಟಿವ್ ಕಾಫಿ ಖಂಡಿ ಗಿಕ್ಕೆ | 140— 0 | 148— 0 |
| ಫಿಟೇರಿ ಕಾಫಿ ಖಂಡಿ ಗಿಕ್ಕೆ | 185— 0 | 198— 0 |
| ಮಡಿಕೇರಿ ಏಲಕ್ಕಿಮುಡಿ | 35— 0 | 39 — 0 |

ಮಿಲಿಯಾಂತರ ಮಂದಿಯ ಭಾಗ್ಯದೇವತೆ

## ಮೋಹನದಾಸ. ಗಾಂಧಿ!!

'ಮಹಾತ್ಮಾಜಿಯವರು ತಮ್ಮ ಪೂರ್ಣ ಸಮಯವನ್ನು ಗ್ರಾಮೋದ್ಧಾರ ಮತ್ತು ಹರಿಜನರ ಸೇವೆಯಲ್ಲಿ ಕಳೆಯತೊಡಗಿದಂದಿನಿಂದ ಅವರ ಪ್ರಭಾವವು ದೇಶದ ಮೇಲೆ ಕಡಿಮೆಯಾಗುತ್ತ ಬಂದಿತ್ತು ಎಂದು ನಾವು ಊಹಿಸಿದ್ದೆವು. ಆದರೆ ನಮ್ಮ ಊಹನೆಯು ಬಯಲು ಭ್ರಮೆಯಾಯಿತು 'ಮೊದಲಿನಂತೆಯೇ ಈಗಲೂ ಗಾಂಧಿಯು ಮಿಲಿಯಾಂತರ ಮಂದಿಯ ಭಾಗ್ಯದೇವತೆಯಾಗಿದ್ದಾನೆ' ಎಂದು ರಿಚಾರ್ಡ ಫ್ರಂಡ ಎಂಬವರು 'ಸ್ಪೆಕ್ಟೇಟರ'ದಲ್ಲಿ ಬರೆಯುತ್ತಾರೆ

ಪ್ರಬಲ ವಿರೋಧಿಗಳಿದ್ದರೂ ಕಾಂಗ್ರೆಸನ್ನು ಅಪ್ರತಿಮ ರಾಜಕೀಯ ಶಕ್ತಿಯನ್ನಾಗಿ ಮಾಡಿದವನು ಗಾಂಧಿ' ಈಗ ಕಾಂಗ್ರೆಸಿನೊಳಗಿನ ಆ ಶಕ್ತಿಯನ್ನು ತನ್ನ ಕೈಯೊಳಗಿಟ್ಟುಕೊಂಡವನೂ ಅವನೆ' ಆ ಪಂಗಡ ಈ ಪಂಗಡ, ಅವನ ಇಷ್ಟ ನಂಬುದಿಲ್ಲದೆ, ಎಲ್ಲರಿಗೂ ಅವನು ಪೂಜ್ಯನಾಗಿದ್ದಾನೆ, ಆದರಣೀಯನಾಗಿದ್ದಾನೆ ಇದರ ಗುಟ್ಟೇನೆಂದರೆ, ಆವನ ಆತ್ಮಶಕ್ತಿಯ ವಿಕಾಸ ಹಿಂದೂ ದೇಶದ ಜನರಿಗೆ ಗಾಂಧಿ ಎಂದರೆ ರಾಜಕೀಯ ಮುತ್ಸದ್ದಿಯಲ್ಲ, ಅವನು ಸಂತನೆಂಬ [illegible] ಆದ್ದರಿಂದ ಗಾಂಧಿ ಯಾವ ಕೆಲಸ ಮಾಡುತ್ತಿದ್ದರೂ ಅವನ ಪ್ರಭಾವ, ಅವನ ವರ್ಚಸ್ಸು ಬೆಳೆಯುತ್ತ ಹೋಗುತ್ತದೆ

ಅಧಿಕಾರಿಗಳು ಎಂತಹ ಕಣ್ಣುಮುಚ್ಚಾಲೆಯ ಆಟವನ್ನು ಆಡಿಕೊಂಡಿದ್ದರೂ,ಗಾಂಧಿಯ ಶಕ್ತಿ ಕುಂದುತ್ತ ಬಂದಿತೆಂದೂ ಸಂತೋಷಿಸುತ್ತಿದ್ದರೂ ಹಿಂದೂದೇಶದ ಸಂಬಂಧವಾವ ಸಮಸ್ಯೆಯನ್ನು ಬಿಡಿಸಬೇಕಾದರೂ 'ಗಾಂಧಿ ಏನನ್ನುವಂತೆ?' ಎಂದು ಕೇಳಬೇಕಾದ ಸಮಯವು ಇನ್ನೂ ಮುಗಿದುಹೋಗಿರುವುದಿಲ್ಲ ಯಾಕೆ? ವ್ಯಾಸರಾಯ ಕೂಡ ಗಾಂಧಿ ಇಟ್ಟ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆಯಬೇಕಾದ ಕಾಲಬಂದಿದೆ ನೋಡಿ' ಎಲ್ಲಿಂದ ನೋಡಿದರೂ ಗಾಂಧಿಯ ಅನುಕರಣ, ಗಾಂಧಿಯ ಅನುಸರಣಗಳೇ ಕಂಡುಬರುತ್ತವೆ.

ಗಾಂಧಿ ಶಿಸ್ತು ಮತ್ತು ವ್ಯವಸ್ಥೆಯ ಪ್ರತ್ಯಕ್ಷ ಅವತಾರ, ಅವನ ಯಾವ ಚಳವಳಿಯಲ್ಲಿಯೂ ನಿಷ್ಪಕ್ಷಪಾತಿಗಳಾದವರೂ ಎಷ್ಟು ಚಿಕ್ಕ ಕುಂದು ಅಥವಾ ಕೊರತೆಯನ್ನೂ ತೋರಿಸಿಕೊಡಲಾರರು ಆದ್ದರಿಂದ ಗಾಂಧಿಯ ಮಾತು ನಂಬರೆ ಕೆಲಸಗಾರರಿಗೆ ಅದೇ ವೇದವಾಕ್ಯ ಅದರಿಂದಲೇ ಅವರಿಗ ಕೆಲಸಮಾಡಲು ಬೇಕಾದ ಅಪೂರ್ವ ಸ್ಫೂರ್ತಿ ಉತ್ಸಾಹಗಳು ಬರುತ್ತವೆ ಗಾಂಧಿಯ ಮೇಲೆ ಅವರಿಗೆ ದೃಢವಾದ ಭಕ್ತಿ ಶ್ರದ್ಧೆ ವಿಶ್ವಾಸಗಳು ಇರುವುದು ಕೂಡ—ಇದೇ ಕಾರಣದಿಂದ

ಗಾಂಧಿಯ ಮಹಾತ್ಮೆಯನ್ನು ಒಲ್ಲದೇ ಇದ್ದರು ಎಲ್ಲರಿಗೇನು ಗೊತ್ತು—ಅವನ ಮಹಾತ್ಮೆ

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಮಾಘ ಶು ೫ ಶನಿವಾರದಿಂದ, ಮಾಘ ಶು ೧೧ ಶುಕ್ರವಾರದ ವರೆಗಿನ ಪಂಚಾಂಗ (೧೯೩೮ನೇಯ ಫೆಬ್ರವರಿ ಪ್ರಯಂತೆಲ್)

| [illegible] | [illegible] | [illegible] | [illegible] | [illegible] | [illegible] | [illegible] | [illegible] |
|---|---|---|---|---|---|---|---|
| 5 | ಶನಿ | [illegible] | [illegible] | [illegible] | [illegible] | [illegible] | [illegible] |
| 6 | ರವಿ | [illegible] | [illegible] | ರೇವತಿ | [illegible] | [illegible] | |
| 7 | ಸೋಮ | [illegible] | [illegible] | [illegible] | [illegible] | [illegible] | |
| 8 | ಕುಜ | [illegible] | [illegible] | [illegible] | | [illegible] | |
| 9 | ಬುಧ | [illegible] | [illegible] | ರೋಹಿಣಿ | [illegible] | [illegible] | |
| 10 | ಗುರು | [illegible] | [illegible] | ಮೃಗಶಿರ | [illegible] | [illegible] | |
| 11 | ಶುಕ್ರ | [illegible] | [illegible] | ಆರ್ದ್ರಾ | [illegible] | [illegible] | |


# ಗರ್ಭಿನೋಲ್ ಸಂತಾನದಾಯಿನಿ,

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ, ಶ್ವೇತಪ್ರದರ, ರಕ್ತಪ್ರದರ, ಗರ್ಭಸ್ರಾವ, ಗರ್ಭಾಶಯ ವ್ರಣ, ಮೂತ್ರದ್ವಾರದ ಉರಿ, ನರಗಳ ಶಿಥಿಲ, ಪ್ರಸವಾನಂತರ ಉಂಟಾಗುವ ಕ್ಷಯ ಚಿಹ್ನೆ, ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು, ತಲೆನೋವು, ತಲೆ ತಿರುಗುವಿಕೆ, ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ಮೆದುಳಿನ ವಿಕಾರಗಳು, ಅಶಕ್ತತೆ, ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು

ಹೆಚ್ಚೇನು? ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು. ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

## "ವಿಜಯ ಗರ್ಭಿನೋಲ"

ನ್ನೆ ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು.

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ. "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ವಿಜಯ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರೆಯಾಗಿ ಗುಣಹೊಂದಿದ್ದಾರೆ. ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ'

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2—8—0.
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು:—

ವಿಜಯ ಫಾರ್ಮಸಿ, ಕೊಚ್ಚಿನ್.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು,



## THE PIE-MONEY BANK LTD,

Maidan Road, MANGALORE.

Undertakes all kinds of Banking Business. Current account at 2½%per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 months 3½%

Auction chit Funds ranging from Rs 100/ toRs 5000, run regularly on systematic lines. Unique Banking facilities to Businessmen and interested Public

*Apply for particulars*-K R. GURU, *Managing Director*



☞ ಪೇಂಟರ್ಸ್

Whenever you require the service of

*Please call on or write to:-*

Simon & Co,
*Painters.*

Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.
ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

PAINTERS

# ಟೋಲ್‌ಸ್ಟೋಯಿಯವರ ನೀತಿ

[illegible]

'ಮನುಷ್ಯನು ತನ್ನ ಜೀವನವನ್ನು [illegible] [illegible]

[illegible] 10ನೆಯ ಅಧ್ಯಾಯದ [illegible] ಇಲ್ಲಿವೆ.

[illegible]

ಟೋಲ್‌ಸ್ಟೋಯವರ ತತ್ವಗಳು [illegible] ನಮಗೆ ತುಂಬಾ ಪ್ರಾಭವದಾಗದ [illegible]

## ಹಿಂದೂದೇಶದ ದಾರಿದ್ರ್ಯದ ಕಾರಣ

([illegible])

[illegible] ದಾರಿದ್ರ್ಯದ ಈ ಕಾರಣವನ್ನು [illegible] ಕಾರ್ಯಕ್ರಮವು [illegible]



# ಧರ್ಮಾರ್ಥ ಮತ್ತು ಕಡ್ಡಾಯವಾದ ಶಿಕ್ಷಣ. ಭಾರತೀಯರಿಗೆ ಪ್ರಾರ್ಥ ಸ್ವಾತಂತ್ರ್ಯ. ಮುನಿಸಿಪಾಲಿಟಿಗಳ ಸುಧಾರಣೆಯಾಗಬೇಕು.

[illegible]

### ಹಿಂದೂ ಮಹಾಸಭೆಯ ವಿಚಿತ್ರ ವರ್ತನೆ.

[illegible]

### ಹಳ್ಳಿಗಳಲ್ಲಿ ಆಯುರ್ವೇದ.

[illegible]

### ಹಿಂದೂದೇಶದ ಮುನಿಸಿಪಾಲಿಟಿಗಳು.

[illegible]

# ಟೋಲ್‌ಸ್ಟೋಯಿಯವರ ನೀತಿ

ಅಗತ್ಯವಿದ್ದ ವ್ಯಕ್ತಿಗಳಾದ ಟೋಲ್‌ಸ್ಟೋಯಿಯವರನ್ನು ಅರಿಯದವನಿಲ್ಲ. ಗಾಂಧೀಜಿಯವರು ಅವರನ್ನು ಗುರುಭಾವದಿಂದ ಕಾಣುತ್ತಾರೆ. ಹಾಗಾದರೆ ಅವರ ತತ್ವಗಳಿಗೂ ಮಹಾತ್ಮಾಜಿಯವರ ತತ್ವಗಳಿಗೂ ಏನಾದರೂ ಹೋಲಿಕೆಯು ಇದ್ದೇ ಇರಬೇಕು. ಬಲಾತ್ಕಾರ (violence)ದ ಕುರಿತು ಅವರು ಈ ರೀತಿಯ ಅಭಿಪ್ರಾಯಪಡುತ್ತಾರೆ.

ಬಲಾತ್ಕಾರಕ್ಕೆ ಮೂರು ಕಾರಣಗಳನ್ನು ಕೊಡಬಹುದು. ಧಾರ್ಮಿಕ ತಳಹದಿಯ ಮೇಲೆ ತಲೆಯೆತ್ತಿದ ಅರಸರ ದಿವ್ಯಹಕ್ಕೆಂಬುದು ಒಂದು. ಉಳಿದುಳಿದ ಯೋಗ್ಯನಾದವನ ಹಕ್ಕೆಂಬ ವೈಜ್ಞಾನಿಕ ಕಾರಣ ಎರಡನೆಯದು. ರಾಜಕೀಯ ದೃಷ್ಟಿಯಿಂದ, ಬಹುಮತ ಇದ್ದವರು ತಮಗೆ ಅಭ್ಯಂತರಗಳೆಂದಿದ್ದವರನ್ನು ನಾಶಗೊಳಿಸುವುದು ಮೂರನೆಯದು. ಇದಲ್ಲದೆ ಭಾರತೀಯರು ಬ್ರಿಟಿಷರ ಗುಲಾಮರಾಗಿರಲು ಕಾರಣಗಳೇನೆಂಬುದನ್ನೂ ಅವರು ವಿವರಿಸಿರುವರು.

'ತಮ್ಮನ್ನು ಬ್ರಿಟಿಷರು ಗುಲಾಮರನ್ನಾಗಿ ಮಾಡಿರುವರೆಂದು ಭಾರತೀಯರು ಹೇಳುವ ಮಾತು, ಕಳ್ಳು ಮಾರುವವನು ತನ್ನನ್ನು ಗುಲಾಮನನ್ನಾಗಿ ಮಾಡಿರುವನೆಂದು ಹೇಳುವ ಕುಡಿಕನ ಮಾತಿನಷ್ಟೆ ಸತ್ಯವಾದುದು. ಬಲಾತ್ಕಾರಪೂರ್ವಕವಾಗಿ ಭಾರತೀಯರು ಗುಲಾಮರಾಗಿ ಮಾಡಲ್ಪಟ್ಟಿರುವರಾದರೆ, ಅವರೂ ಬಲಾತ್ಕಾರದಿಂದ ಜೀವನವನ್ನು ನಡೆಸುತ್ತಿರುವರು—ನಡೆಸುತ್ತಿದ್ದರು ಮತ್ತು ಮಾನವ ಸಹಜವಾದ ಪ್ರೇಮದ ಸನಾತನ ಕಟ್ಟಿನ ಕಡೆಗೆ ಅವರು ಗಮನವನ್ನು ಕೊಡುತ್ತಿಲ್ಲವೆಂದು ಹೇಳಬೇಕು. ಪ್ರೇಮತತ್ವಕ್ಕನುಸಾರವಾಗಿ, ಬಲಾತ್ಕಾರದಲ್ಲಿ ಭಾಗವಹಿಸದೆ, ಮಾನವನಾದವನು ವರ್ತಿಸತೊಡಗಿದನೆಂದರೆ, ಒಂದು ಮಿಲಿಯ ಜನರಿಂದ ನೂರಾರು ಮಂದಿಯನ್ನು ಅಷ್ಟೇಕೆ ಒಬ್ಬನನ್ನು ಕೂಡ ಗುಲಾಮಗಿರಿಯಲ್ಲಿ ಇರಿಸಲು ಆಗದ ಮಾತು, ಈ ಮಾತು ಅಸಂಭವನೀಯವೆಂದು ಕಂಡರೂ ಮಹಾತ್ಮಾಜಿಯವರು ದಕ್ಷಿಣಾಫ್ರಿಕದಲ್ಲಿಯೂ ಇಂದಿಗೆ ಭಾರತದಲ್ಲಿಯೂ ನಡೆಸುತ್ತಿರುವ ಸತ್ಯಾಗ್ರಹ ಸಮರದಿಂದ ಸುಸಾಧ್ಯವೆಂದು ಸ್ಪಷ್ಟವಾಗದಿರದು.

'ಮನುಷ್ಯರು ಮತ್ತರಾಗುವರೇಕೆ?' ಎಂಬುದಕ್ಕೆ ಟೋಲ್‌ಸ್ಟೋಯಿಯವರ ಉತ್ತರವಿಷ್ಟೆ. ಇಂದು ಮಾದಕ ಪದಾರ್ಥ ನಿಷೇಧದ ಅನುಮೋದಕರಾದವರು ಇದನ್ನು ತಿಳಿದುಕೊಳ್ಳುವುದು ಅತ್ಯಗತ್ಯ. ಜನಜನಿತವಾದ, ಅಫೀಮು, ಸುರೆ, ಬಂಗಿ, ಧೂಮ್ರಪಾನ ಮೊದಲಾದ ಮಾದಕ ವಸ್ತುಗಳ ಸೇವನೆಯು, ಅದೊಂದು ರುಚಿ, ಆನಂದ, ವಿಶ್ರಾಮ ಇತ್ಯಾದಿಗಳನ್ನು ಅವು ಒದಗಿಸಿ ಕೊಡುತ್ತವೆ ಎಂಬ ಕಾರಣದಿಂದ ನಡೆಯುತ್ತಿಲ್ಲ. ಮಾನವನ ಅಂತರಂಗದ ಕೆಲವೊಂದು ಇಚ್ಛೆಗಳನ್ನು ಅಡಗಿಸಲು ಅವು ಸಹಾಯಕವಾಗಿವೆ ಎನ್ನಬಹುದು. ನನಗೆ ಬೀಡಿ ಎಳೆಯದಿದ್ದರೆ ಬರೆಯಲಾಗುವುದಿಲ್ಲ ವೆಂದು ಹಲವರು ಹೇಳುವುದುಂಟು. ಆದರೆ ಇದರ ನಿಜವಾದ ಅರ್ಥವೇನು? ಆತನ ಬರೆಯ ಬೇಕಾದುದು ಏನೂ ಇಲ್ಲ, ಇದ್ದರೂ ಅದು ಪಕ್ವವಾಗಿಲ್ಲ, ಎಂದು ಹೇಳಬಹುದು. ಬೀಡಿ ಎಳೆಯದಿದ್ದರೆ ಕೆಲಸವನ್ನು ಅರ್ಧಕ್ಕರ್ಧದಲ್ಲಿಯೇ ನಿಲ್ಲಿಸಬೇಕಾಗಬಹುದು. ನಮ್ಮ ಆಲೋಚನೆಗಳು ಸ್ವಚ್ಛವಾಗುವ ತನಕ ಅದೇ ಪ್ರೇರಣೆಯೂ ಸಿಗಲಾಗಬಹುದು. ಹೊಗೆ ಬತ್ತಿಯನ್ನು ಸೇದದೆ ಇದ್ದರೆ ಹಿಡಿದ ಕೆಲಸವನ್ನು ನೀವು ಅಷ್ಟರಲ್ಲಿಯೇ ಬಿಟ್ಟುಬಿಡಬೇಕಾದೀತು. ಇಲ್ಲವೇ ಆಲೋಚನೆಯು ತಿಳಿಯಾಗುವ ತನಕ ಕಾಯಬೇಕಾಗಬಹುದು. ಅದೇ ಬೀಡಿ ಎಳೆದರೆ ನಿಮ್ಮೊಳಗೆ ಇದ್ದ ವಿಮರ್ಶಕನಿಗೆ ಕಣ್ಣುಕಟ್ಟಿದಂತಾಗಿ ನಿಮ್ಮ ಕಾರ್ಯಾಪ್ರವರ್ತನೆಗಿದ್ದ ಆತಂಕಗಳು ಅಡಗುವುವು.

ಶ್ರೀಮದ್ಭಗವದ್ಗೀತೆಯ 16ನೆಯ ಅಧ್ಯಾಯದ ಅರ್ಥದ್ಯೋತಕವಾದ ಮಾತುಗಳು ಇಲ್ಲಿವೆ.

'ಮನುಷ್ಯನು ತನ್ನ ಜೀವನವನ್ನು ತಿಳಿದುಕೊಳ್ಳುವಾಗ, ಆತನಿಗೆ ತನ್ನಲ್ಲಿಯೇ ಎರಡು ಜೀವಿಗಳು ಕಾಣಿಸದಿರವು—ಶಾರೀರಕ ಕುರುಡು ಜೀವಿಯೊಂದು, ಆಧ್ಯಾತ್ಮಿಕ ಪ್ರೇಕ್ಷಕ ಜೀವಿ ಇನ್ನೊಂದು. ಕುರುಡು ಜೀವಿಯು ತಿನ್ನುವುದು, ಕುಡಿಯುವುದು, ವಿಶ್ರಮಿಸುವುದು, ಮಲಗುವುದು, ಪ್ರವರ್ಧಿಸುವುದು ಮತ್ತು ಚಲಿಸುವುದು. ಕುರುಡು ಜೀವಿಯೊಡನೆ ಕಲೆತಿದ್ದ ಪ್ರೇಕ್ಷಕ ಆಧ್ಯಾತ್ಮಿಕ ಜೀವಿಯು ಕುರುಡು ಜೀವಿಯ ಕೃತ್ಯಗಳನ್ನು ತುಲನಾತ್ಮಕ ದೃಷ್ಟಿಯಿಂದ ಕಂಡು, ಅದರ ಕೃತ್ಯಗಳನ್ನು ಒಪ್ಪುವಾಗ ಅದರೊಡನೆ ಒಂದಾಗುವುದು. ಒಪ್ಪದಿರುವಾಗ ಅದರಿಂದ ಬೇರೆಯಾಗುವುದು.

ಮನುಷ್ಯರು ದುಷ್ಟ ಚಾಳಿಗಳಿಗೆ ಬಲಿ ಬೀಳುವುದೇಕೆಂದು ನೋಡೋಣ.

'ಮಾನವರ ಕವಿಯುವುದ ಇಲ್ಲವೆ ಹೊಗೆಬತ್ತಿ ಸೇದುವುದು ಬೇಸರವಾದಾಗಲ್ಲ, ಆತ್ಮಸಂತೋಷಕ್ಕಾಗಲ್ಲ, ರಂಜನೆಗಲ್ಲ, ಆದರೆ ಅವರ ಅಂತರಂಗ ಕರೆಯನ್ನು ಮುಳುಗಿಸುವುದಕ್ಕಾಗಿ ಎಂದು ಹೇಳಬಹುದು. ಇದರ ಪರಿಣಾಮವು ಮಾತ್ರ ಅದೆಷ್ಟು ಭೀಕರವಾಗಿರಬಹುದು? ಗೋಡೆಗಳನ್ನು ನೀಟವಾಗಿ ಕಟ್ಟಲು ಮೂಲೆಗಳನ್ನು ಸರಿಯಾಗಿ ನಿಲ್ಲಿಸಲು, ಮಟ್ಟ ಮೊದಲಾದ ಸಾಹಿತ್ಯಗಳನ್ನು ಉಪಯೋಗಿಸದೆ ತನಗೆ ಮನಬಂದಂತೆ ಒಂದು ಮನೆಯನ್ನು ಕಟ್ಟಿಸಿದರೆ ಅದೆಷ್ಟು ಸುಂದರವಾದೀತು? ಆದರೆ ಜೀವನದ ಕ್ರಮವೇ ಇದಾಗಿರುವುದು' ಅಂತರಂಗ ಪ್ರೇರಣೆಗನುಗುಣವಾಗಿ ನಾವಿಂದು ಜೀವನವನ್ನು ನಡೆಸುತ್ತಿಲ್ಲ. ಆದರೆ ನಮ್ಮ ಜೀವನಕ್ಕೆ ಸರಿಯಾಗಿಯೇ ಅಂತರ್ಯವನ್ನು ಬಗ್ಗಿಸುತ್ತಿರುವೆವು.'

ಟೋಲ್‌ಸ್ಟೋಯಿಯವರ ತತ್ವಗಳಿವು. ಇವುಗಳಲ್ಲಿ ಎಷ್ಟು ನಿಜಾಂಶವಿರುವುದೆಂದು ಅವುಗಳನ್ನು ಓದಿ ಮನನ ಮಾಡಿಕೊಂಡವರಿಗೆ ಮಾತ್ರ ತಿಳಿಯುವುದು. ಅಲ್ಲದೆ ಇಂದು ಆಧುನಿಕ'ವೆಂದು ಹೇಳಲ್ಪಡುವ ವಿಷಯಗಳಿಗೆ ಮನಸೋತ ನಾವು ಅವರ ಈ ತತ್ವಗಳತ್ತ ಗಮನವನ್ನು ಕೊಟ್ಟರೆ ನಮಗೆ ತುಂಬಾ ಲಾಭವಾಗದಿರದು.

---

## ಹಿಂದೂದೇಶದ ದಾರಿದ್ರ್ಯದ ಕಾರಣ

(೬ನೇ ಪುಟದಿಂದ ಮುಂದುವರಿದುದು)

ಹಿಂದೆ ಯುರೋಪ್ಯದ ಫ್ರಾನ್ಸಿನಲ್ಲಿ ನಡೆದ ಕ್ರಾಂತಿಗೆ ಕಾರಣ ಅನೇಕರ ಪರಿಶ್ರಮದ ಫಲವಾದ ಈ ಸಂಪತ್ತು ಕೆಲವೆ ಮಂದಿಗಳ ಬೊಕ್ಕಸಗಳನ್ನು ಸೇರಿದುದೇ. ಫ್ರಾನ್ಸಿನ ಕ್ರಾಂತಿಗೆ ಕಾರಣವಾಯಿತು. ಸಂಪತ್ತು ಸರಿಸಮಾನವಾದ ರೀತಿಯಲ್ಲಿ ಹಂಚಲ್ಪಡುವುದೆಂಬುದು. ಕಾಂಗ್ರೆಸ್ಸಿನಿಂದ ಭರವಸೆಯು ದೊರಕಿರುವುದು. ಸಂಪೂರ್ಣ ಸಂಪತ್ತಿನ ಮೂರನೆ ಒಂದು ಶವು ಶೇಕಡ 5 ರಷ್ಟು ಜನರೊಡನಿರುವ ಈ ದೇಶದಲ್ಲಿ ಪೂರ್ಣ ಬೇರ್ಪಾಟು ಆಗಲೇ ಬೇಕು. ದಾರಿದ್ರ್ಯದ ಈ ಕಾರಣವನ್ನು ನಿವಾರಿಸಲಿಕ್ಕೆ ಕಾಂಗ್ರೆಸ್ ಕಾರ್ಯಕ್ರಮವು ಯುಕ್ತ ಬೇಗನೇ.

---



# ಧರ್ಮಾರ್ಥ ಮತ್ತು ಕಡ್ಡಾಯವಾದ ಶಿಕ್ಷಣ. ಭಾರತೀಯರಿಗೆ ಪೂರ್ಣ ಸ್ವಾತಂತ್ರ್ಯ. ಮುನಿಸಿಪಾಲಿಟಿಗಳ ಸುಧಾರಣೆಯಾಗಬೇಕು.

### ಪಾಟಿಯಾಲದ ಮಹಾರಾಜರು

ಫೆಡರೇಶನಿನ ಕುರಿತು ಸರ್ ತೇಜ್ ಬಹದ್ದೂರ್ ಸಪ್ರೂಗಳನ್ನು ವಿಚಾರಿಸುವರಾಗಿ, ವಾರ್ತೆಯು ಹರಡಿರುತ್ತದೆ. ಸರ್ ಸಪ್ರೂರವರು ತಮ್ಮ ಉದ್ಯೋಗ ಕಾರ್ಯ ನಿಮಿತ್ತ ಪಾಟಿಯಾಲಾ ಸಂಸ್ಥಾನಕ್ಕೆ ತೆರಳಿದುದು ಈ ವಾರ್ತೆಗೆ ಕಾರಣವಾಗಿರುತ್ತದೆ. ಪಾಟಿಯಾಲದ ಮಹಾರಾಜರು ಆಶ್ರಿತರಾಜರ ಸಂಘದ ಚಾನ್ಸಲರರಾಗಿರುವುದರಿಂದ, ಫೆಡರೇಶನಿನ ಕುರಿತು ಸರ್ ಸಪ್ರೂಗಳವರ ಅಭಿಪ್ರಾಯವನ್ನು ಕೇಳುವರೆಂಬ ವಾರ್ತೆಯಿಂದ ಆಶ್ರಿತ ರಾಜರ ಸಂಘದ ಸಭೆಯೊಂದು ಫೆಡರೇಶನಿನ ಕುರಿತು ಆಲೋಚಿಸಲು [illegible]ವರಿ ಫೆಬ್ರುವರಿಯಲ್ಲಿ ಸೇರಲಿದೆ.

### ಹಿಂದೂ ಮಹಾಸಭೆಯ ವಿಚಿತ್ರ ವರ್ತನೆ

ಜಪಾನೀಯರು ಚೀನಾದ ಮೇಲೆ ಆಕ್ರಮಿಸಿದುದನ್ನು ಖಂಡಿಸಿದ ಭಾರತ ಕಾಂಗ್ರೆಸ್ಸಿನೊಡನೆ ನಾವಿಲ್ಲವೆಂಬುದಾಗಿ, ಹಿಂದೂ ಮಹಾಸಭೆಯ ಕಾರ್ಯದರ್ಶಿ ಬರೆದ ಒಂದು ಪತ್ರವು ಜಪಾನೀಯ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು. ಹಿಂದೂ ಮಹಾಸಭೆಯು ಹಿಂದೂದೇಶದ [illegible] ಜನರ ಪ್ರತಿನಿಧಿ ಎಂದೂ [illegible] ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಹಿಂದೂದೇಶವು ಐಕ್ಯಮತದಿಂದ ಚೀನಾದ ಮೇಲೆ ಜಪಾನೀಯರು ನಡೆಯಿಸ[illegible] ಅತಿಕ್ರಮವನ್ನು ಖಂಡಿಸುತ್ತಿರುವಾಗ, ಹಿಂದೂ ಮಹಾಸಭೆಯ ಕಾರ್ಯದರ್ಶಿಗಳು ಹೀಗೆ ಬರೆಯಲು ಕಾರಣವೇನೆಂದು ಹಿಂದೂದೇಶದಲ್ಲೆಲ್ಲಾ ಪ್ರಶ್ನೆಯು ಹೊರಟಿರುತ್ತದೆ. ಹಿಂದೂ ಮಹಾಸಭೆಗೆ ಇದರಿಂದ ಯಾವ ಉಪಕಾರವಾಗುವುದೋ ನಮಗೆ ತಿಳಿಯದು.

### ಹಳ್ಳಿಗಳಲ್ಲಿ ಆಯುರ್ವೇದ

ಹಳ್ಳಿಗಳ ವೈದ್ಯಕೀಯ ಸೇವೆಯ ಪುನರ್ನಿರ್ಮಾಣಕ್ಕೆಗೊಳಿಸುವ ಯೋಜನೆಯೊಂದು ಯುಕ್ತ ಪ್ರಾಂತ್ಯದ ಸರಕಾರದಿಂದ ರಚನೆಯಾಗಿರುತ್ತದೆ.

ಪಾಶ್ಚಾತ್ಯ ವೈದ್ಯಕೀಯ ಕ್ರಮಕ್ಕಿಂತ ದೇಶೀಯ ವೈದ್ಯಕೀಯವೇ ಶ್ರೇಷ್ಠವಾದುದೆಂಬ ಅಭಿಪ್ರಾಯದಿಂದ, ಯುಕ್ತ ಪ್ರಾಂತ್ಯದ ಪ್ರತಿಯೊಂದು ಹಳ್ಳಿಯಲ್ಲಿ ಒಂದು ಆಯುರ್ವೇದಿಕ ಡಿಸ್ಪೆನ್ಸರಿಯು ಇರುವಂತೆ ಏರ್ಪಾಡು ಮಾಡಲಾಗುವುದು. ಇದಲ್ಲದೆ, ಪಾಶ್ಚಾತ್ಯ ಕ್ರಮದ ಎಂಬ್ಯುಲೆನ್ಸು ಒಂದು ಅಲ್ಲಲ್ಲಿ ಸಂಚರಿಸುವಂತೆ ಏರ್ಪಾಡು ಮಾಡಲಾಗುವುದು.

### ಗಾನ, ನರ್ತನದ ಹಬ್ಬ.

ಹರಿಪುರ ಕಾಂಗ್ರೆಸ್ ಅಧಿವೇಶನ ನೇತೃತ್ವದಲ್ಲಿ ಜರಗುವ ಪ್ರದರ್ಶನದಲ್ಲಿ ಅನೇಕ ವಿನೋದಗಳಿಂದ ಕೂಡಿದ ಕಾರ್ಯಕ್ರಮವು ನಡೆಯಿಸಲಾಗುವುದೆಂದು ತಿಳಿದುಬರುತ್ತದೆ.

ಪ್ರಸಿದ್ಧ ಕಲಾಗಾರರಿಂದ ಕಲಾ ಪ್ರದರ್ಶನದಲ್ಲಿ ಪ್ರಾಚೀನ ಮತ್ತು ಆಧುನಿಕ ಕಾಲದ ಕಲೆಯು ಪ್ರದರ್ಶಿಸಲಾಗುವುದು.

ಸಟರಮುಕಿ ಆಶ್ರಮದ ಶ್ರೀ ನಾರಾಯಣ ರಾವ್ ಕಾರೆಯವರು ಈ ಪ್ರದರ್ಶನದ ಪ್ರಾರಂಭದಿಂದ ಒಳ್ಳೆ ಆಕರ್ಷಣೀಯ ತೆರದ ಕಾರ್ಯಕ್ರಮದಿಂದ ಕೂಡಿದ ಗಾಯನದ ವ್ಯವಸ್ಥೆಯನ್ನು ಮಾಡುವರು. ಈ ಬಗ್ಗೆ ಅವರು ದೇಶದ ಎಲ್ಲಾ ಪ್ರಸಿದ್ಧ ಗಾಯಕರನ್ನು ಆಮಂತ್ರಿಸಿರುವರು. ಅಲ್ಲದೆ, ವಿವಿಧ ಸಂಸ್ಥೆಗಳ ವಿದ್ಯಾರ್ಥಿಗಳಿಂದ ರಾಸ, ಗರ್ಭಾ ಇತ್ಯಾದಿ ನೃತ್ಯಗಳು ನಡೆಯುವ ಏರ್ಪಾಡು ಮಾಡಲಾಗಿದೆ.

### ಹಿಂದೂದೇಶದ ಮುನಿಸಿಪಾಲಿಟಿಗಳು. ಈ ಕುರಿತು ರಾಷ್ಟ್ರಪತಿ ನೆಹರೂರವರ ವಿಮರ್ಶೆ:

ನಾಗರೀಕರ ಹಿತವು ನಗರ ಸಭೆಗಳ ಧ್ಯೇಯವಾಗಿರಬೇಕು. ನಗರದ ಆಡಳಿತವು ಸಾಂಗವಾಗಿ ನಡೆಯುವಂತೆ ಮುನ್ಸಿಪಲ್ ಕಮಿಟಿಗಳು ಹೊಣೆಗಾರರಾಗಿರುವವು. ಆದರೆ ಹಿಂದೂದೇಶದ ಮುನ್ಸಿಪಲ್ ಕಮಿಟಿಗಳು ನಾಗರೀಕರ ಹಿತಸಾಧಿಸುವ ತಮ್ಮ ಪ್ರಾಮುಖ್ಯ ಧ್ಯೇಯವನ್ನು ಮರೆತು, ಕೆಲವು ಚಿಲ್ಲರೆ ಪ್ರಕರಣಗಳ ಕುರಿತ. ಮಹಾ ಶ್ರಮಗಳನ್ನು ವಹಿಸುತ್ತಿರುವುದು ಕಂಡುಬರುತ್ತದೆ. ನಗರಸಭೆಗಳು ರಸ್ತೆ ನಿರ್ಮಾಣ, ಶೌಚ್ಯ, ಬೆಳಕು ಮತ್ತು ನೀರು ಇತ್ಯಾದಿಗಳಲ್ಲಿ ಪೂರ್ಣ ಮಗ್ನರಾಗಿ ತಮ್ಮ ತಾಣದಲ್ಲಿರುವ ಜನರಿಗೆ ಬೇಕಾದ ಆಹಾರ, ಉಳಕೊಳ್ಳಲು ಸ್ಥಳವನ್ನು ಒದಗಿಸುವ ಪ್ರಾಮುಖ್ಯವಾದ ಸೈಗಳನ್ನು ಮರೆತುಬಿಡಬಾರದು. ಯಾವನೊಬ್ಬನಾದರೂ ಆಹಾರವಿಲ್ಲದವನಾಗದಂತೆಯೂ ನಗರದಲ್ಲಿ [illegible] ದ್ಯೋಗಿಗಳಿರದಂತೆಯೂ ಮಾಡುವುದು ಪ್ರತಿಯೊಂದು ನಗರ ಸಭೆಯ ಆದ್ಯ ಕರ್ತವ್ಯವಾಗಿರುತ್ತದೆ. ಮುನ್ಸಿಪಾಲಿಟಿಯಿಂದ ಕೈಗಾರಿಕಾ ಸಂಸ್ಥೆಗಳು ಸ್ಥಾಪನೆಹೊಂದಬೇಕು. ಪುಸ್ತಕಭಂಡಾರಗಳ ಹೆಚ್ಚಿಸಲ್ಪಡಬೇಕು.

ಗತಿಸಿದ [illegible] ರಾಷ್ಟ್ರಪತಿ ಜವಾಹರಲಾಲ ನೆಹರೂರವರಿಗೆ [illegible] ಲಿಟಿಯು ದ ಒಪ್ಪಿಸಲಾದ ಬಿನ್ನಹಕ್ಕೆ ಉತ್ತರವೀಯುತ್ತಾ ಅವರು ಮೇಲಿನ ಅಭಿಪ್ರಾಯವನ್ನೊಳಗೊಂಡ ವಿಮರ್ಶೆಯನ್ನು ಮಾಡುತ್ತಾ ಅದಕ್ಕೆ ಉತ್ತರವಿತ್ತರು.

ಹಿಂದೂದೇಶದ ಲೋಕಲ್ ಬೋರ್ಡುಗಳು [illegible] ಹೊಣೆಗಾರಿಕೆಯುಳ್ಳದವೆಂದಾಗಿ [illegible] ರೆಂದೂ [illegible] ದೂರಕ್ಕೆ ಲೋಕಲ್ ಬೋರ್ಡುಗಳ ಚುನಾವಣೆಯು ನಡೆಯಬೇಕೆಂದೂ ಶ್ರೀ ನೆಹರೂರವರ ಅಭಿಪ್ರಾಯವಾಗಿರುತ್ತದೆ. ಕಾಂಗ್ರೆಸ್ ವಾಲರನ್ನೇ ನಗರ ಸಭೆಯ ಮತ್ತು ಲೋಕಲ್ ಬೋರ್ಡುಗಳ ಸದಸ್ಯರನ್ನಾಗಿ ಆರಿಸಬೇಕೆಂದೂ ಶ್ರೀಯುತರು ವಿನಂತಿಮಾಡಿಕೊಂಡಿರುತ್ತಾರೆ.

### ಸಂಯುಕ್ತ ಪ್ರಾಂತ್ಯದ ಪ್ರಾಥಮಿಕ ಶಾಲೆಗಳು.

ಪ್ರಾಂತ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಕಾಗದ ತಯಾರಿಸುವದರಲ್ಲಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವ ವ್ಯವಸ್ಥೆಯಿರುವಂತೆ ನೋಡಬೇಕಾಗಿ ಅಲ್ಲಿಯ ಸರಕಾರದ ವಿದ್ಯಾಖಾತೆಯು ಶಾಲಾ ಇನ್ಸಪೆಕ್ಟರರಿಗೆ ಒಂದು ಸರ್ಕ್ಯುಲಾರನ್ನು ಕೊಟ್ಟಿರುವುದು.

### ಚೀನಾದ ಕುರಿತು ಸರಿಯಾದ ವಾರ್ತೆಗಳು ಬರುವುದಿಲ್ಲ.

ಚೀನಾ–ಜಪಾನ್ ಯುದ್ಧದ ಕುರಿತು ಸರಿಯಾದ ವಾರ್ತೆಗಳು ಬರುವುದಿಲ್ಲ. ಚೀನಿಯರು ಕೆಲವು ದಿವಸಗಳಿಂದ ಜಪಾನೀಯರಿಂದ ಒಂದು ಬಂದರವನ್ನು ಹಿಡಿದ ವಾರ್ತೆಯು, ಅದು ತಮಗೆ ಬೇಡವೆಂದು ಬಿಟ್ಟುಬಿಟ್ಟೆವೆಂದು ಜಪಾನೀಯರು ಪ್ರಕಟಿಸಿದ ನಂತರ, ಬಂದಿರುತ್ತದೆ. ಇದೇ ರೀತಿಯಲ್ಲಿ ಜಪಾನೀಯರು ಈ ಮೊದಲು ಹಿಡಿದಿರುವ ಪ್ರದೇಶಗಳನ್ನು ತ್ಯಜಿಸಬೇಕಾಗಿ ಬಂದಿರುವ ಸಂದರ್ಭಗಳು ಉಂಟಾಗಿದ್ದವೆಂದು ವಾರ್ತೆಯಿದೆ. ಜಪಾನೀಯರಿಗೆ ಚೀನಿಯರ ವಿರೋಧವು ಬಲ ಹೊಂದುವುದರಿಂದಲೇ ಜಪಾನೀಯರು ಹೀಗೆ ಹಿಂದೆ ಸರಿಯುತ್ತಿರುವುದಂತೆ.

### ವಿದ್ಯಾಮಂದಿರ ಯೋಜನೆ.

ಮಧ್ಯಪ್ರಾಂತ್ಯದ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ ರವಿಶಂಕರ ಶುಕ್ಲಾರವರು ಪ್ರಾಂತ್ಯದಲ್ಲಿ ಶಿಕ್ಷಣವು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ನಡೆಯಿಸುವ ಒಂದು ಯೋಜನೆಯನ್ನು ರಚಿಸಿರುವರು. ಪ್ರತಿಯೊಂದು ಹಳ್ಳಿಯಲ್ಲಿ ೪೦ ಮಂದಿ ವಿದ್ಯಾರ್ಥಿಗಳಿರುವ ಒಂದು ಶಾಲೆಯನ್ನು ಸ್ಥಾಪಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ವಿದ್ಯಾಮಂದಿರಗಳಲ್ಲಿ ಶಿಕ್ಷಣವು ಮಾತೃಭಾಷೆಯಲ್ಲಿಯೇ ನಡೆಯುವುದು. ಈ ವಿದ್ಯಾಮಂದಿರವು ಹಳ್ಳಿಗೆ ಸ್ಫೂರ್ತಿದಾಯಕವಾಗಿರಬೇಕು. ಆಯಾಯ ಹಳ್ಳಿಗಳ ವಾತಾವರಣಗೆ ತಕ್ಕುದಾದ ಶಿಕ್ಷಣವು ಅಲ್ಲಿ ಕೊಡಲಾಗುವುದು. ಹಳ್ಳಿಜೀವನ, ವ್ಯವಸಾಯ ಇತ್ಯಾದಿಗಳಲಿ ಹಳ್ಳಿಗರ ಮಕ್ಕಳ ತರಬೇತಿ ಇಲ್ಲಿ ನಡೆಯಬೇಕು. ಈ ವಿದ್ಯಾಮಂದಿರಗಳು ದೇವಾಲಯ, ಇಗರ್ಜಿ, ಮಸೀದಿ, ಮಠ ಇತ್ಯಾದಿ ಧರ್ಮ ಸಂಸ್ಥೆಗಳಿಂದಲೂ, ಜಮೀನ್ದಾರ ಸಾಹುಕಾರ, ಸರ್ಕಾರ್ ದಾರರಿಂದಲೂ ಉದಾರಾಶ್ರಯವನ್ನು ಹೊಂದಿಕೊಂಡ [illegible] ಸ್ಥಾಪನೆಯಾಗಬೇಕು.

ಪ್ರಕೃತಕ್ಕೆ ಸರಕಾರವು ಈ ತರದ ವಿದ್ಯಾಮಂದಿರಗಳನ್ನು ಎಲ್ಲಾ ತಾಲೂಕುಗಳಲ್ಲಿ ಪರೀಕ್ಷಾರ್ಥವಾಗಿ ತೆರೆಯುವುದು. ಪ್ರತಿಯೊಂದ ವಿದ್ಯಾ[illegible] ಸ್ಥಳವು ಕೊಡಲಾಗುವುದು. [illegible] ನೂಲುವುದು, ವ್ಯವಸಾಯ, [illegible] ಉದ್ಯೋಗಗಳಲ್ಲಿ ಮಕ್ಕಳನ್ನು ತರಬೇತಿಗೊಳಿಸಿ ವಿದ್ಯಾಮಂದಿರದ ವ್ಯಯವು [illegible] ವ್ಯವಸಾಯದ ಬಲದಿಂದಲೇ ನಡೆಯಬೇಕು. ಈ ವಿದ್ಯಾಮಂದಿರದಲ್ಲಿ ಗ್ರಾಮಸಾಮ್ರಾಜ್ಯದ [illegible] ಶಿಕ್ಷಣಗೈದ ಒಬ್ಬೊಬ್ಬ ಉಪಾಧ್ಯಾಯನಿರುವನು. ಆತನು ಗ್ರಾಮಜೀವನದ ಸಕಲ ವ್ಯವಹಾರಗಳ [illegible] ಅರಿತವರಾಗಬೇಕು. ಈ ವಿದ್ಯಾಮಂದಿರಗಳಲ್ಲಿ ಶಿಕ್ಷಣ ಮಾತ್ರವಲ್ಲದೆ, ಗ್ರಾಮ ಶೌಚ್ಯ ಮತ್ತು ಆರೋಗ್ಯ, ವ್ಯವಸಾಯ ಇತ್ಯಾದಿಗಳ ಪ್ರಗತಿಯಾಗುವ ತೆರದಲ್ಲಿ ಕಾರ್ಯ ನಡೆಯಬೇಕು. ಈ ಮಂದಿರಗಳ ತಮ್ಮದೇ ಎಂಬ ಭಾವನೆಯು ಹಳ್ಳಿಗರನ್ನು ಹೊಂದಿಕೊಂಡಿರಬೇಕು.

### ಬಿಹಾರಿನ ನೂತನ ಸ್ಕೀಮು.

ಜ್ಯುಡಿಸಿಯರಿಯನ್ನು ಎಕ್ಸಿಕ್ಯೂಟಿವ್ ನಿಂದ ವಿಂಗಡಿಸುವ ಯೋಜನೆಯು ಬಿಹಾರಿನ ಎಡ್ವೋಕೇಟ ಜನರಲ್‌ರಿಂದ ರಚನೆಯಾಗಿ ಈಗ ಪ್ರಕಟವಾಗಿರುತ್ತದೆ. ಅದನ್ನು ಆಲೋಚಿಸುವರೆ, ಒಂದು ವಿಶಿಷ್ಟ ಸಮಿತಿಯು ಬಿಹಾರ ಸರಕಾರದಿಂದ ನೇಮಿಸಲ್ಪಟ್ಟಿರುವುದು. ಮದ್ರಾಸಿನಲ್ಲಿ ಈ ತರದ ಯೋಜನೆಯನ್ನು ಕೈಕೊಳ್ಳದೆ ಇದ್ದಕ್ಕೆ ರಾಜಾಜಿಗಳವರ ಮೇಲೆ [illegible] ಟೀಕೆಯು ನಡೆದಿತ್ತು.

### ಗುಡಿ ಕೈಗಾರಿಕೆಗಳ ಒಡವೆಗಳು.

ಬಿಹಾರಿನ ಗುಡಿ ಕೈಗಾರಿಕೆಗಳ ಒಡವೆಗಳಿಗೆ ಬಹಿರ್ ದೇಶಗಳಲ್ಲಿ ಗಿರಾಕಿಗಳು ಹೆಚ್ಚುತ್ತಿದ್ದವೆಂದೂ, ಪಾಟ್ನಾ ನಗರದ ಗುಲ್ಜಾರ್ ಭಾಗ್ ಗುಡಿ ಕೈಗಾರಿಕೆ ಸಂಸ್ಥೆಯವರ ವರದಿಯಾಗಿರುತ್ತದೆ.

ಈ ಸಂಸ್ಥೆಯಲ್ಲಿ ಸಿದ್ಧವಾಗುತ್ತಿರುವ ಹತ್ತಿಯ ಬಟ್ಟೆಗಳಿಗೆ, ಪರೀಕ್ಷಾರ್ಥವಾಗಿ ಅಮೇರಿಕಾದಿಂದ ಆರ್ಡರುಗಳು ಬಂದಿವೆ ಎಂದೂ ಯುಕ್ತ ಅಮೇರಿಕಾದ ನ್ಯೂಯೋರ್ಕಿನಲ್ಲೂ, ಕೆನಡಾದಲ್ಲೂ, ಈ ಸಂಸ್ಥೆಯು ಪ್ರವರ್ತಕರನ್ನು ನೇಮಿಸಿರುವುದೆಂದು, ಮೇಲಿನ ವರದಿಯಲ್ಲಿದೆ.

### ಹಿಟ್ಲರನು ಹಿಂದೂದೇಶದಲ್ಲಿ ಒಂದು ಸ್ಥಳವನ್ನು ಪಡೆದಿರುವನು.

ಪೋರ್ತುಗೀಸ್ ಸರಕಾರದೊಡನೆ ವ್ಯವಹಾರ ನಡೆಯಿಸಿ, ಜರ್ಮನ್ ಸರಕಾರವು ಪಶ್ಚಿಮ ಹಿಂದೂದೇಶದಲ್ಲಿರುವ 'ಡಯ್ಯು' ಎಂಬ ದ್ವೀಪವನ್ನು ಪಡೆದುಕೊಂಡಿರುವರೆಂದು ತಿಳಿದುಬರುತ್ತದೆ. ಈ ದ್ವೀಪವು ಅರಬಿ ಸಮುದ್ರದಲ್ಲಿ ಯುದ್ಧ ಸನ್ನಾಹದ ಕಾರ್ಯಗಳಿಗೆ ಬಹಳ ಉಪಕಾರಯುಕ್ತವಾಗುವುದಂತೆ. ಇಲ್ಲಿ ಧಾರಾಳ ಯುದ್ಧಶಸ್ತ್ರ ಸಿಡಿಮದ್ದುಗಳನ್ನು ಶೇಖರಿಸಿಡುವ ವ್ಯವಸ್ಥೆಯನ್ನು ಹಿಟ್ಲರನು ಮಾಡುವನಂತೆ.

### ಒಂದು ಮಹಾ ಹೋರಾಟ.

ಒಮಾನ್ ದೇಶದ ಎಲ್ಲ ಪ್ರದೇಶದಲ್ಲಿ ಮಜೂರರ ಮಹಾಮುಷ್ಕರವೊಂದು ನಡೆಯುತ್ತಿದೆ.

ಮಜೂರರ ದೃಢಸಂಕಲ್ಪ ಮಾಡಿದಂತೆ ಕಾಣುತ್ತದೆ. [illegible] ಕಂಪನಿಗೆ [illegible] ದೃಢವಾಗಿ [illegible] ಯೋಗ್ಯತೆಯು ಇರುವುದ[illegible]

[illegible] ಸರಕಾರದ [illegible] ಮಜೂರರು ಕಾಂಗ್ರೆಸ್ [illegible]

[illegible]

### ಲಂಡನಿನಲ್ಲಿ ಭಾರತೀಯ ಸ್ವಾತಂತ್ರ್ಯ ದಿನಾಚರಣೆ

[illegible] ಲಂಡನಿನಲ್ಲಿ ನಡೆದ ಭಾರತೀಯ ಸ್ವಾತಂತ್ರ್ಯ ದಿನಾಚರಣೆಯ [illegible] ಸಭೆಯ [illegible] ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು [illegible] ಭಾಷಣವಿತ್ತರು. ವರ್ಣಭೇದದಿಂದ ಭಾರತೀಯರ ಮೇಲೆ ಆಫ್ರಿಕಾ ಇತ್ಯಾದಿ ಕಡೆಗಳಲ್ಲಿರುವ ನಿರ್ಬಂಧಕ್ಕಾಗಿ ಇವರು ವಿಷಾದವನ್ನು ಸೂಚಿಸಲ್ಪಟ್ಟಿತು. ಕಾಂಗ್ರೆಸ್ಸಿನ ನಾಯಕತ್ವದಲ್ಲಿ ಭಾರತೀಯರ ಬಲದ ಅರಿವು ಆದುದರಿಂದಲೇ ಅವರಿಗೆ [illegible] ಇಂಡಿಯಾ ಆಕ್ಟು ಕೊಡಲಾಯಿತೆಂದೂ ಈ ಆಕ್ಟಿನಲ್ಲಿ ಏನೂ ಸಾರವಿಲ್ಲವೆಂದೂ [illegible] ಅವರು ಅಭಿಪ್ರಾಯಪಟ್ಟರು. ಪ್ರೊಫೆಸರ್ [illegible] ವಿಚಾರಣೆಯಿಲ್ಲದೆ ಕೈದಿಗಳನ್ನು ಬಂಧನದಲ್ಲಿ ಇಡುವ ಧೋರಣೆಯನ್ನು ಖಂಡಿಸಿ ಭಾಷಣವಿತ್ತರು.

### ಸೋವಿಯಟ್–ಜಪಾನ್ ತಿಕ್ಕಾಟ

ಕಳೆದ ದಶಂಬರ [illegible]ನೇ ದಿನ ಚೀನಾ ದೇಶದ ಜಪಾನೀಯರ ವಶದಲ್ಲಿರುವ ಮಂಚೂಕ್ಯುವಿನಲ್ಲಿ, ಸೋವಿಯಟ್ಟಿನ ಅಂಚೆ ವಿಮಾನವೊಂದು ನಿಲ್ಲಿಸಲ್ಪಟ್ಟುದಕ್ಕಾಗಿ— ಈಗ ಸೋವಿಯಟ್ ಜಪಾನಿನೊಡನೆ ಅಂಚೆ ವ್ಯವಹಾರವನ್ನು ನಿಲ್ಲಿಸುವ ನಿರ್ಧಾರವಮಾಡಿದೆ. ಈ ನಿರ್ಧಾರದಿಂದ ಜಪಾನ್ ಮತ್ತು ರಷ್ಯಾದೇಶಗಳೊಳಗೆ ಅಂಚೆ ವ್ಯವಹಾರವು ನಿಲ್ಲಿಸಲ್ಪಡುವುದಲ್ಲದೆ, ರಷ್ಯದ ಮೂಲಕ ಜಪಾನು ಇತರ ದೇಶಗಳೊಡನೆ ಮಾಡುವ ಅಂಚೆ ವ್ಯವಹಾರವು ನಿಂತುಹೋಗುವುದು.

ಚೀನಾದೇಶದ ಹಾಂಕೌ ನಗರದ ಮೇಲೆ ಜಪಾನೀಯರ [illegible] ವಿಮಾನಗಳು ಬಾಂಬುಗಳನ್ನು ಸುರಿಸಿ, ಅಲ್ಲಿನ ವಿಮಾನ ನಿಲ್ದಾಣವನ್ನು ಧ್ವಂಸಮಾಡಿದರು. ಅಲ್ಲಿರುವ ಆಯುಧಶಾಲೆಗಳನ್ನು ನಾಶಮಾಡಲು ನಡೆದ ಅವರ ಯತ್ನಗಳು ಫಲಕಾರಿಯಾಗಲಿಲ್ಲ.

ಶಾಂಗ್ಹಾಯಿ ಸುತ್ತಮುತ್ತಲೂ ಚೀನಿಯ ಸೈನಿಕರು ಜಪಾನೀಯ ಸೈನಿಕರನ್ನು ಪೀಡಿಸುತ್ತಿರುವರು. ಅಲ್ಲಿ ಜಪಾನೀಯರ ಸ್ಥಿತಿಯು ಬಹಳವಾಗಿ ಕೆಟ್ಟುಹೋಗಿದೆ.

# ನೋಟುಗಳು.—Note. .....s

ವರಿಷ್ಠ ಎಸೆಂಬ್ಲಿಯಲ್ಲಿ ಸೇನಾಂಗಗಳಿಗೆ ಯಂತ್ರ ಸನ್ನಾಹವನ್ನು ಒದಗಿಸುವ ವಿಷಯವಾಗಿ ಚರ್ಚೆಯುಂಟಾಗಿ, ಅದು ಹೊತ್ತುಮೀರಿ ನಡೆದುದರಿಂದ, ಅಲ್ಲಿಗೇ ಮುಕ್ತಾಯಹೊಂದಬೇಕಾಯಿತು. ಇದೂ ಇತ್ಯರ್ಥವಾಗದಂತೆ ಸೂಚನೆಗಳನ್ನು ಮುಗಿಸುವ ಒಂದು ಕ್ರಮ

° ° ° °

ಇಟಲಿ, ಜರ್ಮನಿ, ರಷ್ಯಾ, ಜಪಾನುಗಳ ಯುದ್ಧಸನ್ನಾಹವನ್ನು ಕಂಡು ಸಂಶಯಗೊಂಡೊ ಅಥವಾ ಮುಂಜಾಗ್ರತೆಗೆಂದೊ, ಇತರ ರಾಷ್ಟ್ರಗಳೂ ತಮ್ಮ ಸನ್ನಾಹಗಳನ್ನು ಹೆಚ್ಚಿಸುತ್ತಾ ಬರುವವು. ಇಂಗ್ಲೆಂಡು ಇದೊಂದು ವರ್ಷದೊಳಗೆ ಬಹಳ ತೀವ್ರವಾಗಿ ಸನ್ನಾಹ ಹೆಚ್ಚಿಸಿಕೊಂಡಿದೆ. ಇದಕ್ಕಾಗಿ ಇಂಡಿಯಾ ಸರಕಾರಕ್ಕೆ ಆರು ಲಕ್ಷ ಹಣ ತೆತ್ತು, ಇಲ್ಲಿನ ಬ್ರಿಟಿಷ ಸೇನಾವಿಭಾಗವನ್ನು ಪೂರ್ಣ ಸನ್ನಾಹಗೊಳಿಸಲು ಪಾರ್ಲಿಮೆಂಟಿನ ಸೂಚನೆಯಿದೆ

° ° ° °

ಇದರಿಂದ ಇಂಡಿಯಾ ಸರಕಾರಕ್ಕೆ ೨೪೩ ಲಕ್ಷ ರೂಪಾಯಿ ಹೆಚ್ಚಿಗೆ ವ್ಯಯವಾಗುವುದು. ಸನ್ನಾಹಗೊಳ್ಳುವ ಸೇನೆಗಳು ಹಿಂದೀ ಸೇನೆಗಳಲ್ಲ, ಬ್ರಿಟಿಷ ಸೇನೆಗಳು. ಹಿಂದೀ ಸೇನೆಗಳನ್ನು ಹೆಚ್ಚಿಸಿ ಬಲಗೊಳಿಸುವುದಕ್ಕಾದರೆ ಯಾರೂ ಆಕ್ಷೇಪವೆತ್ತುತ್ತಿರಲಿಲ್ಲ. ಈ ಪಾರ್ಲಿಮೆಂಟಿನ ಗ್ರಾಂಟನ್ನು ಪಡೆದುದಕ್ಕಾಗಿ, ಇಷ್ಟು ಅಪಾರ ಹಣವು ವ್ಯಯಿಸುವುದೇಕೆ ಎಂದು ಪ್ರಶ್ನೆ, ಸನ್ನಾಹಸಾಮಗ್ರಿಗಳೆಲ್ಲವನ್ನು ಇಲ್ಲಿ ತಯಾರಿಸದೆ, ಇಂಗ್ಲೆಂಡಿನಿಂದಲೇ ತರಿಸುವ ಕಾರಣ, ಅಲ್ಲಿನವರಿಗೆ ಉದ್ಯೋಗವೂ ಹಣವೂ ದೊರೆತು, ಅಲ್ಲಿಂದ ಬಂದ ಸೈನ್ಯವೇ ಬಲಗೊಳ್ಳುವಂತಾಗುತ್ತದೆ ಎಂದು ಆಕ್ಷೇಪ. ಸಮಯವೆಲ್ಲ ಚರ್ಚೆಯಲ್ಲೇ ಮುಗಿಯಿತು ಹೊರತು, ಇತ್ಯರ್ಥವಾಗಲಿಲ್ಲ.

° ° ° °

ಫೆಡರೇಶನ್ ಸ್ಕೀಮನ್ನು ನಿರಾಕರಿಸಿ ಒಂದು ಠರಾವನ್ನು ಮದ್ರಾಸು ಮಂತ್ರಿಮಂಡಲವು ಎಸೆಂಬ್ಲಿಯಲ್ಲಿ ಮುಂತಂದು ಮಂಜೂರು ಮಾಡಿಕೊಂಡಿತು. ಪ್ರಾಂತಿಕ ಪ್ರತಿನಿಧಿಗಳೊಡನೆ, ದೇಶೀಯ ರಾಜ್ಯಗಳಿಂದ ನೊಮಿನೇಟೆಡ್ ಮೆಂಬರರು ಕೂತು, ತುಂಬ ರಕ್ಷಣಾಸೂತ್ರಗಳುಳ್ಳ ಸಭೆಯಲಿ ಸೇರಿ, ದೇಶವನ್ನು ಉದ್ಧಾರ ಮಾಡಲಿರುವುದಿಲ್ಲವಾಗಿ ಸ್ಪಷ್ಟಹೇಳಲಾಯಿತು

° ° ° °

ಇತರ ಯಾವತ್ತೂ ಪ್ರಾಂತಿಕ ಸರಕಾರಗಳೂ ಹೀಗೆಯೇ ನಿರ್ಣಯಗಳನ್ನು ಮಂಜೂರ್ಮಾಡಿದರೆ, ಫೆಡರೇಶನಿನ ಅಂತರಂಗವು ಬಹಿರಂಗವಾಗಿ, ಬ್ರಿಟಿಷ ಸರಕಾರವು ಕಣ್ತೆರೆವಂತಾಯಿತೆಂದು ಇಲ್ಲಿನ ಮಂತ್ರಿಗಳ ಹಾರೈಕೆಯಿದೆ. ಕಾಂಗ್ರೆಸು ಅಧಿಕಾರ ವಹಿಸಿರುವ ಪ್ರಾಂತ್ಯಗಳಲ್ಲಿ ಅದು ಹಾಗೆಯೇ ಅಧಿಕಾರ ನಡೆಸುವುದು, ಫೆಡರೇಶನ್ ಮುರಿಯಲು ಪ್ರಯತ್ನಗಳನ್ನು ಕೌನ್ಸಿಲುಗಳ ಹೊರಗೆಯೇ ಕಾಂಗ್ರೆಸ್ ಸಾಧಿಸುವುದು ಎಂದೂ ಸೂಚಿಸಲಾಗಿದೆ

° ° ° °

ಚುನಾವಣೆಯ ಕಾಲದಲ್ಲಿ, ರೈತರ ಋಣವಿಮೋಚನೆಗೆ ಕಾನೂನು ಮಾಡುತ್ತೇವೆಂದುದಕ್ಕೆ ಈ ಕಾನೂನು ಮುಂದೆ ಬಂದುದೇ? ಎಂದೊಬ್ಬರು ಎಸೆಂಬ್ಲಿಯಲಿ ಪ್ರಶ್ನೆಕೇಳಿದರು. ಚುನಾವಣೆಯ ಕಾಲದಲ್ಲಿ ನಾನಾ ಬಗೆಯ ಭರವಸೆ ಕೊಟ್ಟು, ಅನಂತರ ಅದನ್ನೆಲ್ಲ ಮರೆತವರ ಸಾಲಿಗೆ ಕಾಂಗ್ರೆಸ್ ಮಂತ್ರಿಗಳು ಸಿಲ್ಲಲು ಅಪೇಕ್ಷಿಸುವುದಿಲ್ಲವಷ್ಟೆ

---

## ರೈತರ ಋಣವಿಮೋಚನಾ ಬಿಲು

ಮದ್ರಾಸು ಎಸೆಂಬ್ಲಿಯಲ್ಲಿ ಒಂದು ಕಾನೂನಾಗಿ ಮಂಜೂರಾಗಿ, ಅದೀಗ ಕೌನ್ಸಿಲಿಗೆ ಬಂದಿರುತ್ತದೆ. ಈ ಬಿಲಿನಲ್ಲಿ ಅನೇಕ ಬದಲಾವಣೆಗಳಾಗಬೇಕೆಂದು ಬಂದ ಎಮೆಂಡ್‌ಮೆಂಟ್‌ಗಳು ಒಂದೊಂದೆ ನಿರಾಕರಿಸಲ್ಪಟ್ಟು, ಅವುಗಳಲ್ಲಿ ಹೆಚ್ಚಿನವುಗಳು ಬಹುಮತದಿಂದ ತಿರಸ್ಕರಿಸಲಾದುವು. ಈ ಬಿಲಿನಲ್ಲಿ ಸಾಧ್ಯವಾಗುವ ಮಟ್ಟಿಗೆ ಎಮೆಂಡ್‌ಮೆಂಟುಗಳನ್ನು ಮಾಡಲಾಗಿದೆಯೆಂದೂ ಪ್ರಧಾನ ರಾಜಾಜಿಯವರು ತಿಳಿಸಿರುವರು. ಸಾಲವೆಂಬುದೆ ರೈತರ ಮಹಾ ಪೀಡೆ. ಅದರ ನಿವಾರಣೆಯಾಗದೆ ದೇಶದ ಅಭ್ಯುದಯವಾಗದು. ಆದ್ದರಿಂದ ಈ ಬಿಲಿನ ಅಗತ್ಯವಿದೆ ಎಂಬುದು ರಾಜಾಜಿಯವರ ಮತವಾಗಿರುತ್ತದೆ. ಈ ಬಿಲಿನಿಂದ ಕೆಲವು ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಸ್ವಲ್ಪ ನಷ್ಟ ತೊಂದರೆಗಳು ಉಂಟಾಗುವುದು ನಿಜ. ಆದರೆ ದೇಶಕ್ಕೆ ಬೇಕಾದ ಆಹಾರವನ್ನು ತಯಾರಿಸುತ್ತಿರುವ ವ್ಯವಸಾಯದ ಮಹಾ ಪೀಡೆಯನ್ನು ನಿವಾರಿಸುವ ಅದರ ಉದ್ದೇಶದ ಎದುರು ಅವೆಲ್ಲಾ ಅಲ್ಪವಾದುವುಗಳೆಂದು ರಾಜಾಜಿಯವರ ಅಭಿಪ್ರಾಯವಾಗಿರುತ್ತದೆ




ನಿಮ್ಮ ಚರ್ಮವ್ಯಾಧಿಗಳೆಲ್ಲವನ್ನೂ ಕೊನೆಗಾಣಿಸಿರಿ

ರಾತ್ರಿ ಮಲಗುವಾಗ ಸಾಂಬಕ್ ಉಜ್ಜಿರಿ

ಅಸಹ್ಯವಾದ ದದ್ದು ಕಜ್ಜಿ ವ್ರಣಗಳು ಸಾಂಬಕ್ಕನ್ನು ಬಿಡದೆ ಉಪಯೋಗಿಸುವುದ ರಿಂದ ಗುಣವಾಗುವುದು. ರಾತ್ರಿ ಮಲಗುವ ಮುಂಚೆ ವ್ಯಾಧಿಗಳಿರುವ ಸ್ಥಳಕ್ಕೆ ಸಾಂಬಕ್ ಹಚ್ಚಿ. ನೀವು ನಿದ್ರಿಸುವಾಗ ಅದು ಕೆಲಸಮಾಡಲು ಬಿಡಿ. ಸಾಂಬಕ್‌ನಲ್ಲಿರುವ ಉತ್ತಮ ವನಸ್ಪತಿ ತೈಲಗಳನ್ನು ಚರ್ಮವು ಸುಲಭವಾಗಿ ಹೀರಿಕೊಳ್ಳುವುದು. ಹಾಗೆಯೆ ನೋವು ತಗ್ಗಿ, ಊದು ಇಳಿದು, ಕೀವು ಸುರಿಯುತ್ತಿರುವದು ಒಣಗಿಹೋಗುವುದು. ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಸಾಂಬಕ್ಕು ರೂಪಾಯಿ 1 ಮತ್ತು ೨-೪-೦ರಂತೆ ಒಂದು ಡಬ್ಬಿ ಸಿಗುವುದು

ಏಜಂಟರು — ಮೆಸ್ಸರ್ಸ್ ರಾಧಾ ಎಂಡ್ ಕೊ, ಪಿ. ಟಿ. ಮದ್ರಾಸು

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ.

ಸಾಂಬಕ್

Zam Buk


# ಕೋಮುವಾರು ಭೇದವಿರಬಾರದು

ಬಂಗಾಳದ ಸ್ಥಳೀಯ ಸಂಸ್ಥೆಗಳ ಸಚಿವರಾದ ಮಿ। ಸೈಯ್ಯದ್ ನೌಶರಾಲಿಯವರು, ಅ। ಬಂಗಾಳ ಮುನ್ಸಿಪಲ್ ಪರಿಷತ್ತಿನಲ್ಲಿ ಮಾತನಾಡುತ್ತಾ ಮುನಿಸಿಪಾಲಿಟಿ ಇತ್ಯಾದಿ ಸ್ಥಳೀಯ ಸಂಸ್ಥೆಗಳಲ್ಲಿ 'ಸ್ವದಸ್ಯತನಗಳನ್ನು ವಿಂಗಡಿಸುವುದರಿಂದ ರಾಷ್ಟ್ರೀಯತೆಗೆ ಹಾನಿಬರುವುದೆಂಬುದಾಗಿ ಭಾಷಣವಿತ್ತಿರುವರು. ಮುಂಬಯಿ ಸರಕಾರದ ಸಾರ್ವಜನಿಕ ಕಾಮಗಾರಿಯ ಸಚಿವರಾದ ಮಿ। ಬಿ ವೈ ನೂರಿಯವರು 'ಇಸ್ಲಾಂ ಅಪಾಯದಲ್ಲಿದೆ' ಎಂಬ ಸುಳ್ಳು ಭೀತಿಯನ್ನು ಹೊರಡಿಸುವವರ ವರ್ತನೆಯನ್ನು ಖಂಡಿಸಿಯೂ ಪ್ರತಿಯೋರ್ವ ಮುಸ್ಲಿಮನೂ ಸ್ವಾತಂತ್ರ್ಯಹೋರಾಟದಲ್ಲಿ ಭಾಗಿಗಳಾಗಬೇಕೆಂದೂ ಕೋರಿ ಮುಂಬಾಯಿಯ ಒಂದೆಡೆ ಭಾಷಣವಿತ್ತಿರುವರು

---

ಶ್ರೀ। ಮನುಸುಭೇದಾರರು

## ಹತ್ತಿಯನ್ನು ಪಡೆಯುವ ಕುರಿತು

ಜಪಾನೀಯರಿಗೂ ಭಾರತೀಯ ವರ್ತಕ ಮಂಡಲಕ್ಕೂ ಕೆಲವು ಭೇದಾಭಿಪ್ರಾಯಗಳು ಉಂಟಾಗಿವೆ. ಜಪಾನೀಯರ ವರ್ತನೆಯು ಈ ಮೊದಲು ಹತ್ತಿ ವ್ಯಾಪಾರದ ಕುರಿತಾದ ಒಪ್ಪಂದಕ್ಕೆ ವಿರೋಧವಾಗಿರುವುದೆಂದೂ, ಅದಲ್ಲದೆ, ಅದು ಇಂಡೋಜಪಾನ್ ವ್ಯಾಪಾರ ಒಪ್ಪಂದಕ್ಕೆ ವಿರೋಧವಾಗಿರುವುದೆಂದೂ ಕೇಂದ್ರ ಎಸೆಂಬ್ಲಿಯ ಹಿಂದೀಯ ವರ್ತಕರ ಪ್ರತಿನಿಧಿಗಳಾದ ಶ್ರೀ। ಮನುಸುಭೇದಾರ್ ಇವರ ಅಭಿಪ್ರಾಯವಾಗಿರುತ್ತದೆ

---

## ಎಲ್ಲರೂ ಐಕ್ಯಹೊಂದಿಕೊಂಡು ಕಾರ್ಯ ಸಾಧಿಸಬೇಕು

—ಈಗಿನ ಕೃತದ ಅಂತರರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯು, ಭಾರತೀಯರಿಗೆ ತಮ್ಮ ಗುರಿಯನ್ನು ಹೊಂದಲು ಒಂದು ಮಹಾ ಅನುಕೂಲವಾಗುತ್ತದೆ. ಆದ್ದರಿಂದ ಜಾತಿ, ಮತ ಭೇದಗಳನ್ನು ತೊರೆದು ಕಾಂಗ್ರೆಸ್ ಕೋರಿಕೆಗಳನ್ನು ಬಲಪಡಿಸುವ ತೆ ಎಲ್ಲರೂ ಐಕ್ಯಹೊಂದಬೇಕು ಎಂಬದಾಗಿ ನವರಾಷ್ಟ್ರಪತಿ ಶ್ರೀ। ಸುಭಾಶ್ಚಂದ್ರ ಬೋಸರು ಬಂಗಾಳ ಪ್ರಾಂತೀಯ ರಾಜಕೀಯ ಪರಿಷತ್ತಿನ ಸಮಯ ಮಾಡಿದ ತಮ್ಮ ಭಾಷಣದಲ್ಲಿ ಕೋರಿರುವರು. ಅಲ್ಲದೆ ಇಂದಿನ ಸರಕಾರ ಆಡಳಿತವು ಪ್ರಜಾಮತವನ್ನನುಸರಿಸಿ ನಡೆಯುವುದಿಲ್ಲ. ಜನರಿಗೆ ಅವರ ದಿನದ ವ್ಯವಹಾರದಲ್ಲಿ ಉಂಟಾಗುವ ಕಷ್ಟಗಳನ್ನು ಸುಧಾರಿಸಲು ಈಗ ಅಸಾಧ್ಯವೆನಿಸಿದೆ. ಹಳ್ಳಿಗರು ದೇಶದ ಸರಕಾರದ ಆಡಳಿತದಲ್ಲಿ ಭಾಗಿಗಳಾಗುವಂತೆ ಮಾಡುವುದೇ ಕಾಂಗ್ರೆಸ್ಸಿನ ಧ್ಯೇಯವು. ಹಳ್ಳಿಗಳಿಂದ ಬರುವ ಸೂಚನೆಗಳು ಹಳ್ಳಿಗಳಿಂದ ನಗರಕ್ಕೂ, ನಗರದಿಂದ ಪ್ರಾಂತ್ಯಕ್ಕೂ ಆಗ ದಿಲ್ಲಿಯಲ್ಲಿರುವ ಕೇಂದ್ರಕ್ಕೆ ಹೋಗಬೇಕು ಎಂಬುದಾಗಿ ಭಾಷಣ ಮಾಡಿರುವರು,

## ಶಾಹಿದ್‌ಗಂಜ್ ಚಳವಳ.

ಶಾಹಿದ್‌ಗಂಜ್ ವ್ಯಾಜ್ಯವು ಲಾಹೋರಿನ ಹೈಕೋರ್ಟಿನಲ್ಲಿ ಸಿಕ್ಖರಿಗೆ ಗುಣವಾಗಿದ್ದು, ಈ ಕುರಿತು ದೇಶದ ಎಲ್ಲಾ ಕಡೆಗಳ ಮುಸ್ಲಿಮರಲ್ಲಿ ಒಂದು ತರದ ವಿರೋಧಭಾವವು ಉಂಟಾದುದು ಕಂಡುಬರುತ್ತದೆ. ಅನೇಕ ಪ್ರಾಮುಖ್ಯ ಕೇಂದ್ರಗಳಲ್ಲಿ ಶಾಹಿದ್‌ಗಂಜ್ ಚಳವಳವನ್ನು ಆಚರಿಸಬೇಕಾಗಿ ಚಳವಳವು ಪ್ರಾರಂಭವಾಗಿರುತ್ತದೆ. ರಾವಲ್ಪಿಂಡಿಯ ಜುಮ್ಮಾ ಮಸೀದಿಯಲ್ಲಿ ಫೆಬ್ರವರಿ ತಾ. ೧೩ (ಯಿದ್ ದಿನಾಚರಣೆಯ ಸಮಯ) ರಲ್ಲಿ, ಒಂದು ಲಕ್ಷ ಜನರು ಬಾದಶಾಹಿ ಮಸೀದಿಯಲ್ಲಿ ಕೂಡಿಬಂದು ಶಾಹಿದ್ಗಂಜ್ ಕಡೆಗೆ ಮೆರವಣಿಗೆಯಲ್ಲಿ ಹೋಗಬೇಕಾಗಿ ನಿರ್ಧಾರವಾಗಿರುತ್ತದೆ

---

ಸಾಲಗಾರರ ಬಿಲು ಮುಂಬಯಿ ಅಸೆಂಬ್ಲಿಯ ಮುಂದೆ ಬಂದು, ಅದನ್ನೀಗ ಒಂದು ಸಿಲೆಕ್ಟ್ ಕಮಿಟಿಯ ವಿಮರ್ಶೆಗಾಗಿ ಒಪ್ಪಿಸಿರುವರು. ಸಾಲಗಾರರ ಹಾವಳಿಯನ್ನು ಕಡಿಮೆ ಮಾಡುವುದೇ ಈ ಬಿಲಿನ ಉದ್ದೇಶವಾಗಿರುತ್ತದೆ

---

ಸದ್ಯದಲ್ಲೇ ವಾರ್ಧದಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಪ್ರಾಂತ್ಯಗಳ ಪ್ರಧಾನರು ಹಾಜರಾಗುವರಾಗಿ ತಿಳಿದುಬರುತ್ತದೆ

---

## ಚೀನಾ—ಜಪಾನ್ ಪ್ರಕರಣ.

ಜಪಾನು ಎಣಿಸಿದಂತೆ, ಚೀನಾ-ಜಪಾನ್ ಯುದ್ಧವು ಬೇಗನೇ ಮುಗಿಯುವ ಹಾಗಿಲ್ಲ. ಚೀನಿಯರ ವಿರೋಧವು ದಿನೇ ದಿನೇ ವೃದ್ಧಿಯಾಗುತ್ತಾ ಬರುತ್ತಿರುವುದರಿಂದ, ಅಲ್ಲಿ ದೀರ್ಘಸಮಯದ ಯುದ್ಧ ಚಟುವಟಿಕೆಗಳನ್ನು ನಡೆಯಿಸಲು ಜಪಾನಿನ ಸಂಗ್ರಾಮಮಂತ್ರಿಗಳು ತಕ್ಕ ಸಿದ್ಧತೆಗಳನ್ನು ಮಾಡುತ್ತಿರುವರು. ತನ್ಮಧ್ಯೆ ಬ್ರಿಟನ್—ಜಪಾನ್ ಸಂಬಂಧವು ಕೆಡುತ್ತಾ ಬರುವ ಚಿಹ್ನಗಳು ಕಾಣಿಸುತ್ತವೆ. ಬ್ರಿಟಿಷರು ತಮ್ಮ ಜನಾಂಗಿಕ ಮತ್ತು ಸಾಂಪತ್ತಿಕ ರಕ್ಷಣೆ ಬಗ್ಗೆ ಬೇಕಾದ ವ್ಯವಸ್ಥೆಗಳನ್ನು ಮಾಡುವುದರ ಕುರಿತು ತಮ್ಮ ಆಸ್ಥೆಯಿಲ್ಲದಿದ್ದರೂ, ಅವರು ಚೀನಾದ ರಾಜಕೀಯದಲ್ಲಿ ಕೈಹಾಕಿದರೆ ಆಗ, ಜಪಾನಿಗೆ ಬ್ರಿಟನಿನ ಮೇಲೆ ಬೀಳಲೇಬೇಕಾಗಿ ಬರುವುದೆಂದು ಜಪಾನಿನ ಮುಖ್ಯ ಮಂತ್ರಿಗಳು ಒಂದು ಎಚ್ಚರಿಕೆಯನ್ನು ಹೊರಡಿಸಿರುವರು. ಬ್ರಿಟಿಷರ ಹೋಂಗ್‌ಕಾಂಗಿನಿಂದ ಚೀನಾದೇಶಕ್ಕೆ ಧಾರಾಳ ಯುದ್ಧಶಸ್ತ್ರ, ಮದ್ದುಗುಂಡು ದೊರಕುತ್ತಿರುವುದರಿಂದ ಅದಕ್ಕೆ ತಡೆಹಾಕಬೇಕಾಗಿ ಜಪಾನಿಯರ ಪ್ರಯತ್ನಗಳು ನಡೆಯುತ್ತಿವೆ. ಆದುದರಿಂದ, ಚೀನಾದ ಕುರಿತು ಬ್ರಿಟಿಷ್—ಜಪಾನ್ ಪ್ರಭುತ್ವಗಳೊಳಗೆ ಒಂದು ಒಪ್ಪಂದವಾಗುವ ಸಂಭವಗಳು ಕಡಿಮೆಯೆನ್ನಬೇಕು

---

## ಜನಾಂಗ ಮಂಡಳವು ನಿಷ್ಪ್ರಯೋಜನಕರವೆನಿಸಿದೆ

ಚೀನಾ-ಜಪಾನ್ ಕಲಹ ನಿವಾರಣೆ ಮಾಡಿ, ಚೀನಾದ ಮೇಲೆ ಜಪಾನಿನ ಅನ್ಯಾಯ ಅತ್ಯಾಚಾರಗಳು ನಡೆಯುದಂತೆ ಮಾಡಲು ಜನಾಂಗ ಮಂಡಲಕ್ಕೆ ಅಸಾಧ್ಯವಾದುದು ಕಾಣಿಸುತ್ತದೆ. ಶಾಂತಿ ರಕ್ಷಣೆ ವಿಚಾರದಲ್ಲಿ ಜನಾಂಗ ಮಂಡಳವು ನಿಷ್ಪ್ರಯೋಜಕ ಸಂಸ್ಥೆಯಾದುದು ಇದರಿಂದ ಕಂಡು ಬರುತ್ತದೆ. ಜನಾಂಗ ಮಂಡಳದ ಕೌನ್ಸಿಲಿನ ಸಭೆ ಜರಗಿ, ಚೀನಾದ ಮೇಲೆ ಜಪಾನ್ ಕೈಗೊಂಡಿದ ಕುರಿತು ಆಲೋಚಿಸಲಾಗುವುದಂತೆ. ಜನಾಂಗ ಮಂಡಳವು ಈ ಕುರಿತು ಒಂದು ದೃಢವಾದ ಧೋರಣೆಯನ್ನು ಕೈಕೊಳ್ಳಬೇಕಾಗಿ, ಚೀನಿಯ ಪ್ರತಿನಿಧಿಗಳು ಕೋರಿರುವರೆಂದು ವಾರ್ತೆಯಿದೆ. ಜನಾಂಗ ಮಂಡಲಕ್ಕೆ ಯಾವತ್ತೂ ತರದ ಪ್ರಭಾವವಿಲ್ಲವೆಂದೂ, ಈ ಮೊದಲೆ ಎಬಿಸೀನಿಯ, ಇತ್ಯಾದಿ ಪ್ರಕರಣಗಳಿಂದ ವ್ಯಕ್ತವಾಗಿರುವಾಗ, ಚೀನಿಯ ಪ್ರತಿನಿಧಿಗಳು ಅದರೊಡನೆ ಮಾಡಿದ ಈ ಕೋರಿಕೆಯಿಂದ ಆಶ್ಚರ್ಯವಾಗುತ್ತದೆ,

THE
## BANK OF MANGALORE LTD.,
MANGALORE.

ESTD 1931

*Branches* -
Panemangalore, Mudabidri & Padubidri.

*Chairman*—**Philip J. Chandran, Esq.,**
*Retd. Dt. Registrar of Joint Stock Companies*

On & from 1st of January 1937,
Fixed Deposits will be received at following rates of interest

| | | |
|---|---|---|
| For 3 months | | 3½% |
| „ 6 „ | | 4% |
| „ 12 „ | | 5% |
| „ 24 | & upwards | 5½% |

Interest Payable Quarterly

Saving Bank deposit 3½% on daily balances

**All kinds of banking business transacted**

U. R PAI, N. U PAI, *Managing Directors*

## ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದಾರ್ಬಲ್ಯತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1 4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ
P O Peridepi (ನೆಲ್ಲೂರು ಜಿ.)

## HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಯಂಟೈನ್,
ಉಪಯೋಗಿಸಿರಿ.

ಶ್ರೀ ವೆಂಕಟೇಶ ಬ್ರಾದರ್ಸ್,
ರಥಬೀದಿ ಬಜಾರ್, ಮಂಗಳೂರು

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

## 'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ
## ಈ ದಿನವೇ ಚಂದಾದಾರರಾಗಿರಿ.

## S. U. N. & Co.,

*Silk Merchants,*
Chaukhamba BENARES CITY

ಉಗಿನ ತರಹ (ಕಾಶಿ) ಬೆನಾರೆಸ್ ಸೀರೆ ಕರ್ಚೀಫ್ ಕಾರದಿ ನಮ್ಮನ್ನು ... ಉಗಿ ಕಯ ... ಸುಲಭ ... 18 ಮೊಳದ 2½ ಅಗಲದ ಸಣ್ಣ ಬುಟ್ಟಿ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಸೀರೆಗಳು ರೂ 35ರಿಂದ ರೂ 65 ... ಸಾದಾ ಸೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯರ್,
ಚೌಕಂಬಾ, ಬೆನಾರೆಸ ಸಿಟಿ

ಎಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ. ನಿಮ್ಮ ಸೌಂದರ್ಯವನ್ನೂ ಸ್ವಚ್ಛತನವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

## ಲಿಮ್ಡಾ ಸೋಪು
### ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ - ಬೊಂಬಾಯಿ & ಮದ್ರಾಸು

ಒದಗಿಸಿಕೊಡುವವರು -

## ಸೇಠ್ ನಾಗಜೀ ಪುರುಷೋತ್ತಮ ಕಂಪನಿ,
ಕಲ್ಲಿಕೋಟೆ (ಮಲಬಾರು)

I visited the Office of the Bhuvanendra Products Ltd I wish the same very success as I am told they are rendering help to the poor by the supply of medicines free of cost. I wish the institution every success.

(*Sd*) V. V Giri,
4-10-1937 *Minister of Labour*

**Bhuvanendra Products Ltd**, Katapady, S Kanara

# ಶ್ರೀಮಾನ ಚಕ್ರವರ್ತಿ ರಾಜಗೋಪಾಲಾಚಾರಿ

ಮದ್ರಾಸಿನ ಪ್ರಧಾನಾಮಾತ್ಯ ಚಕ್ರವರ್ತಿ ರಾಜಗೋಪಾಲಾಚಾರ್ಯರು ಜಗತ್ತಿನ ಮಹಾಪುರುಷರಲ್ಲಿ ಒಬ್ಬರಾಗಿರುವರು. ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರೂ ಇವರ ಅನಂತರದ ಗಣನೀಯ ಸ್ಥಾನವು ಅವರಿಗೆ ಪ್ರಾಪ್ತವಾಗಿದೆ.

ಆಚಾರ್ಯರಿಗೆ ಆಕರ್ಷಣೀಯವಾದ ಅಂಗಸೌಷ್ಠವವಾಗಲೀ ವ್ಯಕ್ತಿತ್ವವಾಗಲೀ ಇರುವದಿಲ್ಲ. ಕಂಡ ಮಾತ್ರದಿಂದ ಯಾರೂ ಅವರನ್ನು ಮಹಾಪುರುಷರೆಂದು ಹೇಳಲಾರರು. ಪರಂತು ಒಮ್ಮೆಗೆ ಮಾತುಕತೆ ಬೆಳೆಸಿದರೆಂದರೆ, ಆಗತಾನೇ ಅವರ ಅಗಾಧ ಪ್ರತಿಭೆಯ ಪರಿಚಯವಾಗಲಿಕ್ಕೆ ಆರಂಭವಾಗುವದು. ಆಚಾರ್ಯರಂಥ ಮಹಾ ಮೇಧಾವಿಗಳಾಗಲೀ, ವಿಚಾರವಿವೇಕ ಶಕ್ತಿಸಂಪನ್ನರಾಗಲೀ, ಉತ್ತಮೋತ್ತಮ ಗುಣಶೀಲ ಭರಿತರಾಗಲೀ ಪ್ರಪಂಚದಲ್ಲಿ ಇನ್ನೊಬ್ಬರಿರುವದು ಅಪರೂಪ.

ಆಚಾರ್ಯರ ಜೀವನವೆಂದರೆ ಅದು ಬಿಡಿಸಲಿಕ್ಕಾಗದ ಒಗಟು. ಆ ಒಗಟನ್ನು ಬಿಡಿಸುವದು ಆಚಾರ್ಯರ ಪ್ರಾಣದ ಶತ್ರುವಿಗಾಗಲೀ ಜೀವದ ಗೆಳೆಯನಿಗಾಗಲೀ ಸಾಧ್ಯವಲ್ಲ, ಅಂದಮೇಲೆ ಸಾಮಾನ್ಯರ ಮಾತೇನು? ಆಚಾರ್ಯರು ತಮ್ಮದೊಂದು ಆತ್ಮಕತೆಯನ್ನು ಬರೆದರೆ ಅವರ ಜೀವನ ಸತ್ಯ ಸಂಗತಿಗಳು ಹೊರಬಿದ್ದಾವು; ಲೋಕಕ್ಕೂ ಇತಿಹಾಸಕ್ಕೂ ಉಪಕಾರವಾದೀತು. ಇಲ್ಲವಾದರೆ ಅವರ ಜೀವನದ ಕಥಾವಿಷಯವು ಅಂತೆಯ ಕಂತೆಯಾಗಿಯೇ ಉಳಿಯುವದು.

ತಮ್ಮ ಕೋಳಿಗೇ ಮೂರು ಕಾಲೆಂದು ಛಲಹಿಡಿಯುವ ಹಠವಾದಿಗಳು ನಮ್ಮ ಆಚಾರ್ಯರು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಸಾಧ್ಯಾಸಾಧ್ಯತೆಯನ್ನು ಲೆಕ್ಕಿಸದ ಆದರ್ಶವಾದಿಗಳು ಅವರಾಗಿರುವರೆಂದು ಮತ್ತೆ ಕೆಲವರು ಹೇಳುತ್ತಾರೆ. ಗಯಾ ಕಾಂಗ್ರೆಸಿನ ಕಾಲದ ಅವರ ವರ್ತನೆ, 1928ನೇ ಇಸವಿಯ ಎಪ್ರಿಲ್ ತಿಂಗಳಲ್ಲಿ ದಿಲ್ಲಿಯಲ್ಲಿ ಕೂಡಿದ ವರ್ಕಿಂಗ ಕಮಿಟಿಯಲ್ಲಿ ಅವರ ಆಚರಣೆ ಇವುಗಳಿಂದ ಆ ಜನರು ಹೇಳುವದು ಸತ್ಯವೆಂದೂ ತೋರುತ್ತದೆ.

ಆದರೆ ಆಚಾರ್ಯರು ಹಟಕ್ಕೂ ಹೀಗಿರುವರೆ? ಆಚಾರ್ಯರಷ್ಟು ದಯಾಳುಗಳು ಇನ್ನೊಬ್ಬರಿಲ್ಲವೆಂದು ಕೆಲವರನ್ನುವರು. ಅವರಷ್ಟು ನಿರ್ದಯಿಗಳು, ಕ್ರೂರಿಗಳು ಮತ್ತೊಬ್ಬರಿಲ್ಲವೆಂದು ಮತ್ತೆ ಕೆಲವರು ಹೇಳುವರು. ಕೆಲವು ಜನರು ಆಚಾರ್ಯರನ್ನು ಮಹಾ ಉಪದ್ರವಿಗಳೆಂದೂ ಇಲ್ಲದ ಕಿರಿಕಿಟಿಗಳನ್ನು ಎಬ್ಬಿಸುವವರೆಂದೂ ಹೇಳುವರು. ಮತ್ತೆ ಕೆಲವರು ಅವರಷ್ಟು ನಿರುಪದ್ರವಿಗಳು, ಸಜ್ಜನರು ಮತ್ತಾರೂ ಇಲ್ಲವೆನ್ನುವರು.

ಹೀಗೆ ಆಚಾರ್ಯರನ್ನು ಕುರಿತು ಒಬ್ಬೊಬ್ಬರು ಒಂದೊಂದು ರೀತಿಯಿಂದ ಹೇಳುವರು. ತೆಗಳಿದವರೇ ಅವರನ್ನು ಹೊಗಳುವರು, ಹೊಗಳಿದವರೇ ತೆಗಳುವರು. ಯಾರನ್ನು ನಂಬಬೇಕು, ಯಾರನ್ನು ನಂಬದಿರಬೇಕು? ಆಚಾರ್ಯರ ಜೀವನದ ಕತೆಯನ್ನು ಹೇಳುವದೆಂದರೆ ಹುಟ್ಟು ಕುರುಡರು ಆನೆಯ ಒಂದೊಂದು ಅಂಗವನ್ನು ಮುಟ್ಟಿ ನೋಡಿ, ಆನೆಯ ವರ್ಣನೆ ಮಾಡಿದ ಹಾಗಿದೆ. ಆನೆಯ ವಿಷಯವಾಗಿ ಕುರುಡರಾಡಿದ ಮಾತುಗಳು ಸುಳ್ಳಲ್ಲ, ಪರಂತು ಸತ್ಯವೂ ಅಲ್ಲ. ಹಾಗಿವೆ— ಆಚಾರ್ಯರ ವಿಷಯವಾಗಿ ಜನರ ಅಭಿಪ್ರಾಯಗಳು! ಎಲ್ಲರೂ ಸರಿ, ಎಲ್ಲರೂ ತಪ್ಪು!!

ಆಚಾರ್ಯರು ಹಾಗಾಗಿದ್ದಾರೆ, ಹೀಗಾಗಿದ್ದಾರೆ/ಎನ್ನುವದಕ್ಕಿಂತ ಅವರು ಹಾಗಾಗಿಲ್ಲ ಹೀಗಾಗಿಲ್ಲ ಎನ್ನುವದು ಸುಲಭ. ಅವರಲ್ಲಿ ಇದ್ದ ಗುಣಗಳನ್ನು ಎತ್ತಿ ತೋರಿಸುವದಕ್ಕಿಂತ ಇಲ್ಲದ ಗುಣಗಳನ್ನು ತಿಳಿಸಿಕೊಡುವದು ಸುಲಭ. ಯಾಕೆಂದರೆ ಆಚಾರ್ಯರಲ್ಲಿ ಇರುವ ಗುಣಗಳು ಹೆಚ್ಚು; ಇಲ್ಲದ ಗುಣಗಳು ಕಡಿಮೆ.

ಆಚಾರ್ಯರಂಥ ಮೇಧಾವಿ ಪುರುಷರು ಪ್ರಪಂಚದಲ್ಲೇ ಇರುವದಿಲ್ಲ. ಪಾಶ್ಚಾತ್ಯ ಪೌರ್ವಾತ್ಯಗಳೆಲ್ಲಾ ವಿದ್ವಾಂಸರು ಅವರನ್ನು ಶ್ಲಾಘಿಸಿದ್ದಾರೆ. ಬುದ್ಧಿ ಸಾಮರ್ಥ್ಯ, ತರ್ಕ ಪಾಂಡಿತ್ಯದಿಂದ ತಾವು ಆಚಾರ್ಯರನ್ನು ಸೋಲಿಸುವೆವೆಂದು ಯಾರಾದರೂ ಮುಂದೆ ಬರುವದಾದರೆ ಅವರಂಥ ಮೂರ್ಖರು ಇನ್ನೊಬ್ಬರಿಲ್ಲ. ಮಹಾ ಮೇಧಾವಿಗಳೆಂದು ಹೆಸರು ಪಡೆದ ದೇಶಬಂಧು ದಾಸ, ಮೋತಿಲಾಲ ನೆಹರು, ಶ್ರೀನಿವಾಸ ಅಯ್ಯಂಗಾರ, ಎಂ. ಆರ್. ಜಯಕರ ಮೊದಲಾದವರು ಕೂಡ ಆಚಾರ್ಯರೊಡನೆ ತರ್ಕಿಸಿ ಸೋಲನ್ನು ಒಪ್ಪಿಕೊಂಡಿರುವರು. ಅಸಹಕಾರ ಚಳವಳದ ಇತಿಹಾಸವನ್ನು ಬಲ್ಲವರು ಇದನ್ನು ಚೆನ್ನಾಗಿ ಬಲ್ಲರು.

ಅವರ ಮೇಧಾಶಕ್ತಿಯನ್ನು ಅರಿಯಲಿಕ್ಕೆ ಅಸಹಕಾರ ಚಳವಳದ ಇತಿಹಾಸವನ್ನು ಓದುವದು ಕೂಡ ಬೇಡ. ಇತ್ತೀಚೆಗೆ ನಡೆದ ಘಟನೆಯನ್ನೇ ತೆಗೆದುಕೊಳ್ಳೋಣ. ಕೃಷಿಕರ ಸಾಲ ನಿವಾರಣಾ ಮಸೂದೆಯನ್ನು ಪ್ರಕಟಿಸಿದಾಗ ಆಚಾರ್ಯರ ರಾಜಕೀಯ ಜೀವನವು ಮುಗಿಯಿತು, ಅವರು ಈ ಮಸೂದೆಯನ್ನು ಮುಂದೆ ತಂದು, ತಮ್ಮ ಕೊಡಲಿಯಿಂದ ತಮ್ಮ ಕಾಲುಗಳನ್ನೇ ಕಡಿದುಕೊಂಡರು, ಮದ್ರಾಸಿನ ಕಾಂಗ್ರೆಸ ಮಂತ್ರಿಮಂಡಳದ ಉಜ್ವಲ ಭವಿಷ್ಯವು ಮಂದವಾಯಿತು ಎಂದು ಮೊದಲಾಗಿ ಹಲವರು ಹಲವು ರೀತಿಯಿಂದ ಊಹಿಸಿದ್ದರು. ಆದರೆ ಅನಂತರ ನಡೆದ ಸಂಗತಿಗಳಿಂದ ಅವರ ಊಹಾಪೋಹಗಳು ತೀರ ಸುಳ್ಳಾದುವು. ಆಚಾರ್ಯ ಖಂಡನ ಮಂಡನಗಳಿಂದ ಮಸೂದೆಯ ಪ್ರಬಲ ವಿರೋಧಿಗಳಾದ ಸರ್ [illegible] ಉಸ್ಮಾನರಂಥವರೂ ಅದರ ದೊಡ್ಡ ಸಮರ್ಥಕರಾದರು.

ಆಚಾರ್ಯರು ಮೇಧಾವಿಗಳೆಂದು ಮಾತ್ರ ಕೀರ್ತಿಭಾಜನರಾಗಿರುವದಲ್ಲ. ಅವರು ಸೂಚನೆ ಕೊಟ್ಟ ಮಾತ್ರಕ್ಕೆ ಪ್ರಾಣ ಕೊಡಲಿಕ್ಕೂ ಸಿದ್ಧರಾದ ಸಾವಿರಾರು ಮಂದಿ ಭಾರತೀಯರು ಈಗಲೂ ಇದ್ದಾರೆ. ಕಾಯದೆ ಮಂಡಲಿಗಳಲ್ಲಿ ಅವರ ಆಜ್ಞೆಗಳನ್ನು ಚಾಚೂ ತಪ್ಪದೆ ಪಾಲಿಸುವ ನೂರಾರು ಮಂದಿ ಅನುಯಾಯಿಗಳು ಅವರಿಗಿದ್ದಾರೆ. ಹಿಟ್ಲರ, ಮುಸಲೀನಿಯರೇ ಮೊದಲಾದ ಸರ್ವಾಧಿಕಾರಿಗಳಿಗೆ ಹೆದರಿ ಅವರ ಆಜ್ಞಾಧಾರಕರಾಗಿರುವಂತೆ ಈ ಅನುಯಾಯಿಗಳು ಆಚಾರ್ಯರ ಆಜ್ಞಾಧಾರಕರಾಗಿರುವದಿಲ್ಲ. ಹಾಗಾದರೆ ಅಷ್ಟು ಮಂದಿಯನ್ನು ತಮ್ಮ ಕಡೆಗೆ ಆಕರ್ಷಿಸಿ ಹಿಡಿಯುವ ಬೇರೆ ಯಾವ ಮಹಾಶಕ್ತಿಯು ಆಚಾರ್ಯರಲ್ಲಿದೆ?

ಆಚಾರ್ಯರು ಧೀಮಂತರಾಗಿರುವಂತೆ ಗುಣವಂತರೂ ಆಗಿದ್ದಾರೆ. ಬುದ್ಧಿಯನ್ನು ಮೆಚ್ಚುವದಕ್ಕಿಂತಲೂ ಹೆಚ್ಚಾಗಿ ಜನರು ಮನುಷ್ಯನ ಗುಣವನ್ನು ಮೆಚ್ಚುವರು. ಆಚಾರ್ಯರು ಧೀಮಂತರು- ಗುಣವಂತರು— ಕರ್ಮಯೋಗಿಗಳು ಮತ್ತು ಸನ್ಯಾಸಿಗಳು ಆಗಿದ್ದಾರೆ. ಗಾಂಧಿತತ್ವದ ದಿವ್ಯಮಣಿ ತ್ಯಾಗದ ಮೂರ್ತಿ ಅವರಾಗಿದ್ದಾರೆ. ಆದ್ದರಿಂದ ಗಾಂಧಿಯಂತೆ ಆಚಾರ್ಯರನ್ನೂ ಜನರು ಪತಿತ ಪಾವನ ಪವಿತ್ರ ಮೂರ್ತಿಯೆಂದು ಶ್ರದ್ಧೆ, ಭಕ್ತಿ, ವಿಶ್ವಾಸಗಳಿಂದ ಕಾಣುವರು.

ಗಾಂಧಿ ಬೇರೆ ಆಚಾರ್ಯ ಬೇರೆ ಅಲ್ಲ ಎಂದು ಒಬ್ಬರು ಅಲಂಕಾರಿಕವಾಗಿ ಅವರನ್ನು ಪ್ರಶಂಸಿದ್ದಾರೆ. ಆಚಾರ್ಯರು ಗಾಂಧಿಯವರ ಪಟ್ಟಶಿಷ್ಯರು ಅಷ್ಟೇ ಅಲ್ಲ, ಅವರ ಕೀರ್ತಿ ಮಾನಗಳನ್ನು ಹರಡಿಸಿದವರೂ ಆಗಿದ್ದಾರೆ. ಗಾಂಧಿತತ್ವದ ದುರೂಹ ವಿಷಯಗಳನ್ನು ಅವರೇ ವಿವರಿಸಿ ಹೇಳಲಿಕ್ಕೆ ಸಮರ್ಥರು. ಮರಕ್ಕೆ ಜನ್ಮವನ್ನು ಕೊಟ್ಟ ಬೀಜ ದೊಡ್ಡದೋ, ಬೀಜದಿಂದ ಹುಟ್ಟಿದ ಮರ ದೊಡ್ಡದೋ ಎನ್ನುವದು ಕಷ್ಟವಾಗಿರುವಂತೆ, ಗಾಂಧಿ ಮತ್ತು ಆಚಾರ್ಯರಲ್ಲಿ ಯಾರು ದೊಡ್ಡವರೆಂದು ಹೇಳುವದು ಕಠಿನವಾಗಿದೆ.

ಆಚಾರ್ಯರ ವಿಷಯವಾಗಿ ಇಷ್ಟರ ತನಕ ನಾವಾಡಿದ ಮಾತುಗಳ ಉತ್ಪ್ರೇಕ್ಷೆಯೆಂದು ಯಾರಾದರೂ ಹೇಳಬಹುದು. ಆದ್ದರಿಂದ ಅದು ಹಾಗಿರಲಿ. ಆದರೆ ಪಾನ ನಿರೋಧ ಚಳವಳಕ್ಕೆ ಅವರು ಸಲ್ಲಿಸಿದ ಸೇವೆ, ಅವರು ಮಾಡಿದ ಉಪಕಾರವನ್ನು ಭಾರತವು ಮಾತ್ರವಲ್ಲ, ಇಡೀ ಪ್ರಪಂಚವು ಮರೆಯುವ ಹಾಗಿಲ್ಲವೆಂದು ಅವರ ರಾಜಕೀಯ ಶತ್ರುಗಳಾದವರೂ ಹೇಳುತ್ತಾರೆ. ಉಳಿದ ಪಾಶ್ಚಾತ್ಯರು ಪಾನನಿರೋಧದ ಕುರಿತು ಆಲೋಚನೆ ಮಾಡುತ್ತಿರುವಾಗಲೇ ಆಚಾರ್ಯರು ಸೇಲಂ ಜಿಲ್ಲೆಯಲ್ಲಿ ಅತ್ಯಂತ ಸಫಲತಾಪೂರ್ವಕ ಪಾನನಿರೋಧ ಮಾಡಿ ಜಗತ್ತಿಗೇ ಮಾರ್ಗದರ್ಶಕರಾದರು.

ಮತ್ತೆ ಆಚಾರ್ಯರು ಮದ್ರಾಸಿನ ನಾಲ್ಕು ರಸ್ತೆಗಳು ಕೂಡುವಲ್ಲಿ ಇದ್ದ ಸೀಲ ಪ್ರತಿಮೆಯನ್ನು ತೆಗೆಸಿದ್ದು ಕಡಿಮೆ ಸಾಹಸದ ಕಾರ್ಯವೆ? ಅದರ ಹಿಂದಿನ ಚಳವಳಿಯ ಇತಿಹಾಸವನ್ನು ತಿಳಿದವರು ಮಾತ್ರ ಅದೆಷ್ಟು ಮಹತ್ವದ ಕಾರ್ಯವಾಗಿತ್ತೆಂದು ಹೇಳಬಲ್ಲರು. ಇಂಥವರು ಲೋಕವಂದಿತರಾಗುವದರಲ್ಲಿ ಏನಾಶ್ಚರ್ಯ! ಅವರು ಪ್ರಾತಃಸ್ಮರಣೀಯರಾಗುವದರಲ್ಲಿ ಏನು ವಿಶೇಷವಿದೆ! ರಾಜಗೋಪಾಲಾಚಾರ್ಯರನ್ನು ಪಡೆದು ಭಾರತೀಯ ಮಸ್ತಕವು ಉನ್ನತವಾಯಿತೆಂಬುದರಲ್ಲಿ ಏನೇನೂ ಸಂದೇಹವಿಲ್ಲ.

# ವಿಜ್ಞಾನದ ಸಹಾಯದಿಂದ ಅಪರಾಧಿಗಳ ಶೋಧ!!!

ಈಗ ನಿಜವಾದ ಅಪರಾಧಿಗಳು ಯಾರು ಎಂದು ಪತ್ತೆದಾರನಿಗೆ ತಿಳಿಯುವದು ಕಷ್ಟವಾಗುತ್ತ ಬಂದಿದೆ. ವಿಲಾಯತಿಯಲ್ಲಿ ಸಾಮಾನ್ಯ ಕಳ್ಳತನದಿಂದಾರಂಭಿಸಿ ಕೊಲೆ ಸುಲಿಗೆ ದಂಗೆ ದರೋಡೆಗಳ ತನಕ ಪ್ರತಿಯೊಂದು ಅಪರಾಧವನ್ನು ಮಾಡುವದು ವಿಶಿಷ್ಟ ಪ್ರಕಾರದ ಒಂದು ಕಲೆಯಾಗಿದೆ. ಈ ಎಲ್ಲ ವೃತ್ತಿಗಳನ್ನು ಕಲಿಸುವ ಶಾಲೆಗಳು, ಉಪಾಧ್ಯಾಯರು ಅಲ್ಲಿದ್ದಾರೆ. ಸುಶಿಕ್ಷಿತ ಅಪರಾಧಿಗಳನ್ನು ಕಂಡುಹಿಡಿಯುವದು ಒಂದು ಪ್ರಯಾಸದ ಕೆಲಸವಾಗಿದೆ. ಆದಕಾರಣ ಪತ್ತೆದಾರನು ವಿಜ್ಞಾನಕ್ಕೆ ಶರಣು ಹೋಗುವ ಕಾಲವು ಬಂದಿದೆ. ಅವನ ಹಿಂದಿನ ಉಪಾಯಗಳು ಈಗ ತೀರ ಹಳತಾಗಿ ಹೋಗಿರುವವು.

ದುರ್ಬೀನು ಮತ್ತು ಶೋಧನಾ ನಳಿಗೆ- ಇವುಗಳ ಮೂಲಕ ವಿಲಾಯತಿಯ ಸ್ಕಾಟ್ಲೆಂಡ ಯಾರ್ಡ ಮತ್ತು ಪ್ರಾಂತೀಯ ಕೇಂದ್ರಗಳ ಪತ್ತೆದಾರರು ದೊಡ್ಡ ದೊಡ್ಡ ಅಪರಾಧಗಳ ಪತ್ತೆ ಹಚ್ಚಲು ಸಮರ್ಥರಾಗಿರುವರು. ಅದ ಕೆಸ್ಕೋಸ್ಕರ ಹೆಂಡನ ಎಂಬಲ್ಲಿ ಒಂದು ದೊಡ್ಡ ಶೋಧನಾಲಯವು ಇದೆ. ಅಲ್ಲಿ ತಜ್ಞರು ಕೆಲಸ ಮಾಡಿ ತಮ್ಮ ಅನುಭವದ ಪ್ರಯೋಜನವನ್ನು ಪತ್ತೆದಾರರಿಗೆ ಕೊಡುವರು.

ರುಬಿಯ ಕೊಲೆ ಮಾಡಿದವನು ಸ್ಟೋನನೆ? ಎಂಬ ಪ್ರಶ್ನೆಯು ಈ ತಜ್ಞರ ಮುಂದೆ ಇಡಲ್ಪಟ್ಟಿತು. ಸ್ಟೋನನ ಅಂಗಿ ಕೋಟಿನ ಮೇಲಿದ್ದ ಒಂದು ರೇಶ್ಮೆ ನೂಲು ರುಬಿಯ ಜಾಕೀಟಿನದ್ದು ಎಂದು ವಿಜ್ಞಾನವು ಹೇಳಿತು. ಸ್ಟೋನನ ಇಜಾರುಗಳಿಗೆ ಅಂಟಿಕೊಂಡಿದ್ದ ಧೂಳಿಯ ಕಣವು ಕೊಲೆ ನಡೆದ ಸ್ಥಾನಕ್ಕೆ ಸೇರಿದ್ದೆಂದು ಅದು ತೋರಿಸಿಕೊಟ್ಟಿತು. ಸರಿ, ಸ್ಟೋನನೇ ರುಬಿಯನ್ನು ಕೊಂದವನೆಂದು ನಿರ್ಧಾರವಾಗಿ ಅವನಿಗೆ ಶಿಕ್ಷೆಯಾಯಿತು. ವಿಜ್ಞಾನದ ಸಹಾಯ ಇಲ್ಲವಾಗಿದ್ದರೆ ರೇಶ್ಮೆ ನೂಲು ಮತ್ತು ಧೂಳಿನ ಕಣದ ಗುರುತಿನಿಂದ ಸ್ಟೋನನನ್ನು ದಂಡನೆಗೆ ಗುರಿಪಡಿಸುವದು ಸಾಧ್ಯವಿತ್ತೆ? ಅವನು ಕಡೆತನಕ ನಿರಪರಾಧಿಯಾಗಿಯೇ ಉಳಿಯುತ್ತಿದ್ದ.

ವೇಗದಿಂದ ಓಡಿಬರುತ್ತಿದ್ದ ಒಂದು ಕಾರು ಸಾಯಿಕಲ್ ಸವಾರಿ ಮಾಡುತ್ತಿದ್ದ ಒಬ್ಬನ ಮೇಲೆ ಹಾಯ್ದುಹೋಯಿತು. ಸಾಯಿಕಲ ಸವಾರನು ಸತ್ತುಹೋದ. ಕಾರುಬಿಟ್ಟವನು ತನ್ನ ಕಾರನ್ನು ವೇಗದಿಂದ ಓಡಿಸಿ ಎಲ್ಲಿಗೋ ಹೋಗಿಬಿಟ್ಟ. ಲಂಡನಿನ ಜನಸಂದಣಿಯಲ್ಲಿ ಅವನ ಪತ್ತೆ ಹಚ್ಚುವದು ಅಸಾಧ್ಯವೆಂಬಂತೆ ತೋರುತ್ತಿತ್ತು. ಪತ್ತೆದಾರರಿಗೆ ಒಂದು ಕಾರನ್ನು ನೋಡಿ ಸಂದೇಹವಾಯಿತು. ಅವರು ಅದನ್ನು ಹೆಂಡನಿಗೆ ಕಳುಹಿಸಿಕೊಟ್ಟರು. ದುರ್ಬೀನಿನಿಂದ ನೋಡುವಾಗ ರೇಡಿಯೇಟರಿನ ಮೇಲೆ ಹಸುರು ಬಣ್ಣದ ಒಂದು ಚಿಕ್ಕ ಕಲೆ ಕಾಣಿಸಿತು. ಪಕ್ಕಗಳಲ್ಲಿ ಚಾ ಸೀರು ಹಾರಿಬಿದ್ದ ಗುರುತುಗಳಿದ್ದುವು. ಸರಿ, ಈಗ ಗೊತ್ತಾಯಿತು: ಸಾಯಿಕಲು ಸವಾರನು ಹಸುರು ಬಣ್ಣದ ಸಾಯಿಕಲಿನ ಮೇಲೆ ಸವಾರಿ ಮಾಡುತ್ತಲಿದ್ದ, ಅವನ ಕಿಸೆಯಲ್ಲಿ ಚಾ ಬಾಟಲಿ ಇದ್ದಿತು. ಆ ಮೋಟರ ಡ್ರಾಯ್ವರನನ್ನು ಹಿಡಿದು ಶಿಕ್ಷೆಗೆ ಗುರಿಮಾಡಿದರು. ವಿಜ್ಞಾನವು ಅಲ್ಲದಿರುತ್ತಿದ್ದರೆ ಮೋಟರಿನ ಅಷ್ಟು ಸಣ್ಣ ಕಲೆಗಳನ್ನು ಗುರುತಿಸುವದು ಹೇಗೆ ಸಾಧ್ಯವಿತ್ತು?

ಒಬ್ಬ ಅತ್ಯಂತ ಚತುರ ಕಳ್ಳನಿದ್ದ. ಅವನು ಹಾರಿ ನೆಗೆದು, ಓಡಿ ತನ್ನ ಕೆಲಸ ಸಾಧಿಸುವದರಲ್ಲಿ ಮಹಾ ಪ್ರವೀಣನೆಂದು ಹೆಸರು ಪಡೆದಿದ್ದ. ಭಗೀರಥ ಪ್ರಯತ್ನಗಳನ್ನು ಮಾಡಿದ್ದರು, ಪೋಲೀಸರ ಕೈಗೆ ಸಿಕ್ಕದೆ ತನ್ನ ಕೆಲಸವನ್ನು ಎಡೆಬಿಡದೆ ಮಾಡಿಕೊಂಡಿದ್ದ. ಆದರೆ ಒಂದಾನೊಂದು ದಿನ ಕಳ್ಳತನ ನಡೆದ ಮನೆಯ ತೋಟದಲ್ಲಿ ಕಾಲಿನ ಒಂದು ಗುರುತು ತೋರಿತು. ಪೋಲೀಸರು ಅದರ ಅಚ್ಚನ್ನು ತೆಗೆದು ಹೆಂಡನ ಶೋಧನಾಲಯಕ್ಕೆ ಕಳುಹಿಸಿಕೊಟ್ಟರು.

ಆದರೆ ಹೆಂಡನಿನಲ್ಲಿ ಕಾಲಿನ ಅಚ್ಚನ್ನು ಪರೀಕ್ಷಿಸಿದಾಗ, ಕಳ್ಳತನ ಮಾಡುತ್ತಿದ್ದವ ಅವನಲ್ಲ, ಅವಳು ಎಂದು ಗೊತ್ತಾಯಿತು. ಅಷ್ಟರ ತನಕ ಪೋಲೀಸರು ಪುರುಷರ ಪತ್ತೆಯಲ್ಲಿದ್ದರು. ಆದ್ದರಿಂದ ಯಾರೂ ಸಿಕ್ಕಿರಲಿಲ್ಲ. ಈಗ ಅಪರಾಧಿಯು ಒಬ್ಬ ಸ್ತ್ರೀಯೆಂದು ಗೊತ್ತಾದ ಮೇಲೆ ಪೋಲೀಸರ ದೃಷ್ಟಿ ತಿರುಗಿತು. ಅವರು ಸುಲಭದಿಂದ ಅಪರಾಧಿಯ ಪತ್ತೆಹಚ್ಚಿದರು.

ಅಪರಾಧಿಯು ಉಟ್ಟ ಪೋಶಾಕನ್ನು ಕಳುಹಿಕೊಟ್ಟರೆ, ಹೆಂಡನ ಶೋಧನಾಲಯವು ಅಪರಾಧಿಯ ಪ್ರಾಯ, ರೂಪು, ಬಣ್ಣ, ನಡಿಗೆ ಎಲ್ಲವನ್ನೂ ಹೇಳಿಕೊಡುವದು. ಏನಾಶ್ಚರ್ಯ?

ಇಂಗ್ಲೆಂಡಿನಲ್ಲಿ ಖೋಟಾ ನಾಣ್ಯಗಳು ವಿಶೇಷ ಪ್ರಚಾರದಲ್ಲಿವೆಯೆಂದು ಕಂಡುಹಿಡಿದದ್ದು ಈ ಹೆಂಡನ ಶೋಧನಾಲಯ! ಈ ನಕಲಿ ನೋಟು ನಾಣ್ಯಗಳು ನಿಜ ನೋಟು ನಾಣ್ಯಗಳಿಂದ ಬರೀ ನೂಲೆಳೆಯಷ್ಟು ವ್ಯತ್ಯಾಸವನ್ನು ಹೊಂದಿದ್ದುವಂತೆ. ಬರೀ ಕಣ್ಣುಗಳಿಗೆ ಅವುಗಳೊಳಗಿನ ಅಂತರವನ್ನು ಕಂಡುಹಿಡಿಯುವದು ಅಷ್ಟು ಮಾತ್ರಕ್ಕೂ ಸಾಧ್ಯವಲ್ಲ. ಈ ನಾಣ್ಯ ನೋಟುಗಳನ್ನು ಪ್ರಕಾಶ ಕಿರಣಗಳ ಸಹಾಯದಿಂದ ಗೊತ್ತುಹಚ್ಚಿದರು. ಆ ಮೇಲೆ ಅವುಗಳ ಪ್ರಚಾರವನ್ನು ತಡೆಯುವದು ಬಹು ಸುಲಭವಾಯಿತು. ನಕಲಿ ನೋಟು ನಾಣ್ಯಗಳನ್ನು ತಯಾರಿಸುತ್ತಿದ್ದ ಕಾರಖಾನೆಯು ಪೇರಿಸ ನಗರದಲ್ಲಿದ್ದಿತು. ಆಗ ಪೋಲೀಸರು ಆ ಕಾರಖಾನೆಯನ್ನೇ ಮು[illegible] ತೆಗೆದರು.

ಸಂದೇಹದ ಮೇಲೆ ಇಬ್ಬರು ಪೋಲೀಸ ಸ್ಟೇಶನಿಗೆ ಒಯ್ಯಲ್ಪಟ್ಟರು. ಅಪರಾಧವನ್ನು ಮಾಡಿದವರು ಯಾರೆಂದು ತಿಳಿಯಲಿಕ್ಕೆ ರುಜುವಾತು, ಸಾಕ್ಷ್ಯಗಳು ಬೇರೆ ಯಾವುವೂ ಇರಲಿಲ್ಲ. ಪೋಲೀಸರು ಅವರ ಬೂಟುಗಳಿಗೆ ಅಂಟಿದ್ದ ಕೆಸರು ಮಣ್ಣನ್ನು ಕೆರೆದು ತೆಗೆದು ಹೆಂಡನಿಗೆ ಕಳುಹಿಸಿ ಕೊಟ್ಟರು. ಆ ಮಣ್ಣು ಅಪರಾಧ ನಡೆದ ಸ್ಥಾನದ್ದೆಂದು ಗೊತ್ತಾಯಿತು. ಅಪರಾಧಿಗಳಿಗೆ ಶಿಕ್ಷೆಯಾಯಿತು.

ಒಬ್ಬ ತಿಜೋರಿಯನ್ನು ಮುರಿದು ಸಾಮಾನುಗಳನ್ನು ಹೊತ್ತುಕೊಂಡು ಹೋಗಿದ್ದ. ತಿಜೋರಿ ಮುರಿಯುವಾಗ ಕಬ್ಬಿಣದ ಸ್ವಲ್ಪ ಧೂಳು ಅವನ ಇಜಾರಿಗೆ ಅಂಟಿಕೊಂಡಿತ್ತು. ಅದರ ಸಹಾಯದಿಂದ ಪೋಲೀಸರು ಅವನನ್ನು ಹಿಡಿದು ಜೈಲಿಗೆ ಕಳುಹಿಸಿಕೊಟ್ಟರು.

**Scientific Opticians.**

**Eye Testing Free.**

STYLISH FRAMES,
LENSES, CASES.

*Please Visit*

**Nayaks Optical Stores**
Car Street,
MANGALORE



# ಹಿಂದುಸ್ಥಾನ ಕೊ-ಒಪರೇಟಿವ್ ಇನ್ಸೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು ಕಲ್ಕತ್ತಾ — ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ — ಸ್ಥಾಪನೆ 1907

| | | |
|---|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ | 12,00,00,000 |
| ಆಸ್ತಿಪಾಸ್ತಿಗಳು | ರೂ | 2,21,00,000 |
| ನೂತನ ವ್ಯವಹಾರ | ರೂ | 2,82,81,000 |

ಅತ್ಯಧಿಕ ಬೋನಸ್ ಹಂಚಲಾಗಿದೆ.

ಎಂಡೋವ್ಮೆಂಟ್ ಪಾಲಿಸಿಗಳಿಗೆ, ರೂ 1000 ವಿಮೆಯ ಮೇಲೆ ಪ್ರತಿ ವರ್ಷ ಒಂದರ ರೂ 28

ಮಕ್ಕಳ ವಿಮಾ, ಅವಘಡ, ಮತ್ತು ಮರಣ ವಿಮೆ-ನಮ್ಮ ವಿಶಿಷ್ಟತೆ

*For particulars please apply to*

T. ANANTACHARI,
BRANCH MANAGER H C I S LTD
POST BOX 223 MADRAS.

K K MENON
ORGANISER H C I S LTD
Court Road CALICUT

)
[ಸಂಚಿಕೆ ೬

ಕೆಸಲಾಗುವುದೇನು?


# The Canara Banking Corporation, Udipi, Ltd

INCORPORATED IN BRITISH INDIA

## NOTICE

Is hereby given that under section 3[illegible] of the Indian Companies Act No. VII of 1913 the Register of Members of the Corporation will remain closed from Saturday the 1[illegible]th February 1938 to and until 11th March 1938 (Both days inclusive).

By order,

V R Kamath, [illegible]
Ag. Manager



# The Bombay Life Assurance Company, Ltd.

ESTD: 1908

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,855 | 1,16,58,706 |
| 1930 | 59,97,500 | 9,83,367 | 28,00,970 | 2,06,68,328 |
| 1933 | 94,16,500 | 15,12,692 | 50,04,871 | 3,07,98,434 |
| 1936 | 1,36,06,130 | 26,76,274 | 82,69,451 | 5,14,38,205 |

The Company offers all the up-to-date schemes of Assurances. Family Safe Guard Policy a special feature.
Application for agencies will be received from honest and respectable gentlemen.
Organisers appointed with pay and allowance.
Gentlemen with organising ability and who can guarantee Business need apply.

**Kochikar Brothers, Ltd.,**
(Incorporating Messrs Kochikar Brothers),
***Madras Branch Secretaries.***
Post Box 337, Mount Road, MADRAS.
Phone No 8?45

***Apply to any of the following Offices:-***

| Ottapalam | Central Station Road, Trivandrum | Visveshwarapuram Circle, Bangalore City. | Soumyalayam Puthiyara, Calicut. | Car Street, Mangalore. | Udipi S. India | Charni Road, Bombay No. 4 |
|---|---|---|---|---|---|---|

# ಶ್ರೀಮಾ...
# ಚಕ್ರವರ್ತಿ ರಾಜಗೋ...

...ಶಾಭಿಮಾನಿ.
...ABHIMANI, MANGALORE

ಮದ್ರಾಸಿನ ಪ್ರಧಾನಾಮಾತ್ಯ ಚಕ್ರವರ್ತಿ ರಾಜಗೋಪಾಲಾಚಾರ್ಯರು ಜಗತ್ತಿನ ಮಹಾಪುರುಷರಲ್ಲಿ ಒಬ್ಬರಾಗಿರುವರು. ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರೂ ಇವರ ಅನಂತರದ ಗಣನೀಯ ಸ್ಥಾನವು ಅವರಿಗೆ ಪ್ರಾಪ್ತವಾಗಿದೆ.

ಆಚಾರ್ಯರಿಗೆ ಆಕರ್ಷಣೀಯವಾದ ಅಂಗಸೌಷ್ಠವವಾಗಲೀ ವ್ಯಕ್ತಿತ್ವವಾಗಲೀ ಇರುವದಿಲ್ಲ. ಕಂಡ ಮಾತ್ರದಿಂದ ಯಾರೂ ಅವರನ್ನು ಮಹಾಪುರುಷರೆಂದು ಹೇಳಲಾರರು. ಪರಂತು ಒಮ್ಮೆಗೆ ಮಾತುಕತೆ ಬೆಳೆಸಿದರೆಂದರೆ, ಆಗತಾನೇ ಅವರ ಅಗಾಧ ಪ್ರತಿಭೆಯ ಪರಿಚಯವಾಗಲಿಕ್ಕೆ ಆರಂಭವಾಗುವದು. ಆಚಾ...ಂಥ ಮಹಾ ಮೇಧಾವಿಗಳಾಗಲೀ, ವಿಚಾ... ಶಕ್ತಿಸಂಪನ್ನರಾಗಲೀ, ಉತ್ತಮೋ...ಶೀಲ ಭರಿತರಾಗಲೀ ಪ್ರಪಂಚದಲ್ಲಿ ...ಧು ಅಪರೂಪ.

ಲಭ... ಗುಣಗ... ಪ್ರಪಂಚ... ವಾರ್ತ್ಯ... ಸಿದ್ಧಿ... ಕ್ಕದಿಂದ... ವೆಂದು ಯ... ಅವರಂಥ... ಮೇಧಾವಿ... ಬಂಧು... ವಾಸ ಅ... ಮೊದಲ... ತರ್ಕಿಸಿ... ಹಳಿ... ಇದ...

ಮದ್ರಾಸಿನ ಮುಖ್ಯಮಂತ್ರಿಗಳಾದ ಶ್ರೀ| ಸಿ. ರಾಜಗೋಪಾಲಾಚಾರ್ಯರವರು ಮುಂಬಯಿಗೆ ತೆರಳಿದ್ದಾಗ, ಅಲ್ಲಿಯ ಸುಪ್ರಸಿದ್ಧ ಹಿಂದೀ ನಾಳ್ಪಿನ ಚಿತ್ರಸಂಸ್ಥೆಯಾದ ಸಾಗರ್ ಕಂಪೆನಿಯ ಕಾರ್ಯಾಲಯವನ್ನು ಸಂದರ್ಶಿಸಿದಾಗ ತೆಗೆದ ಛಾಯಾಚಿತ್ರವಿದು.

ಮಾಳಿಗೆಯ ಮೇಲೆ ರಸ್ತೆ – ಅಮೇರಿಕದಲ್ಲಿ

ಜರ್ಮನಿನ ಸೆಮ್ಸನ್ ಇವನು ಕೂದಲನ್ನು ಬೆಳೆಯಿಸಿರುವನು.

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.

Edited Printed & Published By A. S. Kamath at the Sharada Press, Car Street, Mangalore.

REGD. NO. M. 8406 | ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2-13-0 | ಬಿಡಿ ಸಂಚಿಕೆ ಒಂದಾಣೆ

# ಸ್ವದೇಶಾಭಿಮಾನಿ

ಸಂಪುಟ ೩೨ | ಕಾರೀಕಟು ೧೧ನೇ ಶುಕ್ರವಾರ ಫೆಬ್ರುವರಿ ೧೯೩೮ (11-2-1938) | ಸಂಚಿಕೆ ೬

# ಹರಿಪುರದಲ್ಲಿ ಸೇರುವ ಕೊಂಗ್ರೆಸ್ ಅಧಿವೇಶನದಲ್ಲಿ ಚರ್ಚಿಸಲಾಗುವುದೇನು?

ರಾಷ್ಟ್ರಪತಿ ಶ್ರೀ ಬೋಸರು

ನೂತನ ರಾಷ್ಟ್ರಪತಿ ಶ್ರೀ ಬೋಸರು ಫೆಬ್ರವರಿ ತಾ. ೧೩ರಲ್ಲಿ ಬಾರ್ಡೋಲಿಗೆ ತೆರಳುವರು. ಅವರ ಸ್ವಾಗತ ಬಗ್ಗೆ ಮಹಾ ಸಿದ್ಧತೆಗಳು ನಡೆಯುತ್ತಿವೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇದೇ ತಾ. ೧೬ರಲ್ಲಿ ಸಭೆ ಸೇರುವುದು. ಹರಿಪುರಕ್ಕೆ ಹೋಗುವ ಮೊದಲು ಶ್ರೀ ಬೋಸರು ಅಂಡಮಾನ ಕೈದಿಗಳನ್ನು ಕಾಣುವರೆಂದು ವಾರ್ತೆಯಿದೆ.

## ಎರಡು ಠರಾವುಗಳು: ಸಂದೇಹ ಸೂಚನೆ.

ವಾರ್ಧಾದಲ್ಲಿ ಸೇರಿದ ಕೊಂಗ್ರೆಸ್ ಕಾರ್ಯಕಾರೀ ಮಂಡಲಿಯು ಈಗಲೆ ನಿರ್ಧರಿಸಿ ಯಾವ ಸೂಚನೆಗಳನ್ನು ರಾಷ್ಟ್ರಸಭಾಧಿವೇಶನದಲ್ಲಿ ಮುಂತರುವುದೋ ಅದನ್ನು ಕುರಿತು ಕೆಲಮಾತುಗಳಲ್ಲೇ ಸಂಕ್ಷೇಪಿಸಬಹುದಾಗಿದೆ.

ಮೊದಲನೆಯು ಮಹತ್ವವನ್ನು ಫೆಡರೇಶನ್ ವಿಷಯಕ್ಕೆ ಕೊಡಬೇಕು. ಫೆಡರೇಶನ್ ಆಗದಂತೆ ದೇಶವು ಪ್ರಯತ್ನಿಸಿ ನಿವಾರಿಸಬೇಕು, ಹಾಗಾದ ಬಳಿಕವೂ ಫೆಡರೇಶನನ್ನು ಜಾರಿಗೆ ತಂದಲ್ಲಿ, ಅಲ್ಲಿಯೂ ಅದನ್ನು ಎದುರಿಸಿ ಮುರಿಯಲೆತ್ನಿಸಬೇಕು, ಕೊನೆಗೆ ಕಾಂಗ್ರೆಸ್ ಅಧಿಕಾರಹೊಂದಿರುವ ಪ್ರಾಂತ್ಯಗಳಲ್ಲಿ ಆ ಪ್ರಾಂತಿಕ ಸರಕಾರಗಳೂ ಮಂತ್ರಿಮಂಡಲಿಗಳೂ ಫೆಡರೇಶನ್ ವಿಚಾರವಾಗಿ ಯಾವ ವಿಧದಲ್ಲೂ ಸಹಕರಿಸಲೇಬಾರದು. ಬಾರದಂತೆ, ಬಂದಾಗ ಆದರಿಸದಂತೆ, ಒತ್ತಾಯದಿಂದ ದುಡುಕಿದಲ್ಲಿ ಅದರೊಡನೆ ಸಹಕರಿಸದಂತೆ, ಮೂರು ಬಾರಿಗೂ ಅದನ್ನು ರದ್ದುಗೊಳಿಸಲೇಬೇಕೆಂದೇ ವರ್ಕಿಂಗ್ ಕಮಿಟಿಯು ನಿರ್ಧಾರವಾಗಿದೆ. ಮಾತ್ರವಲ್ಲದೆ, ಈ ವಿಷಯವಾಗಿ ಮುಂದೆ ಕೈಕೊಳ್ಳಬೇಕಾಗಿರುವ ಕಾರ್ಯಕ್ರಮವನ್ನು ವರಿಷ್ಠ ಕಮಿಟಿಯೇ ಸೂಚಿಸಲೂ ಅಧಿಕಾರಹೊಂದಿದೆ.

ಅಧಿಕಾರ ಸ್ವೀಕಾರದ ಪ್ರಶ್ನೆ ಎದ್ದಾಗ, ಕೌನ್ಸಿಲುಗಳನ್ನು ಅಂತೂ ಆಕ್ಟನ್ನು ಮುರಿಯುವುದಕ್ಕಾಗಿಯೆ ಜನತೆಗೆ ಇನ್ನೂ ಬಲಬರುವಂತೆ ಅಧಿಕಾರ ಸ್ವೀಕರಿಸಬಹುದೆಂದೂ, ಆದರೆ

## ಯಾವ ಕಾರ್ಯಸಾಧನೆಯ ಮೂಲಕ ಸ್ವಾತಂತ್ರ್ಯವು ಲಭಿಸುವುದು?

ಅದನ್ನು ಆಕ್ಟನ್ನು [illegible] ಬಗೆಗೇ [illegible] ಯೋಗಿಸಬೇಕೆಂದೂ ಸೂಚನೆ [illegible] ದತ್ತ ಆದರೆ [illegible] ವೇಳೆ ಆ [illegible] ದರಲ್ಲಿ ನವ ಹೊಂದಿ ಅದನ್ನು ಮುರಿಯುವುದೆಂದು [illegible] ಬಹುದು ಸಹಕರಿಸದೆ ಇರುವುದ [illegible] ಅಸಹಕಾರ ಕೈಕೊಳ್ಳುವುದು [illegible] ಗಳಲ್ಲಿ ಕೋಮುವಾದ [illegible] ಕೊಂಡ ಎರಡನೆಯ ದನ್ನೆ ಫೆಡರೇಶನ್ ವಿಚಾರದಲ್ಲಿ [illegible] ಗೊಡದೆಗೂ [illegible] ದೆಂದೂ [illegible] ಸದವಿಯುಕ್ತ ಅದರಲ್ಲಿ ಸ್ವಾನವನ್ನೂ ಆ [illegible] ದು ಆ ವರೆಗೆ [illegible] ದಲ್ಲಾಗಿದೆ.

ಸಂಸ್ಥಾನ ರಾಜ್ಯಗಳ ವಿಷಯವಾಗಿದ [illegible] ಇದುವರೆಗೆ [illegible]

ವಾಗಿಯೂ ಈ ಸೂಚನೆಯು ಮಾತುಗಳಿಂದ [illegible] ಒಬ್ಬರು [illegible] ರಾಜಕೀಯ ವಿದ್ಯಮಾನಗಳು ಒಂದು ಒಗನೆ ಒದಲಾಗುತ್ತ ಬರುವುದರಿಂದ, ರಾಷ್ಟ್ರೀಯ ಭಾವದ ದೇಶೀಯ ರಾಜ್ಯಗಳ ಪ್ರಶ್ನೆಯನ್ನು ಉತ್ತರಿಸತೊಡಗಿದರೆ, ಹೀಗೆ ವಿಪರೀತಭಾವವೇ ತೋರುವೇಕಾದುದು ಸಹಜ. ಮುನ್ನಡೆಯಬೇಕು, ಹೆಚ್ಚು ಹಿಂದಿಡಬೇಕು, ಎಂದರೆ ಹೇಗೆ ಕಾಣಬಹುದೋ ಹಾಗೆ ಈ ಸೂಚನೆಯು ಪೂರ್ವವಿದೆ. ದೇಶೀಯ ರಾಜ್ಯಗಳ ಕಡೆಗೆ ಕೊಂಗ್ರೆಸಿನ ಧೋರಣೆಯೂ ಕಾರ್ಯಕ್ರಮವೂ, ಉತ್ತರವಾದ ಪರ್ವತವನ್ನು ರೈಲು ಮಾರ್ಗವು ದಾಟುವಾಗ ಎತ್ತರಕ್ಕೇರುತ್ತಲೂ ಆದರೆ ಮುಂದೆ ಸಾಗಿ ಹಿಂದೆ ಬರುತ್ತಲೂ ಪ್ರಯಾಣಮಾಡುವಂತೆ ಭಾಸವಾಗುತ್ತವೆ. 1923, 1932ರಲ್ಲಿ ಮುಂದೆ ಸಾಗಿ, 1935ರಲ್ಲಿ ಹಿಂದೆ ಬಂದು, 1936, 1937ರಲ್ಲಿ ಮುಂದೆ ಪುನಃ ಸಾಗಿದಂತೆ ತೋರುವ ಸೂಚನಗಳನ್ನೆ ಕೊಂಗ್ರೆಸ್ ಕಾರ್ಯಕಾರೀ ಮಂಡಳವು ಮಾಡಿಯದೆ. ಸಂಪೂರ್ಣ ಸ್ವಾತಂತ್ರ್ಯವೆಂಬುದು ಬ್ರಿಟಿಷ ಇಂಡಿಯದ ವಿಚಾರದಲ್ಲಿ ಮಾತ್ರವಲ್ಲದೆ, ದೇಶೀಯ ರಾಜ್ಯಗಳ ವಿಚಾರದಲ್ಲೂ

ಅನಂತರ [illegible] ರಾಜ್ಯಗಳಲ್ಲಿ ಪ್ರಜಾ [illegible] ಗಳಿಗೆ [illegible] ಆದರೆ ಅಲ್ಲಲ್ಲಿ [illegible] ಕೊಂಗ್ರೆಸ್ ಕಮಿಟಿಗಳು [illegible] ಇತ್ಯಾದಿ [illegible] ಕಮಿಟಿಗಳಲ್ಲಿ [illegible] ಕೊಂಗ್ರೆಸಿನ [illegible] ಸಂಸ್ಥೆಗಳಲ್ಲಿ [illegible] ಅದನ್ನು ವಿರೋಧವನ್ನು [illegible] ಪ್ರಕಾರವಾದ [illegible] ಕಲಗಳಲ್ಲಿ [illegible] ಕಾರ್ಯಸಾಧನೆಯ ಮೂಲಕ ಸ್ವಾತಂತ್ರ್ಯ [illegible] ಅದನ್ನು ಪೂರೈಸಿ [illegible]

ಶ್ರೀ ವಲ್ಲಭಭಾಯಿ ಪಟೇಲರು

[illegible] ಗಳು ಸ್ವಹಾಯವು, [illegible] ದ ಒಗ್ಗಲವು [illegible] ತಿಳಿದ ತುಂಬ ಹತಾಶರಾಗದೆ ಇದರಿಂದ, ಪ್ರಜೆಗಳಲ್ಲಿ [illegible] ವಳಿಸುವ ಆಸಕ್ತಿಯು [illegible] ವಹೊಂದಬಹುದು. ಆದುದರಿಂದ [illegible] ಕೇವಲ ನೈತಿಕ ಬೆಂಬಲದ [illegible] ಇಲ್ಲ.

ಆದರೆ ಎಷ್ಟೋ ರಾಜ್ಯಗಳಲ್ಲಿ ಇಷ್ಟು [illegible] ಕಾಂಗ್ರೆಸ್ ಕಮಿಟಿಗಳು ಇದ್ದು ಕೆಲಸ ಮಾಡಲಿಲ್ಲವೆ? ಈಗ ಮಾತ್ರ ಕಾಂಗ್ರೆಸಿನ ಕಾರ್ಯಕ್ರಮವು ಹಲವು ರಾಜ್ಯಗಳ ವಿದ್ಯಮಾನಗಳಿಗೆ ಸರಿಯಾಗುತ್ತಿಲ್ಲ ಎಂದು ಕಾಂಗ್ರೆಸಿಗೆ ತಿಳಿದ ಬಂತೆ? ಎಂದು ಕೇಳಿದರೆ,—ದೇಶೀಯ ಪ್ರಜೆಗಳೇ ಕೊಂಗ್ರೆಸಿನ ಮಾದರಿಯಲ್ಲಿಯೆ ಸಸ್ಥೆಗಳನ್ನು ಮಾಡಿಕೊಂಡಲ್ಲಿ ಅವುಗಳಿಗೆ ಬಲ ಹೆಚ್ಚುವುದು, ಪ್ರಜೆಗಳಲ್ಲಿ ಆತ್ಮಾವಲಂಬನವುಂಟಾಗುವುದು, ಅಲ್ಲಲ್ಲಿನ ವಿದ್ಯಮಾನಗಳಂತೆ ಅಲ್ಲಲ್ಲಿ ಸಂಸ್ಥೆಗಳುಂಟಾಗುವುವು, ಎಂಬ ಉತ್ತರ ಬರುವುದು. ಇದಕ್ಕೆಲ್ಲ ಮಹಾತ್ಮಾಜಿ

ಸಿ. ರಾಜಗೋಪಾಲಾಚಾರಿಯವರು

ಯ [illegible] ಕಾರಣವೆಂದು [illegible] ತರೆ ಆದರೆ ಕಾಂಗ್ರೆಸ್ ಸದಸ್ಯರು ರಾಜ್ಯಗಳಲ್ಲಿನ ಇಂತಹ ಸಂಸ್ಥೆಗಳಿಗೆ ಸಹಾಯವನ್ನು ಮಾಡುವುದಕ್ಕೂ [illegible] ಇದ [illegible] ಕೊಂಗ್ರೆಸಿನ ಹೆಸರಲ್ಲಿ ಕಾರ್ಯಕ್ಷೇತ್ರ

ಪಂಡಿತ ನೆಹರೂರವರು

ಗಳನ್ನು ಸಹಿಸಿದ ರಾಜ್ಯಗಳಲ್ಲಿನ ಪ್ರಜೆಗಳಿಗೆ ಕೊಂಗ್ರೆಸಿನ ಹೆಸರಲ್ಲಿ ಎಮ್ಮ ಸ್ವಾತಂತ್ರ್ಯಸಾಧನೆ ಮಾಡಬೇಡಿರೆಂದು ಹೇಳಿದರೆ ಅವರೆಷ್ಟು ನೊಂದುಹೋಗುವರು [illegible] ಪಕ್ಷವೆಂದು [illegible] ಅಲ್ಲಲ್ಲಿ ಸಭಾಸದಸ್ಯರಾದವರೇನೆನ್ನಬಹುದು?

# ಚಿತ್ರ-ವಿಚಿತ್ರ!

## 800 ಮೈಲು 'ಸರ್ಪನ ಮಗ'

ಉತ್ತರ ಹಿಂದೂದೇಶದ ಒಬ್ಬ ಮನುಷ್ಯನು ತನ್ನ ಇಬ್ಬರು ಮಕ್ಕಳೊಂದಿಗೆ ಯಾತ್ರಾರ್ಥವಾಗಿ ಹೊರಟಿರುವನು. ಅವರಿಬ್ಬರಿಗೆ ಕಠಿನ ಅಸ್ವಸ್ಥವಾದಾಗ ಆತನೊಂದು ವಿಚಿತ್ರ ತರದ ಹರಕೆಯನ್ನು ಹೇಳಿಕೊಂಡಿದ್ದನು. ಈಗ ಅದರ ಪೂರ್ತಿಕೆಗಾಗಿ ಅವರಿಬ್ಬರೊಡನೆ ಕೈಕಾಲುಗಳಿಂದ ತೆವಳುತ್ತ 800 ಮೈಲು ದೂರದ ಅದೊಂದು ದೇವಾಲಯಕ್ಕೆ ಹೊರಟಿರುವನು.

## ಹೆಂಡತಿಯು ಕ್ಷೌರ ಗಂಡನನ್ನು ಕೊಂದಿತು

ತನ್ನ ಹೆಂಡತಿಯು ಎಷ್ಟು ಹೇಳಿದರೂ ಕೇಳದೆ, ಆಗಾಗ್ಗೆ ಕ್ಷೌರ ಮಾಡಿಸುವಳೆಂಬ ಕಾರಣದಿಂದ ಅಮೇರಿಕದ ಬೇಸಾಯಗಾರನೊಬ್ಬನು ಆತ್ಮಹತ್ಯೆ ಮಾಡಿಕೊಂಡಿರುವನು. ಸಾಯಬೇಕಾದರೆ ಆಕೆಯನ್ನು ಕೊಲ್ಲಬೇಕೆಂದು ಆತನು ಪ್ರಯತ್ನಪಟ್ಟಿದ್ದನು. ಆದರೆ ಅದು ಮಾತ್ರ ಸಾಧ್ಯವಾಗಲಿಲ್ಲ.

## ಡಾ. ಬಾತುಕೋಳಿ.

ಅಮೇರಿಕದಲ್ಲಿ ಅದೊಂದು ಮಾತನಾಡುವ ಬಾತುಕೋಳಿಗೆ 'ಡಾಕ್ಟರ್' ಎಂಬ ಬಿರುದು ಕೊಡಲ್ಪಟ್ಟಿದೆ. ಅದರ ಹೆಸರು ಗೂ-ಗೂ, ಎಂದು. ಆದುದರಿಂದ ಅದನ್ನೀಗ ಡಾ। ಗೂ ಗೂ, ಎಂದು ಕರೆಯುವರು.

## ರೋಗಗಳ ನಾಮಕರಣ

ಅಮೇರಿಕದ ಮಿ। ಮತ್ತು ಮಿಸೆಸ್ ಎವಿಲ್ ಜೇಕ್ಸನ್ ಎಂಬವರು ತಮ್ಮ ಮೂರನೆಯ ಮಗುವನ್ನು ಏಪೆಂಡಿಸೈಟಿಸ್ ಎಂಬ ನಾಮಕರಣ ಮಾಡಿರುವರು. ಮೊದಲನೆಯ ಮಗುವಿನ ಹೆಸರು ಟೊನ್ಸಿಲೈಟಿಸ್, ಎರಡನೆಯ ಮಗುವಿನ ಹೆಸರು ಮೆನಿಂಜೈಟಿಸ್. ಇನ್ನು ಈ ವಿಚಿತ್ರ ದಂಪತಿಗಳಲ್ಲಿ ಯಾವ ರೋಗವು ಜನನಕ್ಕೆ ಬರುವುದೆಂದು ನೋಡಬೇಕು.

## ಕಲಹಾರಿ ಮರುಭೂಮಿಯ ಮರಳು ಕೂಗುವುದೇಕೆ?

ಆಫ್ರಿಕದ ಕಲಹಾರಿ ಮರುಭೂಮಿಯಲ್ಲಿ ಅಲ್ಲಸಲ್ಲದ ಶಬ್ದಗಳಾಗುವುದರಿಂದ ಅದಕ್ಕೆ 'ಕೂಗುವ ಮರಳು ಕಾಡು' ಎಂದು ಹೆಸರಾಗಿದೆ. ಅದರಲ್ಲಿ ಯಾರಾದರೂ ನಡೆದುಕೊಂಡು ಹೋಗುವಾಗ, ಕಾಲಿಟ್ಟಲ್ಲಿ ಕೂಗಿದಂತೆ ಶಬ್ದವಾಗುವುದು. ಕೈಯಲ್ಲಿ ಸ್ವಲ್ಪ ಹೊಯ್ಗೆಯನ್ನು ಹಿಡಿದು ಬೆರಳುಗಳ ಎಡೆಯಿಂದ ಬಿಡುವಾಗಲೂ ಅದೊಂದು ಬಗೆಯ ಶಬ್ದವುಂಟಾಗುವುದು.

ಇಂದಿಗೆ ಕೆಲವು ವರ್ಷಗಳಿಂದ, ದಕ್ಷಿಣ ಆಫ್ರಿಕದ ಖಗೋಳಜ್ಞರ ಸಂಸ್ಥೆಯ ಅಧ್ಯಕ್ಷರೂ ಮತ್ತು ಅದರ ನಾಲ್ಕು ಮಂದಿ ಅನುಯಾಯಿಗಳೂ ಈ ವಿಚಿತ್ರವೇನೆಂದು ಗೊತ್ತುಹಚ್ಚಬೇಕೆಂದು ಶೋಧಗಳನ್ನು ನಡೆಸುತ್ತಿದ್ದರು. ಆ ಮರಳಿನಲ್ಲಿ 'ಸಿಲೀಕಾ' ಎಂಬ ವಸ್ತುವು ಇದ್ದುದರಿಂದ ಈ ಅಲ್ಲಸಲ್ಲದ ಶಬ್ದಗಳಿಗೆ ಕಾರಣವೆಂದು ಗೊತ್ತುಹಚ್ಚಲಾಗಿದೆ.

ರೇಡಿಯೋ ಸೆಟ್ಟಿನಂತೆ ಈ ಸಿಲೀಕದ ಅಣುಗಳು ಶಬ್ದವನ್ನು ಸಂಗ್ರಹಿಸಿ, ಒಂದರಿಂದ ಇನ್ನೊಂದಕ್ಕೆ ಬಿಡುತ್ತವಂತೆ. ಇದರಿಂದ ಶಬ್ದವು ಇನ್ನೂ ಹೆಚ್ಚಾಗಿ, ಬಗೆಬಗೆಯ ಕೂಗುವ ಧ್ವನಿಗಳಿಗೆ ಕಾರಣವಾಗುತ್ತದಂತೆ.

## ಚುಂಬನ ಮದ್ದು

ಸಂಬಂಧಿಕರಲ್ಲದವರಿಂದ ಚುಂಬಿಸಿಕೊಳ್ಳುವುದೂ ಅದೊಂದು ಬಗೆಯ ಮದ್ದಂತೆ! ಬರ್ಮಾದ ಉತ್ತರ ಷಾನ್ ಪ್ರಾಂತ್ಯದ ಜನರ ಅಭಿಪ್ರಾಯವಿದು. ಅದೊಂದು ಬಗೆಯ ಜ್ವರವಿದೆಯಂತೆ. ಇದಕ್ಕೆ ಚುಂಬನವೇ ರಾಮಬಾಣ ಮದ್ದು. ಅದರ ಚಿಹ್ನೆಗಳೇನೆಂದರೆ— ಜ್ವರ, ಹೊಟ್ಟೆ ಹಸಿವೆ ಅಡಗುವುದು, ಮತ್ತು ಶಕ್ತಿಗುಂದುವುದು. ಸಿನೆಮಾ ನಟರು ಅಲ್ಲಿ ಹೋದರೆ ತುಂಬಾ ಹಣವನ್ನು ಸಂಪಾದಿಸಬಹುದಲ್ಲವೆ?

## ಪ್ರಾಣಿಗಳ ಕೆಲೆಂಡರು.

ಮಂಗೋಲಿಯಾ ದೇಶದ ಕಿರ್ಗಿಜ್ ಎಂಬ ಜನಾಂಗದ ಯಾರಾದರೊಬ್ಬನೊಡನೆ 'ನಿನ್ನ ಪ್ರಾಯವೆಷ್ಟು' ಎಂದು ಕೇಳಿದರೆ, 'ನಾನು ನಾಯಿಯ ಸಂವತ್ಸರದಲ್ಲಿ ಹುಟ್ಟಿದೆನು. ಈಗ ನನಗೆ 5 ಆವರ್ತನಗಳಾದುವು' ಎಂದು ಹೇಳುವನು.

ಈ ಮಂಗೋಲಿಯದ ಟಾರ್ಟರಿ ಜನರಿಗೆ ಪಾಶ್ಚಾತ್ಯ ಕೆಲೆಂಡರಿನ ಪರಿಚಯವೇ ಇಲ್ಲ. ವರ್ಷಗಳನ್ನು ಲೆಕ್ಕಮಾಡುವ ಅವರ ಕ್ರಮವು ವಿಚಿತ್ರವಾದುದು. ಅವರ ಪ್ರತಿಯೊಂದು ಆವರ್ತನವೆಂದರೆ ನಮ್ಮ ಹದಿನೆರಡು ವರುಷಗಳು. ಪ್ರತಿಯೊಂದು ಆವರ್ತನವು ಹದಿನೆರಡು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿರುವುದು ಮತ್ತು ಪ್ರತಿಯೊಂದು ಭಾಗಕ್ಕೆ ಒಂದೊಂದ ಪ್ರಾಣಿಯ ಹೆಸರು ಕೊಡಲ್ಪಟ್ಟಿರುವುದು. ಆದುದರಿಂದ ಅವರು 'ಸರ್ಪದ ವರ್ಷ', 'ಕುದುರೆಯ ವರ್ಷ', 'ಕಾಡಿಯ ವರ್ಷ' 'ನಾಯಿಯ ವರ್ಷ' ಎಂಬುದಾಗಿ ಹೇಳುವರು.



ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ. ಎಳೆಯ ಮಕ್ಕಳ ಆರೋಗ್ಯವು ಸ್ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ. ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ. ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣಬೇಧಿಗಳು, ಕೈಕಾಲುಗಳು ಸಣ್ಣವಾಗಿ ಕ್ಷೀಣ, ಇವುಗಳಿಂದ ನರಳಿ, ಬಳಲಿ ಎಷ್ಟೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ನೊಂದು ಸಾಯುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ.

ಎಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೧ ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು

ದ. ಕ. ಜಿಲ್ಲೆಯ ಏಜಂಟರು —
ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

ನಿಮ್ಮ ಕುಟುಂಬದವರಿಗೆಲ್ಲ ಒಳ್ಳೇ ಆರೋಗ್ಯ

ನಿಮ್ಮ ಕುಟುಂಬದ ಆರೋಗ್ಯವು ಬಹಳ ಪ್ರಾಮುಖ್ಯವಾದ ವಿಷಯವಾಗಿರುತ್ತದೆ. ಆದ್ದರಿಂದಲೇ ದೇಶದಲ್ಲಿನ ಎಲ್ಲಾ ಮನೆಗಳಲ್ಲಿಯೂ ಶಕ್ತಿವರ್ಧಕ ಆಹಾರ ಪಾನೀಯವಾದ ಓವಲ್ಟಿನ್ನನ್ನು ಬಹಳವಾಗಿ ಉಪಯೋಗಿಸುತ್ತಾರೆ.

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಪೌಷ್ಟಿಕ ಆಹಾರಗಳಾದ ಹಣ್ಣಾದ ಬಾರ್ಲಿ ಸತ್ವದ ದಲೂ ಉತ್ತಮ ಕೆನೆ ಹಾಲಿನಿಂದಲೂ ತಯಾರಿಸಲ್ಪಟ್ಟದ್ದಾಗಿದ್ದು ಸಂಪೂರ್ಣವೂ ಪೂರ್ಣವಾಗಿಯೂ ಅದದ್ದಾಗಿರುತ್ತದೆ. ಇಷ್ಟಲ್ಲದೆ ಇದರಲ್ಲಿ ಪ್ರಕೃತೀಯವಾದ ವಿಟಮಿನ್‌ಗಳ ಇತರ ಉತ್ತಮ ಆಹಾರಗಳೂ ಸೇರಿವೆ.

ಓವಲ್ಟಿನ್'ನಲ್ಲಿ ದೇಹಶಕ್ತಿಯನ್ನೂ, ಮಾನಸಿಕ ಚಟುವಟಿಕೆಯನ್ನೂ ಅಭಿವೃದ್ಧಿಗೊಳಿಸಿ ಆದರಿಸತಕ್ಕ ಎಲ್ಲಾ ಪೌಷ್ಟಿಕ ಆಹಾರಗಳೂ ಸೇರಿರುವುದರಿಂದ, ಒಂದು ಕಪ್ 'ಓವಲ್ಟಿನ್'ನ್ನು ದಿನಂಪ್ರತಿ ಸೇವಿಸುವುದೆಂದರೆ, ನಿಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ಒಳ್ಳೇ ಶಕ್ತಿ, ಆರೋಗ್ಯ ಮತ್ತು ಚೈತನ್ಯವನ್ನು ಸೂಚಿಸುತ್ತದೆ. ಇಮಿಟೇಶನುಗಳಿಗೆ ಮೋಸಹೋಗಬೇಡಿರಿ.

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ
ಮಿದುಳು, ನರ ಮತ್ತು ದೇಹಶಕ್ತಿಯನ್ನು ವೃದ್ಧಿಸುತ್ತದೆ.
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ
ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ
ಏಜಂಟರು —ಜೇಮ್ಸ್ ರೈಟ್ ಲಿಮಿಟೆಡ್
ಕಲ್ಕತ್ತ, ಮುಂಬಾಯಿ, ಕರಾಚಿ, ಮದ್ರಾಸುಗಳಲ್ಲಿ.
OV 447

## ಅಪರಾಧಿ ಮಕ್ಕಳು.

ಜರ್ಮನ್ ನೆಕನೇಲಿಟಿಯನ್ನು ಕಳಕೊಂಡ 88 ಮಂದಿಯ ಒಂದು ಪಟ್ಟಿಯು ಹಿಟ್ಲರರಿಂದ ಹೊರಡಿಸಲ್ಪಟ್ಟಿರುವುದು. ಅವರು ಜನಕೆಗೂ ರೈಶಿಗೂ ದ್ರೋಹಮಾಡಿದುದರಿಂದ ಈ ರೀತಿ ಮಾಡಲಾಯಿತಂತೆ. ಆದರೆ ವಿಚಿತ್ರವೆಂದರೆ ಇಂತಹ ಅಪರಾಧಿಗಳಲ್ಲಿ ಒಂದು ವರ್ಷದ 2 ಕೂಸುಗಳೂ, ಎರಡು ವರ್ಷದ 1 ಮಗುವೂ ಮತ್ತು ಮೂರು ವರ್ಷದ ಒಬ್ಬ ಹುಡುಗನೂ ಇರುವರು. ಇಂತಹ ಎಳೆಯ ಮಕ್ಕಳು ಮಾಡಿದ ಅಪರಾಧವೇನೆಂದು ಹಿಟ್ಲರರು ಪ್ರಕಟಿಸಿದ್ದರೆ ತುಂಬಾ ಉಪಕಾರವಾಗುತ್ತಿತ್ತಲ್ಲವೆ?

ಶ್ರೀ ಸುಭಾಸ್ ಭೋಸರು ತಮ್ಮ ಅಧ್ಯಕ್ಷ ಬಿನ್ನಪವನ್ನು ಬರೆಯುತ್ತಿದ್ದು, ಅದನ್ನು ನಿನ್ನೆ ದಿವಸ ಮುಗಿಸಿರುವರು. ಅವರು ತಮ್ಮ ಭಿನ್ನಪವನ್ನು ಹಿಂದೀ ಭಾಷೆಯಲ್ಲಿ ಕೊಡುವರಾಗಿ ತಿಳಿದುಬರುತ್ತದೆ.

ರತ್ನೈರ್ಮಹಾರ್ಹೈಸ್ತುತುಷುರ್ನ
ದೇವಾ । ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥
ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥

ಸ್ವದೇಶಾಭಿಮಾನಿ
SWADESHABHIMANI

"ಗರಲಕವರಂಜಿದರೆ! ಸುಧೆಯನು
ಮಾರಿತು ಕ್ಷುದ್ರರ
ಕೆರದಿ ಕುಳಿತರೆ, ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾ. ೧೧ನೇ ಶುಕ್ರವಾರ ಫೆಬ್ರವರಿ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.) | ತಾರೀಖು 11—2—1938.

## ಫೆಡರಲ್ ಯೋಜನೆಯ ಖಂಡನೆ

ವಾರ್ಧಾದಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಫೆಡರೇಶನಿನ ಕುರಿತು ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಠರಾವಾಗಿರುತ್ತದೆ. ಈ ಠರಾವು ಆಚರಣೆ ಬಗ್ಗೆ ಹರಿಪುರ ಕಾಂಗ್ರೆಸಿನಲ್ಲಿ ಧಲಾಗು[illegible] ಈ ಠರಾವಿನ ಕುರಿತು ವರ್ಕಿಂಗ್ ಕಮಿಟಿಯ ಸದಸ್ಯರು ಶೆಗಾಂವಿಗೆ ತೆರಳಿ ಮಹಾತ್ಮಾಜಿಯರೊಡನೆ ವಿಚಾರವೆತ್ತಿ ಒಂದು ತಾಸಿನವರೆಗೆ ಅವರೊಡನೆ ಮಾತನಾಡಿದುದಾಗಿ ಅದರ ನಂತರವೆ ಈ ಠರಾವು ಮುಂದೆ [illegible] ವುದೆಂದು ತಿಳಿದುಬರುತ್ತದೆ.

ಸಮ್ರಾಜ ಶಾಸನವು ಕಾಂಗ್ರೆಸ್ಸಿನಿಂದ ತಿರಸ್ಕರಿಸಲ್ಪಟ್ಟಿದೆ. ಪ್ರಜಾಮತದಿಂದ ಆರಿಸಿದ ಕೊನ್ಸ್ಟಿಟ್ಯುವೆಂಟ್ ಆಸೆಂಬ್ಲಿಯಲ್ಲಿ ಆಸ್ಯ ಜನಾಂಗಿಕರ ಕೈಯಲ್ಲಿದೆ, ಹಿಂದೂದೇಶಕ್ಕೆ ಒಪ್ಪುವ [illegible] ರಾಜಶಾಸನದ ರಚನೆಯಾಗಬೇಕೆಂದು, ಕಾಂಗ್ರೆಸ್ಸಿನ ನಿರ್ಣಯವು ಈ ಮೊದಲೆ [illegible] ಹಿಂದೂದೇಶಕ್ಕೆ ಬೇಕಾದ [illegible] ನವು ಸ್ವಾತಂತ್ರ್ಯದ ಮೇಲೆ [illegible] ಬೇಕು. ಈ ಧೋರಣೆಯನ್ನು [illegible] ಸ್ವಾತಂತ್ರ್ಯದ [illegible] ಪ್ರಾಂತ್ಯಗಳಲ್ಲಿ ಕಾಂಗ್ರೆಸ್ [illegible]

[illegible]

ವಿಚಾರಗಳ [illegible] ಫೆಡರೇಶನಿನ ಹಿಂದೂದೇಶಕ್ಕೆ [illegible] ಸಾಮ್ರಾಜ್ಯಶಾಹಿ [illegible] ಗಳನ್ನು [illegible] ಈ ಫೆಡರೇಶನ್ [illegible] ಕಾಂಗ್ರೆಸ್ಸು ವಿರೋಧಿಸುತ್ತದೆ. [illegible] ಸಮಾನವಾದ ಸ್ವಾತಂತ್ರ್ಯವನ್ನೂ [illegible] ಹಕ್ಕುಗಳನ್ನೂ [illegible] ಈ ಫೆಡರೇಶನಲ್ಲಿ [illegible] ಕಾಂಗ್ರೆಸ್ಸಿನ [illegible] ಭಾಗ [illegible] ಭಾರತೀಯ ಸಂಸ್ಥಾನಗಳಲ್ಲಿ ಪ್ರಜಾಸತ್ತಾತ್ಮಕ ಕ್ರಮಗಳನ್ನು ಅನುಸರಿಸಿ ನಡೆಯುವ ಸರಕಾರವಿರಬೇಕು. ಇಲ್ಲವಾದರೆ ಈ ಫೆಡರೇಶನಲ್ಲಿ ಪ್ರಜಾಸತ್ತಾತ್ಮಕ [illegible] ಸರ್ವಾಧಿಕಾರಿ ಅರಸರ [illegible] ನೆಟ್ಟಗಾಗದು. ಈಗಿನ ತರದ ಫೆಡರೇಶನಿಂದ ಹಿಂದೂದೇಶದಲ್ಲಿ ಐಕ್ಯವುಂಟಾಗುವ ಬದಲು ಛಿದ್ರಗಳುಂಟಾಗುವುವು.

ಆದುದರಿಂದ ಕಾಂಗ್ರೆಸ್ಸು ಫೆಡರೇಶನನ್ನು ಖಂಡಿಸುತ್ತದೆ, ಎಲ್ಲಾ ಕಾಂಗ್ರೆಸ್ ಕಮಿಟಿಗಳು ಕಾಂಗ್ರೆಸ್ ಮಂತ್ರಿಮಂಡಳಗಳು ಮತ್ತು ಜನರು ಈ ಫೆಡರೇಶನು ರೂಢಿಗೆ ಬರದಂತೆ ಅಡ್ಡಿಗಳನ್ನು ಹಾಕಬೇಕೆಂದು ಆಜ್ಞಾಪಿಸುತ್ತದೆ.

ಜನರ ಇಚ್ಛೆಗೆ ವಿರೋಧವಾಗಿ ಈ ಫೆಡರೇಶನ್ ಯೋಜನೆಯನ್ನು ಹಿಂದೂದೇಶದ ಮೇಲೆ ಒತ್ತಾಯದ ಮೂಲಕ ಹೊರಿಸಲು ಯತ್ನ ನಡೆದರೆ, ಎಲ್ಲಾ ತರದ ಉಪಾಯಗಳಿಂದ ಈ ಯತ್ನವನ್ನು ವಿರೋಧಿಸಬೇಕು. ಪ್ರಾಂತೀಯ ಸರಕಾರಗಳು ಮತ್ತು ಕಾಂಗ್ರೆಸ್ ಮಂತ್ರಿ ಮಂಡಳಗಳು [illegible]

ಆ ತರದ ಸಂದರ್ಭವು ಬಂದರೆ, ಅದಕ್ಕೆ ಸರಿಯಾಗಿ ಕಾರ್ಯಸಾಧನೆಯ ಮಾರ್ಗಗಳನ್ನು ರಚಿಸುವರೆ ಆ ಭಾ. ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಅಧಿಕಾರ ಕೊಡಲಾಗಿದೆ.

ನವ ರಾಜಶಾಸನವನ್ನು, ತನ್ನೊಡನಿರುವ ಎಲ್ಲಾ ಬಲದಿಂದ ವಿರೋಧಿಸಬೇಕೆಂಬುದು ಕಾಂಗ್ರೆಸ್ಸಿನ ನಿರ್ಣಯವು. ಹೀಗೆ ಫೆಡರೇಶನನ್ನು ವಿರೋಧಿಸಲು, ಮಾತ್ರವೇ ಅಸಹಕಾರ ಚಳವಳವನ್ನು ಹೊರಡಿಸಲು ಕೂಡ ತಾನು ಸಿದ್ಧನಿರುವೆನೆಂದು, ನೂತನ ರಾಷ್ಟ್ರಪತಿ ಶ್ರೀ ಸುಭಾಷ್ಚಂದ್ರ ಬೋಸರು [illegible] ತಿಳಿದುಬರುತ್ತದೆ. [illegible]

### ಪ್ರಾಂತ್ಯಗಳೂ ಫೆಡರೇಶನೂ

ಗಾಂಧಿಜಿಯವರೊಡನೆ [illegible] ಕಾಂಗ್ರೆಸ್ಸಿನ ಅಧ್ಯಕ್ಷರ [illegible] ಕಾರಗಳ [illegible] ಫೆಡರಲ್ [illegible] ಫೆಡರೇಶನ್ [illegible]

[illegible]

ಫೆಡರೇಶನನ್ನು [illegible] ವಾಗಿರುತ್ತದೆ.

### ಫೆಡರೇಶನಿನ ಕುರಿತು ಸುಭಾಸಬಾಬುಗಳ ಮನೋವರ್ತನೆ

ಈ [illegible] ಸುಭಾಸಬಾಬುಗಳ, [illegible] ಸದ [illegible] ತಿಳಿದುಬರುತ್ತದೆ. [illegible] ಗಳ ವಿಚಾರದಲ್ಲಿ [illegible] ಫೆಡರಲ್ ಯೋಜನೆಯು [illegible] ಸಹಕಾರವು [illegible] ಕಾಂಗ್ರೆಸ್ಸು [illegible] ನಡೆಯ [illegible] ಇಂಗ್ಲೆಂಡಿನ ಮಂಬುವುದಿಲ್ಲ. ತನ್ನ ಈ ಅಧ್ಯಕ್ಷತೆಯ ಅವಧಿಯನ್ನು ಫೆಡರೇಶನ್ ವಿರೋಧವನ್ನು ದೃಢಪಡಿಸುವುದರಲ್ಲಿ ವಿನಿಯೋಗಿಸುವನೆಂದೂ, [illegible] ವಾದಂತೆ ಕಾಂಗ್ರೆಸ್ಸು ಸಿಜವಾಗಿಯೂ ಕಾರ್ಯ ನಡೆಯಿಸಿಬಿಟ್ಟರೆ, ಆಗ ಬ್ರಿಟಿಷ ಸರಕಾರವು ಬಗ್ಗುವುದೆಂದೂ, ಆಗ ಫೆಡರೇಶನನ್ನು ಅವರು ಒತ್ತಾಯದಿಂದ ಹೊಂಸಲಾರರೆಂದೂ, ಕಾರಣ ಅಂತರಾಷ್ಟ್ರೀಯ ರಾಜಕೀಯದ ಈ ಸಂದಿಗ್ಧ ಸಮಯದಲ್ಲಿ ಹಿಂದೂದೇಶದೊಡನೆ ಇನ್ನೊಂದು ತಿಕ್ಕಾಟ ನಡೆಯಿಸಲು ಬ್ರಿಟಿಷರು ಸಿದ್ಧರಿಲ್ಲವೆಂದೂ, ಸುಭಾಸಬಾಬುಗಳ ಅಭಿಪ್ರಾಯವಾಗಿದೆ.

ಇದಿರುನೋಡುತ್ತಿದೆಯೆ? ನಾವೆಲ್ಲರೂ ಅದಕ್ಕೆ ಸಿದ್ಧರೆ?

### ಮುಸ್ಲಿಮರೊಡನೆ ಐಕ್ಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಫೆಡರೇಶನಿನ ಕುರಿತಲ್ಲದೆ, ಇತರ ಅನೇಕ ವಿಷಯಗಳ ಕುರಿತು ಆಲೋಚಿಸಿತು. ಶ್ರೀಗಳಾದ ಬಾಬು ಸುಭಾಷ್ಚಂದ್ರ ಬೋಸರ, ಪಂಡಿತ ಜವಾಹರಲಾಲ ನೆಹರುಗಳವರ, ಅಬ್ದುಲ್ ಕಲಾಮ್ ಆಜಾದರು, ವಲ್ಲಭಭಾಯಿ ಪಟೇಲರು, ಸರೋಜಿನಿ ದೇವಿಯವರು ಮಹಾತ್ಮಾಜೀಯವರನ್ನು ಕಂಡ [illegible] ವಿಚಾರವೆತ್ತಿದ ದಲ್ಲದೆ, ಕಾಂಗ್ರೆಸ್ [illegible] ಐಕ್ಯದ [illegible] ಜಿನ್ನಾರವರ [illegible] ಕೇಳಿ, [illegible] ಜವಾಹರಲಾ[illegible] ಹಿಂದೂ [illegible] ಪಕ್ಷದ [illegible] ಜವಾಹರಲಾಲರ [illegible] ಪ್ರಕಟಿಸಿ [illegible]

[illegible]

ತಿಳಿದುಬರುತ್ತದೆ.

### ಅಸ್ಸಾಮು ಮಂತ್ರಿಮಂಡಳದಲ್ಲಿ ಬದಲಾವಣೆಗಳು

[illegible] ಸದಸ್ಯರು, [illegible] ಕಾಂಗ್ರೆಸ್ ಪಕ್ಷದ [illegible] ಗವರ್ನರರಿಗೆ [illegible] ತಂತಿಗಳು [illegible]

### ಗಾಂಧಿಜೀಯವರ ಆರೋಗ್ಯ

ಗಾಂಧಿಜೀಯವರ ಆರೋಗ್ಯವು ವೃದ್ಧಿಯಾಗ [illegible] ಕಳೆದವಾರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಿಗೆ ಕೆಲವು ಸೂಚನೆಗಳನ್ನು ಕೊಡುವ ಕೆಲಸವನ್ನು ಮಾಡಿದ್ದರೂ, ಅವರ ರಕ್ತದೊತ್ತಡದಲ್ಲಿ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಅವರ ಆರೋಗ್ಯದಲ್ಲಿ ಪ್ರಗತಿಯು ಇನ್ನೂ ಆಗಲಿಲ್ಲ. ಹರಿಪುರ ಕಾಂಗ್ರೆಸ್ಸಿನ ಸಮಯ ಗಾಂಧಿಜೀಯವರಿಗೆ ಬಹಳ ಶ್ರಮವಹಿಸಬೇಕಾಗುವುದು.

### ಹಸಿವಿನ ಮುಷ್ಕರವನ್ನು ತೊರೆದರು

ಬಂಗಾಳದ ಡಾಕಾ ಜೈಲಿನಲ್ಲಿರುವ ರಾಜಕೀಯ ಕೈದಿಗಳು, ಮಹಾತ್ಮಾಜಿಯವರ ತಂತಿ [illegible]

ವಿಚಾರದಲ್ಲಿ ಶ್ರೀ ಶರತ್‌ಚಂದ್ರ ಬೋಸರು, ಶೆಗಾಂವಿಗೆ ತೆರಳಿ ಮಹಾತ್ಮಾಜಿಯವರನ್ನು ಕಂಡು, ಅವರಿಗೆ ಎಲ್ಲಾ ವಿಷಯಗಳನ್ನು ತಿಳಿಸಿರುವರಾಗಿ ತಿಳಿದುಬರುತ್ತದೆ. ಮಾರ್ಚ ೧ನೇ ತಾರೀಕಿನೊಳಗೆ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿಸುವ ಭರವಸೆಯು ಗಾಂಧಿಜಿಯವರಿಗಿರುತ್ತದೆ.

### ರಾಜಕೀಯ ಕೈದಿಗಳ ಬಿಡುಗಡೆ

ರಾಜಕೀಯ ಕೈದಿಗಳ ಬಿಡುಗಡೆಯ ಸಮಸ್ಯೆಯಿಂದ, ಬಿಹಾರಿನ ಕಾಂಗ್ರೆಸ್ ಮಂತ್ರಿಮಂಡಳಕ್ಕೂ, ಅಲ್ಲಿನ ಗವರ್ನರರಿಗೂ ತಿಕ್ಕಾಟವು ಪ್ರಾರಂಭವಾಗಿರುವುದೆಂದು, ಅಂದಮಾನ ದಿಂದ ಹಿಂತರಲಾದ ಕೆಲವೇ [illegible] ರಾಜಕೀಯ ಕೈದಿಗಳನ್ನು ಅವರೀಗ ಹಿಂಸಾಚರಣೆಯನ್ನು ತೊರೆದಿರುವರಾಗಿ ವಾಗ್ದಾನವಿತ್ತಿರುವುದಾದರೂ ಬಿಡುಗಡೆ ಮಾಡಲು ಗವರ್ನರರು ಕಾಂಗ್ರೆಸ್ ಮಂತ್ರಿಗಳಿಗೆ ಅಪ್ಪಣೆ [illegible] ಈ ಕುರಿತು ಕಾಂಗ್ರೆಸ್ ಪ್ರಧಾನರಿಗೂ ಗವರ್ನರರಿಗೂ ಅನೇಕ [illegible] ನಡೆದು [illegible] ಗವರ್ನರರು [illegible] ಅಭಿಪ್ರಾಯವನ್ನು [illegible] ತಿಳಿದುಬರುತ್ತದೆ. [illegible]

[illegible]

### ಬಂಗಾಳ ಕಾಂಗ್ರೆಸ್ ಕಮಿಟಿಯ ಪುನರ್ವ್ಯವಸ್ಥೆ

[illegible] ಬಂಗಾಳ ಕಾಂಗ್ರೆಸ್ ಕಮಿಟಿಯ ಪುನರ್ವ್ಯವಸ್ಥೆ [illegible] ಇದರಿಂದ ಪ್ರಾಂತ್ಯದ ರಾಜಕೀಯದಲ್ಲಿ ಅನೇಕ [illegible] ವಣೆಗಳು ನಡೆದು [illegible] ಮಂಡಳವು ಬೇಗನೆ [illegible]

### ಸುಭಾಸ ಬಾಬುಗಳ ಎಚ್ಚರಿಕೆ

ಜನರು ಹಿಂಸಾಚಾರಿಗಳಾಗ[illegible], ಮತ್ತು ತೊಂದರೆಗಳನ್ನು ಹೊರಡಿಸುವರೆ, ಸೆಣಸಾಟ ನಡೆಯಿಸುವ ಕೆಲಸಗಳು ಪ್ರಾರಂಭವಾಗಿವೆ ಎಂದು, ಸುಭಾಷಬಾಬುಗಳಿಂದ ಎಚ್ಚರಿಕೆ ಹೊರಬಿದ್ದಿರುತ್ತದೆ. ಇದರ ಅತ್ಯಂತ ಲಕ್ಷ್ಯವಾಗಬೇಕು.

ಕಾಂಗ್ರೆಸ್ಸಿನ ಪವಿತ್ರ ಧ್ಯೇಯವಾದ ಆದರ್ಶಗಳಿಗೆ ಭಂಗತರುವ ಕಾರ್ಯಗಳಲ್ಲಿ ಅನೇಕ ಯುವಕರು ತೊಡಗಿರುವುದರ ಕಾರಣವು ಇದೆ ಅಲ್ಲದೆ ಮತ್ತಾವುದಿರಬಹುದು? ಎಷ್ಟು ಪ್ರಯಾಸಪಟ್ಟರೂ ಇವರ ಕಾರ್ಯಕಲಾಪಗಳಿಗೆ ಬೇರೊಂದು ಕಾರಣವನ್ನು ತಿಳಿಯುವುದು ಅಸಾಧ್ಯವಾಗಿದೆ. ಆದುದರಿಂದ ಕಾಂಗ್ರೆಸಿಗೆ ಭಂಗವನ್ನು ತರುವವರ ಕುರಿತು, ಹಿಂಸಾಚರಣೆಯನ್ನು ಬೋಧಿಸುವವರ ಕುರಿತು ಪ್ರತಿಯೊಬ್ಬ ಕಾಂಗ್ರೆಸ್ ವಾದಿಯು ಕ[illegible] ಮಾಡಿಕೊಂಡು ಜಾಗರೂಕತೆಯ

# ಪಟ್ಟವನ್ನು ಹಿಂದೆ ಪಡೆಯಲು ಯಜ್ಞ

## ಪುರೋಹಿತನ ಆಶೆ—ರೂ. ೫೦೦ ಜುಲುಮಾನೆ.

ಜ್ಯೋತಿಷ್ಯಶಾಸ್ತ್ರಜ್ಞರ ಬೋಧನೆಪ್ರಕಾರ ಮಧ್ಯಪ್ರಾಂತ್ಯದ ಜಾಬ್ವಾ ಸಂಸ್ಥಾನದ ಪಟ್ಟಕಳಕೊಂಡ ರಾಜರು, ತಮ್ಮ ಕಳೆದುಹೋದ ಪಟ್ಟವನ್ನು ಪಡೆಯುವರೆ ಯಜ್ಞವನ್ನು ನಡೆಸಿದರಾಗಿ ತಿಳಿದುಬರುತ್ತದೆ ಈ ಯಜ್ಞದಿಂದ ಸಂಬಂಧ ಪಟ್ಟ ಅಧಿಕಾರಿಗಳ ಅಭಿಪ್ರಾಯವು ಬದಲಾಗಿ ರಾಜರನ್ನು ಹಿಂದ ಕರೆಯುನಂತಾಗುವುದೆಂದು ಪಾವಗಡದ ಜೈನಮುನಿಯೊಬ್ಬರ ಅಭಿಪ್ರಾಯವಾಗಿರುತ್ತದೆ

ರಾಜರು ಈ ಯಜ್ಞವನ್ನು ನಡೆಸಿಬಿಟ್ಟರು. ತಾಂಶವನ್ನು ನೀರಿಕ್ಷಿಸುತ್ತಿದ್ದಾರೆ



ಜಾರ್ಜ ಲ್ಯಾನ್ಸ್ಬರಿಯವರು

### ಭೀತಿಯು ಗದ್ದಲಕ್ಕೆ ಕಾರಣವು

"ಯುದ್ಧಸಂಭವವು ಕಳೆದ ವರ್ಷಕ್ಕಿಂತ ಈ ವರ್ಷ ಬಹಳ ಹಿಂದಕ್ಕೆ ಸರಿದಿರುವುದೆಂದು ಹೇಳಬಹುದು. ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಗದ್ದಲಕ್ಕೆ ಭೀತಿಯೇ ಕಾರಣವು ಜರ್ಮನಿ ಇತ್ಯಾದಿ ದೇಶಗಳ ವಾರ್ಷಿಕ ಇತ್ಯಾದಿ ಒಪ್ಪಂದಗಳಿಂದ ಉಂಟಾದ ಹತಾಶಭಾವದಿಂದ ಜನರಲ್ಲಿ ಒಂದು ತರದ ವೈಷಮ್ಯಭಾವವುಂಟಾದುದು ಕಾಣಿಸುವುದು' ಎಂಬುದಾಗಿ ಲಂಡನಿನ ಶಾಂತಿ ಪ್ರತಿಜ್ಞೆ ಸಂಘದ ಆಶ್ರಯದಲ್ಲಿ ಮಾಡಿದ ಭಾಷಣದಲ್ಲಿ ಮಿ॥ ಜಾರ್ಜ ಲ್ಯಾನ್ಸ್ಬರಿಯವರು ಅಭಿಪ್ರಾಯಪಟ್ಟಿರುವರು

### ಜೂಜಿನಿಂದ ಗಳಿಸಿದ ಹಣವು ದಾನಕ್ಕೆ ಕೊಡಲಾಯಿತು

ಸ್ವಿಡನ್ನಿನ ಅರಸನಾದ ಗುಸ್ಟೇವನು ಕಳೆದ ಕ್ರಿಸ್‌ಮಸ್ ಸಮಯದಲ್ಲಿ ದಾನಧರ್ಮಗಳಿಗಾಗಿ ಒಂದು ಧನವನ್ನರ್ಪಿಸಿದನು ಇದು ಎಲ್ಲಿಂದ ಬಂತೆಂದು ಜನರಲ್ಲಿ ಆಶ್ಚರ್ಯವು ಉಂಟಾಗಿತ್ತು. ಮೋಂಟೊಕಾರ್ಲೊ ಎಂಬುದು ಐರೋಪ್ಯದ ಮಹತ್ತಾದ ಜುಗಾರಾಟದ ಮಂದಿರ. ಅಲ್ಲಿಗೆ ತೆರಳಿ ಜುಗಾರಾಡಿದ ಗುಸ್ಟೇವಂಗೆ, ದೈವವಶಾತ್ ಅನೇಕ ಜಯಗಳು ಒದಗಿ ತುಂಬಾ ಹಣವು ದೊರಕಿತ್ತಂತೆ ಈ ಹಣವನ್ನೇ ಅವರು ಮೊನ್ನೆ ದಾನಕ್ಕಾಗಿ ಕೊಟ್ಟಿರುವರಂತೆ. ಜುಗಾರಾಟದ ಹಣವು ಇದೇ ರೀತಿಯಲ್ಲಿ ವಿನಿಯೋಗಿಸ್ಪಡಬೇಕು.

### ಜಪಾನಿಯರಿಂದ ರಕ್ಷಿಸಿಕೊಳ್ಳಲು—

ಆಸ್ಟ್ರೇಲಿಯ ಸರಕಾರದವರು ತಮ್ಮ ಬಂದರುಗಳಲ್ಲಿ ವಿಶೇಷ ತರದ ರಕ್ಷಣಾ ಏರ್ಪಾಡು ಮಾಡಲಿರುವರೆಂದು ತಿಳಿದುಬರುತ್ತದೆ.

### ಪುರೋಹಿತನ ಆಶೆ—ರೂ. ೫೦೦ರ ಜುಲುಮಾನೆ.

ಕುಲಪುರೋಹಿತನೊಬ್ಬನ ಒತ್ತಾಯದಿಂದ ತನ್ನ ಗಂಡನು ದೇಹಾಲಸ್ಯವಿದ್ದಾಗ್ಯೂ ಹರಿದ್ವಾರಕ್ಕೆ ತೆರಳಿ, ಅಲ್ಲಿ ಆತನ ತಂದೆಯ ಶ್ರಾದ್ಧಕ್ರಿಯೆಗಳನ್ನು ಮಾಡಲು, ನದಿಯಲ್ಲಿ ಸ್ನಾನ ಮಾಡಿದ್ದರಿಂದ ಉಂಟಾದ ವಿಷಮಜ್ವರದಿಂದ ಗಂಡನು ಮೃತಪಟ್ಟನೆಂದು ವಿಧವೆಯೊಬ್ಬಳು ಕೋರ್ಟಿನಲ್ಲಿ ದೂರಿದಳು, ಮ್ಯಾಜಿಸ್ಟ್ರೇಟರು ಅ ಕುರಿತು ವಿಚಾರಣೆ ನಡೆಸಿ—ಪುರೋಹಿತನು ಕೊಲೆಯ ಮಟ್ಟಿಗೆ ತಪ್ಪಿತನೆಂದು ಕಂಡುಹಿಡಿದು ಆತನಿಗೆ ರೂ. ೫೦೦ರ ಜುಲ್ಮಾನೆಯನ್ನು ವಿಧಿಸಿರುವರು ನಾಯಸ್ ಎಂಬಲ್ಲಿ ಈ ಜುಲುಮಾನೆಯ ಹಣ ವಿಧವೆಗೆ ಕೊಡಲಾಗಬೇಕೆಂದು ಮ್ಯಾಜಿಸ್ಟ್ರೇಟರ ಅಪ್ಪಣೆಯಾಗಿರುತ್ತದೆ

### ಯೆಹೂದಿಯರ ಜಾನುವಾರುಗಳ ಮೇಲೂ ನಿರ್ಬಂಧ

ಜರ್ಮನಿಯ ಲಿ ಯೆಹೂದಿಯರ ಮೇಲೆ ವಿರೋಧಭಾವವು ಉಂಟಾಗಿ, ಅವರಲ್ಲಿಂದ ಹೊರಅಟ್ಟಲ್ಪಟ್ಟರಷ್ಟೆ ಅದರೊಡನೆ ಯೆಹೂದ್ಯರ ಯಾವತ್ತೂ ತರದ ಪ್ರೇರಣೆಯ 'ದೇಶದಲ್ಲಿರದಂತೆ ಸಕಲ ತರದ ನಿರ್ಬಂಧದ ಏರ್ಪಾಡುಗಳಾಗಿದ್ದವು ಈಗ ಯೆಹೂದ್ಯರ ಜಾನುವಾರುಗಳ ಮೇಲೂ ನಾಜಿ ದೃಷ್ಟಿಗೋಚರವಾಗಿರುತ್ತದೆ. ಯೆಹೂದ್ಯರ ಸ್ಪರ್ಶದಿಂದ ಹುಟ್ಟಿ ಬೆಳೆದ ಜಾನುವಾರುಗಳೂ ದೇಶದಲ್ಲಿರದಂತೆ ಇನ್ನು ಹುಟ್ಟಿಬೆಳೆಯದಂತೆ ಅವುಗಳ ಮೇಲೆ ನಿರ್ಬಂಧ ಕಾನೂನುಗಳು ಈಗ ಜರ್ಮನಿಯಲ್ಲಿ ಜ್ಯಾರಿಯಾಗಿದೆ!

### ಉದ್ಯೋಗಕ್ಕಾಗಿ ಹೋದವಳು ಕದ್ದೊಯ್ಯಲ್ಪಟ್ಟಳು

ಕಾನ್ಪುರ ಮುನಿಸಿಪಾಲಿಟಿಯ ಉಪಾಧ್ಯಾಯಿನಿಯೊಬ್ಬಳಿಗೆ ಉದ್ಯೋಗದ ಆಶೆ ತೋರಿಸಿ ಸ್ನೇಹಿತರಿಬ್ಬರ ಸಹಾಯದಿಂದ ಆಕೆಯ ನ್ನು ಅಕರ್ಷಿಸಿ, ಅವಳನ್ನು ಅಪಹರಿಸಿ ಕೊಂಡುಹೋಗಿ ಬಂದಿಖಾನೆಯಿರಿಸಿ, ಆಕೆಯ ಮೇಲೆ ಬಲಾತ್ಕಾರದಿಂದ ಅತ್ಯಾಚಾರ ನಡೆಸಲು ಯತ್ನಿಸಿದ ಕಾನ್ಪುರ ಮುನಿಸಿಪಲ್ ವಿದ್ಯಾಸಮಿತಿಯ ಸದಸ್ಯರೊಬ್ಬರ ಮತ್ತು ಸ್ಕೂಲ್ ಮಾಸ್ತರನೊಬ್ಬನ ಕುರಿತು ವಾರ್ತೆಯು ಬಂದಿರುತ್ತದೆ

ಹೀಗೆ ಕದ್ದೊಯ್ಯಲ್ಪಟ್ಟ ಶ್ರೀಮತಿ ಮಾಧವಿ ಎಂಬವಳ ಕಥೆಯು ಹೀಗಿದೆ — ತನ್ನ ಸ್ನೇಹಿತರಾದ ಸ್ಥಳೀಯ ಡಾಕ್ಟರರೊಬ್ಬರ ಕುಮಾರಿಯರ ಹೇಳಿಕೆಪ್ರಕಾರ ಒಂದುದಿನ ಅವರ ಮನೆಗೆ ತೆರಳಿದ ಅಲ್ಲಿ ಮುನಿಸಿಪಲ್ ವಿದ್ಯಾಸಮಿತಿಯ ಸದಸ್ಯರನ್ನು ಕಂಡು, ಅವರಿಂದ ಉದ್ಯೋಗ ದೊರಕುವ ಕುರಿತು ಭರವಸೆಗಳನ್ನು ಪಡೆದು, ಹಿಂತಿರುಗಿದಳು. ಮತ್ತೊಂದು ದಿನ ಡಾಕ್ಟರರ ಮನೆಗೆ ತೆರಳಿ ಅಲ್ಲಿ ವಿದ್ಯಾ ಸಮಿತಿಯ ಸದಸ್ಯರನ್ನೂ, ಇನ್ನೊಬ್ಬ ಸ್ಕೂಲ್ ಮಾಸ್ತರರನ್ನು ಕೂಡಿ, ವಿದ್ಯಾ ಇಲಾಖೆಯ ಮೇಲಧಿಕಾರಿಗಳನ್ನು ಕಾಣಲೆಂದು ಹೋಗುತ್ತಿರುವಾಗ, ಹಾದಿಯಲ್ಲಿ ಆಕೆಯನ್ನು ಅವರು ಕದ್ದೊಯ್ದು, ಒಂದೆಡೆ ಬಂಧನದಲ್ಲಿರಿಸಿದರು ಅಲ್ಲಿ ಸ್ಕೂಲು ಮಾಸ್ತರರು ಅವಳ ಮೇಲೆ ಅತ್ಯಾಚಾರ ನಡೆಸಲು ಯತ್ನಿಸಿದಾಗ, ಆಕೆಯು ಪೆಟ್ಟಿನಿಂದ ಗದರಿಸಲು ಆತನು ಭಯಪಟ್ಟು ಹೋಗುವವನಾದನು ನಂತರ ಆಕೆಯು ಹೇಗೊ ಮಾಡಿ ತನ್ನ ಗಂಡನಿಗೆ ಈ ವಾರ್ತೆಯನ್ನು ತಿಳಿಸಿ, ಅವನಿಂದ ರಕ್ಷಿಸಲ್ಪಟ್ಟಳು. ಈ ಕುರಿತು ಕಾನ್ಪುರದ ಮೆಜಿಸ್ಟ್ರೇಟರ ಕಛೇರಿಯಲ್ಲಿ ವಿಚಾರಣೆಯು ನಡೆಯುತ್ತದೆ.

ಸೋವಿಯಟ್ ರಷ್ಯಾದ ವಿಮಾನ ಬಲವು ಬಹಳವಾಗಿ ವೃದ್ಧಿಹೊಂದಿರುತ್ತದೆ ಸದ್ಯದಲ್ಲಿ ಜಗಮಂಡಲವನ್ನು ಒರೇ ೮೦ ತಾಸುಗಳಲ್ಲಿ ಸುತ್ತಾಡಿಬರುವ ತರದ ಯುದ್ಧವಿಮಾನಗಳ ಪಡೆಯೊಂದು ಸಂಚಾರಕ್ಕೆ ಹೊರಡುವುದೆಂದು ವಾರ್ತೆಯಿದೆ. ರಷ್ಯದ ವಿಮಾನ ಬಲದಿಂದಾಗಿ ಜರ್ಮನಿ ಮೊದಲಾದ ದೇಶಗಳು ಭೀತರಾಗಿರುವವೆಂದು ತಿಳಿದುಬರುತ್ತದೆ.

ಒಂದೇ ಸೀಸೆಯಿಂದ

ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!

ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯಲ್ಲಿದೆ.

ಕೇಸರಿ ಕುಟೀರಂ—ರಾಯಪೇಟೆ - ಮದ್ರಾಸು.

ಮಂಗಳೂರು ಪ್ರವರ್ತಕರು ಬಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

*Best Cheap Durable*

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by* -

The West Coast Soap Factory.

**ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,**

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents.*

**Panchmal Krishnaya Shenoy & Son,**

Bunder, MANGALORE

ಸರ್ವಾಧಿಕಾರಿಗಳ ಬಾಲ್ಯ: ೩

# "ಮುಸಲೀನಿ

**ಬಾಲ್ಯದಿಂದಲೂ ತುಂಟತನದಿಂದಲೇ ಮುಸಲೀನಿಯವರು ಕಾಲವನ್ನು ಕಳೆದವರು ತನಗೆ ಅಪರಾಧ ಮಾಡಿದವರನ್ನು ಅವರೆಂದೂ ಮರೆತವರಲ್ಲ. ತಾಯಿಯ ಅಕ್ಕರೆಯ ಪುತ್ರರವರು. ತಂದೆಯಿಂದ ಎಷ್ಟೋ ಬಾರಿ ಶಿಕ್ಷೆಯನ್ನು ಅನುಭವಿಸಿರುವರು. ತಂದೆಯು ಒಬ್ಬ ದಂಗೆಖೋರನ ಹೆಸರನ್ನವರಿಗಿಟ್ಟರು. ದೊಡ್ಡವನಾದ—ಮೇಲೆ - ದಂಗೆಖೋರನ ಜೀವನವನ್ನು ನಡೆಸಿದ ಮುಸಲೀನಿಯವರು ಇಟಲಿಯಲ್ಲಿಂದು ಅಗ್ರಗಣ್ಯರೆನಿಸಿರುವರು.**

೧೮೮೩ನೇ ಇಸವಿ ಜುಲೈ ತಾ. ೨೯ರಲ್ಲಿ ಆದೊಂದು ಆದಿತ್ಯವಾರ ದಿನ, ಮಧ್ಯಾಹ್ನ ೨ ಗಂಟೆಯ ಹೊತ್ತಿಗೆ ಮುಸಲೀನಿಯವರ ಜನ್ಮ.

ಅವರ ತಂದೆಯ ಹೆಸರು ಎಲಿಸ್ಸನೇರೊ ಅಕ್ಷರದ ಗುರುತು ಅವರಿಗಿರಲಿಲ್ಲ. ಬರಿ ಹತ್ತು ವರ್ಷಗಳಾಗುವಾಗಲೆ ಅವರ ತಂದೆತಾಯಿಗಳು ಕಮ್ಮಾರನ ಕೆಲಸವನ್ನು ಕಲಿಯಲಿಕ್ಕೆಂದು ಅವರನ್ನು ಡೊವಾಲ್ಲೋಲಾ ಎಂಬ ಸಮೀಪದ ಹಳ್ಳಿಗೆ ಕಳುಹಿದರು. ಆದರೆ [illegible] ಅವರಲ್ಲಿಂದ ಪೊರ್ಲಿಪ್ಪೊಲಾ ಎಂಬಲ್ಲಿಗೆ ತೆರಳಿದರು. ಅಲ್ಲಿ [illegible] ವರ್ಷಗಳ ತನಕ ಇದ್ದರು. ಅಗಲೇ ಅವರು ಅಂತರರಾಷ್ಟ್ರೀಯ ಸಂಘ ಮತ್ತು ಅವರ ರೀತಿ ನೀತಿಗಳ ಪರಿಚಯ ಮಾಡಿಕೊಂಡರು.

ನಂತರ ಅವರು ಡೋವಿಯಾ ಎಂಬಲ್ಲಿ ತನ್ನದೇ ಸ್ವಂತ ಒಂದು ಕನ್ನಡ ಶಾಲೆಯನ್ನು ತೆರೆದರು. ಅಲ್ಲಿ ಅವರಿಗೆ ತುಂಬಾ ಕೆಲಸವು ಸಿಕ್ಕುತ್ತಿದ್ದಿಲ್ಲ. ಜನರಲ್ಲಿ ತನ್ನ ಅಂತರಾಷ್ಟ್ರೀಯರ ನೀತಿಗಳನ್ನು ಪ್ರಚಾರಮಾಡತೊಡಗಿದರು. ತಾವೆ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ದಿನ ಹೋಗುತ್ತಾ ಅವರ ಸದಸ್ಯತನವು ಹೆಚ್ಚುತ್ತಾ ಬಂದಿತು. ಆದರೆ ಈ ಸಂಸ್ಥೆಯು ಬಹಳ ಕಾಲ ಬಾಳಲಿಲ್ಲ. ಪೊಲೀಸರು ಅದನ್ನು ಒಡೆದು ಚದರಿಸಿಬಿಟ್ಟರು.

ಎಲಿಸ್ಸನೇರೊ [illegible]ವನ್ನು ಸರಕಾರದವರು ಕೈದು ಮಾಡಿದರು. ಆದರೆ ಕೆಲವು ತಿಂಗಳುಗಳ ನಂತರ ಅವರ ತಪ್ಪು [illegible] ಅವರನ್ನು ಬಿಡುಗಡೆ ಮಾಡಲಾಯಿತು. [illegible] ಇದರಿಂದ ಅವರ ಮನಸ್ಸಿಗೆ ಏನೂ ಸಮಾಧಾನವಾಗಲಿಲ್ಲ.

ಅವರು ಕೊಪರೇಟಿವ (ಪರಸ್ಪರ ಸಹಾಯಕ ಸಂಘ) ಸದಸ್ಯರೆಲ್ಲಿಸಲ್ಪಟ್ಟರು. ಕೊವಾಗ್ರರೆಲ್ಲರೂ ಕೃಷಿಕರು. ಆದರೆ ಜಮೀನೆಲ್ಲವೂ ದೊಡ್ಡ ದೊಡ್ಡ ಜಮೀನುದಾರರ ಕೈಕೆಳಗಿರುವುದರಿಂದ, ಇವರಿಗೆ ಯಾವ ಕೆಲಸವೂ ಸಿಗುತ್ತಿದ್ದಿಲ್ಲ. ಇದರಿಂದಾಗಿ ಇವರು ಆಗಾಗ್ಗೆ ಕಲಹಗಳನ್ನೆಬ್ಬಿಸುತ್ತಿದ್ದರು. 'ಪುಂಡರ ತಂದೆ' ಎಂದೇ ಅವರಿಗೆ ಹೆಸರಾಯಿತು. ಎಲಿಸ್ಸನೇರೊ ಮುಸಲೀನಿಯವರು ಕೆಲಸಕ್ಕಾಗಿ ಇನ್ನೇನು ಮಾಡಲಿ? ಅಮೇರಿಕಕ್ಕೆ ಹೋಗಲಿ, ಇಲ್ಲವೆ ಸ್ವದೇಶದಲ್ಲಿದ್ದು ಉಪವಾಸ ಬೀಳಲಿ? ಸ್ವದೇಶ ಪ್ರೇಮಿಗಳಾದ ಅವರು ದೇಶದಲ್ಲಿದ್ದು ಉಪವಾಸ ಬಿದ್ದರೂ ಚಿಂತೆಯಿಲ್ಲ, ಪರದೇಶಕ್ಕೆ ಹೋಗಲಾರೆನೆಂದು ನಿಶ್ಚೈಸಿದರು.

[illegible] ದೊಡ್ಡ [illegible] ಗಳಲ್ಲಿ [illegible] ಬೇಕೆಂದು [illegible] ದಂಗೆಖೋರರಲ್ಲಿ ಎಲಿಸ್ಸನೇರೊ ಒಬ್ಬರು. ಇವರು [illegible] ಸಮಾಜ ಸುಧಾರಕರಾದ [illegible] ಮತ್ತು [illegible] ಇವರ ಅನುಯಾಯಿಗಳು.

[illegible] ಬಳಿಕ, ತನ್ನ ಅಂಗಡಿಯಲ್ಲಿ ತನ್ನ ಇಷ್ಟಮಿತ್ರರದೊಂದು ಕೂಟ ಕೂಡಿಸಿ, ಇವರು ರಾಜಕೀಯ ವಿಷಯಗಳ ಕುರಿತು ಚರ್ಚೆ ನಡೆಸುತ್ತಿದ್ದರು. ಒಂದೆಡೆ ಗಂಡಸರು ಮಾತುಕತೆ ನಡೆಸುತ್ತಿರುವಾಗ, ಇನ್ನೊಂದೆಡೆ ಅಂಗಡಿಯ ಮೂಲೆಯೊಂದರಲ್ಲಿ ಕುಳಿತು ಎಲಿಸ್ಸನೇರೊರವರ ಪತ್ನಿ ಸೀನೋರಾ ರೋಸ್ ಹೊಲಿಗೆಯ ಕೆಲಸವನ್ನು ಮಾಡುತ್ತಿದ್ದಳು. ಆ ವಾದವಿವಾದಗಳಲ್ಲಿ ಆಕೆಗೆ ಅಭಿರುಚಿ ಇದ್ದಿಲ್ಲ. ತನ್ನ ಮಕ್ಕಳ ಆರೈಕೆಯನ್ನು ನೋಡಿಕೊಳ್ಳುವುದೇ ಆಕೆಯ ಮನಸಿತ್ತ ದ ಕೆಲಸ.

ತನ್ನ ರಾಜಕೀಯ ಅಭಿಪ್ರಾಯಗಳಿಗನುಸಾರವಾಗಿ ಎಲಿಸ್ಸನೇರೊರವರು ತನ್ನ ಮಕ್ಕಳಿಗೆ ರಾಜದ್ರೋಹಿಗಳ ಹೆಸರುಗಳನ್ನಿಟ್ಟಿದ್ದರು. ಹಿರೀ ಮಗನಿಗೆ ಮೆಕ್ಸಿಕೋದಿನ ರಾಜದ್ರೋಹಿಯಾದ ಬೆನಿಟೊ ಜವಾರೆಜ್ಜನ ಸ್ಮಾರಕಾರ್ಥವಾಗಿ ಬೆನಿಟೊ ಎಂದು ನಾಮಕರಣ ಮಾಡಿದರು. ಕಿರಿಯವನಿಗೆ ಅರ್ನಾಲ್ಡೊ ಎಂದು ಹೆಸರಿಟ್ಟರು.

## ಶಾಲೆಯಲ್ಲಿ ತುಂಟತನ

ಹಿರಿಯವನಾದ ಬೆನಿಟೋವು ತಾಯಿಯ ಅಕ್ಕರೆಯ ಪುತ್ರನು. ಅವಳಂತೆ ಶೀಘ್ರಕೋಪಿ, ಅಷ್ಟು ವಿಷಯಕ್ಕಾಗಿ ಉದ್ರೇಕಗೊಳ್ಳುವ ಸ್ವಭಾವವು ಅವನದು. ಮಗನು ಏನು ತಪ್ಪು ಮಾಡಿದರೂ ತಾಯಿಯು ಅತನ ಪಕ್ಷವನ್ನು ವಹಿಸುತ್ತಿದ್ದಳು. ತಂದೆಯು ಮಾತ್ರ ಹಾಗಲ್ಲ. ತಪ್ಪು ಮಾಡಿದರೆ ಅದಕ್ಕೆ ತಕ್ಕ ಶಿಕ್ಷೆ ಕೊಡದೆ ಅತನು ಸುಮ್ಮಗಿರುತ್ತಿದ್ದಿಲ್ಲ.

ಕೆಲಸ ಮಾಡುತ್ತಿರುವ ಸಮಯದಲ್ಲಿ ಮಗನು ಬೇರೆ ಕಡೆಗೆ ಲಕ್ಷ್ಯವನ್ನು ಕೊಟ್ಟಲ್ಲಿ, ತಂದೆಯ ಕೈಯಲ್ಲಿದ್ದ ಚಾಟಿಯಿಂದ ಮಗನ ಬೆನ್ನಿನ ಮೇಲೆ ಪೆಟ್ಟುಗಳು ತಪ್ಪುತ್ತಿದ್ದಿಲ್ಲ. ಆಗ ಬೆನಿಟೋವು ಒಮ್ಮೆಲೆ ಹೊರಗೆ ಓಡಿಹೋದವನು, ಏಕಾಂಗಿಯಾಗಿ ಎಲ್ಲೆಲ್ಲಿಯೋ ಅಲೆದಾಡಿ, ರಾತ್ರಿಯಾಗದ ವಿನಹ ಮನೆಗೆ ಹಿಂತಿರುಗುತ್ತಿದ್ದಿಲ್ಲ.

ಅತನ ತಾಯಿಯು ಆ ಊರ ಶಾಲೆಯ ಉಪಾಧ್ಯಾಯಿನಿ. ಆಕೆಯು ಮಕ್ಕಳಿಗೆ ಪಾಠಗಳನ್ನು ಹೇಳಿಕೊಡುತ್ತಿರಾಗ, [illegible] ಬೆಂಚುಗಳ ಅಡಿ ನುಗ್ಗಿ ಚಿಕ್ಕ ಮಕ್ಕಳ ಕಾಲುಗಳನ್ನು ಚುಚ್ಚುವುದ, [illegible] ಇವೇ ಮೊದಲಾದ [illegible] ಗಳನ್ನು [illegible] ಅತನು [illegible] ಆಟಗಳನ್ನು [illegible] ಇದರಿಂದ [illegible] ತನ್ನ ಮಗನನ್ನೇ [illegible] ಮತ್ತೆ [illegible] ಬೇರೆ [illegible]

ಶಾಲೆಯ ಮಕ್ಕಳೆಲ್ಲರೂ [illegible] ಭಯಪಡುತ್ತಿದ್ದರು. ಆದರಲ್ಲಿ [illegible] ಅತನ ಬಾಧೆಯು ತಪ್ಪಿದ್ದಲ್ಲ. ಅವರನ್ನು ಒಯ್ಯುಗಳಿಗೆ ಕರಕೊಂಡ ಹೋಗಿ [illegible] ಗಳ ಅಡ್ಡ ಅವಿತುಕೊಂಡು [illegible] ಹೋಗ [illegible] ಒದರಿಸುತ್ತಿದ್ದನು. ಅವರಲ್ಲಿ ಒಬ್ಬ ದೈತನ [illegible] "ನನಗೊಂದು ಮುತ್ತು ಕೊಡು. ಮುರಿಯಬೇಡ" ಎಂದಾತಗೆ ಅವನು ಬೆದರಿಸುವನು. ಆಗಳು [illegible] ಮಾಡಲು, ಆಕೆಯ ಕೂದಲುಗಳನ್ನು ಹಿಡಿದೆಳೆದು, ಆಕೆಯನ್ನು ಅಲ್ಲೇ ಬಿಟ್ಟು ಓಡುವನು.

ತನ್ನ ಬಾಲ್ಯದ ಕುರಿತು ಮುಸಲೀನಿಯವರು ಈ ರೀತಿ ಬರೆದಿರುವರು: "ನಾನೊಬ್ಬ ಚಪಲ ಕುಯುಕ್ತಿಯ ಪೀಡಿಸು ಹುಡುಗ. ಜಗಳ ಹೊಡೆದಾಟವೇ ನನ್ನ ಶಕ್ತಿ. ಎಲ್ಲಿಯಾದರೂ ಇಂತಹ ಹೊಡೆದಾಟಗಳಲ್ಲಿ ನನಗೆ ಅಪಮಾನವಾದರೆ, ಪ್ರತೀಕಾರವನ್ನು ಮಾಡುವ ಉಪಾಯವು ನನಗೆ ತಿಳಿದೇ ಇತ್ತು. ರಜಾ ದಿನಗಳಲ್ಲಿ, ನನ್ನ ತಮ್ಮನೊಂದೊಡಗೂಡಿ ನದೀ ತೀರದಲ್ಲಿ ಆಟದಲ್ಲಿಯೇ ನಾನು ಕಾಲಕಳೆಯುತ್ತಿದ್ದೆನು. ಒಮ್ಮೆ ನಾನೊಬ್ಬನ ಪಕ್ಷಿಗಳನ್ನು ಕದ್ದೆನು. ಅವುಗಳ ಯಜಮಾನನು ನನ್ನನ್ನು ಓಡಿಸಿಕೊಂಡು ಬಂದನು. ನಾನು ನಾಗಾ

(೬ನೇ ಪುಟಕ್ಕೆ ಮುಂದುವರಿದಿದೆ.)


## ಉದರದೊಳಗೆ ವಾಯು

ಉದರದೊಳಗೆ ವಾಯು ಉಂಟಾಗುವುದು, ಅಜೀರ್ಣಾವಸ್ಥೆಯಿಂದಪರಿಣಮಿಸುವ, ಈಸಂಕಟವನ್ನು ಅತಿ ಬೇಗನೆ ಗುಣಪಡಿಸಬಹುದು. ವಾಯುರೋಗದ ನೋವನ್ನು ನಿವಾರಿಸಬಹುದು. ಹೊಟ್ಟೆಯೊಳಗೆ ವಾಯು ಉತ್ಪತ್ತಿಯಾಗುವುದರಿಂದ, ಹೊಟ್ಟೆಯು ತುಂಬಿದ ಭಾವವು ನಿಮ್ಮಲ್ಲಿ ಉಂಟಾಗುವುದು. ಅಜೀರ್ಣದಿಂದಲೂ, ಹೊಟ್ಟೆಯೊಳಗೆ ಜೀರ್ಣರಸಗಳು ಅತಿರೇಕವಾಗಿ ಉಂಟಾಗುವುದರಿಂದಲೂ ವಾಯು ಉಂಟಾಗುವುದು. ಹೊಟ್ಟೆಯಲ್ಲಿ ಅತಿರೇಕವಾಗಿ ಜೀರ್ಣರಸಗಳು ಉಂಟಾಗದಂತೆ ಏನಾಗಬೇಕು, ಇದನ್ನು ನೀವು ಮುಖ್ಯವಾಗಿ ತಿಳಿಕೊಳ್ಳಬೇಕು. ಅಲ್ಕೇಲಿಯನ್ನು ಹೊಟ್ಟೆಯೊಳಗೆ ಸೇರಿಸಿದರೆ, ಅದು ಹೊಟ್ಟೆಯೊಳಗೆ ಉಂಟಾಗುವ ಜೀರ್ಣ ಆಸಿಡ್‌ಗಳನ್ನು ಕಡಿಮೆ ಮಾಡುವುದು. ಹೊಟ್ಟೆಯೊಳಗೆ ಜಾಸ್ತಿ ಆಸಿಡ್ ಉಂಟಾದುದನ್ನು ಗುಣಪಡಿಸಲು, ಅಲ್ಕೇಲಿ ಚಿಕಿತ್ಸೆ ಶ್ರೇಷ್ಠವಾದುದು.

ಮೆಕ್ಲೀನ್ ಬ್ರೆಂಡ್ ಸ್ಟೊಮೆಕ್ ಪೌಡರು, ಅಪಾಯವಿಲ್ಲದ ಅತ್ಯಂತ ಗುಣಕಾರಿ ಅಲ್ಕೇಲಿ [illegible] ಅದು ಹೊಟ್ಟೆಯಲ್ಲಿರುವ ಆಸಿಡನ್ನು [illegible] [illegible] ವಾಯುವಾಗದಂತೆ [illegible]

[illegible] ಮೆಕ್ಲೀನ್ ಬ್ರೆಂಡ್ ಸ್ಟೊಮೆಕ್ ಪೌಡರನ್ನು [illegible] ಗುಣವಾಗುವುದು. ಇದು [illegible] ಇದಕ್ಕೆ [illegible] ಕಾರಣವಿದೆ.

ಈ ವಾಯುವಿನ [illegible] ಉದರರೋಗಗಳ [illegible] ಹೊಟ್ಟೆಯೊಳಗೆ [illegible] ಉಂಟಾಗುವ [illegible] ಈ ಅಪಾಯಗಳಿಂದ ಸುರಕ್ಷಿತರಾಗಲು, ವಾಯುರೋಗ ಪೀಡಿತನು ಎಚ್ಚರಪಡಬೇಕು. ಮೆಕ್ಲೀನ್ ಪೌಡರಿನಿಂದ ಹೊಟ್ಟೆಯು ನಿರ್ಮಲವಾಗುವುದಲ್ಲದೆ, ಹೊಟ್ಟೆಯೊಳಗಿನ ಆಸಿಡು ಕಡಿಮೆಯಾಗಿ, [illegible] ಗಳುಂಟಾಗಲಿಕ್ಕೆ ಅವಕಾಶವು [illegible] ಮೆಕ್ಲೀನ್ ಬ್ರೆಂಡ್ ಪೌಡರನ್ನು [illegible]

Alex. C. Maclean

ಎಂಬ ಸಹಿ [illegible] ಪೆಟ್ಟಿಯ ಮೇಲೆ [illegible] ಅದನ್ನು ಉಪಯೋಗಿಸಿದ ನಂತರ [illegible] ಸಂತೋಷಪಡಲಾರಿರಿ.

ಇಂತಹ [illegible] ಪೆಟ್ಟಿಯನ್ನು [illegible] ಜಾಸ್ತಿ [illegible] ಗಳಲ್ಲಿ ದೊರೆಯುತ್ತದೆ.

[illegible] ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜೆ. ಎಲ್. ಮೋರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್
ಸ್ಟೆಂಡಾರ್ಡ್ ಬಿಲ್ಡಿಂಗ್, ಹೋರ್ನ್‌ಬಿ ರೋಡ್ ಮುಂಬಯಿ.



S No. 65



# ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

## ಗೊನೋಕಿಲರ್ (ರಿಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಅಂಗ್ರೇಜಿ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನನ್ನ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗಿಗಳಾಗಿದ್ದರೂ, ಗೊನೋರಿಯಾ, ಗ್ಲೀಟ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

*Sole Manufacturer:* **Dr. D. N. JASANI,** Vithalbhai Patal Road, BOMBAY 4.

ಅವಳು ಒಟ್ಟು ಮಾಡಿಟ್ಟ ಹಣ—ಒಂದು ಒಂದು ರೂಪಾಯಿ ಕೂಡ ಆಗಿರಲಿಲ್ಲ. ಒಂದು ರೂಪಾಯಿ ಆಗಬೇಕಾದರೆ ಇನ್ನೂ ಏಳು ಪೈಗಳನ್ನು ಆ ಹಣಕ್ಕೆ ಕೂಡಿಸಬೇಕಾಗಿತ್ತು. ಹದಿನೈದಾಣೆ ಐದು ಪೈ!—ಆದರೆ ಅಷ್ಟು ಸಣ್ಣ ಮೊಬಲಗನ್ನಾದರೂ ಕೂಡಿಸಿ ಇಡಲಿಕ್ಕೆ ಅವಳೆಷ್ಟು ಕಷ್ಟಪಟ್ಟಿದ್ದಳು. ಒಂದು ಸೇರು ಅಕ್ಕಿ ತರಬೇಕಾದರೆ ಮೂರು ಮೂರು ಮೈಲು ನಡೆದು ಹೋಗುತ್ತಿದ್ದಳು ಯಾವ ಅಂಗಡಿಯಲ್ಲಿ ಅಕ್ಕಿ ಒಂದು ಪೈ ಕಡಿಮೆಗೆ ದೊರೆಯುತ್ತದೆ ಎಂದು ನೋಡುತ್ತಿದ್ದಳು ಹೀಗೆ ಬಹಳ ಚೌಕಸಿ ಮಾಡಿ ಅವಳು ತನ್ನ ಅಗತ್ಯದ ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದಳು. ಕಾಸಿಗೆ ಕಾಸು ಕೂಡಿಸಿ ಹದಿನಾರಾಣೆ ಐದು ಪೈ ಮಾಡಿದ್ದಳು ಆದರೆ, ನಾಳೆಯೇ ಕಿಸ್‌ಮಿಸ್ ಹಬ್ಬ! ಏನು ಮಾಡುವುದು? ಪಾಪ! ಅವಳು 365 ದಿನಗಳಲ್ಲಿ ಒಟ್ಟು ಮಾಡಿದ ಹಣಕಾಸು ಒಂದು ದಿನದ ಊಟಕ್ಕೂ ಸಾಲದು

ಮೇರಿ ನಿರಾಶಳಾಗಿ ಒಂದು ನಿಟ್ಟುಸಿರು ಬಿಟ್ಟಳು ಅವಳು ಟಿನ್ನಿನ ಕರಡಿಗೆಯ ಪುನಃ ಮುಚ್ಚಳ ತೆಗೆದ ಒಂದೊಂದೇಯಾಗಿ ಪೈಗಳನ್ನು ನೆಲದ ಮೇಲಿಟ್ಟು ಲೆಕ್ಕ ಮಾಡಿದಳು ಒಟ್ಟಿಗೆ ನೂರಎಂಭತ್ತೈದು–ಒಂದು ಹೆಚ್ಚಿಲ್ಲ, ಒಂದು ಕಡಿಮೆಯಿಲ್ಲ–ಜಗಲಿಯಲೇ ಕೂತು ತನ್ನ ಪ್ರಾರಬ್ಧವನ್ನು ದೂರಿದಳು ಮನುಷ್ಯ ಜೀವನವು ಸುಖದುಃಖ ಮಿಶ್ರಿತವಾಗಿರುವದು ನಿಜ ಆದರೆ ಅದರಲ್ಲಿ ಸುಖಕ್ಕಿಂತ ದುಃಖದ ಮಾತ್ರೆಯೇ ಹೆಚ್ಚೆಂಬುದು ಮೇರಿಯ ಜೀವನ ಕ್ರಮದಿಂದ ಸ್ಪಷ್ಟವಾಗುತ್ತಿತ್ತು

ದುಃಖಸಾಗರದಲ್ಲಿ ಮುಳುಗಿಕೊಂಡಿದ್ದ ಮೇರಿಯ ಆ ಮನೆಯಾದರೂ ಎಂಥಹದ್ದು! ಅದರ ಯಜಮಾನ ಪ್ರತಿ ಸೋಮವಾರ ಬಂದು ಮನೆಬಾಡಿಗೆ ಒಂದೊಂದು ರೂಪಾಯಿ ತಗೆದುಕೊಂಡು ಹೋಗುತ್ತಿದ್ದ ತಿಂಗಳಿಗೆ ನಾಲ್ಕು ರೂಪಾಯಿ ಬಾಡಿಗೆಯ ಆ ಮನೆ ಅದರ ಹೋಲಿಕೆಯ ಬೇರೆ ಮನೆ ಪ್ರಾಯಶಃ ಜಗತ್ತಿನಲ್ಲೇ ಇಲ್ಲ! ದೂರದಿಂದ ನೋಡುವಾಗ ಅದು ಯಾರೋ ಒಬ್ಬ ಬಡ ಭಿಕ್ಷುಕನ ಹರಕು ಮುರುಕು ಗುಡಿಸಲನಂತೆ ತೋರುತ್ತಿತ್ತು. ಗೇಟಿನ ಮೇಲೆ ಒಂದು ಅಂಚೆ ಪೆಟ್ಟಿಗೆ ತೂಗಿದೆ ಅದರ ಮೇಲೆ 'ಜೆರೋಮ್ ಮತ್ತಾಯುಸ್' ಎಂಬು ಬರೆದ ಒಂದು ಕಾಗದದ ತುಂಡು ಅಂಟಿದೆ ಆದರೆ ವರ್ಷದಲ್ಲಿ ಒಂದು ದಿನವಾದರೂ ಅದರೊಳಗೆ ಒಂದೇ ಒಂದು ಕಾಗದಪತ್ರ ಬಂದು ಬಿದ್ದದ್ದಿಲ್ಲ! ಮನೆಯಲಿ ವಿದ್ಯುದ್ದೀಪದ ಒಂದು ಗುಂಡಿ ಇದೆ ಆದರೆ ಅದನ್ನೊತ್ತಿ ಬೆಳಕು ಮಾಡುವದು ಮನುಷ್ಯ ಮಾತ್ರನಿಗೆ ಸಾಧ್ಯವಲ್ಲ —ಹೀಗಿತ್ತು ಮೇರಿಯ ಆ ಮನೆ!

ಮತ್ತಾಯುಸನಿಗೆ ನೇಯುಗೆ ಕಾರಖಾನೆಯಲ್ಲಿ ವಾರಕ್ಕೆ ಎಂಟು ರೂಪಾಯಿ ಸಂಪಾದನೆಯಾಗುವ ಒಂದು ಸಮಯವಿತ್ತು ಆದರೆ ಈಗ ಅವನ ಸಂಪಾದನೆ ಎಂಟರಿಂದ ಎರಡಕ್ಕೆ ಬಂದು ಇಳಿದಿದೆ ಆದರೂ ಹಗಲಲ್ಲಿ ಪರಿಶ್ರಮಪಟ್ಟು ಸಾಯಂಕಾಲವಾಗುವ ಹೊತ್ತಿಗೆ ಮನೆ ಸೇರಿದಾಗ, ಮತ್ತಾಯುಸನಿಗೆ ಸಂಭ್ರಮದ ಸ್ವಾಗತವಾಗುತ್ತಿತ್ತು ಮೇರಿ ಅವನನ್ನು ಜಿಮ್ಮಿ ಎಂದು ಮುದ್ದಿನಿಂದ ಕರೆಯುತ್ತಿದ್ದಳು. ಜಿಮ್ಮಿ ಅವಳನ್ನು ಮೇರಿ ಅನ್ನುತ್ತಿದ್ದನು. ಆ ಎರಡು ಹೆಸರುಗಳಲ್ಲಿ ಎಂಥ ಆಕರ್ಷಣ

ಮೇರಿ ಅತ್ತು ಅತ್ತು ಶಾಂತಳಾದಳು ಆ ಮೇಲೆ ಕಿಟಕಿಯ ಹತ್ತಿರ ಹೋಗಿ ಹೊರಗಿನ ಪ್ರಪಂಚವನ್ನು ಇಣಿಕಿನೋಡುತ್ತ ಏನನೊ ಆಲೋಚಿಸ ತೊಡಗಿದಳು. ನಾಳೆಯೇ ಕಿಸ್‌ಮಿಸ್ ಹಬ್ಬ ಆದರೆ ಅವಳ ಹತ್ತಿರ ಇರುವದು ಕೇವಲ ಹದಿನೈದಾಣೆ ಐದುಪೈ ಮಾತ್ರ ಆ ಹಣದಿಂದ ನಾಳೆಯ ಖರ್ಚು ನಡೆಯಬೇಕು, ಜಿಮ್ಮಿಗಾಗಿ ಏನಾದರೊಂದು ಉಪಹಾರವನ್ನು ತರಬೇಕು ಒಂದಲ್ಲ, ಎರಡಲ್ಲ, ಹತ್ತಲ್ಲ, ಇಪ್ಪತ್ತಲ್ಲ, 365 ದಿವಸಗಳಿಂದ ಅವಳು ಹಣ ಕೂಡಿಸುತ್ತ ಬಂದಿದ್ದಾಳೆ. ತಿಂಗಳಿಗೆ ಎಂಟು ರೂಪಾಯಿ ಸಿಕ್ಕುವದಾದರೆ, ಅದರಿಂದ ಉಳಿಸುವದಾದರೂ ಏನನ್ನು? ಆದರೆ ಹದಿನೈದಾಣೆ ಐದು ಪೈಯಿಂದ ಜಿಮ್ಮಿಗಾಗಿ ಅವಳ ಪ್ರೇಮದ ಜಿಮ್ಮಿಗಾಗಿ ನಾಳೆಗೊಂದು ಉಪಹಾರ ತರಬೇಕು. ಏನು ತರುವದೆಂದು ಅವಳು ಆಲೋಚಿಸುತ್ತ ನಿಂತಳು. ಉಪಹಾರ ಉತ್ಕೃಷ್ಟ, ಅಮೂಲ್ಯ, ಉಪಯುಕ್ತ ಆಗಿರಬೇಕು ಮೇರಿ ಅಂಥಹದೇ ಒಂದು ವಸ್ತುವನ್ನು ಕೊಂಡುಕೊಳ್ಳಲಿಕ್ಕೆ ಆಲೋಚಿಸಿದ್ದಳು.

# ಪ್ರೇಮೋಪಹಾರ

ಅನುವಾದಕ—ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ ಅಧ್ಯಾಪಕ ಕಾರ್ಕಳ

೦ ೦ ೦ ೦

ಕೋಣೆಯ ಎರಡು ಕಿಟಕಿಗಳ ನಡುವೆ ಒಂದು ನಿಲುಗನ್ನಡಿ ತೂಗಿಕೊಂಡಿತ್ತು ಅದು ಯಾವ ಮಾಂಧಾತನಕಾಲದ್ದೋ ಗೊತ್ತಿಲ್ಲ ನೋಡಿದವನ ರೂಪು ಆ ಕನ್ನಡಿಯಲ್ಲಿ ಒಂದಕ್ಕೊಂದಾಗಿ ತೋರುತ್ತಿತ್ತು ಅದ ಕಾರಣ ಯಾರೂ ಕೆಲವು ವರ್ಷಗಳಿಂದ ಅದರ ಉಪಯೋಗ ಮಾಡುತ್ತಿರಲಿಲ್ಲ ಪರಂತು ಮೇರಿ ಮಾತ್ರ ಆ ಕನ್ನಡಿಯಿಂದಲೇ ತೃಪ್ತಳಾಗಿದ್ದಳು ಅವಳು ಕನ್ನಡಿ ಮುಂದೆ ಬಂದು ನಿಂತುಕೊಂಡಳು ಆಗಲೇ ಅವಳ ಮನಸ್ಸಿನಲ್ಲಿ ಒಂದು ವಿಚಿತ್ರ ಪ್ರಕಾರದ ತರಂಗವೆದ್ದಿತು ಕಣ್ಣುಗಳಲ್ಲಿ ಕಾಂತಿಯುದ್ದಿತು, ಮುಖದಲ್ಲಿ ಲಾವಣ್ಯವಿದ್ದಿತು ಆದರ ಒಂದರೆಕ್ಷಣದಲ್ಲಿ ಆ ಕಾಂತಿ, ಆ ಲಾವಣ್ಯ ಎದ್ದು ಎಲ್ಲೋ ಹಾರಿಹೋಯಿತು ಅವಳು ಥರಥರ ನಡುಗ ತೊಡಗಿದಳು ಮೇರಿ ತನ್ನ ಕೇಶರಾಶಿಯನ್ನು ಚೆದರಿಸಿ ಇಟ್ಟಳು. ಉದ್ದುದ್ದವಾದ ಕೂದಲುಗಳು ಕೃಷ್ಣಸರ್ಪಗಳಂತೆ ಆಡತೊಡಗಿದುವು.

ಜಿಮ್ಮಿಯ ಪ್ರೀತಿಯ ಎರಡು ವಸ್ತುಗಳಿದ್ದುವು ಅವು ಜಿಮ್ಮಿ ಮತ್ತು ಮೇರಿಗೆ ಪ್ರಾಣಕ್ಕಿಂತಲೂ ಪ್ರೀತಿಯದ್ದಾಗಿದ್ದುವು ಅವುಗಳಲ್ಲಿ ಒಂದು ಜಿಮ್ಮಿಯ ಕೈಗಡಿಯಾರ ಅದನ್ನು ಅಜ್ಜನ ಕಾಲ ಮುತ್ತಾತರು ಕೂಡ ಉಪಯೋಗಿಸಿಕೊಂಡು ಬಂದಿದ್ದರು ಮತ್ತೆ ಇನ್ನೊಂದು ಮೇರಿಯ ಕೇಶರಾಶಿ ಆ ಬೇರನು ತನ್ನ ಖಜಾನೆಯೊಳಗಿನ ಅಪಾರವಾದ ಧನರಾಶಿಯನ್ನು ನೋಡಿ ನೋಡಿ ಸಂತೋಷಪಡುತ್ತಿದ್ದನಾದರೆ ಜಿಮ್ಮಿ ತನ್ನ ಕೈಗಡಿಯಾರವನ್ನೆನೋಡಿ ಆನಂದಪಡುತ್ತಿದ್ದನ

ಆ ಮಾತು ಹಾಗಿರಲಿ ಮೇರಿ ತನ್ನ ಕೇಶರಾಶಿಯನ್ನು ಮುಂದೆ ಮಾಡಿ ಹರವಿ ನೋಡಿದಳು ಎಂಥ ಸೊಬಗು ಎಷ್ಟು ಹೊಳಪು! ಅದಕ್ಕಿಂತ ಉತ್ಕೃಷ್ಟ ಆಭೂಷಣ ಬೇರೊಂದಿದ್ದೀತೆ? ಸ್ವಲ್ಪ ಸಮಯ ಕಳೆಯುವಷ್ಟರಲ್ಲಿ ಮೇರಿ ನಡುಗುವ ಕೈಗಳಿಂದ ಆ ತನ್ನ ಕೇಶರಾಶಿಯನ್ನು ಪುನಃ ಬಾಚಿ ಕಟ್ಟಿಕೊಂಡಳು ಮತ್ತೆ ಒಂದು ಕ್ಷಣ ಕಾಲ ಅವಳು ಸ್ತಂಭಿತಳಾಗಿ ನಿಂತುಕೊಂಡಳು, ಶಾಂತಳಾದಳು. ಕಣ್ಣುಗಳಿಂದ ಎರಡು ಹನಿ ಬಿಸಿನೀರು ಅವಳ ಹರಕು ಸೀರೆ ಸೆರಗಿನ ಮೇಲೆ ಬಿದ್ದುವು ಆ ಕೂಡಲೆ ಪೇಟೆಗೆ ಹೊರಟಳು ಕಣ್ಣುಗಳಲ್ಲಿ ಕಣ್ಣೀರಿನ ಬಿಂದುಗಳು ಉಜ್ವಲವಾದ ಮುತ್ತುಗಳಂತೆ ಹೊಳೆಯುತ್ತಿದ್ದುವು ಕ್ಷಣಮಾತ್ರದಲ್ಲಿ ಅವಳು ಮನೆಯಿಂದ ಬೀದಿಗೆ ಬಂದಳು ಮತ್ತೆ 'ಮಿ ಸ್ಮಿತ್, ಕೂದಲುಗಳ ವ್ಯಾಪಾರಿ ಎಂದು ಸ್ಟೈನ ಬೋರ್ಡು ಹಚ್ಚಿದ್ದ ಅಂಗಡಿ ಎದುರಿಗೆ ಬಂದು ನಿಂತಳ

'ಅಯ್ಯಾ! ಅತ್ಯುತ್ಕೃಷ್ಟವಾದ ಅಮೂಲ್ಯ ಕೇಶರಾಶಿ ಬೇಕೆ?' ಎಂದು ಮೇರಿ ಕೇಳಿದಳು.

'ಸರಿ, ಅದೇ ನಮ್ಮ ವ್ಯಾಪಾರ—ಎಲ್ಲಿದೆ ಕೇಶರಾಶಿ?' ಎಂದು ಸ್ಮಿತ್ ಕೇಳಿದ

ಮೇರಿ ಹ್ಯಾಟ್ ಎತ್ತಿ ತಲೆ ತೋರಿಸಿದಳ

'ಇವಕ್ಕೆ ಹತ್ತು ರೂಪಾಯಿ ಕೊಡಬಲ್ಲೆ' ಎಂದು ಕೇಶರಾಶಿಯನು ಪರೀಕ್ಷಿಸುತ್ತ ಸ್ಮಿತ್ ಹೇಳಿದ

'ಸರಿ, ಹತ್ತಾದರೆ ಹತ್ತು ಬೇಗ ಕತ್ತರಿಸಿ ತೆಗೆಯಿರಿ' ಎಂದು ಮೇರಿ ಹೇಳಿದಳು ಆ ಮೇಲೆ ಅವಳು ಶಾಪಿಗೆ ಹೋಗಿ ಜಿಮ್ಮಿಗಾಗಿ ಉಪಹಾರ ಹುಡುಕ ತೊಡಗಿದಳು

ವಾವ್ಹಾ—ಜಿಮ್ಮಿಗಾಗಿಯೇ ತಯ್ಯಾರಿಸಿಟ್ಟ ವಸ್ತು?—ಹೌದು. ಅದು ಹಾಗೆಂದೇ ತೋರಿತು. ಇಡೀ ಪೇಟೆ ಹುಡುಕಿದರೂ ಅಂಥ ಉತ್ಕೃಷ್ಟ ಒಡವೆ ಬೇರೆ ಸಿಕ್ಕಲಿಲ್ಲ ಪ್ಲೆಟಿನಮ್ ಲೋಹದ ಗಡಿಯಾರ ಸರಪಳಿ, ಜಿಮ್ಮಿಯ ಕೈಗೆ ಎಷ್ಟು ಚೆನ್ನಾಗಿ ಒಪ್ಪುವದು—ಜಿಮ್ಮಿಗೆ ತಕ್ಕ ಗಡಿಯಾರ ಗಡಿಯಾರಕ್ಕೆ ತಕ್ಕ ಸರಪಳಿ ಮೇರಿ ಹತ್ತು ರೂಪಾಯಿ ಎಂಟಾಣೆ ಕೊಟ್ಟು ಆ ಸರಪಳಿಯನ್ನು ಕೊಂಡುಕೊಂಡಳು ಉಳಿದ ಎಳಾಣೆ ಐದುಪೈ ತೆಗೆದುಕೊಂಡು ಮನೆಕಡೆಗೆ ಕಾಲಿಟ್ಟಳು ಜಿಮ್ಮಿ ಮನೆಗೆ ಬಂದು ಅವಳನ್ನು ಕಾಯುತ್ತಿರಬಹುದು ಎಂದು ಮೇರಿ ಬೇಗ ಬೇಗನೆ ಹೆಜ್ಜೆ ಇಟ್ಟು ನಡೆದು ಹೋದಳು ಸರಪಳಿಯನ್ನು ನೋಡಿನೋಡಿ ಅವಳ ಹೃದಯದಿಂದ ಆನಂದವು ಉಕ್ಕೇರಿ ಹರಿಯುತ್ತಿತ್ತು ತಾತ ಮುತ್ತಾತರ ಗಡಿಯಾರ ನೋಡಿ ಜಿಮ್ಮಿ ಸಂತೋಷಿಸುತ್ತಿದ್ದ ವಿಷಯವೂ, ಅದಕ್ಕೆ ಇದ್ದ ಚರ್ಮದ ಪಟ್ಟಿ ನೋಡಿ ದುಃಖಿಸುತ್ತಿದ್ದ ವಿಷಯ ಮೇರಿಗೆ ತಿಳಿದಿತ್ತು ಆದ್ದರಿಂದ ಈಗ ಗಡಿಯಾರಕ್ಕೆ ಒಳ್ಳೆಯ ಸರಪಳಿ ಕೊಂಡು ಕೊಂಡು ಅವಳಿಗೆ ಅಪಾರವಾದ ಸಂತೋಷವಾಯಿತು

ಆದರೆ ಮೇರಿ ಮನೆ ಮುಟ್ಟಿದಾಗ ಅವಳ ಆನಂದವು ಕೊಂಚ ಕಡಿಮೆಯಾಯಿತು ಜಿಮ್ಮಿಗೊಂದು ಉಪಹಾರವನ್ನು ಕೊಡುವ ವಿಷಯದಲ್ಲಿ ಅವಳು ಹುಚ್ಚಾಗಿದ್ದಳು ಆದರೆ ಮನೆಗೆ ಬಂದ ಮೇಲೆ ಸ್ವಲ್ಪವಿಚಾರಕ್ಕೆ ಎಡೆಕೊಟ್ಟಳು. ತನ್ನಷ್ಟಕೆ ತಾನು ಮಾಡಿದ ಕೃತ್ಯದ ಔಚಿತ್ಯವನ್ನು ತರ್ಕಿಸ ತೊಡಗಿದಳು. ಅವಳು ನೆಟ್ಟಗೆ ಕೋಣೆಗೆ ಹೋಗಿ ತನ್ನ ಮರದ ಬಾಚಣಿಗೆಯನ್ನು ತೆಗೆದು ತಲೆಯನ್ನು ಬಾಚಲಾರಂಭಿಸಿದಳು

ಸ್ವಲ್ಪ ಸಮಯದೊಳಗಾಗಿಯೇ ಅವಳ ತಲೆಯ ಮೇಲೆ ಅರ್ಧ ಇಂಚಿಗೆ ಕತ್ತರಿಸಿದ ತಲೆ ಕೂದಲು ಮುದ್ದುಮುದ್ದಾಗಿ ಬಾಚಿ ನಿಂತಿತು ಅವಳು ಶಾಲೆಗೆ ಹೋಗುವ ಹದಿನಾರು ವರ್ಷ ಪ್ರಾಯದ ಕನ್ನಿಕೆಯಂತೆ ಶೋಭಿಸಿದಳು ಅವಳ ಆ ಮನಮೋಹಕವಾದ ರೂಪವನ್ನು ನೋಡಿ ಯಾರೂ ಹುಚ್ಚಾಗುವಂತಿತ್ತು ಬಹಳ ಸಮಯದ ತನಕ ಅವಳು ಕನ್ನಡಿಯಲ್ಲಿ ತನ್ನ ಸೌಂದರ್ಯಾತಿಶಯವನ್ನು ನೋಡುತ್ತ ನಿಂತಳು

ಮೇರಿ ಮನಸ್ಸಿನಲ್ಲೇ ಹೇಳಿದಳು—'ಮೊದಲು ನೋಡಿ ನನ್ನ ಪತಿದೇವನು ನನ್ನ ಮೇಲೆ ಸಿಟ್ಟಾಗದಿದ್ದರೆ, ಇನ್ನೊಮ್ಮೆ ನೋಡಿ ಅವನು ಖಂಡಿತವಾಗಿಯೂ ಸಂತೋಷದಿಂದ ನನ್ನನ್ನು ಮುದ್ದಿಸುವನು

ಸಾಯಂಕಾಲ ಏಳು ಗಂಟೆಯ ಸಮಯವಾಗಿತ್ತು ಮೇರಿ ಕಾಫಿಮಾಡಿ ಕೆಳಗಿಳಿಸಿದಳು ಈಗ ರೊಟ್ಟಿ ಸುಡಲಿಕ್ಕೆ ಕಬ್ಬಿಣದ ತವೆಯನ್ನು ಒಲೆ ಮೇಲಿಟ್ಟಳು

ಜಿಮ್ಮಿ ಸಾಯಂಕಾಲ ಮನೆಗೆ ಒರಬೇಕಾದರೆ ಹೊತ್ತಾಗುತ್ತಿರಲಿಲ್ಲ ಮೇರಿ ಕೈಯಲ್ಲಿ ಸರಪಳಿ ಹಿಡಕೊಂಡು ಅವನ ನಿರೀಕ್ಷೆ ಮಾಡುತ್ತ ಹೊಸ್ತಿಲ ಬಳಿ ಹೋಗಿ ಕೂತುಕೊಂಡಳು ಅಷ್ಟರೊಳಗೆ ಗೇಟು ತೆರೆದು ಯಾರೋ ಒಳಗೆ ಬರುವ ಶಬ್ದ ಕೇಳಿತು ಒಂದರೆಕ್ಷಣ ಮೇರಿ ನಡುಗಿದಳು ಜಿಮ್ಮಿ ಬರುವದನ್ನು ನೋಡಿ ಮೇರಿಯ ಎದೆ ಧಸಕ್ಕೆಂದಿತು. ಅವ

(೧೪ನೇ ಪುಟಕ್ಕೆ ಮುಂದುವರಿಯುವುದು.)


# ಇನೋಸ್ ಫ್ರುಟ್ ಸಾಲ್ಟ

ಜರ ಮತ್ತು ಶೀತದ ನಂತರ ಅಶಕ್ತಿ, ಅವನು ಉತ್ತಮ ಸ್ಥಿತಿಯಲಿ ಬರಲು ಸಾಧ್ಯವಿರಲಿಲ್ಲ ಅವನು ಯಾವಾಗಲೂ ದಣಿಯುತ್ತಿದ್ದನು.

ಇನೋ ಅವನ ಸುಧಾರಿಕೆಗೆ, ಅಕ್ತಿ ಬರುವ ವಿಷಗಳನ್ನು ಹೋಗಲಾಡಿಸಿತು ಪುನಹ ಅವನಿಗೆ ಆರೋಗ್ಯಾವಸ್ಥೆಗ ತಂದಿತು.

## ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ

ನೀವು ಆರೋಗ್ಯದಲ್ಲಿರುವಿರಿ ಇನೋಸ್ ಫ್ರುಟ್ ಸೋಲ್ಟ Eno's Fruit Salt' ಇದು ಹೊಟ್ಟೆಯ ಅವ್ಯವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ಮಲಬದ್ಧತೆ ತಲೆನೋವು, ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು ಇದೇ ಆರೋಗ್ಯವು ಇನೋ ENO' ಇವಕ್ಕೆ ಸೌಮ್ಯ, ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿದೆ

ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ Eno's Fruit Salt ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ

ಇನೋಸ್‌ಫ್ರುಟ್ ಸೋಲ್ಟಿನಲ್ಲಿ 'Eno's Fruit Salt ಒಳ್ಳೇ ಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರಿರುತ್ತವೆ

EX 14

Eno's 'Fruit Salt'

# ಮುಸಲೋನಿ

(ಹಿನೇ ಪುಟದಿಂದ ಮುಂದುವರಿದುದು)

ತೋಟದಿಂದ ಓಡಿಕೊಂಡು ಹೋಗಿ ಒಂದು ನದಿಯಲ್ಲಿ ಧುಮ್ಮಿಕ್ಕಿ ಈಜಿಕೊಂಡು ಆಚೆ ದಡವನ್ನು ಸೇರಿದೆನು. ಆದರೂ ಪಕ್ಷಿಗಳನ್ನು ಮಾತ್ರ ನಾನು ಬಿಟ್ಟುಬಿಡಲಿಲ್ಲ.'

ಮುಸಲೋನಿಯವರ ಸ್ವಭಾವವು ಎಂತಹುದೆಂದು ಅವರ ಎಳೆಯ ವಯಸ್ಸಿನಲ್ಲಿ ನಡೆದ ಅದೊಂದು ಪ್ರಸಂಗದಿಂದಾಗಿ ನಮಗೆ ತಿಳಿದುಬರುತ್ತದೆ. ಒಮ್ಮೆ ಒಬ್ಬ ಹುಡುಗನು ಅವರ ಆಟದ ಸಾಮಾನೊಂದನ್ನು ಅವರ ಕೈಯಿಂದ ಕಸಗೊಂಡನು. ಅವರು ಕೇಳಿದಾಗ ಕೊಡದೆ, ಹೊಡೆದೋಡಿಸಿದನು.

ಬೆನಿಟೊ ಕೂಗುತ್ತ ಬಂದು ತಂದೆಯ ಕೂಡೆ ದೂರು ಹೇಳಿದನು. ತಂದೆಯು ಅವನ ಮಾತಿಗೆ ಕಿವಿಗೊಡಲಿಲ್ಲ ಮಾತ್ರವಲ್ಲ, ಅವನ ಎರಡೂ ಕಿವಿಗಳನ್ನು ಚೆನ್ನಾಗಿ ಹಿಂಡಿಬಿಟ್ಟರು.

'ನಿನ್ನನ್ನು ಯಾರೋ ಹೊಡೆದನೆಂದು ನನ್ನೊಡನೆ ದೂರು ಹೇಳುವೆಯಾ?' ಎಂದು ಅವರು ಬೆನಿಟೊವನ್ನು ಗದರಿಸಿದರು. 'ಅವನ ಪೆಟ್ಟು ತಿಂದೂ ಅವನನ್ನು ಹೋಗಗೊಟ್ಟೆಯಾ ನೋಡಿ? ನಿನ್ನನ್ನ ಕಾಪಾಡಿಕೊಳ್ಳಲು ಕಲಿಯದಿದ್ದ ಮೇಲೆ ಹೋಗಿ ಏನೂ ಪುರುಷಾರ್ಥವಿಲ್ಲ!'

ತಂದೆಯ ಈ ಮಾತುಗಳನ್ನು ಕೇಳಿದೊಡನೆ ಬೆನಿಟೊವು ಸುಮ್ಮಗೆ ಹೊರಟು ಹೋದನು. ಅಂದಿನ ದಿನವನ್ನು ಒಂದು ಕಲ್ಲನ್ನು ಚೂಪಾಗಿ ಮಾಡುವುದರಲ್ಲಿಯೇ ಕಾಲ ಕಳೆದನು. ಅದಾದ ಮೇಲೆ ತನ್ನನ್ನು ಹೊಡೆದ ಆ ಹುಡುಗನನ್ನು ಹುಡುಕಿಕೊಂಡು ಹೊರಟನು.

ಅವನು ಎದುರಿಗೆ ಸಿಕ್ಕಿದೊಡನೆ, 'ನೀನು ಆಗ ನನ್ನನ್ನು ಹೊಡೆದೆ ಅಲ್ಲವೆ? ಇನ್ನು ಅಂತಹ ಕೆಲಸವನ್ನು ಎಂದೂ ಮಾಡದಂತೆ ಇಗೋ ನಿನಗೆ ಇದು ತಿಳಿಸುವುದು' ಎಂದು ಹೇಳಿ, ಕೈಯಲ್ಲಿದ್ದ ಕಲ್ಲಿನಿಂದ ತನ್ನ ವೈರಿಯ ತಲೆಯನ್ನು ಜಜ್ಜಿದನು. ಆತನ ತಲೆಗೆ ಗಾಯವಾಗಿ ರಕ್ತವು ಧಾರಾಕಾರವಾಗಿ ಸುರಿಯಿತು.

ಇಂತಹ ಪುತ್ರನಿಂದಾಗಿ ಸಿನೋರಾ ರೋಸಳಿಗೆ ತುಂಬಾ ಚಿಂತೆಗೆ ಕಾರಣವಾಯಿತು. ಆತನ ಕ್ರೂರ ಸ್ವಭಾವವನ್ನು ಹತೋಟಿಯಲ್ಲಿಡಲು ತನಗೆ ಅಸಾಧ್ಯವೆಂದು ಆಕೆಗೆ ತೋರಿತು. ಆದುದರಿಂದ ಆತನನ್ನು ಶಾಲೆಗೆ ಕಳುಹಿಸುವಂತೆ ತನ್ನ ಗಂಡನನ್ನು ಕೇಳಿಕೊಂಡಳು. ಆದರೆ ಪಾದ್ರಿಗಳಿಂದ ನಡೆಸಲ್ಪಡುತ್ತಿರುವ ಶಾಲೆಗಳಿಗೆ ತನ್ನ ಮಗನನ್ನು ಕಳುಹಲಾರೆನೆಂದು ಅವರೆಂದರು. ಪರಂತು ತಾಯಿಯು ತನ್ನ ಹಟವನ್ನು ಬಿಡಲಿಲ್ಲ. ಫೇನ್ಜಾ ಎಂಬಲ್ಲಿ ಬೆನಿಟೊವನ್ನು ವಿದ್ಯಾಭ್ಯಾಸಕ್ಕಾಗಿ ಕಳುಹಬೇಕೆಂದು ತನ್ನ ಪತಿಗೆ ಆಗಾಗ್ಗೆ ಬಾಧಿಸತೊಡಗಿದಳು. ಕಡೆಗೆ ಆತನೂ ಒಪ್ಪಿಕೊಂಡನು.

**ಸ್ವಾತಂತ್ರ್ಯದ ಕೊನೆಯ ದಿನಗಳು.**

ಬೆನಿಟೊವು ಫೇನ್ಜಕ್ಕೆ ಹೋಗುವುದೆಂದು ನಿಶ್ಚಯವಾಯಿತು. ಹೋಗಬೇಕಾದರೆ ಅದನ್ನು ಆನಂದದಿಂದ ಇರೋಣವೆಂದು ಆತನು ಗುಡ್ಡ ಬೆಟ್ಟ ಗದ್ದೆಗಳಲ್ಲಿ ತುಂಬಾ ಅಲೆದಾಡಿದನು.

'ನನ್ನ ಸ್ವಾತಂತ್ರ್ಯದ ಕೊನೆಯ ದಿನಗಳನ್ನು ನಾನು ದ್ರಾಕ್ಷೆಯ ತೋಟಗಳಲ್ಲಿ ಕಳೆದೆನು. ನನ್ನಿಂದ ಆದಷ್ಟು ತಂಟೆಮಾಡಿದೆನು. ಅಕ್ಟೋಬರದವರೆಗೆ ಖರ್ಚಿಗೆ ಬೇಕಾದ ಹಣವೂ, ಶಾಲಾ ಸಾಹಿತ್ಯಗಳೂ ತಂದೆಯಿಂದ ನನಗೆ ಒದಗಿಸಲ್ಪಟ್ಟವು. ಹೋಗಬೇಕಾದರೆ ನನ್ನ ಸಹಪಾಠಿಯೋರ್ವನೊಡನೆ ನಾನು ಕಲಹ ಮಾಡಿದೆನು. ಆತನ ತಲೆಗೆಂದು ಹೊಡೆದ ಪೆಟ್ಟು ತಪ್ಪಿ ನನ್ನ ಕೈಮುಷ್ಟಿಯಿಂದ ಸಮೀಪದ ಗೋಡೆಗೆ ಹೊಡೆದೆನು. ಕೈ ಜರ್ಝರಿತವಾಗಿ ಬಾತುಹೋಯಿತು. ಆದುದರಿಂದ ಫೇನ್ಜಕ್ಕೆ ಹೊರಡುವಾಗ ನನ್ನ ಒಂದು ಕೈಗೆ ವಸ್ತ್ರದ ಮುಂಡಾಸವನ್ನು ಕಟ್ಟಿಕೊಂಡೆನು.

ಮನೆಯನ್ನು ಬಿಟ್ಟು ಹೋಗುವಾಗ ನನಗೆ ... [illegible]

ಬಂದನು. ಅದೊಂದು ಕತ್ತೆಯ ಗಾಡಿಯಲ್ಲಿ ನಾವು ಕುಳಿತು ಪ್ರಯಾಣ ಬೆಳೆಸಿದೆವು' ಎಂದು ಮುಸಲೋನಿಯವರೇ ಬರೆದಿರುವರು.

**ಹೊಸ ಜೀವನ**

'ಸಾಧಾರಣ ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಸರಿಯಾಗಿ ನಾವು 'ಕೊಲೆಜಿಯೊ ಡಿ ಸೆಲೆಸಿಯಾನಿ'ಗೆ ಮುಟ್ಟಿದೆವು. ಯಾರೋ ಒಬ್ಬ ಆಳು ಬಂದು ಬಾಗಿಲನ್ನು ತೆರೆದು ನಮ್ಮನ್ನು 'ಸೆನ್‍ಸೋರ'ರ ಮುಂದೆ ಕರಕೊಂಡು ಹೋಗಿ ನಿಲ್ಲಿಸಿದನು. ನನ್ನನ್ನು ನೋಡಿಕೊಂಡು ಅವರು, 'ಈ ಬಾಲಕನು ತುಂಬಾ ಧೀಮಂತನಾಗಿರಬೇಕು' ಎಂದರು. ಆಗ ನನ್ನ ತಂದೆಯು ಪ್ರೇಮದಿಂದ ನನ್ನನ್ನು ಆಲಿಂಗಿಸಿ ಮುದ್ದಿಟ್ಟರು. ಬಳಿಕ ನನ್ನನ್ನು ಅಲ್ಲಿಯೇ ಬಿಟ್ಟು, ಸೆನ್‍ಸೋರರ ಅಪ್ಪಣೆ ಪಡೆದು ಹೊರಟುಹೋದರು. ಅವರು ಹೋದೊಡನೆ ಏನೋ ನನ್ನ ಕಣ್ಣುಗಳಿಂದ ಕಂಬನಿಗಳು ಸುರಿದುವು.

ಮುಸಲೋನಿಯವರು ಜೀವನದಲ್ಲಿ ಒಂದಂಕವು ಮುಗಿಯಿತು. ಸೆಲೇಸಿಯನರೊಡನೆ ಹೊಸ ಜೀವನವು ಪ್ರಾರಂಭವಾಯಿತು. ಅದು ಅಷ್ಟೊಂದು ಸುಖಕರವಾಗಿರಲಿಲ್ಲ. ಬೆನಿಟೊ ನನ್ನು ಎರಡು ಬಾರಿ ಶಾಲೆಯಿಂದ ಹೊರತಳ್ಳಿದರು. ಆದರೆ ಆತನ ತಾಯಿಯ ಕೂಗು ಆತನನ್ನು ಪುನಃ ಶಾಲೆಗೆ ಸೇರಿಸಿಕೊಳ್ಳುವಂತೆ ಮಾಡಿತು. ಯಾರೂ ಆತನಿಗೆ ಬಿಗಿಲೆಸೆಯಲು ಅವನು ಬಿಡುತ್ತಿದ್ದಿಲ್ಲ. ಒಮ್ಮೊಮ್ಮೆ ಸುಮ್ಮನೆ ನಿಶ್ಚಿಂತತೆಯಿಂದ ದಿನಗಳನ್ನು ನೂಕುತ್ತಿರುವಾಗ ಹಲವೊಮ್ಮೆ ನಿಷ್ಕಾರಣವಾಗಿಯೂ ತನ್ನ ಸಹಪಾಠಿಗಳ ಮೈಮೇಲೆ ಬಿದ್ದು ಅವರನ್ನು ಗುದ್ದಿ ಹಣ್ಣು ಮಾಡುವನು.

ಈ ಬಗೆಯ ವರ್ತನೆಯಿಂದಾಗಿ ಆತನಿಗೆ ಕಠಿಣ ಶಿಕ್ಷೆಯು ವಿಧಿಸಲ್ಪಡುತ್ತಿತ್ತು. ಒಮ್ಮೆ ಆತನು ಪ್ರತಿನಿತ್ಯ ನಾಲ್ಕು ಗಂಟೆಗಳ ಪ್ರಕಾರ ಒಂದು ವಾರದ ತನಕ ಮೊಣಕಾಲೂರಿ ನಿಲ್ಲಬೇಕಾಯಿತು.

ಈಗಲೂ ತನ್ನ ಬಾಲ್ಯದ ದಿನಗಳನ್ನು ನೆನಪಾದರೆ ಮುಸಲೋನಿಯವರು ಮೂಗು ಮುರಿದುಕೊಳ್ಳುವರು. 'ಕಷ್ಟರಹಿತವಾದ ಸುಖಮಯ ಜೀವನದ ಅರಿವು ನನಗೆ ಬಾಲ್ಯದಲ್ಲಿ ಇದ್ದಿಲ್ಲ. ಆದುದರಿಂದ ಆಗ ಮನೆಯಲ್ಲಿ, ಶಾಲೆಯಲ್ಲಿ, ಹೊರಗೆ, ಮತ್ತು ಈ ಯೌವನದಲ್ಲೂ, ನಾನು ಗಡುಸು ಮತ್ತು ಮುಂಗೋಪಿ ಸ್ವಭಾವವನ್ನು ತೋರಿದರೆ ಅದು ಆಶ್ಚರ್ಯವೆನಿಸದು' ಎಂದು ತನ್ನ ಕುರಿತು ಮುಸಲೋನಿಯವರು ಈಗಲೂ ಹೇಳುವರು.

'ನನ್ನ ಜೀವನದ ಯಥಾರ್ಥತೆಯು ಮೊದಲಿನ ೧೫ ವರ್ಷಗಳ ಬಾಳುವೆಯಲ್ಲಿ ಅಡಕವಾಗಿರುವುದು. ಬಾಲ್ಯದಲ್ಲಿ ನನ್ನ ನಡೆನುಡಿಗಳನ್ನು ರೂಪಿಸಿದ ಶಕ್ತಿಗಳೇ ನನ್ನ ಈಗಿನ ಈ ಬಗೆಯ ವರ್ತನೆಗೆ ಕಾರಣವೆನ್ನಬಹುದು. ಇಂದು ನನ್ನಲ್ಲಿ ತೋರಿಬರುವ ಪ್ರತಿಯೊಂದು ಗುಣವೂ ಅಂದು ಅಂಕುರ ರೂಪದಲ್ಲಿತ್ತು, ಆ ಮೊಳೆಯು ಬಲಿತು, ಇಂದು ಬೆಳೆಯಾಗಿ, ನನ್ನ ಬಾಳುವೆಗೆ ಕಳೆಯನ್ನಿತ್ತಿರುವುದು.'

## ನವಾಬ ಮಹದಿಯರ್ ಜಂಗ್ ಬಹದ್ದೂರ್

ಇವರು ನಿಜಾಮ ಸರಕಾರದ ವಿದ್ಯಾಮಂತ್ರಿಗಳು. ಆಂಧ್ರ ವಿಶ್ವವಿದ್ಯಾಲಯಕ್ಕೆ ನಿಜಾಮರವರು ಒಂದು ಲಕ್ಷ ರೂಪಾಯಿಗಳ ದಾನ ಸಹಾಯ ಮಾಡಿರುವರಷ್ಟೆ. ನಿಜಾಮರ ಉಸ್ಮಾನಿಯಾ ಯೂನಿವರ್ಸಿಟಿಯ ಪ್ರತಿನಿಧಿಯಾಗಿ ಇವರು ಆಂಧ್ರ ಯೂನಿವರ್ಸಿಟಿಗೆ ಸಂದರ್ಶನೆಗಾಗಿ ಬಂದಿದ್ದರು. ವಿದ್ಯಾರ್ಥಿಗಳಿಗೆ ಅಮೋಘವಾದೊಂದು ಭಾಷಣವನ್ನು ಮಾಡಿದರು. "ದೇಶಭಕ್ತ ತನ್ನ ಜನ್ಮಭೂಮಿಗೆ ಸಲ್ಲಬೇಕಾಗಿರುವ ಭಕ್ತಿಯ ಕರ್ತವ್ಯವು ಮುಂದಿದ್ದು ಕೊನೆಗೆ ಮಾತೃಭೂಮಿಯ ಸೇವೆಯಲ್ಲಿಯೆ ನಿರತರಾಗುವಂತೆಯೂ ಆಗತಕ್ಕದು. ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದೆನ್ನುವವರಿರಬಹುದು. ದೇಶವು ಈಗ ಅತಿ ಅಪೂರ್ವವಾದಂಥ ಒಂದು ಸಂಧಿಯಲ್ಲಿರುವಾಗ, ವಿದ್ಯಾರ್ಥಿಗಳ ದೇಶದ ಸ್ಥಿತಿಯನ್ನು ತಿಳಿದುಕೊಂಡು ಸರಿಯಾಗಿ ವರ್ತಿಸುವುದು ಅತ್ಯಾವಶ್ಯಕವೇ ಆಗಿದೆ. ತನ್ನ ದೇಶದ ಅಭ್ಯುದಯದಲ್ಲಿ ಯಾರಾದರೊಬ್ಬ ಸಹಾಯ ಮಾಡಲಾರದಷ್ಟು ಪಶುಬುದ್ಧಿಯುಳ್ಳವನಾಗಿದ್ದಷ್ಟೆ. ಹೀಗಿರುವಾಗ್ಗೆ ರಾಜಕೀಯ ವಿಷಯದಲ್ಲಿ ಕೈಯಿಕ್ಕಲಾಗದೆನ್ನುವುದು ತಪ್ಪು. ನಿಮ್ಮ ಹಿತ್ತಿಲವರ ವಿಚಾರಗಳನ್ನು ದೂರವಿಡು ಎಂದರೆ ಅದು ಸರಿಯಾದೀತೆ? ಬಂದಿಷ್ಟು ಬಿದ್ದಿರುವ ಮನುಷ್ಯನಿಗೆ ಇದು ಸಾಧ್ಯವೆ? ಹಾಗೆಂದು ಅತಿರೇಕವಾಗಿ ಹಿಂಸಾತುರತೆಯಿಂದ ಉಗ್ರತನ ವಹಿಸಿದರೆ ಅದು ಭಕ್ತಿಯಾಗದು. ಜಾತಿಗಳೊಳಗೆ ವೈರವನ್ನು ಬಿತ್ತಿದರೆ ಅದೂ ಭಕ್ತಿಯಲ್ಲ." 'ಇದು' ನಿಜಾಮ ಸರಕಾರದ ಮಂತ್ರಿಗಳು ಬ್ರಿಟಿಷ ಪ್ರಾಂತಿಕ ವಿದ್ಯಾರ್ಥಿಗಳಿಗೆ ಹೇಳಬೇಕಾಗಿ ಬಂದಷ್ಟು ವಕ್ರವಾಗಿ, ಇಲ್ಲಿ ನಡೆದ ವಿದ್ಯಾರ್ಥಿ ಪರೀಕ್ಷೆಯ ಫಲ. ಇದಕ್ಕೆ ದೂರಬೇಕು ಯಾರನ್ನು?


ಜಿಂಜರ್ ರೋಜರ್ಸ್.

ಇವಳು ಯಾವಾಗಲೂ ಸ್ವತಃ
ಲೋಕಸುಂದರಿಯಾಗಿದ್ದಾಳೆ

ಜಿಂಜರ್‌ರೋಜರ್ಸ್ ಹೇಳುವುದೇನೆಂದರೆ ' ನನ್ನ ಚರ್ಮವನ್ನು ಮನೋಹರವಾಗಿಯೂ ನುಣುಪಾಗಿಯೂ ಮೃದುವಾಗಿಯೂ ಮತ್ತು ಕೋಮಲವಾಗಿಯೂ ಇರುವಂತೆ ಲಕ್ಸ್ ಟಾಯಿಲೆಟ್ ಸಾಬೂನು ಇರಲ್ಪಟ್ಟಿದೆ ' ಅವಳ ಸೌಂದರ್ಯವುಳಿಸದ ಎಷ್ಟು ಉಜ್ಜ್ವಲವಾಗಿದೆ

ಚಲನಚಿತ್ರ ನಟಿಯರಂತೆ ಆಚರಿಸಿ ಲಕ್ಸ್ ಟಾಯಿಲೆಟ್ ಸಾಬೂನನ್ನು ನಿಮ್ಮ ಸೌಂದರ್ಯ ಸಾಧನೆಯದನ್ನಾಗಿ ಮಾಡಿಕೊಳ್ಳಿರಿ. ಅದರ ಬೆಣ್ಣೆಯಂಥ ಬಿಳುಪಾದ ನೊರೆಯು ಚರ್ಮರಂಧ್ರಗಳಲ್ಲಿ ಬಹಳದೂರದವರೆಗೂ ಪ್ರವೇಶಿಸಿ ಕೊಳೆಯನ್ನೆಲ್ಲಾ ಹೊರಗೆಹೋಗಿಸಿ, ಚರ್ಮದನ್ನು ಮೃದುಮಾಡಿ ಯೌವನಸ್ಥರಂತೆ ಮಾಡುತ್ತದೆ. ನೀವು ಅದರ ಆಮೋಧವಾದ ಸುವಾಸನೆಯನ್ನು ಸಹಾ ಪ್ರೀತಿಸುವಿರಿ

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP

ಇಂಡಿಯಾದಲ್ಲಿ ಲೀವರ್ ಬ್ರದರ್ಸ್ ರವರು ಶುದ್ಧ ಎಣ್ಣೆಯಿಂದಲೇ ತಯಾರಿಸಿದ್ದು

X LTS 600/2-50 LEVER BROTHERS (INDIA) LIMITED KANARESE



## ನಾಲ್ಕು ವರ್ಷಗಳ ಸಮಯ ಬೆನ್ನು ನೋವನ್ನು ಅನುಭವಿಸಿದನು

**ಯಾವಾಗಲೂ ಭಯಾನಕ ಕಲ್ಪನೆಗಳನ್ನೆ ಮಾಡುತ್ತಿದ್ದನು**

**ಕ್ರುಶನ್ ಅವನನ್ನು ರಕ್ಷಿಸಿತು**

ನಾಲ್ಕು ವರ್ಷಗಳ ಸಮಯ ಆತನ ಬೆನ್ನು ಬಿಡದೆ ನೋಯಿಸಿತು. ಆದುದರಿಂದಲೆ ಅವನು ಯಾವಾಗಲೂ ಕಳವಳಚಿತ್ತನಾಗಿದ್ದನು. ಈಗ ಆತನ ಪ್ರಾಯವು ೫೭, ಆದರೆ ಅತ್ಯಂತ ಹರುಷಚಿತ್ತದಿಂದ ತನ್ನ ಹೃದ್ಯ ಜೀವನಯಾನವನ್ನು ಪ್ರಾರಂಭಿಸಿದನು. ಆತನಲ್ಲೀಗ ಬೆನ್ನುನೋವೆ ಇಲ್ಲ. ಆತನ ಕಥೆಯನ್ನು ಓದಿರಿ

'ನಾಲ್ಕು ವರ್ಷಗಳ ಸಮಯ ಬಿಡದೆ ನಾನು ಬೆನ್ನುನೋವನ್ನು ಅನುಭವಿಸಿ, ಜೀವಿಸುವುದು ಬೇಡವೆಂದು ಎಣಿಸುತ್ತಿತ್ತು. ಈಗ ಕ್ರುಶನ ಮಹೋಪಕಾರದಿಂದ, ಆರೋಗ್ಯದಿಂದಿರುವೆನು. ಅದಕ್ಕಾಗಿ ನಾನು ಚಿರಋಣಿಯಾಗಿರುವೆನು. ಬೆಳಗ್ಗಿನ ಜಾವ ನಾನು ಉತ್ಸಾಹದಿಂದ ನಿತ್ಯಕಾರ್ಯವನ್ನು ಪ್ರಾರಂಭಿಸುತ್ತೇನೆ. ಬರೇ ಏಳು ದಿವಸಗಳ ಕ್ರುಶನ್ ಸೇವನೆಯಿಂದ, ನನಗ ಬೇಗನೆ ಹಾಸಿಗೆಬಿಡಲು ಸಾಧ್ಯವಾಯಿತು. ಬೆಳಗಿನ ಜಾವ ನಾನು ಹರ್ಷಚಿತ್ತನಾಗಿರುವೆನು. ನನ್ನ ಪ್ರಾಯವು ೫೭. ಕ್ರುಶನೆ ನನ್ನ ಮುಕ್ತಿಮಾರ್ಗವು'.

ಜೆ. ಟಿ

ಮೂತ್ರಪಿಂಡಗಳು ಮನುಷ್ಯನ ದೇಹವನ್ನು ನಿರ್ಮಲಗೊಳಿಸುವ ಇಂದ್ರಿಯ. ದೇಹದೊಳಗಿರುವ ವಿಷಕರ ಕಶ್ಮಲಗಳನ್ನು ಹೊರದೂಡುವುದೆ ಅವಗಳ ಕರ್ತವ್ಯವು. ಅವುಗಳು ಸರಿಯಾಗಿ ಕೆಲಸ ಮಾಡದಿದ್ದರೆ, ಆಗ ವಿಷಕಶ್ಮಲಗಳ ದೇಹದಲ್ಲಿ ಶೇಖರವಾಗಿ, ರಕ್ತವನ್ನು ಕೆಡಿಸಿ, ಚಿಲ್ಲಸಲ್ಲದ ಕಷ್ಟಸರಂಪರೆಗಳಿಗೆ ಕಾರಣವಾಗುವುವು. ಬೆನ್ನುನೋವು, ಹರ್ಷವಿಲ್ಲದಿರುವಿಕೆ ಇತ್ಯಾದಿ ರೋಗಗಳಿಗೆ ಇದೆ ಕಾರಣವು.

ಕ್ರುಶನಿನಲ್ಲಿರುವ ಆರು ಲವಣಗಳು ನಿಮ್ಮ ಮೂತ್ರಪಿಂಡವು ಸರಿಯಾಗಿ ಕೆಲಸಮಾಡುವಂತೆ ಮಾಡುತ್ತವೆ. ಅದರ ಫಲವಾಗಿ ನಿಮ್ಮಲ್ಲಿರುವ ಎಲ್ಲಾ ಬೇನೆಗಳು ಮಾಯವಾಗುತ್ತವೆ. ನೀವು ಬೆವರುತ್ತಿರುವಾಗ ಅವು ನಿಮ್ಮ ಅಂಗದಿಂದ ಹೊರಟುಹೋಗುತ್ತವೆ.

ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲೂ ಸ್ಟೋರುಗಳಲ್ಲೂ ಎಜಂಟರುಗಳಲ್ಲೂ ಮಾರಲ್ಪಡುತ್ತದೆ

## ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ [illegible] ಇವರ

### ಸಂತತಿ ಪ್ರತಿಬಂಧ ಚೂರ್ಣ (ರಿಜಿಸ್ಟರ್ಡ್)

[illegible] ಉಂಟಾಗುತ್ತದೆ. [illegible] ಅಥವಾ ಬೇರೆ ಕಾರಣದಿಂದಲೂ [illegible] ಉಪಯೋಗಿಸಬೇಕು. [illegible] ಶರೀರಕ್ಕೆ [illegible] ಗರ್ಭಧಾರಣ ಉಂಟಾಗುವುದು. [illegible] ಉಂಟಾಗುವುದಿಲ್ಲ. [illegible] ಔಷಧ ಬೇಡಿರಿ. [illegible] ಗರ್ಭಧಾರಣವು ಆಗುವುದಿಲ್ಲ. ಚೂರ್ಣ ಗುಣಕಾರಿ [illegible] ಕ್ರಯ! ರೂ. [illegible]

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (S. M. C.



೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಕದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಹಳೆಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

## ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1—8—0.

**ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್**

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:—ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಳ್ಳಿ.



# ಹೊಸ ಮಾಲು ಇಂದೆ ಬಂದದ್ದು!




# ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents:—*

**The Kerala Tea Syndicate,**

PONANI—(S. Malabar.)



॥ ಶ್ರೀ ॥

# ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ ಧರ್ಮಸ್ಥಳಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! ಅಪೂರ್ವ ರಿಯಾಯತಿ!

## ತಾ. 14—2—1938ರಿಂದ 15—3—1938ರ ವರೆಗೆ ಮಾತ್ರ!

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 28—2—1938ರಲ್ಲು ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವ ರಾತ್ರಿ ಮಹೋತ್ಸವಕ್ಕೆ ಬಂದುಹೋಗತಕ್ಕ ಯಾವತ್ತೂ ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತೂ ಸ್ಟೇಷನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓%ರ ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಟನ್ನು ಮಾಡಿರುವೆವು.

ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದ್ದಾಗಿದೆ

## ಇಂತಹ ಅತ್ಯಪೂರ್ವ ಸುಸಂದರ್ಭವನ್ನು ಕಳಕೊಳ್ಳದಿರಿ!

***JOINT MANAGERS,***

**Combined Booking Agency, Mangalore. Joint Booking Office, Kodialbail.**

# 55 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ.** ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ ಪಿತ್ತದಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿ ಕೊಳ್ಳುವುದು ಡಬ್ಬಿ 1ಕ್ಕೆ ರೂ 2-8-0 3ಕ್ಕೆ 7-0-0.

೨ **ಅಶೋಕಾರಿಷ್ಟ ಮತ್ತು ಮಾತ್ರೆ** ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ ಚಳಿಜ್ವರ, ರಕ್ತಹೀನತೆ, ಕೈಕಾಲು ಸೆಳತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು ಬಾಟ್ಲಿ 1ರ 1-2-0, 1 ಡಬ್ಬಿ ಮಾತ್ರೆಗೆ 1-2-0, 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4-4-0

೩ **ಚಂದನಾಸವ ಮತ್ತು ಮಾತ್ರೆಗಳು** ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತುಹೋಗುವುದು ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ವಾಯಾರಿಕೆ, ಮಲಬದ್ಧತೆ ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ ಬಾಟ್ಲಿ 1ರ 1-2-0, 1 ಡಬ್ಬಿ ಮಾತ್ರೆಗೆ 1-6-0, 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗೂ 4-12-0

೪ **ಸಾರಿವಾದ್ಯಸವ** ಕೆಟ್ಟುಹೋದ ರಕ್ತವನ್ನು ಶೋಧಿಸಿ, ಮೈಯಲ್ಲಿ ಇರಬಹುದಾದ ತುರಿ, ವ್ರಣ, ಗಂಟು, ಕಲೆ ಇತ್ಯಾದಿಗಳನ್ನು ಗುಣಮಾಡಿ ದೇಹಕ್ಕೆ ಆರೋಗ್ಯವನ್ನುಂಟುಮಾಡುತ್ತದೆ ಇದು ಉಪದಂಶ (ಫರಂಗಿ) ರೋಗಕ್ಕೂ ಬಹಳ ಉತ್ತಮ ಬೆಲೆ ಬಾಟ್ಲಿ 1ಕ್ಕೆ 1-2-0, 3ಕ್ಕೆ 3-4-0

೫ (ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ.** ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ಇಲ್ಲದಂತೆ ಮಾಡಿ ಗರ್ಭಕೋಶದ ವೇದನೆಗಳನ್ನು ಸಮಾಧಾನ ಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯ ವಾಗಿ ಬಾಣಂತಿಯರು ಪುಷ್ಟಿಹೊಂದುವರು ಮಗುವಿನ ಆರೋಗ್ಯವು ಸ್ವಾತಂತ್ರವಾಗುವುದು ಪ್ರಸವಿಸಿದ ತರವಾಯ 3 ದಿನಗಳ ಮಾತ್ರೆ ಈ 3 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ರ 1-8-0, 2 ಬಾಟ್ಲಿಗಳಿಗೆ ರೂ 3

೬ **ಮಲೇರಿಯಾ ನಿವಾರಿಣೆ** ಇದರ ಸೇವನೆಯಿಂದ ಮಲೇರಿಯಾ ೧ ದಿನ ಯಾ ೩ ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ ಬಾಟ್ಲಿ 1ಕ್ಕೆ ರೂ 1-8-0 2 ಬಾಟ್ಲಿಗಳಿಗೆ ಕ್ರಯ ರೂ 2-12-0

೭ **ಬಾಲಗ್ರಹ ಗುಟಿಕೆ.** ಬಾಲಗ್ರಹ ಕಫ ... ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ, ಇವುಗಳ ಮೇಲೆ ದಿವ್ಯ ಔಷಧ ... 1ರ ಕ್ರಯ 0-10-0 3ಕ್ಕೆ 1-12-0

೮ **ಇಚ್ಛಾಭೇದಿ ಗುಟಿಕೆ.** ಆಯಾಸವನ್ನು ಕೊಡದ ಸುಖವಿರೇಚಕ ಬಾಟ್ಲಿ 1ರ 0-12-0 3ಕ್ಕೆ 2-2-0

೯ **ಮಹಾಜ್ವರಾಂಕುಶ** ಇನ್‌ಫ್ಲೂಯೆಂಜಾ, ನ್ಯೂಮೋನಿಯಾ, ಶೀತಜ್ವರ ಇವುಗಳ ಮೇಲೆ ದಿವ್ಯ ಔಷಧ ಬಾಟ್ಲಿ 1ಕ್ಕೆ 10 ಆ 3ಕ್ಕೆ 1-12-0

೧೦ **ಶ್ವಾಸಕುಠಾರ ಗುಟಿಕೆ** ಎಲ್ಲಾ ವಿಧದ ಕಫ, ಕೆಮ್ಮು ಶ್ವಾಸಶ್ವಾಸಕ್ಕೆ. ಬಾಟ್ಲಿ 1ರ 10 ಆ 3ಕ್ಕೆ 1-12-0

೧೧ **ಸೈಂಧವ ವಟಿ** ಜ್ವರ ಸಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವುದು ಬಾಟ್ಲಿ 1ರ 1-0-0- 3ಕ್ಕೆ 2 12-0

**ಕೆಟಲಾಗನ್ನು ನೋಡಿರಿ.** **ಎಮ್. ಗಣಪಯ್ಯ ಎಂಡ್ ಸನ್ಸ್,** ಆಯುರ್ವೇದಿಕ್, ಫಿಜಿಸಿಯನ್ಸ್, ರಥಬೀದಿ, ಮಂಗಳೂರು.



ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ !

# ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯಕಾರ್ಯಾಲಯ--ಮಂಗಳೂರು.

## ಮಿತ ವ್ಯಯವೂ, ಸುವ್ಯವಸ್ಥಿತ ಆಡಳಿತವೂ ಉಳ್ಳ ದೇಶೀಯ ವಿಮಾ ಸಂಘ.

ಜೀವವಿಮೆಯ ಒಳ್ಳೆಯ ಎಲ್ಲಾ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರಗಳಲ್ಲಿ ಒದಗಿಸಿಕೊಡುವ ಈ ಕಂಪೆನಿಗೆ ಮುಕ್ತಹಸ್ತರಾಗಿ ಸಹಕರಿಸಿರಿ

ಪ್ರತಿಯೊಂದು ತಾಲೂಕಿನಲ್ಲಿ, ಜಿಲ್ಲೆಯಲ್ಲಿ ಮತ್ತು ನಗರದಲ್ಲಿ ಪರಿಚಿತರೂ ದಕ್ಷರೂ ಆದ ಯೋಗ್ಯ ಗೃಹಸ್ಥರಿಂದ ಏಜನ್ಸಿಯ ಕುರಿತು ಅರ್ಜಿಗಳು ಅಪೇಕ್ಷಿಸಲ್ಪಟ್ಟಿವೆ. ಮನಸ್ಸಿಟ್ಟು ಕೆಲಸಮಾಡುವವರಿಗೆ ... ಧಾರಾಳವಾದ್ಯ ಕಮಿಷನ್ ಇದೆ. ಯಾವತೂ ಮಾಹಿತಿಗ್ಗೂ ವಿನಗಳ ಸತಕ್ಕೆ ಬರೆಯಿರಿ.
ರೂಪಾಯಿಗಳು ಬೇಕಾಗುವದು. ಸ್ವಾಸ್ಥ್ಯ ಆದರೆ ಲಾಭ ಹೆಚ್ಚು ಅವುಗಳ ... ರಾಜಚಿಹ್ನೆ.

# ಸೋಷಿಯಲಿಸಮ್

ಲೇಖಕರು.— ಶ್ರೀ. ಜಿ. ವಿ. ರಾಮಾಚಾರ್ಯ, ಬಿ ಎ

ಮನುಷ್ಯನು ಅನಾದಿಯಾಗಿ ವಿಶ್ವದಲ್ಲಿದ್ದರೂ ಕೂಡ ಅದರ ಸುವ್ಯವಸ್ಥೆಗೆ ಹೆಚ್ಚು ಗಮನ ಕೊಟ್ಟಿಲ್ಲ ಏಕೆಂದರೆ, ಜೀವನದಲ್ಲಿ ಸ್ವಾಭಾವಿಕವಾದ ಪಶುಗುಣಗಳು ಸಾಮಾನ್ಯವಾಗಿ ಜನರನ್ನು ಆವರಿಸಿವೆ. ಸ್ವಾರ್ಥವು ಅತಿ ಹೀನವೆಂದು ಹೇಳಿದರೂ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ, ಕಳೆದ ಶತಮಾನದಲ್ಲಿ ಅದು ಮಹದುಪಕಾರವನ್ನು ಮಾಡಿದೆ ಸ್ವಾರ್ಥವು ಆರ್ಥಿಕ ಸಂಪತ್ತಿಯನ್ನು ವೃದ್ಧಿಪಡಿಸಿತು ಅದ್ದರಿಂದ ವಿಜ್ಞಾನ ಪ್ರಸರಣೆಯೂಯಿತು. ಆದರೆ, ಸಮಾಜದ ಸಮಷ್ಟಿ ಸಂಪತ್ತಿಯು ಪ್ರತಿ ವ್ಯಕ್ತಿಯ ಸೌಖ್ಯಕ್ಕೆಂದೆ ಹೇಳುವುದಕ್ಕೆ ಆಗುವುದಿಲ್ಲ ಆದ್ದರಿಂದ ಒಂದು ಕಡೆ ಸಂಪತ್ತಿನ ವೃದ್ಧಿಯೂ ಮತ್ತೊಂದು ಕಡೆ ಅಸಂತುಷ್ಟಿಯೂ ತಲೆದೋರಿದವು

ಹೇಗೆ ಈ ನಿಜಗುಣವು ಮಾನವನ ಜೀವನವನ್ನು ಬದಲಾಯಿಸಿತೋ, ಹಾಗೆಯೇ ಅದ್ಭುತವಾದ ಕೆಲವು ಭಾವನೆಗಳು ಜೀವನಾದರ್ಶವನ್ನು ಬದಲಾಯಿಸಿವೆ. ಅಂದಲ್ಲಿ ಭಾವನೆಗಳು ಮನುಜನ ನಿಜಗುಣಗಳನ್ನು ಸಮಾಜದ ಸುಖದ ಹಾದಿಹಿಡಿದು ಒಂದು ತೆರನ ವ್ಯವಸ್ಥೆಯನ್ನು ಕಲ್ಪಿಸಿವೆ ನೈಜಗುಣಗಳೆಂಬ ಮೋಹಾಸ್ತ್ರಕ್ಕೆ ಧ್ಯೇಯಗಳು ಪಡಿತದ ಹಗ್ಗ ಅದರಾವೇಶವನ್ನು ಬದಿಗೊತ್ತುವ ಅಸ್ತ್ರ ಭಾವನೆಗಳ ಮತ್ತು ಧ್ಯೇಯಗಳ ಭಾಗಕ್ಕೆ ಒಮ್ಮೆ ಸಿಕ್ಕಿದ ಮೇಲೆ ಪ್ರತಿ ಒಬ್ಬ ವ್ಯಕ್ತಿಯೂ ಅದರ ದಾಸಾನುದಾಸನಾಗುವನು ಸರ್ವಕಾಲದಲ್ಲಿಯೂ ತನ್ನ ಧ್ಯೇಯವನ್ನು ಕಾರ್ಯರಂಗಕ್ಕಿಳಿಸುವ ಪ್ರಯತ್ನವೇ ಅವನ ಹಂಬಲವಾಗುವುದು ವಾಲ್ಟರ್ ರೂಸೂ ಎಂಬ ತಾತ್ವಿಕರು ತಮ್ಮ ಕ್ರಾಂತಿವಾದದ ಅರಿವನ್ನು ಫ್ರಾನ್ಸ ದೇಶದಲ್ಲಿ ಹರಡಿದ ಮೇಲೆ, ಆ ಧ್ಯೇಯದ ಪಾಶಕ್ಕೆ ಬಿದ್ದಿದ್ದ ಆ ದೇಶವು ವಿಶ್ವವನ್ನೇ ತನ್ನ ಧ್ಯೇಯಕ್ಕೆ ಅಹುತಿ ಕೊಡಬೇಕೆಂದು ಪ್ರಯತ್ನಪಡಲಿಲ್ಲವೇ? ಈ ಶತಮಾನದಲ್ಲಿಯೂ ಕೂಡ ರಷ್ಯವು ತನ್ನ ಧ್ಯೇಯವನ್ನು ಪ್ರಪಂಚದಲ್ಲೆಲ್ಲಾ ಹರಡುವುದಕ್ಕೆ ಪ್ರಯತ್ನಪಡುತ್ತಿಲ್ಲವೇ? ಅರಿವಿನ ಪ್ರಸರಣೆಯ ವೇಗವನ್ನು ಇಷ್ಟೆಂದು ಅಳೆಯುವದಕ್ಕೆ ಆಗುವುದಿಲ್ಲ ಆ ಧ್ಯೇಯದ ಅಂತಃಶಕ್ತಿಯು ಹೆಚ್ಚಿದ ಹಾಗೆಲ್ಲಾ ಅದರ ಪ್ರಸರಣೆಯ ವೇಗವು ಹೆಚ್ಚುತ್ತದೆ. ಹಾಗೆಯೇ ಈಗ ವಿಶ್ವದಲ್ಲಿ ನಲಿದಾಡುತ್ತಿರುವ ಅಸಂತುಷ್ಟಿಗೂ, ಅಜ್ಞಾನಕ್ಕೂ, ಮತ್ತು ಜನಜಾಲದ ದಾರಿದ್ರ್ಯಕ್ಕೂ ಮೂಲಕಾರಣವಾದ ಬಂಡವಾಳ ತತ್ವವನ್ನು ನಿರ್ಮೂಲವಮಾಡಬೇಕೆಂಬ ಧ್ಯೇಯವು ಹರಡುತ್ತಿದೆ ಬಂಡವಾಳ ತತ್ವವನ್ನು ನಿರ್ಮೂಲ ಮಾಡಿ, ಅದರ ಸ್ಥಳದಲ್ಲಿ ಸಮಾಜ ಸರ್ವಾಂಗಕ್ಕೂ ಸೌಖ್ಯ ಕೊಡುವ ಸೋಷಿಯಲಿಸಂ ತತ್ವವನ್ನು ಹರಡುವುದು ಈ ಶತಮಾನದ ಸಾಂಸ್ಕೃತಿಕ ವಿಭೂತಿಗಳ ಧ್ಯೇಯವಾಗಿದೆ. **ಈ ಶತಮಾನದ ಹೆಬ್ಬು ಕೂಗೆಂದರೆ, ಮಾನವನ ಸಾಂಸ್ಕೃತಿಕ ವ್ಯಕ್ತಿತ್ವೋದ್ಧಾರ.** ಹಿಂದಿನ ೧೯ನೆಯ ಶತಮಾನದಲ್ಲಿ ಮಾನವನು ತನ್ನ ಜೀವನವನ್ನು ಗುರಿಯಿಲ್ಲದ ಕ್ರಿಯೆಯಂತೆ ಕಳೆದನು ಏಕೆಂದರೆ ಅವನ ಸಂಸಾರದಲ್ಲಿ ಪಶುಸಂಬಂಧವಾದ ನೈಜಗುಣಗಳೇ ಉನ್ನತ ಸ್ಥಾನವನ್ನು ಪಡೆದಿದ್ದವು ಆದರೆ, ಅವನು ಅದರ ಅಪ್ರಯೋಜನವನ್ನು ಅರಿತು ವ್ಯಕ್ತಿಯ ಸೌಖ್ಯವು ಸಮಷ್ಟಿ ಸಮಾಜ ಸೌಖ್ಯದಿಂದ ಆಗುತ್ತದೆ ಎಂಬುದನ್ನು ಅರಿತಿದ್ದಾನೆ ಡಾರ್ವಿನ್ನನ "ಸಮರ್ಥರ ಉಳಿಕೆ" (Survival of the fittest) ಯ ತತ್ವವನ್ನು ಪರಿತ್ಯಾಗ ಮಾಡಿ ಉಳಿದವರೆಲ್ಲರೂ ಜೀವನ ಸಾಮರ್ಥ್ಯವನ್ನು ಸಂಪಾದಿಸಬೇಕೆಂಬುದೇ ಅವನ ಧ್ಯೇಯವಾಗಿದೆ ವ್ಯಕ್ತಿಗಳ ಸಂಚಯಕ್ಕೆ ಸಮಾಜವೆಂಬುದನ್ನು ಮಿಥ್ಯವೆಂದು ತಿಳಿದು, ವ್ಯಕ್ತಿಗಳ ಸಮಷ್ಟಿಜ್ಞಾನಕ್ಕೆ ಸಮಾಜವೆಂದು ಅರಿಯುತ್ತಿದ್ದಾನೆ ವ್ಯಕ್ತಿ ಜ್ಞಾನವು ಸಮಾಜದಲ್ಲಿ ಹೇಗೆ ಅಡಕವಾಗಿದೆಯೋ ಹಾಗೆಯೇ ಸಮಾಜಜ್ಞಾನವು ವ್ಯಕ್ತಿಯಲ್ಲಿ ಅಡಕವಾಗಿರಬೇಕೆಂದು ತಿಳಿಯುತ್ತಿದ್ದಾನೆ ವ್ಯಕ್ತಿ-ಸಮಾಜದ ಪರಸ್ಪರ ಸೌಖ್ಯಜ್ಞಾನವೇ ಸೋಷಿಯಲಿಸಂ ಎನ್ನಬಹುದು ಈ ಧ್ಯೇಯವನ್ನು ಏತಕ್ಕೆ ಅನುಸರಿಸಬೇಕು ಇದಕ್ಕೆ ಆಧಾರವೇನು ಎಂದು ಕೇಳಬಹುದು.

ಈ ತತ್ವಕ್ಕೆ ಎರಡು ಆಧಾರಗಳಿವೆ. ಒಂದು ಚಾರಿತ್ರಿಕ ಆಧಾರ, ಮತ್ತೊಂದು ಆರ್ಥಿಕ ಶಾಸ್ತ್ರದ ಆಧಾರ ದೇಶಗಳ ಮತ್ತು ಜನಾಂಗಗಳ ಉನ್ನತಿ ಮತ್ತು ಅವನತಿಗಳಿಗೆ ಪ್ರಕೃತಿಯ ಪರಿಸ್ಥಿತಿಯೇ ಮೂಲಕಾರಣವೆಂದು ಚಾರಿತ್ರಿಕಾಧಾರವು ಸಾರುತ್ತಿದೆ ಅಂದರೆ ಮಾನವನ ಮನೋವಿಕಾಸವು ಆಯಾ ದೇಶದ ಪ್ರಕೃತಿಸಂಪತ್ತಿಯ ಪರಿಣಾಮವಾಗಿಯೇ ಇರುತ್ತದೆ. ಈ ತತ್ವವನ್ನು ಫೇರಬಾಂಕ್ ಎಂಬ ಜರ್ಮನ ತಾತ್ವಿಕ ವಿದ್ವಾಂಸನು ಸೋಷಿಯಲಿಸಮಿಗೆ ಮುಖ್ಯ ಆಧಾರವೆಂದು ಹೇಳುತ್ತಾನೆ. ಈ ವಿದ್ವಾಂಸನ ಪ್ರಕಾರ ಹಿಂದೂಸ್ಥಾನದಲ್ಲಿ ಏತಕ್ಕೆ ಅದ್ವೈತ ವೇದಾಂತಕಾರರು ಹುಟ್ಟಿದರೆಂದರೆ, ಅದರ ಪ್ರಕೃತಿಯ ಪರಿಸ್ಥಿತಿಯೇ ಕಾರಣವೆಂದು ಹೇಳುತ್ತಾನೆ. ಹಾಗೆಯೇ ಒಂದು ಜನಾಂಗದ ರಾಜಕೀಯ ಸಂಸ್ಥೆಗಳಿಗೂ ಕೂಡ ಪರಿಸ್ಥಿತಿಯೇ ಕಾರಣವೆಂದು ಹೇಳುತ್ತಾನೆ. Plekhenar ಎಂಬ ರಷ್ಯದ ಲೇಖಕನು ಈ ರೀತಿ ಬರೆಯುತ್ತಾನೆ "The Primary thesis of Materialism is that History is made up of human beings Now if it is made by human beings it most obivously is made by great men among the rest Our Problem is then to find out by what the activity of these men is determined" ಸಾರಾಂಶವೇನೆಂದರೆ, ಚರಿತ್ರೆಯು ಮಾನವನಿಂದ ನಿರ್ಮಾಣವಾಗಿದೆ ಮಾನವರಲ್ಲಿಯೂ ಪ್ರತಿಭಾಸಂಪನ್ನರಿಂದ ನಿರ್ಮಾಣವಾಗಿದೆಯೆಂದು ಹೇಳಬೇಕು ಆದರೆ ಈ ಪ್ರತಿಭಾಸಂಪನ್ನರ ಕಾರ್ಯಕಲಾಪಗಳು ಯಾವುದರಿಂದ ನಿರ್ಧಾರವಾಗುತ್ತವೆ ಎಂಬುದೆ ನಮ್ಮ ಸಮಸ್ಯೆ" ಈ ಸಮಸ್ಯೆಗೆ ಉತ್ತರ ಕೊಡುವಾಗ ಪ್ರಕೃತಿಯ ಪರಿಸ್ಥಿತಿಯಿಂದ ಅವರ ಧ್ಯೇಯಗಳು ನಿರ್ಧಾರವಾಗುತ್ತದೆಂದು ಹೇಳುತ್ತಾನೆ ವಾಸ್ತವಿಕ ಪ್ರಪಂಚದ ಕಾರ್ಯಗಳಿಗೆ ಧ್ಯೇಯವೇ ಮೂಲಾಧಾರ ಅಂದರೆ ಸೋಷಿಯಲಿಸಂ ತತ್ವಕ್ಕೆ ನೈಜವಾದ ಪ್ರಕೃತಿಯ ಪರಿಸ್ಥಿತಿಯೇ ಒಂದು ಆಧಾರವೆಂದು ಅರಿಯಬೇಕು ಆರ್ಥಿಕ ಶಾಸ್ತ್ರದ ಆಧಾರವೂ ಕೂಡ ಈ ಆಧಾರವನ್ನೇ ಅನುಸರಿಸಿದೆ ಪರಿಸ್ಥಿತಿ ಪ್ರಭಾವದಿಂದುಂಟಾದ ಅನುಕೂಲತೆಗಳನ್ನು ಕೆಲವು ವ್ಯಕ್ತಿಗಳು ತಮಗಿದ್ದ ಅಧಿಕ ಶಕ್ತಿಯಿಂದಲೋ ಅಥವಾ ಜನಸಾಮಾನ್ಯದ ಔದಾಸೀನ್ಯದಿಂದಲೊ ಸ್ವಾರ್ಥಾರ್ಪಣ ಮಾಡಿಬಿಟ್ಟರು ಈ ಕೇವಲ ಸ್ವಲ್ಪ ಜನ ಸೌಖ್ಯಕ್ಕೆ ಬಂಡವಾಳವು ಅಣಿಮಾಡಿತು ಆದ್ದರಿಂದ ಬಂಡವಾಳಗಾರರನ್ನು ವಿಶ್ವದಿಂದ ನಿರ್ಮೂಲಮಾಡುವುದೇ ಸೋಷಿಯಲಿಸಂನ ಒಂದು ಮುಖ್ಯ ಅಂಗ ಆದರೆ, ಈ ತತ್ವವು ಕೇವಲ ವಿನಾಶದ ಧ್ಯೇಯವನ್ನು ಅನುಸರಿಸುತ್ತದೆಂದು ಭಾಸಮಾಡಿಕೊಳ್ಳಬಾರದು, ಸೃಷ್ಟಿಯು ಹಿಂದೆ ವಿನಾಶವಿದ್ದೆ ಇರಬೇಕು ವಿನಾಶದ ಭವಿಷ್ಯತ್ತಿನಲ್ಲಿ ಸೃಷ್ಟಿಯು ಇದ್ದೇ ಇರುತ್ತದೆ ಉದಾಹರಣೆಗಾಗಿ ರಷ್ಯ ಮತ್ತು ಜರ್ಮನಿ ದೇಶಗಳನ್ನು ನೋಡಿ ಜರ್ಮನಿಯು ಮಹಾಯುದ್ಧವಾದ ಮೇಲೆ ನಾಶದ ಪರಮಾವಧಿಯನ್ನು ಮುಟ್ಟುವದರಲ್ಲಿತ್ತು ಆದರೆ, ಆ ದೇಶದ ರಾಜನೀತಿಜ್ಞರ ನಿಪುಣತೆಯಿಂದಲೂ ಮತ್ತು ಪ್ರಜಾಸಹಕಾರದಿಂದಲೂ ಹತ್ತು ವರ್ಷಗಳಲ್ಲಿ ಪತಿತ ರಾಷ್ಟ್ರವು ಸರ್ವಾಂಗ ಚೈತನ್ಯದಿಂದ ತುಂಬಿತು ಆ ದೇಶದ ವ್ಯಾಪಾರವು ಹೆಚ್ಚಿತು ಜನರು ಸಂತುಷ್ಟರಾಗುತ್ತಾ ಬಂದರು ಆ ದೇಶದ ಆರ್ಥಿಕ ಪರಿಸ್ಥಿತಿಯು ಇತರ ದೇಶಗಳಲ್ಲಿ ವಿಶ್ವಾಸದ ಬೀಜಗಳನ್ನು ಹೂಡಿತು ಮಹಾಯುದ್ಧದ ಅನಾಹುತಗಳನ್ನು ಮರೆಯುತ್ತಾ ಬಂದರು

ರಷ್ಯದಲ್ಲಿಯೂ ಕೂಡ ಇದೇ ರೀತಿಯ ಪರಿವರ್ತನವಾಯಿತು ಆದ್ದರಿಂದ ಬಂಡವಾಳದ ದಬ್ಬಾಳಿಕೆಯನ್ನು ನಾಶಮಾಡಬೇಕೆಂದರೆ ಭಯಪಡಬಾರದು ಮನುಷ್ಯ ಜೀವನಕ್ಕೆ ಯಾವ ಯಾವ ಪದಾರ್ಥಗಳು ಅತ್ಯಾವಶ್ಯಕವೋ ಅಂತಹ ಕಾರ್ಖಾನೆಗಳನ್ನು ಮತ್ತು ಅವುಗಳನ್ನು ಸೃಷ್ಟಿ ಮಾಡತಕ್ಕ ಸಲಕರಣಗಳನ್ನೂ, ಸಾರ್ವಜನಿಕ ಸಂಸ್ಥೆಗಳ ಅಧೀನದಲ್ಲಿಡಬೇಕು ಸಲಕರಣಗಳನ್ನು ಅಧೀನದಲ್ಲಿಟ್ಟುಕೊಂಡರೆ ಸರಕುಗಳನ್ನು ಅವಶ್ಯಕತೆಯ ಮೇರೆಯನ್ನು ಮೀರಿ ಸೃಷ್ಟಿಸುವುದಕ್ಕೆ ಅಸಾಧ್ಯವಾಗುವುದು ಸ್ಪರ್ಧೆಯ ಜೀವನವು ಹೋಗಿ, ಸಹಕಾರ ಜೀವನವು ಉದ್ಭವಿಸುವುದು ಬರೀ ಸ್ವಾರ್ಥ ಸಂಪತ್ತಿಗೆ ಮರ್ಯಾದೆ ತಪ್ಪಿ, ಯೋಗ್ಯತೆಗೆ ಮರ್ಯಾದೆ ದೊರಕುವುದು ಪರದೇಶದ ಸಾಂಸ್ಕೃತಿಕ ಮತ್ತು ಆರ್ಥಿಕ ದಾಸ್ಯವು ಅಳಿಯುವುದು ಆತ್ಮಗೌರವವು ಹೆಚ್ಚುವುದು ದೇಶವು ಸುಭಿಕ್ಷವಾಗುವುದು, ಮತ್ತು ಮಾನ್ಯವಾಗುವುದು.

ಆದರೆ ಈ ಸೌಖ್ಯ ದೊರೆಯಬೇಕಾದರೆ, ಸಾರ್ವಜನಿಕ ಸಂಸ್ಥೆಗಳು ಸಾಂಗವಾಗಿ ಕಾರ್ಯನಿರ್ವಾಹ ಮಾಡಬೇಕಲ್ಲವೆ? ಆ ಸಂಸ್ಥೆಗೆ ಸದಸ್ಯರು ಉಚ್ಚ ಧ್ಯೇಯಗಳಿಂದ ಸ್ಫೂರ್ತಿವಂತರಾಗಬೇಕಲ್ಲವೆ ಈಗಿರುವ ಸಾರ್ವಜನಿಕ ಸಂಸ್ಥೆಗಳಲ್ಲಿ ಈ ಯಾವ ಗುಣಗಳೂ ಕಾಣಬರುವುದಿಲ್ಲ ಮುಂದೆ ಆ ಸದ್ಗುಣಗಳು ಕಂಡುಬರುತ್ತವೆ ಎಂಬ ಆಶೆ ಎಲ್ಲಿದೆ ಎಂದು ಪ್ರಶ್ನೆಮಾಡಬಹುದು ಸಾರ್ವಜನಿಕ ಸಂಸ್ಥೆಗಳು ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದೇನೋ ಸತ್ಯ. ಆದರೆ ಅದಕ್ಕೆ ಕಾರಣವೇನೆಂದು ಚರ್ಚೆ ಮಾಡಿದರೆ ಕಾರ್ಯ ಅಸಮರ್ಪಕತೆಯು, ಸಂಸ್ಥೆಗಳಲ್ಲಿರುವ ಅಂತರ್ಯ ಕುಂದುಗಳಿಂದಲ್ಲ, ಆದರೆ, ಬಂಡವಾಳ ತತ್ವ ಪ್ರಚಾರದಿಂದಾದ ಸ್ವಾರ್ಥ ಶಕ್ತಿಯ ವರ್ಚಸ್ಸು ಆ ಸಂಸ್ಥೆಗಳ ಮೇಲೆ ಬಿದ್ದಿದೆ ಸಂಸ್ಥೆಗಳು ವ್ಯಕ್ತಿಗಳ ಮನೋಭಾವನೆಗಳನ್ನು ಕಾರ್ಯರಂಗಕ್ಕಿಳಿಸುವುದಕ್ಕೆ ಒಂದು ಹಾದಿಯೇ ಹೊರತು ವ್ಯಕ್ತಿಗಳ ಅಂತರ್ಯವನ್ನು ಶುದ್ಧಿಮಾಡಲಾರದು ಉಚ್ಚ ಸಂಸ್ಥೆಗಳಿಗೆ ನಾವು ನಮ್ಮಲ್ಲಿ ಬೆಳೆಯುವುದಕ್ಕೆ ಅವಕಾಶವಿತ್ತು ಅವುಗಳಲ್ಲಿ ಕಾರ್ಯಭಾಗ ನಡೆಸುವವರನ್ನು ಅಂತಹ ಉಚ್ಚಧ್ಯೇಯಗಳಿಂದ ಸ್ಫೂರ್ತಿವಂತರನ್ನಾಗಿ ಮಾಡದಿದ್ದರೆ ಅದು ಸಂಸ್ಥೆಗಳ ತಪ್ಪಲ್ಲ, ವ್ಯಕ್ತಿಗಳ ತಪ್ಪು ಪ್ರಜಾಪ್ರಭುತ್ವದಲ್ಲಿ ಕುಂದಿದೆಯೆಂದು ಹೇಳುವವರು, ಅದಕ್ಕೆ ಸಮಾನವಾದ ಇನ್ನೊಂದು ವ್ಯವಸ್ಥೆಯನ್ನು ಸೂಚಿಸಬೇಕು ಹದಿನೇಳು ಶತಮಾನಗಳೂ ಚಕ್ರಾಧಿಪತ್ಯಗಳಿಗೂ ಮತ್ತು ರಾಜ ಪ್ರಭುತ್ವಗಳಿಗೂ ಅವಕಾಶವಿತ್ತದ್ದಕ್ಕೆ ಮಾನವ ವ್ಯಕ್ತಿತ್ವವನ್ನು ಅಶನವಸನಗಳಿಲ್ಲದ ಪಾಮರನನ್ನಾಗಿ ಮಾಡಿತು ಆಧುನಿಕ ಪ್ರಜಾಪ್ರಭುತ್ವದ ತತ್ವವು ಹುಟ್ಟಿ ಇನ್ನೂ ಎರಡು ಶತಮಾನಗಳಾಗಿಲ್ಲ ಅದು ಸಮರ್ಪಕವಾಗಿ ಕಾರ್ಯಮಾಡುವುದಕ್ಕೆ ತಕ್ಕ ಪರಿಸ್ಥಿತಿ ಮತ್ತು ಸಲಕರಣಗಳೂ ಉತ್ಪನ್ನವಾಗಿಲ್ಲ ಆದ್ದರಿಂದ ಅದರ ಪ್ರಯೋಜಕ, ಅಪ್ರಯೋಜಕ ವಿಷಯಗಳಲ್ಲಿ ಯಾರೂ ಅಭಿಪ್ರಾಯ ಕೊಡಲಾರರು ಆದರೂ ಪ್ರಜಾಪ್ರಭುತ್ವವು ರಾಜನೀತಿಜ್ಞರು ಕಲ್ಪಿಸಿರುವ ಸಂಸ್ಥೆಗಳಲ್ಲಿ ಅತ್ಯುತ್ತಮವಾದದ್ದು ಪ್ರಭುತ್ವ ಸಂಸ್ಥೆಗಳಿಗೆ ಪ್ರಜಾ ಪ್ರಭುತ್ವವು ಶಿರೋಮಣಿಯಂತಿದೆ ಪ್ರಜಾ ಪ್ರಭುತ್ವವು ಸಮಾಜ ಸಹಕಾರ ಜೀವನದ ದೀವಟಿಗೆ

ಆದುದರಿಂದ ಸೋಷಿಯಲಿಸಂ ತತ್ವವನ್ನು ಕಾರ್ಯರಂಗಕ್ಕಿಳಿಸುವುದು ಅಸಾಧ್ಯವೆಂದು ಹೇಳಲಾಗದು ಅಸಾಧ್ಯವೆಂದು ಉದ್ಗಾರ ತೆಗದು ಪರಿತ್ಯಾಗ ಮಾಡಿದರೆ, ಮಾನವ ಸಂಸ್ಕೃತಿ ಪ್ರಸರಣೆಗೆ ತಿಲೋದಕ ಬಿಟ್ಟಂತಾಗುತ್ತದೆ. ನಮ್ಮ ದೇಶದ ದಾರಿದ್ರ್ಯದ ಮತ್ತು ಅಸಂತುಷ್ಟಿಯ ರೋಗಕ್ಕೆ ಸೋಷಿಯಲಿಸಂ ತತ್ವವೇ ಪರಮೌಷಧ

ಸೋಷಿಯಲಿಸಂ ತತ್ವವನ್ನು ಅನುಸರಿಸುವ ಪ್ರಭುತ್ವದಲ್ಲಿ ಮತಗಳ ಸ್ಥಾನವೇನು, ಮಠಾಧಿಪತಿಗಳ ಗತಿಯೇನು ಎಂಬುದನ್ನು ಯೋಚಿಸುವ ಈ ತತ್ವವು ನೈಜ ಧರ್ಮಕ್ಕೂ ಮತ್ತು ಮತಗಳಿಗೂ ವಿರುದ್ಧವೆಂದು ತಿಳಿಯುವುದು ಶುದ್ಧ ಅಜ್ಞಾನ ಈ ತತ್ವವು ಮತಗಳ ತತ್ವಗಳನ್ನು ವಿರೋಧಿಸುವುದಿಲ್ಲ ಅನೇಕ ಮತಗಳ ಆಧಾರವಾಗಿರುವ ಧರ್ಮಗುಣಗಳನ್ನು ಅನುಮೋದಿಸುತ್ತದೆ ಆದರೆ ಮತಗಳ ಹೆಸರಿನಲ್ಲಿ ಸಂಸ್ಥೆಗಳನ್ನು ಕಟ್ಟಿ ಧನಾರ್ಜನೆ ಮಾಡುವ ಪ್ರಯತ್ನಗಳಿಗೆ ಸ್ಥಳ ದೊರೆಯಲಾರದು ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಅರ್ಥಾತ್ ಅವರ ಪ್ರತಿನಿಧಿಗಳೇ ಸರ್ವಾಧಿಕಾರಿಗಳು ಮಠಾಧಿಪತಿಗಳು ಪ್ರಜಾಧೀನವಾಗುವರ, ಹಾಗೂ, ಮಠಾಧಿಪತಿಗಳು ಮತಾಧಿಪತಿಗಳೆಂದು ಹೇಳಲಿಕ್ಕಾಗುವುದಿಲ್ಲ **ಮಠಗಳು ಅಳಿದರೂ ಮತಗಳು ಅಳಿಯುವುದಿಲ್ಲ** ಆದುದರಿಂದ ಸೋಷಿಯಲಿಸಂ ತತ್ವವನ್ನು ಅನುಸರಿಸುವ ಪ್ರಭುತ್ವದಲ್ಲಿ ದಬ್ಬಾಳಿಕೆಗೆ ಅವಕಾಶ ಕೊಡುವ ಯಾವ ಸಂಸ್ಥೆಗೂ ಸ್ಥಾನವಿಲ್ಲ. ಆದರೆ ಧರ್ಮ ಪ್ರಚಾರ ಮಾಡುವುದಕ್ಕೆ ಅಡ್ಡಿ ಯಾವುದೂ ಕಂಡುಬರುವುದಿಲ್ಲ

# ಪಾನನಿಷೇಧದಿಂದ ಕೋಟ್ಯಾಂತರದ ಆರ್ಥಿಕ ಕ್ಷತಿ!!

## ಪ್ರಾಂತಿಕ ಸರಕಾರಗಳು ಇದನ್ನು ಹೇಗೆ ತುಂಬಿಸುವವು?

ಮದ್ರಾಸು ಬೊಂಬಾಯಿ ಮೊದಲಾದ ಕಾಂಗ್ರೆಸಿಗೆ ಬಹುಮತವಿರುವ ನಮ್ಮ ದೇಶದ ಏಳು ಪ್ರಾಂತ್ಯಗಳಲ್ಲಿ ಇನ್ನು ಮುಂದೆ ದೇಶಾಭಿವೃದ್ಧಿಯ ಕಾರ್ಯದಲ್ಲಿ ಹೆಚ್ಚೆಚ್ಚು ಹಣವನ್ನು ಖರ್ಚು ಮಾಡಬೇಕಾಗುವದು. ಕಾಂಗ್ರೆಸ್ ಮಂತ್ರಿ ಮಂಡಲಗಳು ಜನಮತದ ಒಲವು ಪ್ರೀತಿಗಳನ್ನೂ ಸಹಾನುಭೂತಿ ಬೆಂಬಲಗಳನ್ನೂ ಪಡೆಯಬೇಕಾದರೆ ಅವು ಹೀಗೆ ಮಾಡಬೇಕಾದ್ದು ಅತ್ಯಗತ್ಯವಾಗಿದೆ. ಗವರ್ನಮೆಂಟ್ ಆಫ್ ಇಂಡಿಯಾ ಏಕ್ಟಿಗನುಗುಣವಾಗಿ ಈ ಮಂತ್ರಿಮಂಡಲಗಳು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಸರ್ವತಂತ್ರಸ್ವತಂತ್ರವಾಗಿರುವದಿಲ್ಲ. ಸಿವಿಲ್ ಸರ್ವಿಸುಗಳು ಮೊದಲಾದ ವಿಷಯಗಳು ಅವುಗಳ ಅಧಿಕಾರದಿಂದ ಹೊರಗಾಗಿರುವ ಕಾರಣದಿಂದ ಈ ಮಂತ್ರಿಮಂಡಲಗಳಿಗೆ ಯಾವ ರಾಷ್ಟ್ರಹಿತ ಕಾರ್ಯವನ್ನು ಮಾಡಬೇಕಾದರೂ ಹಣದ ಕೊರತೆಯ ಪ್ರಶ್ನೆಯು ಮುಂದೆ ಬರುವದು. ಹೀಗಿರಂತು ಸಾಧ್ಯವಿದ್ದಷ್ಟು ಯತ್ನಮಾಡಿ ಜನಹಿತವನ್ನುಂಟು ಮಾಡುವ ಯತ್ನ ಮಾಡುತ್ತೇವೆಂದು ಇವು ಪ್ರತಿಜ್ಞೆ ಮಾಡಿಕೊಂಡಿರುವದರಿಂದ, ಏನಾದರೂ ಮಾಡಲೇಬೇಕು. ಇತರ ಕಡೆಯ ಮಂತ್ರಿಮಂಡಲಗಳಂತೆ ಜನಮತವನ್ನು ಉಪೇಕ್ಷಿಸಿ ಕೇವಲ ಅಧಿಕಾರಿಗಳ ಸಹಾಯ ಸಹಕಾರಗಳಿಂದ ಅಧಿಕಾರಾರೂಢವಾಗಿರುವದು ಸಾಧ್ಯವಲ್ಲ.

ಅದಕ್ಕೋಸ್ಕರ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಇನ್ನು ಮೂರು ವರ್ಷಗಳಲ್ಲಿ ಈ ಏಳು ಪ್ರಾಂತ್ಯಗಳಲ್ಲಿ ಸಂಪೂರ್ಣವಾಗಿ ಮದ್ಯಪಾನ ನಿಷೇಧ ಮಾಡಬೇಕೆಂದು ಹೇಳಿದೆ. ಮದ್ಯಪಾನನಿಷೇಧಮಾಡುವದರೊಂದಿಗೆ ಶಿಕ್ಷಣ ಪ್ರಚಾರ, ಸ್ವಾಸ್ಥ್ಯ ರಕ್ಷಣೆ ಮೊದಲಾದ ಇತರ ಕಾರ್ಯಗಳೂ ನಡೆಯಬೇಕಾಗಿರುವವು. ಇದಕ್ಕೆಲ್ಲಾ ತುಂಬ ಹಣಬೇಕು. ಪ್ರಾಂತೀಯ ಸರಕಾರಗಳ ಉತ್ಪತ್ತಿಯ ಮಾರ್ಗಗಳು ಕಡಿಮೆ. ಆದರೆ ಖರ್ಚಿನ ಮಾರ್ಗಗಳು ಹೆಚ್ಚಾಗಿರುವವು. ನೆಲಕಂದಾಯವನ್ನು ಬಿಟ್ಟರೆ, ಮದ್ಯಪಾನದಿಂದ ಸರಕಾರಕ್ಕೆ ದೊರೆಯುವ ಉತ್ಪತ್ತಿಯೇ ದೊಡ್ಡದಾಗಿರುವದು. ಒಟ್ಟು ಕರಕಂದಾಯಗಳ ಒಂದು ಚತುರ್ಥಾಂಶವು ಅಬಕಾರಿ ಇಲಾಖೆಯಿಂದ ದೊರೆಯುವದು. ಆದ್ದರಿಂದ ಮದ್ಯನಿಷೇಧ ಮಾಡಿಬಿಟ್ಟರೆ ಅಬಕಾರಿ ಇಲಾಖೆಯ ಲಾಭವು ನಿಂತುಹೋಗುವದು.

ಮದ್ರಾಸು ಸರಕಾರವು ಮೂರು ವರ್ಷಗಳೊಳಗಾಗಿ ಇಡೀ ಪ್ರಾಂತ್ಯದಲ್ಲಿ ಮದ್ಯನಿಷೇಧ ಮಾಡುವದೆಂದು ಕಾನೂನು ಮಾಡಿದೆ. ಸೇಲಂ ಜಿಲ್ಲೆಯಲ್ಲಿ ಅದು ಜಾರಿಗೆ ಬಂದೂ ಇರುವದು. ಆದರೆ ಆ ಒಂದು ಜಿಲ್ಲೆಯಿಂದ—ಮದ್ಯನಿಷೇಧ ಮಾಡಿದ ಪರಿಣಾಮವಾಗಿ—ಹನ್ನೊಂದ ಲಕ್ಷ ರೂಪಾಯಿಗಳು ಪ್ರತಿವರ್ಷ ಸರಕಾರಕ್ಕೆ ಸಿಕ್ಕುವಂಥಾದ್ದು ಸಿಕ್ಕದೆ ಹೋಗುವದು. ಮದ್ರಾಸು ಸರಕಾರದ ಒಟ್ಟು ವಾರ್ಷಿಕ ಆದಾಯವು 17 ಕೋಟಿ ರೂಪಾಯಿ. ಅದರಿಂದ 7 ಕೋಟಿ ರೂಪಾಯಿ ನೆಲಕಂದಾಯದಿಂದಲೂ, 4½ ಕೋಟಿ ರೂಪಾಯಿ ಅಬಕಾರಿ ಇಲಾಖೆಯಿಂದಲೂ, ಉಳಿದ ಹಣವು ಇತರ ಹಲವು ಕರಗಳಿಂದಲೂ ಸಿಕ್ಕುವದು. ಅಬಕಾರಿಯಿಂದ ಸಿಕ್ಕುವ ನಾಲ್ಕೂ ಕಾಲು ಕೋಟಿ ರೂಪಾಯಿಗಳಲ್ಲಿ ಎರಡುವರೆ ಕೋಟಿ ರೂಪಾಯಿ ಶಿಕ್ಷಣಕ್ಕಾಗಿಯೂ ಒಂದೂವರೆ ಕೋಟಿ ರೂಪಾಯಿ ಸ್ವಾಸ್ಥ್ಯರಕ್ಷಣೆಗಾಗಿಯೂ ಖರ್ಚಾಗುತ್ತದೆ. ಮದ್ರಾಸು ಪ್ರಾಂತ್ಯದಲ್ಲಿ ಮದ್ಯ ನಿಷೇಧವನ್ನು ಸಾರ್ವತ್ರಿಕವಾಗಿ ಮಾಡಿಬಿಟ್ಟರೆ ಶಿಕ್ಷಣ, ಸ್ವಾಸ್ಥ್ಯ ರಕ್ಷಣೆ ಮೊದಲಾದ ಉಪಯುಕ್ತ ಕಾರ್ಯಗಳಿಗೆ ಹಣದೊರೆಯದ ಹೋಗುವದು. ಆದರೆ ಮದ್ಯನಿಷೇಧವು ಆಗಲೇಬೇಕು, ಶಿಕ್ಷಣ, ಸ್ವಾಸ್ಥ್ಯರಕ್ಷಣೆ ಮೊದಲಾದ ಇತರ ಕೆಲಸಗಳೂ ಆಗಬೇಕು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡುವದಾದರೆ ಸರಕಾರಕ್ಕೆ ಐದು ಕೋಟಿ ರೂಪಾಯಿಗಳು ಬೇಕಾಗುವದು. ಸ್ವಾಸ್ಥ್ಯ ರಕ್ಷಣೆ ಗ್ರಾಮ ಸುಧಾರಣೆ ಮೊದಲಾದ ಕಾರ್ಯಗಳಿಗೂ ಕೋಟಿಗಟ್ಟಲೆ ಹಣಬೇಕಾಗುವದು. ಹೀಗೆ ಇನ್ನು ಎರಡು ಮೂರು ವರ್ಷಗಳಲ್ಲಿ ಮದ್ರಾಸು ಸರಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಆರ್ಥಿಕ ಕ್ಷತಿ ಉಂಟಾಗುವದು. ಮದ್ಯನಿಷೇಧದಿಂದುಂಟಾದ ನಾಲ್ಕೈದು ಕೋಟಿ ರೂಪಾಯಿಗಳ ನಷ್ಟವನ್ನು ತುಂಬಿಸಬೇಕಾದ್ದು ಮಾತ್ರವಲ್ಲದೆ ಶಿಕ್ಷಣ ಪ್ರಚಾರ, ಸ್ವಾಸ್ಥ್ಯ ರಕ್ಷಣೆ ಮೊದಲಾದ ಇತರ ಕಾರ್ಯಗಳಿಗಾಗಿ ಮತ್ತೆ ಏಳೆಂಟು ಕೋಟಿ ರೂಪಾಯಿಗಳನ್ನು ಸಂಪಾದಿಸುವ ಮಾರ್ಗವನ್ನು ಹುಡುಕಬೇಕಾಗಿರುವದು.

ಮದ್ರಾಸು ಮಂತ್ರಿಮಂಡಲದ ಮುಂದೆ ಮಾತ್ರ ಈ ಆರ್ಥಿಕ ಪ್ರಶ್ನೆಯುಂಟಾದದ್ದಲ್ಲ. ಎಲ್ಲ ಪ್ರಾಂತ್ಯಗಳಲ್ಲಿಯೂ ಇದೇ ಪರಿಸ್ಥಿತಿಯುಂಟಾಗಿದೆ. ಅದರೊಟ್ಟಿಗೆ ರೈತರ ಸ್ಥಿತಿಯೂ ಚಿಂತಾಜನಕವಾಗಿರುವದು. ಭೂಕಂದಾಯವನ್ನು ಕಾಲಾಂಶ ಏರಿಸದೆ ಕಡಿಮೆ ಮಾಡುವೆವು ಎಂದು ರೈತರಿಗೆ ಕಾಂಗ್ರೆಸಿನ ಪ್ರಣಾಳಿಕೆಯಲ್ಲಿ ಅಭಿವಚನವಿತ್ತಿದೆ. ಆದ್ದರಿಂದ ರೈತರ ಹಿತಕ್ಕಾಗಿ ಸಹ, ಅವರ ಕಷ್ಟ ದಾರಿದ್ರ್ಯಗಳನ್ನು ಕಡಿಮೆ ಮಾಡಲಿಕ್ಕಾದರೂ ಕಾಂಗ್ರೆಸು ಮಂತ್ರಿಮಂಡಲಗಳು ಪ್ರಯತ್ನಿಸಬೇಕು. ಇದಕ್ಕೆಲ್ಲಾ ಹಣವು ಎಲ್ಲಿಂದ ಬರುವುದು? ಇದೊಂದು ಪ್ರಶ್ನೆಯನ್ನು ಕಾಂಗ್ರೆಸ್ ಮಂತ್ರಿಮಂಡಲಗಳು ತೃಪ್ತಿಕರವಾಗಿ ಉತ್ತರಿಸಿದರೆ ಸಾಕು, ಭಾರತೀಯ ಇತಿಹಾಸದಲ್ಲಿ ಅವುಗಳ ಕಾರ್ಯಕಲಾಪಗಳ ಸ್ವರ್ಣಾಕ್ಷರಗಳಿಂದ ಅಂಕಿತವಾಗುವವು.

ಪ್ರಾಂತೀಯ ಸರಕಾರಗಳ ಹೆಚ್ಚೆಚ್ಚು ಸಾಲವನ್ನು ತೆಗೆದುಕೊಳ್ಳಬಾರದು. ಅವುಗಳ ತಲೆಯ ಮೇಲೆ ಹಿಂದಿನವರು ಸಾಕಷ್ಟು ಸಾಲದ ಹೊರೆಯನ್ನು ಇಟ್ಟು ಹೋಗಿದ್ದಾರೆ. ಸಿವಿಲ್ ಸರ್ವಿಸುಗಳ ಸಂಬಳವನ್ನು ಕಡಿಮೆ ಮಾಡಲಿಕ್ಕೆ ಅವಕಾಶವಿದೆ. ಆದರೆ ಮಂತ್ರಿಮಂಡಲಗಳು ಈ ವಿಷಯದಲ್ಲಿ ತಾವಾಗಿ ಸ್ವತಂತ್ರಿಸಿ ಏನನ್ನಾದರೂ ಮಾಡಲಿಕ್ಕೆ ಅಧಿಕಾರವುಳ್ಳವುಗಳಾಗಿರುವದಿಲ್ಲ. ಸಿವಿಲ್ ಸರ್ವಿಸುಗಳು ಕಾನೂನು ಮೂಲಕ ಸುರಕ್ಷಿತವಾಗಿರುವವು. ಮತ್ತೆ ಸೈನ್ಯದ ಖರ್ಚನ್ನು ತಗ್ಗಿಸಿ ಅದರ ಒಂದಂಶವು ಪ್ರಾಂತೀಯ ಸರಕಾರಗಳಿಗೆ ದೊರೆಯುವಂತೆ ಮಾಡಿದರಾಗಬಹುದು. ಆದರೆ ಇಂಡಿಯಾ ಸರಕಾರವು ಮತ್ತು ಇಂಗ್ಲೆಂಡಿನ ಪಾರ್ಲಿಮೆಂಟ—ಇವುಗಳ ಪ್ರಕೃತದ ಮನೋಭಾವವನ್ನು ನೋಡಿದಾಗ ಅದೂ ಅಸಂಭವವೆಂದು ಕಾಣುತ್ತದೆ. ಇಷ್ಟಿದ್ದೂ ಕಾಂಗ್ರೆಸ್ ಮಂತ್ರಿಮಂಡಲಗಳು ಜನತಾರೂಪೀ ಜನಾರ್ದನನ ಸೇವೆಯಲ್ಲಿ ತೊಡಗಿವೆ. ಅವು ಜನಹಿತಕ್ಕಾಗಿ ಯಾವದಾದರೊಂದು ಸಾಧು ಉಪಾಯದಿಂದ ಮದ್ಯನಿಷೇಧ ಶಿಕ್ಷಣ ಪ್ರಚಾರ, ಸ್ವಾಸ್ಥ್ಯರಕ್ಷಣೆಯಂಥ ಕಾರ್ಯಗಳನ್ನು ಸಾಧಿಸಲೇಬೇಕು. ಅದು ಮಾತ್ರ ಹೇಗೆ ಸಾಧ್ಯವಾಗುವದೊ? ನೋಡೋಣ.

ಕೆಲವು ಅರ್ಥಶಾಸ್ತ್ರಿಗಳು ಈ ವಿಷಯ ಚೆನ್ನಾಗಿ ಪರಾಮರ್ಶೆ ಮಾಡಿ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ, ಉಪ್ಪು, ಬೆಂಕಿಪೆಟ್ಟಿಗೆ, ಸಿಗರೇಟು, ಬೀಮೆ ಮೊದಲಾದ ಕೆಲವು ವ್ಯವಸಾಯಗಳನ್ನು ಪ್ರಾಂತೀಯ ಸರಕಾರಗಳು ತಮ್ಮ ಕೈಗೆ ತೆಗೆದುಕೊಳ್ಳಬೇಕು. ಈ ವ್ಯವಸಾಯಗಳಲ್ಲಿ ಖರ್ಚು ಕಡಿಮೆ, ಆದರೆ ಲಾಭ ಹೆಚ್ಚು. ಅವುಗಳ ರಾಷ್ಟ್ರೀಕರಣದಿಂದ ಪ್ರಜಾವರ್ಗಕ್ಕೆ ಪ್ರಯೋಜನವೂ ಈಗಿನದಕ್ಕಿಂತ ಬಹಳ ಹೆಚ್ಚಾಗುವದು. ಹಾಗೆಯೇ ಭೋಗ ವಿಲಾಸದ ಸಾಮಗ್ರಿಗಳ ಮಾರಾಟದ ಮೇಲೆ ಕರಹಾಕುವ ಅಧಿಕಾರವೂ, ಮೃತ್ಯು ತೆರಿಗೆಯ ಅಧಿಕಾರವೂ ಪ್ರಾಂತೀಯ ಸರಕಾರಗಳಿಗಿದೆ. ಆ ಅಧಿಕಾರವನ್ನು ಸರಕಾರಗಳು ಯಥೋಚಿತ ಉಪಯೋಗಿಸಿಕೊಳ್ಳಬೇಕು. ಯಾವ ವಸ್ತುಗಳ ಉತ್ಪತ್ತಿಯ ಮೇಲೆ ಇಂಡಿಯಾ ಸರಕಾರವು ಕರಹಾಕುತ್ತದೋ, ಆ ವಸ್ತುಗಳ ಮಾರಾಟದ ಮೇಲೆ ಕರಹಾಕುವ ಅಧಿಕಾರವು ಪ್ರಾಂತೀಯ ಸರಕಾರಗಳಿಗೆ ಇರಲಾಗದೆಂದು ಇಂಡಿಯಾ ಸರಕಾರವು ಸಾಧಿಸಬಹುದು. ಆದರೆ ಅದನ್ನು ವಿರೋಧಿಸುವ ಶಕ್ತಿಯು ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಇರುವದಾದರೆ ಇಂಡಿಯಾ ಸರಕಾರವು ಕೂಡ ಸುಮ್ಮಗಿರಬೇಕಾಗುವದು.

ಜಪಾನದ ಸರಕಾರವು ಸಿಗರೇಟು ವ್ಯವಸಾಯವನ್ನು ತನ್ನ ಕೈಗೆ ತೆಗೆದುಕೊಂಡಿದೆ. ಜಪಾನಿನಲ್ಲಿ ಕೂಡ ಸಿಗರೇಟು ವ್ಯವಸಾಯವು ಸರಕಾರದ ಕೈಯಲ್ಲಿದೆ. ಹೀಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇರೆ ಬೇರೆ ವ್ಯವಸಾಯಗಳನ್ನು ಸರಕಾರಗಳು ತಮ್ಮ ಕೈಗೆ ತೆಗೆದುಕೊಂಡು ಹಣ ಸಂಪಾದಿಸುತ್ತಿರುವವು. ಪ್ರಾಂತೀಯ ಸರಕಾರಗಳೂ ಹಾಗೆಯೇ ಮಾಡಬಹುದು. ಮೋಟರ ಟ್ರಾನ್ಸ್‌ಪೋರ್ಟ ಮತ್ತು ಬೇಂಕಿಂಗ್ ವ್ಯವಹಾರಗಳನ್ನು ಕೂಡ ತಮ್ಮ ಕೈಗೆ ತೆಗೆದುಕೊಳ್ಳುವದರಿಂದ ಸರಕಾರಕ್ಕೆ ತುಂಬಾ ಲಾಭವಾಗುವ ಸಂಭವವಿದೆ. ಹೈದರಾಬಾದ ನಿಜಾಮ ಸರಕಾರವು 30 ಲಕ್ಷ ರೂಪಾಯಿಗಳ ಭಂಡವಾಲ ಹಾಕಿ ಮೋಟರ ಟ್ರಾನ್ಸ್‌ಪೋರ್ಟ ವ್ಯವಸಾಯವನ್ನಾರಂಭಿಸಿದೆ. ಅದಕ್ಕೆ ಸೇಕಡಾ 10ರಷ್ಟು ಲಾಭವು ದೊರೆಯುತ್ತಿರುವದು.

ಆದರೆ ಈ ವ್ಯವಹಾರಗಳಲ್ಲಿ ತೊಡಗಿದ ಭಂಡವಾಲಿಗರ ಸ್ವಾರ್ಥವಿದೆ. ಈ ವ್ಯವಹಾರಗಳನ್ನು ಪ್ರಾಂತೀಯ ಸರಕಾರಗಳು ತಮ್ಮ ಕೈಗೆ ತೆಗೆದುಕೊಳ್ಳುವದರಿಂದ ಭಂಡವಾಲಿಗರ ಸ್ವಾರ್ಥಕ್ಕೆ ದೊಡ್ಡ ಧಕ್ಕೆ ತಗಲುವದು. ಕೃಷಿಕರ ಸಾಲನಿವಾರಣೆ ಮಸೂದೆಯ ಸಂಬಂಧದಲ್ಲಿ ಸಾಹುಕಾರರೂ, ಮೆಸರ್ಸ್ ಟೋಡಿಯಾ ಬಿಲ್ಲಿನ ಕಾಂಗ್ರೆಸ್ ವಕೀಲರ ಮೊದಲಾದವರೂ ಕೂಗೆಬ್ಬಿಸಿ ಆ ಮಸೂದೆಗಳನ್ನು ವಿರೋಧಿಸಿರುವಂತೆ, ಈ ಸಂದರ್ಭದಲ್ಲಿ ಭಂಡವಾಲಿಗರು ಭಯಂಕರವಾದ ಕೂಗನ್ನು ಕೂಗಿ ಆಕಾಶ ಪಾತಾಳಗಳನ್ನು ಒಂದು ಮಾಡದೆ ಇರಲಾರರು. ಅವರ ವಿರೋಧ ವಿದ್ರೋಹಗಳನ್ನು ತಾಳಿಕೊಳ್ಳುವ ಶಕ್ತಿ ಧೈರ್ಯ ಸಾಹಸಗಳು ನಮ್ಮ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಇರುವವೆ? ಇರುವದಾದರೆ ಅವುಗಳು ವಿಮಾ, ವಿದ್ಯುಚ್ಛಕ್ತಿ, ಉಪ್ಪು, ಸಿಗರೇಟು ಬೆಂಕಿಪೆಟ್ಟಿಗೆ ಮೊದಲಾದ ವ್ಯವಸಾಯಗಳನ್ನು ಸರಕಾರವೇ ತಮ್ಮ ಕೈಗೆ ತೆಗೆದುಕೊಳ್ಳುವ ರೀತಿಯಲ್ಲಿ ಭಗೀರಥ ಯತ್ನಗಳನ್ನು ಮಾಡಬೇಕು. ಮತ್ತು ಪ್ರಾಂತ್ಯಹಿತದ ಮದ್ಯನಿಷೇಧ ಸ್ವಾಸ್ಥ್ಯರಕ್ಷಣೆ ಕೃಷಿಕರ ಸಾಲನಿವಾರಣೆ ಮೊದಲಾದ ಕಾರ್ಯಗಳನ್ನು ಮಾಡಿ ಕೊನೆಮುಟ್ಟಿಸಬೇಕು.

—

ಜಪಾನೀಯ ಧರಿಸುವ ಪದ್ಧತಿ ರಾಜಚಿಹ್ನೆ

ನಿಷ್ಣಾತ ವೈದ್ಯರು

# ನಿಮ್ಮ ದಮ್ಮಿನ ಚಿಕಿತ್ಸೆ

ಯನ್ನು

## ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ನಿಮಿಷಗಳಲ್ಲಿ ಚುಟಕಿ ಹೊಡೆದಂತೆ ಗುಣಮಾಡುವೆನೆಂದು ಅವನು ಹೇಳಬಹುದೆಂದ ನಿಮಗೆ ಅನಿಸುವದೇ? ದಮ್ಮಿನ ತತ್ಕಾಲಿಕ ಗುಣವನ್ನು ತರುವ ಉಪಾಯವು ಎಫಿಡ್ರಿನುದ ಗುಳಿಗೆಗಳು ಇದವಾ ಹೊಗೆತೆಗೆದುಕೊಳ್ಳುವ ಔಷಧಗಳು. ಆದರೆ ಇವು ದಮ್ಮನ್ನು ಪೂರ್ಣ ನಾಶಪಡಿಸಲು ತೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ. ಪರಿಣಾಮದಲ್ಲಿ ಈ ಔಷಧಗಳು ಗಟ್ಟಿಯಾದ ಹುಗುರು ಶ್ವಾಸನಳಿಗೆಗಳ ಬೇನೆಯನ್ನು ಹೆಚ್ಚಿಸಿ ರೋಗಿಯನ್ನು ಕಾಯಂ ದಮ್ಮಿನವನನ್ನಾಗಿ ಮಾಡಿಬಿಡುವವು.

ದಮ್ಮು ಮೆಲ್ಲಮೆಲ್ಲಗೆ ಆದರೆ ... ವಾಗಿ ಗುಣಮಾಡುವ ಔಷಧಿಗಳಲ್ಲಿ ... ಹಿತ ಶ್ವಾಸಹಾರಿ ಇದೊಂದು ... ಯಾದ ಔಷಧವಾಗಿದೆ, ದಮ್ಮಿನ ... ವದ, ಮ ... ಈ ಔಷ ... ಡುವ ಕೆಮ್ಮು ... ಫಿಕಾರಗಳನ್ನು ...

ಯೋ... ಬೇಕ ಇದರಿಂದ ... ಸರ್ವಾಂಗ ... ಮಾಡಿ ರೋಗಮುಕ್ತರಾಗಿ ... ಶ್ವಾಸಹಾರಿ ... ದಮ್ಮಿನವರು



ಡಾ॥ ಪುರೋಹಿತ ಶ್ವಾಸಹಾರಿ

**Use the soaps**
KNOWN ALL OVER
**WISICO'S.**
**MINAR**
**TAJAMAHAL** Red
Bar Soaps.
POPULAR IN THE MARKET.
*Sole D...*

**...A BANK**
**...IMITED**
**...OW RECEIVES**
**...EASON DEPOSITS**
**AT RATES UP TO**
**3½% P. A**

# ಸೋಷಿಯಲಿಸಮ್.

ಲೇಖಕರು:— ಶ್ರೀ. ಜಿ. ವಿ. ರಾಮಾಚಾರ್ಯ, ಬಿ. ಎ.

ಮನುಷ್ಯನು ಅನಾದಿಯಾಗಿ ವಿಶ್ವದಲ್ಲಿದ್ದರೂ ಕೂಡ ಅದರ ಸುವ್ಯವಸ್ಥೆಗೆ ಹೆಚ್ಚು ಗಮನ ಕೊಟ್ಟಿಲ್ಲ. ಏಕೆಂದರೆ, ಜೀವನದಲ್ಲಿ ಸ್ವಾಭಾವಿಕವಾದ ಪಶುಗುಣಗಳು ಸಾಮಾನ್ಯವಾಗಿ ಜನರನ್ನು ಆವರಿಸಿವೆ. ಸ್ವಾರ್ಥವು ಅತಿ ಹೀನವೆಂದು ಹೇಳಿದರೂ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ, ಕಳೆದ ಶತಮಾನದಲ್ಲಿ ಅದು ಮಹದುಪಕಾರವನ್ನು ಮಾಡಿದೆ. ಸ್ವಾರ್ಥವು ಆರ್ಥಿಕ ಸಂಪತ್ತಿಯನ್ನು ವೃದ್ಧಿಪಡಿಸಿತು. ಆದ್ದರಿಂದ ವಿಜ್ಞಾನ ಪ್ರಸರಣೆಯಾಯಿತು. ಆದರೆ, ಸಮಾಜದ ಸಮಷ್ಟಿ ಸಂಪತ್ತಿಯು ಪ್ರತಿ ವ್ಯಕ್ತಿಯ ಸೌಖ್ಯಕ್ಕೆಂದೆ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಂದು ಕಡೆ ಸಂಪತ್ತಿನ ವೃದ್ಧಿಯೂ ಮತ್ತೊಂದು ಕಡೆ ಅಸಂತುಷ್ಟಿಯೂ ತಲೆದೋರಿದವು.

ಹೇಗೆ ಈ ನಿಜಗುಣವು ಮಾನವನ ಜೀವನವನ್ನು ಬದಲಾಯಿಸಿತೋ, ಹಾಗೆಯೇ ಅದ್ಭುತವಾದ ಕೆಲವು ಭಾವನೆಗಳು ಜೀವನಾದರ್ಶವನ್ನು ಬದಲಾಯಿಸಿವೆ. ಅಂದರೆ, ಭಾವನೆಗಳು ಮನುಜನ ನಿಜಗುಣಗಳನ್ನು ಸಮಾಜದ ಸುಖದ ಹಾದಿಗೆಳೆದು ಒಂದು ತೆರನ ವ್ಯವಸ್ಥೆಯನ್ನು ಕಲ್ಪಿಸಿವೆ. ನೈಜಗುಣಗಳೆಂಬ ಮೋಹಾಶ್ವಕ್ಕೆ ಧ್ಯೇಯಗಳು ಬಿಡಿತದ ಹಗ್ಗ. ಅದರಾವೇಶವನ್ನು ಬದಿಗೊತ್ತುವ ಅಸ್ತ್ರ. ಭಾವನೆಗಳ ಮತ್ತು ಧ್ಯೇಯಗಳ ಭಾಗಕ್ಕೆ ಒಮ್ಮೆ ಸಿಕ್ಕಿದ ಮೇಲೆ ಪ್ರತಿ ಒಬ್ಬ ವ್ಯಕ್ತಿಯೂ ಅದರ ದಾಸಾನುದಾಸನಾಗುವನು. ಸರ್ವಕಾಲದಲ್ಲಿಯೂ ತನ್ನ ಧ್ಯೇಯವನ್ನು ಕಾರ್ಯರಂಗಕ್ಕಿಳಿಸುವ ಪ್ರಯತ್ನವೇ ಅವನ ಹಂಬಲವಾಗುವುದು. ವಾಲ್ಟೇರ್ ರೂಸೋ ಎಂಬ ತಾತ್ವಿಕರು ತಮ್ಮ ಕ್ರಾಂತಿವಾದದ ಅರಿವನ್ನು ಫ್ರಾನ್ಸ ದೇಶದಲ್ಲಿ ಹರಡಿದ ಮೇಲೆ, ಆ ಧ್ಯೇಯದ ಪಾಶಕ್ಕೆ ಬಿದ್ದಿದ್ದ ಆ ದೇಶವು ವಿಶ್ವವನ್ನೇ ತನ್ನ ಧ್ಯೇಯಕ್ಕೆ ಆಹುತಿ ಕೊಡಬೇಕೆಂದು ಪ್ರಯತ್ನಪಡಲಿಲ್ಲವೇ? ಈ ಶತಮಾನದಲ್ಲಿಯೂ ಕೂಡ ರಷ್ಯವು ತನ್ನ ಧ್ಯೇಯವನ್ನು ಪ್ರಪಂಚದಲ್ಲೆಲ್ಲಾ ಹರಡುವುದಕ್ಕೆ ಪ್ರಯತ್ನಪಡುತ್ತಿಲ್ಲವೇ. ಅರಿವಿನ ಪ್ರಸರಣೆಯ ವೇಗವನ್ನು ಇಷ್ಟೆಂದು ಅಳೆಯುವದಕ್ಕೆ ಆಗುವುದಿಲ್ಲ. ಆ ಧ್ಯೇಯದ ಅಂತಃಶಕ್ತಿಯು ಹೆಚ್ಚಿದ ಹಾಗೆಲ್ಲಾ ಅದರ ಪ್ರಸರಣೆಯ ವೇಗವು ಹೆಚ್ಚುತ್ತದೆ. ಹಾಗೆಯೇ ಈಗ ವಿಶ್ವದಲ್ಲಿ ನಲೆದಾಡುತ್ತಿರುವ ಅಸಂತುಷ್ಟಿಗೂ, ಅಜ್ಞಾನಕ್ಕೂ, ಮತ್ತು ಜನಜಾಲದ ದಾರಿದ್ರ್ಯಕ್ಕೂ ಮೂಲಕಾರಣವಾದ ಬಂಡವಾಳ ತತ್ವವನ್ನು ನಿರ್ಮೂಲವಾಡಬೇಕೆಂಬ ಧ್ಯೇಯವು ಹರಡುತ್ತಿದೆ. ಬಂಡವಾಳ ತತ್ವವನ್ನು ನಿರ್ಮೂಲ ಮಾಡಿ, ಅದರ ಸ್ಥಳದಲ್ಲಿ ಸಮಾಜ ಸರ್ವಾಂಗಕ್ಕೂ ಸೌಖ್ಯ ಕೊಡುವ ಸೋಷಿಯಲಿಸಂ ತತ್ವವನ್ನು ಹರಡುವುದು ಈ ಶತಮಾನದ ಸಾಂಸ್ಕೃತಿಕ ವಿಭೂತಿಗಳ ಧ್ಯೇಯವಾಗಿದೆ. **ಈ ಶತಮಾನದ ಹೆಬ್ಬು ಕೂಗೆಂದರೆ, ಮಾನವನ ಸಾಂಸ್ಕೃತಿಕ ವ್ಯಕ್ತಿತ್ವೋದ್ಧಾರ.** ಹಿಂದಿನ ೧೯ನೆಯ ಶತಮಾನದಲ್ಲಿ ಮಾನವನು ತನ್ನ ಜೀವನವನ್ನು ಗುರಿಯಿಲ್ಲದ ಕುರಿಯಂತೆ ಕಳೆದನು. ಏಕೆಂದರೆ ಅವನ ಸಂಸ್ಕಾರದಲ್ಲಿ ಪಶುಸಂಬಂಧವಾದ ನೈಜಗುಣಗಳೇ ಉನ್ನತ ಸ್ಥಾನವನ್ನು ಪಡೆದಿದ್ದವು. ಆದರೆ, ಅವನು ಅದರ ಅಪ್ರಯೋಜನವನ್ನು ಅರಿತು ವ್ಯಕ್ತಿಯ ಸೌಖ್ಯವು ಸಮಷ್ಟಿ ಸಮಾಜ ಸೌಖ್ಯದಿಂದ ಆಗುತ್ತದೆ ಎಂಬುದನ್ನು ಅರಿತಿದ್ದಾನೆ. ಡಾರ್ವಿನ್ನನ "ಸಮರ್ಥರ ಉಳಿಕೆ" (Survival of the fittest) ಯ ತತ್ವವನ್ನು ಪರಿತ್ಯಾಗ ಮಾಡಿ ಉಳಿದವರೆಲ್ಲರೂ ಜೀವನ ಸಾಮರ್ಥ್ಯವನ್ನು ಸಂಪಾದಿಸಬೇಕೆಂಬುದೇ ಅವನ ಧ್ಯೇಯವಾಗಿದೆ. ವ್ಯಕ್ತಿಗಳ ಸಂಚಯಕ್ಕೆ ಸಮಾಜವೆಂಬುದನ್ನು ಮಿಥ್ಯವೆಂದು ತಿಳಿದು, ವ್ಯಕ್ತಿಗಳ ಸಮಷ್ಟಿಜ್ಞಾನಕ್ಕೆ ಸಮಾಜವೆಂದು ಅರಿಯುತ್ತಿದ್ದಾನೆ. ವ್ಯಕ್ತಿ ಜ್ಞಾನವು ಸಮಾಜದಲ್ಲಿ ಹೇಗೆ ಅಡಕವಾಗಿದೆಯೋ ಹಾಗೆಯೇ ಸಮಾಜಜ್ಞಾನವು ವ್ಯಕ್ತಿಯಲ್ಲಿ ಅಡಕವಾಗಿರಬೇಕೆಂದು ತಿಳಿಯುತ್ತಿದ್ದಾನೆ. ವ್ಯಕ್ತಿ-ಸಮಾಜದ ಪರಸ್ಪರ ಸೌಖ್ಯಜ್ಞಾನವೇ ಸೋಷಿಯಲಿಸಂ ಎನ್ನಬಹುದು. ಈ ಧ್ಯೇಯವನ್ನು ಏತಕ್ಕೆ ಅನುಸರಿಸಬೇಕು. ಇದಕ್ಕೆ ಆಧಾರವೇನು ಎಂದು ಕೇಳಬಹುದು.

ಈ ತತ್ವಕ್ಕೆ ಎರಡು ಆಧಾರಗಳಿವೆ. ಒಂದು ಚಾರಿತ್ರಿಕ ಆಧಾರ, ಮತ್ತೊಂದು ಆರ್ಥಿಕ ಶಾಸ್ತ್ರದ ಆಧಾರ. ದೇಶಗಳ ಮತ್ತು ಜನಾಂಗಗಳ ಉನ್ನತಿ ಮತ್ತು ಅವನತಿಗಳಿಗೆ ಪ್ರಕೃತಿಯ ಪರಿಸ್ಥಿತಿಯೇ ಮೂಲಕಾರಣವೆಂದು ಚಾರಿತ್ರಿಕಾಧಾರವು ಸಾರುತ್ತಿದೆ. ಅಂದರೆ ಮಾನವನ ಮನೋವಿಕಾಸವು ಆಯಾ ದೇಶದ ಪ್ರಕೃತಿಸಂಪತ್ತಿಯ ಪರಿಣಾಮವಾಗಿಯೇ ಇರುತ್ತದೆ. ಈ ತತ್ವವನ್ನು ಫೇರಬಾಂಕ್ ಎಂಬ ಜರ್ಮನ ತಾತ್ವಿಕ ವಿದ್ವಾಂಸನು ಸೋಷಿಯಲಿಸಮಿಗೆ ಮುಖ್ಯ ಆಧಾರವೆಂದು ಹೇಳುತ್ತಾನೆ. ಈ ವಿದ್ವಾಂಸನ ಪ್ರಕಾರ ಹಿಂದೂಸ್ಥಾನದಲ್ಲಿ ಏತಕ್ಕೆ ಅದ್ವೈತ ವೇದಾಂತಕಾರರು ಹುಟ್ಟಿದರೆಂದರೆ; ಅದರ ಪ್ರಕೃತಿಯ ಪರಿಸ್ಥಿತಿಯೇ ಕಾರಣವೆಂದು ಹೇಳುತ್ತಾನೆ. ಹಾಗೆಯೇ ಒಂದು ಜನಾಂಗದ ರಾಜಕೀಯ ಸಂಸ್ಥೆಗಳಿಗೂ ಕೂಡ ಪರಿಸ್ಥಿತಿಯೇ ಕಾರಣವೆಂದು ಹೇಳುತ್ತಾನೆ. Plekhenar ಎಂಬ ರಷ್ಯದ ಲೇಖಕನು ಈ ರೀತಿ ಬರೆಯುತ್ತಾನೆ. "The Primary thesis of Materialism is that History is made up of human beings Now if it is made by human beings it most obivously is made by great men among the rest. Our Problem is then to find out by what the activity of these men is determined". ಸಾರಾಂಶವೇನೆಂದರೆ, ಚರಿತ್ರೆಯು ಮಾನವನಿಂದ ನಿರ್ಮಾಣವಾಗಿದೆ. ಮಾನವರಲ್ಲಿಯೂ ಪ್ರತಿಭಾಸಂಪನ್ನರಿಂದ ನಿರ್ಮಾಣವಾಗಿದೆಯೆಂದು ಹೇಳಬೇಕು. ಆದರೆ ಈ ಪ್ರತಿಭಾಸಂಪನ್ನರ ಕಾರ್ಯಕಲಾಪಗಳು ಯಾವುದರಿಂದ ನಿರ್ಧಾರವಾಗುತ್ತವೆ ಎಂಬುದೆ ನಮ್ಮ ಸಮಸ್ಯೆ" ಈ ಸಮಸ್ಯೆಗೆ ಉತ್ತರ ಕೊಡುವಾಗ ಪ್ರಕೃತಿಯ ಪರಿಸ್ಥಿತಿಯಿಂದ ಅವರ ಧ್ಯೇಯಗಳು ನಿರ್ಧಾರವಾಗುತ್ತದೆಂದು ಹೇಳುತ್ತಾನೆ: ವಾಸ್ತವಿಕ ಪ್ರಪಂಚದ ಕಾರ್ಯಗಳಿಗೆ ಧ್ಯೇಯವೇ ಮೂಲಾಧಾರ. ಅಂದರೆ ಸೋಷಿಯಲಿಸಂ ತತ್ವಕ್ಕೆ ನೈಜವಾದ ಪ್ರಕೃತಿಯ ಪರಿಸ್ಥಿತಿಯೇ ಒಂದು ಆಧಾರವೆಂದು ಅರಿಯಬೇಕು. ಆರ್ಥಿಕ ಶಾಸ್ತ್ರದ ಆಧಾರವೂ ಕೂಡ ಈ ಆಧಾರವನ್ನೇ ಅನುಸರಿಸಿದೆ. ಪರಿಸ್ಥಿತಿ ಪ್ರಭಾವದಿಂದುಂಟಾದ ಅನುಕೂಲತೆಗಳನ್ನು ಕೆಲವು ವ್ಯಕ್ತಿಗಳು ತಮಗಿದ್ದ ಅಧಿಕ ಶಕ್ತಿಯಿಂದಲೋ ಅಥವಾ ಜನಸಾಮಾನ್ಯದ ಬಿಧಾಸೀನ್ಯದಿಂದಲೋ ಸ್ವಾರ್ಥಾರ್ಪಣ ಮಾಡಿಬಿಟ್ಟರು. ಈ ಕೇವಲ ಸ್ವಲ್ಪ ಜನಸೌಖ್ಯಕ್ಕೆ ಬಂಡವಾಳವು ಅಣಿಮಾಡಿತು. ಆದ್ದರಿಂದ ಬಂಡವಾಳಗಾರರನ್ನು ವಿಶ್ವದಿಂದ ನಿರ್ಮೂಲಮಾಡುವುದೇ ಸೋಷಿಯಲಿಸಂನ ಒಂದು ಮುಖ್ಯ ಅಂಗ. ಆದರೆ, ಈ ತತ್ವವು ಕೇವಲ ವಿನಾಶದ ಧ್ಯೇಯವನ್ನು ಅನುಸರಿಸುತ್ತದೆಂದು ಭಾಸಮಾಡಿಕೊಳ್ಳಬಾರದು, ಸೃಷ್ಟಿಯು ಹಿಂದೆ ವಿನಾಶವಿದ್ದೆ ಇರಬೇಕು. ವಿನಾಶದ ಭವಿಷ್ಯತ್ತಿನಲ್ಲಿ ಸೃಷ್ಟಿಯು ಇದ್ದೇ ಇರುತ್ತದೆ. ಉದಾಹರಣೆಗಾಗಿ ರಷ್ಯ ಮತ್ತು ಜರ್ಮನಿ ದೇಶಗಳನ್ನು ನೋಡಿ. ಜರ್ಮನಿಯು ಮಹಾಯುದ್ಧವಾದ ಮೇಲೆ ನಾಶದ ಪರಮಾವಧಿಯನ್ನು ಮುಟ್ಟಿದ್ದರಲ್ಲಿತ್ತು. ಆದರೆ, ಆ ದೇಶದ ರಾಜನೀತಿಜ್ಞರ ನಿಪುಣತೆಯಿಂದಲೂ ಮತ್ತು ಪ್ರಜಾಸಹಕಾರದಿಂದಲೂ ಹತ್ತು ವರ್ಷಗಳಲ್ಲಿ ಪತಿತ ರಾಷ್ಟ್ರವು ಸರ್ವಾಂಗ ಚೈತನ್ಯದಿಂದ ತುಂಬಿತು. ಆ ದೇಶದ ವ್ಯಾಪಾರವು ಹೆಚ್ಚಿತು. ಜನರು ಸಂತುಷ್ಟರಾಗುತ್ತಾ ಬಂದರು. ಆ ದೇಶದ ಆರ್ಥಿಕ ಪರಿಸ್ಥಿತಿಯು ಇತರ ದೇಶಗಳಲ್ಲಿ ವಿಶ್ವಾಸದ ಬೀಜಗಳನ್ನು ಹೂಡಿತು. ಮಹಾಯುದ್ಧದ ಅನಾಹುತಗಳನ್ನು ಮರೆಯುತ್ತಾ ಬಂದರು.

ರಷ್ಯದಲ್ಲಿಯೂ ಕೂಡ ಇದೇ ರೀತಿಯ ಪರಿವರ್ತನವಾಯಿತು. ಆದ್ದರಿಂದ ಬಂಡವಾಳದ ದಬ್ಬಾಳಿಕೆಯನ್ನು ನಾಶಮಾಡಬೇಕೆಂದರೆ ಭಯಪಡಬಾರದು. ಮನುಷ್ಯ ಜೀವನಕ್ಕೆ ಯಾವ ಯಾವ ಪದಾರ್ಥಗಳು ಅತ್ಯಾವಶ್ಯಕವೋ ಅಂತಹ ಕಾರ್ಖಾನೆಗಳನ್ನು ಮತ್ತು ಅವುಗಳನ್ನು ಸೃಷ್ಟಿ ಮಾಡತಕ್ಕ ಸಲಕರಣಗಳನ್ನೂ, ಸಾರ್ವಜನಿಕ ಸಂಸ್ಥೆಗಳ ಅಧೀನದಲ್ಲಿಡಬೇಕು. ಸಲಕರಣಗಳನ್ನು ಅಧೀನದಲ್ಲಿಟ್ಟುಕೊಂಡರೆ ಸರಕುಗಳನ್ನು ಅವಶ್ಯಕತೆಯ ಮೇರೆಯನ್ನು ಮೀರಿ ಸೃಷ್ಟಿಸುವುದಕ್ಕೆ ಅಸಾಧ್ಯವಾಗುವುದು. ಸ್ಪರ್ಧೆಯ ಜೀವನವು ಹೋಗಿ, ಸಹಕಾರ ಜೀವನವು ಉದ್ಭವಿಸುವುದು. ಬರೀ ಸ್ವಾರ್ಥ ಸಂಪತ್ತಿಗೆ ಮರ್ಯಾದೆ ತಪ್ಪಿ, ಯೋಗ್ಯತೆಗೆ ಮರ್ಯಾದೆ ದೊರಕುವುದು. ಪರದೇಶದ ಸಾಂಸ್ಕೃತಿಕ ಮತ್ತು ಆರ್ಥಿಕ ದಾಸ್ಯವು ಅಳಿಯುವುದು. ಆತ್ಮಗೌರವವು ಹೆಚ್ಚುವುದು. ದೇಶವು ಸುಭಿಕ್ಷವಾಗುವುದು; ಮತ್ತು ಮಾನ್ಯವಾಗುವುದು.

ಆದರೆ ಈ ಸೌಖ್ಯ ದೊರೆಯಬೇಕಾದರೆ, ಸಾರ್ವಜನಿಕ ಸಂಸ್ಥೆಗಳು ಸಾಂಗವಾಗಿ ಕಾರ್ಯನಿರ್ವಾಹ ಮಾಡಬೇಕಲ್ಲವೆ? ಆ ಸಂಸ್ಥೆಗೆ ಸದಸ್ಯರು ಉಚ್ಚ ಧ್ಯೇಯಗಳಿಂದ ಸ್ಫೂರ್ತಿವಂತರಾಗಬೇಕಲ್ಲವೆ. ಈಗಿರುವ ಸಾರ್ವಜನಿಕ ಸಂಸ್ಥೆಗಳಲ್ಲಿ ಈ ಯಾವ ಗುಣಗಳೂ ಕಾಣಬರುವುದಿಲ್ಲ. ಮುಂದೆ ಆ ಸದ್ಗುಣಗಳು ಕಂಡುಬರುತ್ತವೆ ಎಂಬ ಆಶೆ ಎಲ್ಲಿದೆ ಎಂದು ಪ್ರಶ್ನೆಮಾಡಬಹುದು. ಸಾರ್ವಜನಿಕ ಸಂಸ್ಥೆಗಳು ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದೇನೋ ಸತ್ಯ. ಆದರೆ ಅದಕ್ಕೆ ಕಾರಣವೇನೆಂದು ಚರ್ಚೆ ಮಾಡಿದರೆ ಕಾರ್ಯ ಅಸಮರ್ಪಕತೆಯು, ಸಂಸ್ಥೆಗಳಲ್ಲಿರುವ ಆಂತರ್ಯ ಕುಂದುಗಳಿಂದಲ್ಲ, ಆದರೆ, ಬಂಡವಾಳ ತತ್ವ ಪ್ರಚಾರದಿಂದಾದ ಸ್ವಾರ್ಥ ಶಕ್ತಿಯ ವರ್ಚಸ್ಸು ಆ ಸಂಸ್ಥೆಗಳ ಮೇಲೆ ಬಿದ್ದಿದೆ. ಸಂಸ್ಥೆಗಳು ವ್ಯಕ್ತಿಗಳ ಮನೋಭಾವನೆಗಳನ್ನು ಕಾರ್ಯರಂಗಕ್ಕಿಳಿಸುವುದಕ್ಕೆ ಒಂದು ಹಾದಿಯೇ ಹೊರತು ವ್ಯಕ್ತಿಗಳ ಅಂತರ್ಯವನ್ನು ಶುದ್ಧಿಮಾಡಲಾರದು. ಉಚ್ಚ ಸಂಸ್ಥೆಗಳಿಗೆ ನಾವು ನಮ್ಮಲ್ಲಿ ಬೆಳೆಯುವುದಕ್ಕೆ ಅವಕಾಶವಿತ್ತು ಅವುಗಳಲ್ಲಿ ಕಾರ್ಯಭಾಗ ನಡೆಸುವವರನ್ನು ಅಂತಹ ಉಚ್ಚಧ್ಯೇಯಗಳಿಂದ ಸ್ಫೂರ್ತಿವಂತರನ್ನಾಗಿ ಮಾಡದಿದ್ದರೆ ಅದು ಸಂಸ್ಥೆಗಳ ತಪ್ಪಲ್ಲ, ವ್ಯಕ್ತಿಗಳ ತಪ್ಪು. ಪ್ರಜಾಪ್ರಭುತ್ವದಲ್ಲಿ ಕುಂದಿದೆಯೆಂದು ಹೇಳುವವರು, ಅದಕ್ಕೆ ಸಮಾನವಾದ ಇನ್ನೊಂದು ವ್ಯವಸ್ಥೆಯನ್ನು ಸೂಚಿಸಬೇಕು. ಹದಿನೇಳು ಶತಮಾನಗಳೂ ಚಕ್ರಾಧಿಪತ್ಯಗಳಿಗೂ ಮತ್ತು ರಾಜ ಪ್ರಭುತ್ವಗಳಿಗೂ ಅವಕಾಶವಿತ್ತದ್ದಕ್ಕೆ ಮಾನವ ವ್ಯಕ್ತಿತ್ವವನ್ನು ಅಶನವಸನಗಳಿಲ್ಲದ ಪಾಮರನನ್ನಾಗಿ ಮಾಡಿತು. ಆಧುನಿಕ/ಪ್ರಜಾಪ್ರಭುತ್ವದ ತತ್ವವು ಹುಟ್ಟಿ ಇನ್ನೂ ಎರಡು ಶತಮಾನಗಳಾಗಿಲ್ಲ. ಅದು ಸಮರ್ಪಕವಾಗಿ ಕಾರ್ಯಮಾಡುವುದಕ್ಕೆ ತಕ್ಕ ಪರಿಸ್ಥಿತಿ ಮತ್ತು ಸಲಕರಣಗಳೂ ಉತ್ಪನ್ನವಾಗಿಲ್ಲ. ಆದ್ದರಿಂದ ಆದರ ಪ್ರಯೋಜಕ, ಅಪ್ರಯೋಜಕ ವಿಷಯಗಳಲ್ಲಿ ಯಾರೂ ಅಭಿಪ್ರಾಯ ಕೊಡಲಾರರು, ಆದರೂ ಪ್ರಜಾಪ್ರಭುತ್ವವು ರಾಜನೀತಿಜ್ಞರು ಕಲ್ಪಿಸಿರುವ ಸಂಸ್ಥೆಗಳಲ್ಲಿ ಅತ್ಯುತ್ತಮವಾದದ್ದು. ಪ್ರಭುತ್ವ ಸಂಸ್ಥೆಗಳಿಗೆ ಪ್ರಜಾ ಪ್ರಭುತ್ವವು ಶಿರೋಮಣಿಯಂತಿದೆ. ಪ್ರಜಾ ಪ್ರಭುತ್ವವು ಸಮಾಜ ಸಹಕಾರ ಜೀವನದ ಹೆಬ್ಬಾಗಿಲು.

ಆದುದರಿಂದ ಸೋಷಿಯಲಿಸಂ ತತ್ವವನ್ನು ಕಾರ್ಯರಂಗಕ್ಕಿಳಿಸುವುದು ಅಸಾಧ್ಯವೆಂದು ಹೇಳಲಾಗದು. ಅಸಾಧ್ಯವೆಂದು ಉದ್ಗಾರ ತೆಗೆದು ಪರಿತ್ಯಾಗ ಮಾಡಿದರೆ, ಮಾನವ ಸಂಸ್ಕೃತಿ ಪ್ರಸರಣೆಗೆ ತಿಲೋದಕ ಬಿಟ್ಟಂತಾಗುತ್ತದೆ. ನಮ್ಮ ದೇಶದ ದಾರಿದ್ರ್ಯದ ಮತ್ತು ಅಸಂತುಷ್ಟಿಯ ರೋಗಕ್ಕೆ ಸೋಷಿಯಲಿಸಂ ತತ್ವವೇ ಪರಮೌಷಧ.

ಸೋಷಿಯಲಿಸಂ ತತ್ವವನ್ನು ಅನುಸರಿಸುವ ಪ್ರಭುತ್ವದಲ್ಲಿ ಮತಗಳ ಸ್ಥಾನವೇನು, ಮಠಾಧಿಪತಿಗಳ ಗತಿಯೇನು ಎಂಬುದನ್ನು ಯೋಚಿಸುವ. ಈ ತತ್ವವು ನೈಜ ಧರ್ಮಕ್ಕೂ ಮತ್ತು ಮತಗಳಿಗೂ ವಿರುದ್ಧವೆಂದು ತಿಳಿಯುವುದು ಶುದ್ಧ ಅಜ್ಞಾನ. ಈ ತತ್ವವು ಮತಗಳ ತತ್ವಗಳನ್ನು ವಿರೋಧಿಸುವುದಿಲ್ಲ. ಅನೇಕ ಮತಗಳ ಆಧಾರವಾಗಿರುವ ಧರ್ಮಗುಣಗಳನ್ನು ಅನುಮೋದಿಸುತ್ತದೆ. ಆದರೆ ಮತಗಳ ಹೆಸರಿನಲ್ಲಿ ಸಂಸ್ಥೆಗಳನ್ನು ಕಟ್ಟಿ ಧನಾರ್ಜನೆ ಮಾಡುವ ಪ್ರಯತ್ನಗಳಿಗೆ ಸ್ಥಳ ದೊರೆಯಲಾರದು. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ, ಪ್ರಜೆಗಳೇ ಅರ್ಥಾತ್ ಅವರ ಪ್ರತಿನಿಧಿಗಳೇ ಸರ್ವಾಧಿಕಾರಿಗಳು. ಮಠಾಧಿಪತಿಗಳು ಪ್ರಜಾಧೀನವಾಗುವರು. ಹಾಗೂ, ಮಠಾಧಿಪತಿಗಳು ಮತಾಧಿಪತಿಗಳೆಂದು ಹೇಳಲಿಕ್ಕಾಗುವುದಿಲ್ಲ. **ಮಠಗಳು ಅಳಿದರೂ ಮತಗಳು ಅಳಿಯುವುದಿಲ್ಲ.** ಆದುದರಿಂದ ಸೋಷಿಯಲಿಸಂ ತತ್ವವನ್ನು ಅನುಸರಿಸುವ ಪ್ರಭುತ್ವದಲ್ಲಿ ದಬ್ಬಾಳಿಕೆಗೆ ಅವಕಾಶ ಕೊಡುವ ಯಾವ ಸಂಸ್ಥೆಗೂ ಸ್ಥಾನವಿಲ್ಲ. ಆದರೆ ಧರ್ಮ ಪ್ರಚಾರ ಮಾಡುವುದಕ್ಕೆ ಅಡ್ಡಿ ಯಾವುದೂ ಕಂಡುಬರುವುದಿಲ್ಲ.

# ಪಾನನಿಷೇಧದಿಂದ ಕೋಟ್ಯಾಂತರದ ಆರ್ಥಿಕ ಕ್ಷತಿ!!

## ಪ್ರಾಂತಿಕ ಸರಕಾರಗಳು ಇದನ್ನು ಹೇಗೆ ತುಂಬಿಸುವವು?

ಮದ್ರಾಸು ಬೊಂಬಾಯಿ ಮೊದಲಾದ ಕಾಂಗ್ರೆಸಿಗೆ ಬಹುಮತವಿರುವ ನಮ್ಮ ದೇಶದ ಏಳು ಪ್ರಾಂತ್ಯಗಳಲ್ಲಿ ಮುಂದೆ ದೇಶಾಭಿವೃದ್ಧಿಯ ಕಾರ್ಯಗಳಲ್ಲಿ ಹೆಚ್ಚೆಚ್ಚು ಹಣವನ್ನು ಖರ್ಚು ಮಾಡಬೇಕಾಗುವದು. ಕಾಂಗ್ರೆಸ್ ಮಂತ್ರಿ ಮಂಡಲಗಳು ಜನಮತದ ಒಲವು ಪ್ರೀತಿಗಳನ್ನೂ ಸಹಾನುಭೂತಿ ಬೆಂಬಲಗಳನ್ನೂ ಪಡೆಯಬೇಕಾದರೆ ಅವು ಹೀಗೆ ಮಾಡಬೇಕಾದ್ದು ಅತ್ಯಗತ್ಯವಾಗಿದೆ. ಗವರ್ನಮೆಂಟ್ ಆಫ್ ಇಂಡಿಯಾ ಎಕ್ಟಿಗನುಗುಣವಾಗಿ ಈ ಮಂತ್ರಿಮಂಡಲಗಳು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಸರ್ವತಂತ್ರಸ್ವತಂತ್ರವಾಗಿರುವದಿಲ್ಲ. ಸಿವಿಲ್ ಸರ್ವಿಸುಗಳು ಮೊದಲಾದ ವಿಷಯಗಳು ಅವುಗಳ ಅಧಿಕಾರದಿಂದ ಹೊರಗಾಗಿರುವವು. ಆದ್ದರಿಂದ ಈ ಮಂತ್ರಿಮಂಡಲಗಳಿಗೆ ಯಾವ ರಾಷ್ಟ್ರಹಿತ ಕಾರ್ಯವನ್ನು ಮಾಡಬೇಕಾದರೂ ಹಣದ ಕೊರತೆಯ ಪ್ರಶ್ನೆಯು ಮುಂದೆ ಬರುವದು. ಆದರಂತು ಸಾಧ್ಯವಿದ್ದಷ್ಟು ಪ್ರಯತ್ನಮಾಡಿ ಜನಕ್ಷೇಮವನ್ನುಂಟು ಮಾಡುವ ಯತ್ನ ಮಾಡುವೆವೆಂದು ಇವು ಪ್ರತಿಜ್ಞೆಗೈದುಕೊಂಡಿರುವದರಿಂದ, ಏನಾದರೂ ಮಾಡಲೇಬೇಕು. ಇತರ ಕಡೆಯ ಮಂತ್ರಿಮಂಡಲಗಳಂತೆ ಜನಮತವನ್ನು ಅಲಕ್ಷಿಸಿ ಕೇವಲ ಅಧಿಕಾರಿಗಳ ಸಹಾಯ ಸಹಕಾರಗಳಿಂದ ಅಧಿಕಾರರೂಢವಾಗಿರುವದು ಸಾಧ್ಯವಲ್ಲ.

ಅದಕ್ಕೋಸ್ಕರ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಇನ್ನು ಮೂರು ವರ್ಷಗಳಲ್ಲಿ ಈ ಏಳು ಪ್ರಾಂತ್ಯಗಳಲ್ಲಿ ಸಂಪೂರ್ಣವಾಗಿ ಮದ್ಯಪಾನ ನಿಷೇಧ ಮಾಡಬೇಕೆಂದು ಹೇಳಿದೆ. ಮದ್ಯಪಾನನಿಷೇಧಮಾಡುವದರೊಂದಿಗೆ ಶಿಕ್ಷಣ ಪ್ರಚಾರ, ಸ್ವಾಸ್ಥ್ಯ ರಕ್ಷಣೆ ಮೊದಲಾದ ಇತರ ಕಾರ್ಯಗಳೂ ನಡೆಯಬೇಕಾಗಿರುವವು. ಇವಕ್ಕೆಲ್ಲಾ ತುಂಬ ಹಣಬೇಕು. ಪ್ರಾಂತೀಯ ಸರಕಾರಗಳ ಉತ್ಪತ್ತಿಯ ಮಾರ್ಗಗಳು ಕಡಿಮೆ ಆದರೆ ಖರ್ಚಿನ ಮಾರ್ಗಗಳು ಹೆಚ್ಚಾಗಿರುವವು. ನೆಲಕಂದಾಯವನ್ನು ಬಿಟ್ಟರೆ, ಮದ್ಯಪಾನದಿಂದ ಸರಕಾರಕ್ಕೆ ದೊರೆಯುವ ಉತ್ಪತ್ತಿಯೇ ದೊಡ್ಡದಾಗಿರುವದು. ಒಟ್ಟು ಕರಕಂದಾಯಗಳ ಒಂದು ಚತುರ್ಥಾಂಶವು ಅಬಕಾರಿ ಇಲಾಖೆಯಿಂದ ದೊರೆಯುವದು. ಆದ್ದರಿಂದ ಮದ್ಯನಿಷೇಧ ಮಾಡಿಬಿಟ್ಟರೆ ಅಬಕಾರಿ ಇಲಾಖೆಯ ಲಾಭವು ನಿಂತುಹೋಗುವದು.

ಮದ್ರಾಸು ಸರಕಾರವು ಮೂರು ವರ್ಷಗಳೊಳಗಾಗಿ ಇಡೀ ಪ್ರಾಂತ್ಯದಲ್ಲಿ ಮದ್ಯನಿಷೇಧ ಮಾಡುವದೆಂದು ಕಾನೂನು ಮಾಡಿದೆ. ಸೇಲಂ ಜಿಲ್ಲೆಯಲ್ಲಿ ಅದು ಜಾರಿಗೆ ಬಂದೂ ಇರುವದು. ಆದರೆ ಆ ಒಂದು ಜಿಲ್ಲೆಯಿಂದ— ಮದ್ಯನಿಷೇಧವಾದದ ಪರಿಣಾಮವಾಗಿ— ಹನ್ನೊಂದು ಲಕ್ಷ ರೂಪಾಯಿಗಳು ಪ್ರತಿವರ್ಷ ಸರಕಾರಕ್ಕೆ ಸಿಕ್ಕುವ ಆದಾಯ ಸಿಕ್ಕದೆ ಹೋಗುವದು. ಮದ್ರಾಸು ಸರಕಾರದ ಒಟ್ಟು ವಾರ್ಷಿಕ ಆದಾಯವು 17 ಕೋಟಿ ರೂಪಾಯಿ. ಅದರಿಂದ 7 ಕೋಟಿ ರೂಪಾಯಿ ನೆಲಕಂದಾಯದಿಂದಲೂ, 4½ ಕೋಟಿ ರೂಪಾಯಿ ಅಬಕಾರಿ ಇಲಾಖೆಯಿಂದಲೂ, ಉಳಿದ ಹಣವು ಇತರ ಹಲವು ತೆರಗಳಿಂದಲೂ ಸಿಕ್ಕುವದು. ಅಬಕಾರಿಯಿಂದ ಸಿಕ್ಕುವ ನಾಲ್ಕು ಕಾಲು ಕೋಟಿ ರೂಪಾಯಿಗಳಲ್ಲಿ ಎರಡುವರೆಕೋಟಿ ರೂಪಾಯಿ ಶಿಕ್ಷಣಕ್ಕಾಗಿಯೂ ಒಂದುವರೆ ಕೋಟಿ ರೂಪಾಯಿ ಸ್ವಾಸ್ಥ್ಯರಕ್ಷಣೆಗಾಗಿಯೂ ಖರ್ಚಾಗುತ್ತದೆ. ಮದ್ರಾಸು ಪ್ರಾಂತ್ಯದಲ್ಲಿ ಮದ್ಯ ನಿಷೇಧವನ್ನು ಸಾರ್ವತ್ರಿಕವಾಗಿ ಮಾಡಿಬಿಟ್ಟರೆ ಶಿಕ್ಷಣ, ಸ್ವಾಸ್ಥ್ಯ ರಕ್ಷಣೆ ಮೊದಲಾದ ಉಪಯುಕ್ತ ಕಾರ್ಯಗಳಿಗೆ ಹಣದೊರೆಯದೆ ಹೋಗುವದು. ಆದರೆ ಮದ್ಯನಿಷೇಧವು ಆಗಲೇಬೇಕು. ಶಿಕ್ಷಣ, ಸ್ವಾಸ್ಥ್ಯರಕ್ಷಣೆ ಮೊದಲಾದ ಇತರ ಕೆಲಸಗಳೂ ಆಗಬೇಕು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡುವದಾದರೆ ಸರಕಾರಕ್ಕೆ [illegible] ಕೋಟಿ ರೂಪಾಯಿಗಳು ಬೇಕಾಗುವದು. ಸ್ವಾಸ್ಥ್ಯ ರಕ್ಷಣೆ ಗ್ರಾಮಸುಧಾರಣೆ ಮೊದಲಾದ ಕಾರ್ಯಗಳಿಗೂ ಕೋಟಿಗಟ್ಟಲೆ ಹಣಬೇಕಾಗುವದು. ಹೀಗೆ ಇನ್ನು ಎರಡು ಮೂರು ವರ್ಷಗಳಲ್ಲಿ ಮದ್ರಾಸು ಸರಕಾರಕ್ಕೆ ಕೋಟ್ಯಂತರ ರೂಪಾಯಿಗಳ ಆರ್ಥಿಕ ಕ್ಷತಿ ಉಂಟಾಗುವದು. ಮದ್ಯನಿಷೇಧದಿಂದುಂಟಾದ ನಾಲ್ಕೈದು ಕೋಟಿ ರೂಪಾಯಿಗಳ ನಷ್ಟವನ್ನು ತುಂಬಿಸಬೇಕಾದ್ದು ಮಾತ್ರವಲ್ಲದೆ ಶಿಕ್ಷಣ ಪ್ರಚಾರ, ಸ್ವಾಸ್ಥ್ಯ ರಕ್ಷಣೆ ಮೊದಲಾದ ಇತರ ಕಾರ್ಯಗಳಿಗಾಗಿ ಮತ್ತೆ ಏಳೆಂಟು ಕೋಟಿ ರೂಪಾಯಿ ಗಳನ್ನು ಸಂಪಾದಿಸುವ ಮಾರ್ಗವನ್ನು ಹುಡುಕಬೇಕಾಗಿರುವದು.

ಮದ್ರಾಸು ಮಂತ್ರಿಮಂಡಲದ ಮುಂದೆ ಮಾತ್ರ ಈ ಆರ್ಥಿಕ ಸಮಸ್ಯೆಯು ಇದೆ ಎಂದಲ್ಲ. ಎಲ್ಲ ಪ್ರಾಂತ್ಯಗಳಲ್ಲಿಯೂ ಇದೇ ವಿಷಮ ಪರಿಸ್ಥಿತಿಯಿರುವದು. ಇದರೊಟ್ಟಿಗೆ ರೈತರ ಸ್ಥಿತಿಯು ಕೂಡ ಚಿಂತಾಜನಕವಾಗಿರುವದು. ಭೂಕಂದಾಯವನ್ನು ಕಾಲಾಂತರದಾದರೂ ಇಳಿಸದ ಉಪಾಯವಿಲ್ಲ. ರೈತರೇ ಕಾಂಗ್ರೆಸಿನ ಬೆನ್ನೆಲುಬು. ರೈತರಿದ್ದರೆ ಕಾಂಗ್ರೆಸಿದೆ. ಅದ್ದರಿಂದ ರೈತರ ಹಿತಕ್ಕಾಗಿ [illegible], ಅವರ ಕಷ್ಟ ದಾರಿದ್ರ್ಯಗಳನ್ನು ಕಡಿಮೆಮಾಡುವದಕ್ಕಾದರೂ ಕಾಂಗ್ರೆಸು ಮಂತ್ರಿಮಂಡಲಗಳು ಪ್ರಯತ್ನಿಸಬೇಕು. ಇದಕ್ಕೆಲ್ಲಾ ಹಣವು ಎಲ್ಲಿಂದ ಬರುವುದೆಂಬದೊಂದು ಪ್ರಶ್ನೆಯನ್ನು ಕಾಂಗ್ರೆಸ್ ಮಂತ್ರಿಮಂಡಲಗಳು ತೃಪ್ತಿಕರವಾಗಿ ಉತ್ತರಿಸಿದರೆ ಸಾಕು, ಭಾರತೀಯ ಇತಿಹಾಸದಲ್ಲಿ ಅವುಗಳ ಕಾರ್ಯಕಲಾಪಗಳು ಸ್ವರ್ಣಾಕ್ಷರಗಳಿಂದ ಅಂಕಿತವಾಗುವವು.

ಪ್ರಾಂತೀಯ ಸರಕಾರಗಳು ಹೆಚ್ಚೆಚ್ಚು ಸಾಲವನ್ನು ತೆಗೆದುಕೊಳ್ಳಲಾರವು. ಅವುಗಳ ತಲೆಯ ಮೇಲೆ ಹಿಂದಿನವರು ಸಾಕಷ್ಟು ಸಾಲದ ಹೊರೆಯನ್ನು ಇಟ್ಟೇ ಹೋಗಿದ್ದಾರೆ. ಸಿವಿಲ್ ಸರ್ವಿಸುಗಳ ಸಂಬಳವನ್ನು ಕಡಿಮೆಗೊಳಿಸಲಿಕ್ಕೆ ಅವಕಾಶವಿದೆ, ಆದರೆ ಮಂತ್ರಿಮಂಡಲಗಳು ಈ ವಿಷಯದಲ್ಲಿ ತಾವಾಗಿ ಸ್ವತಂತ್ರಿಸಿ ಏನನ್ನಾದರೂ ಮಾಡಲಿಕ್ಕೆ ಅಧಿಕಾರವುಳ್ಳವುಗಳಾಗಿರುವದಿಲ್ಲ. ಸಿವಿಲ್ ಸರ್ವಿಸುಗಳು ಕಾನೂನು ಮೂಲಕ ಸುರಕ್ಷಿತವಾಗಿರುವವು. ಮತ್ತೆ ಸೈನ್ಯದ ಖರ್ಚನ್ನು ತಗ್ಗಿಸಿ ಅದರ ಒಂದಂಶವು ಪ್ರಾಂತೀಯ ಸರಕಾರಗಳಿಗೆ ದೊರೆಯುವಂತೆ ಮಾಡಿದರಾಗಬಹುದು, ಆದರೆ ಇಂಡಿಯಾ ಸರಕಾರ ಮತ್ತು ಇಂಗ್ಲೆಂಡಿನ ಪಾರ್ಲಿಮೆಂಟು— ಇವುಗಳ ಪ್ರಕೃತದ ಮನೋಭಾವವನ್ನು ನೋಡಿದಾಗ ಅದೂ ಅಸಂಭವವೆಂದು ಕಾಣುತ್ತದೆ. ಇಷ್ಟಿದ್ದೂ ಕಾಂಗ್ರೆಸ್ ಮಂತ್ರಿಮಂಡಲಗಳು ಜನತಾರೂಪೀ ಜನಾರ್ದನನ ಸೇವೆಯಲ್ಲಿ ತೊಡಗಿವೆ. ಅವು ಜನಹಿತಕ್ಕಾಗಿ ಯಾವದಾದರೊಂದು ಸಾಧ್ಯ ಉಪಾಯದಿಂದ ಮದ್ಯನಿಷೇಧ, ಶಿಕ್ಷಣ ಪ್ರಚಾರ, ಸ್ವಾಸ್ಥ್ಯರಕ್ಷಣೆಯಂಥ ಕಾರ್ಯಗಳನ್ನು ಸಾಧಿಸಲೇಬೇಕು. ಅದು ಮಾತ್ರ ಹೇಗೆ ಸಾಧ್ಯವಾಗುವದೊ? ನೋಡೋಣ.

ಕೆಲವು ಅರ್ಥಶಾಸ್ತ್ರಿಗಳು ಈ ವಿಷಯ ಚೆನ್ನಾಗಿ ಪರಾಮರ್ಶೆ ಮಾಡಿ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ, ಉಪ್ಪು, ಬೆಂಕಿಪೆಟ್ಟಿಗೆ, ಸಿಗರೇಟು, ದೇವವಿಮೆ ಮೊದಲಾದ ಕೆಲವು ವ್ಯವಸಾಯಗಳನ್ನು ಪ್ರಾಂತೀಯ ಸರಕಾರಗಳು ತಮ್ಮ ಕೈಗೆ ತಗೆದುಕೊಳ್ಳಬೇಕು. ಈ ವ್ಯವಸಾಯಗಳಲ್ಲಿ ಖರ್ಚು ಕಡಿಮೆ, ಆದರೆ ಲಾಭ ಹೆಚ್ಚು. ಅವುಗಳ ರಾಷ್ಟ್ರೀಕರಣದಿಂದ ಪ್ರಜಾವರ್ಗಕ್ಕೆ ಪ್ರಯೋಜನವೂ ಈಗಿನಕ್ಕಿಂತ ಬಹಳ ಹೆಚ್ಚಾಗುವದು. ಹಾಗೆಯೇ ಭೋಗವಿಲಾಸದ ಸಾಮಗ್ರಿಗಳ ಮಾರಾಟದ ಮೇಲೆ ಕರಹಾಕುವ ಅಧಿಕಾರವೂ, ವ್ಯಕ್ತಿಕರಗಳ ಅಧಿಕಾರವೂ ಪ್ರಾಂತೀಯ ಸರಕಾರಗಳಿಗಿದೆ. ಆ ಅಧಿಕಾರವನ್ನು ಸರಕಾರಗಳು ಯುಕ್ತರೀತಿ ಉಪಯೋಗಿಸಿಕೊಳ್ಳಬೇಕು. ಯಾವ ವಸ್ತುಗಳ ಉತ್ಪತ್ತಿಯ ಮೇಲೆ ಇಂಡಿಯಾ ಸರಕಾರವು ಕರಹಾಕುತ್ತದೋ, ಆ ವಸ್ತುಗಳ ಮಾರಾಟದ ಮೇಲೆ ಕರಹಾಕುವ ಅಧಿಕಾರವು ಪ್ರಾಂತೀಯ ಸರಕಾರಗಳಿಗೆ ಇರಲಾಗದೆಂದು ಇಂಡಿಯಾ ಸರಕಾರವು ಸಾಧಿಸಬಹುದು. ಆದರೆ ಅದನ್ನು ವಿರೋಧಿಸುವ ಶಕ್ತಿಯೆ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಇರುವದಾದರೆ ಇಂಡಿಯಾ ಸರಕಾರವು ಕೂಡ ಸುಮ್ಮನಿರಬೇಕಾಗುವದು.

ಫ್ರಾನ್ಸಿನ ಸರಕಾರವು ಸಿಗರೇಟು ವ್ಯವಸಾಯವನ್ನು ತನ್ನ ಕೈಗೆ ತೆಗೆದುಕೊಂಡಿದೆ. ಜಪಾನಿನಲ್ಲಿ ಕೂಡ ಸಿಗರೇಟು ವ್ಯವಸಾಯವು ಸರಕಾರದ ಕೈಯ್ಯಲ್ಲಿದೆ. ಹೀಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇರೆ ಬೇರೆ ವ್ಯವಸಾಯಗಳನ್ನು ಸರಕಾರಗಳು ತಮ್ಮ ಕೈಗೆ ತೆಗೆದುಕೊಂಡು ಹಣ ಸಂಪಾದಿಸುತ್ತಿರುವವು. ಪ್ರಾಂತೀಯ ಸರಕಾರಗಳೂ ಹಾಗೆಯೇ ಮಾಡಬಾರದು [illegible] ಮೋಟರ ಟ್ರಾನ್ಸ್ಪೋರ್ಟ ಮತ್ತು ಬೇಂಕಿಂಗ ವ್ಯವಹಾರಗಳನ್ನು ಕೂಡ ತಮ್ಮ ಕೈಗೆ ತೆಗೆದುಕೊಳ್ಳುವದರಿಂದ ಸರಕಾರಕ್ಕೆ ತುಂಬಾ ಲಾಭವಾಗುವ ಸಂಭವವಿದೆ. ಹೈದರಾಬಾದ ನಿಜಾಮ ಸರಕಾರವು 30 ಲಕ್ಷ ರೂಪಾಯಿಗಳ ಭಂಡವಾಳ ಹಾಕಿ ಮೋಟರ ಟ್ರಾನ್ಸಪೋರ್ಟ ವ್ಯವಹಾರವನ್ನಾರಂಭಿಸಿದೆ. ಅದಕ್ಕೆ ಸೇಕಡಾ 10ರಷ್ಟು ಲಾಭವು ದೊರೆಯುತ್ತಿರುವದು.

ಆದರೆ ಈ ವ್ಯವಹಾರಗಳಲ್ಲಿ ತೊಡಗಿದ ಭಂಡವಾಲಿಗರ ಸ್ವಾರ್ಥವಿದೆ. ಈ ವ್ಯವಹಾರಗಳನ್ನು ಪ್ರಾಂತೀಯ ಸರಕಾರಗಳು ತಮ್ಮ ಕೈಗೆ ತೆಗೆದುಕೊಳ್ಳುವದರಿಂದ ಭಂಡವಾಲಿಗರ ಸ್ವಾರ್ಥಕ್ಕೆ ದೊಡ್ಡ ಧಕ್ಕೆ ತಗಲುವದು. ಕೃಷಿಕರ ಸಾಲನಿವಾರಣೆ ಮಸೂದೆಯ ಸಂಬಂಧದಲ್ಲಿ ಸಾಲಗಾರರೂ, ಮೋರಿಟೋರಿಯಂ ಬಿಲ್ಲಿನ ಕಾಲಕ್ಕೆ ವಕೀಲರು ಮೊದಲಾದವರೂ ಕೂಗೆಬ್ಬಿಸಿ ಆ ಮಸೂದೆಗಳನ್ನು ವಿರೋಧಿಸಿದಂತೆ, ಈ ಸಂದರ್ಭದಲ್ಲಿ ಭಂಡವಾಲಿಗರು ಭಯಂಕರವಾದ ಕೂಗನ್ನು ಕೂಗಿ ಆಕಾಶ ಪಾತಾಳಗಳನ್ನು ಒಂದು ಮಾಡದೆ ಇರಲಾರರು. ಅವರ ವಿರೋಧ ವಿದ್ರೋಹಗಳನ್ನು ತಾಳಿಕೊಳ್ಳುವ ಶಕ್ತಿ ಧೈರ್ಯ ಸಾಹಸಗಳ ನಮ್ಮ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಇರುವವೆ? ಇರುವದಾದರೆ ಅವುಗಳು ವಿಮೆ, ವಿದ್ಯುಚ್ಛಕ್ತಿ, ಉಪ್ಪು, ಸಿಗರೇಟು, ಬೆಂಕಿಪೆಟ್ಟಿಗೆ ಮೊದಲಾದ ವ್ಯವಸಾಯಗಳನ್ನು ಸರಕಾರವೇ ತಮ್ಮ ಕೈಗೆ ತೆಗೆದುಕೊಳ್ಳುವ ರೀತಿಯಲ್ಲಿ ಭಗೀರಥ ಯತ್ನಗಳನ್ನು ಮಾಡಬೇಕು. ಮತ್ತು ಪ್ರಾಂತ್ಯಹಿತದ ಮದ್ಯನಿಷೇಧ, ಸ್ವಾಸ್ಥ್ಯರಕ್ಷಣೆ, ಕೃಷಿಕರ [illegible] ಮೊದಲಾದ ಕಾರ್ಯಗಳಿಗೆ ಹಣ ಕೊಡಬೇಕಾಗಿದೆ. ಜಪಾನೀಯರು ಧರಿಸುವ ವಸ್ತ್ರಕ್ಕೆ [illegible] ರಾಜಟಿಕ್ಕೆ.


ನಿಷ್ಣಾತ ವೈದ್ಯರು
ನಿಮ್ಮ ದಮ್ಮಿನ ಚಿಕಿತ್ಸೆಯನ್ನು
ಹೇಗೆ ಮಾಡುವರು?

ನಿಮ್ಮ ದಮ್ಮನ್ನು [illegible] ಗುಣಮಾಡಲಿಕ್ಕೆ [illegible] ಉಪಾಯವು [illegible] ಗುಳಿಗೆಗಳು ಅಥವಾ ಹೊಟ್ಟೆಗೆ ತೆಗೆದುಕೊಳ್ಳುವ ಔಷಧಗಳು [illegible] ಇವು ದಮ್ಮನ್ನು ಪೂರ್ಣ ನಾಶಪಡಿಸಲು [illegible] ಸಿದ್ಧವಾಗಿದೆ. [illegible]

ದಮ್ಮು ಮಲ್ಲಮಲ್ಲಗೆ ಆದರೆ [illegible] ಗುಣಮಾಡುವ ಔಷಧಗಳಲ್ಲಿ [illegible] ಶ್ವಾಸಹಾರಿ ಇದೊಂದು [illegible] ಔಷಧವಾಗಿ ದಮ್ಮು, ದಾಳಿ, [illegible] ರೋಗಮುಕ್ತರಾಗ [illegible] ದಮ್ಮಿನ [illegible]

ಡಾ ಪುರೋಹಿತ ಶ್ವಾಸಾರಿ

Use the soaps
KNOWN ALL OVER
WISICO'S.
MINAR
TAJAMAHAL 'Red'
Bar Soaps.
POPULAR IN THE MARKET
Sole Di[illegible]

A BANK
LIMITED
NOW RECEIVES
SEASON DEPOSITS
AT RATES UP TO
3½% P. A.

ಸ್ವದೇಶಾಭಿಮಾನಿ.

ತಾ.೧೧ನೇ ಶುಕ್ರವಾರ ಫೆಬ್ರವರಿ ೧೯೩೮

## ಇನ್ನೊಂದು ಯುದ್ಧವಾದರೆ?

### (ಆಕ್ಷೇಪ—ಸಮಾಧಾನ).

ಕೊಂಗ್ರೆಸ್ ವರ್ಕಿಂಗ್ ಕಮಿಟಿಯು 'ಭಾರತವಾಸಿಗಳು ನೆರೆಯ ರಾಜ್ಯಗಳೊಡನೆ ಶಾಂತಿ ಮೈತ್ರಿಯಿಂದಲೇ ಬಾಳಬೇಕೆನ್ನುವ ಇಚ್ಛೆಯುಳ್ಳವರಾದುದರಿಂದ, ಸಾಮ್ರಾಜ್ಯವು ಯುದ್ಧದಲ್ಲಿ ಸೇರುವಂತಾದಲ್ಲಿ, ಭಾರತ ವರ್ಷವು ಅದರಲ್ಲಿ ಯಾವ ಭಾಗವನ್ನೂ ವಹಿಸಕೂಡದು' ಎಂದು ನಿರ್ಧರಿಸಿದುದೇ,— ಕೆಲವು ಪತ್ರಿಕೆಗಳು ಉದ್ವಿಗ್ನವಾಗಿವೆ.

ಜಪಾನಿನಿಂದ ನಮ್ಮ ದೇಶಕ್ಕೆ ಎಂದಾದರೂ ಮುಂದೆ ಯುದ್ಧಕಾರಣದಿಂದ ಹಾನಿ ಯಾಗುವ ಸಂಭವವಿದೆ ಎಂದು ಡಾ। ಸುಬ್ಬರಾಯನ್‌ರವರು ಒಂದು ಕಡೆ ಭಾಷಣಮಾಡಿದುದರಿಂದ, ಈ ದೇಶದಲ್ಲಿ ಯುದ್ಧಸನ್ನಾಹವನ್ನು ಅಗತ್ಯವಾಗಿಯೂ ಪರರಾಷ್ಟ್ರಗಳ ಅಭಿಯೋಗಾದಿಗಳ ನಿವಾರಣೆಗಾಗಿಯೇ ಹೆಚ್ಚಿಸಬೇಕೆಂದೂ ಆ ಪತ್ರಿಕೆಗಳು ಸೂಚಿಸಿವೆ.

ಇಲ್ಲಿ ಸ್ವಲ್ಪ ಆಲೋಚಿಸಿ ನೋಡಬೇಕಾಗಿರುವ ಅಗತ್ಯವಿದೆ.

ನಾವು ಶಾಂತಿಜಪವನ್ನು ಮಾಡುತ್ತ ಕುಳಿತರೆ, ಆಗಲೆ ಇತರರಾರೂ ನಮ್ಮ ದೇಶದಮೇಲೆ ಯುದ್ಧಮಾಡದಂತಾದೀತೆಂದು ನಮ್ಮಲ್ಲಿ ನಿರಬುಗುವುದು ... ರೇ ಇಲ್ಲ. ಸ್ವತಂತ್ರವಾದ ಭಾರತವರ್ಷವು ... ರಕ್ಷಣೆಮಾಡಿಕೊಳ್ಳಲು ಅವಶ್ಯಕವಾಗಿ ... ಮೇಲೆ, ಆ ... ಅವಶ್ಯ ... ವನ್ನೇ ತನ್ನ ಧ್ಯೇಯಕ್ಕೆ ಆಹುತಿ ಕೊಡಬೇಕೆಂದು ... ಈ ಶತಮಾನದಲ್ಲಿ ಯೂರೋಪಿಗೂ ... ಸಂಭವಿಸಿದಕ್ಕು. ಆದರೆ ಆಕ್ಷೇಪ ... ಯಾವುದೆಂದರೆ, — ನಮಗೆ ಇಷ್ಟೇ ಸಂಬಂಧವೇನೂ ಇಲ್ಲದ ಯುದ್ಧಗಳಲ್ಲಿ ನಮ್ಮ ಅಂತಃಶತ್ರುಗಳೇ ಅಲ್ಲದವರೊಡನೆ ಯುದ್ಧಮಾಡುವೇಗವು ಹೆಚ್ಚು, ನಾವು ಸೇರಬೇಕೆ? ಎಂಬುದು ಇಷ್ಟೇ ... ಡುತ್ತಿರುವ ...

ಜಾಲದ ದಾರಿ ... 1914ರಲ್ಲಿ ಆದುದೇನು, ನೆನಪಿಗ ಕೆಲವು ತತ್ವವನ್ನು ನಿಮ್ಮ ... ಜರ್ಮನರು ಫ್ರಾನ್ಸಿನಲ್ಲಿ ಮುಂ ... ದಂತೆ, ನಮ್ಮ ಸೇನೆಗಳು ಫ್ರಾನ್ಸಿಗೆ ತೆರಳಿ, ... ಸ್ಥಳದಲ್ಲಿ ಸಮ ... ದಲ್ಲಿ ಸುಮಾರು ನಾಲಿಗೆ ನಿರ್ನಾಮ ... ಸೋಷಿಯಲಿಸಂ ... ಹಿಂದೀ ಸೈನ್ಯವು ಯಾರೊಡನೆ ... ಸಾಂಸ್ಕೃತಿಕ ವಿಭ ... ಯುದ್ಧಮಾಡಲು ಬಂದಿದೆ ಎಂದು ... ನದ ಹೆಬ್ಬು ಕೂಗು ... ಇಲ್ಲ ಎಂದು ಆಗ ನಮ್ಮ ವ್ಯಕ್ತಿ ... ಲಾರ್ಡ್ ಬರ್ಕನ್ ... ಹೆಡ್‌ರವರು ಸೂಚಿಸಿರುವರಲ್ಲದೆ, — ಹಿಂದೀ ಕಳೆದ ... ಸೈನಿಕರು ತಾವು ರಷ್ಯದವರ ... ಹೋರಾಡುತ್ತಿರುವಾ ... ವಂತೆಯೇ ಭಾವಿಸಿದ್ದರೆಂದೂ ಎಂದಿದ್ದಾರೆ!

ಆದ ... ಹೀಗಿರುವ ಕಾರಣ, ಸಾಮ್ರಾಜ್ಯದ ದರ್ಪ ವ್ಯಕ್ತಿ ... ರಕ್ಷಣೆಗಾಗಿ ನಡೆಯಬಹುದಾದ ಯುದ್ಧಗಳಲ್ಲಿ ... ತ್ರದೆ ಎಂಬುದೆಷ್ಟು ... ಧಾಳಗಳನ್ನಾಗಿ ಉಪಯೋಗಿಸಿ ... (Survival of the fittest) ಯ ಕಮಿಟಿಯ ಪರಿತ್ಯಾಗ ಮಾಡಿ ಉಳಿದವರೆಲ್ಲರೂ ಜೀವನ ಸಾಮಾಗ್ರಿ ವನ್ನು ಸಂಪಾದಿಸಬೇಕೆಂಬುದೇ ಅವನ ಧ್ಯೇಯವಾಗಿದೆ. ವ್ಯಕ್ತಿಗಳ ಸಂಚಯಕ್ಕೆ ಸಮಾಜವೆಂಬುದನ್ನು ಮಿಥ್ಯವೆಂದು ತಿಳಿದು, ವ್ಯಕ್ತಿಗಳ ಸಮಷ್ಟಿಜ್ಞಾನಕ್ಕೆ ಸಮಾಜವೆಂದು ಅರಿಯುತ್ತಿದ್ದಾನೆ. ವ್ಯಕ್ತಿ ಜ್ಞಾನವು ಸಮಾಜದಲ್ಲಿ ಹೇಗೆ ಅಡಕವಾಗಿದೆಯೋ ಹಾಗೆಯೇ ಸಮಾಜಜ್ಞಾನವು ವ್ಯಕ್ತಿಯಲ್ಲಿ ಅಡಕವಾಗಿರಬೇಕೆಂದು ತಿಳಿಯುತ್ತಿದ್ದಾನೆ ವ್ಯಕ್ತಿ-ಸಮಾಜದ ಪರಸ್ಪರ ಸೌಖ್ಯಜ್ಞಾನವೇ ಸೋಷಿಯಲಿಸಂ ಎನ್ನಬಹುದು. ಈ ಧ್ಯೇಯವನ್ನು ಏತಕ್ಕೆ ಅನುಸರಿಸಬೇಕು. ಇದಕ್ಕೆ ಆಧಾರವೇನು ಎಂದು ಕೇಳಬಹುದು.

ಈ ತತ್ವಕ್ಕೆ ಎರಡು ಆಧಾರಗಳಿವೆ ಒಂದು ಚಾರಿತ್ರಿಕ ಆಧಾರ, ಮತ್ತೊಂದು ಆರ್ಥಿಕ ಶಾಸ್ತ್ರದ ಆಧಾರ. ದೇಶಗಳ

ಇತರ ಕಾರಣಗಳನ್ನು ಕಲ್ಪಿಸಿ ಅಥವಾ ಭಾವಿಸಿ ಬ್ರಿಟನ್ನು ಇದನ್ನೆಲ್ಲ ಅನುಮೋದಿಸಿಯದೆಂದು ಹೇಳಿದ್ದರೂ ಹೇಳಿರಬಹುದು. ಜಪಾನಿನ ದಂಡಿನವರು, ಬ್ರಿಟಿಷ ರಾಯಭಾರಿಯನ್ನು ಗಾಯಗೊಳಿಸಿದ್ದದೆ, ಬ್ರಿಟಿಷಸೈನಿಕರನ್ನು ಬಡಿದುದಿದೆ, ಧ್ವಜಗಳನ್ನು ಹರಿದುದುಂಟು; ಹಡಗನ್ನು ಮುಳುಗಿಸಿದುದುಂಟು. ಇದಕ್ಕೂ ಇತ್ತೀಚೆಗೆ ಬ್ರಿಟಿಷ ವಿದೇಶರಾಷ್ಟ್ರಗಳ ಕಡೆಗೆ ಅಂಗೀಕರಿಸಿರುವ ರಾಜನೀತಿಯೇ ಕಾರಣವೆನ್ನಬೇಡವೆ?

# ಮಂಗಳೂರು.

## ಪಶ್ಚಿಮ ಕರಾವಳಿ ವಿದ್ಯಾರ್ಥಿಗಳ ಪರಿಷತ್ತು

ಇದೇ ತಾ. ೫ ಮತ್ತು ೬ನೇ ದಿನಗಳಲ್ಲಿ ಪಶ್ಚಿಮ ಕರಾವಳಿ ವಿದ್ಯಾರ್ಥಿಗಳ ಪರಿಷತ್ತು ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಶಾಲಾಕಾಲೇಜು ವಿದ್ಯಾರ್ಥಿಗಳಿಂದ ಮಂಗಳೂರಲ್ಲಿ ಯಶಸ್ವಿಯಾಗಿ ಜರಗಿತು. ಬೆಸೆಂಟ್ ಬಾಲಿಕಾ ಪಾಠಶಾಲೆಯ ಎದುರು ಕೆನರಾ ಹೈಸ್ಕೂಲಿನವರ ಆಟದ ಮೈದಾನಿನಲ್ಲಿ ಪರಿಷತ್ತಿನ ಸ್ವಾಗತ ಮಂಡಲಿಯವರು ತಯಾರಿಸಿದ ವಿದ್ಯಾರ್ಥಿನಗರದಲ್ಲಿ ನಡೆದ ಈ ಪರಿಷತ್ತಿಗೆ ಬೊಂಬಾಯಿಯ ಕಾಂಗ್ರೆಸ್ ಸೋಸಿಯಲಿಸ್ಟ್ ಪತ್ರದ ಸಂಪಾದಕರಾದ ಶ್ರೀ. ಅಶೋಕ ಮೇಥಾರವರು ಅಧ್ಯಕ್ಷರಾಗಿ ಬಂದಿದ್ದರು.

ಮೊದಲನೆಯ ದಿನ ಬೆಳಿಗ್ಗೆ ಪ್ರಭಾತಫೇರಿ, ಧ್ವಜವಂದನೆ, ಭಾಷಣ, ಸ್ಪರ್ಧೆ, ವಿಷಯನಿಯಾಮಕ ಮಂಡಲಿಯ ಸಭೆ ಮೊದಲಾದ ಕಾರ್ಯಕ್ರಮದ ನಂತರ ಸಂಜೆ ೫ ಗಂಟೆಗೆ ಮಂಗಳೂರು ಸ್ಟುಡೆಂಟ್ಸ್ ಯೂನಿಯನ್ನಿನ ಆಫೀಸಿನಿಂದ ಪರಿಷತ್ತಿನ ಅಧ್ಯಕ್ಷರನ್ನು ಮೆರವಣಿಗೆಯಿಂದ ಪರಿಷತ್ತಿಗೆ ಕರತೊಯ್ದರು. ಮೆರವಣಿಗೆಯಲ್ಲಿ ಸ್ವಯಂಸೇವಕರ ದಿಣ್ಡುವಾದ್ಯವಿದ್ದಿತಲ್ಲದೆ ದಳನಾಯಕರು ಕುದುರೆಯ ಮೇಲೆ ಕುಳಿತು ವ್ಯವಸ್ಥೆಯನ್ನು ಮಾಡುತ್ತಲಿದ್ದರು.

ಮೆರವಣಿಗೆಯು ವಿದ್ಯಾರ್ಥಿನಗರಕ್ಕೆ ಮುಟ್ಟಿದೊಡ ... ವಿಶ್ವ ಪ್ರಪಂಚದ ಕಾರ್ಯಗಳಿಗೆ ಧ್ಯೇಯವೇ ... ಪರಿಷತ್ತಿನ ಕಾರ್ಯಾರಂಭವಾಯಿತು. ಸ್ವಾಗತಾಧ್ಯಕ್ಷರು ಪರಿಷತ್ತನ್ನು ಜರಗಿಸಲು ಯಾರ್ಯಾರು ಯಾವ ಯಾವ ರೀತಿಯಿಂದ ಸಹಾಯದಗಾದಿರುವರೆಂಬುದನ್ನು ವಿವರಿಸಿ ಎಲ್ಲರಿಗೂ ಕೃತಜ್ಞತೆಯನ್ನು ಸೂಚಿಸಿದರು. ಮಂಗಳೂರು ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರೂ ಸೈಂಟ್ ಅಲೋಶಿಯಸ್ ಕಾಲೇಜಿನ ಪ್ರೊಫೆಸರರೂ ಆದ ಶ್ರೀ। ಜೋಸೆಫರು ಪರಿಷತ್ತಿನ ಉದ್ದೇಶಗಳನ್ನು ವಿವರಿಸಿದರು. ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯಕ್ಕಾಗಿ ಅವಶ್ಯವಾಗಿ ಹೋರಾಡಬೇಕೆಂದು ಧೈರ್ಯದಿಂದ ಇವರು ಹೇಳಿದ ಮಾತುಗಳನ್ನು ಎಲ್ಲರೂ ಮೆಚ್ಚಿದರು. ಅನಂತರ ಮಂಗಳೂರು ಸಭಾಧ್ಯಕ್ಷರಾದ ಡಾಕ್ಟರ್ ವಿಟ್ಠಲ ಶೆಟ್ಟರು ಪರಿಷತ್ತನ್ನು ತೆರೆಯುವ ಭಾಷಣಮಾಡಿದರು. ಬರುವ ವರ್ಷ ಇಡೀ ಮದ್ರಾಸು ಪ್ರಾಂತ್ಯದ ವಿದ್ಯಾರ್ಥಿಗಳ ಪರಿಷತ್ತನ್ನು ಮಂಗಳೂರಲ್ಲಿ ಕರೆಯುವಂತೆ ಸೂಚಿಸಿದರು. ಹಲವು ಮಂದಿ ಮುಖಂಡರಿಂದ ಬಂದ ಸಂದೇಶಗಳನ್ನು ಸ್ವಾಗತಾಧ್ಯಕ್ಷರು ಓದಿಹೇಳಿದ ಬಳಿಕ ಪರಿಷತ್ತಿನ ಅಧ್ಯಕ್ಷರ ಭಾಷಣವಾಯಿತು

ಅಂದೇ ರಾತ್ರಿ ವಿದ್ಯಾರ್ಥಿಗಳು ಶ್ರೀ। ಶಿವರಾಮ ಕಾರಂತ ವಿರಚಿತ ಗರ್ಭಗುಡಿಯೆಂಬ ನಾಟಕವನ್ನಭಿನಯಿಸಿದರು. ಮಧ್ಯೆ ಮಧ್ಯೆ ಕಾಸರಗೋಡು ತಾಲೂಕಿನ ಪರಾದ ಶ್ರೀ। ಕೋಮನ್ ನಾಯರರ ಜಾತೀಯತೆಯ ಭೂತ ಭಕ್ತ, ಕೃಷಿಕ ಮೊದಲಾದ ಪಾತ್ರಗಳ ಅಭಿನಯವೂ ಇದ್ದಿತು ಇವರ ಈ ಪಾತ್ರಗಳನ್ನು ನೋಡಿದವರು ಇವರನ್ನು ರಸಿಕ ಶಿರೋಮಣಿಯೆಂದು ಕರೆಯದೆ ನ್ಯಾಯವನ್ನಾವುದರಲ್ಲಿ ಸಂಶಯವಿಲ್ಲ.

ಮೂರನೆಯ ದಿನ ಬೆಳಿಗ್ಗೆ ಪುನಃ ಪ್ರಭಾತಫೇರಿ ವ್ರತನೆಗೆ, ಧ್ವಜವಂದನ, ವಿಷಯನಿಯಾಮಕ ಸಭೆಗಳಾ ನಾಶ. ಎರಡನೆಯ ದಿನ ಪರಿಷತ್ತು ಸೇರಿತು ಪರಿ ... ಜೀವನಕ್ಕೆ ... ದುಸ್ಥಾನ ಸರಕಾರದವರು ಜಾರಿಗೆ ತರಲಿ ... ಅಂತಹ ಕಾ ... ವಿರೋಧ ಪ್ರಕಟಣೆ, ಚೀನಾ ಮೊದ ... ಮಾಡತಕ್ಕ ಸ ... ಸಿಗೆ ತುತ್ತಾಗುತ್ತಿರುವ ರಾಜ್ಯದ ... ಅಧೀನದಲ್ಲಿ ದಬೇ ... ವಿದ್ಯಾರ್ಥಿವಿದ್ಯಾಭ್ಯಾಸ ಯೋ ... ವಿದ್ಯಾರ್ಥಿಗಳ ಹಕ್ಕು ಬಾಧ್ಯತೆಗಳ ಕೊಂಡರೆ ಸರಕುಗಳ ... ಗಳು ಮಂಜೂರಾದವು ಸೃಷ್ಟಿಸುವುದಕ್ಕೆ ಅಸಾಧ್ಯ ... ಮಧ್ಯಾಹ್ನ ಸಂಗೀತ ಹೋಗಿ, ಸಹಕಾರ ಜೀವನ ವಿವಿಧ ವಿನೋದಗಳ ಸಂಪತ್ತಿಗೆ ಮರ್ಯಾದೆ ತೌ ಪರಿಷತ್ತಿನ ಎಲ್ಲಾ ...

## ಹರಿಕೀರ್ತನೆ ಸಮಾರಂಭ

ಈ ಮೊದಲೇ ಪತ್ರಪತ್ರಿಕೆಗಳ ಮೂಲಕ ಪ್ರಕಟವಾದಂತೆ ಸಾಯಂಕಾಲ ೫ ಗಂಟೆಯಿಂದ ... ಗಂಟೆಯ ತನಕ ಕೊಡಿಯಾಲ್‌ಬೈಲ್ ಗುತ್ತುಮನ್ಸಾನಿನ ರಂಗಣದಲ್ಲಿ ಕುಮಾರಿ ಎಂ. ಕೆ. ಸೀತಾಬಾಯಿಯ ಹರಿಕೀರ್ತನ ಪ್ರಥಮ ಸಮಾರಂಭವು ಯಶಸ್ವಿಯಾಗಿ ಜರಗಿತು. ... ಸಾವಿತ್ರಿ ಚರಿತ್ರೆ ಶ್ರೇಯೋಭಿವೃದ್ಧಿಗಾಗಿ ಪರಮಾತ್ಮನ ಪ್ರಾರ್ಥನಾರೂಪ ಭಾಷಣಗಳು ಮತ್ತು ಸಾಮಯಿಕ ಹರಿದಾಸ ಮಂಟಪದವರಿಂದ ಇದ್ದುವು ಮಂಗಳಾರತಿಯ ನಂತರ ಪುಷ್ಪ ಫಲ ತಾಂಬೂಲ ಇತ್ಯಾದಿಗಳಿಂದ ಸಭೆಯ ಉಪಚಾರವಾಗಿ ಸಮಾರಂಭವು ಕೊನೆಗೊಂಡಿತು.

## ನೇಯಿಗೆ ಕೆಲಸಗಾರರ ಸಭೆ

ಸ್ಥಳೀಯ ನೇಯಿಗೆ ಕೆಲಸಗಾರರ ಸಂಘದ ಸರ್ವಸಾಮಾನ್ಯ ಸಭೆಯೊಂದು ಮುಂಬಾಯಿಯ ಕಾಂಗ್ರೆಸ್ ಸೋಶಿಯಲಿಸ್ಟ್ ಪತ್ರಿಕೆಯ ಸಂಪಾದಕ ಶ್ರೀ। ಅಶೋಕ ಮೇಥಾರವರ ಅಧ್ಯಕ್ಷತೆಯಲ್ಲಿ ತಾ ೬—೨—೩೮ನೇ ಆದಿತ್ಯವಾರ ಪೆಲಿಕ್ಸ್ ಪೈ ಬಜಾರಲ್ಲಿ ಕೂಡಿಬಂತು. ನೇಯಿಗೆಯವರು ಒಳ್ಳೆ ವ್ಯವಸ್ಥೆ ಹೊಂದಿಕೊಂಡು ನಂತರ ಕಾಂಗ್ರೆಸಿನೊಡನೆ ಸೇರಬೇಕೆಂದೂ, ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸನ್ನು ಬಲಪಡಿಸುವುದರಲ್ಲೇ ಅವರಿಗೂ ದೇಶಕ್ಕೂ ಮುಕ್ತಿಮಾರ್ಗವಿರುವುದೆಂದೂ ಎಲ್ಲರೂ ಹಿಂದೀಯನ್ನು ಕಲಿಯುವ ಅವಶ್ಯತೆಯನ್ನು ಸೂಚಿಸಿಯೂ ಅವರು ಭಾಷಣವಿತ್ತರು. ನಂತರ ಸಂಘದ ಆಫೀಸು ಕೆಲಸಗಾರರಿಗೆ ಚಾಪಾನವೂ ನಡೆಯಿತು

## ಸಾರ್ವಜನಿಕ ಸಭೆ

ಕಳೆದವಾರ ಶ್ರೀಮತಿ ಕಮಲಾ ದೇವಿಯರ ಅಧ್ಯಕ್ಷತನದಲ್ಲಿ ಮಂಗಳೂರಿನ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ, ಮುಂಬಯಿ ಅಶೋಕಾ ಮೇಥಾರವರ ಭಾಷಣ ನಡೆಯಿತು. ಈ ಭಾಷಣದಲ್ಲಿ ಅವರು ಕಾಂಗ್ರೆಸ್ಸಿನ ಹುಟ್ಟು, ಶ್ರೇಯಸ್ಸು ಇತ್ಯಾದಿ ಸುರಸವಾಗಿ ವಿವರಿಸಿದರು. ಸ್ಥಳೀಯ ಸೋಸಲಿಸ್ಟರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಗಳಲ್ಲಿ ಹೆಚ್ಚಿನ ಸದಸ್ಯತನಗಳನ್ನು ಪಡೆವುದಕ್ಕಾಗಿ ಪ್ರಯತ್ನಿಸಿದ ನಂತರ ... ಸೋಸಲಿಸ್ಟ ಪಕ್ಷದ ಚರಿತ್ರೆಯನು ... ಕಾಂಗ್ರೆಸ್ ಮತದಿಂದ ಪ್ರಯೋಜನವಿಲ್ಲದ ... ವಿವರಿಸಿ, ಗಾಂಧಿವಾದಿ ಕಾರ್ಯಕ್ರಮ ಪ್ರಶ್ನೆವೆಂದೂ, ದೇಶವೂ ಪ್ರಬಲ ಸೂಚಿಸಿ ... ವರನ್ನು ಕಟ್ಟಿಕೊಳ್ಳಬೇಕೆಂದೂ ... — ಸೋಸಲಿಸ್ಟರ ಪರಿಶ್ರಮದ ಪರಿಣಾಮವಾ ... ಒಂದು ವಿದ್ಯಾರ್ಥಿಸಂಘದ ಮುಖರ ಸಂಘ ಇತ್ಯಾದಿಗಳು, ಉದ್ಭವಿಸಿವೆಂದೂ, ಕಾಂಗ್ರೆಸ್ಸಿನ ಸಂದೇಶಗಳ ಪ್ರಚಾರವಾಯಿತೆಂದೂ, ಕೈತಮಾಗಾರರ ಜನರ ಪ್ರಭಾವವು ಎಲ್ಲರಿಗೂ ತಿಳಿದುಬರುತ್ತಿದೆಂದೂ ಅಭಿಪ್ರಾಯ ಪಟ್ಟು, ಮೇಥಾರವರು ಬ್ರಾಹ್ಮಣನಿದ್ದರು. ಜನರೆಲ್ಲರು ಒಕ್ಕಟ್ಟಾಗಿ, ಕಾಂಗ್ರೆಸ್ಸಿನೊಡನೆ ಸೇರಬೇಕೆಂದು ಅವರು ಬೇಡಿಕೊಂಡರು.

## ಹೋಸ್ಟೆಲ್ ದಿನಾಚರಣೆ.

ಸ್ಥಳೀಯ ರಾಮಕೃಷ್ಣ ವಿದ್ಯಾರ್ಥಿ ಗೃಹದ ದಿನಾಚರಣೆಯು ಕಳೆದ ಆದಿತ್ಯವಾರ ಜಿಲ್ಲಾ ಜಡ್ಜರಾದ ಮಿರ್ ಅಮಿರುದ್ದೀನ್‌ರ ಅಧ್ಯಕ್ಷತನದಲ್ಲಿ ನಡೆಯಿತು ಸಂಘದ ವರದಿ ಓದುವಿಕೆ ಇತ್ಯಾದಿ ಕಾರ್ಯಕ್ರಮಗಳು ಮುಗಿದ ನಂತರ ಮಿರ್ ಅಮಿರುದ್ದೀನರು ಆಟಗಳಲ್ಲಿ ಗೆದ್ದವರಿಗೆ ಪಾರಿತೋಷಕಗಳನ್ನು ಹಂಚಿದರು

ಎಲ್ಲರೂ ಸಹೋದರ ಭಾವವನ್ನು ಆಚರಿಸುವುದೇ ಕೋಮುವಾರು ಬೇಧದ ನಿವಾರಣೆ ಉಪಾಯವೆಂದೂ ಸೂಚಿಸಿ ಧರ್ಮವು ಈ ಸಹೋದರ ಭಾವಕ್ಕೆ ಒಂದು ಅಡ್ಡಿಯಾಗಿ ನಿಲ್ಲಬಾರದೆಂದೂ ಬೋಧನೆಯನ್ನು ಮಾಡಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು ಅಂತ್ಯದಲ್ಲಿ ವಿವಿಧ ವಿನೋದಗಳ ಕಾರ್ಯಕ್ರಮವೊಂದು ನಡೆಯಿತು.

## ಕರ್ನಾಟಕ ಸಂಘದ ಸಭೆ.

ಸ್ಥಳೀಯ ಗವರ್ನಮೆಂಟ ಕಾಲೇಜಿನ ಕರ್ನಾಟಕ ಸಂಘ ವಾರ್ಷಿಕ ಸಭೆಯು, ಮೊನ್ನೆ ಆದಿತ್ಯವಾರ ದಿವಸ ಒಡ್ಲಮನೆ ಅಪ್ಪರಾಮ ಶಾಸ್ತ್ರಿಯರ ಅಧ್ಯಕ್ಷತನದಲ್ಲಿ ನಡೆಯಿತು ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ಸೀತಾರಾಮಾಚಾರ್ಯರು, ಅಧ್ಯಕ್ಷರನ್ನು ಸ್ವಾಗತೀಕರಿಸಿದ ನಂತರ ಸಂಘದ ವರದಿಯು ಕಾರ್ಯದರ್ಶಿಯವರಿಂದ ಓದಲಾಯಿತು

ಅಧ್ಯಕ್ಷರು ತಮ್ಮ ಭಾಷಣದ ಅಂತ್ಯದಲ್ಲಿ ಕನ್ನಡ ಭಾಷೆಯ ಏಳ್ಗೆಯನ್ನು ಬಯಸಿಯೂ, ಆ ಕುರಿತು ಎಲ್ಲಾ ಪತ್ರಿಕೆಗಳೂ ಶ್ರಮವಹಿಸಬೇಕೆಂದೂ, ಕೋರಿಯೂ ಕರ್ನಾಟಕ ಸಾಹಿತ್ಯ ಚಟುವಟಿಕೆಗಳನ್ನು ಶ್ಲಾಘಿಸಿಯೂ, ತಮ್ಮ ಭಾಷಣವನ್ನು ಮುಗಿಸಿದರು ವಿವಿಧ ಆನಂದಗಳ ಕಾರ್ಯಕ್ರಮದೊಂದಿಗೆ ಸಮಾರಂಭವು ಕೊನೆಗೊಂಡಿತು.

## ಸಂಗೀತ ಸ್ಪರ್ಧೆ.

ಪಶ್ಚಿಮ ಕರಾವಳಿ ವಿದ್ಯಾರ್ಥಿ ಪರಿಷತ್ತಿನ ನೇತೃತ್ವದಲ್ಲಿ ಕಳೆದ ಆದಿತ್ಯವಾರ ದಿವಸ ಸಂಗೀತ ಸ್ಪರ್ಧೆಯೊಂದು ನಡೆದು, ಶ್ರೀಮತಿ ಮಂಗಲ ಎಂಬವರಿಗೆ ಪ್ರಥಮ ಬಹುಮಾನವು ಶ್ರೀಮತಿ ರಾಧಾ ಎಂಬವರಿಗೆ ...

# ತಾಲೂಕುಗಳಿಂದ

## ಕಾರ್ಕಳ

ಕಾರ್ಕಳ ಟೌನ್ ಕಾಂಗ್ರೆಸ್ ಕಮಿಟಿಯ ಸಭೆಯು ತಾ. ೬೦—೧—೩೮ರ ದಿನ ಸಾಯಂಕಾಲ ಶ್ರೀ। ವಕೀಲ ಲಕ್ಷ್ಮಣ ಕಾಮ್ತರ ಆಫೀಸಿನಲ್ಲಿ ..., ಶ್ರೀ। ಕಾಮ್ತರು ಅಧ್ಯಕ್ಷರಾಗಿಯೂ, ಸಂಕಪ್ಪ ಸಾಹೇಬರು ಉಪಾಧ್ಯಕ್ಷರಾಗಿಯೂ, ಪೊದುವಾಳರು ಕಾರ್ಯದರ್ಶಿಯವರಾಗಿಯೂ ಆರಿಸಲ್ಪಟ್ಟರು.

ಪ್ರತಿ ತಿಂಗಳ ತಾ. ೨೧ಕ್ಕೆ ಮಾಡಬೇಕಾದ ಕಂದಾಯ ವಸೂಲಿಯ ಇರಸಾಲನ್ನು ೧೫ನೇ ತಾರೀಕಿನ ವರೆಗೆಯೇ ಮಾಡಬೇಕೆಂದು ಮೇಲಧಿಕಾರಿಗಳ ಹುಕುಂ ಬಂದಿರುವ ಕಾರಣ ೧೫ನೇ ತಾರೀಕಿನೊಳಗಾಗಿ ತೀರ್ವೆ ಕಿಸ್ತಿಗಳನ್ನು ವಸೂಲು ಮಾಡಬೇಕಾಗಿ ಪಟೇಲರು ಚೀಟಿ ಸಹಿ ತಿಳಿಸಿದ್ದಾರೆ ಪಟ್ಟಾದಾರರು ಇದನ್ನು ನೆನಪಿನಲ್ಲಿಟ್ಟುಕೊಂಡರೆ ಉತ್ತಮ

ಪ್ರಥಮ ಬಹುಮಾನವು ದೊರಕಿತು. ಭಾಷಣ ಸ್ಪರ್ಧೆಯೂ ನಡೆದು ಕೆನರಾ ಹೈಸ್ಕೂಲಿನ ಶ್ರೀಮತಿ ಕಸ್ತೂರಿ ಬಾಯಿಯವರಿಗೆ ಪ್ರಥಮ ಬಹುಮಾನವು, ಕುಂದಾಪುರ ಹೈಸ್ಕೂಲಿನ ಶ್ರೀ। ರಮಾನಂದ ಉಡುಪರಿಗೆ ದ್ವಿತೀಯ ಬಹುಮಾನವು ದೊರಕಿತು

ಮೊನ್ನೆ ತಾ. 8ರಲ್ಲಿ ನಡೆದ ಫುಟ್ ಬೋಲ್ ಸ್ಪರ್ಧೆ ಆಟದ ಅಂತ್ಯದಲ್ಲಿ ಪ್ರೇಕ್ಷಕರ ವರ್ಗವು ಹುಟಿಂಗ್ ಮಾಡುವ ಕೆಲಸದಲ್ಲಿ ತೊಡಗಿದುದರ ಪರಿಣಾಮವಾಗಿ, ಆಟಗಾರರಿಗೂ, ಪ್ರೇಕ್ಷಕರಿಗೂ, ಕೈಕೈ ಜಟಾಪಟಿ ಉಂಟಾಗಿ, ಲಾಠಿ ಚಾರ್ಜಿನಿಂದ ಅದು ಕಡೆಯಲಾಯಿತು.

## ಹಿಂದೀ ಟ್ರೈನಿಂಗ್ ಕಾಲೇಜು

ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆಯವರು ಹಿಂದೀ ಅಧ್ಯಾಪಕರನ್ನು ತರಬೇತುಮಾಡುವ ಉದ್ದೇಶದಿಂದ ಇತ್ತಲಾಗೆ ಧಾರವಾಡದಲ್ಲೊಂದು ಹಿಂದಿ ಟ್ರೈನಿಂಗ್ ಕಾಲೆಜನ್ನು ತೆರೆದಿರುವರಷ್ಟೆ. ಅದರಂತೆ ದಕ್ಷಿಣ ಕನ್ನಡದ ಹಿಂದೀ ಅಧ್ಯಾಪಕರ ತರಬೇತಿಗೋಸ್ಕರ ಸದ್ಯದಲ್ಲೇ ಮಂಗಳೂರಿನಲ್ಲಿ ಒಂದು ಹಿಂದೀ ಟ್ರೈನಿಂಗ್ ಕಾಲೇಜನ್ನು ತೆರೆಯುವಂತೆ ಸಭೆಯ ಕಾರ್ಯಕಾರಿ ಸಮಿತಿಯವರು ನಿರ್ಣಯಿಸಿರುತ್ತದಾಗಿ ಕೇಳುತ್ತೇನೆ ಇದರಿಂದ ಸದ್ಯದಲ್ಲಿ ಇಲ್ಲಿಯ ಹಾಯರ್‌ಸ್ಕೂಲ್ ಕಾಲೇಜು ಮತ್ತು ಇತರ ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದಕ್ಕೆ ಸಾಕಷ್ಟು ಅಧ್ಯಾಪಕರ ಸಂಖ್ಯೆಯು ಸಿಗುವುದಲ್ಲದೆ ಎಷ್ಟೋ ಬಡ ಹಿಂದೀ ಅಧ್ಯಾಪಕರಿಗೆ ಸಹ ಅನುಕೂಲವಾಗುವುದು

## ಈಶ್ವರಾನಂದ ದಿನಾಚರಣೆ

ಸ್ಥಳೀಯ ಈಶ್ವರಾನಂದ ಸ್ಮಾರಕ ಸಂಘದ ನೇತೃತ್ವದಲ್ಲಿ ಸ್ವಾಮಿ ಈಶ್ವರಾನಂದರವರ ಹತ್ತನೆ ಮೃತ ತಿಥಿಯು, ಕಳೆದ ಮಂಗಳವಾರ ದಿವಸ ಸ್ಥಳೀಯ ರಘುನಾಥಯ್ಯ ಸ್ಮಾರಕ ಹೋಲಿನಲ್ಲಿ ಶ್ರೀ ಕಿಲ್ಲೆಯವರ ಅಧ್ಯಕ್ಷತನದಲ್ಲಿ ನಡೆಯಿತು ಬೆಳಿಗ್ಗೆ ಈಶ್ವರಾನಂದ ಪಟವನ್ನು ಒಯಿದು ಮೆರವಣಿಗೆಯು ನಡೆಯಿತು ಸಾಯಂಕಾಲ ಒಂದು ಸಾರ್ವಜನಿಕ ಸಭೆಯು ಸೇರಿ, ಊರಿನ ಅನೇಕ ಮಹನೀಯರು, ಸ್ವಾಮಿಜಿಯವರ ಗುಣಕಥನ ಮಾಡಿ ಭಾಷಣಗಳನ್ನಿತ್ತರು. ಸ್ವಾಮಿಜಿಯವರಿಂದ ಹೊರಡಿಸಲಾದ ಸೇವಾ ಆದರ್ಶಗಳನ್ನು ಹಳ್ಳಿಗಳಲ್ಲಿಯೂ ಹರಡುವಂತೆ ಮಾಡಬೇಕೆಂದೂ, ಒಳ್ಳೆ ರಚನಾತ್ಮಕ ಕಾರ್ಯಗಳಿಂದ, ಸ್ವಾಮಿಜಿಯ ಸ್ಥಾಪನೆಯನ್ನು ತೋರಿಸಬೇಕೆಂದೂ, ಸೂಚಿಸಿ, ಶ್ರೀ ಕಿಲ್ಲೆಯವರು ತಮ್ಮ ಭಾಷಣವನ್ನು ಮುಗಿಸಿದರು

ಅಂದು ಒಂದು ಹರಿಕಥೆಯು ಕೂಡ ನಡೆದಿತ್ತು

## ಕೊಲೆಯೊ?

ಮಂಗಳೂರು ತಾಲೂಕಿನ ಬಂಗ್ರ ಕೂಳೂರಿನ ಎಂ. ಪೆರೇರನು ಕೊಲೆ ಮಾಡಲ್ಪಟ್ಟಿರುವನೆಂಬ ಸಂದೇಹಗಳುಂಟಾಗಲು, ಪೋಲೀಸರು ಆ ಕುರಿತು ಶೋಧ ನಡೆಯಿಸುತ್ತಿದ್ದಾರೆ. ಕಳೆದ ತಾ ೭—೭—38ರಲ್ಲಿ, ನಾಲುಜನ ಕ್ರೈಸ್ತರು ಆತನ ಮನೆಯನ್ನು ನುಗ್ಗಿ ಆತನನು ಹೊಡೆದು, ಅನಂತರ ಆತನನ್ನು ನದಿಯ ಕಡೆ ಕೊಂಡೊಯ್ದರೆಂದೂ, ನಂತರ ಆತನು ಹಿಂತಿರುಗದಿರಲು ಮರುದಿನ ಆತನ ಪತ್ನಿಯು ಭೀತಿಪಟ್ಟವಳಾಗಿ ಗ್ರಾಮ ಪಟೇಲರಿಗೆ ಈ ವಾರ್ತೆಯನ್ನು ತಿಳಿಸಿದಳು ತಾರೀಕು 3—2—38ರಲ್ಲಿ ಆಕೆಯ ಗಂಡನ ಶವವು 2 ಫೆಂಟ ಸರಿಯಾಗಿ ನದಿಯಲ್ಲಿ ತೇಲುವುದು ಕಂಡು ಆ ರಲು ... ಶರೀರವು ತನ್ನ ಗಂಡನದೆಂದು, ಆಕೆಯು ಗುರುತಿಸಿದಳು ದುರಾತ್ಮರ ದೆಸೆಯಿಂದ ಈ ಸಾವು ನಡೆದಿರುವುದಾಗಿ ಪೋಲೀಸ್ ದಾಖ್ಲೆಯಾಗಿರುತ್ತದೆ 30 ... ಪೋಲೀಸರು ಕೇಸ್ ದಾಖಲು ಮಾ

ತಾಲೂಕು ಕಾಂಗ್ರೆಸ್ ಕಮಿಟಿಯು ೧೯೩೭ನೆಯ ಇಸವಿಯ ಲೆಕ್ಕಪತ್ರಗಳನ್ನು ಪರಿಶೋಧಿಸುವ ಬಗ್ಗೆ ಕಾರ್ಕಳ ಸವಸ್ಥರ ಸಹಾಯಕ ಸಂಘದ ಮೆನೇಜರರಾಗಿರುವ ಶ್ರೀ ಎಚ್. ಎಸ್. ಶೆಣೈಯವರು ಗೌರವ ಲೆಕ್ಕ ಪರಿಶೋಧಕರಾಗಿ ಕಮಿಟಿಯವರಿಂದ ನೇಮಿಸಲ್ಪಟ್ಟಿದ್ದಾರೆ.

ಇಲ್ಲಿ ಕೆಲವು ದಿವಸಗಳಿಂದ ಮಲಬಾರ ಕಡೆಯಿಂದ ಬಂದ ಸ್ವಯಂಸೇವಕ ವೇಷದಲ್ಲಿರುವ ಇಬ್ಬರು ಮೂವರು ಪ್ರತಿ ಶನಿವಾರ ದಿನಗಳಲ್ಲಿ ಊರ ಮೆರವಣಿಗೆ ಹೊರಟು, ಸಂತೆಸ್ಥಾನಕ್ಕೆ ಹೋಗಿ ಚಿಕ್ಕ ಚಿಕ್ಕ ಸಭೆಗಳನ್ನು ಕೂಡಿಸಿ, ಕೂಲಿಜನರು ಸಂಘಟಿತರಾಗಿ ತಮ್ಮ ತಮ್ಮ ಹಕ್ಕು ಬಾಧ್ಯತೆಗಳನ್ನು ಕಾದುಕೊಳ್ಳುವ ಅವಶ್ಯಕತೆಯ ಕುರಿತು ಭಾಷಣಗಳನ್ನು ಕೊಡುತ್ತಿರುವರು.

## ಉಡುಪಿ

ತಾ ೫ನೇ ಮಧ್ಯಾಹ್ನ ಹೊತ್ತಿಗೆ ಥಳುಕೋಟೆಯಲ್ಲಿ ಶ್ರೀ ಚಂದ್ರಮೌಳೀಶ್ವರ ನಾಟಕ ಸಭೆಯವರು ಕಟ್ಟಿಸಿದ್ದ ನಾಟಕ ಗೃಹಕ್ಕೆ ಆಕಸ್ಮಾತ್ತಾಗಿ ಬೆಂಕಿ ತಗಲಿ ಬಹುಮಟ್ಟಿಗೆ ಸುಟ್ಟುಹೋಯಿತು. ನಾಟಕ ಸಭೆಯವರು ಮುಂಚಿತವಾಗಿಯೇ ಕುಂದಾಪುರಕ್ಕೆ ಹೋಗಿದ್ದರಾಗಿ ನಾಟಕ ಗೃಹದ ಕಂಟ್ರಾಕ್ಟರರಿಗೆ ರೂ ೩೦೦ ನಷ್ಟವಾಗಬಹುದು. ಪಟ್ಟಣ ಯುವಕರೂ ಇನ್ನಿತರರೂ ಒಟ್ಟುಗೂಡಿ ಪ್ರಯತ್ನಪಟ್ಟು ಬೆಂಕಿಯನ್ನು ಆರಿಸಿ ಆಜು ಬಾಜಿನ ಮನೆಗಳಿಗೆ ಅಪಾಯ ತಪ್ಪಿಸಿದರು.

ತಾ ೪ನೇ ಸಾಯಾಹ್ನ ೪ ೩೦ಕ್ಕೆ ಮ್ಯುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ನಗರಾಧ್ಯಕ್ಷ ಶ್ರೀ ಎ. ಎಲ್. ಎನ್ ರಾಯರ ಸಭಾಧಿಪತ್ಯದಲ್ಲಿ ಜರಗಿತು. ೧೦ ಸದಸ್ಯರು ಹಾಜರಿದ್ದರು. ಕಡ್ಡಾಯ ಶಿಕ್ಷಣದ ಸೂಚನೆಯು ವಿಶೇಷ ಸಭೆಯವರೇ ನಿರ್ಧರಿಸತಕ್ಕದ್ದಾಗಿ ಮುಂದರಿಸಲಾಯಿತು.

ಮದ್ರಾಸು ನ್ಯಾಯವಿಧಾಯಕ ಸಭೆಗಳಲ್ಲಿ ಮುನಿಸಿಪಾಲಿಟಿಯ ಸಂಬಂಧವಾಗಿ ಪ್ರಶ್ನೋತ್ತರರೂಪವಾಗಿ ನಡೆದುದರ ಮೇಲಿಂದ ಸರಕಾರಕ್ಕೆ ಮ್ಯುನಿಸಿಪಲ್ ಆಡಳಿತ ವಿಷಯದಲ್ಲಿ ತಪ್ಪು ಅಭಿಪ್ರಾಯಗಳನ್ನು ಕೊಡಲಾಗಿದೆಯೆಂಬುದಾಗಿ ಜನತೆಯಲ್ಲಿ ಹಬ್ಬಿದ್ದಕ್ಕೆ ಸರಕಾರದವರು ಮುನಿಸಿಪಲ್ ಆಫೀಸಿನ ಮೂಲಕ ಅಗತ್ಯವಿರುವ ಎಲ್ಲಾ ಅಭಿಪ್ರಾಯ ಪಡೆದು ಜಿಲ್ಲಾ ಕಲೆಕ್ಟರವರ ಮುನಿಸಿಪಲ್ ಚೆಯರ್‌ಮ್ಯಾನರ ಹೇಳಿಕೆ ಮೊದಲಾದುವನ್ನು ಪಡೆದು ಪರಿಶೋಧಿಸಿ ಮುಂದರಿಯಬೇಂದು ಕೋರಲಾಗುತ್ತದೆ.

ತಾ ೭ಕ್ಕೆ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ನಗರಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೇರಿ ಮುಂದಣ ವರ್ಷದ ಅಂದಾಜು ಪಟ್ಟಿಯ ಚರ್ಚೆ ನಡೆಯಿತು.

ತಾ ೮ಕ್ಕೆ ತಾ ಕೊಂ ಕಮಿಟಿಯ ಕಾರ್ಯಕಾರಿ ಮಂಡಳಿಯು ಸೇರಿ ತಾಲೂಕಿನಲ್ಲಿ ಮುಂದಣ ಕಾರ್ಯಕ್ರಮದ ಕುರಿತು ... ತಾ ೭ ಮತ್ತು ೮ಕ್ಕೆ [illegible] ರಾಜಕೀಯ ಪರಿಷತ್ತು ಹಾಗೂ ಪ್ರದರ್ಶನದ ಕುರಿತು ಸಮಾಲೋಚನೆಯಾಯಿತು. ಸದ್ರಿ ... ಯಲ್ಲಿ ಸರಕಾರ ಪ್ರೋತ್ಸಾಹ ... ಮುಖ್ಯಯೋಗಗೊಳಿಸಬೇಕೆಂದು ... ನಿರ್ಣಯವಾಯಿತು. ಬ್ರಹ್ಮಾವರ ಬೋರ್ಡು ಎಲಿಮೆಂಟರಿ ಶಾಲೆಯ ಹರಿಜನ ವಿದ್ಯಾರ್ಥಿಗಳನ್ನು ಸೇರಿಸಿದ ಇತರ ವಿದ್ಯಾರ್ಥಿಗಳು ಶಾಲೆಗೆ ಹಾಜರಾಗದೆ, ಶಾಲೆಯನ್ನು ಬಹಿಷ್ಕರಿಸುವರೆಂದು ತಿಳಿದುಬಂದುದರ ವಿಷಯ ವಿಷಾದಪಡುವುದಲ್ಲದೆ ವಿದ್ಯಾರ್ಥಿಗಳ ಹೆತ್ತವರು ತಮ್ಮ ಮಕ್ಕಳನ್ನು ಸದ್ರಿ ಶಾಲೆಗೆ ಕಳುಹಿ ಹರಿಜನೋದ್ಧಾರ ಕಾರ್ಯಕ್ಕೆ ಸಹಾನುಭೂತಿ ತೋರಬೇಕೆಂದು ವಿನಂತಿಸಲಾಯಿತು.

ತಾ. ೧೦ನೇ ಸಾಯಂಕಾಲ ಗಾಂಧಿಮೈದಾನದಲ್ಲಿ ತಾ ಕಾಂ ಕ ಯ ನೇತೃತ್ವದಲ್ಲಿ ಶ್ರೀ ಅಶೋಕ ಮೆಹ್ತಾರವರು ಸಾರ್ವಜನಿಕ ಭಾಷಣಮಾಡಿರುವರು. ಇವರು ಮಂಗಳೂರಿಗೆ ಜರುಗುವ ಕರಾವಳಿಯ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷರಾಗಿ ಬಂದಿದ್ದಾಗಿ ಮಲಬಾರು ಮತ್ತು ದಕ್ಷಿಣ ಕನ್ನಡಗಳನ್ನು ಪ್ರವಾಸಗೈಯುತ್ತಲಿರುವರು. ವಿದ್ಯಾರ್ಥಿಗಳಿಗೆ ಬೋಧಪರವಾದ ಭಾಷಣವೀಯುವರಾಗಿ ವಿದ್ಯಾರ್ಥಿಗಳೂ ಈ ಸುಸಂದರ್ಭವನ್ನು ಸದುಪಯೋಗ ಮಾಡುವರೆಂದು ಆಶಿಸಲಾಗುತ್ತದೆ. ಶ್ರೀಮತಿ ಕಮಲಾದೇವಿಯವರೂ ಬರಲಿದ್ದಾರೆ.

## ಕುಂದಾಪುರ

ಮಹೋತ್ಸವವು ಈ ಮೊದಲೇ ನಿಶ್ಚಿತವಾದಂತೆ ಕಳೆದ ತಾ ೨೯ ಮತ್ತು ೩೦ರಲ್ಲಿ ಸಂಭ್ರಮದಿಂದ ಜರಗಿತು.

ತಾ. ೨೯ ಬೆಳಗ್ಗೆ ೮ ೩೦ಕ್ಕೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಲವು ಸ್ಪರ್ಧೆಗಳು ಜರಗಿದುವು. ಸುಮಾರು ಅಂಕ್ಯಾಂತಲೂ ಹೆಚ್ಚಾದ ವಿದ್ಯಾರ್ಥಿಗಳು ಭಾಗವನ್ನುವಹಿಸಿದ್ದರು.

ಸಾಯಂಕಾಲ ೫—೪೦ಕ್ಕೆ ಶ್ರೀ ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಭೆಯು ಜರಗಿತು. ಶ್ರೀಯುತ ವಿದ್ವಾನ್ ಟಿ. ಕೆ ಆಚಾರ್ಯ ಮ. ರಾ ಎಚ್. ರಾಮಪ್ಪಯ್ಯ ಎಂ. ಎ. ಬಿ. ಎಲ್. ಮುಂತಾದವರು ಏಕೀಕರಣದ ಆವಶ್ಯಕತೆಯನ್ನು ಸಮರ್ಥಿಸಿ ಭಾಷಣಮಾಡಿದರು. ಅಧ್ಯಕ್ಷರು ಏಕೀಕ

ರಣವಾದರೆ ಕರ್ನಾಟಕದ ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಬಹುದೆಂದು ವಿವರಿಸುತ್ತಾ, ಅಧ್ಯಕ್ಷರು ಕನ್ನಡ ಭಾಷೆಯ ಅಭಿವೃದ್ಧಿಯ ಅವಶ್ಯಕತೆಯ ವಿಷಯ ಬಹಳ ಉದಾತ್ತ ಭಾಷಣ ಮಾಡಿದರು. ಶ್ರೀ ಕೊ. ಶಿ. ಕಾರಂತರು ತಾವು ರಚಿಸಿದ ನಾಟಕವೆಂಬ ನಾಟಕವನ್ನು ಉತ್ತಮ ರೀತಿಯಿಂದ ಅಭಿನಯಿಸಿದರು, ಸರ್ವರಿಗೂ ಮನರಂಜನೆಯಾದ ಮೇಲೆ ಸಭೆಯು ಮುಕ್ತಾಯವಾಯಿತು. ೩ ಸಭೆಗಳಲ್ಲಿಯೂ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು.

## ಮುಲ್ಕಿ.

ಕಳೆದ ವಾರ ನಮ್ಮ ಜಿಲ್ಲಾ ವಿದ್ಯಾಧಿಕಾರಿಗಳಾದ ಮಿ। ದಸ್ತಗಿರ್‌ರವರು ಉಡುಪಿ ರೇಂಜಿನ ಡೆಪ್ಯೂಟಿ ಇನ್ಸ್‌ಪೆಕ್ಟರುಗಳೊಂದಿಗೆ ಬಹದುರ್‌ಗಡವನ್ನು ಸಂದರ್ಶಿಸಲು ಬಂದಿದ್ದರು. ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಸ್ಕೂಲ್ ಕಮಿಟಿಯವರು ವಿದ್ಯಾಧಿಕಾರಿಗಳಿಗೊಂದು ಟೀಪಾರ್ಟಿ ಸತ್ಕಾರವನ್ನಿತ್ತು ಗೌರವಿಸಿದರು. ಊರ ಪ್ರಮುಖರು ಮತ್ತು ಸರಕಾರಿ ನೌಕರರು ನೆರೆದಿದ್ದರು. ಸ್ಕೂಲ್ ಕಮಿಟಿಯವರು ಮುಲ್ಕಿಯಲ್ಲೊಂದು ಹಾಯರ್ ಎ ಶಾಲೆಯಿಲ್ಲದೆ ಬಡಬಗ್ಗರಿಗೆ ಆದ ಅನ್ಯಾಯವನ್ನು ಕಳೆದ ನಾಲ್ಕೈದು ವರ್ಷಗಳಿಂದ ಅದಕ್ಕಾಗಿ ಮಾಡುತ್ತಿರುವ ನಿರಂತರ ಪ್ರಯತ್ನ ಎಲ್ಲವುಗಳನ್ನೂ ಅಧಿಕಾರಿಗಳಿಗೆ ವಿವರಿಸಿ ಹೇಳಿದರು. ವಿದ್ಯಾಧಿಕಾರಿಗಳು ಅದಕ್ಕೆ ಸಂಬಂಧಪಟ್ಟ ಎಲ್ಲಾ ರಿಕಾರ್ಡುಗಳನ್ನೂ ನೋಡಿ ಮುಲ್ಕಿಗೊಂದು ಹಾ ಎ ಶಾಲೆಯು ಅತ್ಯಗತ್ಯವೆಂದು ಅಭಿಪ್ರಾಯಪಟ್ಟು ಆ ವಿಚಾರದಲ್ಲಿ ತನ್ನ ಸಂಪೂರ್ಣ ಸಹಾನುಭೂತಿಯಿದೆ ಎಂಬುದಾಗಿಯೂ ಆಶ್ವಾಸನೆಯನ್ನಿತ್ತರು. ಜಿಲ್ಲಾ ಬೋರ್ಡಿನವರು ಬೇಗನೇ ಮುಲ್ಕಿಯಲ್ಲೊಂದು ಹಾ ಎ ಶಾಲೆಯನ್ನು ತೆರೆಯುವ ವ್ಯವಸ್ಥೆಯನ್ನು ಮಾಡಿ ಸಾರ್ವಜನಿಕರಿಗೆ ಸಂತಸವನ್ನು ನೀಡುವ ಸುದಿನವನ್ನು ಮುಲ್ಕಿಯ ಮಹಾಜನರು ಉತ್ಸಾಹದಿಂದ ನಿರೀಕ್ಷಿಸುತ್ತಿರುವರು.

## ಮಂಜೇಶ್ವರ

ಸ್ಥಳೀಯ [illegible] ಶ್ರೀಯುತ ಅಮ್ಮೆಂಬಳ ಕೃಷ್ಣರಾಯರ ಮನೆಯಲ್ಲಿ ಇಲ್ಲಿಯ ಕಾಂಗ್ರೆಸ್ ಸದಸ್ಯರ ಸಭೆಯು ಶ್ರೀಯುತ [illegible] ಅಧ್ಯಕ್ಷತೆಯಲ್ಲಿ ಸೇರಿ, ಈ ಕೆಳಗಿನವರನ್ನು ತಾಲೂಕು ಕಾಂಗ್ರೆಸ್ ಕಮಿಟಿಗೆ ಸೆಂಬರರನ್ನಾಗಿ ಚುನಾಯಿಸಲಾಯಿತು. [illegible] ಸುವರ್ಣ [illegible] ಮಾಧವ ಕಾಮತ್ ನಂತರ ಸ್ಥಳೀಯ ಕಾಂಗ್ರೆಸ ಕಮಿಟಿಗೆ ಶ್ರೀ ಅಚ್ಯುತ ಕೃಷ್ಣ[illegible]ರನ್ನು ಅಧ್ಯಕ್ಷ [illegible] ... ಕಮಿಟಿಯನ್ನು ರಚಿಸಲಾಯಿತು. ಶ್ರೀ [illegible]ರಾಯ ರಿಗೂ ಕೂಡಿದ ಸಭೆಗೂ ವಂದನಾರ್ಪಣೆಗಳಾದ ಬಳಿಕ ಸಭೆಯು ಮುಕ್ತಾಯವಾಯಿತು.

## ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S No 494/1937

The C B C Udipi Ltd represented by its Manager M Venkatrayn Kamath—Plaintiff

and

ಸೈಯದ್ ಸಾಹೇಬ—ಗೌಡ್ಸೆ ಫಕೀರ ಮಹಮ್ಮದ ಕಾಶಿಂ ಸಾಹೇಬರ ಮಗ—ಉಡುಪಿ ತಾಲೂಕು ಪಡುತೋನ್ಸೆ ಗ್ರಾಮ Defendant

ವಾದಿಯು ಬ್ಯಾಂಕಿಗೆ ಪ್ರತಿವಾದಿಯಿಂದ ಮೂಲಗೇಣಿ ಬಾಬ್ತು ಬರತಕ್ಕ ಕಳೆದ ಪರ್ಯಾಯ [illegible] ಸಂವರದ ಅಗ್ರಾಸ್ತು ಧಾತು ಸಂವರದ ವರೆಗಿನ ಗೇಣಿ ಬಾಕಿ ಒಟ್ಟು ಕ್ರಿ ರೂಪಾಯಿ 99 14-4ಕ್ಕೆ ಮೂಲಗೇಣಿ ಹಕ್ಕಿನ ವ ಸ್ವತ್ತುಗಳ ಹಕ್ಕಿನ ಮಾರಾಟದಿಂದ ಕೂಡ ವಿಮುಕ್ತಿ ಕೇಳಿ ವಾದಿಯು ದಾಖಲು ಮಾಡಿದ ಸದಿ ವ್ಯಾಜ್ಯವು ತಾ 7—3 1938ಕ್ಕೆ ತಸಿಗೆ ಇಟ್ಟಿದೆ. ಈ ದಿವಸ 10 ಗಂಟೆಗೆ ಪ್ರತಿವಾದಿಯು ಕೋರ್ಟಿಗೆ ಹಾಜರಾಗಿಯೂ ವಕೀಲರ ಮುಖಾಂತರ ಹಾಜರಾಗಿ ತಕರಾರು ಇದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಪ್ರತಿವಾದಿಯ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ತಿಳಿದಿರಲಿ.

Udipi, 10-2-'38

M VITTAL KAMATH B A.,L.L.

Vakil for Plaintiff

# ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮಂಗಳೂರು ಶಹಾರ್ ಸೆಲ್ಲಿಕಾಂಪ ಶ್ರೀನಿವಾಸರಾಯರ ಮಗ ವೆಂಕಟಕೃಷ್ಣರಾಯರ ಸಂಪೂರ್ಣ ಹಕ್ಕಿನ ಈ ಕೆಳಗೆ ಶೆಡ್ಯೂಲಿನಲ್ಲಿ ವಿವರಿಸಿದ ಸ್ಥಿರಾಸ್ತಿಗಳನ್ನು ವಿಕ್ರಯಿಸುವರೇ ಅವರಿಂದ ತಾ 16-3-'38ನೇ ತಾರೀಕಿಗೆ ರಿಜಿಸ್ಟ್ರಿಯಾದ ಜನರಲ್ ಪವರ್ ಆಫ್ ಎಟೋರ್ನಿ ಮೂಲಕ ಪೂರ್ಣಾಧಿಕಾರ ಹೊಂದಿದ ಮಂಗಳೂರು ಶಹಾರಿನಲ್ಲಿರುವ ಸಾಹುಕಾರ ಮಿಜಾರ ಅಣ್ಣಪೈಗಳ ಮಗ ಮಿಜಾರ್ ಗೋವಿಂದ ಪೈ ಇವರಿಂದ ಸದ್ರಿ ಸ್ಥಿರಾಸ್ತಿಗಳು ಕೆಳಗೆ ಕಾಣಿಸಿದಂತೆ ಲೆಂಡ್ ಆಗಿ ಮಂಗಳೂರು ಶಹಾರು ತೇರುಬೀದಿಯಲ್ಲಿರುವ ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಉಡುಪಿ ಲಿಮಿಟೆಡ್ ಇದರ ಆಫೀಸಿನ ಉಪ್ಪರಿಗೆಯ ಮೇಲೆ 1938ನೇ ಇಸವಿ ಮಾರ್ಚಿ ತಿಂಗಳ ತಾ. [illegible]ನೇ ಮಂಗಳವಾರ ಘಂಟೆ 8ರಿಂದ 11ರ ವರೆಗೂ, ಏಲಂ ಕೈದು ಆಗುವ ಪರಿಯಂತರ ಬಹಿರಂಗವಾದ ಹರಾಜು [illegible] ಮಾರಾಟಮಾಡಲ್ಪಡುವುವು. ಖರೀದಿಸಬಯಸುವವರು ಸದ್ರಿ ಹರಾಜಿನಲ್ಲಿ ಕೊಂಡುಕೊಳ್ಳಬಹುದು. ಮೂರು [illegible] ಕಾಯಂ ಮಾಡುವುದು ಯಾ ಮಾಡದಿರುವುದು ಏಲಂ ಮಾಡುವವರ ಇಷ್ಟದ ಮೇಲೆ ಹೊಂದಿರುತ್ತದೆ.

ಗೆದ್ದ ದರಖಾಸ್ತುದಾರನು ತನ್ನ ಹೆಸರಿನಲ್ಲಿ [illegible] ಆದ ಕೂಡಲೇ ಏಲಂ ಮೊಬಲಗಿನ ಪೈಕಿ ನಾಲ್ಕನೆಯ ಒಂದಂಶವನ್ನು ಕೂಡಲೇ ಕೆರಕಕ್ಕದ್ದು. [illegible] ಏಲಂ ಕಾಯಂ ಆದ 15 ದಿವಸಗಳ ಒಳಗೆ ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಉಡುಪಿ ಲಿಮಿಟೆಡನ್ನು [illegible] ರಶೀದಿ ಪಡೆಯತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತುದಾರನು [illegible] ಇವರಿಗೆ ಪಾವತಿಮಾಡಿದನ್ನು ಕಳಕೊಳ್ಳುವುದಲ್ಲದೆ ಸದ್ರಿ ದರಖಾಸ್ತುದಾರನ ನಷ್ಟ ಸಂಬಂಧ ಮೇಲೆ [illegible] ಮಾಡಲ್ಪಡುವುದು. ಮತ್ತು ಹಾಗೆ ಮಾಡಲ್ಪಡುವ ಎರಡನೆಯ ಏಲಮಿನಲ್ಲಿ ಹುಟ್ಟಿದ ಪುನಃ ಏಲಂ ಏಲಮಿನ ಐವಜಿಗಿಂತ ಕಮ್ಮಿಯಾದಲ್ಲಿ ಹಾಗೆ ಕಮ್ಮಿಯಾಗುವ ಸದ್ರಿ ನಷ್ಟದ ಮೊಬಲಗನ್ನು ಮೊದಲಿನ ಲಗಾಯ್ತು ವಸೂಲು ವರೆಗೆ ಸೇಕಡಾ 12½ರ ದರದ ಬಡ್ಡಿ ಸಮೇತ ಕೊಡುವರೆ ಪ್ರಥಮ ದರಖಾಸ್ತುದಾರನು ಬದ್ಧನಾಗಿರಬೇಕು. ಹೊರತು ಎರಡನೇಯ ಏಲಮಿನಲ್ಲಿ ಹೆಚ್ಚಿಗೆ ಐವಜು ಹುಟ್ಟಿದರೆ ಅದನ್ನು ಕೇಳಲು ತಪ್ಪಿದ ದರಖಾಸ್ತುದಾರನಿಗೆ ಹಕ್ಕು ಇರುವುದಿಲ್ಲ.

ಗೆದ್ದ ದರಖಾಸ್ತುದಾರನು ದರಖಾಸ್ತಿನ ಮೊಬಲಗನ್ನು 15 ದಿವಸಗಳ ಒಳಗೆ ವಸೂಲು ಕೊಟ್ಟಲ್ಲಿ ಆತನ ಹೆಸರಲ್ಲಿ ದರಖಾಸ್ತು ಕಾಯಂ ಮಾಡಿ ಸದ್ರಿ ದರಖಾಸ್ತುದಾರನ ಖರ್ಚಿನಿಂದ ಅಗತ್ಯವಿರುವ ದಸ್ತಾವೇಜು ಸದ್ರಿ ಅಧಿಕಾರ ಹೊಂದಿದ ನನ್ನಿಂದ ರಿಜಿಸ್ಟ್ರಿ ಸಿಕಿ ಬರಕೊಡಲಾಗುವುದು. ಪ್ರಥಮ ದರಖಾಸ್ತಿನ ಮೊಬಲಗನ್ನು ವಾಯಿದೆ ಒಳಗೆ ವಸೂಲು ಕೊಡದ ಸಂಗತಿಯಲ್ಲಿ ಮಾರಲ್ಪಡುವ ಎರಡನೇ ದರಖಾಸ್ತಿನ ರೂಲುಗಳ ಸಹಾ ಮೇಲೆ ಕಾಣಿಸಿದಂತೆಯೇ ಆಗಿರುತ್ತವೆ.

ಏಲಮಿಗೆ ಕಾರಣವಾದ ಆಸ್ತಿಗಳು ಮಂಗಳೂರು ಕೆನರಾ ಬೇಂಕಿಂಗ್ ಕೋರ್ಪೊರೇಶನಿಗೆ ಸದ್ರಿ ಸೆಲ್ಲಿಕಾಂಪ ವೆಂಕಟಕೃಷ್ಣರಾಯರು ಬರಕೊಟ್ಟ ದಕ್ಷಿಣ ಕನ್ನಡ ಜಿಲ್ಲಾ ರಿಜಿಸ್ಟ್ರಾರರ ಆಫೀಸು ನಂಬ್ರ 617/'33ಕ್ಕೆ ರಿಜಿಸ್ಟ್ರಿ ಆದ Indemnity Bondನಲ್ಲಿ ಸೇರಿರುತ್ತವೆ. ಏನಹಾ ಬೇರೆ ಯಾವ ತರದಿಂದಲೂ ಪರಾಧೀನವಾಗಿರುವುದಿಲ್ಲ. ಪ್ರಕೃತ ಹರಾಜು ಮಾಡುವ ಆಸ್ತಿಗಳ ಕ್ರಯದ ಪ್ರತಿಫಲವು ಸದ್ರಿ ಕೋರ್ಪೊರೇಶನ್ ಬ್ಯಾಂಕಿಗೆ ಪಾವತಿಮಾಡಲ್ಪಡುವುದರಿಂದ ಅಂಥಾ ಜವಾಬುದಾರಿಯ ಏಲಮಿನಲ್ಲಿ ಪಡಕೊಳ್ಳುವವರ ಮೇಲಾಗಲೀ ಅವರು ಪಡಕೊಳ್ಳುವ ಆಸ್ತಿಯ ಮೇಲಾಗಲೀ ಎಷ್ಟನ್ನಾದರೂ ಹೊಣೆಯಾಗುವದಿಲ್ಲ.

ನಾನು ಬರೀ ಏಜಂಟನಾಗಿರುವುದರಿಂದ ಹಕ್ಕುಗಳ ಕಾಂಡುಕೊರತೆಗಳನ್ನು ಅವರವರೇ ತಿಳಿದುಕೊಳ್ಳಬೇಕಾ[illegible] ... ಜವಾಬುದಾರಿ ಇರುವುದಿಲ್ಲ ಎಂಬುದನ್ನು ಈ ಮೂಲಕ ... ಸ್ಪಷ್ಟಗೊಳಿಸುವೆ ... ಯ ಮುಂದಿನ ಯಾವತ್ತು ... ಕ್ರಯಗಾರನೇ

ಈ ಏಲಂ ಪ್ರಕಾರ ಕ್ರಯಕ್ಕೆ ಪಡಕೊಂಡ ಆ[illegible] ಜವಾಬುದಾರನಾಗಿರತಕ್ಕದ್ದು.

ಮಾರಾಟಮಾಡುವ ಸ್ಥಿರಾಸ್ತಿಗಳ ಶೆಡ್ಯೂಲು.

| ಗ್ರಾಮದ ಹೆಸರು | ಸರ್ವೆ ನಂಬ್ರ | ಸಬ್ ಡಿವಿಜನ್ ನಂಬ್ರ | ಕಿಸ್ಮು | ವಿಸ್ತೀರ್ಣ | ಸೆಂಟ್ಸ್ | ರೇಟು | ರೆವಿನ್ಯು ವ[illegible] | ಷರಾ |
|---|---|---|---|---|---|---|---|---|
| ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಕಸಬಾ ಬಜಾರ ಗ್ರಾಮದ ... | 700 | 1 | [illegible] | 1 | [illegible] 1 10 | XII | 4-9 | ... |
| | 70[illegible] | | 3 | 0 | 13 1 9 | XII | 4 9 | |
| | 649 | 1B | [illegible] | Split 4848 | 1 9 | XII | 1-5 | |
| | 649 | | 3 | Split 2614 | 0 1 | XII | 1-[illegible] | |
| | 779 | | 3 | 0 | [illegible] 0 8 | XII | [illegible] | |

ಕೆರೆ ಬಾವಿಗಳು ಇರುವ ಉಪಕಟ್ಟಡಗಳು ತಕ [illegible] ತೆಂಗ, ಕೆಂಗ, ಹಲಸು, ಮಾವು ವಗೈರೆ ಮರಮಟ್ಟುಗಳ ಸಹ.

ಮಂಗಳೂರು ತಾ 10-2-1938

Mijar Govinda Pai ಪವರ್ ಆಫ್ ಎಟೋರ್ನಿ

N B ಮೇಲಿನ ಆಸ್ತಿಯ ರಿಕಾರ್ಡುಗಳನ್ನು ನೋಡಲು [illegible] ಬೇಂಕಿಂಗ್ ಕೋರ್ಪೊರೇಶನ್ ಉಡುಪಿ ಲಿಮಿಟೆಡ್ ಮಂಗಳೂರು [illegible] ರಜಾ ಇಲ್ಲದ ದಿವಸ ಬೆಳಗ್ಗೆ ಗಂಟೆ 11ರಿಂದ ಸಾಯಂಕಾಲ ಗಂಟೆ 4ರ ತನಕ ಬ್ಯಾಂಕಿನ [illegible] ದಿವಸಗಳಲ್ಲಿ ನೋಡಬಹುದು.


ESTD. 1906

CANARA BANK

LIMITED

NOW RECEIVES SEASON DEPOSITS AT RATES UP TO 3½% P. A.

months 3½% ... Rs 5000 ... running fa...

# ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ.

ಪಾರ್ಧಾದಲ್ಲಿ ಕಳೆದ ವಾರ ಪ್ರಾರಂಭವಾಗಿ ಮೊನ್ನೆಯ ತನಕ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ—ಫೆಡರೇಶನಿನ ಕುರಿತು ಠರಾವಲ್ಲದೆ ಆಶ್ರಿತ ರಾಜ್ಯಗಳಲ್ಲಿ ನಡೆಯುವ ಕಾಂಗ್ರೆಸ್ ಚಟುವಟಿಕೆಗಳೊಡನೆ ಸಹಾನುಭೂತಿಯನ್ನು ಸೂಚಿಸಿಯೂ, ಆಶ್ರಿತ ರಾಜ್ಯಗಳಲ್ಲಿ ಕಾಂಗ್ರೆಸ್ ಚಳವಳಿಯು ಅಲ್ಲಿನ ಪ್ರಜೆಗಳಿಂದಲೆ ಸ್ವಸಾಮರ್ಥ್ಯವಾಗಿ ನಡೆಯಬೇಕೆಂದೂ, ಸಿಲೋನಿನ ಭಾರತೀಯರಿಗೆ ಹಾನಿ ತರುವ ತರದ ಸರಕಾರದ ವರ್ತನೆಯನ್ನು ಖಂಡಿಸಿಯೂ, ಜಂಜಿಬಾರಿನ ಲವಂಗದ ಬಹಿಷ್ಕಾರದ ಯಶಸ್ವಿಯಾಗಿ ನಡೆದಿರುವುದೆಂದೂ ಇನ್ನೂ ಜಂಜಿಬಾರಿನ ಭಾರತೀಯರ ... ಕುರಿತು ಕಾ ಸುಧಾರಿಸಲ್ಪಡಲಿಬೇಕೆಂದೂ, ಪೂರ್ವ ಆಫ್ರಿಕಾದಲ್ಲಿನ ಭಾರತೀಯರ ಹಕ್ಕುಗಳ ರಕ್ಷಿಸಲ್ಪಡಬೇಕೆಂದೂ, ಜಪಾನಿಯ ಒಡವೆಗಳನ್ನು ಬಹಿಷ್ಕರಿಸಬೇಕಾಗಿಯೂ, ಚೀನಾದಲ್ಲಿ ನಡೆಯುವ ಜಪಾನೀಯ ಸಾಮ್ರಾಜ್ಯಶಾಹಿಯ ಅತ್ಯಾಚಾರವನ್ನು ಖಂಡಿಸಿಯೂ, ಇತ್ಯಾದಿ ವಿಷಯಗಳ ಮೇಲೆ ಠರಾವುಗಳಾಗಿರುತ್ತವೆ

## ಜರ್ಮನಿಯಲ್ಲಿ ನಾಜಿಗಳು ಪ್ರಬಲರಾಗಿರುವರು

ಜರ್ಮನಿಯಲ್ಲಿ ನಾಜಿಪಕ್ಷ ಮತ್ತು ಸಂಗ್ರಾಮ ಪಕ್ಷ ಎಂಬೀ ಎರಡು ಪಕ್ಷಗಳಿದ್ದವು ಸಂಗ್ರಾಮ ಪಕ್ಷವು ಕೆಲವು ಪ್ರಸಿದ್ಧ ಸಂಗ್ರಾಮ ನಾಯಕರ ನಾಯಕತ್ವದಲ್ಲಿದ್ದು ಅದು ಹಿಟ್ಲರನ ಪ್ರೇರಣೆಯ ಹೊರಗಾಗಿತ್ತು ಆದರೆ ಈ ವರೆಗೆ ಸೇನಾಪತಿಯಾಗಿದ್ದ ಈ ಸಂಗ್ರಾಮ ಪಕ್ಷ ನಾಯಕರೊಬ್ಬರು ನಿವೃತ್ತರಾಗಿ, ಸೇನಾಪತಿತ್ವವನ್ನು ಹಿಟ್ಲರನೇ ವಹಿಸಿರುವನಲ್ಲ ... ಈಗ ನಾಜಿನಾಯಕನು ... ಪಕ್ಷದ ನಾಯಕನೂ ... ಜರ್ಮನಿಯ ಅತ್ಯಂತ ಪ್ರಬಲ ... ಜರ್ಮನಿ ಸರಕಾರದ ಮಂತ್ರಿಮಂಡಲವು ಬೇಗನೆ ಕೂಡಿ, ರಾಜಕೀಯ, ಸಾಂಪತ್ತಿಕ, ಸಂಗ್ರಾಮಿಕ ಬಲಗಳನ್ನು ಹೆಚ್ಚಿಸುವ ಕುರಿತು ಆಲೋಚನೆಗಳಾಗುವವೆಂದು ವಾರ್ತೆಯಿದೆ

ಇಟಲಿಯ ಫೆಸಿಯಿಸ್ಟ ಗ್ರೇಂಡ್ ಕೌನ್ಸಿಲು ಬೇಗನೆ ಸಭೆ ಸೇರಿ ಜಗತ್ತಿನ ರಾಜಕೀಯ ಪರಿಸ್ಥಿತಿಯ ಕುರಿತು ಆಲೋಚಿಸುವುದು

## ... ರಾಜಕೀಯ ಕೈದಿಗಳ ಸಮಸ್ಯೆ

... ಕಾರಾಗೃಹ ವಾಸದಲ್ಲಿರುವ ... ರವನ್ನು ಹಿಡಿದಿರುವ ... ದಿಗಳನ್ನು ಬಿಹಾರಿನ ... ಸಿಂಹರು ರಾಷ್ಟ್ರಪತಿ ... ದು, ಕಾಂಗ್ರ ... ಪರಿಣಾಮ ... ಈಗ ಹಸಿವಿನ ... ವರು.

... ವೊಕದಮ್ಮೆಯ ಅಂಡಮಾನಗಳನ್ನು ಬಿಡುಗಡೆಮಾಡುವುದರಲ್ಲಿ ಬಿಹಾರಿನ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಹೆಚ್ಚಿನ ಕಷ್ಟವಿರದೆಂದು ವಾರ್ತೆಯಿದೆ

ಬಿಹಾರಿನ ಪ್ರಧಾನರು ರಾಜಕೀಯ ಕೈದಿಗಳ ಸಮಸ್ಯೆಸುಧಾರಣೆಯ ಕುರಿತು ಬಲವಾದ ಭರವಸೆ ಕೊಟ್ಟಿರುವರು

## ಲಾಹೋರಿನ ರಾಜಕೀಯ ಕೈದಿಗಳು

ಮಹಾತ್ಮಾ ಗಾಂಧಿಯವರ ಭರವಸೆಯುಕ್ತ ಸಂದೇಶ ಬಂದದಾಗ್ಯೂ, ಲಾಹೋರಿನ ರಾಜಕೀಯ ಕೈದಿಗಳು ಹಸಿವಿನ ಮುಷ್ಕರವನ್ನು ... ತೊರೆದಿಲ್ಲ

## ಕಾನ್‌ಪುರದಲ್ಲಿ ಗಲಭೆ

ಮುಸ್ಲಿಂ ಲೀಗು ಮತ್ತು ಮುಸ್ಲಿಂ ಅಂಸಾರ್ ಪಕ್ಷದವರ ಪರಸ್ಪರ ತಿಕ್ಕಾಟದಿಂದ ಕಾನ್ಪುರದಲ್ಲಿ ಯುಕ್ತಪ್ರಾಂತ್ಯದ ಮಂತ್ರಿಮಂಡಲದ ಹಫೀಜ್ ಮಹಮ್ಮದ ಇಬ್ರಾಹಿಮರು ಅಲ್ಲಿಗೆ ಚಿತ್ತೈಸಿದಾಗ, ಅವರು ಮುಸ್ಲೀಮ ಲೀಗನ್ನು ತ್ಯಜಿಸಿ, ಕಾಂಗ್ರೆಸ್ಸ ಸೇರಿದುದಕ್ಕಾಗಿ ಮುಸ್ಲಿಂ ಲೀಗನವರು ಕಪ್ಪು ಧ್ವಜಗಳ ಪ್ರದರ್ಶನ ನಡೆಸಿದುದರ ಪರಿಣಾಮವಾಗಿ ಸಣ್ಣದೊಂದು ಗಲಭೆಯು ಉಂಟಾಗಿ, ಅನೇಕರಿಗೆ ಗಾಯ ಇತ್ಯಾದಿ ಹಾನಿಗಳಾದವು ಜಿಲ್ಲಾ ಕಲೆಕ್ಟರರು ೧೪೪ನೇ ಕ್ರಮವನ್ನು ಜ್ಯಾರಿಮಾಡಿ, ದಂಗೆ ಸಂಭವದಲ್ಲಿ ಕೋವಿ ಹಾರಿಸಲು, ಇತ್ತ ಅಣ್ಣಿಯ ದೆಸೆಯಿಂದ ಗಲಭೆಯು ಬೇಗನೆ ತಣಿಯಲ್ಪಟ್ಟಿತು ಪುಂಡರ ತಂಡಗಳು ಲಾಠಿಗಳನ್ನು ಹಿಡಕೊಂಡು ನಗರದಮಾರ್ಗಗಳಲ್ಲಿ ಸಂಚರಿಸುತ್ತಿದ್ದಾರೆ ಪೋಲೀಸು ಬಂದೋಬಸ್ತು ಇದೆ

## ಬಂಗಾಳದ ರಾಜಕೀಯ ಕೈದಿಗಳು

ಸಮಸ್ಯೆಯು ಸುಭಾಷ್ಚಂದ್ರ ಬೋಸರು ಬಹಳವಾಗಿ ಬಾಧಿಸುತಿದ್ದು ಅದೀಗ ವಿಷಮಸ್ಥಿತಿಯನ್ನು ಹೊಂದಿರುತ್ತದೆ ಮಹಾತ್ಮಾಜಿಯವರು ಹರಿಪುರದ ಕಾಂಗ್ರೆಸ್ಸಿನ ತರುವಾಯ ನೇರಾಗಿ ಬಂಗಾಳಕ್ಕೆ ತೆರಳಿ ರಾಜಕೀಯ ಕೈದಿಗಳ ಸಮಸ್ಯೆ ಸ ಧಾರಣೆ ಕೈಗೊಳ್ಳುವರಾಗಿ ಬಲವಾದ ವಾರ್ತೆಯಿದೆ ರಾಜಕೀಯ ಕೈದಿಗಳ ಸಮಸ್ಯೆಯನ್ನು ಎದುರಿಸಬೇಕಾಗಿ ಶ್ರೀ ಬೋಸರು ಸಂಕಲ್ಪಮಾಡಿರುವರು

## ಪಂಡಿತ ಮಾಲವೀಯರು.

ಈಗ ಕಾಯಕಲ್ಪ ಚಿಕಿತ್ಸೆಯನ್ನು ಹೊಂದುತ್ತಿದ್ದವರು ಆದರಿಂದ ಈಗಾಗಲೆ ಬಾರಿ ಗುಣಾಂಶಗಳನ್ನು ಪಡೆದಿರುವರೆಂದು ವಾರ್ತೆ ಬಂದಿದೆ ಪಂಡಿತರ ದೇಹದಲ್ಲಿರುವ ವೃದ್ಧಾಪ್ಯದೆಸೆಯ ಅನೇಕಕೊರತೆಗಳುಮಾಯವಾಗಿ ಅವರಲ್ಲೀಗ ತಾರುಣ್ಯಭಾವವು ಕಾಣಿಸುವುದೆಂದೂ, ಪಂಡಿತರ ಜ್ಞಾನಶಕ್ತಿಯು ಮೊದಲಿನ ತಾರುಣ್ಯದ ಸ್ಥಿತಿಯನ್ನು ಹೊಂದಿರುವುದೆಂದೂ ಅವರೀಗ ದೃಷ್ಟಿಚಕ್ರವಿಲ್ಲದೆ ಓದುತ್ತಿದ್ದಾರೆಂದೂ ತಿಳಿದು ಬರುತ್ತದೆ ಈ ಕಾಯಕಲ್ಪ ಚಿಕಿತ್ಸೆಯಿಂದ ಪಂಡಿತರ ತಾರುಣ್ಯವನ್ನು ಪಡೆಯುವಾಗ ಅವರಲ್ಲಿ ಹೊಸ ಹಲ್ಲುಗಳು ಮೊಳೆಯುವವಂತೆ ಈ ಕಾಯಕಲ್ಪ ಚಿಕಿತ್ಸೆಯಿಂದ ಮನುಷ್ಯನ ಆಯುಷ್ಯವನ್ನು ಬೇಕಾದಂತೆ ಹೆಚ್ಚಿಸಬಹುದಂತೆ

## ಜಪಾನಿಗೆ ಇತರ ಜನಾಂಗಗಳ ಎಚ್ಚರಿಕೆ

ಲಂಡನ್ ನೌಕಾ ಒಪ್ಪಂದ ಶರ್ತಗಳಿಗೆ ವಿರುದ್ಧವಾಗಿ ಜಪಾನ ಮಹತ್ತರದ ಯುದ್ಧ ಜಹಜುಗಳನ್ನು ಕಟ್ಟಲು ನಿರ್ಧಾರ ಮಾಡಿರುವುದು ಇದರಿಂದ ಆ ಒಪ್ಪಂದಕ್ಕೆ ಸಹಿ ಹಾಕಿದ ಜನಾಂಗಗಳು,ತಾವೂ ಕೂಡ ಅದೇ ತರದಲ್ಲಿ ಒಪ್ಪಂದದ ನಿರ್ಲಕ್ಷ ಮಾಡಿ ... ಹಡಗುಗಳನ್ನು ಕಟ್ಟಿಸುವೆವೆಂದು ಎಚ್ಚರಿಕೆ ಕೊಟ್ಟಿರುವರು ಈ ಎಚ್ಚರಿಕೆ ಪ್ರಕಾರ ಮಹತ್ತಾದ ಯುದ್ಧ ಹಡಗುಗಳನ್ನನೇಕವುಗಳನ್ನು ಸಿದ್ಧಪಡಿಸುವ ಮಹಾ ಯೋಜನೆಯೊಂದನ್ನು ಸಂಯುಕ್ತ ಅಮೇರಿಕವು ಸದ್ಯದಲ್ಲೇ ಕೈಗೊಳ್ಳುವುದಂತೆ ಅದೇ ತರದಲ್ಲಿ ಬ್ರಿಟನ್, ಫ್ರೆಂಚ್ ಸರಕಾರಗಳು ನೌಕಾರಚನೆಯ ಮಹಾ ಯೋಜನೆಗಳನ್ನು ಕೈಗೊಳ್ಳಲಿದ್ದಾರೆ

## ಬಂಗಾಳದಲ್ಲಿ ಕೋಮುಗಳ ಐಕ್ಯ.

ಬಂಗಾಳದ ಆರ್ಥಿಕ ಸಚಿವರಾದ ಶ್ರೀ ನಳಿನಿರಂಜನ್ ಸರ್ಕಾರರವರು ಬಾಬು ಸುಭಾಷ್ಚಂದ್ರ ಭೋಸರನ್ನು ಅವರ ಮನೆಯಲ್ಲಿ ಕಂಡು, ಬಂಗಾಳದ ರಾಜಕೀಯ ಸಮಸ್ಯೆಗಳ ಕುರಿತು ಮಾತುಕತೆ ನಡೆಸಿದರಾಗಿ ವಾರ್ತೆಯಿದೆ ಈ ಮಾತುಕತೆಗಳಿಂದ ಬಂಗಾಳಪ್ರಾಂತ್ಯದ ವಿವಿಧ ವರ್ಗಗಳಲ್ಲಿ ಒಳ್ಳೇ ತರದ ಐಕ್ಯಭಾವವುಂಟಾಗುವುದೆಂದು ...

# ರಾಜಕೀಯ ಕೈದಿಗಳ ಸಮಸ್ಯೆ!

ಅಜಾದರ ಕರೆಗೆ ಹಕ್ಕರ ಉತ್ತರ

ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಮುಸ್ಲಿಮರ ಹಿತಗಳಿಗೆ ಯಾವ ತರದ ಭಂಗಗಳು ಬಂದಿವೆ, ಅವುಗಳನ್ನು ತೋರಿಸಿ ಕೊಟ್ಟರೆ, ಅವುಗಳನ್ನು ವಿಚಾರಣೆಗೊಳಿಸ ಬೇಕೆಂದು ಮೌಲಾನಾ ಅಬ್ದುಲ್ ಕಲಾಮ ಅಜಾದರು ಬಂಗಾಳದ ಮುಖ್ಯ ಮಂತ್ರಿ ಹಕ್ಕರಿಗೆ ಕಳೆದ ವಾರ ಒಂದು ಪತ್ರವನ್ನು ಕಳುಹಿಸಿ ಕೊಟ್ಟುದಕ್ಕೆ, ಹಕ್ಕರಿಂದ ನೂರಾರು ಆರೋಪಗಳಿಂದ ಕೂಡಿದ ಒಂದು ಪತ್ರವು ಕಳುಹಿಸಲಾಗಿದೆ ಎಂದು ವಾರ್ತೆ



ಗೋವಿಂದ ವಲ್ಲಭ ಪಂತರವರು ಪ್ರಧಾನರು

## ವಿಮಾನವನ್ನು ಪಯೋಗಿಸಿದರು

ಮೊನ್ನೆ ದಿವಸ ಯುಕ್ತಪ್ರಾಂತ್ಯದ ಪ್ರಧಾನರಾದ ಗೋವಿಂದ ವಲ್ಲಭ ಪಂತರು ಕಾನ್ಪುರದಲ್ಲಿ ನಡೆಯುವ ರಾಜಕೀಯ ಪರಿಷತಿನಲ್ಲಿ ಭಾಗವಹಿಸಲು ಲಕ್ನೋದಿಂದ ತಮ್ಮ ಸೆಕ್ರೆಟರಿಯವರಿಂದ ಕೂಡಿದವರಾಗಿ ವಿಮಾನದ ಮೂಲಕ ಹಾರಾಡಿ ಕಾನ್ಪುರಕ್ಕೆ ತೆರಳಿ ಅಲ್ಲಿ ನಡೆದ ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಿ ಗಲಭೆ ತಣಿಸುವ ಏರ್ಪಾಡುಗಳನ್ನು ಮಾಡಿ ವಿಮಾನ ಮೂಲಕ ಲಕ್ನೋವಿಗೆ ಹಿಂತಿರುಗಿ ಅಲ್ಲಿ ನಡೆಯುವ ಅಸೆಂಬ್ಲಿ ಅಧಿವೇಶನಕ್ಕೆ ಭಂಗ ಬಾರದಂತೆ ... ದರು

## ಹಿಂದೂ ಮಹಾಸಭೆಯ ಎಚ್ಚರಿಕೆ.

ಹಿಂದೂ ಮಹಾಸಭೆಯನ್ನು ಯಾ ಹಿಂದೂಗಳನ್ನು ವಿಚಾರಿಸದೆ ಆಗುವ ಕೋಮುವಾರು ಒಪ್ಪಂದವು ಹಿಂದೂ ಮಹಾಸಭೆಗೆ ... ಹಿಂದುಗಳಿಗೆ ಬಂಧುವಾಗಲಾರದೆಂದೂ ಕಾಂಗ್ರೆಸ್ ಕೋಮುವಾರು ಒಪ್ಪಂದವನ್ನು ಅಧಿಕಾರವಿರುವುದಿಲ್ಲವೆಂದೂ ಹಿಂದೂಮಹಾಸಭೆಯ ವರ್ಕಿಂಗ್ ಕಮಿಟಿಯ ಸಭೆಯು ಮೊನ್ನೆ ಸೇರಿ ಠರಾವಾಗಿರುತ್ತದೆ ಮುಸ್ಲಿಮ ಲೀಗು ಹೇಗೆ ಮುಸ್ಲಿಮರ ಪ್ರತಿನಿಧಿಯಾಗಿರುತ್ತದೆಯೋ, ಅದೇ ತರವಲ್ಲಿ ಹಿಂದೂ ಮಹಾಸಭೆಯು ಹಿಂದೂಗಳ ಪ್ರತಿಯಾಗಬೇಕೆಂದು, ಅದರ ಮತವಾಗಿರುತ್ತದೆ

## ಫ್ರಾಂಕೊನಿಗೆ ಎಡೆನ್ನರ ಎಚ್ಚರಿಕೆ

ಬ್ರಿಟಿಷ ಸರಕಾರದ ಬಹೀರ್ ವ್ಯವಹಾರ ಕಾರ್ಯದರ್ಶಿಯವರು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಬಂದೊಂದು ಪ್ರಶ್ನೆಗೆ ಉತ್ತರವೀಯುತ್ತಾ, ಜನರಲ್ ಫ್ರಾಂಕೊನು ಇತ್ತೀಚೆಗೆ ಕಳ್ಳಾಟಕೆಯಲ್ಲಿ ಬ್ರಿಟಿಷ ವರ್ತಕ ಹಡಗದ ಮೇಲೆ ನಡೆಸಿದ ಅತಿಕ್ರಮಗಳ ಕುರಿತು ಮಾತನಾಡಿದರು ಬ್ರಿಟಿಷ ಹಡಗುಗಳ ಮೇಲೆ ಅತಿಕ್ರಮ ನಡೆದುದು ಫ್ರಾಂಕೋನಿನಿಂದಲೇ ಎಂದು ತಿಳಿದು ಬರುತ್ತದೆ ಫ್ರಾಂಕೊನು ತನ್ನ ವರ್ತನೆಯನ್ನು ಬಿಡದಿದ್ದರೆ ಬ್ರಿಟಿಷರಿಗೆ ತನ್ನ ಯುದ್ಧ ಜಹಜುಗಳಿಗೆ ಕೆಲಸಹೇಳಬೇಕಾಗಿ ಬರುವುದೆಂದೂ ಎಡೆನ್ನರ ಎಚ್ಚರಿಕೆಯು ಹೊರಟಿರುತ್ತದೆ

## ಪೋಲೀಸ ಆಫೀಸರರ ಕೊಲೆ

ಗಡಿನಾಡಿನ ಪೇಶಾವರ ಜಿಲ್ಲೆ ಮಾತ್ರಾಜ ಪೋಲಿಸ ಸ್ಟೇಶನ ಸ್ಪೇ। ಇನ್ಸಪೆಕ್ಟರಾದ ವಲಿ ಮಹಮ್ಮದ್ ಶಾ ಎಂಬವರು ಪೇಶಾವರ ಮಾತ್ರಾ ರಸ್ತೆಯಲ್ಲಿ ಮೊನ್ನೆ ರಾತ್ರಿಯಲ್ಲಿ ಯಾರಿಂದಲೋ ಗುಂಡಿಕ್ಕಿದವರಾಗಿ ಕೊಲೆ ಮಾಡಲ್ಪಟ್ಟಿರುವರು ಕೊಲೆ ಪಾತಕಿಗಳಾರೆಂದು ತಿಳಿದುಬಂದಿಲ್ಲ ಪೇಶಾವರದ ಒಂದು ಕೋರ್ಟಿನಲ್ಲಿ ಸಾಕ್ಷಿ ಹೇಳಿ ಅವರು ಮಾತ್ರಾಕೆ ಹಿಂತಿರಳು, ಸಮಯ ಮಧ್ಯರಸ್ತೆಯಲ್ಲಿ ಈ ಕೊಲೆಯು ನಡೆಯಿತು ಇನ್ಸಪೆಕ್ಟರ ಶವವು ಮರ ದಿವಸ ರಸ್ತೆಯಲ್ಲಿ ದೊರಕಿತು ಅವರೊಡನಿದ್ದ ರಿವಾಲ್ವರು ಕಾಣೆಯಾಗಿತ್ತು

## ಮುಂಬಯಿಯ ಕಾಂಗ್ರೆಸ್ ಸರಕಾರ

ಮುಂಬಯಿ ಕಾಂಗ್ರೆಸ್ ಆರ್ಥಿಕ ಸಚಿವರು ತಮ್ಮ ಬಜೇಟನ್ನು ಇದೇ ೩೦ ತಾರೀಖಿನಲ್ಲಿ ಎಸೆಂಬ್ಲಿಯಲಿ ಪ್ರಸಿದ್ಧಿಪಡಿಸುವರಾಗಿ ತಿಳಿದುಬರುತ್ತದೆ ಈ ಭಾರಿಯ ಬಜೇಟಿನಲ್ಲಿ ಸ್ವಲ್ಪ ಡಿಫಿಸಿಟ್ ಕಾಣಿಸಬಹುದಂತೆ ಗ್ರಾಮಾಭ್ಯುದಯದ ಬಗ್ಗೆ ಇದರಲ್ಲಿ ರೂ ೫೦ ಲಕ್ಷ ವಿಂಗಡಿಸಲಾಗಿದೆ ಈ ಹಣವನ್ನು ಹಳ್ಳಿಗಳಿಗೆ ಶುದ್ಧವಾದ ನೀರನ್ನು ಒದಗಿಸುವ ಯೋಜನೆ ಗ್ರಾಮ ಶಿಕ್ಷಣ ವೈದ್ಯಕೀಯ ಸಹಾಯ ಇತ್ಯಾದಿ ಗ್ರಾಮಾಭ್ಯುದಯದ ಕಾರ್ಯಗಳಿಗಾಗಿ ವಿನಿಯೋಗಿಸಲಾಗುವುದು

## ಶೀತವನ್ನೇಕೆ ಅನುಭವಿಸುತ್ತೀರಿ

ಶೀತ ಹೊಂದಿದ ಎಲ್ಲರ ಅವಸ್ಥೆಯೂ ಒಂದೇ ತರದಲ್ಲಿ ಕಣ್ಣಿಂದ ನೀರು ಬರುವುದು ನೆಗಡಿ ಬರುವುದು ಗಂಟಲು ಉರಿತ ಇತ್ಯಾದಿ ಪೀಡೆಗಳನ್ನು ನಾವು ಪೆಪ್ಸ ಶ್ವಾಸನೀಯ ಗುಳಿಗೆಗಳನ್ನು ಸೇವಿಸಿ ತಪ್ಪಿಸಿಕೊಳಬಹುದು ಪೆಪ್ಸ ಗುಳಿಗೆಗಳು ಬಾಯಲ್ಲಿ ಕರಗುತ್ತಿರುವಾಗ ಒಂದು ತರದ ಔಷಧೀಯ ಧೂಮವನ್ನು ಹೊರಡಿಸಿ ಆ ಧೂಮವು ನಿಮ್ಮ ಶ್ವಾಸಕೋಶ, ಗಂಟಲು ಇತ್ಯಾದಿಗಳನ್ನು ಶೀತಕ್ಕೆ ಕಾರಣವಾದರೋಗಾಣುಗಳನು ನಾಶಮಾಡುತ್ತದೆ ಆದ್ದರಿಂದ ನಿಮ್ಮಲ್ಲಿರುವ ಶೀತ ಮಾಯವಾಗುತ್ತದೆ ಜ್ವರವು ದೂರವಾಗುತ್ತದೆ

ಪೆಪ್ಸ ಮಾತ್ರೆಗಳು ಬಾಟ್ಲಿ ಒಂದಕ್ಕೆ ರೂ ೧ರ ಪ್ರಕಾರ ಎಲ್ಲಾ ಕಡೆಗಳಲ್ಲಿ ಮಾರಾಟವಾಗುತ್ತದೆ

ಏಜಂಟರ - ಮೆಸ್ಸರ್ಸ್ ದಾಥಾ ಎಂಡ್ ಕೊ, ಪಿ. ಟಿ. ಮದ್ರಾಸು

ವಿಷಹಾರಿ ಶ್ವಾಸನೀಯ ಪೆಪ್ಸ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

DIAMONDS! DIAMONDS!
BEST BRILLIANCY!

# K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎವರ್ಸ್ಟ್ಯಾಂಡಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗಿದ್ದರೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ಬೆತ್ತ ಗುಡ್ಡ ಮು. | 1 — 10 | 1 — 10 |
| ರಾಶಿ ಅಕ್ಕಿ | 3 — 8 | 4 — 0 |
| ಸುಗ್ಗಿ | 4 — 0 | 4 — 0 |
| ಗುಡ್ಡು .. | 4 — 2 | 4 — 2 |
| ಊರ ಅವಲ್ ಬೆಳ್ತಿಗೆ . | 4 — 7 | 4 — 7 |
| ರಂಗೂನು ಬೆ ಗೋ ಅಕ್ಕಿ | 7 — 2 | [illegible] — 4 |
| ಎಲ್ಲೂರು ಬೆ ಮು ಅಕ್ಕಿ | 3 — 14 | 4 — 0 |
| ಗೋದಿ ಗೋಣಿ ಅಕ್ಕಿ .. | 13 — 0 | 14 — 8 |
| ತೊಗರಿ ಗೋಣಿ ಅಕ್ಕಿ .. | 11 — 8 | 18 — 8 |
| ಹುರುಳಿ ಗೋಣಿ ಅಕ್ಕಿ .. | 6 — 0 | 6 — 2 |
| ಕಡಲೆ ಗೋಣಿ ಅಕ್ಕಿ .. | 9 — 8 | 10 — 8 |
| ತೊಗರಿಬೇಳೆ ಗೋಣಿ ಅಕ್ಕಿ . | 17 — 8 | 18 — 0 |
| ಉದ್ದು ಗೋಣಿ ಅಕ್ಕಿ | 9 — 0 | 9 — 8 |
| ಹೆಸರು ಗೋಣಿ ಅಕ್ಕಿ | 9 — 12 | 10 — 8 |
| ಉದ್ದಿನಬೇಳೆ ಖಂಡಿ ಅಕ್ಕಿ | 27 — 8 | 31 — 0 |
| ಉಪ್ಪು ಗೋಣಿ ಅಕ್ಕಿ | 4 — 8 | 5 — 4 |
| ಕೊಬ್ರಿ ಖಂಡಿ ಅಕ್ಕಿ | 50 — 0 | 2 — 0 |
| ಎಳ್ಳೆಂಡ ಖಂಡಿ ಅಕ್ಕಿ | 25 — | 26 — 0 |
| ತೆಂಗಿನ ಎಣ್ಣೆ ಮಣ ಅಕ್ಕಿ | 3 — 7 | 3 — 7 |
| ಎಳ್ಳೆಣ್ಣೆ ಮಣ ಅಕ್ಕಿ | 6 — 0 | 7 — 0 |
| ಚಿಮಿಣಿಎಣ್ಣೆ ಪೆಟ್ಟಿಗೆ ಅಕ್ಕಿ | 6 — 5 | 7 — 5 |
| ನೆಲಕಡಲೆ ಮ ಅಕ್ಕಿ | 2 — 13 | 2 — 14 |
| ಮೆಣಸು | 4 — 8 | 6 — 0 |
| ಸಾಸಿವೆ ಮುಡಿ ಅಕ್ಕಿ | 5 — 8 | 6 — 8 |
| ಕಾಳುಮೆಣಸು ಹವೇಗೆ | 15 — 4 | 17 — 0 |
| ಯೇಲಕ್ಕಿಬೀಜ ಮಣಅಕ್ಕಿ | 80 — 0 | 85 — 0 |
| ಗೇರುಬೀಜ ಮು ಅಕ್ಕಿ | 3 — 4 | 3 — 12 |
| ಕಬ್ಬಿಣ ಖಂಡಿ ಅಕ್ಕಿ | 50 — 0 | 55 — 0 |
| ತಾಂಬ್ರತಗಡು ಮು ಅಕ್ಕಿ | 14 — 12 | 15 — 0 |
| ತಾಂಬ್ರಪಾತ್ರಗಳು ಮು ಅಕ್ಕಿ | 14 — 8 | 15 — 0 |
| ಹುಣಸೆಹುಳಿ ನೇರು ಅಕ್ಕಿ | 13 — 8 | 14 — 0 |
| ಹಿತ್ತಾಳೆ ತಗಡು ಮು ಅಕ್ಕಿ | 12 — 0 | 12 — 0 |
| ಶವನು ಅಕ್ಕಿ | 22 — 8 | 22 — 8 |
| ಸುಣ್ಣ ಹುಳಿ ಖಂಡಿ ಅಕ್ಕಿ | 40 — 0 | 45 — 8 |
| ನೇಟಿವ್ ಕಾಫಿ ಖಂಡಿ ಅಕ್ಕಿ | 140 — 0 | 148 — 0 |
| ಫಿಟೇಟ್ ಕಾಫಿ ಖಂಡಿ ಅಕ್ಕಿ | 185 — 0 | 198 — 0 |
| ಮುಡಿಗೇರಿ ಏಲಕ್ಕಿ ಮಣ | 35 — 0 | 39 — 0 |

## ಪ್ರಚಾರ ನಡೆಯುತ್ತಲೇ ಇದೆ

"ಈ ದಿವಸ ನಾನು ಒಬ್ಬನಾಗಿ ಕಾದು ನಿಂತಿದ್ದೆ ಆಗ ಒಬ್ಬ ಯುವಕನು "ಮಾಡಲ್ ಟೀ ಹೌಸಿಗೆ" ಆಹ್ವಾನಿಸಿ ಒಂದು ಕಪ್ ಟೀ ಕೊಟ್ಟನು. ನನಗೆ ಬೇಡವಾದರೂ ಕೂಡ ಟೀಯನ್ನು ನಾನು ಸ್ವೀಕರಿಸಿದೆನು ಆದರೆ ಅದನ್ನು ನಾನು ಕುಡಿದ ಮೇಲೆ ಅದರ ರುಚಿ ನನಗೆ ಗೊತ್ತಾಯಿತು. ನನಗೆ ಟೀಯ ಮೇಲೆ ಹಿಂದೆ ಇದ್ದ ವೈರವು ನಾಯವಾಯಿತು. ಇನ್ನು ಮುಂದೆ ಟೀ ಕುಡಿಯುವ ಅಭ್ಯಾಸವನ್ನೇ ಇಟ್ಟುಕೊಳ್ಳುತ್ತೇನೆ ಮಾಡಲ್ ಟೀ ಹೌಸಿಗೆ ವಂದನೆಗಳು"

ತಂಜಾವೂರಿನ ಇಂಡಿಯನ್ ಟೀ ಎಕ್ಸ್‌ಪೆನ್‌ಶನ್ ಬೋರ್ಡಿನ ಮಾಡಲ್ ಟೀ ಸ್ಟಾಲ್ ಮುಂಭಾಗದಲ್ಲಿ ಟೀ ಪ್ರಚಾರದವರು ಪ್ರಚಾರ ಮಾಡುತಿದ್ದಾಗ ದಕ್ಷಿಣ ಇಂಡಿಯಾದ ಅಮ್ಮಪೇಟ್ ರೈಲ್ವೇ ಸ್ಟೇಷನಿನ ಸ್ಟೇಷನ್ ಮಾಸ್ಟರ್ ಬಂದರು. ಆ ಸಮಯದಲ್ಲಿ ನಡೆದ ಘಟನೆಯನ್ನು ಮೇಲಿನ ರೀತಿ ಈ ಸ್ಟೇಷನ್ ಮಾಸ್ಟರು ತಿಳಿಸುತ್ತಾರೆ ಮೇಲಿನ ಪ್ರಶಂಸೆಯಲ್ಲಿ ವಿಶೇಷವೇನೆಂದರೆ ಟೀ ಅಭ್ಯಾಸವಿಲ್ಲದೆ ಇದ್ದಂಥವರು ಇಷ್ಟರ ಮಟ್ಟಿಗ ಟೀಯನ್ನು ಪ್ರಶಂಸಿಸಿದ್ದಾರೆ ಕೆಲವು ದಿನಗಳ ನಂತರ ಅದೇ ಜಿಲ್ಲೆಯಲ್ಲಿ ಒಬ್ಬ ಪ್ರಮುಖ ಡಾಕ್ಟರರು ಇದೇ ರೀತಿಯಲ್ಲಿ ಟೀ ಸ್ಟಾಲಿಗೆ ಬಂದು ಟೀ ಕುಡಿದ ಈ ಕೆಳಗಿನ ರೀತಿಯಲ್ಲಿ ತಿಳಿಸಿದ್ದಾರೆ:

"ಒಂದು ಮುನಿಸಿಪಾಲಿಟಿಯ ಹೆಲ್ತಾಫೀಸರಾಗಿ ನಾನು ಈ ಟೀ ತಯಾರಿಕೆಯನ್ನು ಪರಿಶೀಲಿಸಿದ್ದೇನೆ ಇದು ಆರೋಗ್ಯಶಾಸ್ತ್ರ ರೀತಿಯಲ್ಲಿ ತಯಾರಾಗುತ್ತಿದೆ ನನಗ ಕೊಡಲಾದ ಟೀಯನ್ನು ಕುಡಿದೆ ಅದು ಅತ್ಯಂತ ರುಚಿಕರವಾಗಿತ್ತು. ಇದೇ ರೀತಿಯ ಮಾದರಿಯ ಟೀ ಹೌಸ್‌ಗಳು ಈ ದೇಶದ ಜನರನ್ನೆಲ್ಲಾ ಟೀ ಕುಡಿಯುವವರನ್ನಾಗಿ ಮಾಡುವುದು ಈ ದೇಶದ ಪ್ರಮುಖ ನಗರಗಳಲ್ಲಿ ಈ ರೀತಿಯ ಟೀ ಹೌಸ್‌ಗಳು ಏರ್ಪಾಡಾಗಲೆಂದು ಆಶಿಸುತ್ತೇನೆ.

೧೯೩೬-೩೭ನೇ ಸಾಲಿನಲ್ಲಿ ಟೀ ಪ್ರಚಾರ ಕಾರ್ಯಕ್ರಮದಲ್ಲಿ ಮೇಲೆ ತಿಳಿಸಿದ ರೀತಿಯ ೬೦ ಮಾದರಿ ಟೀ ಸ್ಟಾಲುಗಳನ್ನು ಏರ್ಪಡಿಸಲಾಯಿತು ಆಯಾಯ ಪ್ರದೇಶಗಳಲ್ಲಿ ಜನಸಂದಣಿ ಗಾಢ ವಾಗಿರುವ ಮುಖ್ಯ ಸ್ಥಳಗಳಲ್ಲಿ ಸ್ಟಾಲುಗಳ ಸ್ಥಾಪಿಸಲಾಗಿದೆ. ಈ ಸ್ಟಾಲುಗಳಲ್ಲಿ ದಿನದಿನವೂ ಸಾವಿರಾರ ಹೊಸಬರಿಗೆ ಟೀ ಕುಡಿಯುವುದನ್ನು ಅಭ್ಯಾಸ ಮಾಡುತ್ತಿವೆ ಟೀಗೆ ಹೊಸಬನಾಗಿದ್ದವನು ಈ ಟೀ ಸ್ಟಾಲಿಗೆ ಬಂದು ಟೀ ಕುಡಿದರೆ ಅವನಿಗೆ ತೀರಾ ಆನಂದವಾಗುವುದು, ಟೀ ಸ್ಟಾಲುಗಳ ಏರ್ಪಟ್ಟಿರುವ ಪ್ರದೇಶಗಳಲ್ಲಿ ವಾಸವಾಗಿರುವ ಜನಗಳು ತಮಗೆ ಈ ಟೀ ಸ್ಟಾಲಿನಿಂದ ಹೆಚ್ಚು ಅನುಕೂಲವಾಗಿದೆ ತಿಳಿಯುತ್ತಾರೆ ಗ್ರಾಮವಾಸಿಗಳಿಗೆ ಈ ಸ್ಟಾಲುಗಳು ಒಂದು ಮನರಂಜನೆಯ ಉಪಹಾರ ಕೇಂದ್ರವಾಗಿ ಪರಿಣಮಿಸಿದೆ

ಇದಲ್ಲದೆ ಎಲ್ಲಾ ಪ್ರಮುಖ ರೈಲ್ವೆ ಸ್ಟೇಷನ್‌ಗಳಲ್ಲಿಯೂ ಕೂಡ ಶುದ್ಧವಾಗಿಯೂ, ಅಗ್ಗವಾಗಿಯೂ ದೊರಕುವಂತೆಯೇ ಈ ಪ್ರದೇಶಗಳಲ್ಲೆಲ್ಲಾ 'ಮಾದರಿಯಾದ ಮತ್ತು ಶ್ರೇಷ್ಠವಾದ ಟೀ ಸ್ಟಾಲುಗಳನ್ನು ಏರ್ಪಡಿಸುವುದೇ ಈ ಟೀ ಪ್ರಚಾರದ ಚಳುವಳಿಯ ಮುಖ್ಯ ಉದ್ದೇಶ ಈ ಉದ್ದೇಶವು ಸಾಫಲ್ಯವಾಗಬೇಕಾದರೆ ವರ್ಷಗಳಾಗಬೇಕು. ಆದರೆ ಇದು ಭರವಸೆಯ ಆಸೆ ಇಂಡಿಯಾ ದೇಶದಲ್ಲಿ ಟೀಯು ಒಂದು ರಾಷ್ಟ್ರೀಯ ಪಾನೀಯವಾಗಿ...

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಮಾಘ ಶು. ೧೨ ಶನಿವಾರದಿಂದ, ಮಾಘ ಬ. ೪ ಶುಕ್ರವಾರದ ವರೇಗಿನ ಪಂಚಾಂಗ.(೧೯೩೮ನೇ ಫೆಬ್ರುವರಿ ತಾರೀಕು ...)

| ತಾರೀಕು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ವಿಶೇಷ |
|---|---|---|---|---|---|---|---|
| 12 | ಶನಿ | ೩ | ೯೦ | ಪುನರ್ವಸು | ೫೬ | ೩೦ | ಭೀ |
| 13 | ರವಿ | ೧೪ | ೪ | ಪುಷ್ಯ | ೩೩ | ೧ | |
| 14 | ಸೋಮ | ೧೫ | ೪೦ | ಆಶ್ಲೇಷ | ೩೦ | ೨ | |
| 15 | ಕುಜ | ೧ | ೩೭ | ಮಘ | ೧೬ | ೪ | |
| 16 | ಬುಧ | ೨ | ೩೫ | ಪುಬ್ಬ | ೨೭ | ೬ | |
| 17 | ಗುರು | ೩ | ೩೩ | ಉತ್ತರ | ೨೭ | ೭ | |
| 18 | ಶುಕ್ರ | ೪ | ೩೫ | ಹಸ್ತ | ೨೮ | ೭ | |

THE PIE-MONEY BANK LTD.

Maidan Road MANGALORE

Undertakes all kinds of Banking Business Current account at 2½ per annum Savings Bank Deposits at 4½% per annum

FIXED DEPOSITS

For 2 Years ... 1 Year ... For 6 months ... 3 months 3½% ...

Auction chit Funds ranging from Rs. 100 to Rs 5000 run regularly on systematic lines Unique ... facilities to Businessmen and interested Public

Apply for particulars-K R. GURU, Managing Director

ಪೈಂಟರ್ಸ್

Whenever you require the service of

Please call on or write to:-

Simon & Co,
Painters

Churchgate, Hampankatta No. 13, MANGALORE

PAINTERS

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಕೆಟ್ಟಿನ ಮಾಡಿತ ಬಗ್ಗೆ ಮೇರಣ ವಿಳಾಸಕ್ಕೆ ಸ್ವಸ್ಥ ಪತ್ರ ಬರೆದು ತಿಳಕೊಳ್ಳಬಹುದು.

ಗರ್ಭಿನೋಲ್ ಶ್ರೀ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ ಶ್ವೇತಪದರ, ರಕ್ತಪದರ ಗರ್ಭಸ್ರಾವ ಗರ್ಭಾಶಯ ವ್ರಣ, ಮೂತ್ರದ್ವಾರ ಉರಿ ನರಗಳ ಶೈಥಿಲ್ಯ ಪ್ರಸವ ನಂತರ ಉಂಟಾಗುವ ಕ್ಷಯ ಚಿತ್ತ ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು ತಲೆನೋವು ತಲೆ ತಿರುಗುವಿಕೆ ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ವೆದುಳಿನ ವಿಕಾರಗಳ ಅಶಕ್ತತೆ ಇಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು

ಹೆಚ್ಚೇನು? ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

"ವಿಜಯ ಗರ್ಭಿನೋಲ"

ನ್ನ ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರಿಯಾಗಿ ಗುಣಹೊಂದಿದ್ದಾರೆ. ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ".

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2—8—0.
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು:—

ವಿಜಯ ಫಾರ್ಮಸಿ, ಕೊಚ್ಚಿನ್.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

# ಜಪಾನಿನ ವಿಜಯಕ್ಕಾಗಿ ಪವಿತ್ರ ಹಗ್ಗ

# ಮನೆವಾರ್ತೆ ಹೆಂಗಸರಿಗೆ ನಾಜಿಗಳ ವಿನಂತಿ.

**ಭೂಗರ್ಭದೊಳಗೆ ಪೆಟ್ರೋಲಿನ ಶೇಖರ!**

ಐದು ಮಿಲಿಯ ಸವನುಗಳ ವ್ಯಯದಿಂದ ಭೂಗರ್ಭದೊಳಗೆ ಪೆಟ್ರೋಲಿನ ಮಹಾ ಶೇಖರವನ್ನು ಮಾಡಲು ಟಾಂಕಿಗಳನ್ನು ಕಟ್ಟಿಸುವ ಒಂದು ಯೋಜನೆಯನ್ನು ಬ್ರಿಟಿಷರು ಕೈಕೊಳ್ಳುವರೆಂದು ವಾರ್ತೆಯಿದೆ.—ಸಂದಿಗ್ಧ ಸಮಯದಲ್ಲಿ ಬೇಕಾಗುವ ಪೆಟ್ರೋಲನ್ನು ಶೇಖರಿಸಿಡುವುದು ಈ ಯೋಜನೆಯ ಉದ್ದೇಶವಾಗಿದ್ದರೂ, ಯುದ್ಧ ಸಮಯದಲ್ಲಿ ಪೆಟ್ರೋಲನ್ನು ಭದ್ರವಾಗಿಡುವ ಕ್ರಮವು ಇದೊಂದೇ ಆಗಿರುತ್ತದೆಂದು ಬ್ರಿಟಿಷ ಸರಕಾರದ ಅಭಿಪ್ರಾಯವಾಗಿರುತ್ತದೆ.

**ಜಪಾನಿನ ವಿಜಯಕ್ಕಾಗಿ ಪವಿತ್ರ ಹಗ್ಗ!**

ಹುಲ್ಲಿನಿಂದ ತಯಾರಿಸಿದ ೪೮ ಅಡಿ ಉದ್ದದ ಹಗ್ಗಗಳು ಜಪಾನಿನ ದೇವಾಲಯಗಳಲ್ಲಿ ಮಂತ್ರಿಸಲ್ಪಟ್ಟು, ಜಪಾನಿನ ಜಯಕ್ಕಾಗಿ ಚೀನಾ ರಣರಂಗದ ಸೈನಿಕರಿಗೆ ಒಂದು ವಿಶಿಷ್ಟ ಕೈಲ್ಷಿಗಾಡಿಯಲ್ಲಿ ಚೀನಾಕ್ಕೆ ಕಳುಹಿಸಿಕೊಡಲಾಗಿವೆ. ಜಪಾನೀಯ ಸೈನಿಕರ ಧೈರ್ಯಗೆಡದಂತೆ ಮಾಡುವುದೆ ಇದರ ಮುಖ್ಯ ಉದ್ದೇಶವು ತಾವು ಹಿಡಿದಿರುವ ಕಾರ್ಯವು ಒಂದು ದೈವೀಕಾರ್ಯವು ಎಂಬ ಮನೋಭಾವವು ಉಂಟಾಗುವಂತೆಯೂ, ಅನಿಷ್ಟಗಳು ಕಡಿಮೆಯಾಗುವುವೆಂಬ ಭಾವನೆಯೂ ಉಂಟಾಗುವಂತೆ ಈ ಹಗ್ಗಗಳು ಚೀನಾಕ್ಕೆ ಕಳುಹಿಸಲಾಗಿದೆಯೆಂದು ತಿಳಿದುಬರುತ್ತದೆ. ಚೀನಾದಲ್ಲಿ ಜಪಾನಿಯ ಸೈನ್ಯದ ಬೀಡುಗಳಲ್ಲಿ ಈ ಹಗ್ಗವು ತೂಗಹಾಕುವ ಏರ್ಪಾಡುಮಾಡಲಾಗಿದೆ, ಭಕ್ತಿಯಿಂದ ಜಪಾನಿಯ ಸೈನಿಕರು ಅದರ ಪೂಜೆನಡೆಸಬೇಕಾಗಿ ಕಟ್ಟಪ್ಪಣೆಗಳಾಗಿವೆ.

**ಸಂತಾನಾಭಿವೃದ್ಧಿಯ ಕುರಿತು ಮುಸಲೋನಿಯ ಭಾಷಣ**

ಫೆಸಿಸ್ಟ ಇಟಲಿಯು ಸಾಮ್ರಾಜ್ಯಶಾಹಿ ಮಹತ್ವಾಂಕ್ಷೆಯಿಂದ ಕೂಡಿದ್ದು ಯುದ್ಧಸನ್ನಾಹತವಾಗಿರುವುದಷ್ಟೆ ಕೋವಿಗಳಿಗೆ ಹೆಚ್ಚಿನ ತುತ್ತುಗಳನ್ನು ತಯಾರಿಸಲಿಕ್ಕೋ ಎಂಬಂತೆ ಸಂತಾನಭಿವೃದ್ಧಿಯಾಗುವಂತೆ ಮುಸಲೋನಿಯು ಈಗ ಮಹತ್ವಾದ ಪ್ರಚಾರಕಾರ್ಯವನ್ನು ಪ್ರಾರಂಭಿಸಿರುವನು. ಹೋದೆಡೆಗಳಲ್ಲೆಲ್ಲಾ ಆ ಕುರಿತು ಭಾಷಣಮಾಡುತ್ತಿರುವನು ಜನರು ಮಕ್ಕಳನ್ನು ಪಡೆಯುವುದರಲ್ಲಿ ಸ್ಪರ್ಧೆನಡೆಯುಸುವಂತೆ, ಹೆಚ್ಚು ಮಕ್ಕಳನ್ನು ಪಡೆಯುವವರಿಗೆ ಬಹುಮಾನಗಳನ್ನೂ ಕೊಡುವ ಏರ್ಪಾಡುಗಳನ್ನೂ ಮಾಡಿರುವನು ನೊನ್ನೆ ಒಂದೆಡೆ ಹೆಚ್ಚು ಮಕ್ಕಳನ್ನು ಪಡೆದುದಕ್ಕಾಗಿ ಬಹುಮಾನಗಳನ್ನು ಹಂಚಲಾದ ಮೇಲೆ, ಸ್ತ್ರೀಪುರುಷರು ಭೋಗಸುಖವನ್ನು ಹೆಚ್ಚೆಚ್ಚಾಗಿ ಅನುಭವಿಸಬೇಕಾಗಿ ಕೋರಿ ಭಾಷಣಮಾಡಿದನು ತಮ್ಮ ಗಂಡಂದಿರು ಈ ಕಾರ್ಯದಲ್ಲಿ ಹಿಂದುಳಿಯುವವರಾದರೆ, ಯಾ ಹೆಚ್ಚು ಮಕ್ಕಳನ್ನು ಪಡೆಯುವರೆ ಅಸಮಾಧಾನ ಸೂಚಿಸಿದರೆ ತನಗೆ ತಿಳಿಸಬೇಕಾಗಿ ಮುಸಲೋನಿಯು ಸ್ತ್ರೀಯರೊಡನೆ ವಿನಂತಿಮಾಡಿಕೊಂಡಿರುವನು. ಧರ್ಮಗುರುಗಳ ಮೂಲಕವೂ ಕೂಡ ಸಂತಾನಭಿವೃದ್ಧಿಯ ಕುರಿತು ಪ್ರಚಾರಕಾರ್ಯವನ್ನು ನಡೆಯುವಂತೆ ಏರ್ಪಾಡುಮಾಡಿರುವನು.

**ರಷ್ಯಾದ ಜನನ ಸಂಖ್ಯೆಯು ಹೆಚ್ಚಿತು.**

ಗರ್ಭಸ್ರಾವ ಮಾಡಿಕೊಳ್ಳುವುದು ಸೋವಿಯಟ್ ಕ್ರಮ ದೃಷ್ಟಿಯಿಂದ ಒಂದು ಅನ್ಯಾಯವಾಗಿ ಮಾಡಲ್ಪಟ್ಟಂದಿನಿಂದ, ರಷ್ಯದ ಮೊಸ್ಕೋ ನಗರದ ಜನನ ಸಂಖ್ಯೆಯು ಇಮ್ಮಡಿಯಾಗಿರುತ್ತದೆ. ವಿವಾಹವಿಚ್ಛೇದಗಳ ಕುರಿತು ಅಲ್ಲಿ ಕೆಲ ನಿರ್ಬಂಧಗಳನ್ನು ಹಾಕಿದುದರಿಂದ, ವಿವಾಹವಿಚ್ಛೇದಗಳು ಬಹು ಕಡಿಮೆಯಾಗಿವೆಯೆಂದೂ

**ಇನ್ನೊಂದು ಜೆಪ್ಲಿನ್**

ಮಹತ್ತಾದ ಒಂದು ವಾಯು, ಜಹಜನ್ನು (ಜೆಪ್ಲಿನ್) ರಚಿಸಬೇಕಾಗಿ ಜರ್ಮನಿಯ ನಿರ್ಧಾರವಾಗಿರುತ್ತದೆ. ಈ ಜೆಪ್ಲಿನಿನ ಪ್ರಮಾಣಗಳು ಕೆಲಮಟ್ಟಿಗೆ ಹೆಚ್ಚಿಸಲಾಗಿವೆ ಕೆಲಸಮಯದ ಹಿಂದೆ ಸುಟ್ಟು ಹೋದ 'ವಾನ್ ಹಿಂಡನ್‌ಬರ್ಗ' ನಂತೆ ಇದರಲ್ಲೂ ೫೦ ಜನರಿಗೆ ಪ್ರಯಾಣಮಾಡಲು ಅನುಕೂಲಮಾಡಲಾಗುವದಂತೆ. ಇದು ೧೯೩೯ರೊಳಗೆ ಸಿದ್ಧವಾಗುವುದೆಂದೂ ತಿಳಿದು ಬರುತ್ತದೆ

**ಜರ್ಮನಿಯಲ್ಲಿ ಹಿಟ್ಲರನು**

ಅಧಿಕಾರಕ್ಕೆ ಬಂದಂದಿನಿಂದ, ೮೦ ಜನ ನಾಜಿ ವಿರೋಧಿಗಳು ಗಲ್ಲಕ್ಕೇರಿಸಲ್ಪಟ್ಟಿರುವರು. ನಾಜಿ ವಿರೋಧಿಗಳು ಈಗ ಪತ್ರಕಗಳ ಮೂಲಕ ತಮ್ಮ ಪ್ರಚಾರಕಾರ್ಯವನ್ನು ನಡೆಯಿಸುತ್ತಿರಲು, ಅವರನ್ನು ಕಂಡುಹಿಡಿಯಲು ಹಿಟ್ಲರನು ಗುಪ್ತ ಪೋಲೀಸರಿಂದ ಕೂಡಿದ ಒಂದು ಮಹಾ ವ್ಯವಸ್ಥೆಯನ್ನು ಮಾಡಿರುವನು ನಾಜಿಗಳ ವಿರೋಧಿಗಳನ್ನು ಹುಡುಕಾಡುತ್ತಾ ಇವರು ಸಮಸ್ತ ಜರ್ಮನಿಯಲ್ಲಿ ಸಂಚಾರಗೈಯ್ಯುತ್ತಿರಬೇಕಾಗಿ ಏರ್ಪಾಡಾಗಿರುತ್ತದೆ. ಹಿಟ್ಲರನು ಈಗ ಜರ್ಮನಿಯ ಸಮಸ್ತ ಸೈನ್ಯಮಂಡಳ ಇತ್ಯಾದಿಗಳ ಅಧಿಕಾರವನ್ನು ತಾನೇ ವಹಿಸಿಕೊಂಡಿರುವನು ಸರ್ವಾಧಿಕಾರಿಗಳಿಗೆ ಇತರರಲ್ಲಿ ವಿಶ್ವಾಸವು ಕಡಿಮೆ

**ಫ್ರೆಂಕೋನಿಗೆ ಜಯವು ಸಿಗುವುದು ಅಸಂಭವನೀಯ.**

ಜನರಲ್ ಫ್ರೆಂಕೊನಿಗೆ ೮೦ ಸಾವಿರ ಇಟಲಿಯನರು, ೧೦ ಸಾವಿರ ಜರ್ಮನರೂ, ಅಲ್ಲದೆ ಈ ಎರಡು ಜನಾಂಗಗಳಿಂದ ಯುದ್ಧ ಶಸ್ತ್ರ — ಸಿಡಿಮದ್ದುಗಳ ಒದಗುತ್ತಿದ್ದರೂ ಆತನಿಗೆ ಜಯವು ಒದಗುವ ಸಂಭವವಿಲ್ಲ, ವಿಮಾನಗಳ ಮೂಲಕ ಅವನ ನಡೆಸುತ್ತಿರುವ ಧಾಳಿಗೆ ಸ್ಪೆನಿಶ್ ಸರಕಾರವು ಹೆದರುವುದಿಲ್ಲ ಅವುಗಳನ್ನು ಬಹು ಸಾಹಸದಿಂದ ಎದುರಾಯಿಸಿ, ಫ್ರೆಂಕೋನ ವಿಮಾನಗಳನ್ನು ಓಡಿಸಿಬಿಡುತ್ತಾರೆ ಸರಕಾರ ಸ್ಪೆಯಿನಿನಲ್ಲೆಲ್ಲಾ ಜನರನ್ನು ವಿಮಾನ ಧಾಳಿಯಿಂದ ರಕ್ಷಿಸುವರೆ ವಿಶೇಷ ತರದ ಏರ್ಪಾಡುಗಳು ಮಾಡಲಾದುದರಿಂದ ವಿಮಾನಧಾಳಿಯಿಂದ ಸ್ಪೆನಿಶ್ ಸರಕಾರವನ್ನು ಸೋಲಿಸುವುದು ಫ್ರೆಂಕೊನಿಗೆ ಅಸಾಧ್ಯವು. ಇಂದಿನ ರಿಪಬ್ಲಿಕನ್ ಸೈನ್ಯಮಂಡಳವು ಮುಂಚಿಗಿಂತ ಹೆಚ್ಚು ಬಲವಂತವಾಗಿರುತ್ತದೆ. ಸ್ಪೆನಿಶ್ ಸರಕಾರದ ಸೈನಿಕರಲ್ಲಿ ಮಹಾ ಉತ್ಸಾಹವೂ ಸ್ಫೂರ್ತಿಯೂ ಇರುತ್ತದೆ

**ಮನೆವಾರ್ತೆ ಹೆಂಗಸರಿಗೆ ನಾಜೀ ವಿನಂತಿ**

ಆಹಾರದ ಕುರಿತು ಸ್ವಸಾಮರ್ಥಿಗಳಾಗುವಂತೆ ಜರ್ಮನಿಯ ನಾಜೀ ಸರಕಾರದವರು ರೇಡಿಯೋ ಮೂಲಕ ಮನೆವಾರ್ತೆ ಸ್ತ್ರೀಯರೊಡನೆ ವಿನಂತಿಮಾಡಿಕೊಂಡಿರುವರು ಆಹಾರ ತಿನಸುಗಳನ್ನು ತಯಾರಿಸುವುದರಲ್ಲಿ ಜಾಗರೂಕತೆಯನ್ನು ತೋರಿಸಬೇಕಾಗಿಯೂ, ಜರ್ಮನಿಯಲ್ಲೇ ದೊರಕುವ ಸಾಮಾನುಗಳನ್ನು ಮಾತ್ರ ಉಪಯೋಗಿಸಬೇಕಾಗಿಯೂ, ಹೊರದೇಶಗಳ ಆಹಾರವಸ್ತುಗಳನ್ನು ಪಡಕೊಳ್ಳುವುದು ಕಡಿಮೆ ಮಾಡಬೇಕೆಂಬೂ ಈ ವಿನಂತಿಯ ಅಭಿಪ್ರಾಯ

## ನೋಟಗಳು.—Note......s

"ಸಾಂಪ್ರದಾಯಿಕವಾದ ತಂಟೆ" ಎಂಬ ಬಿರುದನ್ನು ಲೋಥಿಯನ್ ಪ್ರಭುಗಳ ವರ್ತನೆಗೆ ಕೊಟ್ಟು ಕೊಂಗ್ರೆಸ್ ಸೋಶಲಿಸ್ಟ ಪತ್ರಿಕೆಯು ಹೀಗೆ ಹೇಳುತ್ತದೆ—ಯುರೋಪೀಯ ಮಹಾಯುದ್ಧ ಮುಗಿಸಿದ ವರ್ಸೇಲ್ಸ್ ಒಪ್ಪಂದದ ಶರ್ತಗಳನ್ನು ಹಾಕಿಕೊಟ್ಟು ಯಾವ ಮುಖ್ಯಮಂತ್ರಿ ಲೊಯ್ಡ ಜೋರ್ಜರ ಸೆಕ್ರಟರಿ ಫಿಲಿಪ್ ಕೆರ್ ಎಂಬವರು ಲೋರ್ಡ್ ಲೋಥಿಯನ್ ಬಿರುದು ಪಡೆದರೋ, ಯಾವ ಒಪ್ಪಂದದ ಶರ್ತಗಳು ಮತ್ತೊಂದು ಮಹಾಯುದ್ಧವನ್ನು ಇನ್ನಷ್ಟು ಘೋರವಾಗಿ ಪರಿಣಮಿಸುವಂತೆ ಹೂಡಿರುವುವೊ, ಆ ಲೋಥಿಯನ್ನರೇ ಈಗ ಫೆಡರೇಶನ್ ಅಂಗೀಕರಿಸಬೇಕಾಗಿ ನಮಗೆ ಬೋಧಿಸುತ್ತಿದ್ದಾರೆ! ಕಾರಣವೇನು ಬಲ್ಲಿರಾ?

೦ ೦ ೦ ೦

ಬ್ರಿಟಿಷ್ ಪಾರ್ಲಿಮೆಂಟಿಗೆ ಇಂಡಿಯಾ ಆಕ್ಟನ್ನು ಕುರಿತು ಆಲೋಚಿಸಲೂ ಈಗ ನಾನಾ ಇತರ ಕಾರಣಗಳಿಂದ ಅವಕಾಶವಿಲ್ಲವಂತೆ! 350 ಮಿಲ್ಲಿಯ ಜನಾಂಗದ ವಿಚಾರ ಮಾಡಲು ಪುರುಸೊತ್ತು ಇಲ್ಲದವರಿಗೆ ಅವರ ಮೇಲೊಂದು ರಾಜ್ಯಭಾರ ಮಾಡುವ ವ್ಯವಸ್ಥೆ ಹೊರಿಸಲು ಅಧಿಕಾರವಾದರೂ ಏಕಯ್ಯ?

೦ ೦ ೦ ೦

ಫೆಡರೇಶನನ್ನು ಅಂಗೀಕರಿಸಲಾರಂರಾದರೆ ಅತ್ಯುತ್ಪಾತಗಳಾಗಬಹುದೆಂದೂ ಅವರೆನ್ನುವರು ಇದೊಂದು ವಿಕಟಚಿತ್ರ ಐಕ್ಯತೆಯೆಲ್ಲಾ ಮುರಿದು ಹೋಗುವುದೆನ್ನುತ್ತಾರೆ ಬ್ರಿಟಿಷ್ ಆಳಿಕೆಯಲ್ಲಿ ಐಕ್ಯತಾ ನಿರೋಧನಂದಷ್ಟು ಚೆನ್ನಾಗಿ ಇತರ ಯಾವ ಆಳಿಕೆಯಲ್ಲೂ ಜಗತ್ತೇ?

೦ ೦ ೦ ೦

ಗುಲಾಮನು ತನನ ಸಂಕೋಲೆಯ ಐಕ್ಯತೆಗಿಂತ, ಐಕ್ಯತೆಯ ಇಲ್ಲದಿರುವುದುತ್ತಮವೆಂದು ಇಂಡಿಪೆಂಡೆಂಟ್ ಪತ್ರಿಕೆಯೆನ್ನುತ್ತಿದೆ

೦ ೦ ೦ ೦

ನಮ್ಮ ರಾಜ್ಯಭಾರ ಕ್ರಮವನ್ನು ತಿದ್ದುವ ಪ್ರಯತ್ನಗಳು ನಮ್ಮ 35 ಮಿಲ್ಲಿಯ ವೋಟರರ ಕೈಯಲ್ಲಿ ಇವೆ ಎಂದೂ ಲೋಥಿಯನ್‌ರವರ ಕೊನೆಯ ಬುದ್ಧಿವಾದ ಇಷ್ಟು ಸತ್ಯವಾದ ಮಾತನ್ನು ಅವರು ಬೇರೆ ಆಡಿದ್ದಿಲ್ಲ. ವೋಟರರು ತಮಗೆ ಬೇಕಾಗಿರುವ ಕ್ರಮವನ್ನು ತಾವೇ ಮಾಡಿಕೊಳ್ಳಲಿಕ್ಕೆ ಫೆಡರೇಶನನ್ನು ದೂರವಿಡುವುದುತ್ತಮ ಹೊರತು, ಅದನ್ನೊಪ್ಪಿಕೊಂಡು ಮತ್ತೆ ಪಾರ್ಲಿಮೆಂಟಿನ ಬಾಗಿಲಲ್ಲಿ ಭಿಕ್ಷುಕರಾಗಿ ಏಕೆ ಕಾಯುತ್ತಿರಬೇಕು?

೦ ೦ ೦ ೦

ಮುಸ್ಲಿಮ್ ಲೀಗ್,—ಇದಕ್ಕೇನಂತೆ? ಪಂಜಾಬು ಮತ್ತು ಸಿಂಧ ಪ್ರಾಂತ್ಯಗಳ ಮಂತ್ರಿಮಂಡಲಗಳು ಜೊಯಿಂಟ್ ಇಲೆಕ್ಟೊರೇಟುಗಳನ್ನೆ ಸ್ಥಾಪಿಸಬೇಕೆಂದೂ, ಲೋಕಲ್ ಬೋರ್ಡುಗಳಲ್ಲಿ ಇದೇ ವ್ಯವಸ್ಥೆಯಿರಬೇಕೆಂದೂ ಕಾನೂನಿರುವುದೆಂದು ವಿವರಿಸಿರುವರು ಬೊಂಬಾಯಿ ಸರಕಾರವೂ ಇದೇ ತರದ ಕಾನೂನನ್ನು ಸ್ಥಳೀಯ ಸಂಸ್ಥೆಗಳಿಗಾಗಿ ಮಾಡುವಾಗ, ಮುಸ್ಲಿಮರಿಗೆ ಸ್ಥಾನಗಳನ್ನು ಕಾದಿಟ್ಟು ಜೊಯಿಂಟ್ ಇಲೆಕ್ಟೊರೇಟುಗಳಾಗಬೇಕೆಂದು ತೀರ್ಮಾನಿಸುವಾಗ ಮಾತ್ರ, ಮುಸ್ಲಿಮ್ ಲೀಗಿನ ಮೆಂಬರರು ಮಡಿಯಾಗಿ ದೂರಕ್ಕೆದ್ದು ಹೋದುದೇಕೆ?

೦ ೦ ೦ ೦

"ಜನಾಂಗದ ಪ್ರಾತಿನಿಧ್ಯವು ಕೊಂಗ್ರೆಸಿಗಿಲ್ಲ, ಜನಾಂಗಕ್ಕೆ ಫೆಡರೇಶನು ಬೇಕಾಗಿದೆ" ಎಂದು ಶ್ರೀ ಪಾಲಟರು ಮದ್ರಾಸು ಎಸೆಂಬ್ಲಿಯಲ್ಲಿ ಠರಾವು ತಂದರು. ದುರ್ಭಾಗ್ಯವೆಂದರೆ, ಈ ಸೂಚನೆ ಸಮರ್ಥಿಸಲು ಒಬ್ಬರೂ ಸಿಲ್ಲಲಿಲ್ಲ! ಜನಾಂಗ ಪ್ರತಿನಿಧಿಗಳಾಗಿ ಪಾಲಟರೊಬ್ಬರೇ ನಿಂತರು! ನಿಂತರು

ಜಗತ್ತಿನಲ್ಲಿ ಸರಕು ಒಯ್ಯುವುದಕ್ಕೆ ಒಟ್ಟು 65 ಮಿಲ್ಲಿಯ ಟನ್ ಭಾರದ ಹಡಗುಗಳಿವೆ. ಇಂಡಿಯಕ್ಕೆ 4400 ಮೈಲು ಉದ್ದದ ಕರಾವಳಿಯಿದೆ, ಒಂದೂವರೆ ಲಕ್ಷ ಟನ್ ಭಾರದ ಸರಕು ಒಯ್ಯುವ ಹಡಗುಗಳು ಸಹ ಇಲ್ಲ! ಯಾರ ತಪ್ಪು? ಯಾವ ಹಂಚಿಕೆ? 800 ಕೋಟಿ ರೂಪಾಯಿಯ ವಹಿವಾಟು ನಡೆಯುವುದಲ್ಲ? ಯಾರಿಗೆ ಈ ಲಾಭ?

೦ ೦ ೦ ೦

ಕೊಂಗ್ರೆಸು ಮತ್ತು ಲೀಗುಗಳೊಳಗೆ ಶಾಶ್ವತವಾದ ಒಪ್ಪಂದದ ಕರಾರು ಸದ್ಯದಲ್ಲೇ ಉಂಟಾಗುವುದೆಂಬ ಶುಭವಾರ್ತೆಯನ್ನು ಮದ್ರಾಸಿನಲ್ಲಿ ಹೇಳಿರುವ ಶ್ರೀ ಜಮಾಲ ಮಹಮ್ಮದರವರ ಮಾತು ಈ ವರ್ಷದ ಶುಭವಾರ್ತೆಯಾಗಿದೆ ಇವರು ಗಾಂಧಿಜಿಯವರೊಡನೆ ಸಂಭಾಷಿಸಿದ್ದಾರೆ. ನೆಹರು-ಜಿನ್ನಾ ಸಂಭಾಷಣೆಗಳು ಸದ್ಯದಲ್ಲೇ ಪ್ರಾರಂಭಿಸುವುವಾಗಿ ತಿಳಿದು ತಿಳಿದುಬಂದಿದೆ

೦ ೦ ೦ ೦

1928ರಲ್ಲಿ ಸುಭಾಷ್ಚಂದ್ರ ಭೋಸರು, ಯುವಕ ಪರಿಷತ್ತಿನಲ್ಲಿ, ಎತ್ತಿನ ಗಾಡಿಯ ದಿನಗಳು ಎಂದೋ ಮುಗಿದಿವೆ ಎಂದು ಮಹಾತ್ಮಾಜಿಯರ ಧ್ಯೇಯಗಳನ್ನು ಅಸ್ಮರಣೆಯಿಂದ ದೂರಿದರು. 1938ರಲ್ಲಿ ಇವರೇ ಈಗ ರಾಷ್ಟ್ರಪತಿಯಾಗಿ ಮೆರೆವಣಿಗೆಯಾಗುವ 'ರಥ'ಕ್ಕೆ 51 ಎತ್ತುಗಳನ್ನು ಹೂಡುವರಲ್ಲ! ಎತ್ತಿನ ರಥದ ದಿನಗಳು ಮುಗಿದಿವೆಯಲ್ಲವೆ

೦ ೦ ೦ ೦

ದಕ್ಷಿಣ ಮತ್ತು ಪೂರ್ವ ಆಫ್ರಿಕದೊಳಗಣ ಹಿಂದೀಯರ ಸ್ಥಾನಮಾನಗಳನ್ನು ಕಾಪಾಡುವುದಕ್ಕಾಗಿ ಇಂಡಿಯಾ ಸರಕಾರವು ಮಾಡುವ ಪ್ರಯತ್ನಗಳು ನಿಷ್ಫಲವಾಗಿಯೂ ಹೋಗುವುದಕ್ಕೆ, ಬರೀ ಭಾಷಣಗಳೂ ಭೂರಿ ಸಂಬಳವೂ ಅಧಿಕಾರ ಉಳ್ಳವರ ಲಕ್ಷಣವಾಗಿರುವುದೇ ಕಾರಣವೆ?

೦ ೦ ೦ ೦

ಸೈನ್ಯ ಸರಂಜಾಮುಕ್ಕೆಂದು ಈ ವರ್ಷ ಸುಮಾರು ಮೂರು ಕೋಟಿ ರೂಪಾಯಿ ವ್ಯಯಿಸುವರು ಎಸೆಂಬ್ಲಿಯಲ್ಲಿ ಇದೆಲ್ಲ ಹಣವು ಪರದೇಶಕ್ಕೆ (ಇಂಗ್ಲೆಂಡಿಗೆ) ಸಲ್ಲುವುದೆಂದೂ, ಏಕೆಂದರೆ ಅಂತಹ ಉಪಕರಣಗಳನ್ನು ಇಲ್ಲಿ ಮಾಡಲಾಗುವುದಿಲ್ಲೆಂದೂ ಹೇಳಲಾಯಿತು ಇಲ್ಲಿ ಕಾರ್ಖಾನೆಗಳನ್ನು ಏಕೆ ನಿರ್ಮಾಣ ಮಾಡಬಾರದು? ಎಂದುದಕ್ಕೆ, ಆ ಕಥೆಯೇ ಬೇರೆ ಎಂದರು ಮಿಲಿಟರಿ ಸೆಕ್ರೆಟರಿಗಳು!

೦ ೦ ೦ ೦

ನಮ್ಮ ರೈಲ್ವೆಗಳಿಗೆ ಬೇಕಾಗುವ ಇಂಜಿನಗಳನ್ನು ಇಲ್ಲೇ ಕಟ್ಟಿಸುವ ವಿಷಯವೂ ಹೀಗೆಯೆ ಆ ಕಥೆಯೇ ಬೇರೆ ಇಂಗ್ಲೆಂಡಿನ ನಿರುದ್ಯೋಗಿಗಳಿಗೆ ಕೆಲಸ, ಕಾರ್ಖಾನೆಗಳಿಗೆ ಹಣ ಇಲ್ಲಿನವರಿಗೆ ನಿರಾಧಾರ

೦ ೦ ೦ ೦

ನಾಳೆ ಯುದ್ಧವಾದರೆ? ಮುಸ್ಸೊಲಿನಿ ಭೂಮಧ್ಯ ಸಮುದ್ರಕ್ಕೆ ಗೇಟು ಹಾಕಿದರೆ ಇಂಡಿಯದ ಗತಿಯೇನು? ಇಂಗ್ಲೆಂಡಿನ ಯಾವ ಯುದ್ಧೋಪಕರಣಗಳೂ ಇತ್ತ ಬರಬೇಕಾದರೆ ~~ತಿಂಗಳು ಎಷ್ಟು ಹಿಡಿಯಬಹುದು? ಅಷ್ಟು ದೂ~~ ಪ್ರಯಾಣ ಮಾಡಲು ಹಡಗುಗಳೂ ದೊರೆವುವೆ ಇಂಗ್ಲೆಂಡಿನ ಸರಹದ್ದೇ ಗಂಡಾಂತರದಲ್ಲಿರುವಾಗ? ಅಬಿಸೀನಿಯ, ಚೀನಗಳು ಹೇಗೆ ಯುದ್ಧೋಪಕರಣ ದೊರೆಯದೆ ಮೋಸಹೋದವೋ ಹಾಗೆಯೆ ಇಂಡಿಯವೂ—ಈ ಬೇರೆ ಕಥೆ ಕೇಳಿಯೆ—ಮೋಸಹೋಗದೆ?

೦ ೦ ೦ ೦

ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಸಲಾಮು —ಎಂಬುದಕ್ಕೆ ಉತ್ಕೃಷ್ಟ ದೃಷ್ಟಾಂತ ಜಪಾನಿನವರಾಕು ಅಮೇರಿಕನ್ ರಾಯಭಾರಿಯ ಆಫೀಸಿಗೆ, ಕ್ಷಮಾ ಪ್ರಾರ್ಥನೆ ಅದರೊಡನೆ

# ಪ್ರೇಮೋಪಹಾರ

(೬ನೇ ಪುಟದಿಂದ ಮುಂದುವರಿದುದು)

ಳಿಗೆ ಮನೆ ಕೆಲಸ ಮುಗಿದ ಮೇಲೆ ೯—10 ಮಿನುಟುಗಳ ತನಕ ಮೌನಳಾಗಿ ಯೇಸುದೇವನ ಸ್ಮರಣೆ ಮಾಡುವ ಅಭ್ಯಾಸವಿದ್ದಿತು. ಈಗ ಅವಳು ಹೀಗೆಂದು ಪ್ರಾರ್ಥಿಸಿದಳು—'ಯೇಸು ದೇವ! ನನ್ನನ್ನು ಈಗಲಾದರೂ ಮೊದಲಿನಂತೆಯೇ ಕಾಣುವ ಬುದ್ಧಿಯನ್ನು ಜಿಮ್ಮಿಗೆ ಕೊಡು! ಅಷ್ಟರೊಳಗೆ ಜಿಮ್ಮಿ ಬಂದು ಜಗಲಿ ಹತ್ತಿ ನಿಂತನು. ಜಿಮ್ಮಿ ಬಹಳ ದುರ್ಬಲ ಮತ್ತು ಗಂಭೀರನಾಗಿದ್ದನು. ಈಗ ಹಾರಿ ಕುಣಿದು ವಿನೋದಿಸುವ ದಿನಗಳಾಗಿದ್ದವು. ಆದರೆ ದೇವರ ಮರ್ಜಿ 20—22 ವರ್ಷಗಳಾಗಬೇಕಾದರೆ ಸಂಸಾರ ಭಾರವು ಜಿಮ್ಮಿಯ ತಲೆ ಮೇಲೆ ಬಂದು ಬಿದ್ದಿತ್ತು. ಬಹಳ ದಿನಗಳಿಂದ ಜಿಮ್ಮಿ ಒಂದು ಕೋಟು ಮಾಡಬೇಕೆಂದಿದ್ದ. ಆದರೆ ದಾರಿದ್ರ್ಯದ ಕಾರಣದಿಂದ ಆತನ ಮನಸ್ಸಿನ ಆಶೆ ಮನಸ್ಸಿನಲ್ಲೇ ಉಳಿದಿತ್ತು.

ಜಿಮ್ಮಿ ಮೆಲ್ಲ ಮೆಲ್ಲಗೆ ಹೆಜ್ಜೆಯಿಟ್ಟು ಕೋಣೆಯೊಳಗೆ ಹೋದ. ಅವನ ಮುಂದಿನಿಂದ ಮೇರಿ ಅದೇ ಕೋಣೆಗೆ ಹೋಗುತ್ತಿದ್ದಳು. ಜಿಮ್ಮಿ ಅವಳನ್ನು ದಿಟ್ಟಿಸಿ ನೋಡಿದ. ಅವಳೂ ಅವನನ್ನು ನೋಡಿದಳು. ಪಾಪದ ಜಿಮ್ಮಿಯ ಮನೋಭಾವಗಳನ್ನು ತಿಳಿಯುವದು ಮೇರಿಗೆ ಅಸಾಧ್ಯವಾಯಿತು. ಅವನ ಕಣ್ಣುಗಳಲ್ಲಿ ಕ್ರೋಧವಿಲ್ಲ, ಉದ್ವೇಗವಿಲ್ಲ. ತಾತ್ಸಾರ ತಿರಸ್ಕಾರಗಳಿಲ್ಲ. ನಿಜವಾಗಿ ನೋಡಿದರೆ ಜಿಮ್ಮಿಯನ್ನು ನೋಡಿ ಆಗ ಮೇರಿ ಹೆದರಬೇಕಾಗಿರಲಿಲ್ಲ. ಜಿಮ್ಮಿ ಅವಳನ್ನು ನಟ್ಟ ದೃಷ್ಟಿಯಿಂದ ನೋಡುತ್ತಿದ್ದನು, ಅಷ್ಟೇ! ಆದರೂ ಮೇರಿ ಅವನನ್ನು ನೋಡಿ ನಡುಗಿದಳು.

ಅವಳು ನಡುಗುತ್ತ ಜಿಮ್ಮಿಯ ಸಮೀಪಕ್ಕೆ ಬಂದಳು. 'ಜಿಮ್ಮಿ!' ಎಂದು ಅವಳು ಕರುಣಾರಸಪೂರಿತ ಕಣ್ಣುಗಳಿಂದ ಅವನನ್ನೇ ನೋಡಿದಳು. 'ಜಿಮ್ಮಿ ಹೀಗೆ ನನ್ನನ್ನೇ ನೋಡುತ್ತಿರಬೇಡ. ನೋಡು ನಾನು ನನ್ನ ತಲೆ ಕೂದಲನ್ನು ಕತ್ತರಿಸಿ ಮಾರಿದೆ. ಜಿಮ್ಮಿ! ನನ್ನ ಅಪರಾಧವಾಯಿತು. ಆದರೆ ಜಿಮ್ಮಿ ನನ್ನನ್ನು ಕ್ಷಮಿಸು. ಅವು ಇನ್ನು ಸ್ವಲ್ಪ ದಿನಗಳಲ್ಲಿ ಮೊದಲಿಗಿಂತಲೂ ಸುಂದರವಾಗಿ ಬೆಳೆದು ಬರುವವು. ನೋಡು ಜಿಮ್ಮಿ! ಕಿಸ್‌ಮಿಸ್‌ನಂಥ ಪವಿತ್ರ ಹಬ್ಬದ ದಿನ ನಿನಗೊಂದು ಉಪಹಾರ ಕೊಡದೆ ನಾನು ಹೇಗೆ ಸುಮ್ಮನಿರಬಹುದಿತ್ತು? ಜಿಮ್ಮಿ! ಅದಕ್ಕೋಸ್ಕರ ಕೂದಲು ಕತ್ತರಿಸಿದೆ. ನನ್ನ ಅಪರಾಧವನ್ನು ಮರೆ. ಜಿಮ್ಮೀ ನನ್ನ ಅಪರಾಧವನ್ನು ಕ್ಷಮಿಸುವೆಯಾ? ಹೇಳು—ಕಿಸ್‌ಮಿಸ್ ಸಂತೋಷದಿಂದ ಕಳೆಯಿತು ಎಂದು ಅನ್ನಿಸುವೆಯಾ? ಬಾ! ಸಂತೋಷದಿಂದ ಹಬ್ಬ ಮಾಡುವ. ನನ್ನ ಜಿಮ್ಮಿ ಪ್ರಾಯಶಃ ನಿನಗೆ ಗೊತ್ತಿಲ್ಲ. ನಿನಗಾಗಿ ನಾನು ಒಂದು ಉತ್ತಮವಾದ ಉಪಹಾರ ತಂದಿದ್ದೇನೆ'.

'ಮೇರಿ ತಲೆದೂಗಲು ಕತ್ತರಿಸಿದೆಯಾ?' ಜಿಮ್ಮಿ ಕಾತರ ಸ್ವರದಿಂದ ಕೇಳಿದ.

'ಜಿಮ್ಮಿ ಕತ್ತರಿಸಿ ಮಾರಿಯೂ ಬಿಟ್ಟೆ. ಜಿಮ್ಮಿ, ಈಗ ನೀನು ಮೊದಲಿನಂತೆ ನನ್ನನ್ನು ಪ್ರೀತಿಸಲಾರೆಯಾ? ಜಿಮ್ಮಿ—ನೋಡು, ಕೂದಲು ಇಲ್ಲವಾದರೂ ನಾನು—ನಿನ್ನ ಮುಂದ ನಿಂತಿರುವವಳು—ಮೊದಲಿನ ಅದೇ ಮೇರಿ ಆಗಿದ್ದೇನೆ, ಜಿಮ್ಮಿ ನೋಡು' ಎಂದು ಅವಳು ಅಳು ಸ್ವರದಿಂದ ಹೇಳಿದಳು.

ಜಿಮ್ಮಿಯು ಗಂಭೀರನಾಗಿ ಕೋಣೆಯ ನಾಲ್ಕು ಸುತ್ತಲೂ ನೋಡಿದನು. ಅವನು ಪುನಃ ಕೇಳಿದ—'ಮೇರಿ, ನನ್ನ ಮುದ್ದಿನ ಮೇರಿ! ಏನು ಹೇಳಿದೆ? ಇನ್ನೊಮ್ಮೆ ಹೇಳು—ಕೇಶರಾಶಿಯನ್ನು ಕತ್ತರಿಸಿ ಮಾರಿದೆಯಾ?'

'ನೀನು ಅದಕ್ಕಾಗಿ ಚಿಂತಿಸಬೇಡ, ಜಿಮ್ಮಿ! ಎಂದು ಅವಳು ವಿನೀತಳಾಗಿ ದುಃಖಪಟ್ಟು—ಏನು ಪ್ರಯೋಜನ? ನೋಡು, ನಾಳೆ, ಕಿಸ್‌ಮಿಸ್ ಹಬ್ಬ; ನನ್ನ ಹಬ್ಬ; ನನ್ನ ಮೇಲೆ ದಯೆ ಇಡು. ನಾನು ಕೇಶರಾಶಿಯನ್ನು ನಿನಗಾಗಿ ತ್ಯಾಗ ಮಾಡಿದೆ. ಜಿಮ್ಮಿ, ಜಿಮ್ಮಿ! ಆ ಮಾತು ಮರೆತುಬಿಡು. ಹಸಿದು ಬಂದಿರುವೆ ರೊಟ್ಟಿ ಮಾಡಲೆ? ಹೇಳು, ತವೆ ಒಲೆ ಮೇಲಿದೆ. ಈಗಲೇ ಮಾಡಿ ತರುತ್ತೇನೆ'

ಜಿಮ್ಮಿ ಮೂರ್ಛೆಯಿಂದ ಎದ್ದು ನಿಂತಂತೆ ಮೇರಿಯನ್ನೇ ನೋಡಿದ. ಅವನು ಅವಳ ಮಾತು ಕೇಳಿ ಬಾಹುಪಾಶಗಳಿಂದ ಅವಳನ್ನು ಬಿಗಿದು ಹಿಡಿದು ಆ ಮೇಲೆ ಗಂಭೀರನಾಗಿ ತನ್ನ ಕಿಸೆಯಿಂದ ಒಂದು ಕಾಗದದ ಪೊಟ್ಟಣ ತೆಗೆದು ಮೇಜಿನ ಮೇಲಿಟ್ಟ, 'ಮೇರಿ! ನನ್ನವಿಷಯವಾಗಿ ಯಾವ ಭ್ರಮೆಯನ್ನೂ ಇಟ್ಟುಕೊಳ್ಳಬೇಡ. ನೀನು ಮೊದಲಿನಂತೆ ಈಗಲೂ ನನ್ನ ಆರಾಧ್ಯ ದೇವಿ ಆಗಿರುವೆ. ನಿನ್ನ ಮೂರ್ತಿಯು ಈಗಲೂ ನನ್ನ ಹೃದಯದಲ್ಲಿ ಅಚ್ಚಳಿಯದೆ ನಿಂತಿದೆ. ತಲೆಕೂದಲು ಕತ್ತರಿಸಿ ಹಾಕಿದ್ದರಿಂದ ನಿನ್ನ ಸೌಂದರ್ಯವು ತಿಲಮಾತ್ರ ಕೆಡಲಿಲ್ಲ. ಆದರೆ ಮೇರಿ ಆ ಪೊಟ್ಟಣವನ್ನು ಬಿಚ್ಚಿ ನೋಡಿದರೆ ನಿನಗೆ ಗೊತ್ತಾಗುವದು—ನಾನೇಕೆ ಇಷ್ಟು ಖಿನ್ನನಾಗಿದ್ದೇನೆಂದು.'

ಮೇರಿ ತನ್ನ ಕೋಮಲವಾದ ಪುಟ್ಟ ಕರಗಳಿಂದ ಆ ಪೊಟ್ಟಣವನ್ನು ಎತ್ತಿಕೊಂಡು ಮೆಲ್ಲ ಮೆಲ್ಲಗೆ ಬಿಚ್ಚಿ ನೋಡಿದಳು. ಅವಳಿಗೆ ಬಹಳ ಸಂತೋಷವಾಗಿತ್ತು ಆದರೂ ಅವಳ ಎದೆ ಡಡ ಡಡ ಎನ್ನುತಿತ್ತು. ಕೈಗಳು ಥರಥರ ಎನ್ನುತಿದ್ದುವು. ಕಣ್ಣುಗಳಿಂದ ನೀರು ಹರಿಯತೊಡಗಿತ್ತು. ಅವಳು ಪೊಟ್ಟಣವನ್ನು ಬಿಚ್ಚಿ ಇಟ್ಟಳು. ಏನು ನೋಡುವದು! ಬಂಗಾರದ ಹರಳುಕೊಟ್ಟ ಬೆಳ್ಳಿಯ ಎರಡು ಸುಂದರ ಬಾಚಣಿಗೆಗಳು ಸೊನಗಾರನ ಕಪಾಟಿನಲ್ಲಿ ಅವುಗಳನ್ನು ನೋಡಿ ಅವಳ ಬಾಯಿಂದ ನೀರೂರಿತ್ತು. ಈ ಜೀವನದಲ್ಲಿ ಅವನ್ನು ಕೊಂಡುಕೊಳ್ಳುವದು ಅಸಾಧ್ಯವೆಂದು ಅವಳು ಪೂರ್ಣ ನಿರಾಶಳಾಗಿದ್ದಳು. ಅವೇ ಬಾಚಣಿಗೆಗಳು ಈಗ ಅವಳಿಗಾಗಿ ಅವಳ ಮುಂದಿವೆ! ಹಾಯ್! ಏನು ಪ್ರಯೋಜನ? ಕೂದಲಿಲ್ಲದ ತಲೆ ಬಾಚಲಿಕ್ಕೆ ಈ ಬಾಚಣಿಗೆಗಳು ಯಾಕೆ? ಊಟಕ್ಕಿಲ್ಲದ ಉಪ್ಪಿನ ಕಾಯಿಯಂತೆ ಅವು ಕಾಲವೀರಿ ಮನೆಗೆ ಬಂದುವು. ಮೇರಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅಳುವನ್ನು ತಡೆಯುವದು ಅವಳಿಂದಾಗಲಿಲ್ಲ. ಆದರೆ ಐದಾರು ಮಿನುಟುಗಳು ಕಳೆದ ಬಳಿಕ ಅವಳು ಅವುಗಳನ್ನು ಎತ್ತಿಕೊಂಡು ಎದೆಗೆ ಒತ್ತಿಹಿಡಿದಳು. ಮೇರಿ ಕಿರುನಗೆ ನಕ್ಕು ಹೇಳಿದಳು —

'ಜಿಮ್ಮಿ! ಚಿಂತಿಸಬೇಡ' ನನ್ನ ಕೇಶರಾಶಿ ಬಹುಬೇಗ ಬೆಳೆದು ಬರುವದು.' ಇಷ್ಟು ಹೇಳಿ ಅವಳು ಅಬೋಧ ಬಾಲಿಕೆಯಂತೆ ಹಾರಿ ಹಾರಿ ಕುಣಿದಳು.

ಜಿಮ್ಮಿ—ಅವನಿಗಾಗಿ ಮೇರಿ ತಂದ ಉಪಹಾರವನ್ನು ಅಲ್ಲಿಯ ತನಕ ಏನೆಂದು ನೋಡಿರಲಿಲ. ಈಗ ಮೇರಿ ಸಂತೋಷದಿಂದ ತನ ಮುಷ್ಟಿ ಬಿಚ್ಚಿ ಅದನ್ನು ಜಿಮ್ಮಿಗೆ ತೋರಿಸಿದಳು. ಸರಪಳಿ ಥಳಥಳನೆ ಹೊಳೆಯಿತು. ಅದು ದರ ಹೊಳೆಪಲ್ಲ, ಅವಳ ಪ್ರೇಮಮಯ ಕಾಂತಿಯುಕ್ತ ಆತ್ಮದ ಪ್ರತಿಬಿಂಬವೆಂಬಂತೆ ಭಾಸವಾಯಿತು. ಅವಳು ಹೇಳಿದಳು.

'ಜಿಮ್ಮಿ—ಒಳ್ಳೆದಾಗಿದೆಯಲ್ಲವೆ? ಇದಕ್ಕಾಗಿ ನಾನು ಇಡೀ ಹಗಲನ್ನು ಪೇಟೆಯಲ್ಲಿ ಕಳೆದೆ. ಈಗ ಸಮಯ ನೋಡಬೇಕಾದರೆ ಎಂದೇನು, ದಿವಸದಲ್ಲಿ ನೂರು ನೂರು ಬಾರಿ ಗಡಿಯಾರ ನೋಡುವ ಅವಶ್ಯಯಾಗುವದು. ಜಿಮ್ಮಿ, ಬಾ, ನಾನೇ ಅದನ್ನು ಗಡಿಯಾರಕ್ಕೆ ಕಟ್ಟುತ್ತೇನೆ; ನಿನ್ನ ಕೈಗೆ ಇಟ್ಟು ನೋಡುತ್ತೇನೆ ಎಷ್ಟು ಸುಂದರವಾಗಿದೆ ಎಂದು ನೋಡುವ, ನಿನ್ನ ಗಡಿಯಾರ ಎಲ್ಲಿ?'

ಜಿಮ್ಮಿಯ ಕಾಲುಗಳು ಕಂಪಿಸಿದುವು. ಅವನು ಬಿದ್ದೇಳುವವನಂತೆ ಹೋಗಿ ಆರಾಮ ಕುರ್ಚಿಯ ಮೇಲೆ ಬಿದ್ದ. ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಮೇರಿಗೆ ಹೇಳಿದ.

'ಮೇರಿ, ನನ್ನ ಪ್ರಾಣದ ಮೇರಿ! ಬಾಚಣಿಗೆಗಳಿಗಾಗಿ ನಾನು ನನ್ನ ಗಡಿಯಾರ ಮಾರಿದೆ. (ವಿಲಿಯಂ ಸಿಡ್ನೀ ಪೋರ್ಟರ್ ಒಂದು ಕತೆಯ ಅನುವಾದ).

# ಜಪಾನೀ ರೇಶ್ಮೆಯ ಹೋಳಿ ಹಬ್ಬ!

**ಕೋತಿಯಿಂದ ಪ್ರಾಣರಕ್ಷಣೆಯಾಯಿತು!**

ಆಫ್ರಿಕಾದಲ್ಲಿ ಕ್ರಿಮಿಕೀಟಗಳ ಕುರಿತು ಸಂಶೋಧನೆಗಾಗಿ ಅಲೆದಾಡುತ್ತಿದ್ದ ಶಾಸ್ತ್ರಜ್ಞನೊಬ್ಬನು ತನ್ನ ಪ್ರವಾಸದಲ್ಲಿ ಕೋತಿಗಳ ಭಾಷೆಯ ಅರಿವನ್ನು ಮಾಡಿಕೊಂಡುದರಿಂದ, ಅವನು ತನ್ನ ಜೀವರಕ್ಷಣೆ ಮಾಡಿಕೊಂಡನು. ಕೆಲವು ಕ್ರಿಮಿಗಳಿಗಾಗಿ ಅರಣ್ಯದಲ್ಲೊಂದೆಡೆ ಆತನು ಸುತ್ತಾಡುತ್ತಿರುವ ಸಮಯ ಕೋತಿಗಳು ಹೊರಡಿಸಿದ ವಿಚಿತ್ರ ತರದ ಶಬ್ದಗಳನ್ನು ಅಪಾಯಸೂಚಕವೆಂದು ಆತನಲ್ಲಿ ಹೊಳೆಯಲು, ಆತನು ಜಾಗ್ರತೆಯಿಂದ ವರ್ತಿಸುವವನಾಗಲು, ಆತನು ಮುಂದೆ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಹೆಬ್ಬಾವು ಇರುವುದನ್ನು ಕಂಡನು.

---

**ಸರಕಾರದ ಮೇಲೆ ನೂನನಷ್ಟ ದಾವೆ.**

ಮುಸಲೋನಿಯ ಪ್ರೇಮಕ್ಕಾಗಿ ತನ್ನ ಸರ್ವಸ್ವವನ್ನೂ ಅರ್ಪಿಸಿದ, ಕೆಲ ಸಮಯದ ಹಿಂದೆ ಫ್ರಾನ್ಸಿನ ಒಂದೆಡೆ ಓರ್ವ ನಿವೃತ್ತ ರಾಯಭಾರಿಯನ್ನು ಗುಂಡಿಕ್ಕಿದ ಆಪಾದನೆಗೊಳಗಾದ ಮೆಡಮ್ ಫ್ರೊಂಟೆಂಗೆಸ್‌ಳು, ತನ್ನ ಕುರಿತು

ಮೆಡಮ್ ಫ್ರೊಂಟೆಂಗಸಳು.

ಅಮೇರಿಕದಲ್ಲಿ ದುರಭಿಪ್ರಾಯವುಂಟಾಗುವಂತೆ ಫ್ರಾನ್ಸಿನ ಸರಕಾರದ ಪ್ರೇರಣೆಯು ನಡೆದಿರುತ್ತದೆಂಬುದಾಗಿ ಅದರ ಮೇಲೆ ೧೦ ಲಕ್ಷ ಪವನುಗಳ ಮಾನನಷ್ಟಕ್ಕೆ ವ್ಯಾಜ್ಯಹೂಡಿರುವಳು. ಫ್ರೆಂಚ್ ಸರಕಾರವು ತನ್ನ ಕುರಿತು ತುಚ್ಛ ಅಭಿಪ್ರಾಯವನ್ನು ಹೊರಡಿಸಿದರಿಂದಲೇ ಅಮೇರಿಕವು ತನ್ನ ಮೇಲೆ ವಕ್ರದೃಷ್ಟಿಯನ್ನು ಬೀರಲು ಕಾರಣವೆಂದು ಆಕೆಯ ವಾದ. ತನಗೆ ಆ ಕುರಿತು ಏನೊಂದೂ ವಿಚಾರವು ತಿಳಿದಿರುವುದಿಲ್ಲವೆಂದು ಫ್ರೆಂಚ್ ಸರಕಾರದ ವಾದ

---

**ಜಪಾನೀಯ ರೇಶ್ಮೆಯ ಹೋಳಿಹಬ್ಬ**

ಅಮೇರಿಕದ ನ್ಯೂಯೋರ್ಕಿನ ವಿದ್ಯಾರ್ಥಿ ಸಂಘದವರು, ಜಪಾನೀಯ ರೇಶ್ಮೆಯ ಶರ್ಟು, ಕಾಲುಚೀಲ ಇತ್ಯಾದಿಗಳನ್ನು ರಾಶಿ ಹಾಕಿ ಒಂದು ಮಹಾ ಹೋಳಿ ಹಬ್ಬವನ್ನು ನಡೆಸಿದರು. ಅಮೇರಿಕದಲ್ಲಿ ಎಲ್ಲಾ ಜಪಾನೀಯ ಒಡವೆಗಳ ಮೇಲೆ ಬಹಿಷ್ಕಾರ ಹಾಕಬೇಕಾಗಿ ನಿರ್ಣಯಗಳಾಗಿ, ಜನರು ಆ ಕುರಿತು ಪ್ರೋತ್ಸಾಹಗೊಳ್ಳುವಂತೆ ಕಾರ್ಯಕಲಾಪಗಳು ನಡೆಯುತ್ತವೆ. ಅಮೇರಿಕದ ವಸ್ತ್ರ ವ್ಯಾಪಾರಿ ಮಹಾಸಂಸ್ಥೆಗಳೂ ಕೂಡ ಜಪಾನೀಯ ವಸ್ತ್ರ ಒಡವೆಗಳನ್ನು ಕೊಂಡುಕೊಳ್ಳಬಾರದಾಗಿ ದೃಢ ಸಂಕಲ್ಪಮಾಡಿರುತ್ತಾರೆ.

---

**ಭೂತಗಳ ಕತೆಗಳನ್ನು ಹೇಳಿದುದಕ್ಕಾಗಿ ಯಮಪುರಿಯ ಶಿಕ್ಷೆ.**

ಸೋವಿಯಟ್ ರಷ್ಯದಲ್ಲಿ ಓರ್ವ ಉಪಾಧ್ಯಾಯನನ್ನೂ, ಒಬ್ಬ ಮಹಮ್ಮದೀಯ ಧರ್ಮಗುರುವನ್ನೂ, ಮಕ್ಕಳಿಗೆ ಭೂತಗಳ ಕತೆಗಳನ್ನು ಹೇಳಿ, ಅವುಗಳನ್ನು ಹೆದರಿಸಿದುದಕ್ಕಾಗಿ ಮರಣ ದಂಡನೆಗೆ ಗುರಿಮಾಡಲಾಗಿದೆ.

---

**ಚಾಲಕನಿಲ್ಲದೆ ವಿಮಾನವು ಹಾರಿತು.**

ಬೆಸಿನ್ ವಿಮಾನ ನಿಲ್ದಾಣದಲ್ಲಿ ಇಳಿದ ವಿಮಾನವೊಂದು ಚಾಲಕನಿಲ್ಲದೆ ಚಲಿಸಿ, ಓರ್ವ ಪ್ರಯಾಣಿಕನನ್ನು ಉಭಯಸಂಕಟಕ್ಕೀಡು ಮಾಡಿ ಮರವೊಂದಕ್ಕೆ ಢಿಕ್ಕಿಬಡೆದು ಬಿದ್ದ ಕುರಿತು ವಾರ್ತೆಯೊಂದು ಬಂದಿರುತ್ತದೆ.

ಬೆಸಿನ್‌ನಲ್ಲಿ ಇಳಿದ ಈ ವಿಮಾನದಿಂದ ಚಾಲಕನು ಕೆಳಗಿಳಿದಿದ್ದನು. ಇಂಜಿನು ನಿಲ್ಲಿಸಲಾಗಿತ್ತು. ಬೇರೊಂದು ವಿಮಾನಕ್ಕೆ ಇಳಿಯಲು ಜಾಗಮಾಡಿಕೊಡಲು ಚಾಲಕನು ತನ್ನ ವಿಮಾನ ಪ್ರೊಪೆಲರನ್ನು ತಿರುಗಿಸಿದನು. ಒಡನೆ ವಿಮಾನದ ಯಂತ್ರ ಚಲಾವಣೆಯು ಪ್ರಾರಂಭವಾಗಿ ಚಾಲಕನು ಅದನ್ನೇರುವುದರಷ್ಟರೊಳಗೆ ಅದು ಹಾರಾಡಲಾರಂಭಿಸಿತು. ಸಮೀಪದಲ್ಲಿರುವ ಪೆಟ್ರೋಲ್ ಟಾಂಕಿಗೆ ಅದು ಢಿಕ್ಕಿ ಬಡೆಯದಂತೆ ಚಾಲಕನು ಅದರ ಚುಕ್ಕಾಣಿಯನ್ನು ತಿರುಗಿಸಿಬಿಟ್ಟದ್ದರಿಂದ ಅದು ಒಂದು ಮರಕ್ಕೆ ಢಿಕ್ಕಿಹೊಡೆದು ಕೆಳಗೆಬಿದ್ದು ಬಿಟ್ಟಿತು. ಒಳಗಿದ್ದ ಪ್ರಯಾಣಿಕನೊಬ್ಬನಿಗೆ ಉಭಯಸಂಕಟವು ಉಂಟಾಗಿತ್ತಂತೆ. ಆದರೆ, ಆತನು ಯಾವತ್ತೂ ಹಾನಿಯಿಲ್ಲದೆ ಸುರಕ್ಷಿತನಾಗಿದ್ದನು

---

ಆಶ್ರಿತರಾಜರುಗಳ ಸಂಘದ ಚಾನ್ಸಲರಾದ ಪಾಟಿಯಾಲ ಸಂಸ್ಥಾನದ ಮಹಾರಾಜರು

ಫೆಡರೇಶನಿನ ಕುರಿತು ಸರ್ ತೇಜ್ ಬಹದ್ದೂರ್ ಸಪ್ರೂರವರ ಅಭಿಪ್ರಾಯವನ್ನು ತಿಳಿಯಲಿರುವರೆಂದು ವಾರ್ತೆಯಿದೆ. ಫೆಡರೇಶನಿನ ಕುರಿತು ವಿಚಾರಿಸಲು ಮರೆ ಇನ್ನೇ ಕೆಲ ದಿನಗಳಲ್ಲಿ ಆಶ್ರಿತ ರಾಜರುಗಳ ಸಭೆಯೊಂದು ಬೇಗನೇ ಸೇರಲಿದೆ.

---

**ಮೆಡಿಟರೇನಿಯನ್ ಸಾಗರದಲ್ಲಿ**

ಸಮುದ್ರ ಕಳ್ಳರ ಹಾವಳಿಯು ಇನ್ನೂ ನಿಲ್ಲಲಿಲ್ಲ. ಬ್ರಿಟನ್, ಇಟಲಿ ಇತ್ಯಾದಿ ಜನಾಂಗಗಳು ಒಟ್ಟುಗೂಡಿ ಮೆಡಿಟರೇನಿಯನ್ ಸಾಗರದಲ್ಲಿ ಕಳ್ಳಕಾಕರ ಕುರಿತು ಕಾವಲಿದ್ದರೂ, ಮೊನ್ನಿಂದ ಮೊನ್ನೆಗೆ ಎರಡು ಬ್ರಿಟಿಷ ಹಡಗುಗಳು ಜಲಾಂತರ್ಯಾಮಿ ಹಡಗುಗಳಿಂದ ಮುಳುಗಿಸಲ್ಪಟ್ಟವು. ಕಳ್ಳರು ಯಾರೆಂದು ಮಾತ್ರ ಇನ್ನುವರೆಗೆ ಕಂಡುಹಿಡಿಯಲಾಗಲಿಲ್ಲ

---

ಜನರಲ್ ಫ್ರಾಂಕೋನಿಗೆ ಸ್ಪೇಯಿನಿನ ದಕ್ಷಿಣ ಭಾಗದಲ್ಲಿ ಸಣ್ಣ ಜಯವೊಂದು ಲಭಿಸಿ, ನೂರು ಚದರ ಮೈಲುಗಳ ವಿಸ್ತೀರ್ಣದ ಪ್ರದೇಶವು ವಶವಾಗಿರುತ್ತದೆ.

---

**ನಾಯಿಗಳ ಕ್ರಿಕೆಟ್ ಆಟ.**

ನ್ಯೂ ಸೌತ್ ವೇಲ್ಸಿನಲ್ಲಿ ಎಲೆಗ್ಸಾಂಡ್ರಿಯಾ ಎಂಬಲ್ಲಿ 10 ನಾಯಿಗಳು ಪ್ರತಿನಿತ್ಯವೂ ಕ್ರಿಕೆಟ್ ಆಟವಾಡುತ್ತಿರುವವು. ಇಬ್ಬರು ಪೋಲೀಸರು ಅವುಗಳನ್ನು ತರಬೇತಿಗೊಳಿಸಿದವರು: ಅವುಗಳು ಮನುಷ್ಯರಂತೆ ಚಲೋದಾಗಿ ಆಡುವವಂತೆ. ಅಂತೂ ಕ್ರಿಕೆಟ್ ಆಟ ನಾಯಿಯು ಪಾಲಾಯಿತೆನ್ನಿ!

---

# ಬಹುಕಾಲ ಬದುಕಿ ಬಾಳುವುದು ಹೇಗೆ?

**ಡಾ। ಹೇಮಚಂದ್ರ ಭಟ್ಟಾಚಾರ್ಯ, ಯಂ. ಬಿ., ಇವರ ಅಭಿಪ್ರಾಯ.**

ಪ್ರತಿಯೊಬ್ಬನು ತಾನು ಬಹುಕಾಲ ಬದುಕಿ ಬಾಳಬೇಕೆಂದು ಇಚ್ಛಿಸುತ್ತಾನೆ. ಮುದುಕರನ್ನು—'ನೀನು ಮುದಕ' ಎಂದು ಹೇಳಿದರೆ ಸಿಟ್ಟುಬರುವದು! ಯಾಕೆಂದರೆ ವೃದ್ಧರಾದವರು ಬೇಗ ಸಾಯುವರು ಎಂಬುದವರಿಗೆ ತಿಳಿದಿದೆ. ಪ್ರತಿಯೊಬ್ಬನು ಮರಣಕ್ಕೆ ಹೆದರುತ್ತಾನೆ. ಆದರೆ ದೀರ್ಘಕಾಲ ಬದುಕಿ ಬಾಳುವದರಿಂದ ಯಾವ ಪುರುಷಾರ್ಥವನ್ನು ಸಂಪಾದಿಸಲಿಕ್ಕಿದೆ ಎಂದು ಯಾರೂ ಯೋಚಿಸುವದಿಲ್ಲ. ಹೇಗಿದ್ದರೂ ಬಹುಕಾಲ ಬದುಕಿ ಬಾಳುವದು ಕೂಡ ಒಂದು ದೊಡ್ಡ ಸಾಧನೆಯೇ ಆಗಿರುವ ಪ್ರಯುಕ್ತ ಎಲ್ಲರು ಅದಕ್ಕಾಗಿ ಪ್ರಯತ್ನಿಸಬೇಕಾದ್ದು ಅಗತ್ಯ.

ಜೀವನವು ನಿಯಮಬದ್ಧವಾಗಿದೆ. ದೀರ್ಘಕಾಲ ಬದುಕಿ ಬಾಳಬೇಕಾಗಿದ್ದರೂ, ಅನಿಯಂತ್ರಿತ ಜೀವನದಿಂದ ಅದು ಸಾಧ್ಯವಲ್ಲ. ದೀರ್ಘ ಜೀವನಕ್ಕೂ ನೇಮನಿಯಮಗಳಿವೆ. ಅವುಗಳನ್ನು ಎಷ್ಟು ಚೆನ್ನಾಗಿ ಪಾಲಿಸುತ್ತಾನೋ ಅಷ್ಟು ಚೆನ್ನಾಗಿ ಮನುಷ್ಯನು ದೀರ್ಘ ಜೀವಿಯಾಗುತ್ತಾನೆ. ನಮ್ಮ ದೇಹವನ್ನು ಒಂದು ಮನೆಗೆ ಹೋಲಿಸಬಹುದು. ಮನೆಕಟ್ಟಲಿಕ್ಕೆ ಉಪಯೋಗಿಸಿದ ಸಾಹಿತ್ಯಸಾಮಗ್ರಿಗಳು ಉತ್ಕೃಷ್ಟವಾದ್ದಂತೆ ಅವುಗಳಿಂದ ಕಟ್ಟಿಸಿದ ಮನೆಯು ಹೆಚ್ಚುಕಾಲ ತಾಳುವಂಥಾದ್ದೂ ಬಾಳುವಂಥಾದ್ದೂ ಆಗುತ್ತದೆ. ಅದರಂತೆಯೇ ಬಾಲ್ಯ, ತಾರುಣ್ಯ, ಯೌವನ ಮತ್ತು ವೃದ್ಧಾಪ್ಯದಲ್ಲಿ ಶರೀರ ಬೆಳವಣಿಗೆ ಮತ್ತು ಅದರ ರಕ್ಷಣೆಗೆ ಉಪಯೋಗಿಸ್ಪಡುವ ವಸ್ತು ಒಡವೆಗಳು ಉತ್ಕೃಷ್ಟ ಮತ್ತು ಸಾಕಾದಷ್ಟು ದೊರೆತಂತೆ ಶರೀರವು ಹೆಚ್ಚು ಕಾಲದ ತನಕ ನಷ್ಟವಾಗದೆ ಗಟ್ಟಿಮುಟ್ಟಾಗಿ ಉಳಿಯುತ್ತದೆ

ಶರೀರವು ಬೆಳೆಯುವಂತೆಯೂ, ಬೆಳೆಯುತ್ತಿರುವ ಮತ್ತು ಬೆಳೆದ ಕಾಲಕ್ಕೆ ಅದು ಸುರಕ್ಷಿತವಾಗಿರುವಂತೆಯೂ ನಾವು ಕ್ರಮವರಿತು ಒಳ್ಳೇ ಪುಷ್ಟಿಕರವಾದ ರಕ್ಷಣಾತ್ಮಕ ಆಹಾರ ಪದಾರ್ಥಗಳನ್ನು ಶರೀರಕ್ಕೆ ಒದಗಿಸಿಕೊಡಬೇಕು. ರಕ್ಷಣಾತ್ಮಕ ಆಹಾರ ಪದಾರ್ಥಗಳು ಅಂದರೆ—ಬಲಕಾರಿ ಪದಾರ್ಥಗಳು, ಜೀವಾತುಗಳು ಮತ್ತು ಖನಿಜ ಪದಾರ್ಥಗಳು ಸೇರಿರುವಂಥವುಗಳು ಆಗಿವೆ. ಇಂಥ ಪದಾರ್ಥಗಳು ಹಸುರು ತರಕಾರಿಗಳಲ್ಲಿಯೂ, ಹಸನಾದ ಹಣ್ಣು ಹಂಪಲುಗಳು, ಹಾಲು ಮತ್ತು ಮೊಟ್ಟೆಗಳಲ್ಲಿಯೂ ವಿಶೇಷವಾಗಿ ಇರುತ್ತವೆ. ನಾವು ಸಾಮಾನ್ಯವಾಗಿ ಗುರಿಯಾಗುವ ರೋಗರುಜೆಗಳಿಂದ ಈ ಆಹಾರ ಪದಾರ್ಥಗಳು ನಮ್ಮನ್ನು ರಕ್ಷಿಸುವವು.

ದೇಹಕ್ಕೆ ದಣುವಾಗಬಾರದೆಂದು ನಾವು ಆರಾಮವಿರಾಮ, ವ್ಯಾಯಾಮ, ವಿನೋದಗಳಿಂದ ಕಾಲವನ್ನು ಕಳೆದರೂ, ಹಗಲಿರುಳು ಅಂಗಾಂಗಗಳಲ್ಲಿ ನಡೆಯುವ ಕೆಲಸದ ಮೂಲಕ ದೇಹನಿರ್ಮಾಣ ಸಾಮಗ್ರಿಗಳು ನಿಮಿಷ ನಿಮಿಷಕ್ಕೂ ನಷ್ಟವಾಗುತ್ತಿರುವವು. ಆದ್ದರಿಂದ ಶರೀರದಲ್ಲಿ ಉಂಟಾದ ನಷ್ಟವನ್ನು ತುಂಬಿಸಲಿಕ್ಕೆ ನಾವು ಅತ್ಯುತ್ಕೃಷ್ಟ ಬಲಕಾರಿ ಪದಾರ್ಥಗಳನ್ನು ಉಪಯೋಗಿಸಬೇಕು. ಇವು ಮಾಂಸ, ಮೀನು, ಮೊಟ್ಟೆ ಮತ್ತು ಹಾಲಿನಲ್ಲಿ ಅತಿಶಯವಾಗಿರುತ್ತವೆ. ಅಕ್ಕಿ, ಗೋದಿ, ಬಾರ್ಲಿ, ಬೇಳೆ ಧಾನ್ಯಗಳು, ಮೀನು, ಮಾಂಸ, ಮೊಟ್ಟೆ ಮೊದಲಾದವು ರಕ್ತಗತವಾಗುವಾಗ ದ್ರಾವಕ (ಎಸಿಡು) ಗುಣದ ಅನ್ನರಸವನ್ನು ಉಂಟುಮಾಡುತ್ತವೆ. ಆದರೆ ಹಸುರು ತರಕಾರಿಗಳು, ಹಣ್ಣುಹಂಪಲು ಮೊದಲಾದ ಇತರ ಕೆಲವು ಪದಾರ್ಥಗಳು ರಕ್ತಗತವಾಗುವಾಗ ಕ್ಷಾರ (ಅಲ್ಕಾಲಿ) ಸ್ವಭಾವದ ಅನ್ನರಸವನ್ನುಂಟುಮಾಡುತ್ತದೆ. ಹಾಲಿನಲ್ಲಿ ದ್ರಾವಕಗುಣವು ಇರುವದಿಲ್ಲ. ಕ್ಷಾರ ಗುಣವು ಸ್ವಲ್ಪಮಟ್ಟಿಗೆ ಮಾತ್ರ ಇರುತ್ತದೆ. ಕ್ಷಾರ ಸ್ವಭಾವದ ಪದಾರ್ಥಗಳನ್ನು ತೆಗೆದುಕೊಳ್ಳುವದಕ್ಕಿಂತ ದ್ರಾವಕ ಸ್ವಭಾವದವುಗಳನ್ನೇ ನಾವು ಹೆಚ್ಚೆಚ್ಚಾಗಿ ತೆಗೆದುಕೊಳ್ಳುತಿದ್ದರೆ, ಅದರ ಪರಿಣಾಮವಾಗಿ ಶರೀರದ ಕೋಮಲಾಂಗಗಳು, ರಕ್ತಕಣಗಳು, ನರನಾಡಿಗಳು, ವಿಸರ್ಜನಾಂಗಗಳು ದುರ್ಬಲವಾಗಿ ತಮ್ಮ ತಮ್ಮ ಕಾರ್ಯನಿರ್ವಾಹವನ್ನು ಮಾಡಲಿಕ್ಕೆ ಅಸಮರ್ಥವಾಗುವವು. ಇದರಿಂದ ಅಂಗಭಾಗಗಳಿಗೆ ಸಂಬಂಧಪಟ್ಟ ಹೃದ್ರೋಗಗಳು, ಮೂತ್ರರೋಗಗಳು, ಅಜೀರ್ಣ ಸಂಬಂಧ ರೋಗಗಳು, ಪಿತ್ತರೋಗಗಳು, ಹಲ್ಲು ರೋಗಗಳು, ಕಣ್ಣುರೋಗಗಳು, ಶ್ವಾಸಕೋಶದ ರೋಗಗಳು ಇತ್ಯಾದಿ ಉಂಟಾಗುವವು. ಈ ರೋಗಗಳಿಂದ ದೂರವಾಗಿರಬೇಕಾದರೆ ದ್ರಾವಕಗುಣದ ಆಹಾರ ಪದಾರ್ಥಗಳೊಂದಿಗೆ ಕ್ಷಾರ ಸ್ವಭಾವದ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳಬೇಕು. ದ್ರಾವಕ ಮತ್ತು ಕ್ಷಾರ ಸ್ವಭಾವದವುಗಳಲ್ಲಿ ಯಾವದಾದರೊಂದನ್ನು ಮಾತ್ರ ವಿಶೇಷವಾಗಿ ತೆಗೆದುಕೊಳ್ಳುತಿದ್ದರೆ ದೇಹಾರೋಗ್ಯವು ಕೆಟ್ಟುಹೋಗುವದು ಖಂಡಿತ

ಮಿಲ್ಲುಗಳಲ್ಲಿ ತಯಾರಾಗುವ ಅಕ್ಕಿ, ಹಿಟ್ಟು, ಎಣ್ಣೆ, ಸಕ್ಕರೆ, ಮೊದಲಾದವುಗಳನ್ನು ಉಪಯೋಗಿಸುತಿದ್ದರೂ, ಶರೀರಕ್ಕೆ ಬೇಕಾದ ಜೀವಾತುಗಳು ಮತ್ತು ಬೇರೆ ಬೇರೆ ಖನಿಜ ಪದಾರ್ಥಗಳು ಸಿಕ್ಕದೆ ಹೋಗಿ ಅನಾರೋಗ್ಯವುಂಟಾಗುವದು. ಯಾಕೆಂದರೆ ಮಿಲ್ಲುಗಳಲ್ಲಿ ಈ ಪದಾರ್ಥಗಳು ತಯ್ಯಾರಾಗುವಾಗ ಅವುಗಳಲ್ಲಿರುವ ಜೀವಾತುಗಳು ಮತ್ತು ಖನಿಜ ಪದಾರ್ಥಗಳು ನಷ್ಟವಾಗುವವು. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಹರಡಿರುವ ಅನೇಕ ಬಗೆಯ ರೋಗಗಳಿಗೂ, ತಾಯಂದಿರಲ್ಲಿ ಮೊಲೆಹಾಲು ಕಡಿಮೆಯಾಗಲಿಕ್ಕೂ, ಮಿಲ್ಲುಗಳಲ್ಲಿ ತಯಾರಾಗುವ ಆಹಾರ ಪದಾರ್ಥಗಳನ್ನು ಸೇವಿಸುತ್ತಿರುವದರ ಮೂಲಕ ಜೀವಾತುಗಳು ಮತ್ತು ಖನಿಜ ಪದಾರ್ಥಗಳು ಶರೀರಕ್ಕೆ ದೊರೆಯದಿರುವದೇ ಕಾರಣವೆಂದು ಅನೇಕ ಮಂದಿ ಆಹಾರ ತಜ್ಞರ ಅಭಿಪ್ರಾಯವಾಗಿರುತ್ತದೆ

ತಾರುಣ್ಯವು ಕಳೆದು ಮಧ್ಯವಯಸ್ಸಿಗೆ ಒಂದ ಬಳಿಕ ಜೀವನಕ್ರಮವನ್ನು ಕೆಲವು ಮಟ್ಟಿಗೆ ಬದಲಾಯಿಸುವದು ಅಗತ್ಯ. ಅಂಗೋಪಾಂಗ ವ್ಯಾಪಾರಗಳು ಚೆನ್ನಾಗಿ ನಡೆಯಲಿಕ್ಕೆ ಸಿಟ್ಟಿಂತೆ, ಸಂತೋಷ ಉಲ್ಲಾಸಗಳು ಹೇಗೆ ಕಾರಣವಾಗಿವೆಯೋ, ಅವು ನಡೆಯದಿರಲಿಕ್ಕೆ ಚಿಂತೆ, ದುಃಖ, ಕಳವಳ, ಮೊದಲಾದವು ಕಾರಣವಾಗಿವೆ. ಸಿಟ್ಟು, ಕಳವಳ, ಉದ್ವೇಗಗಳಿಂದ ಅಜೀರ್ಣ ಮೊದಲಾದವು ಉಂಟಾಗುವದು ಎಲ್ಲರ ಅನುಭವಕ್ಕೆ ಬಂದಿರಬಹುದು. ಆದ್ದರಿಂದ ಪ್ರಾಯ ಕಳೆಯುತ್ತ ಬಂದ ಹಾಗೆ ಹೆಚ್ಚೆಚ್ಚು ಸಿಟ್ಟಿಂತರೂ, ಸಂತೋಷಿಗಳೂ, ಉಲ್ಲಾಸಿಗಳೂ ಆಗುವಂತೆ ಪ್ರತಿಯೊಬ್ಬನು ಪ್ರಯತ್ನಿಸಬೇಕು. ಸಿಟ್ಟು, ಕಳವಳ ಉದ್ವೇಗ ಮೊದಲಾದವು ಉಂಟಾಗುವಂಥ ಪ್ರಸಂಗಗಳಿಂದ ಆದಷ್ಟು ಮಟ್ಟಿಗೆ ದೂರವಾಗಿರಬೇಕು. ಶರೀರ ಮತ್ತು ಮನಸ್ಸಿಗೆ ಅತಿರೇಕ ಆಯಾಸವನ್ನುಂಟು ಮಾಡುವ ಯಾವ ಕೆಲಸವನ್ನೂ ಮಾಡಬಾರದು. ಹಿಂದಿನ ತರದ ವ್ಯಾಯಾಮ ಕಸರತ್ತುಗಳನ್ನು ಮಾಡಬಾರದು. ಇಳಿವಯಸ್ಸಿನಲ್ಲಿ 'ನಡೆಯುವದು' ಇದೊಂದೇ ಉತ್ತಮವಾದ ವ್ಯಾಯಾಮವಾಗಿದೆ. ಅದನ್ನು ದಿನನಿತ್ಯ ಮಾಡುತ್ತಿರಬೇಕು. ವೃದ್ಧಾಪ್ಯದಲ್ಲಿ ಯಾವ ಕಾರ್ಯಕ್ಕೂ ಅವಸರವಿರಬಾರದು. ಪ್ರತಿಯೊಂದು ಕಾರ್ಯವನ್ನು ಸಾವಧಾನದಿಂದ ಮಾಡಬೇಕು. ತಾಳ್ಮೆ, ಶಾಂತತೆ ಇವು ವೃದ್ಧಾಪ್ಯದ ಮುಖ್ಯ ಗುಣಗಳಾಗಿರಬೇಕು. ಆ ಕಾಲದಲ್ಲಿ 'ತತ್ವಜ್ಞಾನಿ'ಗಳಾಗುವದರಿಂದ ಕೆಲವು ಮಟ್ಟಿಗೆ ಚಿಂತೆ, ಕಳವಳ ಮೊದಲಾದವುಗಳಿಂದ ದೂರವಾಗಿರಲಿಕ್ಕಾಗುತ್ತದೆ. ಆದ್ದರಿಂದ ಆ ಸಮಯ ವೇದಾಂತ ಪುಸ್ತಕಗಳನ್ನು ಓದಿಕೊಂಡಿರಬೇಕು. ಕಾಫಿ, ಟೀ, ಹೊಗೆಸೊಪ್ಪು ಮದ್ಯಪಾನ, ಮಸಾಲೆ ಜಿನಸು, ಮತ್ತು ಬಹಳ ಪೌಷ್ಟಿಕವಾದ ಆಹಾರ ಪದಾರ್ಥಗಳ ಸೇವನೆಯನ್ನು ವೃದ್ಧಾಪ್ಯದಲ್ಲಿ ಮಾಡಕೂಡದು. ಅವು ವೃದ್ಧಾಪ್ಯದ ಅನೇಕ ರೋಗಗಳಿಗೆ ಮೂಲಕಾರಣಗಳಾಗಿವೆ. ಅವುಗಳ ಸೇವನೆಯಿಂದ ಆಯುಃಪ್ರಮಾಣವು ತಗ್ಗುತ್ತದೆ.

THE

**BANK OF MANGALORE LTD.,**

MANGALORE.

ESTD 1931

*Branches.-*
Panemangalore, Mudabidri & Padubidri

*Chairman*—**Philip J. Chandran, Esq.,**
*Retd Dt Registrar of Joint Stock Companies*

On & from 1st of January 1937,
Fixed Deposits will be received at following rates of interest

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 & upwards | 5½% |

Interest Payable Quarterly

Saving Bank deposit 3½% on daily balance

**All kinds of banking business transacted**

U R. PAI, N. U PAI, *Managing Directors*

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ ಅಂಡ್ ಕೋ,
ಆಯುರ್ವೇದಿಕ್ ಸಮಾಜ ಪೆರಿಡೇಪಿ
P O Peridepi (ನೆಲ್ಲೂರು ಜಿ)

**HOUNSA**

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋರಿಕಟ್ಟಾ ಬಜಾರ್, ಮಂಗಳೂರು

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

## 'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ
## ಈ ದಿನವೇ ಚಂದಾದಾರರಾಗಿರಿ.

**S. U. N. & Co.,**

*Silk Merchants,*
Chaukhambi BENARES CITY

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ... 18 ಮೊಳದ 2½ ... ಸಣ್ಣ ಬುಟ್ಟಿ ಶೀರೆಗಳು 1 ... 45ರಿಂದ 150 ಸಾಧಾರಣತರದ್ದು 18 ಮೊಳ ... ಶೀರೆಗಳು ರೂ 35 ... ರೂ 55 ... ಶೀರೆ 18 ... ರೂ 32 ... ರೂ 65 ... 1½ ... 2½ ರೂ 20 ರಿಂದ 35ರ ವರೆಗೆ ... ಮಾಲುಗಳ ... ಉಚಿತವಾಗಿ ಕಳುಹಿಸಲಾಗುವುದು

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ

ಎಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ, ನಿಮ್ಮ ಸೌಂದರ್ಯವನ್ನೂ ಆರೋಗ್ಯವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

## ಲಿಮ್ಡಾ ಸೋಪು
## ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ-ಮದ್ರಾಸು

ಒದಗಿಸಿಕೊಡುವವರು—

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,
ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd. I wish the same very success as I am told they are rendering help to the poor by the supply of medicines free of cost. I wish the institution every success.

(*Sd*) **V. V Giri,**
*Minister of Labour*

*1-10-1937*

**Bhuvanendra Products Ltd.**, Katapady, S Kanara

# ಆಯರ್ಲೆಂಡಿಗೆ ಸ್ವಾತಂತ್ರ್ಯ ಸಿಕ್ಕಿತು!

ಲೇಖನಿಯಿಂದ ಒಂದೇ ಒಂದು ಅಕ್ಷರವನ್ನು ಬರೆದು ಡಿವೆಲೆರಾನು, ಬ್ರಿಟಿಷ ಪಾರ್ಲಿಮೆಂಟು ಆಯರ್ಲೆಂಡಿನ ಮೇಲೆ ಹೊರಿಸಿದ ರಾಜಕೀಯ ಘಟನೆಯನ್ನು ಚೂರು ಚೂರು ಮಾಡಿ ಕಸದ ಬುಟ್ಟಿಗೆ ಒಗೆದುಬಿಟ್ಟನು ಐರಿಷ ಜನರಿಗಾಗಿ ಆಯರ್ಲೆಂಡಿನಲ್ಲಿ ಆಯರ್ಲೆಂಡಿನವರೇ ಬರೆದು ತಯ್ಯಾರಿಸಿದ ಹೊಸ ಘಟನೆಯು ಕಳೆದ ದಶಂಬರ ತಿಂಗಳ 29ನೇ ತಾರೀಕಿನ ದಿನ ಜಾರಿಗೆ ಬಂದಿತು ಆಯರ್ಲೆಂಡು ಪೂರ್ಣ ಸ್ವತಂತ್ರವಾಯಿತು ಅದಕ್ಕೆ ಸ್ವಾತಂತ್ರ್ಯವು ದೊರಕಿದುದಲ್ಲ, ಅದು ತಾನಾಗಿ ಸ್ವಾತಂತ್ರ್ಯವನ್ನು ದೊರಕಿಸಿಕೊಂಡಿತು. ಅದರ ಇತಿಹಾಸವು ಸ್ವರ್ಣಾಕ್ಷರಗಳಿಂದ ಬರೆದಿಡುವಷ್ಟು ಮಹತ್ವವುಳ್ಳದ್ದಾಗಿದೆ

ಸ್ವಾತಂತ್ರ್ಯ ಲಾಭವಾಗಬೇಕಾದರೆ ಎಷ್ಟೋ ದೇಶಗಳಲ್ಲಿ ಎಷ್ಟೋ ರಕ್ತರಂಜಿತ ಕ್ರಾಂತಿಗಳಾದುವು ಯಾಕೆ? ಆಯರ್ಲೆಂಡಿನಲ್ಲೇ ಎಷ್ಟೋ ಮಂದಿ ವೀರ ದೇಶಭಕ್ತರ ಸ್ವಾತಂತ್ರ್ಯದೇವಿಯ ಬಲಿವೇದಿಯ ಮೇಲೆ ತಮ್ಮ ಪ್ರಾಣಗಳನ್ನು ಬಲಿಕೊಟ್ಟಿದ್ದಾರೆ ಎಷ್ಟೋ ರಕ್ತವು ನದಿ ತೊರೆಗಳಾಗಿ ಹರಿದುಹೋಗಿದೆ ಆದರೆ ಈ ಸಲ ಮಾತ್ರ ಆಯರ್ಲೆಂಡ ಪೂರ್ಣ ಸ್ವತಂತ್ರವಾಗುತ್ತಿರುವಾಗ ಒಬ್ಬನೇ ಒಬ್ಬನಾದರೂ ಜೀವದಾನ ಮಾಡಬೇಕಾಗಲಿಲ್ಲ ಶಾಂತರೀತಿಯಿಂದ, ಸಮಾಧಾನದಿಂದ 'ಎಲ್ಲ ಕೆಲಸಗಳು ನಡೆದು ಹೋದುವು ಎಲ್ಲದಕ್ಕೂ ಡಿವೆಲೆರಾನ ಸೂಕ್ಷ್ಮದರ್ಶಿತ್ವ, ಕಾರ್ಯಪಟುತ್ವ, ಬುದ್ಧಿ ಚಾತುರ್ಯಗಳೇ ಕಾರಣ

ದಶಂಬರ 29ನೇ ತಾರೀಕು ಇದು ಆಯರ್ಲೆಂಡಿನ ಮಹತ್ವದ ದಿನ ನಮ್ಮಲ್ಲಿ ಪುತ್ರ ಜನ್ಮವಾದಾಗ, ದೊಡ್ಡದೊಂದು ನಿಧಿ ದೊರಕಿದಾಗ, ಜಾತ್ರೆ ಉತ್ಸವಗಳು ನಡೆಯುವಾಗ ಎಷ್ಟು ಸಂತೋಷವೋ, ಅದಕ್ಕೂ ಸಾವಿರಪಾಲು ಹೆಚ್ಚಿನ ಸಂತೋಷ ಅಂದು ಐರಿಷ ಜನರಿಗೆ ಆಗಿತ್ತು ಸ್ವಾತಂತ್ರ್ಯವು ಯಾರಿಗೆ ಬೇಡ? ಅದರಲ್ಲೂ ಶತಮಾನಗಳಿಂದ ಮಾಡಿದ ಶತಪ್ರಯತ್ನಗಳ ಫಲವಾಗಿ ಅದೂ ದೊರಕಿತೆಂದರೆ ಸ್ವಾತಂತ್ರ್ಯದ ಮೌಲ್ಯವು ಲಕ್ಷಪಾಲು ಹೆಚ್ಚುತ್ತದೆ. ಅಲ್ಲ, ಅದು ಅಮೂಲ್ಯವಾಗುತ್ತದೆ ಅಂಥ ಅಮೂಲ್ಯ ವಸ್ತುವು ಐರಿಷ ಜನರಿಗೆ ಪ್ರಾಪ್ತವಾದುದಕ್ಕಾಗಿ ಆ ಜನರ ಆನಂದಕ್ಕೆ ಪಾರವೇ ಇಲ್ಲ ಸ್ವರ್ಗವು ಸಿಕ್ಕಿದುದಕ್ಕಿಂತಲೂ ಹೆಚ್ಚಾಗಿ ಅವರು ಸಂತೋಷಪಟ್ಟರು.

1916ರಲ್ಲಿ ಐರಿಷ ಜನರು 'ತಾವು ಪೂರ್ಣ ಸ್ವತಂತ್ರರೆಂದು ಲೋಕಕ್ಕೆ ಸಾರಿದ್ದರು ಆದರೆ ಅಧಿಕಾರವು ಪ್ರಾಪ್ತವಾಗದೆ ಮಾಡಿದ ಸಾರಣೆ ಅದು ಅಧಿಕಾರಕ್ಕಾಗಿ ಮುಂದೆ ಸಾವಿರಾರು ಮಂದಿ ಪ್ರಾಣಕೊಟ್ಟರು, ಲಕ್ಷಾಂತರ ಜನರು ಗಾಯಗೊಂಡರು ಭಯಂಕರ ದಂಗೆಗಳು ನಡೆದುವು ಐರಿಷ ಜನರು ಸೋತಿದ್ದರು ಆದರೆ ಮಲಗಿ ಪ್ರಾಣಹೀನರಾಗಲಿಲ್ಲ ಹೊಸ ಸ್ಫೂರ್ತಿ ಹೊಸ ಉತ್ಸಾಹ ಪಡೆದು ಎದ್ದು ನಿಂತರು, ಮುಂದೆ ನಡೆದರು ಸ್ವಾತಂತ್ರ್ಯ ದೇಗುಲವನ್ನು ಸೇರಿ ಅವಳ ದರ್ಶನವನ್ನು ಪಡೆದೇ ಪಡೆದರು ಐರಿಷ ಜನರು ಜನ್ಮಸಾರ್ಥಕ ಮಾಡಿಕೊಂಡರು, ಕೃತಾರ್ಥರಾದರು.

ಹೊಸ ಘಟನೆಯಿಂದಾಗಿ, ಆಯರ್ಲೆಂಡಿನ ಪಕ್ಷಪ್ರತಿಪಕ್ಷಗಳೊಳಗಿನ ಸ್ಪರ್ಧೆಯು ನಿಂತಿತು ಆಯರ್ಲೆಂಡು ಬ್ರಿಟಿಷ ಸಾಮ್ರಾಜ್ಯದ ಅಂತರ್ಗತವಾಗಿರಬೇಕೆ, ಅಥವಾ ಅದರಿಂದ ಬಹಿರ್ಗತವಾಗಬೇಕೆ ಎಂದು ನಿರ್ಣಯ ಮಾಡುವ ಅಧಿಕಾರವು ಆಯರ್ಲೆಂಡಿಗೇ ಇರುವದು ಮೊದಲಿನಂತೆ ಅದನ್ನು ಇನ್ನು ಬ್ರಿಟಿಷ ಪಾರ್ಲಿಮೆಂಟು ನಿರ್ಣಯಿಸಲಾರದು; ಇನ್ನು ಆ ಅಧಿಕಾರ ಬ್ರಿಟಿಷ ಪಾರ್ಲಿಮೆಂಟಿಗಿರುವುದಿಲ್ಲ.

ಸ್ವಾತಂತ್ರ್ಯ ದಿನವನ್ನು ಐರಿಷ ಜನರು ಬಹಳ ವಿಜೃಂಭಣೆಯಿಂದ ಆಚರಿಸಿದ್ದಾರೆ ಆ ಉತ್ಸವವು 'ನಭೂತೋನಭವಿಷ್ಯತಿ' ಎಂಬ ಹಾಗೆ ನಡೆದಿದೆ. ಆದರೆ ಜನರು ಧೃತಿಗೆಟ್ಟಿಲ್ಲ, ಉನ್ಮತ್ತರು ಭ್ರಾಂತರು ಆಗಿಲ್ಲ, ಅವರ ಉತ್ತರದಾಯಿತ್ವ ಹೆಚ್ಚಿದೆ, ಜವಾಬುದಾರಿ ಬೆಳೆದಿದೆ. ಆದ್ದರಿಂದ ಅವರು ವಿಚಾರಪರರಾಗಿದ್ದಾರೆ. ಆಯರ್ಲೆಂಡಿನಲ್ಲಿ ಇನ್ನು ಆಗತಕ್ಕ ಬಹಳ ಕೆಲಸಗಳಿವೆ. ಉತ್ತರ ದಕ್ಷಿಣಗಳ ಏಕೀಕರಣವಾಗಬೇಕಾಗಿದೆ

ಆದಕಾರಣ ಈಗ ದಿನ ಪ್ರತಿ ದಿನ ಆಯರ್ಲೆಂಡನ್ನು ಉತ್ತರ– ದಕ್ಷಿಣವೆಂದು ವಿಭಜಿಸಿ ಹಾಕಿದ ಬ್ರಿಟಿಷ ಪಾರ್ಲಿಮೆಂಟಿನ ನೀತಿಯನ್ನು ನಿಷೇಧಿಸಿ, ಏಕೀಕರಣವನ್ನು ಪ್ರಯತ್ನಿಸುವ ಎಷ್ಟೋ ಚಿಕ್ಕ ದೊಡ್ಡ ಸಭೆಗಳು ಹಳ್ಳಿಹಳ್ಳಿ, ಪೇಟೆಪಟ್ಟಣ—ಸಂದುಗೊಂದುಗಳಲ್ಲಿ ಕೂಡುತ್ತಿವೆ ಸ್ವಾತಂತ್ರ್ಯ ದಿನವು ಐರಿಷ ಜನರಿಗೆ ಸಂತೋಷದ ದಿನವಾಗಿತ್ತು. ಮಾತ್ರವಲ್ಲ, ಅದು ಕರ್ತವ್ಯ ಪಾಲನೆಯ ಪ್ರತಿಜ್ಞೆ ತೆಗೆದುಕೊಳ್ಳುವ ದಿನವೂ ಆಗಿತ್ತು ಹೊಸ ರಾಜಕೀಯ ಘಟನೆಯು ಸಮಸ್ತ ಆಯರ್ಲೆಂಡಿಗೆ ಅನ್ವಯಿಸುವಂತೆ ಪ್ರಯತ್ನಿಸುವೆವೆಂದು ಪ್ರತಿಯೊಬ್ಬರು ಪ್ರತಿಜ್ಞೆ ತೆಗೆದುಕೊಂಡರು

ವ್ಯಕ್ತಿ ಸ್ವಾತಂತ್ರ್ಯ, ಸಮಾಜ ವ್ಯವಸ್ಥೆ, ದೇಶದ ಏಕೀಕರಣ ಹಾಗೂ ಸಂಘಟನೆ ಪರದೇಶಗಳೊಡನೆ ಸ್ನೇಹ ಸಂವರ್ಧನೆಗೋಸ್ಕರ ಆಯರ್ಲೆಂಡಿನ ಹೊಸ ರಾಜಕೀಯ ಘಟನೆ ಆಗಿರುವದು ಈ ಘಟನೆಯ ಪ್ರಕಾರ ಆಯರ್ಲೆಂಡು ಇಂಗ್ಲೆಂಡಿನ ಅರಸರೊಡನೆ ಯಾವ ಸಂಬಂಧವನ್ನು ಇಟ್ಟುಕೊಳ್ಳುವದಿಲ್ಲ, ಅವರಿಗೆ ವಿಧೇಯವಾಗುವ ಪ್ರತಿಜ್ಞೆಯನ್ನು ತೆಗೆದುಕೊಳ್ಳುವದಿಲ್ಲ, ಆಯರ್ಲೆಂಡಿನಲ್ಲಿ ಅರಸನ ಪ್ರತಿನಿಧಿಗೆ ಸ್ಥಾನವಿಲ್ಲ ಮುಂದೆ ಘಟನೆಯಲ್ಲಿ ಕಾಲಪರಿಸ್ಥಿತಿಗನುಸಾರವಾಗಿ ಬದಲಾವಣೆಗಳನ್ನು ಮಾಡುವ ಅಧಿಕಾರ ಕೂಡ ಆಯರ್ಲೆಂಡಿಗೆ ಇರುವದು.

ಹೊಸ ಘಟನೆ ಆಯರ್ಲೆಂಡಿನ 28 ಜಿಲ್ಲೆಗಳಿಗೂ ಸಂಬಂಧಿಸಿದೆ ಉತ್ತರದ 2 ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲ ಕಡೆಗಳಲ್ಲಿ ಅದು ಆಗಲೇ ಜಾರಿಗೆ ಬಂದಿದೆ ಪ್ರತ್ಯೇಕವಾದ ಒಂದು ಶಾಸನದ ರೀತಿಯನ್ನು ಬದಲಾಯಿಸದೆ ಯಾವಾಗ ಬೇಕಾದರೂ ತಿದ್ದುಪಡಿ ಮಾಡಬಹುದು ಅಥವಾ ತೆಗೆದುಹಾಕಬಹುದು) ಯುದ್ಧಪ್ರಕಾರ ಬಂದರುಗಳ ಮತ್ತು ಪರದೇಶ ವ್ಯವಹಾರ ನೀತಿಯ ಬಗ್ಗೆ ಮಾತ್ರ ಆಯರ್ಲೆಂಡು ಬ್ರಿಟಿಷ ಅರಸನೊಡನೆ ಸಂಬಂಧವನ್ನಿಟ್ಟುಕೊಳ್ಳುವದು

ಈಗ ಆಯರ್ಲೆಂಡು ಪೂರ್ಣ ಸ್ವಾತಂತ್ರ್ಯವಾಗಿದೆ ಅದೀಗ ಉತ್ತರ ದಕ್ಷಿಣ ಭಾಗಗಳ ಏಕೀಕರಣಕ್ಕಾಗಿ ಪ್ರತಿಜ್ಞಾಬದ್ಧವಾಗಿದೆ ಆದೊಂದು ಕಾರ್ಯವು ಆಗಿ ಮುಗಿಯಿತೆಂದರೆ ಐರಿಷ ಜನರ ಶತಮಾನಗಳ ಹಿಂದಿನ ಕನಸು ಕನಸಾಗಿ ಉಳಿಯದೆ ಅದು ಪೂರ್ಣ ಸತ್ಯವಾಗುವದು. ಅದಕ್ಕಾಗಿ ಅಲ್ಲೀಗ ಭಗೀರಥ ಪ್ರಯತ್ನಗಳು ಆಗುತ್ತಲಿವೆ ಹಿಂದಿನ ಇಂದಿನ ಪರಿಸ್ಥಿತಿಯ ಅವಲೋಕನ ಮಾಡುವಾಗ ಏಕೀಕರಣವು ಸದ್ಯದಲ್ಲಿಯೇ ಸಾಧ್ಯವಾಗುವದು ಅಸಂಭವವೆಂದೇನೂ ತೋರುವದಿಲ್ಲ

'ಜಯ್! ಸ್ವತಂತ್ರ ಆಯರ್ಲೆಂಡಕೀ ಜಯ್'' ಎನ್ನುವ ಐರಿಷ ಜನರ ಜಯಜಯಕಾರದೊಂದಿಗೆ ನಾವೂ ಧ್ವನಿ ಕೂಡಿಸುವ ಅದರ ಪ್ರತಿಧ್ವನಿ, ಆಯರ್ಲೆಂಡಿನ ಹಾಗೆ ಭಾರತವೂ ಸ್ವತಂತ್ರವಾಗುವಂತೆ ನಮ್ಮಲ್ಲಿ ಶಕ್ತಿ ಸಾಮರ್ಥ್ಯ, ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸಲಿ' ಅಂಧಕಾರದಲ್ಲಿ ಮಾರ್ಗ ಕಾಣದೆ ಹೊರಳುವ ನಮಗೆ ಮಾರ್ಗದರ್ಶನ ಮಾಡಲಿ''




ಡೋಂಗರೇ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ.



ಆರೋಗ್ಯವೇ ಪ್ರಥಮಸ್ಥಾನವನ್ನು
ಹೊಂದುತ್ತದೆ



ಲೈಫ್‌ಬಾಯ್‌ನ್ನೇ

ನಿಮ್ಮ ಮಕ್ಕಳ ಆರೋಗ್ಯವನ್ನು ಕೆಡಿಸುವ ಕ್ರಿಮಿಗಳನ್ನು ನೀವು ನೋಡಲಾರಿರಿ. ಆದರೆ ಧೂಳಿನಲ್ಲಿ ಅದು ಯಾವಾಗಲೂ ಇರುತ್ತಿರುವದು ಗೊತ್ತಿದೆ. ನಿಮ್ಮ ಮಕ್ಕಳು ಆಟವಾಡಿ ಬಂದನಂತರ ಅವರ ಕೈ ಕಾಲುಗಳು ಎಷ್ಟು ಧೂಳಿನಿಂದ ಆವರಿಸಿರುವದನ್ನು ಗಮನಿಸಿರಿ ಆ ಧೂಳಿನಲ್ಲಿರಬಹುದಾದ ವಿಷಕ್ರಿಮಿಗಳೆಷ್ಟಿರುವವೆಂಬುದನ್ನು ಯೋಚಿಸಿ. ನಿಮ್ಮ ಮಕ್ಕಳನ್ನು ಇವುಗಳಿಂದ ಕಾಪಾಡಿ. ಅವರು ಯಾವಾಗಲೂ ಲೈಫ್‌ಬಾಯ್‌ನ್ನೇ ಉಪಯೋಗಿಸುವಂತೆ ನೋಡಿಕೊಳ್ಳಿರಿ. ಅದರ ವಿಶಾಸಕಾರಿಯಾದ ನೊರೆಯು ಬೇಗ ಎಲ್ಲಾ ಕೊಳೆಯನ್ನು ಹೋಗಿಸಿ ಮಕ್ಕಳನ್ನು ಆರೋಗ್ಯವಾಗಿರುವಂತೆ ಮಾಡುತ್ತದೆ

ಲೈಫ್ ಬಾಯ್ ಸಾಬೂನು
**LIFEBUOY SOAP**

LEVER BROTHERS (INDIA) LIMITED

# Scientific Opticians.

**Eye Testing Free.**

STYLISH FRAMES,
LENSES, CASES.

*Please Visit*

**Jayaks Optical Stores**

**Car Street,**
**MANGALORE.**



# ಹಿಂದುಸ್ಥಾನ ಕೊ-ಓಪರೇಟಿವ್ ಇನ್ಶೂರೆನ್ಸ್
## ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು ಕಲ್ಕತ್ತಾ. — <u>ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ</u> — ಸ್ಥಾಪನೆ 1907

| | |
|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ 12,00 00,000 |
| ಆಸ್ತಿಪಾಸ್ತಿಗಳು | ರೂ 2 21,00,000 |
| ನೂತನ ವ್ಯವಹಾರ | ರೂ 2,82,81,000 |

ಅತ್ಯಧಿಕ ಬೋನಸ್ ಹಂಚಲಾಗಿದೆ.

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ದ ಮೇಲೆ ಪ್ರತಿ ವರ್ಷ ಒಂದರಂತೆ 28.

ಮಕ್ಕಳ ವಿಮಾ, ಅವಘಡ, ಮತ್ತು ಮರಣ ವಿಮೆ-ನಮ್ಮ ವಿಶಿಷ್ಟತೆ

*For particulars please apply to*

**T. ANANTACHARI,**
BRANCH MANAGER H C I S LTD
POST BOX 223 MADRAS

**K K MENON,**
ORGANISER H C I S LTD,
Court Road, CALICUT



# ಪರಮಾ

ಮೊದಲಾದ ಭಯಂಕರ ಮೂತ್ರರೋಗಗಳ ಭಯಂಕರ ಪರಿಣಾಮವನ್ನು ತಡೆಯುವದಕ್ಕಾಗಿ (ಪಿಚಕಾರಿಯ ಹೊರತಾಗಿ)

**ಗೊನೋಲೆಕ್ಸ (ರಿಜಿಸ್ಟರ್ಡ)**

ತೆಗೆದುಕೊಳ್ಳಿರಿ ಮತ್ತು ಶಾಶ್ವತವಾಗಿ ರೋಗದಿಂದ ಮುಕ್ತರಾಗಿರಿ ಈ ಔಷಧವು ಎಲ್ಲ ತರಹದ ಪರಮಾ ಮೊದಲಾದ ಎಲ್ಲ ಮೂತ್ರರೋಗಗಳ ನಿವಾರಣೆಯಾಗಿ ಮುಕ್ತ ಗಳು ಸಾಫ ಆಗುತ್ತವೆ ಮೊದಲನೆ ಒಂದೇ ಬಾಟ್ಲಿಯಿಂದ ಗುಣವಾಗುತ್ತದೆ ಬೆಲೆ ರೂ. ೧-೦-೦ ಅಂಚೆವೆಚ್ಚ ಪ್ರತ್ಯೇಕ ಹಳೇ ಮತ್ತು ಅಸಾಧ್ಯ ರೋಗಗಳಿಗೆ ಗೊನೋಲೆಕ್ಸ ನಂ. ೧ದನ್ನು ಉಪಯೋಗಿಸಿರಿ ಬೆಲೆ ರೂ. ೩-೦-೦ ಅಂಚೆವೆಚ್ಚ ಪ್ರತ್ಯೇಕ ಎಲ್ಲ ದೊಡ್ಡ ಔಷಧಿಯ ಅಂಗಡಿಗಳಲ್ಲಿಯೂ ಸ್ಟಾಕಿಸ್ಟರ ಕಡೆಗೂ ಸಿಗುತ್ತದೆ.

ಸೋಲ್ ಏಜಂಟರು.—ಬೆಲ್ಸ್ಪ್ರಿಪ್ ಲಿ

೧೭೪ ಹಾರ್ನಬಿ ರೋಡ್,

ಫೋರ್ಟ ಮುಂಬಾಯಿ

ಸ್ಟಾಕಿಸ್ಟ: ಎಂ. ಡಿ. ವ್ಯೋರಾ ಮತ್ತು ಕಂಪನಿ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ



# The Canara Banking Corporation, Udipi, Ltd

INCORPORATED IN BRITISH INDIA

## NOTICE

It is hereby given that under section 37 of the Indian Companies Act No. VII of 1913 the Register of Members of the Corporation will remain closed from Saturday the 12th February 1938 to Friday the 11th March 1938 (Both days inclusive)

(By order)

Office of the Corporation, UDIPI, 29th January 1938

**V R Kamath,** B.A., LL.B.
*Mg. Manager*



# The Bombay Life Assurance Company, Ltd.

<u>ESTD: 1908</u>

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | *32,08,000 | 5,04,466 | 15,14,853 | 1,16,38,706 |
| 1930 | 59,97,500 | 9,83,367 | 28,00,970 | 2,06,68,328 |
| 1933 | 94,16,500 | 15,12,692 | 50,04,871 | 3,07,98,434 |
| 1936 | 1,38,00,180 | 26,76,274 | 82,69,451 | 5,14,88,205 |

The Company offers all the up-to-date schemes of Assurances. Family Safe Guard Policy a special feature.
Application for agencies will be received from honest and respectable gentlemen.
Organisers appointed with pay and allowance
Gentlemen with organising ability and who can guarantee Business need apply.

***Apply to any of the following Offices:-***

**Kochikar Brothers, Ltd.,**
(Incorporating Messrs. Kochikar Brothers),
***Madras Branch Secretaries.***
Post Box 337, Mount Road, MADRAS.
Phone No. 8245.

| | | | | | | |
|---|---|---|---|---|---|---|
| Ottapalam | Central Station Road, Trivandrum | Visveshwarapuram Circle, Bangalore City. | Soumyalayam Puthiyara, Calicut. | Car Street, Mangalore. | Udipi, S. India. | Charni Road, Bombay No. 4 |

# ಸ್ವದೇಶಾಭಿಮಾನಿ.

SWADESHABHIMANI, MANGALORE




ಮೈಸೂರಿನ ಶ್ರೀರಂಗ ಪಟ್ಟಣದ ಬೃಂದಾವನ.

(Regd)

## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

**ಅಮೃತಾಂಜನ ಡಿಪ್ಪೋ.** ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA



Edited Printed & Published By A. S. Kamath at the Sharada Press, Car Street, Mangalore.

Regd. No M. 3406.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩– 18 –0.

ಬಿಡಿ ಸಂಚಿಕೆ ಒಂದ

ಸಂಪುಟ ೨೨]  ತಾರೀಕು ೧೮ನೇ ಪೆಬ್ರವರಿ ೧೯೩೮ (18–2–1938)  [ಸಂಚಿಕೆ ೭

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

# ಅನುಕ್ರಮಣಿಕೆ

ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆ

ರಾಷ್ಟ್ರಪತಿ ಸುಬಾಷ್ಚಂದ್ರ ಭೋಸರ ಸಂದೇಶ

ಕಾಂತಾರಣ್ಯದಲ್ಲೊಂದು ದಿವ್ಯ ನಗರ

ಜರ್ಮನಿಯ ಅರಾತಿ

ವಾರ್ಧಾ ಶಿಕ್ಷಣ ಯೋಜನೆಯ ವ್ಯಾಖ್ಯಾನ

ಏಸು ಸ್ವಾಮಿ ಬ್ರಹ್ಮಸೃಷ್ಟಿಯು ಕಲ್ಪಿತ ವ್ಯಕ್ತಿಯೊ?

ಫ್ರಾನ್ಸಿನಲ್ಲಿ ಹಾರಾಡುವ ಸಬ್‌ಮೆರಿನ್.

[illegible]
[illegible]
ಮಿಸ್ ಸವಿತಾ ದೇವಿ

ESTD 1906

CANARA BANK
LIMITED

NOW RECEIVES
SEASON DEPOSITS
AT RATES UP TO

## ಚಿತ್ರ-ವಿಚಿತ್ರ!

★

### ಆಧುನಿಕ ಧರ್ಮರಾಯ

ಧರ್ಮರಾಯನು ತನ್ನ ಹೆಂಡತಿ ಮತ್ತು ತಮ್ಮಂದಿರನ್ನು ಒತ್ತೆಯಾಗಿಟ್ಟು, ಅವರನ್ನು ಕಳೆದುಕೊಂಡಿದ್ದನೆಂದು ನಾವು ಪುರಾಣದಲ್ಲಿ ಓದಬಲ್ಲೆವು. ಇಂಥವರೂ ಇದ್ದಾರೆಯೆ? ಎಂದು ಈಗ ನಮ್ಮ ಮನಸ್ಸಿನಲ್ಲಿ ಒಂದು ಪ್ರಶ್ನೆಯು ಎದ್ದಿರಬಹುದು. ಹಿಂದೆ ಇದ್ದರು, ಈಗಲೂ ಇದ್ದಾರೆ, ಎಂಬುದೇ ಅದಕ್ಕೆ ಉತ್ತರ

ಪೋಲಾಂಡಿನಲ್ಲಿ ಸ್ಟಬಿನಿಯೊಕ್ ಎಂಬಾತನು ಒಮ್ಮೆ ತನ್ನ ಪ್ರೇಯಸಿಯೊಡನೆ ವಿಹಾರಕ್ಕಾಗಿ ಹೋಗಿದ್ದನು ದಾರಿಯಲ್ಲಿ ಎಂಟೊನಿ ಬಾಲಕನೆಂಬೊಬ್ಬ ಮಿತ್ರನ ಭೇಟಿಯಾಯಿತು. ಮೂವರೂ ಕೂಡಿ ಒಂದು ಹೊಟೇಲಿಗೆ ಹೋಗಿ, ಉಪಹಾರಾದಿಗಳು ಮುಗಿದ ನಂತರ ಇಸ್ಪೀಟು ಆಟವನ್ನು ಮೊದಲು ಮಾಡಿದರು ಸ್ಟಬಿನಿಯೊಕನು ತನ್ನಲ್ಲಿದ್ದ ಹಣವೆಲ್ಲವನ್ನು ಕಳಕೊಂಡನು ಬಳಿಕ ತನ್ನ ಇಪ್ಪತ್ತು ವರ್ಷದ ಹೋಲ್ ಎಂಬ ಪ್ರೇಯಸಿಯನ್ನು ಪಣವಾಗಿಟ್ಟು ಆಕೆಯನ್ನು ಕಳಕೊಂಡನು ಈಗ ವಾದವೆದ್ದಿದೆ—ಗಂಡನಿಗೆ ಹೆಂಡತಿಯನ್ನು ಒತ್ತೆ ನೀಡುವ ಹಕ್ಕಿದೆಯೇ? ಎಂದು.

★

### ಹೆಂಡತಿಯ ಆಟ, ಗಂಡನ ಪ್ರಾಣ ಸಂಕಟ



ಮನೆಯಲ್ಲಿ ಅಡಿಗೆ ಬಿಟ್ಟು ಬಿಟ್ಟು ತನ್ನ ಹೆಂಡತಿಯು ಟೋಲ್ ಆಡುವುದರಲ್ಲಿಯೇ ಕಾಲ ಕಳೆಯುತ್ತಿರುವಳೆಂಬ ಕಾರಣದಿಂದ, ಪ... ಕಾರ್ಲ್ಲಟ್ಟ ಎಂಬಾತನು ದಾಂಪತ್ಯ ವಿ... ಅರ್ಜಿಮಾಡಿರುವನು

★

### 500,000 ತರುಣಿಯರು— - ಕೇಳಿಕೊಂಡಿರುವರು.

ಯುಗೊಸ್ಲಾವಿಯದಲ್ಲೊಬ್ಬ ಬ್ರಹ್ಮಚಾರಿ ಮದುವೆ ಮಾಡಿಕೊಳ್ಳಬೇಕೆಂಬ ಆಸೆಯುಂಟಾಗಿ ಆತನು 'ವಧು'ಬೇಕೆಂದು ಜಾಹೀರು ಪಡಿಸಿದನು. ಜಾಹಿರು ಪಡಿಸಿದ ಅಲ್ಪಾವಧಿಯಲ್ಲಿಯೇ 500,000 ತರುಣಿಯರ ಅರ್ಜಿಗಳು ಆತನಿಗೆ ಬಂದವೆ ಈಗ ಏನುಮಾಡಲೆಂದು ಆತನಿಗೆ ತೋಚದಾಗಿದೆ ಎಲ್ಲರನ್ನೂ ಮದುವೆ ಮಾಡಿಕೊಳ್ಳಬಾರದೆ ಎಂದು ನಮ್ಮದೊಂದು ಸೂಚನೆ ಕೃಷ್ಣಲೀಲೆಯನ್ನಾಡಿ ತೋರಿಸಲಿ'

★

### ಫೋನ್ ಫೊಟೋಗಳು

ಇನ್ನು ಮುಂದೆ ವಾರ್ತಾ ಪತ್ರಿಕೆಗಳ ಬಾತ್ಮಿದಾರರಿಗೆ ಫೋಟೊಗಳನ್ನು ಕಳುಹಿಸುವುದು ಬಹಳ ಸುಲಭವಾಗಲಿದೆ ಫ್ಲೋರಿಡರ ಮಿ. ಸೆಸಿಲ್ ಎಫ್ ವಾಟ್ಸ ಎಂಬವರು ಕೈಯಲ್ಲಿ ಒಯ್ಯುತಕ್ಕ ಒಂದು ಯಂತ್ರವನ್ನು ಕಂಡುಹಿಡಿದಿರುವರು ಟೆಲಿಫೋನಿನಲ್ಲಿ ಮಾತನಾಡುವವನು ಅದನ್ನು ಟೆಲಿಫೋನಿಗೆ ಜೋಡಿಸತಕ್ಕದು ಅಂತಹುದೇ ಇನ್ನೊಂದು ಯಂತ್ರವನ್ನು ಕೇಳುವವನೂ ತನ್ನ ಕಡೆಯಲ್ಲೂ ಜೋಡಿಸಿಕೊಳ್ಳಬೇಕು

ಪ್ಲೆಂಚೆಟನೋಪಾದಿಯಿರುವ ಒಂದು ಚಿಕ್ಕದ ಸೂಜಿಯು ಫೋಟೊವಿನ ಮೇಲೆ ತಿರುಗುವುದು. ಆಗ ವಿದ್ಯುಚ್ಛಕ್ತಿಯ ಮುಖಾಂತರ ಅಂತಹುದೇ ಒಂದು ಚಿತ್ರವು ಇನ್ನೊಂದು ಕೊನೆಯಲ್ಲಿ ಬಿಡಿಸಲ್ಪಡುವುದು ಆದುದರಿಂದ ಎಷ್ಟು ದೂರದಿಂದಲಾದರೂ ಇನ್ನು ಮುಂದೆ ಬಹುಬೇಗನೆ - ಫೊಟೊಗಳನ್ನು ಕಳಹಿಸಲು ...

### ಅಮೂಲ್ಯ ರಂಗು

ವಜ್ರ, ಕೆಂಪು ನೀಲದಂಥ ಅಮೂಲ್ಯ ಖನಿಜಗಳನ್ನು ಹುಡಿಮಾಡಿ ಕೆಲವು ರಸಾಯನಗಳೊಡನೆ ಬೆರಸಿ ಜಪಾನಿನಲ್ಲಿ ಅಪರೂಪ ರಂಗುಗಳನ್ನು ತಯಾರಿಸುತ್ತಿರುವರು ಆ ರಂಗಿನ ಒಂದೊಂದು ಸಣ್ಣ ಟ್ಯೂಬಿನ ಬೆಲೆ ಪವನುಗಳು ಕ್ರಯವಿರುವುದು

ಜಪಾನಿನ ತಾಕೆ ಸಾತೊ ಎಂಬೊಬ್ಬ ಪ್ರಸಿದ್ಧ ಚಿತ್ರಕಾರನು ಈ ಅಮೂಲ್ಯ ರಂಗುಗಳನ್ನೇ ಉಪಯೋಗಿಸುತ್ತಿರುವನು ಅವುಗಳಿಂದ ತಯಾರಿಸಿದ ಚಿತ್ರಗಳು ಎಂದೂ ಮಸುಕು ಇಲ್ಲವೆ ಹಾಳಾಗುವುದಿಲ್ಲವಂತ ಸಾತೊವು ಮಾಡಿದ ಚಿತ್ರಗಳು ಬಹಳವಾಗಿ ಮಿರುಗುತ್ತಿವೆ ಅಮೂಲ್ಯ ಕಲ್ಲುಗಳಿಂದ ಕೆತ್ತಿ ಮಾಡಿದಂತೆಯೇ ತೋರುತ್ತಿವೆ.

★

### ಹಾರಾಡುವ ಸಬ್‌ಮೆರೀನು

ವಿಜ್ಞಾನಿಗಳು ಕಂಡು ಹಿಡಿದ ಅನೇಕಾನೇಕ ಯುದ್ಧೋಪಕರಣಗಳೊಂದಿಗೆ ಈಗ ಇನ್ನೊಂದು ಸೇರಿರುವುದು. ಅದೇ ಹಾರಾಡುವ ...

ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಲೋರ್ಡ್ ಝೆಟ್ಲಾಂಡರವರು.

ಬ್ರಿಟಿಷ ಚಕ್ರವರ್ತಿಗಳು ಹಿಂದೂದೇಶದ ಪ್ರವಾಸವನ್ನು ಸದ್ಯಕ್ಕೆ ನಿಲ್ಲಿಸಲ್ಪಟ್ಟಿರುವರೆಂದು ...

### ಹಾರಾಡುವ ಸಬ್‌ಮೆರೀನು

ಈ ಹೊಸ ಶೋಧವನ್ನು ಮಾಡಿದವರು ಸ್ಪ್ಯಾನಿಷರು. ಅದು ನೀರಿನ ಅಡಿಯಿಂದಲೂ ನೀರಿನ ಮೇಲೂ ಹೋಗಬಲ್ಲುದಂತೆ, ಅಗತ್ಯವಿದ್ದಾಗ ಹಾರಲೂ ಬಲ್ಲುದಂತೆ

ಫ್ರೆಂಚ್ ಸರಕಾರದವರು ಈ ಹೊಸ ಬಗೆಯ ಸಬ್ ಮೆರಿನುಗಳ ಪರೀಕ್ಷೆಯನ್ನು ನಡೆಸಿ, ಆ ಯಂತ್ರಗಳಿಗೆ ಆಜ್ಞೆಯನ್ನಿತ್ತಿರುವರಂತೆ ಅಂತೂ ಈ ವಿಜ್ಞಾನವೇ ಜಗತ್ತಿನ ನಾಶಕ್ಕೆ ಕಾರಣವಾಗುವಂತಿದೆಯಲ್ಲವೆ?

★

### ಮೀನಿನಿಂದ ವಸ್ತ್ರ

ಜರ್ಮನಿಯಲ್ಲಿ ಹೊಸತೊಂದು ಶೋಧವು ನಡೆಸಲ್ಪಟ್ಟಿರುವುದು—ಮೀನಿನಿಂದ ವಸ್ತ್ರವನ್ನು ತಯಾರಿಸುವುದು ಈ ಕ್ರಮವು ಗೋಪ್ಯವಾಗಿಡಲ್ಪಟ್ಟಿರುವುದಾದರೂ, ಮೀನಿನಲ್ಲಿದ್ದ ಅಲಬುಮಿನಿಗೆ ಕೆಲವು ರಸಾಯನಗಳನ್ನು ಕೂಡಿಸಿ ಅದರಿಂದ ನೂಲನ್ನು ನೇಯುತ್ತಿರುವರೆಂದೂ ಹೇಳಲಾಗಿದೆ ಇಂತಹ ನೂಲಿನಿಂದ ತಯಾರಿಸಲ್ಪಟ್ಟ ವಸ್ತ್ರಗಳು ಬಹಳ ಗಟ್ಟಿಯಾಗಿಯೂ ...

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥

ದೊರೆಯಲನುಪಮ ರತ್ನಗಳು ನಾ । ಗರನ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುವ ಬರುತಿರುವ ॥

# ಸ್ವದೇಶಾಭಿಮಾನಿ
SWADESHABHIMANI

ಗರಳಕವರಂಜಿದರೆ ಸುಧೆಯನು । ವರೆತು ಕನ್ನದ್ಯರ ಕೆರದಿ ಕುಳಿತರೆ । ಕೆರಳ ಬಲ್ಲರೆ ಕೊರೆದು ಧೀರರು ನಿಶ್ಚಿತಾರ್ಥ ವನಾ ॥

ತಾ. ೧೮ನೇ ಶುಕ್ರವಾರ ಫೆಬ್ರವರಿ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.) | ತಾರೀಕು 18—2—1938

# ವಾರ್ಧಾ ಶಿಕ್ಷಣ ಯೋಜನೆಯ ವ್ಯಾಖ್ಯಾನ:—

★ ★

★ ಇತರರೊಡನೆ ಪರಸ್ಪರ ಪ್ರೀತಿಯ ವಿನಿಮಯವು ನಮಗೆ ಬೇಕು,

★ ನಮಗೆ ಯಾವತರದ ಸೂತ್ರಗಳು ಬೇಕು, ಯಾವ ತರದ ಶಿಕ್ಷಣ ಬೇಕು?

★ ಹಿಂದೂದೇಶವು ರಾಮರಾಜ್ಯವಾಗಬೇಕು;

★ ಹಿಂದೂದೇಶದ ದಾರಿದ್ರ್ಯನಿವಾರಣೆಯಾಗಬೇಕು.

ದಕ್ಷಿಣ ಹಿಂದೂದೇಶದ ಒಂದು ವಿದ್ಯಾಸಂಸ್ಥೆಯ ಆಡಳಿತಗಾರರಾದ ಡಾ| ಜೊನ್ ಡಿ ಬೋರರು, ರಜೆಯ ವೇಳೆ ತನ್ನ ಸ್ವದೇಶವಾದ ಅಮೇರಿಕಾಕ್ಕೆ ತೆರಳುವ ಮೊದಲು, ವಾರ್ಧಾಕ್ಕೆ ತೆರಳಿದ್ದು, ಅಲ್ಲಿ ಮಹಾತ್ಮಾಜಿಯವರೊಡನೆ ವಾರ್ಧಾ ಶಿಕ್ಷಣಯೋಜನೆಯ ಕುರಿತು ಪ್ರಸ್ತಾಪವೆತ್ತಿದರು. ಡಾ ಬೋರರು ವಾರ್ಧಾ ಶಿಕ್ಷಣ ಯೋಜನೆಯನ್ನು ಚೆನ್ನಾಗಿ ಮಂಡಿಸಿದವರು. ಆ ಯೋಜನೆಯ ಮೂಲವು ಅಹಿಂಸೆಯಾಗಿರುವುದರಿಂದ, ಅದಕ್ಕವರು ಮನಸೋತಿರುವಂತೆ ಅಹಿಂಸಾವರ್ತಿಗಳಿಂದ ಹೊಂದಿಸಲ್ಪಟ್ಟದ್ದಾದರೂ, ಆ ಯೋಜನೆಯಲ್ಲಿ ಅಹಿಂಸೆಯ ಪ್ರಾಮುಖ್ಯತೆಯನ್ನು ಏಕೆ ವಹಿಯಲಿಲ್ಲವೆಂಬುದು ಅವರಿಗೆ ತಿಳಿಯಲಿಲ್ಲವಾಗಿತ್ತು.

“ಶಿಕ್ಷಣಯೋಜನೆಯು ಪೂರ್ಣ ನೆಲೆಬನ್ನು ಅಹಿಂಸೆಯ ಮೇಲೆ ಹೊಂದಿಕೊಂಡಿರಬಾರದು. ಈ ಯೋಜನೆಯು ಅಹಿಂಸಾವರ್ತಿಯೊಬ್ಬರಿಂದ ಕಲ್ಪನೆಯಾದುದೆಂದು ಸ್ಮರಣೆಯಲ್ಲಿಟ್ಟರೆ ಸಾಕು. ಈ ಯೋಜನೆಗೆ ಸಮ್ಮತಿಸಿದವರು, ಅಹಿಂಸೆಯನ್ನು ಆಚರಿಸದಂತಾಗಲಾರದು. ದೃಷ್ಟಾಂತವಾಗಿ ಈ ಶಿಕ್ಷಣಯೋಜನೆಯ ಸಮಿತಿಯವರೆಲ್ಲರೂ, ಅಹಿಂಸಾ ನೀತಿಯನ್ನು ಆಚರಿಸುವವರಲ್ಲ. ಒಬ್ಬನು ಅಹಿಂಸಾನೀತಿಯಲ್ಲಿ ವಿಶ್ವಾಸವಿಲ್ಲದೇನೆ ಆರೋಗ್ಯಕಾರಣಗಳಿಂದಾಗಿ ವನಸ್ಪತಿಹಾರಿಯಾಗಬಹುದು. ಅದರಂತೆ ಈ ಯೋಜನೆಯನ್ನು ಸ್ವೀಕರಿಸಿದವರೆಲ್ಲಾ ಅಹಿಂಸಾನೀತಿಯ ಮೇಲೆ ನಂಬುಗೆವುಳ್ಳವರಾಗಬೇಕೆಂಬುದಿಲ್ಲ” ಎಂಬುದು ಮಹಾತ್ಮಾಜಿಯವರ ಅಭಿಪ್ರಾಯ.

‘ಅಹಿಂಸಾತತ್ವದ ಮೇಲೆ ಈ ಯೋಜನೆಯು ಹೊಂದಿಕೊಂಡಿರುವುದರಿಂದಲೆ, ಅನೇಕ ಶಿಕ್ಷಣಾಚಾರ್ಯರು ಅದರಲ್ಲಿ ಕೈವಾಡದಿರುವುದಕ್ಕೆ ಕಾರಣವಾಗಿರುವುದೆಂದು,’ ಡಾ| ಬೋರರು ತಿಳಿಸಲು, ಗಾಂಧೀಜಿಯವರು, “ಅದು ನನಗೆ ತಿಳಿದಿರುವುದು, ಖಾದಿಯ ತತ್ವವು ನನ್ನ ಜೀವನದ ತತ್ವವನ್ನು ಆಧರಿಸಿಕೊಂಡಿರುವುದರಿಂದಲೆ, ಅನೇಕ ಪ್ರಾಮುಖ್ಯ ವ್ಯಕ್ತಿಗಳದನ್ನು ಅಂಗೀಕರಿಸದಿರುವುದು. ಈ ಯೋಜನೆಯ ಮೂಲಾಧಾರವು ಅಹಿಂಸೆಯಾಗಿರುವುದೆಂದು ನಾನು ವ್ಯಕ್ತಪಡಿಸುವವನಾದರೆ, ಅದರ ಕುರಿತು ಅವರ ಉತ್ಸಾಹವು ಕಡಿಮೆಯಾಗಬಹುದು. ಹಸಿವಿನಿಂದ ಬಳಲುತ್ತಿರುವ [illegible] ದೇಶಕ್ಕೆ ಅವರ ಮಕ್ಕಳ ಶಿಕ್ಷಣಕ್ಕೆ [illegible] ಇನ್ನೊಂದ [illegible] ಅದಕ್ಕೆ ಇದೆ ತಕ್ಕುದಾದ ಯೋಜನೆ ಎಂದು [illegible] ನಲ್ಪಟ್ಟರೆ, ಆಗ ನೂತನ ತರದ ಶಾಂತಕ್ರಾಂತಿಯು ಅದರಿಂದ ಫಲಿಸುವುದು. [illegible] ಪಡೆಯಲು ಕಾಂಗ್ರೆಸ್ [illegible] ಯನ್ನು ಆಚರಿಸುವುದರಲ್ಲಿ [illegible] ಇರುವುದು. ಸಮಸ್ತ ಹಿಂದೂದೇಶವು ಅಹಿಂಸೆಯನ್ನು ಒಂದು ವಿಶ್ವಾಸಾರ್ಹವಾಗಿ ಮತ್ತು ಜೀವನಕ್ರಮವನ್ನಾಗಿ ಆಚರಿಸಿದರೆ, ನಾವು ಬೇಗನೆ ಒಂದು ಪಂಚಾಯತಿ ಪತ್ಯವನ್ನು ಸ್ಥಾಪಿಸಬಹುದು.”

“ನಾನೋರ್ವ ಸೌಮ್ಯವಾದಿ ಅಹಿಂಸಾನೀತಿಯಲ್ಲಿ ನನಗೆ ವಿಶ್ವಾಸವಿರುವುದರಿಂದ ಈ ಯೋಜನೆಯು ನನ್ನ ಮನಸ್ಸೆಳೆಸಿರುವುದು. ಆದರೆ ನನ್ನ ಸೌಮ್ಯವಾದಿ ದೃಷ್ಟಿಯಿಂದ ಈ ಯೋಜನೆಯು ಹಿಂದೂದೇಶವನ್ನು ಜಗತ್ತಿನಿಂದ ತುಂಡರಿಸಿ ಬೇರೆಯಾಗಿ ಮಾಡುವುದು. ಆದರೆ ಸರ್ವ ಜಗತ್ತು ಐಕ್ಯವೊಂದುವಂತೆ ನಾವು ಸಾಧಿಸಬೇಕು. ಇದಕ್ಕೆ ಸೌಮ್ಯವಾದವೆ ಶೀಘ್ರ ಉಪಾಯವೆಂದು ನನ್ನ ನಂಬಿಕೆಯಾಗಿರುವುದರಿಂದ ಈ ದೃಷ್ಟಿಯಲ್ಲಿ ಯೋಜನೆಯನ್ನು ತಿಳಿಯಲು ನನಗೆ ಕಷ್ಟವಾಗುತ್ತದೆಂದು” ಡಾ| ಬೋರರು ಹೇಳಲು, ಮಹಾತ್ಮಾಜೀಯವರು —

“ಆ ಕಷ್ಟವು ನನಗಿರುವುದಿಲ್ಲ. ಸರ್ವ ಜಗತ್ತಿನಿಂದ ಬೇರೆಯಾಗಬೇಕೆಂಬ ನಮ್ಮ ಅಭಿಪ್ರಾಯವಲ್ಲ, ಇತರ ಜನಾಂಗಗಳೊಡನೆ ನಿರ್ವಿಘ್ನವಾಗಿ ವಿನಿಮಯ ನಡೆಸುವುದು ನಮ್ಮ ಉದ್ದೇಶವಾಗಿರುತ್ತದೆ. ಈ ವಿನಿಮಯದಲ್ಲಿ ಬಲಾತ್ಕಾರವಿರಬಾರದು. ಇತರರ ಮೇಲೆ ಸಫಲಕರಣೆ ನಡೆಯಿಸುವ ಇಚ್ಛೆಯು ನಮಗಿರುವುದಿಲ್ಲ. ಇತರರು ನಮ್ಮ ಮೇಲೆ ಸಫಲಕರಣೆ ನಡೆಯಿಸುವುದನ್ನು ನಾವು ಸಹಿಸಲಾರೆವು. ನಮ್ಮ ಮಕ್ಕಳನ್ನು ಬೆಳೆಯಿಸುವವರನ್ನಾಗಿ ಮಾಡಿ, ರಾಷ್ಟ್ರದ ರೂಪನ್ನೆ ಪೂರ್ಣ ಬದಲಾಯಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಕಾರಣ, ಈ ಯೋಜನೆಯಲ್ಲಿ ನಮ್ಮ ಸಮಾಜವನ್ನು ಸಂಪೂರ್ಣ ಬದಲಾಯಿಸುವ ಗುಣಗಳಿವೆ. ಜಗತ್ತಿನಿಂದ ದೂರ ಸರಿಯಬೇಕಾಗಿ ನಾವು ಇಚ್ಛಿಸುವುದಿಲ್ಲ. ತಮ್ಮಲ್ಲಿ ಕೆಲವು ಒಡವೆಗಳು ಸಿದ್ಧವಾಗದಿರುವುದರಿಂದಲೆ ರಾಷ್ಟ್ರಗಳು ಇತರರ ವಿನಿಮಯವನ್ನು ಕೋರುತ್ತಿರುವುದು. ಅವುಗಳಿಗಾಗಿ ಅವರು ಆ ರಾಷ್ಟ್ರಗಳ ಮೇಲೆ ಹೊಂದಿಕೊಂಡಿರಬೇಕು. ಆದರೆ ಆ ರಾಷ್ಟ್ರಗಳು ತಮ್ಮನ್ನು ಹೊಂದಿಕೊಂಡಿರುವವರ ಮೇಲೆ ಸಫಲಕರಣೆಯನ್ನು ನಡೆಯಿಸಬಾರದು.

“ಆದರೆ ನಿಮಗೆ ಬೇಕಾದುದನ್ನು ಇಲ್ಲಿ ತಯಾರಿಸುವಂತೆ ಮಾಡಿ, ನೀವು ಇತರ ರಾಷ್ಟ್ರಗಳಿಂದ ದೂರ ಸರಿಯಬಹುದು, ಆದರೆ ನೀವು ಅಮೇರಿಕದೊಡನೆ ವಿನಿಮಯ ಬೆಳೆಯಿಸಬೇಕಾಗಿ ನನ್ನ ಇಚ್ಛೆಯಿರುವುದೆಂದು ಡಾ| ಬೋರರು ಹೇಳಲು ಮಹಾತ್ಮರು,

‘ಇತರರಿಂದ ಸಫಲಕರಣೆ ನಡೆಯಿಸಲ್ಪಡುವುದು, ಇತರರ ಮೇಲೆ ಸಫಲಕರಣೆ ನಡೆಯಿಸುವುದು ಈ [illegible] [illegible] ಅವೆ ಸಿರಿಕಾವನ್ನು [illegible] ಈ [illegible] ಮಾಡಿದರೆ ಆಗ [illegible] ಸ [illegible] ತರದಲ್ಲಿ ನಡೆಸುವುದು.

“ಆದರೆ ಜೀವನದ [illegible] [illegible] ದೇಶವು [illegible] ವಾಗದೆ [illegible] ಮಾಡುವುದು [illegible] ವಶ್ಯಕ [illegible]

[illegible] ಜಗತ್ತಿನ [illegible] ಕಾದ ಕಲಸವು [illegible] ದೇಶಕ್ಕೆ [illegible] ದನ್ನು ತಯಾರಿಸುವುದಕ್ಕೆ ಆಗ ಪುದಾರವರೆ, ಅದರಿಂದ [illegible] ಸಿದ್ಧವಾಗಿ ಗಳಾಗಬಹುದೆ, ಅದರಲ್ಲಿ ನನಗೆ ಸಮಾಧಾನವಿರುವುದು ದೇಶದಲ್ಲಿ ಕೈಗಾರಿಕೆಗಳನ್ನು [illegible] ಒಂದು [illegible] ತಾಸುಗಳ [illegible] ಮಾಡುವುದು ಸೌಮ್ಯವಾದಿಗಳ ಅಭಿಪ್ರಾಯ ನನಗೆ ತಿಳಿದಿರುವುದು. ಆದರೆ ಅದು ನನಗೆ ಬೇಕಾಗಿಲ್ಲ.

‘ಅವರಿಗೆ ವಿಶ್ರಾಂತಿಯು ದೊರೆಯುವುದು,’

“ಯಾಕೆ ಪೋಕರ್ ಆಟ ಆಡಲಿಕ್ಕೋ?

‘ಅದಕ್ಕೆ ಮಾತ್ರವಲ್ಲದೆ, ಇತರ ಕೈವೃತ್ತಿಗಳನ್ನು ನಡೆಯಿಸುವರೆ’’

“ಒಳ್ಳೆ ತರದ ಕೈವೃತ್ತಿಗಳನ್ನು ಅವರು ಆಚರಿಸಬೇಕಾಗಿ, ನನ್ನ ಬೋಧನೆಯು. ಆ ವೃತ್ತಿಯಲ್ಲಿ ಅವರು ದಿನಂಪ್ರತಿ ಎಂಟು ತಾಸು ದುಡಿಯಲೆ ಬೇಕು’’

‘ಪ್ರತಿಯೊಂದು ಮನೆಯಲ್ಲಿ ಒಂದು ಮೋಟಾರು ವಾಹನ ಮತ್ತು ರೇಡಿಯೊ ಪೆಟ್ಟಿಗೆ ಇರುವಂತೆ ಮಾಡುವುದರಲ್ಲಿ ನಿಮಗೆ ಆಸಕ್ತಿಯಿರುವಂತೆ ತೋರುವುದಿಲ್ಲ’’ ಎಂದು ಡಾ| ಬೋರರು ಅನ್ನಲು,

“ದೇಶದಲ್ಲಿ ಆ ತರದಲ್ಲಿ ಮೋಟಾರು ವಾಹನಗಳ ಸಂಖ್ಯೆಯು ಬೆಳೆದರೆ, ಜನ ನಡೆಯಲು ಅವಕಾಶ ದೊರಕದು’ ಎಂದರು ಮಹಾತ್ಮರು.

“ಅದಕ್ಕೆ ನನ್ನ ಒಪ್ಪಿಗೆ. ಈಗ ನಮ್ಮ ದೇಶದಲ್ಲಿ ಈ ಮೋಟಾರು ವಾಹನಗಳ ದೆಸೆಯಿಂದ ವರ್ಷಂಪ್ರತಿ ೪೦,೦೦೦ ಕೊಲೆಗಳು ನಡೆಯುತ್ತವೆ. ಅಸಂಖ್ಯಾತ ಜನರು ಭಯಂಕರ ತರದ ಹಾನಿಗಳನ್ನು ಅನುಭವಿಸುತ್ತಾರೆ.’

“ಹೇಗೂ ಆಗಲಿ, ಪ್ರತಿಯೊಂದು ಮನೆಯಲ್ಲಿ ರೇಡಿಯೊ ಪೆಟ್ಟಿಗೆ ಇರುವ ದಿನವು ಮೂಡುವ ತನಕ ನಾನು ಜೀವದಲ್ಲಿರಲಾರೆನು”

“ಧಾರಾಳವಾಗಿ ಸಿದ್ಧಪಡಿಸುವ ಸಾಂಘಿಕ [illegible] ದಲ್ಲಿ ಶ್ರೀ| ಜವಾಹರಲಾಲ ನೆಹರೂರವರಿಗೆ

ಹರಿಪುರದಲ್ಲಿ [illegible] ಮಹಾತ್ಮಾಜಿಯವರ ವಸತಿಗೃಹ

ವಿಶ್ವಾಸವಿದೆಯಂತೆ [illegible], ಡಾ| ಬೋರರು ಅನ್ನಲು.

“ಅದು ನನಗೆ ತಿಳಿದಿರುವುದು. ಆದರೆ [illegible] ತಯಾರಿಸ [illegible]? [illegible] ವಿವಿಧ [illegible] ಯನ್ನು [illegible] ಅದನ್ನು [illegible] ವುದು ಅದರ ಅರ್ಥವಾಗಿರದು.

‘ಅದು [illegible] ತರದ ಪತಿದಂಡನಕಾರರು ಈಗವರು ತಯಾರಿಸುವ ವಸ್ತುಗಳನ್ನು ಸಾಗಿಸುವ ಪ್ರವೃತ್ತಿ ಬದಲಾಗಿ [illegible] ಯನ್ನು ಬೆಳೆಸಿ [illegible] ಕೈಕಾರಿಗೆ ಹಣವನ್ನು [illegible] ಶಕ್ತಿಯು ಬೆಳೆಯ [illegible] ವಾದರೆ [illegible] ಅವುಗಳನ್ನು ಒಬ್ಬರ ಮೇಲೊಬ್ಬರು [illegible] ವಿನೋದ [illegible] ಉಪಯೋಗಿಸ [illegible]’ ಎಂದು ಡಾ| ಬೋರರು ಅನ್ನಲು ಗಾಂಧೀಜಿಯವರು

ಆ ಸೂತ್ರ ನನಗೆ ಬೇಕಾಗಿಲ್ಲ. ಎಲ್ಲರಿಗೂ ಉಣಲಿಕ್ಕೆ ತಿನಲಿಕ್ಕೆ ಬೇಕಾದಷ್ಟು ಆಹಾರವಾಗಿ ದೊರಕುವುದು. ಉಡಲು ಬೇಕಾದ ವಸ್ತ್ರ ದೊರಕುವುದು, ಎಲ್ಲರೂ ಶಿಕ್ಷಿತರಾಗುವುದು—ಇದು [illegible] ಧಾರಾಳ ತರದಲ್ಲಿ ತಯಾರಿಸುವ ಸೂತ್ರದ ಅರ್ಥವಾದರೆ, ಅದು ನಮಗೆ ಬೇಕು. ಹೊಟ್ಟೆಗೆ ಬೇಕಾದಕ್ಕಿಂತ ಮಿತಿಮೀರಿ ಆಹಾರವನ್ನು ಹೊಟ್ಟೆಯೊಳಗೆ ತುಂಬಿ, ಅಜೀರ್ಣಾವಸ್ಥೆಯನ್ನು ಅನುಭವಿಸುವ ಇಚ್ಛೆಯು ನಮಗಿಲ್ಲ. ಆದರೆ ಬಡತನ, ನಿರುದ್ಯೋಗ, ಮಿಮಾಂಸ, ಸಂಕಟ ಇತ್ಯಾದಿಗಳೂ ನಮಗೆ ಬೇಕಾಗಿಲ್ಲ.

(ಹರಿಜನ ಪತ್ರಿಕೆಯಿಂದ.)

ಐ ಸಿ ಎಸ್ ಮೊದಲಾದ ಅಖಿಳಭಾರತದ ಸರ್ವಿಸುಗಳನ್ನು ಸೆಕ್ರೆಟರಿಯವರು ಲಂಡನಿನಿಂದ ನೇಮಿಸುವ ಬದಲಾಗಿ, ಇವೆಲ್ಲ ಸರ್ವಿಸುಗಳೂ ಪ್ರಾಂತಿಕ ಸರ್ವಿಸುಗಳಾಗಿ ಇಲ್ಲಿನವರನ್ನೆ ಸರಕಾರವು ಇಲ್ಲಿಯೇ ನೇಮಿಸುವಂತಾಗಬೇಕೆಂದೂ, ಇನ್ನು ಈ ಸರ್ವಿಸುಗಳಿಗೆ ಹೊಸಬರನ್ನು ನೇಮಿಸುವುದು ಬೇಡವೆಂದು ಮೊದಲಾಗಿ ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿಯಲ್ಲಿ ಒಂದು ಠರಾವು ಮಂಜೂರಾಗಿ, ಮುಸ್ಲಿಂ ಲೀಗ್ ಮತ್ತು ಎಂಗ್ಲೋಇಂಡಿಯನ ಸಭಾಸದಸ್ಯರು ಸಹ ಇದನ್ನು ಅನುಮೋದಿಸಿದವರು. ಇದರಿಂದ ವರ್ಷಕ್ಕೆ ೧೫ ೩೦ ಲಕ್ಷ ರೂಪಾಯಿಗಳ ಉಳಿತಾಯ ವಾಗುತ್ತಿದೆ.

## ಒಂದೇ ಶೀಸೆಯಿಂದ




**ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!**

ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಶೀಸೆಯ ಸೇವನೆಯಲ್ಲಿದೆ.

ಕೇಸರಿ ಕುಟೀರಂ—ರಾಯಪೇಟೆ—ಮದ್ರಾಸು.

ಮಂಗಳೂರು ಪ್ರವರ್ತಕರು. ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು



**Best Cheap Durable**

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by:-*

The West Coast Soap Factory

## ನಮ್ಮ 515 ಕೆಂಪು 365 ಮತ್ತು 232

## ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ತರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents,*

**P-nchmal Krishnaya Shenoy & Son,**

Bunder, MANGALORE


# ಅಂಧಾಚಾರದ ಬಲಿವೇದಿಯಲ್ಲಿ!

ಸರಕಾರದ ನೌಕರಿಯಲ್ಲಿದ್ದು ನಿವೃತ್ತನಾದ ಡಾಕ್ಟರರೊಬ್ಬರಿಗೆ ಪ್ರಾಯಕ್ಕೆ ಬಂದ ಅವಿವಾಹಿತ ಹುಡುಗಿಯೊಬ್ಬಳಿದ್ದಳು. ಡಾಕ್ಟರರು ಪರಿಶ್ರಮ ಪಟ್ಟು, ಶತ್ರುಮಿತ್ರರ ಕಾಲುಹಿಡಿದು, ಕಾಡಿ ಬೇಡಿ ಭಗೀರಥ ಪ್ರಯತ್ನ ಮಾಡಿದ ಮೇಲೆ ಶ್ರೀಮಂತ ಮನೆತನಕ್ಕೆ ಸೇರಿದ ಸುಶಿಕ್ಷಿತ ವರನೊಬ್ಬನಿಗೆ ಹುಡುಗಿಯನ್ನು ಕೊಟ್ಟು ಮದುವೆ ಮಾಡುವದೆಂದು ನಿಷ್ಕರ್ಷೆಯಾಯಿತು. ವರನು ಬಂದು ಹುಡುಗಿಯನ್ನು ನೋಡಿ ಸಮ್ಮತಿ ಕೊಟ್ಟುಹೋದ.

ಪೂರ್ವ ನಿಶ್ಚಿತ ದಿನ ದಿಬ್ಬಣ ಬಂದಿತು. ಮದುವೆಯೂ ಆಯಿತು ಆ ಮೇಲೆ ಡಾಕ್ಟರರು ಕೊಟ್ಟ ವರದಕ್ಷಿಣೆ ಎಷ್ಟಾಯಿತೆಂದು ಎಣಿಕೆ ಹಾಕುವಾಗ ಅದು ವರಪಕ್ಷದವರು ನಿರೀಕ್ಷಿಸಿದುದಕ್ಕಿಂತಲೂ ಸ್ವಲ್ಪ ಕಡಿಮೆಯಾಯಿತು. ಸಿಟ್ಟಾಗಿ ವರಪಕ್ಷದವರು ವಧು ಮತ್ತು ದಕ್ಷಿಣೆ ಎರಡನ್ನೂ ಬಿಟ್ಟು ಹೋಗಿರುವರು ಕನ್ಯೆಯ ಮುಖ ಕೂಡ ನೋಡಲಿಕ್ಕಿಲ್ಲವೆಂದು ಆಣೆ ಹಾಕಿಕೊಂಡಿರುವರಂತೆ.

ಮುದಿಪ್ರಾಯದಲ್ಲಿ ಡಾಕ್ಟರರು, ತಾರುಣ್ಯದಲ್ಲಿ ಅವರ ಮಗಳು—ಕೂಡಿಯೇ ಅಂಧಾಚಾರದ ಬಲಿವೇದಿಯ ಮೇಲೆ ಕೂತು ಕಣ್ಣೀರು ಮಿಡಿಯುತ್ತಿದ್ದಾರೆ ಅವರ ದುಃಖವನ್ನು ನೋಡಿ ಅದನ್ನು ಕಡಿಮೆ ಮಾಡುವಷ್ಟು ಸಮಾಜವು ಉದಾರವಾಗಿರುವದೆ? ಹಿಂದೂ ಸಮಾಜವು ಬಹಳ ಅನುದಾರವೆಂಬ ಅದರ ಕೀರ್ತಿಗೆ ಕಲಂಕ ತಪ್ಪಿದರೆ?

★

ರಕ್ಸೋಲ ಎಂಬಲ್ಲಿಂದ ರೈಲುಗಾಡಿ ವೇಗದಿಂದ ಓಡಿಹೋಗುತ್ತಿದ್ದಾಗ ೩೦ ವರ್ಷದ ಒಬ್ಬ ಯುವತಿ ಗಾಡಿಯಿಂದ ಕೆಳಗೆ ಹಾರಿ ಆತ್ಮಘಾತ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದ್ದಳಾಗಿ, ಕೆಲವು ಸಮಯದ ಹಿಂದೆ ಒಂದು ವರ್ತಮಾನ ಬಿದ್ದಿತ್ತು. ಅವಳ ಕ್ಲಿಷ್ಟ ಸ್ಥಿತಿಯಿಂದ ಗಾಯಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಳು. ಅಲ್ಲಿಯೇ ಅವಳು ಆ ಗಾಯಗಳಿಂದ ಸತ್ತುಹೋದಳು.

ಸಾಮಾಜಿಕ ಅತ್ಯಾಚಾರಗಳನ್ನು ಸಹಿಸಿಕೊಳ್ಳಲಿಕ್ಕಾಗದೆ ಆ ಯುವತಿ ಹೀಗೆ ಮಾಡಿದಳೆಂದು ತಿಳಿದುಬರುತ್ತದೆ.

★

ಪ್ರತಿಷ್ಠಿತ ಮನೆತನದಿಂದ ಮದುವೆ ಮಾಡಿ ತಂದ ಒಬ್ಬ ಹುಡುಗಿಯನ್ನು ಅವಳ ಅಪರಾಧ ಏನೂ ಇಲ್ಲವಾದರೂ—ಬೇರೆ ಜಗಳಗಳ ಕಾರಣದಿಂದ ಬಿಟ್ಟು ಬಿಟ್ಟು, ಅವಳ ಗಂಡನಿಗೆ ಇನ್ನೊಂದು ವಿವಾಹ ಮಾಡುವ ಯೋಚನೆಯನ್ನು ಅವನ ತಂದೆ ಮಾಡಿದ್ದನು. ಹೊಸ ಹುಡುಗಿಯ ಲಗ್ನದ ದಿನವು ಕೂಡ ನಿಶ್ಚಯವಾಗಿತ್ತು, ಆದರೆ ಊರ ಮಹಿಳಾಸಭೆಯವರು ಹುಡುಗಿಯ ಮಾವನ ಈ ಅಕೃತ್ಯವನ್ನು ಪ್ರಬಲವಾಗಿ ನಿಷೇಧಿಸಿದ್ದಾರೆ. ಮೊದಲನೆ ಹೆಂಡತಿಯು ಜೀವದಿಂದಿರುತ್ತಾ ಇನ್ನೊಬ್ಬಳನ್ನು ಮದುವೆಯಾಗುವ ಅಧಿಕಾರವು ಯಾವ ಪುರುಷನಿಗೂ ಇರಕೂಡದಾಗಿ ಅವರು ಠರಾವು ಮಾಡಿಕೊಂಡಿದ್ದಾರೆ ಈ ಠರಾವಿನನ್ವಯ ಮಹಿಳಾ ಸಭೆಯ ಕೆಲವು ಮಾನನೀಯ ಮಹಿಳೆಯರು ವಧುಪಕ್ಷದವರಲ್ಲಿಗೆ ಒಂದು ಶಿಷ್ಟ ಮಂಡಲವನ್ನು ತೆಗೆದುಕೊಂಡು ಹೋಗಿ ಇಂಥ ವಿವಾದಗಳಿಂದಾಗುವ ಹಾನಿಗಳನ್ನು ತೋರಿಸಿ ಕೊಟ್ಟರು. ಆದರೆ ಪಾಪದ ವಧುಪಕ್ಷದವರು ಅವರ ಮಾತುಗಳನ್ನು ಕಿವಿಮೇಲೆ ಹಾಕಿಕೊಳ್ಳಲಿಲ್ಲ. ಯಾಕೆಂದರೆ ಮದುವೆಯಾಗಲಿಕ್ಕಿರುವ ವರನು ಕಾಲೇಜಿನ ಪ್ರೊಫೇಸರನಾಗಿರುವನಂತೆ.

ನ್ಯಾಯಬದ್ಧ ಎಲ್ಲ ಉಪಾಯಗಳಿಂದ ಪ್ರೊಫೇಸರನ ದ್ವಿತೀಯ ವಿವಾಹವನ್ನು ತಡೆಯುವದಾಗಿ ಮಹಿಳಾ ಸಭೆಯು ಪ್ರತಿಜ್ಞೆ ತೆಗೆದು ಕೊಂಡಿದ್ದು ಸುಶಿಕ್ಷಿತ ಪ್ರೊಫೇಸರನನ್ನು ಹಾದಿಗೆ ತರಬೇಕಾದರೆ ಇಂಥ ಮಹಿಳಾ ಸಭೆಯೇ ಬೇಕು.

★

ಇಂದೋರಿನ ಸ್ಮಾಲ್‌ಕಾಜ್ ಕೋರ್ಟಿನಲ್ಲಿ ಒಂದು ವಿಚಿತ್ರ ಪ್ರಕಾರದ ಮೊಕದ್ದಮೆಯು ದಾಖಲಾಗಿರುವದು. ಈ ಮೊಕದ್ದಮೆಯ ವಾರ್ತೆಯನ್ನು ಕೇಳಿ ಜನರು ತುಂಬಾ ಉದ್ವೇಗಗೊಂಡಿದ್ದಾರೆ ಒಬ್ಬನು ತನ್ನ ಖರ್ಚಿನ ನಿಮಿತ್ತ ಕೆಲವು ರೂಪಾಯಿಗಳಿಗೆ ತನ್ನ ಹೆಂಡತಿಯನ್ನು ಇನ್ನೊಬ್ಬನಲ್ಲಿ ಅಡವು ಇಟ್ಟಿದ್ದನು ಸಕಾಲದಲ್ಲಿ ಸಾಲ ಬಡ್ಡಿಯನ್ನು ಪಾವತಿ ಮಾಡಲಿಕ್ಕೆ ಆಗದೆ ಇದ್ದುದರಿಂದ ಸಾಲಗಾರನು ಅವನ ಮೇಲೆ ಈಗ ವ್ಯಾಜ್ಯ ಹೂಡಿರುವನು. ದಾವೆಯಲ್ಲಿ—ಅವಳನ್ನು ಸಾಕಿದ ಖರ್ಚನ್ನು ಕೊಡಿಸಬೇಕಾಗಿ ಸಾಲಗಾರನು ಕೋರ್ಟನ್ನು ಪ್ರಾರ್ಥಿಸಿದ್ದಾನೆ ಹಣಕ್ಕಾಗಿ ಇನ್ನು ಏನೇನಾಗುವದೋ ಯಾರು ಬಲ್ಲರು?

★

ಕೆಲವು ತಿಂಗಳುಗಳ ಹಿಂದೆ ನಡೆದ ಘಟನೆಯಿದು ವಿಷ್ಣುಪುರ ಎಂಬ ಊರಿನಲ್ಲಿ ಜನಕ ಕುಮಾರಿ ಎಂಬ ಮಹಿಳೆ ತನ್ನ ಗಂಡನೊಂದಿಗೆ ಸುಖವಾಗಿ ಕಾಲಯಾಪನೆ ಮಾಡುತ್ತಿದ್ದಳು ಆದರೆ ಅವಳ ಗಂಡ ದೇವಶರಣ ಸಿಂಹನು ಅಕಾಲದಲ್ಲಿ ಮೃತ್ಯುವಶನಾದನು. ಆದರಿಂದ ಜನಕ ಕುಮಾರಿಯ ಹೃದಯಕ್ಕೆ ಘೋರ ಆಘಾತವುಂಟಾಯಿತು ಅವಳ ದುಃಖವೇಗವನ್ನು ತಡೆಯುವವರು ಆ ಸಮಯಕ್ಕೆ ಅಲಿ ಯಾರೂ ಇರಲಿಲ್ಲ. ಆದ್ದರಿಂದ ಸಸ್ವರ್ಣ ವಿನಂತಿ ಅಲಂಕಾರ ಸ್ನಾನಮಾಡಿಕೊಂಡು ಅವಳು ಪತಿಯ ಚಿತೆಯಲ್ಲಿ ಬಿದ್ದು ಸಹಗಮನ ಮಾಡಿಕೊಂಡಳು. ಸುತ್ತಲೂ ಕೂಡಿದ್ದ ಸ್ತ್ರೀಯರೆಲ್ಲ ಹೀಗೆ ನಿಷ್ಠೆ ಈ ಕಾರ್ಯವನ್ನು ತಡೆಯಿರಾದರೆ ಸಿರಿ ಗೆಲುವು ಸೋತ ಪಾಪವು ತಟ್ಟುವದೆಂದ ಅವಳ ಹೇಳಿದ್ದಳಂತೆ ಆದ್ದರಿಂದ ಅವರು, ಅವಳ ಈ ಸಹಗಮನದಂಥ ಪವಿತ್ರ ಕಾರ್ಯವನ್ನು ನೋಡಿ ಪುಣ್ಯಕಟ್ಟಿಕೊಂಡರು.

★

ಪಟವಾರಿ ಎಂಬಲ್ಲಿ ಒಬ್ಬ ಹುಡುಗನು ಒಬ್ಬ ಹುಡುಗಿಯ ಮೇಲೆ ಮೋಹಿತನಾಗಿದ್ದ. ಇಬ್ಬರೂ ಅವಿವಾಹಿತರಾಗಿದ್ದರು. ಇಬ್ಬರೂ ವಿವಾಹವಾಗುವ ಇಚ್ಛೆಯುಳ್ಳವರಾಗಿದ್ದರು. ಆದರೆ ನಡುವೆ ಇನ್ನೊಂದು ಪ್ರಸಂಗ ನಡೆಯಿತು. ಹುಡುಗಿ-ಹುಡುಗರೊಳಗೆ ಪ್ರೇಮ ಸಂಬಂಧವಿರುವದೆಂದು ಕೇಳಿದ ಹುಡುಗಿಯ ಅಣ್ಣನು ಹುಡುಗನ ಅಕೃತ್ಯವನ್ನು ತೆಗಳಿ ಅವನನ್ನು ಬೈದು ಭಂಗಿಸಿದ ಹುಡುಗನ ಹೃದಯವು ನೊಂದು ಬೆಂದಿತು ಅವನು ವಿಚಾರಂಕೆಟ್ಟು ಉದ್ಭ್ರಾಂತನಾದ ಹೇಗೋ ಮಾಡಿ ತಂದೆಯ ರಿವಾಲ್ವರನ್ನು ಕದ್ದು ತಂದು ಮೊದಲು ಹುಡುಗಿಯ ಅಣ್ಣನನ್ನು ತಟ್ಟಿಟ್ಟು, ಆ ಮೇಲೆ ತನ್ನನ್ನು ತಾನೇ ಸುಟ್ಟಿಟ್ಟುಕೊಂಡು ಸತ್ತುಹೋದ.

★

ಒಂದೂರಿನಿಂದ ಹೊಲೆಯರ ಒಂದು ಮದುವೆ ದಿಬ್ಬಣ ಬರುತ್ತಾ ಇತ್ತು ದಿಬ್ಬಣವನು, ಉಚ್ಚವರ್ಣದವರ ಮದುವೆ ದಿಬ್ಬಣವನ್ನು ನಾಚಿಸುವಂತಿತ್ತು ಇದನ್ನು ಕಂಡು ಉಚ್ಚವರ್ಣದವರ ಹೊಟ್ಟೆಯಿಂದ ಉರಿಯೇಳತೊಡಗಿತು. ಅವರ ಹಲ್ಲುಗಳು ಕಟಕಟ ಕಡಿದುವು ನೂರಾರು ಮಂದಿ ಒಟ್ಟುಕೂಡಿ ದಿಬ್ಬಣ ಮುಂದೆ ಹೋಗಕೂಡದೆಂದು ಅಟಕಾಯಿಸಿದರು ಹೊಲೆಯರು ಅಸ್ಪೃಶ್ಯರಾದರೂ ಅವರ ಮೈಮೇಲೆ ಬೀಳಲಿಕ್ಕೆ ಮುಂದಾದರು ಮುಷ್ಟಾಮುಷ್ಟಿ, ಕೇಶಾಕೇಶಿಗೆ ಆರಂಭವಾಯಿತು ಅಷ್ಟರಲ್ಲಿ ಈ ಸುದ್ದಿ ಪೋಲೀಸರಿಗೆ ಮುಟ್ಟಿ ಅವರು ಎಲ್ಲವನ್ನು ಶಾಂತಮಾಡಿ ದಿಬ್ಬಣ ಮುಂದಕ್ಕೆ ಹೋಗಬಿಟ್ಟರು.

ಹೊಲೆಯರಿಗೆ ಬ್ರಾಹ್ಮಣರನ್ನು ನಾಚಿಸುವಂತೆ ದಿಬ್ಬಣ ಕೊಂಡುಹೋಗುವ ಅಧಿಕಾರವನ್ನು ಯಾವ ಶಾಸ್ತ್ರವೂ ಕೊಟ್ಟಿರುವದಿಲ್ಲವಾ! ಬ್ರಾಹ್ಮಣರ ದೂರು!

## ಜಪಾನು ಯಾರಿಗೂ ಹೆದರುವಂತಿಲ್ಲ

ಲಂಡನ್ ನವಾಲ್ ಪೆಕ್ಟನ್ನು ಉಲ್ಲಂಘಿಸಿ ಜಪಾನು ಮಹತ್ವದ ಯುದ್ಧ ನೌಕೆಗಳನ್ನು ನಿರ್ಮಿಸುವುದರಲ್ಲಿ ತೊಡಗಿದುದಕ್ಕಾಗಿ ಪ್ರಭುತ್ವದ ಜನಾಂಗಗಳಾದ ಬ್ರಿಟನ್ ಅಮೇರಿಕಾ, ಫ್ರಾನ್ಸು ಜನಾಂಗಗಳು ಪ್ರತಿಕೂಲವಾ ಗರ್ಜನೆ ತ್ತಿಯನ್ನು ಹೊರದಿಸಿದರಷ್ಟೆ ಜಪಾನು ಅದರ ಮುಲಕ್ಷ್ಯವೆ ಮಾಡಲಿಲ್ಲ. ಅವರ ಬೆದರಿಕೆಗೆ ಅವನು ಹೆದರುವ ಹಾಗಿಲ್ಲ. ತನ್ನ ಇಚ್ಛೆಯನು ವ್ಯಾಪಾರ ವರ್ತಿಸುವವೆಂದು, ಜಪಾನಿನ ಉತ್ತರ ದೊರೆಟಿರುತ್ತದೆ

ಏನ್ ಳನು ತಿಳ ಗಿದೆ ಸ್ವಾ ತ್ರಿಯ ತ್ರಿರು ವೇ ಕಾರ ಮಟ್ಟ ಹೆಸರ ಯೇ

ಚೀನಾದೇಶದ ಪ್ರಸಿದ್ಧ ಸೈನ್ಯದಳ

ದೊಡ್ಡ ಉಪದೇಶಿಯೆಂದೂ, ಅನೇಕ ಚಮತ್ಕಾರಗಳನ್ನು ಮಾಡಿ ತೋರಿಸುವ ವಿಶೇಷ ವ್ಯಕ್ತಿಯೆಂದೂ ಪ್ರಖ್ಯಾತನಾಗಿದ್ದನು ಆದರೂ ಕೂಡ ಅವನ ಕಾಲದ ಪ್ರಸಿದ್ಧ ಲೇಖಕರಾರೂ ಅವನ ವಿಷಯವಾಗಿ ಏನನ್ನೂ ಬರೆದಿರಲಿಲ್ಲ. ಈ ಕಾರಣದಿಂದ, ಯೇಸುಸ್ವಾಮಿಯು ನಿಜವಾಗಿಯೂ ವ್ಯಕ್ತಿಸೃಷ್ಟಿಯೋ ಅಥವಾ ಕಲ್ಪಿತ ವ್ಯಕ್ತಿಯೋ ಎಂದು ಸ್ವತಂತ್ರ ವಿಚಾರಗಳು ಪ್ರಶ್ನೆ ಸಹತ್ತಿರುವರು. ಯೇಸು ಹುಟ್ಟಿಯೇ ಇಲ್ಲ! ಮತಾಚಾರ್ಯರು ಮತಾನುಯಾಯಿಗಳ ಪ್ರೀತಿ ಅನುರಾಗಗಳನ್ನು ಸಂಪಾದಿಸುವುದಕ್ಕೋಸ್ಕರ ಯೇಸುವನ್ನು ಒಣ ಕಲ್ಪನಾಲೋಕದಲ್ಲಿ ಸೃಷ್ಟಿಸಿಕೊಂಡು ಅವನ ಹೆಸರಲ್ಲಿ ಕ್ರೈಸ್ತಮತ ಪ್ರಚಾರವನ್ನು ಮಾಡಿದರು ಎಂದು ಹೇಳುವ ಕೆಲವು ಜನರು ಈಗಲೂ ಇದ್ದಾರೆ. ಆದರೆ ಹೀಗೆ ಸಂದೇಹಪಡುವ ಜನರಿಗೆ ಡಾಕ್ಟರ ಅರ್ಥರ ಆರ್ ಎಸ್ ರಾಯ್, ಪಿ ಎಚ್ ಡಿ, ದಿ ಲಿಟ್ ಅವರು ಕೈಜರ್-ಹಿಂದ್ ಪತ್ರಿಕೆಯಲ್ಲಿ ಒಂದು ಲೇಖ ಬರೆದು ಸಂದೇಹನಿವಾರಣೆ ಮಾಡಲಿಕ್ಕೆ ಪ್ರಯತ್ನಿಸಿದ್ದಾರೆ.

ಯೇಸುಸ್ವಾಮಿಯು ಚರಿತ್ರವನ್ನು ಜೋಸೇಫ ಮತ್ತು ಪಿಲಾತ ಎಂಬಿಬ್ಬ ಲೇಖಕರು ಬರೆದಿರುತ್ತಾರೆ. ಜೋಸೇಫನು ಯೇಸುವಿನ ಸ್ವರ್ಗಾರೋಹಣವಾದ ಏಳು ವರ್ಷಗಳ ಅನಂತರ ಹುಟ್ಟಿದ್ದನು. ಆದರೆ ಪಿಲಾತನು ಆತನ ಸಮಕಾಲೀನನಾಗಿದ್ದನು. ಯೇಸುವಿಗೆ ನ್ಯಾಯದಂಡನೆಯನ್ನು ಕೊಟ್ಟ ನ್ಯಾಯಾಧಿಪತಿ ಕೂಡಲು ಇರುತಿತು! ಅದನ್ನು ಅವನು ನರ ಜ್ಞೇನರು ಬಾಚಿಕೊಳ್ಳುವ ಪ್ರಕಾರ ಚಾಚಿಕೊಳ್ಳುತಿದ್ದನು. ಸರಳ ದೃಷ್ಟಿ, ಆದರೆ ಗಂಭೀರ ನಡೆ. ಯಾಕಂದರೆ ಅವನು ನಾನಾ ಬಗೆಯ ಚಮತ್ಕಾರಗಳನ್ನೂ ಪವಾಡಗಳನ್ನೂ ಮಾಡಿ ತೋರಿಸುವವನಾಗಿದ್ದನು. ಅದೇನೋ ಒಂದು ಅದೃಶ್ಯ ಶಕ್ತಿಯು ಬಲದಿಂದ ಅವನು ಹಾಗೆ ಮಾಡಬಲ್ಲವನಾಗಿದ್ದನು. ಅವನ ಹೆಸರು ಯೇಸು ಎಂದಾಗಿತ್ತು. ಆದರೆ ಜನರು ಅವನನ್ನು ಸ್ವಾಮಿ ಎಂದು ಕರೆಯುತಿದ್ದರು. ಸಭ್ಯ ಜನರು ಅವನನ್ನು ಒಬ್ಬ ಉಪಕಾರಿ ಮನುಷ್ಯ ಎಂದು ತಿಳಿಯುತಿದ್ದರು. ಆದರೆ ಕೆಲವು ಜನರು ಅವನನ್ನು ಲೋಕೋದ್ಧಾರಕ್ಕಾಗಿ ಬಂದ ದೇವರ ಮಗನೆಂದೂ ಕರೆಯುತಿದ್ದರು" ಹೀಗೆ ಜೋಸೇಫನು ತಾನು ಬರೆದ ಚರಿತ್ರೆಯಲ್ಲಿ ಯೇಸುವಿನ ವರ್ಣನೆ ಮಾಡಿದ್ದಾನೆ.

ಪಿಲಾತನು ಯೇಸುವಿನ ಸಮಕಾಲೀನನಾಗಿದ್ದನು. ಅವನು ಬರೆದ ದರಲ್ಲಿ ಸತ್ಯಾಂಶವು ಹೆಚ್ಚಿನ ಅಧಿಕವಾಗಿರಬೇಕು. ಆದರೆ ಕೆಲವು ಸಾಮಾನ್ಯ ಸಂಗತಿಗಳನ್ನು ಬಿಟ್ಟರೆ ಜೋಸೇಫನು ಬರೆದಿರುವುದರಲ್ಲಿಯೂ ಅವನು ಬರೆದಿರುವುದರಲ್ಲಿಯೂ ವಿಶೇಷ ಅಂತರವು ಕಂಡುಬರುವುದಿಲ್ಲ. ಸಾಮಾನ್ಯ ವಿಷಯಗಳಲ್ಲಿ ಇಬ್ಬರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಪಿಲಾತನು ಬರೆದ ಕೆಲವು ವರ್ಷಗಳ ಬಳಿಕ ಜೋಸೇಫನು ಮಂದಿಯ ಬಾಯಲ್ಲಿದ್ದ ಮಾತುಗಳನ್ನೇ ಎತ್ತಿಕೊಂಡು ಅವನ್ನು ಸಮರ್ಥಿಸಿ ಬರೆದಿರುವನೆಂಬುದರಿಂದ, ಯೇಸುಸ್ವಾಮಿಯು ಕಲ್ಪಿತ ವ್ಯಕ್ತಿ ಅಲ್ಲ, ಅವನು ನಿಜಕ್ಕೂ ಜೀವಿಸಿ ಇದ್ದ ಒಬ್ಬ ಮನುಷ್ಯ ಎಂಬುದು ನಿರ್ಧಾರವಾಗುತ್ತದೆ.

ಟಿ

ಅತಿ ಕುಡಿ ಶ್ರೇಷ್ಠ ಕೂಡ ರದಲ್ಲಿ ಯನ ವನ್ನು ಕಾಗಿ

ಆದರೆ ಯೇಸುಸ್ವಾಮಿಯಂಥ ಮಹಾಪುರುಷನ ವರ್ಣನೆಯನ್ನು ಇವರಿಬ್ಬರಲ್ಲದೆ ಬೇರೆ ಯಾರೂ ಮಾಡಿರುವದಿಲ್ಲವೆಂಬುದು ವಿಚಿತ್ರವೇ ಸರಿ. ಪರಂತು ಕಾನ್ಸ್ಟಂಟಿನೋಪಲ ಮತ್ತು ಅಲೆಗ್ಝಾಂಡ್ರಿಯ ಕ್ರೈಸ್ತಸಾಹಿತ್ಯಭಂಡಾರವು ನಾಶವಾಗಿ ಹೋಗಿದೆ. ಅದು ಉಪಲಬ್ಧವಾಗಿದ್ದರೆ ಯೇಸುಸ್ವಾಮಿಯ ಕುರಿತು ಇನ್ನು ಕೆಲವು ಇತಿಹಾಸಗಳನ್ನು ನಾವು ನೋಡಬಹುದಾಗಿತ್ತೋ ಏನೊ?

### ಯೇಸುವಿನ ವರ್ಣಚಿತ್ರ

ಇಂಥ ಇತಿಹಾಸಗಳು ಇದ್ದಿರಬಹುದೆಂದು ಊಹಿಸಲಿಕ್ಕೆ ಅವಕಾಶವು ಇದೆ. ಯೇಸುವಿನ ಮರಣಾನಂತರ-ಪ್ರಾಯಶಃ ಒಂದೆರಡು ಶತಮಾನಗಳು ಕಳೆದ ಬಳಿಕ ಬಿಡಿಸಿದ ಯೇಸುವಿನ ಒಂದು ವರ್ಣಚಿತ್ರವು ರೋಮಿನ ವೆಟಿಕನ್ ನಗರದಲ್ಲಿ ಇರುವುದಾಗಿ ಶ್ರೀ. ಯಂ ಯಸ್ ರಾಮಸ್ವಾಮಿ ಅಯ್ಯಂಗಾರರು ಹೇಳಿದ್ದಾರೆ. ಆ ವರ್ಣಚಿತ್ರವನ್ನೂ, ಆ ಕಾಲದಲ್ಲಿ ಉಪಲಬ್ಧವಾಗಿರುವ ಇತಿಹಾಸವನ್ನೂ ಓದಿ, ಅದರಲ್ಲಿ ಯೇಸುವಿನ ವರ್ಣನೆ ಮಾಡಿರುವ ಪ್ರಕಾರವೇ ಬರೆದಿರಬೇಕು. ಯಾಕಂದರೆ ದಂತಕತೆಯನ್ನು ಕೇಳಿ ಚಿತ್ರ ಬಿಡಿಸುವುದು ... ಇತಿಹಾಸವನ್ನು ಓದಿ ಚಿತ್ರಬಿಡಿಸುವುದು ಸುಲಭವಾಗಿದೆ ಎಂಬುದು ಅನುಭವಕ್ಕೆ ಬರುವ ವಿಷಯವಾಗಿದೆ. ಜನರು ಹೇಳಿದುದನ್ನು ಕೇಳಿ ಬೇರೆ ಬೇರೆ ಪುಸ್ತಕಗಳಲ್ಲಿ ಬರೆದಿರುವುದನ್ನು ಓದಿ ಚಿತ್ರಗಾರನು ಯೇಸುವಿನ ವರ್ಣಚಿತ್ರವನ್ನು ಬಿಡಿಸಿದ್ದಾನೆ ಎಂಬುದರಲ್ಲಿ ಯಾವ ಸಂದೇಹವೂ ಇರಲಿಕ್ಕೆ ಎಡೆಯಿಲ್ಲ.

ಆದರೆ ವೆಟಿಕ ನಗರದಲ್ಲಿರುವ ಆ ಚಿತ್ರವನ್ನು ನೋಡುವಾಗ ಒಬ್ಬನು ಆಶ್ಚರ್ಯಸಾಗರದಲ್ಲಿ ಮುಳುಗಿ ಹೋಗಬಹುದು. ಚಿತ್ರಗಾರನು ಯೇಸುವನ್ನು ಒಬ್ಬ ಹಿಂದೂ ಯೋಗಿಯ ಹಾಗೆ ಚಿತ್ರಿಸಿದ್ದಾನೆ. ಆ ಚಿತ್ರದಲ್ಲಿ ಯೇಸು ಧೋತಿ ಉಟ್ಟುಕೊಂಡಿದ್ದಾನೆ. ಅವನ ಕೊರಳಿಗೆ ಯಜ್ಞೋಪವೀತವಿದೆ, ಹಣೆಯಲ್ಲಿ ಭಸ್ಮವಿದೆ, ತಲೆಯಲ್ಲಿ ಜುಟ್ಟಿದೆ, ವೇಷಭೂಷಣಗಳೆಲ್ಲ ಹಿಂದೂಯೋಗಿಯ ವೇಷಭೂಷಣಗಳನ್ನು ಹೋಲುತ್ತವೆ.

### ಯೇಸು ಇಂಡಿಯಕ್ಕೆ ಬಂದಿದ್ದನೆ?

ಯೇಸುಸ್ವಾಮಿಯು ಹಿಂದೂದೇಶಕ್ಕೆ ಬಂದಿರಲಿಲ್ಲವಾದರೆ ಅವನನ್ನು ಹಿಂದೂಯೋಗಿಯಂತೆ ಚಿತ್ರಿಸುವುದು ಹೇಗೆ ಸಾಧ್ಯವಾಗುತ್ತಿತ್ತು? ಆದರೆ ಈಚೆಗೆ ಆಗಿರುವ ಶೋಧಗಳಿಂದ ಕಂಡುಬರುವದೇನೆಂದರೆ ಯೇಸುಸ್ವಾಮಿಯು ಒಬ್ಬ ಮಹಾಪುರುಷನಾಗಿದ್ದನು. ಅವನು ನಮ್ಮ ಭರತಖಂಡಕ್ಕೆ ಬಂದು ಕೆಲವು ವರ್ಷ ಕಾಲ ಉಳಿಕೊಂಡಿದ್ದನು, ಇಲ್ಲಿಯ ಋಷಿಮುನಿಗಳಿಂದ ಯೋಗವಿದ್ಯೆ, ಧರ್ಮಾಧರ್ಮ ವಿಚಾರ ಮೊದಲಾದವನ್ನು ಕಲಿತುಕೊಂಡು ಸ್ವದೇಶಕ್ಕೆ ಮರಳಿದ್ದನು.

ಅಂಧಶ್ರದ್ಧೆಯ ಮತಾನುಯಾಯಿಗಳು ಬೇಕಾದರೆ ಮೇಲೆ ಹೇಳಿದ ಮಾತುಗಳನ್ನು ಒಪ್ಪದೆ ಇರಲಿ, ವಿಚಾರಿಗಳಾದ ಸತ್ಯಪ್ರಿಯರು, ಮಾತ್ರ ಇತಿಹಾಸದಿಂದ ಪ್ರತ್ಯಕ್ಷವಾಗುವ ಈ ಮಾತುಗಳನ್ನು ಒಪ್ಪದೆ ಇರಲಾರರು.


## ದ್ರಾವಕಾಧಿಕ್ಯ.

ಉದರದೊಳಗೆ ದ್ರಾವಕಾಧಿಕ್ಯವಾಗುವುದು ಆಧುನಿಕ ಕಾಲದ ಒಂದು ದಂಡನೆಯು-ಕಾಲ ನಿಯಮವಿಲ್ಲದ ಊಟಗಳು, ಅಜೀರ್ಣದಿಂದ ಆಹಾರವು ಕೊಳೆಯುವುದು, ಅಯೋಗ್ಯ ಆಹಾರ, ಮನೋವ್ಯಥೆ, ಇವೆ ಮೊದಲಾದವುಗಳೇ ಅದರ ಕಾರಣಗಳು. ಕಾರಣ ಯಾವುದೆ ಇರಲಿ ಅದನ್ನು ಖಂಡಿತವಾಗಿಯೂ ಗುಣಪಡಿಸಬಹುದು.

ದ್ರಾವಕಾಧಿಕ್ಯವನ್ನು ಗುಣಪಡಿಸಲು, ನೀವು ಆಲ್ಕೇಲಿ ಪದಾರ್ಥವನ್ನು ಸೇವಿಸಬೇಕು. ಅದು ದ್ರಾವಕ ವಿರೋಧಿಯು. ವೈದ್ಯರುಗಳು, ಜನಜನಿತವಾದ ಹೆಚ್ಚಾಗಿ ಉಪಯೋಗಿಸಲ್ಪಡುವ, ಈ ಆಲ್ಕೇಲಿ ಹುಡಿಯೆಂದರೆ, ಅದು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರ್ ... ಗಳಲ್ಲಿ ...

ಸಹಿಯುಳ್ಳ ... ಮೇಲೆ ... ಒಂದು ... ಈ ಹುಡಿಯನ್ನು ನೀರಿನಲ್ಲಿ ... ಭೋಜನದ ತರುವಾಯ ಸೇವಿಸಿದರೆ ಆಗ ದ್ರಾವಕಾಧಿಕ್ಯದ ... ಪರಿಣಾಮ ... ಸಮಯ ... ಅದರಿಂದ ಮಹಾ ... ಉದರದೊಳಗಿನ ... ಹಾಳುಮಾಡುವ ... ಸಂತೋಷ ... ಆಹಾರವು ಸರಿಯಾಗಿ ಜೀರ್ಣವಾಗುತ್ತದೆ. ಅದು ... ಸಿಹಿ ... ವುದ

ದ್ರಾವಕಾಧಿಕ್ಯವನ್ನು ಕೂಡಲೆ ಗುಣಪಡಿಸಬೇಕು. ಅದು ಉದರದ ಅನೇಕ ಮಹಾ ರೋಗಗಳಿಗೆ ತಳಹದಿಯು. ಅದಕ್ಕೆ ಸರ್ಜಕ್ಷವಾದರೆ ಉದರದೊಳಗೆ ಕುರ ಇತ್ಯಾದಿಗಳು ... ಮೆಕ್ಲೀನ್ ಪೌಡರು ಎಷ್ಟರ ಮಟ್ಟಿಗೆ ಗುಣಕಾರಿಯೆಂದರೆ ಅದರಿಂದ ಕರುಳುಗಳ ಮೇಲೆ ನಡೆಯಬೇಕಾದ ಶಸ್ತ್ರಚಿಕಿತ್ಸೆಯನ್ನು ತಪ್ಪಿಸಲಾಗಿದೆ. ಆದರೂ ಆ ಮಹಾ ವ್ಯಾಧಿಗಳು ... ಮೊದಲೆ, ಮೆಕ್ಲೀನನ್ನು ... ಸೇವಿಸಿ, ... ರಕ್ಷಣೆಯನ್ನು ಮಾಡಿಕೊಳ್ಳುವುದು ...

Alex. C. Maclean

ಎಂಬ ಸಹಿಯುಳ್ಳ ... ಬಾಟ್ಲಿಯ ಮೇಲೆ ಕೆಂಪು ಮುದ್ರೆ ... ಜಾಗರೂಕರಾಗಿರಿ. ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ.

... ಕಡಿಮೆ ದರದ ... ಹೇಳಿಕೊಳ್ಳಬೇಡಿ.

... ಬೆಲೆಗಳಲ್ಲೂ ದೊರಕುತ್ತದೆ.

... ಕೆಮಿಸ್ಟರಿಂದ ...

ಜೆ ಎಲ್ ಮೋರಿಸನ್ ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್

ಸ್ಟ್ರಾಂಡ್ ಬಿಲ್ಡಿಂಗ್, ಹೇಸ್ಟಿಂಗ್ಸ್ ರೋಡ್, ಮುಂಬೈ

S. No. 68

ಅದರಮೂಲಕವಾಗಿ

ನೋಡಬಹುದಾದಷ್ಟು

ಶುದ್ಧವಾಗಿದೆ.

ಪೀಯರ್ಸ್ ಸೋಪಿನ ಪ್ರತಿಯೊಂದು ಬಿಲ್ಲೆ ತನ್ನ ಪರಿಶುದ್ಧತೆಯ ಗುರುತನ್ನು ತಾನೇ ಇಟ್ಟುಕೊಂಡಿದೆ. ನೀವು ಅದರ ಮೂಲಕವಾಗಿ ನೋಡಬಹುದಷ್ಟು ಅದು ಸ್ವಚ್ಛವಾಗಿದೆ. ಅಷ್ಟು ಶುದ್ಧವಾದ ಸೋಪನ್ನು 'ಪೀಯರ್ಸ್ ಪ್ರೋಸೆಸ್' ಎಂದರೆ ಎರಡುಸಲ ಶುದ್ಧ ಮಾಡುವ ವಿಶೇಷ ಕ್ರಮದಿಂದಮಾತ್ರವೇ ತಯಾರಿಸಬಹುದು. ಪೀಯರ್ಸ್ ನ್ನು ನಿಮ್ಮ ಸೋಪನ್ನಾಗಿ ಉಪಯೋಗಿಸಿರಿ. ಅದರ ಆಶ್ಚರ್ಯಕರವಾದ ದೇಹಪೋಷಣೆಯ ಕಾರ್ಯದಿಂದ ನಿಮ್ಮ ಚರ್ಮದಲ್ಲಿ ನವಚೇತನವು ಉಕ್ಕುತ್ತಿರುವುದನ್ನು ದೇಹವು ನವ ಸೌಂದರ್ಯವನ್ನು ಪಡೆಯುವುದನ್ನು ನಿರೀಕ್ಷಿಸಿರಿ.

Pears

ದೇಹಕಾಂತಿಯನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದು.

J.T.G. 95KA-8 A. & F. PEARS LTD ISLEWORTH ENGLAND

KANARESE

# ಒಂದೇ ಸೀಸೆಯಿಂದ




ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!

ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯಲ್ಲಿದೆ.

ಕೇಸರಿ ಕುಟೀರಂ—ರಾಯಪೇಟೆ— ಮದ್ರಾಸ್.

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು



**Best Cheap Durable**

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied Buy now and you will also be convinced.**

*Manufactured by* –

The West Coast Soap Factory

**ನಮ್ಮ 515 ಕೆಂಪು 365 ಮತ್ತು 232**

**ಬಿಳಿ ಬಾರ್ ಸೋಪುಗಳು,**

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವದಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents.*

**Panchmal Krishnaya Shenoy & Son,**

Bunder, MANGALORE


# ಅಂಧಾಚಾರದ ಬಲಿವೇದಿಯಲ್ಲಿ! ೩

ಸರಕಾರ ವೃತ್ತಿಯಲ್ಲಿದ್ದು ನಿವೃತ್ತನಾದ ಡಾಕ್ಟರರೊಬ್ಬರಿಗೆ ಪ್ರಾಯಕ್ಕೆ ಬಂದ ಅವಿವಾಹಿತ ಹುಡುಗಿಯೊಬ್ಬಳಿದ್ದಳು. ಡಾಕ್ಟರರು ಪರಿಶ್ರಮ ಪಟ್ಟು, ಶತ್ರುಮಿತ್ರರ ಕಾಲು ಹಿಡಿದು, ಕಾಡಿ ಬೇಡಿ ಭಗೀರಥ ಪ್ರಯತ್ನ ಮಾಡಿದ ಮೇಲೆ ಶ್ರೀಮಂತ ಮನೆತನಕ್ಕೆ ಸೇರಿದ ಸುಶಿಕ್ಷಿತ ವರನೊಬ್ಬನಿಗೆ ಹುಡುಗಿಯನ್ನು ಕೊಟ್ಟು ಮದುವೆ ಮಾಡ ಬೇಕೆಂದು ನಿಷ್ಕರ್ಷೆಯಾಯಿತು. ವರನು ಬಂದು ಹುಡುಗಿಯನ್ನು ನೋಡಿ ಸಮ್ಮತಿ ಕೊಟ್ಟು ಹೋದ.

ಪೂರ್ವ ನಿಶ್ಚಿತ ದಿನ ದಿಬ್ಬಣ ಬಂದಿತು ಮದುವೆಯೂ ಆಯಿತು ಆ ಮೇಲೆ ಡಾಕ್ಟರರು ಕೊಟ್ಟ ವರದಕ್ಷಿಣೆ ಎಷ್ಟಾಯಿತೆಂದು ಎಣಿಕೆ ಹಾಕುವಾಗ ಅದು ವರಪಕ್ಷದವರು ನಿರೀಕ್ಷಿಸಿದುದಕ್ಕಿಂತಲೂ ಸ್ವಲ್ಪ ಕಡಿಮೆಯಾಯಿತು. ಸಿಟ್ಟಾಗಿ ವರಪಕ್ಷದವರು ವಧು ಮತ್ತು ದಕ್ಷಿಣೆ ಎರಡನ್ನೂ ಬಿಟ್ಟು ಹೋಗಿರುವರು ಕನ್ಯೆಯ ಮುಖ ಕೂಡ ನೋಡಲಿಕ್ಕಿಲ್ಲವೆಂದ ಆಣೆ ಹಾಕಿಕೊಂಡಿರುವರಂತೆ

ಮುದಿಪ್ರಾಯದಲ್ಲಿ ಡಾಕ್ಟರರು ತಾರುಣ್ಯದಲ್ಲಿ ಅವರ ಮಗಳು—ಕೂಡಿಯೇ ಅಂಧಾಚಾರದ ಬಲಿವೇದಿಯ ಮೇಲೆ ಕೂತು ಕಣ್ಣೀರು ಮಿಡಿಯುತ್ತಿದ್ದಾರೆ ಅವರದು, ಇದನ್ನು ನೋಡಿ ಅದನ್ನು ಕಡಿಮೆ ಮಾಡುವಷ್ಟು ಸಮಾಜವು ಉದಾರವಾಗಿರುವದೆ? ಹಿಂದೂ ಸಮಾಜವು ಬಹಳ ಅಸಾಧಾರಣವೆಂಬ ಅದರ ಕೀರ್ತಿಗೆ ಕಲಂಕ ಬಟ್ಟಿದರೆ?

★

ರಕ್ಸೌಲ ಎಂಬಲ್ಲಿಂದ ರೈಲು ಗಾಡಿ ಹೊರಡಿ ದ ಓಡಿಹೋಗುತಿದ್ದಾಗ ೨೦ ವರ್ಷದ ಒಬ್ಬ ಸಧವಾ ಪತಿ ಗಾಡಿಯ ... ಕೆಳಗೆ ಹಾರಿ ಆತ್ಮಘಾತ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದ್ದಳಾಗಿ ಕೆಲವು ಸಮಯದ ಹಿಂದೆ ಒಂದು ವರ್ತಮಾನ ಬಿದ್ದಿತು ಅವಳ ಕಠಿಣ ರೀತಿ... ದ ಗಾಯ ಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟವಳು ಅಲ್ಲಿಯೇ ಅವಳು ಆ ಗಾಯಗಳಿಂದ ಸತ್ತು ಹೋದಳು

ಸಾಮಾಜಿಕ ಅತ್ಯಾಚಾರಗಳನ್ನು ಸಹಿಸಿಕೊಳ್ಳಲಿಕ್ಕಾಗದೆ ಆ ಯುವತಿ ಹೀಗೆ ಮಾಡಿದಳೆಂದು ತಿಳಿದುಬರುತ್ತದೆ

★

ಪ್ರತಿಷ್ಠಿತ ಮನೆತನದಿಂದ ಮದುವೆ ಮಾಡಿ ತಂದ ಒಬ್ಬ ಹುಡುಗಿಯನ್ನು ಅವಳ ಅಪರಾಧ ಏನೂ ಇಲ್ಲವಾದರೂ—ಬೇರೆ ಜಗಳಗಳ ಕಾರಣದಿಂದ ಬಿಟ್ಟು ಬಿಟ್ಟು, ಅವಳ ಗಂಡನಿಗೆ ಇನ್ನೊಂದು ವಿವಾಹ ಮಾಡುವ ಯೋಚನೆಯನ್ನು ಅವನ ತಂದೆ ಮಾಡಿದ್ದನು ಹೊಸ ಹುಡುಗಿಯ ಲಗ್ನದ ದಿನವು ಕೂಡ ನಿಶ್ಚಯವಾಗಿತ್ತು, ಆದರೆ ಊರ ಮಹಿಳಾಸಭೆಯವರು ಹುಡುಗಿಯ ಮಾವನ ಈ ಅಕೃತ್ಯವನ್ನು ಪ್ರಬಲವಾಗಿ ನಿಷೇಧಿಸಿದ್ದಾರೆ ಮೊದಲನೆ ಹೆಂಡತಿಯು ಜೀವದಿಂದಿರುತ್ತಾ ಇನ್ನೊಬ್ಬಳನ್ನು ಮದುವೆಯಾಗುವ ಅಧಿಕಾರವು ಯಾವ ಪುರುಷನಿಗೂ ಇರಕೂಡದಾಗಿ ಅವರು ಠರಾವು ಮಾಡಿಕೊಂಡಿದ್ದಾರೆ ಈ ಠರಾವಿನನ್ವಯ ಮಹಿಳಾ ಸಭೆಯ ಕೆಲವು ಮಾನನೀಯ ಮಹಿಳೆಯರು ವಧುಪಕ್ಷದವರಲ್ಲಿಗೆ ಒಂದು ಶಿಷ್ಟ ಮಂಡಲವನ್ನು ತೆಗೆದುಕೊಂಡು ಹೋಗಿ ಇಂಥ ವಿವಾದಗಳಿಂದಾಗುವ ಹಾನಿಗಳನ್ನು ತೋರಿಸಿ ಕೊಟ್ಟರು ಆದರೆ ಪಾಪದ ವಧುಪಕ್ಷದವರು ಅವರ ಮಾತುಗಳನ್ನು ಕಿವಿಮೇಲೆ ಹಾಕಿಕೊಳ್ಳಲಿಲ್ಲ ಯಾಕೆಂದರೆ ಮದುವೆಯಾಗಲಿಕ್ಕಿರುವ ವರನು ಕಾಲೇಜಿನ ಪ್ರೊಫೇಸರನಾಗಿರುವನಂತೆ

ನ್ಯಾಯಬದ್ಧ ಎಲ್ಲ ಉಪಾಯಗಳಿಂದ ಪ್ರೊಫೇಸರನ ದ್ವಿತೀಯ ವಿವಾಹವನ್ನು ತಡೆಯುವದಾಗಿ ಮಹಿಳಾ ಸಭೆಯು ಪ್ರತಿಜ್ಞೆ ತೆಗೆದು ಕೊಂಡಿದೆ ಸುಶಿಕ್ಷಿತ ಪ್ರೊಫೇಸರನನ್ನು ಹಾದಿಗೆ ತರಬೇಕಾದರೆ ಇಂಥ ಮಹಿಳಾ ಸಭೆಯೇ ಬೇಕು

★

ಇಂದೋರಿನ ಸ್ಮಾಲ್‌ಕಾಜ್ ಕೋರ್ಟಿನಲ್ಲಿ ಒಂದು ವಿಚಿತ್ರ ಪ್ರಕಾರದ ಮೊಕದ್ದಮೆಯು ದಾಖಲಾಗಿರುವದು ಈ ಮೊಕದ್ದಮೆಯ ವಾರ್ತೆಯನ್ನು ಕೇಳಿ ಜನರು ತುಂಬಾ ಉದ್ವೇಗಗೊಂಡಿದ್ದಾರೆ ಒಬ್ಬನು ತನ್ನ ಖರ್ಚಿನ ನಿಮಿತ್ತ ಕೆಲವು ರೂಪಾಯಿಗಳಿಗೆ ತನ್ನ ಹೆಂಡತಿಯನ್ನು ಇನ್ನೊಬ್ಬನಲ್ಲಿ ಅಡವು ಇಟ್ಟಿದ್ದನು ಸಕಾಲದಲ್ಲಿ ಸಾಲ ಬಡ್ಡಿಯನ್ನು ಪಾವತಿ ಮಾಡಲಿಕ್ಕೆ ಆಗದೆ ಇದ್ದುದರಿಂದ ಸಾಲಗಾರನು ಅವನ ಮೇಲೆ ಈಗ ವ್ಯಾಜ್ಯ ಹೂಡಿರುವನು ದಾವೆಯಲ್ಲಿ—ಅವಳನ್ನು ಸಾಕಿದ ಖರ್ಚನ್ನು ಕೊಡಿಸಬೇಕಾಗಿ ಸಾಲಗಾರನು ಕೋರ್ಟನ್ನು ಪ್ರಾರ್ಥಿಸಿದ್ದಾನೆ ಹಣಕ್ಕಾಗಿ ಇನ್ನು ಏನೇನಾಗುವದೋ ಯಾರು ಬಲ್ಲರು?

★

ಕೆಲವು ತಿಂಗಳುಗಳ ಹಿಂದೆ ನಡೆದ ಘಟನೆಯಿದು ವಿಷ್ಣುಪುರ ಎಂಬ ಹಳ್ಳಿಯಲ್ಲಿ ಜನಕ ಕುಮಾರಿ ಎಂಬ ಮಹಿಳೆ ತನ್ನ ಗಂಡನೊಂದಿಗೆ ಸುಖವಾಗಿ ಕಾಲಯಾಪನೆ ಮಾಡುತಿದ್ದಳು, ಆದರೆ ಅವಳ ಗಂಡ ದೇವಶರಣ ಸಿಂಹನು ಅಕಾಲದಲ್ಲಿ ಮೃತ್ಯುವಶನಾದನು ಅದರಿಂದ ಜನಕ ಕುಮಾರಿಯ ಹೃದಯಕ್ಕೆ ... ಆಘಾತವುಂಟಾಯಿತು ಅವಳ ದುಃಖವೇಗವನ್ನು ತಡೆಯುವವರು ಆ ಸಮಯಕ್ಕೆ ಅಲ್ಲಿ ಯಾರೂ ಇರಲಿಲ್ಲ. ಆದ್ದರಿಂದ ... ಅಲಂಕಾರ ಮಾಡಿಕೊಂಡು ಅವಳ ಪತಿಯ ಚಿತೆಯಲ್ಲಿ ಬಿದ್ದು ಸಹಗಮನ ಮಾಡಿಕೊಂಡಳು. ಸುತ್ತಲು ಕೂಡಿದ್ದ ಸ್ತ್ರೀಪುರುಷರು ... ಯನ್ನು ತಡೆದರೆ ... ಭಯ ... ತಟ್ಟುವದೆಂದು, ಅವಳ ಬೇಕಿದ್ದಂತೆ ಆದ್ದರಿಂದ ... ಅವಳ ಈ ಸಹಗಮನದಂಥ ಪವಿತ್ರ ಕಾರ್ಯವನ್ನು ನೋಡಿ ಪುಣ್ಯಕಟ್ಟಿಕೊಂಡರು

★

ಪಟವಾರಿ ಎಂಬಲ್ಲಿ ಒಬ್ಬ ಹುಡುಗನು ಒಬ್ಬ ಹುಡುಗಿಯ ಮೇಲೆ ಮೋಹಿತನಾಗಿದ್ದ ಇಬ್ಬರೂ ಅವಿವಾಹಿತರಾಗಿದ್ದರು. ಇಬ್ಬರೂ ವಿವಾಹವಾಗುವ ಇಚ್ಛೆಯುಳ್ಳವರಾಗಿದ್ದರು ಆದರೆ ನಡುವೆ ಇನ್ನೊಂದು ಪ್ರಸಂಗ ನಡೆಯಿತು ಹುಡುಗಿ-ಹುಡುಗರೊಳಗೆ ಪ್ರೇಮ ಸಂಬಂಧವಿರುವದೆಂದ ಕೇಳಿದ ಹುಡುಗಿಯ ಅಣ್ಣನು ಹುಡುಗನ ಅಕೃತ್ಯವನ್ನು ತೆಗಳಿ ಅವನನ್ನು ಬೈದು ಭಂಗಿಸಿದ ಹುಡುಗನ ಹೃದಯವು ನೊಂದು ಬೆಂದಿತು ಅವನು ವಿಚಾರಗೆಟ್ಟ ಉದ್ಭ್ರಾಂತನಾದ ಹೇಗೋ ಮಾಡಿ ತಂದೆಯ ರಿವಾಲ್ವರನ್ನು ಕದ್ದು ತಂದು ಮೊದಲು ಹುಡುಗಿಯ ಅಣ್ಣನನ್ನು ತಟ್ಟಿಟ್ಟು, ಆ ಮೇಲೆ ತನ್ನನ್ನು ತಾನೇ ಸುಟ್ಟಿಟ್ಟುಕೊಂಡು ಸತ್ತುಹೋದ

★

ಒಂದೂರಿನಿಂದ ಹೊಲೆಯರ ಒಂದು ಮದುವೆ ದಿಬ್ಬಣ ಬರುತ್ತಾ ಇತ್ತು. ದಿಬ್ಬಣವಿನ್ನು ಉಚ್ಚವರ್ಣದವರ ಮದುವೆ ದಿಬ್ಬಣವನ್ನು ನಾಚಿಸುವಂತಿತ್ತು ಇದನ್ನು ಕಂಡು ಉಚ್ಚವರ್ಣದವರ ಹೊಟ್ಟೆಯಿಂದ ಉರಿಯೇಳತೊಡಗಿತು ಅವರ ಹಲ್ಲುಗಳು ಕಟಕಟ ಕಡಿದುವು ನೂರಾರು ಮಂದಿ ಒಟ್ಟುಕೂಡಿ ದಿಬ್ಬಣ ಮುಂದೆ ಹೋಗಕೂಡದೆಂದು ಅಟಕಾಯಿಸಿದರು ಹೊಲೆಯರು ಅಸ್ಪೃಶ್ಯರಾದರೂ ಅವರ ಮೈಮೇಲೆ ಬೀಳಲಿಕ್ಕೆ ಮುಂದಾದರು ಮುಷ್ಟಾಮುಷ್ಟಿ, ಕೇಶಾಕೇಶಿಗೆ ಆರಂಭವಾಯಿತು ಅಷ್ಟರಲ್ಲಿ ಈ ಸುದ್ದಿ ಪೋಲೀಸರಿಗೆ ಮುಟ್ಟಿ ಅವರು ಎಲ್ಲವನ್ನು ಶಾಂತಮಾಡಿ ದಿಬ್ಬಣ ಮುಂದಕ್ಕೆ ಹೋಗಬಿಟ್ಟರು

ಹೊಲೆಯರಿಗೆ ಬ್ರಾಹ್ಮಣರನ್ನು ನಾಚಿಸುವಂತೆ ದಿಬ್ಬಣ ಕೊಂಡುಹೋಗುವ ಅಧಿಕಾರವನ್ನು ಯಾವ ಶಾಸ್ತ್ರವೂ ಕೊಟ್ಟಿರುವದಿಲ್ಲವಾ ಬ್ರಾಹ್ಮಣರ ದೂರು! ನಿಜ!

ದೊಡ್ಡ ಉಪದೇಶಿಯೆಂದೂ, ಅನೇಕ ಚಮತ್ಕಾರಗಳನ್ನು ಮಾಡಿ ತೋರಿಸುವ ವಿಶೇಷ ವ್ಯಕ್ತಿಯೆಂದೂ ಪ್ರಖ್ಯಾತನಾಗಿದ್ದನು. ಆದರೂ ಕೂಡ ಅವನ ಕಾಲದ ಪ್ರಸಿದ್ಧ ಲೇಖಕರಾರೂ ಅವನ ವಿಷಯವಾಗಿ ಏನನ್ನೂ ಬರೆದಿರಲಿಲ್ಲವೆಂಬ ಕಾರಣದಿಂದ, ಯೇಸುಸ್ವಾಮಿಯು ನಿಜವಾಗಿಯೂ ಬ್ರಹ್ಮಸೃಷ್ಟಿಯೇ ಅಥವಾ ಕಲ್ಪಿತ ವ್ಯಕ್ತಿಯೇ ಎಂದು ಸ್ವತಂತ್ರ ವಿಚಾರಿಗಳು ಪ್ರಶ್ನಿಸಹತ್ತಿರುವರು. ಯೇಸು ಹುಟ್ಟಿಯೇ ಇರಲಿಲ್ಲ. ಮತಾಚಾರ್ಯರು ತಮ್ಮ ಅನುಯಾಯಿಗಳ ಪ್ರೀತಿ ಅನುರಾಗಗಳನ್ನು ಸಂಪಾದಿಸುವುದಕ್ಕೋಸ್ಕರ ಯೇಸುವನ್ನು ಒಬ್ಬ ಕಲ್ಪನಾಲೋಕದಲ್ಲಿ ಸೃಷ್ಟಿಸಿಕೊಂಡು ಅವನ ಹೆಸರಲ್ಲಿ ಕ್ರೈಸ್ತಮತ ಪ್ರಚಾರವನ್ನು ಮಾಡಿದರು ಎಂದು ಹೇಳುವ ಕೆಲವು ಜನರು ಈಗಲೂ ಇದ್ದಾರೆ. ಆದರೆ ಹೀಗೆ ಸಂದೇಹಪಡುವ ಜನರಿಗೆ ಡಾಕ್ಟರ ಆರ್ಥರ ಆರ್ ಎಸ್ ರಾಯ್, ಪಿ ಎಚ್ ಡಿ, ಡಿ ಲಿಟ್ ಅವರು ಕೈಜರೀ-ಹಿಂದ್ ಪತ್ರಿಕೆಯಲ್ಲಿ ಒಂದು ಲೇಖ ಬರೆದು ಸಂದೇಹನಿವಾರಣೆ ಮಾಡಲಿಕ್ಕೆ ಪ್ರಯತ್ನಿಸಿದ್ದಾರೆ.

ಯೇಸುಸ್ವಾಮಿಯ ಚರಿತ್ರವನ್ನು ಜೋಸೇಫ ಮತ್ತು ಪಿಲಾತ ಎಂಬಿಬ್ಬ ಲೇಖಕರು ಬರೆದಿರುತ್ತಾರೆ. ಜೋಸೇಫನು ಯೇಸುವಿನ ಸ್ವರ್ಗಾರೋಹಣವಾದ ಏಳು ವರ್ಷಗಳ ಅನಂತರ ಹುಟ್ಟಿದ್ದನು. ಆದರೆ ಪಿಲಾತನು ಆತನ ಸಮಕಾಲೀನನಾಗಿದ್ದನು. ಯೇಸುವಿಗೆ ನ್ಯಾಯದಂಡನೆಯನ್ನು ಕೊಟ್ಟ ನ್ಯಾಯಾಧಿಪತಿ ಕೂಡಲೂ ಇರುತ್ತಿತ್ತು' ಅದನ್ನು ಅವನು ನಜರೇನರು ಒಪ್ಪಿಕೊಳ್ಳುವ ಪ್ರಕಾರ ಪಾಲಿಸಿಕೊಳ್ಳುತ್ತಿದ್ದನು. ಸರಳ ದೃಷ್ಟಿ ಆದರೆ ಗಂಭೀರ ನಡೆ. ಯಾಕೆಂದರೆ ಅವನು ನಾನಾ ಬಗೆಯ ಚಮತ್ಕಾರಗಳನ್ನೂ ಪವಾಡಗಳನ್ನೂ ಮಾಡಿ ತೋರಿಸುವವನಾಗಿದ್ದನು. ಅದೇನೋ ಒಂದು ಅದೃಶ್ಯ ಶಕ್ತಿಯ ಬಲದಿಂದ ಅವನು ಹಾಗೆ ಮಾಡಬಲ್ಲವನಾಗಿದ್ದನು. ಅವನ ಹೆಸರು ಯೇಸು ಎಂದಾಗಿತ್ತು. ಆದರೆ ಜನರು ಅವನನ್ನು ಸ್ವಾಮಿ ಎಂದು ಕರೆಯುತ್ತಿದ್ದರು. ಸಭ್ಯ ಜನರು ಅವನನ್ನು ಒಬ್ಬ ಉಪಕಾರಿ ಮನುಷ್ಯ ಎಂದು ತಿಳಿಯುತ್ತಿದ್ದರು. ಆದರೆ ಕೆಲವು ಜನರು ಅವನನ್ನು ಲೋಕೋದ್ಧಾರಕನಾಗಿ ಬಂದ ದೇವರ ಮಗನೆಂದೂ ಕರೆಯುತ್ತಿದ್ದರು'' ಹೀಗೆ ಜೋಸೇಫನು ತಾನು ಬರೆದ ಚರಿತ್ರೆಯಲ್ಲಿ ಯೇಸುವಿನ ವರ್ಣನೆ ಮಾಡಿದ್ದಾನೆ.

ಪಿಲಾತನು ಯೇಸುವಿನ ಸಮಕಾಲೀನನಾಗಿದ್ದನು. ಅವನು ಬರೆದುದರಲ್ಲಿ ಸತ್ಯಾಂಶವು ಹೆಚ್ಚಿಗೆ ಅಡಕವಾಗಿರಬೇಕು. ಆದರೆ ಕೆಲವು ಸಾಮಾನ್ಯ ಸಂಗತಿಗಳನ್ನು ಬಿಟ್ಟರೆ ಜೋಸೇಫನು ಬರೆದಿರುವುದರಲ್ಲಿಯೂ ಅವನು ಬರೆದಿರುವುದರಲ್ಲಿಯೂ ವಿಶೇಷ ಅಂತರವು ಕಂಡುಬರುವುದಿಲ್ಲ. ಮುಖ್ಯ ಮುಖ್ಯ ವಿಷಯಗಳಲ್ಲಿ ಇಬ್ಬರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಪಿಲಾತನು ಬರೆದ ಕೆಲವು ವರ್ಷಗಳ ಬಳಿಕ ಜೋಸೇಫನು ಮುಂದಿಯ ಬಾಯಲ್ಲಿದ್ದ ಮಾತುಗಳನ್ನೇ ಎತ್ತಿಕೊಂಡು ಅವನನ್ನು ಸಮರ್ಥಿಸಿ ಬರೆದಿರುವನೆಂಬುದರಿಂದ, ಯೇಸುಸ್ವಾಮಿ, ಕಲ್ಪಿತ ವ್ಯಕ್ತಿ ಅಲ್ಲ, ಅವನು ನಿಜಕ್ಕೂ ಜೀವಿಸಿ ಇದ್ದ ಒಬ್ಬ ಮನುಷ್ಯ ಎಂಬುದು ನಿರ್ಧಾರವಾಗುತ್ತದೆ.

ಆದರೆ ಯೇಸುಸ್ವಾಮಿಯಂಥ ಮಹಾಪುರುಷನ ವರ್ಣನೆಯನ್ನು ಇವರಿಬ್ಬರಲ್ಲದೆ ಬೇರೆ ಯಾರೂ ಮಾಡಿರುವದಿಲ್ಲವೆಂಬುದು ವಿಚಿತ್ರವೇ ಸರಿ. ಪರಂತು ಕಾನ್ಸ್ಟಂಟಿನೋಪಲ ಮತ್ತು ಅಲೆಗ್ಝಾಂಡ್ರಿಯ ಕ್ರೈಸ್ತಸಾಹಿತ್ಯಭಂಡಾರವು ನಾಶವಾಗಿ ಹೋಗಿದೆ. ಅದು ಉಪಲಬ್ಧವಾಗಿದ್ದರೆ ಯೇಸುಸ್ವಾಮಿಯ ಕುರಿತು ಇನ್ನು ಕೆಲವು ಇತಿಹಾಸಗಳನ್ನು ನಾವು ನೋಡಬಹುದಾಗಿತ್ತೋ ಏನೋ?

### ಯೇಸುವಿನ ವರ್ಣಚಿತ್ರ

ಇಂಥ ಇತಿಹಾಸಗಳು ಇದ್ದಿರಬಹುದೆಂದು ಊಹಿಸಲಿಕ್ಕೆ ಅವಕಾಶವೂ ಇದೆ. ಯೇಸುವಿನ ಮರಣಾನಂತರ ಪ್ರಾಯಶಃ ಒಂದೆರಡು ಶತಮಾನಗಳು ಕಳೆದ ಬಳಿಕ ಬಿಡಿಸಿದ ಯೇಸುವಿನ ಒಂದು ವರ್ಣಚಿತ್ರವು ರೋಮಿನ ವೆಟಿಕನ್ ನಗರದಲ್ಲಿ ಇರುವುದಾಗಿ ಶ್ರೀ. ಯಂ ಯಸ್ ರಾಮಸ್ವಾಮಿ ಅಯ್ಯಂಗರು ಹೇಳಿದ್ದಾರೆ. ಆ ವರ್ಣಚಿತ್ರವನ್ನೂ, ಆ ಕಾಲದಲ್ಲಿ ಉಪಲಬ್ಧವಾಗಿರುವ ಇತಿಹಾಸವನ್ನು ಓದಿ, ಅದರಲ್ಲಿ ಯೇಸುವಿನ ವರ್ಣನೆ ಮಾಡಿರುವ ಪ್ರಕಾರವೇ ಬರೆದಿರಬೇಕು. ಯಾಕೆಂದರೆ ದಂತಕತೆಯನ್ನು ಕೇಳಿ ಚಿತ್ರ ಬಿಡಿಸುವದಕ್ಕಿಂತ ಇತಿಹಾಸವನ್ನು ಓದಿ ಚಿತ್ರ ಬಿಡಿಸುವುದು ಸುಲಭವಾಗಿದೆ ಎಂಬುದು ಅನುಭವಕ್ಕೆ ಬರುವ ವಿಷಯವಾಗಿದೆ. ಜನರ ಹೇಳಿದುದನ್ನು ಕೇಳಿ ಬೇರೆ ಬೇರೆ ಪುಸ್ತಕಗಳಲ್ಲಿ ಬರೆದಿರುವುದನ್ನು ಓದಿ ಚಿತ್ರಗಾರನು ಯೇಸುವಿನ ವರ್ಣಚಿತ್ರವನ್ನು ಬಿಡಿಸಿದ್ದಾನೆ ಎಂಬುದರಲ್ಲಿ ಯಾವ ಸಂದೇಹವೂ ಇರಲಿಕ್ಕೆ ಎಡೆಯಿಲ್ಲ.

ಆದರೆ ವೆಟಿಕನ್ ನಗರದಲ್ಲಿರುವ ಆ ಚಿತ್ರವನ್ನು ನೋಡಿದಾಗ ಒಬ್ಬನು ಆಶ್ಚರ್ಯಸಾಗರದಲ್ಲಿ ಮುಳುಗಿ ಹೋಗಬಹುದು. ಚಿತ್ರಗಾರನು ಯೇಸುವನ್ನು ಒಬ್ಬ ಹಿಂದೂ ಯೋಗಿಯ ಹಾಗೆ ಚಿತ್ರಿಸಿದ್ದಾನೆ. ಆ ಚಿತ್ರದಲ್ಲಿ ಯೇಸು ಧೋತಿ ಉಟ್ಟುಕೊಂಡಿದ್ದಾನೆ. ಅವನ ಕೊರಳಿಗೆ ಯಜ್ಞೋಪವೀತವಿದೆ, ಹಣೆಯಲ್ಲಿ ಭಸ್ಮವಿದೆ, ತಲೆಯಲ್ಲಿ ಜಟೆಯಿದೆ. ವೇಷ ಭೂಷಣಗಳೆಲ್ಲ ಹಿಂದೂಯೋಗಿಯ ವೇಷಭೂಷಣಗಳನ್ನು ಹೋಲುತ್ತವೆ.

### ಯೇಸು ಇಂಡಿಯಕ್ಕೆ ಬಂದಿದ್ದನೆ?

ಯೇಸುಸ್ವಾಮಿಯು ಹಿಂದೂದೇಶಕ್ಕೆ ಬಂದಿರಲಿಲ್ಲವಾದರೆ ಅವನನ್ನು ಹಿಂದೂಯೋಗಿಯಂತೆ ಚಿತ್ರಿಸುವುದು ಹೇಗೆ ಸಾಧ್ಯವಾಗುತ್ತಿತ್ತು? ಆದರೆ ಈಚೆಗೆ ಆಗಿರುವ ಶೋಧಗಳಿಂದ ಕಂಡುಬರುವುದೇನೆಂದರೆ ಯೇಸುಸ್ವಾಮಿಯು ಒಬ್ಬ ಮಹಾಪುರುಷನಾಗಿದ್ದನು. ಅವನು ನಮ್ಮ ಭರತಖಂಡಕ್ಕೆ ಬಂದು ಕೆಲವು ವರ್ಷ ಕಾಲ ಉಳಕೊಂಡಿದ್ದನು. ಇಲ್ಲಿಯ ಋಷಿಮುನಿಗಳಿಂದ ಯೋಗವಿದ್ಯೆ, ಧರ್ಮಾಧರ್ಮ ವಿಚಾರ ಮೊದಲಾದವನ್ನು ಕಲಿತುಕೊಂಡು ಸ್ವದೇಶಕ್ಕೆ ಮರಳಿದ್ದನು.

ಅಂಧಶ್ರದ್ಧೆಯ ಮತಾನುಯಾಯಿಗಳು ಬೇಕಾದರೆ ಶೋಧಕರು ಹೇಳಿದ ಮಾತುಗಳನ್ನು ಒಪ್ಪದೆ ಇರಲಿ; ವಿಚಾರಿಗಳಾದ ಸತ್ಯಪ್ರಿಯರು, ಮಾತ್ರ ಇತಿಹಾಸದಿಂದ ಪ್ರತ್ಯಕ್ಷವಾಗುವ ಈ ಮಾತುಗಳನ್ನು ಒಪ್ಪದೆ ಇರಲಾರರು.


## ದ್ರಾವಕಾಧಿಕ್ಯ.

ಉದರದೊಳಗೆ ದ್ರಾವಕಾಧಿಕ್ಯವಾಗುವುದು ಆಧುನಿಕ ಕಾಲದ ಒಂದು ದಂಡನೆಯು—ಕಾಲನಿಯಮವಿಲ್ಲದ ಊಟಗಳು, ಅಜೀರ್ಣದಿಂದ ಆಹಾರವು ಕೊಳೆಯುವುದು, ಅಯೋಗ್ಯ ಆಹಾರ, ಮನೋವ್ಯಥೆ, ಇವೇ ಮೊದಲಾದವುಗಳು ಅದರ ಕಾರಣಗಳು. ಕಾರಣ ಯಾವುದೇ ಇರಲಿ ಅದನ್ನು ಖಂಡಿತವಾಗಿಯೂ ಗುಣಪಡಿಸಬಹುದು.

ದ್ರಾವಕಾಧಿಕ್ಯವನ್ನು ಗುಣಪಡಿಸಲು, ನೀವು ಅಲ್ಕೇಲಿ ಪದಾರ್ಥವನ್ನು ಸೇವಿಸಬೇಕು. ಅದು ದ್ರಾವಕ ವಿರೋಧಿಯು. ಮಾತ್ರ ಗುಣಗಳುಳ್ಳ, [illegible] ಹೆಚ್ಚಾಗಿ ಉಪಯೋಗಿಸಲ್ಪಡುವ, ಈ ಅಲ್ಕೇಲಿ ಹುಡಿಯೆಂದರೆ, ಅದು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ [illegible] ಬಾಟಲಿಗಳ ಮೇಲೂ [illegible] ಪ್ಯಾಲು ಪೆಟ್ಟಿಗೆಯ ಮೇಲೆ ರಕ್ಷಣೆಯ ಬಗ್ಗೆ ಒಂದು ಕೆಂಪು ಮುದ್ರೆ ಇರುವುದು. ಒಂದು ಚಮಚೆಯಷ್ಟು ಈ ಹುಡಿಯನ್ನು ನೀರಿನೊಡನೆ ಭೋಜನದ ತರುವಾಯ ಸೇವಿಸಿದರೆ ಆಗ ದ್ರಾವಕಾಧಿಕ್ಯದ ಪರಿಣಾಮ ಕಾರಿಯಾಗುವ ಸಮಯವಾದುದರಿಂದ ಅದರಿಂದ ಮಹಾ ಉಪಕಾರವು ದೊರಕುವುದು. ಉದರದೊಳಗಿನ ಒಂದು ತರದ ಹಾಳುಭಾವವನ್ನು ತೆಗೆದು ಸಂತೋಷದ ಭಾವನೆಯನ್ನುಂಟುಮಾಡುವುದು. ನಿಮ್ಮ ಆಹಾರವು ಸರಿಯಾಗಿ ಜೀರ್ಣವಾಗುತ್ತದೆ. ಅದು ಕೊಳೆಯುವುದು ನಿಂತದು ನಿಮಗೆ ತಿಳಿಯುವುದು.

ದ್ರಾವಕಾಧಿಕ್ಯವನ್ನು ಕೂಡಲೆ ಗುಣಪಡಿಸಬೇಕು. ಅದು ಉದರದ ಅನೇಕ ಮಹಾ ರೋಗಗಳಿಗೆ ತಳಹದಿಯು. ಅದರ ನಿರ್ಲಕ್ಷ್ಯವಾದರೆ ಉದರದೊಳಗೆ ಹುಣ್ಣು ಇತ್ಯಾದಿಗಳು ಉಂಟಾಗುವುವು. ಮೆಕ್ಲೀನ್ ಪೌಡರು ಎಷ್ಟರ ಮಟ್ಟಿಗೆ ಗುಣಕಾರಿಯೆಂದರೆ ಅದರಿಂದ ಕರುಳುಗಳ ಮೇಲೆ ನಡೆಯಬೇಕಾದ ಶಸ್ತ್ರಚಿಕಿತ್ಸೆಯನ್ನು ತಪ್ಪಿಸಲಾಗಿದೆ. ಆದರೂ ಆ ಮಹಾ ವ್ಯಾಧಿಗಳು ಉಂಟಾಗುವ ಮೊದಲೆ, ಮೆಕ್ಲೀನನ್ನು ಕ್ರಮವಾಗಿ ಸೇವಿಸಿ, ನಿಮ್ಮ ರಕ್ಷಣೆಯನ್ನು ಮಾಡಿಕೊಳ್ಳುವುದು ಉತ್ತಮ.

Alex. C. Maclean

ಎಂಒ ಸಹಿಯು ಮತ್ತು, ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿರಿ. ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ.

ಇಂತಹ ನಮೂನೆಯು ಕಡಿಮೆ ದರದ ಪರಿಕೆಯ ಪ್ಯಾಲನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲಿ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಜೆ ಎಲ್ ಮೊರಿಸನ್, ಸನ್ ಎಂಡ್ ಜೋನ್ಸ್
(ಇಂಡಿಯಾ) ಲಿಮಿಟೆಡ್
ಸ್ಟೇಂಡಾರ್ಡ್ ಬಿಲ್ಡಿಂಗ್, ಹೊರ್ನಬೈ ರೋಡ್ ಮುಂಬಯಿ

S. No 66

# ಅದರಮೂಲಕವಾಗಿ ನೋಡಬಹುದಾದಷ್ಟು ಶುದ್ಧವಾಗಿದೆ.

ಪೇಯರ್ಸ್ ಸೋಪಿನ ಪ್ರತಿಯೊಂದು ಬಿಲ್ಲೆ ತನ್ನ ಪಾರದರ್ಶಕತೆಯ ಗುರುತನ್ನು ಹಾಗೇ ಇಟ್ಟುಕೊಂಡಿದೆ. ನೀವು ಅದರ ಮೂಲಕವಾಗಿ ನೋಡಬಹುದಾದಷ್ಟು ಅದು ಸ್ವಚ್ಛವಾಗಿದೆ. ಅಷ್ಟು ಶುದ್ಧವಾದ ಸೋಪನ್ನು ಪೇಯರ್ಸ್ ಪ್ರೊಸೆಸ್ ಎಂದರೆ ಎರಡುಸಲ ಶುದ್ಧ ಮಾಡುವ ವಿಶೇಷ ಕ್ರಮದಿಂದಮಾತ್ರವೇ ತಯಾರಿಸಬಹುದು. ಪೇಯರ್ಸನ್ನು ನಿಮ್ಮ ಸೋಪನ್ನಾಗಿ ಉಪಯೋಗಿಸಿರಿ. ಅದರ ಆಶ್ಚರ್ಯಕರವಾದ ದೇಹಪೋಷಕ ಕಾರ್ಯದಿಂದ ನಿಮ್ಮ ಚರ್ಮದಲ್ಲಿ ನವಚೇತನವು ಉತ್ಪತ್ತಿಯಾಗಿ, ದೇಹವು ನವ ಸೌಂದರ್ಯವನ್ನು ಪಡೆಯುವುದನ್ನು ನಿರೀಕ್ಷಿಸಿರಿ.

Pears

ದೇಹಕಾಂತಿಯನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದು.

I.T.G. 1664   A. & F. PEARS LTD   ISLEWORTH   ENGLAND

KANARESE

# 'ಮದ್ಯನಿಷೇಧ ಮಾಡಬಾರದು!'

## ಎನ್ನುವ ಜನರು ಇದನ್ನು ಓದಬೇಕು.

# ಮದ್ಯಪಾಯಿಗಳ ನಿತ್ಯಜೀವನದ ಸತ್ಯಕತೆಗಳು!

ಅವರಿಬ್ಬರು ಎರಡು ಪತ್ರಿಕೆಗಳ ಸಂಪಾದಕರಾಗಿದ್ದರು. ಒಬ್ಬೊಬ್ಬರಾಗಿ ಇಬ್ಬರಿಗೂ ಕಲಿಜೆಯು ವ್ರಣವಾಗಿದ್ದಿತು. ಒಬ್ಬರಾದ ಮೇಲೆ ಒಬ್ಬರಂತೆ ಇಬ್ಬರೂ ತಮ್ಮ ಉದ್ಯೋಗಕ್ಕೆ ಎಳ್ಳುನೀರು ಬಿಡಬೇಕಾಯಿತು ಪಾಪ! ಅವರಿಬ್ಬರೂ ಆಸ್ಪತ್ರೆಯನ್ನು ಸೇರಿದರು ಅವರ ಮೇಲೆ ಶಸ್ತ್ರಚಿಕಿತ್ಸೆ ನಡೆಯಿತು. ಅದೇನೋ ಸಂಪೂರ್ಣ ಯಶಸ್ವಿಯಾಗಿದ್ದಿತು ಚಿಕಿತ್ಸೆ ಮುಗಿದ ಮೇಲೆ ಅವರಿಬ್ಬರು 'ಬದಲಾವಣೆ'ಗಾಗಿ ಸಮುದ್ರ ಪ್ರಯಾಣಕ್ಕೆ ಹೊರಟರು ಅದು ಪೂರ್ಣ ಮುಗಿಯಬೇಕಾದರೆಯೇ ಪಾಪದ ಅವರು ಪುನಃ ಅಸ್ವಸ್ಥ ಬಿದ್ದು ತೀರಿಕೊಂಡರು* ವರೀಕ್ಷಿಸಿ—ನೋಡಿದಾಗ, ಅವರಿಬ್ಬರೂ ದೊಡ್ಡ ಕುಡುಕರಾಗಿದ್ದರೆಂದು ತಿಳಿದುಬಂದಿತು

★ ★

ಒಂದು ದಿನ ಸೈನ್ಯದ ಒಬ್ಬ ಸಿಪಾಯಿ ಇನ್ನೊಬ್ಬನನ್ನು ಗುಂಡಿಟ್ಟು ಕೊಂದ. ವಿಚಾ... ಯಿಗೆ ಮರಣದಂಡನೆ ವಿಧಿಸಲ್ಪಟ್ಟಿತು ಫಾಸಿಯಾಗುವ ಮೊದಲು ಅವನು, ತನ್ನ ಇತರ ಸಿಪಾಯಿಬಂಧುಗಳನ್ನು ಉದ್ದೇಶಿಸಿ—'ಸಹೋದರರೆ! ಜೀವನದಲ್ಲಿ ಯಾವ ಕಾಲಕ್ಕೂ ಮದ್ಯಪಾಯಿಗಳಾಗಬೇಡಿ ಆ ದುರ್ವ್ಯಸನಕ್ಕೆ ಬಲಿಬಿದ್ದುದರಿಂದಲೇ ನಾನಿಂದು ಫಾಸಿಗೆ ಹೋಗಬೇಕಾಯಿತು ನನ್ನನ್ನು ನೋಡಿಯಾದರೂ ನೀವು ಕುಡಿಯುವುದನ್ನು ಬಿಟ್ಟುಬಿಡಿ' ಎಂದು ಚಿಕ್ಕದೊಂದು ಭಾಷಣಮಾಡಿ ಗಲ್ಲಕ್ಕೇರಿದನು ಅವನ ದುರ್ಮರಣ ನೋಡಿ ಅನೇಕ ಮಂದಿ ಸಂತಾಪಗೊಂಡರು. ಆದರೇನು?

★ ★

ಬ್ರೌನನು ಆಂಗ್ಲೋ ಇಂಡಿಯನ ತರುಣ ತಿಂಗಳಿಗೆ ೨೦ ರೂಪಾಯಿ ಸಂಪಾದನೆಯಾಗುತ್ತಿದ್ದಿತು ಆದರೆ ಅವನ ತಾಯಿ ವಿಧವೆಯಾಗಿದ್ದಳು ಕುಟುಂಬದ ಸಾಕಣೆಯ ಭಾರವು ಅವಳ ಮೇಲಿದ್ದಿತು ಮಗನ ಅಷ್ಟು ಸ್ವಲ್ಪ ಸಂಪಾದನೆಯಿಂದ ದಿನಕಳೆಯುವುದು ಕಷ್ಟವೆಂದು ಅವಳಿಗೆ ತೋರಿತು ಆದಕಾರಣ ರೈಲು ಕಂಪೆನಿಯ ಟ್ರಾಫಿಕ್ ಮೆನೇಜರನೊಡನೆ ಮಾತನಾಡಿ ಬ್ರೌನನಿಗೆ ೬೦ ರೂಪಾಯಿಗಳ ಗಾರ್ಡನ ಕೆಲಸವನ್ನು ದೊರಕಿಸಿಕೊಟ್ಟಳು

೪೦, ೪೫ ವರ್ಷಗಳು ಕಳೆದುಹೋದುವು ಅದೇ ಬ್ರೌನ ಅದೇ ಕೆಲಸದ ಮೇಲಿದ್ದ ಆದರೆ ಹಿಂದಿನ ಬ್ರೌನನಿಗೂ ಈಗಿನ ಬ್ರೌನನಿಗೂ ಎಷ್ಟು ವ್ಯತ್ಯಾಸ! 'ಯಾಕಪ್ಪಾ, ಹೀಗಾಗಿದ್ದಿ?' ಎಂದು ಕೇಳಿದೆ ಅವನ ಮುಖ ಬಿಳುಪೇರಿದ್ದಿತು ಕಣ್ಣುಗಳು ಕಾಂತಿಹೀನವಾಗಿದ್ದುವು ಶರೀರವು ಬಹು ಬಡಕಲಾಗಿ ಈಗಲೋ ಆಗಲೋ ಸಾಯಲಿಕ್ಕೆಂಬಂತೆ ಆಗಿದ್ದನು. ಅವನನ್ನು ನೋಡಿ ಎದೆ ಧಸಕ್ಕೆನ್ನುತ್ತಿದ್ದಿತು ಅವನು 'ಸ್ವಾಮೀ, ಎಲ್ಲಾ ನನ್ನ ಕರ್ಮಫಲ' ಕಲಿಜೆಯಲ್ಲಿ ವ್ರಣವಾಗಿದೆ ಬದುಕುವ ಆಶೆಯಿಲ್ಲ' ಎಂದು ನಿರಾಶಸೂಚಕ ಉತ್ತರವನ್ನು ಕೊಟ್ಟನು. ಮಿತ್ರರು ಒತ್ತಾಯಮಾಡಿದುದರಿಂದ ಆಸ್ಪತ್ರೆಗೆ ಹೋದ ಕಲಿಜೆಯ ವ್ರಣವಾದವರು ಎಷ್ಟೋ ಮಂದಿ ಶಸ್ತ್ರಚಿಕಿತ್ಸೆಯಿಂದ ಗುಣವಾಗಿದ್ದಾರೆ ಬ್ರೌನನು ಮಾತ್ರ ಚಿಕಿತ್ಸೆಯಾಗುತ್ತಿರುವಾಗಲೇ ಸತ್ತುಹೋದ 'ಅಯ್ಯೋ, ಕುಡಿಯುವುದಿಲ್ಲವಾಗಿದ್ದರೆ ಇನ್ನೂ ಕೆಲವು ಕಾಲ ಬದುಕಿರಬಹುದಾಗಿತ್ತು' ಎಂದು ಕಣ್ಣೀರು ಸುರಿಯುತ್ತಲಿದ್ದವನು ಪ್ರಾಣಕೊಟ್ಟ ಎಂದು ಆಸ್ಪತ್ರೆಯ ಡಾಕ್ಟರರು ಹೇಳಿದರೆ, ಪರಂತು ಮಂದಿಗೆ ಬುದ್ಧಿ ಬರಬೇಕಲ್ಲ?

★ ★

ಬೆರ್ನಾರ ಪೆನ್ಶನ ಪಡೆದ ಒಬ್ಬ ಪೋಲೀಸ ಅಧಿಕಾರಿ. ಬಾಗ್ಲೆಯ ಠಾಕೂರ ಸಾಹೇಬರು ಅವನ ಜೀವದ ಗೆಳೆಯರಾಗಿದ್ದರು ಮದ್ಯಪಾನದ ದುರ್ವ್ಯಸನವು ಅವರಿಬ್ಬರ ಸ್ನೇಹಕ್ಕೆ ಗಂಟುಹಾಕಿದ್ದಿತು. ಬೆರ್ನಾರ ಒಳ್ಳೆಯ ಸಭ್ಯಗೃಹಸ್ಥ, ಸಾಮಾಜಿಕ ಜೀವಿ, ಕುಡಿಯುವ ದೊಂದುದುರ್ವ್ಯಸನಕ್ಕೆಬಲಿಯಾಗಿರಲಿಲ್ಲವಾದರೆ, ಅವನಿಗೆ ದೇವತೆಯಂತಲ್ಲವಾದರೆ ಮನುಷ್ಯನಂತಾದರೂ ಸುಖದಿಂದ ಬಾಳಿಕೊಂಡಿರಬಹುದಿತ್ತು

ಒಂದು ದಿನ ರಾತ್ರಿ ಠಾಕೂರ ಸಾಹೇಬರ ಅರಮನೆ ಉದ್ಯಾನದಲ್ಲಿ ದೊಡ್ಡದೊಂದು ಮಿತ್ರಭೋಜನವು ನಡೆದಿತ್ತು ಬೆರ್ನಾರನೂ ಆಮಂತ್ರಿತನಾಗಿದ್ದ ಭೋಜನ ಮುಗಿದ ಮೇಲೆ ಉದ್ಯಾನದಲ್ಲಿ ಅವರಿಬ್ಬರೇ ಉಳಿದರು ಮಧ್ಯರಾತ್ರಿ ನಿದ್ದೆ ಬರುವ ತನಕ ಒಂದಾದ ಮೇಲೆ ಒಂದರಂತೆ ಹತ್ತಿಪ್ಪತ್ತು ಬಾಟಲಿ ಬ್ರಾಂದಿ ವ್ಹಿಸ್ಕಿ, ವ್ಯಾನ್ ಕುಡಿಯುತ್ತ ಇದ್ದರು ಠಾಕೂರ ... ಎದ್ದು ಒಳಗೆ ನಡೆದರು ಬರ್ನಾರ ಒಬ್ಬನೆ ಅಲ್ಲಿ ಅಮಲಿನಿಂದ ನೆಲದ ಮೇಲೆ ಬಿದ್ದುಕೊಂಡಿದ್ದ ಆ ರಾತ್ರಿ ಚೆನ್ನಾಗಿ ಮಂಜು ಬಿದ್ದಿತ್ತು ಬೆಳಗಾತ ಬರ್ನಾರ ಎದ್ದು ಮನೆಗೆ ಹೋದ ಸಾಯಂಕಾಲಕ್ಕೆ ನಿಮೋನಿಯ ಆಯಿತು ಮೂರೇ ಮೂರು ದಿನಗಳ ಅಸ್ವಸ್ಥದಿಂದ ತೀರಿಹೋದ ಬದುಕಿಸಬೇಕೆಂದು ಶತಪ್ರಯತ್ನಗಳಾದುವು ಆದರೆ ನೀರ ಮೇಲಿನ ಹೋಮದಂತೆ ಎಲ್ಲ ವ್ಯರ್ಥವಾಯಿತು.

ಬರ್ನಾರನ ವಿಧವೆ ಅವಳ ಅಕ್ಕನನ್ನು ಆಶ್ರಯಿಸಿದಳು ಮೊದಲೇ ಪತಿವಿಯೋಗದ ದುಃಖವಿದ್ದಿತ. ಅದರ ಮೇಲೆ ಪರರಾಶ್ರಯದ ದುಃಖ ಬಂದು ಬಿದ್ದಿತು ಗಾಯದ ಮೇಲೆ ಬೊಕ್ಕೆ ಎದ್ದಂತಾಯಿತು. ದುಃಖವೇದನೆಗಳನ್ನು ಸಹಿಸುವುದು ಅವಳಿಂದ ಸಾಧ್ಯವಾಗಲಿಲ್ಲ ಕೆಲ ದಿನಗಳಲ್ಲಿ ಅವಳೂ ಗಂಡನ ಹಾದಿ ಹಿಡಿದಳು

★ ★

ಇಗರ್ಜಿಯ ಒಬ್ಬ ಪಾದ್ರಿಗಳಿದ್ದರು ಅವರಿಗೆ ಕುಡಿಯುವುದೆಂದರೆ ಪಂಚಪ್ರಾಣ ಬಾಟಲಿ ತ್ರಿವರ್ಣದ ಮುದ್ರೆ ನೋಡಿದೊಡನೆ ಕನಸಿನಿಂದ ಎದ್ದು ಕೂತುಕೊಳ್ಳುವ ಜೀವಿ ಅದು ಆದರೆ ಆ ಪ್ರದೇಶದಲ್ಲಿ ವಾಂತಿಭೇದಿಯ ಪ್ರಕೋಪ ಆಗಾಗ ಆಗುತ್ತಿದ್ದಿತ ಆದ ಕಾರಣ ಈ ಪಾದ್ರಿಗಳು ತಮ್ಮ ಕ್ಲೋರೊಡ್ಯಾನಿನ ಬಾಟಲಿಯೊಂದನ್ನು ಯಾವಾಗಲೂ ಇಟ್ಟುಕೊಂಡಿರುತ್ತಿದ್ದರು

ಒಂದು ದಿನ ಪಾದ್ರಿಗಳು ಕಾರ್ಯಾರ್ಥಾಂತರದ ಮೇಲೆ ಬೇರೊಂದೂರಿಗೆ ಹೋಗಿದ್ದರು ಹಿಂತಿರುಗುವಾಗ ವಾಂತಿಭೇದಿಯಾಯಿತು ಯಾವ ಯಾವ ಡಾಕ್ಟರರು ಬಂದು ಚಿಕಿತ್ಸೆ ಮಾಡಿದರೂ ಫಲವಾಗಲಿಲ್ಲ ಸದಾಕಾಲಕ್ಕಾಗಿ ಪಾದ್ರಿಗಳು ಇಹಲೋಕ ಜೀವನವನ್ನು ಮುಗಿಸಿದರು

★ ★

ಇಂಗ್ಲೆಂಡಿಗೆ ಹೋಗಿ ಪರೀಕ್ಷೆ ಕೊಟ್ಟು ಬಂದ ಒಬ್ಬ ಡಾಕ್ಟರರಿದ್ದರು ತಮ್ಮ ವೃತ್ತಿಯಿಂದ ಅವರಿಗೆ ನೂರಾರು ರೂಪಾಯಿಗಳ ಸಂಪಾದನೆಯಾಗುತ್ತಿದ್ದಿತು ಆದರೆ ವಿಲಾಯತಿಯಲ್ಲಿದ್ದಾಗ ಅವರು ಮದ್ಯಪಾನದ ದುರ್ವ್ಯಸನಕ್ಕೆ ಬಲಿಯಾಗಿದ್ದರು ಸ್ವದೇಶಕ್ಕೆ ಬಂದ ತರುವಾಯವೂ ಕುಡಿಯುತ್ತಿದ್ದರು

ಅವರಿಗೆ ನಿಮೋನಿಯ ಆಯಿತು. ಅದರಿಂದ ಬದುಕಿದವರು ಎಷ್ಟು ಮಂದಿ ಇಲ್ಲ? ಆದರೆ ಡಾಕ್ಟರರಿಗೆ ದೊಡ್ಡ ದೊಡ್ಡ ಡಾಕ್ಟರರು ಬಂದು ಚಿಕಿತ್ಸೆ ಮಾಡಿದರು ಆದರೆ ಅವರನ್ನು ಬದುಕಿಸಬೇಕೆಂದು ಮಾಡಿದ ಭಗೀರಥ ಪ್ರಯತ್ನಗಳೆಲ್ಲ ವ್ಯರ್ಥವಾದುವು ಅವರು ತಮ್ಮ ಪತ್ನಿಯನ್ನು ವಿಧವೆಯನ್ನಾಗಿ ಮಾಡಿ ಪರಲೋಕಕ್ಕೆ ತೆರಳಿದರು ಅವಳೂ ಮಕ್ಕಳೂ ಅನಾಥರಾದರು

★ ★

ಇವೆಲ್ಲ ಬಡ ಹಿಂದೂದೇಶದಲ್ಲೇ ನಡೆದ ಕತೆಗಳು ಈ ಕರುಣಕತೆಗಳನ್ನು ಓದಿದ ಮೇಲೂ ಮದ್ಯನಿಷೇಧ ಆಗಬಾರದು ಎನ್ನುವವರು ಇದ್ದಾರೇ? ಅದಕ್ಕೋಸ್ಕರವೇ ಮದ್ಯನಿಷೇಧ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಮಂತ್ರಿಮಂಡಲಗಳು ಪ್ರಥಮಸ್ಥಾನವನ್ನು ಕೊಟ್ಟಿವೆ ಈ ಮಂತ್ರಿಮಂಡಲಗಳ ಸತ್ಪ್ರಯತ್ನಗಳು ಸಫಲವಾಗುವಂತೆ ಪ್ರಯತ್ನಿಸುವುದು ಎಲ್ಲರ ಕರ್ತವ್ಯವಾಗಿರುವುದು

---

## NOTICE

The following dates have been fixed by the Canara High school Council for the election of an Old Boy to a seat on the Council.

Nomination papers to reach the Headmaster by registered post or in the custody of one of the proposers by 22-3-1938

Scrutiny & withdrawal by 23-3-193[illegible]

Voting papers to issue on 26-3-193[illegible]

Voting papers to be received by 3 p m on 26-4-193[illegible]

Counting & declaration of results commencing from 3 30 p m on 26-4-1938

Nomination papers will have to be accompanied by a non returnable deposit of Rs 10/ The Voters' Roll may be inspected in the Head master's office during working hours

**Madhava Rao,**
*Manager*

---


# ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

## ಗೊನೊಕಿಲರ್ (ರಿಜಿಸ್ಟರ್ಡ)

ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ದೌರ್ಬಲ್ಯ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

*Sole Manufacturer* **Dr D. N. JASANI,** Vithalbhai Patal Road, BOMBAY 4

### ಜಪಾನು ಯಾರಿಗೂ ಹೆದರುವಂತಿಲ್ಲ

ಲಂಡನ್ ನೆವಾಲ್ ಪೆಕ್ಟನ್ನು ಉಲ್ಲಂಘಿಸಿ ಜಪಾನು ಮಹತ್ತಾದ ಯುದ್ಧ ನೌಕೆಗಳನ್ನು ರಚಿಸುವುದರಲ್ಲಿ ತೊಡಗಿದುದಕ್ಕಾಗಿ ಪ್ರಭುತ್ವದ ಜನಾಂಗಗಳಾದ ಬ್ರಿಟನ್ ಅಮೇರಿಕಾ, ಫ್ರಾನ್ಸ ಜನಾಂಗಗಳು ಪ್ರತಿಕೂಲವಾ ಗರ್ಜನೆಯನ್ನು ಹೊರಡಿಸಿದರಷ್ಟೆ. ಜಪಾನು ಅದರ ಲಕ್ಷವೆ ಮಾಡಲಿಲ್ಲ. ಅವರ ಬೆದರಿಕೆಗೆ ಅವರು ಹೆದರುವ ಹಾಗಿಲ್ಲ ತನ್ನ ಇಚ್ಛಾನುಸಾರ ವರ್ತಿಸುವನೆಂದು, ಜಪಾನಿನ ಉತ್ತರ ಹೊರಟಿರುತ್ತದೆ.



ಚೀನಾದೇಶದ ಪ್ರಸಿದ್ಧ ಸೈನ್ಯದಳ

ದೇಶರಕ್ಷಣೆಯ ಕುರಿತು ಸಮಸ್ತ ಚೀನಾದಲ್ಲಿ ಸ್ಫೂರ್ತಿ ಉಂಟಾಗುವಂತೆ, ಈ ಸೈನ್ಯ ಮಂಡಳವು ಕಾರ್ಯ ನಡೆಯಿಸುತ್ತದೆ.

### ಜರ್ಮನಿಯಲ್ಲಿ ಅಶಾಂತಿ

ಕಳೆದ ವಾರ ಜರ್ಮನಿಯಲ್ಲಿ ಸಂಗ್ರಾಮ ಪಕ್ಷಕ್ಕೂ ನಾಜಿಗಳಿಗೂ ತಿಕ್ಕಾಟ ಉಂಟಾಗಿ ದಂಗೆಯು ನಡೆಯಿತೆಂಬ ವಾರ್ತೆಯು ಹೊರಡಿತ್ತು ಈ ದಂಗೆಯ ದೆಸೆಯಿಂದ ಜರ್ಮನಿಯ ಗಡಿ ಬಾಗಿಲುಗಳೆಲ್ಲಾ ಮುಚ್ಚಲ್ಪಟ್ಟಿದ್ದವಂತೆ ಆದರೆ ದಂಗೆಯ ವಾರ್ತೆಯು ಸುಳ್ಳೆಂದು ಹಿಟ್ಲರನ ಪ್ರಕಟಣೆಯಾಗಿರುತ್ತದೆ ನಿಜವಾದ ವಾರ್ತೆಯು ದೇವರಿಗೇ ಗೊತ್ತು

### ಆಸ್ಟ್ರಿಯಾ ಜರ್ಮನ್ ಒಪ್ಪಂದ

ಮುಸಲೋನಿಯ ಸಹಾನುಭೂತಿಯಿಂದ ಆಸ್ಟ್ರಿಯಾ ಜರ್ಮನ್ ಒಪ್ಪಂದದ ಕುರಿತು ಜರ್ಮನಿ ಅಧಿನಾಯಕ ಹಿಟ್ಲರನಿಗೂ, ಆಸ್ಟ್ರಿಯದ ನಾಯಕರಿಗೂ ದೀರ್ಘ ಸಮಯದ ಮಾತುಕತೆಗಳು ನಡೆದವು ಇದರಿಂದ ಆಸ್ಟ್ರಿಯಾದಲ್ಲಿ ನಾಜಿಗಳ ತಕ್ಕ ಪ್ರಚಾರ ಕಾರ್ಯವನ್ನು ನಿಲ್ಲಿಸಬೇಕೆಂದಾಗಿದೆ ಇದಕ್ಕೆಬದಲಾಗಿ ನಾಜಿಗಳಿಗೆ ಅಲ್ಲಿನ ಶಾಸನ ಸಭೆಯಲ್ಲಿ ಸದಸ್ಯತನಗಳು ವಿಧಾಸಿಪಲಾಗುವುದು ಈ ಒಪ್ಪಂದ ವಿಚಾರವು ಬಹಳ ರಹಸ್ಯದಲ್ಲಿ ನಡೆದಿರುತ್ತದೆ


# ಬೇಸಿಗೆಯಲ್ಲಿ ಟೀ ಕುಡಿಯಿರಿ

ಅತಿ ಚುರುಕಾದ ಬಿಸಿಲು ಕಾಲದಲ್ಲಿ ಎಲ್ಲರೂ ಟೀ ಕುಡಿಯುವರು. ಯಾಕೆಂದರೆ ಅದು ದಾಹಶಾಂತಿಗೆ ಸರ್ವಶ್ರೇಷ್ಠ ಸಾಧನ ಟೀ ಯು ನಿಮ್ಮ ಶರೀರವನ್ನು ಪ್ರವೇಶಿಸಿದ ಕೂಡಲೇ ನಿಮ್ಮ ನರಗಳಿಗೆ ಅಮೃತದಂತೆ ಶಕ್ತಿ ಕೊಟ್ಟು ಶರೀರದಲ್ಲಿನ ಆಯಾಸವನ್ನು ಓಡಿಸಿ ಇಂದ್ರಿಯಗಳಲ್ಲಿ ಲವಲವಿಕೆಯನ್ನುಂಟುಮಾಡುವುದು ಬಿಸಿಲು ಕಾಲದಲ್ಲಿ ನಿಮ್ಮ ಶರೀರವನ್ನು ಚಟುವಟಿಕೆಯಿಂದಲೂ, ಇಂದ್ರಿಯಗಳನ್ನು ಚುರುಕಾಗಿಯೂ ಇಡಲು ಇಚ್ಛಿಸುವಿರಾದರೆ ಆಗಾಗ್ಗೆ ಇಂಡಿಯಾದ ಟೀ ಕುಡಿಯಿರಿ.



**ಇಂಡಿಯಾದ ಟೀ ಯು ತಂಪನ್ನುಂಟುಮಾಡಿ ಆನಂದವನ್ನು ಕೊಡುವುದು.**

### ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿ. ಬಿಸಿಯಾಗಿರುವ ಮಣ್ಣಿನ (ಪಿಂಗಾಣಿ) ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗಾಗಿ ಒಂದು ಚಮಚ ಉತ್ತಮವಾದ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ ನೀರು ಕುದಿಯಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ

I. h. 52


## Canara Bank Ltd, Kasaragod

ಕೆನರಾ ಬೇಂಕ್ ಲಿಮಿಟೆಡ್

ಕಾಸರಗೋಡು

## NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳನ್ನಾಗಲಿ ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1938ನೇ ಇಸವಿ ಮಾರ್ಚಿ ತಿಂಗಳ ತಾರೀಕು 12ನೇ ಶನಿವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, ಇದೇ 1938ನೇ ಇಸವಿ ಮಾರ್ಚಿ ತಿಂಗಳ ತಾರೀಕು 15ನೇ ಮಂಗಳವಾರ ದಿವಸ ಅಪರಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
1 S L 110/36 Abdul Kadar S/o Mahamad Khah, Pallikere, Bekal
ಅಸಲು ರೂ 15

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
2 L 958/35 Veeroji S/o Appoji Cultivator, Bela, Mundod Kasaragod
ಅಸಲು ರೂ 30

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
3. L 1307/35 Mahamad S/o Hassinar Ferryinar Chaminad, Kasaragod.
ಅಸಲು ರೂ. 50.

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
4. L. 875/36 Chandu Nair N/o Chandu Nair, Cultivator, Perambale, Bekal.
ಅಸಲು ರೂ 45.

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
5 L 1300/36 Amuill N/o Dumumu, Cultivator, Ubrangala Agolipudy, Kasaragod.
ಅಸಲು ರೂ. 65

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
6 L 1470/36 A Abdulla S/o Mahamad, Merchant Tekkil Bended Kasaragod
ಅಸಲು ರೂ. 30

ಕ್ರ. ನಂಬ್ರ ಲೋನ್ ನಂಬ್ರ ಹೆಸರು ವ ವಿಳಾಸ
7 L. 2133/36 Damu S/o Koragu Cultivator Balloor, Mogral Puttur, Kumbla
ಅಸಲು ರೂ 25

office of the Bank Kasaragod, 15-2-38

A. Gopala-Krishna Pai ಏಜಂಟ್ ಅವರ


ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ.

ಎಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

**ಬಾಲಭಾಸ್ಕರ**

ಆಯುರ್ವೇದಾಶ್ರಮಂ,
೧೫೧ ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.

ದ. ಕ. ಜಿಲ್ಲೆಯ ಏಜಂಟರು —
ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

## ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

### ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ, ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನಿಲ್ಲುವದಂತೆ ಸುಗಮವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು - ಡಾ। ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ, ಕಾಶೀ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ. ಅಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C

ಗ೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ.
ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನೂ ಹೆಚ್ಚಿಸುವುದು.ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ,ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು
ಬಾಟ್ಲಿ ಒಂದಕ್ಕೆ ರೂ. 3—8—0. ಮೂರು ಬಾಟ್ಲಿಗಳಿಗೆ ರೂ. 7—0—0.

## ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ 1—8—0.

**ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್**
ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳಃ-ಡಾಕ್ಟರ್ ಬಿ ಭಿಜ್ ಪದ್ಮನಾಭ ಪೈ, ಚಿಕ ಮಂಗಳೂರು 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ, ಗಿರಗಾಂ ಮುಂಬಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

# ಹೊಸ ಮಾಲು ಇಂದೆ ಬಂದದ್ದು!




# ಕಣನ್ ದೇವನ್ ಚಹಾ ಪೊಟ್ಟಣಗಳು!

## ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents:—*

**The Kerala Tea Syndicate.**

PONANI—(S. Malabar)

|| ಶ್ರೀ ||

# ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ ಧರ್ಮಸ್ಥಳಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! ಅಪೂರ್ವ ರಿಯಾಯತಿ!

## ತಾ. 14–2–1938ರಿಂದ 15–3–1938ರ ವರೆಗೆ ಮಾತ್ರ!

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 28–2–1938ರಲ್ಲು ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದುಹೋಗತಕ್ಕ ಯಾವತ್ತೂ ಯಾತ್ರಾರ್ಥಿಗಳಿಗೆ ನಮ್ಮ ಬ್ಯಾನುಗಳ ಯಾವತ್ತೂ ಸ್ಟೇಷನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓%ರ ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಟನ್ನು ಮಾಡಿರುವೆವು.

ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದ್ದಾಗಿದೆ

## ಅತ್ಯಪೂರ್ವ ಸುಸಂದರ್ಭವನ್ನು ಕಳಕೊಳ್ಳದಿರಿ!

***JOINT MANAGERS,***

**...g Agency, Mangalore. Joint Booking Office, Kodialbail.**

# ಇಟೆಲಿ ಅಬಿಸೀನಿಯವನ್ನು ಗೆದ್ದಿತು!

## ಆದರೆ ಇಟೆಲಿಗೆ ಅಬಿಸೀನಿಯದಿಂದ ಸುಖವಿಲ್ಲ

### ಶಾಂತಿಯಿಲ್ಲ! ಸಮಾಧಾನವಿಲ್ಲ" ಬಂಡಾಯಗಾರರು ಹೊಂಚುಹಾಕಿ ಕೊತಿದ್ದಾರೆ! ಇಟೆಲಿಯಾನರಿಗೆ ಅರತಾಸು ನಿದ್ರಿಸು ವುದಕ್ಕೂ ಬಿಡುವುದಿಲ್ಲ!

★ ★ ★

ಮುಸೋಲಿನಿಯು ಅನ್ಯಾಯ ಅತ್ಯಾಚಾರಗಳಿಂದ ಅಬಿಸೀನಿಯನ್ನು ಗೆದ್ದ. ಇಟಾಲಿಯನ ಸಾಮ್ರಾಜ್ಯವನ್ನು ವಿಸ್ತರಿಸಿ, ಅದನ್ನು ಲೋಕದ ಅಗ್ರಗಣ್ಯ ಮಹಾಶಕ್ತಿಯನ್ನಾಗಿ ಮಾರ್ಪಡಿಸಬೇಕೆಂದು ಸಾಮದಾನಭೇದದಂಡ-ಚತುರೋಪಾಯಗಳನ್ನು ಅಶ್ರಯಿಸಿದ ವಿಷಗ್ಯಾಸ, ಬೊಂಬುಗಳ ಸುರಿಮಳೆಗೆ ತಲೆಕೊಡಲಾರದೆ ಕೆಚ್ಚೆದೆಯ ವೀರ ಅಬಿಸೀನಿಯರು ದುಃಖಾಶ್ರುಗಳನ್ನು ಸುರಿಸುತ್ತ ಇಟೆಲಿಯನ ಅಧಿಕಾರಿಗಳೆದುರು ನತಮಸ್ತಕರಾದರು. ಅಬಿಸೀನಿಯದ ಚಕ್ರವರ್ತಿ— ಹೇಲಿಸೇಲಾಸಿ ರಾಜ್ಯಬಿಟ್ಟು ಪಲಾಯನ ಮಾಡಿದನು. ಒಂದು ಪುರಾತನ ಸ್ವತಂತ್ರ ರಾಜ್ಯವು ಅನ್ಯಾಕ್ರಾಂತವಾಯಿತು. 'ಎಲ್ಲಿ ಬಲವೋ ಅಲ್ಲಿ ನ್ಯಾಯ' ಎಂಬ ಗಾದೆ ಮಾತು ಚರಿತ್ರಾರ್ಥವಾದಂತೆ ಭಾಸವಾಯಿತು

ಆದರೇನು? ಈ ಹೊಸ ಸಾಮ್ರಾಜ್ಯವು ಇಟೆಲಿಗೆ ಹೊರಲಾರದ ಹೊರೆಯಾಗಿ ಪರಿಣಮಿಸಿದೆ ಈ ಸಾಮ್ರಾಜ್ಯರಕ್ಷಣೆಗಾಗಿ ಇಟೆಲಿಯ ಜನಬಲ, ಧನಬಲಗಳ ಅತಿವ್ಯಯ, ಅಪವ್ಯಯ, ಅನಾವಶ್ಯಗಳಾಗುತ್ತಿವೆ ಆದ್ದರಿಂದ, ಇಟೆಲಿಯ ಶಕ್ತಿಯು ಬೆಳೆಯುವುದರ ಬದಲಿಗೆ ಅದು ದಿನೇ ದಿನೇ ಕುಂದುತ್ತಲಿದೆ

ಅಬಿಸೀನಿಯ ಎಂಬುದು ಫ್ರಾನ್ಸು ಇಟೆಲಿಗಳು ಕೂಡಿ ಆದ ಪ್ರದೇಶಕ್ಕಿಂತಲೂ ಹೆಚ್ಚು ವಿಸ್ತಾರವಾದ್ದು. ಅಲ್ಲಿಯ ಒಂಭತ್ತು ಮಿಲಿಯ ಜನರೆಂದರೆ, ಪ್ರತಿಯೊಬ್ಬನೂ ದೇಶಕ್ಕಾಗಿ ತನ್ನ ಸರ್ವಸ್ವವನ್ನೂ—ಕೊನೆಗೆ ಪ್ರಸಂಗ ಬಂದರೆ, ತನ್ನ ಪ್ರಾಣವನ್ನೂ ಕೂಡ ಬಲಿಕೊಡಲಿಕ್ಕೆ ಸದಾಕಾಲ ಸಿದ್ಧನಾಗಿರುವ ಮಹಾ ಸಾಹಸಿ ಅಂಥವರನ್ನು ಗೆದ್ದು ಅವರನ್ನು ಸತ್ವಹೀನರನ್ನಾಗಿ ನಿಶ್ಪಶುಗಳನ್ನಾಗಿ ಮಾಡಲಿಕ್ಕೆ ಸರ್ವಾಧಿಕಾರಿ ಮುಸಲೋನಿ ಎರಡು ಲಕ್ಷ ಸೈನಿಕರನ್ನು ಇಟೇಲಿಗೆ ಕಳುಹಿಸಿಕೊಟ್ಟಿದ್ದಾನೆ. ಇಟೆಲಿಯು ೨ ಲಕ್ಷ ಸೈನಿಕರನ್ನು ಕಳುಹಿಸಿಕೊಡುವುದೆಂದರೆ, ಅಥವ ಮಟ್ಟಿಗೆ ಅದು ದೊಡ್ಡ ವಿಷಯವೇ ನಿಜ ಆದರೆ, ೯ ಮಿಲಿಯ ಜನರೆದುರಿಗೆ ಇಟೆಲಿಯ ಈ ಎರಡು ಲಕ್ಷದ ಸೈನ್ಯವು ಒಂದು ಈಡೆ?

### ವೈಸರಾಯಿಯನ್ನೆ ಗಾಯಗೊಳಿಸಿದರು!

ಗುಡೋಲ್ಫ್ ಗ್ರೇಜಿಯಾನಿ- ಅಬಿಸೀನಿಯಾದಲ್ಲಿ ಇಟೆಲಿಯ ವಾಯ್ಸರಾಯಿಯಾಗಿದ್ದವನು ಈಗ ವೃದ್ಧಾಪ್ಯ, ದುರ್ಬಲತೆ ಎಂದು ಏನೇನೋ ಕಾರಣಗಳನ್ನು ಹೇಳಿ ಸ್ವದೇಶಕ್ಕೆ ಗಂಟುಮೂಟೆ ಕಟ್ಟಿದ್ದಾನೆ ಗ್ರೇಜಿಯಾನಿ ವೃದ್ಧನಹುದು ಅವನಿಗೆ ಅನಾರೋಗ್ಯವುಂಟಾಗಿರುವದೂ ನಿಜ. ಆದರೆ ಆ ಅನಾರೋಗ್ಯವೂ ಅಶಕ್ತಿಯೂ ವೃದ್ಧಾಪ್ಯದಿಂದ ಬಂದಿರುವದಲ್ಲ ಕಳೆದ ಬೇಸಿಗಾಲದಲ್ಲಿ ಅಬಿಸೀನಿಯದ ಬಂಡಾಯಗಾರರು ಅವನನ್ನೇ ಆಕ್ರಮಿಸಿದರು ಅವನ ಮೇಲೆಯೇ ಮುಕರದಬ್ಬೆಗಳನ್ನು ಬಿಸಾಡಿದರು ಗ್ರೇಜಿಯಾನಿಯ ಮೈಕೈಗಳು ಸುಟ್ಟುಹೋದುವು ಗಾಯಪಟ್ಟ ಅನಾರೋಗ್ಯವೂ ಅಶಕ್ತಿಯೂ ಕಾಣಿಸಿಕೊಂಡುವು

ಇಷ್ಟೆಲ್ಲ ಆದುದು ಯಾವಾಗ? 'ಅಬಿಸೀನಿಯ ಹೊಸ ಶಾಸನಕ್ರಮವನ್ನು ತಲೆಬಾಗಿ ಒಪ್ಪಿಕೊಂಡಿದೆ ಅಲ್ಲಿ ಈಗ ಎಲ್ಲವೂ ಸುಖ, ಎಲ್ಲರೂ ಶಾಂತ' ಎಂದು ಗ್ರೇಜಿಯಾನಿ ಪ್ರಕಟಣೆ ಕೊಟ್ಟ ಬರೇ ೧೫ ದಿನಗಳೊಳಗಾಗಿ! ಗ್ರೇಜಿಯಾನಿ ಕಂಡದ್ದು ಬಿಸಿಲ ಕುದುರೆ, ಅಲ್ಲಿ ಸಿಹಿನೀರಿನ ಸರೋವರವಿಲ್ಲ ಎಂದು ಅಬಿಸೀನಿಯಾದ ವೀರರು ಅವನಿಗೆ ಒಂದು ಒಳ್ಳೇ ಪಾಠವನ್ನು ಕಲಿಸಿದರು.

### ಪರಿಸ್ಥಿತಿ ನಿಮಿಷನಿಮಿಷಕ್ಕೆ ಬದಲಾಗುತ್ತಿದೆ!

ಅಬಿಸೀನಿಯಾದ ಪರಿಸ್ಥಿತಿಯು ಈಗಿರುವಂತೆ ಮತ್ತಿರುವುದಿಲ್ಲ ಈಗ ಸ್ವರ್ಗರಾಜ್ಯದಂತೆ ತೋರಿದ ಅಬಿಸೀನಿಯದ ಒಂದು ಪ್ರದೇಶದಲ್ಲಿ ಇನ್ನೊಂದರೆಕ್ಷಣದಲ್ಲಿ ರಕ್ತದ ಕಾಲುವೆಯೇ ಹರಿದುಹೋಗಬಹುದು. ಅನಿರೀಕ್ಷಿತವಾಗಿ, ಅನಪೇಕ್ಷಿತವಾಗಿ, ಎಲ್ಲಿಂದಲೋ ಹಾರಿ

ಅಬಿಸೀನಿಯಾ ಚಕ್ರವರ್ತಿಗಳು

ನೆಗೆದು ಬಂದು ಅಬಿಸೀನಿಯರು ಇಟಾಲಿಯನ ಪಾಳೆಯಗಳ ಮೇಲೆ ಆಕ್ರಮಣ ಮಾಡಬಹುದು ದೊಡ್ಡ ಕಲಹವೇ ಅಲ್ಲಿ ನಡೆಯಬಹುದು ಸಾವಿರಾರು ಮಂದಿ ಸತ್ತುಬೀಳಬಹುದು, ನೂರಾರು ಮಂದಿ ಗಾಯಪಟ್ಟು ನರಳಬಹುದು, ಹೀಗಿದೆ—ಅಲ್ಲಿಯ ಪರಿಸ್ಥಿತಿ ಇಟಾಲಿಯನ ಅಧಿಕಾರಿಗಳು ರಾತ್ರಿ ಅಂಗರಕ್ಷಕರು, ಮೆಶಿನ ಗನ್ನುಗಳು, ಟ್ಯಾಂಕುಗಳು, ಯುದ್ಧವಿಮಾನಗಳು ಇವುಗಳ ನಡುವೆ ಪ್ರಾಣಗಳನ್ನು ಕೈಮೇಲಿಟ್ಟುಕೊಂಡು ದಿನಗಳನ್ನು ಕಳೆಯುತ್ತಿದ್ದಾರೆ ಪ್ರಾಣಸಂಚಕಾರ ಯಾವಾಗ ಬರುವದೋ ಎಂದು ಹೇಳಲಾರದ ಇಟೇಲಿಯನ ಪಾಳೆಯಗಳ ಸಮೀಪದಲ್ಲೇ ಹೀಗಿದೆ ಮತ್ತೆ ಅವನ್ನು ಬಿಟ್ಟು ದೂರದ ಪ್ರದೇಶಗಳಲ್ಲಿ ಇಟೆಲಿಯ ದರ್ಪವು ಎಷ್ಟಿರಬಹುದೋ ನಾವೇ ಕರೇ ಆಲೋಚಿಸಬಹುದು.

### ಅಬಿಸೀನಿಯರು ಏನನ್ನೂ ಲಕ್ಷಿಸುವದಿಲ್ಲ.

ಇಟೆಲಿಯವರು ಅಬಿಸೀನಿಯದ ಚಕ್ರವರ್ತಿಯನ್ನು ಓಡಿಸಿದ, ಅನೇಕ ಮಂದಿ ರಾಜಕುಮಾರರನ್ನು ಫಾಶಿಗೆ ಹಾಕಿದೆ ಆಗಾಗ ಹಳ್ಳಿ ಹಳ್ಳಿ, ಪೇಟೆಪಟ್ಟಣಗಳ ಮೇಲೆ ಬೊಂಬುಗಳ ಸುರಿಮಳೆಯನ್ನು ಸುರಿಸಿ, ಜನರ ಧೈರ್ಯ ಕೆಡಿಸುವ ಪ್ರಯತ್ನಮಾಡುತ್ತಿದೆ ಆಧುನಿಕ ಶತ್ರುನಾಶಕ ಯುದ್ಧೋಪಕರಣಗಳು ಸೈನ್ಯಸರಂಜಾಮುಗಳನ್ನು ತಂದು ಅಬಿಸೀನಿಯದಲ್ಲಿ ಹರಡಿಸಿಬಿಟ್ಟಿದೆ ಆದರೆ, ಅಬಿಸೀನಿಯರಿಗೆ ಇವುಗಳ ಗಣ್ಯವೇ ಇಲ್ಲ ಯಾಕೆಂದರೆ, ಪ್ರಕೃತಿಯು ಅಬಿಸೀನಿಯರಿಗೆ ಸಹಾಯಕವಾಗಿದೆ ಅಲ್ಲಿಯ ದಟ್ಟವಾದ ಕಾಡುಗಳು, ಆಳವಾದ ನದೀಪ್ರವಾಹಗಳು, ಅತ್ಯುಷ್ಣ ಮತ್ತು ಅತಿ ಚಳಿ, ಬಿರುಗಾಳಿ ಸುಳಿಗಾಳಿಗಳಿಂದ ಇಟೇಲಿಯಾನರು ಅಬಿಸೀನಿಯಾದಲ್ಲಿ ಜೀವಿಸುವದಾಗಲಿ, ಅಲ್ಲಿನ ಜನರ ವಿರುದ್ಧ ಯುದ್ಧೋಪಕರಣಗಳ ಉಪಯೋಗ ಮಾಡುವದಾಗಲೀ ಪೂರ್ಣ ಅಸಾಧ್ಯವಾಗಿರುವದು. ಆಕಾಶಕ್ಕೆ ಹಾರಿದ ವಿಮಾನಗಳು ತನ್ನಷ್ಟಕ್ಕೆ ನಾಶವಾಗುವವು, ಅಥವಾ ಕೆಳಗೆ ಬೀಳುವವು, ನೆಲದ ಮೇಲೆ ನಡೆಯುವ ಮೆಶಿನ್‌ಗನ್ನುಗಳು ಹೂತುಹೋಗುವವು, ಅಥವಾ ಕೆಲಸಕ್ಕೆ ಬಾರದಾಗುವುವು ಇಂಥ ಗಂಡಾಂತರಗಳಿಗೆ ಬಲಿಯಾಗಿಯೇ ಅನೇಕ ಮಂದಿ ಇಟಾಲಿಯಾನರು ವ್ಯರ್ಥ ಪ್ರಾಣಕೊಡಬೇಕಾಗಿ ಬಂದಿದೆ

### ಅಂಜಿಕೊಟ್ಟು ಜೀವದ ಭಿಕ್ಷೆ ತಕೊಳ್ಳುವರು.

ಅಬಿಸೀನಿಯರು ವೀರಪುರುಷರು ಅಲ್ಲಿಯ ಸ್ತ್ರೀಯರೂ ವೀರರಮಣಿಯರಾಗಿದ್ದಾರೆ. ಅವರು ವೀರ ಪುರುಷರನ್ನೇ ಮೆಚ್ಚುವರು, ಮದುವೆಯಾಗುವರು. ಆದ್ದರಿಂದ ಯಾವನಾ ದರೊಂದು ಹೆಣ್ಣನ್ನು ಮದುವೆಯಾಗಬೇಕಾದರೆ ಅಬಿಸೀನಿಯ ಯುವಕರು ಹೇಗ ಮಾಡಿ ಬಿಲ್ಲುವಿದ್ಯೆ ಕಲಿಯ ಬೇಕು, ಸಾಹಸತನ ತೋರಿಸಬೇಕು ಆಗ ಎಲ್ಲಿಯಾದರೂ ಆ ಹೆಣ್ಣು ಅವನ ಕಡೆಗೆ ಒಂದೆರಡು ಕಣ್ಣೆತ್ತಿ ನೋಡುವಳು ಆದರೆ, ತರುಣನು ಒಂದು ಬಂದೂಕು ಅಥವಾ ಒಂದು ಪಿಸ್ತೂಲನ್ನು ಸಂಪಾದಿಸಿದ್ದೇ ಆದರೆ ಹತ್ತಿಪ್ಪತ್ತು ಮಂದಿ ಹೆಮ್ಮಕ್ಕಳು ಅವನನ್ನು ಮದುವೆಯಾಗಲು ಓಡ್ಯೋಡಿ ಬರುವರು

ಇಟೆಲಿಯನರು ಅವಿವಾಹಿತ ತರುಣರಿಗೆ ಒಂದೊಂದು ಪಿಸ್ತೂಲು ಕೊಟ್ಟು ಅವರ ಮೂಲಕ ತಮ್ಮ ಸತ್ತೆಯನ್ನು ಬಲಪಡಿಸುವ ಪ್ರಯತ್ನ ಮಾಡಿದರು ಅವರು ವಿಭಾಗಿಸಿ ಆಳುವ ನೀತಿಯನ್ನು ಅನುಸರಿಸಿದರು ಆದರೂ ವ್ಯರ್ಥ ಇಟೇಲಿಯನರು ಕೊಟ್ಟ ಪಿಸ್ತೂಲುಗಳಿಂದಲೇ ಇಟೇಲಿಯಾನರು ಪೆಟ್ಟು ತಿಂದು ಹಾಹಾಕಾರ ಎಬ್ಬಿಸಿದ ಪ್ರಸಂಗಗಳು ಎಷ್ಟೋ ಇವೆ

### ಬಿಳಿಕೂಲಿಗಳು ಕೆಲಸಮಾಡುತ್ತಾರೆ.

ಆಫ್ರಿಕದ ಕಪ್ಪುಜನರ ರಾಜ್ಯದಲ್ಲಿ ಬಿಳೀ ಕೂಲಿಗಳು ಕೆಲಸಮಾಡಲಾರಂಭಿಸಿದ್ದು ಅಂದರೆ ಅಬಿಸೀನಿಯದಲ್ಲಿ ಇಟೇಲಿಯಾನರು, ಮಾತ್ರ ಅಲ್ಲಿ ಇಟೇಲಿಯನ ಕೂಲಿಗಳು ದಿನಕ್ಕೆ ೧೨ ಗಂಟೆಗಳಂತೆ ಕೆಲಸಮಾಡಿ ಅಬ್ಸೀನ ಅಬಾಬ

ಇಟೆಲಿಯ ಸರ್ವಾಧಿಕಾರಿ ಮುಸೊಲಿನಿ

ದಿಂದ ಮೊಂಬಾಸ್ಸ ಮತ್ತು ಕೆಲವು ನಗರಗಳಿಗೆ ರಸ್ತೆ ಕಟ್ಟುತ್ತಾರೆ ಈ ವರೆಗೆ ಅಬಿಸೀನಿಯದಲ್ಲಿ ದೊಡ್ಡ ದೊಡ್ಡ ರಸ್ತೆಗಳು ಇರಲೇ ಇಲ್ಲ ಆದ್ದರಿಂದ ರಾಜಶಾಸನದ ಸೌಕರ್ಯಕ್ಕಾಗಿ ರಸ್ತೆಗಳನ್ನು ಮಾಡುವುದು ಅಗತ್ಯವಾಯಿತು. ಪರಂತು ಅಲ್ಲಿ ಪ್ರಾಕೃತಿಕ ಸನ್ನಿವೇಶಗಳಿಂದ ಈ ಕಾರ್ಯವು ವಿಶೇಷ ಖರ್ಚಿನದ್ದೂ ತೊಡಕಿನದ್ದೂ ಆಗಿ ಕಂಡುಬಂದಿರುವದು ಕಟ್ಟಿದ ಕೆಲವು ರಸ್ತೆಗಳನ್ನು ಅಬಿಸೀನಿಯನರು ಕಡಿದು ಹಾಕುತ್ತಾರೆ, ಉಳಿದವುಗಳನ್ನು ಮಳೆಬಿರುಗಾಳಿಯು ಕೊಡೆದುಹಾಕುತ್ತವೆ 'ಕುಂಬಾರಗೆ ವರುಷ, ದೊಣ್ಣೆಗೆ ನಿಮಿಷ' ಎಂಬ ಹಾಗೆ ಅಲ್ಲಿ ಈ ಕೆಲಸವು ನಡೆಯುತ್ತದೆ ಆದ್ದರಿಂದ ಅಬಿಸೀನಿಯದಲ್ಲಿ ಇಟೆಲಿಯನರಿಗೆ ವ್ಯವಹಾರ ಸೌಕರ್ಯಗಳು ಬಹಳ ಕಡಿಮೆ, ಭಾರವಾದ ಯುದ್ಧೋಪಕರಣಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವದಂತೂ, ಕೊಡಗಟ್ಟಲೆ ಬೆವರು ಸುರಿಸಿದರೂ ಸಾಧ್ಯವಾಗದ ಕಾರ್ಯ

### ಶಾಸನಕ್ರಮದ ದೋಷ.

ಅಬಿಸೀನಿಯರು ಇಟೆಲಿಗೆ ವಶವಾಗದಿರುವ ಇನ್ನೂ ಅನೇಕ ಕಾರಣಗಳಿವೆ ಅವರ ವಿಭಾಗಿಸಿ ಆಳುವ ನೀತಿಯು ಸಣ್ಣ ದೊಡ್ಡ ರಾಜಕುಮಾರರಲ್ಲಿ ಬಹಳ ಅತೃಪ್ತಿಯನ್ನುಂಟು ಮಾಡಿದೆ ಮತ್ತೆ ಇಟೆಲಿಯ ಸೈನಿಕರೇ ಕರ್ತವ್ಯ ಮೂಢರಾಗಿ ಅಬಿಸೀನಿಯರನ್ನು ವಶಮಾಡಿಕೊಳ್ಳಲಿಕ್ಕೂ, ಅವರಿಂದ ಆಹಾರ ಸಾಮಗ್ರಿಗಳನ್ನು ಕೊಂಡುಕೊಳ್ಳಲಿಕ್ಕೂ, ಕೋವಿ, ತೋಟಿ ಮದ್ದು ಇತ್ಯಾದಿಗಳನ್ನು ಕೊಡುತ್ತಾರೆ. ಅವೇ ಸಾಮಗ್ರಿಗಳು ಇಟಾಲಿಯನರ ಸರ್ವನಾಶಕ್ಕೆ ಎಂದು ಅಬಿಸೀನಿಯರು ಉಪಯೋಗಿಸುತ್ತಾರೆ. ಅಬಿಸೀನಿಯನರಿಗೆ ದೇಹ ದಂಡನೆಗಿಂತಲೂ ದೇಹಾಂತಶಿಕ್ಷೆಯು ಮೆಚ್ಚಿಗೆಯದ್ದಾಗಿದೆ. ಇಟೆಲಿಯನರು ತಾವು ದೊಡ್ಡ ದಯಾಳುಗಳೆಂದು ತೋರಿಸಲಿಕ್ಕೆ ದೇಹದಂಡನೆಯನ್ನು ಕೊಡುತ್ತಾರೆ. ಹೀಗೆ ಬಹು ವಿಧದಿಂದ ಅವರ ಅಪಮಾನ ಮಾಡುತ್ತಾರೆ ಇಂಥ ಹಲವು ಕಾರಣಗಳಿಂದ ಜನರು ಉದ್ರೇಕಗೊಳ್ಳುತ್ತಾರೆ ಇಟೆಲಿ ಅಬಿಸೀನಿಯವನ್ನು ಗೆದ್ದು ಎರಡು ವರ್ಷಗಳಾದುವು ಆದರೂ ಆ ಪ್ರಕರಣವಿನ್ನೂ ಮುಗಿದಿಲ್ಲ. ಬಂಡಾಯ, ವಿದ್ರೋಹ, ಪಿತೂರಿ, ಮುಸಲಿತುಗಳು ನಿತ್ಯದ ಘಟನೆಗಳಾಗಿವೆ ಮುಸಲೋನಿಗೆ ಏನುಮಾಡುವದೆಂದು ಗೊತ್ತಾಗ ವುದಿಲ್ಲ. ಇದೇ ದಿನ ತಲೆಕೆಡರುತ್ತಾನೆ ಅಬಿಸೀನಿಯವು ಅವನಿಗೆ ಬಿಸಿನೀರು ಗುಟುಕು ಆಗಿದೆ, ಅದು ಬೇಡವೆಂದು ಉಗುಳಲಿಕ್ಕೂ ಅಲ್ಲ, ಬೇಕೆಂದು ನುಂಗಲಿಕ್ಕೂ ಅಲ್ಲ!

---

ಹಿಂದೂ-ಮುಸ್ಲಿಂ ಐಕ್ಯ ಪರಿಷತ್ತು ಮುರ್ಶಿದಾಬಾದಿನ ನವಾಬರ ಅಧ್ಯಕ್ಷತೆಯಲ್ಲಿ ಕಲ್ಕತ್ತದಲ್ಲಿ ಸೇರಿ, ನೆಹರು ಜಿನ್ನಾ ಸಂಭಾಷಣೆಗಳಾಗುವುವೆಂದು ಅಭಿನಂದಿಸಿದೆ

---

ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ-
ಇರಬೇಕಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಸ್ತ್ರೀರೋಗದ ವ್ಯಾಧಿಗಳಿಂದ ಕುಂದಿ ಹೋಗುವ ಸಂಭವವು ಇರುತ್ತದೆ ಆದರೆ, ಈಗ

### ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ. ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣಭೇದಗಳು, ಕೈಕಾಲುಗಳು ಸಣ್ಣವಾಗಿ ರೋಣ, ಇವುಗಳಿಂದ ನರಳಿ, ಬಳಲಿ ಎಷ್ಟೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ನರಳುತ್ತಾ ಇರುತ್ತಾರೆ.
ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡ ಬಲ್ಲ ಮಹತ್ತರವಾದ ಔಷಧಿ—ಬಾಲಭಾಸ್ಕರವನ್ನು ಕೊಡಿರಿ.
ಎಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

# ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೧ ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.
ದ. ಕ. ಜಿಲ್ಲೆಯ ಏಜಂಟರು —
ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

# ರಾಜಕೀಯ ಕೈದಿಗಳ ಬಿಡುಗಡೆ ಮಾಡಲು ಮುಖ್ಯ ಮಂತ್ರಿವರ್ಯರುಗಳ ಆಜ್ಞೆ–ಗವರ್ನರ ಜನರಲರ ಆತಂಕ!!

ಸ್ವದೇಶಾಭಿಮಾನಿ

ತಾ ೧೮ನೇ ಶುಕ್ರವಾರ ಫೆಬ್ರವರಿ ೧೯೩೮

## ಬಿಕ್ಕಟ್ಟಿನ ಪರಿಣಾಮ

ಅತ್ತ ವಿರಲನಗರದಲ್ಲಿ ಕೊಂಗ್ರೆಸ್ ಅಧಿವೇಶನವು ಜರುಗಿ, ಮುಂದಣ ಕಾರ್ಯಕ್ರಮಗಳನ್ನು ನಿರ್ಧರಿಸಲಿರ ವಾಗಲೆ, ಇತ್ತ ಕೊಂಗ್ರೆಸ್ಸಿನ ಮಂತ್ರಿಮಂಡಲಗಳೆರಡು (ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ) ರಾಜೀನಾಮೆ ಇತ್ತ ವಾರ್ತೆ ಬಂದಿರುವುದು ವಿಶೇಷ ಮಹತ್ವದ್ದಾಗಿದೆ. ರಾಜಕೀಯ ಕೈದಿಗಳ ಬಿಡುಗಡೆಯ ಆದೊಂದು ಪ್ರಶ್ನೆಯು ಜನತೆಯ ಪ್ರತಿನಿಧಿಗಳ ಮನಸ್ಸನ್ನು ಎಷ್ಟು ಉದ್ವಿಗ್ನಗೊಳಿಸಿಯದೆಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಚುನಾವಣೆಯ ಕಾಲದಲ್ಲಿ ಭರವಸೆಯನ್ನಿತ್ತ ಕಾರ್ಯಕ್ರಮಗಳಾವುವನ್ನೂ ಹಿಂದೆಗೆಯದಂತೆ ಕೊಂಗ್ರೆಸ್ ಮಂತ್ರಿಗಳು ಒಂದೊಂದನ್ನೆ ಅನುಸರಿಸಿ ಕಾರ್ಯರೂಪಕ್ಕೆ ತರುವಾಗ, ರಕ್ಷಾಕವಚದ ವ್ಯವಸ್ಥೆಯುಳ್ಳ ಅಧಿಕಾರೀ ವರ್ಗವು ಈ ಅನುಸರಣೆಗೆ ತಡೆಗಟ್ಟಲಾರದು ಎಂದು ಭಾವಿಸಿದವರೂ ತಡೆಗಟ್ಟದಿರಲಾರದು ಎಂದು ನಂಬಿದವರೂ ಇದ್ದರು. ಪ್ರಾಂತಿಕ ಸ್ವರಾಜ್ಯ ಎಂಬಾ ಮಾತುಗಳು ಅರ್ಥದಲ್ಲಿ ಏನೇನೂ ಹುರುಳಿಲ್ಲದುವೆಂದು ಸಾರುತಿದ್ದವರಿಗೆ ಈ ಬಗೆಯಲ್ಲಿ ಅಧಿಕಾರಿಗಳು ತಡೆಗಟ್ಟಿದುದೊಂದು ಕಾರಣವು ಬಲವಾದ ತರ್ಕಕ್ಕೆ ಅನುಕೂಲವಾಗುವಂತಾಯಿತು. ಮದ್ರಾಸು ಪ್ರಾಂತ್ಯದ ಕೋರ್ಟುಗಳು ರಾಜಕೀಯ ಕೈದಿಗಳನ್ನು ಇತರ ಪ್ರಾಂತಿಕ ಜೈಲುಗಳಲಿ ದಂಡನೆ ವಿಧಿಸಿ ಇರಿಸಿವೆ. ಇವರ ಸಲುವಾಗಿಯೂ ಮದ್ರಾಸು ಮಂತ್ರಿಕೂಟವು ಬಿಡುಗಡೆಯ ಅಪ್ಪಣೆ ಕೊಡಬಹುದು. ಗವರ್ನರರು ಅದನ್ನೊಪ್ಪಬಹುದು ಅಥವಾ ನಿರಾಕರಿಸಬಹುದು. ಬಿಹಾರ ಸಂಯುಕ್ತ ಪ್ರಾಂತ್ಯಗಳಲ್ಲಾದಂತೆಯೆ ಇತರ ಕೊಂಗ್ರೆಸ್ ಮಂತ್ರಿಮಂಡಲಗಳಿರುವ ಪ್ರಾಂತ್ಯಗಳಲ್ಲಿ ಇದೊಂದೇ ಪ್ರಶ್ನೆಯ ನಿಮಿತ್ತವಾಗಿ ಮಂತ್ರಿಕೂಟಗಳು ರಾಜೀನಾಮೆ ಕೊಡಬೇಕಾಗಿ ಬರುವ ಸಂಭವಗಳಿಲ್ಲವೆಂದಿಲ್ಲ. ಇನ್ನು ಇವುಗಳ ಅಸ್ತಿತ್ವಕ್ಕೆ ದೃಢವಾದ ಆಯುರ್ಬಲತಪ್ಪುವ ಸಂಭವಗಳು ಹೆಚ್ಚಾಗಿವೆ ಎನ್ನಬೇಕು.

ಒಂದೊಂದು ತತ್ವಕ್ಕಾಗಿ ಹೀಗೆ ರಾಜೀನಾಮೆಗಳುಂಟಾದರೆ ಅವನ್ನು ಕುರಿತು ಸಂತಾಪಗೊಳುವ ಅಗತ್ಯವಿಲ್ಲ. ತತ್ವವು ಸತ್ಯವನ್ನವಲಂಬಿಸಿರುವಲ್ಲಿ, ಕೊಂಗ್ರೆಸಿಗೆ ಇದರಿಂದ ಬಲವು ಹೆಚ್ಚಲೇ ಬೇಕು.

ಬಹುಮತಾಧಿಕಾರವುಳ್ಳ ಕೊಂಗ್ರೆಸ್ ಪಕ್ಷವು ದೊರಗೊಳ್ಳುವ ಹಾಗೆ ಪ್ರಾಂತಿಕ ಸ್ವರಾಜ್ಯವೆಂಬ ಪ್ರಜಾಸತ್ತೆಯನ್ನು ಪಾಲಿಸಿಕೊಂಡು ಬರಬೇಕಾಗುವ ಗವರ್ನರರು, ಎಂತಹ ಮನೋಸ್ಥಿತಿಯಲ್ಲಿರಬೇಕೋ ಹೇಳಬರುತ್ತಿಲ್ಲ. ಅಂತೂ ಗವರ್ನರರ ಕರ್ತವ್ಯಪಥವು ಬಲು ಬಿಕ್ಕಟ್ಟಿನದಾಗಿದೆನ್ನಬೇಕು. ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿನ ಗವರ್ನರರು ಮಂತ್ರಿಕೂಟವನ್ನು ವಿರೋಧಿಸಿ ನಡೆವಂತೆ ವೈಸ್ರಾಯರೀ ಜವಾಬುದಾರಿಯನ್ನು ಹೊತ್ತುದೂ ಪ್ರಕಟವಾಗಿದೆ.

ಈಗ ಪುನಃ ಚುನಾವಣೆಗಳಾದಲ್ಲಿ ಕೊಂಗ್ರೆಸು ಪಕ್ಷವು ಇನ್ನಷ್ಟು ಬಲವಾಗಿ ಚುನಾವಣೆ ಹೊಂದದೆ ಇರಲಾರದು. ಕೊಂಗ್ರೆಸನ್ನು ಅದರ ಮತಾಧಿಕ್ಯ ಕಳೆವಂತೆ ಮಾಡುವುದು ಸುಲಭವಾಗಲಾರದು. ಕೊಂಗ್ರೆಸಿನ ಕಾರ್ಯಕ್ರಮಗಳಲ್ಲಿ ಮನನೊಂದ ಪಕ್ಷವೊಂದು ಅಧಿಕಾರ ಹಿಂದೆ ಅಪಜಯ ಹೊಂದಿದ ಪಕ್ಷವೊಂದು ಪುನಃ ಎಚ್ಚತ್ತು ಮುಂದೆ ಬರಬಹುದೆ. ಜನತೆಯು ಅದಕ್ಕೆ ತಕ್ಕ ಬೆಲೆ ಕಟ್ಟದಿರದೆನ್ನೋಣ. ಆದರೆ ರಾಷ್ಟ್ರೀಯ ದೃಷ್ಟಿಯಿಂದ ಕೊಂಗ್ರೆಸು ಕೈಕೊಂಡುದರಲ್ಲಿ ತಪ್ಪುಗಳಿರಬಹುದಾದರೂ ಉದ್ದೇಶ ಬಲ್ಲವರಿಗೆ ಒಪ್ಪುಗಳೇ ಹೆಚ್ಚಾಗಿ ತೋರುವ ಕಾರಣವೂ, ಪೊಳ್ಳು ಸ್ವರಾಜ್ಯದ ಅರಿವು ಉಂಟಾದುದರಿಂದಲೂ ಕೊಂಗ್ರೆಸು ಮುಂದೂ ಕ್ಕೆ ತೀವ್ರವಾಗಿ ಧೈರ್ಯದಿಂದ [illegible] ಬಹುದಾಗಿದೆ. ಚುನಾವಣೆಗಳಾಗದಿರುವಲ್ಲಿ ಅಧಿಕಾರದ ಎದುರುನಿಂತು ರಾಜ್ಯಭಾರ ನಿರ್ವಹಿಸಬಲ ಮಂತ್ರಿಮಂಡಲವಾದರೂ ರಚನೆ ಹೊಂದುವುದೂ ಕಷ್ಟ. ಹೊಂದಿದರೆ ಉಳಿಯುವುದೂ ಕಷ್ಟ. ಹೀಗಾಗಿ ಪ್ರಾಂತಿಕ ಸ್ವರಾಜ್ಯದ ಹೆಸರನ್ನು ಉಳಿಸುವುದು ಕಷ್ಟವಾಗದಿರದು. ಎಂತೂ ಆಕ್ಟಿನ ಹುರುಳು ಹೊರಬಿದ್ದಂತೆ ಆಗದೆ? ಅದಕ್ಕಿಂತ ಸ್ಪಷ್ಟವಾಗಿ ಅಕ್ಟು ರದ್ದಾಗುವಂತೆ ಬೇರೆ ಇಸ್ತಿಹಾರು ಬೇಕಾಗುವುದೆ?

ರಾಷ್ಟ್ರಪತಿ ಸುಭಾಷ್ಚಂದ್ರಬೋಸರು

## ವಿಠಲ ನಗರ
### ಗೊಂಡಾರಣ್ಯದಲ್ಲೊಂದು ದಿವ್ಯ ನಗರ

ಎಷ್ಟೋ ಕಟೆ ಟಂಡರ ಎಷ್ಟೋ ಕೆಲಸಗಳ ಕರುವಿಗಳು ಇವೇ ತಂಬಿದ ಒಂದು ವಿಸ್ತಾರವಾದ ಹಳ್ಳಿಗೇಡು ಈಗ ಸಂಸಾರಿಯಾಗಿ 10000 ಜನರ ವಸತಿ 10000 ಜನರ ಸೈನಿಕ ಸಂದರ್ಶನೆಯ ಸ್ಥಳವಾಗಿ ಮಾರ್ಪಡಿಸಿರುವ ಪ್ರಯತ್ನಗಳನ್ನು [illegible] ಡಾಪಬೇಡವೆ? ಜನಸಂಖ್ಯೆ ಏರತ್ತಲೆ ಪಾತ ನಗರಪಾಟಿ ಬೀರುವುದಾದರೂ, ಇಡೀ ನಗರ ವು ತಾಜಾ ಹಳ್ಳಿಯೇ ಆಗಿ ಉಳಿದಿದೆ.

ಎರಡು ಮೈಲು ದೂರದಲಿರುವ ಹರಿಪುರದ ದಿನ್ನೆಯ ನೆತ್ತಿಗೇರಿದರೆ ತಪತಿನದಿ, ಕೆಲವು ಬಿಳಿ ಗುಡಿಸಲುಗಳ ಮಧ್ಯವಾಗಿ ಕಮಾನಾಗಿರುವ ಹೆಬ್ಬಾಗಿಲುಗಳು, ಮರಗಳ ತುದಿಗಳಲ್ಲಿ ಕೊಂಗ್ರೆಸ್ ಧ್ವಜಗಳ ಇವಿಷ್ಟು ಕಾಣುವುವು. ಉತ್ತಮವಾಗಿ ಹಾಸಿದ ರಸ್ತೆಯು ವೇಲೆ ವಿರಲ ನಗರವನ್ನು ಸೇರುವೆವು. ನೂರಾರು ಲಾರ್ರಿಗಳು ನಗರದ ಹೊರಗೆ ನಿಂತಿವೆ. ಖಾಸಗಿ ವಾಹನಾದಿಗಳ ಸಂಚಾರಕ್ಕೆ ಸಂಪೂರ್ಣ ಸೌಕರ್ಯ... [illegible] ಕಡೆ ಸ್ವಯಂಸೇವಕರು ಸಿಗಾ ನೋಡುತ್ತಿದ್ದಾರೆ. ಒಂದು ಕಡೆ ತಪತಿನದಿ ಮತ್ತೊಂದ ಬದಿಯಲ್ಲಿ ನಾಲೆ ಇವೆರಡರ ನಡುವೆ ನಗರ ನಿಂತಿದೆ.

ಹೊಳೆ ಬದಿಯಲ್ಲೆಲ್ಲ ಸಾಲಾಗಿ ಮುಖಂಡರ ಗುಡಿಸಲುಗಳಿವೆ. ಮೊದಲನೆಯದೇ ಮಹಾತ್ಮಾಜಿಯದು. ಇತರ ನಗರ ಭಾಗಗಳಿಗೂ ಇದಕ್ಕೂ ನಡುವೆ ಒಂದು ಚರಂಡಿಯಿದೆ. ಇದರ ಮತ್ತೊಂದು ಕೊನೆಯಲ್ಲಿ ಸುಂದರವಾದ ಉದ್ಯಾನವಿದೆ. ಸಮೀಪವೆಲ್ಲ ‘ಕೊಂಗ್ರೆಸು ಮಂತ್ರಿ’ಗಳ ಗುಡಿಸಲುಗಳು. ವಿಷಯ ಸೂಚಕ ಸಭಾಭವನ, ಸೇವಿಕಾದಳ ಧ್ವಜದ ಮೈದಾನು ಇವೆಲ್ಲ ಒತ್ತೊತ್ತಾಗಿದ್ದು, ಕೊನೆಯದು ಅಧಿವೇಶನ ಸ್ಥಳದ ಗರ್ಭಗುಡಿಯಂತಿದೆ. ಸ್ವಾಗತಸಭೆ, ಕಾರ್ಯದರ್ಶಿಯರ ಆಫೀಸು, ತಂತೀ ಆಫೀಸು ಮೊದಲಾದುವೆಲ್ಲ ಸಮೀಪವೇ ಇವೆ. ಜೇಂಡಾ ಚೌಕವೇ ನಗರದ ಅತಿ ಸುಂದರ ಭಾಗ. ವಿಸ್ತಾರವಾದ ಅಧಿವೇಶನ ಮಂಟಪವನ್ನೂ ಇದನ್ನೂ ಹೋಲಿಸಿ ನೋಡಿದಷ್ಟು ಇದು ಸುಂದರವೆನಿಸುವುದು. ಸುತ್ತಲು ಪ್ರೇಕ್ಷಕರ ಸ್ಥಳ, ಗುಡಿಸಲುಗಳು ಪ್ರತಿನಿಧಿಗಳ ವಸತಿಗಳು ಸಂತೆಗಳು ಇತ್ಯಾದಿ ಇವೆ.

ಮುದಲು ಛಾವಣಿಯ ಆದೊಂದೇ ಗುಡಿಸಲು, ಇಡೀ ನಗರದಲಿ ಇಂಥದು ಇದೊಂದೆ. ಅದರ ಬಿದುರುಗೋಡೆಗಳ ನಡುವೆಲ್ಲ ಕೊಂಗ್ರೆಸ್ ಧ್ವಜ ಸುತ್ತಿಕೊಂಡಿದೆ. ಇದ ಮಹಾತ್ಮಾಜಿಯವರಿಗಾಗಿದೆ. ಇಡೀ ನಗರಕ್ಕೂ ಇದಕ್ಕೂ ನಡುವೆ ಆಳವಾದ ಕಣಿವೆಯಿದೆ. ಕಣಿವೆಯ ಮತ್ತೊಂದು ಕಡೆ ಸರದಾರ ವಲ್ಲಭಭಾಯಿಯವರ ಗುಡಿಸಲು. ಇವೆರಡಕ್ಕೂ ನಡುವೆ ಬಿದಿರುಗಳ ಸೇತುವೆ. ಇದನ್ನು ಸ್ವಯಂಸೇವಕರು ಕಾಯುತಿದ್ದಾರೆ. ಶ್ರೀಮತಿ ಕಸ್ತೂರಿಬಾಯಿಯವರ ಗುಡಿಸಲು ಹೊಳೆ ತೀರದಲ್ಲಿ ಗಾಂಧಿಜಿಯವರ ಗುಡಿಸಲಿಂದ ಕಿಂಚಿದ್ದೂರದಲ್ಲಿದೆ. ಹೊಳೆಯ ಇಕ್ಕಡೆ ಒಂದಕ್ಕೊಂದು ಮುಖಮಾಡಿಕೊಂಡು ನೆಹರು ಗುಡಿಸಲುಗಳಿವೆ. ಜವಾಹರಲಾಲರದೂ [illegible] ಒಂದ್ರಂದೊಡನ [illegible]. ಇದೇ ಸಾಲಿನ ಸರದಾರು ಹತ್ತು ಹನ್ನೆರಡು ಗುಡಿಸಲುಗಳು ಇನ್ನೂ ಇವೆ. ಮುಖಂಡರವು [illegible] ಹಂದ ವು56 [illegible] ಕಂಭಗಳುಳ್ಳದಾಗಿದೆ. ಮೇಲ್ಕಟ್ಟು ಬಿಳೀ ನಾಳ ಬಟ್ಟೆ. ಇದಕ್ಕೆ ಆರು ಹೆಬ್ಬಾಗಿಲುಗಳಿವೆ. ಸುಮಾರು 3000 ಮಂದಿ ಆಸನ [illegible].

### ಅಧ್ಯಕ್ಷರ ಮೆರವಣಿಗೆ

ಬಾರ್ಡೋಲಿ ತಾಲೂಕು ಇಡೀ ಸ್ವಾಗತ ಮಾಡಿತು. ಸಂಕಾರದ ನೌಕರರೆಲ್ಲ ಸಹಕರಿಸಿದರು. ಸಾಲುಮರಗಳಿಗೂ ಕೊಂಗ್ರೆಸು ಧ್ವಜಗಳು. ಬೊಂಬಾಯಿಯಿಂದ ಹರಿಪುರಕ್ಕೆ ನಡುವೆ ಪ್ರತಿ ರೈಲ್ವೆ ಸ್ಟೇಶನಿನಲ್ಲಿ ಪ್ರಚಂಡ ಜನಸಮೂದಾಯ ಅಧ್ಯಕ್ಷರ ಗಾಡಿಯಲ್ಲಿ ಹೂರಾಶಿಯೇ.

ಬಾರ್ಡೋಲಿ ಆಶ್ರಮಕ್ಕೆ ತಲಪುತ್ತಲೇ ತರುಣ ಸ್ತ್ರೀಯರು ಅಧ್ಯಕ್ಷರಿಗೆ ತಿಲಕವನ್ನಿಟ್ಟರು. ಪೂರ್ಣಕುಂಭಗಳಾದುವು. ಅಕ್ಷತೆ ಸೇಸೆ. ಕೈದರು...

ನಾಲ್ಕು ಲಕ್ಷ ಜನರು ಮೆರವಣಿಗೆಗೆ ಸಿದ್ಧರಾದರು. ಇವರೆಲ್ಲ ಹಳ್ಳಿ ಮೂಲೆಗಳಿಂದ ಕೂಸುಗಳನ್ನು ಕೈಯಲೆತ್ತಿಕೊಂಡು ಮಾಸಿದ ಬಟ್ಟೆಬರೆಗಳಿಂದ ಅಲಂಕೃತರಾಗಿದ್ದಂತೆಯೆ ಎಷ್ಟೋ ಮೈಲು ದೂರ ನಡೆದುಬಂದವರು. ಹರಿಪುರದಿಂದ ಕೊಂಗ್ರೆಸ್ ಸದನದ ತನಕ ಸಾಲಿಗೆ 10–20 ಜನದಂತೆ ಹಿಂದೆ ನಿಂತಿದ್ದರು. ಚಕಾರ ಶಬ್ದವಿಲ್ಲ. ಮೂರು ದಿನಗಳಿಂದ ಜನರಿಗೆ ಬೋಧಿಸಿ ಅವರು ಶಿಸ್ತು ಪಾಲಿಸುವಂತೆ ಮಾಡಲಾಗಿದೆ.

ಕೇಸರಿ ಬಣ್ಣದ ಸೀರೆಗಳನ್ನುಟ್ಟ ಸ್ವಯಂಸೇವಿಕೆಯರು ಅವರ ಹಿಂದೆ ಸ್ವಯಂಸೇವಕರೂ ಅತ್ತಿತ್ತ ವಾದ್ಯ ಮೇಳಗಳು — ಹಿಂದೆ ಅಧ್ಯಕ್ಷರ ರಥ. ನಾವೆಯಾಕಾರದ ಈ ರಥದಲ್ಲಿಯೆ ಸಂಯುಕ್ತೆಯನ್ನು ಪೃಥ್ವೀರಾಜನು ಎತ್ತಿದ್ದನೆಂದು ಪ್ರತೀತಿಯಿದೆ. ರಥಕ್ಕೆ ಎರಡು ಗೋಪುರಗಳು. ರೇಶ್ಮೆಯ ಮೇಲ್ಕಟ್ಟು, ೮1 ಎತ್ತುಗಳೇ ವಾಹಕರು, ಇವುಗಳ ಕೊಂಬುಗಳಲ್ಲಿ ಅಂಕಿಸಿದ ರಾಷ್ಟ್ರಧ್ವಜ. ಬರ್ಮದಿಂದ ಕಾವೀ ವಸ್ತ್ರಧಾರಿಗಳಾಗಿ ಬಂದಿದ್ದ ನೂರಾರು ಸನ್ಯಾಸಿಗಳು ವಾದ್ಯ ಬಾರಿಸುತಿದ್ದರು.

ಶಾಸನೋಲಂಘನ ಕಾಲದಲ್ಲಿ ಕರನಿರಾಕರಣಮಾಡಿ ಸಮಸ್ತವನ್ನೂ ಕಳೆದುಕೊಂಡು ಬರೋಡಾ ರಾಜ್ಯಕ್ಕೆ ತೆರಳಿದ್ದ ಚಿತಾಭಾಯಿ ಭಿಕಾಭಾಯಿಯವರೀ ಸರದಾರರು ಸಮಚಾಯಿಸಿದುದರಿಂದ ಇತ್ತಬಂದು ಸಾರಥಿಗಳಾಗಿದ್ದರು.

ಐನೂರು ಬಸ್ಸುಗಳಿದ್ದುವು. ತೀರಸಾಲಿದಾದುವು ಇತರ ಪ್ರಯಾಣಿಕರಿಗೆ [illegible]

## ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಮಂಡಳಗಳು
## ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಆಜ್ಞೆ ಪ್ರಕಾರ ರಾಜಿಯಿತ್ತವು-ಮುಂದೇನು?
### ★ ಹರಿಪುರದಲ್ಲಿ ೫೧ನೇ ಕಾಂಗ್ರೆಸ್ ಅಧಿವೇಶನ ಸಮಾರಂಭ ★

...ದಲ್ಲಿ, ಈ ಕೈದಿಗಳು ಕೇವಲ ರಾಜಕೀಯ ಕಾರಣಗಳಿಂದಾಗಿ ಅಹಿಂಸೆಯನ್ನವಲಂಬಿಸಿದುದಕ್ಕೆ ಕೈದುಹೊಂದುದಲ್ಲ. ಆದರೆ ಇವರಲ್ಲಿ ಎಷ್ಟೋ ಮಂದಿ, ಹಿಂಸಾತ್ಮಕ ಚಳವಳದಲ್ಲಿ ಸೇರಿದುದಕ್ಕಾಗಿ ಅಥವಾ ಆಯುಧಗಳನ್ನಿಟ್ಟುಕೊಂಡುದಕ್ಕಾಗಿ ಮಾತ್ರ ಕೋರ್ಟುಗಳಿಂದ ದಂಡನೆ ಹೊತ್ತವರು ಎಂದೇ ಗವರ್ನರರು ಅಭಿಪ್ರಾಯಪಡುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಬಂಗಾಳದಲ್ಲೂ ಪಂಜಾಬಿನಲ್ಲೂ ಇರುವರು (ಬಂಗಾಳದಲ್ಲಿ ೩೮೭, ಪಂಜಾಬಿನಲ್ಲಿ ೪೪) ಬಿಹಾರ್ದವರು ೧೫ ಮಂದಿಯೂ, ಸಂಯುಕ್ತ ಪ್ರಾಂತ್ಯದವರು ೧೬ ಮಂದಿಯೂ ಈ ಬಗೆಯ ಸ್ಥಿತಿಯಲ್ಲಿರುವರು. ಇವರನ್ನ ಬಿಡುಗಡೆ ಮಾಡಲು ಮಂತ್ರಿಗಳು ಅಪ್ಪಣೆ ಕೊಡಬೇಕಾಗಿಯೂ ಗವರ್ನರರು ಕೊಡದೆಂದಲ್ಲಿ ರಾಜೀನಾಮೆ ಕೊಡಬೇಕಾಗಿಯೂ ಮಂತ್ರಿಗಳಿಗೆ ಕಾರ್ಯಕಾರೀ ಮಂಡಲವು ತಿಳಿಸಿಯದೆ.

ಬಿಹಾರ ಮಂತ್ರಿಗಳು ಹೀಗೆ ತಿಳಿಸಿದರು— ಅಧಿಕಾರ ವಹಿಸಿದಂದಿನಿಂದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದೇ ನಮ್ಮ ಪ್ರಯತ್ನಗಳಾದುವು. ಎಷ್ಟು ಸಲ ಗವರ್ನರರೊಡನೆ ಈ ಪ್ರಸ್ತಾಪವೆತ್ತಿದರೂ, ಚರ್ಚೆಗಳು ಅನಂತವಾಗಿಯೇ ಬೆಳೆದವು, ಕೆಲಸವೇನೂ ಮುಂದೆ ಸಾಗಲಿಲ್ಲ. ಕೊನೆಗೆ ಕೈದಿಗಳ ಬಿಡುಗಡೆಗೆ ಅಪ್ಪಣೆ ಕೊಟ್ಟೆವು. ಆ ಗವರ್ನರರು ಗವರ್ನರ ಜನರಲರವರಿಂದ ಅಪ್ಪಣೆ ಮೇರೆಗೆ ನಿರ್ದೇಶ ಪಡೆದು ನಮ್ಮ ಅಪ್ಪಣೆಯನ್ನು ತಾವೂ ಸಮ್ಮತಿಸಲಾರೆವೆಂದರು. ಹೀಗಿರುವಾಗ, ನಾವು ರಾಜೀನಾಮೆ ಕೊಡದೆ ಮತ್ತೇನನ್ನು ಮಾಡಬಹುದು. ನಮ್ಮೆಲ್ಲ ಕೂಟದ ರಾಜೀನಾಮೆಯನ್ನೀಗ ಗವರ್ನರರಿಗೆ ಒಪ್ಪಿಸಿದ್ದೇವೆ.

[ಜನತೆಯು ಶಾಂತಿಯನ್ನು ಪ್ರಬಲವಾಗಿ ಬೆದರಿಸುವ ಯಾವುದೊಂದು ವಿಷಯದಲ್ಲಿ ಗವರ್ನರ ಜನರಲರು ತಮ್ಮ ಮನಸಿಗೆ ನಿರ್ಧಾರವಾದಂತೆ ಗವರ್ನರರಿಗೆ ಅಂತಹ ಯಾವ ಅಪ್ಪಣೆಕೊಡದಂತೆ ನಿರ್ದೇಶಿಸಬಹುದೆಂದು ಆಕ್ಟಿನ 126ನೇ ಕಲಮಿನಲ್ಲಿದೆ ]

ಸುಭಾಷಚಂದ್ರಬೋಸರು ಬಿಹಾರದ ಮಂತ್ರಿಗಳು ಮಾಡಿದ್ದು ಸರಿಯಾಗಿದೆ. ಇತರ ಪ್ರಾಂತಿಕ ಮಂತ್ರಿಮಂಡಲಗಳು ಇದರಂತೆ ಮಾಡುವುವಾಗಿ ಸುಭಾಷರ ಭರವಸೆಯಿದೆ. ಗವರ್ನರರ ಇದರಲ್ಲಿ ತಡೆಮಾಡದಿದ್ದಲಿ ಇದೊಂದ ಹೊಸ ವಿಜಯದಿಂದ ಹೊಸ ವರ್ಷವನ್ನು ಪ್ರಾರಂಭಿಸಬಹುದು ಎಂದರು.

ಸಂಯುಕ್ತ ಪ್ರಾಂತ್ಯದಲ್ಲೂ ಇದೇ ಅಭಿಸಂಧಿ ಉಂಟಾಗಿದೆ. ಗವರ್ನರರೊಡನೆ ಮಂತ್ರಿಕೂಟವು ಒಂದು ತಾಸ್ ವರೆಗೆ ಚರ್ಚಿಸಿದ ಬಳಿಕ ಮಂತ್ರಿಗಳೇ ಪುನಃ ತಮ್ಮ [illegible] ಜರುಗಿಸಿದರು. ಮಂತ್ರಿಗಳ ಟೆಲಿಫೋನಿನ ಮೂಲಕವಾಗಿ ಹರಿಪುರದ [illegible] 15 ವ [illegible] ಕೈದಿಗಳ ವಿಷಯ ಇನ್ನು ಚರ್ಚಿಸುತ್ತ, ಗವರ್ನರರ ಒಂದ ಕಾರಣ [illegible] ಜವಾಬು [illegible]

### “ಕಾಂಗ್ರೆಸ್ಸಿನಷ್ಟು ದೊಡ್ಡ ಸಂಸ್ಥೆಯು ಜಗತ್ತಿನಲ್ಲಿ ಇನ್ನೊಂದಿಲ್ಲ”

[illegible] 3 [illegible] ಸಂಸ್ಥೆ [illegible] ಗಳ ಚುನಾವಣೆ [illegible] ದೇಶದ ಕಾಂಗ್ರೆಸ್ಸಿನಲ್ಲಿ ಹೆಚ್ಚಿನ [illegible] ಕಾಂಗ್ರೆಸ್ ಸದಸ್ಯತನದ [illegible] ಕಾಂಗ್ರೆಸು ಕಮಿಟಿಗಳ ಚುನಾವಣೆಗಳ [illegible] ಕ್ಷಕರು, ವಿದ್ಯಾರ್ಥಿಗಳ ಸಮಯುಕ್ತನ [illegible] ಕರು ತಮ್ಮ ತಮ್ಮ ಹಿತರಕ್ಷಣೆಗಾಗಿ ಕಾಂಗ್ರೆಸ್ಸಿನ ಆಶ್ರಯವನ್ನು ಪಡೆದಿರುವರು. ಇವರ ದೆಸೆಯಿಂದ ಆಪ್ತ ಆದರ್ಶ ಕಾಂಗ್ರೆಸ ವಾಲರು ಹಿನ್ನೆಲೆಗೆ ಸರಿದಿರುವರು. ಆ ಭಾ. ಕಾಂಗ್ರೆಸ್ ಕಮಿಟಿಯ ಚುನಾವಣೆಯಲ್ಲಿ ಹಲವು ಕಡೆಗಳಲಿ ಈ ತೆರ ನಡೆದಿರುವುದು. ಆದ್ದರಿಂದ ಯೋಗ್ಯರನ್ನು ಬಿಟ್ಟುಹೋಗದಂತೆ ಚುನಾವಣೆಗಳು ಒಳ್ಳೇ ಶಿಸ್ತಿನಿಂದ ನಡೆಯುವ ವ್ಯವಸ್ಥೆಯು ಬೇಗನೇ ಆಗಬೇಕು ಎಂಬ ಅಭಿಪ್ರಾಯವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯವರಾದ ಶ್ರೀ। ಕೃಪಾಲಾನಿಯವರು, ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಮಾಡಿಕೊಂಡ ವಾರ್ಷಿಕ ವರದಿಯಲಿದೆ.

ಇಬ್ಬರ ನ್ಯಾಯ ಮೂರನೆಯವನಿಗೆ ಲಾಭ’ ಎಂಬ ನಡೆ ಸರಿಯಾಗಿ ಕಾಂಗ್ರೆಸ್ಸಿನೊಳಗೆ ಕಿಸಾನ್ ಸಂಘ, ಮಜೂರ ಸಂಘ ಇತ್ಯಾದಿ ಸಂಸ್ಥೆಗಳ ಕುರಿತು ಭೇದಾಭಿಪ್ರಾಯವು ಉಂಟಾಗಿ, ಮೂರನೆಯವರಿಗೆ ಉಪಕಾರವಾಗದಂತೆ ಅವುಗಳ ವಿಚಾರ ಪರಸ್ಪರ ಸಹಕಾರದಿಂದ ನಡೆಯುವ ವ್ಯವಸ್ಥೆಯಾಗಬೇಕೆಂದೂ ಶ್ರೀ। ಕೃಪಾಲನಿಯವರ ವರದಿಯಲ್ಲಿದೆ.

ಶ್ರೀ। ಜವಾಹರಲಾಲ ನೆಹರೂರವರೂ ತನ್ನ ರಾಷ್ಟ್ರಪತಿ ಅಧಿಕಾರವನ್ನು ಬಿಟ್ಟುಕೊಡುವ ಈ ಸಮಯದಲ್ಲಿ ತನ್ನ ಅಧ್ಯಕ್ಷತನದ ಅವಧಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಲಾಪಗಳ ಕುರಿತು ವರದಿಮಾಡಲಿದ್ದಾರೆ.

## ರಾಷ್ಟ್ರಪತಿ
## ಭಾರತಗೌರವ ಸುಭಾಷ್ಚಂದ್ರಬೋಸ್,
### ಇವರ ಸಂದೇಶ.

ಐವತ್ತು ವರ್ಷಗಳ ಕಾರ್ಯಸಪನ್ನಜೀವ ಮತ್ತು ಅರ್ಧಕೋಟಿಗೂ ಕಡಮೆ ಸಂಖ್ಯೆಯ ಸದಸ್ಯವರ್ಗ ಇಷ್ಟು ನಮ್ಮ ರಾಷ್ಟ್ರಸಮಿತಿಯ ಕಾರ್ಯವು ಸ್ವಾತಂತ್ರ್ಯಸಾಧನೆಯ ಕಾರ್ಯಕ್ರಮದಲಿ [illegible] ಪ್ರತಿ [illegible] ವಾಗುವುದು. ಯುವಕರು, ಕೃಷಿಕರು ಕೈಗೆಲಸದವರು, ಕೂಲೀಜನರು, ಶಿಕ್ಷಿತರು ಅಶಿಕ್ಷಿತರು [illegible] ಹಿಂದ [illegible] ಪ್ರತಿಯೊಬ್ಬ ಭಾರತೀಯನೂ ಸ್ವಾತಂತ್ರ್ಯ [illegible] ದಳದಲ್ಲಿ ಸೇರಿ ಕಾದಬೇಕಾಗಿದೆ. ದಾಸ್ಯ ಮತ್ತು ಸಾಮ್ರಾಜ್ಯ [illegible] ಇವೆರಡರೊಳಗೆ [illegible] ಒಪ್ಪಿಕೊಳ್ಳುವುದಕ್ಕೆ ವಿಶೇಷವಾಗಿರುವ ಅವಕಾಶವೆ [illegible] ಅಗಲೆ ಸ್ಥಿತವಾರ್ಗವನ್ನು ಅವಲ್ಲಂಬಿಸಲಾರದವರು ಮುಂದೆ [illegible] ಮುನ್ನಡೆಯಲಿಲ್ಲ. ಸ್ವಾತಂತ್ರ್ಯಕ್ಕಾಗಿ ಸಾಧಿಸದವರು ಸ್ವಾತಂತ್ರ್ಯವಡೆಯಲು ಅರ್ಹರಲ್ಲ.

ಮುಂಬಯಿ 13–2–38



ಹರಿಪುರ ಕಾಂಗ್ರೆಸ ಅಧಿವೇಶನಕ್ಕೆ ಈ ಬಾರಿಯ ಅಧ್ಯಕ್ಷರಾದ ಸುಭಾಷ್ಚಂದ್ರ ಬೋಸರನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವ ರಥ

### ರಾಜಕೀಯ ಕೈದಿಗಳು

ಕೊಂಗ್ರೆಸ್ ಕಾರ್ಯಕಾರೀ ಮಂಡಲವು ಆರು ತಾಸುಗಳ ತನಕ ಪರ್ಯಾಲೋಚಿಸುತಿದ್ದ ವಿಷಯವೆಂದರೆ, ರಾಜಕೀಯ ಕೈದಿಗಳ ಬಿಡುಗಡೆಯ ವಿಚಾರ. ಈ ಮಧ್ಯೆ ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿನ ಮಂತ್ರಿಮಂಡಲಗಳು ಏನನ್ನು ತಿಳಿಸುವುವೊ ಎಂದೇ ಕಾಯುತ್ತಿರಬೇಕಾಯಿತು. ಅತ್ತ ಮಹಾತ್ಮಾಜಿಯವರ ಮೌನವ್ರತ ಮುಗಿಯುವ ತನಕವೂ ಕಾಯಬೇಕಾಯಿತು. ಕೊಂಗ್ರೆಸ್ ಮಂತ್ರಿಕೂಟಗಳು ಪ್ರತಿಯೊಂದು ಪ್ರಾಂತ್ಯದಲ್ಲೂ ರಾಜಕೀಯ ಕೈದಿಗಳ ಬಿಡುಗಡೆಗಾಗಿ ಯತ್ನಿಸಬೇಕೆಂದು ಮೊದಲೇ ಸೂಚಿಸಲಾಗಿದೆ. ಚುನಾವಣೆಯ ಕಾಲಕ್ಕೆ ಇದು ಕೊಟ್ಟ ವಾಗ್ದಾನವಷ್ಟೆ. ಅದನ್ನು ಪೂರಯಿಸಬೇಕೆಂಬುದಷ್ಟೆ ಕರ್ತವ್ಯ. ಅಲ್ಲಲ್ಲಿನ ಜೈಲುಗಳಲ್ಲಿ ಈ ಕೈದಿಗಳು ಉಪವಾಸವಾಗಿದ್ದಾಗ ಅವರಿಗೆ ಆಶ್ವಾಸನೆ ಕೊಟ್ಟು, ಅವರ ವ್ರತಭಂಗವನ್ನು ಮಾಡಿದುದಕ್ಕೀಗ ಪ್ರಯತ್ನಪೂರ್ವಕ ಅವರನ್ನು ಬಿಡುಗಡೆ ಮಾಡಬೇಕಾಗಿ ಸದಿಚ್ಛೆ. ಅಲ್ಲಿನ ಗವರ್ನರುಗಳ ಅಭಿಪ್ರಾಯ...

### ಭಂಗಿಯ ಕೆಲಸವು ಮಹತ್ವಾದ ಸಾಮಾಜಿಕ ಸೇವೆಯು

ಕಾಂಗ್ರೆಸ್ ಅಧಿವೇಶನಕ್ಕಾಗಿ ಹರಿಪುರಕ್ಕೆ ತೆರಳಿದ ಮಹಾತ್ಮಾಜಿಯವರು ಅಲ್ಲಿ ಕೂಡಿದ ಸ್ವಯಂಸೇವಕರನ್ನುದ್ದೇಶಿಸಿ — ನಾನ ಕಾಂಗ್ರೆಸ್ಸಿನೊಳಗಿರುವುದಿಲ್ಲ. ನಾನು ಕಾಂಗ್ರೆಸ್ ಸದಸ್ಯನಲ್ಲ. ಕಾಂಗ್ರೆಸ್ ಡೆಲಿಗೇಟನಲ್ಲ. ಅದರಲ್ಲಿ ಒಂದು ರಹಸ್ಯವಿದೆ. ಕಾಂಗ್ರೆಸ್ಸಿನ ಹೊರಗಿದ್ದುದರಿಂದಲೇ ನಾನು ಕಾಂಗ್ರೆಸ್ಸಿನ ಹೆಚ್ಚಿನ ಸೇವೆಯನ್ನು ಮಾಡತಿದ್ದೇನೆಂದು ನನ್ನ ನಂಬಿಗೆಯಾಗಿರುತ್ತದೆ. ದೇವರ ಕೃಪೆಯಿಂದ ನನ್ನಲಿ ಶಕ್ತಿಯಿರುವ ತನಕ ನಾನದರ ಸೇವೆಯಲ್ಲಿ ದುಡಿಯುವೆನು ಎಂದರು. ವಿಠ್ಠಲನಗರದಲ್ಲಿ ಈ । ಅಧಿವೇಶನಕ್ಕಾಗಿ ನಡೆದ ಏರ್ಪಾ...

ತನ್ನ ಎರಡು ವರ್ಷದ [illegible] ಗಳನ್ನು ಹರಿಪುರ ಕಾಂಗ್ರೆಸ್ [illegible] ರ ಪಂಡಿತ ಜವಾಹರಲಾಲ ನೆಹರೂ ರವರು

...ಡುಗಳ [illegible] ಮಹಾತ್ಮಾಜಿ [illegible] ಸಂದರ್ಶಿಸಿ [illegible] ಅಲ್ಲಿನ ಸ್ವಯಂಸೇ [illegible] ಭಂಗಿ ಕೆಲಸವನ್ನು [illegible] ಸವು ರಾಷ್ಟ್ರಪತಿ [illegible] ಕೆಲಸಕ್ಕಿಂತ ಕೀಳುತರದೆ [illegible] ಸೇವೆಮಾಡುತ್ತಿದ್ದಾರೆ. ನೀವೂ ಸೇವಕರಾದು [illegible] ಕೆಲಸಕ್ಕೆ ನಾನು [illegible] ಮೌಲ್ಯವನ್ನು ಕೊಡುತ್ತಿದ್ದೇನೆ [illegible] ಅನೇಕರು [illegible] ಸೇವೆಯನ್ನು [illegible] ಅವರನ್ನು [illegible] ಹಲವರ ನಂಬಿಕೆಯಾಗಿರುತದೆ [illegible] ಭಂಗಿ ಕೆಲಸವನ್ನು [illegible] ನೀವು ಎಳೇ [illegible] ನಾನು ನನ್ನ ಕಾಯಿಯನ್ನು [illegible] ಹಾಗೆ, ನಾನು ಭಂಗಿಯನ್ನೇಕೆ [illegible]

★

### ರೈತರ ಋಣವಿಮೋಚನೆಯ ಕಾನೂನು

ಗವರ್ನರ ಜನರಲರ ಸಮ್ಮತಿ, ಈ ಬಿಲನ್ನು ಮದ್ರಾಸ ಗವರ್ನರರು ಕಳಿಸಿದ್ದಾರೆಂದು ವಾರ್ತೆ.

### ಚಲಿಸುವ ವಿಶ್ವ ವಿದ್ಯಾನಿಲಯ
### ಪ್ರದರ್ಶನ–ಮಿಲಿಯಗಟ್ಟಳೆ ಜನರ ಶಿಕ್ಷಣ ಸ್ಥಳ
#### ಚರಕದ ಮೇಲೆ ನನ್ನ ವಿಶ್ವಾಸವು ಹೆಚ್ಚುತ್ತಿದೆ ಗಾಂಧಿಜಿ

ಕಳೆದ ತಾ ೧೧ರಲ್ಲಿ ಗಾಂಧಿಜಿಯವರು ಹರಿಪುರದ ವಿಠ್ಠಲನಗರದಲ್ಲಿ ಕಾಂಗ್ರೆಸ್ ಪ್ರದರ್ಶನದ ತೆರೆಯೋಣ ಸಮಾರಂಭವನ್ನು ನೆರವೇರಿಸಿದರು. ಈ ಪ್ರದರ್ಶನದಲ್ಲಿ ಭಂಗಾರ ಮತ್ತು ಆನೆಯ ದಂತದಿಂದ ತಯಾರಿಸಲ್ಪಟ್ಟ ಒಂದು ಸುಂದರವಾದ ಸಿಂಹಾಸನ ಬೆರಳಿನ ಉಂಗುರದೊಳಗೆ [illegible] ಒಂದು ಶಾಲು ಇತ್ಯಾದಿ ಗುಡಿಕೈಗಾರಿಕೆಯಿಂದ ಸಿದ್ಧವಾಗಿರುವ ಅನೇಕ ವಿಶಿಷ್ಟ ವಸ್ತುಗಳು ವಿಶಿಷ್ಟ ತರದ ಕಲೆಯಿಂದ ಕೂಡಿದ ಚಿತ್ರಗಳು ಅಲ್ಲಿ ಪ್ರದರ್ಶಿಸಲ್ಪಟ್ಟಿವೆ. ಅಲ್ಲಿ [illegible] ಸ್ಟಾಲುಗಳಿವೆ [illegible] ಸಂಯುಕ್ತ ಪ್ರಾಂತ್ಯ ಮೈಸೂರು [illegible] ಇತ್ಯಾದಿ ಕಡೆಗಳ [illegible] ಈ ಪ್ರದರ್ಶನದಲ್ಲಿ ಭಾಗವಹಿಸಿವೆ.

[illegible]

★

### ಕೊಮನ್ಸ್ ಸಭೆಯಲ್ಲಿ

[illegible] ಸರಕಾರವು [illegible] ಸಂಬಳ [illegible] ಸ್ವತಃ ಈ ಸಂಬಳ [illegible] ಸಂಪೂರ್ಣ ಸ್ವಾತಂತ್ರ್ಯ [illegible] ಸರಕಾರವ [illegible] ಸರಕಾರದ [illegible] ಗವರ್ನರರು [illegible] ನಾನಾ ಪ್ರಶ್ನೆ [illegible]

★

### ಗಿರಣಿ ಕೆಲಸಗಾರರ ಸಂಬಳ

ಬೊಂಬಾಯಿ ಸರಕಾರವು [illegible] ಮಾಸಿಕ ಸಂಬಳ [illegible] ರೂಪಾಯಿಗೆ [illegible] ಸಂಖ್ಯೆ [illegible]

# ಮಂಗಳೂರು.

(ನಮ್ಮ ಸ್ವಂತ ಬಾತ್ಮಿದಾರರಿಂದ)

## ಕ್ಷಯರೋಗ ನಿವಾರಣ ನಿಧಿ.

ಲೆಡಿ ಲಿನ್ಲಿತ್‌ಗೋ ರವರು ಹೊರಡಿಸಿದ ವಿನಂತಿ ಪ್ರಕಾರ ಕ್ಷಯರೋಗ ನಿವಾರಣ ನಿಧಿಗೆ ಹಣಕೂಡಿಸುವರೆ ಉಪಾಯಗಳನ್ನು ಕಲ್ಪಿಸಲು ಒಂದು ಸಭೆಯು ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಹಾಲಿನಲ್ಲಿ ಇದೇ ತಾ. ೧೩ ರಲ್ಲಿ ಜರಗಿತು.

ಬೇಗಮ್ ಸುಲ್ತಾನ್ ಮಿರ್ ಅಮಿರುದ್ದೀನ್, ಡಾ. ಮಿಸ್. ಲೊಂಬಾರ್ಡ, ಶ್ರೀ ಮಹಾಬಲ ಹೆಗ್ಡೆ, ಡಾ. ವಿಠಲ ಶೆಟ್ಟಿ, ಕೆಪ್ಟನ್ ಕೆ. ಕೆ. ನಂಬಿಯಾರ್, ಶ್ರೀ ಬಿ. ವೆಂಕಟ್ರಾಯ ಬಾಳಿಗ, ಇವೆ ಮೊದಲಾದ ಮಹನೀಯರು ಮಹಾಪೀಡೆಯಾದ ಕ್ಷಯರೋಗದಿಂದ ರಕ್ಷಣೆಯಾಗಲು ಎಲ್ಲರೂ ಮೇಲಿನ ನಿಧಿಗೆ ಉದಾರ ಸಹಾಯವೀಯಬೇಕಾಗಿ ಕೋರಿ ಭಾಷಣವಿತ್ತರು.

## ಮುನಿಸಿಪಲ್ ಸಭೆ:

ಮುನಿಸಿಪಲ್ ಸಭೆಯನ್ನು ವಿಚಾರಿಸದೆ, ಕಮಿಶನರು ದೇವಾವೆಗಳಿಗೆ ಲೈಸನ್ಸು ಕೊಡಬಹುದೊ ಮತ್ತು ಕಮಿಶನರಾದ ಶ್ರೀ ಗೋವಿಂದರಾಜುಲು ನಾಯಿಡುರವರು ಕಳೆದ ದಶಂಬರ ತಿಂಗಳಲ್ಲಿ ಹೊಲಿವುಡ್ ಸಿಟಿ ಶೋಸ್‌ರವರಿಗೆ ಮುನಿಸಿಪಲ್ ಸಭೆಯ ಅನುಮತಿಯಿಲ್ಲದೆನೆ ಹೇಗೆ ಲೈಸನ್ಸು ಕೊಡುವವರಾದರು ಎಂಬ ವಿಚಾರವು ಮೊನ್ನೆ ಸೋಮವಾರ ತಾ ೧೪ರಲ್ಲಿ ಜರಗಿದ ಮುನಿಸಿಪಲ್ ಸಭೆಯಲ್ಲಿ ಚರ್ಚೆಗೆ ಬಂತು. ಕಮಿಶನರ ವರ್ತನೆಯನ್ನು ಬಹುಮಂದಿ ಸದಸ್ಯರು ತೀವ್ರವಾಗಿ ಖಂಡಿಸಿದರು. ಸಭಾಧ್ಯಕ್ಷರು ಶಾಂತಿಯಾಗುವ ತರದ ಒಂದು ಸ್ಟೇಟ್‌ಮೆಂಟನ್ನು ಮಾಡದಿರುತ್ತಿದ್ದರೆ ರೋಷಾವೇಶದ ಮಾತುಗಳ ಸಂಗ್ರಾಮವೇ ನಡೆಯುವ ಸಂಭವಗಳುಂಟಾಗಿದ್ದವು. ಪ್ರಾರಂಭದಲ್ಲಿ ನವಾಬ ಅಬ್ದುಲ್ ಹಕೀಮರ ನಿಧನದ ಕುರಿತು ಸಂತಾಪಸೂಚಿಸಿ, ಅಧ್ಯಕ್ಷರಿಂದ ಮುಂದೆ ತರಲಾದ ಠರಾವು ಬಹುಮತದಿಂದ ಮಂಜೂರಾತಿ ಹೊಂದಿತು.

ಸ್ವಾತಂತ್ರ್ಯ ದಿನಾಚರಣೆ ದಿವಸ ಅಂದರೆ ಜನವರಿ ತಾ ೨೬ರಲ್ಲಿ ನಡೆದ ಸಭೆಯ ಕಾರ್ಯ ವೃತ್ತಾಂತವನ್ನು ಅಧ್ಯಕ್ಷ ಡಾ ವಿಠಲ ಶೆಟ್ಟರಿಂದ ಓದಲಾಗಿ, ಅದು ಸಭೆಯ ಅಂಗೀಕಾರದ ಬಗ್ಗೆ ಮಂಡಿಸಲಾಯಿತು. ಈ ವಿಚಾರದಲ್ಲಿ ಮಿ। ಶ್ರೀಪ್ಪರು ಈ ಸಭೆಯ ಕುರಿತು ಕಳುಹಿಸಲಾದ ನೋಟಿಸಿನ ಮೇಲೆ, ಸ್ವಾತಂತ್ರ್ಯ ದಿನಾಚರಣೆಗೂ ನಗರ ಸಭೆಗೂ ಯಾವ ತರದ ಸಂಬಂಧವಿರುವುದೆಂದು ಕೇಳಿ ಬರೆದುದನ್ನು ಡಾ ಶೆಟ್ಟರು ಖಂಡಿಸಿದರು. ನೋಟಿಸಿನ ಮೇಲೆ ತಮ್ಮ ಅಭಿಪ್ರಾಯವನ್ನು ಸೂಚಿಸುವ ಬದಲಾಗಿ ಶ್ರೀ ಶ್ರೀಪ್ಪರು ಬೇರೆ ಒಂದು ಪತ್ರವನ್ನು ಬರೆಯಬಾರದಿತ್ತೆ ಎಂಬುದಾಗಿ ಕೆಲವರು ಅಭಿಪ್ರಾಯ ಸೂಚಿಸಿದರು. ನಗರ ಸಭಾಧ್ಯಕ್ಷರಿಗೆ ಸ್ವಾತಂತ್ರ್ಯ ದಿನಾಚರಣೆಯ ಕುರಿತು ತಾ ೧೬ನೆ ಆಗೋಸ್ತು ೧೯೩೧ರಲ್ಲಿ ಜರಗಿದ ಸಭೆಯಲ್ಲಿ ಸಂಪೂರ್ಣ ಅಧಿಕಾರವು ಕೊಡಲಾಗಿದೆಂದೂ ಅದರಿಂದ ಶ್ರೀ ಶ್ರೀಪ್ಪರು ಈ ಪತ್ರ ಬರೆದು ಕಳುಹಿಸಿದುದು ತಪ್ಪೆಂದೂ ವಾದಿಸಲಾಯಿತು.

ನಂತರ ನಗರ ಸಭೆಯ ಅನುಮತಿಯಿಲ್ಲದೆ ಕಮಿಶನರು ಹೊಲಿವುಡ ಸಿಟಿ ಶೋಸ್‌ನವರಿಗೆ ಲೈಸನ್ಸು ಕೊಟ್ಟ ವಿಚಾರ ಪ್ರಶ್ನೋತ್ತರ ಪ್ರಾರಂಭವಾಗಲು, ಡಾ। ಶೆಟ್ಟರು ಆ ಘಟನೆಯ ಕುರಿತು ಒಂದು ಪ್ರಕಟಣೆಯನ್ನು ಮಾಡಿದರು. ಈ ವಿಚಾರದಲ್ಲಿ ಸ್ಥಳೀಯ ಕೆಲವು ಪತ್ರಿಕೆಗಳು, ಕಮಿಶನರ ಕುರಿತು ಮತ್ತು ಕೆಲವು ಮಂದಿ ಸದಸ್ಯರ ಕುರಿತು ಹುರುಳಿಲ್ಲದ ಟೀಕಾ ವಿಮರ್ಶೆಯನ್ನು ಮಾಡಿದುದರ ಕುರಿತು ಅಧ್ಯಕ್ಷರು ವಿಷಾದಿಸಿದರು.

ಮುನ್ಸಿಪಲ್ ಸಭೆಯು ಹೊಲಿವುಡ್ ಸಿಟಿ ಶೋಸ್‌ರವರಿಗೆ ಲೈಸನ್ಸು ಕೊಡುವ ವಿಚಾರದಲ್ಲಿ ಇದ್ದ ಕೌನ್ಸಿಲಿನ ವಿರುದ್ಧ ಅಭಿಪ್ರಾಯವು ತನಗೆ ತಿಳಿದಿರಲಿಲ್ಲವೆಂದೂ, ಇತರ ಕಡೆಗಳಲ್ಲೂ ಈ ತರದ ದೇವಾವೆಗಳಿಗೆ ಲೈಸನ್ಸು ಕೊಡಲ್ಪಟ್ಟಿರುವುದರಿಂದ, ಕ್ರಿಸ್‌ಮಸ್ ಸಮಯದಲ್ಲಿ ಜನರ ವಿನೋದಕ್ಕಾಗಿ ತಾನು ಈ ಲೈಸನ್ಸು ಕೊಡುವವನಾದೆನೆಂದೂ, ಲೈಸನ್ಸು ಕೊಡಲು ಪ್ರತಿಬಂಧವಿರುವ ನಗರಸಭೆಯ ಠರಾವು ಯಾವುದೂ ಇಲ್ಲವೆಂದೂ ಕಮಿಶನರು ವಾದಿಸಿದರು. ದೇವಾವೆಯಲ್ಲಿ ಜೂಜಾಟವು ನಡೆಯುವುದಿಲ್ಲವೆಂಬುದಾಗಿ ಹೊಲಿವುಡ್ ಸಿಟಿ ಶೋಸ್‌ನವರು ವಾಗ್ದಾನವಿತ್ತಿದ್ದರಂತೆ.

ಕಳೆದ ಒಕ್ಟೋಬರದಲ್ಲಿ ಹೊಲಿವುಡ್ ಸಿಟಿ ಶೋಸ್‌ರವರು ತನ್ನ ಬಳಿಗೆ ಲೈಸನ್ಸಿಗಾಗಿ ಬಂದಿದ್ದಾಗ, ಅದನ್ನು ಕೊಡಲಾಗುವುದಿಲ್ಲವೆಂದು ತಾನು ಹೇಳಿದ್ದೆನೆಂದೂ, ತಾನು ಮುಂಬಯಿಗೆ ತೆರಳುವ ಮುಂಚಿನ ದಿನ ಕಮಿಶನರು ಬಂದು ತನ್ನ ಅಭಿಪ್ರಾಯವನ್ನು ಕೇಳಲು, ಆಗ ತಾನು ಅಸಮ್ಮತವನ್ನು ಸೂಚಿಸಿರುವೆನೆಂದೂ, ಶ್ರೀ ಮಲ್ಯರವರ ಸಭಾಧ್ಯಕ್ಷ ಅವಧಿಯಲ್ಲಿ ಲೈಸನ್ಸು ಕೊಡಲಾದುದೆಂದೂ, ಕೌನ್ಸಿಲಿನ ಅಭಿಪ್ರಾಯವು ಕಮಿಶನರಿಗೆ ತಿಳಿದಿಲ್ಲವಾಗಿತ್ತೆಂದೂ, ಕ್ರಿಸ್‌ಮಸ್ ಸಮಯದಲ್ಲಿ ಜನರ ವಿನೋದಾರ್ಥವಾಗಿ ಲೈಸನ್ಸು ಕಮಿಶನರಿಂದ ಕೊಡಲಾಯಿತೆಂದೂ ಅಧ್ಯಕ್ಷ ಶ್ರೀ ಶೆಟ್ಟರು ಪ್ರಕಟಿಸಿ ಮಾಡಿದರು.

ಶ್ರೀ ನೆಲ್ಲಿಕಾಯಿ ವೆಂಕಟ್ರಾಯರ ಮನೆಯಲ್ಲಿ ಹತ್ತು ಜನ ಕೌನ್ಸಿಲರು ಕೂಡಿ ಈ ದೇವಾವೆಗೆ ಲೈಸನ್ಸು ಕೊಡುವ ಕುರಿತು ಆಲೋಚನೆನಡೆದಿರುವಾಗ ದೂರೆಲ್ಲಾ ಕಮಿಶನರ ಮೇಲೆಯೇ ಯಾಕೆ ಹೊರಿಸಬೇಕೆಂಬುದಾಗಿ ಶ್ರೀ ಮಾಧವರಾಯರು ಅಭಿಪ್ರಾಯ ಪಡುವವರಾದರು. ದೇವಾವೆಗೆ ದೀರ್ಘ ಸಮಯದಲ್ಲಿರುವಂತೆ ಶ್ರೀ ನೆಲ್ಲಿಕಾಯಿ ವೆಂಕಟ್ರಾಯರಲ್ಲಿ ಕೆಲವು ಕೌನ್ಸಿಲರ ಸಭೆ ಸೇರಿದೆಂದು ಶ್ರೀ ರಂಗರಾಯರು ತಿಳಿಸಿದರು. ಅಂತೂ ಇಂತೂ ಹೊಲಿವುಡ್ ವಿವಾದವು ಡಾ। ಶೆಟ್ಟರ ವ್ಯವಹಾರ ಕುಶಲತೆಯಿಂದ ಶಾಂತರೀತಿಯಲ್ಲಿ ಕೊನೆಗೊಳಿಸಲ್ಪಟ್ಟಿತು. ನಂತರ ನಿತ್ಯದ ಕೆಲವು ಕಾರ್ಯಗಳನ್ನು ಮುಗಿಸಿ ಸಭೆಯು ಮುಕ್ತಾಯವಾಯಿತು.

## ಸ್ತ್ರೀಯೋರ್ವಳಿಗೆ ಮರಣ ದಂಡನೆ ವಿಧಿಸಲಾಯಿತು

ಆಭರಣಗಳಿಗಾಗಿ ಮೂರು ವರ್ಷದ ಒಂದು ಮಾಪಿಳ್ಳ ಮಗುವನ್ನು ಕೊಲೆ ಮಾಡಿದುದಕ್ಕಾಗಿ, ಮಾಪಿಳ್ಳ ಸ್ತ್ರೀಯೋರ್ವಳಿಗೆ ಜಿಲ್ಲಾ ಜಡ್ಜರಾದ ಮಿರ್ ಅಮಿರುದ್ದೀನರು ಮರಣ ದಂಡನೆಯನ್ನು ವಿಧಿಸಿರುವರು.

ಸ್ಥಳೀಯ ಕೆನರಾ ಬ್ಯಾಂಕಿನ ಶ್ರೀ ಕೃಷ್ಣ ಭಂಡಾರಿಯವರ ಉತ್ಸಾಹದಲ್ಲಿ ನಡೆಯುವ ಮಂಗಳೂರು ಬೋಟ್ ಕ್ಲಬ್

## ಒಂದುವರೆ ತಿಂಗಳು ಸಮುದ್ರದ ಮೇಲೆ!

ಉಳ್ಳಾಲದ ನಾಲ್ಕು ಜನ ಬೆಸ್ತರ ವಿಷಾದಮಯ ಅನುಭವದ ಕುರಿತು ಒಂದು ವಾರ್ತೆಯು ಬಂದಿರುತ್ತದೆ. ತಿಂಗಳ ಹಿಂದೆ ಒಂದು ದಿನ ರಾತ್ರೆ ಮೀನು ಹಿಡಿಯುವುದಕ್ಕಾಗಿ ಆ ಬೆಸ್ತರು ತಮ್ಮ ದೋಣಿಯಲ್ಲಿ ಸಮುದ್ರಕ್ಕೆ ತೆರಳಿದವರು ತಮ್ಮ ಕಾರ್ಯವನ್ನು ನಡೆಸಿ ಬರುವರೆ ದಿಕ್ಕುತಪ್ಪಿದವರಾಗಿ, ತನ್ಮಧ್ಯೆ ದೋಣಿಯು ಕವುಚಿಬಿದ್ದು ಅದನ್ನು ಚಲಿಸುವ ಉಪಕರಣಗಳು ಕಳೆದುಕೊಂಡುದರಿಂದ ಒಂದುವರೆ ತಿಂಗಳ ಕಾಲ ಸಮುದ್ರದ ಮೇಲೆ ನೀರು ಆಹಾರವಿಲ್ಲದೆ ತೇಲಾಡಿ, ೩ ಜನರು ಮೃತರಾದರು. ಪ್ರಜ್ಞೆತಪ್ಪಿದ ಉಳಿದವನೊಬ್ಬನನ್ನು ಮೂರನೇ ಶವದೊಂದಿಗೆ ಕೂಡಿದ ಆ ದೋಣಿಯನ್ನು ಸ್ಟೀಮರ್ ನವರು ರಕ್ಷಿಸಿ ಮಂಗಳೂರಿಗೆ ಕಳುಹಿಸಲಾಯಿತು. ಪ್ರಜ್ಞೆತಪ್ಪಿದವನು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವನು.

## ವಾರ್ಷಿಕೋತ್ಸವಗಳು.

ಸ್ಥಳೀಯ ಸೈಂಟ್ ಅಲೋಸಿಯಸ್ ಕಾಲೇಜಿನ ಯೂನಿಯನ್ ಸಂಘದ ವಾರ್ಷಿಕೋತ್ಸವವು ನಿನ್ನೆ ತಾ ೧೨ರಲ್ಲಿ ಅತಿ ವಿಜೃಂಭಣೆಯಿಂದ ಜರುಗಿತು. ವಂದೆ ಮಾತರಂ ಗೀತೆಯು ಹಾಡಲ್ಪಟ್ಟ ನಂತರ, ಕಾಲೇಜಿನ ಪ್ರಿನ್ಸಿಪಾಲರಿಂದ ಸ್ಪರ್ಧಾ ಬಹುಮಾನಾದಿಗಳ ವಿತರಣೆಯ ನಂತರ ಫಲಾಹಾರ ವಿನೋದ ಇತ್ಯಾದಿಗಳಿಂದ ಕೂಡಿದ ಕಾರ್ಯಕ್ರಮವು ನಡೆದು ಸಭೆಯು ಮುಕ್ತಾಯವಾಯಿತು.

ಸ್ಥಳೀಯ ಸೈಂಟ್ ಅಲೋಸಿಯಸ್ ಕಾಲೇಜಿನ ಜ್ಯುಬಿಲಿ ಸಂಘದ ವಾರ್ಷಿಕೋತ್ಸವವು ಗವರ್ನಮೆಂಟು ಕಾಲೇಜಿನ ಉಪಪ್ರಾಚಾರ್ಯರ ಅಧ್ಯಕ್ಷತನದಲ್ಲಿ ಜರಗಿತು. ಈಗ ಪರದೇಶಗಳಿಂದ ಬರುವ ತರತರದ ಸಾಮಾನುಗಳನ್ನು ವಿದ್ಯಾರ್ಥಿಗಳು ಕೈವೃತ್ತಿಯಿಂದ ತಯಾರಿಸಬೇಕಾಗಿ ಬೋಧಿಸಿ, ಶ್ರೀ ಜೋಸೆಫರು ಭಾಷಣವಿತ್ತರು. ವಿದ್ಯಾರ್ಥಿಗಳು ಸ್ವದೇಶಿ ಸೂತ್ರವನ್ನು ಆಚರಿಸಬೇಕಾಗಿ ಕೋರಿ ಅಧ್ಯಕ್ಷರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

ಇದೇ ತಾ ೧೪ರಲ್ಲಿ ಸೈಂಟ್ ಆಗ್ನೇಸ್ ಕಾಲೇಜಿನ ವಾರ್ಷಿಕೋತ್ಸವವು ಬೇಗಮ್ ಮಿರ್ ಅಮಿರುದ್ದೀನ್‌ರ ಅಧ್ಯಕ್ಷತನದಲ್ಲಿ, ಸಾಂಗವಾಗಿ ನಡೆಯಿತು. ಕಾಲೇಜಿನ ವರದಿಯು ಮುಖ್ಯ ಉಪಾಧ್ಯಾಯಿನಿಯಿಂದ ಓದಲಾಯಿತು. ಕಾಲೇಜು ಎಲ್ಲಾ ತರಗಳಲ್ಲಿ ಪ್ರಗತಿ ಹೊಂದಿರುವುದೆಂದು ವರದಿಯಿಂದ ತಿಳಿದುಬಂದಿತು. ಕಳೆದ ವರ್ಷ ಬಿ ಎ ಪರೀಕ್ಷೆಗೆ ಕುಳಿತ ೨೧ ಮಂದಿ ಸ್ತ್ರೀ ವಿದ್ಯಾರ್ಥಿನಿಗಳಲ್ಲಿ ೧೮ ಜನರು ತೇರ್ಗಡೆ ಹೊಂದಿರುತ್ತಾರೆ. ಇಂಟರ್‌ಮಿಡಿಯಟ್ ಪರೀಕ್ಷೆಯಲ್ಲಿ ೨೮ರಲ್ಲಿ ೧೮ ಜನರು ತೇರ್ಗಡೆ ಹೊಂದಿರುವರು.

ಹಿಂದೂದೇಶದಲ್ಲಿ ಸ್ತ್ರೀಯರು ಇಂದು ಮುಂದೆ ಬರುತ್ತಿದ್ದಾರೆ, ದೇಶದ ಉನ್ನತಿಯಲ್ಲಿ ಭಾಗಿಗಳಾಗುತ್ತಿದ್ದಾರೆ — ಈ ವಿಚಾರದಲ್ಲಿ ಈ ಕಾಲೇಜಿನಿಂದ ಬಹು ಉಪಕಾರವಾಗಿರುತ್ತದೆ. ಎಲ್ಲಾ ಸ್ತ್ರೀಯರು ಪ್ರೌಢ ವಿದ್ಯಾಭ್ಯಾಸವನ್ನು ಹೊಂದಬಾರದು. ಬದುಕಿಗೆ ತಕ್ಕದಾದ ವಿದ್ಯಾಭ್ಯಾಸವನ್ನು ಹೆಚ್ಚಿನವರು ಹೊಂದಬೇಕು. ಅನುಕೂಲ ಮತ್ತು ಯೋಗ್ಯತೆಯುಳ್ಳವರು ಮಾತ್ರ ಪ್ರೌಢಶಿಕ್ಷಣವನ್ನು ಹೊಂದಬೇಕು. ಈ ಜಗತ್ತಿನಲ್ಲಿ ಸ್ತ್ರೀಯರು ಪುರುಷರಂತೆ ಮಹತ್ಕಾರ್ಯಸಾಧನೆ ಮಾಡಿರುತ್ತಾರೆ. ಈ ಸಂಸ್ಥೆಯಿಂದ ಸ್ತ್ರೀಸಮಾಜದ ಜೀವನಕ್ಕೆ ಅನೇಕ ಅನುಕೂಲಗಳು ದೊರೆಯುತ್ತವೆ. ಆಧುನಿಕಕಾಲದಲ್ಲಿ ಸ್ತ್ರೀಯರ ದೆಸೆಯಿಂದ ಮುನ್ನಡೆದವು ಬಿದ್ದು ಹೋಗಿವೆ. ಆದರೆ ಹಿಂದೂದೇಶದಲ್ಲಿ ಅದು ಆಗದಂತೆ ನಡೆಯುವಂತೆ ಪ್ರಚಾರ ನಡೆಯಬೇಕೆಂದು ಬೇಗಮ್ ಮಿರ್ ಅಮಿರುದ್ದೀನ್ ತಮ್ಮ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು.

# ತಾಲೂಕುಗಳಿಂದ

## ಉಡುಪಿ

ಮೋಟಾರಿನ ನಾದುರಸ್ತಿಯಿಂದಾಗಿ ಶ್ರೀ ಅಶೋಕ ಮೇಹತಾರವರು ಉಡುಪಿಗೆ ತಲಪುವಾಗ ರಾತ್ರೆ ೯ ಗಂಟೆಯಾಗಿದ್ದಿತು. ಅಂತೆ ಮರುದಿನ ತಾ. ೧೧ನೇ ಪ್ರಾತಃ ೮ ತಾಸಿಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಸಭೆ ಸೇರಿಸಲಾಗಿ ಶ್ರೀ ಮೇಹತಾರವರು ಭಾಷಣವಿತ್ತರು. ಪೂರ್ವದಲ್ಲಿ 'ನೆಶನಲ್' ಯುವಕ ಸಂಘದವರು ಮಾನಪತ್ರ ಸಮರ್ಪಿಸಿದರು. ಅದಕ್ಕೆ ಸದುತ್ತರವಿತ್ತು, ಸಮತಾವಾದದಲ್ಲಿ ಹಿಂದೂ ದೇಶದಲ್ಲಿ ಸರ್ವವ್ಯಾಪಿಯಾಗಿ ದಾಳಿ ಮಾಡುತ್ತಿರುವ ನಿರುದ್ಯೋಗತನ ಮತ್ತು ಬಡತನಗಳಿಗೆ ಕೊಂಗ್ರೆಸು ಶ್ರಮಿಸುತ್ತಿರುವುದಾದರೆ, ಕೃಷಿಕರೂ ಮಜೂರರೂ ಕೆಲಸಗಾರರೂ ಸಂಘಟಿಸಿ ತಮ್ಮ ಪ್ರಶ್ನೆಗಳನ್ನು ಬಿಡಿಸಲು ಪ್ರಯತ್ನಿಸದ ಹೊರತು ಸ್ವರಾಜ್ಯ ಸಾಧನೆ ಸುಲಭ ಸಾಧ್ಯವಲ್ಲವೆಂದೂ, ಸಮತಾವಾದಿಗಳು ಕೊಂಗ್ರೆಸಿನೊಳಗಾಗಲಿ ದೇಶದಲ್ಲೆಲ್ಲಾಗಲಿ ದ್ವೇಷಕ್ಕೆದವರಲ್ಲ, ದೇಶದ ಸ್ವಾತಂತ್ರ್ಯ ಶ್ರೇಯೋಭಿವೃದ್ಧಿಗಾಗಿ ಸೆಣಸಾಡತಕ್ಕವರೆಂದೂ ವಿವರಿಸಿದರು.

ತಾ. ೯ನೆಗೆ ಶ್ರೀ ಪೇಜಾವರ ಮಠೀಯ ಶ್ರೀ ವ್ಯಾಸಭವನ ಪುಸ್ತಕ ಭಂಡಾರದಲ್ಲಿ ಶ್ರೀ ಪುತ್ತಿಗೆ ಹಿರಿಯ ಸ್ವಾಮಿಯವರಿಂದ ಶ್ರೀ ದ್ವೈತ ಮತಸ್ಥಾಪನಾಚಾರ್ಯರಾದ ಶ್ರೀ ಮಧ್ವಾಚಾರ್ಯರ ತೈಲಚಿತ್ರ ಅನಾವರಣ ಮಾಡಲಾಯಿತು.

ಶ್ರೀ ಕೃಷ್ಣದೇವಸ್ಥಾನದ ರಾಜಾಂಗಣದಲ್ಲಿ ತಾ. ೧೪-೧೫ರಲ್ಲೆರಡು ದಿನಗಳಲ್ಲೂ ಹುಲ್ಲು ರಾಶಿಗೆ ಬೆಂಕಿ ತಗಲಿತು. ಮುಂಚಿನ ದಿನ ಆಕಸ್ಮಾತ್ ಬೆಂಕಿ ತಗಲಿತ್ತೆಂದೂ ವಾರ್ತೆ. ಮರುದಿನವೂ ಉಳಿಯಲ್ಲಿದ್ದ ಹುಲ್ಲು ಕುಪ್ಪೆಗೆ ಬೆಂಕಿ ತಾಗಿಸಲ್ಪಟ್ಟದ್ದು ಆಶ್ಚರ್ಯ.

ತಾ ೨೦ನೇ ಸಾಯಂಕಾಲ ಅಜ್ಜರಕಾಡಿನ ಗಾಂಧಿ ಮೈದಾನದಲ್ಲಿ ಕೊಂಗ್ರೆಸ್ ದಿನಾಚರಣೆ ಸಂಬಂಧವಾಗಿ ಮಹಾಸಭೆ ಭಾಷಣಗಳು ಸಾಯಂಕಾಲ ೬ ಗಂಟೆಗೆ ಜರಗಲಿವೆ. ಮಹಾಜನರು ಸಹಭಾಗಿಗಳಾಗಿ ನೆರವಾಗುವರೆಂದು ಹಾರೈಸಲಾಗಿದೆ.

## ಕಾರ್ಕಳ

ಶ್ರೀಯುತ ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ತಾ ೬. ೨. ೩೪ರ ದಿನ ಕಾರ್ಕಳ ತಾಲೂಕು ಕಾಂಗ್ರೆಸ ಕಮಿಟಿಯ ಸಭೆ ಜರುಗಿ ಶ್ರೀ ಕುಡ್ವರು ಅಧ್ಯಕ್ಷರಾಗಿಯೂ ಕೆ ಪಾಂಡುರಂಗ ಪೈ ಮತ್ತು ಕೆ ಪಿ. ರಾವ್ ಮೊದಲಾದವರು ಕಾರ್ಯದರ್ಶಿಯರಾಗಿಯೂ ಚುನಾಯಿಸಲ್ಪಟ್ಟರು. ನಿರಶನ ವ್ರತದಿಂದಿದ್ದ ರಾಜಕೀಯ ಕೈದಿ ಶ್ರೀ ಹರೇಂದ್ರನಾಥ ಮುನ್ಶಿಯ ಅಕಾಲ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿಯೂ ಬಂಗಾಳ ಸರಕಾರದ ರಾಜಕೀಯ ಕೈದಿಗಳ ಸಂಬಂಧವಾದ ನೀತಿಯನ್ನು ಖಂಡಿಸಿಯೂ ಈ ಸಭೆಯಲ್ಲಿ ಠರಾವುಗಳಾದವು.

ಬೊಂಬಾಯಿಯ ಕಾಂಗ್ರೆಸ ಸೋಶಿಯಲಿಸ್ಟ ಪತ್ರಿಕೆಯ ಸಂಪಾದಕರಾದ ಶ್ರೀ ಅಶೋಕ ಮೇಹತಾರವರು ತಾ ೧೦–೨–೩೪ರ ದಿನ ಸಾಯಂಕಾಲ ಬೋರ್ಡ ಮೈನ ಎಲಿಮೆಂಟರಿ ಶಾಲೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಫೆಡರೇಶನನ್ನು, ಮುಂದಿನ ಮಾರ್ಗಗಳು ಮತ್ತು ಜನರ ಕರ್ತವ್ಯಗಳ ಕುರಿತು ಬೋಧಪ್ರದವಾದ ಭಾಷಣವನ್ನು ಕೊಟ್ಟರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯತನಕ್ಕೆ ಹೆಬ್ರಿ ಸರ್ಕಲಿನಿಂದ ನಡೆದ ಉಪಚುನಾವಣೆಯಲ್ಲಿ ಶ್ರೀಯುತ ಎಂ. ಎಸ್. ಅಧಿಕಾರಿಯವರ ಮೃತ್ಯು ನಿಮಿತ್ತದಿಂದ ಅವರು ಪ್ರತಿಸ್ಪರ್ಧಿ ಇಲ್ಲದೆ ಆ ಸ್ಥಾನಕ್ಕೆ ಆರಿಸಿ ಬಂದಿದ್ದಾರೆ ಎಂದು ಚುನಾವಣಾ ಅಧಿಕಾರಿಗಳಾದ ಶ್ರೀ ಸಿ. ಮಂಜುನಾಥ ಕಾಮತರು ತಿಳಿಸುತ್ತಾರೆ.

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಇದೇ ಫೆಬ್ರವರಿ ತಿಂಗಳ ಪ್ರಾಥಮಿಕ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು, ಶ್ರೀ ವೆಂಕಟ್ರಮಣ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಯಂ ಸರ್ವೋತ್ತಮ ಕಾಮತ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಜರುಗಿದುವು. ಈ ಕೇಂದ್ರದಿಂದ ಪ್ರಾಥಮಿಕ ಪರೀಕ್ಷೆಗೆ ೧೯ ಮಂದಿ ಮಕ್ಕಳು ಮತ್ತು ರಾಷ್ಟ್ರಭಾಷೆಗೆ ೧ ಹೀಗೆ ಒಟ್ಟು ೨೦ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೂತಿದ್ದರು.

ಕಲೆಗಳನ್ನು ಬಿಡದೆ ವಾಸಿಮಾಡುತ್ತದೆ

ವ್ರಣ ಮತ್ತು ಗಾಯಗಳಿಗೆ 'ಪ್ರಥಮ ಚಿಕಿತ್ಸೆ' ಯಂತ ಚಿಕಿತ್ಸೆ.

ರಕ್ತದಲ್ಲಿ ವಿಷಸೇರುವುದರಿಂದ ನಿಮ್ಮ ಅಂಗಾಂಗಗಳು ಕಳೆದುಹೋಗಬಹುದು. ನಿಮ್ಮ ಮೈಯಲ್ಲಿ ಉಂಟಾದ ಒಂದು ಗಾಯ ಯಾ ವ್ರಣದ ನಿರ್ಲಕ್ಷ್ಯವಾಗಿ ಅದರಿಂದಾಗುವ ಗಾಯ ಇತ್ಯಾದಿಗಳನ್ನು ವಿಷಹಾರಿ ಝಾಂಬಕ್ಕಿನಿಂದ ವಾಸಿಮಾಡಿಕೊಳ್ಳಿರೆಂದು. ಪ್ರತಿ ಮಾಡಿಕೊಳ್ಳಿ. ಝಾಂಬಕ್ಕಿನಲ್ಲಿನ ವನಸ್ಪತಿ ಎಣ್ಣೆಗಳು ಚರ್ಮದೊಳಗಿನ ಗ್ರಂಥಿಗಳನ್ನು ಸೇರಿದೊಡನೆ ನೋವು ನಿವಾರಣೆಯಾಗುತ್ತದೆ. ಉರಿತವೂ ಶಮನವಾಗುತ್ತದೆ. ಝಾಂಬಕ್ ಚರ್ಮದೊಳಗೆ ಸೇರುವುದರಿಂದ ರೋಗಾಣುಗಳು ನಾಶವಾಗಿ ಗಾಯ ಯಾ ವ್ರಣಗಳು ಕಲೆಗಳನ್ನು ಬಿಡದೆ ವಾಸಿಯಾಗುತ್ತದೆ. ಎಲ್ಲಾ ಔಷಧವ್ಯಾಪಾರಸ್ಥರಲ್ಲಿ ಝಾಂಬಕ್ಕು ರೂ 1 ಮತ್ತು ರೂ 2-4 ರಂತೆ ಮಾರಲ್ಪಡುತ್ತದೆ. ಏಜಂಟರು —

ಮೆಸ್ಸರ್ಸ್ ದಾಧಾ ಎಂಡ್ ಕೊ, ಪಿ. ಟಿ. ಮದ್ರಾಸು

ಝಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರವಿಲ್ಲ.

ಝಾಂಬಕ್

Zam Buk

# ಪ್ರೇಮ—ಬಲಿ

ಅನುವಾದಕ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ ಕಾರ್ಕಳ

★

ರಾತ್ರಿ ಸುಮಾರು ಸಮಯ ಕಳೆದು ಹೋಗಿತ್ತು. ಯಶವಂತೆ ಮನೆ ಕೆಲಸಗಳನ್ನು ಮುಗಿಸಿ ಮಲಗಲಿಕ್ಕೆ ಬಂದಳು. ಕೋಣೆಯಲ್ಲಿ ಪತಿದೇವನು ಗಾಢನಿದ್ರೆಯಲ್ಲಿ ಬಿದ್ದುಕೊಂಡಿದ್ದನು. ಮೇಜಿನ ಮೇಲೆ ಒಂದು ಚಿಮಿಣಿ ದೀಪವು ಸಣ್ಣದಾಗಿ ಉರಿಯುತ್ತಿತ್ತು. ಅದರ ಮಂದ ಪ್ರಕಾಶವು ಅವನ ಸುಂದರ ಮುಖಕಮಲದ ಮೇಲೆ ಬಿದ್ದು, ತನ್ನ ಕಾಂತಿಹೀನತೆಯನ್ನು ಮತ್ತಷ್ಟು ಚೆನ್ನಾಗಿ ತೋರಿಸುತ್ತಿತ್ತು. ಯಶವಂತೆ ದಿನವೆಲ್ಲಾ ಕೆಲಸಮಾಡಿ ಸೋತು ಸುಣ್ಣವಾಗಿದ್ದಳು. ಅವಳು ಹಾಸಿಗೆಯ ಒಂದು ಬದಿಯಲ್ಲಿ ಕೂತು ಒಂದು ನಿಡಿದುಸಿರು ಬಿಟ್ಟಳು. ಕಿಟಕಿಯಿಂದ ಹೊರಗೆ ಇಣಿಕಿ ನೋಡಿದಳು. ಅಲ್ಲಿ ನಾಲ್ಕು ದಿಕ್ಕುಗಳಿಂದಲೂ ಕಗ್ಗತ್ತಲೆ ಬಂದು ಹರಡಿಕೊಂಡಿತ್ತು. ಮನೆಕೆಲಸದವಳು ಎಲ್ಲಿಗೋ ಹೋಗಿ ಬಿಟ್ಟದ್ದರಿಂದ ಎಲ್ಲ ಕೆಲಸಗಳನ್ನು ಅವಳೊಬ್ಬಳೇ ಮಾಡಬೇಕಾಗಿತ್ತು. ಆದ್ದರಿಂದ ಮೈ ಕೈ ಕಾಲುಗಳೆಲ್ಲ ನೋಯುತ್ತಿದ್ದುವು. ಯಶವಂತೆ ಮೆಲ್ಲಗೆ ಎದ್ದು ಉಟ್ಟ ಬಟ್ಟೆಗಳನ್ನು ಬದಲಿಸಿಕೊಂಡಳು. ಮತ್ತೆ ಗಂಡನು ಎಚ್ಚರವಾಗದಂತೆ ನಿಶ್ಶಬ್ದವಾಗಿ ನಡೆದು ದೀಪವನ್ನು ನಂದಿಸಲಿಕ್ಕೆ ಬಂದಳು. ಅವಳು ಒಮ್ಮೆಗೆ ಅವನ ಮುಖದ ಕಡೆಗೆ ದೃಷ್ಟಿ ಬೀರಿದಳು. ಅವನ ಮೇಲೆ ಅವಳ ಎಂಥ ವಿಶ್ವಾಸ, ಎಂಥ ಶ್ರದ್ಧೆ! ಎಷ್ಟು ನಿರ್ಮಲ ಪ್ರೇಮ!" ಎಲ್ಲರಿಂದ ತಿರಸ್ಕರಿಸಲ್ಪಟ್ಟ ಅವನ ಮೇಲೆ ಅವಳಿಗೆ ಕರುಣೆ ಹುಟ್ಟಿತು. ದಯಾರಸವು ಹೃದಯದಿಂದ ಉಕ್ಕೇರಿ ಹರಿಯಿತು. ಇಷ್ಟು ತೇಜಸ್ವಿ, ಇಷ್ಟು ಚತುರ, ಇಷ್ಟು ದೈವೀ ಸ್ವಭಾವದ ಪತಿದೇವನು ನಿಜವಾಗಿಯೂ ಸುರೆಯ ದಾಸನಾಗಿದ್ದಿರಬಹುದೆ? ಸುರಾಪಾನದ ಕಾರಣದಿಂದ ಅವನ ನೌಕರಿ ಹೋಗಿತ್ತು. ಆದರೆ ಅವಳಿಗೆ ನಂಬಿಗೆಯಿಲ್ಲ. ಸುರಾಪಾನದಿಂದಲೇ ಮನೋಹರನು ನೌಕರಿ ಕಳಕೊಂಡನೆಂದು ಜಗತ್ತಿಗೆ ಜಗತ್ತೇ ಅವನನ್ನು ದೂಷಿಸುತ್ತಿತ್ತು. ಆದರೂ ಅವಳಿಗೆ ಆ ಮಾತಿನ ಮೇಲೆ ವಿಶ್ವಾಸವಾಗುತ್ತಿರಲಿಲ್ಲ. ಎಲ್ಲಾ ಭಾಗ್ಯಾಧೀನವೆಂದು ಅವಳು ಹೇಳಿಕೊಳ್ಳುತ್ತಿದ್ದಳು. ಪ್ರೇಮವು ಅವಳನ್ನು ಕುರುಡುಮಾಡಿತ್ತು. ಅವಳ ಮೇಲೆ ಮನೋಹರನ ಏನೋ ಮಾಟ ಮೋಡಿ ನಡೆದಿತ್ತು. ಅವಳು ಅವನ ಕಡೆಗೆ ಪೂರ್ಣ ಆಕರ್ಷಿತಳಾಗಿದ್ದಳು. ತನು ಮನಗಳಿಂದ ಅವನನ್ನು ಮೆಚ್ಚಿಕೊಂಡಿದ್ದಳು. ಆ ಕಾರಣ ಮನೋಹರನಲ್ಲಿ ಇಲ್ಲದ ಸದ್ಗುಣಗಳನ್ನು ಕಲ್ಪಿಸಿಕೊಂಡಿದ್ದಳು.

ಹಾಸಿಗೆ ಮೇಲೆ ಬಿದ್ದುಕೊಂಡಿದ್ದಳು, ಆದರೆ ಕೂಡಲೇ ಯಶವಂತೆಗೆ ನಿದ್ದೆ ಬೀಳಲಿಲ್ಲ. ಕಳೆದುಹೋದ ಆ ಸುಖದುಃಖದ ದಿನಗಳು ಒಂದರ ಮೇಲೊಂದಾಗಿ ಅವಳ ನೆನಪಿಗೆ ಬರತೊಡಗಿದುವು. ಪತಿದೇವನು ಸ್ಫೂರ್ತಿ ಉತ್ಸಾಹದಿಂದ ಕೂಡಿ ನೌಕರಿ ಮಾಡಿಕೊಂಡಿದ್ದಾಗಿನ ಆ ಸುಖ ಮತ್ತು ಶಾಂತಿಮಯ ದಿನಗಳು, ಅವನು ಮದ್ಯಪಾನದ ದುರ್ವ್ಯಸನಕ್ಕೆ ಬಲಿಬಿದ್ದಾಗಿನ ಆ ದುಃಖ ಮತ್ತು ನಿರಾಶಾಮಯ ದಿನಗಳು ಇವೆಲ್ಲ ಅವಳ ಸ್ಮೃತಿ ಪಥದಲ್ಲಿ ಬಂದು ಹೋದುವು. ಆ ದಿನಗಳಲ್ಲಿಯಾದರೂ ತನ್ನದೇ ಎಂದು ಕರೆಯಬಹುದಾದ ಒಂದು ಮನೆಯಾದರೂ ಅವಳಿಗಿತ್ತು. ಆದರೆ ಇಲ್ಲಿ, ತಂದೆಯ ಮನೆಯಲ್ಲಿ ಅನೇಕ ವರ್ಷಗಳು ಕಳೆದ ಮೇಲೆ ಇದೇ ಪ್ರಥಮ ಬಾರಿ ಬಂದಿದ್ದರೂ ಅವಳಿಗೆ ತಂದೆಯ ಮನೆ ಎಂಬುದು ಅಪರಿಚಿತ ಅನ್ಯ ಗೃಹಸ್ಥರ ಮನೆ ಹಾಗೆಯೇ ಭಾಸವಾಯಿತು. ತಂದೆ, ಯಶವಂತೆಯನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದುದು ನಿಜ, ಪರಂತು ಅವನನ್ನು ಬಿಟ್ಟು ಉಳಿದವರೆಲ್ಲರೂ ಅವಳನ್ನು ಸ್ನೇಹದಿಂದ ನೋಡುತ್ತಿರಲಿಲ್ಲ. ಅವಳ ಮಲತಾಯಿ ಮತ್ತು ಮಲತಾಯಿ ಮಗ ಮನೋಹರನನ್ನು ದೂಷಿಸಿ ದ್ವೇಷಿಸುತ್ತಿದ್ದರು. ಹಾಯ್! ಎಂದು ಯಶವಂತೆಯ ಸುಖಸ್ವಪ್ನಗಳು ಸತ್ಯವಾಗುವವು? ಎಂದು ತನ್ನದೇ ಎನ್ನಿಸುವ ಮನೆಯಲ್ಲಿ ಅವಳು ಪತಿದೇವನೊಂದಿಗೆ ವಾಸಿಸುವಳು? ಹೀಗೆಂದು ಯಶವಂತೆ ಬಾರಿ ಬಾರಿಗೆ ಆಲೋಚಿಸುತ್ತಿದ್ದಳು.

ಮರುದಿನ ರಮಾನಂದ— ಯಶವಂತೆಯ ತಂದೆ— ಮಧ್ಯಾಹ್ನದ ಊಟಕ್ಕೆ ಕೂತುಕೊಂಡಿದ್ದನು. ಆಗ ಅವನ ಹೆಂಡತಿ ಬಂದು ಹೇಳಿದಳು—'ಮನೋಹರ ಈಗಲಾದರೂ ಏನೊಂದು ಕೆಲಸ ಮಾಡಿಕೊಂಡು ಇರಬೇಕೆಂದು ನಿಮಗೆ ತೋರುವದಿಲ್ಲವೆ? ಎಷ್ಟೋ ಸಮಯದಿಂದ ಸೋಮಾರಿಯಾಗಿ ಮನೆಯಲ್ಲೇ ಬಿದ್ದುಕೊಂಡಿರುತ್ತಾನೆ. ಕೆಲಸ ಸಂಪಾದಿಸಬೇಕೆಂಬ ತಾತ್ಪರ್ಯ, ಅವನಿಗೆ ಇದ್ದ ಹಾಗೆ ಕಾಣುವದಿಲ್ಲ?'

ಹೌದೇ' ಹಾಗೋ?' ಎಂದು ರಮಾನಂದ ನಡುನಡುವೆ ಮಾತಿಗೆ ಮಾತು ಬೆರಸುತ್ತಿದ್ದ.

'ಹೌದು' ಹಾಗೆಯೇ ' ಅವನ ಸೋಮಾರಿತನ ಕಂಡರೆ ನನ್ನ ಮೈ ಉರಿದುಹೋಗುತ್ತದೆ. ನಿಮ್ಮ ಹಣವನ್ನು ಹಾಳುಮಾಡುವದಕ್ಕಿಂತ ಹೊಲಕ್ಕೆ ಹೋಗಿ ನನ್ನ ಮಗನಿಗಾದರೂ ಸ್ವಲ್ಪ ಸಹಾಯ ಮಾಡಬಹುದಲ್ಲ?''

ಈ ಮಾತು ನಡೆಯುತ್ತಿದ್ದಾಗಲೇ ಯಶವಂತೆ ಅಡಿಗೆ ಕೋಣೆಗೆ ಬಂದಳು. ತಂದೆ-ಮಲತಾಯಿಯ ಈ ಸಂಭಾಷಣೆಯನ್ನು ಅವಳು ಸ್ವಲ್ಪ ಸ್ವಲ್ಪ ಕೇಳಿದ್ದಳು. ಆದ್ದರಿಂದ ಸಣ್ಣ ಸ್ವರದಲ್ಲಿ ಅವಳು ಹೇಳಿದಳು—'ಯಾಕೆ ಚಿಕ್ಕಮ್ಮಾ! ಅವರೇನೂ ಸುಮ್ಮಗೆ ಕೂತುಕೊಂಡಿಲ್ಲ. ಅವರು ಪ್ರತಿ ದಿನ ಪೇಟೆಗೆ ಹೋಗಿ ಏನಾದರೊಂದು ಕೆಲಸ ದೊರಕಿಸಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದಾರೆ'

'ನಿಜವಾಗಿಯೂ?' ಮಲತಾಯಿ ವ್ಯಂಗ್ಯದಿಂದ ಮಾತನಾಡಿದಳು—'ಆದರೆ ಕ್ಲಬ್ಬಿನಲ್ಲಿ ಅವನು ಏನೋ ಪಟ್ಟಾಂಗ ಹೊಡೆಯುತ್ತಿರುವನೆಂದು ಉಪೇಂದ್ರ ಹೇಳಿದ'

'ದೋಷಗಳನ್ನು ಹುಡುಕುವದೇ ನಿಮ್ಮ ಕೆಲಸ' ಎಂದು ಯಶವಂತೆ ಪ್ರತಿಯಾಡಿದಳು. ಅವಳ ಕಣ್ಣುಗಳಿಂದ ನೀರು ಹರಿದು ಬರುತ್ತಲಿತ್ತು.

ಮಲತಾಯಿಗೆ ಯಶವಂತೆಯ ಮಾತುಗಳು ಅಸಹನೀಯವಾದುವು. ಅವಳು ಕೂಗಿ ಆಡಿದಳು—'ನೀನು ಇಷ್ಟು ಮೂರ್ಖಳಾಗಿರುವದಕ್ಕಾಗಿ ಮುಂದೆ ಒಳ್ಳೇ ಫಲ ತಿನ್ನಲಿಕ್ಕುಂಟು, ನೋಡು! ನಿನ್ನ ಒಳ್ಳೆತಕ್ಕಾಗಿ ನಾನು ಮಾತನಾಡುವದು. ಮನೋಹರ ಕಾಸಿನ ಪ್ರಯೋಜನಕ್ಕೂ ಬಾರದವನಾಗಿರುವದು ನಿನಗೆ ಗೊತ್ತೇ ಇಲ್ಲವೆ? ಪಾಪ, ಹೇಗೆ ಗೊತ್ತಾದೀತು.

ಯಶವಂತೆಯಿಂದ ಮಾತನಾಡಲಾಗಲಿಲ್ಲ. ಅವಳ ಕಂಠವು ಬಿಗಿದು ಬಂದಿತು. ತಂದೆಯಾದರೂ ಸ್ವಲ್ಪ ಸಹಾನುಭೂತಿ ತೋರಿಸುವನೆಂದು ಅವಳು ಬಗೆದಿದ್ದಳು. ಆದರೆ ಅವನು ಮೌನಿಯಾಗಿದ್ದನು. ಅಳಿಯ ಕಾಸಿನ ಕೆಲಸಕ್ಕೂ ಬಾರದ ವ್ಯರ್ಥ ಜೀವಿಯಾಗಿದ್ದಾನೆಂದು ಹೆಂಡತಿ ಅವನನ್ನು ಬೇಕುಬೇಕೆಂದೇ ತೆಗಳುವದನ್ನು ಅವನು ನೋಡಿದ್ದ. ಆದರೆ ಅವಳ ಮುಂದೆ ಬಾಯೆತ್ತುವ ಸಾಹಸವು ಅವನಿಗಿದ್ದಿರಲಿಲ್ಲ. ಕಲಹವೆಂದರೆ ಅವನು ಸಾವಿರ ಮಾರು ದೂರ ಓಡಿ ಹೋಗುತ್ತಿದ್ದನು. ಆದ್ದರಿಂದ ಅವಸರದಿಂದ ಊಟ ಮುಗಿಸಿ ಅವನು ಹೊರಗೆ ನಡೆದ.

ಸಾಯಂಕಾಲ ಮನೋಹರ ಮನೆಗೆ ಹಿಂತಿರುಗಿದಾಗ ಯಶವಂತೆ ಕೇಳಿದಳು—'ನೀವು ಈ ದಿನ ಪೇಟೆಗೆ ಹೋಗಿದ್ದಿರಾ?'

ಮನೋಹರನಿಗೆ ಪೀಕಲಾಟ ಉಂಟೆಂದು ಸಂದೇಹದಿಂದ ನೋಡಿದ. ಅಂಜಿ ಅಂಜಿ—'ಇಲ್ಲ ಇಲ್ಲ. ಹೋಗಲಾಗಲಿಲ್ಲ. ನಾಳೆಗೆ ಖಂಡಿತವಾಗಿಯೂ ಹೋಗುತ್ತೇನೆ.' ಯಶವಂತೆಗೆ ನಿರಾಶೆ ಆಯಿತು. ತಂದೆ ಮನೆಯಲ್ಲಿ ತನ್ನ ಸ್ಥಾನಮಾನಗಳು ಯಾವುವೆಂದು ಮನೋಹರನು ಇನ್ನೂ ತಿಳಿಯದುದಕ್ಕಾಗಿ ಅವಳಿಗೆ ತುಂಬಾ ವ್ಯಸನವಾಯಿತು. ಅಂಗಲಾಚಿ ಬೇಡಿಕೊಳ್ಳುತ್ತಾ ಅವಳು ಹೇಳಿದಳು—'ನೀವು ನೌಕರಿ ಮಾಡುವ ಇರಾದೆಯಲ್ಲೇ ಇಲ್ಲವೆಂದು ಚಿಕ್ಕಮ್ಮ ಹೇಳುತ್ತಾಳೆ. ಹೀಗಾದರೆ ಏನು ಮಾಡಬೇಕು, ಹೇಳಿ! ನೀವು ನೌಕರಿ ಹುಡುಕಿದ ಹೊರತು ನಾವಿಲ್ಲಿ ಇರಲಿಕ್ಕೆ ಇಲ್ಲ '

ಮಾತು ಕೇಳಿ ಮನೋಹರನಿಗೆ ದುಃಖವಾಗಲಿಲ್ಲ. 'ಇದು, ಎಂದಿನಂಥ ಒಂದು ಪ್ರಕರಣ' ಎಂದು ಹಗುರ ಮಾಡಿಕೊಂಡ, 'ಬೇರೆ ಕಡೆ ಹೋಗಲಿಕ್ಕೆ ನೀನ್ಯಾಕೆ ಅಷ್ಟು ಆತುರ ಪಡುತ್ತಿ? ಸತ್ಯಕ್ಕೂ ನಾವಿಲ್ಲಿ ಇನ್ನೂ ಕೆಲವು ದಿನ ಇರಬಹುದು ' ಎಂದು ಅವನು ಹೇಳಿದ.

'ಇಲ್ಲ, ಇಲ್ಲ. ಇಲ್ಲಿ ಇನ್ನು ಒಂದು ದಿನ ಕೂಡ ಕಳೆಯಬಾರದು. ಏಕಾಕಿಗಳಾಗಿ ನಾವು ಬೇರೆಲ್ಲಿಯಾದರೂ ಆಗಬಹುದು, ಅಲ್ಲಿಗೇ ಹೋಗಲೇ ಬೇಕು. '

ಮನೋಹರನು ಅವಳನ್ನು ಸಮಜಾಯಿಸಿದ—'ಚಿಂತಾಕುಲಳಾಗಬೇಡ ಯಶವಂತೆ! ಇನ್ನು ಕೆಲವೇ ದಿನಗಳಲ್ಲಿ ನನ್ನ ಭಾಗ್ಯೋದಯವಾಗಬಹುದು '

ಒಂದು ಮಿನಿಟ್ ಕಳೆದ ಮೇಲೆ, ಮನೋಹರ ಪುನಃ 'ನೋಡು, ನಿನಗಾಗಿ ನಾನೇನು ತಂದಿರುವೆನೆಂದು?' ಎಂದು ಹೇಳಿ ಒಂದು ಕಟ್ಟನ್ನು ಅವಳ ಕೈಗೆ ಕೊಟ್ಟ. ಒಂದು ರೇಶ್ಮೆಯ ರವಕೆ ಕಣವನ್ನು ತಂದುಕೊಡಬೇಕೆಂದ, ಕೆಲವು ದಿನಗಳ ಹಿಂದೆ ಅವಳು ಅವನೊಡನೆ ಹೇಳಿದ್ದಳು. ಆ ರವಕೆ ಕಣವೇ ಅದು. ನೋಡಿ, ಸಂತೋಷ ಮತ್ತು ಆಶ್ಚರ್ಯದಿಂದ ಅವಳ ಮುಖವು ಕಂಪೇರಿತು.

'ಈ ಕಷ್ಟದ ದಿನಗಳಲ್ಲಿ ನೀವು ಇಷ್ಟು ಕ್ರಯದ ರವಕೆ ಕಣವನ್ನು ತರಬಾರದಾಗಿತ್ತು ' ಎಂದು ಹೇಳಿ ಅವಳು ಗಂಡನ ಮುಖವನ್ನು ದಿಟ್ಟಿಸಿ ನೋಡಿದಳು.

ಅವನು ನಕ್ಕನು, ಮತ್ತೇನೂ ಮಾತಾಡಲಿಲ್ಲ. ಯಶವಂತೆ ಹಾಗೆ ಮಾತನಾಡಿದಳಾದರೂ ಆ ಕಣವನ್ನು ಪಡೆದು, ಅವಳಿಗೆ ಸಂತೋಷವಾಗಿತ್ತು, ತನ್ನ ಬುದ್ಧಿ ಚಾತುರ್ಯಕ್ಕೆ ಆಶ್ಚರ್ಯಪಟ್ಟಿದ್ದಳು ಎಂದು ಅವನಿಗೆ ಗೊತ್ತಾಯಿತು. ಮನೋಹರನಿಗೆ ತನ್ನ ಮೇಲೆ ಎಷ್ಟು ಪ್ರೇಮ ಎಂದು ಯಶವಂತೆ ಆಲೋಚಿಸಿದಳು. ಅವಳು ತಿಳಿದಷ್ಟು ಚೆನ್ನಾಗಿ ಮನೋಹರನನ್ನು ಮತ್ತಾರೂ ತಿಳಿದಿಲ್ಲವೆಂದು ಬಗೆದ ಕೂಡಲೇ ಅವನಲ್ಲಿ ಅವಳ ಆದರ ಹೆಚ್ಚಿತು. ಪ್ರೇಮವು ಕೂಡ ಅಷ್ಟೇ ಅಧಿಕವಾಗಿರುವದೆಂದು ಭಾವಿಸಿದಳು. ಈ ಕ್ಷಣದಲ್ಲಿ ಅವಳ ತನ್ನ ದುಃಖ ಸಂತಾಪಗಳನ್ನೆಲ್ಲ ಮರೆತಳು. ಯಾವ ವೇಳೆಯೂ ಅವಳಿಗೆ ಸ್ವಲ್ಪ ಮಾತ್ರ ದುಃಖವಾಗಲಿಲ್ಲ. ಅವಳ ನೋವು ಕಷ್ಟವೆಲ್ಲ ಕರಗಿ ನೀರಾಗಿ ಹರಿದು ಹೋಯಿತು. ಅವಳು ಪುನಃ ಆ ಕಣವನ್ನು ನೋಡಿದಳು. ಕಣ್ಣುಗಳಿಂದ ಆನಂದಾಶ್ರುಗಳು ಹರಿದುಬಂದುವು.

ಹೀಗೆಯೇ ಕೆಲವು ದಿನಗಳು ಕಳೆದುವು. ಆದರೂ ಮನೋಹರನಿಗೆ ನೌಕರಿ ಮಾತ್ರ ಸಿಗಲಿಲ್ಲ. ಪ್ರತಿ ದಿನ ಅವನು ಊಟ ಮುಗಿಸಿ ಪೇಟೆಗೆ ಹೋಗುತ್ತಿದ್ದ. ಸಾಯಂಕಾಲವಾಗುವ ಹೊತ್ತಿಗೆ ಮನೆಗೆ ಹಿಂತಿರುಗುತ್ತಿದ್ದ. ಉಂಡಾಡಿಗರೊಂದಿಗೆ ಆಡಿ ಕೂಡಿ ಸಮಯ ಕಳೆಯಲಿಕ್ಕಾಗಿ ಮಾತ್ರ ಮನೋಹರನು ಪೇಟೆಗೆ ಹೋಗುತ್ತಿದ್ದಾನೆಂದು ಉಪೇಂದ್ರನು ಎಣಿಸಿದ್ದ. ಅವನ ತಾಯಿಯಾದರೂ, ಮನೋಹರನ ವಿಷಯವಾಗಿ ಇದಕ್ಕಿಂತ ಉತ್ತಮ ಅಭಿಪ್ರಾಯವನ್ನು ಇಟ್ಟುಕೊಂಡಿರಲಿಲ್ಲ. ಅವರ ಈ ಅಭಿಪ್ರಾಯಗಳು ಯಶವಂತೆಯನ್ನು ಮಾತ್ರ ಹರಿತವಾದ ಶಸ್ತ್ರದಿಂದ ಇರಿದಂತೆ ನೋಯಿಸುತ್ತಿದ್ದುವು. ಅವಳಿಗೆ ಮನೋಹರನ ಮೇಲೆ ಪೂರ್ಣ ವಿಶ್ವಾಸವಿದ್ದಿತು. ತಾಯಿ ಮಗ ಕೂಡಿ ತನ್ನ ಪತಿದೇವನನ್ನು ದ್ವೇಷಿಸುವದು ಅವಳಿಗೆ ಅಸಹನೀಯವಾಯಿತು. ಮನೆ ಕೆಲಸದಲ್ಲಿ ಅವಳ ದಿನಗಳೆಲ್ಲಾ ಕಳೆದು ಹೋಗುತ್ತಿದ್ದುವಾದರೂ ಅವಳಿಗೆ ಆ ಮನೆ ಎಂಬುದು ಒಂದು ಬಂಧನಗೃಹದಂತೆ ಭಾಸವಾಗುತ್ತಿತ್ತು.

ಗಂಡಹೆಂಡಿರಿಬ್ಬರು ಕೂಡಿದ್ದಾಗ ಯಶವಂತೆ ಮುಂದೇನೆಂದು ಅವನನ್ನು ಕೇಳುವಳು. ತಾನು ಭಗೀರಥ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಆದರೂ ಈ ದಿನಗಳಲ್ಲಿ ನಿರುದ್ಯೋಗವು ಪ್ರಬಲವಾಗಿದೆ. ನೌಕರಿ ದೊರಕುವದು ಬಹಳ ಕಷ್ಟವಾಗಿದೆ. ಪರಂತು ಒಂದೆರಡು ದಿನಗಳಲ್ಲಿ ಇಂಥ ಒಂದು ಆಫೀಸಿನಲ್ಲಿ ಒಂದು ಕೆಲಸ ಖಾಲಿಯಾಗುವದು ಎಂದು ಮೊದಲಾಗಿ ಮನೋಹರನು ಹೇಳುವನು. ಅವನ ಮಾತುಗಳನ್ನು ಕೇಳಿ ಯಶವಂತೆ ಮನಸ್ಸಿನಲ್ಲಿಯೇ ಮಂಡಿಗೆಗಳನ್ನು ತಿನ್ನತೊಡಗುವಳು.

ಒಂದು ದಿನ ಮನೋಹರ ಹೇಳಿದ—'ದಯವಿಟ್ಟು ನನಗೆ ಸ್ವಲ್ಪ ಹಣ ಕೊಡು. ಒಬ್ಬ ಮಹಾಶಯನನ್ನು ಕಾಣಲಿಕ್ಕೆ ಹೋಗುತ್ತೇನೆ '

ಹತ್ತು ರೂಪಾಯಿ ಒಂದು ನೋಟು ಯಶವಂತೆಯ ಕೈಯಿಂದ ಮನೋಹರನ ಕೈಸೇರಿತು. ಅವನು ಹೊರಟುಹೋದ ತರುವಾಯ ಯಶವಂತೆ ಗಾಳಿಗೋಪುರಗಳನ್ನು ಕಟ್ಟಲಾರಂಭಿಸಿದಳು. ಅವಳ ಸುಖಸ್ವಪ್ನಗಳು ಈಗ ಸತ್ಯವಾಗಬಹುದು. ಕಷ್ಟ ದಾರಿದ್ರ್ಯಗಳು ದೂರವಾಗಬಹುದು. ಆದರೆ, ಅವನಿಗೆ ಈಗಲೂ ಸಫಲತೆ ದೊರೆಯದಿದ್ದರೆ? ಈ ಯೋಚನೆಯೂ ಅವಳ ತಲೆಗಟ್ಟಿತು. ಆದರೂ ಅವಳು ನಿರಾಶೆಯ ಭೂತವನ್ನು ಆಶೆಯ ಮಂತ್ರದಿಂದ ಉಚ್ಚಾಟನೆ ಮಾಡಿದಳು. ಯಾವ ನೌಕರಿ ಮಾಡಲಿಕ್ಕಾದರೂ ಅವನಲ್ಲಿ ಯೋಗ್ಯತೆ ಇದೆ. ಸಫಲತೆಯ ಸಂಭವಗಳು ತುಂಬಾ ಇವೆ. ಅವಳು ಕನಸುಗಳನ್ನು ನೋಡುತ್ತ ಹೋದಳು. ಅವುಗಳಲ್ಲಿ ತನ್ನ ಭಾವೀ ಸುಖಪ್ರದ ಸುಂದರ ಚಿತ್ರಗಳನ್ನು ಕಾಣತೊಡಗಿದಳು.

ಬೇಸಗೆಯ ದೀರ್ಘ ಹಗಲು ಕಳೆದು ರಾತ್ರಿ ಬಂದಿತು. ಆದರೆ ಮನೋಹರನು ಇನ್ನೂ ಮನೆಗೆ ಹಿಂತಿರುಗಿರಲಿಲ್ಲ. ಯಶವಂತೆ ಅವನಿಗಾಗಿ ಕಾತರಳಾದಳು. ಅಡಿಗೆ ಕೋಣೆಯಲ್ಲಿ ಅಡಿಗೆ ಮಾಡುತ್ತಿದ್ದಾಗಲೂ ಅವನು ಬರುವ ಕಾಲಸಪ್ಪಳಕ್ಕೆ ಕಿವಿಗೊಡುತ್ತ ಕೂತಳು.

ತನ್ನ ಕೆಲಸವನ್ನೆಲ್ಲಾ ಮುಗಿಸಿ ಕೋಣೆಗೆ ಬಂದ ಹೊರಡುವ ತನಕ ಅವಳು ಪತಿದೇವನ ಮಾತನ್ನು ಕೇಳಲಿಲ್ಲ. ಆಗಲೇ ಹೊರಗೆ ಅವನ ಉಪೇಂದ್ರನೊಡನೆ ಮಾತನಾಡುವದು ಕೇಳಿತು. ಕ್ಷಣಕಾಲಕ್ಕೆ ಇಬ್ಬರ ಮಾತು ಕರ್ಕಶ ಸ್ವರದಲ್ಲಿ ಜೋರಾಗುತ್ತ ನಡೆದಿತ್ತು. ಏನು ವರ್ತಮಾನವೋ ಎಂದು ಯಶವಂತೆಯ ಹೃದಯವು ನಡುಗತೊಡಗಿತು. ಮನೋಹರ ಮತ್ತು ಉಪೇಂದ್ರ ಇಬ್ಬರೂ ಕಲಹವನ್ನೆಬ್ಬಿಸಿದ್ದರು. ಮತ್ತೆ ಮುಗಿದ ಪ್ರಸಂಗವು ಗುದ್ದಾಟಕ್ಕೆ ಬಂದಿತ್ತು. ಅವಳಿಗೆ ಬಹಳ ದುಃಖವಾಯಿತು. ಕಲಹದ ಕಾರಣ ತಿಳಿಯಬೇಕೆಂದು ಹೊರ ಹೊರಟಿದ್ದಾಗಲೇ ಮನೋಹರನು ಒಳಗೆ ಕಾಲಿಟ್ಟು ಅವನೇನೇನೋ ಗೊಣಗುಟ್ಟುತ್ತಿದ್ದನು. ಅವನ ಬಾಡಿದ ಮುಖ ಮತ್ತು ಉರಿ ಕಾರುವ ಕಣ್ಣುಗಳನ್ನು ನೋಡಿ ಅವಳು ಬೆಚ್ಚಿಬಿದ್ದಳು. ಏನೋ ಕೇಳಬೇಕೆಂದಿದ್ದಳು, ಆದರೆ ಅವಳ ತುಟಿಗಳು ಅಲ್ಲಾಡಲಿಲ್ಲ.

ಯಶವಂತೆಯನ್ನು ನೋಡಿಯೂ ನೋಡದವನಂತೆ, ಮನೋಹರನು ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡ. ಅವನು ಕುಡಿದುಬಂದಿದ್ದನೆಂಬುದು ಆಗ ಅವಳಿಗೆ ತಿಳಿಯಿತು. ಇತ್ತೀಚೆಗೆ ಅವನ ನಡತೆ ಎಷ್ಟು ಚೆನ್ನಾಗಿತ್ತೆಂದರೆ ಯಶವಂತೆ ತನ್ನ ಹಿಂದಿನ ದುಃಖಗಳನ್ನೆಲ್ಲ ಮರೆತಿದ್ದಳು. ಈಗ ಅವನು ಪುನಃ [illegible]ನಾಗಿದ್ದನು, ಎಲ್ಲರ ತಾತ್ಸಾರ ತಿರಸ್ಕಾರಗಳಿಗೆ ಪಾತ್ರನಾದನು. ಕಣ್ಣುಗಳಲ್ಲಿ ನೀರು ತುಂಬಿ[illegible]

ಮುಂದಿನ ಪಟಕ್ಕೆ ಮುಂದುವರಿಯುವುದು.

# ಐರ್ಲೆಂಡಿನ ಸ್ವಾತಂತ್ರ್ಯಸಾಧನೆಗಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟ ಆರ್ಸ್ಕಿನ್ ಚಾಯ್ಲ್ಡರ್!

1922ನೆ ಇಸವಿ ನವಂಬರ ತಿಂಗಳ 24ನೆ ತಾರೀಕು, ಚರಿತ್ರೆಯಲ್ಲಿ ಹಿಂದೆಂದೂ ನಡೆದು ಇದ್ದಿರಲಾರದಂಥ ಒಂದು ದುರ್ಘಟನೆಯು ಅಂದು ಬೆಳಗ್ಗೆ 8 ಘಂಟೆಗೆ ನಡೆಯಿತು. ಆ ಸಮಯಕ್ಕೆ ಸರಿಯಾಗಿ ಚ್ಯಾಲ್ಡರನನ್ನು ಫಿರಂಗಿಯ ಗುಂಡಿಗೆ ಬಲಿಕೊಡಬೇಕೆಂದು ನಿಶ್ಚಯವಾಗಿತ್ತು. ಬೆಳಗಾಗಬೇಕಾದರೆ ಅವನೆದ್ದು—'ಓಹೋ! ಅದೇನು ಚಿಂತಿಸತಕ್ಕ ವಿಷಯ? ದಿನವೆಲ್ಲ ದುಡಿದು ಬೆವರಿಳಿಸಿ ಬಂದ ಮನುಷ್ಯನು ರಾತ್ರಿ ಆಧೂಡನೆ ಹಾಯಾಗಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳುವ ಪ್ರಕಾರ ಅದು ಸಾಮಾನ್ಯ ಸಂಗತಿ' ಎಂದು ಬರೆದಿದ್ದನು. ನಿರ್ಣಯಿಸಿದ ಹೊತ್ತಿಗೆ ಆ ಧೀರವೀರ ದೇಶಾಭಿಮಾನಿಯು ಬಿಸಿಬಿಸಿ ರಕ್ತವನ್ನು ಬಲಿಕೆಗೆದುಕೊಂಡು ಐರ್ಲೆಂಡದ ಸ್ವಾತಂತ್ರ್ಯದೇವಿಯು ನಾಲಗೆಯನ್ನು ಚಪ್ಪರಿಸಿದಳು.

ವಿಚಾರಣೆ ಆಗುತ್ತಿದ್ದಾಗ ಪತ್ರಕರ್ತನೊಬ್ಬನು ಚ್ಯಾಲ್ಡರನನ್ನು ನೋಡಲಿಕ್ಕೆ ಬಂದಿದ್ದನು. ಆ ಮಹಾತ್ಮನನ್ನು ಏನು ನೋಡುವದು? ಐರ್ಲೆಂಡದ ಸೇವೆ ಮಾಡಿ ಮಾಡಿ ದಣಿದ ಶರೀರ! ಐರ್ಲೆಂಡು ಇನ್ನೂ ಸ್ವತಂತ್ರವಾಗಲಿಲ್ಲವಲ್ಲ ಎಂಬ ಚಿಂತೆಯಿಂದ ಬಾಡಿ ಬಣ್ಣಗೆಟ್ಟ ಮುಖ. ಚ್ಯಾಲ್ಡರನನ್ನು ನೋಡಿದಾಕ್ಷಣಕ್ಕೆ ಪತ್ರಕರ್ತನ ಕಣ್ಣುಗಳಿಂದ ಎರಡು ಹನಿ ನೀರು ಇಳಿದು ಬಿದ್ದಿತ್ತು.

ಎಷ್ಟು ದೀರ್ಘ ಕಾಲದ ಅವನ ಪ್ರಯತ್ನ! ಪ್ರಯತ್ನದಲ್ಲಿ ಸೋಲುವೆನೇ ಗೆಲ್ಲುವೆನೇ ಎಂಬುದು ಚ್ಯಾಲ್ಡರನಿಗೆ ತಿಳಿದಿರಲಿಲ್ಲ. ಪರಿಸ್ಥಿತಿ ನೋಡಿ ತನಗೆ ಅಪಜಯವೆಂದುಕೊಂಡು ನಿರಾಶನಾಗಿ ಕೂತ ಎಷ್ಟೋ ಪ್ರಸಂಗಗಳಿದ್ದವು. ಆದರೆ ಅವನು ಹಿಮ್ಮೆಟ್ಟಲಿಲ್ಲ, ಹಿಂಜರಿಯಲಿಲ್ಲ. ಒಂದೇ ಸಮನೆ ಕೆಲಸ ಮಾಡುತ್ತ ಹೋದನು. ತನ್ನ ಪ್ರಯತ್ನದಲ್ಲಿ ಅವನು ಪ್ರಾಣಕೊಟ್ಟನಾದರೂ, ಅಲ್ಲಿಗೆ ಅವನ ಕೆಲಸ ಮುಗಿಯಲಿಲ್ಲ. ಮುಗಿಯಲಾರದು ಎಂಬುದು ಅವನಿಗೆ ಗೊತ್ತಾಗಿತ್ತು, ಪ್ರಾಣ ಕೊಟ್ಟಾಗಲೂ ಅದೊಂದು ಸಮಾಧಾನವು ಅವನಿಗಿತ್ತು.

ಚ್ಯಾಲ್ಡರನು ಪ್ರಾಣಕೊಟ್ಟನು, ಪಣ ಬಿಡಲಿಲ್ಲ. ಅವನೊಬ್ಬನು ಹೋದರೆ ಬೇರೆ ಸಾವಿರಾರು ಮಂದಿ ಅವನ ಸ್ಥಾನಕ್ಕೆ ಬಂದರು. ಈಗಲೂ ಚ್ಯಾಲ್ಡರನೆಂದರೆ ಸ್ವಾತಂತ್ರ್ಯ ಪ್ರಿಯ ಐರಿಷ ಜನರು ಅವನಿಗೆ ಭಕ್ತಿಯ ಕಾಣಿಕೆಯನ್ನು ಅರ್ಪಿಸಿ ತಮ್ಮನ್ನು ಕೃತಕೃತ್ಯರಾದವೆಂದು ತಿಳಿಯುತ್ತಾರೆ.

ಐರ್ಲೆಂಡದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚ್ಯಾಲ್ಡರನು ಮಾಡಿದ ಕೆಲಸಗಳು ಸಾಮಾನ್ಯವಲ್ಲ. ಅಥವಾ ವಿಚಾರಹೀನನಾಗಿ, ಕೇವಲ ಭಾವೋದ್ರೇಕದಿಂದ ಅವನ ಈ ಸಂಗ್ರಾಮಕ್ಕೆ ಬರಲೂ ಇಲ್ಲ. ತರ್ಕವಿತರ್ಕಗಳಿಂದ ತಾನು ಮಾಡುವ ಕಾರ್ಯದಲ್ಲಿ ನ್ಯಾಯವಿದೆ ಎಂದು ಮನಸ್ಸಿಗೆ ಖಚಿತವಾದ ಬಳಿಕವೇ ಐರ್ಲೆಂಡದ ಸ್ವಾತಂತ್ರ್ಯಕ್ಕಾಗಿ ಕಾದಿದನು.

ಚ್ಯಾಲ್ಡರ ದೊಡ್ಡ ಮೇಧಾವಿ, ಸತ್ಯವಂತ, ನ್ಯಾಯವಂತ. ಪೂರ್ವದಲ್ಲಿ ಅವನು ಬ್ರಿಟಿಷ ಸಾಮ್ರಾಜ್ಯದ ಪ್ರಬಲ ಸಮರ್ಥಕನಾಗಿದ್ದನು. ಆದರೆ ಬ್ರಿಟಿಷ ಸಾಮ್ರಾಜ್ಯದ ಮರೆಯಲ್ಲಿ ನ್ಯಾಯದ ಹೆಸರಿನಿಂದಾಗುವ ಅನ್ಯಾಯಗಳು ಅವನ ತಿಳುವಳಿಕೆಗೆ ಬರುತ್ತಲೇ ಅವನು ಅದೇ ಬ್ರಿಟಿಷ ಸಾಮ್ರಾಜ್ಯದ ಪ್ರಬಲ ದ್ವೇಷಿಗನೂ, ದೊಡ್ಡ ವಿದ್ರೋಹಿಯೂ ಆದನು. ಜನಾಂಗದ ಮಾನಾಪಮಾನಗಳ ಪ್ರಶ್ನೆಯಿದ್ದಾಗ, ಹಂಗು, ದಯೆ, ದಾಕ್ಷಿಣ್ಯಗಳಿಗೆ ಸ್ಥಾನವಿಲ್ಲವೆಂದು ಬಗೆದು, ಐರಿಷ ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡಿದನು; ಅದಕ್ಕಾಗಿಯೇ ಅವನು ತನ್ನ ಪ್ರಾಣಗಳನ್ನು ಕೊಟ್ಟು ಅಮರನಾದನು.

ಮೊದಲು 20 ವರ್ಷಗಳ ತನಕ ಚ್ಯಾಲ್ಡರನು ಬ್ರಿಟಿಷ ಸರಕಾರದ ಉಚ್ಚ ಅಧಿಕಾರ ಪದದಲ್ಲಿದ್ದನು. ಆಫ್ರಿಕದಲ್ಲಿ ಬ್ರಿಟಿಷ ಸಾಮ್ರಾಜ್ಯದ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದನು. ಆದರೆ ಅಲ್ಲಿಂದ ಹಿಂತಿರುಗುತ್ತಿದ್ದಂತೆ ಅವನು ಐರ್ಲೆಂಡದ ಸ್ವಾತಂತ್ರ್ಯ ಯುದ್ಧದ ವೀರಭಟನಾಗಿ ಹಿಂತಿರುಗಿದನು. ಜೀವನದಲ್ಲಿ ಈ ಬಗೆಯ ಮಾರ್ಪಾಟಗಳನ್ನು ಕೇವಲ ಮಹಾಪುರುಷರಲ್ಲಿ ಮಾತ್ರ ಕಾಣಬಹುದು.

ಚ್ಯಾಲ್ಡರನ ತಾಯಿ ಐರಿಷ ಸ್ತ್ರೀ, ತಂದೆ ಇಂಗ್ಲೀಷರವನು. ಹೀಗಿದ್ದರೂ ಅವನ ಮನಸ್ಸಿನ ಒಲವು ಐರ್ಲೆಂಡಿನ ಕಡೆಗೇ ವಿಶೇಷವಾಗಿದ್ದಿತು. ಬಾಲ್ಯವೆಲ್ಲವೂ ಐರ್ಲೆಂಡಿನಲ್ಲಿಯೇ ಕಳೆಯಿತು. ಅವನು ತನ್ನ ತಾರುಣ್ಯವನ್ನು ಬ್ರಿಟನ್ನಿನ ಶಾಲೆ ಕಾಲೇಜುಗಳಲ್ಲಿಯೋ, ಪಾರ್ಲಿಮೆಂಟು ಭವನಗಳಲ್ಲಿಯೋ, ಸಾಮ್ರಾಜ್ಯ ಸೇವೆಯಲ್ಲಿಯೋ ಕಳೆದುದು ನಿಜ. ಆದರೂ ಬಾಲ್ಯದಲ್ಲಿ ಅಡಿಗೂಡಿದ ಆದು ಮನಸ್ಸಿನ ಮೇಲಾದ ಸಂಸ್ಕಾರಗಳನ್ನು ತೊಳೆದು ಬಿಡಲಿಕ್ಕೆ ಈ ಘಟನೆಗಳು ಸಮರ್ಥವಾಗಲಿಲ್ಲ. ಐರ್ಲೆಂಡಿನ ಪಕ್ಷಕ್ಕೆ ಅವನು ಸೇರಿದ್ದನು, ಯಾಕೆಂದರೆ ಅದು ನ್ಯಾಯದ ಪಕ್ಷವಾಗಿತ್ತು. ಇಂಗ್ಲೆಂಡಿನ ಮೇಲೆ ಅವನಿಗೆ ಪ್ರೇಮವಿದ್ದಿತು. ಅದು ಅವನ ತಂದೆಯ ಹುಟ್ಟು ನಾಡಾಗಿತ್ತು. ಆದರೂ ಐರ್ಲೆಂಡದ ಮೇಲೆ ಅವನಿಗಿದ್ದ ಪ್ರೇಮವು ಇದಕ್ಕಿಂತ ಅತಿಶಯವಾಗಿತ್ತು. ಯಾಕೆಂದರೆ ಅದು ಅವನ ತಾಯಿಯ ತಾಯಿನಾಡು, ಮಾತೃಭೂಮಿ.

ಹೋಮರೂಲ್ ಚಳವಳಿಯು ಆರಂಭವಾದಾಗ ಮೊತ್ತಮೊದಲು ಅದನ್ನು ಆರಂಭಿಸಿದವರಲ್ಲಿ ಚ್ಯಾಲ್ಡರನೂ ಒಬ್ಬನಾಗಿದ್ದನು. ಆಗ ಅವನು ಅದರ ಪ್ರಕಟನಾ ಸಮಿತಿಯಲ್ಲಿ ಕೆಲಸ ಮಾಡಿಕೊಂಡಿದ್ದನು. 1911ರಲ್ಲಿ ಐರ್ಲೆಂಡಿಗೆ ಒಂದು ಹೋಮ್‌ರೂಲ್ ಮಸೂದೆಯನ್ನು ತಯಾರಿಸಿದ್ದನು. ಆಗ ಆ ಮಸೂದೆಯು 'ಬಹಳವಾಯಿತು ಬಹಳವಾಯಿತು' ಎಂದೆನ್ನುವ ಶ್ಲಾಘನೆಗೆ ಪಾತ್ರವಾಗಿದ್ದಿತು. ಅಂದು ಬ್ರಿಟಿಷರು ಅದನ್ನು ಒಪ್ಪಿದ್ದರೆ ಇಂದು ಐರ್ಲೆಂಡಿನ ರೂಪವೇ ಬೇರೆಯಾಗುತ್ತಿದ್ದಿತು. ಮುಂದೆ ಅದಕ್ಕೂ ಉಗ್ರವಾದ ಮಸೂದೆಯಾಗಿ ಅದರ ಹೆಸರಡಗಿ ಹೋಯಿತು. ಬ್ರಿಟಿಷರ ನ್ಯಾಯಬುದ್ಧಿಯಲ್ಲಿ ಸಂದೇಹಪಟ್ಟರು, ಐರಿಷರು ತಮ್ಮ ಸ್ವಾತಂತ್ರ್ಯ ಸಂಪಾದನೆಗಾಗಿ ಕ್ರಾಂತಿಯನ್ನಾರಂಭಿಸಿದರು. ಚ್ಯಾಲ್ಡರನು ಅದನ್ನು ಸೇರಿ ಮಹತ್ವಪೂರ್ಣ ಕೆಲಸ ಮಾಡಿದನು.

ತನ್ಮಧ್ಯ ಮಹಾಯುದ್ಧಕ್ಕಾರಂಭವಾಯಿತು. ಬ್ರಿಟನು ನ್ಯಾಯರಕ್ಷಣೆಗಾಗಿ ಜರ್ಮನರ ವಿರುದ್ಧ ಕತ್ತಿಕಟ್ಟಿದೆ ಎಂದು ಭಾಸವಾಯಿತು, ಬ್ರಿಟನು ಗೆದ್ದರೆ ತಮಗೆ ನ್ಯಾಯ ದೊರೆಕೀತೆಂದು ಎಣಿಸಿದರು. ಆದ್ದರಿಂದ ತಮ್ಮ ಸ್ವಾತಂತ್ರ್ಯ ಚಳವಳಿಗೆ ತಾತ್ಕಾಲಿಕ ವಿಶ್ರಾಂತಿ ಕೊಟ್ಟು ಅವರು ಬ್ರಿಟನಿನ ಪಕ್ಷದಲ್ಲಿ ಮಹಾಯುದ್ಧದಲ್ಲಿ ಕಾದಿದರು. ಆದರೆ ಯುದ್ಧ ಮುಗಿದಾಗ ಅವರ ಎಣಿಕೆ ಬರೇ ಕನಸಾಯಿತು. 'ಒಂದು ಜನಾಂಗವು ಆಳಬೇಕು, ಮತ್ತೊಂದು ಆಳಿಸಿಕೊಳ್ಳಬೇಕು' ಎಂಬ ವಿಚಿತ್ರ ವಿಧಾನವನ್ನು ಪರಮಾತ್ಮನು ಮಾಡಲಿಲ್ಲ. ಗುಲಾಮ ಜನಾಂಗವು ವಿದ್ರೋಹಿಯಾಗುವದು ಸಹಜ. ಆದರ ಉತ್ತರದಾಯಿತ್ವವು ಮಾತ್ರ ಆಳುವ ಜನಾಂಗದ ಮೇಲೆಯೇ ಇರುವದು. ವಿದ್ರೋಹದ ದುಷ್ಪರಿಣಾಮಗಳಿಗೂ ಅದುವೇ ಜವಾಬ್ದಾರವಾಗುವದು' ಎಂದು ಅನಂತರದ ಒಂದು ಸಭೆಯಲ್ಲಿ ಚ್ಯಾಲ್ಡರನು ಹೇಳಿದ್ದನು.

ಮಹಾಯುದ್ಧವು ಮುಗಿದ ತರುವಾಯ ಐರ್ಲೆಂಡಿನಲ್ಲಿ ಪುನ ಕ್ರಾಂತಿಗಾರಂಭವಾಯಿತು. ಸರಕಾರಕ್ಕೂ ವಿದ್ರೋಹಿಗಳಿಗೂ ಭಯಂಕರ ಕದನಗಳು ನಡೆದು ಎಷ್ಟೋ ಮಂದಿ ಹತಾಹತರಾದರು. ಮುಂದಿನ ನಾಲ್ಕು ವರ್ಷಗಳಲ್ಲಿ ಚ್ಯಾಲ್ಡರನು ಎದುರಾಳಿಗಳ ಹಲ್ಲುಕಡ್ಡಿ ಕಚ್ಚುವ ರೀತಿಯಲ್ಲಿ ಅನುಪಮ ಧೈರ್ಯ ಸಾಹಸಗಳನ್ನು ತೋರಿಸಿ ಐರ್ಲೆಂಡಿನ ಪರವಾಗಿ ಕಾದಿದನು, ಕಾದಿದನು ಮಾತ್ರವಲ್ಲ, ಲೋಕದ ಸಹಾನುಭೂತಿಯನ್ನು ಪಡೆಯುವುದಕ್ಕೋಸ್ಕರ ಪ್ರಚಾರಾತ್ಮಕ ಬೋಧಪ್ರದ ಲೇಖನಾದಿಗಳನ್ನು ಬರೆದನು. ಇದರಿಂದ ಆ ಕಾಲದ ಐರ್ಲೆಂಡದ ಅಧ್ಯಕ್ಷ ಮುಖಂಡನೆನ್ನಿಸಿಕೊಂಡ ಗ್ರಿಫಿತನಿಗಿಂತ ಅವನು ಹೆಚ್ಚು ಲೋಕ ವಿಖ್ಯಾತನಾದನು.

ಮುಂದೆ ಬ್ರಿಟಿಷರು ಸಂಧಾನ ಪ್ರಸ್ತಾಪವನ್ನೆತ್ತಿದರು. ಸಂಧಾನ ಚರ್ಚೆಯು ನಡೆಯಿತು. ಐರ್ಲೆಂಡಿನ ಪಂಚರಿಗೆ ಚ್ಯಾಲ್ಡರನು ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟನು. ನಿಜವಾಗಿ ನೋಡಿದರೆ ಅವನು ಕಾರ್ಯದರ್ಶಿ ಅಲ್ಲ, ಪಂಚರೊಳಗಿನವನೊಬ್ಬನು. ಸಂಧಾನ ನಡೆಯುತ್ತಿದ್ದಾಗ ಬ್ರಿಟಿಷರ ನಡೆಯ, ನುಡಿಯ, ಆಚಾರದ, ವಿಚಾರದ ಪ್ರತಿಯೊಂದರ ಇಂಗಿತ ಉದ್ದೇಶಗಳನ್ನು ತಿಳಕೊಂಡು, ಐರ್ಲೆಂಡಿನ ಹಿತರಕ್ಷಣೆಗೆ ಸೊಂಟ ಕಟ್ಟಿದನು. ಅನಂತರ [illegible] ಚ್ಯಾಲ್ಡರನು [illegible] ಸಂಕ್ಷಿಪ್ತದರ್ಶಿಯಾಗಿದ್ದನು.

ಆದರೆ ಇತಿಹಾಸದ ಆ ದಿವಸ [illegible] ಜಾತಿಯಿಂದ ಐರಿಷನಾದ [illegible] ಹೆಚ್ಚಾಗಿ, ಚೆನ್ನಾಗಿ ಜಾತಿಯಿಂದ ಇಂಗ್ಲೀಷನಾದ ಚ್ಯಾಲ್ಡರನು ಐರ್ಲೆಂಡದ ಪರವಾಗಿ ಸ್ವಜಾತಿಯರ ವಿರುದ್ಧ ಕಾದಾಡುವದನ್ನು ನೋಡಿ ಗ್ರಿಫಿತನಿಗೆ ಅವನು ಬ್ರಿಟಿಷರ ಕಡೆಯ ಗುಪ್ತಚಾರನಾಗಿದ್ದರಬಹುದೋ ಎಂದು ಸಂದೇಹವಾಯಿತು. ಗ್ರಿಫಿತನು ಅವನ ಮೇಲೆ ಸಿಟ್ಟುಗೊಂಡನು, ಮಾತ್ರವಲ್ಲ ಜೀವದ ಶತ್ರುವಾದನು. ಅಂದಿನಿಂದ ಮುಂದೆ ಗ್ರಿಫಿತ-ಚ್ಯಾಲ್ಡರರೊಳಗೆ ಹೆಚ್ಚೆಚ್ಚಿಗೆ ವಾಗ್ವಾದ, ಕಾದಾಟಗಳಿಗಾರಂಭವಾದುವು. ಪಾಳಯದೊಳಗೆ ಕಚ್ಚಾಟಕ್ಕಾರಂಭವಾಯಿತು. ಐರ್ಲೆಂಡಿನ ಹಿತಶತ್ರುಗಳಾದ ವಿಂಸ್ಟನ್ ಚರ್ಚಿಲ್ ಮೊದಲಾದವರು ಅದನ್ನು ಕಂಡು ಮನಸ್ಸಿನೊಳಗೆಯೇ ನಕ್ಕರು, ಆನಂದ ಸಾಗರದಲ್ಲಿ ಮುಳುಗಿ ತೇಲಿದರು.

ಸಂಧಾನವಾದಾಗ, ಐರ್ಲೆಂಡದ ಜನರು ಯಾವ ಸಂಪೂರ್ಣ ಸ್ವಾತಂತ್ರ್ಯದ ತತ್ವಕ್ಕಾಗಿ ತಮ್ಮ ಪ್ರಾಣಗಳನ್ನು ಆಹುತಿ ಕೊಟ್ಟಿದ್ದರೋ, ಅದು ಮೂಲೆಗೊಂಪಾದುದನ್ನು ನೋಡಿ ಚ್ಯಾಲ್ಡರನಿಗೆ ಸಹಿಸಕೂಡದಷ್ಟು ವ್ಯಸನವಾಯಿತು. ಆದರೆ ಮಾಡಲೇನು? ವರ್ಷಾಂತರಗಳ ಪರಿಶ್ರಮದಿಂದ ಅವನ ಶರೀರವೆಲ್ಲ ಜರ್ಜರಿತವಾಗಿದ್ದಿತು. ಕೈಕಾಲುಗಳು ದುರ್ಬಲವಾಗಿದ್ದುವು; ಮಾತನಾಡುವ ಶಕ್ತಿ, ಬರೆಯುವ ಬಲ ಕೂಡ ಅವನಲ್ಲಿ ಉಳಿದಿರಲಿಲ್ಲ.

ಸರಿ, ಸ್ವಾತಂತ್ರ್ಯದ ಹೆಸರಿನಲ್ಲಿ ಗುಲಾಮ ಜನರ ಸರಕಾರ ಸ್ಥಾಪನೆಯಾಯಿತು. ಎಲ್ಲಿ ಚ್ಯಾಲ್ಡರನ ಜನ್ಮವಾಗಿದ್ದಿತೋ, ಯಾವುದನ್ನು ಅವನು ತನ್ನ ಮನೆ ಎಂದು ತಿಳಿದಿದ್ದನೋ ಅದೇ ಗ್ಲಂಡಲೋ ಜಿಲ್ಲೆಯಲ್ಲಿ ಮೊದಲು ಅವನ ಪರವಾಗಿ, ಅಂದರೆ ಐರ್ಲೆಂಡದ ಸ್ವಾತಂತ್ರ್ಯದ ಪರವಾಗಿ ಕಾದಿದ್ದ ಸಿಪಾಯಿಯರೇ ಬಂದು ಅವನನ್ನು ಸೆರೆಹಿಡಿದರು. ಅವನು ಐರ್ಲೆಂಡದ ವಿದ್ರೋಹಿಯೆಂದು ವಿಚಾರಣೆಯಾಗಿ ಮರಣದಂಡನೆಯೂ ವಿಧಿಸಲ್ಪಟ್ಟಿತು. ಯಾವ ಜನರ ಬಾಯಿಗಳಿಂದ ಹೊಗಳಿಸಿಕೊಂಡಿದ್ದನೋ, ಸಾಯುವ ಕಾಲಕ್ಕೆ ಅವೇ ಬಾಯಿಗಳಿಂದ ತೆಗಳಿಸಿಕೊಂಡು ಸಾಯುವದೆಂದರೆ ಜೀವನದಲ್ಲಿ ಇದಕ್ಕೂ ದೊಡ್ಡದಾದ ಟ್ರೆಜಡಿ (Tragedy) ಯಾವುದಿರಬಹುದು. ಕೊನೆಗಾಲಕ್ಕೆ ಸಿಪಾಯಿಯರ ಫಿರಂಗಿಯ ಬಾಯಿಗೆ ಬಲಿಯಾಗಿ ಅವನು ಪ್ರಾಣ ಕೊಟ್ಟನು.

ಎಷ್ಟೋ ಕಡೆಗಳಲಿ, ಎಷ್ಟೋ ರಾಜ್ಯಗಳಲ್ಲಿ ಮಾದವೀ ಕಲಹಗಳಾದವೆ. ಎಷ್ಟೋ ಜನರು ಸಿಟ್ಟು, ದ್ವೇಷಗಳ ಆವೇಶದಲ್ಲಿ ಕೊಳೆದು ಹೋದವರೂ ಪ್ರಾಣಕೊಟ್ಟವರೂ ಇದ್ದಾರೆ. ಆತ್ಮೀಯರಿಂದಲೇ ಆತ್ಮೀಯರು ಕೊಲ್ಲಲ್ಪಟ್ಟ ಬೇರೆ ಎಷ್ಟೋ ದುರ್ಘಟನೆಗಳ ಇತಿಹಾಸದಲ್ಲಿ ನಡೆದಿವೆ. ಆದರೆ ಇಂಥ ದುರ್ಘಟನೆ ಬೇರೊಂದಿಲ್ಲ. ಜೀವದ ಗೆಳೆಯನಾಗಿದ್ದವನೇ ಪ್ರಾಣದ ಶತ್ರುವಾಗುವದು, [illegible] ಚ್ಯಾಲ್ಡರನಿಗೆ ಸಂದೇಹದ ರೀತಿ ಮರಣವು ಪ್ರಾಪ್ತವಾಗುವದು. ಅಂದರೆ, ಅದು ಏನಾಗಬಹುದೆಂದು ಆಲೋಚಿಸಿ ನೋಡಿ.

ಒಬ್ಬ ಇಂಗ್ಲೀಷನೇ ಚ್ಯಾಲ್ಡರನನ್ನು ಕುರಿತು ಹೀಗೆ ಹೇಳಿದ್ದನು — ಅಲ್ಪತನ ಕುಹಕತನಗಳು ಚ್ಯಾಲ್ಡರನಲ್ಲಿ ಲವಲೇಶವಿರಲಿಲ್ಲ. ಅವನು ಏನು ಆಡಿದನೋ, ಏನು ಮಾಡಿದನೋ ಅವೆಲ್ಲವನ್ನು ಆತ್ಮಸಾಕ್ಷಿಗೆ ಸರಿಯಾಗಿ ಮಾಡಿದನು. ಅವನು ಸತ್ಯಕ್ಕಾಗಿ ಜೀವಿಸಿದನು, ಸತ್ಯಕ್ಕಾಗಿ ಕಾದಿದನು, ಸತ್ಯಕ್ಕಾಗಿ ಪ್ರಾಣ ಕೊಟ್ಟನು.

ಐರಿಷ್ ಪ್ರೆಸ್

ಲುಧಿಯಾನದಲಿನ 11 ಮಂದಿ ಕಾಂಗ್ರೆಸ್ ಪಕ್ಷದ ಮುಖಂಡರು ಒಬ್ಬ ಹೆಡ್‌ಕಾನ್ಸ್‌ಟೇಬಲ್ ಫೌಜಿಸ್ಟೆಟರನ್ನು ಕೊಲೆ ಮಾಡಲು ಪ್ರಯತ್ನಿಸಿದರೆಂದು ಆರೋಪಣೆಗೊಳಗಾಗಿ ಕೈದುಹೊಂದಿದ್ದಾರೆ. ಕೋರ್ಟಿನಲ್ಲಿ ಸೇರಿದಾಗಲೇ ಇವರನ್ನು ಕೈದು ಮಾಡಲಾಗಿದೆ. ವಿಚಾರಣೆ ಸಾಗುತ್ತಲಿದೆ.

*Use the soaps*
KNOWN ALL OVER
**WISCO'S.**
**MINAR**
&
**TAJAMAHAL** Red'
Bar Soaps.
POPULAR IN THE MARKET
*Sole Distributer* -
**P. G. KAMATH,**
Kashmir House,
Marnamikatta, MANGALORE.

**'DILROZ'** Reg
'Dil Roz' is a sure cure fo[r]
Oriental sores local sores all kin[d]
of deep rooted sores, skin eruption[s]
Pimples, Eczema, Ringworm, Sinu[s]
Fistula auxillary Abscess
There is no need of dressi[ng]
the wounds, nor are baths prohibite[d]
**Price Rs. 2.** Postage extra
**TAHIR DIN,**
Anarkali, LAHOR[E]

DIAMONDS! DIAMONDS!
BEST BRILLIANCY!

# K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

## ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬಂದು ಬ್ರಾಂಚು ಇತ್ತೀಚೆಗೆ [illegible] ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು



ಅತ್ಯುತ್ಕೃಷ್ಟ ವಾರಪತ್ರಿಕೆಯಾದ

## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ


## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ಬತ್ತ ಗುಡ್ಡು ಮು | 1 — 10 | 1 — 10 |
| ರಾಶಿ ಅಕ್ಕಿ | 3 — 8 | 4 — 0 |
| ಸುಗ್ಗಿ | 4 — 0 | [illegible] — 0 |
| ಗುಡ್ಡು | 4 — 2 | 4 — 2 |
| ಊರ ಅವ್ವಲ್ ಬೆಳ್ತಿಗೆ | 4 — 7 | 4 — 7 |
| ರಂಗೂನು ಬೆ ಗೋ ಅಕ್ಕಿ | 7 — 2 | 7 — 4 |
| ಎಲ್ಲೂರು ಬೆ ಮು ಅಕ್ಕಿ | 3 — 14 | 4 — 0 |
| ಗೋಧಿ ಗೋಣಿ ಅಕ್ಕಿ | 13 — 0 | 14 — 8 |
| ತೊಗರಿ ಗೋಣಿ ಅಕ್ಕಿ | 11 — 8 | 18 — 8 |
| ಹುರುಳಿ ಗೋಣಿ ಅಕ್ಕಿ | 6 — 0 | 0 — 2 |
| ಕಡಲೆ ಗೋಣಿ ಅಕ್ಕಿ | 9 — 8 | 10 — 8 |
| ತೊಗರಿಬೇಳೆ ಗೋಣಿ ಅಕ್ಕಿ | 17 — 8 | 1[illegible] — 0 |
| ಉದ್ದು ಗೋಣಿ ಅಕ್ಕಿ | 9 — 0 | 9 8 |
| ಹೆಸರು ಗೋಣಿ ಅಕ್ಕಿ | 9 — 12 | 10 — 8 |
| ಊರುಬೆಲ್ಲ ಖಂಡಿ ಅಕ್ಕಿ | 27 — 8 | [illegible] — 8 |
| [illegible] ಗೋಣಿ ಅಕ್ಕಿ | 4 — 8 | 5 4 |
| ಕೊಬ್ರಿ ಖಂಡಿ ಅಕ್ಕಿ | 46 — 4 | 40 — 1 |
| ಎಳ್ಳಿಂಡಿ ಖಂಡಿ ಅಕ್ಕಿ | 2[illegible] | 26 — 0 |
| ತೆಂಗಿನ ಎಣ್ಣೆ ಮುಡಿ ಅಕ್ಕಿ | 8 — [illegible] | 3 — [illegible] |
| ಎಳ್ಳೆಣ್ಣೆ ಮುಡಿ ಅಕ್ಕಿ | 6 — 0 | [illegible] 0 |
| ಚಿಮಿಣಿಎಣ್ಣೆ ಪೆಟ್ಟಿಗೆ ಅಕ್ಕಿ | 6 — 5 | [illegible] — 5 |
| ಪೋರ್ಟ ಸಕ್ಕರೆ ಮು ಅಕ್ಕಿ | 2 — 13 | [illegible] — 14 |
| ಮೆಣಸು | 4 — 8 | 6 — 0 |
| [illegible] ಮುಡಿ ಅಕ್ಕಿ | [illegible] — [illegible] | 6 — 8 |
| [illegible] | 1[illegible] — 0 | 15 0 |
| [illegible] | 80 — 0 | 85 — 0 |
| [illegible] | [illegible] — 4 | 4 — 12 |
| [illegible] ಖಂಡಿ ಅಕ್ಕಿ | [illegible]0 — 0 | [illegible] — 0 |
| [illegible] ಮು ಅಕ್ಕಿ | 14 — 12 | 15 — 0 |
| [illegible] ಮು ಅಕ್ಕಿ | 14 — 8 | 15 — 0 |
| [illegible] ಸೇರು ಅಕ್ಕಿ | 13 8 | 14 — 0 |
| [illegible] | 1 [illegible] | 12 0 |
| [illegible] | 22 [illegible] | [illegible] 0 |
| [illegible] ಖಂಡಿ ಅಕ್ಕಿ | 10 0 | 1[illegible] — [illegible] |
| [illegible] ಖಂಡಿ ಅಕ್ಕಿ | [illegible] — 0 | 14[illegible] 0 |
| [illegible] ಖಂಡಿ ಅಕ್ಕಿ | 1[illegible]5 0 | 19[illegible] 0 |
| ಮಡಿಕೇರಿ ಏಲಕ್ಕಿ ಮು | [illegible] 0 | [illegible] 0 |

# ಡೋಂಗರ್‌ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ


ಶಾಲಿವಾಹನ ಶಕ [illegible] ಸಂವತ್ಸರದ [illegible] ಶುಕ್ರವಾರದಿಂದ [illegible] ( [illegible] )

| | | | | | | | |
|---|---|---|---|---|---|---|---|
| 19 | [illegible] | [illegible] | [illegible] | [illegible] | [illegible] | [illegible] | [illegible] |
| 20 | ರವಿ | [illegible] | [illegible] | [illegible] | [illegible] | [illegible] | |
| 21 | ಸೋಮ | [illegible] | [illegible] | [illegible] | [illegible] | [illegible] | |
| 22 | [illegible] | | [illegible] | [illegible] | [illegible] | [illegible] | |
| 23 | ಬುಧ | [illegible] | [illegible] | [illegible] | [illegible] | [illegible] | |
| 24 | ಗುರು | | [illegible] | [illegible] | [illegible] | | |
| 25 | ಶುಕ್ರ | [illegible] | | [illegible] | [illegible] | [illegible] | |


## ಗರ್ಭಿಣೀ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಕ್ರುಶನ್ ಲವಣವು ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ ಸ್ಟೋರುಗಳಲ್ಲೂ ಮತ್ತು ಬಜಾರುಗಳಲ್ಲೂ ದೊರೆಯುತ್ತದೆ

ಜೋನ್ ಬ್ಲಾಂಡೆಲ್.

ಚಲನ ಚಿತ್ರಗಳಲ್ಲಿ ಸುಂದರಿಯಾಗಿರುವುದಲ್ಲದೆ ಸ್ವತಃ ಸುಂದರಿಯಾಗಿಯೇ ಇರುವುದರಿಂದ ಎಲ್ಲರಿಂದಲೂ ಹೊಗಳಲ್ಪಟ್ಟಿರುತ್ತಾಳೆ.

ಜೋನ್‌ಬ್ಲಾಂಡೆಲ್ ತನ್ನ ಸೌಂದರ್ಯವನ್ನು ಹೆಚ್ಚಿಸುವ ಲಕ್ಸ್ ಟಾಯಿಲೆಟ್ ಸಾಬೂನಿನ ಆದರಣೆಯಲ್ಲಿ ಬಹಳ ಮುಂದಾಳಾಗಿದ್ದಾಳೆ. ಅವಳು ಹೇಳುವುದೇನೆಂದರೆ ಲಕ್ಸ್ ಟಾಯಿಲೆಟ್ ಸಾಬೂನನ್ನು ಬಹಳ ನಂಬಿಕೆಯಿಂದ ಉಪಯೋಗಿಸಿದ ಯುವತಿಯ ಚರ್ಮವು ಯಾವರೀತಿ ಸೌಂದರ್ಯದಿಂದಿರುತ್ತೆಂಬುದನ್ನು ನಂಬಲೂಸಹಾ ಅಸಾಧ್ಯವಾದದ್ದು ಲಕ್ಸ್ ಟಾಯಿಲೆಟ್ ಸಾಬೂನು ನಿಮ್ಮ ಚರ್ಮದ ಸೌಂದರ್ಯವನ್ನು ನುಣುಪಾಗಿಯೂ, ಮೃದುವಾಗಿಯೂ ಇರುವಂತೆ ಇಡಲಿ ಅದರ ಆಹ್ಲಾದಕರವಾದ ಬೆಣ್ಣೆಯಂಥ ಬಿಳಿಯ ನೊರೆಯು ಬರಟಾದ ಚರ್ಮದಮೇಲೆ ಊಹಿಸಲಸಾಧ್ಯವಾದ ಕೆಲಸಗಳನ್ನು ಮಾಡುತ್ತದೆ ಈ ದಿನವೇ ಪರೀಕ್ಷಿಸಿ

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP

ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧ ಎಣ್ಣೆಯಿಂದಲೇ ತಯಾರಿಸಿದ್ದು

L-LTS 801/2-80

LEVER BROTHERS (INDIA) LIMITED

KANARESE

★ ರಾಷ್ಟ್ರಪತಿ ★

# ಸುಭಾಷಚಂದ್ರ ಬೋಸರ ಭಾಷಣ

(೩ನೇ ಪುಟದಿಂದ ಮುಂದುವರಿಸಿದುದು)

ದ ಆಶ್ರಯದಲ್ಲಿ ಸ್ವಯಂಸೇವಕದಳವಿರಬೇಕು. ನಮ್ಮ ರಾಜಕೀಯ ಕೆಲಸಗಾರರಿಗೆ ಯೋಗ್ಯ ಶಿಕ್ಷಣವು ದೊರೆಯಬೇಕು ನಮ್ಮ ಪಕ್ಷದಲ್ಲಿ ಇನ್ನೂ ಹೆಚ್ಚಿನ ವ್ಯಕ್ತಿಭಾಶಾಲಿಗಳು ಬೇಕು

ಕಿಸಾನ್ ಸಭೆ, ಮಜೂರರ ಸಂಘ ಇತ್ಯಾದಿ ಸಂಸ್ಥೆಗಳು ಕಾಂಗ್ರೆಸ್ಸಿನ ಧ್ಯೇಯಗಳಿಗೆ ಅನುಸಾರವಾಗಿ ನಡೆದುಕೊಂಡು ಬರಬೇಕು ಕಾಂಗ್ರೆಸ್ಸಿನ ರೀತಿ ನೀತಿಗಳನ್ನನುಸರಿಸಿ ಕಾಂಗ್ರೆಸ್ಸಿನೊಂದಿಗೆ ಸಹಕರಿಸಿ ಕೆಲಸ ಮಾಡಬೇಕು. ಕಾಂಗ್ರೆಸ್ ಕೆಲಸಗಾರರು ಹೆಚ್ಚು ಹೆಚ್ಚಾಗಿ ಕೂಲಿಗಾರ ಮತ್ತು ರೈತರ ಸಂಘಗಳಲ್ಲಿ ಬೆರೆತು ಕೆಲಸ ಮಾಡಬೇಕು

### ಕಾಂಗ್ರೆಸ್ ಸಮತಾವಾದ ಪಕ್ಷ

ಸಮತಾವಾದ ತತ್ವವು ಇಂದು ನಮ್ಮ ಸದ್ಯದ ಗುರಿಯಾಗಿಲ್ಲ ಆದರೂ ರಾಜಕೀಯ ಸ್ವಾತಂತ್ರ್ಯವು ಬಂದ ಮೇಲೆ ದೇಶವನ್ನು ಸಮ

ತಾವಾದಮಯವನ್ನಾಗಿ ಮಾಡಲು ಈಗಿನಿಂದಲೂ ಸಮತಾವಾದ ತತ್ವಪ್ರಚಾರವು ಅವಶ್ಯ

### ಭಾರತದ ವಿದೇಶಾಂಗ ನೀತಿ

ನಾವು ಪ್ರತಿಯೊಂದು ದೇಶದಲ್ಲಿಯೂ ಭಾರತೀಯರ ವಿಷಯದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸುವ ಸ್ನೇಹಪುರುಷರೊಡನೆ ಬಾಂಧವ್ಯವನ್ನಿಟ್ಟುಕೊಂಡಿರಬೇಕು. ಅದನ್ನು ಅಭಿವೃದ್ಧಿಗೊಳಿಸುತ್ತ ಹೋಗಬೇಕು ಈ ರೀತಿ ಮಾಡಲು ವಿದೇಶಗಳ ವೃತ್ತಪತ್ರಿಕೆಗಳ ಮೂಲಕವೂ ಭಾರತದಲ್ಲಿ ತಯಾರಾದ ಕುಶಲ ಕಲಾಪ್ರದರ್ಶನಗಳ ಮೂಲಕವೂ ಚಲನಚಿತ್ರಗಳ ಮೂಲಕವೂ ತಕ್ಕ ಪ್ರಚಾರ ನಡೆಸಬೇಕು

ಕಾಂಗ್ರೆಸ್ ಅಂತರರಾಷ್ಟ್ರೀಯ ದೇಶಗಳೊಡನೆ ಸಂಬಂಧ ಬೆಳೆಸುವ ವಿಚಾರದಲ್ಲಿ ಭಾರತದ ಸಾಂಸ್ಕೃತಿಕ ಸಂಘಗಳು ಸಹಾಯ ಮಾಡಬೇಕು ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಕ್ಷೇತ್ರದಲ್ಲಿ ಕೆಲಸಮಾಡಿ ಭಾರತ ವಾಣಿಜ್ಯ ಸಂಸ್ಥೆಗಳು ಸಹಾಯ ಮಾಡಬೇಕು ಪ್ರತಿಯೊಂದು ಅಂತರಾಷ್ಟ್ರೀಯ ಸಮ್ಮೇಳನಕ್ಕೂ ಭಾರತೀಯರು ತಪ್ಪದೆ ಹೋಗಬೇಕು ಭಾರತಕ್ಕೆ ಅದರಿಂದ ತುಂಬಾ ಪ್ರಯೋಜನವುಂಟು. ಜಗತ್ತಿನ ಎಲ್ಲ ಕಡೆಗಳಲ್ಲೂ ಭಾರತವು ಅನಾಗರಿಕ ದೇಶ, ಆದುದರಿಂದ ಆ ದೇಶದ ಪ್ರಜೆಗಳನ್ನು ನಾಗರಿಕರನ್ನಾಗಿ ಮಾಡುವುದಕ್ಕೆ ಬ್ರಿಟಿಷರು ಒಬ್ಬರೇ ಇರಬೇಕು ಎಂಬ ಪ್ರಚಾರವು ನಡೆಯುತ್ತಿದೆ. ಇದಕ್ಕುತ್ತರವಾಗಿ ನಾವು ನಮ್ಮ ಸಂಸ್ಕೃತಿಯನ್ನೂ ವಿಶಾಲ ಜಗತ್ತಿಗೆ ತೋರಿಸಿಕೊಡಬೇಕು ಆಗ ನಮಗೆ ಅಂತರಾಷ್ಟ್ರೀಯ ಸಹಾನುಭೂತಿಯು ಅಪಾರವಾಗಿ ದೊರೆಯುವುದು ಮತ್ತು ಭಾರತದ ಕೋರಿಕೆಯನ್ನು ತಿರಸ್ಕರಿಸಲಸಾಧ್ಯವಾಗುವುದು

ಏಷ್ಯಾ, ಆಫ್ರಿಕಾ ಇದರಲ್ಲಿಯೂ ಮುಖ್ಯವಾಗಿ ಜಂಜಿಬಾರ್, ಕೆನಿಯಾ, ದಕ್ಷಿಣ ಆಫ್ರಿಕ, ಮಲಯ ಮತ್ತು ಸಿಲೋನ್ ದೇಶಗಳಲ್ಲಿ ನೆಲೆಸಿರುವ ನಮ್ಮ ದೇಶದ ಪ್ರಜೆಗಳು ಅನುಭವಿಸುತ್ತಿರುವ ಕಷ್ಟನಷ್ಟಗಳನ್ನು ಈ ಸಮಯದಲ್ಲಿ ಸೂಚಿಸುವುದನ್ನು ನಾವು ಮರೆಯಲಾರೆವು ಅವರ ವಿಷಯದಲ್ಲಿ ಕಾಂಗ್ರೆಸ್ಸು ಮೊದಲಿನಿಂದಲೂ ಬಹಳ ಆಸಕ್ತಿಯನ್ನು ವಹಿಸಿದೆ, ಇನ್ನು ಮುಂದೆಯೂ ವಹಿಸುವುದು.

### ರಾಜಕೀಯ ಬಂದಿಗಳ ಬಿಡುಗಡೆಯ ವಿಚಾರ

ಇತ್ತೀಚೆಗೆ ಬಂದಿಗಳು ನಡೆಸಿದ ಉಪವಾಸ ವ್ರತದಿಂದ ಈ ಪ್ರಶ್ನೆಯು ಹೆಚ್ಚಿನ ಪ್ರಾಮುಖ್ಯತೆಗೆ ಬಂದಿದೆ

### ಬಿಡುಗಡೆಯಾದ ಬಂದಿಗಳ ಅವಸ್ಥೆ

ಬಂಧನದಲ್ಲಿರುವ ರಾಜಕೀಯ ಬಂದಿಗಳು ಮಾತ್ರ ನರಳುತ್ತಿಲ್ಲ, ಬಂಧನದಿಂದ ಬಿಡುಗಡೆ ಹೊಂದಿದ ಅನೇಕ ಬಂದಿಗಳ ಸ್ಥಿತಿಯೂ ಉತ್ತಮವಾಗಿಲ್ಲ ಆರೋಗ್ಯವು ತುಂಬ ಕೆಟ್ಟು ಹೋಗಿ ಕ್ಷಯ ಮುಂತಾದ ನಾನಾ ಭಯಂಕರ ರೋಗಗಳಿಗೆ ತುತ್ತಾಗಿ ಅವರ ಮನೆಗಳನ್ನು ಸೇರುವರು ಹೊಟ್ಟೆ ಹಿಟ್ಟಿಲ್ಲದ ತಾಪತ್ರಯ ಬೇರೆ ಅನುಭವಿಸುವುದು ಅವರನ್ನು ಅವರ ಆತ್ಮೀಯರು [illegible] ಗಳಿಂದ ಸ್ವಾಗತಿಸು [illegible] ಸರಿಯ ನಗರಿಗೆ ಹೋ [illegible] ಗಳನ್ನನುಭವಿಸಿದ ಈ [illegible] ವಿಚಾರದಲ್ಲಿ ನಮ್ಮ [illegible] ವೇನ ಆದರೂ [illegible] ತ್ಯಾಗ [illegible] ಸಹಾನುಭೂತಿಯನ್ನು ವ್ಯಕ್ತ [illegible] ನವರ [illegible] ಪ್ರದರ್ಶಿಸಿ ನಮ್ಮ [illegible] ಸಹಾಯವನ್ನು ಮಾಡೋಣ

ಇಂದು [illegible] ದಲ್ಲಿ ಪ್ರಮುಖ ಸ್ಥಾನ [illegible] ಆದರಲ್ಲಿ ಮಿತವಾದಿಗಳೂ ಇರಬಹುದು [illegible] ಪಕ್ಷದವರೂ ಇರಬಹುದು. ಆದರೆ ಭಾರತದ ಸ್ವಾತಂತ್ರ್ಯ ಸಂಪಾದನೆಗಾಗಿ ಹೋರಾಡುತ್ತಿರುವ ಎಲ್ಲ ಸಾಮ್ರಾಜ್ಯ ನೀತಿವಿರುದ್ಧ ಸಂಸ್ಥೆಗಳಿಗೂ ಅದು ವೇದಿಕೆಯಾಗಿ ಪರಿಣಮಿಸಿದೆ ಆದುದರಿಂದ ದೇಶವೆಲ್ಲವೂ ಭಾರತ ರಾಷ್ಟ್ರಮಹಾಸಂಸ್ಥೆಯ ಧ್ವಜದಡಿಯಲ್ಲಿ ನಿಂತು ಕೆಲಸ ಮಾಡಬೇಕು

### ಮಹಾತ್ಮರು ಚಿರಕಾಲ ಬಾಳಲಿ!

ಕೊನೆಯಲ್ಲಿ 'ಮಹಾತ್ಮಾ ಗಾಂಧಿಯವರು ಇನ್ನೂ ಬಹುಕಾಲ ಜೀವಿಸಿ ನಮ್ಮ ರಾಷ್ಟ್ರದ ಸೇವೆಯನ್ನು ಮಾಡಲಿ'' ಎಂದು ಭಾರತವೆಲ್ಲ ಪ್ರಾರ್ಥಿಸುತ್ತಿರುವುದನ್ನೇ ನಾನೂ ಸಹ ಪ್ರಾರ್ಥಿಸುತ್ತೇನೆ. ಭಾರತವು ಅವರನ್ನು ಕಳೆದುಕೊಳ್ಳುವುದಕ್ಕೆ ಸಿದ್ಧವಾಗಿಲ್ಲ ಅದರಲ್ಲಿಯೂ ಈ ಸಮಯದಲ್ಲಿ ಅವರನ್ನೆಂದಿಗೂ ಕಳೆದುಕೊಳ್ಳುವ ಹಾಗಿಲ್ಲ. ನಮ್ಮ ದೇಶದ ಪ್ರಜೆಗಳು ಐಕಮತ್ಯದಿಂದ ಇರುವುದಕ್ಕೆ ಮಹಾತ್ಮರು ಬೇಕು. ನಮ್ಮ ಚಳುವಳಿಯು ದ್ವೇಷಭರಿತವಾಗಿ ನಡೆಯದಂತೆ ಮಹಾತ್ಮರು ಬೇಕು ಭಾರತದ ಸ್ವಾತಂತ್ರ್ಯ ಸಾಧನೆಯಿಂದ ಹೆಚ್ಚಾಗಿ ಮಾನವಕೋಟಿಯ ಕಲ್ಯಾಣಕ್ಕಾಗಿ ಮಹಾತ್ಮಾ ಗಾಂಧಿಯವರು ಬೇಕು! ನಮ್ಮ ಚಳುವಳಿಯು ಬ್ರಿಟನ್ನಿನ ಸಾಮ್ರಾಜ್ಯನೀತಿಯನ್ನು ಪ್ರತಿಭಟಿಸುವುದಕ್ಕಾಗಿ ಮಾತ್ರ ಹೂಡಿರುವ ಚಳುವಳಿಯಲ್ಲ. ಜಗತ್ತಿನಲ್ಲಿ ಇರುವ ಸಾಮ್ರಾಜ್ಯ ನೀತಿಯನ್ನೆಲ್ಲಾ ಪ್ರತಿಭಟಿಸುವುದಕ್ಕಾಗಿ ಹೂಡಲ್ಪಟ್ಟಿದೆ. ಜಗತ್ತಿನಲ್ಲಿ ಕಾಣಬರುವ ಸಾಮ್ರಾಜ್ಯನೀತಿಯೇ ಮುಖ್ಯವಾದದ್ದು. ಆದುದರಿಂದ ಭಾರತದ ಉದ್ಧಾರಕ್ಕಾಗಿ ಮಾತ್ರ ನಾವು ಹೋರಾಡುತ್ತಿಲ್ಲ. ಮಾನವ ಕೋಟಿಯ ಕಲ್ಯಾಣಕ್ಕಾಗಿ ಹೋರಾಡುತ್ತಿದ್ದೇವೆ- ಭಾರತವು ಸ್ವತಂತ್ರವಾಯಿತೆಂದರೆ ಮಾನವ ಕೋಟಿಯ ಕಲ್ಯಾಣವಾದಂತೆಯೇ!

"ವಂದೇ ಮಾತರಮ್"

## ಸರ್ವಸ್ವವನ್ನು ತ್ಯಾಗಮಾಡಿದ ಸರ್ವಾಧಿಕಾರಿಗಳು

ಹಿಟ್ಲರ, ಮುಸಲೋನಿ ಮೊದಲಾದ ಸರ್ವಾಧಿಕಾರಿಗಳಿದ್ದಾರಲ್ಲ ಅವರು ತಮಗಾಗಿ, ತಮ್ಮ ಸ್ವಾರ್ಥಸಾಧನೆಗಾಗಿ ಸರ್ವಾಧಿಕಾರ ಪದದಲ್ಲಿ ಶೋಭಿಸುತ್ತಿರುವದಿಲ್ಲ, ದೇಶಕ್ಕಾಗಿ, ದೇಶದ ಕೀರ್ತಿಮಾನಗಳನ್ನು ಬೆಳಗಿಸುವದಕ್ಕಾಗಿ ಮಾತ್ರ ಸರ್ವಾಧಿಕಾರಿಗಳಾಗಿದ್ದಾರೆ ಅವರಷ್ಟು ದೊಡ್ಡ ತ್ಯಾಗವೀರರು, ದೇಶಕ್ಕಾಗಿ ತಮ್ಮ ಜೀವನವನ್ನು ಬಲಿಗೊಟ್ಟವರು ಪ್ರಪಂಚದಲ್ಲಿ ಬೇರೊಬ್ಬರಿಲ್ಲ ಆದ್ದರಿಂದ ಆ ಸರ್ವಾಧಿಕಾರಿಗಳು ತುಂಬ ದರಿದ್ರರಾಗಿದ್ದಾರೆ ಅವರು ತೆಗೆದುಕೊಳ್ಳುವ ವೇತನಾದಿಗಳು ಬಹು ಅಲ್ಪವಾಗಿವೆ ಎಂದು ಲೋಕವಿಖ್ಯಾತವಾಗಿರುವದು. ಬಹು ಜನರು ಹೀಗೆಂದೇ ನಂಬಿದ್ದಾರೆ

ಆದರೆ ಲಂಡನ್ನಿನ ಡೈಲಿಹೆರಾಲ್ಡ್ ಪತ್ರಿಕೆಯ ಸುದ್ದಿಗಾರನೊಬ್ಬನು ಈ ಸರ್ವಾಧಿಕಾರಿಗಳ ವಿಷಯವಾಗಿ ಬೇರೆಯೇ ಒಂದು ತರಹದ ಕತೆಯನ್ನು ಹೇಳಿದ್ದಾನೆ. ಅವನು ಹೇಳುವದೇನಂದರೆ 'ಸರ್ವಾಧಿಕಾರಿಗಳ ದಾರಿದ್ರ್ಯದ ವಿಷಯವಾಗಿ ಹರಡಿರುವ ಸಮಾಚಾರವೆಲ್ಲ ಪೂರ್ಣ ಸುಳ್ಳು. ಪ್ರಪಂಚದಲ್ಲಿ ತಮ್ಮ ಮಾನಮರ್ಯಾದೆಗಳು ಹೆಚ್ಚಬೇಕೆಂದು ಆ ಸರ್ವಾಧಿಕಾರಿಗಳು ದೇಶವಿದೇಶಗಳಲ್ಲಿ ಮಾಡಿದ ಸರ್ವ ಪೂರ್ಣ ಪ್ರಚಾರ ಕಾರ್ಯದಿಂದ ಈ ತರಹದ ಭ್ರಮೆಯು ಪ್ರಪಂಚದಲ್ಲಿ ಉಂಟಾಗಿದೆ ಯೂರೋಪಿನ ಸರ್ವಾಧಿಕಾರಿಗಳು ಸರ್ವಸ್ವವನ್ನು ತ್ಯಾಗಮಾಡಿದ ಲಕ್ಷಾಧಿಪತಿಗಳಲ್ಲ, ಅವರು ಸರ್ವಸ್ವವನ್ನು ತಮಗಾಗಿ ಇಟ್ಟುಕೊಳ್ಳುತ್ತಿರುವ ಲಕ್ಷಾಧಿಪತಿಗಳಾಗಿದ್ದಾರೆ

### ಮುಸಲೋನಿ

[illegible] ಸರ್ಕಾರದ [illegible] ವಾರ್ಷಿಕ ಸಂಬಳ [illegible] 1050 ಪವನುಗಳು ಅಂದರೆ [illegible] ಸಾವಿರ ರೂಪಾಯಿ ಮಾತ್ರ [illegible] ಇದು ಅವನ ಸ್ವಾಧೀನದಲ್ಲಿ [illegible] ರೆ ಅವನ ಹತ್ತಿರ ಸ್ವಾರ್ಜಿತ ಬೇರೆ ಸಂಪತ್ತಿ ತುಂಬಾ ಇರುವದು ಇಟಲಿಯ ಸುಪ್ರಸಿದ್ಧ ವಾರ್ತಾ ಪತ್ರಿಕೆ 'ಪಪ್ಪೋಲೋ ಡಿ ಇಟಲಿಯಾ' ಎಂಬುದರ ಅವನು ಒಬ್ಬನೇ ಒಬ್ಬ ಅಧಿಕಾರಿಯಾಗಿದ್ದಾನೆ ಆ ಪತ್ರಿಕೆಯಿಂದ ಅವನಿಗೆ ತುಂಬಾ ಲಾಭವಾಗುತ್ತದೆ ಅಷ್ಟೇ ಮಾತ್ರವಲ್ಲ ಅವನು ಇತರ ಪತ್ರಿಕೆಗಳಿಗೆ ಲೇಖನಾದಿಗಳನ್ನು ಬರೆದುಕೊಟ್ಟಾಗಲೂ ಆ ಬೇರೆ ಪತ್ರಿಕೆಗಳವರು ಅವನಿಗೆ ತುಂಬ ಹಣವನ್ನು ಕೊಡುವರು ಅವನಿಗೆ ಇನ್ನೂ ಉತ್ಪತ್ತಿ ಕೂಡ ತುಂಬ ಇರುವದು ಅವನು ಬರೆದ ಪುಸ್ತಕಗಳ ಪ್ರಚಾರವು ಇಟಲಿಯ ಹಳ್ಳಿಹಳ್ಳಿಗಳಲ್ಲಿ ಆಗುತ್ತದೆ ಆ ಪುಸ್ತಕಗಳ ಮಾರಾಟದಿಂದಲೂ ಅವನಿಗೆ ಹಣವಾಗುತ್ತದೆ ಆದ್ದರಿಂದ ಮುಸಲೋನಿ ಲಕ್ಷಾಧಿಪತಿಯಷ್ಟೇ ಅಲ್ಲ, ಕೋಟ್ಯಾಧಿಪತಿ ಆಗಿರಲಿಕ್ಕೂ ಸಾಕು ಎಂದು ಊಹಿಸಲಿಕ್ಕೆ ಎಡೆ ಇದೆ.

### ಹಿಟ್ಲರ್

ಹಿಟ್ಲರನ ವಾರ್ಷಿಕ ಸಂಬಳ 4080 ಪವನು ಅಂದರೆ ಸುಮಾರು 53 ಸಾವಿರ ರೂಪಾಯಿಗಳಾಗಿರುವವು ಆದರೂ ಕೂಡ ಅವನು ಆ ವೇತನವನ್ನು ತೆಗೆದುಕೊಳ್ಳುವದು ಕೂಡ ~~ಇಲ್ಲ ಪರಂತು ಅವನ ಸ್ವಾರ್ಜಿತ ಹಣವು~~ ಮುಸಲೋನಿಯಲ್ಲಿರುವದಕ್ಕಿಂತ ಎಷ್ಟು ಮಾತ್ರಕ್ಕೂ ಕಡಿಮೆಯಾಗಿರಲಾರದು. ನಾಜಿ ತತ್ವಗಳ ಪ್ರಚಾರ ಕಾರ್ಯದಲ್ಲಿ ಹಿಟ್ಲರನ ದೊಡ್ಡ ಪಾಲು ಇದೆ. ಆ ಪ್ರಕಾರ ಸಾಹಿತ್ಯದ ಮಾರಾಟದಿಂದ ವರ್ಷವರ್ಷ ಅವನಿಗೆ ಎಷ್ಟು ಲಾಭವಾಗುತ್ತದೆ ಎಂಬುದು ಇದು ವರೆಗೆ ಒಬ್ಬನಾದರೂ ಹೇಳಿದುದಿಲ್ಲ. ಆದರೆ ಜರ್ಮನಿಯಲ್ಲಿ ನಾಜಿ ತತ್ವಗಳ ಪ್ರಚಾರ ಮಾಡುವದು ಹಿಟ್ಲರ ಒಬ್ಬನೇ ಒಬ್ಬನ ಅಧಿಕಾರಕ್ಕೆ ಸೇರಿದುದಾಗಿರುವದು. ಅಲ್ಲಿ ಅವನಿಗೆ ಪ್ರತಿಸ್ಪರ್ಧಿಗಳು ಇಲ್ಲವೇ ಇಲ್ಲ. ಆದಕಾರಣ ಸರ್ವಾಧಿಕಾರಪದದಲ್ಲಿರುವ ಅವನ ಪುಸ್ತಕಾದಿಗಳಿಗೆ ಒಳ್ಳೆಯ ಬೆಲೆ ಬರಲಿಕ್ಕೇಬೇಕು. ಅಲ್ಲದೆ ಅವನ ವಿದೇಶಿ ಪುಸ್ತಕ ವ್ಯಾಪಾರಗಳ ಮೂಲಕವೂ ಅವನಿಗೆ ಹೆಚ್ಚು ಹಣ ಬರುತ್ತದೆ. ಆದ್ದರಿಂದ ಹಿಟ್ಲರನು ಕೂಡ ಲೋಕದ ಒಬ್ಬ ದೊಡ್ಡ ಶ್ರೀಮಂತನಾಗಿರುವನು.

### ಸ್ಟಾಲೀನ

ರಶ್ಯದಲ್ಲಿ ಸಮಾಜಸತ್ತಾವಾದಿಗಳ ಶಾಸನವಿದೆ ಅಲ್ಲಿ ಶ್ರೀಮಂತ ಬಡವ ಎಂಬ ಭೇದಭಾವನೆಗೆ ಎಡೆ ಇರುವದಿಲ್ಲ. ಆದರೂ ಕೂಡ ರಶ್ಯದ ಸಾಮಾನ್ಯ ಒಬ್ಬ ಪ್ರಜೆಗಿಂತ ಅಲ್ಲಿಯ ಸರ್ವಾಧಿಕಾರಿ ಸ್ಟಾಲೀನನು ಎಷ್ಟೋ ಪಾಲು ಹೆಚ್ಚಿಗೆ ಹಣ ಕಾಸು ಉಳ್ಳವನಾಗಿರುವನು. ಇತರರಿಗಿಂತ ಅವನು ದೊಡ್ಡ ಶ್ರೀಮಂತನಾಗಿರುವನೆಂದು ಹೇಳುತ್ತಾರೆ ಸ್ಟಾಲೀನನ ವಾರ್ಷಿಕ ಆಯುವು 600 ಪವನುಗಳು ಅಂದರೆ ಸುಮಾರು 8000 ರೂಪಾಯಿಗಳಾಗಿರುವವು.

ಹೇಳುವ ತಾತ್ಪರ್ಯವಿಷ್ಟೇ! ಹೊರಗಿನಿಂದ ಈ ಸರ್ವಾಧಿಕಾರಿಗಳು ಅಷ್ಟು ನಿಸ್ವಾರ್ಥಿಗಳೆಂದು ತೋರಿಬರುತ್ತಾರೋ, ಒಳಗಿನಿಂದ ಅಷ್ಟೇ ಸ್ವಾಧೀನಗಳಾಗಿ ಇರುವರು ದೇಶಹಿತ ಸಾಧನೆಯೊಂದೇ ಅವರ ಜೀವನ ಧ್ಯೇಯವಾಗಿರುವದಿಲ್ಲ, ಅದರೊಟ್ಟಿಗೆ ಸ್ವಾರ್ಥಸಾಧನೆಯು ಕೂಡ ಅವರ ಜೀವನ ಧ್ಯೇಯವಾಗಿಯೂ ಇರುವದೆಂಬುದು ಹೆರಾಲ್ಡ್ ಪತ್ರಿಕೆಯ ಆ ಸುದ್ದಿಗಾರನ ಲೇಖನದಿಂದ ಸುಸ್ಪಷ್ಟವಾಗುವದು


## ಅಗ್ನಿಮಾಂದ್ಯ.

ಅಜೀರ್ಣಾವಸ್ಥೆಗಳಲ್ಲಿ ಒಂದಾದ ಅಗ್ನಿಮಾಂದ್ಯವನ್ನು ಮಾಯಾವಿ ತರದಲ್ಲಿ ಗುಣಪಡಿಸಲು ಸಾಧ್ಯವಿಲ್ಲ ಅದಕ್ಕೆ ತಕ್ಕ ಚಿಕಿತ್ಸೆಯು ನಡೆಯಬೇಕು. ಸಮಾಧಾನವನ್ನು ತಾಳಿ ಆ ಚಿಕಿತ್ಸೆಯನ್ನು ನಡೆಸಿದರೆ, ಆಗ ಗುಣವು ದೊರಕುವುದು.

ಖಂಡಿತವಾಗಿಯೂ ಗುಣಪಡಿಸತಕ್ಕ [illegible] ಚಿಕಿತ್ಸೆಯೆಂದರೆ "ಮೆಕ್ಲೀನ್ [illegible]" [illegible] ಅಗ್ನಿಮಾಂದ್ಯವನ್ನು [illegible] ಗಳಿಗೆ ಬೇಕಾದ [illegible] ಅಗ್ನಿಮಾಂದ್ಯ [illegible] ಮಾಡುವುದು. [illegible] ಜೀರ್ಣವನ್ನುಂಟು [illegible] ಗುಣ [illegible].

ಜೀರ್ಣಕ್ಕೆ ಬೇಕಾದ ರಸಗಳು ಹೊಟ್ಟೆಯಲ್ಲಿ ಉಂಟಾಗದಿರಲು ಮೆಕ್ಲೀನ್ ಬ್ರ್ಯಾಂಡ್ ಪುಡಿಯು ಜೀರ್ಣಕೋಶದ ಅಂಗಗಳೊಡನೆ ಸಹಕರಿಸಿ, ಜೀರ್ಣವನ್ನು ಸಂಪಾದಿಸುವುದು.

ಅಗ್ನಿಮಾಂದ್ಯವನ್ನು ಅನುಭವಿಸುತ್ತಿರುವವರು ಒಂದು ವಾರ ಯಾ ಎರಡು ವಾರಗಳ ತನಕ ಮೆಕ್ಲೀನ್ ಬ್ರ್ಯಾಂಡ್ ಪುಡಿಯನ್ನು ತಪ್ಪದೆ ಸೇವಿಸಬೇಕು. ಆ ಅವಧಿಯಲ್ಲಿ ಅವರಿಗೆ ವಿಶೇಷ ಗುಣವು ಕಾಣಿಸುವುದು. ಆದರಿಂದ ಅವರು ಆಶ್ಚರ್ಯಚಕಿತರಾಗಿ ಸಂತೋಷ ಹೊಂದುವವರಾಗುವರು. ಖಾತ್ರಿಯಾದ ಮೆಕ್ಲೀನ್ ಬ್ರ್ಯಾಂಡ್ ಪುಡಿಯನ್ನು ಪಡೆಯುವುದಕ್ಕೆ ಜಾಗರೂಕರಾಗಿರಿ ಪೆಟ್ಟಿಗೆಯ ಮೇಲೂ ಬಾಟ್ಲಿಯ ಮೇಲೂ ಕೆಂಪು ಮುದ್ರೆಯ ಮೇಲೆ

Alex C. Maclean

ಎಂಬ ಸಹಿ ಇರುವಂತೆಯೂ, ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿರಿ. ಅದನ್ನು ಉಪಯೋಗಿಸಿದ ನಂತರ ನೀವು ಸಂತುಷ್ಟರಾಗುವಿರಿ.

ಇಂತಹ ನಮೂನೆಯ ಇತರ [illegible] ಕೆಲವು ಪುಡಿಗಳು ನಕಲು [illegible] ಅವು ಎಲ್ಲ ರೋಗಗಳಿಗೂ ಉಪಯುಕ್ತವಿಲ್ಲ, ಆ ಔಷಧಿಗಳ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತವೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜೆ. ಎಲ್. ಮಾರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್,
ಸ್ಟೇಂಡರ್ಡ್ ಬಿಲ್ಡಿಂಗ್, ಹಾರ್ನ್‌ಬೀ ರೋಡ್, ಮುಂಬಯಿ.

S No. 67

# ಶ್ರೀ ನೆಹರೂರವರ ವಿದ್ಯುತ್ ಸಂಸ್ಕಾರ

**ಹಳೆ ಮ್ಯಾಗ್ನೇಟೊದಿಂದ ವಿದ್ಯುತ್ ಪ್ರವಾಹವನ್ನು ತಯಾರಿಸಿ, ಅದನ್ನು ಪ್ರಾಣಿಗಳ, ವನಸ್ಪತಿಗಳ, ರೋಗನಿವಾರಣೆ, ಬೆಳವಣಿಗ್ಯೆ ಇತ್ಯಾದಿಗಳಿಗೆ ಉಪಯೋಗಿಸಬಹುದು. ಈ ಸುಲಭವಾದ ಉಪಾಯದ ಹೆಚ್ಚಿನ ವಿವರ ಬೇಕಾದವರು, ಮಣಿಪುರ ಶ್ರೀ ನೆಹರೂರವರಿಗೆನೇ ಬರೆದುಕೊಳ್ಳಬಹುದು.**

ಡಾ। ನೆಹರೂರವರು ಅಲಹಾಬಾದದ ವಿಶ್ವವಿದ್ಯಾಲಯದ ವಿಜ್ಞಾನದ ಅಧ್ಯಾಪಕರಾಗಿ ಕೆಲಸ ಮಾಡಿ, ಆ ಮೇಲೆ ಐ. ಸಿ. ಯಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೈನಪುರಿ ಜಿಲ್ಲೆಯ ಕಲೆಕ್ಟರರಾಗಿ ನೇಮಿಸಲ್ಪಟ್ಟ ಕರ್ತೃತ್ವಶಾಲಿಗಳು; ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಿಂದ ಡಾಕ್ಟರ ಪದವಿ ಪಡೆದ ವಿದ್ವಾಂಸರು; ಹಿಂದೀ ಶಾಸ್ತ್ರೀಯ ಸಭೆಯ ಬೇಸಾಯ ವಿಭಾಗದ ಅಧ್ಯಕ್ಷರು; ಬೇಸಾಯ ಸಂಶೋಧನ ಮಾಡುವ ಇಂಪೀರಿಯಲ್ ಕೌನ್ಸಿಲ್ ಸಂಸ್ಥೆಯ ಸಲಹೆಗಾರರು. ಇಷ್ಟು ಅಧಿಕಾರಿ ಪುರುಷರಾದಾಗ್ಯೂ ಇವರಿಗೆ ಅಧಿಕಾರದ ಗರ್ವವಿಲ್ಲ. ಯಾವಾಗಲೂ ಬಡ ಹಳ್ಳಿಗರೊಡನೆ ಇವರು ಒಡನಾಡುವದು ಹೆಚ್ಚು. ಅವರ ಚಿಕಿತ್ಸೆ ಮಾಡುವದು, ಅವರ ಹೊಲಗಳಲ್ಲಿ ವಿಶೇಷ ಉತ್ಪನ್ನ ಬೆಳೆಯುವಂತೆ ಅವರಿಗೆ ಕ್ರಮಗಳನ್ನು ತಿಳಿಸಿ ಹೇಳುವದು, ದನಕರುಗಳ ಜೋಪಾನ ಕ್ರಮಗಳನ್ನು ತಿಳಿಸಿಕೊಡುವದು, ಇವರದೊಂದು ಸ್ವಭಾವ. ಇವರು ಹೋದ ಹೋದಲ್ಲಿ ಜನರು ಇವರಿಗೆ ಮುತ್ತುತ್ತಾರೆ. ಎಲ್ಲರಿಗೆ ಇವರು ಹೇಳುವ ಉಪಾಯವೊಂದೇ 'Electroculture' ವಿದ್ಯುತ್‌ಸಂಸ್ಕಾರ!

ವಿದ್ಯುತ್ ಸಂಸ್ಕಾರದ ರಹಸ್ಯವನ್ನು ನಾವು ತಿಳಕೊಳ್ಳುವದುಚಿತ. ಮಾನವನೇ ಆಗಲಿ, ಪ್ರಾಣಿಯೇ ಆಗಲಿ, ಗಿಡ-ಮರಗಳೇ ಆಗಲಿ; ಎಲ್ಲವುಗಳ ಜೀವಜಂತುಗಳಲ್ಲಿ ಜೀವನಕಲೆಯ ರೂಪದಲ್ಲಿ ವಿದ್ಯುತ್ತಿದೆ; ವಿದ್ಯುತ್ತೇ ಜೀವನಕಲೆ! ಜೀವನಕಲೆಯ ವಿದ್ಯುತ್ತಿನಲ್ಲಿ ವ್ಯತ್ಯಾಸವಾದರೆ ರೋಗಗಳಾಗುತ್ತವೆ; ಬೆಳವಣಿಗೆ ಕುಂಠಿತವಾಗುತ್ತದೆ; ಕಸುವು ಕುಗ್ಗುತ್ತದೆ; ರೋಗ ವಿರೋಧಕ ಶಕ್ತಿ ಕುಂದುತ್ತದೆ; ದುರ್ಬಲತೆ ಹೆಚ್ಚಿ ಸಾವು ಬರುತ್ತದೆ. ಅದರಿಂದ ಪ್ರಾಣಿಕೋಟಿಯಲ್ಲಾಗಲಿ, ವನಸ್ಪತಿ ಕೋಟಿಯಲ್ಲಾಗಲಿ ಬದಗುವ ವಿದ್ಯುತ್ತಿನ ಕೊರತೆಯನ್ನು ಕೃತ್ರಿಮ ಉಪಾಯಗಳಿಂದ ಜೀವಜಂತುಗಳಿಗೆ ಪೂರೈಸಿದರೆ, ಜೀವನಕಲೆ ಬಲಿತು ಪ್ರಾಣಿಗಳೂ ವನಸ್ಪತಿಗಳೂ ಕ್ಷೇಮಹೊಂದಿ ಪರಿಪುಷ್ಟವಾಗಿ ಬೆಳೆದು ವಿಶೇಷ ಕಾರ್ಯಕ್ಷಮವಾಗುವವು. ಮೈನಪುರಿ ಜಿಲ್ಲೆಯೊಳಗಿನ ಪ್ರಯೋಗ ನೋಡಿ ಮುಂಬಯಿ 'ಟೈಮ್ಸ್' ಪತ್ರಿಕೆಯ ಸಂಪಾದಕರಾಗಿದ್ದ ಸರ್ ಸ್ಟೆನ್ಲೀ ರೀಡರವರೂ ಗಡಿನಾಡಿನ ಬೇಸಾಯ ಇಲಾಖೆಯ ಡ್ಯಾರೆಕ್ಟರರಾದ ಕರ್ನಲ್ ನೋಲರವರೂ ಡಾ। ನೆಹರೂರವರಿಗೆ ಹೊಗಳಿದ್ದಾರೆ. ಕರ್ನಲ್ ನೋಲರವರು ತಾ. 9-7-37ನೇಗೆ ಸರಕಾರಕ್ಕೆ ಸಾದರಪಡಿಸಿದ ವರದಿಯಲ್ಲಿ ಡಾ। ನೆಹರೂರವರ ವಿದ್ಯುತ್ ಸಂಸ್ಕಾರ ಪ್ರಯೋಗಗಳಿಂದ ಕಾಳು-ಕಡಿಗಳ ಉತ್ಪತ್ತಿ ಶೇಕಡಾ 80ರಷ್ಟು ಬೆಳೆಯಿತಾಗಿಯೂ ಈ ಬಗ್ಗೆ ಖರ್ಚೇನಿಲ್ಲವಾಗಿಯೂ ಬರೆಯುತ್ತಾರೆ. ವಿದ್ಯುತ್ ಸಂಸ್ಕಾರ ಮಾಡಿದರೆ ಗಿಡಗಳು ಪ್ರಬಲವಾಗಿ ಬೆಳೆಯುತ್ತವೆ; ಎಲೆಗಳು ತೇಜಃಪುಂಜವಾಗುತ್ತವೆ; ರೋಗ ಹತ್ತುವದಿಲ್ಲ; ಮಂಜು-ಆಣೆಕಲ್ಲುಗಳು ಬಿದ್ದಾಗ್ಯೂ ಫಲಗಳು ದೊಡ್ಡದಾಗುತ್ತವೆ; ರುಚಿಕರವಾಗುತ್ತವೆ; ಫಲ ಬೇಗ ಬಂದು ದೀರ್ಘಕಾಲದ ತನಕ ಬಾಳುತ್ತವೆ, ಸಾಯಲಿಕ್ಕೆ ಬಿದ್ದ ಮರಗಳು ಪುಷ್ಟವಾಗಿ ಬೆಳೆಯತೊಡಗುತ್ತವೆ; ಬಂಜರು ಬಿದ್ದ, ಬೆಳೆ ಹುಟ್ಟದ, ಬೀಳುಗಟ್ಟಿ ಭೂಮಿಯೆಂದು ಗಣಿಸಲ್ಪಟ್ಟ ಭೂಮಿ ಗಿಡ ಮರಗಳಿಂದ ಪ್ರಫುಲ್ಲಿತವಾಗುತ್ತದೆ. ಹುಟ್ಟದ ಬೆಳೆ ಹುಟ್ಟಹತ್ತುತ್ತದೆ. ವರ್ಷಕ್ಕೊಮ್ಮೆ ಫಲ ಬರುವಲ್ಲಿ ವರ್ಷಕ್ಕೆ 2-8 ಬಾರಿ ಈಗ ಫಲ ಕೊಯ್ಯಲ್ಪಡುತ್ತದೆ. ವರ್ಷಕ್ಕೊಮ್ಮೆ ಫಲ ಬರುವಲ್ಲಿ ವರ್ಷಕ್ಕೆ 2-8ಬಾರಿ ಈಗ ಫಲ ಕೊಯ್ಯಲ್ಪಡುತ್ತದೆ. ರೋಗ ಹಿಡಿದ ದನಕರುಗಳಿಗೆ ಸ್ವಾಸ್ಥ್ಯ ಪ್ರಾಪ್ತಿಯಾಗಿದೆ; ಹಾಲು ಹಿಂಡದ, ಕಿಂಚಿತ್ ಹಾಲು ಹಿಂಡುವ ದನಗಳು ವಿಪುಲ ಹಾಲು ಕೊಡುತ್ತಿವೆ। ಈ ಸಂಗತಿಗಳನ್ನೋದಿದರೆ ದಂತಕಥೆಯೆಂದೂ, ಕಟ್ಟುಕಥೆಯೆಂದೂ ಕಾದಂಬರಿಯೆಂದೂ ಯಾರಾದರೂ ಎಣಿಸಬಹುದು. ಆದರೆ, ಈ ಸಂಗತಿಗಳು ಮೈನಪುರಿಯೊಳಗೆ ಪ್ರತ್ಯಕ್ಷ ಘಟಿಸುತ್ತಿವೆ. ಅವನ್ನು ಪ್ರತ್ಯಕ್ಷ ನೋಡಿಕೊಂಡು ಸ್ವಾಮಿ ಸೇವಾನಂದರವರು ಕಲಕತ್ತೆಯ 'ಮೋಡರ್ನ ರಿವ್ಯೂ' ಮಾಸಪತ್ರಿಕೆಯಲ್ಲಿ ಇವನ್ನು ಸಚಿತ್ರ ವಿವರಿಸಿದ್ದಾರೆ. ವಿದ್ಯುತ್ ಸಂಸ್ಕಾರ ಪೂರ್ವ ಕುದುರೆ, ವಿದ್ಯುತ್ ಸಂಸ್ಕಾರೋತ್ತರ ಕುದುರೆ; ವಿದ್ಯುತ್ ಸಂಸ್ಕಾರಪೂರ್ವ ಬದನೆಕಾಯಿ, ವಿದ್ಯುತ್ ಸಂಸ್ಕಾರೋತ್ತರ ಬದನೆಕಾಯಿ; ವಿದ್ಯುತ್‌ಸಂಸ್ಕಾರಪೂರ್ವ ಗಡ್ಡೆಗೆಣಸು ಗಿಡಮರ, ವಿದ್ಯುತ್ ಸಂಸ್ಕಾರೋತ್ತರದ ಗಡ್ಡೆಗೆಣಸು ಗಿಡಮರ, ವಿದ್ಯುತ್‌ಸಂಸ್ಕಾರಪೂರ್ವ ಬಾಳೆಕೊನೆ, ವಿದ್ಯುತ್ ಸಂಸ್ಕಾರೋತ್ತರ ಬಾಳೆಕೊನೆ ಮೊದಲಾದವುಗಳ ಚಿತ್ರಗಳನ್ನು ಕೊಟ್ಟು ಡಾ। ನೆಹರೂರವರ ಪ್ರಯೋಗದಿಂದ ಕೃಷಿಕರ್ಮದಲ್ಲಿ ಉಂಟಾದ ಕ್ರಾಂತಿಯನ್ನು ಸ್ವಾಮಿಗಳು ದಿಗ್ದರ್ಶನ ಮಾಡಿದ್ದಾರೆ. ವಿದ್ಯುತ್‌ಸಂಸ್ಕಾರಯುಕ್ತ ಹೋರಿಯ ಚಿತ್ರ ನೋಡಿದರೆ ಮನಸ್ಸು ಆಲ್ಹಾದದಿಂದ ನಲಿದಾಡುತ್ತಿದೆ. ಇಷ್ಟು ಕ್ರಾಂತಿಯನ್ನುಂಟುಮಾಡುವ ಪ್ರಯೋಗದ ವಿವರವನ್ನು ತಿಳಕೊಳ್ಳಲು ವಾಚಕರು ಕುತೂಹಲಪಡುವದು ಸಹಜ.

ಪ್ರಾಣಿಗಳಿಗೆ ವಿದ್ಯುತ್ ಸಂಸ್ಕಾರ ಮಾಡಿದ ನೀರನ್ನು ಕುಡಿಸಗೊಡಬೇಕು; ಬೀಜಗಳನ್ನು ವಿದ್ಯುತ್ ಸಂಸ್ಕಾರಯುಕ್ತ ನೀರಿನಲ್ಲಿ ನೆನೆಹಾಕಬೇಕು; ಗಿಡಮರಗಳಿಗೆ ಹೊಲಗಳಿಗೆ ವಿದ್ಯುತ್‌ಸಂಸ್ಕಾರಯುಕ್ತ ನೀರನ್ನೆರೆಯಬೇಕು; ಇದಕ್ಕೆ ವಿಶೇಷ ಖರ್ಚಿಲ್ಲ. ಮುರಿದುಬಿದ್ದ ಮೋಟಾರು ಮ್ಯಾಗ್ನೆಟೊ, ಹರಿದುಬಿದ್ದ ಮೋಟಾರು ಟ್ಯೂಬಿನ ಒಂದೆರಡು ತುಂಡು, ಕೆಲ ಸರಿಗೆಗಳು, ಕಾಜಿನ ತುಂಡು; ಇವೇ ಡಾ। ನೆಹರೂರವರ ವಿದ್ಯುತ್‌ಸಂಸ್ಕಾರ ಪ್ರಯೋಗ ಸಾಧನಗಳು. ಇವುಗಳಿಂದ ವಿದ್ಯುತ್ತನ್ನು ಹುಟ್ಟಿಸಿ ನೀರಿಗೆ ಬಿಡುತ್ತಾರೆ. ಇದರಿಂದ ಸರಿಗೆಯ ಜಾಕೀಟುಗಳನ್ನು ತಯಾರಿಸುತ್ತಾರೆ. ಈ ಜಾಕೀಟುಗಳನ್ನು ಗಿಡಗಳಿಗೆ ಸುತ್ತಬೇಕು ಇಲ್ಲವೆ ಗಿಡಕ್ಕೆ ಹಚ್ಚಬೇಕು. ರೋಗ ಹಿಡಿದ ಟೊಂಗೆಗಳಿಗೂ ಹಚ್ಚಬಹುದು. ಗಿಡಮರಗಳು ಅವುಗಳಿಂದ ವಿದ್ಯುತ್ತನ್ನು ಹೀರಿಕೊಂಡು ಅವಶ್ಯವುಳ್ಳ ಜೀವನಕಲೆಯನ್ನು ಪಡೆದು ಪುಷ್ಟವಾಗಿ ಬೆಳೆಯುತ್ತವೆ. ಪ್ರಯೋಗಕ್ಕೆ ಎಳ್ಳಷ್ಟು ಖರ್ಚಿಲ್ಲ. ಕಸದ ಬುಟ್ಟಿಯಲ್ಲಿ ಒಗೆದುಬಿಟ್ಟ ಕಸವೇ ಈ ಪ್ರಯೋಗದ ಸಕಲ ಸಾಹಿತ್ಯ.

ಕಾನಡಾ ವೃತ್ತದಿಂದ


॥ ಶ್ರೀ ॥

## ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ ಧರ್ಮಸ್ಥಳಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! ಅಪೂರ್ವ ರಿಯಾಯತಿ!

**ತಾ. 14-2-1938ರಿಂದ 15-3-1938ರ ವರೆಗೆ ಮಾತ್ರ!**

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 28-2-1938ರಲ್ಲು ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದುಹೋಗತಕ್ಕ ಯಾವತ್ತೂ ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತೂ ಸ್ಟೇಷನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓%ರ ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಟನ್ನು ಮಾಡಿರುವೆವು.

ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದ್ದಾಗಿದೆ

## ಇಂತಹ ಅತ್ಯಪೂರ್ವ ಸುಸಂದರ್ಭವನ್ನು ಕಳಕೊಳ್ಳದಿರಿ!

***JOINT MANAGERS,***

**Combined Booking Agency, Mangalore. Joint Booking Office, Kodialbail.**

# ಕಲ್ಕತ್ತದ ಕತ್ತಲೆಯ ಕೋಣೆ.

## ಅದರಲ್ಲಿ ಐತಿಹಾಸಿಕ ಸತ್ಯವಿಲ್ಲ.

## "ಸ್ಮಾರಕವನ್ನು ಕಿತ್ತು ಪ್ರದರ್ಶನಾಲಯದಲ್ಲಿ ಇಡಬೇಕು".

(ಪ್ರೊಫೇಸರ್ ಹುಮಾಯೂನ್ ಕಬೀರ್ ಎಂ. ಎಲ್. ಸಿ., ಇವರ ಪ್ರಕಟಣೆ.)

ಭಾರತದ ಇತಿಹಾಸವನ್ನು ಓದಿದ ಪ್ರಪಂಚದ ಎಲ್ಲ ಭಾಗದ ಜನರಿಗೆ 'ಕಲ್ಕತ್ತ' ಎಂದಾಗ ಅದರ ಕತ್ತಲೆಕೋಣೆಯು ನೆನಪು ಬರುತ್ತದೆ ೧೭೫೬ನೇ ಇಸವಿಯ ಜೂನ್ ತಿಂಗಳ ೨೦ನೇ ತಾರೀಕಿನ ದಿನ ಬಂಗಾಳದ ಸುಬೇದಾರನಾಗಿದ್ದ ಸಿರಾಜುದ್ದೌಲನು ೧೪೬ ಮಂದಿ ಯೂರೋಪೀಯ ಗಂಡಸರು ಮತ್ತು ಒಬ್ಬ ಹೆಂಗಸನ್ನು ೧೮ ಅಡಿ ಚದರದ ಕಿಟಕಿ, ಗಾಳಿಕಿಂಡಿ ಯಾವುದೂ ಇಲ್ಲದ ಒಂದು ಚಿಕ್ಕ ಕೋಣೆಯಲ್ಲಿ ಬಂಧಿಸಿಟ್ಟಿದ್ದನು ಮರುದಿನ ಬರೀ ೨೩ ಮಂದಿ ಮಾತ್ರ ಅರೆಜೀವದಲ್ಲಿದ್ದರು ಎಂದು ಇತಿಹಾಸದಲ್ಲಿ ಓದುತ್ತೇವೆ

ಸಿರಾಜುದ್ದೌಲನ ಈ ದುಷ್ಕೃತ್ಯ ಮತ್ತು ಭೀಕರ ಅತ್ಯಾಚಾರವನ್ನು ಕೇಳಿದ ಮಾತ್ರಕ್ಕೆ ಕಲ್ಲೆದೆಯವನಾದರೂ ಬೆಚ್ಚಿಬೀಳಬೇಕು. ಈ ವೃತ್ತಾಂತವನ್ನು ಓದಿದ ಪ್ರತಿಯೊಬ್ಬ ವಿದೇಶೀಯನು ಹಿಂದೂದೇಶದ ವಿಷಯವಾಗಿ—'ಅದು ರಾಕ್ಷಸೀ ಸ್ವಭಾವದ ಜನರ ನಾಡು' ಎಂಬಭಿಪ್ರಾಯವನ್ನು ಮಾಡಿಕೊಂಡಿದ್ದಾರೆ. ಅದರಿಂದ ಜಗತ್ತಿನಲ್ಲಿ ಹಿಂದೂದೇಶದ ಕುರಿತು ದುರಭಿಪ್ರಾಯಗಳು, ತಪ್ಪಭಿಪ್ರಾಯಗಳ ಹರಡಿ ಈ ದೇಶಕ್ಕೆ ತುಂಬಾ ನಷ್ಟವುಂಟಾಗಿದೆ, ಮಾನಹಾನಿಯಾಗಿದೆ

ನಿಜವಾಗಿಯೂ ಇಂಥಹದ್ದೊಂದು ದುರ್ಘಟನೆಯು ನಡೆದಿತ್ತಾದರೆ, ಭಾರತೀಯರು ಅದಕ್ಕಾಗಿ ಪ್ರಾಯಶ್ಚಿತ್ತವನ್ನಾದರೂ ತೆಗೆದುಕೊಳ್ಳುತ್ತಿದ್ದರು ಆದರೆ ಈ ಘಟನೆಯಲ್ಲಿ ತಿಲಮಾತ್ರವಾದರೂ ಐತಿಹಾಸಿಕ ಸತ್ಯವು ಇರುವುದಿಲ್ಲ ಎಲ್ಲ, ಹೊಲ್ವೆಲ್ ಎಂಬ ಇಂಗ್ಲಿಷನ ಸ್ವಕಪೋಲ ಕಲ್ಪನೆ ಭಾರತದ ವಿಷಯವಾಗಿ ವಿದೇಶಿಯರಲ್ಲಿ ಕೆಟ್ಟ ಅಭಿಪ್ರಾಯವುಂಟಾಗಬೇಕು ಇಲ್ಲಿ ಇಂಗ್ಲಿಷರ ಕೈಬಲ ಬೆಳೆಯಬೇಕೆಂಬ ನೀಚಸ್ವಾರ್ಥದಿಂದ ಅವನು ಹೂಡಿದ ಕೇವಲ ಕುತಂತ್ರವಾಗಿದೆ ಎಂಥ ಅನ್ಯಾಯ

ನಾವು ಕೂಡ ಅದನ್ನು ಓದಿ ಸತ್ಯವೆಂದೇ ಬಗೆದಿದ್ದೆವು. ಈಗ ವಿಚಾರಮಾಡಿ ನೋಡುವಾಗ, ಹೊಲ್ವೆಲ್ಲನು ಈ ಕಲ್ಕತ್ತೆಯ ಕತ್ತಲೆಕೋಣೆಯ ಪ್ರಕರಣದಲ್ಲಿ ನೂರಕ್ಕೆ ನೂರು ಸುಳ್ಳು ಹೇಳಿ ಜಗತ್ತಿಗೆ ಮೋಸಮಾಡಿದ್ದಾನೆ

### ಅವನ ಗೆಳೆಯರೇ ಅವನ ಮಾತನ್ನು ನಂಬಿರಲಿಲ್ಲ

ಹೊಲ್ವೆಲ್ಲನು ಎಂಥ ಮನುಷ್ಯನಾಗಿದ್ದನೆಂದರೆ ಅವನ ಜನರೇ ಅವನ ಮಾತುಗಳನ್ನು ನಂಬುತ್ತಿರಲಿಲ್ಲ. ಹೊಲ್ವೆಲ್ಲನ ಸ್ವಕಪೋಲಕಲ್ಪಿತ ಈ ಕಲ್ಪನೆಯನ್ನು ಸಮಯಹೋದಂತೆ ತಿದ್ದಿ ಉಪ್ಪುಕಾರ, ಹುಳಿಮೆಣಸಿನ ಲೇಪಹಚ್ಚಿ ಒಳ್ಳೇ ರುಚಿಕರವಾಗಿ ಬಣ್ಣಿಸಿದ್ದಾನೆ ಅವನು ಈ ಪ್ರಕರಣದ ವಿಷಯವಾಗಿ ಮೊದಲು ಬರೆದಿರುವುದಕ್ಕೂ ಕಡೆಕಡೆಗೆ ಬರೆದಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ 'ಪಾಪ' ತಾನು ಬರೆದ ಪತ್ರಗಳನ್ನು ಮುಂದೆ ಒಂದಕ್ಕೊಂದು ಹೋಲಿಸಿ, ವಿಮರ್ಶಿಸಿ, ಸತ್ಯವನ್ನು ಹೊರಗೆಡಹುವ ಜನರೂ ಹುಟ್ಟಿಯಾರೆಂದು ಅವನು ಎಣಿಸದೆ ಇದ್ದಿರಬೇಕು. ಇಲ್ಲವಾದರೆ ತಾಜಾ ಸುಳ್ಳು ಎಷ್ಟು ಮಾತ್ರಕ್ಕಾದರೂ ಹೇಳಿ ಮುಖಕ್ಕೆ ಮಸಿ ಬಳಿದುಕೊಳ್ಳುತ್ತಿರಲಿಲ್ಲ

ಹೊಲ್ವೆಲ್ 1756ನೇ ಜುಲೈ ತಿಂಗಳ ತಾ ೧೭ರಲ್ಲು ಬರೆದ ಕಾಗದದಲ್ಲಿ ಸಿರಾಜುದ್ದೌಲನು ಈ ಅಕೃತ್ಯವನ್ನು ಮಾಡಿದನೆಂದೂ ೫೦ ಮಂದಿ ಮಾತ್ರ ಬದುಕಿದ್ದರೆಂದೂ ಹೇಳಿದ್ದಾನೆ. ಆದರೆ ಕೋಣೆಯೊಳಗೆ ಒಬ್ಬ ಹೆಂಗಸು ಕೂಡ ಇದ್ದಳೆಂದು ಹೇಳಿಲ್ಲ. ಅನಂತರ ಅದೇ ತಿಂಗಳ 17ನೇ ತಾರೀಕಿನ ಪತ್ರದಲ್ಲಿ, ಅವನು—ಸಿರಾಜುದ್ದೌಲನೇ ಆ ಕಾರ್ಯ ಮಾಡಿದನೆಂದು ಹೇಳಿದ್ದನಾದರೂ ಬದುಕಿದ್ದವರ ಸಂಖ್ಯೆ ಕೇವಲ ೧೬ ಎನ್ನುತ್ತಾನೆ. ಮತ್ತೆ ಆಗೋಸ್ತು ೩ರ ಪತ್ರದಲ್ಲಿ ಸಿರಾಜುದ್ದೌಲನ ಅಪರಾಧವಿಲ್ಲವೆಂದೂ, ಮುಂದಿನ ವರ್ಷದ ಫೆಬ್ರುವರಿ ತಿಂಗಳ ೨೮ನೇ ತಾರೀಕಿನ ಕಾಗದದಲ್ಲಿ ಉಮ್ಮಿಚಂದ ಎಂಬವನು ಅಪರಾಧಿಯೆಂದೂ ಬರೆಯುತ್ತಾನೆ ಈ ಕಡೆ ಪತ್ರದಲ್ಲಿ ಮಾತ್ರ, ಈ ಪ್ರಕರಣದಲ್ಲಿ ಒಬ್ಬ ಹೆಂಗಸು ಕೂಡ ಬಲಿಯಾಗಿದ್ದಳೆಂದು ಹೇಳುತ್ತಾನೆ' ಹೇಗಿದೆ, ಮಾತಿನ ಚಮತ್ಕಾರ!

ಹೊಲ್ವೆಲ್ಲನ ಸ್ವಕಪೋಲ ಕಲ್ಪಿತ ಈ ಕತ್ತಲೆಕೋಣೆಯ ಪ್ರಕರಣವು ನಡೆಯುವಂಥ ದಿನಗಳಲ್ಲಿ ಡಚ್ಚರೂ ಕಲ್ಕತ್ತದಲ್ಲಿದ್ದರು ಸಿರಾಜದ್ದೌಲನಿಗೂ ಇಂಗ್ಲಿಷರಿಗೂ ಆದ ಸಂಘರ್ಷ, ಯುದ್ಧಮೂಲಕ ಕಲ್ಕತ್ತೆಯು ಇಂಗ್ಲಿಷರ ವಶವಾದುದು ಇತ್ಯಾದಿ ಅನೇಕ ಘಟನೆಗಳ ಉಲ್ಲೇಖವು ಅವರ ಕಾಗದಪತ್ರಗಳಲ್ಲಿದೆ ಆದರೆ, ಎಲ್ಲಿಯೂ ಕತ್ತಲೆಕೋಣೆಯ ಸುದ್ದಿಲ್ಲ ಅಷ್ಟೇಕೆ ಆ ಕಾಲದ ಈಸ್ಟ್ ಇಂಡಿಯಾ ಕಂಪನಿಯ ರಿಕಾರ್ಡುಗಳಲ್ಲಿಯಾಗಲೀ, ಕ್ಲೈವನ ವ್ಯವಹಾರಗಳಲ್ಲಿಯಾಗಲೀ, ಸಿರಾಜುದ್ದೌಲ ಮೀರ್ ಜಾಫರ್ ಮೊದಲಾದವರೊಡನೆ ಆದ ಸಂಧಿಪತ್ರಗಳಲ್ಲಿಯಾಗಲೀ ಅದರ ಸಮಾಚಾರ ಕೂಡ ಬರಲಿಲ್ಲ ಇದು ನಿಜವಾಗಿಯೂ ನಡೆದಿತ್ತಾದರೆ, ಬಂಗಾಳದ ಸುಭೇದಾರರು ಇಂಗ್ಲಿಷರೊಡನೆ ಸಂಧಿಮಾಡಿಕೊಳ್ಳುತಿದ್ದಾಗ, ಅವರಿಂದ ಇಂಗ್ಲಿಷರು ಪರಿಹಾರದ್ರವ್ಯವನ್ನು ಕೇಳದೆ ಇರುತ್ತಿರಲಿಲ್ಲ ಆದರೆ ಅವರ ಹಾಗೆ ಮಾಡಿದ್ದು ಎಲ್ಲಿಯೂ ಕಾಣುವುದಿಲ್ಲ

### ಹೊಲ್ವೆಲ್ ದೊಡ್ಡ ಸುಳ್ಳುಗಾರ

ಕಲ್ಕತ್ತೆಯ ಕತ್ತಲೆ ಕೋಣೆಯ ಪ್ರಕರಣವು ನಡೆದಿಲ್ಲವೆಂದು ದಕ್ಕೆ ಮತ್ತೊಂದು ಸಾಕ್ಷ್ಯವನ್ನು ಕೊಡಬಹುದು ಆ ಸಾಕ್ಷ್ಯದಿಂದ ಹೊಲ್ವೆಲ್ಲನ ಪಕ್ಕಾ ಸುಳ್ಳುಗಾರನೆಂಬುದೂ ಸ್ಪಷ್ಟವಾಗುತ್ತದೆ ಈ ಪ್ರಕರಣ ನಡೆದ ದಿವಸ ಸಿರಾಜುದ್ದೌಲನ ೧೪೬ ಮಂದಿ ಇಂಗ್ಲಿಷರನ್ನು ಕತ್ತಲೆಕೋಣೆಗೆ ದೂಡಿದನೆಂದು ಅವನು ಹೇಳುತ್ತಾನೆ ಆದರೆ ೧೮ ಅಡಿ ಚದರದ ಚಿಕ್ಕ ಕೋಣೆಯಲ್ಲಿ ೧೪೬ ಮಂದಿಯನ್ನು ಯಾವ ರೀತಿಯಿಂದಲಾದರೂ ಸೇರಿಸಲಿಕ್ಕೆ ಸಾಧ್ಯವಿಲ್ಲವೆಂದು ಗಣಿತವು ಹೇಳುತ್ತದೆ. ಮತ್ತೆ ಆ ದಿನ ಕಲ್ಕತ್ತದಲ್ಲಿ ೪೦ ಮಂದಿ ಇಂಗ್ಲಿಷರು ಕೂಡ ಇದ್ದಿರಲಿಲ್ಲ. ಹಿಂದಿನ ದಿನ ನಡೆದ ಕದನದಲ್ಲಿ ಇಂಗ್ಲಿಷರು ಸೋತು ಹೋಗಿದ್ದಾಗ ಕೋಟೆಯಲ್ಲಿ ೧೭೦ ಮಂದಿ ಯುರೋಪಿಯರು ಮಾತ್ರ ಇದ್ದರಂತೆ ಅವರಲ್ಲಿ ಸುಮಾರು ೫೦ ಮಂದಿ ಆ ದಿನ ರಾತ್ರಿ ನವಾಬನಿಗೆ ಶರಣಾಗತರಾಗಿದ್ದರು. ಮತ್ತೆ ೫೦ ಮಂದಿ ಅಂದಿನ ಮತ್ತು ಮುಂದಿನ ದಿನಗಳ ಕದನಗಳಲ್ಲಿ ಕೊಲ್ಲಲ್ಪಟ್ಟಿದ್ದರು ಬ್ಲೆಗ್ ಎಂಬವನು ಕೋಣೆಯಲ್ಲಿ ಉಸಿರುಕಟ್ಟಿಕೊಂಡು ಪ್ರಾಣಕೊಟ್ಟನೆಂದು ಹೊಲ್ವೆಲ್ಲನು ಹೇಳುತ್ತಾನೆ. ಆದರೆ ಬ್ಲೆಗ್ಗನು ಧೀರತನದಿಂದ ರಣರಂಗದಲ್ಲಿ ಕಾದಿ ವೀರಸ್ವರ್ಗವನ್ನು ಪಡೆದನೆಂದು ಇತರ ದಾಖಲೆಗಳು ಹೇಳುತ್ತವೆ

### ಕತ್ತಲೆಕೋಣೆಯ ಸ್ಮಾರಕವನ್ನು ಕಿತ್ತು

ಜಾತೀಯ ದುಷ್ಟಸ್ವಾರ್ಥವು ಹೊಲ್ವೆಲ್ಲನನ್ನು ಕುರುಡುಮಾಡಿತು ಅದು ಅವನನ್ನು ಅವಿಚಾರಿಯೂ ಅವಿವೇಕಿಯೂ ಆದ ಬುದ್ಧಿಹೀನನನ್ನಾಗಿ ಮಾರ್ಪಡಿಸಿತು. ಮತ್ತೆ ಅವನು ಕತ್ತಲೆಕೋಣೆಯ ಕಟ್ಟುಕತೆಯನ್ನು ಬರೆದು ಮಹಾಪಾಪವನ್ನು ಸಂಪಾದಿಸಿದನು- ಅವನಿಗೆ ಉತ್ಪನ್ನಕೊಟ್ಟ ಅಪರಾಧಕ್ಕಾಗಿ ಭಾರತವು ಪ್ರಪಂಚದ ಮುಂದೆ ನತಮಸ್ತಕೆಯಾಗಬೇಕಾಯಿತು.

ಕತ್ತಲೆಯೊಳಗಿನ ಕತ್ತಲೆಕೋಣೆಯು ಆ ಸ್ಮಾರಕವು ಜಾತೀಯ ದ್ವೇಷಾಗ್ನಿಗೆ ತುಪ್ಪಹಾಕಿ ಅದನ್ನು ಪ್ರಜ್ವಲಿಸುತ್ತದೆ ಇಂಥ ಒಂದು ಸ್ಮಾರಕವು ಬಹಿರಂಗಸ್ಥಾನದಲ್ಲಿ ಇರುವದರಿಂದ ಯಾರಿಗೂ ಉಪಯೋಗವಿಲ್ಲ ಬದಲಿಗೆ ಹಾನಿ ಹೆಚ್ಚು ಜಾತಿಜಾತಿಗಳು, ಜನಾಂಗ ಜನಾಂಗಗಳು ಪರಸ್ಪರ ಸ್ನೇಹ ಪ್ರೇಮಸಂಬಂಧಗಳನ್ನು ಕಟ್ಟಿಕೊಳ್ಳಬೇಕಾಗಿರುವ ಈ ಕಾಲದಲ್ಲಿ ಈ ಸ್ಮಾರಕವು ಅಂಥ ಸಂಬಂಧಸ್ಥಾಪನೆಗೆ ದೊಡ್ಡ ಆತಂಕವಾಗಿದೆ ಇಂಗ್ಲಿಷರು ಮತ್ತು ಭಾರತೀಯರೊಳಗಿನ ಗೆಳೆತನದ ಕರೆಯ ಕದಡಿದ ೧೮ ನಲ್ಲಿ ದೊಡ್ಡ ಕಲ್ಲೊಂದನ್ನು ಹೊತ್ತುಹಾಕಿ, ಆ ನೀರನ್ನು ಇದು ಮತ್ತಷ್ಟು ಕದಡಿಸುತ್ತದೆ ಇದ್ದರಿಂದ, ಆ ಸ್ಮಾರಕವನ್ನು ಕಿತ್ತು ಎಲ್ಲಿಯಾದರೂ ವಸ್ತುಪ್ರದರ್ಶನಾಲಯದಲ್ಲಿಡಬೇಕು ಜಾತೀಯ ಸ್ವಾರ್ಥವು ಇತಿಹಾಸವನ್ನು ಹೇಗೆ ದೂಷಿಸುತ್ತದೆ ಎಂಬ ಪಾಠವನ್ನು ದರ್ಶಕರಿಗೆ ಕಲಿಸುತ್ತ ಅದು ಅಲ್ಲಿಯೇ ಬಿದ್ದುಕೊಂಡಿರಲಿ ಎಂಬ ಸೂಚನೆಯನ್ನು ಪ್ರೊಫೆಸರ ಹುಮಾಯೂನ್ ಕಬೀರ್, ಎಂ. ಎಲ್. ಸಿ, ಇವರು ಕೊಟ್ಟಿದ್ದಾರೆ

ಪ್ರೊಫೇಸರ ಕಬೀರರು ಪ್ರಸಿದ್ಧ ಶಿಕ್ಷಣತಜ್ಞರಾಗಿದ್ದು ಕಲ್ಕತ್ತೆಯ ವಿದ್ಯಾರ್ಥಿ [illegible] ಅವರ ಪ್ರಧಾನ ಭಾರತೀಯ [illegible] ದರ್ಶಿಗಳಾಗಿದ್ದರು. [illegible] ಬಂಗಾಳ [illegible] ವಿಧಾಯಕ [illegible] ಸದಸ್ಯರೂ ಆಗಿದ್ದಾರೆ [illegible] ಬಂಗಾಳ ಸರಕಾರವು [illegible] ಪ್ರದರ್ಶನಾಲಯದಲ್ಲಿ [illegible] ಮುಂದಿನ [illegible] ಸಭೆಯಲ್ಲಿ ಚರ್ಚೆ [illegible] ಸರಕಾರವು ಅವರ ಸೂಚನೆಯನ್ನು ಸ್ವೀಕರಿಸ [illegible] ಭರವಸೆ ಇದೆ

### ಚೀನಾ ಸರಕಾರಕ್ಕೆ

ರಷ್ಯದಿಂದ ಟಿಕ್ಯಾಂಗಿನ ಸಹಾಯವಾಗುವಂತಿಲ್ಲ ಇನ್ನು ಇಂಗ್ಲೆಂಡು ಅಮೇರಿಕಗಳ ಮುಖವನ್ನೇ ನೋಡುತ್ತ ಚೀನವು ಕುಳಿತಿದೆ ಐವತ್ತು ಮಂದಿ ಪ್ರತಿನಿಧಿಗಳು ಸೇರಿ ಜಪಾನಿನ ಬಹಿಷ್ಕಾರವನ್ನು ಯುರೋಪಿನಲ್ಲಿ ನಿರ್ಧರಿಸಿದ್ದಾರೆ ಲೀಗ್ ಆಫ್ ನೇಶನ್ಸ್ ಇದನ್ನು ಒಪ್ಪಿದ ಆದರೆ, ಫಲಿತಾಂಶವೇನಿದೆ? 250,000 ಚೀನಿಯರನ್ನು ಇಷ್ಟರಲ್ಲಿ ಕೊಂದಾಗಿದೆ, 150,000 ಜಪಾನಿಯರೂ ಸತ್ತಿರಬಹುದೆಂಬ ಅಂದಾಜು ಇದೆ ಇನ್ನು ಅಲ್ಲಲ್ಲಿ ಪುಂಡರ ಕೂಟದಂತೆ ಯುದ್ಧ ಮಾಡುತ್ತಾ ಒಂದು ವರ್ಷವೇನೋ ಚೀನವು ಜಪಾನನ್ನು ಎದುರಿಸಬಹುದು. ಜಪಾನು ಬಹಳವಾಗಿ ವೇಗದಿಂದ ಮುಂದೊತ್ತುತ್ತಿದೆ ಹೊಸ ಹಡಗುಗಳನ್ನು ಕಟ್ಟುವುದು ತನ್ನ ಕರ್ತವ್ಯ, ಇತರ ದೇಶೀಯರು ಕೇಳುವುದಕ್ಕಿಲ್ಲ ಎನ್ನುತ್ತಿದೆ


ನಿಷ್ಣಾತ ವೈದ್ಯರು

ನಿಮ್ಮ ದಮ್ಮಿನ ಚಿಕಿತ್ಸೆಯನ್ನು

ಹೇಗೆ ಮಾಡುವರು?

[illegible]

ದಮ್ಮು [illegible]

[illegible]

ಮಾರ್ಗದರ್ಶಕ

ಶ್ವಾಸಹಾರೀ

ಬೆಂಗಳೂರು.—ದಿ ಪ್ರೊಪ್ರೈಟರ್

ಸ್ಟೋರ್ಸ್, ರಥಬೀದಿ.

[illegible]

ಯು. ಬಿ. [illegible]

[illegible]

'DILROZ'

Dil Roz' [illegible]

Oriental sores lo al sore all kinds of deep rooted sores skin eruptions Pimples Eczema, Ringworm Sinus Fistula auxillary Abscess

There is no need of dressing the wounds, nor are baths prohibited

Price Rs. 2 Postage extra

TAHIR DIN

Anarkali, LAHORE

Use the soaps

KNOWN ALL OVER

WISICO'S.

MINAR

&

TAJAMAHAL 'Red'

Bar Soaps.

POPULAR IN THE MARKET

Sole Distributor—

P. G. KAMATH,

Kashmir House,

Marnamikatta, MANGALORE.

# ✻ ಹರಿಪುರದಲ್ಲಿ ಭಾರತೀಯ ರಾಷ್ಟ್ರಮಹಾಸಭೆಯ ೫೧ನೇ ಅಧಿವೇಶನ ಸಮಾರಂಭ! ✻

ಫೆಡರೇಶನನ್ನು ವಿರೋಧಿಸಬೇಕಾಗಿಯೂ, ಆಶ್ರಿತ ರಾಜ್ಯಗಳಲ್ಲಿ ಕಾಂಗ್ರೆಸ್ ಚಟುವಟಿಕೆಗಳು ಬೇರೆಯಾಗಿ ನಡೆಯಬೇಕಾಗಿಯೂ, ಅವರೊಡನೆ ಆ ಭಾ. ಕಾಂಗ್ರೆಸ್ ಸಂಸ್ಥೆಯು ಸಹಾನುಭೂತಿಯನ್ನು ತೋರಿಸಬೇಕೆಂದೂ, ಕಿಸಾನಾ ಸಭೆಗಳ ಕುರಿತು, ಅಲ್ಪ ಸಂಖ್ಯಾಕರ ಕುರಿತು, ರಾಜಕೀಯ ಕೈದಿಗಳ ಬಿಡುಗಡೆಗಾಗಿ, ಮಂತ್ರಿಗಳು ರಾಜಿಯಿತ್ತ ಪ್ರಕರಣದ ಕುರಿತೂ, ಅವಶ್ಯಕಂಡರೆ ಸ್ವಾತಂತ್ರ್ಯಸಂಗ್ರಾಮಕ್ಕೆ ಸಿದ್ಧತೆಗಳಾಗಬೇಕೆಂದೂ ಘನವಾದ ನಿರ್ಣಯಗಳಾದುವು

★ ★

## ಅಧಿವೇಶನವು ತಾ. 20-21ರಲ್ಲಿ ಜರಗಿ ಕೊನೆಗೊಂಡಿತು. ೪ ಲಕ್ಷ ಜನರು ನೆರೆದಿದ್ದರು!

★ ★

ಸ್ವದೇಶಾಭಿಮಾನಿ.

ತಾ.೨೫ನೇ ಶುಕ್ರವಾರ ಫೆಬ್ರವರಿ ೧೯೩೮

### ಮಂತ್ರಿಮಂಡಲಗಳ ರಾಜೀನಾಮೆ.

ಕಳೆದೊಂದು ವಾರ ಇಲ್ಲಿಯೂ ಇಂಗ್ಲೆಂಡಿನಲ್ಲಿಯೂ ಇದೊಂದೇ ಪ್ರಶ್ನೆ—ಈ ರಾಜೀನಾಮೆಯ ಕಾಂಡವು ಹೇಗೆ ಮುಗಿಯಬಹುದು? ಎಂಬುದೇ. ಇತ್ತ ಕೊಂಗ್ರೆಸು ಅಧಿವೇಶನ ಕಾಲದಲ್ಲಿ ಇದಕ್ಕೇ ಪ್ರಾಮುಖ್ಯತೆ ಕೊಡಬೇಕಾಗಿ ಬಂತು. ಪ್ರಾಂತಿಕ ಸ್ವರಾಜ್ಯವೆಂಬುದು ಎಷ್ಟು ಪೊಳ್ಳು ಎಂಬುದನ್ನು ಬಯಲಿಗೆ ತರಲು ಇಂತಹ ಮತ್ತೊಂದು ಸಂದರ್ಭವು ಎಂದೂ ಸಿಗಲಿಲ್ಲ. ಮಂತ್ರಿಗಳಿಗೆ ಮರಣದಂಡನೆ ವಿಧಿಸಿದ್ದನ್ನು ಸಹ ಇಳಿಸಲೂ ಅಧಿಕಾರವಿರುವಾಗ, ರಾಜಕೀಯ ಕಾರಣಗಳಿಂದ ದಂಡನೆ ಹೊಂದುತ್ತಿದ್ದವರನ್ನು ಬಿಡುಗಡೆಮಾಡಲು ಅಧಿಕಾರವಿಲ್ಲವೆ? ರಾಜ್ಯದಲ್ಲಿ ಅರಾಜಕತೆ ಉಂಟಾಗದಂತೆ ನೋಡಲು ಅವರು ಸಂಪೂರ್ಣ ಅಧಿಕಾರವುಳ್ಳವರಾಗಿ ಅಗತ್ಯ ಕಂಡಲ್ಲಿ ಅಂತಹ ನಿರ್ಬಂಧಗಳನ್ನು ವಿಧಿಸಿದ್ದಾರೆ. ನೂರಾರು (ಸಾವಿರವೆನ್ನಬಹುದು) ಕೈದಿಗಳನ್ನು ಇದುವರೆಗೆ ಬಿಡುಗಡೆ ಮಾಡಲಾಗಿದೆ. ಕಳೆದ ವಾರ ನಮ್ಮ ಪ್ರಾಂತ್ಯದಲ್ಲಿ ನೂರಕ್ಕೆ ಮಿಕ್ಕಿ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ. ಅವರಿಗೆ ಕಲೆಕ್ಟರರೇ ಬುದ್ಧಿವಾದ ಹೇಳಿ ಅವರು ಸ್ವತಂತ್ರವಾದ ನ್ಯಾಯಸಮ್ಮತ ಜೀವನಮಾಡುವಂತೆ ಒಪ್ಪಿಕೊಂಡಿದ್ದಾರೆ. ತಪ್ಪಿತು ನಡಿಸಿದ್ದಲ್ಲಿ ಪುನಃ ತಾವಾಗಿ ಶಿಕ್ಷೆಗೆ ಒಳಪಡುವರು. ಹೀಗಿಲ್ಲಾ ಪರಿಸ್ಥಿತಿ ಇರುತ್ತಾ, ಚುನಾವಣೆಯ ಕಾಲಕ್ಕೆ ಜನತೆಗೆ ಹೇಳಿದ ಮಾತನ್ನು ನಡಿಸಿಕೊಡುವ ನಿಮಿತ್ತವಾಗಿ (ಹಿಂದಣ ಮಂತ್ರಿಕೂಟಗಳು ಇದನ್ನು ಪರತ್ ಅಷ್ಟೊಂದು ಆಕ್ಷೇಪವೆತ್ತಿದವರೂ ಇಲ್ಲ—ಪತ್ರದಲ್ಲಿ ಕಿವಿಕೊಟ್ಟವರೂ ಇಲ್ಲ) ಮಂತ್ರಿಗಳು ರಾಜಕೀಯ ಕೈದಿಗಳನ್ನು ಬಿಡುಗಡೆಮಾಡ[illegible]—ಇಡೀ ದೇಶದ ಶಾಂತಿಗೆ ಭಂಗವುಂಟಾಗಬಹುದಾಗಿ ಏಕೆ ಗವರ್ನರರಾಗಲಿ ಗವರ್ನರ ಜನರಲರಾಗಲಿ ಎಣಿಸಬೇಕಿತ್ತು? ಫೆಡರೇಶನಿಗೆ ಅನುಕೂಲವಾಗಿಲ್ಲದ ಮಂತ್ರಿಕೂಟಗಳು ಹೊರಗೆ ಬೀಳಲೆಂದೇ ಇದು ನೆವವೇ? ಪಂಜಾಬು ಬಂಗಾಳಗಳಲ್ಲಿರುವ ಪ್ರಜಾಮತದ ಬೆಂಬಲವಿಲ್ಲದೆ, ಜಾತಿಬೆಂಬಲದಿಂದ ನಡೆವ ಮಂತ್ರಿಗಳ ಕಾರ್ಯಭಾರಕ್ಕೆ ಈ ಇತರ ಪ್ರಾಂತಗಳ ನಡತೆಯಿಂದ ಧಕ್ಕೆಬಡೆದು ಅಲ್ಲಿನ ಮಂತ್ರಿಮಂಡಲಗಳು ಒಡೆದುಹೋಗಬಹುದೆಂದೂ ನಂಬಿ, ಹೀಗೆ ಅಡ್ಡಬರುವುದೆ? ಒಂದು ವೇಳೆ ಎಚ್ಚರಿಸಬಹುದಾಗಿದ್ದರೆ—ಮಂತ್ರಿಗಳು ಜವಾಬ್ದಾರರಾಗಲಿ, ಮುಂದೆ ಪ್ರಮಾದವುಂಟಾದಲ್ಲಿ ಗವರ್ನರ ಜನರಲರೇ ಶಾಸನಮಾಡುವರೆಂದು ತಿಳಿಸಿದರೆ ಸಾಕಾಗುತ್ತಿರಲಿಲ್ಲವೆ? ಇತ್ಯಾದಿಯಾಗಿ ನಾನಾ ತರ್ಕಗಳು ಹರಿಪುರದಲ್ಲಾದುವು. ಇಂಗ್ಲೆಂಡಿನಲ್ಲೂ ಇದರ ಪ್ರತಿಧ್ವನಿ ಎದ್ದಿತು. ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು ನಡೆದಾಗ, ಏಕಪಕ್ಷೀಯವಾದ ಮಾತು ಒಂದು ದಿನ ಹೊರಬಿತ್ತಾದರೂ, ನಾಲ್ಕು ವರ್ಷ ಅಸ್ಸಾಮಿನಲ್ಲಿ ಗವರ್ನರರಾದವರೊಬ್ಬರು, ರಾಜಕೀಯ ಕೈದಿಗಳ ಕರಾಲತೆಯನ್ನು ವಿವರಿಸಿದವರೊಬ್ಬರೇ ವಿನಾ, ಮುಖ್ಯ ವೃತ್ತಪತ್ರಿಕೆಗಳೂ ಮಂತ್ರಿಮಂಡಳಗಳಲ್ಲಿ ದೋಷಾರೋಪಣೆ ಮಾಡಲಾರದಾದುವು. ಗವರ್ನರರು ಸಹ, ಮಂತ್ರಿಗಳು ವಿವೇಚನೆಯಿಂದಲೂ ನ್ಯಾಯದಿಂದಲೂ, ಸಮಾಧಾನದಿಂದಲೂ ದೇಶಾಭ್ಯುದಯ ಕಾರ್ಯ ಮಾಡಿದವರೆಂದು ಹೊಗಳಿ, ಇನ್ನೂ ಅವರ ರಾಜೀನಾಮೆಗಳನ್ನು ಅಂಗೀಕರಿಸದೆ ಇರುವರು.

ಇತ್ತ, ಗಾಂಧಿಜಿಯವರೊಬ್ಬರು ಬಹಳವಾಗಿ ಸೂಚಿಸದೆ ಇದ್ದಲ್ಲಿ, ಮಿಕ್ಕೆಲ್ಲ ಕಾಂಗ್ರೆಸ್ ಮಂತ್ರಿಗಳು ಅಲ್ಲಲ್ಲಿ ಹೊರಬೀಳುವ ಪ್ರಸಂಗವುಂಟಾಗುತ್ತಿದ್ದಿತು. ಇದೊಂದು ಮಹಾ ಅವಾಂತರವೇ ಆಗುತ್ತಿತ್ತು. ಇತರ ಕರುವಾಯದಲ್ಲಿ ಮಂತ್ರಿಗಳಾಗಲು ಕರೆದ ಮುಖಂಡರೇ ತನಗೆ ಅದು ಬೇಡವೆಂದುದಷ್ಟೆ ಅಲ್ಲದೆ ಕಾಂಗ್ರೆಸಿನವರೇ ಮಂತ್ರಿಗಳಾದರೆ ಹಿತ ಹೆಚ್ಚಿನದೆಂದರು. ಇಂಡಿಯಾ ಸೆಕ್ರೆಟರಿಯವರೂ ವೈಸ್ರಾಯರೂ ಪುನ ತಮ್ಮ ಅಪ್ಪಣೆಯನ್ನು ಪರ್ಯಾಲೋಚಿಸುವಂತಾಯಿತು. ಈ ವಿಷಯದಲ್ಲಿ ಎಲ ವೃತ್ತಾಂತವನ್ನೂ ಮಾಹಿತಿಯನ್ನೂ ಪಾರ್ಲಿಮೆಂಟಿಗೆ ಪುಸ್ತಕರೂಪವಾಗಿ ತಿಳಿಸುವಂತೆ ಸೆಕ್ರೆಟರಿಯವರು ಹೇಳಿದ್ದರೂ ಕೊನೆಗೆ ವೈಸ್ರಾಯರು ಪ್ರಕಟಿಸುವ ಹೇಳಿಕೆಯನ್ನು ಇದರೆ ಯಥೇಷ್ಟವಾಗುವುದಾಗಿ ಸೆಕ್ರೆಟರಿಯವರ ತಿಳಿಸಿದರು. ವೈಸ್ರಾಯರು ಅಂತಹ ಹೇಳಿಕೆ ಹೊರಡಿಸಿದರು. ಕೊಂಗ್ರೆಸಿನವರೂ ಸಹ ಈ ಸಲ ಮಂತ್ರಿಗಳು ರಾಜೀನಾಮೆ ಕೊಟ್ಟ ವಿಷಯವಾಗಿ ಅವರನ್ನು ಅಭಿನಂದಿಸಿರುವರು ಮಾತ್ರವಲ್ಲದೆ ಕೊಂಗ್ರೆಸಿನಲ್ಲಿಯೇ ಅಧಿಕಾರ ಸ್ವೀಕಾರವನ್ನು ಮನ್ನಿಸದ ಮಂತ್ರಿಮಂಡಲದ ಬೆಂಬಲಕ್ಕಿದೆ ಎಂದೂ ಪ್ರಕಟಿಸಿತು.

ಕೊಂಗ್ರೆಸ ಮಂತ್ರಿಗಳ ಅಧಿಕಾರವನ್ನು ಕಡಮೆ ಮಾಡುವ ಉದ್ದೇಶದಿಂದ ಹೀಗೆ ನಾನೇನೂ ವರ್ತಿಸಿದ್ದಲ್ಲ. [illegible]ದಿಂದ ಪ್ರಾಂತ್ಯದಲ್ಲಿ ಅಧಿಕಾರ ಹೊಂದಿರುವ ಯಾವ ಮಂತ್ರಿಕೂಟಗಳಿಗಾದರೂ ಕಳೆದ [illegible]ಗಳಲ್ಲಿ ನಾನೂ ಸರಕಾರವೂ ಸಂಪೂರ್ಣ ಸಹಾನುಭೂತಿಯನ್ನೆ ತೋರಿಸಿದ್ದೇನೆ.



ವೈಸರಾಯ ಪ್ರಭುಗಳು

ಗವರ್ನರರಾಗಲಿ ಗವರ್ನರ ಜನರಲರಾಗಲಿ ಕೊಂಗ್ರೆಸು ಅಥವಾ ಇತರ ಸರಕಾರದ ನ್ಯಾಯವಾದ ಕರ್ತವ್ಯಗಳನ್ನು ಆತಂಕ ಮಾಡುವ ಉದ್ದೇಶವುಳ್ಳವರಲ್ಲ. ಈ ಪ್ರಸಂಗದಲ್ಲಿ ಮಾತ್ರ ದೇಶದ ಶಾಂತಿ ಹಾಳಾಗದಂತೆ ಕಾನೂನು ಸರಿಯಾಗಿ ಜ್ಯಾರಿಯಲ್ಲಿರುವ ಹಾಗೆ ಈ ರೀತಿ ಅಪ್ಪಣೆ ಕೊಡಬೇಕಾಯಿತು. ಗವರ್ನರರ ಕೂಡೆ ವಿಮರ್ಶಿಸಿ ಮಂತ್ರಿಗಳು ಕೈದಿಗಳನ್ನು ಬಿಡುಗಡೆ ಮಾಡಲು ಎಂದಿನಂತೆ ಅನುಕೂಲವೇ ಇದೆ. ಸ್ನೇಹದಿಂದ ಸಹಾನುಭೂತಿಯಿಂದ ಹಿಂದಿನಂತೆ ಮುಂದೆಯೂ ಮಂತ್ರಿಗಳೊಡನೆ ಗವರ್ನರರು ಪ್ರತಿಯೊಬ್ಬ ಕೈದಿಯ ವಿಷಯವಾಗಿ ವಿಮರ್ಶೆ ನಡೆಸುವರು.

ಇತರ ಪ್ರಾಂತ್ಯಗಳಿಗೆ ಈ ಸಂಕಟವನ್ನು ಪಸ್ತರಿಸುವುದಕ್ಕೆ ಯಾರೂ ಪ್ರಯತ್ನಿಸುತ್ತಿಲ್ಲವೆಂಬುದು ಸಂತೋಷವೇ. ವ್ಯವಹಾರವು ಪುನಃ ಸ್ಥಾಪನೆ ಹೊಂದತಕ್ಕ ಆ ಎರಡು ಪ್ರಾಂತ್ಯಗಳಲ್ಲಿನ ಮಂತ್ರಿಗಳು ಸಹ ತಮ್ಮ ಗವರ್ನರರೊಡನೆ ಕೈದಿಗಳನ್ನು ಕುರಿತಾದ ಸಂಭಾಷಣೆಗಳನ್ನು ಮುಂದರಿಸಲು ಅನುಕೂಲವಿದೆ ಎಂದು ನಂಬುತ್ತೇನೆ.

ಈ ಬಗೆಯಾಗಿ ಮಾನ್ಯ ವೈಸ್ರಾಯರು ತಮ್ಮ ಹೇಳಿಕೆಯಲ್ಲಿ ವಿವರಿಸಿದರು.

ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿನ ಮಂತ್ರಿಮಂಡಲಗಳನ್ನು ಕ[illegible] ಕೊಂಗ್ರೆಸಿನವರಾದ ನಿರ್ಣಯದಿಂದ (ಇತರ ಕೊಂಗ್ರೆಸು ಅಧಿಕಾರ ನಡೆಸುವ ಪ್ರಾಂತ್ಯಗಳ ಮಂತ್ರಿಗಳು ಈ ಕಾರಣದಿಂದ ರಾಜೀನಾಮೆ ಕೊಡುವುದ ಅಗತ್ಯವಲ್ಲ ಎಂಬುದೆ) ಮತ್ತು ಗಾಂಧಿಜಿಯವರು [illegible] ರೀತಿಯ ದ ಈಗ ವೈಸ್ರಾಯರ ಹೊರಡಿಸಿದ ಹೇಳಿಕೆಯನ್ನು ಓದುವಾಗ ಈ ಬಿಕ್ಕಟ್ಟು ಇಲ್ಲಿಗೆ ಮುಗಿಯಿತೆಂದೇ ತೋರುವುದು. ಕೊಂಗ್ರೆಸು ಇದುವರೆಗೆ ನ್ಯಾಯವಾದ [illegible] ಅಭ್ಯುದಯ ಕಾರ್ಯಗಳನ್ನುಮಾಡಿ ಜನತೆಯ [illegible] ಪಡೆದಿದೆ. ಇದನ್ನು ಕಳೆದುಕೊಳ್ಳದಂತೆ [illegible] ನ್ಯಾಯದಿಂದ [illegible] ದೇಶ ಹಾರಯಿಸಬೇಕಾಗಿದೆ.

ಸಂದಿಗ್ಧದ ಕುರಿತು ಮಹಾತ್ಮಾಜೀಯವರ ಅಭಿಪ್ರಾಯ

ಪ್ರಾಂತದ ಲಾ ಎಂಡ್ ಆರ್ಡರಿಗೆ ಮಂತ್ರಿಗಳೆ ಜವಾಬ್ದಾರರಾಗಿರುವಾಗ ವೈಸ್ರಾಯರ[illegible] ಈ ತರದ ಅಡ್ಡಿ ಮಾಡಿದುದರ ಅರ್ಥವು ನನಗೆ ತಿಳಿಯುವುದಿಲ್ಲ. [illegible] ಬ್ರಿಟಿಷ ಸರಕಾರಕ್ಕೆ ಕಾಂಗ್ರೆಸ್ಸಿನ ಕುರಿತ [illegible] ಉಂಟಾಗಿರುವುದೆಂದ ನನ್ನ [illegible] ಎಂಬ ಸಂದೇಹವು ಉಂಟಾಗುತ್ತದೆ.

ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಯಿಸಿ ಕಾಂಗ್ರೆಸ್ಸು ಬೆಳೆಯುವುದನ್ನು ನೋಡಿ ಜನಪದದ ಮೇಲೆ ಅವರ ಹಿಡಿತವು ಗಟ್ಟಿಯಾಗುವುದನ್ನು ನೋಡಿ ಬ್ರಿಟಿಷರ ಹೆದರಿರಬೇಕೆಂಬ ಅಭಿಪ್ರಾಯವು ವೈಸ್ರಾಯರ ಈ ವರ್ತನೆಯಿಂದ ಉಂಟಾಗುತ್ತದೆ. ಈ ಸಂದಿಗ್ಧವು ಬ್ರಿಟಿಷ ಸರಕಾರದಿಂದ ಉಂಟಾದುದು, ಅದು ಬ್ರಿಟಿಷ ಸರಕಾರದಿಂದಲೇ ಸುಧಾರಿಸಲ್ಪಡಬೇಕು.

### ಗುಜರಾತಿನಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನಗಳಿಗೆ ಬಂಗಾಳಿಗಳೇ ಅಧ್ಯಕರು

★

ಸರ್‌ದಾರ್ ಪಟೇಲರ ಭಾಷಣ

ಕೊಂಗ್ರೆಸ್ ಅಧಿವೇಶನಾಂತ್ಯದಲ್ಲಾದ ಭಾಷಣಗಳನ್ನೆಲ್ಲಾ ಉತ್ತರಿಸಿ, ಸರದಾರ್ ಪಟೇಲರು, ತಮ್ಮ ಕೃತಜ್ಞತೆಯನ್ನು ಸೂಚಿಸಿದ ತರುವಾಯ ಶ್ರೀ ರಾಜಗೋಪಾಲಾಚಾರ್ಯ, ಖಾನ ಅಬ್ದುಲ್ ಸಫರ್ ಖಾನ, ಡಾ| ಖಾನ್ ಸಾಹೇಬರು ಪಂಡಿತ ಮಾಲವೀಯರು, ಈ ಅಧಿವೇಶನದಲ್ಲಿ ಭಾಗಿಗಳಾಗಲು ಅಡ್ಡಿಗಳುಂಟಾದುದರ, ಕುರಿತು ವಿಶಾಧಿಸಿದರು. ಗುಜರಾತಿನಲ್ಲಿ ನಾಲ್ಕು ಕಾಂಗ್ರೆಸ್ ಅಧಿವೇಶನಗಳು ನಾಲ್ಕು ಬಂಗಾಳಿಗಳ ಅಧ್ಯಕ್ಷತನದಲ್ಲಿ ಜರಗಿದವೆಂದೂ ಸುರೇಂದ್ರನಾಥ ಬೆನರ್ಜಿ (ಅಹಮ್ಮದಾಬಾದ್ ಕೊಂಗ್ರೆಸ್) ರಾಶ ಬಿಹಾರಿ ಘೋಶ (ಸೂರತ ಕೊಂಗ್ರೆಸ್) ಚಿತ್ತರಂಜನ ದಾಸ್ (ಅಹಮ್ಮದಾಬಾದ್) ಸುಭಾಷ್ಚಂದ್ರ ಬೋಸರು (ಹರಿಪುರ ಕೊಂಗ್ರೆಸ್ಸು) ಎಂದು ಅವರು ಸೂಚಿಸಿದರು.

ಈ ಅಧಿವೇಶನವು ಅನೇಕರ ಪರಿಶ್ರಮದಿಂದ ಫಲವಾಗಿ ಬಹಳ ಯಶಸ್ವಿಯಾಗಿ ನಡೆದಿರುವುದು. ವಿಠಲ ನಗರ ಅಲಂಕಾರ ಕೆಲಸವೆಲ್ಲಾ ಶ್ರೀ ನಂದಾಲಾಲ ಬೋಸರಿಂದಲೇ ನಡೆದ ದರಿಂದಲೆ ಹರಿಪುರದ ಅಲಂಕಾರ ಪ್ರಶಂಸೆ ಅವರಿಗೆ ಸಲ್ಲತಕ್ಕದು. ಮಹಾತ್ಮಾಜಿಯವರ ಅಪೇಕ್ಷೆ ಮೇರೆಗೆ ಹರಿಪುರ ಕಾಂ[illegible]

ಹರಿಪುರದಲ್ಲಿ ರಾಷ್ಟ್ರಪತಿ ಸುಭಾಷ್ಚಂದ್ರಬೋಸರ ಅಧ್ಯಕ್ಷತನದ [illegible] ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಸಭೆ

[illegible] ಗ ದನದ ಹಾಲೆ ಉಪಯೋಗಿಸಲಾಯಿತು. [illegible] ಮಿಯಿಂದ ಉಂಟಾದ ಜಿನಸುಗಳನ್ನೆ ಉಪಯೋಗಿಸಲಾದವು. ನಾನು ಮಾಡಿದ [illegible] ಕಡಿಮೆ. ಆದರೆ ಕೃತಜ್ಞತೆ [illegible] ಅವುಗಳನ್ನು ನನ್ನ ಪರ[illegible] ನಡೆಯುದರ ಬಗ್ಗೆ ಸ್ವೀ[illegible] ಒಪ್ಪಿಸುತ್ತೇನೆ.

### ರಾಷ್ಟ್ರಪತಿ ಬೋಸರ ಕೊನೆಯ ಭಾಷಣ

★

ಸಂಘಟನೆ—ಹರಿಪುರ ಸಂದೇಶ

51ನೇ ರಾಷ್ಟ್ರಸಭಾಧಿವೇಶನವನ್ನು ಕೊನೆಗೊಳಿಸುತ್ತ ಶ್ರೀ ಸುಭಾಷ್ಚಂದ ಬೋಸರು ಈ ಕೆಳಗಿನ ಭಾಷಣವನ್ನಿತ್ತರು. ಹರಿಪುರದ ಸಂದೇಶವು ಸಂಘಟನೆ. ಅಂದರೆ ಶಿಸ್ತಿನ ವ್ಯವಸ್ಥೆ. ಈ ಮಹಾ ಸಂಧಿಗ್ಧದಲ್ಲಿ ನಮ್ಮಲ್ಲಿ ಅಖಂಡವಾದ ಐಕ್ಯವಿರವುದೆಂದು ನಮ್ಮೊಡನೆ ಯೋಗ್ಯ ಶಿಸ್ತು ಇರುವುದೆಂದೂ ನಾವು ವ್ಯಕ್ತಪಡಿಸಿರುವೆವು. ನಾನು ಅಧ್ಯಕ್ಷತನವನ್ನು ವಹಿಸಲು ಸಮ್ಮತಿಸಿತ್ತಾಗ ಈ ಅಧಿವೇಶನವು ಯಶಸ್ವಿಯಾಗಿ ನಡೆಯುವ ಕುರಿತು ನನ್ನಲ್ಲಿ ಸಂದೇಹಗಳುಂಟಾಗಿದ್ದವು. ಆಗ ಅಂತಃಕಲಹದ ಚಿಹ್ನೆಗಳು ಉಂಟಾಗಿದ್ದವು. ಬೇಧಾಭಿಪ್ರಾಯಗಳುಂಟಾಗುವ ಸಂಭವಗಳು ಕಾಣಿಸಿಕೊಂಡಿದ್ದವು. ಆದರೆ ಹರಿಪುರ ಕಾಂಗ್ರೆಸಿನಲ್ಲಿ ಎಲ್ಲವೂ ಬದಲಾಗಿ ಬಿಟ್ಟಿತು.

ಯಾರಿಗೆ ಕೃತಜ್ಞತೆಯನು ಸೂಚಿಸಬೇಕೆಂದು ನನಗೆ ತೋರುವುದಿಲ್ಲ. ಆದರೆ ನಮ್ಮ ಕೃತಜ್ಞತೆಯು ಸಲ್ಲಬೇಕಾದ ಹಲವರಲ್ಲಿ ಬ್ರಿಟಿಶ ಸರಕಾರವು ಒಂದು. ಅದು ನನ್ನ ತಿಳುವಳಿಕೆಯು. ಎರಡು ಪ್ರಾಂತ್ಯಗಳಲ್ಲಿ ಸಂದಿಗ್ಧ ಸ್ಥಿತಿಯನ್ನುಂಟುಮಾಡಿದುದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಯು ಸಲ್ಲಬೇಕಾಗಿದೆ. ನಾವೆಲ್ಲರೂ ಭಾರತೀಯರು ಕಾಂಗ್ರೆಸ್ಸಿನವರು. ನಮ್ಮಲ್ಲಿ ಭೇದಗ[illegible]ವಾಗಿ ಒಮ್ಮತವು ಹೆಚ್ಚಲಿ ಎಂಬ ಜ್ಞಾನೋದಯವು ಅದರಿಂದ ನಮ್ಮಲ್ಲುಂಟಾಗಿರುತ್ತದೆ.

ಭವಿಷ್ಯದ ಕುರಿತ ಮಾತನಾಡುತ್ತಾ ರಾಷ್ಟ್ರಪತಿ ಬೋಸರು ಅಹಿಂಸಾನೀತಿಯುದ ಕೂಡಿದ ಅಸಹಕಾರ ಕವಚದಿಂದ, ನಮ್ಮ ಶಸ್ತ್ರ ಭಂಡಾರದಲ್ಲಿರುವ ಎಲ್ಲಾ ಶಸ್ತ್ರಗಳನ್ನು ಉಪಯೋಗಿಸಿ ನ[illegible] ಶಾಸನದ ಫೆಡರಲ್ ಯೋಜನೆಯನ್ನು ನಿರ್ಮೂಲಯಿಸಬೇಕು. ಈ ಹೊತ್ತು [illegible] ಸಂದಿಗ್ಧವು ಉಂಟಾಗಿರುವುದು [illegible] ಜ[illegible] ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಸಭೆ[illegible] ಉಂಟಾಗಬಹುದು. ಆಚೆ ನಾಳದ ಅಸಹಕಾರವು ಪ್ರಾರಂಭವಾಗಬಹುದು.

ಏನೂ ಆಗಲಿ ನಾವು ಐಕ್ಯದಿಂದಿರಬೇಕು. ಕಾರಣ ನಮ್ಮ ಆತ್ಮವು ಒಂದೇ. ನಮ್ಮ ಗುರಿಯು ಒಂದೆ. ನಮ್ಮ ದೃಷ್ಟಿಕೋನವು ಒಂದೆ. ಸ್ವ[illegible]

ಶ್ರೀ ಸರದಾರ್ ವಲ್ಲಭಾಯಿ ಪಟೇಲರು

ರಾಜ್ಯ ಸಾಧಿಸುವ ಕಾರ್ಯದಲ್ಲಿ ನಮಗೆ ಜಯ ಲಭಿಸುವಂತೆ ಪವಿತ್ರವಾದ ತಪತಿ ನದಿಯ ದಡದಲ್ಲಿ ನಮ್ಮ ಭೇದಗಳನ್ನೆಲ್ಲಾ ಮರೆತು ಬಿಡಬೇಕಾಗಿ ನಾವಿಂದು ಪ್ರತಿಜ್ಞೆಗೈಯ್ಯುವ. ಹಿಂದೂದೇಶವು ಸ್ವತಂತ್ರವಾಗಲೇಬೇಕು. ಆ ಕಾರ್ಯದಲ್ಲಿ ನಾವೆಲ್ಲರೂ ಭಾಗಿಗಳಾಗಬೇಕು. ಹಿಂದೂದೇಶದ ಸ್ವಾತಂತ್ರ್ಯದಲ್ಲಿ ನಮಗೆ ನಂಬಿಕೆ ಇದೆ. ಅದಕ್ಕಾಗಿ ನಾವು ಹೋರಾಡುವ

### ಮಂತ್ರಿಗಳಿಗೆ ವೈಸರಾಯರ ವಿನಂತಿ—

ತೊಂದರೆಗಳನ್ನು ನಿರೀಕ್ಷಿಸುವುದು ಬೇಡ ಮಂತ್ರಿಗಳ ಅಧಿಕಾರಕ್ಕೆ ಭಂಗವಿಲ್ಲ

✱

ಸಂಧಿಗ್ಧ ಸಮಯವು ಉಂಟಾದ ಕಾರಣಗಳನ್ನು ವಿವರಿಸುತ್ತಾ ವೈಸ್ರಾಯರು [illegible] ಅಭಿಪ್ರಾಯವನ್ನೊಳಗೊಂಡ ಪ್ರಕಟಣೆಯನ್ನು ಮಾಡಿರುವರು.

ಕಾಂಗ್ರೆಸ್ ಮಂತ್ರಿಮಂಡಲಗಳ ಅಧಿಕಾರ ಭಂಗಮಾಡಬೇಕೆಂಬ ಉದ್ದೇಶದಿಂದ ನಾನು ಈ ಪ್ರಕರಣದಲ್ಲಿ ಕೈಹಾಕಿದ್ದಲ್ಲ. ಇಂಡಿಯಾ ಆಕ್ಟಿನನುಗುಣವಾಗಿ ಕೆಲದಲ್ಲಿ ಎಲ್ಲಾ ಪ್ರಾಂತ್ಯಗಳ ಮಂತ್ರಿಮಂಡಲಗಳಿಗೆ ಒಂದು ಸಹಾಯವನ್ನು ಒದಗಿಸಲು [illegible] ಗವರ್ನರರೂ [illegible] ತರಾಗಿರುವುದು ಕಳೆದ [illegible]ಗಳ ವಿದ್ಯಮಾನಗಳಿಂದ ಸ್ಪಷ್ಟವಾಗಿದೆ.

ಕಾಂಗ್ರೆಸ [illegible] ಸರಕಾರಗಳ [illegible] ಬದ್ಧವಾದ ಧೋರಣೆಗಳ [illegible] ಗವರ್ನರರ, ಗವರ್ನರ ಜನರಲರ [illegible] ಸಮಾಧಾನಗಳಿಗೆ ಭಂಗ[illegible] [illegible] ಎಂದ [illegible] ರಕ್ಷಣೆಗಾಗಿ ನಾನು ಇದರಲ್ಲಿ ಪ್ರವೇಶವಾದದ್ದು. ಆದರೆ [illegible] ಗಡೆ ಮಾಡುವ [illegible] ಸಲ ಇವ [illegible] ತೊಂದರೆಗಳು ಒದಗಬಹುದೆಂದು ಅವರ ನಿರೀಕ್ಷಿಸುವುದು ಬೇಡ. ಪ್ರತಿಯೊಬ್ಬ ಕೈದಿಯ ವಿಚಾರವನ್ನು ಬೇರೆ ಬೇರೆಯಾಗಿ ಪರಿಶೀಲಿಸಿ ಅವರ ಬಿಡುಗಡೆಮಾಡುವ ಕುರಿತ ಗವರ್ನರರು ಕಾಂಗ್ರೆಸು ಮಂತ್ರಿಗಳೊಡನೆ ವ್ಯಕ್ತಿ[illegible] ಸಹಕರಿಸಲು ಸದಾ ಸಿದ್ಧರಾಗಿರುವರು.

ತೊಂದರೆಗಳನ್ನು ಇನ್ನಷ್ಟು ಹೆಚ್ಚಿಸುವ ಇಚ್ಛೆಗಳಿಲ್ಲದಿರುವುದು ನನಗೆ ಸಂತೋಷವಾಗಿರುತ್ತದೆ. ತೊಂದರೆಗಳುಂಟಾದ ಎರಡು ಪ್ರಾಂತ್ಯಗಳಲ್ಲಿ ಮಂತ್ರಿಮಂಡಲಗಳು ಗವರ್ನರರೊಡನೆ ವಿಚಾರವೆತ್ತಿ ಬೇಗನೇ ಸಂಧಿಗ್ಧದ ನಿವಾರಣೆಯಾಗಿ ಸಹಜ ಸ್ಥಿತಿಯು ಉಂಟಾಗಲು, ಅಸ್ಪದವಿರುವುದೆಂದು ನನ್ನ ಆಶಯವು.

ಹಿಂದೂದೇಶದ ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಉಂಟಾದ ಸಂಧಿಗ್ಧದ ಕುರಿತು ಆಂಗ್ಲೇಯ ಅಭಿಪ್ರಾಯವು ವೈಸ್ರಾಯರ ವರ್ತನೆಯನ್ನು ಬಹಳವಾಗಿ ಖಂಡಿಸಿರುವುದು. ಬರೇ ಅಲ್ಪ ಸಂಗತಿಗಾಗಿ ಈ ಸಂಧಿಗ್ಧವು ಉಂಟಾದುದೆಂದೂ, ಅದಕ್ಕಾಗಿಯೇ ಬಿಕ್ಕಟ್ಟಿನ ಪರಿಸ್ಥಿತಿಯು ಉಂಟಾಗುವುದು ಸರಿಯಲ್ಲವೆಂದೂ ಅಲ್ಲಿನ ಅಭಿಪ್ರಾಯ.

ಕಾಂಗ್ರೆಸ್ ಮಂತ್ರಿಮಂಡಲಗಳು ರಾಜಿಯಿತ್ತು ಖಾಲಿಬಿದ್ದ ಸ್ಥಳಗಳಿಗೆ ಬರಲು ಯಾವ ಪಕ್ಷವೂ ಸಿದ್ಧವಿರುವುದಿಲ್ಲವಾಗಿ ತಿಳಿದುಬರುತ್ತದೆ. ಸಂಯುಕ್ತ ಪ್ರಾಂತ್ಯದ ವಿರೋಧ ಪಕ್ಷದ ನಾಯಕರಾದ ಚಟಾರಿನ ನವಾಬರು ಈಗಿನ ಪರಿಸ್ಥಿತಿಯು ನಿವಾರಣೆಯಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕೆಂದು ಹೇಳಿರು.

ಹರಿಪುರ ಕಾಂಗ್ರೆಸ್ ಅಧಿವೇಶನ ದಿ[illegible] ನಡೆದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ [illegible]

ವರ [illegible] ಜವಾಹರ್‌ಲಾಲ್ [illegible] ವರ್ಗವು [illegible] ಕಾಂಗ್ರೆಸ್ಸಿನೊಳಗೆ ಒಪ್ಪಂದ ಮಾಡಿಕೊಳ್ಳದವರಾಗಿ ಮಂತ್ರಿಪದವಿಯನ್ನು ಸ್ವೀಕರಿಸಲಾರೆವೆಂದು ಅಭಿಪ್ರಾಯ ಸೂಚಿಸಿರುವರು.

ಆಗ ವೈಸ್ರಾಯರ [illegible] ಪ್ರಕಟಣೆಯಿಂದ [illegible] ಅದರಿಂದ ಸಂಧಿಗ್ಧ [illegible] ಅವಕಾಶವಿದೆಯೇ? [illegible]

★

ಮಹಾತ್ಮಾಜಿಯವರು

[illegible]

ಹರಿಪುರದಿಂದ [illegible]



ಹರಿಪುರ ಕಾಂಗ್ರೆಸ್ ಅಧಿವೇಶನ

ಹರಿಪುರದಿಂದ ತೆರಳ[illegible] ಮಹಾತ್ಮಾಜಿಯವರು ವರ್ಧಾ[illegible] ಬಿಡುವಿನವರೆಗೆ ಸಂಪೂರ್ಣವಾಗಿ [illegible] ವಿಚಾರ ಮೋಧನೆಯಿಂದಿರುವರಾಗಿ ತಿಳಿದುಬರುತ್ತದೆ. ಶ್ರೀ| ಬೋಸರು ಮುಂದಿನ ವಿಚಾರ ಮಹಾತ್ಮಾಜಿಯವರೊಡನೆ ಸೋಧನೆ ಪಡೆವರು [illegible]ವಾಗಿ ತಿಳಿದು ಬರುತ್ತದೆ. ಮಹಾತ್ಮಾಜಿಯವರು ಕಲ್ಕತ್ತಕ್ಕೆ ತೆರಳುವ ಸಮಯ ಅವರೊಡನೆ ಸರೋಜಿನಿ ದೇವಿಯವರೂ ಹೋಗುವರಂತೆ.

★

### ಹರಿಪುರ ಅಧಿವೇಶನ ಯಶಸ್ಸು ಸರದಾರ್ ಪಟೇಲರಿಗೆ ಸಲ್ಲತಕ್ಕದು

ಪಂಡಿತ ಪಂತರು ಭಾಷಣ ಮಾಡುತ್ತಾ:

"ಇಲ್ಲಿ ನೆರೆದವರ ಪರವಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಿಗೂ, ಈ ಅಧಿವೇಶನವನ್ನು ನಡೆಯಿಸುವಂತೆ ಶ್ರಮಿಸಿದ ಸ್ವೀಕರುಪರಿಗ[illegible] ಕೃತಜ್ಞತೆಯನ್ನು ಸೂಚಿಸುತ್ತೇವೆ. ಅನಾರೋಗ್ಯದ ಬೆನೆಯಿಂದ ಹೊರದೇಶಗಳಲ್ಲಿದ್ದ ನಮ್ಮ ರಾಷ್ಟ್ರಪತಿಗಳಾದ ಶ್ರೀ ಸುಭಾಷ್ಚಂದ್ರ ಬೋಸರಿಗೂ ನಮ್ಮ ಕೃತಜ್ಞತೆಗಳು. ಅವರು ಹಿಂತಿರುಗಿದಂದಿನಿಂದ ಕಾಂಗ್ರೆಸ್ ಅಧಿವೇಶನದ ಸಂಬಂಧವಾಗಿ ಅವರ ಹಗಲಿರುಳು ದಣಿದಿರುವರು. ಅವರು ಈ ಹೊಣೆಗಾರಿಕೆಯನ್ನು ಅಂಗೀಕರಿಸಿರುವರು. ಈ ಹೊರೆಯನ್ನು ಹೊರಲು ಅವರಿಗೆ ಬಲಕೊಡಬೇಕೆಂದು ದೇವರೊಡನೆ ಪ್ರಾರ್ಥಿಸುವ.

ಸರದಾರ್ ಪಟೇಲರ ಮಾರ್ಗದರ್ಶಕತ್ವದಲ್ಲಿ, ಮಹಾತ್ಮಾಜಿಯವರ ಸ್ಫೂರ್ತಿಯಿಂದ ಈ ಕಾಂಗ್ರೆಸ್ಸಿನ [illegible] ಎಷ್ಟು [illegible] ಈ ಅಧಿವೇಶನದಿಂದ ಸ್ವರಾಜ್ಯ [illegible] ಇಂದ ಆಲೋಕದಂತೆ ಪರಿವರ್ತಿಸಿದ್ದು [illegible] ಸರದಾರ್ [illegible] ಲಾಯಿತು. [illegible] ಕೌತುಕವೆ ಉಂಟಾಗುವುದು. ಇದೆಲ್ಲಾ ಮಹಾತ್ಮಾಜಿಯವರ ದಿವ್ಯ ಪ್ರೇರಣೆಯಿಂದ ಸರ್‌ದಾರ್ ಪಟೇಲರ ಪ್ರತಿಭೆಯಿಂದ ಗುಜರಾತಿನ ಅನೇಕ ಶ್ರದ್ಧಾಪೂರ್ವಕ ಸ್ವಯಂಸೇವಕರ ಪರಿಶ್ರಮದಿಂದ ಎಂದು ಹೇಳಬೇಕಾಗಿದೆ.

★

ಹರಿಪುರ ಕಾಂ| ಅಧಿವೇಶನದ ವೆಚ್ಚವು—

ರೂ ೩| ಲಕ್ಷ. ಇದರಲ್ಲಿ ಹೆಚ್ಚಿನ ಕಷ್ಟ ಉದಾರ ಪೋಷಕರಿಂದ ತೆರಲಾಗಿದೆ. ಆದರೆ ಕಾಂಗ್ರೆಸ್ ಅಧಿವೇಶನಕ್ಕಾಗಿ ಇಷ್ಟು ವ್ಯಯವೆಂದು ಗಾಂಧಿಜಿಯವರ ಅಭಿಪ್ರಾಯ. ಬರೇ ೫೦ ಸಾವಿರ ರೂಪಾಯಿಗಳೊಳಗೆ ಅದನ್ನು ತೀರಿಸಬೇಕೆಂಬುದೇ ಅವರ ಅಭಿಪ್ರಾಯ.

# ಏಡೆನ್ನರ ರಾಜಿನಾಮೆ! ಜರ್ಮನ್ ಸರಕಾರದ ಮಹಾ ಸಭೆ! ಹಿಟ್ಲರರ ಭಾಷಣ!! ಬೋಲ್ಶೆವಿಶಂನ ವಿರೋಧ!!!

## 'ಹಿಟ್ಲರ—ಮುಸಲೋನಿಗಳ ಬಾಲಹಿಡಿದು ಕುಣಿದಾಡುವದಿಲ್ಲ!'—ಏಡೆನ್

★ ★ ★

"ಬ್ರಿಟನ್ ಮತ್ತು ಫ್ರೆಂಚ್ ರಾಷ್ಟ್ರಗಳು ಜರ್ಮನಿಗೆ ವಸಾಹತುಗಳನ್ನು ಹಿಂದಕ್ಕೊಪ್ಪಿಸಲು ಸಿದ್ಧರಾಗಬೇಕು. ಬೊಲ್ಶೆವಿಸಮನ್ನು ನಾನು ಎಂದೂ ಸಹಿಸುವ ಹಾಗಿಲ್ಲ. ಸ್ಪೇಯಿನಿನಲ್ಲಿ ಅದರ ಬೆಳವಣಿಗೆಯಾಗಬಾರದು. ಇಟಲಿ, ಜಪಾನ್ ರಾಷ್ಟ್ರಗಳೊಡನೆ ಮೈತ್ರಿಯನ್ನು ಬೆಳೆಸಬೇಕು":—ಹಿಟ್ಲರ್.

★ ★

ಸ್ಪೆಯಿನಿನ ಪ್ರಕರಣದ ಇತ್ಯರ್ಥವಾಗದೆ ಮುಸಲೋನಿಯೊಡನೆ ಮಾತುಕತೆ ನಡೆಯಿಸುವದು ತಮಗೆ ಅಸಮಾಧಾನವಿದ್ದುದರಿಂದಲೇ ಏಡೆನ್ನರು ತಮ್ಮ ಪರರಾಷ್ಟ್ರವಹಾರ ಕಾರ್ಯದರ್ಶಿತ್ವಕ್ಕೆ ರಾಜಿಯಿತ್ತರು.

ಮಿ| ಎಂಥೋನಿ ಏಡೆನ್ನರು

ಅಂತರಾಷ್ಟ್ರೀಯ ವಿಚಾರಗಳಲ್ಲಿ ಇಂದಿಗೆ ಬಹಳ ಸಮಯದಿಂದ ಏಡೆನ್ನರಿಗೂ ಬ್ರಿಟಿಷ ಪ್ರಧಾನ ಮಂತ್ರಿಯರು ಮತ್ತು ಇನ್ನಿತರ ಮಂತ್ರಿಗಳಿಗೂ ಬೇಧಾಭಿಪ್ರಾಯಗಳು ಬೆಳೆದು ಬಂದುದೇ ಈ ರಾಜಿಗೆ ಕಾರಣವಾಗಿರುತ್ತದೆ. ಸರ್ವಾಧಿಕಾರಿ ರಾಷ್ಟ್ರಗಳಾದ ಫೆಸಿಸ್ಟ್ ಜರ್ಮನಿ ಮತ್ತು ಇಟಲಿಯನ್ನು ಒಲಿಸಿಕೊಂಡು ಸದ್ಯದ ವಿಷಮಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಪ್ರಧಾನ ಚೆಂಬರ್ಲೇನರ ಮತ್ತು ಅವರ ಅನುಯಾಯಿಗಳ ಅಭಿಪ್ರಾಯವಾಗಿರುತ್ತದೆ. ಈ ಕಾರಣದಿಂದಲೇ, ಅವರು ಸ್ಪೇಯಿನ ರಿಪಬ್ಲಿಕ್ ಸರಕಾರದ ಹಿತಗಳ ಅಲಕ್ಷ್ಯ, ಪ್ರಜಾಪ್ರಭುತ್ವ ಸೂತ್ರಗಳ ಅಲಕ್ಷ್ಯ ಮತ್ತು ಇಟಲಿಯು ಎಬಿಸಿನಿಯಾದ ಯಜಮಾನರೆಂದು ಮನ್ನಣೆಯೀಯಲು ಅವರು ಸಿದ್ಧರಿದ್ದಾರೆ. ಹಿಟ್ಲರನಿಗೆ ಆಸ್ಟ್ರಿಯಾ ಇತ್ಯಾದಿ ಮಧ್ಯ ಯುರೋಪ್ಯದ ಕೆಲವು ಸ್ಥಳಗಳಲ್ಲಿ ಅವಕಾಶಮಾಡಿಕೊಟ್ಟು, ಅವನನ್ನು ಸಂತೈಸುವುದೇ ಬ್ರಿಟಿಷ ಮಂತ್ರಿಮಂಡಲದ ಸದ್ಯದ ಧೋರಣೆಯಾಗಿರುತ್ತದೆ. ಅಂತರಾಷ್ಟ್ರೀಯ ವಿಚಾರದಲ್ಲಿ, ಫೆಸಿಸ್ಟರ ದುಶ್ಚಟವನ್ನು ವಿರೋಧಿಸುವರೆ ಬ್ರಿಟಿಷ ಮಂತ್ರಿಮಂಡಲಗಳು ಒಂದು ಖಂಡಿತ ಧೋರಣೆಯನ್ನು ಕೈಗೊಳ್ಳುವರೆ ಹಿಂಜರಿಯುವುದರಿಂದಲೇ ಎಂತೋನಿ ಏಡೆನ್ನರ ರಾಜಿನಾಮೆಗೆ ಕಾರಣವಾಗಿರುತ್ತದೆ.

ಇಂದಿಗೆ ಆರು ವರ್ಷಗಳಿಂದ ನಡೆಯುವ ಘೋಟಾಯುವಿಕೆಯಲ್ಲಿ ಬ್ರಿಟನು ಸುಮ್ಮನಿದ್ದುದರಿಂದ ಬ್ರಿಟನಿನ ಅಂತರಾಷ್ಟ್ರೀಯ ಧೋರಣೆಯು ಕಳಚಿಬಿದ್ದಿರುತ್ತದೆ. ಬ್ರಿಟನು ಫೆಸಿಸ್ಟರ ಹಿತವಾದಿಗಳಾದುದು ಈಗ ಕಂಡುಬರುತ್ತದೆ. ಬ್ರಿಟಿಷ ಪ್ರಧಾನ ನೆವಿಲ್ಲೆ ಚೆಂಬರ್ಲಿನರು ಜರ್ಮನಿಯ ಹಿತಕಾಂಕ್ಷಿಗಳು. ಲೋರ್ಡ್ ಹೆಲಿಫೇಕ್ಸರು ಅವರ ಆಧಾರಕರು. ಏಡೆನ್ನರಿಗೆ ಈ ವರ್ತನೆಯು ಸರಿತೋರಲಿಲ್ಲ. ಆದರೆ ಮಂತ್ರಿಮಂಡಲದಲ್ಲಿ ಅವರಿಗೆ ವಿಶೇಷ ಬೆಂಬಲವಿರಲಿಲ್ಲ. ಆದರೂ, ಚೆಂಬರ್ಲಿನರು ಏಡೆನ್ನರೊ ಡನೆ ಇದ್ದು ಸಮಯ ಕಳೆಯುವವರಾದರು. ಮಿ| ಏಡೆನ್ನರು ಈ ಮೊದಲೇ, ಅಂದರೆ ೧೯೩೬ರ ಎಬಿಸಿನಿಯಾ ಪ್ರಕರಣದ ಸಮಯ ರಾಜಿ ಕೊಟ್ಟು ಮಂತ್ರಿಮಂಡಲದಿಂದ ಹೊರಗೆ ಬರುತ್ತಿದ್ದರೆ ಉತ್ತಮವಿತ್ತು. ಆದರೆ ಕೆಲ ಕಾರಣಗಳಿಂದ ಅವರು ಮಂತ್ರಿಮಂಡಲದಲ್ಲಿ ಮತ್ತೂ ಇರುವವರಾದರು.

ಏಡೆನ್ನರ ರಾಜಿಯಿಂದ, ಸ್ಪೆಯಿನ ಪ್ರಕರಣ ಎಬಿಸೀನಿಯಾ ಪ್ರಕರಣ—ಇತ್ಯಾದಿಗಳ ಕುರಿತು ಬ್ರಿಟನಿನ ನಿಜವಾದ ವರ್ತನೆಯು ಈಗ ಹೊರಬಿದ್ದಿರುತ್ತದೆ. ಈಗಿನ ಬ್ರಿಟಿಷ ಮಂತ್ರಿಮಂಡಲವು ಫೆಸಿಸ್ಟ ಇಟಲಿ—ಜರ್ಮನಿಯೊಡನೆ ಇದೆ.

★

### ಏಡನ್ನರ ರಾಜಿಯ ಪರಿಣಾಮ ಏನಾಗಬಹುದು

ಏಡನ್ನರ ರಾಜಿಯಿಂದ ಜರ್ಮನಿ, ಇಟಲಿ ಇತ್ಯಾದಿ ಫೆಸಿಯಿಸ್ಟ್ ಹಿತಕಾಂಕ್ಷಿ ರಾಷ್ಟ್ರಗಳಿಗೆ ತುಂಬಾ ಸಂತೋಷ ಉಂಟಾಗಿರುತ್ತದೆ. ಪ್ರಜಾಪ್ರಭುತ್ವ ಸಂಯುಕ್ತ ಅಮೇರಿಕಾಕ್ಕೆ ಮಾತ್ರ ಅದರಿಂದ ನೋವಾಗಿರುತ್ತದೆ. ಅದರಿಂದ ಯುರೋಪ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಭಂಗಬರುವುದೆಂಬ ಭಯವು ಅವರಿಗೆ ಉಂಟಾಗಿರುತ್ತದೆ. ಎಬಿಸೀನಿಯದ ವಿಜಯ, ಮಂಚೂಕ್ಯೂ ಸರಕಾರಕ್ಕೆ ಮನ್ನಣೆ, ನಂತರ ಜಪಾನೀಯರ ಉತ್ತರ ಚೀನಾದ ಒಡೆತನಕ್ಕೆ ಮನ್ನಣೆ ಬ್ರಿಟನಿನಿಂದ ಕೊಡಲಾದರೆ,—ಆಗ ಬ್ರಿಟನು, ಅಮೇರಿಕಾ, ಫ್ರಾನ್ಸ ರಾಷ್ಟ್ರಗಳಿಗೆ ವೈಮನಸ್ಸುಂಟಾಗಿ ತೋಂದರೆ ಕಲಹಗಳಿಗೆ ಕಾರಣ ಉಂಟಾಗಬಹುದೆಂದು ಅಮೇರಿಕಾದ ಅಭಿಪ್ರಾಯ.



ಲೋರ್ಡ್ ಹೆಲಿಫೇಕ್ಸ (ಹಿಂದೊಮ್ಮೆ ಇಂಡಿಯಾ ವೈಸರಾಗಿದ್ದ ಲೋರ್ಡ ಇರ್ವಿನ್ನ)ರು ಮಿ| ಏಡೆನ್ನರ ಸ್ಥಾನಕ್ಕೆ ನೇಮಿಸಲ್ಪಡುವರೆಂದು ತಿಳಿದುಬರುತ್ತದೆ

ಸದ್ಯದ ಬ್ರಿಟಿಷ ಮಂಡಳದ ಫೆಸಿಯಿಸ್ಟ ಹಿತವಾದ ತರದ ಪರರಾಷ್ಟ್ರವಹಾರದ ಧೋರಣೆಯ ಕುರಿತು ಇಂಗ್ಲೆಂಡಿನಲ್ಲಿ ಅನೇಕರಿಗೆ ಅಸಮಾಧಾನವುಂಟಾಗಿದೆ. ಅಲ್ಲಿನ ಲಿಬರಲ ಮತ್ತು ಲೇಬರ್ ಪಕ್ಷದವರು ಅದನ್ನು ತೀವ್ರವಾಗಿ ಖಂಡಿಸುತ್ತಿದ್ದಾರೆ. ಆದ್ದರಿಂದ ಇಂಗ್ಲಂಡಿನ ನ್ಯಾಶನಲ್ ಸರಕಾರವು ರಾಜಿಯಿತ್ತು, ಮಹಾಚುನಾವಣೆಯು ನಡೆಯುವ ಸಂಭವಗಳುಂಟಾಗಬಹುದೆಂದು, ಬಲವಾದ ನಿರೀಕ್ಷೆಗಳಿವೆ. ಲಿಬರಲ್ ಮತ್ತು ಲೇಬರ್ ಪಕ್ಷದವರು ಐಕ್ಯಹೊಂದಿಕೊಂಡು, ನವೀನ ಸರಕಾರದ ರಚನೆಯಾಗಬಹುದೆ?

★

### ಜರ್ಮನ್ ಸರಕಾರದ ಮಹಾಸಭೆ.

ಜರ್ಮನ್ ಸರಕಾರದ ಮಹಾಸಭೆ

ಬ್ರಿಟಿಷ ಪ್ರಧಾನಮಂತ್ರಿ ನೆವಿಲ್ಲೆ ಚೆಂಬರ್ಲಿನ್

ಯೊಂದು ಹಿಟ್ಲರನ ಅಧ್ಯಕ್ಷತನದಲ್ಲಿ ಮೊನ್ನೆ ದಿನ ಕೂಡಿತ್ತು. ಅಲ್ಲಿ ಭಾಷಣವೀಯುತ್ತ ಹಿಟ್ಲರನು "ಜರ್ಮನಿಯು ಬೊಲ್ಶೆವಿಸಮಿನ ಬೆಳವಣಿಗೆಯನ್ನು ವಿರೋಧಿಸುತ್ತದೆ. ಜಪಾನಿನ ಸೋಲಿನಿಂದ ಯುರೋಪ್ಯಕ್ಕೆ ಉಪಕಾರವಿಲ್ಲ. ಅದರಿಂದ ಉಪಕಾರವಿರುವುದು ರಷ್ಯಕ್ಕೆ ಮಾತ್ರ. ಇಟಲಿ, ಜಪಾನ್ ರಾಷ್ಟ್ರಗಳೊಡನೆ ಜರ್ಮನ್ ಮೈತ್ರಿಯು ಬೆಳೆಯಬೇಕು. ಸ್ಪೆಯಿನಿನಲ್ಲಿ ಬೊಲ್ಶೆವಿಜ ಪ್ರಚಾರಿತವು ಕಾಲೂರಿದೊಡೆ ಯುರೋಪ್ಯದ ಶಾಂತಿಗೆ ಭಂಗಬರುವದು. ಕೈಗಾರಿಕ ವಿಚಾರದಲ್ಲಿ ಜರ್ಮನಿಗೆ ಅನೇಕ ತೊಂದರೆಗಳುಂಟಾಗಿವೆ. ಜರ್ಮನಿಯಲ್ಲಿ ಬಳಕೊಳ್ಳಲು ಸಾಕಷ್ಟು ಸ್ಥಳವಿಲ್ಲ. ಜರ್ಮನಿಯು ತನ್ನ ವಸಾಹತುಗಳನ್ನು ಹಿಂದಕ್ಕೆ ಕೋರುತ್ತದೆ. ಆಸ್ಟ್ರಿಯದೊಡನೆ ನಡೆದ ಒಪ್ಪಂದದಿಂದ ಮಧ್ಯ ಯುರೋಪ್ಯದ ಶಾಂತಿರಕ್ಷಣೆಯಾಗುವದು. ನಾಜಿಗಳು ಅಧಿಕಾರಕ್ಕೆ ಬಾರದಿರುತ್ತಿದ್ದರೆ, ಯುರೋಪ್ಯದ ಸ್ಥಿತಿಯು ಅಲ್ಲೋಲಕಲ್ಲೋಲವಾಗುತಿತ್ತು. ಸಂಗ್ರಾಮ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳಾಗಿವೆ ನಿಜ. ಆದರೆ, ಸಂಗ್ರಾಮ ಪಕ್ಷದ ಸಂಪೂರ್ಣ ಅಧಿಕಾರವು ನಮ್ಮೊಡನಿರುವುದು."

ಇಟಲಿಯ ಸರ್ವಾಧಿಕಾರಿ ಮುಸಲೋನಿ.

ಏಡೆನ್ನರ ರಾಜಿಯಿಂದ, ಮೊನ್ನೆ ನಡೆದ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಬಹಳ ಕೋಲಾಹಲವೆದ್ದಿತು. ಪ್ರಧಾನ ಚೆಂಬರ್ಲಿನರು ಉಭಯಸಂಕಟಕ್ಕೊಳಗಾಗಿರುವರು. ಬ್ರಿಟಿಷ ಸರಕಾರದಲ್ಲಿ ಬದಲಾವಣೆಯಾಗುವುದೆ?

### ಹರಿಪುರ ಕಾಂಗ್ರೆಸ್ ಅಧಿವೇಶನ

#### ಫೆಡರೇಶನಿನ ಕುರಿತು ಠರಾವು ಬಹುಮತದಿಂದ ಮಂಜೂರಾಯಿತು.

★

ಫೈಜಪುರ ಕಾಂಗ್ರೆಸ್ಸೇ ವಿಶೇಷವಾದುದೆಂದು ಹಿಂದೆ ಎಣಿಸಲಾಗಿತ್ತು. ಹರಿಪುರ ಕಾಂಗ್ರೆಸ್ಸು ಅದನ್ನು ಬಹಳವಾಗಿ ಹಿಮ್ಮೆಟ್ಟಿರುತ್ತದೆ. ಹರಿಪುರದೊಡನೆ ಫೈಜಪುರವನ್ನು ಸರಿಹೋಲಿಸಿದರೆ, ಫೈಜಪುರವು ಅತೀ ಸಣ್ಣದೆಂದು ಕಾಣುವುದು. ಮಹಾತ್ಮಾಜಿಯರ ನಾಯಕತ್ವದಲ್ಲಿ ದಿನೇ ದಿನೇ ಕಾಂಗ್ರೆಸ್ಸಿನ ಬಲವು ವೃದ್ಧಿಯಾಗುತ್ತಿದೆ.

ಕಾಂಗ್ರೆಸ್ ಅಧಿವೇಶನಕ್ಕೆ ಸಹಾಯವಾಗಿ ಒಂದೊಂದು ಮಣ ಅಕ್ಕಿಯನ್ನಿತ್ತ ಗ್ರಾಮಸ್ಥರಿಲ್ಲಾ ಹರಿಪುರದಲ್ಲಿ ನೆರೆದಿದ್ದರು. ಅದಲ್ಲದೆ ಸುತ್ತಮುತ್ತಲಿನ ಸಾವಿರಾರು ಮಂದಿ ರೈತರೂ ಕಾಂಗ್ರೆಸ್ಸಿಗೆ ತಮ್ಮ ವಂದನೆಗಳನ್ನರ್ಪಿಸಲು ಹರಿಪುರಕ್ಕೆ ಯಾತ್ರಾರ್ಥಿಗಳಾಗಿ ಬಂದಿದ್ದರು. ಕಾಂಗ್ರೆಸ್ ಅಧಿವೇಶನದ ಚಪ್ಪರದೊಳಗೆ ಅಧಿವೇಶನದ ದಿನ ಸಾಧಾರಣ ೬ ಲಕ್ಷಕ್ಕೆ ಮಿಕ್ಕಿದ ಜನಸ್ತೋಮವು ಕೂಡಿಬಂದಿತ್ತು. ಶ್ರೀ ಸುಭಾಷ್ ಚಂದ್ರ ಭೋಸರ ನಡೆಯಿಕೊಂಡು ಒಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆರವಣಿಗೆಯಲ್ಲಿ ಅಧಿವೇಶನ ಚಪ್ಪರಕ್ಕೆ ಬಂದುಮುಟ್ಟಿತು. ಗಾಂಧಿಜಿಯವರು ಅಶಕ್ತಿಯಿದ್ದಾಗ್ಯೂ ಕಾಂ. ಅಧಿವೇಶನಕ್ಕೆ ಬಂದಿದ್ದರು. ಅಧಿವೇಶನ ಚಪ್ಪರದೊಳಗೆ ಏರ್ಪಡಿಸಲಾದ ಶ್ರೀ ನಂದಲಾಲ ಭೋಸರ ಸರಳ ಕಲೆಯಿಂದ ಶೋಭಾಯಮಾನವಾದ ಪ್ಲಾಟ್ಫೋರ್ಮಿನ ಮೇಲೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು, ಮಹಾತ್ಮಾಜಿಯವರೂ, ಇಂಗ್ಲೆಂಡಿನ ಲಿಬರಲ್ ಪಕ್ಷದ ನಾಯಕರಾದ ಲಾರ್ಡ್ ಸಾಮುವೇಲರೂ ಕುಳಿತಿದ್ದರು. ಭೋಸರು ತಮ್ಮ ಅಧ್ಯಕ್ಷ ಭಾಷಣವನ್ನು ಹಿಂದೀಯಲ್ಲಿ ಮಾಡಿದರು.

ಜರ್ಮನಿಯ ಸರ್ವಾಧಿಕಾರಿ ಹೆರ್ ಹಿಟ್ಲರ್

★

### ಗಾಜಿನ ತಂತುಗಳಿಂದ ಬಟ್ಟೆನೇಯಬಹುದು

ಬರುವ ಬಾರಿ ಬರ್ಮಿಂಗ್ಹಾಮ್ ನಗರದಲ್ಲಿ ನಡೆಯಲಿರುವ ವಸ್ತು ಪ್ರದರ್ಶನದಲ್ಲಿ ಗಾಜಿನ ತಂತುಗಳಿಂದ ನೇದ ಬಟ್ಟೆಗಳನ್ನು ಪ್ರದರ್ಶನಕ್ಕಿಡುವರು. ಗಾಜಿನಿಂದ ತಂತುಗಳನ್ನು ಎಳೆಯುವ ಮತ್ತು ಅದರಿಂದ ಬಟ್ಟೆ ನೇಯುವ ಕಲೆಯನ್ನು ೧೯೩೦ರಲ್ಲಿಯೇ ಹುಡುಕಿ ತೆಗೆದಿದ್ದರು. ಈಗ ಆ ಕಲೆಯು ತುಂಬಾ ಪ್ರಗತಿಯಾಗಿದೆ. ಗಾಜಿನ ಬಟ್ಟೆಗಳು ಹತ್ತಿಯ ಬಟ್ಟೆಗಳಿಗಿಂತ ಹೆಚ್ಚು ಹೊಳಪುಳ್ಳವು, ಉಪಯುಕ್ತ ಮತ್ತು ನಾಜೂಕು ಕೆಲಸಗಳಿಗೆ ಬರುವಂಥವುಗಳಾಗಿರುವವು. ಕೈಗಾರಿಕೆಗಳಲ್ಲಿ ಈ ಬಟ್ಟೆಗಳಿಂದ ವಿಶೇಷ ಪ್ರಯೋಜನವಾಗಲಿದೆ. ವಿದ್ಯುಕ್ತರಿಗೆಗಳನ್ನು ಸುತ್ತಲಿಕ್ಕೂ ರಾಸಾಯನಿಕ ದ್ರವ್ಯಗಳನ್ನು ಸೋಸಲಿಕ್ಕೂ ಇವುಗಳಂಥ ಬೇರೆ ಕಾರ್ಯಗಳಿಗೂ ಈ ಬಟ್ಟೆಗಳಿಂದ ಬಹಳ ಉಪಕಾರವಾಗುತ್ತದೆ.

# ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆಯ ★ ★ ಕುರಿತು ಕಾಂಗ್ರೆಸ್ ನಾಯಕರ ಇತ್ಯರ್ಥ!

### ವೈಸರಾಯರು ಈ ಕುರಿತು ಮತ್ತೊಮ್ಮೆ ಪರ್ಯಾಲೋಚಿಸಬೇಕು.

### ★ ಮಿಕ್ಕ ಪ್ರಾಂತ್ಯಗಳು ರಾಜಿ ಕೊಡುವುದು ಬೇಡ. ★

ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರ ಮಂತ್ರಿಮಂಡಳಗಳು ರಾಜಕೀಯ ಕೈದಿಗಳ ಬಿಡುಗಡೆಗಾಗಿ 'ರಾಜಿನಾಮೆ ಕೊಟ್ಟ ವಿಷಯದ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಹಾತ್ಮಾಜಿಯವರ ಸಹಕಾರದಿಂದ ಒಂದು ಘನವಾದ ನಿರ್ಧಾರವಾಗಿರುತ್ತದೆ

ವೈಸ್ರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ತಾವು ಹಿಂದೆ ಮಾಡಿದ ಪ್ರಕಟಣೆಯಲ್ಲಿ ಇತ್ತ ಭರವಸೆಗೆ ವಿರುದ್ಧವಾಗಿ ವರ್ತಿಸಿರುವರೆಂದೂ, ಮತ್ತು ಅವರು ಪ್ರಾಂತ್ಯದ ನಿತ್ಯದ ವ್ಯವಹಾರದಲಿ ಕೈಹಾಕುತ್ತಿರುವರೆಂದು ಕಾಂ। ವರ್ಕಿಂಗ್ ಕಮಿಟಿಯು ಇತ್ಯರ್ಥವಾಗಿರುತ್ತದೆ

ಈ ಸಂದಿಗ್ಧವನ್ನು ಇತರ ಕಾಂಗ್ರೆಸ್ ಪ್ರಾಂತ್ಯಗಳಿಗೂ ಹರಡಿಸುವ ಕುರಿತು ದೀರ್ಘವಾದ ಚರ್ಚೆಯು ನಡೆದಿರುತ್ತದೆ ಇತರ ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಮಂಡಳಗಳು ಅಲ್ಲಿನ ಗವರ್ನರರುಗಳು ಸಂದಿಗ್ಧ ಸ್ಥಿತಿಯನ್ನು ಉಂಡುಮಾಡುವ ವರೇಗೆ ರಾಜಿಕೊಡುವುದು ಬೇಡವೆಂದೂ, ಇತ್ಯರ್ಥವಾಗಿದೆ

ಈ ಠರಾವು ಮಹಾತ್ಮಾಜಿಯವರಿಂದ ರಚನೆಯಾಗಿದ್ದು ಅದರ ಪ್ರತಿಯೊಂದು ಸೊಲ್ಲಿನಲಿ ಅರ್ಥ ಗಾಂಭೀರ್ಯವು ತುಂಬಿದ್ದು ಅದರಿಂದ ಈ ಸಂದಿಗ್ಧಸ್ಥಿತಿಯನ್ನು ನಿವಾರಿಸುವರೆ ವೈಸ್ರಾಯರಿಗೆ ಅವಕಾಶ ಮಾಡಿಕೊಡಲಾಗಿದೆ ವೈಸ್ರಾಯರು ತನ್ನ ವರ್ತನೆಯನ್ನು ಬದಲಾಯಿಸದಿದ್ದರೆ, ಹೋರಾಟವು ಪ್ರಾರಂಭವಾಗಬೇಕೆಂದು ನಿರ್ಧಾರವಾಗಿರುತ್ತದೆ

★

### ಠರಾವಿನ ಸಾರಾಂಶ.

ಹೈಪುರ ಕಾಂಗ್ರೆಸ್ಸಿನಲ್ಲಿ ಆದ ನಿರ್ಣಯದ ಪ್ರಕಾರ ಬ್ರಿಟಿಷ ಸರಕಾರದಿಂದ ಕೆಲವು ಭರವಸೆಗಳನ್ನು ಪಡೆದು ಕಾಂಗ್ರೆಸ್‌ವಾಲರು ಅಧಿಕಾರ ಸೂತ್ರವನ್ನು ವಹಿಸುವಂತೆ ಅವಕಾಶ ಮಾಡಿಕೊಡಲಾಯಿತು ಮೊತ್ತಮೊದಲು ಕಾಂಗ್ರೆಸ್‌ವಾಲರು ಮಂತ್ರಿಮಂಡಳಗಳನ್ನು ರಚಿಸುವುದನ್ನು ನಿರಾಕರಿಸಿ, ನಂತರ ಅನೇಕ ಪ್ರಕಟಣೆ ಇತ್ಯಾದಿಗಳ ಫಲಿತಾಂಶವಾಗಿ, ಕಾಂಗ್ರೆಸ್ ಅಧಿಕಾರ ಸೂತ್ರವನ್ನು ವಹಿಸಿತು ಈ ಪ್ರಕಟಣೆಗಳಲ್ಲಿ, ಜವಾಬ್ದಾರೀ ಮಂತ್ರಿಗಳಿಗೆ ಸರಕಾರ ಆಡಳಿತದ ನಿತ್ಯವ್ಯವಹಾರದಲ್ಲಿ ತಡೆಗಳು ಬಾರವೆಂದು ವ್ಯಕ್ತಪಡಿಸಲಾಗಿತ್ತು

ಆದರೆ ಸರಕಾರದ ಆಡಳಿತದ ನಿತ್ಯವ್ಯವಹಾರದಲ್ಲಿ ತಡೆಗಳು ಬರುವುವೆಂದು ಕಾಂಗ್ರೆಸ್ ಮಂತ್ರಿಮಂಡಳ ಅನುಭವದಿಂದ ತಿಳಿದುಬರುತ್ತದೆ ಅದರಲ್ಲಿ ಸಂಯುಕ್ತ ಪ್ರಾಂತ್ಯ ಬಿಹಾರ ಪ್ರಾಂತ್ಯಗಳಲ್ಲಿ ಈ ತರದ ತಡೆ ಸ್ಪಷ್ಟವಾಗಿದೆ ಕಾಂಗ್ರೆಸ್ ಅಧಿಕಾರ ವಹಿಸಿದ ಸಮಯ, ಅವರು ರಾಜಕೀಯ ಕೈದಿಗಳ ಬಿಡುಗಡೆ ಮಾಡುವೆವೆಂದು ಪ್ರಸಿದ್ಧ ಪಡಿಸಿದುದು ಗವರ್ನರರಿಗೆ ತಿಳಿದೇ ಇತ್ತು ಆದರೆ ಕಾಂಗ್ರೆಸ್ ಮಂತ್ರಿಮಂಡಳಗಳು ಆ ಕಾರ್ಯವನ್ನು ಕೈಕೊಂಡ ಮೇಲೆ, ಗವರ್ನರರು, ಆ ಕುರಿತು ಅಸಮ್ಮತಿಯನ್ನು ತೋರಿಸುವುದನ್ನು ಕಂಡರು, ರಾಜಕೀಯ ಕೈದಿಗಳ ಬಿಡುಗಡೆಯ ಸಮಸ್ಯೆ ನಿತ್ಯದ ವ್ಯವಹಾರದ ವಿಚಾರವು ಆ ಕುರಿತು ಗವರ್ನರರೊಡನೆ ಹೆಚ್ಚು ವಿಚಾರಮಾಡಬೇಕಾಗಿಲ್ಲ, ಕಾಂಗ್ರೆಸ್ ಮಂತ್ರಿಮಂಡಳಗಳು ತಮ್ಮ ಕಾರ್ಯ ವೃತ್ತಾಂತವನ್ನು ವರ್ಕಿಂಗ್ ಕಮಿಟಿಗೆ ವರದಿ ಮಾಡಬೇಕಾಗಿ ಬಂದಾಗ, ರಾಜಕೀಯ ಕೈದಿಗಳ ಬಿಡುಗಡೆಗೆ ಉಂಟಾದ ತಡೆಗಳ ಕಾರಣ ತಿಳಿದುಬರಲು, ಅವರು ಕೂಡಲೇ ಅವರ ಬಿಡುಗಡೆಯು ಆಜ್ಞೆಕೊಡಬೇಕು, ಅದಕ್ಕೆ ತಡೆಗಳು ಬಂದರೆ ರಾಜಿ ಕೊಡಬೇಕೆಂದೂ ವರ್ಕಿಂಗ್ ಕಮಿಟಿಯ ಆಜ್ಞೆಯಾಗಿತ್ತು. ಬಿಹಾರಿನ ಮತ್ತು ಯುಕ್ತ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಮಂಡಳಗಳ ವರ್ತನೆಯನ್ನು ಕಾಂಗ್ರೆಸ್ ಕಮಿಟಿಯು ಅನುಮೋದಿಸುತ್ತದೆ ಆ ವರ್ತನೆಗಾಗಿ, ಅವರನ್ನು ಶ್ಲಾಘಿಸುತ್ತದೆ

ರಾಜಕೀಯ ಕೈದಿಗಳ ಈ ಪ್ರಕರಣದಲ್ಲಿ ವೈಸ್ರಾಯರು ಕೈಹಾಕಿದುದರಿಂದಲೆ ಸದ್ಯದ ಸಂದಿಗ್ಧವು ಉಂಟಾದುದ

ಇಷ್ಟು ಅಲ್ಪಾವಧಿಯಲ್ಲೆ ಕಾಂಗ್ರೆಸು ತನ್ನ ಕಾರ್ಯದಕ್ಷತೆಯ ಕುರಿತು, ಅವರ ತ್ಯಾಗಬುದ್ಧಿಯ ಕುರಿತು, ರಚನಾತ್ಮಕ ಕಾರ್ಯಶೀಲತೆಯ ಕುರಿತು, ಆಡಳಿತ ಯೋಗ್ಯತೆಯ ಕುರಿತು, ಒಳ್ಳೆ ಭರವಸೆಗಳನ್ನು ಉಂಟುಮಾಡಿದೆ ಸಾಮಾಜಿಕ ಮತ್ತು ಸಾಂಪತ್ತಿಕ ಕುಂದುಕೊರತೆಗಳನ್ನು ಹೋಗಲಾಡಿಸುವರೆ, ಅವರು ಯೋಗ್ಯ ತರದ ಕಾರ್ಯಕಲಾಪಗಳನ್ನು ನಡೆಯಿಸಿರುವರು ಅವರಿಗೆ ಆ ಕಾರ್ಯದಲ್ಲಿ ಗವರ್ನರರ ಸಹಕಾರವು ಒದಗಿದದ ಪಕ್ಷದಲ್ಲಿಯೂ ನೂತನ ರಾಜ್ಯಾಂಗ ರಚನೆಯಿಂದ ಆದಷ್ಟು ಒಳ್ಳೆತನ ಪಡೆಯಲು ಕಾಂಗ್ರೆಸ ಹೃದ್ಪೂರ್ವಕ ಪ್ರಯತ್ನಗಳನ್ನು ಮಾಡಿರುತ್ತದೆ ತನ್ನ ಧ್ಯೇಯವಾದ ಸ್ವಾತಂತ್ರ್ಯ ಸಾಧನೆಗಾಗಿ, ಒಳ್ಳೆ ಪರಿಶ್ರಮಗಳನ್ನು ನಡೆಸಿದೆ

ಸಂಯುಕ್ತ ಪ್ರಾಂತ್ಯದ ವಿಚಾರದಲಿ, ಬಂಧವಿಮೋಚನೆ ಹೊಂದಿದ ಕಾಕೋರಿ ಮೊಕದ್ದಮೆಯ ರಾಜಕೀಯ ಕೈದಿಗಳ ಬಿಡುಗಡೆಯ ನಂತರ ನಡೆದ ಸಭೆ ಭಾಷಣ ಇತ್ಯಾದಿಗಳು ರಾಜಕೀಯ ಕೈದಿಗಳ ಬಿಡುಗಡೆಯ ಘೋಷಣೆಗೆ ಒದಗಿದ ಅಡ್ಡಿಯಾಯಿತ್ತೆಂದು ವಾದಿಸಲಾಗಿದೆ ಈ ತರದ ಚಟುವಟಿಕೆಗಳನ್ನು ಮಹಾತ್ಮಾಜಿ, ಇತ್ಯಾದಿ ಕಾಂಗ್ರೆಸ್ ಮುಖಂಡರು ತೀವ್ರವಾಗಿ ಖಂಡಿಸಿದ್ದಾರೆ ಆದರಿಂದ ಅವರ ತಮ್ಮ ತಪ್ಪಿತವನ್ನು ತಿಳಿಕೊಂಡವರಾಗಿ ಅವರ ಅಭಿಪ್ರಾಯಗಳು ಸಂಪೂರ್ಣ ಬದಲಾದವು ಇದರ ನಂತರ ಕಾಕೋರಿ ಕೈದಿಗಳೂ ಬ್ಯಾಕಿ ಬಿಡುಗಡೆಯಾಗಲು ಆಗ ಯಾವತತ್ತ್ವ ತರದ ಪ್ರದರ್ಶನ, ಭಾಷಣ ಇತ್ಯಾದಿಗಳೂ ನಡೆಯಲಿಲ್ಲ ಕಾಂಗ್ರೆಸಿನ ಆದರ್ಶಗಳಾದ ಸತ್ಯ ಮತ್ತು ಅಹಿಂಸಾ ನೀತಿಯುಕ್ತವಾದ ಅಸಹಕಾರ ಚಳವಳವನ್ನು ಹೂಡಿ, ಒಂದು ಮಹಾಸಂದಿಗ್ಧವನ್ನು ರಚಿಸುವರೆ ಕಾಂಗ್ರೆಸ್ಸು ಇಚ್ಛಿಸುವುದಿಲ್ಲ ಆದ್ದರಿಂದ ಗವರ್ನರ ಜನರಲರ ವರ್ತನೆಯನ್ನು ಪ್ರತಿಕೂಲಿಸಿ, ಇತರ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜಿಯೀವರೆ ಆಜ್ಞೆಯೀಯಲು ವರ್ಕಿಂಗ್ ಕಮಿಟಿಯು ಸಿದ್ಧವಿಲ್ಲ ಗವರ್ನರಜನರಲರು ತಮ್ಮ ವರ್ತನೆಯ ಕುರಿತು ಸರಿಯಾಗಿ ಪರ್ಯಾಲೋಚಿಸಬೇಕಾಗಿಯೂ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಶಾಸನಕ್ರಮಗಳಿಗೆ ಸರಿಯಾಗಿ, ಗವರ್ನರರು ವರ್ತಿಸುವಂತೆಯೂ, ಮಂತ್ರಿಮಂಡಳಗಳ ಬೋಧನೆಯನ್ನು ಲಾಲಿಸುವಂತೆ ಅವಕಾಶ ಉಂಟಾಗಬೇಕಾಗಿಯೂ, ಈ ಕಮಿಟಿಯು ಇಚ್ಛಿಸುತ್ತದೆ.

' ಜವಾಬ್ದಾರಿಯಿಲ್ಲದ ಮಂತ್ರಿಮಂಡಳಗಳು ರಚನೆಯಾಗುವುದು ಕಾಂಗ್ರೆಸ್ಸು ಸಹಿಸುವುದಿಲ್ಲ ಆ ತರದ ಮಂತ್ರಿಮಂಡಳಗಳ ರಚನೆಯಿಂದ ಬ್ರಿಟಿಷ ಸರಕಾರದ ಮೇಲಿನ ವಿರೋಧ ಭಾವವು ಇನ್ನಷ್ಟು ಬೆಳೆಯುತ್ತದು ಇಂಡಿಯಾ ಸರಕಾರದ ಆಕ್ಟಿನಿಂದ ನಿಜರೂಪವನ್ನು ತಿಳಿಕೊಂಡೆ ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಿದುದು ನೂತನ ಇಂಡಿಯಾ ಆಕ್ಟಿನಿಂದ ಹಿಂದೂದೇಶಕ್ಕೆ ಸ್ವಾತಂತ್ರ್ಯ ಲಭಿಸುವ ಬದಲು,' ಸ್ವಾತಂತ್ರ್ಯವು ಮಾಯವಾಗುವುದೆಂಬುದಾಗಿ ಇದ್ದ ಕಾಂಗ್ರೆಸಿನ ಅಭಿಪ್ರಾಯವು, ವೈಸ್ರಾಯರ ವರ್ತನೆಯಿಂದ ಸ್ಪಷ್ಟವಾಗುತ್ತದೆ. ನೂತನ ಇಂಡಿಯಾ ಆಕ್ಟಿನಿಂದ ಹಿಂದೂದೇಶಕ್ಕೆ ಯಾವ ಪುರುಷಾರ್ಥವು ದೊರಕುವ ಹಾಗಿಲ್ಲ ಪ್ರಾಯಸ್ಥರಿಗೆ ಮತಕೊಟ್ಟು ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿ ರಚನೆಯಾಗಿ ಹಿಂದೂದೇಶಕ್ಕೆ ಬೇಕಾದ ರಾಜಶಾಸನದ ರಚನೆಯಾಗುವ ತನಕ, ಈಗಿನ ಇಂಡಿಯಾ ಆಕ್ಟು ನಾಶವಾಗದ ತನಕ, ಹಿಂದೂದೇಶಕ್ಕೆ ಸ್ವಾತಂತ್ರ್ಯ ಲಭಿಸದು ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಅಧಿಕಾರದಲ್ಲಿರುವುದು ಸಾಧನೆಗಾಗಿಯಾ ಅಧಿಕಾರ ಜೊರನಡೆಯುವುದು

ರಾಜಕೀಯ ಕೈದಿಗಳ ಬಿಡುಗಡೆಯನ್ನು ನಾಲ್ಕು ತಿಂಗಳ ಸಮಯ ಬಾಕಿಯಿದಲು ಇನ್ನೊಂದು ಕಾರಣವಿದೆ ಪ್ರಾಂತ್ಯದಲ್ಲಿ ಲಾ ಎಂಡ್ ಓರ್ಡರಿಗೆ ಮಂತ್ರಿಗಳು ಜವಾಬ್ದಾರರು ಸಂದರ್ಭಾನುಸಾರವಾಗಿ ಆ ಕುರಿತು ಇತ್ಯರ್ಥ ಹೊಂದುವುದು ಮಂತ್ರಿಗಳ ಕೆಲಸ ನಿತ್ಯದ ಆಡಳಿತ ವ್ಯವಹಾರಗಳಲ್ಲಿ ಮಂತ್ರಿಗಳಿಗೆ ತಡೆಗಳುಂಟಾದರೆ, ಅದರಿಂದ ಸ್ಥಿತಿಯು ಕೆಡುವುದು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿ ಕಾಂಗ್ರೆಸ್ ಮಂತ್ರಿಮಂಡಳಗಳು ಸಂಕಲ್ಪ ಮಾಡಿಕೊಂಡು ಕಾರ್ಯಸಾಧನೆಯನ್ನು ಪ್ರಾರಂಭಿಸಿದರು, ಕೈದಿಗಳು ಹಿಂಸಾವಾದದಲ್ಲಿ ತಮಗಿರುವ ವಿಶ್ವಾಸವನ್ನು ತೊರೆದಿರುವರೆಂದು ಭರವಸೆಗಳು ದೊರಕಿದುದರಿಂದ ರಾಜಕೀಯ ಕೈದಿಗಳ ಬಿಡುಗಡೆಮಾಡಬೇಕೆಂದು ನಿರ್ಧರಿಸಲಾಯಿತು

ತನ್ನ ಶಿಸ್ತಿಗೆ ವಿರೋಧವಾಗಿ, ಅಹಿಂಸಾನೀತಿಗೆ ವಿರೋಧ ನಡೆಯುವುದನ್ನ ಕಾಂಗ್ರೆಸ್ಸು ಎಷ್ಟಕ್ಕೂ ಸಹಿಸ ವುದಿಲ್ಲವೆಂಬುದು ಇತ್ತೀಚಿನ ಕೆಲವು ಘಟನಾವಳಿಗಳಿಂದ ವ್ಯಕ್ತವಾಗುತ್ತದೆ ಭಾಷಣಗಳಲ್ಲಿ ಅಶಿಸ್ತು ಹಿಂಸಾಮಯ ವಿಷಯಗಳನ್ನ ಕೂಡಿಸುವುದರಿಂದ ನಮ್ಮ ಕಾರ್ಯಸಾಧನೆಗೆ ವಿಘ್ನ ಒದಗುವುದೆಂದು ಕಾಂಗ್ರೆಸು ಕಾಂಗ್ರೆಸ್ಸಿನವರನ್ನು ಎಚ್ಚರಿಸಿದೆ

ರಾಜಕೀಯ ಕೈದಿಗಳ ಬಿಡುಗಡೆಗಾಗಿ, ಕಾಂಗ್ರೆಸ್ಸು ಅಧಿಕಾರವನ್ನು ತ್ಯಜಿಸಿದೆ ಆದರೆ ಬಿಡುಗಡೆಗಾಗಿ ಹಿಂಸೆಯ ಪ್ರಚಾರದ ಚಳವಳಿಯನ್ನು ಕಾಂಗ್ರೆಸ್ ಸಹಿಸುವುದಿಲ್ಲ ಆದರಿಂದ ಪಂಜಾಬು, ಬಂಗಾಳ ಪ್ರಾಂತ್ಯಗಳಲ್ಲಿ ಹಿಂಸಾವಾದದ ಪ್ರಚಾರವನ್ನ ಹಿಡಿದ ರಾಜಕೀಯ ಕೈದಿಗಳು ಅವುಗಳನ್ನು ತೊರೆಯುವಂತೆ ಕಾಂಗ್ರೆಸು ವಿನಂತಿಮಾಡಿಕೊಳ್ಳುತ್ತದೆ ಕಾಂಗ್ರೆಸ್ ಪ್ರಾಂತ್ಯಗಳಲ್ಲಿನ ಮತ್ತು ಇತರ ಪ್ರಾಂತ್ಯಗಳಲ್ಲಿನ ರಾಜಕೀಯ ಕೈದಿಗಳ ಬಿಡುಗಡೆಯ ಬಗ್ಗೆ ಕಾಂಗ್ರೆಸ್ಸು ಶಾಂತವಾದ ಮತ್ತು ನ್ಯಾಯವಾದ ಪರಿಶ್ರಮವನ್ನು ನಡೆಯಿಸುವುದು

ಈಗ ಉಂಟಾದ ಸಂದಿಗ್ಧ ಸ್ಥಿತಿಗೆ ಸರಿಯಾಗಿ ತಮಗೆ ಅವಶ್ಯ ತೋರಿದ ರೀತಿಯಲ್ಲಿ ಕಾರ್ಯಸಾಧನೆಯನ್ನು ಕಲ್ಪಿಸಿ, ಅದನ್ನು ನಡೆಯಿಸಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಪೂರ್ಣ ಅಧಿಕಾರ ಕೊಡಲಾಗಿದೆ

### ಕಾಂಗ್ರೆಸ್ಸಿಗೆ ಪೂರ್ಣ ಬೆಂಬಲ.

ಮಂಗಳೂರು ನಗರ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಸ್ಥಳೀಯ ಮೈದಾನದಲ್ಲಿ ಪ್ರಚಂಡ ಸಭೆಯೊಂದು ತಾ ೨೧ರಲ್ಲಿ ಜರಗಿ, ಹರಿಪುರದಲ್ಲಾಗುವ ಠರಾವುಗಳಿಗೆ ಪೂರ್ಣ ಸಮ್ಮತವನ್ನು ಸೂಚಿಸಿಯೂ, ಕಾಂಗ್ರೆಸ್ಸಿನಲ್ಲಿ ಪೂರ್ಣ ವಿಶ್ವಾಸವಿರುವುದೆಂಬ ಅಭಿಪ್ರಾಯದ ಠರಾವು ಮಾಡಲಾಯಿತು ಇಲ್ಲಿಗೆ ಕೆಲವು ದಿವಸ ಗಳಿಗಾಗಿ ಚಿಕಿತ್ಸೆಗಿದ್ದ ಶ್ರೀ ಎ ಬಿ ಶೆಟ್ಟಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕಾಂಗ್ರೆಸು ಬಹಳ ಬಲತೊಂದಿದೆ ಅದು ಸಮಸ್ತ ಲೋಕದ ದೃಷ್ಟಿಗೋಚರಕ್ಕೆ ಬಂದಿರುತ್ತದೆಂಬುದಾಗಿ ಅಭಿಪ್ರಾಯವುಳ್ಳ ಅನೇಕರ ಭಾಷಣಗಳು ಆದುವು, ಬಿಹಾರ್ ಮತ್ತು ಯುಕ್ತ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳ ವ್ಯವಹಾರದಲ್ಲಿ ವೈಸ್ರಾಯರು ಕೈಹಾಕಿದುದನ್ನು ಖಂಡಿಸಿ ಶ್ರೀ ಶೆಟ್ಟಿಯವರು ಗಂಭೀರವಾದ ಭಾಷಣವನ್ನು ಮಾಡಿದರು ಅಧಿಕಾರ ಸ್ವೀಕಾರದಿಂದ ಕಾಂಗ್ರೆಸ್ಸಿನ ಬಲವು ಬಹಳವಾಗಿ ವೃದ್ಧಿಯಾಗಿರುವುದೆಂದೂ ಅಭಿಪ್ರಾಯಪಡಲಾಯಿತು,

ಶ್ರೀ ಶೆಟ್ಟಿ ಅಧ್ಯಕ್ಷಭಾಷಣದೊಂದಿಗೆ ಸಭೆಯು ವಂದೇ ಮಾತರಂ ಗೀತೆಯೊಂದಿಗೆ ಮುಕ್ತಾಯವಾಯಿತು.

# ಮಂಗಳೂರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

### ಪ್ರಾಂತೀಯ ವಿದ್ಯಾಪರಿಷತ್ತು ಮತ್ತು ಪ್ರದರ್ಶನ.

ಬರುವ ಮೇ ತಿಂಗಳ ಮೊದಲನೆಯ ವಾರದಲ್ಲಿ ಮಂಗಳೂರಲ್ಲಿ ಜರಗಲಿಕ್ಕಿರುವ ಮದ್ರಾಸು ಪ್ರಾಂತೀಯ ವಿದ್ಯಾ ಪರಿಷತ್ತಿನ ಸಭೆಯು ಒಂದು ವಿದ್ಯಾ ಪ್ರದರ್ಶನವನ್ನು ಕೂಡ ಜರಗಿಸಬೇಕೆಂದು ಸ್ವಾಗತಮಂಡಳಿಯವರು ನಿರ್ಣಯಿಸಿರುತ್ತಾರೆ, ಇದು ಮದ್ರಾಸು ಪ್ರಾಂತೀಯ ವಿದ್ಯಾ ಪ್ರದರ್ಶನವಾದರೂ ಮಂಗಳೂರಲ್ಲಿ ಜರಗುವುದಾದ ಕಾರಣ, ದಕ್ಷಿಣ ಕನ್ನಡ ಜಿಲ್ಲೆಯವರೇ ಇದನ್ನು ಯಶಸ್ವಿಯಾಗುವಂತೆ ಮಾಡುವದೆ ಹೆಚ್ಚಿನ ಜವಾಬ್ದಾರರಾಗಿರುತ್ತಾರೆ ವಿದ್ಯೆಯ ಮಟ್ಟಿಗೆ ದಕ್ಷಿಣ ಕನ್ನಡವು ದಕ್ಷಿಣ ಹಿಂದೂಸ್ಥಾನದಲ್ಲಿ ಬಹಳ ಮುಂದುವರಿದ ಜಿಲ್ಲೆಯೆಂದು ಕೀರ್ತಿಯನ್ನು ಪಡೆದಿರುವುದು ಈ ಪ್ರದರ್ಶನವು ಉತ್ತಮ ಸ್ಥಿತಿಯಾಗದಿದ್ದರೆ ಇತರ ಜಿಲ್ಲೆಯವರಿಗೆ ಈ ಜಿಲ್ಲೆಯ ಮೇಲಿದ್ದ ಗೌರವಾದರಗಳು ಕಡಿಮೆಯಾಗುವವು, ಆದ್ದರಿಂದ ಜಿಲ್ಲೆಯ ಶಾಲೆಗಳು ಮತ್ತು ಅಧ್ಯಾಪಕರ ಮೇಲಿನ ಜವಾಬ್ದಾರಿಯು ಮತ್ತಷ್ಟು ಹೆಚ್ಚಿಗೆ ಇರುತ್ತದೆ, ಪ್ರದರ್ಶನಕ್ಕೆ ಕಳುಹಿಸುವ ವಸ್ತುಗಳು ಸಾಮಾನ್ಯ ಎಲ್ಲಾ ಪ್ರದರ್ಶನಗಳಲ್ಲಿ ಕಂಡುಬರುವ ಸಾಮಾನುಗಳು, ಚಾರ್ಟುಗಳು, ನೋಡಲಾದುವು ಆಗಿರದೆ, ಶಾಲೆಗಳಲ್ಲಿ ಕಲಿಸುವುದಕ್ಕೆ ನಿಜವಾದ ಸಹಾಯವಾಗುವಂತಹವುಗಳಾಗಿರಬೇಕು ಅಲ್ಲದೆ ಈಗ ಎಲ್ಲೆಲ್ಲಿಯೂ ಚರ್ಚಿಸುತ್ತಲಿರುವ ವಾರ್ಧಾ ವಿದ್ಯಾ ಸಮಿತಿಯ ಯೋಜನೆಯು ಎಷ್ಟರಮಟ್ಟಿಗೆ ಕಾರ್ಯಗತವಾಗುವುದು ಎಂಬೀ ವಿಚಾರ ನಮ್ಮ ಜಿಲ್ಲೆಯಲ್ಲಿ ಕೈಕೊಳ್ಳಬಹುದಾದ ಚಿಕ್ಕ ಕೈಗಾರಿಕೆಗಳ ಕುರಿತು ಅನುಭವ ಕೊಡುವಂತಹ ಲೇಖಗಳು ವಸ್ತುಗಳು ಅವುಗಳನ್ನು ತಯಾರಿಸುವ ವಿವಿಧ ವಿಧಾನಗಳು, ಇವುಗಳನ್ನು ತೋರಿಸುವ ವಸ್ತುಗಳನ್ನು ಪ್ರದರ್ಶಿಸಿದರೆ ಬಹಳ ಪ್ರಯೋಜನವಾಗುವುದು ಅದಕ್ಕಾಗಿ ಜಿಲ್ಲೆಯ ಹೈಸ್ಕೂಲುಗಳು ಈಗ ಉಳಿದಿರುವ ಎರಡು ತಿಂಗಳುಗಳಲ್ಲಿ ತಮಗೆ ಸಾಧ್ಯವಿದ್ದಷ್ಟು ವಾರ್ಧಾ ಸಮಿತಿಯ ಯೋಜನೆಯ ಮೇರೆಗೆ ... ಕೆಲಸ ... ಕೆಲಸ ... ಫಲಿತಾಂಶವನ್ನು ಪ್ರದರ್ಶನಕ್ಕೆ ಕಳುಹಿಸಬೇಕೆಂದು ...

ಪ್ರದರ್ಶನಕ್ಕೆ ... ವಸ್ತುಗಳು ಪ್ರದರ್ಶನ ... ವರೆಗೆ ... ಮೂಲಕ ... ಸಿಗುವುದು.

**ಉಡುಪಿ ಗೋವಿಂದ ರಾವ್,**

ಸ್ವಾಗತ ಮಂಡಳಿ ಪ್ರಾಂತೀಯ ವಿದ್ಯಾಪರಿಷತ್ತು

13 2 38 ಮಂಗಳೂರು

### ಜಿಲ್ಲಾ ಎಜ್ಯುಕೇಶನಲ್ ಸಂಘದ ಸಭೆ

ಮೊಂದು ಕೆಲವು ದಿವಸಗಳ ಹಿಂದೆ ಜರಗಿದ ವಿದ್ಯಾ ... ಯೋಜನೆ ... ಶಾಲೆಗಳನ್ನು ... ಬಗ್ಗೆ ... ಅರ್ಜಿಗಳ ಕುರಿತು ... ಹಿಂತೆಗೆಯಬೇಕೆಂದು ಬಂದ ಜಿಲ್ಲಾ ... ಶಿಫಾರಸ್ಸಿನ ವಿಷಯವು ಚರ್ಚೆಗೆ ಬಂದು ಶ್ರೀ ... ಯವರು ಅದನ್ನು ವಿರೋಧಿಸಿದರು ... ರನ್ನು ... ವಿದ್ಯಾರ್ಥಿಗಳ ... ಕಡಿಮೆಯಾದುದರಿಂದ ... ಇತ್ಯರ್ಥವಾಯಿತು ನಂತರ ... ಚರ್ಚೆ ನಡೆದು ಆ ಬಗ್ಗೆ ... ಶ್ರೀ ... ತೆಗೆದುಕೊಳ್ಳಲಿಲ್ಲ ಹೀಗೆ ಅನೇಕ ವಿಷಯಗಳ ಕುರಿತು ಚರ್ಚೆ ನಡೆದು ... ವಂದನೆಯೊಂದಿಗೆ ಸಭೆ ಮುಕ್ತಾಯವಾಯಿತು

### ಮಹಾಶಿವರಾತ್ರಿ—ಸೆಕ್ಷನ್ 144 ಜ್ಯಾರಿ

ಸ್ಥಳೀಯ ಶ್ರೀ ಗೋಕರ್ಣನಾಥ ದೇವಸ್ಥಾನದ ಆಡಳಿತ ಕಮಿಟಿಗೂ ಅದರ ಭಜನಾಮಂಡಳಿಯವರಿಗೂ ಇರುವ ವೈಮನಸ್ಯದಿಂದ ಶಿವರಾತ್ರಿಯ ಸಮಯ ಗಲಿಬಿಲಿ ಉಂಟಾಗಬಹುದೆಂದು, ಭಜನಮಂಡಳಿಯು ... ಎಂಬವರು ದೇವಸ್ಥಾನದಲ್ಲಿ ಯಾ ದೇವಸ್ಥಾನದ ಸುತ್ತಲೂ ಭಜನೆ ಇತ್ಯಾದಿಗಳನ್ನು ನಡೆಯಿಸಬಾರದಾಗಿ ನಿರ್ಬಂಧಹಾಕಿರುವ ... ಕ್ರಿಮಿನಲ್ ಅಧಿಕಾರದಿಂದ ಜ್ಯಾರಿ ...

# ರಾಷ್ಟ್ರಪತಿ ಸುಭಾಷಚಂದ್ರ ಬೋಸರು.

1897ರಲ್ಲಿ ಜನವರಿ 23ನೇ ತಾರೀಕಿನ ದಿನ ಸುಭಾಸಚಂದ್ರ ಭೋಸರು ಜನ್ಮವೆತ್ತಿದರು. ಶಾಲೆಯಲ್ಲಿ ಯಾವಾಗಲೂ ಅವರು ತನ್ನ ತರಗತಿಯಲ್ಲಿ ಪ್ರಥಮ ಸ್ಥಾನವನ್ನು ಪಡೆಯುತ್ತಿದ್ದರು. ಬರೇ 14 ವರ್ಷ ಪ್ರಾಯದಲ್ಲಿ ಅವರು ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರಿಂದ ಆಕರ್ಷಿಸಲ್ಪಟ್ಟು, ತಾನೂ ಒಬ್ಬ ಸನ್ಯಾಸಿಯಾಗುವೆನೆಂದು ನಿಶ್ಚೈಸಿದರು.

1913ರಲ್ಲಿ, ಪ್ರೆಸಿಡೆನ್ಸಿ ಕಾಲೇಜಿನಲ್ಲಿದ್ದಾಗ ತನ್ನಂತೆಯೆ ವಿರಕ್ತರಾದ ಕೆಲವು ಮಂದಿ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ರಾಮಕೃಷ್ಣ ಪರಮಹಂಸರ ಬೋಧನೆಗಳಿಗನುಸಾರವಾಗಿ ಜೀವನವನ್ನು ನಡೆಸಬೇಕಾಗಿ ಅವರು ಚರ್ಚಿಸತೊಡಗಿದರು ಮಾತ್ರವಲ್ಲ, ಮರುವರ್ಷವೇ ಮನೆಯನ್ನು ಬಿಟ್ಟು, ಗುರುವನ್ನು ಹುಡುಕುತ್ತಾ ಉತ್ತರಹಿಂದುಸ್ಥಾನದ ಅನೇಕ ಪವಿತ್ರ ಸ್ಥಳಗಳನ್ನು ಸಂದರ್ಶಿಸಿದರು ಆದರೆ ಈ ಕಾರ್ಯದಲ್ಲಿ ಅವರು ಕೃತಕೃತ್ಯರಾಗದೆ ಮನೆಗೆ ಹಿಂದಿರುಗಿದರು

ಇಂಟರಮಿಡಿಯಟಿನಲ್ಲಿ ತೇರ್ಗಡೆಹೊಂದಿದ ನಂತರ ಅವರು ಮಿಮಾಂಸೆಯನ್ನು ಅಧ್ಯಯನ ಮಾಡತೊಡಗಿದರು ಆಗ ತನ್ನ ತರಗತಿಯ ಮುಖಂಡರು ಅವರಾಗಿದ್ದರು 1916ರಲ್ಲಿ ವಿದ್ಯಾರ್ಥಿಗಳ ಅದೊಂದು ಮುಷ್ಕರದಲ್ಲಿ ಭಾಗ ವಹಿಸಿದ್ದಕ್ಕಾಗಿಯೂ, ಉಪಾಧ್ಯಾಯರೊಬ್ಬರಿಗೆ ಅವಮಾನಮಾಡಿದ್ದಕ್ಕಾಗಿಯೂ ಸುಭಾಷರನ್ನು ವಿದ್ಯಾಲಯದಿಂದ ಹೊರಡಬ್ಬಿದರು ಎರಡು ವರ್ಷಗಳನ್ನು ವ್ಯರ್ಥವಾಗಿ ಕಳೆದ ನಂತರ ಅವರಿಗೆ ಪುನಃ ಸ್ಕಾಟಿಶ್ ಚರ್ಚಿನ ಕಾಲೇಜಿನಲ್ಲಿ ಪ್ರವೇಶವು ದೊರಕಿತು ಅಲ್ಲಿ ಅವರು ತನ್ನ ಬಿ ಎ ಡಿಗ್ರಿಯನ್ನು ಪಡೆಕೊಂಡರು ಬಿ ಎ ಯಲ್ಲಿ ಪ್ರಥಮ ಶ್ರೇಣಿಯಲ್ಲಿ ಅವರು ಉತ್ತೀರ್ಣರಾಗಿದ್ದರು

ಬಿ ಎ ಆದ ನಂತರ ಕೆಲವು ತಿಂಗಳುಗಳ ತನಕ ಅವರು ಜೀವನ ತತ್ವವಿಜ್ಞಾನ (Psychology)ವನ್ನು ಅಧ್ಯಯನಮಾಡಿ, ಆಕಸ್ಮಾತ್ತಾಗಿ ಐ ಸಿ ಎಸ್ ಪರೀಕ್ಷೆಯನ್ನು ಕೊಡಲು ಇಂಗ್ಲಾಂಡಿಗೆ ಹೊರಟುಹೋದರು ಎಂಟು ತಿಂಗಳುಗಳ ಶಿಕ್ಷಣವನ್ನು ಹೊಂದಿ ಪವರು ಐ. ಸಿ ಎಸ್ ಪರೀಕ್ಷೆಗೆ ಕುಳಿತು ನಾಲ್ಕನೇ ಸ್ಥಾನವನ್ನು ಪಡೆದರು ಪಾಸಾದ ಒಂದೇ ವರ್ಷದೊಳಗಾಗಿ ಅವರು ತನ್ನ ಉಚ್ಚ ಸ್ಥಾನಕ್ಕೆ ರಾಜಿನಾಮೆಯನ್ನಿತ್ತು, ಮಾತೃಭೂಮಿಯ ಸೇವೆಯನ್ನು ಕೈಕೊಂಡರು

ಭಾರತಕ್ಕೆ ಬಂದೊಡನೆ ಅವರು ಮಹಾತ್ಮ ಗಾಂಧಿಯವರನ್ನು ಕಂಡು, ಅವರ ಪ್ರೇರಣೆಯ ಮೇರೆಗೆ ಸಿ ಆರ್ ದಾಸರನ್ನು ಕಂಡರು ಕೆಲಸಮಯ ಅವರು ನೇಶನಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು ನಂತರ ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರಕಟನಾ ಶಾಖೆಯ ಉದ್ಯೋಗಸ್ಥರಾಗಿ ನೇಮಿಸಲ್ಪಟ್ಟರು ಕೆಲವು ತಿಂಗಳುಗಳ ನಂತರ ಪ್ರಿನ್ಸ್ ಒಫ್ ವೇಲ್ಸರ ಆಗಮನದ ಸಮಯದಲ್ಲಿ ನಡೆದ 'ಹರತಾಲ'ದಲ್ಲಿ ಪ್ರಮುಖ ಭಾಗವನ್ನು ವಹಿಸಿದರು ಇದರಿಂದಾಗಿ ಕಾಂಗ್ರೆಸ್ ಸ್ವಯಂಸೇವಕರು ಸರಕಾರದವರಿಂದ ನಿಷೇಧಿಸಲ್ಪಟ್ಟು, ದೇಶಬಂಧುದಾಸ, ಸುಭಾಸಚಂದ್ರ ಮೊದಲಾದ ಪ್ರಮುಖರ ದಸ್ತಗಿರಿಮಾಡಲಾಯಿತು

ಎಂಟು ತಿಂಗಳುಗಳ ಕಾರಾಗೃಹವಾಸವನ್ನು ಅನುಭವಿಸಿದ ಬಳಿಕ 1922ರಲ್ಲಿ ಭೋಸರನ್ನುಬಿಡುಗಡೆಮಾಡಲಾಯಿತು ಒಡನೆ ಅವರು ಉತ್ತರ ಬಂಗಾಳದಲ್ಲಿ ನೆರೆಯ ಹಾವಳಿಗೆ ತುತ್ತಾದವರಿಗೆ ಸಹಾಯವನ್ನು ಒದಗಿಸುವ ಕಾರ್ಯವನ್ನು ಕೈಕೊಂಡು ತುಂಬಾ ಕೆಲಸ ಮಾಡಿದರು ಆ ಸಮಯದಲ್ಲಿ ಅವರ ಈ ಕೆಲಸವನ್ನು ಜನರು ಮೆಚ್ಚಿದುದಲ್ಲದೆ, ಆಗಿನ ಗವರ್ನರರು ಕೂಡ ತುಂಬಾ ಶ್ಲಾಘಿಸಿರುವರು 1922ರಲ್ಲಿ ಗಯೆಯಲ್ಲಿ ನಡೆದ ಕಾಂಗ್ರೆಸಿನ ಅಧ್ಯಕ್ಷಸ್ಥಾನವನ್ನು ವಹಿಸಿದ ದೇಶಬಂಧು ದಾಸರ ನೇತೃತ್ವದಲ್ಲಿ ಅಂಥು ಸ್ವರಾಜ್ಯಪಾರ್ಟಿಯು ತಲೆಯೆತ್ತಿತು. ಈ ಪಾರ್ಟಿಯನ್ನು ಬಲಪಡಿಸುವ ಕಾರ್ಯದಲ್ಲಿ ಸುಭಾಸರು ತುಂಬಾ ಶ್ರಮವಹಿಸಿದರು 1923ರಲ್ಲಿ ದೇಶಬಂಧುಗಳ ಅಪೇಕ್ಷೆಯ ಮೇರೆಗೆ ಅವರು 'ಫೊರ್‍ವರ್ಡ' ಎಂಬ ಪತ್ರಿಕೆಯನ್ನು ಹೊರಡಿಸಿದರು. ಅದರ ಮೇಲೆ ಸರಕಾರದವರು 1,50,000 ರೂಪ್ಯಾಗಳಷ್ಟು ದಂಡನೆಯನ್ನುವಿಧಿಸಿದೊಡನೆ ಭೋಸರು ಎದೆಗುಂದದೆ ಮರುದಿನವೇ 'ದಿ ನ್ಯೂ ಫೊರ್‍ವರ್ಡ' ಎಂಬ ಪತ್ರಿಕೆಯನ್ನು ಹೊರಡಿಸಿದರು. ಅದರ ಮೇಲೂ ಸರಕಾರದ ವಕ್ರದೃಷ್ಟಿಯು ಬಿದ್ದೊಡನೆ ಮರುದಿನವೇ 'ಲಿಬರ್ಟಿ' ಎಂಬ ಹೊಸತೊಂದು ಪತ್ರಿಕೆಯು ಅವರ ನೇತೃತ್ವದಲ್ಲಿ ಹೊರಬಿತು

### ಕಲ್ಕತ್ತಾ ಕೊರ್ಪರೇಶನಿನಲ್ಲಿ ಕೆಲಸ

ಕಲ್ಕತ್ತಾ ಕೊರ್ಪರೇಶನು ಕಾಂಗ್ರೆಸ್ ಪಾರ್ಟಿಯ ಅಧಿಕಾರಕ್ಕೆ ಒಳಗಾದೊಡನೆ, ಭೋಸರು ಅದರ ಪ್ರಧಾನ ಕಾರ್ಯನಿರ್ವಾಹಕ ಉದ್ಯೋಗಸ್ಥರಾಗಿ ಆರಿಸಲ್ಪಟ್ಟರು. ಈ ಹುದ್ದೆಯಲ್ಲಿ ತಾನು ಬರೇ 6 ತಿಂಗಳುಗಳ ತನಕ ಇದ್ದೆನಾದರೂ ಬೋಸರು ಆ ಅಲ್ಪಾವಧಿಯಲ್ಲಿಯೇ ಅನೇಕ ಮಹತ್ಕಾರ್ಯಗಳನ್ನು ಮಾಡಿದರು ಅಷ್ಟರಲ್ಲಿ 1924ನೇ ಅಕ್ಟೋಬರ ತಿಂಗಳಲ್ಲಿ ಅವರನ್ನು ಅಯಾಚಿತ್ತಾಗಿ ಕೈದುಮಾಡಲಾಗಿ ಅವರನ್ನು ಮಾಂಡಲೇ ದ್ವೀಪಗಳಿಗೆ ಸಾಗಿಸಲಾಯಿತ 1927ರಲ್ಲಿ ಅವರನ್ನು ಪುನ ಸ್ವದೇಶಕ್ಕೆ ತರಲಾಗಿ ಅನಾರೋಗ್ಯದ ಕಾರಣದಿಂದ ಬಿಡುಗಡೆಮಾಡಲ್ಪಟ್ಟರು

1927 29ರ ತನಕ ಸುಭಾಸಚಂದ್ರರು ಬಂಗಾಲ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳೂ ಆಗಿದ್ದರು 1930ರಲ್ಲಿ ಅವರನ್ನು ಕೈದುಮಾಡಿ 9 ತಿಂಗಳ ಕಠಿಣಸಜೆಗೆ ಗುರಿಮಾಡಲಾಯಿತು ಸೆರೆಮನೆಯಲ್ಲಿರುವಾಗ ಅವರನ್ನು ಜನರು ಕಲ್ಕತ್ತೆಯ ಮೇಯರರಾಗಿ ಚುನಾಯಿಸಿದರು ಒಡನೆ ಸರಕಾರದವರು ಅವರನ್ನು ಬಿಟ್ಟು ಬಿಟ್ಟು, ನಾಲ್ಕು ತಿಂಗಳುಗಳ ನಂತರ ಪುನಃ ಕಾರಾಗವಾಸಕ್ಕೆ ಗುರಿಮಾಡಿದರು ಗಾಂಧಿ ಇರ್ವಿನ್ ಒಪ್ಪಂದದ ಸಮಯದಲ್ಲಿ ಅವರನ್ನು ಬಿಡುಗಡೆ ಮಾಡಲಾಗಿ, ಒಪ್ಪಂದದ ಮಾತುಕತೆಗಳು ನಡೆಯುತ್ತಿರುವಾಗಲೆ ಎರಡು ಬಾರಿ ದಸ್ತಗಿರಿಮಾಡಲ್ಪಟ್ಟರು

### ಯೂರೋಪು ಪ್ರವಾಸ

1932ನೆಯ ಆದಿಯಲ್ಲಿ ಭೋಸರು ಪುನಃ ಕೈದುಮಾಡಲ್ಪಟ್ಟು 1933ನೆಯ ಫೆಬ್ರವರಿ ತನಕ ಜೈಲಿನಲ್ಲಿ ಅವರ ಆರೋಗ್ಯವು ಕೆಟ್ಟಿತು ಆಗ ಸರಕಾರದವರು ಶಮನೆಗಾಗಿ ಅವರಿಗೆ ಯೂರೋಪಿಗೆ ಹೋಗಲು ಅನುಮತಿಯನ್ನು ಕೊಟ್ಟರೂ, ಹೆತ್ತವರ ಕೂಡೆ ಮಾತನಾಡಿ ಆಶೀರ್ವಾದಗಳನ್ನು ಪಡೆದು ಹೋಗಲು ಬಿಡಲಿಲ್ಲ 1934ರಲ್ಲಿ ತಂದೆಗೆ ಕಠಿಣ ಕಾಯಿಲೆಯೆಂದು ತಂತಿ ಬಂದೊಡನೆ, ಅವರು ವಿಮಾನದಲ್ಲಿ ಪ್ರಯಾಣವನ್ನು ಬೆಳೆಸಿ ತಂದೆಯ ಮುಖವನ್ನು ಅಂತ್ಯಕಾಲದಲ್ಲಿ ಕಾಣಬೇಕೆಂಬ ಆತುರದಿಂದ ಬಹುಬೇಗನೆ ಕಲ್ಕತ್ತೆಯನ್ನು ಸೇರಿದರು ಆದರೆ ದುರ್ವಿಧಿ! ಸ್ವದೇಶದಲ್ಲಿ ಕಾಲಿಟ್ಟೊಡನೆ ಅವರ ಆ ಕಾಲುಗಳಿಗೆ ಪುನ ಬೇಡಿಗಳು ಜಡಿಯಲ್ಪಟ್ಟವು ತಂದೆಯನ್ನು ಕಾಣಬಂದ ಅವರಿಗೆ ಕಾರಾಗೃಹವಾಸದ ದರ್ಶನವೇ ಲಾಭವಾಯಿತು ಒಂದು ತಿಂಗಳ ನಂತರ ಅವರು ಅನಾರೋಗ್ಯದ ದೆಸೆಯಿಂದ ಪುನಃ ಯೂರೋಪಿಗೆ ಪ್ರವಾಸವನ್ನು ಬೆಳೆಸಿದರು

ಆಶ್ರಿತ ರಾಜ್ಯಗಳ ಕುರಿತು ಕಾಂಗ್ರೆಸ್ಸಿನ ಧೋರಣೆಯು ವಿಷಯ, ಸ್ವಾತಂತ್ರ್ಯಕ್ಕಾಗಿ ನಮ್ಮ ಚಳವಳವು ಎಲ್ಲಾ ಆಶ್ರಿತ ರಾಜ್ಯಗಳಲ್ಲಿ ನಡೆಯಬಹುದಿಲ್ಲ ಆದರೆ ಕಾಂಗ್ರೆಸ್ಸಿನ ಹೆಸರಿನಿಂದ ಸಫಲಕರಣೆ ನಡೆಯುವುದ ನಾವೆಂದಿಗೂ ಸಹಿಸುವುದಿಲ್ಲ ಆಶ್ರಿತ ರಾಜ್ಯಗಳಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯಹೋರಾಟದೊಡನೆ ಕಾಂಗ್ರೆಸ್ಸಿನ ಸಹಾನುಭೂತಿ ಇದೆ ಸಾಧ್ಯವಾದ ಕಡೆ ಅದು ಅವುಗಳಿಗೆ ಆಧಾರವನ್ನು ಕೊಟ್ಟಿರುತ್ತದೆ ಆಶ್ರಿತ ರಾಜ್ಯಗಳು, ಕಗ್ಗತ್ತಲೆ ಸ್ಥಳಗಳು, ಅಲ್ಲಿ ವಿಚಿತ್ರ ಘಟನೆಗಳು ನಡೆಯುತ್ತವೆ ಕೆಲವರು ಕುರುಹುಗಳನ್ನು ಕೂಡ ಬಿಡದೆ ಮಾಯವಾಗುತ್ತಾರೆ

ಕಾಂಗ್ರೆಸ್ ಮಂತ್ರಿಮಂಡಳಗಳ ಕಾರ್ಯಗಳ ಕುರಿತು ವಿಮರ್ಶಿಸುತ್ತ "ಮಹಾ ತೊಂದರೆಗಳಿದ್ದಾಗ್ಯೂ ಕೂಡ, ಕಾಂಗ್ರೆಸ್ ಮಂತ್ರಿಮಂಡಳಗಳು ಪ್ರಶಂಸನೀಯ ರೀತಿಯಲ್ಲಿ ಕಾರ್ಯ ನಡೆಯಿಸಿರುವರು"

### ಕೃತಜ್ಞತೆಯಿಲ್ಲದ ಕೆಲಸ

ಮುಂದುವರಿದು, "ನವರಾಜ ಶಾಸನದಲ್ಲಿ ಅನೇಕ ತೊಂದರೆಗಳಿವೆ ಅವಕಾಶವಿದೆ ಈ ವಿಷಯುಮಾತ್ರ ಬೆಳಕಿಗೆ ಬರುವುದಿಲ್ಲ ಅದರಿಂದಲೆ ಸಮಯವಿಳಂಬನೆಯಾಗುತ್ತದೆ-ಸಾರ್ಥಕ ತರದ ಕೆಲಸಗಳಿಗೆ ಅಡ್ಡಿಯಾಗುತ್ತದೆ. ಕಾಂಗ್ರೆಸ್ಸು ಮಾಡಬೇಕೆಂದಿರುವ ಮಹಾ ಮಾರ್ಪಾಟುಗಳಿಗೆ ಅವಕಾಶ ಮಾಡಿಕೊಡುವವರು,—ಹಳೆಯ ಅಧಿಕಾರ ವರ್ಗವಲ್ಲ. ಈ ತರದ ತೊಂದರೆಗಳ ಎದುರು ಉಪಯುಕ್ತ ಕೆಲಸಗಳನ್ನು ಮಾಡುವದೆ ನಮ್ಮ ಮಂತ್ರಿಮಂಡಲಗಳಿಗೆ ಸಾಧ್ಯವಿಲ್ಲ,—ಇದರಿಂದ ನಮ್ಮ ಮಂತ್ರಿಗಳು ವಿಶಿಯುಳ್ಳ ಕೆಲಸವನ್ನು ಮಾಡಬೇಕಾಗಿದ ಈ ಕಾರ್ಯಭರದಲ್ಲಿ ಅವರು ದಣಿಯುತ್ತಿರುವರು ಅವರೊಡನೆ ನಮ್ಮ ಸಂಪೂರ್ಣ ಚಿಂತನೆಯು ಇರಬೇಕು

### ಪಕ್ಷ ಕಲಹಗಳು

ಸಾಮಾಜಿಕ ಕಲಹಗಳು ಮತ್ತು ಕಾಂಗ್ರೆಸ್ಸು ಈ ವಿಚಾರ,-ಕಾಂಗ್ರೆಸ್ಸಿನೊಳಗೆ ಪಕ್ಷವಾಗಲು ಕುತೂಹಲವು ಹೆಚ್ಚಿರುವುದು -ನಮ್ಮ ಮಹಾ ಜಯವೆಂದು ನಾವೆಣಿಸಬೇಕು ಹೀಗಿಲ್ಲದಿದ್ದರೆ ನಮ್ಮ ಧ್ಯೇಯಸಾಧನೆಗೆ ಮಹಾ ಹಾನಿಯು ಒಂದೊದಗುವುದು. ಕಾಂಗ್ರೆಸ್ಸಿನೊಳಗೆ, ಎಡ, ಬಲ ಮಧ್ಯ ಇತ್ಯಾದಿ ಪಕ್ಷಗಳ ಉಪಾಂಗ ಕಲಹಗಳು ನಡೆಯುವುದರಲ್ಲಿ ಸ್ವಾರ್ಥಪ್ರಯತ್ನಾರ್ಥವಿದೆ ಸತ್ಯ ಮತ್ತು ಅಹಿಂಸಾ ನೀತಿಗಳನ್ನು ಎಂದೆಂದಿಗೂ ಮರೆಯಬಾರದು, ನಮ್ಮ ಆದರ್ಶಗಳಿಗೆ, ನಮ್ಮ ದೃಢಶ್ರದ್ಧೆಗೆ ಹಾನಿಕರವ ರಾಜಕೀಯದಿಂದ ಯಾವತರದ ಲಾಭವಾಗುವದೆ?

### ಕೋಮುವಾರುತನ

ಈ ಕುರಿತು ಪಂಡಿತ ನೆಹರೂಗಳವರು, ವಿಚಾರಪೂರ್ವ ವಿಮರ್ಶೆಯನ್ನು ಮಾಡುವರು ಈ ವಿಷಯದ ಕೊನೆಯ ಭಾಗದಲ್ಲಿ, "ವಿಚಿತ್ರತರದ ಮತ್ತು ತೊಂದರೆಯ ಯುಕ್ತಿಯ ಕೋಮುವಾರುತನವು, ತಕ್ಕನೆ ಹುಟ್ಟಿದುದು ನಾವು ಕಂಡಿರುವೆವು. ಮುಸ್ಲಿಮ ಲೀಗಿನವರು ಸಂಪೂರ್ಣ ಸ್ವಾತಂತ್ರ್ಯವನ್ನು ತಮ್ಮ ಧ್ಯೇಯವನ್ನಾಗಿ ಮಾಡಿದುದರಲ್ಲಿ ನಮಗೆ ಸಂತೋಷವಿದೆ ಮುಸ್ಲಿಮರಲ್ಲಿ ರಾಜಕೀಯ ಜ್ಞಾನವುಂಟಾದುದರಿಂದ ನಮಗೆ ಸಂತೋಷವಾಗಿರುತ್ತದೆ. ಈ ಕಾರಣದಿಂದಲೆ ಅನೇಕ ಮುಸ್ಲಿಮರು ಕಾಂಗ್ರೆಸ್ಸಿನ ಹೊರಗೆ ಕಾರ್ಯ ನಡೆಯಿಸುತ್ತಿರುವಲ್ಲಿ ನಮಗೆ ತುಂಬಾ ಸಮಾಧಾನವಿದೆ ಆದರೆ ಈ ತರದ ಜನರು ಕೋಮುವಾರುತನವನ್ನು ಹೊರಡಿಸಿದುದಕ್ಕೆ ತುಂಬಾ ವಿಷಾದಿಸುತ್ತೇವೆ ಕಾರಣ ವಿಭಜನೆಯು ಒಂದು ಮಹಾ ತಡೆಯ . ಅದರಲ್ಲೂ ಸಾರ್ವಜನಿಕ ಜೀವನದ ಕ್ರಮಗಳಿಗೆ ವಿರೋಧಿಸುವ ವರ್ತನೆ ವ್ಯಕ್ತವಾದುದ ವಿಷಾದ ಕಲವು ಹಿಂಸೆಯು ಕೆಲವೆಡೆಗಳಲ್ಲಿ ಪ್ರೋತ್ಸಾಹಿಸಲ್ಪಟ್ಟಿತು-ಇದರಿಂದ ಅನೇಕ ಪಾದಕ್ಷಗಳು ನಡೆದುಬಿಟ್ಟವು

ಆದರೆ ಇದೆಲ್ಲಾ ಮಾಯವಾಗುವುದು ಮುಸ್ಲಿಮ ಮಹಾಜನಗಳಲ್ಲಿ ಉಂಟಾದ ಪರಿಜ್ಞಾನ ಮಾತ್ರ ನಿಲ್ಲುವುದು. ಎಲ್ಲಾ ಅಲ್ಪಸಂಖ್ಯಾತರಿಗೆ ನ್ಯಾಯ ದೊರಕಿಸಿ, ಅವರ ವಿಶ್ವಾಸವನ್ನು ಪ್ರೇಮವನ್ನು ಪಡೆಯುವ ತರದಲ್ಲಿ ಕಾಂಗ್ರೆಸ್ಸು ವರ್ತಿಸುವುದರಿಂದ ಕೋಮುವಾರುತನವು ಮಾಯವಾಗುವುದು ಇದೆಲ್ಲಾ ಹೋಗಿಬಿಡಬೇಕು. ಕಾರಣ, ಇತರ ಮಹಾ ಸಮಸ್ಯೆಗಳು ನಮ್ಮೆದುರಿವೆ. ಕೃಷಕರು ಹಿಂದೂ

(೧೪ನೇ ಪುಟವನ್ನು ನೋಡುವುದು.)

# ಒಂದೇ ಸೀಸೆಯಿಂದ

ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ

ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯಲ್ಲಿದೆ.

ಕೇಸರಿ ಕುಟೀರಂ—ರಾಯಪೇಟೆ— ಮದ್ರಾಸು.

ಮಂಗಳೂರು ಪ್ರವರ್ತಕರು: ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.



***Best Cheap Durable***

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by:-*

The West Coast Soap Factory.

**ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,**

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents.*

**Panchmal Krishnaya Shenoy & Son,**

Bunder, MANGALORE


# ವೀರಕೇಸರಿ ಪಂ| ಜವಾಹರಲಾಲನೆಹರುರವರು

## ಸ್ವಾತಂತ್ರ್ಯ ಮಹಾ ಹೋರಾಟಕ್ಕಾಗಿ ಸಿದ್ಧರಾಗಬೇಕೆಂದು ಅವರ ಕರೆ.

★

ಪಂಡಿತ ಜವಾಹರಲಾಲ ನೆಹರುರವರು ತನ್ನ ಅಧ್ಯಕ್ಷತನವನ್ನು ಶ್ರೀ| ಭೋಸರಿಗೆ ವಹಿಸಿಕೊಡುವ ಸಮಯದಲ್ಲಿ ಹರಿಪುರದಲ್ಲಿ ಕಾಂ| ಅಧಿವೇಶನದ ನೇತೃತ್ವದಲ್ಲಿ ಜರಗಿದ ಅ. ಭಾ. ಕಮಿಟಿಯ ಸಭೆಯಲ್ಲಿ ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಭಾಷಣವನ್ನು ಮಾಡಿದರು.

'ಮಹಾ ತೊಡಕ್ಕೊಂದು ಪ್ರಾಪ್ತವಾಗಿರುವ ಈ ಕಾಲದಲ್ಲಿ ಎಲ್ಲರೂ ಮತಭೇದವನ್ನು ತೊರೆದುಬಿಡಬೇಕು. ಬಿಹಾರಿನ ಮತ್ತು ಯುಕ್ತ ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿ ಮಂಡಲಗಳ ರಾಜಿನಾಮೆಯಿಂದ, ಈ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗಿರುವುದು. ಈ ಪ್ರಕರಣದಲ್ಲಿ ಮಹಾ ಪ್ರಶ್ನೆಯು ಅಡಕವಾಗಿರುವುದು. ಆದ್ದರಿಂದ ನಾವೆಲ್ಲರೂ ಒಕ್ಕಟ್ಟಿನಿಂದ ಇರುವುದು ಅವಶ್ಯವಾಗಿರುತ್ತದೆ. ದೊಡ್ಡ ಗಂಡಾಂತರವನ್ನು ನಾವು ಎದುರಿಸಬೇಕಾಗಿ ಬರಬಹುದು. ಈಗ ನಾವು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿರುವೆವು. ಮುಂದೇನು? ಪ್ರಬಲವಾದ ಬ್ರಿಟಿಷ ಸಾಮ್ರಾಜ್ಯಶಾಹಿಯೊಡನೆ ಘೋರ ಹೋರಾಟವನ್ನು ನಡೆಸುವ ಘೋರ ಪ್ರಸಂಗವು ಬರಬಹುದು. ದಿನೇ ದಿನೇ ನಾವು ರಣಭೂಮಿಯ ಕಡೆಗೆ ಸಾಗುತ್ತಿದ್ದೇವೆ.

ನವ ಅಧ್ಯಕ್ಷರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಯಾವ ವೇಳೆಯಲ್ಲಾದರೂ ದೇಶಸೇವೆ ಮಾಡಲು ಸಿದ್ಧನಿರುವೆನೆಂದು ಅವರಿಗೆ ನನ್ನ ಆಶ್ವಾಸನೆ. ಹೀಗೆ ಭಾಷಣ ಮಾಡುತ್ತಾ, ವೀರ ನೆಹರುಗಳವರು ವೀರ ಭೋಸರಿಗೆ ತ್ರಿವರ್ಣದ ಖಾದಿಹಾರವನ್ನು ಹಾಕಿ, ಅಧ್ಯಕ್ಷತನವನ್ನು ಅವರಿಗೆ ಒಪ್ಪಿಸಿದರು.

★

ಪಂಡಿತ ಜವಾಹರಲಾಲರ ಅಧ್ಯಕ್ಷತನ. ಸರೋಜಿನಿ ದೇವಿಯವರ ಪ್ರಶಂಸೆ.

ಶ್ರೀಮತಿ ಸರೋಜಿನಿದೇವಿಯವರು ಈ ಕುರಿತು ಹರಿಪುರದಲ್ಲಿ ಅಖಿಲ ಭಾರತ ಕಾಂ| ಕಮಿಟಿಯಲ್ಲಿ ಭಾಷಣಮಿತ್ತರು: ಶ್ರೀ ಜವಾಹರಲಾಲರ ಅಗಾಧವಾದ ಚಟುವಟಿಕೆಗಳು, ಮಹತ್ತಾದ ಪ್ರೇರಣ ಶಕ್ತಿ, ವಿಸ್ತಾರವಾದ ಕರ್ತೃತ್ವ ಶಕ್ತಿಯು ಎಲ್ಲರಿಗೂ ತಿಳಿದಿರುವುದು. ಅವರು ಕಾಂಗ್ರೆಸ್ಸಿನ ಒಳಗಿರಲಿ, ಹೊರಗಿರಲಿ, ಅಧಿಕಾರದಲ್ಲಿರಲಿ, ನಿವೃತ್ತರಾಗಲಿ ಎಲ್ಲಿದ್ದರೂ ಕಾಂಗ್ರೆಸ್ಸಿನ ಸೇವೆಯನ್ನು ಅವರು ಸದಾಕಾಲ ಮಾಡುವರು. ತಮ್ಮ ಬುದ್ಧಿಬಲ, ಜ್ಞಾನ, ಸೌಹಾರ್ದತೆ ಉತ್ತೇಜನಗಳಿಂದ ಭಾರತದಲ್ಲಿ ನವಚೈತನ್ಯವನ್ನು ತುಂಬುವವರು ಅವರು. ಭಾರತವನ್ನು ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ರಾಷ್ಟ್ರಗಳ ಮುಂದಿಟ್ಟು, ದೇಶದ ಸಲುವಾಗಿ ಸರ್ವಸ್ವವನ್ನರ್ಪಿಸಿ ಯಾವಾಗಲೂ ದುಡಿಯುವವರು—ಪಂಡಿತ ಜವಾಹರಲಾಲ ನೆಹರುರವರು.

ಪಂಡಿತರ ನಂತರ ಅಧ್ಯಕ್ಷಗದ್ದಿಗೆಯನ್ನೇರುವದು ಇಂದು ಸುಲಭದ ಕೆಲಸವಲ್ಲ. ಆದರೆ ಸಂಪೂರ್ಣ ಮಾಹಿತಿಯುಳ್ಳ, ಸ್ವಾತಂತ್ರ್ಯಹೋರಾಟದಲ್ಲಿ ಸರ್ವಸ್ವವನ್ನರ್ಪಿಸಿದ, ಶಿಸ್ತಿನ ಯುವಕರ ನಾಯಕರಾದ ಶ್ರೀ ಸುಭಾಷ್ಚಂದ್ರಭೋಸರು ಕಾಂಗ್ರೆಸ್ಸಿನ ಮಹತ್ಪೂರ್ಣವಾದ ಆದರ್ಶಗಳನ್ನು ನಡೆಯಿಸುವರೆ ಅವರೊಡನೆ ನನ್ನ ಸಂಪೂರ್ಣ ಸಹಾನುಭೂತಿಯಿದೆ. ಅವರಿಗೆ ನನ್ನ ವಂದನೆಗಳು.

★

ಶ್ರೀ| ಜವಾಹರಲಾಲ ನೆಹರೂರವರು ಕಳೆದ ಎರಡು ವರ್ಷಗಳಲ್ಲಿ ಅಧ್ಯಕ್ಷರಾಗಿ ದುಡಿದು, ದಣಿದು ಸೋತಿರುವರು. ಆದ್ದರಿಂದ ತನ್ನ ಆರೋಗ್ಯಸಾಧನೆಗಾಗಿಯೂ, ಭಾರತದ ಕುರಿತು ಪ್ರಚಾರನಡಿಸುವುದಕ್ಕಾಗಿಯೂ ಅವರು ಸದ್ಯದಲ್ಲೇ ವಿದೇಶಕ್ಕೆ ತೆರಳುವರಾಗಿ ತಿಳಿದು ಬರುತ್ತದೆ. ಅನಿವಾರ್ಯವಾಗಿ ಶ್ರಮಿಸಿದ ಅವರಿಗೆ ವಿಶ್ರಾಂತಿಯು ಬೇಕೇಬೇಕು. ವಿದೇಶದಲ್ಲಿ ಅವರು ಒಂದು ಮಹಾಕೃತಿಯನ್ನು ಹೊರಡಿಸಲಿರುವರೆಂದು ತಿಳಿದುಬರುತ್ತದೆ.

★

ಹರಿಪುರ ಕಾಂಗ್ರೆಸ್ ಅಧಿವೇಶದೊಡನೆ ಒಂದು ಜನನವೂ, ಎರಡು ವಿವಾಹಗಳೂ, ಎರಡು ಮರಣಗಳೂ ನಡೆದಿವೆಯಾಗಿ ತಿಳಿದು ಬರುತ್ತದೆ.

★

### ದಿನ ಒಂದಕೆ ನಾಲ್ಕು ಲಕ್ಷ ಶಬ್ದಗಳು!

ಹರಿಪುರದಿಂದ ಕಾಂಗ್ರೆಸ್ ಅಧಿವೇಶನದ ಸಮಯ ಟೆಲಿಗ್ರಾಫ್ ಮೂಲಕ ಸಾಧಾರಣ ಮೂರು ಮಿಲಿಯ ಐನೂರು ಸಾವಿರ ಶಬ್ದಗಳು ಕಳುಹಿಸಲಾಗಿವೆ ಎಂದೂ ಇದಲ್ಲದೆ ಎರಡು ಸಾವಿರ ಸಾಧಾರಣ ಟೆಲಿಗ್ರಾಫುಗಳು ಕಳುಹಿಸಲಾದುವೆಂದು ಇದಕ್ಕಾಗಿ ಟೆಲಿಗ್ರಾಫ್ ಇಲಾಖೆಯವರು ವಿಶೇಷತರದ ಯಾಂತ್ರಿಕ ಏರ್ಪಾಡನ್ನು ಮಾಡಿದ್ದರೆಂದೂ, ಈ ಬಾರಿಯ ಅಧಿವೇನದಲ್ಲಿ ೩೬ ಜನರು ಟೆಲಿಫೋನ್ ಕನೆಕ್ಷನು ಪಡೆದುಕೊಂಡಿದ್ದು ೧೨೦೦ ಟ್ರೇಕ್ ಕೊಲ್‌ಗಳನ್ನು ಮಾಡಿರುವರೆಂದೂ ತಿಳಿದುಬರುತ್ತದೆ. ಈ ಬಗ್ಗೆ ವ್ಯವಸ್ಥೆ ಮಾಡಲು ಟೆಲಿಗ್ರಾಫ್ ಖಾತೆಯ ಡೈರೆಕ್ಟರರು ಖುದ್ದಾಗಿ ಹರಿಪುರದಲ್ಲಿ ಬಂದಿಳಿದಿದ್ದರು.

★

### ಮೋಟರವಾಹನಗಳ ಮೇಲೆ ಸುಂಕ

ಖಾಸಗಿ ಮತ್ತು ಬಾಡಿಗೆಗೆ ಎಂಬ ಭೇದವಿಲ್ಲದೆ ಮೋಟಾರು, ಲೋರಿಗಳ ತೆರಿಗೆಯನ್ನು ವಿಧಿಸುವ, ಲೋರಿಗಳು ಜಿ. ಬೋರ್ಡಿಗೆ ತೆರುವ ಸುಂಕವನ್ನು ತೆಗೆದುಹಾಕುವ, ಮೋಟರು ಬಸ್ಸುಗಳ ಮೇಲೆ ತೆರಿಗೆಯನ್ನು ಹೆಚ್ಚಿಸುವ ಇತ್ಯಾದಿಗಳನ್ನೊಳಗೊಂಡ ಬಿಲೊಂದು ಮದರಾಸು ಸರಕಾರದಿಂದ ಸದ್ಯದಲ್ಲೇ ಜ್ಯಾರಿಮಾಡಲಾಗುವುದು.

# ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ ರಾಜಮಾರ್ಗವನ್ನು ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ—

## ಜೀವಾಮೃತ

ಆಯುರ್ವೇದಾಶ್ರಮ,
೧೫೧, ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.

ದ. ಕ. ಜಿಲ್ಲಾ ಏಜಂಟರು:—
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

### ಭೂವ್ಯವಸ್ಥೆಯಲ್ಲಿ ಗೇಣಿಯ ಕ್ರಮದಲ್ಲಿ

# ಸುಧಾರಣೆಯ ಆವಶ್ಯಕತೆ

★ ★ ★

ಭಾರತ ವರ್ಷದಲ್ಲಿನ ಸಾಮಾಜಿಕ ಜೀವನದಲ್ಲಿ ಒಕ್ಕಲಿಗನು ಪಡೆದಿರುವ ಪ್ರಾಮುಖ್ಯತೆಯು ಸರ್ವಸಮ್ಮತವಾದುದು; ಆತನು ಸಮಾಜದ ಒಂದು ಪ್ರಮುಖಾಂಗನೆಂಬುದನ್ನು ಎಲ್ಲರೂ ಒಪ್ಪಲೇ ಬೇಕಾಗಿದೆ. ಹಿಂದೂದೇಶದಲ್ಲಿ ವ್ಯವಸಾಯವೇ ಮುಖ್ಯ ಉದ್ಯೋಗವಾಗಿರುವುದರಿಂದಲೂ, ಬಹುಜನರ ಜೀವನೋಪಾಯವಾಗಿರುವುದರಿಂದಲೂ, ದೇಶೋನ್ನತಿಗಾಗಿ ಕೈಕೊಳ್ಳುವ ಯಾವುದೇ ಕಾರ್ಯಕ್ರಮಗಳೂ ಕೃಷಿಕರಿಗೆ ಅನ್ವಯಿಸುವಂತಿರಬೇಕು. "ಕೃಷಿಕ" ಎಂಬ ಪದಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಿರುವರು. ಆದರೆ, ನಿಜವಾದ ಕೃಷಿಕನು ಭೂಮಿಯನ್ನು ಉತ್ತು ಬಿತ್ತುವಂತಹ ವ್ಯಕ್ತಿಯು ಸರಿ. ಹೊಲದಲ್ಲಿ ಗೇದು, ದವಸಧಾನ್ಯಗಳನ್ನು ಬೆಳೆಸಿ, ಊರವರು ಉಣ್ಣುವ ಅನ್ನವನ್ನು ಒದಗಿಸುವುದರಲ್ಲಿ ಶ್ರಮಿಸುತ್ತಿರುವವನೇ ನಿಜವಾದ ಒಕ್ಕಲಿಗನು! ತಾನು ಉತ್ತು ಬಿತ್ತುವ ಜಮೀನಿನಲ್ಲಿ ಆತನಿಗೆ ವಿಕ್ರಯ ಸ್ವಾತಂತ್ರ್ಯದಿಂದ ಕೂಡಿದ ಯಾವ ತರದ ಹಕ್ಕುಗಳೂ ಇರುವುದಿಲ್ಲ, ಆದರೂ ಹೊಲಗಳು ಫಲಪ್ರದವಾಗಿರುವುದು ಆತನ ಪರಿಶ್ರಮದಿಂದಲೇ. ಸಮಾಜಕ್ಕೆ ಆತನಿಂದ ಸಿಗುವ ಸೇವೆಯ ವೈಶಿಷ್ಟ್ಯದಿಂದಲೇ ಆತನು ಸಮಾಜದಲ್ಲಿ ಮಾನ್ಯತೆಗೆ ಭಾಗಿಯಾಗಿರುವನು.

ಚಾಲಗೇಣಿ —ನಮ್ಮ ಜಿಲ್ಲೆಯಲ್ಲಿ ಸರ್ವಸಾಮಾನ್ಯವಾದ ಒಕ್ಕಲುತನವೆಂದರೆ ವರ್ಷಾವಧಿಯ ನ್ನೊಳಗೊಂಡ ಚಾಲಗೇಣಿಯು. ಆ ವರ್ಷದ ಅವಧಿಯು ದಾಟಿಹೋದಲ್ಲಿ ಧನಿಯ ಒಪ್ಪಿಗೆಯಿಂದ ಈ ಒಕ್ಕಲುತನವು ವರ್ಷದಿಂದ ವರ್ಷಕ್ಕೆ ಮುಂದುವರಿಯಬಹುದು. ಒಕ್ಕಲಿಗನು ಒಂದು ವರ್ಷದ ಮಟ್ಟಿಗೆ ಹೊಲದಲ್ಲಿ ಬೇಸಾಯವನ್ನು ಮಾಡಬಹುದು. ಆದರೆ ವರ್ಷಾಂತ್ಯದಲ್ಲಿ ಹೊಲವನ್ನು ಧನಿಗೆ ಒಪ್ಪಿಸಿಬಿಡಲೇ ಬೇಕು.

ಚಾಲಗೇಣಿ ಒಕ್ಕಲಿಗೆ ಒಂದು ವರ್ಷದ ತನಕ ಸಾಗುವಳಿ ಮಾಡುವ ಹಕ್ಕು ಮಾತ್ರವೇ ಲಭಿಸುವುದಾಗಿದೆ, ಆದುದರಿಂದ ವರ್ಷಾಂತ್ಯದಲ್ಲಿ ಆತನು ಒಕ್ಕಲೇಳುವುದಕ್ಕೆ ಸಿದ್ಧನಾಗಿರಬೇಕು, ಎಳೆದೆ ಇದ್ದರೆ ಅವನನ್ನು ಹೊರಪಡಿಸಲು ಧನಿಗೆ ಅಧಿಕಾರವೂ ನಿಯಮನಿಬಂಧನೆಗಳ ಸಹಾಯವೂ ಇದೆ. ಈ ಚಾಲಗೇಣಿಯ ಶರತ್ತುಗಳಲ್ಲಿ ಕೆಲವು ಅತೀವ ಸೋಜಿಗವಾಗಿವೆ, ಅವುಗಳನ್ನು ಈ ಕೆಳಗೆ ಕೊಡಲಾಗಿದೆ –

೧ ಆಸ್ತಿಯಲ್ಲಿರುವ ಕಟ್ಟೋಣಗಳ ಛಾವಣಿ, ಕಟ್ಟಕಡಿ, ಕೋಲುಬೇಲಿ, ದುರುಸ್ತಿ ವಗೈರೆಗಳನ್ನು ನನ್ನ ಖರ್ಚಿನಿಂದ ನಾನೇ ಮಾಡಿಸಿ, ಆಸ್ತಿಗೆ ಸಂಬಂಧಿಸಿದ ಸರಕಾರದ ಪಂತಿಗೆಗಳನ್ನೂ ನಾನೇ ಕೊಟ್ಟು, ನಿಮ್ಮ ಬಿಟ್ಟಿಬೇಗಾರಿ ಮಾಡಿಕೊಂಡು, ನಿಮಗೆ ಅನಮೃತನಾಗಿ ನಡಕೊಂಡೇನು.

೨ ಬಾಕಿಯಾಗಬಹುದಾದ ಗೇಣಿಯ ಸೈಕಿ, ನಗದಿ ಗೇಣಿಯ ಮೇಲೆ ಸಾಲಿಯಾನ ಶೇಕಡಾ ೧೨॥ ದರದ ಬಡ್ಡಿಯನ್ನೂ ಗೇಣಿ ಅಕ್ಕಿ ಅಥವಾ ಭತ್ತದ ಮೇಲೆ ಸಾಲಿಯಾನ ಮುಡಿಗೆ ಕಾಲು ಮುಡಿಯಂತೆ ಹೊಲಿಯನ್ನೂ, ಕೂಡಿಸಿ ಕೊಡುವರೆ ನಾನು ಬದ್ಧನಾಗಿರುತ್ತೇನೆ.

೩ ಆಸ್ತಿಯಲ್ಲಿನ ಬೆಳೆ ಕಟಾವಿನ ಮುಂಚೆ ತಕ್ಕ ಕಾಲದಲ್ಲಿ ನಿಮ್ಮ ಗೇಣಿಗೆ ಯೋಗ್ಯವಾದ ಜಾಮೀನನು ಕೊಟ್ಟು ಬೆಳೆಯನ್ನು ಕಟಾಯಿಸೇನು. ಆಸ್ತಿಯಲ್ಲಿ ನಾನು ಬೆಳೆಸುವ ಎಲ್ಲಾ ತರದ ಫಲವೈರುಗಳು ನಿಮ್ಮ ಗೇಣಿಗೆ ಪ್ರಥಮ ಜವಾಬ್ದಾರಿಯಾಗಿರುವುದಲ್ಲದೆ, ನನ್ನ ಸಮಸ್ತ ಸ್ಥಿರಚರಸೊತ್ತುಗಳೂ, ಜ್ಯಾಮಿನದಾರುಗಳೂ, ಮಾತ್ರವಲ್ಲ ನನ್ನ ದೇಹವು ಕೂಡಾ ಹೊಣೆಯಾಗಿರುತ್ತವೆ.

೪ ಸರ್ವೆಕಲ್ಲುಗಳ ನಿಗಾವಾಣೆಯನ್ನು ನೋಡಿಕೊಳ್ಳಲು ನಾನು ಬದ್ಧನಾಗಿರುತ್ತೇನೆ; ಆ ಕುರಿತು ಅಲಕ್ಷ ಮಾಡುವುದರಿಂದ ಸಂಭವಿಸಬಹುದಾದ ಜುಲುಮಾನೆಯನ್ನು ತೆರಲಿಕ್ಕೆ ಸಹ ನಾನು ಬದ್ಧನಾಗಿದ್ದೇನೆ.

೫ ನಾನು ಚಾಲಗೇಣಿ ಒಕ್ಕಲಾಗಿರುತ್ತಾ ಕೃಷಿ ಮಾಡುವ ಹಕ್ಕು ನನಗಿಲ್ಲವಾದುದರಿಂದ, ನಿಮ್ಮ ಬರಹಮೂಲಕವಾದ ಅನುಮತಿ ಪಡೆದ ವಿನಹ ಆಸ್ತಿಯಲ್ಲಿ ಯಾವ ತರದ ಕೃತಾವಳಿ ಮಾಡಿಸಿದರೂ ಆ ಕುರಿತು ಕೃತದ ಮೌಲ್ಯ ಅಥವಾ ಪ್ರತಿಫಲ ಬರಬೇಕೆಂತ ವಾದಿಸುವುದಕ್ಕೆ ನನಗೆ ಹಕ್ಕಿರುವುದಿಲ್ಲ. ನೀವು ಕೃತಾವಳಿಗಳನ್ನು ಮಾಡಿಸುವುದಾದರೆ ಆ ಕುರಿತು ಆಕ್ಷೇಪಿಸುವುದಕ್ಕೂ ನನಗೆ ಹಕ್ಕಿರುವುದಿಲ್ಲ.

೬. ಮೇಲೆ ಕಾಣಿಸಿದ ಶರತುಗಳ ಮೇರೆಗೆ ನಾನು ವ ನನ್ನ ಪ್ರತಿನಿಧಿಗಳು ಕೂಡಾ ವರ್ತಿಸುವರೆ ತಪ್ಪಿದರೆ, ಆ ಕುರಿತು ನಿಮ್ಮ ಇಚ್ಛಾನುಸಾರ ನಡೆಸುವ ರೆವಿನ್ಯೂ, ಕ್ರಿಮಿನಲ್, ಸಿವಿಲ್ ವ್ಯವಹರಣೆಗಳ ಸಕಲ ಖರ್ಚು ನಷ್ಟ ವಗೈರೆ ತೆರಲಿಕ್ಕೆ ನಾನು ಬದ್ಧನಾಗಿರುತ್ತೇನೆ.

ಈ ಶರತುಗಳೆಲ್ಲವೂ ಎಲ್ಲೆಡೆಗಳಲ್ಲಿಯೂ ದೊರೆಯುವ ಛಾಪಾ ಚಾಲಗೇಣಿ ಚೀಟಿನ ಹಾಳೆಗಳಲ್ಲಿ ಕಂಡುಬರುವುವುಗಳೇ, ಹೀಗಿರಲು ಇವುಗಳನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ ಎಂದು ತೋರಬಹುದು. ಆದರೂ ಅವುಗಳನ್ನು ಜಾಗರೂಕತೆಯಿಂದ ಪರಿಶೀಲನ ಮಾಡಿದರೆ ವಾಚಕರಿಗೆ ಆಶ್ಚರ್ಯವಾಗದಿರದು, ಮತ್ತು ನಾನು ಖಂಡಿತವಾಗಿಯೂ ಹೇಳಬಲ್ಲೆ ಅವುಗಳಲ್ಲಿ ಒಂದೆರಡಾದರೂ ನಿಷ್ಕಾರಣವಾದವುಗಳೆಂದೂ ಅವಶ್ಯವಿಲ್ಲದವುಗಳೆಂದೂ ವಾಚಕರು ಮನಗಾಣುವರು.

ಇಂತಹ ಗೇಣಿಚೀಟುಗಳಿಗೆ ಪ್ರತಿವರುಷದಲ್ಲಿಯೂ ಹೆಬ್ಬೆಟ್ಟು ಮುದ್ರೆಯನ್ನೊ, ಅಥವಾ ಅಕ್ಷರಪೂರ್ವಕವಾಗಿ ಸಹಿಯನ್ನೋ ಅಂಕಿತಗೊಳಿಸುವ ಸಾವಿರಾರು ಜನ ಒಕ್ಕಲಿಗರಿಗೆ ನೈಜಾರ್ಥವು ತಿಳಿದಿಲ್ಲವೆಂದರೆ ಸರ್ವಥಾ ತಪ್ಪಾಗಲಾರದು. ಇವುಗಳ ಗೂಡಾರ್ಥವು ಅವರಿಗೆ ತಿಳಿದಿದ್ದರೆ ಅವರು ಈ ಗೇಣಿಚೀಟುಗಳಿಗೆ ಸಹಿ ಯಿಕ್ಕುತ್ತಿರಲಿಲ್ಲ ಎಂದು ನಾನು ಹೇಳಲಾರೆ, ಇವುಗಳಿಗಿಂತಲೂ ಕಠಿಣವಾದ ಶರತುಗಳೇ ಆದರೂ ಕೂಡ, ಅಂತಹ ಶರತುಗಳನ್ನು ವಿವರವಾಗಿ ಅವರಿಗೆ ತಿಳಿಯಹೇಳಿದರೂ ಕೂಡಾ, ತಿಲಮಾತ್ರವೂ ಸಂಕೋಚಪಡದೆ ಅವರು ಅವುಗಳಿಗೆ ತಮ್ಮ ಹೆಬ್ಬೆಟ್ಟು ಮುದ್ರೆಯನ್ನು ಒತ್ತಿಬಿಡುವುದೇನೋ ಖಂಡಿತವೇ ಸರಿ. ಆದರೆ, ಇದೊಂದರಿಂದಲೇ ಅವರ ನಿರಾಶಾಪೂರಿತವಾದ ಸಹಾಯಶೂನ್ಯವಾದ ದುಸ್ಥಿತಿಯು ವ್ಯಕ್ತವಾಗುವುದು.

ಧನಿಜನರ ಮೇಲಾಗಲೀ ವರ್ಗದಾರರ ಮೇಲಾಗಲೀ ನಾನು ದೋಷಾರೋಪಣೆಯನ್ನು ಮಾಡುತ್ತಿರುವೆನೆಂದು ತಿಳಿಯಲಾಗದು. ಪ್ರಸ್ತುತ ಸ್ಥಿತಿಯು ಕಾರಣಾಂತರಗಳ ಫಲಿತಾಂಶವಾಗಿದೆ; ಹೀಗಿರಲು ಯಾವನೊಬ್ಬ ವರ್ಗದಾರನಾದರೂ ಈ ವಿಷಯದಲ್ಲಿ ಹೊಸದಾರಿಯನ್ನು ಕಡಿದು ನಿರ್ಮಿಸಿ ಮುಂದೆ ಸಾಗಬಲ್ಲನೆಂದು ತಿಳಿಯಲು ಸಾಧ್ಯವಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಒಕ್ಕಲಿಗರು ಅನುಭವಿಸುತ್ತಿರುವ ಹಲಕೆಲವು ಸಂಕಟಗಳನ್ನೂ, ಅವರ ಹೆಗಲ ಮೇಲೆ ಹೇರಿರುವ ಆತಂಕಗಳನ್ನೂ ವಿಷದಗೊಳಿಸಿ, ಈಗಿನ ವ್ಯವಸ್ಥೆಯಲ್ಲಿ ಅಡಕವಾಗಿರುವ ಅವ್ಯವಸ್ಥೆಗಳನ್ನು ನಿವಾರಿಸುವ ಮಾರ್ಗವನ್ನು ಸೂಚಿಸುವುದೂ ಮತ್ತು ಒಕ್ಕಲಿಗರು ತಾವು ಸಮಾಜದ ಒಂದು ಪ್ರಮುಖಾಂಗವೆಂಬುದನ್ನರಿತು ಸಾಮಾಜಿಕ ಜೀವನದಲ್ಲಿ ತಮ್ಮ ಉಪಯುಕ್ತತೆ ಸ್ಥಾನಮಾನಗಳನ್ನೆಲ್ಲಾ ಮನಗಂಡು, ಮುಂದೆ ಸಮಾಜದ ಶ್ರೇಯೋಭಿವೃದ್ಧಿಗೆ ಮತ್ತಷ್ಟು ಸಹಾಯಕರಾಗುವಂತೆ ಮಾಡುವುದೂ, ನನ್ನ ಆಶಯವಾಗಿದೆ ಮತ್ತು ಈ ಲೇಖನದ ಉದ್ದೇಶವಾಗಿದೆ. ಧನಿಜನರೆಲ್ಲರೂ ಒಕ್ಕಲುಗಳ ಮೇಲೆ ದಯದಾಕ್ಷಿಣ್ಯಗಳಿಲ್ಲದವರೆಂದಾಗಲಿ, ಒಕ್ಕಲುಗಳ ಮೇಲ್ಮೆಯನ್ನು ಬಯಸದವರೆಂದಾಗಲೀ ಹೇಳಿದರೆ ಆ ಮಾತು ಸತ್ಯವೂ ಅಲ್ಲ, ನ್ಯಾಯವೂ ಅಲ್ಲ. ಅಂತೆಯೇ ಒಕ್ಕಲುಗಳೂ ಸಹ ಸರ್ವದಾ ಅನ್ಯಾಯವಾದ ಸಂಕಷ್ಟಗಳಿಂದ ಪೀಡಿತರಾಗಿರುವರೆಂದು ಹೇಳುವುದರಲ್ಲಿಯೂ ಅರ್ಥವಿಲ್ಲ. ಹಲವೆಡೆಗಳಲ್ಲಿ ಧನಿ ಒಕ್ಕಲಿಗರೊಳಗೆ ಅತ್ಯಂತ ಮೈತ್ರಿಯು ನೆಲಸಿರುವುದು. ಕೆಲವೆಡೆಗಳಲ್ಲಿ ಧನಿಯು ಒದಗಿಸಿಕೊಟ್ಟಿರುವ ಸೌಕರ್ಯಗಳನ್ನು ಒಕ್ಕಲಿಗರು ದುರುಪಯೋಗಪಡಿಸಿರುವುದೂ ಇದ್ದೇ ಇದೆ. ವ್ಯಕ್ತಿಪರವಾದ ನ್ಯೂನಾತಿರೇಕಗಳು ಪ್ರಪಂಚದ ಅಂತ್ಯದ ವರೆಗೂ ಇದ್ದೇ ಇರುವುವು. ಪ್ರಕೃತ ನಾವು ವ್ಯವಸ್ಥೆಯನ್ನೂ ಪದ್ಧತಿಯನ್ನೂ ಮಾತ್ರವೇ ಪರಿಶೀಲಿಸಬೇಕಾಗಿದೆ. ಏಕೆಂದರೆ ಅಂತಹ ವ್ಯವಸ್ಥೆಯನ್ನು ಪದ್ಧತಿಯನ್ನೋ ಮಾತ್ರವೇ ನಾವು ಯಾವಜ್ಜೀವವೂ ಅವಲಂಬಿಸಬಲ್ಲೆವಲ್ಲದೆ, ಬರೀ ವ್ಯಕ್ತಿಗಳನ್ನಲ್ಲ. ಅತಿ ಯೋಗ್ಯನಾದೊಬ್ಬ ಧನಿಯ ಅನಂತರದಲ್ಲಿ ಅತಿ ಕ್ರೂರನೊಬ್ಬನು ಬರಲೂ ಬಹುದು, ಆಗ, "ಹಿಂದಿನ ಧನಿಯು ಒಕ್ಕಲುಗಳ ಮೇಲ್ಮೆಗಾಗಿಯೇ ತನ್ನ ಮನೆಮಾರುಗಳನ್ನು ಮಾರಿರಲಿಲ್ಲವೆ? ಅಂದಿನ ಸ್ಥಿತಿ ಹಾಗೆ, ಇಂದಿನ ಸ್ಥಿತಿ ಹೀಗೆ!" ಎಂಬುದು ಯಾವ ಸಮಾಧಾನವೂ ಅಲ್ಲ.

ಹಿಂದೂದೇಶದಲ್ಲಿ ಆಂಗ್ಲ ಜನರು ಕಾಲಿಡುವದರ ಪೂರ್ವದಲ್ಲಿ ವ್ಯವಹಾರ ಸೌಕರ್ಯಗಳು ಏರ್ಪಡುವುದರ ಹಿಂದೆ, ಪ್ರತಿಯೊಂದು ಗ್ರಾಮವೂ ಒಂದು ಚಿಕ್ಕ ಸಂಸ್ಥೆಯೆ ಆಗಿದ್ದಿತು. ಆ ಕಾಲಗಳಲ್ಲಿ ಧನಿ ಒಕ್ಕಲುಗಳಲ್ಲಿ ಪರಸ್ಪರವಾದ ನಿಕಟ ಸಂಬಂಧವೊಂದು ಬೆಳೆದಿದ್ದಿತು; ಒಬ್ಬರ ಸುಖ ದುಃಖಗಳಲ್ಲಿ ಮತ್ತೊಬ್ಬರು ಸಹಭಾಗಿಗಳಾಗಿದ್ದರು. ಮಾತ್ರವಲ್ಲದೆ ಗ್ರಾಮ ಪಂಚಾಯತಿಗಳು ಒಕ್ಕಲಿಗರಿಗೆ ಬೆಂಬಲವನ್ನು ಕೊಟ್ಟು ಅವರ ಹಿತ ಪೋಷಣೆಯನ್ನು ಮಾಡುತ್ತಿದ್ದವು. ಆದರೆ ಇತ್ತೀಚೆಗೆ ಆ ಹಿಂದಿನ ಸಾಮಿಪ್ಯ ಸಂಬಂಧಗಳು ಮಾಯವಾಗಿ, ವಿಶಾಲವಾದ ಗ್ರಾಮಾತೀತ ಸಂಬಂಧಗಳು ನೆಲೆಗೊಂಡಿವೆ, ಮತ್ತು, ಗ್ರಾಮ ಪಂಚಾಯತಿಗಳ ಅಧಿಕಾರಗಳೂ ಲೋಪವಾಗಿವೆ. ವ್ಯಕ್ತಿಷ್ಟವಾದ ನಿಯಮ ನಿಬಂಧನೆಗಳು ಅನ್ಯೋನ್ಯ ಸಂಬಂಧಗಳನ್ನು ಇತ್ಯರ್ಥಗೊಳಿಸಿ, ಕರಾರುಗಳ ಶರತುಗಳನ್ನು ಜ್ಯಾರಿಮಾಡುತ್ತಿದೆ. ದೂರದಲ್ಲಿರುವ ನ್ಯಾಯಸ್ಥಾನವೆಂಬುದು ಅದೊಂದು ಯಂತ್ರ. ತನ್ನ ಕರ್ತವ್ಯವನ್ನು ಯಂತ್ರದಂತೆಯೇ ಅದ ಸಾಗಿಸುತ್ತದೆ. ಅದಕ್ಕೊಂದು ಹೃದಯವು ಇರುವುದೂ ಇಲ್ಲ. ಅದರ ಬಾಹುಗಳೇನೋ ಬಹು ನೀಳವಾಗಿದೆ; ಆ ಬಾಹುಗಳು ಎಷ್ಟು ದೂರ ನಿಲುಕಬೇಕಾಗುವುದೋ ಅಷ್ಟು ಬಡ ಒಕ್ಕಲಿಗನ ಹೆಗಲ ಮೇಲಣ ಹೊರೆಯೂ ಭಾರತರವಾಗುವುದು. ಆದುದರಿಂದಲೇ ಕರಾರುಗಳ ಶರತುಗಳಿಗೆ ಪ್ರಾಮುಖ್ಯತೆಯು ಬಂದಿದೆ, ಅವುಗಳನ್ನು ಅಲಕ್ಷಿಸುವರೆ ಸಾಧ್ಯವಿಲ್ಲ.

ಕೈಗಾರಿಕೆಗಳ ಬೆಳವಣಿಗೆ ಪಟ್ಟಣಗಳ ಸಂಸ್ಥಾಪನೆ, ಘೋರ ದುರ್ವ್ಯಯಗಳನ್ನೊಳಗೊಂಡಿರುವ ಸರಕಾರದ ಸಂಘಟನೆ ಇವೆಲ್ಲಾ ಕಾರಣಗಳಿಂದ ಮಧ್ಯಮ ತರಗತಿಯಲ್ಲಿ ಕೆಲವರ ಬೊಕ್ಕಸಗಳಲ್ಲಿ ಐಶ್ವರ್ಯವು ಅವಿತುಕೊಳ್ಳುವಂತಾಗಿದೆ. ಮಹಾಯುದ್ಧದ ಕಾಲದಲ್ಲಿ ಮಾಲಗಳ ಮೌಲ್ಯದಲ್ಲಾದ ತೀವ್ರ ಅತಿಕ್ರಮಣ ಅದನ್ನು ಹಿಂಬಾಲಿಸಿ ಬಂದ ಬರಗಾಲದ ಆರ್ಥಿಕ ದುಃಸ್ಥಿತಿ. ಇದು ಸಾಲದೆಂಬಂತೆ ಕ್ಷಿಪ್ರವಾಗಿ ಏರಿಸಲ್ಪಟ್ಟ ಆಂತರರಾಷ್ಟ್ರೀಯದ ದರ. ಇದೆಲ್ಲಾ ಸೇರಿದಾಗ ಗ್ರಾಮವಾಸಿಗಳಾದ ವರ್ಗದಾರರು ತಮ್ಮ ಜಮೀನುಗಳನ್ನು ಕಳೆದುಕೊಳ್ಳುವಂತಾಯಿತು, ಅವುಗಳು ನಗರ ವಾಸಿಗಳಾದ ಧನಾಢ್ಯ ಮಧ್ಯವರ್ತಿಗಳ ಕೈಸೇರುವಂತಾಯಿತು. ಈ ಧನಾಢ್ಯರಿಗೆ ಜಮೀನೆಂಬುದು ಅತಿ ಲಾಭದಾಯಕವಾಗಿರುವ ಒಂದು ಬ್ಯಾಂಕಿನ ಹಾಗೆಯೇ, ಬಡ್ಡಿಯು ಸರಾಗವಾಗಿ ದೊರೆಯುತ್ತಿರಬೇಕಲ್ಲದೆ ಇನ್ನಾವ ಬಯಕೆಯೂ ಅವರಿಗಿಲ್ಲ. ಇಂತಹ ಧನಿಕರಿಗೆ ಒಂದು ಬಾರಿಯಾದರೂ ತಮ್ಮ ಜಮೀನುಗಳನ್ನು ಸಂದರ್ಶಿಸುವ ಅವಕಾಶವು ಒದಗುವುದಿಲ್ಲ, ಒಕ್ಕಲಿಗೆ ಸಿಕ್ಕಿರುವ ಬೆಳೆಯ ಗುಣದೋಷಗಳನ್ನು ಅವರು ಚರ್ಚಿಸುವುದಿಲ್ಲ. ಊರಲ್ಲಿ ಯಾವ ಬರಗಾಲ ಬಂದರೂ ಅವರು ನೆಮ್ಮದಿಯಿಂದ ಗೇಣಿಚೀಟಿನ ಕರಾರುಗಳನ್ನು ಮಾತ್ರವೇ ಪರಿಶೀಲಿಸುತ್ತಿರುವರು. ಅತಿ ವೃಷ್ಟಿ, ಅನಾವೃಷ್ಟಿ, ಮಹಾಪೂ

(೬ನೇ ಪುಟವನ್ನು ನೋಡುವುದು.)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೊಕಿಲರ್ (ರಜಿಸ್ಟರ್ಡ್)
ವ್ಯಾಧಿಗೆ ಸಿದ್ಧೌಷಧ
GONO KILLER
ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ನೆ ಎಂಬಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕಡೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯದೂ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಸ್ರಾವ ಮುಂತಾದವುಗಳು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.
ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಛಾರ್ಜು ಬೇರೆ.
ನಕಲಿ ಮದ್ದುಗಳಿಗೆ ಬಲಿಯಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ
ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.
Sole Manufacturer: Dr. D. N JASANI, Vithalbhai Patal Road, BOMBAY 4

# ಅಲ್ಪಸಂಖ್ಯಾಕ ಮತ್ತು ಜಾತೀಯ ಪ್ರಶ್ನೆ.

## ರಾಷ್ಟ್ರಸಭೆಯಲ್ಲಿ ಪಂಡಿತ ಜವಾಹರಲಾಲ ನೆಹರೂರವರ ಮಹತ್ವಪೂರ್ಣ ಭಾಷಣ

★ ★

ಹಿಂದೂಸ್ಥಾನದ ಅಲ್ಪಸಂಖ್ಯಾಕರ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಕಾಂಗ್ರೆಸು ಯಾವಾಗಲೂ ಮನ್ನಿಸಿ ರಕ್ಷಿಸುವದೆಂಬ ಠರಾವನ್ನು ಮಹಾಸಭೆಯು ಮಂಡಿಸುತ್ತಾ, ಪಂಡಿತ ಜವಾಹರಲಾಲ ನೆಹರೂರವರು ಒಂದು ಮಹತ್ವಪೂರ್ಣ, ಉದ್ಬೋಧಕರ ಮತ್ತು ಸ್ಫೂರ್ತಿದಾಯಕ ಭಾಷಣವನ್ನು ಮಾಡಿದರು. ಅದರ ಸಾರಾಂಶವು ಈ ಪ್ರಕಾರ ಇರುತ್ತದೆ.

ಅಲ್ಪಸಂಖ್ಯಾಕರಲ್ಲಿ ರಾಷ್ಟ್ರೀಯ ಭಾವನೆಯು ವಿಕಾಸವಾಗುತ್ತಿರುವದನ್ನು ನೋಡಿ ಪ್ರತಿಯೊಬ್ಬ ದೇಶಾಭಿಮಾನಿಗೂ ಸಂತೋಷವಾಗುತ್ತದೆ. ಅಲ್ಪ ಸಂಖ್ಯಾಕರು ಸ್ವದೇಶದ ಸ್ವಾತಂತ್ರ್ಯಕ್ಕಾಗಿ ಬಹು ಸಂಖ್ಯಾಕರೊಂದಿಗೆ ಕೂಡಿ ಒಕ್ಕಟ್ಟಿನಿಂದ ದುಡಿಯಲಿಕ್ಕೆ ಹೆಚ್ಚೆಚ್ಚು ಪ್ರಯತ್ನಿಸುತ್ತಿರುವುದನ್ನು ನೋಡಿ ಕಾಂಗ್ರೆಸ್ಸಿಗೆ ಬಹು ಆನಂದವಾಗಿದೆ. ಕಳೆದ ಒಂದೆರಡು ವರ್ಷಗಳಲ್ಲಿ ಮುಸಲ್ಮಾನರೇ ಮೊದಲಾದ ನೂರಾರು ಅಲ್ಪಸಂಖ್ಯಾಕ ಜಾತಿಗಳು ಕಾಂಗ್ರೆಸ್ಸನ್ನು ಸೇರಿ ಸ್ವಾತಂತ್ರ್ಯಸಮರದಲ್ಲಿ ತಮ್ಮ ಸಹಾಯ ಸಹಾನುಭೂತಿಗಳನ್ನು ಕೊಟ್ಟವು; ಜನತೆಯ ಸುಲಿಗೆಯನ್ನು ಪೂರ್ಣ ನಿಲ್ಲಿಸುವ ಕಾಂಗ್ರೆಸ್ಸಿನ ಪ್ರಯತ್ನದಲ್ಲಿ ಈ ಜಾತಿಗಳು ಕಾಂಗ್ರೆಸ್ಸಿಗೆ ಬೆಂಬಲವಾದುವು.

೧೯೩೭ನೆಯ ಇಸವಿ ಅಕ್ಟೋಬರ ತಿಂಗಳಲ್ಲಿ ಕಲ್ಕತ್ತದಲ್ಲಿ ಕೂಡಿದ ಕಾಂಗ್ರೆಸ್ ಕಾರ್ಯಕಾರೀ ಕಮಿಟಿಯು ಮಾಡಿದ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ಸಂಬಂಧದ ನಿರ್ಣಯವನ್ನು ಒಪ್ಪಿ ಕಾಂಗ್ರೆಸು ಅದನ್ನು ಮನ್ನಿಸುತ್ತದೆ. ಅಲ್ಪಸಂಖ್ಯಾಕರ ಶ್ರದ್ಧೆ, ಧರ್ಮ, ಸಂಸ್ಕೃತಿ ಮತ್ತು ಭಾಷೆಯ ರಕ್ಷಣೆಮಾಡುವದೆಂದು ಕಾಂಗ್ರೆಸು ಘಂಟಾಘೋಷದಿಂದ ಹೇಳುತ್ತದೆ. ಕಾಂಗ್ರೆಸ್ಸಿನ ಸಂಬಂಧ ಅಥವಾ ಕೈಯಿರುವ ಸರಕಾರದ ಯಾವುದೇ ಯೋಜನೆಯಲ್ಲಾದರೂ ಅದು ಅಲ್ಪ ಸಂಖ್ಯಾಕರ ವಿಕಾಸ ಮತ್ತು ಬೆಳವಣಿಗೆಗೆ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುವದು. ಅವರ ರಾಜನೈತಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಂಪತ್ತಿಕ ಉನ್ನತಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಿ ಕೊಡುವದು

### ಕಾಂಗ್ರೆಸ್ ಮತ್ತು ಅಲ್ಪಸಂಖ್ಯಾಕರು.

ಜಾತೀಯ ಪ್ರಶ್ನೆಯನ್ನು ನಾನು ಎಲ್ಲಾ ದೃಷ್ಟಿಯಿಂದ ವಿಚಾರಿಸಿದ್ದೇನೆ ಜಾತಿಗಳಿಗೆ ನಿಜವಾಗಿ ಬೇಕಾಗಿರುವದೇನು? ಅವರ ನ್ಯಾಯವಾದ ಹಕ್ಕುಬಾಧ್ಯತೆಗಳ ರಕ್ಷಣೆತಾನೆ? ಕಾಂಗ್ರೆಸ್ಸಿನಲ್ಲಿ ಈಗ ಸಾವಿರಾರು ಅಲ್ಪಸಂಖ್ಯಾಕ ಜಾತಿಗಳಿವೆ. ಪ್ರತಿಯೊಂದು ಜಾತಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಕ್ಕುಬಾಧ್ಯತೆಗಳಿಗೆ ಕಾಂಗ್ರೆಸು ಮೊದಲೇ ಭದ್ರತೆಕೊಟ್ಟಿರುವದು ಪ್ರತಿಯೊಂದು ಜಾತಿಯವನು ಕಾಂಗ್ರೆಸ್ಸಿಗೆ ಸೇರಿ ತನ್ನ ಮಾತೃಭೂಮಿಯ ಬಂಧವಿಮೋಚನೆಗೆ ಪ್ರಯತ್ನಿಸಬೇಕೆಂದು ನಮ್ಮ ಆಶೆಯಾಗಿರುವದು. ಇತ್ತೀಚೆಗೆ ನಡೆದ ಚುನಾವಣೆಗಳು ಕಾಂಗ್ರೆಸು ತನ್ನ ಸಂದೇಶವನ್ನು ಹಳ್ಳಿಹಳ್ಳಿಗಳ ಮನೆಮನೆಗಳ ತನಕ ಸಾರಿತು. ಹಿಂದೂ ಮುಸಲ್ಮಾನ ಎಂಬ ಭೇದವಿಲ್ಲದೆ ಪ್ರತಿಯೊಬ್ಬನೂ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಶ್ಲಾಘಿಸಿದ್ದಾನೆ ಕಾಂಗ್ರೆಸು ಅಲ್ಪಸಂಖ್ಯಾಕರಿಗಾಗಿಯೂ ಯಾಕೆ ಕೆಲಸಮಾಡುತ್ತದೆ ಎಂದು ಕೆಲವು ಜಾತಿಸಂಘಗಳು ಕೇಳುತ್ತವೆ. ಆದರೆ ಕಾಂಗ್ರೆಸು ಭಾರತೀಯರಿಗಾಗಿ ಕೆಲಸಮಾಡುವದಲ್ಲವಾದರೆ, ಬೇರೆ ಯಾರಿಗಾಗಿ ಕೆಲಸಮಾಡಬೇಕು? ಭಾರತೀಯರಲ್ಲಿ ಅಲ್ಪಸಂಖ್ಯಾಕರೂ ಬಹು ಸಂಖ್ಯಾಕರೂ, ಹಿಂದೂ ಮುಸಲ್ಮಾನ ಕ್ರೈಸ್ತ, ಸಿಕ್ಕ, ಫಾರಸಿ ಮೊದಲಾದ ಎಲ್ಲರೂ ಇರುವರಷ್ಟೆ?

ಬಹು ಸಂಖ್ಯಾಕರ ಮಾತು ಕೇಳಿದೊಡನೆ ಅಲ್ಪಸಂಖ್ಯಾಕರು ಹೆದರುತ್ತಿರುವಂತೆ ಕಾಣುತ್ತಾರೆ. ಆದರೆ ಅವರು ಯಾಕೆ ಹಾಗೆ ಹೆದರಬೇಕೋ ಗೊತ್ತಾಗುವುದಿಲ್ಲ ಕಳೆದ 15 20 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಎಷ್ಟೋ ಆಶ್ಚರ್ಯಕರ ಘಟನೆಗಳು ಘಟಿಸಿರುವವು. ಅವುಗಳಲ್ಲಿ ಅತ್ಯಾಶ್ಚರ್ಯಕರ ಘಟನೆಯೆಂದರೆ – ಅಲ್ಪಸಂಖ್ಯಾಕರು ಕಾಂಗ್ರೆಸ್ಸನ್ನು ಸೇರುವದಾಗಿದೆ. ಮುಸಲ್ಮಾನರ ಮಾತು ಹೇಳುವದಾದರೆ ಅವರು ಇತ್ತೀಚೆಗೆ ಕಾಂಗ್ರೆಸ್ಸಿಗೆ ಸೇರಿಲ್ಲ ಪ್ರತಿಯೊಂದು ಆಂದೋಲನದಲ್ಲಿ ಅವರಿದ್ದರು. 1921ರ ಮಾತು ಹಾಗಿರಲಿ 1930ರಲ್ಲಿ ಕೂಡ ಕಾಂಗ್ರೆಸ್ಸಿನ ಕರೆಗೆ ತಲೆಬಗ್ಗಿಸಿ 15000 ಮುಸಲ್ಮಾನರು ಜೈಲಿಗೆ ಹೋಗಿರುವರು. ಅವರಂತೆ ಕ್ರೈಸ್ತರು, ಯಹೂದಿಯರು, ಫಾರಸಿಯರು, ಸಿಕ್ಖರು ಮತ್ತು ಉಳಿದ ಇತರ ಜಾತಿಯ ಜನಗಳು ಕೂಡ ಸ್ವಾತಂತ್ರ್ಯಚಳವಳಿಯಲ್ಲಿ ಸೇರಿರುವರು.

### ಕಾಂಗ್ರೆಸ್-ಎಲ್ಲಾ ಜಾತಿಗಳ ಸಂಸ್ಥೆ

ಲಕ್ನೊ ಕಾಂಗ್ರೆಸ್ಸಿನ ಮೊದಲು ಸಾಮಾನ್ಯವಾಗಿಯೂ, ಅನಂತರ ವಿಶೇಷವಾಗಿಯೂ ಹಿಂದೂದೇಶದ ಎಲ್ಲಾ ಜಾತಿಗಳ ಎಲ್ಲಾ ಜನರನ್ನು ಕಾಂಗ್ರೆಸಿಗೆ ಬರುವಂತೆ ಪ್ರಯತ್ನಗಳು ನಡೆದವೆ. ಆದರೆ ಕಾಂಗ್ರೆಸ್ಸು ಮುಸಲ್ಮಾನರನ್ನು ತನ್ನ ಪಕ್ಷಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದೆಯೆಂದು ಈಗ ಮಾತ್ರ ಕೆಲವು ಮುಸಲ್ಮಾನ ಗ್ರಹಸ್ಥರು ಕೂಗಿಕೊಳ್ಳುವುದೇತಕ್ಕೆ? ಕಾಂಗ್ರೆಸು ಹಾಗೆ ಪ್ರಯತ್ನಿಸಿದರೆ ಅದರ ತಪ್ಪಾದರೂ ಏನು? ಜಾತಿಮತಭೇದಗಳನ್ನು ಬಿಟ್ಟು ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿರೆಂದು ಹೇಳಿದರೆ ಅದು ಪಾಪವಾಗುವದೆ? ಅದೊಂದು ಅಪರಾಧವಾಗುವದೇ? ಕಾಂಗ್ರೆಸು ಜಾತೀಯ ಮತ್ತು ಧಾರ್ಮಿಕ ಸಂಸ್ಥೆ ಆಗಿರುವದಿಲ್ಲ ಅದು ಕೇವಲ ರಾಜಕೀಯ ಸಂಸ್ಥೆಯಾಗಿರುವದು ದಾಸ್ಯ ಮತ್ತು ದಾರಿದ್ರ್ಯವನ್ನು ದೇಶದಿಂದ ತೊಲಗಿಸಬೇಕೆಂಬುದೇ ಅದರ ಉದ್ದೇಶಸಾಧನೆಯಾಗಿರುವದು ಎಲ್ಲ ಜಾತಿಮತೀಯರ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುವ ಅದು ಎಲ್ಲಾ ಜಾತಿಮತಗಳ ಜನರಿಗೆ ಸೇರಿದ ಏಕಮಾತ್ರ ಸಂಸ್ಥೆಯಾಗಿರುವದು.

ಹಾಗಿರುವಾಗ ಕಾಂಗ್ರೆಸ್ಸು ಅಲ್ಪ ಸಂಖ್ಯಾಕರಿಗಾಗಿ ಏನು ಮಾಡಬೇಕು, ಏನು ಮಾಡಬಾರದು? ಕಷ್ಟದಾರಿದ್ರ್ಯಗಳು, ದಾಸ್ಯ ಗುಲಾಮತನಗಳು ಯಾವದಾದರೂ ಒಂದು ಜಾತಿಮತ ಪಂಗಡಕ್ಕೆ ಸೇರಿದ ಪ್ರಶ್ನೆಯಾಗಿರುವುದಿಲ್ಲ ಅವುಗಳ ಪೀಡೆಯಿಂದ ಪ್ರತಿಯೊಂದು ಜಾತಿಮತ ಪಂಗಡವು ಪೀಡಿತವಾಗಿದೆ ಧಾರ್ಮಿಕ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೆ ಇದ್ದೇ ಇರುವದು ಅದನ್ನು ಯಾರೂ ಕಿತ್ತುಕೊಳ್ಳಲಾರರು ಪ್ರತಿಯೊಂದು ಜಾತಿಮತ ಪಂಗಡಕ್ಕೆ ಅವರ ಧರ್ಮ ಸಂಸ್ಕೃತಿ ಭಾಷೆಯ ರಕ್ಷಣೆಯಾಗಬೇಕು. ಈ ರಕ್ಷಣೆಭದ್ರತೆಗಳು ಜಾತಿಮತಗಳಿಗೆ ದೊರೆತ ಮೇಲೆ ಅವರು ಕಚ್ಚಾಡಿಕೊಳ್ಳುವುದು ಯಾವುದಕ್ಕಾಗಿ? ಆರ್ಥಿಕ ಪ್ರಶ್ನೆಗಳು ಹಿಂದು ಅಥವಾ ಮುಸಲ್ಮಾನರಿಗೆ ಮಾತ್ರ ಸಂಬಂಧಪಟ್ಟು ಇರುವುದಿಲ್ಲ ಗೋವು ಅಥವಾ ಮಸೀದಿಯ ಮುಂದೆ ವಾದ್ಯಕ್ಕಾಗಿ ತಲೆತಲೆ ಒಡಕೊಳ್ಳುವವರು ಹುಚ್ಚರು. ಇಂಥ ಹುಚ್ಚರು ನಮ್ಮ ದೇಶದಲ್ಲಿ ತುಂಬಾ ಮಂದಿ ಇದ್ದಾರೆ. ಶಿಕ್ಷಿತರಲ್ಲೂ ಈ ತರದ ಹುಚ್ಚರು ಇರುವುದು ಒಂದು ಆಶ್ಚರ್ಯದ ಸಂಗತಿಯಾಗಿರುತ್ತದೆ

### ದಾರಿದ್ರ್ಯವು ಜಾತೀಯ ಪ್ರಶ್ನೆಯಲ್ಲ!

ಬಡತನವು ಆ ಜಾತಿ ಅಥವಾ ಈ ಜಾತಿಗೆ ಸಂಬಂಧಪಟ್ಟ ಸಂಗತಿಯಲ್ಲ. ಕಾಂಗ್ರೆಸು ಹಿಂದೂ ಅರಸುತನವನ್ನು ಸ್ಥಾಪಿಸಿರುತ್ತದೆಂದು ಸೂಚಿಸುವ ಅರ್ಥದಲ್ಲಿ ಒಂದು ಜಾತೀಯ ಸಂಸ್ಥೆಯು ಕಾಂಗ್ರೆಸ್ಸಿನ ವಿರುದ್ಧ ಪ್ರಚಾರ ಕಾರ್ಯವನ್ನು ನಡೆಸಿತ್ತು. ಈಗ ಹಿಂದೀಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವ ಮತ್ತೆ ವಂದೇ ಮಾತರಮನ್ನು ರಾಷ್ಟ್ರೀಯ ಹಾಡನ್ನಾಗಿ ಮಾಡುವ ಕುರಿತು ಇದರಂಥ ಜಾತೀಯ ಸಂಘಗಳು ವಿರುದ್ಧಪ್ರಚಾರಮಾಡುತ್ತಿವೆ ಹಿಂದೂ ಅರಸುತನ ಅಥವಾ ಮುಸಲ್ಮಾನ ಬಾದಶಾಹಿಗಳು ಹಿಂದೂಸ್ಥಾನದಲ್ಲಿ ಇನ್ನು ಸ್ಥಾಪಿಸಲ್ಪಡುವವು ಎಂದು ತಿಳಿಯುವವರು ಹುಚ್ಚರೇ ಸರಿ ರಾಷ್ಟ್ರಭಾಷೆಯಾಗಿ ಹಿಂದೀ ಹಿಂದೂಸ್ಥಾನಿಯ ಪ್ರಚಾರಮಾಡುವದರಿಂದ ಪ್ರಾಂತೀಯ ಭಾಷೆಗಳನ್ನು ಅಲಕ್ಷಿಸುವರೆಂದು ಯಾರಾದರೂ ಅರ್ಥ ಮಾಡಲಿಕ್ಕೆ ಕೂಡ ಇರುವದಿಲ್ಲ ಹಾಗಿರುವಾಗ ವ್ಯರ್ಥ ಈ ಬೊಬ್ಬೆ ಯಾತಕ್ಕೆ?

ಶ್ರೀ. ಶೇಟ್ ಜಮ್ನಾಲಾಲಬಜಾಜರವರು

ಪಂಜಾಬಿನ ಹಳ್ಳಿಹಳ್ಳಿಗಳಲ್ಲಿ ಜಾತೀಯ ಪ್ರಶ್ನೆಯು ಅತ್ಯಂತ ವಿಕಟರೂಪವನ್ನು ತಾಳಿರುತ್ತದೆಂದು ಹೇಳುತ್ತಾರೆ ಆದರೆ, ನಿಜವಾಗಿ ನೋಡಿದರೆ ಅಲ್ಲಿ ಜಾತೀಯ ಪ್ರಶ್ನೆಯು ಸುದ್ದಿ ಎತ್ತುವವರನ್ನು ಕೂಡ ನಾನು ಕಂಡಿರುವದಿಲ್ಲ ಹಿಂದೂ ಮುಸಲ್ಮಾನ ಭೇದವಿಲ್ಲದೆ ಎಲ್ಲರೂ ಹೊಟ್ಟೆಯ ಬಾಧೆಯಿಂದ ಪೀಡಿತರಾಗಿದ್ದಾರೆ ಜಾತೀಯ ಸಂಘಗಳು ಜಾತೀಯ ಹಕ್ಕುಬಾಧ್ಯತೆಗಳ ರಕ್ಷಣೆಯಾಗಬೇಕೆಂದು ಅರಚಿಕೊಳ್ಳುತ್ತಿವೆ ಆದರೆ, ಕಾಂಗ್ರೆಸು ಪ್ರತಿಯೊಂದು ಜಾತಿಗೆ ಅದರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವದೆಂದು ಎಂದೋ ಮಾತು ಕೊಟ್ಟಿದೆ ಅಂಥ ಭರವಸೆಯನ್ನು ಅದು ಆಗಾಗ್ಗೆ ಕೊಡುತ್ತ ಬಂದಿದೆ ಮತ್ತೆ ಜಾತೀಯ ನಿರ್ಣಯವು ಅಲ್ಪ ಸಂಖ್ಯಾಕರಿಗೆ ಎಸೆಂಬ್ಲಿ ಕೌನ್ಸಿಲುಗಳಲ್ಲಿಯೂ ನೌಕರಿ ಉದ್ಯೋಗಗಳಲ್ಲಿಯೂ ಸ್ಥಾನಗಳಲ್ಲಿಯೂ ಕಾದಿಟ್ಟಿದೆ. ಇನ್ನು ಅವರಿಗೆ ಏನು ಬೇಕಾಗಿದೆ? ಮಂತ್ರಿಪದವಿಗಳನ್ನು ಪಡೆಯಲಿಕ್ಕಾಗಿಯೋ, ಸರಕಾರಿ ನೌಕರಿಗಳನ್ನು ಸಂಪಾದಿಸಲಿಕ್ಕೋ, ಎಸೆಂಬ್ಲಿ ಕೌನ್ಸಿಲುಗಳಲ್ಲಿ ಮೆಂಬರರುಗಳಾಗಲಿಕ್ಕೊ, ಕೇವಲ ಮಧ್ಯಮ ಅಥವಾ ಉಚ್ಚವರ್ಗದ ಜಾತಿಜನರು ಈ ಬೊಬ್ಬೆಯನ್ನು ಎಬ್ಬಿಸಿರುತ್ತಾರೆಂದು ಸ್ವಲ್ಪ ವಿಚಾರಮಾಡಿದರೆ ಗೊತ್ತಾದೀತು ಈ ಅಲ್ಪ ವಿಷಯಗಳಿಗಾಗಿ ನಾವು ಸ್ವರಾಜ್ಯದಂಥ ಮಹತ್ಪೂರ್ಣ ವಿಷಯವನ್ನು ಬದಿಗೊತ್ತಬೇಕೆ? ಅಥವಾ ಸ್ವರಾಜ್ಯವನ್ನು ಬಿಟ್ಟು ಈ ಅಲ್ಪ ವಿಷಯಗಳಿಗಾಗಿ ಕಾದಾಡುತ್ತಿರಬೇಕೆ? ಇದು ಮೂರ್ಖತನವೆನಿಸುವದಾದರೂ ಕೂಡ ಅಲ್ಪಸಂಖ್ಯಾಕರ ನ್ಯಾಯವಾದ ಮತ್ತು ರಾಷ್ಟ್ರವಿಘಾತುಕವಲ್ಲದ ಕೇಳಿಕೆಗಳನ್ನು ಮನ್ನಿಸಲಿಕ್ಕೆ ಕಾಂಗ್ರೆಸ್ಸು ಸದಾ ಸಿದ್ಧವಿರುವುದೆಂದು ಬಾರಿಬಾರಿಗೂ ಹೇಳುತ್ತಾಬಂದಿದೆ. ಕಾಂಗ್ರೆಸ್ ದ್ವಾರವು ಎಲ್ಲರಿಗಾಗಿ ತೆರೆದಿದೆ. ಎಲ್ಲರಿಗೆ ಕಾಂಗ್ರೆಸ್ಸಿನಲ್ಲಿ ಸ್ವಾಗತವಿರುತ್ತದೆ. ದೇಶಮಾತೆಯ ದಾಸ್ಯಶೃಂಖಲೆಗಳನ್ನು ಕಡಿದು ಅವಳನ್ನು ಬಂಧಮುಕ್ತಳನ್ನಾಗಿ ಮಾಡುವವರು-ಅವರು ಹಿಂದೂ ಮುಸಲ್ಮಾನ, ಕ್ರೈಸ್ತ, ಫಾರಸಿ, ಸೀಕ, ಯಹೂದಿ—ಯಾರೇ ಆಗಿರಲಿ, ಅವರನ್ನು ಕಾಂಗ್ರೆಸು ಪ್ರೇಮಾದರಗಳಿಂದ ಆಲಿಂಗಿಸುವುದು. ಕೇವಲ ದೇಶದ ಸ್ವಾತಂತ್ರ್ಯದಲ್ಲಿ ಶ್ರದ್ಧೆವಿಶ್ವಾಸಗಳಿಲ್ಲದವರಿಗೆ ಮಾತ್ರ ಅದರಲ್ಲಿ ಪ್ರವೇಶವು ಸಿಕ್ಕಲಾರದು.

### ಹಿಂದೂದೇಶಕ್ಕೊಂದು ರಾಷ್ಟ್ರಭಾಷೆ

ಎಂಟನೇ ರಾಷ್ಟ್ರಭಾಷಾ ಸಮ್ಮೇಳನವು ಮೊನ್ನೆ ಹರಿಪುರದಲ್ಲಿ ಕಾಂಗ್ರೆಸ್ ಅಧಿವೇಶನದ ಸಮಯ, ಶ್ರೀ ಶೇಟ್ ಜಮ್ನಾಲಾಲಬಜಾಜರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು ಭಾರತೀಯ ರಾಷ್ಟ್ರಬೆಳವಣಿಗೆಗೆ ಎಲ್ಲಾ ಪ್ರಾಂತ್ಯಗಳಲ್ಲಿ ಹಿಂದೀ ಯಾ ಹಿಂದೂಸ್ಥಾನಿಯ ಪ್ರಚಾರವಾಗಬೇಕೆಂದು ರಾಷ್ಟ್ರಪತಿ ಭೋಸರು ಅಭಿಪ್ರಾಯಪಟ್ಟರು


ನಿಷ್ಣಾತ ವೈದ್ಯರು
ನಿಮ್ಮ ದಮ್ಮಿನ ಚಿಕಿತ್ಸೆ
ಯನ್ನು
ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ಮಿನಿಟುಗಳಲ್ಲಿ ಚುಟಿಕಿ ಹೊಡೆದಂತೆ ಗುಣಮಾಡುವೆನೆಂದೆ ಅವನು ಹೇಳಬಹುದೆಂದು ನಿಮಗೆ ಅನಿಸುವದೊ? ದಮ್ಮನ್ನು ತತ್ಕಾಲಕ್ಕೆ ಗುಣಮಾಡುವ ಉಪಾಯವು ಎಫಿಡ್ರಿಮದ ಗುಳಿಗೆಗಳು ಅಥವಾ ಹೊಗೆತೆಗೆದುಕೊಳ್ಳುವ ಔಷಧಗಳು ಆದರೆ ಇವು ದಮ್ಮನ್ನು ಪೂರ್ಣ ನಾಶಪಡಿಸಲು ತೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ ಪರಿಣಾಮದಲ್ಲಿ ಈ ಔಷಧಗಳ ಗಂಟಲದ ಹಾಗೂ ಶ್ವಾಸನಳಿಗೆಗಳ ಬೇನೆಯನ್ನು ಹೆಚ್ಚಿಸಿ ರೋಗಿಯನ್ನು ಕಾಯಂ ದವಿನವನನ್ನಾಗಿ ಮಾಡಿಬಿಡುವವು

ದಮ್ಮು ಮೆಲ್ಲಮೆಲ್ಲಗೆ ಆದರೆ ನಿಶ್ಚಿತವಾಗಿ ಗುಣಮಾಡುವ ಔಷಧಿಗಳಲ್ಲಿ ಪುರೋಹಿತ ಶ್ವಾಸಹಾರಿ ಇದೊಂದು ಪ್ರಭಾವಶಾಲಿಯಾದ ಔಷಧವಾಗಿದೆ ದಮ್ಮು, ದಾಹ ಹತ್ತುವದು, ಮುಂಜಾವಿನ ಪಸಿಕೆ, ಕಂಠದಾಹ ಮಾಡುವ ಕೆಮ್ಮು ಮತ್ತು ಪುಪ್ಪುಸದ ಯಾವತ್ತೂ ವಿಕಾರಗಳನ್ನು ಗುಣಮಾಡಲು ಈ ಔಷಧ ಯೋಜನೆಯನ್ನು ನಿರ್ಭೀತಿಯಿಂದ ಮಾಡಬೇಕು ಇದರಿಂದ ಸಾವಿರಾರು ದಮ್ಮಿನವರು ರೋಗಮುಕ್ತರಾಗಿರುವರು ಪ್ರತ್ಯೇಕ ಊರಿನ ಕೆಮಿಸ್ಟ ಇಲ್ಲವೆ ಅಂಗಡಿಕಾರರಲ್ಲಿ ಇದು ರೂ. ೨, ೩/೪ ಮತ್ತು ರೂ ೬ ಈ ಪ್ರಕಾರ ಬೇರೆ ಬೇರೆ ಬೆಲೆಯ ಸಣ್ಣ ದೊಡ್ಡ ಸೀಸೆಗಳಲ್ಲಿ ಮಾರಲ್ಪಡುತ್ತದೆ




ಮಂಗಳೂರು — ದಿ ಪ್ರೊವ್ಯೆಲರ್ ಸ್ಟೋರ್ಸ್, ರಥಬೀದಿ.

ಸರ್ವಾಧಿಕಾರಿಗಳ ಬಾಲ್ಯ: ೪

# "ಮುಸ್ತಾಫಾ ಕೆಮಲ್"

★

ತಂದೆಯ ಕೃಪೆಯಿಂದಾಗಿ ಮುಸ್ತಾಫಗೆ ಪ್ರೌಢ ಶಿಕ್ಷಣವು ದೊರೆಯಿತು. ಮಿತ್ರನೊಬ್ಬನ ಪ್ರೇರಣೆಯಿಂದಾಗಿ ಮಿಲಿಟರಿಯಲ್ಲಿ ಪ್ರವೇಶವು ಲಭಿಸಿತು. ಸ್ವಪ್ರತಿಭೆಯಿಂದ ಅದರಲ್ಲಿ ಅಗ್ರಸ್ಥಾನವನ್ನು ಅಲ್ಪಾವಧಿಯಲ್ಲೇ ಸಾಧಿಸಿದರು. ಟರ್ಕಿಯಲ್ಲಿ ಹಳತು ಮತ್ತು ಹೊಸತು ಎಂಬವುಗಳ ಮಂಥನದಿಂದಾಗಿ ಆವಿರ್ಭವಿಸಿದ ನವನೀತವೇ ಮುಸ್ತಾಫಾ ಕೆಮಲ್. ಆ ನವನೀತದ ಸವಿಯನ್ನವರು ಇಂದು ಟರ್ಕಿಗೆ ಉಣ್ಣಿಸುತ್ತಿರುವರು.

★

"ನನ್ನ ಬಾಲ್ಯದ ದಿನಗಳ ಕುರಿತು ನನಗೆ ಅದೊಂದೇ ವಿಷಯವು ನೆನಪಿರುವುದು," ಆಧುನಿಕ ಟರ್ಕಿಯ ಅಧಿಕಾರಿಗಳಾದ ಮುಸ್ತಾಫಾ ಕೆಮಲರ ಮಾತುಗಳಿವು, "ಅಲ್ಲದೆ ನನ್ನ ಮನೋಪಟದ ಮೇಲೆ ಅದರ ಅಚ್ಚಳಿಯದ ಮುದ್ರೆಯೊತ್ತಲ್ಪಟ್ಟಿರುವುದು."

"ನನ್ನ ವಿದ್ಯಾಭ್ಯಾಸದ ಕುರಿತೇ ಆ ವಿಷಯವು. ನನ್ನ ತಂದೆ ತಾಯಿಗಳೊಳಗೆ ಈ ಕುರಿತು ಭಿನ್ನಾಭಿಪ್ರಾಯವಿತ್ತು. ನನ್ನ ತಾಯಿಯು ಹಳೇ ಸಾಂಪ್ರದಾಯದ ಹೆಂಗಸು. ಆಕೆಯು ತನ್ನ ಇಡೀ ಜೀವನವನ್ನು ದೇವಭಕ್ತಿ, ಧ್ಯಾನಾದಿ ಧಾರ್ಮಿಕ ಪ್ರಸಂಗಗಳಲ್ಲಿಯೇ ಕಳೆದವಳು."

"ನನ್ನ ತಂದೆಯು ಇದಕ್ಕೆ ಸರಿ ವಿರುದ್ಧ ಸ್ವಭಾವದವನು. ಆತನು ವಿಶಾಲ ಮನೋವೃತ್ತಿಯವನು. ಧಾರ್ಮಿಕ ಗುರುಗಳನ್ನು ನೋಡಿದರೆ ಆತನಿಗಾಗುತ್ತಿದ್ದಿಲ್ಲ. ಆಗಲೆ ಪಾಶ್ಚಾತ್ಯ ದೇಶಗಳಿಂದ ಹರಿದುಬರುತ್ತಿರುವ ನಾಗರಿಕ ವಿಷಯಗಳತ್ತ ಆತನ ಮನಸ್ಸು ಒಲಿದಿತ್ತು. ಆದುದರಿಂದ ನನ್ನನ್ನು ಒಂದು ಪಾಠಶಾಲೆಗೆ ಕಳುಹಿಸಿ, ಕುರಾನನ್ನು ಕಲಿಸುವ ಬದಲಾಗಿ, ಆಧುನಿಕ ವಿಜ್ಞಾನಾದಿ ವಿಷಯಗಳನ್ನು ಕಲಿಸಬೇಕೆಂದು ಆತನ ಆಸೆಯಾಗಿತ್ತು."

"ಈ ಒಗೆಯ ವಿರೋಧಾಭಿಪ್ರಾಯಗಳ ಜಗಳದಲ್ಲಿ, ಅದೊಂದು ಉಪಾಯದಿಂದ ನನ್ನ ತಂದೆಯು ತನ್ನ ಪಂಥವನ್ನು ಸಾಧಿಸಿಕೊಂಡನು. ನನ್ನ ತಾಯಿಯ ಇಚ್ಛೆಗೆ ಮಣಿಯುವಂತೆ ನಟಿಸಿ, ಶಾಸ್ತ್ರೋಕ್ತ ವಿಧಿಗನುಸಾರವಾಗಿ ತಂದೆಯು ನನ್ನನ್ನು ಫಾತೀಮಾ ಮೋಲಾ ಕದಿನ್ ಶಾಲೆಗೆ ಸೇರಿಸಿದರು."

"ನನ್ನನ್ನು ತಾಯಿಯು ಯೋಗ್ಯರೀತಿಯಲ್ಲಿ ಸಿಂಗರಿಸಿದಳು. ಹೋಜಾ (ಉಪಾಧ್ಯಾಯ) ತನ್ನ ಇತರ ವಿದ್ಯಾರ್ಥಿಗಳೊಡನೆ ನಮ್ಮ ಮನೆಗೆ ಬಂದರು. ತಂದೆತಾಯಿ ಗುರುಹಿರಿಯರಿಗೆ ವಂದಿಸಿ, ನನ್ನ ಕೈಬೆರಳ ತುದಿಗಳಿಂದ ನನ್ನ ಎದೆ ಮತ್ತು ಹಣೆಯನ್ನು ಮುಟ್ಟಿ, ನಾನು ಅವರ ಕೈಗಳನ್ನು ಚುಂಬಿಸಿದೆನು. ಬಳಿಕ ನನ್ನ ಸಹಪಾಠಿಗಳು ಆನಂದದಿಂದ ನನ್ನನ್ನು ಮೆರವಣಿಗೆಯಲ್ಲಿ ಬಳಿಯ ಮಸೀದಿಗೆ ಕರಕೊಂಡು ಹೋದರು. ಅಲ್ಲಿ ಎಲ್ಲರೂ ಕೂಡಿ ಪುನಃ ಪ್ರಾರ್ಥನೆಯು ನಡೆಯಿತು. ನಂತರ ಉಪಾಧ್ಯಾಯರು ನನ್ನ ಕೈಹಿಡಿದು ನನ್ನನ್ನು ಅದೊಂದು ಗುಪ್ತ ಕೋಣೆಗೆ ಕರಕೊಂಡು ಹೋಗಿ, ಅಲ್ಲಿ ನನಗೆ ಕುರಾನಿನ ಪವಿತ್ರ ಶಬ್ದದ ಪರಿಚಯವನ್ನು ಮಾಡಿ ಕೊಟ್ಟರು."

## ಮನೆಯಲ್ಲಿ ವಿವಾದ

"ಸುಮಾರು ಆರು ತಿಂಗಳುಗಳ ನಂತರ ತಂದೆಯವರು ನನ್ನನ್ನು ಆ ಶಾಲೆಯಿಂದ ಕರಕೊಂಡು ಹೋಗಿ ಇನ್ನೊಂದು ಶಾಲೆಗೆ ಸೇರಿಸಿದರು. ಇಲ್ಲಿ ಶೆಮ್ಸಿ ಎಫೆಂಡಿ ಎಂಬವರು ಪಾಶ್ಚಾತ್ಯ ರೀತಿಯಲ್ಲಿ ಪಾಠಗಳನ್ನು ತನ್ನ ಶಿಷ್ಯರಿಗೆ ಹೇಳಿಕೊಡುತ್ತಿದ್ದರು. ಇದಕ್ಕೆ ನನ್ನ ತಾಯಿಯು ಆಕ್ಷೇಪವನ್ನೆತ್ತಲಿಲ್ಲ. ಕಾರಣ, ಆಕೆಯ ಇಚ್ಛೆಯಂತೆ ಶಾಸ್ತ್ರೋಕ್ತ ರೀತಿಯಲ್ಲಿ ಮಗನ ಪಾಠಶಾಲೆಯ ಪ್ರವೇಶವಾಗಿತ್ತಲ್ಲವೆ? ಮಗನು ಏನು ಕಲಿತರೂ ಚಿಂತೆಯಿಲ್ಲ, ಆದರೆ ಶಾಲಾಪ್ರವೇಶವು ವಿಧಿಪ್ರಕಾರವಾಗಬೇಕೆಂದೇ ಆಕೆಯ ಮತವಾಗಿತ್ತು."

ತಮ್ಮ ಮಗನ ವಿದ್ಯಾಭ್ಯಾಸದ ಕುರಿತು ತಂದೆತಾಯಿಗಳೊಳಗಣ ಈ ವಿವಾದವು ಆಗಿನ ಕಾಲದ ಟರ್ಕಿಯ ವೇಧಕ ಸ್ಥಿತಿಯನ್ನು ಪ್ರತಿಬಿಂಬಿಸುವುದು. ಅಲ್ಲದೆ, ಮುಸ್ತಾಫನು ದೊಡ್ಡವನಾದ ಮೇಲೆ ಏಕೆ ಕ್ರಾಂತಿಕಾರಕನಾದನೆಂಬುದನ್ನೂ ಬಹುಮಟ್ಟಿಗೆ ಸ್ಪಷ್ಟೀಕರಿಸುವುದು. ತಂದೆತಾಯಿಗಳೊಳಗಣ ಈ ಮತಭೇದವು ಹಳೆ ಮತ್ತು ಹೊಸ ಸಾಂಪ್ರದಾಯದ ಟರ್ಕಿಯಲ್ಲಿ ನಡೆಯುತ್ತಿರುವ ತಿಕ್ಕಾಟವೆಂದು ಹೇಳಬಹುದು. ಹಳತು ಹೋಗಿ ಹೊಸತು ಜನ್ಮಕ್ಕೆ ಬರುವ ಸಮಯವದು. ಇಂತಹ ಸಂಧಿಗ್ಧ ವೇಳೆಯಲ್ಲಿ ಮುಸ್ತಾಫನ ಜನನವಾಯಿತು.

## ಕಷ್ಟದ ದಿನಗಳು

ಮುಸ್ತಾಫನ ತಂದೆ, ಅಲಿರಿಜಾ ಬೇ, ಇವರು ವಿಶಾಲಮನಸ್ಸಿನವರು. ಮುಸಲ್ಮಾನ ರಾಜ್ಯದಲ್ಲಿ ನಡೆಯುತ್ತಿರುವ ಅನಾಚಾರ, ಅತ್ಯಾಚಾರಗಳನ್ನು ಅವಲೋಕಿಸಿ, ಅನರು ಜರಾತುರವಾಗಿದ್ದ ತುರ್ಕಿಯಲ್ಲಿ ಸುಧಾರಣೆಯಾಗಬೇಕೆಂದು ಹೆಣಗಾಡ ತೊಡಗಿದರು.

ಜುಬೇದಾ ಹನುಮ ಎಂದು ಇವರ ಹೆಂಡತಿಯ ಹೆಸರು. ಇವಳು ತುಂಬಾ ಧಾರ್ಮಿಕ ನಿಷ್ಠೆಯುಳ್ಳವಳು. ತನ್ನ ಕೊನೆಯ ದಿನಗಳ ತನಕ ಅವಳು ಘೋಷಾಜೀವನವನ್ನು ಆಚರಿಸಿದ್ದಳು. ಅವಳಿಗೆ ಓದುಬರಹವೂ ಬರುತ್ತಿದ್ದಿಲ್ಲ. ತನ್ನ ಮನೆಯವರೊಡನೆಯೂ ಮತ್ತು ಕೆಲವು ಮಂದಿ ಇಷ್ಟಮಿತ್ರರೊಡನೆಯೂ ಅಲ್ಲದೆ ಅವಳು ಇನ್ನಿತರರೊಡನೆ ಮಾತನಾಡಿ ಬಲ್ಲವಳಲ್ಲ. ಮನೆಯಲ್ಲಿಯ ಮನೆವಾರ್ತೆಯ ಕೆಲಸವನ್ನು ಮಾಡಿಕೊಂಡು ತನ್ನ ಜೀವನವನ್ನು ಕಳೆದಳು.

ಅಲಿ ರಿಜಾ ಬೇಯ ಸೆಲೊನೀಕದ ಸುಂಕದ ಕಛೇರಿಯಲ್ಲಿ ಒಬ್ಬ ಕೆಲಸಗಾರರು. ಅವರು ಅಲ್ಪ ವೇತನದ ನೌಕರರು. ಆ ವೇತನವೂ ವೇಳೆಗೆ ಸರಿಯಾಗಿ ಸಿಗುತ್ತಿದ್ದಿಲ್ಲ. ಆದುದರಿಂದ ಅವರಿಗೆ ತನ್ನ ಕುಟುಂಬವನ್ನು ಪೋಷಿಸುವುದು ಸುಲಭದ ಮಾತಾಗಿರಲಿಲ್ಲ. ಅನೇಕ ದಿನಗಳನ್ನು ಅವರ ಕಷ್ಟದಿಂದ ಕಳೆದರು. ಮನೆಯಲ್ಲಿ ತನ್ನ ಹೆಂಡತಿಯಲ್ಲದೆ ಅವರಿಗೆ ಇಬ್ಬರು ಗಂಡು ಮಕ್ಕಳೂ ಒಂದು ಹೆಣ್ಣು ಮಗುವೂ ಇದ್ದುವು. ಮುಸ್ತಾಫನ ಹಿರಿಯಣ್ಣನು ಕಿರಿಯವನಿರುವಾಗಲೇ ಕಾಲವಾದುದರಿಂದ ಮನೆಯಲ್ಲಿ ನಾಲ್ವರೇ ಉಳಿದರು. ತಂದೆ ತಾಯಿ, ಮುಸ್ತಾಫನು ಮತ್ತು ಆತನ ತಂಗಿ ಮಕ್ಬೂಲಾ ಎಂಬವಳು.

ತನ್ನ ಸಂಪಾದನೆಯು ಕುಟುಂಬದ ಪೋಷಣೆಗೆ ಸಾಕಾಗುವುದಿಲ್ಲವೆಂದು ಅಲಿರಿಜಾ ಬೇಯವರು ತನ್ನ ವೃತ್ತಿಗೆ ತಿಲಾಂಜಲಿಯನ್ನೀಯುವ ಆಲೋಚನೆಯನ್ನು ಮಾಡಿದರು. ಅದನ್ನು ಬಿಟ್ಟು ಬಿಟ್ಟು ಮರದ ಟ್ಟುಗಳ ವ್ಯಾಪಾರವನ್ನು ಪ್ರಾರಂಭಿಸಿದರು. ಇದರಲ್ಲಿ ಅವರಿಗೆ ಸಾಕಷ್ಟು ಸಂಪಾದನೆಯಾಗ ತೊಡಗಿತು.

ಈ ಸಮಯದಲ್ಲಿ ಮುಸ್ತಾಫನು ತನ್ನ ಬಾಲ್ಯವನ್ನು ಮಹದಾನಂದದಿಂದ ಕಳೆದನು. ಆದರೆ ಕಾಲಚಕ್ರದ ಭ್ರಮಣದಲ್ಲಿ ಮುಸ್ತಾಫನು ಅಲ್ಪಾವಧಿಯಲ್ಲಿಯೇ ಕಷ್ಟದ ದಿನಗಳನ್ನು ಕಾಣಬೇಕಾಯಿತು. ಆತನ ತಂದೆಯು ಆತನಿಗೆ ೯ ವರ್ಷಗಳೆನ್ನುವಾಗಲೇ ತೀರಿಕೊಂಡನು. ತಾಯಿಯು ಹೊಟ್ಟೆಯ ಪಾಡಿಗೆ ಸಿರುಪಾಯಳಾಗಿ, ಲಾಝುಸಾನ್ ಎಂಬಲ್ಲಿದ್ದ ತನ್ನ ತಮ್ಮನನ್ನು ಮರೆಹೊಕ್ಕಳು. ಇಲ್ಲಿ ಮುಸ್ತಾಫನು ಕಷ್ಟಪಟ್ಟು ಕೆಲಸಮಾಡಬೇಕಾಗಿ ಬಂತು. ಕುದುರೆಯ ಲಾಯವನ್ನು ಗುಡಿಸಬೇಕಾತನು, ಕುರಿಗಳನ್ನು ಮೇಯಿಸಬೇಕಾತನು, ದನಗಳಿಗೆ ತಿನಿಡಬೇಕಾತನು. ಮುಸ್ತಾಫನು ಒಬ್ಬನು ಬೇಸಾಯಗಾರನಾದನು.

ಎರಡು ವರ್ಷಗಳು ಕಳೆದುವು. ಸಿಟಿಲಿ ಎಲುಬಿನ ಗೂಡಿನಂತಿದ್ದ ಮುಸ್ತಾಫನು ತುಂಬಿದ ಮೈಯ, ಹಟಮಾರಿ ಸ್ವಭಾವದ, ಸ್ವೇಚ್ಛಾವಿಹಾರಿ ಯುವಕನಾಗಿ ಪರಿಣಮಿಸಿದನು.

ಮಗನು ಮಾಡುತ್ತಿದ್ದ ಕೆಲಸವನ್ನು ನೋಡಿ ತಾಯಿಗೆ ವಿಚಾರಕ್ಕಿಟ್ಟಿತು. ಆತನು ಕುರುಬನಾಗಬಾರದೆಂದು ಆಕೆಯ ಮನಸ್ಸಿನಲ್ಲಿತ್ತು. ತನ್ನ ಮಗನ ಭವಿಷ್ಯದ ಕುರಿತು ಆಕೆಯು ಈ ಮೊದಲೇ ಆಲೋಚಿಸಿದ್ದಳು. ಆತನ ವಿದ್ಯಾಭ್ಯಾಸಕ್ಕಾಗಿ ಏನಾದರೂ ಸಹಾಯಮಾಡುವಂತೆ ಆಕೆಯು ಸೆಲೊನೀಕದಲ್ಲಿದ್ದ ತನ್ನ ಒಬ್ಬ ತಂಗಿಯನ್ನು ಒಪ್ಪಿಸಿಕೊಂಡಳು.

ಎರಡು ವರ್ಷಗಳ ತನಕ ಬೇಸಾಯದ ಕೆಲಸವನ್ನು ಮಾಡಿ, ಮುಸ್ತಾಫನು ಒಂದು ಮಾಧ್ಯಮಿಕ ಶಾಲೆಯನ್ನು ಸೇರಿದನು. ಅಲ್ಲಿ ತನ್ನ ಸಹಪಾಠಿಗಳ ಅದೊಂದು ಕಲಹದಲ್ಲಿ ಆತನು ಸಿಕ್ಕಿಕೊಂಡನು. ವಿಚಾರಣೆಯು ನಡೆದು ಮುಸ್ತಾಫನೇ ಕಲಹಕ್ಕೆ ಕಾರಣನೆಂದು ಆತನ ಮೇಲೆ ತಪ್ಪು ಸ್ಥಾಪಿಸಲ್ಪಟ್ಟು, ಆತನನ್ನು ಕಠಿಣವಾದ ದಂಡನೆಗೆ ಗುರಿಮಾಡಲಾಯಿತು. ಆತನ ಮೈಮೇಲೆ ಬಾಸುಂಡೆಗಳೆದ್ದುವು.

ಇದರಿಂದ ಮುಸ್ತಾಫನು ಬಹಳ ಖೇದಗೊಂಡನು. ಕೋಪಿಷ್ಠನಾದ ಆತನು ಇನ್ನು ಮುಂದೆ ಶಾಲೆಗೆ ಹೋಗಲಾರೆನೆಂದು ನಿಶ್ಚಯಿಸಿದನು. ಅಲ್ಲಿಂದ ಹೊರಟು ಪುನಃ ಲಾಝುಸಾನಿನಲ್ಲಿರುವ ತಾಯಿಯ ಬಳಿಯನ್ನು ಸೇರಿದನು. ಅಲ್ಲಿ ಪುನಃ ದನ ಮೇಯಿಸುವುದೇ ಮೊದಲಾದ ಕೆಲಸಗಳೇ ಆತನ ಪಾಲಿಗೆ ಬಿದ್ದುವು. ಆದರೆ ಬಹುಕಾಲದ ತನಕ ಅದನ್ನಾತನು ಮಾಡಬೇಕಾಗಿ ಬರಲಿಲ್ಲ. ಮುಸ್ತಾಫನಗೊಬ್ಬ ಮಿತ್ರನಿದ್ದನು. ಆತನು ಮಿಲಿಟರಿ ವಿಶ್ವವಿದ್ಯಾಲಯಕ್ಕೆ ಹೋಗುತ್ತಿದ್ದನು. ಅವನ ಸುಂದರವಾದ ಪೋಷಾಕನ್ನು ಕಂಡು ಮುಸ್ತಾಫನಿಗೆ ಅಸೂಯೆಯಾಯಿತು. ತಾನೂ ಒಬ್ಬ ಸೈನಿಕನಾಗುವೆನೆಂದ ಬಗೆದನು.

ಮಗನ ಈ ಆಲೋಚನೆಯನ್ನು ತಾಯಿ ಸಮರ್ಥಿಸಲಿಲ್ಲ. ಆಗ ಮುಸ್ತಾಫನು ತನ್ನ ಮಿತ್ರನ ಮನೆಗೆ ಹೋಗಿ ಆತನ ತಂದೆಯೊಡನೆ ಸಹಾಯವನ್ನು ಯಾಚಿಸಿದನು. ಮುಸ್ತಾಫನ ಸೆಲೊನೀಕದಲ್ಲಿದ್ದ ಮಿಲಿಟರಿ ವಿಶ್ವವಿದ್ಯಾಲಯದಲ್ಲಿ ಪರೀಕ್ಷೆಗೆ ಕೂತುಕೊಳ್ಳುವಂತೆ, ಅದರ ಅಧಿಕಾರಿಗಳಿಂದ ಅವರು ಅನುಜ್ಞೆಯನ್ನು ಪಡೆದಿಂದರು.

ಪರೀಕ್ಷೆಯಲ್ಲಿ ಮುಸ್ತಾಫನು ತೇರ್ಗಡೆ ಹೊಂದಿ, ಆತನಿಗೆ ಮಿಲಿಟರಿಯಲ್ಲಿ ಪ್ರವೇಶವು ದೊರಕಿತು. ಅಂದಿನಿಂದ ಆತನ ಸೈನಿಕ ಜೀವನವು ಪ್ರಾರಂಭವಾಯಿತು. ಆತನೊಬ್ಬ ರಣಬಾಲ (cadet)ನಾದನು. ಶೀಘ್ರದಲ್ಲಿಯೇ ತನ್ನ ತರಗತಿಯವರಲ್ಲಿ ಆತನು ಶ್ರೇಷ್ಠನೆನಿಸಿಕೊಂಡನು.

ಗಣಿತದಲ್ಲಂತೂ ಆತನಿಗೆ ತುಂಬಾ ಅಭಿರುಚಿ. ಗಣಿತದ ಉಪಾಧ್ಯಾಯರಾದ ಕೆಪ್ಟನ್ ಮುಸ್ತಾಫರೆಂಬವರು ಇವನನ್ನು ಆದರದಿಂದ ಕಾಣತೊಡಗಿದರು. ಎರಡು ವರ್ಷಗಳ ನಂತರ ಮುಸ್ತಾಫನ ವಶದಲ್ಲಿ, ಸಣ್ಣವರದೊಂದು ಕ್ಲಾಸನ್ನು ಒಪ್ಪಿಸಿ, ಆತನನ್ನು ಕೆಮಲ್ (ಕೆಮಲ್ ಎಂದ್ಹರೆ ಅರಬಿ ಭಾಷೆಯಲ್ಲಿ ನೈಪುಣ್ಯವೆಂದು ಅರ್ಥವಾಗುವುದು) ಎಂದು ಅಕ್ಕರೆಯಿಂದ ಕರೆಯತೊಡಗಿದರು. ಅಂದಿನಿಂದ ಆತನನ್ನು ಎಲ್ಲರೂ ಮುಸ್ತಾಫಾ ಕೆಮಲ್ ಎಂದು ಸಂಬೋಧಿಸತೊಡಗಿದರು.

ಕೆಳಗಿನ ತರಗತಿಗಳಲ್ಲಿ ಬೇಗನೆ ತೇರ್ಗಡೆ ಹೊಂದಿ ಕೆಮಲನು ಮೊನಾಸ್ಟಿರಿನಲ್ಲಿರುವ ಯುದ್ಧ ವಿದ್ಯಾಲಯಕ್ಕೆ ಪ್ರವೇಶವನ್ನು ಪಡೆದನು. ಆ ಸಮಯದಲ್ಲಿ ಆತನ ಮಿತ್ರನೊಬ್ಬನು ಆತನ ಕುರಿತು ಈ ಅಭಿಪ್ರಾಯವನ್ನು ಕೊಟ್ಟಿರುವನು.

"ಮುಸ್ತಾಫನು ಯಾವಾಗಲೂ ಮಂದಿಯೊಡನೆ ಹೆಚ್ಚು ಬೆರೆತು ಮಾತನಾಡುತ್ತಿದ್ದಿಲ್ಲ. ಆದರೆ ಯಾರ ಮೇಲೆಯೂ ಆತನಿಗೆ ದ್ವೇಷವಿದ್ದಿಲ್ಲ. ಆತನು ಯಾವಾಗಲೂ ಹಸನ್ಮುಖಿಯಾಗಿದ್ದು, ವಿನಯ ಶೀಲನಾಗಿದ್ದನು. ಪುಸ್ತಕಗಳನ್ನಾತನು ತುಂಬಾ ಓದುತ್ತಿದ್ದನು; ಓದಿ ತಿಳಿದ ವಿಷಯಗಳನ್ನು ಮನಸ್ಸಿನಲ್ಲಿಯೇ ಮೇಲಿಂದ ಮೇಲೆ ಮಥಿಸಿ, ಅವುಗಳ ಸಾರಾಸಾರವನ್ನು ಗ್ರಹಿಸುತ್ತಿದ್ದನು."

## ಬಂಧನದಿಂದ—ಮುಂದಾಳುತ್ವ

ಅವನ ಸಹಪಾಠಿಗಳಿಗೆ ಮುಸ್ತಾಫನನ್ನು ಕಂಡರೆ ಆಗುತ್ತಿದ್ದಿಲ್ಲ. ಆತನನ್ನು ಸ್ವಾಭಿಮಾನಿಯೆಂದೂ ಕುಟಿಲನೆಂದೂ ಅವರೆಲ್ಲರೂ ದೂಷಿಸುತ್ತಿದ್ದರು. ತಮ್ಮೊಡನೆ ಆತನು ಕೂಡದಿರಲು ಕಾರಣವೇನೆಂದು, ಅವರೊಮ್ಮೆ ಆತನೊಡನೆ ವಿಚಾರಿಸಲು, ತನಗೆ ಅವರ ಸಂಗದಲ್ಲಿ ಆಸಕ್ತಿಯಿಲ್ಲವೆಂದು ಆತನು ಹೇಳಿಬಿಟ್ಟನು. ಇದರಿಂದ ಕುಪಿತರಾದ ಆ ಬಾಲಕರು,—

"ನೀನು ಯಾರೆಂದು ತಿಳಿದಿರುವೆ? ಇನ್ನು ಮುಂದೆ ಏನಾಗಬೇಕೆಂದು ಆಲೋಚಿಸಿರುವೆ? ಅರಸನೆ?" ಎಂದು ಪ್ರಶ್ನಿಸಿದರು.

ಮುಸ್ತಾಫನು ಆ ಹುಡುಗರೊಡನೆ ಗಾಂಭೀರ್ಯದಿಂದ ಹೀಗೆಂದನು: "ಯಾರಾದರೊಬ್ಬ ಗಣನೀಯ ಪುರುಷನಾಗಬೇಕೆಂದಿರುವೆನು."

ರಜೆಯು ದೊರೆತೊಡನೆ ಮುಸ್ತಾಫನು ತನ್ನ ಊರಿಗೆ—ತನ್ನ ತಾಯಿಯ ಬಳಿಗೆ—ಹೊರಟನು. ಆದರೆ ಅಷ್ಟರಲ್ಲಿಯೆ ಆಕೆಯು ರೋಡ್ಸಿನ ಒಬ್ಬ ಶ್ರೀಮಂತನನ್ನು ವಿವಾಹವಾಗಿದ್ದಳು. ಈ ಮದುವೆಯ ಕುರಿತು ಮುಸ್ತಾಫನು ತನ್ನ ತಾಯಿಯೊಡನೆ ಜಗಳವಾಡಿದನಷ್ಟೇ ಅಲ್ಲ, ತನ್ನ ತಂದೆಯೊಡನೆ ಮಾತನಾಡಲೊಲ್ಲೆನೆಂದನು. ಆತನ ಹೆಸರು ಬಿದ್ದಲ್ಲಿ ಶಾಂತಿಯ ನೀರನ್ನು ಹಾಕತೊಡಗಿದನು.

ಪುನಃ ಮೊನಸ್ಟೀರಿಗೆ ಬಂದಾಗ ಕೆಮಲನು ನಿತ್ಯಶ್ರದ್ಧೆಯಿಂದ ಕೆಲಸಮಾಡಿದುದರಿಂದ ಆತನಿಗೆ ಪದೋನ್ನತಿಯು ದೊರೆತು, ಕೊನ್ಸ್ಟಂಟಿನೋಪಲಿನಲ್ಲಿರುವ ಮಿಲಿಟರಿ ವಿಶ್ವವಿದ್ಯಾಲಯಕ್ಕೆ ಆತನನ್ನು ವರ್ಗಾಯಿಸಲಾಯಿತು. ಇಲ್ಲಿದ್ದಾಗಲೇ ಆತನು ತನ್ನ ದೇಶದ ವಿಷಯಗಳಲ್ಲಿ ಮೊದಲು ತಲೆ ಹಾಕಲು ಪ್ರಾರಂಭಿಸಿದನು. ಶೀಘ್ರದಲ್ಲಿಯೇ ಆತನು ಅಲ್ಲೊಂದು "ವೇಟನ್" (ಜನ್ಮ ಭೂಮಿ) ಎಂಬ ಕ್ರಾಂತಿಕಾರರ ಸಂಸ್ಥೆಯನ್ನು ಸ್ಥಾಪಿಸಿ ಅದರ ನಾಯಕತ್ವವನ್ನು ವಹಿಸಿದನು. ತನ್ನ ಕ್ರಾಂತಿಕಾರಕ ಚಟುವಟಿಕೆಗಳಿಂದಾಗಿ ಆತನಿಗೆ ಸ್ಟಾಂಬೂಲಿನಲ್ಲಿರುವ ಕೆಂಪು ಜೈಲಿನಲ್ಲಿ ಕೈದಿಯಾಗಿರುವ ಪ್ರಸಂಗವು ಬಂದೊದಗಿತು.

ಅಂದಿನಿಂದ ಆತನ ರಾಜಕೀಯ ಬಾಳುವೆಯು ಮೊದಲಾಯಿತೆನ್ನಬಹುದು. ಪ್ರತಿಯೊಬ್ಬ ಸರ್ವಾಧಿಕಾರಿಯ ರಾಜಕೀಯ ಜೀವನವು ಅನಿವಾರ್ಯವಾಗಿ ಜೈಲುವಾಸದಿಂದ ಉಪಕ್ರಮಿಸುವುದು. ಮುಸಲೋನಿಯವರದು ಅದೇ ರೀತಿ, ಹಿಟ್ಲರರದು ಅದೇ ರೀತಿ, ಸ್ಟೇಲಿನರದು ಅದೇ ರೀತಿ, ಮುಸ್ತಾಫಾಕೆಮಲರದೂ ಅದೇ ರೀತಿ. ಬಾಲ್ಯದ ಸ್ನೇಹಿತನೊಬ್ಬನು, 'ಅರಸನಾಗಬೇಕೆಂದಿರುವೆಯೊ?' ಎಂದು ತಮಾಷೆಗೆ ಕೇಳಿದರು, ಇಂದು ಮುಸ್ತಾಫಾಕೆಮಲ್ ಪಾಷರು ಟರ್ಕಿಯಲ್ಲಿ ಅರಸನಿಗಿಂತಲೂ ಹೆಚ್ಚಿನವರಾಗಿರುವರು.

---

## ಪಂಡಿತ ಜವಾಹರಲಾಲರ ವರದಿ

(೩ನೇ ಪುಟದಿಂದ ಮುಂದುವರಿಸಿದುದು)

ದೇಶದಲ್ಲಿ ಸ್ವಾಮಿಭಕ್ತಿಯನ್ನು ಪಡೆಯುತ್ತಿರುವನು ರೈತನ ಮತ್ತು ಆತನ ತರದ ಜನರ ಕಡೆಗೆ ನಾವು ನೋಡಬೇಕು. ಅವನು ನಮ್ಮಲ್ಲಿ ದಯೆತೋರಿದರೆ, ಆತನಿಗೆ ಉಪಶಮನ ದೊರತಿಸಿದರೆ, ಆತನನ್ನು ಪಾಶಂಪರ್ಯವಾಗಿ ನಡೆದು ಬಂದ ದಾಸ್ಯದಿಂದ ವಿಮೋಚನಗೊಳಿಸಿದರೆ, ಆತನು ನಮ್ಮೊಡನಿರುವನು. ಆದರೆ ಆತನಿಗೆ ಕೊಟ್ಟ ವಚನಗಳನ್ನು ನಾವು ಪಾಲಿಸದೆ ಹೋದುದಾದರೆ ಅದರಿಂದ ಒಳ್ಳಿತು ಉಂಟಾಗದು.

ವರದಿಯನ್ನು ಕೊನೆಗೊಳಿಸುತ್ತ, "ನಮ್ಮ ಮತ್ತು ಈ ಜಗತ್ತಿನ ಸಕಲ ತೊಡಕುಗಳ ನಿವಾರಣೆಗೆ ಸೌಮ್ಯವಾದವೆ ಶ್ರೇಷ್ಠವಾದ ಉಪಾಯವೆಂದು, ಇನ್ನೊಮ್ಮೆ ನಾನು ಒತ್ತಿ ಹೇಳಬಯಸುತ್ತೇನೆ. ಆದರೆ ಈಗ ನಮ್ಮ ಮುಂದಿರುವ ಮುಖ್ಯ ಕಾರ್ಯಗಳೆಂದರೆ, ಸಾಮ್ರಾಜ್ಯಶಾಹಿಯನ್ನು ನಾಶಗೊಳಿಸುವುದು, ನಮ್ಮ ಆಶ್ರಿತ ರಾಜ್ಯಗಳಲ್ಲಿ ಮತ್ತು ಜಮೀನ್ದಾರರಲ್ಲಿರುವ 'ಪುಷ್ಟಿದಾಳಿಸಂ'ನ್ನು ನಾಶಗೊಳಿಸುವುದು

# ಪತ್ರವ್ಯವಹಾರ

ಕಳೆದ ತಾ. ೨೦-೨-೩೮ರ ಪ್ರಭಾತ ಸಂಚಿಕೆಯಲ್ಲಿ "ನಾನು" ಎಂಬ ಸಹಿಯುಳ್ಳ ವ್ಯಕ್ತಿಯೊಂದು ಹೊಗೆ ಸೊಪ್ಪಿನ ಕುರಿತು ಬಾತ್ಮಿಯನ್ನು ಕೊಟ್ಟಿರುತ್ತದಷ್ಟೆ! ಅದು "ಮನುಷ್ಯರೂಪೇಣ ಮೃಗಾಶ್ಚರಂತಿ" ಎಂಬ ಲೋಕೋಕ್ತಿಯನ್ನು ಧೃಢೀಕರಿಸಲು ಹೊರಟಿರುತ್ತದೋ ಎಂಬ ಸಂಶಯವು ನನಗೆ ಕಲೆದೋರುತ್ತದೆ. ಲೇಖನಗಳ ಶಿರೋನಾಮೆಗಳಿಗೆ ತಲೆ ಬರಹ ಎಂದು ಕರೆಯುವ ಹವ್ಯಾಸದ ಮನುಷ್ಯರು ಇರುವರು.

ಆ "ನಾನು" ಎಂಬ ವ್ಯಕ್ತಿಗೆ ಹೊಗೆ ಸೊಪ್ಪು ವ್ಯಾಪಾರಸ್ಥರಿಗೂ, ಕೃಷಿಕರಿಗೂ ತಲೆ ತಲೆ ಗಂಟು ಹಾಕುವ ಕೆಲಸದಲ್ಲಿ ಬಹಳ ಆತುರತೆ ಶ್ರದ್ಧೆ ಮುಂದಾಳುತನ ವಗೈರೆಯುದರಲ್ಲಿ ಪರಿಶ್ರಮ ಜಾಸ್ತಿಯಿತ್ತೆಂತ ಕಾಣುತ್ತದೆ. ಹೊಗೆ ಹೊಗೆ ಸೊಪ್ಪು ಬಹಿಷ್ಕಾರ ಸಮಿತಿಯ ವರದಿಯು ತಾ. ೬೦-೧-೩೮ರಲ್ಲು ಪ್ರಭಾತದಲ್ಲಿ ಪ್ರಕಟಿಸಿದ್ದುದನ್ನು ಕಂಡು ಮುಂದಕ್ಕೆ ನಮ್ಮ ಜಿಲ್ಲೆಯ ಹೊಗೆ ಸೊಪ್ಪಿನ ಕೃಷಿಯು ತುಂಬಾ ಶ್ರೇಯಸ್ಕರವಾಗುವುದೆಂದು "ನಾನು" ತಿಳಿದಿತ್ತೆಂತ ಮಾತ್ರವಲ್ಲದೆ ಮಂಗಳೂರು ಹೊಗೆ ಸೊಪ್ಪಿನ ವರ್ತಕರ ಪ್ರೊಗ್ಗಟ್ಟು ಹಿಂದಿನ ಪ್ರೊಗ್ಗಟ್ಟಿನಂತೆ ಆಗಲಾರದೆಂದೂ, ಈಗ ಸ್ಥಾಪಿಸಿದ ಬಹಿಷ್ಕಾರ ಸಮಿತಿಯು ಯಶಸ್ವಿಯಾಗುವುದೆಂದು ಇದ್ದ ಭಾವನೆಯು ಪೂರ್ಣ ನಿರಾಶಾಜನಕವಾಗಿರುತ್ತದಾಗಿ ಈಗ ನಡೆದ ವಿದ್ಯಮಾನಗಳಿಂದ ಖಂಡಿತವಾಗಿ ಹೇಳಬಹುದಂತೆ. ಹೊಯ್ಗೆ ಹೊಗೆಸೊಪ್ಪು ಬಹಿಷ್ಕಾರ ಸಮಿತಿಯವರು ಶ್ರದ್ಧೆಯಿಂದ ನಡ್ಸುವ ಕಾರ್ಯಕ್ರಮಗಳನ್ನು ಅದು ಅರಿತಿದ್ದಲ್ಲಿ ಅದು ಹೀಗೆ ಬರೆಯುತ್ತಿದ್ದಿಲ್ಲ. ಸದರಿ ಸಮಿತಿಯವರು ಹೊಗೆ ಸೊಪ್ಪಿಗೆ ಹೊಯ್ಗೆಯನ್ನು ಬೆರಸಬಾರದಾಗಿ ಕೃಷಿಗಾರರಿಗೆ ನೋಟೀಸುಗಳನ್ನು ಛಾಪಿಸಿ ಹಂಚಿಸಿರುತ್ತಾರೆ ಮಾತ್ರವಲ್ಲದೆ ಕೃಷಿಯಾಗುವ ಊರುಗಳಿಗೆ ಹೋಗಿ ಕೃಷಿಗಾರರಿಗೆ ಬೋಧನೆಗಳನ್ನು ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ಕನ್ನಿನಾಡುವರೆ ರಾ| ಪಿ. ಸುಬ್ರಾಯರನ್ನು ನೇಮಿಸಿರುತ್ತಾರೆ. ಮಾನ್ಯ ಜಿಲ್ಲಾ ಕಲೆಕ್ಟರ ಧೊರೆಗಳು ಸಹ ಪಟೇಲರ ಮುಖಾಂತರ ಹೊಗೆ ಸೊಪ್ಪಿಗೆ ಹೊಯ್ಗೆ ಬೆರಸದಂತೆ ಕೃಷಿಗಾರರಿಗೆ ಎಚ್ಚರಿಸಿರುತ್ತಾರೆ. ಇಷ್ಟರ ತನಕ ಯಾವ ಕೃಷಿಗಾರನಾದರೂ ಹೊಯ್ಗೆಯನ್ನು ಹೊಗೆ ಸೊಪ್ಪಿಗೆ ಬೆರಸಲಿಲ್ಲವೆಂತ ಖಂಡಿತವಾಗಿ ಹೇಳಬಹುದು. ಆದರೆ, ಕಾಣದದ್ದನ್ನು ಕಂಡಂತೆಯೂ, ನೋಡಿದ್ದನ್ನು ನೋಡದಂತೆಯೂ ಭಾವಿಸುವ ಆ "ನಾನು" ವ್ಯಕ್ತಿಗೆ ಇದೊಂದು ತಿಳಿದಿಲ್ಲವೆಂತ ತೋರುತ್ತದೆ. ತಾ. ೨೦-೨-೩೮ರ ಒಳಗೆ ನೂರಾರು ಕಟ್ಟು ಹೊಗೆ ಸೊಪ್ಪು ಮಂಗಳೂರಿಗೆ ಬಂದಿರುತ್ತದೆಂದು ಇದು ಹೇಳುತ್ತದೆ. ಕೃಷಿಕರಿಂದ ಅವರಿಗೆ ನೂರಾರು ಕಟ್ಟು ಹೊಗೆ ಸೊಪ್ಪು ತಯ್ಯಾರಾಗಲಿಲ್ಲ, ನೂರಾರು ಕಟ್ಟು ಹೊಗೆ ಸೊಪ್ಪು ವ್ಯಾಪಾರಸ್ಥರು ಪಡೆಯುವದರಲ್ಲಿ ದ್ವಾರೆ ಇತ್ತಲಾಗೆ ಬಂದ ಕೆಲವು ಕಟ್ಟುಗಳು ಮಣ ೧೫ ಅಂದಾಜು ನಾಲ್ಕು ಯಾ ಏಳು ರಾತ್ಲು ಹೊಯ್ಗೆ ಮಿಶ್ರಿತವಾಗಿರುವಲ್ಲಿ ಮಣ ೧೮ ರೂ. ೧೦||ರಂತೆ ಮಾರಾಟವಾಗಿರುವುದಾಗಿ ತಿಳಿಸುತ್ತದೆ. ಹೀಗೆ ಬರೆಯುವರೆ ಇದು ಎಷ್ಟು ಮಣ ಹೊಗೆ ಸೊಪ್ಪು ತನಿಖೆ ಮಾಡಿರುತ್ತದೆ? ಎಲ್ಲೆಲ್ಲಿ ವ್ಯಾಪಾರವಾದುದನ್ನು ನೋಡಿರುತ್ತದೆ?

ಹೆಚ್ಚಿನ ಹೊಗೆ ಸೊಪ್ಪು ಕೃಷಿಮಾಡುವದು ಮಣಗಿಸುವದು ಸಮುದ್ರ ಕಿನಾರೆಯ ಹೊಯ್ಗೆ ಗದ್ದೆಗಳಲ್ಲಿ. ಗಿಡಗಳು ಬೆಳೆಯುವಾಗ ಎಲೆಗಳು ನೆಲದ ಮೇಲೆ ಮಲಗಿಕೊಂಡಿರುತ್ತವೆ. ಗಿಡಗಳನ್ನು ಕಡಿದು ಹಾಕುವಾಗ ಅಲ್ಪ ಸ್ವಲ್ಪ ಹೊಯ್ಗೆ ಎಲೆಗಳಲ್ಲಿ ಅಂಟಿಕೊಳ್ಳುತ್ತದೆ ಮಾತ್ರವಲ್ಲದೆ ಹೊಗೆಸೊಪ್ಪು ಕಟ್ಟು ಕಟ್ಟುವಿಕೆ ಕೆಲಸಮಾಡುವಾಗ ಒಂದೆರಡು ಹೊಯ್ಗೆ ಕಣಗಳು ಹೊಗೆಸೊಪ್ಪಿಗೆ ಅಂಟಿಕೊಳ್ಳಬಹುದು. ಕೂಲಂಕುಶ ಪರೀಕ್ಷಿಸಿದರೆ ಒಂದು ಹೊಗೆಸೊಪ್ಪಿನ ಕಟ್ಟಿನಲ್ಲಿ ಒಂದೆರಡು ಹೊಯ್ಗೆ ಕಣಗಳು ಕಾಣಸಿಕ್ಕಲಿಕ್ಕಿಲ್ಲವೆಂತ ಹೇಳಲಾಗುವುದಿಲ್ಲ. ಇದರಿಂದ ಹೊಯ್ಗೆ ಬೆರಸಿದ ಹೊಗೆ ಸೊಪ್ಪನ್ನು ಮಂಗಳೂರು ವರ್ತಕರು ಪಡಕೊಳ್ಳುತ್ತಾರೆಂದು ಕುಚೇಷ್ಟೆಮಾಡಲು ಆಧಾರವೆಲ್ಲಿ?

ಅಕ್ಕಿಯಲ್ಲಿಯೂ ನಾವು ಊಟಮಾಡುವ ಅನ್ನದಲ್ಲಿ ಒಂದೆರಡು ಸಣ್ಣ ಕಲ್ಲುಗಳು ನೋಡಲು ಸಿಕ್ಕರೆ ಅಕ್ಕಿಗೆ ಕಲ್ಲು ಮಿಶ್ರಮಾಡುತ್ತಾರೆಂದು ಹೇಳಲಿಕ್ಕಾಗುವುದಿಲ್ಲ.

ಪೋ "ನಾನೇ" ದೇಶ ಹಿತಕ್ಕಾಗಿ ಜಿಲ್ಲೆಯ ಅಭಿವೃದ್ಧಿಗಾಗಿ, ರೈತರ ಹಿತಕ್ಕಾಗಿ, ಸ್ವಾರ್ಥತ್ಯಾಗದಿಂದ ತಿಂದು ಬಾಳಿದ ನೀನು ನಮ್ಮಲ್ಲಿಗೆ ಬಂದು ಹೋಗಿ ಸೊಪ್ಪು ಕಟ್ಟಿರಿಸುವ ಕ್ರಮಗಳನ್ನು ತಿಳಕೊಳ್ಳಬಾರದೇ? ಸರಕಾರ ಹೊಗೆಸೊಪ್ಪಿಗೆ ಹೊಯ್ಗೆ ಬೆರಸುವದನ್ನು ಆತಂಕಪಡಿಸುವರೆ ಕೈಗೊಂಡ ಕೋರ್ಟು ಕ್ರಮಗಳನ್ನು ತಿಳಕೋ. ವಿಚಾರಿಸಿ ತನಿಖೆ ಮಾಡದೆ ವಿಚಾರವಿಲ್ಲದೆ ಲೇಖನಗಳನ್ನು ಪ್ರಕಟಿಸಿ ಜನರನ್ನು ವಂಚಿಸಬೇಡ. ಬೊಂಬಾಯಿ ಬಿಹಾರಿಲ್ಲ ಹಿಂದೀ ವರ್ತಕರಿಂದ ನಡಿಸಲ್ಪಡುವ ಲವಂಗ ಬಹಿಷ್ಕಾರ ಚಳವಳಿಂದ ಜಂಜಿಬಾರ್ ಸರಕಾರವನ್ನು ಅಲ್ಲೋಲ ಕಲ್ಲೋಲ ಮಾಡಿ ಹಿಂದುಸ್ಥನಕ್ಕೊ ಇದರ ಸೆನ್ನತಂದುಕೊಂಡ ವಿಧಾನಗಳು ನಿನಗೆ ಗೊತ್ತುಂಟು. ಸಹಕಾರ ಭಕ್ತಿಗಳಿಂದಾಗುವ ಕಾರ್ಯಗಳು ಕಾನೂನುಗಳಿಂದಾಗದು. ಊರ ಪ್ರಮುಖ ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳ ಸೂಚನೆಯನ್ನು ನೀನು ತಿಳಿದಿರುತ್ತಿ. ಆದುದರಿಂದ ಇನ್ನು ಮೇಲಾದರೂ ಸರಕಾರದವರ ಸಹಾನುಭೂತಿಯಿಂದ ಮಂಗಳೂರು ಹೊಗೆಸೊಪ್ಪಿನ ವರ್ತಕರೂ ಕೃಷಿಗಾರರೂ ಕಾವು ಕೈಗೊಂಡ ಕಾರ್ಯದಲ್ಲಿ ಯಶಸ್ಸು ಪಡೆಯುವರೆಂದು ಪ್ರಾರ್ಥಿಸುತ್ತೇನೆ.

ಮಮ್ಮುಂಞ.

## ನೋ ಟೀ ಸು

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No. 23/1938

1 ಕೊರಗಾ, 2. ಅಪ್ಪೆ, 3. ಮಾರುಕ್ಕೆ, 4 ಕುಂಞಮ್ಮ ಯಾನೆ ದೇವಕಿ – ಬಿಲ್ಲ ಕುಂಞಿರಾಮನ ಮಕ್ಕಳು. 1 ಮತ್ತು 2ನೇಯವರು ಪಳ್ಳಿಕೆರೆ ಗ್ರಾಮದ ಅಗ್ಸರ ಹೊಳೆಯಲ್ಲಿಯೂ, 3ನೇಯವಳು ಕೀಕಾನ ಗ್ರಾಮದ ಕೋಟೆಯಲ್ಲಿಯೂ 4ನೇಯವಳು ಮೂಡಬಿದ್ರೆಯಲ್ಲಿಯೂ ಇರುವವರು – ಅರ್ಜಿದಾರರು.

ಅರ್ಜಿದಾರರ ತಂದೆಯಾಗಿದ್ದ ಪಳ್ಳಿಕೆರೆ ಗ್ರಾಮದ ಅಗ್ಸರ ಹೊಳೆಯಲ್ಲಿದ್ದ ಬಿಲ್ಲ ನೆರುವಿಲ್ ಕಣ್ಣನ ಅಳಿಯ ಕುಂಞಿರಾಮನು ತಾ 20–11–37ರಲ್ಲು ಮೃತಪಟ್ಟಿರುವುದರಿಂದ ಆತನಿಗೆ ಸದ್ರಿ ಅರ್ಜಿಯಲ್ಲಿ ವಿವರಿಸಿದ ರೀತಿ ಬರತಕ್ಕ ಹಣ ವಸೂಲು ಪಡೆಯುವ ಬಗ್ಗೆ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖ್ಲು ಮಾಡಿದ ಸದ್ರಿ ಅರ್ಜಿಯು ತಾ 17-3 1938ರಲ್ಲು ತನ್ಕಿಗೆ ಇಟ್ಟಿದೆ. ಆ ಕುರಿತು ಆಕ್ಷೇಪಿಸುವವರು ತಮ್ಮ ಆಕ್ಷೇಪವನ್ನು ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು 28 2–38 **C Rama Rao,** ಅರ್ಜಿದಾರರ ವಕೀಲ್

|| ಶ್ರೀ ||

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ ಧರ್ಮಸ್ಥಳಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! ಅಪೂರ್ವ ರಿಯಾಯತಿ!

ತಾ. 14–2–1938ರಿಂದ 15–3–1938ರ ವರೆಗೆ ಮಾತ್ರ!

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಇದೇ ಬರುವ ತಾರೀಕು 28 – 2 – 1938ರಲ್ಲು ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದುಹೋಗತಕ್ಕ ಯಾವತ್ತೂ ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತೂ ಸ್ಟೇಷನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓%ರ ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಟನ್ನು ಮಾಡಿರುವೆವು.

ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದ್ದಾಗಿದೆ

ಇಂತಹ ಅತ್ಯಪೂರ್ವ ಸುಸಂದರ್ಭವನ್ನು ಕಳಕೊಳ್ಳದಿರಿ!

*JOINT MANAGERS,*

**Combined Booking Agency, Mangalore. Joint Booking Office, Kodialbail.**

## ಪ್ರೊಫೆಸರ್

# ಕೋಡಿ ರಾಮಮೂರ್ತಿ ನಾಯಿಡು

★

### ಸಂಕ್ಷಿಪ್ತ ಜೀವನ ಚರಿತ್ರೆ

ರಾಮ ಮೂರ್ತಿಯು ಆಂಧ್ರದೇಶದ ವಿಜಯನಗರದವನು. ಈತನ ತಂದೆಯು ಒಬ್ಬ ಪೋಲಿಸ್ ಕಾನ್ಸ್ಟೇಬಲ್. ಈತನಿಗೆ ವಿದ್ಯಾಭ್ಯಾಸವು ಬಾಲ್ಯದಲ್ಲಿ ಚೆನ್ನಾಗಿ ನಡೆಯಲಿಲ್ಲ. ಆದ್ದರಿಂದ ತಂದೆಯು ಇವನಿಗಾಗಿ ಪೋಲೀಸು ಇಲಾಖೆಯಲ್ಲಿ ಉದ್ಯೋಗಕ್ಕಾಗಿ ಪ್ರಯತ್ನಿಸುತ್ತಿದ್ದನು. ಆದರೆ ರಾಮ ಮೂರ್ತಿಯು ಸ್ವಲ್ಪ ಕುಳ್ಳನಾದುದರಿಂದ ಉದ್ಯೋಗವು ದೊರಕದೇ ಹೋಯಿತು. ಸ್ವಸ್ಥಳದಲ್ಲಿ ಜೀವನಕ್ಕೆ ಬೇರೆ ಉಪಾಯವಿಲ್ಲದೆ ಡ್ರಿಲ್ ಉಪಾಧ್ಯಾಯ ವೃತ್ತಿಯನ್ನು ಅಂಗೀಕರಿಸಬೇಕಾಯಿತು. ಹೀಗೆ ಸ್ವಲ್ಪ ಕಾಲ ತನ್ನ ಸ್ವಂತ ಊರಾದ ವಿಜಯನಗರದಲ್ಲೇ ಕಳೆದನು.

ಆಗ ಡ್ರಿಲ್ ಉಪಾಧ್ಯಾಯರಾಗಬೇಕಾದವರು ಮದ್ರಾಸು ಟೀಚರ್ಸ್ ಕಾಲೇಜಿನಲ್ಲಿ ತೇರ್ಗಡೆಯಾಗಬೇಕೆಂದು ವಿದ್ಯಾ ಇಲಾಖೆಯವರು ವಿಧಿಸಿದರು. ಅಂತೆಯೇ ನಮ್ಮ ವೀರನು ಸೈದಾಪೇಟೆಯಲ್ಲಿರುವ ಕಾಲೇಜಿನಲ್ಲಿ ಉತ್ತೀರ್ಣನಾಗಿ ಅದೇ ಶಾಲೆಯಲ್ಲಿ ಸ್ವಲ್ಪ ಕಾಲ ಉದ್ಯೋಗವನ್ನು ನೋಡಿದನು. ಆಗ ಆತನ ವಯಸ್ಸು ಸುಮಾರು ೧೯ ೨೦ ವರ್ಷಗಳು ಇರಬಹುದು.

೨೦ನೇ ಶತಮಾನದ ಆದಿಯಲ್ಲಿ ಆಂಗ್ಲೇಯರು ಪಾಶ್ಚಾತ್ಯರೀತಿಯ ಮುಷ್ಟಿಯುದ್ಧವನ್ನು ನಮ್ಮ ದೇಶಕ್ಕೆ ತಂದರು. ಆಗಿನ ಮದ್ರಾಸಿನ ಅಧಿಕಾರಿಗಳೂ, ಯುವಕರೂ ಮುಷ್ಟಿಯುದ್ಧಕ್ಕೆ ಮರುಳಾದರು. ಹೀಗೆ ಪ್ರಜೆಗಳಿಂದಲೂ, ಅಧಿಕಾರಿಗಳಿಂದಲೂ ಈ ವಿದ್ಯೆಗೆ ಗೌರವ ದೊರಕಿತು. ರಾಮ ಮೂರ್ತಿಗೆ ಆ ಕಾಲದಲ್ಲೇ ಕುಸ್ತಿಯಾಟಗಳ ತಿಳಿವಿತ್ತು. [illegible] ತಾನೂ ಒಬ್ಬ ಉತ್ತಮ ತರಗತಿಯ ಬಾಕ್ಸರನಾಗಬೇಕೆಂಬ ಅಪೇಕ್ಷೆಯಿಂದ ಮೂರು ತಿಂಗಳೊಳಗಾಗಿ ಈ ವಿದ್ಯೆಯ ಮರ್ಮವೆಲ್ಲವನ್ನು ಅರಿತು, ಆರು ತಿಂಗಳೊಳಗಾಗಿ ಪ್ರವೀಣನಾದನು. ಅಲ್ಲಿಂದ ಮುಂದೆ ಮದ್ರಾಸು, ಬೆಂಗಳೂರು, ಮುಂತಾದ ಪಟ್ಟಣಗಳಲ್ಲಿ ತನ್ನ ಪ್ರದರ್ಶನಗಳನ್ನು ತೋರಿಸುತ್ತಾ ಹಣವನ್ನೂ ಕೀರ್ತಿಯನ್ನೂ ಸಂಪಾದಿಸಿದನು.

ಆ ಕಾಲದಲ್ಲಿ ಕುಸಿ ಮಹಾರಾಜರ ಕಾರ್ಯಸ್ಥರೊಬ್ಬರು ಮದ್ರಾಸಿನಲ್ಲಿದ್ದರು. ಈತನು ಮಹಾಮೇಧಾವಿಯೂ, ರಾಮ ಮೂರ್ತಿಯ ಪರಮ ಸ್ನೇಹಿತನೂ ಆಗಿದ್ದರು. ಈ ಕೊಂಡಲ ರಾವುಪಂತುಲುರವರು ಪ್ರೇರಣ ಮೇರೆಗೆ ರಾಮ ಮೂರ್ತಿಯು ಯಾರೂ ತಿಳಿಯದಂತೆ ಭಾರವನ್ನು ಎತ್ತುವುದು, ಹೊರುವುದು ಈ ವಿದ್ಯೆಯನ್ನು ಆರಂಭಿಸಿ ಎರಡು ತಿಂಗಳುಗಳೊಳಗಾಗಿ ಎರಡು ಟನ್ನು ಭಾರವನ್ನು ಬೆನ್ನ ಮೇಲೂ, ಎದೆಯ ಮೇಲೂ ಹೊರ ತೊಡಗಿದನು. ಪಂತುಲುರವರು ಈತನ ಸಾಮರ್ಥ್ಯಕ್ಕೆ ಮೆಚ್ಚಿ ವ್ಯಾಯಾಮದ ಕುರಿತು ಪೂರ್ವ ಗ್ರಂಥಗಳನ್ನು ನೋಡಿ, ಎದೆಯ ಪ್ರಮಾಣವನ್ನು ಹೆಚ್ಚಿಸುವ, ತಗ್ಗಿಸುವ ಉಪಾಯವು ದೇಹದಲ್ಲಿ ಸಂಚರಿಸ ತಕ್ಕ ವಾಯುವನ್ನು ಹೊಂದಿರುತ್ತದೆಂಬ ಸಲಹೆಯನ್ನು ತಿಳಿಸಿದರು. ಆಗ ಗ್ರಂಥಗಳು ಬಹಳವಾಗಿರಲಿಲ್ಲ. ಆದರೂ ಊಹನೆ ಮೇಲೆ ಸ್ವತಂತ್ರನಾಗಿ ಎದೆಯ ಪ್ರಮಾಣವನ್ನು ಹೆಚ್ಚು ಕಡಮೆ ಮಾಡುವ ಮರ್ಮವನ್ನು ತಿಳಿದುಕೊಂಡು, ಅಭ್ಯಾಸದ ಮೂಲಕ ೧೦-೧೨॥ ಅಂಗುಲದ ವರೆಗೆ ಹೆಚ್ಚಿಸಲು ಅಭ್ಯಾಸಮಾಡಿದನು. ಇದನ್ನು ಕೇಳಿ ಪಂತುಲುರವರು ಮೆಚ್ಚಿ ಕುಸಿ ಮಹಾರಾಜರ ಸಮಕ್ಷಮದಲ್ಲಿ ರಾಮ ಮೂರ್ತಿಯ ಬಲ ಪ್ರದರ್ಶನೆಯನ್ನು ತೋರಿಸುವ ಏರ್ಪಾಡು ಮಾಡಿದರು. ಆ ಕಾಲದಲ್ಲಿ ಬಲ ಪ್ರದರ್ಶನವೆಂದರೆ ಎಳ್ಳನ್ನು ಹಿಡಿಯಲ್ಲಿ ಹಿಂಡಿ ಎಣ್ಣೆ ತೆಗೆಯುವುದು, ರೂಪಾಯಿ ನಾಣ್ಯವನ್ನು ಬೆರಳಿನಿಂದ ನೆಗ್ಗಿ ಬಟ್ಟಲಾಕೃತಿಗೆ ತರುವುದು. ಇವುಗಳನ್ನೆಲ್ಲಾ ರಾಮ ಮೂರ್ತಿಯು ಮಾಡುತ್ತಿದ್ದನು.

ತನ್ನ ಜೊತೆಯಲ್ಲಿ ಕೆಲವು ಮಂದಿ ಬಾಕ್ಸರುಗಳನ್ನು ಕರಕೊಂಡು ಮೈಸೂರು, ಮಹಾರಾಷ್ಟ್ರದೇಶಗಳ ಸಂಚಾರವನ್ನು ಮಾಡಿ, ದ್ರವ್ಯವನ್ನೂ ಕೀರ್ತಿಯನ್ನೂ ಸಂಪಾದಿಸಿದನು. ಹಾಗೆ ಸಂಚರಿಸುತ್ತಾ ಬೆಂಗಳೂರು ನಗರಕ್ಕೆ ಬರಲು ಅಲ್ಲಿ ಒಂದು ಸರ್ಕಸ್ ಕಂಪೆನಿಯು ಬಂದಿಳಿದಿತ್ತು. ಆ ಕಂಪನಿಯಲ್ಲಿ ಗುಂಡಪ್ಪ ನಾಗಪ್ಪ ಎಂಬಿಬ್ಬರು ಜಟ್ಟಿಗಳಿದ್ದರು. ಇವರೊಡನೆ ರಾಮ ಮೂರ್ತಿಗೆ ಸ್ನೇಹವುಂಟಾಯಿತು. ಅವರಿಬ್ಬರಲ್ಲಿ ಗುಂಡಪ್ಪನು ಬಲು ಗಟ್ಟಿಗನಾದ ಜಟ್ಟಿ. ಕುಸ್ತಿ ವಿದ್ಯೆಯಲ್ಲಿ ಪ್ರವೀಣನು. ಆತನು ಈಗಲೂ ಜೀವಂತನಾಗಿದ್ದು ಉಡುಪಿ ಪಾಂಙ್ಯದ ಒಂದಾನೊಂದ ಗ್ರಾಮದಲ್ಲಿ ತನ್ನ ವೃದ್ಧಾಪ್ಯವನ್ನು ಕಳೆಯುತ್ತಿರುವನೆಂದು ತಿಳಿದು ಬಂದಿದೆ. ಆತನಿಗೆ ಈಗ ಸುಮಾರು ೮೦ ವರ್ಷಗಳ ವಯಸ್ಸಿರಬಹುದು. ಈ ಗುಂಡಪ್ಪನೂ ಈತನ ಸೋದರಳಿಯ ನಾಗಪ್ಪನೂ ರಾಮಮೂರ್ತಿಯ ಸ್ನೇಹವನ್ನನುಸರಿಸಿ ಆತನ ಹಿಂದೆ ತೆರಳಿದರು.

ಮದ್ರಾಸಿಗೆ ಬಂದ ಕೂಡಲೆ ಕೊಂಡಲ ರಾವು ಪಂತುಲುರವರನ್ನು ಕಂಡು, ಅವರೊಡನೆ ತಾನು ಸರ್ಕಸ್ ಕಂಪೆನಿಯೊಂದನ್ನು ತೆರೆಯಬೇಕೆಂದಿರುವೆನೆಂದು ಸೂಚಿಸಿದನಲ್ಲದೆ ತಾನು ತೆರೆಯಲಿರುವ ಕಂಪನಿಗೆ ಮೆನೇಜರರಾಗಿ ಪಂತುಲುರವರು ಇರಲೇಬೇಕೆಂದು ಬಯಸಿದನು. ಈತನ ಅಭಿಪ್ರಾಯಕ್ಕೆ ಪಂತುಲುರವರು ಮೆಚ್ಚಿ ಕುಸಿ ಮಹಾರಾಜರಿಂದ ದ್ರವ್ಯಾನುಕೂಲತೆಯನ್ನು ಮಾಡಿಸಿ ಕೊಟ್ಟು, ಆ ಕಂಪನಿಯಲ್ಲಿ ಕೆಲಕಾಲ ಮೆನೇಜರರಾಗಿ ನಿಂತರು.

೧೯೦೩ನೇ ಜುಲಾಯಿ, ಆಗೋಸ್ತು ತಿಂಗಳಲ್ಲಿ ಈ ಸರ್ಕಸ್ ಕಂಪನಿಯು ಆರಂಭವಾಗಿ ೫-೬ ತಿಂಗಳೊಳಗಾಗಿಯೇ ಇದರಲ್ಲಿ ೧೫೦ ಮಂದಿ ಇದ್ದು ದೊಡ್ಡ ಸರ್ಕಸ್ ಕಂಪನಿಗಳಲ್ಲೊಂದಾಯಿತು. ೧೯೦೪-೦೫ರಲ್ಲಿ ರಾಮ ಮೂರ್ತಿಯು ತನ್ನ ಕಂಪೆನಿಯೊಡನೆ ಪೂನಾ ನಗರಕ್ಕೆ ಹೊರಟನು. ಅಲ್ಲಿ ರಾಮ ಮೂರ್ತಿಗೆ ಲೋಕಮಾನ್ಯರ ಸಂದರ್ಶನವಾಯಿತು. ಅಲ್ಲಿಯೇ ಸ್ವಲ್ಪ ಕಾಲವಿದ್ದು ಪ್ರತಿದಿನವೂ ಲೋಕಮಾನ್ಯರನ್ನು ಸಂದರ್ಶಿಸುತ್ತಾ ಅಲ್ಲಿಂದ ಮುಂದೆ ನಾಸಿಕಾ ನಗರಕ್ಕೆ ತೆರಳಿದನು.

ನಾಸಿಕದಲ್ಲಿ ಗುಡಾರಹಾಕಿದಾಗ ಒಂದು ದಿನ ಈ ಕಂಪೆನಿಯ ಆನೆಗಳಲ್ಲಿ ಮದವೇರಿದ ಆನೆಯೊಂದು ರಾತ್ರಿ ವೇಳೆಯಲ್ಲಿ ಕಟ್ಟಿದ ಸಂಕಲೆಯನ್ನು ಮುರಿದು ರಾಮ ಮೂರ್ತಿಯು ಮಲಗಿದ್ದ ಗುಡಾರವನ್ನು ಕಲಕ್ಕಿರುಳಿಸಿ ಅದನ್ನು ತುಳಿದುಕೊಂಡು ಓಡಿತು. ಇದು ಓಡುವ ರಭಸದಲ್ಲಿ ರಾಮ ಮೂರ್ತಿಯ ಎದೆಯ ಮೇಲೆ ತುಳಿದುಕೊಂಡು ಓಡಿತು. ಇದನ್ನು ಕಂಪೆನಿಯವರು ಕಂಡು ತಮ್ಮ ಯಜಮಾನನಿಗೆ ವಿಪತ್ತುಂಟಾಗಿರಬಹುದೆಂಬ ಯೋಚನೆಯಲ್ಲಿರಲು, ರಾಮ ಮೂರ್ತಿಯು ಮಲಗಿದ್ದಲ್ಲಿಂದ ಸುಖವಾಗಿ ಎದ್ದು ಬರುವುದನ್ನು ಕಂಡು ಎಲ್ಲರೂ ಸಂತೋಷಿಸಿದರು. ಇಂದು ಮೊದಲು ರಾಮ ಮೂರ್ತಿಯು ಸುಮಾರು ೩ ಟನ್ನು ಭಾರವಿರುವ ಬಂಡೆಕಲ್ಲನ್ನು ತನ್ನ ಎದೆಯ ಮೇಲೆ ೫ ನಿಮಿಷಗಳ ವರೆಗೂ ಇಟ್ಟುಕೊಳ್ಳಲು ತೊಡಗಿದನು. ಈ ಕಾಲದಲ್ಲಿ ಮಾನ್ಸರ್ ವಿರಾಟ್ ಎಂಬ ಸುಪ್ರಸಿದ್ಧ ಫ್ರೆಂಚ್ ಜಟ್ಟಿಯ ಸ್ನೇಹವುಂಟಾಯಿತು. ಈತನಿಂದ ಕಬ್ಬಿಣದ ಸರಪಳಿಗಳನ್ನು ತುಂಡಾಗಿ ಕತ್ತರಿಸುವ ಮರ್ಮವನ್ನು ತಿಳಿದುಕೊಂಡು ಬಲಭೀಮ ಪರಾಕ್ರಮಿ ಎಂಬ ಬಿರುದನ್ನು ಸಂಪಾದಿಸಿದನು.

೧೯೦೪ರಲ್ಲಿ ಜಾರ್ಜ್ ಚಕ್ರವರ್ತಿಗಳು ಪ್ರಿನ್ಸ್ ಆಫ್ ವೇಲ್ಸ್ ಆಗಿ ಭಂಡಾಗ ಮದ್ರಾಸು ಗವರ್ನರರು ರಾಮ ಮೂರ್ತಿಗೆ ಆಹ್ವಾನ ಪತ್ರಿಕೆಯನ್ನು ಕಳಿಸಿ ಆತನ ವಿದ್ಯೆಯನ್ನು ಪ್ರಭುಗಳ ಮುಂದೆ ಪ್ರದರ್ಶಿಸುವ ಏರ್ಪಾಡು ಮಾಡಿದರು. ಅಲ್ಲಿ ರಾಮ ಮೂರ್ತಿಯು ಆನೆಯ ಸಾಧಕವೊಂದುಳಿದು ಮಿಕ್ಕೆಲ್ಲವನ್ನೂ ತೋರಿ ರಾಜ ಗೌರವಕ್ಕೆ ಪಾತ್ರನಾದನು. ೧೯೧೫ರಲ್ಲಿ ನೋಡಲು ಆತನ ವಕ್ಷಸ್ಥಳದಲ್ಲಿ ಸುಮಾರು ೮೦೦ ಪದಕಗಳು ಕಂಗೊಳಿಸುತಿದ್ದುವು. ಇವುಗಳಲ್ಲಿ ಹೆಚ್ಚಿನ ಪಾಲು ಬ್ರಿಟಿಷ್ ಪ್ರಭುಗಳಿಂದ ಪಡೆದವುಗಳು. ಮಿಕ್ಕವು ಹಿಂದೂದೇಶದ ಮತ್ತಿತರ ದೇಶಗಳ ಸಂಸ್ಥಾನಾಧಿಪತಿಗಳು ಕೊಟ್ಟವುಗಳು.

ಲೋಕಮಾನ್ಯರ ಸಂದರ್ಶನವಾದಂದಿನಿಂದ ಕುಸ್ತಿ ವಿದ್ಯೆಯಲ್ಲಿ ರಾಮ ಮೂರ್ತಿಯು ಬಹಳ ಶ್ರದ್ಧೆಯನ್ನು ತೋರಿಸಲಾರಂಭಿಸಿದನು. ಕುಸ್ತಿಯು ಅಪಾಯಕರವಾದ ವ್ಯವಹಾರ. ಎದುರಾಳಿಯು ಮರ್ಮ ಹಿಡಿದುಬಿಟ್ಟು ಹಿಡಿದಲ್ಲಿ ಎಲುಬು ಮುರಿಯುವ ಸಂಭವವೂ ಇರುವುದು. ತಾನು ಸಂದರ್ಶಿದ ಪ್ರತಿ ಊರಲ್ಲೂ ತನ್ನ ಪ್ರದರ್ಶನಗಳಲ್ಲಿ ಮಾತ್ರ ತೃಪ್ತಿ ಪಡದೆ ವ್ಯಾಯಾಮದ ಅವಶ್ಯಕತೆಯನ್ನು ಕುರಿತು ಬಹಿರಂಗವಾಗಿ ಉಪನ್ಯಾಸವನ್ನು ಕೊಡಲು ತೊಡಗಿದನು. ವಿದ್ಯಾರ್ಥಿಗಳಿಗೂ ಸ್ವಯಂಸೇವಕರಿಗೂ ವ್ಯಾಯಾಮವು ಎಷ್ಟು ಅವಶ್ಯಕವೆಂಬುದನ್ನು ಮಾತ್ರ ಸೂಚಿಸಿದ್ದಲ್ಲದೆ ತಾನು ತಂಗಿದ ಎಲ್ಲೆಡೆಗಳಲ್ಲಿ ವ್ಯಾಯಾಮ ಶಾಲೆಗಳನ್ನು ತೆರೆಯುವ ಏರ್ಪಾಡು ಮಾಡಿದನು. ಇದು ತಿಲಕರ ಸಂದರ್ಶನದ ಫಲವಿರಬಹುದೆಂದು ಊಹೆ.

ರಾಜಾಧಿರಾಜರೂ ಅನುಭವಿಸದ ಸಾಮ್ರಾಟರೂ ಅನುಭವಿಸದ ದಿವ್ಯ ವೈಭವವನ್ನು ಕಡು ದಾರಿದ್ರ್ಯವನ್ನೂ ನಮ್ಮ ರಾಮ ಮೂರ್ತಿಯು ಅನುಭವಿಸಿದನು. ದಾರಿದ್ರ್ಯ ಸಮಯದಲ್ಲಿ ಈತನಿಗೆ ನೆರವಾದವರೆಂದರೆ ಪಂಡಿತ ಮಾಲವಿಯರೊಬ್ಬರೇ. ತನ್ನ ಹಿಂದೂ ವಿಶ್ವ ವಿದ್ಯಾಲಯದಲ್ಲಿ ಈತನನ್ನು ವ್ಯಾಯಾಮಾಧ್ಯಾಪಕನಾಗಿ ನೇಮಿಸಿದರು. ಡ್ರಿಲ್ ಉಪದೇಶಕನಾಗಿ ಜೀವಿತವನ್ನಾರಂಭಿಸಿದ ರಾಮ ಮೂರ್ತಿಯು ಕೊನೆಯ ವರೆಗೂ ಅದರಿಂದಲೇ ಜೀವನ ಕಳೆಯುವಂತಾದನು.

ಕೊನೆಯ ಕಾಲದಲ್ಲಿ ಅತಿಮೂತ್ರರೋಗದಿಂದ ಈ ಬಲಶಾಲಿಯು ಎಷ್ಟೋ ದಿನ ನರಳುತ್ತಿದ್ದನು. ಕೊನೆಯಲ್ಲಿ ವೈದ್ಯರು ಆತನ ಕಾಲನ್ನು ಕತ್ತರಿಸದ ವಿನಹ ವಿಧಿಯಿಲ್ಲವೆಂದು ಅಭಿಪ್ರಾಯಪಟ್ಟು ಅಂತೆಯೇ ಒಂದು ಕಾಲನ್ನು ಕಡಿದು ತೆಗೆದರು. ನಮ್ಮ ಕಥಾನಾಯಕನು ಇದೇ ಕಳೆದ ಜನವರಿ ತಿಂಗಳ ತಾರೀಕಿನಲ್ಲಿ ಪರಂಧಾಮವನ್ನೈದಿದನು. ಮೃತಾತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

— ಸಂಪೂರ್ಣ —

## ಭೂವ್ಯವಸಾಯದ ಗೇಣಿ-ಯಲ್ಲಿ ಸುಧಾರಣೆಯ ಅವಶ್ಯಕತೆ

(ಆನೇ ಪುಟದಿಂದ ಮುಂದುವರಿದುದು)

ಯಂತಹ ಈ ರೀತಿ ಬಾಧೆಗಳನ್ನು ಅವರಲ್ಲಿ ಚರ್ಚಿಸುವುದರಿಂದ ಉಪಯೋಗವಿಲ್ಲ. ಒಕ್ಕಲಿಗನು ಗೇಣಿಚೀಟಿಗೆ ಸಹಿಯಿಕ್ಕುವಾಗ ಸಿದ್ಧನಾಗಿ ಹೋಗಿರಲಿಲ್ಲ, ತಕ್ಕ ಮುಂಜಾಗ್ರತೆಯಿಲ್ಲದೆ ಯಿಲ್ಲದೆ ಆತನು ಸಹಿಯಿಕ್ಕಿದ್ದನಾದರೆ, ತನ್ನ ವಿಧಿಯನ್ನೇ ಶಪಿಸಿಕೊಳ್ಳಬೇಕಲ್ಲದ, ಧನಿಯಲ್ಲಿ ದೂರಿಡುವುದೇ? "ಬಿಟ್ಟಿ ಬೇಗಾರಿ"ಯ ಬಾಧೆಯಿಂದಲೂ ಧನಿಯ ಕಡೆಗಣ್ಣಿನ ಕಾವಲಿನಿಂದಲೂ ಆತನು ತಪ್ಪುವನೆಂಬುದೇನೋ ನಿಜ. ಆದರೆ, ಇದರಲ್ಲಿ ಮಾನುಷಿಕವಾದ ಸಾಮೀಪ್ಯ ಸಂಬಂಧವು ತೀರಾ ಲೋಪವಾಗಿದೆ, ಅವರೊಳಗಿನ ಏಕ ಮಾತ್ರ ಸಂಬಂಧವಾವುದೆಂದರೆ ಗೇಣಿ ಚೀಟಿನದು. ನಿರ್ಜೀವವಾದ ಕರಾರಿನದು. ಹೀಗಿರಲು ಆ ಗೇಣಿಚೀಟೇ ಒಕ್ಕಲಿಗನ ಭವಿತವ್ಯವನ್ನು ನಿಷ್ಕರ್ಷಿಸುವುದಾಗಿದೆ.

(ಮುಂದುವರಿಯುವುದು.)

## ಹೊಟ್ಟೆನೋವು 5 ನಿಮಿಷಗಳಲ್ಲಿ ಮಾಯವಾಯಿತು.

"ಹೊಟ್ಟೆನೋವಿನಿಂದ ನೀವು ಸಂಕಟಪಡುವುದಾದರೆ, ಆ ನೋವಿನ ನಿವಾರಣೆ ಬೇಗನೆ ಮಾಡಿಕೊಳ್ಳಲು ನೀವು ಇಚ್ಛಿಸುವಿರಿ. ಈ ಅನುಭವವು ಬ್ರ್ಯಾಟ್ನಿನ ಮಿಸೆಸ್ 'ಡಿ' ಎಂಬವಳಿಗಾಯಿತು.

ಅವಳು ಹೊಟ್ಟೆನೋವಿನ ಸಂಕಟವನ್ನು ಅನುಭವಿಸುತ್ತಿದ್ದಳು. ಈಗ ಅವಳು ಬೇಗನೆ ಹೊಟ್ಟೆನೋವನ್ನು ನಿವಾರಿಸುವ ಮತ್ತು ಅದು ಮುಂದಕ್ಕೆ ಬಾರದ ಹಾಗೆ ಮಾಡುವ ಉಪಾಯವನ್ನು ಕಂಡುಹಿಡಿದಿರುವಳು.

ಅಕೆಯ ಪತಿಯು ಈ ರೀತಿ ಬರೆಯುತ್ತಿದ್ದಾನೆ:—"ಎರಡು ವಾರಗಳ ಹಿಂದೆ ನನ್ನ ಪರಮ ಮಿತ್ರನೊಬ್ಬನು, ನನ್ನ ಪತ್ನಿಗೆ ಒಂದು ಬಾಟ್ಲಿ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಒದಗಿಸಿದನು. ಅಂದು ಶುಕ್ರವಾರವಾಗಿತ್ತು. ಬೆಳಗಿನ ಜಾವಕ್ಕೆ, ಆಗ ನನ್ನ ಪತ್ನಿ ಹೊಟ್ಟೆನೋವಿನ ಸಂಕಟಪಡುತ್ತಿದ್ದಳು.

'ಒಡನೆ ಅವಳು ಒಂದು ಡೋಸನ್ನು ಸೇವಿಸಿದಳು. ಐದೆ ನಿಮಿಷಗಳಲ್ಲಿ ಅವಳ ನೋವು ಮಾಯವಾಯಿತು. ಹೋಯಿಲ್ಲದ ಅವಳ ಮುಖ ಲಕ್ಷಣಗಳನ್ನು ನೋಡಲು, ಅತಿ ಸಂತೋಷವೆನ್ನಿಸಿತು. ಈಗ ಅವಳು ಅದನ್ನು ನಿತ್ಯವೂ ಸೇವಿಸುತ್ತಿದ್ದಾಳೆ. ಅವಳ ಹೊಟ್ಟೆನೋವು ಸಂಪೂರ್ಣವಾಗಿ ಮಾಯವಾದುದಲ್ಲದೆ, ಈಗ ಅವಳಿಗೆ ಹೊಟ್ಟೆ ನೋವೆ ಆಗುವುದಿಲ್ಲ. ಈಗ ಬಹಳ ಸಂತುಷ್ಟಳಾಗಿರುವಳು.

"ಬರಿದೆ ಸಂಕಟ ಪಡಬೇಡಿರಿ. ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಪಡೆಯಿರಿ—ಆದರೆ ಅದು, ಅಲೆಕ್ಸ್ ಸಿ ಮೆಕ್ಲೀನ್ ರವರದೇ ಎಂದು ಖಚಿತ ಮಾಡಿಕೊಳ್ಳಿರಿ. [illegible] ನನ್ನ ಸ್ನೇಹಿತರಿಗ ಬೋಧಿಸುವನು.

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು, ಮಾಯವಾವಿ ತರದಲ್ಲಿ ನೋವು ನಿವಾರಣ ಮಾಡುವುದರಲ್ಲಿ ಇದೊಂದು ದೃಷ್ಟಾಂತವಾಗಿರುತ್ತಿದೆ. [illegible] ಇದೆ ತರದ ಅನುಭವವನ್ನು [illegible] ಇದೆ [illegible] ಆದರೆ [illegible] ವಿಷಯಗಳನ್ನು [illegible] ನೋಡಿ [illegible]



[illegible] ಕೈ ಅತಿ [illegible] ಅಡಿ [illegible] ಇದರ ತನಕ [illegible] ಹಿಡಿದು ಬಿಟ್ಟು [illegible]

### ಮದರಾಸು ಸರಕಾರದ ಬಜೇಟು

ವೈದ್ಯಕೀಯ [illegible] ವೈದ್ಯರ [illegible] 50 [illegible]

[illegible] ಬಜೇಟು ರಚನೆಯಾಗಿರುತ್ತದೆ

35 ರೂಪಾಯಿಗಳು [illegible] 2 [illegible]

## ಬೇಕಾಗಿದೆ

ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿ ತಿಂಗಳಿಗೆ 75 [illegible] 25/- ಅಲೋವೆನ್ಸಿನ ಮೇಲೆ ಆರ್ಗನೈಜರರೂ, ಪ್ರತಿಯೊಂದು ತಾಲೂಕಿಗೆ ತಿಂಗಳಿಗೆ 35/- ರೂಪಾಯಿ ಸಂಬಳದ ಮೇಲೆ ಏಜಂಟರೂ ಬೇಕಾಗಿರುತ್ತಾರೆ. 2 ಆಣೆ ಸ್ಟಾಂಪ್ ಇಟ್ಟು ಸವಿಸ್ತಾರ ಮಾಹಿತಿಗೆ ಬರೆದುಕೊಳ್ಳಿರಿ.

ಮ್ಯಾನೇಜರ್

**ಡಿ. ಜಿ. ಬಿ. ಇನ್ಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.**

ಕರ್ನಾಟಕ ಶಾಖೆ, ಶಿವಮೊಗ್ಗ.

## ಪತ್ರವ್ಯವಹಾರ

ಕಳೆದ ತಾ. ೨೦-೨-೩೮ರ ಪ್ರಭಾತ ಸಂಚಿಕೆಯಲ್ಲಿ "ನಾನು" ಎಂಬ ಸಹಿಯುಳ್ಳ ವ್ಯಕ್ತಿಯೊಂದು ಹೊಗೆ ಸೊಪ್ಪಿನ ಕುರಿತು ಬಾತ್ಮಿಯನ್ನು ಕೊಟ್ಟಿರುತ್ತದಷ್ಟೆ! ಅದು "ಮನುಷ್ಯ ರೂಪೇಣ ಮೃಗಾಶ್ಚರಂತಿ" ಎಂಬ ಲೋಕೋಕ್ತಿಯನ್ನು ದೃಢೀಕರಿಸಲು ಹೊರಟಿರುತ್ತದೋ ಎಂಬ ಸಂಶಯವು ನನಗೆ ತಲೆದೋರುತ್ತದೆ. ಲೇಖನಗಳ ಶಿರೋನಾಮೆಗಳಿಗೆ ತಲೆ ಬರಹ ಎಂದು ಕರೆಯುವ ಹವ್ಯಾಸದ ಮನುಷ್ಯರು ಇರುವರು.

ಆ "ನಾನು" ಎಂಬ ವ್ಯಕ್ತಿಗೆ ಹೊಗೆ ಸೊಪ್ಪು ವ್ಯಾಪಾರಸ್ಥರಿಗೂ, ಕೃಷಿಕರಿಗೂ ತಲೆ ತಲೆ ಗಂಟು ಹಾಕುವ ಕೆಲಸದಲ್ಲಿ ಬಹಳ ಆತುರತೆ ವೃದ್ಧಿ ಮುಂದಾಳುತನ ವಗೈರೆಯಾದರಲ್ಲಿ ಪರಿಶ್ರಮ ಜಾಸ್ತಿಯಿದ್ದಂತೆ ಕಾಣುತ್ತದೆ. ಹೊಗೆ ಸೊಪ್ಪು ಬಹಿಷ್ಕಾರ ಸಮಿತಿಯು ವರದಿಯು ತಾ ೬-೦ ೧-೩೮ರಲ್ಲು ಪ್ರಭಾತದಲ್ಲಿ ಪ್ರಕಟಿಸಿದ್ದುದನ್ನು ಕಂಡು ಮುಂದಕ್ಕೆ ನಮ್ಮ ಜಿಲ್ಲೆಯ ಹೊಗೆ ಸೊಪ್ಪಿನ ಕೃಷಿಯು ಕುಂಬಾ ಶ್ರೇಯಸ್ಕರವಾಗುವುದೆಂದು "ನಾನು" ತಿಳಿದಿತ್ತಂತೆ ಮಾತ್ರವಲ್ಲದೆ ಮಂಗಳೂರು ಹೊಗೆ ಸೊಪ್ಪಿನ ವರ್ತಕರ ಹೊಗ್ಗಟ್ಟು ಹಿಂದಿನ ಹೊಗ್ಗಟ್ಟಿನಂತೆ ಆಗಲಾರದೆಂದೂ, ಈಗ ಸ್ಥಾಪಿಸಿದ ಬಹಿಷ್ಕಾರ ಸಮಿತಿಯು ಯಶಸ್ವಿಯಾಗುವುದೆಂದು ಇದ್ದ ಭಾವನೆಯು ಪೂರ್ಣ ನಿರಾಶಾಜನಕವಾಗಿರುತ್ತದಾಗಿ ಈಗ ನಡೆದ ವಿದ್ಯಮಾನಗಳಿಂದ ಖಂಡಿತವಾಗಿ ಹೇಳಬಹುದಂತೆ ಹ್ಯೊಗೆ ಹೊಗೆಸೊಪ್ಪು ಬಹಿಷ್ಕಾರ ಸಮಿತಿಯವರು ಶ್ರದ್ಧೆಯಿಂದ ನಡೆಸುವ ಕಾರ್ಯಕ್ರಮಗಳನ್ನು ಅದು ಅರಿತಿದ್ದಲ್ಲಿ ಅದು ಹೀಗೆ ಬರೆಯುತ್ತಿದ್ದಿಲ್ಲ. ಸದರಿ ಸಮಿತಿಯವರು ಹೊಗೆ ಸೊಪ್ಪಿಗೆ ಹ್ಯೊಗೆಯನ್ನು ಬೆರಸಬಾರದ್ದಾಗಿ ಕೃಷಿಗಾರರಿಗೆ ನೋಟೀಸುಗಳನ್ನು ಛಾಪಿಸಿ ಹಂಚಿಸಿರುತ್ತಾರೆ ಮಾತ್ರವಲ್ಲದೆ ಕೃಷಿಯಾಗುವ ಊರುಗಳಿಗೆ ಹೋಗಿ ಕೃಷಿಗಾರರಿಗೆ ಬೋಧನೆಗಳನ್ನು ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ತನ್ನಿಮಾಡುವರೆ ರಾ| ಪಿ. ಸುಬ್ರಾಯರನ್ನು ನೇಮಿಸಿರುತ್ತಾರೆ. ಮಾನ್ಯ ಜಿಲ್ಲಾ ಕಲೆಕ್ಟರ ಧೊರೆಗಳು ಸಹ ಪಟೇಲರ ಮುಖಾಂತರ ಹೊಗೆ ಸೊಪ್ಪಿಗೆ ಹ್ಯೊಗೆ ಬೆರಸದಂತೆ ಕೃಷಿಗಾರರಿಗೆ ಎಚ್ಚರಿಸಿರುತ್ತಾರೆ. ಇಷ್ಟರ ತನಕ ಯಾವ ಕೃಷಿಗಾರನಾದರೂ ಹ್ಯೊಗೆಯನ್ನು ಹೊಗೆ ಸೊಪ್ಪಿಗೆ ಬೆರಸಲಿಲ್ಲವೆಂತ ಖಂಡಿತವಾಗಿ ಹೇಳಬಹುದು. ಆದರೆ, ಕಾಣದನ್ನು ಕಂಡಂತೆಯೂ, ನೋಡದ್ದನ್ನು ನೋಡದಂತೆಯೂ ಭಾವಿಸುವ ಆ "ನಾನು" ವ್ಯಕ್ತಿಗೆ ಇದೊಂದು ತಿಳಿದಿಲ್ಲವೆಂತ ತೋರುತ್ತದೆ. ತಾ. ೨೦ ೨ ೩೮ರ ಒಳಗೆ ನೂರಾರು ಕಟ್ಟು ಹೊಗೆ ಸೊಪ್ಪು ಮಂಗಳೂರಿಗೆ ಬಂದಿರುತ್ತದೆಂದು ಇದು ಹೇಳುತ್ತದೆ. ಕೃಷಿಕರಿಂದ ಅವರಿಗೆ ನೂರಾರು ಕಟ್ಟು ಹೊಗೆ ಸೊಪ್ಪು ತಯ್ಯಾರಾಗಲಿಲ್ಲ, ನೂರಾರು ಕಟ್ಟು ಹೊಗೆ ಸೊಪ್ಪು ವ್ಯಾಪಾರಸ್ಥರು ಪಡಿಯುವದರಲ್ಲಿ ದಷ್ಟರೆ ಇತ್ತಲಾಗೆ ಬಂದ ಕೆಲವು ಕಟ್ಟುಗಳು ಮಾ೪ ೧ಕ್ಕೆ ಅಂದಾಜು ನಾಲ್ಕು ಯಾ ಐಳು ರಾತ್ಲ ಹ್ಯೊಗೆ ಮಿಶ್ರಿತವಾಗಿರುವಲ್ಲಿ ಮಣ ೧ರ ರೂ ೧೦||ರಂತೆ ಮಾರಾಟವಾಗಿರುವುದಾಗಿ ತಿಳಿಸುತ್ತದೆ ಹೀಗೆ ಬರೆಯುವರೆ ಇದು ಎಷ್ಟು ಮಣ ಹೊಗೆ ಸೊಪ್ಪು ತನಿಖಿ ಮಾಡಿರುತ್ತದೆ? ಎಲ್ಲೆಲ್ಲಿ ವ್ಯಾಪಾರವಾದುದನ್ನು ನೋಡಿರುತ್ತದೆ

ಹೆಚ್ಚಿನ ಹೊಗೆ ಸೊಪ್ಪು ಕೃಷಿಮಾಡುವದು ವಣಗಿಸುವದು ಸಮುದ್ರ ಕಿನಾರೆಯ ಹ್ಯೊಗೆ ಗದ್ದೆಗಳಲ್ಲಿ ಗಿಡಗಳು ಬೆಳೆಯುವಾಗ ಎಲೆಗಳು ನೆಲದ ಮೇಲೆ ಮಲಗಿಕೊಂಡಿರುತ್ತವೆ ಗಿಡಗಳನ್ನು ಕಡಿದು ಹಾಕುವಾಗ ಅಲ್ಪ ಸ್ವಲ್ಪ ಹ್ಯೊಗೆ ಎಲೆಗಳಲ್ಲಿ ಅಂಟಿಕೊಳ್ಳುತ್ತದೆ ಮಾತ್ರವಲ್ಲದೆ ಹೊಗೆಸೊಪ್ಪು ಕಟ್ಟುವಿಕೆ ಕೆಲಸಮಾಡುವಾಗ ಒಂದೆರಡು ಹ್ಯೊಗೆ ಕಣಗಳು ಹೊಗೆಸೊಪ್ಪಿಗೆ ಅಂಟಿಕೊಳ್ಳಬಹುದು. ಕೂಲಂಕೂಶ ಪರೀಕ್ಷಿಸಿದರೆ ಒಂದು ಹೊಗೆಸೊಪ್ಪಿನ ಕಟ್ಟಿನಲ್ಲಿ ಒಂದೆರಡು ಹ್ಯೊಗೆ ಕಣಗಳು ಕಾಣಸಿಕ್ಕಲಿಕ್ಕಿಲ್ಲವೆಂತ ಹೇಳಲಾಗುವುದಿಲ್ಲ ಇದರಿಂದ ಹ್ಯೊಗೆ ಬೆರಸಿದ ಹೊಗೆಸೊಪ್ಪನ್ನು ಮಂಗಳೂರು ವರ್ತಕರು ಪಡಕೊಳ್ಳುತ್ತಾರೆಂದು ಕುಚೇಷ್ಟೆಮಾಡಲು ಆಧಾರವೆಲ್ಲಿ?

ಅಕ್ಕಿಯಲ್ಲಿಯೂ ನಾವು ಊಟಮಾಡುವ ಅನ್ನದಲ್ಲಿ ಒಂದೆರಡು ಸಣ್ಣ ಕಲ್ಲುಗಳು ನೋಡಲು ಸಿಕ್ಕರೆ ಅಕ್ಕಿಗೆ ಕಲ್ಲು ಮಿಶ್ರಮಾಡುತ್ತಾರೆಂದು ಹೇಳಲಿಕ್ಕಾಗುವುದಿಲ್ಲ

ಓ "ನಾನೇ" ದೇಶ ಹಿತಕ್ಕಾಗಿ ಜಿಲ್ಲೆಯ ಅಭಿವೃದ್ಧಿಗಾಗಿ, ರೈತರ ಒಳ್ಳಿತಕ್ಕಾಗಿ, ಸ್ವಾರ್ಥತ್ಯಾಗದಿಂದ ತಿಂದು ಬಾಳಿದ ನೀನು ನಮ್ಮಲ್ಲಿಗೆ ಬಂದು ಹೋಗಿ ಸೊಪ್ಪು ಕಟ್ಟಿರಿಸುವ ಕ್ರಮಗಳನ್ನು ತಿಳಕೊಳ್ಳಬಾರದೇ ? ಸರಕಾರ ಹೊಗೆಸೊಪ್ಪಿಗೆ ಹ್ಯೊಗೆ ಬೆರಸುವದನ್ನು ಆತಂಕಪಡಿಸುವರೆ ಕೈಗೊಂಡ ಕೋರ್ಟು ಕ್ರಮಗಳನ್ನು ತಿಳಕೋ ವಿಚಾರಿಸಿ ತನಿಖಿ ಮಾಡದೆ ವಿಚಾರವಿಲ್ಲದೆ ಲೇಖನಗಳನ್ನು ಪ್ರಕಟಿಸಿ ಜನರನ್ನು ವಂಚಿಸಬೇಡ ಬೊಂಬಾಯಿ ಬಿಹಾರಿಲ್ಲ ಹಿಂದೀ ವರ್ತಕರಿಂದ ನಡೆಸಲ್ಪಡುವ ಲವಂಗ ಬಹಿಷ್ಕಾರ ಚಳವಳದಿಂದ ಜಂಜಿಬಾರ್ ಸರಕಾರವನ್ನು ಅಲ್ಲೋಲ ಕಲ್ಲೋಲ ಮಾಡಿ ಹಿಂದುಸ್ಥಾನಕ್ಕೆ ಇದರ ಸೆನ್ನುತಂದು ಕೊಂಡ ವಿಧಾನಗಳು ನಿನಗೆ ಗೊತ್ತುಂಟು ಸಹಕಾರ ಭಕ್ತಿಗಳಿಂದಾಗುವ ಕಾರ್ಯಗಳು ಕಾನೂನುಗಳಿಂದಾಗದು ಊರ ಪ್ರಮುಖ ಮಾನ್ಯಜಿಲ್ಲಾ ಕಲೆಕ್ಟರ ದೊರೆಗಳ ಸೂಚನೆಯನ್ನುನೀನು ತಿಳಿದಿರುತ್ತಿ, ಆದುದರಿಂದ ಇನ್ನು ಮೇಲಾದರೂ ಸರಕಾರದವರ ಸಹಾನುಭೂತಿಯಿಂದ ಮಂಗಳೂರು ಹೊಗೆಸೊಪ್ಪಿನ ವರ್ತಕರೂ ಕೃಷಿಗಾರರೂ ಕಾವು ಕೈಗೊಂಡ ಕಾರ್ಯದಲ್ಲಿ ಯಶಸ್ಸು ಪಡೆಯುವರೆಂದು ಪ್ರಾರ್ಥಿಸುತ್ತೇನೆ

ಮಮ್ಮುಂಞಿ.

---

## ನೋಟೀಸು

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No. 23/1938

1 ಕೊರಗಾ, 2. ಅಪ್ಪು, 3. ಮೂರುಕ್ಕೆ, 4 ಕುಂಞಮ್ಮ ಯಾನೆ ದೇವಕಿ – ಬಿಲ್ಲವ ಕುಂಞರಾಮನ ಮಕ್ಕಳು. 1 ಮತ್ತು 2ನೇಯವರು ಪಳ್ಳಿಕರೆ ಗ್ರಾಮದ ಅಗ್ಗರ ಹೊಳೆಯಲ್ಲಿಯೂ, 3ನೇಯವಳು ಕೀಕಾನ ಗ್ರಾಮದ ಕೋಟೆಯಲ್ಲಿಯೂ 4ನೇಯವಳು ಮೂಡಬಿದ್ರೆಯಲ್ಲಿಯೂ ಇರುವವರು – ಅರ್ಜಿದಾರರು.

ಅರ್ಜಿದಾರರ ತಂದೆಯಾಗಿದ್ದ ಪಳ್ಳಿಕರೆ ಗ್ರಾಮದ ಅಗ್ಗರ ಹೊಳೆಯಲ್ಲಿದ್ದ ಬಿಲ್ಲ ವೆರು ವಿಲ್ ಕಣ್ಣನ ಅಳಿಯ ಕುಂಞರಾಮನು ತಾ 20—11—37ರಲ್ಲು ಮೃತಪಟ್ಟಿರುವುದರಿಂದ ಆತನಿಗೆ ಸದ್ರಿ ಅರ್ಜಿಯಲ್ಲಿ ವಿವರಿಸಿದ ರೀತಿ ಬರತಕ್ಕ ಹಣ ವಸೂಲು ಪಡಿಯುವ ಬಗ್ಗೆ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಕಲು ಮಾಡಿದ ಸದ್ರಿ ಅರ್ಜಿಯು ತಾ 17-3-1938ರಲ್ಲು ತನಿಖೆಗೆ ಇಟ್ಟಿದೆ ಆ ಕುರಿತು ಆಕ್ಷೇಪಿಸುವವರು ತಮ್ಮ ಆಕ್ಷೇಪವನ್ನು ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

ಕಾಸರಗೋಡು, 28 2-38 — C Rama Rao, ಅರ್ಜಿದಾರರ ವಕೀಲ್

---

|| ಶ್ರೀ ||

# ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ ಧರ್ಮಸ್ಥಳಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! ಅಪೂರ್ವ ರಿಯಾಯತಿ!

## ತಾ. 14–2–1938ರಿಂದ 15–3–1938ರ ವರೆಗೆ ಮಾತ್ರ!

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 28–2–1938ರಲ್ಲು ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದುಹೋಗತಕ್ಕ ಯಾವತ್ತೂ ಯಾತ್ರಾರ್ಥಿಗಳಿಗೆ ನಮ್ಮ ಬ್ಯಾನುಗಳ ಯಾವತ್ತೂ ಸ್ಟೇಶನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓%ರ ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಟನ್ನು ಮಾಡಿರುವೆವು.

ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದ್ದಾಗಿದೆ

## ಇಂತಹ ಅತ್ಯಪೂರ್ವ ಸುಸಂದರ್ಭವನ್ನು ಕಳಕೊಳ್ಳದಿರಿ!

***JOINT MANAGERS,***

**Combined Booking Agency, Mangalore. Joint Booking Office, Kodialbail.**

### ಪ್ರೊಫೆಸರ್

# ಕೋಡಿ ರಾಮಮೂರ್ತಿ ನಾಯಿಡು

★

## ಸಂಕ್ಷಿಪ್ತ ಜೀವನ ಚರಿತ್ರೆ

ರಾಮ ಮೂರ್ತಿಯು ಆಂಧ್ರದೇಶದ ವಿಜಯನಗರದವನು. ಈತನ ತಂದೆಯು ಒಬ್ಬ ಪೋಲಿಸ್ ಕಾನ್‍ಸ್ಟೇಬಲ್ ಈತನಿಗೆ ವಿದ್ಯಾಭ್ಯಾಸವು ಬಾಲ್ಯದಲ್ಲಿ ಚೆನ್ನಾಗಿ ನಡೆಯ ಲಿಲ್ಲ. ಆದ್ದರಿಂದ ತಂದೆಯು ಇವನಿಗಾಗಿ ಪೋಲೀಸು ಇಲಾಖೆಯಲ್ಲಿ ಉದ್ಯೋಗಕ್ಕಾಗಿ ಪ್ರಯತ್ನಿಸುತ್ತಿದ್ದನು ಆದರೆ ರಾಮ ಮೂರ್ತಿಯು ಸ್ವಲ್ಪ ಕುಳ್ಳನಾದುದರಿಂದ ಉದ್ಯೋಗವು ದೊರಕದೇ ಹೋಯಿತು ಸ್ವಸ್ಥಳದಲ್ಲಿ ಜೀವನಕ್ಕೆ ಬೇರೆ ಉಪಾಯವಿಲ್ಲದೆ ಡ್ರಿಲು ಉಪಾಧ್ಯಾಯ ವೃತ್ತಿಯನ್ನು ಅಂಗೀಕರಿಸಬೇಕಾಯಿತು ಹೀಗೆ ಸ್ವಲ್ಪ ಕಾಲ ತನ್ನ ಸ್ವಂತ ಊರಾದ ವಿಜಯನಗರದಲ್ಲೇ ಕಳೆದನ

ಆಗ ಡ್ರಿಲು ಉಪಾಧ್ಯಾಯರಾಗಬೇಕಾದವರು ಮದ್ರಾಸು ಟೀಚರ್ಸ್ ಕಾಲೇಜಿನಲ್ಲಿ ತೇರ್ಗಡೆಯಾಗಬೇಕೆಂದು ವಿದ್ಯಾ ಇಲಾಖೆಯವರು ವಿಧಿಸಿದರು ಅಂತೆಯೇ ನಮ್ಮ ವೀರನು ಸೈದಾಪೇಟೆಯಲ್ಲಿರುವ ಕಾಲೇಜಿನಲ್ಲಿ ಉತ್ತೀರ್ಣನಾಗಿ ಅದೇ ಶಾಲೆಯಲ್ಲಿ ಸ್ವಲ್ಪ ಕಾಲ ಉದ್ಯೋಗವನ್ನು ನೋಡಿದನು ಆಗ ಆತನ ವಯಸ್ಸು ಸುಮಾರು ೧೯ ೨೦ ವರ್ಷಗಳು ಇರಬಹುದು

೨೦ನೇ ಶತಮಾನದ ಆದಿಯಲ್ಲಿ ಆಂಗ್ಲೇಯರು ಪಾಶ್ಚಾತ್ಯರೀತಿಯ ಮುಷ್ಟಿಯುದ್ಧವನ್ನು ನಮ್ಮ ದೇಶಕ್ಕೆ ತಂದರು ಆಗಿನ ಮದ್ರಾಸಿನ ಅಧಿಕಾರಿಗಳೂ, ಪ್ರೋತ್ಸಾಹಕರೂ ಮುಷ್ಟಿಯುದ್ಧಕ್ಕೆ ಮರುಳಾದರು ಹೀಗೆ ಪ್ರಜೆಗಳಿಂದಲೂ, ಅಧಿಕಾರಿಗಳಿಂದಲೂ ಈ ವಿದ್ಯೆಗೆ ಗೌರವ ದೊರಕಿತು ರಾಮ ಮೂರ್ತಿಗೆ ಆ ಕಾಲದಲ್ಲೇ ಕುಸ್ತಿಯಾಟಗಳ ತಿಳಿವಿತ್ತು ಆದರೆ ತಾನೊಬ್ಬ ಉತ್ತಮ ತರಗತಿಯ ಬಾಕ್ಸರನಾಗಬೇಕೆಂಬ ಅಪೇಕ್ಷೆಯಿಂದ ಮೂರು ತಿಂಗಳೊಳಗಾಗಿ ಈ ವಿದ್ಯೆಯ ಮರ್ಮವೆಲ್ಲವನ್ನು ಅರಿತು ಆರು ತಿಂಗಳೊಳಗಾಗಿ ಪ್ರವೀಣನೆಂದೆನ ಅಲ್ಲಿಂದ ಮುಂದೆ ಮದ್ರಾಸು, ಬೆಂಗಳೂರು ಮುಂತಾದ ಪಟ್ಟಣಗಳಲ್ಲಿ ತನ್ನ ಪ್ರದರ್ಶನಗಳನ್ನು ತೋರಿಸುತ್ತಾ ಹಣವನ್ನೂ ಕೀರ್ತಿಯನ್ನೂ ಸಂಪಾದಿಸಿದನು.

ಆ ಕಾಲದಲ್ಲಿ ತಂ ಮಹಾರಾಜರ ಕಾರ್ಯಸ್ಥರೊಬ್ಬರು ಮದ್ರಾಸಿನಲ್ಲಿದ್ದರು ಈತನು ಮಹಾಮೇಧಾವಿಯೂ, ರಾಮ ಮೂರ್ತಿಯ ಪರಮ ಸ್ನೇಹಿತನೂ ಆಗಿದ್ದರು ಈ ಕೋಂಡಲ ರಾವುಪಂತುಲುರವರು ಪ್ರೇರಣ ಮೇರೆಗೆ ರಾಮ ಮೂರ್ತಿಯು ಯಾರೂ ತಿಳಿಯದಂತೆ ಭಾರವನ್ನು ಎತ್ತುವುದು, ಹೊರುವುದು ಈ ವಿದ್ಯೆಯನ್ನು ಆರಂಭಿಸಿ ಎರಡು ತಿಂಗಳುಗಳೊಳಗಾಗಿ ಎರಡು ಟನ್ನು ಭಾರವನ್ನು ಬೆನ್ನ ಮೇಲೂ, ಎದೆಯ ಮೇಲೂ ಹೊರ ತೊಡಗಿದನು ಪಂತುಲುರವರು ಈತನ ಸಾಮರ್ಥ್ಯಕ್ಕೆ ಮೆಚ್ಚಿ ವ್ಯಾಯಾಮದ ಕುರಿತು ಪೂರ್ವ ಗ್ರಂಥಗಳನ್ನು ನೋಡಿ, ಎದೆಯ ಪ್ರಮಾಣವನ್ನು ಹೆಚ್ಚಿಸುವ, ತಗ್ಗಿಸುವ ಉಪಾಯವು ದೇಹದಲ್ಲಿ ಸಂಚರಿಸ ತಕ್ಕ ವಾಯುವನ್ನು ಹೊಂದಿರುತ್ತದೆಂಬ ಸಲಹೆಯನ್ನು ತಿಳಿಸಿದರು. ಆಗ ಗ್ರಂಥಗಳು ಬಹಳವಾಗಿರಲಿಲ್ಲ ಆದರೂ ಊಹನೆ ಮೇಲೆ ಸ್ವತಂತ್ರವಾಗಿ ಎದೆಯ ಪ್ರಮಾಣವನ್ನು ಹೆಚ್ಚು ಕಡಮೆ ಮಾಡುವ ಮರ್ಮವನ್ನು ತಿಳಿದುಕೊಂಡು, ಅಭ್ಯಾಸದ ಮೂಲಕ ೧೦-೧೨ ಅಂಗುಲದ ವರೆಗೆ ಹೆಚ್ಚಿಸಲು ಅಭ್ಯಾಸಮಾಡಿದನು ಇದನ್ನು ಕೇಳಿ ಪಂತುಲುರವರು ಮೆಚ್ಚಿ ತುನಿ ಮಹಾರಾಜರ ಸಮಕ್ಷಮದಲ್ಲಿ ರಾಮ ಮೂರ್ತಿಯ ಬಲ ಪ್ರದರ್ಶನೆವನ್ನು ತೋರಿಸುವ ಏರ್ಪಾಡು ಮಾಡಿದರು. ಆ ಕಾಲದಲ್ಲಿ ಬಲ ಪ್ರದರ್ಶನವೆಂದರೆ ಎಳ್ಳನ್ನು ಹಿಡಿಯಲ್ಲಿ ಹಿಂಡಿ ಎಣ್ಣೆ ತೆಗೆಯುವುದು, ರೂಪ್ಯಾ ನಾಣ್ಯವನ್ನು ಬೆರಳಿನಿಂದ ನೆಗ್ಗಿ ಬಟ್ಟಲಾಕೃತಿಗೆ ತರುವುದು ಇವುಗಳನ್ನೆಲ್ಲಾ ರಾಮ ಮೂರ್ತಿಯು ಮಾಡುತ್ತಿದ್ದನು

ತನ್ನ ಜೊತೆಯಲ್ಲಿ ಕೆಲವು ಮಂದಿ ಬ್ರಾಹ್ಮರುಗಳನ್ನು ಕರಕೊಂಡು ಮೈಸೂರು ಮಹಾರಾಷ್ಟ್ರದೇಶಗಳ ಸಂಚಾರವನ್ನು ಮಾಡಿ, ದ್ರವ್ಯವನ್ನೂ ಕೀರ್ತಿಯನ್ನೂ ಸಂಪಾದಿಸಿದನು. ಹಾಗೆ ಸಂಚರಿಸುತ್ತಾ ಬೆಂಗಳೂರು ನಗರಕ್ಕೆ ಬರಲು ಅಲ್ಲಿ ಒಂದು ಸರ್ಕಸ್ ಕಂಪೆನಿಯು ಬಂದಿಳಿದಿತ್ತು ಆ ಕಂಪೆನಿಯಲ್ಲಿ ಗುಂಡಪ್ಪ ನಾಗಪ್ಪ ಎಂಬಿಬ್ಬರು ಜಟ್ಟಿಗಳಿದ್ದರು ಇವರೊಡನೆ ರಾಮ ಮೂರ್ತಿಗೆ ಸ್ನೇಹವುಂಟಾಯಿತು ಅವರಿಬ್ಬರಲ್ಲಿ ಗುಂಡಪ್ಪನು ಬಲು ಗಟ್ಟಿಗನಾದ ಜಟ್ಟಿ ಕುಸ್ತಿ ವಿದ್ಯೆಯಲ್ಲಿ ಪ್ರವೀಣನು ಆತನು ಈಗಲೂ ಜೀವಂತನಾಗಿದ್ದು ಉಡುಪಿ ಪಕ್ಕದ ಒಂದಾನೊಂದು ಗ್ರಾಮದಲ್ಲಿ ತನ್ನ ವೃದ್ಧಾಪ್ಯವನ್ನು ಕಳೆಯುತ್ತಿರುವನೆಂದು ತಿಳಿದು ಬಂದಿದೆ ಆತನಿಗೆ ಈಗ ಸುಮಾರು ೯೭ ವರ್ಷಗಳ ವಯಸ್ಸಿರಬಹುದು ಈ ಗುಂಡಪ್ಪನೂ ಈತನ ಸೋದರಳಿಯ ನಾಗಪ್ಪನೂ ರಾಮಮೂರ್ತಿಯ ಸ್ನೇಹವನ್ನನುಸರಿಸಿ ಆತನ ಹಿಂದೆ ತೆರಳಿದರು.

ಮದ್ರಾಸಿಗೆ ಬಂದ ಕೂಡಲೆ ಕೋಂಡಲ ರಾವು ಪಂತುಲರವರನ್ನು ಕಂಡು ಅವರೊಡನೆ ತಾನು ಸರ್ಕಸ್ ಕಂಪೆನಿಯೊಂದನ್ನು ತೆರೆಯಬೇಕೆಂದಿರುವೆನೆಂದ ಸೂಚಿಸಿದನಲ್ಲದೆ ತಾನು ತೆರೆಯಲಿರುವ ಕಂಪೆನಿಗೆ ಮೇನೇಜರಾಗಿ ಪಂತುಲುರವರು ನಿಲ್ಲಬೇಕೆಂದು ಬಯಸಿದನು ಈತನ ಅಭಿಪ್ರಾಯಕ್ಕೆ ಪಂತುಲುರವರು ಮೆಚ್ಚಿ ತುನಿ ಮಹಾರಾಜರಿಂದ ದ್ರವ್ಯಾನುಕೂಲತೆಯನ್ನು ಮಾಡಿಸಿ ಕೊಟ್ಟು, ಆ ಕಂಪೆನಿಯಲ್ಲಿ ಕೆಲಕಾಲ ಮೇನೇಜರರಾಗಿ ನಿಂತರು

೧೯೦೩ನೇ ಜುಲಾಯಿ ಆಗೋಸ್ತು ತಿಂಗಳಲ್ಲಿ ಈ ಸರ್ಕಸ್ ಕಂಪೆನಿಯು ಆರಂಭವಾಗಿ ೪೬ ತಿಂಗಳೊಳಗಾಗಿಯೇ ಇದರಲ್ಲಿ ೧೫೦ ಮಂದಿ ಇದ್ದು ದೊಡ್ಡ ಸರ್ಕಸ್ ಕಂಪೆನಿಗಳಲ್ಲೊಂದಾಯಿತು ೧೯೦೪-೦೫ರಲ್ಲಿ ರಾಮ ಮೂರ್ತಿಯು ತನ್ನ ಕಂಪೆನಿಯೊಡನೆ ಪೂನಾ ನಗರಕ್ಕೆ ಹೊರಟನು ಅಲ್ಲಿ ರಾಮ ಮೂರ್ತಿಗೆ ಲೋಕಮಾನ್ಯರ ಸಂದರ್ಶನವಾಯಿತು ಅಲ್ಲಿಯೇ ಸ್ವಲ್ಪ ಕಾಲವಿದ್ದು ಪ್ರತಿದಿನವೂ ಲೋಕಮಾನ್ಯರನ್ನು ಸಂದರ್ಶಿಸುತ್ತಾ ಅಲ್ಲಿಂದ ಮುಂದೆ ನಾಸಿಕಾ ನಗರಕ್ಕೆ ತೆರಳಿದನು

ನಾಸಿಕದಲ್ಲಿ ಗುಡಾರಹಾಕಿದಾಗ ಒಂದು ದಿನ ಈ ಕಂಪೆನಿಯ ಆನೆಗಳಲ್ಲಿ ಮದವೇರಿದ ಆನೆಯೊಂದು ರಾತ್ರಿ ವೇಳೆಯಲ್ಲಿ ಕಟ್ಟಿದ ಸಂಕಲೆಯನ್ನು ಮುರಿದು ರಾಮ ಮೂರ್ತಿಯು ಮಲಗಿದ್ದ ಗುಡಾರವನ್ನು ಕಾಲಕ್ಕುರುಳಿಸಿ ಅದನ್ನು ತುಳಿದುಕೊಂಡು ಓಡಿತು ಇದು ಓಡುವ ರಭಸದಲ್ಲಿ ರಾಮ ಮೂರ್ತಿಯ ಎದೆಯ ಮೇಲೆ ತುಳಿದುಕೊಂಡು ಓಡಿತು ಇದನ್ನು ಕಂಪೆನಿಯವರು ಕಂಡು ತಮ್ಮ ಯಜಮಾನನಿಗೆ ವಿಪತ್ತುಂಟಾಗಿರಬಹುದೆಂಬ ಯೋಚನೆಯಲ್ಲಿರಲು, ರಾಮ ಮೂರ್ತಿಯು ಮಲಗಿದ್ದಲ್ಲಿಂದ ಸುಖವಾಗಿ ಎದ್ದು ಬರುವುದನ್ನು ಕಂಡು ಎಲ್ಲರೂ ಸಂತೋಷಿಸಿದರು ಇಂದು ಮೊದಲು ರಾಮ ಮೂರ್ತಿಯು ಸುಮಾರು ೩ ಟನ್ನು ಭಾರವಿರುವ ಬಂಡೆಕಲ್ಲನ್ನು ತನ್ನ ಎದೆಯ ಮೇಲೆ ೫ ನಿಮಿಷಗಳ ವರೆಗೂ ಇಟ್ಟುಕೊಳ್ಳಲು ತೊಡಗಿದನು. ಈ ಕಾಲದಲ್ಲಿ ಮಾನ್ಸರ್ ವಿರಾಟ್ ಎಂಬ ಸುಪ್ರಸಿದ್ಧ ಫ್ರೆಂಚ್ ಜಟ್ಟಿಯ ಸ್ನೇಹವುಂಟಾಯಿತು. ಈತನಿಂದ ಕಬ್ಬಿಣದ ಸರಪಳಿಗಳನ್ನು ತುಂಡಾಗಿ ಕತ್ತರಿಸುವ ಮರ್ಮವನ್ನು ತಿಳಿದುಕೊಂಡು ಬಲಭೀಮ ಪರಾಕ್ರಮ ಎಂಬ ಬಿರುದನ್ನು ಸಂಪಾದಿಸಿದನು.

೧೯೧೧ರಲ್ಲಿ ಜಾರ್ಜ್ ಚಕ್ರವರ್ತಿಗಳು ಪ್ರಿನ್ಸ್ ಆಫ್ ವೇಲ್ಸ್ ಆಗಿ ಬಂದಾಗ ಮದ್ರಾಸು ಗವರ್ನರರು ರಾಮ ಮೂರ್ತಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿ ಆತನ ವಿದ್ಯೆಯನ್ನು ಪ್ರಭುಗಳ ಮುಂದೆ ಪ್ರದರ್ಶಿಸುವ ಏರ್ಪಾಡು ಮಾಡಿದರು. ಅಲ್ಲಿ ರಾಮ ಮೂರ್ತಿಯು ಅನೇಕ ಸಾಧಕವೊಂದುಳಿದು ಮಿಕ್ಕೆಲ್ಲವನ್ನೂ ತೋರಿ ರಾಜ ಗೌರವಕ್ಕೆ ಪಾತ್ರನಾದನು. ೧೯೧೫ರಲ್ಲಿ ನೋಡಲು ಆತನ ವಕ್ಷಸ್ಥಳದಲ್ಲಿ ಸುಮಾರು ೬೦೦ ಪದಕಗಳು ಕಂಗೊಳಿಸುತಿದ್ದವು ಇವುಗಳಲ್ಲಿ ಹೆಚ್ಚಿನ ಪಾಲು ಬ್ರಿಟಿಷ್ ಪ್ರಭುಗಳಿಂದ ಪಡೆದವುಗಳು ಮಿಕ್ಕವು ಹಿಂದೂದೇಶದ ಮತ್ತಿತರ ದೇಶಗಳ ಸಂಸ್ಥಾನಾಧಿಪತಿಗಳು ಕೊಟ್ಟವುಗಳು

ಲೋಕಮಾನ್ಯರ ಸಂದರ್ಶನವಾದಂದಿನಿಂದ ಕುಸ್ತಿ ವಿದ್ಯೆಯಲ್ಲಿ ರಾಮ ಮೂರ್ತಿಯು ಬಹಳ ಶ್ರದ್ಧೆಯನ್ನು ತೋರಿಸಲಾರಂಭಿಸಿದನು ಕುಸ್ತಿಯು ಅಪಾಯಕರವಾದ ಪ್ರಹಾರ ಎದುರಾಳಿಯು ಮರ್ಮ ಹಿಡಿದುಪಟ್ಟು ಹಿಡಿದಲ್ಲಿ ಎಲುಬು ಮುರಿಯುವ ಸಂದರ್ಭವೊದಗುವುದು ತಾನು ಸಂದರ್ಶಿದ ಪ್ರತಿ ಊರಲ್ಲೂ ತನ್ನ ಪ್ರದರ್ಶನಗಳಲ್ಲಿ ಮಾತ್ರ ತೃಪ್ತಿ ಪಡದೆ ವ್ಯಾಯಾಮದ ಅವಶ್ಯಕತೆಯನ್ನು ಕುರಿತು ಬಹಿರಂಗವಾಗಿ ಉಪನ್ಯಾಸವನ್ನು ಕೊಡಲು ತೊಡಗಿದನು ವಿದ್ಯಾರ್ಥಿಗಳಿಗೂ ಸಂಸಾರಿಕರಿಗೂ ವ್ಯಾಯಾಮವು ಎಷ್ಟು ಆವಶ್ಯಕವೆಂಬುದನ್ನು ಮಾತ್ರ ಸೂಚಿಸಿದ್ದಲ್ಲದೆ ತಾನ ಹೋಗಿದ ಎಲ್ಲೆಡೆಗಳಲ್ಲೂ ವ್ಯಾಯಾಮ ಶಾಲೆಗಳನ್ನು ತೆರೆಯುವ ಏರ್ಪಾಡು ಮಾಡಿದನು. ಇದು ಕಿಬಕರ ಸಂದರ್ಶನದ ಫಲವಿರಬಹುದೆಂದು ಊಹೆ

ರಾಜಾಧಿರಾಜರೂ ಅಖಂಡ ಸಾಮ್ರಾಟರೂ ಅನುಭವಿಸದ ದಿವ್ಯ ವೈಭವವನ್ನೂ ಕಡು ದಾರಿದ್ರ್ಯವನ್ನೂ ನಮ್ಮ ರಾಮ ಮೂರ್ತಿಯು ಅನುಭವಿಸಿದನ ದಾರಿದ್ರ್ಯ ಪದ ಯದಲ್ಲಿ ಈತನಿಗೆ ನೆರವಾದವರೆಂದರೆ ಪಂಡಿತ ಮಾಲವಿಯರೊಬ್ಬರೇ ತನ್ನ ಹಿಂದೂ ವಿಶ್ವ ವಿದ್ಯಾಲಯದಲ್ಲಿ ಈತನನ್ನು ವ್ಯಾಯಾಮ ಪ್ರವೀಣನಾಗಿ ನೇಮಿಸಿದರು ಡ್ರಿಲ್ಲು ಉಪದೇಶಕನಾಗಿ ಜೀವಿತವನ್ನಾರಂಭಿಸಿದ ರಾಮ ಮೂರ್ತಿಯು ಕೊನೆಯ ವರೆಗೂ ಅದರಿಂದಲೇ ಜೀವನ ಕಳೆದುದಂತಾದನು.

ಕೊನೆಯ ಕಾಲದಲ್ಲಿ ಅಜೀರ್ಣ ರೋಗದ ಬಾಧೆಯಿಂದ ಪೀಡಿತ ನಾಗಿದ್ದನು. ಕೊನೆಯಲ್ಲಿ ವೈದ್ಯರು ಅನ್ನು ಕತ್ತರಿಸದ ಹೊರತು ಬದುಕಲ್ಲವ ಪ್ರಾಯಪಟ್ಟು ಅಂತೆಯೆ ಒಂದು ಕಡಿದು ತೆಗೆದು ನಮ್ಮ ಕಥಾನಾಯಕ ಇದೇ ಕಳೆದ ಜನವರಿ ತಿಂಗಳ ೧೭೦ರಲ್ಲು ಪರಂಧಾಮವನ್ನೈದಿದನು ವ್ಯಕ್ತಿಗೆ ಭಗವಂತನು ಶಾಂತಿಯನ್ನೀಯಲಿ

— ಸಂಪೂರ್ಣ —

# ಹೊಟ್ಟೆನೋವು 5 ನಿಮಿಷಗಳಲ್ಲಿ ಮಾಯವಾಯಿತು.

ಹೊಟ್ಟೆನೋವಿನಿಂದ ನೀವು ಸಂಕಟಪಡುವುದಾದರೆ, ಆ ನೋವಿನ ನಿವಾರಣೆ ಬೇಗನೆ ಮಾಡಿಕೊಳ್ಳಲು ನೀವು ಇಚ್ಛಿಸುವಿರಿ ಈ ಅನುಭವವು ಬ್ರ್ಯಾಂಟನ್ನಿನ ಮಿಸೆಸ್ ಡಿ ಎಂಬವಳಿಗಾಯಿತು

ಅವಳು ಹೊಟ್ಟೆನೋವಿನ ಸಂಕಟವನ್ನು ಅನುಭವಿಸುತ್ತಿದ್ದಳು. ಈಗ ಅವಳು ಬೇಗನೆ ಹೊಟ್ಟೆನೋವನ್ನು ನಿವಾರಿಸುವ ಮತ್ತು ಇದು ಮುಂದಕ್ಕೆ ಬಾರದ ಹಾಗೆ ಮಾಡುವ ಉಪಾಯವನ್ನು ಕಂಡುಹಿಡಿದಿರುವಳು.

ಆಕೆಯ ಪತಿಯು ಈ ರೀತಿ ಬರೆಯುತ್ತಾನೆ—"ಎರಡು ವಾರಗಳ ಹಿಂದೆ ನನ್ನ ಮಿತ್ರನೊಬ್ಬನು, ನನ್ನ ಪತ್ನಿಗೆ ಒಂದು ಬಾಟ್ಲಿ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಒದಗಿಸಿದನು ಅಂದು ಶನಿವಾರವಾಗಿತ್ತು ಬೆಳಗಿನ ಜಾವಕ್ಕೆ, ಆಗ ನನ್ನ ಪತ್ನಿ ಹೊಟ್ಟೆನೋವಿನ ಸಂಕಟದಲ್ಲಿದ್ದಳು

"ಒಡನೆ ಅವಳು ಒಂದು ಡೋಸನ್ನು ಸೇವಿಸಿದಳು ಐದೇ ನಿಮಿಷಗಳಲ್ಲಿ ಅವಳ ನೋವು ಮಾಯವಾಯಿತು ನೋವಿನ್ದದ ಅವಳ ಎಲ್ಲ ಲಕ್ಷಣಗಳನ್ನು ನೋಡಲು, ಅತಿ ಸಂತೋಷವೆನ್ನಿಸಿತು ಈಗ ಅವಳು ಅದನ್ನು ನಿತ್ಯವೂ ಸೇವಿಸುತ್ತಿದ್ದಾಳೆ ಅವಳ ಹೊಟ್ಟೆನೋವು ಸಂಪೂರ್ಣವಾಗಿ ಮಾಯವಾದುದಲ್ಲದೆ, ಈಗ ಅವಳಿಗೆ ಹೊಟ್ಟೆ ನೋವೆ ಆಗುವುದಿಲ್ಲ ಈಗ ಬಹಳ ಸಂತುಷ್ಟಳಾಗಿರುವಳು.

"ಬರಿದೆ ಸಂಕಟ ಪಡಬೇಡಿರಿ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಪಡೆದುಕೊಳ್ಳಿರಿ ಇದು ಅಲೆಕ್ಸ್ ಸಿ ಮೆಕ್ಲೀನ್ ಪದಾರ್ಥದ ಖಚಿತ ಮಾಡಿಕೆ ಇದು ... ನನ್ನ ಸ್ನೇಹಿತರಿಗೆ ಬೋಧಿಸುವನು

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಮಾಯವಾದ ರೀತಿಯಲ್ಲಿ ನೋವು ನಿವಾರಣ ಮಾಡುದರಲ್ಲಿ ಇದೊಂದು ದೃಷ್ಟಾಂತವಾಗಿರುತ್ತದೆ ಸಾವಿರಾರು ಮಂದಿಗಳ ಇದೆ ತರದ ಅನುಭವವನ್ನು ... ಇದೆ ಸಂತೋಷಕರ ... ವರ ... ಪಟ್ಟಿ ಗೆಯ ಮೇಲೆ



## ಭೂವ್ಯವಸಾಯದ ಗೇಣಿ-ಯಲ್ಲಿ ಸುಧಾರಣೆಯ ಅವಶ್ಯಕತೆ

(೫ನೇ ಪುಟದಿಂದ ಮುಂದುವರಿಸಿದುದು)

ಯಿಂತಹ ಈ ರೀತಿ ಬಂಧಗಳನ್ನು ಅವರಲ್ಲಿ ಚರ್ಚಿಸುವುದರಿಂದ ಉಪಯೋಗವಿಲ್ಲ ಒಕ್ಕಲಿಗನು ಗೇಣಿಚೀಟಿಗೆ ಸಹಿಯಿಕ್ಕುವಾಗ ಎದ್ದು ಹೋಗಿರಲಿಲ್ಲ, ತಕ್ಕ ಮುಂದಾಲೋಚನೆಯಿಲ್ಲದೆ ಆತನು ಸಹಿಯಿಕ್ಕಿದ್ದನಾದರೆ, ತನ್ನ ವಿಧಿಯನ್ನೇ ಶಪಿಸಿಕೊಳ್ಳಬೇಕಲ್ಲದೆ, ಧನಿಯಲ್ಲಿ ದೂರಿಡುವುದೇ ? 'ಬಿಟ್ಟಿ ಬೇಗಾರಿ''ಯ ಬಾಧೆಯಿಂದಲೂ ಧನಿಯ ಕಡೆಗಣ್ಣಿನ ಕಾವಲಿನಿಂದಲೂ ಆತನು ತಪ್ಪುವನೆಂಬುದೇನೋ ನಿಜ. ಆದರೆ, ಇದರಲ್ಲಿ ಮಾನುಷಿಕವಾದ ಸಾಮಿಪ್ಯ ಸಂಬಂಧವು ತೀರಾ ಲೋಪವಾಗಿದೆ, ಅವರೊಳಗಿನ ಏಕ ಮಾತ್ರ ಸಂಬಂಧವಾವುದೆಂದರೆ ಗೇಣಿ ಚೀಟಿನದು. ನಿರ್ಜೀವವಾದ ಕರಾರಿನದು. ಹೀಗಿರಲು ಆ ಗೇಣಿಚೀಟೇ ಒಕ್ಕಲಿಗನ ಭವಿತವ್ಯವನ್ನು ನಿಷ್ಕರ್ಷಿಸುವುದಾಗಿದೆ.

(ಮುಂದುವರಿಯುವುದು)

35 ರೂಪಾಯಿಗಳು

ಬೇಕಾಗಿದೆ !

ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿ ತಿಂಗಳಿಗೆ 15 - ರೂಪಾಯಿ ಸಂಬಳ 25/- ಅಲೋವೆನ್ಸಿನ ಮೇಲೆ ಆರ್ಗನೈಜರರೂ, ಪತಿಯೊಂದು ತಾಲೂಕಿನ ತಿಂಗಳಿಗೆ 35/- ರೂಪಾಯಿ ಸಂಬಳದ ಮೇಲೆ ಏಜಂಟರೂ ಬೇಕಾಗಿರುತ್ತಾರೆ 2 ಆಣೆ ಸ್ಟ್ಯಾಂಪು ಇಟ್ಟು ಸವಿಸ್ತಾರ ಮಾಹಿತಿಗೆ ಬರಕೊಳ್ಳಿರಿ.

ಮ್ಯಾನೇಜರ್

ದಿ ಜೆ. ಬಿ. ಇನ್ಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

ಕರ್ನಾಟಕ ಸಾಮ್ರಾಜ್ಯ ಶಿವಮೊಗ್ಗ

# ಮದ್ರಾಸು ಸರಕಾರದ ಬಜೇಟು-ಹೊಸ ತೆರಿಗೆಗಳಿಲ್ಲ- ಕಾಂಗ್ರೆಸ್ ಕಾರ್ಯಕ್ರಮಕ್ಕೆ ಸರಿಯಾಗಿದೆ

ಸ್ವದೇಶಾಭಿಮಾನಿ

ತಾ ೪ನೇ ಶುಕ್ರವಾರ ಮಾರ್ಚಿ ೧೯೩೮

## ಬಡತನದ ಭಾಗ್ಯ.

### ಮದ್ರಾಸು ಸರಕಾರದ ಮುಂದಣ ವರ್ಷದ ಆಯುವ್ಯಯ (1938 39ರ ಬಜೇಟು)

ಮದ್ರಾಸು ಸರಕಾರದ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು ಇದೇ ಮಂಗಳವಾರ, ಎಸೆಂಬ್ಲಿಯಲ್ಲಿ ಮುಂದಿಟ್ಟ ಬಜೇಟು ವೃತ್ತಾಂತವನ್ನು ಓದುವಾಗ ಅವರನ್ನು ಎಲ್ಲ ಪಕ್ಷ ಪಂಗಡಗಳು ಕೊಂಡಾಡುವಂತಿದೆ ದೀನ ದರಿದ್ರರ ಹಿತಚಿಂತನವನ್ನೆ ಮನಸ್ಸಿನಲ್ಲಿಟ್ಟುಕೊಂಡ ರಚಿಸಿರುವ ಈ ಬಜೇಟಿನ ಪಂಚಾಮವು ಬಡತನದ ಭಾಗ್ಯವನ್ನೆ ಕಣ್ಣೆದಿರಿನಲ್ಲಿ ನಿಲ್ಲಿಸುವುದೆನ್ನುವಂತಿದೆ ಸರಕಾರವು ಬಡವಾಗಿದೆ ಮಂತ್ರಿಮಂಡಲವೂ ಬಡತನವೇ ತಮ್ಮ ಉಡುಗೊರೆಯೆಂದಿದೆ ಬಡತನದ ಭಾಗ್ಯ ಬಲ್ಲವರೇ ಬಡವರ ಭಾಗ್ಯವು ಹೆಚ್ಚಲೆಂದು ಪ್ರಯತ್ನಿಸುವುದರಲಿ ವಿಚಿತವೇನೂ ಇಲ್ಲದಿರಬಹುದು ಹೀಗಿದ್ದರೂ ಹಿಂದಣ ಸಂಪನ್ನ ಕಾಲದ ಬಜೇಟುಗಳನ್ನೂ ಇದನ್ನೂ ಹೋಲಿಸುವಾಗ, ಇದು ದೈವಕಟಾಕ್ಷದಿಂದಲೇ ಇಷ್ಟಕ್ಕೆ ಪರಿಣಮಿಸುವಂತಾಯಿತೆನ್ನಬೇಕು ರಿಯಾಯಿತಿಗಳು ಮಾಫಿಗಳು ಸುಂಕ ವಜಾ ಮೊದಲಾದುವುಗಳಿಂದ ಎಷ್ಟೋ ಆಯಭಾಗವು ಕಡಿಮೆಯಾಗಬೇಕಿದಿತು ಇದು ಎಣಿಕೆಗಿಂತ ...

... ಕೃಟವಾಗಿ ನೀರು ಸರಬರಾಯಿಯು ಕೆಲಸಗಳಿಗೆ ಕೈಹಚ್ಚುವುದಕ್ಕೆ ಹಿಂತೆಗೆಯಬಾರದು

ವರ್ಷಾಂತ್ಯದಲ್ಲಿ ಎಲ್ಲಾ ಬಗೆಯ ಪ್ರಜಾರಂಜಕ ಕಾರ್ಯಗಳನ್ನು ಮಾಡಿಯ ೧೨೦೦೦ ರೂಪಾಯಿ ಉಳಿತಾಯವಾದೀತೆಂದು ಅಂದಾಜು ಇದೆ ಖರ್ಚನ್ನು ಇಳಿಸುವುದಕ್ಕೆ ಧಾರಾಳವಾಗಿ ಪ್ರಯತ್ನಿಸಿದರೂ ಸರ್ವಿಸುಗಳ ಸಂಬಳದಲ್ಲಿ ಬರೇ ೬೧೦೦೦ ಮಾತ್ರ ಉಳಿಸಬಹುದಾಗಿದೆ ಎಂದು ತೋರುತ್ತದೆ ಇಷ್ಟು ಕಡಮೆಯಾಗಿ ಉಳಿಸಲಾಗುವಂತಾದ ರೀತಿಯಿಂದ ಇನ್ನೆಷ್ಟೋ ವರ್ಷಗಳ ತನಕ ಪೇಚಾಡಿದರೂ ಪ್ರಜಾ ಪುರೋಭಿವೃದ್ಧಿಗಾಗಿ ಹಣದೊರೆವುದೇ ಕಷ್ಟವೆನಿಸುವುದಿಲ್ಲವೆ? ಈ ಭಾಗದಲ್ಲಿ ಎಷ್ಟೋ ವಿವೇಚನೆ ವಿಮರ್ಶೆ ಮೊದಲಾದುವು ಆವಶ್ಯಕವಿವೆ

ರೈತರ ಸಾಲ ನಿವಾರಣೆಗಾಗಿ ಅರ್ಧ ಕೋಟಿ ರೂಪಾಯಿಗಳನ್ನು ಸರಕಾರವು ವಿನಿಯೋಗಿಸುವುದು ಇದೇ ವರ್ಷ ಎಸೆಂಬ್ಲಿಯಲ್ಲಿ ...

ಪ್ರಧಾನ ಮಂತ್ರಿ ರಾಜಗೋಪಾಲಾಚಾರಿ

... ಇನ್ನೆರಡು ಜಿಲ್ಲೆಗಳಲ್ಲಿ ...

## ಮಿತ ವ್ಯಯ ಕ್ರಮಗಳಿಂದ ೨೧ ಲಕ್ಷ ಉಳಿತಾಯ ರೈತರ ಸಾಲನಿವಾರಣೆಗಾಗಿ ರೂ. ೫೦ ಲಕ್ಷ ★ ಮೀಸಲಿರಿಸುವ ಚಾರ್ಜು ಅರ್ಧಕ್ಕೆ ಇಳಿಸಲಾಗಿದೆ. ★

ರೂ ೧॥ ಕೋಟಿ ಸಾಲ ತೆರಲಾಗುವುದು – ಭೂಕಂದಾಯದಲ್ಲಿ ಮಾಫಿ – ಹಳ್ಳಿಗಳಿಗೆ ಶುದ್ಧ ನೀರಿನ ಸರಬರಾಯಿ –

... ವೆನ್ನುವುದರಲ್ಲಿ ತಿರುಳಿಲ್ಲ ಹಿಂದೆ ಕೋಟ್ಯಂತರ ರೂಪಾಯಿಗಳನ್ನು ಖಜಾನೆಯಲ್ಲಿ ಜಮೆಯಿಟ್ಟು ಕೊನೆಗೆ ವಾರ್ಷಿಕವಾಗಿ ಅದನ್ನೆಲ್ಲ ಕೇಂದ್ರ ಸರಕಾರಕ್ಕೆ ತೆರಬೇಕಾಗಿ ಬಂದುದೇ ಒಂದು ಅನಲಕ್ಷಣ ಉಂಟಾಯಿತಲ್ಲದೆ ಪ್ರಜಾರಂಜಕಗಳಾದ ಕಾರ್ಯಗಳನ್ನು ಮಾಡುವುದಕ್ಕೆ ಹಿಂದೆಗೆದೇ ನಮ್ಮ ಪ್ರಾಂತಿಕ ಆಡಳಿತ ನಡೆಸಿತೆಂದ ಅಪವಾದವನ್ನು ಹೊತ್ತಿದೆ ಹೀಗಾದುದರಿಂದ ಕಾಂಗ್ರೆಸ ಮಂತ್ರಿಗಳು ಉಳಿಸುವ ಹಣ ಕಡಮೆಯಾದರೂ ಪ್ರಜಾರಂಜನೆಗೆ ಸಲ್ಲಿಸುವ ಹಣ ಹೆಚ್ಚಾಗಲೆಂದೇ ಪ್ರಯತ್ನಿಸಿರುವರು ಅದಕ್ಕಾಗಿಯೇ ಇನಂಟೇಕ್ಸಿನ ಅಂಶವಾಗಿ ಕೇಂದ್ರ ಸರಕಾರದಿಂದ ದೊರೆತ ಮೊಬಲಗನ್ನು ಗ್ರಾಮಾಂತರಗಳಲಿ ನೀರು ಸರಬರಾಯಿಗಾಗಿ ಒಪ್ಪಿಸಿರುವುದು ಶುಭಲಕ್ಷಣವೆನ್ನಬೇಕು ಹಣವನ್ನು ವ್ಯಯಿಸುವುದರಲ್ಲೂ ಹಣವೆಲ್ಲ ವ್ಯರ್ಥ ಖರ್ಚಾಗದಂತೆ ನೋಡಬೇಕಾಗಿದೆ ... ಇದರಿಂದ ಹೊಸ ಸಂಪಾದನೆಗಳಿಗೆಂದ ವ್ಯಯವಾಗತಕ್ಕ ಹಣವೆಲ್ಲ ಪ್ರಜಾಭ್ಯುದಯಕ್ಕಾಗಿಯೇ ವಿನಿಯೋಗ ಹೊಂದುವುದೆಂಬುದನ್ನು ಒಪ್ಪಿಕೊಳ್ಳಬಹುದಾಗಿದೆ

ಇದಲ್ಲದೆ ಒಂದು ಮುಕ್ಕಾಲು ಕೋಟಿ ರೂಪಾಯಿಯನ್ನು ಸಾಲ ತೆಗೆಯಲು ಅನುಕೂಲತೆಯ ಪ್ರಾಂತಿಕ ಸರಕಾರಕ್ಕೀಗ ಇದೆ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ವಿತರಣಮಾಡುವುದಕ್ಕೂ ಈ ಹಣವು ಉಪಯೋಗವಾಗಿ ಲಾಭ ...

## ಮದ್ಯನಿರೋಧವು ಹರಡಿಸಲಾಗುವುದು'

ಒಬ್ಬರು ಮತ್ತೊಬ್ಬರಿಗೆ ಅನುಕೂಲರಾಗಿ ವರ್ತಿಸುವುದು ಹಿತವೆಂದು ನಾವು ನಂಬುವವರು ಹೀಗಾಗಿ ತಪ್ಪುಗಳಿಗೆ ನ್ಯಾಯವಾದೀತೆಂದು ನಾವು ಇನ್ನೂ ನಂಬಿರುವುದು, ಕಾಲಕ್ರಮೇಣ ಸರಿಯೆಂದು ವ್ಯಕ್ತವಾದೀತು ಆದುದರಿಂದ ಸದ್ಯಕ್ಕೆ ಈ ಪ್ರಾರ್ಥನಾಗೀತವನ್ನು ಲೋಪಿಸಿ, ಸವಸ್ತರೂ ಸೇರಿ ಪ್ರಾರ್ಥಿಸುವುದರ ಮೂಲಕ ಪಡೆಯಬಹುದಾಗಿರುವ ಹೃದಯಬಲವನ್ನು ಕೆಲವರ ಈ ಗೀತದಿಂದ ನೊಂದಕೊಳ್ಳುತ್ತಾರಾದ ಕಾರಣ ಕಳೆದುಕೊಳ್ಳುತ್ತಿದರೂ ಚಿಂತೆಯಿಲ್ಲ

ರಾಷ್ಟ್ರೀಯ ಚಳವಳದಲಿ ಭಾಗಿಗಳಾಗಿದ್ದವರಿಗೆ ವಂದೇ ಮಾತರಂ ಗೀತದ ಪವಿತ್ರ ಸಂಗೀತದಿಂದ ಪರಿಶುದ್ಧ ಮಾತುಗಳಿಂದ ಎಂತೆಂತಹ ಭಾವನೆಗಳು ಉಂಟಾಗುವುವೆಂಬುದು ಗೊತ್ತೇ ಇದೆ ಈಗ ಇದನ್ನು ಲೋಪಿಸುವುದರಿಂದ ಅವರಿಗೆ ಎಂತಹ ಮನೋವೇದನೆಯುಂಟಾಗುವುದೆಂಬುದನ್ನು ಎಲ್ಲರೂ ತಿಳಿಯಬಲ್ಲರು ... ನಮ್ಮ ತ್ಯಾಗದಿಂದ ತಾನೆ ನಾವು ಒಂದು ಜನಾಂಗವಾಗಿ ಮುಂದರಿಯಬಹುದಾಗಿದೆ ...

(ಗುಮ್ಮ ವರ್ತಮಾನಗಳ ಸೇಳಿಕೆ)

★

ದೀನಬಂಧು ಸಿ ಎಫ್ ಎಂಡ್ರ್ಯೂಸರು.

### ಎಸೆಂಬ್ಲಿಯಲ್ಲಿ ಪ್ರಾರ್ಥನ

### ಸದ್ಯಕ್ಕೆ 'ವಂದೇ ಮಾತರಂ ಹಾಡುವುದಿಲ್ಲ

### ಸದಸ್ಯರ ಮನಃಶಾಂತಿಗಾಗಿ ಈ ತರ್ಕ ತಡೆಯಲಾಗಿದೆ

### ಜೈಲುಗಳ ಸುಧಾರಣೆಯಾಗಬೇಕು

ಸುಧಾರಣೆಯಾಗುವಂತೆ ಸಮಸ್ತ ದೇಶದಲ್ಲೆಲ್ಲಾ ಚಳವಳಿ ನಡೆಯಬೇಕೆಂದ ರೆವರೆಂಡ್ ಸಿ ಎಫ್ ಎಂಡ್ರ್ಯೂಸರ ವಿನಂತಿ ಮಾಡಿಕೊಂಡಿರುವರು

### ಫೆಡರೇಶನಿಗೆ ವಿರೋಧ

### ನಮ್ಮಲ್ಲಿ ಕಿಸ್ಸಬೇಲು

ಮಹಾಜನಗಳಲ್ಲಿ ಕಾಂಗ್ರೆಸ್ಸಿನ ಕುರಿತು ...

### ಶ್ರೀ ಅರವಿಂದ ಘೋಷರು

### ಪಂಡಿತ ಮಾಲವೀಯರು

ಡಾ ಅನ್ಸಾರಿ ...

### ಸ್ವಾತಂತ್ರ್ಯಕ್ಕಾಗಿ ಬಾಲಕರ ಆಹುತಿ

### ಬ್ರಿಟನಿಗೆ ಇಟೆಲಿಯ ಶರ್ತಗಳು

### ರಷ್ಯಾದಲ್ಲಿ ಬಿಳಸಂಚುಗಳು

### ಮದರಾಸು ಸರಕಾರದ ಬಜೇಟು

### ಹೊಸ ಸ್ನೇಹಿತರನ್ನು ಹುಡುಕಾಡುತ್ತಿರುವುದು

# ಮದ್ಯಪಾನ ನಿರೋಧದ ಫಲಿತಾಂಶ.

## ಸೇಲಂ ಜಿಲ್ಲಾ ಕಲೆಕ್ಟರರ ವರದಿಯ ವಿಮರ್ಶೆ:

★

**ತಾಳೆಮರಗಳ ಮೂರ್ತೆ.**

ಇದೇ ಮೊದಲನೆ ಹೊಸ ಉದ್ಯಮವಾಗಿದೆ ಮೂರು ಲಕ್ಷ ತಾಳೆಮರಗಳನ್ನು ಮದ್ಯ ಮಾಡುವುದಕ್ಕಾಗಿ ಅಲ್ಲದೆ ಸಿಹಿ ರಸವನ್ನು ಕುಡಿಸುವುದಕ್ಕಾಗಿ ಮಾತ್ರ ಸುಮಾರು ೮೦೦೦ ಮಂದಿ ಲೈಸನ್ಸು ಪಡೆದಿದ್ದಾರೆ ಕಳೆದ ವರ್ಷ ಇವುಗಳಲ್ಲಿ ಆರರಲ್ಲಿ ಒಂದಂಶದಷ್ಟು ಸಹ ಮೂರ್ತೆಯಾದುದಿಲ್ಲ ಮದ್ಯಪಾನ ನಿರೋಧದ ಜಾರಿಗೆ ಕಠಿನ ವಿಘ್ನರವೆಂದರೆ ಈ ಬಗೆಯ ಮೂರ್ತೆ, ಸುಲಭವಾಗಿ ಈ ರಸವನ್ನು ಹುಳಿಯಾಗಿಸಿ ಹೆಂಡವಮಾಡಬಹುದು. ಈ ವಿಷಯ ಕಮಿಟಿಗಳನ್ನು ನೇಮಿಸಿ ಹೆಂಡಮಾಡದಂತೆ ಆತಂಕಿಸಲಾಗಿದೆ ಕಳ್ಳಹೆಂಡವನ್ನು ತಯಾರಿಸುವುದೇ ಬಲುಕಷ್ಟವಾಗುವಂತೆ ಮಾಡಲಾಗಿರುವ ಕಾರಣ, ಈ ಕಾಟ ಕಡಿಮೆ ನಿರೋಧ ಕಾರ್ಯವನ್ನು ಕೈಕೊಂಡಿರುವ ಅಬಕಾರಿ ಹಾಗೂ ಸಾಮಾನ್ಯ ಪೊಲೀಸರ ಈ ವಿಷಯ ವಿಶೇಷ ಜಾಗರೂಕರಾಗಿದ್ದಾರೆ, ಗ್ರಾಮಾಂತರಗಳಲ್ಲಿ ಮದ್ಯ ತಯಾರಿಸಿದಲ್ಲಿ, ಗ್ರಾಮ ಉದ್ಯೋಗಸ್ಥರಿಗೇ ಶರಾ ಬರುವುದರಿಂದ ಶರಾಬು ಕಡಿಮೆಯಾಗಿದೆ ಪ್ರತಿ ತಾಲೂಕು ಕಮಿಟಿಯೂ ಕೆಲ ಹಳ್ಳಿಗಳಲ್ಲಿ ಬಲುಸೂಕ್ಷ್ಮವಾಗಿ ಸಂಚರಿಸಿ ಜಾಗ್ರತೆನೋಡುತ್ತವೆ ರೆವಿನ್ಯೂ ಆಫೀಸರರೂ, ಮರಗಳ ಧನಿಗಳೂ ಈ ವಿಷಯ ಕಾನೂನಿಗೆ ವಿರೋಧವಾಗಿ ಯಾರೂ ನಡೆಯದಂತೆ ಎಚ್ಚರವಿಟ್ಟಿದ್ದಾರೆ ತಾಳೆಮರದಿಂದ ಇಳಿದುದೇ ಮೂರ್ತೆದಾರನು ತನ್ನ ಮಡಕೆಯನ್ನು ಪೊಲೀಸರಿಗೆ ತೋರಿಸಬೇಕಾಗಿದೆ ರಾತ್ರಿ ಕಾಲದಲ್ಲಿ ದಸಿಗಳು ತಾಳತೋಪುಗಳಲ್ಲಿ ಸಂಚರಿಸಿ, ಯಾರೂ ಹೆಂಡಮಾಡದಂತೆ ನೋಡುತ್ತಿದ್ದಾರೆ ಮಾತ್ರವಲ್ಲದ, ಎಲ್ಲಿಯಾದರೂ ಹೆಂಡದೊರೆಯುವಂತಿದೆ ಎಂದ ಕೂಡಲೆ ಆ ವಾರ್ತೆ ಬಹುಬೇಗನೆ ಹರಡಿ, ಹೆಂಡ ತಯಾರಿಸಿದವನಿಗೆ ಬಾಧೆಗೆ ಕಾರಣವಾಗುತ್ತದೆ

**ಗಾಂಜಾ ಮಾರಾಟ**

ಇದಿನ್ನೂ ಇದೆ ಇದನ್ನು ಅಡಗಿಸುವುದು ಸುಲಭವಾಗಿಲ್ಲ ಮಾರಲೇ ಬಾರದೆಂಬ ನಿರ್ಬಂಧವಿದೆ ಗಾಂಜಾ ಪಡೆದವರ ಸಂಖ್ಯೆ, ಹಿಂದಣ ಮದ್ಯಪಾಯಿಗಳ ಸಂಖ್ಯೆಯು ತೀರ ಅಲ್ಪಾಂಶ ಮದ್ಯದ ಎಡಲ ಗಾಂಜಾ ಉಪಯೋಗಿಸುವವರು ತೀರ ಕಡಿಮೆ. ಆದರೆ ಗಾಂಜಾವನ್ನು ಮಾರಬಾರದೆಂಬ ಕಾರಣ ಎಲ್ಲಿಂದಲೂ ಕಳ್ಳತನದಿಂದ ಅದನ್ನು ತಂದು ಅಂತರಂಗದಲ್ಲಿ ಮಾರಾಟ ಮಾಡಲು ಆಸ್ಪದವಿದೆ ಜಿಲ್ಲಾ ಮೆಡಿಕಲ್ ಆಫಿಸರರು. ಗಾಂಜಾ ಉಪಯೋಗದಿಂದ ಉಂಟಾಗುವ ಹಾವಳಿಯನ್ನು ಬೋಧಿಸುವ ಒಂದು ಪತ್ರಿಕ ಬರೆದು ಹಂಚಿರುವರು ಎಲ್ಲ ಕಮಿಟಿಗಳೂ ಈ ಹಾವಳಿಯನ್ನು ತಡೆಯ ನೋಡುತ್ತವೆ ಹಳ್ಳಿಗಳಲ್ಲಿ ಗಾಂಜಾ ನಿರೋಧವನ್ನು ಕುರಿತಾಗಿ ಡಂಗುರ ಸಾರಲಾಗಿದೆ ೧೫೦ ತೊಲಾ ಗಾಂಜಾವನ್ನು ಒಮ್ಮೆ ರೈಲ್ವೆ ಸ್ಟೇಶನಿನಲ್ಲೇ ತಡೆಯಲಾಗಿದೆ ಈಗ ಗಾಂಜಾ ಮೊದಲಾದುವನ್ನು ಜಿಲ್ಲೆಯೊಳಗೆ ತರಿಸುವ ಬದಲು ಇಲ್ಲಿಂದ ಹೊರ ಜಿಲ್ಲೆಗಳಿಗೆ ಕಳಿಸುತ್ತಾರೆ ಅದರಂತೆ ೫೮॥ ಸೇರು ಅಫೀಮು, 7 ಸೇರು ಗಾಂಜಾವನ್ನು ಇರೋಡು ಸ್ಟೇಶನಿನಲ್ಲಿ ಜಪ್ತಿಮಾಡಲಾಗಿದೆ ಆದರೂ, ಕಳ್ಳ ಮಾರಾಟ ತಡೆವುದು ಕಷ್ಟವಾಗಿದೆ ಸನ್ಯಾಸಿಗಳಿಗೆ ಇದೇ ಬೇಕು ಜಿಲ್ಲೆಯ ಹೊರಗಿಂದ ಕ್ರಯಕ್ಕೆ ಕೊಂಡುಕೊಂಡು ತರುತ್ತಾರೆ,ಗಾಂಜಾವನ್ನಾದರೂ ಬಿಟ್ಟಾರು, ಅಫೀಮನ್ನು ಬಿಡುವುದು ಜನರಿಗೆ ಕಷ್ಟ, ಲೇಹ್ಯಾದಿಗಳಲ್ಲಿ ಇವನ್ನು ಉಪಯೋಗಿಸಲೂ ಕೂಡದೆಂಬ ನಿರ್ಬಂಧವಿದೆ.

ಬೆಂಗಳೂರಲ್ಲಿ ಅಫೀಮು ಹೆಚ್ಚಾಗಿ ಮಾರಾಟವಾಗುವುದಕ್ಕೆ ಸೇಲಂ ಜಿಲ್ಲೆಯ ಗಿರಾಕಿಗಳೇ ಕಾರಣರಾಗಿರಬೇಕೆಂದು ಊಹಿಸಲಾಗಿದೆ ಕೆಲವರು ತಮ್ಮ ಹಗೆಗಳ ಮನೆಗಳಲ್ಲಿ ಗಾಂಜಾವನ್ನು ತಂದಿಟ್ಟು ಅವರು ದಂಡನೆ ಹೊರುವಂತೆ ಮಾಡುವುದೂ ಇದೆ, ಇಂತಹ ವಿಚಾರಣೆಗಳಲ್ಲಿ ತಪ್ಪಿತಸ್ಥರಿಗೆ ಕಠಿನ ಶಿಕ್ಷೆಕೊಡಲಾಗಿದೆ ಗಾಂಜಾ—ಅಫೀಮುಗಳ ನಿವಾರಣೆ ಕಷ್ಟ, ಆದರೂ ಜನರ ಸಹಕಾರದಿಂದ ಅದು ಸುಲಭವಾದೀತೆನ್ನಬೇಕು

**'ಸ್ಪಿರಿಟ'ನ್ನು ಕುಡಿಯುವವರಿದ್ದಾರೆ.**

ಕೃಷ್ಣಗಿರಿಯಲ್ಲಿ ಸ್ಪಿರಿಟಿನ ಮಾರಾಟ ಬಹಳವಾಯಿತು ಅದರಂತೆಯೆ ಸೇಲಂ, ರಾಸಿಪುರಗಳಲ್ಲಿ ಸಹ ಸಾಧಾರಣವಾಗಿ ಈ ಬಗೆಯ ಸ್ಪಿರಿಟಿನ ಉಪಯೋಗ ಹೆಚ್ಚಿತು ಕೆಲವು ಜೇಡರು ಮದ್ಯಪಾಯಿಗಳಾಗಿದ್ದವರು ಈಗ ನಿರುಪಾಯರಾಗಿ ಸ್ಪಿರಿಟನ್ನು ಕುಡಿಯ ತೊಡಗಿದರು ಇದನ್ನು ಕುಡಿದಲ್ಲಿ ನಾನಾ ಪರಿಣಾಮ ಬಾಧೆಗಳುಂಟು. ಅಂತಹದೇನೂ ಗೋಚರಿಗೆ ಬರಲಿಲ್ಲ ಆದರೂ, ಬಹಳ ಹಾನಿಕರ ಇದ ನ್ನೀಗಲೇ ಅಡಗಿಸಬೇಕಾಗಿದೆ ಜಿಲ್ಲಾ ಮೆಡಿಕಲ್ ಆಫೀಸರರು ಈ ವಿಷಯ ಒಂದು ಬೋಧನಾ ಪತ್ರವನ್ನು ಬರೆವಂತೆ ಕೇಳಿಕೊಳ್ಳಲಾಗಿದೆ

ಕಮಿಟಿಗಳು ರಿಪೋರ್ಟು ಬರದುಕೊಂಡು ತುಂಬ ಸಹಕರಿಸಿವೆ

**ಮದ್ಯಪಾಯಿಗಳ ಕುಟುಂಬಗಳು.**

ಹಿಂದಣ ಮದ್ಯಪಾಯಿಗಳ ಕುಟುಂಬಗಳು ಈಗ ಸುಖವಾಗಿವೆ. ಕುತ್ತಿಗನ ಅನ್ನಕ್ಕದ ಗದ್ದಲ, ಗಲಾಟೆಗಳ ಮನೆಯಲ್ಲಿಲ್ಲ ಹೆಂಗಸರಿಗೂ ಮಕ್ಕಳಿಗೂ ಇದರಿಂದ ಸಮಾಧಾನ ಸಂತೋಷಗಳುಂಟಾಗಿವೆ ಮದ್ಯಪಾನ ನಿವಾರಣೆಗೆ ಅತ್ಯುತ್ತಮ ಪ್ರೋತ್ಸಾಹವು ದೊರೆತದ ಸ್ತ್ರೀಯರಿಂದ ಇವರಿಗೆ ಇನ್ನೂ ಗ್ರಾಮಗಳಲ್ಲಿ ಅವರ ಮಾತಿನ ಬೆಲೆ ದೊರೆವುದು ಕಡಿಮೆಯಾಗಿರುವ ಕಾರಣ ಮದ್ಯಪಾನದ ನಿರೋಧವು ಇನ್ನಷ್ಟು ಚೆನ್ನಾಗಿ ಸಾಗುತ್ತಿಲ್ಲ ಸಾಧಾರಣ ಕುಡಿಕರಾಗಿದ್ದವರ ಆಹಾರರುಚಿಯೂ ಆರೋಗ್ಯವೂ ಈಗ ಉತ್ತಮವಾಗಿದೆ ಗಾಢ ಮದ್ಯಪಾಯಿಗಳಲ್ಲಿ ಹಲವರ ಆರೋಗ್ಯವು ಈಗ ಕೆಟ್ಟಿದೆ ಎಂದು ವಾರ್ತೆ ಇತರ ಇಂಥವರಿಂದ ಈಗ ಹಚ್ಚಿನ ಕೆಲಸವಾಗುತ್ತಿಲ್ಲ ಮೈಗೆ ಜೀಸರ ಇವರಲ್ಲಿ ಕೆಲವರು ಮದ್ಯದ ವಾಸನೆ ಕೂಡ ಈಗ ಸಹಿಸದಷ್ಟು ಚೆನ್ನಾಗಿ ಸಧಾರಣೆ ಹೊಂದ ಆರೋಗ್ಯವಂತರೂ ಸುಶೀಲರೂ ಆಗಿದ್ದಾರೆ ಮದ್ಯ ಕುಡಿಯಲಿಕ್ಕಿಲ್ಲವೆಂಬ ಕಾರಣದಿಂದ ಹೆಚ್ಚಾಗಿ ದುಡಿಯುವ ಆಸಕ್ತಿ ಇಲ್ಲದವರಿದ್ದಾರೆ ಕೂಲಿಯವರಿಗೆ ಈಗ ಹಿಂದಣ ಖರ್ಚಿನ ಅಗತ್ಯವಿಲ್ಲೆಂದು, ಅವರಿಗ ಕಡಿಮೆ ಕೂಲಿಕೊಡುವವರೂ ಇದ್ದಾರೆ

**ಬಡವರು**

ಇನ್ನೂ ಹಣ ಉಳಿಸಿದರೂ, ಅದನ್ನು ಜತನವಿಡುವ ಅಭ್ಯಾಸಮಾಡಿಲ್ಲ ಉತ್ತಮ ಆಹಾರ ತೆಗೆದುಕೊಳ್ಳುತ್ತಿದ್ದಾರೆ ಈಗ ಎಲ್ಲೆಲ್ಲಿಯೂ ರಾತ್ರಿ ಊಟಗಳು ಇವೆ, ಹಿಂದೆ ಇದ್ದಿಲ್ಲ ಕೆಲವರು ಸಾಲಗಳನ್ನು ತೆತ್ತಿರುವರಾದರೂ, ಉಳಿಸಿದವರು ಕಡಿಮೆ, ಈ ಅಭ್ಯಾಸವಿನ್ನೂ ಹುಟ್ಟಿಲ್ಲ 104 ಹುಂಡಿ ಪೆಟ್ಟಿಗೆಗಳನ್ನು ಸೇಲಂನಲ್ಲಿ ಹಂಚಿದ್ದಾರೆ, ಹಣ ದಾಸ್ತಾನುಮಾಡಲಿ ಎಂದು ಸಮಗಾರರೂ ಸಹ ಕೆಲವರು ಸೇವಿಂಗ್ಸ್ ಬೇಂಕಿಗೆ ಸೇರಿದ್ದಾರೆ ಹದಿಮೂರು ಮಿತವ್ಯಯ ಸಂಘಗಳಾಗಿವೆ ಧರ್ಮಪುರದಲ್ಲಿ ನೂರು. ಸ್ಪೆಶಲ್ ಡೆವೆಲಪ್‌ಮೆಂಟ್ ಆಫೀಸರರ ನೇಮಕವಾಗಿರುವ ಕಾರಣ, ಸಹಕಾರ ಸಂಘಗಳ ಮೂಲಕ ಈ ಹಿಂದಣ ಮದ್ಯಪಾಯಿಗಳ ಉದ್ಧಾರವಾದೀತೆಂದು ನಂಬಬೇಕು ಸಾಲ ಕಡಿಮೆ ಸಾಲ ನಿವಾರಣೆಯ ಮಸೂದೆಯ ದೆಸೆಯಿಂದ, ಸಾಲ ಕೊಡುವುದೂ ಕಡಿಮೆ ಜೀವನಕ್ಕೆ ಬೇಕಾದುದಕ್ಕಾಗಿ ಸಾಲ ತೆಗೆದುಕೊಳ್ಳುವುದೂ ಮಾತ್ರ ಇದೆ.

# ಯಾಂತ್ರೀಕರಣದಿಂದ ಭಾರತದ ಉನ್ನತಿ ಯಾಕಾಗಕೂಡದು?

**ಅದರಿಂದ-ಅಹಿಂಸೆ, ಸತ್ಯ, ನ್ಯಾಯ ಮತ್ತು ಧರ್ಮಾಚರಣೆಯ ಲೋಪವಾಗುತ್ತದೆ.**
**ಹಿಂಸೆ, ಅಸತ್ಯ, ಅನ್ಯಾಯ ಮತ್ತು ಅಧರ್ಮಭಾವನೆಗಳ ಪ್ರಚಾರವಾಗುತ್ತ .**
**ಕೈಕಸಬುಗಳೇ ಭಾರತೋನ್ನತಿಯ ಸುಲಭ ಉಪಾಯವು.**

★ ★ ★

ಅ| ಭಾ| ಗ್ರಾಮಕೈಗಾರಿಕಾ ಸಂಘದ ಶ್ರೀ| ಜೆ. ಸಿ ಕುಮಾರಪ್ಪನವರು

ಭಾರತದ ಸಾಂಪತ್ತಿಕ ಉನ್ನತಿಗೆ ಕೈಗಾರಿಕೆಗಳ ಯಾಂತ್ರೀಕರಣವು ಸರ್ವೋಪರಿ ಸದುಪಾಯವಾಗಿರುವದೆಂದು ಅನೇಕ ಮಂದಿ ಅನೇಕ ಭಾರಿ ಹೇಳುತ್ತಿರುವುದನ್ನು ನಾವು ಕೇಳುತ್ತೇವೆ ಕೈಗಾರಿಕೆಗಳ ಯಾಂತ್ರೀಕರಣವೆಂದರೆ ಸಿದ್ಧ ಸಾಮಗ್ರಿಗಳ ರಾಶಿಹಾಕುವದಷ್ಟೆ? ಹೀಗೆ ಮಾಡಿ ಸಿದ್ಧಸಾಮಗ್ರಿಗಳ ದೊಡ್ಡ ದೊಡ್ಡ ರಾಶಿಹಾಕಬಹುದೆಂಬುದು ನಿಜವೇ ಆದರ ನಮ್ಮ ಆಸ್ತಿತ್ವಕ್ಕು ಉದ್ಧಾರಕ್ಕು ಇದೊಂದೇ ಉಪಾಯವಲ್ಲ ಕೈಗಾರಿಕೆಗಳ ಯಾಂತ್ರೀಕರಣದಿಂದ ಭಾರತದ ಉನ್ನತಿಗಿಂತ ಅವನತಿಯ ಭಯವೇ ಹೆಚ್ಚಾಗಿರುತ್ತದೆ ಅಹಿಂಸೆ ಸತ್ಯ ನ್ಯಾಯ, ಧರ್ಮಗಳೇ ಭಾರತೋನ್ನತಿಯ ಮೂಲಸೂತ್ರಗಳು ಯಾಂತ್ರೀಕರಣವು ಈ ಮೂಲಸೂತ್ರಗಳನ್ನೇ ಕಿತ್ತು ಕಡಿದು ಚೂರು ಚೂರು ಮಾಡುವದೆಂದರೆ ಅಂಥ ಯಾಂತ್ರೀಕರಣವು ಭಾರತೋನ್ನತಿಯ ಸರ್ವೋಪರಿ ಶ್ರೇಷ್ಠ ಉಪಾಯವು ಹೇಗಾಗಬಹುದು? ಅದ್ದರಿಂದ ಯಾಂತ್ರೀಕರಣದ ಮೊದಲು ನಾವು ಅದರ ಸಾಧಕ ಭಾದಕಗಳನ್ನು ಚೆನ್ನಾಗಿ ಆಲೋಚಿಸಿ ತಿಳಕೊಳ್ಳಬೇಕಾಗುತ್ತದೆಂದು ಶ್ರೀ| ಜೆ ಸಿ ಕುಮಾರಪ್ಪನವರು ಹರಿಜನದಲ್ಲಿ ಒಂದು ವಿಚಾರಪರಿಪ್ಲುತ ಲೇಖನವನ್ನು ಬರೆದಿರುತ್ತಾರೆ

ಸಂಗ್ರಹವಾದ ವಿಪುಲಸಂಪತ್ತಿಯ ವಿನಿಯೋಗಕ್ಕೆ ಬೇರೆ ಉಪಾಯವು ಇಲ್ಲದಿದ್ದಾಗ ಬಂಡವಾಳಿಗರು ತ ತಮ್ಮ ಸಂಪತ್ತಿಯನ್ನು ಕೈಗಾರಿಕೆಗಳಲ್ಲಿ ವಿನಿಯೋಗಿಸಿ ದೊಡ್ಡ ದೊಡ್ಡ ಯಂತ್ರಾಲಯಗಳನ್ನು ಸ್ಥಾಪಿಸಿಕೊಂಡು ಹಸಿ ಪದಾರ್ಥಗಳಿಂದ ಸಿದ್ಧಸಾಮಗ್ರಿಗಳನ್ನು ತಯಾರಿಸುತ್ತಾರೆ ಅದ್ದರಿಂದ ಬಂಡವಾಳಿಗರು ಶ್ರಮಜೀವಿಗಳ ಪರಿಶ್ರಮದ ನಿಯಂತ್ರಣ ಮಾಡಿ ಅದನ್ನು ತಮಗೆ ಬೇಕಾದ ಹಾಗೆ ಉಪಯೋಗಿಸಲಿಕ್ಕೆ ಹವಣಿಸುತ್ತಾರೆ ಇದರಿಂದ, ಅನೇಕ ರೀತಿಗಳಿಂದ ಬಹುಬಗೆಯ ಸಂಘರ್ಷಗಳಿಗೂ ಸಂಪುಗಳಿಗೂ ಆರಂಭವಾಗುತ್ತದೆ ಮತ್ತೆ ಕೈಗಾರಿಕೆಗಳ ಕೇಂದ್ರೀಕರಣಕ್ಕಾಗಿ ಶ್ರಮಜೀವಿಗಳ ಪರಿಶ್ರಮವನ್ನು ಉಪಯೋಗಿಸುವದೆಂದರೂ ಕೂಡ, ಅದರಿಂದ ಇಚ್ಛೆಇರಲಿ ಇಲ್ಲದಿರಲಿ, ಪ್ರತಿಯೊಬ್ಬನೂ ಅದಕ್ಕಾಗಿ ಕೆಲಸಮಾಡಬೇಕಾಗುವಂಥಾ ಪರಿಸ್ಥಿತಿಯುಂಟಾಗುತ್ತದೆ ಹೀಗೆಲ್ಲ ಮಾಡುವದು ಹಿಂಸೆ, ಅನ್ಯಾಯಗಳೇ ಸರಿ.

ಕೈಗಾರಿಕೆಗಳ ಯಾಂತ್ರೀಕರಣವು ಅನಾರೋಗ್ಯಕರ ಸ್ಪರ್ಧೆಗೆ ಆಸ್ಪದವಮಾಡಿಕೊಡುತ್ತದೆ ತಾವು ವಿನಿಯೋಗಿಸಿದ ಭಂಡವಾಳದ ಮೇಲೆ ಅತ್ಯಲ್ಪ ಕಾಲದೊಳಗಾಗಿ ಅತಿಹೆಚ್ಚು ಲಾಭವಾಗಬೇಕೆಂಬ ದೃಷ್ಟಿಯಿಂದ ಭಂಡವಾಳಿಗರು ಯಂತ್ರಾಲಯಗಳನ್ನು ನಡೆಸುತ್ತಾರೆ ಅದ್ದರಿಂದ ಎಷ್ಟರಮಟ್ಟಿಗೆ ಯಿರುತ್ತದೋ ಅದಕ್ಕೂ ಹೆಚ್ಚಾಗಿ ಸಿದ್ಧಸಾಮಗ್ರಿಗಳು ತಯಾರಾಗುತ್ತವೆ ಮತ್ತೆ ಹೀಗೆ ರಾಶಿಬಿದ್ದ ಸಾಮಗ್ರಿಗಳ ಮಾರಾಟಕ್ಕಾಗಿ ಅವರು ಹೊಸ ಹೊಸ ಕ್ಷೇತ್ರಗಳನ್ನು ಹುಡುಕುತ್ತಲೇ ಇರಬೇಕಾಗುತ್ತದೆ ಆದರಿಂದ ಹೆಚ್ಚೆ ಹೆಚ್ಚಿಗೂ ಸ್ಪರ್ಧೆಯಾಗುತ್ತದೆ ಪ್ರತಿಯೊಂದು ಹೆಜ್ಜೆಯಲ್ಲಿ ಬಲಾತ್ಕಾರವು ಬೆಳೆಯುತ್ತದೆ, ಅನ್ಯಾಯ ವು ಹೆಚ್ಚುತ್ತದೆ

ಕೈಗಾರಿಕೆಗಳ ಯಾಂತ್ರೀಕರಣದಿಂದ ಮತ್ತೊಂದು ಹಾನಿಯಿರುವುದನ್ನು ಕೂಡ ನಾವು ಆಲೋಚಿಸಬೇಕು ಯಂತ್ರಾಲಯಗಳಲ್ಲಿ ಕೈಗಾರಿಕೆಗಳಾಗುವುದಾದರೆ, ಹಸಿಪದಾರ್ಥಗಳು ಬಂದು ರಾಶಿಬೀಳಬೇಕು ಅವು ಸ್ವದೇಶದಲ್ಲಿಯೇ ಹುಟ್ಟಿ ಬೆಳೆಯವಾದರೆ, ಅವುಗಳ ಸಂಗ್ರಹಕ್ಕಾಗಿ ದೇಶದೇಶಗಳಲ್ಲಿ ಅಲೆಯಬೇಕು, ಅವುಗಳ ಸಂಪಾದನೆಗಾಗಿ ರಾಜಕೀಯ ಶಕ್ತಿಯನ್ನೂ ಉಪಯೋಗಿಸಬೇಕು ಜನಾಂಗ-ಜನಾಂಗಗಳೊಳಗೆ ಇಂದು ಕಾಣುತ್ತಿರುವ ಪ್ರಬಲ ದ್ವೇಷಭಾವನೆಗೆ ಕೈಗಾರಿಕೆಗಳ ಯಾಂತ್ರೀಕರಣದ ದೆಸೆಯಿಂದ ರಾಜಕೀಯ ಶಕ್ತಿಯ ಉಪಯೋಗವು ಮೂಲ ಕಾರಣವಾಗಿರುವದು.

ಸಂಪತ್ತು ಭಂಡವಾಳಿಗರಲ್ಲಿ ಮಾತ್ರ ಸಂಗ್ರಹವಾಗುವುದಕ್ಕಿಂತ ದೇಶದಲ್ಲಿ ಸರ್ವತ್ರ ಹಂಚಿಬಿದ್ದರೆ ಮಾತ್ರ ಕ್ಷೇಮವಿದೆ, ಸಮವಿದೆ ಇಲ್ಲವಾದರೆ ಶ್ರೀಮಂತ ಬಡವರೊಳಗಿನ ಉಚ್ಚನೀಚ ಭಾವನೆಯು ಕಲ್ಪನಗ ಕೂಡ ದೊರೆಯದ ಅನಿಷ್ಟಗಳಿಗೆ ದೇಶವು ತಲೆಕೊಡುವ ಪ್ರಸಂಗವು ಬರುತ್ತದೆ ಕೈಗಾರಿಕೆಗಳ ಯಾಂತ್ರೀಕರಣದಿಂದ ಸಂಪತ್ತು ಹಂಚಿಬೀಳುವ ಬದಲಿಗೆ ಅದು ಭಂಡವಾಳಿಗರಲ್ಲಿಯೇ ಇನ್ನಷ್ಟು ಕೂಡಿಬಂದು ಸಾಮಾನ್ಯ ಜನತೆಯ ಕಷ್ಟದಾರಿದ್ರ್ಯಗಳು ಮಿತಿಮೀರಿ ಬೆಳೆಯುತ್ತವೆ

ಇವೇ ಮೊದಲಾದ ಯಾವ ದೃಷ್ಟಿಯಿಂದ ವಿಚಾರಮಾಡಿದರೂ ಕೈಗಾರಿಕೆಗಳ ಯಾಂತ್ರೀಕರಣದಿಂದ ಅಹಿಂಸೆ, ಸತ್ಯ, ನ್ಯಾಯ ಧರ್ಮಾಚರಣೆಗಳ ಲೋಪವಾಗುವದು ಕಂಡುಬರುತ್ತದೆ ಅಷ್ಟು ತಾನೇ ಅಲ್ಲ ಅದರಿಂದ ಹಿಂಸೆ, ಅನ್ಯಾಯ ಅಸತ್ಯ ಅಧರ್ಮಾಚರಣೆಯ ಪ್ರಚಾರವು ಅವ್ಯಾಹತವಾಗಿ ನಡೆಯಲೂ ಕಾರಣವಾಗುತ್ತದೆ ಕೈಗಾರಿಕೆಗಳ ಯಾಂತ್ರೀಕರಣದಿಂದಾಗಿಯೆ ಪ್ರಪಂಚದಲ್ಲಿ ಇಂದು ಅಶಾಂತಿ ಅಸಮಾಧಾನಗಳು ಹರಡಿವೆ ಎಲ್ಲಿ ನೋಡಿದರಲ್ಲಿ ಪರಸ್ಪರ ಸ್ಪರ್ಧೆ, ಸಂಘರ್ಷ, ಯುದ್ಧಭಯಗಳು ಕಂಡುಬರುತ್ತಿವೆ

ಭಾರತದ ಪ್ರಕೃತಿ, ಚಿತ್ತವೃತ್ತಿಗಳು ಆದಿಯಿಂದ ಅಹಿಂಸೆ, ಸತ್ಯ, ನ್ಯಾಯಧರ್ಮಗಳ ಕಡೆಗೆ ಇದ್ದಿರುತ್ತವೆ ಕೈಗಾರಿಕೆಗಳ ಯಾಂತ್ರೀಕರಣದಿಂದ ಭಾರತದ ಈ ವೈಶಿಷ್ಟ್ಯಕ್ಕೆ ಲೋಪವುಂಟಾಗಿ ಅದು ತನ್ನ ಅಸ್ತಿತ್ವವನ್ನೇ ಕಳಕೊಳ್ಳುವುದೆಂದಾದರೆ, ಯಾಂತ್ರೀಕರಣವು ನಮ್ಮ ಯಾರಿಗಾಗಿ ಆಗಬೇಕು? ಅದ್ದರಿಂದ ಭಾರತೋನ್ನತಿಗಾಗಿ ನಾವು ಕೈಗಾರಿಕೆಗಳ ಯಾಂತ್ರೀಕರಣವನ್ನು ಬಿಟ್ಟುಬಿಟ್ಟು ಬೇರೆಯೇ ಉಪಾಯಗಳನ್ನು ಹುಡುಕಿ ಕೈಕೊಳ್ಳಬೇಕಾಗಿದೆ

ಮನೆಕೈಗಾರಿಕೆಗಳು ಮತ್ತು ಕೈಕಸಬುಗಳ ಪ್ರಚಾರಗಳು ಭಾರತೋನ್ನತಿಯ ಸರ್ವೋಪರಿ ಶ್ರೇಷ್ಠಉಪಾಯಗಳಾಗಿರುವವು

# ಮಂಗಳೂರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

## ಮುನಿಸಿಪಲ್ ಕೌನ್ಸಿಲ್ ಸಭೆ

ಸ್ಥಳೀಯ ಮುನಿಸಿಪಲ್ ಕೌನ್ಸಿಲ್ ಸಭೆಯು ಕಳೆದ ತಾ ೨೫ರಲ್ಲಿ ಡಾ। ಪಟ್ಟಲಶೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿಬಂದು, ಮುಂದಿನ ವರ್ಷದ ಬಜೆಟಿನ ಕುರಿತು ಚರ್ಚೆ ನಡೆದು ಬಜೆಟು ಮಂಜೂರುಮಾಡಲ್ಪಟ್ಟಿತು. ಸಭೆಯು ಪ್ರಾರಂಭವಾಗುವ ಮೊದಲು ದಿ। ಕರ್ನಾಡು ಸದಾಶಿವರಾಯರ ತೈಲಚಿತ್ರ ಅನಾವರಣಕ್ಕೆ (ನಗರ ಸಭಾಸದನದಲ್ಲಿ) ರೂ. ೩೦ಕ್ಕಿಂತ ಹೆಚ್ಚಿನ ಖರ್ಚು ಆಗಲುವುದೆಂದೂ, ಕೌನ್ಸಿಲಿನ ಸದಸ್ಯರು ಯುಕ್ತ ವಂತಿಗೆ ಕೊಡುವುದೆಂದೂ ಡಾ। ಪಟಲಶೆಟ್ರು ಸೂಚಿಸಲು ಆ ಖರ್ಚನ್ನು ತೆರಲು ವಂತಿಗೆಯೂ ಯುಕ್ತವೆಂದು ಕೌನ್ಸಿಲಿನ ಸದಸ್ಯರಿಂದ ಭರವಸೆದೊರಕಿತು. ನಂತರ ಡಾ। ಶೆಟ್ರು ಬಜೆಟನ್ನು ಮುಂದೆ ತಂದರು. ಹಣದ ಅಭಾವದಿಂದ, ಮುನಿಸಿಪಾಲಿಟಿಯಿಂದ ಸೆಂಕ್ಷನ್ ಮಾಡಲ್ಪಟ್ಟ ಅನೇಕ ಕಾಮಗಾರಿಗಳನ್ನು ನಡೆಸಲು ಅಸಾಧ್ಯವಾಗಿರುವುದೆಂದೂ, ಆರೋಗ್ಯಖಾತೆಗೆ ಹೆಚ್ಚಿನ ವ್ಯಯವಾಗುವುದೆಂದೂ, ಕೋಳಂ ಪ್ಲೇಗ್ ಮಲೇರಿಯಾ ಇತ್ಯಾದಿಗಳ ನಿವಾರಣೆಗೆ ನಿಧಿ ಏರ್ಪಡಿಸಲಾಗಿದೆಯೆಂದೂ ನುಸಿಕಾಟವನ್ನು ಕಡಿಮೆಮಾಡುವರೆ ಸ್ವಲ್ಪ ಹಣವು ಸೆಂಕ್ಷನಾಗಿರುವುದೆಂದೂ, ನಗರದ ಎಲ್ಲಾ ಮಾರ್ಗಗಳಿಗೆ ಡಾಮರು ಹಾಕಲಾಗುವುದೆಂದೂ ಈ ಬಜೆಟಿನಿಂದ ತಿಳಿದುಬರುತ್ತದೆ. ಬಜೆಟಿನ ಕುರಿತು ಬಹಳ ಸಮಯದ ವರೆಗೆ ಚರ್ಚೆಯು ನಡೆದು, ಕೊನೆಗೆ ಮಂಜೂರುಮಾಡಲಾಯಿತು. ರಸ್ತೆಗಳಿಗೆ ಡಾಮರು ಹಾಕಬೇಕೆಂದು ಬಂದ ಡಾ। ಶೆಟ್ರ ಸೂಚನೆಯು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟಿತು.

## ಟ್ರಾಪುಶಿಕ್ಷೆ ವಿಧಿಸಲಾಯಿತು.

ಕಾಞಂಗಾಡಿನ ಉಕ್ಕರನ್ ನಾಯರ್ ಎಂಬವನ ಕುರಿತು ವಿಚಾರಣೆಯು ನಡೆದು ಅತನು ತನ್ನ ಅಳಿಯನನ್ನು ಬರೀ ರೂ 2/8 ಗಾಗಿ ಕಡಿದುಕೊಂದಿರುವನೆಂಬ ತಪ್ಪಿತವು ಆತನ ಮೇಲೆ ಸ್ಥಾಪಿತವಾಗಿ ಅವನಿಗೆ ಜಿಲ್ಲಾ ಜಡ್ಜರಾದ ಮಿ। ಅನಿರುದ್ಧನ್‌ರಿಂದ ಜನ್ಮ ಟ್ರಾಪು ಶಿಕ್ಷೆಯು ವಿಧಿಸಲ್ಪಟ್ಟಿತು. ಪೆರಿಯ ಶಂಕರನ್ನಾಯರು (ಕೊಲ್ಲಲ್ಪಟ್ಟವನು) ಮೊದಲು ತನ್ನ ಮಾವನ ಮನೆಯಲ್ಲಿಯೇ ಉಳಕೊಳ್ಳುತ್ತಿದ್ದವನು ತನ್ನ ಮಾವನಿಂದಲೇ ಒಂದು ಹಿತ್ತಿಲನ್ನು ಬಾಡಿಗೆಗೆ ಪಡೆದು ಅಲ್ಲಿಯೆ ಬೇರೆಯಾಗಿ ಜೀವಿಸುತ್ತಿದ್ದನು. ಆತನಿಂದ ಮೋಲಿನ ಐದು ಬಾಡಿಗೆ ಬಾಕಿಯಾಗಿದ್ದು) ಅನ್ನು ಮಾವನು ಪದೇ ಪದೇ ಕೇಳಿ ಕೊನೆಗೊಂದು ದಿನ ಅಳಿಯನನ್ನು ಕೋಪದಿಂದ ಕಡಿದುಕೊಂದನು ಎಂಬ ವಿಷಯವು ವಿಚಾರಣೆಯಿಂದ ತಿಳಿದುಬರುತ್ತದೆ.

## ಆರೋಗ್ಯದ ಕಾಯಿದೆಗಳು

ಮಂಗಳೂರಲ್ಲಿ ಹೊಟೇಲು ಸೋಡಾ ಅಂಗಡಿ ಫ್ರಿಡ್‌ಬೇಕರಿ ಅಂಗಡಿ ಇವುಗಳಲ್ಲಿ ಆರೋಗ್ಯನಿಯಮವೆಲ್ಲಾ ಸರಿಯಾಗಿ ಆಚರಿಸಲ್ಪಡುವಂತೆ ನಗರಸಭೆಯವರು ಬರುವ ಏಪ್ರಿಲ್ ತಾ 1೦ದ ಕ್ರಮ ಗಳನ್ನು ಜಾರಿ ಮಾಡಲಿರುವರೆಂದು ತಿಳಿದುಬರುತ್ತದೆ. ಮೊನ್ನೆ ದಿನ ಮುನಿಸಿಪಲ್ ಹೆಲ್ತಾಫೀಸರರ ಅಹ್ವಾನಪ್ರಕಾರ ಹೊಟೇಲು ಅಂಗಡಿ ಇತ್ಯಾದಿ ಬೇರೆ ಬೇರೆ ಅಂಗಡಿಮಾಲಕರ ಸಭೆ ಯೊಂದು ಜರಗಿ ಅಲ್ಲಿ ಅವರೆಲ್ಲರಿಗೆ ಬ್ಯಾಲೋಸ್‌ಗಳು ತಿಳಿಹೇಳಲಾಯಿತು.

## ಪೋಲಿಸ್ ಇನ್ಸ್‌ಪೆಕ್ಟರರು ತಪ್ಪಿತಸ್ಥರಲ್ಲ.

ಅನ್ಯಾಯವಾಗಿ ಪ್ರತಿಬಂಧಿಸಿದರೆಂಬ ಅಪಾದನೆಗೊಳಗಾದ ಮ ಲ್ಕಿಯ ಸಬ್ ಇನ್ಸ್‌ಪೆಕ್ಟರರಾದ ಅನಿರುದ್ಧನವರ ಮೇಲೆ ಡಿವಿಜನಲ್ ಆಫೀಸರರು ವಿಚಾರಣೆ ನಡೆಸಿ ಅವರು ತಪ್ಪಿತರಲ್ಲವೆಂದು ಇತ್ಯರ್ಥಮಾಡಲಾಗಿದೆ. ಕಳೆದ ಸೆಪ್ಟೆಂಬರದಲ್ಲಿ ರಾಘವಾಚಾರ್ಯರೆಂಬವರ ಮೇಲೆ ಮಂಗಳೂರಿನ ಸ್ಪೇಶಲ್ ಸಬ್ ಮೆಜಿಸ್ಟ್ರೇಟರು ಹಾಜರಿ ಹುಕುಂ ಕಳಿಸಿ ಮೂಲ್ಕಿ ಸಬ್ ಇನ್ಸ್‌ಪೆಕ್ಟರರಿಗೆ ಕಳುಹಿಸಿಕೊಟ್ಟಿದ್ದರು. ಅವರು ರಾಘವಾಚಾರ್ಯರನ್ನು ಬಂಧನದಲ್ಲಿಟ್ಟರೆಂಬ ದೂರು ಅವರ ಮೇಲೆ ಹೊರಿಸಲಾಗಿತ್ತು.

## ಕಸದತೊಟ್ಟಿಯಲ್ಲಿ ಶಿಶು

ಮೈದಾನಿನ ಉತ್ತರಬದಿಯ ಒಂದು ಕಸಹಾಕುವ ತೊಟ್ಟಿಯಲ್ಲಿ ಒಂದು ಶಿಶು ಕೂಗುತ್ತಿರುವುದು ಕೇಳಿಬಂದು ಕೆಲವರು ಅದರ ಕಡೆಗೆ ಹೋಗಿ ನೋಡಲು ಅದರೊಳಗೆ ಒಂದು ಶಿಶುವು ಇರುವುದನ್ನು ಕಂಡು ಅದನ್ನು ಹೊರಗೆ ತೆಗೆದು ಪೋಲೀಸರ ತಾಬೆಗೆ ವಹಿಸಿಕೊಟ್ಟರು. ವಿಚಾರಣೆ ನಡೆಯಲು, ಸ್ತ್ರೀಯರ ಆಸ್ಪತ್ರೆಯಲ್ಲಿ ಹೆತ್ತ ಅವಿವಾಹಿತ ಕ್ರೈಸ್ತ ಸ್ತ್ರೀಯೊಬ್ಬಳ ಮಗುವೆಂದು ತಿಳಿದುಬಂದಿರುತ್ತದೆ.

## ಕಲ್ಯಾಡಿ ಲಕ್ಷ್ಮೀನಾರಾಯಣರಾಯರ ನಿಧನ

ಬಹಳದಿವಸಗಳಿಂದ ರೋಗಪೀಡಿತರಾಗಿ ಹಾಸಿಗೆ ಹಿಡಿದಿದ್ದ ಮಂಗಳೂರಿನ ಪ್ರಸಿದ್ಧ ವಕೀಲರಾದ ಕಲ್ಯಾಡಿ ಲಕ್ಷ್ಮೀನಾರಾಯಣರಾಯರು ಕಳೆದ ತಾ ೨೭ನೇ ಶನಿವಾರ ರಾತ್ರಿ ದೈವಾಧೀನರಾದರು. ಇಂದಿಗೆ ೫೦ ವರ್ಷಗಳ ಹಿಂದೆ ವಕೀಲಿಕೆಯನ್ನು ಆರಂಭಿಸಿ ಮಹಾ ಖ್ಯಾತಿಯನ್ನು ಪಡೆದು, ಹೇರಳ ದ್ರವ್ಯವನ್ನು ಸಂಪಾದಿಸಿದವರು. ಕಕ್ಷಿಗಾರರಿಗೆ ಇವರ ಮೇಲೆ ಬಹಳ ವಿಶ್ವಾಸವಿದ್ದಿತು. ಅವರು ಜನಪ್ರಿಯ ವಕೀಲರಾಗಿದ್ದರು. ಐಶ್ವರ್ಯವಂತರಾಗಿದ್ದರೂ ಸರಳಜೀವಿಗಳಾಗಿದ್ದರು. ಸ್ಥಳೀಯ ಕರ್ನಾಟಕ ಬ್ಯಾಂಕಿನ ಸಂಸ್ಥಾಪಕರು. ತಮ್ಮ ಜಾತೀಯ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸಿದವರು. ಎರಡು ವರ್ಷಗಳ ಹಿಂದೆ ತಮ್ಮ ವೃತ್ತಿಯಿಂದ ನಿವೃತ್ತಿಹೊಂದಿದ್ದರು. ಮೃತರ ಆತ್ಮಕ್ಕೆ ಶಾಂತಿಯಿರಲಿ.

## ಡಾ। ಎಫ್ ಕಿಟ್ಟೆಲರ ಭಾವಚಿತ್ರ ಅನಾವರಣ

ಬಿ ಇ ಎಮ್ ಹೈಸ್ಕೂಲಿನ 'ಸಾಹಿತ್ಯ ಸಂಘ'ದ ವಾರ್ಷಿಕೋತ್ಸವವು ರೆವ। ಮಾರ್ಗರ್‌ರವರ ಅಧ್ಯಕ್ಷತೆಯಲ್ಲಿ ತಾ ೨೪-೩-೩೪ರಂದು ನೆರವೇರಿತು. ಅಧ್ಯಕ್ಷರ ಪ್ರಾಸ್ತಾವಿಕ ಭಾಷಣವಾದ ಮೇಲೆ ಕಾರ್ಯದರ್ಶಿಗಳಾದ ಶ್ರೀ। ಕೆ ಕೆ ದೈಮಾಸ್ತ್ರಿ, ಶ್ರೀ। ಹರಿದಾಸ ಪುರುಷೋತ್ತಮ ಇವರು ವಾರ್ಷಿಕ ವರದಿಯನ್ನೋದಿದರು. ಆ ಮೇಲೆ ಗತಿಸಿದ ಡಾ। ಕಿಟ್ಟೆಲರ ಜೀವನ ಚರಿತ್ರೆ, ಗ್ರಂಥ ರಚನೆ, ವಿಶ್ವಕೋಶ ನಿರ್ಮಾಣ ಗ್ರಂಥ ಪ್ರಕಾಶನವೇ ಮೊದಲಾದ ಕನ್ನಡ ಸೇವೆಯ ಕುರಿತು ಶ್ರೀ। ಬಿ ರಾಮಚಂದ್ರ ಮುಜೋಪಾಧ್ಯಾಯ ಮತ್ತು ಶ್ರೀ। ಕೆ ಕೆ ದೈ ವಿದ್ವಾನ್ ಇವರು ಭಾಷಣಗಳನ್ನಿತ್ತರು. ಆ ಮೇಲೆ ಶ್ರೀ। ಜಿ ಇ ಐವನ್, ಬಿ ಎ ಎಲ್ ಟಿ ಇವರು ಸಂಘದ ಪರವಾಗಿ ಭಾವಚಿತ್ರವನ್ನು ಅನಾವರಣ ಮಾಡುವ ಸಲುವಾಗಿ ಅಧ್ಯಕ್ಷರ ವಶ ಒಪ್ಪಿಸಿದರು. ಸಭಿಕರ ಕರತಾಡನದೊಡನೆ ಭಾವಚಿತ್ರವು ಅನಾವರಣ ಮಾಡಲ್ಪಟ್ಟಿತು. ಶ್ರೀ ಎಂ ಅನಂತ ಶೆಣೈ ಬಿ ಎ ಎಲ್ ಟಿ ಇವರು ಸಂಘದ ಕಾರ್ಯಕಲಾಪಗಳನ್ನು ಕೊಂಡಾಡಿ ಸಂದೇಶವಿತ್ತರು. ಜರ್ಮನಿಗೆ ಪತ್ನೀಸಮೇತರಾಗಿ ತೆರಳುವ ಕಾಲಾ ಮುಖ್ಯೋಪಾಧ್ಯಾಯರಾದ ರೆ। ಮಾರ್ಗರ್‌ರಿಗೆ ಶುಭಪ್ರಯಾಣವನ್ನು ಹಾರೈಸಿ ಶ್ರೀ ವೆಂಕಟ್ರಮಣ ಭಟ್ಟ ಶ್ರೀ। ಹರಿದಾಸ ಪುರುಷೋತ್ತಮ ಇವರು ಮಾನಪತ್ರವನ್ನೊಪ್ಪಿಸಿದ ಮೇಲೆ ಅಧ್ಯಕ್ಷ ಭಾಷಣವಾಯಿತು.

ಶ್ರೀ। ಸಿ ಇ ಸುಬ್ರಾಯ ಬಿ ಎ ಇವರು ಧನ್ಯವಾದಗಳನ್ನರ್ಪಿಸಿದರು.

## ಮಂಗಳೂರು ಶ್ರೀ ಶಾಂತೀಶ್ವರ ಸ್ವಾಮಿ ಚೈತ್ಯಾಲಯದಲ್ಲಿ

ನಡೆಯುವ ವರ್ಷಾವಧಿ ಮಹೋತ್ಸವವು ಈಸ್ವರ ನಾಮ ಸಂವತ್ಸರದ ಫಾಲ್ಗುನ ಮಾಸ ದಿನ ೧ ಸಲುವ ಫಾಲ್ಗುನ ಶುದ್ಧ ೧೪ಯು ಸೋಮವಾರ (ತಾ. ೧೯-೩-೩೪) ಪ್ರಾರಂಭವಾಗಿ ತಾ ೧೬-೩-೩೪ರ ಬುಧವಾರ ವರೆಗೆ ಕ್ರಮದರ್ಶನ ೧೦೮ ಕಲಶ ವ ಅಭಿಷೇಕ ಸಂಘ ಸಂತರ್ಪಣೆ ಇತ್ಯಾದಿ ಶ್ರೀ ಸನ್ನಿಧಿಯಲ್ಲಿ ನಡೆಯುವದಾಗಿ ಸದ್ರಿ ದೇವಳದ ಆಡಳಿತ ಮೊಕ್ತೇಸರರು ತಿಳಿಸುತ್ತಾರೆ.

## ಬೀಡಿ ಲೇಬರ್ ಯೂನಿಯನಿನ ವಾರ್ಷಿಕ ಮಹಾಸಭೆಯು

ಇದೇ ತಾ ೨೭ನೇ ಸಾಯಂ ೬ ಘಂಟೆಗೆ ಬೀಡಿ ಲೇಬರ್ ಯೂನಿಯನಿನ ಆಫೀಸಿನಲ್ಲಿ ಸೇರಿ, ಗತ ವರುಷದ ವರದಿ, ಲೆಕ್ಕಪತ್ರಗಳನ್ನು ಪರಿಶೀಲಿಸಿದ ಮೇಲೆ ಹೊಸ ವರುಷದ ಬಗ್ಗೆ ಅಧ್ಯಕ್ಷರಾಗಿ ಆರ್. ಆರ್ ಶೇಟ್ ಬೇಂಕರ್, ಉಪಾಧ್ಯಕ್ಷ ಎಸ್ ಎನ್ ಹೊಳ್ಳ ಜನರಲ್ ಸೆಕ್ರೆಟರಿ ಕೆ ಕೇಶವ ಕಾಮತ್ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ಕೆ ಎಸ್ ಅಹಮ್ಮದ್ ಬಾವಾ, ಖಜಾನ್ಜಿ ಜನಾರ್ಧನ ಪೈ ಇವರನ್ನೂ ಅಲ್ಲದೆ ಬೇರೆ ೧೨ ಜನ ಕಾರ್ಯಕಾರಿ ಮಂಡಳಿಯ ಚುನಾವಣೆ ನಡೆದ ತರುವಾಯ ಒಂದು ಜಿಲ್ಲಾ ಬೀಡಿ ಕೆಲಸಗಾರರ ಸಮ್ಮೇಳನವನ್ನು ಸಿದ್ಧದಲ್ಲಿ ಕರೆಯ ಬೇಕಾಗಿಯೂ ಅದರ ಬಗ್ಗೆ ಸ್ವಾಗತ ಮಂಡಳಿಯನ್ನು ಕೂಡಿಸುವರೆ ೫ ಜನರ ಒಂದು ತಾತ್ಕಾಲಿಕ ಕಮಿಟಿ ಸ್ಥಾಪಿಸಿತು.

## ಕಣ್ಣೂರು

ಮೊನ್ನೆ ತಾ ೨೮ನೇ ಸೋಮವಾರ ಬೆಳಿಗ್ಗೆ ಸುಮಾರು ಗಂಟೆ ೩ ಘಂಟೆಗೆ ಗಟ್ಟದಿಂದ ಕಾಫಿ ಸಾಗಿಸಿಕೊಂಡು ಮಂಗಳೂರಿಗೆ ಬರುತ್ತಿದ್ದ ಜೋಡು ಎತ್ತಿನ ಗಾಡಿಯೊಂದು ಇಲ್ಲಿಯ ಬೈರಾಡಿ ಕೆರೆಯ ಬಳಿಯಲ್ಲಿರುವ ಸಂಕದಿಂದ ಇಳಿಜಾರು ಸ್ಥಳಕ್ಕೆ ಜಾರಿ ಮಾರ್ಗದ ಬದಿಯಲ್ಲಿನ ಸುಮಾರು ೨೦ ಅಡಿ ಆಳದ ತೋಡಿಗೆ ಬಿದ್ದು, ಗಾಡಿಯು ಮುರಿದಿರುವುದು, ಗಾಡಿ ಹೊಡೆಯುತ್ತಿದ್ದ ಗೌಡನು ಗಾಡಿ ಹಿಂದಕ್ಕೆ ಜಾರುವುದನ್ನು ಥಕ್ಕನೆ ತಿಳಿದು ಮಾರ್ಗಕ್ಕೆ ಹಾರಿದನು. ಇದೇ ಸ್ಥಳದಲ್ಲಿ ಒಟ್ಟು ೬ ಗಾಡಿಗಳು ಇದೇ ರೀತಿ ಬಿದ್ದಿರುತ್ತವೆ. ಇದೇ ತಾ ೩ರಲ್ಲಿ ಒಂದು ಬೈಹುಲ್ಲು ಸಾಗಿಸುತ್ತಿದ್ದ ಗಾಡಿಯೂ ಇದೇ ಸ್ಥಳದಲ್ಲಿ ಬಿದ್ದು ಗಾಡಿಯವನಿಗೆ ವಿಶೇಷ ಪೆಟ್ಟು ಆಗಿರುತ್ತದೆ. ಈ ತರದ ಅಪಘಾತಗಳಿಗೆ ಕಾರಣವೇನೆಂದರೆ ಇಳಿಜಾರು ಮಾರ್ಗವಾಗಿ, ಮಾರ್ಗದ ಬದಿಯಲ್ಲಿ ದಂಡೆಯಿಲ್ಲದಿರುವುದಾಗಿರುತ್ತದೆ. ಊರವರ ಸಂಕಷ್ಟಗಳನ್ನು ನಿವಾರಿಸುವವರಾದ ಈ ಗ್ರಾಮದ ಅಧಿಕಾರಿಗಳು ಮಾತ್ರ ಸ್ವಲ್ಪ ಸಂಕದ ಬಳಿಯಲ್ಲೇ ನಿತ್ಯವೂ ಕೆಲಸ ಮಾಡಿಸುತ್ತಿರುವ ದಸ್ತ್ರಿ ಕಂಟ್ರಾಕ್ಟುದಾರರೂ, ಈ ವಿಷಯವನ್ನು ಕಣ್ಣಾರೆ ಕಂಡರೂ ಗಮನಕ್ಕೆ ತೆಗೆದುಕೊಳ್ಳದಿರುವುದು ತುಂಬಾ ವಿಷಾದಕರವಾಗಿದೆ. ಆದುದರಿಂದ ಇನ್ನು ಮುಂದಾದರೂ ಸಂಬಂಧಪಟ್ಟ ಅಧಿಕಾರಿಗಳು, ಅಥವಾ ಊರ ಪ್ರಮುಖರಾದರೂ ಈ ಚಿಕ್ಕ ಕಾರ್ಯದಲ್ಲಿ ಭಾಗವಹಿಸಿ, ಇಂತಹ ಅಪಘಾತಗಳನ್ನು ತಪ್ಪಿಸುತ್ತಿದ್ದರೆ ಮಹಾ ಉಪಕಾರವಾಗುತ್ತಿತ್ತು.

## ಆರ್ಯ ಸಮಾಜದ ವಾರ್ಷಿಕೋತ್ಸವವು

ಸ್ಥಳೀಯ ಆರ್ಯಸಮಾಜದ ೨೦ನೇ ವಾರ್ಷಿಕೋತ್ಸವವು ಮೊನ್ನೆ ತಾ ೨೮ರಲ್ಲಿ ಸೈಂಟ್ ಅಲೋಶಿಯಸ್ ಕಾಲೇಜಿನ ಶ್ರೀ ರಾಮಚಂದ್ರ ಅಯ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಿಗ್ಗೆ ನಗರಸಂಕೀರ್ತನೆ ವೈದಿಕಧ್ವಜ ಅನಾವರಣ ಹವನ ಪೂಜೆ ಇತ್ಯಾದಿಗಳು ನಡೆದು ಕಣ್ಣಾನೂರಿನ ಶ್ರೀ। ಹನುಮಂತಶೆಟ್ಟಿಯವರಿಂದ ವಿದ್ಯಾರ್ಥಿಗಳ ಕುರಿತು ಭಾಷಣ ನಡೆಯಿತು. ಅಪರಾಹ್ನ ಜನರಲ್ ಬೋರ್ಡಿಯ ಸಭೆಸೇರಿ ಆಫೀಸುದಾರರ ಚುನಾವಣೆ ನಡೆಯಿತು. ಆರ್ ಮಂಜುನಾಥಶೆಟ್ಟಿಯವರ ಹರಿಕೀರ್ತನೆ ನಡೆಯಿತು. ಸಾಯಂಕಾಲ ಸಾರ್ವಜನಿಕ ಸಭೆಸೇರಿ ಅನೇಕರಿಂದ ಭಾಷಣಗಳಾದುವು.

## ಲೇಡಿಸ್ ಕ್ಲಬ್

ಸ್ಥಳೀಯ ಲೇಡಿಸ್ ಕ್ಲಬ್ಬಿನ ಸಭೆಯೊಂದು ಮೊನ್ನೆ ನಡೆದು ಇದೇ ಮಾರ್ಚಿ ತಾ. ೯ನೇ ದಿನ ನಡೆಯಲಿಕ್ಕಿರುವ ಔತಣ ಕೂಟದಲ್ಲಿ ಪುರುಷರಿಗೆ ಪ್ರವೇಶಕೊಡುವ ವಿಚಾರವು ಚರ್ಚಿಸಲಾಗಿ ಪುರುಷರಿಗೆ ಅವಕಾಶಕೊಡಲು ಸಾಧ್ಯವಿಲ್ಲವೆಂದು ಬಹುಮತದಿಂದ ಇತ್ಯರ್ಥ ಮಾಡಲಾಯಿತು.

## ಕಾಲೇಜ್ ಯೂನಿಯನ್

ಸ್ಥಳೀಯ ಗವರ್ನ್ಮೆಂಟ್ ಕಾಲೇಜಿನ ಯೂನಿಯನಿನ ವಾರ್ಷಿಕ ಸೋಶಿಯಲ್ ಮೊನ್ನೆ ದಿನ ೮ ಗಂಟೆಗೆ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ನಡೆಯಿತು. ಫಲಾಹಾರ ನಡೆದ ನಂತರ ಪಾರಿತೋಷಕ ಇತ್ಯಾದಿ ಹಂಚಲಾಯಿತು. ಅನಂತರ ಅಧ್ಯಕ್ಷರ ಭಾಷಣದೊಂದಿಗೆ ಸಭೆ ಮುಕ್ತಾಯವಾಯಿತು. ಆಂಗ್ಲೇಯದಲ್ಲಿ ಪ್ರವೀಣತೆಗೆ ಕೊಡಲಾಗುವ ಜಾಜಿ ಕಾಸಿಮ್ ಪಾರಿತೋಷಕವು ಶ್ರೀ। ಫಣೀಂದ್ರ ಕಲ್ಲೂರರಿಗೆ ಕೊಡಲಾಯಿತು.

## ಉಡುಪಿ:

ತಾ. ೨೦ನೆ ಸಾಯಂ ಸುಮಾರು ೫-೩೦ ಕ್ಕೆ ಕರ್ನಾಟಕ ಪ್ರಾಂ ಕಾಂ ಕಮಿಟಿಯ ಅಪೇಕ್ಷೆ ಮೇರೆಗೆ ಅಜ್ಜರಕಾಡಿನ ಗಾಂಧಿ ಮೈದಾನದಲ್ಲಿ ಕಾಂಗ್ರೆಸ್ ದಿನಾಚರಣೆಗಾಗಿ ಮಹಾಸಭೆಯು ತಾ ಕೊರ ಕಮಿಟಿಯವರಿಂದ ಜರಗಿಸಲಾಯಿತು. ಶ್ರೀ ಕೆ ಕೆ ಶೆಟ್ಟಿಯ ಅಧ್ಯಕ್ಷತೆ ಮತ್ತು ಸಂಯುಕ್ತ ಪಾಂತ್ಯಗಳಲ್ಲಿ ಮಂತ್ರಿಮಂಡಲಗಳು ರಾಜೀನಾಮೆಕೊಟ್ಟ ದೆಸೆಯಿಂದಾಗಿ ಭರತಖಂಡದಲ್ಲುಂಟಾದ ಸಂದಿಗ್ಧವಾತಾವರಣ ವಿವರ ಮಾಡಿದರು. ಅನಂತರ ರಾಷ್ಟ್ರಪತಿ ಸುಭಾಸ್‌ಚಂದ್ರ ಬೋಸರವರ ಉಜ್ವಲ ಭಾಷಣದ ಸಾರಾಂಶವನ್ನು ಹೇಳಿದರು.

## ಕಾರ್ಕಳ:

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾ ಇಲಾಖಾ ಆಫೀಸರ್ ದರ್ಜೆಯ ದನಾಲಿ ಗುರುಮ ದಕ್ಷಿಣ ಡಿಸ್ಟ್ರಿಕ್ಟ್ ಬೋರ್ಡಿನ ಕಾರ್ಕಳ ತಾಲೂಕಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯ ಸಂಘದ ಬೇರೆ ಬೇರೆ ಕೇಂದ್ರ ಕಾರ್ಯದರ್ಶಿಗಳನ್ನು ತಾ ೧೯-೩-೩೪ರ ದಿನ ಡೆಪ್ಯುಟಿ ಇನ್ಸ್‌ಪೆಕ್ಟರರ ಆಫೀಸಿನಲ್ಲಿ ಬರಮಾಡಿ ಪ್ರಾಥಮಿಕ ಶಿಕ್ಷಣದ ಪ್ರಚಾರ ಪ್ರಸಾರಗಳ ಬಗ್ಗೆ ಯೋಗ್ಯ ಸಲಹೆಗಳನ್ನು ಕೊಟ್ಟರು.

★

ಸ್ಥಳೀಯ ಈಶ್ವರಾನಂದ ಸ್ವಾಮಿಗಳ ಸೇವಾಶ್ರಮದ ಸಹಾಯಾರ್ಥವಾಗಿ ಇದೇ ರವಿವಾರ ತಾ ೫ರಲ್ಲಿ ಬೇಗಮ್ ಅಬಿದುದ್ದೀನ್‌ರವರ ಅಧ್ಯಕ್ಷತನದಲ್ಲಿ ಸ್ಥಳೀಯ ಬಿಸೆಂಟ್ ಗರ್ಲ್ಸ್ ಸ್ಕೂಲಿನ ಸದನದಲ್ಲಿ ಹುಡುಗಿಯರಿಂದಲೇ ವ್ಯಾಯಾಮ ಪ್ರದರ್ಶನವೊಂದು ಜರಗಲಿದೆ. ಇದರಲ್ಲಿ ರಮಣೀಯವಾದ ನರ್ತನ ಕಸರತ್ತು ಗಾಯನ ಇತ್ಯಾದಿಗಳು ನಡೆಯಲಿದೆ. ಮಹಾಜನರು ಪ್ರೋತ್ಸಾಹಿಸ ಬೇಕಾಗಿ ವಿನಂತಿ.

ಕಾಲು ಕುಂಟುಗೊಳಿಸುವ ಬೊಕ್ಕೆಗಳನ್ನು ನಿವಾರಿಸಿರಿ

ಜ್ಯಾಂಬಕು ಕಲೆಗಳಿಲ್ಲದಂತೆ ವಾಸಿ ಮಾಡುತ್ತದೆ

ಬೊಕ್ಕೆ ಕಡಿತ ವ್ರಣ ಇತ್ಯಾದಿಗಳ ಮೇಲೆ ಜ್ಯಾಂಬಕನ್ನು ಹಚ್ಚಿದಾಕ್ಷಣವೇ ವಾಸಿಯಾಗುವುದು ಪ್ರಾರಂಭವಾಗುತ್ತದೆ. ಜ್ಯಾಂಬಕು ಚರ್ಮದಲ್ಲಿರುವ ನಂಜನ್ನು ತೆಗೆದು ಗಾಯವನ್ನು ಶುದ್ಧಗೊಳಿಸುತ್ತದೆ. ತ್ವಚೆಯ ಒಳಗೆ ಸೇರುವುದರಿಂದಲೇ ರೋಗಾಣುಗಳು ನಾಶವಾಗಿ ಹೊಸ ಚರ್ಮವು ಬೆಳೆಯುತ್ತದೆ. ಜ್ಯಾಂಬಕಿನಿಂದ ನೋವು ನಿವಾರಣೆಯಾಗುತ್ತದೆ, ಉರಿತವು ಶಮನವಾಗುತ್ತದೆ. ವ್ಯಾಪಕ ಗುಣವುಳ್ಳ ಜ್ಯಾಂಬಕನ್ನು ಎಲ್ಲಾ ಡಾಕ್ಟರರು ಶಿಫಾರಸು ಮಾಡುತ್ತಾರೆ. ಎಲ್ಲಾ ದವಾಖಾನೆಗಳಲ್ಲಿ ಜ್ಯಾಂಬಕ್ಕು ರೂ ೧ ಮತ್ತು ೦-೪-೦ ಪ್ರಕಾರ ಮಾರಾಟವಾಗುತ್ತದೆ.

ಏಜಂಟರು —
ಮೆಸರ್ಸ್ ರಾಧಾ ಎಂಡ್ ಕೋ, ಪಿ ಟಿ ಮದ್ರಾಸು.

ಜ್ಯಾಂಬಕ್
Zam Buk

# ಕಾಂಗ್ರೆಸ್ ಮಂತ್ರಿಮಂಡಲಗಳ ಸ್ತುತ್ಯಪ್ರಯತ್ನ!

## ಹರಿಜನರ ಮಂದಿರಪ್ರವೇಶಕ್ಕೆ ಬೊಂಬಾಯಿ ಸರಕಾರದ ಸಮ್ಮತಿ.

### ವಿರೋಧಿಗಳ ಆಕ್ಷೇಪಣೆಗಳಿಗೆ ಗೃಹಮಂತ್ರಿಗಳ ಸಮರ್ಪಕ ಉತ್ತರ.

★

ಸಣ್ಣ ಸಣ್ಣ ಸುಧಾರಣೆಗಳು ದೊಡ್ಡ ದೊಡ್ಡ ಸುಧಾರಣೆಗಳಾಗಲಿಕ್ಕೆ ತಡೆಗಳಾಗಿರುವೆಂದು ಹೇಳುವ ಮಾತು ದೊಡ್ಡ ಸುಧಾರಣೆಗಳಾಗಲಿಕ್ಕೆ ಸಹಾಯಕಗಳಾದ ಸಣ್ಣ ಸುಧಾರಣೆಗಳ ಕುರಿತು ಹೇಳಿದುದಲ್ಲ. ಬೊಂಬಾಯಿಯ ಎಸೆಂಬ್ಲಿ ಮತ್ತು ಕೌನ್ಸಿಲುಗಳು ಪ್ರಬಲ ಬಹುಮತದಿಂದ ಮಂಜೂರುಮಾಡಿದ ಹರಿಜನರ ಮಂದಿರ ಪ್ರವೇಶ ಮತ್ತು ಕೃಷಿಕರ ಸಾಲ ಸಂದಾಯಕ್ಕೆ ಸಮಯ ಕೊಡುವ ಮಸೂದೆಗಳು, ಸಣ್ಣವಾಗಿರುವವಾದರೂ, ಮಹತ್ವದ್ದಾಗಿರುವವು. ಅವುಗಳನ್ನು ಮಂಜೂರುಮಾಡಿಸಿಕೊಂಡ ಬೊಂಬಾಯಿ ಸರಕಾರವು-ಮುಖ್ಯವಾಗಿ ಅದರ ಗೃಹ ಮಂತ್ರಿಗಳಾದ ಶ್ರೀ ಮುನ್ಷಿಯವರು ಪ್ರಶಂಸೆಗೆ ಪಾತ್ರವಾಗಿದ್ದಾರೆ-ಎಂದು ಎಂ. ಡಿ. ಯವರು ಹರಿಜನದಲ್ಲಿ ಬರೆಯುತ್ತಾರೆ

ಈ ಮಸೂದೆಗಳನ್ನು ಮಂಜೂರುಮಾಡಿದುದರಿಂದ, ಸುಧಾರಣೆಯ ಕಾರ್ಯಗಳು ಅಲ್ಲಿಗೇ ಮುಗಿಯಲಿಲ್ಲ. ಆಗಬೇಕಾದ ಸುಧಾರಣೆಗಳು ಬಹಳ ಇವೆ. ಆದರೆ ಅವು ಈ ಮಸೂದೆಗಳಿಂದಾಗಿ ಸುಲಭದಲ್ಲಿ ಮತ್ತು ಶೀಘ್ರದಲ್ಲಿ ಸಾಧ್ಯವಾಗುವವು ಎಂದು ಮಸೂದೆಗಳ 'ಉದ್ದೇಶ ಮತ್ತು ಕಾರಣ'ದಲ್ಲಿ ಕೆಲವೇ ಮಾತುಗಳಿಂದ ಸ್ಪಷ್ಟವಾಗಿ ಹೇಳಿಯದೆ. ಐದು ಎಕ್ರೆಗಿಂತ ಹೆಚ್ಚು ವಿಸ್ತಾರವಾಗಿಲ್ಲದ ಬೇಸಾಯ ಭೂಮಿ ಅಥವಾ ಹದಿನೈದು ಎಕ್ರೆಗಿಂತ ಹೆಚ್ಚು ವಿಸ್ತಾರವಾಗಿಲ್ಲದ ಇತರ ಭೂಮಿಯಿರುವ ಕೃಷಿಕರ ಭೂಮಿ ಜಾನುವಾರುಗಳು ಅವರ ಸಾಲ ಸಂದಾಯಕ್ಕೆ ಜಪ್ತಿ ಅಥವಾ ಏಲಂ ಆಗಬಾರದೆಂದು ಕೃಷಿಕರ ಸಾಲ ಸಂದಾಯಕ್ಕೆ ಸಮಯ ಕೊಡುವ ಮಸೂದೆಯಲ್ಲಿ ನಿರ್ಧಾರವಾಗಿದೆ. ಇದು ಕೃಷಿಕರ ಸಾಲ ಸಂದಾಯಕ್ಕೆ ಆಗುವ ಇನ್ನೊಂದು ಮಸೂದೆಯು ಕೇವಲ ಪರೀಕ್ಷಾ ಪ್ರಕರಣವಾಗಿರುವುದು. ಮದ್ರಾಸು ಸರಕಾರವು ಕೃಷಿಕರ ಸಾಲ ಸಂದಾಯಕ್ಕೆ ಸಮಯ ಕೊಡುವ ಈ ತಾತ್ಕಾಲಿಕ ಉಪಾಯಕ್ಕೆ ಕೈಹಾಕದೆ, ಚಿರಕಾಲ ಅವರಿಗೆ ನಿವೃತ್ತಿಕೊಡುವ ಮಸೂದೆಯನ್ನೇ ಮಂಜೂರುಮಾಡಿಸಿಕೊಂಡು, ಸ್ವಾರ್ಥಿಗಳ ಪ್ರಬಲ ವಿರೋಧಕ್ಕೆ ಎದೆಕೊಟ್ಟಿದೆ. ಆದರೆ ಅಸ್ಪೃಶ್ಯತೆ ಎಂಬ ಕೊಳೆ ರೋಗದ ಉಪಶಮನ ಕಾರ್ಯವನ್ನು ಅದು ಇನ್ನು ಮಾಡಬೇಕಾಗಿದೆ. ಹೇಗೂ ಇರಲಿ.

ಬೊಂಬಾಯಿ ಸರಕಾರದ ಹರಿಜನರ ಮಂದಿರ ಪ್ರವೇಶದ ಮಸೂದೆಗೆ ಸನಾತನಿಗಳೆಂದು ಹೇಳಿಸಿಕೊಳ್ಳುವವರ ವಿರೋಧವು ಇಲ್ಲವೆ ಇರಲಿಲ್ಲ. ಆದರೆ ಮಸೂದೆಯಿಂದ ಸುಧಾರಣೆಯು ಚೆನ್ನಾಗಿ ಆಗಲಿಕ್ಕೆ ಅವಕಾಶವು ಸಾಕಾಗಲಿಲ್ಲವೆಂದು ಅದನ್ನು ವಿರೋಧಿಸಿದವರೂ ಇದ್ದರು. ಒಬ್ಬ ಪ್ರಸಿದ್ಧ ಹರಿಜನ ಸೇವಕರು ಬರೆದ ಕೆಳಗಿನ ಪತ್ರದಿಂದ ಈ ಮಾತು ಸ್ಪಷ್ಟವಾಗುತ್ತದೆ.

"ಈ ಮಸೂದೆಯಿಂದ ಸುಧಾರಣೆ ಆಗಲಿಕ್ಕಿಲ್ಲ. ಆದ್ದರಿಂದ ಅದು ನಿರಾಶಾಜನಕವಾಗಿದೆ. ದೇವಸ್ಥಾನಗಳ ಮೊಕ್ತೇಸರರು ಅಂಥ ವಿಶ್ವಾಸವನ್ನು ಸುಲಭದಲ್ಲಿ ಬಿಡಲಾರರು. ಮಿಲಿಯಾಂತರ ಹರಿಜನರ ಭವಿಷ್ಯವು ಕೇವಲ ಬೆರಳೆಣಿಸುವಷ್ಟು ಮಂದಿ ಮೊಕ್ತೇಸರರ ಸದ್ಭಾವನೆಯನ್ನು ಹೊಂದಿಕೊಂಡಿರಬೇಕೆಂದಾದರೆ, ಹರಿಜನೋದ್ಧಾರದ ದಿನವು ಬರಲಿಕ್ಕೆ ...

ಮಂದಿ ಭಕ್ತರು ಹರಿ ಜನರಿಗೆ ಆ ದೇವಸ್ಥಾನದಲ್ಲಿ ಪ್ರವೇಶಕೊಡಲಿಕ್ಕೆ ಇಷ್ಟವುಳ್ಳವರಾಗಬಹುದು, ಆದರೆ ಮೊಕ್ತೇಸರನು ಇಷ್ಟಪಡದಿದ್ದರೆ ಅಂಥ ದೇವಸ್ಥಾನದಲ್ಲಿ ಕಾನೂನು ಪ್ರಕಾರ ಹರಜನರಿಗೆ ಪ್ರವೇಶ ಸಿಗಲಾರದು. ಇದರ ಬದಲಿಗೆ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ರಂಗ ಅಯ್ಯರರು ತಂದಂಥ ಒಂದು ಮಸೂದೆಯನ್ನು ಸರಕಾರವು ಮಂಜೂರು ಮಾಡಿಸಿದರಾಗುತ್ತಿದ್ದಿಲ್ಲವೇ?"

ಬೊಂಬಾಯಿ ಸರಕಾರದ ಗೃಹಮಂತ್ರಿಗಳು ಇಂಥ ಆಕ್ಷೇಪಣೆಗಳಿಗೆ ತಮ್ಮ ಭಾಷಣದಲ್ಲಿ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ.

"ಹರಿಜನರ ಮಂದಿರ ಪ್ರವೇಶಕ್ಕೆ ಕಾನೂನು ಮೂಲಕವಾದ ಎಷ್ಟೋ ಆತಂಕಗಳಿದ್ದವು. ಕೆಲವು ಸಂದರ್ಭಗಳಲ್ಲಿ ಭಕ್ತ ಜನರು ಸುಧಾರಣೆಗೆ ಒಪ್ಪುತ್ತಾರೆ, ಆದರೆ ಮೊಕ್ತೇಸರರು ಒಪ್ಪುವುದಿಲ್ಲ. ಇನ್ನೂ ಕೆಲವು ಸಂದರ್ಭಗಳಲ್ಲಿ ಮೊಕ್ತೇಸರರು ಹರಿಜನರ ಮಂದಿರ ಪ್ರವೇಶಕ್ಕೆ ಒಪ್ಪುತ್ತಾರೆ. ಆದರೆ ಭಕ್ತರು

ಶ್ರೀ ಸತ್ಯಮೂರ್ತಿಯವರು

ದೇಹಾಲಸ್ಯದಿಂದ ಪೀಡಿತರಾಗಿದ್ದವರು, ಈಗ ಗುಣಹೊಂದಿರುವರಾಗಿ, ಅವರು ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಭಾಗವಹಿಸಬಹುದೆಂದು ಡಾಕ್ಟರರ ಅಭಿಪ್ರಾಯವಾಗಿರುವುದೆಂದು ತಿಳಿದುಬರುತ್ತದೆ.

ಒಪ್ಪುವುದಿಲ್ಲ. ಶ್ರೀ ರಂಗ ಅಯ್ಯರರ ಮಸೂದೆಯು ಮೊದಲು ಬರೆದ ಕಷ್ಟವನ್ನು ಮಾತ್ರ ನಿವಾರಿಸಲಿಕ್ಕೆ ನೋಡಿತ್ತು. ಆದರೆ ಅದರಲ್ಲಿ ಕಾಣಿಸಿದ ಉಪಾಯವು ಮಾತ್ರ ವ್ಯವಹಾರಿಕವಾಗಿರಲಿಲ್ಲ. ಇಡೀ ದೇಶದ ಎಲ್ಲ ಕಡೆಗಳಲ್ಲಿ ವಾಸಿಸಿರುವ ಭಕ್ತ ಜನರ ಬಹುಮತವನ್ನ ಪಡೆದು ಒಂದು ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕೆ ಬಿಟ್ಟು ಬಿಡುವುದು ಸಾಧ್ಯವೇ ಅಲ್ಲ. ಮೊಕ್ತೇಸರರನ್ನ ಭಜಕರ ಪ್ರತಿನಿಧಿಗಳೆಂದು ತಿಳಕೊಂಡು ಅವರ ಅಭಿಪ್ರಾಯದಂತೆ ಈ ಪ್ರಶ್ನೆಯನ್ನು ಉತ್ತರಿಸುವದು ಸುಲಭವಾಗಿದೆ. ಭಜಕರ ಪ್ರವೃತ್ತಿ, ಚಿತ್ತವೃತ್ತಿಗಳ ಹೇಗಿರುತ್ತವೆಂಬುದನ್ನು ಮೊಕ್ತೇಸರರು ಬಹು ಚೆನ್ನಾಗಿ ತಿಳಿದಿರುವವು. ಬಹು ಸಂಖ್ಯೆಯಿಂದ ಭಜಕರು ಸುಧಾರಣೆಯನ್ನು ಕೋರುವದಾದರೆ ಅದನ್ನು ಅಲ್ಲಗಳೆಯುವದು ಮೊಕ್ತೇಸರರಿಗೆ ಸಾಧ್ಯವೇ ಅಲ್ಲ. ಆದ್ದರಿಂದ ಈಗಿನ ಮಸೂದೆಯು ಸುಧಾರಣೆಯ ಸಾಧ್ಯಾಸಾಧ್ಯತೆಯನ್ನು ಮೊಕ್ತೇಸರರ ಮೂಲಕ ತಿಳಿಯಪೇಕ್ಷಿಸಿದೆ. ಜನಮತವನ್ನು ಅವಲಂಬಿಸಿ ... ಬಹು ಜನರು ಸುಧಾರಣೆಯನ್ನು ಅಪೇಕ್ಷಿಸಿದರೆ ಆಗ ಜನರನ್ನು ದೇವಸ್ಥಾನ ಪ್ರವೇಶಕ್ಕೆ ಬಿಡುವುದು ಸುಲಭವಾಗುವುದು."

ವಿಶೇಷಾಡಂಬರ ಮುಂತಾದ್ದೇನೂ ಇಲ್ಲದೆ ಹರಿಜನರ ಪ್ರವೇಶಕ್ಕೆ ದೇವಸ್ಥಾನಗಳನ್ನು ತೆರೆಯುವ ಅಧಿಕಾರವನ್ನು ಆ ದೇವಸ್ಥಾನಗಳ ಮೊಕ್ತೇಸರರಿಗೆ ಕೊಟ್ಟಿರುವುದರಿಂದ ಮಸೂದೆಯು ವ್ಯವಹಾರಿಕವಾದುದಲ್ಲವೆನ್ನುವ ಮಾತಿನಲ್ಲಿ ಹುರುಳಿರುವುದಿಲ್ಲ. ಮೊದಲಾದರೋ — ಭಜಕರು ಮೊಕ್ತೇಸರರುಗಳಲ್ಲಿ ಬಹು ಜನರು ಸುಧಾರಣೆಯನ್ನು ಅಪೇಕ್ಷಿಸಿದರೂ ಕೂಡಾ, ಅಂತಹ ಸುಧಾರಣೆಗೆ ಕಾನೂನು ಮೂಲಕವಾದ ವಿರೋಧವಿತ್ತು. ಈಗ ಅದು ದೂರವಾದಂತಾಯಿತು. ಈ ಬಗೆಯ ಸುಧಾರಣೆ ಮಾಡಲಿಕ್ಕೆ ಕಾನೂನು ತಮಗೆ ಸ್ವಾತಂತ್ರ್ಯ ಕೊಡುವುದಿಲ್ಲವೆಂದು ಹೇಳಿದ ಸಾವಿರಾರು ಮಂದಿ ದೇವಸ್ಥಾನಗಳ ಮೊಕ್ತೇಸರರಿದ್ದಾರೆ. ಈಗ ಅವರು ಅಂತಹ ಆಕ್ಷೇಪಗಳನ್ನು ಎತ್ತುವ ಹಾಗಿಲ್ಲ. ಭಜಕರು ಸುಧಾರಪ್ರಿಯರಾಗಿದ್ದು ಮೊಕ್ತೇಸರರ ಕಟ್ಟಿದ ಪಂಧಿಗಳಾಗಿ ಇರಲೂ ಬಹುದು, ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಆದರೆ ಅಂಥವರಾದರೂ ಕೂಡ ಪ್ರಬಲ ಜನಮತಕ್ಕೆ ತಲೆತಗ್ಗಿಸಲೇಬೇಕಾಗುತ್ತದ ಎಂಬುದು ಎಲ್ಲರಿಗೆ ತಿಳಿದ ವಿಷಯವಾಗಿದೆ.

ಜನಮತಕ್ಕೆ ತಲೆತಗ್ಗಿಸದ ಮೊಕ್ತೇಸರರೂ ಇರುವರೆಂದು ಮಾತಿಗೆ ಒಪ್ಪಿಕೊಳ್ಳೋಣ. ಆಗಲಿ ಅಂತಹ ಸಂದರ್ಭದಲ್ಲಿ ದೇವಸ್ಥಾನಗಳನ್ನು ಹರಿಜನರ ಪ್ರವೇಶಕ್ಕೆ ತೆರೆದಿಡುವ ಅಧಿಕಾರವನ್ನು ಭಜಕರಿಗೆ ಕೊಡುವ ಶ್ರೀ ರಂಗಅಯ್ಯರರ ಮಸೂದೆಯಂಥ ಇನ್ನೊಂದು ಮಸೂದೆಯನ್ನು ಮಂಜೂರು ಮಾಡಿಸಿಕೊಳ್ಳುವದೇನಷ್ಟದ ಕಾರ್ಯವಾಗದು. ಜನಮತವನ್ನು ಅನುಕೂಲ ಮಾಡಿಕೊಳ್ಳಬೇಕಾದ್ದೇ ಹರಿಜನ ಸೇವಕರ ಮುಖ್ಯ ಕಾರ್ಯವಾಗಿದೆ. ಜನಮತವು ಅನುಕೂಲವಾದರೆ ಈಗಿನ ಮಸೂದೆಯಿಂದಾಗಿಯೇ ಹತ್ತರಲ್ಲಿ ಒಂಭತ್ತು ದೇವಸ್ಥಾನಗಳು ಹರಿಜನರಿಗೆ ತೆರೆಯಲ್ಪಡುವುದು. ಉಳಿದ ಒಂದರ ಮೊಕ್ತೇಸರರು ಕೂಡ ಜನಮತದ ಬೇಡಿಕೆಯನ್ನು ಸ್ವಲ್ಪ ವಿಳಂಬವಾಗಿಯಾದರೂ ಮನ್ನಿಸಿಯೇ ಮನ್ನಿಸುವರೆಂದು ನಮ್ಮ ದೃಢವಾದ ನಂಬಿಕೆ ಇದೆ.

ಕಾನೂನು ಮೂಲಕವಾದ ಒಂದು ತಡೆಯನ್ನು ಬೊಂಬಾಯಿಯ ಕಾಂಗ್ರೆಸು ಮಂತ್ರಿಮಂತ್ರಿಮಂಡಲದ ಈ ಮಸೂದೆಯು ದೂರ ಮಾಡಿದೆ. ಅದರ ಪರಿಣಾಮವೇನೆಂಬುದು, ಮುಂದಿನ ಒಂದೆರಡು ವರ್ಷಗಳಲ್ಲಿ ಗೊತ್ತಾಗುವದು. ಅದನ್ನು ನೋಡಿಕೊಂಡು ಇನ್ನೊಂದು ಹೆಜ್ಜೆ ಮುಂದಕ್ಕೆ ಇಡಬೇಕಾಗಿದೆ. ಹರಿಜನರ ಮಂದಿರ ಪ್ರವೇಶಕ್ಕೆ ಪ್ರಬಲ ಜನಮತವಿದ್ದು ದೇವಸ್ಥಾನಗಳ ಮೊಕ್ತೇಸರರು, ಅಂತಹ ಸುಧಾರಣೆಗೆ ಒಪ್ಪದಿರುವರಾದರೆ, ಆಗ ಇನ್ನೊಂದು ಕಾನೂನು ಮಾಡುವ ಕಾಲವು ಸನ್ನಿಹಿತವಾಗಿದೆಯೆಂದು ತಿಳಕೊಂಡು ಕಾಂಗ್ರೆಸ್ ಮಂತ್ರಿಮಂಡಲಗಳು ಆ ಕಾರ್ಯಕ್ಕೆ ಪ್ರವೃತ್ತವಾಗುವುವು.

---

### ಅರೇಬಿಯದಲ್ಲಿ ಮುಸಲೀನಿ

ಬ್ರಿಟಿಷ ಪೆಲೆಸ್ತೀನದಲ್ಲಿ ಮುಸಲೀನಿಯು ಬ್ರಿಟಿಷರಿಗೆ ವಿರುದ್ಧವಾಗಿ ಪ್ರಸಾರಣೆ ನಡೆಯಿಸುತ್ತಿರುವನೆಂದು ತಿಳಿದುಬರುತ್ತದೆ. ಆತನ ತನ್ನ ಈ ವರ್ತನೆಯನ್ನು ಬಿಡಬೇಕು, ನಂತರ ಆತನೊಡನೆ ಸಂಧಾನ ಪ್ರಸ್ತಾಪವೆತ್ತಬೇಕೆಂದು ಅಂತೋನಿ ಯೇಡನ್ನರು ಹೇಳುತ್ತಿದ್ದರು. ಮುಸಲೀನಿಯವರ ಪೊಳ್ಳು ಬೆದರಿಕೆಗಳು ಪರಿಣಾಮಕಾರಿಯಾದಂತೆ ಕಾಣುತ್ತದೆ.

---


## ಪ್ರಕಟಣೆ.

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 24/1938

ಬೀಪಾತುಮ್ಮ ಪಳ್ಳಿಡಿಯಾನೆ ಮಮ್ಮುಂಞ ಬ್ಯಾರಿ ಮಗಳು ವ ಮೃತಪಟ್ಟ ಅಬ್ದುಲ್ಲ ಹೆಂಡತಿ, ಕಾಸರಗೋಡು ತಾಲೂಕು ತೆಳಂಗರೆ ಗ್ರಾಮದ ಕಡವತ್ತಲ್ಲಿರುವವಳು ಅರ್ಜಿದಾರಳು

ಮತ್ತು

1 ಮೊಯ್ದಿಂಕುಟ್ಟಿ 2 ಅಮು 3 ಖದೀಜುಮ್ಮ 4 ಜೈನಬ್ಬಾ, ಎಡನೀರ ಮುಹಮ್ಮದ್ ಬ್ಯಾರಿಯ ಮಕ್ಕಳು. ಸದ್ರಿ ತಾಲೂಕು ತೆಳಂಗರೆ ನಾಡ ಗ್ರಾಮಸ್ಥರು. ರೆಸ್ಪಾಂಡೆಂಟರು

ಅರ್ಜಿದಾರಳ ಗಂಡ ವ ರೆಸ್ಪಾಂಡೆಂಟರ ಸಹೋದರ, ಮೃತಪಟ್ಟ ಅಬ್ದುಲ್ಲಗೆ ಹೋಸ್ಟಾಫೀಸಿನಿಂದ ಸಲ್ಲಬೇಕಾದ ಐವೇಜನ್ನು ವಸೂಲುಮಾಡಿಕೊಳ್ಳುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 17 8 ೩೮ಕ್ಕೆ ತೀರ್ಪುಗೆ ಇಟ್ಟಿರುವದರಿಂದ ಆಕ್ಷೇಪವುಳ್ಳವರು ಆ ದಿವಸ ಹಾಜರು ಮಾಡತಕ್ಕದೆಂತ ಈ ಮೂಲಕ ತಿಳಿಸೋಣಾಗಿಯದೆ

Kasargode 20—2—1938 | (sd) P AHMAD Advocate for Petition


---


## ಸಿಲ್ಕ್ ಶರ್ಟಿಂಗ್

ಎಲ್ ಮೆಹರ್‌ಚಂದಾ, ರಿಜಿಸ್ಟ್ರಾರ್, ಸುಕೇಟ್ ಸ್ಟೇಟ್ ಇವರು ತಾ 31 1 38 ರಲ್ಲಿ ಬರೆದಿರುವ ಕಾಗದದಲ್ಲಿ ಹೀಗೆಂದು ಹೇಳುತ್ತಾರೆ

ನೀವು ರೂ 5-8-0ಕ್ಕೆ ವಿ ಪಿ ಪಿ ಮೂಲಕ ರವಾನಿಸಿದ ಶರ್ಟಿಂಗ್ ವಸ್ತ್ರದ ಪಾರ್ಸೆಲನು ಪಡೆದು ನೋಡಿದೆನು. ಅದೇ ಸ್ಟೈಲಿನ ಮೆಸರ್ಸ್ ... ಇವರ ಕಂಪೆನಿಯಿಂದ ರೂ 0-12-0ಕ್ಕೆ ತಂಸಿದ ಶರ್ಟಿಂಗ್ ವಸ್ತ್ರವನ್ನೂ ನೋಡಿದೆನು. ಆದರೆ ನೀವು ರವಾನಿಸಿದ ವಸ್ತ್ರವು ಬೆಲೆಯಲ್ಲಿ ಅಗ್ಗವೂ ಅದಕ್ಕಿಂತ ಉತ್ತಮವೂ ಆದರ ನೇಯಿಗೆ ನಾಜೂಕಾದುದೂ ಎಂಬುದನ್ನು ತಿಳಿಸುವರೆ ನನಗೆ ತುಂಬಾ ಸಂತೋಷವಾಗುತ್ತದೆ. ವ್ಯಾಪಾರ ವಹಿವಾಟಿನಲ್ಲಿ ನಿಮ್ಮ ಸರಳತೆ ಮತ್ತು ಶ್ರದ್ಧೆಯನ್ನು ನೋಡಿ ನಿಮಗೆ ವ್ಯಾಪಾರದಲ್ಲಿ ಹೆಚ್ಚಿನ ಯಶಸ್ಸು ಮತ್ತು ಲಾಭ ದೊರೆಯಲೆಂದು ಬಯಸುತ್ತೇನೆ

ಸಿಲ್ಕ್ ಶರ್ಟಿಂಗ್— ಶುದ್ಧ ಬಿಳಿದು, ಅತೀ ಉತ್ತಮ ಮತ್ತು ಹೆಚ್ಚು ಬಾಳಿಕೆ ಬರುವಂತಾದ್ದು. ಹತ್ತಿಯ ನೂಲಿನಿಂದ ವಿರಹಿತವಾಗಿದೆ. ಅತಿ ನುಣುಪಾಗಿಯೂ, ತಂಪಾಗಿಯೂ, ಸುಖಕರವಾಗಿಯೂ ಇದೆ. ಎಷ್ಟು ಕಠಿಣವಾಗಿ ಒಗೆದರೂ ಬಾಳಿಕೆ ಬರಬಲ್ಲುದು. 9 ಗಜ ಉದ್ದ, 54 ಇಂಚು ಅಗಲದ 6 ಶರ್ಟುಗಳ ವಸ್ತ್ರಕ್ಕೆ ಬೆಲೆ ರೂ 5 8 0

ಸಿಲ್ಕ್ ಸೀರೆಗಳು—ಖಾತ್ರಿಯಾಗಿ ಬಣ್ಣ ಹೋಗದ ಪಿಂಟಾದ ಅಂಚುಗಳು ಸ್ಸೈಜು 7 8, 9, 10 ಗಜ ಉದ್ದ ಮತ್ತು 45 ಇಂಚು ಅಗಲ ಕಪ್ಪುಬಣ್ಣ ವಿರಹಿತ ಇತರ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುತ್ತೆ. ಕ್ರಯ ರೂ 4 12 0 5 9 0, 6 2 0 ಮತ್ತು 6 15 0. ಸಿಲ್ಕ್ ದುಪ್ಪಟಿಗಳು—ಇವುಗಳ ಹೆಚ್ಚಿನ ಹೆಸರನ್ನು ಪಡೆದಿರುತ್ತವೆ. ನಾವು ಪ್ರತ್ಯೇಕವಾಗಿ ಇವುಗಳ ಕುರಿತು ಹೇಳಬೇಕಾಗಿಲ್ಲ. ಸೈಜು 2½ ಗಜ ಉದ್ದ, 44 ಇಂಚು ಅಗಲ ಕ್ರಯ ರೂ 2 ಮಾತ್ರ

ಪೇಕಿಂಗ್ ಮತ್ತು ಅಂಚೆವೆಚ್ಚ ಧರ್ಮಾರ್ಥ. ನಿಮಗೆ ಒಂದಿಷ್ಟು ಅಸಮಾಧಾನ ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸುಮಾಡಲು ನಾವು ಸಿದ್ಧರಿದ್ದೇವೆ.

ಮಲ್ಲಿನ ಸಿಲ್ಕುಗಳನ್ನು ಇತರರು ಮಾರುವಂತೆ ನಮ್ಮಲ್ಲಿಯೂ ಸಿಗುತ್ತದೆ 9 ಗಜ × 54 ಇಂಚು ರೂ 5

GIRSON KNITTING WORKS, DEPT 67, LUDHIANA

**DIAMONDS! DIAMONDS!**
**BEST BRILLIANCY!**

# K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ'

## ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

**ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ. | ರೂ. ಆ. |
| ಬಿಕ್ಷ ಗುಡ್ಡು ಮು. | 1 —10 | 1 —10 |
| ರಾಶಿ ಅಕ್ಕಿ | 3— 8 | 4— 0 |
| ಸುಗ್ಗಿ | 4— 0 | 4— 0 |
| ಗುಡ್ಡು | 4— 2 | 4— 2 |
| ಊರ ಅವ್ವಲ್ ಬೆಳ್ತಿಗೆ | 4— 7 | 4— 7 |
| ರಂಗೂನು ಬೆ ಗೋ ೧ಕ್ಕೆ | 7 — 2 | 7— 4 |
| ಎಲ್ಲೂರು ಬೆ. ಮು. ೧ಕ್ಕೆ | 3—14 | 4— 0 |
| ಹೇಡಿ ಗೋಣಿ ೧ಕ್ಕೆ | 13 — 0 | 14— 8 |
| ತೊಗರಿ ಗೋಣಿ ೧ಕ್ಕೆ | 11— 8 | 18— 8 |
| ಹುರುಳಿ ಗೋಣಿ ೧ಕ್ಕೆ | 6— 0 | 6— 2 |
| ಕಡಲೆ ಗೋಣಿ ೧ಕ್ಕೆ | 9 — 8 | 10 — 8 |
| ತೊಗರಿಬೇಳೆ ಗೋಣಿ ೧ಕ್ಕೆ | 17— 8 | 18— 0 |
| ಉದ್ದು ಗೋಣಿ ೧ಕ್ಕೆ | 9— 0 | 9 — 8 |
| ಹೆಸರು ಗೋಣಿ ೧ಕ್ಕೆ | 9—12 | 10— 8 |
| ಊರುಬೆಲ್ಲ ಖಂಡಿ ೧ಕ್ಕೆ | 27— 8 | 8— 8 |
| ಉಪ್ಪು ಗೋಣಿ ೧ಕ್ಕೆ | 4— 8 | 5— 4 |
| ಕೊಬ್ರಿ ಖಂಡಿ ೧ಕ್ಕೆ | 46 — 4 | 46— 4 |
| ಎಳ್ಳಿಂಡಿ ಖಂಡಿ ೧ಕ್ಕೆ | 26 — | 26 — 0 |
| ತೆಂಗಿನ ಎಣ್ಣೆ ಮುಡಿ ೧ಕ್ಕೆ. | 3 — 7 | 3— 7 |
| ಎಳ್ಳೆಣ್ಣೆ ಮುಡಿ ೧ಕ್ಕೆ | 6— 0 | 7— 0 |
| ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ | 6— 5 | 7— 5 |
| ಜೋನಿ ಸಕ್ಕರೆ ಮು. ೧ಕ್ಕೆ | 2— 13 | 2 —14 |
| ಮೆಣಸು | 4— 8 | 6— 0 |
| ಸಾಸಿವೆ ಮುಡಿ ೧ಕ್ಕೆ | 5 — 8 | 6— 8 |
| ಕಾಳುಮೆಣಸು ಹ ವೇ ೧ | 17 — 0 | 18 – 0 |
| ಯೇಲಕ್ಕಿ ಬೀಜ ಮಣ೧ಕ್ಕೆ | 80— 0 | 85— 0 |
| ಗೇರುಬೀಜ ಮು ೧ಕ್ಕೆ | 2— 4 | 4—12 |
| ಕಬ್ಬಿಣ ಖಂಡಿ ೧ಕ್ಕೆ | 50— 0 | 55— 0 |
| ತಾಂಮ್ರತಗಡು ಮ ೧ಕ್ಕೆ | 14— 12 | 15— 0 |
| ತಾಂಮ್ರಪಾತ್ರಗಳು ಮ ೧ಕ್ಕೆ | 14— 8 | 15— 0 |
| ಚೀನಿಬೆಳ್ಳಿ ಸೇರು ೧ಕ್ಕೆ | 13— 8 | 14— 0 |
| ಹಿತ್ತಾಳೆ ತಗಡು ಮ ೧ಕ್ಕೆ | 12 — 0 | 12— 0 |
| ಪವನು ೧ಕ್ಕೆ | 22— 8 | 22 — 6 |
| ಹುಣಸೆ ಹುಳಿ ಖಂಡಿ ೧ಕ್ಕೆ | 40— 0 | 45 — 0 |
| ನೇಟಿವ್ ಕಾಫಿ ಖಂಡಿ ೧ಕ್ಕೆ | 140— 0 | 148— 0 |
| ಪ್ಲಾಂಟರಿ ಕಾಫಿ ಖಂಡಿ ೧ಕ್ಕೆ | 185— 0 | 198— 0 |
| ಮಂಡಕ್ಕಿ ಖಲಕ್ಕಿ ಮಣ | 35— 0 | 39 — 0 |

## ಡೋಂಗರೇ ಬಾಲಾಮೃತ

ಇದರಿಂದ

ಸೊರಗಿ ಕಡ್ಡಿಯಂತಾದ ಮಕ್ಕಳು

ಆರೋಗ್ಯ ಹೊಂದಿ

ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಫಾಲ್ಗುಣ ಶು ೩ ಶನಿವಾರದಿಂದ, ಫಾಲ್ಗುಣ ಶು ೧೦ ಶುಕ್ರವಾರದ ವರೆಗಿನ ಪಂಚಾಂಗ (೧೯೩೮ನೇಯ, ಕುಂಭಮಾಸ)

| | | | | | | | |
|---|---|---|---|---|---|---|---|
| 5 | ಶನಿ | ೩ | – | [illegible] | – | – | [illegible] |
| 6 | ರವಿ | ೪ | [illegible] | ಅಶ್ವಿನಿ | [illegible] | [illegible] | – |
| 7 | ಸೋಮ | [illegible] | [illegible] | ಭರಣಿ | [illegible] | [illegible] | |
| 8 | ಕುಜ | [illegible] | [illegible] | ಕೃತ್ತಿಕಾ | [illegible] | [illegible] | |
| 9 | ಬುಧ | [illegible] | [illegible] | ರೋಹಿಣಿ | | [illegible] | |
| 10 | ಗುರು | – | [illegible] | ಮೃಗಶಿರ | [illegible] | [illegible] | |
| 11 | ಶುಕ್ರ | ೧೦ | [illegible] | ಆರ್ದ್ರಾ | | [illegible] | |

## ಗರ್ಭಿಣೀ ಸತ್ಸಂತಾನದಾಯಿನಿ

**ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗ ಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.**

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ, ಶ್ವೇತಪ್ರದರ ರಕ್ತಪ್ರದರ, ಗರ್ಭಸ್ರಾವ, ಗರ್ಭಾಶಯ ವ್ರಣ, ಮೂತ್ರದ್ವಾರ ಉರಿ ನರಗಳ ಸೆಳೆತ, ಪ್ರಸಾವ ನಂತರ ಉಂಟಾಗುವ ಕ್ಷಯ ಚಿಹ್ನೆ, ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು, ತಲೆನೋವು, ತಲೆ ತಿರುಗುವಿಕೆ, ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ಮೆದುಳಿನ ವಿಕಾರಗಳು ಅಶಕ್ತತೆ ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು

**ಹೆಚ್ಚೇನು?** ವಿಜಯ ಗರ್ಭಿಣೀ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

## "ವಿಜಯ ಗರ್ಭಿಣೀ"

ನ್ನೆ ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿಣೀ ಕೊಟ್ಟಲ್ಲಿ ಅವರೆಲ್ಲರೂ ತ್ವರೆಯಾಗಿ ಗುಣಹೊಂದಿದ್ದಾರೆ. ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ'

**ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2—8—0.**
**ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.**

ತಯಾರಿಸುವವರು:—

## ವಿಜಯ ಫಾರ್ಮಸಿ, ಕೊಚ್ಚಿನ್.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

## THE PIE-MONEY BANK LTD,

Maidan Road MANGALORE

Undertakes all kinds of Banking Business Current account a 2½% per annum Savings Bank Deposits at 4½% per annum

**FIXED DEPOSITS**

For 2 Years 6% 1 Year 5% For 6 months 4% 3 months 3½%

Auction chit Funds ranging from Rs 100 to Rs 5000 run regularly on systematic lines Unique Banking facilities to Businessmen and interested Public

*Apply for particulars*—**K R. GURU,** *Managing Director*

***Use the soaps***

KNOWN ALL OVER

***WISILO'S.***

**MINAR**

&

**TAJAMAHAL** Regd

**Bar Soaps.**

POPULAR IN THE MARKET

*Sole Distributer*—

**P. G. KAMATH,**

Kashmir House,

Marnamikatta, MANGALORE

## 'DILROZ' Regd.

Dil Roz' is a sure cure for Oriental sores local sores, all kinds of deep-rooted sores, skin eruptions, Pimples, Eczema, Ringworm, Sinus Fistula auxillary-Abscess

There is no need of dressing the wounds, nor are baths prohibited.

Price Rs. 2 Postage extra

**TAHIR DIN,**
Anarkali, LAHORE

# ನೋಟಗಳು.—Note.......s

★

ಕೇಂದ್ರ ಸರಕಾರದ ಖಜಾನ್ಜಿಯವರೇ ಎನ್ನುತ್ತಾರೆ—ಇದೊಂದು ಯಥಾಪೂರ್ವ 'ಬಜೇಟು' ಎಂದು. ಬಜೇಟು ತೆರಿಗೆಗಳನ್ನು ಏರಿಸಿಲ್ಲ, ಇಳಿಸುವುದೂ ಇಲ್ಲ, ಹೊಸ ತೆರಿಗೆಗಳನ್ನು ವಿಧಿಸುವುದೂ ಇಲ್ಲ ನಿರ್ಜೀವ ಬಜೇಟು ಎಂದರೆ ಹೀಗಿರಬೇಕು, ಅವರೇ ಒಪ್ಪುತ್ತಾರಲ್ಲ!

○ ○ ○ ○

ಪ್ರಾಂತ್ಯಗಳಿಗೆ–ಸುಮಾರು ೨ ಕೋಟಿ ರೂಪಾಯಿ ಪ್ರಾಂತಿಕ ಸರಕಾರದ ಖಜಾನೆಗೆಂದು, ಇನ್ಕಮ್‌ಟೇಕ್ಸಿನ ಅಂಶರೂಪವಾಗಿ ಸುಮಾರು ಒಂದೂಕಾಲು ಲಕ್ಷ ಕೋಟಿ ಇಷ್ಟು ಕೋಟಿಗಳನ್ನು ಕೊಟ್ಟ ಬಳಿಕ, ಗ್ರಾಮಾಭ್ಯುದಯಕ್ಕೆಂದು ಒಂದು ಅಥವಾ ಒಂದೂಕಾಲು ಕೋಟಿ ಹಂಚುವುದನ್ನು ತಡೆಯಬೇಕಾಗಿದೆ ಗ್ರಾಮಾಭ್ಯುದಯವೆಲ್ಲ ಪ್ರಾಂತ್ಯಗಳ ಮೇಲೆಯೆ,–ತೆರಿಗೆ ಇಳಿಸಿ, ಮದ್ಯಪಾನ ನಿವಾರಿಸಿ, ಶಿಕ್ಷಣ ವೈದ್ಯಸಹಾಯ ಹೆಚ್ಚಿಸಿ ಈ ಭಾರ ಹೊರಬೇಕು

○ ○ ○ ○

ಸೈನ್ಯಕ್ಕೆಂದು ಆಗುತ್ತಿರುವ ಕೋಟಿಗಳಿಗೆ ಇನ್ನೊಂದು ಅರ್ಧಕೋಟಿ ಹೆಚ್ಚಬೇಕಾಗಿದ ಬ್ರಿಟಿಷ ಸರಕಾರವು ಕೊಟ್ಟ (ಧರ್ಮಾರ್ಥ) ಎಷ್ಟು ಸಾಕುವುದಕ್ಕೆ! ಎಷ್ಟೆಯು ಹಾಲೆಲ್ಲ ಬ್ರಿಟಿಷ ಸಾಮ್ರಾಜ್ಯದ ಪುಷ್ಟಿಗೆ, ಹಟ್ಟೆ ಮಾತ್ರ ನಮ್ಮಲ್ಲಿ–ಆಹಾರ ನಮ್ಮದು, ಹಟ್ಟೆಗೊಬ್ಬರ ಸಹ ನಮ್ಮ ಜಮೀನಿಗೆ ದೊರೆವ ಹಾಗಿಲ್ಲ ಎಂದು ಪತ್ರಿಕೆಗಳ ಟೀಕೆ

○ ○ ○ ○

ಬ್ರಿಟಿಷ ಹಡಗುಪಡೆಯ ಸಹಾಯಕ್ಕೆ ವರ್ಷಂಪ್ರತಿ ತೆರುವ ಒಂದು ಲಕ್ಷ ಪವನಿನ ಬದಲಾಗಿ, ನಮ್ಮ ಸರಕಾರವೇ ಆರು ಹಡಗುಗಳ ಖರ್ಚನ್ನು ನೋಡಿಕೊಳ್ಳಬೇಕಾಗಿದೆ ನಮ್ಮದೊಂದು ಹಡಗುಪಡೆ ಪಡೆದಂತಾಯಿತು

○ ○ ○ ○

ದೇಶೀಯ ರಾಜ್ಯಗಳ ಕಂದಾಯದ ಸೇಕಡಾ ೧೦ಕ್ಕಿಂತ ಹೆಚ್ಚಿನ ಪೊಗದಿಯನ್ನು ಮಾಫಿ ಬಿಡಲಾಗುವುದು ಫೆಡರೇಶನಿಗೆ ಅತ್ಯನುಕೂಲ! ಇದರಿಂದ ಒಂಭತ್ತು ಲಕ್ಷ ವಜಾ ಆಗುವುದು

ವಾಯುವ್ಯ ಗಡಿನಾಡಿನಲ್ಲಾಗುವ ಗಡಿಬಿಡಿಯ ಖರ್ಚು ಒಂದೂಮುಕ್ಕಾಲು ಕೋಟಿ ರೂಪಾಯಿ

○ ○ ○ ○

ಲಂಡನಿನಲ್ಲಿ ಪ್ರಕಟವಾಗುವ ಡೈಲೀ ಮಿರ್ರರ್ ಎಂಬ ಪತ್ರಿಕೆಯಲ್ಲಿ, ಒಬ್ಬ ನರ್ತಕಿಯು ತನ್ನ ನರ್ತನ ಪ್ರಕಾರಗಳನ್ನು ಪ್ರದರ್ಶಿಸುತ್ತಲಿದ್ದಾಗ ಬುದ್ಧದೇವನ ವಿಗ್ರಹದ ಇದಿರಲ್ಲಿ ವಿಕಾರವಾಗಿ ನರ್ತಿಸಿದ ಚಿತ್ರವೂ ಪ್ರಕಟವಾಗಿದೆ ಇದು ಅತಿ ಆಕ್ಷೇಪಕರವೆಂದು ಬರ್ಮದವರಿಗೆ ತಿಳಿದ ಸರಕಾರಕ್ಕೆ ದೂರು, ಆ ಪತ್ರಿಕೆಯು ಬರ್ಮದಲ್ಲಿ ಬಾರದಂತೆ ಪ್ರತಿಬಂಧಿಸಲಾಗಿದೆ, ಗವರ್ನರರ ಅಪ್ಪಣೆ

○ ○ ○ ○

ಟಪ್ಪಾಲು ದಸ್ತಾರಿ, ಇನ್ಕಮ್‌ಟೇಕ್ಸ್, ಉಪ್ಪಿನ ಸುಂಕ—ಇವೆಲ್ಲವೂ ಇನ್ನೂ ಒಂದು ವರ್ಷದ ತನಕ ಈಗ ಇರುವ ದರದಲ್ಲೇ ಇರುವುವು ಅವೆಲ್ಲಿಯಾದರೂ ಇಳಿದಾವು ಎಂದು ಯಾರೂ ಗಾಬರಿಪಡುವ ಅಗತ್ಯವೇ ಇಲ್ಲ, ಎಂದು ಖಜಾನ್ಜಿ ಸಾಹೇಬರ ಮತ್ತೊಂದು ಬಿಲ್ಲು ಮುಂದೆ ಬರಲಿದೆ

○ ○ ○ ○

ಫ್ರಾನ್ಸು ಸರಕಾರವೂ ಈಗ ಬೇರೆ ಮಾತಾಡುತ್ತದೆ 'ವಾರ್ಸೆಲ್ಸ್ ಒಪ್ಪಂದವೆಲ್ಲ ವ್ಯರ್ಥವಾಗಿದೆ ಜನಾಂಗಸಂಘವೂ ನಿರ್ಜೀವವಾಗಿದೆ; ಅದನ್ನು ಸರಿಗೊಳಿಸಬೇಕು, ಇಂಗ್ಲೆಂಡ–

★

ಇಟೆಲಿಗಳೊಡನೆ ಆಗುವ ಮೈತ್ರಿ ಸಂಭಾಷಣಾದಿಗಳನ್ನು ಫ್ರಾನ್ಸು ಚೆನ್ನಾಗಿ ಆಲಿಸಿ ಅನುಮೋದಿಸಬೇಕು, ಒಸ್ಟ್ರಿಯಾ ಚೆಕ್ಕೊಸ್ಲೊವಾಕಿಯಗಳು ಸ್ವತಂತ್ರವಾಗಿರಬೇಕು'— ಹೀಗೆಲ್ಲ ಫ್ರೆಂಚ ಮುಖ್ಯ ಮಂತ್ರಿಗಳ ಅಭಿಪ್ರಾಯ ಬ್ರಿಟಿಷ ಮುಖ್ಯ ಮಂತ್ರಿಗಳ ಮಾತಿನಂತೆಯೆ ಈ ಮಿತ್ರರ ಮಾತು ಇಡನ್‌ಸಾಹೆಬರಂತೂ ಹೊರಗಾದರು, ಇಟೆಲಿಗೆ ಸಂತೋಷವಾರ್ತೆ

○ ○ ○ ○

ವಿಜಯನಗರ ಸಂಸ್ಥಾನದೊಳಗೂ ಹಿಂದೂ ದೇವಾಲಯದೊಳಗೆ ಹರಿಜನರನ್ನು ನಿರಾತಂಕವಾಗಿ ಪ್ರವೇಶಗೊಳಿಸಲು ಮುಖಂಡರ ಸಮ್ಮತಿ ಪಡೆಯಲಾಗುತ್ತಿದೆ. ತ್ರಿವಾಂಕೂರಿಗೆ ಅಷ್ಟು ಹತ್ತರವಿರುವ ಕೊಚ್ಚಿಯಲ್ಲಿ, ಒಬ್ಬ ಹೊಸ ಮಂತ್ರಿಯನ್ನು ನೇಮಿಸುವುದಷ್ಟೆ ಉದ್ಧಾರ ಕಾರ್ಯವಾಗುತ್ತದೆ

○ ○ ○ ○

ಇಟೆಲಿ ಇಂಗ್ಲೆಂಡುಗಳ ಮೈತ್ರಿ ಸಂಭಾಷಣೆಗಳಾಗುತ್ತವೆ, ಆತಂಕವಾಗಲಾರದು ಇಡನ್ ಸಾಹೇಬರಿಲ್ಲವಷ್ಟೆ ಹತ್ತಿರದ ಐರ್ಲೆಂಡಿನ ಅಧ್ಯಕ್ಷ ಡಿವಲೇರರು ಸಂಭಾಷಣೆಗಳನ್ನೆಲ್ಲ ಮಾಡುತಿದ್ದಾರೆ, ಅವರಿಗೆ ಆತಂಕವುಂಟಾಗುತ್ತದ ಐರ್ಲೆಂಡು ಒಂದಾಗಬೇಕಾಗಿದೆ ಎಂದರೆ ಅದು ಸಾಧ್ಯವಿಲ್ಲೆಂದೇ ಉತ್ತರ ಸಿಗುವುದಾಗಿ ಡಿವಲೇರರು ನಂಬಿರುತ್ತಾರೆ

○ ○ ○ ○

ಸರ್ವ ಭೂತೇಶ್ವರನಾಗಿರುವ ಶಿವನ ಮಹಾರಾಧನೆಯು ಶಿವರಾತ್ರಿಯ ಕಾಲದಲ್ಲಿ, ಸರ್ವಪ್ರಕಾರದ ಭೂತಗಳೆಲ್ಲ ಒಂದಾಗಿ ಎಲ್ಲೆಲ್ಲಿಯೂ ವಿಜೃಂಭಣೆಯಿಂದ ಸಿಕ್ಕಮನೆಗಳ ಮೇಲೆ ಕಲ್ಲು ಬಿಸುಡುವುದರಲ್ಲಿ ತಪ್ಪೇನು? ಹಿಂದೂಧರ್ಮವು ಇಷ್ಟೆಲ್ಲ ಭೂತಗಳಿಗೆ ಆಶ್ರಯ ಕೊಡುವುದರಿಂದ, 144ನೆ ಸೆಕ್ಷನು ಸಹವ ಜಾಲೆ ಪಾಲಾಗಬೇಕಾಗಿದೆ, ಈ ಭೂತಗಳ ವಿಷಯದಲ್ಲ ಹಂಚುಕಾರ್ಖಾನೆಗಳಿಗೆ ಈ ಭೂತಗಳ ದೆಸೆಯಿಂದ ಸ್ವಲ್ಪ ಉತ್ತೇಜನ ಸಿಗಬಹುದು

○ ○ ○ ○

ಮಂತ್ರಿಗಳು ಸೋತದ್ದಿಲ್ಲ, ಗವರ್ನರರು ಗೆದ್ದದ್ದಿಲ್ಲ, — ಎಂಬ ತತ್ವಕ್ಕನುಸಾರವಾಗಿ ಉಭಯತರಿಗೂ ಸುಗಮವಾಗುವಂತೆ ಬಿಹಾರ ಮತ್ತು ಸಂಯುಕ್ತಪ್ರಾಂತ್ಯಗಳ ಮಂತ್ರಿಮಂಡಲಗಳು ರಾಜೀನಾಮೆ ಹಿಂತೆಗೆದುಕೊಳ್ಳುವಂತಾವಂತಾಯಿತು ಗವರ್ನರರೂ ಬಜೇಟಿನ ಸಭೆ ಕರೆಸುವಂತಾಯಿತು ವೈಸ್ರಾಯರು ವಿವೇಕದಿಂದ ಕಾಂಗ್ರೆಸಿನ ವಿವೇಕ ರೀತಿ ತಿಳಿದು ಇಸ್ತಿಹಾರನ್ನು ಪ್ರಕಟಿಸುವಂತಾಯಿತು

○ ○ ○ ○

ಜರ್ಮನಿಯ ಮುಖ್ಯಾಧಿಕಾರಿಗಳಲ್ಲಿ ಒಬ್ಬರಾಗಿರುವ ಜನರಲ್ ಗೇರಿಂಗ್‌ರವರಿಗೆ ಅವರ ಜನ್ಮದಿನೋತ್ಸವಕ್ಕೆ ಬಂದ ಬಹುಮಾನಗಳಲ್ಲಿ, ದಕ್ಷಿಣ ಅಮೇರಿಕದಿಂದ ಒಂದುಕಾಡುಬೆಕ್ಕು ಬಂದಿದೆ! ಇದೊಂದು ಉಗ್ರಜಂತು ಇವರ ಜನ್ಮದಿನಾಚರಣೆಗೂ ಈ ಉಗ್ರಜಂತುವಿಗೂ ಸಂಬಂಧವೇನೋ!

○ ○ ○ ○

ಹಿಂದೀ ಭಾಷೆ ಕಲಿಯುವುದಕ್ಕೆ ಉರ್ದು ಮತ್ತು ದೇವನಾಗರಿ ಲಿಪಿಗಳ ಪಕ್ಷಪಾತಿಗಳು ಜಗಳವಾಡುತ್ತಿದ್ದಾರೆ ತುರ್ಕಿಯಲ್ಲಿ ಮಾಡಿರುವಂತೆ ಇಂಗ್ಲಿಷ ಬರಹ ಉಪಯೋಗಿಸಿದರಾದೀತೆಂದು ರಾಷ್ಟ್ರಪತಿಗಳ ಸೂಚನೆ ಜವಾಹರಲಾಲರೂ ಒಮ್ಮೆ ಆನಂದಭವನಕ್ಕೆ ಕೊಟ್ಟ ಆಮಂತ್ರಣವು ಹಿಂದೀಭಾಷೆ, ಇಂಗ್ಲಿಷ ಲಿಪಿಗಳಲ್ಲಿತ್ತು!

○ ○ ○ ○

# ರಾಜಕೀಯ ಕೈದಿಗಳ ಬಿಡುಗಡೆ

## ಬಿಹಾರ, ಸಂ. ಪ್ರಾಂತ್ಯಗಳ ಕಾಂ. ಮಂತ್ರಿಗಳು ಪುನಹ ಅಧಿಕಾರ ವಹಿಸಿರುವರು

### ನಿರಶನವ್ರತವನ್ನು ತೊರೆದರು.

ಮಹಾತ್ಮಾಜೀಯವರ ವಿನಂತಿ ಮೇರೆಗೆ ಲಾಹೋರು ಮತ್ತು ಬಂಗಾಳದ ಜೈಲುಗಳಲ್ಲಿ ರಾಜಕೀಯ ಕೈದಿಗಳು ಕೈಕೊಂಡಿದ್ದ ನಿರಶನ ವ್ರತವನ್ನು ತೊರೆದಿರುವರು ಮಹಾತ್ಮಾಜಿಯವರಿಂದ ತಮಗೆ ಮೋಕ್ಷ ದೊರಕುವುದಾಗಿ ಅವರಿಗೆ ತುಂಬಾ ವಿಶ್ವಾಸವಿರುವುದೆಂದು ಅವರು ತಿಳಿಸಿರುವರು

### ಮುನ್ನಾ ಸಂಸ್ಥಾನದಲ್ಲಿ

ರೈತವರ್ಗವು ಕಂದಾಯವನ್ನು ತೆರುವುದಿಲ್ಲವೆಂಬುದಾಗಿ ಚಳವನ್ನು ಆರಂಭಿಸಿರುವರು ಇವತ್ತಿಗೆ ಬಹಳ ಸಮಯದಿಂದ ಹೆಚ್ಚುತ್ತಾ ಬಂದ ಕಂದಾಯವನ್ನು ಇಳಿಸುವುದಕ್ಕಾಗಿ ಸರಕಾರದ ಅಧಿಕಾರಿಗಳು, ಕಂದಾಯ ವಸೂಲಿಗಾಗಿ ಒತ್ತಾಯವನ್ನೂ ದಬ್ಬಾಳಿಕೆಯನ್ನೂ ನಡೆಯಿಸುತಿದ್ದಾರೆ ಅನೇಕರನ್ನು ಸೆರೆಹಿಡಿಯಲಾಗಿದೆ ಸುತ್ತುಮುತ್ತಲಿನ ರೈತರು ಮುನ್ನಾ ರೈತರೊಡನೆ ಸಹಾನುಭೂತಿಯನ್ನು ತೋರಿಸಿರುವರೆಂದು ತಿಳಿದುಬರುತ್ತದೆ

ಗಡಿನಾಡಿನ ಕಾಂಗ್ರೆಸ್ ಪ್ರಧಾನಮಂತ್ರಿ ಡಾ। ಖಾನ್ ಸಾಹೇಬರು

### ಗಡಿನಾಡಿನ ಕಾಂಗ್ರೆಸ್ ಸರಕಾರವು

ನೋರ್ತ್ ವೆಸ್ಟ್ ಫ್ರೊಂಟಿಯರ್ ಪ್ರಾಂತದ ಎಸೆಂಬ್ಲಿಯಲ್ಲಿ ಜ್ಯಾರಿಯಲ್ಲಿರುವ ರಿಪೀಲಿಂಗ್ ಮತ್ತು ಎಮೆಂಡಿಂಗ್ ಬಿಲುಗಳನ್ನು ರದ್ದು ಮಾಡುವ ಮಸೂದೆಯೊಂದು ಸದ್ಯದಲ್ಲೇ ಮುಂದೆ ಬರುವುದೆಂದು ತಿಳಿದುಬರುತ್ತದೆ ಈ ಬಿಲಿನ ಪ್ರಕಾರ ಇಂಡಿಯನ್ ಪನಲ್ ಕೋಡಿನ 124 ಎ ಕ್ರಮ ವು ಜ್ಯಾರಿಯಾದುದು ರದ್ದು ಮಾಡಲಾಗುವುದೆಂದೂ,ಪತ್ರಿಕೆಗಳ ಮೇಲಿರುವ ನಿರ್ಬಂಧಗಳು ತೆಗೆದುಹಾಕಲಾಗುವವೆಂದೂ, ಹೀಗೆ ಈ ವರೆಗೆ ಜ್ಯಾರಿಯಲ್ಲಿರುವ ನಿರ್ಬಂಧಕರ ಕ್ರಮಗಳು ರದ್ದಾಗುವವೆಂದು ತಿಳಿದುಬರುತ್ತದೆ

### ಮಿಡ್ನಾಪುರದಲ್ಲಿ ರಾಜಕೀಯ ಕೈದಿಗಳ ಬಿಡುಗಡೆಯಾಯಿತು.

ಮಿಡ್ನಾಪುರದ ಹಿಜ್ಲಿ ಕೇಂಪಿನಲ್ಲಿರುವ (II ರೆಗ್ಯುಲೇಶನ್ ಪ್ರಕಾರ) ಕೈದಿಗಳಾದ ಶ್ರೀ ಸುರೇಂದ್ರ ಘೋಸ್, ಜ್ಯೋತಿಷ್ ಘೋಷ್ ಎಂಬಿಬ್ಬರು ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬೇಕಾಗಿ ಬಂಗಾಳ ಸರಕಾರದ ಆಜ್ಞೆಯಾಗಿರುತ್ತದೆ ಮಹಾತ್ಮಾಜಿಯವರು ಬಂಗಾಳ ರಾಜಕೀಯ ಕೈದಿಗಳ ಸಮಸ್ಯೆಯನ್ನು ಕೈಗೊಂಡ ನಂತರ ನಡೆದ ಈ ಬಿಡುಗಡೆಯು ಇದೆ ಪ್ರಥಮದ್ದಾಗಿರುತ್ತದೆ

### ಮೈಸೂರಿನಲ್ಲಿ ಸುಧಾರಣೆ.

ಪ್ರಜಾಪ್ರಾತಿನಿಧ್ಯಕ್ಕಾಗಿ ಮೈಸೂರಿನಲ್ಲಿ ಇತ್ತೀಚೆಗೆ ಬಹಳ ಚಳವಳಿ,ದಬ್ಬಾಳಿಕೆ ಇತ್ಯಾದಿಗಳು ನಡೆದು, ಅನೇಕರು ಬಂಧಿಸಲ್ಪಟ್ಟು, ಕಲವು ದಿವಸಗಳ ಹಿಂದೆ ಅವರೆಲ್ಲರನ್ನೂ ಮೈಸೂರು ಸರಕಾರವು ವಿಮೋಚನೆಗೊಳಿಸಿತಷ್ಟೆ ಈಗ ರಾಜಶಾಸನದಲ್ಲಿ ಸುಧಾರಣೆಗಳಾಗುವರೆ ಸೂಚನೆಗಳನ್ನು ಕೊಡುವರೆ ಒಂದು ಸಮಿತಿಯು ರಚನೆಯಾಗುವುದೆಂದೂ, ಅದರಲ್ಲಿ ಎಲ್ಲಾ ಪಕ್ಷದವರಿಗೆ ಸದಸ್ಯತನ ಕೊಡಲಾಗುವುದೆಂದೂ ತಿಳಿದುಬರುತ್ತದೆ

### ಹಿಂದೂ ಮುಸ್ಲಿಂ ಐಕ್ಯ ಪರಿಷತ್ತು–

ಮುರ್ಶಿದಾಬಾದಿನ ನವಾಬರ ಅಧ್ಯಕ್ಷತೆಯಲ್ಲಿ ಬಂಗಾಳದ ಮುರ್ಶಿದಾಬಾದಿನಲ್ಲಿ ಜರಗಿ ಹಿಂದೂ ಮುಸ್ಲಿಮರಲ್ಲಿ ಸಾಮಾಜಿಕ, ಸಾಂಪತ್ತಿಕ ಇತ್ಯಾದಿ ಎಲ್ಲಾ ವಿಚಾರಗಳಲ್ಲಿ ಐಕ್ಯವಿರಬೇಕೆಂದು ನಿರ್ಣಯವಾಗಿರುತ್ತದೆ ದೇಶಪ್ರೇಮವಿದ್ದವನಲ್ಲಿ, ತಾನು ಜೀವಿಸುತ್ತಿರುವುದು ಮತ್ತು ಸಾಯುತ್ತಿರುವುದು ಹಿಂದೂದೇಶಕ್ಕೇ– ಎಂಬ ಭಾವನೆಯುಂಟಾದಿರದೆಂದೂ ನವಾಬರು ಸೂಚಿಸಿ, ಹಿಂದೂಮುಸ್ಲಿಂ ಐಕ್ಯವಾಗಲೇಬೇಕೆಂದು ಆಶಿಸಿ ಭಾಷಣವಿತ್ತರು ಪರಿಷತ್ತು ಯಶಸ್ವಿಯಾಗಿ ನಡೆಯಿತು

### ಸಂಯುಕ್ತ ಪ್ರಾಂತ್ಯಗಳಲ್ಲಿ ರಾಜಕೀಯ ಕೈದಿಗಳ ಬಿಡುಗಡೆಯಾಯಿತು.

ರಾಜಕೀಯ ಕೈದಿಗಳ ಬಿಡುಗಡೆಗಾಗಿ ಸಂಯುಕ್ತ ಪ್ರಾಂತ್ಯದ ಮತ್ತು ಬಿಹಾರಿನ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ಕೊಟ್ಟಿದ್ದವಷ್ಟೆ ಆ ಕುರಿತು ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ನಿರ್ಧಾರ, ವೈಸ್ರಾಯರ ಪ್ರಕಟಣೆ ಗಾಂಧೀಜಿಯವರ ಪ್ರಕಟಣೆ ಇತ್ಯಾದಿಗಳು ಹೊರಟು ಸಂಧಾನಪ್ರಸ್ತಾಪ ನಡೆದು, ಅಲ್ಲಿನ ಕಾಂಗ್ರೆಸು ಮಂತ್ರಿಮಂಡಲಗಳು ಪುನಃ ಅಧಿಕಾರ ವಹಿಸಿರುವವು ಮುಂದಕ್ಕೆ ಗವರ್ನರರು ಮಂತ್ರಿಮಂಡಲಗಳ ಜವಾಬ್ದಾರಿಯ ಮೇಲೆ ಕೈಹಾಕುವುದಿಲ್ಲವೆಂಬ ಭರವಸೆಯೂ ಕೂಡ ದೊರಕಿದಂತಾಗಿದೆ ಯುಕ್ತಪ್ರಾಂತ್ಯದ ಮತ್ತು ಬಿಹಾರ್ ಪ್ರಾಂತ್ಯದ ಮುಖ್ಯ ಮಂತ್ರಿಗಳಿಗೂ ಗವರ್ನರರಿಗೂ ದೀರ್ಘ ಚರ್ಚೆನಡೆದು ರಾಜಕೀಯ ಕೈದಿಗಳ ವಿಚಾರವನ್ನು ಬೇರೆ ಬೇರೆ ಪರಿಶೀಲಿಸಿ ಅವರನ್ನು ಬಿಡುಗಡೆಮಾಡುವ ಕೆಲಸವು ಕೈಕೊಳ್ಳಲಾಗಿದೆ ಯುಕ್ತಪ್ರಾಂತ್ಯದಲ್ಲಿ ೬ ಮಂದಿ ರಾಜಕೀಯ ಕೈದಿಗ (ಅಂಡಮಾನದಿಂದ ಹಿಂತರಲಾದವರು) ಳನ್ನು ಬಿಡುಗಡೆಮಾಡಲಾಗಿದೆ ಬಿಹಾರಿನಲ್ಲಿ ೯ ಮಂದಿಗಳನ್ನು ಬಿಡುಗಡೆಮಾಡಲಾಗಿದೆ ಸದ್ಯದಲ್ಲೇ ಈ ಎರಡು ಪ್ರಾಂತ್ಯಗಳಲ್ಲಿನ ಬಿಕ್ಕುಳಿದ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮಾಡಲಾಗುವುದು

ಸಂಯುಕ್ತ ಮತ್ತು ಬಿಹಾರಪ್ರಾಂತ್ಯಗಳಲ್ಲಿ ರಾಜಿಪ್ರಕರಣವು ಸುಧಾರಿಸಲ್ಪಡದಿರುತ್ತಿದ್ದರೆ, ಕಾಂಗ್ರೆಸ್ ಮಂತ್ರಿಮಂಡಲಗಳ ಬದಲಾಗಿ ಬೇರೆ ಮಂತ್ರಿಮಂಡಲಗಳನ್ನು ರಚಿಸಲು ಸಾಧ್ಯವೇ ಇರಲಿಲ್ಲ ಗವರ್ನರರೇ ಸರ್ವ ರಾಜ್ಯಾಡಳಿತವನ್ನು ನಿರ್ವಹಿಸಬೇಕಾಗಿ ಬರುತ್ತಿತೆಂದು ಬಿಹಾರಿನ ಪ್ರಧಾನಮಂತ್ರಿ ಶ್ರೀ ಕೃಷ್ಣಸಿನ್ಹರು ಪಾಟ್ನಾದಲ್ಲಿ ಜರಗಿದ ಒಂದು ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು

THE

**BANK OF MANGALORE LTD.,**

ESTD 1931 MANGALORE.

*Branches.-*
Panemangalore, Mudabidri & Padubidri.

*Chairman* —**Philip J. Chandran, Esq.,**
*Retd. Dt Registrar of Joint Stock Companies*

On & from 1st of January 1937,
Fixed Deposits will be received at following rates of interest.

| | |
|---|---|
| For 3 months | 3½% |
| , 6 | 4% |
| , 12 „ | 5% |
| , 24 & upwards | 5½% |

Interest Payable Quarterly

Saving Bank deposit 3½% on daily balances

**All kinds of banking business transacted**

U. R. PAI, N. U. PAI, *Managing Directors*

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ಸಿನ್ನುರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ ಪೆರಿಡೇಪಿ
P O Peridepi (ನೆಲ್ಲೂರು ಜಿ)

**HOUNSA**

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

# 'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

**ಈ ದಿನವೇ ಚಂದಾದಾರರಾಗಿರಿ.**

**S. U. N. & Co.,**

*Silk Merchants,*
Chaukhambha, BENARES CITY

ಈಗಿನ ತರಹ(ಕಾಶಿ) ಬನಾರಿಸ್ ಸೀರೆ ತಗಲು ಬೇಕಾದರೆ ನಮ್ಮನ್ನು ಸುರಯ ಮೇ 30 ಈಗ ಕಯ ತುಂಬ ಸಲಬ ಬುತ್ತಿ ಮಾಲು 18 ಮೊಳದ 2 ಅಗಲದ ಸಣ್ಣ ಬುಟ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ ಒಟ್ಟು ಸೀರೆಗಳು ರೂ 35ರಿಂದ ರೂ 55 ವರೆಗೆ ಸಾದಾ ಸೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35ರ ವರೆಗೆ ; ಬೇರೆ ಮಾಲುಗಳ ಕಟಲಾಗು ಉಚಿತವಾಗಿ ಕಳುಹಿಸಲಾಗುವದು.

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರಿಸ್ ಸಿಟಿ,

ಎಲ್ಲಿಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ, ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

# ಲಿಮ್ಡಾ ಸೋಪು

## ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ-ಬೊಂಬಾಯಿ-ಮದ್ರಾಸು

ಒದಗಿಸಿಕೊಡುವವರು—

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,
ಕಲ್ಲಿಕೋಟೆ (ಮಲಬಾರು).

I visited the office of the Bhuvanendra Products Ltd. I wish the same very success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**
*Minister of Labour*

*1-10-1937*

**Bhuvanendra Products Ltd**, Katapady, S Kanara

# ★ "ಗವಾಯಿ" ★

ಬರೆದವರು ವ ಚಿತ್ರಕಾರರು:—'ಬಿ. ಆರ್. ಕಾಮತ್.'

★

ಇಂಗ್ಲೀಷರಲ್ಲಿ ಒಂದು ಪದ್ಧತಿಯುಂಟು; ಅಪರಿಚಿತರಾದ ಇಬ್ಬರು ವ್ಯಕ್ತಿಗಳು ಭೇಟಿಯಾದಾಗ, ಅವರಿಬ್ಬರ ಪರಿಚಯವಿದ್ದ ಮೂರನೆಯವರು, ಒಬ್ಬರನ್ನು ಇನ್ನೊಬ್ಬರಿಗೆ ಇಂಟ್ರೊಡ್ಯೂಸ್ (ಇಂಗ್ಲಿಷ್ ಶಬ್ದವಿದು) ಮಾಡುವುದು. ಇಂತಹ ಇಂಟ್ರೊಡಕ್ಷನ್ (ಇಂಟ್ರೊಡ್ಯೂಸ್ ಎಂಬ ಶಬ್ದದ ನಾಮಪದರೂಪ, ಅಷ್ಟೆ!) ಇಂಗ್ಲಿಷ್ ಆಚಾರ, ಶ್ರದ್ಧಾನುವರ್ತಿಗಳಾದ ನಮ್ಮಂತಹ ಪದ್ಧತಿ ಪರರಿಗೆ ಅದೊಂದು 'ನಿರ್ಬಂಧ' ವಾದುದರಿಂದ, ನಿಮ್ಮ ಮತ್ತು ನಮ್ಮೂರ ಗಾಯಕರ ಪರಿಚಯವಿದ್ದ ನಾನೀಗ ಈ ಕಾರ್ಯದಲ್ಲಿ ಆಚಾರ್ಯಸ್ಥಾನವನ್ನು ವಹಿಸಲಿರುವೆನು. ಪರಂತು ದಕ್ಷಿಣೆಯ ಪ್ರತೀಕ್ಷೆಯು ಮಾತ್ರ ನನಗಿಲ್ಲ.

ನಾನೀಗ ನಿಮಗೆ ಯಾರ ಪರಿಚಯವನ್ನು ಮಾಡಿಕೊಡಬೇಕೆಂದಿರುವೆನೋ, ಅವರನ್ನು ನಮ್ಮೂರಿನವರೆಲ್ಲರೂ 'ಗವಾಯಿ' ಯೆಂದು ಕರೆಯುತ್ತಿದ್ದರು. ನಾನೂ ಅವರ ಹೆಸರೇ ಗವಾಯಿ ಎಂದು ಎಣಿಸಿದ್ದೆ. ಕೇಳುವಾಗ ಹೆಸರು ಅಷ್ಟೊಂದು ಸಮಂಜಸವಾಗಿ ತೋರುವುದಲ್ಲವಾದರೂ, 'ಬಾಳಪ್ಪಯ್ಯ' 'ರಘಾಯಿ' 'ಚೀಮಬಾಯಿ' ಎಂಬಿತ್ಯಾದಿ ಮೂಗು ಮುರಿದುಕೊಳ್ಳುವಂತಹ ಹೆಸರುಗಳು ಕೂಡ ಇರುವಾಗ 'ಗವಾಯಿ' ಎಂಬ ನಾಮವೇಕಿರಬಾರದು?

ಅವರ ಹೆಸರು ಅದಲ್ಲವೆಂದೂ, 'ಗವಾಯಿ' ಎಂದರೆ ಗಾಯಕವೆಂದರ್ಥವೆಂದೂ, ನನಗೆ ತಿಳಿದುದು ಅವರ ಶಿಷ್ಯಕೋಟಿಯಲ್ಲಿ ನಾನೂ ಒಬ್ಬನಾದಾಗ. ಅವರ ಮಾತಾಪಿತೃಗಳು ಅವರನ್ನು ತೊಟ್ಟಿಲಲ್ಲಿ ಹಾಕಿ ತೂಗುವಾಗ, ಇಟ್ಟ ಹೆಸರು ಕೋದಂಡ ಎಂದಂತೆ. ಪಾಠಶಾಲೆಗೆ ಅವರು ದಾಖಲಾದೊಡನೆ 'ಕೋದಂಡ'ನೊಡನೆ 'ರಾವ್' ವು ಸಮಾಗಮವಾದುದರಿಂದ; ಅವರು ಕೋದಂಡ ರಾವ್, ಎಂದಾದರು ದೊಡ್ಡವನಾಗಿ ಗಾಯನಕಲೆಯನ್ನು ಕಲಿತುಮಾಡಿದಂದಿನಿಂದ 'ಕನಾಯಿ' ಅಲ್ಲಲ್ಲ 'ಗವಾಯಿ' ಎಂಬ ಬಿರುದು ಅವರಿಗೆ ತಾನಾಗಿ ದೊರಕಿತು. ಅಂತು, ಅವರ ಇಂದಿನ ವಿಳಾಸವೆಂತೆಂದರೆ—ಮ. ರಾ. ರಾ. ಗವಾಯಿ ಕೋದಂಡ ರಾವ್, ಎಸ್. ಪಿ. ಪಿ. ಎಸ್. ಪಿಟ್ಟೀಟಿರಾ. (ಎಸ್. ಪಿ. ಎಂದರೆ ಸಂಗೀತ ಪ್ರವೀಣ, ಪಿ. ಎಸ್. ಎಂದರೆ ಪ್ರವೀಣ ಸಂಗೀತಜ್ಞನೆಂದರ್ಥ. ಕಿರುಗುಮುರುಗು ಅಷ್ಟೆ! ಎಟ್ಸೆಟೇರಾ ಎಂದರೇನೆಂದು ನನಗೇ ತಿಳಿಯದು.)

ಇಂದಿಗೆ ಕೆಲಸಮಯದ ಹಿಂದೆ ಆದೊಂದು ಆಷಾಢ ಮಾಸದಿನ, ಪೂರ್ವಾಹ್ನ ಶ್ರೀಮನ್ ಸೂರ್ಯನಾರಾಯಣನು ನಡುನೆತ್ತಿಯ ಮೇಲಿದ್ದಾಗ, ಉಲ್ಕಾಪಾತವಾದಂತೆ ಆಕಸ್ಮಿಕವಾಗಿ ಕೋದಂಡರಾಯರು ನಮ್ಮೂರಿಗೆ ಆಗಮಿಸಿದರು. ಊರಹಲವು ಪ್ರಮುಖರ ಸಂದರ್ಶನವನ್ನು ಮಾಡಿ, ಅವರು ಬಂದ ಮರುದಿನವೇ ಒಂದು ಗಾಯನ ಮಂದಿರವನ್ನು ತೆರೆದರು. ವಿದ್ಯಾರ್ಥಿಗಳು ಕಿಕ್ಕಿರಿದು ಬಂದು ಸೇರಿದರು.

ಮೂರು ದಿನಗಳೊಳಗೆ ಇಷ್ಟೆಲ್ಲ ಕಾರುಭಾರವನ್ನು ತೋರಿಸಿದ ಮ. ರಾ. ರಾ. ಕೋದಂಡರಾಯರನ್ನು ಅರಿತವರೆಲ್ಲರೂ ಅವರನ್ನು ಬಲ್ಲರು. ತನ್ನನ್ನು ಅರಿಯದವರ ಪರಿಚಯವನ್ನು ಅವರು ತಾನಾಗಿ ಮಾಡಿಕೊಳ್ಳುತ್ತಿದ್ದರು. ಅದುದರಿಂದಲೇ ಇಂದು ನಮ್ಮೂರಲ್ಲಿ ಕೋದಂಡರಾಯರ ಹೆಸರು ಗೊತ್ತಿಲ್ಲದವರೇ ಇಲ್ಲ. ಅವರಿಗೂ ಅಪರಿಚಿತರೇ ನಾಸ್ತಿ. ಹೀಗೆ ಉಂಟಾಗಲು ಕಾರಣ—ಅವರ ಗಾಯನ ಕಲೆಯ ಮಹತ್ವ ಮತ್ತು ಬಾಯೊಳಗಿನ ನಾಲಗೆಯ ವಾಕ್ಪಟುತ್ವ. ಮಾತ್ರವಲ್ಲ, ಅವರ ರೂಪು ಒಮ್ಮೆ ನೋಡಿದರೆ ಎಂದೂ ಮರೆಯುವಂತಿರಲಿಲ್ಲ. ಅದರಲ್ಲೂ ನಾಟಕದಲ್ಲಿ ಅವರು ಸ್ತ್ರೀ ಪಾತ್ರವನ್ನು ವಹಿಸಿದರೆ ಬಾಲಗಂಧರ್ವರಿಗಿಂತ ಸ್ವಲ್ಪ ಮಿಗಿಲೋ (ಎತ್ತರದಲ್ಲಿ) ಕೀಳೋ ಎಂದು ಹೇಳಲು ಬರುವಂತಿಲ್ಲ. ಅಷ್ಟು ಸ್ವಭಾವ ಸಿದ್ಧ ನಟನೆ ಅವರದು! ಬೊಂಬಾಯಿಯಲ್ಲಿ ಇರುತ್ತಿದ್ದಾಗ ಸ್ತ್ರೀ ಪಾತ್ರದಲ್ಲಿ ಮೊದಲಿನ ಮರ್ಯಾದೆ ಅವರಿಗೇ. ಅವರು ಮುಂದಿನಿಂದ ಬರುವಾಗ, ಹೀರಾಬಾಯಿ ಬರೋಡೆಕರರು ಕೂಡ ಹಿಂದಿನಿಂದ ಬರಬೇಕಿತ್ತು.

ತಾನೂ ನಾಟಕದ ಪ್ರಾಣಿಯಾಗಿದ್ದಾಗ ತಿಂಗಳೊಂದರ 200 ರೂಪಾಯಿಗಳಂತೆ ತನಗೆ ತಲಬು ದೊರಕುತ್ತಿತ್ತಾದರೂ, ಪರತಂತ್ರ ಬಾಳುವೆಯಲ್ಲಿ ಜಿಗುಪ್ಸೆ ಹುಟ್ಟಿ, ಕೋದಂಡರಾಯರು ತನ್ನ ಹುದ್ದೆಗೆ ತಿಲಾಂಜಲಿಯನ್ನಿತ್ತು, ಊರೂರುಗಳನ್ನು ಅಲೆದು 'ಬೈಠಕು'ಗಳನ್ನು ಜರಗಿಸಿ ಸ್ವತಂತ್ರ ಜೀವನವನ್ನು ನಡೆಸತೊಡಗಿದರು. ಈ ಬಗೆಯ ಸಂಚಾರವೇ ಅವರನ್ನು ನಮ್ಮೂರಿಗೆ ತಂದುದಾಗಿರುವುದು. ಆಹಾ! ಪದ್ಮಾಸನವನ್ನು ಹಾಕಿ, ತಾಳತಂಬುರಿಯನ್ನು ಕೈಯೊಳಗೆ ಹಿಡಕೊಂಡು, 'ನಾದ ಬ್ರಹ್ಮದ ಕಗ್ಗವಿ'ಯನ್ನು ಪ್ರವೇಶಿಸಿ ಕಣ್ಣುಮುಚ್ಚಿದರೆಂದರೆ, ಎದುರಿಗಿದ್ದ ಒಂದೇ ಒಂದು ವಸ್ತುವು ಅವರಿಗೆ ದೃಗ್ಗೋಚರಿಸುತ್ತಿದ್ದಿಲ್ಲ. ಅಷ್ಟು ತಲ್ಲೀನತೆ! ಅಷ್ಟು ತನ್ಮಯತೆ! ಅವರಿಗೆ ತಿಳಿಯದ ರಾಗವಿಲ್ಲ; ಬಾರಿಸಲರಿಯದ ವಾದ್ಯವಿಲ್ಲ. ಬಪ್ಪನಾಡಿನ ಧೋಲಿಸಿಂದ ತಂತಿ ಇಲ್ಲದ 'ಪಿಟೀಲು'ನ್ನೂ ಅವರು ಬಾರಿಸುತ್ತಿದ್ದರು. ಪರಂತು ಯಾವ ಕಾರ್ಯವಾಗಬೇಕಾದರೂ ಈಶ್ವರೀ ಪ್ರೇರಣೆಯಾಗಬೇಕು ಅವರಿಗೆ.

ಅವರ ಗಾನಕ್ಕೆ ಮಾತಿಗೊಪ್ಪುವಳ್ಳಾದವರು ನಮ್ಮೂರಲ್ಲಿ ಅಷ್ಟಿಷ್ಟಿಲ್ಲ. ಅವರು ರಾಗಾಲಾಪನ ಮಾಡಿದರೆಂದರೆ ಕೋಣದಂತಹ ಪ್ರಾಣಿಗಳು ಕೂಡ ಕಿವಿನಿಮಿರಿಸಿ ನಿಲ್ಲುತ್ತಿದ್ದುವು. ಇಂತಹ ಕಂಠವನ್ನು ವರ್ಧಿಸಬೇಕಾದರೆ ಅವರು ಪಟ್ಟ ಕಷ್ಟಗಳೇನು ಅಷ್ಟಿಷ್ಟೆ? ಹದಿನೇಳು ವರ್ಷಗಳಿಂದ ತಬಲೆ ತಿಕ್ಕಿತಿಕ್ಕಿ ಅವರು ತರಬೇತಿ ಹೊಂದಿದ್ದರು. ಗಂಧರ್ವ ವಿದ್ಯಾಶಾಲೆಯಲ್ಲಿ ಎಂಟು ವರ್ಷ ಕಸ ಗುಡಿಸಿರುವರು. 'ದರ್ಬಾರಿ ಕಾನಡಾ' ರಾಗವೊಂದನ್ನು ಕಲಿಯಲಿಕ್ಕಾಗಿ ಮುಸಲ್ಮಾನ ಗಾಯಕನೊಬ್ಬನ ಗದ್ದವನ್ನು ನಾಲ್ಕು ವರ್ಷ ತೀಡಿರುವರು. ಮಾಲಕಂಸ ರಾಗವನ್ನು ಅಭ್ಯಸಿಸಬೇಕಾದರೆ ಕಂಸವಧೆ ನಾಟಕವನ್ನು ಬಾರಿ ಬಾರಿ ನೋಡಿರುವರು. ಅಂದ ಮೇಲೆ ಶಾರದಾಂಬೆಯು ಅವರಿಗೆ ಒಲಿಯದಿರ್ಪಳೆ? ಅರ್ಥಾತ್ ರಾಗಗಳೆಲ್ಲವನ್ನೂ ಮುದ್ದೆ ಮಾಡಿ ನುಂಗಿದ ರಾಗದ ಮುದ್ದೆಯೇ ಅವರು—ನಮ್ಮೂರ ಗಾಯಕರು.

ಬಸವನ ಹಿಂದೆ ಬಾಲದಂತೆ ಮಹಾಪುರುಷರ ಹಿಂದೆ ಜನರಿಗೇನು ಕೊರತೆಯೇ? ನಮ್ಮೂರ 'ಗವಾಯಿ'ಗಳು ಅಂತೆಯೇ ಸರಿ. ಅವರಿಗೆ ಎಷ್ಟು ಬಿರುದು ಬಾವಲಿಗಳು ಇದ್ದುವೋ ಅಷ್ಟೇ ಮಂದಿ ಭಜಕರು, ಭಕ್ತರು ಇದ್ದರು. ಆದರಲ್ಲೂ ಅವರ ಭಜಕರಲ್ಲೊಬ್ಬರ ಬಾಯಲ್ಲಿ ಗವಾಯಿಗಳ ಗುಣಕಥನಾಮೃತವೇ ಇದ್ದಿತು.

'ಇಂತಹ ಗಾಯಕರನ್ನು ಪಡೆದವರೂ ನಿಜವಾಗಿಯೂ ಪುಣ್ಯಶಾಲಿಗಳಯ್ಯಾ.' ಒಮ್ಮೆ ಅವರು ನನ್ನೊಡನೆ ಅಂದರು.

'ಅಂದರೆ ನಾವು, ಅಲ್ಲವೆ?' ನಾನೆಂದೆ.

'ಹೌದು ನಾವೇ. ಇವರನ್ನು ನಾವು ಹೇಗಾದರೂ ಮಾಡಿ ಇಲ್ಲಿಯೇ ನಿಲ್ಲಿಸಬೇಕು. ವಿದ್ವಾಂಸರು, ಮಹಾ ವಿದ್ವಾಂಸರು!'

'ಉಲ್ಕಾಪಾತವಾದಂತೆ ಬಂದವರು. ಹಾಗೆಯೇ ಒಂದು ದಿನ ಪರಾರಿಯಾಗಲೂ ಬಹುದು.'

'ಅದಕ್ಕಾಗಿಯೇ ನಾನು, ಅವರನ್ನು ಹೇಗಾದರೂ ಮಾಡಿ ಇಲ್ಲಿಯೇ ಇಟ್ಟುಕೊಳ್ಳಬೇಕೆನ್ನುವುದು. ಮಹಾಪುರುಷರೆಂದರೆ ಹಾಗೆಯೇ ನೋಡಿ. ಒಮ್ಮೆ ಕದಿರೆಯ ಸುಂದರನಾಥರು—ಇಲ್ಲಿಗೆ ಬಂದ ನೆನಪಿದೆಯೇ ನಿಮಗೆ? ರಾತ್ರಿ ಎಲ್ಲರೊಡನೆ ಅವರು ಒಂದು ಕೋಣೆಯಲ್ಲಿ ಮಲಗಿದ್ದರು. ಬೆಳಗಾತ ನೋಡುವಾಗ ಅದೃಶ್ಯರಾಗಿದ್ದರು.'

'ಆಗ ನಾನು ಬಲು ಚಿಕ್ಕವನಿದ್ದೆನು. ನೆನಪು ಸಾಲದು. ಆದರೆ ಒಂದು ನೋಡಿ, ಕಳ್ಳರೂ ಹೀಗೆಯೇ ಮಾಡುತ್ತಾರೆ.'

'ಛೆ ಛೇ, ಏನು ಅಸಂಬದ್ಧ ಮಾತಯ್ಯಾ ಇದು! ಕಾಲು ತೊಳೆದು ತೀರ್ಥ ತೆಗೆದುಕೊಳ್ಳಬೇಕು, ಇಂತವರದ್ದು.'

'ಆಯಿತು. ಹಾಗಾದರೆ, ನಾಳೆಗೇ ತಲೆ ಬೋಳಿಸಲು ಹೇಳಿ ಅವರಿಗೆ.'

'ಗಾಯನವೆಂದರೆ ಏನೆಂದು ನಿಮಗಿನ್ನೂ ತಿಳಿಯದು. ಸಾಗರ, ಸಾಗರವದು!'

'ಯಾವ ಸಾಗರ? ಶಾಂತ ಸಾಗರವೋ ಹಿಂದೂ ಸಾಗರ?'

'ಛೆ ಛೇ, ಸಾಗರವೆಂದರೆ, ಅಷ್ಟೇ ಅಗಾಧವಾದ ಕಲೆಯೆಂದರ್ಥ.'

'ಹಾಗಾದರೆ ನಾವು ಅದರಲ್ಲಿಯ ಮೀನುಗಳು, ಅಲ್ಲವೇ?'

'ಮೀನುಗಳೂ ಅಲ್ಲ. ಅಣುಗಳಷ್ಟು ಗಾತ್ರದ ಕ್ಷುಲ್ಲಕ ಜೀವಿಗಳು.'

'ನಮ್ಮ ಗವಾಯಿಗಳು ಅದರಲ್ಲಿಯ ಮೊಸಳೆ!'

'ಅಲ್ಲಲ್ಲ, ಸಿಂಹ-ಸಿಂಹ.'

ಅಯ್ಯಾ, ಏನಿದು? ಅರಿತವರಾದ ನೀವು ಹೀಗೆನ್ನಬಹುದೆ? ಸಿಂಹವು ನೀರಿನಲ್ಲಿ ವಾಸ ಮಾಡುತ್ತದೆಯೆ?'

'ಸಿಂಹವು ವನದಲ್ಲಿದ್ದ ಮೃಗಗಳಲ್ಲಿ ಹೇಗೆ ಶ್ರೇಷ್ಠವೋ, ಹಾಗೆಯೇ ಅವರು ಗಾಯಕರಲ್ಲಿ ಅತ್ಯುತ್ಕೃಷ್ಟರೆಂದರ್ಥ, ಅಷ್ಟೆ.'

'ನಿಜವಾಗಿಯೂ ಅಷ್ಟು ವಿದ್ವಾಂಸರೇ ಅವರು'

'ಗಾಯನವೆಂದರೆ ಅವರು ಕೊಟ್ಟರುಂಟು.'

ನಾವು ತೆಗೆದುಕೊಂಡರಲ್ಲವೆ?'

ಛೆ, ಛೇ, ಅಂಬಡೆಗೆ ಗಿಂಬಡೆ ಎನ್ನುವ ನಿಮ್ಮಂತಹರೊಡನೆ ವಾದಿಸಿ ಫಲವಿಲ್ಲ. ಕೋಣದ ಸಮಕ್ಷವೇದ ಹೇಳಿದರೆ ಏನು ಪ್ರಯೋಜನ? ವೋಕಲ್ ಮ್ಯೂಜಿಕ್ ಅವರು ಕೊಟ್ಟರುಂಟು.'

ಆಹಾ, ವೋಕಲ್ ಅವರು ಕೊಟ್ಟರುಂಟೆ! ಅದಕ್ಕೆ ಸರಿಗೆಗಳೆಷ್ಟು? ಭಟ್ರೆ'

'ಸರಿಗೆಗಳು ತುಂಬಾ ಇವೆ.'

ಇನ್ನು ಬೇಕೆ ನಮ್ಮೂರ ಗಾಯಕರ ಇಂತಹ ಭಕ್ತರ ಪರಿಚಯ. ಆ ಗವಾಯಿಗಳಿಗೆ ಈ ಬೋಳೇಬಸ್ಪ ಭಕ್ತರ ಜೋಡು.!

ಹಾಗಾದರೆ ನೀವೂ ಅವರ ಭಕ್ತರಲ್ಲೊಬ್ಬರಲ್ಲವೆ? ಎಂದು ವಾಚಕಪ್ರಿಯಾ, ನೀವು ಪ್ರಶ್ನಿಸಬಹುದು. ನಾನು ಅವರ ಭಕ್ತನಲ್ಲ—ಶಿಷ್ಯನು. ಸಿಂಧುವಿಗೂ ಬಿಂದುವಿಗೂ ಹೇಗೆ ಭೇದವಿದೆಯೋ ಅಷ್ಟೇ ಭಕ್ತನಿಗೂ ಶಿಷ್ಯನಿಗೂ ಇದೆ. ಆದರಲ್ಲೂ ನನ್ನಂತಹ ಶಿಷ್ಯನಿರಬೇಕು—ಆ ಗುರುಗಳ ಉದ್ಧಾರವಾಯಿತೆನ್ನಿ!

ನನಗೆ ಗಾಯನದ ಗಂಧವಿಲ್ಲದಿದ್ದರೂ ಅವರು ಗಾಯನ ಹೇಳುವಾಗ, ಬಸವನಂತೆ ತಲೆದೂಗಲು ನಾನು ಚೆನ್ನಾಗಿ ಬಲ್ಲೆನು. ಮನೆಯವರ 'ನಮ್ಮ ರಾಯನು ಹೇಗೆ ಹಾಡುತ್ತಾನೆ' ಎಂದು ಆಗಾಗ್ಗೆ ನನ್ನ ಇದಿರಿನಲ್ಲಿಯೇ ಹೊಗಳುತ್ತಿದ್ದರು. ಇನ್ನು ನಮ್ಮೂರಿಗೆ ಅಯಾಚಿತವಾಗಿ ಆಗಮಿಸಿದ ಗವಾಯಿಗಳೊಡನೆ 'ಸಾರಿಗಮಪದನಿಸ' ಕಲಿತರೆ ಮತ್ತೆ ನಾನೆಷ್ಟು ಚೆನ್ನಾಗಿ ಹಾಡಬಲ್ಲೆನೊ? ಅಲ್ಲದೆ ಒಮ್ಮೆ ನನ್ನ ಗೆಳೆಯರ್ಕಳ್, ನನ್ನನ್ನು ಸ್ವತಂತ್ರ ಗಾಯಕನೆಂದು ಸಂಬೋಧಿಸಿದ್ದರು.

ಪರಂತು ಗಾಯನ ಕಲಿಯಬೇಕೆಂದು ಅವರನ್ನು ಗುರುಗಳನ್ನಾಗಿ ಮಾಡಿಕೊಂಡ ನಾನು ಅವರಿಂದ ಕಲಿತದ್ದೇ ಬೇರೆಯಾಯಿತು. ಆದರಿಂದ ನನಗೂ ನಿಮಗೂ ಪ್ರಯೋಜನವಾಯಿತೆನ್ನಿ. ಅವರು ದಿನ ಒಂದಕ್ಕೆ ಒಂದು ತಾಸು ಗಾಯನ ಹೇಳಿ ಕೊಡಬೇಕೆಂದ ನಮ್ಮೊಳಗಿನ ಕರಾರು. ಆದರೆ ಅವರು ಗಾಯನ ಹೇಳಿಕೊಡುವುದು 10 ನಿಮಿಷ. ಉಳಿದ ಸಮಯದಲ್ಲಿ ಹೇಳುವುದು ಗಾಯನದ ಕುರಿತೇ ಕೆಲವು ಕತೆಗಳು. ನಾನೂ ಇದಕ್ಕೆ ಪ್ರತಿನುಡಿಯದೆ, ಅವರ ಕತೆಗಳನ್ನು ಕಿವಿಯಾರೆ ಕೇಳುತ್ತಿದ್ದೆನು. ನನ್ನಂತಹ ಕಥಿಕನಿಗೆ ಗಾಯನಕ್ಕಿಂತಲೂ ಕಥೆಗಳು ಹೆಚ್ಚು ರುಚಿಸಿದುವು.

ನಾನು ನಾಲ್ಕಾಣೆ ಗುರುದಕ್ಷಿಣೆ ಕೊಟ್ಟು, ಗಾಯನ ಮಂದಿರ ಪ್ರವೇಶಮಾಡಿ, ಗುರುಚರಣಾರವಿಂದಗಳನ್ನು ಶರಣೆಂದಾಗ ನನಗವರು 'ವಂದೇ ಗಣಪತಿ' ಎಂಬ ಪದ್ಯವನ್ನು ಬರೆದು ಕೊಟ್ಟಿದ್ದರು. ಇಂದು ಅಂದೊಂದೇ ಪದ್ಯವನ್ನು ಅಭ್ಯಸಿಸುತ್ತಿರುವೆನು. ಗಣಪತಿಗೆ ಮದುವೆಯಾದುದಿಲ್ಲ. 'ವಂದೇ ಗಣಪತಿ' ಪದ್ಯವನ್ನು ಬಿಟ್ಟು ಬೇರೊಂದನ್ನು ನಾನು ಕಲಿತುದಿಲ್ಲ. ವಂದೇ ಮಾತರಂ!


## WANTED

2 Circle Agency Inspectors, for Districts of North Kanara, South Kanara and Coorg—Belgam Bijadur and Dharwar, 6 District Agency Inspectors and Supervisors on a monthly salary of Rs. 100- Rs. 60-and Rs. 35—respectively. Only Graduates and Passed Matriculates who can guarantee business need apply:

M/s. PADUBIDRI BROS.,
40, Narayanlal Bansilal Mansions
Bellasis Road, Bombay 8

# Scientific Opticians.

**Eye Testing Free.**

STYLISH FRAMES, LENSES, CASES.

*Please Visit*

**Nayaks Optical Stores**
Car Street
MANGALORE

---

# ಹಿಂದುಸ್ಥಾನ ಕೋ-ಓಪರೇಟಿವ್ ಇನ್ಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು ಕಲ್ಕತ್ತಾ — ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ — ಸ್ಥಾಪನೆ 1907

| | |
|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ 12,00,00,000 |
| ಆಸ್ತಿಪಾಸ್ತಿಗಳು | ರೂ 2,21,00,000 |
| ನೂತನ ವ್ಯವಹಾರ | ರೂ 2,82,81,000 |

ಅತ್ಯಧಿಕ ಬೋನಸ್ ಹಂಚಲಾಗಿದೆ.

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ವಿಮಾ ಮೇಲೆ ಪ್ರತಿವರ್ಷ ಒಂದರ ರೂ 23

ಮಕ್ಕಳ ವಿಮಾ, ಆಪಘಾತ, ಮತ್ತು ಧನ ವಿಮೆ-ನಮ್ಮ ವಿಶಿಷ್ಟತೆ

*For particulars please apply to*
T. ANANTACHARI,
BRANCH MANAGER H C I S LTD
POST BOX 223 MADRAS

K K MENON,
Or ... Court Road CALICUT

---

# ಪರಮಾ

[illegible]

ಗೊನೋಲಿಕ್ಸ (ರಿಜಿಸ್ಟರ್ಡ್)

[illegible]

ಸೋಲ್ ಏಜಂಟರು.—ಸ್ಟ್ಯಾರ್ ಏಜೆನ್ಸಿ,
[illegible] ರೋಡ್,
ಫೋರ್ಟ್ ಮುಂಬಾಯಿ

ಸ್ಟಾಕಿಸ್ಟ: ಎಂ. ಡಿ. ವ್ಹೊರಾ ಮತ್ತು ಕಂಪನಿ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ

---

# The Canara Banking Corporation, Udipi, Ltd

INCORPORATED IN BRITISH INDIA

EST 19

## SEASON DIPOSITS

of

Rs. 500/- & above

Are Accepted

at

3% p. a.

at

All Our Branches

---

# The Bombay Life Assurance Company, Ltd.

ESTD: 1908

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,855 | 1,16,58,706 |
| 1930 | 59,97,500 | 9,83,367 | 28,00,970 | 2,06,68,328 |
| 1933 | 94,16,500 | 15,12,692 | 50,04,871 | 3,07,95,484 |
| 1936 | 1,36,00,180 | 26,76,274 | 82,69,451 | 5,14,38,205 |

The Company offers all the up-to-date schemes of Assurances Family Safe Guard Policy a special feature

Application for agencies will be received from honest and respectable gentlemen.

Organisers appointed with pay and allowance

Gentlemen with organising ability and who can guarantee Business need apply.

**Kochikar Brothers, Ltd.,**
(Incorporating Messrs Kochikar Brothers),
***Madras Branch Secretaries.***
Post Box 337, Mount Road, MADRAS.
Phone No. 8245.

***Apply to any of the following Offices:-***

| | | | | | | | |
|---|---|---|---|---|---|---|---|
| Ottapalam | Central Station Road, Trivandrum. | Visveshwarapuram Circle, Bangalore City. | Sowmya ... Pu... | ...alayam ...thiyara, Calicut. | Car Street, Mangalore. | Udipi, S. India. | Charni Road, Bombay No. 4 |

ಚಂದಾ: ರೂ. 2-0-0. Established 1906. Regd. No. M. 3406 ಟಪ್ಪಾಲು ಹಾಸಲು ಸೇರಿ ರೂ. 2-18-0.

# ಸ್ವದೇಶಾಭಿಮಾನಿ.

# SWADESHABHIMANI, MANGALORE

ಸಂಪುಟ ೩೨ ತಾರೀಕು ೪ನೇ ಮಾರ್ಚ ೧೯೩೮ ಸಂಚಿಕೆ ೯


## ಹೊಸ ಮಾಲು ಇಂದೆ ಬಂದದ್ದು!




## ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agent*

**The Kerala Tea Syndicate.**

PONANI—(S Malabar)

**BUY ADVERTISED GOODS**

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ ... ಕಲ್ಪದ ...)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ... ಮೂತ್ರದೊಡನೆ ಹೋಗುವಿಕೆ ಸೊಂಟನೋವು, ಕೈಕಾಲು ಬಚ್ಚುವುದು ... ಒಳಜ್ವರ ಅಶಕ್ತತೆ ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವೆ ... ಜೀರ್ಣಶಕ್ತಿಯನ್ನೂ ಹೆಚ್ಚಿಸುವುದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ... ವೃದ್ಧಿಯನ್ನು ದೇಹಪುಷ್ಟಿಯನ್ನು ಸಂಭೋಗಶಕ್ತಿಯನ್ನು ಜ್ಞಾಪಕಶಕ್ತಿಯನ್ನು ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನು ... ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0 ಮೂರು ಬಾಟ್ಲಿಗಳಿಗೆ ರೂ 7—0—0.

## ಕಸ್ತೂರಿ ಮಿಶ್ರಣ ದಶಮೂಲ

[illegible] ... ಔಷಧಿ ... ಬಾಟ್ಲಿ 1ಕ್ಕೆ ರೂ 1—8—0.

**ಎಂ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್**

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ... 2 ... 3 ... 4 ... [illegible]

## ಗುಣ ಬಾರದಿದ್ದರೆ ಹಣ ವಾಪಾಸ.

### ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ... ಹಡೆಯುವುದರಿಂದ ... ಅಶಕ್ತರಾಗುತ್ತಾರೆ ... ವಿಶೇಷ ... ಈ ಚೂರ್ಣವನ್ನು ಉಪಯೋಗಿಸಬೇಕು ... ಇದರ ಸೇವನೆಯಿಂದ ... ಶರೀರಕ್ಕೆ ... ಗರ್ಭಧಾರಣ ... ಮಾಡಿದರೂ ... ಸರ್ಟಿಫಿಕೇಟು ... ಗರ್ಭಧಾರಣವು ಆಗುವುದಿಲ್ಲ ... ರೂ ... [illegible]

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ ಮಿರಜ, (S. M. C.

(Regd)

## ಅಮೃತಾಂಜನ

ತಲೆವೇದನೆ, ಶಿರೋವೇದನ ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು ಘಾಯಗಳು ಬ್ಯಾತುಕೊಳ್ಳುವುದು ಚೇಳು ವಿಷ ... ಚೇನೆ ಪಕ್ಷವಾತ ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

## ಹುಳುಕಡ್ಡಿ ಮದ್ದು

ಗಜ್ಜಿ, ತುರಿಕೆ, ತುರಿಕಜ್ಜಿ ಹುಳುಕಡ್ಡಿ, ಸಿಕ್ಕ್ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

**ಅಮೃತಾಂಜನ ಡಿಪೋ.** ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು


Edited Printed & Published By A. S. Kamath at the Sharada Press, Car Street, Mangalore.

Regd. No. M. 3406.

# ಸ್ವದೇಶಾಭಿಮಾನಿ

ಸಂಪುಟ ೩೨] ತಾರೀಕು ೧೧ನೇ ಮಾರ್ಚಿ ೧೯೩೮ (11-3-1938.) [ಸಂಚಿಕೆ ೧೦

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

## ಅನುಕ್ರಮಣಿಕೆ

ಖಾದಿ ದೋತಿಗಾಗಿ ಆತ್ಮಹತ್ಯೆ

ಮದ್ರಾಸು ಸರಕಾರದ ಬಜೇಟಿನ ವಿಮರ್ಶೆ

ಸಂಯುಕ್ತ ಪ್ರಾಂತ್ಯದಲ್ಲಿ ಇನ್ನೊಂದು ಬಿಕ್ಕಟ್ಟು ಉಂಟಾಗುವುದೇ?

ಗೋರಕ್ಷಣೆಯ ಕುರಿತು ಮಹಾತ್ಮಾಜೀಯವರ ಭಾಷಣ

ಕಣ್ಣಿನ ಕೃಷಿ

ಲಿಂಗವನ್ನು ಬದಲಾಯಿಸುವ ಯಂತ್ರ

[illegible]
ಪ್ರಸಿದ್ಧ ನೃತ್ಯಗಾರ್ತಿ ಅಜೂರಿ.

**"OUR EXPERIENCE IS YOUR BENEFIT."**

A Successful man often confers with his banker about his business problems and every depositor in our bank has the same facility. Especially in these troublous times we wonder if some of our customers are not missing something by failing to come into the bank occasionally just to talk things over.

OUR OFFICERS ARE ALWAYS GLAD TO SEE YOU.

**RESOURCES OF A CRORE.**

ESTD 1906

**CANARA BANK, LIMITED.**

# ಚಿತ್ರ-ವಿಚಿತ್ರ!

★

## ಲಿಂಗವನ್ನು ಬದಲಾಯಿಸುವ ಯಂತ್ರ

ಮಿಚಿಗಾನ್ ವಿಶ್ವವಿದ್ಯಾಲಯದ ವಿಜ್ಞಾನೋಪಾಧ್ಯಾಯರಾದ ಡಾ। ವಿಲ್ಲರ್ಡ್ ಪಿ. ಫೂಕರೆಂಬವರು, ಆಗಲೇ ಇಟ್ಟ ಮೊಟ್ಟೆಗಳ ಲಿಂಗವನ್ನು ಕಂಡುಹಿಡಿಯುವ ಮತ್ತು ಅವುಗಳ ಲಿಂಗವನ್ನು ಬೇಕಾದಂತೆ ಬದಲಾಯಿಸುವ ಒಂದು ಯಂತ್ರವನ್ನು ಕಂಡುಹಿಡಿದಿರುವರು ಈ ಯಂತ್ರವು ವಿದ್ಯುಚ್ಛಕ್ತಿಯ ಸಹಾಯದಿಂದಲೇ ನಡೆಸಲಾಗುವುದು

★

## ಹೊಸ ನಕ್ಷತ್ರ

ಅಮೇರಿಕದ ಯರ್ಕಿಸ್ ಒಬ್ಸರ್ವೇಟರಿಯವರು ೪ ಮಿಲಿಯ ಮೈಲು ವ್ಯಾಸವಿದ್ದ ದೊಡ್ಡದೊಂದು ನಕ್ಷತ್ರವನ್ನು ಗೊತ್ತುಹಚ್ಚಿರುವರು ಈ ತನಕ ಜ್ಯೋತಿಷಿಗಳಿಗೆ ಗೊತ್ತಿದ್ದ ಅತಿ ದೊಡ್ಡ ನಕ್ಷತ್ರವೆಂದರೆ ಎಂಟಾರಿಸ್ ಎಂಬುದು ಅದರ ವ್ಯಾಸವು ೪೦೦,೦೦೦,೦೦೦ ಮೈಲು. ಸೂರ್ಯನ ವ್ಯಾಸವು ೮೬೪,೦೦೦ ಮೈಲು

★

## ಹಾಡಿನ ಹೊಸ ಉಪಯೋಗ

ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಕೂಲಿಯಾಳುಗಳು ಕೆಲಸಮಾಡುತ್ತಿರುವಾಗ ಹಾಡುಗಳನ್ನು ಒದಗಿಸಿಕೊಡುವುದು ಇತ್ತೀಚೆಗೆ ಇಂಗ್ಲಾಂಡಿನಲ್ಲಿ ರೂಢಿಗೆ ಬಂದಿದೆ ಹೀಗೆ ಮಾಡಿದರೆ ಕೂಲಿಯಾಳುಗಳು ಬೇಗ ಬೇಗನೇ ಕೆಲಸಮಾಡುವರಂತೆ

ಒಂದು ಕಡೆಯಲ್ಲಿ ಮಜೂರರು ಅದೊಂದು ರಣದ ಹಾಡನ್ನು ಕೇಳಕೇಳುತ್ತಾ ಬೇಗಬೇಗನೇ ಕೆಲಸಮಾಡತೊಡಗಿದರು ಅವರು ಅಂದು ಮಾಡಿದ ಕೆಲಸವು ಸಿಕ್ಕದ ಕೆಲಸಕ್ಕಿಂತ ಸಾಧಾರಣ ಇಮ್ಮಡಿಯಾಗಿತ್ತು

★

## ಕಣ್ಣಿನ ಕೃಷಿ

ಮೆಂಚೆಸ್ಟರಿನ ರೋಯಲ್ ಆಯ್ ಹೊಸ್ಪಿಟಲಿನ ಡಾಕ್ಟರರಾದ ಒ ಎಂ ಡ್ಯುತಿ ಎಂಬವರು, ಆರು ವರ್ಷಗಳ ಹಿಂದೆ ಕಣ್ಣಿನ ದೃಷ್ಟಿಯನ್ನು ಕಳಕೊಂಡ ನೊಬ್ಬನಿಗೆ ಇನ್ನೊಂದು ಕಣ್ಣನ್ನು ಕೃಷಿಮಾಡಿ ದೃಷ್ಟಿದಾನ ಮಾಡಿರುವರ

ಹೆರೋಲ್ಡ್ ಕೆಲ್ಲೀ ಎಂದೆ ಅವರ ಹೆಸರು ಮೊದಲು ಯಾವ ಚಿಕಿತ್ಸೆಮಾಡಿದರೂ ಏನೂ ಪ್ರಯೋಜನವಾಗಲಿಲ್ಲ ಆಗಲೇ ಸ್ವಲ್ಪ ಪಟ್ಟಾದ ತನ್ನ ಕಣ್ಣನ್ನು ತೆಗೆಯಬೇಕೆಂದು ಒಬ್ಬನು ಅಲ್ಲಿಗೆ ಬಂದನು ಡಾಕ್ಟರರಿಗೆ ಅದೊಂದು ಆಲೋಚನೆಯು ಹೊಳೆಯಿತು ಎರಡನೆಯ ರೋಗಿಯ 'ಮೃತ ಕಣ್ಣಿನಿಂದ ಕೊರ್ನಿಯವನ್ನು ತೆಗೆದು, ಡಾಕ್ಟರರು ಮೊದಲನೆಯ ರೋಗಿಯ ಕಣ್ಣಿಗೆ ಕೃಷಿಮಾಡಿದರು ಇದರಿಂದಾಗಿ ಆತನಿಗೆ ಈಗ ಪೂರ್ಣದೃಷ್ಟಿಯು ಲಭಿಸಿರುವುದು

★

## ಮಾತನಾಡುವ ಮಗು

ಅಭಿಮನ್ಯುವು ಸುಭದ್ರೆಯ ಹೊಟ್ಟೆಯಲ್ಲಿರುವಾಗಲೇ ಕೃಷ್ಣನ ಕಥೆಯನ್ನು ಕೇಳಿ ಹೂಂಗುಟ್ಟುತ್ತಿದ್ದನೆಂದು ನಾವು ಓದಬಲ್ಲೆವು ಈಗ ಅಮೇರಿಕದಲ್ಲಿ ಹದಿನೆಂಟು ತಿಂಗಳ ಮಗುವೊಂದು ದೊಡ್ಡವರಂತೆ ಮಾತನಾಡತೊಡಗಿದೆ ಯಾರಾದರೂ ಅದರೊಡನೆ ಅಲ್ಲಿಯೊಡನೆ ಮಾತನಾಡ ತೊಡಗಿದರೆ 'ಸಾಕು ಅರ್ಥವಿದ್ದ ಮಾತುಗಳನ್ನಾಡು' ಎಂದು ಅದು ಗದರಿಸುವುದು ಹೇರಿಯು ತನಗೆ ೬ ತಿಂಗಳುಗಳನ್ನಾಗಲೇ ಮಾತನಾಡಲು ತೊಡಗಿದ್ದನು ಆಗ ಆತನಿಗೆ ೪೦೦ ಶಬ್ದಗಳು ತಿಳಿದಿದ್ದುವು ಈಗ ಎಷ್ಟು ತಿಳಿದಿವೆಯೆಂದು ಗೊತ್ತುಹಚ್ಚಲಾಗುವುದಿಲ್ಲ

★

## ಖಾದಿ ಧೋತಿಗಾಗಿ ಆತ್ಮಹತ್ಯೆ.

ತಾನು ಆಶಿಸಿದ ಖಾದಿ ಧೋತಿಯೊಂದು ತನಗೆ ಸಿಗದಿರಲು, ನಿರಾಶನಾದ 18 ವರ್ಷದ ಹುಡುಗನೊಬ್ಬನು, ಬಿಹಾರಿನ ಅದೊಂದು ಊರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವನು

ಅಲ್ಲಿಯ ಸಬ್ ಜಡ್ಜರ ಕೋರ್ಟಿನಲ್ಲಿ ಕೆಲಸಕ್ಕಿದ್ದ ಒಬ್ಬ ಬಡವನ ಮಗನಾತನು ತಂದೆಯೊಡನೆ ತನಗೊಂದು ಖಾದಿ ಧೋತಿಯನ್ನು ತಂದುಕೊಡಬೇಕೆಂದು ಕೇಳಿದನು. ತನ್ನಲ್ಲಿ ಬೇಕಾದಷ್ಟು ಹಣವಿಲ್ಲದಿರಲು, ಮಿಲ್ಲಿನಿಂದ ತಯಾರಾದ ಧೋತಿಯ ಜೋಡನ್ನು ತಂದೆಯು ಮಗನಿಗೆ ತಂದುಕೊಟ್ಟನು ಹುಡುಗನು ಬಹಳ ವ್ಯಥೆಗೊಂಡನು ಮತ್ತು ತನ್ನ ಕೊಠಡಿಗೆ ಹೋಗಿ ಕುತ್ತಿಗೆಗೆ ಒಂದು ಹಗ್ಗದಿಂದ ನೇಣುಹಾಕಿಕೊಂಡು ಆತ್ಮಹತ್ಯೆಮಾಡಿಕೊಂಡನು

★

## ಮಣ್ಣಿನ ಪಾತ್ರೆಗಳ ಪ್ರಯೋಜನ.

"ಲೋಹದ ಪಾತ್ರೆಗಳಲ್ಲಿ ಸಾಮಾನುಗಳನ್ನು ದಾಸ್ತಾನು ಮಾಡುವುದರಿಂದಲೂ ಬೇಯಿಸುವುದರಿಂದಲೂ ಅನೇಕ ಬಗೆಯ ರೋಗಗಳು ಮನುಷ್ಯನಲ್ಲಿ ಉತ್ಪನ್ನವಾಗುತ್ತವೆ ಎಂದು ಹೇಳಲು ಇತ್ತೀಚೆಗೆ ಕೆಲವು ಆಧಾರಗಳು ದೊರೆತಿವೆ ದಕ್ಷಿಣ ಹಿಂದೂಸ್ಥಾನದಲ್ಲಿ ಹೆಚ್ಚಾಗಿ ತಿನುಪದಾರ್ಥಗಳು ಉಪ್ಪು ಖಾರ ಹಚ್ಚಿ ಉಪಯೋಗಿಸಲ್ಪಡುವುದು ಬಹಳವಾದ ದರಿಂದ ಈ ಬಗೆಯ ಲೋಹಗಳ ಕಿಲ್ಬಿಷದಿಂದ ಉಂಟಾಗುವ ರೋಗಗಳ ಇಲ್ಲಿ ಅಧಿಕವಾಗಿರಲು ಅವಕಾಶವುಂಟು" ಎಂಬುದಾಗಿ ಡಾ। ವಿ ಸುಬ್ರಹ್ಮಣ್ಯಂ ಎಂಬವರು ಬರೆಯುತ್ತಾರೆ

★

## ತವರದ ಕಿಲ್ಬಿಷ

'ಅಗ್ಗದ ಪಾತ್ರೆ ಮೊದಲಾದವುಗಳು ಆಮ್ಲಪದಾರ್ಥಗಳಿಂದ ಬಹು ಬೇಗನೆ ಕಲುಷಿತವಾಗುವುದ ಕಲಾಯಿ ಹಾಕಲ್ಪಟ್ಟ ಪಾತ್ರೆಗಳ ತವರವೂ ಇದೇ ರೀತಿಯಲ್ಲಿ ಬಹು ಬೇಗನೇ ಕಲುಷಿತವಾಗುವುದು ತವರವೊಂದೇ ವಿಷೋತ್ಪನ್ನಕಾರಿ ಅದರೊಡನೆ ಬೆರಸಿ ಇದ್ದ ಸೀಸವು (ಒಮ್ಮೊಮ್ಮೆ ಸೇಕಡಾ ೯೦ರಷ್ಟು ಇರುತ್ತದೆ) ಅದರ ಈ ಗುಣವನ್ನು ಇನ್ನೂ ಹೆಚ್ಚಿಸುತ್ತದೆ ಎಲ್ಯೂಮಿನಿಯಂ ಅಷ್ಟೊಂದು ವಿಷಕಾರಿಯಲ್ಲ ಆದರೆ ಅದ ತ್ವರಿತದಲ್ಲಿ ತೊರೆದುಹೋಗುವುದು ಮಾತ್ರವಲ್ಲ ಆಹಾರ ಸಾಮಗ್ರಿಗಳಲ್ಲಿರುವ ಗಂಧಕದ ಅಂಶವನ್ನು ಕಡಿಮೆಮಾಡುವ ಶಕ್ತಿಯೂ ಅದವಲ್ಲಿರುವುದು'

★

## ಬೆಳವಣಿಗೆಯ ಮೇಲೆ ಪರಿಣಾಮ

'ಪಾತ್ರೆಗಳ ಕಿಲ್ಬಿಷವು ಹೊಟ್ಟೆಯೊಳಗೆ ಹೋದರೆ ಕೂಡಲೇ ಕಾರಿಹೋಗುವುದೆಂಬ ಭಾವನೆಯು ನಮ್ಮಲ್ಲಿ ಸಾಮಾನ್ಯವಾಗಿದೆ ಆದರೆ, ತಾಮ್ರ ಮತ್ತು ಸತುವುಗಳಿಂದ ವಿಷಕ್ತವಾದ ಆಹಾರವನ್ನು ಭುಂಜಿಸಿದರೆ ಮಾತ್ರ ಹೀಗಾಗುವುದು ಉಳಿದ ಅನೇಕ ವಿಷಯಗಳಲ್ಲಿ ಅವುಗಳ ಕುರುಹುಗಳು ಕೂಡ ಕಾಣಬರುವುದಿಲ್ಲ ಹೀಗೆ ನಾವು ತಿಂದ ವಿಷವು ದೇಹದ ಮುಖಾಂತರ ಹೊರಟು ತಳ್ಳಲ್ಪಡಬಹುದು, ಆದರೂ ದೇಹದ ಬೆಳವಣಿಗೆಯ ಮೇಲೂ, ಬಲದ ಮೇಲೂ ಇದರಿಂದ ಹಾನಿಯುಂಟಾಗುವುದು ಲೋಹದ ಪಾತ್ರೆಗಳಲ್ಲಿ ಮತ್ತು ಮಣ್ಣಿನ ಪಾತ್ರೆಗಳಲ್ಲಿ ತಯಾರು ಮಾಡಿದ ಆಹಾರವನ್ನು ಬೇರೆ ಬೇರೆಯಾಗಿ ಕೆಲವು ಇಲಿಗಳಿಗೆ ಕೊಟ್ಟು ನೋಡಲಾಗಿ, ಮಣ್ಣಿನ ಪಾತ್ರೆಯ ಆಹಾರವನ್ನು ತಿಂದ ಇಲಿಗಳು ಆರೋಗ್ಯವುಳ್ಳವುಗಳಾಗಿಯೂ ಭಾರವಾಗಿಯೂ ಇದ್ದುವು ಆದುದರಿಂದ ಮಣ್ಣಿನ ಪಾತ್ರೆಗಳಲ್ಲಿ ತಯಾರಿಸಿದ ಆಹಾರವನ್ನು ತಿನ್ನುವುದು ಎಷ್ಟೋ ಮೇಲು" ಎಂದು ಡಾ ಸುಬ್ರಹ್ಮಣ್ಯರವರು ಸಿರ್ಧರಿಸಿರುವರು

★

ಇಂದೋರ್ ಸಂಸ್ಥಾನದ ದೇವಾಲಯಗಳಲ್ಲೆಲ್ಲಾ ಹರಿಜನರಿಗೆ ಪ್ರವೇಶಕೊಡುವಂತೆ ಸಂಸ್ಥಾನದ ಆಜ್ಞೆ ಹೊರಟಿರುತ್ತದೆ

ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಸರ್ ಮಿರ್ಜಾಇಸ್ಮಾಯಿಲ್ ಪಕ್ಷದವರಿಗೂ ಮಾತುಕತೆಗಳು ನಡೆದು, ಮುಂದಿನ ಸುಧಾರಣೆಗಳ ಕುರಿತೂ ಕೆಲವು ಒಪ್ಪಂದಗಳಾಗಿವೆಂದೂ ತಿಳಿದು ಬರುತ್ತದೆ

## ಕೇಂದ್ರ ಎಸೆಂಬ್ಲಿಯ ಬಜೇಟಿನಲ್ಲಿ

ಧನ ಮತ್ತು ಬಹಿರ್ವ್ಯವಹಾರದ ವಿಭಾಗಗಳನ್ನು ಎಸೆಂಬ್ಲಿಯ ವಿಚಾರದ ಹೊರಗ ಮಾಡಿದುದಕ್ಕಾಗಿ ಪ್ರತಿಕೂಲತೆಯಾಗಿ, ಕೇಂದ್ರ ಎಸೆಂಬ್ಲಿ ವಿರೋಧಪಕ್ಷವು ಬಜೇಟಿನ ಕುರಿತು ಚರ್ಚೆಯಲ್ಲಿ ಭಾಗವಹಿಸದುದರಿಂದ, ಬಜೇಟಿನ ಕುರಿತು ಚರ್ಚೆಇಲ್ಲದಂತಾಗಿದೆ.

ರಕ್ಷೈರ್ಮಹಾರ್ಹೈಸ್ತುತುರ್ಮನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ದೊರೆಯಲನುಸುವ ರತ್ನಗಳು ಸಾ । ಗರವ ಮಥಿಸಲು ಸುರರಿಂ ಗದರಿಂ । ಹರುಷವಾಯಿತೆ ಮತ್ತೆ ವಿಶ್ವವ ಸುಡುವ ಬರುತಿರುವ ॥

ಸ್ವದೇಶಾಭಿಮಾನಿ

SWADESHABHIMANI

ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ಕೊನೆದು ಧೀರರು ನಿಶ್ಚಿತಾರ್ಥಗಳನು ॥

ಸಂ. ೧೧ನೇ ಶುಕ್ರವಾರ ಮಾರ್ಚಿ ೧೯೩೮ | (ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.) | ತಾರೀಕು 11—3—1938

# ಪೋಲೀಸರ ಮನೋವರ್ತನೆ

ಕಾಂಗ್ರೆಸ್ಸು ಅಧಿಕಾರ ವಹಿಸಿದ್ದಾಗ್ಯೂ ಸರಕಾರ ನೌಕರರ ಪೋಲಿಸಿನ ಮನೋವರ್ತನೆಯು ಬದಲಾಗದೇ ಇದ್ದುದರ ಕುರಿತು ದೃಷ್ಟಾಂತವಾಗಿ ಬಿಹಾರಿನ ಗಯಾದಲ್ಲಿ ನಡೆದ ಘಟನೆಯಿಂದ ತಿಳಿದುಬರುತ್ತದೆ.

ಬಿಹಾರದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳವು ರಾಜಿಮೆತ್ತಿದ್ದಷ್ಟೆ ಒಡನೆ ಗಯಾ ನಗರ ಪೋಲೀಸರು ಸುತ್ತಮುತ್ತಲಿನ ಪ್ರದೇಶಗಳನ್ನು ಸುತ್ತಾಡಿ, ಕಾಂಗ್ರೆಸ್ ಧ್ವಜಗಳನ್ನು ಹಿಡಿದು ಯಾರೂ ಮೆರವಣಿಗೆ ಇತ್ಯಾದಿಗಳನ್ನು ಅಪ್ಪಣೆ ವಿನಹ ನಡೆಯಿಸಬಾರದಾಗಿಯೂ, ಹಾಗೆ ಅಪ್ಪಣೆ ಉಲ್ಲಂಘಿಸಿ ಮಾಡಿದವರಿಗೆ ಶಿಕ್ಷೆ ವಿಧಿಸಲಾಗುವುದೆಂದೂ, ಡಂಗುರ ಮೂಲಕ ಸಾರಿದರು.

ಕಾಂಗ್ರೆಸ ಮಂತ್ರಿಮಂಡಳವು ಪುನಃ ಪದವಿಗೆ ಏರಿತ್ತೆಂದು ಅಧಿಕಾರ ವಹಿಸುವುದೆಂದ ತಿಳಿದುಬರಲು ಪೋಲಿಸ ಅಧಿಕಾರಿ ... ತಪ್ಪು ತಿಳುವಳಿಕೆಯಿಂದ ದುಮ್ಮತ್ತೆ ಸಾರಿದರು.

★

ರಾಷ್ಟ್ರಪತಿಯರು ಮುನ್ನೋಡು ತಿದ್ದಾರೆ

**ಬಹೀರ್ ದೇಶಗಳಲ್ಲಿ ಭಾರತೀಯ ಪ್ರಾತಿನಿಧ್ಯ ಮಂಡಲಗಳ ರಚನೆಯಾಗಬೇಕು**

'ಹಿಂದೂಸ್ಥಾನ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖದಲ್ಲಿ, ಮುಂದಿನ ಸ್ವಾತಂತ್ರ್ಯ ಹಿಂದೂದೇಶಕ್ಕಾಗಿ, ಬಹೀರ್ ದೇಶಗಳಲ್ಲಿ ಹಿಂದೂದೇಶದ ಸೇವೆಗಾಗಿ ಭಾರತೀಯರನ್ನು ಸಿದ್ಧಗೊಳಿಸುವರೆ, ಒಂದು ತಳಹದಿಯಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಡಿಪ್ಲೊಮೆಟಿಕ್ ಸೇವೆ ಮತ್ತು ಬಹೀರ್ ವ್ಯವಹಾರ ಆಫೀಸು ಈಗಲೆ ಸ್ಥಾಪನೆಯಾಗಬೇಕೆಂದು ರಾಷ್ಟ್ರಪತಿ ಬೋಸರು ಸೂಚಿಸಿರುವರು. ಈ ಲೇಖದಲ್ಲಿ ಅವರು,—

ವೈಜ್ಞಾನಿಕ ರೀತಿಯಲ್ಲಿ ಯುದ್ಧಶಸ್ತ್ರಗಳು ಸಿದ್ಧವಾಗುವ ಈ ಅತ್ಯಂತ ಕಷ್ಟತರದ ದಿನಗಳಲ್ಲಿ ಸುಲಭವಾಗಿ ತನ್ನ ಸಾಮ್ರಾಜ್ಯದ ರಕ್ಷಣೆಯನ್ನು ಮಾಡಿಕೊಳ್ಳಬೇಕಾದರೆ, ಬ್ರಿಟನ ಹಿಂದೂದೇಶದೊಡನೆ ಶಾಂತಿ ಬೆಳೆಯಿಸಬೇಕು ಹಿಂದೀಯ ರಾಜಕೀಯ ಪುರುಷರು ಜಗತ್ತಿನ ಸ್ಥಿತಿಯಿಂದ ಬಲಪಡೆಯಬೇಕು, ಹಿಂದೂದೇಶದಲ್ಲಿ ಬ್ರಿಟಿಶರ ಒಡೆತನವನ್ನು ನಾಶಗೊಳಿಸುವ ಕುರಿತು ಆಲೋಚಿಸುವ ಸಮಯವು ಬೇಗನೆ ಕೂಡಿಬರುವುದು.

ಜಗತ್ತಿನ ಕುರಿತು ಸರಿಯಾದ ವಾರ್ತೆಗಳು ದೊರೆಯಬೇಕಾದರೆ, ಬಹೀರ್ ದೇಶಗಳಲ್ಲಿ ವ್ಯವಸ್ಥೆಗಳಾಗಬೇಕು. ಇದಕ್ಕಾಗಿ ನಾವು ಅನ್ಯರ ಮೇಲೆ ಹೊಂದಿಕೊಂಡಿರಬೇಕಾಗುವುದೆ—ನಮಗಾಗಿ ನಮ್ಮವರೇ ಈ ವಾರ್ತೆಗಳನ್ನು ಕಳುಹಿಸುವವರಾಗಬೇಕು.

ಹಿಂದೂದೇಶವು ಒಂದಾನೊಂದು ದಿನ ಸ್ವತಂತ್ರವಾಗುವುದೆ ಬ ವಿಶ್ವಾಸವುಳ್ಳ ನಾವು ಒಂದಾನೊಂದು ದಿನ ನಮ್ಮ ಬಹೀರ್ ವ್ಯವಹಾರವನ್ನು ನಾವೇ ನಡೆಯಿಸಬೇಕಾಗಿ ಬರುವುದೆಂದ ತಿಳಿಯಬೇಕು. ಅದಕ್ಕಾಗಿ ನಮ್ಮೊಡನೆ ತಕ್ಕ ಶಿಕ್ಷಣ ತರಬೇಕು ಎಲ್ಲಿದೆ?

ಅದಲ್ಲದೆ ಇತರ ಎಲ್ಲಾ ಇಲಾಖೆಗಳಲ್ಲಿ ಸ್ವನ್ನ ಇಲಾಖೆಯ ... ಕೆಲಸ ... ಭಾರತೀಯ ... ಬ್ರಿಟಿಶ ಆಫೀಸರರ ಬದಲು ... ಹೊಂದಿದ ದಿನ ಉಳಿಸಬೇಕಾಗುವುದು.

ಆದರೆ ಬಹೀರ್ ವ್ಯವಹಾರದ ... ಹಾಗಲ್ಲ. ಅದರಲ್ಲಿ ... ಶಿಕ್ಷಣದಿಂದ ... ಹೊಂದುವುದೆ ... ಉಗಾಯುವು ... ಬಹೀರ್ ವ್ಯವಹಾರಗಳ ... ಕಾಂಗ್ರೆಸ್ಸು ... ತರಬೇತು ಗೊಳಿಸಬೇಕು ... ಬಹೀರ್ ವ್ಯವಹಾರಕ್ಕೆ ... ಜನರರ ಬೇಕು ... ಒಂದು ... ಸರ್ವಿಸ ... ಈಗಲೆ ವ್ಯವಸ್ಥೆಗಳಾಗಬೇಕು.

ಈ ತರದ ತರಬೇತಿಗಾಗಿ ಸ್ಥಾಯೀ ಕಮಿಟಿಯ ... ಬಹೀರ್ ವ್ಯವಹಾರ ಫೋರಿನ್ ... ಸಂಪಾದ ... ಈ ಸಂಪಾದಲ ವಿದ್ವಾಂಸರು ಕೆಲವರಿದ್ದು ನಿಂಥ ಸನ ... ಕುರಿತು, ಪರಿಶೀಲನೆ ... ಶೋಧನೆ ನಡೆದು, ಆಗಾಗ್ಗೆ ಪತ್ರಗಳ ಪ್ರಕಟವಾಗಬೇಕು. ಈ ಸಂಪಾದ ದ ಬಹೀರ್ ವ್ಯವಹಾರದ ಕುರಿತು ಒಂದು ಮಾಸ ... ವತ್ರಿಕೆಯು ಪ್ರಕಟವಾಗಬೇಕು. ಪ್ರವೀಣರು ದೊರೆತದಾಗ ಬಹೀರ್ ವ್ಯವಹಾರದ ಕುರಿತು ಚರ್ಚೆ ಸಭೆಗಳು ಈ ಸಂಪದ ಆಶ್ರಯದಲ್ಲಿ ನಡೆಯಿಸಲ್ಪಡಬೇಕು.

ಈ ತರದ ಸಂಸ್ಥೆಯೊಂದು ಸರಿಯಾದ ರೀತಿಯಲ್ಲಿ ನಡೆದರೆ ಸ್ವತಂತ್ರ ಭಾರತದ ಬಹೀರ್ ವ್ಯವಹಾರಕ್ಕೆ ಬೇಕಾದ ಜನರನ್ನು ತರಬೇತು ಗೊಳಿಸಬಹುದು. ಮುಂದಿನ ಡಿಪ್ಲೊಮೆಟಿಕ್ ಸರ್ವಿಸಿಗೆ ಜನರನ್ನು ತರಬೇತುಗೊಳಿಸಬಹುದು ಬಹೀರ್ ವ್ಯವಹಾರದ ಕುರಿತು ಜನರಲ್ಲಿ ಸರಿಯಾದ ಜ್ಞಾನವು ಉಂಟಾಗುವಂತೆ ಕಾರ್ಯ ಸಾಧನೆ ಮಾಡಬಹುದು.

★

## ಫೆಡರೇಶನು ರೂಢಿಗೆ ಬರಬೇಕಾದರೆ

ಫೆಡರೇಶನಿನ ಕುರಿತು 'ತ್ರಿವೇಣಿ' ಎಂಬ ಆಂಗ್ಲೇಯ ಪತ್ರಿಕೆಯು ಫೆಡರೇಶನನ್ನು ವಿರೋಧಿಸಲು ಬಲಗಳೆಲ್ಲಾ ಸಿದ್ಧವಿರುವುದಾದರೂ, ಆ ಕುರಿತು ಮತ್ತೊಮ್ಮೆ ಪುನರ್ವಿಚಾರಿಸಲು, ಕಾಂಗ್ರೆಸ್ಸು ಸಿದ್ಧವಿರುವುದು ಅದು ಮುಂದರಿಯುತ್ತಾ ಹೀಗೆನ್ನುತ್ತದೆ.

ಹಿಂದೂದೇಶದೊಡನೆ ರಾಜಿ ಮಾಡಬೇಕಾದರೆ,—ಅದೊಂದು ತಾತ್ಕಾಲಿಕ ರಾಜಿಯಾದರೂ,—ಅದಕ್ಕಾಗಿ ಕಾಂಗ್ರೆಸ್ಸೆ ತಕ್ಕುದಾದ ಸಂಸ್ಥೆಯಾಗಿರುತ್ತದೆ. ಇದಕ್ಕಾಗಿ ಇತರ ಪಕ್ಷಗಳ ಮೇಲೆ ಹೊಂದಿಕೊಂಡಿರುವುದರ ಪರಿಣಾಮ, ಬ್ರಿಟಿಶ ಸರಕಾರಕ್ಕೆ ಈ ವರೆಗಿನ ಅನುಭವದಿಂದ ತಿಳಿದ ಬರುತ್ತದೆ. ಕೇಂದ್ರ ಸರಕಾರದಲ್ಲಿ ಅಧಿಕಾರವಿರುವುದು, ಕಾಂಗ್ರೆಸ್ಸಿಗೆ ಹಿತದಾಯಕವು. ಈ ಅಧಿಕಾರದ ಪ್ರಗತಿ ... ಬಗೆಗಳು ... ತಾಗ ... 

ಅದರ ... ಕಾಂಗ್ರೆಸ್ ಸಂಸ್ಥಾ ... ಪರಿಹಾರದ ಒಗ್ಗ ಕಲೆಯ ... ಫೆಡರೇಶನು ಈಗ ಇದ್ದ ಹಾಗೆ ... ಅದನ್ನು ಕಾಂಗ್ರೆಸ್ಸು ವಿರೋಧಿಸುವುದೆಂದ ಬ್ರಿಟಿಶ ಸರಕಾರಕ್ಕೆ ತಿಳಿದೇ ಇದೆ. ಫೆಡರೇಶನ ಈಗಣ ... ಒಂದು ... ಮಾಡಿದರೆ ಅದನ್ನು ... ಕಾಂಗ್ರೆಸ್ಸಿನ ... ಅಧಿಕಾರ ... ಅದರಲ್ಲಿ ... ಅಧಿಕಾರ ... ನಲ್ಲಿ ಸಂಪೂರ್ಣ ಮಾರ್ಪಾಟೊಂದಿ ಇರದ.

★

## ವಾಯುಮಂಡಲದಿಂದ ಬೊಂಬುಗಳು

ಹಿಂದೂದೇಶದ ಗಡಿ ... ಬಿಷಪರು, ಗಗನ ... ಎಸ ... ಎಡ್ವರ್ಡ್ ಥಾಮ್ಸನ್ ಎಂಬ ... ರಿವ್ಯೂ' ಎಂಬ ಪತ್ರಿಕೆಯಲ್ಲಿ ಈ ಕೆಳಗಿನ ಅಭಿಪ್ರಾಯವನ್ನು ಬರೆದಿರ ...

ವಾಯು ಮಂಡಲದಿಂದ ... ಇದರಿಂದ ಜನರಲ್ಲಿ ವೈರತ್ವವು ಹೆಚ್ಚುತ್ತದೆ,—ವಜೀರಿಸ್ಥಾನದಲ್ಲಿ ಈ ಬೊಂಬುಗಳ ... ನಮ್ಮ ಸರಕಾರವು ಆಸ್ಯಾದಲ್ಲಿ ಅವುಗಳ ಹಾನಿಯನ್ನು ತೋರಿದಿರುವುದರಿಂದ ... ಆಶ್ಚರ್ಯವಾಗುತ್ತದೆ. ಏರೋಪ್ಲೇನಲ್ಲಿ ... ದ್ದಾದ ಇದು ಆಸ್ಯದಲ್ಲಿ ಕಾರುಣ್ಯತರದ್ದೆ?

ಆದುದರಿಂದ ವಿಮಾನಗಳಿಂದ ಬೊಂಬುಗಳನ್ನು ಸುರಿಸ ... ಕುರಿತು ನಡೆಯುವ ಅಂತರಾಷ್ಟ್ರೀಯ ಒಪ್ಪಂದದಿಂದ ಏನೂ ಪ್ರಯೋಜನವಾಗದೆಂದು ಹೇಳಬೇಕಾಗಿದೆ. ಅದರಲ್ಲೂ ಈ ಸಮಯದಲ್ಲಿ ಅದು ರೂಢಿಗೆ ಬಂದರೆ, ಆ ಒಪ್ಪಂದವು ಸರಿಯಾಗಿ ನಡೆಯುವಂತೆ ಇತರ ಜನಾಂಗಗಳು ಸ್ವಲ್ಪ ಹಿಂಜರಿಯುವವು.

★

## ಪ್ರಭಾವಶಾಲಿ ವ್ಯವಸ್ಥಾಪಕರು

ನೂತನ ರಾಷ್ಟ್ರಪತಿ ಬೋಸರು, ಎಂಬುದಾಗಿ, ಯುಸೂಫ್ ಮೆಹರಾಲಿಯವರು ರಾಷ್ಟ್ರಪತಿ ಬೋಸರ ಕುರಿತು, ಕಾಂಗ್ರೆಸ್ ಸೋಷಲಿಸ್ಟ್ ಪತ್ರಿಕೆಯಲ್ಲಿ ಬರೆದ ಲೇಖದಲ್ಲಿ ಈ ಕೆಳಗಿನ ಅಭಿಪ್ರಾಯಪಡುತ್ತಿರುವರು.

ಶ್ರೀ। ಬೋಸರು ಉಜ್ವಲ ಭಾಷಣಗಾರರು, ಅವರ ಮಾತುಗಳಲ್ಲಿ ವಿಚಾರವಿದೆ, ತತ್ವವಿದೆ ಆದರೆ, ಎಲ್ಲಕ್ಕಿಂತ ಶ್ರೇಷ್ಠ ಗುಣವೆಂದರೆ ಶ್ರೀ। ಬೋಸರು ಪ್ರಭಾವಶಾಲಿ, ವ್ಯವಸ್ಥಾಪಕರು, ಈ ಒಂದು ಗುಣದಿಂದ ಅವರು ಈ ವರೆದಲು ಅನೇಕ ಕಠಿನಗಳಿಂದ ಪಾರಾಗಿ... ವರು. ಅವರ ಈ ಗುಣದಿಂದಲೇ ಜನಾಂಗಕ್ಕೆ ಮಹಾ ಉಪಕಾರವಿದೆ.

ವ್ಯವಸ್ಥಾಪನೆಯು ಅಗತ್ಯವು ಶ್ರೀ। ಬೋಸರಿಗೆ ತಿಳಿದಷ್ಟು ಬೇರೆ ಯಾರಿಗೂ ತಿಳಿದಿಲ್ಲವೆನ್ನಬಹುದು ವ್ಯವಸ್ಥೆ ಹೊಂದಿದ ಪಕ್ಷವು ಮಾತ್ರ ಸರಿಯಾಗಿ ಕಾರ್ಯಗೊಳಿಸಬಲ್ಲದೆಂದು ಅವರು ತಿಳಿದಿರುವರು.

★

## 'ಮಾತೃ ಭಾಷೆ'

### ನಮ್ಮ ಜಿಲ್ಲೆಯಲ್ಲಿ ಶಿಕ್ಷಣದ ಭಾಷೆ ಯಾವುದು?

**'ಮಾತೃಭಾಷಾ ವಿಚಾರದಲ್ಲಿ ಶ್ರೀ। ಸಲ್ದಾನ್ಹರ ಪ್ರಶ್ನೆಗಳು ಮದ್ರಾಸು ಕೌನ್ಸಿಲಿನಲ್ಲಿ ಮಂತ್ರಿಗಳ ಉತ್ತರ**

ನಮ್ಮ ಜಿಲ್ಲೆಯಲ್ಲಿ ಭಿನ್ನ ಭಾಷಾ ಬೇರೆ ಬೇರೆಯಾಗಿರುವ ... ಸಮಾಜಗಳ ವಿದ್ಯಾರ್ಥಿಗಳಿಗೆ ಯಾವ ಭಾಷೆಯ ಮೂಲಕ ಶಿಕ್ಷಣ ಸಿಗುವಂತಾಗಬೇಕು ದ ಸರಕಾರದ ನಿರ್ಧಾರವೇನಿದೆ? ... ವ್ಯಕ್ತಿಗಳಿಂದ ಸಂಘಗಳಿಂದ ಈ ವಿಷಯವಾಗಿ ಸರಕಾರಕ್ಕೆ ಬಿನ್ನವಿಸಿದುದುಂಟೆ? ಸರಕಾರವು ಈ ಬಿನ್ನಪಗಳಿಗೆ ಏನುತ್ತರ ಹೇಳಿದುದೆ? — ಇವೇ ಶ್ರೀ। ಸಲ್ದಾನ್ಹರ ಪ್ರಶ್ನೆಗಳ.

ಶ್ರೀ। ರಾವ ಸಾಹೇಬರ (ವಿದ್ಯಾ ಇಲಾಖೆಯ ಮಂತ್ರಿಗಳ ಪರವಾಗಿ) ಉತ್ತರವು ಇಷ್ಟು ಎಲಿಮೆಂಟರಿ ಎಜ್ಯುಕೇಶನ್ ಏಕ್ಟಿನಲ್ಲಿ ನಮೂದಿಸಿರುವಂತೆ, ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲೆ ಶಿಕ್ಷಣವಾಗಬೇಕು. ಸೆಕೆಂಡರಿ ಶಾಲೆಗಳ I ರಿಂದ III ನೇ ಫಾರ್ಮುಗಳಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣವಾಗಬೇಕು ದಿನ ಏರ್ಪಾಡು. ಇದು ಬೇಕೆಂದೂ ಇತರ ಭಾಷೆಯಲ್ಲಿ ಕಲಿಸುವರೆ ಎಜ್ಯುಕೇಶನಲ್ ಆಫೀಸರರ ಅಪ್ಪಣೆ ಪಡೆಯಬೇಕೆಂದೂ ಎಜ್ಯುಕೇಶನಲ್ ರೂಲ್ಸಿನ ಕಾನೂನುಗಳಲ್ಲಿದೆ. ಭಾಷೆಯ ಬ್ಬದ ವಿಷಯಗಳನ್ನು ಮಾತೃಭಾಷೆಯಲ್ಲೇ ಅಥವಾ ಒಂದೇ ಫಾರ್ಮುಗಳಲ್ಲಿ ಏಕ್ಯವಾಗಿ ಕಲಿಸುವ ಅಪ್ಪಣೆ ಸೆಕೆಂಡರಿ ಶಾಲೆಗಳಿಗಿದೆ. ಇಂಥವೇ ಭಾಷೆಗಳಲ್ಲಿ ಕಲಿಸಬೇಕೆಂಬ ಕಟ್ಟಲೆ ಮಾಡಿಲ್ಲ. ಸ್ಥಳೀಯ ವಿದ್ಯಾ ಸಂಸ್ಥೆಗಳನ್ನು ಅನುಸರಿಸಿ ಶಾಲಾ ಅಧಿಕಾರಿಗಳು ತಮಗೆ ಅನುಕೂಲತೆ ಇರುವಂತೆ ವರ್ತಿಸಬಹುದು.

ದಕ್ಷಿಣ ಕನ್ನಡ ಜಿಲ್ಲಾ ಕೆಥೋಲಿಕ ಎಸೋಸಿಯೇಶನಿನಿಂದ ಒಂದು ಬಿನ್ನಪ ಬಂದಿದೆ. ಸರಕಾರವು ಪ್ರಾದೇಶಿಕ ಭಾಷೆಯನ್ನೆ ಒತ್ತಾಯದಿಂದ ಮಾತೃಭಾಷೆಯಾಗುವಂತೆ ಅಪ್ಪಣೆ ಕೊಡುವರೆಂದು ಅದರಲ್ಲಿ ಭಾವಿಸಿದಂತೆ ತೋರುತ್ತದೆ. ಅಂತಹ ಒತ್ತಾಯವು ಮಾಡುವ ಸಂದರ್ಭ ಉಂಟಾದಾಗ ಕಾಣೆ, ಈ ಬಿನ್ನಪದ ಸಲಹೆಗಳನ್ನು ಸರಕಾರವು ಅವಗಾಹನೆಗೆ ತಂದುಕೊಂಡಿತು.

ಈ ಜಿಲ್ಲೆಯಲ್ಲಿ ನಾಲ್ಕು ಭಾಷೆಗಳು ಮಾತೃಭಾಷೆಗಳಾಗಿವೆ. ಇವಲ್ಲಿ ಯಾವುದರ ಭಾಷಾವಾತ್ಸಲ್ಯವನ್ನು ಭಂಗಗೊಳಿಸುವ ಇರಾದೆಯು ಸರಕಾರಕ್ಕಿಲ್ಲ—ಎಂದೂ ಮಂತ್ರಿಗಳೆಂದರು.

ಹಾಗಿದ್ದರೆ,—ಶಿಕ್ಷಣದ ಭಾಷೆ ಯಾವುದೆಂದು ಬಾಯಿತು? ಕೊಂಕಣಿಯೆ, ತುಳುವೇ, ಮಲೆಯಾಳಿಯೋ ಅಥವಾ ಕನ್ನಡವೆ?

# ಒಂದೇ ಸೀಸೆಯಿಂದ

ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ'

ಸಂಸಾರ ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯುಳ್ಳಿದೆ.

ಕೇಸರಿ ಕುಟೀರಂ—ರಾಯಪೇಟೆ— ಮದ್ರಾಸು,

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

**Best Cheap Durable**

## Use only 515 Red 365 & 232 White bar soap & be satisfied.

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by* –

The West Coast Soap Factory

## ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

**ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.**

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents*

**Panchmal Krishnaya Shenoy & Son,**

Bunder, MANGALORE


# ಗೋರಕ್ಷಣೆಯಲ್ಲ-ಗೋಸೇವೆ.

★ ಮಹಾತ್ಮಾ ಗಾಂಧಿಜಿಯವರ ಭಾಷಣ. ★

ಮಹಾತ್ಮಾ ಗಾಂಧಿಯವರ ಸುಖಸ್ವಪ್ನಗಳು ಸತ್ಯವಾಗಬೇಕೆಂದು, ವಲ್ಲಭಭಾಯಿ ಪಟೇಲರ ಮೊದಲುಗೊಂಡು ಗುಜರಾತಿನ ಒಬ್ಬ ದೀನ ಸ್ವಯಂಸೇವಕನ ತನಕ ಪ್ರತಿಯೊಬ್ಬರು ಹರಿಪುರದಲ್ಲಿ ಭಗೀರಥ ಪ್ರಯತ್ನಗಳನ್ನು ಮಾಡಿದರು. ಮಹಾತ್ಮಾಜಿಯವರ ಮಾತುಗಳು ವ್ಯವಹಾರಕ್ಕೆ ಉಪಯುಕ್ತವಾದವುಗಳಲ್ಲ, ಆದರ್ಶವಾದಿಗಳು ಮಾತ್ರ ಆ ಮಾತುಗಳಲ್ಲಿ ಶ್ರದ್ಧೆಯನ್ನಿಡಬಹುದು ಎಂದು ಕೆಲಕೆಲವರು ಆಡಿಕೊಳ್ಳುತ್ತಿದ್ದುದನ್ನು ಸುಳ್ಳಾಗಿ ತೋರಿಸಬೇಕೆಂದು ಅಲ್ಲಿ ಎಲ್ಲ ಕೆಲಸಗಾರರು ಒಮ್ಮನಸ್ಸಿನಿಂದ ದುಡಿದರು ಗ್ರಾಮ ನೈರ್ಮಲ್ಯ, ಶರೀರಾರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬಹುದೆಂದು ಪ್ರತ್ಯಕ್ಷ ಉದಾಹರಣೆಯಿಂದ ತೋರಿಸಿಕೊಡಲಿಕ್ಕೆ, ಮಾಮಾ ಸಾಹೇಬ ಫಾಡ್ಕೆ ಮತ್ತು ಜಗತಾಪ ದಾವೆಯವರು, ಸ್ವತಃ ಬ್ರಾಹ್ಮಣರಾಗಿದ್ದರೂ, ಅಂಧಾಚಾರದ ವೇದಿಯ ಮೇಲೆ ವಿಚಾರ ಸ್ವಾತಂತ್ರ್ಯವನ್ನು ಬಲಿಕೊಡದೆ, ತಮ್ಮ ಹಾಗಿನ 1200 ಸ್ವಯಂ ಸೇವಕರ ಸಹಾಯ ತೆಗೆದು, ರಾಷ್ಟ್ರ ಸಭಾಧಿವೇಶನದ ಕಾಲಕ್ಕೆ ಲಕ್ಷಾಂತರ ಮಂದಿ ಕೂಡಿದ ಹರಿಪುರದಲ್ಲಿ ತೋಟಿಗಳು, ಭಂಗಿಗಳು, ರ್‍ಹಾಡಮಾಲಿಗಳಾಗಿ ಕೆಲಸ ಮಾಡಿದರು ಇವರು ಹಾರೆ, ಕುಂಟೆ, ಕಸಬರಿಗೆಗಳನ್ನು ತೆಗೆದುಕೊಂಡು ಬೆಳಗ್ಗಿನಿಂದ ಸಾಯಂಕಾಲದ ತನಕ ಓಡಾಡುವ ದೃಶ್ಯವು ಅಪೂರ್ವವೂ ಸ್ಫೂರ್ತಿದಾಯಕವೂ ಆಗಿತ್ತು ಪ್ರೇಮ ಮತ್ತು ಬುದ್ಧಿಚಾತುರ್ಯಗಳಿಂದ ಅವರು ನೆರೆದ ಜನರಿಗೆ ತಮ್ಮ ತಮ್ಮ ಗ್ರಾಮಗಳ ಮತ್ತು ಶರೀರದ ಶುಚಿತ್ವವನ್ನು ಕಾಪಾಡಿಕೊಳ್ಳುವ ರೀತಿಯನ್ನು ಸ್ವತಃ ಆಚರಣೆಯಿಂದ ತೋರಿಸಿಕೊಟ್ಟರು

ಅದರಂತೆಯೇ ಹರಿಪುರದಲ್ಲಿ ಕಾಂಗ್ರೆಸಿನ ಪ್ರತಿನಿಧಿಗಳಾಗಿಯೋ ಪ್ರೇಕ್ಷಕರಾಗಿಯೋ ಬಂದು ಉಳಕೊಂಡ ಜನರಿಗೆ ಕೇವಲ ಶುದ್ಧ ಹಾಲು ಸಿಕ್ಕುತ್ತು ಅದರಿಂದ ಹುಟ್ಟಿ ಬಂದ ಗಿಣ್ಣು ಬೆಣ್ಣೆ, ಮೊಸರು, ಮಜ್ಜಿಗೆ ತುಪ್ಪಗಳನ್ನು ಒದಗಿಸಿಕೊಡುವ ವ್ಯವಸ್ಥೆಯೂ ಕೂಡ ಬಹು ಚನ್ನಾಗಿ ನಡೆದಿತ್ತು ಇದಕ್ಕೆ ಅಲ್ಲಿ ಹಾಲುಕರೆಯುವ ಉತ್ತಮ ಜಾತಿಯ 500 ದನಗಳನ್ನು ಸಾಕಿದ್ದರು. ಗೋಪಾಲನೆಯ ಕ್ರಮವನ್ನು ಪ್ರತ್ಯಕ್ಷವಾಗಿ ಕಲಿಸಿಕೊಟ್ಟು, ಎಮ್ಮೆಗಳನ್ನು ಸಾಕುವದಕ್ಕಿಂತ ದನಗಳನ್ನು ಸಾಕುವದು ಪರಿಣಾಮದಲ್ಲಿ ಹೇಗೆ ಲಾಭಕಾರಿಯಾಗಿದೆ ಎಂಬುದನ್ನು ತೋರಿಸಿಕೊಡುತ್ತಿದ್ದರು

ಹರಿಪುರದಲ್ಲಿ ಜರಗಿದ ಗೋವುಗಳ ಪ್ರದರ್ಶನದಲ್ಲಿ ಮಹಾತ್ಮಾಜಿಯವರೂ ಒಂದು ಚಿಕ್ಕ ಭಾಷಣವನ್ನು ಕೂಡ ಮಾಡಿದರು

'ಗೋವುಗಳ ರಕ್ಷಣೆಯಲ್ಲ, ಗೋವುಗಳ ಸೇವೆ ಎಂಬುದೇ ನಮ್ಮ ಜೀವನದ ಧ್ಯೇಯವಾಗಿರಬೇಕು ಗೋವುಗಳ ದುರವಸ್ಥೆಗೆ ನಮ್ಮ ಅಜ್ಞಾನ ಮತ್ತು ಆಲಸ್ಯಗಳು ಮುಖ್ಯ ಕಾರಣಗಳಾಗಿವೆ. ಬಟ್ಟೆ ಕೈಗಾರಿಕೆ ಮೂಲವನ್ನು ಶೋಧಿಸಿದರೆ ಅದು ಚರಕದಿಂದ ಆರಂಭವಾಗುವದು ಗೊತ್ತಾಗುತ್ತದೆ ಬಟ್ಟೆ ಕೈಗಾರಿಕೆಗೆ ಚರಕವು ಜೀವಾಳವಾಗಿದೆ ಅದರಂತೆ ಹಾಲಿನ ಕೈಗಾರಿಕೆಗೆ ಗೋವುಗಳು ಜೀವಾಳವಾಗಿರುವದನ್ನು ಕಾಣಬಹುದು ಆದ್ದರಿಂದ ಗೋವುಗಳ ಸೇವೆಯು ನಮ್ಮ ಜೀವನದ ಧ್ಯೇಯವಾಗಿರಬೇಕು ನಾನು ಅಧ್ಯಯನ ಮಾಡಿದರ ಮೇಲಿಂದಲೂ, ತಜ್ಞರಿಂದ ಪಡೆದ ಸಲಹೆಗಳ ಮೇಲಿಂದಲೂ, ಗೋವು ಮತ್ತು ಎಮ್ಮೆ ಇವೆರಡನ್ನೂ ಜೀವನ ಸಂಗ್ರಾಮದಿಂದ ಬದುಕಿಸುವದು ಸಾಧ್ಯವಲ್ಲವೆಂಬುದನ್ನು ಹೇಳಬಲ್ಲೆ ಗೋವುಗಳ ರಕ್ಷಣೆಯಾದರೆ, ಒಂದು ಮಿತಿಯ ತನಕ ಎಮ್ಮೆಗಳ ರಕ್ಷಣೆಯಾಗಲೂ ಬಹುದು ಆದರೆ ಗೋವುಗಳೊಂದಿಗೆ ಎಮ್ಮೆಗಳನು ಸ್ಪರ್ಧೆಗೆ ಕಟ್ಟುವಿರಾದರೆ–ಗೋವು–ಎಮ್ಮೆ ಎರಡೂ ನಾಮಾವಶೇಷವಾಗುವವು. ಆರ್ಥಿಕ

ದೃಷ್ಟಿಯಿಂದ ಎಮ್ಮೆಗಳನ್ನು ಸಾಕುವದಕ್ಕಿಂತಲೂ ದನಗಳನ್ನು ಸಾಕುವದು ಹೆಚ್ಚು ಲಾಭಕಾರಿಯಾಗಿದೆ ಈ ವಿಷಯವನ್ನು ಮನಗಂಡುದರಿಂದಲೇ ನಮ್ಮ ಹಿರಿಯರು, ನಮ್ಮ ಅರಸರು ಗೋಬ್ರಾಹ್ಮಣ ಸಂರಕ್ಷಕರೆಂದು ಸಂಬೋಧಿಸಿದರು ಬ್ರಾಹ್ಮಣರಿಗಿಂತ ಮೊದಲಾಗಿ ಗೋವುಗಳ ಹೆಸರಿಟ್ಟುದನ್ನು ವಿಚಾರಿಸಿರಿ ಧಾರ್ಮಿಕರುವದವಿಯಲ್ಲಿರುವ ಬ್ರಾಹ್ಮಣರ ಅಸ್ತಿತ್ವವು ಕೂಡ ಗೋವುಗಳನ್ನು ಹೊಂದಿಕೊಂಡಿರುತ್ತದೆಂದು ಇದರಿಂದ ಅರ್ಥವಾಗುವದಿಲ್ಲವೆ? ಗೋಪಾಲನೆಯು ಲಾಭಕಾರಿಯಲ್ಲ, ಎಮ್ಮೆಗಳೇ ಜೀವಾಧಾರವಾಗಿರುವದೆಂದು ನೀವು ತಿಳಕೊಂಡಿದ್ದೀ[illegible] ಇದು ನಿಮ್ಮ ಭ್ರಮೆಯಾಗಿದೆ ಎಮ್ಮೆಗಳ ಮೇಲೆ ಇಡುವಷ್ಟು ಜಾಗರೂಕತೆಯನ್ನು ನೀವು ದನಗಳ ಮೇಲೆ ಇಡುವಿರಾದರೆ ಪರಿಣಾಮದಲ್ಲಿ ಗೋಪಾಲನೆಯೇ ಹೆಚ್ಚು ಲಾಭ [illegible]

ಕಟುಕರ ಕತ್ತಿಯಿಂದ ದನಗಳನ್ನು ಕಾಪಾಡಲಿಕ್ಕೆ ನಾವು ಬಹಳ ಪರಿಶ್ರಮ ಪಡುತ್ತೇವೆ ಕಟುಕರ ಕತ್ತಿಯಿಂದ ದನಗಳನ್ನು ಯಾಕೆ ಕಾಪಾಡಬೇಕು? ಕಟುಕನು ತನ್ನ ಕಸುಬನ್ನು ಮಾಡುತ್ತಿದ್ದಾನಷ್ಟೆ? ದನಗಳ ನಾಶಕ್ಕೆ ಕಟುಕರನ್ನು ದೂಷಿಸುವದಾದರೆ, ನಿಮ್ಮ ಜ್ವರಬಾಧೆಗೆ ಡಾಕ್ಟರರನ್ನು ಬೈದಂತಾಗುವದು ನಮ್ಮ ಅಲಕ್ಷ್ಯ, ಅಸಡ್ಡೆಗಳಿಂದ ನಾವು ದನಗಳನ್ನು ಕಟುಕರ ಮನೆಗೆ ಹೋಗಬಿಡುತ್ತೇವೆ ಅವುಗಳ ಕೊಲೆಗೆ ನಾವೇ ಜವಾಬುದಾರರಾಗಿರುವೆವು ದನಗಳು ಕಟುಕನ ಮನೆಗೆ ಹೋಗುವದು ಆರ್ಥಿಕ ದೃಷ್ಟಿಯಿಂದ ನಷ್ಟಪ್ರಾಯವಾಗುವಂತೆ ಮಾಡುವ ಸಾಮರ್ಥ್ಯವು ನಮ್ಮಲ್ಲಿದೆ, ದನಗಳನ್ನು ಕಟುಕನು ಕಡಿಯುವದಕ್ಕಿಂತಲೂ ನಾವು ಅವುಗಳ ಚೆನ್ನಾಗಿ ಸೇವೆ ಮಾಡಿದರೆ, ಅವು ಹೆಚ್ಚು ಲಾಭವನ್ನು ನಮಗೆ ಕೊಡುವವು, ಎಂಬೀ ಮೊದಲಾದ ಸಂಗತಿಗಳನ್ನು ಈ ಪ್ರದರ್ಶನವು ನಿಮಗೆ ಮುಂದಿಟ್ಟು ಮಾಡುವದು.''

ಮಹಾತ್ಮಾಜಿಯವರ ಈ ಭಾಷಣವು ಮುಗಿದ ಮೇಲೆ ಸಾರ್ವಜನಿಕರ ಬಗ್ಗೆ ಪ್ರದರ್ಶನವು ತೆರೆದಿಡಲ್ಪಟ್ಟಿತು ಅದು ಮಹಾತ್ಮಾಜಿಯವರ ಭಾಷಣದಲ್ಲಿ ಪ್ರತಿಪಾದಿತ ವಿಷಯಗಳನ್ನು ಕಣ್ಣವರಿಂದೆ (?) ಪ್ರತ್ಯಕ್ಷ ಸ್ಪಷ್ಟೀಕರಿಸುತಿತ್ತು

## ಬ್ರಿಟಿಷ ಗನಿ ಧನಿಗಳ ನಿಶ್ಚಯ

ವಾರಕ್ಕೆ ೩ ಪವನು ಗಂಡಸರಿಗೆ, ೧½ ಪವನು ಹೆಂಗಸರಿಗೆ ಮಜೂರಿ ಕೊಟ್ಟು, ಒಂದೊಂದು ವಾರ ರಜೆಕೊಟ್ಟೇ ತೀರಬೇಕೆಂದು ಬ್ರಿಟಿಷ ಗನಿಧನಿಗಳು ನಿಶ್ಚಯಮಾಡಿರುವರು ೬೦ ಸಾವಿರ ಕೂಲಿಯವರಿಗೆ ಇದರ ಪ್ರಯೋಜನವಿದೆ ಧನಿಗಳಿಗೆ ಕಾಲು ಮಿಲ್ಲಿಯ ಪವನು ವ್ಯಯವಾಗುವದು ಇಂತಹ ಕಾನೂನು ಇಂಡಿಯದ ಗನಿಕೂಲಿಗಳ ಹಿತಕ್ಕಾಗಿ ಎಂದಿಗೆ ಉಂಟಾಗಬಹುದು?

# ★ ವೈದ್ಯರಾಜ ★

(ಬರೆದವರು ವ ಚಿತ್ರಕಾರರು - ಬಿ. ಆರ್ ಕಾಮತ್)

**ಯೋ ನರಾಣಾಂ ಶತಂ ಹಂತಿ ಸ ಏವ ವೈದ್ಯಪದಮರ್ಹತಿ ॥**

ಕಂಸ ಪುರಾಣದಲ್ಲಿಯ ಶ್ಲೋಕವೊಂದಿದು ಇದರಂತೆ ನೂರು ಕೊಲೆಗಳನ್ನು ಮಾಡಿದವನು ಪಂಡಿತನೆನಿಸನು. ನೂರು ಮಂದಿಗೆ ಯಮಪುರಿಯ ಪಾಸ್‌ಪೋರ್ಟನ್ನು ಒದಗಿಸಿಕೊಟ್ಟನೆಂದು ಮಾತ್ರ ಇಂದು 'ವೈದ್ಯಗಿರಿ'ಯನ್ನೇರಲು ಪರವಾನಿಗೆಯನ್ನು ಪಡೆಯುವನು ಯಾವ ವೈದ್ಯನಾದರೂ ಸರಿ, ಆತನ ಡಿಗ್ರಿಗಿಗ್ರಿ ಕೇಳುವ ಅವಶ್ಯಕತೆಯೇ ಈಗಿಲ್ಲ. 'ಮದ್ದುಕೊಟ್ಟು ನೀನು ಎಷ್ಟು ಮಂದಿಯನ್ನು ಕೊಂದಿರುವೆ?' ಎಂದು ಕೇಳುವುದು. ಅಂದು ನೂರಒಂದನೆಯ ತಪ್ಪು ಶಿಶುಪಾಲನ ಶಿರಸ್ಸನ್ನು ಅಪಹರಿಸಿತಾದರೆ, ನೂರಒಂದನೆಯ ಕೊಲೆಯು ಇಂದು ಒಬ್ಬನಿಗೆ ಪಂಡಿತನೆಂಬ ಬಿರುದನ್ನು ಒದಗಿಸಿಕೊಡುವುದು.

ನನ್ನ ಅಜ್ಜನ ಎತ್ತಜ್ಜರ ಕಾಲದಲ್ಲಿ ಈಗಿನಂತೆ ರೋಗರುಜೆಗಳು ಇದ್ದಿಲ್ಲವೆಂದು ಅವರು ಆಗಾಗ್ಗೆ ಹೇಳುವುದುಂಟು ಆಗ ಊರಿಗೆ ಒಬ್ಬಿಬ್ಬರು ವೈದ್ಯರು ಇದ್ದರಂತೆ ಈಗಿನ ಎಪೆಂಡಿಸೈಟಿಸ್, ಮೆನಿಂಜೈಟಿಸ್, ಎಂಟಿರೈಟಿಸ್ ಇತ್ಯಾದಿ ರೋಗಗಳೇ ಆಗ ಇದ್ದಿಲ್ಲವಂತೆ ಅವುಗಳ ಹೆಸರುಗಳನ್ನು ಉಚ್ಚರಿಸಲು ಅವರಿಗ ಈಗಲೂ ಸರಿಯಾಗಿ ಬರುವುದಿಲ್ಲ ಅಷ್ಟೇಕೆ ಈಗ ಪ್ರತಿಯೊಬ್ಬ ತರುಣನ ಬಾಯಿಯಲ್ಲಿ ಕಾಣಸಿಗುವ ಸಿಗರೇಟ್ ಎಂಬ ಶಬ್ದವನ್ನು ಕೂಡ ಅವರಿಗೆ ಸರಿಯಾಗಿ ಹೇಳಲು ಬರವುದಿಲ್ಲ 'ಚಿಕ್ಲೇಟ' ಎನ್ನುತ್ತಾರೆ ಆಗ ಮಾರುದ್ದದ ಒಂದು ಎಲೆಯುಡಿಕೆಯ ಚೀಲ ಮತ್ತು ರಣಕಹಳೆಯ ಗಾತ್ರದ ಹುಡಿ ಬುರುಡೆಯೊಂದು ಇದ್ದವನೆಂದರೆ ಆತನು ಬಹಳ ಸುಖವಾದ ಜೀವನವನ್ನು ನಡೆಸುವವನೆಂದೇ ಭಾವನೆಯಿತ್ತು ಆ ಕಾಲದಲ್ಲಿ ಪರಂಪರಾಕಾಲವು ಬದಲಾಯಿಸುವಾಗ ಕ್ರಮ, ಕ್ರಿಯೆಗಳೂ ಬದಲಾಯಿಸಬೇಕಲ್ಲವೆ? ಹಿಂದೆ ಪಂಡಿತರು ಕಡಿಮೆ ಇದ್ದರಾದರೆ ಹಾಗೆಯೇ ರೋಗರುಜೆಗಳೂ ಕಡಿಮೆ ಇದ್ದವು (ನನ್ನ ಅಜ್ಜನ ಮಾತಿದು) ಈಗ ಪ್ರತಿ ತಿಂಗಳೂ ಹೊಸಹೊಸ ರೋಗಗಳ ಶೋಧನೆಯಾಗುತ್ತಿರುವಾಗ, ಅವುಗಳನ್ನು ಪರಿಹರಿಸುವ ವೈದ್ಯರ ಸಂಖ್ಯೆಯೂ ಹೆಚ್ಚುವುದು ಸಹಜವೇ ಸರಿ ಮಾತ್ರವಲ್ಲ ಎಲ್ ಎ ಪಿ ಎಂ ಬಿ ಬಿ ಎಸ್ ಎಂ ಡಿ ಎಂಬಿತ್ಯಾದಿ ಇಂಗ್ಲಿಷ್ ಅಕ್ಷರ ಮಾಲೆಯ ಡಿಗ್ರಿಗಳನ್ನು ಪಡೆದವರು ಒಂದು ಕಡೆ, ಆಯುರ್ವೇದ ಭೂಷಣ, ಆಯುರ್ವೇದ ಭಿಷಗಾಚಾರ್ಯ, ರಾಜ ವೈದ್ಯ ಮೊದಲಾದ ಬಿರುದಾವಳಿಗಳಿದ್ದವರು ಇನ್ನೊಂದು ಕಡೆ, ಯುನಾನಿ ವೈದ್ಯ ಶಾಸ್ತ್ರಜ್ಞರಾದ ಹಕೀಮರು ಮತ್ತೊಂದು ಕಡೆ, ಮಳೆಗಾಲದಲ್ಲಿ ಮಳೆಗಾಲದಲ್ಲಿ ಸಿಕ್ಕಿದೆಡೆಗಳಲ್ಲಿ ಬೆಳೆಯುತ್ತುವ ನಾಯಿಕೊಡೆಗಳಂತೆ ಮಲೆಯಾಳ ಪಂಡಿತರು ಮಗದೊಂದು ಕಡೆ ಹೀಗೆ ರೋಗಗಳಿಗೆ ಮದ್ದುಗಳನ್ನು ಕೊಡುವವರ ಸಂಖ್ಯೆಯು ನೆರೆಯ ನೀರಿನಂತೆ ಉಕ್ಕುತ್ತಿರಲು, ರೋಗಗಳು, ಎಷ್ಟಿದ್ದರೂ ನಾವು ಹೆದರಬೇಕೆ? 'ಬಂದದ್ದು ಬರಲಿ ಗೋವಿಂದನ ದಯೆವೊಂದಿರಲಿ' ಎಂದು ನಾವು ಮದ್ದನ್ನು ಸೇವಿಸುವಾಗ ಮಾತ್ರ ಹೇಳಿದರಾಯಿತು ಆದರೆ ಮದರಾಸ ಸರಕಾರದವರು ಇತ್ತೀಚೆಗೆ ಮೆಡಿಕಲ್ ಕೊಲೇಜನ್ನು ಮುಚ್ಚುವಂತೆ ಮಾಡಿರುವ ಆಲೋಚನೆಯು ಮಾತ್ರ ಅಯೋಚಿತವೆಂದೇ ಹೇಳಬೇಕು

ಹೀಗೆ ಪಂಡಿತರ ಕುರಿತು ಪ್ರಸ್ತಾಪಿಸುವಾಗ ಮಾತ್ರ ನಮ್ಮೂರ ವೈದ್ಯರಾಜರ ವಿಷಯು ಹೇಳದೆ ನಿರ್ವಾಹವಿಲ್ಲ ಅವರೇನು ಸಾಮಾನ್ಯರೆ? ಹೆಸರಿಗೆ ತಕ್ಕಂತೆ ವೈದ್ಯರಿಗೆಲ್ಲ ಅವರೇ ರಾಜರೆನ್ನಬಹುದು ದಿವಂಗತ ರಾಜ ವೈದ್ಯ ಪುರುಷೋತ್ತಮ ಪುರಾಣಿಕರ ಶಿಷ್ಯರವರು

ಪುರುಷೋತ್ತಮ ಪುರಾಣಿಕರೆಂದರೆ ಪ್ರಾತಃಸ್ಮರಣೀಯ ಪುರುಷರವರು ಮಹಾ ಪಂಡಿತರು ಅವರಿಗೆ ಗೊತ್ತಿಲ್ಲದ ರೋಗವಿದ್ದಿಲ್ಲ. ಅವರಲ್ಲಿ ದೊರೆಯದ ಮದ್ದು ಇದ್ದಿಲ್ಲ. ಅವರ ಕೀರ್ತಿಯು ಘಟ್ಟದ ತುದಿಗಳ ತನಕವೂ ಹಬ್ಬಿತ್ತು. ಕಾರ್ಯ ಬಾಹುಳ್ಯದಿಂದಲೋ, ನಮ್ಮೂರ ವೈದ್ಯರಾಜರ ದುರದೃಷ್ಟದಿಂದಲೋ, ಪುರುಷೋತ್ತಮ ಪುರಾಣಿಕರಿಗೆ ತನ್ನ ಶಿಷ್ಯನಿಗೆ ಹೆಚ್ಚಿನ ವಿದ್ಯೆಯನ್ನು ಹೇಳಿಕೊಡಲು ಸಾಧ್ಯವಾಗಲಿಲ್ಲ ಆದರೆ, ಮೇಧಾವಿಗಳಾದ ವೈದ್ಯರಾಜರು ಅವರಿಲ್ಲದ ಸಮಯದಲ್ಲಿ ಅವರ ಗ್ರಂಥಗಳನ್ನೆಲ್ಲಾ ಓದಿ ಅವುಗಳಲ್ಲಿಯ 'ಬದನೆ ಕಾಯಿ'ಗಳನ್ನು, ಆಯ್ದುಕೊಂಡರು. ಅಲ್ಲದೆ ಅನೇಕ ಇಂಗ್ಲಿಷ್ ವೈದ್ಯಕೀಯ ಗ್ರಂಥಗಳನ್ನು ತರಿಸಿ, ಅವುಗಳಲ್ಲಿಯ ಸಾರವೆಲ್ಲ ಹೀರಿದರು ಆತ ರಾಜವೈದ್ಯ ಪುರುಷೋತ್ತಮ ಪುರಾಣಿಕರು ಕೀರ್ತಿಶೇಷರಾದ ಬಳಿಕ ಅವರ ಶಿಷ್ಯರಾದ ವೈದ್ಯರಾಜರ ಕೀರ್ತಿಯು ಎಲ್ಲೆಲ್ಲೂ ಹಬ್ಬಿತು. ಅವರು ಮದ್ದುಕೊಟ್ಟರೆಂದರೆ ಯಾವ ರೋಗವಾದರೂ ಸರಿ ಅದು ಟಮ್ಮನೆ ಗುಣ— ಇಲ್ಲವೆ ಮದ್ದು ಸೇವಿಸಿದವನು ಹೆಣ—ಅವರಿಗಂತು ಕಿಸೆ ತುಂಬ ದುಡ್ಡು ಹಣ



ನಮ್ಮೂರ ವೈದ್ಯರಿಗೆ ಆಯುರ್ವೇದದ ಮಾಹಿತಿಯಲ್ಲದೆ, ಇಂಗ್ಲೀಷು ಮದ್ದುಗಳ ಪರಿಚಯವೂ ಇದ್ದಿತು ಇದಕ್ಕೆ ಸಾಕ್ಷಿಯೆಂದರೆ ಅವರ ಕಿಸೆಯಿಂದ ಬಿಲದಲ್ಲಿದ್ದ ಕೇರೆಹಾವಿನಂತೆ ತಲೆಯನ್ನು ಮಾತ್ರ ಹೊರಗೆ ಹಾಕಿ ಇಣಿಕಿ ನೋಡುವ ಸ್ಟೆತೆಸ್ಕೋಪು. ಅದರ ಸಹಾಯದಿಂದ ಅವರು ಯಾವ ರೋಗವನ್ನಾದರೂ ಗೊತ್ತು ಹಚ್ಚುತಿದ್ದರು

ಒಂದು ದಿನ ಓರ್ವ ಹಳ್ಳಿಗನು ತನಗೆ ಜೋರು ತಲೆಸಿಡಿತವೆಂದು ಮದ್ದಿಗೆ ಅವರಲ್ಲಿಗೆ ಬಂದನು. ಒಡನೆ ನಮ್ಮ ವೈದ್ಯರಾಜರು ಕಿಸೆಯಿಂದ ಸ್ಟೆತೆಸ್ಕೋಪನ್ನು ತೆಗೆದು, ಅದರ ಕಾಲುಗಳನ್ನು ರೋಗಿಯ ಕಿವಿಗಳಲ್ಲಿ ಸಿಕ್ಕಿಸಿ ಅದರ ಮೇಲ್ಭಾಗವನ್ನು ಎದೆಗೆ ಒತ್ತಿ ಹಿಡಿದ ಕೊಳವೆಯನ್ನು ಆತನೊಡನೆ ಹೇಳಿದರು ರೋಗಿಯು ಹಾಗೆಯೇ ಹಿಡಿದುಕೊಂಡು ನಿಂತನು ಹತ್ತು ಹದಿನೈದು ನಿಮಿಷಗಳು ಕಳೆದುವು ಬಳಿಕ ವೈದ್ಯರಾಜರು ರೋಗಿಯನ್ನು ಕುರಿತು, 'ವಿಶೇಷವೇನಾದರೂ ನಿಮಗೀಗ ತೋರುತ್ತದೆಯೆ?' ಎಂದರು 'ವಿಶೇಷವೇನಿಲ್ಲ ಆದರೆ ಗಡಿಯಾರದ ಒಡಿತದಂತೆ ಕಿವಿಗಳಿಗೆ ಡಬ ಡಬ ಎಂಬ ಶಬ್ದವು ಕೇಳಿಸುತ್ತದೆ ರೋಗಿ ಎಂದ ಅದೇ ನಾನು ಕೇಳಿದ್ದು ತಲೆಸಿಡಿತದ ಶಬ್ದವದು ಒಡಿತವು ಹೇಗಿದೆ, ಮೆಲ್ಲಗಿದೆಯೋ ಜೋರಿದೆ?'

'ಡಬಡಬ ಎಂದು ಜೋರು ಶಬ್ದವಾಗುತ್ತದೆ'

'ಛೀ ಛೀ, ರೋಗವು ಹದ್ದು ಮೀರಿದಂತಿದೆ ನೀವು ಮೊದಲೇ ಏಕೆ ಬರಲಿಲ್ಲ ನಿಮ್ಮಂಥವರ ಅವಸ್ಥೆಯೇ ಹೀಗಲ್ಲವೆ. ಕಸ್ತು ಎಂದೊಡನೆ ವೈದ್ಯರಾಜರಲ್ಲಿಗೆ ಬರುವುದು ಅದರ ಮೊದಲು ಆ ಪಂಡಿತ ಈ ಪಂಡಿತ ಎಂದು ಇಲ್ಲದ ಮದ್ದುಮಾಡುವುದು'' ಸ್ವಲ್ಪ ಗದರಿಸಿ ನುಡಿದರು ವೈದ್ಯರಾಜರು. 'ಸ್ವಾಮಿ, ನನಗೆ ತಲೆ ಸಿಡಿತವು ಪ್ರಾರಂಭವಾಗಿಯೇ ಹತ್ತಿಪ್ಪತ್ತು ನಿಮಿಷಗಳಾಯಿತಷ್ಟೆ ಮುಂಚೆಯೇ ಬರುವುದೆಂದರೆ ಹೇಗೆ?'

'ಹೂಂ, ಇರಲಿ. ಇದನ್ನು ಸಿಲ್ಲಿಸುವುದೊಂದು ದೊಡ್ಡ ಕೆಲಸವೆ? ನಾನೊಂದು ಕ್ವಾಥ ಕಷಾಯವನ್ನು ಕೊಡುತ್ತೇನೆ. ಅದನ್ನು ದಿನಕ್ಕೆ ಮೂರು ಬಾರಿಯಂತೆ ಒಂದು ವಾರದ ತನಕ ತೆಗೆದುಕೊಳ್ಳಬೇಕು. ಕೂಡಲೆ ಗುಣವಾಗುತ್ತದೆ'

'ತಲೆಸಿಡಿತ ನಿಂತರೂ ತೆಗೆದುಕೊಳ್ಳಬೇಕೆ?'

'ಹೌದಾದು ಒಂದು ವಾರದ ತನಕ ತೆಗೆದುಕೊಂಡರೆ ಇಂಜಕ್ಷನಿನ ಹಾಗೆ ಮತ್ತೆ ಯಾವಾಗಲೂ ಇಂತಹ ಬೇನೆಯೇ ಆಗುವುದಿಲ್ಲ'

ಎಂದು ಹೇಳಿ ವೈದ್ಯರಾಜರು ಒಂದು ಬಾಟ್ಲಿಯಲ್ಲಿ, ಏನೋ ಒಂದು ಕಸಾಯವನ್ನು ತುಂಬಿ ಕೊಟ್ಟರು ಮದ್ದನ್ನು ಪಡಕೊಂಡು ಆ ರೋಗಿಯು ಕೆಳಗಿಳಿಯುವಾಗ ಇನ್ನೊಬ್ಬನು ಕಿವಿಯನ್ನು ಒತ್ತಿ ಹಿಡಿದುಕೊಂಡು ಮೇಲೆ ಬಂದನು ಆತನನ್ನು ಕೂತುಕೊಳ್ಳಲು ಹೇಳಿ, ಬಂದ ಕಾರಣವನ್ನು ವೈದ್ಯರಾಜರು ವಿಚಾರಿಸಿದರು. ರೋಗವು ಕಿವಿ ನೋವೆಂದೊಡನೆ, ರೋಗಿಗೆ ಅಲ್ಲಿಯೇ ಒಂದು ಮಂಚದ ಮೇಲೆ ಮಲಗಲು ಹೇಳಿ, ಆತನ ಕಿವಿಯನ್ನು ಬಿಟ್ಟು ಬಾಕಿ ಪ್ರತಿಯೊಂದು ಅವಯವವನ್ನು ಪರೀಕ್ಷಿಸಿ ನೋಡಿದರು.

ಬಳಿಕ ಅವರು ಒಂದಿಷ್ಟು ಹತ್ತಿಯನ್ನು ತೆಗೆದ ತನ್ನ ಕೋಟಿನ ಕಿಸೆಯಲ್ಲಿ ಅವಿತಿದ್ದು ಪೆನ್ಸಿಲಿನ ಆ ಹತ್ತಿಯ ತಾಸಿಗೆಯಲ್ಲಿ ಮುಳುಗಿಸಿ, ಅದನ್ನು ಮುದುಡಿ ರೋಗಿಯ ಕಿವಿಯಲ್ಲಿ ತುರುಕಿಸಿದರು ನಂತರ ಎಕ್ಸ್ರೇ ಎಂಬ ಮದ್ದನ್ನು (ಅವರು ಹೇಳಿದ ಮದ್ದಿದು) ಆ ಹತ್ತಿಯ ಮೇಲೆ ಸುರಿದರು. ಒಂದು ಹತ್ತು ನಿಮಿಷಗಳಾಗಲು ಆ ಹತ್ತಿಯನ್ನು ಮೆಲ್ಲಗೆ ತೆಗೆದು ಬಿಡಿಸಿ ನೋಡಿದರು. ಹತ್ತಿಯ ಮಧ್ಯದಲ್ಲಿ ಒಂದು ಉದ್ದನಷ್ಟು ಗಾತ್ರದ ಸಣ್ಣ ವರ್ಣದ ಒಂದು ತಿಗಣೆಯು ಕಳೇಬರವು ಇತ್ತು ಅದನ್ನು ಅಂಗೈಯಲ್ಲಿಟ್ಟು ರೋಗಿಯನ್ನು ಕುರಿತು (ನೋಡಿದಿರಾ, ಇಂತಹ ಕ್ರಿಮಿಗಳು ಕಿವಿಯಲ್ಲಿರುವಾಗ ಕಿವಿ ನೋವಾಗದೆ ಹೇಗಿದ್ದೀತು?

(ಐನೇ ಪುಟಕ್ಕೆ ಮುಂದರಿಯುವದು)



# ವಿದ್ಯುತ್ ವ್ಯವಸಾಯ

## ಕೃಷಿಕರು ಅಗತ್ಯ ತಿಳಿಯಬೇಕಾದ ವಿದ್ಯೆ

1. ವಿದ್ಯುತ್ ವ್ಯವಸಾಯವೆಂದರೇನು? ಎಂಬ ವಿಷಯವನ್ನು ಸಂಕ್ಷೇಪವಾಗಿ ಸರ್ವರಿಗೂ ತಿಳಿಸುವುದಕ್ಕೆ ಪ್ರಯತ್ನಿಸುವೆನು. ಪಾಶ್ಚಾತ್ಯ ದೇಶಗಳಲ್ಲಿಯೂ, ಅಮೇರಿಕ ದೇಶಗಳಲ್ಲಿಯೂ ವಿದ್ಯುತ್ ಶಕ್ತಿಯನ್ನು ಎಲ್ಲಾ ತರದ ವ್ಯವಸಾಯಗಳಿಗೆ ಸಹಾಯಕವಾಗಿ ಉಪಯೋಗಿಸಿ ಬೆಳೆಯನ್ನು ಇಮ್ಮಡಿಯಾಗಿ ಮಾಡಿಕೊಳ್ಳುತ್ತಾರೆಂಬ ವಿಷಯ ಎಲ್ಲರಿಗೂ ವರ್ತಮಾನ ಪತ್ರಗಳ ಮೂಲಕ ಗೊತ್ತೇ ಇರಬಹುದು ಆದರೆ ಅದನ್ನು ಕಣ್ಣಾರೆ ಕಾಣಲಿಕ್ಕಾಗಲೀ, ಆ ವಿಧವನ್ನು ನಮಗೆ ಸಾಧ್ಯಪಡಿಸುವರಿಯಾಗಲೀ ಈ ನಮ್ಮ ಭರತಖಂಡದ ರೈತರಿಗೆ ಸಾಧ್ಯಮಾಡಿ ತೋರಿಸಿದವರೂ ಇಲ್ಲ ಆ ವಿಧದ ವ್ಯವಸಾಯಕ್ಕೆ ಅಲ್ಲಿ ಅವರು ಲಕ್ಷೋಪಲಕ್ಷ ಹಣಗಳನ್ನು ಖರ್ಚು ಮಾಡಿ ಎಷ್ಟೋ ಕಷ್ಟದಿಂದ ಆಕಾಶವನ್ನು ಭೇದಿಸುವರೋ ಎಂಬಷ್ಟಿನ ಯಂತ್ರಗಳನ್ನು ತಯಾರಿಸಿ ವಿದ್ಯುತ್ ಶಕ್ತಿಯನ್ನು ಹುಟ್ಟಿಸಿ ಅದನ್ನು ಹೊಲ ತೋಟಗಳಿಗೆ ಒಯ್ದುಕೊಂಡು ಲಕ್ಷಗಟ್ಲೆ ಎಕ್ರೆ ಸ್ಥಳಗಳನ್ನು ವೃದ್ಧಿಗೊಳಿಸಿರುವರು. ಈ ನಮ್ಮ ಭರತಖಂಡದಲ್ಲಿ ಅಲ್ಲಿಯವರ ಹಾಗೆ ಲಕ್ಷಾಧಿಪತಿಗಳೂ ಇಲ್ಲ ಸಾವಿರಾರು ಜನರು ಒಟ್ಟುಕೂಡಿ ಲಕ್ಷಗಳನ್ನು ಸೇರಿಸಿ, ಅಲ್ಲಿಯವರು ಮಾಡಿದ ಹಾಗೆ ಕಷ್ಟವೆಚ್ಚಗಳನ್ನು ಸಾಧಿಸಿಕೊಳ್ಳುವವರೂ ಇರುವುದಿಲ್ಲ ಹೀಗಾಗಿ ನಮ್ಮ ಸಣ್ಣ ರೈತರು ವಿದ್ಯುತ್‌ಶಕ್ತಿಯನ್ನು ತಮ್ಮ ಸಣ್ಣ ಸಣ್ಣ ಹೊಲಗಳಲ್ಲಿಯೂ, ತೋಟಗಳಲ್ಲಿಯೂ ಉಪಯೋಗಿಸುವುದು ಹೇಗೆ ಎಂಬ ವಿಚಾರವನ್ನು ಆಲೋಚಿಸಲು ಕೂಡ ನಮ್ಮ ವಿದ್ಯಾವಂತರು ಈ ವರೇಗೆ ಪ್ರಯತ್ನಿಸಿದ್ದು ಸಹಾ ಇಲ್ಲ ಈ ವಿಷಯವನ್ನು ಆಲೋಚಿಸಲು ವಿದ್ಯುತ್ ಶಕ್ತಿಯನ್ನು ಸರಿಯಾಗಿ ಕಲಿತು ತಿಳಿದುಕೊಂಡವರೇ ಅರ್ಹರು ಎಷ್ಟೋ ಮಂದಿ ಕಲಿತವರಿದ್ದರೂ ಇಷ್ಟರ ವರೆಗೆ ಯಾರೊಬ್ಬನಿಗಾದರೂ ಆ ವಿದ್ಯೆಯನ್ನು ನಮ್ಮ ಸಣ್ಣ ರೈತರಿಗೆ ಅನುಕೂಲಿಸುವಂತೆ ದಾರಿಯನ್ನು ಒದ್ದಿಸಿ ತೋರಿಸಲಾರದೆ ಕತ್ತಲೆ ಕೋಣೆಯಲ್ಲೆ ಇದ್ದ ಹಾಗೆ ಇತ್ತು

2 ಆದರೂ ನಮ್ಮ ಭರತ ಖಂಡದಲ್ಲಿ ಆಗಾಗ್ಯೆ ಎಲ್ಲಾ ವಿಷಯಗಳನ್ನು ತಿಳಿದ ಮಹಾತ್ಮರು ಜನಿಸುತ್ತಲೇ ಇರುತ್ತಾರೆ ಅದೇ ಪ್ರಕಾರ ಮೇಲೆ ಹೇಳಿದ ವಿದ್ಯುತ್‌ಶಕ್ತಿಪ್ರಚಾರದ ಸಲುವಾಗಿ ಒಬ್ಬರು ಜನಿಸಿರುವಂತೆ ತೋರುತ್ತದೆ ಅವರು ಈಗ ವಿದ್ಯುತ್‌ಶಕ್ತಿಯನ್ನು ಸುಲಭ ರೀತಿಯಿಂದ ವ್ಯವಸಾಯದ ಎಲ್ಲಾ ವಿಷಯಗಳಲ್ಲಿ ಏನೂ ಖರ್ಚು ಇಲ್ಲದೆ ಉಪಯೋಗಿಸಿಕೊಳ್ಳುವರೆ ಉಪಾಯಗಳನ್ನು ಕಂಡು ಹಿಡಿದಿರುತ್ತಾರೆ ಆ ಉಪಾಯಗಳನ್ನೆಲ್ಲಾ ಸ್ವತಹಾ ಉಪಯೋಗಿಸಿ ಸಾಧಿಸಿರುತ್ತಾರೆ ಅಲ್ಲದೆ ಅದನ್ನು ಇತರರಿಗೂ ತೋರಿಸಿಕೊಟ್ಟು ಅದರಿಂದ ಅನೇಕರು ಉಪಯೋಗಪಟ್ಟಿರುತ್ತಾರೆ ಅವರು ತನ್ನ ವಿದ್ಯಾನಿಪುಣತೆಯ ಫಲವನ್ನು ತನ್ನ ಸ್ವಂತ ಲಾಭಕ್ಕಾಗಿ ಮಾಡುವಂಥಾದ್ದಲ್ಲ ಖರೇ ಲೋಕೋಪಕಾರಕ್ಕಾಗಿಯಲ್ಲದೆ ಬೇರೆ ಯಾವ ಉದ್ದೇಶ್ಯವೂ ಇರುವುದಿಲ್ಲ ಅವರು ಸ್ವಲಾಭಕ್ಕಾಗಿ ತನ್ನ ವಿದ್ಯಾಫಲವನ್ನು ಉಪಯೋಗಿಸುವರೆ ಅಗತ್ಯವುಳ್ಳವರೂ ಅಲ್ಲ ಅವರ ವಿದ್ಯಾನಿಪುಣತೆಯ ಈ ಚುಟುಕಾದ ವಿದ್ಯಾಫಲವನ್ನು ಯೂರೋಪು, ಅಮೇರಿಕ ಮೊದಲಾದ ಬಹಿರ್ದೇಶಗಳಲ್ಲಿಯ ಸಣ್ಣ ಸಣ್ಣ ರೈತರು ಅವರಿಂದ ತಿಳಕೊಂಡು ಉಪಯೋಗಿಸಿ ಪ್ರಯೋಜನಪಡುತ್ತಲೂ ಇದ್ದಾರೆ.

3. ಈ ಮಹಾಪುರುಷರ ಹೆಸರು ಡಾಕ್ಟರ್ ಎಸ್. ಎಸ್ ನೆಹರು ಆಗಿರುತ್ತದೆ. ಇವರು ಅಲ್ಲಹಾಬಾದಿನಲ್ಲಿ ಬಿ. ಎ. ಬಿ. ಎಸ್. ಸಿ. ಡಿಗ್ರಿಗಳನ್ನು ಪಡೆದು ಕೇಂಟರ್ಬರಿಯಲ್ಲಿ ಎಂ ಎ ಡಿಗ್ರಿ ಪಡೆದು ಜರ್ಮನಿಯ ಹೆಡ್ಡೆಬರ್ಗಿನಲ್ಲಿ ಪಿ ಎಚ್. ಡಿ ಡಿಗ್ರಿ ಹೊಂದಿ, ಪ್ಯಾರಿಸಿನಲ್ಲಿ ಎಲ್. ಇ. ಡಿ. ಪಾಸಾಗಿ ಮತ್ತು ಬೆಲ್ಜಿಯ್ಮಿನ ಬ್ರುಸ್ಸೆಲ್ಸಿನಲ್ಲಿ ಎಲ್. ಎಲ್. ಡಿ. ಡಿಗ್ರಿ ಸಂಪಾದಿಸಿ, ನಮ್ಮ ಇಂಡಿಯನ್ ಐ ಸಿ ಎಸ್ ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟು ಪ್ರಕೃತ ಉತ್ತರ ಹಿಂದೂಸ್ಥಾನದ ಸಂಯುಕ್ತ ಸಂಸ್ಥಾನದಲ್ಲಿ ಮೈನಪುರಿ ಜಿಲ್ಲೆಗೆ ಜಿಲ್ಲಾ ಕಲೆಕ್ಟರ್ (ಜಿಲ್ಲಾ ಮೆಜಿಸ್ಟ್ರೇಟ)ರಾಗಿರುತ್ತಾರೆ ಹೀಗಿರುತ್ತಾ ತನ್ನ ಹುದ್ದೆಯ ಕೆಲಸ ಜ್ಯಾರಿಗಾಗಿ ಇಡೀ ಜಿಲ್ಲೆಯೆಲ್ಲಾ ತಿರುಗುತ್ತಾ ಹೋದಹೋದಲ್ಲೆಲ್ಲಾ ವಿದ್ಯುತ್ ವ್ಯವಸಾಯದ ವಿಷಯ ಬೋಧನೆ ಕೊಡುತ್ತಾ ಅದನ್ನು ಯಾವ ರೀತಿ ಮಾಡಬೇಕೆಂಬುದನ್ನು ವಿವರವಾಗಿ ಬೋಧಿಸಿ ಎಲ್ಲರಿಗೂ ಕಣ್ಣಾರೆ ತೋರಿಸುತ್ತಾ, ತನ್ನ ಖಾಲಿ ಇರುವ ಸಮಯವನ್ನೆಲ್ಲಾ ಅದರಲ್ಲೇ ಕಳೆಯುತ್ತಿದ್ದಾರೆ. ಈ ಬಗ್ಗೆ ಯಾವ ಪ್ರತಿಫಲವನ್ನೂ ಕೋರದೆ ಪೂರ್ಣ ನಿಗರ್ವಿಯಾಗಿ ವಿಶೇಷ ಆತುರದಿಂದ ಕೇಳುವವರಿಗೆಲ್ಲಾ ಪೂರ್ಣ ಸಮಾಧಾನ ಕೊಡುತ್ತಾರೆ

4 ಇವರು ಮೇಲೆ ಹೇಳಿದ ಹಾಗೆ ಮಾತ್ರವಲ್ಲದೆ ಆ ಬಗ್ಯೆ ಪ್ರತಿ ತಿಂಗಳಲ್ಲಿ ಒಂದು ಕ್ಲಾಸನ್ನು ಏರ್ಪಡಿಸಿ ಉಮೇದ್ವಾರರನ್ನು ತರಬೇತಿ ಮಾಡಿ, "ಸರ್ಟಿಫಿಕೇಟು" ಸಹಾ ಕೊಟ್ಟು ಅವರವರ ಸ್ಥಾನಕ್ಕೆ ಕಳುಹಿಸುತ್ತಿದ್ದಾರೆ ಆ ಬಗ್ಯೆ ಅಲ್ಲಿಗೆ ಮೈನಪುರಿಗೆ ಬರುವ ವಿದ್ಯಾರ್ಥಿಗಳಿಗೆ ಯಾವ ಖರ್ಚು ಇಲ್ಲದೆ ಕ್ಲಾಸು ನಡಿಸಿ ತರಬೇತು ಮಾಡುತ್ತಾರೆ ವಿದ್ಯಾರ್ಥಿಗಳಿಗೆ ಅಲ್ಲಿಯ ಖರ್ಚು ದಿನಕ್ಕೆ ಊಟದ ಬಗ್ಯೆ ಅಣೆ 4 ಮಾತ್ರ ವಸತಿ, ಜಾಗೆ, ಓಳುಗಳು, ಲೆಕ್ಚರುಗಳು, ಕಣ್ಣಾರೆ ತರಬೇತಿ —ಇವೆಲ್ಲಕ್ಕೂ ಏನೂ ಖರ್ಚು ಇಲ್ಲ ಕೊಡುವ ಸರ್ಟಿಫಿಕೇಟಿಗೆ ಕೂಡ ಏನೂ ಕೊಡಬೇಕಾದುದಿಲ್ಲ ವಿದ್ಯಾರ್ಥಿಗಳು ಅಲ್ಲಿಗೆ ಹೋಗುವದಿದ್ದರೆ ಪ್ರಯಾಣದ ಖರ್ಚು ಮಾತ್ರ ವಿದ್ಯಾರ್ಥಿಗಳೇ ಸಹಿಸಬೇಕು ಹೀಗೆಂದು ಅವರ ಸಹಿಯುಳ್ಳ ಕಾಗದವು ನನ್ನ ಹತ್ತಿರ ಉಂಟು ಇಷ್ಟರ ವರೇಗೆ ಅವರು ನಾಲ್ಕು ಕ್ಲಾಸು ನಡಿಸಿ 275 ಜನರಿಗೆ ಸರ್ಟಿಫಿಕೇಟು ಕೊಟ್ಟು ಕಳುಹಿಸಿರುತ್ತಾರೆ 5ನೇ ಕ್ಲಾಸು ಅವರು ನನಗೆ ಬರೆದ ಕಾಗದದ ಸಮಯ ನಡೆಯುತ್ತಿತ್ತು 6ನೇ ಕ್ಲಾಸು ಇದೇ ಫೆಬ್ರವರಿ ತಾರೀಕು 13ರಿಂದ 20ಕ್ಕೆ ನಡೆಯುತ್ತಲಿದೆ ಕ್ಲಾಸು ಮತ್ತು ಎಲ್ಲಾ ಅದರ ಬೋಧನೆ ಕೆಲಸವು ಒಂದೇ ವಾರದೊಳಗೆ ಮುಗಿಯುವದು ಅಲ್ಲಿಗೆ ಹೋಗಿ ಬರುವ ಖರ್ಚು ಮತ್ತು ಅಲ್ಲಿಯ ಊಟದ ಖರ್ಚು ದಿನಕ್ಕೆ 4 ಅಣೆಯಲ್ಲದೆ ಬೇರೆ ಖರ್ಚು ಇರುವುದಿಲ್ಲ

5 ಉತ್ತೇಜನ ಪಡುವವರು ಅಲ್ಲಿಗೆ ಹೋಗಿ ತರಬೇತಿಪಟ್ಟು, ಆ ವಿದ್ಯೆಯ ಫಲವಾಗಿ ತನ್ನ ವ್ಯವಸಾಯದ ಬೆಳೆಯನ್ನು 10ಕ್ಕೆ 20 ಮಟ್ಟಿಸಿಕೊಂಡು ತನ್ನ ಹಾಗಿನ ನೆರೆಯವರಿಗೆ ತರಬೇತು ಕೊಡುತ್ತಾ ಉಪಕಾರ ಸಹಾ ಮಾಡಿ ಸರ್ವರ ವೃದ್ಧಿಗೆ ಕಾರಣಭೂತರಾಗಬಹುದು ಆ ವಿದ್ಯುತ್ ಉಪಾಯಗಳನ್ನು ಜನರ ಮತ್ತು ಪಶುಪಕ್ಷಿಗಳ ರೋಗನಿವಾರಣೆ, ಆರೋಗ್ಯಾಭಿವೃದ್ಧಿಗಳ ಬಗ್ಯೂ ಉಪಯೋಗಿಸಬಹುದು

6. ಅವರ ಕಾಗದವನ್ನು ನೋಡಬೇಕೆಂದಿದ್ದರೆ ಅಂಥವರಿಗೆ ತೋರಿಸಲು ಸಿದ್ಧನಾಗಿರುತ್ತೇನೆ.

K. Shiva Rao,
*Regd Govt. Medical Pensioner,*
Udipi, ೨ K


ಆರೋಗ್ಯವೇ ಪ್ರಥಮಸ್ಥಾನವನ್ನು ಹೊಂದುತ್ತದೆ.

ನಿಮ್ಮ ಯುವಕರನ್ನು ವಿಷಕ್ರಿಮಿಗಳಿಂದ ರಕ್ಷಿಸಬೇಕಾದರೆ ಯಾವಾಗಲೂ ಲೈಫ್‌ಬಾಯ್ಸೋ ಉಪಯೋಗಿಸಿ

ನಿಮ್ಮ ಮಕ್ಕಳ ಆರೋಗ್ಯವನ್ನು ಕೆಡಿಸುವ ವಿಷ ಕ್ರಿಮಿಗಳನ್ನು ನೀವು ನೋಡಲಾರಿರಿ ಆದರೆ ಕೈಯ್ಯಿಗೆ ಅದು ಯಾವಾಗಲೂ ಅಂಟಿಕೊಂಡು ಇರುತ್ತದೆ ಅದರಲ್ಲೂ ವಿಶೇಷವಾಗಿ ಕೊಳಚೆ ಇನ್ನಾದರೂ ನಿಮ್ಮ ಮಕ್ಕಳು ಆಟವಾಡಿದನಂತರ ಅವರ ಕೈ ಕಾಲುಗಳು ಎಷ್ಟು ಧೂಳಿನಿಂದ ತುಂಬಿಕೊಂಡಿರುವುದನ್ನು ಗಮನಿಸಿರಿ. ಆ ಧೂಳಿನಲ್ಲಿರಬಹುದಾದ ವಿಷಕ್ರಿಮಿಗಳೆಷ್ಟೆಂಬುದನ್ನು ಯೋಚಿಸಿ. ನಿಮ್ಮ ಮಕ್ಕಳನ್ನು ಇದರಿಂದ ಕಾಪಾಡಿ ಅವರು ಯಾವಾಗಲೂ ಲೈಫ್‌ಬಾಯ್ ಉಪಯೋಗಿಸುವಂತೆ ನೋಡಿಕೊಳ್ಳಿರಿ ಇದರ ನಿರ್ಮಲಕಾರಿಯಾದ ನೊರೆಯು ಬಹುಬೇಗ ಎಲ್ಲಾ ಕೊಳೆಯನ್ನು ಹೋಗಿಸಿ ಮಕ್ಕಳನ್ನು ಆರೋಗ್ಯವಾಗಿರುವಂತೆ ಮಾಡುತ್ತದೆ.

ಲೈಫ್ ಬಾಯ್ ಸಾಬೂನು
LIFEBUOY SOAP



ಇಂಡಿಯಾದಲ್ಲೇ ವನಸ್ಪತಿಗಳ ಉತ್ತಮವಾದ ಎಣ್ಣೆಯಿಂದ ತಯಾರಿಸಿರುವುದು.

LEVER BROTHERS (INDIA) LIMITED
X L 442/1 89
KANARESE

ಇನೋಸ್ ಫ್ರುಟ್ ಸಾಲ್ಟ್





ಅವಳು ಯಾವಾಗಲೂ ಅಸ್ವಸ್ಥಳಾಗಿದ್ದು ಉಲ್ಲಾಸವಿಲ್ಲದೆ ಮುಂಗೋಪಿಯಾಗಿದ್ದು ಅವಳು ಕಾಹಿಲೆಯಾಗಿದ್ದು ಈಗ ಆವಳಿಗೆ ಆರೋಗ್ಯಾವಸ್ಥೆಗೆ ಬರಲು ಶಕ್ತಿಯೇ ಇರಲಿಲ್ಲ





"ಇನೋ" ಅವಳಿಗೆ ಹೊಟ್ಟೆಯೊಳಗಿನ ವಿಷಗಳನ್ನು ತೆಗೆದು ಪುನಹ ಆರೋಗ್ಯಾವಸ್ಥೆಗೆ ತಂದಿತು

ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ



ನೀವು ಆರೋಗ್ಯದಲ್ಲಿರುವಿರಿ ಇನೋಸ್‌ಫ್ರುಟ್‌ಸೋಲ್ಟ್ 'Eno's Fruit Salt' ಇದು ಹೊಟ್ಟೆಯ ಅಸ್ವಸ್ಥಗಳ ಬಗ್ಯೆ ಮನೆಯ ಖಾಯಂ ಔಷಧವಾಗಿದ್ದು ಅಜೀರ್ಣ, ಮಲಬದ್ಧತೆ ತಲೆನೋವು, ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ ನೀವು ಈ ಉತ್ತಮವಾದ ಪೇಯವನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು ಇದೇ ಆರೋಗ್ಯವು
ಇನೋ 'ENO' ಇದಕ್ಕೆ ಸೌಮ್ಯ, ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿದೆ
ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ 'Eno's Fruit Salt' ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ
ಇನೊಸ್‌ಫ್ರುಟ್ ಸೋಲ್ಟಿನಲ್ಲಿ 'Eno's Fruit Salt ಒಳ್ಳೇ ಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರಿರುತ್ತವೆ
EX 13

Eno's 'Fruit Salt'

## ವೈದ್ಯರಾಜ

(ಹಿಂದಿನ ಪುಟದಿಂದ ಮುಂದುವರಿದುದು.)

ನೀವು ಇಂದೇ ಬಂದುದು ಬಹಳ ಒಳ್ಳೆಯದಾಯಿತು. ಇನ್ನು ಒಂದೆರಡು ದಿನಗಳು ಹೋದುದಾದರೆ ಖಂಡಿತವಾಗಿಯೂ ನಿಮಗೆ ಪಿಸಾಚ್ಛಿಯಾಗುತಿತ್ತು' ಎಂದರವರು ಇದೆಲ್ಲವನ್ನೂ ದೂರದಲ್ಲಿ ಕೂತು ನೋಡುತಿದ್ದ ನಾನು, ಮದ್ದಿಗೆಂದು ಬಂದವನು ಹೇಳದೆ ಕೇಳದೆ ಅಲ್ಲಿಂದ ಪರಾರಿಯಾದೆನು

ಇಂಥಹ ವೈದ್ಯರಾಜರಿಗೆ ಯೋಗ್ಯ ಪಾರಿತೋಷಕವನ್ನು ಕೊಡುವುದು ತನ್ನ ಕರ್ತವ್ಯವೆಂದು ಬಗೆದು ವೊನ್ನೆ ತಾನೆ ಹೊಸಪೇಟೆಯ ಈಶ್ವರಯ್ಯನವರು ಅವರನ್ನು ಬಹುಮಾನಿಸಿರುವರು ಅವರಿಗೆ ಸೌಖ್ಯವಿಲ್ಲವೆಂದು ನಾನು ಕೆಲವು ದಿನಗಳ ಹಿಂದೆಯೇ ಕೇಳಿದ್ದೆನು ಕಳೆದ ಶನಿವಾರ ಸ್ವಲ್ಪ ಹೆಚ್ಚಾಯಿತು ಆವಾಗ ಅವರ ಮಡದಿ ಪಾರ್ವತಮ್ಮನವರು ಹೆದರಿ ವೈದ್ಯರಾಜರನ್ನು ಕರೆಯಲು ಸ್ವತಃ ಹೋದರು ಬಂದವಳು ಪಾರ್ವತಿ ನೋಡಲು ಹೋಗುವುದು ಈಶ್ವರನನ್ನು ವೈದ್ಯರಾಜರು ಒಳ್ಳೆನನ್ನುವುದೆಂತು? ಮನೆಯ ಒಳ ಕೋಣೆಯಲ್ಲಿ ರೋಗಿಯು ಮಲಗಿದ್ದನು ರೋಗದ ಚಿಹ್ನೆಗಳೆಲ್ಲವನ್ನು ಒಂದೊಂದಾಗಿ ಪಾರ್ವತಮ್ಮನವರು ವೈದ್ಯರಾಜರೊಡನೆ ಹೇಳಿದರ ಅವರ ಬಾಯಿಯಿಂದ ಆಗಾಗ್ಗೆ (ಹೂಂ ಹೂಂ' ಎಂಬ ಉದ್ಗಾರವು ಹೊರಡುತ್ತಿದ್ದರೂ, ಅವರ ಕಿವಿಗಳನ್ನು ಮುಚ್ಚಿ, ಕಣ್ಣುಗಳನ್ನು ತೆರೆದು ಪಾರ್ವತಮ್ಮನವರ ಸೌಂದರ್ಯದ ಸತ್ವವನ್ನು ಹೀರುತಿದ್ದರು ಪಾರ್ವತಮ್ಮನವರು ಮಾತನಾಡಿದ್ದು ಬಹಳ ಹೊತ್ತಾದರೂ ನಮ್ಮ ವೈದ್ಯರಾಜರಿಗೆ ಅದು ಕೇಳಿಯಲೇ ಇಲ್ಲ

(ಅವರು ಅಲ್ಲಿ ಮಲಗಿರುವರು. ಒಮ್ಮೆ ಬೇಗನೇ ಪರೀಕ್ಷೆ ಮಾಡಿದರೆ ಉತ್ತಮ ವಿತ್ತು) ಎಂದು ಮೂರನೆಯ ಬಾರಿ ಪಾರ್ವತಮ್ಮನವರು ಸ್ವಲ್ಪ ಗಟ್ಟಿಯಾಗಿ ಹೇಳಿದಾಗಲು, ನಿದ್ದೆಯಿಂದ ಎಚ್ಚೆತ್ತವರಂತೆ ಆದೀತು, ಆದೀತು' ಎಂದು ಹೇಳಿ, ವೈದ್ಯರಾಜರು ಆಸೆಯಿಂದ ಸ್ಟೆತೆಸ್ಕೋಪವನ್ನು ತೆಗೆದು ಕಿವಿಗಳಿಗೆ ಸಿಕಿಸಿ, ಪಾರ್ವತಮ್ಮನವರಿದ್ದೆಡೆಗೆ ಮುಂದುವರಿದರು.

'ರೋಗಿಯು ನಾನಲ್ಲ, ಅವರ ಅಲ್ಲಿ ಮಲಗಿರುವರು' ಪಾರ್ವತಮ್ಮನವರು ತುಸು ಹಿಂದೆ ಸರಿದು ಅಂಜುತಂಜುತ ಅಂದರು

'ನೀವು ಅವರ ಅರ್ಧಾಂಗಿಯಲ್ಲವೆ? ನಿಮ್ಮನ್ನು ಪರೀಕ್ಷಿಸಿ ನೋಡಿದರೆ ಸಾಕಾಗುವುದು ಸುಮ್ಮನೆ ಅವರಿಗೇಕೆ ತ್ರಾಸಕೊಡುವುದು' ಎಂದು ಹೇಳಿ ವೈದ್ಯರಾಜರು ಅವರ ನಾಡಿಪರೀಕ್ಷೆಯನ್ನು ಮಾಡಲು, ಕೈಯನ್ನು ಹಿಡಿದುಬಿಟ್ಟರು

ಪಾರ್ವತಮ್ಮನವರು ಆಕಸ್ಮಿಕವಾಗಿ ಘಟಿಸಿದ ಈ ಮಾನಾಪಹಾರ ಪ್ರಸಂಗದಿಂದಾಗಿ ದಂಗು ಬಡೆದಂತವರಾಗಿ, ಒಮ್ಮೆ ದೀನ ದೃಷ್ಟಿಯಿಂದ ತನ್ನ ಗಂಡನ ಕಡೆಗೆ ನೋಡಿ, ವೈದ್ಯರಾಜರ ಹಿಡಿತದಿಂದ ಬಿಡಿಸಿಕೊಳ್ಳಲು ಒದ್ದಾಡತೊಡಗಿದರು ಕಾಮಾತುರರಾದ ವೈದ್ಯರಾಜರು ತನ್ನ ಸುತ್ತಮುತ್ತಲಿನ ಪ್ರಪಂಚದ ಪರವೆಯೇ ಇಲ್ಲದೆ, ಆಲಿಂಗನಕ್ಕಾಗಿ ಕೈಗಳನ್ನು ಮುಂದೆ ಚಾಚಿದರು

ಆಗಲೆ ಅವರ ಸೊಂಟದ ಮೇಲೊಂದು ಬಲವಾದ ಪೆಟ್ಟು ಬಿತ್ತು ವೈದ್ಯರಾಜರು ನೆಲದ ಮೇಲೆ ಮಗುಚಿಬಿದ್ದರು ತನ್ನನ್ನು ಹೊಡೆದವನು ಯಾರೆಂದು ಹಿಂದಿರುಗಿ ನೋಡಿದರು ಸ್ವಲ್ಪ ಸಮಯದ ಹಿಂದೆ ಸರಿಯಾಗಿ ಎದ್ದು ಕುಳಿತುಕೊಳ್ಳಲು ತ್ರಾಣವಿಲ್ಲದೆ ಹಾಸಿಗೆಯ ಮೇಲೆ ಹೊರಳಾಡಿಕೊಂಡಿದ್ದ ಈಶ್ವರಯ್ಯನವರು ತಾಂಡವನೃತ್ಯರನ್ನು ಮಾಡುತ್ತಿದ್ದರು. ವೈದ್ಯರಾಜರು ಎದ್ದು ನಿಲ್ಲಲು ನೆಲಕ್ಕೆ ಒಂದು ಕೈಯನ್ನು ಊರಿದರು ಸ್ಸೈ! ಬಿತ್ತು ಇನ್ನೊಂದು ಪೆಟ್ಟು, ಅವರ ಮುಸುಡಿಯ ಮೇಲೆ ತುಟಿಗಳ ಎಡೆಯಿಂದ ಕೆಂಪು ಹಾಲು ತುಸು ಸುರಿಯಿತು, ಇನ್ನು ಅಲ್ಲಿ ನಿಂತರೆ ತನಗೆ ಉಳಿಗಾಲವಿಲ್ಲವೆಂದು ಬಗೆದು, ವೈದ್ಯರಾಜರು ವಿದ್ಯುದ್ವೇಗದಿಂದ ಆ ಮನೆಯಿಂದ ಹೊರಬಿದ್ದರು. ಊರಿನಿಂದ ಪರಾರಿಯನ್ನು ಓಡಿಸುವಂತೆ ಈಶ್ವರಯ್ಯನವರೂ ಪಾರ್ವತಮ್ಮನವರೂ ಅವರನ್ನು ಮನೆಯ ಹೆಬ್ಬಾಗಿಲಿನ ತನಕ ಅಟ್ಟಿಕೊಂಡು ಬಂದರು

ಈಗಲೂ ಹೊಸಪೇಟೆಯ ನೆನಪು ಅವರ ತಲೆಯಲ್ಲಿ ಹೊಸತಾಗಿಯೇ ಇರುವುದು.

---




ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

GONO KILLER ORIGINAL

ವ್ಯಾಧಿಗೆ ಸಿದ್ಧೌಷಧ

ಇಂದಿನ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ ಕಳೆವು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಯಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರುಃ ಡಾಕ್ಟರ್ ಡಿ ಎನ್. ಜಸಾನಿ, ವಿಠ್ಠಲ ಭಾಯಿ ಪಟೇಲ್ ರೋಡ್, ಮುಂಬಯಿ 4.

*Sole Manufacturer* **Dr D. N JASANI,** Vithalbhai Patel Road, BOMBAY 4.

## ನೋಟೀಸು

ತಾರೀಕು 13-2-1938ರಲ್ಲಿ ಜರಗಿದ ದಿ ಕುಂದಾಪುರ ಬೇಂಕ್ ಲಿಮಿಟೆಡ್ ಇದರ ಬೋರ್ಡ್ ಆಫ್ ಡೈರೆಕ್ಟರರ ಮೀಟಿಂಗಿನಲ್ಲಿ ಪಾಸಾದ ಪ್ರಥಮ ನಿರ್ಣಯಕ್ಕನುಸಾರವಾಗಿ ಸದ್ರಿ ಬೇಂಕಿನ ಎಲ್ಲಾ ಮೆಂಬರರಿಂದ ಪಾಲುಗಳ ಬಾಬ್ತು ಪಾಲು ಒಂದರ ಬರತಕ್ಕ ರೂ 5ರ ಪೈಕಿ ಪಾಲು ಒಂದರ 2½ಯನ್ನು ಕರಬೇಕಾಗಿ ನಿಶ್ಚಯಿಸಿಯದೆ ಆ ಬಾಬ್ತು ಪಾಲುಗಾರರಿಂದ ಪಾಲು ಒಂದರ ಬರತಕ್ಕ ರೂಪಾಯಿ 2-8-0ನ್ನು ಈ ತಾರೀಕಿನಿಂದ ಒಂದು ತಿಂಗಳ ಅವಧಿಯೊಳಗೆ ಅಂದರೆ ತಾ 31-3-38ರ ಒಳಗೆ ಕುಂದಾಪುರದ ಕೊಡ್ಗಿಯವರ ಕಟ್ಟೋಣದಲ್ಲಿರುವ ಸದ್ರಿ ಬೇಂಕಿನ ರಿಜಿಸ್ಟರ್ಡ್ ಆಫೀಸಿನಲ್ಲಿ ಬೇಂಕಿನ ಆಫೀಸು ಸಮಯದಲ್ಲಿ (ರಜಾ ದಿನಗಳ ಹೊರತು) ತಪ್ಪದೆ ಪಾವತಿ ಮಾಡಿ ರಶೀದಿ ಪಡೆಯಬೇಕಾಗಿ ತಿಳಿಯಪಡಿಸೋಣಾಗಿರುತ್ತದೆ,

ಕುಂದಾಪುರ,
21-2-1938.

**Surendranath Kamti**
*Secretary.*

# ಮದ್ರಾಸು ಸರಕಾರದ ಬಜೇಟಿನ ವಿಮರ್ಶೆ.

## ಎಸೆಂಬ್ಲಿಯಲ್ಲಿ ಎತ್ತಿದ ಕೆಲವು ಆಕ್ಷೇಪಗಳೂ ಸಮಾಧಾನಗಳೂ

### ಮುಖ್ಯ ಮಂತ್ರಿಗಳ ಸಂಪೂರ್ಣ ಸಮರ್ಪಕ ಉತ್ತರ.

ಕಳೆದ ಶನಿವಾರದ ವರೆಗೆ ಎಸೆಂಬ್ಲಿಯಲ್ಲಿ ಬಜೇಟಿನ ವಿಮರ್ಶೆ ನಡೆಯಿತು. ಹೊಗಳಿದವರು ಹಲವರು; ತೆಗಳಿದರು ಕೆಲವರು. ಹೊಗಳಿಕೆ ತೆಗಳಿಕೆಗಳೆರಡನ್ನೂ ಪರಿಗಣನೆಗೆ ತಂದು, ಒಂದು ವಿಚಾರವನ್ನೂ ಮರೆಯದೆ ಸಮರ್ಪಕವಾದ ಉತ್ತರವನ್ನು ಎರಡೂವರೆ ತಾಸಿನ ಭಾಷಣ ಮೂಲಕ ಕೊಟ್ಟವರು ಮಂತ್ರಿಗಳವರು.

ಬಜೇಟೆಂದರೆ ಅಂಕೆಸಂಖ್ಯೆಗಳ ಗೊಂದಲವೆಂದು ನೀರಸವಾದ ರೀತಿಯಲ್ಲಿ ಒಕ್ಕಣಿಸುವುದೇ ಇದು ವರೆಗಣ ಕ್ರಮವಾಗಿತ್ತು. ಶ್ರೀ. ಆಚಾರ್ಯರ ಕೌಶಲವು ಅದರಲ್ಲಿಲ್ಲ. ಅವರು ಅತಿ ಕಠಿಣ ಸಮಸ್ಯೆಯನ್ನೂ ತುಂಡರಿಸಿ ವಿಭಜಿಸಿ ಮೂಲದಿಂದ ಸೂಕ್ಷ್ಮವಾಗಿ ಕ್ರಮವಾಗಿ ವಿವರಿಸಿ, ಚಮತ್ಕಾರದ ಮಾತುಗಳಲ್ಲಿ ವಿರುದ್ಧ ವಿಚಾರಗಳನ್ನು ಅಲ್ಲಲ್ಲೇ ಕತ್ತರಿಸಿ, ಪರಿಹಾಸಗೊಳಿಸಿ, ಮುಗಿಸಿಬಿಡತಕ್ಕ ಪ್ರವೀಣರು. ಸತ್ಯಾಗ್ರಹದ ಭಿತ್ತಿಯ ಮೇಲೆ ಬಜೇಟಿನ ತತ್ವಗಳನ್ನು ಕಟ್ಟಿ, ಅದರ ಮೇಲೆ ಎಂತಹ ರಚನೆಯನ್ನು ಅವರು ನಿರ್ಮಾಣಮಾಡಬಲ್ಲರೆಂದರೆ, ಅವರ ಮೆದುಳಲ್ಲಿ ಗಲಿಬಿಲಿಯ ಗಡಿಬಿಡಿಗೆ ಅವಕಾಶವೇ ಇಲ್ಲದಿರುವ ಕಾರಣ, ಸುಂದರವಾದ ಭಾಷೆಯಲ್ಲಿ ಕೋಮಲವಾದ ವ್ಯಂಗವಚನಗಳಿಂದ ಅವರು ಎಲ್ಲವನ್ನೂ ಸುಲಭವಾಗಿ ವಿವರಿಸಿ, ತಮ್ಮ ತತ್ವವನ್ನೇ ಸ್ಥಾಪಿಸಬಲ್ಲರು. ಅತಿ ಕ್ರೂರವಾದ ಟೀಕೆಯನ್ನು ಅವರು ಎಷ್ಟು ಸಮಾಧಾನವಾಗಿ ವಿಮರ್ಶಿಸಿ ಪ್ರತಿಟೀಕಿಸಬಲ್ಲರೆಂದರೆ, ಎದುರುವಾದಿಗಳು ಅಲ್ಲಲ್ಲೇ ಬಾಡಿ, ಆದದ್ದೇಕೆಂದು ಚಕಿತರಾಗಿ ನಾಲಗೆ ಕಚ್ಚಿಕೊಳ್ಳಬೇಕಾಗುವುದು.

ವಿರೋಧವಿಮರ್ಶೆ ಮಾಡಿದವರೆಲ್ಲ ಅರೆಮನಸ್ಸಿನಿಂದ ಮಾತಾಡಿದಂತೆ ವ್ಯಕ್ತವಾಗುವುದು; ಅವರೇ ಕೆಲವರಾದರೂ, ಧೈರ್ಯದಿಂದ ನುಡಿದಂತಿಲ್ಲ, ಎದುರುನುಡಿಯಬೇಕೆಂದೆ ತಾನೆ ನುಡಿದಂತೆ ತೋರುವುದು. ಆದರೂ ಇಂತಹ ವಿಮರ್ಶೆಗೂ ಇರಿ ಒತ್ತಿ ಬಿಡದೆ ಮುಖ್ಯ ಮಂತ್ರಿಗಳು ಸಮಾಧಾನಕೊಟ್ಟಿರುವರು. ಎಲ್ಲ ಆಕ್ಷೇಪಗಳನ್ನು ನಾಲ್ಕು ವರ್ಗಗಳಲ್ಲಿ ವಿಭಜಿಸಬರುವುದು. ಜನಾಭ್ಯುದಯಕ್ಕೆ ಕೊಡಬೇಕಾಗಿ ತೋರಿದಷ್ಟು ಧನ ಸಹಾಯಮಾಡಿಲ್ಲ. ಇದೇ ಅಭ್ಯುದಯಕ್ಕಾಗಿ ಕೆಲಸಮಾಡಲು ಸಾಲ ಎತ್ತುವುದೂ ಸರಿಯಲ್ಲ; ಮದ್ಯನಿರೋಧದಿಂದ ಜಯವಿಲ್ಲ, ಆಯ ಇಳಿದು, ತೆರಿಗೆಗಳು ಹೆಚ್ಚಬೇಕಾಗುವುದು; ಕೂಲಿಜನರ ಸಮಸ್ಯೆಯಿಂದ ಸ್ಟ್ರೈಟರು ಮೊದಲಾದವರಿಗೆ ಇನ್ನಾವ ಗೊಂದಲವುಂಟಾಗಬಹುದೋ ಎಂಬ ಅಂಜಿಕೆ. ಮುಖ್ಯ ಇವೇ ನಾಲ್ಕು ಕಣ್ಣಿಗೆ ತೋರುವ ಆಕ್ಷೇಪಗಳು. ಇವೆಲ್ಲ ಆಕ್ಷೇಪಗಳಲ್ಲಿ ಯಾವ ಹುರುಳೂ ಇಲ್ಲವೆಂದು ಮಂತ್ರಿಗಳು ಆಡಿದ ಒಳಕ ಆಕ್ಷೇಪವೆತ್ತಿದವರಿಗೆ ಚೆನ್ನಾಗಿ ತಿಳಿದಿರಬಹುದು ಉತ್ತರಕೊಡುವಾಗಲೆಲ್ಲ, ಇವರು 'ತಾನೆಂದುದು ಹಾಗಲ್ಲ, ಹೀಗೆ' ಎಂದು ಪ್ರತ್ಯುತ್ತರ ತಪ್ಪಿಸನೋಡಿದುದೇ ಸಾಕ್ಷಿ. ಮದ್ಯಪಾನ ನಿವಾರಣೆಯೆಂಬುದು ಇನ್ನೂ ನಿರ್ಮೂಲನವೇ ಸರಿಯೆಂದು ಸರಕಾರದ ಖಂಡಿತ ಅಭಿಪ್ರಾಯವಾಗಿದೆಂದು ಇನ್ನಷ್ಟು ವ್ಯಕ್ತವಾಯಿತು. ಚಿನ್ನದ ಮೊಟ್ಟೆ (ಕಂದಾಯ) ಇಡುತಿದ್ದ ಹೇಂಟೆಯನ್ನು (ಮದ್ಯಪಾನ) ಕೊಂದಂತಾಯಿತು ಎಂದು ನುಡಿದ ಮಿ| ಬೋವರ್ ಸಾಹೆಬರಿಗೆ, ಮಂತ್ರಿಗಳು, 'ಈ ದೇಶದಲ್ಲಿ ಕೆಲಸಗಾರನೇ ಚಿನ್ನದ ಮೊಟ್ಟೆ ಇಡುತ್ತಿರುವ ಹೇಂಟೆ; ಮದ್ಯಪಾನದಿಂದ ಈ ಹೇಂಟೆಯ ಹೊಟ್ಟೆಯನ್ನೇ 'ಬಿಗಿಯ ಲಿತ್ತಿಸುವುದು ಉತ್ತಮವಲ್ಲ, ಏಕೆಂದರೆ, ಹಾಗೆ ಮಾಡಿದರೆ ಅದು ಹೇಗೆ ಮೊಟ್ಟೆ ಇಡಬಲ್ಲುದು? ಎಂದು ಕೇಳಿದರು. ಮದ್ಯಪಾನ ನಿವಾರಣೆಗೆ ವಿರುದ್ಧಭಾವವನ್ನು ಸುಮ್ಮನೆ ತಳೆವುದು ವ್ಯರ್ಥವೆಂದು ಮುಂದೆ ತಿಳಿಯಿತು. ಇನ್ನು ಈ ನಿವಾರಣಾಕಾರ್ಯವು ಇನ್ನೆರಡು ಜಿಲ್ಲೆಗಳಿಗೆ ಹರಡುವಾಗ ಎಡುರಾಳಿಗಳು ಇರಲಾರದಂತಾಯಿತು.

ಪ್ರಜಾರಂಜಕವಾದ ಕೆಲಸವನ್ನು ಮಾಡಿಯೂ, ಅವುಗಳಿಂದ ಸರಕಾರವು ಲಾಭಾಂಶವನ್ನು ಪಡೆವಂತೆ ಹೂಡಿಟ್ಟು, ಸಾಲಗಳನ್ನು ಎತ್ತುವುದಾದರೆ, ಅಂತಹ ಸಾಲಕ್ಕೆ ಹಣವು ಸುಲಭವಾಗಿ ಸಿಗುವಾಗ, ಸರಕಾರದ ಆಡಳಿತವು ಉತ್ತಮವೆಂದು ಅರ್ಥವಾಗದೆ? ಉಳಿತಾಯವೆಂದು ಹಣ ಕೂಡಿಸಿಟ್ಟುದು ಮತ್ತೆಲ್ಲಿ ಹಿಂದೆ ಉಳಿದಿದೆ? ಪ್ರಜಾಭ್ಯುದಯಕ್ಕಾಗಿ ಹಣ ವ್ಯಯಿಸದೆ ಕೂಡಿಸಿಟ್ಟುದು ಸುಮ್ಮನೆ ಮೆಸ್ಟನ್ ಎವಾರ್ಡಿನಂತೆ ನಮ್ಮ ಸರಕಾರವು ಇಂಡಿಯಾ ಸರಕಾರಕ್ಕೆ ಹಣ ಕೊಟ್ಟೇಹೋಯಿತು. ಇಂಡಿಯಾ ಸರಕಾರವು ಹಿಂದೆ ಕೊಟ್ಟಿದ್ದ ಪಜಾ ಹಣವೂ ಕೋಟಿಗಟ್ಟಲೆಯಾಗಿ ಯಾವ ಪ್ರಜಾ ಕಾರ್ಯಗಳಿಗೆ ಬಿದ್ದುದುಂಟು? ಸಾಲ ತೆಗೆದುಕೊಂಡು ಲಾಭಕರವಾದ ಉದ್ಯಮಗಳಲ್ಲಿ ವಿನಿಯೋಗಿಸುವಾಗ ಅದು ಸಾಲವಾಗಿರದೆ ಮೂಲವೇ ಎಣಿಸುವುದು. ಜನಹಿತಕ್ಕಾಗಿ ಪ್ರತಿಯೊಂದು ಕಾಸನ್ನೂ ವ್ಯಯಿಸುವ ಪ್ರಮಾಣವಚನವುಳ್ಳ ಶ್ರೀ| ಆಚಾರ್ಯರು ಸಾಲವೆತ್ತುವುದರಲ್ಲಿ ಅಡಚಣೆ ಇಲ್ಲ, ಆಕ್ಷೇಪವಿರಬಾರದು. ಹಣ ವ್ಯಯಿಸಬೇಕಾದರೂ, ಸಾಲ ಎತ್ತುದರ ವಿನಿಯೋಗವು ಸರಿಯಾಗಿ ಆಯಿತೇ ಎಂದು ತಿಳಿಯಬೇಕಾದರೂ ಎಸೆಂಬ್ಲಿಯು ಪ್ರಶ್ನೆ ಹಾಕಿ ನೋಡಬಾರದೆ? ವ್ಯಯದ ಮೇಲೆ ತೀಕ್ಷ್ಣ ದೃಷ್ಟಿಬಾರದೆ? ಅನುಕೂಲವಿರುವಾಗ, ದೇಶಹಿತವರ್ಧನೆಗಾಗಿ ಲಾಭದೊರೆವಂತೆ ಸಾಲವನ್ನೆತ್ತುವುದು ಖಂಡಿತವಾಗಿಯೂ ಸರಕಾರದ ಉದ್ದೇಶವಾಗಿರಬೇಕೆಂದು ಉತ್ತಮ ನಾಗರಿಕ ಸರಕಾರಗಳ ಮಾದರಿಯೇ ತೋರಿಸುತ್ತಿಲ್ಲವೆ? ಧೈರ್ಯ ವಿವೇಕಗಳಿಲ್ಲದಿರುವಲ್ಲಿ ಮಾತ್ರ ಎದೆಹೆದರಬೇಕು. ಪ್ರಜಾಭ್ಯುದಯ ಕಾರ್ಯಗಳಿಗೆ ಸರಕಾರವು ವ್ಯಯಿಸುವುದು ಕಡಿಮೆ, ಎಂಬುದಕ್ಕೆ ಇತರ ಪ್ರಾಂತ್ಯಗಳೊಡನೆ ಹೋಲಿಸುವಾಗ, ಬಂಗಾಳವು 274 ಲಕ್ಷ, ಬೊಂಬಾಯಿ 271 ಲಕ್ಷ, ಸಂಯುಕ್ತಪ್ರಾಂತ್ಯವು 386 ಲಕ್ಷ ವ್ಯಯಿಸುವುದಾಗಿ ನಿರ್ಧರಿಸಿರುವಾಗ, ನಮ್ಮ ಸರಕಾರವು 432 ಲಕ್ಷವನ್ನು ಕಳೆದ ವರ್ಷವೂ 490 ಲಕ್ಷವನ್ನು ಈ ವರ್ಷವೂ ವ್ಯಯಿಸುವ ಏರ್ಪಾಡುಮಾಡಿರುವುದು ಸ್ತುತ್ಯವಲ್ಲವೆ, ನಿಂದನೀಯವೆ? ಮದ್ರಾಸುಪ್ರಾಂತ್ಯದ ಗೌರವವನ್ನು ಕಾಪಾಡುವುದು, ಕೆಲಸವೆ ಗೌರವವನ್ನು ಸೂಚಿಸುವಂತೆ ಏರ್ಪಡಿಸುವುದು ಪರಿಣಾಮದಿಂದ ಉದ್ದೇಶವನ್ನು ನಿಜವಾಗಿಯೂ ಸ್ತುತ್ಯವಾದುದೆಂದು ರುಜುಪಡಿಸುವುದು, ಇಷ್ಟೇ ನಮ್ಮ ಮಂತ್ರಿಮಂಡಲದ ಸಾಧನೆಯಾಗಿದೆ.

ಮಜೂರರ ವಿಚಾರವಾಗಿ ಆಕ್ಷೇಪವೆತ್ತಿದುದನ್ನೆ, ಆಕ್ಷೇಪವೆತ್ತಿದವರಿಗೇ ಅನ್ವಯಿಸುವಂತೆ ಉತ್ತರದಲ್ಲಿ ತೋರಿಸಿ ಬುದ್ಧಿವಾದ ಸಾರಲಾಗಿದೆ. ಮುಷ್ಕರಗಳಲ್ಲಿ ಹೆಚ್ಚಿನವಕ್ಕೆ ಧನಿಗಳೇ ಕಾರಣರು ಎಂದು ವಿಚಾರಮಾಡಿದಲ್ಲಿ ತಿಳಿದುಬಂದಿದೆ. ಕಾರ್ಖಾನೆಗಳ ಧನಿಗಳೂ ಆಡಳಿತಗಳೂ ಯೂನಿಯನುಗಳನ್ನು ಅಂಗೀಕರಿಸಿ ಅವುಗಳ ಪ್ರತಿನಿಧಿಗಳೊಡನೆ ತಮ್ಮ ಕಾರ್ಖಾನೆಯ ಅಭ್ಯುದಯಕ್ಕೆ ಅಗತ್ಯತೋರುವ ಸೂಚನೆಗಳನ್ನು ಪಡೆದು ವಿವೇಕದಿಂದ ಅನುಕೂಲರಾಗಿ ನಡೆದುಕೊಂಡರೆ, ಶಾಂತಿಯು ಒಮ್ಮತವೂ ಉಂಟಾಗಿ ಮುಷ್ಕರಗಳಿಗೆ ಆಸ್ಪದವೇ ಇರಲಾರದು. ಮಜೂರರ ಪ್ರಶ್ನೆಯೇ ಮಾಯವಾದೀತು. ಇದನ್ನೆಲ್ಲದೆ ಇದ್ದರೆ ಕಾರ್ಖಾನೆಯ ಮಾಲಿಕರು ತಮ್ಮ ಮೇಲೆ ಗಂಡಾಂತರಗಳನ್ನು ಸೆಳೆದುಕೊಳ್ಳುವಂತಾದೀತು. ಟೀಕಿಸುವುದು ಸುಲಭ; ಅವೇ ಟೀಕೆಗಳಂತೆ ನಡೆದುಕೊಳ್ಳಲು ಒಪ್ಪುವುದು ಕಷ್ಟವೆಂಬುದನ್ನು ಧನಿಗಳು ತಿಳಿದುಕೊಳ್ಳುವುದು ಅಗತ್ಯ. ಆಡಿದಂತೆ ನಡೆಯಲೊಪ್ಪದ ಧನಿಗಳಿರುವಲ್ಲೇ ಮುಷ್ಕರಗಳು ಹೆಚ್ಚಾಗುವುವು.

ಹಿಂದೆ ತಾತ್ಕಾಲಿಕ ಮಂತ್ರಿಗಳಾಗಿದ್ದ ಸರ್ ಪನ್ನೀರಸೆಲ್ವಮ್‌ರವರ ಮಾತೇ ಮಾತು. 'ಕೇಂದ್ರಸರಕಾರದಿಂದ ಸುಮಾರು 20 ಲಕ್ಷ ರೂಪಾಯಿ ಇನ್ಕಮ್‌ಟೇಕ್ಸಿನ ಅಂಶವಾಗಿ ದೊರೆಯದಿದ್ದಲ್ಲಿ ಏನಾಗುತ್ತಿತ್ತೋ ಹೇಳಬರುವಂತಿಲ್ಲ! ಎಂದು ಅವರು ಟೀಕಿಸಿದ್ದರು. ಹಣ ದೊರಕುದು ದೈವವಶಾತ್ ದೊರಕುದೆಂಬಂತೆ ಮಾತಾಡಿಕ್ಕು. ಮಂತ್ರಿಗಳು 'ಕದ್ದುದನ್ನು ಮರಳಿಕೊಟ್ಟಷ್ಟು ಪುಣ್ಯವಿದೆ, ಈ ಗ್ರೇಂಟಿಗೆ ಆ ಹಣವನ್ನು ನಾವು ಹೇಗೆ ವ್ಯಯಿಸುತ್ತೇವೆಂದಾದರೂ ನೋಡಬಾರದೆ? ಹಿಂದಣ ಸರಕಾರವು ಮಾಡಿಟ್ಟ ಹಣದ ವಿನಿಯೋಗದಿಂದ ನಾವು ಪುಣ್ಯಗಳಿಸುವುದಿಲ್ಲ. ಹಿಂದಣ ಮಂತ್ರಿಗಳು ಏನು ಮಹಾ ಉಪಕಾರಮಾಡಲು ಮೆಸ್ಟನ್ ಎವಾರ್ಡಿನ ಹಣವನ್ನು ಉಪಯೋಗಿಸಿದರು ನಮ್ಮ ಬಳಿಯಲ್ಲಿದ್ದರೆ ಪ್ರಾಂತ್ಯದಲ್ಲೆಲ್ಲಿಯೂ ಮದ್ಯಪಾನವುಳಿಯುತ್ತಿತ್ತೇ? ತೀರ್ವೆಯನ್ನು ಎಂದೋ ಇಳಿಸುತಿದ್ದೆವು. ಅಷ್ಟು ಕೋಟಿ ಹಣ ವ್ಯರ್ಥವಾಗಿ ಏಕೆ ಹೋಯಿತು? ಎಂದು ಕೇಳಿದರು. ಮಾತ್ರವಲ್ಲದೆ, ನಷ್ಟವನ್ನುಂಟುಮಾಡುವ ಯಾವ ಉದ್ಯಮಕ್ಕಾದರೂ ನಾವು ಸಾಲ ಎತ್ತದಂತೆ ಮಾಡಿರಿ ಎಂದು ಪ್ರಾರ್ಥಿಸಿದರು.

(೧೦ನೇ ಪುಟಕ್ಕೆ ಮುಂದುವರಿಯುವುದು)


"NACET" BLADES




ನೆಸೆಟ್ಟನ್ನು ಪಡೆಕೊಂಡು ಕಡಿಮೆ ಬೆಲೆಯ ಖಾತ್ರಿ ಬ್ಲೇಡುಗಳನ್ನು ಪಡೆಯಿರಿ. ಅವುಗಳ ಕಡಿಮೆ ಬೆಲೆ ಯುಕ್ತ ವಿಶೇಷ ಗುಣಗಳಿಂದಾಗಿ, ಅವುಗಳು ಜನಪ್ರಿಯವಾಗಿವೆ. ಬ್ಲೇಡುಗಳಿಗೆ ಬಾಳಿಕೆ ಬಹಳ. ಮೂರು ಗೂಟದ ರೇಜರುಗಳಲ್ಲಿ ಉಪಯೋಗಿಸಬಹುದು.

**7 ಆಣೆಗಳಿಗೆ ಬ್ಲೇಡುಗಳು 10**

INV


## ಪ್ರಕಟಣೆ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 20/38.

1. ಥೈಯದಿನ ಕುಂಞಿ ಬ್ಯಾರಿ, 2. ಪಳ್ಳಿ ಕುಂಞಿ ಬ್ಯಾರಿ, 3. ಮ್ಯಾನೆ ಬ್ಯಾರಿ, 4. ಬೀಪಾತುಮ್ಮ, 5. ಮಮ್ಮದೆ (ಮ್ಯಾನರ) 6. ಖದಿಜುಮ್ಮ (ಮ್ಯಾನರ) 7. ಅಸ್ಮಮ್ಮ (ಮ್ಯಾನರ) ಮೃತಪಟ್ಟ ಅಬ್ದುಲ್ಲ ಖಾದ್ರ ಬ್ಯಾರಿ ಮಕ್ಕಳು. 5, 6, 7ನೇ ಯವರು ಮ್ಯಾನರರು, ಇವರ ಕ್ಷೇಮಚಿಂತಕ 1ನೇ ಥೈಯದಿನ್‌ಕುಂಞಿ ಬ್ಯಾರಿ. 8. ಮರಿಯಮ್ಮ ಸದ್ರಿ ಅಬ್ದುಲ್ ಖಾದ್ರ ಬ್ಯಾರಿ ಹೆಂಡ್ತಿ. ಇವರೆಲ್ಲರೂ ಕಾಸರಗೋಡು ತಾಲ್ಕು ತಲೆಕಳ ಗ್ರಾಮದಲ್ಲಿ ಇರುವವರು—ಅರ್ಜಿದಾರರು.

ಇವರೊಳಗೆ

1ರಿಂದ 7ನೇ ವರೆಗಿನ ಅರ್ಜಿದಾರರ ತಂದೆ 8ನೇಯವಳ ಗಂಡ ಮೃತಪಟ್ಟ ಅಬ್ದುಲ್ಲ ಖಾದ್ರ ಬ್ಯಾರಿಗೆ ಬರತಕ್ಕ ಹಣ ವಸೂಲಿ ಕುರಿತು ಮೊದಲು ಈ ಕೋರ್ಟು O. P. No. 35/37 ನೇಗೆ ಪಡೆದ ವಾರೀಸು ಸರ್ಟಿಫಿಕೇಟಿನಲ್ಲಿ ಕೇಳುವರೆ ಬಿಟ್ಟುಹೋದ ಬಾಬ್ತು ಮೇಲ್ಕಂಡ ಅರ್ಜಿ ಶೆಡ್ಯೂಲ್‌ನಲ್ಲಿ ಹೇಳಿದ ಹಣವನ್ನು ಸಹಾ ಸದ್ರಿ ಸರ್ಟಿಫಿಕೇಟಿನಲ್ಲಿ ಸೇರಿಸಿ ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 28-3-38ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಆ ದಿವಸ ಕೋರ್ಟಿಗೆ ಹಾಜರಾಗಿ ವ್ಯವಹರಿಸತಕ್ಕದ್ದೆಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿದೆ.

ಕಾಸರಗೋಡು, K. Vittal Nayak,
4—3—'38. ಅರ್ಜಿದಾರರ ಕಡೆ ವಕೀಲ.


## ಮನೆವಾರ್ತೆ ಕೆಲಸಗಳನ್ನು ೭೦ ವರ್ಷಗಳಲ್ಲಿಯೂ ಕ್ರುಶನ್ ಲವಣದ ಸಹಾಯದಿಂದ ಮಾಡುತಿದ್ದಳು

### ೯ ವರ್ಷಗಳಿಂದಲೂ ಬಿಡದೆ ಕ್ರುಶನ್ ಸೇವನೆ ಮಾಡುತಿದ್ದಳು.

ಕಾಗದವನ್ನು ಬರೆದಾಕೆಯು ತನ್ನ ಕೆಲಸಗಳಿಗೆ ಹಿಗ್ಗುತಿದ್ದಳು. ಅವಳು ಹಾಗೆ ಮಾಡುವುದಕ್ಕೆ ಬಲವಾದ ಕಾರಣಗಳಿದ್ದುವು. ಅವಳು ಹೀಗೆ ಹೇಳುತ್ತಾಳೆ —

"ನಾನು ೯ ವರ್ಷಗಳಿಂದಲೂ ಕ್ರುಶನ್ ಲವಣವನ್ನು ಉಪಯೋಗಿಸುತಿದ್ದೆ. ಅದು ಇಲ್ಲದೆ ನನಗೆ ದಿನವೆ ಸಾಗುತಿದ್ದಿಲ್ಲ. ಸ್ವಲ್ಪ ಬಿಸಿನೀರಿನೊಂದಿಗೆ ಒಂದು ಚಮಚ ಹುಡಿಯನ್ನು ಬೆರಸಿ ಕುಡಿಯುತಿದ್ದೆ. ಈಗ ಕಾಹಿಲೆಯ ಬಾಧೆ ಇಲ್ಲ, ತಲೆತಿರುಗುವಿಕೆ ಇಲ್ಲ.

ನನಗೀಗ ೭೦ ವರ್ಷ ಪ್ರಾಯ. ಆದರೂ ಮನೆಗೆಲಸವನ್ನು ಕ್ರುಶನಿನ ಸಹಾಯದಿಂದ ಸರಾಗವಾಗಿ ಮಾಡಬಲ್ಲೆನು. ನಾನು ನನ್ನ ಆಸುಪಾಸಿನ ಜನರಿಗೆಲ್ಲಾ ಕ್ರುಶನ್ ಸೇವನೆಯ ಉಪಯೋಗವನ್ನು ಹೇಳಿರುವೆನು. ಕ್ರುಶನ್ ಸೇವಿಸುವುದಕ್ಕೆ ಮೊದಲು ಆಗಾಗ ಆಶ್ಚರ್ಯಕರ ಸಹಾಯವು ಅಗತ್ಯವಿದ್ದು ಈಗ ಅದರ ಅಗತ್ಯವಿಲ್ಲ. ನನಗೆ ಯಾವಾಗಲೂ ಕಾಹಿಲೆ ತಲೆವ್ಯಾಧಿಗಳು ಇದ್ದು ಏನೊಂದೂ ಕೈಲಾಗುತಿದ್ದಿಲ್ಲ. ಕ್ರುಶನಿಗೆ ನನ್ನ ಅನಂತ ವಂದನೆಗಳು. ಮಿ. ಜೆ. ಜೆ.

ನೀವು ಈಗ ಎಳೆ ವಯಸ್ಸಿನವರಾಗಲೀ ಪ್ರಾಯ ಹೋಗಿ ಶಕ್ತಿಗುಂದಿದವರಾಗಲೀ ಎರಡೂ ಒಂದೇ. ನಸ್ಸಿಗೆ ಇರುವ ಕ್ರುಶನ್ ಹುಡಿಯನ್ನು ಬೆಳಗ್ಗಿನ ಚಾ ಅಥವಾ ಕಾಫಿಯಲ್ಲಿ ಬೆರಸಿ ಕುಡಿಯಿರಿ. ಇದೇ ಕ್ರುಶನ್ ಸೇವನೆಯ ಕ್ರಮವು. ಇದರಿಂದಲೇ ಎಲ್ಲಾ ಕಾಲದಲ್ಲಿಯೂ ಆರೋಗ್ಯವಂತರಾಗುವಿರಿ.

ನಾಳೆಯಿಂದಲೇ ಇದರ ಸೇವನೆಗೆ ತೊಡಗಿದರೆ ಒಂದು ವಾರದೊಳಗೆ ಆಗುವ ಗುಣವನ್ನು ಕಾಣುವಿರಿ. ಅಂದರೆ ನೀವು ತಾರುಣ್ಯವನ್ನು ಹೊಂದಿಯೇ ಹೊಡುವಿರಿ. ನೀವು ನಿಮ್ಮ ಆಹಾರವನ್ನಾದರೂ ಬಿಡಬಲ್ಲಿರಿ. ಆದರೆ ಈ ಹುಡಿಯನ್ನು ಬಿಡಲಾರಿರಿ.




ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಕ್ರುಶನ್ ಲವಣವು ಮಾರಲ್ಪಡುತ್ತದೆ.

# ಮುಸ್ಲಿಂಲೀಗಿನೊಡನೆ ಶಾಂತಿ ಅಸಾಧ್ಯ

### ಸರ್ ವಝೀರ್ ಹಸನರ ಹೇಳಿಕೆ.

## ★ ಅದರೊಳಗೆ ಪ್ರಜಾಸತ್ತ ಭಾವವಿಲ್ಲ ★

ದೇಶದಲ್ಲಿ ಅಲ್ಲಲ್ಲಿ ಕೆಲವೆಡೆಗಳಲ್ಲಿ ಕೋಮುವಾರುಕತನವು ಬೆಳೆಯುವ ಕುರಿತು ಸರ್ ವಜೀರ್ ಹಸನರು ಈ ಕೆಳಗಿನ ಅಭಿಪ್ರಾಯವುಳ್ಳ ಒಂದು ಪ್ರಕಟಣೆಯನ್ನು ಮಾಡಿರುವರು

ಮಹಾಜನಗಳಲ್ಲಿ ಮತ್ತು ವರ್ಗವಾರುಗಳಲ್ಲಿ ಪರಸ್ಪರ ಸಹೋದರ ಭಾವ ಉಂಟಾಗುವಂತೆ ಮಾಡುವುದು ಇಂದಿನ ಮುಸ್ಲಿಮ ಲೀಗಿನ ಉದ್ದೇಶವಲ್ಲ.

ಮುಸ್ಲಿಮ ಲೀಗು, ಕೆಲವು ಮುಸ್ಲಿಮ ಸರ್ವಾಧಿಕಾರಿಗಳ, ಧನಾಢ್ಯ ಮತ್ತು ಧರ್ಮೋತ್ಸಾಹಿಗಳ ರಕ್ಷಣ ಸ್ಥಳವಾಗಿರುತ್ತದೆ

ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಅದಕ್ಕೆ ಮೈತ್ರಿ ಹೆಚ್ಚು ಅದರಿಂದಲೆ ತಮ್ಮ ಸ್ವಾರ್ಥಮಯ ಹಿತಗಳನ್ನು ರಕ್ಷಿಸಿಕೊಳ್ಳಬಹುದೆಂದು ಅವರ ಅಭಿಪ್ರಾಯ ದೇಶದಲ್ಲಿ ಕ್ರಾಂತಿಮಯ ಮಾರ್ಪಾಟುಗಳಾಗದಂತೆ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಅಡ್ಡಿಯಾಗಿರುವುದೆಂದು ಅವರ ತಿಳುವಳಿಕೆ

ಸಮಾಜಿಕಸ್ಥಿತಿಯನ್ನೇ ಪುನರ್ವ್ಯವಸ್ಥೆಗೊಳಿಸುವ ದೃಷ್ಟಿಯಿಂದ ಮಹಾಜನಗಳಲ್ಲಿ ರಾಜಕೀಯ ಪರಿಜ್ಞಾನವು ಉಂಟಾಗುವಂತೆ ಮಹಾಜನ ಸಮಸ್ಯೆಯು ಕಾಂಗ್ರೆಸ್ಸಿನಿಂದ ಕೈಗೊಳ್ಳಲಾಗಿದೆ ಮುಸ್ಲಿಮ ಲೀಗಿನವರು ಮಹಾಜನಗಳನ್ನು ಸಮಾಧಾನಿಸುವುದು ಚುನಾವಣೆಗಳಿಗಾಗಿ ಅವರ ಸಾಂಪತ್ತಿಕ ಸುಧಾರಣೆಯ ಬದಲಾಗಿ, ಧರ್ಮರಕ್ಷಣೆಯ ನೆಪದಿಂದ ಅವರನ್ನು ತಮ್ಮ ಕಡೆಗೆ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ ಮುಸ್ಲಿಂ ಲೀಗು ಪೂರ್ಣ ಅಧಿಕಾರಕ್ಕೆ ಬಂದರೆ, ಪ್ರತಿಯೊಂದು ಹಳ್ಳಿಯಲ್ಲಿ ಒಂದು ಮಸೀದಿಯನ್ನು ಸರಕಾರಿ ಖರ್ಚಿನಿಂದಲೇ ಕಟ್ಟಿಸುವ ವ್ಯವಸ್ಥೆ ಮಾಡುವವೆಂದೂ ಯುಕ್ತಪ್ರಾಂತ್ಯದ ಅಸೆಂಬ್ಲಿಯ ಉಪಚುನಾವಣೆಯು ನಡೆಯುತ್ತಿದ್ದಾಗ ಒಂದು ಪ್ರಕಟಣೆ ಪತ್ರಗಳಿಂದ ತಿಳಿದುಬಂದಿರುತ್ತದೆ

ಭೂರಿಜನ ಸಂಪರ್ಕ ಕಾರ್ಯಕ್ರಮವನ್ನು ಕಾಂಗ್ರೆಸ್ಸು ಮುಸ್ಲಿಮರಲ್ಲಿ ನಡೆಯಿಸಿ, ಅವರನ್ನು ಕೋಮುವಾರುತನದ ಭ್ರಮೆಯಿಂದ ರಕ್ಷಿಸಬೇಕಾಗಿ, ಸರ್ ವಜೀರ್ ಹಸನರು ಕಾಂಗ್ರೆಸ್ಸಿನೊಡನೆ ವಿನಂತಿ ಮಾಡಿಕೊಂಡಿರುವರು



ಸರ್ ವಝೀರ್ ಹಸನ್‌ರವರು

ಕಾಂಗ್ರೆಸ್ ಅಧಿವೇಶನಕ್ಕಾಗಿ ಒಂದ ಪ್ರೇಕ್ಷಕನೊಬ್ಬನು ಮಹಾತ್ಮಾಜಿಯವರಿಗೆ ಈ ಕೆಳಗಿನ ಅಭಿಪ್ರಾಯವುಳ್ಳ ಒಂದು ಪತ್ರವನ್ನು ಬರೆದನು

'ನಾವೆಲ್ಲಾ ಚಳಿಯಲ್ಲಿ ನಡುಗುತ್ತಿರುವಾಗ ನೀವೆಲ್ಲಾ ಬೆಚ್ಚಗಿದ್ದ ಗುಡಿಸಲಿನೊಳಗೆ ಸುಖವಾಗಿದ್ದೀರಿ ನಮಗೆ ತುಪ್ಪ ದೊರೆಯುವುದಿಲ್ಲ, ಹಾಲು ದೊರಕುವುದಿಲ್ಲ ನೀವು ನಾಯಕರೆಲ್ಲಾ ಸುಖ ಪಡೆಯುತ್ತೀರಿ. ಆಗ ನಮಗೆ ದೊರಕುವುದು ಬರೆ ಧೂಳು ಮಾತ್ರ. ಭೂರಿಜನ ಪಾಕಶಾಲೆಯಲ್ಲಿ ಆಹಾರವು ನಮ್ಮ ಕಡೆ ಎಸೆಯುತ್ತಿರುವಾಗ, ನಾಯಕರಿಗೆ ಅಲಂಕೃತರಾದ ದೇಶ ಸೇವಿಕೆಯರಿಂದ, ಆಹಾರವು ಅತ್ಯಂತ ಸಂಭ್ರಮದಿಂದ ಬಡಿಸಲ್ಪಡುತ್ತದೆ ನೀವೆಲ್ಲಾ ಮೋಟಾರ ವಾಹನಗಳಲ್ಲಿ ಓಡಾಡುತ್ತಿರುವಾಗ ನಿಮ್ಮ ಕಾರುಗಳಿಂದ ಉಂಟಾದ ಧೂಳಿನಿಂದ ನಮಗೆ ಉಭಯ ಸಂಕಟ ನೀವೆಲ್ಲಾ ಕಪಟಿಗಳು.

ಈ ಪತ್ರಕ್ಕೆ ಉತ್ತರ ಬರೆಯುತ್ತಾ ಶ್ರೀ ಮಹದೇವ ದೇಸಾಯಿಗಳವರು ಹೀಗೆಂದು ಬರೆದಿರುವರು

ಖಾದಿಯು ಅಹಿಂಸೆಯ ಸಂಕೇತವಾಗಿರುವುದಾದರೆ, ಅದು ಸರಿಸಮಾನತೆಯ ಸಂಕೇತವಾಗಿರುವುದು ಹೀಗಿರುವಾಗ, ರೈತರ ಕ್ಯಾಂಪು ಜನರಲ್ ಕ್ಯಾಂಪು, ನಾಯಕರ ಕ್ಯಾಂಪು ಎಂಬ ಭೇದಗಳೇಕೆ? ನಾಯಕರು ನಾಯಕರಾಗಿರುವರು, ಪೂಜಿಸಲ್ಪಡುವವರಾಗಿರುವರು ಆದರೆ ಅವರಿಗಾಗಿ, ನಾವು ಈ ತರದ ಭೇದಗಳನ್ನು ಏಕೆ ತಂದು ಹಾಕಬೇಕು ಅವರನ್ನು ಗೌರವಿಸುವ ಭರದಲ್ಲಿ ಅನೇಕ ಕೇಡುಗಳಿಗೆ ನಾವು ಕಾರಣರಾಗುತ್ತಿದ್ದೇವೆ'

ಈ ತರದ ಏರ್ಪಾಡುಗಳ ಕುರಿತು ಪ್ರತಿಕೂಲಿಸಿದವರಲ್ಲಿ ಮಹಾತ್ಮಾಜಿಯವರು ಮೊದಲಿಗರೆಂದು ಶ್ರೀ ದೇಸಾಯಿಯವರು ಬರೆದಿರುವರು.

### ಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸರಕಾರದ ಯತ್ನಗಳು.

ಸಿವಿಲ್ ಲಿಬರ್ಟಿಸ್ (ನಾಗರೀಕ ಹಕ್ಕುಗಳು) ಗಳನ್ನು ಹೆಚ್ಚಿಸುವರೆ ಯುಕ್ತಪ್ರಾಂತ್ಯದ ಕಾಂಗ್ರೆಸ್ ಸರಕಾರವು ಹೆಚ್ಚಿನ ಯತ್ನಗಳನ್ನು ಮಾಡಿರುವುದಾಗಿ ತಿಳಿದುಬರುತ್ತದೆ ಮುತ್ರಾಜಿಲ್ಲೆಯ ಬೃಂದಾವನದಲ್ಲಿರುವ ಪ್ರೇಮ ಮಹಾವಿದ್ಯಾಲಯವು ಅಕ್ರಮಬದ್ಧವಾದುದೆಂದು ಈ ಮೊದಲಿದ್ದ ಸರಕಾರಿ ಆಜ್ಞೆಯು ಈಗ ಕಾಂಗ್ರೆಸ್ ಸರಕಾರದಿಂದ ರದ್ದುಮಾಡಲ್ಪಟ್ಟಿರುತ್ತದೆ ಈ ಸಂಸ್ಥೆಯ ಎಲ್ಲಾ ಆಫೀಸ, ಕಟ್ಟಡ ಇತ್ಯಾದಿಗಳನ್ನು (ಈ ಮೊದಲಿನ ಸರಕಾರದಿಂದ ವಶೀಕರಿಸಲ್ಪಟ್ಟದ್ದು) ಹಿಂದಕ್ಕೆ ಕೊಡಲಾಗಿದೆ. ಅಲ್ಲದೆ ಹಿಂದೆ, ಏನೊಂದೂ ತಪ್ಪಿಲ್ಲದೆ ಕೆಳತರಗತಿಗೆ ತಳ್ಳಲ್ಪಟ್ಟಿದ್ದ ಪ್ರಾಂತೀಕೀಯ ವೈದ್ಯಸೇವಾ ಖಾತೆಯ ಡಾ ರಾಮಸ್ವರೂಪ ಗುಪ್ತರನ್ನು ನ್ಯಾಯವಾದ ಸ್ಥಾನಕ್ಕೇರಿಸಲಾಗಿದೆ ಅವರ ಕುರಿತು ವಿಚಾರಣೆಯಾಗಲು, ಅವರು ತಪ್ಪಿತರಲ್ಲವೆಂದು ಕಂಡುಹಿಡಿಯಲಾಗಿದೆ

### ರೈತರಿಗೆ ಪ್ರಧಾನ ಪಂತರ ಭರವಸೆ

ಸಂಯುಕ್ತ ಪ್ರಾಂತ್ಯದ ಲಕ್ನೊದಲ್ಲಿ ಎಸೆಂಬ್ಲಿ ಸದನದ ಎದುರು ೫೦ ಸಾವಿರ ಜನ ರೈತರು ಕೂಡಿರುವ ರೈತರ ಮಹಾಮೇಳವೊಂದು ಜರಗಿ, ರೈತರು ಸರಕಾರದೊಡನೆ ತಮ್ಮ ಕೋರಿಕೆಗಳನ್ನು ಮಾಡಿದರು. ರೈತರಿಗೆ ಉಪಶಮನ ದೊರಕುವಂತೆ ತಾವು ಪ್ರಯತ್ನಗೊಳ್ಳುವೆನೆಂದು ಪ್ರಧಾನ ಮಂತ್ರಿ ಪಂಡಿತ ಗೋವಿಂದವಲ್ಲಭಪಂತರವರಿಂದ ಭರವಸೆಯು ದೊರಕಿರುತ್ತದೆ ರೈತರ ಕಾಂಗ್ರೆಸ್ ಧ್ವಜಕ್ಕೆ ನಿಷ್ಠರಾಗಿರಬೇಕಾಗಿ ಕೋರಿ ಜವಾಹರಲಾಲ ನೆಹರೂರವರು ಭಾಷಣವಿತ್ತರು.

ಸಂಯುಕ್ತ ಪ್ರಾಂತ್ಯದ ವಿದ್ಯಾಮಂತ್ರಿಗಳಾದ ಶ್ರೀ ಪ್ಯಾರೆಲಾಲ್ ಶರ್ಮಾರ ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟುದರಿಂದ ಅವರ ಸ್ಥಾನಕ್ಕೆ ಸಂಪೂರ್ಣಾನಂದರವರು ಬಂದಿರುವರ

ಮುಸ್ಲಿಂಲೀಗಿನ ಅಧ್ಯಕ್ಷ– ಮಹಮ್ಮದಾಲಿ ಜಿನ್ನಾರವರು

### ಕಾಂಗ್ರೆಸ್ಸ್‌ವಾಲರೂ ಶಾಹಿದ್ಗಂಜ್ ಪ್ರಕರಣವೂ.

ಶಾಹಿದ್ಗಂಜ್ ಚಳವಳದಲ್ಲಿ ಕಾಂಗ್ರೆಸ್ಸ್‌ವಾಲರು ಭಾಗವಹಿಸುವ ಕುರಿತು ಅಭಿಪ್ರಾಯವನ್ನು ಕೋರಿ, ಅಮೃತಸರದ ಯುಥ್ ಲೀಗಿನವರು ರಾಷ್ಟ್ರಪತಿ ಭೋಸರ ಮತ್ತು ಪಂಡಿತ ಜವಾಹರಲಾಲ ನೆಹರೂರವರಿಗೆ ಪತ್ರ ಬರೆದಿರುವರು

ಶಾಹಿದ್ಗಂಜನ್ನು ಮುಸ್ಲಿಮರಿಗೆ ಹಿಂದಕ್ಕೆ ಒಪ್ಪಿಸುವರೆ ಪಂಜಾಬ ಅಸೆಂಬ್ಲಿಯಲ್ಲಿ ಒಂದು ಬಿಲ್ಲು ಬಂದಿರುವುದರಿಂದ, ಸಿಖ್ಖರು ಆ ಕುರಿತು ಹಂಬಲಪಡುವವರಾಗಿದ್ದಾರೆ ಶಾಹಿದ್ಗಂಜನ್ನು ಉಳಿಸಿಕೊಳ್ಳುವರೆ ಕೊನೆಯ ತನಕ ಹೋರಾಡುವರೆ ಸಿಖ್ಖರು ಮಹಾಪ್ರತಿಜ್ಞೆಮಾಡಿರುವರು

ಭರತಖಂಡದ ಎಲ್ಲಾ ಸಿಖ್ಖರೂ ಈ ಹೋರಾಟದಲ್ಲಿ ಭಾಗವಹಿಸುವ ಕುರಿತು ನಿರ್ಧಾರಮಾಡಿರುವರಾಗಿ ತಿಳಿದುಬರುತ್ತದೆ.

### 1000 ಮಂದಿಗಳು ಜಲಸಮಾಧಿ

ಹೊಂದಬೇಕು. ಈ ತರದ ಸೂಚನೆಯೊಂದು ಸೇನಾಪತಿ ಬಾಪಟರಿಂದ ಮಾಡಲಾಗಿದೆ ಯಾಕೆ? 1935ರ ಆಕ್ಟಿನ ಬದಲಾಗಿ, ಆಚರಿಸಲ್ಪಡುವರೆ ಬೇರೆ ಒಂದು ಶಾಸನವನ್ನು ಸಿದ್ಧಪಡಿಸಿ ಪಾರ್ಲಿಮೆಂಟಿಗೆ ಒಪ್ಪಿಸಬೇಕು ಅದು ಆಚರಣೆಗೆ ಬರುವಂತೆ, 1000 ಮಂದಿಗಳು ಒಂದೆ ಜಲಸಮಾಧಿ ಹೊಂದಬೇಕು ಯಾ ಹಸಿವಿನ ಮುಷ್ಕರ ವ್ರತವನ್ನಾಚರಿಸಬೇಕು ಮಹಾತ್ಮಾಜಿಯವರು ಈ ಕಾರ್ಯವನ್ನು ಕೈಕೊಳ್ಳಬೇಕು

### ಅದೇಕೆ ನಾಯಕರಿಗೆ ಮಾತ್ರ ಹೆಚ್ಚು ಸತ್ಕಾರ.

ಹರಿಪುರದ ಕುರಿತು ಒಬ್ಬರ ಅಸಮಾಧಾನ, ಮಹಾತ್ಮಾಜಿಯರ ಪ್ರತಿಕೂಲತೆ

ಹರಿಪುರದ ಕಾಂಗ್ರೆಸ್ಸು ಅತ್ಯಂತ ಯಶಸ್ಸಿನಿಂದ ನಡೆಯುತ್ತೆಂಬ ವಾರ್ತೆಯನ್ನು ನಾವು ಕೇಳಿದ್ದೆವಷ್ಟೆ ಆದರೆ ಅದರ ಕುರಿತು ಅಸಮಾಧಾನ ಹೊರಡದೆಯಿರಲಿಲ್ಲ. ಈ ತರದ ಅಸಮಾಧಾನ ಸೂಚಿಸಿದ ಎರಡು ಪತ್ರಗಳು ಹರಿಜನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

'ನನಗಾಗಿ ಈ ವಿಶಿಷ್ಟ ಗುಡಿಸಲು ಏಕೆ ನನಗಾಗಿ ಇಷ್ಟೆಲ್ಲಾ ಏರ್ಪಾಡುಗಳೇಕೆ ಎಂಬುದು ಮಹಾತ್ಮಾಜಿಯರು ಹರಿಪುರಕ್ಕೆ ಬಂದೊಡನೆ ಹೊರಟ ಪ್ರಶ್ನೆ

ರಾಷ್ಟ್ರೀಯ ಚಳವಳವನ್ನು ವಿರೋಧಿಸುವರೆ ನಿಷ್ಠೆಯಿಂದ ಸೇವೆಯನ್ನು ಮಾಡಿದವರಿಗೆ ಸರಕಾರದಿಂದ ಪಾರಿತೋಷಕವಾಗಿ ಕೊಡಲಾದ ಭೂಮಿ ಇತ್ಯಾದಿಗಳನ್ನು ಹಿಂದಕ್ಕೆ ಪಡೆಯುವರೆ, ಗಡಿನಾಡಿನ ಕಾಂಗ್ರೆಸ್ ಸರಕಾರವು ಒಂದು ಕ್ರಮವನ್ನು ಮಾಡಲಿದೆ


## ನಿಷ್ಣಾತ ವೈದ್ಯರು
## ನಿಮ್ಮ ದಮ್ಮಿನ ಚಿಕಿತ್ಸೆ
## ಯನ್ನು
## ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ಮಿನಿಟುಗಳಲ್ಲಿ ಚುಟಿಕಿ ಹೊಡೆದಂತೆ ಗುಣಮಾಡ ಬೆನೆಂದ ಅವನು ಹೇಳಬಹುದೆಂದು ನಿಮಗೆ ಅನಿಸುವದೆ? ದಮ್ಮನ್ನು ತತ್ಕಾಲಕ್ಕೆ ಗುಣಮಾಡುವ ಉಪಾಯವು ಎಫಿಡ್ರಿನ ಗುಳಿಗೆಗಳ ಅಥವಾ ಹೊಗೆತೆಗೆದುಕೊಳ್ಳುವ ಔಷಧಗಳು ಆದರೆ ಇವು ದಮ್ಮನ್ನು ಪೂರ್ಣ ನಾಶಪಡಿಸಲು ಶರೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ ಪರಿಣಾಮ ದಲ್ಲಿ ಈ ಔಷಧಗಳು ಗಂಟಲದ ಹಾಗೂ ಶ್ವಾಸನಳಿಗೆಗಳ ಬೇನೆಯನ್ನು ಹೆಚ್ಚಿಸಿ ರೋಗಿಯನ್ನು ಕಾಯಂ ದಮ್ಮಿನವನನ್ನಾಗಿ ಮಾಡಿಬಿಡುವವು

ದಮ್ಮು ಪೆಲ್ಲಮೆಲ್ಲಗೆ ಆದರೆ ನಿಶ್ಚಿತವಾಗಿ ಗುಣಮಾಡುವ ಔಷಧಗಳಲ್ಲಿ ಪುರೋಹಿತ ಶ್ವಾಸಹಾರಿ ಇದೂ ದ ಪ್ರಭಾವಶಾಲಿಯಾದ ಔಷಧವಾಗಿದೆ ದಮ್ಮು, ದಾಘ ಹತ್ತುವದು, ಮುಂಜಾವಿನ ಕೆಮ್ಮು, ಕಫದಿಂದ ಮಾಡುವ ಕೆಮ್ಮು ಮತ್ತು ಫುಪ್ಪುಸದ ಯಾವತ್ತು ವಿಕಾರಗಳನ್ನು ಗುಣಪಡಿಸಲು ಈ ಔಷಧದ ಯೋಜನೆಯನ್ನು ನಿಭೀತಿಯಿಂದ ಮಾಡಬೇಕು ಇದರಿಂದ ಸಾವಿರಾರು ದಮ್ಮಿನವರು ರೋಗಮುಕ್ತರಾಗಿರುವರು ಪ್ರತ್ಯೇಕ ಊರಲ್ಲಿ ಕೆಮಿಸ್ಟ ಇಲ್ಲವೆ ಅಂಗಡಿಕಾರರಲ್ಲಿ ಆಡು ರೂ ೩ ೪/೮ ಮತ್ತು ರೂ ೬ ಈ ಪ್ರಕಾರ ಬೇರೆ ಬೇರೆ ಬೆಲೆಯ ಸಣ್ಣ ದೊಡ್ಡ ಸೀಸೆಗಳಲ್ಲಿ ಮಾರಲ್ಪಡುತ್ತದೆ




ಮಂಗಳೂರು – ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ


### ಹುಡುಗಿಯರನ್ನು ಮಾರಾಟಮಾಡುತ್ತಿದ್ದರು!

ಹದಿನಾಲ್ಕು ವರ್ಷದ ಹುಡುಗಿಯರನ್ನು ಉತ್ತರ ಹಿಂದೂದೇಶದ ವಿವಿಧ ಕಡೆಗಳಿಂದ ಕದ್ದೊಯ್ದು ಅವರನ್ನು ಬೇರೆ ಬೇರೆ ಕಡೆಗಳಲ್ಲಿ ವಿವಾಹದಲ್ಲಿ ಮಾರಾಟ ಮಾಡಿ ಒಂದು ಮಹಾ ವ್ಯಾಪಾರವನ್ನೇ ನಡೆಸಿದ ನಾಲ್ವರನ್ನು ಸಿಂಧ್ ಪ್ರಾಂತ್ಯದ ಗುಪ್ತಪೋಲೀಸರು ಹಿಡಿದಿರುವರು. ಅಪ್ರಾಯಸ್ಥ ಹುಡುಗಿಯರನ್ನು ಕದ್ದೊಯ್ದು ಅವರನ್ನು ಹಳ್ಳಿಗಳಲ್ಲಿ ಮಾರಾಟಮಾಡುವದೇ ಅವರ ಕೆಲಸವಾಗಿತ್ತಂತೆ ಈ ಹುಡುಗಿಯರನ್ನು ಅವರು ರೂ ೩೦೦—೪೦೦ನ್ನು ಪಡೆದು ಮಾರಾಟಮಾಡಿರುವರಂತೆ. ವಿವಾಹಿತ ಹುಡುಗಿಯರನ್ನು ಕೂಡ ಇವರು ಕದ್ದೊಯ್ದಿರುವರೆಂದೂ, ಅವರ ಗಂಡಂದಿರು ಈಗ ಪೋಲೀಸರೊಡನೆ ತಮ್ಮ ಹೆಂಡಂದಿರ ಪತ್ತೆಯ ಕುರಿತು ವಿಚಾರಿಸುತ್ತಿದ್ದಾರೆಂದೂ ತಿಳಿದುಬರುತ್ತದೆ

# ಫೆಡರೇಶನನ್ನು ವಿರೋಧಿಸಲು ಎಲ್ಲರೂ ಐಕ್ಯಹೊಂದಿರಿ! ಅದಕ್ಕಾಗಿ ಸದಾಸಿದ್ಧರಾಗಿರಿ!

## ಪೋಲೀಸ ವೃತ್ತಿಗೆ ಸ್ತ್ರೀಯರನ್ನೇಕೆ ಸೇರಿಸಿಕೊಳ್ಳಬಾರದು?

## ಬಂಗಾಳದಲ್ಲಿ ಕಾಂಗ್ರೆಸ್ - ಪ್ರೊಜಾ ಒಪ್ಪಂದವೇ?

THE
Canara Banking Corporation, Udipi, Ltd
INCORPORATED IN BRITISH INDIA.
ESTD 1906
**SEASON DEPOSITS**
of
Rs. 500/- & above
Are Accepted
at
$3\frac{1}{2}$% p. a.
at
All Our Branches

ಸ್ವದೇಶಾಭಿಮಾನಿ

ತಾ ೪ನೇ ಶುಕ್ರವಾರ ಮಾರ್ಚಿ ೧೯೩೮

### ಲೋರ್ಡ್ ಹೆಲಿಫೆಕ್ಸರು

ಎಂದರೆ ಗಾಂಧಿಜಿಯವರೊಡನೆ ತಹ ನಾಮೆ ಮಾಡಿ ಶಾಸನೋಲ್ಲಂಘನ ಚಳವಳಿವು ಮುಗಿಸಂತೆಯೂ ಮಾಡಿ ಅವರು ಇಂಗ್ಲೆಂಡಿಗೆ ವರ್ತುಲ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗುವಂತೆ ಮಾಡಿರುವ ಪರಿಶುದ್ಧಾತ್ಮರಾಗಿರುವ ಲೋರ್ಡ್ ಐರ್ವಿನರು ಈಗ ಇವರು ಈಡನ್ ಸಾಹೇಬರ ಸ್ಥಾನದಲ್ಲಿ ಪರರಾಷ್ಟ್ರಗಳ ಮಂತ್ರಿಗಳಾಗಿ ಬ್ರಿಟಿಷ ಮಂತ್ರಿಕೂಟದಲ್ಲಿ ಸ್ಥಾನವಡೆದಿರುವರು ಆಬಿಸೀನಿಯವು ಇಟೆಲಿ ಸಾಮ್ರಾಜ್ಯಕ್ಕೆ ಸೇರಿದುದೆಂದು ಈಗ ಬ್ರಿಟಿಷ ಸರಕಾರವು ಅಂಗೀಕರಿಸಿರುವುದಾದರೂ, ಪರರಾಷ್ಟ್ರಗಳೊಡನೆ ಬ್ರಿಟಿಷ ರಾಜನೀತಿಯು ಎಂದಿನಂತೆಯೇ ಇರುವುದು' ಎಂದು ಇವರು ಭರವಸೆ ಕೊಟ್ಟಿರುವರು ಗಾಂಧಿಜಿಯವರೊಡನೆ ತಹಾ ಮಾಡಿದರೂ ಇಂಡಿಯಾ ಸರಕಾರದ ರಾಜನೀತಿಯು ಏಕಪ್ರಕಾರವಾಗಿಯೇ ಇದ್ದುದರಿಂದ, ಅವರು ಇಂಗ್ಲೆಂಡಿನಿಂದ ಹಿಂದೆ ಬರುತ್ತಲೇ ಅವರನ್ನು ಕೈದುಮಾಡಿದರಲ್ಲವೆ? ರಾಜನೀತಿಯು ಯಥಾಪ್ರಕಾರ ಮುಂದರಿವುದೆಂದರೆ ಹೀಗೆ ಎಂದು ಅರ್ಥ ಅಬಿಸೀನಿಯಾ ರಣಕಾಲದಲ್ಲಿ ಇಟೆಲಿಗೆ ವಿರುದ್ಧವಾಗಿ ಸೆಂಕ್ಷನುಗಳಾಗಬೇಕೆಂದ ಬ್ರಿಟಿಷ ಸರಕಾರವು ಈಗ ಏಕಪ್ರಕಾರವಾದ ರಾಜನೀತಿ' ಎಂದು ಇಟೆಲಿಗೆ ಅಬಿಸೀನಿಯದ ಮೇಲೆ ಅಧಿಕಾರವನ್ನು ಮಂಜೂರುಮಾಡಿ ಬಲಗೊಳಿಸುತ್ತದೆ! ಬ್ರಿಟಿಷರಿಗೆ ಹಾರ್ಯಾ ಹಾನಿಯಾಗದ ತೆರದಲ್ಲಿ, ಶಾಂತಿಯನ್ನು ಬೋಧಿಸಬಾರದೆಂಬುದೊಂದೇ ಉತ್ತಮೋದ್ದೇಶವು ಬ್ರಿಟಿಷ ಸರಕಾರದ್ದಾಗಿದೆ ಇಟೆಲಿಯು ಬ್ರಿಟಿಷ ಸಾಮ್ರಾಜ್ಯದ ಮರ್ಮಸ್ಥಾನಗಳನ್ನು ಭೇಧಿಸಬಹುದಾದ ಬಲವುಳ್ಳ ಕಾರಣ, ಅಬಿಸೀನಿಯದ ಬಲ್ಲಿದಾನ ಮೂಲಕವಾಗಿ ಇಟೆಲಿಯ ಮಾರಿಹೊಡೆತದಿಂದ ಬ್ರಿಟಿಷರು ಹೀಗೆ ತಪ್ಪಿಸಿಕೊಳ್ಳುವರು ಎಂದು ಆಕ್ಷೇಪವೆತ್ತುವವರಿದ್ದಾರೆ ಭಯದಿಂದಲ್ಲ, ಯುದ್ಧವೊಂದಾಗದೆ ಬ್ರಿಟಿಷ ಸಾಮ್ರಾಜ್ಯದ ಶಾಂತಿಗೆಡದಂತೆ, ರಾಜನೀತಿಯನ್ನು ಏಕಪ್ರಕಾರವಾಗಿ ಮುಂದರಿಸುವುದನ್ನೆ ಬ್ರಿಟಿಷ ಮಂತ್ರಿಮಂಡಲಗಳ ಕರ್ತವ್ಯವಲ್ಲವೆ? ಹೀಗಾದರೆ ಜನಾಂಗಸಂಘ ಉಳಿದೀತೆ?? ಅದರ ಗೌರವವೆಲ್ಲಿದೆ! ಅಬಿಸೀನಿಯವು ಈಗಲೂ ಈ ಸಂಘದ ಮೆಂಬರಿಕೆ ಬಿಟ್ಟಿಲ್ಲ ಇಟೆಲಿಗೆ ಅಬಿಸೀನಿಯವು ಸೇರಿತೆಂದಾದರೆ, ಸಂಘದ ಗೌರವ ಕೆಡದೆ? ಲೋರ್ಡ್ ಹೆಲಿಫೆಕ್ಸರು, 'ಈ ಜನಾಂಗಸಂಘದ ಬೆಂಬಲಕ್ಕೆ ಎಂದಿನಂತೆ ಮುಂದೆಯೂ ನಾವಿದ್ದೇವೆ ನಮಗೆ ಅದು ಬೇಕೇ ಬೇಕು ಅದರ ಮೂಲ ಸೂತ್ರಗಳಲ್ಲಿ ಒಂದನ್ನೂ ರದ್ದುಗೊಳಿಸಬಾರದೆಂದು ಮುಖ್ಯ ಪ್ರಧಾನರು ಹೇಳಿದುದನು ನಾವೂ ಒಪ್ಪುತ್ತೇವೆ ಏಕೆಂದರೆ ಒಂದಾನೊಂದು ದಿನ ಈ ಲೀಗು ಮೂಲದಲ್ಲಿ ಎಣಿಸಿದಂತೆ ಜಗದುದ್ಧಾರಕ್ಕೆ ಜೋಗುಳ ಹಾಡಬಹುದಲ್ಲವೆ? ಆಗ ಅದು ತನ್ನ ಕರ್ತವ್ಯಗಳನ್ನು ಮಾಡುವುದು ಎನ್ನುತ್ತಾರೆ ಜೋಕೆ ನಿಧಾನವಾಗಿ ಈ ಜನಾಂಗಸಂಘವನ್ನು ಕೊಲ್ಲುತ್ತಲೂ ಭವಿಷ್ಯತ್ಕಾಲದಲ್ಲಿ ಅದನ್ನು ಯಥಾಪೂರ್ವವಾಗಿ ಊರ್ಜಿತ ವಿರಿಸಲೂ ಬ್ರಿಟಿಷ ಮಂತ್ರಿಗಳು ಪ್ರಯತ್ನ ಮಾಡುತ್ತಾರೆಂದು ತಿಳಿದ ಒಳಿಕ ಬ್ರಿಟಿಷ ರಾಜಕಾರಣ ಮುತ್ಸದ್ದಿಗಳ ವಿಷಯವಾಗಿ ಅಗಾಧವಾದ ಗೌರವವನ್ನು ಇತರ ರಾಷ್ಟ್ರಗಳು ತೋರಿಸದೆ ಇರಲಾದೀತೆ?

★

### ಮದ್ರಾಸು ಸರಕಾರದ ಬಜೇಟಿನ ವಿಮರ್ಶೆ

(೮ನೇ ಪುಟದಿಂದ ಮುಂದುವರಿಸಿದುದು)

'75 ಲಕ್ಷ ರೂಪಾಯಿ ತೀರ್ವೆ ಮಾಫಿ ಮಾಡಿದರೆನ್ನುತ್ತೀರಲ ಅದನ್ನು ನಾವೇ ಹಿಂದೆ ಮಾಡಿಲ್ಲವೆ? ಎಂದರು ಸರ್ ಪನ್ನೀರಸೆಲ್ವಮ್, ಹಾಗಿದ್ದರೆ ಅದನ್ನು 150 ಲಕ್ಷ ಏಕೆ ಮಾಡಲಾರದಾದಿರಿ? ಹಣ ಮಾಫಿಬಿಟ್ಟೂ ಬಜೇಟಿನಲ್ಲಿ ನಷ್ಟವಾಗದಂತೆ ಇತರ ಇಸಮುಗಳನ್ನು ಸರಿಯಿಡಲು ಧೈರ್ಯ ವಿವೇಕ ಜಾಣ್ಮೆ ಎಲ್ಲವೂ ಬೇಕು ಬತ್ತಿಹೋದ ಬಂಜೆಯಾದ ಎರಡು ಧನಗಳನ್ನು ನಮಗೆ ಪ್ರಾಂತಿಕ ಸ್ವರಾಜ್ಯ ಎಂಬ ಹೆಸರಿಂದ ದಾನ ಮಾಡಿದ್ದಾರೆ ಒಂದು ಅಬಕಾರಿ ಸುಂಕ ಇನ್ನೊಂದು ತೀರ್ವೆ, ಭೂಕಂದಾಯ ಇವೆರಡು ಧನಗಳಿಂದ ಇಡೀ ಪ್ರಾಂತ್ಯವನ್ನು ನಾವು ಸಾಕಬೇಕಾಗಿದೆ ಇವೆರಡು ಧನಗಳು ಕೆಲಸಕ್ಕೆ ಬಾರದಾಗಿವೆ ತೀರ್ವೆ ಇಳಿಸಬೇಕೆಂದು ಗೊತ್ತಿದೆ, ಶತಪ್ರಯತ್ನ ಮಾಡುವೆವು ಅದಕ್ಕಾಗಿ ಈಗಲೇ ಕೈಯಿಕ್ಕಿದರೆ ಹೇಗಾದೀತು? ಹೀಗೆ ಜಪ ಮಾಡುತ್ತ ಬರುವ ಅನುಕೂಲತೆ ನೋಡೋಣ ಎಂದರು ಮಂತ್ರಿಗಳು

ಮುಸ್ಲಿಮರ ವಿದ್ಯಾಭ್ಯಾಸವು ಪ್ರಚಾರ ಹೊಂದುವಷ್ಟಕ್ಕೆ ಹಿಂದೂ ಮುಸ್ಲಿಮ ಸಮುಸ್ಯೆ ಅತಿ ಸುಲಭವಾಗಿ ಇತ್ಯರ್ಥ ಹೊಂದುವುದೆಂದೂ, ಇದೊಂದೇ ಮಾತ್ರ ಅತ್ಯಾವಶ್ಯಕವಾದ ಉಪಾಯವೆಂದೂ, ಇದಕ್ಕಾಗಿ ಸಾಧ್ಯವಿದ್ದಲ್ಲಿ ನೀರಿನಂತೆ ಹಣವನ್ನು ವಿನಿಯೋಗಿಸಲು ಸಿದ್ಧನೆಂದೂ ಮಂತ್ರಿಗಳು ಹೇಳಿ ಈ ಜೀವಮಾನದಲ್ಲಾದರೂ ಈ ಉದ್ದೇಶವನ್ನು ಖಂಡಿತವಾಗಿ ಸಾಧಿಸಲು ಬಲವುಂಟಾದೀತೆಂದು ನಂಬಿದ್ದೇನೆಂದೂ ಇದೀ ಕೊಂಗ್ರೆಸ್ಸು ಈ ವಿಚಾರವನ್ನು ಮೊದಲೇ ಮಾಡಿಟ್ಟಿದೆ ಎಂದು ತಿಳಿಸಿದರು ಆದರೆ ಖರ್ಚಿಗೆ ದೊರೆವ ಹಣಕ್ಕೆ ಮಿತಿ ಇರುವಾಗ ಎಷ್ಟು ಸಾಧ್ಯವೋ ಅಷ್ಟೇ ಪ್ರಯತ್ನ ಎಂಬುದು ಸಹಜವಲ್ಲವೆ? ಹೀಗಿದ್ದರೂ, ಮುಸ್ಲಿಮ ವಿದ್ಯಾಭ್ಯಾಸ ಪ್ರಚಾರಕ್ಕಾಗಿ ಉತ್ತಮ ಸಲಹೆಗಳಾವುವೂ ಇದ್ದಲ್ಲಿ, ಮನಃಪೂರ್ವಕವಾಗಿ ಅದನ್ನು ಆಲೋಚಿಸುತ್ತೇವೆಂದರು

ಬೊಂಬಾಯಿ ಸಂಯುಕ್ತ ಪ್ರಾಂತ್ಯಗಳಲ್ಲಿ ಒಂದೊಂದೇ ಲಕ್ಷ ರೂಪಾಯಿಯನ್ನು ಹಿಂದುಳಿದ ತರಗತಿಗಳ ಉನ್ನತಿಗಾಗಿ ವ್ಯಯಿಸುವಾಗ ನಮ್ಮ ಪ್ರಾಂತ್ಯದಲ್ಲಿ ಕಳೆದ ವರ್ಷ 10 ಲಕ್ಷ, ಈ ವರ್ಷ 11 ಲಕ್ಷ ವ್ಯಯಿಸಲಿದ್ದುದು ಯಾರೂ ಕಡಿಮೆ ಎನ್ನುವರೆ?

ಮದ್ಯಪಾನ ನಿವಾರಣೆ ಮಾಡಿದ ಸೇಲಂನಲ್ಲಿ ಜನರು ಹಣ ಉಳಿಸಿಲ್ಲ ಎಂದು ನಿಂದಿಸುತ್ತಾರೆಂದ್ದಾರೆ ಉಳಿಸಿದ ಹಣ ಜೀವನದ ಇತರ ಭಾಗಗಳಿಗೆ ವ್ಯಯಿಸಲಾಗಿದೆ ಧನಕ್ಕಿಂತ ಜನವೇ ಹೆಚ್ಚಲ್ಲವೆ? ಚಿತ್ತೂರು ಕಡಪಾಗಳು ನೆರೆಯ ಜಿಲ್ಲೆಗಳು; ಅಲ್ಲಿಯಾದರೂ ವಿದ್ಯಮಾನಗಳನ್ನು ತಿಳಿದೇ ಮದ್ಯಪಾನನಿಷೇಧವನ್ನಾರಂಭಿಸುತ್ತೇವೆ ನೆರೆಜಿಲ್ಲೆಗಳೆಂಬುದೇ ಕಾರಣವಲ್ಲ, ಇತರ ಸಾಮಾನ್ಯ ಅನುಕೂಲತೆಗಳೂ ಇರಬೇಕೆಂದು ಮಂತ್ರಿಯವರು ಶ್ರೀ ಪಾಲಕ್ಕರವರಿಗೆ ಸೂಚಿಸಿದರು.

ಕೈದಿಗಳ ಬಿಡುಗಡೆಯಿಂದ ಭಯಂಕರ ಪರಿಣಾಮಗಳುಂಟೆಂದು ಸರ್ ಪನ್ನೀರಸೆಲ್ವಮ್ ರವರೂ ಜ್ಯುಡಿಶಿಯಲ್ ಆಫೀಸರರ ಅಧಿಕಾರವನ್ನು ಮಂತ್ರಿಗಳು ಕಿತ್ತುಕೊಂಡಿರುವರೆಂದ ಶ್ರೀ ಪಾಲತ್‌ರೂ ಆಕ್ಷೇಪಿಸಿದರು ಒಂದು ಕಾನೂನು ಕಮಿಶನನ್ನೇ ನೇಮಿಸುವುದುತ್ತಮವೆಂದು ಮತ್ತೊಬ್ಬರು ಸೂಚಿಸಿದರು

ಸಂಬಳ ಇತ್ಯಾದಿಗಳೇನೂ ಇಲ್ಲದೆ ಯಾವುದೊಂದು ಕಮ್ಮಿಶನು ಕೆಲಸಮಾಡಲೊಪ್ಪದರೆ ಮಾತ್ರ, ಅಂತಹ ಕಮಿಶನನ್ನು ಕೂಡಲೆ ನೇಮಿಸುವ ಜ್ಯುಡಿಶಿಯಲ್ ಆಫೀಸರರ ಅಧಿಕಾರವನ್ನು ಕಿತ್ತುಕೊಂಡದ್ದೂ ಅಲ್ಲ ಕರುಣೆ ತೋರಿಸಿದ್ದೂ ಅಲ್ಲ, ತಪ್ಪಿತಸ್ಥರನ್ನು ಈಗ ಸುಧಾರಿತ ರಾಷ್ಟ್ರಗಳಲ್ಲಿ ಹೇಗೆ ಕಾಣುತ್ತಾರೋ ಹಾಗೆ ಮಾತ್ರ ನಾವೂ ಕಾಣಬೇಕಾಗಿದೆ ಎಂದೇ ಕೈದಿಗಳನ್ನು ಬಹು ದಿನಗಳಿಂದ ಶಿಕ್ಷೆ ಅನುಭವಿಸುತ್ತಿದ್ದವರನ್ನು, (ಜೈಲ ವಾಸ ಅನುಭವಿಸಿದವರಿಗೆ ಈ ಅನುಭವವೇನೆಂದು ತಿಳಿದೀತು ಹೊರತು ಹೊರಗಿದ್ದವರಿಗಲ್ಲ) ಅವರು ಮುಂದೆ ಉತ್ತಮ ಶೀಲದಲ್ಲಿರುವಂತೆ ವಾಗ್ದಾನಪಡೆದು ಬಿಡುಗಡೆ ಮಾಡಲಾಗಿದೆ ದುಷ್ಟರನ್ನು ಇನ್ನೂ ಬಿಡುಗಡೆ ಮಾಡಿಲ್ಲ ಬಿಡುಗಡೆ ಹೊಂದಿದವರು ಪುನಃ ಕಪ್ಪಿತಮಾಡಿದಲ್ಲಿ ಪುನಃ ಜೈಲುಪಾಲಾಗುವರು ಎಂದು ಮಂತ್ರಿಗಳ ವಿವರಿಸಿದರು

ನಮ್ಮ ಸಂಸ್ಥಾನದಲ್ಲಿ 611 ಮಂದಿ ಸಬ್ ರಿಜಿಸ್ಟ್ರಾರರು ಇರುವರು ಬೊಂಬಾಯಿಯಲ್ಲಿ 381 ಬಂಗಾಳದಲ್ಲಿ 248 ಹೀಗಿರುವಾಗಲೂ, ಇವರ ಇಷ್ಟು ಆಫೀಸುಗಳ ಖರ್ಚಿನ ಮಟ್ಟಿಗಾದರೂ, ರಿಜಿಸ್ಟ್ರೇಶನ್ ದರಗಳನ್ನು (200 ರೂಪಾಯಿ ಮಿಕ್ಕಿದ ಸಾಧನಗಳ ಮೇಲೆ ಮಾತ್ರ) ಹೆಚ್ಚಿಸಲಾಗಿದೆ ಹೀಗೆ ಹೆಚ್ಚಿಸಿದ ದರಗಳು ಬೊಂಬಾಯಿ, ಬಂಗಾಳಗಳಲ್ಲಿರುವ ದರಗಳಿಗಿಂತ ಕಡಮೆಯಾಗಿವೆ' ಎಂದೂ ತಿಳಿಸಿದರು

ಹಿಂದೀಯನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವಾಗ, ಅದು ಇಬ್ಬರು ಮಿತ್ರರ ದುರಭಿಮಾನದ ಶಾಪವಾಗಿ ಎದುರಿಸಲ್ಪಟ್ಟಿದೆ ಎಂದರು ಇವರಲ್ಲೊಬ್ಬರಿಗೆ ಆರ್ಯ ಸಂಸ್ಕೃತಿಯೇ ಒಪ್ಪದು, ಮತ್ತೊಬ್ಬರಿಗೆ ಕೊಂಗ್ರೆಸೆಂದರಾಗದು ಹೊರತು ಶಾಲಾಶಿಕ್ಷಣ ಸಂಬಂಧವಾಗಿ ಇವರೊಂದು ಖಂಡಿತ ಅಭಿಪ್ರಾಯವಿಟ್ಟು ಎದುರಿಸುತ್ತಿಲ್ಲವೆಂಬುದು ಖಂಡಿತವಾಗಿ ತಿಳಿದಿದೆ ವಿದ್ಯಾರ್ಥಿಗಳಿಗೆ ಇದು ಕಷ್ಟವಾಗಲಾರದೆಂದು ಇಲಾಖೆಯೇ ತಿಳಿಸಿದೆ ಇಡೀ ಭಾರತ ವರ್ಷದ ಹಿಂದೂ ಮುಸಲ್ಮಾನರಲ್ಲಿ ಹೆಚ್ಚಿನವರು ಆಡುವ ಒಂದೇ ಭಾಷೆ ಹಿಂದೀ ಫೆಡರೇಶನ್ ಪ್ರಸ್ತಾಪವನ್ನಾಡುವಾಗ, ಈ ಭಾಷೆಯ ಪ್ರಚಾರವನ್ನು ಕುರಿತು ಆಡುವುದು ತಪ್ಪೇ? ವಿದ್ಯಾರ್ಥಿ ಸಭೆಗಳಲ್ಲಾದರೂ ಹಿಂದೀ ಬೇಡವೆಂದವರಿಲ್ಲ

ವಾರ್ಧಾಶಿಕ್ಷಣ ಯೋಜನೆ ಎಂಬುದು ಟರಗಾಲದ ಕೂಲಿಗಳ ಕರ್ಮವೆಂದು ಶ್ರೀ ಪಾಲತರು ಸೂಚಿಸಿರುವರು ಜತನದಿಂದ ಸಾಗಿತೆಂದು ಮತ್ತೊಬ್ಬರು ವಿವೇಕ ಹೆ... ಅಂತರಂಗವೇನ? ಭಾಷಾ ಪುಸ್ತಕದ ಭಜನೆಯೇ ಶಿಕ್ಷಣವಾಗದು ಯಾವುದೊಂದ ವೃತ್ತಿಯನ್ನು ಮಾಡ ತ ಸಂಸ್ಕೃತಿಯ ೩ ಶಿಕ್ಷಣವೂ ಒಮ್ಮೆಲೇ ಮುಂದರಿಯಬೇಕೆಂದು ಶತಪ್ರಯತ್ನಗಳಾಗಬೇಕು ಮಕ್ಕಳಿಗೆ ಸುಲಭದಲ್ಲಿ ಸಾಧ್ಯವಾಗುವ ವೃತ್ತಿ ಕಲಿಸುತ್ತ ಧಾರಾಳ ಶಿಕ್ಷಣ ಹೇಳಿಕೊಡಬಹುದು ಸದ್ಯಕ್ಕೆ ಪ್ರಾರಂಭದಲ್ಲಿ ಇದು ಕಷ್ಟವಾಗಿ ವ್ಯಯಕ್ಕೆ ಕಾರಣವಾಗಿ ತೋರಿದರೂ ಮುಂದೆ ಶಿಕ್ಷಣವೆಲ ಸುಲಭವಾಗಿ ಅಲ್ಪವ್ಯಯದಲಿ ದೊರೆವುದೆಂಬುದು ಖಂಡಿತ

ವಾರ್ಷಿಕವಾಗಿ ನೀಲಗಿರಿ ಯಾತ್ರೆ ಮಾಡುತ್ತಿರುವ ಸರಕಾರದ ಖರ್ಚನ್ನು ಕತ್ತರಿಸಿ ಉಳಿಸಿದ ಹಣವನ್ನು ಮಂತ್ರಿಗಳು ಸ್ವೇಚ್ಛಾವಿಹಾರಕ್ಕಾಗಿ ವ್ಯಯಿಸುತ್ತಾರೆಂದು ಸರ್ ಪನ್ನೀರಸೆಲ್ವಂರವರು ಆಕ್ಷೇಪಿಸಿದರು ಈ ಆಕ್ಷೇಪವನ್ನು ಎತ್ತಿದ್ದ ಪಕ್ಷದಲ್ಲಿ ಸರ್‌ರು ಎಸೆಂಬ್ಲಿಯ ಸಮಯ ನಷ್ಟಮಾಡುತ್ತಿರಲಿಲ್ಲ ಪ್ರಜೆಗಳಿಗೆ ಜವಾಬುದಾರರಾಗಿರುವ ಮಂತ್ರಿಗಳು ಇಡಿ ಪ್ರಾಂತ್ಯದಲ್ಲಿ ಸಂಚರಿಸುವುದಕ್ಕೂ ಸರಕಾರದ ಇಲಾಖಾಧಿಕಾರಿಗಳು ಊಟಕಮಂಡಿಗೆ ಪ್ರವಾಸ ಮಾಡುವುದಕ್ಕೂ ಭೇದವೇ ಇಲ್ಲವೆ? ಸರಕಾರ ನಡೆಸಲು ಜವಾಬ್ದಾರಿಯುಳ್ಳ 10 ಮಂದಿ ಮಂತ್ರಿಗಳು 6 ತಿಂಗಳಲ್ಲಿ 20000 ರೂಪಾಯಿ ವ್ಯಯಿಸಿದರು ನಿಜ ನಮ್ಮ ಪೂರ್ವಾಧಿಕಾರಿಗಳಾಗಿದ್ದ ತಾತ್ಕಾಲಿಕ ಮಂತ್ರಿಗಳು ಆರೇ ಮಂದಿ ಇವರು ೩ ತಿಂಗಳುಗಳಲ್ಲಿ 28000 ರೂಪಾಯಿ ವ್ಯಯಿಸಿದ್ದರು ಅವರಂತೆ (ಅವರಲ್ಲಿ ಸರ್‌ರು ಒಬ್ಬರು) ನಾವೂ ವ್ಯಯಿಸಿದ್ದರೆ ಈಗ 86000 ರೂಪಾಯಿ ಖರ್ಚಾಗಿ ಹೋಗುತಿತ್ತು ಅದೂ ಅಲ್ಲದೆ ಇಡೀ ಸಂಸ್ಥಾನದಲ್ಲಿ ನಾವು ಸಂಚರಿಸುತ್ತೇವೆ ಈ ರಾಯರುಗಳು ಕೆಲ ಸ್ಥಳಗಳನ್ನಷ್ಟು ಪದೇ ಪದೇ ನೋಡಿದವರು ಸರ್‌ರು ಈ ಪ್ರಶ್ನೆಯನ್ನೆತ್ತಬಾರದಿತ್ತು ಅದು ವಿವೇಕ ಎನಿಸದಿತ್ತು ಆದರೆ ಇಂತಹ ಪ್ರಶ್ನೆಗೆ ಉತ್ತರಕೊಡದೆ ಹೋದರೆ, ಊರಲ್ಲೆಲ್ಲ ಅವರ ಮಾತೇ ಮೆರೆಯುವ ಕಾರಣವಿದ್ದುದರಿಂದಷ್ಟೆ ಈಗ ಉತ್ತರಕೊಡಬೇಕಾಯಿತು ಸತ್ಯ ಸಿತಿ ತಿಳಿಯಬಂತು

### ಸದಾ ಸಿದ್ಧರಾಗಿರಿ!

ರಾಷ್ಟ್ರಪತಿ ಸುಭಾಷ್ಚಂದ್ರ ಭೋಸರವರು ಮುಂಬಯಿಯಿಂದ ವಾರ್ಧಾಕ್ಕೆ ತೆರಳಿರುವರು ಮುಂಬಯಿಯಲ್ಲಿ ಸಾಧಾರಣ ಹತ್ತು ದಿವಸಗಳ ಕಾರ್ಯಕ್ರಮವನ್ನು ನಡೆಸಿದರು

'ಇನ್ನೊಂದು ಸಂದಿಗ್ಧತೆಯುಂಟಾಗುವಂತೆ ಕಾಂಗ್ರೆಸ್ಸು ಪ್ರೇರೇಪಿಸುವುದಿಲ್ಲವಾದರೂ ಪ್ರಾಂತ್ಯಕೀಯ ಯಾ ಫೆಡರೇಶನಿನ ವಿಚಾರದಿಂದಾಗಿ, ಒತ್ತಾಯದಿಂದ ನಾವು ಸಂದಿಗ್ಧಕ್ಕೆ ಒಳಗಾಗಬಹುದ ಭಾರತೀಯರಿಂದ ಕೊನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯ ಮೂಲಕ ರಚನೆಯಾದ ರಾಜಶಾಸನಕ್ಕೆ ಮಾತ್ರ ನಮ್ಮ ಒಪ್ಪಿಗೆಯಿದೆ ಎಂದು ನಾವು ಜಗತ್ತಿಗೇ ವ್ಯಕ್ತಪಡಿಸು ನಮ್ಮ ವ್ಯವಹಾರಗಳಲ್ಲಿ ಕೆಲವು ದಿನಗಳ ಹಿಂದೆ ಒಂದು ದೊಡ್ಡ ಅಲೆ ಬಂದಿರುತ್ತದೆ ಅದರ ಉಪಯೋಗದಿಂದ ನಾವು ಸ್ವಾತಂತ್ರ್ಯದ ಕಡೆಗೆ ಸಾಗೋಣ ಸಮಸ್ತ ಹಿಂದೂದೇಶವು ತಿರಂಗ ಕಾಂಗ್ರೆಸ್‌ಧ್ವಜದಡಿಯಲ್ಲಿ ಒಂದುಗೂಡಬೇಕು ಒಳ್ಳೇ ಶಿಸ್ತುಹೊಂದಿ ಅಹಿಂಸಾವಂತ ಸೈನ್ಯದಳವನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಾವಿನ್ನು ನಿರತರಾಗುವ ಅವಶ್ಯ ಬಿದ್ದರೆ ಗಾಂಧಿಯವರಂತೆ ಮಹಾತ್ಮರಿಯು ಮುಂದೆ ಬರುವುದೆಂದು ನನ್ನ ಹಾರೈಕೆ' ಎಂದು ರಾಷ್ಟ್ರಪತಿ ಸುಭಾಷ್ಚಂದ್ರ ಭೋಸರು ಮುಂಬಯಿಯಿಂದ ಹೊರಡುವಾಗ ಜನತೆಗೆ ಕೊಟ್ಟ ಸಂದೇಶವಾಗಿರುತ್ತದೆ

### ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಳ

ಪ್ರಾಂತ್ಯದ ಅಭಿವೃದ್ಧಿಗಾಗಿ ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಳವು ಈ ಕೆಳಗಿನ ಕಾರ್ಯಕ್ರಮಗಳನ್ನು ಕೈಗೊಳ್ಳಲಿದೆ ೧ ಪ್ರಜೆಗಳ ಜೀವನಕ್ರಮವನ್ನು ಉತ್ತಮಗೊಳಿಸುವದೆ ಅವರ ಉತ್ಪನ್ನವು ಹೆಚ್ಚುವ ೨ ಎಂದರೆ

ಮುಂಬಯಿಯ ಕಾಂಗ್ರೆಸ್ ಪ್ರಧಾನ ಮಂತ್ರಿ ಖೇರ್‌ರವರು

ಹಳ್ಳಿಗಳಲ್ಲಿ ನಗರಗಳಲ್ಲಿ ಜನರಿಗೆ ಉಳಕೊಳ್ಳಲು ಉತ್ತಮ ತರದ ಮನೆಗಳ ವ್ಯವಸ್ಥೆ ಆರೋಗ್ಯದಾಯಕ ಮತ್ತು ಪುಷ್ಟಿದಾಯಕವಾದ ಆಹಾರವನ್ನೊದಗಿಸುವುದು ೨ ಭೂಸ್ವಾಮ್ಯದ ಮೇಲಿರುವ ಭಾರವನ್ನು ಗುಡಿಕೈಗಾರಿಕೆ ಇತ್ಯಾದಿ ಕೈಗಾರಿಕೆಗಳಿಂದ ಕಡಿಮೆ ಮಾಡುವುದು ಗುಡಿಕೈಗಾರಿಕೆಗಳು ಉತ್ತಮ ತರದಲ್ಲಿ ವೃದ್ಧಿ ಹೊಂದುವಂತೆ ಮಾಡುವುದು ವ್ಯವಸಾಯದ ಫಲವನ್ನು ಹೆಚ್ಚಿಸುವುದು ೪ ಸಾಲಗಳನ್ನು ಇಳಿಸುವುದು ಸುಲಭ ತರದ ಸಾಲಗಳ ವ್ಯವಸ್ಥೆ ೫ ಸಹಕಾರ ಚಳವಳವನ್ನು ಹರಡಿಸುವುದು ೬ ಭೂಮಿಯನ್ನು ಉತ್ತುವ ರೈತನಿಗೆ ಹೆಚ್ಚಿನ ಉಪಕಾರ ದೊರೆಯುವಂತೆ ನಕ್ಕಲುತನ ಕ್ರಮಗಳಲ್ಲಿ ಸುಧಾರಣೆ ೭ ಹಳ್ಳಿಗಳೊಳಗೆ ಉತ್ತಮ ತರದ ಮಾರ್ಗೋಪಾಯಗಳು ೭ ನಿರುದ್ಯೋಗವು ಕಡಿಮೆಯಾಗುವಂತೆ ಉದ್ಯೋಗಗಳ ತರಬೇಕು ೮ ಪ್ರಾಂತ್ಯದ ಆಕಳುಗಳ ವೃದ್ಧಿ ೯ ಹೆಚ್ಚಿನ ಜನರು ಕೈಗಾರಿಕೆ, ಕೈವೃತ್ತಿಗಳನ್ನು ಆಚರಿಸುವಂತೆ ಮಾಡಿ ಜಮೀನಿನ ಮೇಲಿರುವ ಭಾರವನ್ನು ಕಡಿಮೆ ಮಾಡುವುದು ೧೦ ಕಂದಾಯ ಹೊರಿಸುವಿಕೆ ಪೋಸ್ಟ್‌ಫೀಸುಗಳ ಬೆಳವಣಿಗೆ ಇಷ್ಟೆ ಅಲ್ಲದೆ ಪ್ರಾಂತ್ಯದ ಕೈಗಾರಿಕೆಗಳು ಅಭಿವೃದ್ಧಿ ಹೊಂದುವಂತೆ ಉದ್ಯೋಗಕ್ಕೆ ರಕ್ಷಣೆಕೊಡುವ ವ್ಯವಸ್ಥೆ ಇತ್ಯಾದಿ ಅಭಿವೃದ್ಧಿಗಾಗಿ ಎಲ್ಲಾ ತರದ ಯತ್ನಗಳು ನಡೆಯಲಾಗಿವೆಯೆಂದು ಪ್ರಧಾನ ಮಂತ್ರಿ ಬಿ ಜಿ ಖೇರರ ಪ್ರಕಟಣೆಯಾಗಿರುತ್ತದೆ

### ವಿದ್ಯಾರ್ಥಿಗಳ ಮೇಲೆ ಗುಪ್ತ ಪೋಲೀಸರ ಕಾವಲು

ಪಂಜಾಬಿನ ಗವರ್ನರರು ವಿಗ್ರಹವೊಂದರ ಅನಾವರಣ ನಡೆಸುವ ಸಮಾರಂಭ ಸಮಯ ವಿದ್ಯಾರ್ಥಿಗಳ ಮೇಲೆ ಗುಪ್ತಪೋಲಿಸರ ಕಾವಲು ಇದ್ದುದರಿಂದ ಪಂಜಾಬ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲಿ ಕೋಲಾಹಲಕ್ಕೆ ಕಾರಣವಾಗಿದೆ

ಸಮಾರಂಭದ ಸಮಯ ವಿದ್ಯಾರ್ಥಿಗಳು ಗವರ್ನರರ ಒಡ್ಡೋಲಗದಿಂದ ೧೦ ಅಡಿ ದೂರಕ್ಕೆ ಇರುವಂತೆ ಏರ್ಪಾಡು ಮಾಡಲಾಗಿತ್ತು ಸಭೆಯಲ್ಲಿ ಅನೇಕ ಪೋಲೀಸರಿದ್ದರು ಸಮಾರಂಭವು ಮುಗಿದು ಗವರ್ನರರು ವಿಶ್ವವಿದ್ಯಾಲಯದ ಸದನದಿಂದ ತೆರಳುವ ತನಕ ಗುಪ್ತ ಪೋಲೀಸರು ಸದನವನ್ನು ಬಿಟ್ಟು ಹೊರನಡೆಯಲಿ

### ಸುಸಂಘಟಿತ ಸಹಾಯ

... ಂಕ್ ಪರಭಾಗದ ಆತನ ಅನುಜ ... ಶು ವಿ...ದವುಂ...ದು ಜನ್ಮ ಗಡಿನಾಡಿನ ಕಾಂಗ್ರೆಸ ಮಂತ್ರಿಮಂಡಳ ... ಒಳ್ಳೆ ... ಇತ್ಯರ್ಥಿಸ್ಪ್ರೈ...ದ ... ವುದನ್ನು ತಡೆದ ... ಪದ ಈ ಯುದ್ಧದಿಂದ ಘೋರ ತರದ ... ಸೆಂಬರ ... ಂಕಿನ ನಾಬರ್ ... ಬವು ಗಡಿನಾಡಿನಲಿ ಒಂದು ... ಕುಮುಂಬವಾಗಿರುತ್ತದೆ

### ಪೋಲೀಸ ವೃತ್ತಿಗೆ ಸ್ತ್ರೀಯರನ್ನೇಕೆ ಸೇರಿಸಿಕೊಳ್ಳಬಾರದು?

ಸ್ತ್ರೀಯರು ಪೋಲಿಸವೃತ್ತಿಯನ್ನೇಕೆ ಆಚರಿಸಬಾರದು ಹಿಂದೂದೇಶದ ಸ್ತ್ರೀಯರು ಪೋಲೀಸ ವೃತ್ತಿಯನ್ನು ಆಚರಿಸಲು ಮುಂದೆ ಬರಬೇಕು—ಎಂಬುದಾಗಿ ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನ ಉಪಾಧ್ಯಕ್ಷೆಯರಾದ ಬೇಗಮ್ ಅಜೆಜ್ ರಸೂಲರ ಸ್ತ್ರೀಯರಿಗೆ ಹಿತಬೋಧನೆ

ಪಶ್ಚಿಮ ಜಗತ್ತಿಗೆ ಬೆಳಕಿಗೆ ಬಂದ ಟರ್ಕಿ ದೇಶದಲ್ಲಿ ಸ್ತ್ರೀ ಪೋಲಿಸರ ದೊಡ್ಡ ಫೌಜೊಂದಿರುವುದ ಈ ದಳದ ಅಧಿನಾಯಕಿಯಾದ ಸ್ತ್ರೀಯು ಮಹಾ ಯಶಸ್ಸುಪಡೆದಿರುವಳ ಹೀಗೆ ರಷ್ಯಾದಲ್ಲೂ ಅನೇಕ ಸ್ತ್ರೀಯರು ಪೋಲೀಸ್ ವೃತ್ತಿಯನ್ನು ಕೈಗೊಂಡಿರುವರು ಪೋಲೀಸ ವೃತ್ತಿಯೇಕೆ ಸೈನಿಕರಾಗಿಯೂ ಮುಂದೆ ಬರುವರು

### ಭೂರಿಜನರಿಗಾಗಿ ಮ್ಯೂಜಿಯಮ್ಮುಗಳು

ವಿಜ್ಞಾನ ಸಹಾಯದಿಂದ ನಮ್ಮ ಪ್ರಗತಿಯಾಗಬೇಕು ವಿಜ್ಞಾನವು ತನ್ನ ಆರಾಧ್ಯದೇವತೆಯು ನಮ್ಮ ಸಮಸ್ಯೆಗಳ ಕುರಿತು ಪ್ರವೀಣರು ಅತ್ಯಂತ ಶ್ರಮವಹಿಸಬೇಕು ಭೂರಿಜನರ ಶಿಕ್ಷಣಕ್ಕಾಗಿ, ಅದರಲ್ಲೂ ನಮ್ಮ ರೈತವರ್ಗದ ಶಿಕ್ಷಣಕ್ಕಾಗಿ ಅಲ್ಲಲ್ಲಿ ಶಾಶ್ವತವಾದ ಮ್ಯೂಜಿಯಮ್‌ಗಳ ಸ್ಥಾಪನೆಯಾಗಬೇಕು. ಈ ತರದ ಅನೇಕ ಮ್ಯೂಜಿಯಮ್ಮುಗಳನ್ನು ನಾನು ರಷ್ಯಾದಲ್ಲಿ ನೋಡಿರುವೆನು ಹಿಂದೂದೇಶದ ಸರಕಾರಗಳು ವಿಜ್ಞಾನಿಗಳ ಈ ಕುರಿತು ಪರಸ್ಪರ ಸಹಕಾರದಿಂದ ಕಾರ್ಯನಡೆಯಿಸಬೇಕೆಂಬುದಾಗಿ ಶ್ರೀ ಪಂಡಿತ ಜವಾಹರಲಾಲ ನೆಹರೂರವರು ಅಲ್ಲಹಾಬಾದಿನ ಸಾಯನ್ಸ್ ಅಕೆಡೆಮಿಯ ವಾರ್ಷಿಕ ಸಭೆಯ ಅಧ್ಯಕ್ಷರಾಗಿ ಭಾಷಣವಿತ್ತರು

### ಗಡಿನಾಡಿನಲ್ಲಿ ಮದ್ಯನಿರೋಧ

ಇದೇ ಎಪ್ರಿಲ್ ತಾ ೧ರಿಂದ ಗಡಿನಾಡಿನ ಒಂದು ಜಿಲ್ಲೆಯಲ್ಲಿ ಮದ್ಯನಿರೋಧ ಕ್ರಮವು ಪೂರ್ಣವಾಗಿ ಜ್ಯಾರಿ ಮಾಡಲಾಗ ವುದಲ್ಲದೆ ಇತರ ಜಿಲ್ಲೆಗಳಲ್ಲಿ ಮದ್ಯನಿರೋಧವು ಕೆಲ ಮಟ್ಟಿಗೆ ನಡೆಯುವಂತೆ ಏರ್ಪಾಡುಮಾಡಲಾಗುವುದು

### ಪೆಲೆಸ್ತೀನದಲ್ಲಿ

ಬ್ರಿಟಿಷರು ವಿಮಾನದಳಗಳ ಮೂಲಕ ಬಾಂಬುಗಳಿಂದ ಅರಬರನ್ನು ಶಾಂತಗೊಳಿಸುತ್ತಿದ್ದಾರೆ ಸ್ಪೈನಿನಲ್ಲಿ ದಂಗೆಗಾರರು ಬಾರ್ಸಿಲೋನಾ ಮತ್ತು ಆಲ್ಕ್ಯಾಂಟ ನಗರಗಳ ಮೇಲೆ ವಾಯುಮಂಡಳದಿಂದ ಆತಿಕ್ರಮ ನಡೆಸುತ್ತಿರುವರು ಚೀನಾದಲ್ಲಿ ಜಪಾನೀಯರು ಇದೇ ಉಪಾಯದಿಂದ ತಮ್ಮ ಕಾರ್ಯ ಸಾಧಿಸುತ್ತಿದ್ದಾರೆ ಮೆಡಿಟರೇನಿಯನ ಸಾಗರಕ್ಕೆ ಜರ್ಮನಿಯ ಸಬ್‌ಮೆರೀನುಗಳು ಬಂದಿವೆಯೆಂದಾಗಿಯೂ ತಿಳಿದುಬರುತ್ತದೆ

### ಬಂಗಾಳದಲ್ಲಿ ಕಾಂಗ್ರೆಸ್ ಪ್ರೊಜಾ ಒಪ್ಪಂದವೇ?

ಬಂಗಾಳದ ಪ್ರೊಜಾ ಪಕ್ಷದ ಅನೇಕ ಮಂದಿ ಎಸೆಂಬ್ಲಿ ಸದಸ್ಯರ ಕಾಂಗ್ರೆಸ್ ಪಕ್ಷದೊಡನೆ ಕೂಡುವ ಕುರಿತು ಮಾತುಕತೆಗಳು ನಡೆಯುತ್ತಿವೆ ಈ ಮಾತುಕತೆಗಳ ಫಲಿತಾಂಶವಾಗಿ ಹಕ್ ಮಂತ್ರಿಮಂಡಳದ ಬದಲಾಗಿ ಕಾಂಗ್ರೆಸ ಪ್ರೊಜಾ ಮಂತ್ರಿಮಂಡಲವು ಅಧಿಕಾರಕ್ಕೆ ಬರುವ ಸಂಭವಗಳಿವೆ ಹಿಗೆಂಬುದೆಂದು ರಾಷ್ಟ್ರಪತಿ ಭೋಸರು ಕೂಡಾ ತಿಳಿಸಿರುವರು

### ಮಹಾತ್ಮಾಗಾಂಧಿಜಿಯವರು

ಬಂಗಾಳದ ರಾಜಕೀಯ ಕೈದಿಗಳ ಮತು ಡೆಟಿನ್ಯೂಗಳಿಗಾಗಿ ಇದೇ ತಾ ೧೪ರೊಳಗೆ ಕಲ್ಕತ್ತಕ್ಕೆ ತೆರಳುವರಾಗಿ ತಿಳಿದುಬರುತ್ತದೆ ಅವರ ಆರೋಗ್ಯಸ್ಥಿತಿಯು ತುಂಬಾ ವೃದ್ಧಿಯಾಗಿರುವುದೆಂದೂ ತಿಳಿದುಬರುತ್ತದೆ ರಾಜಕೀಯ ಮತ್ತು ಡೆಟಿನ್ಯೂಕೈದಿಗಳ ಬಿಡುಗಡೆಗಾಗಿ ಕಲ್ಕತ್ತೆಯಲ್ಲಿ ಭಾರೀ ಚಳವಳವು ನಡೆಯುತ್ತಿವೆ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಬಂಗಾಳ ಸರಕಾರದ ಘೋಷಣೆಯಲ್ಲಿ ಬದಲಾವಣೆಗಳಿಲ್ಲವೆಂದು ಹೋಂ ಮೆಂಬರರ ಪ್ರಕಟಣೆಯಾಗಿರುತ್ತದೆ

### ಜನನಗಳ ಮೇಲೆ ತೆರಿಗೆ

ಹೊರಿಸಬೇಕೆಂದು ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನಲ್ಲಿ ಬೇಗಮ್ ಅಜೆಜ್ ರಸೂಲರ ಸೂಚನೆ

### ಫೆಡರೇಶನನ್ನು ವಿರೋಧಿಸಲು ಎಲ್ಲರೂ ಐಕ್ಯಹೊಂದಿರಿ.

ಭಾರತೀಯ ಪ್ರಜಾಮತವು ಯಾವರೀತಿಯಲ್ಲಿ ಫೆಡರೇಶನು ಅವರ ಮೇಲೆ ಹೊರಿಸಲ್ಪಡುವುದೆಂದು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪ್ರಕಟಣೆಯಾಗಲು ಫೆಡರೇಶನನ್ನು ವಿರೋಧಿಸುವರೆ ದೇಶದ ಎಲ್ಲಾ ವರ್ಗಗಳೂ ಐಕ್ಯಹೊಂದುವಂತೆ ಮುಂದಾಳುಗಳು ಬೇಗನೇ ಕೂಡಬೇಕಾಗಿ ಮುಸ್ಲಿಂ ಲೀಗಿನ ಕರೀಮ್ ಭಾಯಿಯವರ ಎನಂತಿ

ಇಂಡಿಯಾ ಸ್ಟೇಟ ಸೆಕ್ರೆಟರಿ ಲಾರ್ಡ ಜೆಟ್ಲೆಂಡರು

ಬಚ್ಚೇವಿನ ಕುರಿತು ಇಂಡಿಯಾ ಸರಕಾರಕ್ಕೂ ವಿರೋಧಪಕ್ಷಗಳಿಗೂ ಉಂಟಾದ ಕಲಹದಲ್ಲಿ ಸೆಕ್ರೆಟರಿ ಒಫ್ ಸ್ಟೇಟರು ಸೈಪಾಕುವುದಿಲವಾಗಿ ತಿಳಿದುಬರುತ್ತದೆ

### ಆಸ್ಟ್ರೀಯಾದಲಿ ನಾಜಿಗಳ ವಿಜಯ

ಆಸ್ಟ್ರಿಯಾದಲಿ ಇಂಜರಗಿ ಒಮ್ಮೆದರ ರಕಿರುವುದೆಂದ ಹೇಳಬೇಕಾಗಿದೆ ಆಸ್ಟ್ರಿಯದ ಈಗಿನ ಸರಕಾರದಲ್ಲಿ ನಾಜಿಗಳಿಗೆ ಹೆಚ್ಚಿನ ಅವಕಾಶವುದೆ ರಕಿರುತ್ತದೆ ನಾಜಿಗಳ ಕುರಿತು ಈ ಹಿಂದಿರುವ ಬಂಧಗಳು ತೆಗೆದುಹಾಕಲಾಗಿವೆ ನಾಜಿಗಳಿಗೆ ಆಸ್ಟ್ರಿಯವನ್ನು ಜರ್ಮನಿಗೆ ಕಲಿಸಲು ಆಗದಿದ್ದರೆ ಅವರ ಪ್ರಭಾವವು ಅಲ್ಲಿ ನಡೆಯುವಂತಾಗಿದೆ

### ಸೋವಿಯಟ್ ರಷ್ಯಾಕ್ಕೆ ವಿರೋಧವಾಗಿ ಒಳಸಂಚು

ಸೋವಿಯಟ್ ರಷ್ಯದ ಈಗಿನ ಸರಕಾರಕ್ಕೆ ವಿರೋಧವಾಗಿ ಒಳಸಂಚು ನಡೆಸಿದ ಕೆಲವರ ವಿಚಾರಣೆಯಲಿ ... ಸೆ ವಿಯಟ್ಟಿಗೆ ವಿರೋಧವಾ ನಡೆಸಿದ ಒಳಸಂಚಿನಲ್ಲಿ ಪುರುಷರ ಬ್ರಿಟಿಷ ಮಹಾಕೆಲವು ಸಹಾನುಭೂತಿಯಿತ್ತೆಂದ ಕಿಳಿದ ಬರುತ್ತದೆ ... ಬ್ರಿಟಿಷ ಅಧಿಕಾರಗಳ ಇತ್ತೀಚೆಗೆ ರಷ್ಯಾಕ್ಕೆ ಹಾನಿ... ಅನೇಕ ... ಜಪಾನಿಯ ... ತಿಳಿದುಬರುತ್ತದೆ ... ನಲ್ಲಿ ... ಗಿನ್ನಿಲ

### ಕೇಂದ್ರ ಎಸೆಂಬ್ಲಿಯಲ್ಲಿ

ಕೇಂದ್ರ ... ಸ... ಬಜೆಟ್ಟು ಮುಂದೆ ತರಲು ... (... ಕ್ಕೆ ...) ... ವ್ಯವಹಾರದ ಕರಿಕುವ್ಯಯಗಳನ್ನು ಎಸೆಂಬ್ಲಿಯ ವಿಚಾರದಿಂದ ವಿಷಾದವಾದ ಪಕ್ಕ ಪ್ರತಿಕೂಲೆಗಳು ... ಬಜೇಟಿನ ಪ್ರತಿಯೊಂದು ಕೋರಿಕೆಯು ಅನೆ ಬ್ಯಾಮಿಲ್ಲಿ ತಿರಸ್ಕರಿಸಲ್ಪಟ್ಟಿವೆ ಸಂಪೂರ್ಣ ಫ್ಯಾನನ್ಸ ಬಿಲಿನ ತಿರಸ್ಕೃತವಾಗುವುದಾಗಿ ತಿಳಿದುಬರುತ್ತದೆ ವೈಸ್ರಾಯರ ಸರ್ಟಿಫಿಕೇಟು ಮೂಲಕವೇ ಈ ಬಜೇಟನ್ನು ಪಾಸುಮಾಡಬೇಕಾಗಿದೆ ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷದೊಡನೆ ಇತರ ಅನೇಕ ಪಕ್ಷಗಳು ಕೂಡಿದೆ

# ಸಂಯುಕ್ತ ಪ್ರಾಂತ್ಯದಲ್ಲಿ ಇನ್ನೊಂದು ಬಿಕ್ಕಟ್ಟು ಸಂಭವಿಸುವುದೆ?

★ ★ ★

ಸ್ಥಳೀಯ ಸಂಸ್ಥೆಗಳ ಆಡಳಿತ ಕ್ರಮದಲ್ಲಿ ಪುನರ್ವ್ಯವಸ್ಥೆ, ಬದಲಾವಣೆ ಇತ್ಯಾದಿ ಸುಧಾರಣೆಗಳನ್ನು ಸೂಚಿಸಿ ಆದ, ಪ್ರವೀಣ ಸಮಿತಿಯೊಂದರ ವರದಿಯ ಕುರಿತು, ಸಂಯುಕ್ತ ಪ್ರಾಂತ್ಯದಲ್ಲಿ ಗವರ್ನರರಿಗೂ, ಕಾಂಗ್ರೆಸ್ ಮಂತ್ರಿಮಂಡಳಕ್ಕೂ ತಿಕ್ಕಾಟ ಆರಂಭವಾಗಿ, ಇನ್ನೊಂದು ಸಂದಿಗ್ಧವು ಉಂಟಾಗುವ ಸಂಭವಗಳುಂಟಾಗಿವೆ ಎಂದು ವಾರ್ತೆಯಿದೆ.

ಈ ವರದಿಯಲ್ಲಿ ಅನೇಕ ಮಹತ್ತರವಾದ ಮಾರ್ಪಾಟುಗಳು ಸೂಚಿಸಲ್ಪಟ್ಟು, ಅದೀಗ ಸರಕಾರದಿಂದ ಸ್ವೀಕರಿಸಲ್ಪಟ್ಟಿದೆ. ಪೋಲಿಸರನ್ನು ಮುನ್ಸಿಪಲ್ ಇಲಾಖೆಯ ಕೈಕೆಳಗೆ ಕೊಡಬೇಕಾಗಿ ಇದರಲ್ಲಿ ಸೂಚನೆಗಳಿವೆ. ಈ ಈ ಬಿಲ್ಲು ಬೇಗನೆ ಮಂಜೂರು ಮಾಡುವರೆ ಕಾಂಗ್ರೆಸ್ ಸರಕಾರವು ಕುತೂಹಲಪಡುತ್ತಿದೆ. ಆದರೆ ಈ ವರದಿಯು ವಿವಿಧ ಪಕ್ಷದ ಪ್ರತಿನಿಧಿಗಳಿಂದ ಕೂಡಿದ ಸಮಿತಿಯಿಂದ ರಚಿಸಲ್ಪಡದಿದ್ದರಿಂದ, ಗವರ್ನರರು ಈ ಬಿಲಿನ ಕುರಿತು ತಮ್ಮ ಸಮ್ಮತಿಯೀಯಲು ಸಿದ್ಧರಿಲ್ಲವೆನ್ನುತ್ತಿದ್ದಾರೆ.

ಇಷ್ಟರೊಳಗೆ, ಸಮಿತಿ ಇತ್ಯಾದಿಗಳು ನಡೆದು, ಬೇಕಾದಷ್ಟು ಸಮಯ ವಿಳಂಬವಾಗಿ ಧಾರಾಳ ದ್ರವ್ಯವೆಚ್ಚವಾಗಿ ಈ ವರದಿಯು ಸಿದ್ಧವಾಗಿದ್ದು, ಗವರ್ನರರ ಸೂಚನೆ ಪ್ರಕಾರ ಎಲ್ಲಾ ಪಕ್ಷಗಳ ಪ್ರತಿನಿಧಿಯಿರುವ ಇನ್ನೊಂದು ಸಮಿತಿಯನ್ನು ರಚಿಸಿ, ಈ ಬಿಲಿನ ಕುರಿತು ಮತ್ತೊಮ್ಮೆ ವಿಚಾರಿಸಬೇಕಾಗಿ ಬಂದ ಗವರ್ನರರ ಸೂಚನೆಯಲ್ಲಿ ಕಾಂಗ್ರೆಸ್ ಸರಕಾರಕ್ಕೆ ಸಮಾಧಾನವಿರುವುದಿಲ್ಲ.

## ಕಾಯಕಲ್ಪಕ್ಕೆ ಇನ್ನೊಂದು ವಿಜಯ.

ಪಂಡಿತ ಮಾಳವೀಯರಿಗೆ ಒಳ್ಳೆ ಪರಿಣಾಮಕಾರಿಯಾದ ಕಾಯಕಲ್ಪದಿಂದ ಮಥುರಾ ಜಿಲ್ಲೆಯ ಇರ್ವರು ವೃದ್ಧರಿಗೆ ಮಹದುಪಕಾರ ದೊರಕಿದ ವಾರ್ತೆಯು ಬಂದಿರುತ್ತದೆ. ಈ ಇರ್ವರು ವೃದ್ಧರಲ್ಲಿ, ವಾತ, ಉಬ್ಬಸ ಇತ್ಯಾದಿಗಳು ಇದ್ದವುಗಳು ಸಂಪೂರ್ಣ ಮಾಯವಾಗಿರುವುದಾಗಿ ತಿಳಿದುಬರುತ್ತದೆ. ಇಬ್ಬರ ಪ್ರಾಯವು 72ಕ್ಕೆ ಮಿಕ್ಕಿರುತ್ತದೆ. ಈಗ ಅವರಲ್ಲಿ ತಾರುಣ್ಯವು, ಚೈತನ್ಯವು ಉಂಟಾಗಿರುವುದು. ಬಿಳೀ ಬಣ್ಣವನ್ನು ಪಡೆದ ಅವರ ಕೂದಲು ಈಗ ಕಪ್ಪಾಗಿರುತ್ತದೆ. ಬೋಳಾಗಿರುವ ಅವರ ತಲೆಯಲ್ಲಿ ಕೂದಲು ಬೆಳೆದಿರುತ್ತದೆ. ಈ ವೃದ್ಧರಿಬ್ಬರು ತಮಗೆ ಉಬ್ಬಸ ರೋಗಕ್ಕಾಗಿ ಅಫೀಮು ಸೇವಿಸುತ್ತಿದ್ದವರಿಗೆ ಈಗ ಅದರ ಅಗತ್ಯವಿಲ್ಲವಾಗಿ ತಿಳಿದುಬರುತ್ತದೆ.

ನಮ್ಮ ಜಿಲ್ಲೆಯ ಉಬ್ಬಸ ರೋಗಿಗಳು, ಕಾಯಕಲ್ಪವನ್ನು ಪಡೆಯಬಾರದೆ?

## ವಿಧವೆಯೊಬ್ಬಳ ಮೇಲೆ ಅತ್ಯಾಚಾರ— ವಕೀಲರೊಬ್ಬರಿಗೆ ಹತ್ತು ವರ್ಷ ಕಠಿನ ಸಜೆ.

ಬರ್ಬರ ಜನರಂತೆ ಕಾಮಾಚಾರವನ್ನು ನಡೆಯಿಸಿ, ವಕೀಲರೊಬ್ಬರು ವಿಚಾರಹೀನರಾಗಿ ವರ್ತಿಸಿದ ವಾರ್ತೆಯು ಬಂಗಾಳದ ಅಲಿಪುರದಿಂದ ಬಂದಿರುತ್ತದೆ. ಬಂಗಾಳದ ಬೆರಕ್‌ಪುರದ ಮುನ್ಸಿಪಲ್ ಕೌನ್ಸಿಲರೂ ವಕೀಲರೂ ಆದ ಅಲಿಹೈದರರೆಂಬವರು, ಈ ತಪ್ಪಿತವನ್ನು ನಡೆಯಿಸಿದವರು. ಬಿಂಧು ಗೋಪಾಲಿನಿ ಎಂಬ ತರುಣಿ ಸೌಂದರ್ಯವತಿ ಹಿಂದೂ ವಿಧವೆಯೊಬ್ಬಳನ್ನು ಬಲಾತ್ಕಾರದಿಂದ ಕನ್ನೆಡನಿರಿಸಿ, ಆಕೆಯ ಮೇಲೆ ಹೇಯ ತರದ ಕಾಮಾಚಾರ ಕೃತ್ಯಗಳನ್ನು ನಡೆಯಿಸಿದುದಕ್ಕಾಗಿ, ಈ ವಕೀಲರಿಗೆ ಅಲಿಪುರದ ಜಡ್ಜರಿಂದ ಹತ್ತು ವರ್ಷ ಕಠಿನ ಸಜೆಯು ವಿಧಿಸಲಾಗಿದೆ. ಅನಾಥ ಸ್ತ್ರೀಯೊಬ್ಬಳ ಮೇಲೆ ಇಂಥಾ ಹೇಯ ತರದ ಕೃತ್ಯವು ನಡೆದುದು, ಇತ್ತೀಚೆಗಿನ ಚರಿತ್ರೆಯಲ್ಲಿ ಇದೊಂದು ವಿಶಿಷ್ಟವಾದುದೆಂದು ಜಡ್ಜರ ಅಭಿಪ್ರಾಯವಾಗಿರುತ್ತದೆ.

ಕಲ್ಕತ್ತೆಯ ಸಿಹಾಲ್ದಾ ಸ್ಟೇಶನಿನಿಂದ ಟ್ರೈನನ್ನು ಹತ್ತಿಕೊಂಡು ಬಿಂಧು ಗೋಪಾಲಿನಿಯು, ಬೆಲ್ಗೆರಿಯಾಕ್ಕೆ ತನ್ನ ಅಕ್ಕನನ್ನು ಕಾಣಲು ಹೋಗುತ್ತಿದ್ದಳು. ಅವಳು ಹತ್ತಿದ ಗಾಡಿಯಲ್ಲಿ ಈ ಮೊಕದ್ದಮೆಯಲ್ಲಿ ಶಿಕ್ಷಿಸಲ್ಪಟ್ಟ ಐವರೂ ಪ್ರಯಾಣ ಮಾಡುತ್ತಿದ್ದು, ತಾವು ಬೆಲ್ಗೆರಿಯಾದ ಆಕೆಯ ಅಕ್ಕನ ಸ್ನೇಹಿತರೆಂದು ಬಿಂಧುವನ್ನು ನಂಬಿಸಿ, ಹಾದಿಯಲ್ಲಿ ಒಂದು ಸ್ಟೇಶನಿನಲ್ಲಿ ಬಿಂಧುವಿನೊಡನೆ, ಆಕೆಯನ್ನು ಅಕ್ಕನ ಮನೆಗೆ ಕೊಂಡೊಯ್ಯುವೆವೆಂದು ನಂಬಿಸಿ, ಆಕೆಯನ್ನು ನೇರಾಗಿ ಹೈದರ್ ಅಲಿಯ ಮನೆಗೆ ಕೊಂಡೊಯ್ದು ತಾವೊಂದು 'ಫಲವನ್ನು' ತಂದುದಕ್ಕಾಗಿ ಪಾರಿತೋಷಕವನ್ನು ಕೇಳುವವರಾದರು. ಅದಕ್ಕೆ ಬಿಂಧುವು ಪ್ರತಿಕೂಲಿಸಲು, ಆಕೆಯು ಹೈದರನ ಮನೆಯಲ್ಲಿ ಬಂಧಿಸಲ್ಪಟ್ಟಳು. ಆಕೆಯ ಮೇಲೆ ಪಟ್ಟಿನ ಪ್ರಯೋಗವಾಯಿತು. ನಂತರ ಆಕೆಯನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯಲಾಗಿ, ಆಕೆಯ ಮೇಲೆ ಅತ್ಯಂತ ಭೀಕರ ತರದ ಕಾಮಾಚಾರ ಕೆಲಸಗಳು ನಡೆಯಿಸಲಾದುವು. ಅದರಿಂದ ಆಕೆಯ ಲಿಂಗೇಂದ್ರಿಯಕ್ಕೆ ಭಯಂಕರ ತರದ ಹಾನಿಯು ಉಂಟಾಯಿತು.

ಆದರೂ, ಮತ್ತೂ ಅವರು ಆಕೆಯ ಮೇಲೆ ಅತ್ಯಾಚಾರ ನಡೆಯಿಸುವವರಾದರು. ಆಕೆಯ ಮೇಲೆ ಚಿಕಿತ್ಸೆ ನಡೆಯಿಸುವ ಕುರಿತು ಅಲಕ್ಷ್ಯ ಮಾಡಿದರು. ಬಿಂಧುವು ಅನೇಕ ಸಾರಿ ಅವರಿಂದ ತಪ್ಪಿಸಿಕೊಂಡು ಹೋಗಲು ಮಾಡಿದ ಯತ್ನಗಳು ಫಲಕಾರಿಯಾಗಲಿಲ್ಲ. ಭದ್ರವಾದ ಕಾವಲಿಗೆ ಒಳಗಾಗಿ ಅವಳು ಬಂಧಿಸಲ್ಪಟ್ಟಳು. ಒಂಬೊತ್ತು ಮಾಸಗಳ ಸಮಯ. ಕೊನೆಗೆ ಮುಸ್ಲಿಂ ಸ್ತ್ರೀಯೊಬ್ಬಳ ಸಹಾಯದಿಂದ, ತನ್ನ ಸ್ಥಿತಿಯನ್ನು ಆರ್ಯ ಸಮಾಜದವರಿಗೆ ತಿಳಿಸಿ ಅವರ ಮೂಲಕ ಪೋಲಿಸರ ಸಹಾಯವನ್ನು ಪಡೆದು. ಹೇಗೂ ಬಂಧವಿಮುಕ್ತಳಾದಳು.

ಬಿಂಧುವಿನೊಡನೆ ವಿಚಾರಿಸಿ, ಪೋಲಿಸರು ಹೈದರನನ್ನೂ ಆತನೊಡನೆ ಸಹಕರಿಸಿದ ಐವರನ್ನೂ ಸೆರೆಹಿಡಿದು, ವಿಚಾರಣೆ ನಡೆದು, ಮೇಲಿನ ತರದಲ್ಲಿ ಶಿಕ್ಷೆವಿಧಿಸಲ್ಪಟ್ಟರು. ವಕೀಲ್ ಹೈದರ್ ಅಲಿಯ ಸಹಪಾಟಿಗಳಿಗೆ ಏಳೇಳು ವರ್ಷದ ಕಠಿನ ಸಜೆಯು ವಿಧಿಸಲಾಗಿದೆ.

## ಆ ವೀರ

ಮಥುರಾ ನಗರದ ಭೀಮಸಿಂಗನೆಂಬವನು ಓರ್ವ ಹಿಂದೂತರುಣಿಯನ್ನು ಬ್ರಿಟಿಷ ಸೈನಿಕರಿಂದ ರಕ್ಷಿಸಲು ಹೋದಾಗ, ಸೈನಿಕರು ಗುಂಡಿಕ್ಕಿದುದು ಆತನಿಗೆ ತಗಲಿ, ಆತನು ಮೃತನಾಗಲು, ಆತನ ಶವವು ಮಥುರಾ ನಗರದ ಬೀದಿಗಳಿಂದ ಅತ್ಯಂತ ಸಂಭ್ರಮವಾದ ಮೆರವಣಿಗೆಯಿಂದ ಕೊಂಡೊಯ್ಯಲಾಯಿತು. ಬ್ರಿಟಿಷ ಸೈನಿಕರು ಕಾಮಾಚಾರ ಕೆಲಸಕ್ಕಾಗಿ ಹಿಂದೂ ತರುಣಿಯನ್ನು ಬಲತ್ಕಾರದಿಂದ ಎಳೆದೊಯ್ಯುತ್ತಿರುವಾಗ, ಭೀಮಸಿಂಗನು ಆಕೆಯ ರಕ್ಷಣೆಗಾಗಿ ಹೋಗಿದ್ದನು. ಮೆರವಣಿಗೆಯ ಕೊನೆಗೆ ಸೈನಿಕರ ಈ ದುಷ್ಕೃತ್ಯವನ್ನು ಖಂಡಿಸಿ ಮಥುರಾ ನಗರನಿವಾಸಿಕರು ಸಭೆಸೇರಿ ಒಂದು ಠರಾವನ್ನು ಮಾಡಿರುವರು.

## ಮುದ್ರಣಪ್ರತಿಬಂಧಕ ಆಜ್ಞೆ!

'ಸ್ವಾತಂತ್ರ್ಯ ದಿನಾಚರಣೆ'ಯ ದಿವಸ ಸ್ಥಳೀಯ ಕಾಂಗ್ರೆಸ್ ಕಮಿಟಿಯ ಕೆಲವು ಪತ್ರಿಕೆಗಳನ್ನು ಪ್ರಕಟಿಸಿದುದಕ್ಕಾಗಿ ಬಂಗಾಳದ ನಾದಿಯಾ ಎಂಬಲ್ಲಿನ ಮೆಜಿಸ್ಟ್ರೇಟರು ಅಲ್ಲಿನ ನವಾದೀಪ ಪ್ರೆಸ್ಸಿನವರು, ಮುಂದಕ್ಕೆ ಕಾಂಗ್ರೆಸ್ ಪತ್ರಿಕೆಗಳನ್ನು ಮುದ್ರಿಸಬಾರದಾಗಿ ಆಜ್ಞಾಪಿಸಿರುವರು.


## ಕಷ್ಟದಾದ ಆ ಕೆಮ್ಮನ್ನೂ, ಶೀತವನ್ನೂ ಹೋಗಲಾಡಿಸಿರಿ.

ನಿಮ್ಮ ಗಂಟಲಲ್ಲಿ ಉರಿತ ಉಂಟಾದಾಗ, ಕಣ್ಣಿನಲ್ಲಿ ನೀರು ಸುರಿಯುತ್ತಿರುವಾಗ, ಕೆಮ್ಮುವನ್ನು ತಡೆಯುವದು ನಿಮಗೆ ಅಸಾಧ್ಯವಾದಾಗ, ಶೀತ ಪೀಡೆಗಳಿಗೆ ಗುರಿಯಾದಾಗ, ಪೆಪ್ಸ್ ಗುಳಿಗೆಯೊಂದು ನಿಮ್ಮ ಬಾಯಲ್ಲಿದ್ದರೆ, ಆಗ ನಿಮಗೆ ವಿಶಿಷ್ಟ ತರದ ಉಪಶಮನವು ದೊರಕುವುದು. ಈ ವಿಶಿಷ್ಟ ತರದ ಶ್ವಾಸನೀಯ ಗುಳಿಗೆಗಳಿಂದ ಶೀತಲ ದೆಸೆಯಿಂದ ನಿಮ್ಮ ಶ್ವಾಸಕೋಶ ಮತ್ತು ಎದೆಯಲ್ಲಿ ಉಂಟಾಗುವ ದುಷ್ಪರಿಣಾಮಗಳು ದೂರವಾಗುವವು. ಪೆಪ್ಸ್‌ಗಳಿಂದ ಹೊರಡುವ ಔಷಧೀಯ ಧೂಮವು ಶೀತವನ್ನು ನಿವಾರಿಸಿ, ಪೀಡೆಗಳಿಗೆ ಕಾರಣವಾದ ರೋಗಾಣುಗಳನ್ನು ನಾಶಪಡಿಸುತ್ತದೆ. ಪೆಪ್ಸ್ ಗಂಟಲು ನೋವನ್ನು ಸುಧಾರಿಸುತ್ತದೆ, ನಿಮ್ಮ ಶ್ವಾಸಕೋಶದೊಳಗಿರುವ ಕಫವನ್ನು ಹೊರಡಿಸುತ್ತದೆ. ನಿಮ್ಮಲ್ಲಿ ಸುಖಭಾವವನ್ನುಂಟು ಮಾಡುತ್ತದೆ.



ಪೆಪ್ಸ್ ಗುಳಿಗೆಗಳು ಸೀಲು ಒತ್ತಲ್ಪಟ್ಟ ಅಂದವಾದ ಬಾಟ್ಲಿಗಳಲ್ಲಿ ರೂ 1ರಂತೆ ದೊರೆಕುತ್ತದೆ.

ಎಜಂಟರು:– ಮೆಸರ್ಸ್ ದಾಧಾಕ್ಸ್ ಎಂಡ್ ಕೊ., ಪಿ. ಟಿ. ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS


## ಗಂಡಹೆಂಡಿರ ಜಗಳ–

ಇಂದಾಗಿ ಸಮಸ್ತ ನಗರದ ಶಾಂತಿಗೆ ಭಂಗಬಂದ ವಾರ್ತೆಯೊಂದು ಬಂಗಾಳದ ಜೆಸ್ಸೂರು ನಗರದಿಂದ ಬಂದಿರುತ್ತದೆ. ಈ ಮೊಕದ್ದಮೆಯು ಈಗ ಅಲ್ಲಿನ ಮೆಜಿಸ್ಟ್ರೇಟರ ಮುಂದೆ ವಿಚಾರಣೆಗೆ ಬಂದಿರುತ್ತದೆ.

ಜೆಸ್ಸೂರಿನ ಮುನ್ಸಿಪಾಲಿಟಿಯ ವೈಸ್ ಚೆಯರ್ಮನರೂ ವಕೀಲರೂ ಆದ ಅಬ್ದುಸ್ ಸಲಾಮರು ಈ ಮೊಕದ್ದಮೆಯ ತಪ್ಪಿತಸ್ಥರು. ಆ ನಗರದ ಪ್ರಸಿದ್ಧ ವ್ಯಕ್ತಿಗಳು. ಕೆಲವು ತಿಂಗಳ ಹಿಂದೆ, ವಿದ್ಯಾವಂತರಾದ ಅವರ ಪತ್ನಿಯು ಪತಿ ದಕ್ಷಿಣೆಗಾಗಿ ಸಲಾಮರ ಮೇಲೆ ದಾವೆಹೂಡುವವಳಾದಳು. ಪತ್ನಿ–ಅಮೀನಾ ಖಾತೂನಳಿಗೆ ಗಂಡನಿಂದ ಹಿಂಸೆಯಾಗದಂತೆ, ಮೆಜಿಸ್ಟ್ರೇಟರಿಂದ ಸಲಾಮನ ಮೇಲೆ ನಿರ್ಬಂಧ ಕ್ರಮಗಳು ಜಾರಿಯಾಗಿದ್ದುವು. ಕೋರ್ಟಿನ ಆಜ್ಞೆಗೆ ವಿರೋಧವಾಗಿ, ವೈಸ್ ಚೆಯರ್ಮನರು ಶಸ್ತ್ರಧಾರಿಗಳಾದ ಮೂವರು ನೇಪಾಳಿಯವರಿಂದಲೂ ಕೆಲವು ಮಂದಿ ಮುನ್ಸಿಪಲ್ ಪೇದೆಯವರಿಂದಲೂ ಕೂಡಿಕೊಂಡು, ಹೆಂಡತಿಯ ಮನೆಯೊಳಗೆ ನುಗ್ಗಿದರು. ಸಲಾಮರನ್ನು ವಿರೋಧಿಸುವ ಕಾರ್ಯದಲ್ಲಿ ಅಮೀನಳಿಗೆ ಅನೇಕ ಗಾಯಗಳಾದುವು. ಅಷ್ಟರೊಳಗೆ ಅಲ್ಲಿಗೆ ಸಾವಿರ ಜನರು ಕೂಡಿಬಂದು, ಅವರೊಳಗೆ ಪಕ್ಷಭೇದಗಳುಂಟಾಗಿ ಮಹಾ ಕ್ಷೋಭೆಯಾಗುವ ಸಂಭವುಂಟಾಗಲು, ಪೋಲೀಸ ಅಧಿಕಾರರು ಪೋಲೀಸ್ ಫೌಜಿನೊಂದಿಗೆ ಧಾವಿಸಿ ಬಂದು ಅಲ್ಲಿ ಕೂಡಿಬಂದವರನ್ನು ಚದರಿಸಿ ಶಾಂತಿರಕ್ಷಣೆ ಮಾಡಿದರು. ಗಂಡನ ಮೇಲೆ ಚಾರ್ಜ್‌ಸೀಟ್ ಹಾಕಿರುವರು.

ಮಜೂರರ ಮಜೂರಿಯನ್ನು ಹೆಚ್ಚಿಸಲು ಮುಂಬೈಯ ಗಿರಣಿಮ್ಹಾಲಿಕರು ಒಪ್ಪಿರುವರು.

ಅಸ್ಸಾಮ್ ಎಸೆಂಬ್ಲಿಯ ಖಾಲಿಬಿದ್ದ ಒಂದು ಸದಸ್ಯತನಕ್ಕೆ ಉಪಚುನಾವಣೆ ನಡೆದು, ಅಸ್ಸಾಂ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಬಹುಮತದಿಂದ ಚುನಾಯಿತರಾಗಿ ಬಂದಿರುವರು.

## ಮನೋವಾಂಛಿತ ಸಂತತಿ.

### ಹೆಣ್ಣು ಬೇಕಾದರೆ ಹೆಣ್ಣು, ಗಂಡು ಬೇಕಾದರೆ ಗಂಡು. ಬಂಜೆಯರಿಗೂ ಮಕ್ಕಳು ಹುಟ್ಟುವ ಕ್ರಮ ಒಂದು ಹೊಸ ಶೋಧ.

ವಿಲಾಯತಿಯ ಒಬ್ಬ ಡಾಕ್ಟರ–ವಿಜ್ಞಾನಿಯು ಮನೋವಾಂಛಿತ ಸಂತತಿಯನ್ನು ಪಡೆಯುವ ಸುಲಭೋಪಾಯವನ್ನು ಕಂಡು ಹಿಡಿದಿದ್ದಾನೆ. ಸುಮಾರು 100 ಜನ ಹೆಂಗಸರ ಮೇಲೆ ತನ್ನ ಪ್ರಯೋಗಗಳನ್ನು ನಡೆಯಿಸಿದಾಗ ಸುಮಾರು 75ಕ್ಕಿಂತ ಹೆಚ್ಚು ಹೆಂಗಸರು ತಮ್ಮ ಮನೋವಾಂಛಿತ ಸಂತತಿಯನ್ನೇ ಪಡೆದರು. ಸ್ತ್ರೀಯರು ಗರ್ಭವತಿಯರಾಗಿದ್ದಾಗ ಅವರ ಶರೀರದ ರಾಸಾಯನಿಕ ಗುಣವಿಶೇಷಗಳಿಂದ ಅವರಿಗಾಗುವ ಮಕ್ಕಳು ಗಂಡೋ ಹೆಣ್ಣೋ ನಪುಂಸಕವೋ ಎಂದು ನಿರ್ಧರಿಸಬಹುದಂತೆ. ಈ ತತ್ವವನ್ನು ಮೂಲಾಧಾರವಾಗಿಟ್ಟುಕೊಂಡು ಆ ಡಾಕ್ಟರನು ತನ್ನ ಶೋಧನೆಗಳನ್ನು ನಡೆಸಿದ್ದಾನೆ. ಗರ್ಭಿಣಿ ಸ್ತ್ರೀಯರಲ್ಲಿ ದ್ರಾವಕ ಗುಣ (Acid State)ವು ವಿಶೇಷವಾಗಿದ್ದರೆ ಅವರಿಗೆ ಹುಟ್ಟುವ ಮಕ್ಕಳು ಹೆಣ್ಣುಗಳಾಗುತ್ತವೆ. ಮತ್ತೆ ಗರ್ಭಿಣಿ ಸ್ತ್ರೀಯರಲ್ಲಿ ಕ್ಷಾರ ಗುಣ(Alkaline State)ವು ವಿಶೇಷವಾಗಿದ್ದರೆ, ಹುಟ್ಟುವ ಮಕ್ಕಳು ಗಂಡುಗಳಾಗುತ್ತವೆ ಎಂದು ವಿಜ್ಞಾನಿಗಳು ಹೇಳುವರು. ಆದಕಾರಣ ಗರ್ಭಿಣಿಯರಿಗೆ ದ್ರಾವಕ ಗುಣದ ಔಷಧಿಯನ್ನು ಇಂಜೆಕ್ಟ್ ಮಾಡಿದರೆ ಅವರಿಗೆ ಹೆಣ್ಣುಗಳು ಹುಟ್ಟುವವು. ಕ್ಷಾರ ಗುಣದ ಔಷಧಿಯನ್ನು ಇಂಜೆಕ್ಟ್ ಮಾಡಿದರೆ ಗಂಡುಗಳು ಹುಟ್ಟುವವು. ಕೆಲವು ಜನ ಸ್ತ್ರೀಯರಲ್ಲಿ ಕೆಲವು ಕಾರಣಗಳಿಂದ ದ್ರಾವಕ ಅಥವಾ ಕ್ಷಾರ–ಇವೆರಡರಲ್ಲಿ ಯಾವದೊಂದರ ಗುಣವಿಶೇಷವೂ ಕಂಡುಬರುವುದಿಲ್ಲ. ಅವರು ಬಂಜೆಯರಾಗಿ ಇರುತ್ತಾರೆ. ಇಂಥ ಸ್ತ್ರೀಯರಿಗೆ ದ್ರಾವಕ ಅಥವಾ ಕ್ಷಾರ-ಎಂಥ ಗುಣವಿಶೇಷದ ಔಷಧಿಯ ಇಂಜೆಕ್ಷನು ಕೊಡುತ್ತಾರೋ, ಅವರಿಗೆ ಅಂಥ ಮಕ್ಕಳು ಹುಟ್ಟುವವು. ಡಾಕ್ಟರನು ತನ್ನ ಶೋಧನೆಯನ್ನು ವಿಸ್ತಾರವಾಗಿ ವಿವರಿಸಿ 'ಹುಡುಗ ಅಥವಾ ಹುಡುಗಿ!' ಎಂಬ ಹೆಸರಿನ ಒಂದು ಪುಸ್ತಕವನ್ನು ಇಂಗ್ಲೀಷಿನಲ್ಲಿ ಬರೆದಿದ್ದಾನೆ. ಅವರು ಹೇಳುವ ಪ್ರಕಾರ ಮದ್ದು ಕೊಟ್ಟು ಬಂಜೆಯರು ಮಕ್ಕಳನ್ನು ಪಡೆದಿದ್ದಾರೆ; ಹೆಣ್ಣುಗಳು ಮಾತ್ರ ಪಡೆದವರು ಗಂಡಗಳನ್ನೂ, ಗಂಡುಗಳನ್ನು ಮಾತ್ರ ಹುಟ್ಟಿಸಿದ್ದವರು ಹೆಣ್ಣುಗಳನ್ನೂ ಪಡೆದು ತಮ್ಮ ಇಚ್ಛಾಪೂರ್ತಿ ಮಾಡಿಕೊಂಡಿದ್ದಾರೆ.

# ಮಂಗಳೂರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

## ಡಿ. ಸಿ. ಮಿಶ್ಯನ್ ಅನಾಥಾಲಯದ ಸಾಹಿತ್ಯೋತ್ಸವವು

'ದಿವಂಗತ ಸ್ವಾಮಿ ಈಶ್ವರಾನಂದ' ಅನಾಥಾಲಯ ಸಾಹಿತ್ಯ ಸಂಘದ ಮೂರನೇ ವಾರ್ಷಿಕೋತ್ಸವವು ಇದೇ ತಿಂಗಳ ತಾರೀಕು 6-3-38ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11ಕ್ಕೆ ವಿದ್ಯಾರ್ಥಿ ಉಪಾಧ್ಯಾಯರಾದ ಶ್ರೀಯುತ ಯಂ. ಸುರೇಂದ್ರನಾಥನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಕಾರ್ಯಕ್ರಮವು ಭಗವಂತನ ಪ್ರಾರ್ಥನೆಯಾದ ಬಳಿಕ ಸಂಘದ ಕಾರ್ಯದರ್ಶಿಯವರಿಂದ ವರದಿ ವಾಚನವಾಯಿತು. ತದನಂತರ ಮಾತಾಡುವುದರಲ್ಲಿ ಲೇಖನ ಬರೆಯುವುದರಲ್ಲಿ ಮತ್ತು ಸರಿಯಾಗಿ ಹಾಜರಾದ್ದ ಸದಸ್ಯರುಗಳಲ್ಲಿ ಪ್ರಥಮ ದ್ವಿತೀಯ ಸ್ಥಾನಗಳನ್ನು ಪಡೆದವರಿಗೆ ಬಹುಮಾನ ಹಂಚಲಾಗಿ ಸದ್ರಿ ಸಂಘದ ಅಧ್ಯಕ್ಷರು ಸಂಘದ ಏಳಿಗೆಯ ವಿಷಯ ಸುರಸವಾದ ಭಾಷಣವನ್ನಿತ್ತರು. ಆ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ 'ಸಾಹಿತ್ಯಸಂಘದ ಮಹತ್ವಿಕೆಯನ್ನು ಕೊಂಡಾಡಿ ಸುಮಧುರವಾದ ಅರ್ಥಗರ್ಭಿತವಾದ ಉಪನ್ಯಾಸವನ್ನಿತ್ತರು

## ಭಾವಚಿತ್ರ 'ಅನಾವರಣ ಸಮಾರಂಭ:

ಇದೇ ತಾ 10ನೇ ಸಾಯಂ ಗಂಟೆ 5-10ಕ್ಕೆ ದ. ಕ. ಕೆಲಸಗಾರರ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡು ಮಾಜಿ ಪ್ರೆಸಿಡೆಂಟರಾದ ಶ್ರೀಯುತ ಎ ಬಿ ಶೆಟ್ಟಿ, ಎಂ ಎಲ್ ಎ. ಇವರ ತೈಲಚಿತ್ರ ಅನಾವರಣೋತ್ಸವವನ್ನು ಪ್ರಾಂತ ಮಂತ್ರಿ ಗೋಪಾಲ ರೆಡ್ಡಿಯವರು ಡಿ. ಬೋ ಆಫೀಸಿನಲ್ಲಿ ಮಾಡಲಿರುವವರಾಗಿ ತಿಳಿದುಬರುತ್ತದೆ

ಲೋಕಲ್ ಎಡ್ಮಿನಿಸ್ಟ್ರೇಶನಿನ ಮಂತ್ರಿಗಳಾದ ಮಾನ್ಯ ಗೋಪಾಲ ರೆಡ್ಡಿಗಳಿಗೂ ಪಾರ್ಲಿಮೆಂಟರಿ ಕಾರ್ಯದರ್ಶಿ ಭಕ್ತವತ್ಸಲಂ ಎಂ ಎಲ್ ಎ ಇವರಿಗೂ ಈ ದಿನ ಗಂಟೆ 4 30ಕ್ಕೆ ಮಂಗಳೂರು ಮುನ್ಸಿಪಾಲಿಟಿಯವರು "ಎಟ್ ಹೋಂ" ಕೊಡುವರಾಗಿ ತಿಳಿದುಬರುತ್ತದೆ

## ಸಜ್ಜನರೇ ಪ್ರಾಣಿಬಲಿಯನ್ನು ನಿಷೇಧಿಸಿರಿ.

ಉರ್ವ ಮಾರಿಗುಡಿ ದೇವಸ್ಥಾನದಲ್ಲಿ ಪ್ರಾಣಿಬಲಿಯು ಹತ್ತಿರ ಬರುತ್ತಲಿದೆ. ಈ ಸಂದರ್ಭದಲ್ಲಿ ಹಿಂದು ಮಹಾಜನರಲ್ಲಿ ಮತ್ತು ಮಾರಿಗುಡಿ ಮೊಕ್ತೇಸರರಲ್ಲಿ, ಶಾಸ್ತ್ರಿ ಗುರಿಕಾರ ಭಜನೆ ಮಂಡಳಿಯ ಭಕ್ತವೃಂದದಲ್ಲಿ ಕೂಡಾ ವಿಜ್ಞಾಪಿಸಿಕೊಳ್ಳುವದೇನೆಂದರೆ ದಯಮಾಡಿ ಪಶುಬಲಿಯನ್ನು ನಿಲ್ಲಿಸಿರಿ. ತನ್ನಂತೆಯೇ ಸರ್ವ ಪ್ರಾಣಿಗಳೆಂದು ತಿಳಿಯಬೇಕು. ತನ್ನನ್ನು ರಕ್ಷಿಸುವಪಕ್ಷೋಸ್ಕರ ಮತ್ತೊಂದು ಪ್ರಾಣಿಯನ್ನು ಕೊಲ್ಲಬಾರದು. ಎಲ್ಲ ಪ್ರಾಣಿಗಳಿಗೂ ಬದುಕಬೇಕೆಂಬ ಆಶೆಯು. ಮನಸ್ಸಿನಿಂದಲೂ ಮಾತಿನಿಂದಲೂ, ಕೆಲಸದಿಂದಲೂ ಯಾವ ಪ್ರಾಣಿಗೂ ಒಮ್ಮೆಯಾದರೂ ದುಃಖವನ್ನುಂಟು ಮಾಡದೇ ಇರುವದೇ ಪುಣ್ಯ. ಇದೇ ಅಹಿಂಸೆ ಪಾಪಕರ್ಮಹಾನಿಕಾರಕಯೆಂದು ತಿಳಿಯದ ತಮ್ಮ ಬಂಧುಮಿತ್ರಾದಿಗಳಿಗೆ ಇದನ್ನು ಬೋಧಿಸಿ ಪ್ರಾಣಿಬಲಿಯನ್ನು ನಿಷೇಧ ಮಾಡಿಸಿದರೆ ಕೊಲ್ಲದೆ ಉಳಿಸಿದ ಪುಣ್ಯಕ್ಕೆ ಪಾತ್ರರಾಗುವರೆಂದು ನಿಜ್ಞಾಪನೆ

## ದ. ಕ. ಜಿಲ್ಲಾ ಬೋರ್ಡಿನ ಸಭೆ:

ದ ಕ ಜಿಲ್ಲಾ ಬೋರ್ಡಿನ ಸಭೆಯು ತಾ 4ರಲ್ಲಿ ಶ್ರೀ ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಎರಡು ವಿಭಾಗಗಳಿಗೆ ರಾಜಿನಾಮೆ ಸದಸ್ಯತನವನ್ನು ಕಳಕೊಂಡ ಶ್ರೀ ವೈಕುಂಠ ಬಾಳಿಗರಿಗೆ ಸದಸ್ಯತನ ಕೊಡಲಾಯಿತು. ಕೋಮ್ಯುನಲ್ ರಿಪ್ರೆಸೆಂಟೇಶನ್ ಕುರಿತು ಏನೊಂದುಗಳ ಕುರಿತು ಬಂದ ಮದ್ರಾಸು ಸರಕಾರದ ಪತ್ರ ಓದಲಾಗಿ ಲೋಕಲ್ ಫಂಡ್ ವೈದ್ಯಕೀಯ ಇಲಾಖೆಗೆ ಅದು ಅನ್ವಯಿಸಬಾರದಾಗಿ ಸೂಚನೆಯೊಂದು ಮುಂದೆ ಬರಲು, ಬಿ ಎಲ್. ಆಕ್ಷೇಪಿಸಿದರು. ಆ ರೂಲ್ಸುಗಳನ್ನು ತೆಗೆದು ಹಾಕಬೇಕಾಗಿ ಇಂದು ಅದನ್ನು ಮುಂದೆ ತಂದರು. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ ಈ ಠರಾವನ್ನು ತರುವದೆಂದೇ ತರಲಾಯಿತೆಂದು ವಾದಿಸಲಾಯಿತು. ಶ್ರೀ ಗೋವಿಂದ ಶಿವರಾಯರು ಮತ್ತು ಸದಾಶಿವರಾಯರು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಸದಸ್ಯರಾಗಿ ಚುನಾಯಿಸಲ್ಪಟ್ಟರು.

ಕಾರ್ಲಾಡಿ ಸಂಕದ ಜೀರ್ಣೋದ್ಧಾರಕ್ಕಾಗಿ ರೂ. 16,500 ಸಂಕ್ಷನ್ ಮಾಡಲಾಯಿತು. ಪ್ರತಿವರ್ಷ ಮಂಗಳೂರಲ್ಲಿ ಜಿಲ್ಲಾ ಎಥಲಿಟಿಕ್ ಸಂಘದ ಆಶ್ರಯದಲ್ಲಿ ನಡೆಯುವಂತೆ ಸ್ಪರ್ಧಾಟಗಳನ್ನು ನಡೆಯಿಸಬೇಕಾಗಿ ನಿರ್ಣಯವಾಯಿತು

ಹಳ್ಳಿಗಳಲ್ಲಿ ಕೆಲಸ ಮಾಡುವ ಸೂಳಗಿತ್ತಿಯವರು, ಜಿಲ್ಲಾ ಹೆಲ್ತ್ ಆಫೀಸರರ ಕೈಕೆಳಗಿರಬೇಕಾಗಿಯೂ ನಿರ್ಣಯವಾಯಿತು. ಹಳ್ಳಿಗಳಲ್ಲಿ ಮೆಟರ್ನಿಟಿ ಕುರಿತು, ಕೆಲಸಮಾಡುವ ಕುರಿತು ಜಿಲ್ಲಾ ಬೋರ್ಡಿನವರು ಓವರ್ ಸ್ಟ್ರೀ ಶೃದ್ಧಕನ್ನು ನೇಮಿಸುವ ವಿಚಾರದಲ್ಲಿ ಚಾಕಿಯಾಡಲಾಯಿತು.

ಬೀಡಿ ತಯಾರಿಸುವ ಫ್ಯಾಕ್ಟರಿಗಳಿಗೆ ಲ್ಯಾಸನ್ಸು ಫೀಸು ವಿಧಿಸಬೇಕಾಗಿ ನಿರ್ಣಯವಾಯಿತು. ಬೀಡಿಯ ವ್ಯಾಪಾರಕ್ಕೆ ಒಂದು ತರದ ಪಕೋಟೆಯನ್ನು ಹಾಕಬೇಕಾಗಿ ಶ್ರೀ ಶಿವರಾಯರು ಸೂಚಿಸಲು, ಅದು ಅಸಾಧ್ಯವೆಂದು ಡಾ॥ ನಿಕಲ ಶೆಟ್ರು ಅಭಿಪ್ರಾಯಪಟ್ಟರು. ಹೀಗೆ ಅನೇಕ ವಿಚಾರದ ಕುರಿತು ಚರ್ಚೆ ನಡೆದು, ಸಭೆಯು ಮುಕ್ತಾಯವಾಯಿತು.

## ಬೋರ್ಡು ಶಾಲೆಗಳಲ್ಲಿ ವಂದೆ ಮಾತರಂ ಗೀತೆ.

ಜಿಲ್ಲಾ ಬೋರ್ಡಿನ ಇರ್ವರು ಮುಸ್ಲಿಮ ಸದಸ್ಯರ ಪ್ರತಿಕೂಲೆಯ ಮೇಲೆ, ಜಿಲ್ಲಾ ಬೋರ್ಡ್ ಪ್ರೆಸಿಡೆಂಟರು ಬೋರ್ಡು ಶಾಲೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಬಾರದಾಗಿ ಕೊಟ್ಟ ಅಪ್ಪಣೆಯು ಹಿಂತೆಗೆಯಲಾಗಿದೆ. ಮುಸ್ಲಿಮ ಶಾಲೆಗಳಲ್ಲಿ ಈ ಹಾಡನ್ನು ಹಾಡಬಾರದಾಗಿಯೂ ಇತರ ಶಾಲೆಗಳಲ್ಲಿರುವ ಮುಸ್ಲಿಮ ವಿದ್ಯಾರ್ಥಿಗಳು ಈ ಪ್ರಾರ್ಥನೆಯಲ್ಲಿ ಭಾಗವಹಿಸುವ ಆಗತ್ಯವಿಲ್ಲೆಂದು ಈ ಅಪ್ಪಣೆಯಲ್ಲಿದೆ

## ನಗರ ಸಭೆ:

ಮುನ್ಸಿಪಾಲಿಟಿಯ ಮೀಟಿಂಗ್ ಇದೇ ಮಾರ್ಚ ತಾ 14ನೇ ಸೋಮವಾರ 5-30ಕ್ಕೆ ಜರಗಲಿರುವುದಾಗಿ ತಿಳಿದುಬರುತ್ತದೆ

## ಋಣ ವಿಮೋಚನಾ ಬೀಲಿನ ಕುರಿತು ಭಾಷಣ:

ಯೂನಿವರ್ಸಿಟಿ ಎಕ್ಸ್ಟೆನ್ಶನ್ ಬೋರ್ಡಿನ ನೇತೃತ್ವದಲ್ಲಿ ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಏರ್ಪಡಿಸಿದ ಹೋಲಿನಲ್ಲಿ ಸಭೆ ಸೇರಿ ಶ್ರೀ ಬಿ. ವೈಕುಂಠ ಬಾಳಿಗರು, ಮೊನ್ನೆ ಮದ್ರಾಸು ಎಸೆಂಬ್ಲಿಯಲ್ಲಿ ಮಂಜೂರಾದ ಋಣವಿಮೋಚನ ಬೀಲಿನ ಕುರಿತು ಭಾಷಣವಿತ್ತರು. ಶ್ರೀ ಬಾಳಿಗರ ಭಾಷಣದ ಸಾರಾಂಶ —

ಇದೊಂದು ನೂತನ ಕ್ರಮವಲ್ಲ. ವೈಕಲ್ಯಗಾದ ಕಾಲದ ಹೊರೆಯು ವಿಶೇಷವಾಗಲು ಹೊರಗಿನ ಅನೇಕ ದೇಶಗಳಲ್ಲಿ ಈ ತರದ ಕ್ರಮಗಳು ಆಚರಿಸಲ್ಪಟ್ಟವೆ. ಸಾಲಪಡೆಕೊಂಡವರ ಮೇಲೆ ಸಾಲಕೊಟ್ಟವರು ವಿಶೇಷ ತರದ ಕಾವಳಿ ನಡೆಯಿಸದಂತೆ ನ್ಯಾಯ ಕ್ರಮಗಳನ್ನು ಈ ಮೊದಲೇ ಯಿದ್ದವು. ಆದರಿಂದ ಕೊಂಟ್ರಕ್ಟಿನ ಮಹತ್ವಗಳನ್ನು ಮುಂದುಬಿಟ್ಟದು ಈ ಬೀಲಿನಲ್ಲಿ ಪ್ರಥಮವಾದುದಲ್ಲ. ದಾನ ದುಸ್ಥಿತಿ ಕ್ರಮದ ರೂಂತು ಅದು ನಮ್ಮ ಸ್ವಾತಂತ್ರ್ಯದಲ್ಲಿ ಆಚರಿಸ ವುದು ಸರಿಯಲ್ಲ. ಬಡ್ಡಿದರಗಳ ಮೇಲೆ ಸರಕಾರದ ಹತೋಟಿಯು ಬೇಕು. ಈ ಬೀಲಿನ ಕ್ರಮದಿಂದ ಭವಿಷ್ಯದಲ್ಲಿ ಅನೇಕ ತೊಂದರೆಗಳುಂಟಾಗಬಹುದು. ಈ ಬೀಲಿನಿಂದ ಕೆಲವರ ಪಕ್ಷ ಇದ್ದತೆಗಳ ಮೇಲೆ ಕೈವಶಪಡಿದಂತಾಗಿದೆ ಭೂಹಿಡುವಳಿಯವರು ಅಂಶವಿಲ್ಲದ ವ್ಯಯ ಇವುಗಳ ಕುರಿತು ಮೊದಲು ವ್ಯವಸ್ಥೆಯಾಗಬೇಕು ಹೀಗೆ ಬೀಲಿನಲ್ಲಿ ಅನೇಕ ತೊಡಕುಗಳನ್ನು ತೋರಿಸಿಕೊಟ್ಟು ಈ ಬೀಲು ಅತಿ ಅವಸರದಿಂದ ಚರ್ಚಿಸಲ್ಪಟ್ಟು ಮಂಜೂರಾಗಿರುತ್ತದೆಂದು ಅಭಿಪ್ರಾಯಪಟ್ಟು ಶ್ರೀ ಬಾಳಿಗರು ತಮ್ಮ ಭಾಷಣವನ್ನು ಮುಗಿಸಿದರು

## ಲೇಬರ್ ಕಮಿಶನರ ಆಗಮನ

ಲೇಬರ್ ಕಮಿಶನರರಾದ ಮಿ॥ ಓ. ಜಿ ರೂಥರ್ ಫರ್ಡ್ ಸಾಹೇಬರು ತಾ 6ಕ್ಕೆ ಮಂಗಳೂರಿಗೆ ಬಿಜಯಂಗೈದು ತಾ 7ನೇ ದಿನ ಗೇರುಬೀಜ ಕಾರ್ಖಾನೆಯ ಕೆಲಸಗಾರರ ಕುಂದುಕೊರತೆಗಳ ವಿಷಯ ವಿಚಾರಣೆ ನಡೆಸುವರೆಂದು ತಿಳಿದುಬರುತ್ತದೆ

## ಜಿಲ್ಲಾ ಕಾಂಗ್ರೆಸ್ ಕಮಿಟಿ

ನೂತನವಾಗಿ ಚುನಾಯಿಸಲ್ಪಟ್ಟ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯು ಮೊನ್ನೆ ಆದಿತ್ಯವಾರ ತಾ 6ರಲ್ಲಿ, ಶ್ರೀ ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಮತ್ತು ಪ್ರತಿನಿಧಿಗಳು ಕೆಲವರ ತಮ್ಮ ತಮ್ಮ ಕಡೆಗಳಲ್ಲಿ ಚುನಾವಣೆಗಳು ಸರಿಯಾಗಿ ನಡೆದುದರಿಂದ, ಈ ಸಭೆಯನ್ನು ನಡೆಯಿಸುವ ಕುರಿತು ಆಕ್ಷೇಪವೆತ್ತಿರುವರಾಗಿ, ಅಧ್ಯಕ್ಷರು ಸಭಾ ಪ್ರಾರಂಭದಲ್ಲಿ ತಿಳಿಸಿದರು. ಆದರೆ ಸಭೆಯು ಮುಂದುವರಿಸಬಾರದು—ಅನೇಕ ಪ್ರಾಮುಖ್ಯ ವಿಚಾರಗಳು ಮಹಿಳಾ ದೊಳಗೆ ಆಗಬೇಕೆಂದು ಅಭಿಪ್ರಾಯಗಳಾಗಿ, ಮತ ತೆಗೆಯಲಾಗಿ ಸಭೆಯು ನಡೆಯಬೇಕೆಂದಾಯಿತು.

ಶ್ರೀ ಶ್ರೀನಿವಾಸ ಮಲ್ಯರು, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಚುನಾಯಿತರಾದರು, ಶ್ರೀಗಳಾದ ಉಮೇಶರಾಯರು ಮತ್ತು ಕೆ. ಮಹಾಬಲ ಹೆಗ್ಡೆಯವರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು, ಶ್ರೀಗಳಾದ ಕೆ. ಕೆ. ಶೆಟ್ಟಿಯವರು ಜನರಲ್ ಸೆಕ್ರೆಟರಿಯವರಾಗಿಯೂ, ಶ್ರೀ॥ ಕಾಶಪ್ಪಯ್ಯರವರು ಜೊಯಿಂಟ್ ಸೆಕ್ರೆಟರಿಯವರಾಗಿಯೂ, ಶ್ರೀ॥ ಅಪ್ಪಾಜಿಯವರು ಖಜಾಂಚಿಯವರಾಗಿಯೂ ಚುನಾಯಿಸಲ್ಪಟ್ಟರು.

ವರ್ಕಿಂಗ್ ಕಮಿಟಿಯ ಚುನಾವಣೆಯ ಕುರಿತು ಕೊನ್ಸ್ಟಿಟ್ಯೂಶನ್‌ನಲ್ಲಿ ಕೆಲ ಬದಲಾವಣೆಗಳಾಗಬೇಕೆಂದು ಶ್ರೀ॥ ಎಲ್. ಎಸ್. ನಾಯಕರ ಠರಾವಿನ ಪ್ರಕಾರ ವರ್ಕಿಂಗ್ ಕಮಿಟಿಯಲ್ಲಿ ಜನರಲ್ ಬೋಡಿನಲ್ಲಿರುವ ಸದಸ್ಯರ ಸಂಖ್ಯೆಯು ಮೂರನೇ ಒಂದಂಶವಿರಬೇಕಾಗಿ ಈ ಮೊದಲಿನ ನಿಯಮದಂತೆ, ಚುನಾವಣೆ ನಡೆಯುವ ಬದಲಾಗಿ, ವರ್ಕಿಂಗ್ ಕಮಿಟಿಯಲ್ಲಿ ಜನರಲ್ ಬೋಡಿಯ ಐದನೆ ಒಂದಂಶ ಸದಸ್ಯರಿದ್ದರೆ ಸಾಕೆಂದು ನಿರ್ಣಯವಾಗಿ ಶ್ರೀಗಳಾದ ಸುಬ್ಬಣ್ಣ ಶೆಟ್ರಿ, ಲಕ್ಷ್ಮೀನಾರಾಯಣ ನಾಯ್ಕ, ನಾಗೇಂದ್ರ ಬಾಳಿಗ, ಎಸ್. ಎನ್ ಹೊಳ್ಳ, ವಾಸುದೇವ ಶೆಣೈ, ಬಿ. ಮಾಧವ ರಾವ್ ಕೋಟಿಯಾನ್ ಶೆಟ್ಟಿ, ಕೃಷ್ಣ ಹೆಗ್ಗಡೆ, ಚನ್ನಪ್ಪ ಗೌಡ, ಕೆ ಎಲ್. ಕುಡ್ವಾ, ಅನ್ನಕಳ್ಪಣರಾಯ, ಎಮ್ ಆರ್ ಪ್ರಭು, ಗೋಪಾಲ ಕೃಷ್ಣ ಕಾಮತ್, ಎಲ್ ಎಸ್ ನಾಯಕ್, ಕಮಲಾದೇವಿ, ಮೊದಲಾದವರು, ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಚುನಾಯಿಸಲ್ಪಟ್ಟರು

ಮುಂದಿರುವ ಜಿಲ್ಲಾ ಬೋರ್ಡಿನ ಚುನಾವಣೆಯ ವಿಷಯವು ಚರ್ಚೆಗೆ ಬಂದು, ಈ ಮೊದಲಿರುವ ಪಾರ್ಲಿಮೆಂಟರಿ ಕಮಿಟಿಯನ್ನು ರದ್ದುಮಾಡಿ, ಆ ಕೆಲಸವೆಲ್ಲಾ ವರ್ಕಿಂಗ್ ಕಮಿಟಿಗೆ ವಹಿಸಿಕೊಡಬೇಕಾಗಿ ನಿರ್ಣಯಿಸಲಾಯಿತು. ಚುನಾವಣೆಗಳಲ್ಲಿ, ವರ್ಕಿಂಗ್ ಕಮಿಟಿಯಿಂದ ನಡೆಯಿಸಲಾಗುವವು. ಉಮೇದ್ವಾರರು ರೂ 25ನ್ನು ಅರ್ಜಿಯೊಡನೆ ಡಿಪಾಜಿಟು ಕೊಡಬೇಕಾಗಿಯೂ ನಿರ್ಣಯಿಸಲಾಯಿತು

ನಂತರ, ತಾಲೂಕು, ನಗರ, ಗ್ರಾಮ ಕಮಿಟಿಗಳ ಶಾಸನವನ್ನು ರಚಿಸುವರೆ, ಒಂದು ಸಬ್ ಕಮಿಟಿಯು ನೇಮಕವಾಯಿತು. ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು

## ವಾರ್ಷಿಕೋತ್ಸವ.

ಸ್ಥಳೀಯ ಶ್ರೀ ಈಶ್ವರಾನಂದ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ಜೂನಿಯರ್ ಡಿಪ್ಯುಟಿ ಶಾಲಾ ಇನ್ಸ್ಪೆಕ್ಟರರಾದ ಶ್ರೀ॥ ಕೃಷ್ಣರವರ ಅಧ್ಯಕ್ಷತೆಯಲ್ಲಿ ಮೊನ್ನೆ ಶನಿವಾರ ದಿವಸ ನಡೆಯಿತು. ವಂದೆ ಮಾತರಂ ಗೀತದೊಂದಿಗೆ ಸಭೆಯು ಪ್ರಾರಂಭವಾಗಿ, ಸಂಘದ ವರದಿಯು ಓದಲಾಗಿ, ಭಾಷಣಗಳಿಂದ ಸಭೆಯು ಮುಕ್ತಾಯವಾಯಿತು. ಅಂದು ಬೆಳಿಗ್ಗೆ ಫೋಟೋ ಕೂಟವು ಫಲಾಹಾರವು ನಡೆದಿತ್ತು

## ಸತ್ಕಾರ ಕೂಟ.

ಸ್ಥಳೀಯ ಸೈಂಟ್ ಆಲೋಸಿಯಸ್ ಕಾಲೇಜಿನ ಉಪಾಧ್ಯಾಯರಿಗಾಗಿ ಸ್ಥಾಪಿಸಲ್ಪಟ್ಟ ಹಿಂದಿ ಕ್ಲಾಸಿನ ವ್ಯವಸ್ಥಾಪಕರಾದ ಶ್ರೀ ರಾಮಚಂದ್ರ ಅಯ್ಯರವರು, ಆ ಹಿಂದಿ ಕ್ಲಾಸಿನ ಸದಸ್ಯರಿಗೆ ಮೊನ್ನೆ ಒಂದು ಸತ್ಕಾರ ಕೂಟವನ್ನು ಕೊಟ್ಟರು. ಹಿಂದೂದೇಶಕ್ಕೆ ಒಂದು ರಾಷ್ಟ್ರೀಯ ಭಾಷೆಯು ಆಗತ್ಯವಿರುವುದೆಂದು ಅದು ಹಿಂದಿ ಎಂದು ಶ್ರೀ ರಾಮಚಂದ್ರ ಅಯ್ಯರು, ಭಾಷಣವಿತ್ತರು ಶ್ರೀ॥ ನಾಯರರ ಕಾರ್ಯಸಾಧನವನ್ನು ಶ್ಲಾಘಿಸಿ ಅನೇಕ ಮಂದಿಗಳು ಭಾಷಣವಿತ್ತರು

## ಕ್ಷಯರೋಗ ನಿವಾರಣಾ ಫಂಡಿನ 'ಫ್ಲೇಗ್ ಡೇ' ಆಚರಣೆಯು

ಇದೇ ಮಾರ್ಚ ತಾ 16ನೇ ದಿವ ಆಚರಿಸಲಾಗುವುದು. ಆ ದಿನ ಜಾವಣೆಯು ಒಂದಾಣೆಯ ರತ ಮಾರಲ್ಪಡುವುದು. ಪ್ರತಿಯೊಬ್ಬರೂ ಪ್ರೋತ್ಸಾಹಿಸಬೇಕಾಗಿ ವಿನಂತಿ

## ದ. ಕ ಜಿಲ್ಲಾ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಮಹಾಸಭೆ.

ಇದೇ ತಾರೀಕು 6ನೇ ಆದಿತ್ಯವಾರ ನಡೆದು ಈ ಕೆಳಗಿನ ಕಾರ್ಯಕ್ರಮವು ಜರಗಿತ. ಅಧಿಕಾರಿ ವರ್ಗದ ಚುನಾವಣೆಯು ಸ್ಥಗಿತವಾಗಿ ಈ ಕೆಳಗಿನವರು ಆಯಾ ಸ್ಥಾನಕ್ಕೆ ಆರಿಸಿ ಬಂದರು 1 ಅಧ್ಯಕ್ಷರು–ಶ್ರೀಮತಿ ಕಮಲಾದೇವಿ 2 ಉಪಾಧ್ಯಕ್ಷರು–ಶ್ರೀ॥ ಸುಬ್ಬಣ್ಣ ಶೆಟ್ಟಿ, ಬಸ್ರೂರು 3. ಜನರಲ್ ಸೆಕ್ರೆಟರಿ–ಶ್ರೀ॥ ಯಸ್ ಎಸ್. ಹೊಳ್ಳ, 4 ಜಾಯಿಂಟ್ ಸೆಕ್ರೆಟರಿ–ಶ್ರೀ॥ ಶೇಷಗಿರಿ ರಾವ್, ಯಸ್. 5 ಕೋಶಾಧಿಕಾರಿ–ಶ್ರೀ॥ ಕೃಷ್ಣ ಪೈ ಇವರಲ್ಲದೆ ಈ ಕೆಳಗಿನವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀಯುತರುಗಳಾದ 1. ಕೆ. ಕೆ. ಶೆಟ್ಟಿ. 2. ಕೆ ಯಲ್. ನಾಯಕ್. 3 ಸಿ. ಯಸ್. ಸಲ್ಡಾನ್ಹ, 4 ಅಣ್ಣಪ್ಪ ಶೆಟ್ಟಿ, 5. ಬಿ. ಜೆ. ಶೆಟ್ಟಿ

# ತಾಲೂಕುಗಳಿಂದ

## ಕಾರ್ಕಳ

ಈ ತಾಲೂಕಿನ ಕೆಲವು ಪ್ರಮುಖ ಕೃಷಿವರ್ಗದಾರರು ಒಂದು ತಂತಿ 'ಮಾಲಕ ಮದ್ರಾಸು ಕೃಷಿಕರ ಸಾಲನಿವಾರಣಾ ಮಸೂದೆಗೆ ಸಮ್ಮತಿ ಕೊಡಬಾರದೆಂದು ಪ್ರಾರ್ಥಿಸಿ ಗವರ್ನರ, ವಾಯ್ಸರಾಯರಿಗೆ ಪ್ರಾರ್ಥನಾ ಪತ್ರವನ್ನು ಕಳುಹಿಸಿ ಕೊಟ್ಟಿದ್ದಾರೆ. ಈ ಸಂಬಂಧ ಚತುರ್ಮುಖ ಬಸದಿಯಲ್ಲಿ ಒಂದು ಸಭೆ ಕೂಡಿತ್ತಾಗಿಯೂ ತಿಳಿದುಬರುತ್ತದೆ

ತಾ. 1ನೇ ಶಿವರಾತ್ರಿ ಗೆ ಶ್ರೀ ವೀರಭದ್ರ ದೇವಸ್ಥಾನದ ಚಂದ್ರಶಾಲೆಯಲ್ಲಿ ಊರಪರವೂರ ಮಡಿವಾಳರ ಒಂದು ಜಾತಿಸಭೆಯು ಶ್ರೀ ಕೆ. ಪುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಜಾತಿಯ ಉದ್ಧಾರದ ಬಗ್ಗೆ ಅನೇಕ ಮಹನೀಯರ ಭಾಷಣಗಳಾದುವು. ಅಧ್ಯಕ್ಷರು ಕೆಲವು ಹಿತಸೂಚನೆಗಳನ್ನು ಕೊಟ್ಟು ಬಳಿಕ ಸಭೆ ಮುಗಿಯಿತು

ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ॥ ಕೊರಗ್ರೈನವರು ತಂಜಾವೂರು ಜಿಲ್ಲೆಯ ತಿರುವಾರೂರಿಗೆ ವರ್ಗಹೊಂದಿದುದರಿಂದ ಅವರ ಸ್ಥಾನಕ್ಕೆ ಮಂಗಳೂರಿನ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ ಪೋಲು ರೆಡ್ಡಿಯವರು ನೇಮಕಹೊಂದಿರುವರೆಂದು ತಿಳಿದುಬರುತ್ತದೆ

ಕಾರ್ಕಳದ ಸುತ್ತಮುತ್ತಲಿರುವ ಮರ್ಣೆ, ಮಾಳ ಮೊದಲಾದ ಹಳ್ಳಿಗಳಲ್ಲಿ ಮಲೇರಿಯಾ ವಿಪರೀತವಾಗಿ ಹರಡಿರುವದೆಂದು ತಿಳಿದುಬರುತ್ತದೆ. ಆರೋಗ್ಯಖಾತೆಯ ಅಧಿಕಾರಿಗಳು ಇದರ ಕುರಿತು ಒಳ್ಳೆ ನಿಗಾತೆಗೆದುಕೊಂಡು ಅದನ್ನು ನಿಲ್ಲಿಸು ಪ್ರಯತ್ನಮಾಡುವರಾಗಿ ನಂಬಿದ್ದೇವೆ

## ವಾರಂಗೆ

ಇದೇ ತಾ 19ನೇ ಶನಿವಾರ ಶ್ರೀ ನಾರಾಯಣ ಮಠದ ಇದಿರು ಶ್ರೀ ಮಂಡರ್ ಮತ್ತು ಶ್ರೀ ಅಮ್ಮತೇಶ್ವರಿ ದಶಾವತಾರ ಮೇಳಗಳ ಜೋಡಾಟವು ವಿಜೃಂಭಣೆಯಿಂದ ಜರಗಲಿಕ್ಕಿರುವುದು. ಸರ್ವರಿಗೂ ಸುಸ್ವಾಗತವು

## ಪಡುಬಿದ್ರೆ

ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಉತ್ಸವ ಸಂಬಂಧವಾದ ಧ್ವಜಾರೋಹಣವು ಇದೇ ಮಾರ್ಚ ತಾ. 14ನೇ ಸೋಮವಾರ ದಿವಸವೂ ತಾ 1 ನೇ ದಿನ ರಾತ್ರೆ ಅಯನೋತ್ಸವವು ಮತ್ತು ತೆಂಕುತಿಟ್ಟು ಬಡಗುತಿಟ್ಟು ಯಕ್ಷಗಾನ ತಾಳಮದ್ದಳೆ ಕೂಡಾ ಮಂಗಳವಾರವೂ, ರಥೋತ್ಸವವು ತಾ 21ನೇ ಸೋಮವಾರವೂ ಬಾಗಿಲು ತೆರೆಯುವುದು ಮತ್ತು ಚೆಂಡಾಟ ಉತ್ಸವವು ತಾ 22ನೇ ಮಂಗಳವಾರ ದಿವಸವೂ ಜರಗುವುದು.

## ಮೂಡಬಿದ್ರೆ

ಇಲ್ಲಿಯ ಉಪಾಧ್ಯಾಯರ ಸಂಘದ ವಾರ್ಷಿಕಾಧಿವೇಶನ ಸಭೆಯು ಇದೇ ಮಾರ್ಚ ತಾ 19-3-38ರಲ್ಲಿ ಬೋರ್ಡು ಹುಡುಗರ ಶಾಲೆಯಲ್ಲಿ ಜರಗಿಸಲ್ಪಡುವುದೆಂದು ತಿಳಿದುಬರುತ್ತದೆ

---

ಬಿ ಕೆ ಯಲ್ [illegible] ರ ಬಿ ರ್ಮಣನಾಕ [illegible] ಇದೇ ಎಪ್ರಿಲ್ ತಿಂಗಳಲ್ಲಿ [illegible] ಜರಗಲಿರುವ ಅಖಿಲ ಭಾರತ ಕಾಂಗ್ರೆಸ್ ಸೋಶಿಯಲಿಸ್ಟ್ ಪರಿಷತ್ತಿಗೆ ನಮ್ಮ ಜಿಲ್ಲೆಯ ಪತಿಯಿಂದ ಈ ಕೆಳಗಿನವರು ಪ್ರತಿನಿಧಿಗಳಾಗಿ ಆರಿಸಲಾಯಿತು

1 [illegible] 2 [illegible] 3 [illegible] 4. [illegible] 5 ಸುಬ್ಬಣ್ಣ ಶೆಟ್ಟಿ, ಬಸ್ರೂ 6 ಕೆ ಯಲ್ ನಾಯಕ್, 7 ಬಿ ಕೆ. ಶೆಟ್ಟಿ. [illegible] 1. [illegible] ಮೇ ತಿಂಗಳಲ್ಲಿ [illegible] ಲಿಸ್ಟ್ ಪರಿಷತ್ತನ್ನು ನಮ್ಮ ಜಿಲ್ಲೆಗೆ ಆಮಂತ್ರಿಸ ಪುದು. 2 ಜನರಲ್ [illegible] ಜಿಲ್ಲೆಯ [illegible] ಸ್ಥಳೀಯ ಪ್ರತಿನಿಧಿ [illegible] ಮಾಡಿ [illegible] 3. ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಪಕ್ಷದ ಯಾವ ಸದಸ್ಯರೂ ಪಕ್ಷದ ಪರವಾಗಿ ಅಧಿಕಾರ ಸ್ವೀಕರಿಸಲಾಗದು. ಆದರೆ ಅಧಿಕಾರ ಸ್ಥಾನಕ್ಕೆ ಆರಿಸಲ್ಪಟ್ಟಲ್ಲಿ ತಂತಮ್ಮ ಸ್ವಂತ ಜವಾಬ್ದಾರಿಯಿಂದ ಅಧಿಕಾರ ಸ್ವೀಕರಿಸುವ ಬಗ್ಗೆ ಅವರ ಸ್ವಾತಂತ್ರ್ಯವು ಪ್ರತಿಯೊಬ್ಬ ಪಕ್ಷದ ಸದಸ್ಯನಿಗಿದೆ

# ಗೇಣಿ ಕ್ರಮದಲ್ಲಿ ಬದಲಾವಣೆಗಳು

### ಉದ್ದೇಶ

೧. ಒಕ್ಕಲುಗಳಿಗೆ ಅವರ ಸ್ವಾಧೀನವಿರುವ ಜಮೀನುಗಳಲ್ಲಿ ಶಾಶ್ವತವಾದ ಹಕ್ಕನ್ನು ಒದಗಿಸಿಕೊಡುವುದು.

೨. ನ್ಯಾಯವಾದ ಗೇಣಿಯನ್ನು ನಿಶ್ಚಯಿಸುವುದು.

### ಪ್ರಚಾರಕಾರ್ಯದ ವಿಧಾನಗಳು

೧. ಅಲ್ಲಲ್ಲಿಯ ಒಕ್ಕಲುಗಳ ಪಟ್ಟಿಗೆ ಈ ಕೆಳಗಿನ ವಿವರಗಳನ್ನು ಸಂಗ್ರಹಿಸುವುದು

ಒಂದು ಮುಡಿ ಗದ್ದೆಯ ವಿಸ್ತೀರ್ಣ ಮತ್ತು ಅದರಲ್ಲಿ ಬಿತ್ತಲಾಗುವ ಬತ್ತದ ಪರಿಮಾಣ.

ಒಂದೊಂದು ಬೆಳೆಗೆ ಸಿಕ್ಕುವ ಉತ್ಪತ್ತಿಯ ಅಂದಾಜು.

ಪ್ರಚಾರದಲ್ಲಿರುವ ಗೇಣಿ

ಬಾಗಾಯ್ತುಗಳ (ತೆಂಗು ಅಡಿಕೆ) ಚಾಲ್ತಿಗೇಣಿ ಮತ್ತು ಉತ್ಪತ್ತಿಗೆ ಇರುವ ಸಂಬಂಧ

೨. ಮೇಲಿನ ಉದ್ದೇಶಗಳನ್ನು ವಿವರಿಸುವ ಬಗ್ಗೆ ಒಕ್ಕಲುಗಳ ಸಭೆಗಳನ್ನು ಸೇರಿಸಿ ನಿರ್ಣಯಗಳನ್ನು ಮಾಡಿ ಸರಕಾರಕ್ಕೆ ತಿಳಿಸುವುದು

೩. ಒಕ್ಕಲುಗಳ ಮನವಿಗಳನ್ನು ತಯಾರಿಸಿ ಅವರ ಸಹಿಗಳ ಸಮೇತ ಸರಕಾರಕ್ಕೆ ತಿಳಿಸುವುದು.

೪. ಒಕ್ಕಲುಗಳಲ್ಲಿ ಈ ಕುರಿತು ತಿಳುವಳಿಕೆಯೂ ಉತ್ಸಾಹವೂ ಉಂಟಾಗುವಂತೆ ಗ್ರಾಮದಿಂದ ಗ್ರಾಮಕ್ಕೆ ಮೆರವಣಿಗೆಯನ್ನು ಕೊಂಡುಹೋಗುವುದು

೫. ಅವಶ್ಯವಿರುವ ಬದಲಾವಣೆಗಳ ಕುರಿತು ಪತ್ರಗಳ ಮೂಲಕವೂ, ಕರಪತ್ರಗಳ ಮೂಲಕವೂ ಪ್ರಚಾರಮಾಡುವುದು

೬. ಕಾಂಗ್ರೆಸ್ ಕಮಿಟಿಗಳೇ ಮೊದಲಾದ ಸಾರ್ವಜನಿಕ ಸಂಸ್ಥೆಗಳ ಮೂಲಕ ಈ ಉದ್ದೇಶಗಳನ್ನು ಸಾಧಿಸುವರೆ ಸರಕಾರವನ್ನು ಕೇಳಿಕೊಳ್ಳುವುದು

### ಈಗ ಕಾಣಬರುವ ಮುಖ್ಯ ದೋಷಗಳು

೧ 'ಮುಡಿಬೀಜವರಿ' ಎಂಬ ಅಂದಾಜಿನಲ್ಲಿ ಈಗ ಗೇಣಿಯು ನಿಶ್ಚಯಿಸಲ್ಪಟ್ಟಿರುವುದಾದರೂ, ಅಂತಹ ಬೀಜವರಿ ಗದ್ದೆಯಲ್ಲಿ ಒಂದು ಮುಡಿ ಬೀಜವು ಹಿಡಿಯುವಂತಿಲ್ಲ

೨ ಒಕ್ಕಲಿಗೆ ಯಾವ ರೀತಿಯ ಸ್ವಾತಂತ್ರ್ಯವೂ ಇಲ್ಲ

೩ ಧನಿಯ ಮನಸ್ಸನ್ನು ಒಲಿಸಿದರೆ ಮಾತ್ರವೇ ಒಕ್ಕಲು ಜಮೀನಿನಲ್ಲಿ ಇರಲಾಗುವುದು

೪ ಪಾವತಿಯಾದ ಗೇಣಿಯ ಬಗ್ಗೆ ರಶೀದಿಯನ್ನು ಕೊಡುವ ಕ್ರಮವು ಇಲ್ಲ. ಅದನ್ನು ಕೇಳುವ ಧೈರ್ಯವು ಒಕ್ಕಲಿಗೆ ಇಲ್ಲ. ಇದರಿಂದ ಅನೇಕ ಸಂದರ್ಭಗಳಲ್ಲಿ ಒಕ್ಕಲು ನಷ್ಟಹೊಂದುವಂತಾಗಿದೆ

೫ ಜಮೀನಿನಲ್ಲಿ ಕೃತವನ್ನು ಮಾಡುವರೆ ಒಕ್ಕಲಿಗೆ ಯಾವ ತರದ ಉತ್ತೇಜನವೂ ಇಲ್ಲ. ಜನಸಂಖ್ಯೆಯು ಹೆಚ್ಚುತ್ತಾ ಇದ್ದಾಗ್ಯೂ ಉತ್ಪತ್ತಿಯು ಮೊದಲಿನಷ್ಟೇ ಇದ್ದು ದಾರಿದ್ರ್ಯವು ಹೆಚ್ಚುತ್ತಾ ಹೋಗುತ್ತದೆ

೬. ಒಕ್ಕಲುಗಳ ಸ್ಥಿತಿಯು ದಿನೇ ದಿನೇ ಹೀನವಾಗುತ್ತಾ ಹೋಗುತ್ತದೆ

### ಬದಲಾವಣೆಗಳಿಂದುಂಟಾಗುವ ಉಪಯೋಗಗಳು

೧. ಒಕ್ಕಲಿಗೆ ತನ್ನ ಜಮೀನೆಂಬ ಮಮತೆಯು ಉಂಟಾಗಿ ಅವನು ಅದನ್ನು ವೃದ್ಧಿಗೊಳಿಸಲು ಯತ್ನಿಸುವನು. ಉತ್ಪತ್ತಿಯೂ ಅಧಿಕವಾಗುವುದು

೨. ಗೇಣಿ ಪಾವತಿಯ ಕುರಿತು ಸರಿಯಾದ ರಶೀದಿಯನ್ನು ಕೇಳಿ ಪಡೆಯುವರೆ ಲೀತಿ ಇರದೆ ಅವನಿಗೆ ಅನ್ಯಾಯವಾಗದಂತಾಗುವುದು.

೩. ತನ್ನ ಕುಟುಂಬಕ್ಕೆ ಸಿಗುವ ಹಕ್ಕೆಂಬುದು ನಿಶ್ಚಯವಾಗುವುದರಿಂದ ಅವನು ಆ ಹಕ್ಕನ್ನು ಕಳೆದುಕೊಳ್ಳದಂತೆ ಜಾಗ್ರತೆಯಿಂದಿರುವನು. ಗೇಣಿ ಬಾಕಿ ಮಾಡಿಕೊಂಡರೆ ಈ ಹಕ್ಕು ರದ್ದಾಗುವುದೆಂದಾದರೆ ಅವನು ಗೇಣಿಯನ್ನು ಕ್ರಮವಾಗಿ ಪಾವತಿ ಮಾಡುವನು.

೪. ಒಕ್ಕಲಿಗೆ ಪ್ರತಿಯೊಂದು ವಿಷಯದಲ್ಲಿಯೂ ಸ್ವತಂತ್ರ ರೀತಿಯಿಂದ ವರ್ತಿಸುವ ಅವಕಾಶವು ದೊರೆಯುವುದು

೫. ಒಕ್ಕಲಿನ ಶ್ರಮಕ್ಕೆ ತಕ್ಕ ಪ್ರತಿಫಲವು ಸಿಗುವಂತಾಗುವುದು

ನಮ್ಮ ಜಿಲ್ಲೆಯ ಗೇಣಿ ಒಕ್ಕಲುಗಳ ಸ್ಥಿತಿಯು ಬಹಳ ಹೀನವಾಗಿದೆಯೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ದಿನೇ ದಿನೇ ಕಷ್ಟಗಳು ಹೆಚ್ಚುತ್ತಾ ಹೋಗುತ್ತಿವೆ. ಕೃಷಿ ಮಾಡುವವರಿಗೆ ದುರ್ಭಿಕ್ಷವಿಲ್ಲ ಎಂಬ ಗಾದೆಯನ್ನು ಮಾಡಿದುದರ ನ್ಯಾಯವೇ ತಿಳಿಯುವಂತಿಲ್ಲ. ಒಕ್ಕಲುಗಳ ಈ ಪರಿಸ್ಥಿತಿಯನ್ನು ಸುಧಾರಿಸುವರೆ ಗೇಣಿಯ ಕ್ರಮದಲ್ಲಿ ಈ ಕೆಳಗಿನ ಬದಲಾವಣೆಗಳು ಅತ್ಯಗತ್ಯವೆಂದು ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರಾದ ನಾವು ಅಭಿಪ್ರಾಯಪಡುತ್ತೇವೆ. ಈ ಬಗ್ಗೆ ಆದಷ್ಟು ಬೇಗನೆ ಕಾನೂನನ್ನು ಮಾಡಬೇಕಾಗಿ ಈ ಮೂಲಕ ಮದ್ರಾಸು ಸರಕಾರವನ್ನು ಕೇಳಿಕೊಳ್ಳುತ್ತೇವೆ

### ಗೇಣಿಯ ಕ್ರಮದಲ್ಲಿ ಆಗಬೇಕಾದ ಬದಲಾವಣೆಗಳು

**ನಿಶ್ಚಿತ ಗೇಣಿ**

ಸ್ಥಳೀಕ ಸಂಸ್ಥೆಗಳ ಮೂಲಕ ಯಾ ಇತರ ರೀತಿಗಳಲ್ಲಿ ಆಯಾ ಜಮೀನುಗಳ ಸಾಧಾರಣ ಉತ್ಪತ್ತಿ ತಲಗಲುವ ಖರ್ಚು ಇತ್ಯಾದಿ ತಿಳಿದುಕೊಂಡು ಗೇಣಿಯನ್ನು ನಿಶ್ಚಯಿಸತಕ್ಕದ್ದು. ಹೀಗೆ ನಿಶ್ಚಯಿಸಿದ ಗೇಣಿಯನ್ನು ಅರ್ಜಿ ಮೂಲಕ ಕೋರ್ಟಿನಲ್ಲಿ ಡಿಪೊಜಿಟ್ ಮಾಡುವ ಹಕ್ಕು ಒಕ್ಕಲಿಗೆ ಇರತಕ್ಕದ್ದು

**ಶಾಶ್ವತ ಹಕ್ಕು**

ಈ ಕೆಳಗೆ ಕಾಣಿಸಿದ ವಿಶೇಷ ಕಾರಣಗಳಿಗಾಗಿ ಮಾತ್ರ ಒಕ್ಕಲನ್ನು ಹೊರಪಡಿಸುವ ಹಕ್ಕು ಧನಿಗೆ ಇರತಕ್ಕದ್ದು

೧ ಕೊಡಬೇಕಾಗಿ ನಿಶ್ಚಯಿಸಿದ ಗೇಣಿಯನ್ನು ನಿಶ್ಚಿತ ಸಮಯದ ೪ ತಿಂಗಳೊಳಗೆ ಪಾವತಿ ಮಾಡದೆ ಇರುವುದು

೨ ಜಮೀನಿನಲ್ಲಿ ಬೇಕೆಂತಲೇ ನಷ್ಟವನ್ನುಂಟುಮಾಡುವುದು

೩ ಧನಿಯ ಹಕ್ಕನ್ನು ಎದುರಿಸುವಂತೆ ಬೇರೊಬ್ಬನಿಗೆ ಜಮೀನಿನಲ್ಲಿ ಆಕ್ರಮಣ ಮಾಡುವರೆ ಬಿಡುವುದು

೪ ಧನಿಯು ಯಾ ಆಸ್ತಿಯಲ್ಲಿ ಹಕ್ಕಿರುವ ವಾರಿಸ್ದಾರರಿಗೆ ನಿಜವಾಗಿಯೂ ಸ್ವಂತ ಬೇಸಾಯಕ್ಕೆ ಜಮೀನು ಅವಶ್ಯಬೀಳುವ ಸಂದರ್ಭದಲ್ಲಿ

೫ ಧನಿಯು ಯಾ ಆಸ್ತಿಯಲ್ಲಿ ಹಕ್ಕಿರುವ ವಾರಿಸ್ದಾರರಿಗೆ ಸ್ವಂತ ವಾಸ್ತವ್ಯದ ಬಗ್ಗೆ ಕಟ್ಟೋಣವನ್ನು ಕಟ್ಟಿಸುವ ಅವಶ್ಯಬೀಳುವ ಸಂದರ್ಭದಲ್ಲಿ

**ಸೂಚನೆ:** ೧ ಒಂದನೇ ಕಾರಣದಿಂದಾಗಿ ಒಕ್ಕಲನ್ನು ಹೊರಡಿಸುವರೆ ವ್ಯಾಜ್ಯಮಾಡಿದಲ್ಲಿ ಬಾಕಿ ಇರಬಹುದಾದ ಗೇಣಿ, ವ್ಯವಹರಣೆಯ ಖರ್ಚು, ಮತ್ತು ನ್ಯಾಯವಾದ ಬಡ್ಡಿಯನ್ನು ಒಕ್ಕಲು ಸಂದಾಯ ಮಾಡಿದರೆ ಅವನನ್ನು ಹೊರಪಡಿಸಲಾಗದು

೨ ೪ ಐನೇ ಕಾರಣಗಳಿಗಾಗಿ ಒಕ್ಕಲನ್ನು ಹೊರಪಡಿಸಿದಲ್ಲಿ ಆ ಸಮಯದಿಂದ ೧೨ ವರ್ಷಗಳೊಳಗೆ ಯಾವಾಗಲಾದರೂ ಧನಿಯು ಆ ಉದ್ದೇಶಗಳಿಗೆ ವಿರೋಧವಾಗಿ ನಡೆದಲ್ಲಿ ಜಮೀನನ್ನು ಸ್ವಾಧೀನಪಡಿಯಲು ಒಕ್ಕಲು ಹಕ್ಕುದಾರನಾಗುವನು. ಅಲ್ಲದೆ ಹೊರಪಡಿಸಿದ ಒಂದು ವರ್ಷದೊಳಗೆ ೫ನೇ ರಿಕಾನೆಯಲ್ಲಿ ಹೇಳುವ ಕಟ್ಟೋಣವನ್ನು ಕಟ್ಟಿಸದಿದ್ದಲ್ಲಿ ಜಮೀನನ್ನು ಸ್ವಾಧೀನಪಡೆಯುವರೆ ಒಕ್ಕಲು ಹಕ್ಕುದಾರನಾಗುವನು

**ಕೃತದ ಹಕ್ಕು**

ಮೇಲೆ ಹೇಳಿದ ಯಾವುದಾದರೂ ಕಾರಣಗಳಿಂದ ಒಕ್ಕಲನ್ನು ಹೊರಡಿಸುವ ಸಂದರ್ಭ ಬಂದೊದಗಿದಲ್ಲಿ ಹೊರಪಡಿಸುವ ಮುಂಚಿತವಾಗಿ ಆ ವರೆಗಿನ ಕೃತದ ಮೊಬಲಗನ್ನು ಪಡೆಯುವರೆ ಒಕ್ಕಲು ಹಕ್ಕುದಾರನಿರತಕ್ಕದ್ದು

**ವಿಕ್ರಯದ ಹಕ್ಕು**

ಒಕ್ಕಲಿಗೆ ತನಗೆ ಜಮೀನಿನಲ್ಲಿರುವ ಹಕ್ಕನ್ನು ~~ವಿಕ್ರಯಿಸುವರೆ ಅಧಿಕಾರವಿರತಕ್ಕದ್ದು~~ ಹೀಗೆ ವಿಕ್ರಯಿಸುವ ಮೊದಲು ಅವನು ಧನಿಗೆ ನೋಟೀಸು ಕೊಡತಕ್ಕದ್ದು. ಅಂತಹ ಸಂದರ್ಭದಲ್ಲಿ ಆ ಹಕ್ಕನ್ನು ಧನಿಯು ಪಡೆಯಲು ನಿರಾಕರಿಸಿದರೆ ಮಾತ್ರ ಬೇರೆಯವರಿಗೆ ವಿಕ್ರಯಿಸಬಹುದು

ಈ ವಿಷಯದಲ್ಲಿ ಏನಾದರೂ ಅಭಿಪ್ರಾಯಗಳನ್ನು ಕಳುಹಿಸುವುದಿದ್ದರೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಿರಿ –

The Secretary
S. K. VOKKALIGARA SAHAKARA SHMITHI
C/o The Kanara Printing Works Mangalore

# ಮರಳು ಮಿಶ್ರಿತ ಹೊಗೆಸೊಪ್ಪು

ಮರಳುಮಿಶ್ರಿತ ಹೊಗೆಸೊಪ್ಪಿನ ವಿರೋಧದ ಕುರಿತು ನಡಿಸೋಣಾಗುವ ಪ್ರಚಾರಕಾರ್ಯಕ್ಕೆ ಇಡೀ ಜಿಲ್ಲೆಯ ಹಾಗೂ ಮುಖ್ಯವಾಗಿ ಮಂಗಳೂರು ಶಹರಿನ ಹೊಗೆಸೊಪ್ಪಿನ ವ್ಯಾಪಾರಿಗಳು ತೋರಿಸುವ ವಿಶೇಷವಾದ ಬೆಂಬಲವ ಸಹಾಯದ ನಿಮಿತ್ತ ಹೊಗೆ ಬೆರಸುವ ಆತ್ಮಘಾತುಕವಾದ ದುರಭ್ಯಾಸವು ಬಹುಮಟ್ಟಿಗೆ ತಡೆಯಲ್ಪಟ್ಟಿರುವುದೆಂಬ ಸಂಗತಿಯು ಈ ಜಿಲ್ಲೆಯಲ್ಲಿರುವ ಹೊಗೆಸೊಪ್ಪಿನ ವ್ಯವಸಾಯ ವ ವ್ಯಾಪಾರಕ್ಕೆ ಸಂಬಂಧಪಟ್ಟ ಜನರು ತಿಳಿಯುವರೆ ಸಂತೋಷಪಡಬಹುದು. ಸಾಹುಕಾರರು ಹೊಗೆಮಿಶ್ರಿತ ಹೊಗೆಸೊಪ್ಪನ್ನು ಕೊಂಡುಕೊಳ್ಳಲು ಬದ್ಧವಿರೋಧಿಗಳಾಗಿ ನಿಂತಿರುವರು. ಇದನ್ನು ತಿಳಿದ ಕೃಷಿಕರು ಹೊಗೆ ಬೆರಸುವುದನ್ನು ಬಹುಮಟ್ಟಿಗೆ ತ್ಯಜಿಸಿರುವರು. ಅವರ ಅಂತಃಕರಣಕ್ಕೆ ಮಾಡಿದ ವಿನಂತಿಯು ಫಲಿತಾಂಶವು ಹೆಚ್ಚಿನ ಸಮಾಧಾನಕರವಾಗಿರುವುದು. ಆದರೆ ದುರಭ್ಯಾಸಗಳನ್ನೂ ದುರ್ಮಾರ್ಗಗಳನ್ನೂ ಬಿಡುವುದು ಪ್ರಯಾಸಕರ. ಆದುದರಿಂದ ಹೊಗೆಸೊಪ್ಪಿಗೆ ಹೊಯಿಗೆ ಬೆರಸುವ ದುರಭ್ಯಾಸವನ್ನು ಬಿಡದವರು ಇನ್ನೂ ಕೆಲವರಿರುವರು. ಇವರು ತಮ್ಮ ಹಿತವಿರೋಧ ಮಾತ್ರವಲ್ಲದೆ ಸರ್ವ ಜನರ ಹಿತಕ್ಕೂ ಹಾನಿಕರವಾಗಿ ಈ ಕೆಲಸವನ್ನು ಮಾಡುತ್ತಿರುವವರುವರು ಎಂಬುದನ್ನು ಸಕಾಲದಲ್ಲಿ ತಿಳಿಯಬೇಕು. ಸಾಹುಕಾರರು ಇವರ ಹೊಗೆಸೊಪ್ಪನ್ನು ಒಂದು ವೇಳೆ ತಿರಸ್ಕರಿಸದಿದ್ದರೂ ಅಲ್ಪ ಬೆಲೆಗೆ ಕೇಳುವರೆಂಬುದರಲ್ಲಿ ಸಂಶಯವಿಲ್ಲ. ಚಿತ್ತಾರಿಯಲ್ಲಿ ಎಳನಾಂದಿ, ಪೂಚಕಾಡಿನಲ್ಲಿ ಒಂಭತ್ತು ವಂದಿ ವರನ್ನೂ ಹೊಗೆಸೊಪ್ಪಿಗೆ ಹೊಗೆ ಬೆರಸುತ್ತಿದ್ದಾರೆಂಬ ಸಂಗ್ತಿ ವರ್ತಕರಿಗೆ ಈ ಮೂಲಕ ತಿಳಿಸೋಣಾಗುತ್ತದೆ. ಇವರು ಮಾರಾಟಕ್ಕೆ ತರುವ ಸರಕುಗಳನ್ನು ಕೊಂಡುಕೊಳ್ಳುವ ಮೊದಲು ಸರಿಯಾಗಿ ಪರೀಕ್ಷಿಸುವುದಕ್ಕೋಸ್ಕರ ಇವರ ಹೆಸರುಗಳನ್ನು ಆಗತ್ಯವಿದ್ದರೆ ಸಾಹುಕಾರರಿಗೆ ತಿಳಿಸಲೂಬಹುದು.

ನಾನು ಗುಂಟೂರಿನಿಂದ ತರಿಸಿದ 'ವರ್ಜೀನಿಯ' ಜಾತಿಯ ಹೊಗೆಸೊಪ್ಪಿನ ಬೀಜಗಳು ಜಿಲ್ಲೆಯ ನಾಲ್ಕು ಕಡೆಗಳಲ್ಲಿ ಕಳೆದ ಕ್ರಾಯದಲ್ಲಿ ಬಿತ್ತಿ ಬೆಳೆದ ಪೈರು ಬಹಳ ಚೆನ್ನಾಗಿರುತ್ತದೆ. ಎಲೆಗಳು ವಿಕಪ್ರಕಾರವಾಗಿ ನಾಲ್ಕು ಅಡಿಗೆ ಮಿಕ್ಕಿ ಉದ್ದವಾಗಿವೆ. ಈ ಹೊಗೆಸೊಪ್ಪಿನ ಗುಣಪರೀಕ್ಷೆ ಬಗ್ಗೆ ನಮೂನೆಯನ್ನು ಶೀಘ್ರದಲ್ಲಿಯೇ ತಜ್ಞರಿಗೆ (ಎಕ್ಸ್‌ಪರ್ಟ್) ಕಳುಹಿಸಲಾಗುವುದು. ಈ ಪರೀಕ್ಷೆಯ ಫಲವನ್ನು ಜನರ ತಿಳುವಳಿಕೆ ಬಗ್ಗೆ ಜಿಲ್ಲೆಯ ವರ್ತಮಾನಪತ್ರಗಳ ಸಹಾಯದಿಂದ ಕ್ರಮೇಣ ಪ್ರಕಟಿಸಲಾಗುವುದು. ಕನ್ನಡ್ಕ ಮದ್ರಾಸ್ 'ಹಿಂದು' ಪತ್ರಿಕೆಯಲ್ಲಿ ಗುಂಟೂರು ಬಾತ್ಮಿದಾರರು ಪ್ರಕಟಿಸಿದ ಈ ಕೆಳಗಿನ ಬಾತ್ಮಿಯನ್ನು ಜನರು ಓದಿ ಪ್ರಯೋಜನ ಹೊಂದಬಹುದು

"ಹೊಗೆಸೊಪ್ಪಿನ ಆದರಲ್ಲೂ-ವರ್ಜೀನಿಯ ಜಾತಿಯ ಕ್ರಯಬಡಾವಣೆಯಿಂದ ಗುಂಟೂರಿನ ಹೊಗೆಸೊಪ್ಪಿನ ವ್ಯಾಪಾರಿಗಳು ಪ್ರಯೋಜನ ಹೊಂದುವಂತೆ ಕಾಣುತ್ತದೆ

"ಕಳೆದ ನವಂಬರ ತಿಂಗಳಲ್ಲಿ ಇಬ್ಬನಿಯ ದೆಸೆಯಿಂದ ಪೈರು ನಾಶವಾಯಿತೆಂಬ ಭಯವಿತ್ತು. ಪೈರಿನ ಬೆಳವಣಿಗೆಯು ಕ್ಷೀಣವಾಗಿದ್ದರೂ ಉಳಿದಿರುವ ಎಲೆಗಳು ಚೆನ್ನಾಗಿ ವೃದ್ಧಿಯಾಗುತ್ತಿವೆ. ವರ್ಜೀನಿಯ ಜಾತಿಯ ಹೊಗೆಸೊಪ್ಪಿನ ಕೃಷಿಯು ಇಲ್ಲಿ ಹತ್ತು ವರ್ಷಗಳ ಹಿಂದೆ ಪ್ರಾರಂಭವಾಗಿ ಈಗ ಅದು ಸುಮಾರು ಒಂದು ಲಕ್ಷ ಎಕ್ರೆಗೆ ವಿಸ್ತರಿಸಿದೆ. ಈ ವರ್ಷದ ಬೆಳೆಯು ಸಾಧಾರಣ ೪ ಕೋಟಿ ರೂಪಾಯಿಗಳ ಬೆಲೆಯುಳ್ಳದ್ದಾಗಿ ಎಣಿಕೆ ಹಾಕಲಾಗಿದೆ. ೧೯೩೭ನೇ ಇಸವಿಯಲ್ಲಿ ರೂಪಾಯಿ ೨೦೦ರಿಂದ ೫೦೦ರ ವರೆಗೆ ಬೆಲೆಯಿದ್ದ ಮೊದಲನೆ ತರಗತಿಯ ಕ್ರಯವು ಈ ವರ್ಷ ಇಮ್ಮಡಿಯಾಗಿದೆ

"ಕ್ರಯದ ಏರಿಕೆ ಮುಂದರಿಯುವಂತಿದೆ. ಮುಂದಿನ ವರ್ಷದ ಸ್ಥಿತಿಯು ಇನ್ನೂ ವೃದ್ಧಿಯಾಗಲಿಕ್ಕಿದೆ. ಹೊಗೆಸೊಪ್ಪನ್ನು ಒಣಗಿಸುವರೆ ೮,೨೦೦ಕ್ಕೆ ಮಿಕ್ಕಿ ಕಣಜಗಳು ಈಗಲೇ ಇವೆ. ಬೇರೆ ಬೇರೆ ಕಡೆಗಳಲ್ಲಿ ಇನ್ನು ಸುಮಾರು ೨,೦೦೦ ಕಣಜಗಳನ್ನು ಸಿದ್ಧಪಡಿಸುವ ಕೆಲಸವು ಭರದಿಂದ ಸಾಗುತ್ತಿದೆ. ಸಾಗುವಳಿ ವಿಸ್ತೀರ್ಣವು ಮೇಲು ಪಾಲಿಷ್ಟು ಹೆಚ್ಚುವ ಸಂಭವಗಳಿವೆ

"ಈ ತನಕ ದೇಶೀಯ ಹೊಗೆಸೊಪ್ಪನ್ನು ಜಪಾನು ಹೇರಳವಾಗಿ ಕೊಂಡುಕೊಳ್ಳುತಿತ್ತು. ಇನ್ನು ಮುಂದೆ ಗುಂಟೂರಿನ ಹೊಗೆಸೊಪ್ಪನ್ನು ಕೊಂಡುಕೊಳ್ಳುವುದಿಲ್ಲವೆಂಗ ಜಪಾನ ಇತ್ತೀಚೆಗೆ ಮಾಡಿರುವ 'ಧಾರಣವು ಪ್ರಶ್ನ ವರಜಿತ ಬರದಿರುವುದು. ಇದರ ಫಲವಾಗಿ ಈ ವರೆಗೆ ದೇಶೀಯ ಹೊಗಸೊಪ್ಪನ್ನು ಬೆಳಸುತಿದ್ದ ಹೊಲಗಳಲ್ಲಿ ವರ್ಜೀನಿಯ ಹೊಗೆಸೊಪ್ಪನ್ನು ಈಗ ಬೆಳಸಹತ್ತಿದ್ದಾರೆ"

ಷರಾ: – ಕಣಜವೆಂದರೆ ಗೋಡೆಗಳಲ್ಲಿ ಸುತ್ತಲು ನಳಿಗೆಗಳನ್ನು ಇಟ್ಟು ನಳಿಗೆಯ ಬುಡದಲ್ಲಿ ಒಲೆ ಹಾಕಿ ಬೆಂಕಿಮಾಡಿ ನಳಿಗೆಗಳ ಮೂಲಕ ಹೋಗುವ ಬಿಸಿ ಗಾಳಿಯಿಂದ ಹೊಗೆಸೊಪ್ಪು ಒಣಗಿಸುವರೆ ತಯಾರಿಸಿದ ಒಂದು ಕೋಟಡಿ

Sd M. V. VELLODI
Collector of South Kanara

### ಬದ್ವಾನ್‌ನ ಮಹಾರಾಜರ ಸತ್ಕಾರ ಕೂಟ

ಬದ್ವಾನಕ್ಕೆ ಗವರ್ನರರ ಆಗಮನದ ನೇತೃತ್ವದಲ್ಲಿ ಮಹಾರಾಜರಿಂದ ಕೊಡಲಾದ ಸತ್ಕಾರ ಕೂಟಕ್ಕೆ ಬಂದ ಅನೇಕ ಪ್ರಮುಖ ವ್ಯಕ್ತಿಗಳು ಕೂಟದಲ್ಲಿ ಭಾಗಿಗಳಾಗದೆ ರೇಗಿ ಹಿಂತೆರಳಿದ ವರ್ತಮಾನ ಬಂದಿರುತ್ತದೆ

~~ಮಹಾರಾಜರು ಅತಿಥಿ ಸತ್ಕಾರದಲ್ಲಿ ಭೇಧ~~ ಮಾಡಿದುದೆ ಇದಕ್ಕೆ ಕಾರಣ. ದೊಡ್ಡದೊಡ್ಡವರನ್ನು ಗವರ್ನರರನ್ನೂ ಒಳಗೆ ವಿಶೇಷ ಸತ್ಕಾರಕ್ಕೆ ಒಳಪಡಿಸಿ, ಮಿಕ್ಕವರನ್ನು ಕೀಳು ತರದ ಸತ್ಕಾರಕ್ಕೆ ಒಳಪಡಿಸುವ ಏರ್ಪಾಡು ಮಹಾರಾಜರಿಂದ ಮಾಡಲಾಗಿತ್ತು. ಕೆಳಗಿನವರಿಗೆ ಅನಿರ್ಮಲ ಜನರ ದ ಪೇಟೆಯ ಮಿಠಾಯಿಯನ್ನು ಹಂಚುವ ಏರ್ಪಾಡು ಮಾಡಲಾಗಿತ್ತು. ಇದನ್ನು ಕಂಡು ಅನೇಕರು ಸತ್ಕಾರ ಕೂಟದಲ್ಲಿ ಭಾಗವಹಿಸದೆ ಹಿಂತೆರಳಿಬಿಟ್ಟರು

DIAMONDS! DIAMONDS!
BEST BRILLIANCY!

# K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

## ವಜ್ರಗಳು!

ಎಮ್‌ಸ್ಟಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ
ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ ಶೆಟ್, ಜುವೆಲ್ಲರ್
ಮಂಗಳೂರು

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಅ | ರೂ ಅ |
| ಬತ್ತ ಗುಡ್ಡ ಮು | 1 — 10 | 1 — 10 |
| ರಾಶಿ ಅಕ್ಕಿ | 3 — 8 | 4 — 0 |
| ಸುಗ್ಗಿ | 4 — 0 | 4 — 0 |
| ಗುಡ್ಡ | 4 — 2 | 4 — 2 |
| ಊರ ಅವ್ವಲ್ ಬೆಳ್ತಿಗೆ | 4 — 7 | 4 — 7 |
| ರಂಗೂನು ಬೆ. ಗೋ. ಅಕ್ಕಿ | 7 — 2 | 7 — 4 |
| ಎಲ್ಲೂರು ಬೆ ಮು ಅಕ್ಕಿ | 3 — 14 | 4 — 0 |
| ಗೋದಿ ಗೋಣಿ ಅಕ್ಕಿ | 13 — 0 | 14 — 8 |
| ತೊಗರಿ ಗೋಣಿ ಅಕ್ಕಿ | 11 — 8 | 13 — 8 |
| ಹುರುಳಿ ಗೋಣಿ ಅಕ್ಕಿ | 6 — 0 | 6 — 2 |
| ಕಡಲೆ ಗೋಣಿ ಅಕ್ಕಿ | 9 — 8 | 10 — 8 |
| ತೊಗರಿಬೇಳೆ ಗೋಣಿ ಅಕ್ಕಿ | 17 — 8 | 18 — 0 |
| ಉದ್ದು ಗೋಣಿ ಅಕ್ಕಿ | 9 — 0 | 9 — 8 |
| ಹೆಸರು ಗೋಣಿ ಅಕ್ಕಿ | 9 — 12 | 10 — 8 |
| ಊರುಬೆಲ್ಲ ಖಂಡಿ ಅಕ್ಕಿ | 27 — 8 | 3[illegible] — 8 |
| ಉಪ್ಪು ಗೋಣಿ ಅಕ್ಕಿ | 4 — 8 | 5 — 4 |
| ಕೊಬ್ರಿ ಖಂಡಿ ಅಕ್ಕಿ | 46 — 4 | 46 — 4 |
| ಎಳ್ಳಿಂಡಿ ಖಂಡಿ ಅಕ್ಕಿ | 2[illegible] — | 26 — 0 |
| ತೆಂಗಿನ ಎಣ್ಣೆ ಮಣ ಅಕ್ಕಿ | 3 — 7 | 3 — 7 |
| ಎಳ್ಳೆಣ್ಣೆ ಮಣ ಅಕ್ಕಿ | 6 — 0 | 7 — 0 |
| ಚಿಮಿಣಿಎಣ್ಣೆ ಪೆಟ್ಟಿಗೆ ಅಕ್ಕಿ | 6 — 5 | 7 — 5 |
| ದೋರಸ ಸಕ್ಕರೆ ಮ. ಅಕ್ಕಿ | 2 — 13 | 2 — 14 |
| ಮೆಣಸು | 4 8 | 6 — 0 |
| ಸಾಸಿವೆ ಮುಡಿ ಅಕ್ಕಿ | 5 — 8 | 6 — 8 |
| ಕಾಳುಮೆಣಸು ಪ ವೇಗೆ | 17 — 0 | 18 0 |
| ಯೇಲಕ್ಕಿ ಬೀಜ ಮಣ ಅಕ್ಕಿ | 80 — 0 | 8[illegible] — 0 |
| ಗೇರುಬೀಜ ಮು. ಅಕ್ಕಿ | 2 — 4 | 4 — 12 |
| ಕಪ್ಪಿನ ಖಂಡಿ ಅಕ್ಕಿ | 50 — 0 | 55 — 0 |
| ತಾಂಬ್ರಾತಗಡು ಮ ಅಕ್ಕಿ | 14 — 12 | 15 — 0 |
| ತಾಂಬ್ರಾಪಾತ್ರಗಳು ಮ ಅಕ್ಕಿ | 14 — 8 | 15 — 0 |
| ಹಿತ್ತಾಳೆ ಸೇರು ಅಕ್ಕಿ | 13 — 8 | 14 — 0 |
| ಹಿತ್ತಾಳೆ ತ[illegible] ಮ. ಅಕ್ಕಿ | 1[illegible] — 0 | 12 0 |
| ಸತುವು ಅಕ್ಕಿ | 22 — 8 | 2[illegible] 0 |
| ಹುಣಸೆ ಹುಳಿ ಖಂಡಿ ಅಕ್ಕಿ | 40 — 0 | 45 — 0 |
| ನೇಟಿವ್ ಕಾಫಿ ಖಂಡಿ ಅಕ್ಕಿ | 140 0 | 148 — 0 |
| ಪ್ಲಾಂಟೇಶನ್ ಕಾಫಿ ಖಂಡಿ ಅಕ್ಕಿ | 185 — 0 | 198 — 0 |
| ಮುಡಿಕೇರಿ ಏಲಕ್ಕಿ ಮಣ | 35 — 0 | 3[illegible] — 0 |

# ಡೋಂಗರೆ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರ

ಶಾಲಿವಾಹನ ಶಕ ೧೮೭೦ನೆಯ ಈಶ್ವರ ಸಂವತ್ಸರದ [illegible] ಶನಿವಾರದಿಂದ [illegible] ಶುಕ್ರವಾರದವರೆಗಿನ ಪ ಚಾಂಗ [illegible] ಕುಂಭಮಾಸ)

| | | | | | | | |
|---|---|---|---|---|---|---|---|
| 12 | ಶ | ೧ | - | ಪೂರ್ವ | [illegible] | - | |
| 13 | ರವಿ | ೧೨ | [illegible] | ಉತ್ತರ | ೪೯ | [illegible] | |
| 14 | ಸೋಮ | ೧೩ | [illegible] | ಪ ಫಾ | [illegible] | [illegible] | |
| 15 | ಕುಜ | ೧೪ | [illegible] | ಹ ಸ್ತ | [illegible] | [illegible] | |
| 16 | ಬುಧ | ೧೫ | ೦ | ಉತ್ತರ | [illegible] | • | |
| 17 | ಗುರು | - | [illegible] | ಹಸ್ತ | [illegible] | [illegible] | |
| 18 | ಶುಕ್ರ | [illegible] | [illegible] | ಚಿತ್ತ | [illegible] | [illegible] | |

## THE PIE-MONEY BANK LTD,

Maidan Road MANGALORE

Undertakes all kinds of Banking Business Current account [illegible] 2½% per annum Savings Bank Deposits at 4% per annum

**FIXED DEPOSITS**

For 2 Years 6% 1 Year 5% For 6 months 4% 3 months 3½%

Auction chit Funds ranging from Rs 100 to Rs [illegible]000 run regularly on systematic lines Unique Banking facilities to Businessmen and Interested Public

*Apply for particulars*—K. R. GURU, *Managing Director*

# ಗರ್ಭಿನೋಲ್ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ ಶ್ವೇತಪ್ರದರ, ರಕ್ತಪ್ರದರ, ಗರ್ಭಸ್ರಾವ, ಗರ್ಭಾಶಯ ವ್ರಣ ಮೂತ್ರದ್ವಾರ ಉರಿ, ನರಗಳ ಶಿಥಿಲ ಪ್ರಸಾವ ನಂತರ ಉಂಟಾಗುವ ಕ್ಷಯ ಚಿಹ್ನೆ ಅಜೀರ್ಣ, ಮಲಬದ್ಧತೆ, ಎದೆನೋವ, ಬೆನ್ನುನೋವು, ತಲೆನೋವು, ತಲೆ ತಿರುಗುವಿಕೆ ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ಮೆದುಳಿನ ವಿಕಾರಗಳು ಅಶಕ್ತತೆ, ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು

**ಹೆಚ್ಚೇನು?** ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

## "ವಿಜಯ ಗರ್ಭಿನೋಲ"

ನ್ನ ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ. "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರೆಯಾಗಿ ಗುಣಹೊಂದಿದ್ದಾರೆ ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ"

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ 2—8—0.
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು:—

**ವಿಜಯ ಫಾರ್ಮಸಿ, ಕೊಚ್ಚಿನ್.**

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು

***Use the soaps***
KNOWN ALL OVER
***WISICO'S.***
**MINAR**
&
**TAJAMAHAL** Red
Bar Soaps.
POPULAR IN THE MARKET
*Sole Distributer*—
**P. G. KAMATH,**
Kashmir House,
Mar[illegible]katta MANGALORE

# 'DILROZ' [illegible]

Dil Roz is [illegible] sure [illegible] Open [illegible] sores [illegible] all kinds of deep rooted sores [illegible] eruptions Pimples Eczema Ringworm, Sinus Fistula auxillary Abscess

There is no need of dressing the wounds, nor are baths prohibited

**Price Rs. 2** Postage extra

**TAHIR DIN,**
Anarkali, LAHORE

# ನೋಟಗಳು;=Note.......s

★ ★ ★

ಡಿಲ್ಲಿಯ ಎಸೆಂಬ್ಲಿಯಲ್ಲಿ ಒಂದು ಪ್ರಹಸನನ್ನೇ ಅಭಿನಯಿಸುತ್ತಿದ್ದಾರೆನ್ನಬೇಕು. ಬಜೆಟಿನ ಪ್ರತಿಯೊಂದು ಇಸಮನ್ನೂ ಮೆಂಬರು ... ದು ಖಜಾನಾ ಮಂತ್ರಿಗಳು ಕೂಡಲೇ ... ಲ್ಲ ಪಕ್ಷಗಳೂ ಒಂದಾಗಿ, ನಾಂಜೂರುಮಾಡುವುದಿಲ್ಲೆಂದು ತಿಳಿಸಿಯೇ ಬಿಡುವುದು! ಹೀಗೆ ... ಇಸಮುಗಳನ್ನು ಇನ್ಕಾರುಮಾಡಲಾಗಿದೆ.

೦ ೦ ೦ ೦

ಪ್ರತಿಯೊಂದೂ ಇನ್ಕಾರವಾದ ಕೂಡಲೇ ... ನುಕೂಲ ಮತ್ತು ಪ್ರತಿಕೂಲ ವೋಟುಗಳನ್ನು ... ಣಿಸಬೇಕಾಗಿ ಕೇಳಬಹುದು ಆಗ, ಉಭಯ ... ಡೆಯ ವೋಟುಕೊಡುವವರೂ ಹಾಗೆ ವೋಟು ... ಣಿಸುವ ಸ್ಥಾನಸೇರಬೇಕಾಗುವುದು. ಮತ್ತೆ ... ನಃ ಸಭೆಗೆ ಬರಬೇಕು ಇನ್ನೊಂದು ಇಸ ... ನ್ನು ಮುಂದಿಟ್ಟಕೂಡಲೇ ಎಣಿಕೆಯಾಗಬೇ ... ಂದರೆ ಹಾಗೆ ಯಾತ್ರೆ ಮಾಡುತ್ತಿರಬೇಕು ... ೧೧೧ ಮಂದಿ ಮೆಂಬರರು ಸಭೆಗೂ ... ವೋಟು ಗಣಿಸುವ ಕೋಣೆಗೂ ಪ್ರಯಾಣ ... ಮಾಡಿದ್ದೇ ಬರೇ ಎಂಟು ಸಲ—ಒಟ್ಟಣಿಸಿದರೆ, ... ವಾರು ೮ ಮೈಲು ಆಯಿತು! ಭತ್ತೆ ಸಿಕ್ಕಿದೆ ... ಷ್ಟೆ

೦ ೦ ೦ ೦

ಎಷ್ಟೋ ಸಲ, ಮೆಂಬರರ ಮಾತನಾಡ ... ನೆ, ಇನ್ಕಾರು ಮಾಡಿದರು ಎಂಟು ಸಲ ... ನ್ಕಾರು ಮಾಡಿದ್ದು ಮೂರು ಕೋಟಿ ರೂಪಾ ... ಯ ಖರ್ಚು ಎಷ್ಟೋ ಸಲ, ಮೆಂಬರರು ... ಮುಂದಣ ಇಸಮು ವೋಟಿಗೆ ಹಾಕುವ ... ಕೂಡಲೇ ಇನ್ಕಾರು ಸೂಚಕ ಕೋಣೆಯ ಬಾಗಿ ... ಗೆ ಧಾವಿಸಿ ನಿಲ್ಲುತ್ತಿದ್ದರು ವೋಟು ಕೇಳಿ ... ಾಗ ಒಳನುಗ್ಗುವುದು ಎಂದು!

೦ ೦ ೦ ೦

ಪ್ರಜಾಪಕ್ಷದ ಎಲ್ಲ ಮೆಂಬರರೂ ಒನ್ನು ... ಸ್ಸಿನಿಂದ ಹೀಗೆ ಎಡೆಬಿಡದೆ ವರ್ತಿಸಿರುವುದು ... ಭಾ ಇತಿಹಾಸದಲ್ಲಿ ವಿಚಿತ್ರವಾಗಿದೆ ಗವರ್ನರ ... ಜನರಲರು ಈ ಇನ್ಕಾರನ್ನೆಲ್ಲ ತಮ್ಮ ಸರ್ಟಿ ... ಕೇಟಿನಿಂದ ಪುರಸ್ಕಾರಮಾಡುವರೆಂದು ಎಲ್ಲ ... ಗೂ ಗೊತ್ತೇ ಇದೆ ಕೌನ್ಸಿಲ್ ಆಫ್ ಸ್ಟೇಟಿ ... ಲ್ಲೂ ಇದೇ ರೀತಿಯಾಗಬಹುದೇನೊ? ... ಕೆಂದರೆ ಬಜೇಟನ್ನು ಓದುತ್ತಲೆ, ಆಕ್ಷೇಪವನ್ನೆತ್ತಿದವರು ಎಲ್ಲ ಪ ಗಡಗಳು

೦ ೦ ೦ ೦

ಕಾರಣವಿಷ್ಟೆ ಇದುವರೆಗೆ ಸೇನಾಂಗದ ... ರ್ಚಿನ ಕೋಟ್ಯಾಂತರ ರೂಪಾಯಿಗಳಲ್ಲಿ ಬರೀ ... ಲವು ಲಕ್ಷ ರೂಪಾಯಿಗಳ ಇಸಮು ಗಳನ್ನು ... ವೋಟಿಗೆ ಒಪ್ಪಿಸುತ್ತಿದ್ದರ ಈ ವರ್ಷ ಅದೂ ... ಡದೆಂದು ಆಗಿದೆ ಕಾರಣವೆಂದರೆ ಅದೆಲ್ಲ ... ನ್ನು ಕುರಿತು ಟೀಕಿಸುವಾಗ ನಾನಾ ಗುಟ್ಟು ... ಳೂ ಹೊರಬೀಳಬಹುದು ಪ್ರಜಾಮತವು ... ಂದಿನ ವ್ಯವಸ್ಥೆಯನ್ನು ಕುರಿತು ಖಂಡಿತವಾಗಿ ... ಟೀಕಿಸಬಹುದ ಅದೂ ಅಲ್ಲದೆ, ಎಲ್ಲವನ್ನೂ ... ಹೇಗೂ ಗವರ್ನರ ಜನರಲರ ಸರ್ಟಿಫಿಕೇಟಿನ ... ಸಂಜೀವನ ಪ್ರಭಾವದಿಂದ ಊರ್ಜಿತವೆನಿಸ ... ರುತ್ತದೆ ಎಂದ ತಿಳಿದಿರುವ ಪ್ರಯುಕ್ತ—ಆ ... ಇಸಮುಗಳನ್ನು ಸಹ ವೋಟಿಗೆ ಒಪ್ಪಿಸದೆ ಖಜಾ ... ಯವರು ವಜಾಪಡಿಸಿದರ

೦ ೦ ೦ ೦

ನಮ್ಮ ಅಭಿಮತ ವಿಶಾರ ನಡೆದರೆ ನಾವು ... ಕೊಣೆಯಲ್ಲ ಆದರೆ, ನಮ್ಮ ಅಭಿಮತ ಕೇಳಿ ... ವಾರದೆಂದರೆ ಹೇಗಾದೀತು? ಪ್ರಜಾಪ್ರತಿನಿಧಿ ... ಗಳಿಗೆ ಉಳಿದ ಕೆಲವೇ ಪಕ್ಕಗಳನ್ನು ಈ ಬಗೆ ... ನಿರ್ಮೂಲಿಸಿದರೆ ಚೆನ್ನಾಗುವುದೇ? ಇನ್ನು ಪೆಡ ... ರೇಶನ್ ಬಂದಾಗ ಯಾವ ರೀತಿ ಪ್ರಜಾಪ್ರತಿನಿಧಿಗಳನ್ನು ನಡಿಸುವಿರಿ ಎಂಬ ದನ್ನು ಈಗಲೇ ... ತಿಳಿಯಬಹುದಲ್ಲವೆ? —ಎಂದು ಎಲ್ಲ ಪಕ್ಷಗಳ ... ಚುನಾಯಿತ ಪ್ರತಿನಿಧಿಗಳ ತರ್ಕ ಉತ್ತರವಿಲ್ಲ

೦ ೦ ೦ ೦

ಎಂಟು ಸಲ ಹೀಗಾದುದೇ, ಉಳಿದ ೮೨ ಸಲ ಡಿವಿಜನ್ ಮಾಡಲೇ ಇಲ್ಲ 'ನಾಪಾಸು' ಎಂದು ದಾಖಲ್ಮಾಡಿಕೊಂಡುದಾಯಿತು

೦ ೦ ೦ ೦

ಹೀಗೆ ವೋಟಿಗೆ ಹಾಕುತ್ತಿದ್ದ ಇಸಮುಗಳನ್ನು ವಜಾಮಾಡಿದ್ದೇಕೆಂದು ಕೇಳಿದರೆ—ಖಜಾನಾ ಇಲಾಖೆ ನಾವು ಕಾರಣರಲ್ಲ ಎನ್ನುತ್ತದೆ. ಖಜಾನಾ ಮಂತ್ರಿಗಳು ಇದಕ್ಕೆ ಕಾರಣರಲ್ಲವೆಂದು ಸ್ಟೇಟ್‌ಮೆಂಟು ಹೊರಟಿದೆ ಲಂಡನಿನಿಂದ ಅಪ್ಪಣೆಯಾಗಿತ್ತೋ? ಗೊತ್ತಿಲ್ಲ

೦ ೦ ೦ ೦

ವೋಟು ಕೊಡುವಾಗ, ಒಪ್ಪಿದವರು 'ಆಯ್' ಎನ್ನಬೇಕು (Aye) ಹೀಗೊಮ್ಮೆ ಖಜಾನಾ ಮಂತ್ರಿಗಳು ಹೇಳುತ್ತಲೇ ವಿರುದ್ಧ ಪಕ್ಷದಲ್ಲಿ ಶ್ರೀ ಬದರಿನಾಥದತ್ತ ಪಾಂಡೇಯವರು 'ರಾಮನಾಮ ಸತ್ಯ ಹೈ' ಎಂದು ಪ್ರತಿನಿಧಿಗಳನ್ನು ನಗೆಗಡಲಲ್ಲೇ ತೇಲಿಸಿದರು

೦ ೦ ೦

ಉತ್ತರದೇಶದಲ್ಲಿ ಹಿಂದೂಗಳ ಹೆಣ ಹೊರುವಾಗ ದಾರಿಯಲ್ಲೆಲ್ಲಾ 'ಹರೀ ಬೋಲ್' ಎನ್ನುತ್ತ ಕೂಗುವುದುಂಟು ಇಸಮುಗಳನ್ನು ಇನ್ಕಾರು ಮಾಡುವಾಗ ವೋಟುಕೊಡುವ ಪ್ರತಿನಿಧಿಗಳು ಹೀಗೆ ಹರಿನಾಮ ಸ್ಮರಣೆಮೂಲಕ ಎಲ್ಲರೂ ಏಕಕಂಠರಾಗಿ ಕೂಗಿದರು

೦ ೦ ೦ ೦

ಇರ್ರಿಗೇಶನ್ ಎಂದರೆ ನೀರಾವರಿ ಕೆಲಸ ಇರಿಟೇಶನ್ ಎಂದರೆ ಸಿಟ್ಟಾಗುವಂತೆ ಕೆಣಕು ವಿಕೆ ಖಜಾನಾಮಂತ್ರಿ ಗ್ರಿಗ್ ಸಾಹೇಬರು ನೀರಾವರಿ ಕೆಲಸದ ಖರ್ಚಿಗಾಗಿ ಇಸಮನ್ನು ವೋಟಿಗೆ ತರುವಾಗ 'ಇರಿಟೇಶನ್' ಎಂದು ತಪ್ಪಾಗಿ ನುಡಿದರು ಪ್ರತಿಸಲವೂ ಇನ್ಕಾರು ಮಾಡಿರುವ ಪ್ರಯುಕ್ತ, ಅವರ ಮನಸ್ಸಿನಲ್ಲಿ ಇರಿಟೇಶನ್ ಉಂಟಾಗಿದ್ದಿರಬಹುದು ಅವರು ಬೇಕೆಂದೇ ಹಾಗೆ ಹೇಳಿದ್ದಿರಲೂ ಬಹುದು. ಅಂತೂ, ಕಣಕಾಟ ಹೊರಬಿತ್ತು ಇನ್ಕಾರು ವೋಟು ದಾಖಲಾಯಿತು

೦ ೦ ೦ ೦

ಯೂರೋಪಿಯನ್ ಅಥವಾ ಎಂಗ್ಲೋ ಇಂಡಿಯನ್ ನರ್ಸುಗಳು ಈ ದೇಶದಲ್ಲಿ ಸಿಗುವಾಗ, ಸೈನಿಕರ ಸಲುವಾಗಿ ಈ ನರ್ಸಮ್ಮಗಳನ್ನು ಇಂಗ್ಲೆಂಡಿನಿಂದಲೇ ತರುವುದೇಕೆ? ಎಂದು ಸರ್ ಹೆನ್ರಿ ಗಿಡ್ನೆಯವರ ಪ್ರಶ್ನಿಸಿದರು ಅಷ್ಟು ತರಬೇತಾಗಿರುವ ನರ್ಸುಗಳು ಇಲ್ಲಿ ಸಿಗುವುದಿಲ್ಲವಾಗಿ ಉತ್ತರ 'ಸೋಲ್ಜರರು ನರ್ಸುಗಳಿಗ ಸ್ವಲ್ಪ ವಿನೋದವಮಾಡಿದರೆ, ಎಸೆಂಬ್ಲಿಯಲ್ಲಿ ಕೂಡಲೇ ರೋಷಾವೇಶದಿಂದ ಮುಂದರಿಸುವ ಸೂಚನೆಗಳು ಬಂದಾವಲ್ಲ ಎಂದೊಬ್ಬರು ಉತ್ತರ ಕೊಟ್ಟರು

೦ ೦ ೦ ೦

ಫೆಡರೇಶನಿಗೆ ಸೇರುವ ರಾಜ್ಯಗಳು ಸಮಾನವೆಂದೆಣಿಸಲ್ಪಡ ಬಾಗ, ಮೈಸೂರು ತ್ರಿರುವಾಂಕೂರು ರಾಜ್ಯಗಳಿಂದ ಕಪ್ಪ ಪಡೆವುದೆಂದರೇನ? ಈ ಪ್ರಶ್ನೆಗೆ ಉತ್ತರವಿಲ್ಲ

೦ ೦ ೦ ೦

ವಯೋವೃದ್ಧರೂ ಜ್ಞಾನವೃದ್ಧರೂ ಹೀಗೆಲ್ಲ ಹುಡುಗಾಟಿಕೆ ಮಾಡುತ್ತಿರುವುದಕ್ಕೆ ಎಸೆಂಬ್ಲಿಗೆ ಚ ನಾವಣೆ ಹೊಂದಬೇಕಾಗಿ ಬಂದುದೂ ಇಂಡಿಯಾ ಆಕ್ಟಿನ ಉಪಕಾರವಷ್ಟೆ

೦ ೦ ೦ ೦

ವಿಮಾನಗಳಿಂದ ಬೊಂಬುಗಳನ್ನು ಚೆಲ್ಲಿ ದಲ್ಲಿ ಕರುಣೆಯಿಂದ ದುಷ್ಟನಿಗ್ರಹಮಾಡಬರುವುದಾಗ ಲೋರ್ಡ್ ಲಂಡನ್ ಡೆರಿಯವರು (ವಿಮಾನ ಸೇನಾಮಂತ್ರಿ) ತಿಳಿಸಿದ್ದಾರೆ ಅದೇ ದಿನ ೮೦ ಅರಬರು ಈ ಒಗೆಯ ಕರುಣಾಕಟಾಕ್ಷಕ್ಕೆ ಪೆಲೆಸ್ಟ್ಯಾನಿನಲ್ಲಿ ಈಡಾದರು'

# ನಾಜಿ ಜರ್ಮನಿಯ ನವೀನ ಧರ್ಮ.

## ಜರ್ಮನರು ಮೂರ್ತಿ ಪೂಜಕರಾಗುತ್ತಿದ್ದಾರೆ.

### ★ ಹಿಟ್ಲರ್ ಅವರ ಆರಾಧ್ಯ ದೇವತೆ ★

ಜರ್ಮನಿಯಲ್ಲಿ ಕ್ರೈಸ್ತ ಮತವು ಮೂಲೆಗೊಂಪಾಗುತ್ತಿದೆ ಅದರ ಸ್ಥಾನದಲ್ಲಿ ಒಂದು ನವೀನ ಧರ್ಮದ ಪ್ರಸಾರವಾಗುತ್ತಿದೆ ನಾಜಿ ತತ್ವಗಳೇ ಆ ಹೊಸ ಧರ್ಮದ ಸೂತ್ರಗಳು ಹಿಟ್ಲರನೇ ಹೊಸ ಧರ್ಮಾವಲಂಬಿಗಳ ಆರಾಧ್ಯ ದೇವತೆ ಅವನು ಅವರ ಸರ್ವಸ್ವ ಹಿಟ್ಲರನ ಶೋಡಶೋಪಚಾರಯುಕ್ತ ದಿವ್ಯ ಪೂಜೆ ಮಾಡಿ ಜರ್ಮನರು ತಮ್ಮ ಜನ್ಮ ಸಫಲವಾಗುವದೆಂದೂ ಇಹದಲ್ಲಿ ಸುಖ, ಪರದಲ್ಲಿ ಮೋಕ್ಷ ದೊರಕುವದೆಂದೂ ನಂಬತೊಡಗಿದ್ದಾರೆ ನಿರಾಕಾರ ಪರಬ್ರಹ್ಮನ ಸ್ಥಾನದಲ್ಲಿ ಸಾಕಾರ ಹಿಟ್ಲರನನ್ನು ಭಕ್ತಿಶ್ರದ್ಧೆ ವಿಶ್ವಾಸಗಳಿಂದ ಪೂಜಿಸಿ ತಮ್ಮನ್ನು ತಾವು ಕೃತಾರ್ಥರೆಂದು ತಿಳಿಯುತಿದ್ದಾರೆ

ನವೀನ ಧರ್ಮವನ್ನನುಸರಿಸಿ ಜರ್ಮನಿಯಲ್ಲಿ ಹೊಸ ಪ್ರಾರ್ಥನಾಲಯಗಳು ಕಟ್ಟಲ್ಪಡುತ್ತಿವೆ ಜರ್ಮನ ಭೂಮಿ ಕುಟುಂಬ ಮತ್ತು ಕುಲ ಹಾಗೂ ಹಿಟ್ಲರನ ಪೂಜೆಗಳೇ ಈ ಪ್ರಾರ್ಥನಾಲಯಗಳಲ್ಲಿ ನಡೆಯುವ ಕರ್ತವ್ಯ ವಿಧಿಗಳು ಹಿಟ್ಲರನ ಪ್ರತಾಪವು ಮುಂದುವರಿಯುತ್ತಿದ್ದರೆ ಜರ್ಮನಿಯಲ್ಲಿ ಯಹೂದಿ ಕ್ರೈಸ್ತರ ತದ ಸ್ಥಾನವನ್ನು ನಾಜಿಗಳ ಈ ನವೀನ ಧರ್ಮವು ಆಕ್ರಮಿಸದೆ ಇರಲಾರದು

ಕೇಂದ ಸರಕಾರದ ಯೂರೋಪಿಯನ್ ಸದಸ್ಯರಾದ ಸರ್ ಹೆ. ಗಿಡ್ನಿಯವರ

— —

ನವೀನ ಧರ್ಮದ ಪ್ರಚಾರವು ಹೇಗಾಗುತ್ತದೆ ಎಲ್ಲಾಗುತ್ತದೆ ಯಾಕಾಗುತ್ತದೆ ಎಂಬ ವಿಚಾರವು ಗುಪ್ತವಾಗಿರಿಸಲ್ಪಟ್ಟಿದೆ ಅದರ ಸಂಗತಿಗಳ ಪತ್ರಪತ್ರಿಕೆಗಳಲ್ಲಿ ಪ್ರಕಟವಾಗುವದಿಲ್ಲ ಪ್ರಪಂಚವು ಈ ನವೀನ ಧರ್ಮದಿಂದ ದಿಗಿಲುಗೊಂಡು ವಿರೋಧ ಪ್ರಚಾರ ಮಾಡದಂತೆ ಅದನ್ನು ತಡೆಯುವದಕ್ಕಾಗಿಯೋ ಹೀಗೆ ಈ ವಿಷಯವನ್ನು ನಾಜಿಗಳು ಬೇಕು ಬೇಕೆಂದೇ ಗುಪ್ತವಾಗಿಟ್ಟಿದ್ದಾರೆ

ನಾಜಿ ಪಂಗಡದ ಸ್ಥಳೀಯ ಮುಖಂಡರು ಪ್ರಾರ್ಥನಾಲಯಗಳಲ್ಲಿ ಪೌರೋಹಿತ್ಯವನ್ನು ಮಾಡುತ್ತಾರೆ ಚರ್ಚಿನಲ್ಲಿ ಶಿಲುಬೆಯ ಸ್ಥಾನದಲ್ಲಿ ಸ್ವಸ್ತಿಕಾ ಇರುತ್ತದೆ ಯೇಸು, ಮೇರಿ ಮತ್ತು ಇತರ ಕ್ರೈಸ್ತ ಸಾಧುಸಂತರ ಚಿತ್ರಪಟಗಳ ಸ್ಥಾನದಲ್ಲಿ ಹಿಟ್ಲರ ಮತ್ತು ಅವನ ಪಂಗಡಕ್ಕೆ ಸೇರಿದ ಮಹಾನ ಮಂದಿರ ಭಾವಚಿತ್ರಗಳು ತೂಗಾಡುತ್ತದೆ ಯೇಸು ಮೇರಿ ಮೊದಲಾದವರ ಪ್ರತಿಮೆಗಳಿರುವಲ್ಲಿ ಜರ್ಮನ ಮಾತೆಯ ಪ್ರತಿಮೆಯ ಸ್ಥಾಪಿಸಿರುತ್ತಾರೆ ನಾಲ್ಕು ಮಕ್ಕಳು ಅವಳ ಪಾದಕಮಲವನ್ನು ಮುದ್ದಿಸುವಂತೆ ಮೂರ್ತಿ ಯುಕ್ತವಾಗಿಟ್ಟಿರುತ್ತದೆ ಮೂರ್ತಿಮಂತ ಜರ್ಮನ ಮಾತೆಯು ಜರ್ಮನರ ಯೇಸು ಅವರ ಮೇರಿ' ಗೋಡೆಗಳ ಮೇಲೆ ಬ್ಯಾಬಲ ವಾಕ್ಯಗಳಿರುವದರ ಬದಲಿಗೆ ನಾಜಿಗಳ ತತ್ವಸೂತ್ರಗಳು, ಅವರ ನೀತಿಧರ್ಮಗಳು, ಕುಲೀನ ಜರ್ಮನರ ನಾಮಾವಳಿಗಳು ಬರೆಯಲ್ಪಡುತ್ತವೆ

'ಜರ್ಮನಿಯ ಮೇಲೆ ನಮಗೆ ಪೂರ್ಣ ವಿಶ್ವಾಸವಿದೆ ಸತ್ಯದ ಜಯದಲ್ಲಿ ನಮಗೆ ನಂಬಿಗೆ ಇದೆ ಸತ್ಯವೆಂದರೆ ಸಂಗ್ರಾಮ, ಜೀವನ ಸಂಗ್ರಾಮದಲ್ಲಿ ನಾವು ನಿಶ್ಚಯವಾಗಿಯೂ ಸಫಲರಾಗುವೆವು ಯಾರು ಬಲಿಷ್ಠನೋ ಅವನೇ ನ್ಯಾಯವಂತನು, ಜರ್ಮನ ಮಕ್ಕಳ ವಿಷಯದಲ್ಲಿ ನ್ಯಾಯವು ಕಾಪಾಡಲ್ಪಡಲೇಬೇಕು ಆ ಮಕ್ಕಳಿಗಾಗಿ ಪ್ರಾಣಕೊಡುವವನು ಧೈರ್ಯವಂತನು, ಧೀಮಂತನು ಅವನೇ ನಿಜವಾದ ಜರ್ಮನನು —ಇವು ನವೀನ ನಾಜಿಧರ್ಮದ ಕೆಲವು ನೀತಿ ಸೂತ್ರಗಳು ಇವುಗಳನ್ನು ಓದಿದೊಡನೆ ಮೈ ಜುಮ್ಮೆನ್ನುವದಿಲ್ಲವೆ?

'ಹೇ ಜರ್ಮನಿ! ನಾವು ಹೋದರೂ ನೀನು ಉಳಿಯುವೆ ನಾವು ಬಾಡಿದರೂ ನೀನು ಅರಳುವೆ

'ಹೇ ಜರ್ಮನಿ! ನಾವು ಏನು ಮಾಡುವೆವು ನಿನಗಾಗಿ ಮಾಡುವೆವು ನಾವು ಏನು ಅರ್ಜಿಸುವೆವೋ, ನಿನಗಾಗಿ ಅರ್ಪಿಸುವೆವು

ಹೇ ಜರ್ಮನಿ ನಾವು, ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ನಿನಗಾಗಿ ಹುಟ್ಟುವೆವು ನಿನಗಾಗಿ ಬಾಳುವೆವು, ನಿನಗಾಗಿ ಸಾಯುವೆವು ಹೇ ಜರ್ಮನಿ ನಾವು ನಿನಗಾಗಿ, ಕೇವಲ ನಿನಗಾಗಿ ಇರುವೆವು' —ಇದು ನವೀನ ನಾಜಿ ಧರ್ಮಾನುಯಾಯಿಗಳ ನಿತ್ಯ ಪ್ರಾರ್ಥನೆಯ ಕವನವಾಗಿದೆ ಕೇವಲ ಜರ್ಮನಿಗಾಗಿ ಜರ್ಮನರು ಎಂಬ ರಾಷ್ಟ್ರೀಯ ಭಾವನೆ ಯಿಂದ ಸ್ಫೂರ್ತಿ ಪ್ರೇರಿತವಾದ ಈ ನಾಜಿ ಧರ್ಮದ ಪ್ರಸಾರದಿಂದ ಪ್ರಪಂಚದ ಮೇಲೆ ಎಂಥ ಪರಿಣಾಮವಾಗುವದೋ ವಾಚಕರೇ ಊಹಿಸಲಿ




ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ಆದರೆ, ಈಗ

**ಲಿವರ್ ಮತ್ತು ಸ್ಪ್ಲೀನ್**
**ವ್ಯಾಧಿಗಳು**

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣ ಬೇಧಿಗಳು, ಕೈಕಾಲುಗಳು ಸಣ್ಣವಾಗಿ ದೋಣ, ಇವುಗಳಿಂದ ನರಳಿ, ಬಳಲಿ ಎಷ್ಟೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ಸೊರಗಿ ಹೋಗುತ್ತಾರೆ ಎಂದಿರುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ ಒಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ

ಎಳೆಯ ಮಕ್ಕಳನ್ನು ರಕ್ಷಿಸುವುದ ದರೆ—

ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೧ ಗೋವಿ ದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸು

ದ ಕ ಜಿಲ್ಲೆಯ ಏಜಂಟರು —
ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

THE

**BANK OF MANGALORE LTD.,**
**MANGALORE**

*ESTD 1931*

*Branches* -
Panemangaore, Mudabidri & Padubidri.

*Chairman*—**Philip A. Chandran, Esq.,**
*Retd Dt Registrar of Joint Stock Companies*

On & from 1st of January 1937,
Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| | 12 „ | 5% |
| | 24 „ & upwards | 5½% |

Interest Payable Quarterly

Saving Bank deposit 3½% on daily balance

**All kinds of banking business transacted**

U. R PAI, N. U. PAI, *Managing Directors*

## ಮದನಕಾಮೇಶ್ವರಿ ಲೇಹ್ಯ

**ಅತ್ಯಂತ ಬಲಕಾರಿ.**

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದು. ಸನ್ನಿರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 8 ದಿವಸಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸರ್ಜನ ಪೆರಿಡೇಪಿ
P O Peridepi (ನೆಲ್ಲೂರು ಡಿ)

## HOUNSA

**ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,**
ಉಪಯೋಗಿಸಿರಿ.
ಕೆ. ವೆಂಕಟೇಶ ಪಾಬ್ಬೆಗ,
ಗಣಪತಿಕಟ್ಟೆ, ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ
## 'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ
## ಈ ದಿನವೇ ಚಂದಾದಾರರಾಗಿರಿ.

# S. U. N. & Co.,

*Silk Merchants,*
Chaukhambi BENARES CITY

ಈಗಿನ ತರಹ(ಕಾಶಿ) ಬನಾರಿಸ್ ಶೀರೆ ತರಿಸಿ ಬೇಕಾದರೆ ನಮ್ಮನ್ನು ಬರೆಯಿರಿ ಬೇಟಿ ಅಗ ಕ್ಷಣ ತುಂಬು ಸ ಲಭ ಮಾತ್ರ ಮಾಲು 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಶೀರೆಗಳು ರೂ 35ರಿಂದ ರೂ 55 ವರೆಗೆ ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2¼ ರೂ 20 ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾಗುವದು

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯರ್,
ಚೌಕಂಬಾ, ಬೆನರಿಸ್ ಸಿಟಿ

## ಎಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ.

ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

# ಲಿಮ್ಡಾ ಸೋಪು
## ಉಪಯೋಗಿಸಿರಿ
ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ-ಬೋಂಬಾಯಿ&ಮದ್ರಾಸು

ಒದಗಿಸಿಕೊಡುವವರು—
## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,
ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd I wish the same very success as I am told they are rendering help to the poor by the supply of medicines free of cost. I wish the institution every success.

(*Sd*) **V. V Giri**
*1-10-1937* *Minister of Labour*

**Bhuvanendra Products Ltd,** Katapady, S. Kanara

# 2187ರ ? ನಮ್ಮೂರು!!

ನಮ್ಮದು ವಿಚಿತ್ರ ಪ್ರಪಂಚ. ಇಪ್ಪತ್ತಂ ಆದಲ್ಲಿ ಚಿತ್ರವಿಚಿತ್ರ ಸಂಗತಿಗಳು ಜರಗುತ್ತವೆ. ಅಸಂಭವನಗಳು ಸಂಭವನೀಯವಾಗುತ್ತವೆ. ಅಸಾಧ್ಯ ವಿಷಯಗಳು ಸಾಧ್ಯವಾಗುತ್ತವೆ. ಇವತ್ತಿನ ಪ್ರಪಂಚವು ನಿನ್ನೆಯ ಹಾಗೆ ಇರಲಿಲ್ಲ. ನಾಳೆಯ ಪ್ರಪಂಚವೂ ಇವತ್ತಿನ ಹಾಗೆ ಇರಲಾರದಷ್ಟು, ಅದರಲ್ಲಿ ನಿಮಿಷ ನಿಮಿಷಕ್ಕೂ ಬದಲಾವಣೆಗಳು ಆಗುತ್ತಲೇ ಇರುತ್ತವೆ. ಎರಡೂವರೆ ಶತಮಾನಗಳು ಕಳೆದ ಮೇಲೆ ನಮ್ಮ ಪ್ರಪಂಚ ಹೇಗಿದ್ದೀತು? 2187ರ ನಮ್ಮೂರು-ನಮ್ಮ ಪಟ್ಟಣ ಹೇಗೆ ಕಾಣಬಹುದು? ಕಲ್ಪನಾಲೋಕದಲ್ಲಿ ಸಂಚರಿಸುತ್ತಿರುವ ಕುಲ್ಸುಮ್ ಸೂರಯ್ಯ ಎಂಬ ಮಹಿಳೆಯು ಬೊಂಬಾಯಿ ಕ್ರಾನಿಕಲಿನಲ್ಲಿ-ಈ ಪ್ರಶ್ನೆಗೆ ಹೀಗೆ ಉತ್ತರ ಕೊಟ್ಟಿದ್ದಾರೆ.

### ಮಹದಂತರ

2187ನೇ ಇಸವಿ ಕಾಲವು ಘನಗಿಯ ಬೇಕಾದರೆ ಸ್ತ್ರೀಪುರುಷ ಸಂಬಂಧದಲ್ಲಿ ಹೇಳಿಕೊಡದಷ್ಟು ಬದಲಾವಣೆ ಆಗುವದು. ಆ ಕಾಲಕ್ಕೆ ಸ್ತ್ರೀಯರು ಸಬಲೆಯರು, ಪರಂತು ಪುರುಷರು ಅಬಲೆಯರು ಎನ್ನಿಸಿಕೊಳ್ಳುವರು. ಪುರುಷರು ಸ್ತ್ರೀಯರ ವಾಮಾಂಗವಾಗುವರು; ಸ್ತ್ರೀಯರ ಆದರ ಆಶ್ರಯಗಳಲ್ಲಿ ಅವರು ಬೆಳೆದು ಬರುವರು. ಸ್ತ್ರೀ ಸಾಹಸವು ಅವರ ರಕ್ಷಾ ಕವಚವಾಗುವದು. ಎಲ್ಲಿ ನೋಡಿದರಲ್ಲಿ ಸ್ತ್ರೀಯರದ್ದೇ ಪ್ರಾಬಲ್ಯ. ಜೂಜಿನ ಕುದುರೆಗಳನ್ನು ಓಡಿಸುವವರು ಸ್ತ್ರೀಯರು! ಕ್ರಿಕೆಟ ಫುಟ್‌ಬಾಲ್, ಹಾಕಿ ಪಂದ್ಯಾಟಗಳು ನಡೆಯುವದು, ಬಹುಮಾನಗಳು ದೊರೆಯುವದು, ಸ್ತ್ರೀಗಳಿಗೇನೇ! ಆಗ ಪುರುಷರು ಬರೇ ದರ್ಶಕರಾಗಿ ಕ್ರೀಡಾಂಗಣಗಳಿಗೆ ಬರುವರು. ಪುರುಷರ ಲಜ್ಜಾಭಾವ, ಅವರ ಕೋಮಲಾಂಗ ಇವನ್ನೆಲ್ಲ ನೋಡಿಕೊಂಡು ಸ್ತ್ರೀಯರು ಅವರ ಕೂತುಕೊಳ್ಳುವಿಕೆಗೆ ಪ್ರತ್ಯೇಕ ಸ್ಥಾನಗಳನ್ನು ಕಾದಿಡುವರು. ಶತಮಾನದ ಅಭ್ಯಾಸ ಬಲದಿಂದ ಸ್ತ್ರೀಯರು ಪುರುಷತ್ವವನ್ನು ಪುರುಷರು ಸ್ತ್ರೀಯತ್ವವನ್ನು ಸಂಪಾದಿಸಿಕೊಂಡಿರುವರು. ಸ್ತ್ರೀಯರಲ್ಲಿ ಮೊದಲಿನ ಆಕರ್ಷಣವಿಲ್ಲ. ಪುರುಷರಲ್ಲಿ ಮೊದಲಿನ ಧೀರತನವಿಲ್ಲ. ಸ್ತ್ರೀಯರು ಕೊಡುವ ಪ್ರತಿಯೊಂದು ಏಟೆಯನ್ನು ಪುರುಷರು ಸುಮ್ಮನೆ ಸಹಿಸಿಕೊಂಡು ಇರುವರು. ಆದರೆ ಪುರುಷರು ಸ್ತ್ರೀಯರ ಕಡೆಗೆ ಸ್ವಲ್ಪ ಬಾಯಿ ಬಿಟ್ಟು ನೋಡಿದರೂ ಸಾಕು, ಸ್ತ್ರೀಯರು ಆಕಾಶ ಪಾತಾಳಗಳನ್ನು ಒಂದುಮಾಡಿ ಆ ಪುರುಷರನ್ನು ದಂಡನೆಗೆ ಗುರಿಮಾಡದೆ ಇರುವದಿಲ್ಲ. ಆ ಕಾಲಕ್ಕೆ ಸ್ತ್ರೀಪುರುಷರ ಉಡಿಗೆ ತೊಡಿಗೆಗಳಲ್ಲಿ ಕೂಡ ವಿಶೇಷ ವ್ಯತ್ಯಾಸವಾಗಿರುವದು ಕಂಡುಬಂದೀತು. ಸ್ತ್ರೀಯರು ಲಂಗೋಟಿ ಕಚ್ಚೆ ಉಟ್ಟುಕೊಂಡು ಬೀದಿಬೀದಿ ತಿರುಗುವರು. ಆದರೆ ಪುರುಷರು ಸೀರೆ ಕುಪ್ಪಸ ತೊಟ್ಟುಕೊಂಡು ಬೀದಿಬೀದಿ ತಿರುಗುವರು. ಆದರೆ ಪುರುಷರು ಸೀರೆ ಕುಪ್ಪಸ ತೊಟ್ಟುಕೊಂಡು ಸಾಮಾನ್ಯವಾಗಿ ಮನೆಯ ಒಳಗಿದ್ದೇ ತಮ್ಮ ದಿನಗಳನ್ನು ಕಳೆಯುವರು. ಯುರೋಪಿಯ ಸ್ತ್ರೀಯರು ಚಡ್ಡಿ ಚಲ್ಲಾಣಗಳನ್ನು ಹಾಕಿಕೊಳ್ಳುವರು. ಅವರ ಪುರುಷರು ಗವನು ಫ್ರಾಕುಗಳನ್ನು ತೊಟ್ಟುಕೊಳ್ಳುವರು.

### ಪುರುಷರಿಗೆ ಘೋಷ!

ಸಾಮಾಜಿಕ ಆರ್ಥಿಕ, ವ್ಯವಹಾರ ಕ್ಷೇತ್ರಗಳಲ್ಲಿ ಮಹದಂತರವು ಕಾಣಿಸಿಕೊಳ್ಳುವದು. ಪ್ರತಿಯೊಂದು ಅಂಗಡಿ, ಪ್ರತಿಯೊಂದು ಭಂಡಸಾಲೆ, ಪ್ರತಿಯೊಂದು ಆಫೀಸು, ಖಚೇರಿಗಳಲ್ಲಿ ಸ್ತ್ರೀಯರೇ ಕಾಣಿಸಿಕೊಳ್ಳುವರು. ಅವರೇ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುವವರಾಗುವರು. ಪುರುಷರ ಹೆಸರನ್ನು ಬರೆದ ಸೈನ್ ಬೋರ್ಡುಗಳು, ಒಂದು ಅಂಗಡಿಯ ಮುಂದೆ ಕೂಡ ತೂಗಾಡಿಕೊಂಡಿರುವದಿಲ್ಲ. 'ಲೀಲಾವತಿ ವಿದ್ಯಾಗಾರ' 'ಕಮಲಾ ರಾಧಮ್ಮ' 'ಶಾಂತಾಬಾಯಿ ಉಪ್ಪುಂದ' 'ಮೇರಿ ಎಲಿಜಾ' 'ಮಗ್ದಲಿನ್ ಆಗ್ನೆಸ್' 'ಫಾತಿಮಾ ಬೇಬಿ' ಎಂಬಿವೇ ಮೊದಲಾದ ಹೆಸರುಗಳೇ ಹೆಚ್ಚಾಗಿ ಕಾಣಿಸಿಕೊಳ್ಳುವವು. ಪೇಟೆ ಸಂತೆ ಕೋರ್ಟು, ಖಚೇರಿ, ಬಂದರು, ಸ್ಟೇಶನು, ಗುತ್ತಿಗೆ, ಸೆಲೂನು, ಹೋಟೇಲು, ಕ್ಲಬ್ಬು, ಪಾರ್ಕು ತೋಟ, ಎಲ್ಲಾ ಕಡೆಗಳಲ್ಲಿ ಸ್ತ್ರೀಯರೇ ಸ್ತ್ರೀಯರು! ನಾಟಕ ಸಿನೇಮಾ ಮಂದಿರಗಳಲ್ಲಿ ಪುರುಷರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗುತ್ತದೆ. ಅವರು ಹೆಚ್ಚಿನ ಸಂಖ್ಯೆಯಿಂದ ಬರುವಂತೆ ಅವರಿಗೆ ಕನ್ಸೆಶನುಗಳು ಇರುತ್ತವೆ. ಘೋಷಾ ಪುರುಷರಿಗೆ ಪ್ರತ್ಯೇಕ ಸ್ಥಾನವಿರುತ್ತದೆ. ಮೋಟಾರುಗಳಲ್ಲಿ, ಟ್ರಾಮುಗಳಲ್ಲಿ ಮುಂದಿನ ಸೀಟುಗಳು ಪುರುಷರಿಗೂ ಮಕ್ಕಳಿಗೂ ರಿಜರ್ವ ಆಗಿರುತ್ತವೆ. ರೈಲುಗಳಲ್ಲಿ ಪುರುಷರಿಗೆ ಪ್ರತ್ಯೇಕ ಡಬ್ಬಿಗಳಿವೆ. ಈ ಡಬ್ಬಿಗಳಿಗೆ ಸ್ತ್ರೀಯರು ಹತ್ತಿದರೆ ಜುರುಮಾನೆ ಆಗುವದು. ವಿಹಾರ ಸ್ಥಾನಗಳಲ್ಲಿ ಕತ್ತಲೆಯಾದ ಮೇಲೂ ವಾಯು ಸೇವನೆಗಾಗಿ ಬಂದ ಸ್ತ್ರೀಯರು ಆಕಾಶದಲ್ಲಿನ ನಕ್ಷತ್ರಗಳನ್ನು ನೋಡುತ್ತ ಹಾಯಾಗಿ ಅಡ್ಡಬಿದ್ದಿರುವದನ್ನು ನೋಡಬಹುದು. ಆದರೆ ಪುರುಷರು ಮಾತ್ರ—ಹಾಲು ಕರೆಯಲಿಕ್ಕೆ ಇದೆ, ಅಕ್ಕಚ್ಚು ಇಡಲಿಕ್ಕಿ ಇದೆ. ಅಡಿಗೆ ಮಾಡಲಿಕ್ಕೆ ಇದೆ, ಮಕ್ಕಳು ಅತ್ತುಕೊಂಡಾವು! ಎಂದುಕೊಂಡು ಆರು ಘಂಟೆ ಹೊತ್ತಾಗಬೇಕಾದರೆ ಮನೆ ಸೇರುವದನ್ನು ಕಾಣಬಹುದು. ಆಗ ಮನೆಯೇ ಪುರುಷರ ವಿವಿಧ ಚಟುವಟಿಕೆಗಳ ಕೇಂದ್ರ ಸ್ಥಾನವೆಂದು ತಿಳಿಯಲ್ಪಡುವದು. ಪರೀಕ್ಷೆಯ ಫಲಿತಾಂಶ ಪಟ್ಟಿಯಲ್ಲಿ ಪುರುಷರ ಹೆಸರುಗಳು ಬರುವದು ತೀರಾ ಕಡಿಮೆ. ಅಂಥ ಪುರುಷರು ಎಲ್ಲಿಯಾದರೂ ಸಣ್ಣ ಪರೀಕ್ಷೆಯಲ್ಲಿ ತೇರ್ಗಡೆಯಾದರೂ ಪತ್ರಿಕೆಗಳಲ್ಲಿ ಅವರ ಫೋಟೋ ಬರುವದು; ಅವರ ಶ್ಲಾಘನೆಯಾಗುವದು.

### ಸ್ತ್ರೀಯರಿಗೆ ರಾಜ್ಯಾಧಿಕಾರ!!

ರಾಜಕೀಯ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಸ್ತ್ರೀಯರದ್ದೇ ಕಾರುಬಾರು ಇರುವದು. ಜವಾಬ್ದಾರಿ ಉಚ್ಚ ನೌಕರಿ ಉದ್ಯೋಗಗಳಲ್ಲೆಲ್ಲ ಸ್ತ್ರೀಯರು ವಿರಾಜಮಾನರಾಗುವರು. ಸೈನ್ಯದ ಸೇನಾಧಿಕಾರಿಗಳು ಸ್ತ್ರೀಯರು; ಹೈಕೋರ್ಟುಗಳ ಜಡ್ಜರು ಸ್ತ್ರೀಯರು; ಅಂತರಾಷ್ಟ್ರೀಯ ಸಭೆ ಸಮಾರಂಭಗಳಿಗೆ ಪ್ರತಿನಿಧಿಗಳಾಗಿ ಹೋಗುವವರು ಸ್ತ್ರೀಯರು! ಆಗ ಹಿಂದೆ ಪುರುಷರು ಮಾಡಿದ ಕಾಯದೆ ಕಾನೂನು ನೇಮ ನಿಬಂಧನೆಗಳೆಲ್ಲ ರದ್ದಾಗಿ ಸ್ತ್ರೀಯರ ಕಾಯದೆ ಕಾನೂನುಗಳು ಬರುವವು. ಪುರುಷರ ಸ್ಮಾರಕ ಮಂದಿರ, ಪ್ರತಿಮೆ ಇತ್ಯಾದಿಗಳನ್ನು ಕೆಡವಿ ಹಾಕಿ ಸ್ತ್ರೀಯರ ಸ್ಮಾರಕ ಮಂದಿರ ಪ್ರತಿಮೆ ಇತ್ಯಾದಿಗಳನ್ನು ಇಡುವರು. ಅವರ ಒಂದು ನಮೂನೆ ಹೀಗೆ ಇರುವದು:—

★

### ಶ್ರೀಮತಿ ಪದ್ಮಾವತಿ ಕಾಮಾಕ್ಷಮ್ಮ

(ಹುಟ್ಟು 2130—ಸಾವು 2187)

ಸ್ವಾಭಾವಿಕ ಅಥವಾ ಕೃತ್ರಿಮ ಉಪಾಯಗಳಿಂದ ಸ್ತ್ರೀಯರು ಗಡ್ಡ ಮೀಸೆಗಳನ್ನು ಬೆಳೆಸಿಕೊಳ್ಳಲಿಕ್ಕೆ ಅನುಕೂಲವಾಗುವಂತೆ ವೈಜ್ಞಾನಿಕ ಶೋಧವನ್ನು ಮಾಡಲಿಕ್ಕೆ ತಮ್ಮ ಸರ್ವಸ್ವವನ್ನೂ ಧಾರೆ ಎರೆದು ಕೊಟ್ಟ ಈ ರಮಣೀರತ್ನದ ಸ್ಮಾರಕಕ್ಕಾಗಿ ಈ ಭವನವು ಕಟ್ಟಿಸಲ್ಪಟ್ಟಿತು.

ಇನ್ನೊಂದು ಸ್ಮಾರಕ ಶಿಲೆಯ ಮೇಲೆ ಈ ಕೆಳಗಿನ ಅಕ್ಷರಗಳನ್ನು ಕೆತ್ತಿರುವದನ್ನು ಓದಬಹುದು:—

★

### ಸರ್ವ ಸೇನಾಧಿಕಾರಿಣಿ ಶ್ರೀಮತಿ ಗುಲ್ನಾರ ಬೇಗಮ್

(ಹುಟ್ಟು 2120—ಸಾವು—2155)

ಅಫಘಾನಿಸ್ಥಾನದ ವೀರ ಮಹಿಳೆಯರೊಡನೆ ಕಾದಾಡಿ ಈ ವರ್ಷ ವಿಜಯ ಶ್ರೀಯನ್ನು ಒಲಿಸಿಕೊಂಡ ಸ್ಮಾರಕವಾಗಿ ಈ ಶಿಲೆಯು ಇಲ್ಲಿ ನಡಲ್ಪಟ್ಟಿದೆ.

17ನೇ ಜೂನ್ 2155

★

### ಯಂತ್ರಯುಗದ ಆರಂಭ

ಪುರುಷರಿಗೆ ಎಲ್ಲಿಯೂ ಸ್ಥಾನವಿಲ್ಲ. ಕೈಗಾರಿಕೆ ಕಾರ್ಖಾನೆಗಳಲ್ಲಿ ಮನುಷ್ಯನ ಸುಳಿವೇ ಇಲ್ಲ. ಎಲ್ಲ ಕೆಲಸಗಳು ವಿದ್ಯುಚ್ಛಕ್ತಿಯಿಂದ ನಡೆಯುತ್ತವೆ. ಮನೆ ಮಠ, ಎಲ್ಲಾ ಕಡೆಗಳಲ್ಲಿ ವಿದ್ಯುಚ್ಛಕ್ತಿಯ ಮನುಷ್ಯರು ಕೆಲಸ ಮಾಡುತ್ತಾರೆ. ಜಟ್ಕಾ, ಗಾಡಿ ಮೊದಲಾದವು ಮ್ಯೂಜಿಯಮ್ಮುಗಳನ್ನು ಸೇರುವವು. ವಿಮಾನಸಂಚಾರವು ಸಾರ್ವತ್ರಿಕವಾಗುವದು. ಈಗ ಸ್ಕೈಕಲ ಸವಾರಿ ಮಾಡುವಂತೆ ಆಗ ಸ್ತ್ರೀಪುರುಷರು ವಿಮಾನ ಸಂಚಾರ ಮಾಡುವರು.

### ಮಾದರಿ ಶಾಲೆ

ಜೂನ್ ತಿಂಗಳಲ್ಲಿ ಶಾಲೆ ಆರಂಭವಾಗಿದೆ. ಮಕ್ಕಳು ಶಾಲೆಗಳಲ್ಲಿ ದಾಖಲಾಗುತ್ತಿದ್ದಾರೆ. ಲಂಗೋಟಿ ಕಚ್ಚೆ ಉಟ್ಟುಕೊಂಡ ಹೆಣ್ಣು ಮಕ್ಕಳು ಶಾಲೆಯ ಜಗಲಿಯ ಮೇಲೆ ಸ್ವೇಚ್ಛೆಯಿಂದ ತಿರುಗುತಿದ್ದಾರೆ. ಮುಖ್ಯೋಪಾಧ್ಯಾಯಿನಿ ರಾಜೀವಿ ಸರಸಮ್ಮ ಕೈಯಲ್ಲಿ ಬೆತ್ತ ಹಿಡಿದು ಹಾರಾಡುತಿದ್ದಾಳೆ. ಅಷ್ಟರಲ್ಲಿ ಹೆಣ್ಣು ಮಕ್ಕಳು ದಾಖಲಾಗಲಿಕ್ಕೆ ಬರುತ್ತಾರೆ. ಅವರ ತಾಯಂದಿರೂ ಜೊತೆಯಲ್ಲಿದ್ದಾರೆ. ರಾಜೀವಿ ಒಂದು ಸಿಗರೇಟಿಗೆ ಬೆಂಕಿಕಡ್ಡಿ ಕೀರಿಟ್ಟು ಆಫೀಸು ಕೋಣೆಗೆ ಹೋಗುತ್ತಾಳೆ. ಶಾಲೆಯಂಥಿನ ನೂತನ ಮುಸ್ಕಳ ಶಿಕ್ಷಣ ಅವಳಿಗೆ ತೃಪ್ತಿಕರವಾಗಿ ಕಂಡುಬರುವದಿಲ್ಲ. ಅವರನ್ನು ಆವರು ಕಲಿತ ದರ್ಜೆಯಲ್ಲಿಯೇ ಬೇಕಾದರೆ ಸೇರಿಸಿಕೊಳ್ಳುತ್ತೇನೆ' ಎನ್ನುವಳು. ತಾಯಂದಿರು ಬಹಳ ಬೇಡಿಕೊಳ್ಳುವರು. ಆದರೆ ಅವಳಿಗೆ ಸಿಟ್ಟುಬರುವದು ಈ ಹೆಣ್ಣು ಮಕ್ಕಳನ್ನು ಸೇರಿಸಿಕೊಳ್ಳಲಿಕ್ಕೆ ಆಗುವದಿಲ್ಲ' ಎಂದು ತಿರಸ್ಕರಿಸುವಳು. ಅಷ್ಟರಲ್ಲಿ ಒಬ್ಬ ತಂದೆ ತನ್ನ ಮಗನನ್ನು ಕರಕೊಂಡು ಬರುತ್ತಾನೆ. ರಾಜೀವಿ ಸಂತೋಷದಿಂದ ಅವನಿಗೆ ಕೂತುಕೊಳ್ಳಲಿಕ್ಕೆ ಕುರ್ಚಿ ಕೊಡುತ್ತಾಳೆ. ಕ್ಷೇಮಸಮಾಚಾರ ಕೇಳಿ, ಆ ಹುಡುಗನನ್ನು ಮೇಲ್ತರಗತಿಗೆ ದಾಖಲು ಮಾಡುತ್ತಾಳೆ. ಸ್ಕಾಲರಶಿಪ್ಪಿಗೂ 'ಪ್ರಯತ್ನಿಸುತ್ತೇನೆಂದು ಮಾತು ಕೊಡುತ್ತಾಳೆ. ತುಂಟರಾಗಿದ್ದ ಹೆಣ್ಣು ಮಕ್ಕಳು ಆ ಹುಡುಗನ ಎದುರಿಗೆ ಬಹಳ ಸಂಭಾವಿತರಾಗಿ ಬಿಡುತ್ತಾರೆ. ರಾಜೀವಿ ಹೇಳುತ್ತಾಳೆ—'ನಾನೀಗ ಪುರುಷರ ಶಿಕ್ಷಣಕ್ಕಾಗಿ ಹೆಚ್ಚು ಧ್ಯಾನ ಕೊಡಬೇಕು. ಈ ಶಾಲೆಗೆ ಗಂಡುಮಕ್ಕಳನ್ನು ಸೇರಿಸಿಕೊಳ್ಳುವದೆಂದರೆ ನನಗೆ ಬಹಳ ಆನಂದ. ಸಹ ಶಿಕ್ಷಣ. ಅದು ಅಗತ್ಯವಾದ್ದೊಂದು ದುರ್ವ್ಯಸನ. ಅದರ ದುಷ್ಪರಿಣಾಮಗಳನ್ನು ಕಡಿಮೆ ಮಾಡುವದಕ್ಕೆ, ನಮ್ಮ ಶಾಲೆಯಲ್ಲಿ ಗಂಡು ಮಕ್ಕಳಿಗೆ ಮುಂದಿನ ಬೆಂಚುಗಳನ್ನು ಕೊಟ್ಟಿದ್ದೇನೆ.''

ಮರುದಿನ ಪಾಠಗಳಿಗೆ ಆರಂಭವಾಗುತ್ತದೆ. ಪ್ರತಿಯೊಂದು ದರ್ಜೆಯಲ್ಲಿ ಹೆಣ್ಣುಗಳೇ ಹೆಚ್ಚಾಗಿದ್ದಾರೆ. ಆದರೆ ಕೆಲವು ಕ್ಲಾಸುಗಳ ಮುಂದಿನ ಕೆಲಕೆಲವು ಬೆಂಚುಗಳಲ್ಲಿ ಕೆಲಕೆಲವು ಗಂಡು ಮಕ್ಕಳು ಮರ್ಯಾದೆಯಿಂದ ಕೂತುಕೊಂಡಿದ್ದಾರೆ. ಉಪಾಧ್ಯಾಯಿನಿ ಕೊಡುವ ಪಾಠ ಹೆಣ್ಣು ಮಕ್ಕಳಿಗೆ ರುಚಿಸುವದಿಲ್ಲ. ಅವರು ತುಂಟ ತಕರಾರುಗಳಿಗೆ ಆರಂಭಿಸುತ್ತಾರೆ. ಉಪಾಧ್ಯಾಯಿನಿ ಸಿಟ್ಟಾಗಿ ಪಾಠವನ್ನು ಅರ್ಧದಲ್ಲೇ ಮುಗಿಸಿ—'ನಿಮಗೆ ತಕ್ಕ ಶಾಸನ ಮಾಡದೆ ಇರುವದಿಲ್ಲ' ಎಂದು ಎಚ್ಚರಿಕೆ ಕೊಟ್ಟು ಹೊರಟು ಹೋಗುತ್ತಾಳೆ.

ಸಾಯಂಕಾಲ ಶಾಲೆ ಕೆಲಸ ಮುಗಿದ ಮೇಲೆ ಹೆಣ್ಣು ಮಕ್ಕಳು ಆಡಲಿಕ್ಕೆ ಹೋಗುತ್ತಾರೆ. ಟೆನ್ನಿಸ, ಹಾಕ್ಕಿ, ಫುಟ್‌ಬಾಲ್, ಕ್ರಿಕೆಟ್ ಇವುಗಳೇ ಅವರ ಪ್ರೀತಿಯ ಆಟಗಳು. ಕೆಲವು ಗಂಡು ಮಕ್ಕಳು ಮಾತ್ರ, ಬಹಳ ಒತ್ತಾಯ ಇದ್ದುದರಿಂದ ಆಟದ ಬಯಲಿನ ಒಂದು ಮೂಲೆಯಲ್ಲಿ ಯಾರಿಗೂ ತಿಳಿಯದಂತೆ ಬೆಡ್‌ಮಿಂಟನ ಆಡುವರು!

### ಹಿಪ್, ಹಿಪ್ ಹುರ್ರಾ ಮಾಧುರಿ!

ಆದಿತ್ಯವಾರ ದಿನ ಮಾಧುರಿ ಖಚೇರಿಗೆ ಹೋಗುವದಿಲ್ಲ. ಆ ದಿನ ಅವಳಿಗೆ ರಜೆ. ತನ್ನ ಗೆಳತಿಯರನ್ನು ಮಧ್ಯಾಹ್ನ ಕಾಫಿ ಫಲಾಹಾರಕ್ಕೆ ಆಮಂತ್ರಣ ಕೊಟ್ಟಿದ್ದಾಳೆ. ಆದರೆ ಮಧುರ (ಅವಳ ಗಂಡನ ಹೆಸರು; ಹೆಂಡತಿಯ ಹೆಸರಿನಿಂದ ಗಂಡನನ್ನು ಕರೆಯುವದು ಆಗಿನ ವಾಡಿಕೆ) ಮನೆಯ ಅಡಿಗೆ ಕೋಣೆಯಲ್ಲಿ ಹೊಗೆ ತಿಂದು ತಿಂದು ಕಣ್ಣೀರು ಸುರಿಸುತಿದ್ದಾನೆ. ಅವನಿಗೆ ರಜೆ ಎಂಬುದಿಲ್ಲ. ವಾರದಲ್ಲಿ ಏಳುದಿನ ಹಗಲೂ ರಾತ್ರಿ ಕೆಲಸವಿದೆ. ಆದಿತ್ಯವಾರ ದಿನ ಅವನಿಗೆ ನಿತ್ಯಕ್ಕಿಂತ ಹೆಚ್ಚು ಕೆಲಸ! ಹೆಂಡತಿಯ ಗೆಳತಿಯರಿಗೆ ಕಾಫಿಫಲಾಹಾರಕ್ಕೆ ತಯಾರಿಸಬೇಕು ಅವರಿಗಾಗಿ ಕುರ್ಚಿ ಮೇಜುಗಳನ್ನು ಸಂದಮಾಡಿಡಬೇಕು. ಹೆಚ್ಚಿಗೆ ಪಾತ್ರೆಗಳನ್ನು ತಿಕ್ಕಿ ತೊಳೆದಿಡಬೇಕು. ಇಷ್ಟಾದ ಮೇಲೂ ಮಾಧುರಿ ಕರೆದಾಗ ಅವನು ಬಾರದಿದ್ದರೆ ಶೀಘ್ರ ಕೋಪಿಯಾದ ಅವಳ ಗದಾ ಪ್ರಹಾರಕ್ಕೆ ಆರಂಭವಾಗುವದು ಅದರ ಮೇಲೆ ಚಂಡಿ ಹಿಡಿದು ಅಳುವ ಆ ಹೆಣ್ಣು ಮಗು! ಅದೆಂದರೆ ಮಾಧುರಿಗೆ ಅತ್ಯಂತ ಪ್ರೇಮ. ಅದು ಪಿಟ್ಟೆಂದು ಒಂದು ಕ್ಷಣ ಕಾಲಕ್ಕೂ ಅಳಕೂಡದೆಂದು ಮಧುರನಿಗೆ ಮಾಧುರಿಯ ಕಟ್ಟಪ್ಪಣೆಯಾಗಿತ್ತು. ಹೀಗೆ ಮಧುರನ ಕಷ್ಟಗಳನ್ನು ಹೇಳಿ ಮುಗಿಯುವಂತಿಲ್ಲ. ಅವನೇ ಮಗುವನ್ನು ತೂಗಬೇಕು, ಜೋಗುಳ ಹಾಡಬೇಕು, ಮೂತ್ರಮಲ ಮಾಡಿದರೆ ಅದನ್ನು ತೆಗೆದು ಮಗುವನ್ನು ತೊಳೆದು ತರಬೇಕು. ಅಳುವ ಮಗುವನ್ನು ಸಂತೈಸುವ ಕೆಲಸ ಮಾಧುರಿಯದ್ದು ಅಲ್ಲವೇ ಅಲ್ಲ! ಖರ್ಚು ಕಡಿಮೆ ಮಾಡಬೇಕೆಂದು ಮಾಧುರಿ ಮನೆಯಲ್ಲಿ ಒಂದು ಆಳು ಕೂಡ ಇಟ್ಟಿಲ್ಲ. ಆದರೂ ತನ್ನ ಗಂಡನ ಹಾಳು ವರ್ತನೆಯ ಕುರಿತು ಆಗಾಗ ಗೆಳತಿಯರೊಂದಿಗೆ ದೂರುವಳು—'ನನ್ನ ಗಂಡ, ನನ್ನ ಗಂಡ ಅಂದರೆ ಅವನು ದೊಡ್ಡ ಫಟಿಂಗ! ಅವನಿಗೆ ಅನ್ನ ಕೊಡುತ್ತೇನೆ, ವಸ್ತ್ರ ಕೊಡುತ್ತೇನೆ. ತಿಂಗಳಿಗೆ ಒಂದಾಣೆ ಖರ್ಚಿಗೆ ಕೊಡುತ್ತೇನೆ. ಆದರೂ ಅವನಿಗೆ ತೃಪ್ತಿಯಿಲ್ಲ. ಒಂದು ದಿನ ನೋಡಬೇಕು; ಕುತ್ತಿಗೆಗೆ ಕೈಹಾಕಿ ಹೊರಗೆ ದಬ್ಬದೆ ಇರುವದಿಲ್ಲ. ಇವನಿಗೆ ಏಳು ಸಮುದ್ರದ ನೀರು ತೋರಿಸದಿದ್ದರೆ ಮತ್ತೆ ನಾನೇಕೆ?' ಇಷ್ಟು ಕೇಳಿದ್ದೇ ಸರಿ ಗೆಳತಿಯರು—'ಮಧುರ ಅಂದರೆ ದೊಡ್ಡ ರಕ್ಕಸ. ಪಾಪದ ಮಾಧುರಿಗೆ ಎಲ್ಲಿ ಗಂಟುಬಿದ್ದನೋ?' ಎಂದು ಮಾಧುರಿಯೊಡನೆ ಸಂತಾಪಪಟ್ಟು ಸಹಾನುಭೂತಿಯ ಉಸಿರುಬಿಟ್ಟು, ರಾತ್ರಿ 9-10 ಗಂಟೆಯ ಸಮಯಕ್ಕೆ ತಂತಮ್ಮ ಮನೆಗಳಿಗೆ ಹೋಗುವರು.


**WANTED**

2 Circle Agency Inspectors, for Districts of North Kanara, South Kanara and Coorg—Belgam Bijadur and Dharwar, 6 District Agency Inspectors, and Supervisors on a monthly salary of Rs. 100—Rs. 60—and Rs. 35—respectively—Only Graduates and Passed Matriculates who can guarantee business need apply.

M/s. PADUBIDRI BROS.,
40, Narayanlal Bansilal Mansions,
Bellasis Road, Bombay 8.

# ಸಿಲ್ಕ್ ಶರ್ಟಿಂಗ್

ಎಲ್. ಮೆಹರ್‌ಚಂದ್, ರಿಜಿಸ್ಟ್ರಾರ್, ಸುಕೆಟ್ ಸ್ಟೇಟ್, ಇವರು ತಾ. 31-1-38 ರಲ್ಲು ಬರೆದಿರುವ ಕಾಗದದಲ್ಲಿ ಹೀಗೆಂದು ಹೇಳಿರುತ್ತಾರೆ:-

ನೀವು ರೂ 5-8-0ಕ್ಕೆ ವಿ. ಪಿ. ಪಿ. ಮೂಲಕ ರವಾನಿಸಿದ ಶರ್ಟಿಂಗ್ ವಸ್ತ್ರದ ಪಾರ್ಸಲನು ಪಡೆದು ನೋಡಿದೆನು. ಅದೇ ಸೈಜಿನ ಮೆಸರ್ಸ್ ..... ಇವರ ಕಂಪೆನಿಯಿಂದ ರೂ. 5-12-0ಕ್ಕೆ ತರಿಸಿದ ಶರ್ಟಿಂಗ್ ವಸ್ತ್ರವನ್ನೂ ನೋಡಿದೆನು. ಆದರೆ ನೀವು ರವಾನಿಸಿದ ವಸ್ತ್ರವು ಬೆಲೆಯಲ್ಲಿ ಅಗ್ಗವೂ ಅದಕ್ಕಿಂತ ಉತ್ತಮವೂ ಅದರ ನೇಯಿಗೆ ನಾಜೂಕಾದುದೂ ಎಂಬುದನ್ನು ತಿಳಿಸುವರೆ ನನಗೆ ತುಂಬಾ ಸಂತೋಷವಾಗುತ್ತದೆ. ವ್ಯಾಪಾರ ವಹಿವಾಟಿನಲ್ಲಿ ನಿಮ್ಮ ಸಂಳಿಕೆ ಮತ್ತು ವೃದ್ಧಿಯನ್ನು ನೋಡಿ, ನಿಮಗೆ ವ್ಯಾಪಾರದಲ್ಲಿ ಹೆಚ್ಚಿನ ಯಶಸ್ಸು ಮತ್ತು ಲಾಭ ದೊರೆಯಲೆಂದು ಬಯಸುತ್ತೇನೆ

**ಸಿಲ್ಕ್ ಶರ್ಟಿಂಗ್:**— ಶುದ್ಧ ಬಿಳಿದು, ಅತೀ ಉತ್ತಮ ಮತ್ತು ಹೆಚ್ಚು ಬಾಳಿಕೆ ಬರುವಂತಾದ್ದು. ಹತ್ತಿಯ ನೂಲಿನಿಂದ ವಿರಹಿತವಾಗಿದೆ. ಅತಿ ನುಣುಪಾಗಿಯೂ, ತಂಪಾಗಿಯೂ, ಸುಖಕರವಾಗಿಯೂ ಇದೆ. ಎಷ್ಟು ಕಠಿಣವಾಗಿ ಒಗೆದರೂ ಬಾಳಿಕೆ ಬರಬಲ್ಲುದು. 9 ಗಜ ಉದ್ದ, 54 ಇಂಚು ಅಗಲದ 6 ಶರ್ಟುಗಳ ವಸ್ತ್ರಕ್ಕೆ ಬೆಲೆ ರೂ 5 8 0.

**ಸಿಲ್ಕ್ ಸೀರೆಗಳು:**— ಖಾತ್ರಿಯಾಗಿ ಬಣ್ಣಹೋಗದ ಪ್ರಿಂಟಾದ ಅಂಚುಗಳು ಸೈಜು 7, 8, 9, 10 ಗಜ ಉದ್ದ ಮತ್ತು 45 ಇಂಚು ಅಗಲ. ಕಪ್ಪು ಬಣ್ಣ ವಿರಹಿತ ಇತರ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುತ್ತೆ. ಕ್ರಯ ರೂ 4-12 0, 5 9 0, 6 2 0 ಮತ್ತು 6 15 0. **ಸಿಲ್ಕ್ ದುಪ್ಪಟಿಗಳು:**— ಇವುಗಳು ಹೆಚ್ಚಿನ ಹೆಸರನ್ನು ಪಡೆದಿರುತ್ತವೆ. ನಾವು ಪ್ರತ್ಯೇಕವಾಗಿ ಇವುಗಳ ಕುರಿತು ಹೇಳಬೇಕಾಗಿಲ್ಲ. ಸೈಜು 2½ ಗಜ ಉದ್ದ, 44 ಇಂಚು ಅಗಲ ಕ್ರಯ ರೂ 2 ಮಾತ್ರ

ಪೆಕಿಂಗ್ ಮತ್ತು ಅಂಚೆವೆಚ್ಚ ಧರ್ಮಾರ್ಥ. ನಿಮಗೆ ಒಂದಿಷ್ಟು ಅಸಮಾಧಾನ ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸುಮಾಡಲು ನಾವು ಸಿದ್ಧರಿದ್ದೇವೆ

ಮಸ್ಲಿನ ಸಿಲ್ಕುಗಳನ್ನು ಇತರರು ಮಾರುವಂತೆ ನಮ್ಮಲ್ಲಿಯೂ ಸಿಗುತ್ತದೆ. 9 ಗಜ × 54 ಇಂಚು ರೂ 6

**GIRSON KNITTING WORKS, DEPT. 67, LUDHIANA**


## ನೋಟೀಸು

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 21/38

ಕೃಷ್ಣಮ್ಮ, ವ್ಯಾನರ ಉಕನ ಕ್ಷೀಮ ಚಿಂತಕಳು ತಾಯಿ ಎಮುನಮ್ಮ-ಕಯ್ಯಾರು ಗ್ರಾಮದ ಖಂಡಿಯೊಂಬಲ್ಲಿರುವವಳು- ಅರ್ಜಿದಾರಳು ಮತ್ತು

1 ನಾರಾಯಣ ಆಚಾರಿ, 2. ಸುಬ್ರಾಯ ಆಚಾರಿ, 3 ದಸನಪ್ಪಾಚಾರಿ, 4 ರಾಮಪ್ಪಾಚಾರಿ— ದೇವಪ್ಪಾಚಾರಿ ಪುತ್ರರು, ಕಯ್ಯಾರು ಗ್ರಾಮದ ಖಂಡಿಯೊಂಬಲ್ಲಿರುವವರು— ರೆಸ್ಪಾಂಡೆಂಟರು

ಇವರೊಳಗೆ

ಕಾಸರಗೋಡು ತಾಲೂಕು ಕಯ್ಯಾರು ಗ್ರಾಮದಲ್ಲಿರುವ ಅಣ್ಣಪ್ಪಾಚಾರಿ ವ್ಯಾನರ ಮಗ ಕೃಷ್ಣಯ್ಯ ಎಂಬವನ ಕ್ಷೇಮಚಿಂತಕಳು ತಾಯಿ ಎಮುನಮ್ಮ ಎಂಬವಳ ಕಡೆಯಿಂದ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ, ಅರ್ಜಿದಾರನ ತಂದೆ ಮ ರೆಸ್ಪಾಂಡೆಂಟರ ಸಹೋದರ ಮೃತಪಟ್ಟ ಅಣ್ಣಪ್ಪಾಚಾರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲ್ಮಾಡ ವಡೆಯೂ ಬೇಂಕಿನಲ್ಲಿ ಇಡಿಟ್ಟ ನಗಗಳನ್ನು ಪಡೆಯುವರೆ ಕೂಡ ಮೃತನ ವಾರೀಸುದಾರನ ನೆಲೆಯಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಅರ್ಜಿಯು ತಾರೀಕು 21—8— '38ಕ್ಕೆ ತನಿಖೆಗೆ ಇಟ್ಟಿರುವುದರಿಂದ ಸದ್ರಿ ಅರ್ಜಿ ಕುರಿತು ಆಕ್ಷೇಪವುಳ್ಳವರು ಆ ದಿವಸ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ಉದಾಹರಿಸಬಹುದು ಎಂತ ಈ ಮೂಲಕ ತಿಳಿಸೋಣವಾಗುತ್ತದೆ

ಕಾಸರಗೋಡು, 8-8-38. — L. Lakshman Rao, ಅರ್ಜಿದಾರನ ಕಡೆ ವಕೀಲ.


**35 ರೂಪಾಯಿಗಳು 100 ರೂಪಾಯಿಗಳು!**

## ಬೇಕಾಗಿದೆ

ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿ ತಿಂಗಳಿಗೆ 75/ ರೂ. ಸಂಬಳ, 25/ ರೂ ಅಲೋವೆನ್ಸಿನ ಮೇಲೆ ಆರ್ಗನೈಜರರೂ, ಪ್ರತಿಯೊಂದು ತಾಲೂಕಿಗೆ ತಿಂಗಳಿಗೆ 35/- ರೂ ಸಂಬಳದ ಮೇಲೆ ಏಜಂಟರೂ ಬೇಕಾಗಿರುತ್ತಾರೆ. 2 ಆಣೆ ಸ್ಟಾಂಪು ಇಟ್ಟು ಸವಿಸ್ತಾರ ಮಾಹಿತಿಗೆ ಬರೆದು ಕೇಳಿರಿ — ಮ್ಯಾನೇಜರ್,

ದಿ ಜಿ. ಬಿ. ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಕರ್ನಾಟಕ ಶಾಖೆ ಶಿವಮೊಗ್ಗ

## Scientific Opticians

**Eye Testing Free.**

STYLISH FRAMES, LENSES, CASES.

*Please Visit*

**Nayaks Optical Stores**
Car Street
MANGALORE

## ಹಿಂದುಸ್ಥಾನ ಕೊ-ಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು ಕಲ್ಕತ್ತಾ — ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ — ಸ್ಥಾಪನೆ 1907

| | |
|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ 12,00 00,000 |
| ಆಸ್ತಿಪಾಸ್ತಿಗಳು | ರೂ 2,21 00 000 |
| ನೂತನ ವ್ಯವಹಾರ | ರೂ 2,82,81,000 |

**ಅತ್ಯಧಿಕ ಬೋನಸ್ ಹಂಚಲಾಗಿದೆ.**

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ವಿಮೆಯ ಮೇಲೆ ಪ್ರತಿ ವರ್ಷ ಒಂದರ ರೂ 23

ಮಕ್ಕಳ ವಿಮಾ, ಅಪಘಾತ, ಮತ್ತು ಮರಣ ವಿಮೆ- ನಮ್ಮ ವಿಶಿಷ್ಟತೆ

*For particulars please apply to*

T. ANANTACHARI, BRANCH MANAGER, H C I S LTD, POST BOX 223 MADRAS

K. K. MENON, Organiser H C I S LTD, Court Road, CALICUT

## ಪರಮಾ

ತೊದಲುವ ಭಯಂಕರ ಮೂತ್ರರೋಗಗಳ ಭಯಂಕರ ಪರಿಣಾಮವನ್ನು ತಡೆಯುವದಕ್ಕಾಗಿ ಪಿಚಕಾರಿಯ ಹೊರತಾಗಿ)

**ಗೊನೋರಿಯ (ರಿಜಿಸ್ಟರ್ಡ್)**

ತೆಗೆದು ಕೊಳ್ಳಿರಿ ಮತ್ತು ವಾರ್ಡಿಕಾಗಿ ರೋಗದಿಂದ ಮುಕ್ತರಾಗಿರಿ. ಈ ಔಷಧವು ಎಲ್ಲಾ ತರಹದ ಹಳೆ ಹೊಸ ... ಎಲ್ಲಾ ಮೂತ್ರರೋಗಗಳ ... ಬಾಟ್ಲಿಯಿಂದ ಗುಣವಾಗುತ್ತದೆ ... ಅಂಚೆವೆಚ್ಚ ಪ್ರತ್ಯೇಕ ... ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ ...

ಸೋಲ್ ಏಜಂಟರು — ನವ್ಯಾಬ್ ವಿಜೆಸ್ಸಿ ...

ಸ್ಟಾಕಿಸ್ಟ: ಎಂ. ಡಿ. ನ್ಯೊರಾ ಮತ್ತು ಕಂಪನಿ ...

# The Bombay Life Assurance Company, Ltd.

ESTD: 1908.

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,855 | 1,16,58,706 |
| 1930 | 59,97,500 | 9,88,367 | 28,00,970 | 2,06,68,328 |
| 1933 | 94,16,500 | 15,12,692 | 50,04,871 | 3,07,98,434 |
| 1936 | 1,86,00,180 | 26,76,274 | 82,69,451 | 5,14,38,205 |

The Company offers all the up-to-date schemes of Assurances Family Safe Guard Policy a special feature.
Application for agencies will be received from honest and respectable gentlemen
Organisers appointed with pay and allowance.
Gentlemen with organising ability and who can guarantee Business need apply

**Kochikar Brothers, Ltd.,**
(Incorporating Messrs Kochikar Brothers),
***Madras Branch Secretaries.***
Post Box 337, Mount Road, MADRAS.
Phone No. 8245.

***Apply to any of the following Offices:-***

| | | | | | | |
|---|---|---|---|---|---|---|
| Ottapalam | Central Station Road, Trivandrum. | Visveshwarapuram Circle, Bangalore City. | Soumyalayam Puthiyara, Calicut. | Car Street, Mangalore. | Udipi, S. India. | Charni Road, Bombay No. 4 |

ಮುಂಗಡ ರೂ. 2-0-0. Established 1906. Regd. No. M. 3406. ಟಪ್ಪಾಲು ಹಾಸಲು ಸೇರಿ ರೂ. 2-13-0.

# ಸ್ವದೇಶಾಭಿಮಾನಿ.

# SWADESHABHIMANI, MANGALORE

ಸಂಪುಟ ೩೨. ತಾರೀಕು ೧೧ನೇ ಮಾರ್ಚ ೧೯೩೮ ಸಂಚಿಕೆ ೧೦

## ಹೊಸ ಮ್ಹಾಲು ಇಂದೆ ಬಂದದ್ದು!




## ಕಣನ್ ದೇವನ್ ಚಹಾ ಪೊಟ್ಟಿಗಳು!

## ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents —*

**The Kerala Tea Syndicate,**

PONANI—(S Malabar)

**BUY ADVERTISED GOODS**

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ 7—0—0.

## ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

**ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್**

**ರಥಬೀದಿ ನಂಬ್ರ 2 ಮಂಗಳೂರು.**

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಪಿ/ಎಚ್ ಪದ್ಮನಾಭ ಪೈ, ಚಿಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂವ್ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಸ್ ಕೆ ರಜಪೂತ ಇವರ

## ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು — ಡಾ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಮಾಡಿದ ಆಣೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವು ಆಗುವುದಿಲ್ಲ ಪೂರ್ಣ ಗುಣಕಾರಿ ದಬ್ಬಿಯ ಕ್ರಯ ರೂ ೪—೦—೦ ಪಿ ಪಿ ಆಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು ಪೊ. ಮಿರಜಿ, (S. M. C.

(Regd)

## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಎಲ್ಲಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

Edited Printed & Published By A. S. Kamath at the Sharada Press, Car Street, Mangalore.

ಸಂಪುಟ ೩೨] ತಾರೀಕು ೧೮ನೇ ಮಾರ್ಚ್ ೧೯೩೮ (18-3-1938) [ಸಂಚಿಕೆ ೧೧

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

## ಅನುಕ್ರಮಣಿಕೆ


ರೈತರ ಋಣವಿಮೋಚನಾ ಮಸೂದೆಗೆ ವೈಸರಾಯರ ಸಮ್ಮತಿ

ಅಸ್ಸಾಮಿನ ಎಸೆಂಬ್ಲಿ ಸದಸ್ಯರಿಗೆ ಗದರಿಕೆ ಪತ್ರ

ಹಿಂದೂದೇಶದ ಮೇಲೆ ಬಲಾತ್ಕಾರ ನಡೆಯದು.

ಒಸ್ಟ್ರಿಯವು ಹಿಟ್ಲರನ ಕೈಸೇರಿತೆ?

ಬೆಂಕಿಕಡ್ಡಿಗಳ ಗಡಿಯಾರ

ಹಾರಾಡುವ ಚಂಬುಚೆರಿಗೆ

ಕಣ್ಣುರೆಪ್ಪೆಗಳ ಸಾಕ್ಷಿ

'ಪ್ರಭಾತ' ಕಂಪೆನಿಯವರಿಂದ ಇತ್ತೀಚೆಗೆ ತಯಾರಿಸಲ್ಪಟ್ಟ 'ಗೋಪಾಲಕೃಷ್ಣ' ಚಲಚ್ಚಿತ್ರದ ಎರಡು ದೃಶ್ಯಗಳು


**"OUR EXPERIENCE IS YOUR BENEFIT."**

A Successful man often confers with his banker about his business problems and every depositor in our bank has the same facility. Especially in these troublous times we wonder if some of our customers are not missing something by failing to come into the bank occasionally, just to talk things over.

**OUR OFFICERS ARE ALWAYS GLAD TO SEE YOU.**

**RESOURCES OF A CRORE.**

ESTD 1906

**CANARA BANK, LIMITED.**

... ESTD. 1906

# ಚಿತ್ರ-ವಿಚಿತ್ರ

★

### ಕಣ್ಣುರೆಪ್ಪೆಗಳ ಸಾಕ್ಷಿ.

ಮಿಸೆಸ್ ಹೆನ್ಸನ್ ಎಂಬಾಕೆಯ ಒಡವೆ ವಸ್ತುಗಳನ್ನು ಅಪಹರಿಸಿದ ಅಪಾದನೆಯ ಮೇಲೆ ಥೋಮಸ್ ಮೆಶಾರ್ಟೆ ಎಂಬವನನ್ನು ಲೀಡ್ಸ್ ಮೆಜಿಸ್ಟ್ರೇಟರ ಮುಂದೆ ತಂದು ನಿಲ್ಲಿಸಲಾಯಿತು. ಕಳವಾದ ವಸ್ತುಗಳು ಹೆನ್ಸನಳದೆಂಬುದನ್ನು ಸ್ಥಾಪಿಸಲು ಪೋಲೀಸರು ಥೋಮಸನ ಬಳಿ ಅವು ಕಣ್ಣುರೆಪ್ಪೆಗಳನ್ನು ಕೋರ್ಟಿನಲ್ಲಿ ಹಾಜರುಮಾಡಿದರು ಹೆನ್ಸನಳ ಕಳವಾದ ಪೆಟ್ಟಿಗೆಯಲ್ಲಿದ್ದ ಎರಡು ಕಣ್ಣುರೆಪ್ಪೆಗಳೊಡನೆ ಅವುಗಳನ್ನು ಹೋಲಿಸಿ, ಥೋಮಸನ ಮೇಲೆ ತಪ್ಪು ಸ್ಥಾಪಿಸಲ್ಪಟ್ಟಿತು

ಅಪಾದಿತನು ತಾನು ನಿರಪರಾಧಿಯೆಂದು ಹೇಳಿದ ಮಾತುಗಳು, ಕಣ್ಣುರೆಪ್ಪೆಗಳ ಆಧಾರದ ಮೇಲೆ ನಿರಾಕರಿಸಲ್ಪಟ್ಟವು, ಆತನಿಗೆ ನಾಲ್ಕು ತಿಂಗಳ ಸಜೆಯು ವಿಧಿಸಲಾಗಿದೆ.

★

### ವಿಚಿತ್ರ ವೀಲು.

ಚಾರ್ಲ್ಸ್ ವಾನ್ಸ್ ಮಿಲ್ಲರ್ ಎಂಬವನು ಟೊರೋಂಟೊ ಎಂಬಲ್ಲಿಯ ಒಬ್ಬ ವಕೀಲನು. ತಾನು ಸಾಯುವಾಗ (1926ರಲ್ಲಿ) ಒಂದು ವಿಚಿತ್ರ ವೀಲನ್ನು ಬರೆದಿಟ್ಟನು ಅದರಲ್ಲಿ ತನ್ನ ಮರಣದ ಹತ್ತೊಂದು ವರ್ಷಗಳ ನಂತರ, ಅಷ್ಟರೊಳಗೆ ತನ್ನ ಹುಟ್ಟೂರಿನ ಹೆಂಗಸರಲ್ಲಿ ಯಾರು ಹೆಚ್ಚು ಮಂದಿ ಮಕ್ಕಳನ್ನು ಹೆರುವಳೋ ಆಕೆಗೆ ತನ್ನ ಸಂಪತ್ತಾದ 150 ಸಾವಿರ ಪವನುಗಳನ್ನು ಕೊಡಬೇಕಾಗಿ ನಿರೂಪಿಸಿತ್ತು ಆ 11 ವರ್ಷಗಳು ಕಳೆದುದರಿಂದ, ಆ ಹಣಕ್ಕಾಗಿ 19 ಮಂದಿ ಹೆಂಗಸರು ಅರ್ಜಿ ಮಾಡಿರುವರು ಒಂಟೇರಿಯೋದ ಕೋರ್ಟಿನಲ್ಲಿ ಈ ವಿಷಯವು ನಿಶ್ಚಯಿಸಲ್ಪಡುವುದು

★

### ಅತಿ ಸಣ್ಣ ವಾರ್ತಾಪತ್ರಿಕೆ

ಜಗತ್ತಿನಲ್ಲಿ ಅತಿ ಸಣ್ಣ ವಾರ್ತಾ ಪತ್ರಿಕೆಯು ಬಿಮಿನಿ ಬ್ಯೂಗುಲ್ ಎಂಬುದು ಅದರ ಸಂಪಾದಕನು ಓರ್ವ ನಿಗ್ರೋ ಹುಡುಗನು ಆ ಪತ್ರಿಕೆಯಲ್ಲಿ 16 ಪುಟಗಳಿವೆ ಪ್ರತಿಯೊಂದು ಪುಟವು 5½ ಇಂಚು ಉದ್ದ ಮತ್ತು 4½ ಇಂಚು ಅಗಲವಿದೆ ಇದನ್ನು ಪ್ರಿಂಟು ಮಾಡುವ ಕೈ ಯಂತ್ರವನ್ನು, ಒಬ್ಬ ಲಕ್ಷಾಧೀಶನು ಇದರ ಸಂಪಾದಕನಾದ ನೀಗ್ರೊ ಹುಡುಗನಿಗೆ ಪತ್ರಿಕೆಯ ಆಕಾರವನ್ನು ದೊಡ್ಡದುಮಾಡಕೂಡದು ಎಂಬ ಶರ್ತದ ಮೇಲೆ ಪುಕ್ಕಟೆಯಾಗಿ ಕೊಟ್ಟಿದ್ದನು.

★

### ಕಪ್ಪೆಗಳ ಜೂಜಾಟ

ಸೇನ್ ಫ್ರಾನ್ಸಿಸ್ಕೋವಿನಲ್ಲಿ ಗೋಲ್ಡನ್ ಗೇಟ್ ಪ್ರದರ್ಶನವು ನಡೆದ ಸ್ಥಳದಲ್ಲಿ ಒಂದು ಕಪ್ಪೆಗಳ ಓಟವು ನಡೆಯಲಿದೆ ಈ ಓಟದಲ್ಲಿ ಭಾಗವಹಿಸಲು ಜಗತ್ತಿನ ಯಾವ ಭಾಗದಿಂದಲಾದರೂ ಕಪ್ಪೆಗಳನ್ನು ಕಳುಹಿಸಬಹುದಾಗಿದೆ ಮಿ। ಫಿಲಿಪ್ ಬ್ರೆಡ್ಲೀ ಎಂಬವರು ತನ್ನ ಬರೋರಾ ಬೊರಿಯಾಲಿಸ್ ಎಂಬ ಕಪ್ಪೆಯನ್ನು ಸ್ಪರ್ಧೆಗೆ ಕಳುಹಿಸಿದುದಲ್ಲದೆ, ಅದರ ಮೇಲೆ 2 ಸಾವಿರ ಪವನುಗಳನ್ನು ನೆತ್ತವಿಟ್ಟಿರುವರು!

★

### ಹಾರಾಡುವ ಚೆಂಬುಚೆರಿಗೆಗಳು.

ಗಾಲೀಯಲ್ಲಿ ಹಾರಾಡುವ ಫಲಾಹಾರದ ಪ್ಲೇಟುಗಳು, ಇಟ್ಟಲ್ಲಿಯೇ ಹುಡಿಯಾಗುವ ಪಿಂಗಾಣಿ ಸಾಮಾನುಗಳು, ಇದ್ದಲ್ಲಿಂದ ಬಡಬಡನೆ ಕೆಳಗೆ ಉರುಳುವ ಚೆಂಬುಚೆರಿಗೆಗಳು, ಇವೇ ಮೊದಲಾದ ವಿಚಿತ್ರ ಘಟನೆಗಳು ಸ್ಕಾಟ್ಲೇಂಡಿನ ಟೂಲ್ಬಾಡಿ "ಚೆವೊಲಿಸ್" ಎಂಬ ಗ್ರಾಮ ನಿವಾಸಿಗಳನ್ನು ಬೆದರಿಸಿಬಿಟ್ಟಿರುವುವು

ಬೆಂಕಿಯನ್ನು ಹೊತ್ತಿಸಿ ಪೀಟ್ಸ್ ಎಂಬಾತನು ಭೂತಪ್ರೇತಾದಿಗಳನ್ನು ಆಮಂತ್ರಿಸುವ ಮಂತ್ರಗಳನ್ನು ಉಚ್ಚರಿಸಿ ಕುಣಿದಾಡತೊಡಗಿದನು ಒಡನೆ ಮೊದಲಾಯಿತು ಮೇಲೆ ಹೇಳಿದ ವಿಚಿತ್ರಕ್ಕೆ! ಅಡಿಗೆಕೋಣೆಯಲ್ಲಿದ್ದ ಸಾಹಿತ್ಯಗಳೆಲ್ಲಾ ಅತ್ತಿತ್ತ ಓಡಾಡಿ ಕುಣಿಕುಣಿದು ಬಿದ್ದು ಒಡೆದುಹೋದುವು ಒಂದು ಚೆಂಬು ಮತ್ತು ಹರಿವಾಣವು ಮೇಜಿನ ಮೇಲಿನಿಂದ ಹಾರಿ, ಕೋಣೆಯ ಮೂಲೆ ಮೂಲೆಗಳನ್ನು ಸುತ್ತಾಡಿ ಶಯನಮಂದಿರವನ್ನು ಪ್ರವೇಶಿಸಿ, ಅಲ್ಲಿರುವ ಹಾಸಿಗೆಯ ಮೇಲೆ ನಿಂದಿಸಿದುವು ಒಂದು ಲೋಹದ ಚಾ ಪಾತ್ರೆಯು ಹಾರಿಕೊಂಡು ಹೋಗಿ, ಗೋಡೆಗೆ ಬಡೆದು, ಅಲ್ಲಿಂದು ಚಾ ಸೊಪ್ಪಿನ ಬೆಳೆಯನ್ನು ಉಂಟುಮಾಡಿತು ಆ ಮನೆಯ ನಿವಾಸಿಗಳು ಇದರಿಂದ ದಿಗಿಲುಗೊಂಡಿರುವರಾದರೂ, ಮನೆಯನ್ನು ಬಿಟ್ಟುಹೋಗಲು ಕೇಳುವಂತಿಲ್ಲ

★

### ಕೃತಕ ಎದೆಗುಂಡಿಗೆ.

ಕರ್ನಲ್ ಲಿಂಡ್‌ಬರ್ಗರು ಬಹುಕಾಲ ಬದುಕುವ ಇಚ್ಛೆಯಿಂದ ತನ್ನ ಎದೆಗುಂಡಿಗೆಯನ್ನು ತೆಗೆದು, ಲೋಹ ಮತ್ತು ರಬ್ಬರಿನಿಂದ ನಿರ್ಮಿತವಾದ ಎದೆಗುಂಡಿಗೆಯನ್ನು ಇಟ್ಟುಕೊಳ್ಳಲು ಒಪ್ಪಿರುವರೆಂಬ ಮಹತ್ವದ ವರ್ತಮಾನವು ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಇದರಿಂದ ರಕ್ತಚಲಾವಣೆಯು ಸರಾಗವಾಗಿ ನಡೆದು ಪ್ರಾಣರಕ್ಷಣೆಯನ್ನು ಮಾಡಲಾಗುವುದಂತೆ

ಸ್ಯಿಂಟ್ ಗ್ವಾಲ್ಸ್ ಎಂಬ ನಿರ್ಜನವಾದ ಅದೊಂದು ದ್ವೀಪದ ಮೇಲೆ ಅನೇಕ ಶೋಧಗಳನ್ನು ನಡೆಸಿ ಡಾ। ಕಾರೆಲ್ ಮತ್ತು ಲಿಂಡ್‌ಬರ್ಗರೇ ಕೃತಕ ಎದೆಗುಂಡಿಯನ್ನು ಗೊತ್ತುಹಚ್ಚಿದರಂತೆ ಈಗ ಲಿಂಡಬರ್ಗರು ಈ ಶಸ್ತ್ರಕ್ರಿಯೆಯ ಸಿದ್ಧತೆಗಾಗಿ ನಿಯಮಿತ ಆಹಾರವನ್ನು ತೆಗೆದುಕೊಳ್ಳುತ್ತಿರುವರು

★

### ಬೆಂಕಿಕಡ್ಡಿಗಳ ಗಡಿಯಾರ

ಫ್ರಾನ್ಸ್ ಥೇಲರ್ ಎಂಬ ಓರ್ವ ಜರ್ಮನ್ ಗಡಿಯಾರ ವ್ಯಾಪಾರಿಯ ಒಬ್ಬ ಕೆಲಸಗಾರನು 268,750 ಬೆಂಕಿಕಡ್ಡಿಗಳನ್ನು ಉಪಯೋಗಿಸಿ ಒಂದು ಗಡಿಯಾರವನ್ನು ತಯಾರಿಸಿರುವನು ಅದರಲ್ಲಿ ಒಂದೆರಡು ಭಾಗಗಳು ಮಾತ್ರ ಲೋಹದಿಂದ ಮಾಡಲ್ಪಟ್ಟಿವೆ ಉಳಿದ ಭಾಗಗಳೆಲ್ಲ ಬೆಂಕಿಕಡ್ಡಿಯಿಂದ ಮಾಡಿದವುಗಳು

### ಕೆಮೆರಾ ಗನ್

ಕೆಮೆರಾ ಗನ್ ಎಂಬ ಹೊಸತೊಂದು ಬಂದೂಕು ಇತ್ತೀಚೆಗೆ ತಯಾರಿಸಲ್ಪಟ್ಟಿರುವುದು ಅದರ ಒಂದು ಕುದುರೆ (trigger) ಯನ್ನು ಎಳೆದೊಡನೆ ನಮಗೆ ಬೇಕಾದವನ ಚಿತ್ರವು ತೆಗೆಯಲ್ಪಡುವುದು ಇನ್ನೊಂದು ಕುದುರೆಯನ್ನು ಎಳೆದೊಡನೆ ಬುಲೆಟ್ ಹಾರುವುದು ಎರಡು ಕುದುರೆಗಳೂ ಒಮ್ಮೆಗೆ ಕೆಲಸಮಾಡುವಂತೆ ಮಾಡಲು ಸಾಧ್ಯವಿದೆ ಇದರಿಂದ ಬೇಂಕಿನ ಕಾವಲುಗಾರರಿಗೂ ಪೋಲೀಸರಿಗೂ ತುಂಬಾ ಸಹಾಯವಾದೀತೆಂದು ನಂಬಲಾಗಿದೆ

★

### ಭಾರಿ ಭೂಪ್ರದಕ್ಷಿಣೆ ಮಾಡಿದನು

ಮಿ। ಜೆರಾಮ್ ಹಿಲ್ ಎಂಬ ಲಿಂಕನ್ ಶಾಯರಿನ ಟಪ್ಪಾಲಪೇದೆಯು ತನ್ನ 69ನೆಯ ವಯಸ್ಸಿನಲ್ಲಿ ಕೆಲಸದಿಂದ ಕಳೆದ ವರ್ಷ ನಿವೃತ್ತನಾದನು ತಾನು ಟಪ್ಪಾಲು ಪೇದೆಯ ಕೆಲಸವನ್ನು ನೇರ 55 ವರ್ಷ ಎಡೆಬಿಡದೆ ಕೆಲಸಮಾಡಿರುವೆನೆಂದೂ, ತಾನು ನಡೆದ ದೂರವು ಸಾಧಾರಣ 150 ಸಾವಿರ ಮೈಲಾಗುವುದೆಂದೂ ಆ ಮಹಾಶಯನು ಹೇಳುವನು ಇದು ಭೂಮಿಯ ಸುತ್ತಳತೆಯ 6 ಪಾಲಿನಷ್ಟಾಗುವುದು

ಶಕ್ತಿ ಮತ್ತು ಚೈತನ್ಯಕ್ಕಾಗಿ
ಓವಲ್ಟಿನ್ ಕುಡಿಯಿರಿ

ಶಕ್ತಿಹೀನತೆಯಿಂದ ನಿಮ್ಮದ ಕೆಲಸದಲ್ಲಿ ಮತ್ತು ಆಟಗಳಲ್ಲಿ ನಿಮಗೆ ಸಂತೋಷವಿಲ್ಲದಾಗಿದೆಯಾದರೆ ನಿಮಗೆ ವಿಶ್ರಾಂತಿಯ ನಿದ್ರೆಯು ಬರದಿದ್ದರೆ ಬೆಳಿಗ್ಗೆ ಎದ್ದಾಗ ನೀವು ಶುಭ್ರರಾಗಿಯೂ ಉತ್ಸಾಹವಂತರೂ ಆಗದಿದ್ದರೆ, ಆಗ ನಿಮ್ಮ ನರ ಮೆದುಳು ಮತ್ತು ದೇಹ ಸರಿಯಾಗಿ ಕಾರ್ಯಮಾಡುವುದಿಲ್ಲವೆಂದು ನೀವು ಖಚಿತ ಮಾಡಿಕೊಳ್ಳಬಹುದು

ಸರಿಯಾದ ಪೌಷ್ಟಿಕದಿಂದ ಕೂಡಿದ ಆಹಾರವೇ ಆರೋಗ್ಯ ಶಕ್ತಿ ಮತ್ತು ಚೈತನ್ಯದ ದೃಢವಾದ ಅಡಿಕಟ್ಟು ಜಗತ್ ವಿಖ್ಯಾತವಾದ ಟಾನಿಕ್ ಆಹಾರ ಓವಲ್ಟಿನ್ನಿನಿಂದ ಪೌಷ್ಟಿಕವು ಸರಿಯಾದ ರೀತಿಯಲ್ಲಿ ದೊರಕುವುದಲ್ಲದೆ, ಆರೋಗ್ಯದಾಯಕ ದೇಹ ಪರಿತೃಪ್ತವಾದ ಮನಸ್ಸು ರಾತ್ರಿ ಸುಖಮಯ ನಿದ್ದೆ ಅದರಿಂದ ಲಭಿಸುವುದು ಖಂಡಿತ

ಓವಲ್ಟಿನ್ ಪರಿಪೂರ್ಣವಾದ ಮತ್ತು ಕೇಂದ್ರೀಕರಿಸಿದ ಆಹಾರ ಪುಷ್ಟಿದಾಯಕ ವಸ್ತುಗಳಾದ ನೈಸರ್ಗಿಕ ಆಹಾರ ಬಾರ್ಲಿಯ ಮಾಲ್ಟು ಮತ್ತು ಪರಿಶುದ್ಧವಾದ ಕೆನೆ ತೆಗೆಯದ ದನದ ಹಾಲು ಮತ್ತು ಇತರ ಆರೋಗ್ಯದಾಯಕ ವಸ್ತುಗಳು ಅದರಲ್ಲಿ ಕೂಡಿವೆ ಓವಲ್ಟಿನ್ನಿನ ತಯಾರಿಯಲ್ಲಿ ಹಸ್ತಸ್ಪರ್ಶವಾಗುವುದಿಲ್ಲ

ನಕಲಿ ವಸ್ತುಗಳ ಕುರಿತು ಜಾಗರೂಕರಾಗಿರಿ ಓವಲ್ಟಿನ ನಲ್ಲಿ ಗುಣಶೀಲ ಸರಿಸಮಾನ ಹೆಚ್ಚು ಕೆಟ್ಟ ಪರಿಣಾಮ ಇಲ್ಲದ ರುಚಿಕರ ಓವಲ್ಟಿನ್ನಿಗೆ ಸರಿಹೋಲುವಂಥದ್ದು ಇನ್ನೊಂದಿಲ್ಲ

ಓವಲ್‌ಟಿನ್
ಟಾನಿಕ್ ಆಹಾರ ಪಾನೀಯ
ಆರೋಗ್ಯ ಬಲ ಮತ್ತು ಚೈತನ್ಯಕ್ಕಾಗಿ

'OVALTINE'
ಎಲ್ಲಾ ದವಾಖಾನೆಗಳಲ್ಲೂ, ಅಂಗಡಿಗಳಲ್ಲೂ ದೊರಕುತ್ತದೆ
ಏಜಂಟರ ಜೇಮ್ಸ್ ರೈಟ್ ಲಿಮಿಟೆಡ್,
೬೫ ರಿಪನ್ ಸ್ಟ್ರೀಟ್, ಕಲ್ಕತ್ತಾ
ಮುಂಬಯಿ ದಿಲ್ಲಿ ಮದ್ರಾಸ ಕರಾಚಿಗಳಲ್ಲಿ ಇದರ ಶಾಖೆಗಳಿವೆ
OV 510

ರಕ್ಷ್ಯೆರ್ಮಹಾರ್ಹೈರ್ನ ತುತುಷುರ್ನ
ದೇವಾ । ನ ಭೇಜಿರೇ ಭೀತಿಮ್
ವಿಶೇಷ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ ।
ನನಿಶ್ಚಿತಾರ್ಥದ್ವಿರಮಂತಿ ಧೀರಾಃ ॥
ದೊರೆಯಲು ಅನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥

ಸ್ವದೇಶಾಭಿಮಾನಿ
SWADESHABHIMANI

ಗರಲಕವರಂಜಿದರೆ! ಸುಧೆಯನು ।
ಪರಿತು ಕಷ್ಟದ್ವರ
ತೆರದ ಕುಳಿತರೆ । ಕೆರಳ ಬಲ್ಲರೆ!
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾ. ೧೮ನೇ ಶುಕ್ರವಾರ ಮಾರ್ಚ್ ೧೯೩೮

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿತವಾದುದು.)

ತಾರೀಕು 18—3—1938

# ★ ಯುರೋಪಿನ ಸ್ಥಿತಿ ★

## ದಿನದಿನಕ್ಕೆ ಬದಲಾವಣೆ: ಪ್ರಜಾಸತ್ತೆ ಉಳಿದೀತೆ

### ಮಹಾಯುದ್ಧವುಂಟೆ? ಯುದ್ಧವಾದರೆ ಹೇಗೆ?

## ಉಪಾಯ-ಶಾಂತಿಗೆ-ಅಪಾಯ

ಇಂಗ್ಲೆಂಡಿನಲ್ಲಿ ಈಡನ್ ಸಾಹೇಬರು ರಾಜೀನಾಮೆ ಕೊಟ್ಟದ್ದು, ಸಾಮಾನ್ಯವಾಗಿ, ಹೋರ್-ಲಾವಲ್‌ರವರು ಸೇರಿ ಎಬಿಸೀನಿಯಾ ವಿಭಜನೆಗಾಗಿ ಮಾಡಿದ ತಂತ್ರದ ಫಲವಾಗಿ ಹೋರರು ರಾಜೀನಾಮೆ ಕೊಡಬೇಕಾಗಿ ಬಂದ ಆ ದಿನದಿಂದ, ಇಂದಿನ ವರೆಗೆ ಬಹಳ ಗಾಢವಾಗಿ ಬ್ರಿಟಿಷ ಜನತೆಯನ್ನು ಕಲುಕಿಸಿಬಿಟ್ಟಿದೆ. ಮುಖ್ಯಮಂತ್ರಿ ಚೆಂಬರ್‌ಲೇನರೂ, ಹಿಟ್ಲರ್ ಮುಸೋಲಿನಿಗಳಿಬ್ಬರು ಡಿಕ್ಟೇಟರರ ಪ್ರತಾಪವನ್ನು ಅಣಗಿಸುವುದಕ್ಕೋ, ಅವರ ಉಗ್ರತೆ

ಮಿ ಅಂತೋಣಿ ಈಡನ್ನರ

ಯನ್ನು ತಡೆದು ಶಾಂತಿಸಾಧನೆ ಮಾಡುವುದಕ್ಕೋ, ಈಡನ್‌ರ ರಾಜೀನಾಮೆ ಕೊಡುವುದಗತ್ಯವೆಂದು ತಿಳಿದಿರಬೇಕು. ಹಿಟ್ಲರನು ರೇಡಿಯೋ ಮೂಲಕ ಈಡನರ ಮೇಲೆ ನಾನಾ ಟೀಕೆಯಾಗಿ ದೂಷಿಸಿದ ಭಾಷಣ ಮಾಡಿದ್ದುದೂ, ಮುಸ್ಸೋಲಿನಿಯು ಈಡನರ ರಾಜೀನಾಮೆ ಅಗತ್ಯವೆಂದು ರಾಯಭಾರಿಯ ಮೂಲಕ ಸೂಚಿಸಿದುದೂ ಚೆಂಬರ್‌ಲೇನರಿಗೆ ತಿಳಿದುದೇ.

ಇಟೇಲಿಯೊಡನೆ ಈ ಸಂಧಾನ ಪ್ರಯತ್ನಗಳು ಈಗಲೇ ಸಾಗಬೇಕಾದುದೆಂಬುದೇಕೆ? ಹಾಗೆ ಮಾಡದಿದ್ದಲ್ಲಿ, ಮುಸ್ಸೋಲಿನಿಯು ಏನು ಮಾಡಬೇಕೆಂದಿದ್ದನು? ಸ್ಪೈನಿನಿಂದ ಪೊಲಂಟೀಯರರನ್ನು ಮುಸ್ಸೋಲಿನಿಯು ಹಿಂತೆಗೆಯಬೇಕೆಂದು ಬ್ರಿಟಿಷರು ಒತ್ತಾಯ ಪಡಿಸಿದಲ್ಲಿ, ಅವನೇನು ಮಾಡುತಿದ್ದನು?

ಜನವರಿಯಲ್ಲಿ ಮುಸ್ಸೋಲಿನಿಯೊಡನೆ ಬ್ರಿಟಿಷ ಸರಕಾರದ ಒಪ್ಪಂದವನ್ನು ಗೃಹಸ್ಥರ ರೀತಿಯಿಂದ ಮಾಡಿದ್ದಿತು. ಆದರೆ, ಅಗಲಿ ಐದು ವಾರಗಳೊಳಗೆ ಇಟಲಿಯು ಐದು ಡಿವಿಜನ್ ಸೇನೆಯು ಸ್ಪೈನಿನಲ್ಲಿರಿಯಿತು. ಬ್ರಿಟಿಷರೇ ಮೊದಲಾದ ಸರಕೀಯರ ಹಡಗುಗಳನ್ನು ಜಲಾಂತರ್ಗಾಮಿ ನಾವೆಗಳು ಮುಳುಗಿಸಿದುವು. ರೇಡಿಯೋ ಮೂಲಕ ಬ್ರಿಟಿಷ ದ್ವೇಷವನ್ನು ಪೆಲೆಸ್ತೀನಿನಲ್ಲಿ ಹಬ್ಬಲಾಯಿತು. ಲಿಬಿಯದಲ್ಲಿ 80000 ಸೇನಿಕರನ್ನು ಇಟಲಿಯು ಕಳಿಸಿತು, ಇಜಿಪ್ತವನ್ನು ನುಗ್ಗುವುದಕ್ಕೆ ಇದು ಸಿದ್ಧವಾಗಿ, ಅಲ್ಲೇ ಇನ್ನೂ ಉಳಿದಿದೆ!

ಲಿಬಿಯದಿಂದ ಸೈನ್ಯವನ್ನು ಹಿಂತೆಗೆದರೆ ಮುಸ್ಸೋಲಿನಿಗೆ ಬ್ರಿಟಿಷ ಸರಕಾರವು ಸಾಲಕೊಡುವುದೆಂದು ತಿಳಿಸಿದೆಯೇ? ಅರಬರನ್ನು ಅವರು ಬ್ರಿಟಿಷ ದ್ವೇಷ ಮಾಡದಂತೆ ಇಟಲಿಯೂ ರೇಡಿಯೋ ಮೂಲಕ ಸಾಧಿಸದಂತೆ ಸುಯೆಜ್ ಕಾಲುವೆಯ ಆಡಳಿತದಲ್ಲಿ ಇಟಲಿಗೂ ಅಧಿಕಾರ ಕೊಡಬಾರದೇತೆ?

ಅಬಿಸೀನಿಯವು ಇಟಲಿಗೆ ಸೇರಿತೆಂದು ಬ್ರಿಟಿಷರು ಒಪ್ಪಿದರೆ ಪೆ ಇಟಲೀಯನ್ ಸಾಮ್ರಾಜ್ಯದಲ್ಲಿ ಇಂಗ್ಲೆಂಡಿನ ಸರ್ವಾಧಿಕಾರವನ್ನು ಇಟೇಲಿಯು ಕೊಡುವುದೆ? ಎರಡು ವರ್ಷಗಳ ಹಿಂದೆ ಡಿಸೆಂಬರಿನಲ್ಲಿ, ವ್ಯಾಲಂಟೀಯರರಲ್ಲಿ ಕೆಲವರನ್ನಾದರೂ ಹಿಂದೆ ಕರೆದಂತೆ ವ್ಯಾಖ್ಯಾನ ಮಾಡಿದುದನ್ನು ಈಗ ಮುಸ್ಸೋಲಿನಿಯು ಪೂರೈಸುವನೆ? — ಇವೆಲ್ಲ ಪ್ರಶ್ನೆಗಳ ಬ್ರಿಟಿಷ ಮಂತ್ರಿಯ ರಾಜೀನಾಮೆಯಿಂದ ಆಲೋಚನೆಗೆ ಇಂಬುಕೊಟ್ಟಿವೆ.

ಮುಸ್ಸೋಲಿನಿಗೆ ಎರಡು ವಿಪತ್ತುಗಳುಂಟಾಗಿವೆ. ಇವುಗಳಿಗೆ ಅವನು ಬಲಿಯಾದರೆ, ಫೆಸಿಸ್ಟ್ ಪಂಗಡದ ಬದಲಾಗಿ ಇನ್ನಾವ ಪಕ್ಷವೋ ಇಟಲಿಯಲ್ಲಿ ಅಧಿಕಾರ ಹೊಂದುವುದು. ಇವನಿಗೆ ಹಣಬೇಕಾಗಿದೆ. ಬ್ರಿಟಿಷ ಯುದ್ಧ ಸಾಮುಗ್ರಿ ತಯಾರಿಸ್ಸುವ ಕಾರ್ಖಾನೆಗಳ ಕುಂಬ ನಫೆ ಹೊಂದಿದ್ದು, ಈ ಹಣ ಒದಗಿಸಲು ಸಿದ್ಧವಿವೆ. ಆದರೆ ಇದೇ ಹಣ ಪಡೆದು ಇಟಲಿಯು ಸಬ್‌ಮೆರೀನುಗಳನ್ನು ಕಟ್ಟಿಸಿ, ಅದೇ ಹಣ ಕೊಟ್ಟವರ ನಫೆಯ ದೆಸೆಯಿಂದ ಇಂಗ್ಲೆಂಡು ಕಟ್ಟಿಸುವ ಯುದ್ಧನಾವೆಗಳನ್ನು ಇಟಲಿಯು ಸುಲಭವಾಗಿ ಮುಳುಗಿಸಬಹುದು. ಸ್ಪೈನಿನಲ್ಲಿ ಬಾಂಬುಗುಂಡಗಳಿಗೀಡಾಗಿ ಧ್ವಂಸವಾದ ನಗರಗಳಿವೆ. ಅವುಗಳ ರಚನೆಯಾಗಬೇಕು. ಅಲ್ಲಿಯ ಕಾರ್ಖಾನೆಗಳನ್ನು ಫ್ರೆಂಕೋ ಧ್ವಂಸಗೊಳಿಸುವಂತಾಗಿದೆ. ಎಲ್ಲ ಕೈಗಾರಿಕೆಗಳನ್ನು ಪುನಃ ನಿರ್ಮಾಣ ಮಾಡಬೇಕು? ಇದಕ್ಕೆ ಎಲ್ಲಿಂದ ಹಣ ಒದಗೀತು?

ಇತ್ತ, ಬರ್ಲಿನ್-ರೋಮ್‌ಗಳೇ ಕೇಂದ್ರವಾಗಿರುವಂತೆ, ಜಗತ್ತೆಲ್ಲ ಈ ಕೇಂದ್ರದ ಸುತ್ತಲು ತಿರುಗುವಂತೆ ಜರ್ಮನಿ ಇಟಲಿಗಳೊಳಗೆ ಒಪ್ಪಂದವಂತಿದೆ. ಇಂಗ್ಲೆಂಡು ಫ್ರಾನ್ಸ್‌ಗಳು ಒಂದಾಗಿ ನಡೆವಂತಾಗಿದೆ. ಅತ್ತ, ರಷ್ಯವನ್ನು ಪ್ರತ್ಯೇಕಿಸ ಬೇಕಾಗಿದೆ. ಅಷ್ಟರಲ್ಲಿ ಯೂ ಸಾಮ್ರಾಜ್ಯವಿರುವ ರಿಷ್ಟನ್ನು ತನ್ನ ದಾರಿ ತಾನೇ ನೋಡಿಕೊಳ್ಳಲೆಂದು ಚೆಂಬರಲೇನರು ಹೇಳಿರುತ್ತಾರೆ.

ಜರ್ಮನಿ, ಇಟಲಿ, ಜಪಾನು, ಪೋಲಂಡುಗಳು ಒಂದಾಗಿವೆ. ರುಮೇನಿಯವು ಇವರಂತೆ ಇದೆ. ಚೆಕೋಸ್ಲೊವಾಕಿಯ ದಲ್ಲಿರುವ ಜರ್ಮನ ಜನರನ್ನು ಕಾಪಾಡುವ ಭಾರವು ತನ್ನ ಮೇಲಿದೆ ಎಂದು ಹಿಟ್ಲರನು ಘೋಷಿಸಿರುವನು. ಸ್ಪೈನಿನಲ್ಲಿ ಫೆಸಿಸ್ಟರಿಗೆ ಖಂಡಿತ ಜಯ ದೊರೆವುದಾಗಿ ಸಹ ಹಿಟ್ಲರನ ನಂಬುಗೆಯಿದೆ.

ಇವೆಲ್ಲವೂ ಈಡನ್ ಸಾಹೇಬರ ರಾಜೀನಾಮೆಯ ನಂತರ ಕೂಡಿಬಂದ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಅಗತ್ಯವಿರುವ ಅಂಶ.

### ಒಸ್ಟ್ರಿಯದ ಸ್ವಾತಂತ್ರ್ಯ

ಈ ತರದ ಸುಳ್ಳುಗಳು ಇತಿಹಾಸದಲ್ಲಿ ಎಷ್ಟೋ ಇವೆ. 1919ರಲ್ಲಿ ಒಸ್ಟ್ರೀಯವನ್ನು ಒಂದು ಪ್ರಜಾಧಿಪತ್ಯವಾಗಿ ಮಾಡಿದ, ಇಲ್ಲಿಯ ಜನಸಂಖ್ಯೆಗೆ ಬಿಟ್ಟು ಕೊಡುವಾಗ, ಅದು ಸ್ವಾತಂತ್ರವಾಗಿರುವುದು ಅದರ ಕಷ್ಟದ ಭಾಗವೆಂದು ಎಲ್ಲರೂ ತಿಳಿದಿದ್ದರೂ, ಅಲ್ಲಿ ಖಜಾನೆ ಬರಿದಾಗಿ, ಅದು ಶಾಶ್ವತವಾಗಿ ಕಾಲು ಸತ್ತಿದ್ದ ದೇಹವಾಗಿದ್ದಿತು. ಒಸ್ಟ್ರಿಯದ ಜನಸಂಖ್ಯೆಯು ಅರಿವಾಗಿ ವಿಯನ್ನಾದಲ್ಲಿದೆ, ಎಲ್ಲ ಕೈಗಾರಿಕೆಗಳು ಅಲ್ಲೇ ಇವೆ. ಅಲ್ಲಿನ ವ್ಯಾಪಾರವು ಸಾಗದಂತೆ ಸುಂಕದ ಸಂಕೋಲೆಯು ಬಿಗಿಯಿತು. ಇತರ ಮಿತ್ರ ಜನಾಂಗಗಳ ಹಣ ಸಾಲಕೊಟ್ಟುದರಿಂದ ಮಾತ್ರ ಆ ರಾಜ್ಯವು ಉಳಿಯಿತು. ಒಸ್ಟ್ರಿಯ ಜರ್ಮನಿಗಳೊಳಗೆ ವ್ಯಾಪಾರದ ಕರಾರು 1930ರಲ್ಲಿ ಆಗ ಮಾಡಿದ್ದಾಗ, ಫ್ರಾನ್ಸ್ ಎದುರಿಸಿತು. ಇದೇ ದುರ್ಮುಖದಿಂದ ಈಗ ಒಂದು ರಗಳೆಯ ಭಯಂಕರ ಕಾಡೇ ಬೆಳೆದಂತಾಗಿದೆ. 1931ರಲ್ಲಿ ಒಸ್ಟ್ರಿಯವು ವಿಪರೀತಾವಸ್ಥೆ ಹೊಂದಿ, ಹೇಗೂ ಬದುಕ ಮಂತ್ರಗಬೇಕಾದಾಗ, ಅದ ಮಾತ ರೂಪವನ್ನು ತಿಳಿಯುತ ಹಕ್ಕುಗಳಲ್ಲಿರವ ಕೆಥೊಲಿಕರಿಗೂ ವಿಯನ್ನದಲ್ಲಿರುವ ಪ್ರಜಾಪಕ್ಷದ ಮತಸ್ಥರಿಗೂ ಜಗಳಾಟಗಳೇ ನಿತ್ಯಜೀವನದ ಆಹಾರವಾಯಿತು. ಹೀಗಾಗಿ ಫೆಸಿಸ್ಟ ಪಂಗಡಕ್ಕೆ ಚಳವಳ ಹೂಡಲು ಅತ್ಯನುಕೂಲವಾಯಿತು. ಹಿಟ್ಲರನು ಅಧಿಕಾರಕ್ಕೆ ಬಂದ, ಜರ್ಮನರೆಲ್ಲ ಒಂದೇ ರಾಷ್ಟ್ರಕ್ಕೆ ಸೇರುವಂತಾಗಬೇಕೆಂದು ಅವನ ನುಡಿದದೇ, ಒಸ್ಟ್ರಿಯಕ್ಕೆ ಗಂಡಾಂತರಕ್ಕೆ ಈಡಾಗಿ, ಅದರ ಸ್ವಾತಂತ್ರ್ಯವು ಸ್ಥಿರೆಯಲ್ಲಿ ಬೋಪಹೊಂದವು ದೊಡ್ಡ ಭಯಕ್ಕೆ ಕಾರಣವಾಯಿತು.

ಆಗ ಅಲ್ಲಿ ಮುಖ್ಯಸ್ಥನಾಗಿದ್ದ ಡಾ. ಡೋಲ್‌ಫಸ್ ಎಂಬಾತನ ದೆಸೆಯಿಂದ ಮುಸೋಲಿನಿಯು ಒಸ್ಟ್ರಿಯಕ್ಕೆ ಒಲಿದುದರಿಂದ ಹಿಟ್ಲರನು ಹಿಂತೆಗೆಯಬೇಕಾಗಿ ಬಂತು. ಇದರ ಪರಿಣಾಮವಾಗಿ, ವಿಪರೀತ ಫಲಗಳಾದುವು. ಡಾಲ್‌ಫಸ್‌ನ ಕೊಲೆ, ಹಿಟ್ಲರನ ದಂಡು ಮುಂದರಿದು ಒಸ್ಟ್ರಿಯದ ಕಡೆಗೆ ಧಾವಿಸಿತು. ಆದರೆ, ಆಗಲೇ ಮುಸ್ಸೋಲಿನಿಯು ತನ್ನ ದಂಡನ್ನು ಗಡಿನಾಡಿಗೆ ಕಳಿಸಿದ ಕಾರಣವೇ, ಹಿಟ್ಲರನ ಕೈ ಕಡೆಯಿತು. ಕೂಡಲೆ, ನಾಝೀಪಕ್ಷವನ್ನು ಶಾಸನ ನ್ಯಾಯಾಗಳಿಂದ ನಿಷೇಧಿಸಲಾಯಿತು. ಆಗ ಡಾ. ಶುಷ್ನಿಗ್‌ರೇ ಡಿಕ್ಟೇಟರರಾಗಿ, ಮುಸೋಲಿನಿಗೆ ಹಿಟ್ಲರನೂ ದೂರದಲ್ಲಿರುವಂತೆ ವಿಧಾನ ಹೂಡಿ ಹೇಗೂ ದಿನ ಕಳೆದರು.

ಆದರೆ, ಹೀಗೆ ಎಷ್ಟು ದಿನ ಸಾಗಬಹುದು? ಹಿಟ್ಲರನು ದಿನದಿನಕ್ಕೆ ಪ್ರಬಲನಾಗುತ್ತಲೂ, ಮುಸೋಲಿನಿಯು ದುರ್ಬಲನಾಗುತ್ತಲೂ ಬೆಳೆಪಂತಹ ವಿದ್ಯಮಾನಗಳುಂಟಾದುವು. 1936ನೆ ಇಸ್ವಿ ಜುಲಾಯಿಯಲ್ಲಿ, ಹಿಟ್ಲರ್ ಶೂಷ್ನಿಗ್‌ರೊಳಗೊಂದು ಒಪ್ಪಂದವಾಗಿ, — ಒಸ್ಟ್ರಿಯವು ಸ್ವತಂತ್ರವೆಂದೂ ನಾಝಿಗಳು ಒಸ್ಟ್ರಿಯದಲ್ಲಿ ಚಳವಳಿಸಬಾರದೆಂದೂ ನಿರ್ಧಾರವಾ

ಮುಸೋಲೀನಿ

ಯಿತ. ಒಸ್ಟ್ರಿಯವು ಜರ್ಮನಿ ವ್ಯಕ್ತಿಯುಳ್ಳ ರಾಜ್ಯವೆಂದು ಒಸ್ಟ್ರಿಯನರು ಒಪ್ಪಿದರು. ಇದರಿಂದ, ಮುಂದೆ ಅಗತ್ಯ ತೋರಿದಾಗ ಜರ್ಮನರು ಒಸ್ಟ್ರಿಯವ ಸಹಾಯ ಕ್ಕೆದಗುತ್ತ ಒಳಿನ ಗ ಪ್ರಬಲವಾಗ ಪ್ರವೃತ್ತಿ ಇದರಿಂದ ಕಾರಣವಾಗಿತ್ತ.

ಮೂರೇ ವಾರಗಳ ಹಿಂದೆ ಈ ಸಂದೇಹವ, ಹಾಗೆ ಇನ್ನು ಬಳಿಯದೆ ಬದಲಾಕಿನ ಬೆದರಿಕೆ ತೋರಿಸಿಯೇ ಹಿಟ್ಲರನ ಒಸ್ಟ್ರಿಯದ ಸರಕಾರಕ್ಕೆ ಭಯ ಪ್ರದರ್ಶಿಸಿದನು. ನಾಝಿಗಳು ಪ್ರಬಲವಾಗಿ ನಮ್ಮ ಮಂತ್ರಿಗಳನ್ನು ಸರಕಾರದ ಮಂತ್ರಿಮಂಡಲದಲ್ಲಿ ಸೇರಿದರು. ನಾಝಿಗಳು ರಾಜ್ಯದಲ್ಲೆಲ್ಲ ಹರಡಿ, ತಮ್ಮ ಬಲ ಪ್ರದರ್ಶನ ಮಾಡುತ್ತ ಶಾಸನೋಲ್ಲಂಘನ ಮಾಡಿದರು. ಇದರಿಂದಾಗಿ, ಒಸ್ಟ್ರಿಯವು ಜರ್ಮನ ರಾಷ್ಟ್ರದೊಳಗೆ ಸೇರಲು ಅನುಕೂಲವಾಯಿತು.

ಆದರೆ ಶೂಷ್ನಿಗ್‌ರು ನಾಝಿ ಚಿಹ್ನೆ ಪತಾಕೆ, ಡ್ರೆಸ್ಸು ಮೊದಲಾದವು ಪ್ರದರ್ಶಿಸದಂತೆ ಆಜ್ಞೆ ಕೊಟ್ಟು, ಪ್ರಾಂತಿಕ ಸಭೆಗಳಲ್ಲಿ ಒಬ್ಬರೇ ನಾಝಿ ವ್ಯಕ್ತಿಗಳು ಪಾರುಪತ್ಯ ಇರದಂತೆ ಮಾಡಿ ದೇಶದಲ್ಲೆಲ್ಲ ನಾಝಿ ಪಂಗಡಕ್ಕೆ ವಿರುದ್ಧವಾಗಿ ಚಳವಳ ನಡೆಯಿತು. ಹಿಟ್ಲರನು ತನ್ನ ಸ್ವಾತಂತ್ರ್ಯವೆಂಬುದು ಕಡೆಗ ಸಿಗದನೆಂದೇ ಒಸ್ಟ್ರಿಯಗೆ ಇದ್ದ ಕಾರಣವ ಒಸ್ಟ್ರಿಯದ ಪ ಹರದಲ್ಲಿಂದ ಒಳ ಮಾತ್ರ ಹಿಟ್ಲರ ಪಕ್ಷವಾಗಿತ್ತು. ಅದರಿಂದ ಡಾ. ಶುಷ್ನಿಗ್ಗನ ಪಕ್ಷವು ಬಲವಾಗಿತ್ತೆಂದೇ ಮಂತ್ರಿಗಳಿಗೆ ತೋರಿತು.

### ಪ್ಲೆಬಿಸೈಟ್ ಸ್ವಾತಂತ್ರ್ಯ ನಿರ್ಧಾರ

ಒದಗಲೀ ಅದೇ ಸಂದರ್ಭವೆಂದು, ಎಲ್ಲ ಒಸ್ಟ್ರಿಯ ಜನರ ಅಭಿಮತದಂತೆ ಒಸ್ಟ್ರಿಯ

[೬ನೇ ಪುಟವನ್ನು ನೋಡುವುದು]

## ಒಂದೇ ಸೀಸೆಯಿಂದ

ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!

ಸುಖಜೀವನಕ್ಕೆ ಸಾಧನವಾದ ಸಂತಾನವು ಒಂದೇ ಸೀಸೆಯ ಸೇವನೆಯಲ್ಲಿದೆ

ಕೇಸರಿ ಕುಟೀರಂ—ರಾಯಪೇಟೆ— ಮದ್ರಾಸು.

ಮಂಗಳೂರು ಪ್ರವರ್ತಕರು ದಿ ಪೋಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು



***Best Cheap Durable***

**Use only 515 Red 365 & 232 White bar soap & be satisfied.**

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by* –

The West Coast Soap Factory

**ನಮ್ಮ 515 ಕೆಂಪು 365 ಮತ್ತು 232**

**ಬಿಳಿ ಬಾರ್ ಸೋಪುಗಳು,**

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ತರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents*

**Panchmal Krishnaya Shenoy & Son,**

Bunder, MANGALORE


# ಹಿಂದೂದೇಶದ ಮೇಲೆ ಬಲಾತ್ಕಾರ

## ನಡೆಯದು—ಸಿ. ಎಫ್. ಎಂಡ್ರೂಸರ ಎಚ್ಚರಿಕೆ!

ದೀನಬಂಧು ಸಿ ಎಫ್ ಎಂಡ್ರೂಸರು

ಕೆನಡಾ ಮತ್ತು ದಕ್ಷಿಣ ಆಫ್ರಿಕಾದೊಡನೆ ನಡೆದ ವ್ಯವಹಾರಗಳಲ್ಲಿ ವ್ಯಕ್ತವಾದ ಬ್ರಿಟನಿನ ರಾಜಕೀಯ ನೀತಿಯು ಈಗಲೂ ವ್ಯಕ್ತವಾಗದೆ ಇರಬಾರದು ಕಾರಣ, ಸ್ವಾತಂತ್ರ್ಯವನ್ನು ಪಡೆಯಬೇಕೆಂದು ದೀಕ್ಷೆಹೊಂದಿದ ಭಾರತೀಯರ ಇಚ್ಛೆಯನ್ನು ಬಲಾತ್ಕಾರದಿಂದ ವಿರೋಧಿಸುವುದು ಅಸಾಧ್ಯವು ಎಂದು ಅಭಿಪ್ರಾಯಪಡುತ್ತಾ ಎಂಡ್ರೂಸರು, ನ್ಯೂಸ್ಟೇಟ್ಸ್‌ಮೆನ್ ಮತ್ತು ನೇಶನ್ ಪತ್ರಿಕೆಯಲ್ಲಿ ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಒಂದು ಲೇಖನವನ್ನು ಬರೆದಿರುವರು

ಕಳೆದ 20 ವರ್ಷಗಳಲ್ಲಿ ಹಿಂದೂದೇಶದಲ್ಲಿ ಮಹತ್ತರದ ಹೋರಾಟವೊಂದು ನಡೆದು ಬಿಟ್ಟಿರುತ್ತದೆ ಕಳೆದ ಮಹಾ ಯುದ್ಧದ ದೆಸೆಯಿಂದ ಪ್ರಾರಂಭವಾದ ಈ ಹೋರಾಟವು ಮಹಾತ್ಮಾ ಗಾಂಧಿಯವರಿಂದ ಪರಿಪೂರ್ಣತೆ ಹೊಂದಿರುತ್ತದೆ ಗುಪ್ತವಾಗಿ ನಡೆದ ಒಪ್ಪಂದಗಳು ಅಮೃತಸರ ಮತ್ತು ಜಲಿಯಾನ್‌ವಾಲ ಪ್ರಕರಣಗಳು, ಇವುಗಳಿಂದ ಮಹಾತ್ಮಾಜಿಯವರ ವಿಶ್ವಾಸವು ಕಂಪನವಾಯಿತು ಆದರೆ, ಹಿಂದೂದೇಶವನ್ನು ಸಂಪೂರ್ಣವಾಗಿ ಮಾರ್ಪಡಿಸಿಬಿಟ್ಟುದು ಸತ್ಯಾಗ್ರಹ ಚಳವಳಿ

ಮಹಾತ್ಮಾ ಗಾಂಧಿಯವರ ಸತ್ಯ ಮತ್ತು ಅಹಿಂಸಾ ನೀತಿಯುಕ್ತವಾದ ಸತ್ಯಾಗ್ರಹದ ಎದುರು ಯಾವತರ್‍ಹ ತರದ ಸಂಗ್ರಾಮವು ಬಲವುಳ್ಳದೆಂಬ ವಿಶ್ವಾಸವುಂಟಾಗಿರುತ್ತದೆ ಬ್ರಿಟಿಷರಲ್ಲೂ ಹಿಂದೂದೇಶದ ನೀತಿಯು ಕುರಿತು ಒಂದು ತರದ ಬದಲಾವಣೆಯುಂಟಾಗಿರುವುದರಿಂದ ಮುಂದೆ ಅದಕ್ಕೆ ವಿರೋಧವಾಗಿ ಬಲಾತ್ಕಾರವನ್ನು ಪ್ರಯೋಗಿಸಲು ಅವರಿಂದಾಗದು ಜೈಲುಗಳನ್ನು ಸೇರಿದ ಕಾಂಗ್ರೆಸ್ಸು, ಇಂದು ಅಧಿಕಾರದಲ್ಲಿದೆ. ಪ್ರಾಂತ್ಯಗಳಲ್ಲಿ ರಾಜ್ಯಾಡಳಿತವನ್ನು ಅತ್ಯಂತ ಯಶಸ್ವಿಯಾಗಿ ನಡೆಯಿಸುತ್ತದೆ ದಬ್ಬಾಳಿಕೆಯ ಕ್ರಮಗಳನ್ನಾಚರಿಸಿದ ಸರಕಾರಿ ಉದ್ಯೋಗಸ್ಥರೆ ಅವರೊಡನೆ ಅತ್ಯಂತ ವಿನಯದಿಂದ ಕಾರ್ಯನಡೆಸುತ್ತಿದ್ದಾರೆ ಇದರಿಂದ ಕಾಂಗ್ರೆಸ್ಸಿನ ಗೌರವವು ಇನ್ನಷ್ಟು ಹೆಚ್ಚಿರುತ್ತದೆ. ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಯಿಸಿ ಕಾಂಗ್ರೆಸ್ಸು ಜನತೆಯ ಮಹಾಮನ್ನಣೆಗೂ ಪ್ರೀತಿಗೂ ಪಾತ್ರವಾಗಿರುತ್ತದೆ.

### ಅಪಾಯದಲ್ಲಿದ್ದ ಜಗತ್ತು

ಇಲ್ಲಿಯೂ ಮಹಾತ್ಮಾಜಿಯವರ ವ್ಯಕ್ತಿತ್ವವು ಮಹತ್ತರದಾದುದು ವಿವಿಧ ಸರಕಾರಗಳು ಮಹಾತ್ಮಾಜಿಯವರ ಬೋಧನೆಯನ್ನು ಪಡೆಯುತ್ತಿದ್ದಾರೆ ಮಹಾತ್ಮಾಜಿಯವರೇ ಅವರ ಮಾರ್ಗದರ್ಶಕರು ಆದ್ದರಿಂದ ಮುಂದಕ್ಕೆ ಬರಬಹುದಾದ ಫೆಡರೇಶನಿಗೆ ವಿರೋಧವಾದ ಚಳವಳಿಗಳಿಂದ ಭಯಂಕರ ತರದ ಪರಿಣಾಮಗಳುಂಟಾಗಬಹುದು ಹಿಂದೂದೇಶ ಮತ್ತು ಬ್ರಿಟನಿಗೆ ಮಾತ್ರವಲ್ಲ, ಅದರಿಂದ ಸಮಸ್ತ ಜಗತ್ತಿಗೇ ಹಾನಿಯೊದಗಬಹುದು ಸ್ಪೈನಿನಲ್ಲಿ ಚೀನಾದಲ್ಲಿ ಯುದ್ಧ ನಡೆಯುವ ಈ ಸಮಯದಲ್ಲಿ, ಇನ್ನಿತರ ಕಡೆಗಳಲ್ಲಿ ಯುದ್ಧಕಾರಣಗಳು ಉಂಟಾಗುವ ಈ ಸಮಯದಲ್ಲಿ ಹಿಂದೂದೇಶದಲ್ಲುಂಟಾದ ಶಾಂತವಾತಾವರಣವು ರಕ್ಷಿಸಲ್ಪಡಬೇಕು. ವಿಚಾರಹೀನ ಕಾರ್ಯಗಳಿಂದಾಗಿ ನಾವದನ್ನು ಕೆಡಿಸಬಾರದು. ಬ್ರಿಟನ್ ಹಿಂದೂದೇಶಗಳೊಳಗೆ ಇನ್ನೊಂದು ಮಹಾ ಕಿಕ್ಕಾಟವು ಉಂಟಾಗದಂತೆ ಎಲ್ಲಾ ಪ್ರಯತ್ನಗಳನ್ನೂ ನಾವು ಮಾಡಲೇಬೇಕು.

---

### ಮೂರು ಜನರನ್ನು ಮೋಸಗೊಳಿಸಿದ ತರುಣ.

ಮುಂಬಯಿ, ಬಿಹಾರ್, ಅಲ್ಲಹಾಬಾದ್ ಮತ್ತು ರಜಪುತಾನಾಗಳಲ್ಲಿ ಅನೇಕ ಮೋಸಗಾರಿಗಳನ್ನು ನಡೆಸಿದ ಜೋಧಪುರದ ನರೇಂದ್ರ ಕುಮಾರ ಸಿಂಗನೆಂಬ ತರುಣನನ್ನು ಪಾಲಘರ ಸಂಸ್ಥಾನದಲ್ಲಿ ಸೆರೆಹಿಡಿದಿರುವರು ಬಿಹಾರಿನ ಮತ್ತು ಅಹ್ಮದಾಬಾದಿನ ಪೋಲೀಸರು ಇವನನ್ನು ಬಹಳ ಸಮಯದಿಂದ ತಪಾಸಿಸ್ಮಾಡುತ್ತಿದ್ದರು

ಶಿರೋಹಿ ಸಂಸ್ಥಾನದ ಮಹಾರಾಣಿಯು ತನ್ನನ್ನು ದತ್ತಪುತ್ರನಾಗಿ ಸ್ವೀಕರಿಸಿದ್ದಾಳೆಂಬುದಾಗಿ ನಂಬಿಸಿ, ರಾಮಗಡ ಮಹಾರಾಜರವರ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟು, ಮಹಾರಾಜರಿಗೆ ಮಹಾ ರಾಣಿಯರ ಹೆಸರಲ್ಲೊಂದು ತಂತಿಬಿಟ್ಟು ಮಹಾರಾಜರು ಹತ್ತು ಸಾವಿರ ರೂಪಾಯಿಗಳನ್ನು ಬಿಡುವಂತೆ ಮಾಡಿದನು ಹಣದೊಡನೆ ಈತನು ಪಲಾಯನವಾಗಲು, ಈತನ ಮೋಸವು ಮಹಾರಾಜರಿಗೆ ತಿಳಿದುಬಂದು, ಅವರು ಪೋಲಿಸರಿಗೆ ವರದಿ ಮಾಡಿಕೊಂಡರು ಈ ತರುಣನನ್ನು ಪಾಲಪುರ ಸಂಸ್ಥಾನದಲ್ಲಿ ತಾನು ಬ್ರಿಜ್ವಾಲಿನ ಕುಮಾರನೆಂದು ನಂಬಿಸಿ, ಸಂಸ್ಥಾನದಿಂದ ಸನ್ಮಾನಪಡೆಯುತ್ತಿದ್ದಾಗ ಪೋಲೀಸರು ಅವನನ್ನು ಸೆರೆಹಿಡಿದರು

---

ಕಮಲಾನೆಹರು ಸ್ಮಾರಕ ಆಸ್ಪತ್ರೆಯ ನಿಧಿಯು ಈಗ ರೂ 2,25,000 ಆಗಿರುತ್ತದೆ

---

### ತಮಿಳು ನಾಡಿನಲ್ಲಿ ಖಾದಿಯ ಪ್ರಗತಿ

ಖಾದಿಯ ವಿಚಾರದಲ್ಲಿ ತಮಿಳುನಾಡು ಬಹಳವಾಗಿ ಮುಂದುವರಿಯುತ್ತಿದೆ. ಅಲ್ಲೀಗ ತಿಂಗಳು ಒಂದರ ಒಂದು ಲಕ್ಷ ರೂಪಾಯಿ ಮೌಲ್ಯದ ಖಾದಿಯು ಸಿದ್ಧವಾಗುತ್ತಿದೆ ಕಳೆದ ವರ್ಷ ೧೦॥ ಲಕ್ಷ ರೂಪಾಯಿ ಮೌಲ್ಯದ ಖಾದಿಯು ವಿಕ್ರಯವಾಗಿರುತ್ತದೆ. ಈ ವರ್ಷದಲ್ಲಿ, ಈ ಅಂಖ್ಯೆಗಳು ಇನ್ನೂ ಹೆಚ್ಚಬಹುದೆಂದು ನಿರೀಕ್ಷೆಯಿದೆ

ಖಾದಿಯನ್ನುಪಯೋಗಿಸುವವರು, ತಮ್ಮ ವಸ್ತ್ರದ ವ್ಯಯದಲ್ಲಿ ಶೇಕಡಾ 90 ಸಲೆ ಹಳ್ಳಿಗಳಿಗೆ ಸಲ್ಲಿಸುತ್ತಿದ್ದಾರೆ

ಖಾದಿಯನ್ನು ನೂಲುವವರ ಕೂಲಿಯು ಬಹುಮಟ್ಟಿಗೆ ಹೆಚ್ಚಿರುತ್ತದೆ ಒಳ್ಳೆ ನೂಲುವವರು, ದಿನ ಒಂದರ ಹದಿನೆರಡಾಣೆಗಳ ಪ್ರಕಾರ ದುಡಿಯಬಹುದು ಒಳ್ಳೆ ತರದ ಉಪಕರಣಗಳನ್ನು ಒದಗಿಸಿದುದರಿಂದ, ಉತ್ತಮ ತರದ ಖಾದಿಯು ಸಿದ್ಧವಾಗುವಂತಾಗಿದೆ. ತಿರುಪುರದಲ್ಲಿ ಖಾದಿ ವ್ಯವಸಾಯದಲ್ಲಿ ತರಬೇತು ಹೊಂದಿಕೊಂಡು, ಮೂರು ಪಂಗಡಗಳು, ಹೊರ ಹೋಗಿವೆ ನಾಲ್ಕನೆ ಪಂಗಡವು ಅಲ್ಲೀಗ ತರಬೇತು ಹೊಂದುತ್ತಿದೆ.

ಮದ್ರಾಸು ಸರಕಾರದಿಂದ ಖಾದಿಗೆ ಕೊಡಲಾದ ಗ್ರಾಂಟಿನಿಂದ ಮಹದುಪಕಾರವಾಗಿರುತ್ತದೆ. ಅದರಿಂದ ಖಾದಿ ನೂಲುವವರಿಗೆ ಉತ್ತಮ ತರದ ಉಪಕರಣಗಳು ದೊರಕುವಂತಾಗಿ, ಅವರು ಶೇಕಡಾ 50ರ ಸಲೆ ಹೆಚ್ಚಿನ ಕೂಲಿಯನ್ನು ದುಡಿಯುವವರಾಗಿದ್ದಾರೆ. ಈ ವರ್ಷ ಕೂಡ ಖಾದಿಗೆ ಗ್ರಾಂಟು ಕೊಡಲಾಗಿದೆ ಆದುದರಿಂದ ಇನ್ನೂ ಹೆಚ್ಚಿನ ಪರಿಣಾಮಗಳುಂಟಾಗುವವೆಂದು ನಿರೀಕ್ಷೆಯಿದೆ.

# ಹರಿಪುರ ಕಾಂಗ್ರೆಸ್ಸಿನ ವಿಠಲಭಾಯಿ ಸ್ಮಾರಕ ನಗರ

ಹರಿಪುರದಲ್ಲಿ ಬಾಬು ಸುಭಾಷಚಂದ್ರ ಭೋಸರ ಅಧ್ಯಕ್ಷತೆಯಲ್ಲಿ ಕಾಂಗ್ರೆಸು ಕೂಡಿ ಚೆದರಿತು ಅಲ್ಲಿ ಮಹಾ ಮಹಾ ಮುಖಂಡರುಗಳು ಏನೇನು ಭಾಷಣಮಾಡಿದರು, ಯಾವ ಯಾವ ಠರಾವುಗಳು ಮಂಜೂರಾದುವು, ಸ್ವರಾಜ್ಯ ಸಂಪಾದನೆಗೆ ಕಾಂಗ್ರೆಸು ಯಾವ ಮಾರ್ಗವನ್ನು ತೋರಿಸಿಕೊಟ್ಟಿತು, ಯಾವ ಕರ್ತವ್ಯಗಳ ನಿರೂಪಣೆಮಾಡಿತು, ಇವೆಲ್ಲ ಈಗ ಜನಜನಿತವಾಗಿವೆ ಆದರೆ ಆ ಮಹತ್ವಪೂರ್ಣವಾದ ಆ ಕಾಂಗ್ರೆಸು ಕೂಡಿದ ವಿಠಲ ನಗರವು ಅದೆಂತಹುದೋ, ಎಂಬ ಕುತೂಹಲವು ಮಾತ್ರ ಇನ್ನೂ ಅಚ್ಚಳಿಯದೆ ಇರುವದು

ದಿವಂಗತ ದೇಶಭಕ್ತ ವಿಠಲಭಾಯಿ ಪಟೇಲರ ಸ್ಮಾರಕಚಿನ್ಹವಾಗಿ, ಕಾಂಗ್ರೆಸು ಕೂಡಿದ ಆ ಸ್ಥಳಕ್ಕೆ ವಿಠಲನಗರವೆಂದು ಹೆಸರುಕೊಟ್ಟಿದ್ದರು ಎರಡು ಎರಡೂವರೆ ಮೈಲು ಉದ್ದಗಲವಾಗಿದ್ದ ಆ ನಗರವು ಪ್ರಕಟಿಸುವ ಶೋಭೆಯನ್ನು ನೋಡಿಯೇ ಮನಸ್ಸಿನಲ್ಲಿ ಭಾವಿಸಲೇಕಾಗಿತ್ತಲ್ಲದೆ, ಅದನ್ನು ಶಬ್ದಗಳಿಂದ ಬಣ್ಣಿಸುವುದು ಸಾಧ್ಯವಾಗಿರಲಿಲ್ಲ ಲಕ್ಷಗಟ್ಟಲೆಯಿಂದ ಬಂದು ಕೂಡಿದ ಪ್ರಚಂಡ ಜನಸ್ತೋಮಕ್ಕೆ ಸರ್ವಾನುಕೂಲತೆಗಳನ್ನು ಒದಗಿಸಿಕೊಟ್ಟ ವಿಠಲನಗರದ ಸೊಬಗು ಸೌಂದರ್ಯಗಳು ದಿವ್ಯವೂ ಭವ್ಯವೂ ಆಗಿದ್ದುವು ಒಬ್ಬನ ಜೀವಮಾನದಲ್ಲಿ ಆವನ ಪೂರ್ವಪುಣ್ಯದ ಸತ್ಫಲವೆಂಬಂತೆ ಎಲ್ಲಿಯಾದರೂ ಅಪರೂಪವಾಗಿ ನೋಡಸಿಕ್ಕುವ ಆ ನೋಟವು ಅಸದೃಶವಾದ್ದು ಅನುಪಮವಾದ್ದು, ಎಂದು ಬಲ್ಲಿದನಿಂದ ಮೊದಲುಗೊಂಡು ಒಬ್ಬ ಸಾಮಾನ್ಯನ ಬಾಯಿಯಿಂದ ಕೂಡ ವಿಠಲನಗರವು ಹೊಗಳಿಕೆ, ಪ್ರಶಸ್ತಿಯ ಮಾತುಗಳನ್ನು ಕೇಳಿತು ನೋಡಿದವರಿಗೆ ಅದು ಸ್ವರ್ಗದ ಇಂದ್ರನಗರಿಯೋ, ಕೃಷ್ಣನ ಸುದಾಮಪುರಿಯೋ ಎಂಬ ಹಾಗೆ ಭಾಸವಾಯಿತು ಈ ನಗರದಿಂದಾಗಿ ವಿಠಲಭಾಯಿ ಪಟೇಲರ ಹೆಸರು ಕೀರ್ತಿಗಳು ಅಜರಾಮರವಾದುವೆಂದು ಅದ್ದಿ ಆಕ್ಷೇಪಗಳಿಲ್ಲದೆ ಹೇಳಬಹುದಾಗಿತ್ತು

ವಿಠಲನಗರದಲ್ಲಿ ಕೂಡಿದ ಜನಸಂದಣಿ ಎಷ್ಟು ದೊಡ್ಡದು, ಹರಿಪುರವೆಂಬುದು ಹಳ್ಳಿ ಹಳ್ಳಿಯಲ್ಲಿ ಕೂಡಿದ ಕಾಂಗ್ರೆಸಿನ ಮುಖಂಡರು ಪ್ರತಿನಿಧಿಗಳು, ಪ್ರೇಕ್ಷಕರ ಸಂಖ್ಯೆ, ಈ ತನಕ ಪೇಟೆ ಪಟ್ಟಣಗಳಲ್ಲಿ ಕೂಡಿದ ಸಂಖ್ಯೆಗಿಂತಲೂ ಮಿಗಿಲಾಗಿತ್ತು ಮೊದಲನೆಯ ದಿನದಲ್ಲಿಯೇ ಪ್ರೇಕ್ಷಕರಿಂದ 66000 ರೂಪಾಯಿಗಳು ಒಟ್ಟುಗೂಡಿದ್ದುವು ಎರಡನೆಯ ದಿನ ಕೂಡಿದ ರೂಪಾಯಿ 6000ಕ್ಕೆ ಕಡಿಮೆಯಾಗಿರಲಿಲ್ಲ ಅತ್ಯಲ್ಪವಾಗಿಟ್ಟಿದ್ದ ಪ್ರೇಕ್ಷಕ ಶುಲ್ಕವನ್ನು ಕೊಡಲಿಕ್ಕಾಗದೆ ಬಡಜನರು ಸಭಾಮಂಟಪದ ಹೊರಗೆ ಬಯಲಿನಲ್ಲಿ ಕೂತುಕೊಂಡು ಭಾಷಣಾದಿಗಳನ್ನು ಕೇಳುತಿದ್ದರ ಅವರ ಸಂಖ್ಯೆಯನ್ನು ಲೆಕ್ಕಮಾಡಿ ಹೇಳುವದು ಅಸಾಧ್ಯ ಮತ್ತೆ ಪ್ರದರ್ಶನಾಲಯಕ್ಕೆ ಒಟ್ಟು 30000 ರೂಪಾಯಿಗಳು ದರ್ಶಕರಿಂದ ಪ್ರವೇಶಧನವಾಗಿ ವಸೂಲಾಗಿದ್ದುವು ಆದರೆ ಕಡಿಮೆಪಕ್ಷ ಎರಡು ಎರಡೂವರೆ ಲಕ್ಷ ಜನರಾದರೂ ಹರಿಪುರದ ವಿಠಲನಗರದಲ್ಲಿ ಪ್ರೇಕ್ಷಕ ಪ್ರತಿನಿಧಿಗಳಾಗಿ ಬಂದು ಕೂಡಿದ್ದರು ಎನ್ನಬಹುದು ಇವರಲ್ಲದೆ ಕೆಲಸಗಾರರಾಗಿ, ಸ್ವಯಂಸೇವಕರಾಗಿ ಅಲ್ಲಿ ಸಾವಿರಾರು ಮಂದಿ ಬೇರೆ ಇದ್ದರು ಇಷ್ಟೆಲ್ಲ ಜನರಿಗೆ ವಸತಿ, ಸ್ನಾನಪಾನಗಳ ಸುವ್ಯವಸ್ಥೆ ಮಾಡುವದೆಂದರೆ ಸಾಮಾನ್ಯ ಕಾರ್ಯವಲ್ಲ ಆದರೆ ವಿಠಲ ನಗರದಲ್ಲಿ ಅಂಥ ವ್ಯವಸ್ಥೆಯು ನಿರಾಕ್ಷೇಪಕರವಾಗಿ, ಪ್ರಚಂಡವಾಗಿ, ಬಹು ದೊಡ್ಡ ಪ್ರಮಾಣದಲ್ಲಿ ನಡೆದಿತ್ತು ಅನ್ನುವಾಗ ಈ ನಗರ

ದಿವಂಗತ ವಿಠಲ್‌ಭಾಯಿ ಪಟೇಲರು.

ಐವತ್ತನೇ ಕಾಂಗ್ರೆಸ್ ಅಧಿವೇಶನಕ್ಕಾಗಿ ಹರಿಪುರದಲ್ಲಿ ವಿಠಲ್ ನಗರವನ್ನು ರಚಿಸಿರುವುದಾದರೆ, ಅದು ಇವರ ಉಜ್ವಲ ದೇಶಸೇವೆಯ ಸ್ಮಾರಕೋತ್ಸವದ ಫಲವಾಗಿರುತ್ತದೆ — ಕರ್ತವ್ಯಶಕ್ತಿಯನ್ನು ಎಷ್ಟು ಹೊಗಳಿದರೂ ಸಾಲದು

## ವಿಠಲನಗರ ಅದೊಂದು ಕಲಾಭವನ.

ಪ್ರಶಾಂತವಾದ ತಪತೀ ತೀರದಲ್ಲಿ ಪ್ರಾಕೃತಿಕ ಮತ್ತು ನೈಸರ್ಗಿಕ ಸೌಂದರ್ಯದ ನೆಲೆಯಾದ ಹರಿಪುರದಲ್ಲಿ ನಿರ್ಮಿತವಾದ ವಿಠಲ ನಗರವು ಅದೊಂದು ಕಲಾಭವನವಾಗಿತ್ತೆಂದು ಹೇಳಬಹುದು ಜಗದ್ವಿಖ್ಯಾತ ಕಲಾಕಾರರಾದ ಶ್ರೀ ನಂದಲಾಲ ಭೋಸರವರು ತಮ್ಮ ಸಹೋದ್ಯೋಗಿಗಳಾದ ಶ್ರೀ ಗುಲಾಟಿ, ರವಿಶಂಕರರಾವಳ ಕಾನುದೇಸಾಯಿ ಮತ್ತು ಇತರ ಕಲಾಭ್ಯಾಸಿಗಳ ಸಹಾಯದಿಂದ ವಿಠಲನಗರದಲ್ಲಿ ಕಲಾದೇವಿಯ ಪ್ರತ್ಯಕ್ಷ ಅವತಾರವಾಗುವಂತೆ ಮಾಡಿಬಿಟ್ಟಿದ್ದರ ಕೇವಲ ಬಿದಿರು ತುಂಡುಗಳನ್ನ ಉದ್ದಕ್ಕೆ, ಅಗಲಕ್ಕೆ ಸೀಳಿ, ಅಡ್ಡಕ್ಕೆ ಬಗೆದು ಸೀಳಿ, ನಾನಾ ಪ್ರಕಾರವಾಗಿ ಜೋಡಿಸಿ ಕಟ್ಟಿದ ಮಹಾದ್ವಾರಗಳು, ಅವುಗಳ ಎದುರಿನ ಎತ್ತರವಾದ ಕಮಾನುಗಳು, ಆ ಕಮಾನುಗಳ ಮೇಲೆ ಬೋಳಗುಮ್ಮಟಗಳಂತೆ ಅಡಿಮೇಲೆ ಮಾಡಿ ಇಟ್ಟ ಮಣ್ಣಿನ ಕೊಡಗಳು ಒಳಗಿನ ರಮಣೀಯವಾದ ಸಭಾಮಂಟಪ ವ್ಯಾಸಪೀಠ, ಪ್ರೇಕ್ಷಕ ಪ್ರತಿನಿಧಿಗಳ ಮತ್ತು ಮುಖಂಡರು ಸನ್ಮಾನ್ಯ ಅತಿಥಿಗಳ ವಸತಿಗೃಹಗಳು, ಪ್ರದರ್ಶನಾಲಯ, ಗೋಶಾಲೆ, ಭೋಜನಶಾಲೆ, ಅಗಸಾಲೆ, ಚಂದ್ರಸಾಲೆ— ಯಾಕೆ? ಅಲ್ಲಲ್ಲಿಟ್ಟ ಕಸದ ಪೆಟ್ಟಿಗೆಗಳು, ಪಾಯಖಾನೆ, ಮೂತ್ರಸಂಖ್ಯೆಯ ಸ್ಥಾನಗಳೂ ಕೂಡ ಅದ್ವಿತೀಯ, ಅನನ್ಯಾದೃಶ, ಕಲೆಯ ಪ್ರತಿಮೂರ್ತಿಗಳಾಗಿದ್ದುವು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಈ ಮಾಯಾನಗರವನ್ನು ನಿರ್ಮಿಸಿದ ಕಲಾವಿದನು ಯಾರೆಂದು ಪ್ರೇಕ್ಷಕರು ತಿಳಿಯದೆ ಇದ್ದಿರಬಹುದು ಆದರೆ ಅವರು ಅವನ ನಿರ್ಮಾಣವನ್ನು ನಿರ್ಮಾಣಕಾರ್ಯವನ್ನು ನೋಡಿ, ಮೂಗನಮೇಲೆ ಬೆರಳಿಟ್ಟು ತಲೆದೂಗಿ, ಬಾಯಿತೆರೆಂಬ ಹೋಗದೆ ಇರಲಿಲ್ಲ ಪ್ರಧಾನ ಕಾರ್ಯಾಲಯದ ಮುಂದೆ, ಮುಖಂಡರ ವಸತಿಗೃಹಗಳ ಸುತ್ತು ಮುತ್ತು ಗುಜರಾತಿನ ಪ್ರವೀಣ ತೋಟಗಾರರು ಕಟ್ಟಿದ ಫಲಪುಷ್ಪ ಭರಿತ ತೋಟಗಳು ನಗರಕ್ಕೆ ಸೌಂದರ್ಯಾತಿಶಯವನ್ನು ತಂದುಕೊಟ್ಟಿದ್ದವು. ಪರಿಚಯವಿಲ್ಲದ ಪ್ರೇಕ್ಷಕರಿಗೆ ದಾರಿ ಸೂಚನೆಗಳನ್ನು ತೋರಿಸಲಿಕ್ಕೆ ಹಿಂದಿ, ಉರ್ದು, ಗುಜರಾತಿಗಳಲ್ಲಿ ಬರೆದ ನೋಟೀಸು ಬೋರ್ಡುಗಳು ಕೂಡ ಅಮೂಲ್ಯ ಅಪೂರ್ವ ಕಲಾಪ್ರತಿ

ಸುಪ್ರಸಿದ್ಧ ಕವಿಗಳು ತಾಜಮಹಾಲನ್ನು ಕಂಡು ಬೆರಗಾಗಿ ನಾನಾ ಬಗೆಯಾಗಿ ವರ್ಣಿಸಿದಂತೆ ವಿಠಲನಗರವು ಕೂಡ ಬಿದಿರುತುಂಡುಗಳಿಂದ ಕಟ್ಟಿದ ಕಾವ್ಯ, ಅಥವಾ ಸುಂದರಿಯಾದ ತರುಣಿಯಂತೆ ಕಾಣಿಸುತ್ತಿತ್ತು ಎಂದು ಹೇಳಬಹುದಾಗಿತ್ತು

## ವಿಠಲನಗರದ ಚಿತ್ತಾಕರ್ಷಕ ನೋಟ

ವಿಠಲ ನಗರದಲ್ಲಿ ಮನಸ್ಸನ್ನು ಸೂರೆಮಾಡುತಿದ್ದ ಒಂದು ನೋಟವೆಂದರೆ, ನಗರದ ನಿರ್ಮಲೀಕರಣ ಕಾರ್ಯದಲ್ಲಿ ತೊಡಗಿದ್ದ ಸ್ವಯಂಸೇವಕ ದಳದ ಚಟುವಟಿಕೆಗಳು ಈ ದಳವು ಜಗತ್ಪ್ರಸಿದ್ಧ ದಾವೆ ಮಾಮಾ ಸಾಹೇಬ ಫಾಡ್ಕೆ ಮತ್ತು ಸುರೇಂದ್ರಾಜಿಯವರ ಅಧೀನತೆಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ಸರ್ವಜನ ಸಮ್ಮತ ಮತ್ತು ಮನಮೆಚ್ಚುವ 'ಹಾಗೆ ಮಾಡಿಕೊಂಡು ಶ್ಲಾಘನೆಗೆ ಪಾತ್ರವಾಯಿತು. ದಳದಲ್ಲಿ 1002 ಮಂದಿ ಸಹೋದರರು 200 ಮಂದಿ ಸಹೋದರಿಯರು ತಮ್ಮ ಹೆಸರುಗಳನ್ನು ಕೊಟ್ಟು ಹಗಲೂ ರಾತ್ರಿ ಕೆಲಸ ಮಾಡುತಿದ್ದರು ಇವರ ಸಹಾಯವು ಪ್ರತ್ಯಕ್ಷವಾಗುವಾಗುತಿದ್ದಿಲ್ಲವಾದರೆ, ವಿಠಲ ನಗರಕ್ಕೆ ಹೋದವರ ಭವಣೆ ಏನಾಗುತಿದ್ದಿತೋ, ಅದನ್ನು ಕಲ್ಪಿಸುವದು ಕೂಡ ಕಷ್ಟಸಾಧ್ಯವಾಗಿದೆ ಪಾಯಖಾನೆಗಳು ಮಾತ್ರ ವಿಸರ್ಜನ ಸ್ಥಾನಗಳು ಅಲ್ಲಿ ಇಲ್ಲಿ ಎಲ್ಲಾ ಕಡೆಗಳಲ್ಲಿ ಇದ್ದುವು ಅವುಗಳ ಉಪಯೋಗವನ್ನು ಜನರು ದಿನಮಾನದ ಎಲ್ಲಾ ಸಮಯಗಳಲ್ಲಿ ಮಾಡಿಕೊಳ್ಳುತಿದ್ದರು ಆದರೆ ಯಾವಾಗ ನೋಡಿದರೂ ಆ ಸ್ಥಾನಗಳಲ್ಲಿ ವಾಸನೆ, ನೊಣಗಳ ಕಾಟವೇಳದಂತೆ ಮಲಮೂತ್ರಾದಿ ಕೊಳೆ ಕಶ್ಮಲಗಳನ್ನು ಈ ಸ್ವಯಂಸೇವಕ ದಳವು ಸಂಗ್ರಹವಾದ ಹಾಗೆ ದೂರಕ್ಕೆ ಸಾಗಿಸಿ ಅವನ್ನು ನಿರ್ಮಲವಾಗಿಡುತಿದ್ದರು ಶಾಲಾ ಮಕ್ಕಳು ಕೂಡ ಕಸ ಗುಡಿಸ ವ ಕಿಪ್ಪೆ ರಾಶಿಯನ್ನು ಒಯ್ಯುವ ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದರು ಬ್ರಾಹ್ಮಣ ಬ್ರಾಹ್ಮಣೇತರ ಇತ್ಯಾದಿ ಎಲ್ಲ ಜಾತಿಮತ ಪಂಗಡಗಳಿಗೆ ಸೇರಿದ ಸ್ತ್ರೀಪುರುಷ ಬಾಲಕರು ಈ ದಳದಲ್ಲಿ ಸೇರಿಕೊಂಡು ಬಂಧುಭಗಿನಿಯರಂತೆ ಸ್ಫೂರ್ತಿ ಉತ್ಸಾಹಗಳಿಂದ ತುಂಬಿ ತಮಗೊಪ್ಪಿಸಿದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು ಅಚ್ಚ ಬಿಳಿದಾದ ಉಡಿಗೆಯಲ್ಲಿದ್ದ ಇವರು ಗ್ರಾಮನಿರ್ಮಲ್ಯದ ಪ್ರತಿ ಮೂರ್ತಿಗಳಂತೆ ಕಾಣುತಿದ್ದರು ಆತ್ಮಪ್ರೇರಣೆಯಿಂದ ಪ್ರೇರೇಪಿತವಾಗಿ ಸ್ವೇಚ್ಛಾವೃತ ಭಂಗಿ ಮತ್ತು ಝಾಡಮಾಲಿಗಳಂತೆ ಕೆಲಸ ಮಾಡುತಿದ್ದ ಜಗತ್ಪ್ರಸಿದ್ಧ ದಾವೆ—ಮಾಮಾ ಸಾಹೇಬ ಫಾಡ್ಕೆ, ಸುರೇಂದ್ರಾಜಿ ಮೊದಲಾದವರು ಹತ್ತಿರ ದೂರದ ಹಳ್ಳಿಪಳ್ಳಿ ಪೇಟೆಪಟ್ಟಣಗಳಿಂದ ಬಂದ ಅಬೋಧ ಜನರಿಗೆ ಒಳ್ಳೆ ಮಾರ್ಗದರ್ಶಕರು ಆದರು. ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಹೇಗೆ ಸಾಧಿಸಬಹುದೆಂಬುದನ್ನು ಇಲ್ಲಿ ಪ್ರತ್ಯಕ್ಷ ಕಲಿಯಬಹುದಾಗಿತ್ತು ನಿರ್ಮಲೀಕರಣ ದಳವು ಕೊಟ್ಟ ಮಾದರಿ ಪಾಠವನ್ನು ನೋಡಿದವರೆಲ್ಲರೂ ಕಲಿತು, ಬಹು ಚೆನ್ನಾಗಿಯೇ ಕಲಿತುಕೊಂಡು ಹಿಂತಿರುಗಿದರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ

## ವಿಠಲ ನಗರದ ಕಾವಲುಗಾರ ಸೇನೆ

ನಗರ ಕಾವಲಿನ ಕೆಲಸವನ್ನು ಪ್ರಾಯಶಃ ಸ್ವಯಂಸೇವಿಕೆಯರು ಮಾಡಿ ಕೊಂಡಿದ್ದರು ಆದ್ದರಿಂದ ಶಿಸ್ತಿನ ವ್ಯವಸ್ಥೆಯು ಬಹು ಚೆನ್ನಾಗಿಯೇ ನಡೆಯಿತು ಈ ಸ್ವಯಂಸೇವಿಕೆಯರು ಎಷ್ಟು ಜಾಗರೂಕರು ಕರ್ತವ್ಯತತ್ಪರರು ಮತ್ತು ಸ್ಫೂರ್ತಿ ಉತ್ಸಾಹಗಳಿಂದ ತುಂಬಿತುಳುಕುತಿದ್ದವರು ಆಗಿದ್ದರೆಂದರೆ, ಒಮ್ಮೆಗೆ ಗೊತ್ತಿಲ್ಲದ ಒಬ್ಬ ಹುಡುಗಿ, ಬೊಂಬಾಯಿ ಸರಕಾರದ ಕಾಂಗ್ರೆಸ ಮಂತ್ರಿಗಳಾಗಿರುವ ಡಾಕ್ಟರ ಗಿಲ್ಡರರನ್ನು— 'ಸ್ವಾಮಿ, ಎಲ್ಲಿಗೆ ಹೋಗುತ್ತೀರ, ಇದು ಧುರೀಣರ ಠಾಣ್ಯವೆಂದು ನಿಮಗೆ ತಿಳಿಯದೆ'' ಎಂದು ಪ್ರಶ್ನಿಸಿದಳು. ಅವರು ಗೊಳ್ಳನೆ ನಕ್ಕು 'ಅಮ್ಮಾ' ಅಗೋ ನೋಡು, ನನ್ನ ಗುಡಿಸಲು ಅಲ್ಲಿಯೇ ಇದೆ' ಎಂದು ಮುಂದರಿದರಂತೆ ಈ ಹುಡುಗಿ ... ನ್ನಾಗಿ ಹೊತ್ತಿದ್ದರು ಒಮ್ಮೆ ದರ್ಶನಾಪೇಕ್ಷಿಗಳಾದ ಕೆಲವು ಜನ ಗ್ರಾಮಸ್ಥರು ಮಹಾತ್ಮರ ಗುಡಿಸಲನ್ನು ಮುತ್ತಿದರು ಕಾವಲಿಗೆ ನಿಂತಿದ್ದ ಹುಡುಗಿ—'ಏನು? ನಿಮಗೆ ಇಲ್ಲೇನು ಕೆಲಸ?' ಎಂದು ಕೇಳಿದಳು 'ಅಮ್ಮಾ ನಮಗೆ ಗಾಂಧಿಯ ಗುಡಿಸಲನ್ನು ನೋಡಬೇಕೆಂದು ತುಂಬಾ ಆಸೆ' 'ಅವರು ಅಸ್ವಸ್ಥರಾಗಿದ್ದಾರೆಂದು ನಿಮಗೆ ತಿಳಿದಿಲ್ಲವೆ? ಒಳಗೆ ಬಿಡಲಿಕ್ಕೆ

(ಆನೇ ಪುಟವನ್ನು ನೋಡುವುದು)

## ಪಿತ್ತ

ಕೆಲವು ಉದರರೋಗಗಳು ವಿಶೇಷವಾದವುಗಳು. ಕೆಲವು ಅತ್ಯಂತ ವೇದನಾಮಯವಾಗಿರುವುವು ಮತ್ತು ಕೆಲವು ಅತ್ಯಂತ ಕಷ್ಟಮಯವಾಗಿರುವವು ಪಿತ್ತವು ಹೆಚ್ಚುವುದು, ಅತ್ಯಂತ ಸಂಕಷ್ಟಮಯವು ಆಟ ಪಾಟ ಮತ್ತು ಪಾನಗಳಲ್ಲಿ ಹಿತಭಾವನೆಯು ಉಂಟಾಗದು ಪಿತ್ತಪೀಡಿತರಾದರೆ ನಿಮ್ಮಲ್ಲಿನ ಉತ್ಸಾಹವೆಲ್ಲ ಕಳೆದುಹೋಗುವುದು ಸಂಕಟಮಯ ಭಾವನೆಯು ನಿಮ್ಮಲ್ಲುಂಟಾಗುವುದು ಪಿತ್ತದ ಉಪದ್ರವವನ್ನ ಅನುಭವಿಸಿ, ನಂತರ ಉಪಶಮನ ಹೊಂದಿದ, ಓರ್ವ ಮಹಿಳೆಯ ಅನುಭವವು ಹೀಗಿರುತ್ತದೆ ಆಕೆಯು ಎಸ್ ಡಿ ಜ ಟಿ

"ನಾನು ಪಿತ್ತ ಉಪದ್ರವದಿಂದ ಮಹಾ ಸಂಕಷ್ಟಕ್ಕೆ ಒಳಗಾಗಿದ್ದೆನು.ನನ್ನ ಮಿತ್ರರೊಬ್ಬರು, ಒಂದು ಉಪಶಮನ ದಾರಿಯನ್ನು ತೋರಿಸುವ ವರೆಗೆ, ನಾನು ಆ ಸಂಕಟವನ್ನು ಅನುಭವಿಸಿದೆನು ಮೆಕ್ಲೀನ್ ಬ್ರೇಂಡ್ ಪೌಡರೆ ನನ್ನ ಮಿತ್ರನು ತೋರಿಸಿದ ಹಾದಿಯು ಅಂದಿನಿಂದ ಆ ಪೌಡರನ್ನು ಕ್ರಮವಾಗಿ ಸೇವಿಸಿ, ಈಗ ಪಿತ್ತದ ಉಪದ್ರವದಿಂದ ಹೊರಗಾಗಿರುವೆನು

"ಈ ವಿಚಾರದಲ್ಲಿ ಮೆಕ್ಲೀನ್ ಬ್ರೇಂಡ್ ಅತ್ಯಂತ ಪರಿಣಾಮಕಾರಿಯಾದುದರ ವಿಚಾರ ನಿಮಗೆ ಬರೆಯಬೇಕೆಂದ ನನಗೆನಿಸಿತು ಯಾವುದರಿಂದ ನಾನು ಗುಣಹೊಂದಿದ್ದೆಂದು ನನ್ನ ಮಿತ್ರರು ಕೇಳಿದ್ದಕ್ಕೆ, ನಾನವರೊಡನೆ ಮೆಕ್ಲೀನ್ ಬ್ರೇಂಡಿನ ಗುಣಕಥನ ಮಾಡಿರುವೆನು ಪಿತ್ತ ನಿವಾರಣೆಗೆ ಅದೊಂದು ಶ್ರೇಷ್ಠ ಉಪಾಯವೆಂದು ಅವರಿಗೆ ಬೋಧಿಸಿರುವೆನು' ಅವರಿಗೂ ಅದರಿಂದ ಅತ್ಯಂತ ಸುಖಕರವೆನಿಸುವ ಪರಿಣಾಮಗಳುಂಟಾಗಿವೆ

"ಮೆಕ್ಲೀನ್ ಬ್ರೇಂಡಿನ ಸೇವನೆಯಿಂದ ಯಾವತರದ ಆಹಾರವನ್ನು ಏನೊಂದು ಅಂಜಿಕೆಯಿಲ್ಲದೆ ಸೇವಿಸಬಹುದು ಅಲ್ಲದೆ, ಅದರಿಂದ ನವಚೇತನವು ಉಂಟಾಗುತ್ತದೆ"

ಉದರ ಸಂಬಂಧ ಪೀಡೆಗಳನ್ನು ಹೋಗಲಾಡಿಸುವುದ ಶಕ್ತಿದಾಯಕವು ಮುಂದಕ್ಕೆ ವ್ಯರ್ಥವಾಗಿ ನೋವನ್ನು ಅನುಭವಿಸಬೇಡಿರಿ. ಖಾತ್ರಿಯಾದ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಹುಡಿಯನ್ನು ಕೊಂಡುಕೊಳ್ಳಿರಿ. ಅದರಿಂದ ನೀವು ಸಂಪೂರ್ಣ ಗುಣಮುಖರಾಗುವಿರಿ.ನವ ಶಕ್ತಿಯನ್ನು ಹೊಂದುವಿರಿ

Alex. C. Maclean

ಎಂ. ಸಹಿಯುಳ್ಳಂತೆಯೂ,ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿ ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ

ಇಂತಹ ನಮೂನೆಯ ಕಡಿಮೆ ದರದ ಪರಿಶೀಲಿಸಿ ... ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರ್ಸ್‌ಗಳಿಂದ ... ಜೆ ಎಲ್ ಮೋರಿಸನ್, ಸನ್ ಎಂಡ್ ಜೋನ್ಸ (ಇಂಡಿಯಾ) ಲಿಮಿಟೆಡ್ ಸ್ಟ್ಯಾಂಡರ್ಡ್ ಬಿಲ್ಡಿಂಗ್, ಹಾರ್ನ್‌ಬಿ ರೋಡ್, ಮುಂಬಯಿ

# ಮಂತ್ರಿಮಂಡಲಗಳ ರಾಜೀನಾಮೆಯಿಂದ ಆಳರಸರು ಕಲಿತುಕೊಳ್ಳಬೇಕಾದ ಪಾಠಗಳು!!!

★ ★ ★

ಸಂಯುಕ್ತ ಪ್ರಾಂತ್ಯ ಬಿಹಾರಗಳ ಕಾಂಗ್ರೆಸ್ ಮಂತ್ರಿಮಂಡಲಗಳು, ರಾಜಕೀಯ ಕೈದಿಗಳ ಬಿಡುಗಡೆಯ ಬಾಬಿನಲ್ಲಿ ವ್ಹಾಯ್ಸರಾಯರು ಪ್ರವೇಶಿಸಿದುದನ್ನು ನಿಷೇಧಿಸಿ ತಮ್ಮ ಪದವಿಗಳಿಗೆ ರಾಜಿನಾಮೆಕೊಟ್ಟು ಕೆಲವೇ ದಿನಗಳೊಳಗಾಗಿ ಪ್ರಾಂತೀಯ ಗವರ್ನರರು ಮತ್ತು ಅವರೊಳಗೆ ಸಂಧಿಯಾಗಿ ಅವರು ತಮ್ಮ ರಾಜಿನಾಮೆಗಳನ್ನು ಹಿಂದಕ್ಕೆ ತೆಗೆದುಕೊಂಡರು ಈಗ ಅವರು ಮೊದಲಿನಂತೆಯೇ ಆಡಳಿತ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ

ಗವರ್ನಮೆಂಟ ಆಫ್ ಇಂಡಿಯಾ ಆಕ್ಟಿನ 126(5) ಕಲಮಿಗನುಗುಣವಾಗಿ ವ್ಹಾಯ್ಸರಾಯರು ನಡುವೆ ಬಂದು, ಮಂತ್ರಿಗಳು ರಾಜಕೀಯ ಕೈದಿಗಳನ್ನು ಒಮ್ಮಿಂದೊಮ್ಮೆಗೆ ಬಿಡಲಾಗದೆಂದು ಅವರು ಸಂಯುಕ್ತ ಪ್ರಾಂತ್ಯ, ಬಿಹಾರಗಳ ಗವರ್ನರುಗಳಿಗೆ ತಿಳಿಸಿದರು ಹೀಗೆ ಅವರು ಪ್ರವೇಶಿಸಿದ ಕಾರಣ ರಾಜಕೀಯ ಕೈದಿಗಳ ಬಿಡುಗಡೆಯಿಂದ ದೇಶದಲ್ಲಿ ಅಶಾಂತತೆ ಉಂಟಾದೀತೆಂಬ ಭಯ ಆದರೆ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಶಾಂತತೆಯನ್ನು ಕಾಪಾಡುವ ಜವಾಬುದಾರಿಯು ಪ್ರಾಂತಿಕ ಮಂತ್ರಿಮಂಡಲಗಳಿಗೆ ಸೇರಿದುದಾಗಿದೆ ಆ ಮಂತ್ರಿಮಂಡಲಗಳು ಈ ಹೊಣೆಯನ್ನು ಹೊತ್ತುಕೊಳ್ಳಲು ಅಸಮರ್ಥವಾಗಿವೆಯೆಂದು ಸ್ಪಷ್ಟವಾಗಿ ಕಂಡುಬಂದ ಸಂದರ್ಭಗಳಲ್ಲಿ ಮಾತ್ರ 52ನೇ ಕಲಮಿಗನುಗುಣವಾಗಿ ಗವರ್ನರುಗಳು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಬಹುದು ಪ್ರಕೃತ ಸಂದರ್ಭದಲ್ಲಿ ಕೆಲವು ಮಂದಿ ರಾಜಕೀಯ ಕೈದಿಗಳ ಬಿಡುಗಡೆಯಿಂದ ಬಿಹಾರ ಸ ಪ್ರಾಂತಗಳಲ್ಲಿ ಅಶಾಂತತೆಯು ಉಂಟಾಗುವ ಭೀತಿಯಿರಲಿಲ್ಲವಾದ ಕಾರಣ ಆ ಪ್ರಾಂತ್ಯಗಳ ಗವರ್ನರುಗಳು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಲಿಲ್ಲ

ವ್ಹಾಯಸರಾಯರು ಕೆಲವೊಂದು ವಿಶಿಷ್ಟ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಮಾತ್ರ 126(5) ಕಲಮಿಗನುಗುಣವಾಗಿ ಪ್ರಾಂತೀಯ ಆಡಳಿತದಲ್ಲಿ ಕೈಹಾಕಬಹುದು ಅಂಥ ಪರಿಸ್ಥಿತಿಯಾವುದೆಂದರೆ— ಒಂದು ಪ್ರಾಂತ್ಯದಲ್ಲಿ ಪಿತೂರಿ ಒಳಸಂಚಿನ ಸಿದ್ಧತೆ ಮಾಡುತಿದ್ದು ಆ ಸಿದ್ಧತೆಯಿಂದ ಆ ಪ್ರಾಂತ್ಯದಲ್ಲಿ ಅಶಾಂತತೆ ಉಂಟಾಗದಿದ್ದರೂ ಅದನ್ನು ಬಿಟ್ಟು ಇತರ ಒಂದು ಅಥವಾ ಹೆಚ್ಚಿಗೆ ಪ್ರಾಂತ್ಯಗಳಲ್ಲಿ ಅಶಾಂತತೆ ವಗೈರೆ ಉಂಟಾಗುವ ಹಾಗಿದ್ದರೆ ಮಾತ್ರ ಆ ಒಂದು ಪ್ರಾಂತ್ಯದಲ್ಲೂ ನಡೆಯುತ್ತಿರುವ ಪಿತೂರಿ ವಗೈರೆಯನ್ನು ನಿಲ್ಲಿಸಲಿಕ್ಕೆ ವ್ಹಾಯಸರಾಯರು ಮಂತ್ರಿಮಂಡಲದ ಅಭಿಪ್ರಾಯಗಳಿಗೆ ವಿರೋಧವಾಗಿ ತಮಗೆ ಯುಕ್ತ ಕಂಡಂತೆ ನಡೆಯಲು ಗವರ್ನರರಿಗೆ ಸೂಚಿಸಬಹುದು. ಆದರೆ ರಾಜಕೀಯ ಕೈದಿಗಳ ಬಿಡುಗಡೆಯೆಂಬುದು ಪಿತೂರಿ ಒಳಸಂಚಿಗೆ ಸಂಬಂಧಪಟ್ಟ ವಿಷಯವಲ್ಲ ಮೇಲಾಗಿ ಆ ಕೈದಿಗಳ ಬಿಡುಗಡೆಯಿಂದ ಇತರ ಪ್ರಾಂತ್ಯಗಳಲ್ಲಿ ಅಶಾಂತತೆ ಹರಡುವ ಸಂಭವಗಳು ಸಹ ಇದ್ದಿಲ್ಲ ಎಲ್ಲಿ ಕ್ರಾಂತಿಕಾರರ ಭಯವು ವಿಶೇಷವಾಗಿರುವದೋ ಆ ಪಂಜಾಬ ಬಂಗಾಳ ಪ್ರಾಂತ್ಯದ ಸರಕಾರಗಳು ಸಹ ಯಾವದೇ ಪ್ರಕಾರದಿಂದ ಸಂಯುಕ್ತ ಪ್ರಾಂತ್ಯ, ಬಿಹಾರಗಳ ರಾಜಕೀಯ ಕೈದಿಗಳ ಬಿಡುಗಡೆಗೆ ಅಡ್ಡಿ ಆಕ್ಷೇಪಗಳನ್ನು ತಂದಿರಲಿಲ್ಲ ರಾಜಕೀಯ ಕೈದಿಗಳ ಬಿಡುಗಡೆಯನ್ನು ನಿಷೇಧಿಸಲಿಕ್ಕಾಗಿ 126(5) ಕಲಮು ಸರ್ವಥಾ ಇರುವದಿಲ್ಲ. ಯಾಕಂದರೆ ಅಹಿಂಸಾತ್ಮಕ ಅಥವಾ ಹಿಂಸಾತ್ಮಕ ಕೈದಿಗಳನ್ನು ಬಿಟ್ಟು ಮಾತ್ರದಿಂಥ ಅಶಾಂತತೆ ಉಂಟಾಗುವದೆಂದು ಗ್ರಹಿಸುವದು ತಪ್ಪು, ಒಂದು ಕಾಲದಲ್ಲಿ ಮಹಾ ಕ್ರಾಂತಿಕಾರಿಗಳಾಗಿ ಮರಣಾಂತ ಶಿಕ್ಷೆಗೆ ಗುರಿಯಾಗಿದ್ದ ಡಿವೆಲರಾ, ಕೊಸ್‌ಗ್ರೇವ, ಕೊಲ್ಲಿನ್ಸ ಮೊದಲಾದವರ ಬಿಡುಗಡೆ ದೈವಯೋಗದಿಂದ ಅಥವಾ ಸರಕಾರದ ಯಾ ಭಾವದಿಂದ ಉಂಟಾದುದರಿಂದಲೇ ಅವರು ಮುಂದೆ ತಮ್ಮ ದೇಶಗಳಲ್ಲಿ ಶಾಂತಿಸ್ಥಾಪಕರಾಗಿ ರಾರಾಜಿಸಿದರು ಸರಕಾರದ ದ್ರೋಹಿಗಳಾಗಿದ್ದವರೇ ಸರಕಾರದ ಆಧಾರಸ್ತಂಭರಾದರು ಆದ್ದರಿಂದ ರಾಜಕೀಯ ಕೈದಿಗಳು ಅವರು ಬೇಕಾದರೆ ಕ್ರಾಂತಿಕಾರರಾಗೆಯೇ ಇದ್ದಿರಬಾರದೇಕೆ?— ಅವರ ಬಿಡುಗಡೆ ಮಾತ್ರದಿಂದ ಅವರ ಪ್ರಾಂತ್ಯಗಳನ್ನು ಬಿಟ್ಟು ಉಳಿದ ಪ್ರಾಂತ್ಯಗಳಲ್ಲಿ ಅಶಾಂತಿ ಉಂಟಾಗುವದೆಂದು ಹೇಳಿ, ಪ್ರಜಾಪ್ರತಿನಿಧಿ ಜವಾಬುದಾರರಾದ ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಮಂಡಲಗಳ ಕಾರ್ಯದಲ್ಲಿ ವ್ಹಾಯಸರಾಯರು ಕೈಹಾಕಿದ್ದು ಅನುಚಿತ ಮಾತ್ರವಲ್ಲ, ಅವರಿಗೆ ದೊರೆತ ಅಧಿಕಾರದ ದುರುಪಯೋಗ ಕೂಡ ಆಯಿತೆನ್ನಬಹುದು.

ವೈಸರಾಯರು ತಮ್ಮ ಪ್ರಕಟಣಾ ಪತ್ರದಲ್ಲಿ ಈ ಅನೌಚಿತ್ಯ ಮತ್ತು ಈ ದುರುಪಯೋಗವನ್ನು ಒಪ್ಪಿಲ್ಲವಾದರೂ, ಮುಂದೆ ಮಂತ್ರಿಮಂಡಲಗಳು ತಮ್ಮ ರಾಜಿನಾಮೆಯನ್ನು ಹಿಂತೆಗೆದುಕೊಳ್ಳುವಂತೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟರು ಅದಕ್ಕಾಗಿ ಅವರೂ, ರಾಜಿನಾಮೆ ಕೊಡಲಿಕ್ಕೆ ಕಾರಣವಾದ ಪ್ರತಿಕೂಲ ಪರಿಸ್ಥಿತಿಯ ನಿವಾರಣೆಯಾದೊಡನೆ ತಮ್ಮ ರಾಜಿನಾಮೆಗಳನ್ನು ಹಿಂದಕ್ಕೆ ತೆಗೆದುಕೊಂಡ ಮಂತ್ರಿಮಂಡಲಗಳೂ ಶ್ಲಾಘನೆಗೆ ಪಾತ್ರವಾಗಿವೆ ಮಂತ್ರಿಮಂಡಲಗಳಿಗೆ ಕಾನೂನು ಪ್ರಕಾರ ಪ್ರಾಪ್ತವಾದ ಅಧಿಕಾರಗಳಲ್ಲಿ ಕೈಹಾಕುವದಿಲ್ಲವೆಂದು ಭರವಸೆ ದೊರೆತಿದೆ ಪ್ರಾಂತ್ಯಗಳಲ್ಲಿ ನ್ಯಾಯ ನೀತಿಗೆ ಮನ್ನಣೆ ದೊರೆಯಲಿಕ್ಕೂ ಶಾಂತಿ ಕಾಪಾಡಲಿಕ್ಕೂ ಬೇಕು ಬೇಕಾದ ಉಪಾಯಗಳನ್ನು ಕೈಕೊಳ್ಳುವ ಭಾರವು ಮಂತ್ರಿಮಂಡಲಗಳದ್ದೇ ಎಂದು ಒಪ್ಪಿದಂತಾಗಿದೆಯಲ್ಲದೆ, ಆ ಬಾಬಿನಲ್ಲಿ ಅವರು ಸರ್ವ ತಂತ್ರ ಸ್ವತಂತ್ರರಾಗಿದ್ದಾರೆಂದೂ ಗೊತ್ತಾಗಿದೆ ಮಂತ್ರಿಮಂಡಲಗಳ ಈ ಸ್ವಾತಂತ್ರ್ಯದ ಲವಲೇಶ ಕಿತ್ತುಕೊಳ್ಳುವ ಅಧಿಕಾರವು ವೈಸರಾಯರಿಗಾಗಲೀ ಗವರ್ನರುಗಳಿಗಾಗಲೀ ಇರುವದಿಲ್ಲ ಪಿತೂರಿ ಒಳಸಂಚುಗಳು ಇತ್ಯಾದಿ ವಿಪ್ಲವಕಾರಿ ಕಾರಸ್ಥಾನಗಳು ನಡೆದಾಗ ಮಾತ್ರ, ಅವರು ವಿಶೇಷ ಪರಿಸ್ಥಿತಿಯಲ್ಲಿ ತಮ್ಮ ವಿಶೇಷಾಧಿಕಾರಗಳನ್ನು ಕೇವಲ ಶಾಂತತೆಯ ರಕ್ಷಣೆಗಾಗಿ ಉಪಯೋಗಿಸಿಕೊಳ್ಳಬಹುದು ಅಷ್ಟೇ! ಉಳಿದ ಕಾಲಗಳಲ್ಲಿ ಪ್ರಜೆಗಳಿಗೆ ಜವಾಬುದಾರರಾದ ಮಂತ್ರಿಮಂಡಲಗಳ ಕಾರುಬಾರೇ ಪ್ರಾಂತ್ಯಗಳಲ್ಲಿ ನಡೆಯಬೇಕು

ಈ ರೀತಿ ಒಂದು ಒಪ್ಪಂದವು ಗವರ್ನರುಗಳು ಮತ್ತು ಮಂತ್ರಿಮಂಡಲಗಳೊಳಗೆ ಆದ ನಿಮಿತ್ತ ಕಾಂಗ್ರೆಸಿನ ಕಿರೀಟಕ್ಕೆ ಹೊಸತಾದೊಂದು ಗರಿಯನ್ನು ಇಟ್ಟಂತಾಯಿತು ಅದರ ಕೀರ್ತಿ ಪ್ರತಿಷ್ಠೆಗಳು ಬೆಳೆದುವು ಕಾಂಗ್ರೆಸಿಗೆ ಜನರ ಬೆಂಬಲ ಸಹಕಾರ ಸಹಾಯಗಳು ಅಧಿಕಾಧಿಕವಾಗಿ ದೊರೆಯುತ್ತ ಹೋದ ಹಾಗೆ ಅದು ಸ್ವರಾಜ್ಯ ಪ್ರಾಪ್ತಿಯ ಮಾರ್ಗದಲ್ಲಿ ಹೆಚ್ಚೆಚು ವೇಗದಿಂದ ಹೆಜ್ಜೆಗಳ ಮೇಲೆ ಹೆಜ್ಜೆಗಳನ್ನಿಟ್ಟು ಕ್ಷೇತ್ರದಲ್ಲಿ ನಿಶ್ಚಿತ ಸ್ಥಾನವನ್ನು ಹೋಗಿ ಮುಟ್ಟುವದು ಕಾಂಗ್ರೆಸು ಎಂದರೆ ಜನತೆ, ಜನತೆ ಎಂದರೆ ಕಾಂಗ್ರೆಸು ಎಂದಾಗ ಸ್ವರಾಜ್ಯವೆಂಬ ನಮ್ಮ ಜನ್ಮಸಿದ್ಧ ಹಕ್ಕನ್ನು ಪಡೆಯುವದು ಕಷ್ಟಸಾಧ್ಯವಾಗುವದಿಲ್ಲ ಅದು ಕರತಲಾಮಲಕದಂತೆ ಅತ್ಯಂತ ಸುಲಭವಿರುವದು


## ಇನೋಸ್ ಫ್ರುಟ್ ಸಾಲ್ಟ




ಜ್ವರ ಮತ್ತು ಶೀತದ ನಂತರ ಅಶಕ್ತಿ, ಅವನು ಉತ್ತಮ ಸ್ಥಿತಿಯಲ್ಲಿ ಬರಲು ಸಾಧ್ಯವಿರಲಿಲ್ಲ ಅವನು ಯಾವಾಗಲೂ ದಣಿಯುತ್ತಿದ್ದು ರೇಗುಸುವನು




ಇನೋ ಅವನ ಸುಧಾರಿಕೆಗೆ ಅಡ್ಡಿ ಬರುವ ವಿಷಗಳನ್ನು ಹೋಗಲಾಡಿಸಿತು ಪುನಹ ಅವನಿಗೆ ಆರೋಗ್ಯಾವಸ್ಥೆಗೆ ತಂದಿತು.

### ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ



ನೀವು ಆರೋಗ್ಯದಲ್ಲಿರುವಿರಿ ಇನೋಸ್ ಫ್ರುಟ್ ಸೊಲ್ಟ Eno's Fruit Salt' ಇದು ಹೊಟ್ಟೆಯ ಅಸ್ವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ, ಮಲಬದ್ಧತೆ ತಲೆನೋವು, ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರುಗಳಿಂದ ಹೊಗಳಿಸಿಕೊಂಡಿದೆ ನೀವು ಈ ಉತ್ತಮವಾದ ಪೇಯವನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು ಇದೇ ಆರೋಗ್ಯವು ಇನೋ 'ENO' ಇದಕ್ಕೆ ಸೌಮ್ಯ ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿದೆ

ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ Eno s Fruit Salt' ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ

ಇನೊಸ್ ಫ್ರುಟ್ ಸೋಲ್ಟಿನಲ್ಲಿ 'Eno's Fruit Salt ಒಳ್ಳೇ ಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರಿರುತ್ತವೆ

EX 15

**Eno's 'Fruit Salt'**


ಒಂದು ಬಾರಿಗೆ ಸಂಯುಕ್ತ ಪ್ರಾಂತ್ಯ ಬಿಹಾರಗಳ ಮಂತ್ರಿಮಂಡಲಗಳ ರಾಜಿನಾಮೆಯಿಂದ ಉಂಟಾದ ಘಟನಾತ್ಮಕ ತೊಡಕು ಹೇಗೂ ದೂರವಾದಂತಾಯಿತು ಸ್ನೇಹ ಸೌಹಾರ್ದ ಭಾವನೆಗಳು ಇಕ್ಕಡೆಯಲ್ಲೂ ಇದ್ದುದರಿಂದ ಮಾತ್ರ, ಈ ತೊಡಕು ಬಹು ಸುಲಭದಲ್ಲಿ ದೂರವಾಗಲು ಸಾಧ್ಯವಾಯಿತೆಂಬುದು ಬ್ರಿಟಿಷ ಆಳರಸರಿಗೂ ತಿಳಿದಿದೆ ನಮಗೂ ತಿಳಿದಿದೆ ಈಗ ಆಳರಸರು ಈ ಎಲ್ಲ ಘಟನೆಗಳಿಂದ ಒಂದು ಪಾಠವನ್ನು ಕಲಿಯಲಿಕ್ಕೆ ಇರುವದಿಲ್ಲವೆ? ಹೇಗೆ ಅವರು ಫೆಡರೇಶನನ್ನ ಈ ದೇಶದ ಮೇಲೆ ಹೊತ್ತುಹಾಕಬೇಕೆಂದು ಹಟತೊಟ್ಟಿದ್ದಾರೋ, ಹಾಗೆಯೇ ಕಾಂಗ್ರೆಸು ಕೂಡ ಅದು ಬೇಡವೆಂದು ನಿರಾಕರಿಸಲಿಕ್ಕೆ ತದಿ ಕಾಲಿನ ಮೇಲೆ ನಿಂತಿದೆ ಫೆಡರೇಶನು ಕಾಂಗ್ರೆಸಿಗೆ ಮಾತ್ರ ಬೇಡವಾಗಿರುವುದೆಂದಲ್ಲ ಈ ದೇಶದಲ್ಲಿ ಅದು ಯಾರಿಗೂ ಬೇಡವಾಗಿದೆ, ಯಾರ ಬೆಂಬಲದ ಮೇಲೆ ಫೆಡರೇಶನನ್ನು ಹೊತ್ತುಹಾಕಬೇಕೆಂದು ಆಳರಸರು ನಿಶ್ಚಯಿಸಿದ್ದಾರೋ, ಆ ಸಂಸ್ಥಾನಾಧಿಪತಿಗಳಿಗೆ ಕೂಡ ಅದು ಬೇಡವಾಗಿದೆ ಆದರೆ ಬೇಡವಾದ್ದನ್ನು ಬೇಡವೆಂದು ಹೇಳಲಿಕ್ಕೆ ಧೈರ್ಯ ಸಾಹಸವಾಗಲೀ ಅದನ್ನು ಪೂರ್ಣ ನಿರಾಕರಿಸಿ ನಿರ್ಲಿಪ್ತವಾಗಿರಲಿಕ್ಕೆ ಬೇಕಾದ ಶಕ್ತಿಸಾಮರ್ಥ್ಯವಾಗಲೀ ಕಾಂಗ್ರೆಸಿಗಿರುವಷ್ಟು ಆ ಸಂಸ್ಥಾನಾಧೀಶರಿಗೂ ಇತರ ರಾಜಕೀಯ ಪಕ್ಷಪಂಗಡಗಳಿಗೂ ಇರುವದಿಲ್ಲ ಕಾಂಗ್ರೆಸಿನ ಬಲವೆಷ್ಟೆಂಬುದು ಅದು ಸವಿನಯ ಕಾಯದೆಭಂಗ ಮಾಡುತಿದ್ದಾಗ ಮಾತ್ರವಲ್ಲ, ಈಗ 11ರ ಪೈಕಿ 7 ಪ್ರಾಂತ್ಯಗಳಲ್ಲಿ ಅಧಿಕಾರಾರೂಢವಾಗಿರುವಾಗಲೂ ಆಳರಸರಿಗೆ ಗೊತ್ತಾಗಬಹುದು ಗೊತ್ತಾಗಿಲ್ಲವಾದರೆ, ಮೊನ್ನೆ ಮೊನ್ನೆ ನಡೆದ ಘಟನೆಗಳಿಂದಾದರೂ ಸ್ವಲ್ಪ ತಿಳಿದುಕೊಳ್ಳಲಿ

ಜನತೆಗೆ ಬೇಡವಾದ ಫೆಡರೇಶನನ್ನು ಅದರ ತಲೆ ಮೇಲೆ ಹೊತ್ತುಹಾಕಿ, ಆಳರಸರು ಬಿಹಾರ ಸಂಯುಕ್ತ ಪ್ರಾಂತ್ಯಗಳಲ್ಲಿ ತೋರಿಸಿದ ಅಚಾತುರ್ಯ, ಅಜ್ಞಾನ, ಬುದ್ಧಿಹೀನತೆಯನ್ನೇ ಆಗ ಪುನಃ ತೋರಿಸುವರೆ? ಹಾಗೆ ಮಾಡುವ ಮೊದಲು ತಮ್ಮ ಕಾರ್ಯದ ಪರಿಣಾಮವೇನಾದೀತೆಂದು ಅವರು ಆಲೋಚಿಸಿದರೆ, ಇಕ್ಕಡೆಯವರಿಗೂ ಕ್ಷೇಮವಿದೆ ಮೊದಲಿನ ತಪ್ಪನ್ನೇ ಅವರು ಇನ್ನೊಮ್ಮೆ ಮಾಡುವರಾದರೆ, ಆಗ ಇನ್ನೊಂದು ಘಟನಾತ್ಮಕ ತೊಡಕು ಉಂಟಾಗುವದು ನಿಶ್ಚಯ, ಮತ್ತೊಮ್ಮೆ ಅಹಿಂಸಾತ್ಮಕ ಸಂಗ್ರಾಮವು ಪ್ರಾರಂಭವಾಗಲೂಬಹುದು ಆದರೆ ಹಿಂದಿನ ಘಟನೆಗಳಿಂದ ಪಾಠ ಕಲಿತು ಆಳರಸರು, ಬೇಡವಾದ ಫೆಡರೇಶನನ್ನು ಈ ದೇಶದ ಮೇಲೆ ಹೊರಿಸಲಾರರೆಂದೇ ಆಶಿಸೋಣ

ಹರಿಜನ' ಪತ್ರಿಕೆಯಲ್ಲಿ ಮಹದೇವ ದೇಸಾಯಿಯವರ ಅಗ್ರಲೇಖ

## ಮ್ಯುನಿಸಿಪಾಲಿಟಿ

(೧೮ನೇ ಪುಟದಿಂದ ಮುಂದುವರಿಸಿದುದು)

ಸಂಸ್ಥೆಗಳಾದಿಗಳನ್ನು ಮ್ಯುನಿಸಿಪಾಲಿಟಿಯು ನಡೆಸಿಕೊಂಡು ಬರುವಂತಾಗಬೇಕು ವಿಷ್ಣು ಮ್ಯುನಿಸಿಪಾಲಿಟಿಗಳು ತಮ್ಮವೇ ಆಗಿರುವ ವಿದ್ಯುತ್ ಉತ್ಪಾದನೆಯ ಕಾರ್ಖಾನೆಗಳಿಟ್ಟಿವೆ, ಇನ್ನೂ ಇಡಬಹುದು ಈ ಕಡೆಗೆ ಮುನಿಸಿಪಾಲಿಟಿಗಳು ಗಮನಕೊಡಲೇ ಬೇಕು ಇನ್ನು ಮ್ಯುನಿಸಿಪಾಲಿಟಿಗಳೊಳಗೆ ವಿದ್ಯುತ ಪ್ರಚಾರ ಮಾಡುವುದಕ್ಕೆ ಮ್ಯುನಿಸಿಪಾಲಿಟಿಗಳ ಹಕ್ಕನ್ನೇ ಮೊದಲನೆದಾಗಿ ಎಣಿಸುವುದೆಂದ ಸರಕಾರವೇ ಈಗ ತಿಳಿಸಿದೆ ಮ್ಯುನಿಸಿಪಾಲಿಟಿಗಳು ಬೇಂಕುಗಳನ್ನೂ ಸಹಕಾರಿ ಸಂಘ ಸ್ಟೋರುಗಳನ್ನೂ ಸ್ಥಾಪಿಸುವುದೂ, ಚಲಾವಣೆಗೊಸಲುವಾಗಿ ವಾಹನಾದಿಗಳನ್ನು ಇಡುವುದೂ ಅಗತ್ಯವೇ — ನಮ್ಮ ಕೌನ್ಸಿಲು ಈ ಭಾಗದಲ್ಲಿ ಏನು ಮಾಡಲಿದೆ?

**ಕೆನರಾ ಬೇಂಕ್ ಲಿಮಿಟೆಡ್, ಪುತ್ತೂರು.**

## ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಅದರ ಮೇಲಣ ಬಡ್ಡಿಯನ್ನಾಗಲೀ ವ್ಯಾದೆಗೆ ಸರಿಯಾಗಿ ಕೊಡದೆ ಬಾಕಿ ಮಾಡಿಕೊಂಡದ್ದರಿಂದ, ಸದ್ರಿಯವರಿಗೆ ಕ್ರಮವಾಗಿ ಬಿಟ್ಟ ರಿಜಿಸ್ಟ್ರಿ ನೋಟೀಸು ಮೂಲಕ ಅವರು ಸಿಕ್ಕಲಿಲ್ಲವಾಗಿ ಮರಳು ಬಂದಿರುವುದರಿಂದಲೂ, ಕಳೆದ ಇಸವಿ ಡಿಸೆಂಬರ ತಾ 17ರಲ್ಲು ಸ್ವದೇಶಾಭಿಮಾನಿ ಗಜೇಟಿನಲ್ಲಿ ಪ್ರಕಟಿಸಿದ ಮೇರೆಯೂ ಇದೇ ತಿಂಗಳ 9ನೇ ತಾರೀಕು ಮಧ್ಯಾಹ್ನ ಘಂಟೆ 2ಕ್ಕೆ ಸದ್ರಿ ಅಡವಿಟ್ಟ ನಗಗಳನ್ನು ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಸದ್ರಿ ಸಾಲದ ಅಸಲು, ಬಡ್ಡಿ, ಬಡ್ಡಿಗೆ ಬಡ್ಡಿ, ಖರ್ಚು ವಗೈರೆಗಳ ಬಾಬ್ತು ವಜಾ ಕಳೆದು ಬಾಕಿ ಮೊಬಲಗನ್ನು ಸದ್ರಿಯವರ ಹೆಸರಿನಲ್ಲಿ ಅಧಮಾನಾತು ಖಾತೆಗೆ ಈ ಕೆಳಗೆ ಕಾಣಿಸಿದಂತೆ ಇಟ್ಟುಕೊಂಡಿರುತ್ತದೆ ಈ ಖಾತೆಯ ಐವೇಜನ್ನು ಸದ್ರಿಯವರು ತ್ವರ್‍ಯದಲ್ಲಿಯೇ ಕೊಂಡು ಹೋಗಬೇಕಾಗಿಯೂ ಅದಕ್ಕೆ ಮೇಲ್ಕಂಡ ಬೇಂಕಿನಿಂದ ಯಾವ ಸಲೆಯ ಬಡ್ಡಿಯೂ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ

ಈ ಪ್ರಕಟಣೆಯ ನೋಟೀಸು ಖರ್ಚು ಅವರೇ ತೆರತಕ್ಕದಾದುದರಿಂದ ಅವರ ಅಮಾನಾತು ಖಾತೆಗೇನೇ ಈ ಚಾರ್ಜು, ಖರ್ಚು ಬರೆಯಲಿಕ್ಕಿರುವುದು

S L 150/35 ಗೋವಿಂದ ಬಟ್ಟ, ಸುಬ್ಬಣ್ಣ ಬಟ್ಟರ ಮಗ, ಎನೆಕ್ಕೋಡಿ, ಪ್ರಣಚೆ ಗ್ರಾಮ ವಿಟ್ಲ ಪೋಸ್ಟು, ಏಲಂ ಮಾಡಿ ಹುಟ್ಟಿ ಬಂದ ರೂ 18–4 0 ಸಾಲದ ಬಾಬ್ತು ವಜಾ ಕಳೆದ ಮೊಬಲಗು ರೂ 14–1–6 ಅಮಾನಾತು ಖಾತೆ ರೂ 4–2 6

S L 169/35 ಶಂಕರನಾರಾಯಣ ಬಟ್ಟ ಗಣಪತಿ ಬಟ್ಟರ ಮಗ, ಕರೋಪಾಡಿ ಗ್ರಾಮ ವಿಟ್ಲ ಪೋಸ್ಟು, ಏಲಂ ಮಾಡಿ ಹುಟ್ಟಿ ಬಂದ ರೂ 35–8–0, ಸಾಲದ ಬಾಬ್ತು ವಜಾ ಕಳೆದ ಮೊಬಲಗು ರೂ 24–13–8 ಅಮಾನತು ಖಾತೆ ರೂ 10–10–4

Office of the Bank Puttur 9–3–1938 M Anantha Bhandary, Agent

---

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O P No 28/1938

1 ಖದಿಜಾಬಿ, ಹಳೇಕೋಟೆ ಕುಂಞಾ ಮ್ಯಾಂಕುಟ್ಟಿ ಬ್ಯಾರಿ ಮಗಳು ಮ ಪುದಿಯಪೊರಿ ಮಹಮ್ಮದ್ ಹಾಜ್ಯಾರರ ಹೆಂಡತಿ, 2 ಐಸಬಿ 3 ಕುಂಞಾಲಿ, 4 ಕುಂಞಾಮಾಹಿನ್–1ನೇ ಅರ್ಜಿದಾರಳ ಮಕ್ಕಳು, ಪೈಕಿ 4ನೇ ಅರ್ಜಿದಾರನು ಪ್ರಾಯದ ಕ್ಷೇಮಚಿಂತಕಳು ಆತನ ತಾಯಿ 1ನೇ ಅರ್ಜಿದಾರಳು ಎಲ್ಲರೂ ಕಾಸರಗೋಡು ತಾಲೂಕು ಕಳನಾಡು ಗ್ರಾಮದ ಚಂದ್ರಗಿರಿಯಲ್ಲಿರುವವರು

1ನೇ ಅರ್ಜಿದಾರಳ ಗಂಡ ಮತ್ತು 2ರಿಂದ 4ನೇ ಅರ್ಜಿದಾರರ ತಂದೆಯಾಗಿದ್ದ ಕಾಸರಗೋಡು ತಾಲೂಕು ಕಳನಾಡು ಗ್ರಾಮದಲ್ಲಿದ್ದ ಪುದಿಯ ಪೊರಿ ಮಹಮ್ಮದ ಹಾಜ್ಯಾರರು ತಾರೀಕು 3–3–1937ರಲ್ಲು ಮೃತಪಟ್ಟಿರುವದರಿಂದ ಅವರಿಗೆ ಅರ್ಜಿಯಲ್ಲಿ ವಿವರಿಸಿದ ರೀತಿ ಬರತಕ್ಕ ಋಣ ವಸೂಲು ಮಾಡಿಯುವರೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಸದರೀ ಅರ್ಜಿಯು ತಾರೀಕು 31–3–1938ರಲ್ಲು ತನಿಖೆಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪಿಸುವವರು ಸದರೀ ತಾರೀಕಿನ ಒಳಗೆ ಅವರ ಆಕ್ಷೇಪವನ್ನು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸುವದಾಗುತ್ತದೆ

ಕಾಸರಗೋಡು, 10–3–38 C Rama Rao, ವಕೀಲ್

---

ದಿನೇ ದಿನೇ ಹಗಲೂ ರಾತ್ರಿ ಉಷ್ಣವು ಹೆಚ್ಚುತ್ತಿರುವುದು ನೀವೂ ಆಯಾಸವನ್ನು ಹೊಂದುತ್ತಿರುವಿರಿ. ಇಂತಹ ವೇಳೆಯಲ್ಲಿ ಆಗಾಗ್ಗೆ ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿಯುವುದೇ ಉತ್ತಮ ಮಾರ್ಗ ಕೆಲಸ ಮಾಡುವ ಕಾಲದಲ್ಲಿ ಟೀ ಕುಡಿದಲ್ಲಿ ಆಯಾಸವನ್ನು ಪರಿಹರಿಸುವುದು. ಮಲಗುವ ಮುಂಚೆ ಕುಡಿದಲ್ಲಿ ಸುಖನಿದ್ರೆಯನ್ನು ಕೊಡುವುದು.

# ಭಾರತೀಯ ಚಹಾ

ತಂಪನ್ನೂ ಆನಂದವನ್ನೂ ಕೊಡುವುದು.

**ಟೀ ತಯಾರಿಸುವ ವಿಧಾನ**

ಶುದ್ಧವಾದ ನೀರನ್ನು ಬಿಸಿ ಮಾಡಿರಿ ಶುಭ್ರವಾದ ಒಂದು ಪಿಂಗಾಣೀ ಮಣ್ಣಿನ ಪಾತ್ರೆಯನ್ನು ಬೆಚ್ಚಗೆ ಮಾಡಿರಿ ಟೀ ಕುಡಿಯುವವರ ಸಂಖ್ಯೆಗೆ ಅನುಸರಿಸಿ ತಲಾ ಒಂದು ಚಮಚದಂತೆಯೂ ಪಾತ್ರೆಗಾಗಿ ಒಂದು ಚಮಚವೂ ಉತ್ತಮ ಇಂಡಿಯಾ ಟೀ ಸೊಪ್ಪನ್ನು ಹಾಕಿರಿ ನೀರು ಕುದಿದ ನಂತರ ಅದರ ಮೇಲೆ ಸುರಿಯಿರಿ ಐದು ನಿಮಿಷಗಳ ನಂತರ ಶೋಧಿಸಿ ಹಾಲು ಸಕ್ಕರೆ ಬೆರಸಿ ಕುಡಿಯಿರಿ

I K 49

---

## ನೋಟೀಸು

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ**

O P No 20/1938

ಸಲಿಮಮ್ಮ ಸಹಾ — ಅರ್ಜಿದಾರರು

ಮತ್ತು

1. ಶರೀಫ ಅಮ್ಮ
2. ಪಾತುಮ್ಮ — ಯಿದ್ರರು
3. ಉಮಾಕುಮ್ಮ —

ಇವರೊಳಗೆ

ಸದ್ರಿ ಯಿದ್ರರಿಗೆ ವ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ–

ಹಳೆಯಂಗಡಿ ಗ್ರಾಮದಲ್ಲಿ ಇರುತ್ತಿದ್ದ ಎಚ್. ಪಿ. ಅಹಮ್ಮದ ಬ್ಯಾರಿ ಎಂಬವರು ಕಳೆದ ತಾರೀಕು 5–5–1937ರಲ್ಲು ಆತನ ಕಾಯಂ ವಾಸ್ತವ್ಯದ ಮನೆ ಇದ್ದ ಹಳೆಯಂಗಡಿ ಗ್ರಾಮದಲ್ಲಿ ಮೃತಪಟ್ಟಿರುವದರಿಂದ ಆತನಿಗೆ ಅರ್ಜಿಯಲ್ಲಿ ಕಾಣಿಸಿದ ಮಾಡಿ ಬರತಕ್ಕ ಹಣಗಳನ್ನು ವಸೂಲು ಮಾಡುವರೆ ತಮ್ಮ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಸದ್ರಿ ಮೃತನ ವಿಧವೆ ಮತ್ತು ಮಕ್ಕಳಾದ ಅರ್ಜಿದಾರರು ಬರಕೊಂಡ ಸದ್ರಿ ಅರ್ಜಿಯು ತಾರೀಕು 5–4–1938ಕ್ಕೆ ಇಟ್ಟಿರುವದರಿಂದ ಈ ಕುರಿತು ಆಕ್ಷೇಪಿಸುವವರು ಸದ್ರಿ ದಿನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿಗೆ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದು. ತಪ್ಪಿದ್ದಲ್ಲಿ ಸದ್ರಿ ವ್ಯವಹರಣೆಯು ಅರ್ಜಿದಾರರ ಗುಣಕ್ಕೆ ಏಕಪಕ್ಷವಾಗಿ ತೀರ್ಮಾನಿಸಲಾಗುವದು ಎಂತ ಸದ್ರಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸೋಣಾಗಿಯದೆ

P Ramachandra Rao, Pleader for Petitioners.

---

**75 ರೂಪಾಯಿಗಳು! 100 ರೂಪಾಯಿಗಳು!**

## ಬೇಕಾಗಿದೆ

ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲಿ ತಿಂಗಳಿಗೆ 75/ ರೂ ಸಂಬಳ, 25/ ರೂ ಅಲೋವೆನ್ಸಿನ ಮೇಲೆ ಆರ್ಗನೈಜರರೂ, ಪ್ರತಿಯೊಂದೇ ತಾಲೂಕಿಗೆ ತಿಂಗಳಿಗೆ 35/ ರೂ ಸಂಬಳದ ಮೇಲೆ ಏಜಂಟರೂ ಬೇಕಾಗಿರುತ್ತಾರೆ 2 ಆಣೆ ಸ್ಟಾಂಪು ಇಟ್ಟು ಸವಿಸ್ತಾರ ಮಾಹಿತಿಗೆ ಬರೆದುಕೊಳ್ಳಿರಿ. ಮ್ಯಾನೇಜರ್,

ದಿ ಜೆ. ಬಿ. ಇನ್ಶೂರೆನ್ಸ್ ಸಿಂಡಿಕೇಟ್, ಲಿಮಿಟೆಡ್.

ಕರ್ನಾಟಕ ಬ್ರಾಂಚ್ ಶಿವಮೊಗ್ಗ

# ರೋಗವು ಶಾಪವಲ್ಲ ಪ್ರಕೃತಿಯ ಆಶೀರ್ವಾದ

★ ಮದ್ದು ಔಷಧಿಗಳಿಂದ ಗುಣವಿಲ್ಲ ★

★ ★ ಶಸ್ತ್ರಪ್ರಯೋಗವು ಪ್ರಾಣಘಾತುಕ ★ ★

★ ಪ್ರಕೃತಿ ಚಿಕಿತ್ಸೆಯು ಸ್ವಾಸ್ಥ್ಯಸಾಧನದ ಒಂದೇ ಒಂದು ಉಪಾಯ ★

ಹೇಗೆ ಎಂಬುದನ್ನು ಈ ಲೇಖನದಿಂದ ಓದಿ ನೋಡಿರಿ

"ಈ ಪ್ರಪಂಚದಲ್ಲಿ ಒಬ್ಬನೇ ಡಾಕ್ಟರ, ಶಸ್ತ್ರ ಚಿಕಿತ್ಸಕ, ನರ್ಸ, ಕೆಮಿಸ್ಟ, ಡ್ರಗ್ಗಿಸ್ಟ, ಕಂಪೌಂಡರ ಮತ್ತು ಮದ್ದು ತಯ್ಯಾರಿಸುವವರು ಇಲ್ಲದೆ ಇರುತಿದ್ದರಾದರೂ ಪ್ರಪಂಚಕ್ಕೆ ಅದರಿಂದ ಅಪಕಾರವೇನೂ ಆಗುತ್ತಿರಲಿಲ್ಲ; ಉಪಕಾರವೇ ಆಗುತ್ತಿತ್ತು. ರೋಗರುಜೆಗಳು ಈಗಿರುವದಕ್ಕಿಂತ ಎಷ್ಟೋ ಪಾಲು ಕಡಿಮೆಯಾಗುತಿದ್ದುವು, ಅಕಾಲ ಮರಣಗಳು ಈಗಿನಷ್ಟು ಹೆಚ್ಚಾಗುತ್ತಿರಲಿಲ್ಲ. ಇದನ್ನು ನಾನು ತಾತ್ಕಾಲಿಕ ಭಾವೋದ್ರೇಕದಿಂದ ಹೀಗೆ ಹೇಳುತ್ತಿರುವದಲ್ಲ. ಅನೇಕ ವರ್ಷಗಳ ಅನುಭವ ಮೂಲವಾದ ದೃಢವಿಶ್ವಾಸವು ನನ್ನನ್ನು ಹೀಗೆ ಹೇಳುವಂತೆ ಪ್ರೇರೇಪಿಸುತ್ತಲಿದೆ, ನನಗೆ ಒಂದು ವೇಳೆ ಅಧಿಕಾರವೂ ಬಲವೂ ಇರುತಿದ್ದುದಾದರೆ ಪ್ರಪಂಚದಲ್ಲಿರುವ ವಿಷಭರಿತ ಈ ಔಷಧಿ ಬಾಟಲಿಗಳನ್ನೆಲ್ಲ, ಮನುಷ್ಯ ಸಮಾಜದ ಕಲ್ಯಾಣಾರ್ಥ, ಈ ಕ್ಷಣದಲ್ಲಿಯೇ ಸಮುದ್ರದೊಳಗೆ ಒಗೆದುಬಿಡುತ್ತಿದ್ದೆ. ಆದರೇನು ಮಾಡಲಿ? ಉಪಾಯವಿಲ್ಲ"

ಹೀಗೆಂದು ವಿಲಾಯತಿಯ ಒಂದು ಸುಪ್ರಸಿದ್ಧ ಮತ್ತು ಪ್ರತಿಷ್ಠಿತ ಚಿಕಿತ್ಸಾಸಂಬಂಧವಾದ ಮಾಸಪತ್ರಿಕೆಯ ಸಂಪಾದಕರು ಒಮ್ಮೆಗೆ ಹೇಳಿದ್ದರು. ವಿಷಭರಿತ ಮದ್ದು ಔಷಧಿಗಳಿಂದ ಮಾನವ ಸಮಾಜದ ಸ್ವಾಸ್ಥ್ಯಕ್ಕೆ ಹಾನಿಯಾಗಿರುವಷ್ಟು, ಬೇರೆ ಯಾವ ಕಾರಣದಿಂದಲೂ ಉಂಟಾಗಿರುವದಿಲ್ಲ ಈ ವೈಜ್ಞಾನಿಕ ಯುಗದಲ್ಲಿ ಸ್ವಾಸ್ಥ್ಯಸಂಬಂಧವಾದ ನಾನಾ ಬಗೆಯ ಆವಿಷ್ಕಾರಗಳು ಒಂದರ ಮೇಲೊಂದರ ಪ್ರಕಾರ ಆಗುತ್ತ ಹೋದ ಹಾಗೆ ರೋಗರುಜೆಗಳೂ ಬೆಳೆಯುತ್ತ ಹೋಗಿರುವದೆಂಬುದು ವಿಚಾರಣೀಯವಾಗಿರುವದು ಹೀಗಾಗಲು ಕಾರಣವೇನಿರಬಹುದು? ಇದನ್ನು ಆಲೋಚಿಸುತ್ತ ಶ್ರೀ ಗಂಗಾಪ್ರಸಾದ ಗೌರರು 'ಚಾಂದ'ದಲ್ಲಿ ಒಂದು ಉತ್ತಮ ಲೇಖನವನ್ನು ಬರೆದಿರುತ್ತಾರೆ ಅವರ ಅಭಿಪ್ರಾಯಗಳು ಇವು—

ಅಪ್ರಾಕೃತಿಕ ಮತ್ತು ಕೃತ್ರಿಮ ಸ್ವಾಸ್ಥ್ಯಸಾಧನಗಳ ಮೋಹದಲ್ಲಿ ಬಿದ್ದು ಪ್ರಾಕೃತಿಕ ಮತ್ತು ನೈಸರ್ಗಿಕ ಪ್ರಯೋಗಗಳ ಅವಹೇಳನ ಮಾಡಿ ಪ್ರಪಂಚವು ತನ್ನ ಕಾಲಿನ ಮೇಲೆಯೇ ತಾನು ಕೊಡಲಿ ಹೊಡಕೊಳ್ಳುತ್ತ ಇದೆ ಸದ್ವೈದ್ಯರು ಎಂದೂ ರೋಗಿಗಳಿಗೆ ಮದ್ದು ಔಷಧಿಗಳನ್ನು ಕೊಡುವ ಪಕ್ಷದಲ್ಲಿ ಇರುದಿಲ್ಲವೆಂಬುದು ಈ ಲೇಖನಾಂತ್ಯದಲ್ಲಿ ಕೊಟ್ಟಿರುವ ಜಗದ್ವಿಖ್ಯಾತ ಪುರುಷ ಮಣಿಗಳು ಮತ್ತು ಚಿಕಿತ್ಸಾ ಪಂಡಿತರ ಅಭಿಪ್ರಾಯಗಳ ಮೇಲಿಂದ ಸ್ಪಷ್ಟವಾಗುತ್ತದೆ ರೋಗಿಗಳಿಗೆ ವಿಷಭರಿತ ಮದ್ದಿನ ಗುಳಿಗೆ ಅಥವಾ ನೀರು ಕೊಡುವ ಬದಲಿಗೆ ಕುಶಲರಾದ ಚಿಕಿತ್ಸಕರು' ಪ್ರಾಕೃತಿಕ ಮತ್ತು ನೈಸರ್ಗಿಕ ನೀತಿನಿಯಮಗಳಿಗನುಸರಿಸಿ ರೋಗಿಗಳ ಜೀವನ ಕ್ರಮವನ್ನು ತಿದ್ದಿ ಸುಧಾರಿಸಿಕೊಂಡು ಅತ್ಯಂತ ಕಷ್ಟಸಾಧ್ಯವೆಂದು ಕಂಡುಬಂದ ರೋಗಗಳನ್ನು ಗುಣಪಡಿಸುವನು ಮದ್ದು ಔಷಧಿಗಳನ್ನು ತೆಗೆದುಕೊಂಡು ರೋಗಿಗಳು ತಮ್ಮ ಸ್ವಾಸ್ಥ್ಯ ಮತ್ತು ಧನ ಎರಡನ್ನೂ ಹಾಳು ಮಾಡಿಕೊಳ್ಳುತ್ತಾರೆಂಬದು ನಿರ್ವಿವಾದವಾಗಿರುವದು ಮದ್ದು ಔಷಧಿಗಳನ್ನು ತೆಗೆದುಕೊಳ್ಳುವರೆ 100ರಲ್ಲಿ 80ರಂತೆ ಜನರು ತಮ್ಮ ರೋಗರುಜೆಗಳನ್ನು ಬೆಳೆಸಿಕೊಳ್ಳುತ್ತಾರೆ ಉಳಿದ 20 ಮಂದಿ ಕೂಡ ತಾವು ತೆಗೆದುಕೊಂಡ ಮದ್ದಿನ ಪ್ರಭಾವದಿಂದಲ್ಲ, ಕೇವಲ ತಮ್ಮ ಪ್ರಬಲ ಜೀವನಶಕ್ತಿಯ ಮೂಲಕ ಬದುಕಿ ಉಳಿಯುತ್ತಾರೆ. ಅಲ್ಲವಾದ ಮದ್ದಿನ ವಿಕಾರಿ ಪ್ರಭಾವವು ಅವರ ಮೇಲೆಯೂ ಕಾಣಿಸದೆ ಉಳಿಯುವದಿಲ್ಲ ಅದರಂತೆ ಪ್ರತಿ 100ರಲ್ಲಿ 80ರಂತೆ ಡಾಕ್ಟರ ವೈದ್ಯ ಹಕೀಮ ಪಂಡಿತರು ಕೂಡ ರೋಗಿಗಳಿಗೆ ಮದ್ದು ಕೊಟ್ಟು ರೋಗಗಳನ್ನು ಬೆಳೆಸುತ್ತಾರೆ ಈ ಡಾಕ್ಟರ ವೈದ್ಯರುಗಳು ಈ ಪ್ರಪಂಚದಲ್ಲಿ ಇರದೆ ಇರುವಗಾದರೆ ಪ್ರಪಂಚದಲ್ಲಿ ರೋಗರುಜೆ ನೋವು ನರಳಿಕೆಗಳು ಈಗಿನಕ್ಕಿಂತ ಅರ್ಧದಷ್ಟು ಕಡಿಮೆಯಾಗುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ

ಪ್ರಪಂಚದಲ್ಲಿ ಕೇವಲ ಮನುಷ್ಯ ಜಾತಿಗೆ ಮಾತ್ರ ಮದ್ದು ಔಷಧಿಗಳು ಬೇಕೆನಿಸುವದು ನಿಮಗೆ ಅಸ್ವಾಭಾವಿಕವಾಗಿ ತೋರುವದಿಲ್ಲವೆ? ಈ ಪ್ರಪಂಚದಲ್ಲಿ ಮನುಷ್ಯವನ್ನು ಬಿಟ್ಟು ಬೇರೆ ಯಾವ ಜೀವಿಗೂ ಮದ್ದು ಔಷಧಿಗಳ ಅಗತ್ಯವು ಇರುವದಿಲ್ಲ; ಅವುಗಳಲ್ಲಿ ವೈದ್ಯ ಡಾಕ್ಟರುಗಳು ಇರುವದೂ ಇಲ್ಲ ಇದಕ್ಕೆ ಏನು ಕಾರಣ? ಪ್ರಾಣಿಗಳು ಪ್ರಕೃತಿ ಮತ್ತು ನಿಸರ್ಗಕ್ಕೆ ಅನುಕೂಲವಾಗಿಯೂ ಮನುಷ್ಯರು ಪ್ರಕೃತಿ ಮತ್ತು ನಿಸರ್ಗಕ್ಕೆ ಪ್ರತಿಕೂಲವಾಗಿಯೂ ಆ ಚರಣವನ್ನು ಇಟ್ಟುಕೊಂಡಿರುವದಲ್ಲದೆ ಬೇರೆ ಯಾವ ಕಾರಣವೂ ಇರುವದಿಲ್ಲ

## ಅಸ್ವಸ್ಥವು ಅಭಿಶಾಪವಲ್ಲ

ಅನೇಕ ಜನರು ತಿಳಕೊಳ್ಳುವ ಪ್ರಕಾರ ಅಸ್ವಸ್ಥವು ಅಭಿಶಾಪವಾಗಿರುವದಿಲ್ಲ ಅದು ಪ್ರಕೃತಿ ಮಾತೆಯುವರವಾಗಿರುತ್ತದೆ ಸ್ವಸ್ಥರಾಗುವದಕ್ಕಾಗಿಯೇ ನಾವು ಅಸ್ವಸ್ಥರಾಗುತ್ತೇವೆ ರೋಗಕ್ಕೆ ಮೂಲಕಾರಣವಾದ ದೂಷಿತ ವಿಜಾತೀಯ ದ್ರವ್ಯವು ಶರೀರದಲ್ಲಿ ಸೇರಿಕೊಂಡಿದ್ದಾಗ ಅದನ್ನ ಹೊರಗೆ ಹಾಕುವದಕ್ಕೋಸ್ಕರ ಸ್ನೇಹಮಯಿಯಾದ ಪ್ರಕೃತಿ ಮಾತೆಯು ನಮ್ಮನ್ನು ಅಸ್ವಸ್ಥರನ್ನಾಗಿ ಮಾಡುತ್ತದೆ ಆದರೆ ನಾವು ಮಾತ್ರ ಮೂಢರೂ ಮೂರ್ಖರೂ ಆಗಿ ಈ ಆವಶ್ಯಕ ಪ್ರಕ್ರಿಯೆಯನ್ನು ಮರಣ ಸೂಚಕವೆಂದು ಭಯ ಭ್ರಾಂತರಾಗಿ, ವಿವಿಧ ಪ್ರಕಾರಗಳ ಅನೈಸರ್ಗಿಕ ಪ್ರಯೋಗಗಳ ಮೂಲಕ ದಬಾಯಿಸಲಿಕ್ಕೆ ಪ್ರಯತ್ನಿಸುತ್ತೇವೆ; ಪರಿಣಾಮವಾಗಿ ಹಾನಿಯನ್ನು ತಂದುಕೊಳ್ಳುತ್ತೇವೆ

ಉದಾಹರಣೆಗಾಗಿ ಒಬ್ಬನಿಗೆ ಸ್ವಲ್ಪ ಶೀತವಾಯಿತೆಂದು ಆಲೋಚಿಸೋಣ ಶೀತವೆಂಬುವೇನು? ಶರೀರದಲ್ಲಿ ಸೇರಿಕೊಂಡ ವಿಜಾತೀಯ ದ್ರವ್ಯವನ್ನು ಹೊರಗೆ ಹಾಕುವ ಪ್ರಕೃತಿಯ ಉಪಾಯ ಆದರೆ ನಾವು ಏನು ಮಾಡುತ್ತೇವೆ? ಡಾಕ್ಟರನನ್ನು ಕರೆಸುತ್ತೇವೆ ಅವನು ಬಂದು ಶೀತವು ಯಾವ ಕಾರಣದಿಂದಾಯಿತೆಂದು ಸುಮ್ಮಗೆ ಪರೀಕ್ಷಿಸುತ್ತಾನೆ ಏನೋ ಒಂದು ಮದ್ದು ನೀರು ಕೊಡುತ್ತಾನೆ, ಪಥ್ಯ ಮಾಡಲಿಕ್ಕೆ ಹೇಳುತ್ತಾನೆ ಒಂದು ಔಷಧಿಯಿಂದ ಗುಣವಾಗದಿದ್ದರೆ ಅದನ್ನು ಬದಲಿಸಿ ಬೇರೆಯೊಂದನ್ನು ಕೊಡುತ್ತಾನೆ ಆದರೆ ಫಲವಿಲ್ಲ ಮದ್ದಿನ ವಿಷವು ಶರೀರದಲ್ಲಿ ಕೂಡಿಕೊಳ್ಳುತ್ತ ಹೋಗುತ್ತದೆ ಡಾಕ್ಟರನು ಯಾವ ಪ್ರಕೃತಿಯ ಚಿಕಿತ್ಸಾಕ್ರಮದ ರಹಸ್ಯವನ್ನೂ ತಿಳಿಯದೆ ಔಷಧಿಯ ಮೇಲೆ ಔಷಧಿ ಕೊಡುತ್ತ ಹೋಗುತ್ತಾನೆ ಪರಿಣಾಮವಾಗಿ ಶೀತದ ಪ್ರಕೋಪವಾಗುವುದು ವಿಜಾತೀಯ ದ್ರವ್ಯದ ವಿಸರ್ಜನೆಯಾಗುವ ಬದಲಿಗೆ ಅದು ಶರೀರದಲ್ಲಿಯೇ ಅಡಗಿಕೊಳ್ಳುತ್ತದೆ ಕೆಲವಂಶ ಶ್ವಾಸಕೋಶಗಳ ವಾಯುಚೀಲ, ಶ್ವಾಸನಾಳಗಳಲ್ಲಿಯೂ ಸೇರಿಕೊಂಡು ಕೊಳೆಯುತ್ತದೆ ಶ್ವಾಸಕೋಶಗಳು ಅದನ್ನು ಹೊರಗೆ ಹಾಕಲಿಕ್ಕೆ ಪ್ರಯತ್ನಿಸುತ್ತವೆ ಕೆಮ್ಮು ಆಗಿ ಕಫವು ಹೊರಗೆ ಹೋಗುತ್ತದೆ ಆದರೆ ಡಾಕ್ಟರನಿಗೆ ಅಲ್ಲಿಯೂ ಸಂತೋಷವಿಲ್ಲ ಅವನು ಕೆಮ್ಮು ನಿಲ್ಲಲಿಕ್ಕೆ ಮದ್ದು ಕೊಡುತ್ತಾನೆ ರೋಗವು ಬೆಳೆಯುತ್ತದೆ ಶರೀರದ ಉಷ್ಣವು ಹೆಚ್ಚಾಗಿ ಜ್ವರ ಬರುತ್ತದೆ ಆಗಲೂ ರೋಗಿಯು ಮದ್ದು ತೆಕ್ಕೊಳ್ಳುತ್ತಲೇ ಇರುತ್ತಾನೆ ಶರೀರವೆಲ ವಿಷಮಯವಾಗುತ್ತದೆ ಶ್ವಾಸಕೋಶಗಳ ಕೊಳೆತ ವಿಷಯದಲ್ಲಿ ಕ್ಷಯದ ರೋಗಾಣುಗಳು ಬೆಳೆಯತೊಡಗುತ್ತವೆ ಮದ್ದಿನಿಂದ ತನ್ನ ಕೆಲಸವಾಗದಿರುವುದನ್ನು ನೋಡಿ ಡಾಕ್ಟರನು ಇಂಜೆಕ್ಷನುಗಳನ್ನೋ ಶಸ್ತ್ರಚಿಕಿತ್ಸೆಯನ್ನೋ ಮಾಡುತ್ತಾನೆ ಅಲ್ಪ ಸ್ವಲ್ಪ ಉಳಿದ ಶುದ್ಧರಕ್ತವೂ ಈಗ ವಿಷಮಯವಾಗುತ್ತದೆ ಶರೀರದಲ್ಲಿ ಸೇರಿಕೊಂಡ ವಿಷಪದಾರ್ಥಗಳನ್ನು ಹೊರಗೆಹಾಕುವ ಶಕ್ತಿಯು ಈಗ ಶರೀರಕ್ಕೆ ಇರುವದಿಲ್ಲ ಎಲ್ಲಾ ಹೋಯಿತು, ಮದ್ದಿನ ಗುಣದಿಂದ ಎಂಬಂತೆ ರೋಗಿಯ ಸ್ಥಿತಿಯಾಗುತ್ತದೆ

ನಿರುಪಾಯನಾದ ಡಾಕ್ಟರನು ಆಗ, ತನ್ನ ಯಾವ ಚಿಕಿತ್ಸೆಯಿಂದಲೂ ಫಲವಾಗಲಿಲ್ಲವೆಂದು ತಿಳಿದು—'ಅಪ್ಪಾ, ರೋಗಿ' ಎಲ್ಲಿಯಾದರೂ ಪರ್ವತಪ್ರದೇಶದಲ್ಲಿ ಹೋಗಿ ಇರು ರೋಗ ಗುಣವಾಗಬಹುದು' ಎನ್ನುತ್ತಾನೆ ಆದರೆ ಸಮಯ ಮೀರಿದ ನಂತರ ಪ್ರಕೃತಿ ಮಾತೆಯ ಶರಣು ಬಂದರೆ ಏನು ಲಾಭವಾದೀತು? ಪ್ರಾರಂಭದಲ್ಲಿಯೇ ಅವನು ಪರ್ವತ ಪ್ರದೇಶಕ್ಕೆ ಹೋಗಿದ್ದರೆ ಚೆನ್ನಾಗುತ್ತಿತ್ತು ಆದರೆ ಡಾಕ್ಟರನ ಚಾತುರ್ಯದ ಕುರಿತು ಬರೆದು ಫಲವಿಲ್ಲ ಇತ್ತ ಡಾಕ್ಟರನು ತನ್ನ ಔಷಧಿಬಾಟಲಿ ಮತ್ತು ಇಂಜೆಕ್ಷನ್ ಸೂಜಿಗಳೊಂದಿಗೆ ಮತ್ತೊಬ್ಬ ರೋಗಿಯ ಚಿಕಿತ್ಸೆ (ಅಲ್ಲ, ಬೇಟೆ?)ಯಲ್ಲಿ ತೊಡಗಿರುವಾಗ ಹಳೆ ರೋಗಿಯು ಮಹಾಯಾತ್ರೆಯನ್ನು ಆರಂಭಿಸುತ್ತಾನೆ

ಎಲ್ಲಾ ಸಂದರ್ಭಗಳಲ್ಲಿ, ಎಲ್ಲಾ ರೋಗಿಗಳ ವಿಷಯದಲ್ಲಿ ಘಟನಾಚಕ್ರವು ಹೀಗೆಯೇ ಉರುಳುತ್ತಿರುವುದಿಲ್ಲ ಯಾಕೆಂದರೆ ಬೇರೆ ರೋಗಿಗಳಲ್ಲಿ ಜೀವನಶಕ್ತಿಯು ಹೆಚ್ಚುಕಡಿಮೆಯಾಗಿ ಇರುತ್ತದೆ ಪರಂತು ಇದು ಪೂರ್ಣ ಸತ್ಯವಾದ ಮಾತು ಆಗಿರುವುದ ಏನಂದರೆ, ಸ್ವಾಸ್ಥ್ಯಸಂಬಂಧವಾದ ಹೊಸ ಹೊಸ ವೈಜ್ಞಾನಿಕ ಶೋಧೆಗಳಾಗುತ್ತಿದ್ದ ಹಾಗೆ ರೋಗಗಳ ಮತ್ತು ರೋಗಿಗಳ ಸಂಖ್ಯೆಯು ಬೆಳೆದು ಬರುತ್ತಿರಲಿಕ್ಕೆ ಮದ್ದು ಔಷಧಿಗಳು, ಇಂಜೆಕ್ಷನ್, ಶಸ್ತ್ರಪ್ರಯೋಗಗಳು ಇವೇ ಕಾರಣಗಳಾಗಿರುವುವು ಈ ಲೇಖನವನ್ನು ಓದಿದ ತರುವಾಯ ನಿಮಗೆ ಈ ವಿಷಯದಲ್ಲಿ ಯಾವ ಸಂದೇಹವೂ ಉಂಟಾಗಲಾರದು

## ಕೆಲವು ಅಭಿಪ್ರಾಯಗಳು

ಪ್ರಾಕೃತಿಕ ಮತ್ತು ನೈಸರ್ಗಿಕ ಜೀವನ ಕ್ರಮದಿಂದಲೇ ಮನುಷ್ಯನು ಅತ್ಯಂತ ನಿರೋಗಿ ಮತ್ತು ಆರೋಗ್ಯಶಾಲಿಯಾಗಿ ಇರಬಹುದೆಂಬುದನ್ನು ಜಗದ್ವಂದ್ಯ ಮಹಾತ್ಮಾಗಾಂಧಿ ಫ್ರಾನ್ಸಿಸ ಗೊಗ್‌ಸ್ಟೈಲ್ ಡಾಕ್ಟರ ಬಾಸ್ಟಾಕ ಮೊದಲಾದ ಅನೇಕ ಮಂದಿಯು ಅಭಿಪ್ರಾಯಗಳಿಂದ ಪುಷ್ಟೀಕರಿಸಬಹುದ ಅಂಥ ಅಭಿಪ್ರಾಯಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿರುತ್ತದೆ

"ವಕೀಲರೇ ಜಗತ್ತಿನಲ್ಲಿ ತಂಟೆತಕರಾರುಗಳನ್ನು ಬೆಳೆಸಿದರು, ಮತ್ತ ಡಾಕ್ಟರರೇ ರೋಗರುಜೆಗಳನ್ನು ಹೆಚ್ಚಿಸಿದರು ಈ ಡಾಕ್ಟರರು ಔಷಧಿ ತೆಗೊಳ್ಳದೆ ರೋಗವೇ ಗುಣವಾಗುವುದಿಲ್ಲವೆಂಬ ವಿಶ್ವಾಸವನ್ನು ಹರಡಿಸಿದರು ಆದರೆ ಇದು ಕೇವಲ ತಪ್ಪು ಕೆಲಸವೇ ಆಗಿರುವುದ ಈ ತಪ್ಪು ಅಭಿಪ್ರಾಯದಿಂದ ಎಷ್ಟು ಜನರು ದುಃಖಿಗಳಾಗಿದ್ದಾರೋ ಆಗುತ್ತಿದ್ದಾರೋ, ಅಷ್ಟು ಬೇರೆ ಯಾವ ಕಾರಣದಿಂದಲೂ ಆಗಿಲ್ಲ ಆಗುತ್ತಿಲ್ಲ ನೋವು ನರಳಿಕೆಗಳನ್ನು ಕಡಿಮೆ ಮಾಡಬೇಕೆಂಬುದೇನೋ ಸಹಜವೂ ಸ್ವಾಭಾವಿಕವೂ ಆಗಿದೆ ಆದರೆ ಅದಕ್ಕೋಸ್ಕರ ಅಪ್ರಾಕೃತಿಕ ಔಷಧಿಗಳ ಪ್ರಯೋಗಮಾಡುವುದು ವ್ಯರ್ಥವಷ್ಟೇ ಅಲ್ಲ ಅಸ್ವಾಭಾವಿಕವೂ ಆಗಿರುವುದು ಇಷ್ಟೇ ಅಲ್ಲ, ಔಷಧಿಗಳ ಪ್ರಯೋಗದಿಂದ ನಷ್ಟವಾಗುವದು ಮತ್ತು ಅನೇಕಾನೇಕ ಇತರ ರೋಗಗಳ ಬೀಜಾರೋಪಣಮಾಡಿದಂತಾಗುತ್ತದೆ. ಮನೆಯಲ್ಲಿ ಬಿದ್ದುಕೊಂಡಿರುವ ತಿಪ್ಪೆರಾಶಿಯನ್ನು ಹೊರಗೆ ಹಾಕಿ ಮನೆಯನ್ನು ನಿರ್ಮಲವಾಗಿಡುವದರ ಬದಲಿಗೆ, ಆ ತಿಪ್ಪೆರಾಶಿಯನ್ನು ಮುಚ್ಚಿಟ್ಟರೆ ಯಾವ ದುಷ್ಪರಿಣಾಮವಾಗಬಹುದೋ, ಸರಿಯಾಗಿ ಅದೇ ದುಷ್ಪರಿಣಾಮವು ಔಷಧಿಗಳ ಪ್ರಯೋಗದಿಂದ ನಮ್ಮ ಶರೀರದ ಮೇಲಾಗುತ್ತದೆ ಕಸದರಾಶಿಯನ್ನು ಮುಚ್ಚಿಡುವದಕ್ಕಿಂತ ಹೊರಗೆ ಹಾಕುವದು ವಿಶೇಷ ಬುದ್ಧಿವಂತಿಕೆಯ ಲಕ್ಷಣವಾಗಿರುತ್ತದೆ"—ಮಹಾತ್ಮಾ ಗಾಂಧಿ

"ಈಗ ನಡೆಯುತ್ತಿರುವಂಥ ಚಿಕಿತ್ಸಾ ಕ್ರಮವನ್ನು ಪೂರ್ಣ ನಿಲ್ಲಿಸಿಬಿಟ್ಟಿದ್ದಾದರೆ ಮನುಷ್ಯಜಾತಿಗೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುವದೆಂಬುದು ನನ್ನ ದೃಢವಿಶ್ವಾಸವಾಗಿದೆ"—ಫ್ರಾನ್ಸಿಸ್ ಗೊಗ್‌ಸ್ಟೈಲ್,

ಎಮ್. ಡಿ., ಬೊಸ್ಟನ.

"ನಾವು ರೋಗಿಗಳಿಗೆ ಔಷಧಿಗಳನ್ನು ಕೊಟ್ಟು ಯಾವ ರೋಗಪರೀಕ್ಷೆಗಳನ್ನು ಮಾಡುತ್ತಿರುವೆವೋ, ಅವು ಹುಟ್ಟು ಕುರುಡನು ವಸ್ತುಗಳ ಪರೀಕ್ಷೆಮಾಡುವಂತೆ ವ್ಯರ್ಥವಲ್ಲದೆ ಬೇರೇನಾಗಿರುವದಿಲ್ಲ"—ಡಾಕ್ಟರ್ ಬೊಸ್ಟಾಕ್ 'ಔಷಧಿಯ ಇತಿಹಾಸ' ಎಂಬ ಗ್ರಂಥಕರ್ತರು.

"ಔಷಧಿಯ ಗುಣವಿಶೇಷಗಳ ಮೇಲೆ ನನಗೆ ಎಳ್ಳಷ್ಟಾದರೂ ನಂಬಿಗೆ ಇರುವದಿಲ್ಲ"

—ಡಾಕ್ಟರ್ ಬೇಯ್ಲಿಕ್, ಲಂಡನ್

"ರೋಗವು ನಮ್ಮ ಶತ್ರುವಲ್ಲ, ಮಿತ್ರನಾಗಿರುತ್ತದೆ. ಆದ್ದರಿಂದ ವಿಷಭರಿತ ಔಷಧಿಗಳನ್ನು ಕೊಟ್ಟು ರೋಗವನ್ನು ತಡೆಯುವದು, ಮಹಾ ಮೂರ್ಖತನ ಆಗಿರುತ್ತದೆ ಇಂಥ ಚಿಕಿತ್ಸಾ ಪ್ರಣಾಲಿಯು ವಿಶ್ವಾಸಯೋಗ್ಯವಾಗಿರುವುದಿಲ್ಲ ಅದು ವ್ಯವಹಾರ ನಿಯಮಗಳಿಂದ ವಿಧಿಬದ್ಧವಾಗಿರುವುದೂ ಇಲ್ಲ ಹೀಗೆ ಮುಂದೆ ಆದೀತೆಂಬ ಭರವಸೆ ಕೂಡ ಇರುವದಿಲ್ಲ' – ಡಾಕ್ಟರ ಟ್ರಾಲ್, ಎಮ್ ಡಿ

ಸುಪ್ರಸಿದ್ಧ ಶರೀರ ಶಾಸ್ತ್ರಜ್ಞರು

"ಔಷಧಿ ಔಷಧಿ ಎಂದು ಕೊಂಡು ಜನರು ಯಾಕೆ ಹುಚ್ಚಾಗುತ್ತಾರೆ? ನಾವು ತಿನ್ನುವಂಥ ಪ್ರಕೃತಿಸಿದ್ಧ, ಆಹಾರ ವಸ್ತುಗಳನ್ನೇ ಔಷಧಿ ಎಂದು ಯಾಕೆ ತಿಳಕೊಳ್ಳುವುದಿಲ್ಲ? ಫಲವಸ್ತುಗಳಲ್ಲಿಯೇ ಪ್ರಕೃತಿಯು ಔಷಧಿಗಳನ್ನು ತುಂಬಿಟ್ಟಿರುತ್ತದೆ ಹಣ್ಣುಹಂಪಲುಗಳು ತಿನ್ನಲಿಕ್ಕೆ ರುಚಿಕರವಾಗಿಯೂ ಸಿಹಿಯಾಗಿಯೂ ಇರುವವು ಮಾತ್ರವಲ್ಲ ಅವು ಎಲ್ಲಾ ತರಹದ ರೋಗ ರುಜೆಗಳನ್ನು ದೂರಮಾಡಬಲ್ಲವು ಹಣ್ಣುಹಂಪಲುಗಳು ಅಮೃತದ ಭಾಂಡಾರವೂ ದೇವತೆಗಳು ತಿನ್ನುವಷ್ಟು ಯೋಗ್ಯವೂ ಆಗಿರುವವು ಮಾನವ ಜಾತಿಯು ಇಂಥ ಸ್ವಾದಿಷ್ಟ ಅಮೃತತುಲ್ಯ ಪದಾರ್ಥವನ್ನು ಬಿಟ್ಟು ವಿಷಭರಿತ ಮಿಕ್ಸ್ಚರುಗಳನ್ನು ಸೇವಿಸಿ ಯಾಕೆ ತನ್ನ ಶರೀರವನ್ನು ದುಃಖಸಾಗರದಲ್ಲಿ ಮುಳುಗಿಸುತ್ತದೆಂಬುದು ಗೊತ್ತಾಗುವದಿಲ್ಲ ಇದು ಬಹಳ ಆಶ್ಚರ್ಯದ ಮಾತಾಗಿದೆ ಔಷಧಿಗಳ ಸೇವನೆಯಿಂದ ರೋಗಗಳು ಎಂದೂ ದೂರವಾಗುವದಿಲ್ಲ ವಿ ಜಸ್ಸ

## ಹರಿಪುರದ ವಿಠಲ ನಗರ

(೨ನೇ ಪುಟದಿಂದ ಮುಂದವರಿದುದು)

...ವದಿಲ್ಲ' 'ಅಕ್ಕಾ' ನಾವು ದೂರದಿಂದ ಬಂದಿದ್ದೇವೆ ಏನೂ ಉಪದ್ರ ಕೊಡುವದಿಲ್ಲ ಒಂದು ಬಾರಿಗೆ ಗುಡಿಸಲು ನೋಡಿ ಹೊರಗೆ ಬರುತ್ತೇವೆ ದಯಮಾಡಿ ಇಲ್ಲ ... ಮ್ಮಾ ಇದೊಂದೇ ಉಪಕಾರ' 'ಇಲ್ಲಿ ನಾವು ನಮ್ಮ ಬಂಧುಗಳನ್ನು ಕೂಡ ಬಿಟ್ಟಿಲ್ಲ ಹೋಗಲೇಬೇಕೆಂದಾದರೆ ಪಾಸು ತೆಗೆದ ಕೊಂಡುಬನ್ನಿ ಪಾಸು ಇಲ್ಲದೆ ಒಳಗೆ ಬಿಡಲಾರೆ' ಎಂದು ಅವಳು ಕಟೋಕ್ತ ಹೇಳಿದಳು ಬಂದವರು ನಿರಾಶರಾಗಿ ಹಿಂದಿರುಗಿದರು. ಅಷ್ಟು ಚೆನ್ನಾಗಿತ್ತು ವಿಠಲ ನಗರದ ಶಿಸ್ತಿನ ವ್ಯವಸ್ಥೆ

### ವಿಠಲ ನಗರವನ್ನು ನೋಡಿ ಕಲಿತ ಪಾಠ

ವಿಠಲ ನಗರವನ್ನು ನೋಡಿ ಕಲಿತ ಪಾಠವೇನು? ಎಂಬುದನ್ನು ಶ್ರೀ ಮಹಾದೇವ ದೇಸಾಯಿಯವರು ಹರಿಜನ'ದಲ್ಲಿ ಮಾರ್ಮಿಕವಾಗಿ ಬರೆದಿದ್ದಾರೆ ಪ್ರದರ್ಶನದಲ್ಲಿ ಇಟ್ಟಿದ್ದ ಪಶು ಒಡವೆಗಳು ಎಷ್ಟು ಮಾರಾಟವಾಗಿರಬಹುದೆಂಬುದು ತಿಳಿದಿಲ್ಲ ಆದರೆ ಚಿಲ್ಲರೆಯಾಗಿ 96505—12—0 ಮತ್ತು ರಖಂ ಆಗಿ 2250 ರೂಪಾಯಿಗಳ ಖಾದಿ ವಿಕ್ರಯವು ಹರಿಪುರದಲ್ಲಿ ಪ್ರದರ್ಶನದಲ್ಲಿ ಆಯಿತು ಇಷ್ಟು ಬೇಗ ಖಾದಿ ವಿಕ್ರಯವು ಬೇರೆ ಯಾವ ಕಾಂಗ್ರೆಸು ಅಥವಾ ಪ್ರದರ್ಶನದಲ್ಲಿ ಇಷ್ಟರವರೆಗೆ ಆದುದಿಲ್ಲ ಇದು ಗಾಂಧಿ ವಿಜಯದ ಹೆಗ್ಗುರುತು ತಾನೆ? ಇದರಿಂದಾಗಿಯೇ ಸಾಮಾನ್ಯ ಜನತೆಯು ಅದರ ಭಕ್ತಿ, ವಿಶ್ವಾಸ ಶ್ರದ್ಧೆಗಳು ಕಾಂಗ್ರೆಸಿನ ಮೇಲೆ ಹೇಗೆ ಹೆಚ್ಚುತ್ತ ಬರುತ್ತಿವೆ ಎಂಬುದು ಸ್ವಯಂವ್ಯಕ್ತವಾಗುತ್ತದೆ.

# ಆಸ್ಟ್ರಿಯಾವು ಹಿಟ್ಲರನ ಕೈಸೇರಿತು.

★ ಆತನು ಸದ್ಯದಲ್ಲೇ ಇಡೀ ಯುರೋಪ್ಯದ ಒಡೆಯನಾಗುವನೇ ★

★

ಯುರೋಪ್ಯವೀಗ ಮತ್ತೊಮ್ಮೆ ಅಲ್ಲೋಲ ಕಲ್ಲೋಲ ಸ್ಥಿತಿಯಲ್ಲಿರುವುದು. ಬೇಗನೇ ಅದರ ಬೇರೊಂದು ನಕಾಶೆಯನ್ನು ಬಿಡಿಸಬೇಕಾಗಿ ಬರುವುದು. ಆಗ ಅದರಿಂದ ಕೆಲವು ಸ್ವಾತಂತ್ರ್ಯ ರಾಷ್ಟ್ರಗಳು ಮಾಯವಾದುದನ್ನು ಕಾಣಬಹುದು

ಇದಕ್ಕಾಗಿ ಹಿಟ್ಲರನು ಇವತ್ತಿಗೆ ಬಹಳ ಸಮಯದಿಂದ ಗುಪ್ತದಲ್ಲಿ ಸಿದ್ಧತೆಗಳನ್ನು ಮಾಡುತ್ತಿದ್ದನು. ತಕ್ಕ ಸಮಯವು ಈಗ ಬಂದೊದಗಲು, ಅವನು ತನ್ನ ಉದ್ದೇಶಗಳನ್ನು ಸಾಧಿಸಿಬಿಟ್ಟನು. ಒಂದೇ ಒಂದು ಗುಂಡು ಕೂಡಾ ಹಾರಿಸದೆ, ಕ್ರಾಂತಿಯೊಂದು ನಡೆದುಬಿಟ್ಟಿತು.

ಎಂಟೊನಿ ಏಡೆನ್ನರ ರಾಜಿನಾಮೆ, ಆಸ್ಟ್ರಿಯಾದ ಚಾನ್ಸಲರಿಗೆ ಹಿಟ್ಲರನ ಕರೆ, ಲಾರ್ಡ್ ಹೇಲಿಫೇಕ್ಸರು ಭಹಿರ್‍ವ್ಯವಹಾರದ ಕಾರ್ಯದರ್ಶಿಯಾಗಿ ನೇಮಕಹೊಂದಿದುದು–ಇವೆಲ್ಲಾ ಹಿಟ್ಲರನ ಕೌಶಲ್ಯದ ಪರಿಣಾಮ ಹಿಟ್ಲರನ ಕಾರ್ಯಗಳು ಮುಸಲೀನಿಗೂ ಟೋರಿಗಳಿಗೂ ಮೊಧಲಾಗಿ ತಿಳಿದಿಲ್ಲವಾಗಿರಬೇಕು ಮೊನ್ನೆ ನಡೆದ ಘಟನೆಗಳಿಂದ ಅವರೂ ಕೂಡಾ ಅನಕ್ಕಾದರು ಹಿಟ್ಲರನು ತನ್ನ ಜರ್ಮನ್ ಸಂಸ್ಥಾನವನ್ನು ಯುರೋಪ್ಯದಲ್ಲಿ ಹರಡಿಸುವ ಕುರಿತು ಬ್ರಿಟನಿನ ಆಕ್ಷೇಪವಿರುವುದೇ ಎಂದು ತಿಳಕೊಳ್ಳಲಿಚ್ಛಿಸಿದನು ಟೋರಿಗಳಲ್ಲಿ ಆ ಕುರಿತು ವಿರೋಧಾಭಿಪ್ರಾಯವು ಇದ್ದಾಗ್ಯೂ, ಅವರು ತಮ್ಮ ಆಕ್ಷೇಪವಿಲ್ಲವೆನ್ನುವವರಾದರು ಫ್ರಾನ್ಸ್ ಬ್ರಿಟನನ್ನು ಎಲ್ಲಾ ವಿಚಾರಗಳಲ್ಲೂ ಅನುಸರಿಸುವುದರಿಂದ, ತನ್ನ ಉದ್ದೇಶಸಾಧನೆಗೆ ಫ್ರಾನ್ಸಿನ ಅಡ್ಡಿಯಿರದೆಂದು ಹಿಟ್ಲರನು ತಿಳಿದನು ಏಡೆನ್ನರು ಅಧಿಕಾರ ತ್ಯಜಿಸಿದುದೂ ಇದೇ ಒಂದು ಪ್ರಕರಣದಿಂದ ಹಿಟ್ಲರನಿಗೆ ಇನ್ನೊಂದು ಅಡ್ಡಿ ಇದ್ದಿತು ಮುಸಲೀನಿ ತಾನು ಆಸ್ಟ್ರಿಯಾದ ಗಾರ್ಡಿಯನನೆಂದು ಯಾವಾಗಲೂ ಹೇಳಿಕೊಳ್ಳುತ್ತಿದ್ದನು; ಈ ತಡೆಯನ್ನು ಕೂಡಾ ಹಿಟ್ಲರನು ತನ್ನ ಚಾತುರ್ಯದಿಂದ ತಪ್ಪಿಸಿಕೊಂಡನು ಹಿಟ್ಲರನು ಆಸ್ಟ್ರಿಯಾವನ್ನು ಕಬಳಿಸಿಕೊಳ್ಳುವುದರಿಂದ ಮುಸಲೀನಿಗೆ ಮಹತ್ತರದ ಅಪಾಯವಿದೆ ಮುಸಲೀನಿಯು ಈಗ ಭಯಂಕರ ತೊಂದರೆಗಳಿಗೆ ಒಳಗಾದುದರಿಂದ, ಅವನು ಹಿಟ್ಲರನ ಮಾತುಗಳಿಗೆ ಒಪ್ಪಬೇಕಾಯಿತು

ಸ್ಪೈಯಿನಿನಲ್ಲಿ, ಉತ್ತರ ಆಫ್ರಿಕಾದಲ್ಲಿ, ಮತ್ತು ಮೆಡಿಟರೇನಿಯನ್‌ನಲ್ಲಿ ಮುಸಲೀನಿಗೆ ಹೆಚ್ಚಿಗೆ ಮನಸ್ಸಿದ್ದು, ಆಸ್ಟ್ರಿಯಾದ ಸ್ವಾತಂತ್ರ್ಯ ರಕ್ಷಣೆಗಾಗಿ ಕಳುಹಿಸಲು ಅವನೊಡನೆ ಒಬ್ಬನೇ ಒಬ್ಬ ಸೈನಿಕನಿರುವುದಿಲ್ಲ ಮುಸಲೀನಿಯು ಮೇಲಿನವುಗಳಿಂದ ಸದ್ಯಕ್ಕೆ ಹೊರಬೀಳುವ ಹಾಗಿಲ್ಲ ಅಷ್ಟರೊಳಗೆ ಹಿಟ್ಲರನು, ಬಲಾತ್ಕಾರವನ್ನು ಉಪಯೋಗಿಸಿಯಾದರೂ ಆಸ್ಟ್ರಿಯಾದ ಒಡೆಯನಾಗುವನು

ಹಿಟ್ಲರನಿಗೆ ಈ ವಿಚಾರದಲ್ಲಿದ್ದ ಕೊನೆಯ ಅಡ್ಡಿಯೆಂದರೆ–ಜರ್ಮನ್ ಸಂಗ್ರಾಮ ದಳ ಆಸ್ಟ್ರಿಯಾದ ಮೇಲೆ ದಂಡೆತ್ತಿಹೋಗುವ ಆಲೋಚನೆಯು ಕೆಲವು ಸಂಗ್ರಾಮಾಧಿಕಾರಿಗಳಿಗೆ ಸರಿತೋರಲಿಲ್ಲ ಅವರನ್ನು ಹಿಟ್ಲರನು ಬಂದಿಷ್ಟು ಗುಲ್ಲೆಬ್ಬಿಸದೆ ಹೊರಮಾಡಿದನು

ಕಳೆದ ತಿಂಗಳಲ್ಲಿ ಹಿಟ್ಲರನು ಆಸ್ಟ್ರಿಯಾದ ಚಾನ್ಸಲರರನ್ನು ಬರಮಾಡಿಕೊಂಡಾಗ, ಆಸ್ಟ್ರಿಯಾದ ಗಡಿಯಲ್ಲಿ ಹಿಟ್ಲರನ ಸೈನ್ಯವು ಸಿದ್ಧವಾಗಿತ್ತು. ಬರೇ ತರಬೇತಿಗಾಗಿ ಸೈನ್ಯಮಂಡಳವು ಅಲ್ಲಿರಿಸಲ್ಪಟ್ಟಿದೆಂದು ಹಿಟ್ಲರನು ಹೇಳುವವನಾದನು. ಆದರೆ, ಆಸ್ಟ್ರಿಯಾದ ಚಾನ್ಸಲರರಿಗೆ ಅದರ ನಿಜವಾದ ಉದ್ದೇಶವು ಮೊದಲೇ ತಿಳಿದಿತ್ತು. ಆಸ್ಟ್ರಿಯದ ಚಾನ್ಸಲರರಿಗೆ ಆಲೋಚಿಸಲು ಕೆಲವೇ ನಿಮಿಷಗಳು ಕೊಡಲಾಗಿದ್ದವು ಒಂದೇ ಅತನು ಅತಿಕ್ರಮಕ್ಕೆ ಸಿದ್ಧನಾಗಬೇಕು, ಇಲ್ಲವೇ ಹಿಟ್ಲರನಿಗೆ ಬಗ್ಗಬೇಕು ಎಂಬ ಶರ್ತಗಳು ಅವನ ಮುಂದಿಡಲಾದುವು. ಬಗ್ಗುವುದೇ ಲೇಸೆಂದು ಆಸ್ಟ್ರಿಯಾದ ಚಾನ್ಸಲರ ಶೂಸ್‌ನಿಗ್ಗನು ಇಕ್ಕಟ್ಟಿನಮಾಡಿದ, ಕಾರಣ, ಆಸ್ಟ್ರಿಯಾದ ಸೈನ್ಯಮಂಡಲದ ಮೇಲೆ ಅವನಿಗೆ ಸರಿಯಾದ ಹಿಡಿವಿರುವುದಿಲ್ಲ. ಇದರ ಪರಿಣಾಮವಾಗಿ, ಆಸ್ಟ್ರಿಯಾದ ಜೈಲುಗಳಲ್ಲಿದ್ದ ನಾಜಿ ಕೈದಿಗಳನ್ನೆಲ್ಲಾ ವಿಮುಕ್ತಗೊಳಿಸಲಾಯಿತು ನಾಜಿಯೊಬ್ಬನು ಒಳಗಿನ ವ್ಯವಹಾರದ ಮಂತ್ರಿಯಾಗಿ ನೇಮಿಸಲ್ಪಟ್ಟು ನಾಜಿಗಳಿಗೂ ಜರ್ಮನ್ ಹಿತಕಾಂಕ್ಷಿಗಳಿಗೂ ಯಾವತ್ತೂ ತರದ ಹಾಹಾಕಾರದಂತೆ ಮಾಡಲಾಯಿತು ಆಸ್ಟ್ರಿಯಾವು ಜರ್ಮನಿದ್ದು ಎಂಬ ಅಪ್ಪಣೆಯು ಪ್ರಕಟವಾಗುವುದೊಂದೇ ಈಗ ಬಾಕಿಯಿರುವುದು ವಿಯೆನ್ನಾದಲ್ಲಿ ಬರ್ಲಿನ್‌ನಿಂದ ಬರುವ ಯಾವತ್ತೂ ಅಪ್ಪಣೆಗಳು ಈಗ ಶಿರಸಾವಹಿಸಲಾಗುತ್ತಿದೆ

ಮುಸಲೀನಿಗೆ, ಆಫ್ರಿಕಾ ಇತ್ಯಾದಿ ಕಡೆಗಳಲ್ಲಿ ಕೆಲಸವಿರುವುದರಿಂದ ಈ ಪ್ರಕರಣದಲ್ಲಿ ಅವನಿಗೆ ಪ್ರಾಮುಖ್ಯ ಪಾತ್ರವನ್ನು ವಹಿಸಲು ಅಸಾಧ್ಯವೆನಿಸಿತು ಮೆಡಿಟರೇನಿಯನ್‌ದಲ್ಲಿ ಸಂಪೂರ್ಣ ಒಡೆತನವು ದೊರೆಯುವ ಕುರಿತು ಮುಸಲೀನಿಗೆ ಹಿಟ್ಲರನಿಂದ ಭರವಸೆಯು ದೊರೆತಿರಬಹುದು. ಆದರೆ, ಮುಸಲೀನಿಗೆ ಟೋರಿಗಳಿಂದ ಹಣವು ದೊರಕಿದ ವಿನಹ ಏನೂ ಮಾಡಲಾಗುವುದಿಲ್ಲ ಆತನಿಗೆ ಅವರಿಂದ ಹಣವು ಸಿಗುವುದೆ? ಪೆಸಿಸ್ಟ್ ಮೆಡಿಟರೇನಿಯನ್ಸಿನಿಂದ ತಮಗೆ ಮುಂದಕ್ಕೆ ಸಂಭವಿಸಬಹುದಾದ ತೊಂದರೆಗಳು ಬ್ರಿಟನಿಗೆ ತಿಳಿದೇ ಇರುವಾಗ ಮುಸಲೀನಿಗೆ ಅವರಿಂದ ಸಾಲವು ದೊರಕುವುದೆ? ಎಂದು ನೋಡಬೇಕು. ಆಸ್ಟ್ರಿಯಾವು ಮುಸಲೀನಿಯಿಂದ ತಿರಸ್ಕೃತಗೊಳಿಸಲ್ಪಟ್ಟಿದೆ ಒಂದಾನೊಂದು ದಿನ ಹಿಟ್ಲರನು ಅದನ್ನು ಇಟಲಿಗೆ ವಿರೋಧವಾಗಿ ಉಪಯೋಗಿಸಬಹುದು

ಆಸ್ಟ್ರಿಯಾವು ದೊರಕಿದ ನಂತರವಾದರೂ ಹಿಟ್ಲರ್ ಸುಮ್ಮನಿರುವನೆ? ಜೆಕೊಸ್ಲವೆಕಿಯಾದ ಮೇಲೂ ಕೈಹಾಕಬೇಕೆಂದು ಅವನ ಪಯತ್ನಗಳು ನಡೆಯುತ್ತಿವೆ ಜೆಕೊಸ್ಲವೆಕಿಯಾವು ವಾರ್ಸಲೆ ಒಪ್ಪಂದದ ರಚನೆಯಾಗಿನ್ನೂ ಅಲ್ಲಿ ನ ಸಾ ... ... ಇತರ ಜರ್ಮನರೊಡನೆ ಕೂಡಲು ಅವರ ಬಹು ಆತುರಪಡುತ್ತಿದ್ದಾರೆ ಆಸ್ಟ್ರಿಯಾವು ಜರ್ಮನಿಗೆ ಸೇರಿರುವಾಗ, ಜೆಕೊಸ್ಲವೆಕಿಯಾವು ಕೂಡ ದೊರಕಿಬಿಟ್ಟರೆ, ಆಗ ಜರ್ಮನಿಯು ಅಖಂಡವಾದ ಒಂದು ಮಹಾ ರಾಷ್ಟ್ರವಾಗುವುದು ಇದಕ್ಕೆ ಲಾರ್ಡ್ ಹೆಲಿಫೇಕ್ಸರ ಒಪ್ಪಿಗೆ ಮೊದಲೇ ದೊರಕಿರುವುದು ಜೆಕೊಸ್ಲವೇಕಿಯಾದ ಜನರು ಈ ಕೊಡುವಿಕೆಯನ್ನು ವಿರೋಧಿಸುತ್ತಿರುವರು ಅಲ್ಲಿನ ಸರಕಾರವು ಹಿಟ್ಲರನಿಗೆ ಸುಲಭತರದಲ್ಲಿ ಬಗ್ಗುವಹಾಗಿಲ್ಲ ಅವನೊಡನೆ ಹೋರಾಡದೆ ಸುಮ್ಮನಿರದು ಆದರೆ 76 ಮಿಲ್ಲಿಯ ಜರ್ಮನರೆದುರು 12 ಮಿಲ್ಲಿಯ ಜೆಕ್ಕರು ಏನು ಮಾಡಬಲ್ಲರು? ಇತರ ಭಹಿರ್ ರಾಷ್ಟ್ರಗಳಿಂದ ಸಹಾಯ ಒದಗದ ವಿನಹ ಜೆಕ್ ಸರಕಾರಕ್ಕೆ ಏನೂಮಾಡಲಾಗದು ಆದರೆ ಸಣ್ಣದೊಂದು ರಾಷ್ಟ್ರದ ಸಲುವಾಗಿ ಇತರ ರಾಷ್ಟ್ರಗಳು ಮುಂಬರುವುದ ತೀರ ಅಸಂಭವನೀಯ ಆದರಿಂದ ಅವರಿಗೆ ದೊರಕುವ ಪುರುಷಾರ್ಥವಾದರೂ ಯಾವುದು?

ಈಗಲೇ ಹಿಟ್ಲರನು ಜೆಕ್ ಸರಕಾರದೊಡನೆ ಜಗಳವೆಬ್ಬಿಸಲು ಪ್ರಾರಂಭಮಾಡಿರುವನು ಆತನ ಗೋಜಿಗೆ ಹೋಗದೆ ಸುಮ್ಮನಿರುವ ತರದ ಧೋರಣೆಯು ಅವರದಾದರೂ, ತೋಳ ಮತ್ತು ಕುರಿಮರಿಯ ಕಥೆಯ ತೋಳನಂತೆ ಹಿಟ್ಲರನು ಜಗಳಕ್ಕಾಗಿ ಇಲ್ಲಸಲ್ಲದ ನೆವಗಳನ್ನು ಹುಡುಕುತ್ತಿರುವನು ಅಲ್ಲಿ ತನ್ನ ಉದ್ದೇಶವನ್ನು ಸಾಧಿಸಲು ಹಿಟ್ಲರನು ಸಮಯ ನಿರೀಕ್ಷಿಸುತ್ತಿರುವನು. ಇತರ ಪ್ರಭುತ್ವಗಳು ಜೆಕೊಸ್ಲೊವೆಕಿಯಾದಲ್ಲಿ ಕೈಹಾಕುವುದಿಲ್ಲವೆಂಬುದಾಗಿ ಮೊದಲೇ ಆತನು ಖಚಿತಮಾಡಿಕೊಳ್ಳಬೇಕಾಗಿದೆ ಇತರ ಪ್ರಭುತ್ವಗಳು, ಜೆಕೊಸ್ಲೊವೆಕಿಯಾವು ಜರ್ಮನಿಯೊಡನೆ ಸೇರುವುದನ್ನು ವಿರೋಧಿಸಬಹುದು,—ಆದರೆ ಇದು ಅಸಂಭವನೀಯ ಮುಸಲೀನಿಯು ಹಿಟ್ಲರನೊಡನ ಸಂಬಂಧ ಕಳಚಬಹುದು ಇದೊಂದೇ ಕಾರಣದಿಂದ ಹಿಟ್ಲರನಿಗೆ ಈ ವಿಷಯದಲ್ಲಿ ತೊಂದರೆಯುಂಟಾಗಬಹುದು ಆ ಕುರಿತು ಈಗ ಮಾತುಕತೆಗಳು ನಡೆಯುತ್ತಿವೆ ಮುಸಲೀನಿಯು ಹಿಟ್ಲರನಿಗೆ ವಿರೋಧವಾಗಿ ವರ್ತಿಸುವ ಸಂಭವಗಳೂ ಈ ಮಾತುಕತೆಗಳಿಂದ ಉಂಟಾಗಲೂ ಬಹುದು ಏನೂ ಆಗಲಿ,—ಹಿಟ್ಲರನಿಗೆ ಸದ್ಯಕ್ಕೆ ಒಂದು ಜಯವು ಒದಗಿರುತ್ತದೆ ಸಮಸ್ತ ಯುರೋಪ್ಯಕ್ಕೂ ಒಡೆಯನಾಗುವ ಅವನ ಮನೋಭಿಷ್ಟದ ಪ್ರಥಮಾಂಕವು ನಡೆದಿರುತ್ತದೆ

ಆಸ್ಟ್ರಿಯಾವನ್ನು ಜರ್ಮನಿಯೊಡನೆ ಸೇರಿಸುವುದರ ವಿಚಾರ ಪ್ಲೆಬಿಸೈಟನ್ನು (ಪ್ರಜಾಮತವನ್ನು ತೆಗೆಯುವುದು) ನಡೆಸಬೇಕಾಗಿ ಆಸ್ಟ್ರಿಯ ಚಾನ್ಸಲರರಾದ ಶೂಸ್‌ನಿಗ್ಗರು ಒಂದು ಪ್ರಕಟಣೆಯನ್ನು ಮಾಡಿದ್ದರು. ಅದರಿಂದ ಹಿಟ್ಲರನು ರೇಗಿಬಿಟ್ಟನು ಜರ್ಮನ್ ಸೈನ್ಯಮಂಡಳವು ಆಸ್ಟ್ರಿಯಾವನ್ನು ನುಗ್ಗಿಬಿಟ್ಟಿತು ಹಿಟ್ಲರನು ಆರ ಜನ ಸಂಗ್ರಾಮಾಧಿಕಾರಿಗಳೊಡನೆ ಆಸ್ಟ್ರಿಯಾದ ರಾಜಧಾನಿಯಾದ ವಿಯನ್ನಾ ನಗರಕ್ಕೆ ಧಾವಿಸಿದನು ಚಾನ್ಸಲರ್ ಶೂಸ್‌ನಿಗ್ಗನು ಸೆರೆಹಿಡಿಯಲ್ಪಟ್ಟು ಸಲಾಯನ ಮಾಡಿರುವನೆಂದು ಕೆಲವರೂ,

ಸರ್ವಾಧಿಕಾರಿ ಹಿಟ್ಲರ್.

ಅವನನ್ನು ಸುರಕ್ಷಿತವಾಗಿ ಜರ್ಮನ್ ಕಾವಲಿನಲ್ಲಿ ತನ್ನ ಮನೆಯಲ್ಲಿರುವನೆಂದು ಕೆಲವರೂ ಹೀಗೆ ಅನೇಕ ತರದ ವಾರ್ತೆಗಳು ಹೊರಟಿವೆ ಹಿಟ್ಲರನು ಆಸ್ಟ್ರಿಯಾದಲ್ಲಿ ತನ್ನ ವಿಜಯಯಾತ್ರೆಯನ್ನು ನಡೆಯಿಸಿಬಿಟ್ಟನು ಆಸ್ಟ್ರಿಯಾದ ಸೈನ್ಯಮಂಡಳವು ಜರ್ಮನ್ ಅಧಿಕಾರದ ಒಳಗಿರಲು ಸಮ್ಮತಿಸುತ್ತಿರುವುದು

ಹಿಟ್ಲರನ ಈ ವರ್ತನೆಯನ್ನು ಬ್ರಿಟನ್ ಫ್ರಾನ್ಸು ಇತ್ಯಾದಿ ಪ್ರಜಾಪ್ರಭುತ್ವದ ಜನಾಂಗಗಳು ಖಂಡಿಸಿ ಪ್ರತಿಕೂಲಿಸಿದಾಗ್ಯೂ, ಹಿಟ್ಲರನು ಅವರ ತೀರಾ ಅಲಕ್ಷ್ಯ ಮಾಡಿರುವನು ಜರ್ಮನಿಗೆ ಈ ವಿಜಯವು ದೊರೆತುದು ಒಂದೇ ಒಂದು ಪ್ರಾಣನಷ್ಟವಿಲ್ಲದೆ ಹಿಟ್ಲರನ ನಿಜವಾಗಿಯೂ ಬುದ್ಧಿವಂತನೆಂದೇ ತಿಳಿಯಬೇಕಾಗಿದೆ ಯುರೋಪ್ಯದಲ್ಲಿ ನಡೆದ ಈ ಎದ್ಯಮಾನಗಳಿಂದ ಪೂರ್ವದಲ್ಲಿ ಭಹಿರ್ ರಾಷ್ಟ್ರಗಳಿಗೆ ತೊಂದರೆ ಕೊಡುವ ವಿಚಾರದಲ್ಲಿ ಜಪಾನಿಗೆ ಇನ್ನಷ್ಟು ಬಲ ದೊರೆತಂತಾಯಿತೆಂದು ಭಹಿರ್ ಪತ್ರಿಕೆಯೊಂದರ ಅಭಿಪ್ರಾಯ

ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ ಅಜೀರ್ಣ, ಹೊಟ್ಟೆಯುಬ್ಬರ ಅಜೀರ್ಣ ಬೇಧಿಗಳು, ಕೈಕಾಲುಗಳು ಸಣ್ಣವಾಗಿ ಕ್ಷೀಣ, ಇವುಗಳಿಂದ ನರಳಿ, ಒಳಲಿ ಎಷ್ಟೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ಸೊರಗುತ್ತಿದ್ದಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ' ಒಂದೇ ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ

ಎಳೆಯ ಮಕ್ಕಳನ್ನು ರಕ್ಷಿಸುವುದ ದರೆ–

ಬಾಲಭಾಸ್ಕರ

ಆಯುರ್ವೇದಾಶ್ರಮಂ,
... ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸ

... ... ...
ಪಾಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.


ಯುರೋಪ್ಯದ ಇತರ ಪ್ರಭುತ್ವಗಳ ... ... ... ... ... ... ... ... ... ಹಿಟ್ಲರನ ಈಗ ... ... ... (illegible)

### ಸಿಂಹಳ ದ್ವೀಪಕ್ಕೆ ಸ್ವಾತಂತ್ರ್ಯ

ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸಲು ಸಿಂಹಳ ದ್ವೀಪದಲ್ಲಿ ಕಾಂಗ್ರೆಸ್ಸಿನ ತರದ ಒಂದು ಚಳವಳಿಯು ಪ್ರಾರಂಭವಾಗಿರುತ್ತದೆ

ಮೊನ್ನೆ ದಿನ ಅಲ್ಲೊಂದು ಮಹಾ ಮೆರವಣಿಗೆಯು ನಡೆದ ರಾಷ್ಟ್ರೀಯ ಗೀತಗಳು ಹಾಡಲ್ಪಟ್ಟವು ಸಮಸ್ತ ಸಿಂಹಳ ದೇಶದಲ್ಲೆಲ್ಲಾ ಈ ಸ್ವಾತಂತ್ರ್ಯ ಚಳವಳಿಯು ನಡೆಯುವಂತೆ ಪ್ರತಿಯೊಬ್ಬನ ಮುಂದೆ ಬರುವಂತೆ ಬೇಡಿಕೊಳ್ಳಲಾಗಿದೆ

ಪ್ರತಿ ವರ್ಷದ ಮಾರ್ಚ 2ನೇ ದಿನವನ್ನು ಸ್ವಾತಂತ್ರ್ಯ ದಿನವಾಗಿ ಆಚರಿಸಲ್ಪಡಬೇಕೆಂದು ನಿರ್ಣಯವಾಗಿರುತ್ತದೆ ನವೀನವಾಗಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯ ಪ್ರಾರಂಭೋತ್ಸವದಲ್ಲಿ ಅನೇಕ ಭಾರತೀಯರು ಭಾಗವಹಿಸಿದ್ದರು.

### ಮಾಜಿ ದಿವಾನರು ಸಂಸ್ಥಾನವನ್ನು ಪ್ರವೇಶಿಸಬಾರದು.

ಟಿಗ್ಗಿರಿಯಾ ಸಂಸ್ಥಾನದ ಹೊಸ ದಿವಾನರು ತನ್ನ ಮುಂಚಿನ ಹಳೆ ದಿವಾನರು ಸಂಸ್ಥಾನವನ್ನು ಪ್ರವೇಶಿಸಬಾರದಾಗಿ ಕಟ್ಟಪ್ಪಣೆ ಮಾಡಿರುವರು

ಹಳೆ ದಿವಾನರ ಕುರಿತು ಪ್ರಜೆಗಳಿಂದ ಅನೇಕ ದೂರುಗಳು ಬಂದುದರಿಂದಲೂ, ಅವರು ನಡೆಯಿಸಿದ ಹಾಳು ಕೃತ್ಯಗಳೂ ಈ ತರದ ಅಪ್ಪಣೆ ಹೊರಡಲು ಕಾರಣವಂತೆ.

# ರೈತರ ಸಾಲವಿಮೋಚನಾ ಮಸೂದೆಗೆ ವೈಸರಾಯರು ಸಮ್ಮತಿಯಿತ್ತರು! ರಾಜಗೋಪಾಲಾಚಾರ್ಯರ ಹೇಳಿಕೆ.

ಸ್ವದೇಶಾಭಿಮಾನಿ

### ಸಂಪನ್ನತೆಗೆ ಆಧಾರ

ಮದ್ರಾಸು ಸರಕಾರವು ಮಂಜೂರ್ಮಾಡಿ, ಗವರ್ನರ ಜನರಲರ ಅನುಮತಿ ಸಂಪಾದನೆಗೆ ಒಪ್ಪಿಸಿದ್ದ, ಆ ಋಣವಿಮೋಚನೆಯ ಕಾನೂನು ಧಾರಾಳಿ ದರಿದ್ರರ ಹಿಕಕ್ಕಿಂದಿದ್ದರೂ, ಸುಸಂಪನ್ನರ ಅತಚಣಿಗಳಿಗೂ ಕಾರಣವಾಗಿದ್ದೀತೆಂದು ಅದರ ಮಂಜೂರಾತಿಯು ಮಾಯವಾಗುವಂತೆ ನೋಡಲು ಅರ್ಜಿಗಳೂ ಅರಿಕೆಗಳೂ ನಿರ್ಣಯಗಳೂ ವೈಸ್ರಾಯರಿಗೆ ಕಳುಹಲಾಗಿದ್ದವು, ಪ್ರತಿದ್ವಂದ್ವಿಗಳಾಗಿರುವ ಭಾಷಣಾದಿಗಳೂ ವಿಮರ್ಶಾ ಟೀಕೆಗಳೂ ತುಂಬ ಇದ್ದುವು ಆದರೆ ಕೊಂಗ್ರೆಸ್ಸು, ದೀನರ ಸಲುವಾಗಿ ಭಾಷೆಕೊಟ್ಟುದನ್ನು ನೆರವೇರಿಸಲು ಮಾಡಿದ ಮನಃಪೂರ್ವಕ ನಿಸ್ವಾರ್ಥ ಪ್ರಯತ್ನಗಳು, ಅವುಗಳು ಇಡೀ ದೇಶಕ್ಕನ್ವಯಿಸುವ ಪರಿಷ್ಟ ಸಭಾ ಕಾನೂನುಗಳಿಗೆ ವಿರುದ್ಧವಾಗದಂತೆ ನೋಡಿ ಮಂಜೂರಾಗುವಂತೆ, ವೈಸ್ರಾಯರಿಗೇ ಒಪ್ಪಿಸಲಾಗಿದ್ದುವು ಪ್ರಜೆಗಳ ಬಿನ್ನಪಗಳನ್ನು ಲಾಲಿಸಿ, ದರಿದ್ರನಾರಾಯಣನೇ ವೈಸ್ರಾಯರ ಮೂಲಕ ಈಗ ಈ ಕಾನೂನನ್ನು ಮಂಜೂರು ಮಾಡಿರುವ ಪ್ರಯುಕ್ತ, ದರಿದ್ರ ರೈತರಿಗೆ ಒಂದು ಹೊಸಜೀವನಕ್ಕೆ ತಳಹದಿಹಾಕಿಕೊಳ್ಳಲು ಅನುಕೂಲವಾಗಿದೆ ಇದನ್ನು ಕಂಡು ಸಜ್ಜನರು ಸುಖಗೊಳ್ಳಬೇಕಾಗಿದೆ ನೇಕಡಾ ೯೦ ಮಂದಿಗೆ ಮಿಕ್ಕಿದ ರೈತರಿಗೆ ಒಂದು ಸೌಕರ್ಯ, ಒಂದು ತುತ್ತು ಅನ್ನ, ಒಂದು ಚಿಂದಿ ಬಟ್ಟೆ ಹೆಚ್ಚುವಂತಾಗಿ, ಅವರು ಒಂದು ಉಸಿರು ಹೆಚ್ಚಿಗೆ ಸುಖವಾತವನ್ನು ಅನುಭವಿಸುವುದರಲ್ಲಿ ಯಾವನಿಗೆ ತಾನೆ ಸಂತೋಷವಾಗದು?

ಹೀಗೆಂದು, ಈ ಕಾನೂನಿನಲ್ಲಿ ಕುಂದುಗಳಿಲ್ಲವೆಂದಲ್ಲ ನಾನಾ ವಿದ್ಯಮಾನಗಳಿಗೆ ತುತ್ತಾಗಿರುವ ರೈತರುಗಳಿಗೆ ಹಿತಮಾಡಲೆಳಸುವಾಗ, ಅಂತಹ ಎಲ್ಲ ವಿದ್ಯಮಾನಗಳಿಗೂ ಸಂತೃಪ್ತಿಕರವಾದ ಸಮಾಧಾನವನ್ನೇನೋ ಮಾಡಲೇಬೇಕಾಗುವುದು ಆದರೂ, ನಮ್ಮ ಸಂಸ್ಥಾನದಲ್ಲಿ ಇದೊಂದು ಹೊಸ ಇತಿಹಾಸವನ್ನೇ ಕಲ್ಪಿಸಿಕೊಡುವ ಕಾನೂನು, ವ್ಯವಹಾರದಲ್ಲಿ ಕಂಡುಬರುವ ದೋಷಗಳನ್ನು ತಿದ್ದಲೂ ಸಾಕಷ್ಟು ಅಡಚಣಿಗಳು ಉಂಟಾಗುವಲ್ಲಿ ಅವನ್ನು ಕೂಡಲೇ ತಿದ್ದಲೂ ಖಂಡಿತನಾಗಿ ಮಂತ್ರಿಮಂಡಲವು ಪ್ರಯತ್ನಿಸಲೇ ಬೇಕು ಹಾಗೆ ಮಾಡಿದಲ್ಲಿ ಮಾತ್ರ ಅತಿಸಂಖ್ಯೆಯ ರೈತರಿಗೂ ಕಡಿಮೆ ಸಂಖ್ಯೆಯ ಜಮೀನ್ದಾರ ವ ಧನಿಗಳಿಗೂ ನ್ಯಾಯವು ಏಕಕಾಲದಲ್ಲಿ ಉಂಟಾಗುವುದು

ಅವರ ಸಾಲದ ಪರಿಮಿತಿಯನ್ನು ಇಳಿಸಿರುವ ಬಳಿಕ, ಇನ್ನು ಅದನ್ನು ತೆರುವುದಕ್ಕೆ ಸುಲಭಸಾಧ್ಯವಾಗಿರುವ ನ್ಯಾಯವಾದ ಉಪಾಯಗಳನ್ನೂ ಸರಕಾರವೇ ಮಾಡಿಕೊಡಬೇಕು ಇದಕ್ಕಾಗಿ, ೫೦ ಲಕ್ಷ ರೂಪಾಯಿಗಳನ್ನು ಮುಖ್ಯಮಂತ್ರಿಗಳು ಈ ಸಲದ ಬಜೇಟಿನಲ್ಲಿ ಪ್ರತ್ಯೇಕಿಸಿಟ್ಟಿರುವರಾದರೂ ಅದರಿಂದ ರೈತರ ಸಾಲಸಂದಾಯಕ್ಕೆ ಬಹಳ ಹೆಚ್ಚಿನ ಸಹಾಯವಾಗಲಾರದು ಹೊಸ ಸಾಲಗಳಿಗೆ ಕೊರಲೊಡ್ಡದಂತೆ ರೈತರನ್ನು ರಕ್ಷಿಸುವುದಕ್ಕೂ ಸಹಾಯವೂ ಎಚ್ಚರವೂ ಸರಕಾರದ ಮೂಲಕವಾಗಿಯೇ ಸದ್ಯಕ್ಕೆ ಸಾಗಬೇಕಾಗಿದೆ

ಹೀಗೆ, ಸಂರಕ್ಷಣೆ ನಿವಾರಣೆ ಎರಡೂ ಸರಕಾರಕ್ಕೇ ಸೇರಿರುವ ಕಾರಣದಿಂದ ಹಾಗೆ ವರ್ತಿಸುವಲ್ಲಿ ಮಾತ್ರ ರೈತರಿಗೆ ಏನೊಂದು ಬಗೆಯ ಉದ್ಧಾರವಾದೀತೆನ್ನಬೇಕೇ ಹೊರತು, ಇಲ್ಲದಿದ್ದಲ್ಲಿ, ಎಣಿಸಿದಷ್ಟು ಅಭ್ಯುದಯವು ಉಂಟಾಗಲಾರದು

ಇದಕ್ಕಾಗಿ ರೆವಿನ್ಯೂ ಮಂತ್ರಿಯವರು ಹಲವು ಉದ್ದೇಶಗಳುಳ್ಳ ಸಹಕಾರ ಸಂಘಗಳನ್ನು ಸ್ಥಾಪಿಸುವ ಯೋಜನೆಯನ್ನು ಕೈಕೊಂಡಿರುವರು ಈ ಯೋಜನೆಯಿಂದ ಸರಕಾರದ ಈ ಕರ್ತವ್ಯಭಾಗವು ನೆರವೇರುವುದೆಂದು ನಂಬಬಹುದು ಸಹಕಾರ ಹೊಂದಿ ಬದುಕಬೇಕಾಗಿರುವವನು ಅಂತಹ ಸಹಕಾರವನ್ನು ಸೀದಾ ಪಡೆಯಬೇಕಲ್ಲದೆ, ಹಲವು ಸಂಸ್ಥೆಗಳ ಮುಖಾಂತರ ಪಡೆವಂತಾದಲ್ಲಿ, ಇಷ್ಟು ಮುಖಗಳನ್ನು ದಾಟಿ, ಅವನಿಗೆ ದೊರೆವ ಸಹಕಾರದ ಎಂಜಲು ಕ್ಷೇಮಕರವಾಗುವ ಆಹಾರವಾಗಲಾರದೆಂಬುದನ್ನು ಮರೆಯಬಾರದು ತುಂಬ ದುಡಿಯುವ ಭರವಸೆಗೆ ಯೋಗ್ಯರಾಗಿರುವ ರೈತರಿಗೆ ಸರಕಾರದ ಸಹಾಯವು, ಇತರರ ಬಾಧೆ ಹಂಗುಗಳಿಗೆ ಒಳಗಾಗದೆ ಸಿಗುವಂತಾಗುವುದುತ್ತಮ, ಅಂತಹ ಯೋಜನೆ ಸಾರ್ಥಕವಾದೀತೆಂದೂ ನಂಬುತ್ತೇವೆ



ಮುಖ್ಯ ಮಂತ್ರಿ ರಾಜ ಜಿಯವರು

### ಮುಖ್ಯ ಮಂತ್ರಿಯರ ಸಂದೇಶ

ಅದೋನಿ (ಆದವಾನಿ)ಯಿಂದ ಒಂದು ತಂತೀವಾರ್ತೆ ಬಂದಿದೆ ಹೋಳಿಹಬ್ಬದ ಮೆರವಣಿಗೆ ಮಾಡಲು ಅಧಿಕಾರಿಗಳ ಅಪ್ಪಣೆ ಸಿಕ್ಕಿಲ್ಲ, ಮಂತ್ರಿಗಳು ಸರಿ ಅಪ್ಪಣೆ ಕೊಡಿಸಬೇಕೆಂದಿದೆ ಮಂತ್ರಿಗಳು ಇದಕ್ಕೆ ಉತ್ತರವಾಗಿ—ಈ ವರ್ಷದ ಮೊಹರಮ್ ಕಾಲದಲ್ಲಿ ಸದ್ಯಕ್ಕೆ ಸಹನೆಯುಳ್ಳವರಾಗಿ, ಸ್ಥಳೀಯ ಅಧಿಕಾರಿಗಳೊಡನೆ ಸಹಕರಿಸಿ, ವಿದ್ಯಮಾನಗಳಲ್ಲಿ ತೃಪ್ತರಾಗಿರಿ ಎಂದು ವಾರ್ತೆ ಕಳುಹಿದರು

ಅದೋನಿಯಿರಿ ಅಲ್ಲದೆ ಎಲ್ಲೆಲ್ಲಿಯೂ ಈ ವಿದ್ಯಮಾನಗಳಲ್ಲಿ ಸರ್ವರೂ ಸಾವಧಾನಚಿತ್ತದಿಂದ ವರ್ತಿಸುತ್ತ, ಸ್ಥಳೀಯ ಅಧಿಕಾರಿಗಳ ಕೈಯನ್ನು ಬಲಪಡಿಸಬೇಕಾಗಿದೆ ಹೋಳೀ ಹಬ್ಬವು-ಹಿಂದುಗಳು ಪ್ರೇಮದ ಧ್ಯೇಯವನ್ನು ತಿಳಿದುಕೊಂಡು ಅತಿರೇಕವಾದ ವಿಷಯಾಸಕ್ತಿಯನ್ನು ತಡೆದು ಮನಸ್ಸನ್ನು ಸ್ಥಿರಗೊಳಿಸುವುದನ್ನು ಬೋಧಿಸುವುದಾಗಿದೆ ಮೊಹರಮ್ ಹಬ್ಬವು ಇಬ್ಬರು ಮಹಾತ್ಮರುಗಳ ಆತ್ಮಬಲಿಯನ್ನು ಕುರಿತಾಗಿ ಬೋಧಿಸುವುದಾಗಿದೆ ಇವೆರಡೂ ಹಬ್ಬಗಳ ಯಥಾರ್ಥವಾದ ಅರ್ಥವನ್ನು ಎಲ್ಲರೂ ಅರಿತುಕೊಳ್ಳಲಾರರಾದರೂ, ಕಾಲಕ್ರಮೇಣ ನಾನಾ ಪ್ರಸಂಗಗಳು ಈ ಹಬ್ಬಗಳ ಜತೆಗೆ ಸೇರಿ, ಅಜ್ಞಾನದ ದೆಸೆಯಿಂದ, ಇವುಗಳ ಆಚರಣೆಯು ನಿಜವಾಗಿಯೂ ಮನುಷ್ಯರಿಲ್ಲ ಸೋದರರೆಂಬುದನ್ನು ಈ ಹಬ್ಬಗಳು ಸಾರುವುದಕ್ಕಿವೆ ಪ್ರೇಮವು ದೈವಿಕವಾದುದೆಂದು ಹಿಂದುಗಳಿಗೆ ಹೋಳೀಹಬ್ಬವೂ, ಕರ್ಬಲದಲ್ಲಿ ಬಲಿದಾನವಾದುದರಸ್ಮರಣೆಯಿರಲೆಂದು ಮುಸ್ಲಿಮರಿಗೆ ಮೊಹರಮ್ ಹಬ್ಬವೂ ಸೂಚಿಸುವುದಾಗಿದೆ ಈ ಸ್ಮಾರಣೆಗಳನ್ನು ಮರೆತು, ಅನರ್ಥಗಳಾಗದಂತೆ ಸ್ಥಳೀಯ ಪೋಲೀಸರು ಎಚ್ಚರವಿಡುವುದನ್ನು ತಪ್ಪೆಂದು ಭಾವಿಸಬಾರದಾಗಿದೆ ಅಜ್ಞಾನದಿಂದ ಅಥವಾ ಕ್ಷಣಿಕ ಉದ್ರೇಕತನದಿಂದ ಸುನಡತೆ ತಪ್ಪಬಾರದು ನಿಜವಾದ ಹಿಂದುಗಳಾಗಲಿ ಮುಸ್ಲಿಮರಾಗಲಿ ಇದನ್ನು ಮರೆಯಬಾರದು ಸ್ಥಳೀಯ ಅಧಿಕಾರಿಗಳ ಅಪ್ಪಣೆಗೆ ರೇಗಬಾರದು

ಈ ವರ್ಷ ಹಿಂದೂಗಳ ಮತ್ತು ಮುಸ್ಲಿಮರ ಹಬ್ಬಗಳೆರಡೂ ಒಂದೇ ದಿನಕ್ಕೆ ಬಂದಿವೆ ಇದು ನಮ್ಮ ಸತ್ವಪರೀಕ್ಷೆಗಾಗಿದೆ ಒಂದು ಸಮಾಜಕ್ಕೆ ಮತ್ತೊಂದು ಸಮಾಜವು ಅನುಕೂಲವಾಗಿದೆಯೆ ಇಲ್ಲವೆ ಎಂಬುದನ್ನು ಪರೀಕ್ಷಿಸುವುದಕ್ಕಾಗಿಯೇ ಹೀಗೆ ಪಂಚಾಂಗದಲ್ಲಿ ಘಟಿಸಿ ಬಂದಿದೆ ಎನ್ನಬೇಕು

ಮದ್ರಾಸು ಸಂಸ್ಥಾನದಲ್ಲಿ ಹಿಂದೂ ಮುಸ್ಲಿಮರಲ್ಲಿನ ಒಕ್ಕಟ್ಟು ಕುಂದಾದುದು ಅತಿ ಕಡಿಮೆ ಉತ್ತರ ಹಿಂದೂಸ್ಥಾನದಲ್ಲಿ ನುಚ್ಚುನೂರಾಗಿದೆ ಅಲ್ಲಿನ ದುರ್ಲಕ್ಷಣಗಳು ಇಲ್ಲಿ ಉಂಟಾಗದಂತೆ ಮಂತ್ರಿಗಳ ಸಂದೇಶ

### ಮುರ್ಶಿದಾಬಾದಿನ ನವಾಬರು

ಹಿಂದೂವ ಸ್ಲಿಮ ಐಕ್ಯಸಾಧನೆಗಾಗಿ ಪ್ರಮುಖರನ್ನು ಕೂಡಿಸಿ ಕಳೆದವಾರ ಸಾಧನೆ ಮಾಡಿದರು ... ಎಲಿಲ್ಲಿಂಡ್ ... ವ ಸ್ಲಿಂ ಮುಖಂಡರಲ್ಲಿ ಹಲವರಿಂದರೂ ಈ ಪ್ರಯತ್ನಗಳನ್ನು ಶ್ಲಾಘಿಸಿ ಸಂದೇಶ ಕಳುಹಿದರಾದರೂ, ಬಂಗಾಳದ ಮಂತ್ರಿಮಂಡಲದಿಂದ ಒಬ್ಬ ಮಂತ್ರಿಯೂ ಈ ಸಭೆಯನ್ನು ಪ್ರೋತ್ಸಾಹಿಸಲಿಲ್ಲ ಮುರ್ಶಿದಾಬಾದಿನ ನವಾಬರ ಕುಟುಂಬವು ಬಂಗಾಳದಲ್ಲಿ ಅತ್ಯುತ್ತಮ ಗೌರವವನ್ನು ಸಂಪಾದಿಸಿಂದಲ... ಪಡೆದೇ ಇರುವ ಕಾರಣ ನವಾಬರ ಪ್ರಯತ್ನವು ಖಂಡಿತವಾಗಿಯೂ ಶೀಘ್ರಕರವಾಗಿ ಪರಿಣಮಿಸುವುದು ಕೊಂಗ್ರೆಸನ್ನು ಅಲ್ಪಸಂಖ್ಯಾತರಾದ ಮುಸ್ಲಿಮರ ವಿರುದ್ಧಸಂಸ್ಥೆಯೆಂದು ಕೆಗಳುಹವವರಿಗೆ ಉತ್ತರಕೊಡುತ್ತ ನವಾಬರು ಪ್ರತಿಯೊಂದು ಅಲ್ಪಸಂಖ್ಯಾಕ ಸಮಾಜದ ಹಕ್ಕುಗಳನ್ನು ಕಾಪಾಡುವ ಜವಾಬ್ದಾರಿಯು ಕಾಂಗ್ರೆಸಿನ ಮೇಲೆ ಇದೆಯೆಂಬುದನ್ನು ಸತ್ಯವಾಗಿಯೂ ನಂಬಿರಿ, ಹಿಂದೂ ಮುಸ್ಲಿಮರೇ ಮೊದಲಾದೆಲ್ಲರೂ ಒಂದಾಗುವ ಹಾಗೆ ಪ್ರಯತ್ನಿಸಲು ಹಿಂದೆಗೆಯದಿರಿ ಇದಕ್ಕಾಗಿ ಬೇಕಾದ ವಿಮರ್ಶೆ ಪರೀಕ್ಷೆಗಳನ್ನು ನಡೆಸಿ, ಕಾಂಗ್ರೆಸು ಯಾವ ಅಲ್ಪಸಂಖ್ಯಾತರನ್ನು ಎಲ್ಲಿ ಗಣನೆಗೆ ತಂದುದಿಲ್ಲವೆಂಬುದನ್ನು ಗೊತ್ತುಹಚ್ಚಿಕೊಂಡ ಅನಂತರ ದೂರಿರಿ ಎಂದರು ವಿವೇಕವುಳ್ಳವರಿಗೆ ಇಷ್ಟು ಸಾಕು, ಆದರೆ ಸ್ವಾರ್ಥಿಗಳಿಗೆ ಸಾಕೇ?

### ರೈತರ ಸಾಲವಿಮೋಚನಾ ಮಸೂದೆಗೆ ವೈಸರಾಯರು ಸಮ್ಮತಿಯಿತ್ತರು

ಮದ್ರಾಸು ಶಾಸನಸಭೆಯಲ್ಲಿ ಈ ಮೊದಲು ಪಾಸಾಗಿ ಗವರ್ನರರ ಅನುಮೋದನೆ ಬಗ್ಗೆ ಬಾಕಿ ಇದ್ದ ರೈತರ ಸಾಲನಿವಾರಣಾ ಮಸೂದೆಯು, ಗವರ್ನರರಿಂದ ವೈಸ್ರಾಯರ ಅನುಮತಿಯ ಬಗ್ಗೆ ಕಾದಿಡಲ್ಪಟ್ಟಿತ್ತು

ಮೊನ್ನೆ ತಾ 14ರಲ್ಲಿ, ಪ್ರಧಾನ ಸಚಿವರಾದ ಮಾನ್ಯ ಶ್ರೀ ರಾಜಗೋಪಾಲಾಚಾರ್ಯರು ಶಾಸನಸಭೆಯಲ್ಲಿ ರೈತರ ಋಣವಿಮೋಚನಾ ಮಸೂದೆಗೆ ವೈಸರಾಯರು ತಮ್ಮ ಅನುಮತಿಯನ್ನು ಕೊಟ್ಟಿರುವುದಾಗಿ ತಿಳಿಸಿದರು 'ವೈಸ್ರಾಯರ ಅನುಮತಿ ಬಗ್ಗೆ ಕಾದಿಡಲ್ಪಟ್ಟ ಈ ಮಸೂದೆಯಿಂದಾಗಿ ಮದ್ರಾಸು ಸಂಸ್ಥಾನದಲ್ಲಿ ಭಯಂಕರವಾದ ಮತ್ತು ಅತ್ಯಾಶ್ಚರ್ಯಕರವಾದ ಘಟನೆಗಳು ಸಂಭವಿಸಬಹುದಾಗಿ ಕೆಲವು ಮಂದಿಗಳು ಹಾರೈಸಿದ ವಿಚಾರವು ನಿರಾಶಾಜನಕವಾಯಿತೆಂದು ತಿಳಿಸುವರೆ ನನಗೆ ವ್ಯಥೆಯಾಗುವುದಾದರೂ ವೈಸ್ರಾಯರು ರೈತರ ಸಾಲ ನಿವಾರಣಾ ಮಸೂದೆಗೆ ಅವರ ಅನುಮತಿಯನ್ನಿತ್ತಿರೆನ್ನುವುದನ್ನು ಕೇಳಿ ನಿಮಗೆಲ್ಲರಿಗೂ ಆತ್ಮಾನಂದವಾಗಬಹುದು' ಎಂಬುದಾಗಿಯೂ ತಿಳಿಸಿದರು ಈ ಶಾಸನವು ಫೋರ್ಟ್ ಸೈಂಟ್ ಜೋರ್ಜ್ ಗಜೇಟಿನಲ್ಲಿ ಪ್ರಚಾರಪಡಿಸಿದಂದಿನಿಂದಲೇ ಜಾರಿಗೆ ಬರಬಹುದಾಗಿ ಊಹಿಸಲಾಗಿದೆ

## ಮದ್ರಾಸು ಹೈಕೋರ್ಟಿನಲ್ಲಿ ಬಾಟ್ಲಿವಾಲರ ಅಪೀಲು ತೆಗೆದುಹಾಕಲ್ಪಟ್ಟಿತು.

### ಹೈಕೋರ್ಟು ಜಡ್ಜರಿಂದ ಆರು ತಿಂಗಳ ಸಾದಾ ಸಜೆಯು ವಿಧಿಸಲ್ಪಟ್ಟಿತು'

ಮಾನ್ಯ ವೈಸರಾಯರು

### ಮದ್ರಾಸು ಹೈಕೋರ್ಟಿನಲ್ಲಿ ಬಾಟ್ಲಿವಾಲರ ಅಪೀಲು ತೆಗೆದುಹಾಕಲ್ಪಟ್ಟಿತು

ಬೊಂಬಾಯಿಯ ಸಮತಾವಾದ ಧುರೀಣರಾದ ಎಸ್ ಎಸ್ ಬಾಟ್ಲಿವಾಲರಿಗೆ ಕಳೆದ ಸಪ್ಟಂಬರದಲ್ಲಿ ವೆಂಕಟಗಿರಿಯಲ್ಲಿ ಮಾಡಿದ ಭಾಷಣವು ರಾಜದ್ರೋಹಾತ್ಮಕವಾದದ್ದೆಂಬ ಪಕ್ಷೀವಿನ ಮೇಲೆ ನೆಲ್ಲೂರು ಸಬ್ ಜಡ್ಜರು, ಆರು ತಿಂಗಳ ಸಾದಾಸಜೆಯನ್ನು ವಿಧಿಸಿದ್ದರು. ಈ ಕಾರಣದಿಂದ ಅವರು ಮದ್ರಾಸು ಹೈಕೋರ್ಟಿನಲ್ಲಿ ಮಾಡಿದ ಅಪೀಲು ಮೊನ್ನೆ ತಾ 14ರಲ್ಲಿ ತಮ್ಮ ಆಗ ಹೈಕೋರ್ಟು ಜಡ್ಜರು ಸದ್ರಿ ಅಪೀಲನ್ನು ತೆಗೆದುಹಾಕಿ, ಸಬ್‌ಜಡ್ಜರು ವಿಧಿಸಿದ ಆರು ತಿಂಗಳ ಸಾದಾಸಜೆಯನ್ನು ಕಾಯಂ ಮಾಡಿರುವರು

### ಕೊಂಗ್ರೆಸ್ಸಿನ ಆಯವ್ಯಯ

ಈ ವರ್ಷದ ಕಾಂಗ್ರೆಸ್ ಅಧಿವೇಶನವು ಇಷ್ಟು ವರ್ಷದವುಗಳಿಗಿಂತಲೂ ಬಹಳ ವೈಭವದಿಂದ ಜರುಗಿತು ಸಾಧಾರಣ 7½ ಲಕ್ಷದಷ್ಟು ಹಣವು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿತ್ತು ಆಯವು ಎಷ್ಟೆಂದು ಗೊತ್ತಿಲ್ಲವಾದರೂ 56 000 ರೂಪಾಯಿಗಳ ಟಿಕೇಟು ಮೊದಲಿನ ದಿನವೂ, 6000 ರೂಪಾಯಿಗಳ ಟಿಕೇಟುಗಳು ಎರಡನೆಯ ದಿನವೂ ಮಾರಾಟವಾಗಿತ್ತು ವಸ್ತುಪ್ರದರ್ಶನಾಲಯದ ಬಾಗಿಲು ಮೊಬಲಗು 29 586 10—0 ಆಗಿತ್ತು ಇದರಿಂದ ಸಾಧಾರಣ 286,696 ಜನರು ಪ್ರದರ್ಶನವನ್ನು ನೋಡಿದ್ದರೆಂದು ಹೇಳಬಹುದು ಇದಲ್ಲದೆ, ಸ್ವಯಂಸೇವಕರೂ ಇನ್ನಿತರ ಕೆಲಸಗಾರರೂ ಅದನ್ನು ಧರ್ಮಾರ್ಥ ನೋಡಿರುವರು. ಚಿಲ್ಲರೆಯಾಗಿ ಖಾದಿಮಾರಾಟದಿಂದ ರೂಪಾಯಿ 96,505—12—0ಯೂ, ರಖಂ ಆಗಿ ಮಾರಾಟದಿಂದ 22,508 ರೂ ಗಳೂ ದೊರೆತಿವೆ ಈ ತನಕ ಇಷ್ಟು ಧನಸಂಗ್ರಹವಾಗಿಲ್ಲೆಂದು ಹೇಳಬಹುದು ಇದು ಕೊಂಗ್ರೆಸ್ಸಿಗೆ ಜನತೆಯ ಮೇಲಿರುವ ಪ್ರತಿಭೆಯನ್ನು ವ್ಯಕ್ತಗೊಳಿಸುವುದಲ್ಲವೆ?

### ಬಲಿದಾನ

ಲಾಹೋರಿನ ಓರ್ವ ವಿದ್ಯಾವಂತ ತರುಣ ಇಂಗ್ಲಾಂಡಿಗೆ ಹೋಗಿ ಉಚ್ಚ ಶಿಕ್ಷಣವನ್ನು ಪಡೆದು, ತನ್ನ ಹುಟ್ಟೂರಿಗೆ ಹಿಂತಿರುಗಿದ್ದನು ಆದರೆ, ಮನೆಯಲ್ಲಿ ತನ್ನ ಮಡದಿಯ ಸಹವಾಸದಲ್ಲಿ ಅವನಿಗೆ ಸುಖದೊರಕದಾಯಿತು ಇದರಿಂದ ಜಿಗುಪ್ಸೆಗೊಂಡ ಆತನು ತನ್ನ ವಸ್ತ್ರಗಳ ಮೇಲೆ ಚಿಮಣಿ ಎಣ್ಣೆಯನ್ನು ಸುರಿದು, ಬೆಂಕಿಕೊಟ್ಟು ಸುಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡನು

### ದೇವಸ್ಥಾನಕ್ಕೆ ಹರಿಜನರ ಪ್ರವೇಶ

ಕಿಚ್‌ಪುರದ ವೀರಭೈರವ ದೇವಾಲಯವು ಮೊನ್ನೆ ಶಿವರಾತ್ರೆ ಜಾತ್ರೆ ದಿವಸದಿಂದ ಹರಿಜನರಿಗೆ ತೆರೆಯಲ್ಪಟ್ಟಿರುತ್ತದೆ ಈ ದೇವಾಲಯವು ಅತ್ಯಂತ ಪ್ರಾಚೀನವಾಗಿದ್ದು, ಅಸ್ಥಾನುದ ಜನಜನಿತವಾದುದಾಗಿರುತ್ತದೆ

### ಜೆಕೊಸ್ಲೆವೆಕಿಯಾ ಸರಕಾರಕ್ಕೆ ಫ್ರಾನ್ಸ್ ಸರಕಾರದ ಆಶ್ವಾಸನೆ

ಜೆಕೊಸ್ಲೆವಿಕಿಯೂದ ಮೇಲೆ ಜರ್ಮನಿಯು ಯಾವ ಕ್ಷಣದಲ್ಲಾದರೂ ಯುದ್ಧವನ್ನು ಹೂಡಿದ್ದಲ್ಲಿ ಆ ಕ್ಷಣಕ್ಕೆ ತಮ್ಮ ಸಹಾಯವನ್ನು ಕೊಡವೆವೆಂದು ಫ್ರಾನ್ಸ್ ಸರಕಾರದವರು ಭರವಸೆಯನ್ನು ಹೇಳಿರುತ್ತಾರೆ ಈ ವಿಚಾರವನ್ನು ಬ್ರಿಟಿಷ್ ಸರಕಾರಕ್ಕೂ ಕೂಡಾ ತಿಳಿಸಿರುತ್ತಾರೆ ಮಾತ್ರವಲ್ಲದೆ ಜೆಕೊಸ್ಲೆವೆಕಿಯಾಕ್ಕೆ ಜರ್ಮನಿಯು ಯಾವ ತರದ ಹೆದರಿಕೆಯನ್ನು ಸಂಚಿಸಿದ್ದೂ ಕಂಡುಬಂದಲ್ಲಿ ಆ ಕ್ಷಣದಲ್ಲಿಯೇ ಬ್ರಿಟಿಷ ಸರಕಾರದವರೊಡನೆ ಕೇಳದೇನೇ ಫ್ರಾನ್ಸು ತನ್ನ ಸಹಾಯವನ್ನು ಕೊಟ್ಟು ಜವಾಬ್ದಾರಿಯನ್ನು ಇದಿರಿಸುವಂತೆ ಸಹ ಜೆಕೊಸ್ಲೆವೆಕಿಯಾಕ್ಕೆ ಆಶ್ವಾಸನೆಯನ್ನು ಕೊಟ್ಟಿರುತ್ತದೆ ಇದರಿಂದ ಯುದ್ಧ ಸಾಮುಗ್ರಿಸನ್ನಾಹವು ಬಹು ರಭಸದಿಂದ ಸಾಗುತ್ತಿದೆಯಾಗಿ ತಿಳಿದುಬರುತ್ತದೆ

### ಹಿಮಾಲಯವು ಕುಸಿದುಬೀಳುತ್ತದೆ!

ಹಿಮಾಲಯ ಪರ್ವತವು ಕೆಲವು ಕಡೆಗಳಲ್ಲಿ ಕುಸಿದು ಬೀಳಲು ಪ್ರಾರಂಭವಾಗಿರತ್ತದೆಂದು ವಾರ್ತೆ ಬಂದಿದೆ ಇದರಿಂದ ಹಿಮಾಪ್ರದೇಶಗಳಲ್ಲಿರುವ ಅನೇಕ ಹಳ್ಳಿಗಳಿಗೆ ಹಾನಿ ಬರುವಂತಿದೆ.

### ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿ, ಮತ್ತು ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ ಮಂಗಳೂರು

ಬರುವ ಮಾರ್ಚಿ ತಾ 16ನೇ ಬುಧವಾರ ಈ ಮೇಲ್ಕಾಣಿಸಿದ ಎರಡೂ ಕಮಿಟಿಗಳ ಆಫೀಸುಗಳು ಕೊಡಿಯಾಲ ಬೈಲಿನಿಂದ ಫೆಲಿಕ್ಸ್‌ಪೈ ಬಜಾರ ಮೂರನೇ ಬ್ಲಾಕಿನ ಮಾಳಿಗೆಗೆ ಬದಲಾಯಿಸುವುದರಿಂದ ಇನ್ನು ಮುಂದೆ ಈ ಎರಡೂ ಆಫೀಸುಗಳೊಡನೆ ಮಾಡಬಹುದಾದ ಯಾವತ್ತೂ ಪತ್ರವ್ಯವಹಾರಗಳನ್ನು ಈ ವಿಳಾಸಕ್ಕೆ ಬರೆಯಬೇಕಾಗಿ ವಿನಂತಿ

ಯು ಶ್ರೀನಿವಾಸ ಮಲ್ಯ, ಅಧ್ಯಕ್ಷ

### ಪರಿಷತ್ತ್ ಸಭೆಯಲ್ಲಿ ಕೊಲೆ!

ಅಮೃತಸಾರದಿಂದ 16 ಮೈಲು ದೂರವಿರುವ ಫಾಟಿವಲ್ ಎಂಬ ಗ್ರಾಮದಲ್ಲಿ ಕೊಂಗ್ರೆಸ್ ಚಳವಳದ ಪ್ರಚಾರದ ನಿಮಿತ್ತವಾಗಿ ಏರ್ಪಡಿಸಿದ ರಾಜಕೀಯ ಸಭೆಗೆ ಅನೇಕ ಮಂದಿ ಕಾಂಗ್ರೆಸ್ಸಾಪಲರೂ, ಲಾಹೋರ್ ಎಸೆಂಬ್ಲಿ ಸದಸ್ಯರೂ ಅಲ್ಲದೆ ಅನೇಕ ಗ್ರಾಮಸ್ಥರೂ ಕೂಡಾ ನೆರೆದುಬಂದಿದ್ದರು ಪರಿಷತ್ತಿನ ಸಭೆಯಲ್ಲಿ ಕಾಂಗ್ರೆಸು ಕಡೆಯವರ ಭಾಷಣಗಳು ಮುಗಿಯುತಲೆ ಹಳ್ಳಿಗರಿಲ್ಲರೂ ಏನೋ ಕೊಂಡರೆ ಸಂಭವಿಸುವ ಚಿಹ್ನೆಗಳು ಕಲೆದೋರಿಬಂದ ಕಾರಣ ಓಡಿಹೋದರು ಅಷ್ಟರಲ್ಲಿ ಕೆಲವು ಸಮಯದ ಹಿಂದೆ ಮುಸಲ್ಮಾನರ ದಂಗೆಯ ಕೇಸಿನಲ್ಲಿ ಕಾಂಗ್ರೆಸ್‌ವಾಲರ ವಿರುದ್ಧ ಸಾಕ್ಷಿ ವನ್ನಿತ್ತ ಒಬ್ಬ ಮುಸಲ್ಮಾನ ದೋಣಿಗಾರನನ್ನು ಕೆಲವರು ಓಡಿಸಿಕೊಂಡು ಹೋಗಿ ಅವನನ್ನು ಹೊಡೆದುಕೊಂದಿರುವದಾಗಿ ತಿಳಿದುಬರುತ್ತದೆ ಅಲ್ಲದೆ ನಾಲ್ಕಾರು ಮಂದಿಗೆ ಗಾಯಗಳಾಗಿರುತ್ತವೆಂದೂ, ಆ ವ್ಯಕ್ತಿ ಒಬ್ಬನು ಬಹಳ ಕಠಿಣಾವಸ್ಥೆಯಲ್ಲಿರುವನೆಂದೂ ತಿಳಿದುಬಂದಿದೆ

### ಕಾಂಗ್ರೆಸಿಗೆ ಪಂಜಾಬ ಪ್ರಧಾನಮಂತ್ರಿಗಳ ಅಳಿಯಂದಿರು ಸೇರಿದರು

ಪಂಜಾಬಿನ ಮುಖ್ಯ ಸಚಿವರರ ಅಳಿಯನೂ ಪಂಜಾಬ ಸರಕಾರದ ಮಾಜಿ ರೆವಿನ್ಯೂ ಮೆಂಬರ ಮತ್ತು ಪ್ರಕೃತದ ಎಸೆಂಬ್ಲಿಯ ಸದಸ್ಯರೂ ಆದ ಖಾನ ಬಹದ್ದೂರ ಮಹಮ್ಮದ ಖಾನರ ಪುತ್ರ ನವಾಬ್ಜಾದಾ ಮಹಮ್ಮದಾಲಿಯವರ ಕಾಂಗ್ರೆಸ್ಸನ್ನು ಸೇರಿದರು ಅವರು ಈಗಿನ ಪರಿಸ್ಥಿತಿಗಳನ್ನು ಸಂಪೂರ್ಣವಾಗಿ ವಿಚಾರಿಸಿ, ಹಿಂದೂದೇಶದ ಈಗಿನ ದುರವಸ್ಥೆಯಿಂದ ಅದನ್ನು ಬಿಡುಗಡೆ ಮಾಡಿ ಸ್ವರಾಜ್ಯ ಸಂಪಾದನೆಯ ಸಲುವಾಗಿ ಹೋರಾಡುವ ಸಂಸ್ಥೆಯೇ ಕೊಂಗ್ರೆಸ್ಸು ಬಡವರ ಕಷ್ಟಗಳನ್ನು ನಿವಾರಿಸುವುದೂ ನ್ಯಾಯ ನೀತಿಗಳನ್ನು ಕಾಪಾಡುವುದೂ ಮತ್ತು ನಮ್ಮ ಭೂಮಿಯನ್ನು ಪರರಾಜ್ಯದ ಧನದಿಂದ ಉದ್ಧರಿಸುವುದು ಕಾಂಗ್ರೆಸ್ಸಿನ ಉದ್ದೇಶವಾಗಿದೆ ಆದುದರಿಂದ ಎಲ್ಲರೂ ಕಾಂಗ್ರೆಸ್ಸಿಗೆ ಸೇರಿ ಅದನ್ನು ಬಲಪಡಿಸಿ ನಮ್ಮ ಮಾತೃಭೂಮಿಯನ್ನು ಉದ್ಧರಿಸುವುದು ಪ್ರತಿಯೊರ್ವ ಭಾರತೀಯನ ಕರ್ತವ್ಯವಾಗಿದೆ ಎಂದು ಅವರ ವಿನತಿ ಮಾಡಿಕೊಂಡಿರುವರು

### ಇಂದಿನ ವಾರ್ತೆ.

ಯುರೋಪಿನಲ್ಲಿ ಒಂದು ಬಗೆಯ ಉತ್ಪಾತವೇ ಉಂಟಾಗಿದ್ದು, ಬ್ರಿಟನ್ನು ತನ್ನ ಮತ್ತು ಸಾಮ್ರಾಜ್ಯದ ಸಂರಕ್ಷಣೆಗಾಗಿ ಯುದ್ಧ ಸನ್ನಾಹಗಳನ್ನು ಗೂಢವಾಗಿಯೂ ವಿಸ್ತಾರವಾಗಿಯೂ ತ್ವರಿಯಲ್ಲೇ ಶೃಜಿಸಿಯೇ ಸಿದ್ಧವಾಗಬೇಕೆಂದು ಪಾರ್ಲಿಮೆಂಟಿನಲ್ಲಿ ವಿವರಿಸಲಾಗಿದೆ

ಜರ್ಮನಿಯು ಆಸ್ಟ್ರಿಯದಲ್ಲಿ ಕೈಕೊಂಡ ಅತಿಕ್ರಮಣಾದಿ ವಿಚಾರಗಳನ್ನು ಖಂಡಿತವಾದ ನುಡಿಗಳಲ್ಲಿ ಆಕ್ಷೇಪಿಸಿ, ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬನೂ ಜನಾಂಗವು ಮಾಡುತ್ತಿರುವ ಪ್ರಯತ್ನಗಳಲ್ಲಿಲ ಕೈಗೂಡಿಯೇ ಇರತಕ್ಕಂಥ ದಿನಗಳು ಬಂದಿವೆ ಎಂದೂ ಮುಖ್ಯ ಪ್ರಧಾನರು ತಿಳಿಸಿರುತ್ತಾರೆ

ಒಂದು ಮಿಲ್ಲಿಯ ವೊಲಂಟೀಯರು ಅತ್ಯಾವಶ್ಯಕವಾಗಿ ಇಂಗ್ಲೆಂಡಿಗೆ ಬೇಕಾಗಿರುವರೆಂದು ರೇಡಿಯೋ ಮೂಲಕ ಸರ್ ಸಾಮುವೆಲ್ ಹೋರರು ಜನಾಂಗಕ್ಕೆ ತಿಳಿಸಿ, ವಿಮಾನಗಳ ದಾಳಿಯಿಂದ ಉಂಟಾಗಬಹುದಾದ ಅಪಾಯಗಳನ್ನು ನಿವಾರಿಸಬೇಕೆಂದು ಸೂಚಿಸಿದ್ದಾರೆ

ಲೀಗ್ ಆಫ್ ನೇಶನ್ಸಿಗೆ ಕೂಗಿ ಯಾವ ಫಲವೂ ಬಾರದೆಂದೂ ಬ್ರಿಟನ್ನು ಸಾಮುದಾಯಿಕ ಭದ್ರತೆಗಾಗಿ ಖಂಡಿತ ಪೇಚಾಡಬೇಕೆಂದೂ ಮೆಂಬರರೊಬ್ಬರು ಮಂತ್ರಿಗಳೆಣಿಸಿರುವ ಯೋಜನೆಯನ್ನು ಪ್ರಕಟಿಸಿರುವರು

ಜರ್ಮನಿಯಿಂದ ಬ್ರಿಟಿಷ್ ಸರಕಾರಕ್ಕೆ ಬಂದಿರುವ ಪತ್ರದಲ್ಲಿ—ಜರ್ಮನಿಯು ಜರ್ಮನ ಜನಾಂಗವನ್ನು ಒಂದೇ ಸರಕಾರದ ಆಶ್ರಯಕ್ಕೆ ತರುವ ಪ್ರಯತ್ನ ಮಾಡುವ ವಿಷಯದಲ್ಲಿ, ಇತರರು ಕೈಯಿಕ್ಕುವುದು ಸರಿಯಾಗಿಲ್ಲವೆಂದೂ, ಆಸ್ಟ್ರಿಯದ ಜನರ ಅಪೇಕ್ಷೆಯಂತೆ ಅಲ್ಲಿ ಶಾಂತಿಭಂಗವಾಗಿ ದಂಗೆಯೆದ್ದು ಜನರು ಮರಣಹೊಂದದ ಹಾಗೆ, ಈ ರೀತಿಯಾಗಿ ಜರ್ಮನರು ಆಸ್ಟ್ರಿಯವನ್ನು ಸೇರಿದರೆಂದೂ ಸಹ ತಿಳಿಸಿ, ನೂರನೆಯವರು ಕೈಯಿಕ್ಕುವುದರಿಂದ ಮಾತ್ರ ಜರ್ಮನರು ಶಾಂತಿಸ್ಥಾಪನೆಗೆ ಮಾಡುವ ಪ್ರಯತ್ನಗಳು ಲೋಪಹೊಂದಿ, ತಮ್ಮ ಸ್ವಯಂ ನಿರ್ಧಾರವನ್ನು ಜರ್ಮನರು ತಾವೇ ಮಾಡಿಕೊಂಡವರಲ್ಲಿ ಏನೂ ಅನ್ಯಾಯವಿಲ್ಲವೆಂದೂ ಇದೆ

ಬ್ರಿಟಿಷ ಪ್ರಧಾನಮಂತ್ರಿ ಚೇಂಬರ್‌ಲೇನರ

ರಷ್ಯದಲ್ಲಿ ದೇಶದ್ರೋಹಿಗಳೆಂದು (ಸತ್ಯವೊ ಸುಳ್ಳೊ) ಹಲವರನ್ನು ಜನ್ಮಾಂತ್ಯ ಶಿಕ್ಷೆಗೆ ವಿಧಿಸಲಾಯಿತು ಇಲ್ಲೀಗ ಸರಕಾರವು ಸ ಪಕ್ಷದಲ್ಲಿ ಅಧಿಕಾರಿಗಳಾಗಿದ್ದವರ ಮೇಲೆಯೆ ಹತ್ಯಾಗ್ರಹನ ಪ್ರಾರಂಭಿಸಿಯದೆ ಬದ ಕೋಚನೆಯು

ಸ್ಪೈನಿನಲ್ಲೂ ಚೀನದಲ್ಲಿ ಯುದ್ಧ ಮುಂದುವರಿಯುತ್ತದೆ

### ಸ್ವದೇಶ.

ಬಿಹಾರ್ ಸರಕಾರವು 17+5 ಕೈದಿಗಳನ್ನು (ರಾಜಕೀಯ ವಿಭಾಗ) ಬಿಡುಗಡೆ ಮಾಡಿದೆ ಇನ್ನೊಬ್ಬನೇ ಕೈದಿ ಅಲ್ಲಿ ಉಳಿದಿರುವನು ಅವನನ್ನು ಇನ್ನು ಅಲ್ಪಕಾಲದೊಳಗೆ ಬಿಡುಗಡೆ ಮಾಡುವರು

ಬಂಗಾಳ ಸರಕಾರ ಪಕ್ಷದ ಮೆಂಬರರಾಗಿ ಸೇರಿದ ಪ್ರಜಾಪಕ್ಷದವರಲ್ಲಿ ಮೊನ್ನೆ 20 ಮಂದಿ ಸರಕಾರದ ವ್ಯಕ್ತಿಗಳ ಧೋರಣೆ ಆಕ್ಷೇಪಿಸಿ, ಆ ಪಕ್ಷವನ್ನು ತೊರೆದರು ಈಗ ಪುನಃ 12 ಮಂದಿ ಮುಸ್ಲಿಮರೇ ಆ ಪಕ್ಷಕ್ಕೆ ರಾಜೀನಾಮೆ ಕೊಟ್ಟಿರುವರು ರಾಜಕೀಯ ಕೈದಿಗಳ ಬಿಡುಗಡೆ ಮಾಡಲು ಗಾಂಧೀಜೀಯವರು ಕಲ್ಕತ್ತೆಗೆ ಬರುವ ವಾರ್ತೆ ಹೋಗುವರು ಆಗಲಿ, ಜಹುಶಃ ಮಂತ್ರಿಮಂಡಳದ ರಚನೆಯೂ ಬೇರೆಯಾಗಬಹುದೆ?

ವೃಥಾ ಅಧಿಕ ಸಂಬಳದ ಬಹಳ ಹೊಸ ಹುದ್ದೆಗಳನ್ನು ಬಂಗಾಳ ಮಂತ್ರಿಗಳು ರಚಿಸಿರುವರೆಂದೂ, ಚುನಾವಣೆ ಕಾಲದಲ್ಲಿ ಜನರಿಗೆ ಕೊಟ್ಟ ಮಾತನ್ನು ನಡೆಸುತ್ತಿಲ್ಲವೆಂದೂ, ವ್ಯರ್ಥ ಖರ್ಚು 26 ಲಕ್ಷ ರೂಪಾಯಿಯಾಗಿದೆಯೆಂದೂ ಮೆಂಬರರ ದೂರು

ಮದ್ರಾಸು ಮಂತ್ರಿಗಳು ತೀರ್ವೆ ನಿರ್ಣಯ ಮಾಡುವ ಹೊಸ ಕಾನೂನನ್ನು ಸದ್ಯವೇ ಪ್ರಕಟಿಸುವರು ಆಗ ಅನ ಭವಿಗಳು ಬೇಕೆಂಬದರಿಂದಲೇ, ರೆವಿನ್ಯೂ ಬೋರ್ಡನ್ನು ಇನ್ನೂ ಊರ್ಜಿತವಾಗಿರಿಸಿದ್ದಾರೆ

ಕರಾಂರಾಕರಣ ಕಾಲದಲ್ಲಿ ಮುಟ್ಟುಗೋಲಾಗಿ ಮಾರಾಟವಾದ ಎಷ್ಟೋ ಜಮೀನುಗಳನ್ನು ಪುನ ಅವುಗಳ ಧನಿಗಳಿಗೆ ಕೊಡಿಸುವ ಬಗ್ಗೆ ಬೊಂಬಾಯಿ ಸರಕಾರವು ಒಂದು ಸಭೆ ಜರುಗಿಸುವುದು

ತಾ ೧೨ನೇ ಶನಿವಾರ ಬೆಳಗಿನ ಗಂಟೆ ... ಬೊಂಬಾಯಿ ನಗರವು ಭೂಕಂಪದ ನಡತೆಯಿಂದ ಎಚ್ಚರಿಸಲ್ಪಟ್ಟಿತು ನೆಲಕಂಪನವು ಸುಮಾರು ೨೦ ಸೆಕೆಂಡುಗಳ ವರೆಗೆ ಇತ್ತು ಮಲಗಿಕೊಂಡವರು ಭಯದಿಂದ ಎದ್ದು ಕುಳಿತುಕೊಂಡರೆ ಕೆಲವರು ಮನೆಬಿಟ್ಟು ಹೊರಗೆ ಮೈದಾನುಗಳಿಗೆ ಓಡಿಹೋದರು ಈ ಮೊದಲು ಎರಡು ತಿಂಗಳಲ್ಲಿಯೂ ಭೂಕಂಪದ ಸಮಯದಲ್ಲಿ ಇದೇ ರೀತಿಯ ಕಂಪನವು ಬೊಂಬಾಯಿಯಲ್ಲಿ ಉಂಟಾಗಿತ್ತು

THE
**Canara Banking Corporation, Udipi, Ltd**
INCORPORATED IN BRITISH INDIA
ESTD 1906
**SEASON DEPOSITS**
of
Rs. 500/- & above
Are Accepted
at
3½% p. a.
at
All Our Branches

# ★ ರಾಷ್ಟ್ರಪತಿ ಭೋಸರ ಭಾಷಣ: ★

## 'ಭಾರತೀಯ ಸ್ವಾತಂತ್ರ್ಯಕ್ಕೆ ಸುಸಂದರ್ಭ'

ಇದೀ ಬಂಗಾಳವನ್ನು ಹೊಸತಾಗಿ ಮಾರ್ಪಡಿಸುವರೆ, ನಾನು ನಿಮ್ಮೆಲ್ಲರ ಅನುರಾಗ, ಸಹಾಯ, ಸಹಾನುಭೂತಿ ಮತ್ತು ಸಂಪೂರ್ಣ ಐಕ್ಯತೆಯನ್ನು ಬಯಸುತ್ತೇನೆ. ಇನ್ನೂ ನಿಮ್ಮಲ್ಲಿ ಆಗಾಗ್ಗೆ ಕಂಡುಬರುವ ಕೆಲವು ಭೇದ ಭಾವಗಳನ್ನು ನೋಡಿ ನನಗೆ ತುಂಬಾ ದುಃಖವಾಗುತ್ತದೆ. ಈ ಕ್ಷಣದಿಂದ ನಿಮ್ಮೊಳಗಿರುವ ಯಾವತ್ತೂ ವೈಷಮ್ಯ, ಅನುಮಾನ, ಕಲಹ ಮತ್ತು ಅಸೂಯೆಗಳನ್ನು ತೊರೆದು ಪವಿತ್ರ ಗಂಗಾನದಿಯಲ್ಲಿ ತೊಳೆಯಿಸಿ ಮರೆತುಬಿಟ್ಟು ನನಗೆ ಐದು ವರ್ಷಗಳ ಅವಧಿಯನ್ನು ಕೊಡಬೇಕು. ವಿದ್ಯೆಯಲ್ಲಾಗಲೀ ಕಲೆಯಲ್ಲಾಗಲೀ ಅಥವಾ ಸ್ವಾರ್ಥತ್ಯಾಗಿಗಳಾಗಿ ದೇಶಮಾತೆಯ ಸೇವೆಯಲ್ಲಿ ತಮ್ಮ ಸರ್ವಸ್ವವನ್ನಲ್ಲದೆ ಜೀವವನ್ನೇ ಅರ್ಪಿಸಿದ ಅನೇಕ ವೀರಪುತ್ರರಿಂದ ಈ ಬಂಗಾಳವು ಹೆಸರುಗೊಂಡಿದೆ. ಈಗ ಬೇಕಾಗಿರುವದು ಐಕ್ಯತೆ ಮತ್ತು ಶಿಸ್ತಿನ ಸಂಘಯೋಜನೆ,



ರಾಷ್ಟ್ರಪತಿ ಭೋಸರು

ಇಷ್ಟನ್ನು ನಿಮ್ಮಿಂದ ನಾನು ಅನುಗ್ರಹಿಸಲ್ಪಟ್ಟರೆ ನಿಮ್ಮ ಅನುರಾಗ, ಸಹಾಯ ಮತ್ತು ಸಹಾನುಭೂತಿಯಿಂದ ತೀರಾ ಹೊಸ ಬಂಗಾಳವನ್ನು ಖಂಡಿತವಾಗಿಯೂ ನಿರ್ಮಾಣಮಾಡಬಲ್ಲೆನು' ಎಂಬುದಾಗಿ ಸುಭಾಷ್ಚಂದ್ರ ಭೋಸರು ಹರಿಪುರ ಅ. ಭಾ. ಕಾಂ. ಅಧಿವೇಶನದ ನಂತರ ಪ್ರಥಮ ಬಾರಿಯಾಗಿ ಕಲ್ಕತ್ತಾಕ್ಕೆ ಹೋದಾಗ ಮಾಡಿದ ಭಾಷಣದಲ್ಲಿ ಹೇಳಿದರು. ಅಲ್ಲದೆ, ಈಗಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಗಮನಿಸಿ ನೋಡಿದ್ದಲ್ಲಿ, ಬ್ರಿಟನು ಯಾವ ಜನಾಂಗದವರನ್ನು ಎದುರಿಸಲು ಹಿಂಜರಿಯುತ್ತದೆ, ಅದು ಅದಷ್ಟು ತನ್ನನ್ನು ರಕ್ಷಿಸಿಕೊಳ್ಳಲು ಆತುರಪಡುತ್ತಿದೆ. ಇತ್ತೀಚೆಗಿನ ಆಸ್ಟ್ರೀಯದ ಸಂಘಟನೆಗಳು ಮತ್ತು ಜರ್ಮನಿಯ ಧೋರಣೆಯನ್ನು ಎದುರಿಸಲು ಬ್ರಿಟನಿಗೆ ಸಾಧ್ಯವಾಗಲಿಲ್ಲ. ಜಪಾನು ಮುಸಲೀನಿಯ ಕುರಿತು ಅದು ಎಷ್ಟು ಭಯಗೊಂಡಿರುತ್ತದೆ ಎಂಬುದನ್ನು ನಾವು ಅರಿಯದವರಲ್ಲ. ಮಾತ್ರವಲ್ಲದೆ, ಡಿವೆಲರರೊಡನೆ ಬ್ರಿಟನು ಹೊಸತಾದ ಯಾವುದೋ ಕೆಲವು ಯೋಜನೆಯ ಕುರಿತು ರಾಜಿಯ ಪ್ರಸ್ತಾಪವೆತ್ತಿರುತ್ತದೆ. ಭಾರತಕ್ಕೆ ಸಹ ಇದೇ ಸಂದರ್ಭವು ಅತೀ ಯೋಗ್ಯವಾಗಿರುವುದು. ಈ ಸಂದರ್ಭವನ್ನು ನಾವು ಎಂದಿಗೂ ಉಪಯೋಗಿಸದೆ ಹೀಗೆ ಬಿಡಕೂಡದು. ಆದ್ದರಿಂದ ನಾವೆಲ್ಲರೂ ಒಟ್ಟಾಗಿ ನಮ್ಮ ಶರ್ತಗಳನ್ನು ಬ್ರಿಟನಿಗೆ ತಿಳಿಸಿ ಭಾರತದ ಸ್ವಾತಂತ್ರ್ಯ ಸಾಧನೆಗೆ ಅಗತ್ಯವಿರುವ ಎಲ್ಲಾ ಸನ್ನಾಹದೊಡನೆ ಪ್ರತಿಯೊಬ್ಬ ಭಾರತೀಯನು ಮುಂದುವರಿದು ಬಂದು ತನ್ನ ಸೇವೆಯನ್ನು ಮಾಡುವದು ಅಗತ್ಯವಿರುತ್ತದೆ. ಮತ್ತು ಈ ಪ್ರಸಂಗದಲ್ಲಿ, ಮುಸ್ಲಿಮರನ್ನೂ ಇತರ ಎಲ್ಲ ಜಾತಿಯವರನ್ನೂ ನಾವು ಕಾಂಗ್ರೆಸ್ಸಿನೊಳಗೆ ಸೇರಿಕೊಂಡು, ಭಾರತದ ಸ್ವಾತಂತ್ರ್ಯಕ್ಕಾಗಿ ಸಿದ್ಧರಾಗುವದು ನಮ್ಮ ಕರ್ತವ್ಯವಾಗಿರುತ್ತದೆ ಎಂಬುದಾಗಿ ಸಹ ಗಂಭೀರವಾಗಿ ಭಾಷಣಗೈದರು.

### ಸಾಗುವಳಿ ಉದ್ಧಾರಕ್ಕೆ ಕೃಷಿಕ್ಷೇತ್ರಗಳು.

ತನ್ನ ಪಕ್ಕಲುಗಳಿಗೆ ಸಾಗುವಳಿಯ ನೂತನ ಕ್ರಮಗಳ ಅರಿವನ್ನು ಮಾಡಿಕೊಡುಲು ಮೈಮನ್‌ಸಿಂಗಿನ ಮಹಾರಾಜರು ತನ್ನ ಜಮಿನ್ದಾರಿಯಲ್ಲಿ ಅನೇಕ ಕೃಷಿಕ್ಷೇತ್ರಗಳನ್ನು ಸ್ಥಾಪಿಸುವ ಏರ್ಪಾಟನ್ನು ಮಾಡಿರುವರು. ಇದಕ್ಕಾಗಿ ಮಹಾರಾಜರು ಅನೇಕ ಮಂದಿ ಪದವೀಧರರಿಗೆ ಉದ್ಯೋಗ ಕೊಟ್ಟಿರುವರು.

### ಜನಸಂಖ್ಯೆಯ ಹೆಚ್ಚಳದ ಕುರಿತು ಬೆದರಬಾರದು.

ಜನಸಂಖ್ಯೆಯು ಹೆಚ್ಚಾಗುತ್ತಿದೆ, ಆದ್ದರಿಂದ ಸಂತಾನ ನಿರೋಧವನ್ನಾಚರಿಸಬೇಕೆಂದು ಸೂಚಿಸುವುದು, ಸೋತ ಮನೋವರ್ತನೆ ಎಂದು ಭಾವಿಸಬೇಕು. ಹಿಂದೂದೇಶದ ಪೀಡೆಗಳಿಗೆ ಜನಸಂಖ್ಯೆಯ ಹೆಚ್ಚಳವು ಕಾರಣವೆಂಬುದು ತಪ್ಪು ಅಭಿಪ್ರಾಯವು.

ಈ ಅಭಿಪ್ರಾಯಗಳನ್ನು ನಂಬುವ ಮೊದಲು ಜನರು ನೂರಾರು ಸರ್ತಿ ಆಲೋಚಿಸಬೇಕು. ಹಣದಭಾವದಿಂದಲೆ ಈ ಅಭಿಪ್ರಾಯಗಳು ಉಂಟಾದುದು. ಮಹತ್ವವನ್ನು ಮತ್ತು ಸಮೃದ್ಧಿ ಹೊಂದಲು, ಇದೊಂದು ಶ್ರೇಷ್ಠ ಉಪಾಯವೆಂದು ನಂಬುವುದರಿಂದ ಅಪಾಯವಿದೆ. ಆಹಾರಕ್ಕಾಗಿ ಜನಸಂಖ್ಯೆಯಿಂದ ನಾವು ಭೀತಿಪಡಬೇಕಾದುದಿಲ್ಲ. ಅದರ ಬದಲಾಗಿ ಕಲ್ಪನೆ, ವ್ಯವಸ್ಥೆ ಇತ್ಯಾದಿಗಳಿಂದಲೂ, ಬೇಗನೆ ಧನವನ್ನು ಸಂಗ್ರಹಿಸಿ, ರಾಷ್ಟ್ರೀಯ ಸಂಪಾದನೆಯನ್ನು ವೃದ್ಧಿಗೊಳಿಸುವ ಬಗ್ಗೆ ನಾವು ಯತ್ನಪಡಬೇಕು.

ಮೇಲಿನದು, ಜನಸಂಖ್ಯೆಯು ಹೆಚ್ಚುವ ಕುರಿತು; ಭೀತಿಮಯ ಎಚ್ಚರಿಕೆಗಳನ್ನು ಹೊರಡಿಸುವವರಿಗೆ, ಡಾ| ಡೆ ಎಂಬವರು, ಪ್ಯಾನೆನ್ಸಿಯಲ್ ಟೈಮ್ಸ್ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿರುವರು.

### ಆಂಗ್ಲೇಯರೊಬ್ಬರ ಪ್ರಶಂಸೆ.

ಹಿಂದೂದೇಶದಲ್ಲಿ ಒಂದು ಮಾಸದ ಸಮಯ ಪ್ರವಾಸಗೈದು ಹಿಂತಿರಳಿದ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದ ಎಸ್. ಆರ್. ವೇಲ್ಸರು, ಹಿಂದೂದೇಶದ ರಾಜಕೀಯ ವಾತಾವರಣದಲ್ಲಿ ಭಾರತೀಯ ನಾಯಕರ ಕಾರ್ಯಕಲಾಪಗಳನ್ನು ನೋಡಿ ಬಹಳವಾಗಿ ಮೆಚ್ಚಿರುವರು. ಹಿಂದೂದೇಶದಲ್ಲಿ ಯಾವತ್ತೂ ತರದ ಕಷ್ಟ ಸಮಸ್ಯೆಗಳಿರಲಿ, ಹಿಂದೀಯ ನಾಯಕರಲ್ಲಿ ಮತ್ತು ರಾಜಕೀಯ ಪುರುಷರಲ್ಲಿರುವ ಪರಸ್ಪರ ಸಹಕಾರ ಬುದ್ಧಿ ಮತ್ತು ಪ್ರೇಮದಿಂದ ಎಲ್ಲವನ್ನು ಸುಲಭದಿಂದ ನೀಗಬಹುದೆಂದು ಅವರ ಅಭಿಪ್ರಾಯ.

### ಗಾಂಧಿಜಿಯವರಿಂದ ತಯಾರಿಸಲ್ಪಟ್ಟ ಮೆಟ್ಟುಗಳು.

ಹಿಂದೆ ಗಾಂಧಿಜಿಯವರು ಆಫ್ರಿಕಾದಲ್ಲಿರುವಾಗ ಅಲ್ಲಿನ ಯೂನಿಯನ್ ಸರಕಾರದ ಕ್ರಮ ಉಲ್ಲಂಘನೆ ಮಾಡಿ ಕಾರಾಗೃಹ ಸೇರಿದಾಗ ತಯಾರಿಸಿದ ಮೆಟ್ಟಿನ ಜೋಡೊಂದನ್ನು, ಆಫ್ರಿಕಾದ ಜನರಲ್ ಸ್ಮಟ್ಸರು, ಸರ್ ರಾಜಾ ಅಲಿಯವರಿಗೆ ಮೊನ್ನೆ ಅಲ್ಲಿಂದ ಹಿಂತಿರಳುವ ಸಮಯ, ಒಂದು ಪಾರಿತೋಷಕವಾಗಿ ಕೊಟ್ಟಿರುವರು. ಅಂದು ಜನರಲ್ ಸ್ಮಟ್ಸರು ಮ್ಯಾಜಿಸ್ಟ್ರೇಟರಾಗಿ, ಗಾಂಧಿಜಿಯವರನ್ನು ಕಾರಾಗೃಹಕ್ಕೆ ಕಳುಹಿಸಿದರ ಸ್ಮಾರಕವಾಗಿ, ಅವರು ಅದನ್ನು ತನ್ನೊಡನೆ ಈ 26 ವರ್ಷ ಸಮಯ ಜೋಪಾನವಾಗಿ ಇಟ್ಟುಕೊಂಡಿದ್ದರಂತೆ.

# ★ 'ಕೆಂಪು ಧ್ವಜವು ಸರಿಯಾದುದಲ್ಲ' ★

## ಪಂಡಿತ ಜವಾಹರಲಾಲ ನೆಹರೂರ ಭಾಷಣ.

ಪಂಡಿತ ಜವಹಾರಲಾಲ ನೆಹರೂಗಳವರು ಲಕ್ನೋವಿನಲ್ಲಿ ಜರಗಿದ ಒಂದು ಸಭೆಯಲ್ಲಿ ಭಾಷಣವೀಯುತ್ತಾ, ಹಳ್ಳಿಗಳಲ್ಲಿ ಕೆಂಪು ಧ್ವಜಗಳನ್ನು ಒಯ್ದು ಅಲ್ಲಿ ಜುಗುಪ್ಸೆಯನ್ನುಂಟು ಮಾಡುವ 'ರೆಡಿಕಲ್' ವರ್ಗದವರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿರುವರು.

ಅದನ್ನು ಅನುಮೋದಿಸಿ, ಶ್ರೀ| ಎಂ. ಎನ್. ರೋಯರವರು ಇಂಡಿಪೆಂಡೆಂಟ್ ಇಂಡಿಯಾದಲ್ಲಿ ಹೀಗೆಂದು ಬರೆದಿರುವರು.

ನಮ್ಮ ದೇಶದ ರೆಡಿಕಲ್ ವರ್ಗದವರ ಮನಸ್ಸುಗಳಲ್ಲಿ ನಡೆಯುತ್ತಿರುವ ಆಲೋಚನೆಗಳ ಕುರಿತು, ಪಂಡಿತ ನೆಹರೂರವರ ಮೇಲಿನ ಒಂದು ಪಂಕ್ತಿಯಲ್ಲಿ ಅನೇಕ ಗ್ರಂಥಗಳಷ್ಟು ಅಭಿಪ್ರಾಯವಿದೆ.

ಪಂಡಿತ ಜವಾಹರಲಾಲರೊಡನೆ ಸುಪ್ರಸಿದ್ಧ ಕಾಂ. ಸಮಾಜವಾದಿ ನಾಯಕರಾದ ಶ್ರೀ| ಎಂ. ಎನ್. ರೋಯರು.

ನಿರಕ್ಷರಕುಕ್ಷಿಗಳಾದ ನಮ್ಮ ರೈತವರ್ಗವು ಇತರ ಧ್ವಜಗಳನ್ನು ಮನ್ನಿಸುವಂತೆ ಕೆಂಪು ಧ್ವಜವನ್ನು ಮನ್ನಿಸಬಹುದು. ಅದರಿಂದ ಅವರು ಮೋಸಹೋದಂತಾಗುವುದು. ಕ್ರಾಂತಿಯ ಚಳವಳವೊಂದು ಮಹಾಜನ ವರ್ಗದ ಅಜ್ಞಾನದ ಅಡಿಗಟ್ಟಿನ ಮೇಲೆ ಸ್ಥಾಪನೆಯಾಗಬಾರದು.

ಪಂಡಿತರು ಕೆಂಪು ಧ್ವಜವನ್ನು ಖಂಡಿಸುತ್ತಿರುವುದರ ಅರ್ಥವೇನು?—ಸಾಮ್ಯವಾದವು ರೈತರ ಕೋರಿಯಲ್ಲವೆಂದೇ ಅವರ ಅಭಿಪ್ರಾಯ

### ಅಸೆಂಬ್ಲಿ ಸದಸ್ಯರಿಗೆ ಗದರಿಕೆ ಪತ್ರ.

ಮೊನ್ನೆ ಇತ್ತೀಚೆಗೆ ಅಸ್ಸಾಮು ಎಸೆಂಬ್ಲಿಯಲ್ಲಿ ಈಗಿನ ಮಂತ್ರಿಮಂಡಳದ ಮೇಲೆ ಅವಿಶ್ವಾಸದ ಠರಾವನ್ನು ತಂದ ಮೌಲ್ವಿ ಅಬ್ದುರ್ ರಹಮಾನರಿಗೆ, ಅವರು ಕಾಂಗ್ರೆಸ್ಸಿನೊಡನೆ ಮತ್ತು ಕಾಫರರೊಡನೆ ಸೇರುವುದಾದರೆ ಅವರ ಕೊಲೆಮಾಡಲಾಗುವುದು ಎಂಬ ಗದರಿಕೆಯಿಂದ ಕೂಡಿದ ಒಂದು ಪತ್ರದ ಕುರಿತು ಅಸ್ಸಾಮು ಎಸೆಂಬ್ಲಿಯಲ್ಲಿ ಚರ್ಚಿಸಲಾಯಿತು. ಮುಸ್ಲಿಮು ಮಂತ್ರಿಮಂಡಳವನ್ನು ಅಧಿಕಾರದಿಂದ ತಳ್ಳಲು ರಹಮಾನರು ಮಾಡುತ್ತಿರುವ ಯತ್ನಗಳನ್ನು ಬೇಗನೆ ನಿಲ್ಲಿಸಬೇಕು ಇಲ್ಲದಿದ್ದರೆ, ಅವರು ಕೊಲೆಗಾರನ ಕತ್ತಿಗೆ ತುತ್ತಾಗಬೇಕೆಂದು ಈ ಪತ್ರದಲ್ಲಿರುತ್ತದೆ. ಈ ತರದ ಪತ್ರವೊಂದು ಬಂದಿರಲು, ತನಗೆ ಕೊಲೆಗಾರರಿಂದ ರಕ್ಷಣೆ ದೊರಕಬೇಕೆಂದು ರಹಮಾನರು ಅಸೆಂಬ್ಲಿ ಅಧ್ಯಕ್ಷರೊಡನೆ ಕೇಳಿಕೊಳ್ಳಲು, ಪೋಲಿಸರಿಗೆ ಈ ವಿಚಾರವು ತಿಳಿಸಲಾಗಿದೆ. ಅಸ್ಸಾಮುದ ಈಗಿನ ಮುಸ್ಲಿಮ ಮಂತ್ರಿಮಂಡಳದ ಪಕ್ಷದವರಿಗೆ ಇದರಲ್ಲಿ ಯಾವತ್ತೂ ತರದ ಕೈಯಿರುವುದಿಲ್ಲವೆಂದು ಪ್ರಧಾನ ಮಂತ್ರಿಯವರ ಆಶ್ವಾಸನವು ದೊರಕಿರುತ್ತದೆ.

ರಹಮಾನರು ತಮ್ಮ ಮನೋವರ್ತನೆಯನ್ನು ಬದಲಾಯಿಸದಿದ್ದರೆ, 'ಅವರು ಸ್ವಾಮಿ ಶ್ರದ್ಧಾನಂದರ ಗತಿಯನ್ನು ಹೊಂದಬೇಕಾಗುವುದೆಂದು ಈ ಪತ್ರದಲ್ಲಿ ಬರೆದಿದೆ. ಅಸ್ಸಾಮದಲ್ಲೂ ಅನೇಕ ಮಂದಿ ಅಬ್ದುರ್ ರಶೀದರಿರುವರೆಂದು ಈ ಪತ್ರದಲ್ಲಿ ಬರೆದಿದೆ. ಇಸ್ಲಾಮಿನ ಹೆಸರಲ್ಲಿ ರಹಮಾನರ ಕೊಲೆಮಾಡಲಾಗುವದೆಂದು ಈ ಪತ್ರದಲ್ಲಿ ಬರೆದಿರುತ್ತದೆ.

ರಹಮಾನರು ತಂದ ಅವಿಶ್ವಾಸ ಠರಾವು ಒಂದೆ ಮತದಿಂದ ಬಿದ್ದುಹೋಗಲಾಗಿತ್ತು.

### ದ. ಕ. ಜಿಲ್ಲಾ ಬೋರ್ಡು ಚುನಾವಣೆ—

### ಉಮೇದ್ವಾರಿಕೆಯ ಅರ್ಜಿ ಹಾಕುವ ಕೊನೆಯ ತಾರೀಕು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸುವ ನಿರ್ಧಾರವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯು ಈ ಮೊದಲೆ ಮಾಡಿ ಆ ಬಗ್ಗೆ ಉಮೇದ್ವಾರರ ಅರ್ಜಿಗಳನ್ನು ರೂ. 50ರಂತೆ ಡಿಪೊಜಿಟ್ ಪಡೆದು ಸ್ವೀಕರಿಸಿರುವುದಷ್ಟೆ. ಈಗ ಈ ಚುನಾವಣೆಯು ಇದೇ ಮೇ ತಿಂಗಳ 28ರೊಳಗೆ ನಡೆಯುವುದೆಂದು ಖಂಡಿತವಾಗಿ ತಿಳಿದುಬಂದಿದೆ. ಇದೇ ತಾ. 6ರಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ ಜಿಲ್ಲಾ ಬೋರ್ಡು ಚುನಾವಣೆಯ ಸಂಬಂಧವಾಗಿ ನೇಮಿಸಲ್ಪಟ್ಟಿದ್ದ ಇಲೆಕ್ಷನ್ ಕಮಿಟಿಯನ್ನು ತೆಗೆದು ಹಾಕಿ ಆ ಕುರಿತಾದ ಎಲ್ಲಾ ಅಧಿಕಾರವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಂಡಳಿಗೀಯಲಾಯಿತು. ಮತ್ತು ಉಮೇದ್ವಾರಿಗಳ ಡಿಪೊಜಿಟ್ ಹಣವನ್ನು ರೂ. 25ಕ್ಕೆ ಇಳಿಸಲಾಯಿತು. ಈ ಮೊದಲು ಪಡೆದಿರುವ ಉಮೇದ್ವಾರಿಕೆಯ ಅರ್ಜಿಗಳನ್ನೆಲ್ಲಾ ಸಿಂಧುವಾಗಿರಿಸಿ ಅವುಗಳೊಡನೆ ಕಳುಹಿಸಿರುವ ಡಿಪೊಜಿಟ್ ಹಣದಲ್ಲಿ ರೂ. 25ನ್ನು ಹಿಂದೆ ಕೊಡಲಾಗುವುದು. ಈಗ ಓಟರರ ಪಟ್ಟಿಯು ಬದಲಾಗಿರುವುದರಿಂದ ಇನ್ನು ಮುಂದೆಯೂ ಉಮೇದ್ವಾರಿಕೆಯ ಅರ್ಜಿಗಳನ್ನು ಇದೇ ಮಾರ್ಚಿ ತಿಂಗಳ ತಾ. 31ರ ವರೆಗೆ ಸ್ವೀಕರಿಸಲಾಗುವುದು. ಆದುದರಿಂದ ಹೊಸತಾಗಿ ಅರ್ಜಿಗಳನ್ನು ಹಾಕಲಿಚ್ಛಿಸುವವರು ಈ ತಿಂಗಳ ಅಂತ್ಯದೊಳಗೆ ರೂ. 25ರಂತೆ ಡಿಪೊಜಿಟ್ ಹಣಸಮೇತವಾಗಿ ಸೆಕ್ರಿಟರಿ ಜಿಲ್ಲಾ ಕಾಂಗ್ರೆಸ್ ಕಮಿಟಿ, ಕೊಡಿಯಾಳಬೈಲ್, ಮಂಗಳೂರು- ಇವರಿಗೆ ಬರಕೊಳ್ಳತಕ್ಕದ್ದು. ಉಮೇದ್ವಾರಿಕೆಯ ಅರ್ಜಿಗಳ ಫೋರ್ಮುಗಳನ್ನು ಮಂಗಳೂರಿನ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಿಂದ ಪಡೆಯತಕ್ಕದು, ಸರ್ವ ಸಾಧಾರಣವಾಗಿ ಮಾರ್ಚಿ ತಾ. 31ರ ನಂತರ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಮತ್ತು ಆ ಮೇಲೆ ಬಂದವುಗಳನ್ನು ಸಿಂಧುವಾಗಿ ಪರಿಗಣಿಸಲಾಗುವುದಿಲ್ಲ.

—ಕೆ. ಕೆ. ಸೆಟ್ಟಿ (ಜನರಲ್ ಸೆಕ್ರಿಟರಿ),
ಜಿಲ್ಲಾ ಕಾಂ. ಕಮಿಟಿ, ಮಂಗಳೂರು.

### ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ ಮಂಗಳೂರು.

**ನೋಟೀಸು:—** ಇದೇ ಬರುವ ಮಂಗಳೂರು ಮುನಿಸಿಪಾಲಿಟಿಯ ಇಲೆಕ್ಷನಿನ ಬಗ್ಗೆ ಮುನಿಸಿಪಾಲಿಟಿಗೆ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಿ ನಿಲ್ಲಲಿಚ್ಛಿಸುವವರು ತಮ್ಮ ನೋಮಿನೇಶನುಗಳನ್ನು ಅದರ ಬಾಬ್ತು ಸಲ್ಲತಕ್ಕ ರೂ. 25 ಸಮೇತ ಇದೇ ಮಾರ್ಚಿ 20ನೇ ತಾರೀಕಿನ ಸಂಜೆ 6 ಗಂಟೆಯೊಳಗೆ ಕಾಂಗ್ರೆಸ್ ಕಮಿಟಿ ಆಫೀಸಿಗೆ ಕಳುಹಿಸಿಕೊಡಬೇಕಾಗಿ ಕಾರ್ಯದರ್ಶಿಗಳಾದ ಕೆ. ಅಪ್ಪಾಜಿ ರಾಯರು ಈ ಮೂಲಕ ತಿಳಿಸುತ್ತಾರೆ.

# ಮಾನ್ಯ ಶ್ರೀ ಗೋಪಾಲ ರೆಡ್ಡಿಯವರ ಸಂಚಾರ

## ಕಾಂಗ್ರೆಸ್ ಸದಸ್ಯರುಗಳ ಮನಸ್ಸಾಕ್ಷಿಯ ವಿಚಾರ: ಸ್ಥಳೀಯ ಬೋರ್ಡು ಮ್ಯುನಿಸಿಪಾಲಿಟಿ ಪಂಚಾಯತುಗಳ ಆಶಾಕಾಂಕ್ಷೆಗಳು, ಸಮಾಧಾನ.

ಶ್ರೀ ಗೋಪಾಲರೆಡ್ಡಿಯವರು ತಾ. ೧೦ರಲ್ಲಿ ರೈಲುಗಾಡಿಯಲ್ಲಿ ಇಲ್ಲಿಗೆ ಬಂದುದೇ ಅವರನ್ನು ಸ್ಥಳೀಯ ಅಧಿಕಾರಿ ವರ್ಗವೂ, ಬೋರ್ಡು ಮುನಿಸಿಪಾಲಿಟಿಗಳ ಅಧಿಕಾರಿಗಳೂ ಪ್ರತಿನಿಧಿಗಳೂ ಕಾಂಗ್ರೆಸ್ ಸಂಸ್ಥೆಗಳ ಅಧಿಕಾರಿಗಳೂ ಎದುಗೊಂಡು ಪುಷ್ಪಹಾರಗಳಿಂದ ಸನ್ಮಾನಿಸಿದರು.

### ಮುನ್ಸಿಪಲ್ ಕೌನ್ಸಿಲು

ಮೊದಲನೆಯದಾಗಿ ಮುನ್ಸಿಪಲ್ ಕೌನ್ಸಿಲು ಸದನದಲ್ಲಿ ಟೀಪಾರ್ಟಿಯಿತ್ತು. ಚೆಯರ್ಮೇನರು ಕೆಲ ಅಡಚಣೆಗಳನ್ನು ಮಂತ್ರಿಗಳ ಮುಂದಿಟ್ಟರು ನದಿಯಾಚೆಗೂ ಮುನಿಸಿಪಾಲಿಟಿಯ ವಿಸ್ತೀರ್ಣವನ್ನು ಕೂಡಿಸಿಕೊಳ್ಳಬೇಕಾಗಿದೆ, ಆದರೆ ಅದೆಲ್ಲ ಸ್ಥಳ ಪೋರ್ಟ್ ಟ್ರಸ್ಟಿನವರ ಸ್ವಾಧೀನವಿದೆ, ಮುನಿಸಿಪಾಲಿಟಿಯು ಕೊಡುವ ಸೌಕರ್ಯವನ್ನೆಲ್ಲ ಈ ಹೊಸ ಭಾಗವು ಪಡೆವುದಾದರೂ, ಅಲ್ಲಿ ತೆರಿಗೆಹಾಕಲು ಕೌನ್ಸಿಲಿಗೆ ಅಧಿಕಾರವಿಲ್ಲವಾಗಿದೆ. ತಲಾ 6 ಗೆಲನ್ ನೀರು ಪ್ರತಿದಿನವೂ ಇಲ್ಲಿ ಒದಗಿಸಲಾಗುವಂತೆ ಒಂದು ಸ್ಕೀಮು ಸೆನಿಟರಿ ಇಂಜನಿಯರರಿಂದ ಒಂದೆ ತಯಾರಿಸಲ್ಪಟ್ಟಿತು. ಅಷ್ಟು ಪುರವಟೆ ಸಾಲದು ಫೆಬ್ರವರಿಯಲ್ಲಿ ಇಲ್ಲಿಗೆ ಬಂದು ಈ ನೀರು ಸರಬರಾಯಿಯ ಪ್ರಶ್ನೆಯನ್ನು ಕುರಿತು ಪುನರ್ವಿಚಾರಮಾಡುವುದಾಗಿ ಅವರು ಹೇಳಿದ್ದರು ಆದರೆ ಬಂದಿಲ್ಲ. ಮುಖ್ಯ ದಾರಿಗಳಿಗೆಲ್ಲ ಈಗ ತಾರು ಬಳಿಸಲಾಗುತ್ತದೆ, ಇನ್ನೂ ಹತ್ತು ಮೈಲು ಉದ್ದದ ರಸ್ತೆಗೆ ತಾರು ಬಳಿಸಲು ರೂ. ೫೦ ಸಾವಿರ ಬೇಕಾಗಿದೆ. ಮುನಿಸಿಪಾಲಿಟಿಯ ಆರ್ಥಿಕ ಸ್ಥಿತಿಯು ಚೆನ್ನಾಗಿದೆ. ಹೀಗಾಗಿ ಸರಕಾರವು ಸಾಲಕೊಡಲು ಅಶಂಕಿಸಲಾಗದು ಮಾರ್ಕೆಟನ ಮರುಸ್ತಿ, ಅಭಿವೃದ್ಧಿಗಾಗಿಯೂ ಸಾಲಕೊಡಬೇಕಾಗಿದೆ (ಮದ್ರಾಸಿನಲ್ಲಿ ಮುನಿಸಿಪಲ್ ಕೋರ್ಪರೇಶನು ಎಲ್ಲ ಮಾರ್ಕೆಟುಗಳನ್ನು ಕೊಂಡುಕೊಳ್ಳಲು ಹವಣಿಸಿದೆ ಎಂದು ಮಂತ್ರಿಗಳು ತಿಳಿಸಿದರು) ವಿದ್ಯಾಭ್ಯಾಸದ ಖರ್ಚನ್ನು ಕುರಿತು ವಿವರಿಸಿದಾಗ ಇಲ್ಲೊಂದು ಮುನಿಸಿಪಲ್ ಮಿಡ್ಲ್ ಸ್ಕೂಲ್ ಇಲ್ಲ ಎಂದು ಮಂತ್ರಿಗಳೆಂದರು. ಹಲವು ವದಿನೆಂಟು ಹೈಸ್ಕೂಲು ಕಾಲೇಜುಗಳಿರುತ್ತಾ ಮ ನಿಸಿಪಾಲಿಟಿಯಲ್ಲಿ ಹಲವು ಹೈಯರ್ ಎಲಿಮೆಂಟರಿ ಶಾಲೆಗಳನ್ನು ಮಾತ್ರ ಕೌನ್ಸಿಲು ನಡೆಸುತ್ತಿರುತ್ತದೆಂದು ಉತ್ತರಕೊಡಲಾಯಿತು. ಚುನಾವಣೆಯ ಮೊದಲು ಕೌನ್ಸಿಲು ಬೋರ್ಡುಗಳಲ್ಲಿ ಪಕ್ಷಭೇದಗಳಿದ್ದರೂ ಅವು ಈಗ ಇಲ್ಲವೆಂದೂ ತಿಳಿಸಲಾಯಿತು. ಸರಕಾರವು ಪ್ರಾಥಮಿಕ ಶಾಲೆಗಳೆಲ್ಲವನ್ನೂ ತನ್ನ ಕೈಕೆಳಗೆ ಇಟ್ಟುಕೊಳ್ಳುವುದಾದರೂ ಕಳೆದ ಮೂರು ವರ್ಷಗಳಲ್ಲಿ ಕೌನ್ಸಿಲು ಇವುಗಳಿಗಾಗಿ ವ್ಯಯಿಸಿದ ಸರಾಸರಿ ಮೊಬಲಗನ್ನು ಸರಕಾರಕ್ಕೆ ಕೊಡಬೇಕಾಗಿದೆ ಎಂದು ಮಂತ್ರಿಗಳೆಂದರು.

### ಡಿಸ್ಟ್ರಿಕ್ಟ್ ಬೋರ್ಡ್

ಜಿಲ್ಲಾ ಬೋರ್ಡಿನ ನವ್ವಳರ್ ಮಂತ್ರಿಗಳನ್ನು ಸ್ವಾಗತೀಕರಿಸಿದರು. ಈಗ ಈ ಮಂತ್ರಿಗಳ ಆದೇಶದಲ್ಲಿ ಜಿಲ್ಲಾ ಬೋರ್ಡುಗಳನ್ನು ರದ್ದುಮಾಡಿ, ಎಲಿಮೆಂಟರಿ ಶಾಲೆಗಳನ್ನು ಸರಕಾರದ ಅಡಳಿತಕ್ಕೆ ವರ್ಗಾಯಿಸುವ ಪಂಚಾಯತುಗಳ ಅಕ್ಕನ್ನೆ ಟೀರೆ ಮಾಡಿ ಅಧಿಕಾರ ಹೆಚ್ಚಿಸುವ ಇತ್ಯಾದಿ ಹೊಸ ಸ ಘಟನೆಗಳಾಗುವಾಗ ಈಗ ನವ್ವಳರಿಯಲ್ಲಿದ್ದವ [illegible] ಸದಸ್ಯರುಗಳೆಂಟು ಒಂದು ತಾಲೂಕು ಬೋರ್ಡುಗಳು ನಿರ್ನಾಮವಾದಾಗಲೂ ಇವರು ಅನುಭವಿಸಿದುದು ಧಾರಾಳ, ಆ ಅನುಭವದ ಪರಿಣಾಮದಿಂದ ಇನ್ನೂ ಅನೇಕರು ಪಾರಾಗದೆ ಇರುವರು ಎಂಬ ವಿಚಾರವನು ಮಂತ್ರಿಗಳ ಮುಂದಿಡಲಾಯಿತು. ಅನಂತರ ಶ್ರೀ ಎ ಬಿ ಶೆಟ್ಟಿ ಎಮ್ ಎಲ್ ಎ ಯವರ ವಿಷಯ. ಸೆಕ್ರಿಟರಿ ಸುಂದರರಾಯರು ಕೊಂಡಾಡಿ ಮಾತನಾಡಿ ಅವರದೊಂದು ಭಾವಚಿತ್ರವನ್ನು ಬೋರ್ಡ್ ಆಫೀಸಿನಲ್ಲಿ ಅನಾವರಣ ಮಾಡಲು ಮಂತ್ರಿಯವರನ್ನು ಕೇಳಿಕೊಂಡರು. ಹಲವು ಬೋರ್ಡ್ ಮೆಂಬರರು ಶ್ರೀ ಶೆಟ್ಟರ ಗುಣಕಥನ ಮಾಡಿ ಇದನ್ನು ಅನುಮೋದಿಸಿದರು.

ಮಂತ್ರಿಗಳು ಚಿತ್ರವನ್ನು ಅನಾವರಣ ಮಾಡುತ್ತಾ ಎಂಟು ತಿಂಗಳ ಹಿಂದೆಯೇ ಈ ಜಿಲ್ಲೆಗೆ ಬರಲು ತಮಗೆ ಆಮಂತ್ರಣವಿದ್ದಿದ್ದರೂ ಬರಲಾಗದಿದ್ದರೆ ಈಗ ಈ ಜಿಲ್ಲೆಯನ್ನು ಸಂದರ್ಶಿಸಿದ ಸಂತೋಷ. ಶ್ರೀ ಶೆಟ್ಟರು ತಮ್ಮೊಡನೆ ಉಟಕಮಂಡಿನಲ್ಲಿ ಒಂದೇ ಬಿಡಾರದಲ್ಲಿದ್ದಾಗ, ಅವರು ಮೌನವಾಗಿ ಆಳವಾದ ಮನಸ್ಸುಳ್ಳವರಾಗಿ ವಿನೋದಿಗಳಾಗಿದ್ದುದರ ಸ್ಮರಣೆ, ಇವನ್ನು ತಿಳಿಸಿ ಹಿಂದೂ ಪತ್ರಿಕೆಯಲ್ಲಿ ಈ ಜಿಲ್ಲೆಯ ವರ್ತಮಾನವನ್ನೋದುವಾಗ ಶ್ರೀ ಶೆಟ್ಟರು ಎಂತೆಂತಹ ಕಾರ್ಯಗಳನ್ನು ಮಾಡುತ್ತಿದ್ದರೆಂಬುದನ್ನು ಅರಿತಿರುವೆನೆಂದೂ ಅವರು ಧಾರಾಳ ಮಾತಿನವರಲ್ಲೊಂದೂ, ವೈದ್ಯ ಇಲಾಖಾ ಮಂತ್ರಿಗಳಿಗೆ ತುಂಬಾ ಸಹಾಯಕರಾಗಿ ಈಗ ದುಡಿಯುತ್ತಿರುವರೆಂದೂ ತಿಳಿಸಿದರು. ಈ ಜಿಲ್ಲೆಯು ಮೂವರು ಪಾರ್ಲಿಮೆಂಟರಿ ಸೆಕ್ರಿಟರಿಗಳನ್ನು ಸರಕಾರಕ್ಕೊದಗಿಸಿರುವರೆಂದೂ, ಇವರೆಲ್ಲರೂ ಮಂತ್ರಿಗಳಾಗಲು ಯೋಗ್ಯರೆಂದೂ ಹೇಳುತ್ತಾ, ಜೈಲಿನಲ್ಲಿ ತಮಗೆ ಶ್ರೀ ಶೆಟ್ಟರ ಪರಿಚಯವಾಗಿದ್ದಿಲ್ಲವೆಂದೂ, ಪುನಃ ಆಗತ್ಯತೋರಿದಾಗ ಅಂತಹ ಸಂದರ್ಭದಲ್ಲಿ ವೆಲ್ಲೂರು ಯಾತ್ರಿಕರಾಗಿ ನಾವೆಲ್ಲ ಹೋಗಬೇಕಾಗುವಾಗ ಅವರ ಜತೆ ಹಾಗೂ ಶ್ರೀ ಬಿ ವಿ ಬಾಳಿಗ ಎಮ್ ಎಲ್ ಎ ಯವರ ಜತೆ ತಮಗೆ ದೊರಯಬಹುದೆಂದೂ ನುಡಿದರು.

ದನವೇ ಮೊದಲಾದ ಪಶುಗಳನ್ನು ಅವುಗಳ ಅಭಿಪ್ರಾಯವನ್ನು ಒಪ್ಪಿಗೆಯನ್ನು ಪಡೆಯದೆ ಒಬ್ಬನು ಮತ್ತೊಬ್ಬನಿಗೆ ಕೊಳ್ಳುಹಗ್ಗದ ಸಹಿತ ಒಪ್ಪಿಸಿ ಕೊಡುವ ಹಾಗೆ, ಜನರನ್ನು ಒಬ್ಬ ಧನಿಯು ಮತ್ತೊಬ್ಬ ಧನಿಗೆ ಒಪ್ಪಿಸಿ ಕೊಡಲಾಗದು. ರಾಜರುಗಳ ಪ್ರತಿನಿಧಿಗಳ ಜತೆಯಲ್ಲಿ ಕೊಂಗ್ರೆಸಿನ ಪ್ರತಿನಿಧಿಗಳು ಫೆಡರೇಶನ್ ಸಭೆಯಲ್ಲಿ ಕೂತುಕೊಳ್ಳಲು ಒಪ್ಪುವುದಿಲ್ಲ. ರಾಜ್ಯಗಳ ಜನತೆಯ ಪ್ರತಿನಿಧಿಗಳೊಡನೆ, ಮತ್ತು ಆಯಾ ರಾಜ್ಯಗಳಲ್ಲಿ ಜನಪ್ರತಿನಿಧಿಗಳಿಂದಾದ ಸರಕಾರಗಳುಂಟಾದರೆ ಮಾತ್ರ ಕೊಂಗ್ರೆಸಿಗೆ ಫೆಡರೇಶನ್ ಸರ್ವಥಾ ಸರಿಹೋಗದು. ಸ್ವಪ್ರಜೆಗಳ ಅಭಿಪ್ರಾಯದ ನೆನಪೇ ಇಲ್ಲದೆ, ರಾಜರುಗಳು ಸಾಮ್ರಾಜ್ಯ ಸರಕಾರದೊಡನೆ ಆಲೋಚನೆ ಮಾಡುತ್ತಿರುವರು. ಶ್ರೀಮಂತಿಕೆ, ನಿರಂಕುಶತೆ ಮತ್ತು ಸಾಮ್ರಾಜ್ಯಶಾಹಿಯೊಡನೆ ನಡೆವ ಈ ಕರಾರುಗಳಲ್ಲಿ ಪ್ರಜೆಗಳಿಗೆ ಯಾವ ಸಂಬಂಧವೂ ಇಲ್ಲ. ನಿಂತುಕೊಂಡು ಅವಲೋಕಿಸಲಿಕ್ಕೆ ಇನ್ನು ವಿದಾಯ. ನಮ್ಮ ಸ್ವಯಂ ನಿರ್ಣಯ ಮತ್ತು ಜನ್ಮಸಿದ್ಧ ಹಕ್ಕುಗಳನ್ನು ನಾವು ತೋರಿಯಲಾರೆವು. ಈ ಸತ್ಯಸ್ಥಿತಿಯನ್ನರಿತು ಎಚ್ಚರಗೊಳ್ಳಿರಿ.

ರಾಜಕೋಟದಲ್ಲಿ ೧೯-೩-೩೮

ನೆಯಿಂದ

**ಸ್ತ್ರೀಯರ ಬಂಜೆತನವನ್ನೋಡಿಸುವ ವಜ್ರಾಯುಧ!**

ಸುಖಜೀವನಕ್ಕೆ ಸಾಧನವಾದ ಸಂತಾನವು ಬಂದೇ ಸೀಸೆಯ ಸೇವನೆಯಲ್ಲಿದೆ.
ಕೇಸರಿ ಕುಟೀರಂ—ರಾಯಪೇಟೆ—ಮದ್ರಾಸು.
ಮಂಗಳೂರು ಪ್ರವರ್ತಕರು ವಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು



**Best 		Cheap 		Durable**

# Use only 515 Red 365 & 232 White bar soap & be satisfied.

**They are the best and foremost in the Market.**

**They are the unique products of our Province.**

**Many have tried & found satisfied. Buy now and you will also be convinced.**

*Manufactured by* –

The West Coast Soap Factory

# ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

**ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.**

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ತರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ.
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

*Sole Agents*

**Panchmal Krishnaya Shenoy & Son,**
Bunder, MANGALORE


# ★ ಹಿಂದೂದೇಶವು ★ ಜಗತ್ತಿನ ಗಂಡಾಂತರಗಳ ★ ರಂಗಭೂಮಿಯೆ?

ಹದಿನೆಂಟನೆಯ ಶತಮಾನದ ಆದಿಯಿಂದ ಬ್ರಿಟಿಷರು ಹಿಂದೂದೇಶವನ್ನು ವಶಪಡಿಸಿಕೊಂಡಂದಿನಿಂದ ಯೂರೋಪಿನ ಭಿನ್ನ ಭಿನ್ನ ಜನಾಂಗಗಳಲ್ಲಿ ಪರಸ್ಪರ ಅಸೂಯೆ, ಮಾತ್ಸರ್ಯ ಕಲಹ, ಕುತಂತ್ರಗಳು ತಲೆ-ಎತ್ತುವಂತಾಗಿದೆ. ಅರ್ಥಾತ್ ಬ್ರಿಟಿಷರು ಹಿಂದೂದೇಶವನ್ನು ಸ್ವಾಧೀನಪಡಿಸಿ ಪಡೆದ ಭೋಗ ವಿಲಾಸಗಳಿಂದ ಯೂರೋಪಿನ ಇತರ ಜನಾಂಗಗಳು ಜೊಲ್ಲು ಸುರಿಸುತ್ತಾ, ಸಮಸ್ತ ಯೂರೋಪನ್ನೇ ಭೀಕರ ಯುದ್ಧರಂಗವನ್ನಾಗಿ ಮಾಡಿಕೊಂಡು ೧೯೧೪ರಲ್ಲಿ ಅನಿವಾರ್ಯವಾದ ಭೀಕರ ಯುದ್ಧವು ಆರಂಭವಾಯಿತು ಮಾತ್ರವಲ್ಲ, ಎಷ್ಟರ ತನಕ ಹಿಂದೂಸ್ಥಾನವು ಪರಾಧೀನತೆಯ ಶೃಂಖಲೆಯಿಂದ ಬಿಗಿಹಿಡಿಯಲ್ಪಡುವುದೋ ಅಂದಿನವರೆಗೂ ಯೂರೋಪಿನಲ್ಲೆಲ್ಲ ಶಾಂತಿ ಎಂಬುದೇ ಬಾಯಾರಿ ಬಳಲುವ ಪಾಂಥಿಕನಿಗೆ ಪರಿಶ್ರಮಗೊಳಿಸುವ ಬಿಸಿಲುಗುದುರೆಯಂತಾಗಿ ತೋರದಿರದು.

ಹಲವು ವರ್ಷಗಳ ಹಿಂದೆ ಎಷ್ಟೋ ಯೂರೋಪಿನ ರಾಜಕೀಯ ಪಟುಗಳು ಇದೇ ವಿಷಯವನ್ನೆತ್ತಿ ಸಾರುತ್ತಿರುವ ಸಂಗತಿಯನ್ನು ದಿವಂಗತ ಡಾ। ಜ. ಟಿ. ಸಂಡರ್‌ಲ್ಯಾಂಡ್‌ರು ನಮ್ಮ ಜ್ಞಾಪಕಕ್ಕೆ ತಂದಿದ್ದರು.

ಹರ್ಬರ್ಟ್, ಆಡಮ್ಸ್ ಗಿಬ್ಬನ್ಸ್ ಎಂಬ ಮಹಾಶಯರೊಬ್ಬರು ತಮ್ಮ ಗ್ರಂಥಗಳೊಂದರಲ್ಲಿ ಈ ರೀತಿ ಬರೆದಿರುವರು: ನೆಪೋಲಿಯನ್‌ನ ಪ್ರಪಕರಣದಿಂದೀಚೆಗೆ ವಿಜಯಮದದಿಂದ ಮೆರೆದು, ಸೈನಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ದಕ್ಷತೆಯನ್ನು ವಹಿಸಿದ ಬ್ರಿಟಿಷರ ಪರದೇಶಗಳ ಪರಿಕಲ್ಪಿತ ವರ್ತನೆಯ ಗುರುಳೇನೆಂದು ಯಾರೂ ತಿಳಿಯರು.

ದಿವಂಗತ ಲಾಲಾ ಲಜಪತರಾಯರು ಅನ್ಯ ದೇಶದ ತಮ್ಮ ಮಿತ್ರನಿಗೊಮ್ಮೆ ಹೀಗೆ ಬರೆದಿದ್ದರು — ಹಿಂದೂದೇಶವು ದಾಸ್ಯಪಾಶದಲ್ಲಿ ಬಂಧಿಯಾಗಿರಬೇಕೋ ಅಥವಾ ಸ್ವತಂತ್ರ ಸತ್ತೆಯಲ್ಲಿ ಮೆರೆಯಬೇಕೋ ಎಂಬುದು ಬ್ರಿಟಿಷರಿಗೆ ಮಾತ್ರ ಒಂದು ಸಮಸ್ಯೆಯಾಗಿ ತೋರುವುದಲ್ಲ ಭೂಲೋಕವೇ ಈ ಸಮಸ್ಯೆಯನ್ನು ಪರಿಪರಿಯಾಗಿ ಪರಿಶೀಲಿಸುವುದರಲ್ಲೇ ಮಗ್ನವಾದಂತಿದೆ ಏಕೆ? ಯೂರೋಪ್ ಆದೇಕೆ ಇಡೀ ಭೂಲೋಕದ ಶಾಂತಿಯೇ ಈ ಸಮಸ್ಯೆಯ ಅರ್ಥವನ್ನು ಹೊಂದಿಕೊಂಡಿದೆ.

ಜನಾಂಗ ಸಂಘವೇ ಈ ಸಮಸ್ಯೆಯನ್ನು ಬಿಡಿಸಲು ಬಲು ಭಂಗವನ್ನು ಕಂಡೊಡ್ಡುತ್ತಿದೆ! ಭೂಲೋಕದ ಶಾಂತಿಯೇ ಹಿಂದೂದೇಶದ ಸ್ವಾತಂತ್ರ್ಯದ ಮೇಲೆ ಹೊಂದಿಕೊಂಡಿದೆ. ಹಿಂದೂದೇಶವು ಭೂಲೋಕದ ರಾಜಕೀಯ ತಂತ್ರ, ಪ್ರಭುತ್ವ ಮತ್ತು ಬಂಡವಾಳಶಾಹಿ ಎಂಬ ಚದುರಂಗದಾಟದ ಒಂದು ಪಗಡೆಯಾಗಿ ಪ್ರಯೋಗಿಸದೆ ಇದ್ದರೆ ಅದು ತನ್ನ ನೈಸರ್ಗಿಕ ಅಪ್ರತಿಮ ಸ್ವಾತಂತ್ರ್ಯ ಬಾಹುಬಲದಿಂದ ಜಗತ್ತಿಗೆ ಶಾಂತಿಯನ್ನು ತಂದೊಪ್ಪಿಸಲು ಸಮರ್ಥವಾಗುತಿತ್ತು. ಭೂಲೋಕದ ಅಖಂಡ ಖಂಡದ ಕೇಂದ್ರದಲ್ಲಿದ್ದು ಸಮಸ್ತ ಖಂಡಗಳ ೧।೫ ಪ್ರದೇಶಗಳಿಂದೊಡಗೂಡಿದ ಈ ಹಿಂದೂದೇಶವು ಎಂದಿನವರೆಗೆ ಪರತಂತ್ರದ ಸರಪಣಿಗಳಿಂದ ಬಿಗಿದು ಬಂಧಿಸಲ್ಪಡುವುದೊ ಅಂದಿನವರೆಗೂ ಜನಾಂಗ ಸಂಘವಾಗಲಿ ಯಾ ಇತರ ಪ್ರಬಲರಾಷ್ಟ್ರವಾಗಲೀ ಜಗತ್ತಿನಲ್ಲಿ ಶಾಂತಿಸ್ಥಾಪಿಸುವವೆಂಬುದು ಕನಸಿನಲ್ಲಿ ಸವಿದ ಸವಿ ಸಮುಂಡಿಗೆಯನ್ನ ...

ಕಾಲು ಶತಮಾನದ ಹಿಂದೆ ಬ್ರಿಟನು, ಕೆನಡಾ, ಓಸ್ಟ್ರೇಲಿಯಾಗಳಿಗೆ ಕೊಟ್ಟಂತೆ ವಸಾಹತು ಸ್ವಾತಂತ್ರ್ಯ (ಡೊಮಿನಿಯನ್ ಸ್ಟೇಟಸ್) ಕೊಡುತ್ತಿದ್ದರೆ, ಜರ್ಮನಿಯು ಬರ್ಲಿನ್ ಬಗದಾದ್ ರೈಲ್ವೇ ಪ್ರಕರಣದಲ್ಲಿ ಎಂದೂ ಎದೆಗಾರಿಕೆಯನ್ನು ತೋರಿಸುತಿದ್ದಿಲ್ಲ.

ಬ್ರಿಟಿಷ ಸಾಮ್ರಾಜ್ಯಶಾಹಿಯ ದುರ್ಬಲತೆಯು ಹಿಂದೂದೇಶದ ಪರಾಧೀನತೆಯನ್ನು ಹೊಂದಿಕೊಂಡಿದ್ದು ತಾನು ಬ್ರಿಟಿಷರನ್ನೆದುರಿಸಿದರೆ ಹಿಂದೂದೇಶವು ಸ್ವಾತಂತ್ರ್ಯಸಂಗ್ರಾಮವನ್ನು ಹೂಡಿದ್ದಲ್ಲಿ ಬ್ರಿಟಿಷರು ಸೋತು ಸುಣ್ಣವಾಗಿ ತನ್ನ ವಿಜಯ ಪತಾಕೆಯು ನಿರ್ಭಯವಾಗಿ ಜಗತ್ತಿನ ಹೊಸ ಸ್ಥಾನಗಳಲ್ಲಿ ಹಾರಾಡಬಲ್ಲುದೆಂಬ ಅಭಿಲಾಷೆಯಿಂದ ಅಂದು ಜರ್ಮನಿಯು ಮಹಾಯುದ್ಧಕ್ಕೆ ಕೈಹಚ್ಚಿತ್. ಇಂದ ಜಪಾನೂ ಅದೇ ಉದ್ದೇಶವನ್ನು ಮುಂದಿಟ್ಟು ಹೋರಾಡುತ್ತಿಲ್ಲವೆಂದು ಹೇಳಬರುವುದಿಲ್ಲವಾದರೂ ಸುಲಭವಾಗಿ ಊಹಿಸಬಹುದಾಗಿದೆ. ಅದೇ ಹಿಂದೂದೇಶವು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದರೆ ಅಥವಾ ತೃಪ್ತಿಹೊಂದಿದ ಬ್ರಿಟಿಷ ಸಾಮ್ರಾಜ್ಯಶಾಹಿಯ ಪಾಲುದಾರಳಾಗಿದ್ದರೆ ಜರ್ಮನಿಯು ಆ ತರದ ಒಂದು ತಪ್ಪನ್ನೆಂದೂ ಮಾಡುತ್ತಿದ್ದಿಲ್ಲ. ಇದರಿಂದಾಗಿ ಮಹಾಯುದ್ಧವು ಸಂಭವಿಸಿ ಲೋಕವೇ ಅಶಾಂತಿ ದಾರಿದ್ರ್ಯಗಳ ದವಡೆಯಲ್ಲಿ ಸಿಕ್ಕಿ ಸುಣ್ಣವಾಗುತ್ತಿದ್ದಿಲ್ಲ. ಮಹಾಯುದ್ಧದ ಕಾಲ ಗಾದರೆಲ್ಲರೂ ಬೆಲ್ಜಿಯಮಿಗೆ ಸ್ವಾತಂತ್ರ್ಯದ ಹೋರಾಟಕ್ಕೆ ಬೆಂಬಲ, ಸರ್ಬಿಯಾ ಪೋಲೆಂಡುಗಳಿಗೆ ಸ್ವಾತಂತ್ರ್ಯಗಳನ್ನು ದೊರಕಿಸಿಕೊಟ್ಟ ವಿನಹ ಲೋಕದಲ್ಲಿ ಶಾಂತಿಸ್ಥಾಪನೆಯಾಗದೆಂದು ತಿಳಿದುಕೊಂಡು ಅದೇ ತತ್ವವನ್ನು ಗಂಭೀರನಾದದಿಂದ ಸಾರಿದರು. ಅವರು ಅದೇ ಗಂಭೀರ ವಾಣಿಯಲ್ಲಿ ಏಕ್ಯದ ಅದರಲ್ಲೂ ಹಿಂದೂದೇಶದ ಸಮಸ್ಯೆಯನ್ನೇಕೆ ಸೇರಿಸಿ ನುಡಿಯಲಿಲ್ಲ. ಎಲ್ಲರೂ ಮೌನವ್ರತವನ್ನಾಚರಿಸಿದರೆ? ಇಲ್ಲ ಅವರಲ್ಲಿ ಕೆಲವರು ಈ ವಿಷಯವನ್ನು ಮನಗಂಡು ತೀರುಟ್ಟಿದ್ದರು. ಆದರೆ, ಅವರ ತೀವ್ರ ಇಕತ್ರದ ಗಂಭೀರವಾಣಿಯಲ್ಲಿ ಲೀನವಾಗಿ ಬಲಹೀನವಾಯಿತು. ಪೋಲೆಂಡ್, ಸೈಬೀರಿಯಾಗಳ ಕಡೆಗೆ ಹರಿದ ಅವರ ದೃಷ್ಟಿಯು ಹಿಂದದೇಶದ ಕಡೆಗೂ ಓಡುತ್ತಿದ್ದರೆ, ಅದು ತಾನೆ ಭೂಲೋಕದ ಗಂಡಾಂತರಗಳ ರಂಗಭೂಮಿಯಾಗುತ್ತಿರಲಿಲ್ಲ. ಹೆಚ್ಚೇಕೆ? ರಂಗಭೂಮಿಕಲ್ಲೊಂದು ಎಂಬ ಸಂಶಯಕ್ಕೂ ಎಳ್ಳಷ್ಟೂ ಎಡೆಕೊಡುತ್ತಿರಲಿಲ್ಲ. ಇಂದು ಹಿಂದೂದೇಶ, ತನ್ನ ತಪ್ಪನ್ನು ಅರಿತು ಸ್ವಾತಂತ್ರ್ಯಲಾಭದ ಅಭಿಲಾಷೆಯಲ್ಲಿ ಹಿಂದಿಗಿಂತ ಎಷ್ಟೋ ಮುಂದುವರಿದು ಹೋರಾಡುತ್ತಿದೆ. ಇದರ ಹೋರಾಟಕ್ಕೆ ನಾಗರಿಕ ಜನಾಂಗದವರ ತುಚ್ಛ ವರ್ತನೆಯೆ ಕಾರಣವೆಂದು ಬೇರೆ ಹೇಳಬೇಕಿಲ್ಲ.

## ಗಾಳಿಯ ಟೇಂಕುಗಳು.

ರಷ್ಯಾ ಮತ್ತು ಜರ್ಮನಿ ಈ ಎರಡು ರಾಷ್ಟ್ರಗಳು ಈಗ 'ಗಾಳಿಯ ಟೇಂಕು'ಗಳೆಂಬ ಹೊಸ ಬಗೆಯ ವಿಮಾನಗಳನ್ನು ತಯಾರಿಸುತ್ತಿರುವರಂತೆ. ಈ ವಿಮಾನಗಳನ್ನು ಯಾ ಬಗೆಯ ಸಿಡಿಮದ್ದುಗಳಿಂದಲೂ ಹೊಡೆದು ಕೆಡಹಲು ಅಸಾಧ್ಯವಾಗುವಂತಿಲ್ಲವಾದುದರಿಂದ ಬೇಗನೇ ಅವು ಬೇರೆ ದೇಶಗಳಲ್ಲೂ ತಯಾರು ಮಾಡಲ್ಪಡಬಹುದೆಂದು ನಂಬಲಾಗಿದೆ.

### ಬಾಲದ ಹುಚ್ಚು

ಫಿನ್‌ಲೇಂಡಿನ ಪೋಲೀಸರು, ರಾತ್ರಿ ಸಮಯದಲ್ಲಿ ಕುದುರೆಯ ಲಾಯಗಳಿಗೆ ಪ್ರವೇಶಿಸಿ ಕುದುರೆಗಳ ಬಾಲಗಳನ್ನು ಕತ್ತರಿಸಿ ಅಪಹರಿಸುತ್ತಿರುವ ಓರ್ವ ಚತುರ ಚೋರನ ಶೋಧೆಯನ್ನು ನಡೆಸುತಿರುವರು

ನಮ್ಮ ದೇಶದ 25ನೇ ವರ್ಷದ ಆರ್ಥಿಕ ಪರಿಷತ್ತಿನ ಕಾರ್ಯಕ್ರಮವು ಈಗ ತಾನೆ ಕೊನೆಗಂಡಿರುವದು ದೇಶದ ಎಲ್ಲ ಭಾಗಗಳಿಂದಲೂ ಹಲವು ಮಂದಿ ಅರ್ಥಶಾಸ್ತ್ರಿಗಳು ಈ ಪರಿಷತ್ತಿಗೆ ಬಂದಿದ್ದರು ನಿರುದ್ಯೋಗ ನಿವಾರಣೆಯ ಕುರಿತು ಇವರಲ್ಲಿ ಅನೇಕ ಮಂದಿ ದೊಡ್ಡ ದೊಡ್ಡ ಭಾಷಣಗಳನ್ನು ಕೊಟ್ಟರು ವಾಚಕರ ಮನೋರಂಜನಕ್ಕಾಗಿ ಮಾತ್ರ ಅವರು ಕೊಟ್ಟ ಕೆಲವು ಸೂಚನೆಗಳನ್ನು ಇಲ್ಲಿ ಕೊಡುತ್ತೇವೆ ಬರೀ ಪುಸ್ತಕ ಜ್ಞಾನವು ಹೇಗೆ ಅವ್ಯವಹಾರಿಕವಾಗಿ ಇರುತ್ತದೆಂಬುದನ್ನು ತಿಳಿಯುವಿಕ್ಕೆ ಬೇರೆ ಉದಾಹರಣೆಗಳು ಬೇಡ ವಾಚಕರು ಇವುಗಳ ಕಡೆಗೇ ಸ್ವಲ್ಪ ಲಕ್ಷ್ಯಕೊಟ್ಟರೆ ಸಾಕು

### ಆರ್ಥಿಕ ಪರಿಷತ್ತಿನ ಸೂಚನೆಗಳು

ಆರ್ಥಿಕ ಪರಿಷತ್ತಿನ ಮುಂದೆ ಬಂದ ಕೆಲವು ವಿಚಾರಣೀಯ ಸೂಚನೆಗಳು ಯಾವುವೆಂದರೆ –1 ಸರಕಾರಿ ನೌಕರಿಯಿಂದ ಪೆನ್ಶನ ಪಡೆಯುವ ಪ್ರಾಯವನ್ನು 55ರಿಂದ 50ಕ್ಕೆ ಇಳಿಸಬೇಕು 2 ನಿರುದ್ಯೋಗಿ ಮೆಟ್ರಿಕ್ಯುಲೇಟ, ಮತ್ತು ಯಸ್ ಯಸ್ ಯಲ್ ಸಿ ಗಳಿಗೆ ಕೆಲಸ ಕೊಡುವಕ್ಕೋಸ್ಕರ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕು 3 ಸರಕಾರವು ಬೇರೆ ಬೇರೆ ಕಾರಖಾನೆಗಳನ್ನು ಆರಂಭಿಸಬೇಕು 4 ಖಾಸಗಿಯವರು ಕಾರಖಾನೆಗಳನ್ನು ಆರಂಭಿಸಿದವರಿಗೆ ಸರಕಾರವು ಸಹಾಯ ದ್ರವ್ಯವನ್ನು ಕೊಡಬೇಕು 5 ಕಾರ್ಖಾನೆಯಗಳಲ್ಲಿ ಕೆಲಸದ ಕಾಲಾವಧಿಯನ್ನು ಕಡಿಮೆ ಮಾಡಬೇಕು 6 ಶ್ರಮಜೀವಿಗಳಿಗೋಸ್ಕರ ಪರಿಹಾರ ನಿಧಿಗಳನ್ನು ಸ್ಥಾಪಿಸಬೇಕು 7 ಹುದ್ದೆಗಳನ್ನು ಕೈಗಾರಿಕೆಗಳನ್ನು ದೇಶೀಯವಾಗಿಸಬೇಕು

ಇಂಥ ಇನ್ನೂ ಅನೇಕ ಸೂಚನೆಗಳು ಪರಿಷತ್ತಿನಲ್ಲಿ ಬಂದಿದ್ದವು ನಿರುದ್ಯೋಗ ನಿವಾರಣೆಯು ನಿಜಕ್ಕೂ ಆಗಬೇಕಾದರೆ ಭಾರತದ ಸ್ವಾವಲಂಬನೆಯು ಸಾಧನಗಳಾಗಿ ಇರಬೇಕು ಈ ಸೂಚನೆಗಳು ರೋಗದ [illegible] ವನ್ನು ಶೋಧಿಸಿ ಅದರ ಉಚ್ಚಾಟನೆ ಧ್ಯಾನ ಲಿಕ್ಕೆ ಪ್ರಯತ್ನಿಸುವದರ ಬದಲಿಗೆ ರೋಗದ ಬಾಹ್ಯ ಲಕ್ಷಣಗಳನ್ನು ಮಾತ್ರ ನೋಡಿ ಅದಕ್ಕೆ ಲೇಪ ಹಚ್ಚುವ ಪ್ರಯತ್ನ ಮಾಡುತ್ತವೆ

ಬರೀ ಗ್ರಂಥ ಪಠನೆ ಮಾಡಿ ಮನಸ್ಸಿಗೆ ಬಂದ ಸೂಚನೆಗಳನ್ನು ಕೊಟ್ಟರೆ, ಭಾರತದ ಕಷ್ಟಗಳು ದೂರವಾಗುವದಿಲ್ಲ ಈ ಸೂಚನೆಗಳು ಅಂಥವುಗಳೇ ಆಗಿವೆ ಎಂಬ ದ ಖೇದದ ವಿಷಯ ಕೆಲವರು ನಮ್ಮ ದೇಶದಲ್ಲಿ ಕೈಗಾರಿಕೆಗಳ ಪ್ರಚಾರವಾಗಬೇಕೆಂದರು ಈ [illegible] ನ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಡಾಕ್ಟರ ಗ್ಯಾನಚಂದರು ತಮ್ಮ ಭಾಷಣದಲ್ಲಿ ಜನರ ಜೀವನ ಮಾನ (Standard of Living)ವನ್ನು ಬೆಳೆಸಬೇಕೆಂದರು ಈ ಎಲ್ಲ ಮಾತುಗಳು ಪಾಶ್ಚಾತ್ಯ ದೇಶಗಳಿಂದ ಇಲ್ಲಿಗೆ ಹಾರಿಕೊಂಡು ಬಂದವುಗಳು ಪ್ರಕೃತ ಪರಿಸ್ಥಿತಿಗೂ ಈ ಮಾತುಗಳಿಗೂ ಏನೇನೂ ಸಂಬಂಧವಿಲ್ಲ ಡಾಕ್ಟರ ಅಂತೋನಿ ನಾದರರು ನಮ್ಮ ದೇಶದಲ್ಲಿ ವಾಯುವಿಮಾನಗಳ ಪ್ರಚಾರವಾದಂತೆ ನಿರುದ್ಯೋಗ ನಿವಾರಣೆಯಾಗುವದೆಂದು ಹೇಳಿ, ತಮ್ಮದೊಂದು ದಶವಾರ್ಷಿಕ ಯೋಜನೆಯನ್ನು ಸಭೆಯ ಮುಂದಿಟ್ಟರು. ಆದರೆ ನಮ್ಮ ದೇಶದಲ್ಲಿ ವಿಮಾನಗಳು ಹಾರುವ ಮೊದಲೇ ಇವರ ಮಾತುಗಳು ಗಾಳಿಯಲ್ಲಿ ~~ಹಾರಿಹೋಗಬಾರ್ದೋ ಎಂಬ ಸಂದೇಹವು ನಮಗಿದೆ.~~

### ಸಹಾಯ ದ್ರವ್ಯಕೊಟ್ಟು ಪರಿಹಾರ ವಿಚಾರ

ನಿರುದ್ಯೋಗಿಗಳಿಗೆ ಸಹಾಯ ದ್ರವ್ಯ ಕೊಟ್ಟರೆ ಅವರ ಕಷ್ಟಗಳ ಕೊಂಚ ಪರಿಹಾರವಾಗುವದೆಂಬುದು ನಿಜ ರೋಗಬಾಧೆಯನ್ನು ಕಡಿಮೆ ಮಾಡಲಿಕ್ಕೆ ಔಷಧಿಯಿಂದ ಪ್ರಯೋಜನವುಂಟು ಆದರೆ ಔಷಧಿಯು ಪುಷ್ಟಿಕರವಾದ

ಆರ್ಥಿಕ ಪರಿಷತ್ತಿನಲ್ಲಿ

# ನಿರುದ್ಯೋಗ ನಿವಾರಣೆಯ ಚರ್ಚೆ.

ನಿರುದ್ಯೋಗ ನಿವಾರಣೆಯಾಗಬೇಕೆಂದು ಪ್ರತಿಯೊಬ್ಬ ದೇಶಹಿತೈಷಿಯು ಹಾರೈಸುತ್ತಾನೆ ನಿರುದ್ಯೋಗ ನಿವಾರಣೆಯ ಮೂಲಕವಾಗಿಯೇ ದೇಶದ ಸಂಪದಭಿವೃದ್ಧಿಯಾಗಬೇಕು ಪ್ರಸಿದ್ಧರಾದ ನಮ್ಮ ದೇಶದ ಅರ್ಥಶಾಸ್ತ್ರಿಗಳು ನಿರುದ್ಯೋಗ ನಿವಾರಣೆಯ ಸದುಪಾಯಗಳನ್ನು ತೋರಿಸಿಕೊಡಬಹುದು ಆದರೆ ಅವರಲ್ಲಿ ಹೆಚ್ಚಿನವರು ಪಾಶ್ಚಾತ್ಯ ಅರ್ಥಶಾಸ್ತ್ರಿಗಳ ಸೋಡಮಾಯೆಯ ತತ್ವವಿಚಾರಗಳಿಗೆ ಬಲಿಬಿದ್ದವರು ಅವರು ಮಾಡುವದೇನು?– ಕನ್ನಡಿಯೊಳಗಿನ ಗಂಟಿನ ವಿಚಾರ! ಆಡುವುದೇನು? 'ಆಕಾಶದಲ್ಲಿ ಗೋಪುರ ಕಟ್ಟಿರಿ' ಎಂಬ ಈ ಅರ್ಥಶಾಸ್ತ್ರಿಗಳ ಆಲೋಚನೆಯ ನಡೆನುಡಿ, ಯಾವದೊಂದೂ, ಭಾರತದ ವಾತಾವರಣ, ಸಂಸ್ಕೃತಿಗೆ ಹೊಂದಿಕೊಳ್ಳುವದಿಲ್ಲ. ಹಾಗಾದರೆ ನಮ್ಮ ದೇಶದಲ್ಲಿ ನಿರುದ್ಯೋಗನಿವಾರಣೆ ಹೇಗಾಗಬೇಕು? ಇದಕ್ಕೆ ಉತ್ತರವಾಗಿ ಶ್ರೀ ಜೆ ಸಿ ಕುಮಾರಪ್ಪನವರು 'ಹರಿಜನ'ದಲ್ಲಿ ವಿಚಾರಪ್ರಣಾಳಿಯನ್ನು ಇಟ್ಟಿರುವರು ಉತ್ಕೃಷ್ಟ ಲೇಖನದಲ್ಲಿ ಹೀಗೆ ಬರೆದಿದ್ದಾರೆ

★ ★

ಆಹಾರದ ಸ್ಥಾನವನ್ನು ಎಂದೂ ಆಕ್ರಮಿಸಲಾರದಷ್ಟು? ಸಹಾಯ ದ್ರವ್ಯ ಪರಿಹಾರ ದ್ರವ್ಯಗಳ ಸಹಾಯದಿಂದ, ಅಥವಾ ಸರಕಾರಿ ಕಾಮಗಾರಿಗಳಿಂದ ಮಾತ್ರ ಜನಾಂಗವು ಜೀವಿಸಿರಲಾರದು ಎಲ್ಲಿಯಾದರೂ ಒಂದೆರಡು ವರ್ಷ ಮಳೆ ಬಾರದಿದ್ದರೆ, ಬರಗಾಲ ಬಂದರೆ, ಅಂದ ತಾತ್ಕಾಲಿಕ ಕಷ್ಟಗಳ ನಿವಾರಣ ಮಾಡಲಿಕ್ಕೆ ಮಾತ್ರ ಈ ಸಹಾಯ ದ್ರವ್ಯಗಳ ಮೊದಲಾದವುಗಳ [illegible] ಪ್ರಯೋಜನವಾಗಬಹುದು ಆದರೆ ಭಾರತದ ನಿರುದ್ಯೋಗವು ತಾತ್ಕಾಲಿಕವಾದ್ದಲ್ಲ ಅದು ದೇಶ ವ್ಯಾಪಿಯಾದ [illegible] ಯಾಗಿ ಇಲ್ಲಿಯೇ ನೆಲಸಿರುವದೆಂಬ [illegible] ಅದ್ದರಿಂದ ತಾತ್ಕಾಲಿಕ ಕಷ್ಟ [illegible] ಮಾತ್ರವಲ್ಲ ಸದಾ ಕಾಲಕ್ಕಾಗಿ ನಿರುದ್ಯೋಗ [illegible] ರವನ್ನು ನಾವು ಮಾಡಬೇಕಾಗಿದೆ

### ಜೀವನ ಮಾನವನ್ನು ಬೆಳೆಸುವ ಪ್ರಶ್ನೆ

ಜೀವನ ಮಾನವನ್ನು ಬೆಳೆಸಬೇಕೆಂಬ ಈ ಮಾತು ಪಾಶ್ಚಾತ್ಯ ದೇಶಗಳಲ್ಲಿನ [illegible] ಗರ [illegible] ಈ ಪಶ್ಚಿಮಿಯಲಿ [illegible] ಅತಿಕವಾಗಿದೆ ಶ್ರಮ ಜೀವಿಗಳ ಜೀವನ ಮಾನವನ್ನು ಬೆಳೆಸುವದರಿಂದ ಅವರ ಶಕ್ತಿಯು [illegible] ಜೀವನದ ಆವಶ್ಯಕತೆಗಳ [illegible] ಇರವಾಗ, [illegible] ಕೆಲಸಕ್ಕೆ ರಾಜೀನಾಮೆ [illegible] ತಮ್ಮ ಹಕ್ಕು ಒಪ್ಪಿಗೆ ಮಾಸ [illegible] ರಕ್ಷಣೆ [illegible] ಈ ಶ್ರಮ ಜೀವಿಗಳೇ [illegible] ಭಂಡವಾಳಿಗರ ಆಧೀನದಲಿ ತಮ್ಮ ನೌಕರಿ ಅಥವಾ ಜೀವನೋಪಾಯಕ್ಕೆ [illegible] ಗಳನ್ನು ಮಾರಿ ಅಥವಾ ಕಟ್ಟಿಕೊಟ್ಟದರಿಂದ ಶ್ರಮಜೀವಿಗಳ ಶ್ರಮದಿಂದ ಭಂಡವಾಳಿಗರು ತಮ್ಮ ಸ್ವಾರ್ಥದ ಬೆಳೆಯನ್ನು ಬೆಳೆಯಿಸಲಿಕ್ಕೆ ಸಮರ್ಥರಾಗುವರ ಜೀವನಾವಶ್ಯಕತೆಗಳನ್ನು ಬೆಳೆಸಿಕೊಂಡು ಶ್ರಮಜೀವಿಗಳು ಭಂಡವಾಳಿಗರ ಕ್ರೀತದಾಸರಾಗುವರು

ಶ್ರೀ ಜೆ [illegible]

ಜೀವನ ಮಾನವನ್ನು ಬೆಳೆಸುವದೆಂಬ [illegible] [illegible] ಆದರೆ [illegible] ಪವಿತ್ರ [illegible] ಕೆಲಸಕ್ಕೆ [illegible] [illegible] ಮಾಡುವದು [illegible] ಅದು [illegible] ಆವಶ್ಯಕತೆಯ [illegible] ಇಂಥ [illegible] ಬೆಳೆಸಿ, [illegible] ಆವಶ್ಯಕತೆಗಳು [illegible] [illegible] ವಿಸ್ತರಿಸಬಹುದಾಗಿದ [illegible] ಇಟಲಿಗಳ [illegible] ಪಾಠಿನ ಅರ್ಥವೂ, ಅನಾಗರಿಕ [illegible] ಇರು [illegible], ಅಥವಾ [illegible] ಜೀವನ ಮಾನವನ್ನು ಬೆಳೆಸುವದೆಂಬುದರ ಅರ್ಥವೂ [illegible] ಒಂದೇ ಆಗಿ [illegible] ಕ್ಷೇತ್ರವನ್ನು [illegible] ಇದ್ದ [illegible] ಉದಾಹರಣ [illegible] ಸ್ವದ [illegible] ಮಾತ್ರ ಇರವವು

[illegible] ಪ್ರದೇಶದ ಜನ ಜೀವನಮಾನವನ್ನು ಬೆಳೆಸುವ [illegible] ಆದೇ ಪ್ರದೇಶದಲ್ಲಿ ಆ ಜನರ ಜೀವನದ ಆವಶ್ಯಕತೆಯ [illegible] ಒದಗಿಸಲ್ [illegible]

ಪಕ್ಷದಲ್ಲಿ ಮಾತ್ರ, ಒಂದು ಹದ್ದಿನ ತನಕ, ಆ ಪ್ರದೇಶದ ಜನರ ನಿರುದ್ಯೋಗ ನಿವಾರಣೆಯು ಆಗುವ ಸಂಭವವಿದೆ ಹೆನ್ರಿಫೋರ್ಡನ ಮೋಟರ ಕಾರಖಾನೆ ಇರುವ ಅಮೇರಿಕದ ಪ್ರದೇಶದಲ್ಲಿನ ಜನರು ತಮ್ಮ ಜೀವನಮಾನವನ್ನು ಬೆಳೆಸಿಕೊಂಡು, ಪ್ರತಿಯೊಬ್ಬನೂ ಒಂದೊಂದು ಮೋಟರಕಾರನ್ನು ಕ್ರಯಕ್ಕೆ ತೆಗೆದುಕೊಳ್ಳುವನಾದರೆ, ಆಗ ಫೋರ್ಡ ಕಾರುಗಳಿಗೆ ಬೇಡಿಕೆಗಳು ಹೆಚ್ಚಿ, ಬಹಳ ಮಂದಿ ನಿರುದ್ಯೋಗಿಗಳಿಗೆ ಫೋರ್ಡ ಕಾರ್ಖಾನೆಯಲ್ಲಿ ಉದ್ಯೋಗ ದೊರೆಯಬಹುದು ಪರಂತು ನಮ್ಮ ದೇಶದ ಜನರು ಜೀವನ ಮಾನವನ್ನು ಬೆಳೆಸಿಕೊಂಡು ತಮಗೆ ಬೇಕಾಗುವ ಮೋಟರಕಾರುಗಳನ್ನು ಫೋರ್ಡ ಕಂಪನಿಯಿಂದ ತರಿಸಿಕೊಳ್ಳುವದಾದರೆ, ನಿರುದ್ಯೋಗ ನಿವಾರಣೆಯಾಗುವದು ಅಮೇರಿಕದಲ್ಲಿ ದಿನಹೋದಂತೆ ದೇಶದ ಸಂಪತ್ತು ಅಮೇರಿಕಕ್ಕೆ ಹರಿದುಹೋಗಿ ಬಡವರಾಗುತ್ತ ಬರುವೆವು. ನಾವು— ಇಂಥ ಒಂದು ವಿಚಿತ್ರ ಮತ್ತು ಭಯಂಕರ ಪರಿಸ್ಥಿತಿಯು ಉಂಟಾಗುವದು ಅದ್ದರಿಂದ ನಮ್ಮ ಜೀವನಾವಶ್ಯಕತೆಗಳನ್ನು ನಾವೇ ಸಿದ್ಧ ಮಾಡಿಕೊಂಡಲ್ಲಿದೆ, ಜೀವನ ಮಾನವನ್ನು ಬೆಳೆಸುವದು ಆತ್ಮಘಾತುಕ ನೀತಿಯಾಗಿರುವದು

ನಮ್ಮ ದೇಶದಲಿ ಜೀವನ ಮಾನವನ್ನು ಬೆಳೆಸುವದು ಶಾಲ್ಪಹೋ ಎಂಬ ದಸ್ತಾದರಗಿ [illegible] ಬಿಟ್ಟಿ, ಒಂದು [illegible] ಅನ್ನ [illegible] ನಮ್ಮ ದೇಶವು ದರಿದ್ರವಾಗಿದ ಜೀವನಮಾನವನ್ನು ಬೆಳೆಸುವದೆಂದರೆ ಜನರ ಜೀವನಾವಶ್ಯಕತೆಗಳನ್ನು ಒಳಿಸ ಇದಷ್ಟೆ? ಒಬ್ಬ ಮನುಷ್ಯನು ಹಸಿವಾಗಿರುವಾಗ, ಅವನ ಆವಶ್ಯಕತೆಗಳನ್ನು ಹೆಚ್ಚಿಸ ಬೇಕೆಂಬುದರ ಅರ್ಥ— ಅವನ ಹಸಿವಿನ ಸೋವು [illegible] ಗಳನ್ನು ಹೆಚ್ಚಿಸುವದೆಂದೇ ಆಗುತ್ತದೆ [illegible] ಒಬ್ಬನಲ್ಲಿ ಇಲದಾದ್ದಾಗ, ಅವನು [illegible] ಜೀವನದಲ್ಲಿ ತೃಪ್ತಿ [illegible]? ಅದ್ದರಿಂದ ಜೀವನ ಮಾನವನ್ನು ಬೆಳೆಸ ಬೇಕೆಂದರೆ, ಬೋಗವಿಲಾಸದ ಸಾಧನಗಳನ್ನು ಹೆಚ್ಚಿಸಿಕೊಂಡು [illegible] ಕೊಳ್ಳಬೇಕು ಇಂಥ ಭೋಗವಿಲಾಸದ ಸಾಧನಗಳು ನಮ್ಮ ದೇಶದಲ್ಲಿ ಯಾವುವೂ ಸಿದ್ಧವಾಗವದಿಲ್ಲ ಅವುಗಳೆಲ್ಲ ಪರದೇಶಗಳಿಂದಲೇ ಆಮದಾಗುತ್ತಿವೆ ಅದ್ದರಿಂದ ಈ ಭೋಗವಿಲಾಸದ ಸಾಮಗ್ರಿಗಳನ್ನು ನಾವು ನಮ್ಮ ದೇಶದಲ್ಲಿ ಸಿದ್ಧಮಾಡಿಕೊಳ್ಳುವ ತನಕ ನಾವು ಅವುಗಳನ್ನು ಹೆಚ್ಚಿಸಿಕೊಳ್ಳುವದರಿಂದ ಆ ಪ್ರದೇಶೀ ಜನರ [illegible] ದ್ಯೋಗವನ್ನು ನಾವು ಕಡಿಮೆ ಮಾಡಿ ನಮ್ಮ [illegible] ದ್ಯೋಗವನ್ನು ಹೆಚ್ಚಿಸಿದಂತೆಯೇ [illegible] ಮನಗೆ ಮಾಡಿದಂತಾಗಿ ನಾವು ಪರರಿಗೆ ಉಪಕಾರಿಗಳಾಗಬೇಕೆ? ನಮ್ಮ ದೇಶವು ಹಸಿ ಪದಾರ್ಥಗಳನ್ನು ರಫ್ತುಮಾಡಿ ಸಿದ್ಧಪದಾರ್ಥಗಳನ್ನು

(೬ನೇ ಪುಟವನ್ನು ನೋಡುವುದು)

KANTI
Toilet Soap

ನಂಬಿದರೆ ನಂಬಬಹುದು
ಆದರೆ ಒಂದು ಸಲ ಅತ್ಯುತ್ತಮ ಸುಗಂಧಪೂರಿತ
ಸ್ವಸ್ತಿಕಾ 'ಕಾಂತಿ' ಟಾಯಿಲೆಟ್
ಸಾಬೂನನ್ನು ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನು ಉಪಯೋಗಿಸಲು ಇಚ್ಛಿಸಲಾರರು.
'ಕಾಂತಿ' ಸಾಬೂನನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಟಲೆ ಜನರು ಶ್ಲಾಘಿಸಿ ಉಪಯೋಗಿಸುವರು
ಡಿಸ್ಟ್ರಿಬ್ಯೂಟರರು —
ಎಸ್. ಆರ್. ನ್ಯಾಕ್,
ಬೆಂಗಳೂರು.
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತೆ.

# ನಿರುದ್ಯೋಗ ನಿವಾರಣೆಯ ಚರ್ಚೆ.

(೫ನೇ ಪುಟದಿಂದ ಮುಂದುವರಿಸಿದುದು)

ಆಮದು ಮಾಡುವ ದೇಶ. ಅಂಥ ದೇಶದಲ್ಲಿ ಜೀವನ ಮಾನವನ್ನು ಬೆಳೆಸುವ ನೀತಿಯಿಂದ ನಿರುದ್ಯೋಗ ನಿವಾರಣೆಯು ಸರ್ವಥಾ ಆಗಲಾರದು. ಅದರಿಂದ ದೇಶದ ಬಡತನವೂ ನಿರುದ್ಯೋಗವೂ ಮತ್ತಷ್ಟು ಹೆಚ್ಚಲಿಕ್ಕೆ ಕಾರಣವಾಗುವದು. ಇಂಥ ವಿಘಾತುಕ ನೀತಿಯ ಆಶ್ರಯಕೆಗೊಳ್ಳಿರೆಂದು ನಮ್ಮ ಅರ್ಥಶಾಸ್ತ್ರಿಗಳು ಯಾಕೆ ಹೇಳುತಿದ್ದಾರೋ, ಗೊತ್ತಾಗುವದಿಲ್ಲ. ಸ್ವತಂತ್ರವಾಗಿ ವಿಚಾರ ಮಾಡುವ ಶಕ್ತಿಯನ್ನು ಕಳಕೊಂಡಿರುವದರಿಂದಲೇ ಅವರು ಹೀಗೆ ಹೇಳುತ್ತಿರಬಹುದೆ?

### ನಿರುದ್ಯೋಗದ ನಿಜವಾದ ಕಾರಣ

ಕೆಲವು ತಿಂಗಳುಗಳ ಹಿಂದೆ ನಾನು ತಿರುವಾಂಕೂರಿನಲ್ಲಿ ಸಂಚಾರ ಮಾಡುತಿದ್ದೆ. ಅಲ್ಲಿ ಹುಲ್ಲಿನಿಂದ ಸುಂದರವಾದ ಚಾಪೆಗಳನ್ನು ಮಾಡುವ ಒಂದು ಗ್ರಾಮದಲ್ಲಿ ಒಂದು ದಿನ ಉಳಕೊಂಡಿದ್ದೆ. ಆ ಕೈಗಾರಿಕೆಯಿಂದಲೇ ಜೀವನ ಮಾಡುವ ಆ ಗ್ರಾಮಸ್ಥರ ಮುಖಂಡನು ತನ್ನ ಕೈಗಾರಿಕೆ ಗ್ರಾಮಕ್ಕೆ ಗ್ರಾಮವೇ ಆ ಕೈಗಾರಿಕೆಯಿಂದ ಸಂಪನ್ನಾವಸ್ಥೆಯಲ್ಲಿ ಇದ್ದಿರಲು ಈಗ ಕೇವಲ ಮೂರು ನಾಲ್ಕು ಕುಟುಂಬಗಳಿಗೆ ಕೂಡ ಅದರಿಂದ ಜೀವನವಾಗುವದು ಕಷ್ಟವಾಗಿದೆ ಎಂದು ಅವನು ಹೇಳಿದ. ನಾನು ಕೇಂದ್ರದ ನಿರೀಕ್ಷಣ ಮಾಡಿದ ಬಳಿಕ ಮುಖಂಡನು ನನ್ನನ್ನು ಅವನ ಮನೆಗೆ ಊಟಕ್ಕೆ ಆಮಂತ್ರಿಸಿದ. ನನ್ನ ಇಬ್ಬರು ಸ್ನೇಹಿತರು ಕೂಡ ನನ್ನ ಜೊತೆಯಲ್ಲಿದ್ದರು. ನಾವು ಆತನ ಮನೆಗೆ ಹೋದೆವು. ಎಡಬಲ ಪಕ್ಕಗಳಲ್ಲಿ ಎರಡು ಹುಲ್ಲಿನ ಚಾಪೆಗಳನ್ನು ಹಾಸಿದ್ದರು. ಮುಖಂಡನು ನನಗೆ ನಡುವಿನ ಚಾಪೆಯನ್ನು ತೋರಿಸಿ ನಮ್ಮೆಲ್ಲರಿಗೆ ಊಟಕ್ಕೆ ಕೂತುಕೊಳ್ಳ ಹೇಳಿದ. ನಾನು ನನಗಾಗಿ ಹಾಸಿದ ಚಾಪೆಯನ್ನು ನೋಡಿದೆ. ‘ಓ ಹೊ! ನಿನ್ನ ಕೈಗಾರಿಕೆಯ ಅವನತಿಯ ಕಾರಣವು ಈಗ ನನಗೆ ತಿಳಿಯಿತು’ ಎಂದು ನಾನು ಹೇಳಿದೆ. ಅವನು ಆಶ್ಚರ್ಯಪಟ್ಟು ‘ಏನು ಕಾರಣ? ಹೇಳಿ’ ಎಂದ. ‘ನಿನ್ನ ಕೈಗಾರಿಕೆಯ ಅವನತಿಗೆ ನೀನೇ ಕಾರಣ’ ಎಂದು ಹೇಳುತ್ತ, ನನಗಾಗಿ ಹಾಸಿದ್ದ ಹುಲಿಚಿತ್ರದ ಜಪಾನಿ ಚಾಪೆಯನ್ನು ಅವನಿಗೆ ತೋರಿಸಿ,— ‘ನೀನು ಮನೆಯಲ್ಲಿ ಹೆಣೆದ ಚಾಪೆಗಿಂತ, ಈ ಜಪಾನಿ ಚಾಪೆಯ ಬೆಲೆ, ಮತ್ತು ಮಾನ ಹೆಚ್ಚಾಗಿರುವದೆಂದು ನೀನೇ ಹೇಳುವದಾಗಿದ್ದರೆ, ಇತರರು ಹಾಗೆ ಹೇಳುತ್ತಿರುವದರಲ್ಲಿ ಆಶ್ಚರ್ಯವೇನು ಉಳಿದಿದೆ? ಜನರು ಜಪಾನೀ ಚಾಪೆಗಳನ್ನೇ ಮೋಹಿಸಿ ಕೊಂಡುಕೊಳ್ಳುವರಾದರೆ, ಸ್ವದೇಶೀ ಚಾಪೆಗಳ ವಿಕ್ರಿತವು ಕಡಿಮೆಯಾಗಿ, ಸ್ವಾಭಾವಿಕವಾಗಿ ಆ ಕೈಗಾರಿಕೆಯು ಹೀನಾವಸ್ಥೆಯನ್ನು ಪಡೆಯಬೇಕು; ಅದರ ಪರಿಣಾಮದಿಂದ ನೀವು ನಿರುದ್ಯೋಗಿಗಳೂ ದರಿದ್ರರೂ ಆಗಬೇಕು ಎಂದು ಹೇಳಿದೆ. ನಾವು ಖರ್ಚು ಮಾಡುವ ಒಂದೊಂದು ಪೈಯನ್ನು ನಾವು ನಮ್ಮ ದೇಶದ ನಿರುದ್ಯೋಗ ದಾರಿದ್ರ್ಯಗಳನ್ನು ಹೆಚ್ಚಿಸಲಿಕ್ಕೂ ಖರ್ಚುಮಾಡಬಹುದು; ಅದನ್ನು ಕಡಿಮೆ ಮಾಡಲಿಕ್ಕೂ ಖರ್ಚುಮಾಡಬಹುದಾಗಿದೆ. ದೊಡ್ಡ ದೊಡ್ಡ ಆಶೆಗಳನ್ನು ಕಟ್ಟಿಕೊಂಡು, ಹರಕೆ ಕಾಣಿಕೆ, ಪೂಜೆ ಪ್ರಾರ್ಥನೆಗಳನ್ನು ಮಾಡಿ, ಅಥವಾ ಬ್ರಿಟಿಷ ಸಾಮ್ರಾಜ್ಯಾಧಿಪತಿಗಳು ದೊಡ್ಡ ದೊಡ್ಡ ವಿಚಾರಣಾ ಸಮಿತಿಗಳನ್ನು ಕಳುಹಿಸಿಕೊಟ್ಟು, ನಮ್ಮ ದೇಶದ ನಿರುದ್ಯೋಗ ನಿವಾರಣೆಯಾಗುವದಿಲ್ಲ. ನಾವು ನಮ್ಮ ಕಾಲುಗಳ ಮೇಲೆ ನಿಲ್ಲಲಿಕ್ಕೆ ಪ್ರಯತ್ನಿಸಿ ಕೃತಾರ್ಥರಾದರೆ ಮಾತ್ರ ನಾವು ನಮ್ಮನ್ನು ಸುಧಾರಿಸಿಕೊಳ್ಳಲಿಕ್ಕೆ ಸಮರ್ಥರಾಗುವೆವು. ದೇಶದ ಉನ್ನತ್ಯವನತಿಗಳ ಹೊಣೆ ನಮ್ಮ ತಲೆಯ ಮೇಲೆಯೇ ಇದೆ. ಕೊಂಡುಕೊಳ್ಳುವ ವ್ಯವಹಾರವನ್ನು ದೇಶದ ಹಿತದೃಷ್ಟಿಯಿಂದ ಮಾಡಿದರೆ, ನಿರುದ್ಯೋಗ ನಿವಾರಣೆಯು ವಿಶೇಷ ಪ್ರಯತ್ನವಿಲ್ಲದೇನೇ ಆಗುವದು. ಇರುವ ಉದ್ಯೋಗವನ್ನು ಪರದೇಶಿಯರಿಗೆ ಕೊಟ್ಟಿರುವದರಿಂದಲೇ ನಾವು ನಿರುದ್ಯೋಗಿಗಳಾಗಿದ್ದೇವೆ. ಇಂಥ ಪರಿಸ್ಥಿತಿಯನ್ನು ನಾವೇ ತಂದುಕೊಂಡಿರುವಾಗ, ಗೋಳಿಟ್ಟರೆ ಏನು ಪ್ರಯೋಜನ? ನಮ್ಮನ್ನು ಸುಧಾರಿಸಿಕೊಳ್ಳುವ ಉಪಾಯ ನಮ್ಮ ಕೈಯಲ್ಲೇ ಇದೆ.

### ಪರಿಹಾರೋಪಾಯ

ನಿರುದ್ಯೋಗದ ಕಾರಣಗಳನ್ನು ತಿಳಕೊಂಡ ಮೇಲೆ ಅದರ ನಿವಾರಣೋಪಾಯವು ಆಯಾ ಪ್ರದೇಶಗಳಲ್ಲಿ ಸಿದ್ಧವಾಗುವ ವಸ್ತು ಒಡವೆಗಳನ್ನು ಕೊಂಡುಕೊಳ್ಳುವದರಲ್ಲಿ ಇದೆ ಎಂದಾದ ಬಳಿಕ ಅಂಥ ವಸ್ತು ಒಡವೆಗಳನ್ನು ಸಿದ್ಧಮಾಡಿಕೊಳ್ಳುವ ಸುಲಭ ಮತ್ತು ಉತ್ತಮ ಉಪಾಯವು ಯಾವುದಿದೆ ಎಂಬುದನ್ನು ನಾವು ಸ್ವಲ್ಪ ವಿಚಾರಮಾಡಿಕೊಳ್ಳಬೇಕು. ಅದಕ್ಕೆ ಎರಡು ಉಪಾಯಗಳಿವೆ; ದೊಡ್ಡ ದೊಡ್ಡ ಯಂತ್ರಾಲಯಗಳನ್ನು ಸ್ಥಾಪಿಸಿ, ಎಲ್ಲ ಪ್ರದೇಶಗಳಿಗೆ ಬೇಕಾದ ವಸ್ತು ಒಡವೆಗಳನ್ನು ಒಂದು ಕೇಂದ್ರದಲ್ಲಿ ಸಿದ್ಧಮಾಡಿಕೊಳ್ಳುವದು ಒಂದನೆ ಉಪಾಯ. ಬೇರೆ ಬೇರೆ ಪ್ರದೇಶಗಳಿಗೆ ಬೇಕಾದ ವಸ್ತು ಒಡವೆಗಳನ್ನು ಆಯಾ ಪ್ರದೇಶಗಳ ಬೇರೆ ಬೇರೆ ಕೇಂದ್ರಗಳಲ್ಲಿ ಕೈಕೆಲಸದಿಂದ ಸಿದ್ಧಮಾಡಿಕೊಳ್ಳುವದು ಎರಡನೆ ಉಪಾಯ. ಮೊದಲನೆಯ ಉಪಾಯದಿಂದ ಸಂಪತ್ತು ಒಂದೇ ಕಡೆಯಲ್ಲಿ ಕೂಡುತ್ತದೆ; ಭಂಡವಾಳಿಗರ ಕೈ ಬಲವಾಗುತ್ತದೆ; ಅವರ ಅಧಿಕಾರವು ಮಿತಿಮೀರುತ್ತದೆ. ದೇಶದ ಸಂಪತ್ತು ದೇಶೀಯರೊಳಗೆ ಹಂಚಿಹೋಗುವ ಉಪಾಯದಿಂದಲೇ ದೇಶದ ನಿಜವಾದ ಉದ್ಧಾರವಾಗುವದು. ಕೈಗಾರಿಕೆಗಳ ಕೇಂದ್ರೀಕರಣದಿಂದ ಇದು ಸಾಧ್ಯವಿಲ್ಲ; ಅಥವಾ ಕಷ್ಟಸಾಧ್ಯ ಖಂಡಿತವಾದುದು. ಆದ್ದರಿಂದ ಎರಡನೆ ಉಪಾಯದಿಂದ, ಕೈಕೆಲಸದಿಂದ ಕೈಗಾರಿಕೆಗಳನ್ನು ಮಾಡುವದೇ ನಮ್ಮ ದೇಶಕ್ಕೆ ಉತ್ತಮ ಮಾರ್ಗವಾಗಿರುವದು.

### ಕೇಂದ್ರೀಕರಣದಿಂದಾಗುವ ಹಾನಿ

ಕೈಗಾರಿಕೆಗಳ ಕೇಂದ್ರೀಕರಣದಿಂದ ಹಾನಿಯಲ್ಲದೆ ಲಾಭವಿಲ್ಲ. ಯೂರೋಪ ಅಮೇರಿಕದ ಪ್ರತಿಯೊಂದು ರಾಜ್ಯವೂ ಕೈಗಾರಿಕೆಗಳ ಕೇಂದ್ರೀಕರಣ ಮಾಡಿದ ಫಲವಾಗಿ ಅಪರಿಮಿತ ಕಷ್ಟನಷ್ಟಗಳಿಗೆ ಗುರಿಯಾಗಿದೆ. ಅಲ್ಲಿ ನಿರುದ್ಯೋಗವು ಸರ್ವತ್ರ ಹರಡಿದೆ. ರಸ್ಯವು ಕೇಂದ್ರೀಕರಣವನ್ನು ಇತ್ತೀಚೆಗೆ ಆರಂಭಿಸಿರುವದರಿಂದ ಅಲ್ಲಿ ಅದರ ಹಾನಿಯು ಕಂಡುಬಾರದೆ ಇದ್ದಿರಬಹುದು. ಆದರೆ ಅಮೇರಿಕವು ಈಗ ಈ ಹಾನಿಯ ಅನುಭವವನ್ನು ಮಾಡತೊಡಗಿದೆ. ಜಪಾನು ಚೀನವನ್ನು ಆಕ್ರಮಿಸಿರುವದು ಯಾತಕ್ಕೆಂದು ತಿಳಿದಿರುವಿರಿ? ಜಪಾನು ತನ್ನ ಕೈಗಾರಿಕೆಗಳ ಕೇಂದ್ರೀಕರಣ ಮಾಡಿದ ಫಲವದು. ಕೈಗಾರಿಕೆಯ ಅಭಿವೃದ್ಧಿಯನ್ನು ಸಾಧಿಸಿ, ಪಾಶ್ಚಾತ್ಯ ದೇಶಗಳೊಡನೆ ಪಂಥಕ್ಕೆ ನಿಂತದುದಕ್ಕಾಗಿ ನಾವು ಜಪಾನನ್ನು ಅಭಿಮಾನದಿಂದ ನೋಡುತಿದ್ದ ಒಂದು ಕಾಲವಿತ್ತು. ಆದರೆ ಈಗ ನಾವೂ ಜಪಾನಿನ ಅನುಕರಣ ಮಾಡುತ್ತಿರಬೇಕೆ? ಕೈಗಾರಿಕೆಗಳ ಕೇಂದ್ರೀಕರಣವೆಂಬುದರ ಅರ್ಥವೇ, ವಸ್ತು ಒಡವೆಗಳನ್ನು ಸಿದ್ಧಮಾಡಿಕೊಳ್ಳುವ ಕ್ರಮದಲ್ಲಿ ಆದಷ್ಟು ಕಡಿಮೆ ಮನುಷ್ಯ ಬಲವನ್ನು ಉಪಯೋಗಿಸಬೇಕೆಂಬುದು. ನಿರುದ್ಯೋಗವನ್ನು ಉಂಟುಮಾಡುವಂಥಾದ್ದೇ ಕೇಂದ್ರೀಕರಣವೆಂದಾದರೆ, ಆ ಕೇಂದ್ರೀಕರಣದಿಂದ ನಿರುದ್ಯೋಗ ನಿವಾರಣೆ ಆಗುವದು ಹೇಗೆ? ಕೇಂದ್ರೀಕರಣದಿಂದ ಮನುಷ್ಯರು ಯಂತ್ರೋಪಕರಣಗಳ ಗುಲಾಮರಾಗುತ್ತಾರೆ. ಆದರೆ ನಿಜವಾಗಿ ನೋಡಹೋದರೆ, ಯಂತ್ರೋಪಕರಣಗಳು ನಮ್ಮ ಗುಲಾಮತನಕ್ಕಿರಬೇಕು. ಲಿಂಕಶಯರಿನಲ್ಲಿ ವಸ್ತ್ರ ಕೈಗಾರಿಕೆಯ ಕೇಂದ್ರೀಕರಣ ಮಾಡಿದುದರಿಂದ ನಮ್ಮ ದೇಶದಲ್ಲಿ ನಿರುದ್ಯೋಗವುಂಟಾಯಿತು; ಇಂಗ್ಲಂಡಿನಲ್ಲಿ ಕೆಲವು ಲಕ್ಷಾಧಿಪತಿಗಳು ಹೆಚ್ಚಿದರು. ನಮ್ಮ ರಾಜಕೀಯ ಅವನತಿಗೆ ಕೂಡ, ಲಂಕಶಯರಿನಲ್ಲಿ ವಸ್ತ್ರ ಕೈಗಾರಿಕೆಯ ಕೇಂದ್ರೀಕರಣವೇ ಕಾರಣವಾಗಿರುವದು. ಅದರಿಂದ ನಮ್ಮ ದೇಶೀ ಮನೆ ಕೈಗಾರಿಕೆಗಳು ನಾಮಾವಶೇಷವಾದುವು. ಅವುಗಳು ನಿರ್ನಾಮವಾದರೆ, ಅವುಗಳೊಂದಿಗೆ ನಮ್ಮ ಜನಾಂಗವು ನಿರ್ನಾಮವಾಗುವದೂ ಖಂಡಿತ. ಅವುಗಳ ಉದ್ಧಾರದಿಂದ ನಮ್ಮ ಉದ್ಧಾರವಾಗುವದು. ಮಿಲಿಯಾಂತರ ಜನರಿಗೆ ಉದ್ಯೋಗ ವೃತ್ತಿಗಳು ದೊರೆತು, ದೇಶದ ಸುಖಸಂಪತ್ತು ಬೆಳೆಯುವದು

### ಮುಕ್ತಾಯದ ಮಾತು

ಮಿಲಿಯಾಧಿಪತಿಗಳು, ಲಕ್ಷಾಧಿಪತಿಗಳು ಮತ್ತು ಮಹಾತ್ಮಾ ಗಾಂಧಿಗಳಿಂದ ಮಾತ್ರ ಸಾಧ್ಯವಾಗುವ ಕಾರ್ಯವು ಇದಲ್ಲ. ಪ್ರತಿಷ್ಠಿತ ಗಣ್ಯ ಮಾನ್ಯ ಜನರು ಮತ್ತು ಬಲಿಷ್ಠ ಸರಕಾರವು ಮಾಡುವದಕ್ಕಿಂತಲೂ, ಹಿಂದು ಚಿಕ್ಕಾ

(೧೧ನೇ ಪುಟಕ್ಕೆ ಮುಂದುವರಿಸಿದುದು)


"NACET"

ಕಡಿಮೆ ಬೆಲೆಯ ಅತ್ಯುತ್ತಮ ಬ್ಲೇಡು.

**7 ಆಣೆಗಳಿಗೆ ಬ್ಲೇಡುಗಳು 10**

ಅತಿ ಕಡಿಮೆ ಬೆಲೆಯ ಬ್ಲೇಡುಗಳಲ್ಲಿ ಈ ಮೊದಲು ಅಸಾಧ್ಯವೆನಿಸಿದ ವಿಶಿಷ್ಟತೆಯಿಂದ ಕೂಡಿದ್ದು ‘ನೆಸೆಟ್’ ಬ್ಲೇಡುಗಳು ಅತ್ಯಂತ ಜನಜನಿತವಾಗಿವೆ. ಪ್ರತಿಯೊಂದು ಪೆಕೇಟಿನಲ್ಲಿರುವ ಬ್ಲೇಡು ಒಳ್ಳೆ ಹರಿತವಾಗಿದ್ದು, ಬಹಳ ಸಮಯದ ಬಾಳಿಕೆಯಿಂದ ಕೂಡಿದ್ದು, ಚೊಕ್ಕಟವಾದ ತ್ವರಿಯುಕ್ತ ಕ್ಷೌರವನ್ನು ಕೊಡುವುದು. ನೆಸೆಟ್ ಬ್ಲೇಡು ಮೂರು ಗೂಟಗಳುಳ್ಳ ಸೆಫ್ಟಿ ರೇಜರಿನಲ್ಲಿ ಉಪಯೋಗಿಸಬಹುದು.

I.N.Z.

ಇನೋಸ್ ಫ್ರುಟ್ ಸಾಲ್ಟ್




ಪದೇ ಪದೇ ನೆಗಡಿ ಮಂದ
ಮತ್ತು ಚಟುವಟಿಕೆ ಇಲ್ಲ,
ಮುಂಗೋಪಿ




ಯೋಗ್ಯತೆ
ಒಳ್ಳೆಯ ಹಸಿವು
ಚುರುಕು ಮತ್ತು ಆನಂದ.

ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ

ನೀವು ಆರೋಗ್ಯದಲ್ಲಿರುವಿರಿ. ಇನೋಸ್ ಫ್ರುಟ್ ಸೊಲ್ಟ್ 'Eno's Fruit Salt' ಇದು ಹೊಟ್ಟೆಯ ಅಸ್ವಸ್ಥಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ, ಮಲಬದ್ಧತೆ ತಲೆನೋವು, ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು.

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ. ನೀವು ಈ ಉತ್ತಮವಾದ ಪೇಯವನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು. ಇದೇ ಆರೋಗ್ಯವು.
ಇನೋ 'ENO' ಇದಕ್ಕೆ ಸೌಮ್ಯ, ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿದೆ.
ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ 'Eno's Fruit Salt' ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ.
ಇನೋಸ್ ಫ್ರುಟ್ ಸೋಲ್ಟಿನಲ್ಲಿ 'Eno's Fruit Salt' ಒಳ್ಳೇ ಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರಿರುತ್ತವೆ.

EX14

Eno's 'Fruit Salt'

**Canara Bank Limited,**
**Puttur**
**ಕೆನರಾ ಬ್ಯಾಂಕ್ ಲಿಮಿಟೆಡ್**
**ಪುತ್ತೂರು**

## ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇ ಕ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ ಸರಿಯಾಗಿ ವಾಯಿದೆಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಅವರಿಗೆ ಕ್ರಮವಾಗಿ ಬಟ್ಟ ರಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದಂತೆಯೂ ಅವರು ಸಿಕ್ಕಲಿಲ್ಲವಾಗಿ ಮರಳು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ—ಸದ್ರಿಯವರಿಂದ ಬ್ಯಾಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ, ರಜಿಸ್ಟ್ರಿ ನೋಟೀಸು ಚಾರ್ಜ ಸಹ ಇದೇ ಬರುವ ಎಪ್ರಿಲ್ ತಾ 14 ರ ಒಳಗೆ ಸದ್ರಿಯವರು ಬ್ಯಾಂಕಿಗೆ ತಂದು ಸಲ್ಲಿಸಿ ಅಡವಿಟ್ಟ ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯಿಟ್ಟ ಪಕ್ಷದಲ್ಲಿ ಅಡವಿಟ್ಟ ನಗಗಳನ್ನು ಇದೇ ಬರುವ ತಾರೀಕು 20-4 1938ರಲ್ಲಿ ಮಧ್ಯಾಹ್ನ ಗಂಟೆ 2ಕ್ಕೆ ಯಾ ಅದರ ನಂತರ ಬ್ಯಾಂಕಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹ ಯಾವ ತರದ ನೋಟೀಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು

S L 105/35 ವೀರಪ್ಪ ನಾಯ್ಕ, ಸುಬ್ರಾಯ ನಾಯ್ಕರ ಮಗ, ಭಂಡಾರ ಕಡೇಶಿವಲ್ಯಾ ಗ್ರಾಮ, ನೇರಳಕಟ್ಟೆ ಪೋಸ್ಟು ಅಸಲು ರೂ 15

Office of the Bank Puttur 23 3-1938 — M Anantha Bhandary, Agent



**ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ**

R. E P. No. 632/1937
O. S. No. 359/1936

1 ವ್ಯಾಟಸ್ ಬಸಿಲ್ ಕ್ಯೂಲಿಯೋ
2 ಕರೋಲಿನ್ ಲಿಲ್ಲಿ ಕ್ಯೂಲಿಯೋ

ಇವರ ಪಾವರ್ ಒಫ್ ಯೆಟರ್ನಿ ಇಮ್ಯಾನುವೇಲ್ ಲಾಜಾರಸ್ ಮಾರ್ಕ ಕ್ಯೂಲಿಯೋ — ಅರ್ಜದಾರ ವಾದಿ

ಮತ್ತು

ಜೆಪ್ಪು ಗೋಪಾಲಕೃಷ್ಣ ನಾಯ್ಕ, ಜೆಪ್ಪು ವೆಂಕಟೇಶ ನಾಯ್ಕರ ಮಗ ಮಂಗಳೂರು ಕಸಬಾ ಕರಂಗಲಪಾಡಿಯಲ್ಲಿರುವವ — ರೆಸ್ಪೊಂಡೆಂಟ ಪ್ರತಿವಾದಿ

ಮೇಲ್ಕಾಣಿಸಿದ ಅರ್ಜದಾರನು ಮೇಲಿನ ಅಮಲ್ದಾರಿಯಲ್ಲಿ ಹಾಜರುಪಡಿಸಿದ ಇಸ್ತಿಹಾರಿನಲ್ಲಿ ನಮೂದಿಸಿದ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ ಆದುದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1938ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 20 ಎಂತ ನಿಶ್ಚಯ ಮಾಡಲಾಗಿಯದೆ ಎಂಬದಾಗಿ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ

ಮಂಗಳೂರು 14-3-'38 — C L Lobo, Vakil for Petitioner


### ಪೋಲೇಂಡಿನ ಗಡಿಬಿಡಿ

ಪೋಲೇಂಡಿಗೆ ಒಂದು ಕಡೆ ಜರ್ಮನಿ ಮತ್ತೊಂದು ಕಡೆ ರಷ್ಯ ಹೀಗೆ ಇದೊಂದು ನಡುವಣ ನಾಡು, ಇಬ್ಬರು ವಿರೋಧಿಗಳ ನಡುವೆ ಸಿಕ್ಕಿದೆ ಇತ್ತೀಚೆಗೆ, ಹಿಂದಣ ಹಗೆತನ ಮರೆತು ಪೋಲೇಂಡು ಜರ್ಮನಿ ಇಟಲಿಗಳೊಡನೆ ಮೈತ್ರಿ ಬೆಳಸಿದೆ ಎಂದೂ ಮುಸೊಲಿನಿಯು ಪೋಲೇಂಡಿನ ಕರ್ನಲ್ ಬೆಕ್ಕರನ್ನು ತನ್ನ ವಿಮಾನದಲ್ಲಿ ಕುಳ್ಳಿರಿಸಿ, ಅಂತರೀಕ್ಷ ಸಂಚಾರ ಮಾಡುವಾಗಲೇ ರಾಜಕೀಯ ವಿಚಾರಗಳನ್ನು ತೀರ್ಮಾನ ಕರಾರು ಮಾಡಿಸಿದನೆಂದೂ ಗೊತ್ತಾಗಿದೆ ಆದಾದ ಕೆಲ ದಿನಗಳಲ್ಲೇ ಜರ್ಮನಿಯು ಆಸ್ಟ್ರಿಯವನ್ನು ಸ್ವಾಧೀನಪಡಿಸಿಕೊಂಡಿತೆನ್ನುವುದರೊಳಗೆ, ಪೋಲೇಂಡು ತಾನೂ ಒಂದು ಜರ್ಮನಿಯಾಗಿ ಲಿಥುವಾನಿಯದೊಡನೆ ತನ್ನ ಗಡಿನಾಡಿನ ಮೇಲೆ ಒಂದು ಕಾರಣದಿಂದ ಯುದ್ಧಕ್ಕೆ ಸಿದ್ಧವಾಗಿದೆ ಎಂದೂ ತನ್ನ ಮಾತನ್ನು ಲಿಥುವಾನಿಯವು ಅಂಗೀಕರಿಸಬೇಕೆಂದೂ ಘೋಷವೆಬ್ಬಿಸಿತು

ತಾ 19ರ ರಾತ್ರಿ 6 ಗಂಟೆಯೊಳಗಾಗಿ ಪೋಲೇಂಡಿಗೆ ಅನುಕೂಲವಾಗಿ ನಡೆಯಲು ಲಿಥುವಾನಿಯವು ಒಪ್ಪದಿದ್ದಲ್ಲಿ ಯುದ್ಧಾರಂಭವಾಗ ವಂತಿದ್ದಿತು ಈ ಹಠಾತ್ಕೃತಿಯನ್ನು ಕೇಳಿ ಅಲ್ಲಿನ ಸಭೆಯು, ಇವೆರಡು ರಾಜ್ಯಗಳೊಳಗೆ ವ್ಯಾಪಾರ ಚಲಾವಣೆಯು 20 ವರ್ಷಗಳಿಂದ ನಿಂತೇ ಹೋದುದನ್ನು ಇನ್ನು ತಿದ್ದಿ ಮಾರ್ಚ 31ರೊಳಗೆ ವಾಣಿಜ್ಯ ಕರಾರನ್ನು ಮಾಡಿಕೊಳ್ಳಲೂ, ಒಪ್ಪಿತು ಪೋಲೇಂಡು ತನ್ನ ನಾಡಿನೊಳಗೆ ಅಭಿಯೋಗ ಮಾಡುವುದನ್ನು ತಡೆವುದಕ್ಕೆಂದೇ ಹೀಗೆ ಕರಾರು ಮಾಡಿಕೊಳ್ಳಬೇಕಾಯಿತೆಂಬ ಸಂತಾಪವು ಮಾತ್ರ ಶಾಶ್ವತವಾಗಿ ಲಿಥುವಾನಿಯದಲ್ಲಿ ಉಳಿಯಿತು. ಮೊದಲೋ ನಾಲ್ಕೋ ಮಂತ್ರಿಗಳು ಅಲ್ಲಿ ರಾಜೀನಾಮೆಯನ್ನಿತ್ತರು ಆಸ್ಟ್ರಿಯವು ಹೀಗೆ ಜರ್ಮನಿಯ ಬಲಪ್ರದರ್ಶನಕ್ಕೆ ಹೆದರಿ, ಶರಣೆಂದಿತೋ ಹಾಗೆಯೇ ಇದು ಈ ಕಾರಣದಿಂದ ಬಲವುಳ್ಳವರೇ ಗೆಲುವುಳ್ಳವರೆಂಬ ಯೂರೋಪಿನ ರಾಜನೀತಿಗೆ ಇನ್ನೊಂದು ದೃಷ್ಟಾಂತ ಸಿಕ್ಕಿತು


**THE**
# Canara Banking Corporation, Udipi, Ltd
INCORPORATED IN BRITISH INDIA
ESTD 1906

**SEASON DEPOSITS**
of
**Rs. 500/- & above**
**Are Accepted**
at
**$3\frac{1}{2}$% p. a.**
at
**All Our Branches**



# ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

## ಮಿತವಾದ ದರಗಳು! ಸಭ್ಯ ನೌಕರರು!

## ನಿಯಮಿತ ಕಾಲಕ್ಕೆ ಬಿಡಲ್ಪಡುವ ಬಸ್ಸು ಸರ್ವಿಸುಗಳು

# ಇವುಗಳಿಂದಲ್ಲವೇ

# ಪ್ರಯಾಣ ಸೌಕರ್ಯವು ಹೆಚ್ಚುವುದು?

**ನಮ್ಮ**
ನಮ್ಮ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ನಿಶ್ಚಿತ ಸಮಯಕ್ಕೆ ಹೊರಡುವುವು.
ನೌಕರರು ವಿನಯ ನಮ್ರತೆಗಳಿಂದ ನಿಮ್ಮನ್ನು ಸ್ವಾಗತೀಕರಿಸುವರು.
ಮಿತದರಗಳು ಎಲ್ಲಾ ತರಗತಿಯ ಪ್ರಯಾಣಿಕರಿಗೂ ಬಸ್ಸು ಪ್ರಯಾಣಕ್ಕೆ ಆಸ್ಪದವೀಯುವುದು.

**ಪ್ರಯಾಣಿಕರಿಗೆ ಉಂಟಾಗಬಹುದಾದ ಅಸೌಕರ್ಯಗಳನ್ನು ನಮಗೆ ತಿಳಿಸಿದ್ದಲ್ಲಿ ತಕ್ಕ ನಿಗಾ ಕೊಡೋಣಾಗುವದು.**

***JOINT MANAGERS,***

**The Combined Booking Agency,** MANGALORE.
**The Joint Booking Office,** KODIALBAIL.

## ಹೊಟ್ಟೆ ನೋವಿನಿಂದ ನಾನು ಮೃತ್ಯುವಿನ ಬಾಯಿಗೆ ತುತ್ತಾಗುತ್ತಿದ್ದೆನು

ಶ್ರೈಲ್ವೆ ಗಾರ್ಡನ ಉದ್ಯೋಗದು, ಹೊಟ್ಟೆ ಸಂಬಂಧ ಕಾಯಿಲೆಗಳುಂಟಾಗಲು ಅತ್ಯಂತ ಅನುಕೂಲವು ಮಿ। ಬೆಲಿಸ್ ಎಂಬೋರ್ವ ರೈಲ್ವೆ ಗಾರ್ಡನು,ಹೊಟ್ಟೆ ವ್ರಣದ ಸಂಕಟವನ್ನು ಹೊಂದುಫವನಾದನು. ಅದರಿಂದ ಈತನು ಮೃತ್ಯುಲೋಕದ ಹತ್ತಿರಕ್ಕೆ ತೆರಳಿದ್ದೆನು ಎಕ್ಸರೆ ಪ್ರಯೋಗದಿಂದ ಆತನ ಉದರದ ಪರೀಕ್ಷೆ ಮಾಡಲಾಯಿತು ಬಹಳ ಸಮಯ ಆತನಿಗೆ ಪಥ್ಯದ ಅನುಪಾನದಲ್ಲಿ ಹಾಕಲಾಯಿತು. ಆದರೆ ಹೊಟ್ಟೆನೋವು ಇದ್ದಂತೆಯೇ ಇತ್ತು ಆತನಿಗೆ ಹಸಿವಿರಲಿಲ್ಲ – ಕೆಲಸ ಮಾಡಲು ಅಸಾಧ್ಯವೆನಿಸಿತು

ಈಗ ಆತನು ಹೀಗೆ ಬರೆಯುತಿದ್ದಾನೆ –

" . ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಬೇಕೆಂದು ನಾನು ನಿರ್ಣಯ ಮಾಡಿದೆನು ನನ್ನ ಉದರ ನೋವು ಮಾಯವಾದುದು, ಮತ್ತೊಮ್ಮೆ ಬರಲಿಲ್ಲ ಈಗ ನಾನು ಯಾವತ್ತೂ ಆಹಾರಗಳನ್ನು ಸೇವಿಸುತಿದ್ದೇನೆ ಆದರೆ ಆಹಾರ ಸೇವನೆಯ ನಂತರ ನಾನು ಒಂದಿಷ್ಟು ನಿಮ್ಮ ಪೌಡರನ್ನು ಸೇವಿಸುತ್ತೇನೆ. ಕೆಲಸಕ್ಕೆ ಹೋಗುತ್ತಿರುವಾಗ ಪಾನದನ್ನು ಒಯ್ಯುತ್ತಿದ್ದೇನೆ ಅದಿಲ್ಲದೆ ನನಗೆ ಸರಿಯಾಗುವುದಿಲ್ಲ "

ಮೆಕ್ಲೀನ್ ಬ್ರೇಂಡಿನಿಂದ ಆ ರೈಲ್ವೆಗಾರ್ಡನಿಗೆ ಅಷ್ಟು ವಿಚಿತ್ರ ತರದಲ್ಲಿ ಗುಣವುಂಟಾಗುವುದಾದರೆ ನಿಮ್ಮ ಉದರಸಂಕಟಗಳು ಅಷ್ಟು ಭಯಂಕರ ಸ್ಥಿತಿಗೆ ಹೋಗುವ ಮೊದಲೆ, ಮೆಕ್ಲೀನ್ ಹುಡಿಯನ್ನು ನೀವು ಯಾಕೆ ಸೇವಿಸಬಾರದು? ಈಗಲೇ ಮೆಕ್ಲೀನ್ ಹುಡಿಯನ್ನು ಉಪಯೋಗಿಸಲು ಪ್ರಾರಂಭಿಸಿರಿ ಖಾತ್ರಿ ಮಾಲು ದೊರಕುವಂತೆ, ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

*Alex. C. Maclean*

ಎಂಬ ಸಹಿಯಿರುವಂತೆಯೂ,ಬಾಟ್ಲಿಯ ಮೇಲೆ ಕೆಂಪು ಮುದ್ರೆಯಿರುವಂತೆಯೂ ಜಾಗರೂಕರಾಗಿರಿ ಅದನ್ನು ಉಪಯೋಗಿಸಿದ ನಂತರ ನೀವು ಸಂಕಟಪಡಲಾರಿರಿ

ಇಂತಹ ನಮೂನೆಯ ಕಡಿಮೆ ದರದ ಸರಕೀಯ ಮಾಲನ್ನು ಪಡೆದು ಮೋಸಹೋಗಬೇಡಿ ಇದು ಚಿಲ್ಲರೆಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಜೆ ಎಲ್ ಮೊರಿಸನ್, ಸನ್ ಎಂಡ್ ಜೋನ್ (ಇಂಡಿಯಾ) ಲಿಮಿಟೆಡ್

ಸ್ಟೆಂಡಾರ್ಡ್ ಬಿಲ್ಡಿಂಗ್ ಹೊರ್ನ್ಬಿ ರೋಡ್, ಮುಂಬಯಿ



### ಹೇಗೆ ಸನ್‌ಲೈಟು ಸೋಪು ಬಟ್ಟೆಗಳನ್ನು ಬಹಳಕಾಲ ಬಾಳಿಕೆಬರುವಂತೆ ಮಾಡುತ್ತದೆ.

ಹೆಚ್ಚಾದ ಸನ್‌ಲೈಟು ಸೋಪಿನ ನೊರೆಯು ಬಟ್ಟೆಯ ಕೊಳೆಯನ್ನು ಬಹಳ ಉಜ್ಜದೆಯೂ ಒಗೆಯದೆಯೂ ಬಹಳಬೇಗ ಹೋಗಿಸುತ್ತದೆ ಬಟ್ಟೆಯ ದಾರದ ಎಳೆಗಳನ್ನು ಹಾಳುಮಾಡುವುದಾಗಲೀ, ಬಣ್ಣವನ್ನು ಕೆಡಿಸುವುದಾಗಲೀ ಯಾವ ದೂಷಿಲ್ಲಾ ಸನ್‌ಲೈಟು ಸೋಪು ನಿಮ್ಮ [illegible] ಹಣವನ್ನು ಉಳಿಸುತ್ತದೆ

ಮೇಲಿನ ಚಿತ್ರವು ಫೋಟೋ ತೆಗೆದು ದೊಡ್ಡದುಮಾಡಿ ತೆಗೆದುಕೊಂಡದ್ದು ಮತ್ತು ಅದರಲ್ಲಿ ಕೀಳು ಸೋಪುಗಳನ್ನು ಉಪಯೋಗಿಸಿ ಒಗೆದ ಬಟ್ಟೆಯ ದಾರಗಳು ಹೇಗೆ ಕಿತ್ತುಹೋಗಿವೆ ಎಂಬುದನ್ನು ತೋರಿಸುವೆ [illegible] ಕಿತ್ತುಹೋಗಿರುವ ದಾರದ ಎಳೆಗಳನ್ನು ನೋಡಬಹುದು

ಕೆಳಗಿನ ಚಿತ್ರವು ಫೋಟೋ ತೆಗೆದು ದೊಡ್ಡದುಮಾಡಿ ಸನ್‌ಲೈಟು ಸೋಪನ್ನು ಉಪಯೋಗಿಸಿ ಬಟ್ಟೆಗಳನು ಒಗೆಯುವುದರಿಂದ ಬಟ್ಟೆಯ ದಾರಗಳು ಎಷ್ಟು ಚೆನ್ನಾಗಿವೆ ಎಂಬುದನ್ನು ತೋರಿಸಿದೆ ಒಂದು ದಾರವೂ ಕಿತ್ತುಹೋಗದೆ ಯಾವ [illegible] ಹೊಂದಿದೆ ಇದೆ

# ಸನ್‌ಲೈಟು ಸೋಪು
# SUNLIGHT SOAP




ಇಂಡಿಯಾದಲ್ಲೇ ವಿಶ್ವಸ್ತರ ಶುದ್ಧವಾದ ಎಣ್ಣೆಯಿಂದಲೇ ತಯಾರಾದುದು

NDIA) LIMITED

[illegible] KANARESE



## S No 70

# WANTED

EXPERIENCED PRINTERS AND COMPOSITORS APPLY WITH TESTAMONIALS

*Manager,*
SHARADA PRESS,
MANGALORE.



# ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

## ಗೊನೊಕಿಲರ್ (ರಿಜಿಸ್ಟರ್ಡ್)

GONO KILLER

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ,ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳೆಯದೂ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ,ಧಾತುಸ್ರಾವ,ಬಿಳುಪು ಹರಿಯುವುದು ಇನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ನಕಲಿ ಮದ್ದುಗಳಿಗೆ ಬಲಿಯಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

*Sole Manufacturer* **Dr. D. N JASANI,** Vithalbhai Patal Road, BOMBAY 4

# ಮಂಗಳೂರು.

(ನಮ್ಮ ಸ್ವಂತ ಬಾತ್ಮಿದಾರರಿಂದ)

## ಪ್ರಕಟಣೆ

ಪುತ್ತೂರು ತಾಲೂಕು ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳ ಮತ್ತು ಕಾರ್ಯ ನಿರ್ವಾಹಕ ಮಂಡಳಿಯ ಚುನಾವಣೆಯು ಬರುವ ಎಪ್ರಿಲ್ 23ನೇ ಶನಿವಾರ ಘಂಟೆ 5ಕ್ಕೆ ಪುತ್ತೂರು ಕೋಓಪರೇಟಿವ್ ಕಟ್ಟಡದಲ್ಲಿ ಜರುಗಲಿರುವುದು. ಈ ಚುನಾವಣೆಯನ್ನು ನಡೆಸಲು ಶ್ರೀ ಯಂ ಸದಾಶಿವ ರಾವ್, ಬಿ, ಎ, ಬಿ, ಎಲ್, ಇವರಿಗೆ ಅಧಿಕಾರ ಕೊಟ್ಟಿದೆ. ಈ ಬಗ್ಗೆ ಪುತ್ತೂರು ತಾಲೂಕಿನ ಸಂಯುಕ್ತ ಕಾಂಗ್ರೆಸ್ ಕಮಿಟಿಗಳವರು ಪ್ರತಿ 50 ಮಂದಿ ಪ್ರಾಥಮಿಕ ಕಾಂಗ್ರೆಸ್ ಸದಸ್ಯರಿಗೊಬ್ಬರಂತೆ ಪ್ರತಿನಿಧಿಗಳನ್ನು ಆರಿಸಿ ತಾಲೂಕು ಕಮಿಟಿಗೆ ಕಳುಹಿಸತಕ್ಕದ್ದು—ಕೆ ಕೆ ಶೆಟ್ಟಿ, ಜನರಲ್ ಸೆಕ್ರೆಟರಿ ದ, ಕ ಜಿಲ್ಲಾ ಕಾಂಗ್ರೆಸ್ ಕಮಿಟಿ ಇವರು ತಿಳಿಸುತ್ತಾರೆ.

## ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ:

ದ, ಕ ಜಿಲ್ಲಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಮೊನ್ನೆ ತಾ. 10–3–38ರಲ್ಲಿ ರಾಯ ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಫೆಲಿಕ್ಸ್ ಪೈ ಬಜಾರಿನ ಹೊಸ ಆಫೀಸಿನಲ್ಲಿ ಜರಗಿತು ಕಳೆದ ಇಲೆಕ್ಷನಿನ ಸಂಬಂಧವಾಗಿ ಬಂದ ಆರೋಪಗಳ ಕುರಿತು ವಿಚಾರಿಸಿ ಕುಂದಾಪುರದ ಆರೋಪಗಳನ್ನು ವಿಚಾರಿಸುವರೆ ಒಂದು ಸಮಿತಿಯನ್ನು ನೇಮಿಸಲಾಯಿತು ಪುತ್ತೂರಿನ ಕಂಪ್ಲೇಂಟುಗಳ ಕುರಿತು ಇಲೆಕ್ಷನ್ ಆಫೀಸರರಿಗೆ ಕೇಳಲಾಗಿದೆ ಅಲ್ಲದೆ ಬರುವ ಬೋರ್ಡು ಇಲೆಕ್ಷನ್ ಬಗ್ಗೆ ಆಯಾ ತಾಲೂಕಿನ ಕಾಂಗ್ರೆಸ್ ಕಮಿಟಿಯವರು ಉಮೇದ್ವಾರರ ಅರ್ಜಿಗಳನ್ನು ಮಾರ್ಚಿ 31ರ ವಳಗೆ ಪಡಕೊಂಡು ಅವನ್ನು ಎಪ್ರಿಲ್ 15ರ ವಳಗೆ ಡಿಸ್ಟ್ರಿಕ್ಟ್ ಕಾ ಕಮಿಟಿಗೆ ಅವರ ಶಿಫಾರಸಿನೊಡನೆ ರವಾನಿಸಬೇಕಾಗಿಯೂ ರಸೀತು ಗಳಾಗಿರುತ್ತವೆ ಆಫೀಸಿನ ಖರ್ಚಿಗೆ ತಿಂಗಳೊಂದರ ರೂ 25 ತಲದಿನ ಮೇಲೆ ಒಬ್ಬ ಮನೇಜ ನನ್ನು ನೇಮಿ ಸುವಂತೆ ಸಂಕ್ಷನ್ ಆಗಿ ಆ ದಿನದ ಸಭೆಯು ಅಂತ್ಯವಾಯಿತ

### ವಾರ್ಷಿಕ ಮಹಾಸಭೆ

ಕೊಸ್ಮೊ ಪೊಲಿಟನ್ ಕ್ಲಬ್ಬಿನ ವಾರ್ಷಿಕ ಮಹಾಸಭೆಯು ತಾ. 20ರಲ್ಲು ಜರುಗಿತು ರಾ ಎ ರಾಮರಾಯರು ಅಧ್ಯಕ್ಷರಾಗಿದ್ದರು. ಸಭಾರಂಭದಲ್ಲಿಯೇ ರಾವ್ ಬಹದೂರ್ ಬಿ ವೆಂಕಟ್ರಾಯರ ನಿಧನದ ಕುರಿತು ಸಂತಾಪಸೂಚಕ ಠರಾವು ಮಂಜೂರು ಮಾಡಲಾಯಿತು ನಂತರ ಡಾ॥ ವಿಠಲ ಶೆಟ್ಟಿರು ಇನ್ನು ನಿವೃತ್ತರಾಗಲಿರುವ ಕ್ಲಬ್ಬಿನ ಪ್ರೆಸಿಡೆಂಟರಾದ ಎ ರಾಮರಾಯರ\ ಕ ರಿತು ಶ್ಲಾಘಿಸಿ ಅವರಿಗೆ ಕೃತಜ್ಞತಾ ಪೂರ್ವಕ ವಂದನೆಗಳನ್ನು ಸೂಚಿಸಿ ಅವರ ಒಂದು ಛಾಯಾಚಿತ್ರವನ್ನು ಕ್ಲಬ್ಬಿನಲ್ಲಿ ಇರಿಸಬೇಕಾಗಿ ಠರಾವು ಮಂಜೂರಾಯಿತ ಅಲ್ಲದೆ ಡಾ॥ ಬಿ ರಾಮ ಬಾಳಿಗ ನ್ನು ಅಧ್ಯಕ್ಷರನ್ನಾಗಿಯೂ ಡಾ ಎನ್ ರಾಮ ರಾಯರನ್ನು ಕಾರ್ಯದರ್ಶಿಯಾಗಿಯೂ, ಡಾ ಯು ಪಿ ಮಲ್ಯರನ್ನು ಕೋಶಾಧ್ಯಕ್ಷರಾಗಿಯೂ ಡಾ ಎ ಎಸ್ ಅಳ್ವರನ್ನು ಉಪಾಧ್ಯಕ್ಷರೆ ಗಳಾಗಿ ಚುನಾಯಿಸಿ ಮಂಜೂರು ಮಾಡಲಾಯಿತು

## ಕೆನರಾ ಬೇಂಕಿಂಗ್ ಕೊಪ್ರೋರೇಶನ್ ಉಡುಪಿ ಲಿಮಿಟೆಡ್ ಉಡುಪಿ

1937ನೇ ಇಸವಿ ಇದರ 31ನೇ ದಶಂಬರ ತಿಂಗಳಿಗೆ ಅಂತ್ಯವಾಗುವ ಆಯ ವ್ಯಯದ ಪಟ್ಟಿಯನ್ನು ನೋಡಿದಲ್ಲಿ ಈ ಸಂಸ್ಥೆಯು ದಿನೇ ದಿನೇ ಪ್ರಗತಿ ಹೊಂದುತ್ತಾ ಜನರ ಮೆಚ್ಚುಗೆಯನ್ನು ಸಂಪಾದಿಸುತ್ತಾ ಮುಂಬರಿಯುತ್ತದೆ ಇದರ ನಿಷ್ಪಂಕ ಆಡಳಿತ ಕ್ರಮವೂ ಡೈರೆಕ್ಟರರ ಕ್ರಮಸಹಿಷ್ಣುತೆಯೂ ತುಂಬಾ ಪ್ರಶಂಸನೀಯವಾಗಿದೆ ಅಲ್ಲದೆ ಇದರ ಅನೇಕ ಶಾಖೆಗಳ ಏಜಂಟರೂ ಆಫೀಸರರೂ ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಹೊತ್ತು ಜನರಿಗೆ ಈ ಸಂಸ್ಥೆಯ ಸದುಪಯೋಗವನ್ನು ಮಾಡಿ ಕೊಡುತ್ತಿರುವರು ಈ ಸಂಸ್ಥೆಯು ತನ್ನ ಅನೇಕ ಶಾಖೆ ಗಳನ್ನು ಹಲವು ಕಡೆಗಳಲ್ಲಿ ತೆರೆದು ಅಭಿವೃದ್ಧಿ ಹೊಂದುತ್ತಾ ಒಂದು ಇಂಡಿ ದೊಡ್ಡ ಸಂಸ್ಥೆಗಳನೇಕ ಗಳಲ್ಲಿ ಒಂದಾಗಿ ಪರಿಗಣಿಸಲ್ಪಡುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು.

## ದಿ ಎಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್ ಕುಂದಾಪುರ

ಇದರ 1937ನೇ ಇಸವಿ ದಶಂಬರ ತಿಂಗಳಿಗೆ ಅಂತ್ಯವಾಗುವ ವರ್ಷದ ಆಯ ವ್ಯಯದ ಪಟ್ಟಿಯನ್ನು ಅವಲೋಕಿಸಿದ್ದಲ್ಲಿ ಇಂಥಾ ಸಣ್ಣ ಒಂದು ಸಂಸ್ಥೆಯು ತನ್ನ ಸ್ಥಾಪನೆಯ ಬರೇ ನಾಲ್ಕೇ ವರ್ಷಗಳಲ್ಲಿ ಇಷ್ಟು ಪ್ರಗತಿ ಹೊಂದಿ ಜನಾಂಗದವರಿಕ್ಕೆ ಪ್ರೀತಿಪಾತ್ರವಾದುದೇ ಬಹು ಸ್ತುತ್ಯವೇ ಸರಿ ಅಲ್ಲದೆ ಇದು ಇಷ್ಟು ಅಲ್ಪ ಸಮಯದೊಳಗೆ ಹತ್ತು ಶಾಖೆಗಳನ್ನು ತೆರೆದು ತನ್ನ ಮೂಲಕ ಪ್ರತಿ ಭಾಗದಲ್ಲೂ ಸೇವೆಯನ್ನು ಜನರಿಗೆ ಸಲ್ಲಿಸುತ್ತದೆ

**ಶ್ರೀ ವೀರಮಾರುತಿ ವ್ಯಾಯಾಮ ಮಂಡಲ**

ಇಲ್ಲಿಯ ಜೋಡು ಮರದ ಬಳಿಯಲ್ಲಿರುವ ಶ್ರೀ ವೀರಮಾರುತಿ ವ್ಯಾಯಾಮ ಮಂಡಲದ ದ್ವಿತೀಯ ವರ್ಧಂತಿ ಉತ್ಸವವು ಕಳೆದ ತಾ 4ರಲ್ಲಿ ಸಾಹುಕಾರ್ ಶ್ರೀ ಎಮ್ಮೆ ವೆಂಕಟೇಶ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು ಈ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರವಿದು.

ಇಂಥಾ ಸಂಸ್ಥೆಗಳನೇಕವು ದೇಶದಲ್ಲಿ ಸ್ಥಾಪನೆ ಹೊಂದಿ ಜನರು ಅದರ ಸದುಪಯೋಗವನ್ನು ಹೊಂದಲೆಂದು ಹಾರೈಕೆ

### ಭಾಷಣ:—

ಸ್ಥಳೀಯ ಶ್ರೀ ವೀರಮಾರುತಿ ವ್ಯಾಯಾಮ ಮಂಡಲದಲ್ಲಿ ತಾರೀಕು 20ನೇ ರವಿವಾರ ರಾತ್ರಿ ಗಂಟೆ 6ಕ್ಕೆ ಪಂಜಾಬಿನ ಶ್ರೀ ಮನೋಹರಲಾಲ್ ಆರ್ಯ ಇವರು ಬ್ರಹ್ಮಚರ್ಯ ಯೆಂಬುದರ ಕುರಿತು ಹಿಂದೀ ಯಲ್ಲಿ ಭಾಷಣವಿತ್ತರು ಮಂಡಲದ ಅಧ್ಯಕ್ಷರಾದ ಶ್ರೀಯುತ ಬಿ ವಾಸಪ್ಪ ಶೆಣೈಯವರು ಅದನ್ನು ಕರ್ನಾಟಕದಲ್ಲಿ ಭಾಷಾಂತರಿಸಿದರು

## ದ ಕ ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘ ಮಂಗಳೂರು

ರಥ ಬೀದಿ ಸ್ಟ್ರೀಟ ಡ ಸೋದರಿಸ್ನ ಪಕ್ಕದ ಮಾಳಿಗೆಯಲ್ಲಿರುವ ಈ ಸಂಘದ ಆಫೀಸನ್ನು ಇದೇ ತಾ 1 1–3ರಿಂದ ಫೆಲಿಕ್ಸ್ ಪೈ ಬಜಾರಿನಲ್ಲಿನ ಬ್ಲಾಕ್ ನಂಬ್ರ 2 ರೂಮ್ ನಂಬ್ರ 96 ಎಲ್ಲಾ ಸದಸ್ಯರ ಅನುಕೂಲತೆ ಬಗ್ಗೆ ವರ್ಗಾಯಿಸಲ್ಪಟ್ಟಿರುವುದು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

### ಪೊಳಲಿ.

ಇಲ್ಲಿಯ ಶ್ರೀ ರಾಜರಾಜೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಇದೇ ತಾರೀಕ 14 3 38ರಲ್ಲಿ ಧ್ವಜಾರೋಹಣೋತ್ಸವವಾಗಿ 30 ದಿವಸಗಳ ಕಾಲ ಉತ್ಸವ ನಡೆದು ತಾರೀಕು 7–4 38ನೇ ಬ್ರಹ್ಮರಥೋತ್ಸವ ನಡೆದು, ಉತ್ಸವ ಪ್ರಾರಂಭ ತಾರೀಕು 10 4–38ನೇ ರವಿವಾರ ಚಂದ್ರಮಂಡಲ ಮಹೋತ್ಸವ ತಾರೀಕು 11 4–38 ನೇ ಚಂದ್ರವಾರ ಆಳ್ಕೆ ಬಂಡಿ ಮಹಾಮಹೋತ್ಸವವು ವ ಹೂವಿನ ಪೂಜೆಯು ಜರ ನೆರವೇರಲಿರುವುದು. ಮರು ದಿನ ರಥೋತ್ಸವ ಅನಂತರ ತಾರೀಕ 13–4 38ನೇ ಬುಧವಾರ ಅವಭೃತ ಭಕ್ತಜನಾದಿಗಳೆಲ್ಲರೂ ಸನ್ನಿಧಿಗೆ ಚಿತ್ತೈಸಬೇಕಾಗಿ ವಿನಂತಿ

# ತಾಲೂಕುಗಳಿಂದ

### ಉಳ್ಳಾಲ

ಇದೇ ತಿಂಗಳ ಕಳೆದ ತಾ 19 ನೇ ಶನಿವಾರ ದಿವಸ ರಾತ್ರಿ ಗಂಟೆ 9ಕ್ಕೆ ಸರಿಯಾಗಿ, ಉಳ್ಳಾಲ ಹೈ ಸ್ಕೂಲ್ ಆವರಣದ ಕೋಣೆಯಲ್ಲಿ ಮ ರಾ ರಾ ಕೋಟೆಕಾರ್ ಕೃಷ್ಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಸಭೆಯೊಂದು ಜರಗಿತ್ತು ಈ ಸಂದರ್ಭದಲ್ಲಿ ಚತುರ್ವರ್ಣದವರೂ ಸೇರಿ ಸಾಧಾರಣ 200 ಮಂದಿ ಭೇದಾಭೇದವಿಲ್ಲದೆ ನೆರೆದಿದ್ದರು

ಶ್ರೀಯುತ ಪಂಡಿತ ಮುಂಡನವರ ಸೂಚನೆಯಂತೆ ಶಾಲಾ ಕಟ್ಟಡದ ಬಗ್ಗೆ ಕೈಲಾದ ಸಹಾಯವ ನ್ನಿತ್ತು ಬೇಕೆಂದು ಹೇಳಿದ ಶ್ರೀಯುತ ಯಲ್ ಗೋಪಾಲ ಸಾಲ್ಯಾನರು ಅಧ್ಯಕ್ಷರಿಗೂ, ಸಭಿಕರಿಗೂ ಮತ್ತು ಈ ಯ ಕ್ಷಗಾನಕ್ಕೆ ಮೃದಂಗ, ಶೃತಿ ಪೆಟ್ಟಿಗೆ ಮೊದಲಾದ ಸಾಮಾನುಗಳನ್ನಿತ್ತು ಪ್ರೋತ್ಸಾಹಿಸಿದ ಶ್ರೀಯುತ ಕೋಟೆಕಾರ್ ವೆಂಕಟ್ರಾಯರಿಗೂ ಶಾಲಿನಿಯವರ ಪರವಾಗಿ ಧನ್ಯವಾದಗಳನ್ನರ್ಪಿಸಿ ಬಳಿಕ ಸಭಾಂತ್ಯವಾಯ್ತು

### ಕಾರ್ಕಳ

ತಾರೀಕು 18–3–1938ರ ದಿನ ಸಾಯಂಕಾಲ ಬೋರ್ಡು ಮೈನ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ವಕೀಲ ಪಿ ರ ಮುಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ ಪಂಜಾಬಿನ ಶ್ರೀ ಮನೋಹರಲಾಲ ಆರ್ಯರು ಜಗತ್ತಿನ ಉನ್ನತಿ ಮತ್ತು ಆರ್ಯ ಸಮಾಜದ ಅವಶ್ಯಕತೆ ಎಂಬ ಕುರಿತು ಹಿಂದಿಯಲ್ಲಿ ಮಹತ್ತರವಾದ ಭಾಷಣವನ್ನು ಕೊಟ್ಟರು ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ಅದನ್ನು ಕನ್ನಡಕ್ಕೆ ಅನುವಾದಿಸಿದ್ದರು ಆರ್ಯಸಮಾಜದ ಸಿದ್ಧಾಂತಗಳಿಗನುಸಾರವಾಗಿ ಜೀವನವನ್ನು ವೃದ್ಧಿ ಬೆಳೆಸುವುದರಿಂದಲೇ ಗ್ರಾಮಚದ ಉನ್ನತಿಯಾಗುವದೆಂದು ಭಾಷಣಕರ್ತರು ಹೇಳಿದ ವಿಷಯವನ್ನು ಅಧ್ಯಕ್ಷರು ಪ್ರಸ್ತಾಪಿಸಿ ಮಾತನಾಡಿದ ಬಳಿಕ ಸಭೆ ಮುಗಿಯಿತು

ಕಾಂಡಬೆಟ್ಟು ಬೋರ್ಡ ಮೈನ ಎಲಿಮೆಂಟರಿ ಶಾಲೆಯಲ್ಲಿ ತಾರೀಕು 19 8 38ನೇ ದಿನ ಸುಧಾರ್ಕ ಕಾರ್ಕಳದಿಂದಲ್ಲದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಮಾಸಿಕ ಸಭೆಯು ಶ್ರೀ ಎಂ ಸರ್ವೋತ್ತಮ ಕಾಮತ್ ಬಿ ಎ ಯಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು ವರದಿ ಓದಿ ಆದ ಬಳಿಕ ಶ್ರೀ ಕಟ್ಟೆಮಾಡಿ ಶ್ರೀನಿವಾಸ ಶೆಣೈಯವರ ಹಿಂದೀ ದೇಶದ ಭಾಷೆಗಳು ಎಂಬ ಕುರಿತು ಭಾಷಣವಿತ್ತರು ಅಧ್ಯಕ್ಷರು ಪ್ರಸ್ತಾಪಿಸಿ ಮಾತನಾಡಿದ ಹಿಂದಿಯನ್ನೇ ಕಲಿಯ ವ ಅವಶ್ಯಕತೆಯನ್ನು ತಿಳಿಸಿ ವಂದನಾರ್ಪಣದ ಬಳಿಕ ಫಲಾಹಾರ ಸತ್ಕಾರವಾಗಲು ಸಭೆ ಮುಗಿಯಿತು.

### ಕಾಪು ಜಿಲ್ಲಾಬೋರ್ಡು ಬಾವಿಯ ದುರವಸ್ಥೆ

ಕಾಪು ಊರಲ್ಲಿದ್ದ ಜಿಲ್ಲಾಬೋರ್ಡ ಬಾವಿಯ ಮರವಸ್ಥೆಯು ಬಹಳ ಅದಾಯಕವಾಗಿದೆ. ಈ ಬಾವಿಯ ನೀರನ್ನು ಈಗಲೂ ಊರವರು ಉಪಯೋಗಿಸುತ್ತಿದ್ದಾರೆ ಬಾವಿಗೆ ಬರೇ 2 ಯಾ 2½ ಫೀಟ್ ಎತ್ತರ ಇರುವ ಆವರಣವು ಕುಸಿದು ಬಿದ್ದು ನೆಲಸಮವಾಗಿದೆ ಬಸ್ಸಿಗೆ ಪಕ್ಕದಲ್ಲಿದ್ದ ಈ ಬಾವಿಯ ನೀರನ್ನು ಸ್ತ್ರೀಯರು, 10, 12 ವರ್ಷ ಪ್ರಾಯದ ಬಾಲಕರೂ, ತೆಗೆಯುತ್ತಿರುವಾಗ ತಮ್ಮ ಕಾಲನ್ನು ಜಾರಿದರೆ ಬಿದ್ದು ಉಳಿದ ಅರ್ಧ ಅವರದ್ದೆ ಕಾಲು ಮುಟ್ಟುವದು ಸ್ವಾಭಾವಿಕವಾಗಿದೆ ಇಂಥಾ ಬಾವಿಯಿಂದ ಪ್ರಯೋಜನದ ಬದಲು ಅಪಾಯ ಪ್ರಾಣಹಾನಿ ಉಂಟಾಗುವ ಸಂಭವವೇ ಹೆಚ್ಚಿನದು ಅಲ್ಲದೇನು ಸುಮಾರು ಒಂದು ತಿಂಗಳಿನಿಂದಲೂ ಈ ಸ್ಥಿತಿಯಲ್ಲಿದ್ದ ಬಾವಿಯನ್ನು ಕಡಾವಳ ದುರಸ್ತಿಯಾಗಿ ಪುರ್ಯಾಯವಾಗಿ ನೋಡುತ್ತಲಿದ್ದೇನೆ. ಅದು ಕೃಂತ ಮೊದಲು ಬಿಸ್ಸ ಸವ ಉದಿಂದ ಇದು ಹೀಗೆ ಇದೆಯೋ ಗೊತ್ತಿಲ್ಲ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಉದಾಸೀನತೆಯಿಂದ ನೋಡದಂತೆ ಬೇಗನೆ ಏರ್ಪಾಡು ಮಾಡುವಂತೆ ಇದ್ದಾರೆ ಅಧಿಕಾರಿಗಳು ಇತ್ತ ಗಮನಿಸುವರೆಂದು ನಂಬುತ್ತೇನೆ–ಪ್ರತಿನಿಧಿ ಬಿ ಪಿ ರಾವ್ ಹೆಡ್

### ಮೂಡಬಿದ್ರಿ:

ಮೂಡಬಿದ್ರಿ ಉಪಾಧ್ಯಾಯರ ಸಂಘದ ಪರು ಸಾಂವತ್ಸರಿಕ ವಾರ್ಷಿಕೋತ್ಸವದ ಸಭೆಯು ಇದೇ 19 ರಲ್ಲಿ ಇಲ್ಲಿಯ ಬೋರ್ಡ ಹುಡುಗರ ಶಾಲೆಯಲ್ಲಿ ಇಲ್ಲಿಯ ಸ್ಕೂಲ ಆರ ಮ ರಾ ರಾ ಜಿ ಗೋಪಾಲ ಪೈಗಳ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರುಗಿತು. 1938 1939ರ ವರ್ಷದ ಕಾರ್ಯಕಾರಿ ಮಂಡಳಿಗೆ ಈ ಕೆಳಗಿನ ಅಧ್ಯಕ್ಷರ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು 1 ಪಿ ರಘುನಾಥರಾವ 2 ಕೆ ಸಣ್ಣಯ್ಯ ಶೆಟ್ಟಿ 3 ಕೆ ಕೃಷ್ಣಯ್ಯ 4 ಕೆ ವ ಶಮ್ಮನ್ ಸಾಹೇಬ 5 ಬಿ ಮಂಜುನಾಥ 6 ಬಿ ಎ ಪಿ ಶೇರ 7 ಎ ಕೃಷ್ಣಯ್ಯ 8 ಬಿ ರಾಮಯ್ಯ ಶೇರಿಗಾರ 8 ಬೇಡಿಗಾರ ಆನಂದ ಬಸವ ಸಭೆಯು ಎಪ್ರಿಲ್ 24ಕ್ಕೆ ಮೈಸೂರಿನಲ್ಲಿ ಜರಗಲಿರುವುದಾಗಿ ತ್ರದೆ

**ಎದೆ ಮತ್ತು ಶ್ವಾಸಕೋಶಗಳ ಬಾಧೆಗಳಿಂದ ದೂರವಾಗಿರಿ**

ನಿಮಗೆ ಅಕಸ್ಮಾತ್ತಾಗಿ ಶೀತ ನೆಗಡಿ ಕೆಮ್ಮು ಶ್ವಾಸಕೋಶದ ನೋವುಗಳುಂಟಾದರೆ ಅವುಗಳಿಂದ ಬರುವ ತೊಂದರೆಗಳ ಆರಂಭದಲ್ಲಿಯೇ ನೀವು ಪೆಪ್ಸ್ ಗುಳಿಗೆಗಳನ್ನು ತೆಗೆದುಕೊಳ್ಳಲು ಮರೆಯದಿರಿ

ಬಾಯಿಯೊಳಗೆ ಹಾಕಲ್ಪಡುವ ಪೆಪ್ಸ್ ಗುಳಿಗೆಯು ಸುವಾಸನೆಯುಳ್ಳ ಔಷಧಿ ಸಾರವನ್ನು ಬಿಡುವುದು. ಈ ಸಾರವು ಶ್ವಾಸಕೋಶವನ್ನು ಪ್ರವೇಶಿಸುವುದು ಶ್ವಾಸಕೋಶವನ್ನು ಸೇರಿದ ಈ ಸಾರವು ರೋಗದ ಕ್ರಿಮಿಗಳನ್ನು ನಾಶಮಾಡುವುದು. ವಾಯು ನಾಳದೊಳಗಿನ ತೊಂದರೆಗಳನ್ನು ಹೋಗಲಾಡಿಸಿ ಶೀತ, ಕೆಮ್ಮುಗಳನ್ನು ವಾಸಿ ಗೊಳಿಸುವುದು ಬ್ರಾಂಕೈಟಿಸ್ ಗೂರಲು ವಾತ, ಅಸ್ತ್ಮಾ ಯೆಂಬಾಗಳಿಗೆ ಪೆಪ್ಸ್ ಅತ್ಯಂತ ಗುಣಕಾರಿಯಾಗಿದೆ

ಪೆಪ್ಸ್ ಗುಳಿಗೆಗಳು ಶೀಲು ಒತ್ತಲ್ಪಟ್ಟ ಅಂದವಾದ ಬಾಟ್ಲಿಗಳಲ್ಲಿ ರೂ 1–0 ರಂತೆ ಮಾರಲ್ಪಡುತ್ತದೆ

ಏಜಂಟರು—ಮೆಸರ್ಸ್ ದಾಭಾ ಎಂಡ್ ಕೊ., ಪಿ ಟಿ ಮದ್ರಾಸು

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ,

**ಪೆಪ್ಸ್ PEPS**

# ಸಿಂಧದ ಮಂತ್ರಿಗಳ ರಾಜೀನಾಮೆ! ಬಂಗಾಳದಲ್ಲಿ ಇದಕ್ಕೆ ಅನುಕೂಲತೆ! ಮಹಾತ್ಮಾಜಿಯವರ ಮಂತ್ರಾಲೋಚನೆ!

ಸ್ವದೇಶಾಭಿಮಾನಿ

## ನಮ್ಮ ಸರಕಾರದ ಶಿಕ್ಷಣ ವಿಧಾನಗಳು

(ಎಸೆಂಬ್ಲಿಯಲ್ಲಿನ ಚರ್ಚೆಯ ಫಲ ಶೇ)

ಎಸೆಂಬ್ಲಿಯಲ್ಲಿ ಶಿಕ್ಷಣಕ್ಕೆಂದು ವೆಚ್ಚ ವನ್ನು ಸೆಂಕ್ಷನ್ ಮಾಡುವಾಗ ನಡೆದ ತರ್ಕವನ್ನು ನೋಡಿದರೆ ಕೇವಲವಾಗಿ ನಾನಾ ಸಮಾಜಗಳ ಸ್ವಾರ್ಥದ ಮೊತ್ತವು ಪ್ರತಿಯೊಂದು ವಿಷಯದಲ್ಲೂ ಎಷ್ಟೆಲ್ಲ ಅಪಿವೇಕಕ್ಕೂ ತೊಡಕುಗಳಿಗೂ ಕಾರಣವಾಗಬಹುದೆಂಬುದನ್ನು ತಿಳಿದು ಬೇಸರಗೊಳ್ಳಬೇಕಾಗುವುದು ಶಿಕ್ಷಣಕ್ಕೊಂದು ಜಾತಿ ಬೇರೆಯಿಲ್ಲವಷ್ಟೆ ಶ್ರೀ ಎಲೀಫುಲ್ಲಾ ಸಾಹೇಬರು ಹಿಂದಿಯೊಂದರ ನೆವವನ್ನು ಎತ್ತಿ ಎತ್ತೆತ್ತಲೂ ಅಸಂಗತವಾದುದನ್ನೆ ಭಾಷಣಮೂಲಕ ಆಳುತ್ತ, ಶ್ರೀ ಜವಾಹರಲಾಲರು ಹಿಂದೀ ಉರ್ದು ವಿವಾದಗಳನ್ನು ಕುರಿತಾಗಿ ಇವರಿ ಬಾಯಿ ತುಂಬ ಉತ್ತರಕೊಟ್ಟುದನ್ನು ಮರೆತು ಎಸೆಂಬ್ಲಿಯಲ್ಲೂ ನಾನಾ ದೂಷಣಾರೋಪಗಳನ್ನು ಮಾಡಿದರು ಹಿಂದೀ ಪ್ರಚಾರಕ್ಕೂ ಹಿಂದೂ ಮುಸ್ಲಿಮ ಸಮಸ್ಯೆಗೂ ಯಾ ತೆರದ ... ಇಲ್ಲವಾದರೂ ಈ ... ತಾತ್ಕಾಲಿಕ ಮತ್ರಿ...ಟಕ್ಕೆ ಸೇರಿದ ಸಾಹೇಬರು ನ ನಾ ಬ...ವಾಗಿ ಆದಿತ್ಯೋರಿಸಿದರು ಶ್ರೀ ಅಬ್ದುಲ ಹಮೀದವಾನರು ನ್ಯಾಯವಾದಷ್ಟು ಚೆನ್ನಾಗಿ ವ ...ಸ್ಲಿ ಪಕ್ಷವನ್ನು ಸಮರ್ಥಿ... ಎಷ್ಟೋ ಸಾಧಿಸಬಹುದಾಗಿದ್ದರೂ ಶಿಕ್ಷಣವು ರಾಷ್ಟ್ರೀಯ ಹಾಗೂ ಜನಾಂಗಿಕ ದೃಷ್ಟಿಯಿಂದ ಮುಂದ... ...ಗಬೇಕೆಂದ ಹೇಳ ತ ಸನದಲ್ಲಿ ಆದ ಕೆ...ಂಪಿ ಜಾತಿ ಯನ್ನೆ ನಿರ್ಮೂಲಮಾಡಿ ಕೊಟ್ಟರು ಮುಂ...ಮ ಮಕ್ಕಳನ್ನು ಬೇರೇ ಯಾಗಿ ಶ ಲೆಗಳಲಿ ಕಲಿಸುವಂತಾಗಬೇಕೆನ್ನುವ ಇ ದ... ಇಂಥ ಅಭಿಪ್ರಾಯವುಳ್ಳವರಿಂದ ಈ ದೇಶಕ್ಕೆ ಈಗ ಉಂಟಾಗಿರುವ ...ರ್ಥ...ದ ಸಮಸ್ಯೆಯು ಇನ್ನೂ ಇನ್ನೂ ಕಠಿಣವಾಗ ವಂತಾದೀತೆಂಬ ವಿಚಾರವನ್ನಾದರೂ ಇವರೇ... ಮಾಡುತ್ತಿಲವೋ ಯಾರಿಗೂ ತಿಳಿಯದ... ಪಾರ್ಥ್ಯ ಸ್ಕೀಮ ನ್ನು ತಿಕ್ಕಿ ತೀಡಿ ಅರ್ಧ...ರ್ಧ ...ಂಜೂರು ಮಾಡಿದಂತಾದರೂ ಇದರ ವಿಷಯ ಈಗ ನಡೆಯಲಿರುವ ಪ್ರಯೋಗದಿಂದ ...ಂದೆ ಪರಿಣಾಮಗಳು ತಿಳಿದ ತರುವಾಯವೇ ...ನಾದರೂ ಸದುಪಯೋಗಮಾಡಲು ಅನುಕೂಲವಾಗಿದೆ ಎಂದೂ ತಿಳಿದುಬಂತು ಹೊಸ ಯೋಜನೆ ಎಂದ ಬಳಿಕ ಅದರ ಪರೀಕ್ಷಾ ಪ್ರಯೋಗಗಳಿಗೆ ನಿಜವಾಗಿಯೂ ಅವಕಾಶವೂ ಇದೆ ಅವಧಿಯೂ ಇದೆ ತಿದ್ದಿಕೊಳ್ಳಲೂ ಸಮಯವಿದೆ ಶ್ರೀ ಬಶೀರ್ ಅಮದ್‌ರವರು ಎಲ್ಲ ಕಾನೂನು ಶಿಕ್ಷಣವನ್ನು ಬಾರ್ ಕೌನ್ಸಿಲಿಗೆ ಒಪ್ಪಿಸಿಕೊಡಬೇಕೆಂದರು ಇದು ವಿಹಿತವೇ ಆಗಿದೆಯಾದರೂ ಹಾಗೆ ಒಪ್ಪಿಸಿಕೊಳ್ಳುವುದಕ್ಕೆ ಬಾರ್ ಕೌನ್ಸಿಲು ಸಿದ್ಧವಾಗಿರಬೇಡವೆ? ಸರಕಾರವೇ ಅದನ್ನೊಪ್ಪಿಸಿಕೊಡುವುದೆಂತು? ಅವರು ಎಂತಹ ಸ್ಕೀಮನ್ನು ಸರಕಾರದ ಮುಂದಿಡಬಲ್ಲರು? ತಿಳಿಯದು ಶ್ರೀಮತಿ ಅಮ್ಮಣ್ಣಾ ರಾಜಾರವರ ಅಭಿಪ್ರಾಯದಲ್ಲಿ ಪ್ರತಿ ಜಿಲ್ಲೆಯಲ್ಲೂ ಒಂದು ಬಾಲಿಕೆಯರ ಹೈಸ್ಕೂಲು ಇರಬೇಕೆಂದೂ ಒಬ್ಬರು ಡೆಪ್ಯುಟಿ ಡೈರೆಕ್ಟರರು ಬಾಲಿಕೆಯರ ವಿದ್ಯಾಭ್ಯಾಸವನ್ನು ಕೈಕೊಳ್ಳಬೇಕೆಂದೂ ಆಸೆಯುದೆ, ಅದೇ ಮಾತಿನಲ್ಲಿ ಮಾನಸಿಕ ನೈತಿಕ ಇತ್ಯಾದಿ ವಿಚಾರಗಳಲ್ಲೆಲ್ಲ ಸಮಾನರಾಗಿ ಮಹಿಳೆಯರು ಇರುವಂತಾಗಬೇಕೆಂದೂ ಇವರೇ ಒತ್ತಿ ಹೇಳಿದರು ಇದು ಒಂದಕ್ಕೊಂದು ವಿರೋಧವಾಗಿರುವ ಅಭಿಪ್ರಾಯವೆನಿಸದೆ?

ನಮ್ಮ ಪ್ರಾಂತ್ಯದ ವೃದ್ಧಿಗಾಗಿ ಮಂತ್ರಿಗಳು ಕೈಗೊಂಡಿರುವ ಶಿಕ್ಷಣಧೋರಣೆಯೇನೂ ಸಾಮಾನ್ಯವಲ್ಲ ಅಂತೂ ಬಹುಜನರಿಗೆ ಸಮ್ಮತವಾಗಿಯೆ ಇದೆ ಎಂದು ಚರ್ಚೆಯಿಂದ ತಿಳಿದುಬಂತು ಕಾಲೇಜುಗಳಿಗೆ ಪ್ರವೇಶಕೊಡುತ್ತಿದ್ದ ಕಮ್ಮಿಟಿಗಳನ್ನು ಸರಕಾರವು ಕಿತ್ತುಹಾಕಿರುವುದ ಇದುವರೆಗೆ ಮೇಲ್ತರಗತಿಗಳಲ್ಲಿನ ವಿದ್ಯಾರ್ಜನೆಗೆ ಇದ್ದ ಮಹಾಸಂಕಟವನ್ನು ನಿವಾರಿಸಿದಂತಾಗಿದೆ ಯಾವುದೊಂದೇ ಜಾತಿಯವರಿಗೆ ಹಾನಿಕರವಾದ ರೀತಿಯಲ್ಲಿ ಈ ಕಮ್ಮಿಟಿಗಳು ನೇಮಕಹೊಂದಿ ಕೆಲಸ ನಿರ್ವಹಿಸಿದುದರಿಂದ, ಸರಕಾರದ ಕಾಲೇಜುಗಳಿಂದ ವಿದ್ಯಾರ್ಥಿಗಳು ಇತರ ಮಿಶ್ಶನ ಅಥವಾ ಖಾಸಗಿ ಕಾಲೇಜುಗಳಿಗೆ ಪ್ರವೇಶಹೊಂದ ವಂತಾಯಿತು ವೈದ್ಯಕೀಯ ಅಥವಾ ಇಂಜಿನೀಯರಿಂಗ್ ಇತ್ಯಾದಿ ವೃತ್ತಿಸಂಬಂಧವುಳ್ಳ ಶಿಕ್ಷಣ ಕೊಡುವ ಕಾಲೇಜುಗಳಿಗೆ ಈ ಕಮ್ಮಿಟಿಗಳಿಂದಾದ ಹಾನಿಯು ಅಷ್ಟಿಷ್ಟಲ್ಲ ಹೀಗಿರುತ್ತ ಈ ಕಮಿಟಿಗಳು ರದ್ದಾದುದು ಪ್ರಾಂತ್ಯಕ್ಕೆ ಹಿತವೇ ಪಚ್ಚೆಯಪ್ಪನ ಕಾಲೇಜಿಗೆ ಸರಕಾರವು ಕೈತುಂಬ ಸಹಾಯಧನವನ್ನು ಕೊಟ್ಟದರಿಂದ ಬ್ರಾಹ್ಮಣೇತರರೆ ಈ ಕಾಲೇಜನ್ನು ಅಭಿವೃದ್ಧಿಗೆ ತರುವರೆ ಜಸ್ಟಿಸ್ ಪಕ್ಷದ ಮಂತ್ರಿಗಳಿಗೆ ಯಾವ ರೀತಿಯಲ್ಲಿಯೂ ಅನುಕೂಲವಾಗಿಲ್ಲದಿದ್ದರೂ ಜಸ್ಟಿಸ್ ಪಕ್ಷದವರು ದೂರುತ್ತಿದ್ದ ಕಾಂಗ್ರೆಸ ಮಂತ್ರಿಗಳೇ ಈ ವಿದ್ಯಾಸಹಾಯಕ ಧನವನ್ನಿತ್ತು ಬ್ರಾಹ್ಮಣ ಪಕ್ಷಕ್ಕೇ ಕಾಂಗ್ರೆಸು ಬ್ರಾಹ್ಮಣೇತರರ ಶತ್ರು ಎಂಬ ಮಾತು ಸುಳ್ಳೆಂದು ಸ್ಪಷ್ಟವಾಗುವಂತಾಯಿತು

★

## ಝೆಕೊಸ್ಲೊವಾಕಿಯ

ಮಹಾಯುದ್ಧಾನಂತರದಲ್ಲಿ ... ಯುರೋಪಿನಲ್ಲಿ ನಿರ್ಮಿತವಾದ ಹೊಸ ರಾಜ್ಯವಿದು ಆದರ ಇದಕ್ಕೊಂದು ಇತಿಹಾಸವಿದೆ ಕಿಸ ಮಸ ಹಬ್ಬದ ಕಾಲದಲ್ಲಿ ಹಾಡುವ ವೆನ್ಸಸ ಲಾಸ ರಾಜನ ಹಾಡಿದೆಯಷ್ಟೆ ಆತನೆ ಹಲವು ಶತಮಾನಗಳ ಹಿಂದೆ ಇಲ್ಲಿ ಆಳುತ್ತಿದ್ದನು ಜೋನನೆಂಬ ಒಬ್ಬ ಅರಸು ಕುರುಡನಾಗಿದ್ದು 1346ರಲ್ಲಿ ಯುದ್ಧದಲಿ ಮಡಿದಿದ್ದನ ಅದಿರಲಿ

ಇದು ಪ್ರಜಾಧಿಪತ್ಯ 1918ನೆ ಇಸವಿ ಒಕ್ಟೋಬರ ತಾ 28ರಲ್ಲಿ ಜನನಕ್ಕೆ ಬಂದಿತು ಹಿಂದೆ ಆಸ್ಟ್ರಿಯಕ್ಕೆ ಸೇರಿದ್ದ ಬೊಹೀಮಿಯ ಮೊರೇವಿಯ ರಾಜ್ಯಗಳೂ ಪಶ್ಚಿಮದಲ್ಲಿದ್ದು ಇಂತಹ ವಿಚಿತ್ರ ಜನಾಂಗಗಳದೊಂದು ಅಪೂರ್ವ ಐಕ್ಯಮತ್ಯದ ರಾಜ್ಯವಾಗಿ ಇದು ನಿರ್ಮಾಣಹೊಂದಿದೆ ಈ ರಾಜ್ಯದಲ್ಲಿನ ಕೆಲವರು ಸ್ವರಾಷ್ಟ್ರಪ್ರೇಮವುಳ್ಳ ಝೆಕ್ಕರು ಹಲವರು ರಷ್ಯವನ್ನು ಸೇರಿರಬೇಕೆಂದು ಬಯಸಿದ ಸ್ಲಾವವಂಶದವರು ಜರ್ಮನರು ಇಲ್ಲಿ 3½ ಮಿಲ್ಲಿಯವಿದ್ದು, ಆಸ್ಟ್ರಿಯ ಅಥವಾ ಜರ್ಮನಿಯನ್ನು ಬಿಟ್ಟು ಪ್ರತ್ಯೇಕವಾಗಬಾರದೆಂಬ ಛಲವುಳ್ಳವರು ಸ್ಲೊವಾಕರು ಸ್ವತಂತ್ರರಾಗಿರಲು ಅಷ್ಟು ಇಚ್ಛಿಸಿರಲಿಲ್ಲ ರುಥೇನಿಯವು ರಷ್ಯದ ಆಶ್ರಯವಿಡಲಾರದುದು

ಆದರೂ ಸ್ವಾತಂತ್ರ್ಯಪ್ರಿಯರಾಗಿದ್ದ ಡಾ ಮಸರಿಕ್‌ರವರೂ ಡಾ ಬೆನೆಸ್‌ರವರೂ ಬೋಧಿಸಿ ಪ್ರಯತ್ನಿಸಿದ ಫಲವಾಗಿ ಮೊದಲನೆಯವರು ಪ್ರೆಸಿಡೆಂಟರಾಗಿಯೂ ಎರಡನೆಯವರು ಪರರಾಷ್ಟ್ರಗಳ ಸಚಿವರಾಗಿಯೂ ಈ ಹೊಸರಾಜ್ಯದ ಆಡಳಿತ ನೋಡಿದರು ಪ್ರೆಸಿಡೆಂಟರು ಗಾಡಿಗಾರರ ಮಕ್ಕಳು, ಸಚಿವರು ಬೇಸಾಯಿಯ ಸಂತಾನ ಹಾಗಿದ್ದರೂ ಸ್ವಪ್ರಯತ್ನದಿಂದ ಉಚ್ಚಶಿಕ್ಷಣ ಹೊಂದಿ ಯುದ್ಧಕಾಲದಲ್ಲಿ ಮಿತ್ರರಾಷ್ಟ್ರಗಳನ್ನೂ ಅಮೇರಿಕವನ್ನೂ ತಮ್ಮ ನಾಡಿನ ಕಡೆಗೆ ಒಲಿಯುವಂತೆ ಇವರು ಮಾಡಿಕೊಂಡರು ಫ್ರಾನ್ಸು ಜರ್ಮನಿಯ ಜನ್ಮಶತ್ರುವಷ್ಟೆ ಅದಂತೂ ಇವರಿಗೆ ಮಿತ್ರನಾಗಿಯೇ ಇದ್ದಿತು

ಆದರೆ ಈ ಪ್ರದೇಶಕ್ಕೆ ಮುಖ್ಯ ಗಿರಾಕಿಯಾಗಿದ್ದ ಆಸ್ಟ್ರಿಯಾ ಹಂಗೇರಿ ರಾಜ್ಯಗಳು ಯುದ್ಧಾನಂತರದಲ್ಲಿ ಬಲಹೀನವಾಗಿ ಕಾಸು ಕಡಿಮೆಯಾಗಿದ್ದುದರಿಂದ, ಇಲ್ಲಿನ ವ್ಯಾಪಾರಕ್ಕೆ ತೊಡಕುಂಟಾಯಿತ ಇಡೀ ಆಸ್ಟ್ರಿಯಾ ರಾಜ್ಯದ (ಹಿಂದಿನ) ಹೊಪ್ಸ್ ಬೆಲೆ... ಅಂಶ ಬಾರ್ಲಿಯ ಅರ್ಧಾಂಶ ಬೀಟ ಸಕ್ಕರೆ ಎಲ್ಲವೂ ಈ ರಾಜ್ಯದಲ್ಲಿ ಉತ್ಪನ್ನವಾಗ ತಿ... ಅದಲ್ಲದೆ ಮುಖ್ಯ ಕೈಗಾರಿಕೆಗಳ ಇದೇ (ಬೊಹೀಮಿಯ) ಕೇಂದ್ರವಾಗಿದ್ದಿತ ಹಿಂ... 60 ಮಿಲಿಯ ಜನರಿಗ ಸರಕ ... ರಾಜ್ಯವು ಈಗ 14 ...

ಝೆಕ್ಕರೇ ಅಗ್ರಗಣ್ಯರೆಂಬ ಭಾವನೆಯೂ ಸರಕಾರದಲ್ಲಿರುವುದರಿಂದ ಸ್ವಲ್ಪ ಅಶಾಂತಿಗೆ ಕಾರಣವಿದೆ ಝೆಕ್ಕರು ಇತರರಿಗೆ ಅವರಿರುವಲ್ಲಿ ಸ್ವರಾಜ ಕೊಡುವುದಾಗಿ ಸಂಧಿಕಾಲದಲ್ಲಿ ಹೇಳಿದ್ದರೂ ಹಾಗೆ ಮಾಡಿಲ್ಲ ಅವರ ಪ್ರಾಂತ್ಯಗಳನ್ನು (ಕಾಲೊನಿ) ವಸಾಹತುಗಳಂತೆ ಮಾತ್ರ ನೋಡುತ್ತಾ ಒಂದಿದೆ ಬೋಹೆಮಿಯವು ಉತ್ಪನ್ನ ಮಾಡಿದ ದನ್ನ ಈ ಪ್ರಾಂತ್ಯದಲ್ಲಿ ಮಾರುವರು ಇಲ್ಲಿನ ಜನರನ್ನು ಸುಲಭ ದರಕ್ಕೆ ಕೂಲಿಗೆ ಇಟ್ಟುಕೊಳ್ಳುವರು

ಇದೇ ಈ ರಾಜ್ಯವು ಮುಂದೆ ಒಡೆಯಲು ಕಾರಣವಾಗದಿರದ ಒಳಜಗಳಗಳೂ ಹೊರ...ಗಳೂ ... ಇದ್ದೇ ಇರುವಾಗ ಜರ್ಮನ ಪುನಃ ಬೊಹೀಮಿಯವು ತನ್ನದಾಗಬೇಕೆಂದೂ ಹಂಗೇರಿಗೆ ತನ್ನ ಹಿಂದಣ ಜಮೀನೆಲ್ಲ ... ಭೂಮಿ ... ಈಗ ದೊರ...




ಬೇಕೆಂಗಿ ಬಂತ ... ಹಾಗಿದ್ದರೂ ತೆ... ದೀದೆ ಈ ರಾಜ್ಯವೀಗ ... ಅಗ್ರಗಣ್ಯವಾಗಿದೆ ಇಲ್ಲಿನ ...ಗಳ ನನ್ನಲ್ಲಿ ... ವಿಮಾಯ ತಿಯಲ್ಲಿ ... (ಜಪಾನಿನಂತೆ) ಜಗ...ಗಾಜನ್ನ ಮಾರುವ ರಾಜ್ಯ ಅದಿರಲಿ ... ರಕ್ಷೆ (ಬೂಟ್ಸ್) ಇಲ್ಲಿನ ಬಾಟಾ ಕಂಪನಿಯ ... ತಯಾರಾಗಿ ಪ್ರೋಢ... ವೆ ... ಚೆನ್ನಾಗಿ ಪ್ರಚಾರಕ್ಕೆ ಬಂದಿವೆ ಪ್ರತಿಯೊಂದ ಬಗೆಯ ಖನಿಜವೂ ಈ ರಾಜ್ಯದಲ್ಲಿ ಧಾರಾಳವಾಗಿದೆ ಇದೇ ಮುಖ್ಯ ಸಂಪತ್ತಾಗಿದೆ

ಬೇಸಾಯಗಾರರಿಗೆ ಮನಸ್ತೃಪ್ತಿಯಾಗುವಂತೆ ಜಮೀನನ್ನೆಲ್ಲ ಪುನ ಸರಿಯಾಗಿ ಪಾಲು ಮಾಡಿಕೊಟ್ಟು ¼ ಅಂಶದ ರಾಜ್ಯವನ್ನು ಹೊಸ ಬಗೆಯ ಕೃಷಿಗೆ ಒಪ್ಪಿಸಿದುದೇ ಈ ಸರಕಾರದ ಮುಖ್ಯ ಕರ್ತವ್ಯವೆನಿಸಿದೆ ಹೀಗಾಗಿ ಹಂಗೇರಿಗೆ ಹಿಂದೆ ಸೇರಿದ್ದ ಈ ಬೇಸಾಯಗಳು ಈಗ ಅತ್ಯುತ್ತಮ ಸೌಖ್ಯದಲ್ಲಿರುವ ಕಾರಣ ಹಂಗೇರಿಯೊಡನೆ ಇನ್ನೊಂದೂ ಸೇರುವಂತಿಲ್ಲ

ಅದಲ್ಲದೆ ಜರ್ಮನರಲ್ಲಿ ಮೂರ ವರೆ ಮಿಲ್ಲಿಯ ಜನರು ಇಲ್ಲಿರುವರಾದರೂ ಇವರನ್ನು ಕೂಡಿಕೊಂಡೇ ರಾಜ್ಯಭಾರ ನಡೆಯುತ್ತದೆ ಈ ಜನರೇ ದೇಶದ ಬೆನ್ನೆಲುವಾಗಿದ್ದಾರೆ ಕೈಗಾರಿಕೆಗಳೂ ಕಾರ್ಖಾನೆಗಳೂ ಬೇಂಕುಗಳೂ ಹೆಚ್ಚಾಗಿ ಇವರ ಕೈಯಲ್ಲಿವೆ ಉತ್ತಮ ಕೆಲಸಗಾರರೂ ಇವರೇ ಸರಕಾರದ ಆಡಳಿತದಲಿ ಇವರಿಗೂ ತುಂಬ ಅಧಿಕಾರ ಕೊಡಲಾಗಿದೆ ಇತರ ಜನರಾದ ಹಂಗೇರಿಯಾನರೂ ಸ್ಲೊವಾಕರೂ, ರುಥೇನಿಯದವರೂ ಜರ್ಮನರಷ್ಟು ಹಿತರಲ್ಲೆಂದು ಸರಕಾರಕ್ಕೆ ತಿಳಿದುಬಂದುದರಿಂದ ತಿರು... ಸಂದರ್ಭದಲ್ಲಿ ಒದಕು ಉಂಟಾಗದೆ ಜಗಳವಿರದೆ ಇರಲಾರದ ಹಂಗೇರಿಯ ಪ್ರೇರಿತ್ತಿದರೆ ಈ ರಾಜ್ಯಕ್ಕಾಗದ ... ಜರ... ಮಿತ್ರರಾಜ್ಯಗಳು

... ಆಸ್ಟ್ರಿಯವನ್ನು ... ಮಾಡಿಕೊಂಡ ಬಳಿಕ ರಷ್ಯದೊಳಗೆ ನೀವು ... ಪ್ರಯತ್ನವಾದ ವಾಗ, ಜರ್ಮನರೆ ... ಸ್ಥೈಯಲಿರುವ ಪಶ್ಚಿಮದ ಬೊಹೀ... ರಾಜ್ಯವನ್ನು ವಶಪಡಿಸಿಕೊಳ್ಳಬೇಕೆಂದ ಆಸ ತೋರಿಸಿಯದೆ ರಷ್ಯವು ಇತ್ತ ಸಹಾಯಕ್ಕೆ ಬಾರದಂತೆ ಪೋಲೆಂಡು ತನ್ನ ರಾಜ್ಯದೊಳಗಿಂದ ರಷ್ಯಕ್ಕೆ ದಾರಿಕೊಡದ ಹಾಗೆ ಕರಾರಾಗಿಯೇ ಇದೆ ಮುಂದೆ?

# ಕೊಂಗ್ರೆಸ್ ಧ್ಯೇಯವುಳ್ಳ ಪಂಗಡಗಳೊಡನೆ ಮಾತ್ರ ಕೊಂಗ್ರೆಸ್ ಸಹಕರಿಸುವುದು

## ಸಿಂಧ ಮತ್ತು ಬಂಗಾಳ ಪ್ರಾಂತ್ಯಗಳು

### ಸಿಂಧದ ಮಂತ್ರಿಗಳ ರಾಜೀನಾಮೆ- ಬಂಗಾಳದಲ್ಲಿ ಇದಕ್ಕೆ ಅನುಕೂಲತೆ ಮಹಾತ್ಮ ಗಾಂಧಿಜಿಯವರ ಮಂತ್ರಾಲೋಚನೆ ಕೊಂಗ್ರೆಸ್‌ಧ್ಯೇಯವುಳ್ಳಪಂಗಡಗಳೊಡನೆ ಮಾತ್ರ ಕೊಂಗ್ರೆಸ್ ಸಹಕರಿಸುವುದು

★

ಸಿಂಧದ ಮಂತ್ರಿಮಂಡಳವು ಬಜೇಟನ್ನು ಎಸೆಂಬ್ಲಿಯ ಮುಂದಿಟ್ಟೊಡನೆಯೇ ಆಡಳಿತದ ವ್ಯಯಕ್ಕೆ ಬೇಕಾದ ಹಣದ ಮೊಬಲಗನ್ನು ಎಸೆಂಬ್ಲಿ ನಿರಾಕರಿಸಿತು ಮಂತ್ರಿಮಂಡಳದಲ್ಲಿ ಭರವಸೆಯಿಲ್ಲವೆಂದು ಎಸೆಂಬ್ಲಿಯು ರುಜುಪಡಿಸಿತು ಗವರ್ನರರೇ ಮೊದಲಾದ ... ಸರ್ವಿಸುಗಳಿಗೆ ಸಲ್ಲತಕ್ಕದಾಗಿ ನಿರ್ಧಾರವಾದ ಸಂಬಳ ಮೊದಲಾದುವು ಈ ಮೊಬಲಗಿನಲ್ಲಿ ಸೇರಿದ್ದು ಅದನ್ನು ಗವರ್ನರರು ತಾವಾಗಿ ಮಂಜೂರುಮಾಡುವಂತೆ ಒಂದು ಶೆಡ್ಯೂಲಿನಲ್ಲಿ ಸೇರಿಸಬಹುದು ಆದರೆ ಎಸೆಂಬ್ಲಿಯ ಖರ್ಚು ಮೆಂಬರರ ಸಂಬಳ ಮೊದಲಾದುವನ್ನು ಅವರು ಶೆಡ್ಯೂಲಿನಲ್ಲಿ ಸೇರಿಸಲಾಗುತ್ತಿಲ್ಲ ವೋಟಿಗೆ ಒಪ್ಪಿಸಬೇಕಾಗಿರುವ ಮೊಬಲಗುಗಳ ಮೇಲೆ ಗವರ್ನರರು ಸುಲಭವಾಗಿ ತಮ್ಮ ಅಂಗೀಕಾರದ ಹಾಗೂ ಎಸೆಂಬ್ಲಿಯ ಅಂಗೀಕರಿಸಬೇಕೆ ... ಒತ್ತಾಯದ ಪದ್ಧತಿಯೊತ್ತ ಬರುವುದಿಲ್ಲ ಜನರಿಗೆ ಒಪ್ಪದ ಮಂತ್ರಿ ಮಂಡಲವನ್ನು ಗವರ್ನರರು ಆಧರಿಸಿ ಹಿಡಿಯಲು ಅನ ಕೂಲತೆಗಳು ಈಗಣ ಚಕ್ತಿನಲ್ಲಿ ಕ್ರಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ... ಗಳಿಗೆ ಸಹಾಯಮಾಡುವ ಯಾ ಕೃತಿಯನ್ನು ಗವರ್ನರರು ಮಾಡಲುಸಾಧ್ಯವಿಲ್ಲ ಗವರ್ನರರಿಗಿರುವ ಸ್ಪೆಶಲ್ ಜವಾಬ್ದಾರಿಗೆ ಸಂಬಂಧಪಡುವ ಯಾ ... ಕೃತ ಗೇಟನ್ನಾದರೂ ಗವರ್ನರರು ತಾವಾಗಿ ಸೆಂಕ್ಷನು ಮಾಡಬಹುದು

ಇಂತಹ ಪರಿಸ್ಥಿತಿಯಿರುವ ಕಾರಣವೇ ಸಿಂಧದ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕಾಯಿತ ಆದರೆ ಕೊನೆಗೆ ... ರಾಜೀನಾಮೆ ಕೊಟ್ಟರೆ ಮೇಲೆ ... ಯಾವ ಪಕ್ಷದವರು ಮಂತ್ರಿಮಂಡಲ ರಚಿಸಲಿರುವರಂತೆ ನೋಡಿ ಒದುವೆವು ... ಮುಖ್ಯ ... ಗಳೆ ದರ

ಅಂದೇ ... ಒಡದ್ದರ ... ಪಕ್ಷದವರ ಗವರ್ನರರನ್ನು ಕಂಡ ತಾವೇ ... ಮಂತ್ರಿಗಳ ... ಇಲ ಹಿಟಕ್ಷ ... ಇತರ ಮಂತ್ರಿಗಳೂ ... ನಿಮಾ ... ರು

ಕೊಂಗ್ರೆಸ್ ಮೆಂಬರರು ಈ ಮಂತ್ರಿ ಮಂಡಲ ರಚಿಸುತ್ತಿ ... ಈಗಣ ಖಾನ ಬಹದ್ದೂರರಿಗೆ ೧೨ ಸದಸ್ಯರ ಬೆಂಬಲವಿದ್ದ ಹಿಂದೂ ಪಕ್ಷದ ೧೦ ಮಂದಿ ಇವರಿಗೆ ಜತೆ ಕೊಡುವರು ಕೊಂಗ್ರೆಸ್ ಸದಸ್ಯರು ... ಇದ್ದಾರೆ ಇವರು ಮಂತ್ರಿ ಮಂಡಲ ರಚಿಸುವದಾದರೆ ಖಾವರ ಪಕ್ಷದ ನಾಲ್ವರೂ ಹಿಂದುಗಳು ನಾಲ್ವರೂ ಇವರನ್ನು ಸೇರುವಂತೆ ಮಾಡುತ್ತೇವೆಂದು ಖಾನರು ತಿಳಿಸಿದ್ದರು ೧೬ ಮಂದಿ ಸೇರಿದ್ದರೆ ಅದೇ ಬಹುಪಕ್ಷವಾಗುತ್ತಿತ್ತು

ಈಗ ಈ ಹೊಸ ಮಂತ್ರಿಗಳೊಡನೆ ಸೇರಿಗದ್ದರೂ ಕೊಂಗ್ರೆಸ್ ಪಕ್ಷದವ ಮಂದಿಯೂ ಇವರಿಗೇ ಬೆಂಬಲವೀಯಲು ಸಮ್ಮತಿಸಿದ್ದಾರೆ

## ಬಂಗಾಳದಲ್ಲಿ

ಇನ್ನೆಷ್ಟೋ ಸಂಭಾಷಣೆಯ ಕೂಟಗಳು ಜರುಗಿದ ಬಳಿಕ ಕಾಂಗ್ರೆಸು ಅಧಿಕಾರ ಸ್ವೀಕರಿಸುವುದೋ ಇಲ್ಲವೋ ಎಂದು ತಿಳಿಯಬೇಕಾಗಿದೆ ಏಕೆಂದರೆ ಈಗಣ ಮಂತ್ರಿ ಮಂತ್ರಿಮಂಡಲದ ಬಲಬಲವನ್ನು ನಿರಾಕರಿಸಿರುವ ಕಾರ್ಯಕ್ರಮವಿರವ ಪಕ್ಷಗಳಲ್ಲಿ ಇವರೊಳಗ ಒಂದೇ ಧ್ಯೇಯವುಂಟಾದಲ್ಲಿ ಅದು ಕೊಂಗ್ರೆಸಿನ ಕಾರ್ಯಕ್ರಮದಂತಿದ್ದರೆ ಕಾಂಗ್ರೆಸು ಸದಸ್ಯರು ಅವರನ್ನು ಸೇರಬಹುದು ರಾಷ್ಟ್ರೀಯತೆಯು ಅವರೊಳಗೆ ಹೆಚ್ಚಿದಷ್ಟು ಕೊಂಗ್ರೆಸು ಅವರೊಡನೆ ಸೇರುವುದಾಗಿದೆ ವಾಯುವ್ಯ ಗಡಿನಾಡಿನಲ್ಲಿ ಹೀಗೆಯೆ ಕಾಂಗ್ರೆಸು ಮಂತ್ರಿ ಮಂಡಲ ರಚಿಸಿದೆಯಲ್ಲವೆ? ಈಗಲಿಂತಹ ರಚನೆ ಮಾಡಲು ಅನುಕೂಲವಿದೆಯಾದರೂ ಮುಂದೆ ಅಪಾಯ ಅಥವಾ ಕಚ್ಚಾಟಗಳಾಗದಂತೆ ಎಚ್ಚರವಾಡಬೇಕಾಗಿದೆ ಈಗಣ ಮಂತ್ರಿಗಳಿಗೆ ಬೆಂಬಲ ನಿರಾಕರಿಸಿದವರು ತಾವಾಗಿಯೇ ಹೊರಟವರಲ್ಲದೆ ಗಾಂಧಿಜಿಯವರಿಂದರೂ ಇವರನ್ನು ಹಾಗೆ ಮಾಡಲು ಬೋಧಿಸಿದ್ದಿಲ್ಲ ಹೀಗಿರುವದರಿಂದ ಇನ್ನು ಕೆಲವು ಕಾಲ ಈಗಣ ಜಲಲ್ ಹುಕ್ ಮಂತ್ರಿಯವರ ಕೂಟವೆ ಮುಂದರಿಯಬಹುದು ಕೊಂಗ್ರೆಸಿನೊಡನೆ ಕಾರ್ಯಕ್ರಮದಲ್ಲಿ ಅಂತಃಕರಣ ಪೂರ್ವಕವಾಗಿ ಸೇರಲಿರುವ ಕೂಟಗಳು ಎಷ್ಟು ಬೇಗ ಒಂದಾಗುವುವೊ ಅಷ್ಟು ಬೇಗನೇ ಈ ಕಾಂಗೆಸ ಕೂಟವು ಅಧಿಕಾರವಹಿಸಬರುವುದು ಹೀಗಾಗಿ ಇನ್ನು ಸಂಭಾಷಣೆಗಳು ಇತರ ಪಕ್ಷಗಳ ಮುಖಂಡರೊಳಗೆ ಜರುಗುತ್ತಿವೆ ಕೃಷಿಕ ಪ್ರಜಾಪಕ್ಷ ಸ್ವತಂತ್ರಪ್ರಜಾಪಕ್ಷ ಹಿಂದಿದ ... ಪ್ರತಿನಿಧಿಗಳ ... ಇವೆಲ್ಲವು ... ಹೇಗೆ ... ಕೂಡುವುವೋ ನೋಡಬೇಕಾಗಿದೆ

ಬ್ರಿಗೆಡಿಯರ್ ಜೆನರಲ್ ... ಜೆಲ್

### ಹೆಚ್ಚು ಸದಸ್ಯರನ್ನು ಮಾಡಿದವರಿಗೆ ಬೆಳ್ಳಿಯ ಶೀಲ್ ಬಹುಮಾನ

ಈಗಾಗಲೇ ಪ್ರಾಂತ್ಯದ ೨೨ ಜಿಲೆಗಳಲಿ ... ವರ ಪದ ಕಾಂಗ್ರೆಸ್ ಸದಸ್ಯರ ... ಮಾಡುವ ಕೆಲಸವು ಭರದಿಂದ ಶುರುವಾಗಿದೆ ಈ ವರುಷ ಕಾಂಗೆಸ ಸದಸ್ಯರನ್ನು ಮಾಡುವುದ ... ಯಾವ ಜಿಲೆಯು ಪ್ರಥಮ ಸ್ಥಾನವನ್ನು ಪಡೆಯುವುದೋ ಅದಕ್ಕೆ ಪ್ರಾಂತಿಕ ಕಮಿಟಿಯು ಪರವಾಗಿ ಒಂದು ಬೆಳ್ಳಿಯ ಶೀಲ್ಡು ಒಂದು ವರ್ಷದ ಮಟ್ಟಿಗೆ ಆ ಜಿಲ್ಲಾ ಕಾಂ ಕಮಿಟಿಯ ಹೆಸರು ಹಾಕಿಸಿ ಕೊಡಲಾಗುವುದು ಹಾಗೆಯೇ ಪ್ರತಿ ವರ್ಷ ಹೆಚ್ಚು ಕಾಂ ಸದಸ್ಯರನ್ನು ಮಾಡಿದ ಜಿಲ್ಲೆಗೆ ಕೊಟ್ಟು ಆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಹೆಸರು ಹಾಕಿಸಲಾಗುವುದೆಂದು ಗುದಿಪ್ಪ ಹಳ್ಳಿಕೇರಿ ಪ್ರಧಾನ ಕಾರ್ಯದರ್ಶಿ ಕರ್ನಾಟಕ ಪ್ರಾಂ ಕಾಂಗೆಸ್ ಕಮಿಟಿ ಇವರು ತಿಳಿಸುತ್ತಾರೆ

### ಮಹಾರಾಜರು ದ್ವೀಪಾಂತರಕ್ಕೆ ಹೋಗುವರು

ಮಧ್ಯಪ್ರಾಂತದ ಛಾಪೂರ್ ಸಂಸ್ಥಾನದ ಮಹಾರಾಜರಾದ ರಾಜ ಕುಮಾರ ಪ್ರಫುಲ್ಲ ಕುಮಾರ ಭಾಂಜೆಯವರು ಇಂಗ್ಲಾಂಡಿನ ಸಮೀಪದಲ್ಲಿರ ಒಂದು ದ್ವೀಪವನ್ನು ೧೦,೦೦೦ ಪವನುಗಳಿಗೆ ಕ್ರಯಕ್ಕೆ ಪಡಕೊಂಡು ಅಲ್ಲಿ ಹೋಗಿ ವಾಸಮಾಡಿ ಒಡೆದು ಹೋದ ತನ್ನ ಹೃದಯವನ್ನು ಪುನ ಸಂಪಾದಿಸಲು ನೋಡಲಿರುವರಂತೆ

ಗತಕಾಲದಲ್ಲಿ ಅವರ ಭಾರ್ಯೆಯು ಎಪೆಂಡಿಸೈಟಿಸ್ ಎಂಬ ರೋಗಕ್ಕೆ ತುತ್ತಾಗಿ ... ಕ್ರಿಯೆಯನ್ನು ನಡೆಸಿ ಇಂಗ್ಲಾಂಡಿನಲ್ಲಿ ಕಾಲಾಧೀನರಾಗಿದ್ದರು ಅಂದಿನಿಂದ ಶೋಕಗ್ರಸ್ತರಾದ ಮಹಾರಾಜರ ಮನಸ್ಸು ಸಮಾಧಾನವಾದುದೇ ಇಲ್ಲವಂತೆ ದ್ವೀಪಾಂತರ ವಾಸವನ್ನು ನಡೆಸಿದರೆ ನೆಮ್ಮದಿಯನ್ನು ಪಡೆಯಬಹುದೆಂದು ಮಹಾರಾಜರ ನಂಬುಗೆ ಇರುವುದೆ? ಇಲ್ಲವೆ ೧೦ ೦೦೦ ಪವನುಗಳ ತನಗೆ ಬೇಕಾದ ಶಾಂತಿಯನ್ನು ಒದಗಿಸಬಲ್ಲದೆಂದು ಅವರು ಬಗೆದಿರುವರೆ? ಅಂತು ಅವರಿಗೆ ಶಾಂತಿ ಸಾಧನೆಗಾಗಿ ಹಿಂದೂಸ್ಥಾನದಲ್ಲಿ ಯಾವ ಪ್ರದೇಶವೂ ದೊರಕದೇ ಇದ್ದುದು ಒಹಳ ಶೋಚನೀಯ

ಮಾನ್ಯ ಶ್ರೀ ... ಜಯರವರು

ಮದ... ವಿಧಾನ ಸಭೆಯ (...) ... ಬುಲ ... ವ ... ಪಿನಲಿ ...

### ತ್ರಿಕೇಶಪುರದಲ್ಲಿ ... ಲೀಗು ಪರಿಷತ್ತು

... ಪ್ರಕಾಶ ... ಸಂ... ದಕ ... ಲಿಬಟ ... ನ ಪ್ರೆಸಿಡೆಂಟರ ... ತ್ಯದ ... ಇವರ ... ಪ್ರದದಲ್ಲಿ ನಡೆದ ಮುಸ್ಲಿಂ ಲೀಗಿನ ... ಅಧ್ಯಕ್ಷರಾಗಿ ಭಾರತದ ಸ್ವತಂತ್ರ್ಯದ ಸ... ... ಸೇರು ದಾಗಿ ... ಸ್ಲಿಗ... ಮುಸ್ಲಿ ಲೀಗಿನ ನಡೆ... ಭೇದಭಾವವು ... ಅದ ... ವಿರುದ್ಧ ಭಾವ ... ಅನಾಗರೀಕರಿಂದ ಜನಾಂಗದ ಅಭಿವೃದ್ಧಿಗೆ ... ಸದರಿಯವರ ಕಷ್ಟಗಳನ್ನು ಹಕ್ಕು ...ಗಳನ್ನು ಕಾಪಾಡಿದರೆ ಸಾಕ್ಷವೇ ಈಗ ... ಉದ್ದೇಶವು ನೆರವೇರುವುದು ಅಂತೆಯೇ ಗಾಂಧಿಯವರ ಹರಿಜನೋದ್ಧಾರವು ಆಗಿದೆ ಕಾಂಗ್ರೆಸ್ ಎಂಬ ಸಂಸ್ಥೆಯು ಮುಸಿಮರ ಒಳಿತಕ್ಕೆ ಪರಿಶ್ರಮಿಸದೆ ಇಡೀ ದೇಶದ ಒಳಿತನ್ನೇ ಬಯಸುವದಾಗಿದೆ ಮುಸ್ಲಿಮರ ಕಡೆಯಿಂದ ಹಿಂದಿನ ಕಾಲದ ಚರಿತ್ರೆಯನ್ನ ಕೂಡಾ ಅವಲೋಕಿಸಿದರೆ ಪ್ರತ್ಯೇಕ ... ಹಿಂದರು ... ಸಂಸ್ಥೆಗಳನ್ನ ಏರ್ಪಡಿಸಿ ದೇಶದ ಹಿತಕ್ಕಾಗಿ ಸಾಧಿಸಿದ್ದು ಕಂಡು ಬರುವುದಿಲ್ಲ ಈಗ ಮುಸ್ಲಿಮರು ಕಾಂಗ್ರೆಸ್ಸನ್ನು ದ್ವೇಷಿಸುವುದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ ಮುಸ್ಲಿಂ ಲೀಗಿನ ಕೆಲಸವು ಬರೇ ಮತಭಾವನಲ್ಲ ಹಿಂದೂಗಳ ಅಲ್ಪಸಂಖ್ಯಾತರಾಗಿ ... ದರ ಸ ಪಂಜಾಬ ಬಂಗಾಳದ ಮಾದರಿಯಲ್ಲಿ ಕೊಟ್ಟರು ಮುಸ್ಲಿಮರು ಭಾರತದ ಸ್ವಾತಂತ್ರ್ಯ ರಕ್ಷಣಾ ಕಾರ್ಯದಲಿ ದುಡಿಯಬೇಕಾಗಿದೆ ... ಐಕ್ಯತೆ ... ದ ಎಷ್ಟೊ ಬಾಂಧವರನ್ನ ದಾರಿಗೆ ತರುವ ಪ್ರಯತ್ನಗಳು ಆ ಬಗ್ಗೆ ... ಯುವಕರು ... ಸಂಸ್ಥೆಗಳನ್ನ ... ಪಡಿಸಿ, ತನ್ಮೂಲಕ ದೇಶದ ಸೇವೆ ... ಮಹಮ್ಮದಿ ತತದಿಂದ ಹಿಂದಿ ... ಎಲ್ಲರೂ ಒಂದಾಗಿ ದುಡಿಯಬೇಕು ... ಈ ಪರಿಷತ್ತಿಗೆ ... ಕ... ವಿ ಕಿದ ಜನಸ್ತೋಮವಿತ

### ಸರ್ ಪುಟ್ಟಣ್ಣಚೆಟ್ಟಿಯವರ ನಿರ್ಧಾರ

...ಗಳೆ ... ಸರ್ ... ಪುಟ್ಟಣ್ಣ ಚೆಟ್ಟಿಯವರ ವೀರಶೈವ ವಿದ್ಯಾರ್ಥಿಗಳ ... ಫಿಯ ಪಸ್ವೇ... ವರ ಇದೇ ... ಚೆಟ್ಟಿ ... ಧರ್ಮ ಕಾರ್ಯಗಳಿಗಾಗಿ ಸರ್ ಚಿಟಿಯವರು ದಾನಮಾಡಿದ ಹಣದ ಮೊತ್ತವು ಸುಮಾರು ೪ ಲಕ್ಷದಷ್ಟಿರುವುದ

**Commonwealth**

**Assurance Company, Ltd.,**

**POONA.**

Policies suit to Every PURSE AND POCKET

WANTED ENERGETIC AGENTS

Apply to,

**Gawankar & Sons,**

*Chief Agents.*

163, Gandhi Nagar,

BANGALORE.

# ನೋಟ್ಸ್—Note......s

ಹತ್ತು ದಿನಗಳ ಹಿಂದೆ ಬೆಳಿಗ್ಗಿನ ಜಾವದಲ್ಲಿ ಭೂಕಂಪವಾಯಿತು. ಇದು ಮಧ್ಯ ಹಿಂದುಸ್ಥಾನ ದಾಟಿ ಕಲ್ಕತ್ತೆಕ್ಕೂ ಹಿಮಾಲಯಕ್ಕೂ ತಾಗಿತು. ಹಾನಿಯೇನೂ ಆದುದಿಲ್ಲ ಕೇಳುತ್ತಾರೆ. ಈ ಭೂಕಂಪದ ಫಲವಾಗಿ, ಮೊಹರಮ್-ಹೋಳೀ ಚಳವಳಿಗಳೂ ನಡೆದುವೆ. ಸರಕಾರವು ಎಷ್ಟೋ ಅನುಕೂಲವಾಗಿರುವ ಮೆರವಣಿಗೆಗಳ ಸಮಯ ಸೂಚಿಸಿದರೂ ಮುಸ್ಲಿಮರಿಗೊಲ್ಲದೆ, ಒಂದು ಕಡೆ ಮದುವೆಗಳ ಮೆರವಣಿಗೆಗಳು ಇಡೀ ಮೊಹರಮ್‌ನಲ್ಲೇ ನಡೆಯಗೊಡಬಾರದಾಗಿ ಮುಸ್ಲಿಮರು ತಿಳಿಸಿದುದರಿಂದ, ಸರಕಾರವು ಎಲ್ಲ ಮೆರವಣಿಗೆಗಳನ್ನು ನಿಲ್ಲಿಸಬೇಕಾಗಿ ಬಂದಿದೆ.

○ ○ ○ ○

ಭೂಕಂಪದ ಮತ್ತೊಂದು ಫಲವಾಗಿ,—ಪಂಜಾಬದಲ್ಲಿಯೂ ಕಲ್ಕತ್ತದಲ್ಲಿಯೂ ಮುಸ್ಲಿಮ್ ಮಂತ್ರಿಗಳನ್ನೆ ಇತರ ಮುಸ್ಲಿಮ್ ಸದಸ್ಯರು ಬಿಟ್ಟು ತೊಲಗಿರಬಹುದು. ಇಲ್ಲೀ ಕಾಂಗ್ರೆಸ್ ಪಾರ್ಟಿಗಳೇ ಇತರ ಪಕ್ಷಗಳೊಡನೆ ಹಾಗೆ ನಡೆಯಲು ಅನುಕೂಲವಾದಲ್ಲಿ ಸೇರಿಕೊಂಡು ಹೊಸ ಮಂತ್ರಿಮಂಡಲಗಳೇ ಉಂಟಾಗಬಹುದೆಂಬ ವಿದ್ಯಮಾನಗಳಾಗಿವೆ.

○ ○ ○ ○

ವಿದ್ಯಾಮಂದಿರ-ಶಿಕ್ಷಣದ ಮನೆ—ಎಂಬ ಹೆಸರೇ,—ಮಂದಿರವೆಂಬ ಕೂಡಲೆ ಅದು ಹಿಂದುಗಳ ದೇವಸ್ಥಾನ ಎಂಬರ್ಥ ಸೂಚಿಸುವುದೆಂದೂ ವ್ಯಾಖ್ಯಾನ ಮಾಡಿ—ಮಧ್ಯಪ್ರಾಂತ್ಯದ ಮುಸ್ಲಿಮ ಮೆಂಬರರು ಎಸೆಂಬ್ಲಿಯಲ್ಲಿ ವಾದಿಸಿ ಶಿಕ್ಷಣ ಪ್ರಚಾರವು 6000 ಹಳ್ಳಿಗಳಲ್ಲಿ ಇಲ್ಲದಿದ್ದರೂ ನೂರು ಹಳ್ಳಿಗಳಲ್ಲಾದರೂ ಆಗಬೇಕೆಂದ ಮಂತ್ರಿಗಳಿಗೆ ತಡೆ ಹಾಕಿದರು. ಇದೂ ಆ ಭೂಕಂಪದ ಫಲ. ಪ್ರಚಾರ ಮಂಜೂರಾಗಿದೆ.

○ ○ ○ ○

ಶಹೀದ್‌ಗಂಜ ಚಳವಳಿವು ಸಾಗುತ್ತ 100 ಮಂದಿಗೆ ಮಿಕ್ಕಿ ಜೈಲು ಪಾಲಾದರು. ಇಂತಹ ಸಮಾಧಿಗಳೇ ಮೊದಲಾದುವು ಇದ್ದ ಸ್ಥಳಗಳನ್ನು ಮೂಲಾಧಿಕಾರಿಗಳಿಗೆ ಒಪ್ಪಿಸಬೇಕೆಂಬ ಪಂಜಾಬು ಕೌನ್ಸಿಲಲ್ಲಿ ತಂದ ಮಸೂದೆಯನ್ನು ತಿರಸ್ಕರಿಸುವ ವಿವೇಕವು ಅಲ್ಲಿನ ಮುಸ್ಲಿಮ ಮುಖ್ಯಮಂತ್ರಿಗಳಲ್ಲೇ ಉಂಟಾಗಿ,—ಪ್ರತಿ ಹಿಂದು ಮತಧರ್ಮದ ಎಂದೋ ಒಂದು ಸ್ಥಳದ ಅಧಿಪತ್ಯ ತನ್ನ ಧರ್ಮದ ಪೂಜ್ಯ ಕಲ್ಲಿರಬಹುದೆಂದೂ ದೇಶದಲ್ಲೆಲ್ಲ ವಾದಿಸಿ ರಗಳೆಗೀಡು ಮಾಡುವ ಕಾನೂನನ್ನು ಮಾಡಿಸದಂತೆ ಉತ್ತಮ ಕಾರ್ಯ ಮಾಡಿದರು.

○ ○ ○ ○

ದೇಶದಲ್ಲಿ ಒಕ್ಕಟ್ಟು ತುಂಬ ಇರಬೇಕಾದ ಈ ಕಾಲದಲ್ಲಿ ಕೆಲವರು ಹಲವು ತಂತ್ರಗಳಿಂದ ಹೇಗೂ ಮಾಡಿ ಒಕ್ಕಟ್ಟಾಗದಂತೆ ಸಾಧಿಸಬೇಕೆನ್ನುವುದೂ ಒಂದು ಭೂಕಂಪ. ಆದರೆ ದೈವವಶಾತ್, ಯಾವ ಹಾವಳಿಯೂ ಇದರಿಂದಾಗದಂತೆ ಭಗವಂತನ ಕರುಣೆಯಂತೂ ಇದೆ.

○ ○ ○ ○

ಗಾಂಧೀಜಿಯವರ ಅಹಿಂಸಾ ತತ್ವವನ್ನು ಬ್ರಿಟಿಷ್ ಮುಖ್ಯಮಂತ್ರಿಗಳು ಅಂಗೀಕರಿಸಿರುವರು. ಆಸ್ಟ್ರಿಯಾ ರಾಜ್ಯವನ್ನು ಕ್ಷಣಾರ್ಧದಲ್ಲಿ ಜರ್ಮನಿಯು ಬಗಲಿಗೆ ಕಟ್ಟಿಕೊಂಡದನ್ನು ಕೇಳಿ, ಈ ಮಂತ್ರಿಗಳು ಹಿಂಸೆಗೆ ಕೈಹಚ್ಚುವುದು ಸುಲಭ; ಅದನ್ನು ತಡೆವುದು ತೀರ ವಿವೇಕದ ಕೆಲಸ ಎಂದರು. ತಾನು ಆಸ್ಟ್ರಿಯವನ್ನು ಹಾಗೆ ಅತ್ಯವಸರದಲ್ಲಿ ನುಗ್ಗಿರದಿದ್ದಲ್ಲಿ, ಅತಿ ಹಿಂಸೆಗೆ ಕಾರಣವಾಗುತ್ತಿತ್ತೆಂದು ಹಿಟ್ಲರನ ಮಾತೂ ಇದೆ. ಹೀಗೆ ವಿಲಾಯತಿಯಲ್ಲೆಲ್ಲ ಅಹಿಂಸೆಯೇ ರಾಜತಂತ್ರವಾಗಿರುವುದನ್ನು ಕಂಡರೆ, ಅಹಿಂಸೆಯನ್ನು ಪ್ರತ್ಯಕ್ಷ ಬೋಧಿಸಿರುವ ಗಾಂಧಿಜೀಯವರಿಗೆ ನಿಜವಾಗಿಯೂ ಈ ವರ್ಷ ಶಾಂತಿ ಸಾಧಕರಿಗೆ ಸಲ್ಲಬೇಕಾದ ನೋಬೆಲ್ ಬಹುಮಾನವು ಸಲ್ಲುವುದು ಸಹಜವಲ್ಲವೆ?

○ ○ ○ ○

ಅಹಿಂಸಾ ತತ್ವವನ್ನು ಬ್ರಿಟಿಷ್ ಮಂತ್ರಿಗಳು ಅಂಗೀಕರಿಸಿರುವುದು ನಿಜವಾದರೆ, ಇದುವರೆಗೆ ಒಂದೂವರೆ ಕೋಟಿ ರೂಪಾಯಿ ವ್ಯಯಿಸುತ್ತ, ವಜೀರ್ ಸ್ಥಾನದಲ್ಲಿ ಬಾಂಬು ಗುಂಡು ಚೆಲ್ಲಿ, ಗಡಿನಾಡಿನ ನಮ್ಮ ದರಿದ್ರ ಅಶಿಕ್ಷಿತ ಮುಸ್ಲಿಮ ಬಂಧುಗಳನ್ನು ಹಿಂಸಿಸುವುದನ್ನು ಇನ್ನು ತಡೆಯುವರೇ? ಹಾಗೆ ಮಾಡಿದರೆ, ಪೆಲೆಸ್ತೀನ ಅರಬಸ್ಥಾನಗಳಲ್ಲೂ ಈ ಕೃತ್ಯವನ್ನು ನಿಲ್ಲಿಸಬೇಡವೆ? ಇದರಿಂದ ಎಷ್ಟು ಉಳಿತಾಯವಾಗುವುದು! ಅದನ್ನೆಲ್ಲ, ಜನಾಂಗದ ಅಭಿವೃದ್ಧಿ ಸಾಧಕಕಾರ್ಯಗಳಿಗೆ ವಿನಿಯೋಗಿಸಲು ತುಂಬ ಸೌಕರ್ಯವುಂಟಾಗುವುದಲ್ಲವೆ?

○ ○ ○ ○

ಮುಂದೆ ಅತಿ ಹಿಂಸೆಗೆ ಕಾರಣವೂ ಉಪಯುಕ್ತವೂ ಆಗುವ ಯುದ್ಧಹತ್ಯಾರುಗಳನ್ನು 1600 ಮಿಲ್ಲಿಯ ಪವನು ವ್ಯಯಿಸಿ ಸಿದ್ಧಗೊಳಿಸುವಾಗ, ಅದೆಲ್ಲ ತುಂಬ ಸಿದ್ಧವಾಗುವ ತನಕ ಮಾತ್ರ ಈ ಅಹಿಂಸೆಯ ವ್ರತವೆ? ಸುಧಾಂತ ಜನಾಂಗಗಳ ಮರ್ಜಿಯನ್ನು ಯಾರು ಬಲ್ಲರು?

○ ○ ○ ○

ಸ್ಪೆಯಿನಿನಲ್ಲಿ ಕದನ ಮುಂದೊತ್ತುತ್ತದೆ. ದಂಗೆಗಾರರು ಇನ್ನೂ ಹೋದ ನಗರಗಳನ್ನು ಆಕ್ರಮಿಸುತ್ತ ಗೆಲ್ಲುತ್ತ ಬರುತ್ತಾರೆ. ಸ್ಪೆಯಿನು ಯಾರಿಗೆ ಸೇರಬಹುದು. ಹಿಟ್ಲರನಿಗೋ, ಮುಸ್ಸೊಲಿನಿಗೋ, ಅಥವಾ ಇವರಿಬ್ಬರಿಗೋ? ಅಥವಾ ಫ್ರಾಂಕೋ ಡಿಕ್ಟೇಟರನಾಗುವನೆ? ಈ ಜಗಳದಲ್ಲಿ ತಟಸ್ಥವಾಗಬೇಕಾಗಿ ಇಂಗ್ಲೆಂಡು ಮಾಡಿರುವ ನಿರ್ಧಾರವನ್ನು ತ್ಯಜಿಸುವಂತಿಲ್ಲ. ಆಸ್ಟ್ರಿಯಕ್ಕೆ ಭಾಷೆಕೊಟ್ಟಿದಿಲ್ಲವೆನ್ನುವಂತೆ ಸ್ಪೆಯಿನಿಗೂ ಇಂಗ್ಲೆಂಡು ಯಾವ ಭಾಷೆಯನ್ನು ಕೊಟ್ಟುದಿಲ್ಲ. ಆದರೆ, ಪ್ರಜಾಸತ್ತೆಯೇ ಅಸ್ತಿಭಾರವಾಗಿದ್ದ ಸ್ಪೆಯಿನ್ ಸರಕಾರವು ಸೋತು, ಸ್ಪೆಯಿನು ಇತರರ ಬಾಯಿಗೆ ತುತ್ತಾಗುವುದನ್ನು ನೋಡುವ ತಾಟಸ್ಥ್ಯ ಹೇಗೆ?

---

ಕೆನರಾ ಬೇಂಕ್, ಲಿಮಿಟೆಡ್
ಉಪ್ಪಿನಂಗಡಿ

NOTICE

ಈ ಕೆಳಗೆ ತೋರು ಕಾಣಿಸಿದವರು, ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲಗಳ ಅಸಲು ಬಡ್ಡಿ ಬಾಬ್ತುಗಳನ್ನು ಪಾವತಿ ಮಾಡದೆ ಇರುವುದರಿಂದ ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ

ಸದರೀ ಸಾಲಗಳ ಬಾಬಿನಲ್ಲಿ ಬೇಂಕಿಗೆ ಸಲ್ಲುವ ಅಸಲು ಬಡ್ಡಿ ವಗೈರೆ ಖರ್ಚುಗಳನ್ನು ಸಂಬಂಧಪಟ್ಟವರು ಇದೇ ತಾ. 28-3-'38ನೇ ಸೋಮವಾರದ ಒಳಗೆ ಬೇಂಕಿಗೆ ತೆತ್ತು ಆಧಿನ ನಗಗಳನ್ನು ಬಿಡಿಸಿಕೊಂಡು ಹೋಗುವರೇ ತಪ್ಪಿದ್ದಲ್ಲಿ ಸದರಿ ನಗಗಳನ್ನು ಇದೇ ತಾ. 30—3—'38ನೇ ಬುಧವಾರ ಮಧ್ಯಾಹ್ನ ಘಂಟೆ 2ಕ್ಕೆ ಸದ್ರಿ ಬೇಂಕಿನ ಉಪ್ಪಿನಂಗಡಿ ಶಾಖೆಯಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

1. ಚಿತ್ರೋಡಿ ಅಂತಪ್ಪ ಶೆಟ್ಟಿ—ನಂಬ್ರ 16/37 ಬಹಾ ರೂ. 18—15—9

~~2. ಹರಿಕಾಡಿ ಮುತ್ತ ಸೌತ—ನಂಬ್ರ 56/37~~ ಬಹಾ ರೂ. 16—1—8.

3. ಗೋವಿಂದ ಪಂಡಿತ್—ನಂಬ್ರ 161/37 ಬಹಾ ರೂ. 4—11—10.

4. ನಿತ್ಯಂತಿ ಶೇಷಪ್ಪ ದಾಡಿ—ನಂಬ್ರ 47/36 ಬಹಾ ರೂ. 15—11—11.

5. ಆಜಲೆ ಮೊಗ್ರು ಪೂವ ಕುಂಜ ಗುರು—ನಂಬ್ರ 58/36 ಬಹಾ ರೂ. 14—8—6.

6. ಶೆಟ್ಟಿ ಕೊರಗಪ್ಪ ಕೈ—ನಂಬ್ರ L 56/37 ಬಹಾ ರೂ. 76—9—5.

Canara Bank Ltd. Uppinangady, 20-3-37. | S. Santaram Rao, Agent.

# ★ ಜನರಲ್ ಫ್ರೆಂಕೋ-ವಿರೋಧಿ ★ ಪೆಸ್‌ನೇರಿಯಾ.

ಸ್ಪೈನ್‌ದೇಶದಲ್ಲಿ ಈಗ್ಗೆ ಒಂದೆರಡು ವರ್ಷಗಳಿಂದ ದೊಡ್ಡದೊಂದು ಅಂತಃಕಲಹವು ನಡೆಯುತ್ತಿರುವುದು ಎಲ್ಲರಿಗೂ ತಿಳಿದಿದ್ದ ಸಂಗತಿಯಾಗಿದೆ. ನ್ಯಾಯವಾಗಿ ಸ್ಥಾಪಿತವಾಗಿರುವ ಪ್ರಜಾತಂತ್ರ ಸ್ಪೈನ್ ಸರಕಾರವನ್ನು ತಲೆಕೆಳಗೆ ಮಾಡಿ, ಅಲ್ಲಿ ಫೆಸಿಸ್ಟ ಸರಕಾರ ಕ್ರಮವನ್ನು ಜ್ಯಾರಿಗೆ ತರಬೇಕೆಂದು ಜನರಲ್ ಫ್ರೆಂಕೋ ದೊಡ್ಡ ಭಂಡಾಯವನ್ನೆಬ್ಬಿಸಿದ್ದಾನೆ. ಅವನಿಗೆ ಹಿಟ್ಲರ ಮುಸಲೋನಿಗಳ ಸಹಾಯ ಬೆಂಬಲಗಳು ಇರುವುದರಿಂದ ಬಂಡಾಯ ಕಾಡ್ಗಿಚ್ಚು ಇಡೀ ಸ್ಪೈನಿನಲ್ಲಿ ಹರಡಿದೆ. ಆದರೂ ಕೂಡ ಸ್ಪೈನ್ ಜನಸಾಮಾನ್ಯರ ಪ್ರೀತಿ ಒಲವುಗಳನ್ನು ಸಂಪಾದಿಸಿದ ಪ್ರಜಾತಂತ್ರ ಸರಕಾರವು ಬಂಡಾಯವನ್ನು ಅಡಗಿಸಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡುತ್ತಲಿದೆ.

ಸ್ಪೈನಿನ ಈ ಅಂತಃಕಲಹದಲ್ಲಿ ಅಲ್ಲಿಯ ಸ್ತ್ರೀಜಾತಿಯನ್ನು ಬಂಡಾಯಗಾರರ ವಿರುದ್ಧ ಎತ್ತಿಕಟ್ಟಿದ ದಿಗಂತ ವ್ಯಾಪ್ತ ಶ್ರೇಯಸ್ಸು ಪೆಸನೇರಿಯಳಿಗೆ ಸೇರಿದೆ. ಈ ಸ್ಪೈನ್ ವೀರ ರಮಣಿಯು, ಸ್ಪೈನದ ಮಹಿಳೆಯರಲ್ಲಿ ವೀರೋತ್ಸಾಹವನ್ನು ತುಂಬಿಸಿ, ಅವರನ್ನು ಸ್ಪೈನ್ ಪ್ರಜಾತಂತ್ರ ಸರಕಾರದ ಪರವಾಗಿ ಯುದ್ಧರಂಗಕ್ಕೆ ಕಳುಹಿಸಿಕೊಟ್ಟಿರುವದು ಮಾತ್ರವಲ್ಲದೆ ತಾನೂ ರಣಕ್ಷೇತ್ರಕ್ಕೆ ಹೋಗಿ ಹಗಲಿರುಳು ದುಡಿದು ಸ್ಪೈನ್ ದೇಶದಲ್ಲಿ ಹುಟ್ಟಿದ ಋಣವನ್ನು ತೀರಿಸುತ್ತಿದ್ದಾಳೆ. ಅವಳ ಶೌರ್ಯ, ಧೈರ್ಯ, ವೀರತೆ ಸಾಹಸಗಳನ್ನು ನೋಡಿ ಪುರುಷರು ಕೂಡ ಹುಬ್ಬೇರಿಸಿ ಕಚ್ಚಿರುವರು. ಫ್ರೆಂಕೋವಿನ ಪ್ರಬಲವಿರೋಧಿ— ಸ್ಪೈನ್ ದೇಶದ ಜೋನ್ ಆಫ್ ಆರ್ಕ್ ಎಂಬೀ ಕೀರ್ತಿಗೆ ಪಾತ್ರಳಾದ ಪೆಸನೇರಿಯಳ ಹೆಸರು ಈಗ ಸ್ಪೈನಿನಲ್ಲಿ ಸರ್ವತ್ರ ಹರಡಿರುವದು.

## ಅವಳು ಯಾರು?

ಪೆಸನೇರಿಯಳ ನಿಜವಾದ ಹೆಸರು ಇದಲ್ಸಿ ಡೊಲೊರೆಸ್ ಇಬಾರುರಿ ಎಂದು ಅವಳನ್ನು ಕರೆಯುತ್ತಿದ್ದರು. ಬಾಲ್ಯದಲ್ಲಿ ಪೆಸನೇರಿಯಳು ಡೊಲೊರೆಸ್ ಎಂಬ ಹೆಸರಿನಿಂದಲೇ ಪ್ರಖ್ಯಾತಳಾಗಿದ್ದಳು. ತಂದೆತಾಯಿಗಳು ಬಡ ಕೈತರು. ಆದ್ದರಿಂದ ಬಾಲ್ಯದಲ್ಲಿಯೇ ಅವಳನ್ನು ಗಣಿಗಳಲ್ಲಿ ಕೆಲಸಮಾಡಿಕೊಂಡಿದ್ದ ಒಬ್ಬ ಶ್ರಮಜೀವಿಗೆ ಮದುವೆಮಾಡಿಕೊಟ್ಟರು. ಆದರೆ, ಆ ಶ್ರಮಜೀವಿಯು ಶಿಕ್ಷಿತನಾಗಿದ್ದನು. ಸಮಾಜವಾದದ ಕಡೆಗೆ ಅವನ ಮನಸ್ಸು ಒಲಿದಿತ್ತು. ಅವನು ಸಭೆ ಸಮಾಜಗಳಿಗೆ ತಾನು ಹೋಗುವಾಗ ಆಕೆಯನ್ನೂ ಕರೆದುಕೊಂಡು ಹೋಗುತ್ತಿದ್ದನು. ಪತ್ರಪತ್ರಿಕೆಗಳನ್ನು ಓದಿ ಹೇಳಿ ಆಕೆಗೆ ಪ್ರಚಲಿತ ವಿಷಯಗಳನ್ನು ತಿಳಿಸಿಕೊಡುತ್ತಿದ್ದನು. ಮಾತ್ರವಲ್ಲ ಅವಳು ಸ್ವತಂತ್ರವಾಗಿ ಪ್ರತಿಯೊಂದು ಸಂಗತಿಯನ್ನು ವಿಚಾರಿಸಿ, ಒಂದು ನಿರ್ಧಾರಕ್ಕೆ ಬರುವಂತೆ ಕೂಡಾ ಆಕೆಯನ್ನು ಪ್ರೇರೇಪಿಸುತ್ತಿದ್ದನು. ಆದಕಾರಣ ಒಬ್ಬ ಬಡ ಕೈತನ ಮನೆಯಲ್ಲಿ ಹುಟ್ಟಿ, ಒಬ್ಬ ಶ್ರಮಜೀವಿಯ ಕೈಹಿಡಿದಿದ್ದಳಾದರೂ, ದೇಶದ ಮುಂದಾಳಾಗಿ ~~ಕೆಲಸಮಾಡಲಿಕ್ಕೆ ಅವಳು ಯೋಗ್ಯತೆಯನ್ನು~~ ಸಂಪಾದಿಸಿದ್ದಳು.

## ಕಾರ್ಯಕ್ಷೇತ್ರಕ್ಕೆ ಪ್ರವೇಶ.

ಸ್ವಲ್ಪ ಸಮಯದಲ್ಲಿಯೇ ಅವಳು ರಷ್ಯಕ್ಕೆ ಹೋದಳು. ಅಲ್ಲಿ ಅವಳ ಕಣ್ಣುಗಳು ತೆರೆದುವು. ಪ್ರಪಂಚದ ಇತರ ಭಾಗಗಳಿಗೂ ರಷ್ಯಕ್ಕೂ ನರಕಸ್ವರ್ಗದ ಅಂತರವು ಇರುವದನ್ನು ಅವಳು ಕಂಡಳು. ಸಮಾಜವಾದದ ಮೂಲಕವೇ ಸ್ತ್ರೀಜಾತಿಯು ಉದ್ಧಾರವಾಗಬೇಕೆಂಬುದು ಅವಳಿಗೆ ಮೊಸ್ಕೋ ನಗರದಲ್ಲಿ ಗೊತ್ತಾಯಿತು. ರಷ್ಯದ ಮಹಿಳೆಯರ ಕಾರ್ಯ ಮತ್ತು ಜೀವನಕ್ರಮದ ಅಧ್ಯಯನ ಮಾಡಿ, ರಷ್ಯದ ಮಹಿಳೆಯರ ಅನುಕರಣದಿಂದಲೇ ಸ್ಪೈನಿಶ್ ಮಹಿಳೆಯರ ಉನ್ನತಿಯಾಗುವುದೆಂಬುದನ್ನು ಮನಗಂಡಳು. ಮತ್ತು ಸ್ಪೈನ್ ಜನತೆಯ ಜೀವನಕ್ರಮವನ್ನು ತಿದ್ದಿ ಸುಧಾರಿಸುವ ಕಾರ್ಯದ ವೀಳೆಯನ್ನು ತೆಗೆದುಕೊಂಡು ಅವಳು ಪುನಃ ಸ್ಪೆಯಿನಿಗೆ ಹಿಂತಿರುಗಿದಳು. ಆಗಿನಿಂದ ಅವಳು ದೇಶಕ್ಕೆ ಭಾರಸ್ವರೂಪವಾದ ರಾಜತಂತ್ರವನ್ನು ಮುರಿದು ಪ್ರಜಾತಂತ್ರವನ್ನು ಸ್ಥಾಪಿಸಲಿಕ್ಕೆ ಬದ್ಧಕಂಕಣಳಾದಳು. ಪರಿಣಾಮ—ರಾಜದ್ರೋಹಿ ಎಂದುಕೊಂಡು ಅವಳು ಆಗಿನ ರಾಜತಂತ್ರ ನಿರಂಕುಶಸರಕಾರದ ಅಧಿಕಾರಿಗಳ ಕೈಯಿಂದ ಅಸಹನೀಯವಾದ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಿತು. ಪೆಸನೇರಿಯಳ ಶರೀರವು ಬಂಧಿಸಲ್ಪಟ್ಟು ಜೈಲು ಕೋಣೆಗಳಲ್ಲಿ ಕೊಳೆಯುತಿತ್ತು. ಆದರೆ ಅವಳ ಆತ್ಮವು ಮಾತ್ರ ಸ್ವತಂತ್ರಲೋಕದಲ್ಲಿ ವಿಹರಿಸುತ್ತಿರುವುದನ್ನು ತಪ್ಪಿಸಲಿಕ್ಕೆ ಯಾವ ಸಮರ್ಥ ಅಧಿಕಾರಿಗೂ ಸಾಧ್ಯವಾಗಲಿಲ್ಲ.

## ಸಫಲತೆ—ಯಶಸ್ಸು.

ಪೆಸನೇರಿಯಳ ಭಗೀರಥ ಪ್ರಯತ್ನಗಳು ಮೆಲ್ಲಮೆಲ್ಲಗೆ ಸಫಲವಾಗತೊಡಗಿದುವು. ಸಮಾಜವಾದದ ಪ್ರಚಾರವು ಸ್ಪೈನಿನಲ್ಲಿ ಸರ್ವತ್ರ ಆಗತೊಡಗಿತು. ರಾಜತಂತ್ರವು ಸಮಾಪ್ತಿಯಾಗಿ ಅಲ್ಫನ್ಸೊ ದೊರೆ ರಾಜ್ಯಬಿಟ್ಟು ಪಲಾಯನಮಾಡಿದನು. ಸ್ಪೈನಿನಲ್ಲಿ ಪ್ರಜಾತಂತ್ರ ಸಮಾಜವಾದಿ ಸರಕಾರದ ಸ್ಥಾಪನೆಯಾಯಿತು. ಓವಿಡೋ ಪಟ್ಟಣದ ಮತದಾರರ ಕಡೆಯಿಂದ ಪೆಸನೇರಿಯಾ, ಸ್ಪೈನ್ ಪಾರ್ಲಿಮೆಂಟಿನ ಸದಸ್ಯೆಯಾಗಿ ಆರಿಸಲ್ಪಟ್ಟಳು. ಪೆಸನೇರಿಯಳ ಹೆಸರು ಕೀರ್ತಿಗಳು ದಿಗಂತವ್ಯಾಪ್ತವಾದುವು.

## ಸರಕಾರಕ್ಕೆ ಸಹಾಯ.

ಹೀಗೆಯೇ ಕೆಲವು ವರ್ಷಗಳು ಸಂದುಹೋದುವು. ಸ್ಪೈನದೇಶವು ಶಾಂತಿ, ಸಮಾಧಾನ, ಸುಖಸಂತೋಷಗಳ ತವರುನಾಡಾಗಿ ಮೆರೆಯುತಿತ್ತು. ಆದರೆ, ದುರ್ಭಾಗ್ಯದಿಂದ ಹಿಟ್ಲರ ಮುಸಲೋನಿಯರ ಲೋಭದೃಷ್ಟಿಯು ಸ್ಪೈನಿನ ಮೇಲೆ ಬಿದ್ದಿತು. ಅವರ ದೃಷ್ಟಿ ನಕ್ಕಾದುದೇ ತಡ, ಜನರಲ್ ಫ್ರೆಂಕೊ, ಅಫ್ರಿಕದ ಮೂರರ ಸಹಾಯದಿಂದ ಪ್ರಜಾತಂತ್ರ ಸರಕಾರದ ವಿರುದ್ಧ ಭಂಡಾಯಮಾಡಿದನು. ಅವನಿಗೆ ಪ್ರತ್ಯಕ್ಷ ಅಪ್ರತ್ಯಕ್ಷ ಉಪಾಯಗಳಿಂದ ಹಿಟ್ಲರ ಮುಸಲೋನಿಯರು ಸೈನ್ಯಸರಂಜಾಮುಗಳನ್ನು ಒದಗಿಸಿಕೊಡತೊಡಗಿದರು. ದ್ರವ್ಯಾಭಾವವು ಸ್ಪೈನ್ ಪ್ರಜಾತಂತ್ರ ಸರಕಾರವನ್ನು ಬಹಳವಾಗಿ ಪೀಡಿಸತೊಡಗಿತು. ಪೆಸನೇರಿಯಾ ಫ್ರಾನ್ಸದೇಶದ ಪ್ರತಿಯೊಂದು ಊರುಕೇರಿ ಮನೆಮಠಕ್ಕೆ ಹೋಗಿ ವಂತಿಗೆ ಎತ್ತಿಕೊಂಡು ಸರಕಾರಕ್ಕೆ ಬಹುದೊಡ್ಡ ಆರ್ಥಿಕ ಸಹಾಯವನ್ನು ಕಳುಹಿಸಿಕೊಟ್ಟಳು.

ವಿದ್ರೋಹಿಗಳ ಪ್ರಬಲ ಆಕ್ರಮಣಗಳಿಂದ ಸರಕಾರಿ ಸೇನೆಯು ಹತಾಶವಾಗಿ ರಣಾಂಗಣಕ್ಕೆ ಬೆನ್ನುತೋರಿಸಿದದಾಗಲೆಲ್ಲ ಪೆಸೇರಿಯು ಸ್ವತಹ ರಣಕ್ಷೇತ್ರಕ್ಕೆ ಹೋಗಿ ಸೈನಿಕನ್ನು ಕಾಯೋತ್ಸಾಹದಿಂದ ಹುರಿದುಂಬಿಸುತ್ತಿದ್ದಳು. ಜನತೆಯು ಸರಕಾರಕ್ಕೆ ತನುಮನಧನಗಳಿಂದ ಸಹಾಯಮಾಡುವಂತೆ ಅನ್ನು ಪ್ರೇರೇಪಿಸುತ್ತಿದ್ದಳು. ಇವಳ ಈ ಬಗೆಯ ಅಪ್ರತಿಮ ವಿರೋತ್ಸಾಹಗಳಿಂದಲೇ ಬಂಡಾಯಗಾರರ ಬೇಳೆಯು ಸ್ಪೈನಿನಲ್ಲಿ ಇದುವರೆ ಬೇಯದಂತಾಗಿರುವದು. ಇಲ್ಲವಾದರೆ ಸ್ಪೆಯಿನಿನ ಪ್ರಜಾತಂತ್ರ ಸಮಾಜವಾದಿ ಸರಕಾರವು ಎಂದೋ ಮಣ್ಣುಗೂಡಿ ಹೋಗುತಿತ್ತು.

ಪೆಸನೇರಿಯ ಸಮಾಜವಾದದ ಪ್ರತಿಮೂರ್ತಿ ಆಗಿದ್ದಳೆ. ಅವಳು ಮಹಾ ವಾಗ್ಮಿ.

# ಜಮೀನು-ಭೂಮಿ ಯಾರಿಗಾಗಬೇಕು?

ದೇಶದ ಬೆನ್ನೆಲುಬಿನಂತೆ ಇರುವ ಗ್ರಾಮಗಳ ಅರ್ಥಾತ್, ಗ್ರಾಮೀಣ ಜನರ ಉದ್ಧಾರದ ಮಹತ್ವಪೂರ್ಣ ಪ್ರಶ್ನೆಯು ಈಗ ರಾಷ್ಟ್ರ ಮತ್ತು ಸರಕಾರದ ಮುಂದೆ ಇರುತ್ತದೆ. ಗ್ರಾಮೀಣ ಜನರ ಉದ್ಧಾರವಾಗುವದು ಅಂದರೆ–ಅವರ ಜೀವನ ಕ್ರಮದಲ್ಲಿ ಸುಧಾರಣೆ, ದಾಸಮನೋವೃತ್ತಿಗೆ ತಿಲಾಂಜಲಿ, ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ, ಮೊದಲಾದ ನಾಗರೀಕ ಲಕ್ಷಣಗಳು ಮೂಡಿ ಬರುವದು–ಇವೆಲ್ಲಾ ಆಗಬೇಕಾದರೆ ಅವರ ಸಾಂಪತ್ತಿಕ ಅಭಿವೃದ್ಧಿಯಾಗುವದು ಅತ್ಯಂತಾವಶ್ಯಕವಾಗಿದೆ. ಗ್ರಾಮಗಳ ಜನರ ಪ್ರಧಾನವೃತ್ತಿಯು ಕೃಷಿ ಆಗಿರುವ ಕಾರಣ, ನವೀನ ವೈಜ್ಞಾನಿಕ ಕೃಷಿಕ್ರಮವನ್ನು ಅನುಸರಿಸುವದರಿಂದಲೂ, ಅದಕ್ಕಾಗಿ ಅವರು ಬಿಡು ಸಮಯದಲ್ಲಿ ನೂಲುವದು, ನೇಯುವದು ಇತ್ಯಾದಿ ಉಪವೃತ್ತಿಗಳನ್ನು ಆಶ್ರಯಿಸುವದರಿಂದಲೂ ಗ್ರಾಮಗಳ ಜನರ ಸಾಂಪತ್ತಿಕ ಅಭಿವೃದ್ಧಿಯಾಗಿ ಅವರ ಕಷ್ಟದಾರಿದ್ರ್ಯಗಳು ದೂರವಾಗುವವೆಂದು ಹೇಳುವ ಜನರಿದ್ದಾರೆ. ಆದರೆ ತಾವು ಉತ್ತುಬಿತ್ತಿ ಬೆಳೆಮಾಡಿಕೊಂಡು ಬರುವ ಜಮೀನು ಭೂಮಿಯಲ್ಲಿ ಗ್ರಾಮಗಳ ಜನರಿಗೆ ಮೊದಲಿನಿಂದಲೂ ನ್ಯಾಯವಾಗಿ ಪ್ರಾಪ್ತವಾಗಿದ್ದ ಹಕ್ಕು ಅಧಿಕಾರಗಳು ಈಗ ಅವರಿಗೆ ಪುನಃ ಪ್ರಾಪ್ತವಾಗದ ಹೊರತು, ಈ ಬರೀ ಕೆಲವು ಸುಧಾರಣೆಗಳಿಂದ ಮಾತ್ರ ಅವರ ಉದ್ಧಾರವಾಗುವದೆಂದು ಹೇಳಲಿಕ್ಕಾಗುವದಿಲ್ಲ. ಹೀಗೆ ಮಾಡುವದು–ರೋಗದ ಮೂಲಕಾರಣವನ್ನು ತಿಳಿದು ಅದನ್ನು ದೂರಮಾಡಲಿಕ್ಕೆ ಪ್ರಯತ್ನಿಸದೆ, ಮೇಲಿಂದ ಮೇಲೆ ಔಷಧಿ ತೆಗೆದುಕೊಂಡು ಆ ರೋಗವನ್ನು ಶರೀರದಲ್ಲೇ ಅಡಗಿಸಿ ಇಟ್ಟಂತೆ ಆಗಿರುತ್ತದೆ. ಆ ಸಂದರ್ಭದಲ್ಲಿ ಆ ರೋಗವು ಒಂದಲ್ಲ ಒಂದು ರೂಪದಲ್ಲಿ ಹೊರಗೆ ಕಾಣಿಸಿಕೊಂಡು ಶರೀರವನ್ನು ಪೀಡಿಸುವಂತೆಯೇ, ಗ್ರಾಮಗಳ ಜನರ ಕಷ್ಟದಾರಿದ್ರ್ಯಗಳು ಒಂದಲ್ಲ ಒಂದು ರೂಪದಿಂದ ಅವರನ್ನು ಆಶ್ರಯಿಸಿಕೊಂಡೇ ಇರುವವು.

ಗ್ರಾಮಗಳ ಜನರಿಗೆ ತಮ್ಮ ಭೂಮಿಯಲ್ಲಿ ಮೊದಲು ಇದ್ದ ಹಕ್ಕು ಅಧಿಕಾರಗಳು ಯಾವುವು? ಈಗ ಅವರು ಅಂಥ ಯಾವ ಹಕ್ಕು ಅಧಿಕಾರಗಳಿಂದ ವಂಚಿತರಾಗಿದ್ದಾರೆ? ಎಂಬುದನ್ನು ಗೊತ್ತು ಹಚ್ಚುವ ಮೊದಲು ಅವರ ವರ್ತಮಾನ ಸ್ಥಿತಿಗತಿಗಳನ್ನು ನಾವು ತಿಳಿಯುವದು ಅಗತ್ಯವಾಗಿದೆ. ಭೂಮಿಯನ್ನು ಉತ್ತುಬಿತ್ತಿ ಬೆಳೆಮಾಡಿದ ಯಾರು ಉತ್ತಮೋತ್ತಮ ಭೋಜ್ಯ ಪದಾರ್ಥಗಳನ್ನು ತಿಂದಿರಬೇಕಾಗಿತ್ತೋ ಆ ಗ್ರಾಮೀಣ ಜನರು ಭಿಕ್ಷಾನ್ನದಿಂದ ಜೀವಿಸುತ್ತಿದ್ದಾರೆ. ಯಾರು ಉಡಿಗೆ ತೊಡಿಗೆಗಳಿಗೆ ಬೇಕಾದ ಹತ್ತಿನಾರುಗಳನ್ನು ಬೆಳೆಸಿಕೊಡುತ್ತಾರೋ, ಆ ಗ್ರಾಮಗಳ ಜನರು ಒಂದು ತುಂಡು ಲಂಗೋಟಿಗೂ ಗತಿ ಇಲ್ಲದವರಾಗಿ ಗಾಳಿಮಳೆ ಚಳಿಬಿಸಿಲುಗಳಿಗೆ ಮೈಯೊಡ್ಡಿಕೊಂಡು ನಾನಾ ವಿಧದ ರೋಗರುಜೆಗಳಿಂದ ನರಳುತ್ತಿದ್ದಾರೆ. ಯಾರ ಪರಿಶ್ರಮದಿಂದ ದೊಡ್ಡ ದೊಡ್ಡ ಮನೆಮಠಗಳು ಕಟ್ಟಲ್ಪಡುತ್ತಿವೆಯೋ, ಅವರೇ ಜನರು ಸ್ವತಹ ಹರಕು ಮುರುಕು ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ. ಹೀಗೆಲ್ಲ ಯಾಕಾಯಿತು? ಅಂದರೆ ಗ್ರಾಮಗಳ ಜನರಿಗೆ ಅವರ ಪರಿಶ್ರಮದ ಪೂರ್ಣ ಫಲವನ್ನು ಉಣ್ಣುವ ಹಕ್ಕು ಅಧಿಕಾರಗಳು ಇರುವದಲ್ಲ. ಅವರ ಬಾಯಿತನಕ ಬಂದ ಗ್ರಾಸವನ್ನು ಬೇರೆಯೇ ಜನರು ತಮ್ಮ ತಂತ್ರಮಂತ್ರ, ಮಾಟಮೋಡಿಗಳಿಂದ ತಾವೇ ಕಿತ್ತುಕೊಂಡು ನುಂಗುತ್ತಿದ್ದಾರೆ. ಜಮೀನುದಾರಿ ಭೂಮಾಲಕ ಪದ್ಧತಿಗಳಿಂದಾಗಿ ಗ್ರಾಮಗಳ ಜನರು ಈ ಎಲ್ಲ ಕಷ್ಟದಾರಿದ್ರ್ಯಗಳಿಗೆ ತಲೆಕೊಡಬೇಕಾಗಿ ಬಂದಿದೆ. ಅನ್ನ ಬಟ್ಟೆ ಮನೆಮಠಗಳನ್ನು ಒದಗಿಸಿಕೊಡುವ ಗ್ರಾಮಗಳ ಆ ಜನರೇ ಅನ್ನ, ಬಟ್ಟೆ, ಮನೆಮಠಗಳಿಂದ ವಂಚಿತರಾಗಿ ಇರಬೇಕಾಗಿದೆ. ಮುಂದೆಯೂ ಅವರ ಇದೇ ಸ್ಥಿತಿ ಇರುವದಾದರೆ, ಬರೀ ವೈಜ್ಞಾನಿಕ ಕೃಷಿಕ್ರಮವನ್ನು ಅನುಸರಿಸಿದ ಅಥವಾ ಗ್ರಾಮೋದ್ಯೋಗಗಳನ್ನು ಅವಲಂಬಿಸಿದ ಮಾತ್ರದಿಂದ ಏನಾದಂತಾದೀತು? ಅದರ ಪ್ರಯೋಜನವು ಗ್ರಾಮಗಳ ಆ ಜನರಿಗೆ ದೊರೆಯದೆ, ಕೇವಲ ಅವರನ್ನು ಆಳುವ ಜಮೀನುದಾರರು ಮತ್ತು ಭೂಮಾಲಕರಿಗೆ ದೊರೆಕಂತಾಗುವದು. ಆದ್ದರಿಂದ ಗ್ರಾಮಗಳ ಉದ್ಧಾರವಾಗಬೇಕಾದರೆ, ಗ್ರಾಮಗಳ ಜನರು ವೈಜ್ಞಾನಿಕ ಕೃಷಿಕ್ರಮವನ್ನು ಅವಲಂಬಿಸುವದರೊಂದಿಗೆ, ಅವರಿಂದ ಜಮೀನುದಾರ–ಭೂಮಾಲಕರು ಕಿತ್ತುಕೊಂಡ ಹಕ್ಕು ಅಧಿಕಾರಗಳನ್ನು ಅವರು ಪುನಃ ಪಡೆಯುವದು ಅಗತ್ಯವಾಗಿದೆ, ಗ್ರಾಮಗಳ ಜನರ ಪರಿಶ್ರಮದ ಫಲವು ಪೂರ್ಣವಾಗಿ ಅವರಿಗೆ ದೊರೆಯಬೇಕಾಗಿದೆ.

ಗ್ರಾಮಗಳ ಜನರ ಹಕ್ಕು ಅಧಿಕಾರಗಳು ಅವರಿಗೆ ಪ್ರಾಪ್ತವಾಗಬೇಕೆಂದರೆ, ಏನಾಗಬೇಕಾದ ಹಾಗಾಯಿತು? ಯಾರ, ಯಾವ ಭೂಮಿಯನ್ನು ಉತ್ತು ಬಿತ್ತಿ ಬೆಳೆಮಾಡುತ್ತಿರೋ, ಅವರು ಆ ಭೂಮಿಯ ಮಾಲಕರಾಗಿರಬೇಕು. ಬಂಜರು ಭೂಮಿಯನ್ನು ಬೆಳೆ ಮಾಡುವಾಗ, ಏನೂ ಲಾಭವಾಗದ ಸಂದರ್ಭದಲ್ಲಿ ಆ ಭೂಮಿಯ ಮೇಲೆ ಯಾವದೇ ತರದ ಕರಕಂದಾಯ ಗೇಣಿ ಬಾಡಿಗೆಗಳು ಇರಕೂಡದು. ಪ್ರತಿಯೊಬ್ಬ ಗ್ರಾಮಸ್ಥನಿಗೆ ಅವನ ಜೀವನೋಪಾಯಕ್ಕೆ ಬೇಕಾದಷ್ಟು ಉತ್ಪತ್ತಿ ಇರುವ ಜಮೀನು ಭೂಮಿ ಆಯಾ ಗ್ರಾಮದಲ್ಲಿ ಇರಬೇಕು. ಅಷ್ಟು ಜಮೀನ ಭೂಮಿ ಯಾವ ಕಾರಣದಿಂದಲೂ ಪರಾಭಾರೆಯಾಗತಕ್ಕದ್ದೇ. ಭೂಮಿ ಸಂಬಂಧವಾದ ಕಾಯದೆ ಕಾನೂನುಗಳು ಕೇವಲ ಅದನ್ನು ಉತ್ತು ಬಿತ್ತಿ ಬೆಳೆಮಾಡುವ ಗ್ರಾಮಸ್ಥರ ಹಿತದೃಷ್ಟಿಯಿಂದ ಆಗಬೇಕು.

ಗ್ರಾಮಗಳ ಜನರ ರಾಷ್ಟ್ರ ಮತ್ತು ಸರಕಾರದ ವ್ಯಕ್ತಿಗಳು ಇಷ್ಟರವರೆಗೆ ಈ ಎಲ್ಲಾ ಅಧಿಕಾರಗಳನ್ನು ಅವರಿಗೆ ಕೊಟ್ಟಿದ್ದಾದರೆ, ಮತ್ತೆ ನಮ್ಮ ದೇಶದಲ್ಲಿ ಜಮೀನುದಾರಿ–ಭೂಮಾಲಿಕ ಪದ್ಧತಿಯನ್ನು ನಾಶಮಾಡಿದಂತೆಯೇ ಸರಿ. ಆದರೆ ಇದಕ್ಕಾಗಿ ದುಃಖಿಸಬೇಕೇಕೆ? ನ್ಯಾಯದೃಷ್ಟಿಯಿಂದ ಒಬ್ಬನದಾದ ಒಂದು ವಸ್ತುವನ್ನು ಇನ್ನೊಬ್ಬನು ಅಪಹರಿಸಿ, ಅಥವಾ ಇತರ ಕಾರಣಗಳಿಂದ ತಾನು ಇಟ್ಟುಕೊಂಡಿದ್ದನಾದರೆ ಅದನ್ನು ಆ ಮೊದಲಿಗನಿಗೆ ಕೊಟ್ಟುಬಿಡುವದು ಕರ್ತವ್ಯವೂ ಧರ್ಮವೂ ಆಗಿರುತ್ತದೆ. ಹೀಗೆಯೇ ಗ್ರಾಮಸ್ಥರಿಗೆ ತಾವು ಉತ್ತು ಬಿತ್ತಿ ಬೆಳೆಮಾಡುವ ಭೂಮಿಯ ಮೇಲಿರುವ ಹಕ್ಕು ಅಧಿಕಾರಗಳನ್ನು ಜಮೀನುದಾರ ಭೂಮಾಲಕರಿಂದ ಅವರಿಗೆ ಕೊಡಿಸುವದು, ಅಥವಾ ಗ್ರಾಮಗಳ ಆ ಜನರು ಪಡಕೊಳ್ಳುವದು ನ್ಯಾಯಕ್ಕೂ ನೀತಿಗೂ ಅನುಕೂಲವಾಗಿರುವದು. ಪರಂತು ಇದರಲ್ಲಿ ಒಂದು ಮಾತನ್ನು ವಿಚಾರಿಸಬೇಕಾಗಿದೆ–ಏನೆಂದರೆ, ಗ್ರಾಮಗಳ ಜನರಿಗೆ ಈ ಹಕ್ಕು ಅಧಿಕಾರಗಳು ಯಾವ ಸಮಯದಲ್ಲಿಯಾದರೂ ಪ್ರಾಪ್ತವಾಗಿದ್ದುವೆ, ಹೇಗೆ? ಪ್ರಾಪ್ತವಾಗಿ ಇರಲಿಲ್ಲವಾದರೆ, ಅವರಿಗೆ ಆ ಹಕ್ಕು ಅಧಿಕಾರಗಳನ್ನು ಪಡೆಯುವ ಅಧಿಕಾರವು ಈಗೆಂದೂ ಬರತಕ್ಕದ್ದಲ್ಲ. ಈಗ ಅದೇನೆಂದು ನೋಡೋಣ!

ಇತಿಹಾಸ ಪುರಾಣ ಗ್ರಂಥಗಳನ್ನು ನೋಡಿದರೂ. ಅವಕ್ಕೂ ಮೊದಲಿನ ಶ್ರುತಿಸ್ಮೃತಿಗಳನ್ನು ಪರಿಶೀಲಿಸಿದರೂ, ನಮ್ಮ ದೇಶದಲ್ಲಿ ಜನರಿಗೆ ತಾವು ಉತ್ತು ಬಿತ್ತಿ ಬೆಳೆಮಾಡುವ ಭೂಮಿಯ ಮೇಲೆ ಈ ಅಧಿಕಾರಗಳು ಮೊದಲಿಂದಲೂ ಇದ್ದ ಹಾಗೆ ಕಂಡುಬರುತ್ತದೆ. ಕೃಷಿಕರಿಗೆ ರಕ್ಷಣೆ ಕೊಡುವದು ತಮ್ಮ ಧರ್ಮ ಮತ್ತು ಕರ್ತವ್ಯವೆಂದು ಪ್ರಾಚೀನ ಕಾಲದ ಅರಸರು ತಿಳಕೊಂಡಿದ್ದರು. ರಾಜನು ಜನರಿಗೆ ಕೊಡುವ ರಕ್ಷಣೆಯ ಪ್ರತಿಫಲವಾಗಿ ಜನರು 'ಬಲಿ' ಎಂಬ ಕರವನ್ನು ಕೊಡುವ ಪದ್ಧತಿಯು ಆ ಕಾಲದಲ್ಲಿತ್ತು. ಹೊರತು, ಕಂದಾಯವನ್ನು ವಸೂಲು ಮಾಡುವ ಅಧಿಕಾರವು ಅರಸರಿಗಿರಲಿಲ್ಲ. ಇದರ ಮೇಲಿಂದ–ಆ ಕಾಲದ ಅರಸರಿಗೆ ಭೂಮಿಯ ಮೇಲೆ ಅಧಿಕಾರವಿದ್ದಿರಲಿಲ್ಲ, ಆ ಅಧಿಕಾರವು ಜನರಿಗೇ ಇದ್ದಿತೆಂದು ಅರ್ಥವಾಗುತ್ತದೆ.

ಆನಂತರ ಮೊನ್ನೆ ಮೊನ್ನೆಯ ವರೆಗೆ ಕೂಡ ಇದೇ ಸ್ಥಿತಿ ಇದ್ದಿತ್ತು. ಒಬ್ಬ ಅರಸನು ಒಂದು ಭೂಮಿಯ ತುಂಡನ್ನು ಒಬ್ಬ ಬ್ರಾಹ್ಮಣನಿಗೆ ದಾನಮಾಡಲಿಕ್ಕಿದ್ದಾಗ, ಭೂದೇವಿಯು ಅರಸನ ಆ ಕೃತ್ಯವನ್ನು ಅನ್ಯಾಯವೆಂದು ನಿಷೇಧಿಸಿದ ಒಂದು ಮನೋರಂಜಕ ಕಥೆಯು ಶತಪಥ ಬ್ರಾಹ್ಮಣದಲ್ಲಿದೆ. ಭೂಮಿಯನ್ನು ಕೊಟ್ಟು ತಗೊಳ್ಳುವ ಅಧಿಕಾರವು ಯಾರಿಗೂ ಇದ್ದಿರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ನ ರಾಜ್ಞೆ ಭೂಮಿರ್ಧನಮ್–ಭೂಮಿಯು ರಾಜನ ಧನವಲ್ಲ, ಸ್ವಾನುವೇದಸ್ಯ ಕೇದಾರಮ್–ಯಾರು ಭೂಮಿಯನ್ನು ಉಳುತ್ತಾನೋ ಅವನಿಗೆ ಮಾತ್ರ ಭೂಮಿ ಸೇರಿದ್ದು–ಎಂಬ ಸಂಹಿತೆಗಳಲ್ಲಿನ ವಾಕ್ಯಗಳು ಕೂಡ ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ರ್ಹಾಸ ಡೇವಿಡ್ಸ್, ಕೋಲ್ ಬ್ರುಕ್, ಬಿ. ಸಿ. ಲಾ, ಆರ್. ಸಿ. ದತ್ ಮೊದಲಾದ ಪಾಶ್ಚಾತ್ಯ ಪೌರ್ವಾತ್ಯ ಪಂಡಿತೋತ್ತಮರೂ, ಭಾರತೀಯ ಪ್ರಾಚೀನ ಸಾಹಿತ್ಯದ ಅಧ್ಯಯನ ಮಾಡಿ–ಆ ಕಾಲದಲ್ಲಿ ಭೂಮಿಯ ಮೇಲಿನ ಅಧಿಕಾರವು ಕೇವಲ ಆ ಭೂಮಿಯನ್ನು ಉತ್ತು ಬಿತ್ತಿ ಬೆಳೆಮಾಡುವವರಿಗೆ ಮಾತ್ರ ಇತ್ತೆಂದು ಹೇಳುತ್ತಾರೆ. ಆ ಕಾಲದ ಅರಸರ, ರಾಜ್ಯದ ಆದಾಯದ ಅನೇಕ ಬಾಬತುಗಳಲ್ಲಿ ಭೂಮಿಯ ಕರ (Tax)ವನ್ನು ಎತ್ತುತ್ತಿದ್ದರು. ಆದರೆ, ಭೂಮಿಯ ಮೇಲೆ ಕಂದಾಯ (Land Revenue)ವನ್ನು ಹಾಕಿರಲಿಲ್ಲ. ಯಾಕೆಂದರೆ ಭೂಮಿಯ ಮೇಲೆ ಅವರಿಗೆ ಅಧಿಕಾರವು ಇದ್ದಿರಲಿಲ್ಲ. ಅರಸನಿಗೆ ಅಧಿಕಾರವು ಇದ್ದಿರಲಿಲ್ಲ ಎಂದು ಹೇಳಿದ ಮೇಲೆ, ಉಳಿದವರ ಮಾತು ಬಿಟ್ಟು, ಉಳಿದವರಿಗೆ ಆ ಅಧಿಕಾರವು ಇತ್ತೆಂದು ಎನ್ನಲಿಕ್ಕೆ ಕೂಡ ಸಾಧ್ಯವಿರುವದಿಲ್ಲ.

ಆದರಿಂದಾಚೆಗೆ ನಮ್ಮ ದೇಶವು ಮುಸಲ್ಮಾನರ ಶಾಸನಕ್ಕೆ ಒಳಪಟ್ಟಿತು. ಆಗಲೂ ಜನರಿಗೆ ಭೂಮಿಯ ಮೇಲೆ ಇರುವ ಅಧಿಕಾರದಲ್ಲಿ ವ್ಯತ್ಯಾಸ ಉಂಟಾಗಿರಲಿಲ್ಲ. ಆ ಕಾಲದಲ್ಲಿ ಎಷ್ಟು ಭೂಮಿಯಲ್ಲಿ ಬೆಳೆಯಾಗುತ್ತಿದ್ದಿತೋ, ಅದರ ಉತ್ಪತ್ತಿಯ ಹೆಚ್ಚು ಕಡಿಮೆಯನ್ನನುಸರಿಸಿ ಬಾದಶಹರು ಜನರಿಂದ ಕರವನ್ನು ವಸೂಲು ಮಾಡುತ್ತಿದ್ದರು. ಭೂಮಿಯನ್ನು ತನ್ನ ಅವಶ್ಯಕತೆಗನುಸಾರವಾಗಿ ಬೆಳೆ ಮಾಡುವ ಅಥವಾ ಮಾಡದಿರುವ ಸ್ವಾತಂತ್ರ್ಯವು ಜನರಿಗೇ ಇರುತ್ತಿತ್ತು. ಆಯಿನೆ ಅಕ್ಬರಿಯಲ್ಲಿ–'ಅಮಿಲ್' ಗುಜಾರ ಅಥವಾ ರೆವೆನ್ಯೂ ಕಲೆಕ್ಟರನು ಗ್ರಾಮಗಳ ಜನರನ್ನು ತನ್ನ ಸ್ನೇಹಿತರೆಂದು ತಿಳಕೊಳ್ಳಬೇಕು. ಅವನು ಮುತುವರ್ಜಿಯಿಂದ ಕೆಲಸಮಾಡಿ ಆ ಜನರ ಪ್ರೇಮಾದರಗಳಿಗೆ ಪಾತ್ರನಾಗಬೇಕು. ಎಲ್ಲರಿಗೆ ಅನುಕೂಲವಾದ ಕೇಂದ್ರ ಸ್ಥಾನವನ್ನು ತನ್ನ ಕಾರ್ಯನಿರ್ವಾಹಕ್ಕಾಗಿ ಆರಿಸಿಕೊಂಡು, ಮಧ್ಯಸ್ಥರ ಸಹಾಯ ತೆಗೆದುಕೊಳ್ಳದೆ, ತಾನೇ ಜನರಿಂದ ಕರ(ಕಂದಾಯ ಅಲ್ಲ)ವನ್ನು ವಸೂಲು ಮಾಡಬೇಕು. ಅಗತ್ಯವಿದ್ದರೆ ದೀರ್ಘಾವಧಿಯ ಸಾಲಗಳನ್ನೂ ಕೊಡಬೇಕು' ಎಂದು ಹೇಳಿದೆ. 'ಮಧ್ಯಸ್ಥರ ಸಹಾಯ ತೆಗೆದುಕೊಳ್ಳದೆ' ಎಂದು ಹೇಳಿರುವದರಿಂದ ಆ ಕಾಲದಲ್ಲಿ ಕೂಡ ಜಮೀನುದಾರಿ ಅಥವಾ ಭೂಮಾಲಿಕ ಪದ್ಧತಿ ಇರಲಿಲ್ಲವೆಂದು ಅರ್ಥವಾಗುತ್ತದೆ.

ಬ್ರಿಟಿಷರ ಕಾಲದಲ್ಲಿಯೇ ಜಮೀನುದಾರಿ ಮತ್ತು ಭೂಮಾಲಿಕ ಪದ್ಧತಿಗೆ ಈಗಿನ ರೂಪವು ಬಂದ ಹಾಗೆ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ವಿಭಾಗಿಸಿ ಆಳುವ ನೀತಿಯು ಇಲ್ಲಿಯೂ ತನ್ನ ಕೆಲಸವನ್ನು ಸಾಧಿಸಿತು. ಕೃಷಿಕರು ತಮ್ಮ ನ್ಯಾಯವಾದ ಹಕ್ಕು ಅಧಿಕಾರಗಳಿಂದ ವಂಚಿತರಾದರು. ಬದಲಿಗೆ, ಜಮೀನುದಾರರು ಮತ್ತು ಭೂಮಾಲಕರು ಅವರಿಗೂ ಸರಕಾರಕ್ಕೂ ಮಧ್ಯಸ್ಥರಾಗಿ ನಿಂತು ತಮ್ಮ ಸ್ವಾರ್ಥದ ಬೇಳೆಯನ್ನು ಬೇಯಿಸಿಕೊಳ್ಳತೊಡಗಿದರು. ಅಂದಿನಿಂದಲೇ ಕೃಷಿಕಾರ್ಯದಲ್ಲಿಯೂ ಗ್ರಾಮಜೀವನದಲ್ಲಿಯೂ ಅಲಕ್ಷ್ಯ, ಅಸಡ್ಡೆ, ಉದಾಸೀನ ಭಾವನೆಗಳು ಮನೆಮಾಡಿಕೊಂಡು, ಗ್ರಾಮಗಳ ಅವನತಿಗಾರಂಭವಾಯಿತು.

ಭೂಮಿಯನ್ನು ಉತ್ತು ಬಿತ್ತಿ ಬೆಳೆ ಮಾಡುವವರಿಗೇನೇ ಆ ಭೂಮಿಗಳ ಮೇಲೆ ಹಕ್ಕು ಅಧಿಕಾರಗಳು ಪ್ರಾಪ್ತವಾದರೆ, ಸುಧಾರಿತ ಕ್ರಮಗಳಿಂದ ಕೃಷಿಕಾರ್ಯವನ್ನು ನಡೆಸಿದ ಪೂರ್ಣ ಪ್ರಯೋಜನವು ಆ ಕೃಷಿಕರಿಗೇ ದೊರೆತು ಅವರ ಸಂಪದಭಿವೃದ್ಧಿಯಾಗುವದು. ಆ ಜನರ ಸಂಪದಭಿವೃದ್ಧಿ ಎಂಬುದೇ ಗ್ರಾಮೋದ್ಧಾರದ ಮೂಲಾಧಾರವಾಗಿದೆ. ಈ ಹಕ್ಕು ಅಧಿಕಾರಗಳು ಪ್ರಾಪ್ತವಾದಾಗ ಜನರು ವ್ಯಕ್ತಿಗತ, ಸಮ್ಮಿಲಿತ ಅಥವಾ ಸಾಮೂಹಿಕ ಯಾವ ಸಾಧನೆಯಿಂದ ತಮ್ಮ ಕಾರ್ಯನಿರ್ವಾಹ ಮಾಡಬೇಕೆಂಬುದು ಒಂದು ಪ್ರಶ್ನೆಯಾಗಿದೆ. ಆದರೆ ಅದು ಹೀಗೆಯೇ ನಡೆಯಬೇಕೆಂದು ಕಟ್ಟುನಿಟ್ಟಾಗಿ ಹೇಳಲಾಗುವದಿಲ್ಲ. ಸ್ಥಳ ಕಾಲ ಪರಿಸ್ಥಿತಿ ಮತ್ತು ಜನರ ಆವಶ್ಯಕತೆಗನುಸಾರವಾಗಿ ಅವರ [illegible] ಅವರು ನಿರ್ಧರಿಸಬಹುದಾಗಿದೆ.

ಜಮೀನುದಾರಿ ಅಥವಾ ಭೂಮಾಲಿಕ ಪದ್ಧತಿಯನ್ನು ನಷ್ಟಮಾಡಿ ಅದರ ಬದಲಿಗೆ ಭೂಮಿ ಜಮೀನುಗಳ ಮೇಲಿನ ಅಧಿಕಾರವನ್ನು ಕೃಷಿಕರಿಗೆ ಕೊಟ್ಟುಬಿಡುವ ಈಗ ಸಾಧ್ಯವೆ? ವ್ಯವಹಾರ್ಯವೆ? ಅಲ್ಲವೆಂದು ಕೆಲವರು ಹೇಳುತ್ತಾರೆ. ರಾಷ್ಟ್ರಸಂಘವು ಕೂಡ ಜಮೀನದಾರಿ ಭೂಮಾಲಿಕ ಪದ್ಧತಿಯನ್ನು ನಷ್ಟಮಾಡಬೇಕೆಂದು ಸ್ಪಷ್ಟವಾಗಿ ಹೇಳುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರಕಾರವು ಕೂಡ ಈ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಒಪ್ಪಲಾರದ [illegible]. ಈಗಿನ ಪರಿಸ್ಥಿತಿ ಹೇಗಿದ್ದರೂ ಒಂದಲ್ಲ ಒಂದು ದಿನ ಈ ಅನ್ಯಾಯದ ಕ್ರಮವನ್ನು ತೆಗೆದುಹಾಕಬೇಕು, ಅಥವಾ ಅದು ಹೋಗಬೇಕೆಂಬುದು ಸ್ಪಷ್ಟವಾಗಿದೆ. ಅಂಥ ದಿನವು ನಾಳೆ ಬರಲೂ ಬಹುದು, 10 50 ವರ್ಷಗಳ ತನಕ ಮುಂದರಿಯಲೂ ಬಹುದು. ಎಲ್ಲಿವರೆಗೆ ಜಮೀನುದಾರ, ಭೂಮಾಲಿಕ ಮತ್ತು ಕೃಷಿಕರ ಪರಸ್ಪರ ಸಂಬಂಧವನ್ನು ಹೊಂದಿಕೊಂಡಿದೆ. ಒಕ್ಕಲಿಗರ ಮೇಲೆ ಜಮೀನುದಾರ ಮತ್ತು ಭೂಮಾಲಿಕರ ಅತ್ಯಾಚಾರ ಅನಾಚಾರಗಳು ಬೆಳೆಯುತ್ತಲೂ, ಒಕ್ಕಲಿಗರು ತಮ್ಮ ಹಕ್ಕು ಅಧಿಕಾರಗಳ ಸ್ಥಾಪನೆಗಾಗಿ ಸಂಘಟಿತರಾಗುತ್ತಲೂ ಇದ್ದರೆ ಆ ದಿನವು ಶೀಘ್ರದಲ್ಲಿಯೇ ಬರುವದು. ಅದರ ಬದಲಿಗೆ ಇವರು ಪರಸ್ಪರ ಪ್ರೇಮಾದರಗಳಿಂದ ಕೂಡಿ ಪರಸ್ಪರ ಸಹಾಯ ಸಹಕಾರದಿಂದ ಇರುವದಾದರೆ, ಒಕ್ಕಲಿಗರು ಇನ್ನು ಕುಂಭಕರ್ಣ ನಿದ್ರೆಯಿಂದ ಎಚ್ಚತ್ತು ತಮ್ಮ ಉನ್ನತಿಯ ಪ್ರಯತ್ನಗಳನ್ನು ತಾವು ಮಾಡದೆ ಇರುವದಾದರೆ, ಆ ದಿನವು ದೂರದೂರಕ್ಕೆ ಹೋಗುವುದು.'

## ಆರ್ಥಿಕ ಪರಿಸ್ಥಿತಿಯಲ್ಲಿ

# ನಿರುದ್ಯೋಗ ನಿವಾರಣೆ

## ಚರ್ಚೆ

(೬ನೇ ಪುಟದಿಂದ ಮುಂದುವರಿಸಿದುದು)

ಸನ್ನಾದರೂ ಖರ್ಚು ಮಾಡಲಿಕ್ಕಿರುವ ಪ್ರತಿಯೊಬ್ಬ ಭಾರತೀಯನು ಈ ಮಾರ್ಗದಲ್ಲಿ ಹೆಚ್ಚು ಕೆಲಸ ಮಾಡಬಹುದಾಗಿದೆ.

ಮನೆ ಕೈಗಾರಿಕೆಗಳ ಪ್ರೋತ್ಸಾಹ, ಪ್ರಚಾರ ಪ್ರಸಾರಗಳಿಂದ ಸದ್ಯಕ್ಕೆ ನಮ್ಮ ದೇಶದ ಹಿತವಾಗಬಹುದೆಂದು ಕೆಲವರು ಒಪ್ಪುತ್ತಾರೆ. ಆದರೆ ಮುಂದಕ್ಕೂ ಇದರಿಂದ ಪ್ರಯೋಜನವಾಗಬಹುದೆ? ಎಂದು ಅವರು ಕೇಳುತ್ತಾರೆ. ಅದರೆ ಭವಿಷ್ಯದ ಚಿಂತೆ ವರ್ತಮಾನದವರಿಗೆ ಯಾಕೆ? ಭವಿಷ್ಯದ ನಿರ್ಣಯವನ್ನು ಭವಿಷ್ಯವೇ ಮಾಡಿಕೊಳ್ಳಲಿ. ತತ್ಕಾಲಕ್ಕಾಗಿಯಾದರೂ ಮನೆ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವದು ಪ್ರತಿಯೊಬ್ಬರ ಧರ್ಮವೂ ಕರ್ತವ್ಯವೂ ಆಗಿದೆ. ಕೇವಲ ಆರ್ಥಿಕ ದೃಷ್ಟಿಯಿಂದಾದರೂ ಸರಿಯೆ, ಕೈ ಕೆಲಸದಿಂದ ಸಿದ್ಧವಾದ ವಸ್ತು ಒಡವೆಗಳನ್ನೇ ಪ್ರತಿಯೊಬ್ಬರು ಕೊಂಡುಕೊಳ್ಳಬೇಕು.

ಮನೆಕೈಗಾರಿಕೆಗಳನ್ನು ಉಪೇಕ್ಷಿಸುವದರಿಂದ ಗ್ರಾಮೀಣ ಜನತೆಯ ಮೇಲೆ ನಾವು ಮಾಡುವ ಅನ್ಯಾಯ ಅತ್ಯಾಚಾರಗಳ ಕುರಿತು ಇಲ್ಲಿ ಪ್ರಸ್ತಾಪಿಸಬೇಕಾದ ಅಗತ್ಯವಿರುವದಿಲ್ಲ. ಗ್ರಾಮೀಣ ಜನತೆಗೆ ಅಹಿತವನ್ನುಂಟುಮಾಡುವ ಬೇರೆ ಯಾವ ಉಪಾಯವಾದರೂ ಸರಿ, ಅದರ ದುಷ್ಪರಿಣಾಮವು ಭಯಂಕರ ಆಗೇ ಆಗುವದು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ನಿರುದ್ಯೋಗ ನಿವಾರಣೆಯನ್ನು ನಮ್ಮ ಗೃಹಿಣಿಯರು ಬಹು ಚೆನ್ನಾಗಿ ಸಾಧಿಸಬಲ್ಲರು. ಗೃಹಕಾರ್ಯವನ್ನು ವ್ಯವಸ್ಥೆಗೊಳಿಸುವವರು ನಮ್ಮ ಗೃಹಿಣಿಯರಾಗಿದ್ದಾರೆ. ವಸ್ತು ಒಡವೆಗಳನ್ನು ಹೆಚ್ಚಾಗಿ ಕೊಂಡುಕೊಳ್ಳುವವರು ಅವರೇ. ವಿಚಾರಪೂರ್ವಕ, ತಮಗೆ ಬೇಕಾದ ವಸ್ತು ಒಡವೆಗಳನ್ನು ಕೊಂಡುಕೊಳ್ಳುವದರಿಂದ ಅವರು ದೇಶದ ಹಿತ ಮಾಡುವರು. ನಮ್ಮ ರಾಜಕೀಯ ಮತ್ತು ಆರ್ಥಿಕ ಅವನತಿಗೆ, ನಿಜಕ್ಕೂ ನಮ್ಮನಾಡಿನ ಮಹಿಳೆಯರು ಅಜ್ಞಾನ ಅಂಧಕಾರದಲ್ಲಿರುವದೇ ಪ್ರಬಲ ಕಾರಣವಾಗಿರುವದು. ಚತುರ, ಮತ್ತು ಬುದ್ಧಿವಂತ ಮಹಿಲಾ ಸಮಾಜವು ಆತ್ಮಾಭಿಮಾನದಿಂದ ಪೂರಿತವಾದ ಸ್ವತಂತ್ರ ಜನಾಂಗವನ್ನು ನಿರ್ಮಿಸಲಿಕ್ಕೆ ಸಮರ್ಥವಾಗಿರುತ್ತದೆ. ಮಹಿಳೆಯರನ್ನು ಅಜ್ಞಾನದಲ್ಲಿಟ್ಟುಕೊಂಡು ದೇಶದ ಸಂಪದಭಿವೃದ್ಧಿಯನ್ನು ಸಾಧಿಸುವದು ಸಾಧ್ಯವಲ್ಲ. ತೊಟ್ಟಿಲನ್ನು ತೂಗುವ ಅಸಭ್ಯಸ್ತ ಕೈಯು ಪ್ರಪಂಚವನ್ನು ವ್ಯವಸ್ಥೆಗೊಳಿಸಲಾರದು; ಆದರೆ ಸ್ವದೇಶದ ಅವ್ಯವಸ್ಥೆಗೆ ಅದುವೇ ಕಾರಣವಾಗುವದು.

ಆದ್ದರಿಂದ ಪರದೇಶಗಳಿಂದ ಆಮದಾಗುವ ವಸ್ತು ಒಡವೆಗಳನ್ನು ಕೊಂಡುಕೊಳ್ಳುವದರಿಂದಲೂ, ಕೈಗಾರಿಕೆಗಳ ಕೇಂದ್ರೀಕರಣದಿಂದಲೂ ನಿರುದ್ಯೋಗವು ಉಂಟಾಗುತ್ತದೆಂಬುದು ಸ್ಪಷ್ಟವಾಯಿತು. ಸಹಾಯ ಅಥವಾ ಪರಿಹಾರ ದ್ರವ್ಯಗಳನ್ನು ಕೊಡುವದರಿಂದಾಗಲೀ, ಕಾಮಗಾರಿಗಳಿಂದಾಗಲೀ ನಿರುದ್ಯೋಗ ನಿವಾರಣೆ ಆಗುವದಿಲ್ಲವೆಂಬುದು ನಮಗೆ ತಿಳಿಯಿತು.

ಎಷ್ಟರ ಮಟ್ಟಿಗೆ ಸಾಧ್ಯವುಂಟೋ ಅಷ್ಟರ ಮಟ್ಟಿಗೆ, ಪೂರ್ಣವಾಗಿ ಸ್ವದೇಶೀ ವಸ್ತು ಒಡವೆಗಳನ್ನು ಅಂದರೆ ಕೈಕೆಲಸದಿಂದ ಸಿದ್ಧವಾದವುಗಳನ್ನು ಕೊಂಡುಕೊಳ್ಳುವದರಿಂದಲೇ ಈಗಾಗಲೇ ಭೀಕರ ರೂಪವನ್ನು ತಾಳಿರುವ ಈ ನಿರುದ್ಯೋಗ ಸಮಸ್ಯೆಯನ್ನು ನಾವು ಬಿಡಿಸಬಹುದಾಗಿದೆ. ಅದಕ್ಕೆ ಬೇರೆ ಯಾವ ಉಪಾಯವೂ ಇರುವದಿಲ್ಲ.

K. S. S.


## 92 ವರ್ಷ ಪ್ರಾಯದವನು ಬಹು ದೃಢಕಾಯನಾಗಿದ್ದಾನೆ.

### ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

### ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಿಗ್ಗೆ ಸೇವಿಸುವನು.

ಮಿಸೆಸ್ ಎ. ಜೆ. ಡಬ್ಲ್ಯು ಎಂಬಾಕೆಯು ಹೀಗೆಂದು ಬರೆಯುತ್ತಾಳೆ: ನನ್ನ ಪಿತನಿಗೆ ಕ್ರುಶನ್ ಲವಣದಿಂದ ದೊರೆತ ಆಶ್ಚರ್ಯಕರವಾದ ಗುಣಾಂಶದ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಇಂಥಾ ಫಲಿತಾಂಶಗಳು ವಿಚಿತ್ರ ಘಟನೆಗಳೆಂದು ಹೇಳಬಹುದು. ಆತನು 92 ವರ್ಷ ಪ್ರಾಯದವನಾದರೂ ಪೂರ್ಣ ಗಟ್ಟಿಗನಾಗಿದ್ದಾನೆ. ಅವನು ಚುರುಕಾಗಿ ಚಲಿಸಬಲ್ಲನು; ಮಾತ್ರವಲ್ಲದೆ, ಉಪ್ಪರಿಗೆಯನ್ನು ಸುಲಭವಾಗಿ ಏರಿ ಇಳಿಯುತ್ತಾನೆ. ಅವನ ಸ್ನೇಹಿತರು ಅವನ ಚುರುಕುತನವನ್ನು ನೋಡಿ ಬಹಳ ದಿಗಿಲುಪಡುತ್ತಾರೆ. ತನ್ನ ಪ್ರಾತಃಕಾಲದ ಕ್ರುಶನ್ ಲವಣಮಿಶ್ರಿತ ಚಾ ಸೇವನೆಯೇ ಇದಕ್ಕೆ ಕಾರಣವೆಂದು ತಿಳಿಸುತ್ತಾನೆ. ನಮ್ಮ ಮಿತ್ರಮಂಡಳಿಗೆಲ್ಲಾ ನಾವು ಕ್ರುಶನ್ ಲವಣವನ್ನು ಶಿಫಾರಸು ಮಾಡುತ್ತೇವೆ. ಪ್ರತಿಯೊಂದು ಕುಟುಂಬದಲ್ಲಿ ಕ್ರುಶನ್ ಲವಣವು ಅಗತ್ಯವಿರತಕ್ಕದ್ದು ಎಂಬದಾಗಿ ನನಗೆ ತೋರುತ್ತದೆ.

ಆರೋಗ್ಯಕ್ಕೆ ಮುಖ್ಯ ಸಾಧನವಾದ ಒಳಗಿನ ಇಂಗಗಳನ್ನು ಕಶ್ಮಲರಹಿತವಾಗಿ ಇರಿಸದ ಇರುವುದರಿಂದಲೇ ಹೆಚ್ಚಿನವರು ಅವರ ಪ್ರಾಯ ಬರುವ ಮುಂಚಿತವಾಗಿಯೇ ಮುದುಕರಾಗಿ ಕಾಣುವರು.

ಕ್ರಮೇಣವಾಗಿ ಅವರು ಕ್ರುಶನ್ ಲವಣವನ್ನು ಸೇವನೆಯನ್ನು ಅಭ್ಯಾಸಿಸುವರು. ಅನಂತರ ಅವರ ಜೀವಮಾನದಲ್ಲಿ ಮೊದಲನೇ ಬಾರಿಯಾಗಿ ಅವರ ಶರೀರದೊಳಗಿರುವ ಕಶ್ಮಲ ಪದಾರ್ಥವನ್ನು ಹೊರಗೆಡಿಸಿದಂತಾಗುವುದು. ಹೀಗಾಗಿ ಕರುಳೊಳಗೆ ದ್ರಾಸ್ತ್ರನಾಗಿ, ಕೊಳೆತು ಹೋದಂತಿರುವ ಪದಾರ್ಥವು ಪೂರ್ತಿಯಾಗಿ ಹೊರಗೆ ಹೋಗಿ ನಿರ್ಮಲವಾಗುವುದು. ಲಿವರ್ ಮತ್ತು ಮೂತ್ರಕೋಶವು ಇದರಿಂದಾಗಿ ಕ್ರಮವಾಗಿ ಅವುಗಳ ಕೆಲಸಗಳನ್ನು ಚುರುಕಿನಿಂದ ಮಾಡಲು ತೊಡಗುವುವು. ಇದರ ಪರಿಣಾಮವಾಗಿ ನಮ್ಮ ದೇಹದ ಎಲ್ಲಾ ನರನಾಡಿಗಳಲ್ಲಿ ಶುದ್ಧ ರಕ್ತದ ಚಲಾವಣೆಯು ಸರಾಗವಾಗಿ ನಡೆದು ನಮ್ಮ ಪ್ರತಿಯೊಂದು ಅವಯವಗಳಿಗೆ ಆರೋಗ್ಯ ಬಲ ಮತ್ತು ಹೊಸ ಹುರುಪನ್ನುಂಟು ಮಾಡುತ್ತದೆ.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.


ಕೆನರಾ ಬೇಂಕ್ ಲಿಮಿಟೆಡ್

ಕುಂದಾಪುರ

## NOTICE.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಕೊಡದೆ ಆ ಕುರಿತು ರಿಜಿಸ್ಟ್ರ ನೋಟೀಸ್ ಕೊಟ್ಟಲ್ಲಿ 1ನೇ ಆಸಾಮಿಯು ಮೃತಪಟ್ಟಿರುವುದಾಗಿಯೂ 2ನೇಯವರು ಜ್ಯಾರಿಗೆ ಸಿಕ್ಕದೆ ನೋಟೀಸು ವಾಪಾಸು ಬಂದಿರುವುದಲ್ಲದೆ ಬಾಕಿಯವರು ನೋಟೀಸು ಪಡಕೊಂಡು ಸುಮ್ಮಗಿರುವುದರಿಂದ ಕೂಡ ಅವರ ಪರ ಸಾಲಗಳಿಗೆ ಜವಾಬ್ದಾರಿಯಿರುವ ವಾರಿಸುದಾರರುಗಳನ್ನು ಇದೇ ಬರುವ ಎಪ್ರಿಲ್ ತಿಂಗಳ ತಾರೀಕು 20ನೇ ಬುಧವಾರ ಹಗಲು ಘಂಟೆ 12ಕ್ಕೆ ಯಾ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ಯಾವುದಾದರೂ ಒಂದು ದಿವಸ ಪುನಹ ನೋಟೀಸ್ ವಗೈರೆ ಕೊಡದೆ ಬ್ಯಾಂಕಿನ ಆಫೀಸಿನ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜಿನಲ್ಲಿ ಬ್ಯಾಂಕಿಗೆ ಬರತಕ್ಕ ಮೊಬಲಗು ವಜಾ ಮಾಡಿ ಉಳಿಕೆ ಇದ್ದ ಅವರವರ ಅಮಾನತ ಲೆಕ್ಕದಲ್ಲಿ ಜಮಾ ಇಡುವ ಹಣಕ್ಕೆ ಬಡ್ಡಿ ನಡೆಯಲಿಕ್ಕಿಲ್ಲವೆಂತ ಈ ಮೂಲಕ ತಿಳಿಸಲಾಗುತ್ತದೆ.

1. ಸಾಲದ ನಂಬ್ರ 122/35-28-2-35, ಹೆಸರು ದೊಟ್ಟಗೋಪಿಯ ಅಳಿಯ ಸಾಪ್ರದ ಗ್ರಾಮದ ಪೊಮಿಕೊಡ್ಲು – ಕಿರಿಮಂಜೇಶ್ವರ ಪೋಸ್ಟು, ಅಸ್ಲು ರೂ. 50.

2. ಸಾಲದ ನಂಬ್ರ 483/36-5-8-36 ಕೆ. ಶಿವರಾವ್ ವೆಂಕಟ್ರಮಣ ಶ್ಯಾನುಭೋಗರ ಮಗ-ಕುಂದಾಪುರ. ಅಸ್ಲು ರೂ. 35.

3. ಸಾಲದ ನಂಬ್ರ 411/36-22-6-36 ಜೆ. ಪುಟ್ಟಪ್ಪ ನ್ಯಾಕ-ಹನುಮಂತ ನ್ಯಾಕರ ಮಗ C/o ಸಿ. ಪಿ. ಸಿ. ಕಂಪೆನಿ. ಗಂಗೊಳ್ಳಿ. ಅಸ್ಲು ರೂ. 70.

4. ಸಾಲದ ನಂಬ್ರ 68/37-1-2-37 ದೇವಲಕುಂದ ಶೀನ ಶೆಟ್ಟಿ-ಪಟೇಲ ವೆಂಕಟಯ್ಯ ಶೆಟ್ರ ಅಳಿಯ-ಹಳಲಾಡಿ ಪೋಸ್ಟು, ಅಸ್ಲು ರೂ. 50.

Office of the Bank, Coondapoor. 17—3—1938.

S. R. ACHAR, AGENT.


## ಕೊಳೆಯಿಂದಿರುವ ಕೈ ಮತ್ತು ಕಾಲುಗಳಮೇಲೆ ವಿಷಕ್ರಿಮಿಗಳು ಇರುತ್ತವೆ.



### ನಿಮ್ಮ ಮಕ್ಕಳ ಆರೋಗ್ಯವನ್ನು ಲೈಫ್‌ಬಾಯಿನಿಂದ ಕಾಪಾಡಿರಿ.

ನಿಮ್ಮ ಮಕ್ಕಳು ಆಟವಾಡಿದನಂತರ ಅವರ ಕೈ ಕಾಲುಗಳನ್ನು ನೋಡಿರಿ. ಧೂಳಿಂದ ಕೂಡಿದೆಯಲ್ಲವೆ! ಮತ್ತು ಆ ಧೂಳಿನಲ್ಲಿ ವಿಷಕ್ರಿಮಿಗಳಿರುವದನ್ನೂ ಯೋಚಿಸಿ! ನಿಮ್ಮ ಮಕ್ಕಳನ್ನು ಈ ಅಪಾಯದಿಂದ ರಕ್ಷಿಸಿ. ಆರೋಗ್ಯವುಳ್ಳವರನ್ನಾಗಿ ಮಾಡಿ ಅವರು ಯಾವಾಗಲೂ ವಿಷಾಪಹಾರಿಯಾದ ಲೈಫ್‌ಬಾಯ್‌ನಿಂದಲೇ ತೊಳೆಯಲಿ. ಲೈಫ್ ಬಾಯಿನ ಆರೋಗ್ಯಕರವಾದ ನೊರೆಯು ಪ್ರತ್ಯೇಕವಾದ ಪೋಷಕ ದ್ರವ್ಯದಿಂದ ಕೂಡಿ ಕೊಳೆಯನ್ನು ಚೆನ್ನಾಗಿ ಹೋಗಿಸುವುದಲ್ಲದೆ ಅಪಾಯಕರವಾದ ವಿಷಕ್ರಿಮಿಗಳನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ನಿಮ್ಮ ಚಿಕ್ಕ ಮಕ್ಕಳ ಆರೋಗ್ಯವನ್ನು ಲೈಫ್ ಬಾಯ್‌ನಿಂದ ಸುರಕ್ಷಿತವಾಗಿ ಇಟ್ಟುಕೊಳ್ಳಿರಿ.

ಲೈಫ್‌ಬಾಯ್ ಸಾಬೂನು

# LIFEBUOY SOAP



LEVER BROTHERS (INDIA) LIMITED


## NOTIFICATION.

A competitive examination for the award of the Victoria Jubilee scholarships at the rate of Rs. 15/- per mensem tonable for a period of five years to students studying any one of the marginally noted subject in a Government institution in India one awardable to a candidate of the Muslim community and the other to a candidate belonging to any of the Muslim community and failing him to a candidate of the Christain community, will be held in the Government College, Mangalore, on Monday, the 20th June 1938 at 10 a. m.

1. Engineering-Civil, Municipal, Electrical Mechanical Marine or Sanitary.
2. Forestry.
3. Agriculture.
4. Mining and Metallurgy.

2. The scholarships shall be awarded to students who have passed at least the Public Examination held by the S. S. L. C. Board at Madras and who are between the ages of 16 and 21 Provided however that if a graduate of any recognised University applies for any of the scholarships it shall be sufficient if he shall not have completed the age of 24 years. The candidate shall produce satisfactory evidence of good character, physical fitness and age.

3. Applications for the examination in the prescribed form will be received in the District Court till the 5th day of June 1938 after which date none will be received.

4. Forms of applications and ~~copies of the rules regulating the~~ award of the scholarships can be had from this office on working days between 11 a. m. and 5 p. m. on payment of one anna and two annas respectively.

District Court, S. K. Mangalore 17th March 1938

Mir. Amiruddin, District Judge & President Victoria Jubilee Scholarship Fund.

DIAMONDS! DIAMONDS!
BEST BRILLIANCY!

# K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

## ವಜ್ರಗಳು!

ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

**ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.**
**ಆಗ ತಾನೇ ನಿಮಗೆ ಖಚಿತವಾಗುವುದು.**
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ.

## ಮಂಗಳೂರಿನ ಪೇಟೆಧಾರಣೆ

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ. | ರೂ ಆ |
| ಬತ್ತ ಗುಡ್ಡು ಮು. | 1 —11 | 1 —11 |
| ರಾಶಿ ಅಕ್ಕಿ ... | 3— 8 | 4— 0 |
| ಸುಗ್ಗಿ ... | 3 —14 | 4— 0 |
| ಗುಡ್ಡು .. | 4— 2 | 4— 4 |
| ಊರ ಅನ್ನಕ್ಕ್ ಬೆಳ್ತಿಗೆ ... | 4— 7 | 4— 7 |
| ರಂಗೂನು ಬೆ ಗೋ ಂಕ್ಕೆ... | 7 — 2 | 7— 4 |
| ಎಲ್ಲೂರು ಬೆ. ಮು. ಂಕ್ಕೆ... | 3—14 | 4— 0 |
| ಗೋದಿ ಗೋಣಿ ಂಕ್ಕೆ ... | 13 — 0 | 14— 8 |
| ತೊಗರಿ ಗೋಣಿ ಂಕ್ಕೆ ... | 11— 8 | 13— 8 |
| ಹುರುಳಿ ಗೋಣಿ ಂಕ್ಕೆ ... | 6— 0 | 6— 2 |
| ಕಡಲೆ ಗೋಣಿ ಂಕ್ಕೆ ... | 9 — 8 | 10 — 3 |
| ತೊಗರಿಬೇಳೆ ಗೋಣಿಂಕ್ಕೆ... | 17— 8 | 18— 0 |
| ಉದ್ದು ಗೋಣಿ ಂಕ್ಕೆ ... | 9— 0 | 9 — 8 |
| ಹೆಸರು ಗೋಣಿ ಂಕ್ಕೆ ... | 9—12 | 10— 8 |
| ಊರುಬೆಲ್ಲ ಖಂಡಿ ಂಕ್ಕೆ ... | 27— 8 | 33— 0 |
| ಉಪ್ಪು ಗೋಣಿ ಂಕ್ಕೆ ... | 4— 8 | 5— 4 |
| ಕೊಬ್ರಿ ಖಂಡಿ ಂಕ್ಕೆ .. | 46 — 4 | 46— 4 |
| ಎಳ್ಳಿಂಡಿ ಖಂಡಿ ಂಕ್ಕೆ | 25 — | 26 — 0 |
| ತೆಂಗಿನ ಎಣ್ಣೆ ಮಣ ಂಕ್ಕೆ.. | 3 — 7 | 3— 7 |
| ಎಳ್ಳೆಣ್ಣೆ ಮಣ ಂಕ್ಕೆ . | 6— 0 | 7— 0 |
| ಚಿಮಿಣಿಎಣ್ಣೆ ಪೆಟ್ಟಿಗೆ ಂಕ್ಕೆ... | 6— 5 | 7— 5 |
| ಮೋರಿಸ ಸಕ್ಕರೆ ಮು. ಂಕ್ಕೆ.. | 2— 13 | 2 —14 |
| ಮೆಣಸು | 4— 8 | 6— 0 |
| ಸಾಸಿವೆ ಮುಡಿ ಂಕ್ಕೆ . | 5 — 8 | 6— 8 |
| ಕಾಳುಮೆಣಸು ಹ ವೇಗೆ .. | 16 — 0 | 18— 0 |
| ಯೇಲಕ್ಕಿ ದೀಜ ಮಣಂಕ್ಕೆ | 80— 0 | 85— 0 |
| ಗೇರುಬೀಜ ಮು ಂಕ್ಕೆ . | 2— 8 | 4— 8 |
| ಕಬ್ಬಿಣ ಖಂಡಿ ಂಕ್ಕೆ | 50— 0 | 55— 0 |
| ತಾಂಮ್ರ ತಗಡು ಮು ಂಕ್ಕೆ .. | 14— 12 | 15— 0 |
| ತಾಂಮ್ರಪಾತ್ರಗಳು ಮು ಂಕ್ಕೆ | 14— 8 | 15— 0 |
| ಚೀನಿಬೆಳ್ಳಿ ಸೇರು ಂಕ್ಕೆ . | 13— 8 | 14— 0 |
| ಹಿತ್ತಾಳೆ ತಗಡು ಮು ಂಕ್ಕೆ | 12— 0 | 12— 0 |
| ಹವಸು ಂಕ್ಕೆ | 22— [illegible] | 22— [illegible] |
| ಹುಣಸೆ ಹುಳಿ ಖಂಡಿ ಂಕ್ಕೆ | 40— 0 | 45— [illegible] |
| ನೇಟಿವ್ ಕಾಫಿ ಖಂಡಿ ಂಕ್ಕೆ | 140— 0 | 148— 0 |
| ಫಿರೇಂ ಕಾಫಿ ಖಂಡಿ ಂಕ್ಕೆ | 185— 0 | 198— 0 |
| ಹುಡಿಕೇಂ ಏಲಕ್ಕಿ ಮಣ | 35— 0 | 39 — 0 |

## ಜೋಂಗರ್‌ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಫಾಲ್ಗುಣ ಬ ೧೦ ಶನಿವಾರದಿಂದ, ಚೈತ್ರ ಶು ೧ ಶುಕ್ರವಾರದ ವರೆಗಿನ ಪಂಚಾಂಗ (೧೯೩೮ನೇಯ ಏಪ್ರಿಲ ಸುಗ್ಗಿ)

| ತಾ | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | [illegible] |
|---|---|---|---|---|---|---|---|
| 26 | ಶನಿ | ೧೦ | ೪೦ | ಉ ಷಾಢ | ೨೭ | ೧೨ | [illegible] |
| 27 | ರವಿ | ೧೧ | ೪೩ | ಶ್ರಾವಣ | ೩೩ | ೧೩ | |
| 28 | ಸೋಮ | ೧೨ | ೪೭ | ಧನಿಷ್ಠ | ೩೬ | ೧೪ | |
| 29 | ಕುಜ | ೧೩ | ೪೮ | ಶತಭಿಷ | ೩೯ | ೧೫ | |
| 30 | ಬುಧ | ೧೪ | ೪೭ | ಪೂ ಭಾ | ೪೧ | ೧೬ | |
| 31 | ಗುರು | ೩೦ | ೪೫ | ಉ ಭಾ | ೪೨ | ೧೭ | |
| 1 | ಶುಕ್ರ | ೧ | ೪೩ | ರೇವತಿ | ೪೦ | ೧೮ | |

## ಶಾಶ್ವತ ಶಕ್ತಿ, ರಕ್ತ ಶುದ್ಧಿ ಮಾಡುವ ಬಗಯೇನು?

ಉರಿಯುವ ಬೇಸಿಗೆಯಲ್ಲಿ

# "ವಿಜಯಾ"

ನಾಮದ ಬೇರಿನ (Sarsaparilla) ಸತ್ವವನ್ನು ನೀರಿನಲ್ಲಿ ಇಲ್ಲವ ಹಾಲಿನಲ್ಲಿ ಬೆರಸಿ ರುಚಿಗೆ ತಕ್ಕ ಸಕ್ಕರೆಯನ್ನು ಸೇರಿಸಿ ಕುಡಿಯುವುದರಿಂದ ದಣುವಾರಿಸಿಶರೀರವನ್ನು ತಂಪುಮಾಡುವುದು. ಇದಲ್ಲದ ಗಜ್ಜಿ ಮೊದಲಾದ ಸಕಲ ಚರ್ಮರೋಗಗಳನ್ನು ಹೋಗಲಾಡಿಸಿ ರಕ್ತಶುದ್ಧಿಯನ್ನು ಮಾಡುವುದು

ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು.

ತಯಾರಿಸುವವರು -

## ವಿಜಯ ಫಾರ್ಮಸಿ, ಕೊಚ್ಚಿನ್.

~~ದ. ಕ. ಜಿಲ್ಲೆಯ ಏಜಂಟರು:-~~

ಎನ್. ಜಿ. ಮಲ್ಯ, ಬಾರಕೂರು.
ಯು. ಬಿ. ಬಾಳಿಗ, ಹುಬ್ಬಳ್ಳಿ.
ಪ್ರೊಫ್ಯೆಲರ್ ಫಾರ್ಮಸಿ, ಮಂಗಳೂರು.
ಪೈಸ್ ಫಾರ್ಮಸಿ, ಪುತ್ತೂರು.
ಕೆ. ಅಚ್ಯುತ ಶೆಣೈ, ಕಾಸರಗೋಡು.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

## THE PIE-MONEY BANK LTD,

Maidan Road, MANGALORE

Undertakes all kinds of Banking Business Current account a 2½% per annum Savings Bank Deposits at 4½% per annum

**FIXED DEPOSITS**

For 2 Years 6% 1 Year 5% For 6 months 4% 9 months 3½%
Auction [illegible] ranging from Rs. 100/ to Rs 5000 run regularly on systematic lines. Unique Banking facilities to Businessmen and interested Public.

*Apply for particulars*—K. R. GURU, *Managing Director*

*Use the soaps*
KNOWN ALL OVER
**WISCO'S.**
**MINAR**
&
**TAJAMAHAL** 'Red'
Bar Soaps.
POPULAR IN THE MARKET
*Sole Distributer:-*
**P. G. KAMATH,**
Kashmir House,
Marnamikatta, MANGALORE.

**'DILROZ'** Regd

'Dil Roz' is a sure cure for Oriental sores local sores, all kinds of deep-rooted sores, skin eruptions, Pimples, Eczema, Ringworm, Sinus Fistula auxillary-Abscess,

There is no need of dressing the wounds, nor are baths prohibited.

**Price Rs. 2.** Postage extra.

**TAHIR DIN,**
Anarkali, LAHORE

# ರಷ್ಯದ ಆ ರಾಜಕೀಯ ಘಟನೆ. ಅದು ಬ್ರಹ್ಮದತ್ತ ವರವಂತೆ, ನಿಜವೇನು?

[ರಷ್ಯವು ಇಂದ್ರನ ಸ್ವರ್ಗ ರಾಜ್ಯ, ಕೃಷ್ಣನ ನಂದನವನ ಎಂದು ಮೊದಲಾಗಿ ಬಾಯಿ ತುಂಬ ಹೊಗಳುವ ಜನರಿಗೆ ನಮ್ಮ ದೇಶದಲ್ಲಿ ಕಡಿಮೆಯಿಲ್ಲ. ಸ್ಟಾಲೀನನನು ಹೇಳಿದುದೆಲ್ಲ ವೇದ ವಾಕ್ಯ, ಮಾಡಿದುದೆಲ್ಲ ದೇವಕಾರ್ಯ ಎಂದು ಒಪ್ಪಿಕೊಂಡು ನಂಬಿಕೊಂಡಿದ್ದಾರೆ. ರಷ್ಯದಲ್ಲಿ ಜನರಿಗೆ ಸುಖವಿಲ್ಲ, ಅದೆಲ್ಲ ನರಕವೆಂದು ನಾವು ಹೇಳುವದಿಲ್ಲ. ಆದರೆ ರಷ್ಯದ ವಿಷಯವಾಗಿ ಪ್ರಕಟವಾಗಿರುವ ಮಾತುಗಳೆಲ್ಲ ಪೂರ್ಣ ಸತ್ಯವಾಗಿರುವದಿಲ್ಲ ಎಂಬದಷ್ಟೆ ನಮ್ಮ ಹೇಳಿಕೆ. ಸ್ಟಾಲೀನನು ಈಚೆಗೆ ಪ್ರಜಾಸತ್ತಾತ್ಮಕ ರಾಜಕೀಯ ಘಟನೆಯನ್ನು ಸಿದ್ಧಮಾಡಿ ಜನರಿಗೆ ಕೊಟ್ಟಿದ್ದಾನೆಂದು ವಾರ್ತೆಯಿರುವದಷ್ಟೆ? ಆ ರಾಜಕೀಯ ಘಟನೆ—ಜನರಿಗೆ ಸಿಕ್ಕಿದ ಸ್ವಾತಂತ್ರ್ಯ—ಅದು ಬ್ರಹ್ಮದತ್ತ ವರವೆಂದು ಕೆಲವರು ಹೇಳುತ್ತಾರೆ. ಅದರೆ ಅದು ಸತ್ಯವೇನು? ಈ ಲೇಖನವನು ಓದಿದರೆ ನಿನಗೆಂದು ಗೊತ್ತಾಗುವದು!]

ನಮಗೂ ಬ್ರಿಟಿಷರಿಂದ ಒಂದು ರಾಜಕೀಯ ಘಟನೆ ದೊರೆತಿದೆ. ಆ ಘಟನೆಯ ಪ್ರಕಾರ ನಮಗೆ ಪ್ರಾಪ್ತವಾಗಿರುವ ಸ್ವಾತಂತ್ರ್ಯ ಸವಿಯನ್ನು ನಾವೂ ಸ್ವಲ್ಪ ಸ್ವಲ್ಪ ಸವಿದು ಬಲ್ಲೆವು. ಬಿಹಾರ, ಯು ಪಿ ಗಳಲ್ಲಿಯ ಕಾಂಗ್ರೆಸ್ಸೀ ಮಂತ್ರಿಮಂಡಲಗಳ ರಾಜಿನಾಮೆಯ ಪ್ರಕರಣ ಇನ್ನೂ ನಮ್ಮ ಮನಸ್ಸಿನಲ್ಲಿ ಹೊಸತಾಗಿ ಇದೆ. ನಮಗೆ ಸ್ವರಾಜ್ಯವು ದೊರೆತರೂ, ಆಳರಸರ ಸತ್ತೆ ನಮ್ಮ ಮೇಲೆ ಯಥಾ ಪ್ರಕಾರ ನಡೆದು ಇದೆ ಅಲ್ಲ, ಅದರ ಬಿಗಿತ ಈಗ ಇನ್ನೂ ಸ್ವಲ್ಪ ಹೆಚ್ಚಾಗಿದೆ ಎಂದರೂ ಸಲ್ಲುವದು. ಅಂಥಹದೇ ರಾಜಕೀಯ ಘಟನೆಯು ರಷ್ಯನರಿಗೆ ದೊರೆತಿರುವದು. ಅದು ಬ್ರಹ್ಮದತ್ತ ವರವೇ ಅಥವಾ ಬ್ರಹ್ಮ ಶಾಪವೇ? ಎಂಬುದನ್ನು ನೀವೆ ಊಹಿಸಿಕೊಳ್ಳಿ.

ರಷ್ಯದ ಸರ್ವಾಧಿಕಾರಿ, ಬ್ರಿಟಿಷ ಆಳರಸರಿಗೆ ಯಾವುದರಲ್ಲಿಯೂ ಕಡಿಮೆಯಾಗಿಲ್ಲ. ಅಬಿಸೀನಿಯದ ಪ್ರಕರಣ, ಚೀನದ ಮಾತು, ಸ್ಪೇಯಿನಿನ ಸಂಗತಿ ಎಲ್ಲಾ ಆಲೋಚಿಸಿಕೊಳ್ಳಿ. ಸ್ವಾರ್ಥವನ್ನು ಬಿಟ್ಟು ಪರಾರ್ಥವನ್ನು ಎಣಿಸುವವರು—ಇವರು ಎಷ್ಟು ಮಾತ್ರಕ್ಕೂ ಅಲ್ಲ. ಸ್ವಾರ್ಥ ಸಾಧನೆಯ ಮುಂದೆ ನೀತಿ, ನ್ಯಾಯಗಳ ವಿಚಾರ ಕೂಡ ಇವರಿಗಿಲ್ಲ. ತೋರಿಕೆಗೆ ಅವರು ಬ್ರಿಟಿಷರು, ಇವರು ಇಟಾಲಿಯನರು, ಅವನು ಹಿಟ್ಲರ, ಇವನು ಸ್ಟಾಲೀನ ಎಂಬ ಹಾಗೆ ಬಾಳಿಯದಲ್ಲಿ ಕಚ್ಚಾಡಿಕೊಳ್ಳುತ್ತಿರುವವರಂತೆ ಕಾಣುತ್ತಾರೆ. ಆದರೆ, ಸ್ವಾರ್ಥರಕ್ಷಣೆಯ ಪ್ರಶ್ನೆಬಂದಾಗ ಇವರೆಲ್ಲರ ಬಣ್ಣ ಒಂದೆ. ಬ್ರಿಟಿಷ ಆಳರಸರು ತಮ್ಮ ಸ್ವಾರ್ಥವನ್ನು ಬಲಿಗೊಟ್ಟು ನಮಗೆ ಸ್ವಾತಂತ್ರ್ಯ ದಾನ ಮಾಡಿಯಾರೆ? ಸ್ಟಾಲೀನ ತನ್ನ ಸ್ವಾರ್ಥಕ್ಕೆ ತಿಲಾಂಜಲಿಯನ್ನಿತ್ತು ರಷ್ಯನರಿಗೆ ಅವರ ವಿಚಾರ ಸ್ವಾತಂತ್ರ್ಯ—ಹಕ್ಕು ಬಾಧ್ಯತೆ ಸ್ಥಾನಮಾನಗಳನ್ನು ಕೊಟ್ಟಾನೆ? ಸರ್ವಥಾ ಇಲ್ಲ. ಬ್ರಿಟಿಷರು ನಮಗೆ ಕೊಟ್ಟದೆಂಬ ಆ ಸ್ವರಾಜ್ಯದಂತೆಯೇ, ಸ್ಟಾಲೀನನು ರಷ್ಯನರಿಗೆ ಕೊಟ್ಟಾ ಸ್ವಾತಂತ್ರ್ಯವು ಬರಿಯ ಕಣ್ಣುಕಟ್ಟು ದೊಡ್ಡದೊಂದು ಮೋಸ.

## ಅಲ್ಲಿ ಮತದಾನದ ಸ್ವಾತಂತ್ರ್ಯವಿಲ್ಲ

ನವೀನ ರಾಜಕೀಯ ಘಟನೆಯ ಪ್ರಕಾರ ಸ್ಟಾಲೀನನು ಜನರಿಗೆ ಮತದಾನದ ಸ್ವಾತಂತ್ರ್ಯ ಕೊಟ್ಟಿರುವನೆಂದು ಹೇಳುತ್ತಾರೆ. ಆದರೆ ಅದು ಯಥಾರ್ಥವಲ್ಲ. ಕೇಳಿ—'ಮೊನ್ನೆ ನಡೆದ ಚುನಾವಣೆಯಲ್ಲಿ ಬೊರಿಸ್ಕಿಯ ಮತದಾರರು ಆ ಕಡೆಯಿಂದ ಸರಕಾರದ ಪರವಾಗಿ ನಿಂತ ಉಮೇದ್ವಾರ ನಿಕಿಟಿನ ಎಂಬವನನ್ನು ವಿರೋಧಿಸಿ ಆಂಡ್ರೀಫ ಎಂಬ ತಮ್ಮವನೊಬ್ಬನನ್ನು ಉಮೇದ್ವಾರಿಕೆಗೆ ಮುಂದೆ ಮಾಡಬೇಕೆಂದು ನಿರ್ಣಯಿಸಿದರು. ಆದರೆ, ನಿಲೋಫ್ ಎಂಬ ಒಬ್ಬ ಸ್ಟಾಲೀನನ ಕಡೆಯ ಏಜಂಟನು ಅದು ಕೂಡದೆಂದು ಹೇಳಿ ಆಂಡ್ರೀಫನ ಉಮೇದ್ವಾರಿಕೆಯನ್ನು ಹಿಂತೆಗೆಯಿಸಿದನು. ಜನರು ಉದ್ರೇಕಗೊಂಡರು. ಘಟನೆಯ ಪ್ರಕಾರ ತಮಗೆ ಪ್ರಾಪ್ತವಾದ ಅಧಿಕಾರವನ್ನು ನಿಲೋಫ್ ಕಿತ್ತುಕೊಂಡನೆಂದರು. ಅದೇ ದಿನ ರಾತ್ರಿ ನಿಲೋಫನ ಕೊಲೆಯಾಯಿತು. ಪೋಲೀಸರು ಬಂದು ಆಂಡ್ರಿಫನನ್ನು ಕೈದುಮಾಡಿದರು. ಕಸಿದಲೇ ಅವನ ವಿಚಾರಣೆ ಮಾಡಿ ಗುಂಡುಹೊಡೆದು ಕೊಂದುಬಿಟ್ಟರು' ಎಂದು ರುಯಿಟರನು ಬರೆದಿದ್ದಾನೆ. ಜನರಿಗೆ ಚುನಾವಣೆಯಲ್ಲಿ ತಮ್ಮ ಕಡೆಯ ಉಮೇದುವಾರನನ್ನು ನಿಲ್ಲಿಸುವ ಅಧಿಕಾರವು ಇಲ್ಲದ ಸ್ವಾತಂತ್ರ್ಯವು ಅದೆಂತಹ ಸ್ವಾತಂತ್ರ್ಯ? ಸ್ವಾತಂತ್ರ್ಯದ ಹೆಸರಿನಲ್ಲಿ ಅದು ಸ್ವೇಚ್ಛಾಚಾರ ಆಗಿರುವದು ತಾನೆ?

ಚುನಾವಣೆಗಿಂತ ಉಮೇದ್ವಾರರಲ್ಲಿ ಹೆಚ್ಚಿನವರೆಲ್ಲ ಸ್ಟಾಲೀನನ ಗುಪ್ತಚಾರದಳಕ್ಕೆ ಸೇರಿದ ಬೇರೆ ಬೇರೆ ಸಣ್ಣ ದೊಡ್ಡ ನೌಕರಚಾಕರರಾಗಿರುವರು, ಉಳಿದವರು ಸ್ಟಾಲೀನನು ಹೇಳಿದಂತೆ ಕೇಳುವ 'ಹಾದಿ ಬಸವಣ್ಣ'ರಾಗಿರುವರಂತೆ.

### ಮತ್ತೇನು?

ಮತದಾನವು ಗುಪ್ತವಾಗಿಡುವರೆಂದು ಪ್ರಕಟವಾಗಿದೆ ಪರಂತು, 'ಆದರೆ ' ಎಂಬುದನ್ನು ಆ ಮಾತಿಗೆ ಜೋಡಿಸಿದ್ದಾರೆ. ಸ್ಟಾಲೀನನ ಗುಪ್ತಚಾರದಳದ ವಕ್ರದೃಷ್ಟಿಗೆ ಬಿದ್ದ ಯಾರೂ ಚುನಾವಣೆಗಳಲ್ಲಿ ಉಮೇದ್ವಾರರಾಗಿ ನಿಲ್ಲಕೂಡದು. ಆದ್ದರಿಂದ ಬಹುತೇಕ ಉಮೇದ್ವಾರರು ಸರಕಾರಿ ಪಕ್ಷದವರಾಗಿದ್ದಾರೆ. ವಿರೋಧಿಪಕ್ಷದವರೆಂಬವರು ನಿಜವಾಗಿಯೂ ಯಾವ ಪಕ್ಷಕ್ಕೂ ಸೇರದವರು, ಅಂದರೆ ಸ್ಟಾಲಿನನು ಹೇಳುವದು ಮಾಡುವದರೊಂದಿಗೆ ಪ್ರತ್ಯಕ್ಷ ಸಹಾನುಭೂತಿಯನ್ನು ತೋರಿಸುವವರ. ಈ ಎರಡು ಪಕ್ಷಗಳನ್ನು ಸೇರದವರಿಗೆ ರಷ್ಯದಲ್ಲಿ ಉಳಿಗಾಲವಿಲ್ಲ.

### ಜನರ ಗತಿ.

ಸ್ಟಾಲೀನನೊಂದಿಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಯಾವುದೇ ವಿಧಾನದಿಂದ ಸಹಾನುಭೂತಿಯನ್ನು ತೋರಿಸದ ಉಮೇದ್ವಾರನಿಗೆ ಓಟ ಕೊಟ್ಟರೆ, ಮುಂದೆ ಜನರು ಪ್ರಾಣವನ್ನು ಕೈಯಲ್ಲಿ ತೆಗೆದುಕೊಂಡೇ ಓಡಾಡಬೇಕು. ಅವರ ಅವಸಾನ ಎಲ್ಲಿ ಹೇಗೆ ಆಗಬಹುದೆಂಬುದನ್ನು ಯಾರೂ ಹೇಳುವಂತಿಲ್ಲ. ಚತುರೋಪಾಯಗಳಿಂದ ಸ್ಟಾಲೀನನ ವಿರೋಧಿ ಉಮೇದ್ವಾರರನ್ನು ಸಮರ್ಥಿಸುವ ಜನರನ್ನು ಕಂಡು ಹಿಡಿದು, ಅವರನ್ನು ವಿದ್ರೋಹಿಗಳೆಂದು ಸಾರುವರು. ಆ ಮೇಲೆ ಅವರಿಗೆ ರಷ್ಯದಲ್ಲಿ ಯಾವ ನಾಗರೀಕ ಹಕ್ಕುಬಾಧ್ಯತೆಗಳೂ ಇರುವುದಿಲ್ಲ. ಯಾರು ತನ್ನನ್ನು ಅಥವಾ ಪಕ್ಷೀಯನನ್ನು ಸಮರ್ಥಿಸುವದಿಲ್ಲವೋ, ಅವನು ತನ್ನ ಅಥವಾ ತನ್ನ ಪಕ್ಷದ ವಿದ್ರೋಹಿ ಎಂದೇ ಸ್ಟಾಲೀನನ ನಿರ್ಧಾರವಾಗಿರುವದು. ಮತ್ತೇನು? ಅಂಥ ಜನರಿಗೆ ಗುಂಡಿನ ಬಾಯಿಗೆ ತಲೆಕೊಡುವದಲ್ಲದೆ, ತಪ್ಪಿಸಿಕೊಳ್ಳುವ ಬೇರೆ ಉಪಾಯವು ಇರುವದೇ ಇಲ್ಲ.

ನಿಜವಾದ ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಂಡು, ಜನರಿಗೆ ಮತದಾನದ ಹಕ್ಕು ಸ್ವಾತಂತ್ರ್ಯಗಳನ್ನು ಕೊಟ್ಟಿರುವದೆಂಬ ಈ ವಿಧದ ಘಟನೆಗಳಿದ್ದರೇನು? ಈ ಘಟನೆಯು ಕಡೆಗೆ ಬೆರಳುಕೊಟ್ಟು—'ನೋಡಿ, ಸ್ಟಾಲೀನ ಕೂಡ ನಮ್ಮ ಪಕ್ಷಕ್ಕೆ ಬಂದ, ಸರ್ವಾಧಿಕಾರವನ್ನು ಬಿಟ್ಟುಕೊಟ್ಟು, ಪ್ರಜಾಮತದಂತೆ ಆಳಲಿಕ್ಕೆ ನಿರ್ಧರಿಸಿದ್ದಾನೆ'' ಎಂದು ಸಮಾಜವಾದಿಗಳ ವಿರೋಧಿಗಳು ಹೇಳುತ್ತಾರೆ. 'ನೋಡಿ ರಷ್ಯ ಇನ್ನು ಸರ್ವಾಧಿಕಾರವು ಇಲ್ಲವೇ ಇಲ್ಲ. ನಮ್ಮ ಸಮಾಜವಾದವೆಂದರೆ ಸಾಮಾನ್ಯವೆ?' ಎಂದು ಸಮಾಜವಾದಿಗಳು ಹೇಳುತ್ತಾರೆ. ಎಲ್ಲರೂ ಹೊಗಳುವ ಸ್ಟಾಲೀನನ ಆ ಘಟನೆಯಲ್ಲಿ ಇರುವದೇನು? ಅವನು ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡು 'ಬೇಕಾದುದೆಲ್ಲಾ ನಿಮಗೆ'—ಎಂದಿದ್ದಾನೆ! ನಮ್ಮ ಬ್ರಿಟಿಷ ಆಳರಸರು—'ಮನೆ ಎಲ್ಲಾ ನಿಮ್ಮದೇ, ಬೀಗದ ಕೈ ಮಾತ್ರ ನಮ್ಮೊಂದಿಗಿರಲಿ' ಎನ್ನುತ್ತಿರುವುದಕ್ಕೂ ಸ್ಟಾಲೀನನ ಆ ಮಾತಿಗೂ ಎಳ್ಳಷ್ಟು ಅರ್ಥವ್ಯತ್ಯಾಸವು ಇಲ್ಲ, ನೋಡಿ!

ಯಾರ ಕೊಲೆಯಾಗಿ ಸಮಾಜವಾದಿಗಳ ಸತ್ತೆ ನಡೆಯುತ್ತಿರುವ ಈ ಕಾಲದಲ್ಲಿ ರಷ್ಯದ ಜನರಿಗೆ ಸುಖವಿಲ್ಲವೆ? ಸಂತೋಷವಿಲ್ಲವೆ? ರಷ್ಯದ ಬಡತನ ದೂರವಾಗಿಲ್ಲವೆ? ಸಾಂಪತ್ತಿಕ ಉನ್ನತಿ ಆಗಿರುವದಲ್ಲವೇ? ಯಾರು ಅಲ್ಲವೆನ್ನುತ್ತಾರೆ? ಹೊಸ ರಾಜಕೀಯ ಘಟನೆಯಿಂದಾಗಿ ಸ್ಟಾಲೀನನು ತನ್ನ ಸರ್ವಾಧಿಕಾರ ಪಟ್ಟದಿಂದ ಇಳಿದಿಲ್ಲ. ಅವನ ಅಧಿಕಾರ, ಸ್ವಾರ್ಥಕ್ಕೆ ತಿಲಮಾತ್ರಕ್ಕೆ ಚ್ಯುತಿಯುಂಟಾಗಲಿಲ್ಲ ಎಂದು ತೋರಿಸಿಕೊಡುವದಷ್ಟೆ ಈ ಲೇಖನದ ಉದ್ದೇಶ. ಅಧಿಕಾರ ಸ್ವಾತಂತ್ರ್ಯ ಬಿಟ್ಟು ಜನರು ಎಷ್ಟು ಸುಖಸಂತೋಷಗಳನ್ನು ಪಡೆಯಬಹುದೋ ಅಷ್ಟು ರಷ್ಯದ ಜನರಿಗೆ ನಿಜಕ್ಕೂ ಪ್ರಾಪ್ತವಾಗಿದೆ. ಅಷ್ಟಕ್ಕೂ ಗತಿಯಿಲ್ಲದ ನಮ್ಮ ದೃಷ್ಟಿಯಿಂದ, ರಷ್ಯದ ಜನರು ಭಾಗ್ಯಶಾಲಿಗಳೆಂದೇ ಒಪ್ಪಿಕೊಳ್ಳಬೇಕು. ಆದರೆ, ರಷ್ಯದ ನವೀನ ರಾಜಕೀಯ ಘಟನೆಯಿಂದಾಗಿ ಸರ್ವಾಧಿಕಾರದಿಂದ ದೇಶಕ್ಕಾಗುವ ಸಾಧಕಬಾಧಕ ಹಾನಿ ಲಾಭಗಳಲ್ಲಿ ಕೊಂಚವಾದರೂ ವ್ಯತ್ಯಾಸವು ಉಂಟಾಗಿಲ್ಲ ಅಷ್ಟೆ.

---

### ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಧಾರವಾಡ

**ಲವಂಗಗಳನ್ನು ಸಂಪೂರ್ಣ ಬಹಿಷ್ಕರಿಸಿರಿ**

ಈಗ ಮುಂಬಯಿಯ ಮಾರ್ಗವಾಗಿ ಜಂಜಿಬಾರಿನ ಲವಂಗಗಳ ಒಂದೇ ಸವನೆ ಬರಹತ್ತಿದ್ದು ವೃತ್ತಪತ್ರಿಕೆಗಳ ಮುಖಾಂತರ ಮತ್ತು ನಮ್ಮ ಪ್ರಕಟಣೆಗಳ ಮುಖಾಂತರ ಎಲ್ಲರಿಗೆ ತಿಳಿದಿರಬೇಕು. ಸಾಕು ಇಲ್ಲಿಯ ವರೆಗೆ ಈ ಮಾರ್ಗವಾಗಿ ೨೫೦, ೩೦೦ ಚೀಲು ಹೊಸ್ಪೆ ಮೊನ್ನೆ ಒಳಗೆ ಲವಂಗದ ಚೀಲುಗಳು ಬಂದುವವು. ಈ ಲವಂಗಗಳು ಮುಂಬಯಿಯಲ್ಲಿಯೇ ಉಳಿಯದೆ, ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕಳಿಸಲಾಗಿದೆ. ಆಯಾ ಜಿಲ್ಲಾ ತಾಲೂಕ ಮತ್ತು ಗ್ರಾಮ ಕಾಂಗ್ರೆಸ್ ಕಮಿಟಿಯವರು, ಇವುಗಳು ತಮ್ಮ ಜಿಲ್ಲೆ, ತಾಲೂಕು ಮತ್ತು ಹಳ್ಳಿಗಳಲ್ಲಿ ಬಾರದಂತೆ ನೋಡಿಕೊಳ್ಳಬೇಕು ಮತ್ತು ಆಯಾ ಸ್ಥಳಗಳ ಕಿರುಕುಳ ಗಳ ಮತ್ತು ದೊಡ್ಡ ವ್ಯವಹಾರಸ್ಥರಿಂದ ಕಾಂಗ್ರೆಸ್ಸಿನವರು ಈ ಲವಂಗ ಬಹಿಷ್ಕಾರವನ್ನು ಹಿಂತೆಗೆಯುವ ವರೆಗೆ ಯಾವದೇ ತರದ ಲವಂಗಗಳನ್ನು ಖರೀದಿ ಮಾಡಬಾರದಾಗಿ ಅವರಿಂದ ವಚನ ತೆಗೆದುಕೊಳ್ಳಬೇಕು. ಈಗಾಗಲೇ ಚೀಲುಗಳು ಬಂದಿದ್ದರೆ ಅವುಗಳನ್ನು ಕಟ್ಟಿ ಸೀಲುಮಾಡಿಸಿ ಇಡಲು ಎಲ್ಲ ಬಗೆಯಿಂದಲೂ ಪ್ರಯತ್ನಿಸಬೇಕು. ಇದು ಸಾಧ್ಯವಾಗದ ಹೋದಲ್ಲಿ — ಶಾಂತ ರೀತಿಯಿಂದ ಪಿಕೆಟಿಂಗ್ ಆರಂಭಿಸಿ ಲವಂಗದ ವ್ಯಾಪಾರವನ್ನು ಸಂಪೂರ್ಣ ಬಂದುಮಾಡಿ ಈ ಬಹಿಷ್ಕಾರವು ಯಶಸ್ವಿಯಾಗುವಂತೆ ಮಾಡಬೇಕು.

ಕಾರ್ಯಕರ್ತರಿಗೆ ಜಂಜಿಬಾರಿನ ಲವಂಗಗಳಾವವು ಮತ್ತು ಬೇರೆ ಕಡೆಯಿಂದ ಬಂದ ಲವಂಗಗಳು ಯಾವವು ಎಂದು ತಿಳಿದುಕೊಳ್ಳುವುದು ತೊಂದರೆಯಾಗಬಹುದು. ಇದರ ಸಲುವಾಗಿಯೇ ರಾಷ್ಟ್ರಪತಿ ಸುಭಾಷ್ಚಂದ್ರ ಬೋಸರು ಎಲ್ಲ ಬಗೆಯ ಲವಂಗಗಳನ್ನು ಸಂಪೂರ್ಣ ಬಹಿಷ್ಕರಿಸಿರಿ ಎಂದು ಮೊನ್ನೆ ಹೇಳಿರುವರು. ಇದನ್ನು ಲಕ್ಷ್ಯದಲ್ಲಿಟ್ಟು ಕಾರ್ಯಕರ್ತರು ಕೆಲಸಮಾಡಬೇಕು ಮತ್ತು ಈ ಸಂಬಂಧೀ ಮಾಡಿದ ಕೆಲಸದ ವರದಿಯನ್ನು ನಮ್ಮ ಕಡೆಗೆ ಕಳುಹಿಸಬೇಕು.

**ಕರ್ನಾಟಕ ಏಕೀಕರಣ**

ಈ ವಿಷಯವಾಗಿ ನಾವು ಪ್ರಾಂ. ಕಾಂ. ಕಮಿಟಿಯ ಪ್ರಧಾನ ಕಾರ್ಯದರ್ಶಿ ಮತ್ತು ಮುಂಬಯಿಯ ಪ್ರಧಾನ ಮಂತ್ರಿ ಬಿ. ಜಿ. ಖೇರ ರೊಡನೆ ಆದ ಪತ್ರೋತ್ತರಗಳನ್ನು ಪ್ರಕಟಿಸಿದ್ದೇವೆ. ಆದರೆ, ಮೊನ್ನೆ ಕ. ಏಕೀಕರಣದ ಠರಾವಿನ ಬಗ್ಗೆ ಆದ ವಿದ್ಯಮಾನಗಳಿಂದ ಹಲವು ಜನರಲ್ಲಿ ಪ್ರಾಂ. ಕಾಂ. ಕಮಿಟಿಯ ಅಭಿಪ್ರಾಯ ವಿಷಯಗಳಲ್ಲಿ ಸಂದೇಹಬಂದಿರುವಂತೆ ಕಾಣುತ್ತದೆ. ಕಾರಣ, ಕ. ಪ್ರಾಂ. ಕಾಂ. ಕಮಿಟಿಯವರು ಈ ವಿಷಯವಾಗಿ ಎಳ್ಳಷ್ಟೂ ಅಲಕ್ಷ್ಯ ಮಾಡಿಲ್ಲ ಮತ್ತು ಮಾಡುವದಿಲ್ಲ ಎಂದು ಪುನಃ ಹೇಳಬಯಸುತ್ತೇನೆ. ಈ ವಿಷಯವಾಗಿ ಪ್ರಧಾನ ಮಂತ್ರಿಯವರೊಡನೆ ಪತ್ರವ್ಯವಹಾರ ನಡೆಸಿದ್ದೇವೆ. ಅಲ್ಲದೆ, ಇದು ಶೀಘ್ರದಲ್ಲಿಯೇ ಕೂಡಲಿರುವ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮುಂದೆ ಬರುವದು. ಅಲ್ಲಿ ಕೂಲಂಕಷವಾಗಿ ಚರ್ಚೆಯಾಗಿ ಮುಂದಿನ ಕಾರ್ಯಕ್ರಮವು ನಿಶ್ಚಯಿಸಲ್ಪಡುವದು.

ಗುದ್ಲೆಪ್ಪ ಹಳ್ಳಿಕೇರಿ, ಪ್ರ. ಕಾರ್ಯದರ್ಶಿ.


ನಿಷ್ಣಾತ ವೈದ್ಯರು ನಿಮ್ಮ ದಮ್ಮಿನ ಚಿಕಿತ್ಸೆಯನ್ನು ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ಮಿನಿಟುಗಳಲ್ಲಿ ಚುಟಕಿ ಹೊಡೆದಂತೆ ಗುಣಮಾಡುವೆನೆಂದು ಅವನು ಹೇಳಬಹುದೆಂದು ನಿಮಗೆ ಅನಿಸುವದೋ? ದಮ್ಮನ್ನು ತತ್ಕಾಲಕ್ಕೆ ಗುಣಮಾಡುವ ಉಪಾಯವು ಎಫಿಡಿ ಮುಂತಾದ ಇಂಜೆಕ್ಷನಗಳು ಅಥವಾ ಹೊಗೆ ತೆಗೆದುಕೊಳ್ಳುವ ಔಷಧಗಳು. ಆದರೆ ಇವು ದಮ್ಮನ್ನು ಪೂರ್ಣ ಗುಣಪಡಿಸಲು ತೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ. ಪರಿಣಾಮದಲ್ಲಿ ಈ ಔಷಧಗಳು ಗಂಟಲದ ಹಾಗೂ ಶ್ವಾಸನಲಿಗಳ ಬೇನೆಯನ್ನು ಹೆಚ್ಚಿಸಿ ರೋಗಿಯನ್ನು ಕಾಯಂ ದಮಿನವನನ್ನಾಗಿ ಮಾಡಿಬಿಡುವವು.

ದಮ್ಮು ಮೆಲ್ಲಮೆಲ್ಲಗೆ ಆದರೆ ನಿಶ್ಚಿತವಾಗಿ ಗುಣಮಾಡುವ ಔಷಧಗಳಲ್ಲಿ ಪುರೋಹಿತ ಶ್ವಾಸಹಾರಿ ಇದೊಂದ ಪ್ರಭಾವಶಾಲಿಯಾದ ಔಷಧವಾಗಿದೆ. ದಮ್ಮು, ದಾಸ ಹತ್ತುವದು; ಮುಂಜಾವಿನ ರಸಿಕೆ ಕೂಡದಾಸ ಮಾಡುವ ಕೆಮ್ಮು ಮತ್ತು ಪುಪ್ಪುಸದ ನಾನಾತರ ವಿಕಾರಗಳನ್ನು ಗುಣಪಡಿಸಲು ಈ ಔಷಧದ ಯೋಜನೆಯನ್ನು ನಿರ್ಭೀತಿಯಿಂದ ಮಾಡಬೇಕು. ಇದರಿಂದ ಸಾವಿರಾರು ಮನುಷ್ಯರು ರೋಗಮುಕ್ತರಾಗಿರುವರು. ಪ್ರತ್ಯೇಕ ಊರಲ್ಲಿ ಕೆಮಿಷ್ಟ ಇದ್ದವ ಅಂಗಡಿಕಾರರಲ್ಲಿ ಆರು ರೂ ೩ ೪/೮. ಛಪ್ಪತ್ತು ರೂ ೬. ಈ ಪ್ರಕಾರ ಬೇರೆ ಬೇರೆ ಬೆಲೆಯ ಸಣ್ಣ ದೊಡ್ಡ ಸೀಸೆಗಳಲ್ಲಿ ದೊರಕುವದು.

ಡಾ ಪುರೋಹಿತ ಶ್ವಾಸಹಾರೀ

ಮಂಗಳೂರ — ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ.

THE

# Bank of Mangalore Ltd.,

**MANGALORE**

ESTD 1931

*Branches* -

**Panemangalore, Mudabidri & Padubidri.**

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly

***Saving Bank deposit*** 3½ ***on daily balances.***

**All kinds of banking business transacted**

## ಮದನಕಾಮೇಶ್ವರಿ ಲೇಹ್ಯ

**ಅತ್ಯಂತ ಬಲಕಾರಿ.**

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ ಅಂಡ್ ಕೋ,
ಆಯುರ್ವೇದಿಕ್ ಔಷಧ ಶಾಲೆ
P O Peridepi (ನೆಲ್ಲೂರು ಜಿ)

## HOUNSA

## ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋರ್ಕಟ್ಟಾ ಬಜಾರ್, ಮಂಗಳೂರು

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,— ಅತ್ಯುತ್ಕೃಷ್ಟವಾದ

## 'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

## ಈ ದಿನವೇ ಚಂದಾದಾರರಾಗಿರಿ.

# S. U. N. & Co.,

*Silk Merchants,*

Chaukhamba BENARES CITY

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಸೇರಿಯ ಬೇಕು. ಈಗ ಕ್ರಯ ತುಂಬಾ ಸುಲಭ. ಚಾಕ್ರಿ ಮಾಲು 18 ಮೊಳದ 2¼ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150, ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟ ಶೀರೆಗಳು ರೂ 35ರಿಂದ ರೂ 55 ಮಡಿ ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 10, ಅಗಲ 2¼ ರೂ 20ರಿಂದ 35ರ ವರೆಗೆ: ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ.

## ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ,

ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

# ಲಿಮ್ಡಾ ಸೋಪು

## ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ - ಬೊಂಬಾಯಿ & ಮದ್ರಾಸು

ಒದಗಿಸಿಕೊಡುವವರು—

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd. I wish the same very success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**
*Minister of Labour*

*4-10-1937*

**Bhuvanendra Products Ltd, Katapady, S. Kanara**

"...ಮನುಷ್ಯನಿಗೆ ಶೋಭಿತವೆಂಬುದು ಕಟ್ಟು ದುಷ್ಟ... ಯೌವನದ ಮದ. ರಕ್ತದ ಹುಮ್ಮಸ್ಸು ಇಂದುಮ್ಮುಂದು ನೋಡದೆ, ತಾನು ಮಾಡುವ ಕಾರ್ಯದಿಂದ ಪರಿಣಾಮವೇನಾದೀತೆಂದು ಕೂಡ ಪರ್ಯಾಲೋಚಿಸದೆ ಹೀಗೆ ದುಡುಕುವುದೆಂದ ರೇನು? ಏನು ಕೇಳುವವರೇ ಇಲ್ಲವೆ?" ಮಾಧವರಾಯರು ಓಡುತ್ತೋಡುತ ನಾನಿದ್ದಲ್ಲಿಗೆ ಬಂದು, ಮೇಲಿನ ಶಬ್ದಗಳನ್ನೆಲ್ಲಾ ಒಂದೇ ಉಸಿರಿನಲ್ಲಿ ನೂಕಿಬಿಟ್ಟರು.

ನಾವು ಅಂದರೆ ಮತ್ತಾರೂ ಅಲ್ಲ—ನಾವೇ ಐದು ಮಂದಿ ಮಿತ್ರರಿದ್ದೆವು. ಗಜೇಂದ್ರ ಬಾಳಿಗರು, ಹರಿದಾಸ ಕಾಮತರು, ವಸುಮತಿ ಪೈಗಳು, ಸಂಗೀತ ರಾಯರು ಮತ್ತು ನಾನು, ಮಾಧವರಾಯರು ಓಡುತ್ತೋಡುತ ಬಂದು ಮಾತನಾಡಿದ ರೀತಿಯನ್ನು ನೋಡಿ, ವಿಶೇಷವೇನೋ ನಡೆದಿರಬೇಕೆಂದು ನಮಗೆಲ್ಲರಿಗೂ ಗ್ರಹಿಕೆಯಾಯಿತು. ಆದರೆ ಆ ವಿಶೇಷ ವಿಷಯವೇನೆಂದು ಮಾತ್ರ ತಿಳಿಯಲಿಲ್ಲ.

"ಮಾಧವರಾಯರೇ, ಏನಿದು ಅವಸರ, ಗಡಿಬಿಡಿ! ನಿಮ್ಮ ಅವಸ್ಥೆ ನೋಡಿದರೆ ಏನೋ ಆಗಬಾರದ್ದು ಆದಂತೆ ತೋರುತ್ತದೆ. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ನಡೆದುದೇನೆಂದು ಮತ್ತೆ ಕ್ರಮವಾಗಿ ಹೇಳಿರಿ." ಎಂದು ನಾನು ಅವರನ್ನು ನನ್ನ ಬಳಿಯಲ್ಲಿಯೇ ಕುಳ್ಳಿರಿಸಿದೆನು.

"ಇನ್ನು ಹೇಳುವುದೇನಿದೆ? ಇಲ್ಲದಿದ್ದರೂ ಈದಿನ ಹುಡುಗರಿಗೆ ಕೇಳುವವರೇ ಇಲ್ಲ ಬಿಡಪ್ಪಾ!" ಮಾಧವರಾಯರೆಂದರು.

"ಇನ್ನೂ ನೀವು ಒಗಟು ಮಾತನಾಡುತ್ತಿರುವಿರಲ್ಲವೆ? ಅದುದೇನೆಂದು ಮೊದಲು ಹೇಳಿರಿ." ಬಾಳಿಗರೆಂದರು.

"ಇನ್ನು ಆಗುವುದೇನಿದೆ? ಪಾದರಕ್ಷೆಗಳಿಂದ ಅಗ್ರಪೂಜೆಯಂತು ಆಯಿತು." ಮಾಧವರಾಯರು ಉತ್ತರವಿತ್ತರು.

"ಪೂಜೆಯಾದುದು ಯಾರಿಗೆ?" ಪೂಜೆ ಮಾಡಿದವನಾದರೂ ಯಾರು?" ಸಂಗೀತರಾಯರು ಆತುರವನ್ನಿಟ್ಟರು [ಆತಾಪನವಿಳಿದರು].

"ಪೂಜೆ ಮಾಡಿದವನು ಮತ್ತಾರೂ ಅಲ್ಲ. ನಮ್ಮವನೇ ಅವನು." ಮಾಧವರಾಯರು ಹೇಳಿದರು.

"ಪಾದರಕ್ಷೆಗಳಿಂದ ಅಗ್ರಪೂಜೆಯೇ? ಛೀ, ಛೀ, ಕೇಳಲಾರೆ! ಕೇಳಲಾರೆ! ಈ ಬಿರು ನುಡಿಗಳನ್ನು ಕೇಳಲಾರೆನು" ಪೈಗಳು ಕಿವಿಯೊಳಗೆ ಕೈಬೆರಳುಗಳನ್ನು ತುರುಕಿಸಿ ಅಂದರು.

"ನಮ್ಮವನೇ ಅಂದರೆ ಯಾರು?" ಹರಿದಾಸರು ಮೊರೆಯಿಟ್ಟರು.

"ನಮ್ಮವನೇ ಅಂದರೆ, ನಮ್ಮ ಪೈಕಿಯೇ ಒಬ್ಬನು." ಪುನಃ ಮಾಧವರಾಯರೆಂದರು.

"ನಮ್ಮಲ್ಲಿ ಈ ಐದು ಮಂದಿಯೊಳಗೆ ಯಾರೂ ಇತ್ತೀಚೆಗೆ ಅಂತಹ ಕೆಲಸವನ್ನು ಮಾಡಿದುದಿಲ್ಲ. ನೀವೇನಾ..." ಎಂದು ಸಂಗೀತರಾಯರು ಇನ್ನೊಂದು ಹಾಡು ಹೇಳುವಾಗಲೇ, ನಡುವೆ ಬಾಯಿ ಹಾಕಿಕೊಂಡು ಮಾಧವರಾಯರೆಂದರು," ನಮ್ಮವರೇ ಎಂದರೆ ನಾವೇ ಇಷ್ಟು ಮಂದಿ ಏನು? ನಮಗೆ ಬೇಕಾದವರು ಇನ್ನಾರೂ ಇಲ್ಲವೆ-ಆನಂದರಾಯನಂಥವರು!"

"ಏನೇನು? ಮೆಟ್ಟಿನಿಂದ ಹೊಡೆದವನು ಆನಂದರಾಯನೆ?" ನಾವೆಲ್ಲರೂ ಒಮ್ಮೆಗೆ ಅಂದೆವು. "ಅಷ್ಟು ಸಜ್ಜನನು! ಅವನೆಂದೂ ಇಂತಹ ಕೆಲಸವನ್ನು ಮಾಡಲಿಕ್ಕಿಲ್ಲ. ನಾನು ನಂಬಲೊಲ್ಲೆ." ಹರಿದಾಸರು ಒಂದು ಉಪಕಥೆಯನ್ನು ಹೇಳಿದರು.

"ನೀವು ನಂಬದಿದ್ದರೆ ಬಿಟ್ಟುಬಿಡಿ. ಅಂತು ಮೆಟ್ಟಿನಿಂದ ಹೊಡೆದವನು ಅವನೇ—ಆನಂದರಾಯನು." ಸ್ವಲ್ಪ ಗಡುಸಾಗಿ ಮಾಧವರಾಯರು ಪ್ರತ್ಯುತ್ತರವಿತ್ತರು.

"ಇರಲಿ, ಆನಂದರಾಯನು ಪಾದರಕ್ಷೆಗಳಿಂದ ಹೊಡೆದುದಾದರೂ ಯಾರಿಗೆ?" ಪೈಗಳು ಅಷ್ಟೇ ಸವಾಲು ಹಾಕಿದರು.

"ಅವರ ಹೆಸರನ್ನು ಹೇಳಬೇಕೆ? ಮೆಟ್ಟಿನ ಪೆಟ್ಟು ತಿಂದು ಅವರಿಗಾದ ಅಪಮಾನವು ಸಾಲದೆ? ಈಗ ನಿಮ್ಮಂತಹ ಪತ್ರಿಗಳ ಬಾಯಿಯಲ್ಲಿ ಬಿದ್ದು ಅವರ ಹೆಸರು ಇನ್ನೂ ಪ್ರಕಟವಾಗಬೇಕೆ?" ಮಾಧವರಾಯರು ತಿರಸ್ಕಾರದಿಂದ ನುಡಿದರು.

"ಹಾಗಾದರೆ ನೀವದರ ಪ್ರಸ್ತಾಪವನ್ನು ನಮ್ಮೊಡನೆ ಎತ್ತಿದುದೇಕೆ? ನೀವೇ ಅದನ್ನು ಗುಟ್ಟಿನಲ್ಲಿ ಮುಚ್ಚಿಡಬಹುದಿತ್ತಲ್ಲವೆ? ಪತ್ರಿಕೆಯೆಂದರೆ ನೀವೇ!" ಬಾಳಿಗರು ಪ್ರತ್ಯುತ್ತರವಿತ್ತರು.

# ಅಗ್ರಪೂಜೆ

ಬರೆದವರು ವ ಚಿತ್ರಕಾರರು:—ಬಿ. ಆರ್. ಕಾಮತ್.

"ಹೌದೌದು. ಏನಾದರು ಒಂದಿಷ್ಟು ನಡೆದರೆ ಪೇಟೆಯಲ್ಲೆಲ್ಲಾ ಡಂಗುರ ಹೊಡೆಯುವುದು ಇವರು, ಮತ್ತೆ ನಮ್ಮನ್ನೆಲ್ಲಾ ಪತ್ರಿಕೆಗಳೆಂದು ದೂರುವುದು." ಬಾಳಿಗರ ತಾಳಕ್ಕೆ ಸರಿಯಾಗಿ ಸಂಗೀತರಾಯರು ರಾಗವೆಳೆದರು.

"ಅವರು ದೊಡ್ಡ ಕುಲದಲ್ಲಿ ಹುಟ್ಟಿದವರಾದುದರಿಂದ, ಅವರ ಹೆಸರನ್ನು ಹೇಳಲು ನಾನಿಷ್ಟು ಹಿಂಜರಿಯುವುದು. ದೊಡ್ಡವರ ಮನೆಯ ಪಂಚಾಯಿತಿ ನಮಗೇಕಪ್ಪಾ!" ಮಾಧವರಾಯರು ದೈನ್ಯತೆಯಿಂದ ಅಂದರು.

"ಅವರು ಸಾಹುಕಾರರೆ?" ಕಾಮತರು ಕೇಳಿದರು.

"ಸಾಹುಕಾರರಾದರೇನು? ಬಡವನಾದರೇನು? ಮೆಟ್ಟಿನ ಪೂಜೆಯಾದರೆ ಇಬ್ಬರಿಗೂ ಆಗುವ ಅವಮಾನವು ಒಂದೇ ಅಲ್ಲವೇ?" ಮಾಧವರಾಯರು ತಲೆದೂಗಿ ಉಸುರಿದರು.

"ಹಾಗಾದರೆ ಅವರ ಪೈಕನ್ನಾದರೂ ಹೇಳಿರಿ." ನಾನಂದೆ.

"ಅವರು ನಾಯ್ಕರ ಕುಟುಂಬದವರು." ಮಾಧವರಾಯರು ಜಂಭದಿಂದಂದರು.

"ಅವರು ನಾಯ್ಕರೆಂದಿರೇ? ಯಾರವರು ಜನಾರ್ಧನ ನಾಯ್ಕರೆ?" ಸಂಗೀತರಾಯರು ಮೆಲ್ಲನೆ ಕೇಳಿದರು.

"ನಹಿಂ."

"ಅವನನ್ನು ಹೊಡೆದುದಾದರೂ ಏಕೆ?" ನಾನು ಅಡ್ಡಸವಾಲು ಹಾಕಿದೆ.

"ಮತ್ತೇಕೂ ಅಲ್ಲ. ಆಗಾಗ್ಗೆ ಅವರು ಮನೆಗೆ ಬಂದು ಬಹಳ ಪೀಡಿಸುತ್ತಿದ್ದರಂತೆ. ಕಪ್ಪೊಳಗಿನ ಲೇವಾದೇವಿಯು ಏನಿದ್ದರೂ, ಮನೆಗೆ ಬರಕೂಡದೆಂದು ಒಂದೆರಡು ಬಾರಿ ಆನಂದರಾಯರು ಹೇಳಿದರು ಅವರು ಕೇಳಲಿಲ್ಲವಂತೆ. ಈ ದಿನ ಬೆಳಗಾತವೇ ಬಂದು ಕೂತಿದ್ದರಂತೆ. ಆನಂದರಾಯರಿಗೆ ಅವರನ್ನು ಕಂಡೊಡನೆ ಇಲ್ಲದ ಕೋಪ ಬಂತು. ಎಡಗಾಲಿನ ಮೆಟ್ಟನ್ನು ಕಳಚಿ ಹಿಂದುಮುಂದು ನೋಡದೆ ಹೊಡೆದೇ ಬಿಟ್ಟರು." ಮಾಧವರಾಯರು ವಿವರಿಸಿ ಹೇಳಿದರು.

"ಅಲ್ಲ."

"ವೆಂಕಟೇಶ ನಾಯ್ಕರೆ?" ಬಾಳಿಗರು ಪ್ರಶ್ನಿಸಿದರು.

"ಹೂಂ—ಹೂಂ!"

"ಪದ್ಮನಾಭನಾಯ್ಕರೆ?" ಕಾಮತರು ಕೇಳಿದರು.

"ಹಾಗಾದರೆ ಅವರು ವಾಸುದೇವ ನಾಯ್ಕರೆ?" ನಾನು ವಿಚಾರಿಸಿದೆ.

"ಹೌದೌದು. ವಾಸುದೇವನಾಯ್ಕರಾಗಿರಬಹುದು." ಉಳಿದವರೆಲ್ಲರೂ ನನ್ನ ಮಾತಿಗೆ ಸೈ ಹಾಕಿದರು.

"ಅಲ್ಲವೇ ಅಲ್ಲ."

"ಹಾಗಾದರೆ ಮತ್ತಾರಿರುವರು ಅವರ ಮನೆಗೆ ಹೋಗುವವರು?" ಕಾಮತರು ವಿಚಾರಪೂರ್ಣರಾದರು. "ನನಗೆ ಗೊತ್ತಿದ್ದ ಮಟ್ಟಿಗೆ ಇನ್ನಾರೂ ಇಲ್ಲ." ಬಾಳಿಗರು, ಖಂಡಿತವಾಗಿ ನುಡಿದರು. "ಈಗ ಹೇಳಿದವರಲ್ಲದೆ ಮತ್ತಾರೂ ನನಗೆ ತಿಳಿದಿಲ್ಲ" ಪೈಗಳು ಪಿಸುಗುಟ್ಟಿದರು.

"ಸರಿ ನೆನಪು ಮಾಡಿ ನೋಡಿರಿ. ಮತ್ತೆ ನಾನು ಹೆಸರು ಹೇಳಿದ ಮೇಲೆ 'ಅವರೇ ಏನು?' ಎಂದೆನ್ನಕೂಡದು."

"ಇನ್ನೂ ಯಾರೂ ಇಲ್ಲ." ಸಂಗೀತರಾಯರು ತಟ್ಟನೆ ಅಂದರು.

"ಸೋತೆವೆನ್ನಿ ಹಾಗಾದರೆ"

"ಸೋತೆವು." ನಾವೆಲ್ಲರೂ ಒಮ್ಮೆಗೆ ಅಂದೆವು.

"ಇನ್ನು ಇದನ್ನು ಬೇರೆ ಯಾರೊಡನೆಯೂ ಹೇಳುವುದಿಲ್ಲವೆಂಬುದಾಗಿ ಪ್ರಮಾಣ ಮಾಡಿ ಹೇಳಿರಿ."

"ಇಗೋ, ಪ್ರಮಾಣ ಪೂರ್ವಕವಾಗಿ ಹೇಳುತ್ತೇವೆ.—ನಾವಿದನ್ನು ಬೇರೆ ಯಾರೊಡನೆಯೂ ಹೇಳುವುದಿಲ್ಲ. ದೇವರಾಣೆ, ದೈತ್ಯರಾಣೆ, ದಾನವರಾಣೆ, ನಮ್ಮಾಣೆ, ನಿಮ್ಮಾಣೆ!"

"ನನ್ನಾಣೆ ಕೊಡುವುದೇಕೆ? ನನ್ನನ್ನು ಬೇಗನೆ ಕಳುಹಿಸಿಕೊಡುವ ಯೋಚನೆಯನ್ನು ಮಾಡಿರುವಿರಾ?" ಮಾಧವರಾಯರು ಮರುನುಡಿದರು.

"ಹಾಗಾದರೆ ದಸ್ತ! ನಿಮ್ಮಾಣೆ ಕೊಟ್ಟುದನ್ನು ಪುನಃ ತೆಗೆದುಕೊಳ್ಳುತ್ತೇವೆ. ಅಂತು ಅಗ್ರಪೂಜೆಯಾದ ಆಸಾಮಿಯು ಯಾರೆಂದು ನಮಗೆ ತಿಳಿದರಾಯಿತು." ನಾನಂದೆ.

"ಹಾಗಾದರೆ ಕೇಳಿ" ಎಂದು ರಾಯರು ಕ್ರಮವಾಗಿ ನಮ್ಮಲ್ಲಿ ಪ್ರತಿಯೊಬ್ಬರ ಕಿವಿಯಲ್ಲಿ "ನಮ್ಮ ಮನೆ ನಾಯಿಯನ್ನು!" ಎಂಬ ಅಷ್ಟಾಕ್ಷರೀ ಮಂತ್ರವನ್ನು ಉಚ್ಚರಿಸಿ, ಮಂಗನಂತೆ ಮುಖಮಾಡಿಕೊಂಡು ದೂರದಲ್ಲಿ ಹೋಗಿ ನಿಂತು ನಕ್ಕರು. ಅವರ ಈ ಪರಿಹಾಸ್ಯವನ್ನು ಕೇಳಲು ಇಷ್ಟು ಕುತೂಹಲಪಟ್ಟ ನಮಗೇ-ನಮ್ಮ ಹುಚ್ಚುತನವನ್ನು ಕಂಡು ನಗಲೋ ಅಳಲೋ ಎಂದು ತಿಳಿಯದಾಯಿತು.

ಅದುಮುಂದಿ ಬ್ರಿಟಿಷ್ ರಾಜರ ಮತ್ತು ರಾಣಿಯರ ಮತ್ತು ಬೇರೆ ದೇಶದ ಅರಸರ ಪ್ರಶಸ್ತಿ ಪತ್ರಗಳು ಪಿಯರ್ಸ್ ಸೋಪನ್ನು ರಾಜರ ಸೋಪೆಂಬುದಾಗಿ ನಿಜವಾಗಿಯೂ ಸಮರ್ಥಿಸುತ್ತವೆ. ನಿವುಕೂಡ ಯಾವದೋಷವೂ ಇಲ್ಲದ ಮತ್ತು ಶುದ್ಧವಾದ ಈ ಸೋಪನ್ನು ಉಪಯೋಗಿಸಬಹುದು. ನಿವುಕೂಡ ರೇಷ್ಮೆಯಂತೆ ನುಣ್ಣಗಾದ ಮತ್ತು ಮೈಯನ್ನು ಚೆನ್ನಾಗಿ ತುಳುಕಿಸುವ ... ಉಂಟುಮಾಡುವ ಅದರ ನೊರೆಯ ಸ್ಪರ್ಶಸುಖವನ್ನು ಅನುಭವಿಸಬಹುದು. ಇಂದಿನಿಂದಲೇ ಪಿಯರ್ಸನ್ನು ನಿಮ್ಮ ಸೋಪನ್ನಾಗಿ ಉಪಯೋಗಿಸಿರಿ.

KANARESE

## ಸಿಲ್ಕ್ ಶರ್ಟಿಂಗ್

ಎಲ್ ಮೊಹರ್‌ಚಂದ್, ರಿಜಿಸ್ಟ್ರಾರ್, ಸುಕೆಟ್ ಸ್ಟೇಟ್, ಇವರು ತಾ 8 1-38 ರಲ್ಲಿ ಬರೆದಿರುವ ಕಾಗದದಲ್ಲಿ ಹೀಗೆಂದು ಹೇಳಿರುತ್ತಾರೆ

ನೀವು ರೂ 5-8-0ಕ್ಕೆ ವಿ ಪಿ ಪಿ ಮೂಲಕ ಕಳುಹಿಸಿದ ಶರ್ಟಿಂಗ್ ವಸ್ತ್ರದ ಪಾರ್ಸಲನ್ನು ಪಡೆದು ನೋಡಿದೆನು. ಅದೇ ಸೈಜಿನ ನಂಬರ್ . ಇವರ ಕಂಪೆನಿಯಿಂದ ರೂ 5-12-0ಕ್ಕೆ ತರಿಸಿದ ಶರ್ಟಿಂಗ್ ವಸ್ತ್ರವನ್ನೂ ನೋಡಿದೆನು ಆದರೆ ನೀವು ರವಾನಿಸಿದ ವಸ್ತ್ರವು ಬೆಲೆಯಲ್ಲಿ ಅಗ್ಗವೂ ಅದಕ್ಕಿಂತ ಉತ್ತಮವೂ ಅದರ ನೇಯಿಗೆ ನಾಜೂಕಾದುದೂ ಎಂಬುದನ್ನು ತಿಳಿಸುವರೆ ನನಗೆ ತುಂಬಾ ಸಂತೋಷವಾಗುತ್ತದೆ ವ್ಯಾಪಾರ ವಹಿವಾಟಿನಲ್ಲಿ ನಿಮ್ಮ ಸರಳತೆ ಮತ್ತು ಶ್ರದ್ಧೆಯನ್ನು ನೋಡಿ, ನಿಮಗೆ ವ್ಯಾಪಾರದಲ್ಲಿ ಹೆಚ್ಚಿನ ಯಶಸ್ಸು ಮತ್ತು ಲಾಭ ದೊರೆಯಲೆಂದು ಬಯಸುತ್ತೇನೆ

ಸಿಲ್ಕ್ ಶರ್ಟಿಂಗ್:–ಶುದ್ಧ ಬಿಳಿದು, ಅತೀ ಉತ್ತಮ ಮತ್ತು ಹೆಚ್ಚು ಬಾಳಿಕೆ ಬರುವಂತಾದ್ದು ಹತ್ತಿಯ ನೂಲಿನಿಂದ ವಿರಹಿತವಾಗಿದೆ ಅತಿ ನುಣುಪಾಗಿಯೂ, ತಂಪಾಗಿಯೂ, ಸುಖಕರವಾಗಿಯೂ ಇದೆ ಎಷ್ಟು ಕಠಿಣವಾಗಿ ಒಗೆದರೂ ಬಾಳಿಕೆ ಬರಬಲ್ಲುದು 9 ಗಜ ಉದ್ದ, 54 ಇಂಚು ಅಗಲದ 6 ಶರ್ಟುಗಳ ವಸ್ತ್ರಕ್ಕೆ ಬೆಲೆ ರೂ 5 8 0

ಸಿಲ್ಕ್ ಸೀರೆಗಳು:–ಖಾತ್ರಿಯಾಗಿ ಬಣ್ಣಹೋಗದ ಸುಂದರವಾದ ಅಂಚುಗಳು ಸಾಧು 7, 8, 9, 10 ಗಜ ಉದ್ದ ಮತ್ತು 45 ಇಂಚು ಅಗಲ ಕಪ್ಪುಬಣ್ಣ ವಿರಹಿತ ಇತರ ಎಲ್ಲಾ ಬಣ್ಣಗಳಲ್ಲಿಯೂ ದೊರೆಯುತ್ತವೆ ಕ್ರಯ ರೂ 4 12 0, 5 9 0, 6 2 0 ಮತ್ತು 6 15 0 ಸಿಲ್ಕ್ ದುಪ್ಪಟಿಗಳು:–ಇವುಗಳು ಹೆಚ್ಚಿನ ಹೆಸರನ್ನು ಪಡೆದಿರುತ್ತವೆ ನಾವು ಪ್ರತ್ಯೇಕವಾಗಿ ಇವುಗಳ ಕುರಿತು ಹೇಳಬೇಕಾಗಿಲ್ಲ ಸೈಜು 2½ ಗಜ ಉದ್ದ, 44 ಇಂಚು ಅಗಲ ಕ್ರಯ ರೂ 2 ಮಾತ್ರ

ಪೆಕಿಂಗ್ ಮತ್ತು ಅಂಚೆವೆಚ್ಚ ಧರ್ಮಾರ್ಥ ನಮಗೆ ಒಂದಿಷ್ಟು ಅಸಮಾಧಾನ ಉಂಟಾದಲ್ಲಿ ನಿಮ್ಮ ಹಣವನ್ನು ವಾಪಸು ಮಾಡಲು ನಾವು ಸಿದ್ಧರಿದ್ದೇವೆ

ಮಾದರಿಯ ಸಿಲ್ಕುಗಳನ್ನು ಇತರರು ಮಾರುವಂತೆ ನಮ್ಮಲ್ಲಿಯೂ – ತ್ತದೆ 9 ಗಜ ×54 ಇಂಚು ರೂ

**GIRSON KNITTING WORKS, DEPT 67, LUDHIANA**



## *A FRIEND IN NEED IS A FRIEND INDEED!*

You want your money should bring you maximum profits through safe investments You further wish that your money should be available to serve you in case of need without any obligation to any one All this and more you can have from your Bankers "THE AGRICULTURAL & INDUSTRIAL BANK LIMITED" who issue "5 YEARS 5% CORONATION CASH CERTIFICATES" redeemable at any time before maturity, in various denominations of Rs 10 25, 50, 100, 250, 500 & 1000 on a deposit of Rs 8 20, 40 80 200, 400 & 800 respectively

Particulars and application forms can be had from any of our Offices at Coondapoor Kumta Gokarn Byndoor Virarajendrapet Somwarpet Koteshwar, Shimoga Panemangalore and Kadur

Coondapoor 14-3-1938.

The Agricultural & Industrial Bank Ltd
(INCORPORATED IN BRITISH INDIA)


**Buy Advertised Goods.**


## Scientific Opticians

**Eye Testing Free.**

STYLISH FRAMES, LENSES, CASES.

*Please Visit*

**Nayaks Optical Stores**
Car Street
MANGALORE



## ಹಿಂದುಸ್ಥಾನ ಕೊ-ಓಪರೇಟಿವ್ ಇನ್ಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್

| ಹೆಡ್ ಆಫೀಸು ಕಲ್ಕತ್ತಾ | ಪ್ರಗತಿಪರ ಭಾರತೀಯ ವಿಮಾ ಸಂಸ್ಥೆ | ಸ್ಥಾಪನೆ 1907 |
|---|---|---|
| ಚಾಲ್ತಿಯಲ್ಲಿರುವ ವ್ಯವಹಾರ | ರೂ | 12,00 00,000 |
| ಆಸ್ತಿಪಾಸ್ತಿಗಳು | ರೂ | 2 21,00 000 |
| ನೂತನ ವ್ಯವಹಾರ | ರೂ | 2 82,81,000 |

ಅತ್ಯಧಿಕ ಬೋನಸ್ ಹಂಚಲಾಗಿದೆ.

ಎಂಡೋಮೆಂಟ್ ಪಾಲಿಸಿಗಳಿಗೆ, ರೂ 1000 ವಿಮೆಯ ಮೇಲೆ ಪ್ರತಿ ವರ್ಷ ... ರೂ 24

... ಗಳ ವಿಮೆ ಅವಘಡ, ಮತ್ತು ಮರಣ ... ಪಾಲಿಸಿ

*For particulars please apply to*

T ANANTACHARI,
BRANCH MANAGER H C I S LTD
POST BOX 223 MADRAS

K K MENON
ORGANISER ... CALICUT



## ಪರಮಾ

ಗೊನೋರೇಕ್ಸ್ (ರಿಜಿಸ್ಟರ್ಡ್)

ಸ್ಟಾಕಿಸ್ಟ: ಎಂ. ಡಿ. ಪ್ರೋ ... ಮತ್ತು ಕಂಪೆನಿ



# The Bombay Life Assurance Company, Ltd.

ESTD: 1908.

## A RECORD OF PROGRESS.

| YEAR | NEW BUSINESS COMPLETED | PREMIUM INCOME | LIFE FUND | BUSINESS IN FORCE |
|---|---|---|---|---|
| 1926 | 32,08,000 | 5,04,466 | 15,14,856 | 1 16,58,706 |
| 1930 | 59,97,500 | 9,88,367 | 28,00,970 | 2,06 68,328 |
| 1933 | 94,16,500 | 15,12,692 | 50,04,871 | 3,07,98,434 |
| 1936 | 1,36,00,180 | 26,76,274 | 82,69,451 | 5,14,38,205 |

The Company offers all the up-to-date schemes of Assurances Family Safe Guard Policy a special feature

Application for agencies will be received from honest and respectable gentlemen

~~Organisers appointed with pay and allowance.~~

Gentlemen with organising ability and who can guarantee Business need apply

***Apply to any of the following Offices:-***

**Kochikar Brothers, Ltd.,**
(Incorporating Messrs Kochikar Brothers),
***Madras Branch Secretaries.***
Post Box 337, Mount Road, MADRAS.
Phone No. 8245.

| Ottapalam | Central Station Road, Trivandrum | Visveshwarapuram Circle, Bangalore City. | Soumyalayam Puthiyara, Calicut | Car Street, Mangalore | Udipi S India | Charni Road, Bombay No. 4 |
|---|---|---|---|---|---|---|

ಚಂದಾ: ರೂ. [illegible]-0-0. Established 1906. Regd. No. M. 3406. ಟಪ್ಪಾಲು ಹಾಸಲು ಸೇರಿ ರೂ. 2-13-0

# ಸ್ವದೇಶಾಭಿಮಾನಿ.

# SWADESHABHIMANI, MANGALORE

ಸಂಪುಟ ೩೨. ತಾರೀಕು ೨೫ನೇ ಮಾರ್ಚ ೧೯೩೮ ಸಂಚಿಕೆ ೧೨

## ಹೊಸ ಮಾಲು ಇಂದೆ ಬಂದದ್ದು!




## ಕಣನ್ ದೇವನ್ ಚಹಾ ಪೊಟ್ಟಣಗಳು!

## ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

*Sole Agents:—*

**The Kerala Tea Syndicate,**

PONANI—(S. Malabar).

**BUY ADVERTISED GOODS**

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-0.

## ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1-8-0.

**ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಷಿಯನ್**

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ ಮಂಗಳೂರು. 2. ಶ್ರೀರಾಮ ಸ್ಟೋರ್ಸ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

## ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಒಬ್ಬ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೆಟ್ಟಗೆ ಸಾಗುತ್ತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಸಹ ಮನಾದಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು: — ಡಾ| ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೊಲ್ಹಾಪೂರ ಇವರು. ಸೂಚನೆ: ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ: ರೂ. ೪-೦-೦, ವಿ. ಪಿ. ಖರ್ಚ ೮.

ವಿಳಾಸ: — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.